ಇತಿಹಾಸ ದರ್ಶನ

ಸಂಪುಟ ೨೮



KARNATAKA ITIHASA ACADEMY
कर्नाटक इतिहास अकादमि

ಕರ್ನಾಟಕ ಇತಿಹಾಸ ಅಕಾದೆಮಿ (ರಿ.), ಬೆಂಗಳೂರು

ಸಂಪಾದಕರು

ಡಾ. ದೇವರಕೊಂಡಾರೆಡ್ಡಿ

ಜಿ.ಕೆ. ದೇವರಾಜ ಸ್ವಾಮಿ

೨೦೧೪

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು

ಆಡಳಿತ ಮಂಡಲಿಯ ಸದಸ್ಯರು ೨೦೧೨-೧೪


ಡಾ॥ ಜಿ.ಎಸ್. ದೀಕ್ಷಿತ್
ಗೌರವ ಅಧ್ಯಕ್ಷರು (೨೦೦೪ರ ವರೆಗೆ)


ಡಾ॥ ಸೂರ್ಯನಾಥ ಕಾಮತ್
ಗೌರವ ಅಧ್ಯಕ್ಷರು


ಡಾ॥ ದೇವರಕೊಂಡಾರೆಡ್ಡಿ
ಕಾರ್ಯಾಧ್ಯಕ್ಷರು


ಡಾ॥ ಎಂ.ಜಿ. ನಾಗರಾಜ್
ಉಪಾಧ್ಯಕ್ಷರು


ಡಾ॥ ಬಿ. ರಾಜಶೇಖರಪ್ಪ
ಉಪಾಧ್ಯಕ್ಷರು


ಶ್ರೀ ಎಂ.ಬಿ. ಪಾಟೇಲ್
ಕೋಶಾಧ್ಯಕ್ಷರು


ಶ್ರೀ ಜಿ.ಕೆ. ದೇವರಾಜಸ್ವಾಮಿ
ಪ್ರಧಾನ ಕಾರ್ಯದರ್ಶಿ


ಡಾ॥ ಪಿ.ವಿ. ಕೃಷ್ಣಮೂರ್ತಿ
ಕಾರ್ಯದರ್ಶಿ



ಡಾ॥ ಜಯಮ್ಮ ಎಚ್. ಕರಿಯಣ್ಣ
ಕಾರ್ಯದರ್ಶಿ

ಕಾರ್ಯಕಾರಿ ಸಮಿತಿ ಸದಸ್ಯರು


ಡಾ॥ ಎಚ್.ಎಸ್. ಗೋಪಾಲರಾವ್
ಅರಶಿನಕುಂಟೆ


ಡಾ॥ ಎಚ್.ಎಸ್. ಉಷಾರಾಣಿ
ಮೈಸೂರು


ಶ್ರೀ ರಾಜೇಂದ್ರಪ್ಪ ಎಸ್.
ಕೆಂಗೇರಿ


ಡಾ॥ ಎ.ಕೆ. ಶಾಸ್ತ್ರಿ
ಶಿರಸಿ


ಡಾ॥ ಬಾಲಕೃಷ್ಣ ಹೆಗ್ಗಡೆ
ಶಿವಮೊಗ್ಗ


ಡಾ॥ ಅಮರೇಶ್ ಯತಗಲ್
ಬಿಜಾಪುರ


ಪ್ರೊ. ಮುರುಗೇಶಿ ಓ.
ಉಡುಪಿ


ಪ್ರೊ. ಜಿ.ಕೆ. ಮಲ್ಲಿಕಾರ್ಜುನ
ದಾವಣಗೆರೆ


ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ
ರಾಯಚೂರು


ಶ್ರೀ ಟಿ.ಎಚ್.ಎಂ. ಬಸವರಾಜ
ಬಳ್ಳಾರಿ


ಶ್ರೀ ಮಂಜುನಾಥ ರಾಮಕೃಷ್ಣ ಹೆಗ್ಗಡೆ
ಹಾವೇರಿ


ಡಾ॥ ಸ್ಮಿತಾ ಪಿ. ಸುರೇಬಾನಕರ
ಬೆಳಗಾವಿ


ಶ್ರೀ ಡಿ.ಎನ್. ಯೋಗೀಶ್ವರಪ್ಪ
ತುಮಕೂರು


ಡಾ॥ ಎಸ್.ಕೆ. ಮೇಲಕಾರ
ಧಾರವಾಡ


ಡಾ॥ ಬೆಂ.ಶಾ. ಶಾಮಲಾ ರತ್ನಕುಮಾರಿ
ಬೆಂಗಳೂರು


ಶ್ರೀ ಕಲ್ಲಪ್ಪ ಮಹದೇವಪ್ಪ ಗರಗ
ಗದಗ


ಡಾ॥ ರವೀಂದ್ರನಾಥ
ಹಂಪಿ

ಇತಿಹಾಸ ದರ್ಶನ

ITIHASA DARSANA - *Volume 29 / 2014*

ಸಂಪುಟ ೨೯ / ೨೦೧೪

೨೦೧೩ರ ಸೆಪ್ಟಂಬರ್ ೨೧ರಿಂದ ೨೩ರವರೆಗೆ ಕರ್ನಾಟಕ ಇತಿಹಾಸ ಅಕಾದೆಮಿ ಹಾಗೂ ದಿ ಮಿಥಿಕ್ ಸೊಸೈಟಿ, ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಬೆಂಗಳೂರಿನಲ್ಲಿ ಸಮಾವೇಶಗೊಂಡಿದ್ದ ಕರ್ನಾಟಕ ಇತಿಹಾಸ ಅಕಾದೆಮಿಯ ೨೭ನೆಯ ವಾರ್ಷಿಕ ಸಮ್ಮೇಳನದಲ್ಲಿ ಅಕಾದೆಮಿಯ ಸದಸ್ಯರು ಮಂಡಿಸಿದ ವಿದ್ವತ್ ಪ್ರಬಂಧಗಳ ಸಂಪುಟ.

ಸಂಪಾದಕರು

ಡಾ|| ದೇವರಕೊಂಡಾರೆಡ್ಡಿ

ಜಿ.ಕೆ. ದೇವರಾಜಸ್ವಾಮಿ

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು

ITIHĀSA DARŚANA - ***Volume 29 / 2014***

The Volume of the Scholarly papers presented and the General body Proceedings of the 27th Annual Conference of

The Karnataka Ithihasa Academy (Regd.,)
held at The Mithic Society, Nrupatunga Road, Bengaluru
on 21st, 22nd & 23rd September 2013

ಪುಟಗಳು : ೫೬೪ + xxxii + Photes XVI

Pages : 564 + xxxii + Photes XVI

Edited by : **Dr. Devarakondareddy**
G.K. Devarajaswamy

Published by : Secretary
Karnataka Itihasa Academy (Regd.)
B.M. Shri Kalabhavana premises
3rd Main, Narasimharaja Colony
Bangalore - 560 019.

e-mail : **karnatakaitihasaacademy25@gmail.com**
Blog : **itihasaacademy.blogspot.in**
Web : **www.karnatakaitihasaacademy.org**


Price : ₹ **650**

ಬೆಲೆ : ₹ ೬೫೦

ಆರ್ಥಿಕ ನೆರವು : ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ.
ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠ, ಬಾಳೇಹೊನ್ನೂರು.

ISBN No. 978-81-921255-4-1

Printed at
ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA Bangalore
ISO 9001-2000
ಚಾಮರಾಜಪೇಟೆ, ಬೆಂಗಳೂರು–೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨



ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನ ಮಹಾಸಂಸ್ಥಾನ ಪೀಠ

ಬಾಳೇಹೊನ್ನೂರು-೫೭೭ ೧೧೨ ಚಿಕ್ಕಮಗಳೂರು ಜಿಲ್ಲೆ

ಶ್ರೀಮದ್ ರಂಭಾಪುರಿ ವೀರಸಿಂಹಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು

ದಿನಾಂಕ : ೦೫.೦೮.೧೮ ವಾಸ್ತವ್ಯ : ಶ್ರೀಪೀಠ, ಬಾಳೆಹೊನ್ನೂರು

ಶುಭಾಶೀರ್ವಾದ ಸಂದೇಶ

ಅಂತರಂಗದ ಕಣ್ಣು ಅರಳಿದಾಗ ಸತ್ಯ ಸಾಕ್ಷಾತ್ಕಾರಗೊಳ್ಳುತ್ತದೆ. ಮನುಷ್ಯ ಜೀವನದಲ್ಲಿ ಐಶ್ವರ್ಯದ ಜೊತೆಗೆ ಔದಾರ್ಯವನ್ನು ಸಂಪಾದಿಸಿಕೊಳ್ಳಬೇಕು. ಬುದ್ಧಿ ಭಾವನೆಗಳನ್ನು ಕೊಟ್ಟ ಭಗವಂತನ ಕೊಡುಗೆ ಅಮೂಲ್ಯ. ಸಿರಿವಂತರಿರಲಿ ಇಲ್ಲವೇ ಬಡವರಿರಲಿ ಎಲ್ಲರಿಗೂ ಇರುವುದು ಒಂದೇ ಬದುಕು. ಇತಿಹಾಸ ಪರಂಪರೆಯಲ್ಲಿ ನಂಬಿಕೆಯಿರಲಿ; ಅಪನಂಬಿಕೆಬೇಡ. ಇತಿಹಾಸದ ಪ್ರಜ್ಞೆಯಿರಲಿ; ನಾಸ್ತಿಕತೆಯ ಮನೋಭಾವಬೇಡ. ಕಟ್ಟಡಗಳನ್ನು ಕಲ್ಲು ಮಣ್ಣುಗಳಿಂದ ಕಟ್ಟಬಹುದು. ಆದರೆ ಮನದ ಮನೆಯನ್ನು ವಾತ್ಸಲ್ಯ, ಪ್ರೀತಿ, ಕರುಣೆ ತುಂಬಿದ ಹೃದಯದಿಂದ ಕಟ್ಟಬೇಕು. ಮುಗಿಲೆತ್ತರದ ಮನೆಗಿಂತ ಹುಲ್ಲು ಗುಡಿಸಲು ಶ್ರೇಷ್ಠ. ಮಾಸಿದ ಬಟ್ಟೆ ಮೈಮೇಲೆಯಿದ್ದರೂ ಕೂಸಿನ ಪ್ರೀತಿ ದೊಡ್ಡದು. ಕೈಯಲ್ಲಿ ಒಣರೊಟ್ಟಿ ತುಣುಕಿದ್ದರೂ ಅದು ಅವನಿಗೆ ಅಮೃತ ಸಮಾನ. ನಮ್ಮ ಬದುಕು ಹಣದಿಂದ ಶೋಭಿಸದೇ ಗುಣದಿಂದ ಶೋಭಿಸಲಿ. ಹೂವಿನಂತೆ ಸಂತಸದ ಸುಗಂಧ ಎಲ್ಲಡೆ ಹರಡಲಿ.

ಧರ್ಮ ಎಂಬುದೊಂದು ನಂಬಿಗೆ; ಆದರ್ಶವಾದ ಕಟ್ಟಳೆ. ಜೀವನ ವಿಧಾನ ಎಂದರೂ ತಪ್ಪಾಗದು. ಪುಸ್ತಕ ಓದಿ ಧರ್ಮದ ಜ್ಞಾನ ಪಡೆಯುವ ಅಗತ್ಯವಿಲ್ಲ. ಆಚಾರ ಸದಾಚಾರದಿಂದ ಬೆಳೆದುಕೊಂಡು ಬರಬೇಕು. ಮಾನವೀಯತೆಯಿಂದ ಒಡಗೂಡಿದ ಮಾನವ ಧರ್ಮ ಎಲ್ಲ ಧರ್ಮಕ್ಕಿಂತ ಮಿಗಿಲು. ಸತ್ಯ ಸಾಧಿಸಲು ಹೊರಟವರಿಗೆ ಸಾವಿರ ಸಂಕಷ್ಟ. ಸ್ತುತಿನಿಂದೆಗಳು ಸಹಜ. ಅದನ್ನು ಲೆಕ್ಕಿಸದೇ ನಿಜಗುರಿಯೆಡೆಗೆ ನಡೆಯುವುದೇ ನಿಜವಾದ ಧರ್ಮ. ನದಿ ಎಷ್ಟೇ ದೂರ ಹರಿದಿರಲಿ, ತಾನು ಹುಟ್ಟಿದ ಮೂಲ ಸ್ಥಳದ ಸಂಬಂಧವನ್ನು ಯಾವತ್ತೂ ಕಳೆದುಕೊಳ್ಳುವುದಿಲ್ಲ. ಮನುಷ್ಯ ಎಷ್ಟೇ ಭೌತಿಕವಾಗಿ ಬೆಳೆದಿದ್ದರೂ ಇತಿಹಾಸ ಪರಂಪರೆಗಳನ್ನು ನಿರ್ಲಕ್ಷಿಸಬಾರದು. ಧರ್ಮ-ಸಂಸ್ಕೃತಿ ಇತಿಹಾಸ ಪರಂಪರೆಗಳ ತಾಯ್ನಾಡು ಭಾರತ. ವಿಜ್ಞಾನದ ಯುಗದಲ್ಲಿ ಬದುಕಿ ಬಾಳುತ್ತಿದ್ದರೂ ಇತಿಹಾಸ ಪರಂಪರೆ ಮರೆಯಬಾರದು. ಭವ್ಯ ಕಟ್ಟಡದಲ್ಲಿ ಎರಡು ಬಗೆಯ ಕಲ್ಲುಗಳನ್ನು ಕಾಣಬಹುದು. ಒಂದು ಬುನಾದಿಯ ಕಲ್ಲು. ಇನ್ನೊಂದು ಗೋಡೆಯ ಕಲ್ಲು. ಬುನಾದಿ ಕಲ್ಲು ಯಾರಿಗೂ ಕಾಣದು. ಗೋಡೆಯ ಸುಂದರ ಕಲ್ಲು ನೋಡಿ ಜನ ಸಂತಸಪಡುತ್ತಾರೆ. ಆ ಭವ್ಯ ಕಟ್ಟಡ ತಲೆ ಎತ್ತಿ ನಿಂತಿರುವುದು ಬಲವಾದ ಆ ಬುನಾದಿಯ ಕಲ್ಲುಗಳಿಂದಲೇ ಎನ್ನುವುದನ್ನು ಜನ ಮರೆತೇ ಬಿಡುತ್ತಾರೆ. ಇಂದಿನ ಉತ್ಕರ್ಷತೆಗೆ ಹಿಂದಿನ ಇತಿಹಾಸ ಅಡಿಪಾಯ ಎಂಬುದನ್ನು ಯಾರೂ ಮರೆಯಬಾರದು.

ಕಾಲಕಾಲಕ್ಕೆ ಎಲೆಗಳು ಉದುರಬಹುದು. ಆದರೆ ಮರದ ಬೇರು ಭದ್ರವಾಗಿರುತ್ತದೆ. ಅಂತೆಯೇ ಮನುಷ್ಯನ ಅಭಿಪ್ರಾಯಗಳು ಬದಲಾಗಬಹುದು. ಆದರೆ ಇತಿಹಾಸ ಸಂಸ್ಕೃತಿ ಅಳಿಸಲು ಯಾರಿಂದಲೂ ಸಾಧ್ಯವಿಲ್ಲ. ಒಳ್ಳೆಯದು ಉಳಿಯಬೇಕಾದರೆ ಕೆಟ್ಟದ್ದರ ಜೊತೆಗೆ ಹೋರಾಡಬೇಕಾದದ್ದು ಅನಿವಾರ್ಯವಾಗಿದೆ. ಹೊಸ ರೆಂಬೆಗಳು ಬೇಡ ಎನ್ನುವುದು ಎಷ್ಟು ಅನುಚಿತವೋ ಹಳೆಯ ಬುಡಬೇಡ ಎನ್ನುವುದು ಅಷ್ಟೇ ಅನುಚಿತ. ಕರ್ನಾಟಕ ಇತಿಹಾಸ ಅಕಾಡೆಮಿ (ರಿ.) ಉತ್ತಮ ಕಾರ್ಯ ಮಾಡುತ್ತಿದೆ. ಕರ್ನಾಟಕ ಇತಿಹಾಸದ ನೆಲೆಮೂಲಗಳನ್ನು ನಾಡಿನ ಜನತೆಗೆ ಪರಿಚಯಿಸುವಂಥ ಕಾರ್ಯಮಾಡುತ್ತಿದೆ. ಕರ್ನಾಟಕ ಇತಿಹಾಸ ಅಕಾಡೆಮಿಯ ೨೮ನೆಯ ವಾರ್ಷಿಕ ಸಮ್ಮೇಳನ ಉಡುಪಿ ಜಿಲ್ಲೆಯ ಶಿರ್ವದಲ್ಲಿ ನಡೆಯಲಿರುವುದು ಸಂತೋಷದ ಸಂಗತಿ. "ಇತಿಹಾಸ ದರ್ಶನ" - ಸಂಪುಟ ಪ್ರಕಟಣೆಗಾಗಿ ಹಲವಾರು ವರ್ಷಗಳಿಂದ ೨೫,೦೦೦/- (ಇಪ್ಪತ್ತೈದು ಸಾವಿರ) ರೂಪಾಯಿಗಳನ್ನು ಆಶೀರ್ವಾದ ರೂಪದಲ್ಲಿ ದಯ ಪಾಲಿಸುತ್ತಾ ಬಂದಿದ್ದೇವೆ. ಈ ಸಂಪುಟಕ್ಕೂ ಶ್ರೀ ಪೀಠದ ಆಶೀರ್ವಾದವನ್ನು ಕಳುಹಿಸಲಾಗಿದೆ. ಇತಿಹಾಸ ದರ್ಶನ ಸಂಪುಟ ಸಂಪಾದಕ ಮಂಡಳಿಯ ಎಲ್ಲ ಸದಸ್ಯರಿಗೂ ಶುಭ ಹಾರೈಕೆಗಳು.

ಪರಮದಯಾಳು ಶ್ರೀ ಪಾರ್ವತಿ ಪರಮೇಶ್ವರರು, ಶ್ರೀ ಜಗದ್ಗುರು ರೇಣುಕಾಚಾರ್ಯರು ಹಾಗೂ ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಸರ್ವರಿಗೂ ಮಂಗಲಪರಂಪರೆಯನ್ನು ಅನುಗ್ರಹಿಸಲಿ.

ಶುಭಾಶೀರ್ವಾದಗಳೊಂದಿಗೆ

ಶ್ರೀ ರಂಭಾಪುರಿ ಜಗದ್ಗುರುಗಳು

ವಾರ್ಷಿಕನಿಧಿ ರೂ. ೨೫ ಸಾವಿರ ಕೊಡುಗೆ ಆರಂಭಿಸಿದ ವರ್ಷ : ೨೦೦೫

ಕರ್ನಾಟಕ ಇತಿಹಾಸ ಅಕಾದೆಮಿಯ

ಇಪ್ಪತ್ತೇಳನೆಯ ವಾರ್ಷಿಕ ಸಮ್ಮೇಳನದ ಸರ್ವಾಧ್ಯಕ್ಷರು



ಡಾ॥ ಎಸ್.ಕೆ. ಜೋಶಿ

ಉದ್ಘಾಟನಾ ಸಮಾರಂಭ



ಕರ್ನಾಟಕ ಇತಿಹಾಸ ಅಕಾದೆಮಿಯ ೨೭ನೆಯ ವಾರ್ಷಿಕ ಸಮ್ಮೇಳನದ ಉದ್ಘಾಟನಾ ಸಮಾರಂಭ

ಎಡದಿಂದ ಬಲಕ್ಕೆ: ಶ್ರೀ ವಿ. ನಾಗರಾಜ್, ಡಾ. ಎಂ.ಕೆ.ಎಲ್.ಎನ್. ಶಾಸ್ತ್ರೀ, ಡಾ. ಎಸ್.ಕೆ. ಜೋಶಿ, ಬೆಂಗಳೂರಿನ ಮಹಾಪೌರರಾದ ಕಟ್ಟೆ ಸತ್ಯನಾರಾಯಣ್, ಡಾ. ದೇವರಕೊಂಡಾರೆಡ್ಡಿ, ಡಾ. ಆರ್.ಶೇಷಶಾಸ್ತ್ರಿ, ಡಾ. ಎಸ್.ವಿ. ವೆಂಕಟೇಶಯ್ಯ



೨೭ನೆಯ ವಾರ್ಷಿಕ ಸಮ್ಮೇಳನದ ಉದ್ಘಾಟನೆ
ಸಮ್ಮೇಳನಾಧ್ಯಕ್ಷ ಡಾ. ಎಸ್.ಕೆ. ಜೋಶಿ
ಡಾ. ದೇವರಕೊಂಡಾರೆಡ್ಡಿ, ಶ್ರೀ ವಿ. ನಾಗರಾಜ್
ಡಾ. ಎಂ.ಕೆ.ಎಲ್.ಎನ್. ಶಾಸ್ತ್ರೀ
ಶ್ರೀ ಕಟ್ಟೆ ಸತ್ಯನಾರಾಯಣ
ಡಾ. ಎಸ್.ವಿ. ವೆಂಕಟೇಶಯ್ಯ



'ಇತಿಹಾಸ ದರ್ಶನ' ಸಂಪುಟ
೨೮ರ ಬಿಡುಗಡೆ
ಸಂಪಾದಕರಾದ
ಡಾ. ಪಿ.ವಿ. ಕೃಷ್ಣಮೂರ್ತಿ ಮತ್ತು
ಶ್ರೀ ಎಸ್. ರಾಜೇಂದ್ರಪ್ಪ
ಅವರೊಂದಿಗೆ



'ಡಾ. ಸೂರ್ಯನಾಥ ಕಾಮತ' ಅವರ ಕುರಿತ ಜೀವನ ಚರಿತ್ರೆ ಪುಸ್ತಕ ಬಿಡುಗಡೆ
ಲೇಖಕಿ ಡಾ. ಕೆ. ವಸಂತಲಕ್ಷ್ಮಿ ಅವರೊಂದಿಗೆ



ಸಮ್ಮೇಳನಾಧ್ಯಕ್ಷ
ಡಾ. ಎಸ್.ಕೆ. ಜೋಶಿ
ಅವರಿಗೆ ಸನ್ಮಾನ



ಡಾ. ಆರ್. ಶೇಷಶಾಸ್ತ್ರಿ ಅವರಿಗೆ
'ಡಾ. ಬಾ.ರಾ. ಗೋಪಾಲ್
ಶಾಸನ ದತ್ತಿ ಪ್ರಶಸ್ತಿ'
ಪ್ರದಾನ



ಶ್ರೀಮತಿ ಸೀತಾರಾವ್ ಅವರು ರೂಪಿಸಿದ
ಕರ್ನಾಟಕ ಇತಿಹಾಸ ಅಕಾದೆಮಿಯ
ವೆಬ್‌ಸೈಟ್ ಉದ್ಘಾಟನೆ




ಬೈಸಾನಿ ರುಕ್ಮಣಮ್ಮ ರತ್ನಂಶೆಟ್ಟಿ ಫ್ಯಾಮಿಲಿ ಚಾರಿಟಬಲ್ ಟ್ರಸ್ಟ್ ನೀಡುತ್ತಿರುವ ನೆನಪಿನ 'ಇತಿಹಾಸ ಸಂಸ್ಕೃತಿ ಶ್ರೀ' ಪ್ರಶಸ್ತಿ ಸ್ವೀಕರಿಸುತ್ತಿರುವ ಡಾ. ಸೂರ್ಯನಾಥ ಕಾಮತರೊಂದಿಗೆ ಗಣ್ಯರು



೨೭ನೆಯ ಸಮ್ಮೇಳನದ
ಸರ್ವಾಧ್ಯಕ್ಷರಾದ ಡಾ. ಎಸ್. ಕೆ. ಜೋಶಿ
ಅವರ ಭಾಷಣ



ಬೆಂಗಳೂರಿನ ಮಹಾಪೌರರಾದ
ಕಟ್ಟೆ ಸತ್ಯನಾರಾಯಣ ಅವರು
ಭಾಷಣ ಮಾಡುತ್ತಿರುವುದು



ಡಾ. ಆರ್. ಶೇಷಶಾಸ್ತ್ರಿ ಅವರ ಮಾತು



ನಿಕಟ ಪೂರ್ವಾಧ್ಯಕ್ಷ ಡಾ. ಎಸ್.ವಿ. ವೆಂಕಟೇಶಯ್ಯ ಅವರ ಭಾಷಣ



ಸಮಾರೋಪ ಸಮಾರಂಭ:

ಶ್ರೀ ಜಿ.ಕೆ. ದೇವರಾಜಸ್ವಾಮಿ, ಶ್ರೀ ವಿ. ನಾಗರಜ್, ಡಾ.ಎಸ್.ಕೆ. ಜೋಶಿ, ದೇವರಕೊಂಡಾರೆಡ್ಡಿ ಮತ್ತು ಡಾ.ಅ. ಸುಂದರ



ಬೆಂಗಳೂರಿನಲ್ಲಿ ನಡೆದ ೨೮ನೆಯ ಕರ್ನಾಟಕ ಇತಿಹಾಸ ಅಕಾದೆಮಿಯ ವಾರ್ಷಿಕ ಸಮ್ಮೇಳನದ ಸಭಿಕರ ದೃಶ್ಯ




ಬೆಂಗಳೂರಿನ ಮಿಥಿಕ್ ಸೊಸೈಟಿಯ ಆಶ್ರಯದಲ್ಲಿ ನಡೆದ ೨೮ನೆಯ ಕರ್ನಾಟಕ ಇತಿಹಾಸ ಅಕಾದೆಮಿಯ ವಾರ್ಷಿಕ ಸಮ್ಮೇಳನದಲ್ಲಿ ಭಾಗವಹಿಸಿರುವ ಅಕಾದೆಮಿಯ ಸದಸ್ಯಬಂಧುಗಳು ಮತ್ತು ಇತಿಹಾಸ ಆಸಕ್ತರು

ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ೨೦೧೩



ಉದ್ಘಾಟನೆ

ಡಾ. ಲೀಲಾವತಿ, ಡಾ. ಆರ್. ಗೋಪಾಲ್, ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶ್

ಡಾ. ದೇವರಕೊಂಡಾರೆಡ್ಡಿ, ಡಾ. ಪಿ.ವಿ. ಕೃಷ್ಣಮೂರ್ತಿ, ಡಾ. ಇಂದಿರಾ ಹೆಗಡೆ



ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ೨೦೧೩: ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿಜೇತರು



ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ೨೦೧೩, ಭಿತ್ತಿ ಪತ್ರ ಬಿಡುಗಡೆ



ಕನ್ನಡ ಶಾಸನ ಕವಿಗಳು ವಿಚಾರ ಗೋಷ್ಠಿ ಉದ್ಘಾಟನೆ:
ಡಾ. ದೇವರಕೊಂಡಾರೆಡ್ಡಿ, ಡಾ. ಕೆ. ರಾಮಕೃಷ್ಣ
ಡಾ. ಬಿ. ರಾಜಶೇಖರಪ್ಪ



ಕನ್ನಡ ಶಾಸನ ಕವಿಗಳು ವಿಚಾರ ಗೋಷ್ಠಿ
ಉದ್ಘಾಟಕರಿಗೆ ಸನ್ಮಾನ

ಅಧ್ಯಕ್ಷರ ನುಡಿ

ಕರ್ನಾಟಕ ಇತಿಹಾಸ ಅಕಾದೆಮಿ ತನ್ನ ೨೮ ಸಂವತ್ಸರಗಳನ್ನು ಯಶಸ್ವಿಯಾಗಿ ಪೂರೈಸಿ, ೨೯ನೆಯ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದೆ. ಅದಕ್ಕೆ ಕಾರಣಕರ್ತರಾದವರೆಲ್ಲರಿಗೂ ಧನ್ಯವಾದಗಳನ್ನು ತಿಳಿಸುತ್ತೇವೆ.

ಅಕಾದೆಮಿಯ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ ವರ್ಷದಿಂದ ವರ್ಷಕ್ಕೆ ತನ್ನ ವ್ಯಾಪ್ತಿಯನ್ನು ವಿಸ್ತಾರಗೊಳಿಸಿಕೊಳ್ಳುತ್ತಿದೆ. ಅಕಾದೆಮಿಯ ಜಿಲ್ಲಾ ಘಟಕಗಳು ಪರಂಪರೆ ಉಳಿಸಿ ಕಾರ್ಯಕ್ರಮವನ್ನು ಅನೇಕ ರೀತಿಯಲ್ಲಿ ಆಚರಿಸಿವೆ. ಸಂಘ–ಸಂಸ್ಥೆಗಳು, ಕಾಲೇಜುಗಳು ಮತ್ತು ಪ್ರೌಢಶಾಲೆಗಳಿಂದ ಬಂದ ಕಾರ್ಯಕ್ರಮಗಳ ವರದಿಯನ್ನು ಅವಲೋಕಿಸಿದರೆ, ಪರಂಪರೆ ಉಳಿಸಿ ಕಾರ್ಯಕ್ರಮ ಸಾರ್ವಜನಿಕ ವಲಯಗಳನ್ನು ತಲುಪುವುದೆಂಬ ಭರವಸೆ ಮೂಡಿಸುತ್ತಿದೆ. ಹಾಗಾದರೆ ಕಾರ್ಯಕ್ರಮದ ಸಾರ್ಥಕತೆಯನ್ನು ಸಾಧಿಸಿದಂತಾಗುತ್ತದೆ. ಈ ಯಶಸ್ಸಿನ ಹಿಂದೆ ಕ್ರಿಯಾಶೀಲರಾಗಿರುವ ನಮ್ಮ ಸದಸ್ಯರು, ಕಾರ್ಯಕಾರಿ ಸಮಿತಿಯ ಸದಸ್ಯರು, ಕೆಲವು ಸಂಘ–ಸಂಸ್ಥೆಗಳು, ಮಠಮಾನ್ಯಗಳ ಪಾತ್ರವೂ ಇದೆ. ಇವರೆಲ್ಲರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ಅಕಾದೆಮಿಯ ೨೮ನೆಯ ವಾರ್ಷಿಕ ಸಮ್ಮೇಳನವನ್ನು ಮುಲ್ಕಿ ಸುಂದರರಾಮ ಶೆಟ್ಟಿ ಕಾಲೇಜು ಶಿರ್ವ ಹಾಗೂ ಮಂಗಳೂರು ವಿ.ವಿ.ಯ ಇತಿಹಾಸ ಪ್ರಾಧ್ಯಾಪಕರ ಸಂಘ (ಮಾನುಷ) ಅವರ ಸಹಯೋಗದಲ್ಲಿ ಶಿರ್ವದಲ್ಲಿ ನಡೆಸಲು ತೀರ್ಮಾನಿಸಲಾಯಿತು. ಇದರ ಫಲವಾಗಿ, ಇಂದು ನೀವೆಲ್ಲಾ, ಮುಲ್ಕಿ ಸುಂದರರಾಮ ಶೆಟ್ಟಿ ಕಾಲೇಜಿನಲ್ಲಿ ಸಮ್ಮೇಳನವನ್ನು ಯಶಸ್ವಿಗೊಳಿಸಲು ಸೇರಿದ್ದೀರಿ. ಮುಲ್ಕಿ ಸುಂದರರಾಮ ಶೆಟ್ಟಿ ಕಾಲೇಜಿನ ಆಡಳಿತ ಮಂಡಳಿಗೂ ಪ್ರಾಂಶುಪಾಲರಿಗೂ ಮತ್ತು ಸಿಬ್ಬಂದಿವರ್ಗಕ್ಕೆ ವಿಶೇಷವಾಗಿ ಇತಿಹಾಸ ಪ್ರಾಧ್ಯಾಪಕರಾದ ಡಾ. ಟಿ. ಮುರುಗೇಶಿ ಅವರಿಗೆ ಅಕಾದೆಮಿಯು ಆಭಾರಿಯಾಗಿದೆ.

ಅಕಾದೆಮಿಯ ಜಾಲತಾಣವು (website) ಅಂತರಾಷ್ಟ್ರೀಯ ಮಟ್ಟದಲ್ಲಿ, ಸಾರ್ವಜನಿಕ ವಲಯದಲ್ಲಿ ಸಂಶೋಧನಾ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದೆ. ಆಗಸ್ಟ್, ೨೦೧೪ರ ಅಂತ್ಯಕ್ಕೆ ಸುಮಾರು ೩೦,೦೦೦ ವೀಕ್ಷಕರು ನಮ್ಮ ಜಾಲತಾಣವನ್ನು ವೀಕ್ಷಿಸಿದ್ದಾರೆ. ಇದೊಂದು ಒಳ್ಳೆಯ ಬೆಳವಣಿಗೆ. ಈಗ ನೀವು ನಮ್ಮ ಜಾಲತಾಣದಲ್ಲಿ 'ಇತಿಹಾಸ ದರ್ಶನ'ದ ಹಲವು ಸಂಪುಟಗಳನ್ನು ನೋಡಬಹುದಾಗಿದ್ದು, ಸಂಬಂಧಿಸಿದ ಕೆಲಸವು ಪ್ರಗತಿಯಲ್ಲಿದೆ. ನಮ್ಮ ಸದಸ್ಯರೂ ಅಕಾದೆಮಿಯ ಜಾಲತಾಣದ ರೂವಾರಿಯೂ ಆದ ಶ್ರೀಮತಿ ಸೀತಾರಾವ್‌ರವರು ತಮ್ಮ ನಿರಂತರ ಶ್ರಮ ಮತ್ತು ಸಮಯವನ್ನು ವ್ಯಯಿಸಿ ನಡೆಸುತ್ತಿದ್ದಾರೆ. ಅವರಿಗೆ ನಮ್ಮ ವಂದನೆಗಳು. ಜಾಲತಾಣವನ್ನು ಇನ್ನೂ ಹೆಚ್ಚಿನ ಮಟ್ಟಕ್ಕೆ ಕೊಂಡೊಯ್ಯಬೇಕಾಗಿದ್ದು, ತಮ್ಮೆಲ್ಲರ ಸಹಕಾರ ಅತ್ಯಗತ್ಯ.

ಕಳೆದ ವರ್ಷ ಬೆಂಗಳೂರು ದಿ ಮಿಥಿಕ್ ಸೊಸೈಟಿಯಲ್ಲಿ ನಡೆದ ೨೭ನೆಯ ವಾರ್ಷಿಕ ಸಮ್ಮೇಳನದಲ್ಲಿ ಮಂಡಿಸಿದ ಲೇಖನಗಳನ್ನು ಅಕಾದೆಮಿಯು ಸದಸ್ಯರಿಗೆ ಈ–ಮೇಲ್/ಸಿ.ಡಿ.ಗಳ ಮೂಲಕ ಕಳುಹಿಸಲು ಸೂಚನೆ ನೀಡಿತ್ತು. ನಮ್ಮ ಕೋರಿಕೆಗೆ ಒಳ್ಳೆಯ ಮನ್ನಣೆ ಸಿಕ್ಕಿದೆ. ಲೇಖನಗಳು ಈ–ಮೇಲ್/ಸಿ.ಡಿ. ಮೂಲಕ ತಲುಪಿ ಲೇಖನಗಳ ಸಂಪಾದನೆಯ ಕಾರ್ಯವನ್ನು ಸುಗಮಗೊಳಿಸಿದ್ದಾರೆ. ಲೇಖನಗಳನ್ನು ನಿಗಧಿತ ವೇಳೆಗೆ ಕಳುಹಿಸಲು ಕೋರಿದ್ದರೂ, ಸಮಯಪಾಲನೆಯಲ್ಲಿ ಬಹಳ ನಿರಾಸೆಯಾಗಿದೆ. ಲೇಖನಗಳು ಸೆಪ್ಟೆಂಬರ್ ೨೦೧೪, ಎರಡನೇ ವಾರದಲ್ಲೂ ಕೈಬರಹದ ಮೂಲಕ ತಲುಪಿ, ಮುದ್ರಣಾಲಯಕ್ಕೆ ತಯಾರಿ ಮಾಡಿಕೊಡಲು ಬಹಳಷ್ಟು ಶ್ರಮವಹಿಸಬೇಕಾಯಿತು. ಸದಸ್ಯ ಲೇಖಕರು ದಯವಿಟ್ಟು ಈ–ಮೇಲ್ ಮೂಲಕ ವ್ಯವಹಾರವನ್ನು ನಡೆಸಿದಲ್ಲಿ ಸಿಬ್ಬಂದಿಯೇ ಇಲ್ಲದ ಅಕಾದೆಮಿಯಲ್ಲಿ ಕೆಲಸ ಸುಗಮವಾಗಿ ನಡೆಯಲು ಸಾಧ್ಯವಾಗುವಂತೆ ಅನುವು ಮಾಡಿಕೊಡಬೇಕೆಂದು ಈ ಮೂಲಕ ವಿನಂತಿಸುತ್ತೇವೆ.

ಇತಿಹಾಸ ದರ್ಶನ ೨೮ನೆಯ ಸಂಪುಟದ ಪ್ರಕಟಣೆಗೆ ರಂಭಾಪುರಿ ಮಠದ ಈಗಿನ ಪಟ್ಟಾಧ್ಯಕ್ಷರಾದ ಶ್ರೀ ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ರೂ. ೨೫,೦೦೦/–ವನ್ನು ಆಶೀರ್ವಾದ ಪೂರ್ವಕವಾಗಿ ನೀಡಿದ್ದಾರೆ ಮತ್ತು ಭಾರತೀಯ ಇತಿಹಾಸ ಅನುಸಂಧಾನವು (ICHR, New Delhi) ಇತಿಹಾಸ ದರ್ಶನ ಮುದ್ರಣ ವೆಚ್ಚಕ್ಕಾಗಿ ರೂ.೪೫,೦೦೦/– ಗಳನ್ನು ಕೊಡಲು ಒಪ್ಪಿಗೆ ಸೂಚಿಸಿದ್ದು, ಹಣ ಬರಬೇಕಿದೆ. ಈ ೨೮ನೆಯ ವಾರ್ಷಿಕ ಸಮ್ಮೇಳನ ಮತ್ತು ಇತಿಹಾಸ

ದರ್ಶನ ಸಂಪುಟ ೨೯ಕ್ಕೂ ಸಹ ಅಕಾದೆಮಿಯು ಧನಸಹಾಯಕ್ಕಾಗಿ ಕೋರಿಕೆ ಸಲ್ಲಿಸಿದೆ. ಈ ಎರಡೂ ಸಂಸ್ಥೆಗಳಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಕರ್ನಾಟಕ ರಾಜ್ಯ ಪ್ರಾಚ್ಯವಸ್ತು, ವಸ್ತುಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ, ಮೈಸೂರು ಇವರು ಕರ್ನಾಟಕ ಇತಿಹಾಸ ಅಕಾದೆಮಿಯ ವಾರ್ಷಿಕ ಚಟುವಟಿಕೆಗಳಾದ ಐತಿಹಾಸಿಕ ಪರಂಪರೆ ಉಳಿಸಿ, ವಾರ್ಷಿಕ ಸಮ್ಮೇಳನ ಹಾಗೂ ಇತಿಹಾಸ ದರ್ಶನ ಸಂಪುಟದ ಮುದ್ರಣಕ್ಕಾಗಿ ಮೂರು ಲಕ್ಷ ರೂಪಾಯಿಗಳ ಧನಸಹಾಯ ನೀಡುತ್ತಾ ಬಂದಿದೆ.

ಅಕಾದೆಮಿಯು ಶಾಸನಕವಿಗಳ ಕ್ರಮಬದ್ಧ ಅಧ್ಯಯನ ನಡೆಸುವ ಅಗತ್ಯವಿರುವ ಅಂಶವನ್ನು ಮನಗಂಡು, ದಿನಾಂಕ ೭ ಮತ್ತು ೮ನೆಯ ಡಿಸೆಂಬರ್, ೨೦೧೩ರಲ್ಲಿ ಎರಡು ದಿನಗಳ ವಿಚಾರ ಸಂಕಿರಣವನ್ನು ಬೆಂಗಳೂರಿನಲ್ಲಿ ಅಯೋಜಿಸಲಾಗಿತ್ತು. ಈ ವಿಚಾರ ಸಂಕಿರಣಕ್ಕೆ ಜಿಲ್ಲಾವಾರು ಶಾಸನಗಳ ಹಿನ್ನೆಲೆಯಲ್ಲಿ, ಶಾಸನಕವಿಗಳ ಬಗ್ಗೆ ಸೂಕ್ತ ಮಾಹಿತಿಯೊಂದಿಗೆ ಪ್ರಬಂಧ ಮಂಡಿಸಲು ೨೩ ಜನ ವಿದ್ವಾಂಸರನ್ನು ಆಹ್ವಾನಿಸಲಾಗಿತ್ತು. ಎರಡು ದಿನಗಳ ಈ ವಿಚಾರ ಸಂಕಿರಣದಲ್ಲಿ ಒಟ್ಟು ನಾಲ್ಕು ವಿಚಾರಗೋಷ್ಠಿಗಳು ನಡೆದು, ೨೩ ಪ್ರಬಂಧಗಳು ಮಂಡನೆಯಾಗಿ, ವಿದ್ವಾಂಸರಿಂದ ಚರ್ಚೆಗಳಾಗಿದ್ದಲ್ಲದೆ, ಹೊಸ ಸೂಚನೆಯೊಂದಿಗೆ ಕರ್ನಾಟಕ ಶಾಸನಕವಿಗಳು, ಲಿಪಿಕಾರರು, ಶಾಸನದ ಸಾಹಿತ್ಯ ರಚನೆ, ಶಾಸನ ರಚನೆಕಾರರ ಮಹತ್ವಗಳ ಬಗ್ಗೆ ಹೊಸ ದೃಷ್ಟಿ ಬೀರುವಂತಾಯಿತು. ಈ ವಿಚಾರ ಸಂಕಿರಣದಲ್ಲಿ ಇದುವರೆಗೆ ಅಧ್ಯಯನದ ವ್ಯಾಪ್ತಿಗೆ ಒಳಪಡದೆ ಇದ್ದ ಒಂದು ಹೊಸ ಅಧ್ಯಯನದ ಸಾಧ್ಯತೆಗೆ ನಾಂದಿಯಾಯಿತು. ಈ ವಿಚಾರ ಸಂಕಿರಣವು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ನಡೆದರೂ, ಸರ್ಕಾರ ನಿರೀಕ್ಷಿತ ಧನಸಹಾಯ ನೀಡಲಿಲ್ಲ.

ಅಕಾದೆಮಿಯ ಸದಸ್ಯರಾದ ಶ್ರೀ ಜಿ. ರಾಜನ್‌ರವರು ತುಮಕೂರು, ನಮ್ಮ ಅಕಾದೆಮಿಯಲ್ಲಿ ರೂ. ೫೦,೦೦೦/– (ಐವತ್ತು ಸಾವಿರ ರೂ.)ಗಳ ದತ್ತಿನಿಧಿಯೊಂದನ್ನು ಸ್ಥಾಪಿಸುವ ಮೂಲಕ, ಅದರಿಂದ ಬರುವ ಬಡ್ಡಿಹಣದಲ್ಲಿ ಡಿ.ಲಿಟ್. ಮತ್ತು ಪಿಎಚ್.ಡಿ. ಪಡೆದ ಪದವೀಧರರಿಗೆ ಪ್ರತೀ ವಾರ್ಷಿಕ ಸಮ್ಮೇಳನದಲ್ಲಿ ನಗದು ಬಹುಮಾನ ಕೊಡುವ ಯೋಜನೆಯನ್ನು ಹಮ್ಮಿಕೊಂಡಿದ್ದಾರೆ. ಈ ಯೋಜನೆಯು ಪ್ರಸ್ತುತ ಸಮ್ಮೇಳನದಿಂದಲೇ ಜಾರಿಗೊಳಿಸಲಾಗಿದೆ. ಅವರ ಇತಿಹಾಸದ ಮೇಲಿನ ಪ್ರೀತಿಗೆ ನಮ್ಮ ಅಭಿನಂದನೆಗಳು.

ದೇವರಕೊಂಡಾರೆಡ್ಡಿ
ಅಧ್ಯಕ್ಷರು
ಕರ್ನಾಟಕ ಇತಿಹಾಸ ಅಕಾದೆಮಿ (ರಿ.)

೨೦ ಸೆಪ್ಟೆಂಬರ್, ೨೦೧೪
ಬೆಂಗಳೂರು

ಸಂಪಾದಕೀಯ

ಕರ್ನಾಟಕ ಇತಿಹಾಸ ಅಕಾಡೆಮಿಯು ಸ್ಥಾಪಿತವಾಗಿ ಇಂದಿಗೆ ೨೯ ವರ್ಷಗಳು ತುಂಬುತ್ತಿವೆ. ಪ್ರತಿವರ್ಷ ತನ್ನ ಪ್ರಮುಖ ಚಟುವಟಿಕೆಯೆಂಬಂತೆ ವಾರ್ಷಿಕ ಸಮ್ಮೇಳನ ನಡೆಸುತ್ತದೆ. ಇದಕ್ಕೆ ಅನೇಕ ಮಠಮಾನ್ಯಗಳು, ಸಂಸ್ಥೆಗಳು, ಸರ್ಕಾರದ ಇಲಾಖೆಗಳು ಸಹಕಾರ ನೀಡುತ್ತಾ ಬಂದಿವೆ. ಈ ಮೂಲಕ ಕರ್ನಾಟಕ ಇತಿಹಾಸ ಅಕಾಡೆಮಿಯು ತನ್ನ ಅಸ್ತಿತ್ವವನ್ನು ಸಾರುತ್ತಾ ಜ್ಞಾನದ ವಿಕಾಸದ ಕಡೆಗೆ ಗಮನ ನೀಡುತ್ತಿದೆ. ಇದರ ಅಂಗವಾಗಿ ನಡೆಯುವ ಸಮ್ಮೇಳನಗಳಲ್ಲಿ ವಿದ್ವಾಂಸರು, ಪಾಮರರು, ವಿದ್ಯಾರ್ಥಿಗಳು ಕರ್ನಾಟಕ ಸಂಸ್ಕೃತಿ ಇತಿಹಾಸಕ್ಕೆ ಸಂಬಂಧಿಸಿದಂತೆ ತಮ್ಮ ಆಯ್ಕೆಯ ಪ್ರಬಂಧಗಳನ್ನು ಮಂಡಿಸುತ್ತಾ ಬಂದಿದ್ದಾರೆ. ಇಂತಹ ಪ್ರಬಂಧಗಳನ್ನು ಮುಂದಿನ ಸಮ್ಮೇಳನದ ಹೊತ್ತಿಗೆ ಇತಿಹಾಸ ದರ್ಶನ ಎಂಬ ಹೆಸರಿನ ಸಂಪುಟವಾಗಿ ಹೊರತರುತ್ತಿದೆ. ಇದುವರೆವಿಗೆ ೨೮ ಸಂಪುಟಗಳನ್ನು ಅಕಾಡೆಮಿಯು ಹೊರತಂದಿದೆ. ವಿದ್ವತ್ ವಲಯ ಈ ಸಂಪುಟಗಳನ್ನು ಆದರದಿಂದ ಬರಮಾಡಿಕೊಂಡಿದೆ.

ಈ ವರ್ಷ ೨೦೧೩ರ ಸೆಪ್ಟಂಬರ್ ತಿಂಗಳಲ್ಲಿ ಕರ್ನಾಟಕ ಇತಿಹಾಸ ಅಕಾಡೆಮಿಯು ಬೆಂಗಳೂರಿನಲ್ಲಿ ನಡೆಸಿದ ೨೭ನೆಯ ಸಮ್ಮೇಳನದಲ್ಲಿ ೧೮೦ ಪ್ರಬಂಧಗಳು ಮಂಡನೆಯಾಗಿದ್ದು, ಪ್ರಸ್ತುತ ಸುಮಾರು ೧೩೪ ಪ್ರಬಂಧಗಳ ಸಂಗ್ರಹ ಹಾಗೂ ಸಂಪಾದನೆ. ಇದು ಇತಿಹಾಸ ದರ್ಶನ ೨೯ನೆಯ ಸಂಪುಟವಾಗಿ ಹೊರಬರುತ್ತಿದೆ. ಹಿಂದಿನ ಎಲ್ಲಾ ಸಂಪುಟಗಳಂತೆ ಇದರಲ್ಲಿಯೂ ಪ್ರಾಗೈತಿಹಾಸ, ಶಾಸನ, ದೇವಾಲಯ, ಸಾಮಾಜಿಕ, ಧಾರ್ಮಿಕ, ಶಿಲ್ಪ, ಕಲೆ ಇತ್ತೀಚಿನ ಇತಿಹಾಸ ಮೊದಲಾದವುಗಳಿಗೆ ಸಂಬಂಧಿಸಿದ ಸಂಶೋಧನಾ ಲೇಖನಗಳಿವೆ. ಈ ಬಾರಿ ಛಾಯಾ ಚಿತ್ರಗಳಲ್ಲಿ ಕೆಲವನ್ನು ವರ್ಣದಲ್ಲಿ ನೀಡಲಾಗಿದೆ. ಹಾಗೆಯೇ ಲೇಖನದೊಂದಿಗೆ ಬರಬೇಕಾಗಿದ್ದ ಚಿತ್ರಗಳನ್ನು ಉತ್ತಮ ಮುದ್ರಣ ಕಾಗದ ಬಳಸಿ ಪ್ರತ್ಯೇಕವಾಗಿ ನೀಡಲಾಗಿದೆ. ಇದಕ್ಕೆ ಕಾರಣ ಇವು ಪುನರ್ಬಳಕೆಯಾಗಲೆಂಬ ಉದ್ದೇಶ.

ಈ ಸಂಪುಟದ ಮುದ್ರಣಕ್ಕೆ ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು, ವಸ್ತು ಸಂಗ್ರಹಾಲಯಗಳು ಹಾಗೂ ಪರಂಪರೆ ಇಲಾಖೆ ಇವರು ೨೦೧೪ರಲ್ಲಿ ಒಂದೂವರೆ ಲಕ್ಷ ರೂಪಾಯಿಗಳ ನೆರವು ನೀಡಲಿದ್ದಾರೆ. ಹಾಗೆಯೇ ಸಂಪುಟ ೨೮ಕ್ಕೆ ಕೇಂದ್ರ ಸರ್ಕಾರದ ಐ.ಸಿ.ಎಚ್.ಆರ್. ನವದೆಹಲಿ ಸಂಸ್ಥೆಯು ನಲವತ್ತೈದು ಸಾವಿರ ರೂಪಾಯಿಗಳನ್ನು ನೀಡಿದೆ. ಶ್ರೀಮದ್ ಪ್ರಸನ್ನ ರೇಣುಕ ವೀರ ಸೋಮೇಶ್ವರ ರಾಜ ದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ಬಾಳೆಹೊನ್ನೂರು ವಾರ್ಷಿಕ ಇಪ್ಪತ್ತೈದು ಸಾವಿ ರೂಪಾಯಿಗಳ ನೆರವು ನೀಡುತ್ತಾ ಬಂದಿದ್ದಾರೆ. ಇವರೆಲ್ಲರ ಸಹಕಾರ, ಸಹಾಯ ಹಾಗೂ ಕೃಪಾಶೀರ್ವಾದಗಳಿಂದ ಈ ಸಂಪುಟವೂ ಶಕ್ತಿಯುತವಾಗಿ, ಆಕರ್ಷಕವಾಗಿ ಹೊರಬಂದಿದೆ. ಎಂದಿನಂತೆ ವಿದ್ವಜ್ಜನರು ಇದನ್ನು ಆದರದಿಂದ ಬರಮಾಡಿಕೊಳ್ಳುವರೆಂದು ಆಶಿಸುತ್ತೇವೆ.

ಇತಿಹಾಸ ದರ್ಶನದ ಸಂಶೋಧನಾ ಪ್ರಬಂಧ ಲೇಖನಗಳು ನಮ್ಮ Website ಮೂಲಕ ರಾಷ್ಟ್ರೀಯ, ಅಂತರಾಷ್ಟ್ರೀಯ ಮಟ್ಟದಲ್ಲಿ ಚರ್ಚೆ, ವಿಚಾರ ವಿನಿಮಯವಾಗುತ್ತಿವೆ. ಆದ್ದರಿಂದ ಸಂಶೋಧನಾತ್ಮಕ ಈ ಪ್ರಬಂಧಗಳ ಗುಣಮಟ್ಟದ ಮೌಲ್ಯತೆಯನ್ನು ಕಾಪಾಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವೆಂದು ಆಶಿಸೋಣ.

ಈ ಸಂಪುಟ ಹೊರಬರಲು ಸಹಕಾರ ನೀಡಿದ ಕರ್ನಾಟಕ ಇತಿಹಾಸ ಅಕಾಡೆಮಿಯ ಕಾರ್ಯಕಾರಿ ಸಮಿತಿ, ಸಮ್ಮೇಳನದ ಸಹಯೋಗ ನೀಡಿದ್ದ ಮಿಥಿಕ್ ಸೊಸೈಟಿ, ಸಂಕಲನದಲ್ಲಿ ಸಹಕರಿಸಿದ ಶ್ರೀಮತಿ ಎಸ್.ವೈ. ನಿರ್ಮಲ, ಕರಡಚ್ಚು ತಿದ್ದುವಲ್ಲಿ ನೆರವಾದ ಶ್ರೀ ಬಿ.ಎಸ್. ಗುರುಪ್ರಸಾದ್, ಡಾ. ಕೆ. ವಸಂತಲಕ್ಷ್ಮಿ, ಡಾ. ಎಚ್. ಜಯಮ್ಮ, ಅಂದವಾಗಿ ಮುದ್ರಿಸಿದ ಲಕ್ಷ್ಮೀ ಮುದ್ರಣಾಲಯದ ಶ್ರೀ ಕೆ.ಎಸ್. ಮಂಜು ಅವರಿಗೂ, ಅಂದವಾಗಿ ಮುಖಪುಟ ರಚಿಸಿದ ವಿ.ಎಸ್. ಪ್ರಸನ್ನಕುಮಾರ್, ಡಿಟಿಪಿ ಮಾಡಿದ ಪಿ.ಎಸ್. ಸುಬ್ರಮಣಿ ಬಾಬು ಮತ್ತು ಶ್ರೀಮತಿ ಮಾಲಾ, ಶ್ರೀಮತಿ ನಿರ್ಮಲ, ಶ್ರೀಮತಿ ಸೌಮ್ಯ ಹಾಗೂ ಸಿಬ್ಬಂದಿ ವರ್ಗಕ್ಕೂ ನಮ್ಮ ಕೃತಜ್ಞತೆಗಳು.

೨೫ ಸೆಪ್ಟಂಬರ್ ೨೦೧೪
ಶ್ರೀ ಜಯನಾಮ ಸಂವತ್ಸರ ಆಶ್ವಯುಜ
ಶುದ್ಧ ಪಾಡ್ಯ ಗುರುವಾರ

ಡಾ. ದೇವರಕೊಂಡಾರೆಡ್ಡಿ
ಶ್ರೀ ದೇವರಾಜ ಸ್ವಾಮಿ

ಕರ್ನಾಟಕ ಇತಿಹಾಸ ಅಕಾದೆಮಿ (ರಿ.)

ಬೆಂಗಳೂರು

ಕಾರ್ಯಕಾರಿ ಸಮಿತಿ

(೨೩.೦೯.೨೦೧೨ರಲ್ಲಿ ಆಯ್ಕೆಯಾದವರು)

ಗೌರವ ಅಧ್ಯಕ್ಷರು

ಡಾ॥ ಸೂರ್ಯನಾಥ ಕಾಮತ್

ಕಾರ್ಯಾಧ್ಯಕ್ಷರು

ಡಾ॥ ದೇವರಕೊಂಡಾರೆಡ್ಡಿ

ಉಪಾಧ್ಯಕ್ಷರು

ಡಾ॥ ಎಂ.ಜಿ. ನಾಗರಾಜ್

ಡಾ॥ ಬಿ. ರಾಜಶೇಖರಪ್ಪ

ಪ್ರಧಾನ ಕಾರ್ಯದರ್ಶಿ

ಶ್ರೀ ಜಿ.ಕೆ. ದೇವರಾಜಸ್ವಾಮಿ

ಕಾರ್ಯದರ್ಶಿಗಳು

ಡಾ॥ ಪಿ.ವಿ. ಕೃಷ್ಣಮೂರ್ತಿ

ಡಾ॥ ಜಯಮ್ಮ ಎಚ್. ಕರಿಯಣ್ಣ

ಕೋಶಾಧ್ಯಕ್ಷರು

ಶ್ರೀ ಎಂ.ಬಿ. ಪಾಟೀಲ್

ಸದಸ್ಯರು

ಡಾ॥ ಎಚ್.ಎಸ್. ಗೋಪಾಲರಾವ್, ಅರಶಿನಕುಂಟೆ
ಶ್ರೀ ರಾಜೇಂದ್ರಪ್ಪ ಎಸ್., ಬೆಂಗಳೂರು
ಡಾ॥ ಬಾಲಕೃಷ್ಣ ಹೆಗ್ಗಡೆ, ಶಿವಮೊಗ್ಗ
ಶ್ರೀ ಟಿ.ಎಚ್.ಎಂ. ಬಸವರಾಜ, ಬಳ್ಳಾರಿ
ಶ್ರೀ ಮಂಜುನಾಥ ರಾಮಕೃಷ್ಣ ಹೆಗ್ಗಡೆ, ಹಾವೇರಿ
ಡಾ॥ ಅಮರೇಶ್ ಯತಗಲ್, ಬಿಜಾಪುರ
ಪ್ರೊ. ಜೆ.ಕೆ. ಮಲ್ಲಿಕಾರ್ಜುನ, ದಾವಣಗೆರೆ
ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ, ರಾಯಚೂರು
ಡಾ॥ ಎಚ್.ಎಸ್. ಉಷಾರಾಣಿ, ಮೈಸೂರು
ಡಾ॥ ಎ.ಕೆ. ಶಾಸ್ತ್ರಿ, ಶಿರಸಿ
ಪ್ರೊ. ಮುರುಗೇಶಿ ಓ., ಉಡುಪಿ
ಡಾ॥ ರವೀಂದ್ರನಾಥ, ಹಂಪಿ
ಡಾ॥ ಎಸ್.ಕೆ. ಮೇಲಕಾರ, ಧಾರವಾಡ
ಡಾ॥ ಶ್ರೀಮತಿ ಸ್ಮಿತಾ ಪಿ. ಸುರೇಬಾನಕರ, ಬೆಳಗಾವಿ
ಶ್ರೀ ಡಿ.ಎನ್. ಯೋಗೀಶ್ವರಪ್ಪ, ತುಮಕೂರು
ಡಾ॥ ಬೆಂ.ಶಾ. ಶಾಮಲಾ ರತ್ನಕುಮಾರಿ, ಬೆಂಗಳೂರು
ಶ್ರೀ ಕಲ್ಲಪ್ಪ ಮಹದೇವಪ್ಪ ಗರಗ, ಗದಗ

ಪರಿವಿಡಿ

ಈವರೆಗೆ ಕರ್ನಾಟಕ ಇತಿಹಾಸ ಅಕಾದೆಮಿಯ ವಾರ್ಷಿಕ ಅಧಿವೇಶನಗಳ ಸರ್ವಾಧ್ಯಕ್ಷರು ಹಾಗೂ ಇತರ ವಿವರಗಳು

ಸಂಖ್ಯೆ	ಸರ್ವಾಧ್ಯಕ್ಷರು ದಿನಾಂಕ-ವರ್ಷ/ಸ್ಥಳ ಆಶ್ರಯ/ಸಹಯೋಗ

೧. **ಡಾ|| ಎಂ. ಚಿದಾನಂದಮೂರ್ತಿ**
೧೫-೧೭ ಮೇ ೧೯೮೭
ಕರ್ನಾಟಕ ಇತಿಹಾಸ ಅಕಾದೆಮಿ
ಬೆಂಗಳೂರು



೨. **ಡಾ|| ಜಿ. ಎಸ್. ಗಾಯಿ**
೨೩-೨೪ ಅಕ್ಟೋಬರ್ ೧೯೮೮
ಸಿದ್ಧಗಂಗಾಕ್ಷೇತ್ರ : ಡಾ| ಶಿವಕುಮಾರ ಸ್ವಾಮಿಗಳು ಮತ್ತು ತುಮಕೂರು ಜಿಲ್ಲಾ ಇತಿಹಾಸ ಪರಿಷತ್ತು, ತುಮಕೂರು



೩. **ಡಾ|| ಶ್ರೀನಿವಾಸ ರಿತ್ತಿ**
೧೦-೧೧ ಜೂನ್ ೧೯೮೯
ಶ್ರೀ ಮ. ನಿ. ಪ್ರ. ಜ|| ಡಾ|| ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು, ಶ್ರೀ ತೋಂಟದಾರ್ಯ ಮಠದ ವೀರಶೈವ ಅಧ್ಯಯನ ಸಂಸ್ಥೆ, ಗದಗ



೪. **ಡಾ|| ಎಸ್. ಆರ್. ರಾವ್**
೨೧-೨೨ ಜುಲೈ ೧೯೯೦
ಡಾ|| ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ, ಹಿರೇಮಠ, ದಾವಣಗೆರೆ



೫. **ಡಾ|| ಬಾ. ರಾ. ಗೋಪಾಲ್**
೧೨-೧೪ ಜುಲೈ ೧೯೯೧
ಚಿನ್ಮೂಲಾದ್ರಿ ಶ್ರೀ ಮುರುಘ ರಾಜೇಂದ್ರ ಬೃಹನ್ಮಠ, ಚಿತ್ರದುರ್ಗ



೬. **ಡಾ|| ಕೆ. ವಿ. ರಮೇಶ್**
೧೧-೧೩ ಜುಲೈ ೧೯೯೨
ಪಂಡಿತ್ ತಾರಾನಾಥ ಶಿಕ್ಷಣ ಸಂಸ್ಥೆ ರಾಯಚೂರು



೭. **ಡಾ|| ಅ. ಸುಂದರ**
೨೩-೨೫ ಜುಲೈ ೧೯೯೩
ಸುತ್ತೂರು ಮಠದ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಜೆ. ಎಸ್. ಎಸ್. ಸಂಸ್ಥೆ, ಮೈಸೂರು




೮. **ಡಾ|| ಎಂ. ಎಂ. ಕಲಬುರ್ಗಿ**
೯-೧೦ ಜುಲೈ ೧೯೯೪
ಶ್ರೀ ಎಂ. ವೈ. ಘೋರ್ಪಡೆ ಕರ್ನಾಟಕ ಸೇವಾ ಸಂಘ ಸೊಂಡೂರು



೯. **ಡಾ|| ಎ.ವಿ. ನರಸಿಂಹಮೂರ್ತಿ**
೯-೧೧ ಸೆಪ್ಟೆಂಬರ್ ೧೯೯೫
ಶ್ರೀ ಮ. ನಿ. ಪ್ರ. ಸಿದ್ಧರಾಮ ಮಹಾಸ್ವಾಮಿಗಳು - ಶ್ರೀ ನಾಗನೂರು ರುದ್ರಾಕ್ಷಿಮಠದ ವೀರಶೈವ ಅಧ್ಯಯನ ಅಕಾದೆಮಿ ಬೆಳಗಾವಿ




೧೦. **ಡಾ|| ಜಿ. ಎಸ್. ದೀಕ್ಷಿತ್**
೭-೯ ಜೂನ್ ೧೯೯೬
ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಶ್ರೀ ಮ. ನಿ. ಪ್ರ. ಶಿವಯೋಗಿ ಮಹಾಸ್ವಾಮಿಗಳು ಶ್ರೀ ಮುರುಘಾಮಠ ಧಾರವಾಡ



೧೧. **ಪ್ರೊ|| ಕೆ. ಅಭಿಶಂಕರ್**
೨೫-೨೭ ಅಕ್ಟೋಬರ್ ೧೯೯೭
ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನ ಮಠ ಹಾಗೂ ಸರ್ವಜ್ಞೇಂದ್ರ ಸರಸ್ವತೀ ಪ್ರತಿಷ್ಠಾನ ಶಿರಸಿ




೧೨. **ಡಾ|| ಎಸ್. ನಾಗರಾಜು**
೧೪-೧೬ ನವೆಂಬರ್ ೧೯೯೮
ಕರ್ನಾಟಕ ಇತಿಹಾಸ ಅಕಾದೆಮಿ ದಿ ಮಿಥಿಕ್ ಸೊಸೈಟಿ, ಬೆಂಗಳೂರು



೧೩. **ಡಾ|| ಶ್ರೀನಿವಾಸ ಹಾವನೂರ**
೧೧-೧೩ ಜೂನ್ ೧೯೯೯
ಮಾನ್ಯ ಸಚಿವ ಶ್ರೀ ಡಿ. ನಾರಾಯಣದಾಸ್ ಮತ್ತು ಆಯೋಜಕರಾದ ಶ್ರೀ ಕುಂ.ಬಾ.ಸದಾಶಿವಪ್ಪ ಸ್ವಾಗತ ಸಮಿತಿ, ಹರಪನಹಳ್ಳಿ



೧೪. **ಶ್ರೀ ಸಿ. ಟಿ. ಎಂ. ಕೊಟ್ರಯ್ಯ**
೮-೧೦ ಜುಲೈ ೨೦೦೦
ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ ಹಂಪಿ



ಸಂಖ್ಯೆ	ಸರ್ವಾಧ್ಯಕ್ಷರು ದಿನಾಂಕ-ವರ್ಷ/ಸ್ಥಳ ಆಶ್ರಯ/ಸಹಯೋಗ

೧೫. **ಡಾ|| ಜೋತ್ಸ್ನಾ ಕಾಮತ್**
೧೩-೧೫ ಅಕ್ಟೋಬರ್ ೨೦೦೧
ಪೂಜ್ಯ ಶ್ರೀ ವಿಶ್ವೇಶ್ವರ ತೀರ್ಥ ಪಾದಂಗಳು
ಪೇಜಾವರ ಮಠಾಧೀಶರು, ಉಡುಪಿ



೧೬. **ಡಾ. ಎ.ಕೆ. ಶಾಸ್ತ್ರಿ**
೨೨-೨೪ ಸೆಪ್ಟೆಂಬರ್ ೨೦೦೨
ಪೂಜ್ಯಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳು
ಶ್ರೀ ರಾಮಚಂದ್ರಾಪುರ ಮಠ
ಹೊಸನಗರ



೧೭. **ಡಾ. ಎಸ್. ರಾಜಶೇಖರ್**
೧೩-೧೫ ಸೆಪ್ಟೆಂಬರ್ ೨೦೦೩
ವಿಶ್ವಚೇತನ ಸಂಸ್ಥೆ
ಬಾದಾಮಿ




೧೮. **ಶ್ರೀ ಕೆಳದಿ ಗುಂಡಾ ಜೋಯಿಸ್**
೨೪-೨೬ ಸೆಪ್ಟೆಂಬರ್ ೨೦೦೪
ಶ್ರೀ ಚನ್ನಪ್ಪಸ್ವಾಮಿ ವಿದ್ಯಾಪೀಠ
ಚನ್ನ-ಚೇತನ ಪ್ರಕಾಶನ ಮತ್ತು ಹಿರೇಕಲ್ಮಠ
ಹೊನ್ನಾಳಿ




೧೯. **ಡಾ. ಬಿ.ವ್ಹಿ. ಶಿರೂರ**
೧೧-೧೩ ಸೆಪ್ಟೆಂಬರ್ ೨೦೦೫
ಶ್ರೀ ಕೊತ್ತಲ ಬಸವೇಶ್ವರ
ಭಾರತೀಯ ಶಿಕ್ಷಣ ಸಂಸ್ಥೆ, ಸೇಡಂ



೨೦. **ಡಾ. ಸೂರ್ಯನಾಥ ಕಾಮತ್**
೯-೧೧ ಸೆಪ್ಟೆಂಬರ್ ೨೦೦೬
ಶ್ರೀ ರಾಘವೇಂದ್ರ ಸ್ವಾಮಿಗಳ ಮಠ
ನಂಜನಗೂಡು




೨೧. **ಪ್ರೊ. ಲಕ್ಷ್ಮಣ್ ತೆಲಗಾವಿ**
೮-೧೦ ಸೆಪ್ಟೆಂಬರ್ ೨೦೦೭
ಹಗರಿಬೊಮ್ಮನಹಳ್ಳಿಯ
ರಾಮನಗರ, ಹಗರಿಬೊಮ್ಮನಹಳ್ಳಿ
ಶ್ರೀರಾಮ ಯುವಕ ಸಂಘ



೨೨. **ಡಾ. ವಸುಂಧರಾ ಫಿಲಿಯೋಜಾ**
೧೮-೨೧ ಸೆಪ್ಟೆಂಬರ್ ೨೦೦೮
ಧರ್ಮಸ್ಥಳ ಮಂಜುನಾಥೇಶ್ವರ
ದೇವಾಲಯ ಸಂಸ್ಥೆ, ಧರ್ಮಸ್ಥಳ




೨೩. **ಡಾ. ಎಂ.ಜಿ. ನಾಗರಾಜ್**
೧೦-೧೨ ಅಕ್ಟೋಬರ್ ೨೦೦೯
ಶ್ರೀ ಜಗದ್ಗುರು ರಂಭಾಪುರಿ
ವೀರ ಸಿಂಹಾಸನ ಮಹಾಸಂಸ್ಥಾನ ಪೀಠ
ಬಾಳೆಹೊನ್ನೂರು




೨೪. **ಡಾ. ಎಂ.ಎಸ್. ಕೃಷ್ಣಮೂರ್ತಿ**
೧೩-೧೫ ನವೆಂಬರ್ ೨೦೧೦
ಶ್ರೀ ಆದಿಚುಂಚನಗಿರಿ
ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ




೨೫. **ಡಾ. ಎಚ್.ಎಸ್.ಗೋಪಾಲರಾವ್**
೯-೧೧ ಸೆಪ್ಟೆಂಬರ್ ೨೦೧೧
ದಿ ಮಿಥಿಕ್ ಸೊಸೈಟಿ
ಬೆಂಗಳೂರು





೨೬. **ಡಾ. ಎಸ್.ವಿ. ವೆಂಕಟೇಶಯ್ಯ**
೨೨-೨೪ ಸೆಪ್ಟೆಂಬರ್ ೨೦೧೨
ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಮ್
ಶೃಂಗೇರಿ




೨೭. **ಡಾ. ಎಸ್.ಕೆ. ಜೋಷಿ**
೨೧-೨೩ ಸೆಪ್ಟೆಂಬರ್ ೨೦೧೩
ದಿ ಮಿಥಿಕ್ ಸೊಸೈಟಿ
ಬೆಂಗಳೂರು



ಡಾ|| ಬಾ.ರಾ. ಗೋಪಾಲ್ ಶಾಸನ ದತ್ತಿ ಪ್ರಶಸ್ತಿ ಸನ್ಮಾನಿತರು

ಸಂಖ್ಯೆ	ದಿನಾಂಕ-ವರ್ಷ-ಸ್ಥಳ	ಸನ್ಮಾನಿತರು
೧	***ಡಾ. ಕೆ.ವಿ. ರಮೇಶ*** ೧೫ನೇ ವಾರ್ಷಿಕ ಸಮ್ಮೇಳನ ಅಕ್ಟೋಬರ್ ೨೦೦೧ ಉಡುಪಿ	
೨	***ಡಾ. ಶ್ರೀನಿವಾಸ ರತ್ತಿ*** ೧೬ನೇ ವಾರ್ಷಿಕ ಸಮ್ಮೇಳನ ಸೆಪ್ಟಂಬರ್ ೨೦೦೨ ಹೊಸನಗರ	
೩	***ಡಾ. ದೇವರಕೊಂಡಾರೆಡ್ಡಿ*** ೧೭ನೇ ವಾರ್ಷಿಕ ಸಮ್ಮೇಳನ ಸೆಪ್ಟಂಬರ್ ೨೦೦೩ ಬಾದಾಮಿ	
೪	***ಡಾ. ಬಿ. ರಾಜಶೇಖರಪ್ಪ*** ೧೮ನೇ ಸಮ್ಮೇಳನ ಸೆಪ್ಟಂಬರ್ ೨೦೦೪ ಹೊನ್ನಾಳಿ	
೫	***ಡಾ. ಕೆ.ಆರ್. ಗಣೇಶ್*** ೧೯ನೇ ಸಮ್ಮೇಳನ ಸೆಪ್ಟಂಬರ್ ೨೦೦೫ ಸೇಡಂ	
೬	***ಡಾ. ಎಂ.ಜಿ. ನಾಗರಾಜ್*** ೨೦ನೇ ಸಮ್ಮೇಳನ ಸೆಪ್ಟೆಂಬರ್ ೨೦೦೬ ನಂಜನಗೂಡು	
೭	***ಡಾ. ಎಚ್.ಎಸ್. ಗೋಪಾಲರಾವ್*** ೨೧ನೇ ಸಮ್ಮೇಳನ ಸೆಪ್ಟೆಂಬರ್ ೨೦೦೭ ಹಗರಿಬೊಮ್ಮನಹಳ್ಳಿ	
೮	***ಡಾ. ಪಿ.ಎನ್. ನರಸಿಂಹಮೂರ್ತಿ*** ೨೨ನೇ ಸಮ್ಮೇಳನ ಸೆಪ್ಟೆಂಬರ್ ೨೦೦೮ ಧರ್ಮಸ್ಥಳ	
೯	***ಶ್ರೀಮತಿ ಹನುಮಾಕ್ಷಿ ಗೋಗಿ*** ೨೩ನೇ ಸಮ್ಮೇಳನ ಅಕ್ಟೋಬರ್ ೨೦೦೯ ಬಾಳೇಹೊನ್ನೂರು	
೧೦	***ಡಾ. ಪಿ.ವಿ. ಕೃಷ್ಣಮೂರ್ತಿ*** ೨೪ನೇ ಸಮ್ಮೇಳನ ನವೆಂಬರ್ ೨೦೧೦ ಆದಿಚುಂಚನಗಿರಿ	
೧೧	***ಶ್ರೀ ಕೆ. ಮೊಹಮ್ಮದ್ ಶರೀಫ್*** ೨೫ನೇ ಸಮ್ಮೇಳನ ಸೆಪ್ಟೆಂಬರ್ ೨೦೧೧ ಬೆಂಗಳೂರು	
೧೨	***ಶ್ರೀ ಸೀತಾರಾಮ್ ಜಾಗೀರ್‌ದಾರ್*** ೨೬ನೇ ಸಮ್ಮೇಳನ ಸೆಪ್ಟೆಂಬರ್ ೨೦೧೨ ಶೃಂಗೇರಿ	

ಸಂಖ್ಯೆ	ದಿನಾಂಕ–ವರ್ಷ–ಸ್ಥಳ	ಸನ್ಮಾನಿತರು
೧೩	***ಡಾ॥ ಆರ್. ಶೇಷಶಾಸ್ತ್ರಿ*** ೨೭ನೇ ಸಮ್ಮೇಳನ ಸೆಪ್ಟೆಂಬರ್ ೨೦೧೩ ಬೆಂಗಳೂರು	
೧೪	***ಶ್ರೀ ಎಚ್.ಎಂ. ನಾಗರಾಜರಾವ್*** ೨೮ನೇ ಸಮ್ಮೇಳನ ಸೆಪ್ಟೆಂಬರ್ ೨೦೧೪ ಶಿರ್ವ, ಉಡುಪಿ ಜಿಲ್ಲೆ.	

ಶ್ರೇಷ್ಠ ಇತಿಹಾಸ ತಜ್ಞರಿಗಾಗಿ ಬಿ.ಆರ್.ಆರ್. ಟ್ರಸ್ಟ್‌ನ ಸನ್ಮಾನ್ಯ ಅಶೋಕ್‌ಕುಮಾರ್ ಅವರು ಸ್ಥಾಪಿಸಿರುವ

ಇತಿಹಾಸ ಸಂಸ್ಕೃತಿ ಶ್ರೀ ವಿಶಿಷ್ಟ ಪ್ರಶಸ್ತಿ

ಸಂಖ್ಯೆ ದಿನಾಂಕ-ವರ್ಷ	ಸ್ಥಳ	ಸನ್ಮಾನಿತರು	
೧. ೨೬ನೆಯ ಸಮ್ಮೇಳನ ೨೨.೦೯.೨೦೧೨ ಶೃಂಗೇರಿ	ಶ್ರೀಮದ್ ಜಗದ್ಗುರು ಆದಿ ಶಂಕರಾಚಾರ್ಯ ಮಹಾಸಂಸ್ಥಾನಮ್, ದಕ್ಷಿಣಾಮ್ನಯ ಶ್ರೀ ಶಾರದಾ ಪೀಠಮ್, ಶೃಂಗೇರಿ	**ಪ್ರೊ. ಲಕ್ಷ್ಮಣ್ ತೆಲಗಾವಿ**	
೨. ೨೭ನೆಯ ಸಮ್ಮೇಳನ ಬೆಂಗಳೂರು	ದಿ ಮಿಥಿಕ್ ಸೊಸೈಟಿ, ಬೆಂಗಳೂರು	**ಡಾ. ಸೂರ್ಯನಾಥ ಕಾಮತ್**	
೩. ೨೮ನೆಯ ಸಮ್ಮೇಳನ ಶಿರ್ವ	ಮೂಲ್ಕಿ ಸುಂದರರಾಮ್‌ಶೆಟ್ಟಿ ಕಾಲೇಜು, ಉಡುಪಿ ಜಿಲ್ಲೆ	**ಡಾ. ಅ. ಸುಂದರ**	

ಕರ್ನಾಟಕ ಇತಿಹಾಸ ಅಕಾದೆಮಿ ೨೭ನೆಯ ವಾರ್ಷಿಕ ಸಮ್ಮೇಳನ

ದಿ ಮಿಥಿಕ್ ಸೊಸೈಟಿ, ೧೪/೩, ನೃಪತುಂಗ ರಸ್ತೆ, ಬೆಂಗಳೂರು–೫೬೦ ೦೦೧

ದಿನಾಂಕ ೨೧ ಸೆಪ್ಟೆಂಬರ್ ೨೦೧೩

ಸಮ್ಮೇಳನಾಧ್ಯಕ್ಷರು : **ಡಾ॥ ಎಸ್.ಕೆ. ಜೋಶಿ***

ಅಧ್ಯಕ್ಷ ಭಾಷಣ

ಮಾನ್ಯರೇ, ನಮಸ್ಕಾರಗಳು

ವಿದ್ವಾಂಸರ ಈ ಬೃಹದ್ ಸಭೆಯಲ್ಲಿ ನನ್ನದು ಮೊದಲ ತೊದಲು ಮಾತು. ಜಗತ್ತು ಅಜ್ಞಾನದ – ಕತ್ತಲೆಯಲ್ಲಿ ಮುಳುಗಿರುವಾಗ, ಈ ಭಾರತವು ಸುಜ್ಞಾನದ ಸುಪ್ರಭಾತವನ್ನು ಕಂಡಿತ್ತು. ಆ ಪ್ರಾಚೀನ ಸುಪ್ರಭಾತ, ರಶ್ಮಿಗಳನ್ನು ರಾಷ್ಟ್ರಕವಿ ಕುವೆಂಪು ಅವರ ನುಡಿಗಳಲ್ಲಿ, ಕೇಳೋಣ.

'ಪೃಥುವಿಯ ಪ್ರಥಮ ಸುಪ್ರಭಾತದಲಿ
ದೃಷ್ಟಿಗಸ್ಪಷ್ಟ ಅಜ್ಞಾನ ಗೋಚರದಲಿ
ಹಿಮಶಿಲೆ ಪೃಥುಕಾಯ ಲೇಖದಲಿ
ಆರ್ಯ ಮಾತೆಯ ಮೊದಲ ತೊದಲ ವಾಣಿಯಿಂದೆ
ಸಾಮವೇದದಿ ಮೂಡಿದ ಮೂರ್ತಿ ನೀನೆಲೇ
ಸಂಸ್ಕೃತಿಯ ವಾಗ್ದೇವಿ!..........
ಮೈತ್ರೇಯಿ, ಯಾಜ್ಞವಲ್ಕ್ಯಾದಿಗಳು ತವಸ್ತನ್ಯ
ಪೀಯೂಷ ಪಾನವ ಮಾಡಿ, ಮೃತ್ಯುವನೆ ಉತ್ತರಿಸಿ
ಅಮೃತರಾದರಲ್ಲೇ! ಕಾವ್ಯವಾಹಿನಿಯ ರೂಪದಿಂದೆ
ಪುನೀತರಾದರಲ್ತೆ'

ಗೆಳೆಯರೇ ಎಚ್ಚೆತ್ತ ಭಾರತದ ಶ್ರಾವ್ಯ ಶ್ರೋತ್ರಿ ಚಿತ್ರಣವಿದು ಇತಿಹಾಸ ಪ್ರಾರಂಭವಲ್ಲಿ ಎಷ್ಟೊಂದು ಸುಂದರ ದಿನ. ಇಂದು ಕರ್ನಾಟಕ ಇತಿಹಾಸ ಅಕಾದೆಮಿಯ ೨೭ನೆಯ ಅಧಿವೇಶನ. ಎತ್ತಣವೂ ಇತಿಹಾಸದ ಮಾತು, ಪುರಾತತ್ವದ ಪ್ರಕರಣ ಪ್ರಾಚೀನ ಜ್ಞಾನ ಪ್ರಭೆ.

ಬೆಂಗಳೂರಿನ ಈ ಮಿಥಿಕ್ ಸೊಸೈಟಿ ಭವನದಲ್ಲಿ ಜ್ಞಾನ ಮಂದಿರದಲ್ಲಿ ಹಮ್ಮಿಕೊಂಡ ಈ ಅಧಿವೇಶನಕ್ಕೆ ನನ್ನನ್ನು ಸರ್ವಾಧ್ಯಕ್ಷನನ್ನಾಗಿ ಆರಿಸಿದ್ದೀರಿ ನೀವೆಲ್ಲ. ಕರ್ನಾಟಕದ ಈ ಮಹಾ ಜ್ಞಾನಮಂದಿರದಲ್ಲಿ ನನ್ನನ್ನು ನಿಮ್ಮವನನ್ನಾಗಿ ಮಾಡಿಕೊಂಡಿದ್ದೀರಿ. ನಿಮ್ಮನ್ನು ನಾನೂ ನನ್ನವರನ್ನಾಗಿ ಮಾಡಿಕೊಂಡಿದ್ದೇನೆ, ನನ್ನನ್ನು ಈ ಗೌರವಯುತ ಸ್ಥಾನದಲ್ಲಿ ಕುಳ್ಳಿರಿಸಿದ್ದೀರಿ. ಹಾಗಾಗಿ ಜೀವನದುದ್ದಕ್ಕೂ ನಾನು ನಿಮ್ಮೆಲ್ಲರಿಗೂ ಚಿರಋಣಿ.

ಈ ಸಂದರ್ಭದಲ್ಲಿ ಕರ್ನಾಟಕ ಇತಿಹಾಸ ಅಕಾದೆಮಿಯ ಹಿರಿಯ ಪ್ರತಿಭೆಗಳಾದ ಪ್ರೊ॥ ಸೂರ್ಯನಾಥ್ ಯು. ಕಾಮತ್, ಡಾ॥ ದೇವರ ಕೊಂಡಾರೆಡ್ಡಿ, ಡಾ॥ ಎಂ.ಜಿ. ನಾಗರಾಜ್ ಮುಂತಾದ ಮಹನೀಯರನ್ನು ಹೃತ್ಪೂರ್ವಕವಾಗಿ ಸ್ಮರಿಸಲೇಬೇಕು ಅಲ್ಲದೆ, ಅಕಾದೆಮಿಯ ಕಾರ್ಯಕಾರೀ ಸಮಿತಿ ಸದಸ್ಯರಿಗೂ ತಮಗೂ ನನ್ನ ವಂದನೆಗಳು. ಏಕೆಂದರೆ ಜ್ಞಾನವನ್ನು ಅರಸುವ ಆಗರ ತಾವೆಲ್ಲಾ.

ಹಾಗೆ ನೋಡಿದಲ್ಲಿ ನನ್ನ ಬದುಕನ್ನು ಸಿಂಹಾವಲೋಕಿಸಿದಾಗ ನನ್ನ ಬಗ್ಗೆ ನನಗೆ ಹೀಗನಿಸುತ್ತದೆ. 'ಎನಗಿಂತ ಕಿರಿಯರಿಲ್ಲ' ಎಂದು ೧೨ ನೆಯ ಶತಮಾನದ ಭಕ್ತಿಶಕ್ತಿಯಾದ ಶ್ರೀ ಬಸವನ ಅಂತರಾಳದ ವಿನಯವಂತಿಕೆಯ ನುಡಿಯಲ್ಲಿ ನಾನು ಭಾಗಿಯಾಗಬಯಸುವೆ. ಹೌದು! ನನಗಿಂತ ಕಿರಿಯರಿಲ್ಲ' ಎಂದು ತಮ್ಮೆಲ್ಲರ ಮುಂದೆ ಎಸ್.ಕೆ. ಜೋಶಿ ವಿನೀತನಾಗಿ ಕಿರಿಯನಾಗಿ ಹೇಳುತ್ತಾನೆ.

ಪೂರ್ವಾರ್ಧ ಅವಲೋಕನ

ಮಹನೀಯರೇ, ಕರ್ನಾಟಕ ಇತಿಹಾಸ ಅಕಾದೆಮಿಯು ಒಂದು ಮಹಾಮನೆ ಎಂದು ನಾನು ತಿಳಿದಿರುವೆ. ಕಲ್ಯಾಣ ಚಾಲುಕ್ಯ ರಾಜಧಾನಿಯಾಗಿ ಮೆರೆದ ಬಸವ ಕಲ್ಯಾಣದ ರಾಜರಂಗಳದಲ್ಲಿ ಕೂಡಿದ ಶಿವಶರಣರ ನೆನಪಾಗುತ್ತದೆ. ಅದು ಶರಣರ ಮಹಾಮನೆಯಾದರೆ, ನಮ್ಮದು ಇದು ಇತಿಹಾಸದ ಒಂದು ಮಹಾಮನೆ.

ಮನೆ ಕಟ್ಟಿ, ಗುಡಿ ಕಟ್ಟಿ ಇತಿಹಾಸದ ನೆಲೆಗಳನ್ನು ಗಟ್ಟಿಮುಟ್ಟಾಗಿ ಹುಡುಕಿದ, ಕರ್ನಾಟಕ ಇತಿಹಾಸದ ಅಕಾದೆಮಿಯ ೨೬ ಅಧ್ಯಕ್ಷರುಗಳನ್ನು ಕಳೆದ ಸಂದ ೨೬ ಸಂವತ್ಸರಗಳ ಕಾಲಘಟ್ಟದಲ್ಲಿ ಬೆಳಸಿದ ಹಾಗೂ ಬೆಳೆದು ಬಂದ ಮಹಾ ಶಕ್ತಿಗಳಿವರು. ಅವರೆಲ್ಲರನ್ನೂ ಈ ಪುಣ್ಯ ಪ್ರವರದಲ್ಲಿ ನೆನೆಯಲೇಬೇಕು. ಅವರೆಲ್ಲರೂ ಅಪ್ರತಿಮರು, ಈ ಪ್ರತಿಭರು, ಆದರ್ಶರು ಹಾಗೂ ಇತಿಹಾಸ ಪುರಾತತ್ವದ ತಪಸ್ವಿಗಳು. ಇವರೆಲ್ಲ ತಮ್ಮ ಏಕಾಗ್ರತೆ, ತನ್ಮಯತೆ ಹಾಗೂ ಸಮರ್ಪಣೆಗಳೆಂಬ ತ್ರಿಗುಣಗಳ ಮೂಲಕ ಇತಿಹಾಸ ಜಗತ್ತಿಗೆ ಚಿರಪರಿಚಿರಾಗಿದ್ದಾರೆ.

ಈ ಮೇಲಿನ ಇತಿಹಾಸ–ಪುರಾತತ್ವ ತಪಸ್ವಿಗಳು, ಕನ್ನಡನಾಡಿನ ಹಾಗೂ ಭಾರತ ದೇಶದ ಇನ್ನುಳಿದ

---

*# ೩೦, ಸಿಲ್ವರ್ ಆರ್ಚಡ್, ಧಾರವಾಡ–೫೮೦ ೦೦೧.

ಪ್ರದೇಶಗಳಲ್ಲಿ, 'ಇನ್ ಸರ್ಚ್ ಆಫ್ ಯೆಸ್ಟರ್‌ಡೇಸ್' (In Search of Yesterday's) ಅವರು ನಡೆದ ಶಿಸ್ತಿನ (Disciplines) ದಾರಿಗಳು ಹಲವಾರು. ಆ ಕಾರ್ಯ ಕ್ಷೇತ್ರಗಳಲ್ಲಿ ಮೇಲಿನ ಮಹನೀಯರು ನಡೆದ ಹೆಜ್ಜೆಗಳನ್ನು ಗುರುತಿಸೋಣ.

ಇತಿಹಾಸಪೂರ್ವ, ಪ್ರಾಗಿತಿಹಾಸ, ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಇತಿಹಾಸ, ಕಲೆ, ಮೂರ್ತಿಶಿಲ್ಪ, ವಾಸ್ತುಶಿಲ್ಪ, ಶಾಸನ, ನಾಣ್ಯ, ವಸ್ತು ಸಂಗ್ರಹಾಲಯ, ಅನ್ವೇಷಣೆ, ಉತ್ಖನನ, ಪ್ರಕಟಣೆ, ಸಂರಕ್ಷಣೆ, (ದಾಖಲೀಕರಣ, ಪ್ರಾಚ್ಯಾವಶೇಷ ಕಾಯ್ದೆ, ಬೃಹತ್ ಭಾರತದ ಪುರಾತತ್ವಾನ್ವೇಷಣೆ, ಕೋಟೆ ಕೊತ್ತಲಗಳು, ವರ್ಣಚಿತ್ರಗಳ ರಾಸಾಯನಿಕ ಸಂಸ್ಕರಣೆ, ಉದ್ಯಾನ ವಿನ್ಯಾಸ, ಸ್ಮಾರಕಗಳ ಸೌಂದರ್ಯೀಕರಣ, ಉತ್ಖನನ ವರದಿ, ಗಣ್ಯಾತಿಗಣ್ಯರ ಸಂದರ್ಶನ, ಪ್ರವಾಸೋದ್ಯಮದ ಅಭಿವೃದ್ಧಿ, ಗ್ರಾಮ-ಗ್ರಾಮಗಳ ಪ್ರಾಚ್ಯಾವಶೇಷಗಳ ಸರ್ವೇಕ್ಷಣ ಮುಂತಾದವನ್ನು ಇಲ್ಲಿ ಸಾಂದರ್ಭಿಕವಾಗಿ ಉಲ್ಲೇಖಿಸ ಬಹುದಾಗಿದೆ.

ಕಳೆದೆರಡು ದಶಮಾನಗಳ ವಿಶಿಷ್ಟ ಕಾಲಘಟ್ಟದಲ್ಲಿ ಪ್ರಬಂಧಗಳನ್ನು ಮಂಡಿಸಿ, ಕರ್ನಾಟಕದ ಪುರಾತತ್ವವನ್ನು ಇನ್ನಷ್ಟು ಮತ್ತಷ್ಟು ಶ್ರೀಮಂತಗೊಳಿಸಿದ್ದರೆ, ಅದರ ದಾಖಲೀಕರಣ ಇಲ್ಲಿ ಅವಶ್ಯ. ಡಾ. ಕೆಳದಿ ಗುಂಡಾ ಜೋಯಿಸ್, ಡಾ॥ ವಸಂತ ಮಾಧವ ಕೆ.ಜಿ., ಡಾ. ವಸಂತ ಕುಷ್ಟಗಿ, ಡಾ. ಬಿ. ರಾಜಶೇಖರಪ್ಪ, ಡಾ. ಪಿ.ಎನ್. ನರಸಿಂಹ ಮೂರ್ತಿ, ಡಾ. ಎಂ.ಎಸ್. ಕೃಷ್ಣಮೂರ್ತಿ ಮುಂತಾದವರು ಸೇರಿದಂತೆ ಇಲ್ಲಿ ನೆರದಿರುವ ೧೫೦ಕ್ಕೂ ಹೆಚ್ಚು ಹಿರಿಯ-ಕಿರಿಯ ಇತಿಹಾಸ ವಿದ್ವಾಂಸರ ಪ್ರಭೆಗಳ ಜೊತೆಗೆ, ನೂರಾರು ಹಿರಿಯ ಹಾಗೂ ಕಿರಿಯ ಇತಿಹಾಸ ಸಂಶೋಧಕರು ಹೊಸ ಹೊಸ ಸಂಶೋಧನೆಗಳ ಮೂಲಕ ಮಹತ್ತರ ಕೊಡುಗೆಗಳನ್ನು ನೀಡಿದ್ದಾರೆ. ಈ ಪ್ರಕ್ರಿಯೆಯಡಿ ಕಳೆದ ೨೭ ಸಂವತ್ಸರಗಳಲ್ಲಿ ಕರ್ನಾಟಕ ಇತಿಹಾಸ ಅಕಾದೆಮಿಯ ವತಿಯಿಂದ ಹೊರ ಬಂದ ಇತಿಹಾಸ ದರ್ಶನ ಸಂಪುಟಗಳೇ ಸಾಕ್ಷಿ. ಪ್ರತಿಯೊಂದು ಇತಿಹಾಸ ದರ್ಶನ ಸಂಪುಟವು ಹೆಚ್ಚು ಕಡಿಮೆ ೫೦೦ ಪುಟಗಳಷ್ಟು ಗಾತ್ರವಿದ್ದು, ೫೦೦X೨೬ ಸಂಪುಟಗಳು ಒಟ್ಟು ೧೩,೦೦೦ (ಹದಿಮೂರು ಸಾವಿರ) ಪುಟಗಳಷ್ಟು, ಕರ್ನಾಟಕದ ಇತಿಹಾಸದ ಬಗ್ಗೆ ಸಂಶೋಧನಾ ಸಾಹಿತ್ಯವನ್ನು ವಿದ್ವತ್ ಲೋಕಕ್ಕೆ ನೀಡಿದೆ. ಇಷ್ಟೊಂದು ಹೊಸ ಸಂಶೋಧನಾ ಕೊಡುಗೆಯನ್ನು ಭಾರತದ ಮತ್ತಾವ ರಾಜ್ಯವೂ ನಾನು ಕಂಡಂತೆ ಕೊಟ್ಟಿಲ್ಲ. ಇದು ಕನ್ನಡಿಗರೆಲ್ಲ ಅಭಿಮಾನ ಪಡುವ ವಿಷಯ. ಇಂಥ ಸಾಧನೆಗೆ ಮಾನ್ಯ ಸದಸ್ಯರಾದ ನೀವೆಲ್ಲ ಕಾರಣರಾಗಿದ್ದೀರಿ, ಅದಕ್ಕಾಗಿ ನಿಮಗೆಲ್ಲ ಅಭಿನಂದನೆಗಳು.

ಅಕಾದೆಮಿಯ ಈ ಇತಿಹಾಸ ದರ್ಶನ ಸಂಪುಟಗಳ ಪ್ರಕಟಣೆಗಾಗಿ ಹಗಲಿರುಳೂ ತಿಂಗಳು ತಿಂಗಳುಗಟ್ಟಲೆ ದುಡಿದ ಮಹನೀಯರನ್ನು ಸ್ಮರಿಸಲೇಬೇಕು. ಡಾ. ಸೂರ್ಯನಾಥ ಕಾಮತ್, ಪ್ರೊ॥ ಲಕ್ಷ್ಮಣ ತೆಲಗಾವಿ, ಡಾ. ದೇವರಕೊಂಡಾರೆಡ್ಡಿ, ಡಾ. ಎಂ.ಜಿ. ನಾಗರಾಜ್, ಡಾ. ಪಿ.ವಿ. ಕೃಷ್ಣಮೂರ್ತಿ, ದೇವರಾಜಯಸ್ವಾಮಿ, ಶ್ರೀ ಎಸ್. ರಾಜೇಂದ್ರಪ್ಪ ಮುಂತಾದವರು ಅಭಿನಾರ್ಹರು ಅವರೆಲ್ಲರೂ ನಮ್ಮೊಡನೆ ಇಲ್ಲಿಯೇ ಈ ಸಭೆಯಲ್ಲಿ ಇದ್ದಾರೆ. ವಂದನೆಯು ನಿಮಗೆಲ್ಲ.

ಈವರೆಗೆ ಕರ್ನಾಟಕದ ಇತಿಹಾಸ ಸಂಶೋಧನೆಯಲ್ಲಿ ಪಾಲ್ಗೊಂಡ ಸಾಧಕರ ಸಾಧನೆಯ ಸಂಕ್ಷಿಪ್ತ ಚಿತ್ರಣವನ್ನು ನೀಡಲಾಯಿತು. ಇದು ಸಂಶೋಧನೆಯ ಪೂರ್ವಾವಲೋಕನದ-ಕ್ಷಿಪ್ರದ ನಡಿಗೆಯಲ್ಲಿ.

ಸಂಶೋಧನೆಯ ಮಧ್ಯಾವಲೋಕನ

ನನ್ನ ಈ ಭಾಷಣದ ನಡುಭಾಗದಲ್ಲಿ 'ಮಧ್ಯಾವಲೋಕನ' ಎಂಬ ಶೀರ್ಷಿಕೆಯಲ್ಲಿ, ನಾನು ಪುರಾತತ್ವದಲ್ಲಿ ನಡೆದು ಬಂದ ದಾರಿಯನ್ನು ಸ್ವಲ್ಪದರಲ್ಲಿ ತಿಳಿಸಿದರೆ, ಪರೋಕ್ಷವಾಗಿ ಭಾರತೀಯ ಪುರಾತತ್ವ ಇಲಾಖೆಯ ಜ್ಞಾನ ಸಾಧನೆಯನ್ನು ಜ್ಞಾನ ಅರಸುವವರಿಗೆ ತಿಳಿಸಿದಂತಾಗುತ್ತದೆ. ಪುರಾತತ್ವಕ್ಕೂ ನನಗೂ ಇರುವ ನಿಕಟತೆಯನ್ನು ಪ್ರಕಟ ಮಾಡುವುದು ಒಂದು ತರಹದಲ್ಲಿ ಭೂತಕಾಲದ ಭಾರತೀಯ ಪರಂಪರೆಯನ್ನು ತೋರಿಸಿದಂತಾಗುತ್ತದೆ. ಅದಾಗ ಅದನ್ನು ಇಲ್ಲಿ ಉಕ್ತಿಸುವೆ.

ಏಶಿಯಾ ಖಂಡದಲ್ಲಿಯೇ ಏಕಮೇವ ಪುರಾತತ್ವ ತರಬೇತಿ ಸಂಸ್ಥೆಯನ್ನು ದಿಲ್ಲಿಯಲ್ಲಿ ೧೯೬೨ರಲ್ಲಿ ಸ್ಥಾಪಿಸಿದವರು ಇತಿಹಾಸಕಾರರೇ. 'ಡಿಸ್ಕವರಿ ಆಫ್ ಇಂಡಿಯಾ ಹಾಗೂ ಗ್ಲಿಂಪ್ಸೆಸ್ ಆಫ್ ವರ್ಡ್ ಹಿಸ್ಟರಿ' ಕೃತಿಗಳ ಜನಕರಾದ ಪ್ರಧಾನಿ ಜವಾಹರಲಾಲ್ ನೆಹರು ಹಾಗೂ ಅವರ ಸಚಿವ ಸಂಪುಟದಲ್ಲಿ ಸಚಿವರಾಗಿದ್ದ ಪ್ರೊ॥ ಹುಮಾಯುನ್ ಕಬೀರ್ ಕೂಡ ಇತಿಹಾಸದ ಪ್ರಾಧ್ಯಾಪಕರೇ. ಅಲ್ಲಿ ನನಗೆ ದೊರೆತುದು ಶ್ರೇಷ್ಠ ಇತಿಹಾಸಕಾರರ ಗುಂಪು ಪ್ರೊ॥ ನೂರುಲ್ ಹಸನ್, ಪ್ರೊ॥ ನಿಹರ್ ರಂಜನ್ ರೇ, ಡಾ. ರೋಮಿಲಾ ಥಾಪರ್, ಡಾ. ಕಪಿಲಾ ವಾತ್ಸ್ಯಾಯನ, ಪ್ರೊ॥ ಬಿ.ಬಿ. ಲಾಲ್, ಪ್ರೊ॥ ಬಿ.ಕೆ. ಥಾಪರ್, ಪ್ರೊ॥ ಹೆಚ್.ಡಿ. ಸಂಕಾಲಿಯಾ, ಡಾ. ಸಿ. ಶಿವರಾಮಮೂರ್ತಿ, ಡಾ. ಆರ್.ಡಿ. ಬ್ಯಾನರ್ಜಿ, ಶ್ರೀ ಕೆ.ವಿ. ಸೌಂದರ್‌ರಾಜನ್, ಡಾ. ಎಸ್.ಬಿ. ದೇವ್, ಡಾ. ಎಂ.ಎಂ. ಧವಳೀಕರ್, ಡಾ. ಇರ್ಫಾನ್ ಹಬೀನ್, ಡಾ. ಬಿ. ಷೇಕ್ ಅಲಿ, ಡಾ. ಎಸ್.ಆರ್. ರಾವ್, ಡಾ. ಅ. ಸುಂದರ, ಡಾ. ಶ್ರೀನಿವಾಸ್ ರಿತ್ತಿ, ಡಾ. ಎಂ.ಎನ್. ದೇಶಪಾಂಡೆ, ಡಾ. ಆರ್. ಸಿ. ಅಗರವಾಲ್, ಡಾ. ಆರ್. ಎಸ್. ಪಂಚಮುಖಿ, ಡಾ. ಕೆ.ವಿ. ರಮೇಶ್, ಡಾ. ಬಿ.ಸಿ.ಎಚ್. ಛಾಬ್ರಾ, ಡಾ. ಜಿ.ಎಸ್. ಗಾಯಿ ಹೀಗೆ ಇನ್ನೂ ಹತ್ತಾರು ಗುರುಗಳು ಅಲ್ಲಿ ನನ್ನ ಇತಿಹಾಸ ಪುರಾತತ್ವದ ಜ್ಞಾನ

ಪರಿಧಿಯನ್ನು ವಿಸ್ತರಿಸಿದರು. ಅವರು ಕಲಿಸಿದ ಪಾಠಗಳು ಇತಿಹಾಸದ ಮೂಸೆಯಿಂದ ಬಂದ ಭಾವಗಳು ನನ್ನ ಇತಿಹಾಸದ ಬರವಣಿಗೆಗಳಾದವು. ಅವರು ಇತಿಹಾಸದ "ಸಾರ್ಥವಾಹ"ರಾದರೆ, ನಾನು ಅವರಿಟ್ಟ ಹೆಜ್ಜೆಯಲ್ಲಿ ನಡೆದ 'ಕಾರವಾನ್' ಅದೆ.

'ಉದರ ನಿಮಿತ್ತಂ ಬಹುಕೃತ ವೇಷಂ' ಎನ್ನುವಂತಿದ್ದರೂ, ದೇಶದ ಹಲವಾರು ಪ್ರಾಚೀನ ತಾಣಗಳು, ಅವುಗಳ ಉತ್ಖನನಗಳು ನನ್ನಲ್ಲಿದ್ದ ಪುರಾತತ್ವವಿದನನ್ನು ಪೂರ್ಣತ್ವದ ಕಡೆಗೆ ಕೊಂಡೊಯ್ದುವು. ಸುಮಾರು ಸಂವತ್ಸರಗಳು ನನ್ನನ್ನು ಭಾರತ ದೇಶ ಸುತ್ತಿಸಿದವು. ಮಥುರಾ (ಉ.ಪ.) ಕಾನಿಷ್ಕನ ರಾಜಧಾನಿ, ಭಗವಾನ್‌ಪುರ (ಹರಿಯಾಣ), ಸರಸ್ವತಿ ತೀರ, ದೌಲತಾಬಾದ್ (ಮಹಾರಾಷ್ಟ್ರ) ಮಧ್ಯಯುಗೀನ ಹಿಂದೂ ಹಾಗೂ ಮುಸ್ಲಿಂ ವಸತಿ ನೆಲೆಗಳು, ಇನಾಮುಗಾವಿನ (ಮಹಾರಾಷ್ಟ್ರ) ನಿಯೋಲಿಥಿಕ್-ಚಾಲ್ಕೊಲಿಥಿಕ್ ನಿವೇಶನ; ಮಧ್ಯಯುಗೀನ ದಕ್ಷಿಣ ಭಾರತದ ಭವ್ಯ ಸಾಮ್ರಾಜ್ಯದ ರಾಜಧಾನಿ ಹಂಪಿ ಉತ್ಖನನ; ಐಹೊಳೆ-ಚಾಲುಕ್ಯ ಪೂರ್ಣ ಇಟ್ಟಿಗೆ ಕಟ್ಟಡಗಳು (ಶಾತವಾಹನರ ಕೃತಿಗಳೂ); ಬನವಾಸಿ-ಶಾತವಾಹನ ಹಾಗೂ ಕದಂಬರ ಕಾಲದ ನಿವೇಶನ; ಸನ್ನತಿ-ಕರ್ನಾಟಕದ ಪ್ರಮುಖ ಬೌದ್ಧ ನಿವೇಶನ ಗುಡ್ನಾಪುರ (ಕರ್ನಾಟಕ) ಕದಂಬರ ಕಾಲದ ತಾಣ; ಓಲ್ಡ್ ಗೋವಾದ ಸೆಂಟ್ ಅಗ್ಯಾಸಿಸ್ ಇಗರ್ಜಿ ಮುಂತಾದ ಕ್ರೈಸ್ತ ಸ್ಮಾರಕ ಅವಶೇಷಗಳೇ ಮುಂತಾದವು ಹತ್ತು ಹಲವಾರು. ಈ ಉತ್ಖನನಗಳು "ನನ್ನ ಪ್ರತ್ನಕೀರ್ತಿಂ ಅಪಾವೃಣು" ಭಾರತೀಯ ಪುರಾತತ್ವ ಸರ್ವೇಕ್ಷಣಾದ ಸಂಕುಲಕ್ಕೆ ಬಲ ತಂದುಕೊಟ್ಟವು. ಅಲ್ಲಿಯ ಸಮಗ್ರ ವರದಿ ಸಿದ್ಧ ಪಡಿಸುವುದು ನನ್ನ ಕರ್ತವ್ಯದ ಭಾಗವೇ ಆಗಿತ್ತು.

ಇದಲ್ಲದೆ ನನ್ನ ವೃತ್ತಿ ಜೀವನದಲ್ಲಿ ಹಿರಿಯ ಪುರಾತತ್ವವಿದನಾಗಿ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯಲ್ಲಿ ದೇಶ ಸುತ್ತುವಾಗ ಕೆಲವು ಐತಿಹಾಸಿಕ ಸ್ಮಾರಕಗಳು ತಮ್ಮ ಹಿರಿಮೆ ಗರಿಮೆಗಳ ಕಥೆಯನ್ನು ನನಗೆ ಹೇಳಿದವು. ಆ ಮೂಲ ಸಂವೇದನಾಶೀಲ ಕಥೆಗಳೇ ನನಗೆ ಇತಿಹಾಸ ಬರೆವ ಆಕರಗಳಾದವು. ಅವುಗಳನ್ನು ಜನಸಾಮಾನ್ಯರ ಬಾಗಿಲಿಗೆ ತಲ್ಪುವಂತೆ ನನ್ನ ನೂರಾರು ಜನಪ್ರಿಯ ಲೇಖನಗಳು ಹಲವು ಪತ್ರಿಕೆಗಳಲ್ಲಿ ಪ್ರಕಟವಾದವು. ಈ ನನ್ನ ಸರಳ ಹಾಗೂ ಮೃದುಲ ಶೈಲಿಯ ನೂರಾರು ಲೇಖನಗಳು ದೇಶದ ಇತಿಹಾಸವನ್ನು ಪ್ರಚುರಗೊಳಿಸಿವೆ. ಇದು ನನಗೆ ತೃಪ್ತಿ ತಂದಿದೆ.

ಆ ಕಥೆಗಳೇನು? ಭಾವಗಳೇನು? ಆ ಐತಿಹಾಸಿಕ ಸ್ಮಾರಕಗಳ ಮೂಲಕ ಸಂವೇದನೆಗಳು ಇತಿಹಾಸ ಬರೆವ ಸಾಧನಗಳಾದವು. ಪ್ರೇಮ ಸಂದೇಶದ ತಾಜಮಹಲ್ (ಆಗ್ರಾ), ಜೀವನವನ್ನು ಮೇಲಕ್ಕೇರಿಸುವ ಸಂದೇಶ ಸಾರುವ ದಿಲ್ಲಿಯ ಕುತುಬಮಿನಾರ್ ಪ್ರಾಚೀನ ಬೌದ್ಧ ಸಂದೇಶದ ನಾಳಂದ ವಿಶ್ವವಿದ್ಯಾನಿಲಯ, ಕಾಲಚಕ್ರದ ಗತಿಸೂಚಿಸುವ ಸಾರ್ವಭೌಮರ ಕಣಕಣಗಳ ತಿರುಗಿಸುವ ಚಕ್ರ ರಥದ ಕೋನಾರ್ಕದ ಸೂರ್ಯ ದೇವಾಲಯ, ಬೌದ್ಧ-ಜೈನ-ಹಿಂದೂ ಸಹಜೀವನ ಸಾರುವ ಅಜಂತಾ, ಎಲ್ಲೋರದ ಗುಹಾಂತ ದೇವಾಲಯಗಳು, ಶಾಂತಿ ಸಂದೇಶದ ಅಶೋಕ ನಿರ್ಮಿತ ಸಾಂಚಿ ಸ್ತೂಪ, ದೇವಾಲಯಗಳ ಪರಿಪೂರ್ಣತೆಯ ಕರ್ನಾಟಕದ ಪಟ್ಟದಕಲ್ಲು, ಕ್ಷಾತ್ರ ತೇಜದಿ ಮರೆಯಾದರು ಮರೆಯಲಾರದ ಹಂಪಿ. ದೇಶದಲ್ಲಿಯೇ ಬೃಹತ್ ಗೋಪುರವನ್ನೊಂದಿರುವ ತಂಜಾವೂರಿನ ಬೃಹದೇಶ್ವರ ದೇವಾಲಯ, ನೃತ್ಯಾಂಗನೆಯರ ಸೌಂದರ್ಯ ಶಿಲ್ಪಕಲ್ಪದ ಹಳೆಬೀಡು, ಬೇಲೂರು ಹಾಗೂ ಸೋಮನಾಥಪುರ. ಕ್ರಿಸ್ತನ ಬಲಿದಾನ ಸಾರುವ ವೆಲ್ಹ ಗೋವಾದ ಇಗರ್ಜಿಗಳು ನೀಲ ತರಂಗಗಳಲ್ಲಿ ಸಾಗರದ ದಡದಲ್ಲಿಯ ಮಹಾಬಲಿಪುರದ (Shore Temple) ದೇವಾಲಯ ಇತ್ಯಾದಿ. ಅನನ್ಯ ಐತಿಹಾಸಿಕ ವಿಶ್ವಪರಂಪರೆಯ ತಾಣಗಳು. ಇವು ನನ್ನನ್ನು ಮೂಕನಾಗಿಸಿ ದವು. ಮಾತನ್ನು ಮೌನವಾಗಿಸಿದವು. ಆದರೆ ಬರವಣಿಗೆಗೆ ಪ್ರೇರೇಪಿಸಿದವು.

ಈ ರೀತಿ ನನ್ನ ಇತಿಹಾಸದ ಓದು, ಇತಿಹಾಸದ ಗಳಿಕೆ ಇತಿಹಾಸದ ತಹತಹ, ಇತಿಹಾಸದ ಗಣ್ಯ ವಿದ್ವಾಂಸರ ಸಂಪರ್ಕ ಕ್ಷೇತ್ರಕಾರ್ಯಗಳು, ನನ್ನ ವೃತ್ತಿ ಜೀವನದ ಸುತ್ತ ಹೆಣೆದು ಬಂದು, ಅಲ್ಲಿ ಕಂಡ ಸದ್-ದರ್ಶನವನ್ನು ಕೃತಿಗಿಳಿಸುವುದು. ನಿವೃತ್ತಿ ನಂತರ ಬದುಕಿನ ಪ್ರವೃತ್ತಿಯಾಯಿತು.

ಇತಿಹಾಸಕಾರರ ಬದುಕೇ ಅಂಥಹದು! ಇತಿಹಾಸ ಕಾರರು ತಮ್ಮ ಜೀವಿತದಲ್ಲಿ ಎರಡು ಬದುಕನ್ನು ಬದುಕುತ್ತಾರೆ. ಒಂದು ವರ್ತಮಾನದ ಬದುಕು, ಇನ್ನೊಂದು ಭೂತಕಾಲದ ಬದುಕು ಭೂತಕಾಲದಲ್ಲಿ ಇಳಿದು, ಸುತ್ತಲೂ ಅಲ್ಲಲ್ಲಿ ಕಂಡ ವಿಷಯುಗಳನ್ನು ವರ್ತಮಾನದ ತೆರೆಯ ಮೇಲೆ ಬಿಂಬಿಸುತ್ತಾರೆ. ಅದು ಅವರು ನಿರ್ಮಾಣ ಮಾಡಿದ, ಬೃಹತ್ ಇತಿಹಾಸ ಗ್ರಂಥಗಳು.

ಸಂಶೋಧನೆಯ ಉತ್ತರಾರ್ಧ ಹಾಗೂ ಅಂತಿಮ ಅನಿಸಿಕೆ

ಭಾರತದ ತುಂಬೆಲ್ಲ ನನ್ನ ಪುರಾತತ್ವದ ಕಾರ್ಯಕ್ಷೇತ್ರ ಅದರಲ್ಲೂ ವಿಶೇಷವಾಗಿ ಹರಿಯಾಣ, ದಿಲ್ಲಿ, ಉತ್ತರಪ್ರದೇಶ, ಮಹಾರಾಷ್ಟ್ರ, ಗೋವಾ ಹಾಗೂ ಕರ್ನಾಟಕಗಳು ನನ್ನ ಕಾರ್ಯಕ್ಷೇತ್ರ ಕಳೆದ ೩-೪ ದಶಕಗಳು ಪುರಾತತ್ವ ಕ್ಷೇತ್ರದಲ್ಲಿ ಸಾಕಷ್ಟು ಕೆಲಸವಾಗಿರುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಭಾಗವಹಿಸಿದ್ದೇನೆ, ಅದೇ ನನ್ನ ಅರಿವಿನ ಸಂಪತ್ತಾಗಿದೆ.

ಇನ್ನೂ ಕೆಲವು ಕ್ಷೇತ್ರಗಳಲ್ಲಿ ಕೆಲಸವಾಗಬೇಕಾಗಿದೆ. ಆ ಅಂಶಗಳನ್ನಿಲ್ಲಿ ಕಾರ್ಯಾನ್ವಯಕ್ಕಾಗಿ ತಮ್ಮಂತಹ ವಿದ್ವಾಂಸರ ಮುಂದಿಡುವೆ.

ಪುರಾತತ್ವ ಹಾಗೂ ಇತಿಹಾಸಗಳು ಪ್ರಾಚೀನರ ಬದುಕನ್ನು ಬಿಂಬಿಸುವ ಸಂಪುಷ್ಟ ಕಲ್ಪಗಳು. ಪುರಾತತ್ವವು ಮಾನವನ ಬದುಕಿನ–ಆಯಾ ಕಾಲಗಳಲ್ಲಿ ಬಿಟ್ಟ ಅವಶೇಷಗಳ ಕೇವಲ ಅಸ್ತಿಪಂಜರಗಳಂತಿದ್ದು ಅವಕ್ಕೆ ಮಜ್ಜ–ಮಾಂಸಗಳನ್ನು ಉಪಯೋಗಿಸಿ ಮೂರ್ತ ಸ್ವರೂಪ ನಿರ್ಮಿಸುವುದು ಇತಿಹಾಸವಾಗುತ್ತದೆ.

'ಮೇಲ್ಮೈ ಸಂಗ್ರಹಣೆ (ಸರ್‌ಫೇಸ್ ಕಲೆಕ್ಷನ್)' ಹಾಗೂ ಉತ್ಖನನದಲ್ಲಿ ದೊರೆತ ಭೂತಳ ಸಂಗ್ರಹಣೆ (ಅಂಡರ್ ಗ್ರೌಂಡ್ ಕಲೆಕ್ಷನ್)ಗಳನ್ನು ಸರಿಯಾಗಿ ದಾಖಲಿಸಿ ಅವುಗಳ ಕಾರ್ಯಾರ್ಥ ಅಂಶ ಹಾಗೂ ಔಪಯೋಗಿಕ ಸಂಪತ್ತನ್ನು ವಿವರಿಸುವುದೆ ಇತಿಹಾಸದ ಉದ್ದೇಶವಾಗಿದೆ.

ಈ ಮೇಲಿನ ಎರಡು ಅಂಶಗಳನ್ನು ಪುರಾತತ್ವವಿದರು ಹಾಗೂ ಇತಿಹಾಸಕಾರರು ಲಕ್ಷ್ಯದಲ್ಲಿಡಬೇಕು. ಸತ್ಯಾರ್ಥವನ್ನು ಬರೆಯಬೇಕು. ಸತ್ಯ ಶೋಧನೆಯನ್ನು ದಾಖಲಿಸುವುದೇ ನಮ್ಮ ಗುರಿಯಾಗಬೇಕು.

ಇತಿಹಾಸವನ್ನು ಬರೆಯುವಲ್ಲಿ ಬಹಳ ಕ್ಲಿಷ್ಟ ಭಾಷೆ ಬೇಕಿಲ್ಲ. ಇತಿಹಾಸವನ್ನು ಜನಸಾಮಾನ್ಯರ ಬಾಗಿಲಿಗೆ ಒಯ್ಯ ಬೇಕಾದರೆ, ಅದು ಜನಭಾಷೆಯೇ ಆಗಿರಬೇಕು. ಸರಳ ಕೋಮಲ ನೇರ ತಿಳಿವ ಭಾಷೆಯಾಗಬೇಕೇ ಹಾಗೂ ಪರಂಪರೆಯನ್ನು ದೂರವಿರಿಸುವ ಭಾಷೆಯಾಗಕೂಡದು.

ಪಂ॥ ಜವಾಹರ್‌ಲಾಲ್ ನೆಹರು (Discovery of India) ಪ್ರೊ॥ ನೀಲಕಂಠಶಾಸ್ತ್ರಿ (An Advanced History of India), ಪ್ರೊ॥ ನಿಹರ್ ರಂಜನ್ ರೇ ಅವರ (Ramayana Myth of Reality), ಅಂತಹವರ ಜೊತೆಗೆ ನಮ್ಮ ಕನ್ನಡಿಗರೇ ಆದ ಡಾ. ಅ. ಸುಂದರ, ಡಾ. ಎಸ್. ಶೆಟ್ಟರ್ ಮುಂತಾದವರ ಇತಿಹಾಸ ಕೃತಿಗಳ ಭಾಷೆ ಕ್ಲಿಷ್ಟವಾಗಿದೆ. ಅವು ವಿದ್ವಾಂಸರಿಗೆ ಅಧ್ಯಯನ–ಅಧ್ಯಾಪನಗಳಿಗೆ ಯೋಗ್ಯವಾಗಿವೆ. ಆದರೆ ಅವು ಜನಸಾಮಾನ್ಯರಿಗೆ ತಲುಪುದಿಲ್ಲ. ಜನಸಾಮಾನ್ಯರಿಗೆ ಅದು ತಲುಪಬೇಕಾದರೆ ಸರಳ ಶೈಲಿಯ, ಮೃದು ಭಾಷೆಯ ಉಪಯೋಗ ಮಾಡಬೇಕು. ನನ್ನ ನೂರಾರು ಲೇಖನಗಳನ್ನು ಜನಪ್ರಿಯ ಶೈಲಿಯಲ್ಲಿ ಜನಸಾಮಾನ್ಯರ ಬುದ್ಧಿಗೆ ನಿಲುಕುವಂತೆ ನೀಡಿದ್ದೇನೆ. ಅವು ಪತ್ರಿಕೆಗಳಲ್ಲಿ ಮೂಡಿ ಲಕ್ಷಾಂತರ ಕನ್ನಡಿಗರಿಗೆ ತಲುಪಿವೆ ಎಂದು ನಾನು ವಿನಮ್ರತೆಯಿಂದ ಹೇಳಬಯಸುವೆ.

ಈ ತರಹದ ಜನಪ್ರಿಯ ಲೇಖನಗಳನ್ನು ಯುವ ಪೀಳಿಗೆಯ ಇತಿಹಾಸಕಾರರು ಬರೆಯಲಿ. ಡಾ. ಸೂರ್ಯನಾಥ್ ಕಾಮತ್‌ರಂಥ ನೇರ ಸರಳ ಭಾಷೆ, ಶೈಲಿ ಅಪ್ಯಾಯಮಾನ. ಇನ್ನು ಇತಿಹಾಸ ಪುರಾತತ್ವಗಳ ಸಂಶೋಧನಾ ಕಾರ್ಯ ಪಿ.ಎಚ್.ಡಿ. ಪದವಿ ಪಡೆದುಕೊಂಡ ಇತ್ತೀಚಿನ ವಿದ್ವಾಂಸರ ಬಗ್ಗೆ ಹೇಳುವುದಾದರೆ, ಹಿಂದಿನ ತಲೆಮಾರಿನವರಾದ ನಾವು ಪಿ.ಎಚ್.ಡಿ ಪದವಿ ಪಡೆಯಲು ಕನಿಷ್ಠ ನಾಲ್ಕು ವರ್ಷ ತೆಗೆದುಕೊಳ್ಳುತ್ತಿದ್ದೆವು. ನಮ್ಮ ಅಂದಿನ ಪ್ರಾಧ್ಯಾಪಕರೆಲ್ಲ ಶಿಸ್ತಿನ ಮಾರ್ಗದರ್ಶಕರು. ವಿಷಯವು ಪರಿಪೂರ್ಣವಾಗದ ಹೊರತು ಸುಮ್ಮನಿರುತ್ತಿರಲಿಲ್ಲ. ಅದು ಬಹಳ ಕಠಿಣ ತಪಸ್ಸು.

ಆದರೆ, ಇತ್ತೀಚಿನ ದಶಮಾನಗಳಲ್ಲಿ ಎಲ್ಲವೂ ಧಿಡೀರ್, ಎಲ್ಲೆಲ್ಲೂ ಆತುರಾತುರ, ಕೇವಲ ಎರಡು ಅಥವಾ ಎರಡೂವರೆ ವರ್ಷಗಳಲ್ಲಿ ಪಿ.ಎಚ್.ಡಿ ಪ್ರೌಢಪ್ರಬಂಧ ಸಲ್ಲಿಕೆಯಾಗಿಬಿಡುತ್ತದೆ. ಅದು ಹೀಗಾಗಬಾರದು, ಮಾರ್ಗದರ್ಶಿ ಪ್ರಾಧ್ಯಾಪಕರು ತಮ್ಮ ಸಂಶೋಧನಾ ವಿದ್ಯಾರ್ಥಿಗಳಲ್ಲಿ ಇನ್ನೂ ಹೆಚ್ಚು ಆಳ ಹಾಗೂ ಹರವು ತರಲು ಮಾರ್ಗದರ್ಶಕರಾಗಬೇಕು. ಅಂದರೆ, ಗುಣಮಟ್ಟದ ಸಂಶೋಧನೆ ಆಗುತ್ತದೆ.

ಇನ್ನೂ ಪುರಾತತ್ವ ಸಂಶೋಧನೆಯಲ್ಲಿ ಇನ್ನೂ ಸಾಕಷ್ಟು ವಿಶಿಷ್ಟ ಕಾರ್ಯ ಆಗಬೇಕಾಗಿದೆ.

ಬೃಹತ್ ಶಿಲಾಯುಗದಲ್ಲಿ ಸಂಶೋಧನೆಗೈದಂಥಹ ಡಾ. ಅ. ಸುಂದರ, ಡಾ. ಬಿ. ನರಸಿಂಹಯ್ಯ, ಡಾ. ಬಿ.ಕೆ. ಗುರುರಾಜರಾವ್ ಮುಂತಾದವರು ಅಭಿನಂದನಾರ್ಹರು. "ಬೃಹತ್ ಶಿಲಾಯುಗದ ಸಮಾಧಿಗಳು ಹೇಗಿದ್ದವು, ಅವುಗಳ ವಿನ್ಯಾಸ ರಚನೆ, ಉಪಯೋಗಿಸಿದ ಕಟ್ಟಡ ಪದಾರ್ಥ" ಇತ್ಯಾದಿಗಳ ಬಗ್ಗೆ ಮೇಲಿನ ವಿದ್ವಾಂಸರೆಲ್ಲ ತಮ್ಮ ತಪಸ್ಸಿನ ಫಲ ನೀಡಿದ್ದಾರೆ. ಆದರೆ ಈ ಕ್ಷೇತ್ರದಲ್ಲಿ ಆ ಜನರ ವಸತಿ ಸ್ವರೂಪಗಳು (Settlement Pattern), ಮನೆ ಮಾದರಿಗಳು ಹೇಗಿದ್ದವು ಇತ್ಯಾದಿಗಳನ್ನು ಇನ್ನೂ ಹೆಚ್ಚು ಹೆಚ್ಚಾಗಿ ಶೋಧಿಸಬೇಕಾಗಿದೆ.

ನೂತನ ಶಿಲಾಯುಗದ ನೆಲೆಗಳನ್ನು ಇನ್ನೂ ಹೆಚ್ಚು ಹೆಚ್ಚಾಗಿ ಶೋಧಿಸಬೇಕಾಗಿದೆ. ಡಾ. ಎಂ.ಎಸ್. ನಾಗರಾಜರಾವ್, ಅಲ್ಚಿನ್, ಅ. ಸುಂದರ, ಸಂಕಾಲಿಯಾ ಅವರು ಸಂಗನಕಲ್ಲು, ಪಿಕ್ಲಿಹಾಲ್, ಹುನೂರು ಮುಂತಾದವುಗಳನ್ನು ಶೋಧಿಸಿ ಮೈಲಿಗಲ್ಲು ಸ್ಥಾಪಿಸಿದ್ದಾರೆ. ಆ ಜನರ ವಸತಿ (Like Boya Huts)ಗಳು ನೀರಿನ ವ್ಯವಸ್ಥೆ, ಒಕ್ಕಲುತನ, ಉಪಕರಣಗಳು ಇತ್ಯಾದಿಗಳಿಗೆ ಒತ್ತು ನೀಡಲಾಗಿದೆ.

ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರದಲ್ಲಿ ಡಾ. ಎಸ್. ಶೆಟ್ಟರ್, ಡಾ. ಎಸ್. ರಾಜಶೇಖರ್, ಡಾ. ಎಸ್.ಆರ್. ರಾವ್, ಡಾ. ಷಡಕ್ಷರಯ್ಯ, ಡಾ. ಎಸ್. ನಾಗರಾಜು, ಡಾ. ಎಂ.ಎಸ್. ಕೃಷ್ಣಮೂರ್ತಿ ಮುಂತಾದ ಹಲವಾರು ವಿದ್ವಾಂಸರು ತಪಗೈದಿದ್ದಾರೆ. ಈ ಕ್ಷೇತ್ರದಲ್ಲಿ ಇನ್ನೂ ಹೆಚ್ಚೆಚ್ಚು

ಸಂಶೋಧನೆಯಾಗಬೇಕಿದೆ. ಇದು ದೃಗ್ಗೋಚರ ಕ್ಷೇತ್ರವಾಗಿರುವುದರಿಂದ ಬೇಗನೇ ಕ್ರಮಿಸಲು ಸಾಧ್ಯ.

ಭಾರತ ಸರಕಾರದ ಎರಡನೆಯ ಪಂಚವಾರ್ಷಿಕ ಯೋಜನೆಯಡಿ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯು ಗ್ರಾಮ ಗ್ರಾಮಗಳ ಪ್ರಾಚ್ಯಾವಶೇಷ ಸಮೀಕ್ಷೆ (Village to Village Survey of Antiquarian Remains) ವಿಭಾಗವನ್ನು ತೆರೆದಿತ್ತು. ದೇಶದ ತುಂಬೆಲ್ಲ ಈ ಅನ್ವೇಷಣಾ ಕಾರ್ಯವು ಚೆನ್ನಾಗಿ ನಡೆದಿತ್ತು. ಆದರೆ ನಂತರದ ಎರಡು ಪಂಚವಾರ್ಷಿಕ ಯೋಜನೆಗಳಾದ ಮೇಲೆ ಇದು ಸ್ಥಗಿತಗೊಂಡಿತ್ತು.

ಇಲ್ಲಿ ನಾನು ಈ ಮೇಲಿನ ವಿಷಯವಾಗಿ ಕೇಂದ್ರ ಹಾಗೂ ರಾಜ್ಯ ಸರಕಾರಗಳಲ್ಲಿ ವಿನಂತಿಸುವುದೇನೆಂದರೆ, ಗ್ರಾಮ ಗ್ರಾಮಗಳ ಪ್ರಾಚ್ಯಾವಶೇಷ ಸಮೀಕ್ಷೆ ಕಾರ್ಯಕ್ರಮವನ್ನು ಪುನರಪಿ ಪ್ರಾರಂಭಿಸಬೇಕು. ರಾಜ್ಯ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇದರ ಬಗ್ಗೆ ತ್ವರಿತ ಕ್ರಮ ಕೈಗೊಳ್ಳಬೇಕು. ಹಾಗಾದಾಗ ನಮ್ಮ ನಾಡಿನ ಇತಿಹಾಸದ ಕಳಚಿದ ಕೊಂಡಿಗಳನ್ನು ಜೋಡಿಸಿ ನಮ್ಮ ಪ್ರಾಚೀನ ಭವ್ಯ ಇತಿಹಾಸದ ಮೇಲೆ ಹೆಚ್ಚಿನ ಬೆಳಕು ಚೆಲ್ಲಲು ಸಹಾಯವಾಗುತ್ತದೆ. ಅಲ್ಲದೆ ಯುವ ಜನಕ್ಕೆ ನೌಕರಿಯೂ ದೊರೆಯುವಂತಾಗುತ್ತದೆ.

ನಮ್ಮ ನಾಡಿನಲ್ಲಿ ಕೇಂದ್ರ ಅಥವಾ ರಾಜ್ಯ ಸರ್ಕಾರ ಸಂರಕ್ಷಿಸದೆ ಇರುವ ನೂರಾರು ಗುಡಿಗಳು, ಗುಂಬಜ್, ಪುಷ್ಕರಣಿಗಳು, ಕೋಟೆ ಕೊತ್ತಲ ವಾಡೆಗಳು ಇವೆ. ಅವುಗಳನ್ನು ಸ್ಥಾನಿಕ ಸಂಸ್ಥೆಗಳಿಗೆ ಒಪ್ಪಿಸಿ ರಕ್ಷಣೆ ಹಾಗೂ ಜೀರ್ಣೋದ್ಧಾರ ರಕ್ಷಣೆ ಕಾರ್ಯ ಕೈಗೊಳ್ಳಬೇಕಾಗಿದೆ.

ನಮ್ಮ ದೇಶ ರಾಜ್ಯಗಳಲ್ಲಿ ಅನೇಕ ಕೋಟೆ ಕೊತ್ತಲಗಳಿವೆ. ಅವುಗಳನ್ನು ಸ್ಥಾನಿಕ ಜನರು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ತ್ಯಾಗದ ಭೋಗದ ಕಥೆ ಹೇಳುವ ಈ ಕೋಟೆಗಳನ್ನು ರಕ್ಷಿಸಲು ಕೋಟೆ ಸಂರಕ್ಷಣಾ ವಿಭಾಗವನ್ನು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯಲ್ಲಿ ಪ್ರತ್ಯೇಕವಾಗಿ ತೆರೆಯಬೇಕು. ರಾಜ್ಯ ಸರ್ಕಾರವು ಕೂಡ ಈ ದಿಸೆಯಲ್ಲಿ ಮುಂದಾಗಬೇಕು. ಹೀಗಾಗುವುದರಿಂದ ಪ್ರಾಚೀನರ ರಕ್ಷಣಾ ವ್ಯವಸ್ಥೆ ಹೇಗಿತ್ತೆಂಬುದನ್ನು ಮುಂದಿನ ಜನಾಂಗಕ್ಕೆ ತೋರಿಸಲು ಸಾಧ್ಯವಾಗುತ್ತದೆ. ಕೋಟೆಗಳ ಬಗ್ಗೆ ಜಿಲ್ಲಾವಾರು ಹೊತ್ತಿಗೆಗಳು ತುರ್ತುಪ್ರಕಟವಾಗಬೇಕಿದೆ.

ನಾನು ವಿಶೇಷವಾಗಿ ಹೇಳಬೇಕೆನಿಸಿದ ಅಂಶವೆಂದರೆ ಶಾಸನವಿಭಾಗ, ಕೇಂದ್ರ ಹಾಗೂ ರಾಜ್ಯ ಸರಕಾರದ ಪುರಾತತ್ವ ಇಲಾಖೆಗಳಲ್ಲಿ ಇದು ಕರಗುತ್ತಿದೆ. ಡಾ. ಬಿ.ಸಿ.ಎಚ್. ಛಾಬ್ರಾ, ಡಾ. ಗಾಯಿ, ಡಾ. ಕೆ.ವಿ. ರಮೇಶ್, ಡಾ. ಶ್ರೀನಿವಾಸ್ ರಿತ್ತಿ ಅವರಂಥ ದಿಗ್ಗಜರು ಈ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ಇತಿಹಾಸದ ಸಂಗತಿಗಳ ಕಾಲಮಾನ ಅಳೆಯಲು ಪುರಾಭಿ ಲೇಖನಗಳು ಸರಿಯಾದ ಮಾಪನಗಳು. ಹೀಗಾಗಿ ಇದು ಕರಗಿ ಹೋಗದಂತೆ ನೋಡಿಕೊಳ್ಳುವುದು ಕೇಂದ್ರ ರಾಜ್ಯ ಸರ್ಕಾರಗಳ ಹೊಣೆಯಾಗಿದೆ. ವಿಶ್ವವಿದ್ಯಾನಿಲಯಗಳಲ್ಲಿಯೂ ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿಲ್ಲ. ಆ ಕಾರಣ ಸರ್ಕಾರ ಈ ಕ್ಷೇತ್ರ ಬೆಳೆಯಲು ಸೂಕ್ತ ಕ್ರಮ ಕೈಗೊಳ್ಳಬೇಕಿದೆ.

ಪ್ರಕಾಶನ ನಿಕಾಯ ಕೂಡ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪುರಾತತ್ವ ಇಲಾಖೆಗಳಲ್ಲಿ ಉತ್ಸಾಹದಿಂದ ಕೆಲಸ ಮಾಡಬೇಕಾಗಿದೆ. ವಿದ್ವಾನ್ ಸಂಶೋಧಕರ ಹೆಬ್ಬೊತ್ತಿಗೆಗಳನ್ನು, ಪರಿಚಯ ಪುಸ್ತಕಗಳನ್ನು (ಸಾಮಾನ್ಯ ಜನತೆಯ ಕಿಸೆಗೆ ಹೊರೆಯಾಗದಂತೆ) ಫೋಟೋ ಆಲ್ಬಮ್, ಕ್ಯಾಸೆಟ್‌ಗಳನ್ನು ಹೆಚ್ಚು ಹೆಚ್ಚು ಗುಣಮೌಲ್ಯದೊಂದಿಗೆ ಸಾರ್ವಜನಿಕರಿಗೆ ಒದಗಿಸಬೇಕಿದೆ.

ಆಧುನಿಕ ಬೆಳವಣಿಗೆಯು ಪ್ರಾಚೀನ ಚಾರಿತ್ರಿಕ ನೆಲೆಗಳನ್ನೂ ಸ್ಮಾರಕಗಳನ್ನೂ ನುಂಗುತ್ತಲಿದೆ. ಸ್ವತ್ತು ಸ್ವಾಧೀನ ಕಾಯ್ದೆಯನ್ನು ಸಂಸತ್ತು ೨೦೧೩ರ ಸೆಪ್ಟೆಂಬರ್ ಮೊದಲ ವಾರದಲ್ಲಿ ಅಂಗೀಕರಿಸಿ ಪಾಸುಮಾಡಿದೆ. ಅದರ ಉಪಯೋಗ ಮಾಡಿಕೊಂಡು ಸಂರಕ್ಷಿತ ಸ್ಮಾರಕಗಳ ಸುತ್ತ ಬೆಳೆದು ನಿಂತಿರುವ ಆಧುನಿಕ ಕಟ್ಟಡಗಳನ್ನು ಸ್ವಾಧೀನಪಡಿಸಿಕೊಂಡು, ಸ್ಮಾರಕದ ಸುತ್ತಲಿನ ಪ್ರದೇಶವನ್ನು ಸಂರಕ್ಷಿಸಬೇಕಿದೆ. ಎಲ್ಲಿ ಅವಶ್ಯವೆನಿಸುತ್ತದೆಯೋ ಅಲ್ಲಿ ಇಡೀ ಗ್ರಾಮವನ್ನೆ ಖಾಲಿ ಮಾಡಿಸಿ, ಅಲ್ಲಿರುವ ಸ್ಮಾರಕ ಸಮೂಹಗಳನ್ನು ಯಥಾರೀತೆ ರಕ್ಷಿಸಬೇಕು.

ಮಾರ್ಗದರ್ಶಿಗಳಿಗೆ ತರಬೇತಿ ನೀಡಲು ವಿಭಿನ್ನ ಕೋರ್ಸ್‌ಗಳನ್ನು ಆಯೋಜಿಸಿ, ಮಾರ್ಗದರ್ಶಿಗಳಲ್ಲಿಯ ಕೊರತೆಯನ್ನು ನೀಗಿಸಬೇಕು. ಇದು (Employment) ನಿರುದ್ಯೋಗ ಸಮಸ್ಯೆಯನ್ನೂ ಕೆಲಮಟ್ಟಿಗೆ ಪರಿಹರಿಸುತ್ತದೆ.

ಮಾನ್ಯರೇ, ಅಂತಿಮವಾಗಿ ನಾವೆಲ್ಲರೂ ನಮ್ಮ ಈ ದೇಶದ ಪ್ರಾಚೀನ ಸಿರಿಯನ್ನು ಸಂರಕ್ಷಿಸುವ ಹೊಣೆ ಹೊತ್ತಿದ್ದೇವೆ. ಆ ಪ್ರಾಚೀನ ಪರಂಪರೆಯ ಸಂಪತ್ತನ್ನು ಉಳಿಸುವ ಸಂಕಲ್ಪ ಮಾಡೋಣ, ಬನ್ನಿ, ಶಿಲೆಗಳ ಕೂಗನ್ನು ಕೇಳೋಣ.

'ಕೂಗುತಿವೆ ಕಲ್ಲು ಕಿವಿಯೆತ್ತ
ಕಿವುಡರಿರಾ ಕೇಳಿ ಆ ಸೊಲ್ಲು....
ಸತ್ತವರು ನಾವಲ್ಲ ನೀವೆಂದು ಸಾರುತಿವೆ
ಕೇಳಿ ಆ ಸೊಲ್ಲು ಆ ಸೊಲ್ಲು.....

ನನಗೆ ಈ ಗೌರವ ಸ್ಥಾನ ನೀಡಿ ಸತ್ಕರಿಸಿದ್ದೀರಿ, ಆದರಿಸಿದ್ದೀರಿ, ಆಲಿಸಿದ್ದೀರಿ, ಇಲ್ಲಿ ನೆರೆದ ಪ್ರತಿಯೋರ್ವರಿಗೂ, ಕರ್ನಾಟಕ ಇತಿಹಾಸ ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರ ಕೊಂಡಾರೆಡ್ಡಿಯವರಿಗೂ ಗೌರವಾಧ್ಯಕ್ಷರಾದ ಡಾ. ಸೂರ್ಯನಾಥ ಕಾಮತರಿಗೂ ಕಾರ್ಯಕಾರಿ ಮಂಡಳಿಯ ಇನ್ನಿತರ ಸದಸ್ಯರಿಗೂ ನನ್ನ ಕೃತಜ್ಞತೆ ಹಾಗೂ ವಂದನೆಗಳು.

ಸಂಕ್ಷಿಪ್ತ ಇತಿವೃತ್ತ

ಹೆಸರು	:	ಡಾ॥ ಶ್ರೀನಿವಾಸ ಕೃಷ್ಣಾ.ಜಿ. ಜೋಷಿ
ಕಾವ್ಯನಾಮ	:	ಜೋಷಿ. ಎಸ್.ಕೆ.
ಜನನ	:	೯ನೇ ಜೂನ್ ೧೯೩೬
ಜನ್ಮಸ್ಥಳ	:	ಹಿಡ್ಕಲ್ ಗ್ರಾಮ, ರಾಯಭಾಗ ತಾಲ್ಲೂಕು, ಬೆಳಗಾಂ ಜಿಲ್ಲೆ.
ವಿದ್ಯಾರ್ಹತೆ	:	ಧಾರವಾಡ ಕರ್ನಾಟಕ ವಿ.ವಿ.ದಿಂದ ಬಿ.ಎ. ಮತ್ತು ಎಂ.ಎ. [ಪ್ರಾಚೀನ ಭಾರತದ ಪುರಾತತ್ವ] ಪಿಎಚ್‌ಡಿ ಗ್ರಂಥ – [ಆಂಗ್ಲ ಭಾಷೆ] ಡಿಫೆನ್ಸ್ ಆರ್ಕಿಟೆಕ್ಚರ್ ಇನ್ ಅರ್ಲಿ ಕರ್ನಾಟಕ ಪಿಜಿ ಡಿಪ್ಲೊಮಾ ಇನ್ ಆರ್ಟ್ಸ್ ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯದ 'ಸ್ಕೂಲ್ ಆಫ್ ಆರ್ಕಿಯಾಲಜಿ' ಪದವಿ
ಉದ್ಯೋಗ	:	ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯಲ್ಲಿ ಅಧೀಕ್ಷಕ ಸಹಾಯಕ ಪುರಾತತ್ವವಿದರಾಗಿ ನಿವೃತ್ತಿ ಹೊಂದಿದ್ದಾರೆ.
ವೃತ್ತಿ ಜೀವನದಲ್ಲಿ ಕೈಗೊಂಡ ಮಹತ್ತರ ಕಾರ್ಯಗಳು	:	ಪ್ರಾಗೈತಿಹಾಸಿಕ ಕಾಲದಿಂದ ಮಧ್ಯಯುಗೀನ ಇತಿಹಾಸ ಕಾಲದವರೆಗೂ, ೩೦ಕ್ಕೂ ಅಧಿಕವಾಗಿ ನಡೆಸಿದ ಉತ್ಖನನಗಳಲ್ಲಿ ಭಾಗವಹಿಸಿ ಮತ್ತು ಉತ್ಖನನಗಳ ನಿರ್ದೇಶಕರಾಗಿ ಕಾರ್ಯ ನಿರ್ವಹಣೆ. ಉದಾ : ಕಾನಿಷ್ಕನ ನೆಲೆಗಳು, ಇಂದ್ರಪ್ರಸ್ಥ ನೆಲೆಗಳು, ಮಹಾರಾಷ್ಟ್ರದ ದೈಮಾಬಾದ್, ಮಥುರಾ, ಇನಾಂಗಾವ್ ಹಂಪೆಯ ಉತ್ಖನನ ಮುಂತಾದ ನೆಲೆಗಳು.
ಪಿ.ಎಚ್.ಡಿ. ಗ್ರಂಥ ಮತ್ತು ಇತರ ಪ್ರಕಟಿತ ಪ್ರಕಟಿತ ಕೃತಿಗಳು	:	೧) ಡಿಫೆನ್ಸ್ ಆರ್ಕಿಟೆಕ್ಚರ್ ಇನ್ ಅರ್ಲಿ ಕರ್ನಾಟಕ ದೇಶದ ನಾನಾ ವಿಶ್ವವಿದ್ಯಾಲಯಗಳಲ್ಲಿ ಮಾನ್ಯತೆ ಪಡೆದ ಆಕರ ಗ್ರಂಥ ೨) ಪುರಾತತ್ವದ ಇತಿಹಾಸ, ಕರ್ನಾಟಕದ ಕೋಟೆ ಮತ್ತು ಕೊತ್ತಲಗಳು, ಕಾಳಿಕಾ ದರ್ಶನ, ಇಂದ್ರ ಜಾಲದಿ ಕಲ್ಲು ಕುಸುರಿತು, ಗಾಯತ್ರಿ ಆಂತರ್ಯ ೩) ಗೋವಾದ ಸಾಂಸ್ಕೃತಿಕ ಅಧ್ಯಯನ, ಗೋವಾದ ಕೋಟೆಗಳು ಹಾಗೂ ಹಲವು ಕೃತಿಗಳು, ನಾಲ್ಕು ನೂರಕ್ಕೂ ಮಿಗಿಲಾಗಿ ಮಂಡಿಸಿದ ವಿದ್ವತ್‌ಪೂರ್ಣ ಲೇಖನಗಳು ಇತಿಹಾಸ ವಿದ್ಯಾರ್ಥಿಗಳಿಗೆ ಮತ್ತು ಸಂಶೋಧಕರಿಗೆ ಮಾರ್ಗದರ್ಶನ ಗ್ರಂಥಗಳೆಂಬ ಹೆಗ್ಗಳಿಕೆ.
ಪ್ರಶಸ್ತಿಗಳು ಮತ್ತು ಸನ್ಮಾನ ಮತ್ತು ಗೌರವ ಸ್ಥಾನ	:	೧) ಭಾರತ ಸರ್ಕಾರದ ಸಂಸ್ಕೃತಿ ಇಲಾಖೆಯಿಂದ 'ಅಸಾಮಾನ್ಯ ಪುರಾತತ್ವವಿದ' ಎಂಬ ಪ್ರಶಸ್ತಿ ಚಿನ್ನದ ಪದಕದೊಂದಿಗೆ ಲಭ್ಯವಾಗಿದೆ. ೨) ಕರ್ನಾಟಕ ವಿಶ್ವಕರ್ಮ ಸಂಸ್ಥೆ 'ಗೌರವಾನ್ವಿತ ಪುರಾತತ್ವವಿದ' ಎಂಬ ಬಿರುದನ್ನು ಚಿನ್ನದ ಪದಕದೊಂದಿಗೆ ನೀಡಿ ಗೌರವಿಸಿದೆ. ೩) ಕರ್ನಾಟಕದ ರಾಜ್ಯ ಡಾ. ಬಸವರಾಜ ಮನ್ಸೂರ್ ಸಂಸ್ಮರಣ ಕಲಾ ಸಂಸ್ಥೆಯು ಸಹ 'ಪುರಾತತ್ವ' ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ೪) ಇತಿಹಾಸಕ್ಕೆ ಜೋಷಿಯವರ ಅಮೂಲ್ಯವಾದ ಕೊಡುಗೆಯನ್ನು ಗಮನಿಸಿ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ, ಬೆಂಗಳೂರು 'ವಿಶ್ವಕರ್ಮ ಪ್ರಶಸ್ತಿ' ನೀಡಿ ಗೌರವಿಸಿದೆ.
ಸಂಘ ಸಂಸ್ಥೆಗಳಲ್ಲಿ ಸನ್ಮಾನ ಮತ್ತು ಗೌರವ ಸ್ಥಾನ	:	* ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು. * ಥಿಯೋಸಾಫಿಕಲ್ ಸೊಸೈಟಿ ಆಫ್ ಇಂಡಿಯಾ. * ಕನ್ನಡ ಸಾಹಿತ್ಯ ಪರಿಷತ್ತು. * ಕರ್ನಾಟಕ ವಿದ್ಯಾವರ್ಧಕ ಸಂಘ. * ಸೈನ್ಸ್ ಅಕಾದೆಮಿ. * ಪ್ರೀಮಿಯರ್ ರೋಟರಿ ಪ್ರೊಬಾಸ್ ಇಂಟರ್‌ನ್ಯಾಷನಲ್ ಈ ಎಲ್ಲಾ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. * ಅನೇಕ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವಿಚಾರ ಸಂಕಿರಣ, ಸಮ್ಮೇಳನಗಳಲ್ಲಿ ಉದ್ಘಾಟನೆ, ಅಧ್ಯಕ್ಷತೆ, ಮುಖ್ಯ ಅತಿಥಿ. * ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಉಪನ್ಯಾಸ, ಚರ್ಚೆ, ಸಂದರ್ಶನ. * ಪಿಎಚ್‌ಡಿ ಪದವಿ ಗ್ರಂಥಗಳ ಮೌಲ್ಯಮಾಪನ.

೧

ಹಿರೇಬೆಣಕಲ್ಲಿನ ಪ್ರಾಗಿತಿಹಾಸ ಕಾಲದ ಸ್ತ್ರೀಯ ಪ್ರಸವದ ಅಪೂರ್ವ ಚಿತ್ರ

ಡಾ. ಶರಣಬಸಪ್ಪ ಕೋಲ್ಕಾರ*

ಹಿರೇಬೆಣಕಲ್ಲು ದಕ್ಷಿಣ ಭಾರತದ ಮಹದ್ವತ ಪ್ರಾಗೈತಿಹಾಸಿಕ ನೆಲೆಗಳಲ್ಲಿ ಒಂದು. ಇಲ್ಲಿ ಕಬ್ಬಿಣಯುಗದ ಬೃಹತ್ ಶಿಲಾಯುಗ (Iron age Maegalithic) ಕಾಲದ ನೂರಾರು ಶಿಲಾ ಸಮಾಧಿಗಳು, ಗವಿವರ್ಣಚಿತ್ರಗಳು, ಕಲ್ಲೊಂಬೆಗಳು ಮತ್ತು ವಸತಿನೆಲೆ ಇದ್ದು, ಈ ರೀತಿ ವೈವಿಧ್ಯಮಯ ಪ್ರಾಚ್ಯಕುರುಹುಗಳು ಒಂದೆಡೆ ಕಾಣಸಿಗುವುದು ಅಪರೂಪ ಮತ್ತು ವೈಶಿಷ್ಟ್ಯಪೂರ್ಣವೂ ಆಗಿದೆ. ಈ ಹಿನ್ನೆಲೆಯಲ್ಲಿ ಹಿರೇಬೆಣಕಲ್‌ನ ಈ ನೆಲೆ ಪ್ರಾಗಿತಿಹಾಸ ಕಾಲದ ಅದರಲ್ಲೂ ವಿಶೇಷವಾಗಿ ಬೃಹತ್ ಶಿಲಾಯುಗ ಕಾಲದ ಸಂಸ್ಕೃತಿಯ ಬಗೆಗೆ ಸಾಕಷ್ಟು ಸಂಗತಿಗಳನ್ನು ಅರಿತುಕೊಳ್ಳುವ, ಮತ್ತು ಹೊಸ ಹೊಸ ಸಂಶೋಧನೆಗಳಿಗೆ ಆಹ್ವಾನಿಸುವ ಪ್ರಯೋಗಶಾಲೆಯಂತಿದೆ.

ಹಿರೇಬೆಣಕಲ್ಲು ಗ್ರಾಮ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನಲ್ಲಿದೆ. ಗಂಗಾವತಿಯಿಂದ ದಕ್ಷಿಣಕ್ಕೆ ಕೊಪ್ಪಳ ರಾಜ್ಯ ಹೆದ್ದಾರಿಯಲ್ಲಿ ೧೦ ಕಿ.ಮೀ. ಅಂತರದಲ್ಲಿದೆ. ಮುಖ್ಯರಸ್ತೆಯಿಂದ ದಕ್ಷಿಣಕ್ಕೆ ೨ ಕಿ.ಮೀ. ಅಂತರದಲ್ಲಿ ಗ್ರಾಮವಿದ್ದು, ಗ್ರಾಮದಿಂದ ೧ ಕಿ.ಮೀ. ದಕ್ಷಿಣಕ್ಕೆ ಸಾಲಾಗಿ ಬೆಟ್ಟಗಳಿವೆ. ಈ ಬೆಟ್ಟಗಳಲ್ಲಿ ಮಧ್ಯದಲ್ಲಿರುವುದೇ 'ಮೋರಿಯರ ಬೆಟ್ಟ' ಈ ಬೆಟ್ಟದ ಮೇಲ್ಭಾಗದಲ್ಲಿರುವುದೇ ಬೃಹತ್ ಶಿಲಾಯುಗ ಕಾಲದ ಸಮಾಧಿನೆಲೆ. ಈ ನೆಲೆಯಿಂದ ಅನತಿ ದೂರದಲ್ಲಿ ವಾಯುವ್ಯಕ್ಕೆ ವಸತಿ ನೆಲೆಯೂ ದೊರೆತಿದೆ. ಬೆಟ್ಟದ ಮಧ್ಯಭಾಗದಿಂದ ಹಿಡಿದು ಸಮಾಧಿ ನೆಲೆಯ ಸುತ್ತಮುತ್ತಲು ನೂರಾರು ಗವಿ, ಕಲ್ಲಾಸರೆಗಳಿವೆ. ಇವುಗಳಲ್ಲಿ ಆ ಕಾಲದ ವರ್ಣಚಿತ್ರಗಳನ್ನು ಹೊಂದಿವೆ.

ಹಿರೇಬೆಣಕಲ್‌ನ ಶಿಲಾಸಮಾಧಿಗಳನ್ನು, ಶಿಲಾ ಕೋಣೆಗಳನ್ನು ರೆ.ಜಿ. ಕೆಯಿಸ್‌ರವರು ಶೋಧಿಸಿದ ಸಂಗತಿಯ ವರದಿಯನ್ನು ೧೮೩೫ರ ರಾಯಲ್ ಏಶಿಯಾಟಿಕ್ ಸೊಸೈಟಿ, ಬಾಂಬೆ ಶಾಖೆಯ ಜರ್ನಲ್ ಸಂ. ೪ರಲ್ಲಿ ಕರ್ನಲ್ ಮೆಡೊಸ್ ಟೈಲರ್‌ರವರು ಪ್ರಕಟಿಸಿ ಬೆಳಕಿಗೆ ತಂದರು.[೧] ಆದರೆ ಇಲ್ಲಿಯ ಬೆಟ್ಟಗುಡ್ಡಗಳಲ್ಲಿಯ ಪ್ರಾಗಿತಿಹಾಸ ಕಾಲದ ಕಲಾಸಂಪತ್ತು ಅಜ್ಞಾತವಾಗಿ ಉಳಿದಿತ್ತು. ೧೯೩೫ರಲ್ಲಿ ಆಂಗ್ಲ ಭೂಗರ್ಭತಜ್ಞರಾದ ಲಿಯೋನಾರ್ಡ್‌ಮನ್‌ರವರು ಪ್ರಪ್ರಥಮವಾಗಿ ಮೂರು ವರ್ಣಚಿತ್ರಿತ ಗವಿಗಳನ್ನು ಬೆಳಕಿಗೆ ತಂದರು.[೨] ತದನಂತರ ನಾಡಿನ ಖ್ಯಾತ ಪುರಾತತ್ವಜ್ಞರಾದ ಡಾ. ಅ. ಸುಂದರ ಅವರು ೧೯೬೭ರಿಂದ ೧೯೭೪ರ ಅವಧಿಯಲ್ಲಿ ಹಿಂದೆ ಲಿಯೋನಾರ್ಡ್ ಮನ್ ಶೋಧಿಸಿದ ಚಿತ್ರಗಳ ನೆಲೆಯನ್ನು ಗುರುತಿಸುವ ಸಂದರ್ಭದಲ್ಲಿ ಇನ್ನೂ ಒಂಭತ್ತು ಕಡೆ ಚಿತ್ರಗಳನ್ನು ಶೋಧಿಸಿದ್ದು,[೩] ತದನಂತರ ಡಾ. ಶರಣಬಸಪ್ಪ ಕೋಲ್ಕಾರವರು ಇಲ್ಲಿ ಮತ್ತೆ ೬ ಚಿತ್ರಿತ ನೆಲೆಗಳನ್ನು ಬೆಳಕಿಗೆ ತಂದರು.[೪] ಹೀಗೆ ಸದ್ಯ ಹಿರೇಬೆಣಕಲ್‌ನಲ್ಲಿ ಒಟ್ಟು ೧೮ ವರ್ಣಚಿತ್ರಿತ ಗವಿ/ಕಲ್ಲಾಸರೆಗಳು ಶೋಧವಾಗಿದೆ.

ಹಿರೇಬೆಣಕಲ್‌ನಲ್ಲಿ ಶೋಧವಾಗಿರುವ ಚಿತ್ರಗಳಲ್ಲಿ ವೈವಿಧ್ಯಮಯವಾದ ಸಂಗತಿಗಳಿವೆ. ಅವು ಮನುಷ್ಯ ಬದುಕಿನ ಹಾಗೂ ಪ್ರಾಣಿ ಸಂಪತ್ತಿನ ಕುರಿತಾಗಿ ಬಿಂಬಿತವಾಗಿವೆ. ಮಾವನ ಜೀವನಕ್ಕೆ ಸಂಬಂಧಿಸಿದ ಹಾಗೆ ಬೇಟೆಗಾರಿಕೆ, ಪಶುಪಾಲನೆ, ಸಮೂಹನೃತ್ಯ, ಲೈಂಗಿಕ ಕ್ರಿಯೆ, ಆರಾಧನೆ (ಮಾಂತ್ರಿಕ) ಮುಂತಾದ ಸಂಗತಿಗಳ ಮೇಲೆ ಬೆಳಕು ಚಲ್ಲುತ್ತವೆ. ಅದೇ ರೀತಿ ಸಮಕಾಲೀನ ಎತ್ತು, ಗೂಳಿ, ಹಸು, ಕುದುರೆ, ಚಿರತೆ, ಜಿಂಕೆ, ಹುಲಿ, ಹೆಬ್ಬಾವು, ಮೀನು, ಉಡ, ನವಿಲು ಮುಂತಾದ ಪ್ರಾಣಿ ಪಕ್ಷಿಗಳ ವಿವರಗಳನ್ನು ಒಳಗೊಂಡಿವೆ.

ಗವಿಕಲ್ಲಾಸರೆಯ ವರ್ಣಚಿತ್ರಗಳಿಂದ ಪ್ರಾಗಿತಿಹಾಸ ಕಾಲದ ಮಾನವ ಜೀವನ ಸಂಸ್ಕೃತಿಯ ಹತ್ತು, ಕುದುರೆ, ಚಿರತೆ, ಜಿಂಕೆ, ಹುಲಿ, ಹೆಬ್ಬಾವು, ಮೀನು, ಉಡ, ನವಿಲು ಮುಂತಾದ ಪ್ರಾಣಿ ಪಕ್ಷಿಗಳ ವಿವರಗಳನ್ನು ಒಳಗೊಂಡಿವೆ.

ಪ್ರಸ್ತುತ ಹಿರೇಬೆಣಕಲ್ಲಿನ ೧೭ನೇ ಗವಿಯಲ್ಲಿರುವ ಒಂದು ಸ್ತ್ರೀ ಚಿತ್ರ ತುಂಬಾ ಅಪರೂಪದ ಚಿತ್ರವಾಗಿದ್ದು, ಆ ಅಪರೂಪತೆಯನ್ನು ಬಿಂಬಿಸುವುದೇ ನನ್ನ ಪ್ರಬಂಧದ ಉದ್ದೇಶವಾಗಿದೆ.

* ಪ್ರಾಚಾರ್ಯರು, ಕೆ.ಎಸ್.ಸಿ. ಮಹಿಳಾ ಮಹಾವಿದ್ಯಾಲಯ, ಗಂಗಾವತಿ–೫೮೩೨೨೭.

೧೭ನೇ ಗವಿ : ಹಿರೇಬೆಣಕಲ್ಲಿನ ೧೭ನೇ ಗವಿಯಲ್ಲಿ ಎರಡು ಮಹತ್ವದ ಚಿತ್ರಗಳಿವೆ. ಈ ಗವಿ ಸಹಿತ ಇಲ್ಲಿಯ ಚಿತ್ರಗಳು ಕ್ರಿ.ಶ. ೨೦೦೦ದಲ್ಲಿ ನಾನು ಕೈಗೊಂಡಿದ್ದ ಸಂಶೋಧನೆಯಲ್ಲಿ ಬೆಳಕಿಗೆ ಬಂದಿದ್ದವು. ಆದರೆ ಆ ಚಿತ್ರಗಳ ಕುರಿತಾಗಿ ನನ್ನ ಅಂದಿನ ಗ್ರಹಿಕೆಯಂತೆ ಅವು ವಿಚಿತ್ರ ಮನುಷ್ಯಾಕೃತಿಗಳೆಂದು ಅಭಿಪ್ರಾಯಪಟ್ಟಿದ್ದೇನೆ. ಆದರೆ ಆ ಅಭಿಪ್ರಾಯ ಈಚಿನ ಪುನರ್‌ಪರಿಶೀಲನೆಯಲ್ಲಿ ಸಮಂಜಸವೆಂದು ತೋರಲಿಲ್ಲ. ಹಾಗಾಗಿ ಆ ಚಿತ್ರದ ಪುನರ್‌ಪರಿಶೀಲನೆಯಿಂದ ಒಂದು ಅಪರೂಪದ ಚಿತ್ರವೆಂಬುದು ಗಮನಕ್ಕೆ ಬಂದಿತು.

ಪ್ರಸ್ತುತ ಚಿತ್ರವಿರುವ ಗವಿಯು ಹಿರೇಬೆಣಕಲ್ಲಿನ ಸಮಾಧಿ ನೆಲೆಯ ಪೂರ್ವಕ್ಕೆ ೧ ಕಿ.ಮೀ. ದೂರದಲ್ಲಿದೆ. ಇಲ್ಲಿ ಸುಮಾರು ೧೦ ಎಕರೆಯಷ್ಟು ಬಯಲು ಪ್ರದೇಶವಿದ್ದು, ಅದಕ್ಕೆ 'ರಕ್ಕಸಬೀಳು' ಎಂದು ಸ್ಥಳೀಯರು ಕರೆಯುತ್ತಾರೆ. ಇಲ್ಲಿಯೇ ಬೃಹತ್ ಬಂಡೆಯ ಮೇಲೆ ಹೆಬ್ಬಾವಿನ ಚಿತ್ರ, ಮನುಷ್ಯ, ಹಂದಿ, ಹಸು ಮುಂತಾದ ಚಿತ್ರಗಳಿವೆ. ಈ ಬೃಹತ್ ಬಂಡೆಗೆ ರಕ್ಕಸಬಂಡೆ ಎಂದು ಕರೆಯುತ್ತಾರೆ. ಈ ರಕ್ಕಸಬಂಡೆಯ ಹಿಂಭಾಗದಲ್ಲಿ ದೊಡ್ಡ ಬಂಡೆಗಳ ಬೆಟ್ಟವಿದ್ದು, ಆ ಬೆಟ್ಟದ ಕೆಳಭಾಗದಲ್ಲಿ ಒಂದು ವಿಶಾಲವಾದ ಗವಿ ಇದೆ. ಇದಕ್ಕೂ ಕೂಡ ರಕ್ಕಸಗವಿ ಎಂದು ಹೆಸರು. ಗವಿಯ ಮೇಲ್ಛಾವಣಿಯ ಬಂಡೆ ಸುಮಾರು ೩೦ ಫೀಟ್ ಉದ್ದವಾಗಿ ೧೫ ಫೀಟ್ ಅಗಲವಾಗಿದ್ದು, ಗವಿಯು ಒಂದು ವಿಶಾಲವಾದ ಸಭಾಂಗಣದಂತಿದೆ. ಗವಿಯ ಉತ್ತರ ಮತ್ತು ದಕ್ಷಿಣ ಎರಡೂ ಬದಿಗೆ ತೆರೆದಿದೆ.

ಈ ಗವಿಯ ವಿಶಾಲವಾದ ಮೇಲ್ಛಾವಣಿ ಬಂಡೆಯಲ್ಲಿ ಕೇವಲ ಎರಡೇ ಚಿತ್ರಗಳಿವೆ. ಇವು ಗವಿಯ ದಕ್ಷಿಣ ಭಾಗದಲ್ಲಿದೆ. ಕೆಂಪು ವರ್ಣದ ಈ ಚಿತ್ರಗಳು ಒಬ್ಬ ಪುರುಷನದಾದರೆ ಮತ್ತೊಂದು ಸ್ತ್ರೀಯದ್ದು ಇವು ಪರಸ್ಪರ ಸು. ೧೦ ಫೀಟ್ ಅಂತರದಲ್ಲಿವೆ.

ಪುರುಷ ಚಿತ್ರ : ಇದು ಛಾವಣಿಯ ಪಶ್ಚಿಮ ಭಾಗದಲ್ಲಿದೆ. ತಲೆಯಿಂದ ಕಾಲಿನವರೆಗೆ ೭ ಮೀ. ಉದ್ದವಿದೆ. ಮೊಟ್ಟೆಯಾಕಾರದ ತಲೆ, ಪಕ್ಕಕ್ಕೆ ಚಾಚಿರುವ ಎರಡು ಕೈಗಳು, ಮೊಟ್ಟೆಯಾಕಾರದ ವಿಶಾಲ ಮುಂಡ (ಎದೆ, ಹೊಟ್ಟೆ, ಕಿಬ್ಬೊಟ್ಟು ಸೇರಿ) ವಿದ್ದು, ಕಾಲುಗಳು ಸ್ಪಷ್ಟವಾಗಿ ಗೋಚರಿಸದೇ ಮುಂಡದ ಮಧ್ಯಭಾಗದಿಂದ ಒಂದೇ ಕಾಲು ಬಾಲದಂತೆ ಉದ್ದಕ್ಕೆ ಗೋಚರಿಸುತ್ತದೆ. ಹೀಗಾಗಿ ಈ ಆಕೃತಿ ಒಂದೇ ರೀತಿಯಲ್ಲಿ ಹುಡದಂತೆ ತೋರುತ್ತದೆ. ಎರಡೂ ಕೈಗಳ ಹಸ್ತದಲ್ಲಿ ಮೂರು ಚೂಪಾದ ಸಣ್ಣ ಬೆರಳುಗಳು ಅಥವಾ ಉಗುರುಗಳಿವೆ. ತಲೆಯ ಮೇಲೆ ರೋಮನ್ V ಅಕ್ಷರದಂತೆ ದ್ವಿರೇಖೆಗಳಿವೆ. ಒಟ್ಟಿನಲ್ಲಿ ಇದೊಂದು ವಿಚಿತ್ರ ಚಿತ್ರವೆನಿಸುತ್ತದೆ.

ಸ್ತ್ರೀ ಚಿತ್ರ : ಗವಿಯ ತುಂಬಾ ಸ್ವಾರಸ್ಯಪೂರ್ಣ ಚಿತ್ರವೆಂದರೆ ಸ್ತ್ರೀ ಚಿತ್ರ. ಇದು ಛಾವಣಿಯ ಪೂರ್ವಬದಿಯಲ್ಲಿದೆ. ಈ ಚಿತ್ರದ ರಚನಾಶೈಲಿ, ಭಂಗಿಯನ್ನು ಜೊತೆಗೆ ರಕ್ಕಸಬೀಳು, ರಕ್ಕಸಬಂಡೆ, ರಕ್ಕಸಗವಿ ಎಂಬ ಸ್ಥಳೀಯ ಹೆಸರಿನ ಹಿನ್ನೆಲೆಯಲ್ಲಿ ಇದೊಂದು ರಾಕ್ಷಸ ಅಥವಾ ವಿಚಿತ್ರ ಚಿತ್ರವೆಂದು ನನ್ನ ಹಿಂದಿನ ಗ್ರಂಥದಲ್ಲಿ[೫] ಅಭಿಪ್ರಾಯಪಟ್ಟಿದ್ದೆ. ಆದರೆ ಅದರ ಪುನರಾವಲೋಕನದಲ್ಲಿ ಇದು ಹೊಟ್ಟೆಯಲ್ಲಿ ಶಿಶುವನ್ನು ಹೊಂದಿರುವ ಗರ್ಭಿಣಿಯ ಪ್ರಸವದ ಅಪರೂಪದ ಚಿತ್ರವೆಂಬುದು ಗಮನಕ್ಕೆ ಬಂದಿತು. ಪ್ರಸವದ ೨ ಹಂತಗಳನ್ನು ಇದು ಬಿಂಬಿಸುತ್ತದೆ. ಪ್ರಸವದ ಕೊನೆಯ ಹಂತದಲ್ಲಿ ಹೊಟೆಯಲ್ಲಿರುವ ಶಿಶು ತಲೆ ಕೆಳಗಾಗಿರುವುದು ಮತ್ತು ಪ್ರಸವವಾಗಿ ಶಿಶು ಹೊರಬಂದಿರುವುದು. ಈ ಸ್ತ್ರೀ ಚಿತ್ರವು ೫ ಮೀ. ಉದ್ದ ಹಾಗೂ ೪ ಮೀ. ಅಗಲವಾಗಿದೆ. ತಲೆ ತ್ರಿಕೋನಾಕಾರದಲ್ಲಿದ್ದು, ಬೆನ್ನು ಬಾಗಿಸಿ ಕುಕ್ಕುರುಗಾಲಿನಲ್ಲಿ ಕುಳಿತಂತಿದೆ. ಒಂದು ಕೈ ಮೇಲಕ್ಕೆ ಎತ್ತಿ ಹಿಡಿದಿದೆ. ಕೈಯಲ್ಲಿ ಹಸ್ತ ಅದಕ್ಕೆ ೫ ಬೆರಳುಗಳನ್ನು ತೋರಿಸಲಾಗಿದೆ. ಎರಡೂ ಸ್ತನಗಳನ್ನು ತೋರಿಸಲಾಗಿದೆ. ಅವು ವೃತ್ತಾಕಾರದಲ್ಲಿರದೆ ಆಯತಾಕಾರದಲ್ಲಿವೆ. ಹೊಟ್ಟೆಯಲ್ಲಿ ಕೆಳಮುಖವಾಗಿರುವ ಪುಟ್ಟ ಮನುಷ್ಯಾಕೃತಿ ಇದೆ. ಇದು ಶಿಶುವಿನ ಚಿತ್ರ ಮಡಚಿದ ಕಾಲಿನ ಬಳಿ ಕೈಗಳನ್ನು ಮೇಲಕ್ಕೆತ್ತಿರುವ ಮತ್ತೊಂದು ಪುಟ್ಟ ಮನುಷ್ಯ ಕೃತಿ ಇದೆ. ಇದು ಜನನವಾದ ಶಿಶುವಿನ ಚಿತ್ರ. ಈ ಮೂರು ಮನುಷ್ಯಾಕೃತಿಗಳ ಮೈಮೇಲೆಲ್ಲಾ ದ್ವಿರೇಖೆಯ ಪಟ್ಟಿಗಳಿವೆ.

ಇಡೀ ಚಿತ್ರದ ಸೂಕ್ಷ್ಮಾವಲೋಕನದಿಂದ ಇದೊಂದು ಗರ್ಭಿಣಿಯ ಪ್ರಸವದ ಚಿತ್ರವೆಂದು ಹೇಳಬಹುದು. ಹೊಟ್ಟೆಯಲ್ಲಿ ಕೆಳಮುಖವಾಗಿರುವುದು ಶಿಶುವಿನ ಚಿತ್ರವಾಗಿದೆ. ಇನ್ನೂ ಕಾಲ ಬಳಿ ಇರುವ ಮತ್ತೊಂದು ಚಿತ್ರ ಪ್ರಸವದಿಂದ ಹೊರಬಂದ ಮಗುವಿನ ಚಿತ್ರವೆಂದು ಹೇಳಬಹುದು. ಹೀಗೆ ಇದೊಂದು ಅಪರೂಪದ ಚಿತ್ರವೆನಿಸುತ್ತದೆ. ಇದು ಗರ್ಭಿಣಿಯ ಕುಳಿತ ಭಂಗಿಯ ಪ್ರಸವದ ಚಿತ್ರ. ಹೀಗೆ ಕುಳ್ಳಿರಿಸಿ ಪ್ರಸವ ಮಡಿಸುವ ಪದ್ಧತಿ ನಮ್ಮ ದೇಶದಲ್ಲಿ ಹಿಂದಿನಿಂದಲೂ ಬಂದ ಪದ್ಧತಿಯಾಗಿದೆ. ಆದರೆ ಬ್ರಿಟಿಷರು ಬಂದ ನಂತರ ಮಲಗಿಸಿ ಪ್ರಸವ ಮಾಡಿಸುವ ಪದ್ಧತಿ ರೂಢಿಯಾಯಿತು. ಇಂದಿಗೂ ಬುಡಕಟ್ಟುಗಳಲ್ಲಿ ಕುಳಿತು ಪ್ರಸವ ಮಾಡಿಸುವ ಪದ್ಧತಿ ಪ್ರಚಲಿತದಲ್ಲಿದೆ. ಇದರಿಂದ ಸುಲಲಿತವಾಗಿ ಹೆರಿಗೆಯಾಗುತ್ತದೆ.

ಇದೇ ಗವಿಯ ಮುಂಭಾಗದಲ್ಲಿರುವ ೨ನೆಯ ಕಲ್ಲಾಸರೆಯಲ್ಲಿ ಮೂವರು ನಗ್ನ, ಗರ್ಭಿಣಿಯರ ಚಿತ್ರಗಳು, ಹಿರೇಬೆಣಕಲ್‌ಗೆ ಸಮೀಪದ ಮಲ್ಲಾಪುರದ ಖಾನ್‌ಸಾಬ ಗವಿಯಲ್ಲಿ ಮತ್ತು ಹಂಪಿಯ ಬರಮದೇವರ ಗುಂಡಿಯಲ್ಲಿ

ನೃತ್ಯನಿರತ ನಗ್ನ ಗರ್ಭಿಣಿಯರ ಚಿತ್ರಗಳಿವೆ. ಇವುಗಳ ಮೈಮೇಲೆಲ್ಲಾ ವಿವಿದ ರೀತಿಯ ರೇಖೆಗಳು ಇವೆ. ಇಂಥ ಚಿತ್ರಗಳು ಮಾಂತ್ರಿಕ ವಿಧಿಯಲ್ಲಿ ಪಾಲ್ಗೊಂಡ ಸ್ತ್ರೀಯರ ಚಿತ್ರಗಳು ಎಂದು ಗುರುತಿಸಬಹುದು. ಆದರೆ ಈ ಚಿತ್ರಗಳು ಸಹಿತ ಪ್ರಾಗಿತಿಹಾಸ ಕಾಲದ ಯಾವ ಚಿತ್ರಗಳಲ್ಲೂ ಕಣ್ಣು, ಕಿವಿ, ಬಾಯಿಯಂತಹ ಸೂಕ್ಷ್ಮ ಅಂಗಗಳಿರುವುದಿಲ್ಲ. ಇದಕ್ಕೆ ಪ್ರಸ್ತುತ ಹಿರೇಬೆಣಕಲ್ಲಿನ ಚಿತ್ರವೂ ಹೊರತಾಗಿಲ್ಲ. ಆದರೆ ಹೊಟ್ಟೆಯಲ್ಲಿ ಮಗುವಿನ ಚಿತ್ರವನ್ನು ತೋರಿಸಿರುವುದು, ಅದು ಪ್ರಸವದ ಸಂದರ್ಭದಲ್ಲಿ ಶಿಶು ತಲೆಕಳಗಾಗಿರುವುದನ್ನು ಹಾಗೂ ನವಜಾತ ಶಿಶುವನ್ನು ತೋರಿಸಿರುವುದು ವಿಸ್ಮಯವನ್ನುಂಟು ಮಾಡುತ್ತದೆ. ಕ್ರಿಪೂ. ಸು. ೧೦೦೦ದಿಂದ ೫೦೦ರ ಕಾಲಕ್ಕೆ ಸೇರಬಹುದಾದ ಈ ಚಿತ್ರಗಳು ಬೃಹತ್ ಶಿಲಾಯುಗ ಸಂಸ್ಕೃತಿಯ ಜನರ ರಚನೆಗಳಾಗಿವೆ. ಚಾರಿತ್ರಿಕ ಕಾಲದ ಅನೇಕ ದೇವಾಲಯಗಳಲ್ಲಿ ಸ್ತ್ರೀಯರ ಪ್ರಸವದ ಅನೇಕ ಶಿಲ್ಪಗಳನ್ನು ಕಾಣಬಹುದು. ಉದಾಹರಣೆಗೆ ತಲಕಾಡಿನ ಭಗಂಡೇಶ್ವರ ದೇವಾಲಯ, ರೋಣ ತಾಲ್ಲೂಕಿನ ಇಟಗಿಯ ಈಶ್ವರ ದೇವಾಲಯ, ಹಂಪಿಯ ಮಹಾನವಮಿ ದಿಬ್ಬದಲ್ಲಿ, ಭಟ್ಕಳದ ಕೇತಪೈ ನಾರಾಯಣ ದೇವಸ್ಥಾನಗಳಲ್ಲಿ ಇಂಥ ಶಿಲ್ಪಗಳನ್ನು ಕಾಣಬಹುದು. ಗಬ್ಬೂರಿನಲ್ಲಿ ಗಜಪ್ರಸವದ ಶಿಲ್ಪವಿದೆ.[೬] ಆದರೆ ಶಿಲಾಯುಗ ಕಾಲದಲ್ಲಿ ಈ ರೀತಿಯ ಸ್ತ್ರೀಯ ಪ್ರಸವದ ಚಿತ್ರ ಇರುವುದು ಅತ್ಯಂತ ವಿರಳಾತಿ ವಿರಳವೆಂದೇ ಹೇಳಬಹುದು.

ಬೃಹತ್ ಶಿಲಾ ಸಂಸ್ಕೃತಿಯ ಕಾಲದ (ಕ್ರಿ.ಪೂ.ಸು. ೧೨೦೦-೨೦೦) ಜನರ ಜೀವನ ಕ್ರಮ ಸಾಕಷ್ಟು ಸುಧಾರಿಸಿತ್ತು. ಕಬ್ಬಿಣದ ಬಳಕೆಯನ್ನು ಕಂಡುಕೊಂಡವರು ಇವರೇ ಮೊದಲು. ಈ ಜನರ ಸಂಸ್ಕೃತಿಯು ಇವರ ಹಿಂದಿನ ನೂತನ ಶಿಲಾಯುಗದ ಜನರಂತೆ ಗ್ರಾಮ ಜೀವನ ಪದ್ಧತಿ ಇದ್ದರೂ ಕೂಡ ನಾಗರಿಕ ಸಾಂಸ್ಕೃತಿಕ ಪೀಠಿಕೆ ಹಾಕಿದವರು ಇವರೇ ಇದಕ್ಕೆ ಮುಖ್ಯ ಕಾರಣ. ಇವರು ಉಪಯೋಗಿಸುತ್ತಿದ್ದ ಕಬ್ಬಿಣ ಉಪಕರಣಗಳು ಮತ್ತು ಆಯುಧಗಳು ಅಷ್ಟೇ ಅಲ್ಲ, ಕಬ್ಬಿಣ ಉಪಕರಣಗಳ ಬಳಕೆಯಿಂದ ಕ್ರಮೇಣವಾಗಿ ಕಲ್ಲಿನ ಉಪಕರಣಗಳನ್ನು ಮಾಡುವ ಅವಶ್ಯಕತೆ ಇಲ್ಲದಂತಾಗಿ ಶಿಲಾಯುಗ ಕೊನೆಗೊಂಡಿತು. ವಾಸಕ್ಕೆ ಗುಡಿಸಲುಗಳ ನಿರ್ಮಾಣ, ಸುಟ್ಟ ಮಣ್ಣಿನ ಪಾತ್ರೆಗಳ ಉಪಯೋಗ, ಆಭರಣಗಳ ಉಪಯೋಗ, ತಾಂತ್ರಿಕವಾಗಿ ಗಮನಾರ್ಹವೆನಿಸುವ ಶಿಲಾ ಸಮಾಧಿಗಳ, ಶಿಲಾಕೋಣೆಗಳ ನಿರ್ಮಾಣ ಈ ಸಂಸ್ಕೃತಿಯ ಜೀವನ ಕ್ರಮವಾಗಿದ್ದವು. ಇವುಗಳ ಜೊತೆಗೆ ಗರ್ಭಿಣಿ ಸ್ತ್ರೀಯ ಹೊಟ್ಟೆಯಲ್ಲಿ ಶಿಶು ಇರುವ, ಮತ್ತು ಪ್ರಸವದ ಸಂದರ್ಭದಲ್ಲಿ ಅದು ತಲೆಕೆಳಗಾಗುತ್ತದೆ ಎಂಬ ಅತ್ಯಂತ ಸೂಕ್ಷ್ಮ ಸಂಗತಿಗಳನ್ನು ಬಲ್ಲವರಾಗಿದ್ದರೆಂಬ ಸಂಗತಿಯನ್ನು ಪ್ರಸ್ತುತ ಚಿತ್ರ ಬಿಂಬಿಸುತ್ತದೆ. ಈ ಹಿನ್ನೆಲೆಯಲ್ಲಿ ಬೃಹತ್ ಶಿಲಾಯುಗದ ಜನರ ಬೌದ್ಧಿಕ ವಿಕಾಸದ ಬಗೆಗೆ ಮತ್ತಷ್ಟು ಚಿಂತನೆ ನಡೆಸಬೇಕಾಗಿದೆ ಎಂದು ತೋರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಚಿತ್ರ ಪ್ರಾಗಿತಿಹಾಸ ಕಾಲದ ಚಿತ್ರಗಳಲ್ಲೇ ಅತ್ಯಂತ ಅಪರೂಪದ ಹಾಗೂ ಮಹತ್ವದ ಚಿತ್ರವೆಂದು ಹೇಳಬಹುದು.

ಆಧಾರಸೂಚಿ

೧. ಅಭಿಶಂಕರ್ ಕೆ. (ಸಂ.), ೧೯೭೦ ರಾಯಚೂರು ಡಿಸ್ಟ್ರಿಕ್ಟ್ ಗ್ಯಾಸೆಟಿಯರ್, ಪುಟ ೧೧.

೨. ಪೂಟ್.ಆರ್.ಬಿ., ೧೯೧೬, ಪ್ರಿ ಹಿಸ್ಟಾರಿಕ್ ಅಂಡ್ ಪ್ರೊಟೋಹಿಸ್ಟಾರಿಕ್ ಆ್ಯಂಟಿಕ್ವಿಟೀಸ್ ಆಫ್ ಇಂಡಿಯಾ.

೩. ಸುಂದರ, ಎ., ಐ.ಎ.ಆರ್., ೧೯೬೧-೬೨ರಿಂದ ೧೯೭೯-೯೦ರ ವರೆಗಿನ ವರದಿಗಳು ಮತ್ತು ಸುಂದರ, ಎ., ೧೯೭೪. 'ಫರ್ದರ್ ನೋಟಿಸಸ್ ಆಫ್ ರಾಕ್ ಪೆಯಿಂಟಿಂಗ್ಸ್ ಇನ್ ಬೆನಕಲ್, ರಾಯಚೂರು ಡಿಸ್ಟ್'. ಜೆ ೧೪, ವಾಲುಮ್-೫೨, ತಿರುವನಂತಪುರಂ.

೪. ಶರಣಬಸಪ್ಪ ಕೋಲ್ಕಾರ, ೨೦೦೨, ಕೊಪ್ಪಳ ಹಂಪಿ ಪ್ರದೇಶದ ಪ್ರಾಗಿತಿಹಾಸ ಕಾಲದ ಕಲೆ. ಪಿಎಚ್‌ಡಿ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೫. ಶರಣಬಸಪ್ಪ ಕೋಲ್ಕಾರ, ೨೦೧೧, ಶಿಲಾಯುಗದ ಗವಿಚಿತ್ರಗಳು, ಬಸವ ಪ್ರಕಾಶನ, ಗುಲಬರ್ಗಾ.

೬. ಪ್ರಬಂಧ ಮಂಡನೆಯ ಸಂದರ್ಭದಲ್ಲಿ ರಾಜ್ಯದ ಬೇರೆ, ಬೇರೆ ಕಡೆಯ ದೇವಾಲಯಗಳಲ್ಲಿ ಇರುವ ಸ್ತ್ರೀಯರ ಪ್ರಸವದ ಶಿಲ್ಪಗಳ ಬಗೆಗೆ ಗಮನ ಸೆಳೆದ ವಿದ್ವಾಂಸರಿಗೆ ಕೃತಜ್ಞತೆಗಳು.

೨

ಅರಸೀಕೆರೆ ತಾಲ್ಲೂಕಿನ ಬೃಹತ್ ಶಿಲಾಯುಗದ ನೆಲೆಗಳು ಒಂದು ಅಧ್ಯಯನ

ಪ್ರವೀಣ್ ಬೆಳ್ತಂಗಡಿ* ಡಾ. ಹನುಮನಾಯಕ**

ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಅನೇಕ ಪ್ರದೇಶಗಳು ಬೃಹತ್ ಶಿಲಾಯುಗದ ನೆಲೆಯಾಗಿತ್ತೆಂಬುದಕ್ಕೆ ಇಲ್ಲಿನ ಸುತ್ತಮುತ್ತಲು ದೊರೆತಿರುವ ಪ್ರಾಗೈತಿಹಾಸಿಕ ಕುರುಹುಗಳೇ ಸಾಕ್ಷಿಯಾಗಿದೆ. ಇಲ್ಲಿನ ಐದು ಹೋಬಳಿಗಳಲ್ಲಿಯೂ ಕೂಡಾ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದಂತೆ ನಮಗೆ ವಿವಿಧ ಬಗೆಯ ಕುರುಹುಗಳು ಕಂಡುಬಂದಿವೆ.

ಅರಸೀಕೆರೆ ತಾಲ್ಲೂಕಿನಲ್ಲಿ ಇತ್ತೀಚೆಗೆ ಸುಮಾರು ೬೨ ಪ್ರಾಗೈತಿಹಾಸಿಕ ನೆಲೆಗಳು ಕಂಡುಬಂದಿದ್ದು, ಅವುಗಳಲ್ಲಿ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದಂತೆ ೫೮ಕ್ಕೂ ಅಧಿಕ ನೆಲೆಗಳಲ್ಲಿ ಕುರುಹುಗಳು ಪತ್ತೆಯಾಗಿವೆ. ಇವುಗಳಲ್ಲಿ ಈಗಾಗಲೇ ೧೩ ನೆಲೆಗಳ ಕುರಿತಾಗಿ ಸಂಶೋಧಕರು ಬೆಳಕು ಚೆಲ್ಲಿದ್ದಾರೆ.[೧] ಉಳಿದಂತೆ ಬೃಹತ್ ಶಿಲಾಯುಗದ ಪ್ರಮುಖ ನೆಲೆಗಳನ್ನು ಹೋಬಳಿವಾರು ಮಟ್ಟದಲ್ಲಿ ವರ್ಗೀಕರಿಸಿ ಈ ರೀತಿಯಾಗಿ ತಿಳಿಯಬಹುದು. ಕಣಕಟ್ಟೆ ಹೋಬಳಿಯಲ್ಲಿರುವ ಪ್ರಮುಖ ಬೃಹತ್ ಶಿಲಾಯುಗ ನೆಲೆಗಳಲ್ಲಿ ದಿಬ್ಬೂರ, ಕುಂಬಾರಗಟ್ಟ, ಬಾಣಾವರ, ಕೊಮ್ಮಾರಗಟ್ಟ, ಮಲ್ಲಾಪುರ.ಬಿ, ಪುರಲೇಹಳ್ಳಿ, ಕೆ.ಜಿ. ಅಗ್ರಹಾರ, ಚಿಕ್ಕಮ್ಮನಹಳ್ಳಿ, ಕೋಡಿಹಳ್ಳಿ, ಅರೆಹಳ್ಳಿ, ಸಿ. ಹರಿಹರಪುರ, ಬೈರಾಂಬುದಿ, ತೊಂಡಿಗೇನಹಳ್ಳಿ, ಜಾವಗಲ್ ಹೋಬಳಿ ಯಲ್ಲಿರುವ ಸಿಂಗನಹಳ್ಳಿ, ಸಿಂಗಟಕೆರೆಪಾಳ್ಯ, ಕುರಾದಹಳ್ಳಿ, ಅರಕೆರೆ, ಕಸಬಾ ಹೋಬಳಿಯಲ್ಲಿರುವ ಅರಸೀಕೆರೆ, ಕಾಟಿಕೆರೆ, ಹಾರನಹಳ್ಳಿ, ತಳಲುತೊರೆ, ದುಮ್ಮೇನಹಳ್ಳಿ, ಲಕ್ಷ್ಮೀದೇವಿಹಳ್ಳಿ, ಸಿದ್ಧರಹಳ್ಳಿ ಹಾಗೂ ಗಂಡಸಿ ಹೋಬಳಿಯಲ್ಲಿರುವ ಜೋಬಿಗೆನಹಳ್ಳಿ, ಜಿ. ಮಂಗಳಾಪುರ ಮತ್ತು ಗುಂಡುಕಾನಹಳ್ಳಿಗಳೇ ಆಗಿವೆ.

ಅರಸೀಕೆರೆ ತಾಲ್ಲೂಕಿನ ಕಣಕಟ್ಟೆ ಹಿಂಭಾಗದಲ್ಲಿ ಸುಮಾರು ೬ ಸ್ಥಳಗಳಲ್ಲಿ ನಿಲುಸುಗಲ್ಲುಗಳು, ೨ ಸ್ಥಳಗಳಲ್ಲಿ ಡಾಲ್ಮೆನ್‌ಗಳು, ಸಮಾಧಿದಿಬ್ಬ ಹಾಗೂ ಶಿಲಾವೃತ್ತಗಳು ತಲಾ ಒಂದೊಂದು ಸ್ಥಳಗಳಲ್ಲಿ ಕಂಡುಬಂದಿವೆ. ಹಾಗೆಯೇ ಬಾಣಾವರ ಹೋಬಳಿಯಲ್ಲಿ ಸುಮಾರು ೨೪ ಸ್ಥಳಗಳಲ್ಲಿ ನಿಲುಸುಗಲ್ಲುಗಳು, ೫ ಸ್ಥಳಗಳಲ್ಲಿ ಡಾಲ್ಮೆನ್‌ಗಳು ಹಾಗೂ ೧ ಸ್ಥಳದಲ್ಲಿ ಸಮಾಧಿದಿಬ್ಬ ಕಂಡುಬಂದಿದೆ. ಜಾವಗಲ್ ಹೋಬಳಿಯಲ್ಲಿ ಸುಮಾರು ೬ ಸ್ಥಗಳಲ್ಲಿ ನಿಲುಸುಗಲ್ಲುಗಳು, ೨ ಸ್ಥಗಳಲ್ಲಿ ಡಾಲ್ಮೆನಗಳು, ಒಂದು ಸ್ಥಳದಲ್ಲಿ ಶಿಲಾವೃತ್ತ ಕಂಡುಬಂದಿವೆ. ಕಸಬಾ ಹೋಬಳಿಯಲ್ಲಿ ೧೩ ಸ್ಥಳಗಳಲ್ಲಿ ನಿಲುಸುಗಲ್ಲುಗಳು, ೧ ಸ್ಥಳದಲ್ಲಿ ಸಮಾಧಿದಿಬ್ಬ ಕಂಡುಬಂದಿವೆ. ಹಾಗೆಯೇ ಗಂಡಸಿ ಹೋಬಳಿಯಲ್ಲಿ ೪ ಸ್ಥಳಗಳಲ್ಲಿ ನಿಲುಸುಗಲ್ಲುಗಳು ಕಂಡುಬಂದಿವೆ. ತಾಲ್ಲೂಕಿನಾದ್ಯಂತ ಒಟ್ಟಾರೆಯಾಗಿ ೫೨ ಸ್ಥಳಗಳಲ್ಲಿ ನಿಲುಸುಗಲ್ಲುಗಳು, ೧೦ ಸ್ಥಳಗಳಲ್ಲಿ ಡಾಲ್ಮೆನ್‌ಗಳು, ೩ ಸಮಾಧಿದಿನ್ನೆಗಳು ಹಾಗೂ ೨ ಶಿಲಾವೃತ್ತಗಳು ಕಂಡುಬಂದಿವೆ. ಹೀಗಾಗಿ ಅಧ್ಯಯನದ ದೃಷ್ಟಿಯಿಂದ ಈ ಎಲ್ಲಾ ಪ್ರದೇಶಗಳು ಅತ್ಯಂತ ಪ್ರಮುಖವಾಗಿವೆ.

ಈ ಮೇಲಿನ ಎಲ್ಲಾ ನೆಲೆಗಳನ್ನು ಗಮನಿಸಿದಾಗ ಸಾಕಷ್ಟು ಬೃಹತ್ ಶಿಲಾಯುಗದ ನೆಲೆಗಳು ಮನೆಗಳ ನಿರ್ಮಾಣ, ರಸ್ತೆಗಳ ನಿರ್ಮಾಣ, ಕೃಷಿ ಕಾರ್ಯ ಚಟುವಟಿಕೆಗಳು ಹಾಗೂ ಇನ್ನಿತರ ಕಾರಣಗಳಿಗಾಗಿ ಹಾನಿಗೀಡಾಗಿರುವುದು ಕಂಡುಬಂದಿದೆ. ಕಣಕಟ್ಟೆ ಹೋಬಳಿಯಲ್ಲಿ ಪ್ರಾಗೈತಿಹಾಸಿಕ ಕಾಲಾವಾಧಿಗೆ ಸಂಬಂಧಿಸಿದಂತೆ ನಿಲುಸುಗಲ್ಲುಗಳು, ಡಾಲ್ಮೆನ್‌ಗಳು, ಶಿಲಾವೃತ್ತಗಳು ಹಾಗೂ ಸಮಾಧಿ ದಿನ್ನೆಗಳು ಕಂಡುಬಂದಿವೆ. ಅವುಗಳಲ್ಲಿ ದಿಬ್ಬೂರು ಎಂಬ ಸ್ಥಳದಲ್ಲಿ ನಿಲುಸುಗಲ್ಲೊಂದು ಕಂಡುಬಂದಿದೆ. ಇದು ಸುಮಾರು ೧೩.೩ ಅಡಿ ಎತ್ತರ, ೪.೫ ಅಡಿ ಅಗಲ ಹಾಗೂ ೧.೫ ಅಡಿ ದಪ್ಪದಿಂದ ಕೂಡಿದೆ. ಇದೇ ಗ್ರಾಮದ ಪೂರ್ವಭಾಗದ ಹೊಲವೊಂದರಲ್ಲಿ ಮತ್ತೆರಡು ನಿಲುಸುಗಲ್ಲುಗಳು ಕಂಡುಬಂದಿದ್ದು, ಅವುಗಳಲ್ಲಿ ಒಂದು ನೆಲದಲ್ಲಿ ಬಿದ್ದುಕೊಂಡಿದ್ದರೆ, ಇನ್ನೊಂದು ಸುಮಾರು ೮ ಅಡಿ ಎತ್ತರ, ೬ ಅಡಿ ಅಗಲ ಹಾಗೂ ೧.೫ ಅಡಿ ದಪ್ಪವಿದೆ. ಪಶ್ಚಿಮಾಭಿಮುಖವಾಗಿ ವಾಲಿಕೊಂಡಿರುವ ಈ ನಿಲುಸುಗಲ್ಲಿಗೆ

* ಇತಿಹಾಸ ಉಪನ್ಯಾಕರು, ಶ್ರೀ ಗೋಕರ್ಣನಾಥೇಶ್ವರ ಪದವಿಪೂರ್ವ ಕಾಲೇಜು, ಗಾಂಧಿನಗರ, ಮಂಗಳೂರು, ದಕ್ಷಿಣ ಕನ್ನಡ-೫೭೫೦೦೩.
** ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳ ಗಂಗೋತ್ರಿ.

ಇಂದಿಗೂ ಇಲ್ಲಿನ ಜನತೆ ಪೂಜೆ ಮಾಡುತ್ತಾ ಬಂದಿರುವುದು ವಿಶೇಷವಾಗಿದೆ. ಇದೇ ಹೋಬಳಿಯಲ್ಲಿರುವ ಕುಂಬಾರ ಗಟ್ಟದಲ್ಲಿ ನಿಲುಸುಗಲ್ಲೊಂದು ಊರಿನ ಪ್ರವೇಶ ಭಾಗದಲ್ಲಿ ಕಂಡುಬಂದಿದೆ. ಇದು ಸುಮಾರು ೮.೫ ಅಡಿ ಎತ್ತರ, ೨ ಅಡಿ ಅಗಲ ಮತ್ತು ೧.೩ ಅಡಿ ದಪ್ಪವಿದೆ.

ಬಾಣಾವರ ಹೋಬಳಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬೃಹತ್ ಶಿಲಾಯುಗದ ನೆಲೆಗಳು ಕಂಡುಬಂದಿವೆ. ಅವುಗಳಲ್ಲಿ ಪ್ರಮುಖವಾಗಿ ಮಲ್ಲಾಪುರ.ಬಿ ಎಂಬ ಗ್ರಾಮದ ಜಮೀನಿನಲ್ಲೊಂದು ಡಾಲ್ಮೆನ್ ಕಂಡುಬಂದಿದೆ. ಇದು ಸುಮಾರು ೪ ಅಡಿ ಎತ್ತರ, ೭ ಅಡಿ ಅಗಲವಿದ್ದು, ಕೃಷಿ ಚಟುವಟಿಕೆಯಿಂದ ಹಾನಿಗೀಡಾಗಿದೆ. ಈ ಗ್ರಾಮದ ನೆರೆಯ ತೊಮಡಿಗೇನಹಳ್ಳಿಯಲ್ಲಿ ಇದೇ ರೀತಿಯ ಡಾಲ್ಮೆನ್ ಕಂಡುಬಂದಿದೆ. ಇದು ದಿವಂಗತ ಕೆಂಚನಾಯಕ ಎಂಬ ಸ್ಥಳೀಯರ ಜಮೀನಿನಲ್ಲಿದ್ದು, ಸುಮಾರು ೫ ಅಡಿ ಎತ್ತರ ಹಾಗೂ ೮ ಅಡಿ ಅಗಲವಿದ್ದು, ಮೂರು ಭಾಗಗಳಲ್ಲಿ ನಿಂತಿರುವ ಬೃಹತ್ ಕಲ್ಲುಚಪ್ಪಡಿಗಳು ಕಂಡುಬಂದಿವೆ. ಅರೆಹಳ್ಳಿಯಲ್ಲಿ ಕೆರೆ ಏರಿಯ ಮೇಲೊಂದು ಇದೇ ರೀತಿಯ ಡಾಲ್ಮೆನ್ ಕಂಡುಬಂದಿದೆ. ಇದು ಸುಮಾರು ೪ ಅಡಿ ಎತ್ತರ ಹಾಗೂ ೮ ಅಡಿ ಅಗಲವಿದ್ದು, ಮೇಲ್ಭಾಗದಲ್ಲಿ ೨ ಬೃಹತ್ ಕಲ್ಲುಚಪ್ಪಡಿಗಳಿವೆ.

ಬಾಣಾವರ-ಕಣಕಟ್ಟೆ ರಸ್ತೆಯಲ್ಲಿ ಸಾಗುವಾಗ ಕಾಣಸಿಗುವ ಕೆರೆಯ ಎಡಭಾಗದಲ್ಲಿರುವ ಗೋವಿಂದಪ್ಪ ಎಂಬುವರ ಜಮೀನಿನಲ್ಲಿ ನಿಲುಸಗಲ್ಲೊಂದು ಕಂಡುಬಂದಿದೆ. ಇದು ೭ ಅಡಿ ಎತ್ತರ, ೪.೫ ಅಡಿ ಅಗಲ ಹಾಗೂ ೦.೫ ಅಡಿ ದಪ್ಪವಿದ್ದು, ತ್ರಿಕೋನಾಕಾರದಲ್ಲಿದೆ. ಪುರಲೇಹಳ್ಳಿಯಲ್ಲಿ ರಸ್ತೆಬದಿಯ ಜಮೀನಿನಲ್ಲಿ ಪಶ್ಚಿಮಕ್ಕೆ ವಾಲಿಕೊಂಡಿರುವ ನಿಲುಸುಗಲ್ಲೊಂದು ಮಾಳಿಗೆ ಸಿದ್ದಪ್ಪ ಎಂಬವರ ಜಮೀನಿನಲ್ಲಿ ಕಂಡುಬಂದಿದ್ದು, ಇದು ಸುಮಾರು ೧೬.೫ ಅಡಿ ಎತ್ತರ, ೭ ಅಡಿ ಅಗಲ ಮತ್ತು ೨ ಅಡಿಯಷ್ಟು ದಪ್ಪವಿದೆ. ಇದರ ತುದಿಯು ತ್ರಿಕೋನಾಕಾರದಲ್ಲಿದೆ. ಚಿಕ್ಕಮ್ಮನಹಳ್ಳಿಯಲ್ಲಿ ದೇವರಾಜ ಎಂಬವರ ಜಮೀನಿನಲ್ಲಿ ಬೃಹತ್ ಗಾತ್ರದ ನಿಲುಸುಗಲ್ಲೊಂದು ಕಂಡುಬಂದಿದೆ. ಇದು ಸುಮಾರು ೧೩ ಅಡಿ ಎತ್ತರ, ೧೫ ಅಡಿ ಅಗಲ ಹಾಗೂ ೧.೫ ಅಡಿ ದಪ್ಪವಿದ್ದು, ಇದರ ಉತ್ತರಭಾಗಕ್ಕೆ ಹಿರೇಕಲ್ ಬೆಟ್ಟಸಾಲು ಕಂಡುಬರುತ್ತದೆ.

ಅರೆಹಳ್ಳಿಯ ಕೆರೆಯ ಬದಿಯಲ್ಲಿ ನಿಲುಸುಗಲ್ಲೊಂದು ಕಂಡುಬಂದಿದೆ. ಸುಮಾರು ೬ ಅಡಿ ಎತ್ತರ, ೩ ಅಡಿ ಅಗಲ ಹಾಗೂ ೧ ಅಡಿ ದಪ್ಪವಿರುವ ಈ ನಿಲುಸುಗಲ್ಲು ತ್ರಿಕೋನಾಕಾರದಲ್ಲಿದೆ. ಸಿ. ಹರಿಹರಪುರದಲ್ಲಿರುವ ಜಮೀನಿನಲ್ಲಿ ಸುಮಾರು ೪ ನಿಲುಸುಗಲ್ಲುಗಳು ಕಂಡುಬಂದಿದೆ. ಅವುಗಳಲ್ಲಿ ೮ ಅಡಿ ಎತ್ತರ, ೫ ಅಡಿ ಅಗಲ ಮತ್ತು ೧ ಅಡಿ ದಪ್ಪವಿರುವ ನಿಲುಸುಗಲ್ಲು ಪೂರ್ವಾಭಿಮುಖವಾಗಿ ವಾಲಿಕೊಂಡ ರೀತಿಯಲ್ಲಿದೆ. ಉಳಿದವುಗಳು ಬೇರೆ ಬೇರೆ ಗಾತ್ರಗಳಲ್ಲಿದ್ದು, ಆಕಾರಗಳಲ್ಲಿಯೂ ಸ್ವಲ್ಪಮಟ್ಟಿನ ವ್ಯತ್ಯಾಸಗಳಿರುವುದನ್ನು ಕೂಡಾ ಗಮನಿಸಬಹುದಾಗಿದೆ.

ಜಾವಗಲ್ ಹೋಬಳಿಯಲ್ಲಿರುವ ಸಿಂಗನಹಳ್ಳಿಯಲ್ಲಿ ಶೇಖರಪ್ಪ ಎಂಬ ಸ್ಥಳೀಯರ ಜಮೀನಿನಲ್ಲಿ ಸುಮಾರು ೭ ನಿಲುಸುಗಲ್ಲುಗಳು ವಿವಿಧ ಆಕಾರ ಹಾಗೂ ಗಾತ್ರಗಳಲ್ಲಿ ಕಂಡುಬಂದಿವೆ. ಇದರಲ್ಲಿ ೨ ನಿಲುಸುಗಲ್ಲುಗಳು ೧೦ ಅಡಿ ಎತ್ತರವಿದ್ದು, ೫-೬ ಅಡಿ ಅಗಲ ಹಾಗೂ ೧.೫ ಅಡಿ ದಪ್ಪವಿದೆ. ಹಾಗೆಯೇ ಸಿಂಗಟಕೆರೆಯಲ್ಲಿರುವ ೨ ನಿಲುಸುಗಲ್ಲುಗಳು ರಸ್ತೆ ಬದಿಯಲ್ಲಿ ರಾಮಣ್ಣ ಎಂಬವರ ಜಮೀನಿನಲ್ಲಿ ಕಂಡುಬಂದಿವೆ. ಇಲ್ಲಿನ ನಿಲುಸುಗಲ್ಲೊಂದು ೯ ಅಡಿ ಎತ್ತರ, ೮.೫ ಅಡಿ ಅಗಲ ಮತ್ತು ೧.೫ ಅಡಿ ದಪ್ಪವಿದ್ದು ತ್ರಿಕೋನಾಕಾರದಲ್ಲಿದೆ. ಇದರ ಸನಿಹದಲ್ಲಿರುವ ಎರಡನೆಯ ನಿಲುಸುಗಲ್ಲು ನೆಲದ ಮೇಲೆ ಉರುಳಿಕೊಂಡಿದೆ. ಇದು ೬ ಅಡಿ ಎತ್ತರ, ೩.೫ ಅಡಿ ಅಗಲ ಮತ್ತು ೧ ಅಡಿ ದಪ್ಪವಿದೆ.

ಇದೇ ಹೋಬಳಿಯ ಅರಕೆರೆಯಲ್ಲಿ ಊರಿನ ಕೆರೆಯ ಸನಿಹದಲ್ಲಿಯೇ ಒಂದು ಡಾಲ್ಮೆನ್ ಕಂಡುಬಂದಿದೆ. ಇದು ಸುಮಾರು ೩.೯ ಅಡಿ ಎತ್ತರ, ೪.೭ ಅಡಿ ಅಗಲ ಹಾಗೂ ೦.೬ ಅಡಿ ದಪ್ಪವಿದೆ. ಕುರಾದಹಳ್ಳಿಯಲ್ಲಿ ದೇಶಾಣಿ ರಸ್ತೆಯ ಬದಿಯಲ್ಲಿ ಶಿಲಾವೃತ್ತವೊಂದು ಕಂಡುಬಂದಿದೆ. ಇದು ಪೂರ್ವ-ಪಶ್ಚಿಮಕ್ಕೆ ಸುಮಾರು ೨೨ ಅಡಿ, ಹಾಗೆಯೇ ಉತ್ತರ-ದಕ್ಷಿಣಕ್ಕೆ ಸುಮಾರು ೧೯ ಅಡಿಯಷ್ಟು ವ್ಯಾಪಿಸಿದ್ದು ವೃತ್ತಾಕಾರದಲ್ಲಿ ಜಮೀನಿನ ಮಧ್ಯಭಾಗದಲ್ಲಿದೆ. ಇದೇ ನೆಲೆಯ ಪಶ್ಚಿಮದಲ್ಲಿ ಸುಮಾರು ಅರ್ಧ ಕಿ.ಮೀ. ವ್ಯಾಪ್ತಿಯಲ್ಲಿ ಡಾಲ್ಮೆನ್ ಕೂಡಾ ಕಂಡುಬಂದಿದೆ.

ಕಸಬಾ ಹೋಬಳಿಯಲ್ಲಿ ಕೇಂದ್ರಸ್ಥಳ ಅರಸೀಕೆರೆಯಿಂದ ಮಾರುಕಟ್ಟೆ ರಸ್ತೆಯ ಮೂಲಕ ಸಾಗುವಾಗ ರಂಗಸ್ವಾಮಿ ಎಂಬವರ ಮನೆಯ ಮುಂಭಾಗದಲ್ಲಿ ಬೃಹತ್ ನಿಲುಸುಗಲ್ಲೊಂದು ಕಂಡುಬಂದಿದೆ. ಇದು ಸುಮಾರು ೧೩ ಅಡಿ ಎತ್ತರವಿದ್ದು ೭ ಅಡಿ ಅಗಲವಿದ್ದು, ೨.೫ ಅಡಿ ದಪ್ಪವಿದ್ದು ತ್ರಿಕೋನಾಕಾರದಲ್ಲಿದೆ. ತಳಲುತೊರೆಯಲ್ಲಿರುವ ನಿಲುಸುಗಲ್ಲೊಂದು ಪರಮೇಶ್ವರಯ್ಯ ಟಿ.ಎಸ್. ಎಂಬುವರ ಜಮೀನಿನಲ್ಲಿ ಕಂಡುಬಂದಿದೆ. ತ್ರಿಕೋನಾಕಾರದಲ್ಲಿರುವ ಈ ನಿಲುಸುಗಲ್ಲು ಪೂರ್ವಾಭಿಮುಖವಾಗಿ ವಾಲಿಕೊಂಡಂತಿದ್ದು, ಸುಮಾರು ೧೩ ಅಡಿ ಎತ್ತರ, ೬.೬ ಅಡಿ ಅಗಲ ೧.೮ ಅಡಿ

ದಪ್ಪವಿದೆ. ಅರಸೀಕೆರೆ-ತುಮಕೂರು ರಸ್ತೆಯಲ್ಲಿ ಸಾಗುವಾಗ ಸಿಗುವ ಲಕ್ಷ್ಮೀದೇವಿಹಳ್ಳಿಯಲ್ಲಿ ಗಂಗಮ್ಮ ಎಂಬವರ ಜಮೀನಿನಲ್ಲಿ ಎರಡು ನಿಲುಸುಗಲ್ಲುಗಳು ಕಂಡು ಬಂದಿವೆ. ಇವುಗಳಲ್ಲಿ ಒಂದು ನಿಲುಸುಗಲ್ಲು ನೆಲದ ಮೇಲೆ ಉರುಳಿಕೊಂಡಿದ್ದರೆ, ಎರಡನೆಯದು ಸುಮಾರು ೮.೫ ಅಡಿ ಎತ್ತರ, ೨.೯ ಅಡಿ ಅಗಲ ಮತ್ತು ೧ ಅಡಿ ದಪ್ಪವಿದೆ.

ಸಿದ್ಧರಹಳ್ಳಿಯಲ್ಲಿ ನಂಜುಂಡಯ್ಯ ಎಂಬವರ ಜಮೀನಿನಲ್ಲಿ ಸುಮಾರು ೬ ನಿಲುಸುಗಲ್ಲುಗಳು ಕಂಡು ಬಂದಿವೆ. ಇದರಲ್ಲಿ ಒಂದು ನಿಲುಸುಗಲ್ಲು ತ್ರಿಕೋನಾ ಕಾರದಲ್ಲಿದ್ದು, ಪಶ್ಚಿಮಾಭಿಮುಖವಾಗಿ ನಿಂತಿರುವುದೇ ಸುಮಾರು ೧೨ ಅಡಿ ಎತ್ತರ, ೬ ಅಡಿ ಅಗಲ ಹಾಗೂ ೧.೫ ಅಡಿ ದಪ್ಪವಿದೆ. ಇದರ ಪಶ್ಚಿಮದಲ್ಲಿ ಅಗ್ಗುಂದ-ಗೊಲ್ಲರಹಟ್ಟಿ ಎಂಬ ಬೃಹತ್ ಶಿಲಾಯುಗದ ನೆಲೆಯೊಂದು ಕಂಡುಬಂದಿದೆ. ಉಳಿದಂತೆ ಈ ಹೋಬಳಿಯಲ್ಲಿ ಕಾಟಿಕೆರೆ, ಹಾರನಹಳ್ಳಿ, ದುಮ್ಮೇನಹಳ್ಳಿಗಳಲ್ಲಿಯೂ ಹಲವು ನಿಲುಸುಗಲ್ಲುಗಳು ಕಂಡುಬಂದಿವೆ.

ಗಂಡಸಿ ಹೋಬಳಿಯಲ್ಲಿರುವ ಜೋಬಿಗೆನಹಳ್ಳಿ ಗ್ರಾಮದಲ್ಲಿ ಕಂಡುಬಂದಿರುವ ನಿಲುಸುಗಲ್ಲೊಂದು ಸುಮಾರು ೭ ಅಡಿ ಎತ್ತರ ೨.೫ ಅಡಿ ಅಗಲ ಮತ್ತು ೦.೫ ಅಡಿ ದಪ್ಪವಿದೆ. ಇದೇ ರೀತಿಯಲ್ಲಿ ಜೆ. ಮಂಗಳಾಪುರದ ಜಮೀನಿನಲ್ಲಿ ನಿಲುಸುಗಲ್ಲೊಂದು ಕಂಡುಬಂದಿದ್ದು ಇದು ಸುಮಾರು ೫ ಅಡಿ ಎತ್ತರ, ೧೦ ಅಡಿ ಅಗಲ ಹಾಗೂ ೧ ಅಡಿ ದಪ್ಪವಿದೆ. ಹಾಗೆಯೇ ಗುಂಡುಕಾನಹಳ್ಳಿಯಲ್ಲಿರುವ ನಿಲುಸುಗಲ್ಲೊಂದು ಸುಮಾರು ೪ ಅಡಿ ಎತ್ತರ, ೨.೫ ಅಡಿ ಅಗಲ ಮತ್ತು ೧ ಅಡಿ ದಪ್ಪವಿದೆ.

ಅರಸೀಕೆರೆ ತಾಲ್ಲೂಕಿನ ಅನೇಕ ನೆಲೆಗಳಲ್ಲಿ ಕಂಡುಬಂದಿರುವ ನಿಲುಸುಗಳಲ್ಲುಗಳು ವಿವಿಧ ಆಕಾರ, ಗಾತ್ರ ಮತ್ತು ದಿಕ್ಕುಗಳಲ್ಲಿ ಕಾಣಸಿಗುತ್ತವೆ. ಹಾಗೆಯೇ ವಿವಿಧ ಆಕಾರಗಳಲ್ಲಿ ಡಾಲ್ಮೆನ್‌ಗಳು, ಶಿಲಾವೃತ್ತಗಳು ಹಾಗೂ ಸಮಾಧಿ ದಿನ್ನೆಗಳು ಕೂಡಾ ಗೋಚರಿಸುತ್ತವೆ. ಬಾಣಾವರ ಹೋಬಳಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಈ ಕಾಲಾವಧಿಯ ಕುರುಹುಗಳು ದೊರಕಿರುವುದು ವಿಶೇಷವಾಗಿದೆ. ಉಳಿದಂತೆ ಕಣಕಟ್ಟೆ ಹೋಬಳಿಯಲ್ಲಿ ಅನೇಕ ಸಂಖ್ಯೆಯಲ್ಲಿ ಕುರುಹುಗಳು ದೊರಕಿದರೆ, ಗಂಡಸಿ ಹೋಬಳಿಯಲ್ಲಿ ಕಡಿಮೆ ಸ್ಥಳಗಳಲ್ಲಿ ಕುರುಹುಗಳು ಕಂಡುಬಂದಿವೆ. ಈ ಎಲ್ಲಾ ವಿವರಗಳನ್ನು ಗಮನಿಸಿದಾಗ ಅರಸೀಕೆರೆ ತಾಲ್ಲೂಕು ಕೇವಲ ಐತಿಹಾಸಿಕ ಕಾಲಕ್ಕೆ ಸಂಬಂಧಿಸಿದಂತೆ ಮಾತ್ರ ಪ್ರಾಮುಖ್ಯತೆ ಪಡೆಯದೇ ಪ್ರಾಗೈತಿಹಾಸಿಕ ಕಾಲಘಟ್ಟಗಳಲ್ಲಿಯೂ ಕೂಡಾ ಹೆಚ್ಚಿನ ಮಹತ್ವ ಪಡೆದುಕೊಂಡಿತ್ತೆಂಬುದನ್ನು ಅರಿತುಕೊಳ್ಳಬಹುದಾಗಿದೆ. ಅಲ್ಲದೇ ಐದು ಹೋಬಳಿಗಳ ಪೈಕಿ ಬಾಣಾವರ ಹೋಬಳಿಯಲ್ಲಿ ಏತಕ್ಕಾಗಿ ಅತ್ಯಧಿಕ ಸಂಖ್ಯೆಯಲ್ಲಿ ಬೃಹತ್ ಶಿಲಾಯುಗದ ಕುರುಹುಗಳು ಕಂಡುಬಂದಿವೆ ಎಂಬುದನ್ನು ನಾವಿಲ್ಲಿ ತಿಳಿಯಬೇಕಾಗಿದೆ.

ಈ ಹೋಬಳಿಯಲ್ಲಿ ಕಂಡುಬಂದಿರುವ ಬಹುತೇಕ ಬೃಹತ್ ಶಿಲಾಯುಗದ ನೆಲೆಗಳ ಸನಿಹದಲ್ಲಿ ಬೆಟ್ಟ, ಕೆರೆ, ಹಳ್ಳ, ದಿನ್ನೆಗಳು, ವ್ಯಾಪಾರಿ ಮಾರ್ಗಗಳು ಹೆಚ್ಚಾಗಿ ಕಂಡುಬಂದಿವೆ. ಈ ಪ್ರದೇಶದಲ್ಲಿ ಯಾವುದೇ ನದಿಪಾತ್ರವಿಲ್ಲ ದಿರುವುದರಿಂದ ಆ ಕಾಲದ ಜನತೆಯು ಹಲವಾರು ಕಾರಣಗಳಿಗಾಗಿ ಕೆರೆ ನೀರನ್ನೇ ಆಶ್ರಯಿಸಿ, ಅದರ ಸುತ್ತ ಮುತ್ತಲೂ ನೆಲೆಸಿದ್ದಿರಬಹುದು. ಇಂದಿಗೂ ಈ ಭಾಗದ ಜನತೆ ಬೇಟೆಗಾರಿಕೆ, ಕುರಿಸಾಕಾಣಿಕೆ ಹಾಗೂ ಕೃಷಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ರಾಗಿ, ಎಳ್ಳು, ಜೋಳ, ಭತ್ತ, ತೆಂಗು, ತರಕಾರಿಗಳು ಹಾಗೂ ಹಲವು ರೀತಿಯ ಧಾನ್ಯಗಳನ್ನು ತಮ್ಮ ಜಮೀನಿನಲ್ಲಿ ಬೆಳೆಯುತ್ತಿದ್ದಾರೆ. ಈ ಪ್ರದೇಶದಲ್ಲಿ ಬಹುತೇಕ ಸ್ಥಳಗಳಲ್ಲಿ ಮಡಿಕೆ ಕುಡಿಕೆಗಳ ಅವಶೇಷಗಳು, ಕಬ್ಬಿಣದ ಅದಿರಿನ ಕುರುಹುಗಳು ಕಂಡುಬಂದಿವೆ. ತಾಲ್ಲೂಕಿನ ಇತರ ಹೋಬಳಿಗಳಿಗೆ ಹೋಲಿಸಿದಾದಲ್ಲಿ ಬಾಣಾವರ ಹೋಬಳಿಯು ಹೆಚ್ಚಿನ ರೀತಿಯಲ್ಲಿ ಆಯಕಟ್ಟಿನ ಜಾಗದ ಸ್ವರೂಪದಲ್ಲಿ ಕಂಡುಬರುತ್ತದೆ. ಪ್ರಮುಖ ಪ್ರದೇಶಗಳನ್ನು ಸಂಧಿಸುವ ಮಾರ್ಗಗಳು, ಕೆರೆಗಳ ರಚನೆ, ಕೃಷಿಜಮೀನುಗಳು, ಜನ ವಾಸ್ತವ್ಯ ವಿವರಗಳನ್ನೆಲ್ಲಾ ಗಮನಿಸಿದಾಗ ವಿಶೇಷತೆಯನ್ನು ಪಡೆದುಕೊಳ್ಳುತ್ತದೆ.

ಬಾಣಾವರ ಹೋಬಳಿಯಲ್ಲಿ ಕಂಡುಬಂದಿರುವ ಬೃಹತ್ ಶಿಲಾಯುಗದ ನೆಲೆಗಳಲ್ಲಿ ಬಾಣಾವರ, ರಾಂಪುರ-ಗವಿಮಠ, ಬೈರೆಗೊಂಡನಹಳ್ಳಿ, ಬೆಂಡೆಕೆರೆತಾಂಡ್ಯ, ಕೊಮ್ಮಾರಗಟ್ಟಿ, ಕುರುಬರಹಳ್ಳಿ, ಪುರಲೇಹಳ್ಳಿ, ಕರಡಿಹಳ್ಳಿ, ಕೆ.ಜಿ. ಅಗ್ರಹಾರ, ಚಿಕ್ಕಮ್ಮನಹಳ್ಳಿ, ಕೋಡಿಹಳ್ಳಿ, ಅರೆಹಳ್ಳಿ, ಹರಿಹರಪುರ ಹಾಗೂ ಬೈರಾಂಬುದಿಗಳಲ್ಲಿ ನಿಲುಸುಗಲ್ಲುಗಳು ಕಂಡುಬಂದಿವೆ. ಉಳಿದಂತೆ ಶಾನೆಗೆರೆ, ತೊಂಡಿಗೆನಹಳ್ಳಿ, ಮಲ್ಲಾಪುರ.ಬಿ. ಅರೆಹಳ್ಳಿಗಳಲ್ಲಿ ಡಾಲ್ಮೆನ್‌ಗಳು ಗೋಚರಿಸಿವೆ. ಶಾನೆಗೆರೆ ಎಂಬ ಸ್ಥಳದಲ್ಲಿ ಮಾಲೆದಿಬ್ಬವೆಂಬ ಸಮಾಧಿ ದಿನ್ನೆಯೊಂದು ಕೂಡಾ ಕಂಡುಬಂದಿದೆ. ಒಟ್ಟಾರೆಯಾಗಿ ಕಂಡುಬಂದಿರುವ ಬೃಹತ್ ಶಿಲಾಯುಗದ ಅವಶೇಷಗಳನ್ನು ಗಮನಿಸಿದಾಗ ಬಾಣಾವರ ಹೋಬಳಿಯು ಆ ಕಾಲದ ಜನತೆಗೆ ಉತ್ತಮ ರೀತಿಯ ಆಶ್ರಯ ಕಲ್ಪಿಸಿಕೊಟ್ಟಿತ್ತು ಎಂಬುದಾಗಿ ತಿಳಿಯಬಹುದಾಗಿದೆ.

ಇಂದಿಗೂ ಈ ಪ್ರದೇಶದಲ್ಲಿ ಹಲವಾರು ಗೊಲ್ಲರಹಟ್ಟಿಗಳು, ನಾಯಕ ಜನಾಂಗದವರ ವಾಸಸ್ಥಾನಗಳು, ಕುರುಬ ಜನಾಂಗಗಳ ವಸತಿಗಳು ಕಾಣಸಿಗುತ್ತವೆ. ಈ ಸ್ಥಳಗಳಲ್ಲಿ ಕೃಷಿ ಪ್ರಾಥಮಿಕ ಹಂತದಲ್ಲಿಯೇ ಕಂಡುಬರುವುದಲ್ಲವದೇ, ಮಿಶ್ರ ಬೇಸಾಯದಲ್ಲಿ ಜನತೆ ತೆಂಗು, ಜೋಳ, ರಾಗಿ, ಶೇಂಗ, ಎಳ್ಳು, ತರಕಾರಿಗಳನ್ನು ಬೆಳೆಯುತ್ತಾ ಜೀವಿಸುತ್ತಿದ್ದಾರೆ. ಹೀಗಾಗಿ ಕೆರೆನೀರಿನ ಲಭ್ಯತೆ ಇರುವೆಡೆಗಳಲ್ಲಿ ಬೃಹತ್ ಶಿಲಾಯುಗದ ಜನತೆ ವಾಸಿಸಿದ್ದಿರಬಹುದು. ಜೊತೆಗೆ ತಮಗೆ ಬೇಕಾಗಿದ್ದ ನೈಸರ್ಗಿಕ ಬಂಡೆಗಳು ಇದೇ ಸ್ಥಳಗಳಲ್ಲಿ ನೆಲೆ ನಿಲ್ಲುವುದಕ್ಕೆ ಕಾರಣವಾಗಿರಲೂಬಹುದು. ಹೀಗಾಗಿ ತಾಲ್ಲೂಕಿನ ಉಳಿದ ಹೋಬಳಿಗಳಿಗಿಂತ ಬಾಣಾವರ ಹೋಬಳಿಯಲ್ಲಿ ಬೃಹತ್ ಶಿಲಾಯುಗದ ನೆಲೆಗಳು ಅತ್ಯಧಿಕ ಸಂಖ್ಯೆಯಲ್ಲಿ ಕಂಡುಬಂದಿವೆ.

ಅರಸೀಕೆರೆ ತಾಲ್ಲೂಕಿನ ಬೃಹತ್ ಶಿಲಾಯುಗದ ಸ್ಮಾರಕಗಳಲ್ಲಿ ಪ್ರಮುಖವಾಗಿ ಮೂರು ರೀತಿಯವು ಕಂಡುಬರುತ್ತವೆ. ಅವುಗಳೆಂದರೆ ನಿಲುಸುಗಲ್ಲುಗಳು, ಡಾಲ್ಮೆನ್‌ಗಳು (ಕಲ್ಲುಗೋರಿಗಳು) ಮತ್ತು ಶಿಲಾವೃತ್ತಗಳು ಇವುಗಳಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಕಂಡುಬರುವುದೆಂದರೆ ನಿಲುಸುಗಲ್ಲುಗಳು. ಇದು ಕೆಲವು ಪ್ರಶ್ನೆಗಳಿಗೆ ಎಡೆಮಾಡಿ ಕೊಡುತ್ತದೆ. ಅವುಗಳೆಂದರೆ ಅಂದಿನ ಜನರು ಏತಕ್ಕಾಗಿ ನಿಲುಸುಗಲ್ಲುಗಳನ್ನೇ ಹೆಚ್ಚಾಗಿ ನಿಲ್ಲಿಸುತ್ತಿದ್ದರು ? ಹಾಗೂ ಈ ಪದ್ಧತಿಯು ಯಾವುದಾದರೂ ಧಾರ್ಮಿಕ ಪದ್ಧತಿಯಿಂದ ನಿಯಂತ್ರಿಸಲ್ಪಟ್ಟಿತ್ತೇ?. ಮೊದಲನೆಯ ಸಮಸ್ಯೆ ಅಂದಿನ ಆರ್ಥಿಕತೆಯ ಸ್ವರೂಪವನ್ನು ಅರಿಯಲು ಸಹಾಯಕವಾಗುತ್ತದೆ. ಶಿಲಾವೃತ್ತಗಳಿಗೆ ಮತ್ತು ಕಲ್ಲುಗೋರಿಗಳಿಗೆ ಹೋಲಿಸಿದರೆ ನಿಲುಸುಗಲ್ಲುಗಳನ್ನೇ ನಿರ್ಮಾಣ ಮಾಡುವುದು ಮತ್ತು ನಿಲ್ಲಿಸುವುದು ಆರ್ಥಿಕವಾಗಿ ಸುಲಭವಾದುದರಿಂದ ಹೆಚ್ಚಿನ ಜನರು ಇದನ್ನೇ ಅನುಸರಿಸುತ್ತಿರಬಹುದು. ಎರಡನೆಯದಾಗಿ ಎತ್ತರವಾದ ನಿಲುಸುಗಲ್ಲುಗಳನ್ನು ನಿಲ್ಲಿಸಿದರೆ ಸಮಾಧಿಯಿರುವ ಸ್ಥಳವನ್ನು ಬಹಳ ಸುಲಭವಾಗಿ ದೂರದಿಂದಲೇ ಗುರುತಿಸಬಹುದಾಗಿತ್ತು.

ಎರಡನೆಯ ಪ್ರಶ್ನೆಯು ಬೃಹತ್ ಶಿಲಾಯುಗದ ಕಾಲದಲ್ಲಿಯೇ ಧಾರ್ಮಿಕ ಆಚರಣೆಗಳು ಹುಟ್ಟಿದುದನ್ನು ಗುರುತಿಸಲು ಸಹಾಯಕವಾಗುತ್ತದೆ. ಏಕೆಂದರೆ ಶವವನ್ನು ಹೂಳುವ ಪದ್ಧತಿಯು ಒಂದೊಂದು ಸಾಮಾಜಿಕ ಗುಂಪಿನಲ್ಲಿ ಒಂದೊಂದು ರೀತಿಯಲ್ಲಿದ್ದಿರುವುದನ್ನು ನಾವು ಇದರಿಂದ ಗುರುತಿಸಬಹುದು. ಇಂತಹ ಸ್ಮಾರಕಗಳ ಅಧ್ಯಯನದಿಂದ ಬೃಹತ್ ಶಿಲಾಯುಗದ ಕಾಲದಲ್ಲಿಯೇ ಕೃಷಿ ಮತ್ತು ಪಶುಸಂಗೋಪನೆ ಅತ್ಯಧಿಕ ಪ್ರಮಾಣದಲ್ಲಿ ಬೆಳೆದು ಸಾಮಾಜಿಕ ಮತ್ತು ಆರ್ಥಿಕ ವೈವಿಧ್ಯತೆ ಬೆಳೆದಿರುವುದನ್ನು ನಾವಿಲ್ಲಿ ಗುರುತಿಸಬಹುದು.

ಪ್ರದೇಶಗಳ ನೈಸರ್ಗಿಕ ಆಯ್ಕೆಯ ಆಧಾರದಲ್ಲಿ ವ್ಯತ್ಯಾಸವಿದ್ದುದು ಮಾತ್ರವಲ್ಲದೇ, ಅಂತಸ್ತಿನ ಆಧಾರದ ಮೇಲೆ ಈ ಸಮಾಧಿಗಳ ರಚನೆಯಾಗಿರಲೂಬಹುದು. ಈ ಬಗೆಯ ಎಲ್ಲಾ ನೆಲೆಗಳು ಬೃಹತ್ ಶಿಲಾಯುಗದ ನೆಲೆಗಳೆಂದು ಹೇಳಲು ಸಾಧ್ಯವಿಲ್ಲ. ಉತ್ಖನನ ಮಾಡುವಾಗ ಏನಾದರೂ ಕುರುಹುಗಳು ದೊರೆತಾಗ ಮಾತ್ರ ಅದು ಆ ಕಾಲಘಟ್ಟಕ್ಕೆ ಸಂಬಂಧಿಸಿದ್ದು ಎಂದು ಹೇಳಬಹುದು. ಸ್ಮಾರಕಗಳ ವಿವಿಧ ವರ್ಗಗಳ ಭಾಗವಹಿಸುವಿಕೆ ಕಂಡುಬರುತ್ತದೆ. ವಿವಿಧ ಸಂಸ್ಕಾರಗಳಿರುವುದರಿಂದ ಧಾರ್ಮಿಕವಾಗಿರಲೂಬಹುದಲ್ಲದೆ ಆರ್ಥಿಕ ಹಿನ್ನೆಲೆಯಲ್ಲಿ ಹೇಳಲಾಗದು ಎಂಬಿತ್ಯಾದಿ ವಿವರಗಳನ್ನು ವಿಸ್ವಾಂಸರು[೨] ವ್ಯಕ್ತಪಡಿಸಿದ್ದಾರೆ.

ಆಧಾರಸೂಚಿ

೧. ಹನುಮ ನಾಯಕ., 'ಚೆಲವನಹಳ್ಳಿಯ ಗವಿಮಠ ಒಂದು ಪ್ರಾಗೈತಿಹಾಸಿಕ ನೆಲೆ', ಇನ್ ಇತಿಹಾಸ ದರ್ಶನ, ಸಂ. ೯, ೧೯೯೪, ಬೆಂಗಳೂರು, ಪುಟ ೬-೮, ಆರ್. ವೆಂಕಟೇಶ್ ಮೂರ್ತಿ, 'ಅರಸೀಕೆರೆ ಪರಿಸರದ ಬೃಹತ್ ಶಿಲಾಯುಗದ ನೆಲೆಗಳು-ಒಂದು ಶೋಧ', ಇತಿಹಾಸ ದರ್ಶನ, ಸಂ. ೧೧, ೧೯೯೬, ಬೆಂಗಳೂರು, ಪುಟ ೩೭-೩೮, ಡಾ. ಹನುಮ ನಾಯಕ, 'ಅರಸೀಕೆರೆ ತಾಲ್ಲೂಕು ಚಲುವನಹಳ್ಳಿಯ ಬೃಹತ್ ಶಿಲಾಯುಗದ ನೆಲೆ', ಇತಿಹಾಸ ದರ್ಶನ, ಸಂ. ೨೦, ೨೦೦೫, ಬೆಂಗಳೂರು, ಪುಟ ೧-೩, ಡಾ. ಹನುಮ ನಾಯಕ, 'ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಯ ಕೆಲವು ಹೊಸ ಬೃಹತ್ ಶಿಲಾಯುಗದ ನೆಲೆಗಳು', ಇತಿಹಾಸ ದರ್ಶನ, ಸಂ. ೨೨, ೨೦೦೭, ಬೆಂಗಳೂರು, ಪುಟ ೯.೧೦, ಡಾ. ಹನುಮ ನಾಯಕ, 'ಅರಸೀಕೆರೆ ತಾಲ್ಲೂಕಿನ ಪ್ರಾಗೈತಿಹಾಸಿಕ ಬಂಡೆ ಚಿತ್ರಗಳು', ಇತಿಹಾಸ ದರ್ಶನ, ಸಂ. ೨೪, ೨೦೦೯, ಬೆಂಗಳೂರು, ಪುಟ ೯-೧೧, ಪ್ರವೀಣ್ ಬೆಳ್ತಂಗಡಿ, 'ಬೃಹತ್ ಶಿಲಾಯುಗದ ನೆಲೆಗಳು-ಅಗ್ಗುಂದ-ಗೊಲ್ಲರಹಟ್ಟಿ', ಇತಿಹಾಸ ದರ್ಶನ, ಸಂ. ೨೬, ೨೦೧೧, ಬೆಂಗಳೂರು, ಪುಟ ೧೫-೧೭, ಪ್ರವೀಣ್ ಬೆಳ್ತಂಗಡಿ, ಅರಸೀಕೆರೆ ತಾಲ್ಲೂಕಿನ ಪ್ರಾಗೈತಿಹಾಸಿಕ ನೆಲೆಗಳು', ಇತಿಹಾಸ ದರ್ಶನ, ಸಂ. ೨೭, ೨೦೧೨, ಬೆಂಗಳೂರು, ಪುಟ ೧೨-೧೪.

೨. ಡಾ. ಅ. ಸುಂದರ ಮತ್ತು ಡಾ. ಸಾಮಕ್‌ರವರು ಪ್ರಸ್ತುತ ಪ್ರಬಂಧ ಮಂಡನೆಯ ಸಂದರ್ಭದಲ್ಲಿ ನೀಡಿರುವ ಸೂಕ್ತ ಸಲಹೆಗಳನ್ನು ಅಳವಡಿಸಿಕೊಂಡಿರುವುದಾಗಿದೆ.

೩

ಯಲಹಂಕ ಪರಿಸರದ ಶಿಲಾಯುಗ ಸಂಸ್ಕೃತಿಯ ನೆಲೆಗಳು

ಡಾ. ಸಿ.ಈ. ಲೋಕೇಶ್*

ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಯಲಹಂಕ ಗ್ರಾಮವು ಬೇಲೂರಿನಿಂದ ಪೂರ್ವಕ್ಕೆ ಸರಿಸುಮಾರು ೧೫ ಕಿ.ಮೀ. ದೂರದಲ್ಲಿದೆ. ಈ ಊರಿನ ಸುತ್ತಮುತ್ತಲಿನ ಪರಿಸರದಲ್ಲಿ ಬೃಹತ್‌ಶಿಲಾಯುಗ ಸಂಸ್ಕೃತಿಗೆ ಸೇರಿದ ಅನೇಕ ಶಿಲಾವೃತ್ತಾಕಾರದ ಸಮಾಧಿ ನೆಲೆಗಳು ಇವೆ. ಈ ಶಿಲಾಸಮಾಧಿಗಳು ಅಲ್ಲಲ್ಲಿ ಚದುರಿಹೋಗಿವೆ. ಹಾಗೂ ಆ ಪರಿಸರ ವ್ಯವಸಾಯ ಯೋಗ್ಯ ಭೂಮಿಯಾದ್ದರಿಂದ ಇಂತಹ ಅಪರೂಪದ ಅನೇಕ ಸಮಾಧಿಗಳು ನಾಶವಾಗಿವೆ. ಅಳಿದುಳಿದ ಕೆಲವು ಮಾತ್ರ ಉಳಿದುಬಂದಿವೆ.

ಅವುಗಳ ಸಮಗ್ರ ಚಿತ್ರಣ ಈ ಕೆಳಕಂಡಂತೆ ಇವೆ.

ಸಮಾಧಿ ೧: ಇದು ಕೆರೆಯ ಪಕ್ಕದಲ್ಲಿಯೇ ಇರುವ ಜಮೀನಿನಲ್ಲಿ ಇರುವ ಸಮಾಧಿ ನೆಲೆಯಾಗಿದ್ದು, ಆ ಜಾಗವನ್ನು ವ್ಯವಸಾಯಕ್ಕೆ ಬಳಸಲಾಗಿದೆ. ಕೇವಲ ಒಂದು ಮೂಲೆಯಲ್ಲಿ ಈ ಸಮಾಧಿಯ ಕುರುಹುಗಳಿದ್ದು ಸರಿಸುಮಾರು ೨೫ ದೊಡ್ಡ ದೊಡ್ಡದಾದ ಕಲ್ಲುಗಳನ್ನು ವೃತ್ತಾಕಾರದಲ್ಲಿ ಜೋಡಿಸಲಾಗಿದೆ. ಇದರ ಕೇಂದ್ರಬಿಂದುವಿನಿಂದ ಇದರ ಸುತ್ತಳತೆ ಸುಮಾರು ೧೦ ಅಡಿಗಳಷ್ಟು ವೃತ್ತಾಕಾರವಾಗಿ ನಿರ್ಮಿಸಿರುತ್ತಾರೆ. ಮಧ್ಯದಲ್ಲಿಯು ಕಲ್ಲುಗಳು ಗೋಚರಿಸುತ್ತಿವೆ. ಜೊತೆಗೆ ಈ ಸಮಾಧಿಯ ಪಕ್ಕದಲ್ಲಿ ಒಂದು ದೊಡ್ಡದಾದ ಅಗಲವಾದ ಕಲ್ಲು ಬಿದ್ದಿದ್ದು ಅದರ ಮಧ್ಯದಲ್ಲಿ ಒಂದು ರಂಧ್ರವನ್ನು ಕೂಡ ಮಾಡಲಾಗಿದೆ. ಮೊದಲನೆ ಸಮಾಧಿ ಯಿಂದ ಸರಿಸುಮಾರು ೨೦ ಅಡಿಗಳ ದೂರದಲ್ಲಿದ್ದ ಮತ್ತೊಂದು ಸಮಾಧಿ ಸಂಪೂರ್ಣವಾಗಿ ನಾಶವಾಗಿದ್ದು, ವೃತ್ತಾಕಾರದ ಕಲ್ಲುಗಳನ್ನು ಸಾಲಾಗಿ ಜೋಡಿಸಲಾಗಿದೆ. ಈ ಎಲ್ಲಾ ಕಲ್ಲುಗಳು ಸ್ಥಳಾಂತರಗೊಂಡಿವೆ.

ಸಮಾಧಿ ೨: ಇದು ಕೂಡ ವ್ಯವಸ್ಥಿತ ರೂಪದಲ್ಲಿಯೇ ಇದ್ದು ಸುಮಾರು ೨೩ ಕಲ್ಲುಗಳಿಂದ ನಿರ್ಮಾಣವಾಗಿದ್ದು ದೊಡ್ಡ ದೊಡ್ಡದಾದ ಕಲ್ಲುಗಳನ್ನು ವೃತ್ತಾಕಾರದಲ್ಲಿ ಜೋಡಿಸ ಲಾಗಿದೆ. ಇದು ಕೂಡ ಸಮಾಧಿಯ ಕೇಂದ್ರಬಿಂದುವಿನಿಂದ ೯ ಅಡಿಗಳ ಸಮಾನಾಂತರ ತ್ರಿಜ್ಯದಿಂದ ವೃತ್ತಾಕಾರವಾಗಿ ನಿರ್ಮಿಸಲಾಗಿದ್ದು ಮಧ್ಯಭಾಗದಲ್ಲಿ ಸುತ್ತಲಿನ ಹೊಲಗಳ ತ್ಯಾಜ್ಯವನ್ನು ಹಾಕಿರುವುದರಿಂದ ಸಮಾಧಿಯ ಮಧ್ಯಭಾಗದ ಮಾಹಿತಿಗಳು ಅಸ್ಪಷ್ಟವಾಗಿವೆ.

ಸಮಾಧಿ ೩: ಈ ಸಮಾಧಿಯು ಇಂದಿಗೂ ವ್ಯವಸ್ಥಿತವಾಗಿ ಗೋಚರಿಸುವ ಶಿಲಾವೃತ್ತವಾಗಿದ್ದು ಜಮೀನಿನ ಮಧ್ಯಭಾಗದಲ್ಲಿದ್ದರೂ ಯಾವುದೇ ಹಾನಿಯು ಉಂಟಾಗಿಲ್ಲ. ಈ ಸಮಾಧಿಯು ೨೫ ದೊಡ್ಡ ಗಾತ್ರ ಕಲ್ಲುಗಳನ್ನು ಮಧ್ಯಭಾಗದಿಂದ ಸುಮಾರು ೯ ಅಡಿ ತ್ರಿಜ್ಯದಲ್ಲಿ ಸುತ್ತಲು ವೃತ್ತಾಕಾರದಲ್ಲಿ ಜೋಡಿಸಲಾಗಿದೆ. ಮಧ್ಯಭಾಗದಲ್ಲಿ ಕಲ್ಲಿನ ಅನೇಕ ಕುರುಹುಗಳು ಕಂಡುಬಂದರೂ ಹುತ್ತ ಬೆಳೆದಿದ್ದು ಅಲ್ಲಿ ನಾಗದೇವತೆ ಇದೆ ಎಂಬ ಪ್ರತೀತಿ ಇದೆ. ಹಾಗಾಗಿಯೇ ಈ ಸಮಾಧಿ ಹೊಲದ ಮಧ್ಯದಲ್ಲಿದ್ದರೂ ಯಾವುದೇ ಹಾನಿಯಾಗದೆ ಉಳಿದುಕೊಂಡಿದೆ.

ಸಮಾಧಿ ೪: ನಾಲ್ಕನೆಯ ಸಮಾಧಿಯು ಗಿಡ, ಪೊದೆಗಳ ಮಧ್ಯದಲ್ಲಿದ್ದು ಸುತ್ತಲೂ ಕೃಷಿಭೂಮಿ ಇರುವುದರಿಂದ ಒತ್ತುವರಿಯಾಗಿದ್ದು ವೃತ್ತಾಕಾರದ ಕಲ್ಲುಗಳು ಅಲ್ಲಲ್ಲಿ ಸ್ಥಾನಪಲ್ಲಟಗೊಂಡಿದ್ದು, ನೆಲೆಯು ಭಾಗಶಃ ಸುಸ್ಥಿತಿಯಲ್ಲಿದೆ.

ಸಮಾಧಿ ೫: ಐದನೆಯ ಸಮಾಧಿಯು ಕೂಡ ನಾಲ್ಕು ಕಡೆಯಿಂದಲೂ ಕೃಷಿಭೂಮಿಯಿಂದ ಸುತ್ತುವರಿಯಲ್ಪಟ್ಟಿದ್ದು, ವೃತ್ತಾಕಾರದಲ್ಲಿ ಜೋಡಿಸಿರುವ ಸುಮಾರು ಐದು ಕಲ್ಲುಗಳು ಸ್ಥಾನಪಲ್ಲಟಗೊಂಡಿವೆ ಮತ್ತು ಅಲ್ಲಿಯೇ ಸುತ್ತಮುತ್ತ ಬಿದ್ದಿವೆ. ಈ ಸಮಾಧಿಯು ಕೂಡ ೨೫ ದೊಡ್ಡಗಾತ್ರದ ಕಲ್ಲುಗಳಿಂದ ಕೂಡಿವೆ. ಮಧ್ಯಭಾಗದಲ್ಲಿ ಒಂದು ಮರ ಬೆಳೆದಿದೆ.

ಹೀಗೆ ಕೇವಲ ಐದು ಸಮಾಧಿಗಳು ಪ್ರಸ್ತುತ ಲಭ್ಯವಿದ್ದು ಇವುಗಳನ್ನು ಪಾಂಡವರ ಮನೆ ಎಂಬ ಭಾವನೆಯಿಂದ ಮಾತ್ರ ಉಳಿಸಿಕೊಂಡಿದ್ದಾರೆಂದು ತಿಳಿದುಬರುತ್ತವೆ. ಆದರೆ ಸುತ್ತಮುತ್ತಲ್ಲಿನ ಕ್ಷೇತ್ರಧ್ಯಾಯನದಿಂದ ತಿಳಿದುಬಂದ ಮಾಹಿತಿ ಎಂದರೆ ಅನೇಕ ಬೃಹತ್ ಶಿಲಾ ಸಮಾಧಿಯ ಕುರುಹುಗಳು ಅಲ್ಲಲ್ಲಿ ಚದುರಿರುವುದನ್ನು ನೋಡಿದರೆ ಆ ಪರಿಸರದಲ್ಲಿ

* ಸಹಾಯಕ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಮಹಾರಾಜ ಕಾಲೇಜು, ಮೈಸೂರು–೫೭೦೦೦೫.

ಇನ್ನೂ ಸಾಕಷ್ಟು ಸಮಾಧಿಗಳಿದ್ದವೆಂದು ತಿಳಿಯುತ್ತದೆ. ಆದರೆ ಮನುಷ್ಯನ ಕಾರ್ಯಚಟುವಟಿಕೆಗಳಿಂದಾಗಿ ಇಂತಹ ಅತ್ಯಮೂಲ್ಯ ಸಂಸ್ಕೃತಿಯ ಕುರುಹುಗಳು ನಾಶವಾಗಿವೆ. ಇರುವ ಕೆಲವೇ ಕೆಲವು ಅಮೂಲ್ಯ ಸಮಾಧಿಗಳ ಸಂಶೋಧನೆ ಹಾಗೂ ಆಳವಾದ ಅಧ್ಯಯನದ ಅಗತ್ಯತೆ ಇದೆ.

[ನನ್ನ ಕ್ಷೇತ್ರಾಧ್ಯಯನಕ್ಕೆ ಸಲಹೆ ಸೂಚನೆಗಳನ್ನು ನೀಡಿದ ಖ್ಯಾತ ವಿದ್ವಾಂಸರಾದ ಡಾ. ಅ. ಸುಂದರರವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ.]

ಆಧಾರಸೂಚಿ

೧. ನರಸಿಂಹಮೂರ್ತಿ. ಎ.ವಿ, ೧೯೭೯, ಕರ್ನಾಟಕ ಪುರಾತತ್ ಶೋಧನೆ.

೨. ಶಿವತಾರಕ್ ಕೆ.ಬಿ, ೨೦೦೫, ಕರ್ನಾಟಕ ಪುರಾತತ್ವ ನೆಲೆಗಳು.

೩. ಸುಂದರ. ಅ, ೧೯೭೦ ಇತಿಹಾಸ ಪೂರ್ವ ಕರ್ನಾಟಕ, ಕನ್ನಡ ವಿ.ವಿ. ಇಂಡಿಯಾ ಬುಕ್ ಹೌಸ್.

೪. Gruru(raja) Rao, 1971, Megalithic Culture in South India, UOM, Mysore.

೪

ಮುಲ್ಲೂರು, ಚಿಂಚಖಂಡಿ ಮತ್ತು ಈಶ್ವರಪ್ಪನ ಕೊಳ್ಳದ ಶಿಲಾಯುಗ ಸಂಸ್ಕೃತಿಯ ಒಂದು ಪುರಾತಾತ್ವಿಕ ಅಧ್ಯಯನ

ಮೋಹನ ರಾ*

ಶೀರ್ಷಿಕೆಯಲ್ಲಿ ತಿಳಿಸಿರುವ ಶಿಲಾಯುಗ ಸಂಸ್ಕೃತಿಯ ನೆಲೆಗಳು, ಮಲಪ್ರಭೆ ಮತ್ತು ಅದರ ಉಪನದಿಯಾದ ಜಾಲಿಹಳ್ಳದ ಪ್ರದೇಶದಲ್ಲಿವೆ (ಚಿತ್ರ–೧).

ಮುಲ್ಲೂರು: ಗ್ರಾಮವು ಬೆಳಗಾವಿ ಜಿಲ್ಲೆಯ ರಾಮದುರ್ಗದಿಂದ ದಕ್ಷಿಣ ದಿಕ್ಕಿಗೆ ಸುಮಾರು ೨೦ ಕಿ. ಮೀ ದೂರದಲ್ಲಿ ಸವದತ್ತಿಗೆ ಹಾದುಹೋಗುವ ರಸ್ತೆಯ ಎಡ ಬದಿಯಲ್ಲಿದೆ. ಮುಲ್ಲೂರು ಗ್ರಾಮದ ಉತ್ತರ ಭಾಗವು ಬೆಟ್ಟಗುಡ್ಡಗಳಿಂದ ಆವೃತವಾಗಿದ್ದು, ಇತಿಹಾಸಪೂರ್ವ ಕಾಲಕ್ಕೆ ಸೇರಿದ ಹಲವಾರು ಕುರುಹುಗಳು ಅನ್ವೇಷಣೆಯ ಸಮಯದಲ್ಲಿ ಬೆಳಕಿಗೆ ಬಂದಿವೆ. ಅದರಲ್ಲಿ ಪ್ರಮುಖವಾಗಿ ಆಮೆಚಿಪ್ಪಿನಾಕೃತಿಯ ತಿರುಳು (ಚಿತ್ರ–೨) ಆಕರ್ಷಕವಾಗಿವೆ ಮತ್ತು ಅಲ್ಲಲ್ಲಿ ಮುರಗಲ್ಲು ಅಥವಾ ಜಂಬಿಟ್ಟಿಗೆ ಕಲ್ಲು (Laterite)ಗಳಿಂದ ಆವೃತವಾಗಿವೆ.

ಆಮೆಚಿಪ್ಪಿನಾಕೃತಿಯ ತಿರುಳು/ ಮಂಡಲಾಕೃತಿಯಲ್ಲಿರುವ ತಿರುಳು

ಆಮೆಚಿಪ್ಪಿನಾಕೃತಿಯ ತಿರುಳು (Tortoise Core) ಮಧ್ಯಹಳೇ ಶಿಲಾಯುಗ ಸಂಸ್ಕೃತಿಗೆ ಸೇರಿದ್ದು, ಇದರ ಕಾಲಮಾನ ಕ್ರಿಪೂ. ೧,೫೦,೦೦೦–೪೦,೦೦೦ ಮಾನವ ಶಾಸ್ತ್ರಜ್ಞರಲ್ಲಿ ಈ ಕಾಲಕ್ಕೆ ಸೇರಿದ ಮಾನವ ನಿಯಾಂಡರ್‌ಥಾಲ್ ಸಂತತಿಗೆ ಸೇರಿದವನೆಂಬ ಅಭಿಪ್ರಾಯವಿದೆ. ಭೌಗೋಳಿಕವಾಗಿ ನಿಯಾಂಡರ್‌ಥಾಲ್[೧] ಸಂತತಿಯು ಪಶ್ಚಿಮ ಯೂರೋಪ್, ಪೂರ್ವ ಹಾಗೂ ಉತ್ತರ ಆಫ್ರಿಕ, ಮಧ್ಯ ಮತ್ತು ದಕ್ಷಿಣ ಏಷ್ಯಾ ಭಾಗದಲ್ಲಿ ಮಧ್ಯ ಹಳೇಶಿಲಾಯುಗ ಸಂಸ್ಕೃತಿಗೆ ಸೇರಿದ್ದನೆಂಬುವುದಕ್ಕೆ ಸಾಕಷ್ಟು ಕುರುಹುಗಳ ಜೊತೆಗೆ ನಿಯಾಂಡರ್‌ಥಾಲ್ ಸಂತತಿಯ ಶಾರೀರಿಕ ಅವಶೇಷಗಳು ಸಹ ದೊರಕಿವೆ.

ಮಧ್ಯಹಳೇ ಶಿಲಾಯುಗ ಸಂಸ್ಕೃತಿಯ ಉತ್ತುಂಗತೆಯು ಪ್ಲೈಸ್ಟೋಸೀನ್ ಅಂತ್ಯಭಾಗದಲ್ಲಿ ಕಂಡುಬರುತ್ತದೆ. ಮಧ್ಯ ಹಳೇ ಶಿಲಾಯುಗ (Middle Palaeolithic) ಸಂಸ್ಕೃತಿಯು ಭಾರತದಲ್ಲಿ ಪ್ರಮುಖವಾಗಿ ಪಶ್ಚಿಮ ರಾಜಸ್ಥಾನದ ಲೂನಿ ಕಣಿವೆ[೨], ದಿದ್ವಾನ[೩], ಬುದ್ದಪುಷ್ಕರ್[೪], ಬೇಲನ್ ಕಣಿವೆ[೫], ಸೋನ್ ಕಣಿವೆ[೬], ಮಧ್ಯ ಭಾರತದ ನರ್ಮದಾ[೭] ಮತ್ತು ಅದರ ಉಪನದಿಗಳ ಭಾಗ, ದಖ್ಖನ್ ಪ್ರಸ್ಥಭೂಮಿ[೮], ಛೋಟಾನಾಗ್ಪುರ ಪ್ರಸ್ಥಭೂಮಿ[೯] ಮತ್ತು ಪಶ್ಚಿಮ ಘಟ್ಟ[೧೦]ಗಳಲ್ಲಿ ಯಥೇಚ್ಛವಾಗಿ ಈ ಸಂಸ್ಕೃತಿಯು ಅವಶೇಷಗಳು ಕಂಡುಬರುತ್ತವೆ.

ಮಧ್ಯ ಹಳೇಶಿಲಾಯುಗ ಸಂಸ್ಕೃತಿಗೆ ಸೇರಿದ ಉಪಕರಣಗಳು ಹಳೇಶಿಲಾಯುಗ ಸಂಸ್ಕೃತಿಗೆ ಹೋಲಿಸಿದರೆ ಚಿಕ್ಕದಾಗಿ, ತೆಳುವಾಗಿ ಮತ್ತು ತೂಕರಹಿತವಾಗಿರುತ್ತವೆ. ಏಕೆಂದರೆ ಈ ಮಾದರಿಯ ಉಪಕರಣಗಳನ್ನು ತಯಾರಿಸಲು ಅವರು ಲೇವಾಲ್ವ[೧೧] ವಿಧಾನವನ್ನು ಅನುಕರಿಸುತ್ತಿದ್ದರು. ಇದರಿಂದ ಆಮೆಚಿಪ್ಪು/ಮಂಡಲಾಕೃತಿಯಲ್ಲಿರುವ ತಿರುಳು ಉಂಟಾಗುತ್ತಿತ್ತು.


ಮುಲ್ಲೂರು ಗ್ರಾಮದಿಂದ ಉತ್ತರಕ್ಕಿರುವ ಬೆಟ್ಟಸಾಲುಗಳ ಮೇಲ್ಭಾಗದಲ್ಲಿ ಚಿಂಚಖಂಡಿ ದಿಕ್ಕಿನೆಡೆಗೆ ಇರುವ ಸಂರಕ್ಷಿತ ಅರಣ್ಯದೊಳಗೆ ಸಾಗಿದರೆ ಇಂತಹ ಹಲವಾರು ಕುರುಹುಗಳು ಕಣ್ಣಿಗೆ ಗೋಚರಿಸುತ್ತವೆ. ಅದರಲ್ಲಿಯೂ ಪ್ರಮುಖವಾಗಿ ಏಳುಕೊಳ್ಳದ ಎಲ್ಲಮ್ಮನಕೊಳ್ಳ ಹಾಗೂ ನೀಲಗಿರಿ ಚೌಕದ ಬಳಿ, ನಾಲ್ಕನೇ ಮರಳಿನ (gravel floor) ಪದರಗಳಲ್ಲಿ (ಚಿತ್ರ–೩) ಹೆಚ್ಚಾಗಿ ಕಂಡುಬರುತ್ತವೆ. ಈ ನೆಲೆಯು ಇದುವರೆವಿಗೂ ಯಾವುದೇ ರೀತಿಯ ಮಾನವ ಚಟುವಟಿಕೆಗಳಿಗೆ ಒಳಗಾಗದೆ ಅತ್ಯಂತ ಸುರಕ್ಷಿತವಾಗಿದೆ.

ಆಮೆಚಿಪ್ಪಿನಾಕೃತಿಯ ತಿರುಳು

೧. ಕಾಲಮಾನ ಮಧ್ಯಹಳೇ ಶಿಲಾಯುಗ

೨. ಸ್ಥಳ ಮುಲ್ಲೂರಿನಿಂದ ೨.೫ ಕಿ.ಮೀ. ಉತ್ತರಕ್ಕೆ ಇರುವ ನೀಲಗಿರಿ ಚೌಕದ ಬಳಿ ಇದೆ

* ಸಂಶೋಧನಾ ವಿದ್ಯಾರ್ಥಿ, ಡೆಕ್ಕನ್ ಕಾಲೇಜು, ಪುಣೆ.



ಶಿಲಾಯುಗ ಸಂಸ್ಕೃತಿಗೆ ಸೇರಿದ್ದ ನೆಲೆಗಳನ್ನು ತೋರಿಸುವ ನಕಾಶೆ

೩. ಸಮುದ್ರಮಟ್ಟದಿಂದ ಇರುವ ಎತ್ತರ — ೭೪೬ ಮೀಟರ್

೪. ಒರಿಯಂಟೇಶನ್/ಇನ್‌ಕ್ಲಿನೇಶನ್ — ವಾಯುವ್ಯ–ಆಗ್ನೇಯ/ ಚಪ್ಪಟೆ

೫. ಸುತ್ತಳತೆ — 12 x 10 x 1.6 ಸೆಂಟಿಮೀಟರ್

೬. ಕಚ್ಚಾವಸ್ತು — ಬೆಣಚುಕಲ್ಲು

೭. ದಿನಾಂಕ & ಸಮಯ ೧೪/೦೧/೨೦೧೩, ೧೦.೩೦

ಚಿಂಚಖಂಡಿಯು ರಾಮದುರ್ಗ ತಾಲ್ಲೂಕು ಕೇಂದ್ರದಿಂದ ಆಗ್ನೇಯ ದಿಕ್ಕಿಗೆ ೩ ಕಿ.ಮೀ. ದೂರದಲ್ಲಿದೆ. ಈ ಗ್ರಾಮದಿಂದ ಸುಮಾರು ೫ ಕಿ.ಮೀ. ದಕ್ಷಿಣ ದಿಕ್ಕಿಗೆ ಹಾದುಹೋದರೆ ಅಲ್ಲಿ ಮಧ್ಯ ಹಳೇಶಿಲಾಯುಗಕ್ಕೆ ಸೇರಿದ ಹಲವಾರು ಕುರುಹುಗಳನ್ನು ೨೦ನೇ ಶತಮಾನದ ಅಂತ್ಯಭಾಗದಲ್ಲಿ ಆರ್.ಎಸ್. ಪಪ್ಪು ಮತ್ತು ಎಸ್.ಜಿ. ದೇವ್[೧]ರವರು ಕೈಗೊಂಡ ಅನ್ವೇಷಣೆಯಲ್ಲಿ ದೊರೆತಿವೆ. ಹಾಗೆಯೇ ಪ್ರಸ್ತುತ ಲೇಖಕನು ೨೦೧೩ನೇ ಜನವರಿ ಮಾಹೆಯಲ್ಲಿ ಕೈಗೊಂಡ ಅನ್ವೇಷಣೆಯಲ್ಲಿಯೂ ಸಹ ಇಂತಹ ಕುರುಹುಗಳು ಗೋಚರಿಸಿದವು.

ಈಶ್ವರಪ್ಪನ ಕೊಳ್ಳ: ಪ್ರಾಗೈತಿಹಾಸಿಕ ಕಲೆಯ ನೆಲೆ

ಈಶ್ವರಪ್ಪನ ಕೊಳ್ಳ (೧೫°೫೪'೩೦.೫"ಉತ್ತರ ಅಕ್ಷಾಂಶ ೭೫°೧೮'೪೦.೦"ಪೂರ್ವ ರೇಖಾಂಶ)ದಲ್ಲಿ ಪ್ರಾಗೈತಿಹಾಸಿಕ ಕಲೆಯ ಅವಶೇಷಗಳಿವೆ. ಇದು ಚಿಂಚಖಂಡಿ ಗ್ರಾಮದಿಂದ ಸುಮಾರು ೩.೫ ಕಿ.ಮೀ ನೈಋತ್ಯ ದಿಕ್ಕಿಗೆ ಇದೆ. ಇಲ್ಲಿ ಪ್ರಾಗೈತಿಹಾಸಿಕ ಕಾಲಕ್ಕೆ ಸೇರಿದೆಯೆನ್ನಲಾದ ಕೆಮ್ಮಣ್ಣು ಬಣ್ಣದ ಚಿತ್ರವು ಬೆಟ್ಟದ ಸಮತಟ್ಟಿನ ಮೇಲಿದ್ದು, ಬಿಸಿಲು ಮತ್ತು ಮಳೆಗೆ ತೊಯ್ದಿರುವುದರಿಂದ ಸ್ಪಷ್ಟವಾಗಿಲ್ಲ. ಈ ಸಮತಟ್ಟಾದ ಭಾಗವು (Panel) ಚಿತ್ರಕಲೆಯನ್ನು (ಚಿತ್ರ–೪) ಬಿಡಿಸಲು ಯೋಗ್ಯವಾಗಿದ್ದು, ಪೂರ್ವಕಾಲದಲ್ಲಿ ಇದು ಚಿತ್ರವನ್ನು ಒಳಗೊಂಡಿದ್ದು, ಅದು ನಿರಂತರ ನೈಸರ್ಗಿಕ ವಿಕೋಪ[೧೪]ಗಳಿಗೆ ಒಳಗಾಗಿ ಅಳಿಸಿಹೋಗಿದ್ದು, ಅಲ್ಲಲ್ಲಿ ಗುರುತುಗಳನ್ನು (ಚಿತ್ರ–೫) ಕಾಣಬಹುದಾಗಿದೆ. ಸಂಪೂರ್ಣ ಅಧ್ಯಯನದ ನಂತರ ಇದನ್ನು ಜಿಂಕೆ/ಗೂಳಿ ಚಿತ್ರವೆಂದು ಗುರುತಿಸಲು ಸಾಧ್ಯವಾಗಬಹುದು. ಇದರ ವೈಶಿಷ್ಟ್ಯತೆಯನ್ನು ಗಮನಿಸಿದರೆ ಬಹುಶಃ ಅಂತ್ಯ ಶಿಲಾಯುಗ/ಸೂಕ್ಷ್ಮ ಶಿಲಾಯುಗ ಕಾಲಕ್ಕೆ ಸೇರಿರಬಹುದು. ಇದರ ಪಕ್ಕದಲ್ಲಿರುವ ಸುಮಾರು ೨೦ ಮೀ. ಅಂತರದಲ್ಲಿ ಕಲ್ಲುಪಡಿಯಿದ್ದು ಬಹುಶಃ ಅಲ್ಲಿ ವರ್ಣಚಿತ್ರಗಳಿದ್ದಿರುಹುದು. ಆದರೆ ಅದು ಈಗಿನ ಮಾನವ ಚಟುವಟಿಕೆಗಳಿಗೆ ಒಳಗಾಗಿರುವುದರಿಂದ ಅಂತಹ ಕುರುಹುಗಳು ಇಲ್ಲದಂತಾಗಿವೆ. ಇದಕ್ಕೆ ವಿರುದ್ಧ ದಿಕ್ಕಿನಲ್ಲಿರುವ ಬೆಟ್ಟದ ಸಾಲಿನಲ್ಲಿಯೂ ಸಹ ಬಿಳಿವರ್ಣದ ಚಿತ್ರಗಳಿದ್ದು ಇತ್ತೀಚಿನ ಕಾಲಘಟ್ಟಕ್ಕೆ ಸೇರಿದೆನ್ನಲಾಗಿವೆ.

ಬೃಹತ್ ಶಿಲಾಯುಗ ಕಾಲದ ಶಿಲಾವೃತ್ತಗಳು (Stone circle)

ಕೆಲವು ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಶಿಲಾವೃತ್ತಗಳು (೧೫°೫೪'೦.೫೬" ಉತ್ತರ ಅಕ್ಷಾಂಶ

೭೫°೧೮'೪೫.೫" ಪೂರ್ವ ರೇಖಾಂಶ) ಈಶ್ವರಪ್ಪನ ಕೊಳ್ಳದಿಂದ ನೈಋತ್ಯದಿಕ್ಕಿಗೆ ಸುಮಾರು ೩೦೦ ಮೀಟರ್ ಅಂತರದಲ್ಲಿವೆ (ಚಿತ್ರ–೬). ಸುಮಾರು ೫ಕ್ಕಿಂತ ಹೆಚ್ಚು ಶಿಲಾವೃತ್ತಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಅದರಲ್ಲಿ ಕೆಲವು ೨.೩x೨ ಮೀ. ವ್ಯಾಸದಲ್ಲಿವೆ. ಆದರೆ ಆತಂಕದ ವಿಷಯವೇನೆಂದರೆ ಈ ನೆಲೆಯ ಪಕ್ಕದಲ್ಲಿಯೇ ಕಲ್ಲುಗಣಿಗಾರಿಕೆ (Quarry) ನಡೆಯುತ್ತಿರುವುದರಿಂದ ಈ ನೆಲೆಯು ಮುಂದಿನ ದಿನಗಳಲ್ಲಿ ಇಲ್ಲದಂತಾಗಬಹುದು.

ಕೊನೆಯ ಮಾತು

ಪ್ರಾಗೈತಿಹಾಸಿಕ ಸಂಸ್ಕೃತಿಯ ನೆಲೆಗಳಾದ ಮುಲ್ಲೂರು, ಈಶ್ವರಪ್ಪನಕೊಳ್ಳ ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಶಿಲಾವೃತ್ತಗಳು ಲೇಖಕರ ಹೊಸ ಶೋಧನೆಗಳಾಗಿದ್ದು, ಮೇಲೆ ನಿರೂಪಣೆಯನ್ನು ನೀಡಿದ್ದಾರೆ. ಒಂದು ವೇಳೆ ಮುಂದಿನ ಹಂತದ ಅಧ್ಯಯನ ಕಾರ್ಯವನ್ನು ಭೂ ಉತ್ಖನನದ ಜೊತೆಗೆ geological, geographical, Geomorphology, ecology ಮತ್ತು ಪದರ ವಿಶ್ಲೇಷಣೆ ಈ ಎಲ್ಲಾ ಅಂಶಗಳನ್ನು ವೈಜ್ಞಾನಿಕ ದೃಷ್ಟಿಕೋನದಲ್ಲಿ ಅಭ್ಯಾಸಿಸುವುದಾದರೆ ಈ ಸಂಸ್ಕೃತಿಯ ಮೇಲೆ ಹೊಸ ಬೆಳಕನ್ನು ಚೆಲ್ಲಬಹುದು.

[**ಕೃತಜ್ಞತೆಗಳು:** ಲೇಖಕರ ಪ್ರಾದೇಶಿಕ ಅನ್ವೇಷಣೆಯ ವೇಳೆ ಸ್ಥಳೀಯವಾಗಿ ತಂಗಲು ಸೂಕ್ತ ವ್ಯವಸ್ಥೆ ಮಾಡಿಕೊಟ್ಟ ಮುಲ್ಲೂರು ಗ್ರಾಮದ ಶ್ರೀ ಸೋಮಗುಂಡಿ ಕುಟುಂಬದವರಿಗೆ ಹಾಗೂ ಈ ಸಮಯದಲ್ಲಿ ದೂರವಾಣಿ ಮೂಲಕ ಎಲ್ಲಾ ರೀತಿಯ ಸಹಕಾರ ಮತ್ತು ಮಾಹಿತಿಯನ್ನು ನೀಡಿದ ಪ್ರೊ. ಅ. ಸುಂದರ ಮತ್ತು ಪ್ರೊ. ರವಿ ಕೋರಿಶೆಟ್ಟರ್‌ರವರಿಗೂ ಮತ್ತು ಈ ಲೇಖನದ ಪ್ರತಿ ಮಾಡಿಕೊಟ್ಟ ಆತ್ಮೀಯ ಸ್ನೇಹಿತರಾದ ಮಂಜುನಾಥ ಎಂ.ಜೆ, ರಮೇಶ. ಆರ್ ಮತ್ತು ಸುನಿಲ್ ಕುಮಾರ್‌ರವರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.]

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. Misra, V.N. 2001. Prehistoric Human Colonization of India. *Indian Academy of Sciences 26(4)*: 491-531.

೨. Misra, V.N. 1961. Palaeolithic Culture of Western Rajputana. *Bulletin of Deccan College, Post-graduate and Research Institute, Pune. 21:* 85–156.

೩. Misra, V.N. and Rajaguru, S. N. 1986. Environment et Culture de l' homme Prehistorique dans le desert du Thar, Rajasthan, Inde; L' *Anthropologie 90:* 407–437.

೪. Allchin, B., Goudie, A. and Hegde K.T.M. 1978. *Prehistory and Palaeo-geography of the Great Indian Desert*. London: Academic Press.

೫. Jayaswal, V. 1989 Belan Valley. In: A. Ghosh (Ed.). *An Encyclopaedia of Indian Archaeology*. 2: 59–60. New Delhi: Munshiram Manoharlal Publication.

೬ Sharma, G. R. and Clark, J. D (Eds.) 1983. *Palaeoenvironment and Prehistory in the Middle Son Valley (Madhya Pradesh, North Central India)* Allahabad: Abinash Prakashan.

೭. Khatri, A. P. 1962. Origin and Development of Series II Culture in India; Proc. *Prehistoric Society 28:* 191–208.

೮. Joshi, R. V. 1953. *Pleistocene Studies in the Malaprabha Basin: Prehistory and Geochronology*, Ph. D Dissertation, Deccan College, Post Graduate and Research Institute, Pune.

೯. Ghosh, A. K. 1970. The Palaeolithic Cultures of Singhbhum; Trans. *American Philosophical Sciences 60:* 1–68.

೧೦. Murty, M.L.K. 1966. *Stone Age Cultures of Chittoor District , Andhra Pradesh* , Ph.D. Dissertation, Deccan College, Post Graduate and Research Institute, Pune.

೧೧. ಲೇವಾಲ್ವ ಪೆರೇಟ್ ಎಂಬುದು ಫ್ರಾನ್ಸ್‌ನ ಪ್ಯಾರಿಸ್ ಬಳಿ ದೊರೆತಿರುವ ಒಂದು ಮಧ್ಯ ಹಳೇ ಶಿಲಾಯುಗಕ್ಕೆ ಸೇರಿದ ನೆಲೆಯಾಗಿದ್ದು, ಅನ್ವೇಷಣೆಯ ನಂತರ ಈ ಮಾದರಿಯ ಉಪಕರಣಗಳಿಗೆ ಲೇವಾಲ್ವ ಎಂದು ಹೆಸರು ಬಂದಿತು.

೧೨. Pappu, R.S. and S.G. Deo. 1994. *Manland Relationships during Palaeolithic Times in the Kaladge Basin, Karnataka.* Pune: Deccan College, Post Graduate and Research Institute.

ಪಾವಗಡ ತಾಲ್ಲೂಕಿನ ನಲಿಗಾನಹಳ್ಳಿಯಲ್ಲಿ ದೊರೆತ ಬೃಹತ್ ಶಿಲಾಯುಗದ ನೆಲೆ

ಧನುಂಜಯ ಸಿ.*

ನವಶಿಲಾಯುಗದ ಜನರು ಬೃಹದಾಕಾರದ ಕಲ್ಲುಚಪ್ಪಡಿಗಳನ್ನು ಬಳಸಿ ಸಮಾಧಿಗಳನ್ನು ನಿರ್ಮಿಸುತ್ತಿದ್ದರಿಂದ ಈ ಯುಗವನ್ನು ಬೃಹತ್ ಶಿಲಾಯುಗ ಎಂದು ಕರೆಯುತ್ತಾರೆ. ಕರ್ನಾಟಕದಾದ್ಯಂತ ಬೃಹತ್ ಶಿಲಾಯುಗದ ಅನೇಕ ನೆಲೆಗಳು ಪತ್ತೆಯಾಗಿವೆ. ಹಾಗೆಯೇ ತುಮಕೂರು ಜಿಲ್ಲೆಯ ಪಾವಗಡ ತಾಲೂಕಿನಲ್ಲಿ ಬೃಹತ್ ಶಿಲಾಯುಗಕ್ಕೆ ಸಂಬಂಧಪಟ್ಟಿರುವ ಹಲವಾರು ನೆಲೆಗಳು ಸಂಶೋಧಕರಿಂದ ಬೆಳಕಿಗೆ ಬಂದಿವೆ. ಅವುಗಳಲ್ಲಿ ಬಸವನಬೆಟ್ಟ, ಕನಿಕಲಬಂಡೆ, ತಪ್ಪಗಾನದೊಡ್ಡಿ, ಪಳವಳ್ಳಿ, ವೈ.ಎನ್.ಹೊಸಕೋಟೆ, ಯಲ್ಲಪ್ಪನಾಯಕನಹಳ್ಳಿ, ಬೂದಿಬೆಟ್ಟ, ಮರಿದಾಸನಹಳ್ಳಿ, ರಾಚಮಾರನಹಳ್ಳಿ,[೧] ಮುಂತಾದವು ಪ್ರಮುಖವಾಗಿವೆ.

ಶೃಂಗೇರಿಯಲ್ಲಿ ಸಮಾವೇಶಗೊಂಡಿದ್ದ ಕರ್ನಾಟಕ ಇತಿಹಾಸ ಅಕಾಡೆಮಿಯ ೨೬ನೇ ವಾರ್ಷಿಕ ಸಮ್ಮೇಳನದಲ್ಲಿ ನನ್ನ ಕ್ಷೇತ್ರಕಾರ್ಯಕ್ಕೆ ಸಹಕರಿಸಿದ ಗೆಳೆಯನಾದ ರವೀಶ್ ಜಿ.ಎನ್. ಅವರು ಪಾವಗಡ ತಾಲೂಕಿನಲ್ಲಿ ಇತ್ತೀಚೆಗೆ ದೊರೆತ ಕೆಲವು ಪ್ರಾಗೈತಿಹಾಸಿಕ ನೆಲೆಗಳು ಎಂಬ ಲೇಖನವನ್ನು ಮಂಡಿಸಿದ್ದಾರೆ. ಇದರಲ್ಲಿ ನಲಿಗಾನಹಳ್ಳಿಯ ಪೂರ್ವ ದಿಕ್ಕಿನಲ್ಲಿರುವ ಕೆಲವು ಬೃಹತ್ ಶಿಲಾಯುಗ ನೆಲೆಗಳ ಜೊತೆಗೆ ನಲಿಗಾನಹಳ್ಳಿಯ ಈಶಾನ್ಯ ದಿಕ್ಕಿನಲ್ಲಿರುವ ಬೃಹತ್ ಶಿಲಾಯುಗದ ಸಮಾಧಿಗಳನ್ನು ಸೇರಿಸಿಕೊಂಡಿದ್ದು, ಅವರು ಕೇವಲ ಇಲ್ಲಿ ದೊರೆತಿರುವ ಪ್ರಾಚ್ಯಾವಶೇಷಗಳನ್ನು ಮಾತ್ರ ತಿಳಿಸಿರುತ್ತಾರೆ. ಆದರೆ ನಾನು ಈ ಲೇಖನದಲ್ಲಿ ನಲಿಗಾನಹಳ್ಳಿ ಗ್ರಾಮದ ಈಶಾನ್ಯ ಭಾಗದಲ್ಲಿರುವ ೨೪ ಬೃಹತ್ ಶಿಲಾಸಮಾಧಿಗಳ ಕುರಿತು ಸಂಪೂರ್ಣವಾಗಿ ತಿಳಿಸುವ ಪ್ರಯತ್ನ ಈ ಲೇಖನದ್ದಾಗಿದೆ.

ತುಮಕೂರು ಜಿಲ್ಲೆಯ ಪಾವಗಡ ತಾಲೂಕು ಕಸಬಾ ಹೋಬಳಿಯ ನಲಿಗಾನಹಳ್ಳಿ ಗ್ರಾಮದ ಈಶಾನ್ಯ ಭಾಗಕ್ಕೆ ೧ ಕಿ.ಮೀ. ದೂರದಲ್ಲಿ ಬೃಹತ್ ಹೆಬ್ಬಂಡೆಯ ಗುಡ್ಡದ ಮುಂಭಾಗದಲ್ಲಿ ಬೃಹತ್ ಶಿಲಾಯುಗದ ೨೪ ಸಮಾಧಿಗಳನ್ನು ಪತ್ತೆ ಹಚ್ಚಲಾಗಿದೆ. ಈ ೨೪ ಸಮಾಧಿಗಳಲ್ಲಿ ಒಂದು ಕಿಂಡಿ ಕೋಣೆ ಸಮಾಧಿ, ೩ ಸ್ವಸ್ತಿಕ್ ಮಾದರಿಯವು, ೭ ಚಪ್ಪಟೆಯಾಕಾರದ ಬಂಡೆ ಸಮಾಧಿಗಳು, ೩ ಚಿಕ್ಕ ನಿಲುಸುಗಲ್ಲು ಮಾದರಿಯವು. ಇನ್ನುಳಿದ ಎಲ್ಲಾ ಸಮಾಧಿಗಳು ವೃತ್ತಾಕಾರದ ಉಂಡೆಗಲ್ಲು ಸಮಾಧಿಗಳಾಗಿವೆ.

ಕಿಂಡಿಕೋಣೆ ಸಮಾಧಿಯು ಆಯತಾಕಾರವಾಗಿದ್ದು, ಸಮಾಧಿಯು ಪೂರ್ವದಿಕ್ಕಿಗೆ ಕಿಂಡಿಯಿರುವುದು ಕಂಡುಬರುತ್ತದೆ. ಇದು ಪೂರ್ವ ಪಶ್ಚಿಮವಾಗಿ ೭ ಅಡಿ ಉದ್ದವಿದ್ದು, ಉತ್ತರ ದಕ್ಷಿಣವಾಗಿ ೪ ಅಡಿ ಅಗಲವಾಗಿದೆ. ಈ ಸಮಾಧಿಯು ನಿಧಿಗಳ್ಳರ ಕೃತ್ಯಕ್ಕೆ ಒಳಗಾಗಿ ನಾಶವಾಗಿದೆ. ಹಾಗೆಯೇ ಈ ಸ್ವಸ್ತಿಕ್ ಆಕಾರದ ಸಮಾಧಿಗಳು ಆಯತಾಕಾರವಾಗಿದ್ದು, ನಾಲ್ಕು ಬಂಡೆಗಳನ್ನು ಒಂದಕ್ಕೊಂದು ಒರಗಿಸಿ ಇಟ್ಟಂತೆ ನಿರ್ಮಿಸಲಾಗಿದ್ದು, ಈ ಮೂರು ಸಮಾಧಿಗಳು ಸುಸ್ಥಿತಿಯಲ್ಲಿವೆ. ಇವುಗಳಲ್ಲಿ ಒಂದು ಪೂರ್ವ ಪಶ್ಚಿಮವಾಗಿ ೯ ಅಡಿ ಉದ್ದ, ಉತ್ತರ ದಕ್ಷಿಣವಾಗಿ ೬.೫ ಅಡಿ ಅಗಲವಾಗಿದೆ. ಇನ್ನುಳಿದ ೨ ಸಮಾಧಿಗಳು ಸುಮಾರು ೬ ಅಡಿ ಉದ್ದ, ೪ ಅಡಿ ಅಗಲವಾಗಿವೆ. ಇವುಗಳನ್ನು ಭೂಮಿಯಲ್ಲಿ ೩ ರಿಂದ ೪ ಅಡಿ ಆಳಕ್ಕೆ ಅಗೆದು ನಿರ್ಮಿಸಿರುವುದು ಕಂಡುಬರುತ್ತದೆ. ಹಾಗೆಯೇ ಚಪ್ಪಟೆಯಾಕಾರದ ಬಂಡೆ ಸಮಾಧಿಗಳನ್ನು ಭೂಮಿಯಲ್ಲಿ ಸುಮಾರು ೩ ರಿಂದ ೪ ಅಡಿ ಆಳಕ್ಕೆ ಅಗೆದು ಅದರ ಮೇಲೆ ಬೃಹತ್ ಆದ ಚಪ್ಪಟೆಯಾಕಾರದ ಹಾಸುಗಲ್ಲನ್ನು ಹಾಕಿ ಮುಚ್ಚಿರುವಂತೆ ನಿರ್ಮಾಣ ಮಾಡಲಾಗಿದೆ. ಈ ಹಾಸುಗಲ್ಲು ಸುಮಾರು ೭ ಅಡಿ ಉದ್ದ ೬ ಅಡಿ ಅಗಲವಾಗಿದ್ದು. ೧.೫ ಅಡಿ ದಪ್ಪವಾಗಿದೆ. ಇವುಗಳಲ್ಲಿಯೂ ಕೆಲವು ಸುಸ್ಥಿತಿಯಲ್ಲಿದ್ದು ಮತ್ತೆ ಕೆಲವು ಹಾಳಾಗಿವೆ. ಅದೇ ರೀತಿ ೩ ನಿಲುಸುಗಲ್ಲು ಮಾದರಿಯ ಸಮಾಧಿಗಳಿದ್ದು, ಶವಗಳನ್ನು ಭೂಮಿಯಲ್ಲಿ ಹೂತಿಟ್ಟು ಅದರ ಮೇಲೆ ಹಾಸುಗಲ್ಲನ್ನು ಹಾಸಿ, ಅದರ ಮೇಲೆ ಸುಮಾರು ೨ ರಿಂದ

* S/o ಚಿತ್ತಪ್ಪ, ನಲಿಗಾನಹಳ್ಳಿ ಅಂಚೆ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ-೫೬೧೨೦೨.

೩ ಅಡಿ ಎತ್ತರದ ಚಿಕ್ಕ ನಿಲುಸುಗಲ್ಲನ್ನು ಇಟ್ಟು ನಿರ್ಮಿಸಿರುವುದು ಕಂಡುಬರುತ್ತದೆ. ಇವು ಗಾತ್ರದಲ್ಲಿ ಸ್ವಲ್ಪ ಚಿಕ್ಕದಾಗಿರುವುದರಿಂದ ಬಹುಶಃ ಇವು ಚಿಕ್ಕಮಕ್ಕಳ ಸಮಾಧಿಗಳಾಗಿರಬಹುದು. ಹಾಗೆಯೇ ವೃತ್ತಾಕಾರದ ಉಂಡೆಗಲ್ಲು ಸಮಾಧಿಗಳು ಬಹಳಷ್ಟಿದ್ದು, ಇವುಗಳು ವಿಸ್ತೀರ್ಣದಲ್ಲಿ ದೊಡ್ಡದಾಗಿವೆ. ಇಲ್ಲಿ ಉಂಡೆಗಲ್ಲುಗಳನ್ನು ವೃತ್ತಾಕಾರವಾಗಿಟ್ಟು, ಮಧ್ಯಭಾಗದಲ್ಲಿ ಶವವನ್ನು ಮುಚ್ಚಿ ಅದರ ಮೇಲೆ ಬೃಹತ್ ಗಾತ್ರದ ಹಾಸುಗಲ್ಲನ್ನು ಹಾಸಿ ನಿರ್ಮಿಸಿರುವುದು ಕಂಡುಬರುತ್ತದೆ. ಇವುಗಳಲ್ಲಿಯೂ ಸಹ ಕೆಲವು ಹಾಳಾಗಿದ್ದು, ಇನ್ನೂ ಕೆಲವು ಸುಸ್ಥಿತಿಯಲ್ಲಿವೆ.

ಈ ಸಮಾಧಿಗಳನ್ನು ಅಗೆದಿರುವ ಮಣ್ಣಿನಲ್ಲಿ ಕಪ್ಪು ಮತ್ತು ಕೆಂಪು ಮಿಶ್ರಿತ ಬಣ್ಣದ ಮಡಿಕೆಯ ಚೂರುಗಳು, ಬೂದುಬಣ್ಣದ ಮೃತ್ಪಾತ್ರೆಗಳು, ಹೆರೆಚಕ್ಕೆಗಳು, ಕಬ್ಬಿಣದ ಕಿಟ್ಟಗಳು ದೊರೆತಿವೆ. ಸಾಮಾನ್ಯವಾಗಿ ಬೃಹತ್ ಶಿಲಾಯುಗದ ಜನರ ವಾಸದ ನೆಲೆಗಳ ಹತ್ತಿರದ ಬೆಟ್ಟಗುಡ್ಡಗಲ್ಲಿ, ಗವಿಗಳಲ್ಲಿ, ಕಲ್ಲಾಸರೆಗಳಲ್ಲಿ, ಕೆಲವೊಮ್ಮೆ ರೇಖಾಚಿತ್ರಗಳು ಕಂಡುಬರುತ್ತವೆ. ಇಂತಹ ರೇಖಾಚಿತ್ರವು ಈ ನೆಲೆಯ ಪಕ್ಕದಲ್ಲೇ ಪಶ್ಚಿಮ ದಿಕ್ಕಿನಲ್ಲಿರುವ ಬೃಹತ್ ಬಂಡೆಯ ಗುಡ್ಡದ ಮೇಲಿನ ತುದಿಯಲ್ಲಿ ಚಪ್ಪಡಿಕಲ್ಲುಗಳನ್ನು ಇಟ್ಟು ಅದರ ಮೇಲೆ ಪೂರ್ವ ಪಶ್ಚಿಮವಾಗಿ ೧೮ ಅಡಿ, ಉತ್ತರ ದಕ್ಷಿಣವಾಗಿ ೧೯ ಅಡಿ. ಮತ್ತು ೧ ಅಡಿ ದಪ್ಪದ ವಿಶಾಲವಾದ ಹಾಸುಗಲ್ಲನ್ನು ಹಾಸಿ ನಿರ್ಮಿಸಿದ್ದು, ಈ ಹಾಸುಗಲ್ಲಿನ ಕೆಳಭಾಗದಲ್ಲಿ ಬಿಳಿ ಬಣ್ಣದ ರೇಖಾಚಿತ್ರವಿದೆ. ಅದು ಸ್ವಲ್ಪ ಹಾಳಾಗಿದ್ದು ವ್ಯಕ್ತಿಯ ರೇಖಾಚಿತ್ರದಂತೆ ಭಾಸವಾಗುತ್ತದೆ. ಈ ಬಂಡೆಯ ಪೂರ್ವದಿಕ್ಕಿಗೆ ಸ್ವಲ್ಪ ಕಿಂಡಿಯನ್ನು ಬಿಟ್ಟು ಸುತ್ತಲೂ ಚಿಕ್ಕ ಚಿಕ್ಕ ಕಲ್ಲುಗಳಿಂದ ಮುಚ್ಚಲಾಗಿದೆ. ಈ ಕೋಣೆಯ ಒಳಗಡೆ ಸುಮಾರು ೬ ರಿಂದ ೮ ಜನರ ವರೆಗೆ ಕುಳಿತುಕೊಳ್ಳುವಷ್ಟು ವಿಶಾಲವಾಗಿದೆ. ಈ ಹೆಬ್ಬಂಡೆಯ ಗುಡ್ಡವನ್ನು ಅಲ್ಲಿನ ಸ್ಥಳೀಯರು ಬತ್ತದ ಬಂಡೆ (ಓಡ್ಲಬಂಡ) ಎಂದು ಕರೆಯುತ್ತಾರೆ. ಹಾಗೆಯೇ ಇಂತಹ ಸಮಾಧಿಗಳನ್ನು ಪಾಂಡವರ ಗುಡಿಗಳೆಂದು ಕರೆಯುತ್ತಾರೆ. ಈ ಬತ್ತದ ಬಂಡೆಯ ಪಶ್ಚಿಮಕ್ಕೆ ಒಂದು ಕಿ.ಮೀ ದೂರದಲ್ಲಿ ಮತ್ತೊಂದು ಚಪ್ಪಟೆಯಾಕಾರದ ಬಂಡೆ ಸಮಾಧಿಯಿದ್ದು, ನಿಧಿಗಳ್ಳರಿಂದ ಅಗೆತಕ್ಕೆ ಒಳಗಾಗಿ ನಾಶವಾಗಿದ್ದು. ಇಲ್ಲಿಯೂ ಸಹ ಕಪ್ಪು ಮತ್ತು ಕೆಂಪು ಮಿಶ್ರಿತ ಮಡಿಕೆ ಚೂರುಗಳು ದೊರೆತಿವೆ. ಈ ಸಮಾಧಿಯಿಂದ ಸ್ವಲ್ಪ ದೂರದ ಜಮೀನಿನಲ್ಲಿ ನಯ ಮಾಡಿರುವ ಎರಡು ಕಲ್ಲಿನ ಕೈಕೊಡಲಿಗಳು ದೊರೆತಿದ್ದು, ಇವು ನವಶಿಲಾಯುಗದ್ದಾಗಿವೆ. ಇವು ೧೫ ಸೆಂ.ಮೀ ಉದ್ದ ೮ ಸೆಂ.ಮೀ. ಅಗಲವಾಗಿವೆ.

ಹಾಗೆಯೇ ಈ ನೆಲೆಯು ಕಾಲಮಾನವನ್ನು ತಿಳಿಯುವುದಾದರೆ, ಇತಿಹಾಸ ದರ್ಶನ ಸಂಪುಟ ೧೭ರಲ್ಲಿ ಡಾ. ಕೆ.ಬಿ. ಶಿವತಾರಕ್ ಅವರ ತುಮಕೂರು ಜಿಲ್ಲಾ ಪ್ರದೇಶದ ಬೃಹತ್ ಶಿಲಾಯುಗ ಸಂಸ್ಕೃತಿ ಎಂಬ ಲೇಖನದಲ್ಲಿ ಪಾವಗಡ ತಾಲೂಕಿನ ಇತರೆ ಬೃಹತ್ ಶಿಲಾಯುಗ ಸಂಸ್ಕೃತಿಯ ಕಾಲಮಾನವನ್ನು ಕ್ರಿ.ಪೂ. ೧೨೦೦ರಿಂದ ಕ್ರಿ.ಪೂ.೨೫೦ ಎಂದು ಹೇಳಿರುತ್ತಾರೆ.[2] ಹಾಗಾಗಿ ಇಲ್ಲಿ ದೊರೆತಿರುವ ಪ್ರಾಚ್ಯಾವಶೇಷಗಳ ಆಧಾರದ ಮೇಲೆ ಈ ನೆಲೆಯ ಕಾಲಮಾನವನ್ನು ಕ್ರಿ.ಪೂ. ೮೦೦ರಿಂದ ಕ್ರಿ.ಪೂ ೧೦೦ರ ಆಸುಪಾಸು ಇರಬಹುದೆಂದು ಅಂದಾಜಿಸಬಹುದು. ಇಂತಹ ಸಮಾಧಿಗಳು ಪಾವಗಡ ತಾಲೂಕಿನ ಹಲವು ಕಡೆ ಕಂಡುಬಂದಿದ್ದು. ನಮ್ಮ ದುರಾದೃಷ್ಟಕ್ಕೆ ಇಲ್ಲಿಯ ಹಳ್ಳಿಯ ಜನರು ಈ ಜಾಗವನ್ನು ಆಕ್ರಮಿಸಿಕೊಂಡು ಸಮಾಧಿಗಳನ್ನು ಕೆಡವಿ ಬೇಸಾಯ ಕಾರ್ಯಗಳನ್ನು ಮಾಡುತ್ತಿದ್ದಾರೆ. ಈ ಜನರಿಗೆ ಇವುಗಳ ಮಹತ್ವವನ್ನು ತಿಳಿಸಿದರೂ ಏನು ಪ್ರಯೋಜನವಾಗುತ್ತಿಲ್ಲ. ಜೊತೆಗೆ ನಿಧಿ ಆಸೆಗಾಗಿ ಕೆಲವು ಗೋರಿಗಳು ನಿಧಿಗಳ್ಳರಿಂದ ನಾಶವಾಗಿರುವುದನ್ನು ಸಹ ನಾವು ಕಾಣಬಹುದು. ಹಾಗಾಗಿ ಇವುಗಳಿಗೆ ರಕ್ಷಣೆ ಒದಗಿಸಬೇಕಾಗಿದೆ.

[ಈ ಲೇಖನ ಸಿದ್ದಪಡಿಸಲು ನನಗೆ ಸಲಹೆ ಸೂಚನೆಗಳನ್ನು ನೀಡಿದ ನನ್ನ ಮಾರ್ಗದರ್ಶಕರು ಹಾಗೂ ಗುರುಗಳಾದ ಡಾ. ಸಿ.ಎಸ್. ವಾಸುದೇವನ್ ಅವರಿಗೆ ಹಾಗೆಯೇ ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಗೆಳೆಯರಾದ ರವೀಶ್ ಜಿ.ಎನ್. ಮತ್ತು ರಾಮಾಂಜಿಯವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.]

ಆಧಾರಸೂಚಿ

೧. ಇತಿಹಾಸ ದರ್ಶನ ಸಂಪುಟ ೭, ೧೯೯೨.

೨. ಇತಿಹಾಸ ದರ್ಶನ ಸಂಪುಟ ೧೭, ೨೦೦೨.

ಪಳ್ಳಿಯಲ್ಲಿ ಪತ್ತೆಯಾದ ಬೃಹತ್ ಶಿಲಾಯುಗದ ಸಮಾಧಿ ಶಿಲೆ

ಪ್ರೊ. ಟಿ. ಮುರುಗೇಶಿ*

ಕರಾವಳಿ ಕರ್ನಾಟಕವು ಪುರಾತತ್ವ ಅಧ್ಯಯನ ದೃಷ್ಟಿಯಿಂದ ಇನ್ನು ತುಂಬಾ ದೂರವೇ ಉಳಿದಿರುವ ಕನ್ನೆನೆಲ ಎಂದರೆ ತಪ್ಪಾಗಲಾರದು. ಪ್ರಸ್ತುತ ಕರಾವಳಿ ಕರ್ನಾಟಕವು ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಎಂಬ ಮೂರು ಜಿಲ್ಲೆಗಳನ್ನು ಒಳಗೊಂಡಿದೆ.

ಬೃಹತ್ ಶಿಲಾಯುಗ ಸಂಸ್ಕೃತಿಯು ದಕ್ಷಿಣ ಭಾರತ ದಾದ್ಯಂತ ಅದರ ವಿಶಿಷ್ಟ ಸಮಾಧಿ ನೆಲೆಗಳ ಮೂಲಕ ವ್ಯಾಪಕವಾಗಿ ಬೆಳಕಿಗೆ ಬಂದಿದೆ. ಇದನ್ನು ಪಾಂಡವರ ಕಲ್ಲು, ಮೋರಿಯರ ಮನೆ, ಪಾಣಾರ ಕಲ್ಲು, ಪಾಣಾರ ಅರೆಕಲ್ಲು, ನಿಂತಿಕಲ್ಲು, ನಿಲ್ಸಕಲ್ಲು, ಕಲ್ಮನೆ, ಮಂಚಕಲ್ಲು, ಕಲ್ಮಂಚ, ತೂಂತ್ ಕಲ್ಲು, ಆನೆಕಲ್ಲು, ಇತ್ಯಾದಿ, ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ ಇಲ್ಲವೆ ಗುರುತಿಸಲಾಗುತ್ತದೆ. ಕರಾವಳಿಗೆ ಸೀಮಿತವಾದ ಗುಹಾ ಸಮಾಧಿ, ಟೋಪಿ ಕಲ್‌ಗಳು ಕರ್ನಾಟಕ ಕರಾವಳಿ ಮತ್ತು ಕೇರಳದಲ್ಲಿ ಕಂಡುಬರುತ್ತವೆ. ಆಂಗ್ಲ ಭಾಷೆಯಲ್ಲಿ 'ಡಾಲ್ಮೆನ್' ಎಂದು ಕರೆಯಲ್ಪಡುವ ಶಿಲಾ ಸಮಾಧಿಗಳು ಕರ್ನಾಟಕದಲ್ಲಿ ಪಾಂಡವರ ಕಲ್ಲು, ಮೋರಿಯರ ಮನೆ, ತೂಂತ್ ಕಲ್ಲು, ಕಲ್ಮನೆ, ಎಂದು ಕರೆಯಲ್ಪಡುತ್ತವೆ.

ತುಳುನಾಡಿನ ಚರಿತ್ರೆ ಮತ್ತು ಸಂಸ್ಕೃತಿಯ ಅಧ್ಯಯನದಲ್ಲಿ ಚಿರಸ್ಮರಣೀಯರಾದ ಡಾ. ಪಿ. ಗುರುರಾಜ್ ಭಟ್‌ರವರೇ ಬೃಹತ್ ಶಿಲಾಯುಗ ಸಂಸ್ಕೃತಿಯ ಶೋಧದ ಆದ್ಯ ಪ್ರವರ್ತಕರು.[೧] ತದನಂತರ ಡಾ. ಅ. ಸುಂದರ,[೨] ಡಾ. ಬಿ. ವಸಂತ ಶೆಟ್ಟಿ,[೩] ಡಾ. ಪಿ.ಎನ್. ನರಸಿಂಹಮೂರ್ತಿ,[೪] ಡಾ. ಪುಂಡಿಕ್ಯಾ ಗಣಪಯ್ಯ ಭಟ್,[೫] ಪ್ರೊ. ಟಿ. ಮುರುಗೇಶಿ,[೬] ಶ್ರೀಯುತ ಶ್ರೀಧರ್ ಭಟ್ ಹಾಗು ಕೆ. ನಾರಾಯಣ ನಾಯಕ್‌ರವರು ಜಿಲ್ಲೆಯ ವಿವಿದೆಡೆಗಳಲ್ಲಿ ಬೃಹತ್ ಶಿಲಾಯುಗದ ನಿವೇಶನಗಳನ್ನು ಬೆಳಕಿಗೆ ತಂದಿದ್ದಾರೆ. ಅತಿ ಹೆಚ್ಚು ಬೃಹತ್ ಶಿಲಾಯುಗದ ಸಮಾಧಿ ನೆಲೆಗಳನ್ನು ಬೆಳಕಿಗೆ ತಂದ ಕೀರ್ತಿ ಡಾ. ಬಿ. ವಸಂತ ಶೆಟ್ಟಿಯವರಿಗೆ ಸಲ್ಲುತ್ತದೆ.

ಪ್ರಸ್ತುತ ಲೇಖನವು ಉಡುಪಿ ಜಿಲ್ಲೆ, ಕಾರ್ಕಳ ತಾಲ್ಲೂಕಿನ ಪಳ್ಳಿಯ ಮದ್ಮಲ್ ಪಾದೆ ಎಂಬಲ್ಲಿ ಇತ್ತೀಚೆಗೆ, ನಾನು ಮತ್ತು ನನ್ನ ಅಂತಿಮ ಬಿ.ಎ. ಪುರಾತತ್ವ ವಿದ್ಯಾರ್ಥಿಗಳು ಸಂಶೋಧಿಸಿದ[೭], ಬೃಹತ್ ಶಿಲಾ ಸಂಸ್ಕೃತಿಯ ಕಲ್ಮನೆ ಮಾದರಿಯ ಸಮಾಧಿ ನೆಲೆಯೊಂದರ ಸಂಶೋಧನಾತ್ಮಕ ಲೇಖನವಾಗಿದೆ.

ಪಳ್ಳಿ-ಕಾರ್ಕಳ ರಸ್ತೆಯ ಬಲಭಾಗದಲ್ಲಿ, ಸುಮಾರು ಒಂದು ಕಿ.ಮೀ. ದೂರದಲ್ಲಿ ಅಂಗನವಾಡಿ ಕೇಂದ್ರವೊಂದಿದೆ, ಅಲ್ಲಿಂದ ಕೂಗಳತೆಯ ದೂರದಲ್ಲಿ ಸ್ಥಳೀಯವಾಗಿ ಮದ್ಮಲ್ ಪಾದೆ ಎಂದು ಕರೆಯಲ್ಪಡುವ ಒಂದು ನೈಸ್ ಶಿಲೆ (ಪಾಂಡು ಕಲ್ಲು)ಯ ಬೆಟ್ಟವಿದೆ. ಕಲ್ಲು ಕೋರೆ ಗಣಿಗಾರಿಕೆಯಿಂದ ಬೆಟ್ಟ ಸಂಪೂರ್ಣ ನಾಶವಾಗಿದೆ. ಅಲ್ಲಿ ಮದ್ಮಲ್ ಗುಂಡ ಎಂದು ಸ್ಥಳೀಯವಾಗಿ ಕರೆಯಲ್ಪಡುವ ಒಂದು ಬೃಹತ್ ಶಿಲಾಯುಗದ ಸಮಾಧಿಯಿದೆ. ಕಲ್ಮನೆಯೆಂದರೆ ಭಾರಿಗಾತ್ರದ ಕಲ್ಲು ಚಪ್ಪಡಿಗಳನ್ನು ಗಡಿಯಾರದ ಅನುಕ್ರಮದಲ್ಲಿ ಜೋಡಿಸಿ ಆಯತಾಕಾರದ ಇಲ್ಲವೆ ಚೌಕಾರದ ಕೋಣೆಯನ್ನು ನಿರ್ಮಿಸುವುದಾಗಿದೆ. ಮದ್ಮಲ್ ಗುಂಡದ ಪೂರ್ವದಿಕ್ಕಿನ ಕಲ್ಲು ಚಪ್ಪಡಿ ೧೬೮ ಸೆ.ಮೀ. ಅಗಲ ಮತ್ತು ೧೬೦ ಸೆ.ಮೀ. ಎತ್ತರವಿದೆ. ಅದೇ ಚಪ್ಪಡಿಯಲ್ಲಿ ನೆಲ ಮಟ್ಟದಿಂದ ಸುಮಾರು ೩೩ ಸೆ.ಮೀ ಎತ್ತರದಲ್ಲಿ ಪೂರ್ವಾಭಿಮುಖವಾಗಿ ಸುಮಾರು ೪೧ ಸೆ.ಮೀ. ಸುತ್ತಳತೆಯ ರಂಧ್ರವನ್ನು ಮಾಡಲಾಗಿದೆ. ದಕ್ಷಿಣ ದಿಕ್ಕಿನಲ್ಲಿರುವ ಕಲ್ಲು ಚಪ್ಪಡಿ ೨೬೦ ಸೆ.ಮೀ. ಅಗಲವಾಗಿದ್ದು ೧೮೨ ಸೆ.ಮೀ. ಎತ್ತರವಾಗಿದೆ. ಪಶ್ಚಿಮದಲ್ಲಿರುವ ಕಲ್ಲು ಚಪ್ಪಡಿ ೧೭೬ ಸೆ.ಮೀ. ಅಗಲವಾಗಿದ್ದು ೧೪೮ ಸೆ.ಮೀ. ಎತ್ತರವಾಗಿದೆ. ಉತ್ತರ ದಿಕ್ಕಿನ ಕಲ್ಲು ಚಪ್ಪಡಿ ೧೮೯ ಸೆ.ಮೀ. ಅಗಲವಾಗಿದ್ದು ೧೭೧ ಸೆ.ಮೀ. ಎತ್ತರವಾಗಿದೆ. ಈ ಸಮಾಧಿಯನ್ನು ನೈಸರ್ಗಿಕ ಕಲ್ಲು ಚಪ್ಪಡಿಯ ಮೇಲೆ ಚಿಕ್ಕ ಚಿಕ್ಕ ಕಲ್ಲು ಮತ್ತು ಮಣ್ಣನ್ನು ಬಳಸಿಕೊಂಡು ನೆಲಗಟ್ಟನ್ನು ಮಾಡಿಕೊಂಡು ಚೌಕಾಕಾರದ ಕೋಣೆಯ ಸಮಾಧಿಯನ್ನು ನಿರ್ಮಿಸಲಾಗಿದೆ. ಮೇಲ್ಭಾಗದಲ್ಲಿ ೧೩೪ ಸೆ.ಮೀ. ಉದ್ದ ಮತ್ತು ೧೦೨ ಸೆ.ಮೀ. ಅಗಲದ ಮುಚ್ಚಿಗೆಯ ಕಲ್ಲು ಚಪ್ಪಡಿಯಿದೆ. ಪಶ್ಚಿಮ ದಿಕ್ಕಿನ ಚಪ್ಪಡಿಯ ವಾಯುವ್ಯ ಭಾಗದಲ್ಲಿ ಸಾಂಕೇತಿಕ ರೂಪದ ಕಲ್ಲುಗುಳಿಗಳಿವೆ. ಅದು ನೋಡುವುದಕ್ಕೆ ಹಳೆಗುಳಿ ಮನೆಯನ್ನು ಹೋಲುತ್ತದೆ.

* ಉಪನ್ಯಾಸಕರು, ಎಂ.ಎಸ್.ಆರ್.ಎಸ್. ಕಾಲೇಜು, ಶಿರ್ವ, ಉಡುಪಿ ಜಿಲ್ಲೆ-೫೭೪೧೧೬.

ಪೊದೆಯೊಂದರಲ್ಲಿ ಮುಚ್ಚಿಹೋಗಿದ್ದ ೨ನೇ ಸಮಾಧಿ ಸಂಪೂರ್ಣ ಹಾಳಾಗಿದ್ದು, ಕೇವಲ ಭೂ ಮಟ್ಟದಲ್ಲಿ ಕಲ್ಲುಚಪ್ಪಡಿಯ ಒಡೆದ ತುಂಡುಗಳು ಕಾಣಸಿಗುತ್ತವೆ. ಉತ್ತರ ದಿಕ್ಕಿನ ತುಂಡಾದ ಕಲ್ಲು ಚಪ್ಪಡಿಯ ಉದ್ದ ೮೧.೯ ಸೆ.ಮೀ. ಇದ್ದು, ಪಶ್ಚಿಮದಲ್ಲಿರುವ ತುಂಡಾದ ಕಲ್ಲು ಚಪ್ಪಡಿಯ ಉದ್ದ ೬೫.೮ ಸೆ.ಮೀ. ಪೂರ್ವ ದಿಕ್ಕಿನಲ್ಲಿರುವ ತುಂಡಾದ ಕಲ್ಲುಚಪ್ಪಡಿಯ ಉದ್ದ ೯೭.೭ ಸೆ.ಮೀ. ಇದ್ದು, ದಕ್ಷಿಣ ದಿಕ್ಕಿನಲ್ಲಿದ್ದ ಕಲ್ಲುಚಪ್ಪಡಿ ಕಾಣೆಯಾಗಿದೆ. ಪೂರ್ವ ದಿಕ್ಕಿನಲ್ಲಿರುವ ಕಲ್ಲುಚಪ್ಪಡಿಯಲ್ಲಿ ತುಂಡಾದ ತೂತಿನ ಭಾಗ ಕಂಡು ಬರುತ್ತದೆ. ಈ ಸಮಾಧಿಯ ವೈಶಿಷ್ಟ್ಯವೆಂದರೆ, ಸಮಾಧಿಯ ಒಳಭಾಗದಲ್ಲಿ ೯೪ ಸೆ.ಮೀ. ಉದ್ದ ಮತ್ತು ೯೦ ಸೆ.ಮೀ. ಅಗಲದ ಕಲ್ಲುಚಪ್ಪಡಿಯನ್ನು ಹಾಸಲಾಗಿದೆ. ಈ ಸಮಾಧಿಯಿಂದ ಸುಮಾರು ೫ ಅಡಿ ಅಂತರದಲ್ಲಿ ಇನ್ನು ಎರಡು ಕಲ್ಮನೆ ಸಮಾಧಿಯ ಅವಶೇಷಗಳಿವೆ. ಒಂದು ಬ್ರಹ್ಮಸ್ಥಾನದ ಒಳಭಾಗದಲ್ಲಿದ್ದು ಅದನ್ನೇ ಬ್ರಹ್ಮರಗುಂಡ ಎಂದು ಕರೆದು ಪೂಜಿಸಲಾಗುತ್ತಿದೆ. ಇದರ ದಕ್ಷಿಣ ಭಾಗದ ಆಯತಾಕಾರದ ಒಂದು ಕಲ್ಲುಚಪ್ಪಡಿ ಸುಸ್ಥಿತಿಯಲ್ಲಿದೆ. ಅದು ೧೧೦ ಸೆ.ಮೀ. ಉದ್ದವಿದೆ, ಎತ್ತರ ೪೧ ಸೆ.ಮೀ. ಇದೆ.

ಬೃಹತ್ ಶಿಲಾಯುಗದ ಸಮಾಧಿ ನೆಲೆಗಳು ಉಡುಪಿ ಜಿಲ್ಲೆಯ ಕಾರ್ಕಳ, ಉಡುಪಿ ಹಾಗೂ ಕುಂದಾಪುರ ತಾಲ್ಲೂಕುಗಳಲ್ಲಿ ವ್ಯಾಪಕವಾಗಿ ಕಂಡುಬಂದಿವೆ. ಜಿಲ್ಲೆಯ ಬೃಹತ್ ಶಿಲಾಯುಗದ ನೆಲೆಗಳನ್ನು ಈ ಕೆಳಕಂಡಂತೆ ವರ್ಗೀಕರಿಸಬಹುದಾಗಿದೆ.

೧. ಕಲ್ಮನೆಗಳು ಅಥವಾ ಡಾಲ್ಮೆನ್‌ಗಳು

೨. ಗುಹಾ ಸಮಾಧಿಗಳು

೩. ಮೃತ್ಪಾತ್ರೆಗಳು ಅಥವಾ ಕುಂಭ ಸಮಾಧಿಗಳು

೪. ನಿಲ್ಸ್ ಕಲ್ಲುಗಳು ಅಥವಾ ಮೆನ್‌ಹರ್ಸ್

ಚರ್ಚೆ: ಪಳ್ಳಿಯಲ್ಲಿ ಕಂಡುಬಂದ ಬೃಹತ್ ಶಿಲಾಯುಗದ ಡಾಲ್ಮೆನ್ ಅಥವಾ ಕಲ್ಮನೆ ಮಾದರಿ ನವೇಶನದಲ್ಲಿ ಮದ್ಮಲ್ ಗುಂಡ ಎಂದು ಕರೆಯಲ್ಪಡುವ ಸಮಾಧಿ ಮಾತ್ರ ಅಲ್ಪ ಸುಸ್ಥಿತಿಯಲ್ಲಿದ್ದು, ಕಲ್ಲು ಕ್ವಾರೆ ಕೆಲಸದಿಂದ ಅಪಾಯದಲ್ಲಿದೆ. ಇಲ್ಲಿನ ಸಮಾಧಿ ರಚನೆ ಮತ್ತು ವಿನ್ಯಾಸದಲ್ಲಿ ಕಾರ್ಕಳ ತಾಲ್ಲೂಕಿನ ಬೋರ್ಕಟ್ಟೆ ಮತ್ತು ಕೋಣಾಜೆಯಲ್ಲಿನ ಸಮಾಧಿಗಳನ್ನು ಹೋಲುತ್ತದೆ. ಬೋರ್ಕಟ್ಟೆ ಮತ್ತು ಕೋಣಾಜೆಯ ಸಮಾಧಿಗಳ ಕಾಲವನ್ನು ಸರಿಸುಮಾರು ಕ್ರಿಸ್ತ ಪೂರ್ವ ೮೦೦ ಎಂದು ಡಾ. ಅ. ಸುಂದರ ಅವರು ಗುರುತಿಸಿದ್ದು, ಅದೇ ಕಾಲಮಾನವನ್ನು ಪಳ್ಳಿಯ ನಿವೇಶನಕ್ಕೆ ಅನ್ವಯಿಸಬಹುದಾಗಿದೆ.

ತುಳುವಿನಲ್ಲಿ ಮದ್ಮಲ್ ಗುಂಡ ಎಂದರೆ ಮದುಮಗಳ ಸಮಾಧಿ ಎಂದರ್ಥ, ಪರಂಪರಾನುಗತವಾಗಿ ಇದನ್ನು ಮದುಮಗಳ ಸಮಾಧಿ ಎಂದೇ ಗುರುತಿಸಲಾಗಿದ್ದು, ನಿಜವಾಗಿಯೂ ಇದು ಮದುಮಗಳ ಸಮಾಧಿಯೇ ಆಗಿದ್ದಿರಬಹುದೆ? ಈ ಸಮಾಧಿಯ ಪಶ್ಚಿಮ ದಿಕ್ಕಿನ ಶಿಲಾ ಚಪ್ಪಡಿಯ ಮೇಲೆ ವಾಯುವ್ಯ ಭಾಗದಲ್ಲಿ ಸಾಂಕೇತಿಕ ಗುಳಿಗಳಿವೆ. ಒಟ್ಟು ೧೮ ಗುಳಿಗಳಿದ್ದು, ಅವು ಮೃತ ವ್ಯಕ್ತಿಯ ಪ್ರಾಯ ಅಥವಾ ವಯಸ್ಸನ್ನು ಸೂಚಿಸುತ್ತವೆಯೆ?

ಬ್ರಹ್ಮಸ್ಥಾನದಲ್ಲಿ ಇರುವ ಕಲ್ಮನೆ ಈ ನಿವೇಶನದ ಅತ್ಯಂತ ದೊಡ್ಡ ಸಮಾಧಿಯಾಗಿದ್ದು, ಅಲ್ಲಿನ ಶಿಲಾ ಚಪ್ಪಡಿಗಳು ಅಸ್ತವ್ಯಸ್ತವಾಗಿ ಬಿದ್ದಿವೆ. ದಕ್ಷಿಣ ದಿಕ್ಕಿನ ಶಿಲಾಚಪ್ಪಡಿ ಮಾತ್ರ ಸುಸ್ಥಿತಿಯಲ್ಲಿದೆ. ಈ ಸಮಾಧಿಯನ್ನೇ ಬೆರ್ಮೆರ ಗುಂಡ ಎಂದು ಆರಾಧಿಸಲಾಗುತ್ತಿದೆ. ಬೆರ್ಮೆರ ಗುಂಡವೆಂದರೆ ಬ್ರಹ್ಮರ ಸಮಾಧಿ ಎಂದರ್ಥ. ಬೆರ್ಮೆರ ಸ್ಥಾನವನ್ನು ಆಲಡೆ ಎಂದು ಕರೆಯಲಾಗುತ್ತದೆ. ಆಲಡೆ ಪಂಚದೈವಗಳ ಆರಾಧನಾ ಕೇಂದ್ರ. ಬೃಹತ್ ಶಿಲಾಯುಗದ ಸಮಾಧಿಯೊಂದು ಬೆರ್ಮೆರ ಸ್ಥಾನವಾಗಿ ಆರಾಧನಾ ಕೇಂದ್ರವಾಗಿರುವ ಜೀವಂತ ಉದಾಹರಣೆಯಿದು. ಇದರಿಂದ ಬೃಹತ್ ಶಿಲಾಯುದ ಸಮಾಧಿ ನೆಲೆಗಳೇ ದೈವಸ್ಥಾನಗಳಾಗಿ ನಂತರ ದೇವಾಲಯಗಳಾಗಿ ಬೆಳೆದು ಬಂದಂತೆ ಕಂಡುಬರುತ್ತದೆ. ತುಳುನಾಡಿನ ಬಹುತೇಕ ದೇವಸ್ಥಾನಗಳ ಸಮೀಪದಲ್ಲಿ ಬೃಹತ್ ಶಿಲಾಯುಗದ ಸಮಾಧಿಗಳಿವೆ.

ಉಡುಪಿ ತಾಲ್ಲೂಕಿನ, ಬಾರ್ಕೂರು, ಬಾರಳಿ, ಬೆಳ್ಳರ್ಪಳ್ಳಿ, ಬೋಳುಗುಡ್ಡೆ, ಕಕ್ಕುಂಜೆ, ಕೆಳ ಕುಂಜಾಲು, ಕೀರಾಡಿ, ಮೈರುಕೊಮ್ಮೆ, ಮೂಡನಡಂಬೂರು, ಪರ್ಕಳ, ಸಾಂತೂರು, ಪೆರಂಪಳ್ಳಿ, ಕುರ್ಕಾಲು, ಸುಭಾಷ್‌ನಗರ, ಶಿರ್ವ, ಉಪ್ಪೂರು, ಜಾತಬೆಟ್ಟು, ಪೆರ್ಡೂರು, ನಿಟ್ಟೂರಿನ ಅಡ್ಕದ ಕಟ್ಟೆ, ಕೊಜಕುಳಿ, ಕನ್ನರ್ಪಾಡಿ, ಕೊರಂಗ್ರಪಾಡಿ, ಉಡುಪಿ ಹಾಗೂ ಬೊಮ್ಮರ ಬೆಟ್ಟುವಿನಲ್ಲಿ ಗುಹಾ ಸಮಾಧಿಗಳಿವೆ. ಕಾರ್ಕಳ ತಾಲ್ಲೂಕಿನ ಚಾರ, ಹೆಬ್ರಿಯಲ್ಲಿ ಹಾಗೂ ಕುಂದಾಪುರ ತಾಲ್ಲೂಕಿನ ಅಮಾಸೆಬೈಲು, ಬಸ್ರೂರು, ಹಳ್ನಾಡಿ-ಹರ್ಕಾಡಿ, ಕಡಸ, ವಳ್ಳೂರು, ನೇರಳಕಟ್ಟೆ, ಕಮಲಶಿಲೆ ಮುಂತಾದ ಕಡೆ ಗುಹಾ ಸಮಾಧಿಗಳಿವೆ. ಉಡುಪಿಯ ಹಿರಿಯಡ್ಕ ಮತ್ತು ಶಿರ್ವಗಳಲ್ಲಿ ಹಾಗೂ ಕುಂದಾಪುರದ ಬೇಳೂರಿನಲ್ಲಿ ಮೃತ್ಪಾತ್ರೆ ಸಮಾಧಿಗಳಿವೆ. ಉಡುಪಿ ನಿಟ್ಟೂರಿನ ಅಡ್ಕದಕಟ್ಟೆ ಮತ್ತು ಕುರ್ಕಾಲುವಿನಲ್ಲಿ ಈ ಲೇಖಕ ಕಂಡುಹಿಡಿದ ನಿಲ್ಸಕಲ್ ಸಮಾಧಿಗಳಿವೆ. ನಿಲ್ಸಕಲ್ ಸಮಾಧಿಗಳ ಪಕ್ಕದಲ್ಲಿಯೇ ಗುಹಾ ಸಮಾಧಿಗಳಿವೆ. ಕಾರ್ಕಳದ ಬೋರ್ಕಟ್ಟೆ, ಕೋಣಾಜೆ ಮತ್ತು ಪಳ್ಳಿಯಲ್ಲಿ, ಉಡುಪಿಯ ಕಕ್ಕುಂಜೆ ಸಮೀಪ ಕಬ್ಬಿನ ಹಿತ್ಲುವಿನಲ್ಲಿ ಹಾಗೂ

ಕುಂದಾಪುರದ ಬೇಳೂರಿನಲ್ಲಿ ಡಾಲ್ಮೆನ್ ಅಥವಾ ರಂಧ್ರವಿರುವ ಕಲ್ಮನೆಗಳಿವೆ.

[ಈ ಸಮಾಧಿ ನೆಲೆಯನ್ನು ಮುಲ್ಕಿ ಸುಂದರ್ ರಾಮ್ ಶೆಟ್ಟಿ ಕಾಲೇಜಿನ ಅಂತಿಮ ಬಿ.ಎ. ಪುರಾತತ್ವ ವಿಭಾಗದ ವಿದ್ಯಾರ್ಥಿಗಳ ಜೊತೆಯಲ್ಲಿ ಈ ಲೇಖಕ ೨೬/೦೭/೨೦೧೩ ರಂದು ಸಂಶೋಧನೆ ಮಾಡಲಾಯಿತು. ಇದನ್ನು ಪತ್ತೆ ಹಚ್ಚಲು ನೆರವಾದ ವಿದ್ಯಾರ್ಥಿವೃಂದಕ್ಕೆ ಕೃತಜ್ಞತೆಗಳು.]

ಆಧಾರಸೂಚಿ

೧. Dr. Gururaj Bhat P., Studies in Tuluva History and Culture, Udupi-1975.

೨. Dr. Sundara A: Megaliths in the Western Coast and Ghat Regions of Karnataka a Study: Journal of Karnataka University, 1974.

೩. Dr. Vasantha Shetty., Dakshina Kannadadalli Nutana Shilayuga, Itihasa Darshana Samputa, 2. Pp. 34-36, 1887.

೪. Dr. Narasiha Murthy P. N., The Paper Presented in the 18th Conference of Karnataka Ithihasa Academy ® Bangalore.

೫. Dr. Ganapayya Bhat P., Ithihasa Purvadalli Tulunadu, Taulava, Pp. 13-23, 1997.

೬ Prof. Murugeshi T., Dakshina Kannadada Shirvadalli Pragaitihasika Nele Patte, MSRS College Annual Magazine, Pp. 58, 1998-99 .

೭. Udyavani, Brihat Shilayugada Kandi Kone Samadhi Nele Patte, Agust 22, 2013.

೮. Prof. Murugeshi T., Udupi Jilleya Briht Shilayugda Avasheshagalu, Udupi Jilleya Itihasa mattu Puratatva, Ed By Dr. R. Gopal, DAM, Pp. 25, Mysore, 2008.

೭

ಹೆದ್ದೂರು ಪರಿಸರದ ಪ್ರಾಗೈತಿಹಾಸಿಕ ಸಲಕರಣೆಗಳು

ಎಮ್. ಎ. ಪ್ರಭಾಕರ*

ಕರ್ನಾಟಕ ಇತಿಹಾಸ ಪೂರ್ವಕಾಲದವರೆಗೆ ಅಧ್ಯಯನ ನಡೆಸಿರುವ ವಿದ್ವಾಂಸರುಗಳು ಕೃತಿಗಳನ್ನು ಅವಲೋಕಿಸಿದಾಗ ಶಿಲಾಯುಗದ ನೆಲೆಗಳನ್ನು ಹಾಗೂ ಆ ಜನರು ಬಳಸಿರುವ ವಿವಿದ ಬಗೆಯ ವಸ್ತುಗಳಾದ ಮಣಿಗಳು, ಬಳೆಗಳು, ಮಡಿಕೆ, ಕುಡಿಕೆಗಳು, ಕಬ್ಬಿಣದ ವಸ್ತುಗಳು, ಕಲ್ಲಿನ ಆಯುಧಗಳು ಮತ್ತು ಕರಕುಶಲ ವಸ್ತುಗಳ ಬಗೆಗೆ ವಿಶೇಷ ಗಮನ ಹರಿಸಲಾಗಿದೆ. ಡಾ. ಕೆ. ಪದ್ದಯ್ಯನವರ ಪ್ರಕಾರ, ಕರ್ನಾಟಕದಲ್ಲಿ ಹಳೆಯ ಶಿಲಾಯುಗಕ್ಕೆ ಸೇರಿರುವ ಅವಶೇಷಗಳು ತುಮಕೂರು, ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ, ಬಿಜಾಪುರ, ಗುಲ್ಬರ್ಗ, ಹಾಗೂ ಬೆಳಗಾಂ ಜಿಲ್ಲೆಗಳಲ್ಲಿವೆ. ಇವುಗಳಲ್ಲಿ ಕೆಲವನ್ನು ೧೯ನೇ ಶತಮಾನದ ಕೊನೆಯ ದಶಕಗಳಲ್ಲಿ ಬ್ರೂಸ್ ಫುಟ್ ಅವರು ಪತ್ತೆ ಮಾಡಿದ್ದರು.

ಹೆದ್ದೂರು ಗ್ರಾಮವು ತಿರ್ಥಹಳ್ಳಿಯಿಂದ ೨೨ಕಿ.ಮಿ. ದೂರದಲ್ಲಿರುವ ಸಣ್ಣಹಳ್ಳಿ. ಸಹ್ಯಾದ್ರಿಪರ್ವತ ಶ್ರೇಣಿಯ ತಪ್ಪಲಿನಲ್ಲಿ ರಮಣೀಯವಾದ ಪರಿಸರದಲ್ಲಿ ನದಿ, ಶಿಖರ, ಹಚ್ಚಹಸುರಿನ ಕಾಡಿನಿಂದ ಕೂಡಿದ್ದು ಪ್ರಾಕೃತಿಕಸೌಂದರ್ಯದ ಬೀಡಾಗಿಯೂ, ಇತಿಹಾಸ ಪುರಾಣ ಪ್ರಸಿದ್ಧ ಕ್ಷೇತ್ರವು ಆಗಿದೆ. ತುಂಗಾ ಮತ್ತು ಬ್ರಾಹ್ಮಿನದಿಗಳ ದಡದ ಮೇಲೆ ಈ ಗ್ರಾಮವಿದ್ದು, ಉತ್ತಮ ಹವಾಗುಣದೊಡನೆ ಕೃಷಿಗೆಯೋಗ್ಯ ಮತ್ತು ಫಲವತ್ತಾದ ಭೂಮಿಯಿಂದ ಆಕರ್ಷಿತನಾದ ಆದಿ ಮಾನವ ಸಹಜವಾಗಿಯೇ ತನ್ನ ನೆಲೆಯನ್ನು ಇಲ್ಲಿ ಕಂಡು ಕೊಳ್ಳಲು ಸಾಧ್ಯವಾಯಿತು. ಈ ಪರಿಸರದಲ್ಲಿ ಹೆದ್ದೂರು ವನಚೇತನದ ದೇವಿತೋನಾಗೇಶ ಎಂಬುವರು. ಅವರ ಮನೆಯ ಪಕ್ಕದಲ್ಲಿ ನೆಲವನ್ನು ಅಗೆಯುತ್ತಿದ್ದಾಗ ಪ್ರಾಚೀನ ಕಾಲದ ನಾಲ್ಕು ಉಂಗುರ ಕಲ್ಲುಗಳು (ರಿಂಗಸ್ಟೋನ್ಸ್) ಎರಡು ಕೊಡಲಿ ಪತ್ತೆಯಾಗಿದ್ದು ತಮ್ಮ ಮನೆಯಲ್ಲಿ ವೀಕ್ಷಣೆಗಾಗಿ ಇಟ್ಟಿದ್ದಾರೆ. ನದಿತಟದಲ್ಲಿ ನೆಲೆನಿಂತ ಮಾನವ ಇಂತಹ ಅಪರೂಪದ ಆಯುಧಗಳನ್ನು ಬೇಟೆಯಾಡಲು ಮತ್ತು ಇತರ ಉದ್ದೇಶಗಳಿಗಾಗಿ ಕನಿಷ್ಟ ಮೂರುಸಾವಿರ ವರ್ಷಗಳ ಹಿಂದೆಯೇ ಉಪಯೋಗಿಸುತ್ತಿದ್ದ ಎಂಬುದನ್ನು ಸಂಶೋಧನಾ ತಜ್ಞರಿಂದ ತಿಳಿಯಬಹುದಾಗಿದೆ. ಆಯುಧಗಳು ಮತ್ತು ಸಲಕರಣೆಗಳು ವಿವಿಧ ವಿನ್ಯಾಸ ಮತ್ತು ಗಾತ್ರದಲ್ಲಿವೆ. ಇದೆ ಪರಿಸರದ ಸಮೀಪದಲ್ಲಿಯೇ ಜಿ.ಕೆ. ದೇವರಾಜ ಸ್ವಾಮಿ ಎಂಬುವರು ಇತ್ತೀಚಿಗೆ ಶಿಲಾಯುಗದ ನಿವೇಶನಗಳನ್ನು ಹಾಗೂ ಪ್ರಾಗೈತಿಹಾಸಿಕ ಬಂಡೆ ಚಿತ್ರಗಳನ್ನು ಶೋಧನೆ ಮಾಡಿದ್ದು ಮೇಲಿನ ಸಂಗತಿಗಳಿಗೆ ಸಾಕಷ್ಟು ಪುಷ್ಠಿಯನ್ನು ನೀಡುತ್ತದೆ.

ಪ್ರಸ್ತುತ ಹೆದ್ದೂರಿನಲ್ಲಿ ಪುರಾತನ ಶಿಲಾಯುಗದ ಕಪ್ಪುಕೊಡಲಿ ಲಭಿಸಿದ್ದು ತೀರಾ ಗಡುಸಾದ ಡಾಲರೈಟ್ ಶಿಲೆಯಿಂದ ಮಾಡಿದ್ದು ೩.೦ ಸೆಂ.ಮೀ. ಉದ್ದ ೬.೦ ಸೆಂಮೀ. ವ್ಯಾಸವುಳ್ಳದಾಗಿದ್ದು ತ್ರಿಕೋನಾಕೃತಿಯಲ್ಲಿದೆ. ಎರಡೂ ಬದಿಗಳಲ್ಲಿ ಡುಬ್ಬಾಗಿದ್ದು ಬಾಯಿ ಹರಿತವಾಗಿದ್ದು ಕೋನಾಕಾರದಲ್ಲಿದೆ.

ಇನ್ನೊಂದು ಕೊಡಲಿ ಸಣ್ಣದಾಗಿದ್ದು ಚಪ್ಪಟೆಯಾಗಿದೆ. ೧೩ ಸೆಂ.ಮಿ. ಉದ್ದ, ವ್ಯಾಸ ೫.೫ ಸೆ.ಮೀ ಇದ್ದು, ಕೊಡಲಿಯ ಎರಡುಕಡೆ ಚೆನ್ನಾಗಿ ಉಜ್ಜಿ ಮಾಡಲಾಗಿದ್ದು ಬಾಯಿ ನೇರವಾಗಿದ್ದು ತುಂಬಾ ಹರಿತವಾಗಿದೆ. ಕುತುಹಲಕಾರಿ ಅಂಶವೆಂದರೆ ಇದನ್ನು ಸಹಜವಾದ ಚಪ್ಪಟೆ ಕಲ್ಲಿನಿಂದ ಮಾಡಲಾಗಿದ್ದು ಮೇಲ್ಭಾಗದಲ್ಲಿ ಉಜ್ಜಿದ ಗುರುತುಗಳಿದ್ದು ಇದನ್ನು ಬಾಚಿಯಾಗಿಯೂ ಉಪಯೋಗಮಾಡಲು ಸಾಧ್ಯವಿದೆ.

ಇನ್ನೊಂದು ಕಲ್ಲು ತ್ರಿಕೋನಾಕಾರದಲ್ಲಿದ್ದು ತುಂಬಾ ದಪ್ಪನಾಗಿದೆ. ೧೩.೦ ಸೇ.ಮೀ ಉದ್ದ ೫.೦ ಸೇ.ಮೀ ವ್ಯಾಸವಿದ್ದು ಮೇಲ್ಮೈ ಮತ್ತು ಎರಡು ತುದಿಗಳು ನಯವಾಗಿವೆ. ತೋರುಗಾಣಿಕೆಗೆ ಮನುಷ್ಯನ ಪ್ರಯತ್ನದಿಂದ ಇದರ ಮೇಲ್ಮೈ ಅಷ್ಟು ನಯವಾಗಿರುವಂತೆ ಕಾಣುತ್ತದೆ. ಆದರೆ ಇದು ನೈಸರ್ಗಿಕವಾಗಿ ಇದ್ದಿರಬಹುದೆಂಬುದನ್ನು ತೆಗೆದು ಹಾಕುವಂತಿಲ್ಲ. ಆದರೂ ಇದು ಕುತೂಹಲಕಾರಿಯಾದ

* ಇತಿಹಾಸ ಪ್ರಾಧ್ಯಾಪಕರು, ರಾಜೀವಗಾಂಧಿ ಪರಿಸರ, ಶೃಂಗೇರಿ

ಕಲ್ಲಿನ ಸಲಕರಣೆಯಾಗಿದೆ. ಆದಿಮಾನವ ತನ್ನ ಕೈಯಿಂದ ಪ್ರಾಣಿಗಳನ್ನು ಕೊಲ್ಲಲ್ಲು ಹಾಗು ಗೆಡ್ಡೆಗೆಣಸುಗಳನ್ನೂ ಸಂಗ್ರಹಿಸಲು, ಮೂಳೆಯಿಂದ ಮಾಂಸವನ್ನು ಬೇರ್ಪಡಿಸಲು, ಮರಗಳನ್ನು ಕತ್ತರಿಸಲು ಬಳಸಿರಬಹುದು ಎಂಬುದು ತಜ್ಞರ ಅಭಿಪ್ರಾಯವಾಗಿದೆ. ಈ ಕೊಡಲಿಗಳ ಜೊತೆಗೆ ದೊರೆತ ನಾಲ್ಕು ಉಂಗುರ ಕಲ್ಲುಗಳು (ರೀಂಗ್‌ಸ್ಟೋನ್ಸ್) ಭಾರವಾಗಿವೆ. ಅವುಗಳ ಅಳತೆಗಳು ಹೀಗಿವೆ.

೧. ವ್ಯಾಸ – ೯.೦ ಸೆಂ.ಮೀ.
ಎತ್ತರ – ೪ ಸೆಂ.ಮೀ.
೨. ವ್ಯಾಸ – ೧೦.೦ ಸೆಂ.ಮೀ.
ಎತ್ತರ – ೬.೫ ಸೆಂ.ಮೀ.
೩. ವ್ಯಾಸ – ೧೨.೦ ಸೆಂ.ಮೀ.
ಎತ್ತರ – ೬.೫ ಸೆಂ.ಮೀ.
೪. ವ್ಯಾಸ – ೧೦ ಸೆಂ.ಮೀ.

ತಜ್ಞರ ತಿಳುವಳಿಕೆಯಂತೆ ಇಂಥ ಕಲ್ಲುಗಳ ತೂತಿನಲ್ಲಿ ಉದ್ದನೆಯ ಕೋಲನ್ನು ಅಸಮ ಅಳತೆಯಲ್ಲಿ ಗಟ್ಟಿಯಾಗಿ ಸಿಕ್ಕಿಸಲಾಗುತ್ತಿತ್ತು. ಉಂಗುರ ಕಲ್ಲಿನ ಕೆಳಭಾಗದ ಕೋಲಿನ ತುದಿಯಲ್ಲಿ ಚೂಪಾಗಿ ಮಾಡಿ ಮತ್ತೊಂದು ಭಾಗವನ್ನು ಕೈಯಲ್ಲಿ ಹಿಡಿದುಕೊಂಡು ನೆಲವನ್ನು ಕೊಚ್ಚುವ ಸಾಧನವಾಗಿ ಮಾಡಿಕೊಂಡಿರಬಹುದು. ಇಲ್ಲವೆ ಕೃಷಿ ಉಪಕರಣಗಳಾಗಿ, ಧಾನ್ಯಗಳನ್ನು ಪುಡಿ ಮಾಡಲು ಹಾಗು ಕ್ರೂರಮೃಗಗಳನ್ನು ಓಡಿಸಲು ಬಳಸುತ್ತಿದ್ದಿರಬಹುದು.

ನವಶಿಲಾಯುಗದ ಮತ್ತು ತಾಮ್ರ ಯುಗಗಳ ನಂತರದ ಕಾಲದಲ್ಲಿ ಕಬ್ಬಿಣದ ಆವಿಷ್ಕಾರವಾಗಿ ಕಬ್ಬಿಣದ ಆಯುಧಗಳು ಬಳಕೆಗೆ ಬಂದು ಕಲ್ಲಿನ ಆಯುಧಗಳ ಬಳಕೆ ನಿಂತಿತು. ಇದು ಬೃಹತ್ ಶಿಲಾಯುಗವಾಗಿದ್ದು ಈ ಯುಗವನ್ನು ಕಬ್ಬಿಣ ಯುಗವೆಂದು ಕರೆಯಲಾಗಿದೆ.

ಬೃಹತ್ ಶಿಲಾಯುಗದ ಜನರು ಕೃಷಿ ಉಪಕರಣಗಳು ಹಾಗು ಆಯುಧಗಳನ್ನು ಕಬ್ಬಿಣದಿಂದ ಮಾಡಿ ಬಳಸುತ್ತಿದ್ದರು, ನಿಸರ್ಗದತ್ತವಾದ ಕಬ್ಬಿಣದ ಅದಿರನ್ನು ಕರಗಿಸಿ ಆಯುಧಗಳನ್ನಾಗಿ ಮಾಡಿಕೊಳ್ಳುವ ತಾಂತ್ರಿಕತೆ ಅವರಲ್ಲಿತ್ತು ಎಂಬುದಕ್ಕೆ ಈ ಪರಿಸರದಿಂದ ೧೦ ಕೀ.ಮೀ. ದೂರದಲ್ಲಿ ಎರಡು ಕಬ್ಬಿಣದ ಕೊಳವೆಗಳು ಪತ್ತೆಯಾಗಿವೆ. ಅಳತೆಗಳು ದೊಡ್ಡದು ೨೩.೦ ಸೆಂ.ಮೀ. ಉದ್ದ ೪.೫ ಸೆಂ.ಮೀ. ವ್ಯಾಸ ಸಣ್ಣದು ೧೮ ಸೆಂ.ಮೀ. ಉದ್ದ ೩ ಸೆಂ.ಮೀ. ವ್ಯಾಸ ಉಳ್ಳದ್ದಾಗಿದ್ದು ಮುಂದಿನ ಹೆಚ್ಚಿನ ಸಂಶೋಧನೆಗೆ ಅವಕಾಶಕಲ್ಪಿಸಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಶಿವತಾರಕ್ ಕೆ.ಬಿ. ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ.

೨. ಸುಂದರ, ಅ ೧೯೯೭, ಕರ್ನಾಟಕ ಚರಿತ್ರೆ ಸಂ ೧ ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.

೮

ನವಶಿಲಾಯುಗದ ನೆಲೆ ಬೆನಕನಮಟ್ಟಿ: ಒಂದು ಟಿಪ್ಪಣಿ

ಡಾ.ಸಿ.ಮಹದೇವ*

ಧಾರವಾಡಕ್ಕೆ ಸಮೀಪದಲ್ಲಿರುವ ಚಂದನಮಟ್ಟಿ ಗ್ರಾಮಕ್ಕೆ ಸೇರಿದ ಬೆನಕನಮಟ್ಟಿ ವಿಶಾಲವಾದ ಬಯಲಿನ ನಡುವೆ ಇರುವ ಗುಡ್ಡಪ್ರದೇಶ. ಇದು ಚಂದನಮಟ್ಟಿ ಗ್ರಾಮದಿಂದ ದಕ್ಷಿಣಕ್ಕೆ ೧ ಕಿ.ಮೀ. ಅಂತರದಲ್ಲಿದೆ. ಮಟ್ಟಿ ಸುತ್ತಲೂ ಹೊಲಗಳಿವೆ. ಧಾರವಾಡ ಜಿಲ್ಲೆಯ ದೇವಾಲಯಗಳ ಸರ್ವೇಕ್ಷಣೆ ಮತ್ತು ದಾಖಲಾತಿ ಸಂದರ್ಭದಲ್ಲಿ ಬೆನಕನಮಟ್ಟಿಯ ನೆತ್ತಿಯಲ್ಲಿರುವ ಪರ್ವತ ಮಲ್ಲಯ್ಯನ ಗುಡಿಗೆ ಹೋದಾಗ ಆಶ್ಚರ್ಯವೇ ಕಾದಿತ್ತು. ಈಗ್ಗೆ ಕೆಲವು ದಶಕಗಳ ಹಿಂದೆ ನಿರ್ಮಿಸಿದ ಈ ಕೊಠಡಿಯಲ್ಲಿ ಸಣ್ಣ ಲಿಂಗವನ್ನು ಪ್ರತಿಷ್ಠಾಪಿಸಿದ್ದಾರೆ. ಲಿಂಗದ ಮುಂದಿಟ್ಟಿರುವ ನಯಮಾಡಿದ ಆರು ಶಿಲಾಕೊಡಲಿಗಳು ಮತ್ತು ಕವಣೆಕಲ್ಲು ನವಶಿಲಾಯುಗ ಸಂಸ್ಕೃತಿ ಕಾಲಕ್ಕೆ ಸೇರಿದ ಆಯುದೋಪಕರಣಗಳಾಗಿದ್ದವು. ಇವುಗಳನ್ನು ಕಪ್ಪು ಟ್ರ್ಯಾಪ್ ಮತ್ತು ಬಸಾಲ್ಟ್ ಶಿಲೆಯಲ್ಲಿ ಮಾಡಲ್ಪಟ್ಟಿದೆ. ಇವು ಮಟ್ಟಿಯ ತಪ್ಪಲಿನ ಹೊಲಗಳಲ್ಲಿ ಉಳುಮೆಯ ಸಂದರ್ಭದಲ್ಲಿ ರೈತರಿಗೆ ದೊರೆತಿವೆ. ಇವುಗಳ ನಯಗಾರಿಕೆ ಮತ್ತು ಆಕಾರಕ್ಕೆ ಮನಸೋತ ರೈತರು ಲಿಂಗದ ಮುಂದಿಟ್ಟು ಪೂಜಿಸುತ್ತಿದ್ದಾರೆ. ಇದಲ್ಲದೆ ಸೂಕ್ಷ್ಮ ರಚನೆಯ ಶಿಲಾಕುಡಿಕೆಯೊಂದು ದೊರೆತಿದ್ದು, ಅದರ ಮುಖಭಾಗದಲ್ಲಿ ನಿಂತಿರುವ ಮೂವರು ಸ್ತ್ರೀಯರ ಸೂಕ್ಷ್ಮ ರಚನೆಗಳನ್ನು ಬಿಡಿಸಲಾಗಿದೆ. ಇದು ಸಹ ತಪ್ಪಲಿನ ಹೊಲದಲ್ಲಿ ದೊರೆತಿದೆ. ಇದನ್ನು ಖಾತರಿಪಡಿಸಿಕೊಳ್ಳಲು ಮರುದಿನ ಗುಡ್ಡದ ಸುತ್ತ ಅನ್ವೇಷಣೆ ನಡೆಸಲಾಯಿತು. ಆದರೆ ಫಲವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಕವಣೆಕಲ್ಲುಗಳು ಹಾಗೂ ಭಗ್ನಗೊಂಡ ಶಿಲಾಕೊಡಲಿಗಳು ದೊರೆತವು. ಈ ಶಿಲಾಯುದೋಪಕರಣಗಳನ್ನು ಹೆಬ್ಬಳ್ಳಿ ಮುದುಕಪ್ಪ ಶಾಲಿ ಮತ್ತು ಗಂಗಪ್ಪ ದೇಸಾಯಿ ಅವರ ಹೊಲಗಳಿಂದ ಸಂಗ್ರಹಿಸಲಾಗಿದೆ. ಈ ಹೊಲಗಳು ಮಟ್ಟಿಯ ಸುತ್ತಲೂ ಇದ್ದು, ಇಳಿಜಾರಾಗಿವೆ. ಟ್ರಾಕ್ಟರ್‌ನಿಂದ ಉಳುಮೆ ಮಾಡುವಾಗ ಆಯುಧೋಪಕರಣಗಳು ಮೇಲೆ ಬರುತ್ತವೆಂದು ಅದಕ್ಕೆ ಸಿಲುಕಿದ ಆಯುಧಗಳು ಒಡೆದಿವೆ ಎಂದು ರೈತ ಗಂಗಪ್ಪ ದೇಸಾಯಿಯವರು ತಿಳಿಸುತ್ತಾರೆ. ಇವರು ಲಿಂಗದ ಮುಂದಿಟ್ಟಿರುವ ಆಯುಧಗಳನ್ನು ಸಂಗ್ರಹಿಸಿದ್ದಾರೆ. ಬೆನಕನಮಟ್ಟಿಯು ಜಾಲಿಮರಗಳಿಂದ ಕೂಡಿದೆ. ಮಟ್ಟಿಯ ಮೇಲೆ ನಿಂತು ನೋಡಿದರೆ ಸುತ್ತಲೂ ವಿಶಾಲವಾದ ಬಯಲು ಕಾಣುವುದು. ನವಶಿಲಾಯುಗ ಕಾಲದ ಮಾನವನಿಗೆ ರಕ್ಷಣೆಯ ದೃಷ್ಟಿಯಿಂದ ಮಹತ್ವದ ಸ್ಥಳವಿದು. ಬಳ್ಳಾರಿ, ರಾಯಚೂರು ಪ್ರದೇಶಗಳಂತೆ ಇಲ್ಲಿ ಗ್ರ್ಯಾನೈಟ್ ಬೆಟ್ಟಗುಡ್ಡಗಳಿಲ್ಲ. ಈ ಪ್ರದೇಶದಲ್ಲಿ ಇಂತಹ ಎತ್ತರವಾದ ಮಟ್ಟಿ ಅಥವಾ ಗುಡ್ಡಗಳೇ ನವಶಿಲಾಯುಗ ಕಾಲದ ಜನರಿಗೆ ಆಸರೆಯಾಗಿರುವುದು ಗಮನಾರ್ಹ. ಬೆನಕನಮಟ್ಟಿಯಲ್ಲಿ, ಗುಡ್ಡದ ನೆತ್ತಿಯ ಇಳಿಜಾರಿನ ಪೂರ್ವಭಾಗದಲ್ಲಿ ತಗ್ಗಾದ ಸ್ಥಳವಿದೆ. ಈ ತಗ್ಗುಸ್ಥಳವು ಹೊರಗಿನಿಂದ ಬರುವವರಿಗೆ ಕಾಣಿಸುವುದಿಲ್ಲ. ಗುಡ್ಡವನ್ನು ಏರಿದ ನಂತರ ಗೋಚರಿಸುತ್ತದೆ. ಹಾಗಾಗಿ ಇದು ಪ್ರಾಕೃತಿಕವಾಗಿ ರಕ್ಷಣಾ ತಾಣವಾಗಿದ್ದು, ಕಲ್ಲಾಸರೆಯಿಂದ ಕೂಡಿದೆ. ಸ್ಥಳೀಯರು ಈ ಕಲ್ಲಾಸರೆಯನ್ನು ಗವಿ ಎನ್ನುತ್ತಾರೆ. ಅಂದರೆ ಇನ್ನೂ ಒಳಗೆ ಸುರಂಗದಂತಿದ್ದ ಗವಿಯ ದ್ವಾರವನ್ನು ಸ್ಥಳೀಯ ದನಗಾಹಿಗಳು ಕಲ್ಲು ತುಂಬಿ ಮುಚ್ಚಿದ್ದಾರೆಂದು ಅಕ್ಕಪಕ್ಕದ ಹೊಲದ ರೈತರು ತಿಳಿಸುತ್ತಾರೆ. ಸಧ್ಯ ಹೊರಕಾಣುವ ಕಲ್ಲಾಸರೆಯಲ್ಲಿ ನಾಲ್ಕೈದು ಜನರು ಮಳೆ, ಗಾಳಿ ಮತ್ತು ಬಿಸಿಲುಗಳಿಂದ ರಕ್ಷಣೆ ಪಡೆಯಬಹುದಾಗಿದೆ. ಆದರೆ ಇಲ್ಲಿ ಯಾವುದೇ ಬಗೆಯ ಮಡಿಕೆಚೂರುಗಳು ಕಂಡುಬರುವುದಿಲ್ಲ. ಈ ಕುರಿತು ಹೆಚ್ಚಿನ ಶೋಧನ ನಡೆಯಬೇಕಾಗಿದೆ. ಮೇಲೆ ತಿಳಿಸಿದಂತೆ ಸುರಂಗದ ದ್ವಾರಕ್ಕೆ ಮುಚ್ಚಿರುವ ಕಲ್ಲುಗಳನ್ನು ತೆಗೆದಲ್ಲಿ ಇನ್ನು ಹೆಚ್ಚಿನ ಮಾಹಿತಿಗಳು ದೊರೆಯುವ ಸಾಧ್ಯತೆಯುಂಟು. ಗುಡ್ಡದಿಂದ ೨ ಪರ್ಲಾಂಗ್‌ಗಳ ಅಂತರದಲ್ಲಿ ಹಳ್ಳಗಳು ಹರಿಯುತ್ತವೆ. ಗುಡ್ಡದ ಈಶಾನ್ಯಕ್ಕೆ ಒಂದು ಪರ್ಲಾಂಗ್ ದೂರದಲ್ಲಿ ಸಣ್ಣ ಕೆರೆಯೊಂದಿದೆ. ಇದರ ಪ್ರಾಚೀನತೆಯನ್ನು ತಿಳಿಯುವುದು ಅವಶ್ಯವಿದೆ. ದೊರೆತಿರುವ

* ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬

ನಯಮಾಡಿದ ಶಿಲಾಕೊಡಲಿಗಳು, ಕವಣೆಕಲ್ಲುಗಳು, ಕಲ್ಲಾಸರೆ, ನೀರಿನ ಮೂಲಗಳು ನವಶಿಲಾಯುಗ ಕಾಲದ ಮಾನವನ ವಸತಿ ನೆಲೆಯಾಗಿತ್ತೆಂದು ಸ್ಪಷ್ಟವಾಗುತ್ತದೆ.

ಗುಡಿಯಲ್ಲಿ ಲಿಂಗದ ಮುಂದಿರುವ ಶಿಲಾಕೊಡಲಿಗಳು ಮೂರರಿಂದ ಏಳು ಅಂಗುಲ ಉದ್ದವನ್ನು ಹೊಂದಿವೆ. ಮೂರು ಅಂಗುಲದ್ದು ಕಪ್ಪು ಟ್ರ್ಯಾಪ್‌ಕಲ್ಲಿನದು ಹಾಗೂ ಹೆಚ್ಚು ಹೊಳಪುಳ್ಳದ್ದು. ಉಳಿದ ಕೊಡಲಿಗಳು ಬಸಾಲ್ಟ್ ಶಿಲೆಯವು. ಕೊಡಲಿಗಳು ರಚನೆಯಲ್ಲಿ ಪ್ರಮಾಣಬದ್ಧವಾಗಿದ್ದು, ಉನ್ನತ ತಂತ್ರಜ್ಞಾನವನ್ನು ಪ್ರಕಟಮಾಡುತ್ತವೆ. ಎರಡು ಬದಿಗಳಲ್ಲಿ ಏಕರೂಪದ ನಯಗಾರಿಕೆಯನ್ನು ಕಾಣಬಹುದು. ಈ ಆಯುದೋಪಕರಣಗಳು ರಾಯಚೂರು, ಬಳ್ಳಾರಿ ಪ್ರದೇಶದಲ್ಲಿ ದೊರೆಯುವ ಆಯುದೋಪಕರಣಗಳಿಗಿಂತ ಹೆಚ್ಚು ಹೊಳಪಿನವು ಹಾಗೂ ಉತ್ಕೃಷ್ಟವೂ ಆಗಿವೆ. ನವಶಿಲಾಯುಗ ಸಂಸ್ಕೃತಿಯ ಹೆಚ್ಚಿನ ನೆಲೆಗಳು ಬಳ್ಳಾರಿ, ರಾಯಚೂರು ಪ್ರದೇಶದಲ್ಲಿವೆ. ಕೃಷ್ಣ ಮತ್ತು ತುಂಗಭದ್ರಾ ನದಿಗಳ ಪರಿಸರದಲ್ಲಿ ಅನೇಕ ನೆಲೆಗಳನ್ನು ಗುರುತಿಸಿ ಉತ್ಖನನ ಮಾಡಲಾಗಿದೆ. ಇದೀಗ ಧಾರವಾಡ ತಾಲೂಕಿನ ಬೆನಕನಮಟ್ಟಿಯಲ್ಲಿ ನವಶಿಲಾಯುಗ ಕಾಲದ ಆಯುಧೋಪಕರಣಗಳು ದೊರೆತ ಪರಿಣಾಮವಾಗಿ ಆ ಕ್ಷೇತ್ರದ ಅಧ್ಯಯವನ್ನು ವಿಸ್ತರಿಸಿದಂತಾಗಿದೆ. ಈ ಭಾಗದಲ್ಲಿ ಈಗಲೂ ಜಿಂಕೆ, ಕರಡಿ, ಚಿರತೆ, ನರಿ ಮತ್ತಿತರ ಕಾಡು ಪ್ರಾಣಿಗಳನ್ನು ಕಾಣಬಹುದು. ಒಂದು ಕಾಲಕ್ಕೆ ಈ ಪ್ರದೇಶ ಅಪಾರವಾದ ಪ್ರಾಣಿಸಂಪತ್ತನ್ನು ಹೊಂದಿತ್ತೆಂದು ಗ್ರಹಿಸಬಹುದಾಗಿದೆ.

ಬೆನಕನಮಟ್ಟಿಯ ತಪ್ಪಲಿನಲ್ಲಿ ಆದಿ ಇತಿಹಾಸ ಕಾಲದ ಮಡಿಕೆಚೂರುಗಳು ದೊರೆಯುತ್ತವೆ. ಇವು ಚಿತ್ರಿತ ಕೆಂಪುವರ್ಣದವು. ಅಂದರೆ ಶಾತವಾಹನರ ಕಾಲಕ್ಕೆ ಸೇರುತ್ತವೆ. ಈ ಮೊದಲೇ ತಿಳಿಸಿದ ಲಿಂಗದ ಮುಂದಿರುವ ಸೂಕ್ಷ್ಮ ರಚನೆಯ ಕುಡಿಕೆಯ ಮೇಲೆ ಮೂವರು ಸ್ತ್ರೀಯರ ಸೂಕ್ಷ್ಮ ಶಿಲ್ಪಗಳಿದ್ದು, ಇದು ಸಹ ಆದಿ ಇತಿಹಾಸ ಕಾಲದ ರಚನೆ ಎನ್ನಬಹುದು. ವಾಸ್ತವವಾಗಿ ಇಲ್ಲಿ ಹಳೆ ಊರಿದ್ದು, ಸಾಂಕ್ರಾಮಿಕ ರೋಗಗಳಿಂದಾಗಿ ಹಾಳು ಬಿದ್ದಿತೆಂದು, ಅಲ್ಲಿನ ಜನರು ಸಮೀಪದ ಚಂದನಮಟ್ಟಿ ಗ್ರಾಮದಲ್ಲಿ ನೆಲೆಸಿದರೆಂದು ಸ್ಥಳೀಯರು ತಿಳಿಸುತ್ತಾರೆ. ಹೀಗೆ ಬೆನಕನಮಟ್ಟಿ ನೆಲೆಯಲ್ಲಿ ನವಶಿಲಾಯುಗ ಕಾಲದಿಂದಲೂ ಮಾನವನ ಅಸ್ತಿತ್ವವನ್ನು ಗುರುತಿಸಬಹುದು. ಅಲ್ಲಿ ದೊರೆತಿರುವ ನವಶಿಲಾಯುಗ ಮತ್ತು ಆದಿ ಇತಿಹಾಸ ಕಾಲದ ವಸ್ತು ಅವಶೇಷಗಳು ಧಾರವಾಡ ಪ್ರದೇಶದ ಪ್ರಾಗಿತಿಹಾಸದ ಅಧ್ಯಯನ ವ್ಯಾಪ್ತಿಯನ್ನು ವಿಸ್ತರಿಸಿವೆ ಹಾಗೂ ಮುಂದಿನ ಶೋಧನೆಗಳಿಗೆ ಅನುವು ಮಾಡಿಕೊಟ್ಟಿವೆ.

[ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಹಕರಿಸಿದ ಚಂದನಮಟ್ಟಿಯ ಗ್ರಾಮಸ್ಥರಾದ ಸೋಮಲಿಂಗಪ್ಪ ತಲವಾಯಿ, ಗಂಗಪ್ಪ ದೇಸಾಯಿ, ಯಲ್ಲಪ್ಪ ಎಡಳ್ಳಿ ಮತ್ತು ಚಂದ್ರು ಭಂಡಾರಗಟ್ಟಿ ಇವರುಗಳನ್ನು ಪ್ರೀತಿಯಿಂದ ನೆನೆಯುತ್ತೇನೆ.]

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಧಾರವಾಡ ಜಿಲ್ಲಾ ಗ್ಯಾಸೆಟಿಯರ್: ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೨. ಶಿವಕಾರಕ ಕೆ.ಬಿ: ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಅ. ಸುಂದರ: ಕರ್ನಾಟಕ ಚರಿತ್ರೆ ಸಂಪುಟ ೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಸಂಕಾಲಿಯಾ ಎಚ್.ಡಿ: ಪ್ರಿ ಅಂಡ್ ಪ್ರೋಟೊ ಹಿಸ್ಟರಿ ಆಫ್ ಇಂಡಿಯಾ ಅಂಡ್ ಪಾಕಿಸ್ತಾನ್.

೬

ತೀರ್ಥಹಳ್ಳಿ ತಾಲ್ಲೂಕು ಮರುವಸೆಯ ಕದಂಬರ ಕಾಲದ ಅಪ್ರಕಟಿತ ಶಾಸನ

ಪ್ರೊ ಜಿ.ಕೆ. ದೇವರಾಜ ಸ್ವಾಮಿ*

ತೀರ್ಥಹಳ್ಳಿ ತಾಲ್ಲೂಕಿನ ಮರುವಸೆಯು ಪೌರಾಣಿಕ ಕಥಾನಕಗಳನ್ನೊಗೊಂಡು ತನ್ನ ಪ್ರಾಚೀನತೆಯನ್ನು ತಿಳಿಸುತ್ತದೆ. ಮರುವಸೆ (ಮೃಗವಧೆ)ಯಲ್ಲಿ ಪ್ರಾಚೀನ ಕಾಲದ ಆದಿ ಮಾನನು ಕ್ರಿ.ಪೂ. ಕಾಲದಲ್ಲಿ ಬರೆದ ಬಂಡೆಯು ರೇಖಾಚಿತ್ರಗಳು ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ನೂತನ ಶಿಲಾಯುಗದ ಆಯುಧಗಳು ದೊರೆತಿದೆ.[೧]

ಮರುವಸೆಯಲ್ಲಿ ಕೆಳದಿ ಅರಸರ ಕಾಲದಲ್ಲಿ ಜೀರ್ಣೋದ್ಧಾರವಾದ ಮಲ್ಲಿಕಾರ್ಜುನ ದೇವಾಲಯವಿದೆ. ದೇವಾಲಯದ ಆವರಣದಲ್ಲಿ ಕ್ರಿ.ಶ. ೧೧ನೇ ಶತಮಾನದ ಕಲ್ಯಾಣ ಚಾಲುಕ್ಯರ ಕಾಲದ ತೃಟಿತ ಶಾಸನವಿದೆ. ಕ್ರಿ.ಶ. ೧೧೬೨ರ ಕೋಡಿಮಠದ ಶಾಸನದಲ್ಲಿ ಮರುವಸೆಯನ್ನ ಕೇದಾರೇಶ್ವರ ದೇವಾಲಯದ ಕೈಂಕರ್ಯಗಳಿಗಾಗಿ ದಾನ ನೀಡಿದ್ದನ್ನು ದಾಖಲಿಸಿದೆ.[೨]

ಮಲ್ಲಿಕಾರ್ಜುನ ದೇವಾಲಯವು 'ಬ್ರಾಹ್ಮೀ' ಎಂಬ ಚಿಕ್ಕನದಿಯ ದಂಡೆಯ ಮೇಲಿದೆ. ಇಲ್ಲಿಂದ ಎರಡು ಕಿ.ಮೀ. ದೂರದಲ್ಲಿ ಇದೇ ನದಿಗೆ ಹೊಂದಿಕೊಂಡಿರುವ ಬಂಡೆಯಲ್ಲಿ ಆದಿಮಾನವನು ಬರೆದ ಚಿತ್ರಗಳಿವೆ.

ಪ್ರಸ್ತುತ ಶಾಸನವು ಪ್ರಸ್ತುತ ದೇವಾಲಯದ ಹಿಂಭಾಗದ ಚೌಕಿಯ ಗೋಡೆಯಲ್ಲಿ ಸ್ಥಾಪಿತವಾಗಿದೆ. ಕಣಶಿಲೆಯಲ್ಲಿರುವ ಶಾಸನವು ಸುಮಾರು ಎರಡು ಅಡಿ ಉದ್ದ ಹಾಗೂ ಒಂದೂವರೆ ಅಡಿ ಅಗಲವಾಗಿದೆ. ಶಾಸನವು ಯಾವುದೇ ಚಿತ್ರಗಳಿಲ್ಲದೆ ಎರಡು ಸಾಲುಗಳಲ್ಲಿ ಕ್ರಮವಾಗಿ ನಾಲ್ಕು ಅಕ್ಷರದಂತೆ ಒಟ್ಟು ಎಂಟು ಅಕ್ಷರಗಳನ್ನು ಹೊಂದಿದೆ. ಅಕ್ಷರಗಳು ಸರಾಸರಿ ಎರಡೂವರೆ ಇಂಚು ಉದ್ದ ಹಾಗೂ ಎರಡು ಇಂಚು ದಪ್ಪವಾಗಿದ್ದು ಅಲಂಕಾರಯುತವಾಗಿದೆ. ಶಾಸನ ಪಾಠ: ೧. ಗು ವ ಕ ದು, ೨. ಯ ಮ ವಾ ದ ಅಕ್ಷರಗಳ ತಲೆಕಟ್ಟುಗಳನ್ನು ಚೌಕ ಮತ್ತು ಆಯುತಾಕಾರದಲ್ಲಿ ರಚಿಸಿ ಆಳವಾಗಿ ಕೊರೆಯಲಾಗಿದೆ. ಮೊದಲ ಸಾಲಿನ ಅಕ್ಷರಗಳಿಗೆ ಕೊಂಬು ನೀಡುವಾಗ ತಂಬಾ ಕೆಳಮುಖವಾಗಿ ಇಳಿಸಿ ಎಡದಿಂದ ಮೇಲ್ಭಾಗಕ್ಕೆ ಚಲಿಸಿ ಮೂಲ ಅಕ್ಷರಕ್ಕೆ ಸೇರಿಸಿ ಕೊಂಬು ನೀಡಲಾಗಿದೆ. 'ವ' ಅಕ್ಷರವನ್ನು ಕೆಳಮುಖ ವಾಗಿ ಇಳಿಸಿ ತುಂಬಾ ಉದ್ದರಚನೆಯನ್ನು ಹೊಂದಿದ್ದು ತಲೆಕಟ್ಟು ಮತ್ತು ಮೂಲ ಅಕ್ಷರದ ಅಂತರವನ್ನು ಹೆಚ್ಚಿಸಿದೆ.

'ಕ'ಕಾರವು 'ವ'ಕಾರದಂತೆ ಕಂಡರೂ 'ಕ' ಅಕ್ಷರದ ಅಡ್ಡಗೆರೆಯು ಬಲಕ್ಕೆ ಮುಂದುವರೆದು ಬಾಗಿದೆ. 'ಕ' ಅಕ್ಷರದ ಎಡಭಾಗ ಮತ್ತು ಬಲಭಾಗದಲ್ಲಿ ಕಲ್ಲುಚಕ್ಕೆ ಎದ್ದಿದೆ.

ಎರಡನೆಯ ಸಾಲಿನಲ್ಲಿ ಸಮಚೌಕಾಕೃತಿಯಲ್ಲಿ ಅಕ್ಷರಗಳಿದ್ದು, ತಲೆಕಟ್ಟನ್ನು ಚೌಕವಾಗಿ ರಚಿಸಲಾಗಿದೆ. 'ವ' ಅಕ್ಷರದ ತಲೆಕಟ್ಟು ಬಲಕ್ಕೆ ವೃದ್ಧಿಸಿ ತ್ರಿಕೋನಾಕೃತಿ ಹೊಂದಿದ್ದು 'ವಾ' ದೀರ್ಘಾಕ್ಷರವನ್ನು ಸೂಚಿಸುವಂತೆ ರಚಿಸಿದೆ. ಬಲಭಾಗದ ರೇಖೆಗೆ ಸಮಾನಾಂತರ ರೇಖೆಯನ್ನು ಎಳೆದಿದೆ. ಇದು ಶಿಲ್ಪಿಯ ಅಚಾತುರ್ಯವೋ ಅಥವಾ 'ವಾ' ದೀರ್ಘಸೂಚನೆಯೇ ತಿಳಿಯದು.

ಈ ರೀತಿಯ ಲಿಪಿ ಸ್ವರೂಪದ ಕದಂಬ ಶಾಸನಗಳು ಕರ್ನಾಟಕದಲ್ಲಿ ದೊರೆತಿಲ್ಲದಿದ್ದರೂ ಸಾಮಾನ್ಯ ಹೋಲಿಕೆ ಇರುವ ಒಂದು ಶಾಸನ ಚಿತ್ರದುರ್ಗದ ಚಂದ್ರವಳ್ಳಿ ಸಮೀಪ ಹುಲಿಗೊಂದಿಯ ಬಂಡೆಯ ಮೇಲಿದೆ.[೩] ಇದರಲ್ಲಿ ಮೂರು ಅಕ್ಷರಗಳಿದ್ದು 'ಮಯಮ' ಎಂದಿದೆ. ಈ ಶಾಸನದ 'ಮ' ಮತ್ತು 'ಯ' ಅಕ್ಷರಗಳು ಮರುವಸೆಯ ಶಾಸನದ 'ಮ' ಮತ್ತು 'ಯ' ಅಕ್ಷರಗಳನ್ನು ಹೋಲುತ್ತವೆ. ಆದರೆ ಮರುವಸೆಯ ಶಾಸನದ ಅಕ್ಷರಗಳ ತಲೆಕಟ್ಟು ಸ್ಪಷ್ಟ ಚೌಕಾಕಾರ ಹೊಂದಿದ್ದು ಸ್ಪಷ್ಟ ಕದಂಬ ಲಿಪಿಯನ್ನು ಹೊಂದಿದೆ. ಚಿತ್ರದುರ್ಗದ ಶಾಸನ ಲಿಪಿಯು ಆಂತರಿಕ ಆಧಾರಗಳಿಂದ ಶಾತವಾಹನರ ಕಾಲದ್ದೆಂದು ಪ್ರೊ. ಲಕ್ಷ್ಮಣ ತೆಲಗಾವಿ ಅವರು ಕೃತಿಯಲ್ಲಿ ತಿಳಿಸಿದ್ದಾರೆ.[೪]

ಮರುವಸೆಯ ಶಾಸನವು ಕದಂಬ ಕಾಲದ್ದೆಂದು ಸ್ಪಷ್ಟತೆಗೆ ಕಾರಣ ಲಿಪಿ ಸ್ವರೂಪ ಹಾಗೂ ಮಲ್ಲಿಕಾರ್ಜುನ ದೇವಾಲಯದ ಬಲಭಾಗದ ಕಾಡಿನಲ್ಲಿ ಗುರುತಿಸಲಾಗುತ್ತಿರುವ

* # ೫೬, 'ತ್ರಯೀ' ಮೈಸೂರು ಲ್ಯಾಂಪ್ಸ್ ಲೇಔಟ್, ಚನ್ನನಾಯಕನ ಪಾಳ್ಯ, ೨ನೇ ಹಂತ, ನಾಗಸಂದ್ರ ಅಂಚೆ, ಬೆಂಗಳೂರು-೭೩.



ಶಾಸನದ ಪಡಿಯಚ್ಚು

ಅರಮನೆ ಕೋಟೆ ಎಂದು ಗುರುತಿಸುತ್ತಿರುವ ಸ್ಥಳದ ಪ್ರಾಚ್ಯಾವಶೇಷಗಳು. ಇಲ್ಲಿ ಎತ್ತರವಾದ ದಿಣ್ಣೆ ಹಾಗೂ ಗೋಡೆ ರೀತಿಯಲ್ಲಿರುವ ರಚನೆ, ತಳಪಾಯಗಳು ಇತ್ಯಾದಿ. ಮುಖ್ಯವಾಗಿ ಈ ಕಟ್ಟಡಗಳಿಗೆ ಬಳಸಿದ ಇಟ್ಟಿಗೆಯು ಈವರೆಗೆ ಕದಂಬರ ಕಾಲದ್ದೆಂದು ಹೇಳುವ ಇಟ್ಟಿಗೆಗೆ ಸಮನಾದ ಉದ್ದ ಹಾಗೂ ದಪ್ಪಗಳನ್ನು ಹೊಂದಿದೆ. ಇಟ್ಟಿಗೆಯ ಬಣ್ಣವೂ ಕೂಡ ಕದಂಬ ಉತ್ಖನನಗಳಲ್ಲಿ ದೊರೆತ ಇಟ್ಟಿಗೆ ಬಣ್ಣಕ್ಕೆ ಸರಿ ಹೊಂದುತ್ತದೆ. ಈಗಲೂ ಇಟ್ಟಿಗೆಗಳನ್ನು ಕಾಣಬಹುದಾಗಿದೆ. ಸ್ಥಳೀಯ ವಿದ್ವಾಂಸರೂ ಸಂಶೋಧಕರೂ ಆದ ಶ್ರೀಧರ ಅವರು ತಮ್ಮ ಮನೆಯಲ್ಲಿ ಸಂಗ್ರಹಿಸಿದ್ದಾರೆ.

ಮರುವಸೆ ಪ್ರದೇಶವು ಬನವಾಸಿ ಮಹಾಮಂಡಲಕ್ಕೆ ಸೇರಿದ ಸ್ಥಳವೂ, ನಂತರ ನಾಗರ ಕಂಡ ೭೦ರ ಭಾಗವಾಗಿತ್ತು. ಈ ಹಿನ್ನೆಲೆಯಲ್ಲಿ ಈ ಶಾಸನ, ಪ್ರಾಚ್ಯಾವಶೇಷ ಹಾಗೂ ಇಂದಿಗೂ 'ಮರುವಸೆ' 'ಹೊಸಬೀಡು' 'ಅರಮನೆಕೇರಿ' ಎಂಬ ಸ್ಥಳನಾಮಗಳನ್ನು ಎರಡು ಕಿ.ಮೀ. ಅಂತರದಲ್ಲಿ ಹೊಂದಿದೆ. ಇದನ್ನು ಗಮನಿಸಿದಾಗ ಸ್ಥಳೀಯ ರಾಜವಂಶ(ಕದಂಬಶಾಖೆ?)ವು ಕಾರಣಾಂತರದಿಮದ ಈ ಸ್ಥಳಗಳಲ್ಲಿ ಸ್ಥಾನಪಲ್ಲಟವಾಗಿರುವುದನ್ನು ಸೂಚಿಸುತ್ತದೆ.

ಪ್ರಸ್ತುತ ಶಾಸನವು ಅಲಂಕಾರಿಕ ಲಿಪಿ ಸ್ವರೂಪ ರಚನೆ ಇದ್ದು ಕದಂಬ ಕಾಲದ ಲಿಪಿ ಅಧ್ಯಯನ ದೃಷ್ಟಿಯಿಂದ ಮಹತ್ವದ್ದಾಗಿದೆ. ಶಾಸನೋಕ್ತ 'ಗುವಕದು' ಮತ್ತು 'ಯಮವಾದ' ಎಂಬ ಪದಗಳ ಅರ್ಥ ಸ್ಪಷ್ಟವಿಲ್ಲ. ಕದಂಬ ಕೃಷ್ಣವರ್ಮನ ಅರೇತಲಗದ್ದೆ ಶಾಸನದಲ್ಲಿ ೧೯೯ ಬ್ರಾಹ್ಮಣರ ಗೋತ್ರ ಚರಣ ಹೆಸರಿಸಿದೆ ಈರೀತಿಯ ಹೋಲಿಸಬಹುದಾದ ಪದಗಳು ಮರುವಸೆ ಶಾನಸದಲ್ಲಿ ಬಂದಿವೆ.[೫] ಉದಾಹರಣೆ: ಗೋದುಕನ್ದ, ಗೋದುಭವ, ಗೋದುದಿವಾ ಮುಂತಾದವು. ಆದ್ದರಿಂದ ಈ ಶಾಸನೋಕ್ತ ಪದಗಳು ವ್ಯಕ್ತಿಯ ಹೆಸರಿಗೆ ಸಂಬಂಧಿಸಿದ್ದಾಗಿರಬೇಕು. ಈ ಶಾಸನದ ಕಾಲವನ್ನು ಕ್ರಿ.ಶ. ಸುಮಾರು ೫ನೇ ಶತಮಾನವೆಂದು ಹೇಳಬಹುದು. ಉತ್ಖನನವಾದಲ್ಲಿ ಹೆಚ್ಚಿನ ಐತಿಹಾಸಿಕ ಅಂಶವು ದೊರೆಯುವುದು. ಒಟ್ಟಾರೆ ಮರುವಸೆ (ಮೃಗವಧೆ)ಯು ಪ್ರಾಗೈತಿಹಾಸಿಕ ಕಾಲದಿಂದ ಈ ವರೆಗೂ ಜನಸಮುದಾಯದಿಂದ ಕೂಡಿ ತನ್ನ ಮಹತ್ವವನ್ನು ಹೆಚ್ಚಿಸಿಕೊಂಡು ಪ್ರಸ್ತುತ ಪ್ರಸಿದ್ಧ ಕ್ಷೇತ್ರವಾಗಿದೆ.

[ಈ ಸಂಶೋಧನೆಯಲ್ಲಿ ನನಗೆ ಹೆಚ್ಚಿನ ಮಾಹಿತಿ ಹಾಗೂ ಸಹಾಯ ನೀಡುತ್ತಿರುವ ಮೃಗವಧೆಯ ಗೆಳೆಯರಾದ ಶ್ರೀಧರ್ ಹಾಗೂ ಸೂರ್ಯನಾರಾಯಣ ಸಹೋದರರಿಗೆ ನನ್ನ ಕೃತಜ್ಞತೆಗಳು.]

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಇತಿಹಾಸ ದರ್ಶನ ಸಂಪುಟ, ೧೬, (೨೦೦೧), ಮೃಗವಧೆಯಲ್ಲಿ ಪ್ರಾಗೈತಿಹಾಸಿಕ ಚಿತ್ರಗಳು, ಪುಟ ೧೨–೧೩.

೨. E.C. NI VIII part I, ಶಿಕಾರಿಪುರ ೧೦೨ (Rice) page ೧೯೨–೧೯೩, [ಮರುವಸೆ ಬಗ್ಗೆ ಸ್ಪಷ್ಟವಾಗುತ್ತಿಲ್ಲವೆಂದು ವಿದ್ವಾಂಸರು ಬರೆದಿದ್ದಾರೆ. ತೀರ್ಥಹಳ್ಳಿ ತಾಲ್ಲೂಕಿನ ಮೃಗವಧೆಯೇ ಮರುವಸೆ ಎಂಬುದರಲ್ಲಿ ಸಂಶಯವಿಲ್ಲ. ಲೇ].

೩. ಮೌರ್ಯ ಮತ್ತು ಶಾತವಾಹನ ಯುಗ, ಪ್ರೊ. ಲಕ್ಷ್ಮಣ ತೆಲಗಾವಿ, ಪ್ರಸಾರಂಗ, ಕ.ವಿ.ವಿ., ಹಂಪಿ, ೨೦೦೪, ಪುಟ ೧೫೬–೧೫೭.

೪. ಅದೇ.

೫. ಕದಂಬರ ಅರತಲಗದ್ದೆಯ ಅಪೂರ್ವ ತಾಮ್ರ ಶಾಸನ:ಳ ಭಂಡಾರ, ಡಾ. ಎಸ್.ಜಿ. ಸಾಮಕ್, ಡಾ. ಜಗದೀಶ, ಡಾ. ಎಂ.ವಿ. ರಮೇಶ್ ಜೋಯಿಸ್, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, ೨೦೦೮, ಪುಟ ೧೦–೧೧.

೧೦

ಹರಪನಹಳ್ಳಿ ತಾಲ್ಲೂಕು ಹಳ್ಳಿಕೆರೆ ರಾಷ್ಟ್ರಕೂಟರ ಅಸಗನ ಶಾಸನ

ರಾಘವೇಂದ್ರಾಚಾರಿ ಕೆ.ಎಂ.*

ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲ್ಲೂಕು, ಹಳ್ಳಿಕೆರೆ ಗ್ರಾಮವು ಜಿಲ್ಲಾ ಕೇಂದ್ರದಿಂದ ೨೦ ಕಿ.ಮೀ. ಅಂತರದಲ್ಲಿದೆ. ಈ ಗ್ರಾಮದ ಕೆರೆಯಲ್ಲಿರುವ ಕಲ್ಲೇಶ್ವರ ದೇವಾಲಯವು ಬಹಳ ಪ್ರಾಚೀನತೆಯನ್ನು ಹೊಂದಿದೆ. ಈ ದೇವಾಲಯ ದಕ್ಷಿಣ ಭಾಗದ ಗೋಡೆಗೆ ನಿಲ್ಲಿಸಿರುವ ಎರಡು ಶಾಸನಗಳಲ್ಲಿ ಒಂದು ಶಾಸನವು ರಾಷ್ಟ್ರಕೂಟರ ಅಸಗರಸನು ಕ್ರಿ.ಶ. ೧೦೭೩ರಲ್ಲಿ ಸ್ವಯಂಭೂ ಮಲ್ಲಿಕಾರ್ಜುನದೇವರು ಮತ್ತು ಆದಿತ್ಯದೇವರ ದೇವಾಲಯ ಮತ್ತು ಗೋಪುರವನ್ನು ಕಟ್ಟಿಸಿ, ದೇವಾಲಯದ ಪೂಜಾ ಕೈಂಕರ್ಯಗಳಿಗೆ ಭೂದಾನವನ್ನು ಮಾಡುತ್ತಾನೆ ಮಾಡಿದ್ದಂತೆ ತಿಳಿಸುತ್ತದೆ.

ಪ್ರಸ್ತುತ ಶಾಸನವು ರಾಷ್ಟ್ರಕೂಟರ ಅಸಗರಸನ ಪರಾಕ್ರಮವನ್ನು ವರ್ಣಿಸಲು ಮೀಸಲಾಗಿರುವ ಶಾಸನವಾಗಿದೆ. ಈ ಶಾಸನದಲ್ಲಿ ಮೂವತ್ತು ಸಾಲುಗಳಿದ್ದು, ಯಾವುದೇ ದೇವತಾ ಶ್ಲೋಕಗಳಿಲ್ಲದೆ ನೇರವಾಗಿ ಅಸಗರಸನನ್ನು ಅವನ ವೀರ ಪರಾಕ್ರಮವನ್ನು ವರ್ಣಿಸುತ್ತದೆ. ಈ ಶಾಸನದ ಆರಂಭದ ಭಾಗ ಬೇರೊಂದು ಕಲ್ಲಿನಲ್ಲಿದೆ. ಆ ಶಾಸನದ ಶೋಧ ಮಾಡಬೇಕಾಗಿದೆ. ಈ ಶಾಸನವು ಅಸಗರಸನು ಸೂರ್ಯ ವಂಶದಲ್ಲಿ ಉದ್ಭವಿಸಿದ ಕಣ್ವನಿಗಿಂತ ಮಿಗಿಲಾದ ವೀರಲಕ್ಷ್ಮಿಯನ್ನು ಧರಿಸಿದ ಸತ್ಯವೀಂದ್ರ ನೆನೆಸಿ ಕೀರ್ತಿಲಕ್ಷ್ಮಿ ಒಲಿಸಿಕೊಂಡು ವಿಜೃಂಭಿಸಿದನು. ರಟ್ಟರಾಜೇಂದ್ರಭೂಪ ಎಂದು ಎತ್ತೆತ್ತ ನೋಡಿದರು ಅಸಗರಸನ ಕೀರ್ತಿಯೇ ತುಂಬಿರಲು ಧೀರ ವಿಕ್ರಮ ಭೂಪತಿ ರಟ್ಟನಾರಾಯಣನೆಂಬ ಕೀರ್ತಿಗೆ ಪಾತ್ರವಾಗಿದ್ದಾನೆ.

ರಾಷ್ಟ್ರಕೂಟರ ಶಂಕರಗಂಡನ ಪೂರ್ವಜರಲ್ಲಿ ಅಸಗರಸನ ಉಲ್ಲೇಖ ಉಪ್ಪಿನ ಬೆಟಗರಿ ಮತ್ತು ಕೊಲ್ಲಿಪಾಕಿ ಶಾಸನಗಳಲ್ಲಿ ಬರುತ್ತದೆ. ಈ ಮನೆತನದ ತಲೆಮಾರಿನಲ್ಲಿ ಒಬ್ಬ ವ್ಯಕ್ತಿಗೆ ಈ ಹೆಸರನ್ನಿಟ್ಟುದ್ದು, ಈ ವಂಶದ ಪಾರಂಪರಿಕ ಬಿರುದುಗಳೊಂದಿಗೆ ಈತನ ಹೆಸರಿನ ಅಸಗೇಶ್ವರ ದೇವಾಲಯಗಳು ಇವೆ. ಈ ಅರಸನ ವಿಷಯವಾಗಿ ಇನ್ನು ಶೋಧನೆ ನಡೆಯಬೇಕಿದೆ.

ಶಾಸನಪಾಠ

೧ ಆತನಕ್ಷ ಚೋಳ ಮಾಡುತರದಿ . . ನಿದ್ದರಣ್ಯಾನ್ಕ್ಷರಕ್ರ . . . . . ಮ.ಕ್ಷ . . . ನಂ

೨ ಗತರಾ.ದನ್ತಿಯೊಳಿಕಲೆವಿಮೊಗಳನಳದ್ವಿಕ್ರಮಶ್ರೀ . . . ಣ ಪೇಳ

೩ ಯಾನಡುಇವಾ : ಣ್ಡನದಂಲ್ಯಾಕಾನ್ತವಂ ಪಕ್ಷದ್ವಳಿಸಗರಿಪುಳ್ವ . ಕಸ್ದ . ಭೂಪ॥ ಶ್ರೀಣೇತ್ರಾ

೪ ಶ್ರೀಯಂತರ್ಕ್ಕಯ್ಯ ವಕ್ಷ ಸ್ಥಳದೊಳವಿಸಿಕಣ್ವಣೋಲ್ತೊ ಮೇಲ್ವಾಯ್ದು ವೀರಶ್ರೀ

೫ ಯಂಕೈಕೊಣ್ಡ । ದೋರ್ದ್ದಣ್ಡದೊಳಿರಿಸಿ ವಹಾಧಿಸ್ತಾವತನ್ಯೈಸದಿಂ ವಾರ್ಕಶ್ರೀಯಂತಾಳ್ದಯ್ದು

೬ ವಕ್ತ್ರಾಂಬು ಜಗೋಳಿರಿಸಿಪೃಇಷ್ಟಾರ್ತ್ಥಮಂ ಕೊಟ್ಟು ಕೀರ್ತಿಶ್ರೀಯಂ ಸ್ವೇಛ್ಛಾದಿಹಾರಕ್ರಮದಳಿರಿಸುಗಂರ

೭ ಟ್ಟ ಮಾರ್ತ್ತಾಣ್ಡದೇವ ॥ ಸಂಗರದೇ(ಳ್ದ) ಂಬಿದರಕಂತ ದಿದೇಜಯಾಂಗ ನಾಸಮಾಲಿಂಗನೆ ಗೆಯ್ದುವ.

೮ ರಳವಟ್ಟಿರೆ ಮಾಡಿದ ನನ್ನ ಬೀರಚಾಶಾಂ: ನೆಯರ್ಕಳಾ(ನ್ನ) ಲಿಯಲಾರ್ಕದ . . . .ಯ್ದಗಣ್ಡರನೆಯ್ದೆಸೆಹ್ದಾವೆ


೯ ಟಂಗೋಳಿಸಿತ್ತೂಗಣ್ಡಮುಮದರ್ಪಣಗಣ್ಡರ ಹಿವ ಭೂಪತಿ ॥ ಆವಿಭೂಭ್ರಿದ್ದೋತ್ರಿಗೋತ್ರಾಭಳಕುಳದೊಳೀ

೧೦ ಶಂ ಬನ್ದುವರ್ಗ್ಗೊಬ್ಬಿಂನ(ವಾ) ಸರನಾಥಂ ಸತ್ಕವೀಂದ್ರ ದ್ವಿಜಮುನಿಜಂನರದ್ವಪ್ರಮಂವೀರ. . ತಾತಾರಾಳ್ದು ಪಾಂಗಾಸಿತಂದಿ

೧೧ ವರಸರಸಸರಶ್ಚಂದ್ರಮಂ ಕೀರ್ತಿ(೯) ಲಕ್ಷ್ಮೀಧರಹಾಸಂ ಸ್ತೈ ಪು ಸ್ವ ನ್ಮ ಣಿ ಮಯಮುಣಳಂರಟ್ಟರಾಜೇಯ

೧೨ ಭೂಪ॥ ಛಲದಿಂ ನಮ್ಮಂದು ಚೋಳ ದ್ವೀರದ ಪುಟಗಳದ್ವಿತ್ತೆದಣ್ಡಾದುದೆಲ್ಲಂ ತಲುಸೆದ್ಯಾಟಲ್ಕೆನಿನಾಂ

* ಟೈಲ್ಸ್ ಮೇಸ್ತ್ರಿ, ೩ನೇ ಕ್ರಾಸ್, ಭಾರತ್ ಕಾಲೋನಿ, ದಾವಣಗೆರೆ-೩.



೧೩ ತಿ ದಿ ದೇದೆಯೊಳುವ್ಯಾಳಮಾಣ್ಡಾಳೆಕಂಬ ಸ್ತಳ ನಿರ್ಯ್ಯಾದ್ರಕ್ತಮುಕ್ತಾತತಿವಿತತಿಗಳಿಂ . ಸಂಗರಪ್ರಾಂಗ

೧೪ ಣಂ ಪೋವಲಿಗೆಯ್ದಂತಿ ದಾಶ್ಚರ್ಯ್ಯಂಮ(ನೊ) ದವಿಷ್ಟಾರ್ತ್ಥಕೊಂತ್ತೆಕಾಂತೆಯಭೂಪಾ॥ಮದನ(ವಿ)ರೋದಿ

೧೫ ಗಿಲ್ಲದವಿಭೂತಿಮಹಾತ್ವತೆಗೆಲ್ಲದೊಂದು ಸಂಪದವಿನ . . ಸಹಾಪಿ . . . ವಿಜೇಂದ್ರದಂತಿಗಿ.

೧೬ ಲ್ಲದಮದದಾನಮಂಬುಗಿದ್ವಿಗಿಲ್ಲದ ಪಾರಗಂಭೀರ ಮಾಗ್ಗೆವಿಲ್ಲದ . ಗ್ವಿದ್ಯೆಯ(ಬ)ಣ್ನಿಸುವೊಂದೊಪ್ಪದೆ

೧೭ ವಿಕ್ರಮಧೀರಭೂಪತಿ ॥ಎತ್ತೆತ್ತಲಸಗನ ಪೇವ್ದಿತ್ತೆತ್ತಲಾ ಚಕ್ರಿಯೋ . . . . .(ಶಿ)ಮಿ ್ದಮ ್ದನಯಂಬೆ

೧೮ ತ್ತೂಪತಕಲಿಸಿಸಲೆಡಿಗ್ಭಿತ್ತಿವರಂ ಪೇಕ್ಷಿಸುಚ್ಚಿದಳ್ಳಿಸುತಿರ್ಕು ॥ ಹೊಚ್ಚಾ . . . . ಜ.ಳದಿಲೆರೊರ್ವರೆವರನ

೧೯ ಮತ್ತಸೇತೂವಿತ್ತಲ್ನಹಿಮಹತ್ವಕ್ಷಂತಂಮೆಮೆರತಜದ ಪರ್ಬ್ಬನಿಸಿದಂರು(ದಿ)ಸಿರಟ್ಟನಾರಾಯಣನ@।

೨೦ ಆತನರಿಪುನೃಪರಬಲಮೆನೆತೆಣ ತ್ಯಮನವಯ ವದೇವಾಂಗಲ ಸಗಂನೆಕೊಂತಂತಿನಿ (ಣ) ದೇರಳ್ಗನೆಯ್ದವಾಸು

೨೧ ಗಿಯೆನೇರಣಮುಖದೊಳಾನಿಹಶ್ರಮು . ಮುಂಚೊರ್ಕ್ಕ ॥ ಭುವನಕಾದ.ರದಪ್ಪವ ನದಿರ್ಪ್ಪಂನನ್ನಯಗೆಣ

೨೨ ತರ್ಕ್ಕನೋಸ್ನವಬಿಪಾವಾಸದೊ . . . ವುಲ್ಯಾವರಲ್ಪಚದಣ್ಡ . ಗಳ್ವ ಪತ್ತು . . ಮಿವ್ವೆತ್ತುಚೊತ್ತೂವಕುಹಳ್ಜಾದಕ

೨೩ ಪ್ಪಿಸುವಾಂಕೆಗೊಳ್ವಖಿಚರ್ಬ್ಬವಸೆಳೆವುರ್ಚ್ಚ . ಗಪ್ಪೆಶಷತ್ತನ್ಯತಗಣ್ಡರ . . ಭೂಪತಿ ॥ ಪರಚಕ್ರಾದ್ವಂ

೨೪ ಚೋಳಾಸುರಕಟಕಮುರದ್ವಂಸಿಇಪ್ಪೆಮ್ಮಹಾಗಣ್ಡರ . . . . . . ನಿನ್ನೆದಳಕೆ ಪರಲೋರಳ್ಕಯ್ಯ

೨೫ ಮರ್ತ್ತ್ಯವನಿಪ . . . . ಯಿಲ್ಯುಕೊಡ . . . ದ್ವವ.ಸೆ . . . . . . ಳು . . ಸರಪು

೨೬ ದು . . . ದ್ರಾಹನದಿವಿದಿವಿ . . . . ಯಮಾವ್ಯೆ . . . . ಣಿಲ್ಲಳಂಮುಡಿ . . ಣ್ಣಂ . . .

೨೭ ಬಿದಪಣ್ಣು . . ತಳಿತೆಮಿದ್ದಳ ಪವಣ್ಣಪೇತಿಪು . . . . .ರೆದಿರೆಕ . . . ಟ್ಟಿಪಿ . . . . .

೨೮ ಸವಮಂನಸ . . . . ಚಾಳುತೂಂಪ . ಸುತ್ಯ . ಲ್ದ . ಬಿರಸಿ . ರಿ . ತೋಟಿದೆ ಪಲರೊದೆಗಣ್ಡನಂ

೨೯ ಶ್ರೀರಟ್ಟಾನ್ವಯೇಸಂದೇತವಂತಕೋತೆಯ ಭೂಭೂದೇಃತತ್ಪಾದಪ . ಪಚಿಲಿರತ್ನರಾ . . .

೩೦ ಲಿಖ್ಯತೇ । ಶ್ರೀ

೧೧

ದಾವಣಗೆರೆ ತಾಲ್ಲೂಕು ಬೇತೂರಿನ ವಿಜಯಪಾಂಡ್ಯ ದೇವನ ಅಪ್ರಕಟಿತ ಶಾಸನ

ಬುರುಡೇಕಟ್ಟೆ ಮಂಜಪ್ಪ*

[ಶಕ ೧೦೩೩ ಖರಸಂವತ್ಸರ ಕ್ರಿಶ. ೧೧೧೧ ಕಲ್ಯಾಣಿ ಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲದೇವರು–ಆತನ ಮಹಾ ಮಾಂಡಳೇಶ್ವರ ವಿಜಯಪಾಂಡ್ಯದೇವರು – ಆತನ ಮಾಸಾಮಂತ ಹೆಮ್ಮಾಡಿ ಉದಿಯಾದಿತ್ಯ, ಆತನ ಪ್ರಧಾನ ದಂಡನಾಯಕ ಬಮ್ಮಯ್ಯನು ಬೇಲ್ತೂರ ದೇಮೇಶ್ವರ–ಸಂಗಮೇಶ್ವರ ದೇವಾಲಯಕ್ಕೆ ಭೂದಾನ ನೀಡಿ ಹಾಕಿಸಿದ ಶಾಸನ]

೧ ಶ್ರೀ ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರಚಾರವೇ ತ್ರೈಲೋಕ್ಯ ನಗರಾರಂಭ ಮೂಲ

೨ ಸ್ತಂಭಾಯ ಶಂಭುವೇ ॥ನಮಸ್ತುಂಗ ಜಟಾಜೂಟ ಚಂದ್ರ ಚಂದ್ರಿಕಾಬೋಗ ಭೂತಯೇ

೩ ಭವಾನಿ ದೋರ್ಲತಾಯ ಗಾಢ ಪರಿರಂಭಾಯ ಸಂಭುವೇ ॥ ಸ್ವಸ್ತಿ ಸಮಸ್ತ ಭುವನಾಶ್ರಯ

೪ ಪ್ರಿಥ್ವೀವಲ್ಲಭ ಮಹಾರಾಜಾಧಿರಾಜ ರಾಜಪರಮೇಶ್ವರ ಪರಮ ಭಟ್ಟಾರಕ ಸತ್ಯಾಶ್ರಯ ಕುಳತಿಳ

೫ ಕಂ ಚಾಳುಕ್ಯಾಭರಣ ಶ್ರೀಮತ್ ಪ್ರತಾಪಚಕ್ರವರ್ತಿ ಜಗದೇಕಮಲ್ಲದೇವರು ವಿಜಯ ರಾಜ್ಯರಾಜ್ಯ ಮುತ್ತರೋ

೬ ತ್ತರಾಭಿವೃದ್ಧಿ ಪ್ರವರ್ಧಮಾನಮಾಚಂದ್ರಾರ್ಕ ತಾರಾಂಬರಂ ಸಲುಮಿತ್ತಮಿರೆ ತತ್ಪಾದ ಪದ್ಮೋಪಜೀವಿ

೭ *ಸ್ವಸ್ತಿ ಸಮದಿಗತ ಪಂಚಮಹಾ ಶಬ್ಧ ಮಹಾಮಾಂಡಳೇಶ್ವರಂ ಕಾಂಚಿಪುರವರಾದೀಶ್ವರಂ ಯದುವಂಶಾಂಬರ ದ್ಯು

೮ ಮಣಿ ಸುಭಟಚೂಡಾಮಣಿ ಮಣಿಮಹೇಂದ್ರ ಮಣಿಮುಕುಟ ಕೋಟಿವಿಘಟಿತ ನಿಜವಿಜಯ

ಕರಕಂಕಣಂ ಲೀಲಾಮಾತ್ರ ಸಾದಿತ ಸಪ್ತಕೊಂಕಣಂ ಕನಕ ನಗರ ಶಿಳಾತಳ ಸ್ತಾಪಿತ ಪಾಠೀನಲಾಂಛನಂ ಜ

೯ ಯಸ್ತಂಭಂ ದೂರೀಕೃತಾರಾತಿ ವೀರಾವಷ್ಠಂ ತಾಂಬ್ರಪರ್ಣ್ನೀರ್ಕ್ತಂ ಮೌಕ್ತಿಕ ಮುಕ್ತಾನೇಕ ರತ್ನಾಕರಾ

೧೦ ಮುದ್ರಾಂಕಿತ ಸಮುದ್ರ ಭಾಡಾಗಾರಂ ಸಾರಂ ಮಳಯಗಿರಿ ಚಂದನ ನಂದನ ಮದ್ಯಾದೇಶ ನವೇಶಿತ ಶೃ

೧೧ ಂಗಾರಗಾರಂ ಕಿಂಕರೀಕೃತ ಚೂತವಿತಾಳಂ ಸ್ವೀಕೃತಾನೇಕ ರಿಪು ನೃಪತಿ ಮಂಡಳಂ ಹೇಳಾ ನೃಪಾಳ ವೇಳಾನೀತಿ

೧೨ ಜಳಶೈಳದುರ್ಗನಂದಿ ಕೃತಾರಾತಿ ವೀರಮಾಂಡಳಿಕ ವರ್ಗಂ ॥ ಶ್ರೀ ಶಂಕರನಾರಾಯಣ ಚರಣಾ ಸ್ಮರಣ

೧೩ ಪರಿಣಿತಾಂತಕರಣ ಯಾದವಾಭರಣ ಪಾಂಡ್ಯ ಕುಳಕಮಳ ಮಾರ್ತಾಂಡಂ ಪರಿಚ್ಛೇದಿ ಗಂಡಂ ರಾ

೧೪ ಜಿಗಚೋಳ ಮನೋಭಂಗ ಶ್ರೀಮಜ್ಜಗದೇಕ ಮಲ್ಲದೇವರ ಪಾದಾಬ್ಜಬ್ರಂಗ ನಾಮಾದಿ ಸಮಸ್ತ ಪ್ರಶಸ್ತಿ ಸಹಿತ ಶ್ರೀಮ

೧೫ ನ್ ಮಹಾಮಾಂಡಳೇಶ್ವರಂ ಶ್ರೀ ವಿಜಯ ಪಾಂಡ್ಯದೇವರು ನೊಣಂಬವಾಡಿ ಮೂವತ್ತಿರ ಚ್ಛಾಸಿರಮಂ ದುಷ್ಟ ನಿಗ್ರಹ ಶಿಷ್ಟ ಪ್ರತಿಪಾಳನಂ ಮಾ

೧೬ ಡಿ ಸುಖ ಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತ ಮಿರೆ ಶ್ರೀಮದುಚ್ಚಂಗಿಯ ನೆಲೆಬೀಡಿನಂ ಪ್ರಿಥ್ವೀ

೧೭ ರಾಜ್ಯಂಗೆಯ್ಯುತ್ತಮಿರೆ ಚಮೂರಾಜ ಶ್ರೀಮನ್ಮಹಾ ಪ್ರಧಾನ ವಿಜಯಹೆಂಮಾಡಿ ದಂಡನಾಯಕರು

೧೮ **ಮ

೧೯ ಲೆಂಯಾದಿರಾಜ ಮಹಾನಾಯಕ ಮಣಿ ವುದಿಯಾದಿತ್ಯನುಂ ನಾಯಕ ಬಮ್ಮಯ್ಯನು ಮ

೨೦ **ಸಕವರಿಷ ೧೦೩೪ನೆಯ ಖರ ಸಂವತ್ಸರ ಮಾಘಬಹುಳ ಮಂಗಳವಾರ ಸೂ

* 'ಕುಂಭಶ್ರೀ', ೭೮೯/೧೧, ಜಯನಗರ 'ಎ' ಬ್ಲಾಕ್, ದಾವಣಗೆರೆ–೫೭೭೦೦೪.

೨೧ ರ್ಯಗ್ರಹಣ ವ್ಯತೀಪಾತದಂದು ಹಿರಿಯ ಬೆಳ್ಳೂತ್ರ ದೇಮೇಶ್ವರದೇವರ್ಗ್ಗೆ*****ಹಿರಿಯ ಕೆರೆಯ ಯೇರಿ

೨೨ ಕೆಳಗೆ ಗದ್ದೆ ಮತ್ತರೊಂದು ಮೂಡಣಕೋಡಿಯ ಬಡಗಣ ಕೆಳಗೆ ಮತ್ತ

೨೩ ರೆರಡು ಸಂಗವೇಶ್ವರ ದೇವರಂಗ ಬೋಗಂಗಬೋಗ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಸರ್ವನ

೨೪ ವಸ್ಯವಾಗಿ ಸಂಗವೇಶ್ವರ ಪಂಡಿತರ್ಗ್ಗೆ ಧಾರಾಪೂರ್ವಕಂ ಮಾಡಿ ಕೊಟ್ಟರು॥ ನ ವಿಶಂ

೨೫ ವಿಷ ಮಿತ್ಯಾಹು ದೇವಸ್ವಂ ವಿಷಮುಚ್ಯತೇ ವಿಷ ಮೇ ಕಾಕಿನಾಂ ಹಂತಿ ದೇವಸ್ವಂ

೨೬ ಪುತ್ರ ಪೌತ್ರಕಂ । ವಿಂತೀ ಧರ್ಮವಂ ಪ್ರತಿಪಾಳಿಸುವರ್ಗ್ಗೆ ವಾರಣಾಸಿ ಕುರುಕ್ಷೇತ್ರದಲು

೨೭ ಸಾಯಿರ ಕವಿಲೆಯುಂ ವೇದಪಾರಂಗತರಪ್ಪ ಬ್ರಾಹ್ಮರ್ಣ್ಗೆ ಸೋಮಸೂರ್ಯ ಗ್ರಹಣದಂದು

೨೮ ಮಹಾಪುರುಷನಕ್ಕು ಅದನ್ನಳಿದವರಾ ಮಹಹಾ ಪಾಪಿಯಕ್ಕು//ಸ್ವದತ್ತಾಂ ಪರದತ್ತಾಂ

೨೯ ವಾ ಯೋ ಹರೇತಿ ವಸುಂಧರಾಂ ಷಷ್ಠಿರ್ವ**************** ಮಂಗಳ ಮಹಾ ಶ್ರೀ

ಶಾಸನದ ಮಹತ್ವ

ಚಾಲುಕ್ಯ ಚಕ್ರವರ್ತಿ ಒಂದನೇ ಪ್ರತಾಪ ಚಕ್ರವರ್ತಿ ಜಗದೇಕಮಲ್ಲನ ಮಹಾಮಾಂಡಳೇಶ್ವರನಾದ ಉಚ್ಚಂಗಿ ಪಾಂಡ್ಯರ ವಿಜಯಪಾಂಡ್ಯ ಒಬ್ಬನಲ್ಲ, ಇಬ್ಬರು ವಿಜಯ ಪಾಂಡ್ಯರು ಬರುತ್ತಾರೆಂಬ ಅಂಶವನ್ನು ಪ್ರಸ್ತುತಪಡಿಸುವುದೇ ಈ ಶಾಸನದ ಮಹತ್ವವಾಗಿದೆ.

ಮಹಾಮಾಂಡಳೇಶ್ವರ ಒಂದನೇ ವಿಜಯಪಾಂಡ್ಯನ ಶಾಸನ

ಚಾಳುಕ್ಯ ಚಕ್ರವರ್ತಿ ಒಂದನೆಯ ಪ್ರತಾಪಚಕ್ರವರ್ತಿ ಜಗದೇಕಮಲ್ಲನ ಆಳ್ವಿಕೆಯಲ್ಲಿ ಮಹಾಮಾಂಡಳೇಶ್ವರ ಮೊದಲನೇ ವಿಜಯಪಾಂಡ್ಯನ ಸಾಮಂತಾಧಿಪತಿ ಮಲೆಯಾದಿರಾಜ ವುದಿಯಾದಿತ್ಯ ಪೆರ್ಮಾಡಿದೇವನು ಆತನ ಪ್ರಚಂಡ ದಂಡನಾಯಕ ನಾಯಕಮಣಿ ಬಂಮಯ್ಯನು ಬೇಲ್ಲೂತ್ರ ದೇಮೇಶ್ವರ ಮತ್ತು ಸಂಗಮೇಶ್ವರ ದೇವರ ಅಂಗಬೋಗರಂಗಬೋಗ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಹಿರಿಯ ಕೆರೆಯ ಕೆಳಗೆ ಭೂದಾನ ನೀಡಿ ಹಾಕಿಸಿದ ಶಾಸನ. ಕಾಲದ ಉಲ್ಲೇಖದಲ್ಲಿ ಸಕವರ್ಷ ೧೦೩೪ ಖರ ಸಂವತ್ಸರ ಮಂಗಳವಾರ ಸೂರ್ಯಗ್ರಹಣ ವ್ಯತೀಪಾತವಿದ್ದು ಖರ ಸಂವತ್ಸರವು ಸ.ಕ. ೧೦೩೩ ಆಗಿದ್ದು ಕ್ರಿ.ಶ. ೧೧೧೩ ಆಗುತ್ತದೆ. ಈ ಸಮಯದಲ್ಲಿ ಪ್ರತಾಪ ಚಕ್ರವರ್ತಿ ಇಮ್ಮಡಿ ಜಗದೇಕಮಲ್ಲನ ಆಳ್ವಿಕೆಯೂ ಆರಂಭವಾಗಿರುವುದಿಲ್ಲ. ಇಮ್ಮಡಿ ಜಗದೇಕಮಲ್ಲನ ಆಳ್ವಿಕೆಯ ಕಾಲ ೧೧೩೯ರಿಂದ ೧೧೫೦ರ ವರೆಗೆ. ಹಾಗಾದರೆ ಇಲ್ಲಿ ಬರುವ ಪ್ರತಾಪ ಚಕ್ರವರ್ತಿ ಜಗದೇಕಮಲ್ಲದೇವ ಮೊದಲನೆ ಜಗದೇಕಮಲ್ಲನಾಗಿದ್ದಾನೆ.

ಮಹಾಮಾಂಡಳೇಶ್ವರ ವಿಜಯಪಾಂಡ್ಯನ ಆಳ್ವಿಕೆಯ ಕಾಲ ಸು. ಕ್ರಿ.ಶ. ೧೧೬೮ ರಿಂದ ೧೨೦೮ ರವರಗೆ ಇಲ್ಲಿ ಬರುವ ಕಾಲಕ್ಕು ಈ ವಿಜಯಪಾಂಡ್ಯನಿಗೂ ಹೊಂದುವುದಿಲ್ಲ. ಶಾಸನಗಳ ಪ್ರಕಾರ ಕ್ರಿ.ಶ. ೧೧೦೮ ಮತ್ತು ೧೧೧೦ರಲ್ಲಿ ವಿಜಯಪಾಂಡ್ಯನು ಜಗದೇಕಮಲ್ಲನ ಆಳ್ವಿಕೆಯಲ್ಲಿ ಮಹಾಮಾಂಡಳೇಶ್ವರನಾಗಿ ಆಳುತ್ತಿದ್ದ ಮಾಹಿತಿ ಸಿಗುತ್ತದೆ. ಹೀಗಾಗಿ ಇಲ್ಲಿ ಬರುವ ವಿಜಯಪಾಂಡ್ಯನನ್ನು ಮೊದಲನೇ ವಿಜಯಪಾಂಡ್ಯನೆಂದು ಹೇಳಬಹುದು. ಆದರೂ ಇದೇ ಅಂತಿಮವಲ್ಲ. ಬಾಗಳಿ ಕ್ರಿ.ಶ. ೧೧೦೮ (ಹರಪ-೧೮೦), ಬಾಗಳಿ, ಕ್ರಿ.ಶ.೧೧೧೦ (ಹರಪ-೧೮೧), ಚಿತ್ರದುರ್ಗ ಕ್ರಿ.ಶ. ೧೧೨೪ (ಚಿತ್ರ-೧೩), ಹಾಗು ಪ್ರಸ್ತುತ ಬೇತೂರು ಕ್ರಿ.ಶ. ೧೧೧೩ (ದಾವಣ-ಬು.ಮ) ಶಾಸನಗಳ ಪ್ರಕಾರ ಕ್ರಿ.ಶ. ೧೧೦೮ ರಿಂದ ೧೧೨೪ರವರೆಗೆ ಒಂದನೇ ವಿಜಯಪಾಂಡ್ಯ ಆಳ್ವಿಕೆ ಮಾಡಿದ್ದನೆಂಬ ಅಂಶ ಕಂಡುಬರುತ್ತದೆ.

ಆದರೆ ಈ ಸಂದರ್ಭದಲ್ಲಿ ಕಲ್ಯಾಣ ರಾಜ್ಯದ ಚಕ್ರವರ್ತಿ ಆರನೇ ವಿಕ್ರಮಾದಿತ್ಯನಾಗಿದ್ದು ಪ್ರತಾಪ ಚಕ್ರವರ್ತಿ ಜಗದೇಕಮಲ್ಲನೆಂಬ ಹೆಸರಿನ ಆತನ ಸಹೋದರನೋ, ಸಾಮಂತನೋ ಇದ್ದಿರಬೇಕು ಅಥವಾ ಆರನೇ ವಿಕ್ರಮಾದಿತ್ಯನಿಗೇ ಈ ಬಿರುದು ಇತ್ತೇ ಎಂಬುದನ್ನು ಶೋಧಿಸಬೇಕಾಗಿದೆ.

೧೨

ಮಂಗಳೂರಿನ ಶ್ರೀಮಂತಿಬಾಯಿ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿರುವ ಕಂಚಿನ ವಜ್ರಸತ್ವದ ಹಿಂಭಾಗದಲ್ಲಿರುವ ಅಪ್ರಕಟಿತ ಶಾಸನ

ಶೇಜೇಶ್ವರ.ಆರ್.*

ಕರ್ನಲ್ ಮಿರಾಜ್‌ಕರ್‌ರವರು ಮಂಗಳೂರಿನ ಬಿಜೈನಗುಡ್ಡದಲ್ಲಿ ೧೯೩೯ರಲ್ಲಿ ಮುಂಬೈನ ನುರಿತ ಇಂಜಿನಿಯರು ಹಡಗಿನ ಆಕಾರದಲ್ಲಿ ಕಟ್ಟಡ ನಿರ್ಮಿಸಿದರು. ೧೯೫೫ರಲ್ಲಿ ತನ್ನ ತಾಯಿಯ ನೆನಪಿಗೋಸ್ಕರ ಸರ್ಕಾರಕ್ಕೆ ದಾನ ನೀಡಿದ ನಂತರ ತಾಯಿಯ ಹೆಸರಿನಲ್ಲಿಯೇ ದಿನಾಂಕ: ೦೪-೦೫-೧೯೬೦ರಲ್ಲಿ ಅಧಿಕೃತವಾಗಿ ಆಗಿನ ಉಪರಾಷ್ಟ್ರಪತಿಯಾಗಿದ್ದ ಶ್ರೀಮಾನ್ ಬಿ.ಡಿ. ಜತ್ತಿಯವರು ಶ್ರೀಮಂತಿಬಾಯಿ ಸರ್ಕಾರಿ ವಸ್ತುಸಂಗ್ರಹಾಲಯ ಎಂಬ ನಾಮಕರಣದೊಂದಿಗೆ ವಸ್ತುಸಂಗ್ರಹಾಲಯವನ್ನು ಉದ್ಘಾಟನೆ ಮಾಡಿದರು. ಈ ಬಂಗಲೆಯನ್ನು ಯಥಾಸ್ಥಿತಿಯಾಗಿ ಕಾಪಾಡಿಕೊಂಡು ವಸ್ತುಸಂಗ್ರಹಾಲಯವನ್ನು ಮಾಡಲಾಗಿದೆ, ಇಲ್ಲಿ ಹೆಚ್ಚಿನದಾಗಿ ಮಿರಾಜ್‌ಕರ್‌ರವರು ದೇಶವಿದೇಶದಿಂದ ಸಂಗ್ರಹಿಸಿದ ವಸ್ತುಗಳನ್ನು ಪ್ರದರ್ಶನಕ್ಕಿಡಲಾಗಿದೆ, ಇದು ದಕ್ಷಿಣ ಕನ್ನಡ ಜಿಲ್ಲೆಯ ಏಕೈಕ ಸರ್ಕಾರಿ ವಸ್ತುಸಂಗ್ರಹಾಲಯ ವಾಗಿದೆ.

ಕರ್ನಲ್ ಮಿರಾಜ್‌ಕರ್‌ರವರು ಸಂಗ್ರಹಿಸಿದ ಪ್ರಾಚ್ಯ ವಸ್ತುಗಳಲ್ಲಿ ನೇಪಾಳದಿಂದ ೦೮-೦೫-೧೯೫೭ರಲ್ಲಿ ಸಂಗ್ರಹಿಸಿದ ಕಂಚಿನ ವಜ್ರಸತ್ವ ವಿಗ್ರಹವು ಸಹಾ ಒಂದು, ಬೌದ್ಧ ಧರ್ಮದಲ್ಲಿ ನಾವು ಪ್ರಮುಖವಾಗಿ ಮೂರು ಶಾಖೆಗಳನ್ನು ನೋಡಬಹುದು, ಹೀನಯಾನ, ಮಹಾಯಾನ, ಮತ್ತು ವಜ್ರಯಾನ. ಹೀನಯಾನದಲ್ಲಿ ಬುದ್ಧನ ತತ್ವಗಳಿಗೆ ಮಹತ್ವ ಕೊಟ್ಟರೆ, ಮಹಾಯಾನಲ್ಲಿ ಬುದ್ಧನನ್ನು ಅವತಾರ ಪುರುಷನೆಂದು ಪರಿಗಣಿಸಿ ದೇವತ್ವಪಟ್ಟವನ್ನು ಕಟ್ಟಲಾಯಿತು. ಮಹಾಯಾನದಿಂದ ಮುಂದುವರಿದ ಶಾಖೆಯೇ ವಜ್ರಯಾನ (ತಾಂತ್ರಿಕ ಬೌದ್ಧಧರ್ಮ) ಎಂದು ಕರೆದರು, ಹೀನಯಾನವು ನಿರ್ವಾಣವನ್ನು ಶೂನ್ಯವೆಂದು ಕರೆದರೆ, ಮಹಾಯಾನವು ಶೂನ್ಯ ಮತ್ತು ವಿಜ್ಞಾನವೆಂದು, ವಜ್ರಯಾನವು ಶೂನ್ಯ, ವಿಜ್ಞಾನ, ಮಹಾಸುಖ ಎಂದು ಹೇಳುತ್ತದೆ.

ವಜ್ರಯಾನದಲ್ಲಿ ಅಸಂಖ್ಯಾತ ದೇವತೆಗಳು, ಅವರ ಪೂಜಾವಿಧಾನಗಳು ಮುಖ್ಯ, ಈ ವಜ್ರಸತ್ವ (ಅಥವಾ ಆದಿಬುದ್ಧನ)ನ ಪಂಚಗುಣಗಳಿಂದ ಪಂಚಧ್ಯಾನಗಳೂ ಈ ಪಂಚಧ್ಯಾನಗಳಿಂದ ಐವರು ಧ್ಯಾನಬುದ್ಧರು ಉದಯಿಸಿದರು, ವೈರೋಚನ, ರತ್ನಸಂಭವ, ಅಮಿತಾಭ, ಅಮೋಘ ಸಿದ್ಧಿ, ಅಕ್ಷೋಬ್ಯ ಈ ಐವರಿಗೂ ಕ್ರಮವಾಗಿ ವಜ್ರಧಾತೇಶ್ವರಿ, ಲೋಚನಾ, ಮಾಮಕಿ, ಪಾಂಡರಾ, ತಾರಾ ಎಂಬ ಐವರು ಶಕ್ತಿ ದೇವತೆಗಳುಂಟು, ಬೌದ್ಧರ ದೇವತೆಗಳೆಲ್ಲ ಈ ಧ್ಯಾನಿಬುದ್ಧರ ಕುಲಗಳಿಗೆ ಸೇರಿದವರು, ಈ ದೇವತೆಗಳನ್ನು ತಾಂತ್ರಿಕ ವಿಧಾನಗಳಿಂದ ಅರ್ಚಿಸಿದವರು ವಜ್ರಸತ್ವರಾಗುತ್ತಾರೆ, ಪ್ರಜ್ಞಾ ಎಂಬ ವಧು ಉಪಾಯ ಎಂಬ ವರ ಇವರಿಬ್ಬರ ಮಿಲನದಿಂದಲೇ ಮನುಷ್ಯ ಪೂರ್ಣನಾಗುವುದು, ಇದನ್ನೇ ನೇಪಾಳದಲ್ಲಿ ಕಮಲದಿಂದೇಳುವ ಅಗ್ನಿಯ ಮೂಲಕ ತೋರಿಸಲಾಗಿದೆ, ವಜ್ರಯಾನದ ಪ್ರಕಾರ ಸ್ತ್ರೀ ಪುರುಷರಾಗಿ ಕಾಣಿಸಿಕೊಂಡಿವೆ. ೫೦೦ ಸುಮಾರಿಗೆ ತಂತ್ರದ ಪ್ರಭಾವದಿಂದ ತಾಂತ್ರಿಕ ಬೌದ್ಧ ಪಂಥ ನೇಪಾಳದಲ್ಲಿ ಬೆಳೆಯಿತು ಎನ್ನಬಹುದು. ಈ ಕಂಚಿನ ವಜ್ರಸತ್ವವು ನೇಪಾಳದಿಂದ ಸಂಗ್ರಹಿಸಿದಾಗಿದ್ದು, ೫೭ ಸೆ.ಮೀ. ಉದ್ದ, ೨೨ ಸೆ.ಮೀ. ಆಗಲವಿದೆ. ಹೂವಿನ ಪ್ರಭಾವಳಿಯನ್ನು ಹೊಂದಿದ್ದು, ಕಮಲದ ಪೀಠದಮೇಲೆ ಪದ್ಮಾಸನದಲ್ಲಿ ಕುಳಿತಿದೆ, ಎಡಗೈಯಲ್ಲಿ ಘಂಟೆಯನ್ನು, ಕೊರಳಲ್ಲಿ ಮಾಲೆಯನ್ನು ಧರಿಸಿದೆ, ತಲೆಯು ಹಾಗೂ ಮುಂಭಾಗದ ಪೀಠವು ಆಲಂಕಾರದಿಂದ ಕೂಡಿದೆ, ಪೀಠದ ಹಿಂಭಾಗದ ಮೇಲೆ ಹನ್ನೆರಡು ಸಾಲಿನ ಶಾಸನವಿದ್ದು, ಇದು ಸಂಸ್ಕೃತ ಭಾಷೆ ಹಾಗೂ ನಾಗರಿಲಿಪಿಯಲ್ಲಿದೆ.

ಶಾಸನದ ಪಾಠ

೧ ಸಿದ್ಧಮಂ ಓಂ ನಮಃ ಶ್ರೀ ರಜಸತ್ವಾಯ ॥ ಶ್ರೀ ಗುರುಕರಾತ್ ನಾಯದಹಿ

* ಕ್ಯುರೇಟರ್, ಶ್ರೀಮಂತಿ ಬಾಯಿ ಸ್ಮಾರಕ ಸರ್ಕಾರಿ ವಸ್ತುಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ, ಬಿಜೈ, ಮಂಗಳೂರು-೦೪.

೨ ಮಹಿಸತಗುರೂಂ ಧ್ಯಾನಯಾಗತನುಮನುಬುದ್ಧಿ ಗುಹಿ

೩ ಸನವಾಕ್ರಿತಃ ರಾಗ(ಶೋಕ) ಕಸೂದ್ಃ ಖದಾರಿ

೪ ಜಾಸನಂ ತ್ವಂತಜಾಮಿ ತ್ವಂತಜಾಮಿ ಶ್ರೀ ಗುರು ॥ ಶ್ರೀ ವಜಸ್

೫ ಭೂಯಗಮ್ ಕ್ರಿತ ಕ್ರಿಲಾ ತಥಾ ನಿಮಿತಿನಂ ಚಾನಲು ಯಾಜಿಪಿ ಸಂಪನ್ನೂಂ

೬ ರಾಜಾಯ ಕನದಾನ ಶ್ರೇಯಸ್ತು ಸಂವತೂ ೧೦೨೩ ಗಿ ಆಷಾರ್ ಮಾಸೆ ಶುಕ್(ಲ)

೭ ಪಕ್ಷಃ ಪತಿ ಪದಿ ಪರ್ ದ್ವಿತಿಯಾಷು ಸ್ವಪಿತಾ ವಿಜಯಾಚಾರ್ಯೆ ಶ್ರೀ ಹರ್ಷ್ ದಿವಂಗತ ಜ

೮ . . . . ನಾಮನಂ ಸವರ್ಗರ್ ಪಿತ್ ಶ್ರೀ ವಜಸತ್ವಸ್ಯಾಮೂರ್ತಿ ದೇಯ ಕಾ(ಡಾ) ಪಾನ್ ಪತಿಸ್ಯಾಪಾ

೯ ನಾ ದೀ ನೇಜಲ್ ॥ ಥ್ವಮಾದಾನ್ ಪತಿ ಪಯ್ ಪುತ್ರ್ ಹರ್ಷ್ ಜಾತಿ ಪುತ್ರ್ ಶ್ರೀ ಹರ್ಷದ್ವಜಃ ಪುತ್ರ್ ಶ್ರೀ ದಯಾಮುನಿ

೧೦ ಪುತ್ರ್ ಶ್ರೀ ಪಚಾನಮುನಿ ಪಾತು ಸಿದ್ಧಿಪತಿಪಾತು ಜಲಾಜಪಾತು ದರ್ುರವುರರ್ತನ ಪಾತು ಧಮುನಿಪಮ್

೧೧ ಸ್ವರ್ಸ್ವ(ಸ್ವ) ತಾರ್ಯಾದಿಂ ಸಕಲ ಪಾವಮಚಿತ್ರ ಜಯಾಜಾಂದೇವಕಾಜಲ್ ॥ ಸ್ವದಂತ್ ಪರದಂತೆ ವಾಯೋ ಹರೇ

೧೨ . . . . . ಷಷ್ಟಿವರ್ಷ್ ಸಹಸ್ರಾಣಿ . . ವಿಷ್ಠಾಯಂ ಜಾಯತೇ ಕ್ರಿಮಿಃ ಶ್ರೀ . . . . .

ಶಾಸನದ ಸಾರಂಶ

ಈ ಶಾಸನದಲ್ಲಿ ಶ್ರೀ ಗುರುವಿನ ಶರಚರಣಗಳಿಗೆ ವಂದಿಸುತ್ತ, ಮಹಾಸತ್ವಶಾಲಿಯಾದ ಗುರುವಿಗೆ ಧ್ಯಾನದಿಂದ ಯಾಗದಿಂದ ತನುಮನಬುದ್ಧಿಯನ್ನು ಪ್ರಚೋದಿಸಿ ಶೋಕಗಳಿಂದ ಮುಕ್ತನಾಗಿ ದಾರಿಯನ್ನು ತೋರಿಸುವ ಗುರುವಿನ ಆಸನಗಳಿಗೆ ತಲೆಬಾಗುತ್ತೇನೆ. ಭೂಮಿಯಲ್ಲಿರುವ ಸಂಪನ್ಮೂಲಗಳು ಹಾಗೆಯೇ ಉಳಿಯಲಿ ರಾಜನಿಗೆ ಶ್ರೇಯಸ್ಸು ದೊರೆಯುವುದಕ್ಕೋಸ್ಕರ ೧೦೨೩ನೇ ಕನಿದಾನ ಸಂವತ್ಸರದ ಅಷಾಡಮಾಸ ಶುಕ್ಲಪಕ್ಷದ ಮೊದಲನೆ ದಿನದ ನಂತರ ಮರಣವನ್ನಪ್ಪಿದ ತಂದೆ ವಿಜಯಾಚಾರ್ಯ ಶ್ರೀ ಹರ್ಷದ್ವಜನ ಯಶಸ್ವಿಗಾಗಿ ಶ್ರೀ ಹರ್ಷದ್ವಜನ ಮಗ ದಯಾಮುನಿಯು ವಜ್ರಸತ್ವಮೂರ್ತಿಯನ್ನು ತನ್ನ ಗುರುವಿಗೆ ದಾನ ನೀಡುತ್ತಾನೆ, ಅವರಿಗೆ ಸಿದ್ಧಿ ದೊರೆಯಲಿ ಜಲಚರ ಪ್ರಾಣಿಗಳಿಂದಲೂ ಧರ್ಮ ಅರ್ಥಮೋಕ್ಷ ಸರ್ವಸ್ವ ಎಲ್ಲವೂ ಇಹಲೋಕ ಪರಲೋಕದಲ್ಲಿ ಸಿಗಲಿ ಎಂದು ನದಿನೀರಿನಲ್ಲಿ ತರ್ಪಣ ಬಿಡುತ್ತಾನೆ, ಕೊನೆಯಲ್ಲಿ ಇದನ್ನು ನಾಶ ಮಾಡಿದರೆ ಕ್ರಿಮಿಯಾಗುವೆ ಎಂಬ ಶಾಪಾಶಯದೊಂದಿಗೆ ಕೊನೆಗೊಳ್ಳುತ್ತದೆ.

[ಕೃತಜ್ಞತೆ: ಈ ಪ್ರಬಂಧವನ್ನು ರಚನೆ ಮಾಡುವಲ್ಲಿ ಸಹಕರಿಸಿದ ಡಾ. ಎಸ್.ಜಿ. ಸಾಮಕ್, ಡಾ. ಜಗದೀಶ, ಹಾಗೂ ನನ್ನ ಗುರುಗಳು ಸಂಶೋಧನಾ ಮಾರ್ಗದರ್ಶಕರಾದ ಡಾ.ಹನುಮನಾಯಕರವರಿಗೆ, ಶಾಸನಶಾಸ್ತ್ರ ವಿಭಾಗ, ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆ ಮೈಸೂರು, ಹಾಗೂ ಆಯುಕ್ತರು, ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಮೈಸೂರು, ಇವರುಗಳಿಗೆ ನಾನು ಅಭಾರಿಯಾಗಿರುತ್ತೇನೆ]

ಆಧಾರಸೂಚಿ

೧. ಚಿದಾನಂದ ಸಮಗ್ರ ಸಂಪುಟ–೧, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ.೪೫೦–೧೧೫೦) ಸ್ವಪ್ನ ಬುಕ್ ಹೌಸ್ ಗಾಂಧಿನಗರ, ಬೆಂಗಳೂರು–೯, ೨೦೦೨.

೨. ಬುದ್ಧ ನಡೆದ ಹಾದಿ, ಕೆ.ರಾಮು, ಶ್ರೀನಧಿ ಪಬ್ಲಿಕೇಷನ್ಸ್ ಬೆಂಗಳೂರು–೫೩, ೨೦೧೩.

೧೩

ಕ್ಯಾಸನೂರು ಮತ್ತು ದೇವಿಕೊಪ್ಪದ ಹೊಸ ಶಾಸನಗಳು

ಡಾ. ಹನುಮಾಕ್ಷಿ ಗೋಗಿ*

ಹಾನುಗಲ್ಲು ತಾಲೂಕಿನ ನೈಋತ್ಯ ದಿಕ್ಕಿನಲ್ಲಿ ತಾಲೂಕಿನ ಕೊನೆಯ ಮೇರೆಯಾಗಿರುವ ಮಲೆನಾಡಿನ ಒಂದು ಸುಂದರ ಹಳ್ಳಿ ಕ್ಯಾಸನೂರು. ಸುತ್ತಲೂ ಹಚ್ಚಹಸಿರು ಕಾಡು, ಗದ್ದೆಗಳು, ತೆಂಗು ಹಾಗೂ ಅಡಕೆ ತೋಟಗಳ ಮಧ್ಯೆ ಇರುವ ಊರು. ಊರ ಕೊನೆಯಲ್ಲಿರುವ ಕೆರೆಯನ್ನು ಇಂದು ದೇವರ ಹೊಂಡ ಎಂದು ಕರೆಯುತ್ತಿದ್ದು, ಅದರ ಅಂಚಿನಲ್ಲಿ ರಾಮೇಶ್ವರ ಮತ್ತು ಈಶ್ವರ ದೇವಾಲಯಗಳಿದ್ದು, ಈಶ್ವರ ದೇವಾಲಯದಲ್ಲಿ ಶಿವಲಿಂಗ ಹಾಗೂ ನಂದಿಗಳು ಮಾತ್ರ ಇವೆ. ದೇವಸ್ಥಾನದ ಗರ್ಭಗುಡಿಯನ್ನು ಇತ್ತೀಚೆಗೆ ಕಟ್ಟಲಾಗಿದೆ. ಅದರ ಹೊರಭಾಗದಲ್ಲಿ ಎರಡು ಕಂಬಗಳನ್ನು ತಂದು ನಿಲ್ಲಿಸಿದ್ದು, ಎರಡರ ಮೇಲೆಯೂ ಶಾಸನಗಳಿವೆ. ರಾಮೇಶ್ವರ ದೇವಾಲಯದ ಗರ್ಭಗುಡಿ ಮತ್ತು ಸುಕನಾಸಿಗಳು ಮಾತ್ರ ಈಗ ಉಳಿದಿದ್ದು, ಅಲ್ಲಿ ಕೇಶವನ ಶಿಲ್ಪವಿದೆ. ಸ್ತ್ರೀ ದೇವತೆಯೊಬ್ಬಳ ಭಗ್ನಶಿಲ್ಪವಿದೆ. ಉಳಿದೆಲ್ಲ ಭಾಗಗಳು ಬಿದ್ದುಹೋಗಿವೆ. ದೇವಾಲಯದ ಯಾವುದೇ ಅವಶೇಷಗಳು ಸುತ್ತಮುತ್ತಲೆಲ್ಲೂ ಇಲ್ಲ. ಹೊಂಡದಲ್ಲಿ ಸ್ವಲ್ಪ ನೀರಿದ್ದು, ಅದರಲ್ಲಿ ದೊರೆತ ಶಾಸನಗಳನ್ನು ತಂದು ರಾಮೇಶ್ವರ ದೇಗುಲದ ಮುಂದೆ ನಿಲ್ಲಿಸಲಾಗಿದೆ. ಇವುಗಳಲ್ಲಿ ಎರಡು ಈ ಹಿಂದೆ ಇಐ ೫ರಲ್ಲಿ ಪ್ರಕಟಿತ ಶಾಸನಗಳಿವೆ. ಊರೊಳಗೆ ವೀರಭದ್ರ ದೇವಾಲಯವಿದ್ದು, ಕಟ್ಟಡವು ಇತ್ತೀಚಿನದಾಗಿದೆ. ಮುಂದೆ ಕಂಬವೊಂದನ್ನು ನಿಲ್ಲಿಸಿದ್ದು, ಕಲ್ಯಾಣ ಚಾಲುಕ್ಯರ ಕಾಲದ ಸುಂದರ ಕಂಬವಿದಾಗಿದೆ. ಅದರ ಹತ್ತಿರವೇ ೧೮–೧೯ನೆಯ ಶತಮಾನದ ಮಾಸ್ತಿಕಲ್ಲೊಂದನ್ನು ನಿಲ್ಲಿಸಿದ್ದು, ಲಿಪಿ ಇದೆ. ಊರ ಮಧ್ಯದಲ್ಲಿ ಮನೆಯೊಂದರ ಬೇಲಿಯಲ್ಲಿ ಪಠ್ಯ ಪ್ರಕಟಿತವಾದ ಗೋಸಾಸವೊಂದನ್ನು ನಲ್ಲಿಸಿದೆ. ಇನ್ನೊಂದು ಮನೆಯ ಬೇಲಿಯಲ್ಲಿ ಲಿಪಿರಹಿತ ವೀರಗಲ್ಲೊಂದಿದೆ. ವಿಜಯಕಾಂತ ಪಾಟೀಲರ ಮನೆಯ ಹಿತ್ತಲಿನಲ್ಲಿ ಮರದಡಿ ಶಾಸನವೊಂದಿದ್ದು, ಈಗ ಅದನ್ನು ಪೂಜಿಸಲಾಗುತ್ತಿದೆ. ಐತಿಹಾಸಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಸಮೃದ್ಧವಾಗಿರುವ ಈ ಊರ ಸುತ್ತಲೂ ಇನ್ನೂ ಹೊಸ ಶಾಸನಗಳು ಬಹುಶಃ ಇರುವ ಸಾಧ್ಯತೆ ಇದೆ. ಇದಲ್ಲದೇ ಆನೆಗಳು ಮತ್ತು ಕೃಷಿ ಸಂಸ್ಕೃತಿಯ ನಾಡಾಗಿರುವುದರಿಂದ ಇಲ್ಲಿ ಅಪರೂಪದ ಗೋಸಾಸ ಕಲ್ಲುಗಳೂ ದೊರೆತಿವೆ ಎನ್ನುವುದನ್ನು ಗಮನಿಸಬೇಕು.

ಕರ್ನಾಟಕದಾದ್ಯಂತ ಇದುವರೆಗೆ ಸು. ೨೫೦ ಗೋಸಾಸ ಕಲ್ಲುಗಳು ದೊರೆತಿದ್ದು, ಅವುಗಳಲ್ಲಿ ೫೭ ಲಿಪಿ ಸಹಿತ ಇವೆ. ಇವುಗಳ ಕುರಿತು ಈಗಾಗಲೇ ಡಾ. ಎಂ.ಎಂ. ಕಲಬುರ್ಗಿಯವರು ಮತ್ತು ಡಾ. ಎಂ.ಬಿ.ನೇಗಿನಹಾಳ ಅವರು ಲೇಖನಗಳನ್ನು ಬರೆದು, ಅವುಗಳ ಪಟ್ಟಿ ಮಾಡಲು ಪ್ರಯತ್ನಿಸಿದ್ದಾರೆ. ತದನಂತರ ಡಾ. ಭೋಜರಾಜ ಪಾಟೀಲರು ತಮ್ಮ ಮಹಾಪ್ರಬಂಧದಲ್ಲಿ ಇವುಗಳ ಪ್ರಸ್ತಾಪ ಮಾಡಿದ್ದಾರೆ. ಇತ್ತೀಚೆಗೆ ಬಸಪ್ಪ ಹುಬ್ಬಳ್ಳಿ ಎನ್ನುವವರು ಎಂ.ಫಿಲ್. ಕೂಡ ಮಾಡಿದ್ದಾರೆ.

ಪಟ್ಟದಕಲ್ಲು, ಐಹೊಳೆಯ ಪ್ರಾಚೀನ ಗೋಸಾಸಗಳಿಂದ ಹಿಡಿದು, ಕುಬಟೂರು, ಕುಪ್ಪಗಡ್ಡೆ, ಮಲ್ಲೇನಹಳ್ಳಿ, ಅಸೂಟಿ, ಹೂಲಿ, ಬೆಟಕೆರೂರು, ಎಸಳೆ, ಸೋಮನಹಳ್ಳಿ, ಹುಸ್ಕಿ, ಮುತ್ತಳ್ಳಿ, ಕರಿನೆಲ್ಲಿ, ಸಾತೇನಹಳ್ಳಿ, ತಿಳವಳ್ಳಿಗಳಲ್ಲಿ ಎಂದರೆ ಉತ್ತರದ ಹುನಗುಂದ ತಾಲೂಕಿನಿಂದ ದಕ್ಷಿಣದ ಸೊರಬ, ಸಾಗರ ತಾಲೂಕುಗಳವರೆಗೆ ಇವುಗಳ ವ್ಯಾಪ್ತಿ ಹಬ್ಬಿದೆ. ಇತ್ತೀಚೆಗೆ ನಾನು ಹಾನುಗಲ್ಲು ತಾಲೂಕಿನ ನರೇಗಲ್ಲು, ಸಾವಿಕೇರಿ, ಯಳವಟ್ಟಿ, ಹಿರೂರುಗಳಲ್ಲಿ ಇವುಗಳನ್ನು ಗಮನಿಸಿದ್ದೇನೆ. ಈಗ ಮತ್ತೆ ಎರಡು ಗೋಸಾಸಗಳನ್ನು ಕ್ಯಾಸನೂರಿನಲ್ಲಿ ಪತ್ತೆ ಮಾಡಲಾಗಿದೆ.

ರಾಷ್ಟ್ರಕೂಟ ಅರಸರು ಕೃಷಿ ಪ್ರಧಾನ ಸಂಸ್ಕೃತಿಗೆ ಒತ್ತನ್ನು ಕೊಟ್ಟವರು. ಕೃಷಿ ವಿಸ್ತರಣೆ ಅವರ ಪ್ರಿಯ ವಿಷಯವಾಗಿತ್ತು ಎನ್ನುವುದಕ್ಕೆ ಅವರು ಇಟ್ಟುಕೊಂಡಿರುವ ಬಿರುದುಗಳೇ ಸಾಕ್ಷಿಯನ್ನು ನೀಡುತ್ತವೆ. ಅಕಾಲವರ್ಷ, ಧಾರಾವರ್ಷ, ನಿತ್ಯವರ್ಷ, ಪ್ರಭೂತವರ್ಷ, ಅಮೋಘವರ್ಷ, ಸುವರ್ಣವರ್ಷ ಎಂಬ ಬಿರುದುಗಳನ್ನೇ ಅವರು ಬಳಸಿದ್ದಾರೆ. ಕರ್ನಾಟಕದ ಅಷ್ಟೇ ಏಕೆ ಭಾರತದ ಯಾವ ಅರಸರೂ ಇಂತಹ ಬಿರುದುಗಳನ್ನು ಬಳಸಿಲ್ಲ. ಇನ್ನು ಅವರ ಶುಭತ್ತುಂಗ, ಜಗತ್ತುಂಗ, ನೃಪತುಂಗಗಳಿಗೆ ಏನು ಅರ್ಥವಿದೆ ಎನ್ನುವುದನ್ನು ಶೋಧಿಸಬೇಕಿದೆ. ಮಳೆಗೆ ಅವರು ಮಹತ್ವ ಕೊಟ್ಟಷ್ಟೇ ಕೃಷಿಗೂ

* ಎಚ್.ಐ.ಜಿ. ೨೭, ನವನಗರ, ಹುಬ್ಬಳ್ಳಿ.

ಪ್ರಾಮುಖ್ಯತೆ ನೀಡಿದರು ಎನ್ನುವುದಕ್ಕೆ ಅವರು ನೇಗಿಲನ್ನು ಲಾಂಛನವಾಗಿ ಬಳಸಿದ್ದೇ ಭಾಷ್ಯ ಬರೆಯುತ್ತದೆ. ಅವರು ಬರೆಸಿದ ಬಹುತೇಕ ಎಲ್ಲ ಶಾಸನಗಳ ಕೊನೆಯಲ್ಲಿ ನೇಗಿಲಿನ ಗುರುತಿದೆ. ಕ್ವಚಿತ್ತಾಗಿ ಪ್ರಾರಂಭದಲ್ಲಿಯೂ ಚಿತ್ರಿಸಿದ್ದಾರೆ. ಕೆಲವೆಡೆ ನೇಗಿಲಿಗೆ ಎತ್ತುಗಳನ್ನೂ ಹೂಡಲಾಗಿದೆ. ಅತ್ಯಂತ ಅಧಿಕ ಸಂಖ್ಯೆಯ ಶಾಸನಗಳಲ್ಲಿ ಕೆರೆ ಕಟ್ಟಿಸಿದ ವಿವರಗಳು ಇವರ ಕಾಲದಲ್ಲಿವೆ. ಕೆರೆ ಕಟ್ಟಿಸಿದ ನಂತರ ನೀಡುವ ಗೋ ಸಹಸ್ರ ದಾನದ ಪ್ರಸ್ತಾಪ ಮತ್ತು ಗೋಸಾಸ ಕಲ್ಲುಗಳೂ ಇದೇ ರಾಷ್ಟ್ರಕೂಟರ ಕಾಲದಲ್ಲಿ ದೊರೆಯುತ್ತವೆ. ಇನ್ನೂ ಮುಂದುವರೆದು ಹೇಳಬೇಕೆಂದರೆ ಗೋಗ್ರಹಣ ಪ್ರಸಂಗಗಳು ಮತ್ತು ತುರುಗೊಳ್ ವೀರಗಲ್ಲುಗಳೂ ಸಾಕಷ್ಟು ಪ್ರಮಾಣದಲ್ಲಿ ಸಿಗುವುದು. ಗೋಗ್ರಹಣವೆಂದರೆ ಅವರ ಸ್ವಾಭಿಮಾನ ಮತ್ತು ಶೌರ್ಯಗಳನ್ನು ಕೆಣಕಿದಂತೆ ಆಗುತ್ತಿತ್ತೆಂದು ಬೇರೆ ಹೇಳಬೇಕಿಲ್ಲ. ಇವೆಲ್ಲವುಗಳು ಅವರ ಕೃಷಿ ಸಂಸ್ಕೃತಿಯನ್ನು ಎತ್ತಿ ಸಾರುತ್ತವೆ. ಇಂತಹ ಕೆರೆ ಕಟ್ಟಿಸಿದ ಮತ್ತು ಅದೇ ಸಂದರ್ಭದಲ್ಲಿ ಸಾವಿರ ಗೋವುಗಳನ್ನು ದಾನವಾಗಿ ಕೊಟ್ಟು ಮೇಂಟಿಕಲ್ಲನ್ನು ನಿಲ್ಲಿಸಿದ ಎರಡು ಸಾಕ್ಷಿಗಳು ಕ್ಯಾಸನೂರಿನಲ್ಲಿ ದೊರೆತಿವೆ.

೧

ಈಶ್ವರ ಗುಡಿ ಮುಂದೆ ನಿಂತಿರುವ ಗೋಸಾಸ ೧

ಸು. ೯–೧೦ನೆಯ ಶ.

೩' ಎತ್ತರ ೧.೬" ಅಗಲದ ಈ ಗೋಸಾಸದ ಮೇಲ್ಭಾಗದಲ್ಲಿ ಯಾವುದೇ ಚಿತ್ರಗಳಿಲ್ಲ. ಅರ್ಧ ಕೋನಾಕೃತಿಯ ಕೆಳಭಾಗದ ಚೌಕಾಕಾರದ ಭಾಗದಲ್ಲಿ ಮತ್ತು ಅದರ ಕೆಳಗಿನ ಚೌಕಾಕಾರದ ಭಾಗದಲ್ಲಿ ಕೆತ್ತಿದ ಈ ಶಾಸನವು ಇನ್ನೊಂದು ಪಟ್ಟಿಕೆಯಲ್ಲಿಯೂ ಒಂದು ಸಾಲು ಮುಂದುವರೆದಿದೆ. ಶಾಸನದ ಕೆಳಭಾಗವನ್ನು ಅಗೆಸಿದಾಗ ಯಾವುದೇ ಶಾಸನವು ಕಂಡು ಬಂದಿರುವುದಿಲ್ಲ. ಶಾಸನದ ಎರಡೂ ಪಕ್ಕಗಳಲ್ಲಿಯೂ ಅಕ್ಷರಗಳಿಲ್ಲ. ಹಿಂಭಾಗದಲ್ಲಿ ಮೇಲೆ ಪೂರ್ಣ ಕುಂಭದ ಉಬ್ಬುಶಿಲ್ಪವಿದ್ದು, ಕೆಳಗೆ ನೇಗಿಲಿಗೆ ಹೂಡಿದ ಜೋಡೆತ್ತುಗಳಿವೆ.

ತ್ರುಟಿತ ಮತ್ತು ಅಪೂರ್ಣವಾದ ಪ್ರಸ್ತುತ ಶಾಸನವು ಮಣ್ಣಗೆಡೆಯಲ್ಲಿ ಕೆರೆಯನ್ನು ಕಟ್ಟಿಸಿ, ಗೋಸಹಸ್ರ ದಾನವನ್ನು ಮಾಡಿದ ಗಾಮುಣ್ಡನೊಬ್ಬನನ್ನು (ಸರಗೊವ . ಟ್ಟಯ?) ಹೆಸರಿಸುತ್ತದೆ.

ಮೊದಲನೆಯ ಪಟ್ಟಿಕೆ

೧ ರ ಪ್ರವರ್ತ್ತಿಸೆ ಪವುಷ್ಯ ಮ(ಮಾ)ಸ–
೨ ಮು ಪಞ್ಚಮೆಯು ಬೃಹಸ್ಪ–
೩ ತಿ ವಾರದನ್ದು ಮಣ್ಣಗೆಡೆಯ
೪ ಮಹಾಟರ ಭಟಕ್ಕೆ ಕೆಱೆಯ
೫ ಕೇದರ್ಮ್ಮಮೊಕೋನ್

ಎರಡನೆಯ ಪಟ್ಟಿಕೆ

೬ ದ್ದು ಗೋಸಹಶ್ರಮ–
೭ ನಿಟ್ಟಿ ಸರಗೊವ .

ಮೂರನೆಯ ಪಟ್ಟಿಕೆ

೮ ಟ್ಟಯ ಗಮುಣ್ಡ ಮಙ್ಗಳ [॥*]

ಕ್ಯಾಸನೂರು

೨

ಈಶ್ವರ ಗುಡಿ ಮುಂದೆ ಇರುವ ಗೋಸಾಸ ೨

ಸು. ೯–೧೦ನೆಯ ಶ.

೩' ಎತ್ತರ ೧.೬" ಅಗಲದ ಈ ಗೋಸಾಸದ ಮೇಲ್ಭಾಗದಲ್ಲಿ ಯಾವುದೇ ಚಿತ್ರಗಳಿಲ್ಲ. ಅರ್ಧ ಕೋನಾಕೃತಿಯ ಕೆಳಭಾಗದ ಚೌಕಾಕಾರದ ಭಾಗದಲ್ಲಿ ಕೆತ್ತಿದ ಈ ಶಾಸನವು ಇನ್ನೊಂದು ಗೋಸಾಸ ಕಲ್ಲಿನಲ್ಲಿಯೂ ಮುಂದುವರೆದಿರಬಹುದು. ಶಾಸನದ ಕೆಳಭಾಗವನ್ನು ಅಗೆಸಿದಾಗ ಯಾವುದೇ ಶಾಸನವು ಕಂಡು ಬಂದಿರುವುದಿಲ್ಲ. ಎರಡೂ ಪಕ್ಕಗಳಲ್ಲಿಯೂ ಅಕ್ಷರಗಳಿಲ್ಲ. ಹಿಂಭಾಗದಲ್ಲಿ ಆನೆಯ ಉಬ್ಬುಶಿಲ್ಪವಿದೆ. ಕೆಲವು ಗೋಸಾಸಗಳು ಅಪೂರ್ಣವಾಗಿದ್ದಾಗ ಅಲ್ಲಿಯೇ ದೊರೆಯುವ ಇನ್ನೊಂದು ಗೋಸಾಸ ಕಲ್ಲಿನಲ್ಲಿ ಪಠ್ಯ ಮುಂದುವರೆದ ಉದಾಹರಣೆಗಳಿವೆ. ಸದ್ಯ ದೊರೆತ ಇನ್ನೊಂದು ಗೋಸಾಸದಲ್ಲಿ ಗೋಸಾಸ ದಾನ ಮಾಡಿದ ಕಾಲ ಮತ್ತು ವ್ಯಕ್ತಿಯ ಹೆಸರುಗಳಿದ್ದರೂ ಅಕ್ಷರಗಳ ಸ್ವರೂಪ ಭಿನ್ನವಾಗಿದೆ ಎನ್ನುವುದನ್ನು ಗಮನಿಸಬೇಕು.

ಮಹಾ ಸಾಮಂತ ಕನ್ನಯ್ಯನು ಬನವಾಸಿ ೧೨೦೦೦ವನ್ನು ಆಳುತ್ತಿರುವಾಗ, ಎಡೆವೊಳಲೆಳ್ಪತ್ತು ವಿಭಾಗವನ್ನು ಪೊಲೆಗ ನಾಳ್ಗಾವುಂಡನಾಗಿ ಆಳುತ್ತಿದ್ದ ಮತ್ತು ಊರ ಗಾವುಂಡನಾಗಿ ಸಿಂಗ ಎನ್ನುವವ ಆಳುತ್ತಿದ್ದನೆಂಬ ಉಲ್ಲೇಖಗಳನ್ನು ತಿಳಿಸುತ್ತ ಅಪೂರ್ಣಗೊಳ್ಳುತ್ತದೆ. ಶಾಸನವು ತ್ರುಟಿತ ಮತ್ತು ಅಪೂರ್ಣವಾಗಿ ಕೊನೆ ಕಾಣುವುದರಿಂದ ವಿವರಗಳು ಲಭ್ಯವಿಲ್ಲ.

೧ . . . . ಮಹಾಸಬ್ದ ಮಹಾ ಸಾಮನ್ತನ–
೨ ಧಿಪತಿ ಶ್ರೀಮತ್ಕನ್ನಯ್ಯ ಬನವಾಸೀ ಪ–
೩ ನ್ನಿಚ್ಛಾಸಿರಮನಾಳೆ @ ಶ್ರೀಮತ್ ಎಡೆ–
೪ ವೊಟಲೆಟ್ಪತ್ತರ್ಕ್ಕೆ ಪೊಲೆಗ ನ(ನಾ)ಟ್ಗಮುಣ್ಡು–
೫ ಗೆಯ್ಯೆ ಸಿಙ್ಗನೂರ್ಗ್ಗಮುಣ್ಡುಗೆಯ್ಯೆ

ಕ್ಯಾಸನೂರು

೩

ಈಶ್ವರ ಗುಡಿ ಮುಂದೆ ಬಿದ್ದಿರುವ ಶಾಸನ

ಕ್ರಿ.ಶ. ೧೧೩೨

೩' ಅಗಲ ಮತ್ತು ೫' ಎತ್ತರದ ಕರಿಕಲ್ಲಿನ ಶಾಸನವಿದಾಗಿದೆ. ಮೇಲಿನ ೧'ಯ ಭಾಗದಲ್ಲಿ ಸೂರ್ಯ-ಚಂದ್ರ, ಶಿವಲಿಂಗವನ್ನು ಪೂಜಿಸುತ್ತಿರುವ ಪೂಜಾರಿ, ಕುಳಿತ ನಂದಿ ಮತ್ತು ಕರುವಿಗೆ ಹಾಲೂಡುತ್ತಿರುವ ಆಕಳಿನ ಉಬ್ಬುಶಿಲ್ಪಗಳಿವೆ.

ಕಲ್ಯಾಣ ಚಾಲುಕ್ಯ ಚಕ್ರವರ್ತಿ ತ್ರಿಭುವನಮಲ್ಲ ೬ನೆಯ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದಲ್ಲಿ, ಕದಂಬ ಮಹಾ ಮಂಡಳೇಶ್ವರ ತೈಲಪದೇವರ ಕುಮಾರ ಮಲ್ಲಿಕಾರ್ಜುನ ದೇವರು ಬನವಾಸೆ ಪನ್ನಿರ್ಚ್ಛಾಸಿರ ಮತ್ತು ಪಾನುಂಗಲ್ಲೈ ನೂರುಗಳನ್ನು ಪಾಲಿಸುತ್ತಿದ್ದಾಗ, ಎಡೆವೊಳಲೆಪ್ಪತ್ತರ ಕೆಸಲೂರಿಗೆ ಬಂದು ಅಲ್ಲಿಯ ರಾಮೇಶ್ವರ ದೇವರಿಗೆ ಮತ್ತು ಅಮೃತೇಶ್ವರ ದೇವರಿಗೆ ಬೊಪ್ಪೆಯಜೀಯರ ಕಾಲನ್ನು ತೊಳೆದು ಕೈಧಾರೆ ಎರೆದು ಹೊಲತಿಕೆರೆಯ ಕೆಳಗಿನ ಭೂಮಿಯನ್ನು ದಾನವಾಗಿ ಬಿಟ್ಟದ್ದನ್ನು ತಿಳಿಸುತ್ತದೆ. ಇದಲ್ಲದೆ ಸೆಗರ ಬರ್ಮ ಗಾಮುಣ್ಡ, ಚಾವ ಗಾಮುಣ್ಡ ಮತ್ತು ಕೊಣ್ಡ ಗಾವುಣ್ಡರು ಹಾಗೂ ಅರುವತ್ತೊಕ್ಕಲು ಸೇರಿ ಬೊಪ್ಪೆಯಜೀಯ ಪಂಡಿತರಿಗೆ ಬಿಟ್ಟ ಮತ್ತೊಂದು ದತ್ತಿಯನ್ನು ದಾಖಲಿಸುತ್ತದೆ.

ಶಾಸನದಲ್ಲಿ ಬರುವ "ಯ್ಯೆವತ್ತ[ಂ*]ಟನೆಯ ಪರಿಧಾವಿ ಸಂವಚ್ಚರದ ಚೈತ್ರ ಸುದ್ಧ ಪಂಚಮಿ ಬ್ರೆಹಸ್ಪತಿವಾರದನ್ದು" ಎಂಬ ಮಿತಿಯು ಕ್ರಿ.ಶ. ೧೧೩೨ ಮಾರ್ಚ್ ೨೩ ಬುಧವಾರ ವಾಗಿದೆ. ಆದರೆ ಕಲ್ಯಾಣ ಚಾಲುಕ್ಯ ತ್ರಿಭುವನಮಲ್ಲದೇವನ ಕಾಲವು ಕ್ರಿ.ಶ.೧೧೨೬ ಕ್ಕೆ ಕೊನೆಗೊಂಡಿದೆ.

೧ @ ನಮಸ್ತುಂಗ ಸಿರಸ್ತುಂಗ ಚನ್ದ್ರ ಚಾಮರ ಚಾರವೇ ತ್ರೈಳೋಕ್ಯ ನಗರಾರಂಭ

೨ ಮೂಲಸ್ತಂಭಾಯ ಸಂಭವೇ ॥ ನಮಃ ಶಿವಾಯ ॥

೩ ಸ್ವಸ್ತಿ ಸಮಸ್ತ ಪ್ರಸಸ್ತಿ ಸಹಿತಂ ಶ್ರೀ ಪ್ರಿಥ್ವೀವಲ್ಲಭಂ ಮಹಾರಾಜಾಧಿ-

೪ ರಾಜಂ ಪರಮೇಸ್ವರಂ ಪರಮ ಭಟಾರಕಂ ಸತ್ಯಾಸ್ರಯ

೫ ಕುಳತಿಳಕಂ ಚಾಳುಕ್ಯಾಭರಣಂ ಸ್ರೀಮತ್ರಿಭುವನಮಲ್ಲ-

೬ ದೇವರ ವಿಜಯರಾಜ್ಯಮುತ್ತರೋತ್ತರಾಭಿವ್ರಿದ್ಧಿ ಪ್ರವರ್ದ್ಧಮಾನ-

೭ ಮಾಚನ್ದ್ರಾರ್ಕ್ಕ ತಾರಂಬರಂ ಸಲುತ್ತಮಿರೆ ತತ್ಪಾದ ಪದ್ಮೋ-

೮ ಪಜೀವಿ ॥ ಸ್ವಸ್ತಿ ಸಮಧಿಗತ ಪಞ್ಚಮಹಾಸಬ್ದಂ ಮ-

೯ ಹಾಮಣ್ಡಳೇಸ್ವರಂ ಬನವಾಸಿ ಪುರವರಾಧೀಸ್ವರಂ ಜಯ-

೧೦ ನ್ತಿ ಮಧುಕೇಸ್ವರದೇವರ ಲಬ್ಧ ವರಪ್ರಸಾದ ಮ್ರಿಗಮದಾಮೋದಂ ತ್ರಿ(ತ್ರ್ಯ)-

೧೧ ಕ್ಷ ಕ್ಷ್ಮಾಸಂಭವಂ ಚತುರಾಶೀತಿ ನಗರಾಧಿಷ್ಟಿತಂ ಲ-

೧೨ ಲಾಟ ಲೋಚನಂ ಚತುರ್ಬ್ಭುಜ ಜಗದ್ವಿ[ದಿ*]ತಾಷ್ಟಾ ದಸಾಸ್ವಮೇಧ ದೀಕ್ಷಾ

೧೩ ದೀಕ್ಷಿತಂ ಹಿಮವದ್ಗಿರೀನ್ದ್ರರುನ್ದ್ರ ಸಿಕರೀಸಕ್ತಿ ಸಂಸ್ಥಾಪಿತ ಸಿಳಾಸ್ಥಂಭಂ ಬದ್ಧಮ-

೧೪ ದಗಜ ಮಹಾಮಹಿಮಾಭಿರಾಮಂ ಕಾಡಂಬಚಕ್ರಿ ಮಯೂರವರ್ಮ್ಮ ಮಹಾ ಮ-

೧೫ ಹೀಪಾಳ ಕುಳಭೂಷಣಂ ಪೆರ್ಮ್ಮಟ್ಟಿತೂರ್ಯ್ಯ ನಿರ್ಗ್ಘೋಷಣಂ ಸಾಕಾಚರೇನ್ದ್ರ ಧ್ವಜ

೧೬ ವಿರಾಜಮಾನಂ ಮಾನೋತ್ತುಂಗ ಸಿಙ್ಘಲಾಂಚನ ದತ್ತಾರ್ತ್ತಿ ಕಾಂಚನ ಸಮರ ಜಯಕಾರಣಂ

೧೭ ಕಡಂಬರಾಭರಣಂ ಮಾರ್ಕ್ಕೊಳುವರ ಗಂಣ್ಡಂ ಪ್ರತಾಪಮಾರ್ತ್ತಣ್ಡಂ ಮಣ್ಡಳಿಕಗಣ್ಡ ಬ

೧೮ ಂಗಾಱಂ ನತ್ಯಖಿಳ ನಾಮಾವಳಿ ವಿರಾಜಿತರಪ್ಪ ಸ್ರೀಮನ್ಮಹಾಮಂಣ್ಡಳೇಸ್ವರಂ ತೈ-

೧೯ ಲಪದೇವರ ಕುವುಾರ ವೀರಗಂಣ್ಡೇಭ ಮಲ್ಲಿಕಾರ್ಜ್ಜುನದೇವರು ಬನವಾಸೆ ಪನ್ನಿರ್ಚ್ಛಾಸಿರಮಂ ಪಾ-

೨೦ ನುಂಗಲ್ಲೈನೂಱುಮಂ ಸುಕಸಂಕತಾವಿನೋದದಿಂ ರಾಜ್ಯಂಗೆಯುತ್ತಮಿರ್ದ್ದು ಎಡೆವೊ

೨೧ ಳಲೆಪ್ಪ[ತ್ತ*]ಕಂ ತಲೆವನ್ದು ಕೆಸಲೂರ ರಾಮೇಸ್ವರದೇವರ್ಗ್ಗ ಅಮ್ರಿತೇಸ್ವರ ದೇವರ್ಗ್ಗೆ ಬೊಪ್ಪೆಯಜೀಯರ್ಗ್ಗೆ ಕಾಲಂ

೨೨ ಕರ್ಚ್ಚಿ ಕೈಯಿ ಧಾರೆಯೆಱದು ಬಿಟ್ಟ ಧರ್ಮ್ಮಂ ಹೊಲತಿಕೆಱೆಯ ಕೆಳಗೆ ಮುಗುಳಿ ಕಟ್ಟದೊಳಗೆ ಬಿಟ್ಟ ಧರ್ಮ್ಮ ಗದೆ(ದ್ದೆ)
ಮತ್ತರೆ[ರ*]ಡು

೨೩ ಯ್ಯೆವತ್ತ[ಂ*]ಟನೆಯ ಪರಿಧಾವಿ ಸಂವಚ್ಚರದ ಚೈತ್ರ ಸುದ್ಧ ಪಂಚಮಿ ಬ್ರೆಹಸ್ಪತಿವಾರದನ್ದು ಬಿಟ್ಟ ಧರ್ಮ್ಮ

೨೪ ಸೆಗರ ಬರ್ಮ್ಮ ಗಾಮುಣ್ಡನು ಚಾವ ಗಾಮುಂಣ್ಡನು ಕೊಣ್ಡ ಗಾಮುಣ್ಡನುಂ ಅಱುವತೆ(ತ್ತೊ)ಕ್ಕಲುಂ

೨೫ ಮಿರ್ದ್ದು ಬೊಪ್ಪೆಯಜೀಯ ಪಂಡಿತರಿಗೆ ಇ ಸ್ಥಾನಮಂ ಕ(ಕಾ)ಲಂ ಕರ್ಚ್ಚಿ ಕೈಧಾರೆ ಎಱದು ಕೊಟ್ಟರು

೨೬ ಯೀ ಧರ್ಮ್ಮಮಂನಳಿದಂಗೆ ವಾರಣಾಸಿಯ ಗುರುಕ್ಷೇತ್ರ ಗಂಗೆಯ ತಡಿಯಲು ಸಾಯಿರ ಕ–

೨೭ ವಿಲೆಯುಮಂ ಸಾಯಿರ ಬ್ರಾಮಣರುಮಂ ಅಳಿದ ಪಂಚ ಮಹಾಪಾತಕನಕ್ಕು ॥

ಕ್ಯಾಸನೂರು

೪

ಊರಿಗೆ ಉತ್ತರ ಮಾರ್ಗದಲ್ಲಿ ಮಿಟ್ಟಿಯ ಮ್ಯಾಲೆಯಿರುವ ವೀರಗಲ್ಲು ॥

ಕ್ರಿ.ಶ. ೧೧೭೬

ಮೆಕೆಂಝಿ ಸಂಗ್ರಹ

ಕದಂಬ ಚಕ್ರವರ್ತಿ ಸೋವಿದೇವರಸನು ಆಳುತ್ತಿರುವಾಗ, ಕ್ಯಾಸನೂರ ಠಾವಿನಲ್ಲಿ ಮುದ್ದವ್ವೆಯ ಮಗನಾದ ಸುರವ್ವೆಯ್ಯ ಕ್ಯಾಸನೂರ ತುರುಗೋಳಿನಲ್ಲಿ ಹೋರಾಟ ಮಾಡಿ, ತುರುಗಳನ್ನು ಮರಳಿ ತಂದು ಸುರಲೋಕ ಪ್ರಾಪ್ತನಾದನೆಂದು ಶಾಸನವು ತಿಳಿಸುತ್ತದೆ.

"ಸೋವಿದೇವರಸರೆರಡನೆಯ ದುರ್ಮುಖಿ ಸಂವತ್ಸರದ ಜೇಷ್ಟ ಶುದ್ಧ ೧೦ ಮಂಗಳವಾರದಂದು" ಎಂಬ ಶಾಸನೋಕ್ತ ಮಿತಿಯು ಕ್ರಿ.ಶ. ೧೧೭೬ರ ಮೇ ೨೦ ಗುರುವಾರವಾಗಿದೆ.

ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮನ್ಮಹಾಮಂಡಲೇಶ್ವರಂ । ಬನವಾಸಿ ಪುರವರಾಧೀಶ್ವರಂ । ಜಯಂತಿ ಮಧುಕೇಶ್ವರ ಲಬ್ಧ ವರಪ್ರಸಾದರುಂ । ಸಾಹಸೋತ್ತುಂಗನುಂ । ಸತ್ಯ ರಾಧೇಯನುಂ । ಕದಂಬ ಕುಲಕಮಲ ಮಾರ್ತಾಂಡನುಂ । ಕಲಿಗಳಂಕುಶಂ । ಸೋವಿದೇವರಸರೆರಡನೆಯ ದುರ್ಮುಖಿ ಸಂವತ್ಸರದ ಜೇಷ್ಟ ಶುದ್ಧ ೧೦ ಮಂಗಳವಾರದಂದು ಕ್ಯಾಸನೂರ ಠಾವಿನಲು ಮುದ್ದವ್ವೆಯ ಸುರವ್ವೆಯ್ಯ ಕ್ಯಾಸನೂರೋತ್ತರದ ತುರುವಂ ಮರಳ್ಚಿ ಸುರಲೋಕ ಪ್ರಾಪ್ತನಾದಂ ॥ ಮಂಗಳ ಮಹಾಶ್ರೀ ಶ್ರೀ ಶ್ರಿ [॥*]

ಕ್ಯಾಸನೂರ

೫

ಊರಿಗೆ ಉತ್ತರ ಮಾರ್ಗದಲ್ಲಿ ಮಿಟ್ಟಿಯ ಮ್ಯಾಲೆಯಿರುವ ವೀರಗಲ್ಲು ॥

ಕ್ರಿ.ಶ. ೧೨೪೧

ಮೆಕೆಂಝಿ ಸಂಗ್ರಹ

ಹಾನುಗಲ್ಲಿನ ಕದಂಬ ವೀರಮಲ್ಲಿದೇವ ಆಳುತ್ತಿರುವಾಗ, ಯಡೆವೊಳಲ ಕಂಪಣದಲ್ಲಿರುವ ಕ್ಯಾಸನೂರ ಅಕ್ಕಸಾಲೆ ಬೀರೋಜನ ಮಗ ಬೊಪ್ಪೋಜನು ತಾವಸೆ(ತಾವಂಶಿ)ಯ ಸಿರಿಗೆರೆವೊಳೆಯ ಹಲಶಿನಡಗೆಯಲ್ಲಿ ಹೋರಾಡಿ, ವಂಟೆಯ ಕುಳ್ಳಕದಂಬರೆ(?)ಯನ್ನು ಮತ್ತು ಕುಂದವರ (ಕುಂದೂರು)ಗಳನ್ನು ಗೆದ್ದು ಸುರಲೋಕಪ್ರಾಪ್ತನಾದನೆಂದು ಶಾಸನವು ವಿವರಿಸುತ್ತದೆ. ಬಾವೋಜನ ಮಗನಾದ ಬೀರೋಜ ಮಗನಿಗಾಗಿ ವೀರಗಲ್ಲನ್ನು ನಿಲ್ಲಿಸಿದನಂತೆ.

"ವೀರಮಲ್ಲಿದೇವರ ವಿಜಯರಾಜ್ಯಾಭುದಯದ ಶಖ ೧೧೬೩ನೆಯ ಪ್ಲವ ಸಂವತ್ಸರದ ಪುಷ್ಯ ಶುಧ ಪುಣಮಿ ಬೃಹಸ್ಪತಿವಾರದಂದು" ಎಂಬ ಶಾಸನೋಕ್ತ ಮಿತಿಯು ಕ್ರಿ.ಶ.೧೨೪೧ರ ೧೯ ಡಿಸೆಂಬರ್ ಗುರುವಾರವಾಗಿದೆ.

ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾ ಮಂಡಲೇಶ್ವರಂ । ಬನವಾಸಿ ಪುರ ವರಾಧೀಶ್ವರಂ । ಜಯಂತಿ ಮಧುಕೇಶ್ವರ ಲಬ್ಧ ವರಪ್ರಸಾದಂ । ಕಲಿಗಳಂಕುಶ ವೀರಮಲ್ಲಿದೇವರ ವಿಜಯರಾಜ್ಯಾಭುದಯದ ಶಖ(ಕ) ೧೧೬೩ನೆಯ ಪ್ಲವಸಂವತ್ಸರದ ಪುಷ್ಯ ಶುಧ(ದ್ಧ) ಪುಣಮಿ ಬೃಹಸ್ಪತಿವಾರದಂದು ಯಡೆವೊಳಲ ಕಂಪಣದೊಳು . . . . . ಕೇಸನೂರ ಅಕ(ಕ್ಕ)ಸಾಲೆ ಬೀರೋಜನ ಮಗ ಬೊಪ್ಪೋಜ ತಾವಸೆಯ ಸಿರಿಗೆರೆವೊಳೆಯ ಹಲಶಿನಡಗೆಯಲ್ಲಿ ವಂಟೆಯ ಕುಳ್ಳ ಕದಂಬರೆಯರಗಿಸಿ ಕುಂದವರಂ ಗೆಲ್ದು ತಳ್ತಿರಿದು ಸುರಲೋಕಪ್ರಾಪ್ತನಾದಂ ॥ ಜಿತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ । ಕ್ಷಣ ವಿಧ್ವಂಶಿ(ಸಿ)ನೀ ಕಾಯೇ ಕಾ ಚಿಂತಾ ಮರಣೇ ರಣೇ ॥ ಬಾವೋಜನ ಮಗಂ ಬೀರೋಜಂ ಮಾಡಿಸಿದಂ । ಮಂಗಳ ಮಹಾ ಶ್ರೀ ಶ್ರೀ ಶ್ರೀ [॥*]

ಕ್ಯಾಸನೂರ

೬

ಈಶ್ವರ ಗುಡಿ ಮುಂದಿರುವ ಕಂಬದ ಮೇಲಿನ ಶಾಸನ

ಯಾದವ ಚಕ್ರವರ್ತಿ ವೀರ ರಾಮಚಂದ್ರದೇವನು ಆಳುತ್ತಿರುವಾಗ, ಆತನ ಮಹಾಪ್ರಧಾನ ಸರ್ವಾಧಿಕಾರಿ ನಾಳೊಯ್ಯ, ಅಮರಸೇನ ಪಂಡಿತರು, ನಾಳ್ಪ್ರಭು ಕೆಸಲೂರ ಸಿಂಗ ಗಾಮುಂಡರನ್ನು ಹೆಸರಿಸುತ್ತ ಆತನ ತಮ್ಮ ಮುದಿಗಾಮುಂಡನ ಮಗ ಮಾಡಿಸಿದ ಎಂದಿದೆ.

೧ ಸ್ವಸ್ತಿ ಶ್ರೀಮತು ಯಾದವ ನಾರಾಯ–

೨ ಣ ಭುಜಬಳ ಪ್ರವುಢ ಪ್ರತಾಪ ಚಕ್ರ–

೩ ವರ್ತ್ತಿ ಶ್ರೀ ವೀರ ರಾಮಚಂದ್ರದೇವ ಜ–

೪ ಯ ರಾಜ್ಯೋದಯದ ೨೪ನೆಯ ವಾ .

೫ . ಸಂವತ್ಸ[ರ*] ಪುಷ್ಯ ಸು ೮ ಆದಿವಾರದಂ–

೬ ದು ಸ್ವಸ್ತಿ ಶ್ರೀಮನು ಮಹಾಪ್ರಧಾನ
೭ ಸರ್ವ್ವಾಧಿಕಾರಿ ನಾಳೊಯ್ಯ ಶ್ರೀಯಭ-
೮ ಮರಸೇನಪಂಡಿತರು ಶ್ರೀಮಂನಾ
೯ ಳ್ಪ್ರಭು ಕೆಸಲೂರ ಸಿಂಗ [ಗ*]ಮುಡನ ತಂ-
೧೦ ಮ ಮುದಿಗಮುಡನ ಮಗನ್ ಕೆಸಲೂ-
೧೧ ರ ವಿಲಾಕುಮಳಭೆಯರ ಲೊದೇರ ಹೆಗ-
೧೨ ಕ(ಲ)ನೊಡ್ಡಿ ಸವಾಲ್ಪಿ ಮಾಡ್ಸಿದ [॥*]*

* ಕೊನೆಯ ೨ ಸಾಲುಗಳ ಅಕ್ಷರಗಳು ಅಸ್ಪಷ್ಟವಾಗಿವೆ.

ಕ್ಯಾಸನೂರ

೭

ಹನುಮಂತದೇವರ ಗುಡಿಯ ಮುಂದಿನ ಮಾಸ್ತಿಶಾಸನ

ಸು. ೧೭-೧೮ನೆಯ ಶ.

ಕೆಸನೂರ ಮಲ್ಲಗೌಡರ ಮಗ ಹಲಿಗೌಡನು ಊರಳಿವಿನಲ್ಲಿ ಸತ್ತಾಗ, ಬಹುಶಃ ಆತನ ಹೆಂಡತಿ ಸಹಗಮನ ಮಾಡಿದುದನ್ನು ಸೂಚಿಸುತ್ತದೆ. ಆದರೆ ಶಾಸನವು ಅಸ್ಪಷ್ಟವಾಗಿ ಸವೆದು ಹೋಗಿರುವುದರಿಂದ ವಿವರಗಳು ತಿಳಿಯುವುದಿಲ್ಲ.

೧ . . . .
೨ . . . . . (ಸಯರ) . .
೩ . . . . (ಸೆ ರಣ)
೪ (ನು ಊರು ಹಳಿ) . .
೫ (ಮಾಡಿಸಿ ಕೊಟ) . . .
೬ ಕೆಸನೂರ ಮಲ್ಲ
೭ ಗಉಡರ ಮ-
೮ ಗ ಹಲಿ ಗಉಡನು
೯ ಸುರಲೋಕ ಪ್ರಾ[ಪ್ತ*]-
೧೦ ನಾದನು ಮಂಗಳ
೧೧ ಮಹಾ ಶ್ರೀ ಶ್ರೀ*

* ಮೊದಲಿನ ೫ ಸಾಲುಗಳು ಸವೆದು ಅಸ್ಪಷ್ಟವಾಗಿವೆ.

ಕ್ಯಾಸನೂರು

೮

ಈಶ್ವರ ಗುಡಿ ಮುಂದಿರುವ ಕಂಬದ ಮೇಲಿನ ಶಾಸನ

ಸು. ೧೭-೧೮ನೆಯ ಶ.

ಈಶ್ವರನ ಪ್ರತಿಷ್ಠಾಪನೆ ಮಾಡಿ ಬಿಟ್ಟ ದತ್ತಿಯನ್ನು ತಿಳಿಸುವಂತಿದೆ. ಶಾಸನ ಅಸ್ಪಷ್ಟವಾಗಿರುವುದರಿಂದ ವಿವರಗಳು ತಿಳಿಯುವುದಿಲ್ಲ.

೧ ಶಿವಚಾರವಾದ ಪ್ರತಿಷ್ಟೆಯ
೨ ಮಾಡುವರ್ಗ್ಗೆ ನಿವೇದ್ಯಯಭಿಷೇಕ
೩ ಕ್ಕೆ ಕೊಳನೂರ . . . . ಕಾ . . .
೪ ಆ . . . . . . ॥ ಪ್ರತಿಪಾ-
೫ ಳಿಸೂದು ಮಂಗಳ ಮಾಹಾ
೬ ಶ್ರೀ ಶ್ರೀ ಶ್ರೀ ॥ ಸ್ವದತ್ತಂ ಪರದತ್ತಂ
೭ ವಾ ಯೋ ಹರೇತಿ ವಸುಂಧರಾ
೮ ಷಷ್ಟಿರ್ವರ್ಷ್ ಸಹಸ್ರಾಣಿ ವಿಷ್ಟಾ-
೯ ಯಾಂ ಜಾಯತೇ ಕ್ರಿಮಿ ॥

ಕ್ಯಾಸನೂರ

೯

ವಿಜಯಕಾಂತ ಪಾಟೀಲರ ಮನೆಯ ಹಿತ್ತಲಿನಲ್ಲಿರುವ ಶಾಸನ

ಸು. ೧೯-೨೦ ಶ.

೧ ಹಾ(ವಾ)ಲೆಕಣಿ(ವೆ)ವತಿ ಮ-
೨ ಟದ ಸ್ತಳಕೆ ನೇಡಿದ
೩ ಮಟದ ದತ್ತಿಯ ಸೀಮೆ
೪ ಯ ಕಲ್ಲು

ಕ್ಯಾಸನೂರ

೧೦

ಹನುಮಂತದೇವರ ಗುಡಿ ಮುಂದೆ ನಲ್ಲಿಸಿದ ಶಾಸನ

ಸು. ೧೯-೨೦ ಶ.

ಇತ್ತೀಚಿನ ಈ ಶಾಸನವು ಕವಾರ ಬಧನಾಯಕನ ಮಾನ್ಯದ ಹೊಲವಿದೆಂದು ದಾಖಲಿಸುತ್ತದೆ.

೧ ತಸರಾ ಶ್ರಾವಣ ಬ . ಚಮಿ
೨ ಕವಾಜಿ ಬಧನಾಯ-
೩ ಕನ ಮಾಂನ್ಯ ಕೊಟ ಪೊ
೪ ಸೆ(ಲ) ೧

ದೇವಿಕೊಪ್ಪದ ಹೊಸ ಶಾಸನಗಳು

ಹಾನುಗಲ್ಲು ತಾಲೂಕಿನ ಕ್ಯಾಸನೂರು ಮತ್ತು ಹಿರೇಕಾಂಶಿಗಳ ಮಧ್ಯದಲ್ಲಿರುವ ಬೇಚಿರಾಕ್ ಹಳ್ಳಿಯೇ

ದೇವಿಕೊಪ್ಪ. ಬಹುಶಃ ಅಲ್ಲಿ ದೊರೆತಿರುವ ದೇವಿ ವಿಗ್ರಹವೇ ಇದಕ್ಕೆ ಕಾರಣವಾಗಿದೆ ಎನಿಸುತ್ತದೆ. ಹೊಂಡದ ಅಂಚಿನ ದಿಬ್ಬದ ಮೇಲೆ ಇರುವ ಈ ಗುಡಿಯನ್ನು ಇತ್ತೀಚೆಗೆ ಕಟ್ಟಲಾಗಿದ್ದು, ಈ ರುದ್ರ ಸುಂದರ ವಿಗ್ರಹವು ೪–೫ ನೂರು ವರ್ಷಗಳಷ್ಟು ಹಳೆಯದೆನಿಸುತ್ತದೆ. ನಾಲ್ಕಡಿ ಎತ್ತರದ ವಿಗ್ರಹಕ್ಕೆ ಹಣೆಗಣ್ಣು ಇರುವುದು ವಿಶೇಷವಾಗಿದೆ. ದೇಗುಲದ ಎದುರಿಗೆ ಕೆಳಗಿನ ಶಾಸನಗಳನ್ನು ತಂದು ಇಡಲಾಗಿದೆ.

೧

ಲೋಕೇಶ್ವರಿ ದೇವಸ್ಥಾನದ ಮುಂದಿನ ಶಾಸನ

ಸು. ಕ್ರಿ. ಶ. ೭೫೦

ಶಾಸನದ ಮೇಲ್ಭಾಗ ಒಡೆದಿದೆ ಮತ್ತು ಮೇಲ್ಭಾಗದ ಬಲಭಾಗವೂ ತ್ರಿಕೋನಾಕಾರದಲ್ಲಿ ಒಡೆದಿದೆ. ಪೃಥುವೀಸೇನ ಬನವಾಸಿ ಪನ್ನಿರ್ಚ್ಛಾಸಿರವನ್ನು ಆಳುತ್ತಿರುವಾಗ, ಅರಕಸೇನ ಬಹುಶಃ ಏನನ್ನೋ ಆಳುತ್ತಿರುವಾಗ, ಕಗಸಾಸಿಯ ಮಾಳಾದನ ನಾಳ್ಗಾವುಂಡನಾಗಿದ್ದಾಗ, ಬಾದ್ದಗಿಯರ ಬಾಯಿ ದಾನ ನೀಡಿದುದನ್ನು ತಿಳಿಸುತ್ತದೆ. ಸೇನವರಸ ದೋಸಿಯರಸ ಈ ಶಾಸನವನ್ನು ಮಾಡಿಸಿದನಂತೆ.

ಈ ಶಾಸನದಲ್ಲಿ ಬರುವ ಸೇನವರಸ ದೋಸಿಯರಸನ (ದೋಸಿ, ದೋಸಿಗ, ದೋಸಿಯರ) ಕುರಿತಾಗಿ ಈಗಾಗಲೇ ಚಿಕ್ಕ ನಂದೀಹಳ್ಳಿಯ ಬಾದಾಮಿ ಚಾಲುಕ್ಯ ೨ನೆಯ ವಿಕ್ರಮಾದಿತ್ಯನ ೨ ಶಾಸನಗಳು (೮ನೆಯ ಶ.), ೨ನೆಯ ಕೀರ್ತಿವರ್ಮನ ದಿಡಗೂರ ಮತ್ತು ಮಲ್ಲೇನಹಳ್ಳಿ ಶಾಸನಗಳು (ಸು. ಕ್ರಿ.ಸ. ೭೫೦), ವಕ್ಕಲೇರಿ ತಾಮ್ರಪಟಗಳು (ಶ್ರೀ ದೋಸಿರಾಜ ವಿಜ್ಞಾಪನಯಾ ಬಿಟ್ಟ ದತ್ತಿಯ ಉಲ್ಲೇಖ. ಕ್ರಿ.ಶ. ೭೫೭), ಸಿಡೇನೂರ ಶಾಸನ (ಸು. ಕ್ರಿ.ಶ.೭೬೦)ಗಳಲ್ಲಿ ಉಲ್ಲೇಖಗಳಿವೆ. ಚಿಕ್ಕ ನಂದೀಹಳ್ಳಿ ಶಾಸನದಲ್ಲಿ ಮುಗುಂದ ನಾಡನ್ನು ಆಳುತ್ತಿದ್ದ ಈತ ಮುಂದಿನ ಶಾಸನಗಳಲ್ಲಿ ಪದೋನ್ನತಿ ಹೊಂದಿ ಬನವಸೆ ೧೨೦೦೦ದ ಮಂಡಲೇಶ್ವರನೆಂದು ಕರೆಸಿಕೊಳ್ಳುತ್ತಾನೆ. ಬಾದಾಮಿ ಚಾಲುಕ್ಯ ೨ನೆಯ ವಿಕ್ರಮಾದಿತ್ಯ ಮತ್ತು ೨ನೆಯ ಕೀರ್ತಿವರ್ಮರಿಬ್ಬರ ಕಾಲದಲ್ಲಿ ಸೇವೆ ಸಲ್ಲಿಸಿದ ಈತ ಬಾದಾಮಿ ಚಾಲುಕ್ಯರು ಮತ್ತು ರಾಷ್ಟ್ರಕೂಟರ ಮಧ್ಯೆ ನಡೆದ ಕಾಳಗದಲ್ಲಿ ಸೇಂದ್ರಕ ಶ್ರೀ ಪೊಗಿಲ್ಲಿಯೊಂದಿಗೆ ಮರಣವನ್ನು ಹೊಂದಿದುದನ್ನು ಸಿಡೇನೂರ ಶಾಸನವು ದಾಖಲಿಸುತ್ತದೆ.

ದೋಸಿಯರನನ್ನು ಕುರಿತು ಡಾ. ಶ್ರೀನಿವಾಸ ಪಾಡಿಗಾರ ಅವರು ತಮ್ಮ ಕೃತಿ 'Chalukyas of Badami' ಯ ಅಡಿ ಟಿಪ್ಪಣಿಯೊಂದರಲ್ಲಿ "This chief is known from stone inscriptions of Kirtivarma and he was incharge of Banavase nadu. He belonged to the matura vamsa as known from inscriptions of his descendents. Dosi figures as the governor of Banavasi 12000 in some more inscriptions." ಎಂದು ಹೇಳಿದ್ದು, ಮೇಲ್ಕಾಣಿಸಿದ ಶಾಸನಗಳನ್ವಯ ಈತ ಮಾಟೂರ ವಂಶದವನಲ್ಲ, ಸೇನವಾರ ವಂಶಕ್ಕೆ ಸೇರಿದವನೆಂಬುದು ಖಚಿತವಾಗುತ್ತದೆ.

ಈ ಸೇನವರರು ಸೇನವಾರ, ಸೇನಾವರ, ಸೇಣವಾರ ಇತ್ಯಾದಿ ಹೆಸರುಗಳಿಂದ ಕರೆಸಿಕೊಳ್ಳುತ್ತಿದ್ದರೆಂದು ಅವರ ಕುರಿತು ಲೇಖನವೊಂದನ್ನು ಬರೆದ ಡಾ. ಎಂ.ಬಿ. ನೇಗಿನಹಾಳ ಅವರು ತಿಳಿಸುತ್ತ, ೭ನೆಯ ಶತಮಾನದಿಂದ ೧೨ನೆಯ ಶತಮಾನದವರೆಗಿನ ಶಾಸನಗಳಲ್ಲಿ ಇವರ ಉಲ್ಲೇಖವಿದೆ ಎಂದು ವಿವರಗಳನ್ನು ನೀಡುತ್ತಾರೆ. ಕನತಿ ಶಾಸನವು ಇವರನ್ನು ಕೂಡಲೂರ ಪರಮೇಶ್ವರ, ಮೃಗೇಂದ್ರ ಲಾಂಛನ, ಫಣಿಧ್ವಜ ವಿರಾಜಮಾನ, ಖಚರ ತ್ರಿಣೇತ್ರರು ಎಂಬ ಬಿರುದುಗಳಿಂದ ವರ್ಣಿಸುತ್ತದೆ.

ಈ ಸೇನವಾರ ವಂಶಕ್ಕೆ ಸೇರಿದ ಇನ್ನೊಬ್ಬ ಪ್ರಮುಖ ವ್ಯಕ್ತಿ ಮಾರಕ್ಕೆ ಅರಸ. ಇವನನ್ನು ಕುರಿತು ೧೦ಕ್ಕೂ ಹೆಚ್ಚು ಶಾಸನಗಳು ಹಾನಗಲ್ಲು ಮತ್ತು ಹಿರೇಕೆರೂರು ತಾಲೂಕುಗಳಲ್ಲಿ ದೊರೆಯುತ್ತವೆ. ಈತ ರಾಷ್ಟ್ರಕೂಟ ೧ನೆಯ ಕೃಷ್ಣ ಮತ್ತು ಧ್ರುವರ ಕಾಲದಲ್ಲಿ ಸೇವೆ ಸಲ್ಲಿಸಿ 'ಅಕಾಲವರ್ಷ ಶ್ರೀ ಪೃಥುವೀ ವಲ್ಲಭ ಸೇನಾವರ' ಎಂದು ಕರೆಸಿಕೊಂಡ ನಂತರ ಸು. ಕ್ರಿ.ಶ.೭೮೦ರಲ್ಲಿ ಮರಣ ಹೊಂದುತ್ತಾನೆ. ಇವರಿಬ್ಬರೂ ಬಹುಶಃ ತಂದೆ ಮಕ್ಕಳಾಗಿರಬಹುದು ಎಂದು ತೋರುತ್ತದೆ. ಆದರೆ ಇದಕ್ಕೆ ಸಂಬಂಧಿಸಿ ಪೂರಕವಾದ ಯಾವುದೇ ದಾಖಲೆಗಳಿಲ್ಲ. ಶಾಸನದ ಲಭ್ಯ ಪಠ್ಯ ಇಂತಿದೆ–

೧ . . . . . . ಕನ್ನವಳ . . . ಕರಾ

೨ . . . . ಸ ರಾಟ್ಟಗರನ್ ಪೃಥುವೀಸೇನ

೧ . . . . ನ್ನಿಚ್ಛಾಸಿರಕಮಾಳೆ ಅರಕಸೇನ

೨ . . . . ಗೆಯೆ ಕಗಸಾಸಿಯಾ ಮಾಳಾದನಕ್ಕೆ

೩ . . . . ದನಟರ ನಳ್ಗಮುಣ್ಡುಗೆಯೆ ಎಟ್ಟಿತ

೪ . . . . ಸಾಸಿರವರ ಸಹಿತಮಾಗೆ ಕೊಟ್ಟಿದಿರನೆ

೫ . . . . ನಾಟ್ಗಾಮು[ಣ್ಡ*]ಗೆಯೆ ಕಮ ಬಾದ್ದಗಿಯರ ಬಾಯಿ

೬ . . . . ಲ್ಗಿಟ್ಟಣಿಬದ್ದತ್ಕಾ ಪಟಿಗೆಯ್ದೊ ನೊಳ

೭ . . . . ನಪ್ಪುಮೊ ಕನ್ದುಪ ನುರುಂದ ದಣ್ಡ ಕೊಳ್ಗೆ

೮ ರಳಿದೊಗೆ ಕರಟ್ಟೆ ಇಲ್ಲಿ ಸಾಬೊರ ಜಕೆನ

೯ ವೊಟಿಲ್ಕಿದ . ಮರದಗಿಯರ ಪಿಣ್ಬುಗರಟ್ಟಿ–

೧೦ ಯನ್ದಿದಿಸಿದನ್ ಬುದೊಕಜಸ್ಸಾನ್ ಮಾಸಿಯುಟ–

೧೧ ನ್ ಯಿಲ್ಗಿದಣಮಾನ್ನಿದಿ(ಜೆ)ಸಿದನ್ ದೋಸಿಯ–

೧೨ ರಸ ಕದೇಸಟದೊ ಸೇನವರಸ ಕೇದೋರಿದ–

೧೩ ನಟಿದೋ (ಗುಳಿ) ಮಹಾಪಾತಕನಾದೊಂ [||*]

ದೇವಿಕೊಪ್ಪ

೨

ಲೋಕೇಶ್ವರಿ ದೇವಸ್ಥಾನದ ಮುಂದಿನ ಶಾಸನ

ಸು. ಕ್ರಿ. ಶ. ೮೭೦

ರಾಷ್ಟ್ರಕೂಟ ಚಕ್ರವರ್ತಿ ಇಮ್ಮಡಿ ಇಂದ್ರನು ಆಳುತ್ತಿರುವಾಗ, ಬನವಾಸಿ ನಾಡನ್ನು ಶಂಕರಗಂಡನು ಪಾಲಿಸುತ್ತಿದ್ದನು. ಕೇಸವಯ್ಯನು ಜಮ್ಬೂರ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಮಾಸೆಯರ ಮಾರಮ್ಮ ಊರ ಗಾವುಂಡನಾಗಿದ್ದನು. ಆ ಸಮಯದಲ್ಲಿ ತುಱುವಳ್ಳರ ದೊರವಣ್ಣ ಎನ್ನುವವನು ತುಱುಗೋಳಿನಲ್ಲಿ ಸತ್ತು ಸ್ವರ್ಗಕ್ಕೆ ಸನ್ದನೆಂದು ಶಾಸನವು ತಿಳಿಸುತ್ತದೆ.

ಮೊದಲ ಪಟ್ಟಿಕೆ

೧ [ಸ್ವ*]ಸ್ಥಿ(ಸ್ತಿ) ಶ್ರೀ ಇನ್ದರವಲ್ಲ[ಹ*] ಪೃಥುವಿ ರ(ರಾ)ಜ್ಯ

ಎರಡನೆಯ ಪಟ್ಟಿಕೆ

೨ [ಗೆ*]ಯ್ಯೆ ಸಂಕರಗಣ್ಡ ಬನವಾಸಿ ನ(ನಾ)ಡಾಳೆ ಒದ

೩ . ಗು ಕೇಸವಯ್ಯನು ಜಮ್ಬೂಬರುವುಗೆಯ್ಯೆ ಮಾಸೆಯರ

ಮೂರನೆಯ ಪಟ್ಟಿಕೆ

೪ ಮಾರಮ್ಮ ಊರುಗವುಡುಗೆಯ್ಯೆ ಕಾಗುಗೆರ ತುಱುವ

೫ ಳ್ಳರ ದೊರವಣ್ಣ ತುಱುಗೊಳ್ಸತ್ತು ಸರ್ಗ್ಗಕೆ ಸನ್ದ [||*]

ದೇವಿಕೊಪ್ಪ

೩

ಲೋಕೇಶ್ವರಿ ದೇವಸ್ಥಾನದ ಮುಂದಿನ ಇನ್ನೊಂದು ಶಾಸನ

ಸು. ೯ನೆಯ ಶ.

ರಾಷ್ಟ್ರಕೂಟ ಚಕ್ರವರ್ತಿಗಳ ಕಾಲದ ಈ ಶಾಸನವು ಸವೆದು ಅಸ್ಪಷ್ಟವಾಗಿರುವುದರಿಂದ ವಿವರಗಳು ತಿಳಿದು ಬರುವುದಿಲ್ಲ. ವನವಾಸಿ ನಾಡ ಉಲ್ಲೇಖವಿದೆ. ಆ ಸಮಯದಲ್ಲಿ ವಿಜಯರಸ, ನಾಟಿಬ್ಬೊಯ್ಯ ಎನ್ನುವ ಅಧಿಕಾರಿಗಳು, ಜಯ್ಬುರಾ ಸಟ್ಟಿಯ ಎನ್ನುವ ಗಾಮುಂಡನ ಹೆಸರುಗಳಿವೆ. ಸ್ತ್ರೀ ದೇವತೆ(ಎಜಿತಿ) ಒಬ್ಬಳಿಗೆ ಬರುವ ಧನವೆಲ್ಲವನ್ನೂ ದಾನವಾಗಿ ಬಿಟ್ಟ ಕುರಿತು ಉಲ್ಲೇಖ ಮತ್ತು ಫಲಶ್ರುತಿಯೂ ಇದೆ.

೧ . . . .

೨ . . ಟೆ ಪೃಥುವೀ ರಾಜ್ಯ[ಗೆ*]ಯೆ ಪೃಥಿ–

೩ ವೀ ವಲ್ಲಭ ಮಹಾರಾಜರಾ ವನವಾಸಿ ಮ–

೪ ಣ್ಡಲಮಾಳೆ ವಿಜಯರಸರಾ ರಾಜ್ಯ

೫ ದು ರೆಟಳ್ಳೆ ನಲ್ಪಿ ಮಣ್ಗಿಬ್ಬೊನಾ ನಾ–

೬ ಟಿಬ್ಬೊಯ್ಯು(ಯ್ಯ) ಕೆಯೆ ಜಯ್ಬುರಾ ಸಟ್ಟಿಯ

೭ ಗಾಮುಡು ಕೆಯೆ ಕಾಗುಮಾಸಿಯಾನಾಳೆ–

೮ ಎತಿಯರ್ಕೆ ಬರ್ಪ್ಪ ಧನಮೆಲ್ಲಮಾನ್ಬ–

೯ ಟ್ಟ(ಟ್ಟಾ)ರ್ [||*] ಇದ ಕೆಡುವೊರ್ಪ್ಪಱ್ಬ ಮಹಾ ಪಾ–

೧೦ ತಕರಪ್ಪೋರ್*

* ಮುಂದಿನ ಕೆಲವು ಅಕ್ಷರಗಳು ಅಸ್ಪಷ್ಟವಾಗಿವೆ.

ದೇವಿಕೊಪ್ಪ

೪

ನಾಗನಗೌಡ ಸಂಕನಗೌಡ ಪಾಟೀಲ ದೇವಿಕೊಪ್ಪ ಅವರ ಹೊಲದಲ್ಲಿ

ಕ್ರಿ.ಶ.೧೨೭೦

೫೫" ಎತ್ತರ ೨೦" ಅಗಲ ಗಾತ್ರದ ಕರಿಕಲ್ಲಿನಲ್ಲಿ ಈ ಮಾಸ್ತಿಕಲ್ಲನ್ನು ಕೆತ್ತಿದೆ. ಮೊದಲನೆಯ ಸ್ತರದ ೧೦" ಭಾಗದಲ್ಲಿ ಚಂದ್ರ–ಆಕಳು–ಸೂರ್ಯನ ಉಬ್ಬುಶಿಲ್ಪಗಳಿವೆ. ಎರಡನೆಯ ಸ್ತರದ ೬" ಭಾಗದಲ್ಲಿ ಕೈಮುಗಿದು ಕುಳಿತ ದಂಪತಿ, ಶಿವಲಿಂಗ, ಪೂಜಾರಿ ಮತ್ತು ನಂದಿಗಳ ಉಬ್ಬುಶಿಲ್ಪಗಳಿವೆ. ಮೂರನೆಯ ಸ್ತರದಲ್ಲಿ ಕಂಬದಿಂದ ಹೊರಬಂದ ತೋಳು, ತೋಳಿನ ಮೇಲ್ಭಾಗದಲ್ಲಿ ದಂಪತಿಗಳು, ದಂಪತಿಗಳ ಮೇಲ್ಭಾಗದಲ್ಲಿ ಕೈಮುಗಿದುಕೊಂಡು ಸತಿ ಕುಳಿತಿದ್ದಾರೆ. ತೋಳಿನ ಕೆಳಗೆ ಬಿಲ್ಲು ಹಿಡಿದ ವೀರ ಮತ್ತು ಅವನ ಸೊಂಟ ಹಿಡಿದು ನಿಂತ ಸತಿ ಇದ್ದಾರೆ. ಕೆಳಗೆ ಎರಡು ಸಾಲುಗಳ ಅಪೂರ್ಣ ಶಾಸನ ಎದೆ. ಕೇವಲ ಮಿತಿಯನ್ನು ಮಾತ್ರ ತಿಳಿಸಿ ನಿಂತುಹೋಗುತ್ತದೆ.

"ಸಕವರುಷ ೧೧೯೨ನೆಯ ರಉ(ರೌ)ದ್ರ ಸಂವತ್ಸರದ ಮಾ*" ಎನ್ನುವ ಅಪೂರ್ಣ ಮಿತಿಯು ಕ್ರಿ.ಶ. ೧೨೭೦ರಲ್ಲಿ ಬರುತ್ತದೆ.

೧ ಸ್ವಸ್ತಿ ಸಕವರುಷ ೧೯೭೨ನೆಯ ರಉ(ರೌ)-
೨ ದ್ರ ಸಂವತ್ಸರದ ಮಾ

ದೇವಿಕೊಪ್ಪ

೫

ಲೋಕೇಶ್ವರಿ ದೇವಸ್ಥಾನದ ಮುಂದಿನ ಮತ್ತೊಂದು ಶಾಸನ

ಸು. ೧೮-೧೯ ಶ.

ಸೋನಯ್ಯ ವೊಡೆಯರಿಗೆ ತಾಮರ ನಾಣಿಕೆಯ ನಾಗೆಯನಾಯಕ ಕೊಟ್ಟ ಭೂಮಿಯ ಕುರಿತು ಸುಮಾರು ೧೮-೧೯ನೆಯ ಶತಮಾನದ ಅಕ್ಷರಗಳಲ್ಲಿ ತಿಳಿಸುತ್ತದೆ.

೧೦ ಸೋನಯ್ಯ ವೊ-
೨೦ ಡೆಯರಿಗೆ ತಾಮ-
೩೦ ರ ನಾಣಿಕೆಯ ನಾ-
೪೦ ಗೆಯ ನಾಯಕ ಕೊ-
೫೦ ಟ್ಟ ಭೂಮಿ ಸುಭ-
೬೦ ಮಸ್ತು

[ದೇವಿಕೊಪ್ಪದ ಶಾಸನಗಳ ಪಠ್ಯವನ್ನು ಪರಿಶೀಲಿಸಿ, ಪರಿಷ್ಕರಿಸಿಕೊಟ್ಟ ಡಾ. ಬಿ. ರಾಜಶೇಖರಪ್ಪನವರಿಗೆ ಅನಂತ ಕೃತಜ್ಞತೆಗಳು.]

೧೪

ನುಣ್ಣೂರು ಗ್ರಾಮದಲ್ಲಿ ದೊರೆತ ಹೊಯ್ಸಳ ನರಸಿಂಹನ ಕಾಲದ ಅಪ್ರಕಟಿತ ಶಾಸನ

ಕೂಡ್ಲೂರು ವೆಂಕಟಪ್ಪ ಮುರಳಿ* ಮಂಜುನಾಥ ಎಂ.ಕೆ.**

ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ನುಣ್ಣೂರು ಗ್ರಾಮದ ಹೊರವಲಯದಲ್ಲಿನ ಹೊಲವೊಂದರಲ್ಲಿ ಶಿಲಾಶಾಸನವೊಂದು ಪತ್ತೆಯಾಯಿತು. ಅರ್ಧಕ್ಕಿಂತ ಹೆಚ್ಚು ಭಾಗ ಭೂಮಿಯಲ್ಲಿ ಹೂತುಹೋಗಿದ್ದ ಈ ಶಾಸನವನ್ನು ಅಗೆದು ತೆಗೆದು ಪರಿಶೀಲಿಸಿದಾಗ ಅಪ್ರಕಟಿತ ಶಾಸನವೆಂದು ತಿಳಿಯಿತು. ಐದು ಅಡಿ ಉದ್ದ, ಎರಡುವರೆ ಅಡಿ ಅಗಲ ಹಾಗೂ ಅರ್ಧ ಅಡಿ ದಪ್ಪವಾದ ಕಣಶಿಲೆಯ ಫಲಕದ ಮೇಲೆ ಈ ಶಾಸನವನ್ನು ಕಂಡರಿಸಲಾಗಿದೆ. ಈ ಶಾಸನದ ಭಾಷೆ ಹಾಗೂ ಲಿಪಿಯು ಕನ್ನಡವಾಗಿದೆ. ಈ ಲಿಪಿಯು ಹೊಯ್ಸಳರ ಕಾಲದ್ದಾಗಿದ್ದು, ಸುಂದರವಾಗಿದೆ. ಕಣಶಿಲೆಯ ಕಲ್ಲಿನ ಮೇಲೆ ಗುಂಡಾಗಿ, ಆಕರ್ಷಕವಾಗಿ ಶಾಸನವನ್ನು ಕೊರೆದಿರುವುದು ವಿಶೇಷ.

ಶಾಸನದ ಶಿಲ್ಪ

ಶಾಸನ ಪಾಠದ ಮೇಲ್ಭಾಗದಲ್ಲಿ ಸುಮಾರು ಒಂದು ಅಡಿ ಎತ್ತರವಾದ ಉಬ್ಬುಶಿಲ್ಪವನ್ನು ಕಡೆಯಲಾಗಿದೆ. ಶಾಸನ ಫಲಕದ ತೀರಾ ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಶಿಲ್ಪಗಳ ಕೆಳಭಾಗದಲ್ಲಿ ಇಬ್ಬರು ವ್ಯಕ್ತಿಗಳು ಪ್ರತ್ಯೇಕವಾದ ಪೀಠಗಳ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದಾರೆ. ಅವರ ಮಧ್ಯದಲ್ಲಿರುವ ಗಂಡಸಿನ ಉಡುಗೆ ಧರಿಸಿರುವ ಗಂಡಭೇರುಂಡದ ತಲೆಯನ್ನುಳ್ಳ ವ್ಯಕ್ತಿಯೊಬ್ಬ, ತನ್ನ ಎರಡೂ ಕೈಗಳನ್ನು ಎರಡೂ ಬದಿಗೆ ಚಾಚಿ ಇಕ್ಕೆಲಗಳಲ್ಲಿ ಕುಳಿತಿರುವ ವ್ಯಕ್ತಿಗಳ ತಲೆಯ ಮೇಲೆ ಇರಿಸಿ ಆಶೀರ್ವದಿಸುತ್ತಿದ್ದಾನೆ. ಬಲಗಡೆ ಕುಳಿತ ವ್ಯಕ್ತಿಯ ಮೇಲೆ ಹುಲಿಯೊಂದು ತನ್ನ ಎಡಮುಂಗಾಲನ್ನು ಮೇಲೆತ್ತಿ ಆಕ್ರಮಣ ಮಾಡುವ ಭಂಗಿಯಲ್ಲಿದೆ. ಹುಲಿಯ ಪಕ್ಕದಲ್ಲಿ ಪೂರ್ಣಕುಂಭ ಹಾಗೂ ಅಂಕುಶದ ಶಿಲ್ಪವಿದೆ. ಈ ರೀತಿಯ ಶಾಸನ ಶಿಲ್ಪಗಳು ಚನ್ನಪಟ್ಟಣ ತಾಲ್ಲೂಕಿನ ಹೊಯ್ಸಳರ ಕಾಲದ ಶಾಸನಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಈ ಶಿಲ್ಪವನ್ನು ಗಮನಿಸಿದರೆ ವೀರತನಕ್ಕೆ ನೀಡಿದ ದಾನ ಎನ್ನುವುದನ್ನು ಸೂಚಿಸುತ್ತದೆ. ಒಟ್ಟಾರೆ ಶಾಸನದ ಶಿಲ್ಪ ಅಭೂತಪೂರ್ವವಾದದ್ದು ಎಂದು ಹೇಳಬಹುದು. ನಿಪುಣ ಶಿಲ್ಪಿಯೊಬ್ಬನ ಕೈಚಳಕದ ಫಲಿತವಾದ ಈ ಶಿಲ್ಪವು ಆಕರ್ಷಕವಾಗಿಯೂ ಇದೆ.

ಶಾಸನ ಪಾಠ

೧ ಶ್ರೀಸ್ವಸ್ತಿ ಸಮಸ್ತ ಭುವನಾಶ್ರಯ
೨ ಶ್ರೀಪ್ರಿಥ್ವೀವಲ್ಲಭ ಮಲೆರಾಜರಾಜ
೩ ಮಲಪರೊಳ್‌ಗಂಡ ಗಂಡ
೪ ಭೇರುಂಡ ಕದನಪ್ರಚಂಡ ಶನಿ
೫ ವಾರಸಿದ್ಧಿ ಗಿರಿದುರ್ಗಮಲ್ಲ ಚಲದಂಕ
೬ ರಾಮ ಮಗರರಾಯಸ್ಥಾಪನಾಚಾರಿಯ
೭ ಪಾಂಡ್ಯರಾಯಪ್ರತಿಷ್ಟಾಚಾರ್ಯ ನಿಶ್ಶಂ
೮ ಕ ಪ್ರತಾಪ ಹೊಯಿಸಳ ಭುಜಬಳ ವೀರ
೯ ನಾರಸಿಂಹದೇವರಸರು ಕವಿಕುಮುದ
೧೦ ಚಂದ್ರಲೋಭಿರಾಯ ಗಜಾಂಕುಶ ಶ್ರೀವಾರಜನ
೧೧ ಗಂಡ. ತ್ರಿಭುವನ ವಂದಿಜನ ಚಕ್ರವ
೧೨ ರ್ತಿ ಕೀರ್ತಿದೇವರಸರಿಗೆ ನುಣ್ಣನೂರ ಚತುಃ
೧೩ ಸೀಮೆಯ ಭೂಮಿಯನು ಅರ್ಚ್ಚಾಗತಿ ಕಿಱು
೧೪ ಕುಳ ಕಾಣಿಕೆ ಹಣವನು ವಗದು ಅಮು
೧೫ . . . ಪಂಚಕಾರುಕ. ಲೆಡಿಯೊಳಗಾದ ನಮ
೧೬ . ಕೆಱೆಯನೂ ಬಿಟ್ಟು ಧಾರೆಯನೆಱದು ಸರ್ಬ್ಬ
೧೭ ನಮಸ್ಯವಾಗಿ ಕೀರ್ತಿದೇವರಸರಿಗೆ ಕೊಟ್ಟೆವು
೧೮ ಯೀ ಮರಿಯಾದೆಯುಲು ಸೂರಿ (ಯ) ಚಂದ್ರನುಳೊನಕ

* ಕೂಡ್ಲರು ಗ್ರಾಮ, ಚನ್ನಪಟ್ಟಣ ತಾಲ್ಲೂಕು,ರಾಮನಗರ ಜಿಲ್ಲೆ.
** # ೪೧, ಮಾಕಳಿ ಗ್ರಾಮ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.



೧೯ ವು ನಡವುದು ಇವರ ಒಡವೆ. ಂಡಿನೆ ಸಿಮೋಲ್ಲ (೦) ಫ

೨೦ . ಳ ದೇವನ ಲಿಂಗ ಅಳಿಪಿದವನು ತಾಯ...

೨೧ . ಕತ್ತೆಗೇದ ಕವಿಲೆಯ ಕೊಂದ ಪಾಪ(ದಲಿ ಹೋಹರು)

ಶಾಸನದ ವಿಶ್ಲೇಷಣೆ

ಶಾಸನದಲ್ಲಿ ಒಟ್ಟು ೨೧ ಸಾಲುಗಳ ಪಾಠವಿದೆ. ಶಾಸನದ ಆರಂಭದಲ್ಲಿ ಸ್ವಸ್ತಿಸಮಸ್ತಭುವನಾಶ್ರಯ, ಪೃಥ್ವೀವಲ್ಲಭ, ಮಲೆರಾಜರಾಜ, ಮಲಪರೊಳ್ ಗಂಡ, ಗಂಡಭೇರುಂಡ, ಶನಿವಾರ ಸಿದ್ಧಿ, ಗಿರಿದುರ್ಗಮಲ್ಲ, ಛಲದಂಕರಾಮ, ಮಗರರಾಯ ಸ್ಥಾಪನಾಚಾರ್ಯ, ಪಾಂಡ್ಯರಾಯ ಪ್ರತಿಷ್ಠಾಪನಾಚಾರ್ಯ ಮುಂತಾದ ವೀರನರಸಿಂಹನ ಬಿರುದಾವಳಿಗಳಿವೆ. ಶಾಸನದ ಮುಂದಿನ ಭಾಗದಲ್ಲಿ ಕವಿಕುಮುದಚಂದ್ರ, ಲೋಭಿರಾಯ, ಗಜಾಂಕುಶ, ಶ್ರೀವಾರಜನಗಂಡ, ತ್ರಿಭುವನ ವಂದಿಜನ ಚಕ್ರವರ್ತಿ ಎಂದು ಕೀರ್ತಿದೇವರಸ ಎಂಬುವರಿಗೆ ವೀರನರಸಿಂಹನು ನುಣ್ಣನೂರು ಗ್ರಾಮದ ಚತುಃಸ್ಸೀಮೆಯ ಭೂಮಿಯನ್ನು ಧಾರೆಯೆರೆದು ಯಾವುದೇ ರೀತಿಯ ತೆರಿಗೆಗಳಿಲ್ಲದಂತೆ ದಾನವಾಗಿ ಕೊಟ್ಟ ವಿವರಗಳಿವೆ. ಶಾಸನದ ಅಂತ್ಯದಲ್ಲಿ ಶಾಪಾಶಯಗಳಿವೆ.

ಈ ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲದಿದ್ದರೂ, ಈ ಶಾಸನದಲ್ಲಿ ಉಕ್ತನಾಗಿರುವ ಕೀರ್ತಿದೇವರಸನ ಇತರ ಶಾಸನಗಳು (ಇತಿಹಾಸ ದರ್ಶನ, ಸಂ.೨೬, ಪು ೧೮೯) ಹಾಗೂ ಶಾಸನದಲ್ಲಿ ಉಲ್ಲೇಖಿತನಾಗಿರುವ ವೀರನರಸಿಂಹನ ಬಿರುದುಗಳ ಆಧಾರದಿಂದ ಹೊಯ್ಸಳ ಚಕ್ರವರ್ತಿ ಸೋಮೇಶ್ವರನ ಪುತ್ರನಾದ ಮೂರನೇ ವೀರನರಸಿಂಹನೆಂದು ಗುರುತಿಸಬಹುದು. ಕ್ರಿ.ಶ. ೧೨೫೪ರಿಂದ ೧೨೯೨ರವರೆಗೆ ಆಳ್ವಿಕೆ ನಡೆಸಿದ ಮೂರನೇ ವೀರನರಸಿಂಹನ ಕಾಲಕ್ಕೆ ಈ ಶಾಸನ ಸೇರುತ್ತದೆ. ಮೂರನೇ ನರಸಿಂಹನ ಕಾಲದಲ್ಲಿ ಕೀರ್ತಿದೇವರಸನು ಈ ಪ್ರದೇಶವನ್ನು ಆಳುತ್ತಿದ್ದ ಮಾಂಡಲಿಕನೆಂಬುದು ಸ್ಪಷ್ಟವಾಗುತ್ತದೆ. ಶಾಸನದಲ್ಲಿ ಅಚ್ಚಾರ್ಗತಿ, ಕಿರುಕುಳ, ಕಾಣಿಕೆ, ಪಂಚಕಾರುಕ ಮೊದಲಾದ ತೆರಿಗೆಗಳ ಪ್ರಸ್ತಾಪವಿದೆ. ಈ ಎಲ್ಲಾ ತೆರಿಗೆಗಳಲ್ಲದೇ, ಈ ಗ್ರಾಮದ ಕೆರೆಯನ್ನೂ ವೀರನರಸಿಂಹನು ಕೀರ್ತಿದೇವರಸನಿಗೆ ಸರ್ವ ನಮಸ್ಯವಾಗಿ ಧಾರೆಯೆರೆದು ಕೊಟ್ಟ ವಿವರ ಶಾಸನದಲ್ಲಿದೆ.

[ಈ ಶಾಸನವನ್ನು ಓದಲು ನಮಗೆ ನೆರವಾದ ಪ್ರೀತಿಯ ಗುರುಗಳಾದ ಪ್ರೊ. ಎಂ.ಜಿ. ಮಂಜುನಾಥ್ ಹಾಗೂ ಸೀತಾರಾಮ ಜಾಗೀರ್‌ದಾರ್ ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.]

ಕೆರೆಸಂತೆ ಗ್ರಾಮದ ದೇವಾಲಯವೊಂದರ ಬಾಗಿಲುವಾಡದ ಮೇಲಿರುವ ಒಂದು ಅಪ್ರಕಟಿತ ಶಾಸನ

ಬಿ.ಪಿ. ನಿರಂಜನ್* ರಾ. ಶಶಿಧರ್**

ಕೆರೆಸಂತೆ ಗ್ರಾಮವು ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕಿಗೆ ಒಳಪಡುವ ಒಂದು ಗ್ರಾಮ. ಈ ಗ್ರಾಮವು ತಾಲ್ಲೂಕು ಕೇಂದ್ರವಾದ ಕಡೂರಿನಿಂದ ಸುಮಾರು ೧೮ ಕಿ.ಮೀ. ದೂರದಲ್ಲಿದ್ದು, ಬೆಂಗಳೂರು–ಹೊನ್ನಾವರ ರಾಷ್ಟ್ರೀಯ ಹೆದ್ದಾರಿ–೨೦೬ ಪ್ರಧಾನ ರಸ್ತೆಯಿಂದ ೫ ಕಿ.ಮೀ. ಒಳಭಾಗದಲ್ಲಿದೆ.

ಭೌಗೋಳಿಕವಾಗಿ ಈ ಲೇಖನದ ಕ್ರಾರ್ಯಕ್ಷೇತ್ರವು ಭಾರತೀಯ ಸರ್ವೇಕ್ಷಣ ಇಲಾಖೆಯ ಟೋಪೋಷೀಟ್ ಸಂಖ್ಯೆ D43Q3 (57 C/3) (ಅಳತೆ 1:50,000) ರಲ್ಲಿ ಒಳಪಡುತ್ತದೆ. ಈ ಕೆರೆಸಂತೆ ಗ್ರಾಮಕ್ಕೆ ಪೂರ್ವಕ್ಕೆ ಕೋಡಿಹಳ್ಳಿ, ಬಂಜಾರಹಟ್ಟಿ ಗ್ರಾಮಗಳಿದ್ದು, ಪಶ್ಚಿಮ ಹಾಗೂ ಉತ್ತರ ಭಾಗಗಳಲ್ಲಿ ಚೋಮನಹಳ್ಳಿ ಗ್ರಾಮವಿದೆ, ಉತ್ತರಕ್ಕೆ ಸುಖಲಿಂಗರಹಟ್ಟಿ ಕಂಡುಬರುತ್ತವೆ. ಅಪ್ರಕಟಿತ ಶಾಸನವಿರುವ ಈ ದೇವಾಲಯವು ಪೂರ್ವ ರೇಖಾಂಶ ೭೬೮೦೮'೦೧" ಹಾಗೂ ಉತ್ತರ ಅಕ್ಷಾಂಶ ೧೩೮೦೮'೦೫" ರ ನಿಶ್ಚಿತ ಪ್ರದೇಶದಲ್ಲಿ ಕಂಡುಬರುತ್ತದೆ.


ಶಾಸನೋಕ್ತ ಈ ಕೆರೆಸಂತೆ ಗ್ರಾಮವು ಹೊಯ್ಸಳರ ಕಾಲಘಟ್ಟದಲ್ಲಿ ಪ್ರಮುಖ ವ್ಯಾಪಾರ ಕೇಂದ್ರ ಹಾಗೂ ಮಹಾ ಅಗ್ರಹಾರ ಆಗಿತ್ತೆಂದು ಇಲ್ಲಿನ ಅನೇಕ ಶಾಸನಗಳು ಉಲ್ಲೇಖಿಸಿವೆ. ಹೊಯ್ಸಳರ ಕಾಲಘಟ್ಟದಲ್ಲಿ ಈ ಗ್ರಾಮದ ಹತ್ತಿರವಿರುವ ಬೆಟ್ಟಕ್ಕೆ **'ಹೇಮಗಿರಿ'** ಅಥವಾ **'ಹಿಮಗಿರಿ'** ಎಂದು ಕರೆಯಲ್ಪಡುತ್ತಿದ್ದುದರಿಂದ ಹಾಗೂ ಈ ಗ್ರಾಮವು ಪ್ರಮುಖ ವ್ಯಾಪಾರ ಕೇಂದ್ರ ಆಗಿದ್ದರಿಂದ ಕೆರೆಸಂತೆಯನ್ನು **'ಹೇಮಗಿರಿ ಪಟ್ಟಣ'**ವೆಂದು ಕರೆಯುತ್ತಿದ್ದರು. ಈ ಹೇಮಗಿರಿ ಬೆಟ್ಟದ ಬುಡಕ್ಕೆ ಹೊಂದಿಕೊಂಡಂತಿರುವ ವಿಶಾಲವಾದ ಕೆರೆಗೆ ಅನೇಕ ಶಾಸನಗಳಲ್ಲಿ **'ವಿಷ್ಣುಸಮುದ್ರ'**ವೆಂಬ ಹೆಸರಿನಿಂದ ಕರೆಯುತ್ತಿದ್ದುದು ಉಲ್ಲೇಖವಾಗಿದೆ. ಈ ಕೆರೆಯ ವಿಶಾಲತೆ, ವಿಶೇಷತೆಯ ಕುರಿತಾಗಿ ಅನೇಕ ಶಾಸನಗಳಲ್ಲಿ ವರ್ಣಿಸಲಾಗಿದೆ. ಇತ್ತೀಚೆಗೆ ಈ ಕೆರೆಯು ಭೂಗಳ್ಳರಿಂದ ಒತ್ತುವರಿಯಾಗಿದ್ದು, ಕೆರೆಯ ಬಹುಪಾಲು ಭಾಗದಲ್ಲಿ ಕೃಷಿ ಚಟುವಟಿಕೆಗಳು ಕಂಡು ಬರುತ್ತಿದೆ.

ಹೊಯ್ಸಳ ದೊರೆ ವಿಷ್ಣುವರ್ಧನ ಪತ್ನಿ ರಾಜಲಾದೇವಿಯ ಸೋದರ ಮಾವ ಮಂಚಿಯರಸನು ಈ ಪ್ರದೇಶವನ್ನು ಬಹುಕಾಲ ಆಳುತ್ತಿದ್ದು, ಈತನು ಮಂಚೇಶ್ವರ ಎಂಬ ದೇವಾಲಯವನ್ನು ಕಟ್ಟಿಸಿದನೆಂದು ಶಾಸನಗಳು ತಿಳಿಸುತ್ತದೆ. ಮಂಚೇಶ್ವರ ದೇವಾಲಯವಲ್ಲದೆ ಲಭ್ಯ ಶಾಸನಗಳ ಪ್ರಕಾರ ಕೆರೆಸಂತೆಯಲ್ಲಿ ಶ್ರೀಲಕ್ಷ್ಮೀನರಸಿಂಹ ದೇವಾಲಯ, ಜನಾರ್ದನ ದೇವಾಲಯ, ಸಿದ್ಧೇಶ್ವರ ದೇವಾಲಯ, ಶಂಭುಲಿಂಗ ದೇವಾಲಯ, ವೀಶ್ವರ ದೇವಾಲಯ, ವಿಠಲದೇವರ ದೇವಾಲಯ, ನಖರೇಶ್ವರ ದೇವಾಲಯ, ಒಡೇಶ್ವರ ದೇವಾಲಯ ಹಾಗೂ ಆದಿನಾಥ ಪಾರ್ಶ್ವದೇವರ ಬಸದಿಗಳು ಇದ್ದುದು ಕಂಡುಬರುತ್ತಿದ್ದು, ಪ್ರಸ್ತುತ ಇಲ್ಲಿನ ಹಲವಾರು ದೇವಾಲಯಗಳು ಪಾಳುಬಿದ್ದಿವೆ ಹಾಗೂ ಹಾನಿಗೊಳಗಾಗಿವೆ. ಈ ರೀತಿ ಹಾನಿಗೊಳಗಾಗಿರುವ ದೇವಾಲಯ ಸಮುಚ್ಚಯದಲ್ಲಿ ಕಾರ್ಯಕ್ಷೇತ್ರದಲ್ಲಿ ತೊಡಗಿ ದ್ದಾಗ ಗರ್ಭಗುಡಿ, ಸುಖನಾಸಿ ಹಾಗೂ ಮುಖಮಂಟಪ ವಿರುವ ಒಂದು ಚಿಕ್ಕ ದೇವಾಲಯದ ಬಾಗಿಲವಾಡದ ಮೇಲೆ ೫ ಸಾಲುಗಳುಳ್ಳ ಶಿಲಾಶಾಸನವು ಕಂಡುಬಂದಿತು. ಬಾಗಿಲುವಾಡದ ಮೇಲೆ ಶಾಸನವಿರುವುದು ಬಹು ಅಪರೂಪ ಹಾಗೂ ವಿಶೇಷವೆಂದೇ ಹೇಳಬಹುದು.

ಈ ಶಾಸನವನ್ನು ಬಳಪದ ಕಲ್ಲಿನ (SOAP STONE/ SCHISTOSE ROCK) ಮೇಲೆ ಕಂಡರಿಸಲಾಗಿದ್ದು ೫ ಸಾಲುಗಳುಳ್ಳ ಶಾಸನದ ಪಾಠವು ಈ ಕೆಳಗಿನಂತಿದೆ.

೧ ಶ್ರೀ ಮ ಹೇ ಸ್ವ ರ ದೇ ವ ರಿ ಗೆ . . ಗು ರು
೨ ಗ ಳು ಕ ಪ ಣ ಚಾ ರಿ ಯ ರು ಸ್ಥ ಳ ದ
೩ ವ ಜಾ ದ . ಹಿ ರಿ ಯ ನಾ ಗ ನ . . ಮ ಣಿ ಕ
. ನ ದ .

* # ೭೮೩, ೫ನೇ ಮುಖ್ಯರಸ್ತೆ, ೩ನೇ ಅಡ್ಡರಸ್ತೆ, ವಿಜಯನಗರ, ಬೆಂಗಳೂರು–೫೬೦೦೪೦.
** ಭೂವಿಜ್ಞಾನಿ, 'ವರಮಹಾಲಕ್ಷ್ಮೀನಿಲಯ', ೯೨೮, ೩ನೇ ಅಡ್ಡರಸ್ತೆ, ೩ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು–೫೬೦೦೪೦.



ಬಾಗಿಲವಾಡದಲ್ಲಿರುವ ಶಾಸನದ ಪಡಿಯಚ್ಚು

೪ ಮು ಖ್ಯ ರಾ ದ ವ ರು ಯ . . . . ವ ಬ . . . .

೫ ೦ . ಮ ಡಿ ದ ರು ಶ್ರೀ

ಈ ಶಾಸನವು ಹಲವಾರು ಕಡೆ ಹಾನಿಗೊಳಗಾಗಿದ್ದು, ಶಾಸನದ ಪಾಠವನ್ನು ಸಂಪೂರ್ಣವಾಗಿ ಓದಲು ಸಾಧ್ಯವಾಗುವುದಿಲ್ಲ.

ಈ ಶಾಸನದಲ್ಲಿ ಗುರುಗಳಾದ ಕಪಣಾಚಾರಿಗಳ ಹೆಸರಿನ ಉಲ್ಲೇಖವಿದೆ. ಸ್ಥಳೀಯ ಹಿರಿಯರು ಮತ್ತು ವಣಿಕರ ಉಲ್ಲೇಖವಿದೆ. ನಾಗ ಎಂದು ಸೂಚಿಸುವ ಪಾಠವು ದೊರಕಿದ್ದು ಇದು ಹಿರಿಯ ವ್ಯಕ್ತಿಯ ಹೆಸರೇ ಅಥವಾ ವಣಿಕರ ಹೆಸರೇ ತಿಳಿಯುತ್ತಿಲ್ಲ. ವಿಶೇಷವಾಗಿ ಗಮನಿಸಬೇಕಾದ ಅಂಶವೆಂದರೆ ಮಡಿದರು ಎಂದು ಉಲ್ಲೇಖಿಸಿರುವುದು. ಹೀಗಾಗಿ ಇದೊಂದು ನಿಷಿಧಿ ಶಾಸನವಿರಬಹುದೆಂದು ಊಹಿಸಬಹುದಾಗಿದೆ. ಮರಣ ಶಾಸನವೊಂದು ಈ ರೀತಿ ಬಾಗಿಲುವಾಡದ ಮೇಲಿರುವುದು ಬಹಳ ಅಪರೂಪವಾಗಿದೆ. ಈ ಶಾಸನವು ದೇವಾಲಯದ ಗರ್ಭಗೃಹದ ಮುಂದಿರುವುದಾಗಿದ್ದು ಶಾಸನವು ಮೊದಲೇ ಇತ್ತೇ ಅಥವಾ ನಂತರ ಕಂಡಿರಸಲಾಯಿತೇ ಎಂದು ತಿಳಿದು ಬರುವುದಿಲ್ಲ. ಇಲ್ಲಿ ಉಲ್ಲೇಖಿತವಾಗಿರುವ ಕಪಣಾಚಾರಿಯರೇ ಸ್ಥಳೀಯ ಹಿರಿಯರು ಮತ್ತು ವಣಿಕ ಸಮಾಜದವರ ಸಮ್ಮುಖದಲ್ಲಿ ದೇಹತ್ಯಾಗ ಮಾಡಿದರೇ ಅಥವಾ ಬೇರೆ ಯಾರಾದರೂ ದೇಹತ್ಯಾಗ ಮಾಡಿದರೇ ಸ್ಪಷ್ಟವಾಗುವುದಿಲ್ಲ. ಶಾಸನದಲ್ಲಿ ಇವರನ್ನು ಮಹೇಸ್ವರ ದೇವರಿಗೆ ಗುರುಗಳು ಎಂದು ಹೇಳಲಾಗಿದೆ. ಇದು ಗುರುಗಳ ಮರಣವನ್ನು ಸೂಚಿಸುವುದೇ ಅಥವಾ ದೇಹತ್ಯಾಗ ಮಾಡಿರುವುದನ್ನು ಸೂಚಿಸುವುದೇ ಎನ್ನುವುದು ನಿರ್ಧರಿತವಾಗಬೇಕಾದ ವಿಚಾರ.

ಈ ಶಾಸನವು ಲಿಪಿಯ ದೃಷ್ಠಿಯಿಂದ ೧೦ನೇ ಶತಮಾನದ ಉತ್ತರಾರ್ಧದಿಂದ ೧೧ನೇ ಶತಮಾನದ ಪೂರ್ವಾರ್ಧದ ಕಾಲಘಟ್ಟದ ಕಲ್ಯಾಣ ಚಾಲುಕ್ಯರ ಲಿಪಿಯಾಗಿದೆ.

[ನಮ್ಮ ಈ ಸಂಶೋಧನಾ ಕಾರ್ಯಗಳಿಗೆ ಪ್ರೋತ್ಸಾಹ ನೀಡಿ ಕ್ಷೇತ್ರಕಾರ್ಯದಲ್ಲಿ ಶಾಸನದ ಪಡಿಯಚ್ಚು ತೆಗೆದುಕೊಳ್ಳಲು ಸಹಕರಿಸಿ ಶಾಸನವನ್ನು ಓದಿ, ಲೇಖನವನ್ನೂ ಸಿದ್ದಪಡಿಸುಲು ಸಹಕರಿಸಿದ ಆತ್ಮೀಯ ಗುರುಗಳಾದ ದಿ. ಡಾ. ಅ.ಲ. ನರಸಿಂಹನ್, ಡಾ. ಎಂ.ಜಿ. ಮಂಜುನಾಥ್, ಡಾ. ಭಾರತೀ ಬಿ.ಆರ್., ಡಾ. ಜಯಮ್ಮ ಕರಿಯಣ್ಣ, ಡಾ. ಬಿ.ಕೆ. ದೇವರಾಜಸ್ವಾಮಿ, ಶ್ರೀಮತಿ ನಿರ್ಮಲಾ ಗಣೇಶ್, ಶ್ರೀಮತಿ ಸವಿತ ಹಾಗೂ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಕೃತಜ್ಞತಾ ವಂದನೆಗಳು].

ಆಧಾರಸೂಚಿ

೧. ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ ೧೨, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೨. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ೧೯೯೬.

೩. ಲಿಪಿಯ ಹುಟ್ಟು ಬೆಳವಣಿಗೆ, ಡಾ. ದೇವರಕೊಂಡಾರೆಡ್ಡಿ, ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೨.

೪. ಕನ್ನಡ ಲಿಪಿ ವಿಕಾಸ, ಡಾ. ಎಂ.ಜಿ. ಮಂಜುನಾಥ್ – ಬಿ.ಕೆ. ದೇವರಾಜಸ್ವಾಮಿ, ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ, ಶ್ರೀ ರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ.

೧೬

ಇಂಡಿ ತಾಲ್ಲೂಕು ಲಾಳಸಂಗಿ ಬಕ್ಕಯ್ಯನಮಠದ ಅಪ್ರಕಟಿತ ಶಾಸನ ಮತ್ತು ಪ್ರಾಚ್ಯಾವಶೇಷಗಳು

ಆದಪ್ಪ ಪಾಸೋಡಿ*

ವಿಜಾಪುರ ಜಿಲ್ಲೆಯ ಇಂಡಿ ಪಟ್ಟಣದಿಂದ ಪೂರ್ವಕ್ಕೆ ೨೬ ಕಿ.ಮೀ ದೂರದಲ್ಲಿ ಲಾಳಸಂಗಿ ಗ್ರಾಮವಿದೆ. ತರ್ದವಾಡಿ ನಾಡನ್ನಾಳುತ್ತಿದ್ದ ಕಲಚುರಿ ದೊರೆ ರಾಯಮುರಾರಿ ಸೋವಿದೇವನ ಆಡಳಿತಾವಧಿಯ (ಕ್ರಿ.ಶ. ೧೧೬೭–೭೬) ಶಾಸನವೊಂದನ್ನು ಈ ಗ್ರಾಮದ ಅಗಸಿ ಬಾಗಿಲಿನ ಬಲಭಾಗದಲ್ಲಿ ನಿಲ್ಲಿಸಲಾಗಿದ್ದು, ಇದರಲ್ಲಿ ಪೊಂಮಿದೇವ–ಸೋಯಿದೇವ ರಾಣಿಯರು ಆರವೆ (ಉದ್ಯಾನ) ಗಾಗಿ ಹೊಲ–ಮನೆ ಬಿಟ್ಟುಕೊಟ್ಟರೆಂಬ ಅಪರೂಪದ ಮಾಹಿತಿ ಇದೆ.[೧] ಇಂಥಹುದೇ ಧರ್ಮದಾರವೆಯನ್ನು 'ಕ್ಷಿತಿರುಹ ನೋಂಪಿ' ವ್ರತದ ಭಾಗವಾಗಿ ಬೆಳೆಸಿದ ಇನ್ನೊಂದು ಉಲ್ಲೇಖ ಇದೇ ತಾಲ್ಲೂಕಿನ ಹಿರೇಬೇವಿನೂರಿನ ಕ್ರಿ.ಶ.೧೧೯೦ರ ಶಾಸನದಲ್ಲಿ ಉಕ್ತವಾಗಿದೆ. ಇಲ್ಲಿ ಬೊಪ್ಪಣಯ್ಯನ ಅರ್ಧಾಂಗಿ ಸಿರಿದೇವಿಯಕ್ಕ ವನಸ್ಪತಿಗಳನ್ನು ನೆಟ್ಟು ವ್ರತವನ್ನು ಆಚರಿಸುತ್ತಾಳೆ[೨]. ಲಾಳಸಂಗಿ ಮತ್ತು ಹಿರೇಬೇವಿನೂರು ಗ್ರಾಮಗಳ ಅಂದಿನ ಸ್ಥಳೀಯ ಆಡಳಿತ ಮತ್ತು ಸಾರ್ವಜನಕರು ಹೊಂದಿದ ಆಸ್ಥೆಯನ್ನು ಮೆಚ್ಚಲೇಬೇಕು.

ಲಾಳಸಂಗಿ ಗ್ರಾಮದ ಕಂದಾಯ ವ್ಯಾಪ್ತಿಗೊಳಪಡುವ ಗೋಳಸರದ ಶ್ರೀಮತಿ ಶಾಂತಾಬಾಯಿ ನಿಂಬರಗಿಯವರ ಹೊಲದಲ್ಲಿರುವ ೧೩ನೇ ಶತಮಾನದ ಪೂರ್ವಾರ್ಧ ಕಾಲಮಾನದ ಒಂದು ಶಾಸನವು 'ಲಾಳಸಂಗವಿಗೆಯ ಸಂಕರಸೆಟ್ಟಿ' ಯನ್ನು ಉಲ್ಲೇಖಿಸುತ್ತದೆ[೩]. ಪ್ರಸ್ತುತ ಲಾಳಸಂಗಿ ಸ್ಥಳನಾಮವು ನಾಡಿನೊಳಗೆ ಕಲಹಗಳನ್ನು ನವಾರಿಸಿ ಶಾಂತಿ–ಸುವ್ಯವಸ್ಥೆ ಕಾಪಾಡುತ್ತಿದ್ದ ನಾಡಸಂಧಿವಿಗ್ರಹಿಯ ವಾಸದ ನೆಲೆಯಿಂದಾಗಿ ಅದು ನಾಡಸಂಧಿವಿಗ್ರಹಿ > ನಾಳಸಂದಿವಿಗ್ರಹಿ > ಲಾಳಸಂಗಿವಿಗವಿ > ಲಾಳಸಂಗವಿಗೆ > ಲಾಳಸಂಗಿ ಎಂಬುದಾಗಿಯೂ, ಕೆಲವೊಮ್ಮೆ ಮಾತಿನ ಭರದಲ್ಲಿ ಸ್ಥಳೀಯರು ಲಾಸಂಗಿ ಎಂದೂ ಹೇಳಿಬಿಡುತ್ತಾರೆ.

ಬಕ್ಕಯ್ಯನ ಮಠದ ಶಾಸನ: ಗ್ರಾಮದ ಪೂರ್ವಕ್ಕೆ ಊರ ಹೊರಭಾಗದಲ್ಲಿ 'ಬಕ್ಕಯ್ಯನ ಮಠ' ಇದೆ. ಉತ್ತರ ದಿಕ್ಕಿಗೆ ಮುಖ ಮಾಡಿರುವ ಕರಿಕಲ್ಲಿನ ಇಂಡೋ–ಇಸ್ಲಾಮಿಕ್ ಮಾದರಿಯ ಕಟ್ಟಡವಿದಾಗಿದೆ. ಮಠದ ಪಡಸಾಲೆಗೆ ಮೂರೂ ಕಮಾನುಗಳ ಮೂಲಕ ಪ್ರವೇಶವಿದೆ. ಈ ಕಮಾನುಗಳು ಮತ್ತು ಇಡೀ ಬಕ್ಕಯ್ಯನ ಮಠದ ಹೊರನೋಟವು ವಿಜಾಪುರದ ಇಬ್ರಾಹಿಂರ ಹಳೆಯ ಜಾಮೀ ಮಸೀದಿ ಮತ್ತು ಹೈದರಯ್ಯನ ಮಸೀದಿಗಳಂತೆ ಕಾಣಿಸುತ್ತದೆ. ಮುಂದೆ ಈ ರಾಚನಿಕ ವಿನ್ಯಾಸವು ಈ ಭಾಗದ ಎಲ್ಲ ಧರ್ಮದವರ ನಿರ್ಮಿತಿಗಳಿಗೂ ವಿಸ್ತರಣೆಯಾಗಿರುವುದನ್ನು ಇಲ್ಲಿ ಕಾಣಬಹುದು. ಕಮಾನುಗಳು, ಮಿನಾರ್‌ಗಳು ಇಲ್ಲಿ ಸರ್ವೇಸಾಮಾನ್ಯವಾಗಿ ಉಳಿದುಕೊಂಡಿವೆ. ಪಡಸಾಲೆಯು ಪೂರ್ವ–ಪಶ್ಚಿಮದಲ್ಲಿ ೨೮ ಅಡಿ, ದಕ್ಷಿಣೋತ್ತರ ೧೦ ಅಡಿಗಳ ವಿಸ್ತೀರ್ಣವನ್ನು ಹೊಂದಿದೆ. ಪಡಸಾಲೆಯ ಮಧ್ಯಮ ಕಮಾನಿನ ಮೂಲಕ ಮಧ್ಯದಂಕಣದಲ್ಲಿ ಒಳಗೆ ಚಿಕ್ಕ ಗರ್ಭಗೃಹದಂತಹ ಒಂದು ಕೋಣೆ ಇರುತ್ತದೆ, ಇದರ ಬಾಗಿಲು ೩'೯" ಎತ್ತರ ಹಾಗೂ ೨' ಅಗಲವಾಗಿದೆ. ಈ ಕೋಣೆಯ ದ್ವಾರಬಂಧಗಳ ಮೇಲೆ ಇರುವ ಲಲಾಟದಲ್ಲಿ ಶಿವಲಿಂಗದ ರೇಖಾಚಿತ್ರ ಬಿಡಿಸಿದ್ದು, ಲಿಂಗದ ಸುತ್ತಲೂ ಅಯತಾಕಾರದ ಎರಡು ಗೆರೆಗಳನ್ನು ಎಳೆಯಲಾಗಿದೆ. ಶಿವಲಿಂಗದ ಎಡ–ಬಲಕ್ಕೆ ಶಾಸನದ ಸಾಲುಗಳಿದ್ದು, ಬಣ್ಣ ಬಳಿದಿರುವುದರಿಂದ ಅಕ್ಷರಗಳು ಮಾಸಿರುತ್ತವೆ. ಚಿಕ್ಕ ಕೋಣೆಯ ಎಡಭಾಗದಿಂದ ಮಠದ ಮಾಳಿಗೆಯ ಮೇಲೆ ಹೋಗಲು ಕಲ್ಲಿನ ಮೆಟ್ಟಿಲುಗಳನ್ನು ಕಟ್ಟಲಾಗಿದೆ. ಪಡಸಾಲೆಯ ಛತ್ತಿನ ಮುಂಭಾಗಕ್ಕೆ ೧೮ ಅಲಂಕಾರಿಕ ಬುಗುರೆಗಲ್ಲುಗಳನ್ನು ಕೂಡ್ರಿಸಲಾಗಿದೆ. ಇವುಗಳ ಹಿಂಬಾಲಗಳು ಗೋಡೆಯಲ್ಲಿ ಸಿಕ್ಕಿಕೊಂಡಿರುತ್ತವೆ. ಬುಗುರೆಗಲ್ಲುಗಳು ಗಡಿಗೆಬೋದಿನ ಮನೆಯ ಕಾಷ್ಠಬೋದಿಗೆಗಳನ್ನು ನೆನಪಿಸುತ್ತವೆ ಮತ್ತು ಆನೆಯ ಮೇಲೆತ್ತಿದ ಸೊಂಡಿಲಿನಂತೆಯೂ ಕಾಣಿಸುತ್ತವೆ. ಅವುಗಳ ಮೇಲೆ ಕಲ್ಲುಚಪ್ಪಡಿಗಳನ್ನು ಹೊದಿಸಲಾಗಿದೆ. ಇನ್ನು ಪಡಸಾಲೆಯಲ್ಲಿ ನಡೆಯುತ್ತಿದ್ದ ಚಟುವಟಿಕೆಗಳ ಬಗ್ಗೆ ಊರಿನ ೮೫–೯೦ ವರ್ಷದ ವಯೋವೃದ್ಧರನ್ನು ವಿಚಾರಿಸಿದಾಗ,

* ಆಂಗ್ಲಭಾಷಾ ಶಿಕ್ಷಕ, ಸರ್ಕಾರಿ ಪ್ರೌಢಶಾಲೆ, ಅಗರ, ಸರ್ಜಾಪುರ ರಸ್ತೆ, ಬೆಂಗಳೂರು–೫೬೦೧೦೨.

ಅವರು ಇದನ್ನು ಬಕ್ಕಯ್ಯನ ಮಠವೆಂದೂ, ತಾವು ಇಲ್ಲಿಯೇ ಶಾಲೆ ಕಲಿತ್ತದ್ದು ಎಂದು ಹೇಳುತ್ತಾರೆ. ಮಠದ ಮಧ್ಯದ ಕಮಾನಿನ ಎಡಕಂಬಕ್ಕೆ ಒರಗಿಸಿದ ಸ್ಥಿತಿಯಲ್ಲಿ ೧೮ ಇಂಚು ಅಗಲ ೧೧೪ ಇಂಚು ಎತ್ತರವಿರುವ ಶಿಲಾಶಾಸನವಿದೆ. ಶಾಸನಕಲ್ಲಿನ ಸುತ್ತಲೂ ಒಂದು ಇಂಚು ಅಂಚನ್ನು ಬಿಟ್ಟು ಗೆರೆ ಹಾಕಲಾಗಿದೆ. ಆಯತಾಕಾರದ ಕಲ್ಲಿನ ಮೇಲೆ ಆಯತಾಕಾರದ ಗೆರೆ ಹಾಕಿಕೊಂಡು ಆರು ಸಾಲುಗಳ ಶಾಸನವನ್ನು ಇದರ ಮೇಲೆ ಬರೆಯಲಾಗಿದೆ.

ಶಾಸನ ಪಾಠ

೧ ಶ್ರೀ ಯಂಕಂಚಿ ನಿಂಗಪ್ಪನ ಪುತ್ರನಾ

೨ ದ ಶಂಕರಪ್ಪ . . . . ಸಿದ್ದಲಿಂಗಪ್ಪ

೩ ನ ಪುತ್ರನಾದ ಶಿವಲಿಂಗಪ್ಪ ಯಿಬ್ಬ

೪ ರು ಕೂಡಿ ಆನಂದ ನಾಮ ಸಂವತ್ಸ

೫ ರದಲ್ಲಿ ತಂಮ ಭಕ್ತಿಯಿಂದ

೬ ಕಟ್ಟಿಸಿ ಶರಣು ಮಾಡಿದ ಮಟ

ಯಂಕಂಚಿ ಗ್ರಾಮದ ನಂಗಪ್ಪನ ಪುತ್ರ ಶಂಕರಪ್ಪ ಮತ್ತು ಸಿದ್ಧಲಿಂಗಪ್ಪನ ಪುತ್ರ ಶಿವಲಿಂಗಪ್ಪನ ಇಬ್ಬರೂ ಕೂಡಿಕೊಂಡು ಭಕ್ತಿಯಿಂದ ಲಾಳಸಂಗಿ ಗ್ರಾಮದ ಈ ಮಠವನ್ನು ಕಟ್ಟಿಸಿ ಶರಣು ಮಾಡಿದರು ಎಂಬುದು ಶಾಸನದ ಸಾರಾಂಶ ವಾಗಿರುತ್ತದೆ. ಸಿಂದಗಿ ತಾಲ್ಲೂಕಿನ ಯಂಕಂಚಿಯಿಂದ ಇಂಡಿ ತಾಲ್ಲೂಕಿನ ಲಾಳಸಂಗಿಯು ಸುಮಾರು ೫೫ ಕಿ.ಮೀ. ದೂರದಲ್ಲಿದೆ. ಅಷ್ಟೊಂದು ದೂರದಿಂದ ಬಂದ ಶರಣರಿಬ್ಬರು ಮಠ ಕಟ್ಟಿಸಲು ಮುಂದಾದದ್ದು ಅವರ ಭಕ್ತಿಯ ವಿಷಯ ವಾಗಿದೆ. ಮಠದ ಕಟ್ಟಡದ ಖರ್ಚು-ವೆಚ್ಚಗಳನ್ನು ಇಬ್ಬರೂ ಭರಿಸಿ ಆನಂದನಾಮ ಸಂವತ್ಸರದಲ್ಲಿ ನಿರ್ಮಾಣ ಗೊಳಿಸಿರುತ್ತಾರೆ. ಶಂಕರಪ್ಪ-ಶಿವಲಿಂಗಪ್ಪ ಇವರಿಬ್ಬರೂ ಸಮಕಾಲೀನರಾಗಿದ್ದು, ಇವರಿಬ್ಬರ ತಂದೆಯವರಾದ ಯಂಕಂಚಿ ನಿಂಗಪ್ಪ ಮತ್ತು ಸಿದ್ಧಲಿಂಗಪ್ಪನವರೂ ಸಮವಯಸ್ಕರಾಗಿದ್ದಿರಬಹುದು. 'ಶರಣು ಮಾಡುವುದು' ಎಂದರೆ ಸಮರ್ಪಿಸುವುದು ಎಂಬರ್ಥ ಬರುತ್ತದೆ. 'ಮಠ' ಎಂಬ ಪದಕ್ಕೆ 'ಯತಿಗಳ ವಾಸಸ್ಥಾನ' ಎಂಬುದು ಮೂಲಾರ್ಥ. ಅಂತಹ ವಾಸಸ್ಥಾನಗಳಲ್ಲಿ ವಿದ್ಯಾದಾನ ನಡೆಯುತ್ತಿದ್ದುದರಿಂದ ವಿದ್ಯಾಕೇಂದ್ರ, ಪಾಠಶಾಲೆ ಎಂಬ ಅರ್ಥಗಳೂ ಇವೆ. ಅಮರಕೋಶದಲ್ಲಿ 'ಶಿಷ್ಯರಿರುವ ಸ್ಥಳ' ಎಂಬ ಅರ್ಥವನ್ನು ಕೊಟ್ಟಿದೆಯಾದರೂ ಈಗಲೂ ಹಳ್ಳಿಗಳಲ್ಲಿ ಪಾಠಶಾಲೆಗಳನ್ನು 'ಮಠ', 'ಸಾಲೆಮಠ' ಎಂದು ಕರೆಯಲು ಬಹುಮಟ್ಟಿಗೆ ಪ್ರಾಚೀನ ದೇವಸ್ಥಾನಗಳೇ ಕಾರಣ[೪]. ಇತ್ತೀಚಿನವರೆಗೂ ಲಾಳಸಂಗಿಯಲ್ಲಿ ಪಾಠ ಪ್ರವಚನಗಳು ಇದೇ ಮಠದಲ್ಲಿ ನಡೆಯುತ್ತಿದ್ದವೆಂಬುದನ್ನು ಇಲ್ಲಿಯ ವಯೋವೃದ್ಧರು ನೆನಪಿಸಿಕೊಳ್ಳುತ್ತಾರೆ. ಜನರ ಬಾಯಿಯಲ್ಲಿ ಇದು 'ಬಕ್ಕಯ್ಯನ ಮಠ'ವಾಗಿ ಉಳಿದುಕೊಂಡಿದೆ. ಬಹುಶಃ ಈ ಮಠಕ್ಕೆ ಹೊಂದಿಕೊಂಡಂತೆ ಹಿಂಭಾಗದಲ್ಲಿ ಬಕ್ಕಯ್ಯನ ದೇವಸ್ಥಾನವಿದ್ದಿರಬಹುದು, ಏಕೆಂದರೆ ಈ ಮಠದ ಹಿಂದೆ ಮರಗಳ ಕೆಳಗೆ ಇಟ್ಟಿರುವ ಬೃಹತ್ ಶಿವಲಿಂಗದ ಪಾಣಿಪೀಠವು ಈ ಅಂಶವನ್ನು ದೃಢೀಕರಿಸುತ್ತದೆ.

ಬಕ್ಕಯ್ಯನ ಮಠದ ದುರಸ್ತಿ ಕೆಲಸ ೧೫-೨೦ ವರ್ಷಗಳ ಹಿಂದೆ ನಡೆಯಿತು. ಆಗ ಪಡಸಾಲೆಯ ಗೋಡೆಗಳು ಮತ್ತು ಕಮಾನುಗಳಿಗೆ ಸಿಮೆಂಟ್ ಹಚ್ಚಿ, ಮಧ್ಯದ ಕಮಾನಿನ ಮೇಲೆ 'ಶ್ರೀ ನೂರಂದೇಶ್ವರ ಜ್ಞಾನಮಂದಿರ ಲಾಳಸಂಗಿ' ಎಂಬ ಬರಹ ಬರೆಸಲಾಗಿದೆ. ಆದಾಗ್ಯೂ ಗ್ರಾಮಸ್ಥರು 'ಬಕ್ಕಯ್ಯನ ಮಠ'ವೆಂದೇ ಹೇಳುತ್ತಾರೆ. ಹಿಂದೆ ಈ ಮಠದೊಳಗೆ ಮನೆಗಳಿದ್ದವು, ಮನೆ ಮತ್ತು ಮಠಗಳನ್ನೊಳಗೊಂಡು ದೊಡ್ಡ ಆವರಣ ಗೋಡೆಯೂ ಇರುವುದನ್ನು ಪಾಯದ ಕಲ್ಲುಗಳಿಂದ ಇಂದಿಗೂ ಗುರುತಿಸಬಹುದಾಗಿದೆ. ಬಕ್ಕಯ್ಯನ ಮಠಕ್ಕೆ 'ನೂರಂದೇಶ್ವರ ಜ್ಞಾನಮಂದಿರ' ಎಂಬ ಹೆಸರಿಡುವ ಪ್ರಯತ್ನ ಹೇಗೆ ನಡೆಯಿತು? ಎಂದು ಪ್ರಶ್ನಿಸಿದಾಗ ಲಾಳಸಂಗಿಯ ಕೆಲ ಗ್ರಾಮಸ್ಥರು ಈ ಮಠ ಸಿಂದಗಿ ತಾಲ್ಲೂಕು ಮೋರುಟಗಿಯ ನೂರಂದೇಶ್ವರ ಮಠದ ಆಡಳಿತಕ್ಕೊಳಪಟ್ಟಿದೆ ಎಂದು ತಿಳಿಸಿದರು. ಇನ್ನು ಕೆಲವರು ನೂರಂದೇಶ್ವರ ಮಠದಿಂದ ಒಬ್ಬ ಯತಿ ಬಂದು ಇಲ್ಲಿ ತಂಗಿದ್ದರು. ಅವರ ಇರುವಿಕೆಗಾಗಿ ಇದನ್ನು 'ನೂರಂದೇಶ್ವರ ಜ್ಞಾನಮಂದಿರ' ಎನ್ನಲಾಗಿದೆ ಎಂಬ ವಿವರಣೆ ನೀಡುತ್ತಾರೆ. ಹಾಗಾದರೆ ಮೋರುಟಗಿಯ ನೂರಂದೇಶ್ವರರು ಯಾರು? ಎಂಬ ಪ್ರಶ್ನೆ ಎದುರಾದಾಗ ಮೋರುಟಗಿಯ ಬಸಲಿಂಗಯ್ಯ ತೆಗ್ಗಿನಮಠ ರವರು ಹೀಗೆ ಹೇಳುತ್ತಾರೆ - 'ರಾಮಗಿರಿ ಮಠದ ವಂಶಸ್ಥ ರಾದ ನೂರಂದಯ್ಯ (೧೮೭೯-೧೯೭೪) ನವರು ತಾಯಿ ಬಸಮ್ಮ ಮತ್ತು ತಂದೆ ಗುರುಬಸಯ್ಯನವರ ಜೇಷ್ಠ ಪುತ್ರರು. ಇವರು ಸಿಂದಗಿ ತಾಲ್ಲೂಕಿನ ಮೋರುಟಗಿ, ಅಫಜಲಪುರ ತಾಲ್ಲೂಕಿನ ಶಿವೂರ, ಇಂಡಿ ತಾಲ್ಲೂಕಿನ ಚಿಕ್ಕಬೇವನೂರು, ಚಿತ್ತಾಪುರ ತಾಲ್ಲೂಕಿನ ಪೆಂಗಳಿ, ಅಕ್ಕಲಕೋಟ ತಾಲ್ಲೂಕಿನ ಸುಲೇರ ಜವಳಗಿ, ಹಂಜಗಿ ಗ್ರಾಮಗಳಲ್ಲಿ ಮಠಗಳನ್ನು ಸ್ಥಾಪಿಸಿದ್ದರು. ಈ ಎಲ್ಲ ಮಠಗಳು ನೂರಂದೇಶ್ವರ ವಿರಕ್ತಮಠ ಗಳೆಂದು ಕರೆಯಲ್ಪಡುತ್ತಿವೆ'. ಇವರ ಈ ಮಾತಿನಲ್ಲಿ ಲಾಳಸಂಗಿ ಮಠದ ಪ್ರಸ್ತಾಪವೇ ಇರುವುದಿಲ್ಲ. ಹಾಗಾಗಿ ಲಾಳಸಂಗಿಯ ಬಕ್ಕಯ್ಯನ ಮಠಕ್ಕೂ ಮೋರುಟಗಿಯ ನೂರಂದೇಶ್ವರ ಮಠಕ್ಕೂ ಸಂಬಂಧವಿರುವುದಿಲ್ಲ. ಬಕ್ಕಯ್ಯನ ಮಠದ ಇಂಡೋ-ಇಸ್ಲಾಮಿಕ್ ವಾಸ್ತುಶೈಲಿ (ಕಮಾನು) ಹಾಗೂ

ಯಂಕಂಚಿ ಶರಣರು ಹಾಕಿಸಿದ ಶಿಲಾಶಾಸನ (ಫಲಕದ) ಲಕ್ಷಣಗಳನ್ನಾಧರಿಸಿ ಬಕ್ಕಯ್ಯನ ಮಠವು ಸುಮಾರು ೧೫೦ ವರ್ಷಗಳ ಹಿಂದಿನ ಅಂದರೆ ಕ್ರಿ.ಶ. ೧೮೬೪–೬೫ರ ನಿರ್ಮಿತಿಯೆಂದು ಹೇಳಬೇಕಾಗುತ್ತದೆ. ನಿಂಗಪ್ಪನ ಪುತ್ರ ಶಂಕರಪ್ಪ ಹಾಗೂ ಸಿದ್ಧಲಿಂಗಪ್ಪನ ಪುತ್ರ ಶಿವಲಿಂಗಪ್ಪನವರ ವಂಶಸ್ಥರು ಯಂಕಂಚಿ ಗ್ರಾಮದಲ್ಲಿ ಇದ್ದಿರುವ ಬಗ್ಗೆ, ಈ ಕುಟುಂಬದವರಿಂದ ನಡೆದ ಇಂಥ ಧರ್ಮ ಕಾರ್ಯಗಳ ಹೆಚ್ಚಿನ ಮಾಹಿತಿಗಳನ್ನು ಪಡೆಯುವುದರ ಜೊತೆಗೆ ಸದರಿ ಕುಟುಂಬದ ವಂಶವೃಕ್ಷವನ್ನು ಲಭ್ಯ ಆಕರಗಳಿಂದ ಸಂಗ್ರಹಿಸಬೇಕಾಗಿದೆ. ಶಾಸನೋಕ್ತ 'ಯಂಕಂಚಿ' ಸ್ಥಳನಾಮವು ಕ್ರಿ.ಶ. ೧೧೪೬ ರ ಯರಗಲ್ಲು ಶಾಸನದಲ್ಲಿ 'ಎಕ್ಕಂಚಿ' ಎಂದು ಉಲ್ಲೇಖಿಸಲ್ಪಟ್ಟಿರುತ್ತದೆ. ಬದ್ಧರೂಪದಲ್ಲಿ ಕಾಣಿಸಿಕೊಳ್ಳುವ 'ಎಕ್ಕಂಚಿ' ಸ್ಥಳನಾಮದ ಅಂತ್ಯಸ್ವರ 'ಇ' ಎಂಬ ಸ್ಥಳವಾಚಕದ ಮೂಲ ನಿರ್ಧರಿಸಲು ಹೊರಟರೆ, ಅದು ಗ್ರಾಮ > ಗಾಮ > ಗಾವ > ಗಾ > ಗೆ > ಗಿ (ಗ್+ಇ=ಗಿ, ಚ್+ಇ=ಚಿ) ಆಗಿದೆಯೆನ್ನಲಾಗುತ್ತದೆ. ಸಿಂದಗಿ ತಾಲ್ಲೂಕಿನ ಇಂಥ ಇತರ ಸ್ಥಳನಾಮಗಳೆಂದರೆ ಚಟ್ಟರಕಿ ಹೊನ್ನುಟಕಿ ಇಂಗಳಗಿ, ಕುಮಸಗಿ, ಕುಳೆಕುಮಟಗಿ, ಚಿಕ್ಕರೂಗಿ, ಹಿಪ್ಪರಗಿ ಇತ್ಯಾದಿ[೫].

ಅಜಾತಸ್ವಾಮಿ ಮಠದ ಕಮಾನುಬಾವಿ: ಲಾಳಸಂಗಿ ಗ್ರಾಮದ ಪಶ್ಚಿಮಕ್ಕೆ ಊರ ದಂಡೆಯಲ್ಲಿ ಅಜಾತಸ್ವಾಮಿ ಮಠವಿದೆ. ಈ ಮಠದ ಆವರಣದಲ್ಲಿ ಒಂದು ಕಮಾನು ಬಾವಿಯಿದ್ದು, ಹೊರನೋಟಕ್ಕೆ ಅದೊಂದು ನೀರಿನ ತೊಟ್ಟಿಯಂತೆ ಕಾಣಿಸುತ್ತದೆ. ಬಾವಿಯ ಈಶಾನ್ಯ ದಿಕ್ಕಿನಿಂದ ಒಳಗೆ ಇಳಿಯಲು ನಾಲ್ಕು ತಿರುವುಗಳಲ್ಲಿ ೪+೪+೫+೩ ಹೀಗೆ ಒಟ್ಟು ೧೬ ಮೆಟ್ಟಿಲುಗಳಿರುತ್ತವೆ. ಕ್ರಿ.ಶ. ೧೫೩೦ರ ಕಮಲಾಪುರದ ಶಾಸನವು ನಾಡಬಾವಿ ಮತ್ತು ಕಪಿಲೆಯ ಬಾವಿಯೆಂಬ ಎರಡು ರೀತಿಯ ಬಾವಿಗಳನ್ನು ಉಲ್ಲೇಖಿಸುತ್ತವೆ. ಮೆಟ್ಟಿಲುಗಳ ಮೂಲಕ ನೀರಿಗೆ ಇಳಿಯಬಹುದಾದ ಬಾವಿಯನ್ನು ನಾಡಬಾವಿ ಅಥವಾ ನಡದಬಾವಿಯಾದರೆ, ಮೆಟ್ಟಿಲುಗಳಿಲ್ಲದ ಬಾವಿಗಳಿಂದ ನೀರನ್ನು ಚರ್ಮದ ಅಥವಾ ತಗಡಿನ ಸಾಧನ (ಕಪಿಲೆ)ದಿಂದ ನೀರೆತ್ತುವ ಪ್ರಕಾರದವುಗಳನ್ನು ಕಪಿಲೆಯ ಬಾವಿ ಎನ್ನಲಾಗುತ್ತದೆ[೬]. ಹಾಗಾಗಿ ಮೆಟ್ಟಿಲುಗಳಿರುವ ಈ ಕಮಾನುಬಾವಿಯನ್ನು ನಾಡಬಾವಿ ಎಂದು ಕರೆಯಬೇಕಾಗುತ್ತದೆ. ತಮಿಳಿನಲ್ಲಿ ಇದನ್ನು 'ನಡೈಬಾವಿ' ಎನ್ನುತ್ತಾರೆ. ಬಾವಿಗೆ ಇಳಿಯುವ ಮೆಟ್ಟಿಲು ಹಾಗೂ ಎಡ–ಬಲ ಗೋಡೆಗಳಿಗೆ ಬೃಹತ್ ಗಾತ್ರದ ಚೌಕಾದ ಕರಿಕಲ್ಲುಗಳಿದ್ದು, ಮೇಲ್ಭಾವಣಿಗೆ ಜೋಡಿಸಿರುವ ಕಲ್ಲುಗಳ ಮಧ್ಯದಲ್ಲಿ ಗಾರೆ (ಗಚ್ಚು) ಹಾಕಿ ಕಟ್ಟಲಾಗಿರುತ್ತದೆ. ಎಷ್ಟೇ ಎತ್ತರದ ವ್ಯಕ್ತಿಯೂ ಒಬ್ಬ ನಿರಾಯಾಸವಾಗಿ ಒಳಗೆ ಹೋಗಿ ಬರಬಹುದು. ನೆಲವನ್ನು ವೃತ್ತಾಕಾರದಲ್ಲಿ ಅಗೆದು ಗಟ್ಟಿಭಾಗದಿಂದ ಮೇಲೆ ಕರಿಕಲ್ಲಿನಿಂದ ಚೌಕಾಕಾರದಲ್ಲಿ ಗೋಡೆಕಟ್ಟಿ, ಅದರ ಮೇಲೆ ಪೂರ್ವ–ಪಶ್ಚಿಮ ೧೯ ಅಡಿ, ದಕ್ಷಿಣೋತ್ತರ ೧೭ ಅಡಿ ಸ್ಥಳಾವಕಾಶ ಕಲ್ಪಿಸಿಕೊಡು ಒಟ್ಟು ೧೦ ಕಮಾನಾಕೃತಿಗಳನ್ನು ನಿರ್ಮಿಸಲಾಗಿದೆ. ಈ ಕಮಾನುಗಳ ಅಡಿಯಲ್ಲಿ ವಿಶಾಲವಾದ ಸಮತಟ್ಟು ಮಾಡಿ ತಂಗಲು ಸ್ಥಳಾವಕಾಶ ಒದಗಿಸಲಾಗಿದೆ. ಈ ತಂಗುದಾಣಗಳು ವಿಜಾಪುರ ಹತ್ತಿರದ ಕುಮಟಗಿಯ ಬಾವಿಗಳಲ್ಲಿರುವಂತೆಯೇ ಇರುತ್ತವೆ[೭]. ಕುಮಟಗಿಯಲ್ಲಿರುವಂತೆ ಅಲಂಕಾರಿಕ ಚಿತ್ರಗಳು ಇರುವುದಿಲ್ಲ. ಕಮಾನು ಬಾವಿಯ ಪೂರ್ವದ ಗೋಡೆಗೆ ಎರಡು ಚೌಕಾಕಾರದ ಕೋಷ್ಠಗಳು, ಪಶ್ಚಿಮದ ಗೋಡೆಗೆ ಎರಡು ಕಮಾನಿನಾಕಾರದ ಕೋಷ್ಠಗಳು ಹಾಗೂ ಉತ್ತರ ದಿಕ್ಕಿನ ಗೋಡೆಯಲ್ಲಿ ಎರಡು ಚೌಕಾಕಾರದ ಕೋಷ್ಠ(ಮಾಡು)ಗಳಿರುತ್ತವೆ. ದಕ್ಷಿಣ ದಿಕ್ಕಿಗೆ ಸ್ಥಳಾವಕಾಶ ಇಲ್ಲದಿರುವುದರಿಂದ ಕೋಷ್ಠಗಳನ್ನು ಮಾಡಿರುವುದಿಲ್ಲ. ಲಾಳಸಂಗಿಯ ಈ ಬಾವಿ ನೆಲಮಟ್ಟದಿಂದ ಕೆಳಗೆ ನಿರ್ಮಾಣವಾದ ಕಮಾನುಗಳು, ಅವುಗಳ ಮೇಲೆ ಹಾಕಿದ ಕಲ್ಲಿನ ಛಾವಣಿಗಳು ಇದ್ದು, ಹೊರಗಿನಿಂದ ನೋಡಿದರೆ ನೆಲದೊಳಗೆ ಬಾವಿಯ ಸುತ್ತ ಕಮಾನುಗಳಿವೆಯೆಂದು ಗೊತ್ತಾಗುವುದೇ ಇಲ್ಲ. ಆದಾಗ್ಯೂ ಕಮಾನುಗಳ ರಚನಾ ವಿನ್ಯಾಸ ಕಟ್ಟಡ ಶೈಲಿಗಳು ವಿಜಾಪುರದ ಚಾಂದ್‌ಬಾವಡಿಯನ್ನು ಹೋಲುವುದರಿಂದ ಈ ಬಾವಿಯ ಕಾಲಮಾನವನ್ನು ಕ್ರಿ.ಶ. ೧೫೫೦–೧೬೦೦ರ ನಂತರದ ಅವಧಿಗೆ ಹಾಕಬಹುದು.

ಬಾವಿಯಿಂದ ಒಂದು ಕಿ.ಮೀ. ದೂರದಲ್ಲಿರುವ ಕೆರೆ ತುಂಬಿದರೆ ಬಾವಿಗೆ ನೀರು ಒಸರುತ್ತದೆ. ಕಮಾನುಬಾವಿಯೊಂದಿಗೆ ಬೆಸೆದುಕೊಂಡಿರುವ ಅಜಾತಸ್ವಾಮಿ ಮಠದ ಬಗ್ಗೆ ತಿಳಿಯಲೆತ್ನಿಸಿದಾಗ ಅಜಾತಸ್ವಾಮಿಗಳು ಆಲಮೇಲದಿಂದ ಲಾಳಸಂಗಿ ಗ್ರಾಮಕ್ಕೆ ಬಂದು ಇಲ್ಲಿ ಮಠ ಸ್ಥಾಪಿಸಿದರಂತೆ. ಇವರ ಸಹೋದರ ಗೋಸಯ್ಯನವರು ಆಲಮೇಲದ ಕೆರೆ ಹಿಂಭಾಗದಲ್ಲಿ ಮಠವನ್ನು ಕಟ್ಟಿಸಿದ್ದರೆ, ಇನ್ನೊಬ್ಬ ಸಹೋದರ ಲಗಳಯ್ಯ ಸ್ವಾಮಿಗಳು ಆಲಮೇಲದ ಕಡಣಿ ಅಗಸಿಯ ಹತ್ತಿರವಿರುವ ಬಡಿಗೇರ ಓಣಿಯಲ್ಲಿ ಮಠ ಮಾಡಿಕೊಂಡಿದ್ದ ಮಾಹಿತಿ ತಿಳಿದು ಬಂತು. ಇನ್ನು ಅಜಾತಸ್ವಾಮಿಗಳು ಜಾತ್ಯಾತೀತ ತತ್ವದವರಾಗಿದ್ದು, ಎಲ್ಲ ಜಾತಿಗಳ ಜನರ ಮನೆಗೂ ಭಿಕ್ಷೆಗೆ ಹೋಗುತ್ತಿದ್ದರಂತೆ. ಒಂದು ದಿನ ಮಾಂಸಾಹಾರಿಯ ಮನೆಗೆ ಭಿಕ್ಷೆ ಬೇಡಲು ಹೋದಾಗ ಅವರು ಮಾಂಸಭಿಕ್ಷೆ ನೀಡಿದರಂತೆ. ಇದರಿಂದ ಶಾಖಾಹಾರಿ ಜನರು ರೊಚ್ಚಿಗೆದ್ದು ಧ್ಯಾನಕ್ಕೆ ಕುಳಿತಿದ್ದ ಅಜಾತಸ್ವಾಮಿಗಳನ್ನು ಮಾಂಸಭಿಕ್ಷೆ ಬೇಡಿರುವುದೇಕೆ? ಎಂದು ಕೇಳಬೇಕೆನ್ನುವಷ್ಟರಲ್ಲಿ ಅವರು ಲಿಂಗೈಕ್ಯರಾಗಿದ್ದರಂತೆ, ಹೀಗೆ ಜನರು ಮಾತನಾಡಿಕೊಳ್ಳುತ್ತಾರೆ

ಬಸವಂತನ ಕಮಾನುಬಾವಿಯ ದಂಡೆ ಮೇಲಿರುವ ಸೂರ್ಯ ಮತ್ತು ನರಸಿಂಹ ಶಿಲ್ಪಗಳು: ಗ್ರಾಮದ ಹಡಪದರ ಓಣಿಯೆದುರು ಲಾಳಸಂಗಿ–ಶಿವಪುರ ಮುಖ್ಯ ರಸ್ತೆಯಲ್ಲಿ ಬಸವಂತನ ಬಾವಿಯೆಂದು ಹೇಳಲಾಗುವ ಇನ್ನೊಂದು ಕಮಾನುಬಾವಿಯಿದೆ. ಅಜಾತಸ್ವಾಮಿ ಮಠದ ಆವರಣ ದಲ್ಲಿರುವ ಬಾವಿಗಿಂತ ಇದು ದೊಡ್ಡದಾಗಿದೆ. ಬಾವಿಯ ದಕ್ಷಿಣ ದಿಕ್ಕಿನಿಂದ ಮೆಟ್ಟಿಲುಗಳ ಮೂಲಕ ನೀರಿಗೆ ಇಳಿಯ ಬೇಕಾಗುತ್ತದೆ. ಇದೂ ಸಹ ನಾಡಬಾವಿ ಅಥವಾ ನಡದ ಬಾವಿಯ ಪ್ರಾಕಾರವಾಗಿರುತ್ತದೆ. ಗೋಡೆಗೆ ಬಳಸಿದ ಚೌಕಾಕಾರದ ಕರಿಕಲ್ಲುಗಳ ನಡುವೆ ಗಾರೆ ಬಳಸಲಾಗಿದೆ. ಈ ಹಿಂದೆ ಎರಡು ಕಪಿಲೆ(ಬಾರಿ)ಗಳ ಮೂಲಕ ಬಾವಿಯ ನೀರನ್ನು ಮೇಲೆತ್ತಲಾಗುತ್ತಿತ್ತು.

ಬಾವಿಯನ್ನು ಪ್ರವೇಶಿಸುವಾಗ ನಮ್ಮ ಬಲಭಾಗಕ್ಕೆ ಪೂರ್ವಾಭಿಮುಖವಾಗಿ ಗಣೇಶನ ಗುಡಿಯಿದೆ. ಈ ಗುಡಿಯ ಬಲಗೋಡೆಗೆ ಅಪರೂಪದ ಸೂರ್ಯ ಶಿಲ್ಪವೊಂದನ್ನು ನಿಲ್ಲಿಸಲಾಗಿದೆ. ಇದರಲ್ಲಿ ಸೂರ್ಯನು ಸಮಭಂಗಿಯಲ್ಲಿ ನಿಂತು ಕೈಗಳಲ್ಲಿ ನೀಳವಾದ ತಾವರೆಯ ಮೊಗ್ಗುಗಳನ್ನು ಲಘುವಾಗಿ ಹಿಡಿದಿರುತ್ತಾನೆ. ಸೂರ್ಯಶಿಲ್ಪವು ವಿಜಯ ನಗರೋತ್ತರ ಕಾಲದ್ದೆಂದು ತಿಳಿದು ಬರುತ್ತದೆ. ಗಟ್ಟಿಯಾದ ಕರಿಕಲ್ಲಿನಲ್ಲಿ ತುಂಬಾ ಒರಟಾಗಿ ಶಿಲ್ಪಿಸಲ್ಪಟ್ಟ ಸೂರ್ಯ ಬಿಂಬವನ್ನು ಪೂರ್ವಕ್ಕೆ ಮುಖಮಾಡಿ ನಿಲ್ಲಿಸಲಾಗಿದೆ. ಸೂರ್ಯನಿಗೆ ಎರಡೂ ಕಾಲುಗಳಲ್ಲಿ ಕಾಲ್ಕಡಗ, ನಡುಪಟ್ಟಿ ಯಿಂದ ಇಳಿಬಿದ್ದಿರುವ ಬಟ್ಟೆ, ಎಡಭುಜದಿಂದ ಎದೆಯ ಬಲಕ್ಕೆ ಇಳಿಬಿದ್ದಿರುವ ಯಜ್ಞೋಪವೀತ, ಕರ್ಣಕುಂಡಲ, ಕರಂಡಕಗಳನ್ನು ಕಂಡರಿಸಲಾಗಿದೆ. ಸೂರ್ಯನ ಇಕ್ಕೆಲಗಳಲ್ಲಿ ಉಷಾ–ಪ್ರತ್ಯುಷಾರ ಚಿಕಣಿ ಶಿಲ್ಪಗಳನ್ನು ಮೂಡಿಸಲಾಗಿದೆ[೮]. ಗಣೇಶನ ಗುಡಿಯ ಎಡಗೋಡೆಗೆ ಸಮಭಂಗಿಯಲ್ಲಿ ನಿಂತಿರುವ ನರಸಿಂಹನ ಶಿಲ್ಪವಿದೆ. ನಾಲ್ಕು ಕೈಗಳಿದ್ದು ಒಂದು ಬಲಗೈಯಲ್ಲಿ ಶಂಖ, ಇನ್ನೊಂದು ಬಲಗೈ ಕೆಳಗೆ ಬಿಡಲಾಗಿದೆ. ಒಂದು ಎಡಗೈಯಲ್ಲಿ ಗಧೆಯನ್ನು ಕೆಳಮುಖಮಾಡಿ ಹಿಡಿದುಕೊಂಡಿದ್ದು, ಇನ್ನೊಂದು ಎಡಗೈಯಲ್ಲಿರುವ ವಸ್ತು ಅಸ್ಪಷ್ಟವಾಗಿದ್ದು ಅದು ತೃಟಿತವಾಗಿದೆ. ಕೊರಳಲ್ಲಿ ಅರ್ಧ ಚಂದ್ರಾಕಾರದ ಆಭರಣವಾದ ಅಡ್ಡಿಗೆ, ಎಡಭುಜದಿಂದ ಹಾದು ಬಲತೋಳಿನ ಕೆಳಗೆ ಇಳಿದಿರುವ ಎರಡೆಳೆಯ ಯಜ್ಞೋಪ ವೀತ, ನಡುವನ್ನು ಬಿಗಿದು ಮುಂಭಾಗದಲ್ಲಿ ಗಂಟು ಬಿದ್ದಿರುವ ನಡುಬಂಧ, ಇಳಿಬಟ್ಟೆ, ಕೈಕಡಗ ಮತ್ತು ಅಲಂಕಾರಿಕ ಕಾಲ್ಕಡಗಗಳನ್ನು ತೋರಿಸಲಾಗಿದೆ. ಮುಖಲಕ್ಷಣಗಳನ್ನು ಗಮನಿಸಿದಾಗ ನರಸಿಂಹನಂತೆಯೂ, ಆಯುಧಗಳನ್ನು ಪರಿಗಣಿಸಿದಾಗ ವಿಷ್ಣುವಿನಂತೆಯೂ[೯] ಕಾಣಿಸುವ ಈ ಶಿಲ್ಪವು ಗಟ್ಟಿಯಾದ ಕರಿಕಲ್ಲಿನಲ್ಲಿ ಒರಟಾಗಿ ಕೆತ್ತಲ್ಪಟ್ಟಿದೆ. ಶಿಲ್ಪದ ಎಡಬಲಗಳಲ್ಲಿ ಮನುಷ್ಯರಿಬ್ಬರ ಚಿಕಣಿ ಶಿಲ್ಪಗಳಿರುತ್ತವೆ. ಇದೂ ಕೂಡ ವಿಜಯನಗರೋತ್ತರ ಕಾಲಮಾನದ್ದಾಗಿರುತ್ತದೆ.

ಆರೇರ ಓಣಿಯಲ್ಲಿರುವ ಸಿಂಹಪೀಠ: ಲಾಳಸಂಗಿ ಗ್ರಾಮದ ಆರೇರ ಓಣಿಯಲ್ಲಿ ಉತ್ತರಕ್ಕೆ ಮುಖ ಮಾಡಿರುವ ಸಿಂಹಪೀಠವು ೧೪ ಇಂಚು ಎತ್ತರ ೩೬೪ ಇಂಚು ಉದ್ದವಿದೆ. ೧೬ ಇಂಚು ಅಗಲವಿರುವ ಕರಿಕಲ್ಲು ಚಪ್ಪಡಿಯನ್ನು ಇದಕ್ಕಾಗಿ ಬಳಸಲಾಗಿದೆ. ಪೀಠವನ್ನು ಸರಿಯಾಗಿ ಮೂರು ಭಾಗಗಳನ್ನಾಗಿ ಗುರುತಿಸಿಕೊಂಡು ಮೂರು ಸಿಂಹಗಳನ್ನು ಇದರ ಮೇಲೆ ಕಂಡರಿಸಲಾಗಿದೆ. ಪೀಠದ ಬಲಭಾಗದಲ್ಲಿರುವ ಸಿಂಹವು ತನ್ನ ಮುಂದಿನ ಎಡಗಾಲು ಎತ್ತಿಹಿಡಿದಿದ್ದು ಬಾಲವನ್ನು ಬೆನ್ನಿನ ಮೇಲೆ ತೆಗೆದುಕೊಂಡಿದೆ. ಮುಖವನ್ನು ಎದುರುಗಡೆ ತಿರುಗಿಸಿ ಬಾಯಿ ತೆರೆದು ನಿಂತಿರುತ್ತದೆ. ನಡುವೆಯಿರುವ ಸಿಂಹವು ತನ್ನ ಹಿಂಗಾಲುಗಳ ಮೇಲೆ ಕುಳಿತು ಮುಂಗಾಲುಗಳ ಮೇಲೂ ಭಾರ ಹಾಕಿದೆ. ಕಣ್ಣರಳಿಸಿ, ಬಾಯ್ತೆರೆದು ಕುಳಿತಿದೆ. ಇನ್ನು ಪೀಠದ ಎಡಭಾಗದಲ್ಲಿರುವ ಸಿಂಹವು ಮುಂದಿನ ಬಲಗಾಲನ್ನು ಮೇಲೆ ಎತ್ತಿದ್ದು, ಬಾಲವನ್ನು ಬೆನ್ನಿನ ಮೇಲೆ ತೆಗೆದುಕೊಂಡಿದೆ. ಶಿಲ್ಪಿಯು ಸಿಂಹಪೀಠದ ಮೇಲೆ ಹಾಗೂ ಕೆಳಗೆ ಅಂಚಿನಲ್ಲಿ ಪಟ್ಟಿಕೆ ಹಾಕಿಕೊಂಡಿರು ತ್ತಾನೆ. ಈ ಸಿಂಹಪೀಠದ ನೆತ್ತಿಯ ಮೇಲೆ ೫x೫ ಇಂಚು ಆಳತೆಯ ಚೌಕಾದ ರಂಧ್ರವನ್ನು ಕೊರೆಯಲಾಗಿದೆ. ಪೀಠಕ್ಕೆ ಹೀಗೆ ರಂಧ್ರ ಕೊರೆದು ಮೂರ್ತಿಯನ್ನು ಪೀಠದ ಮೇಲೆ ಸ್ಥಿರೀಕರಿಸುತ್ತಿದ್ದ ಮಾಹಿತಿ ಇದರಿಂದ ತಿಳಿದು ಬರುತ್ತದೆ. ಸಿಂಹಪೀಠದ ಹತ್ತಿರದಲ್ಲಿ ಬಿದ್ದಿರುವ ತೃಟಿತವಾದ ಏಳುಹೆಡೆಗಳ ಕಿರೀಟದಂತಹ ಭಾಗ ಹಾಗೂ ಸಿಂಹಪೀಠ –ಈ ಎರಡನ್ನೂ ಪರಾಮರ್ಶಿಸಿದಾಗ ಪಾರ್ಶ್ವನಾಥ ತೀರ್ಥಂಕರ ಹಾಗೂ ಜಿನಬಸದಿಯೊಂದು ಲಾಳಸಂಗಿಯಲ್ಲಿ ದ್ದಿತ್ತೆಂದು ತಿಳಿದುಬರುತ್ತದೆ. ಆ ಜಿನಾಲಯವು ಯಾವುದೋ ಒಂದು ಕಾಲಘಟ್ಟದಲ್ಲಿ ಸಮೂಲನಾಶವಾಗಿದೆ. ಮಸೀದಿಯ ಇಂದಿನ ಜಾಗವು ಆಳೆತ್ತರದ ದಿಬ್ಬದ ಮೇಲಿದೆ. ಅಲ್ಲಿ ಜಿನಾಲಯದ ಕುರುಹುಗಳನ್ನು ಇಂದಿಗೂ ಮಸೀದಿಯ ಮೆಟ್ಟಿಲುಗಳಿಗೆ ಹಾಕಿದ ಕಲ್ಲಿನ ಕಂಬ, ಮತ್ತಿತರ ತೃಟಿತ ಶಿಲ್ಪಗಳಲ್ಲಿ ನೋಡಬಹುದಾಗಿದೆ. ಅಂದರೆ ವಿಜಾಪುರದ ಆದಿಲ್ ಶಾಹಿ, ಹೈದ್ರಾಬಾದಿನ ನಿಜಾಮರ ದಾಳಿಗೆ ಸಿಲುಕಿ ನಲುಗಿದ ಸ್ಥಳ ಇದಾಗಿದೆ.

ಲಾಳಸಂಗಿ ಗ್ರಾಮವೂ ಕೂಡ ಒಂದು ಜೈನನೆಲೆ ಯಾಗಿತ್ತೆಂದು ನಾವು ಪರಿಗಣಿಸಲೇಬೇಕಾಗುತ್ತದೆ. ತರ್ದವಾಡಿ ನಾಡಿನ ಶಾಸನಗಳಲ್ಲಿ ಕೆಲ ಜಿನಬಸದಿಗಳನ್ನು ಕಟ್ಟಿಸಿದ ಮತ್ತು ಜಿನಪ್ರತಿಮೆಗಳನ್ನು ಮಾಡಿಸಿದ ಉಲ್ಲೇಖಗಳು

ಬಂದಿವೆ. ಅವು ಅಂದಿನ ಜೈನ ಸಮಾಜದ ಮೇಲೆ ಹೆಚ್ಚಿನ ಬೆಳಕನ್ನು ಬೀರುತ್ತಿದ್ದು, ಆ ಜನರ ಜಿನಭಕ್ತಿ, ನಿಷ್ಠೆ, ಶ್ರದ್ಧೆಗಳ ಸಂಕೇತವಾಗಿವೆ. ಅಗರಖೇಡದಲ್ಲಿ ಪಾರಿಸ್ವರ ದೇವರ ಉಲ್ಲೇಖ, ರೂಗಿ ಶಾಸನದ ಸೀಮಾನಿರ್ದೇಶನದಲಿ ಬರುವ ಬಸದಿಯ ಉಲ್ಲೇಖ, ಸಿಂದಗಿ ಶಾಸನದಲ್ಲಿ ಬರುವ ಬಸದಿಯ ಗಡಿಂಬದಕೋಲ ಪ್ರಸ್ತಾಪ– ಇವೆಲ್ಲವೂ ಅಲ್ಲಿ ಬಸದಿಗಳಿದ್ದುದನ್ನು ಸೂಚಿಸುತ್ತವೆ[೧೦]. ಲಾಳಸಂಗಿಯಲ್ಲಿ ಪಾರ್ಶ್ವನಾಥ ತೀರ್ಥಂಕರನ ಪೀಠ, ಪಾರ್ಶ್ವನಾಥ ತೀರ್ಥಂಕರನ ತಲೆಯ ಮೇಲಿರುವ ಏಳು ಹೆಡೆಗಳ ಸರ್ಪದ ತೃಟಿತಶಿಲ್ಪ & ಮಸೀದಿಯ ಆವರಣದಲ್ಲಿರುವ ಬಸದಿಯ ಕಂಬಗಳು ಜೈನಾವಶೇಷಗಳೆನಿಸುತ್ತವೆ. ಇಂಥ ಜಿನಾಲಯ–ಬಸದಿಗಳು ಮೊದ ಮೊದಲು ದೇಶ ಪರ್ಯಟನದಲ್ಲಿದ್ದ ಜಿನಮುನಿಗಳ ತಾತ್ಕಾಲಿಕ ವಾಸಸ್ಥಾನಗಳಾಗಿದ್ದು, ನಂತರ ಅವರ ಸದಾ ನೆಲೆಸುವ ತಾಣಗಳಾದಂತೆ ತೋರುತ್ತವೆ. ಸದ್ಯ ಲಾಳಸಂಗಿಯಲ್ಲಿ ಜೈನ ಕುಟುಂಬಗಳಿರುವುದಿಲ್ಲ ಬದಲಾಗಿ ಮುಸ್ಲಿಂ ಕುಟುಂಬಗಳಲ್ಲಿ ಜೈನಮ್ಮ, ಜೈನುಲ್ ಎಂಬ ಹೆಸರಿನವರಿದ್ದಾರೆ. ಸೂರ್ಯೋದಯದೊಂದಿಗೆ ತಲೆ ಮೇಲೆ ಎಣ್ಣೆಬುಟ್ಟಿ ಹೊತ್ತು ಸುತ್ತಲಿನ ಊರುಗಳಿಗೆ ಹಲ್ಲುಪುಡಿ, ಕುಂಕುಮ, ಎಲೆ–ಅಡಿಕೆ, ನಿಂಬೆಹಣ್ಣು ಮಾರುತ್ತಿದ್ದ ಲಾಳಸಂಗಿಯ ಜೈನಮ್ಮ (ನನ್ನ ತಾಯಿಗೆ ಚಿರಪರಿಚಯದವರು) ಇತ್ತೀಚೆಗೆ ತೀರಿಕೊಂಡರು.

ಪೂರ್ಣಕುಂಭಗಳ ಶಿಲ್ಪ: ದೇವಾಲಯಗಳ ಕಕ್ಷಾಸನದಲ್ಲಿ ಕಂಡುಬರುವ ಪೂರ್ಣಕುಂಭಗಳ ಶಿಲ್ಪವು ಲಾಳಸಂಗಿ ಗ್ರಾಮದ ಬಕ್ಕಯ್ಯನ ಮಠದ ಹಿಂಭಾಗದಲ್ಲಿರುವ ಶಾಂತಪ್ಪ ಅವ್ವಪ್ಪ ಪಾಟೀಲ ಅವರ ತೋಟದ ಬಾವಿಯ ದಂಡೆ ಮೇಲಿದೆ. ೪ ಇಂಚು ದಪ್ಪ, ೨೦ ಇಂಚು ಎತ್ತರ ಹಾಗೂ ೩೬ ಇಂಚು ಉದ್ದನೆಯ ಕಪ್ಪು ಶಿಲಾ (Black Trap) ಫಲಕದಲ್ಲಿ ಎರಡು ಪೂರ್ಣಕುಂಭಗಳನ್ನು ಕಂಡರಿಸಿದ್ದು, ಮೂರನೆಯ ಪೂರ್ಣಕುಂಭ ತೃಟಿತವಾಗಿರುತ್ತದೆ. ಶಿಲಾಫಲಕದ ಅಂಚಿನಲ್ಲಿ ಪಟ್ಟಿಕೆಯನ್ನು ಹಾಕಿಕೊಂಡು ಪ್ರತಿ ಪೂರ್ಣಕುಂಭದ ನಂತರ ಒಂದೊಂದು ಕಂಬ ಮಾದರಿಯನ್ನು ಮಾಡಲಾಗಿದೆ. ಕಂಬ ಮಾದರಿಯಲ್ಲಿ ಪಿಂಡಿ, ಶಲಾಕ, ಕಂಠ, ಮುಚ್ಚಳ, ಕಂಠ, ಬೋದಿಗೆಗಳನ್ನು ತೋರಿಸಲಾಗಿದೆ. ಪೂರ್ಣಕುಂಭದ ಅಡಿಯಲ್ಲಿ ಸಿಂಬಿ (ನಿಲುಗಡೆ) ಇದ್ದು, ಕುಂಭದ ಮಧ್ಯದಲ್ಲಿ ಒಂದು ಸುತ್ತು ಅಲಂಕಾರ ಪಟ್ಟಿಕೆ ಹಾಕಿ ಕಟ್ಟಲಾಗಿದೆ. ಕುಂಭಗಳ ಕಂಠಕ್ಕೆ ಮೇಲೆ ಎರಡೆರಡು ಎಲೆಗಳನ್ನು ಹಾಕಿ, ಎಲೆ ಮೇಲೆ ಫಲವನ್ನಿರಿಸಲಾಗಿದೆ. ಇಂತಹ ಪೂರ್ಣಕುಂಭಗಳು ಐಹೊಳೆಯ ಲಾಡಖಾನ್ ದೇವಾಲಯದ ಕಕ್ಷಾಸನದಲ್ಲಿದ್ದು, ಇವು ೮–೯ನೇ ಶತಮಾನದಲ್ಲಿ ಯಥೇಚ್ಛವಾಗಿ ಬಳಸಲ್ಪಟ್ಟಿರುತ್ತವೆ[೧೧]. ಹಾಗಾಗಿ ಆ ಕಾಲಮಾನದ ವಾಸ್ತುಲಕ್ಷಣಗಳನ್ನೊಳಗೊಂಡ ಆಲಯವೊಂದು ಲಾಳಸಂಗಿಯಲ್ಲಿ ಇತ್ತೆಂಬುದು ಸ್ಪಷ್ಟವಾಗುತ್ತದೆ.

ಲಾಳಸಂಗಿ ಊರಿನ ಸುತ್ತಲೂ ಮಣ್ಣಿನ ಕೋಟೆ ಗೋಡೆಯಿತ್ತು. ಎರಡು ಪ್ರವೇಶ ದ್ವಾರ (ಅಗಸಿಬಾಗಿಲು)ಗಳು ಇದ್ದವು. ಗ್ರಾಮದಿಂದ ಉತ್ತರ ದಿಕ್ಕಿಗೆ ಬಸವಂತನ ಬಾವಿಯ ಹತ್ತಿರ ಒಂದು ಅಗಸಿ ಬಾಗಿಲು ಇತ್ತು. ಅದನ್ನು ಕೆಡವಿ ಗ್ರಾಮದ ಸರ್ಕಾರಿ ಶಾಲಾ ಕಟ್ಟಡ ಕಟ್ಟಿಸಲಾಯಿತೆಂದು ಹೇಳಲಾಗುತ್ತದೆ. ಇನ್ನೊಂದು ಅಗಸಿ ಬಾಗಿಲು ಈಗಿನ ಹನುಮಂತ ದೇವರ ಗುಡಿಯ ಮುಂಭಾಗದಲ್ಲಿ ಅಲ್ಪಸ್ವಲ್ಪ ದುರಸ್ತಿಹೊಂದಿ ತನ್ನ ರೂಪವನ್ನು ಬದಲಿಸಿಕೊಂಡಿದೆ. ಮಣ್ಣಿನ ಗೋಡೆಗಳ ಅರಮನೆಯ ಅವಶೇಷಗಳೂ ಇದ್ದವು. ಆದಿಲ್‌ಶಾಹಿ ಕಾಲದಲ್ಲಿ ಸಂಸ್ಥಾನಿಕ ಲಾಲ್‌ಸಿಂಗ್‌ನೆಂಬ ಸರ್ದಾರನು ಇಲ್ಲಿ ಆಳ್ವಿಕೆ ನಡೆಸಿ, ನೀರಿಗಾಗಿ ಅಸಂಖ್ಯಾತ ಬಾವಿಗಳನ್ನು ಕೊರೆಸಿ ಕಲ್ಲುಗೋಡೆ ಕಟ್ಟಿಸಿದ್ದನು. ಗ್ರಾಮದಲ್ಲಿ ಮನೆಗಳ ಪಾಯ ತೋಡುವಾಗ ಶಾಹಿ ಕಾಲದ ನಾಣ್ಯಗಳು, ಪೋರ್ಚುಗೀಸರ ನಾಣ್ಯಗಳು ಈ ಹಿಂದೆ ಸಿಕ್ಕಿವೆ. ಅಲ್ಲದೆ ಗ್ರಾಮದ ಯಾವುದೇ ಭಾಗದಲ್ಲಿ ಅಗೆದರೂ ಒಂದು ಕಡೆ ಒಂದು ಅಡಿ, ಕೆಲವೆಡೆ ಒಂದೂವರೆ ಅಡಿ ಆಳದ ಮಣ್ಣಿನಲ್ಲಿ ನಾಲ್ಕು ಇಂಚಿನಷ್ಟು ಬೂದಿ ಪದರಿನ ಸ್ತರವೊಂದು ಕಂಡುಬರುತ್ತದೆ[೧೩].

೮ನೇ ಶತಮಾನದ ಪೂರ್ಣಕುಂಭ ಶಿಲ್ಪ, ತರ್ದವಾಡಿ ನಾಡಾಳಿತ ೯, ೧೦ನೇ ಶತಮಾನದ ಪಾರ್ಶ್ವನಾಥ ತೀರ್ಥಂಕರನ ಸಿಂಹಪೀಠ, ತೃಟಿತವಾದ ಏಳು ಹೆಡೆಗಳ ಸರ್ಪ ಮತ್ತು ಬಸದಿಯ ಕಂಬಗಳು, ಕ್ರಿ.ಶ. ೧೧೬೭–೭೬ರ ಕಲಚುರಿ ಅರಸರ ರಾಣಿಯರು ಬಿಟ್ಟ ಧರ್ಮ–ಇಟ್ಟ ಅರವೆಗೆ ಕೊಟ್ಟ ಕೆಯಿ ಮನೆ ಎಂಬ ಶಾಸನದ ಸಾಲು, ೧೩ನೇ ಶತಮಾನದ ಪೂರ್ವಾರ್ಧದಲ್ಲಿ ಶಾಸನೋಕ್ತ ಲಾಳಸಂಗವಿಗೆ ಗ್ರಾಮನಾಮ ಹಾಗೂ ಸುಮಾರು ಕ್ರಿ.ಶ. ೧೮೬೪–೬೫ರ ಬಕ್ಕಯ್ಯನ ಮಠದ ಶಾಸನ, ಕಮಾನು ಬಾವಿಗಳು–ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಲಾಳಸಂಗಿ ಗ್ರಾಮವು ಸುಮಾರು ೮ನೇ ಶತಮಾನದಿಂದಲೂ ಇತಿಹಾಸದಲ್ಲಿ ಗುರುತಿಸಲ್ಪಡುವ ಸ್ಥಳವಾಗಿದೆ.

[ಕ್ಷೇತ್ರಕಾರ್ಯದಲ್ಲಿ ನೆರವಾದ ವಿದ್ಯಾರ್ಥಿ ರವಿ ಆಳೂರ, ಶಿಲ್ಪಗಳ ಭಾವಚಿತ್ರ ಒದಗಿಸಿದ ಮಹಂತೇಶ್ ಹಿಕ್ಕನಗುತ್ತಿರವರ ಸಹಕಾರ ಸ್ಮರಿಸುತ್ತ, ಅನುಭವ ಹಂಚಿಕೊಂಡ ತೇಜಸ್ವಿ ಕಲ್ಲೂರ ಗುರುಗಳಿಗೆ, ಶಿಕ್ಷಕ ವಿ.ಬಿ. ಭೋಗುಂಡಿಯವರಿಗೆ ಧನ್ಯವಾದಗಳು.]

ಆಧಾರಸೂಚಿ

೧. ಇತಿಹಾಸ ದರ್ಶನ, ಸಂ.೧೬, ಕರ್ನಾಟಕ ಇತಿಹಾಸ ಅಕಾಡೆಮಿ (ರಿ) ಬೆಂಗಳೂರು, ೨೦೦೧, ಪುಟ ೨೯–೩೦.

೨. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–೧೦, ಬಿಜಾಪುರ ಜಿಲ್ಲೆ, ಶಾಸನ ಸಂಖ್ಯೆ–೭೭, ಕನ್ನಡ ವಿ.ವಿ.ಹಂಪಿ, ೨೦೧೧, ಪುಟ ೨೨೭–೨೨೮.

೩. ಇತಿಹಾಸ ದರ್ಶನ, ಸಂ.೧೭, ಕರ್ನಾಟಕ ಇತಿಹಾಸ ಅಕಾಡೆಮಿ (ರಿ) ಬೆಂಗಳೂರು, ೨೦೦೧, ಪುಟ ೬೯–೭೦.

೪. ಡಾ. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಪ್ನ ಬುಕ್ ಹೌಸ್, ಬೆಂಗಳೂರು ೨೦೧೧, ಪುಟ ೨೧೧.

೫. ಡಾ. ಕೊಪ್ಪಾ ಎಸ್.ಕೆ., ತರ್ದವಾಡಿ ನಾಡು – ಒಂದು ಅಧ್ಯಯನ, ಪ್ರತಿಭಾ ಪ್ರಕಾಶನ ಇಂಡಿ, ೧೯೯೦, ಪುಟ ೩೬.

೬. ವಿನೋದಾ ಪಾಟೀಲ., ಕರ್ನಾಟಕದ ಪ್ರಾಚೀನ ಬಾವಿಗಳು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು–೨೦೦೬, ಪುಟ–೨೩.

೭. ASI Vol–37, Bijapur and Its Architectural Remains, Topic: The Water Works of the City, 1976, Page 120, 121.

೮. ಪೂಜ್ಯ ಗುರುಗಳಾದ ಡಾ. ಅ.ಸುಂದರ ಅವರು ಸೂರ್ಯಶಿಲ್ಪದ ಇಕ್ಕೆಲಗಳಲ್ಲಿ ಕಂಡರಿಸಿದ್ದ ಅಸ್ಪಷ್ಟ ಚಿಕಣಿ ಶಿಲ್ಪಗಳ ಮಾಹಿತಿ ನೀಡಿದರು.

೯. ಗುರುಗಳಾದ ಡಾ. ರು.ಮ.ಷಡಕ್ಷರಯ್ಯನವರು ಶಂಖ, ಚಕ್ರ, ಗದೆಯಿರುವುದರಿಂದ ಈ ಶಿಲ್ಪ ವಿಷ್ಣುವಿನದ್ದಾಗಿರಬಹುದೆಂದು ಸೂಚಿಸಿದ್ದಾರೆ.

೧೦. ಸೌ.ಇ.ಇ–೨೦, ೨೧೫ (ಇಂಡಿ ತಾ), ಕ್ರಿ.ಶ. ೧೨೪೮, ೪೫ (ಇಂಡಿ ತಾ) ಕ್ರಿ.ಶ. ೧೦೭೧, ೮೦ (ಸಿಂದಗಿ ತಾ) ಕ್ರಿ.ಶ. ೧೧೨೦.

೧೧. ಪ್ರಬಂಧ ಮಂಡನೆ ಸಂದರ್ಭದಲ್ಲಿ ಗುರುಗಳಾದ ಡಾ. ಅ.ಸುಂದರ ಅವರ ಮಾರ್ಗದರ್ಶನ.

೧೨. ಈ ಪ್ಯಾರಾದಲ್ಲಿ ನಮೂದಿಸಿದ ಎಲ್ಲ ಪುರಾತತ್ವದ ಅಂಶಗಳನ್ನು ತಾವು ಗೋಡೆ ಕಟ್ಟುವ ಕೆಲಸ ಮಾಡುತ್ತಿದ್ದಾಗ ಸ್ವಂತ ಅನುಭವಗಳಿಂದ ಸ್ಥಳೀಯ ಜ್ಞಾನವೃದ್ದರಾದ ಶ್ರೀ ತೇಜಸ್ವಿ ಕಲ್ಲೂರ ಅವರು ವಿವರಿಸಿದ್ದಾರೆ.

೧೭

ಕೆಳಗೆರೆ ಗ್ರಾಮದಲ್ಲಿ ದೊರೆತ ಅಪ್ರಕಟಿತ ವೀರಗಲ್ಲುಗಳು

ಡಾ. ಜಿ. ಕರಿಯಪ್ಪ*

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕು ಕೇಂದ್ರದಿಂದ ಸು. ೧೨ ಕಿ.ಮೀ. ದೂರದಲ್ಲಿರುವ ಕೆಳಗೆರೆ ಗ್ರಾಮವು ಐತಿಹಾಸಿಕವಾಗಿ ಮತ್ತು ಚಾರಿತ್ರಿಕವಾಗಿ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ. ಪ್ರಾಚೀನ ಶಾಸನಗಳಲ್ಲಿ ಈ ಗ್ರಾಮವನ್ನು "ಕೆಲ್ಲನ್‌ಗೆರೆ" ಎಂದು ಉಲ್ಲೇಖಿಸಲಾಗಿದ್ದು, ನಾಗಮಂಗಲ ತಾಲೂಕನ್ನೊಳಗೊಂಡಂತೆ ಗಂಗ, ಹೊಯ್ಸಳ ಮತ್ತು ವಿಜಯನಗರ ಕಾಲದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸ ವೈವಿಧ್ಯಮಯವಾಗಿದ್ದು, ಇಲ್ಲಿನ ಸ್ಮಾರಕಗಳಾದ ವೀರಗಲ್ಲು, ಸತಿಕಲ್ಲು, ಮಹಾಸತಿಕಲ್ಲುಗಳು, ವೀರರಗುಡಿಗಳು ಹಾಗೂ ಇನ್ನಿತರ ಸ್ಮಾರಕಗಳ ಬಗ್ಗೆ ಈಗಾಗಲೇ ವಿದ್ವಾಂಸರು ತಮ್ಮ ಕೃತಿ–ಲೇಖನಗಳಲ್ಲಿ ಪರಿಶೀಲಿಸಿದ್ದಾರೆ. ಆದರೆ ಅವುಗಳ ಸಮಗ್ರ ಅಧ್ಯಯನ ನಡೆದಿರುವುದಿಲ್ಲ. ಹೀಗಾಗಿ ಈ ಕೆಳಗೆರೆ ಗ್ರಾಮದಲ್ಲಿ ದೊರೆತಿರುವ ವೀರಗಲ್ಲುಗಳ ಬಗ್ಗೆ ಜಿಲ್ಲಾ ಗ್ಯಾಸೆಟಿಯರ್, ಎಪಿಗ್ರಾಫಿಯಾ ಕರ್ನಾಟಿಕ ಸಂಪುಟಗಳು, ಇತಿಹಾಸ ದರ್ಶನ, ಎಂ.ಎ.ಆರ್. ರಿಪೋರ್ಟ್ ಹಾಗೂ ಇನ್ನಿತರ ನಿಯತಕಾಲಿಕೆಗಳಲ್ಲಿ ವರದಿಯಾಗಿ ಪ್ರಕಟವಾಗಿರುವುದಿಲ್ಲ. ಗ್ರಾಮದ ಪೂರ್ವಕ್ಕೆ ಇರುವ ಈಶ್ವರ ದೇವಾಲಯದ ಬಳಿ ಈ ವೀರಗಲ್ಲುಗಳಿವೆ.

ಒಂದನೇ ವೀರಗಲ್ಲು: ಈ ವೀರಗಲ್ಲನ್ನು ಗೋವುಗಳನ್ನು ಕದಿಯುತ್ತಿರುವ ಗೋವುಗಳ್ಳರೊಡನೆ ಹೋರಾಡಿ ಗೋವುಗಳನ್ನು ರಕ್ಷಿಸಿ ವೀರಮರಣವನ್ನಪ್ಪಿದ ವೀರಪುರುಷನ ಸ್ಮರಾರ್ಣಥಕವಾಗಿ ಸ್ಥಾಪನೆ ಮಾಡಲಾಗಿರುವ ವೀರಗಲ್ಲು ಇದಾಗಿದೆ. ಇದನ್ನು ಸುಮಾರು ನಾಲ್ಕು ಅಡಿ ಎತ್ತರ ಮೂರು ಅಡಿ ಅಗಲ ಮತ್ತು ನಾಲ್ಕು ಇಂಚು ದಪ್ಪನಾಗಿರುವ ಬಳಪದ ಕಲ್ಲಿನಲ್ಲಿ ರಚನೆಮಾಡಲಾಗಿದೆ. ಇದರಲ್ಲಿ ಮೂರು ಹಂತದಲ್ಲಿರುವ ಪಟ್ಟಿಕೆಗಳಲ್ಲಿ ಶಿಲ್ಪಗಳನ್ನು ಕಂಡರಿಸಲಾಗಿದೆ.

ಕೆಳಹಂತದ ಪಟ್ಟಿಕೆಯಲ್ಲಿ ಗೋವುಗಳನ್ನು ಕದಿಯುತ್ತಿರುವ ಗೋವುಗಳ್ಳರೊಡನೆ ಹೋರಾಟ ಮಾಡಲು ಸಜ್ಜಾಗಿ ಕುದುರೆಯನ್ನೇರಿ ಕುಳಿತಿರುವ ವೀರಪುರುಷನು ತನ್ನ ಮೈಮೇಲೆ ವಿವಿಧ ಬಗೆಯ ವಸ್ತ್ರಾಭರಣಗಳನ್ನು ಧರಿಸಿಕೊಂಡಿದ್ದಾನೆ. ಈತನು ತನ್ನ ಎಡಗೈಯಲ್ಲಿ ಕುದುರೆಯ ಲಗಾಮನ್ನು ಹಿಡಿದು ಬಲಗೈಯಲ್ಲಿ ಸುರುಳಿಯೋಪಾದಿಯಲ್ಲಿ ಅಲಂಕರಿಸಲಾಗಿರುವ (ಈಟಿ?) ಆಯುಧವನ್ನು ಹಿಡಿದುಕೊಂಡು ತನ್ನ ಬಲಗೈಯನ್ನು ಮೇಲಕ್ಕೆ ಎತ್ತಿ ಹಿಡಿದಿದ್ದಾನೆ, ಅಲ್ಲದೇ ಕುದುರೆಯನ್ನು ಸಹ ವಿವಿಧ ವಸ್ತ್ರಾಭರಣಗಳನ್ನು ಹಾಕಿ ಅಲಂಕರಣ ಮಾಡಲಾಗಿದೆ, ಈ ಕುದುರೆಯ ಹಿಂಭಾಗದಲ್ಲಿ ತನ್ನ ಪತ್ನಿಯು ಹೋರಾಟಕ್ಕೆ ಸನ್ನಧನಾಗಿರುವ ವೀರನನ್ನು ಬೀಳ್ಕೊಡುತಿರುವಂತೆ ನಿಂತಿರುವ ಸ್ತ್ರೀಯ ಶಿಲ್ಪವನ್ನು ಸಹ ಬಹಳ ಸುಂದರವಾಗಿ ಬಿಡಿಸಲಾಗಿದೆ. ಈ ಸ್ತ್ರೀಯು ಮೈಮೇಲೆ ವಿವಿಧ ಬಗೆಯ ವಸ್ತ್ರಾಭರಣಗಳನ್ನು ಧರಿಸಿ ತಲೆಗೆ ಹೂವನ್ನು ಮುಡಿದುಕೊಂಡಿದ್ದಾಳೆ. ಕೈಯಲ್ಲಿ ನೀರಿನ ಕಮಂಡಲ ಬಲಗೈಯಲ್ಲಿ ಪುಷ್ಪವೊಂದನ್ನು ಹಿಡಿದು ನಿಂತಿದ್ದಾಳೆ. ಈ ಸ್ತ್ರೀಯ ಹಿಂಭಾಗದಲ್ಲಿ ಗೋವುಗಳು ತಮ್ಮ ತಲೆಯನ್ನು ಮೇಲೆತ್ತಿ ನೋಡುತ್ತಿರುವಂತೆ ಶಿಲ್ಪಗಳನ್ನು ಕೆತ್ತನೆ ಮಾಡಲಾಗಿದೆ.

ಎರಡನೇ ಹಂತದ ಪಟ್ಟಿಕೆಯಲ್ಲಿ ಗೋವುಗಳೊಡನೆ ವೀರವೇಶದಿಂದ ಹೋರಾಡಿ ಮರಣಹೊಂದಿದ ವೀರ ಪುರುಷನನ್ನು ಕೀರ್ತಿಮುಖವುಳ್ಳ ಮಂಟಪದಲ್ಲಿರಿಸಿಕೊಂಡು ದೇವಲೋಕಕ್ಕೆ ಕರೆದೊಯ್ಯುತ್ತಿರುವ ದೇವಕನ್ಯೆಯರು ಕೈಗಳಲ್ಲಿ ಛಾಮರವನ್ನು ಹಿಡಿದಿದ್ದಾರೆ. ಮತ್ತೊಂದು ಕೈಯಲ್ಲಿ ಮಂಟಪವನ್ನು ಹಿಡಿದುಕೊಂಡು ದೇವಲೋಕಕ್ಕೆ ಎತ್ತಿಕೊಂಡು ಹೋಗುತ್ತಿರುವಂತೆ ಬಹಳ ಕಲಾತ್ಮಕವಾಗಿ ಕೆತ್ತಲಾಗಿದೆ.

ಮೂರನೇ ಪಟ್ಟಿಕೆಯಲ್ಲಿ ದೇವಲೋಕದ ಕಲ್ಪನೆಯ ಶಿಲ್ಪಗಳನ್ನು ಬಹಳ ಸುಂದರವಾಗಿ ಕೆತ್ತನೆ ಮಾಡಲಾಗಿದೆ. ಇದರಲ್ಲಿ ಶಿವಲಿಂಗ ಒಂದಕ್ಕೆ ಪೂಜೆಯನ್ನು ಸಲ್ಲಿಸುತ್ತಿರುವ ಪುರೋಹಿತ, ಶಿವಲಿಂಗದ ಮುಂದೆ ನಂದಿಯ ಶಿಲ್ಪ, ಪುರೋಹಿತರ ಹಿಂಬದಿಯಲ್ಲಿ ಪದ್ಮಾಸನದಲ್ಲಿ ಕೈಮುಗಿದು ದೇವರ ಪ್ರಾರ್ಥನೆಯಲ್ಲಿ ಮಗ್ನನಾಗಿರುವ ವೀರಪುರುಷನ ಶಿಲ್ಪವನ್ನು ಕೆತ್ತನೆ ಮಾಡಲಾಗಿದೆ. ಅಂತ್ಯದಲ್ಲಿ ಸೂರ್ಯಚಂದ್ರರ ಶಿಲ್ಪಗಳನ್ನು ಸಹ ಸುಂದರವಾಗಿ ಮೂಡಿ ಬರುವಂತೆ ಕೆತ್ತನೆ ಮಾಡಲಾಗಿದೆ.

ಎರಡನೇ ವೀರಗಲ್ಲು: ಇದು ಸಹ ಯಾವುದೋ ಹೋರಾಟದಲ್ಲಿ ತೊಡಗಿ ವೀರ ಮರಣವನ್ನಪ್ಪಿದ ಮಹಾನ್

* ಸಹ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.

ವೀರಪುರುಷನ ಸ್ಮರಣಾರ್ಥಕವಾಗಿ ನಿಲ್ಲಿಸಲಾಗಿರುವಂತಹ ವೀರಗಲ್ಲಾಗಿದೆ. ಈ ವೀರಗಲ್ಲು ಸುಮಾರು ನಾಲ್ಕು ಅಡಿಗಳ ಎತ್ತರವಾಗಿ ಎರಡುವರೆ ಅಡಿಗಳ ಅಗಲವಾಗಿ ಮತ್ತು ನಾಲ್ಕು ಇಂಚು ದಪ್ಪನಾಗಿರುವ ಬಳಪದ ಕಲ್ಲಿನ ಚಪ್ಪಡಿಯ ಮೇಲೆ ರಚಿಸಲಾಗಿದೆ. ಇದರಲ್ಲಿ ಮೂರು ಹಂತದಲ್ಲಿರುವ ಪಟ್ಟಿಕೆಗಳು ಕಾಣಬರುತ್ತವೆ. ಈ ವೀರಗಲ್ಲಿನ ಕೆಳಭಾಗವು ಸ್ವಲ್ಪ ಭೂಮಿಯಲ್ಲಿ ಹೂತುಹೋಗಿದೆ.

ಕೆಳಹಂತದಲ್ಲಿರುವ ಪಟ್ಟಿಕೆಯಲ್ಲಿ ವೀರನೋರ್ವನು ಅಲಂಕರಿಸಲ್ಪಟ್ಟ ಕುದುರೆಯನ್ನೇರಿ ಕುಳಿತಿದ್ದಾನೆ. ಈ ವೀರನು ಮೈಮೇಲೆ ವಿವಿಧ ಬಗೆಯ ವಸ್ತ್ರಾಭರಣಗಳನ್ನು ಧರಿಸಿದ್ದಾನೆ. ಈತನು ತನ್ನ ಎಡಗೈಯಲ್ಲಿ ಕುದುರೆಯ ಲಗಾಮನ್ನು ಹಿಡಿದುಕೊಂಡು ಬಲಗೈಯಲ್ಲಿ ಉದ್ದನೆಯ ಖಡ್ಗವನ್ನು ಹಿಡಿದುಕೊಂಡು ತನ್ನ ಭುಜದ ಮೇಲೆ ಇರಿಸಿಕೊಂಡಿದ್ದಾನೆ. ಈ ವೀರಪುರುಷನು ಏರಿರುವ ಕುದುರೆಯ ಹಿಂಭಾಗದಲ್ಲಿ ಕೈಯಲ್ಲಿ ನೀರಿನ ಕಮಂಡಲ ಮತ್ತು ಪುಷ್ಪವನ್ನು ಹಿಡಿದು ತನ್ನ ಪತಿಯನ್ನು ಬೀಳ್ಕೊಡುವಂತೆ ಕೆತ್ತನೆ ಮಾಡಲಾಗಿರುವ ಸ್ತ್ರೀಯ ಶಿಲ್ಪವಿದೆ. ಈ ಸ್ತ್ರೀಯು ಸಹ ಮೈಮೇಲೆ ವಿವಿಧ ಬಗೆಯ ವಸ್ತ್ರಾಭರಣಗಳನ್ನು ಧರಿಸಿಕೊಂಡಿದ್ದಾಳೆ.

ಎರಡನೇ ಹಂತದ ಪಟ್ಟಿಕೆಯಲ್ಲಿ ಹೋರಾಟದಲ್ಲಿ ತೊಡಗಿ ವೀರಮರಣವನ್ನಪ್ಪಿದ ಪುರುಷನನ್ನು ಕೀರ್ತಿಮುಖ ದಂತಿರುವ ಮಂಟಪದಲ್ಲಿ ಕೂರಿಸಿಕೊಂಡು ದೇವಲೋಕಕ್ಕೆ ಕರೆದೊಯ್ಯುತ್ತಿರುವ ಸ್ತ್ರೀಯರಿಬ್ಬರ ಶಿಲ್ಪಗಳನ್ನು ಬಿಡಿಸಲಾಗಿದೆ. ಈ ಸ್ತ್ರೀಯರು ತಮ್ಮ ಕೈಗಳಲ್ಲಿ ಚಾಮರ ಮತ್ತು ಮಂಟಪವನ್ನು ಹಿಡಿದು ದೇವಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ ಸನ್ನಿವೇಶವನ್ನು ಬಹಳ ಸೊಗಸಾಗಿ ಕೆತ್ತನೆಮಾಡಲಾಗಿದೆ.

ಮೂರನೇ ಪಟ್ಟಿಕೆಯಲ್ಲಿ ಶಿವನ ಸಾನಿಧ್ಯದ ದೃಶ್ಯ ಸನ್ನಿವೇಶವನ್ನು ಬಹಳ ಸೊಗಸಾಗಿ ಕೆತ್ತನೆ ಮಾಡಲಾಗಿದೆ. ಇದರಲ್ಲಿ ಹೂವಿನ ಹಾರಗಳಿಂದ ಅಲಂಕರಿಸಲ್ಪಟ್ಟ ಶಿವಲಿಂಗಕ್ಕೆ ಪೂಜೆಯನ್ನು ಸಲ್ಲಿಸುತ್ತಿರುವ ಪುರೋಹಿತ ಲಿಂಗದ ಎಡಭಾಗದಲ್ಲಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಪುರೋಹಿತರ ಹಿಂಭಾಗದಲ್ಲಿ ಪದ್ಮಾಸನದಲ್ಲಿ ಕುಳಿತು ಕೈಮುಗಿದು ದೇವರ ಪ್ರಾರ್ಥನೆಯಲ್ಲಿ ತೊಡಗಿರುವ ವೀರಪುರುಷನ ಶಿಲ್ಪವನ್ನು ಬಿಡಿಸಲಾಗಿದೆ. ಅಂತ್ಯದಲ್ಲಿ ಸೂರ್ಯಚಂದ್ರರನ್ನು ಸಹ ಬಿಡಿಸಲಾಗಿದೆ.

ಮೂರನೇ ವೀರಗಲ್ಲು: ಈ ವೀರಗಲ್ಲನ್ನು ಬಳಪದ ಕಲ್ಲಿನಲ್ಲಿ ರಚಿಸಲಾಗಿದೆ. ಇದು ಸುಮಾರು ನಾಲ್ಕು ಅಡಿಗಳ ಎತ್ತರ ಎರಡುವರೆ ಅಡಿ ಅಗಲ ಮತ್ತು ನಾಲ್ಕು ಇಂಚು ದಪ್ಪನಾಗಿದೆ. ಇದರಲ್ಲಿ ಮೂರು ಹಂತಗಳಲ್ಲಿ ಪಟ್ಟಿಕೆಗಳನ್ನು ಮಾಡಿ ಶಿಲ್ಪಗಳನ್ನು ಕಂಡರಿಸಲಾಗಿದೆ.

ಕೆಳಹಂತದ ಪಟ್ಟಿಕೆಯಲ್ಲಿ ವೀರನೋರ್ವನು ಎರಡು ಕೈಗಳಲ್ಲಿ ಖಡ್ಗಗಳನ್ನು ಹಿಡಿದುಕೊಂಡಿದ್ದಾನೆ. ಬಲಗೈಯಲ್ಲಿರುವ ಕತ್ತಿಯನ್ನು ಮೇಲಕ್ಕೆ ಎತ್ತಿ ಹಿಡಿದಿದ್ದಾನೆ. ಎಡಗೈಯಲ್ಲಿರುವ ಕತ್ತಿಯನ್ನು ಕೆಳಮುಖವಾಗಿ ಹಿಡಿದುಕೊಂಡಿದ್ದಾನೆ. ಈ ವೀರನು ಮೈ ಮೇಲೆ ವಿವಿಧ ಬಗೆಯ ವಸ್ತ್ರಾಭರಣಗಳನ್ನು ಧರಿಸಿರುವಂತೆ ಬಹಳ ಸುಂದರವಾಗಿ ಕೆತ್ತನೆ ಮಾಡಲಾಗಿದೆ. ಈ ವೀರ ಪುರುಷನ ಮುಂಬದಿಯಲ್ಲಿ ಎರಡು ತಾಳೆಯ ಮರಗಳನ್ನು ಕೆತ್ತನೆ ಮಾಡಲಾಗಿದೆ. ಅಲ್ಲದೆ ವೀರಪುರುಷನ ಹಿಂಬದಿಯಲ್ಲಿ ಸ್ತ್ರೀಯೋರ್ವಳು ನೀರಿನ ಕಮಂಡಲ ಮತ್ತು ಬಲಗೈಯಲ್ಲಿ ಕತ್ತಿಯನ್ನು ಹಿಡಿದು ನಿಂತಿದ್ದಾಳೆ. ಇವಳು ಸಹ ಮೈ ಮೇಲೆ ವಿವಿಧ ಬಗೆಯ ಸುಂದರವಾದ ವಸ್ತ್ರಾಭರಣಗಳನ್ನು ಧರಿಸಿರುವಂತೆ ನಯನ ಮನೋಹರವಾಗಿ ಕೆತ್ತನೆ ಮಾಡಲಾಗಿದೆ.

ಎರಡನೇ ಹಂತದ ಪಟ್ಟಿಕೆಯಲ್ಲಿ ಚಾಮರವನ್ನು ಹಿಡಿದುಕೊಂಡು ಮತ್ತೊಂದು ಕೈಯಲ್ಲಿ ಕೀರ್ತಿಮುಖವುಳ್ಳ ಮಂಟಪವನ್ನು ಹಿಡಿದುಕೊಂಡಿರುವ ದೇವಕನ್ಯೆಯರಿಬ್ಬರು ಹೋರಾಟದಲ್ಲಿ ತೊಡಗಿ ವೀರಮರಣವನ್ನೊಂದಿದ ವೀರಪುರುಷನನ್ನು ಮಂಟಪದ ಒಳಗೆ ಕೂರಿಸಿಕೊಂಡು ದೇವಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ ಸನ್ನಿವೇಶವನ್ನು ಬಿಡಿಸಲಾಗಿದೆ.

ಮೂರನೇ ಹಂತದ ಪಟ್ಟಿಕೆಯಲ್ಲಿ ಶಿವಲಿಂಗಕ್ಕೆ ಪೂಜೆಯನ್ನು ಸಲ್ಲಿಸುತ್ತಿರುವ ಪುರೋಹಿತರು ಕಚ್ಚೆಪಂಚೆಯನ್ನು ಧರಿಸಿ ತಲೆಯ ಕೂದಲನ್ನು ಹಿಂದಕ್ಕೆ ಕಟ್ಟಿಕೊಂಡಿದ್ದಾರೆ. ಶಿವನ ಮುಂದೆ ನಂದಿಯನ್ನು ಇರಿಸಲಾಗಿದೆ. ಪುರೋಹಿತರ ಹಿಂಬದಿಯಲ್ಲಿ ವೀರಮರಣವನ್ನೊಂದಿದ ಪುರುಷನು ಪದ್ಮಾಸನದಲ್ಲಿ ಕೈಮುಗಿದು ಕುಳಿತುಕೊಂಡು ದೇವರ ಪ್ರಾರ್ಥನೆಯಲ್ಲಿ ತೊಡಗಿರುವಂತೆ ಕೆತ್ತನೆ ಮಾಡಲಾಗಿದೆ. ಮೇಲ್ಭಾಗದಲ್ಲಿ ಎಡ ಮತ್ತು ಬಲಭಾಗದಲ್ಲಿ ಸೂರ್ಯ ಚಂದ್ರರನ್ನು ಬಿಡಿಸಲಾಗಿದೆ.

ನಾಲ್ಕನೇ ವೀರಗಲ್ಲು: ಇದೂ ಸಹ ಬಳಪದ ಕಲ್ಲಿನಲ್ಲಿ ಕೆತ್ತನೆ ಮಾಡಲಾಗಿರುವಂತಹ ವೀರಗಲ್ಲಾಗಿದೆ. ಇದು ಸುಮಾರು ನಾಲ್ಕು ಅಡಿ ಎತ್ತರವಾಗಿದೆ. ಎರಡುವರೆ ಅಡಿ ಅಗಲವಾಗಿದೆ ಮತ್ತು ಐದು ಇಂಚು ದಪ್ಪನಾಗಿದೆ. ಇದರಲ್ಲಿ ಮೂರು ಹಂತಗಳಲ್ಲಿ ಪಟ್ಟಿಕಾ ಶಿಲ್ಪಗಳನ್ನು ಬಿಡಿಸಲಾಗಿದೆ. ಈ ವೀರಗಲ್ಲಿನ ಕೆಳಭಾಗವು ಅರ್ಧಭಾಗ ಭೂಮಿಯಲ್ಲಿ ಹೂತುಹೋಗಿದೆ. ಕೆಳಹಂತದ ಪಟ್ಟಿಕೆಯಲ್ಲಿ ವೀರಪುರುಷ ನೋರ್ವನು ಬಿಲ್ಲನ್ನು ಹಿಡಿದು ಬಾಣವನ್ನು ಬಿಡುತ್ತಿರುವಂತೆ ಕೆತ್ತನೆ ಮಾಡಲಾಗಿದೆ. ಈ ವೀರನ ಮುಖ ಭಾಗವು ಪ್ರಕೃತಿಯ

ವಿಕೋಪಕ್ಕೆ ಬಲಿಯಾಗಿ ಕಲ್ಲಿನ ಚಕ್ಕೆ ಎದ್ದು ಹೋಗಿದೆ. ಇವನ ತಲೆಯ ಕೂದಲನ್ನು ಮೇಲೆತ್ತಿ ತುರುಬಿನಂತೆ ಕಟ್ಟಿಕೊಂಡಿರುವಂತೆ ಕೆತ್ತನೆ ಮಾಡಲಾಗಿದೆ.

ಎರಡನೇ ಹಂತದ ಪಟ್ಟಿಕೆಯಲ್ಲಿ ಚಾಮರವನ್ನು ಹಿಡಿದು ವೀರ ಮರಣಹೊಂದಿದ ಪುರುಷನನ್ನು ದೇವಕನ್ಯೆಯರು ವೀರಪುರುಷನ ಕೈಗಳನ್ನು ತಮ್ಮ ಭುಜದ ಮೇಲಿರಿಸಿಕೊಂಡು ದೇವಲೋಕಕ್ಕೆ ಕರೆದೊಯ್ಯುತ್ತಿರುವಂತೆ ಕೆತ್ತನೆ ಮಾಡಲಾಗಿದೆ.

ಮೂರನೇ ಹಂತದ ಪಟ್ಟಿಕೆಯಲ್ಲಿ ಸಿಂಹಾಸನದ ಮೇಲೆ ಕುಳಿತಿರುವ ದೇವಮಾನವ ಶಿಲ್ಪವನ್ನು ಬಿಡಿಸಲಾಗಿದೆ. ಇವನು ತನ್ನ ಬಲಗಾಲನ್ನು ಮಡಿಸಿಕೊಂಡು ಎಡಗಾಲನ್ನು ಮಡಿಚಿಕೊಂಡು ಆ ಕಾಲಿನ ಮೇಲೆ ತನ್ನ ಎಡಗೈಯನ್ನು ಇರಿಸಿದ್ದಾನೆ. ಈ ಶಿಲ್ಪದ ಭಾಗ ಸ್ವಲ್ಪ ಮುರಿದು ಹೋಗಿದೆ. ಈ ದೇವಮಾನವನ ಎಡ ಬಲದಲ್ಲಿ ಚಾಮರ ಮತ್ತು ಫಲವನ್ನು ಹಿಡಿದು ನಿಂತಿರುವ ಸ್ತ್ರೀಯರ ಶಿಲ್ಪಗಳನ್ನು ಕೆತ್ತನೆ ಮಾಡಲಾಗಿದೆ.

ಐದನೇ ವೀರಗಲ್ಲು: ಇದನ್ನು ಬಳಪದ ಕಲ್ಲಿನಲ್ಲಿ ರಚಿಸಲಾಗಿದೆ. ಇದು ಸುಮಾರು ಮೂರು ಅಡಿ ಎತ್ತರವಾಗಿದ್ದು, ಎರಡು ಅಡಿಗಳ ಅಗಲವಾಗಿದೆ ಮತ್ತು ಮೂರು ಇಂಚು ದಪ್ಪನಾಗಿದೆ. ಇದರಲ್ಲಿ ಮೂರು ಹಂತಗಳಲ್ಲಿ ಪಟ್ಟಿಕಾ ಶಿಲ್ಪಗಳನ್ನು ಬಿಡಿಸಲಾಗಿದೆ. ಇದರ ಮೇಲ್ಭಾಗವು ಪ್ರಕೃತಿಯ ವಿಕೋಪಕ್ಕೆ ಬಲಿಯಾಗಿ ಯಾವುದೇ ರೀತಿಯ ರಚನೆ ಕಾಣಬರುವುದಿಲ್ಲ. ಕೆಳಹಂತದ ಪಟ್ಟಿಕೆಯಲ್ಲಿ ಮತ್ತು ಎರಡನೇ ಹಂತದ ಪಟ್ಟಿಕೆಗಳಲ್ಲಿ ಮೂರು ಭಾಗಗಳಾಗಿ ಮಾಡಿ ಮಧ್ಯದಲ್ಲಿ ಚಿಕ್ಕ ಚಿಕ್ಕ ಶಿಲ್ಪಗಳನ್ನು ಬಿಡಿಸಲಾಗಿದೆ. ಇದರಲ್ಲಿ ಇಬ್ಬರು ಪುರುಷರು ಆಯುಧಗಳನ್ನಿಡಿದು ಹೋರಾಟದಲ್ಲಿ ತೊಡಗಿದ್ದಾರೆ. ಎಡಭಾಗದಲ್ಲಿ ಸ್ತ್ರೀಯೋರ್ವಳು ಸಹ ಹೋರಾಟದಲ್ಲಿ ತೊಡಗಿರುವಂತೆ ಬಿಡಿಸಲಾಗಿದೆ. ಇವರ ಮುಖಗಳು ಸ್ಪಷ್ಟವಾಗಿ ಕಾಣ ಬರುವುದಿಲ್ಲ.

ಎರಡನೇ ಹಂತದ ಪಟ್ಟಿಕೆಯಲ್ಲಿ ಮಧ್ಯದ ಭಾಗದಲ್ಲಿ ಪುರುಷನೋರ್ವನು ನೃತ್ಯ ಭಂಗಿಯಲ್ಲಿ ನಿಂತಿದ್ದಾನೆ. ಇವನ ಎಡ ಮತ್ತು ಬಲಭಾಗದಲ್ಲಿ ಸ್ತ್ರೀಯರು ನಿಂತಿದ್ದಾರೆ.

ಆರನೇ ವೀರಗಲ್ಲು: ಇದೊಂದು ಮೂರು ಅಡಿ ಎತ್ತರ ಎರಡು ಅಡಿ ಅಗಲ ಮತ್ತು ಅರ್ಧ ಅಡಿ ದಪ್ಪನಾಗಿರುವ ಬೆಣಚುಕಲ್ಲಿನಲ್ಲಿ ರಚಿಸಲಾಗಿರುವ ವೀರಗಲ್ಲಾಗಿದೆ ಇದರಲ್ಲಿ ಮೂರು ಹಂತಗಳಲ್ಲಿ ಪಟ್ಟಿಕೆಗಳಿವೆ. ಕೆಳಗಿನ ಹಂತದ ಪಟ್ಟಿಕೆಯಲ್ಲಿ ವೀರಾವೇಶದಿಂದ ಹೋರಾಡಿ ಮಡಿದು ನೆಲದ ಮೇಲೆ ಮಲಗಿರುವಂತಹ ಶಿಲ್ಪವನ್ನು ಬಿಡಿಸಲಾಗಿದೆ. ಹೋರಾಟದಲ್ಲಿ ಜಯಶೀಲನಾದ ವೀರನು ಎರಡನೇ ಹಂತದಲ್ಲಿ ತನ್ನ ಪತ್ನಿಯ ಜೊತೆಗೂಡಿ ಬಲಗೈಯಲ್ಲಿ ಕತ್ತಿಯನ್ನು ಮೇಲಕ್ಕೆ ಎತ್ತಿ ಹಿಡಿದು ನಿಂತಿದ್ದಾನೆ. ಇವರಿಬ್ಬರು ವಿವಿಧ ಬಗೆಯ ವಸ್ತ್ರಾಭರಣಗಳನ್ನು ಧರಿಸಿರುವಂತೆ ಬಿಡಿಸಲಾಗಿದೆ. ಆದರೆ ಮುಖದ ಭಾಗವು ಕಾಲಪುರುಷರ ದಾಳಿಗೆ ಬಲಿಯಾಗಿ ಸ್ಪಷ್ಟವಾಗಿ ಕಾಣದಂತಾಗಿದೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರರನ್ನು ಬಿಡಿಸಲಾಗಿದೆ,

ಏಳನೇ ವೀರಗಲ್ಲು: ಇದೊಂದು ಹಸಿರು ಛಾಯವುಳ್ಳ ಬಳಪದ ಕಲ್ಲಿನಲ್ಲಿ ರಚಿಸಲಾಗಿದೆ. ಇದು ಸುಮಾರು ಮೂರು ಅಡಿಗಳ ಎತ್ತರ ಮೂರು ಅಡಿ ಅಗಲ ಮತ್ತು ಅರ್ಧ ಅಡಿ ದಪ್ಪನಾಗಿದೆ. ಇದರಲ್ಲಿ ಮೂರು ಹಂತಗಳಲ್ಲಿ ಶಿಲ್ಪಗಳನ್ನು ಕೆತ್ತನೆ ಮಾಡಲಾಗಿದೆ. ಕೆಳಹಂತದ ಪಟ್ಟಿಕೆಯಲ್ಲಿ ಕುದುರೆಯನ್ನೇರಿ ಹೊರಟಿರುವ ವೀರಪುರುಷ ಅವನ ಮುಂದೆ ಮತ್ತೊಬ್ಬ ಪುರುಷನು ಸೋತು ತನ್ನೆರಡು ಕೈಗಳನ್ನು ಕೆಳಗಿಳಿಸಿ ಸುಸ್ತಾದಂತೆ ಬಿಡಿಸಲಾಗಿದೆ. ಎಡಭಾಗದಲ್ಲಿ ಸ್ತ್ರೀಯೋರ್ವಳ ಶಿಲ್ಪವನ್ನು ಬಿಡಿಸಲಾಗಿದೆ.

ಎರಡನೇ ಹಂತದ ಪಟ್ಟಿಕೆಯಲ್ಲಿ ಹೋರಾಡಿ ವೀರಮರಣವನ್ನೊಂದಿದ ವೀರನನ್ನು ಮಂಟಪವೊಂದರಲ್ಲಿ ಕೂರಿಸಿಕೊಂಡು ದೇವಲೋಕಕ್ಕೆ ಕರೆದೊಯುತ್ತಿರುವ ದೇವಕನ್ಯೆಯರ ಶಿಲ್ಪಗಳನ್ನು ಕೆತ್ತನೆ ಮಾಡಲಾಗಿದೆ. ಮೇಲ್ಭಾಗದಲ್ಲಿ ಶಿವನಲಿಂಗಕ್ಕೆ ಪೂಜೆ ಸಲ್ಲಿಸುತ್ತಿರುವ ಪುರೋಹಿತರು ಪುರೋಹಿತರ ಹಿಂಬದಿಯಲ್ಲಿ ಪದ್ಮಾಸನದಲ್ಲಿ ಕೈಮುಗಿದು ದೇವರ ಧ್ಯಾನದಲ್ಲಿ ತೊಡಗಿರುವ ವೀರಪುರುಷ ಶಿವಲಿಂಗದ ಎಡಭಾಗದಲ್ಲಿ ನಂದಿಯ ಶಿಲ್ಪವನ್ನು ಬಿಡಿಸಲಾಗಿದೆ.

ಈ ವೀರಗಲ್ಲಿನ ಮೇಲ್ಭಾಗವು ಮಳೆಯ ನೀರಿನಿಂದ ಪಾಚಿಕಟ್ಟಿ ಮೇಲೆಲ್ಲಾ ಕಲ್ಲುಹೂ ಬೆಳೆದು ಶಿಲ್ಪಗಳು ಸ್ಪಷ್ಟವಾಗಿ ಕಾಣವುದಿಲ್ಲ.

ಈ ಮೇಲೆ ತಿಳಿಸಿದ ಎಲ್ಲಾ ಅಂಶಗಳನ್ನು ಗಮನಿಸಿದಾಗ ಕೆಳಗೆರೆ ಗ್ರಾಮದಲ್ಲಿ ದೊರೆತ ಎಲ್ಲ ವೀರಗಲ್ಲುಗಳಲ್ಲೂ ಅದರದೇ ಆದ ವೈಶಿಷ್ಟ್ಯತೆಯಿದ್ದು, ಎಲ್ಲದರಲ್ಲೂ ಶಿವಲಿಂಗ, ಸೂರ್ಯ, ಚಂದ್ರ ಮತ್ತು ನಂದಿಯ ಶಿಲ್ಪವಿದ್ದು, ಜೊತೆಗೆ ತಾಳೆಮರಗಳ ಚಿತ್ರ ಕೆತ್ತಿರುವುದು ಹಾಗೂ ಕೆಲವು ಕಡೆ ವೀರರು ಹೋರಾಡುತ್ತಿರುವುದು ಇವುಗಳೆಲ್ಲವೂ ತುಂಬ ಅಲಂಕರಣೆಯಲ್ಲಿ ಸುಂದರವಾಗಿರುವುದನ್ನು ಕಾಣಬಹುದು. ಒಟ್ಟಾರೆ ಇವುಗಳನ್ನು ನೋಡಿದಾಗ ಶೈವಧರ್ಮದ ಆಚರಣೆ ಹೆಚ್ಚಾಗಿ ಪ್ರಚಲಿತದಲ್ಲಿದ್ದು ಶೈವಪರಂಪರೆಯ ಸಂಸ್ಕೃತಿಯನ್ನು ಸಾರುತ್ತದೆ ಎಂದು ಹೇಳಬಹುದಾಗಿದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಕನ್ನಡ ವಿಷಯ ವಿಶ್ವಕೋಶ, ಪ್ರಸಾರಾಂಗ, ಮೈ.ವಿ.ವಿ. ಮೈಸೂರು, ೨೦೦೫.

೨. ಮಂಡ್ಯ ಜಿಲ್ಲಾ ಗ್ಯಾಸೆಟಿಯರ್, ೨೦೦೩, ಕರ್ನಾಟಕ ಮುಸ್ತಕ ಮುದ್ರಣಾಲಯ, ಮೈಸೂರು.

೩. ಎಪಿಗ್ರಾಫಿಯಾ–ಕರ್ನಾಟಿಕ, ಸಂಪುಟ ೭, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೪. ಚಿದಾನಂದಮೂರ್ತಿ.ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ೨೦೦೮, ಪ್ರಸಾರಾಂಗ, ಮೈ.ವಿ.ವಿ. ಮೈಸೂರು.

೫. ಶೇಷಶಾಸ್ತ್ರಿ ಆರ್., ಕರ್ನಾಟಕದ ವೀರಗಲ್ಲುಗಳು, ಧಾರವಾಡ–೧೯೮೨.

೬ ಪರಮಶಿವಮೂರ್ತಿ ಡಿ.ವಿ., ಕನ್ನಡ ಶಾಸನಶಿಲ್ಪ, ೧೯೯೯, ಹಂಪಿ.

೭. ಫೋಟೋದಲ್ಲಿನ ಚಿತ್ರವನ್ನು ಗಮನಿಸಿ, ೧, ೨, ೩, ೪, ೫, ೬, ೭.

೧೮

ಉಜಿನಿ ಅಪ್ರಕಟಿತ ಶಿಲಾಶಾಸನ ಮತ್ತು ಪ್ರಾಚ್ಯಾವಶೇಷಗಳು

ಡಾ. ಎಚ್.ಎಸ್. ಗೋಪಾಲರಾವ್, ವೇದಾವತಿ ಎಸ್. ಬಾಲಸುಬ್ರಹ್ಮಣ್ಯ*

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಸಾಸಲು ಹೋಬಳಿ, ಉಜಿನಿ ಗ್ರಾಮದಲ್ಲಿ ಶಿಥಿಲ ಚೆನ್ನಕೇಶವ ದೇವಾಲಯದ ಎದುರಿಗಿರುವ ಗರುಡ/ಮತ್ಸ್ಯ ಕಂಬದ ಪಕ್ಕದಲ್ಲಿ ನೆಟ್ಟಿರುವ ಕಲ್ಲಿನ ಮೇಲಿನ ಶಿಲಾಶಾಸನದ ಪಾಠ ಈ ಕೆಳಕಂಡಂತಿದೆ.

ಶಾಸನದ ಪಾಠ

೧ [ರ]ಕತಾಕ್ಷಿ ಸಂವತ್ಸರದ ಮಾಗ ಬಹು[ಳ]
೨ - ಐವತು ನಂ ವಿಪಾಳಿತಜೆಗೂ ಸಿಂ
೩ ಗಯನ ಮಕ್ಕಳು ಗೋಸಲ ಕವಿಲೆ ಗೋರ-ನು
೪ ಉಜಿನಿಸೀಮೆಯ ಗಉಡಿ ಕುಕೂಣ ಬಿ
೫ ಕ್ಷೆಯ ಕೊಂಡ ವಿವರ ಕತ್ತಗೊಂಡ ಬಸವಿಗೆ
೬ ವಿರಗಉಡನ ಮಗ ಚಿಕ್ಕಗಳಿಣರಸ ಬಸ
೭ ವರಸರಮಗ ಪುಟ್ಟಚನ್ನಪ್ಪನ ಮಗನ
೮ ವರು ವೀರಬೋವಗೆ ಕೊಟ್ಟ ಕಾಣಿಕೆ
೯ ಯ ಕೊಟ್ಟ ಶಸನ ಮಂಗಳಮಹಾ
೧೦ ಶ್ರೀ ಶ್ರೀ ಶ್ರೀ ಶ್ರೀ

ಶಾಸನದ ಪಾಠ ಅಸ್ಪಷ್ಟ. ಸಿಂಗಯನ ಮೂವರು ಮಕ್ಕಳ ಹೆಸರು ಪ್ರಸ್ತಾಪವಾಗಿದೆ. ಬಹುತೇಕ ಇವರಿಂದ ಉಜಿನ ಸೀಮೆಯ ಗವುಡಿ ಕುಕೂಣಬಿಯು ಪಡೆದ ಶಿಕ್ಷೆಯ ವಿವರವನ್ನು ದಾಖಲಿಸಲು ಶಾಸನ ಸಿದ್ಧವಾಗಿರುವಂತಿದೆ. ಬಹುಷಃ ತಪ್ಪುಕಾಣಿಕೆಯಾಗಿ ಬಸವರಸರ ಮಗ ಪುಟ್ಟಚನ್ನಪ್ಪನ ಮಗ ವೀರಬೋವನಗೆ ಗಉಡಿಯು ಕೊಟ್ಟ ಕಾಣಿಕೆಯ ವಿವರವಿದ್ದು, ಅದು ಕೈತಪ್ಪಿರುವಂತಿದೆ.

ಲಿಪಿಸ್ವರೂಪದ ಆಧಾರದ ಮೇಲೆ ಶಾಸನದ ಕಾಲವನ್ನು ಕ್ರಿ.ಶ. ೧೭ನೆಯ ಶತಮಾನ ಎಂದು ಭಾವಿಸಬಹುದು. ಅದು ಒಪ್ಪಿತವಾದರೆ ಶಾಸನದ ಕಾಲವು ಕ್ರಿ.ಶ. ೧೬೮೫ರ ಫೆಬ್ರವರಿ ೧೪ರಿಂದ ೨೭ರವರೆಗಿನ ಯಾವುದಾದರೂ ಒಂದು ದಿನವಾಗುತ್ತದೆ.

ಸಾರಾಂಶ

ದೊಡ್ಡಬಳ್ಳಾಪುರ ತಾಲ್ಲೂಕು ಸಾಸಲು ಹೋಬಳಿ ಉಜಿನಯಲ್ಲಿ ಶಿಥಿಲ ಚೆನ್ನಕೇಶವ ದೇವಾಲಯವಿದ್ದು, ಪೂರ್ವಾಭಿಮುಖವಾಗಿದ್ದ ದೇವಾಲಯದ ಮುಖ್ಯ ದ್ವಾರದ ಮೂಲಕ ಈಗ ಪ್ರವೇಶವಿಲ್ಲ. ಬದಲಿಗೆ ದಕ್ಷಿಣದಲ್ಲಿ ಒಳಪ್ರವೇಶಿಸಲು ವ್ಯವಸ್ಥೆ ಇದೆ. ಈಗ ದೇವಾಲಯದಲ್ಲಿ ಮೂರ್ತಿಯೂ ಇಲ್ಲ. ದೇವಾಲಯದ ಪೂರ್ವಕ್ಕಿರುವ ಗರುಡಗಂಬ(ಇದರ ಕೆಳಭಾಗದಲ್ಲಿ ಮತ್ಸ್ಯ ಇರುವುದರಿಂದ ಇದನ್ನು ಮತ್ಸ್ಯ ಕಂಬ ಎನ್ನಲೂ ಅವಕಾಶಗಳಿವೆ. ಪಕ್ಕದಲ್ಲಿನ ಕ್ರಿ.ಶ.ಸು. ೧೭ನೆಯ ಶತಮಾನದ ಅಪ್ರಕಟಿತ ಶಾಸನದ ಪ್ರಕಾರ ಉಜಿನಿ ಒಂದು ಸೀಮೆಯ ಕೇಂದ್ರವಾಗಿತ್ತು.

ಉಜಿನಿ ಸ್ಥಳನಾಮವನ್ನು 'ಉದಕಜನಿ'ಯ ಮೂಲಕ ಹುಡುಕಲು ಅವಕಾಶಗಳಿವೆ. ಉಜಿನಿಗೆ ಹೊಂದಿ ಕೊಂಡಂತೆಯೇ ಇರುವ ಗುಡ್ಡದಲ್ಲಿ ಹಲವು ನೀರಿನ ಚಿಲುಮೆಗಳಿವೆ ಎಂದು ಸ್ಥಳೀಯರು ಹೇಳುತ್ತಾರೆ. ಈ ಗುಡ್ಡದಲ್ಲಿ ಹಸಿರು ತುಂಬಿದೆ. ಇದರಿಂದ ಇದು ಜನವಸತಿಗೆ ತಕ್ಕ ಪ್ರದೇಶ ಎಂಬುದರಲ್ಲಿ ಸಂಶಯವಿಲ್ಲ.

ಸಾಮಾನ್ಯವಾಗಿ ಬೀರಗಾರರ ಗುಡಿಗಳು ಇರುವ ಪ್ರದೇಶದಲ್ಲಿ ಪ್ರಾಗಿತಿಹಾಸದ, ಅದರಲ್ಲೂ ವಿಶೇಷವಾಗಿ ಬೃಹತ್ ಶಿಲಾಯುಗದ ನೆಲೆಗಳನ್ನು ಹುಡುಕುವ ಪ್ರಯತ್ನ ಮಾಡುವುದು ಸ್ವಾಭಾವಿಕ. ಇವು ಇತಿಹಾಸ ಕಾಲದ ನೆಲೆಗಳೂ ಆಗಿರುತ್ತವೆ. ವೀರಗಾರರ ಗುಡಿಗಳ ಜೊತೆಗೆ ಬೀರೇಶ್ವರನ ಗುಡಿಯೂ ಇರುತ್ತದೆ. ನಾನು ಕಂಡಿರುವಂತೆ, ಕರ್ನಾಟಕದಲ್ಲಿ ವೀರಗಾರರ ಗುಡಿಗಳಿರುವ ಯಾವುದೇ ಗ್ರಾಮದಲ್ಲಿ ಬೀರೇಶ್ವರನ ಗುಡಿ ಇದ್ದೇ ಇರುತ್ತದೆ. ಇದು ಪಶುಪಾಲಕ ಮತ್ತು ಕೃಷಿಯ ಆರಂಭ ಕಾಲದ ಸ್ವರೂಪ.

ವೀರಗಾರರ ಗುಡಿಗಳನ್ನು ಹಿಂದೆಯೇ ತಿಳಿಸಿರುವಂತೆ ಇತಿಹಾಸದ ಆರಂಭಕಾಲದಿಂದಲೂ ನಿರಂತರವಾಗಿ ಕಾಣಬಹುದು. ಇದು ಬೃಹತ್ ಶಿಲಾಯುಗದ ಪಳೆಯುಳಿಕೆ. ವೀರಗಾರರ ಗುಡಿಗಳು ಸಾಮಾನ್ಯವಾಗಿ ಚಿಕ್ಕವು. ಒಬ್ಬ

* # ೧೪೪, 'ಸ್ವಸ್ತಿಶ್ರೀ ಸ್ಕಂದ', ಐ.ವೈ.ಡಿ. ರಸ್ತೆ, ಅರಸಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-೫೬೨೧೨೩.

ವ್ಯಕ್ತಿ ನುಸುಳುವಷ್ಟು ಜಾಗವೂ ಅಲ್ಲಿರುವುದಿಲ್ಲ. ಚಿಕ್ಕ ಗೂಡಿನಂತಹ ಮಂಟಪದಲ್ಲಿ ಒಂದು ವೀರಗಲ್ಲನ್ನು ಇಟ್ಟು, ಅದಕ್ಕೆ ವರ್ಷದ ನಿರ್ದಿಷ್ಟ ಅಥವಾ ತಮಗೆ ಇಷ್ಟ ಅಥವಾ ಅವಕಾಶ ದೊರೆತ ದಿನದಂದು ಒಂದು ಕುಟುಂಬದವರು ಸಾಮೂಹಿಕವಾಗಿ ಪೂಜೆ ಸಲ್ಲಿಸುವ ಪದ್ಧತಿ ಇರುತ್ತದೆ. ಆ ಪೂಜೆಯಲ್ಲಿ ಪ್ರಾಣಿ ಬಲಿ ಇರಬಹುದು ಅಥವಾ ಇಲ್ಲದೆಯೂ ಇರಬಹುದು. ಉಜಿನಿ ಗ್ರಾಮದ ಊರಿನಿಂದ ಸ್ವಲ್ಪ ದೂರದಲ್ಲಿರುವ ಬೀರೇಶ್ವರ ದೇವಾಲಯವು ಹೆಂಚು ಮತ್ತು ಮಾಳಿಗೆಯ ಕಟ್ಟಡ. ದೂರಕ್ಕೆ ಮನೆಯಂತೆಯೇ ಕಾಣುವ ಇದರ ಮೂರು ಭಾಗಗಳಲ್ಲೂ ಗುಂಪುಗುಂಪಾಗಿ ವೀರಗಾರರ ಗುಡಿಗಳಿವೆ. ಈಗಾಗಲೇ ತಿಳಿಸಿರುವಂತೆ ಇವು ಗೂಡಿನಂತಹ ರಚನೆಗಳು. ಇವುಗಳಲ್ಲಿ ಕೆಲವು ಗುಂಪಿನವು ಸುಸ್ಥಿತಿಯಲ್ಲಿ ರಕ್ಷಿತವಾಗಿವೆ. ಇನ್ನು ಕೆಲವು ರಕ್ಷಣೆಯ ನಿರೀಕ್ಷೆಯಲ್ಲಿವೆ. ಸ್ಥಳೀಯರು ಹೇಳುವ ಪ್ರಕಾರ ಇವು ಹಲವು ಕುಟುಂಬಗಳಿಗೆ ಸೇರಿದ ವೀರಗಾರರ ಗುಡಿಗಳು. ಆಯಾ ಕುಟುಂಬದವರು ತಮಗೆ ಅನುಕೂಲ ಆದ ದಿನ ಅಥವಾ ಮೊದಲೇ ಗೊತ್ತುಪಡಿಸಿದ ದಿನ ಸಾಮೂಹಿಕವಾಗಿ ಬಂದು ಪೂಜೆಯನ್ನು ಸಲ್ಲಿಸಿ, ಪ್ರಸಾದ ಸ್ವೀಕರಿಸಿ ಹೋಗುತ್ತಾರೆ. ಅದೇ ದಿನ ಉಳಿದ ವೀರಗಾರರ ಗುಡಿಗಳಿಗೆ ಸಂಬಂಧಿಸಿದ ಕುಟುಂಬಗಳವರೂ ಬಂದಿರಬಹುದು. ನಿರ್ದಿಷ್ಟ ಗುಂಪಿನ ವೀರಗಾರರ ಗುಡಿಗಳಿಗೆ ನಡೆದುಕೊಳ್ಳುವ ಕುಟುಂಬಗಳವರು ಮತ್ತೊಂದು ಕುಟುಂಬದವರ ವೀರಗಾರರ ಗುಡಿಗಳಿಗೆ ನಡೆದುಕೊಳ್ಳುವುದಿಲ್ಲ. ಆದರೂ ಬಹುತೇಕ ಎಲ್ಲಾ ಕುಟುಂಬ ಗಳಲ್ಲೂ ಆಚರಣೆಯ ವಿಷಯದಲ್ಲಿ ಸಾಮರಸ್ಯವಿದೆ. ಹಿರಿಯರು ಮಾಡಿದ ನಿರ್ಣಯವನ್ನು ಯಾರೂ ಮೀರುವು ದಿಲ್ಲ. ಇದು ಶಿಷ್ಟ ಪಂಗಡಗಳಲ್ಲಿನ ಗೋತ್ರ ಪದ್ಧತಿಯನ್ನು ನೆನಪಿಗೆ ತರುತ್ತದೆ.

ಸರ್ವೇಕ್ಷಣೆಯ ಮೂಲಕ ಉಜಿನಿ ಗ್ರಾಮದ ಪ್ರಾಚೀನತೆಯ ಶೋಧಕ್ಕೆ ತೊಡಗುವುದರಿಂದ ಒಳ್ಳೆಯ ಫಲಿತಾಂಶ ದೊರಕಬಹುದೆಂಬ ಅಂದಾಜಿದೆ. ಬೀರೇಶ್ವರನ ಗುಡಿ, ಅದಕ್ಕೆ ಹೊಂದಿಕೊಂಡ ಬೀರಗಾರರ ಗುಡಿಗಳ ಮೂಲಕ ಶೋಧ ಕಾರ್ಯ ಆರಂಭ ಆಗಬಹುದು.

ಇನ್ನು ಉಜಿನಿ ಗ್ರಾಮದಲ್ಲಿ ಮೇಲೆ ಪ್ರಸ್ತಾಪಿಸಿದ ಅಪ್ರಕಟಿತ ಶಾಸನವಲ್ಲದೆ, ಅದನ್ನು ಕಾಪಾಡಿಕೊಂಡು ಬಂದಿದ್ದ ಗರುಡಗಂಭ (ಮತ್ಸ್ಯ ಕಂಬ)ದ ಎದುರಿಗೆ ಚೆನ್ನಕೇಶವ ದೇವಾಲಯವಿದೆ. ಮೂಲದಲ್ಲಿ ಪೂರ್ವಕ್ಕಿದ್ದ ಇದರ ಮುಖ್ಯ ದ್ವಾರಕ್ಕೆ ಅಡ್ಡಲಾಗಿ ಈಗ, ಬಹುತೇಕ ಇದೇ ದೇವಾಲಯದ ಗರ್ಭಗೃಹದಲ್ಲಿದ್ದ ಪಾಣಿಪೀಠವನ್ನು ಇಟ್ಟು, ಮುಚ್ಚುವ ಪ್ರಯತ್ನ ಮಾಡಲಾಗಿದೆ. ಈಗ ದೇವಾಲಯದ ದಕ್ಷಿಣ ಭಾಗದಲ್ಲಿ ಪ್ರವೇಶ ದ್ವಾರವಿದೆ. ಗರ್ಭಗೃಹದಲ್ಲಿ ಪಾಣಿಪೀಠವೂ ಇಲ್ಲ; ಯಾವುದೇ ಮೂರ್ತಿಯೂ ಇಲ್ಲ. ಗರ್ಭಗೃಹದ ಮುಂದಿನ ಸುಖನಾಸಿಯಲ್ಲದೆ, ನವರಂಗವೂ ಮತ್ತೊಂದು ಸುಖನಾಸಿಯಂತೆಯೇ ಆಗಿದೆ. ದೇವಾಲಯವು ಸ್ವಲ್ಪವೇ ಎತ್ತರದ ಅಧಿಷ್ಠಾನದ ಮೇಲಿದೆ. ದೇವಾಲಯದ ಮುಖ್ಯ ದ್ವಾರ ಮುಚ್ಚಿ, ಗರ್ಭಗೃಹದಲ್ಲಿ ಯಾವ ದೇವರೂ ಇಲ್ಲವಾದ್ದರಿಂದ ರೇಷ್ಮೆ ತಟ್ಟೆಗಳನ್ನು ಇಡಲಾಗಿದೆ. ಬಹುತೇಕ ರೇಷ್ಮೆ ಹುಳುಗಳ ಸಾಕಣೆಗೆ ದೇವಾಲಯ ಬಳಕೆಯಾಗುತ್ತಿದೆ.

ಊರಿನಿಂದ ಆಚೆ ಸ್ವಲ್ಪ ದೂರದಲ್ಲಿ ಬಂಡಿ ಮಾಂಕಾಳಮ್ಮನ ದೇವಾಲಯ ಇದೆ. ಇದು ಆಧುನಿಕ ಕಟ್ಟಡ. ಇಲ್ಲಿರುವುದು ದುರ್ಗಿಯ ಮೂರ್ತಿ. ದುರ್ಗಿಯ ಮೂರ್ತಿಯ ಹಿಂದೆ ವೀರಭದ್ರನ ಮೂರ್ತಿ ಇದೆ. ಕಟ್ಟಡವು ಆಧುನಿಕ ವಾದರೂ, ಮೂರ್ತಿಗಳು ಆಧುನಿಕವಲ್ಲ. ಅವು ಕನಿಷ್ಟ ನೂರು ವರ್ಷಗಳಷ್ಟಾದರೂ ಹಳೆಯವು. ಇದಕ್ಕೆ ಸ್ವಲ್ಪ ಮುಂದೆ ತೆರದ ಬಯಲಿನಲ್ಲಿ ಒಂದು ಬಾಣ ಲಿಂಗ ಮತ್ತು ಅದರ ಎದುರಿಗೆ ಒಂದು ಬಸವನ ಮೂರ್ತಿ ಇದೆ. ಇಲ್ಲಿ ಈಗ ದೇವಾಲಯದ ಗುರುತುಗಳು ಇಲ್ಲವಾದರೂ, ಒಂದು ಕಾಲಕ್ಕೆ ಇಲ್ಲಿ ದೇವಾಲಯ ಇದ್ದಿರಬಹುದು. ಬಾಣ ಲಿಂಗಗಳು ಸಾಮಾನ್ಯವಾಗಿ ಪ್ರಾಚೀನವಾಗಿರುವುದರಿಂದ ಈ ಲಿಂಗ ಮತ್ತು ಅದಕ್ಕೆ ಇದ್ದಿರಬಹುದಾದ ದೇವಾಲಯವು ಕ್ರಿ.ಶ. ೧೦ನೆಯ ಶತಮಾನಕ್ಕೂ ಹಿಂದಿನದು ಎನ್ನಬಹುದು. ಇಲ್ಲಿನ ಕೆಲವು ವೀರಗಲ್ಲುಗಳು ಮತ್ತು ಗಡಿಕಲ್ಲುಗಳು ಈ ಸ್ಥಳದ ಕಾಲವನ್ನು ಕ್ರಿ.ಶ. ೧೦ನೆಯ ಶತಮಾನಕ್ಕೆ ಕೊಂಡೊಯ್ಯುತ್ತವೆ.

ಈಗ ಉಜಿನಿಯ ಈವರೆಗೆ ಅಪ್ರಕಟಿತವಾಗಿದ್ದ ಶಾಸನ ಪ್ರಕಟವಾಗಿದೆ. ಇಲ್ಲಿ ಇತಿಹಾಸಕ್ಕೆ ಸಂಬಂಧಿಸಿದಂತೆ ಇನ್ನೂ ಸಾಕಷ್ಟು ಕೆಲಸಗಳು ಆಗಬೇಕಾಗಿದೆ.

೧೬

ಬಡರಗುಂಟೆಯ ಗಂಟೆ ಶಾಸನ, ನಲ್ಲೇಕಾಮನಹಳ್ಳಿ, ಮಿಡಿಗೇಶಿ, ರೆಡ್ಡಿಹಳ್ಳಿಯ ಹರೆ ಶಾಸನಗಳು ಹಾಗೂ ಮಾದಲೂರು ಶಾಸನ

ಡಾ. ಎನ್. ನಂದೀಶ್ವರ*

ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ಬುಡರಗುಂಟೆಯ ಈರಣ್ಣನ ವಂಶಸ್ಥರು ಕುಂಚಿಟಿಗ ಒಕ್ಕಲಿಗರ ಜಲದೇನವರ ಕುಲದವರಿಗೆ ಹೆಳವರಾಗಿರುತ್ತಾರೆ. ಈ ಹೆಳವರ ಈರಣ್ಣನನ್ನು ಜಲಧಿ ಬೊಪ್ಪರಾಯನ ಗುರುವೆಂದು ಭಾವಿಸಲಾದ ಬೀರಲಿಂಗೇಶ್ವರ ದೇವಸ್ಥಾನವಿರುವ ಆಂಧ್ರಪ್ರದೇಶದ ಮಡಕಶಿರಾ ತಾಲ್ಲೂಕಿನ ಅಗಳಿ ಮಂಡಳ್‌ನ ಕೊಮರೇನಹಳ್ಳಿಯಲ್ಲಿ ಜಲದೇನವರ ಕುಲದವರು ಮನೆ ಕಟ್ಟಿಸಿಕೊಟ್ಟು ಅಲ್ಲಿಯೇ ಉಳಿಸಿಕೊಂಡಿರುವರು. ಈತನ ಹತ್ತಿರ ಇರುವ ಗಂಟೆಯ ಮೇಲೆ ಅಪ್ರಕಟಿತ ಶಾಸನ ಇದೆ. ಈರಣ್ಣನು ಜಲದೇನವರ ಕುಲದವರಿಗೆ ಹೆಳವನಾಗಿದ್ದು, ಜಲದೇನವರು ಇರುವ ಒಕ್ಕಲಿನ ಹತ್ತಿರ ಹೋಗಿ ಜನಾಂಗದ ಇತಿಹಾಸ ಹೇಳಲು ಗಂಟೆಯನ್ನು ಇಟ್ಟುಕೊಂಡಿರುವನು. ಈ ಗಂಟೆಯು ಈತನಿಗೆ ಐದನೆಯ ತಲೆಮಾರಿನಿಂದ ಬಂದಿರುತ್ತದೆ. ಅಂದರೆ ಈರಣ್ಣ ತಂದೆ ಈರಣ್ಣ, ಈರಣ್ಣ ತಂದೆ ಮಲ್ಲಜ್ಜ, ಮಲ್ಲಜ್ಜ ತಂದೆ ಲಿಂಗಪ್ಪ, ಲಿಂಗಪ್ಪ ತಂದೆ ತಿಪ್ಪಣ್ಣ(ತಿಮಗ) ಇವರಿಂದ ಬಂದಿರುತ್ತದೆ. ಈ ಗಂಟೆಯನ್ನು ವಂಶದ ಹೆಳವರು ತೆಗೆದುಕೊಂಡು ಜಲದೇನವರ ಅಣ್ಣತಮ್ಮಂದಿರ ಹತ್ತಿರ ಹೋಗಿ ಜನಾಂಗದ ಇತಿಹಾಸ ಹಾಗೂ ಬೊಪ್ಪರಾಯನಿಗೆ ಸಂಬಂಧಿಸಿದ ಪದಗಳನ್ನು ಗಂಟೆ ಅಳ್ಲಾಡಿಸುತ್ತಾ ಹೇಳುತ್ತಾನೆ. ಇವರು ಜಲದೇನವರ ಅಣ್ಣತಮ್ಮಗಳ ಮನೆಗಳಿಂದ ಕಾಳು ಅಥವಾ ಹಣ ಪಡೆದುಕೊಂಡು ಬರುತ್ತಾರೆ. ದೇವರ ಎಲ್ಲಾ ಕಾರ್ಯಗಳಲ್ಲೂ ಬಹಳ ಶ್ರದ್ದೆಯಿಂದ ಭಾಗವಹಿಸುತ್ತಾ ಪ್ರಮುಖ ವ್ಯಕ್ತಿಯಾಗಿರುತ್ತಾರೆ.

ಈರಣ್ಣನ ಹತ್ತಿರ ಗಂಟೆ ಶಾಸನವು ಕನ್ನಡ ಲಿಪಿಯಲ್ಲಿ ಬರೆಯಲ್ಪಟ್ಟಿದೆ. ಶಾಸನದ ಕಾಲವು (ಡಿಸೆಂಬರ್) ಕ್ರಿ.ಶ. ೧೮೬೭ಕ್ಕೆ ಸರಿಹೊಂದುತ್ತದೆ. ಶಾಸನದ ಮೊದಲಿಗೆ ಜಲಧಿ ಬೊಪ್ಪರಾಯ ಹಾಗೂ ಅವರ ಗುರುವಾದ ಭೀರಲಿಂಗ ಸ್ವಾಮಿಯನ್ನು ಸ್ಮರಿಸಲಾಗಿದೆ. ಅಂದರೆ ಜಲಧಿಬೊಪ್ಪರಾಯನ ಗುರು ಬೀರಲಿಂಗೇಶ್ವರ ಎಂದು ಜಲದೇನವರ ಕುಲದವರು ಭಾವಿಸಿರುತ್ತಾರೆ. ಈತನಿಗೆ ಆಂಧ್ರಪ್ರದೇಶದ ಮಡಕಶಿರಾ ತಾಲ್ಲೂಕಿನ ಕೊಮರೇರನಹಳ್ಳಿಯಲ್ಲಿ ದೇವಸ್ಥಾನ ನಿರ್ಮಿಸಿರುವರು. ಚಳ್ಳಕೆರೆ ತಾಲ್ಲೂಕು ದೊಡ್ಡಬಿರನಹಳ್ಳಿ ಜಲದೇನವರ ಅಮವಾಸ್ಯೆ ದೇವರಾದ ತಾಯಿ ಮುದ್ದಮ್ಮ ದೇವರ ಒಕ್ಕಲಾದ ನಾಲ್ಕು ಮಂದಿ ಸೇರಿ ನಂಮ್ಮಗಳ ಮಗನಾದ ಅಂದರೆ ಯಳವರ ತಿಮಗನಿಗೆ ಅಕಿಸಿದ ಗಂಟೆ ಎಂದು ತಿಳಿಸುತ್ತದೆ. ಈರಣ್ಣನಿಗಿಂತ ೫ ತಲೆಮಾರಿನ ಹಿಂದೆ ಇದ್ದ ತಿಮಗ(ತಿಪ್ಪಣ್ಣ)ನಿಗೆ ಗಂಟೆಯನ್ನು ಜಲದೇನವರ ಕುಲದ ಇತಿಹಾಸ ಹೇಳಲು ಕೊಟ್ಟಿರುತ್ತಾರೆ.

ಶಾಸನದ ಪಾಠ

೧ ಬೊಪರಾಯಸ್ವಾಮಿ ಬೀರಲಿಂಗಸ್ವಮಿ ॥

೨ ॥ ಮಂನ್ಮಥ ಸಂ ॥ ಮಾರ್ಗಶಿರ ಬ। ೧೦ ಲ್ಲು ದೊಡ್ಡಬೀರನಳಿ ತಾಯಿ ಮುದಂಮ್ಮ ವಕ್ಲು

೩ ॥ ೨ ನಾಲ್ಕು ಮಂದಿ ಕೂಡಿ ನಂಮ್ಮಗಳ ಮಗನಾದ ಯಳವರ ತಿಮಗನಿಗೆ ಅಕಿಸಿದ ಗಂಟೆ

ನಲ್ಲೇಕಾಮನಹಳ್ಳಿಯ ಮೂರ್ತಿ ಎಂಬುವವರ ಹತ್ತಿರವಿರುವ ಹರೆ ಶಾಸನ

ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ನಲ್ಲೇಕಾಮನಹಳ್ಳಿಯ ಗ್ರಾಮದ ಛಲವಾದಿ ಜನಾಂಗದ ಮೂರ್ತಿ ಎಂಬುವವರ ಹತ್ತಿರವಿರುವ ಹರೆಯ ಮೇಲೆ ಅಪ್ರಕಟಿತವಾದ ಶಾಸನ ಇರುತ್ತದೆ. ಶಾಸನದ ಪ್ರಾರಂಭದಲ್ಲಿ ಸೂರ್ಯನನ್ನು ಕೊರೆಯಲಾಗಿದೆ. ಶಾಸನವು ಕಾಲವು ಜೂನ್ ೧೮೬೯ಕ್ಕೆ ಸರಿಹೊಂದುತ್ತದೆ. ಕನ್ನಡ ಭಾಷೆಯಲ್ಲಿ ಬರಹವಿದೆ. ನವಾ ನಲ್ಲೇಕಾಮನಹಳ್ಳಿ ಗ್ರಾಮದ ಚಿಕ್ಕ ಸಿದ್ದಾರೆಡ್ಡಿ ಎನ್ನುವವರು ಮಿಡಿಗೇಶಿ ಗ್ರಾಮದಲ್ಲಿರುವ ಸಿದ್ದೇಶ್ವರ(ಮಲ್ಲೇಶ್ವರ)ಸ್ವಾಮಿ

* ಪ್ರಾಂಶುಪಾಲರು, ಪೂರ್ಣಚಂದ್ರ ತೇಜಸ್ವಿ ಸದನ, ಸಿದ್ದಪ್ಪ ಲೇಔಟ್, ಬಾಲಾಜಿನಗರ, ಸಿರಾ ಟೌನ್, ತುಮಕೂರು ಜಿಲ್ಲೆ-೫೭೨೧೩೭.

ಹಾಗೂ ಗ್ರಾಮ ದೇವತೆಯಾದ ಅಂಕಾಲಮ್ಮ ದೇವತೆಗೆ ವಾದ್ಯ ನುಡಿಸಲು ವಾದ್ಯಗಾರನಾದ ಛಲವಾದಿ ಜನಾಂಗದ ನೀರಕಲ್ಲು ಗ್ರಾಮದ ಕೆಂಚನ ಮೊಮ್ಮಗ ಜೂಲನಿಗೆ ಕೊಡಿಸಿ ಕೊಟ್ಟ ಅರೆ. ತಂದೆಗಿಂತ ತಾತನೆ ಹೆಚ್ಚಿನ ಪ್ರಾಮುಖ್ಯತೆ ಇದ್ದುದರಿಂದ ತಾತನ ಹೆಸರನ್ನು ಹೇಳಿಕೊಂಡು ಹರೆ ಹಾಕಿಸಿಕೊಂಡಿರುವನು. ನವಾ ನಲ್ಲೇಕಾಮನಹಳ್ಳಿ ಎನ್ನುವುದು ನಲ್ಲೇಕಾಮನಹಳ್ಳಿಯ ಮೊದಲ ಹೆಸರಾಗಿರುತ್ತದೆ.

ಶಾಸನದ ಪಾಠ

೧ ಪ್ರಜೊಕತ್ಪತ್ಸನಾಮ
೨ ಸಂ। ವದ ಜೇಷ್ಠ ಶು
೩ ದ ೫ಲ್ಲು ಶ್ರಿ ಶಿದ್ದೇ
೪ ಶ್ವರ ಅಂಕಾಲಂಮಗು
೫ ನವಾ ನಲ್ಲೆಕಾಮನಹ
೬ ಳಿ ಚಿಕ್ಕಶಿದಾರೆಡಿ ಕೊ
೭ ಡಿಶಿಕೊಟ್ಪ ಅರೆ ನೀರು
೮ ಕಲ್ಲು ಕೆಂಚ್ಚನ ಮಂಮ್ಮ
೯ ಗ ಜೂಲಗೆ ಆಕಿಸಿದ ಅ
೧೦ ರೆ

ನಲ್ಲೇಕಾಮನಹಳ್ಳಿಯ ಹನುಮಂತರಾಯನ ಹತ್ತಿರವಿರುವ ಹರೆ ಶಾಸನ

ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕು ನಲ್ಲೇಕಾಮನಹಳ್ಳಿಯ ಹನುಮಂತರಾಯನ ಹತ್ತಿರವಿರುವ ಹರೆಯ ಮೇಲೆ ಅಪ್ರಕಟಿತವಾದ ಶಾಸನ ಇರುತ್ತದೆ. ಶಾಸನದ ಪ್ರಾರಂಭದಲ್ಲಿ ಚಂದ್ರ ಸೂರ್ಯ ಬರೆದು ಮಧ್ಯೆ ಶ್ರಿ ಎಂದು ಬರೆಯಲಾಗಿದೆ. ಶಾಸನದ ಕಾಲವು (ಮಾರ್ಚ್) ಕ್ರಿ.ಶ. ೧೮೪೯ಕ್ಕೆ ಸರಿಹೊಂದುತ್ತದೆ. ಕನ್ನಡ ಭಾಷೆಯಲ್ಲಿ ಬರಹವಿದೆ. ಒಟ್ಟು ಎಂಟು ಸಾಲುಗಳಲ್ಲಿ ಬರೆಯಲಾಗಿದೆ. ಹರೆಯು ನಾಲ್ಕು ಕಟ್ಟುಗಳನ್ನಾಗಿ ಮಾಡಲಾಗಿದೆ. ಶಾಸನವನ್ನು ಎರಡು ಭಾಗಗಳಲ್ಲಿ ಬರೆಯಲಾಗಿದೆ. ಗೊಟ್ಟುಗುರಿಕೆ ನಗರದ ಪಾತಪ್ಪದೇವರಿಗೆ ಬೊಮ್ಮಣ್ಣನ ಮೊಮ್ಮಗ ಪಾತಣ್ಣನ ಮಗ ನಿಂಗಣ್ಣನು ಕೊಡಿಸಿದ ಹರೆ. ಈ ಹರೆಯನ್ನು ಬಡಿಯಲು ಹಳೆಮಗನಾದ ನರಸನ ಮಗ ರಂಗನ ಕೊರಳಿಗೆ ಹಾಕಿಸಿದ ಹರೆ ಎಂದು ತಿಳಿಸುತ್ತದೆ. ಚಿತ್ರಗಾರ ಪುಟ್ಟಲಿಂಗಪ್ಪನು ಬರೆದಿರುತ್ತಾರೆ. ಇಂದಿನ ಆಂಧ್ರಪ್ರದೇಶದ ಮಡಕಶಿರಾ ತಾಲ್ಲೂಕಿನ ಗೊಟ್ಟುಗುರಿಕೆ ಊರು ಈ ಶಾಸನದಲ್ಲಿ ನಗರ ಎಂದು ದಾಖಲಿಸಿರುವುದರಿಂದ ಈ ಹಿಂದೆ ಅಥವಾ ಆ ಕಾಲದಲ್ಲಿ ಚಿಕ್ಕನಾಯಕನು ಇಲ್ಲಿ ಆಳ್ವಿಕೆ ನಡೆಸಿರಬೇಕು. ಇದೇ ದೇವರಿಗೆ ಸಂಬಂಧಿಸಿದ ಹರೆಯು ಮಿಡಿಗೇಶಿಯ ಆದಿ ದ್ರಾವಿಡ ಜನಾಂಗದ ಕಾವೇರಪ್ಪನ ಮಗ ಹನುಮಂತರಾಯನ ಹತ್ತಿರ ಇರುತ್ತದೆ. ಆ ಶಾಸನವನ್ನು ಬರೆದವನು ರತ್ನಗಿರಿಯ ಚಿತ್ರಗಾರ ಪುಟ್ಟಲಿಂಗಪ್ಪನಾಗಿರುತ್ತಾನೆ.

೧ ಶ್ರೀ ಹೇವಂಳಂಬಿ ಸಂಮತ್ಸರದ ಚೆತ ಶುದ ೧
೨ ಯಲ್ಲು ಶ್ರಿ ಮತು ಗೊಟ್ಟುಗುರಿಕೆ ನಗರದ ಬಂಮ
೩ ಣ್ಣನ ಮಗ ಪಾತಂಣನ ಮಗ ನಿಂಗಂಣ್ಣ ಶ್ರೀ ಪಾ
೪ ತಪ್ಪದೇವರಿಗೆ ಕೊಡಿಶಿದ ಆರೆ ಭಕ್ತನ ದರಿ ಆರೆ
೫ ಆಳೆ ಮಗ ನರಸನ ಮಗ ರಂಗನ ಕೊ(ರ)ಳಿಗೆ ಆ
೬ ಕಿದ ಆರೆ
೭ ॥ ರ ॥ ಚಿತ್ರಗಾರ
೮ ಪುಟ್ಟಲಿಂಗಪ್ಪ

ರೆಡ್ಡಿಹಳ್ಳಿ ಸಣ್ಣರಂಗಪ್ಪನ ಹತ್ತಿರವಿರುವ ಹರೆಯ ಮೇಲಿನ ಶಾಸನ

ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕು ರೆಡ್ಡಿಹಳ್ಳಿ ಗ್ರಾಮದ ಸಣ್ಣರಂಗಪ್ಪನ ಹತ್ತಿರ ವಿರುವ ಹರೆಯ ಮೇಲೆ ಇಂದು ಅಪ್ರಕಟಿತವಾದ ಶಾಸನ ಇರುತ್ತದೆ. ಶಾಸನದ ಪ್ರಾರಂಭದಲ್ಲಿ ಸೂರ್ಯ ಚಂದ್ರನನ್ನು ಕೊರೆಯಲಾಗಿದೆ. ಶಾಸನವು ಕಾಲವು ಕ್ರಿ.ಶ. ೧೮೩೫ಕ್ಕೆ (ಆಗಸ್ಟ್) ಸರಿಹೊಂದುತ್ತದೆ. ಕನ್ನಡ ಭಾಷೆಯಲ್ಲಿ ಬರಹವಿದೆ. ಒಟ್ಟು ಆರು ಸಾಲುಗಳಲ್ಲಿ ಬರೆಯಲಾಗಿದೆ. ರೆಡ್ಡಿಹಳ್ಳಿ ಕಾವಲಮ್ಮನ ದೇವಸ್ಥಾನವನ್ನು ಯುವ ಸಂವತ್ಸರದ ಶ್ರಾವಣ ಬಹುಳ ೧೨ರಲ್ಲಿ ರೆಡ್ಡಿಹಳ್ಳಿ ಗ್ರಾಮದ ಗೌಡ ಹತ್ತು ಜನರನ್ನು ಕರೆಸಿ ಅವರ ಮುಂದೆ ತೋಟಿ ನರಸನ ಮಗ ರಂಗನ ಕೊರಳಿಗೆ ಹಾಕಿಸಿದ ಹರೆ. ಈ ಹರೆಯನ್ನು ಕಾವಲ್ಲಮ್ಮನ ಉತ್ಸವದ ಕಾರ್ಯಕ್ರಮದಲ್ಲಿ ಬಡೆಯುತ್ತಾರೆ.

೧ ಶುಭಮಸು ರಡಿಹಳಿ ॥ ಕಾವಲಂ
೨ ಮನ ದೇವಸ್ಥಾನ ॥ ಯಿವಸ್ಸಂ ॥
೩ ಶ್ರಾವಣ ಬ ೧೨ ಲ್ಲು ಯೀ ಗ್ರಾಮದ ಗೌ
೪ ಡಿ ಅತ್ತು ಜನರೈ ಕರುಸಹ ವಪಿ
೫ ಶಿದ ಅರೆ ॥ ತೋಟಿನರಸನ ಮಗ
೬ ರಂಗ್ನ ಕೊಳಿಗೆ ಆಕಿದು

ಇಂದಿಗೂ ಮಧುಗಿರಿ, ಸಿರಾ ತಾಲ್ಲೂಕಿನ ಹಲವಾರು ದೇವಸ್ಥಾನಗಳಲ್ಲಿ ಭಕ್ತರು ಕಾಣಿಕೆಯಾಗಿ ನೀಡಿದ ಹರೆಗಳು ಇರುತ್ತವೆ. ಕೆಲವು ಹರೆಗಳ ಮೇಲೆ ಹರೆ ಮಾಡಿಸಿ ಕೊಟ್ಟಂತಹವರು ಶಾಸನ ಬರೆಸಿ ಹರೆ ಬಡಿಯುವವರಿಗೆ ಕೊಟ್ಟಿರುತ್ತಾರೆ.

ಮದಲೂರು ದಾಸರಹಳ್ಳಿಯ ಬುಕ್ಕರಾಯನ ಕಾಲದ ಶಾಸನ: ಪರಿಶೀಲನೆ

ತುಮಕೂರು ಜಿಲ್ಲೆಯ ಸಿರಾ ತಾಲ್ಲೂಕಿನ ಮದಲೂರು ದಾಸರಹಳ್ಳಿಯ ಗೊಲ್ಲ (ಯಾದವ) ಜನಾಂಗದ ಎಳೇಗೌಡನವರ ಈರಣ್ಣನ ಮಗ ದಾಸಪ್ಪನವರ ವಶದಲ್ಲಿದ್ದ ವಿಜಯನಗರ ಕಾಲದ ಅಪ್ರಕಟಿತವಾದ ಹಿತ್ತಾಳೆ ಶಾಸನ ಕಂಡುಬರುತ್ತದೆ. ಈ ಶಾಸನವು ಕನ್ನಡ ಭಾಷೆಯಲ್ಲಿ ಬರೆಯಲಾಗಿದ್ದರೂ, ಶಾಸನವು ಕನ್ನಡ ಮತ್ತು ತೆಲುಗು ಪದಗಳ ಮಿಶ್ರಣದಿಂದ ಕೂಡಿದೆ. ಶಾಸನವು ಎರಡು ಕಡೆ ಒಟ್ಟು ೬೫ ಸಾಲುಗಳಲ್ಲಿ ಬರೆಯಲಾಗಿದೆ. ಶಾಸನದ ಪ್ರಾರಂಭದಲ್ಲಿ ಸೂರ್ಯ ಚಂದ್ರರನ್ನು ಕೆತ್ತಲಾಗಿದೆ. ಈ ಶಾಸನದ ಭಾಷೆ ನೋಡಿದರೆ ೧೯ನೆಯ ಶತಮಾನದ ಕಾಲದ್ದಾಗಿದೆ.

ಶಾಸನದಲ್ಲಿ ವಿಜಯನಗರದ ರಾಮರಾಜ, ಬುಕ್ಕರಾಯರು, ವೀರಬಲ್ಲಾಳರಾಯರು, ಹರತಿ ವಂಶದ ಮಹಾನಾಯಕಾಚಾರ್ಯ ವೀರ ತಿಮ್ಮಣ್ಣನಾಯಕನು ರಾಜ್ಯವಾಳುತ್ತಿರುವ ಸಂದರ್ಭದಲ್ಲಿ ಇವರು ಮದಲೂರು ದಾಸರಹಳ್ಳಿಯ ಕರಡಿಗೊಲ್ಲರ ನಾಗನಗೌಡನಿಗೆ ಬರೆಸಿಕೊಟ್ಟ ದಾನ ಶಾಸನವೆಂದು ತಿಳಿಸುತ್ತದೆ. ಕೆರೆಯನ್ನು ಕಟ್ಟುವಾಗ ಗದ್ಯಾಣ ೨೦೦ ಎಂದು ನಾಲ್ಕು ನಿಟ್ಟಿಗೂ ೮೦೦ ಎಂದು ಹೇಳಿ ಒಟ್ಟು ೧೪೦೦ ಗದ್ಯಾಣದಿಂದ ಕೆರೆ ಕಾಮಗಾರಿ ಮಾಡಿಸಿರುತ್ತಾರೆ. ಕೆರೆಯನ್ನು ಕಟ್ಟಿದ್ದಕ್ಕೆ ವಡ(ಡ್ಡ)ರ ಗಿರಿಯಬೋವಿಗೆ, ದಾಸನಬೋವಿಗೆ ಎರಡು ಕಡುಗ, ಎರಡು ಸರಪಣಿ, ಎರಡು ಉಡುದಾರ ಮೊದಲಾದದ್ದನ್ನು ಕೊಟ್ಟಿರುತ್ತಾರೆ. ಈ ಗ್ರಾಮದ ಆಯಗಾರರಾದ ತಳವಾರ ನಿಂಗ, ಬೇಗಾರನಿಂಗರು ಸಹ ಬಂದು ನಮ್ಮ ಅಪ್ಪಣೆ ಪಡೆದಿರುವುದಕ್ಕೆ ಸದರಿ ಗ್ರಾಮದ ಗೌಡಿಕೆಯನ್ನು ನಿನ್ನದೆಂದು ತಿಳಿಸುತ್ತದೆ. ಯಾರಾದರೂ ದ್ರೋಹ ಮಾಡದಂತೆ ಇರಲು ಈ ಹಿತ್ತಾಳೆಯ ಶಾಸನವನ್ನು ಶಾಶ್ವತವಾಗಿರಲು ಕೊಟ್ಟಿರುತ್ತಾರೆಂದು ತಿಳಿಸುತ್ತದೆ.

ಶಾಪಾಶಯವಿದ್ದು, ಮದಲೂರು ಗ್ರಾಮದ ಗೌಡಿಕೆ ಕರಡಿ ಗೊಲ್ಲರ ನಾಗನಗೌಡ, ಉಪ್ಪಾರ ತಿಂಮನಗೌಡ, ತಳವಾರ ಬೇಗಾರು ನಿಂಗರು ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಹೋಗಲೆಂದು ಬರೆಸಿಕೊಟ್ಟ ದಾನ ಶಾಸನವೆಂದು ತಿಳಿಸುತ್ತದೆ. ಆಯಗಾರರಾದ ನಾಗನಗೌಡನಿಗೆ ಕೆರೆ ಹಿಂದಿನ ಹುಣಿಸೆಮರದ ಗದ್ದೆ, ಶಾನುಭೋಗ ಯಂಗ ನರಸಪ್ಪನಿಗೆ ಜಾಲಿಮರದ ಗದ್ದೆ, ತಮಂಣನಿಗೆ ತೆಂಗಿನಮರದ ಗದ್ದೆ, ಲಿಂಗಣ್ಣನಿಗೆ ಕರೆಕಲು ಗದ್ದೆ, ಹನುಮನಿಗೆ ಬೆಳದ ಮರದ ಗದ್ದೆ, ಕರಿಯ ಹಾಗೂ ನಂಜನಿಗೆ ಗದ್ದೆಗಳನ್ನು, ಕಮ್ಮಾರ ಮಲಣ್ಣನಿಗೆ ಕೊಟ್ಟ ಉಡುಗೊರೆ ಒಂದು ಪಾಗು, ಒಂದು ಧೋತ್ರ (ಪಂಚೆ) ಹಾಗೂ ನಗದು ಒಂಬತ್ತು ರೂ ಎಂದು ತಿಳಿಸುತ್ತದೆ. ಈ ಶಾಸನದ ಕಲ್ಲು ಗ್ರಾಮದ ಪಶ್ಚಿಮ ದಿಕ್ಕಿನಲ್ಲಿ ಇರುತ್ತದೆಂದು ತಿಳಿಸುತ್ತದೆ. ಶಾಸನವನ್ನು ಕಂಚುಗಾರ ನಾಗಪ್ಪನು ಕೆತ್ತಿರುವನು.

ತಾಮ್ರಶಾಸನವು ಶಕ ೧೦೨೦ ಎಂದು ಹೇಳಿರುವು ದರಿಂದ ಅದು ಕ್ರಿ.ಶ.೧೯೮ ಎಂದು ತಿಳಿಯಬೇಕಾಗುತ್ತದೆ. ಆದರೆ ಈ ಕಾಲಕ್ಕೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಯಾಗಿರಲಿಲ್ಲ. ಈ ದಾನಶಾಸನದಲ್ಲಿ ಹೇಳಿರುವಂತೆ ರಾಮರಾಯನು ವಿಜಯನಗರದ ಅರಸನಂತಿದ್ದು ತಾಳೀಕೋಟೆ ಯುದ್ಧದಲ್ಲಿ ಕ್ರಿ.ಶ. ೧೫೬೫ರಲ್ಲಿ ಮರಣ ಹೊಂದಿರುತ್ತಾನೆ. ಇದೇ ರೀತಿಯ ಉಲ್ಲೇಖವಿರುವ ಹೊಯ್ಸಳ ಅರಸ ವೀರಬಲ್ಲಾಳ ಉಲ್ಲೇಖವಿರುವುದರಿಂದ ರಾಮರಾಜನ ಕಾಲದಲ್ಲಿ ಹೊಯ್ಸಳ ರಾಜ್ಯವಾಗಲಿ, ವೀರಬಲ್ಲಾಳನ ಆಳ್ವಿಕೆಯಾಗಲಿ ಇರಲಿಲ್ಲ.

ಈ ದಾನಶಾಸನದ ಆರಂಭ ಭಾಗದಲ್ಲಿ ಗದ್ಯಾಣ ಎಂದು ಹೇಳಲಾಗಿದ್ದು, ಕೊನೆಯಲ್ಲಿ ರೂ(ರೂಪಾಯಿ) ಎಂದು ಹೇಳಿರುವುದರಿಂದ ಒಂದಕ್ಕೊಂದು ತಾಳೆಯಾಗುವು ದಿಲ್ಲ. ರೂಪಾಯಿ ಬಂದದ್ದು ಬ್ರಿಟಿಷರು ಆಡಳಿತ ನಿರ್ವಹಿಸಲು ಪ್ರಾರಂಭಿಸಿದ ನಂತರ. ಈ ಶಾಸನದ ಲಿಪಿಯೂ ಸಹ ಕೇವಲ ಎರಡು ಶತಮಾನಗಳಷ್ಟು ಹಿಂದಿನ ಕಾಲದ್ದಾಗಿದೆ.

ಈ ಶಾಸನದಲ್ಲಿ ಹರತಿ ವಂಶದ ಮಹಾನಾಯಕಾಚಾರ್ಯ ವೀರ ತಿಮ್ಮಣ್ಣನಾಯಕನ ಉಲ್ಲೇಖವು ಬರುತ್ತದೆ. ಹೊಯ್ಸಳರ ಕಾಲದಲ್ಲಿ ಹರತಿ ವಂಶದ ಮಹಾನಾಯಕಾಚಾರ್ಯ ವೀರ ತಿಮ್ಮಣ್ಣನಾಯಕನು ರಾಜ್ಯವಾಳುತ್ತಿರಲಿಲ್ಲ. ವೀರತಿಮ್ಮಣ್ಣನ ಕಾಲವು ಸಹ ೧೭ನೇ ಶತಮಾನಕ್ಕೆ ಸಂಬಂಧಿಸಿದೆ. ಈ ದಾನಶಾಸನದಲ್ಲಿ ಹೇಳಿದಂತೆ ರಾಮರಾಜ, ಬುಕ್ಕರಾಯ ಮತ್ತು ಹೊಯ್ಸಳ ವೀರಬಲ್ಲಾಳರಾಯ, ವೀರತಿಮ್ಮಣ್ಣ ನಾಯಕರು ಸಮಕಾಲೀನರಾಗಿ ಇರಲಿಲ್ಲ. ಆದುದರಿಂದ ಈ ದಾನಶಾಸನವು ಕೂಟ ಶಾಸನವೆಂದು ತಿಳಿಯ ಬಹುದಾಗಿದೆ.

ಶಾಸನದ ಪಾಠ

ಶಾಸನದ ಪ್ರಾರಂಭದ ಎಡಭಾಗದಲ್ಲಿ

೧ ಯಿದರ ಶಾಸ
೨ ನದ ಕಲ್ಲು ಗ್ರಾಮ
೩ ಕ್ಕೆ ಪಶ್ಚಿಮ ದಿ
೪ ಕ್ಕೆ ನಲ್ಲಿದೆ

ಶಾಸನದ ಪ್ರಾರಂಭದ ಬಲಭಾಗದಲ್ಲಿ

೫ ಯಿ ಶಾಸನವಂನು ಕೆ
೬ ತ್ತಿದ ಕಂಚಗಾರ ನಾಗ
೭ ಪ್ಪನವರು
(ಪ್ರಾರಂಭ)
೮ ಶ್ರೀಮನ್ಮಹಾನಾಯಕ ಚಾರ್ಯ
೯ ಹರತಿ ನಿಡಗಲ್ಲು ಯಿ(ವೀ)ರ ತಿಂಮಂ
೧೦ ಣ ನಾಯಕಾಚಾರ್ಯರು ಶುಭ
೧೧ ಮಸ್ತು । ನಮಸ್ತುಂಗ ಶಿರಸುಂಗ ಪ್ರಭಾಸ್ವಸ್ತಿಶ್ರೀ
೧೨ ವಿಜಯಾಬ್ದಯ ಶಾಲಿವಾಹನ ಶಖ ವರುಷ
೧೩ ೦ಬಲು ೩೦ ನೆ ಯಿಶರ ನಾಮ ಸಂವತ್ಸರದ ಕಾರ್ತಿ
೧೪ ಕ ಬ ೧೦ ಲು ಶ್ರೀ. ಮಂನ್ಮಹಾರಾಜಾಧಿರಾಜರಾಜ
೧೫ ಮಾರ್ತಾಂಡ ಕಿರಿಟ ರಾಮರಾಜ ಬುಕ್ಕರಾಯ
೧೬ ರು ವೀರಬಲ್ಲಾಳ ರಾಯರು ಮದ್ದಲೂರು ದಾಸ
೧೭ ರಳಿ ಕರಡಿಗೊಲರ ನಾಗನಗವುಡ ವುಪಾರ
೧೮ ತಿಂಮನ ಗವುಡಗೆ ಬರಶಿ ಕೊಟ್ಟದಾನ ಶಾಸನ
೧೯ ಮದ್ದಲೂರು ನಿಟ್ಟು ೧ಕ್ಕೆ ಗದ್ಯಾಣ ೨೦೦ – ನಾಲುಕು ನಿಟ್ಟಿಗೂ
೨೦ ೮೦೦ ದಾಸರಲ್ಲಿ ವಂದಕೆ ೧೦೦ ಕೆರೆವ ೧ಕ್ಕೆ ೫೦೦
೨೧ ಅಂತು (ಗದ್ದಗ) ಗ ೧೪೦೦ ದಲಾಗುವಾಡು ಮಟ್ಟಿ ಕಟ್ಟಿಸಿದ್ದು ರಿಂದಾಲು ಕಾಮಗಾರಿನಂದ ಮಾರ್ರಿ
೨೨ ವಡರ ಗಿರಿಯನ ಬೊಯಿಗೆ ದಾಸನಬೊಯಿ
೨೩ ಗೆ ಕೊಟ್ಟ ವುಡುಗರೆ ಕಡಗ ನ ೨ ಸರಪಣಿ
೨೪ ನ ೨ ವುಡುದಾರ ೨ ಚಿಟಿಪಾಗು೨ ಚಿಟಿ ಅ
೨೫ ಚಡ ೨ ಸಹಾ ಯಿನಾಮು ಕೊಟ್ಟ ಯಿಗಾಮ
೨೬ ದ ಫಣ ಕಟ್ಟು ಹಾಯಗಾರು ತಳವಾರಂಗ
೨೭ ಬೇಗಾರ ನಿಂಗ ಸಹಾ ನಂಮ ಮೊಕ್ತ ನೀವು ಬ
೨೮ ೦ದು ಸಂಸ್ತಾನದಲಿ ಅರಿಕೆ ಮಾಡಿಕೊಂಡು
೨೯ ನಂಮ್ಮ ಅಪ್ಪಣೆ ಪ್ರಕಾರ ಮರ್ರಿಯಾದಿ ಸಹಾ
೩೦ ಸದಾಶಿ ಯಿರುವದಕ್ಕೆ ಸದರಿ ಯಿ ಗ್ರಾಮದ ಸ್ತಳದ ಗವು
೩೧ ಡಿಕೆ ನಿಂನದು ಅ ಲಾಯಂದು ಯಾರಾದರೂ ದ್ರೊಹ
೩೨ ಕೆ ಬಿದ್ದರೆ ಯಿ ನಿರೂಪದ ದಾಖಲೆ ಪ್ರಕಾರಕ್ಕೆ ನಿ
೩೩ ನಲ್ಲಿ ಶಾಶ್ವತವಾಗಿಯಿರುವದಕ್ಕೆ ಯಿತ್ತಡಿ ಶಾಸನ

ಹಿಂಭಾಗ

೧ ವಂನು ಬರಶಿ ಕೊಟ್ಟು ಅದರಲ್ಲಿ ಹಯಗಾರು ಪೊ
೨ ರುಗಳು ಹಾಕಿಸಿ ಮುಂದೆ ವಿಕಲ್ಪ ಮಾಡಿದಲ್ಲಿ ಸತ್ಯ
೩ ಪ್ರಮಾಣಗಳು ಬರದು ಕೊಟ್ಟು ಯಿದೆಯಾಗಿ ಯಿ
೪ ದಕ್ಕೆ ಯಾರದರೂ ದ್ರೋಹ ಮಾಡಿದಲ್ಲಿ ಕಾಶಿಯಲ್ಲಿ ಗೊ
೫ ಹತ್ಯೆ ಮಾಡಿದಂಗೆ ಸತ್ರನೂರು ಮಂದಿ ಬ್ರಾಂಹ್ಮರಿಗೆ
೬ ವಿಷ ಹಾಕಿದಂಗೆ ಸರ್ರಿ ಅವರ ತಾಯಿ ತಂದೆಗೆ ವಿ
೭ ಷ ಹಾಕಿದಂಗೆ ಸರ್ರಿ ಯಿ ಮದ್ದಲೂರು ಗ್ರಾಮದ ಗಳ
೮ ದ ಗವುಡಿಕೆ ಕರಡಿ ಗೊಲ್ಲರ ನಾಗನಗವುಡ ವುಪಾ
೯ ರ ತಿಂಮನಗವುಡ ನಂಮ ವಶಪಾರಂಪರ್ಯವಾ
೧೦ ಗಿ ತಳವಾರು ಬೇಗಾರು ನಿಂನ ಮಕ್ಕಳಾಗಿ ನಡಶಿಕೊ
೧೧ ಂಡು ಅನುಭವಿಸುವದೆಂದು ಬರೆಶಿ ಕೊಟ್ಟ ದಾ
೧೨ ನ ಶಾಸನಾ ॥ ಯಿದಕ್ಕೆ ಆಯಗಾರಗೆ ಕೊಟ್ಟ ಮಾ
೧೩ ೦ನ್ಯ ನಾಗನಗವುಡಗೆ ಕೊಟ್ಟ ಮಾಂನ್ಯ ಕೆರೆ ಹಿಂ
೧೪ ದೆ ಹುಣಿಶೆ ಮರದ ಗದೆ ಖಂ । ಕರಣಂ ಯ
೧೫ ೦ಗ ಫ ನರಸಪ್ಪಗೆ ಜಾಲಿ ಮರದ ಗದೆ ಖಂ. ಕ
೧೬ ಕ(ತ)ಂಮಂಣಗೆ ತೆಂಗಿನ ಮರದ ಗದೆ – ಅ
೧೭ ತಿಂಮಪಕು ೦॥ ಪಂ। ನರಸಪಗೆ ೦। ಬ
೧೮ ಲಂಗಂಣಗೆ ಕರೆಕಲುಗದೆ _ ೦। ಕುಂ । ಹನುಮ
೧೯ ಗೆ ಬೆಳದ ಮರದ ಗದೆ ೯೦ । ಆ। ಕರಿಯಗೆ ಗದೆ ಮ ೧
೨೦ ಕೆಲ । ನಂಜಗೆ ಗದೆಯ ೧॥ ವಿಕ್ರಮ ಸಂರದ ಮಾರ್ಗಶಿ
೨೧ ರ ಬ ೫ ಲು ಯಿ – ಅಲಗು ಹಾವಿನ
೨೨ ನಡೆನೆ ಸೋಮವಾರ ಸೂರ್ಯವುದಲು ಮಾಡಿದ
೨೩ ಕಂಮಾರ ಮಲಂನಾಗೆ ಕೊಟ್ಟ ವುಡುಗರೆ ಪಾಗು
೨೪ ವ೧ ಧೋತ್ರ ಜತೆ ವ ೧ ನಗದು ರು ೯ ಸಹಾ ನಾಲ್ಕು ಮಾ
೨೫ – – ತಂಮಗಳು ಮುಂದಿಟುಕೊಂಡು ನಾ
೨೬ ಗನ ಗವುಡಗೆ ಕೊಟು ಯಿದಾನೆ ತಿಳಿದಿರುವದೂ
೨೭ ತ । ರಂಗಗೆ ಕೊಟ ನೇರಲಮರದ ಗದೆ ೮೧ ಬಲಗೈ
೨೮ ದಾಸಗೆ – – ಮ೧ ಬೆಗಾ ನಿಂಗಗೆ
೨೯ ದಮ ೧ ಬರಶಿ ಕೊಟ್ಟ ದಾನ ಶಾಸನ ॥ ಶ್ರೀ

[ಪ್ರಬಂಧ ಮಂಡಿಸಲು ಸಹಕರಿಸಿದ ಕೆಂಕೆರೆ ಹನುಮಂತೇಗೌಡರಿವರಿಗೆ ಕೃತಜ್ಞತೆಗಳು]

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಡಾ. ಎನ್. ನಂದೀಶ್ವರ, ೨೦೦೮, **ಸಿರಾ ತಾಲ್ಲೂಕಿನ ಸ್ಮಾರಕಗಳು ಹಾಗೂ ಶಾಸನಗಳು**, ಪೂರ್ಣಚಂದ್ರ ತೇಜಸ್ವಿ ಪ್ರಕಾಶನ, ಸಿರಾ.

೨. ಡಾ. ಎನ್. ನಂದೀಶ್ವರ, ೨೦೦೮, **ಸಿರಾ ತಾಲ್ಲೂಕು ದರ್ಶನ**, ಪೂರ್ಣಚಂದ್ರ ತೇಜಸ್ವಿ ಪ್ರಕಾಶನ, ಸಿರಾ.

೩. **ಎಫಿಗ್ರಾಫಿಯ ಕರ್ನಾಟಕ, ಸಂಪುಟ ೧೨. ತುಮಕೂರು.**

೨೦

ಚಳ್ಳಕೆರೆ ತಾಲ್ಲೂಕಿನ ಸೂರನಹಳ್ಳಿಯ ವೀರಗಲ್ಲುಗಳು ಮತ್ತು ಮಹಾಸತಿ ಕಲ್ಲುಗಳು

ಬಿ. ಪರಮೇಶ*

ಗಂಡುಮೆಟ್ಟಿನನೆಲ ಪ್ರಾಗೈತಿಹಾಸದ ನೆಲೆಯಾದ ಚಿತ್ರದುರ್ಗ ಜಿಲ್ಲೆ ಆಂಧ್ರ ಮತ್ತು ಕರ್ನಾಟಕ ಗಡಿನಾಡಿನ ಜಿಲ್ಲೆಯಾಗಿದ್ದು ಇದೇ ಜಿಲ್ಲೆಯ ಚಳ್ಳಕೆರೆ ತಾಲ್ಲೂಕು ಪರಶುರಾಮಪುರ ಹೋಬಳಿ ಗ್ರಾಮವೆ ಸೂರನಹಳ್ಳಿ, ಇದು ಚಳ್ಳಕೆರೆಯಿಂದ ದೊಡ್ಡೇರಿ ಪುರ್ಲಳ್ಳಿ ಮಾರ್ಗವಾಗಿ ಇಪ್ಪತ್ತನಾಲ್ಕು ಕಿ.ಮೀ. ದೂರದಲ್ಲಿದೆ. ಗ್ರಾಮದ ಉತ್ತರ ಮತ್ತು ದಕ್ಷಿಣಕ್ಕೆ ಪುರ್ಲಳ್ಳಿ ಮತ್ತು ಒಡೇರಳ್ಳಿ ಪೂರ್ವಕ್ಕೆ ಚೌಳೂರು ಪಶ್ಚಿಮಕ್ಕೆ ದೇವರ ಮರಿಕುಂಟೆ ಇದೆ. ಯಾವುದೇ ಬೆಟ್ಟ ಗುಡ್ಡಗಳಿಲ್ಲದೆ ಚಿಕ್ಕ ಚಿಕ್ಕ ಕಣ ಶಿಲೆಯ ಬೆಟ್ಟಗಳಿವೆ. ವೇದಾವತಿ ನದಿಯ ಎಡದಂಡೆ ಮೇಲಿರುವ ಗ್ರಾಮವಾಗಿದೆ. ಈ ಗ್ರಾಮವು ಇತಿಹಾಸ ಪ್ರಸಿದ್ಧ ಬ್ರಹ್ಮಗಿರಿ ಮತ್ತು ಚಂದ್ರವಳ್ಳಿಯಿಂದ ಸುಮಾರು ೬೮ ಕಿ.ಮೀ. ದೂರದಲ್ಲಿದೆ. ಸೂರನಹಳ್ಳಿ ಸೂರಪ್ಪನಾಯಕನೆಂಬುವವನು ಈ ಭಾಗದಲ್ಲಿ ಆಳ್ವಿಕೆ ಮಾಡುತ್ತಿದ್ದ ಹಾಗಾಗಿ ಸೂರನಹಳ್ಳಿ ಎಂದು ಹೆಸರಾಯಿತು.

ಸೂರನಹಳ್ಳಿಯಲ್ಲಿ ಮತ್ತು ಚಳ್ಳಕೆರೆ ತಾಲ್ಲೂಕಿನಲ್ಲಿ ಕೆಲವು ವಿಶಿಷ್ಟ ಹಾಗೂ ಮಹತ್ವವಾದ ವೀರಗಲ್ಲುಗಳು ಮತ್ತು ಮಹಾಸತಿ ಕಲ್ಲುಗಳನ್ನು ನೋಡಬಹುದು. ನೊಳಂಬ, ಪಲ್ಲವ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ವಿಜಯನಗರ ಹಾಗೂ ಚಿತ್ರದುರ್ಗ ಪಾಳೆಗಾರರ ಕಾಲಕ್ಕೆ ಸೇರಿದವುಗಳಾಗಿವೆ. ಸೂರನಹಳ್ಳಿಯಲ್ಲಿ ದೊರೆತಿರುವ ವೀರಗಲ್ಲುಗಳು ಹನ್ನೊಂದನೆ ಶತಮಾನಕ್ಕೆ ಸೇರಿದವಾಗಿವೆ. ಇವು ಊರಿನ ಉತ್ತರಕ್ಕೆ ವಿರುಪಾಕ್ಷಪ್ಪನವರ ಹೊಲದಲ್ಲಿ ನಾಲ್ಕು ವೀರಗಲ್ಲುಗಳಿವೆ.

ಒಂದನೆ ವೀರಗಲ್ಲು

ಈ ವೀರಗಲ್ಲು ಮಣ್ಣಿನಲ್ಲಿ ಸಿಲುಕಿಕೊಂಡಿದ್ದು ತುರುಗಳ್ಳರ ಬಗ್ಗೆ ಮಾಹಿತಿ ವೀರಗಲ್ಲಾಗಿದೆ. ಈ ವೀರಗಲ್ಲು ಮೂರು ಹಂತಗಳನ್ನು ಹೊಂದಿದ್ದು, ನಾಲ್ಕುವರೆ ಅಡಿ ಉದ್ದ ಎರಡುವರೆ ಅಡಿ ಅಗಲವಿದೆ. ಮೂರು ಹಂತಗಳಲ್ಲಿ ಶಿಲ್ಪಗಳನ್ನು ಬಿಡಿಸಲಾಗಿದೆ. ಒಂದನೆ ಹಂತದಲ್ಲಿ ಬಿಲ್ಲುಧಾರಿಯಾದ ವೀರನು ಬಲಗೈಯಲ್ಲಿ ಬಿಲ್ಲನ್ನು ಹಿಡಿದಿದ್ದು ಎಡಗೈಯನ್ನು ಮೇಲಕ್ಕೆತ್ತಿದ್ದಾನೆ. ಎಡಗೈ ಕೆಳಗಡೆ ಎರಡು ಗೋಪುರಗಳನ್ನು ಬಿಡಿಸಲಾಗಿದೆ. ವೀರರ ತಲೆಯ ಮೇಲೆ ತುರುಬು ಇದೆ. ಕೊರಳಲ್ಲಿ ಹಾರ ಸೊಂಟದಲ್ಲಿ ಪಟ್ಟಿ ಎರಡು ತೊಡೆಗಳ ಮಧ್ಯೆ ಇಳಿಬಿದ್ದಿರುವ ವಸ್ತ್ರವಿದೆ. ವೀರನ ಬಲಗಾಲಿನ ಕೆಳಗೆ ಶತ್ರು ಸತ್ತುಬಿದ್ದಿರುವ ಶಿಲ್ಪವಿದೆ. ಈ ಹಂತವಾದ ಮೇಲೆ ಶಾಸನದ ಸಾಲು ಇದೆ. ಎರಡನೆ ಹಂತದಲ್ಲಿ ವೀರ ಹೋರಾಡಿ ಮರಣ ಹೊಂದಿದ್ದ ವೀರನನ್ನು ಇಬ್ಬರು ಅಪ್ಸರೆಯರು ವೀರನ ಎರಡು ಕೈಗಳನ್ನು ತನ್ನ ಭುಜಗಳ ಮೇಲೆ ಹೊತ್ತು ದೇವಲೋಕಕ್ಕೆ ಕರೆದೊಯ್ಯುತ್ತಿರುವ ದೇವಕನ್ಯೆಯ ಚಿತ್ರಗಳಿವೆ. ಮೂರನೆ ಹಂತದಲ್ಲಿ ವೀರ ಪೀಠದ ಮೇಲೆ ಕುಳಿತಿರುವ ಶಿಲ್ಪವಿದೆ. ವೀರನ ಎರಡೂ ಕಡೆ ದೇವಕನ್ಯೆಯರು ಸೊಂಟವನ್ನು ಭಾಗಿಸಿರುವಂತೆ ನಿಂತಿದ್ದಾರೆ.

ಎರಡನೆ ವೀರಗಲ್ಲು

ಈ ವೀರಗಲ್ಲು ನೈಸ್‌ಕಲ್ಲಿನಲ್ಲಿ ಈ ಶಿಲ್ಪವನ್ನು ಬಿಡಿಸಲಾಗಿದೆ. ಈ ವೀರಗಲ್ಲು ಮೂರು ಹಂತಗಳನ್ನು ಹೊಂದಿದೆ. ಈ ವೀರಗಲ್ಲು ಮೂರುವರೆ ಅಡಿ ಉದ್ದ ಒಂದುವರೆ ಅಡಿ ಅಗಲ ೫೩ ಸೆ.ಮೀ. ಸುತ್ತಳತೆ ಇದೆ. ಮೂರನೆ ಹಂತದ ಭಾಗ ಮುರಿದುಹೋಗಿದೆ ಹಾಗು ಎಡಭಾಗದ ಅಂಚಿನಲ್ಲಿ ಶಾಸನದ ಸಾಲು ಇದೆ. ಮೊದಲನೆ ಹಂತದಲ್ಲಿ ವೀರನು ತನ್ನ ಎಡಕೈಯಲ್ಲಿ ಬಿಲ್ಲನ್ನು ಹಿಡಿದು ಹೋರಾಡುತ್ತಿರುವ ಶಿಲ್ಪವಿದೆ. ಬಲಗಾಲನ್ನು ಹಿಂದಕ್ಕೆ ಇಟ್ಟು ಮಡಿಚಿರುವಂತೆ ಪಾದದ ಕೆಳಗೆ ಶತ್ರುವನ್ನು ತುಳಿದು ಸಾಯಿಸುತ್ತಿರುವ ಶಿಲ್ಪವಿದೆ. ವೀರನ ಕೆಳಗಡೆ ಮೂರು ಕರುಗಳನ್ನು ಚಿತ್ರಿಸಲಾಗಿದೆ. ದೇವಲೋಕಕ್ಕೆ ಕರೆದೊಯ್ಯುತ್ತಿರುವ ಚಿತ್ರವಿದೆ. ಮೂರನೆ ಹಂತದಲ್ಲಿ ವೀರನು ದೇವಲೋಕದಲ್ಲಿ ಪೀಠದ ಮೇಲೆ ಕುಳಿತಿರುವ ಚಿತ್ರದಲ್ಲಿದೆ. ವೀರನ ಎರಡು ಕಡೆ ದೇವಕನ್ಯೆಯರು ಸೊಂಟವನ್ನು ಬಾಗಿಸಿರುವಂತೆ ನಿಂತಿದ್ದಾರೆ. ಬಲಭಾಗದ ಸ್ತ್ರೀಯ ಶಿಲ್ಪ

* ಇತಿಹಾಸ ಉಪನ್ಯಾಸಕರು, ಹೆಚ್.ಪಿ.ಪಿ.ಸಿ. ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ.

ಹಾಳಾಗಿದೆ. ವೀರನು ದೇವಲೋಕವನ್ನು ಸೇರಿದ್ದಾನೆ ಎಂಬುದನ್ನು ತಿಳಿಯಬಹುದು. ಅಂಚಿನಲ್ಲಿ ಶಾಸನದ ಸಾಲು ಇದೆ. ಅಸ್ಪಷ್ಟದಿಂದ ಕೂಡಿದೆ.

ಮೂರನೆ ವೀರಗಲ್ಲು

ಈ ವೀರಗಲ್ಲು ಬಿಳಿ ಕಲ್ಲಿನಲ್ಲಿ ಬಿಡಿಸಲಾಗಿದೆ ಇದು ಮೂರು ಹಂತಗಳನ್ನು ಹೊಂದಿದ್ದು, ಮೂರುವರೆ ಅಡಿ ಅಗಲ ಮೂರುವರೆ ಅಡಿ ಉದ್ದ ಎರಡು ಅಡಿ ಅಗಲ ಹೊಂದಿದೆ ೫೨ ಸೆ.ಮೀ. ಸುತ್ತಳತೆ ಇದೆ. ಈ ವೀರಗಲ್ಲಿನ ಬಲಭಾಗದಲ್ಲಿ ಶಾಸನದ ಸಾಲು ಇದೆ. ಅದು "ಉಗುರಾವಳ್ಳಿ ಗೋಳು ಗೊರಾರೊಲ್ಲಿ" ಎಂದು ಶಾಸನದ ಪಾಠ ಇದೆ. ಸು. ಹನ್ನೊಂದನೆ ಶತಮಾನಕ್ಕೆ ಹೋಲುತ್ತವೆ. ಮೊದಲನೆ ಹಂತದಲ್ಲಿ ವೀರನು ಬಲಗೈಯಲ್ಲಿ ಸುರಿಗೆ ಹಿಡಿದಿರುವಂತೆ ಹಾಗೂ ಎಡಗೈಯಲ್ಲಿ ಶತ್ರುವನ್ನು ಹಿಡಿದು ಕತ್ತನ್ನು ಹಿಚುಕಿ ಹೋರಾಡುವ ಶಿಲ್ಪವನ್ನು ವೈರಿತಲೆಯನ್ನು ಹಿಂದಕ್ಕೆ ನೋಡುವಂತೆ ವೀರನಿಗೆ ಹೆದರಿ ಬಾಗಿರುವ ಭಂಗಿಯಲ್ಲಿ ತನ್ನ ಎರಡು ಕೈಗಳನ್ನು ಬಾಗಿರುವಂತೆ ಶತ್ರುವಿನ ಬಲಗೈಯಲ್ಲಿ ಖಡ್ಗವನ್ನು ಹಿಡಿದಿರುವಂತೆ ಚಿತ್ರಿಸಲಾಗಿದೆ. ವೀರನ ಕೊರಳಲ್ಲಿ ಹಾರ ಸೊಂಟಪಟ್ಟಿ ಇರುವ ವಸ್ತ್ರವನ್ನು ಮೊಣಕಾಲಿನ ಭಾಗದವರೆಗೂ ಧರಿಸಿದ್ದಾನೆ. ಬಲಭಾಗದಲ್ಲಿ ತುರುಗಳನ್ನು ಚಿತ್ರಿಸಲಾಗಿದೆ. ಇದೂ ತುರುಗೋಳ್ ವೀರಗಲ್ಲಾಗಿದೆ. ಎರಡನೆ ಹಂತದಲ್ಲಿ ಹೋರಾಡಿದ ವೀರನನ್ನು ದೇವಕನ್ಯೆಯರು ದೇವಲೋಕಕ್ಕೆ ಕೊಂಡೊಯ್ಯುವ ಶಿಲ್ಪಗಳನ್ನು ಬಿಡಿಸಲಾಗಿದೆ. ವೀರನ ಎರಡೂ ಕೈಗಳನ್ನು ಸ್ತ್ರೀಯರು ತಮ್ಮ ಭುಜಗಳ ಮೇಲೆ ಹೊತ್ತು ಕರೆದೊಯ್ಯುತ್ತಿರುವ ಶಿಲ್ಪವಿದೆ. ಮೂರನೆ ಹಂತದಲ್ಲಿ ವೀರನು ಸ್ವರ್ಗಲೋಕದಲ್ಲಿ ಪೀಠದ ಮೇಲೆ ಕುಳಿತಿರುವ ಶಿಲ್ಪವಿದೆ. ವೀರನ ಎರಡೂ ಕಡೆ ದೇವಕನ್ಯೆಯರು ಸೊಂಟವನ್ನು ಭಾಗಿಸಿರುವಂತೆ ನಿಂತಿದ್ದಾರೆ. ವೀರನು ಸ್ವರ್ಗವನ್ನು ಸೇರಿದ್ದಾನೆಂಬುದನ್ನು ಈ ರಚನೆಗಳಿಂದ ತಿಳಿಯಬಹುದು.

ನಾಲ್ಕನೆ ವೀರಗಲ್ಲು

ಈ ವೀರಗಲ್ಲು ಸೀಣಿಕಲ್ಲಿನಲ್ಲಿ ಕೊರೆಯಲಾಗಿದೆ. ಈ ವೀರಗಲ್ಲು ಒಂದೇ ಹಂತದಲ್ಲಿದೆ. ಮೂರುವರೆ ಅಡಿ ಎತ್ತರ ಮೂರು ಅಡಿ ಅಗಲವಿದೆ, ೮೭ ಸೆ.ಮೀ. ಸುತ್ತಳತೆ ಇದೆ. ವೀರನು ಹುಲಿಯನ್ನು ಕೊಲ್ಲುತ್ತಿರುವ ಶಿಲ್ಪವಿದೆ. ಹುಲಿಯನ್ನು ಎಡಗೈಯಲ್ಲಿ ಹುಲಿಯ ಮುಂಗಾಲು ಮತ್ತು ಬಾಯಿಯನ್ನು ಹಿಡಿದಿರುವಂತೆ ವೀರನ ಎಡಪಾದಕ್ಕೆ ಹುಲಿ ತನ್ನ ಹಿಂಗಾಲುಗಳ ಉಗುರುಗಳಿಂದ ಹೊದೆಯುವಂತೆ ಚಿತ್ರವಿದೆ. ವೀರನ ಪಕ್ಕದಲ್ಲಿ ಚಿಕ್ಕವೀರನ ಶಿಲ್ಪವಿದೆ. ಬಲಕೈಯಲ್ಲಿ ಚಾಕು ಹಿಡಿದು ವೀರನಿಗೆ ಸಹಾಯಕನಂತೆ ಚಿತ್ರಿಸಲಾಗಿದೆ. ಇದನ್ನು ಸ್ಥಳೀಯರು ಹುಲಿಕಲ್ಲುಗುಡ್ಡ ಎಂದು ಕರೆಯುತ್ತಾರೆ.

ಐದನೆ ವೀರಗಲ್ಲು

ಇದು ಊರಿನ ಪಶ್ಚಿಮ ಭಾಗದಲ್ಲಿದೆ. ಕರಿಕಲ್ಲಿನಲ್ಲಿ ಕೆತ್ತಲಾಗಿದೆ. ಇದು ಸು. ೧೬ ಮತ್ತು ೧೭ನೇ ಸಾಲಿಗೆ ಸೇರಿದ್ದಾಗಿದೆ. ಇದು ನಾಲ್ಕು ಅಡಿ ಉದ್ದ ಒಂದೂವರೆ ಅಡಿ ಅಗಲವಿದೆ. ಮೊದಲ ಹಂತದಲ್ಲಿ ವೀರನು ಬಿಲ್ಲುಬಾಣಗಳನ್ನು ಹಿಡಿದು ಹೋರಾಡುತ್ತಿರುವ ಶಿಲ್ಪವಿದೆ. ಎರಡನೆ ಹಂತದಲ್ಲಿ ದೇವತಾ ಸ್ತ್ರೀಯರು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ಶಿಲ್ಪವಿದೆ. ಮೇಲಿನ ಭಾಗದಲ್ಲಿ ಸೂರ್ಯ ಚಂದ್ರರ ಶಿಲ್ಪಗಳನ್ನು ಬಿಡಿಸಲಾಗಿದೆ. ಇದು ಬೇಟೆಯ ವೀರಗಲ್ಲಾಗಿದೆ.

ವೀರ ಮಾಸ್ತಿಕಲ್ಲುಗಳು

ಪುರುಷನ ಹಾಗೆ ಸ್ತ್ರೀಯು ಕೂಡ ಕದನದಲ್ಲಿ ಹೋರಾಡಿರುವ ಪರಾಕ್ರಮದ ಪತಿಯ ಮರಣದ ನಂತರ ತಾನು ಕೊಂದುಕೊಂಡ ತ್ಯಾಗದ ಸಂಕೇತವಾಗಿ ಕಂಡುಬರುವ ಸ್ಮಾರಕಗಳು ವೀರಗಲ್ಲುಗಳ ಸಾಲಿನಲ್ಲಿ ನಿಲ್ಲುತ್ತವೆ.

ಈ ವೀರ ಮಹಾಸತಿ ಕಲ್ಲು ಪಶ್ಚಿಮ ಭಾಗದಲ್ಲಿದೆ ಒಂದೇ ಹಂತದಲ್ಲಿ ಪೂರ್ವಾಭಿಮುಖವಾಗಿ ನಿಲ್ಲಿಸಲಾಗಿದೆ. ಇದು ಕಪ್ಪು ಶಿಲೆಯ ಬಂಡೆಯಲ್ಲಿ ಕೊರೆಯಲಾಗಿದೆ. ಇದು ತೀರ ಇತ್ತೀಚಿನ ೧೭-೧೮ನೇ ಶತಮಾನಕ್ಕೆ ಸೇರಿದೆ. ಇದು ೨ ೧/೨ ಉದ್ದ ೨ ೧/೨ ಅಡಿ ಅಗಲ ಬಲಗೈಯನ್ನು ಮೇಲಕ್ಕೆ ಎತ್ತಿಲ್ಲ. ಸತಿ ಕೈ ಮುಗಿಯುತ್ತಿರುವ ಪಾದದವರೆಗು ಹಾರವನ್ನು ಬಿಡಿಸಲಾಗಿದೆ. ತನ್ನ ಎರಡು ಕೈಗಳನ್ನು ಜೋಡಿಸಿರುವ ಭಂಗಿಯಲ್ಲಿದ್ದಾಳೆ. ತಲೆಯಲ್ಲಿ ತುರುಬು ಇದೆ. ಬಲಭಾಗದಲ್ಲಿ ಖಡ್ಗ ಹಿಡಿದು ನಿಂತಿದ್ದಾಳೆ. ಪಾದದ ಕೆಳಗೆ ಬಾಲಕನ ಚಿತ್ರ ಬಿಡಿಸಲಾಗಿದೆ. ಸತಿ ಬೆಂಕಿಯ ಹೊಂಡಕ್ಕೆ ಜಿಗಿಯುವಾಗ ಒಂದು ಭಂಗಿ ಇರಬಹುದು. ಶಿಲ್ಪಗಳ ಮೇಲೆ ಸೂರ್ಯ ಚಂದ್ರರ ಚಿತ್ರಗಳನ್ನು ಬಿಡಿಸಲಾಗಿದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಡಾ. ಆರ. ಶೇಷಶಾಸ್ತ್ರ., ಕರ್ನಾಟಕದ ವೀರಗಲ್ಲುಗಳು.

೨. ಡಾ. ವಿರುಪಾಕ್ಷ ಪೂಜಾರಳ್ಳಿ, ಗಾದ್ರಿಪಾಲ ನಾಯಕ.

೩. ಎಂ.ಎಲ್. ಶಿವಶಂಕರ, ಚನ್ನಬಸಪ್ಪ ಎಸ್. ಪಾಟೀಲ, ವಿಜಯನಗರ ಅಧ್ಯಯನ ಸಂಪುಟ ಎರಡು.

೪. ಮರಿಕುಂಟೆ ತಿಪ್ಪೇಸ್ವಾಮಿ, ವೀರಗಲ್ಲು ಮಾಸ್ತಿಕಲ್ಲು ಹಾಗೂ ಶಾಸನಗಳು ಒಂದು ಅವಲೋಕನ ಮೊಳಕಾಲ್ಮೂರು ದರ್ಶನ.

೫. ಇತಿಹಾಸ ದರ್ಶನ, ಸಂಪುಟ ಹದಿನಾರು, ಕರ್ನಾಟಕ ಇತಿಹಾಸ ಅಕಾಡೆಮಿ.

೬. ಡಾ. ಬಿ. ಜಯಮ್ಮ, ಚಳ್ಳಕೆರೆ ತಾಲ್ಲೂಕಿನ ಸ್ಮಾರಕ ಶಿಲ್ಪಗಳು, ಸಂಪುಟ ೨೬.

೭. ಟಿ. ಗಿರಿಜ, ಚಿತ್ರದುರ್ಗ ಜಿಲ್ಲಾ ದರ್ಶಿನಿ.

೮. ಕ್ಷೇತ್ರಾಧ್ಯಯನದ ವರದಿ, ಮೌಖಿಕ ಮಾಹಿತಿ.

ಕಣೆನೂರು ಗ್ರಾಮದ ಅಪ್ರಕಟಿತ ವೀರಗಲ್ಲುಗಳು

ಡಾ. ಹೆಚ್.ಎನ್. ಕಾಳಸ್ವಾಮಿ*

ತಾಲ್ಲೂಕು ಕೇಂದ್ರವಾದ ನಂಜನಗೂಡಿನಿಂದ ಹುಲ್ಲಹಳ್ಳಿ ಮಾರ್ಗವಾಗಿ ಸು. ನಾಲ್ಕು ಕಿ.ಮೀ. ದೂರದಲ್ಲಿ ಕಂಡು ಬರುವ ಗ್ರಾಮವೇ ಈ ಕಣೆನೂರು. ಇದು ಐತಿಹಾಸಿಕವಾಗಿ ಮತ್ತು ಧಾರ್ಮಿಕವಾಗಿ ತನ್ನದೇ ಆದ ಮಹತ್ವ ಪಡೆದಿದ್ದು ಹೆಚ್ಚಾಗಿ ಶೈವ ಪರಂಪರೆಯುಳ್ಳ ಸ್ಥಳವಾಗಿ ಪರಿಣಮಿಸಿದೆ.

ಕಣೆನೂರು ಎಂಬ ಗ್ರಾಮಕ್ಕೆ ಈ ಹೆಸರು ಬರಲು ಕಾರಣವೇನೆಂದರೆ ಈ ಭಾಗದಲ್ಲಿ ಋಷಿಮುನಿಗಳು ವಾಸಿಸುತ್ತಿದ್ದುದರಿಂದ ಅವರೇ ಸ್ವತಃ ಈ ಗ್ರಾಮವನ್ನು ಸ್ಥಾಪಿಸಿದ್ದರೆಂದು ಸ್ಥಳಿಯರ ಅಭಿಪ್ರಾಯವಾಗಿದ್ದು ಇದರಿಂದಲೆ ಈ ಗ್ರಾಮಕ್ಕೆ ಕಣೆನೂರು ಎಂದು ಕರೆಯಲಾಗಿದೆ. ಇನ್ನೊಂದು ಐತಿಹ್ಯದ ಪ್ರಕಾರ ಹೇಳುವುದಾದರೆ ಕಣ ಎಂದರೆ ರಾಶಿ ನೂರು-ಊರು ಅಂದರೆ ಅಂದಿನ ಕಾಲದಲ್ಲಿ ಈ ಭಾಗದಲ್ಲಿ ರಾಶಿ ರಾಶಿಯಾಗಿ ಭತ್ತವನ್ನು ಬೆಳೆಯುತ್ತಿದ್ದರು. ಇದರಿಂದ ಕಣನೂರು, ಕಣೆನೂರು ಎಂತಲೂ ಹಾಗೂ ಕಣೆ ಎಂದರೆ ಕಡೆ ಎಂತಲೂ ಕರೆಯುವ ವಾಡಿಕೆಯಿತ್ತೆಂದು ಗ್ರಾಮದ ಹಿರಿಯರು ಹೇಳುತ್ತಾರೆ. ಪ್ರಸ್ತುತ ಈ ಗ್ರಾಮದಲ್ಲಿ ೧೧ ವೀರಗಲ್ಲುಗಳು ದೊರೆತಿದ್ದು ಅವುಗಳಲ್ಲಿ ಐದು ವೀರಮಾಸ್ತಿಗಲ್ಲುಗಳಾಗಿವೆ. ಅವುಗಳ ಮಾಹಿತಿಯನ್ನು ಈ ಕೆಳಕಂಡಂತೆ ತಿಳಿಸಲಾಗಿದೆ.

ವೀರಗಲ್ಲು : ಸಂಖ್ಯೆ-೧

ಕಣೆನೂರು ಪೂರ್ವಕ್ಕೆ ಈಶ್ವರ ದೇವಸ್ಥಾನ ಬಲಭಾಗದಲ್ಲಿ ಕಂಡುಬರುತ್ತದೆ. ಇದರ ಮುಂಭಾಗ ಅರಳೀಕಟ್ಟೆ ಇದೆ. ಇದು ಗ್ರಾನೈಟ್ ಕಲ್ಲಿನದಾಗಿದ್ದು ಸುಮಾರು ಮೂರು ಅಡಿ ಎತ್ತರ ಎರಡು ಅಡಿ ಅಗಲ ಮತ್ತು ನಾಲ್ಕು ಇಂಚು ದಪ್ಪನಾಗಿದೆ. ಇದು ಮೂರು ಪಟ್ಟಿಕೆಗಳಿಂದ ಕೂಡಿದ್ದು ಮೊದಲನೆ ಪಟ್ಟಿಕೆಯಲ್ಲಿ ಇಬ್ಬರು ವೀರಯೋಧರು. ವೀರಾವೇಶದಿಂದ ಈಟಿ ಮತ್ತು ಖಡ್ಗವನ್ನು ಹಿಡಿದು ಹೋರಾಡುತ್ತಿರುವ ದೃಶ್ಯ ಕಂಡುಬರುತ್ತದೆ. ಎರಡನೆ ಪಟ್ಟಿಕೆಯಲ್ಲಿ ವೀರ ಯುದ್ಧದಲ್ಲಿ ಮರಣ ಹೊಂದಿದ ವ್ಯಕ್ತಿಯನ್ನು ಮಂಟಪದಲ್ಲಿ ಇರಿಸಿ ಇಬ್ಬರು ಅಪ್ಸರೆಯರು ಛಾಮರಧಾರಣೆಯರಾಗಿ ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಿರುವ ದೃಶ್ಯ ಹಾಗೂ ಮೂರನೆ ಪಟ್ಟಿಕೆಯುಲ್ಲಿ ಸ್ವರ್ಗಕ್ಕೆ ಹೋಗಬೇಕಾದರೆ ಧಾರ್ಮಿಕ ವಿಧಿ-ವಿಧಾನದನ್ವಯ ಭಕ್ತಿಪೂರ್ವಕವಾಗಿ ಪೂಜೆ ಮಾಡುತ್ತಿರುವುದು ಅಲ್ಲದೇ ಯತಿಯು ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿರುವಂತೆ ಕಂಡುಬಂದಿದ್ದು ಶಿವಲಿಂಗದ ಬಲಪಕ್ಕದಲ್ಲಿ ರಾಜನು ಕೈಮುಗಿದು ಕುಳಿತಿರುವುದು ಹಾಗೂ ಎಡಭಾಗದಲ್ಲಿ ನಂದಿಶಿಲ್ಪವಿದ್ದು, ಮೇಲ್ಭಾಗದಲ್ಲಿ ಸೂರ್ಯಚಂದ್ರರನ್ನು ಕೆತ್ತಲಾಗಿದೆ.

ವೀರಗಲ್ಲು : ಸಂಖ್ಯೆ-೨

ಇದು ನಾಲ್ಕು ಅಡಿ ಎತ್ತರ, ಒಂದೂವರೆ ಅಡಿ ಅಗಲ, ಮೂರು ಇಂಚು ದಪ್ಪನಾಗಿದ್ದು ಗ್ರಾನೈಟ್ ಕಲ್ಲಿನದ್ದಾಗಿದೆ. ಇದು ಮೂರು ಪಟ್ಟಿಕೆಗಳಿಂದ ಕೂಡಿದ್ದು ಮೊದಲನೆ ಪಟ್ಟಿಕೆಯಲ್ಲಿ ಇಬ್ಬರು ವೀರರು ತಮ್ಮ ಕೈಗಳಲ್ಲಿ ಕತ್ತಿ ಗುರಾಣಿಗಳನ್ನು ಹಿಡಿದು ವೀರಾವೇಶದಿಂದ ಹೋರಾಡುತ್ತಿರುವ ದೃಶ್ಯವಿದ್ದು ಎರಡನೆ ಪಟ್ಟಿಕೆಯಲ್ಲಿ ಸತ್ತ ವೀರನನ್ನು ಇಬ್ಬರು ಅಪ್ಸರೆಯರು ಮಂಟಪದಲ್ಲಿ ಕುಳ್ಳಿರಿಸಿ ಛಾಮರಧಾರಿಣಿಯರಾಗಿ ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ದೃಶ್ಯವನ್ನು ಕಾಣಬಹುದು. ಮೂರನೆ ಪಟ್ಟಿಕೆಯಲ್ಲಿ ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿರುವ ದೃಶ್ಯವಿದ್ದು ಬಲಭಾಗದಲ್ಲಿ ವೀರ ಶಿವಲಿಂಗಕ್ಕೆ ಕೈಮುಗಿಯುತ್ತಿರುವ ದೃಶ್ಯ ಹಾಗೂ ಎಡಭಾಗದಲ್ಲಿ ಯತಿಯು ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿರುವ ದೃಶ್ಯವಿದೆ.

ವೀರಮಾಸ್ತಿಗಲ್ಲು : ಸಂಖ್ಯೆ-೩

ಇದು ಸುಮಾರು ನಾಲ್ಕು ಅಡಿ ಎತ್ತರ, ಒಂದೂವರೆ ಅಡಿ ಅಗಲ, ನಾಲ್ಕು ಇಂಚು ದಪ್ಪನಾಗಿದ್ದು ಗ್ರಾನೈಟ್ ಕಲ್ಲಿನ ಮೂರು ಪಟ್ಟಿಕೆಗಳಿಂದ ಕೂಡಿದೆ. ಮೊದಲನೆ ಪಟ್ಟಿ ರಾಜ ಮತ್ತು ರಾಣಿ ಇಬ್ಬರು ವ್ಯಕ್ತಿಗಳು ಯಾವುದೋ ಒಂದು ಯುದ್ಧದಲ್ಲಿ ಹೋರಾಡುತ್ತಿರುವ ದೃಶ್ಯ ಕಂಡು ಬಂದಿದ್ದು ವೀರನು ಬಲಗೈಯಲ್ಲಿ ಈಟಿಯನ್ನು ಹಿಡಿದಿದ್ದು ಎಡಗೈಯಿಂದ ರಾಣಿಗೆ ಹೊಡೆಯುತ್ತಿರುವ ದೃಶ್ಯವನ್ನು ಚಿತ್ರದಲ್ಲಿ ಕಾಣಬಹುದು. ಎರಡನೇ ಪಟ್ಟಿಕೆಯಲ್ಲಿ ಇಬ್ಬರು ದೇವಕನ್ಯೆಯರು

* ಯುಜಿಸಿ-ಪೋಸ್ಟ್ ಡಾಕ್ಟರಲ್ ಫೆಲೋ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮೈಸೂರು ವಿವಿ, ಮೈಸೂರು-೦೬.

ಅಲಂಕಾರ ಭರಿತವಾದ ಮಂಟಪದಲ್ಲಿ ಸತ್ತ ವ್ಯಕ್ತಿಯನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ದೃಶ್ಯವಿದೆ. ಮೂರನೇ ಪಟ್ಟಿಕೆಯಲ್ಲಿ ಕೈಲಾಸ ದೃಶ್ಯವಿದ್ದು ಆಸೀನ ಭಕ್ತವೀರ, ಶಿವಲಿಂಗ, ಶಿವಾರ್ಚಕ ಮತ್ತು ನಂದಿಯು ಕುಳಿತಿರುವಂತೆ ಚಿತ್ರದಲ್ಲಿ ಕೆತ್ತಲಾಗಿದ್ದು, ಜೊತೆಗೆ ಸೂರ್ಯಚಂದ್ರ ಶಿಲ್ಪವಿರುವುದನ್ನು ಕಾಣಬಹುದಾಗಿದೆ.

ವೀರಮಾಸ್ತಿಗಲ್ಲು : ಸಂಖ್ಯೆ–೪

ಇದು ಸುಮಾರು ಎರಡು ಅಡಿ ಎತ್ತರ, ಒಂದು ಅಡಿ ಅಗಲ, ಮೂರು ಇಂಚು ದಪ್ಪನಾಗಿದ್ದು ಗ್ರಾನೈಟ್ ಕಲ್ಲಿನದ್ದಾಗಿದೆ. ಇದು ಒಂದೇ ಒಂದು ಪಟ್ಟಿಕೆಯನ್ನು ಮಾತ್ರ ಹೊಂದಿದ್ದು ಈ ಪಟ್ಟಿಕೆಯಲ್ಲಿ ವೀರವನಿತೆಯು ಯಾವುದೋ ಒಂದು ಯುದ್ಧದಲ್ಲಿ ಮರಣ ಹೊಂದಿದಂತೆ ಬಿಡಿಸಿದೆ. ಜೊತೆಗೆ ಮೇಲ್ಭಾಗದಲ್ಲಿ ಸೂರ್ಯಚಂದ್ರರ ಉಬ್ಬು ಕೆತ್ತನೆಯನ್ನು ಮಾಡಲಾಗಿದೆ.

ವೀರಗಲ್ಲು : ಸಂಖ್ಯೆ–೫

ಇದು ಸುಮಾರು ಎರಡು ಅಡಿ ಎತ್ತರವಾಗಿದ್ದು, ಒಂದೂವರೆ ಅಡಿ ಅಗಲ, ಮೂರು ಇಂಚು ದಪ್ಪನಾಗಿದ್ದು ಗ್ರಾನೈಟ್ ಕಲ್ಲಿನದ್ದಾಗಿದೆ. ಇದು ಎರಡು ಪಟ್ಟಿಕೆಗಳಿಂದ ಕೂಡಿದ್ದು ಮೊದಲನೆ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮರಣ ಹೊಂದಿದ ವ್ಯಕ್ತಿಯನ್ನು ಸಂಗೀತ, ವಾದ್ಯ ಮತ್ತು ತಬಲ ಸಮೇತವಾಗಿ ನೃತ್ಯದೊಂದಿಗೆ ಕಂಡರಿಸಿರುವುದು. ಎರಡನೆ ಪಟ್ಟಿಕೆಯಲ್ಲಿ ಸ್ವರ್ಗಲೋಕಕ್ಕೆ ಇಬ್ಬರು ದೇವಕನ್ನಿಕೆಯರು ಎರಡೂ ಕೈಗಳನ್ನು ಹಿಡಿದು ಕರೆದೊಯ್ಯುತ್ತಿರುವ ದೃಶ್ಯ ವಿಭಿನ್ನವಾಗಿ ಮೂಡಿಬಂದಿರುವುದನ್ನು ಕಾಣಬಹುದು.

ವೀರಮಾಸ್ತಿಗಲ್ಲು : ಸಂಖ್ಯೆ–೬

ಇದು ಸುಮಾರು ಒಂದೂವರೆ ಅಡಿ ಎತ್ತರವಾಗಿದ್ದು, ಒಂದು ಅಡಿ ಅಗಲ, ಮೂರು ಇಂಚು ದಪ್ಪನಾಗಿದ್ದು ಗ್ರಾನೈಟ್ ಕಲ್ಲಿನದ್ದಾಗಿದೆ. ಇದು ಎರಡು ಪಟ್ಟಿಕೆಗಳಿಂದ ಕೂಡಿದ್ದು ಮೊದಲನೆ ಪಟ್ಟಿಕೆಯಲ್ಲಿ ದಂಪತಿಗಳು ಯುದ್ಧದಲ್ಲಿ ಹೋರಾಡಿ ಹಾರವಾಗಿರುವ ದೃಶ್ಯವನ್ನು ಕಾಣಬಹುದು. ಎರಡನೆ ಪಟ್ಟಿಕೆಯಲ್ಲಿ ಶಿವಲಿಂಗವಿದ್ದು ಎಡಭಾಗದಲ್ಲಿ ಅಲಂಕಾರಿಕವಾದ ನಂದಿಯನ್ನು ಕೆತ್ತಲಾಗಿದೆ.

ವೀರಮಾಸ್ತಿಗಲ್ಲು : ಸಂಖ್ಯೆ–೭

ಇದು ಸುಮಾರು ಎರಡು ಅಡಿ ಎತ್ತರವಾಗಿದ್ದು, ಒಂದು ಅಡಿ ಅಗಲ, ಮೂರು ಇಂಚು ದಪ್ಪನಾಗಿದ್ದು ಗ್ರಾನೈಟ್ ಕಲ್ಲಿನದ್ದಾಗಿದೆ. ಇದು ಎರಡು ಪಟ್ಟಿಕೆಗಳಿಂದ ಕೂಡಿದ್ದು ಮೊದಲನೆ ಪಟ್ಟಿಕೆಯಲ್ಲಿ ಇಬ್ಬರು ವ್ಯಕ್ತಿಗಳು ಮತ್ತು ಒಂದು ಚಿಕ್ಕ ಮಗುವಿನ ಉಬ್ಬುಕೆತ್ತನೆ ಇರುವುದನ್ನು ಚಿತ್ರದಲ್ಲಿ ಕಾಣುತ್ತೇವೆ. ಇದರಿಂದ ನಮಗೆ ಗೋಚರವಾಗುವುದೇನೆಂದರೆ ಯಾವುದೋ ಯುದ್ಧದಲ್ಲಿ ದಂಪತಿಗಳಿಬ್ಬರು ಮಡಿದು ಜೊತೆಗೆ ತಮ್ಮ ಮಗುವಿದ್ದರೂ ಸಹ ಕಲ್ಯಾಣವೊಂದು ನಡೆದು, ಯಾವುದೋ ಒಂದು ತ್ಯಾಗಕ್ಕಾಗಿ ಇವರುಗಳು ಒಟ್ಟಾಗಿ ಹಾರವಾಗಿರುವುದು ಕಂಡುಬರುತ್ತದೆ. ಎರಡನೇ ಪಟ್ಟಿಕೆಯಲ್ಲಿ ಶಿವಲಿಂಗಕ್ಕೆ ಯತಿಯು ಪೂಜೆಯನ್ನು ಸಲ್ಲಿಸುತ್ತಿರುವುದು ಹಾಗೂ ಬಲಭಾಗದಲ್ಲಿ ನಂದಿಯ ಶಿಲ್ಪವನ್ನು ಕೆತ್ತಿರುವುದು ಮತ್ತು ಸೂರ್ಯಚಂದ್ರರ ಉಬ್ಬು ಕೆತ್ತನೆಯನ್ನು ಚಿತ್ರದಲ್ಲಿ ಕಾಣಬಹುದಾಗಿದೆ.

ವೀರಮಾಸ್ತಿಗಲ್ಲು : ಸಂಖ್ಯೆ–೮

ಇದು ಸುಮಾರು ಎರಡೂವರೆ ಅಡಿ ಎತ್ತರವಾಗಿದ್ದು, ಒಂದು ಅಡಿ ಅಗಲ, ಮೂರು ಇಂಚು ದಪ್ಪನಾಗಿದ್ದು ಗ್ರಾನೈಟ್ ಕಲ್ಲಿನದ್ದಾಗಿದೆ. ಇದು ಎರಡು ಪಟ್ಟಿಕೆಗಳಿಂದ ಕೂಡಿದ್ದು ಮೊದಲನೇ ಪಟ್ಟಿಕೆಯಲ್ಲಿ ಇಬ್ಬರು ದಂಪತಿಗಳು ಪರಸ್ಪರ ಎರಡು ಕೈಗಳನ್ನು ಹಿಡಿದು ನಿಂತಿರುವ ದೃಶ್ಯವನ್ನು ಕಾಣಬಹುದು. ಎರಡನೇ ಪಟ್ಟಿಕೆಯಲ್ಲಿ ಶಿವಲಿಂಗವಿದ್ದು ಬಲಭಾಗದಲ್ಲಿ ಭಕ್ತನು ಕೈಮುಗಿದು ಕುಳಿತಿರುವುದು ಹಾಗೂ ನಂದಿ ಶಿಲ್ಪವಿದ್ದು ಯತಿಯು ಪೂಜೆಸಲ್ಲಿಸುತ್ತಿರುವ ದೃಶ್ಯಾವಳಿಯನ್ನು ಕಾಣಬಹುದು.

ವೀರಗಲ್ಲು : ಸಂಖ್ಯೆ–೯

ಇದು ಸುಮಾರು ಎರಡು ಅಡಿ ಎತ್ತರವಾಗಿದ್ದು, ಎರಡು ಅಡಿ ಅಗಲ, ಮೂರು ಇಂಚು ದಪ್ಪನಾಗಿದ್ದು ಗ್ರಾನೈಟ್ ಕಲ್ಲಿನದ್ದಾಗಿದೆ. ಇದು ಒಂದು ಪಟ್ಟಿಕೆಯಿಂದ ಕೂಡಿದ್ದು ಯುದ್ಧದಲ್ಲಿ ಒಬ್ಬ ವ್ಯಕ್ತಿಯು ಭರ್ಜಿಯಿಂದ ತಿವಿಯುತ್ತಿರುವ ದೃಶ್ಯ ಮೂಡಿಬಂದಿದೆ.

ವೀರಗಲ್ಲು : ಸಂಖ್ಯೆ–೧೦

ಇದು ಸುಮಾರು ನಾಲ್ಕು ಅಡಿ ಎತ್ತರವಾಗಿದ್ದು, ಎರಡು ಅಡಿ ಅಗಲ, ನಾಲ್ಕು ಇಂಚು ದಪ್ಪನಾಗಿದ್ದು ಗ್ರಾನೈಟ್ ಕಲ್ಲಿನದ್ದಾಗಿದೆ. ಇದು ಮೂರು ಪಟ್ಟಿಕೆಗಳಿಂದ ಕೂಡಿದೆ. ಮೊದಲನೆ ಪಟ್ಟಿಕೆಯಲ್ಲಿ ಇಬ್ಬರು ವೀರರು ಪರಸ್ಪರ ಯುದ್ಧದಲ್ಲಿ ಹೋರಾಡುತ್ತಿರುವ ದೃಶ್ಯ ಮೂಡಿಬಂದಿದ್ದು ಕೆಳಗಡೆ ಹೋರಾಟದಲ್ಲಿ ಒಬ್ಬ ವೀರ ಮರಣ ಹೊಂದಿರುವುದು ಕಂಡುಬಂದಿದ್ದರೂ ಆತನನ್ನು ತುಳಿಯುತ್ತ ಯುದ್ಧವನ್ನು ಮುಂದುವರೆಸುತ್ತಿರುವ ದೃಶ್ಯವಿದೆ. ಎರಡನೇ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಸತ್ತ ವೀರನನ್ನು ಇಬ್ಬರು ದೇವಕನ್ಯೆಯರು ಸ್ವರ್ಗಲೋಕಕ್ಕೆ ಛಾಮರಧಾರಿಣಿಯರಾಗಿ ಕೈಯನ್ನು ಹಿಡಿದು ಕರೆದೊಯ್ಯುತ್ತಿರುವ ದೃಶ್ಯವನ್ನು ಕಾಣಬಹುದು. ಮೂರನೇ ಪಟ್ಟಿಕೆಯಲ್ಲಿ ಶಿವಲಿಂಗವಿದ್ದು ಇದರ ಪಕ್ಕದಲ್ಲಿ ಭಕ್ತನು

ಕೈಮುಗಿದು ಕುಳಿತಿದ್ದು ಎಡಭಾಗದಲ್ಲಿ ಯತಿಯು ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿರುವುದು ಹಾಗೂ ನಂದಿಶಿಲ್ಪವಿರುವುದನ್ನು ಚಿತ್ರದಲ್ಲಿ ಕಾಣಬಹುದು. ಜೊತೆಗೆ ಮೇಲ್ಭಾಗದಲ್ಲಿ ಸೂರ್ಯಚಂದ್ರರ ಚಿತ್ರ ಕಾಣಬರುತ್ತದೆ.

ಕುದುರೆ ಮೇಲೆ ಕುಳಿತ ರಾಜ

ಇದು ಸುಮಾರು ಒಂದು ಅಡಿ ಎತ್ತರವಾಗಿದ್ದು, ಒಂದೂವರೆ ಅಡಿ ಅಗಲ, ಎರಡು ಇಂಚು ದಪ್ಪನಾಗಿದ್ದು ಕಪ್ಪು ಗ್ರಾನೈಟ್ ಕಲ್ಲಿನದ್ದಾಗಿದೆ. ಈ ಶಿಲ್ಪವು ರಾಜ ಕುದುರೆ ಮೇಲೆ ಕುಳಿತಿರುವ ದೃಶ್ಯದ ದುಂಡು ಶಿಲ್ಪವು ಉಬ್ಬುಶಿಲ್ಪ ರಚನಾಶೈಲಿಯಲ್ಲಿದೆ ಎನ್ನಬಹುದು. ರಾಜ ಕುದುರೆ ಮೇಲೆ ಕುಳಿತಿದ್ದು ಎಡಗೈಯಲ್ಲಿ ಲಗಾಮು ಹಿಡಿದು ಬಲಗೈಯಲ್ಲಿ ಭರ್ಜಿ ಹಿಡಿದಿದ್ದು, ವೀರಾವೇಶದಿಂದ ಹೋರಾಟಕ್ಕೆ ಹೊರಡುತ್ತಿರುವ ದೃಶ್ಯ ವಿಶೇಷವಾಗಿ ಮೂಡಿಬಂದಿದೆ.

ಒಟ್ಟಾರೆ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಈ ಕಣೆನೂರು ಗ್ರಾಮದಲ್ಲಿ ದೊರೆತ ಎಲ್ಲಾ ವೀರಗಲ್ಲುಗಳಲ್ಲಿರುವ ದೃಶ್ಯಾವಳಿಗೆ ಧಾರ್ಮಿಕ ಹಿನ್ನೆಲೆಯ ಹಾದಿಯಲ್ಲಿ ಶೈವ ಸಂಸ್ಕೃತಿಯನ್ನು ಸಾರುವ ಪರಿಕರಗಳಾಗಿದ್ದು ಪ್ರತಿಯೊಂದರಲ್ಲೂ ಶಿವಲಿಂಗ, ಸೂರ್ಯಚಂದ್ರ ಮತ್ತು ನಂದಿಯ ಶಿಲ್ಪವಿದ್ದು ಇವುಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಇಲ್ಲಿ ಶೈವ ಧರ್ಮದ ಆಚರಣೆ ಹೆಚ್ಚಾಗಿ ಪ್ರಚಲಿತದಲ್ಲಿದ್ದು ಇಲ್ಲಿ ದೊರೆತಿರುವ ೧೧ ವೀರಗಲ್ಲುಗಳಲ್ಲಿ ಐದು ವೀರಮಾಸ್ತಿಗಲ್ಲುಗಳಾಗಿದ್ದು ಇವುಗಳು ಶೈವ ಪರಂಪರೆಯ ಸಂಸ್ಕೃತಿಯನ್ನು ಸಾರುತ್ತವೆ ಎಂದು ಹೇಳಬಹುದಾಗಿದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಸೂರ್ಯನಾಥ್ ಯು.ಕಾಮತ್., ಕರ್ನಾಟಕ ರಾಜ್ಯ ಗೆಜೆಟೊಯರ್, ಬೆಂಗಳೂರು, ೧೯೮೬.

೨. ಕನ್ನಡ ವಿಷಯ ವಿಶ್ವಕೋಶ, ಪ್ರಸಾರಾಂಗ, ಮೈಸೂರು ವಿ.ವಿ., ಮೈಸೂರು.

೩. ಶೇಷಶಾಸ್ತ್ರಿ, ಆರ್., ಕರ್ನಾಟಕದ ವೀರಗಲ್ಲುಗಳು, ಧಾರವಾಡ, ೨೦೧೧.

೪. ಪರಮಶಿವಮೂರ್ತಿ, ಡಿ.ವಿ., ಕನ್ನಡ ಶಾಸನಶಿಲ್ಪ, ಹಂಪಿ, ೧೯೯೯.

೫. ಫೋಟೋದಲ್ಲಿನ ಚಿತ್ರವನ್ನು ಗಮನಿಸಿ, ೧–೧೧.

೨೨

ನಂದಿಬೇವೂರು ಗ್ರಾಮದ ಮಾಸ್ತಿಕಲ್ಲುಗಳು

ನೆಲ್ಕುದ್ರಿ ಸದಾನಂದಪ್ಪ*

ದಾವಣಗೆರೆ ಜಿಲ್ಲೆಯ ಹರಪ್ಪನಹಳ್ಳಿ ತಾಲೂಕಿನ ಉತ್ತರಕ್ಕೆ ಹದಿನಾರು ಕಿ.ಮೀ. ದೂರದಲ್ಲಿ ನಂದಿಬೇವೂರು ಇದೆ. ಶಾಸನಗಳಲ್ಲಿ ಈ ಗ್ರಾಮದ ಹೆಸರು 'ಬೇಹೂರು', 'ನಂದಿಬೇಹೂರು'[೧] ಎಂದು ಉಲ್ಲೇಖಗೊಂಡಿದೆ.

ಫಲವತ್ತಾದ ವಿಶಾಲ ಭೂಸಂಪತ್ತನು ಹೊಂದಿರುವ ಈ ಗ್ರಾಮ ತನ್ನದೆ ಆದ ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿದೆ. ಪ್ರಾಗೀತಿಹಾಸ ಕಾಲಕ್ಕೆ ಸೇರಿದ ಯಾವುದೇ ನೆಲೆಗಳು ಅಥವಾ ಕುರುಹುಗಳು ಇಲ್ಲಿಯವರೆಗೂ ಕಂಡುಬಂದಿಲ್ಲ. ಚಾರಿತ್ರಿಕ ಕಾಲಘಟ್ಟದ ವಿವರಣೆಯನ್ನು ನೀಡುವ ಕ್ರಿ.ಶ. ೧೦೫೪ರ ಮಾಂಡಳಿಕ ತ್ರೈಲೋಕಮಲ್ಲ ನೊಳಂಬಪಲ್ಲವ ಪೆರ್ಮಾಡಿದೇವನ ಮತ್ತು ಕ್ರಿ.ಶ. ೧೫೫೮ರ ವಿಜಯನಗರದ ಸಿಂಹಾಸನದ ವೀರಪ್ಪವೊಡೆಯ ಮತ್ತು ಯಿಮ್ಮಡಿವೊಡೆಯರ ಕಾಲದ,[೨] ಈ ಎರಡು ಶಾಸನಗಳ ಹೊರತು ಪಡಿಸಿ ಯಾವುದೇ ಚಾರಿತ್ರಿಕ ಲಿಖಿತ ದಾಖಲೆಗಳು ದೊರೆಯುವುದಿಲ್ಲ.

ಈ ಅರಸು ಮನೆತನಗಳ ಚಾರಿತ್ರಿಕ ಕಾಲಘಟ್ಟದ ಸಾಮಾಜಿಕ, ಧಾರ್ಮಿಕ ಅಥವಾ ಸಾಂಸ್ಕೃತಿಕ ಅಂಶಗಳನ್ನು ಕಟ್ಟಿಕೊಡುವ ಸ್ಮಾರಕ ಶಿಲ್ಪಗಳಾದ ಮಹಾಸತಿ ಕಲ್ಲುಗಳು ಈ ಗ್ರಾಮದಲ್ಲಿವೆ. ಇಂದಿಗೂ ಅವುಗಳೂ ಚೌಡಮ್ಮ ದೇವಿಯ ಹೆಸರಿನಲ್ಲಿ ಆರಾಧಾನೆಗೊಳ್ಳುತ್ತಿರುವುದು ಇಲ್ಲಿನ ವಿಶೇಷವಾಗಿದೆ. ಎರಡು ಮಹಾಸತಿ ಅಥವಾ ಮಾಸ್ತಿ ಕಲ್ಲುಗಳು ಕಂಡುಬಂದಿವೆ.

೧)ಗ್ರಾಮದ ಆಂಜನೇಯ ದೇವಸ್ಥಾನದಲ್ಲಿರುವ ಮಾಸ್ತಿಕಲ್ಲು

ತೇರಿನ ಮನೆಯ ಹತ್ತಿರ ಇರುವ ಆಂಜನೇಯ ದೇವಸ್ಥಾನದ ಪೌಳಿಯ ಒಳಗೆ ಬಲಬದಿಯಲ್ಲಿದೆ (ವಾಯುವ್ಯ ದಿಕ್ಕು). ಇದನ್ನು ಚೌಡಮ್ಮ, ಚೌಡೇಶ್ವರಿ, ಚೌಡಿ ಎಂದು ಪೂಜಿಸುತ್ತಾರೆ. ಈ ಮಾಸ್ತಿಯ ಸು. ಐದು ಅಡಿ ಎತ್ತರ ೨.೬ ಅಡಿ ಅಗಲ ವಿನ್ಯಾಸದಲ್ಲಿ ಮೇಲೆ ವೃತ್ತಾಕಾರದಲ್ಲಿದೆ. ಇದು ಸತಿ ಶಿಲ್ಪವಾಗಿದೆ. ೧೨ನೇ ಶತಮಾನಕ್ಕೆ ಇದರ ಕಾಲವನ್ನು ಗುರುತಿಸಬಹುದು. ಆಳೆತ್ತರದ ಈ ಶಿಲೆಯ ಕೆಳಭಾಗದಲ್ಲಿ ಎರಡು ಚೌಕ ಮೆಟ್ಟಿಲುಗಳ ಮೇಲೆ ವೃತ್ತಾಕಾರದ ಪೀಠದ ಮೇಲೆ ಮಹಾಸತಿ ನಿಂತಿದ್ದಾಳೆ. ಅವಳ ಸದೃಡ ದೇಹ ರಚನೆಯ ಸ್ಪಷ್ಟಚಿತ್ರಣವನ್ನು ಶಿಲ್ಪಿ ತೋರಿಸಿದ್ದಾನೆ. ನೇರಭಂಗಿಯಲ್ಲಿ ನಂತಿರುವ ಮಾಸ್ತಿಯು ತನ್ನ ಬಲಗೈಯನ್ನು ಯೋಗಮುದ್ರೆಯಲ್ಲಿ ಮೇಲಕ್ಕೆ ಎತ್ತಿದ್ದಾಳೆ. ಹೆಬ್ಬೆರಳು ಮತ್ತು ತೋರಬೆರಳುಗಳ ಮಧ್ಯೆ ನಿಂಬೆಹಣ್ಣನ್ನು ಹಿಡಿದಿದ್ದಾಳೆ. ಬಲಗೈಯ ಕೆಳಗೆ (ಬಲಬದಿಯಲ್ಲಿ) ಕರಂಡಿಕೆಯನ್ನು ಸುಂದರವಾಗಿ ಕೆತ್ತಲಾಗಿದೆ.

ಎಡಗೈಯನ್ನು ನೀಳವಾಗಿ ಕೆಳಗೆ ಇಳಿಬಿಟ್ಟಿದ್ದು, ಹೆಬ್ಬೆರಳು ಮತ್ತು ತೋರುಬೆರಳುಗಳ ಮಧ್ಯ ಕಮಲದ ಮೊಗ್ಗನ್ನು ಕೆಳಮುಖವಾಗಿ ಹಿಡಿದಿದ್ದಾಳೆ. ಮಹಾಸತಿಯು ತನ್ನ ಎರಡು ಕೈಗಳಲ್ಲಿ ಬಳೆ, ತೋಳಬಂಧಿಗಳನ್ನು ತೊಟ್ಟಿದ್ದಾಳೆ. ಇವಳ ಕೇಶಶೃಂಗಾರ ಕೇದಿಗೆ ಗರಿಗಳಿಂದ ಅಲಂಕರಿಸಿ ಆಕರ್ಷಕವಾಗಿದೆ. ಕೊರಳು ಮತ್ತು ಎದೆಯ ಮೇಲೆ ವಿವಿಧ ಬಗೆಯ ಆಭರಣಗಳಿವೆ. ಕತ್ತಿನಲ್ಲಿ ಕಡಗ ಮಾದರಿಯ ಆಭರಣವಿದೆ. ಇದರ ಕೆಳಗೆ ಮಣಿಗಳನ್ನು ಮೂರು ಸಾಲಿನಲ್ಲಿ ಜೋಡಿಸಿ ಮಾಡಿದ ಕಂಠಿಹಾರವಿದೆ. ಇದು ಕೊರಳಿನಿಂದ ಸ್ತನಗಳ ಮುಂತುದಿಯವರೆಗೂ ಈ ಕಂಠಿಹಾರ ಮೂರು ಹಂತಗಳಲ್ಲಿ ಹರಡಿ, ಸೂಕ್ಷ್ಮ ರಚನೆಯಿಂದ ಕೂಡಿದೆ. ಕಿವಿಯಲ್ಲಿ ಕಿವಿ ಓಲೆಗಳಿವೆ. ಸತಿಯು ಬಹಳ ಸಣ್ಣದಾದ ನಡುವನ್ನು ಹೊಂದಿದ್ದು, ಸೀರೆಯ ನೆರಿಗೆಯು ಸೊಂಟದ ಸುತ್ತಲೂ ಹೂವಿನಂತೆ ತೆರೆತೆರೆಯಾಗಿ ಪಾದದವರೆಗೂ ಹರಡಿದ್ದು ಸೊಂಟಕ್ಕೆ ಬೇರೆ ಬಟ್ಟೆಯನ್ನು ಸುತ್ತಿಕೊಂಡಂತೆ ಚಿತ್ರಿಸಲಾಗಿದೆ. ಅದರ ಕುಚ್ಚು ಹೊಕ್ಕಳಿನಿಂದ ಕೆಳಕ್ಕೆ ಇಳಿಬಿದ್ದಿದೆ. ಮಹಾಸತಿ ಶಿಲ್ಪದ ಮೇಲ್ಭಾಗದಲ್ಲಿ ಸ್ವರ್ಗದ ಕಲ್ಪನೆಯಿದೆ. ಬಲಬದಿಯಲ್ಲಿ ಮಾಸ್ತಿ ದೇವರ ಸನ್ನಿಧಿಯಲ್ಲಿ ಎರಡು ಕೈಗಳನ್ನು ಜೋಡಿಸಿ ಕೈಮುಗಿದು ಪದ್ಮಾಸನದಲ್ಲಿ ಕುಳಿತಿದ್ದಾಳೆ. ಎದುರಿಗೆ ಶಿವಲಿಂಗವಿದೆ, ಇದರ ಮುಂದೆ ನಂದಿ ಶಿಲ್ಪವಿದೆ. ಹಿಂಬದಿಯಲ್ಲಿ ಯತಿ ಪೂಜಾಸಾಮಾಗ್ರಿಗಳನ್ನು ಹಿಡಿದು ಶಿವಲಿಂಗದ ಕಡೆ ಬರುವಂತೆ ಚಿತ್ರಿಸಲಾಗಿದೆ. ಈ ಮಾಸ್ತಿಶಿಲ್ಪವು ಹಲವು ವಿಶೇಷತೆಗಳನ್ನು ಹೊಂದಿದೆ.

* ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

* ಈ ಶಿಲ್ಪ ಸೂಕ್ಷ್ಮ ಕೆತ್ತನೆ ಹೊಂದಿದ್ದು ಎತ್ತರವಾಗಿದೆ.
* ಮಾಸ್ತಿ ತನ್ನ ಎಡಗೈಯಲ್ಲಿ ಕಮಲದ ಮೊಗ್ಗು ಹಿಡಿದಿರುವುದು ವಿಶೇಷವಾಗಿದೆ. ಸಾಮಾನ್ಯವಾಗಿ ಮಹಾಸತಿ ನಿಂಬೆಹಣ್ಣು, ಕನ್ನಡಿ, ತೆಂಗಿನಕಾಯಿ, ಕಳಸ ಹಿಡಿದಿರುತ್ತಾಳೆ. ಆದರೆ ಇಲ್ಲಿ ಕರಂಡಿಕೆ, ನಿಂಬೆಹಣ್ಣು ಮತ್ತು ಕಮಲದ ಮೊಗ್ಗು ಒಟ್ಟಿಗೆ ಕಾಣಿಸಿಕೊಳ್ಳುತ್ತವೆ.
* ಮಾಸ್ತಿಯ ಕೇಶಶೃಂಗಾರ ಮತ್ತು ಆಭರಣಗಳ ಅಲಂಕಾರ ಕಲಾತ್ಮಕವಾಗಿದೆ.
* ಈ ಮಾಸ್ತಿ ಶಿಲ್ಪ ದೈವಿ ಸ್ವರೂಪದಲ್ಲಿ ಪ್ರತಿದಿನ ಆರಾಧನೆಗೊಳ್ಳುತ್ತಿದೆ.

೨) ಗ್ರಾಮದಾಚೆ ಆಂಜನೇಯ ದೇವಸ್ಥಾನದ ಬಳಿ ಇರುವ ಮಾಸ್ತಿಕಲ್ಲು

ನಂದಿಬೇವೂರು ಗ್ರಾಮದಿಂದ ಪಶ್ಚಿಮಕ್ಕೆ ಒಂದು ಕಿ.ಮೀ. ದೂರದಲ್ಲಿ ಹರಪನಹಳ್ಳಿಗೆ ಹೋಗುವ ರಸ್ತೆಯ ಪಕ್ಕದ ಆಂಜನೇಯ ದೇವಸ್ಥಾನದ ಮುಂಭಾಗದಲ್ಲಿದೆ. ಇದಕ್ಕೆ ಚಿಕ್ಕದೊಂದು ಗುಡಿಯನ್ನು ನಿರ್ಮಿಸಲಾಗಿದೆ. ಇದು ಪೂರ್ವಾಭಿಮುಖವಾಗಿದ್ದು ಇದನ್ನು ಚೌಡಿಗುಡಿ ಎಂದು ಕರೆಯುತ್ತಾರೆ. ಗ್ರಾನೈಟ್ ಶಿಲೆಯಲ್ಲಿರುವ ಈ ಮಾಸ್ತಿಕಲ್ಲು ೩.೪ ಅಡಿ ಎತ್ತರ, ಎರಡು ಅಡಿ ಅಗಲವಿದೆ. ಕ್ರಿ.ಶ. ೧೭ನೇ ಶತಮಾನಕ್ಕೆ ಸೇರುತ್ತದೆ. ಇಲ್ಲಿ ಇಬ್ಬರು ಮಹಾಸತಿಗಳನ್ನು ಒಟ್ಟಿಗೆ ಚಿತ್ರಿಸಲಾಗಿದೆ. ಮಾಸ್ತಿಯ ಮೇಲ್ಭಾಗದಲ್ಲಿ ಪ್ರಭಾವಳಿಯ ಅಲಂಕಾರ ಉಂಟು. ಮಹಾಸತಿಯರು ತಮ್ಮ ಬಲಗೈಯನ್ನು ಮೇಲಕ್ಕೆ ಎತ್ತಿ ಹರಸುತ್ತಿದ್ದಾರೆ. ಎಡಗೈಯನ್ನು ತಮ್ಮ ತೊಡೆಗಳಿಗೆ ತಾಗುವಂತೆ ನೇರವಾಗಿ ಕೆಳಗೆ ಇಳಿಬಿಡಲಾಗಿದೆ. ಇಲ್ಲಿ ಮಾಸ್ತಿಯರು ತಮ್ಮ ಕೈಯಲ್ಲಿ ಯಾವುದೇ ವಸ್ತುಗಳನ್ನು ಹಿಡಿಯದೆ ಇರುವುದು ವಿಶೇಷವಾಗಿದೆ. ವರದಹಸ್ತದಲ್ಲಿ ಮಾಸ್ತಿಯರು ಕಂಡುಬರುತ್ತಾರೆ. ತಮ್ಮ ಕೈಗಳಲ್ಲಿ ಬಳೆ, ತೋಳಬಂಧಿ ಧರಿಸಿದ್ದಾರೆ. ಎದೆ ಮತ್ತು ಕೊರಳ ತುಂಬ ಕಂಠಿಹಾರದ ಆಭರಣಗಳನ್ನು ಧರಿಸಿ, ಕೇದಿಗೆ ಗರಿಗಳಿಂದ ಅಲಂಕರಿಸಿದ ಕೇಶಶೃಂಗಾರವಿದೆ. ಕಿವಿಗಳಲ್ಲಿ ಕಿವಿ ಓಲೆಗಳಿವೆ. ಸೀರೆಯ ನೆರಿಗೆ ಪಾದದವರೆಗೂ ತೆರೆತೆರೆಯಾಗಿ ಹರಡಿದೆ. ಎರಡು ಮಾಸ್ತಿಗಳನ್ನು ಶಿಲ್ಪಿ ಒಂದೇ ಪ್ರಮಾಣದಲ್ಲಿ ಚಿತ್ರಿಸಿದ್ದಾನೆ.

ಮೊದಲು ವಿವರಿಸಿದ ಮಾಸ್ತಿಕಲ್ಲಿನ ಮಾದರಿಯಲ್ಲೆ ಇದನ್ನು ಚಿತ್ರಿಸಿದ್ದರೂ ಅನೇಕ ಅಂಶಗಳು ಇಲ್ಲಿ ಕಂಡು ಬರುವುದಿಲ್ಲ. ಮಾಸ್ತಿಯ ಮಂಗಲ ಅಥವಾ ಸೌಭಾಗ್ಯಸೂಚಕ ವಸ್ತುಗಳಾದ ತೆಂಗಿನಕಾಯಿ, ಕಳಸ, ಕರಂಡಿಕೆ ಅಥವಾ ನೀರಿನ ಗಿಂಡಿ, ನಿಂಬೆಹಣ್ಣು, ಕಮಲ, ಮೊದಲಾದ ವಸ್ತುಗಳ ಚಿತ್ರಣ ಇಲ್ಲಿ ಕಾಣುವುದಿಲ್ಲ. ಬಹಳ ಸರಳವಾಗಿ ಒರಟಾಗಿದೆ. ಬಳಸಿದ ಶಿಲೆ, ಶಿಲೆಯ ಪ್ರಮಾಣ, ಕಾಲಘಟ್ಟ ಮತ್ತು ಶಿಲ್ಪಿ ಇದಕ್ಕೆ ಕಾರಣವಾಗಿರಬಹುದು.

ಪ್ರಾಚೀನ ಸಮಾಜದ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಇಂತಹ ಸ್ಮಾರಕಗಳ ರಕ್ಷಣೆಯ ಅವಶ್ಯಕತೆ ತುಂಬ ಇದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ದೇವರಕೊಂಡಾರೆಡ್ಡಿ (ಸಂ.), ೧೯೯೮, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೧ ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪುಟ ಸಂ. ೪೫೬, ೪೫೭.

೨. ಗಾಯಿ ಜಿ.ಎಸ್. (ಅ), ಬಸವರಾಧ್ಯ. ಎನ್. (ಪ್ರಸಂ.) ೨೦೧೦, ಕನ್ನಡ ನಿಘಂಟು ಸಂಪುಟ–೭, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪುಟ ಸಂ. ೬೬೪೧.

೩. ದೇವರಕೊಂಡಾರೆಡ್ಡಿ (ಸಂ.), ಪೂರ್ವೋಕ್ತ, ಪುಟ ಸಂ. ೪೫೪, ೪೫೭.

೪. ಶೇಠೆ ಬಿ.ಎಸ್., ೧೯೯೧, ಕರ್ನಾಟಕದಲ್ಲಿ ಸತಿ ಪದ್ದತಿ, ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ. ಪುಟ ೬೫.

೫. ಪರಮಶಿವಮೂರ್ತಿ ಡಿ.ವಿ. ೧೯೯೯, ಕನ್ನಡ ಶಾಸನ ಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧೫೮.

ಬೆಂಗಳೂರು ನಗರದ ಇನ್ನೊಂದು ಹೆಸರು 'ಕಲ್ಯಾಣನಗರ' ಇದರ ಉಲ್ಲೇಖ ಇರುವ ಬೆಂಗಳೂರು ನಗರೇಶ್ವರ ದೇವಾಲಯದ ಶಿಲಾಶಾಸನ

ಡಾ. ಬಿ. ನಂಜುಂಡಸ್ವಾಮಿ*

ಬೆಂಗಳೂರು ನಗರಕ್ಕೆ ಇನ್ನೊಂದು ಹೆಸರು 'ಕಲ್ಯಾಣನಗರ' ವೆಂದು ಈ ಹೆಸರನ್ನು ಈ ಹಿಂದೆ ಬೆಂಗಳೂರು ನಗರದಲ್ಲಿ ಮುದ್ರಣವಾದ ಹತ್ತಾರು ಗ್ರಂಥಗಳ ಮುಖಪುಟದಲ್ಲಿ ಮುದ್ರಿಸಿದ್ದಾರೆ. ಈ ಹಿಂದೆ ಬೆಂಗಳೂರು ನಗರದಲ್ಲಿ ೬೪ ವೀರಶೈವ ಮಠಗಳು ಇದ್ದು, ಆ ಎಲ್ಲಾ ಮಠಗಳು ಜ್ಞಾನದಾಸೋಹ–ಅನ್ನದಾಸೋಹವನ್ನು ನಡೆಸುತ್ತಾ ಇದ್ದವು. ಈ ಬಗ್ಗೆ ಡಾ. ಬಿ.ಸಿ. ವೀರಪ್ಪನವರು ಬೆಂಗಳೂರು ನಗರ ವೀರಶೈವ ಮಠಗಳು ಎಂಬ ಮಹಾ ಪ್ರಬಂಧವನ್ನು ರಚಿಸಿದ್ದಾರೆ. ಶರಣ ಸಾಹಿತ್ಯ ಪರಿಷತ್ತಿನಿಂದ ೨೦೦೧ರಲ್ಲಿ ಪ್ರಕಟವಾಗಿದೆ.

ಬೆಂಗಳೂರು ನಗರ್ತಪೇಟೆಯಲ್ಲಿ ಶ್ರೀ ಅನ್ನಪೂರ್ಣಾಂಬ ಸಮೇತ ಶ್ರೀನಗರೇಶ್ವರಸ್ವಾಮಿ ದೇವಾಲಯವನ್ನು ಬೆಂಗಳೂರಿನ ಸಹಸ್ರಮತಿ ಗೋತ್ರೋದ್ಭವ ರಾದ ಅಯೋಧ್ಯಾ ನಗರದ ಶಿವಾಚಾರ ವೈಶ್ಯ ನಗರ್ತ ಸಮಾಜ ಬಾಂಧವರು ಜನಾನುರಾಗಿಯೂ, ಧನಿಕರೂ ಆಗಿದ್ದ ಶ್ರೀ ಸಂಪನ್ನಯವರ ನಂಜುಂಡಪ್ಪನವರ ಮುಂದಾಳತ್ವದಲ್ಲಿ ಕಟ್ಟಿಸಿ ಅದರಲ್ಲಿ ಶೈವಾಗಮ ಶಾಸ್ತ್ರರೀತ್ಯ ಪಂಚಾಹ್ನಿಕ ಪೂರ್ವಕವಾಗಿ ಶ್ರೀ ನಗರೇಶ್ವಾಮಿ, ಶ್ರೀ ಅನ್ನಪೂರ್ಣಾಂಬ ದೇವಿ, ಶ್ರೀ ಮಹಾಗಣಪತಿ, ಶ್ರೀ ವೀರಭದ್ರಸ್ವಾಮಿ, ಶ್ರೀ ಷಣ್ಮುಖಸ್ವಾಮಿ, ಶ್ರೀ ವೆಂಕಟೇಶ್ವರಸ್ವಾಮಿ, ಶ್ರೀ ನಾಗ ದೇವತೆಗಳು, ಶ್ರೀ ಆಂಜನೇಯಸ್ವಾಮಿ ಶ್ರೀ ದುರ್ಗಾದೇವಿ, ಶ್ರೀ ಸೂರ್ಯನಾರಾಯಣಸ್ವಾಮಿ, ಶ್ರೀ ನಾಗದೇವತೆಗಳು, ಶ್ರೀ ಆಂಜನೇಯಸ್ವಾಮಿ, ಶ್ರೀ ದುರ್ಗಾದೇವಿ, ಶ್ರೀ ಸೂರ್ಯನಾರಾಯಣಸ್ವಾಮಿ, ಶ್ರೀ ಕಾಲಭೈರವೇಶ್ವರ ಸ್ವಾಮಿ ಮುಂತಾದ ದೇವತಾ ವಿಗ್ರಹಗಳನ್ನು ಶಾಲಿವಾಹನ ಶಕ ಶ್ರೀ ಸ್ವಭಾನುನಾಮ ಸಂವತ್ಸರದ ಫಾಲ್ಗುಣ ಬಹುಳ ದ್ವಿತೀಯ ಹಸ್ತ ನಕ್ಷತ್ರ ಗುರುವಾರ ಮಿಥುನ ಲಗ್ನದಲ್ಲಿ ೧೩.೩.೧೮೮೪ರಂದು ಪ್ರತಿಷ್ಠೆ ಮಾಡಿಸಲಾಯಿತು. ಈ ವಿಶೇಷ ದೇವಾಲಯದಲ್ಲಿ ಇರುವ ದೇವಾಲಯ ಪ್ರತಿಷ್ಠಾ ಮುಹೂರ್ತದ ನಿಶ್ಚಿತ ಪ್ರತಿಯಿಂದ ತಿಳಿದುಬಂದದ್ದು. ಈ ವಿಷಯವನ್ನು ಸ್ಪಷ್ಟ ಮಾಡುವಂತಹ ಶಿಲಾಶಾಸನ ದೇವಾಲಯ ಮುಖಮಂಟಪದ ಮಧ್ಯದ ಶಿಲಾ ತೊಲೆಯ ಮೇಲೆ ಕೆತ್ತಿರುವ ಶಿಲಾಶಾಸನ, ಆರು ಸಾಲು ಇದ್ದು, ಸಂಸ್ಕೃತ ಭಾಷೆಯ ಶಿಲಾಶಾಸನವನ್ನು ಕನ್ನಡ ಅಕ್ಷರದಲ್ಲಿ ಖಂಡರಿಸಲಾಗಿದೆ. ಆರು ಸಾಲಿನ ಈ ಶಾಸನದಲ್ಲಿ ಸ್ಪಷ್ಟವಾಗಿ ಬೆಂಗಳೂರು ನಗರವನ್ನು 'ಕಲ್ಯಾಣನಗರೀ' ಎಂದು ಕರೆಯಲಾಗಿದೆ.

ಮಹಾಮಾನವತಾವಾದಿ ವಿಶ್ವಜ್ಯೋತಿ ಬಸವೇಶ್ವರರು ಮಹಾಮಂತ್ರಿಗಳಾಗಿ ಸೇವೆ ಸಲ್ಲಿಸಿದ್ದು 'ಕಲ್ಯಾಣನಗರ' ದಲ್ಲಿ. ಅನುಭವ ಮಂಟಪ, ಮಹಾಮನೆ ಎಲ್ಲಾ ಇದ್ದದ್ದು ಅಲ್ಲೇ. ಮುಂದೆ ಕಲ್ಯಾಣ ಕ್ರಾಂತಿಯ ನಂತರ ಶರಣರು ಚದುರಿದರು. ಮಹಾಜನತೆಯ ಮನಸ್ಸಿನಲ್ಲಿ 'ಕಲ್ಯಾಣನಗರ'ದ ಕಲ್ಪನೆ ಯಥಾವತ್ತಾಗಿ ಇತ್ತು. ಬೆಂಗಳೂರು ನಗರದಲ್ಲಿ ಯಲಹಂಕ–ಮಾಗಡಿ ಗೌಡ ದೊರೆಗಳ ಆಡಳಿತದ ಸಮಯದಲ್ಲಿ ಬಸವಣ್ಣನವರ ಕಲ್ಪನೆಯ ವೀರಶೈವ ಮಠಗಳು ಅದ್ಭುತವಾಗಿ ತಮ್ಮ ಸೇವಾ ಮಣಿಹವನ್ನು ಸಲ್ಲಿಸಿದರು. ಈ ಎಲ್ಲಾ ವಿಷಯವನ್ನು ಶಾಂತವೀರ ದೇಶೀಕ ವಿರಚಿತ "ಶಿವಲಿಂಗ ಚಾರಿತ್ರ"ದಲ್ಲಿ ಸ್ಪಷ್ಟವಾದ ಮಾಹಿತಿ ಇದೆ. ಈ ಲಘು ಕೃತಿ ಆಸ್ಥಾನ ವಿದ್ವಾನ್ ಶ್ರೀ ಎಂ.ಜಿ. ನಂಜುಂಡಾರಾಧ್ಯರು ಸಂಪಾದಿಸಿದರು. ಲಿಂ. ಡಾ. ಜ.ಚ.ನಿ. ಸನ್ನಿಧಿಯವರು ಶ್ರೀಶೈಲ ಜಗದ್ಗುರು ನಿಡುಮಾಮಿಡಿ ಗ್ರಂಥ ಭಂಡಾರದಿಂದ ೧೯೬೬ರಲ್ಲಿ ಪ್ರಕಟವಾಗಿದೆ. ಈ ಪುಸ್ತಕವನ್ನು ಕುರಿತು ಶಾಂತವೀರ ದೇಶಿಕ ವಿರಚಿತ "ಶಿವಲಿಂಗ ಚಾರಿತ್ರ" ಒಂದು ಪರಿಚಯ ಲೇಖನವನ್ನು ನಾನೇ ಬರೆದಿದ್ದು "ರಾಜಾಪುರಶ್ರೀ" ಸಂಸ್ಮರಣ ಸಂಪುಟ ೨೦೦೬ರಲ್ಲಿ ಪ್ರಕಟವಾಗಿದ್ದು ಈ ಸಂಸ್ಮರಣ ಸಂಪುಟದ ಪ್ರಧಾನ ಸಂಪಾದಕರು ಪ್ರೊ. ಎಸ್. ಬಸವಾರಾಧ್ಯ. ಈ ಸಂಸ್ಮರಣ ಸಂಪುಟ ಬೆಂಗಳೂರು ಗ್ರಾಮಾಂತರ ಜಿಲ್ಲೆ

* ಪಂಡಿತ್ ತಾರಾನಾಥ್ ಆಯುರ್ವೇದ ಚಿಕಿತ್ಸಾಲಯ, ತುಮಕೂರು ಷಾಪಿಂಗ್ ಕಾಂಪ್ಲೆಕ್ಸ್, ಬಿ.ಹೆಚ್. ರಸ್ತೆ, ತುಮಕೂರು–೫೭೨೧೦೨.

ಆನೇಕಲ್ ತಾಲ್ಲೂಕ್ ಶ್ರೀ ಮದ್ರಾಜಾಪುರ ವೀರಧರ್ಮ ಸಿಂಹಾಸನ ಸಂಸ್ಥಾನ ಮಠದಿಂದ ಪ್ರಕಟವಾಗಿದೆ. ಅಂದಿನ ದಿನ ವಚನ ಸಾಹಿತ್ಯ ಸಂಗ್ರಹ, ವಾಚನದ ಬಗ್ಗೆ ವಿವರವಾದ ಮಾಹಿತಿ ಇದೆ. ಅರವತ್ನಾಲ್ಕು ಮಠಗಳ ವಿಶಾಲವಾದ ಕಾರ್ಯಕ್ಷೇತ್ರ ಬೆಂಗಳೂರು ಆದ್ದರಿಂದ ಭಕ್ತಜನ ಅಭಿಮಾನದಿಂದ ಬಸವಣ್ಣನವರ ಕಲ್ಯಾಣಪಟ್ಟಣದ ಹೆಸರನ್ನು ಬೆಂಗಳೂರಿಗೆ ಕೊಟ್ಟರು.

ಬೆಂಗಳೂರು ನಗರ್ತಪೇಟೆಯ ನಗರೇಶ್ವರ ದೇವಸ್ಥಾನದ ಮುಖಮಂಟಪದ ಶಿರೋಭಾಗದಲ್ಲಿರುವ ಶಿಲಾಶಾಸನದ ಪಾಠವನ್ನು ಯಥಾವತ್ತಾಗಿ ಕೊಡಲಾಗಿದೆ.

೧ ೦ ಶ್ರೀ ನಗರೇಶ್ವರ ಪ್ರಸಂನ ∪

೨ ಶ್ರೀಮತ್ಕಲಿಯುಗೆ ವೇದ ವಸು ಬ್ರಹ್ಮಾಬ್ಧಿ ಸಂಯಿತೇ ಶುದ್ಧೇ

೩ ಸಂಜ್ಞಕೆ ಶಕೆ ಚತುರ್ವಭೋಯುಕ್ತ ವಸು ಚಂದ್ರಾತ್ಮಕೆ ಶುಭೆ ಶ್ರೀಮತ್ಕೃಷ್ಣೇಂದ್ರ ಸತ್ಪುತ್ರ ಶ್ರೀ ಚಾಮರಾಟ್ಪ್ರಭು ಪಾಲಿ ।

೪ ತೈಃ ಸಹಸ್ರರುಷಿ ಸದ್ಗೋತ್ರ ಸಂಭವೈ ಸ್ಸತ್ಯವಾದಿಭಿಃ

೫ ಚದ್ರವಿಡ ತಾಂಗತೈಃ ಧರ್ಮವಾರಿಣ ಹೇಮಪಾಲ ಶ್ರೈರಿಯಾಳೇತಿ ಸಂಜ್ಞೆಯಾ ಪೂತಿಃ ದಶರಥಾದ್ಯೈಶ್ಚ ರಾಜಭಾದ್ರಹುಮಾನಿತೈಃ

೬ ಕಲ್ಯಾಣನಗರೀ ವಾಸ ನಗರಸ್ತೈಃ ಮಹಾಜನೈಃ ಶ್ರೀಮತಃ ಕಲುದೇವತಸ್ಯ ನಗರೇಶ್ವರೂ ಶಾಶ್ವತೀ

೭ ಪ್ರತಿಷ್ಠಾವಾಸು ಅತಾರಿ ಐಶ್ವರೈಃ ಆ ಚಂದ್ರ ತಾರಕಂ

೮ BY RAMNATH AND CO. 1884 A.D.

ಮೊದಲನೇ ಸಾಲಿನಲ್ಲಿ ಸೂರ್ಯ ಚಂದ್ರ ಇರುವವರೆಗೆ ಈ ಶಾಸನ ಇರಲಿ ಅನ್ನುವ ಉದ್ದೇಶದಿಂದ ಶಾಸನದ ಶಿರೋಭಾಗದಲ್ಲಿ ಕೆತ್ತಲಾಗಿದೆ. ನಗರ್ತರು ತಮ್ಮ ಇಷ್ಟದೈವವಾಗಿ ಸ್ವೀಕರಿಸಿರುವ ಶ್ರೀ ನಗರೇಶ್ವರನ ಶಾಸನದ ಅದಿಯಲ್ಲಿ ಉಲ್ಲೇಖಿಸಲಾಗಿದೆ. ಕಾಲವನ್ನು ತಿಳಿಸಲು ಪ್ರಾಚೀನ ಭಾರತೀಯರು ಬಳಸುತ್ತಾ ಇದ್ದ ಪದ್ಧತಿಯಲ್ಲಿ ಹೇಳಲಾಗಿದೆ ವೇದ=೪ ವಸು=೮ ಬ್ರಹ್ಮ=೯ ಅಬ್ಧಿ=೪ ೪೯೮೪ ಇದರಲ್ಲಿ ೩೧೦೧ ಕಳೆದರೆ ಕ್ರಿ.ಶ. ೧೮೮೩ ಆ ದಿನ ಅಷ್ಟಮೀ ತಿಥಿ, ಸೋಮವಾರ ಬಂದಿರುತ್ತದೆ. ನಮ್ಮನು ಆಳಿದ ಧರ್ಮಪ್ರಭು ಮುಮ್ಮಡಿ ಕೃಷ್ಣರಾಜ ಒಡೆಯರವರ ದತ್ತುಪುತ್ರ ಶ್ರೀ ಚಾಮರಾಜೇಂದ್ರ ಒಡೆಯರವರ ಆಳ್ವಿಕೆಯಲ್ಲಿ ಸಹಸ್ರ ಋಷಿಗಳ ದ್ಗೋತ್ರದಲ್ಲಿ ಉತ್ಪನ್ನರಾಗಿ ಸತ್ಯವಾದಿಳಾದ ಗರುಡನ ಉಪಾಸನೆಯಿಂದ ಪಡೆದ ಗರುತ್ಮಾನ್ ಎಂಬ ಉಜ್ವಲ ಬಿರುದಿನಿಂದ ಕೂಡಿದ ಅಯೋಧ್ಯಾನಗರದಿಂದ ಬಂದ ಪಂಚ ದ್ರವಿಡ ವರ್ಗಕ್ಕೆ ಸೇರಿದ ಧರ್ಮವಾರಿಧಿಯಿಂದ ಹೇಮಪಾಲ, ಶೆರಿಯಾ ಮುಂತಾದ ಪೂರ್ವಿಕರಿಂದ ಕೂಡಿದ ದಶರಥನು ಆದಿಯಾಗಿ ಉಳ್ಳ ರಾಜರುಗಳಿಂದ ಸನ್ಮಾನಿತರಾದ, ಕಲ್ಯಾಣನಗರದಲ್ಲಿ ವಾಸ ಮಾಡುತ್ತಿರುವ ನಗರಸ್ತ ಮಹಾಜನಗಳಿಂದ ಶ್ರೀಯುಕ್ತ ಕುಲದೇವನಾದ ನಗರೇಶ್ವರ ಶಾಶ್ವತವಾದ ದೇವಾಲಯವು ನಕ್ಷತ್ರ ಸಹಿತವಾದ ಚಂದ್ರ ಇರುವವರೆಗೆ ಇರಲೆಂದು ಪ್ರತಿಷ್ಠಾಪಿಸಲ್ಪಟ್ಟಿತು. ಕಡೆಯ ಸಾಲಿನಲ್ಲಿ ಶಾಸನವನ್ನು ಖಂಡರಿಸಿದ. BY RAMANATH AND CO 1884 A.D.

ದೇವಾಲಯದ ಉದ್ಘಾಟನೆ ಮುಂಚೆ ಶಾಸನವನ್ನು ಮುಖಮಂಟಪಕ್ಕೆ ಸೇರಿಸಲು ಮೊದಲೇ ಕೆತ್ತಿಸಿ ಕಟ್ಟಡದ ಜೊತೆ ಸೇರಿಸಿ ಕಟ್ಟಬೇಕಾಗಿರುವುದರಿಂದ ಶಾಸನವನ್ನು ಕೆತ್ತಿದ RAMANATH AND COMPANY ಅವರು ಇಂಗ್ಲೀಷ್ ತೇದಿಯನ್ನು ಸ್ವಲ್ಪ ಹೆಚ್ಚಿಗೆ ಮಾಡಿ ಕೆತ್ತಿದ್ದಾರೆ. ೧೮೮೦–೧೯೦೦ರ ಕಾಲಮಾನದ ಮೂರು ನಾಲ್ಕು ಶಾಸನಗಳನ್ನು ಗಮನಿಸಿದ್ದೇನೆ ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ದೇವಾಲಯದ ಕಲ್ಯಾಣಿಯ ಮುಖಮಂಟಪದಲ್ಲಿ ಹಾಕಿಸಿರುವ ಶಿಲಾಶಾಸನ, ಬೆಂಗಳೂರು ಗುಬ್ಬಿ ತೋಟದಪ್ಪನವರ ಧರ್ಮ ಛತ್ರದಲ್ಲಿ ಹಾಕಿಸಿರುವ ಶಿಲಾಶಾಸನ ಗಿಬ್ಬಿ ತೋಟದಪ್ಪನವರು ಗೌರಿಬಿದನೂರು ತಾಲ್ಲೂಕ್ ಹಲಕೂರು ಸೋಮೇಶ್ವರಸ್ವಾಮಿ ಶಿವ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿ ಹಾಕಿಸಿರುವ ಶಾಸನಗಳನ್ನು ಯುವ ವಿದ್ವಾಂಸರು ಅಧ್ಯಯನ ಮಾಡಬೇಕು. ಈ ಶಾಸನಗಳು ಅವುಗಳ ಅಕ್ಷರ ವಿನ್ಯಾಸ ಎಲ್ಲವನ್ನು ಅಧ್ಯಯನಕ್ಕೆ ಒಳಪಡಿಸಬೇಕು. ಈ ಶಾಸನಗಳು ಕಳೆದ ಶತಮಾನದ ಕಡೇ ಘಟ್ಟದಲ್ಲಿ ಹಾಕಿಸಿದವು.

ಬೆಂಗಳೂರು ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರದಲ್ಲಿ ಸಂಗ್ರಹಿಸಲ್ಪಟ್ಟಿರುವ 'ಏಕೋತ್ತರ ಶತಸ್ಥಲ'ದ ಹಸ್ತಪ್ರತಿಯ ಕ್ರಮಸಂಖ್ಯೆ ೧೧೫೬ (೧೯೬ ಗರಿ–೨೭೬ ಗರ). ಈ ಹಸ್ತಪ್ರತಿಯ ಅಂತ್ಯದಲ್ಲಿ ಈ ಪುಷ್ಪಿಕೆ ಬರೆಯಲ್ಪಟ್ಟಿದೆ.

ಮಹಾಮಹತ್ತಿಗೂ ಶ್ರೀ ಮಹಾಮೇರುವಿನ ದಕ್ಷಿಣ ದಿಗ್ಭಾಗದಲ್ಲಿ ವೊಪ್ಪುತಿರ್ದ ಕಲ್ಯಾಣ ಪಟ್ಟಣದ [ಹೋ]ಳಿನ ಹಿರಿಯ ಹಂಪಯ್ಯ ಅಯ್ಯನವರು ಚಿಕ್ಕಹಂಪಯ್ಯ ಅಯ್ಯನವರು ಗುಮ್ಮಳಾಪುರದ ಚೆನ್ನಮಲ್ಲಿಕಾರ್ಜುನ ದೇವರ ಶಿಷ್ಯರು ವಿರಕ್ತ ಜೆಡೆ ಸಿದ್ಧಲಿಂಗದೇವರು ಅಯ್ಯನವರಿಗೆ ಬರೆಯಿಸಿ ಭಕ್ತಿ ಮಾಡಿದ "ಏಕೋತ್ತರ ಶತಸ್ಥಲ" ಸಮಾಪ್ತಿ ಮಂಗಳ ಮಹಾ ಸಾಧಾರಣ ಸಂವತ್ಸರದ ಆಷಾಢ ಬಹುಳ ೧೦ ಬೃಹಸ್ಪತಿವಾರ ವಿಷಕಂಠ ಸೆಟ್ಟಿಮಗ ಕೆಂಪನು ಬರದು...

ಇಲ್ಲಿ ಗಮನಿಸಬೇಕಾದ್ದು ಶ್ರೀ ಮಹಾಮೇರುವಿನ ದಕ್ಷಿಣ ದಿಗ್ಭಾದಲ್ಲಿ ವೊಪ್ಪುತಿರ್ದ ಕಲ್ಯಾಣ ಪಟ್ಟಣ ಅಂದರೆ ಇಂದಿನ ಬೆಂಗಳೂರು ಅಂದಿನ ದಿನವೆ ಜನಕ್ಕೆ ಉತ್ತರದ ಕಲ್ಯಾಣಪಟ್ಟಣ ಬೇರೆ ದಕ್ಷಿಣದ ಕಲ್ಯಾಣಪಟ್ಟಣ ಬೇರೆ ಎಂಬುದು ತಿಳಿದಿತ್ತು. ಹೋಳಿನ ಹಂಪಣ್ಣನ ಕಾಲವನ್ನು ಲಿಂ. ಎಸ್. ಶಿವಣ್ಣನವರು ಸುಮಾರು ೧೬೨೦ರ ವರಗೆ ಜೀವಿಸಿರಬಹುದು ಎಂದು ಉಹಿಸಿರುವುದರಿಂದ ಈ ಪೂರ್ವೋಕ್ತಿ ಕಾಲ ಸುಮಾರು ಕ್ರಿ.ಶ. ೧೬೦೦ರ ಕಾಲಮಾನದ್ದು ಇರಬಹುದು. ಎಸ್. ಶಿವಣ್ಣನವರ ಸಂಶೋಧನಾ ಲೇಖನಗಳ ಸಂಪುಟ ಕನ್ನಡ ಸಾಹಿತ್ಯ ಪರಿಷತ್ತಿನಿಂದ ೨೦೦೪ರಲ್ಲಿ ಪ್ರಕಟವಾಗಿದ್ದು ಹೆಚ್ಚಿನ ಮಾಹಿತಿಗೆ ಇದೇ ಪುಸ್ತಕದ "ಹೋಳಿನ ಹಂಪಣ್ಣ–ಒಂದು ಟಿಪ್ಪಣಿ" ಲೇಖನವನ್ನು ಗಮನಿಸಬೇಕಾಗಿ ವಿನಂತಿ. ಬೆಂಗಳೂರಿಗೆ ಗುಮ್ಮಳಾಪುರ ಬಹಳ ಹತ್ತಿರ ಇರುವಂತಹದು.

ಬೆಳಗಾಂ ನಗರದ ಲಿಂಗಾಯತ ಸಂಶೋಧನಾ ಸಂಸ್ಥೆಯು ನಾಗನೂದು ರುದ್ರಾಕ್ಷಿ ಮಠದ ಆಶ್ರಯದಲ್ಲಿ ಬೆಳೆಯುತ್ತಾ ಇದೆ. ಈ ಸಂಸ್ಥೆಯ ಸಂಗ್ರಹದಲ್ಲಿ ಇರುವ ಹಸ್ತಪ್ರತಿ ಸಂಖ್ಯೆ ೧೮೯/೩ ಪರಮಾರ್ಥಗೀತೆ ಕಾಗದದ ಹಸ್ತಪ್ರತಿ ಪುಟ ೧೯೫ರಲ್ಲಿ ಈ ಪುಷ್ಟಿಕೆ ಲಿಖಿಸಲ್ಪಟ್ಟಿದೆ.

ಅಂತ್ಯದಲ್ಲಿ : ಗತಿ ೧೧ಕ್ಕಂ ೧೨೧ಕ್ಕಂ ಚರಣ ೧೪೬೯ಕ್ಕಂ ಮಂಗಳ ಮತ್ತು ಇತಿ ಶ್ರೀಮದ್ಬ್ರಹಾನಂದ ಯೋಗೀಂದ್ರ ಪ್ರಸಾದ ಪರಿಲಬ್ಧ ಬ್ರಹ್ಮ ವಿದ್ಯಾ ವೈಶದ್ಯ ವಿದ್ಯೋತಮಾನ ಶ್ರೀ ಶಂಕರಾನಂದ ಸೇವಾಸುಮದಿಗತ ಶಿವಯೋಗಭೋಗಾ ಶ್ರೀಮತ್ಕಲ್ಯಾಣನಗರ ಸಿದ್ಧಾಂತ ಸುಬ್ರಮಣ್ಯ ಶಿವಯೋಗಿ ಪ್ರಸೀತಮಾದ ಪರಮಾರ್ಥಗೀತಾ ಸಮಾಪ್ತಂ.

ಈ ಹಸ್ತಪ್ರತಿ ಬೆಂಗಳೂರು ನಗರದ್ದು ಈ ಕೃತಿಯ ಪ್ರಾರಂಭದಲ್ಲಿ ಸರ್ಪಭೂಷಣ ಶಿವಯೋಗಿನೇ ನಮಃ ಎಂದಿದೆ. ಅಂದರೆ ಈ ಹಸ್ತಪ್ರತಿ ಸರ್ಪಭೂಷಣ ಶಿವಯೋಗಿಗಳ ನಂಥರವಾದರೆ ಸುಮಾರು ಕ್ರಿ.ಶ. ೧೮೪೦ ಅವರು ಇದ್ದಾಗಲೇ ಲಿಖಿತವಾಗಿದ್ದರೆ ಸುವಾರು ೧೮೧೦–೧೮೨೦ರ ಕಾಲಮಾನದ್ದು. ಲಿಪಿಗಾರ ತನ್ನನ್ನು ಶ್ರೀಮತ್ಕಲ್ಯಾಣನಗರ ಸಿದ್ಧಾಂತ ಸುಬ್ರಮಣ್ಯ ಶಿವಯೋಗಿ ಎಂದು ಕರೆದು ಕೊಂಡಿದ್ದಾನೆ.

'ರಘುವಂಶ' ಕಾವ್ಯ ತೆಲುಗು ಅಕ್ಷರದಲ್ಲಿ ಮುದ್ರಣ ವಾಗಿದ್ದು ವೇದಬ್ರಹ್ಮ ಸಾಗ್ಗರೆ ಶ್ರೀಕಂಠಶಾಸ್ತ್ರಿಗಳು ಸಂಪಾದಿಸಿದ ಕೃತಿ ಮುದ್ರಣವಾದದ್ದು ಶ್ರೀಮತ್ಕಲ್ಯಾಣ ನಗರಾಭರಾಣಾ ಮಮಾನಾಯಾಂ ಬೆಂಗಳೂರು ಬುಕ್ ಡಿಪೋ ಮುದ್ರಾಕ್ಷರ ಶಾಲೆಯಲ್ಲಿ ವಾಜಪೇಯಿ ಕೃಷ್ಣಶಾಸ್ತ್ರಿಗಳಿಂದ ಬೆಂಗಳೂರು ನಗರದ ಪ್ರಸಿದ್ಧ "ಸರ್ಪಭೂಷಣ ಶಿವಯೋಗಿಗಳ ಮಠ" ಇರುವುದು ಮೆಜೆಸ್ಟಿಕ್ ಕೆಂಪೇಗೌಡ ರಸ್ತೆಯಲ್ಲಿ ಅವರು ರಚಿಸಿದ "ಕೈವಲ್ಯ ಕಲ್ಪವಲ್ಲರೀ" ಪುಸ್ತಕಕ್ಕೆ ಕನ್ನಡ ಟೀಕೆ ಬರೆದವರು ಬೆಂಗಳೂರು ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಈ ಪುಸ್ತಕ ೧೯೦೭ರಲ್ಲಿ ಬಳ್ಳಾರಿಯ ಕರ್ಣಾಟಕ ಬುಕ್ ಡಿಪೋ ಮುದ್ರಾಕ್ಷರ ಶಾಲೆಯಲ್ಲಿ ಶ್ರೀ ಶಿವಲಿಂಗಂಶೆಟ್ರವರಿಂದ ಮುದ್ರಿತ ಪುಸ್ತಕದ ಮುಖಪುಟದ ಪ್ರಾರಂಭದಲ್ಲಿ ಈ ರೀತಿ ಮುದ್ರಿಸಲಾಗಿದೆ. "ಕಲ್ಯಾಣನಗರ ಪ್ರಾಂತದೊಳು ಪುಟ್ಟಿ ಮಹಾಶಿವಯೋಗಿಯೆನಿಸಿಕೊಂಡು ಅನಿತರ ಸಾಧಾರಣವಾದ ಯಶಸ್ಸನ್ನು ಸಂಪಾದಿಸಿದಿ ಸಪ್ಪಣ್ಣಸ್ವಾಮಿಯೆಂಬ ಸರ್ಪಭೂಷಣನೆಂಬ ಶಿವಯೋಗಿಯಿಂದ ವಿರಚಿತವಾದ "ಕೈಔಲ್ಯಕಲ್ಪವರೀ"...ಎಂದು ಕರೆಯಲಾಗಿದೆ ಈ ಎಲ್ಲಾ ಅಧ್ಯಯನದಿಂದ ಸುಮಾರು ೧೫೦೦ ಕಾಲಮಾನದಲ್ಲಿ ಬೆಂಗಳೂರಿಗೆ ಕಲ್ಯಾಣನಗರ ಎಂಬ ಹೆಸರು ಇತ್ತು ಎಂದು ಸ್ಪಷ್ಟವಾಗಿ ತಿಳಿದುಬರುತ್ತದೆ. ಕಲ್ಯಾಣನಗರ ಹೆಸರನ್ನೇ ನಗರೇಶ್ವರ ದೇವಸ್ಥಾನದ ಶಾಸನದಲ್ಲಿ ಉಲ್ಲೇಖಿಸಲಾಗಿದೆ.

[ಈ ಲೇಖನ ಬರೆಯುವಾಗ ಸಂಸ್ಕೃತ ಶಾಸನದ ಅಧ್ಯಯನಕ್ಕೆ ಸಹಕಾರ ನೀಡಿದ ಶ್ರೀ ಟಿ.ಕೆ. ನಂಜುಂಡಪ್ಪ ಅವರಿಗೆ ವಂದನೆಗಳು.]

೨೪

ಕುಪ್ಪಾಳು ಗ್ರಾಮದ ಅಪ್ರಕಟಿತ ತುಱುಗೋಳ್ ಶಾಸನ

ರಾ. ಶಶಿಧರ್*

ಕುಪ್ಪಾಳು ಗ್ರಾಮವು ಚಿಕ್ಕಮಗಳೂರು ಜಿಲ್ಲೆಯಲ್ಲಿನ ತಾಲ್ಲೂಕು ಕೇಂದ್ರವಾದ ಕಡೂರಿನಿಂದ ಸುಮಾರು ೧೨ ಕಿ.ಮೀ. ದೂರದಲ್ಲಿದ್ದು, ಬೆಂಗಳೂರು-ಹೊನ್ನಾವರ ರಾಷ್ಟ್ರೀಯ ಹೆದ್ದಾರಿ-೨೦೬ಕ್ಕೆ ಹೊಂದಿಕೊಂಡಿರುವ ಒಂದು ಗ್ರಾಮ.

ಪ್ರಸ್ತುತ ಈ ಗ್ರಾಮದಲ್ಲಿ ಸುಮಾರು ೧೧ನೇ ಶತಮಾನದಿಂದ ೧೬ನೇ ಶತಮಾನದ ಕಾಲಘಟ್ಟದ ಅವಧಿಯಲ್ಲಿ ನಿರ್ಮಾಣವಾದ ಶ್ರೀ ಸೋಮನಾಥ ದೇವಾಲಯ, ಶ್ರೀ ಆಂಜನೇಯ ದೇವಾಲಯ, ಶ್ರೀ ಬಸವೇಶ್ವರ ದೇವಾಲಯಗಳಿವೆ.

ಈ ದೇವಾಲಯಗಳಲ್ಲಿನ ದೇವರುಗಳ ಪೂಜಾ ಕೈಂಕರ್ಯಗಳಿಗೆ ನೀಡಿದ ದಾನ-ದತ್ತಿ ವಿವರಗಳುಳ್ಳ ಶಾಸನಗಳು, ವೀರಗಲ್ಲುಗಳು, ಗಡಿಗಲ್ಲುಗಳು, ಪುರಾತನ ಕೆರೆಗಳು ಹಾಗೂ ಶಿಥಿಲಾವಸ್ಥೆಯಲ್ಲಿರುವ ದೇವಾಲಯಗಳ ಅವಶೇಷಗಳು ಕಂಡುಬರುತ್ತದೆ.

ಶಾಸನೋಕ್ತ ದಾಖಲೆಗಳ ಪ್ರಕಾರ ಸುಮಾರು ೧೧ನೇ ಶತಮಾನದಿಂದಲೇ ಈ ಗ್ರಾಮವು **'ಕುಪ್ಪೆಹಾಳು'** ಎಂಬ ಹೆಸರಿನಿಂದ ಪ್ರಚಲಿತವಾಗಿದ್ದು, ಆದರೆ ಯಾವ ಕಾರಣಗಳಿಂದ ಈ ಹೆಸರು ಪಡೆಯಿತೆಂದು ತಿಳಿದು ಬಂದಿಲ್ಲ. ಪ್ರಸ್ತುತ ಈ ಗ್ರಾಮವು **'ಕುಪ್ಪಾಳು'** ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದು, ಐತಿಹಾಸಿಕವಾಗಿ-ಸಾಂಸ್ಕೃತಿಕವಾಗಿ ವಿಶೇಷತೆ ಹೊಂದಿದೆ.

ಭೌಗೋಳಿಕವಾಗಿ ಈ ಲೇಖನ ಕಾರ್ಯಕ್ಷೇತ್ರವು ಭಾರತೀಯ ಸರ್ವೇಕ್ಷಣಾ ಇಲಾಖೆಯ Toposheets ಸಂಖ್ಯೆ D43Q3 (57 C/3) (ಅಳತೆ 1:50,000) ರಲ್ಲಿ ಕಂಡುಬರುತ್ತದೆ. ಪ್ರಸ್ತುತ ಈ ಲೇಖನದಲ್ಲಿ ವಿವರಿಸುತ್ತಿರುವ ಅಪ್ರಕಟಿತ ಶಾಸನವು ಪೂರ್ವ ರೇಖಾಂಶ 76°06'12" ಹಾಗೂ ಉತ್ತರ ಅಕ್ಷಾಂಶ 13°28'46" ರ ನಿಶ್ಚಿತ ಪ್ರದೇಶದಲ್ಲಿ ಕಂಡುಬರುತ್ತದೆ. ಈ ತುಱುಗೋಳ್ ಶಾಸನವು ಸುಮಾರು ಐದೂವರೆ ಅಡಿ ಉದ್ದ ಹಾಗೂ ಎರಡುವರೆ ಅಡಿ ಅಗಲ ಹಾಗೂ ಅರ್ಧ ಅಡಿ ದಪ್ಪವಿರುವ ನೈಸ್ (Gneiss) ಶಿಲೆಯಿಂದ ಕಂಡರಿಸಲ್ಪಟ್ಟಿದೆ. ಕುಪ್ಪಾಳು ಗ್ರಾಮದ ಪೂರ್ವಕ್ಕೆ ಸೋಮಲಿಂಗನಹಳ್ಳಿ, ಸುಖಲಿಂಗರಹಟ್ಟಿ ಎಂಬ ಊರುಗಳಿದ್ದು ಪಶ್ಚಿಮಕ್ಕೆ ಸಿದ್ದಾಪುರ, ದೇವರಹಳ್ಳಿ ಇದೆ. ಉತ್ತರಕ್ಕೆ ಕರಿಯನಹಳ್ಳಿ, ಲಕ್ಕೇನಹಳ್ಳಿ ಇದ್ದು, ದಕ್ಷಿಣಕ್ಕೆ ಹೊಸೂರು ಗ್ರಾಮಗಳು ಕಂಡುಬರುತ್ತದೆ.

ಈ ತುಱುಗೋಳ್ ವೀರಗಲ್ಲು ಮೂರು ಹಂತದ ಚಿತ್ರದ ವಿನ್ಯಾಸವನ್ನು ಹೊಂದಿದ್ದು, ಮೊದಲ ಪಟ್ಟಿಕೆಯ ಬಲಭಾಗದಲ್ಲಿ ರಾಷ್ಟ್ರಕೂಟರ ಲಾಂಛನವಾದ ನೇಗಿಲ ಚಿತ್ರವು ಕಂಡು ಬಂದಿರುವುದು ಈ ತುಱುಗೋಳು ಶಾಸನಶಿಲ್ಪದ ವೈಶಿಷ್ಟ್ಯ.

ವೀರಗಲ್ಲಿನ ಮೊದಲ ಹಂತದ ವಿನ್ಯಾಸದಲ್ಲಿ ತುಱುಕಾಳಗದ ಹೋರಾಟದ ಚಿತ್ರಣವು ಕೆತ್ತಲ್ಪಟ್ಟಿದ್ದು, ಇಲ್ಲಿ ವೀರನು ಆಲೀಢಾಸನ ಭಂಗಿಯಲ್ಲಿ ನಿಂತಿದ್ದು, ಆಳೆತ್ತರದ ಬಾಗಿರುವ ಬಿಲ್ಲಿನೊಡನೆ ಬಾಣ ಹೂಡಿ ಶತ್ರುಗಳ ಮೇಲೆ ಪ್ರಯೋಗಿಸುತ್ತಿರುವಂತೆ ಕೆತ್ತಲಾಗಿದೆ. ಪ್ರತಿಯಾಗಿ ಶತ್ರುವು ಕೂಡಾ ತನ್ನೆತ್ತರದ ಬಾಗಿರುವ ಬಿಲ್ಲಿನಿಂದ ಬಾಣ ಪ್ರಯೋಗಿಸುತ್ತಿರುವಂತೆ ಕಂಡುಬರುತ್ತದೆ. ಶಿಲ್ಪದಲ್ಲಿ ವೀರನ ಗಾತ್ರವು ಶತ್ರುವಿನ ಗಾತ್ರಕ್ಕಿಂತ ದೊಡ್ಡದಾಗಿ ಚಿತ್ರಿತವಾಗಿದೆ. ಶತ್ರುವಿನ ಪಕ್ಕದಲ್ಲಿ ಮತ್ತೊಬ್ಬ ವ್ಯಕ್ತಿಯ ಚಿತ್ರಣವಿದ್ದು ಶಿಲ್ಪದ ಗಾತ್ರದಲ್ಲಿ ಶತ್ರುವಿಗಿಂತಲೂ ಚಿಕ್ಕದಾಗಿದ್ದು ಆತನು ಶತ್ರುವಿನ ಸಹಚರ/ಸೈನಿಕ/ಅನುಯಾಯಿಯಾಗಿರಬಹುದು. ಶತ್ರುವಿನ ಒಂದೆರಡು ಬಾಣಗಳು ವೀರನ ಎದೆಗೆ ಆಳವಾಗಿ ನಾಟಿರುವಂತೆ ಕಂಡುಬರುತ್ತಿದ್ದು ಪ್ರತಿಯಾಗಿ ವೀರನು ಪ್ರಯೋಗಿಸಿದ ಒಂದು ಬಾಣವು ಶತ್ರುವಿನ ತಲೆಯನ್ನು ಛೇದಿಸಿರುವಂತೆ ಕಡೆದಿರುವುದು ವಿಶಿಷ್ಟವಾಗಿದೆ. ಬಾಣಗಳ ಹಿಂಭಾಗದಲ್ಲಿ ಬಾಣವು ಅತ್ಯಂತ ವೇಗವನ್ನು ಪಡೆಯಲು ಅನುಕೂಲವಾಗುವಂತೆ ಬಳಸಿರುವ ಪಕ್ಷಿಯ ಗರಿಗಳು ಕೂಡಾ ಕಂಡುಬರುತ್ತವೆ. ಹೋರಾಟದ ಚಿತ್ರಣವನ್ನು ತೋರಿಸುವ ಶಿಲ್ಪಗಳಲ್ಲಿನ ಚಲನಶೀಲತೆಯು ಅತ್ಯಂತ ಗಮನಾರ್ಹವಾದುದು. ಇಲ್ಲಿ ವೀರನ ವಿಶಾಲವಾದ ಎದೆಯು ನಗ್ನವಾಗಿದ್ದು ಎದೆಯುಬ್ಬಿಸಿ, ಬಿಲ್ಲನ್ನು ಬಗ್ಗಿಸಿ ಎಳೆದು ಬಾಣ

* ಭೂವಿಜ್ಞಾನಿ, 'ವರಮಹಾಲಕ್ಷ್ಮೀನಿಲಯ', ೬೨೮, ೩ನೇ ಅಡ್ಡರಸ್ತೆ, ೩ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು-೪೦.



ಕುಪ್ಪಾಳು ಗ್ರಾಮದ ಅಪ್ರಕಟಿತ ತುಱುಗೋಳ್ ಶಾಸನ

ಪ್ರಯೋಗಿಸುತ್ತಿರುವ ಚಿತ್ರಣವು ಆಕರ್ಷಕವಾಗಿದೆ. ತನ್ನ ಕೂದಲನ್ನು ತಲೆಯ ಶಿಖೆಯಾಗಿ ಕಟ್ಟಿದ್ದು, ಬಟ್ಟೆಯ ಅಂಚನ್ನು ಕುಚ್ಚಗಳ ರೀತಿ ಬಿಟ್ಟಿದ್ದಾನೆ. ವೀರಗಚ್ಚೆಯನ್ನು ಹಾಕಿದ್ದು ಸೊಂಟದ ಪಟ್ಟಿಯನ್ನು ಕಟ್ಟಿಕೊಂಡಿದ್ದಾನೆ ಜೊತೆಗೆ ನಡುಪಟ್ಟಿಯಲ್ಲಿ ಕಿರುಗತ್ತಿ ಕಟ್ಟಿಕೊಂಡಿದ್ದಾನೆ. ಕಾಲಿಗೆ ಕಡಗವನ್ನು ಹಾಕಿಕೊಂಡಿರುವುದು ಕಂಡುಬರುತ್ತದೆ. ವೀರನ ಹಿಂಭಾಗದಲ್ಲಿ ಐದು ಎಮ್ಮೆಗಳ ಚಿತ್ರಣವು ಕಂಡುಬರುತ್ತಿದ್ದು ಬಹುಶಃ ವೀರನು ಈ ತುಱುಗಳನ್ನು ಸಂರಕ್ಷಿಸಲು ಸಾಧ್ಯವಾಗದೆ ಶತ್ರುವನ್ನು ಕೊಂದು ತಾನೂ ವೀರಮರಣವನ್ನು ಹೊಂದಿದ್ದಾನೆಂದು ಕಂಡು ಬರುತ್ತದೆ. ಇಲ್ಲಿ ತುಱುಗಳೆಲ್ಲವು ಎಮ್ಮೆಗಳೇ ಹಾಗಿದ್ದು ಅವುಗಳ ಕೊಂಬುಗಳೆಲ್ಲಾ ಬಾಗಿದ್ದು ಉದ್ದವಾಗಿದೆ.

ಎರಡನೆ ಹಂತದಲ್ಲಿ ಅಪ್ಸರೆಯರಿಬ್ಬರು ಮರಣ ಹೊಂದಿದ ವೀರನನ್ನು ಆಕಾಶದಲ್ಲಿ ಕೈಹಿಡಿದು ಹೊತ್ತೊಯ್ಯುತ್ತಿರುವಂತೆ ಕೆತ್ತಲಾಗಿದ್ದು, ಮತ್ತೊಂದು ಕೈಯಲ್ಲಿ ಚಾಮರಸೇವೆ ಮಾಡುತ್ತಿದ್ದಾರೆ. ಅಪ್ಸರೆಯರು ಶಿಖಾಲಂಕಾರವನ್ನು ಮಾಡಿಕೊಂಡಿದ್ದು, ಕೊರಳಲ್ಲಿ ಹಾರವನ್ನು ಧರಿಸಿದ್ದಾರೆ. ಅಪ್ಸರೆಯರು ಧರಿಸಿರುವ ಪೋಷಾಕು ಕೂಡಾ ವಿಶಿಷ್ಟವಾಗಿದ್ದು ಅದರಲ್ಲಿ ನೆರಿಗೆಗಳು ಕೂಡಾ ಸ್ಪಷ್ಟವಾಗಿ ಕಂಡುಬಂದಿದ್ದು ಆಕರ್ಷಕವಾಗಿದೆ.

ಮೂರನೇ ಹಂತದ ವಿನ್ಯಾಸದಲ್ಲಿ ಅಪ್ಸರೆಯರಿಬ್ಬರು ವೀರನಿಗೆ ಚಾಮರ ಸೇವೆ ಮಾಡುತ್ತಿದ್ದಾರೆ. ಇಲ್ಲಿ ವೀರನು ಪದ್ಮಾಸನ ಹಾಕಿಕೊಂಡಿದ್ದು ಕೈಮುಗಿಯುವ ಭಂಗಿಯಲ್ಲಿ ಪೀಠದ ಮೇಲೆ ಕುಳಿತಿದ್ದಾನೆ. ಈ ಹಂತದಲ್ಲಿ ಬಲಭಾಗದ ಅಪ್ಸರೆಯು ಒಂದು ಕೈಯಲ್ಲಿ ಕಳಶ/ಕಮಲ/ಪೂರ್ಣ ಕುಂಭವನ್ನು ಹಿಡಿದಿರುವಂತೆ ಚಿತ್ರಿತವಾಗಿದೆ.

ಮೊದಲೇ ತಿಳಿಸಿರುವಂತೆ ಈ ತುಱುಗೋಳ್ ಶಾಸನವು ಮೂರು ಹಂತದ ಚಿತ್ರಣವನ್ನು ಚಿತ್ರಿಸುತ್ತಿದ್ದು ಅವುಗಳನ್ನು ಪ್ರತ್ಯೇಕಿಸುವ ಪಟ್ಟಿಕೆಯ ಭಾಗದಲ್ಲಿ ಶಾಸನವು ಖಂಡರಿಸಲ್ಪಟ್ಟಿದೆ. ಶಾಸನದಲ್ಲಿ ಅಕ್ಷರಗಳು ಕೆಲವು ಕಡೆ ಅಸ್ಪಷ್ಟವಾಗಿದ್ದು ಕಲ್ಲಿನ ಕೆಲವು ಭಾಗವು ತೃಟಿತವಾಗಿರುವ ಕಾರಣ ಶಾಸನದ ಪೂರ್ಣಪಾಠವು ಸರಿಯಾಗಿ ಅರ್ಥವಾಗುತ್ತಿಲ್ಲ.

ಮೂರು ಸಾಲುಗಳುಳ್ಳ ಈ ಶಾಸನವು ಸ್ವಸ್ತಿಶ್ರೀ ಎಂಬ ಶುಭವಾಚನದೊಡನೆ ಪ್ರಾರಂಭವಾಗುತ್ತಿದ್ದು ಶಾಸನದ ಪಾಠ ಇಂತಿದೆ,

೧ ಸ್ವ ಸ್ತಿ ಶ್ರೀ . . .
೨ ಬೀ ಡಿ ನ . . . ತು ರು ಪ ಜಿ ಯ್ಯೆ ಬಿ ಟ್ಟು . . ಎ ಜಿ ದು
೩ ವೀ ರ ಬಿ ಟಿ ಯ ಪ್ಪ ಕಾ ದಿ . ತು ಱು ವ ಳಿ ದ ನ್

ಶಾಸನದ ಪಾಠವನ್ನು ಈ ಕೆಳಕಂಡಂತೆ ಅರ್ಥೈಸಬಹುದು.

ಬೀಡಿನ ಹೆಸರು ತಿಳಿಸುವ ಕಡೆ ಕಲ್ಲು ತೃಟಿತವಾಗಿದೆ. ಆ ಕಾಲಘಟ್ಟದ ಇತರೆ ಶಾಸನಗಳನ್ನು ಗಮನಿಸಿದಾಗ ಸ್ಥಳಿಯವಾಗಿ ಮೂರು ಅಕ್ಷರಗಳುಳ್ಳ ಬೀಡು ಬಹುಶಃ ಪಾಚಿಲೆ ಅಥವಾ ಅಸಂದಿ ಆಗಿರಬಹುದೆ ಅಥವಾ ಬೇರಾವುದೋ ಬೀಡು ಆಗಿರಬಹುದೇ ಎಂಬುದು ನಿರ್ಧರಿತವಾಗಬೇಕಾದ ವಿಚಾರ, ತುಱುಗಳ ಮೇಲೆ ಶತ್ರುಗಳು ಹರಿಹಾಯ್ದಾಗ ಇರಿದನು ಎಂದಿದೆ. ಇಲ್ಲಿ ಯಾರನ್ನು ಇರಿದನು ಎಂದು ಸ್ಪಷ್ಟವಾಗಿಲ್ಲ. ಶತ್ರುವಿನ ಹೆಸರು ಹೇಳುವ

ಕಡೆ ಶಾಸನವು ತೃಟಿತವಾಗಿದೆ. ವೀರ ಬಿಟಿಯಪ್ಪ ಹೋರಾಡಿ ತುರುಗಳೊಡನೆ ಮರಣ ಹೊಂದಿದ ಎಂಬ ಅಂಶವನ್ನು ತಿಳಿಸುತ್ತದೆ.

ಲಿಪಿಯ ದೃಷ್ಟಿಯಿಂದ ಹಾಗೂ ಶಿಲ್ಪದ ದೃಷ್ಟಿಯಿಂದ ಗಮನಿಸುವುದಾದರೆ ಈ ಶಾಸನವು ಸುಮಾರು ೧೦ ರಿಂದ ೧೧ನೇ ಶತಮಾನದ ಗಂಗರ ಲಿಪಿಗೆ ಸರಿಹೊಂದುತ್ತದೆಂದು ಹೇಳಬಹುದು. ಆದರೆ ಈ ತುಋುಗೋಳ್ ಶಾಸನದ ಶಿಲ್ಪದಲ್ಲಿ ಕಂಡುಬರುವ ನೇಗಿಲ ಚಿಹ್ನೆಯು ರಾಷ್ಟ್ರಕೂಟರ ಲಾಂಛನ ವಾಗಿದ್ದು ಶಿಲ್ಪಗಳಲ್ಲಿ ಕಂಡುಬರುವ ಚಲನಶೀಲತೆಯಲ್ಲಿಯೂ ಕೂಡ ರಾಷ್ಟ್ರಕೂಟರ ಪ್ರಭಾವವನ್ನು ಕಾಣಬಹುದಾಗಿದೆ.

ಈ ಶಾಸನದಲ್ಲಿ ಕಂಡುಬರುವ ಅಂಶಗಳು ಯಾವುದೇ ರೀತಿಯ ರಾಜಕೀಯ ವಿಷಯಗಳನ್ನು ತಿಳಿಸದೆ ಅಂದಿನ ಸ್ಥಳಿಯ ಘಟನೆಯೊಂದನ್ನು ದಾಖಲಿಸುತ್ತದೆ ಎನ್ನಬಹುದು.

[ನನ್ನೀ ಸಂಶೋಧನಾ ಕಾರ್ಯಗಳಿಗೆ ಪ್ರೋತ್ಸಾಹ ನೀಡುತ್ತಿರುವ ನನ್ನ ತಂದೆ ತಾಯಿಗಳಿಗೆ, ಕ್ಷೇತ್ರಕಾರ್ಯದಲ್ಲಿ ಶಾಸನದ ಪಡಿಯಚ್ಚು ತೆಗೆದುಕೊಳ್ಳಲು ಸಹಕರಿಸಿ, ಶಾಸನವನ್ನು ಓದಿ, ಲೇಖನವನ್ನೂ ಸಿದ್ಧಪಡಿಸುಲು ಸಹಕರಿಸಿದ ಆತ್ಮೀಯ ಗುರುಗಳಾದ ದಿ. ಡಾ. ಅ.ಲ. ನರಸಿಂಹನ್, ಡಾ. ಎಂ.ಜಿ. ಮಂಜುನಾಥ್, ಡಾ. ಭಾರತೀ ಬಿ.ಆರ್., ಡಾ. ಜಯಮ್ಮ ಕರಿಯಣ್ಣ ಹಾಗೂ ಆತ್ಮೀಯ ಸ್ನೇಹಿತರಾದ ಬೆಂ.ಪು. ನಿರಂಜನ, ಡಾ. ಬಿ.ಕೆ. ದೇವರಾಜಸ್ವಾಮಿ, ಶ್ರೀಮತಿ ನಿರ್ಮಲಾ ಗಣೇಶ್, ಶ್ರೀಮತಿ ಸವಿತ ಹಾಗೂ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಕೃತಜ್ಞತಾ ವಂದನೆಗಳು].

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧) ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ ೧೨, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೨) ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ೧೯೬೯.

೩) ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ. ೪೫೦– ೧೧೫೦), ಡಾ. ಚಿದಾನಂದಮೂರ್ತಿ, ಚಿದಾನಂದ ಸಮಗ್ರ ಸಂಪುಟ ೧, ಸಪ್ನ ಬುಕ್ ಹೌಸ್.

೪) ಲಿಪಿಯ ಹುಟ್ಟು ಬೆಳವಣಿಗೆ, ಡಾ. ದೇವರಕೊಂಡಾರೆಡ್ಡಿ, ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೨.

೫) ಕನ್ನಡ ಲಿಪಿ ವಿಕಾಸ, ಡಾ. ಎಂ.ಜಿ. ಮಂಜುನಾಥ್ – ಬಿ.ಕೆ. ದೇವರಾಜಸ್ವಾಮಿ, ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ, ಶ್ರೀ ರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ.

೨೫

ಹೆಬ್ಬೂರಿನ ಅಪ್ರಕಟಿತ ದಾನಪತ್ರ

ಡಾ. ಕೆ.ವಿ. ಅನಂತಪದ್ಮನಾಭ*

ಹೆಬ್ಬೂರಿನ ಕೋದಂಡಾಶ್ರಮಕ್ಕೆ ಸೇರಿದ ದಾನ ಪತ್ರವೊಂದು ಓಲೆಗರಿಯ ಒಂದು ದೊಡ್ಡ ಕಟ್ಟಿನ ಕಡೆಯ ಗರಿಯಾಗಿದ್ದು ಈ ದಾನಪತ್ರದಲ್ಲಿ ಹೆಬ್ಬೂರಿನ ಜೋಯಿಸ ರೊಬ್ಬರಿಗೆ ಶ್ರೀ ಕೋದಂಡಾಶ್ರಮ ಮಠದ ಸ್ವಾಮಿಗಳು ಭೂಮಿಯನ್ನು ದಾನವಾಗಿ ನೀಡಿದ ವಿವರವಿದೆ. ಈ ತಾಳೆಗರಿಯ ಉದ್ದ ೩೭ ಸೆಂಟಿಮೀಟರ್ ಮತ್ತು ಅಗಲ ೩.೫ ಸೆಂಟೀಮೀಟರ್ ಇದೆ. ಇದರ ಎರಡೂ ಕಡೆಯಲ್ಲಿ ಬರವಣಿಗೆಯಿದ್ದು ಒಂದು ಕಡೆ ೭ ಸಾಲುಗಳು ಮತ್ತೊಂದು ಕಡೆಯಲ್ಲಿ ೩ ಸಾಲುಗಳನ್ನು ಒಳಗೊಂಡಿದೆ. ಬರವಣಿಗೆಯು ಸುಟ್ಟವಾಗಿದ್ದು ಓದಲು ಸುಲಭವಾಗಿದೆ.

ಶ್ರೀ ಕೋದಂಡರಾಮ ಪ್ರಸನ್ನ ಎಂಬ ಮಂಗಳಸೂಚಕ ಶಬ್ದದೊಂದಿಗೆ ಆರಂಭವಾಗುವ ಈ ದಾನಪತ್ರವು ಪ್ರಸಿದ್ಧವಾದ ನಮಸ್ತುಂಗ ಶಿರಶ್ಚುಂಬಿ ಮತ್ತು ಹರೇರ್ಲೀವರಾಹಸ್ಯ ಎಂಬ ಎರಡು ಮಂಗಳಶ್ಲೋಕಗಳನ್ನು ಒಳಗೊಂಡಿದೆ. ಇದು ೧೭೪೫ನೆಯ ಸ್ವಭಾನು ನಾಮ ಸಂವತ್ಸರದ ಕಾರ್ತಿಕ ಶುದ್ಧ ೧೨ ಅಂದರೆ ಕ್ರಿ.ಶ. ೧೮೨೩ನೆಯ ಇಸವಿಗೆ ಸೇರುತ್ತದೆ. ಮೈಸೂರು ದೇಶವನ್ನು ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯ ರವರು ಆಳುತ್ತಿದ್ದ ಈ ಸಂದರ್ಭದಲ್ಲಿ ಹೆಬ್ಬೂರಿನ ಶ್ರೀ ಕೋದಂಡಾಶ್ರಮ ಮಠಕ್ಕೆ ಸೇರಿದ ನಾಲ್ಕು ಕೊಳಗ ಜೋಡಿ ಮಾನ್ಯದ ಗದ್ದೆಯನ್ನು ಶ್ರೀಕೋದಂಡಾಶ್ರಮದ ಶ್ರೀ ಸಚ್ಚಿದಾನಂದಸ್ವಾಮಿಗಳವರು ಅದೇ ಊರಿನ ಲಕ್ಷ್ಮೀ ನಾರಾಯಣ ಜೋಯಿಸರ ಮಗನಾದ ವೆಂಕಟ ರಾಮಾಜೋಯಿಸರಿಗೆ ದಾನ ನೀಡಿದ ವಿವರವಿದೆ. ಮುಂದೆ ನೀಡಿದ ದಾನದ ಚಕ್ಕುಬಂದಿಯನ್ನು ನಮೂದಿಸಲಾಗಿದ್ದು, ಸರಕಾರಕ್ಕೆ ಸಲ್ಲಿಸಬೇಕಾದ ಭೂಕಂದಾಯ ನಾಲ್ಕು ಹಣವನ್ನು, ದಾನವನ್ನು ಪಡೆದ ಜೋಯಿಸರು ಸಲ್ಲಿಸಬೇಕೆಂದು ಸೂಚಿಸಿದೆ. ದೇವರನಾಗರಿ ಲಿಪಿಯಲ್ಲಿ ನಾಲ್ಕು ಸಹಿಯನ್ನು ಹಾಕಲಾಗಿದೆ. ಹಾಗೂ ಇದಕ್ಕೆ ಸೂರ್ಯಚಂದ್ರ ಅನಲ ಅನಿಲ ಮೊದಲಾದ ದೇವತೆಗಳೇ ಸಾಕ್ಷಿ ಎಂಬ ಅರ್ಥದ ಸಂಸ್ಕೃತ ಶ್ಲೋಕವನ್ನು ಉಲ್ಲೇಖಿಸಲಾಗಿದೆ. ಅಂತಿಮವಾಗಿ ಇದನ್ನು ಬರೆದವನು ಗಿರಿಯಣ್ಣನ ಮಗ ಬೆಟದರಾಯ ಎಂಬ ವಾಕ್ಯದೊಂದಿಗೆ ಈ ದಾನಪತ್ರವು ಮುಕ್ತಾಯಗೊಳ್ಳುತ್ತದೆ.

ತುಮಕೂರು ಜಿಲ್ಲೆಯ ಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳಲ್ಲಿ ಹೆಬ್ಬೂರು ಸಹ ಒಂದು ಹೆಬ್ಬೂರಿಗೆ ಸೇರಿದ ಶಾಸನಗಳನ್ನು ಪರಿಶೀಲಿಸಲಾಗಿ ಪ್ರಸ್ತುತ ಗಮನಿಸಿರುವ ದಾನಶಾಸನದ ವಿವರಗಳು ಈ ಹಿಂದೆ ಎಲ್ಲೂ ಉಲ್ಲೇಖಗೊಂಡಂತೆ ಕಂಡುಬರುವುದಿಲ್ಲ.

ಟಿಪ್ಪುವಿನ ಪತನಾನಂತರ ಅಧಿಕಾರಕ್ಕೆ ಬಂದ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲಕ್ಕೆ ಈ ಶಾಸನವು ಸೇರುತ್ತದೆ. ಶಾಸನದಲ್ಲಿ ಕೃಷ್ಣರಾಜ ಒಡೆಯರನ್ನು "ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರವುಢಪ್ರತಾಪ ವೀರನರಪತಿ" ಎಂಬ ಬಿರುದಿನಿಂದ ಸಂಬೋಧಿಸಿದೆ. ಖಾಸಾ ಮುಮ್ಮಡಿ ಚಾಮರಾಜ ಒಡೆಯರ್ ಮತ್ತು ಕೆಂಪ ನಂಜಮ್ಮಣ್ಣಿಯವರ ಮಗನಾಗಿ ಕ್ರಿ.ಶ. ೧೭೯೪ರಲ್ಲಿ ಜನ್ಮ ತಾಳಿದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಅಧಿಕಾರಕ್ಕೆ ಬಂದಾಗ ಅವರಿಗೆ ಕೇವಲ ಐದು ವರ್ಷವಾಗಿತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಇವರ ಪರವಾಗಿ ಇವರ ಅಜ್ಜಿ ರಾಣಿ ಲಕ್ಷ್ಮಣ್ಣಿಯವರು ರಾಜಪ್ರತಿನಿಧಿಯಾಗಿ (Regent) ಅಧಿಕಾರ ವಹಿಸಿಕೊಂಡರೆ ಆಡಳಿತದ ಅನುಭವವಿದ್ದ ಪೂರ್ಣಯ್ಯನವರು ದಿವಾನರಾಗಿ ನೇಮಕಗೊಳ್ಳುತ್ತಾರೆ. ದಿವಾನ್ ಪೂರ್ಣ್ಯಯ್ಯನವರ ನಿವೃತ್ತಿಯ ನಂತರ ಕ್ರಿ.ಶ. ೧೮೧೧ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಪೂರ್ಣ ಪ್ರಮಾಣದಲ್ಲಿ ಮೈಸೂರು ಸಂಸ್ಥಾನದ ಆಡಳಿತದ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತಾರೆ. ೩೦ನೇ ಜೂನ್ ಸ೧೭೯ರಲ್ಲಿ ಐದು ವರ್ಷದವರಾಗಿದ್ದಾಗ ಪಟ್ಟಕ್ಕೆ ಬಂದ ಇವರಿಗೆ ಈ ಶಾಸನದ ಕಾಲಕ್ಕೆ ೨೯ ವರ್ಷಗಳಾಗಿತ್ತು. ಈ ಸಂದರ್ಭದಲ್ಲಿ ಈ ದಾನಪ್ರಕ್ರಿಯೆ ನಡೆದಿದೆ.

ಕರ್ನಾಟಕದ ಪ್ರಮುಖ ಶ್ರೀವೈಷ್ಣವ ಕೇಂದ್ರಗಳಲ್ಲಿ ಹೆಬ್ಬೂರು ಸಹ ಒಂದಾಗಿದ್ದರೂ[೧] ಮೂಲತಃ ಇದು ಅದ್ವೈತ ಸಿದ್ಧಾಂತದ ಪ್ರಮುಖ ಕೇಂದ್ರವಾಗಿ ಪ್ರಸಿದ್ಧವಾಗಿದೆ. ಹೆಬ್ಬೂರು ಗ್ರಾಮವನ್ನು ಸ್ಥಳೀಯರು 'ದೇವಾಲಯಗಳ ಆಗರ'ವೆನ್ನುತ್ತಿದ್ದು,

* # ೩೩೨, ೮ನೇ ಅಡ್ಡರಸ್ತೆ, ೪ನೇ ಮುಖ್ಯರಸ್ತೆ, ಕೈಗಾರಿಕಾ ನಗರ, ಬೆಂಗಳೂರು-೫೬೦೦೪೪.

ಈ ಊರಿನಲ್ಲಿ ೧೦೮ ದೇವಾಲಯಗಳೂ, ೧೦೮ ಕಲ್ಯಾಣಿಗಳೂ ಇದ್ದವು ಎಂಬ ವದಂತಿ ಇದ್ದರೂ ಇಂದು ಸುಮಾರು ೧೬-೨೦ ದೇವಾಲಯಗಳು ಉಳಿದು ಬಂದಿವೆ. ವಿಶೇಷವಾಗಿ ಈ ಊರಿನಲ್ಲಿರುವ ವೈಷ್ಣವ ದೇವಾಲಯಗಳನ್ನು ಗಮನಿಸಿದರೆ, ಕಲ್ಯಾಣಿ ಚಾಳುಕ್ಯ ಮತ್ತು ಹೊಯ್ಸಳರ ಕಾಲದ ಅವಶೇಷಗಳು ಹೆಚ್ಚಾಗಿ ಕಂಡುಬರುತ್ತವೆ. ಅವುಗಳಲ್ಲಿ ವೆಂಕಟೇಶ ದೇವರ ಗುಡಿ, ೧೦-೧೧ನೇ ಶತಮಾನದಿಂದ ೧೬-೧೭ನೇ ಶತಮಾನದವರೆಗೆ ಜೀರ್ಣೋದ್ಧಾರಗೊಂಡ ಬೇಟೆರಾಯಸ್ವಾಮಿ ಗುಡಿ ೧೬-೧೭ನೇ ಶತಮಾನದಲ್ಲಿ ಜೀರ್ಣೋದ್ಧಾರಗೊಂಡ ವರದರಾಜಸ್ವಾಮಿ ದೇವಾಲಯಗಳನ್ನು ಹೆಸರಿಸಬಹುದು.[೫] ಶ್ರೀ ಕಾಮಾಕ್ಷಿ ಶಾರದಾ ಪೀಠದ ಮಹಾಮೇರು ಶ್ರೀಚಕ್ರ ದೇವಾಲಯದ ಕಾರಣದಿಂದಾಗಿ ಸದ್ಯ ಹೆಬ್ಬೂರು ಪ್ರಸಿದ್ಧವಾಗಿದ್ದು, ಸುಮಾರು ೩೦೦ ವರ್ಷಗಳ ಹಿಂದೆ ಮಹಾತಪಸ್ವಿಗಳಾದ ಶ್ರೀಕೋದಂಡ ರಾಮಾಶ್ರಮದ ಸ್ವಾಮಿಗಳನ್ನು ಅಲ್ಲಿಯೇ ನೆಲೆಸಲು ಭಕ್ತಾದಿಗಳು ಪ್ರಾರ್ಥಿಸಿ ಆಶ್ರಮವೊಂದನ್ನು ನಿರ್ಮಿಸಿದರೆಂದೂ, ಹಾಗೂ ದಿವಾನ್ ಪೂರ್ಣಯ್ಯನವರ ಸಲಹೆಯ ಮೇರೆಗೆ ಮೈಸೂರು ಮಹಾರಾಜರು ತಮ್ಮ ಮಗಳ ವಿಚಿತ್ರ ರೋಗವನ್ನು ನಿವಾರಿಸಲು ಬೇಡಿಕೊಂಡಾಗ ಹೆಬ್ಬುಲಿಯ ಮೇಲೆಯೇ ಸವಾರಿ ಮಾಡಿ ಮೈಸೂರು ತಲುಪಿದ ಸ್ವಾಮಿಗಳು ರಾಜಕುಮಾರಿಯ ರೋಗವನ್ನು ನಿವಾರಿಸಿದರೆಂಬ ಐತಿಹ್ಯವಿದೆ.[೬] ಈ ದಾನಪತ್ರದಲ್ಲಿ ಬಂದಿರುವ ಶ್ರೀಸಚ್ಚಿದಾನಂದ ಸ್ವಾಮಿಗಳವರು ಇವರೇ ಎಂದು ಊಹಿಸಬಹುದಾಗಿದೆ. ಈ ಸ್ವಾಮಿಗಳು ತಮ್ಮ ಆಶ್ರಮಕ್ಕೆ ಸೇರಿದ ಜೋಡಿಮಾನ್ಯದ ಭೂಮಿಯನ್ನು ಅದೇ ಊರಿನ ಲಕ್ಷ್ಮೀನಾರಾಯಣ ಜೋಯಿಸರ ಮಗನಾದ ವೆಂಕಟರಾಮಾ ಜೋಯಿಸರಿಗೆ ದಾನವಾಗಿ ನೀಡಿದರು. ಅಂದರೆ ಜೋಯಿಸತನವು ಈ ವಂಶಕ್ಕೆ ವಂಶಪಾರಂಪರ್ಯವಾಗಿ ಬಂದಿದ್ದು ಅದನ್ನು ಗೌರವಿಸುವ ಸಲುವಾಗಿ ಮತ್ತು ದಾನವನ್ನು ಸ್ವೀಕರಿಸಿದ ವೆಂಕಟರಾಮಾಜೋಯಿಸರು ಶ್ರೀ ಮಠಕ್ಕೆ ಅತ್ಯಂತ ಶ್ರದ್ಧಾಭಕ್ತಿಗಳಿಂದ ನಡೆದುಕೊಳ್ಳುತ್ತಿದ್ದವರಾಗಿದ್ದು ಮಠಕ್ಕೆ ಹತ್ತಿರದವರಾಗಿದ್ದ ಕಾರಣದಿಂದ ಈ ದಾನವನ್ನು ನೀಡಿರುವ ಸಾಧ್ಯತೆಯಿದೆ.

ಸಾಮಾನ್ಯವಾಗಿ ದಾನವನ್ನು ನೀಡಿದಾಗ ಅದನ್ನು ದಾಖಲೆಯ ರೂಪದಲ್ಲಿ ತಾಮ್ರಪತ್ರದ ಸ್ವರೂಪದಲ್ಲಿ ನೀಡುವುದು ವಾಡಿಕೆ. ಆದರೆ ಇಲ್ಲಿ ತಾಳೆಗರಿಯಲ್ಲಿ ದಾನದ ವಿವರಗಳು ಲಭ್ಯವಾಗಿರುವುದನ್ನು ಗಮನಿಸಿದರೆ ಬಹುಶಃ ತಾಮ್ರಪತ್ರದಲ್ಲಿ ಉಲ್ಲೇಖಗೊಂಡ ವಿವರಗಳನ್ನು ಪ್ರತಿ ಮಾಡಿಕೊಂಡಿರುವ ಸಾಧ್ಯತೆಯನ್ನು ಊಹಿಸಬಹುದಾಗಿದೆ.

ತಾಳೆಗರಿ ದಾನಪತ್ರದ ಪೂರ್ಣಪಾಠ

ಗರಿಯ ಮುಂಭಾಗ

೧ ಶ್ರೀ ಕೋದಂಡರಾಮ ಪ್ರಸಂನ್ನಾ। ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರಚಾರವೇ। ತ್ರೈಲೋಕ್ಯ ನಗರಾರಂಭ ಮೂಲಸ್ಥಂಭಾಯ ಶಂಭವೇ। ಹರೇರ್ಲಿಲಾವರಾಹಸ್ಯ ದಂಷ್ಟಾದಂಡಃ ಸಪಾತು ವಃ। ಹೇಮಾದ್ರಿ ಶಿಖರಾ

೨ ಯತ್ರ ಧಾತ್ರೀ ಛತ್ರ ದಧೌ। ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲೀವಾಹನ ಶಕವರ್ಷಂಗಳು ೧೭೪೫ನೆ ಸಂದ ವರ್ತಮಾನವಾದ ಸ್ವಭಾನುನಾಮ ಸಂವತ್ಸರದ ಕಾರ್ತೀಕ ಶುದ್ಧ ೧೨ಯಲ್ಲು ಶ್ರೀಮದ್ರಾಜಾಧಿರಾಜ

೩ ರಾಜಪರಮೇಶ್ವರ ಪ್ರವುಢ ಪ್ರತಾಪ ವೀರನರಪತಿ ಶ್ರೀ ಕೃಷ್ಣರಾಜವಡೆಯರವರು ಮಹಿಸೂರುನಗರದಲ್ಲು ರತ್ನ ಸಿಂಹಾಸನರೂಢ‌ರಾಗಿ ಪೃಥ್ವೀ ಸಾಂವ್ರಾಜ್ಯ ಗೈಯುತ್ತಿರಲು ಶ್ರೀಮತ್ಪರಮಹಂಸ ಪರಿವ್ರಾ

೪ ಜಿಕಾಚಾರ್ಯ ಶ್ರೀಮತ್ಕೋದಂಡಾಶ್ರಮಸ್ವಾಮಿಗಳವರ ಪರಂಪರವಾಗಿ ಬಂದ ಮಠಕ್ಕೆ ಸಲ್ಲುವ ಹೆಬೂರು ಕೆರೆ ಕೆಳಗೆ ಚಿಕತೂಬಿನ ಹಂತದಲ್ಲಿ ನಂಮ್ಮ ಮಠಕ್ಕೆ ನಡದು ಬರುವ ನಾ

೫ ಲ್ಲುಗಕೊಳಗಜೋಡಿ ಮಾನ್ಯದ ಗದ್ದೆಯಂನ್ನು ಹೆಬೂರ ಲಕ್ಷ್ಮೀನಾರಾಯಣ ಜೋಯಿಸರ ಪುತ್ರರಾದ ವೆಂಕಟರಾಮಾಜೋಯಿಸನಿಗೆ ಶ್ರೀ ಸಚ್ಚಿದಾನಂದ ಸ್ವಾಮಿಗಳವವರು ಶ್ರೀ ಕೋದಂಡರಾ

೬ ರ್ಪಿತವಾಗಿ ಕೊಟ ಭೂದಾನ ಸಾದನಯಿದಕೆ ಚತುರಸ್ರ ಬೀದೀ ಬಸವನ ಗದೆಗೆ ಪಶ್ಚಿಮಾವೋಬಳ್ಯೆಯನ ತೋಟಕೆ ವುತ್ರ ಕಲ್ಯಾಣ ಬಸವಂಣನ ಗದೆಗೆ ಪೂರ್ವ ಲಕ್ಷ್ಮೀನಾರಾಯಣ ಜೋಯಿಸರ ತೋಟಕೆ ದಕ್ಷಿ

೭ ಣಉ ಮಧ್ಯದಲಿಯಿರುವ ಜೋಡಿ ಮಾಂನ್ಯದ ಭೂಮಿಯಂನ್ನು ನಿಂನ್ನ ಪುತ್ರಪವುತ್ರ ಪಾರಂಪರ್ಯವಾಗಿ ಅನುಭವಿಸಿಕೊಂಡು ಅದ ಜೋಡೀ ಸರಕಾರಕ್ಕೆ ೪ ಹಣ ನೀನೆ ತೆತುಕೊಂಡು ಸುಖದಲ್ಲಿ ಅನು

ಗರಿಯ ಹಿಂಭಾಗ

೮ ಭವಿಸಿಕೊಂಡುಯಿರುವುದು ಯಂದು ಬರೆಸಿ ಕೊಟ ಭೂದಾನ ಸಾದನಸಹಿ (ಮುಂದೆ ನಾಗರಿಲಿಪಿಯಲ್ಲಿ ಮುಂದುವರಿದಿದೆ)

೯ ....ಯಿದಕ್ಕೆ ಸಾಕ್ಷಿಗಳೂ॥ ಆದಿತ್ಯ ಚಂದ್ರಾವನಲೋನಿಲಶ್ಚ ದ್ಯೌರ್ಭೂಮಿರಾಪೋ ಹೃದಯಂ ಮನಶ್ಚ ಅಹಶ್ಚ

ರಾತ್ರಿಶ್ಚ ವುಭೇ ಚ ಸಂಧ್ಯೇ ಧರ್ಮಂ ನ ಜಾನಂತಿ ನರಸ್ಯ ವೃತ್ತಂ॥

೧೦. ಬರದಾತ ಗಿರಿಯಂಣನವರ ಮಗ ಬೆಟದರಾಯನ ಬರಹಾ॥

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಎಪಿಗ್ರಾಫಿಯಾ ಕರ್ನಾಟಿಕ ೧೨ನೆಯ ಸಂಪುಟ (ಬಿ.ಎಲ್. ರೈಸ್ ಆವೃತ್ತಿ) ಪುಟ ಸಂಖ್ಯೆ: ೨೪ ಮತ್ತು ೨೫, ಎಪಿಗ್ರಾಫಿಯಾ ಕರ್ನಾಟಿಕ ೨೪ನೆಯ ಸಂಪುಟ (ಪರಿಷ್ಕೃತ ಆವೃತ್ತಿ) ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೨೦೦೯ರಲ್ಲಿ ಕ್ರಮವಾಗಿ ಈ ಶಾಸನಗಳ ಸಂಖ್ಯೆ : ೧೧೬, ೧೧೮ ಮತ್ತು ೧೧೯ ಆಗಿದೆ.

೨. ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಸಂ. ಡಾ. ಆರ್. ಗೋಪಾಲ್ ಪ್ರ. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಪುಟ ಸಂಖ್ಯೆ ೭೬, ಮೈಸೂರು-೫೭೦೦೧೦, ೨೦೦೯.

೩. ಅದೇ ಲೇಖನ, ತುಮಕೂರು ಜಿಲ್ಲೆಯ ಹಸ್ತಪ್ರತಿ ಸಂಪತ್ತು, ಲೇ. ಡಾ. ಬಿ. ನಂಜುಂಡಸ್ವಾಮಿ, ಪುಟಸಂಖ್ಯೆ ೫೩೨.

೪. ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಸಂ. ಡಾ. ಆರ್. ಗೋಪಾಲ್ ಲೇಖನ, ತುಮಕೂರು ಜಿಲ್ಲೆಯ ಧಾರ್ಮಿಕ ಚರಿತ್ರೆ ಲೇ. ಡಾ. ಎಂ.ಜಿ. ಮಂಜುನಾಥ, ಪುಟಸಂಖ್ಯೆ ೫೮೩.

೫. ಇತಿಹಾಸ ದರ್ಶನ, ಸಂ. ೧೪/೧೯೯೯, ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು, ಲೇಖನ ಹೆಬ್ಬೂರಿನ ಪ್ರಾಚೀನ ದೇವಾಲಯಗಳು ಲೇಖಕಿ ಡಾ. ಕೆ. ವಸಂತಲಕ್ಷ್ಮಿ ಪುಟಸಂಖ್ಯೆ: ೧೫೦-೧೫೪.

೬. ಶಕ್ತಿ ದೇವತಾಂಕ ಭಾರತ ದರ್ಶನ ವಿಶೇಷಾಂಕ, ಫೆಬ್ರವರಿ ೨೦೦೨, ಭಾರತ ದರ್ಶನ ಪ್ರಕಾಶನ ಟ್ರಸ್ಟ್ (ರಿ.) ತ್ಯಾಗರಾಜನಗರ, ಬೆಂಗಳೂರು ೫೬೦೦೨೮ ಲೇ. ಐತಿಹಾಸಿಕ ಹೆಬ್ಬೂರು, ಸಂಗ್ರಹ ಶ್ರೀಮತಿ ಸುನಂದ ರಂಗನಾಥಸ್ವಾಮಿ, ಪುಟ ಸಂಖ್ಯೆ ೧೭೩.

೨೬

ಮಚ್ಚೇರಿಯ ಅಪ್ರಕಟಿತ ವೀರಗಲ್ಲು ಮತ್ತು ಶಾಸನಗಳು

ನಿರ್ಮಲಾ ಎಸ್.ವೈ.*

ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲೂಕಿನಿಂದ ಆಗ್ನೇಯಕ್ಕೆ ಸುಮಾರು ೬ ಕಿ.ಮೀ. ದೂರದಲ್ಲಿ ಮಚ್ಚೇರಿ ಗ್ರಾಮವಿದೆ. ಪ್ರಸ್ತುತ ಲೇಖನವು ಮಚ್ಚೇರಿಯಲ್ಲಿ ದೊರತಿರುವ ಅಪ್ರಕಟಿತ ವೀರಗಲ್ಲು ಮತ್ತು ಅಲ್ಲಿ ದೊರೆತಿರುವ ಇತರ ಶಾಸನಗಳ ವಿಷಯವನ್ನು ಚರ್ಚಿಸಲಾಗಿದೆ.

ಸ್ಥಳಪುರಾಣ

ಸ್ಥಳಪುರಾಣದಂತೆ ವಿರಾಟನ ರಾಜಧಾನಿ ಮತ್ಸ್ಯಪುರಿಯ ಮಚ್ಚೇರಿಯಾಯಿತು. ಊರಿನ ಸಮೀಪ ಸುಮಾರು ಒಂದು ಕಿ.ಮೀ. ದೂರದಲ್ಲಿ ವೇದವತಿ ನದಿಯಿದ್ದು ಇದನ್ನು ಕುಂತಿಹೊಳೆ ಎಂದು ಸ್ಥಳೀಯರು ಕರೆಯುತ್ತಾರೆ. ಇದಕ್ಕೆ ಅವರು ನೀಡುವ ಕಾರಣ ಅಜ್ಞಾತವಾಸದಲ್ಲಿದ್ದ ಪಾಂಡವರನ್ನು ಕುಂತಿಯು ಇಲ್ಲಿ ಭೇಟಿಯಾಗಿದ್ದಳು ಎಂಬುದಾಗಿ. ಇಲ್ಲಿಂದ ಮುಂದೆ ಒಂದು ಗುಡ್ಡವಿದ್ದು, ಇದನ್ನು ಕೀಚಕಗುಡ್ಡ ಎನ್ನುತ್ತಾರೆ. ಇಲ್ಲೊಂದು ಗುಹೆಯಿದ್ದು, ಕೀಚಕನು ಇಲ್ಲಿಯೇ ವಾಸಿಸುತ್ತಿದ್ದನೆಂಬ ಪ್ರತೀತಿಯಿದೆ. ಆತನ ಕುಲದೇವತೆಯಾದ ಮೈಲಾರಲಿಂಗ ಅಥವಾ ಮಲ್ಲಿದೇವನ ಶಿಲೆಯೂ ಇಲ್ಲಿದೆ. ಮಚ್ಚೇರಿಯಿಂದ ಉತ್ತರಕ್ಕೆ ಸುಮಾರು ಎರಡು ಕಿ.ಮೀ. ದೂರದಲ್ಲಿ ತುರುವನಹಳ್ಳಿ ಎಂಬ ಗ್ರಾಮವಿದ್ದು, ಮಹಾಭಾರತದ ವಿರಾಟಪರ್ವದಲ್ಲಿ ಬರುವ ಉತ್ತರ ಗೋಗ್ರಹಣದ ಸಂದರ್ಭದಲ್ಲಿ ಅರ್ಜುನನು ಇಲ್ಲಿಯೇ ಗೋವುಗಳನ್ನು ರಕ್ಷಿಸಿದನೆಂದು ಹೇಳಲಾಗುತ್ತದೆ. ಇಷ್ಟೇ ಅಲ್ಲದೇ, ಕುಂತಿಹೊಳೆಯ ದಡದಲ್ಲಿ ಚೌಕಾಕೃತಿಯಲ್ಲಿರುವ ನಾಲ್ಕು ಕುಳಿಗಳ ಮೇಲೆ ಮಂಚವೊಂದನ್ನು ಹಾಕಲಾಗಿದ್ದು, ಭೀಮನು ಇಲ್ಲಿ ವಿರಮಿಸುತ್ತಿದ್ದನೆಂದು ಸ್ಥಳೀಯರು ಹೇಳುತ್ತಾರೆ. ಈ ರೀತಿ ಸ್ಥಳಪುರಾಣಗಳ ಮೂಲಕ ತಮ್ಮ ಊರು ಅತ್ಯಂತ ಪ್ರಾಚೀನವಾದುದು ಎಂಬುದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಇತಿಹಾಸ

ಮಚ್ಚೇರಿಯ ಸುತ್ತಮುತ್ತಲಿನ ಪ್ರದೇಶವನ್ನು ರಾಷ್ಟ್ರಕೂಟ, ಗಂಗ, ಆಸಂದಿ ಗಂಗರು, ಹೊಯ್ಸಳ, ವಿಜಯನಗರ, ಕೆಳದಿ ನಾಯಕರು ಮುಂತಾದ ರಾಜವಂಶಗಳು ಆಳ್ವಿಕೆ ನಡೆಸಿವೆ. ಪ್ರಾದೇಶಿಕ ಇತಿಹಾಸವನ್ನು ಗಮನಿಸಿದಾಗ ಈ ಪ್ರದೇಶದಲ್ಲಿ ರಾಷ್ಟ್ರಕೂಟ, ಗಂಗರ ಕಾಲದಲ್ಲಿ ಯುದ್ಧವಾಗಿರುವ ಬಗ್ಗೆ ತಿಳಿದು ಬರುತ್ತದೆ. ಕಡೂರು ತಾಲೂಕಿನ ಚಿಕ್ಕನಾಯಕನಹಳ್ಳಿ ಮತ್ತು ಹಿರೇಬಾಸೂರು ಮುಂತಾದ ಶಾಸನಗಳಲ್ಲಿ ರಾಷ್ಟ್ರಕೂಟ ಮತ್ತು ಗಂಗರಿಗೆ ಹೋರಾಟವಾಗಿ ಗಂಗರು ಸೋತಿರುವ ದಾಖಲೆಗಳು ದೊರಕುತ್ತವೆ.

ಇದುವರೆಗೆ ಲಭ್ಯವಿದ್ದ ಶಾಸನಗಳಲ್ಲಿ ಹೊಯ್ಸಳ ವಿಷ್ಣುವರ್ಧನನ ಶಾಸನವೇ ಅತ್ಯಂತ ಪ್ರಾಚೀನವಾದದ್ದು. ಮಚ್ಚೇರಿಯ ಅಸ್ತಿತ್ವವು ೧೧-೧೨ನೇ ಶತಮಾನದಲ್ಲೇ ಇತ್ತು ಎಂದು ಊಹಿಸಲಾಗಿತ್ತು. ಈಗ ದೊರೆತಿರುವ ಅಪ್ರಕಟಿತ ಶಾಸನದಿಂದಾಗಿ ಇದರ ಪ್ರಾಚೀನತೆಯನ್ನು ಮತ್ತಷ್ಟು ಹಿಂದಕ್ಕೆ ಅಂದರೆ ೯ನೆಯ ಶತಮಾನಕ್ಕೊಯ್ಯಬಹುದು.

ಮೂರನೇ ಗೋವಿಂದ ತನ್ನ ಉತ್ತರ ದಿಗ್ವಿಜಯದ ನಂತರ ದಕ್ಷಿಣ ದಿಗ್ವಿಜಯಕ್ಕೆ ಬಂದಾಗ ಇಂದಿನ ಕರ್ನಾಟಕದ ದಕ್ಷಿಣ ಭಾಗದ ಬಯಲು ಪ್ರದೇಶದ ಕಡೆ ಬರುತ್ತಾನೆ. ಈ ಸಮಯದಲ್ಲಿ ರಾಷ್ಟ್ರಕೂಟರಿಗೂ ಮತ್ತು ಗಂಗರಿಗೂ ಯುದ್ಧಗಳು ನಡೆಯುತ್ತದೆ. ಆಸಂದಿ ಸುತ್ತಮುತ್ತಲ ಪ್ರದೇಶಗಳಲ್ಲಿ ಇವರಿಗೆ ಹೋರಾಟ ನಡೆದಿತ್ತು ಎಂಬುದು ಸರ್ವವಿದಿತ. ಹೀಗಾಗಿ ಸುತ್ತಮುತ್ತಲ ಪ್ರದೇಶದಲ್ಲಿ ವೀರಗಲ್ಲುಗಳು ಹೆಚ್ಚು, ಪ್ರಸ್ತುತ ದೊರೆತಿರುವ ವೀರಗಲ್ಲುಗಳು ಶಿಲ್ಪ ಮತ್ತು ಲಿಪಿಯ ದೃಷ್ಟಿಯಿಂದ ರಾಷ್ಟ್ರಕೂಟ ಕಾಲಕ್ಕೆ ಸೇರಿಸಬಹುದಾಗಿದೆ. ಮಚ್ಚೇರಿಯಿಂದ ಕಡೂರು ಕೇವಲ ೬ ಕಿ.ಮೀ. ದೂರವಿದ್ದು, ಈ ಪ್ರದೇಶದ ಆಂಜನೇಯ ದೇವಾಲಯದ ಮೊಗಸಾಲೆಯಲ್ಲಿ ರಾಷ್ಟ್ರಕೂಟರ ಕಾಲದ ದೇವಾಲಯದ ಕಂಬಗಳು ಕಾಣಬಹುದು. ಹೀಗಾಗಿ ಮಚ್ಚೇರಿ ಗ್ರಾಮದ ಸುತ್ತಮುತ್ತ ರಾಷ್ಟ್ರಕೂಟರ ಪ್ರಭಾವವಿತ್ತೆಂಬುದು ಸ್ಪಷ್ಟವಾಗುತ್ತದೆ. ಗಂಗರು ಈ ಪ್ರದೇಶದಲ್ಲಿ ಆಳುತ್ತಿದ್ದರು. ಗಂಗರು, ಹೊಯ್ಸಳರು, ವಿಜಯನಗರದ ಅರಸರು, ಕೆಳದಿ ನಾಯಕರು ಮುಂತಾದ ರಾಜವಂಶಗಳು ಈ ಪ್ರದೇಶವನ್ನು ಆಳ್ವಿಕೆ ನಡೆಸಿದ್ದುದು ಕಡೂರು ಶಾಸನಗಳಲ್ಲಿ ದಾಖಲಾಗಿದೆ.

* # ೩೨, ೨ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು-೫೬೦೦೧೯.



ಶಾಸನಗಳು

ಮಚ್ಚೇರಿಯ ಶಾಸನಗಳಲ್ಲಿ ಕಲಿದೇವ, ಮಾಧವದೇವ, ಮಚ್ಚೇಶ್ವರದೇವ ದೇವಾಲಯಗಳ ಉಲ್ಲೇಖವಿದೆ. ಊರಿನ ಇತರ ದೇವಾಲಯಗಳೆಂದರೆ ಯೋಗಾನರಸಿಂಹ, ಕೋದಂಡ ರಾಮ. ಮಚ್ಚೇರಿಯಲ್ಲಿ ದೊರಕಿರುವ ಐದು ಶಾಸನಗಳು ಹಾಗೂ ಮೂರು ತಾಮ್ರಪಟಗಳು ದೊರೆತಿದ್ದು, ಇವುಗಳಲ್ಲಿ ಮಾಧವದೇವ, ಕಲಿದೇವ, ಮಚ್ಚೇಶ್ವರ ಈ ಮೂರು ಹೆಸರು ಗಳು ಮೂರು ಹೆಸರುಗಳು ಮೂರು ಶಾಸನಗಳಲ್ಲಿ ಉಲ್ಲೇಖಿತವಾಗಿದೆ. ಇವುಗಳಲ್ಲಿ ಕಲಿದೇವನ ಉಲ್ಲೇಖಗಳು ಅತ್ಯಂತ ಪ್ರಾಚೀನವಾದದ್ದು, ಕಲ್ಲೇಶ್ವರ ದೇವಾಲಯದಲ್ಲಿರುವ ಶಾಸನದಲ್ಲಿ ಇಟ್ಟಗೆ ೨೪ರ (ಇ.ಸಿ.೧೨, ಕಡೂರು ೧೭೦) ರತುನಶಿವ ಪಂಡಿತರಿಗೆ ದಾನವಾಗಿ ನೀಡಿದ ವಿವರವಿದೆ. ಇದರ ಪ್ರಕಾರ ಸ್ವಯಂಭು ಮೂಲಸ್ಥಾನ ಮಚ್ಚೇರು ಕಲಿದೇವರಿಗೆ ಎಂದು ಇರುವುದರಿಂದ ಇದು ಪ್ರಾಚೀನ ದೇವಾಲಯವಾಗಿದೆ. ಇದಕ್ಕೆ ಪೂರ್ವಮರ್ಯಾದೆಯಿಂದ ದೇವಾಲಯದ ಜೀರ್ಣೋದ್ಧಾರಕ್ಕಾಗಿ ದಾನ ನೀಡಿರು ವುದರಿಂದ ಈ ದೇವಾಲಯದ ಕಾಲವನ್ನು ೮ನೆಯ ಶತಮಾನಕ್ಕೊಯ್ಯಬಹುದಾಗಿದೆ.

ಕ್ರಿ.ಶ. ೮೦೮ರ ಸುಮಾರಿಗೆ ರಾಷ್ಟ್ರಕೂಟ ಮೂರನೇ ಗೋವಿಂದನು ತನ್ನ ಉತ್ತರ ದಿಗ್ವಿಜಯದ ನಂತರ ಕರ್ನಾಟಕದ ದಕ್ಷಿಣ ಭಾಗದ ಬಯಲು ಪ್ರದೇಶಗಳಿಗೆ ಬಂದನೆಂದು ಇತಿಹಾಸದಿಂದ ತಿಳಿದುಬರುತ್ತದೆ. ಈ ಸಂದರ್ಭ ದಲ್ಲಿ ಅನೇಕ ಜನರು ಇತ್ತ ಕಡೆ ವಲಸೆ ಬಂದಿರುವ ಸಾಧ್ಯತೆ ಗಳಿವೆ. ಈ ಹಿನ್ನೆಲೆಯಲ್ಲಿ ಶೈವಮತಾನುಯಾಯಿಯಾದ ರತುನಶಿವ ಪಂಡಿತನು ಬಂದಿರಬಹುದು. ಈತ ಇಟ್ಟಗೆ ೨೪ರ ಪ್ರದೇಶಕ್ಕೆ ಸೇರಿದವನಾಗಿದ್ದು ಮುಂದೆ ಈತನ ಶಿಷ್ಯಪರಂಪರೆ ಇಲ್ಲಿ ಮುಂದುವರೆದಿತ್ತು ಎಂಬುದನ್ನು ಕಾಣ ಬಹುದು. ಅದೇ ದೇವಾಲಯದ ಮತ್ತೊಂದು ಶಾಸನದಲ್ಲಿ (ಇ.ಸಿ. ೧೨, ಕಡೂರು ೧೭೧) ಉಲ್ಲೇಖ ವಾಗಿರುವ 'ರತ್ನಶಿವಯೋಗೇಂದ್ರನಾತ್ಮಜಾತಂ ಗುಣೋ ದ್ಧಾಮಂ, ಶ್ರೀವರಕಾಂತ ಅನ್ತನಶಿವದೇವರ' ಎನ್ನುವ ಉಲ್ಲೇಖ ದಿಂದ ಇದು ಸ್ಪಷ್ಟವಾಗುತ್ತದೆ.

ಕಾಲದ ಉಲ್ಲೇಖವಿಲ್ಲದ (ಕ.೧೭೦) ಶಾಸನವು ಹೊಯ್ಸಳ ವಿಷ್ಣುವರ್ಧನನ ಕಾಲದ್ದಾಗಿದ್ದು, ಮಚ್ಚೇರಿಯ ಮಾಳಗೌಂಡನು ಕಲಿದೇವರಿಗೆ, ಪೂರ್ವಮರ್ಯಾದೆಯಿಂದ ಜೀರ್ಣೋದ್ಧಾರಕ್ಕೆ ಸಲ್ಲಿಸಿದ ಪಡಿ ಎರಡು ಮತ್ತು ಗದ್ದೆ, ನಾಲ್ಕು ಮತ್ತರು ಬೆದ್ದಲೆ, ಸಾವಿರ ಬಳ್ಳಿಯ ತೋಟ, ಒಂದು ಗಾಣ, ೧೦ ಮನೆಯ ನಿವೇಶನವನ್ನು ಕೊಟ್ಟು ಉಲ್ಲೇಖವಿದೆ.

ಅದೇ ಶಾಸನದ ಮತ್ತೊಂದು ಪಕ್ಕದಲ್ಲಿರುವ ಶಾಸನದಲ್ಲಿ ಮಾಚೇಶ್ವರದೇವರಿಗೆ ಒಂದು ಮತ್ತರು ಗದ್ದೆ ಎರಡು ಮತ್ತರು ಗದ್ದೆ ಮಾಧವದೇವರಿಗೆ ನೀಡಿದ ವಿವರವಿದೆ. ಈ ದಾನವನ್ನು ಯಾರು ಕೊಟ್ಟರು ಎಂಬ ಉಲ್ಲೇಖವಿಲ್ಲ.

ಕ್ರಿ.ಶ. ೧೨೩೪ರ ಶಾಸನವು ಮಚ್ಚೇರಿ ಮಾಚಗೌಂಡನ ಮಗನಾದ ಕಾಮಗೌಂಡನು ದಾನ ಕೊಟ್ಟ ಉಲ್ಲೇಖವಿದೆ. ಇದೇ ಕಾಮಗೌಂಡನ ಮಗನಾದ ಮಾಚಗೌಂಡನು ಮಚ್ಚೇರಿಯ ಕೆರೆ ತೂಬನ್ನು ಇಡಿಸಿದ ಬಗ್ಗೆ ಕ್ರಿ.ಶ. ೧೩೬೮ ಶಾಸನವು ಹೇಳುತ್ತದೆ.

ಕ್ರಿ.ಶ. ೧೨೨೧ರ ಹೊಯ್ಸಳ ಇಮ್ಮಡಿ ನರಸಿಂಹನ ಕಾಲದ ಶಾಸನದಲ್ಲಿ (ಕ.೨೫೨) ದೊರೆಯ ಆಣತಿಯಂತೆ ಮಚ್ಚೇರಿಯ ಮಹಾಜನಗಳು ವಾರ್ಷಿಕ ೩೦ ನಿಷ್ಕಗಳನ್ನು ಉದ್ಭವಗೋಪಾಲಸ್ವಾಮಿ ದೇವಾಲಯದ ದೇವರ ಕೈಂಕರ್ಯ ಗಳಿಗೆ ನೀಡಬೇಕೆಂದು ತಿಳಿಸಲಾಗಿದೆ.

ವಿಜಯನಗರದ ಅರಸ ದೇವರಾಯ ಮಹಾರಾಯನು ಕೊಟ್ಟ ತಾಮ್ರಪಟದಲ್ಲಿ (ಕ್ರಿ.ಶ. ೧೪೦೮) ಹೊಯ್ಸಳ ನಾಡಿಗೆ ಸೇರಿದ್ದ ಹಿರಿಯ ಬಾಸೂರು ಮತ್ತು ಚಿಕ್ಕಬಾಸೂರು ಇವುಗಳಿಗೆ ಅಭಿನವ ಪ್ರತಾಪದೇವರಾಯಪುರ ಎಂದು ಪುನರ್‌ನಾಮಕರಣ ಮಾಡಿ, ಸರ್ವಮಾನ್ಯವಾಗಿ ಪಂಪಾ



ಕ್ಷೇತ್ರದ ವಿರೂಪಾಕ್ಷದೇವನ ಸನ್ನಿಧಿಯಲ್ಲಿ ತುಲಾಭಾರ ಮತ್ತು ಬ್ರಹ್ಮಾಂಡದೊಂದಿಗೆ ದಾನವಾಗಿ ನೀಡುತ್ತಾನೆ.

ಮಚ್ಚೇರಿಯ ಕಲಿದೇವರ ನಂದಾದೀಪಕ್ಕೆ ಕಾವಿಸೆಟ್ಟಿ, ಮಾಚಿಸೆಟ್ಟಿ, ಬಲ್ಲಸೆಟ್ಟಿ, ಕೇತಿಸೆಟ್ಟಿ, ಬಿಟ್ಟಿಸೆಟ್ಟಿ ಸೇರಿ ದಾನ ನೀಡಿದ ಉಲ್ಲೇಖವಿದೆ.

ಕ್ರಿ.ಶ. ೧೬೫೨ರ ತಾಮ್ರಶಾಸನವು ಕೆಳದಿಯ ಶಿವಪ್ಪ ನಾಯಕನದಾಗಿದ್ದು, ಸಂಗಮ ವಂಶದ ಇಮ್ಮಡಿ ಹರಿಹರನು ನೀಡಿದ ದಾನವನ್ನು ಪುನರ್‌ನವೀಕರಿಸಿ ಅಭಿನವಪ್ರತಾಪ ದೇವರಾಯಪುರವನ್ನು ವಿದ್ಯಾರಣ್ಯಪುರ ಎಂದು ನಾಮಕರಣ ಮಾಡುತ್ತಾನೆ. ಹೀಗೆ ಪುನರ್ ನವೀಕರಣಗೊಂಡ ಅಗ್ರಹಾರ ವನ್ನು ಪುನಃ ಹಾಳಾಗದಂತೆ ನೋಡಿಕೊಳ್ಳಲು ಶೃಂಗೇರಿಯ ಸಚ್ಚಿದಾನಂದ ಸ್ವಾಮಿಗಳಿಗೆ ನೀಡುತ್ತಾನೆ. ಈ ಪುನರ್ ನವೀಕರಣಕ್ಕೆ ಕಾರಣವೇನೆಂದರೆ ಇಮ್ಮಡಿ ಹರಿಹರನು ನೀಡಿದ ದಾನವು ನಾಶವಾಗಿದ್ದು ದಾನ ನೀಡಿದ್ದ ಭೂಮಿಯು ಅಡಿಕೆ ತೋಟಗಳಿಂದ ತುಂಬಿ ಸ್ಥಳೀಯ ವ್ಯಕ್ತಿಗಳು ಆಕ್ರಮಿಸಿ ಕೊಂಡಿದ್ದರು. ಅದನ್ನು ಮತ್ತೆ ವ್ಯವಸ್ಥಿತಗೊಳಿಸಿ ಯಥಾಪೂರ್ವ ವಾಗಿ ಉಳಿಸಿಕೊಟ್ಟು ದಾನವನ್ನು ನೀಡಲಾಗಿದೆ. ಈ ದಾನದ ಜೊತೆಗೆ ಬಂಕನಕಟ್ಟೆಯ ಕಾಶ್ಯಪಗೋತ್ರದ ಅಶ್ವಲಾಯನ ಸೂತ್ರದ ಋಕ್‌ಶಾಖೆಯ ನಾರಾಯಣಭಟ್ಟನ ಮಗ ತಿರುಮಲ ಭಟ್ಟನಿಗೆ ಸ್ವಲ್ಪ ಭೂಮಿ ಮತ್ತು ಮನೆಯ ನಿವೇಶನವನ್ನು ನೀಡಿರುವುದನ್ನು ಉಲ್ಲೇಖಿಸಲಾಗಿದೆ.

ಪಂಚಮಠಗಳು

ಮಚ್ಚೇರಿಯ ಇನ್ನೊಂದು ಶಾಸನದಲ್ಲಿ (ಇ.ಸಿ.೧೨, ಕಡೂರು ೧೭೧) 'ಮಚ್ಚೇರಿಯ ಪಂಚಮಠವರ್ತಿ' ಎನ್ನುವ ಉಲ್ಲೇಖ ಇರುವುದರಿಂದ ಈ ಸ್ಥಳದಲ್ಲಿ ಪಂಚಮಠಗಳು ಇರುವುದು ಸಾಬೀತಾಗಿದೆ. ಶೈವಮತವಲ್ಲದೇ ತಾಮ್ರ ಶಾಸನವೊಂದರಲ್ಲಿ (ಕ.೨೫೨) ಯೋಗೀಶ್ವರ ಎಂಬ ಉಲ್ಲೇಖ ವಿದ್ದು, ಈತನನ್ನು ವೈಷ್ಣವಾಗ್ರೇಸರ ಎಂದು ಕರೆಯಲಾಗಿದೆ ಮತ್ತು ಮಂತ್ರಗಳನ್ನು ಹೇಳುವಲ್ಲಿ ಸಿದ್ಧನಾಗಿದ್ದನೆಂದು ಹೇಳಲಾಗಿದೆ. ಇದರಿಂದಾಗಿ ವೈಷ್ಣವ ಮತವಿದ್ದುದು ತಿಳಿದು ಬರುತ್ತದೆ. ಉಳಿದ ಮಠಗಳ ಉಲ್ಲೇಖ ಕಂಡುಬರುವುದಿಲ್ಲ.

ಮಚ್ಚೇರಿಯಲ್ಲಿ ಅನೇಕ ದೇವಾಲಯಗಳಿದ್ದು, ವಾಸ್ತುವಿನ ದೃಷ್ಟಿಯಿಂದ ಕಲ್ಯಾಣ ಚಾಲುಕ್ಯ, ವಿಜಯನಗರ ಕಾಲಕ್ಕೆ ಸೇರಿಸಬಹುದಾಗಿವೆ. ದೇವಾಲಯಗಳ ಸಂಪೂರ್ಣ ವಾಗಿ ಶಿಥಿಲವಾಗಿದ್ದು ಉದ್ಭವ ಗೋಪಾಲಕೃಷ್ಣ ದೇವಾಲಯವು ಮನೆಯೊಂದರ ಭಾಗವಾಗಿದ್ದು ಅವರದನ್ನು ಪುನಃ ಕಟ್ಟಿಸಿದ್ದರೂ ಶೈಥಿಲ್ಯಾವಸ್ಥೆಯಲ್ಲಿಯೇ ಇದೆ. ಯೋಗಾನರಸಿಂಹ ದೇವಾಲಯದ ಸ್ಥಿತಿ ಕೂಡ ಇದಕ್ಕಿಂತ ಹೊರತಾಗಿಲ್ಲ.

ಐತಿಹಾಸಿಕ ದೃಷ್ಟಿಯಿಂದ ಮಚ್ಚೇರಿಯು ಆಸಂದಿ ನಾಡಿನಲ್ಲಿದ್ದ ಒಂದು ಸಾಂಸ್ಕೃತಿಕ ಸ್ಥಳವಾಗಿತ್ತೆಂದು ನಿಶ್ಚಿತವಾಗಿ ಹೇಳಬಹುದು.

ಅಪ್ರಕಟಿತ ಶಾಸನ

ಈ ಮೊದಲೇ ತಿಳಿಸಿದಂತೆ ರಾಷ್ಟ್ರಕೂಟ ಮತ್ತು ಗಂಗರ ನಡುವೆ ಯುದ್ಧವೊಂದು ನಡೆದಿರುವುದು ಸುಮಾರು ೮೦೮ರ ಆಸುಪಾಸಿನಲ್ಲಿ. ಈ ಶಾಸನವು ಶಿಲ್ಪದ ದೃಷ್ಟಿಯಿಂದ ಗಂಗರ ಶೈಲಿಯನ್ನು ಹೋಲುತ್ತಿದ್ದರೂ ಸಮಕಾಲೀನ ರಾಷ್ಟ್ರಕೂಟರ ಚಲನಶೀಲತೆಯ ಪ್ರಭಾವವನ್ನು ಕಾಣಬಹುದಾಗಿದೆ. ಲಿಪಿಯ ದೃಷ್ಟಿಯಿಂದ ರಾಷ್ಟ್ರಕೂಟ-ಗಂಗರ ಕಾಲದ್ದಾಗಿದೆ.

ಶಿಲ್ಪವು ಒಟ್ಟು ಮೂರು ಹಂತಗಳನ್ನು ಒಳಗೊಂಡಿದೆ. ಮೊದಲನೆಯ ಹಂತದಲ್ಲಿ ಮೂವರೂ ವಾದ್ಯಗಳನ್ನು ನುಡಿಸುತ್ತಿರುವುದು ಕಂಡುಬರುತ್ತದೆ. ವಾದ್ಯಗಾರರ ಪಕ್ಕದಲ್ಲಿ ಒಬ್ಬ ವ್ಯಕ್ತಿ ಮತ್ತೊಬ್ಬನ ತಲೆಯನ್ನು ಕಡಿಯುತ್ತಿರುವುದು. ಮತ್ತೊರ್ವ ಬೆಂಕಿಯ ಕುಂಡವೊಂದರಲ್ಲಿ ಕುಳಿತಿರುವುದನ್ನು ಕಾಣಬಹುದು. ವೀರನೋರ್ವನು ಕತ್ತಿಯನ್ನು ಹಿಡಿದು ಆನೆಯ ಮೇಲೆ ಕುಳಿತವರೊಂದಿಗೆ ಹೋರಾಡುತ್ತಿರುವ ದೃಶ್ಯವಿದೆ. ಎಡಭಾಗದಲ್ಲಿರುವವರೆಲ್ಲರೂ ತಲೆಯ ಮೇಲೆ ಅಥವಾ ಪಕ್ಕದಲ್ಲಿ ಮುಡಿಯನ್ನು ಕಟ್ಟಿದವರಾಗಿದ್ದಾರೆ. ಬಲಭಾಗ ದಲ್ಲಿರುವ ಆನೆಯ ಮೇಲೆ ಕುಳಿತಿರುವ ವ್ಯಕ್ತಿಗಳು ಕಿರೀಟ

ವನ್ನುಳ್ಳವರಾಗಿದ್ದಾರೆ. ಆನೆಯ ಮುಂಭಾಗದಲ್ಲಿರುವ ವ್ಯಕ್ತಿಯು ಈಟಿಯನ್ನು ಹೋಲುವ ಆಯುಧವನ್ನು ಕೈಯಲ್ಲಿ ಹಿಡಿದಂತೆ ಕಾಣುತ್ತದೆ.

ಎರಡನೆಯ ಹಂತದಲ್ಲಿ ವೀರನು ಇಬ್ಬರು ಅಪ್ಸರೆಯೊಡನೆ ಹಾರಾಡುತ್ತಿರುವ ದೃಶ್ಯವಿದೆ. ಮೂರನೆಯ ಹಂತದಲ್ಲಿ ಇಬ್ಬರು ಚಾಮರಧಾರಿಯರು ಹಾಗೂ ಧ್ಯಾನಕ್ಕೆ ಕುಳಿತ ವೀರನ ಶಿಲ್ಪಗಳಿವೆ.

೧ . . ಗಟ್ಟ . . . . ಗ . . . ನೊಳಗು . . ನಗದೇಚ್ಚೆ ಆಸನ್ದಿನಾಡ . . . .

೨ . ಗಮಜಿಭವ ಕಾಳಗದಲ್ಲಿ . . . . . . ವ . ಬಿಟ್ಟ . . . . .

೩ ಕ ಪಿದನ . . . . . .
4 ನ್ದಿ ಗ . ದಿ . . . .

೫ ಅಜಿ . ಭ . . . .

೬ ವೀರ . . (ತ್ಗ) . . . . . .

೭ . ಯರಿಟ್ಟ . . . ಮ . . ಮ . .

೮ . . . . ಲು . . . . . ತ . ವ .

೯ . . . ಟ್ದಿ ನಗದಲ್ಲಿ ಪುರ . . ಚಿ(ದಿ)(ಥಿ) . . . . . ಲು . (ಗಸಿ)(ಸು) . ದ . . .

೧೦ . . . . ನಿರವ ವೊಳ್ಯ (.) ನಿಂದನ(ಮಂದನ) ಮ ಭು . ತಿ

೧೧ ಮುನ್ದೆನೊಯ್ಯಭಕ್ತನಗೊ ಕೊಟ್ಟವ ನಿಲಪಿದ (ಗ) ಕೊಟ್ಟ . ಯನ . ವ(ಚ)

೧೨ . ಟ್ಟ ದಿಸವೊಳಗೆಯ್ಯ ಗಳ . ಕ್ರಿಲ್ಲ . ಚ್ರಿ . . ಮ . .

ಡಾ. ಎಂ.ವಿ.ಕೃಷ್ಣರಾವ್‌ರವರು ಈ ವಿಷಯದ ಬಗ್ಗೆ ಚರ್ಚಿಸಿರುವಂತೆ (ಎಂ.ಎ.ಆರ್.೧೯೪೪ ಸಂಖ್ಯೆ ೬ ಮತ್ತು ಇ.ಸಿ.೧೨, ಪು.೧೧೬ ಟಿಪ್ಪಣಿ ೩೧ & ೩೨) "ಒಂದೇ ರಾಜವಂಶಕ್ಕೆ ಸೇರಿದ ಇಬ್ಬರು ಕದನವೊಂದರಲ್ಲಿ ಮೃತರಾಗಿರುವುದು ಕಂಡುಬರುತ್ತದೆ. ಇದಕ್ಕೆ ಪುಷ್ಟಿ ನೀಡುವ ಶಾಸನವಾಗಿ ಮಚ್ಚೇರಿಯ ಅಪ್ರಕಟಿತ ಶಾಸನವು ಇದೆ. ಶಾಸನ ಓದಲು ಅಸ್ಪಷ್ಟವಾಗಿರುವುದರಿಂದ ಮತ್ತು ಇದರಲ್ಲಿ ಕೆಲವು ವ್ಯಕ್ತಿಗಳ ಹೆಸರು ಉಲ್ಲೇಖಿತವಾಗಿದ್ದರೂ ನಿಖರವಾಗಿ



ಹೇಳಲು ಸಾಧ್ಯವಾಗುತ್ತಿಲ್ಲ. ವಿಶೇಷವಾಗಿ ಶಿಲ್ಪದ ದೃಷ್ಟಿಯಿಂದ ಹೇಳುವುದಾದರೆ, ಈ ಶಾಸನದಲ್ಲಿ ಆನೆಯ ಮೇಲೆ ಇಬ್ಬರು ವೀರರು ಕುಳಿತಿದ್ದು, ಹೋರಾಟ ನಡೆಸಿದ್ದು. ಬಹುಶಃ ಈ ಇಬ್ಬರೇ ಗಂಗ ಶ್ರೀಪುರುಷ ಮತ್ತು ಆತನ ಮಗ ಶಿವಮಾರರು ಯುದ್ಧ ಮಾಡುತ್ತಿರುವ ಸಂದರ್ಭ ಇರಬಹುದಾಗಿರುವ ಸಾಧ್ಯತೆ ಇದೆ. (ಇ.ಸಿ.೧೨ ಅಡಿಟಿಪ್ಪಣಿ ೩೧ & ೩೨, ಮೈ.ವಿ.ವಿ.)

ಒಟ್ಟಾರೆಯಾಗಿ ಹೇಳುವುದಾದರೆ ಮಚ್ಚೇರಿಯು ಕ್ರಿ.ಶ.೮ನೆಯ ಶತಮಾನದ ಉತ್ತರಾರ್ಧದಿಂದ ಇಂದಿನವರೆಗೆ ಅಸ್ತಿತ್ವದಲ್ಲಿರುವ ನಾಡು. ಇದುವರೆಗೆ ಇದರ ಅಸ್ತಿತ್ವವನ್ನು ಗುರುತಿಸಲಾಗಿತ್ತು. ಪ್ರಸ್ತುತ ಅಪ್ರಕಟಿತ ವೀರಗಲ್ಲು ಶಾಸನವು ೮ನೆಯ ಶತಮಾನದ ಉತ್ತರಾರ್ಧಕ್ಕೆ ಕೊಂಡೊಯ್ಯುತ್ತದೆ. ವಿಶೇಷವಾಗಿ ರಾಷ್ಟ್ರಕೂಟರಿಗೂ ಗಂಗರಿಗೂ ನಡೆದ ಹೋರಾಟದ ಬಗೆಗೆ ಮಾಹಿತಿಯನ್ನು ಒದಗಿಸುತ್ತದೆ.

[ಈ ಲೇಖನವನ್ನು ಸಿದ್ಧಪಡಿಸುವಲ್ಲಿ ಸಹಾಯಹಸ್ತವನ್ನು ಚಾಚಿದ ಡಾ. ಬಿ.ಆರ್. ಭಾರತೀ ಅವರಿಗೆ ನಾನು ಆಭಾರಿಯಾಗಿದ್ದೇನೆ. ಪತಿ ಶ್ರೀ ಎಚ್.ಎಸ್. ಗಣೇಶ್, ಮಗ ಚಿ. ವಾಸುಕಿ ಜಿ., ಮಚ್ಚೇರಿಯ ಮೋಹನ್ ಮತ್ತು ಕುಟುಂಬದವರು, ಪರಮೇಶ, ಮಂಜು, ಗೆಳೆಯ ರಾ. ಶಶಿಧರ ಅವರಿಗೆ, ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕರಿಸಿದ ನನ್ನ ಮೆಚ್ಚಿನ ಗುರುಗಳಿಗೆ ಕೃತಜ್ಞತೆಗಳು ಸಲ್ಲುತ್ತವೆ.]

ಆಧಾರಸೂಚಿ

೧. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ ೧೨, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೨. ಎಂ.ಎ.ಆರ್. ೧೯೪೪, ಸಂಖ್ಯೆ ೬.

೩. ಲಿಪಿಯ ಹುಟ್ಟು ಮತ್ತು ಬೆಳವಣಿಗೆ, ಡಾ. ದೇವರಕೊಂಡಾರೆಡ್ಡಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೨೭

ಚಿಕ್ಕಮಗಳೂರು ಜಿಲ್ಲಾ ಔಸನ ಗ್ರಾಮದ ಅಪ್ರಕಟಿತ ಶಾಸನ ಹಾಗೂ ಈ ಗ್ರಾಮದಲ್ಲಿರುವ ದೇವ ಸಾನಿಧ್ಯಗಳು

ಸಿದ್ಧರಗಿರಿ ಓ.ಎಲ್. ಚಂದ್ರೇಗೌಡ*

ಮಹಾರಾಷ್ಟ್ರದಿಂದ ತಮಿಳುನಾಡಿನ ಕನ್ಯಾಕುಮಾರಿ ಭೂಶಿರದ ವರೆಗಿನ ಪಶ್ಚಿಮ ದಿಕ್ಕಿನಂಚಿನಲ್ಲಿರುವ ತ್ರಯಂಬಕಾದ್ರಿ, ಕೊಡಚಾದ್ರಿ, ಸೈಹ್ಯಾದ್ರಿ, ಶಿಶಿಲಾದ್ರಿ, ಕುಮಾರಾದ್ರಿ, ವೈನಾದ್ರಿ, ನೀಲಾದ್ರಿ ಹಾಗು ಸುವೇಲಾದ್ರಿ ಪರ್ವತ ಸಾಲಿನಿಂದ ಆವೃತವಾದ ಮಲೆಯಾದ್ರಿ ಘಟ್ಟಸೀಮೆ ಯನ್ನು ಪಶ್ಚಿಮಘಟ್ಟ ಶ್ರೇಣಿ ಎಂದು ಸಂಬೋದಿಸುತ್ತೇವೆ. ಈ ಘಟ್ಟಸೀಮೆಯ ಪರ್ವತ ಸಾಲಿನ ಸ್ಥಳೀಯ ಚಾರಿತ್ರಿಕ ಹೆಸರನ್ನು ಇಲ್ಲಿಯವರೆಗೆ ಯಾರೂ ದಾಖಲಿಸದೇ ಇರುವುದರಿಂದ ವಿಶೇಷವಾಗಿ ದಾಖಲಿಸಿದ್ದೇನೆ.

ಈ ಜಗತ್ಪ್ರಸಿದ್ಧವಾದ ಮಲೆಯಾದ್ರಿ ಪಶ್ಚಿಮಘಟ್ಟ ಶ್ರೇಣಿಯಲ್ಲಿರುವ ಶಿಶಿಲಾದ್ರಿ ಪರ್ವತ ಸ್ತೋಮದ ದೇವರಮನೆ ಎಂಬ ಪರ್ವತದಲ್ಲಿನ ಕಾಲಭೈರವನ ಪಾದತಲದ ಕಲ್ಯಾಣಿಯಲ್ಲಿ ಉದ್ಭವಿಸಿ ಭೈರವನ ಬಲಭಾಗದಲ್ಲಿ ನೆಲೆಸಿರುವ ಧೂಮಾವತಿ ದೇವಿಯ ಹೆಸರಿನಲ್ಲಿ ಉತ್ತರಾಭಿಮುಖವಾಗಿ ಹೊರಟು ನಂತರ ಪೂರ್ವಾಭಿಮುಖವಾಗಿ ತಿರುಗಿ ಹರಿಯುತ್ತಾ ಕೋಗಿಲೆ, ಗುತ್ತಿ, ಕೊಟ್ರಕೆರೆ, ತ್ರಿಪುರ, ಹೆಸಗೂಡು, ಔಸನ ಹೇರಗುಡ್ಡೆ, ಪಟ್ಟದ್ದೂರು ಗ್ರಾಮಗಳಲ್ಲಿ ಹಾದು ಬಕ್ಕಿ ಗ್ರಾಮದಲ್ಲಿ ಹೇಮಾವತಿ ನದಿಯೊಡನೆ ಕೂಡಿಕೊಂಡು ಮುಂದೆ ಹಲವಾರು ನದಿಗಳೊಡನೆ ಸಾಗಿ ಕಾವೇರಿಯೊಡನೆ ಒಂದಾಗುತ್ತಾಳೆ.

ಈ ಔಸನ ಗ್ರಾಮವು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಿಂದ ಸುಮಾರು ೧೨ ಕಿ.ಮೀ. ದೂರದಲ್ಲಿದೆ. ಇ.ಸಿ.ಮೂಡಿಗೆರೆ ೩೩ ಎಂದು ಗುರುತಿಸಿರುವ ಬೆಟ್ಟಗೆರೆ ಗ್ರಾಮದ ಮಠದಳ್ಳಿಯ ಶಿಲಾಶಾಸನಾಧಾರ ರೀತ್ಯ ಇಲ್ಲಿ ಇದ್ದಂತ ಹೊಯ್ಸಳರ ಕಾಲದ ಕೋಟೆಯ ಉಲ್ಲೇಖವಿದೆ. ಈ ನಶಿಸಿರುವ ಮಣ್ಣಿನ ಕೋಟೆಯ ಕಂದಕದ ಬದಿಯಲ್ಲಿ ಕಲ್ಲಿನ ನೆಲಹಾಸಿನ ಮೇಲೆ ಅಪ್ರಕಟಿತ ಹೊಯ್ಸಳ ೩ನೇ ನರಸಿಂಹ ಬಲ್ಲಾಳನ ಕಾಲದ ವೀರಗಲ್ಲಿನ ಶಾಸನವಿದೆ. ಈ ಶಾಸನವನ್ನು ಡಾ॥ ಡಿ.ಎಂ. ನಾಗರಾಜ್ ಆರ್ಕಾಲಜಿ ಸರ್ವೆ ಅಪ್ ಇಂಡಿಯಾ ಮೈಸೂರು ರವರನ್ನು ನಾನು ಬರಮಾಡಿಕೊಂಡು ಪಡಿಯಚ್ಚು ತೆಗೆಸಿ ಓದಿಸಿ ಐ.ಎಸ್.ಐ. ನಲ್ಲಿ ಹಿಂದೆಯೇ ದಾಖಲಿಸಿದ್ದೇನೆ. ಇದರ ಒಕ್ಕಣೆ ಕೆಳಕಂಡತಿದೆ.

೧ ಸ್ವಸ್ತಿ ಶ್ರೀ ಮನ್ಮಹಾ ಮಾಂಡಳೇಶ್ವರ ದ್ವಾರಾವತಿ ಪುರಾದೀಶ್ವರ.....ಮಲ್ಲಕಿಗ್ಗದ ಶನಿವಾರಸಿದ್ಧ

೨ .....ಗ....ಗಾಯ ತಳಕಾಡ ಗಂಗವಾಡಿ ನೊಣಂಬವಾಡಿ. ಬನವಾಸಿ, ಹಾನಗಲ್ಲು

೩ ಉಚ್ಚಂಗಿಕೊಂಡ ಪ್ರತಾಪ ಹೊಯ್ಸಣ ಶ್ರೀ ವೀರ ಬಲ್ಲಾಳ ದೇವರು ಪ್ರ

೪ ತ್ವಿ ರಾಜ್ಯ ಗೈಯುತಿರೆ ಹೆಬ್ಬೆಟ್ಟದ ಬಳಿ .... ಬಿಟ್ಟಿದೇವನ ಕಾಳಗದ ಸತ್ತಿವೆರ್ಗಡೆ

೫ ಯರ ಮಗ ಬರವೆಗ್ಗಡೆ ದು ಸಂವತ್ಸರದ ಪಾಲ್ಗುಣ ಸು ೫ ಸೋ ಕಾದಿ ಬಿಟ್ಟ ಹೆ

ಈ ಮೇಲ್ಕಂಡ ನಾನಾ ಬಿರುದಾಂಕಿತ ಹೊಯ್ಸಳ ೩ನೇ ನರಸಿಂಹ ಬಲ್ಲಾಳರಸರು ಸಾಮಂತ ಪಾಳೆಗಾರ ರೊಡಗೂಡಿಕೊಂಡು ಚದುರಂಗಬಲ ಸಮೇತರಾಗಿ ವೈರಿಗಳ ಮೇಲೆ ದಂಡೆತ್ತಿಹೋದಾಗ ದುಂದುಬಿ ಸಂವತ್ಸರದ ಪಾಲ್ಗುಣ ಮಾಸದ ಶುಕ್ಲಪಕ್ಷ ಐದರಂದು ಹೆಬ್ಬಟ್ಟ ಎಂಬಲ್ಲಿ ನಡೆದ ಘೋರ ಕಾಳಗದಲ್ಲಿ ಈ ಗ್ರಾಮದ ಸತ್ತಿವೆಗ್ಗಡೆಯ ಕುಮಾರ ಬರವೆಗ್ಗಡೆ ಎಂಬುವವರು ವೈರಿಗಳೊಡನೆ ವೀರಾವೇಶದಿಂದ ಹೋರಾಡುತ್ತಾ ವೀರಮರಣ ಹೊಂದಿದ ಜ್ಞಾಪಕಾರ್ಥವಾಗಿ ನೆಟ್ಟ ವೀರಗಲ್ಲಿನ ಶಾಸನವಾಗಿದೆ.

ಗ್ರಾಮದ ದೇವಸಾನಿಧ್ಯಗಳು

ಈ ಗ್ರಾಮದ ದಕ್ಷಿಣ ದಿಕ್ಕಿನ ದಿಬ್ಬಾಕಾರದ ವನದ ಮದ್ಯದಲ್ಲಿ ಸುಮಾರು ೩ ಗುಂಟೆಯಷ್ಟರ ಸ್ಥಳದಲ್ಲಿ ಮೂರು

---

* ಸಿದ್ದರಗಿರಿ ಕಾಫಿ ಎಸ್ಟೇಟ್, ಜಾಗರ ಅಂಚೆ, ಚಿಕ್ಕಮಗಳೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ಪ್ರತ್ಯೇಕ-ಪ್ರತ್ಯೇಕವಾದ ದೇವಸಾನಿದ್ಯವನ್ನು ತ್ರಿಕೋಣಾಕಾರವಾದ ಆಯುತದಲ್ಲಿ ಪೂರ್ವಾಭಿಮುಖವಾಗಿ ಪ್ರತಿಷ್ಠಾಪಿಸಲ್ಪಟ್ಟಿದೆ. ಬನವನ್ನು ನಾವು ಕ್ಷೇತ್ರ ಕಾರ್ಯಕ್ಕಾಗಿ ಪ್ರವೇಶಿಸಿ ನೋಡಿದರೆ ಅಲ್ಲಿರುವ ಮೂರು ದೇವಾಯಾತಗಳನ್ನು ಕಾಣಬಹುದು. ಅದರಲ್ಲಿ ನಮ್ಮ ಎಡಬದಿಯ ದೇವಾಯಾತವು ಸ್ವಲ್ಪ ಎತ್ತರವಾದ ನೆಲಕಟ್ಟಿನ ಮೇಲೆ ಪ್ರತಿಷ್ಠಾಪಿಸಲ್ಪಟ್ಟಿರುವುದು ಕಂಡುಬರುತ್ತದೆ. ಆದುದರಿಂದ ಈ ಸ್ಥಾನವು ಕ್ಷೇತ್ರದ ಅಗ್ರಪೂಜೆಗೆ ಅರ್ಹವಾದಂತಹ ಸ್ಥಾನವೆಂದು ನಿರ್ಣಯಿಸಬಹುದು.

ಈ ಸ್ಥಾನವನ್ನು ಒಂದನೇ ದೇವಾಯಾತವೆಂದು ಗುರುತಿಸಿ ಸಂಶೋಧನೆಗೆ ಹೊರಟರೆ ಈ ಸ್ಥಾನವು ಚಚೌಕವಾದ ನೆಲೆಗಟ್ಟಿನ ಮೇಲೆ ಕೃಷ್ಣಶಿಲೆಯಿಂದ ನಿರ್ಮಿಸಿರುವ ಮೂರು ವಿಗ್ರಹಗಳನ್ನು ಪ್ರತಿಷ್ಠಾಪಿಸಿದ್ದಾರೆ. ಇದರಲ್ಲಿ ನಮ್ಮ ಎಡಭಾಗದಿಂದ ಮೊದಲನೆಯದ್ದೆಂದು ಗುರುತಿಸಬಹುದಾದ ವಿಗ್ರಹವು ದ್ವಿಬಾಹುರೂಪಿಯಾಗಿ ಬಲಗೈಯಲ್ಲಿ ಖಡ್ಗದಾರಣೆಗೆಂದೇ ಅನುವುಮಾಡಿರುವ ರಂದ್ರ ಇರುವ ಖಡ್ಗದ ಹಿಡುಪನ್ನು ಮತ್ತು ಎಡಗೈಯಲ್ಲಿ ಕಪಾಲ ಹಿಡಿದುಕೊಂಡು ಹಣೆಯಲ್ಲಿ ಮುಚ್ಚಿದ ಮೂರನೇ ಕಣ್ಣು ಸ್ಪಷ್ಟವಾಗಿ ಗೋಚರಿಸುತ್ತಿರುವಂತಹ ವಟುಕ (ಕುಮಾರ) ರೂಪಿಯು ಕರ್ಣಕುಂಡಲಧಾರಿಯಾಗಿ ಕಿರೀಟದಿಂದ ಅಲಂಕೃತಗೊಂಡ ಗಿಡುಗಾರೂಢ ಸುಂದರವಾದ ವಿಗ್ರಹವಿದೆ.

ಇದರ ಎಡಪಕ್ಕದಲ್ಲಿ ಸಮಾನ ಎತ್ತರದ ಪೀಠದ ಮೇಲೆ ಮಯೂರ ರೂಢಾನಾದ ದ್ವಿಭಾಹು ರೂಪಿಯಾದ ಸುಂದರವಾದ ವಿಗ್ರಹವು ಬಲಗೈಯಲ್ಲಿ ಖಡ್ಗಾದಾರಣೆಗೆಂದೇ ಅನುವು ಮಾಡಿರುವ ಖಡ್ಗದ ಹಿಡುಪನ್ನು ಮತ್ತು ಎಡಗೈಯಲ್ಲಿ ಕಪಾಲ ಹಿಡಿದುಕೊಂಡು ಹಣೆಯಲ್ಲಿ ಮುಚ್ಚಿರುವ ಮೂರನೇ ಕಣ್ಣಿರುವಂತಃ ವಟುಕ (ಕುಮಾರ) ರೂಪಿ, ಕುಂಡಲಧಾರಿಯಾದ ವಿಗ್ರಹ ಇದೆ.

ಇದರ ಎಡಪಕ್ಕದಲ್ಲಿ ಈ ಎರಡೂ ವಿಗ್ರಹಗಳ ಸಮಾನಾಂತರ ಸ್ಥಾನದಲ್ಲಿ ಈ ಎರಡು ವಿಗ್ರಹಗಳಿಗಿಂತಲೂ ಎತ್ತರವಾದ ದ್ವಿಬಾಹುಗಳಿಂದ ಭೂಷಿತವಾದ ದೇವಿರೂಪಿ ವಿಗ್ರಹವು ಬಲಗೈಯಲ್ಲಿ ಲೋಹದ ಖಡ್ಗವನ್ನು ಧಾರಣೆ ಮಾಡಲು ಅನುವುಮಾಡಿಕೊಂಡಿರುವಂತಹ ರಂದ್ರವುಳ್ಳ ಖಡ್ಗದ ಹಿಡುಪನ್ನು ಹಾಗೂ ಎಡಗೈಯಲ್ಲಿ ಪಾನಬಟ್ಟಲನ್ನು ಧಾರಣೆ ಮಾಡಿಕೊಂಡ ಸುಮಾರು ಒಂದು ಅಡಿ ಎತ್ತರದ ಪೀಠಾಸನದ ಮೇಲೆ ಕುಳಿತ ಭಂಗಿಯ ಸುಂದರವಾದ ವಿಗ್ರಹವಿದೆ.

ಈ ಕ್ಷೇತ್ರದ ಎರಡನೇ ದೇವಾಯಾತ ಸ್ಥಾನವು ಮೊದಲನೇ ದೇವಾಯಾತವೆಂದು ಗುರುತಿಸಿರುವ ದೇವಾಯಾತಕ್ಕಿಂತಲೂ ಸ್ವಲ್ಪ ತಗ್ಗಿನದ್ದೆಂದು ಭಾವಿಸಬಹುದಾದ ಚಚೌಕಾಕಾರದ ನೆಲಕಟ್ಟಿನ ಮೇಲೆ ದ್ವಿಭಾಹುಗಳಿಂದ ಭೂಷಿತವಾದಂತಹ ಕೃಷ್ಣಶಿಲೆಯಿಂದ ನಿರ್ಮಿಸಿರುವ ವಿಗ್ರಹವು ಬಲಗೈಯಲ್ಲಿ ತಾವರೆ ಹೂವಿನ ಮೊಗ್ಗನ್ನು ಹಾಗೂ ಎಡಗೈಯಲ್ಲಿ ಪಾನ ಬಟ್ಟಲನ್ನು ದಾರಣೆ ಮಾಡಿಕೊಂಡು ಸುಮಾರು ಒಂದುಕಾಲು ಅಡಿ ಎತ್ತರದ ಪೀಠಾಸನದ ಮೇಲೆ ಕುಳಿತ ಭಂಗಿಯ ಸುಂದರವಾದ ದೇವಿ ವಿಗ್ರಹವಿದೆ. ಈ ದೇವಿ ವಿಗ್ರಹದ ಪೀಠಾಸನದ ಕೆಳಭಾಗದಲ್ಲಿ ಸಿಂಹದ ಗುರುತಿನ ಲಾಂಚನದ ರೇಖಾಚಿತ್ರ ಸ್ಪಷ್ಟವಾಗಿ ಗೋಚರಿಸುತ್ತದೆ.

ಮೂರನೇ ದೇವಾಯಾತ ಈ ಸ್ಥಾನವು ಎರಡನೆಯ ಸ್ಥಾನಕ್ಕಿಂತಲೂ ಎತ್ತರವಾದದ್ದೆಂದು ಕಣ್ಣೋಟಕ್ಕೆ ಭಾವಿಸಬಹುದಾಗಿದೆ. ಈ ದೇವಾಯಾತವು ಚಚೌಕಾಕಾರದ ನೆಲಗಟ್ಟಿನ ಮೇಲೆ ನಸುಗೆಂಪು ಮರಳು ಶಿಲೆಯಿಂದ ರೂಪಿಸಲ್ಪಟ್ಟ ಎರಡು ಬಿಂಬ (ಶಿಲಾವಿಗ್ರಹ)ಗಳನ್ನು ಪ್ರತಿಷ್ಠಾಪಿಸಲ್ಪಟ್ಟಿದೆ. ನಮ್ಮ ಎಡಭಾಗದಿಂದ ಮೊದಲನೆಯದ್ದೆಂದು ಗುರುತಿಸಬಹುದಾದ ವಿಗ್ರಹವು ದ್ವಿಭಾಹುಗಳಿಂದ ಭೂಷಿತವಾಗಿ ಬಲಗೈಯಲ್ಲಿ ದಂಡ, ಎಡಗೈಯಲ್ಲಿ ಪಾನಬಟ್ಟಲು ಹಿಡಿದುಕೊಂಡುಂತಹ ತ್ರಿನೇತ್ರಧಾರಿಯು, ಕುಂಡಲಧಾರಿಯೂ, ದಿಗಂಬರನೂ ಆದ ವಟುಕರೂಪಿಯು ಕಂಠಾಭರಣ ಹಾಗೂ ಯಜ್ಞೋಪವೀತಕ್ಕೆ ರುಂಢಗಳನ್ನು ಪೋಣಿಸಿಕೊಂಡು ಅಂದರೆ ರುಂಡ ಯಜ್ಞೋಪವೀತವನ್ನು ಧಾರಣೆ ಮಾಡಿಕೊಂಡ ಈ ವಟುಕ (ಬಾಲಕ) ರೂಪದ ವಿಗ್ರಹದ ವಜ್ರ (ಲಿಂಗ) ಸ್ಥಾನವು ಸ್ಪಷ್ಟವಾಗಿ ಗೋಚರಿಸುವ ರೀತಿಯಲ್ಲಿ ಸಿದ್ದಾಸನ ಹಾಕಿಕೊಂಡು ಕುಳಿತ ರೀತಿಯಲ್ಲಿ ರೂಪಿಸಿ ಪ್ರತಿಷ್ಠಾಪಿಸಲ್ಪಟ್ಟಿದೆ. ಪಾದತಲದ ಶಿಲಾಸನದಲ್ಲಿ ಸ್ಪಷ್ಟವಾಗಿ ಕಾಣುವಂತಹ ಚೇಳು ಮತ್ತು ಸುನಖನ ರೇಖಾಚಿತ್ರವಿದೆ.

ಈ ವಿಗ್ರಹದ ಎಡಪಕ್ಕದಲ್ಲಿ ಸಮಾನಾಂತರ ನೆಲೆಕಟ್ಟಿನ ಮೇಲೆ ಕೆಂಪು ಮರಳು ಕಲ್ಲಿನಿಂದ ರೂಪಿಸಲ್ಪಟ್ಟಂತಹ ಅಪರೂಪವಾಗಿ ಕಾಣಸಿಗುವ ದೇವಿ ವಿಗ್ರಹವಿದೆ. ಈ ವಿಗ್ರಹವು ಚತುರ್ಭುಜದಿಂದ ಭೂಷಿತವಾಗಿದೆ. ಇದರ ಬಲಭುಜದ ಮುಂಗೈಯಲ್ಲಿ ಲೋಹದ ಖಡ್ಗವನ್ನು ಧಾರಣೆ ಮಾಡಲು ಅನುವು ಮಾಡಿಕೊಂಡಂತಹ ರಂದ್ರವಿರುವ ಖಡ್ಗದ ಹಿಡುಪನ್ನು, ಬಲಭುಜದ ಹಿಂಗೈಯಲ್ಲಿ ಡಮರು ತ್ರಿಶೂಲವನ್ನು ಹಾಗೂ ಎಡಭುಜದ ಹಿಂಗೈಯಲ್ಲಿ ತೇವರ (ಸೃಷ್ಟಿ, ಸ್ಥಿತಿ, ಲಯ ಕಾರಕ ಮಾಂತ್ರಿಕ ದಂಢ) ಮತ್ತು ಕಾಪಾಲವನ್ನು ಹಾಗೆಯೇ ಎಡಭುಜದ ಮುಂಗೈಯಲ್ಲಿ ಪಾನಬಟ್ಟಲು (ಖರ್ಪ)ವನ್ನು ಧಾರಣೆ ಮಾಡಿಕೊಂಡು ಸುಮಾರು ಒಂದುವರೆ ಅಡಿ ಎತ್ತರದ ಶಿಲಾಪೀಠದಲ್ಲಿ ಶವದ ಮೇಲೆ

ಆಸೀನಳಾದ (ಶವಾಸನಾರೂಢಳಾದ) ಸುಮಾರು ೩ ಅಡಿ ಎತ್ತರದ ದೇವಿ ವಿಗ್ರಹವು ಕಾಲ್ಗಡಗ, ಕಾಲ್ಗೆಜ್ಜೆಗಳಿಂದ ಭೂಷಿತವಾಗಿ ರುಂಡಗಳನ್ನು ಪೋಣಿಸಿಕೊಂಡ ಯಜ್ಞೋಪವೀತವನ್ನು ಎಡದಿಂದ ಬಲಕ್ಕೆ ಧಾರಣೆ ಮಾಡಿಕೊಂಡ ಕರ್ಣ ಕುಂಡಳಿಗಳಿಗೂ ಸಹ ಶವವನ್ನು ಧಾರಣೆ ಮಾಡಿಕೊಂಡಿರುವುದಲ್ಲದೆ ತಲೆಗೂದಲನ್ನು ಎತ್ತಿಕಟ್ಟಿ ರುಂಢಾಮಾಲಾ ಹಣೆಪಟ್ಟಿಯಿಂದ ಅಲಂಕರಿಸಿಕೊಂಡು ಶಿರೋಮುಡಿಗೆ ಅಗಲವಾದ ತ್ರಿಶೂಲ ಚಿಹ್ನೆಯಿಂದ ಅಲಂಕರಿಸಿಕೊಂಡಿದೆ. (ಚಾಮುಂಡಾ).

ಈ ಗ್ರಾಮದ ದೇವಸಾನಿದ್ಯದ ವಿಶ್ಲೇಷಣೆಗಳು

ಈ ಗ್ರಾಮದಲ್ಲಿರುವ ದೇವತೆಗಳ ಅನುಸಂಘದಿಂದ ನಾಥಸಂಪ್ರದಾಯದ ಭೈರವ ದೇವತಾ ಮಂಡಲದ ರಹಸ್ಯವನ್ನು ವಿವರಿಸುವುದಕ್ಕೆ ಸಾಧ್ಯವಿದೆ. ಈ ಹಿನ್ನೆಲೆಯಲ್ಲಿ ನಾಥ ಸಂಪ್ರದಾಯದ ಆರಾದ್ಯ ದೈವ ಬೈರವನೆಂಬ ಲೋಕಪ್ರಸಿದ್ದ ದೇವತೆಯ ಕ್ಷೇತ್ರಸ್ಥಾನಗಳನ್ನು ಮೂರ್ತಿ ವೈಶಿಷ್ಟ್ಯಗಳನ್ನು ಉಪಾಸನಾ ಸಾಹಿತ್ಯಗಳನ್ನು ಹಾಗೂ ಸ್ಥಳೀಯ ಜನಪದ ಸಾಹಿತ್ಯವನ್ನು ಸಹ ಪರಿವೀಕ್ಷಣೆಯನ್ನು ಮಾಡಬಹುದಾಗಿದೆ.

ಈ ಅಷ್ಟಭೈರವರುಗಳನ್ನು ಯಮಳ ತಂತ್ರಗಳಲ್ಲಿ ಉಲ್ಲೇಖಿಸಿರುವಂತೆ **"ಅಷ್ಟಬಾಹುಂ ತ್ರಿನಯನಂ ಚತುರ್ಭಾಹುಂ ದ್ವಿಭಾಹುಕಂ"** ಎಂಬ ಮೂರು ಗುಣ ರೂಪಾಕಾರಗಳಲ್ಲಿ ನಾಥಸಂಪ್ರದಾಯದ ಸಿದ್ದರುಗಳು ಆರಾಧಿಸುತ್ತಾರೆ.

ಈ ರೀತಿಯಲ್ಲಿ ಅಷ್ಟಬಾಹುಗಳಿಂದ ಭೂಷಿತನಾದ ಭೈರವ ರೂಪವು ತಾಮಸಾರಾಧನೆಯ ಸ್ವರೂಪ ಅಂದರೆ ಪ್ರಾಣಿಬಲಿ ಪೂಜಾರಾದನಾ ಸ್ವೀಕಾರ ಸ್ವರೂಪ, ಚಿಕ್ಕಮಗಳೂರು ಜಿಲ್ಲಾ ಹೊಸನಗರ ತಾಲ್ಲೂಕಿನ ಬೈರಾಪುರದ ಶಿಶಿಲಾದ್ರಿ ಪರ್ವತದ ತಪ್ಪಲಿನಲ್ಲೂ, ಶಿವಮೊಗ್ಗ ಜಿಲ್ಲಾ ಹೊಸನಗರ ತಾಲ್ಲೂಕಿನ ಕೊಡಚಾದ್ರಿ ಪರ್ವತದಲ್ಲಿನ ಮೂಕಾಂಬಿಕಾದೇವಿಯ ಎದುರಿನಲ್ಲೂ ಪ್ರತಿಷ್ಠಾಪಿಸಲ್ಪಟ್ಟಿದೆ. ಧಾರವಾಡ ಜಿಲ್ಲಾ ಮಡಿವಾಳೇಶ್ವರ ಮಠದಲ್ಲೂ, ಬೆಳಗಾವಿ ಜಿಲ್ಲಾ ಸಿರಸಂಗಿಯಲ್ಲೂ ಹಾಗೂ ನೇಪಾಳ ದೇಶದ ರಾಜದಾನಿ ಖಟ್ಮಂಡುವಿನಲ್ಲಿಯೂ ವಿಗ್ರಹ ರೂಪದಲ್ಲಿ ಕಂಡುಬರುತ್ತವೆ.

ಚತುರ್ಬಾಹುಗಳಿಂದ ಭೂಷಿತನಾದ ಭೈರವ ರೂಪವು ರಾಜಸ ಆರಾಧನಾ ಸ್ವರೂಪ ಇದನ್ನು ಆದಿಚುಂಚನ ಗಿರಿಯಿಂದ ಕದ್ರಿ, ಚಂದ್ರಗುತ್ತಿ ಮುಂತಾದ ಎಲ್ಲಾ ಸುಕ್ಷೇತ್ರಗಳಲ್ಲೂ ಸಾಮಾನ್ಯವಾಗಿ ಕಾಣಬಹುದು.

ದ್ವಿಬಾಹುಗಳಿಂದ ಭೂಷಿತನಾದ ಭೈರವ ರೂಪವು ಸಾತ್ವಿಕಾರಾಧನೆಯ ಸ್ವರೂಪ. ಈ ಸ್ವರೂಪದ ಕಾಲಭೈರವನು ನಿಂತಭಂಗಿಯಲ್ಲಿ ಗೋಕರ್ಣ ಕ್ಷೇತ್ರದಲ್ಲೂ ಹಾಗೆಯೇ ಈ ಸಾತ್ವಿಕ ಸ್ವರೂಪದ ಉನ್ಮತ್ತ ಭೈರವ ಹಾಗೂ ಛಂಢ ಭೈರವನ ನಿಂತಭಂಗಿಯ ವಿಗ್ರಹವು ಉಡುಪಿ ಜಿಲ್ಲೆಯ ಬಾರ್ಕೂರಿನ ಪಂಚಲಿಂಗೇಶ್ವರ ದೇವಸ್ಥಾನದಲ್ಲಿಯೂ ಕಾಣಬಹುದು. ಆದರೆ ಆಸನಾರೂಢನಾಗಿ ಕುಳಿತ ರೀತಿಯಲ್ಲಿರುವ ಕಾಲಭೈರವನ ವಿಗ್ರಹವು ನಾನು ಕ್ಷೇತ್ರಕಾರ್ಯ ನಡೆಸಿರುವ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕ್ ಊಸನ ಗ್ರಾಮದಲ್ಲಿ ಮಾತ್ರ ಕಾಣಲು ಸಾಧ್ಯ.

ನಾನು ಕ್ಷೇತ್ರಕಾರ್ಯದಲ್ಲಿ ಒಂದನೇ ದೇವಾಯಾತವೆಂದು ಗುರುತಿಸಿರುವ ಸ್ಥಳದಲ್ಲಿರುವ ವಿಗ್ರಹವು ದ್ವಿಬಾಹು–ತ್ರಿನೇತ್ರಧಾರಿಯಾಗಿರುವ ವಟುಕ ರೂಪಿಯು ಗಿಡುಗಾರೂಢನಾಗಿರುವುದು ಕಂಡುಬರುತ್ತದೆ. ತ್ರಿನೇತ್ರವೂ ಶಿವನ ಪರಿಪೂರ್ಣ ಸ್ವರೂಪವಾದ ಭೈರವಾಕಾರದಲ್ಲಿ ಮಾತ್ರ ಕಾಣಲು ಸಾದ್ಯ ಹಾಗೆಯೇ ಗಿಡುಗವೂ ಸಹ ಅಷ್ಟಭೈರವರಲ್ಲಿ ಒಬ್ಬನಾದ ಕ್ರೋಧ ಭೈರವನ ವಾಹನವಾಗಿರುವುದರಿಂದ ಹಾಗೂ ವಿಗ್ರಹವೂ ದ್ವಿಬಾಹುಗಳನ್ನು ಹೊಂದಿದ ವಟುಕರೂಪದಲ್ಲಿದೆ. ನಾನು ಮೇಲೆ ಹೇಳಿದ ಹಾಗೆ ಸಾತ್ವಿಕ ಭೈರವರು ದ್ವಿಬಾಹುಗಳನ್ನು ಹೊಂದಿರುವುದರಿಂದ ಈ ವಿಗ್ರಹವನ್ನು ವಟುಕ (ಕುಮಾರ) ಕ್ರೋಧ ಭೈರವ ಎಂದು ದೃಢಪಡಿಸಬಹುದು.

ಈ ವಿಗ್ರಹದ ಎಡಪಕ್ಕದಲ್ಲಿ ಇದೇ ಗುಣ, ರೂಪ, ಲಕ್ಷಣಗಳಿಂದ ಕೂಡಿರುವ ಮಯ್ಯೂರಾ ರೂಢನಾದ ವಿಗ್ರಹವಿದೆ. ಮಯ್ಯೂರ (ನವಿಲು) ಅಷ್ಟ ಬೈರವರುಗಳಲ್ಲಿ ಒಬ್ಬರಾದ ಚಂಢ ಬೈರವನ ವಾಹನ ವಾಗಿರುವುದರಿಂದ ಹಾಗೂ ಪಕ್ಕದಲ್ಲಿರುವ ಬೈರವನ ತ್ರಿನೇತ್ರದಿಂದಾದಿಯಾಗಿ ಎಲ್ಲಾ ಲಕ್ಷಣಗಳನ್ನು ಹೊಂದಿರುವುದರಿಂದ ಇದನ್ನು ವಟುಕ ಚಂಢ ಬೈರವ ಎಂದು ದೃಢಪಡಿಸಬಹುದು.

ಈ ಚಂಡಭೈರವ ವಿಗ್ರಹದ ಎಡಬದಿಯಲ್ಲಿ ಸಮಾನಾಂತರವಾದ ನೆಲಕಟ್ಟಿನ ಮೇಲೆ ಭೈರವರುಗಳಿಗಿಂತಲೂ ಎತ್ತರವಾದ ಆಕಾರದ ಸುಂದರ ಸ್ತ್ರೀ ವಿಗ್ರಹವು ಸುಮಾರು ಒಂದುವರೆ ಅಡಿ ಎತ್ತರದ ಪೀಠದಮೇಲೆ ದ್ವಿಬಾಹುಗಳಿಂದ ಭೂಷಿತಳಾಗಿ ತಲೆಗೂದಲನ್ನು ಹಿಂದಕ್ಕೆ ಬಾಚಿ ದುರುಬಿನೋಪಾದಿಯಲ್ಲಿ ಕಟ್ಟಿಕೊಂಡು ಕರ್ಣಕುಂಡಲ ಧಾರಿಯಾಗಿ ಬಲಗೈಯಲ್ಲಿ ಖಡ್ಗದಾರಣೆ ಮಾಡಲು ಅನುವಾಗಲೆಂದು ರಂದ್ರ ಇರುವಂತ ಖಡ್ಗದ ಹಿಡುಪನ್ನು ಹಿಡಿದುಕೊಂಡು ತಾರುಣ್ಯದ ಎಲ್ಲಾ ಲಕ್ಷಣಗಳನ್ನು ಹೊಂದಿರುವ ಸ್ತ್ರೀ ವಿಗ್ರಹವಿದೆ. ಈ ವಿಗ್ರಹದ ಪೀಠದಲ್ಲಿ

ಮಾಸಲು ಮಾಸಲಾಗಿ ಕಾಣುವ ಮುಯ್ಯೂರನ (ನವಿಲು) ರೇಖಾಚಿತ್ರವಿದೆ. ಹಾಗೆಯೇ ಈ ವಿಗ್ರಹವು ಚಂಡಭೈರವನ ಪಕ್ಕದಲ್ಲಿರುವುದರಿಂದ ಚಂಡ ಭೈರವನ ಚೈತನ್ಯ ಪ್ರೇರಕಳಾದ ಕೌಮಾರಿ ಯೋಗಿನೀದೇವಿ ಎಂದು ಯಮಳ ಶಾತ್ರಾಧಾರ ರೀತ್ಯ ಧೃಢಪಡಿಸಬಹುದು.

ಈ ದೇವಿಯನ್ನು ಆಘೋರ (ಸೌಮ್ಯ) ರೂಪದಲ್ಲಿ ಪ್ರತಿಷ್ಠಾಪಿಸಿದ್ದಾರೆ. ಈ ಮೂರು ವಿಗ್ರಹಗಳು ಆಸನಾರೂಢ ಭಂಗಿಯಲ್ಲಿ ಒಂದೇ ದೇವಾಯಾತದಲ್ಲಿವೆ.

ಎರಡನೇ ದೇವಾಯಾತವೆಂದು ಗುರುತ್ತಿಸಿರುವ ಸ್ಥಳದಲ್ಲಿ ಇರುವ ವಿಗ್ರಹದ ಬಲಗೈಯಲ್ಲಿ ಕಮಲದಮೊಗ್ಗು ಮತ್ತು ಎಡಗೈಯ್ಯಲ್ಲಿ ಪಾನಬಟ್ಟಲು ಹಿಡಿದಿರುವ ದ್ವಿಬಾಹುರೂಪಿಯಾದ ಸಾತ್ವಿಕ ಗುಣಲಕ್ಷಣಗಳಿಂದ ಕೂಡಿದ ಈ ದೇವಿಯ ಪೀಠದಲ್ಲಿ ವ್ಯಾಘ್ರನ (ಸಿಂಹ) ಚಿಹ್ನೆ ಲಾಂಚನ ವಿರುವುದರಿಂದ ಈ ಗುಣಲಕ್ಷಣ ಹೊಂದಿದ ದೇವಿಯ ವಾಹನ ಸಿಂಹವಾಗಿದ್ದರೆ ಯಮಳಶಾಸ್ತ್ರ ಸಮ್ಮತವಾಗಿ ಸಾತ್ವಿಕ ರೂಪಿ ಸ್ಕಂದದುರ್ಗಿ (ಸ್ಕಂದ ಮಾತ) ಎಂದು ಗುರುತಿಸಬಹುದು. ಇಲ್ಲಿಯ ಸ್ಥಳೀಯರು ದೇವಿ ವಿಗ್ರಹದಲ್ಲಿ ಬಾಸಿಂಗರೂಪದ ಪ್ರಭಾವಳಿ ಇರುವುದರಿಂದ ಬಾಸಮ್ಮ ಎಂದು ಕರೆಯುತ್ತಾರೆ. ಇದು ಸಹ ಆಸನಾರೂಢ ಭಂಗಿಯಲ್ಲಿ ಪ್ರತಿಷ್ಠಾಪಿಸಲ್ಪಟ್ಟಿದೆ. ಈ ವಿಗ್ರಹದ ಬಲಭಾಗದಲ್ಲಿ ಸುಮಾರು ೪ ಇಂಚು ದಪ್ಪ ಹಾಗೂ ೫ ಇಂಚು ಎತ್ತರದ ಲಿಂಗಾಕಾರಕ್ಕೆ ಹೋಲುವ ಕಲ್ಲನ್ನು ಪ್ರತಿಷ್ಠಾಪಿಸಿದ್ದಾರೆ. ರೂಪಾಕಾರ ಇಲ್ಲದ್ದರಿಂದ ಯಾವುದು ಎಂದು ತಿಳಿಸಲು ಕಷ್ಟಸಾಧ್ಯವೇ ಸರಿ. ಆದರೆ ಈ ದೇವಿಯ ರೂಪಾಕಾರ ಮತ್ತು ವಾಹನದ ಲಾಂಛನವು ವ್ಯಾಘ್ರ (ಸಿಂಹ) ವಾಗಿರುವುದರಿಂದ ಭೀಷಣ ಭೈರವನ ವಾಹನವೂ ಸಹ ವ್ಯಾಘ್ರ (ಸಿಂಹ) ಆಗಿರುವುದರಿಂದ ಯಮಳಶಾಸ್ತ್ರದ ಆದಾರ ರೀತ್ಯಾ ಸ್ಕಂದದುರ್ಗಿಯ ಪಕ್ಕದಲ್ಲಿ ವಟುಕ (ಕುಮಾರ) ರೂಪಿ ಭೀಷಣ ಭೈರವನಿರುವುದರಿಂದ ಇದನ್ನು ಭೀಷಣ ಭೈರವನೇ ಎಂದು ದೃಢಪಡಿಸಬಹುದು.

ಇಲ್ಲಿರುವ ಮೂರನೇ ದೇವಾಯಾತದಲ್ಲಿ ಈ ಗ್ರಾಮದ ಕ್ಷೇತ್ರಪಾಲಕಳು, ಗ್ರಾಮದ ರಕ್ಷಾದೇವತಾ ಸ್ವರೂಪಳಾದ ದೇವಿಯು ರುಂಢಮಾಲಾ ಧಾರಣಿಯಾಗಿ ತನ್ನ ಕರ್ಣಕುಂಡಲಗಳಲ್ಲಿ ಶವಗಳನ್ನು ಧಾರಣೆ ಮಾಡಿಕೊಂಡು ಕೋರೆ ಧಾಡಿಗಳಿಂದ ಭೂಷಿತಳಾದ ಘೋರ ಸ್ವರೂಪವು ಖಡ್ಗ, ತ್ರಿಶೂಲ, ಢಮರು-ಮಂತ್ರದಂಢ, ಸೃಷ್ಟಿ-ಸ್ಥಿತಿ-ಲಯಕಾರಕ)ಪಾನಭಟ್ಟಲುಗಳನ್ನು ತನ್ನ ಚತುರ್ಭುಜಗಳಲ್ಲಿ ಹಿಡಿದುಕೊಂಡು ರುಂಡಮಾಲೆಯಿಂದ ತಲೆಕೂದಲನ್ನು ಸುತ್ತಿಕಟ್ಟಿ ಅಲಂಕರಿಸಿ ಕೊಂಡು ಶಿರೋಮುಡಿಗೆ ಅಗಲವಾದ ತ್ರಿಶೂಲ ಚಿಹ್ನೆಯಿಂದ ಅಲಂಕರಿಸಿಕೊಂಡಿರುವ (ಈ ರೀತಿಯ ದೇವರ ತಲೆಯ ಮೇಲಿನ ಕಿರೀಟ ಅಥವಾ ತಲೆಯುಡಿಗೆ ಮೇಲೆ ತ್ರಿಶೂಲ ರಚಿಸಿರುವುದು ದೈವತ್ರದ ಪ್ರಾಘಾರ್ಯ ಸಂಕೇತವೆಂದು ಒಪ್ಪಿಕೊಳ್ಳಲೇಬೇಕಾಗಿದೆ ಎಂದು ತ್ರಿರತ್ನ ಬುದ್ದದಮ್ಮ ಮತ್ತು ಸಂಘ ಎಂಬ ಬೌದ್ಧ ಗ್ರಂಥದಲ್ಲಿ ಉಲ್ಲೇಖವಾಗಿರುವುದರಿಂದ ಈ ಶಿಲಾ ಮೂರ್ತಿಗೆ ಹೆಚ್ಚಿನ ಸಂಶೋದನೆಯ ಅವಶ್ಯಕತೆ ಇರುವುದರಿಂದ ಇತಿಹಾಸ ಅಕಾಡಮಿ ಮತ್ತು ಸಂಶೋಧಕರು ವಿಶೇಷವಾಗಿ ಪರಿಗಣಿಸುವುದು ಒಳಿತಾಗಿರುತ್ತದೆ.) ಘನಘೋರ ರೂಪದಲ್ಲಿ ಕಣ್ತೆರೆಯದೆ (ಕಣ್ಣುಮುಚ್ಚಿಕೊಂಡು) ಶವಾಸನಾರೂಢಳಾಗಿ ಪ್ರತಿಷ್ಠಾಪನೆಗೊಂಡಿದೆ. ಇಷ್ಟು ಘನಘೋರ ರೂಪದಲ್ಲಿದ್ದರೂ ಸಹ ಹಸನ್ಮುಖಭಾವದಲ್ಲಿ ಕಿರುನಗೆಸೂಸುತ್ತಾ ಇರುವ ಪರಾಶಕ್ತಿಯ ಈ ಘೋರ ಸ್ವರೂಪದ ದೇವಿಯು ಶವಾಸನಾರೂಢಳಾಗಿ ವಟುಕ ಕಾಲಭೈರವನ ಪಕ್ಕದಲ್ಲಿರುವು ದರಿಂದ ಯಮಳಾಧಾರಿತ ಶಾಸ್ತ್ರಸಮ್ಮತವಾಗಿ ಚಂಡಿಕಾ (ಚೌಡಿ) ಎಂದು ಹೆಸರಿಸಬಹುದು. ಈ ದೇವಿಯನ್ನು ಸ್ಥಳೀಯರು ಚೌಡೇಶ್ವರಿ ಎಂದು ಹೆಸರಿಸಿ ದೇವಿಯ ಎದುರುಗಡೆ ಸುಮಾರು ೨೫ ಅಡಿಗಳಷ್ಟು ದೂರದಲ್ಲಿ ಪ್ರಾಣಿಬಲಿ ಪೂಜಾರಾದನೆಯನ್ನು ನಡೆಸುತ್ತಾರೆ.

ಈ ಚಂಡಿಕೆಯ ಬಲಪಕ್ಕದಲ್ಲಿ ಆಸನಾರೂಢನಾಗಿರುವ ವಿಗ್ರಹದ ಪಾದತಳದ ಪೀಠದಲ್ಲಿ ಸುನಕನ (ನಾಯಿ) ಲಾಂಚನವಿದ್ದು ದ್ವಿಭಾಹುಗಳಿಂದ ಭೂಷಿತನಾಗಿದ್ದು ದಿಗಂಬರನೂ ತ್ರಿನೇತ್ರಧಾರಿಯೂ ವಟುಕರೂಪಿಯೂ ಆಗಿರುವುದರಿಂದ ಸಾತ್ವಿಕ ವಟುಕಕಾಲಭೈರವನೆಂದು ದೃಢಪಡಿಸಬಹುದು. ಸಿದ್ಧಾಸನದಲ್ಲಿ ಕುಳಿತ ಭಂಗಿಯ ವಟುಕ ರೂಪಿ ಸಾತ್ವಿಕ ಕಾಲಭೈರವನ ಬಿಂಬವು ಬಹಳ ವಿರಳ ಹಾಗೂ ಅಪರೂಪದ ವಿಗ್ರಹವಾಗಿದೆ.

ಶಾಕ್ತಪಂಥೀಯ ಸಾಧಕರುಗಳಿಂದ ಪ್ರತಿಷ್ಠಾಪಿಸಿ ಆರಾಧಿಸಲ್ಪಟ್ಟ ಸ್ಥಳಗಳಲ್ಲಿ ಮಾತ್ರ ಭೈರವರುಗಳನ್ನು ಕನಿಷ್ಠ ಹಾಗೂ ಶಕ್ತಿ (ದೇವಿ)ಯನ್ನು ಜೇಷ್ಠಮಟ್ಟದಲ್ಲಿಯೂ ಆರಾಧಿಸಲ್ಪಡುತ್ತದೆ. ಆದುದರಿಂದ ಔಸನ ಗ್ರಾಮದಲ್ಲಿರುವು ದೇವಿಯು ರೂಪಾಕಾರಗಳು ಗಾತ್ರಗಳು ಹಾಗೂ ಪೀಠಾಸನಗಳು ಸಹ ಪಕ್ಕದಲ್ಲಿರುವ ಭೈರವರುಗಳಿಗಿಂತಲೂ ಎತ್ತರ ಅಂದರೆ ಜೇಷ್ಠ ಮಟ್ಟದಲ್ಲಿರುವುದು. ಇದರಿಂದಾಗಿಯೇ ಇದು ಶಾಕ್ತ ಪಂತೀಯರ ಆರಾಧನಾಸ್ಥಳವೆಂದು ದೃಢಪಡುತ್ತದೆ.

ಈ ಅವೈದಿಕ ಆಚರಣೆಯನ್ನು ಮೂಲತಃ ನಾಥ ಸಂಪ್ರದಾಯದ ಎಳೆಗಳಾದ ಪಾಶುಪತ, ಕಾಳಮುಖ, ಕೌಲ, ಶಾಕ್ತ, ಕಾಪಾಲಿಕ, ಗಾಣಪಥ, ಸರ್ಪಪಂಥ ಸಂಪ್ರದಾಯದ ಸ್ಥಾಪಕರುಗಳಾದ ಮಚ್ಚೇಂದ್ರ (ಮತ್ಸೇಂದ್ರ) ಘೋರಕ (ಲಕುಲೀಶ) ಜ್ವಾಲಾಂದರ, ಕಾನೀಪ (ಕಾಪಾಲಿಕ) ಯಿಂದಾದಿಯಾಗಿ ಚೌರಾಸೆ (೮೪) ಸಿದ್ದರುಗಳು ತಮ್ಮ

ಸಿದ್ಧಿಸಾಧನಾ ತಾಂತ್ರಿಕ ಶಕ್ತಿಯನ್ನು ಪ್ರಕೃತಿ ಸಹಜವಾಗಿ ನದಿಗಳಲ್ಲಿ ಹಾಗೂ ಭೂಗರ್ಭದಲ್ಲಿ ಸಹಜವಾಗಿ ಸಿಕ್ಕುವ ಲಿಂಗಾಕಾರದ ಅಥವಾ ಗುಂಡಾಕಾರದ ಉದ್ಭವ ಕಲ್ಲು, ಮರ ಮುಂತಾದವುಗಳಿಗೂ, ಕಾಲಾಂತರದಲ್ಲಿ ಅಂದರೆ ಸುಮಾರ ೫–೬ನೇ ಶತಮಾನದಿಂದೀಚಗೆ ಶಿಲೆಗಳಲ್ಲಿ ವಿಗ್ರಹ (ಕಡಿಯಲು) ಮಾಡಲು ಶುರು ಮಾಡಿದ ನಂತರ ತಮ್ಮ ಸಾಧನಾ ಜ್ಞಾನಚಾಕ್ಷುವಿನಿಂದ ತಾನು ಕಂಡ ತನ್ನ ಇಷ್ಟದೇವರ ರೇಖಾಚಿತ್ರವನ್ನು ಬಿಡಿಸಿ ಶಿಲ್ಪಿಗಳಿಂದ ಶಿಲೆಗಳಲ್ಲಿ ವಿಗ್ರಹ ಮಾಡಿಸಿ ತಮ್ಮ ಮಹತ್ತರವಾದ ಸಾಧನಾ ಇಚ್ಛಾಶಕ್ತಿಯಿಂದ ತನ್ನ ಇಷ್ಟದೈವವನ್ನು ಆವಾಹಯಾಮಿಸಿ ಗಿರಿ, ಕಾನನ, ಗಾಳಿಯಿಂದಾದಿಯಾಗಿ ಬೃಹದ್ಭಾರತದಾದ್ಯಂತ ಹಳ್ಳಿ–ಹಳ್ಳಿಗಳಲ್ಲಿ ಬೀದಿ–ಬೀದಿಗಳಲ್ಲಿ ಮನೆದೇವರು, ಗ್ರಾಮದೇವರು, ಕುಲದೇವರು, ನಾಡ ದೇವರುಗಳಿಂದಾದಿಯಾಗಿ ದ್ವಾದಶ ಜ್ಯೋತಿರ್ಲಿಂಗದ ಸ್ಥಾಪನೆಯ ಹೆಗ್ಗಳಿಗೆ ನಾಥಸಿದ್ದರಿಗೆ ಸಲ್ಲುತ್ತದೆ.

ಈ ತೆರೆನಾದ ನಾಥಸಂಪ್ರದಾಯದ ಶಾಕ್ತ ಪಂಥೀಯ ಮಲೆನಾಡ ಮೂಲ ನಿವಾಸಿ ಕೃಷಿಕ ಬಳಗದವರು ವಸಂತ ಋತು ವಿನಾದ್ಯಂತ ಆಚರಿಸುವ ಸೊಬಗಿನ ವಸಂತ ಸುಗ್ಗಿ ಉತ್ಸವದ ಆರಾಧನಾ ಸ್ಥಳದಲ್ಲೊಂದೆಂದು ಹೆಸರಿಸಬಹುದಾದ ಸ್ಥಳವೇ ಔಸನ ಗ್ರಾಮದಲ್ಲಿ ಆರಾದಿಸುತ್ತಿರುವ ದೈವಾರಾಧನೆ ಗಳು.

ಈ ದೈವಾರಾಧನೆಗಳು ಜನಪರ ಸಂಸ್ಕೃತಿಯ ಪರಂಪರೆ ಯಾಗಿ ಬೆಳೆದು ತನ್ನ ವಿಶಿಷ್ಟವಾದ ವಾರ್ಷಿಕ ಆರಾಧನೆಯಿಂದ ಉಳಿದುಕೊಂಡು ಬಂದಿದೆ. ಎಂಟನೇ ಶತಮಾನದಿಂದೀಚೆಗೆ ಗುಡಿಗಳ ಜೀರ್ಣೋದ್ಧಾರನಿಮಿತ್ತವನ್ನು ಮುಂದಿಟ್ಟುಕೊಂಡು ಆಚಾರ್ಯಪರಂಪರೆಯವರುಗಳಿಂದ ಬಹುತೇಕ ಸ್ಥಳಗಳಲ್ಲಿ ಪರಿವರ್ತನೆಗೊಂಡು ವೈದಿಕ ದೇವತಾರಾದನೆಯ ರೂಪ ಪಡೆದುಕೊಂಡಿವೆ. ಆದರೆ ಒಳಹೊಕ್ಕು ನೋಡಿದರೆ ಆರಾಧನಾ ನಿಯಮಗಳಲ್ಲಿ ವಿಗ್ರಹಗಳ ರೂಪಾಕಾರಗಳಲ್ಲಿ ಕೆಲವೊಂದು ಮೂಲ ಅವೈದಿಕ ಸಂಪ್ರದಾಯದ ಅಂತಶಕ್ತಿಯ ಒಳಹರಿವು ಗೋಚರಿಸದಿರದು.

ಇಲ್ಲಿ ನಿತ್ಯಪೂಜೆಯು ಸಾಮಾನ್ಯವಾಗಿ ಕಂಡು ಬರುವುದಿಲ್ಲ. ಉದಾಹರಣೆಗಾಗಿ ಹಾಸನದ ಹಾಸನಾಂಬಳ ದೇಗುಲದ ಬಾಗಿಲನ್ನು ನಿರ್ದಿಷ್ಟ ದಿನಗಳಲ್ಲಿ ಮಾತ್ರ ತೆರೆದು ಪೂಜಾ ಕೈಂಕರ್ಯ ಮುಗಿಸಿದ ನಂತರ ಬಾಗಿಲು ಮುಚ್ಚಿದರೆ ನಂತರ ಬಾಗಿಲು ತೆರೆದು ಪೂಜಿಸಿ ಆರಾಧಿಸುವುದು ಒಂದು ವರ್ಷಗಳ ನಂತರದ ನಿರ್ದಿಷ್ಟ ದಿವಸವೇ ಬರಬೇಕು. ಇಂತಹ ಆರಾಧನಾ ಸ್ಥಳಗಳಲ್ಲೊಂದು ಔಸನ ಗ್ರಾಮದ ದೇವಸಾನಿಧ್ಯ.

ಈ ದೇವಸಾನಿದ್ಯದ ವಿಶೇಷತೆಗಳೆಂದರೆ ಅತಿ ವಿರಳ ವಾದ ಕ್ರೋಧಭೈರವ, ಚಂಢಭೈರವ ಹಾಗೂ ಕಾಲಭೈರವನ ವಿಗ್ರಹಗಳು ಸಾತ್ವಿಕ ರೂಪದಲ್ಲಿರುವುದು ರಾಜ್ಯದಲ್ಲೇನೂ ರಾಷ್ಟ್ರದಲ್ಲಿಯೂ ಇರುವುದೇ ಅಪರೂಪ. ಅದರಲ್ಲೂ ಒಂದೇ ದೇವಾಲಯದಲ್ಲಿದ್ದು ಆಸನ ರೂಢಾರಾಗಿ ಇರುವ ಭೈರವ ದರ್ಶನವು ಇನ್ನೂ ವಿರಳಾತಿವಿರಳ.

ಇಂತಹ ಎಷ್ಟೋ ನಾಥ ಸಂಪ್ರದಾಯದ ಕ್ಷೇತ್ರಗಳಲ್ಲಿ ನಿತ್ಯ ಪೂಜಾರಾಧನೆ ಕಂಡುಬರುವುದು ಗುಡಿಗೋಪುರಗಳನ್ನು ಭವ್ಯವಾಗಿ ಕಟ್ಟಲು ಶುರುಮಾಡಿದ ನಂತರ ಆಚಾರ್ಯ ಪರಂಪರೆಗೆ ಪರಿವರ್ತನೆಗೊಂಡು ವೈದಿಕ ದೇವತಾರಾಧನೆಯ ರೂಪ ಪಡೆದುಕೊಂಡ ನಂತರದ ಕಾಲಾವಧಿಯ ಆಚರಣೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಈ ಗ್ರಾಮದ ಹೆಸರಿನ ಹುಟ್ಟು

ಈ ವಿಶೇಷತೆಗಳನ್ನು ತನ್ನ ಉದರದಲ್ಲಿಟ್ಟುಕೊಂಡ ಈ ಗ್ರಾಮದಲ್ಲಿರುವ ಎಲ್ಲಾ ದೇವಸಾನಿಧ್ಯಗಳು ಆಸನರೂಢ ರಾಗಿರುವುದರಿಂದ ಈ ಗ್ರಾಮಕ್ಕೆ ಆಸನಗ್ರಾಮವೆಂದು ಆದಿಯಲ್ಲಿ ಕರೆಯಲ್ಪಟ್ಟು ನಂತರ ಇ.ಸಿ. ಮೂಡಿಗೆರೆ ೩೩ ಎಂದು ಗುರುತಿಸಿರುವ ತೇದಿ ದಾಖಲಾಗದ ಶಿಲಾ ಶಾಸನವು ಈ ಗ್ರಾಮಕ್ಕೆ ಸುಮಾರು ಐದಾರು ಕೂಗಳೆತೆ ದೂರದಲ್ಲಿರುವ ಮಠದಳ್ಳಿ ಎಂಬಲ್ಲಿದೆ. ಈ ಶಿಲಾಶಾಸನದಲ್ಲಿ ಅಗುಸನದ ಕೋಟೆ ಎಂಬುದಾಗಿ ಈ ಗ್ರಾಮದಲ್ಲಿನ ಮಣ್ಣಿನ ಕೋಟೆ ಯನ್ನು ಹೆಸರಿಸಿರುವ ಉಲ್ಲೇಖದ ಆಧಾರದ ಮೇಲೆ ಅಗುಸನ ಎಂಬ ಹೆಸರಿನ ಗ್ರಾಮವಾಗಿ ನಂತರದ ಕಾಲಾವಧಿಯ ಆಡುಭಾಷೆಯಲ್ಲಿ ಆವೂಸನವೆಂಬುದಾಗಿ ರೂಡಿಯಲ್ಲಿದ್ದು ತದನಂತರ ಬ್ರಿಟಿಷ್ ರಾಜ್ಯಾಡಳಿತದ ೧೮೮೬ ರಿಂದೀಚೆಗೆ ಕಂದಾಯ ದಾಖಲಾಯಿತಿಗಳಲ್ಲಿ ಔಸನ ಗ್ರಾಮವೆಂದು ರೂಪಗೊಂಡು ಈಗ ಕರೆಯಲ್ಪಡುತ್ತಿದೆ.

ನಾಥ ಸಂಪ್ರದಾಯದ ಆರಾಧ್ಯ ದೈವ ಅಷ್ಟಾ ಮತ್ತು ಅಷ್ಟಾಷ್ಟ ಭೈರವರುಗಳನ್ನು ದೇಶ ವ್ಯಾಪ್ತಿಯಲ್ಲೆಲ್ಲ ಹಲವಾರು ಕ್ಷೇತ್ರಗಳಲ್ಲಿ ಶೈವರೂಪಗೊಳಿಸಲು ಪ್ರಯತ್ನಿಸಲಾಗಿದೆ ಯಾದರೂ ಒಳಹೊಕ್ಕು ನೋಡಿದರೆ ಅವರ ಮೂಲ ಸ್ವಭಾವ ಹಾಗೆಯೇ ಉಳಿದುಕೊಂಡಿರುವುದು ಗೋಚರಿಸುತ್ತದೆ. ಸುಮಾರಾಗಿ ೮ನೇ ಶತಮಾನದಿಂದೀಚೆಗೆ ಸ್ಥಳಪುರಾಣಗಳೆಂಬ ಕಥೆಗಳಂತಹ ಕಲ್ಪಿತ ಸ್ಪಷ್ಟೀಕರಣ ಕಥೆಗಳಿಂದ ಇವರುಗಳನ್ನು ಶಿವಾವತಾರಗೊಳಿಸಲು ಬಹಳ ಪ್ರಯತ್ನ ನಡೆದಿದೆಯಾದರೂ ಮೂರ್ತ ಸ್ವರೂಪ ಮತ್ತು ಉಪಾಸನಾ ಮೂಲಮಂತ್ರದಂತಹ ಮುಖ್ಯ ವಿಚಾರಗಳಲ್ಲಿ ಮೂಲತತ್ವ ಹಾಗೆಯೇ ಉಳಿದು ಕೊಂಡಿರುವುದರಿಂದ ತಮ್ಮ ಮೂಲತತ್ವವನ್ನು ಕಾಪಾಡಿ ಕೊಂಡು ತಮ್ಮ ಅಂತರಂಗವನ್ನು ಸರ್ವವ್ಯಾಪ್ತಿ ಪ್ರಕಟ ಗೊಳಿಸುತ್ತಿದ್ದಾರೆ ಭೈರವರುಗಳು.

ಲಕ್ಷ್ಮೇಶ್ವರದ ಸೋಮೇಶ್ವರ ದೇವಾಲಯದಲ್ಲಿನ ವೀರಗಲ್ಲುಗಳು

ಡಾ. ಎಚ್.ಜಯಮ್ಮ ಕರಿಯಣ್ಣ*

ಲಕ್ಷ್ಮೇಶ್ವರದಲ್ಲಿರುವ ಸೋಮೇಶ್ವರ ದೇವಾಲಯದ ಉತ್ತರ ಪ್ರವೇಶದ್ವಾರದ ಬಳಿ ನಿಲ್ಲಿಸಿರುವ ಮೂರು ವೀರಗಲ್ಲುಗಳಲ್ಲೂ ಶಾಸನವಿಲ್ಲ. ಶಿಲ್ಪ ಮತ್ತು ಬಳಸಿರುವ ಕಲ್ಲಿನ ಆಧಾರದ ಮೇಲೆ ಈ ವೀರಗಲ್ಲುಗಳು ಬಹುಶಃ ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದವು. ಇಲ್ಲಿನ ಮೂರು ವೀರಗಲ್ಲುಗಳಲ್ಲಿ ಒಂದು ಕೋಟೆ ಕಾಳಗಕ್ಕೆ ಸಂಬಂಧಿಸಿದ್ದು, ಉಳಿದವು ವೀರಗಲ್ಲುಗಳು.

ಕೋಟೆ ಕಾಳಗಕ್ಕೆ ಸೇರಿದ ವೀರಗಲ್ಲು ಐದು ಹಂತಗಳಲ್ಲಿದೆ. ಮೊದಲ ಹಂತದಲ್ಲಿ ನಾಲ್ವರು ವೀರರು ವೀರಗಲ್ಲಿನ ಎಡಭಾಗದಿಂದ ಬಲಭಾಗದ ಕಡೆ ಹೋಗುತ್ತಿದ್ದಾರೆ. ವೀರರ ಕೈಗಳಲ್ಲಿ ಕೋಟೆ ಕಾಳಗದಲ್ಲಿ ಬಳಸಬಹುದಾದ ಈಟಿಯಂತಿರುವ ಉದ್ದವಾದ ಆಯುಧ ವಿದೆ. ಇವುಗಳನ್ನು ಸಬಳ ಎಂದು ಗುರುತಿಸಬಹುದು. ಇದು ಮನುಷ್ಯನ ಎತ್ತರಕ್ಕಿಂತ ಉದ್ದವಾಗಿದ್ದು ಕೋಟೆಯ ಮೇಲಿರುವ ವ್ಯಕ್ತಿಗಳನ್ನು ತಿವಿಯಲು ಬಳಸಲಾಗುತ್ತಿತ್ತು. ಸಬಳಗಳ ತುದಿ ಮೊನಚಾಗಿ, ತಳಭಾಗ ತ್ರಿಕೋಣಕಾರವಾಗಿದೆ. ಅದರ ಕೆಳಭಾಗ ಒಂದು ಕಡೆ ಹರಿತವಾದ ಆಯುಧ ಸೇರಿಸಿದಂತೆ ಇದೆ. ವೀರರು ಎರಡೂ ಕಾಲುಗಳಲ್ಲಿ ಕಾಲಂದಿಗೆಗಳನ್ನು, ಕೈಗಳಲ್ಲಿ ಕೈ ಕಡಗ, ತೋಳಬಂದಿ ಮತ್ತು ಕೊರಳಿನಲ್ಲಿ ವಿವಿಧ ರೀತಿಯ ಕಂಠಾಭರಣಗಳನ್ನು, ಕಿವಿಗಳಲ್ಲಿ ಆಭರಣಗಳನ್ನು ಧರಿಸಿದ್ದಾರೆ. ತಲೆಯ ಕೂದಲನ್ನು ಗಂಟು ಹಾಕಿದ್ದಾರೆ. ಕಾಲಾಳು ವೀರರ ಹಿಂಭಾಗದಲ್ಲಿ ಕುದುರೆಗಳ ಮೇಲೆ ಕುಳಿತ ವೀರರ ಆಯುಧಗಳನ್ನು ಹಿಡಿದು ಬರುತ್ತಿದ್ದಾರೆ. ಈ ಹಂತದಲ್ಲಿ ಕೋಟೆ ಕಾಳಗಕ್ಕೆ ಸಿದ್ಧರಾಗಿ ಬರುತ್ತಿರುವಂತೆ ಬಿಡಿಸಲಾಗಿದೆ.

ಎರಡನೆಯ ಹಂತದಲ್ಲಿ ನಾಲ್ವರು ವೀರರು ಕೋಟೆಯ ಸಮೀಪಕ್ಕೆ ಬಂದು ಕೋಟೆಯನ್ನು ರಕ್ಷಣೆ ಮಾಡುತ್ತಿರುವ ಶತ್ರು ಪಕ್ಷದವರನ್ನು ಸಬಳದಿಂದ ಚುಚ್ಚಿ ತಿವಿಯುತ್ತಿದ್ದಾರೆ. ಕೋಟೆಯ ಬುಡದ ಕಲ್ಲನ್ನು ಕೀಳುತ್ತಿರುವ ವೀರ ಎಡಗಾಲ ಮಂಡಿಯನ್ನು ಭೂಮಿಯ ಮೇಲಿಟ್ಟು ಬಲಗಾಲನ್ನು ಮುಂದಿಟ್ಟು ಎಡಗೈಲಿ ಗುರಾಣಿ ಆಸರೆಯಲ್ಲಿ ಕೋಟೆಯ ಕಲ್ಲನ್ನು ಕೀಳುವ ಭಂಗಿಯಲ್ಲಿದ್ದಾನೆ. ಕೋಟೆಯ ಮೇಲಿರುವ ಶತ್ರು ಸೈನಿಕರು ಎದುರಾಳಿಗಳ ಮೇಲೆ ಕೆಲವು ವಸ್ತುಗಳನ್ನು ಹಾಕುತ್ತಿರುವಂತೆ ಬಿಡಿಸಿದೆ. ಕೆಳಗೆ ಒಬ್ಬ ಸತ್ತ ವೀರನ ತಲೆ ಕಾಣುತ್ತದೆ. ಕೋಟೆಯ ಬುಡದಲ್ಲಿ ಕುಳಿತಿರುವ ವೀರನನ್ನು ಡಾ. ಶೇಷಶಾಸ್ತ್ರೀಯವರು ಅಲ್ಲಿ ಸತ್ತು ಬಿದ್ದಿರುವ ವ್ಯಕ್ತಿಯ ಶವದ ಕಾಲನ್ನು ಎಳೆಯುತ್ತಿದ್ದಾನೆ ಎಂಬ ಅಭಿಪ್ರಾಯ ಪಟ್ಟಿದ್ದಾರೆ. ಇದೇ ಚಿತ್ರವನ್ನು ಹಲವು ಛಾಯಾಚಿತ್ರಗಳ ಜೊತೆಯಲ್ಲಿ ಡಾ. ಎಂ. ಚಿದಾನಂದಮೂರ್ತಿ ಅವರು ತಮ್ಮ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಕೃತಿಯಲ್ಲಿ ನೀಡಿದ್ದಾರೆ.

ಮೂರನೆಯ ಹಂತದಲ್ಲಿ ನಾಲ್ಕು ಜನ ಅಲಂಕೃತ ಅಪ್ಸರೆಯರು ವಾದ್ಯಗಳ ಸಹಿತ ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿದ್ದಾರೆ. ಎಡಭಾಗದ ಕಡೆಯಲ್ಲಿರುವ ಅಪ್ಸರೆಯ ಕೈಯಲ್ಲಿ ಜಾಗಟೆಯನ್ನು ಮತ್ತು ಬಲಭಾಗದ ಕಡೆಯ ಅಪ್ಸರೆಯ ಕೈಯಲ್ಲಿ ಮೃದಂಗ ಹಿಡಿದು ಬಾರಿಸುತ್ತಿರುವಂತೆಯೂ ನಡುವಿರುವ ಇಬ್ಬರು ಅಪ್ಸರೆಯರು ಸತ್ತ ವೀರನನ್ನು ಆಕಾಶ ಮಾರ್ಗವಾಗಿ ಎತ್ತಿಕೊಂಡು ಹೋಗುತ್ತಿರುವಂತೆ ಬಿಡಿಸಿದೆ. ನಾಲ್ಕನೆಯ ಹಂತದಲ್ಲಿ ವೀರನನ್ನು ವಿಮಾನದಲ್ಲಿ ಕುಳ್ಳಿರಿಸಿದ್ದಾರೆ. ವೀರ ಕೈಮುಗಿದು ಪದ್ಮಾಸನದಲ್ಲಿ ಆಸೀನನಾಗಿದ್ದಾನೆ. ಅಪ್ಸರೆಯರ ಆಚೆ ಈಚೆ ಒಬ್ಬ ಉದ್ದನೆಯ ತುತ್ತೂರಿಯನ್ನು ಮತ್ತೊಬ್ಬ ಶಂಖವನ್ನು ಊದುತ್ತಿದ್ದಾರೆ. ಇನ್ನಿಬ್ಬರು ಚಾಮರಧಾರಿ ಅಪ್ಸರೆಯರು ವೀರ ಕುಳಿತಿರುವ ಪುಷ್ಪಕ ವಿಮಾನವನ್ನು ಹೊತ್ತೊಯ್ಯುತ್ತಿದ್ದಾರೆ.

ಕಡೆಯ ಹಂತದಲ್ಲಿ ವೀರನು ಸ್ವರ್ಗಾರೋಹಣ ಮಾಡಿದ್ದಾನೆ. ಕೈಲಾಸದಲ್ಲಿರುವಂತೆ ದೇವಾಲಯದಲ್ಲಿ ಶಿವಲಿಂಗವನ್ನು ಪೂಜಿಸುತ್ತಿರುವ ವ್ಯಕ್ತಿ ಯೋಗಿಯಂತಿದ್ದಾನೆ. ಶಿವಲಿಂಗವಿರುವ ಆಲಯದ ಹೊರಭಾಗದಲ್ಲಿ ಭಕ್ತ ಪದ್ಮಾಸನದಲ್ಲಿ ಕೈಮುಗಿದು ಕುಳಿತಿದ್ದಾನೆ. ಅವನ ತಲೆಯ ಮೇಲೆ ಮತ್ತು ಕಿವಿಗಳಲ್ಲಿ ಆಭರಣದಂತಿರುವ ವಸ್ತು ಧರಿಸಿ

* ಆಶೀರ್ವಾದ, # ೨೯೩೩, ೧೩ನೇ ಮುಖ್ಯರಸ್ತೆ, ವಿಜಯನಗರ ೨ನೆಯ ಹಂತ, ಬೆಂಗಳೂರು-೫೬೦೦೪೦.

ದ್ದಾನೆ. ಒಂದು ಪಕ್ಕದಲ್ಲಿ ಗಗ್ಗರ ಸರವನ್ನು ಧರಿಸಿರುವ ಹಿಂಗಾಲುಗಳ ಮೇಲೆ ಕುಳಿತು ಮುಂಗಾಲುಗಳನ್ನು ಮಡಿಚಿ ಕುಳಿತಿರುವ ನಂದಿ ಇದೆ. ಹಿಂದೆ ಮೇಲುಭಾಗದಲ್ಲಿ ಒಂದು ಕಡೆ ಸೂರ್ಯ ಮತ್ತೊಂದು ಕಡೆ ಚಂದ್ರನ ಶಿಲ್ಪವಿದೆ. ರುದ್ರ ಕಾಂತದ ಕಂಬಗಳ ಮೇಲೆ ಬೋದಿಗೆ ಇದೆ. ಅದರ ಮೇಲೆ ಅಲಂಕೃತ ಮುಚ್ಚಿಗೆ ಇದೆ. ಮುಚ್ಚಿಗೆಯ ಮೆಲ್ಭಾಗ ಒಡೆದಿದೆ.

ಅಲ್ಲಿರುವ ಎರಡನೆಯ ವೀರಗಲ್ಲು ಸಹ ಕೋಟೆಕಾಳಗಕ್ಕೆ ಸಂಬಂಧಿಸಿರುವಂತೆ ತಿಳಿಯಬಹುದು. ಮೂರು ಹಂತ ದಲ್ಲಿರುವ ಈ ವೀರಗಲ್ಲಿನಲ್ಲಿ ಮುಖಾಮುಖಿಯಾಗಿ ಕುದುರೆಯ ಮೇಲೆ ಕುಳಿತ ವೀರರು ಹಿಡಿದಿರುವ ಉದ್ದನೆಯ ಆಯುದ್ಧ ಈಟಿಯಂತೆ ಕಂಡರು ಸಬಳದಂತಿರುವ ಆಯುಧವನ್ನು ಪ್ರಯೋಗಿಸುತ್ತಿದ್ದಾರೆ. ಎಡಭಾಗದ ವೀರ ಎಡಗೈಲಿ ಹಾಗೂ ಬಲಗೈಲಿ ಕುದುರೆಯ ಲಗಾಮು ಹಿಡಿದಂತೆ ಆಯುಧವನ್ನು ಹಿಡಿದು ಶತ್ರುವಿನ ಮೇಲೆ ಆಕ್ರಮಣ ಮಾಡುತ್ತಿರುವಂತೆ ಬಿಡಿಸಿದೆ. ಈ ವೀರನ ತಲೆಯ ಮೇಲೆ ಛತ್ರಿಯನ್ನು ಬಿಡಿಸಿದೆ. ಹಾಗೂ ಬಲಭಾಗದ ವೀರ ಎಡಗೈಲಿ ಲಗಾಮು ಹಿಡಿದು ಬಲಗೈ ಒಂದರಿಂದಲೇ ಆಯುಧವನ್ನು ಹಿಡಿದು ಹೋರಾಡುತ್ತಿರುವಂತೆ ಚಿತ್ರಿತವಾಗಿದೆ. ಇಬ್ಬರು ವೀರರೂ ಕಡಗ, ತೋಳಬಂದಿ, ಕಂಠಾಭರಣ ಮೊದಲಾದ ಆಭರಣಗಳಿಂದ ಅಲಂಕೃತರಾಗಿದ್ದಾರೆ. ತಲೆಗೆ ಶಿರಸ್ತ್ರಾಣದಂತೆ ಕಾಣುವ ಕಿರೀಟವಿದೆ. ಅಥವಾ ರಕ್ಷಾ ಕವಚವಾಗಿರಲೂ ಬಹುದು. ಕುದುರೆಗಳೆಡರು ಮುಖಾಮುಖಿಯಾಗಿ ನಿಂತು ಹೋರಾಟದಲ್ಲಿ ಭಾಗಿಯಾಗಿವೆ. ಯುದ್ಧದಲ್ಲಿ ಪಾಲುಗೊಂಡು ಭೂಮಿಯ ಮೇಲೆ ಸತ್ತು ಬಿದ್ದಿರುವ ವೀರರನ್ನು ಕಾಣಬಹುದು.

ಎರಡನೆಯ ಹಂತದಲ್ಲಿ ವೀರನನ್ನು ಅಲಂಕೃತ ಚಾಮರ ಧಾರಿಣಿಯರಾದ ಅಪ್ಸರೆಯರು ಕೈಲಾಸಕ್ಕೆ ಕರೆದೊಯ್ಯುತ್ತಿದ್ದಾರೆ. ವೀರನ ತಲೆಯ ಮೇಲೆ ಗುಂಡಗೆ ಕಿರೀಟದಂತಿರುವ ಶಿರಸ್ತ್ರಾಣವಿದೆ. ಕೊರಳಲ್ಲಿ ಹಲವು ಬಗೆಯ ಕಂಠಾಭರಣಗಳಿವೆ. ನಡುವಿನಲ್ಲಿ ವೀರಗಚ್ಚೆಯ ಮೇಲೆ ಸೊಂಟಕ್ಕೆ ಅಂಗವಸ್ತ್ರ ಬಿಗಿದಿರುವಂತೆ ಬಿಡಿಸಲಾಗಿದೆ. ಮೂರನೆಯ ಹಂತದಲ್ಲಿ ಶಿವಲಿಂಗವಿದೆ. ಮುಂಭಾಗದಲ್ಲಿ ಭಕ್ತ ಪದ್ಮಾಸನದಲ್ಲಿ ಕೈ ಮುಗಿದು ಕುಳಿತಿದ್ದಾನೆ. ಹಿಂಭಾಗದಲ್ಲಿ ಶೈವಯತಿ ಯಂತಿರುವ ವ್ಯಕ್ತಿ ಕೈ ಮುಗಿದು ನಿಂತಿದ್ದಾನೆ.

ಅದೇ ಸ್ಥಳದಲ್ಲಿ ಮತ್ತೊಂದು ವೀರಗಲ್ಲಿದೆ. ಇದು ಮೂರುಹಂತದಲ್ಲಿದ್ದು ಮೊದಲ ಹಂತದಲ್ಲಿ ತೀವ್ರ ಬಿರುಸಾದ ಕಾಳಗ ನಡೆಯುತ್ತಿರುವ ದೃಶ್ಯವೆಂದು ಊಹಿಸಬಹುದಾಗಿದೆ. ಶತ್ರುಗಳು ಮುಖಾಮುಖಿಯಾಗಿದ್ದಾರೆ. ವೀರಗಲ್ಲಿನ ಎಡಭಾಗದಲ್ಲಿ ಕುದುರೆಯ ಮೇಲೆ ಕುಳಿತ ವೀರನ ಕೈಯಲ್ಲಿ ಕತ್ತಿ ಗುರಾಣಿ ಇದೆ. ಅವನ ಜೊತೆ ಕುದುರೆ ರಾಹುತರು ಇದ್ದಾರೆ. ಅವರ ಮುಂದಿರುವ ಕಾಲಾಳು ಬಲಗೈಲಿ ಕತ್ತಿ, ಎಡಗೈಲಿ ಗುರಾಣಿ ಹಿಡಿದು ಬಲಭಾಗದಲ್ಲಿ ಕುದುರೆಯ ಮೇಲೆ ಕುಳಿತಿರುವ ಎದುರು ಪಕ್ಷದ ಶತ್ರುವಿನ ಮೇಲೆ ತನ್ನ ಕತ್ತಿಯಿಂದ ಆಕ್ರಮಣ ಮಾಡುತ್ತಿದ್ದಾನೆ. ಶತ್ರುವಿನ ಪಕ್ಕದಲ್ಲಿ ಬಿಲ್ಲು ಬಾಣ ಹಿಡಿದಿರುವ ಮತ್ತೊಬ್ಬ ವ್ಯಕ್ತಿ ಹೋರಾಟಕ್ಕೆ ಮುನ್ನುಗ್ಗುತ್ತಿದ್ದಾನೆ. ಕುದುರೆಯ ಮೇಲಿರುವ ಶತ್ರು ಎಡಗೈಲಿ ಲಗಾಮು ಹಿಡಿದು ಬಲಗೈಲಿರುವ ಕತ್ತಿಯನ್ನು ಪ್ರಯೋಗಿಸಲು ಸಿದ್ಧನಾಗಿದ್ದಾನೆ. ಸತ್ತು ಬಿದ್ದ ಸೈನಿಕರ ಹೆಣಗಳನ್ನು ಕಾಣಬಹುದು. ಇದರಿಂದ ತೀವ್ರ ಕಾಳಗ ನಡೆದಿರುವುದನ್ನು ತಿಳಿಯಬಹುದು.

ಎರಡನೆಯ ಹಂತದಲ್ಲಿ ಇಬ್ಬರು ಚಾಮರಧಾರಿ ಅಲಂಕೃತ ಅಪ್ಸರೆಯರು ವೀರನು ಕುಳಿತ ವಿಮಾನವನ್ನು ಕೈಲಾಸಕ್ಕೆ ಕೊಂಡೊಯ್ಯುತ್ತಿದ್ದಾರೆ. ವಿಮಾನದಲ್ಲಿ ವೀರ ಪದ್ಮಾಸನದಲ್ಲಿ ಕೈಮುಗಿದು ಕುಳಿತಿದ್ದಾನೆ. ಕಡೆಯ ಹಂತದಲ್ಲಿ ಅದೇ ಶಿವಲಿಂಗ. ಶಿವಲಿಂಗವನ್ನು ಯೋಗಿಯೊಬ್ಬ ಪೂಜಿಸುತ್ತಿರುವಂತೆಯೂ ಆತನ ಹಿಂಭಾಗದಲ್ಲಿ ಕೈಮುಗಿದು ಕುಳಿತ ಭಕ್ತ ಹಾಗೂ ಮುಂಭಾಗದಲ್ಲಿ ನಂದಿ ಶಿವಲಿಂಗವನ್ನು ನೋಡುತ್ತಾ ಕುಳಿತಿರುವಂತೆ ಶಿಲ್ಪಿ ಬಿಡಿಸಿದ್ದಾನೆ.

ಮೇಲಿನ ಈ ಮೂರು ವೀರಗಲ್ಲುಗಳನ್ನು ಗಮನಿಸಿದಾಗ ಕೋಟೆಯ ಚಿತ್ರಣವಿರುವ ವೀರಗಲ್ಲು ಕೋಟೆಯ ಅವರೋಹಣ ಮತ್ತು ಕೋಟೆಯ ಕಲ್ಲು ಕೀಳುವ ಅಪರೂಪದ ವಿವರಗಳನ್ನು ನಮಗೆ ನೀಡುತ್ತದೆ. ಕೆಲವು ಸಾಹಿತ್ಯ ಗ್ರಂಥಗಳಲ್ಲಿ ಕೋಟೆಕಾಳಗದ ವಿವರ ಬಂದಿದ್ದರೂ ಇಲ್ಲಿ ಕೋಟೆ ಕಾಳಗದ ದೃಶ್ಯ ಕಾವ್ಯವನ್ನು ಶಿಲ್ಪಿ ಕಣ್ಣಿಗೆ ಕಟ್ಟುವಂತೆ ಬಿಡಿಸಿದ್ದಾನೆ. ಶಿಲ್ಪಿ ತಾನು ವೀರಗಲ್ಲಿನ ಶಿಲ್ಪದ ಚೌಕಟ್ಟನ್ನು ವಿನ್ಯಾಸ ಮಾಡಿ ತಾನು ಬಿಡಿಸುವ ಪ್ರತಿಯೊಂದು ವಿವರಗಳು ಚಲನಶೀಲತೆ ಇರುವಂತೆ ಬಿಡಿಸಿದ್ದಾನೆ. ಹೀಗಾಗಿ ಹನ್ನೊಂದನೆ ಶತಮಾನದಲ್ಲಿ ನಡೆದಿರಬಹುದಾದ ಕೋಟೆ ಕಾಳಗದ ವಿವರವನ್ನು ಇದರಲ್ಲಿ ನೋಡಬಹುದಾಗಿದೆ.

ಎರಡನೆಯ ವೀರಗಲ್ಲಿನಲ್ಲಿಯೂ ವೀರರು ಸಬಳವನ್ನು ಹಿಡಿದು ಕುದುರೆಯ ಮೇಲೇರಿ ಎದುರಾಳಿಯೊಡನೆ ಯುದ್ಧಮಾಡುತ್ತಿರುವಂತೆ ಬಿಡಿಸಲಾಗಿದೆ. ಹೀಗಾಗಿ ಸಬಳದ ಪ್ರಯೋಗ ಹಿಂದಿನ ಕೋಟೆಕಾಳಗದ ಶಿಲ್ಪದಲ್ಲಿಯೂ ಬಂದಿರುವುದರಿಂದ ಈ ವೀರಗಲ್ಲಿನ ಕಾಲವನ್ನು ಕೂಡ ಹನ್ನೊಂದನೆ ಶತಮಾನಕ್ಕೆ ಹಾಕಬಹುದು. ಈ ವೀರಗಲ್ಲಿನ ವೈಶಿಷ್ಟವೆಂದರೆ ಮೊದಲ ಹಂತದಲ್ಲಿ ಮುಖಾಮುಖಿಯಾಗಿ ನಿಂತು ಕುದುರೆಗಳ ಮೇಲೆ ಕುಳಿತ ಯೋಧರ ನಡುವೆ ಯುದ್ಧಕ್ಕೆ ಸಾಮಗ್ರಿಗಳನ್ನು ಒಯ್ಯುತ್ತಿರುವ ವ್ಯಕ್ತಿಯನ್ನು





ಚಿಕ್ಕದಾಗಿ ಬಿಡಿಸಿರುವುದು ಕಂಡು ಬರುತ್ತದೆ. ಸಬಳವನ್ನು ಹಿಡಿದಿರುವ ವೀರನ ತಲೆಯ ಮೇಲೆ ಛತ್ರಿ ಇರುವುದರಿಂದ ಆತ ಯಾವುದೋ ರಾಜ ವಂಶದವನಾಗಿರುವ ಸಾಧ್ಯತೆ ಇದೆ.



ಮೂರನೆಯ ವೀರಗಲ್ಲಿನ ಶಿಲ್ಪದಲ್ಲಿ ಅಶ್ವಸೇನೆ ಮತ್ತು ಕಾಲ್ದಳಗಳ ಬಳಕೆ ಇದ್ದು ತೀವ್ರವಾದಂತಹ ಹೋರಾಟ ನಡೆಯುತ್ತಿರುವಂತೆ ಬಿಡಿಸಿದೆ. ಈ ವೀರಗಲ್ಲಿನಲ್ಲಿ ಯುದ್ಧಕ್ಕೆ ಕಾರಣವನ್ನು ಶಿಲ್ಪದ ಮೂಲಕವಾಗಲಿ ಬರವಣಿಗೆಯ ಮೂಲಕವಾಗಲಿ ತಿಳಿಸಿಲ್ಲ, ಖಡ್ಗ, ಬಿಲ್ಲು, ಬಾಣ ಇವುಗಳ ಪ್ರಯೋಗ ಇಲ್ಲಿನ ಯುದ್ಧ ಶಿಲ್ಪದಲ್ಲಿ ಯಥೇಚ್ಚವಾಗಿದೆ. ಎರಡೂ ಕಡೆಯ ಸೈನಿಕರು ಸತ್ತಿರುವುದನ್ನು ಗಮನಿಸಿದಾಗ ಯುದ್ಧವು ತೀವ್ರವಾಗಿ ನಡೆದಿರಬಹುದೆಂದು ಊಹಿಸಬಹುದಾಗಿದೆ.



ಹೀಗಾಗಿ ಲಕ್ಷ್ಮೇಶ್ವರದಲ್ಲಿರುವ ಈ ವೀರಗಲ್ಲುಗಳ ಪ್ರಕಾರ ನಡೆದಿರಬಹುದಾದಂತಹ ಬೇರೆ ಬೇರೆ ಕಾಲದ ಯುದ್ಧಗಳಲ್ಲಿ ಭಾಗವಹಿಸಿ ವೀರರು ತಮ್ಮ ಶೌರ್ಯವನ್ನು ಮೆರೆದಿರುವುದನ್ನು ಗುರುತಿಸಬಹುದಾಗಿದೆ.

ದೇವಾಲಯದ ಹೊರಭಾಗದಲ್ಲಿದ್ದ ವೀರಗಲ್ಲುಗಳನ್ನು ಇತ್ತೀಚೆಗೆ ದೇವಾಲಯದ ಒಳಗೆ ರಕ್ಷಿಸಿ ಇಟ್ಟಿದ್ದಾರೆ.

ಚನ್ನರಾಯಪಟ್ಟಣ ತಾಲೂಕಿನ ಶಾಸನೋಕ್ತ ಅಗ್ರಹಾರಗಳು

ಡಾ. ಕೆ.ವಸಂತಲಕ್ಷ್ಮಿ*

ಹಾಸನ ಜಿಲ್ಲೆಯ ಮುಖ್ಯ ತಾಲೂಕುಗಳಲ್ಲಿ ಒಂದಾದ ಚನ್ನರಾಯಪಟ್ಟಣ ತಾಲೂಕಿನಲ್ಲಿ ಒಟ್ಟು ೭೨೫ ಶಾಸನಗಳು ದೊರೆಯುತ್ತವೆ. ಈ ತಾಲೂಕಿನ ಪ್ರಸಿದ್ಧ ಜೈನ ಕೇಂದ್ರವೂ, 'ಶಾಸನಗಳ ತವರೂರು' ಎನ್ನಿಸಿರುವ ಶ್ರವಣಬೆಳಗೊಳ ಗ್ರಾಮದಲ್ಲೇ ಸುಮಾರು ೫೯೦ ಶಾಸನಗಳು ಲಭ್ಯವಿವೆ. ಈ ತಾಲೂಕಿನ ಉಳಿದ ಗ್ರಾಮಗಳಿಂದ ಸಿಗುವ ನೂರ ನಲವತ್ತೆರಡು ಶಾಸನಗಳಲ್ಲಿ ಕೇವಲ ಇಪ್ಪತ್ತು ಶಾಸನಗಳು ಮಾತ್ರ ಅಗ್ರಹಾರದ ಬಗೆಗೆ ತಿಳಿಸುತ್ತಿವೆ. ಚನ್ನರಾಯಪಟ್ಟಣ ತಾಲೂಕಿನ ಶಾಸನಗಳಲ್ಲಿ 'ಶ್ರೀ ಮದನಾದಿ ಅಗ್ರಹಾರ', 'ಮಹಾಗ್ರಹಾರ'ದ ಉಲ್ಲೇಖವೂ ಮತ್ತು ಕೇಶವಾಪುರ, ಮಲ್ಲಿಕಾರ್ಜುನಪುರ, ವಿಜಯಸೋಮನಾಥಪುರ ಮುಂತಾದ ಪುರಗಳ ಉಲ್ಲೇಖವೂ ದೊರೆತಿದೆ. ಈ ಹಿನ್ನೆಲೆಯಲ್ಲಿ ಚನ್ನರಾಯಪಟ್ಟಣ ತಾಲೂಕಿನಲ್ಲಿದ್ದ 'ಅಗ್ರಹಾರ'ಗಳ ಬಗೆಗೆ ಅಭ್ಯಸಿಸಲು ಇಲ್ಲಿ ಯತ್ನಿಸಲಾಗಿದೆ.

ಚನ್ನರಾಯಪಟ್ಟಣ ತಾಲೂಕಿನ ದಿಂಡಗೂರಿನ ಶಾಸನವೊಂದು (ಚ.ರಾ.ಪ. ೪೦) ಕ್ರಿ.ಶ. ೧೨೨೦ರಲ್ಲಿ ಹೊಯ್ಸಳ ದೊರೆ ವೀರಬಲ್ಲಾಳದೇವನ ಪ್ರಧಾನಿಯಾಗಿದ್ದ ಪಂಡಿತ ದಂಡನಾಥನು ರಾಜನನ್ನು ದಿಂಡಗೂರು ಗ್ರಾಮವನ್ನು ಅಗ್ರಹಾರವನ್ನಾಗಿ ಮಾಡಬೇಕೆಂದು ವಿನಂತಿಸಿದನು. ರಾಜನು ಸಂತಸಗೊಂಡು ಶ್ರಾವಣ ಮಾಸದ ಪೂರ್ಣಿಮೆ, ಚಂದ್ರಗ್ರಹಣದಂದು, ದಿಂಡಗೂರ ಸುತ್ತಲ ಸಮಸ್ತ ಹಳ್ಳಿಗಳೂ ಸೇರಿದಂತೆ ಸೀಮೆಕಲ್ಲನ್ನು ನೆಡಿಸಿ, ವಿಶಾಲವಾದ ಭೂಭಾಗವನ್ನು ನಾನಾಗೋತ್ರದ ಬ್ರಾಹ್ಮಣರಿಗೆ ಸಹಿರಣ್ಯೋದಕವಾಗಿ ದಾನ ಬಿಟ್ಟದ್ದನ್ನು ಶಾಸನವು ತಿಳಿಸಿದೆ. ಈ ಅಗ್ರಹಾರವನ್ನು ನಿರ್ಮಿಸುವಾಗ ರಾಜನು ಕೇವಲ ಭೂಮಿಯನ್ನು ಕೊಡದೆ, ಬ್ರಾಹ್ಮಣರಿಗೆ 'ಸಗೃಹೋಪಕರಣ'ಗಳನ್ನು ಕೊಟ್ಟನೆಂದಿದೆ. ಈ ಅಗ್ರಹಾರದಲ್ಲಿ ವೇದ ಪಾರಂಗತರೂ, ಶ್ರುತ ಸಂಪನ್ನರಾದ ೧೫೫ ಜನ ಬ್ರಾಹ್ಮಣರು ನೆಲೆಸಿದ್ದರು. ಹೀಗೆ ಅಗ್ರಹಾರವನ್ನು ನಿರ್ಮಿಸಿದಾಗ, ತಮಗೆ ಬಂದ ಭೂಭಾಗದ ಸಿದ್ಧಾಯವನ್ನು ಬ್ರಾಹ್ಮಣರು ರಾಜನಿಗೆ ನೀಡಬೇಕಾಗಿತ್ತು. ಈ ಶಾಸನವು ಅಗ್ರಹಾರದ ಮೊದಲ ಕರ ೧೦೦ ನಿಷ್ಕಗಳಲ್ಲಿ, ೧೮ ನಿಷ್ಕಗಳನ್ನು ವೇದ ಖಂಡಿಕೆಗಳ ಪಾಠಕರಿಗೂ ಮತ್ತು ಭಟ್ಟವೃತ್ತಿಗೆಂದು ನೀಡಲಾಗಿಟೆ ಎಂದೂ ತಿಳಿಸಿದೆ. ಇದರಿಂದ ಬ್ರಾಹ್ಮಣರು ಕೇವಲ ೮೨ ನಿಷ್ಕಗಳನ್ನು ನೀಡುತ್ತಿದ್ದರೆಂದು ತಿಳಿಯುತ್ತವೆ.

ಈ ಶಾಸನದ ಮುಂದಿನ ಭಾಗದಲ್ಲಿ ವೀರಬಲ್ಲಾಳ ದೇವನ ಮಗನಾದ ವೀರನಾರಸಿಂಹದೇವನು ಪಟ್ಟಾಭಿಷೇಕದ ಸಂದರ್ಭದಲ್ಲಿ ವಿಪ್ರರಿಗೆ ೨೫ ನಿಷ್ಕಗಳನ್ನು ಬಿಟ್ಟುಕೊಟ್ಟದ್ದನ್ನು ತಿಳಿಸುತ್ತಾ ಈಗ ವಿಪ್ರರು ೭೫ ನಿಷ್ಕಗಳ ಸಿದ್ಧಾಯವನ್ನು ತೆರುತ್ತಿದ್ದರೆಂದು ತಿಳಿಸಿದೆ. ಇದರಿಂದ ರಾಜಾಜ್ಞೆಯು ಅವನ ಕಾಲದಲ್ಲಿ ಮಾತ್ರ ಸ್ಥಿರವಿರುತ್ತಿತ್ತೆಂದೂ ತಿಳಿಯುತ್ತದೆ.

ಹೊಯ್ಸಳ ಅರಸರ ಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅಗ್ರಹಾರಗಳು ನಿರ್ಮಾಣವಾಗಿವೆ. ರಾಜನು ತನ್ನ ನೆಚ್ಚಿನ ಅಧಿಕಾರಿಯ ಬಿನ್ನಹವನ್ನು ಮನ್ನಿಸಿ ಅಗ್ರಹಾರ ರಚಿಸಿದಂತೆ, ತನಗೆ ಮೆಗರರಾಜ್ಯದ ಮೇಲೆ ದಿಗ್ವಿಜಯ ಸಿದ್ಧಿಸಿದಾಗ ಉಂಟಾದ ಸಂತಸದಿಂದ, ನೆಚ್ಚಿನ ಶ್ರೀಕರಣದ ಅಧಿಕಾರಿ ವಿಶ್ವನಾಥನಿಗೆ ಅಗ್ರಹಾರ ನಿರ್ಮಿಸಲು ಆದೇಶಿಸಿದ್ದನ್ನು ಕೆಂಬಾಳಿನ ಶಾಸನ ತಿಳಿಸುತ್ತಿದೆ. (ಚರಾಪ ೭೦) ಹೊಯ್ಸಳ ದೊರೆ ವೀರ ನಾರಸಿಂಹದೇವನು ದಿಗ್ವಿಜಯದಿಂದ ಹಿಂತಿರುಗುತ್ತಿದ್ದಾಗ, ಶ್ರೀ ವಜ್ರೇಶ್ವರ ನಾರಸಿಂಹ ದೇವರ ಸನ್ನಿಧಿಯಲ್ಲಿ ಪೂರ್ವ ಪ್ರಸಿದ್ಧ ಚತುಃ ಸೀಮಾ ಸಹಿತವಾದ ಕೆಂಬಾಳು ಗ್ರಾಮವನ್ನು ಧಾರೆ ಎರೆದು ಅಗ್ರಹಾರವಾಗಿ ಮಾಡಲು ತಿಳಿಸುತ್ತಾನೆ. ಈ ಗ್ರಾಮದ ಸಮಸ್ತ ಮೊದಲ ಬಳಿ ಸಹಿತವಾಗಿ ನೂರು ಗದ್ಯಾಣವನ್ನು ಸಿದ್ಧಾಯವಾಗಿ ತೆರಬೇಕೆಂದು ಸೂಚಿಸಿ ತಾಮ್ರಶಾಸನವನ್ನು ಪಡೆದುಕೊಂಡ ವಿಶ್ವನಾಥನು ಕೆಂಬಾಳನ್ನು 'ಶ್ರೀ ವೀರನರಸಿಂಹಪುರ'ವೆಂದು ಹೆಸರಿಸಿ, ಅಗ್ರಹಾರವಾಗಿಸುತ್ತಾನೆ. ಅಗ್ರಹಾರ ನಿರ್ಮಿಸುವ ಸಂದರ್ಭದಲ್ಲಿ ಆ ಪ್ರದೇಶದಲ್ಲಿ ಹೊಸದಾಗಿ ಕೆರೆ ಕಟ್ಟೆಗಳನ್ನು ಕಟ್ಟಿಸಿ, ದೇವಾಲಯವನ್ನು ನಿರ್ಮಿಸಿ, ಆ ಪ್ರದೇಶವು ಜನ ವಸತಿಗೆ ಯೋಗ್ಯವಾಗುವಂತೆ ಸಿದ್ಧಪಡಿಸುತ್ತಿದ್ದರು. ಇದರಂತೆ ವಿಶ್ವನಾಥನು 'ಲಕ್ಷ್ಮೀ ನರಸಿಂಹ ದೇವರನ್ನು ಪ್ರತಿಷ್ಠೆ ಮಾಡಿ ಕರೆ ಕಟ್ಟೆಗಳನ್ನು ಕಟ್ಟಿಸಿದನೆಂದು ಶಾಸನ ತಿಳಿಸಿದೆ. ದೇವರಿಗೆ

* # ೧೩೮೮, ೧೭ನೇ ಮುಖ್ಯರಸ್ತೆ, ಬನಶಂಕರಿ, ೧ನೇ ಘಟ್ಟ, ಬೆಂಗಳೂರು-೫೬೦೦೫೦.

ಅಲಂಕಾರದ ಉಪಕರಣಗಳನ್ನು ಕೊಟ್ಟನಲ್ಲದೇ, ದೇವಮಾನ್ಯವಾಗಿ ೨ ವೃತ್ತಿಯನ್ನು ಬಿಟ್ಟನು. ಈ ಅಗ್ರಹಾರದಲ್ಲಿ ವೇದಪಾರಂಗತರಾದ ದ್ವಿಜೋತ್ತಮರು ನೆಲೆಸಲು, ಸಗೃಹಸೋಪಕರಣಲಂಕಾರ ಸಹಿತವಾಗಿ ೬೨ ವೃತ್ತಿಗಳನ್ನು ನೀಡಿದರೆಂದು ಶಾಸನ ತಿಳಿಸಿದೆ.

ಅಗ್ರಹಾರ ಬೆಳಗುಲಿ ಗ್ರಾಮದ ಶಾಸನವು (ಚರಾಪ ೯೪) ಕ್ರಿ.ಶ. ೧೨೮೯ರಲ್ಲಿ ಹೊಯ್ಸಳ ಚಕ್ರವರ್ತಿ ವೀರಬಲ್ಲಾಳದೇವನು ವಿಜಯಪುರವಾದ ಹೆಳ್ಳೂರಿನಲ್ಲಿ ನೆಲೆಸಿದ್ದಾಗ, ಅವನ ಮಹಾಪ್ರಧಾನನೂ, ಬಾಹತ್ತರ ನಿಯೋಗಾಧಿಪತಿಯೂ ಆಗಿದ್ದ ಕೇಶಿರಾಜಚಮೂಪತಿಯು ನೀರ್ಗುಂದನಾಡಿಗೆ ಸೇರಿದ ಪಂಜಾಡಿಯ ಬೆಳ್ಗುಲಿ ಗ್ರಾಮವನ್ನು ಮಕರ ಸಂಕ್ರಾಂತಿಯಂದು ರಾಜನ ಕೈಯಿಂದ ಧಾರಾಪೂರ್ವಕವಾಗಿ ಪಡೆದನು. ಆ ಗ್ರಾಮದಲ್ಲಿ ಕೇಶವಸಮುದ್ರ, ಲಕ್ಷ್ಮಿ ಸಮುದ್ರಗಳೆಂಬ ಕೆರೆಗಳನ್ನು ಕಟ್ಟಿಸಿ, ಕೇಶವನ ಮತ್ತು ಈಶ್ವರನ ಉತ್ತಂಗ ದೇವಾಲಯಗಳನ್ನು ನಿರ್ಮಿಸಿ ಬೆಳ್ಗುಲಿ ಗ್ರಾಮವನ್ನು 'ಕೇಶವಾಪುರ'ವೆಂಬ ಹೆಸರಿನ ಅಗ್ರಹಾರವಾಗಿ ಮಾಡಿದನು. ಈ ದೇವಾಲಯಗಳ ಶ್ರೀಕಾರ್ಯಕ್ಕೆಂದು ರಾಜನಲ್ಲಿ ಬಿನ್ನಹಮಾಡಿ ತಮ್ಮ ಗೌಡುಗೊಡುಗೆಯಾಗಿದ್ದ ಭೂಮಿಯನ್ನು ದೇವದತ್ತಿಯಾಗಿ ಬಿಡಿಸಿದ್ದನ್ನು ಶಾಸನ ತಿಳಿಸಿದೆ. ರಾಜನು ಈ ದೇವರ ಶ್ರೀಕಾರ್ಯಕ್ಕೆಂದು ತಗಡೂರು ಗ್ರಾಮವನ್ನು ಬಿಡುತ್ತಾನೆ. ಈ ಶಾಸನದಲ್ಲಿ "ಕೇಶವಾಪುರ"ವನ್ನು ಅಗ್ರಹಾರವೆಂದೇ ಸ್ಪಷ್ಟವಾಗಿ ತಿಳಿಸಿದ್ದರೂ, ಇಲ್ಲಿಯ ಭೂಮಿಯನ್ನು ನಾನಾ ವೃತ್ತಿಗಳಾಗಿ ವಿಂಗಡಿಸಿರುವುದಿಲ್ಲ ಮತ್ತು ಗ್ರಾಮವನ್ನು ವೇದಶಾಸ್ತ್ರ ಪಾರಂಗತರಾದ ವಿಪ್ರರಿಗೆ ನೀಡಿಲ್ಲವೆಂಬುದು ಗಮನಾರ್ಹವಾಗಿದೆ. ಶಾಸನದಲ್ಲಿ ತಗಡೂರಿನ ಭೂಭಾಗವನ್ನು ಕಂಚವ್ವೆಯ ಮಮ್ಮಕೇಶವನಿಗೆ ಗದ್ದೆ ೨ ಸಲಗೆ, ೪೦೦ ಕಂಬಬೆದ್ದಲು; ಪಾರಿಸ ಪಂಡಿತರಿಗೆ ಗದ್ದೆ ೧ ಸಲಗೆ, ೨೦೦ ಕಂಬ ಬೆದ್ದಲು; ಸೇನ ಬೋವ ಸೋವಣ್ಣನಿಗೆ ಗದ್ದೆ ಕೊಳಗ ೧೦, ೧೦೦ ಕಂಬಬೆದ್ದಲು; ಬೊಪ್ಪೆಯ ನಾಯಕನಿಗೆ – ೫ ಕೊಳಗಗದ್ದೆ, ೧೦೦ ಕಂಬ ಬೆದ್ದಲು; ಬಡಿಯ ಸೆಟ್ಟಿಯಣ್ಣನಿಗೆ ಗದ್ದೆ ೫ ಕೊಳಗ ಬೆದ್ದಲು ಕಂಬ ೧೦೦; ಬೆಳ್ಗಲಿಯ ಅಕ್ಕಸಾಲಿಗಳಿಗೆ ಗದ್ದೆ ಕೊಳಗ ೫; ೧೦೦ ಕಂಬ ಬೆದ್ದಲು ಹೀಗೆ ಆ ಗ್ರಾಮದ ಬಡಗಿಗಳಿಗೆ, ಕಮ್ಮಾರರಿಗೆ, ಅಗಸರಿಗೆ, ಕುಂಬಾರರಿಗೆ, ಬಾರಿಕರಿಗೆ ಎಲ್ಲರಿಗೂ ಹಂಚಲಾಗಿದೆ. ಇವರೆಲ್ಲರನ್ನೂ ಒಟ್ಟಾಗಿ ಕೇಶವ ದೇವರ ಪರಿವಾರದವರೆಂದೂ ಕರೆಯಲಾಗಿದೆ. ಈ ಶಾಸನದ ಹಿನ್ನೆಲೆಯಲ್ಲಿ ಗಮನಿಸಿದರೆ "ಅಗ್ರಹಾರ"ಗಳು ಹೊಯ್ಸಳರ ಕಾಲದಲ್ಲಿ ಮೊದಲಿನಂತೆ ಕೇವಲ ಬ್ರಾಹ್ಮಣರಿಗೆ ನೀಡುತ್ತಿದ್ದ ಶ್ರೇಷ್ಠ ಭೂಮಿಯುಳ್ಳ ಅಕರಗ್ರಾಮವಾಗಿರದೇ ರಾಜರು ದಾನ ನೀಡುತ್ತಿದ್ದ 'ಗ್ರಾಮದಾನ'ಗಳಾಗಿದ್ದಂತೆ ತೋರುತ್ತದೆ. ಗ್ರಾಮಾಡಳಿತ ವ್ಯವಸ್ಥೆಯಲ್ಲೂ 'ಮಹಾಜನರು' ಪ್ರಮುಖರಾಗಿದ್ದು, ಆಯಾ ಗ್ರಾಮದಲ್ಲಿ ನಡೆಯುವ ಎಲ್ಲ ಕಾರ್ಯಕಲಾಪಗಳಿಗೂ ಕಾರಣಕರ್ತರಾಗುತ್ತಿದ್ದರು. ಇದೇ ಊರಿನ ಮತ್ತೊಂದು ಶಾಸನವು (ಚರಾಪ ೯೩) ಕ್ರಿ.ಶ. ೧೨೩೨ರಲ್ಲಿ ತಗಡೂರ ಸೋಮೆಯ ನಾಯಕನು ಮಹಾಜನರಿಗೆ ಸೇರಿದ್ದ ೧೨ ಸಲಗೆ ಗದ್ದೆ ೧೨೦೦ ಕಂಬಬೆದ್ದಲನ್ನು ಮತ್ತು ಹಳ್ಳಿ ಹಿರಿಯೂರ ಭೂಭಾಗವನ್ನು ವೀರರ ಅನುಮತದಿಂದ ಬೆಳ್ಗುಲಿಯ ದೇವರ ಶ್ರೀಕಾರ್ಯಕ್ಕೆಂದು ಬಿಡುತ್ತಾನೆ. ಈ ದಾನವನ್ನು ಸ್ವೀಕರಿಸಿದ್ದರಿಂದ, ಮಹಾಜನರು ಕಟ್ಟು ಗುತ್ತಿಗೆ ಪಿಂಡದಾನವಾಗಿ, ಪ್ರತಿವರ್ಷ ೪೦ ಗದ್ಯಾಣವನ್ನು ಕೊಡುತ್ತಿದ್ದವರು, ಸೋಮೇಯನಾಯ್ಕನ ಭೂಮಿಯನ್ನುಳಿದು ಅಂದ್ರೆ ೧೫ ಗದ್ಯಾಣವನ್ನು ಕಡಿದು ಉಳಿದ ೨೫ ಗದ್ಯಾಣವನ್ನು ಕೊಡುತ್ತಾರೆಂದು ಶಾಸನ ತಿಳಿಸುತ್ತಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ – ಸೋಮೆಯನ್ನು ನೀಡಿದ ಭೂಮಿಯನ್ನು 'ಅಷ್ಟಭೋಗ ತೇಜಸ್ವಾಮ್ಯಸಹಿತ'ವಾಗಿ ನೀಡಲಾಗಿತ್ತು. ಹೀಗೆ ನೀಡಿದ ಭೂಭಾಗಕ್ಕೆ ಮಹಾಜನರು ಯಾವುದೇ ಕರವನ್ನು ನೀಡಬೇಕಿರಲಿಲ್ಲವೆಂದು ಖಚಿತವಾಗಿ ತಿಳಿಯುತ್ತವೆ. ಹೀಗೆ ಈ ಶಾಸನವು ಭೂದಾನದ ಹಿನ್ನೆಲೆಯಲ್ಲಿದ್ದ ಅಂದಿನ ಆರ್ಥಿಕ ವ್ಯವಸ್ಥೆಯ ಬಗೆಗೆ ಬೆಳಕು ಚೆಲ್ಲಿದೆ.

ಹೊಯ್ಸಳ ದೊರೆ ವೀರಬಲ್ಲಾಳದೇವನ ಮಹಾಪ್ರಧಾನಿ ಸರ್ವಾಧಿಕಾರಿ, ಶ್ರೀಕರಣಾಗ್ರಣಿಯೂ, ಋಗ್ವೇದ ಚೂಡಾಮಣಿಯಾಗಿದ್ದ ಹೆಗ್ಗಡೆ ಮಾಚಯ್ಯನವರು ಕ್ರಿ.ಶ. ೧೧೮೯ರಲ್ಲಿ ಕಬ್ಬುಹನಾಡಿಗೆ ಸೇರಿದ ಆನಗನಕೆರೆಯನ್ನು 'ಕೇಶವಾಪುರ'ವೆಂದು ಹೆಸರಿಸಿ. ಅಗ್ರಹಾರ ಮಾಡಿ ದಾನ ನೀಡಿದ್ದನ್ನು ತಾಮ್ರಶಾಸನವೊಂದು (ಚರಾಪ ೩೩) ತಿಳಿಸಿದೆ. ಈ ಕೇಶವಾಪುರವನ್ನು ಸರ್ವಬಾಧ ಪರಿಹಾರವಾಗಿ ಮಾಡಿದ್ದು, ವೇದಾಧ್ಯಯನ ಸಂಪನ್ನರೂ, ಷಟ್ಕರ್ಮನಿರತರೂ ಆದ ನಾನಾ ಗೋತ್ರ ಸಮುತ್ಪನ್ನರಾದ ಮಹಾಜನಗಳಿಗೆ ಪಾದಪೂಜೆ ಮಾಡಿ ಶ್ರೀವೀರಬಲ್ಲಾಳ ದೇವರು ಸ್ವಹಸ್ತದಿಂದ ಧಾರೆ ಎರೆದುಕೊಟ್ಟರೆಂದು ಶಾಸನ ತಿಳಿಸಿದೆ. ಕೇಶವಾಪುರವು 'ಮಹಾಗ್ರಹಾರ'ವಾಗಿದ್ದು ಇದರ ಮೊದಲ ಸಿದ್ಧಾಯದ ಕುಳದೊಳಗೆ ಗದ್ಯಾಣ ೧೦೦ಕ್ಕೆ ಮಾತ್ರ, ಹಣವೆರಡರ ಸೇಸೆಮಾನ್ಯ ವೋವ್ರತಕಾರುಣ್ಯ ಇವುಗಳನ್ನು ಮಾತ್ರ ಮಹಾಜನರು ತೆರುವರೆಂದಿದೆ.

ಈ ಮಹಾ ಅಗ್ರಹಾರದ ಸ್ಥಾನಮಾನವನ್ನು ತಿಳಿಸುತ್ತಾ ಮೂಲಸ್ಥಾನದ ಸೋಮನಾಥ ದೇವರಿಗೆ ಗದ್ದೆ ೪ ಸಲಗೆ,

ಬೆದ್ದಲು ೨೦೦ ಕಂಬ; ಸ್ವಯಂಭೂ ದೇವರಿಗೆ ಗದ್ದೆ ೪ ಸಲಗೆ, ಬೆದ್ದಲು ೨೦೦ ಕಂಬ: ಅಲ್ಲಿನ ಇಮ್ಮಡಿ ಗೌಡನಿಗೆ ಕೊಡಗಿ ಗದ್ದೆ ೩ ಸಲಗೆ, ಆತನ ಮಗಳು ರಾಮಕ್ಕನಿಗೆ ಸಲಗೆ ಬೆದ್ದಲು ೪೦೦ ಕಂಬ; ಮತ್ತು ಸೆಟ್ಟಿಗೌಡನಿಗೆ ಗದ್ದೆ ೩ ಸಲಗೆ, ಬೆದ್ದಲು ೩೦೦ ಕಂಬ; ಮಾದಿಗೌಡನಿಗೆ ೩ ಸಲಗೆ ಗದ್ದೆ ೪ ಬೆದ್ದಲು ೨೦೦೫ ಎಂದು ತಿಳಿಸಿದೆ. ನಾಲ್ಕು ಗ್ರಾಮಗಳಿಂದ ಕೂಡಿದ 'ಕೇಶವಾಪುರ'ದ ಸೀಮೆಗಳನ್ನು ತಿಳಿಸುತ್ತಿರುವ ಈ ತಾಮ್ರಶಾಸನ ಪಾಠವು ಕನ್ನಡ ಸಾಹಿತ್ಯದ ಜನ್ನ ಕವಿಯು ರಚಿಸಿದ ಶಾಸನವಾಗಿದೆ. ಆದರೆ ಕೇಶವಾಪುರದ ಮಹಾಜನರೆಲ್ಲರೂ ಬ್ರಾಹ್ಮಣರೇ ಆಗಿರದೆ, ಬೇರೆ ಗಣ್ಯರೂ ಸೇರಿದ್ದರೆಂಬುದು ಗಮನಾರ್ಹವಾಗಿದೆ.

ಈ ಶಾಸನದ ಮುಂದಿನ ಭಾಗದಲ್ಲಿ (೮ನೇ ಹಲಗೆ ಚರಾಪ ೩೪, ೯ನೇ ಹಲಗೆ) ಹೊಯ್ಸಳ ದೊರೆ ೨ನೇ ಸೋಮೇಶ್ವರ ದೇವರ ಕೈಯಲ್ಲಿ ಕಬ್ಬುಹನಾಡ ಆನಗನಕೆರೆಗೆ ವಸಿಷ್ಠ ಗೋತ್ರದ ಸಿಂಗಯ್ಯನು, ಮುನ್ನ ಕೊಟ್ಟ ಶಾಸನ ಮರ್ಯಾದೆ ಸಮಸ್ತ ಬಲಿ ಸಹಿತ ಕಡೆಗೆ ತೆರುವ ಗದ್ಯಾಣ ೩೮೦ರಲ್ಲಿ ರಾಜನಿಗೆ ಸೇಸೆ ತೆತ್ತು ೩೦ ಗದ್ಯಾಣ ಬಳಿಯನ್ನು ಬಿಡಿಸುತ್ತಾನೆ. ಇದರಂತೆ ಮಹಾಪಸಾಯತರಾದ ಅಪ್ಪಣ್ಣ, ತಿಕ್ಕಣ್ಣಗಳು ಸೋಮೇಶ್ವರ ದೇವರಿಗೆ ಸೇಸೆ ತೆತ್ತು ಧಾರೆಯಕೊಂಡು ಬಿಡುಗಡೆಯಾಗಿ ೪೦ ಗದ್ಯಾಣವನ್ನು ಬಿಡಿಸುತ್ತಾರೆ. ಇದರಿಂದ ವಿರೋಧಿಕೃತ್ ಸಂವತ್ಸರದಿಂದ ಮೊದಲಾಗಿ ಮಹಾಜನರು ಈ ೨೦ ಗದ್ಯಾಣವನ್ನುಳಿದು ಇನ್ನೂರ ಎಂಭತ್ತು ಗದ್ಯಾಣವನ್ನು ತೆರುವರು" ಎಂದು ಶಾಸನ ಸ್ಪಷ್ಟವಾಗಿ ತಿಳಿಸಿದೆ. ಇದರಿಂದ 'ಕೇಶವಾಪುರ' ವೆನ್ನಿಸಿದ್ದ ಅಗ್ರಹಾರ, ಮಹಾಗ್ರಹಾರಗಳ ಮಹಾಜನರು ರಾಜನಿಗೆ ಸಿದ್ಧಾಯವನ್ನು ನೀಡುತ್ತಿದ್ದರೆಂದು ಖಚಿತವಾಗುತ್ತದೆ.

ಸಂತೆ ಶಿವರ ಗ್ರಾಮದ ಶಾಸನವು (ಚರಾಪ – ೮೩) ಕ್ರಿ.ಶ. ೧೨೨೩ರಲ್ಲಿ ವೀರ ನಾರಸಿಂಹದೇವರ ಬಾಹತ್ತರ ನಿಯೋಗಿಯಾಗಿದ್ದ ಅಮಿತಯ್ಯ ದಂಡನಾಯಕನು ವೀರಬಲ್ಲಾಳದೇವರ ಪಾದಪೂಜೆಯನ್ನು ಮಾಡಿ, ಶಿವರ ಗ್ರಾಮವನ್ನು ಧಾರೆ ಎರೆಸಿಕೊಂಡು, ಅದನ್ನು ೪೨ ವೃತ್ತಿಗಳಾಗಿ ಮಾಡಿ ಅಗ್ರಹಾರವನ್ನಾಗಿಸಿದ್ದನ್ನು ತಿಳಿಸಿದೆ. ಶಿವರದ ಸುತ್ತಲ ಏಳು ಗ್ರಾಮಗಳು ಸೇರಿದಂತೆ ಅಷ್ಟಗ್ರಾಮಗಳ ಕುಳವ ಕಡಿಸಿ, ಸರ್ವಬಾಧಾ ಪರಿಹಾರವಾಗಿ ಮಾಡಿ, ಚಕ್ರವರ್ತಿಯ ಕೈಯಲ್ಲಿ ತಾಮ್ರಶಾಸನವ ಪಡೆದು ಮಹಾಜನರಿಗೆ ಕೊಟ್ಟದ್ದನ್ನು ಶಾಸನ ತಿಳಿಸುತ್ತಿದೆ. ಆ ಮಹಾಜನರು ದಣ್ಣಾಯಕರಿಗೆ ಮಾದಿವೆಗ್ಗಡೆ ಹಳ್ಳಿ, ಹೊಂಚೆಯನಹಳ್ಳಿಯನ್ನು ಬಿಟ್ಟರು. ಉಳಿದದ್ದನ್ನು ತಾವು ಪಡೆದು ಮಹಾಜನರು ಕೊಡಬೇಕಾಗಿದ್ದ ಮೊದಲಗದ್ಯಾಣ ಇಪ್ಪತ್ತನ್ನು, ಅಗ್ರಹಾರದ ನಡುವೆ ತಾವು ನಿರ್ಮಿಸಿದ ಅಮೃತೇಶ್ವರ, ವಾಮೇಶ್ವರ ಮತ್ತು ಲಕ್ಷ್ಮಿನಾರಾಯಣ ದೇವರ ಅಮೃತಪಡಿ, ರಂಗಭೋಗಗಳಿಗೆಂದು ನಾರಸಿಂಹ ದೇವರಿಂದ ಬಿಡಿಸಿದರು. ಹೀಗೆ ಈ ಶಾಸನವು ಅಗ್ರಹಾರ ನಿರ್ಮಾಣ ಮಾಡಿದಾಗ ರಾಜರು ತಾಮ್ರಶಾಸನ ನೀಡಿದ್ದನ್ನು ತಿಳಿಸುತ್ತಾ, ಮೊದಲಬಳಿಯನ್ನು ದೇವರ ಕಾರ್ಯಕ್ಕೆಂದು ರಾಜನೇ ಬಿಟ್ಟುಕೊಟ್ಟು ಅಗ್ರಹಾರದ ಗ್ರಾಮಗಳನ್ನು 'ಅಕರಗ್ರಾಮ'ಗಳಾಗಿಸುತ್ತಿದ್ದರೆಂದು ತಿಳಿಸುತ್ತಿದೆ.

ನುಗ್ಗೇಹಳ್ಳಿಯ ಲಕ್ಷ್ಮೀ ನರಸಿಂಹ ದೇವಾಲಯದ ಶಾಸನವು (ಚರಾಪ ೧೧೩) ಕ್ರಿ.ಶ. ೧೨೧೪ರಲ್ಲಿ ಬೊಂಮಣದಂಡನಾಯಕರು ನುಗ್ಗೇಹಳ್ಳಿಯನ್ನು 'ವಿಜಯ ಸೋಮನಾಥಪುರ'ವೆಂದು ಹೆಸರಿಸಿ ಅಗ್ರಹಾರವಾಗಿಸುತ್ತಾರೆ. ಈ ಅಗ್ರಹಾರದಲ್ಲಿ ಪ್ರಸನ್ನ ಕೇಶವದೇವರು, ನರಸಿಂಹದೇವರು ಮತ್ತು ಗೋಪಾಳದೇವರನ್ನು ಮತ್ತು ಸದಾಶಿವದೇವರನ್ನು ಪ್ರತಿಷ್ಠೆ ಮಾಡಿ ದೇವದಾನ ಕೊಟ್ಟ ಬಗೆಗೆ ಶಾಸನ ತಿಳಿಸುತ್ತಿದೆ. ಬೊಂಮಣ ದಂಡನಾಯಕನು, ತನ್ನ ಪಾಲಿನ ಎರಡು ವೃತ್ತಿಗಳ ಜೊತೆಗೆ, ಮಹಾಜನರ ಕೈಯಲ್ಲಿ ಆರು ವೃತ್ತಿಗಳನ್ನು ಕೊಂಡು, ಎಂಟು ವೃತ್ತಿಗಳನ್ನು ದೇವದಾನವಾಗಿ ಬಿಡುತ್ತಾನೆ. ಮಹಾಜನರು ಎಂಟು ವೃತ್ತಿಗಳ ಸಿದ್ಧಾಯವಾಗಿ ೯೫ ಗದ್ಯಾಣವನ್ನು ತೆರುತ್ತಿದ್ದರು. ಈ ಅಗ್ರಹಾರದಲ್ಲಿ ಒಟ್ಟು ಎಂಭತ್ತೆರಡು (೮೨) ಮಹಾಜನರಿದ್ದು ಆ ಸಿದ್ಧಾಯ ೯೫ ಗದ್ಯಾಣಕ್ಕೆ ಬದಲಾಗಿ ನುಗ್ಗೇಹಳ್ಳಿಯಲ್ಲಿ ತೋಟ ೨೮೦ ಕಂಬವನ್ನು ಸವುದರಿಹಳ್ಳಿಯನ್ನು ಬಿಟ್ಟುಕೊಟ್ಟರೆಂದು ಶಾಸನದಲ್ಲಿ ಹೇಳಿದೆ. ಇದರಿಂದ ಮಹಾಜನರು ತಾವು ತೆರಬೇಕಾದ ಬಳಿಯನ್ನು ದವಸದ ರೂಪದಲ್ಲೋ, ಭೂಮಿಯ ಉತ್ಪತ್ತಿಯ ರೂಪದಲ್ಲೋ ನೀಡುತ್ತಿದ್ದರೆಂದು ತಿಳಿಯುತ್ತದೆ. ಈ ಶಾಸನದಿಂದ ಬೊಮ್ಮಣ್ಣನಾಯಕರು ಸಿದ್ಧಾಯದ ಗದ್ಯಾಣವನ್ನು ಎರಡೂ ದೇವಾಲಯದ ಪರಿವಾರದವರಿಗೆ ಬಳಸುವಂತೆ, ಗುಣಶಾಸನಮಾಡಿದ್ದು ಅದರಂತೆ ಗದ್ಯಾಣ ಒಂದಕ್ಕೆ ಇಪ್ಪತ್ತು ಕಂಬ ಗದ್ದೆ ೧೦೦ ಕಂಬ ಬೆದ್ದಲಿನಂತೆ ಹಂಚಲಾಗಿದೆ. ಈ ನಿಯಮದಂತೆ, ದೇವಾಲಯದ ಸಕಲ ಪರಿವಾರದವರಿಗೂ ಹಂಚಿದ್ದಾರೆ. ಈ ಸಿದ್ಧಾಯದಿಂದ ೫ ಜನ ಪೂಜಾರಿಗಳೂ, ಇಬ್ಬರೂ ಪರಿಚಾರಕರೂ, ನಾಲ್ಕು ಜನ ಬಾಣಸಿಗರೂ, ರಂಗವಾಲಿಯವರೂ, ಸೇನಬೋವ, ಇಬ್ಬರು ಭಟ್ಟಗುತ್ತರೂ, ಎಂಟು ಜನ ದವಸಿಗರೂ, ಮಾಲೆಕಾರ ರಿಬ್ಬರೂ, ಆಂಘರಿಕರಿಬ್ಬರೂ, ಬನದ ತೋಟಗರಿಬ್ಬರೂ, ಕುಂಬಾರರಿಬ್ಬರೂ, ಅಗಸರೂ ಹೀಗೆ ಎಲ್ಲರೂ ಪಾಲುದಾರ ರಾಗಿದ್ದರು. ಇದರಂತೆ ದೇವರ ಅಮೃತ ಪಡಿಗೆ ಶ್ರೀ ಕಾರ್ಯಗಳಿಗೆ ವಿನಿಯೋಗಿಸಲು ನಿಶ್ಚಿತ ಭಾಗವಿತ್ತು. ಜೋಯಿಸರು, ಪುರಾಣದವರ, ಬ್ರಾಹ್ಮಣ ಪರಿವಾರದವರಿಗೆ ಬೇರೆ ಭೂಮಿ

ನೀಡಲಾಗಿತ್ತು. ಒಟ್ಟಿನಲ್ಲಿ ಈ ಶಾಸನದ ಗುಣವಿವರಗಳನ್ನು ಕಂಡಾಗ, ಮಹಾಜನರಿಗೆ ನೀಡಿದ್ದರಲ್ಲಿ ಹೆಚ್ಚಿನ ಅಂಶ ವಿವಿಧ ಕಾರ್ಯಗಳಿಗೆ ಸಲ್ಲುತ್ತಾ ಮಹಾಜನರಿಗೆ ಸು. ೫೦%ರಷ್ಟು ಮಾತ್ರ ಉಳಿದಂತನ್ನಿಸುತ್ತದೆ. ಈ ಶಾಸನದಲ್ಲಿ 'ವಿಜಯ ಸೋಮನಾಥಪುರ'ವನ್ನು 'ತಾವಘ್ರಹಾರವ ಮಾಡಿದ' ಎಂದೇ ಉಲ್ಲೇಖಿಸಿದೆಯಾದರೂ, ಈ ಅಗ್ರಹಾರವು ನಾನಾ ಗೋತ್ರಜರಾದ, ವೇದ ಪಾರಂಗತರಾದ ವಿಪ್ರರಿಗೆ ಹಂಚಿಕೊಟ್ಟ ಗ್ರಾಮವಾಗಿರಲಿಲ್ಲ. ಇಲ್ಲಿಯ ಮಹಾಜನರ ಕೂಟವು ವಿಪ್ರರು ಮತ್ತು ಬೇರೆ ಗಣ್ಯ ಜನರಿಂದ ಕೂಡಿದ್ದಾಗಿತ್ತು ಎಂದು ತಿಳಿಯುತ್ತದೆ.

ವಿಜಯನಗರದ ಅರಸ ವೀರ ಹರಿಹರರಾಯನು ಕ್ರಿ.ಶ. ೧೩೭೮ರಲ್ಲಿ ಹೊಯ್ಸಳ ದೇಶದಲ್ಲಿರುವ ಜಂಬೂರು ಗ್ರಾಮವನ್ನು ಭಾನುವಳ್ಳಿ ಸಹಿತವಾಗಿ ಪೂರ್ವ ಪ್ರಸಿದ್ಧವಾಗಿದ್ದ ಸೀಮೆಗಳನ್ನು ಗುರುತಿಸಿ, ತನ್ನ ತಾಯಿಯ ಹೆಸರಿನಲ್ಲಿ 'ಹೊಂನಲಾಪುರ'ವೆಂದು ಹೆಸರಿಸಿ ಅಗ್ರಹಾರ ಮಾಡಿದ್ದನ್ನು ಶಾಸನವೊಂದು (ಚರಾಪ ೧೩೧) ತಿಳಿಸಿದೆ. ಮುದ್ದಣ್ಣ ದಂಡೇಶನು ಈ ಅಗ್ರಹಾರದ ಭೂಮಿಯನ್ನು ೩೬ ವೃತ್ತಿಗಳಾಗಿ ವಿಂಗಡಿಸಿ ನಾನಾ ಗೋತ್ರದ ವೇದ ಪಾರಂಗತರಾದ ದ್ವಿಜರಿಗೆ ನೀಡಿದ್ದನ್ನು ಶಾಸನ ದಾಖಲಿಸಿದೆ. ವಿಶೇಷವೆಂದರೆ, ಈ ವೃತ್ತಿಗಳಲ್ಲಿ ಮೂರು ವೃತ್ತಿಗಳನ್ನು ಮೊದಲಿನಿಂದ ಆ ಊರಿನಲ್ಲಿ ನೆಲೆಸಿದ್ದ ಬ್ರಾಹ್ಮಣರಿಗೆ ನೀಡಲಾಗಿದೆ.

ಇದೇ ಜಂಬೂರಿನ ಮತ್ತೊಂದು ಶಾಸನವು (ಚರಾಪ ೪೪) ವಿಜಯನಗರದ ದೊರೆ ಸಾಳುವ ಇಮ್ಮಡಿ ನರಸಿಂಗರಾಜ ಮಹಾರಾಜನ ಸೇನಾಧಿಪತಿಯಾದ ನರಸಣ್ಣ ನಾಯಕನು ದಳವಾಯಿ ಮಲ್ಲಣ್ಣ ನಾಯಕರಿಗೆ ಸಾತಿ ಗ್ರಾಮದ ಸೀಮೆಯ ನಾಯಕತನವನ್ನು ನೀಡಿದ್ದನ್ನು ತಿಳಿಸಿದೆ. ಸಾತಿ ಗ್ರಾಮದ ಸೀಮೆಗೆ ಸೇರಿದ್ದ. "ಶ್ರೀಮದುದ್ಭವ ಸರ್ವ್ವಗ್ನ ಸಕಲವಿದ್ಯಾನಿಧಿ ಹೊಂನಲಾಪುರ ನಾಡಿನ ಸರ್ವಮಾನ್ಯ ಅಗ್ರಹಾರ ಜಂಬೂರ ಶ್ರೀ ಜಕ್ಕೇಶ್ವರ ದೇವರಿಗೆ ಮೊದಲು ದೇವಸ್ವವಾಗಿ ಬಿಟ್ಟಿದ್ದ ದೇವೀಗೆರೆ ಹಳ್ಳಿಯು ಜೀರ್ಣವಾಗಿ ನಶಿಸಿದ್ದು ಆ ಧರ್ಮವು ನಿಂತು ಹೋಗಿತ್ತು. ಇದನ್ನು ತಿಳಿದ ನರಸಣ್ಣ ನಾಯಕರು ರಾಜರ ನಿರೂಪದಂತೆ ಮತ್ತೆ ಆ ಧರ್ಮವನ್ನು ಪ್ರತಿಷ್ಠಾಪಿಸುತ್ತಾರೆ. ಹೀಗೆ ಪುನರ್ದತ್ತಿ ಬಿಡುವಾಗ, ನರಸಣ್ಣನಾಯಕರ ಅಪ್ಪಣೆಯಂತೆ, ದಿಂಡಗೂರ ಮಹಾಜನರು, ಜಂಬೂರ ಮಹಾಜನರ ಮುಂದೆಯೇ, 'ಸರ್ವಸ್ವಾಮ್ಯ ಸಮಸ್ತ ಆದಾಯ ಸಹಿತವಾಗಿ ದೇವೀಗೆರೆಯನ್ನು ಜಕ್ಕೇಶ್ವರ ದೇವರಿಗೆ ಧಾರೆ ಎರೆದು ದಾನ ನೀಡಿದ್ದಾರೆ. ಶಾಸನವು ದೇವಿಗೆರೆಯ ಸರ್ವಾದಾಯದಿಂದ ಮತ್ತು ಹುಟ್ಟಿದ ಹಣ ಭತ್ತದಿಂದ ಶ್ರೀ ಜಕ್ಕೇಶ್ವರ ದೇವರಿಗೆ ಪಂಚಾಮೃತ ಅಭಿಷೇಕ, ನೈವೇದ್ಯ, ನಂದಾದೀಪ, ಮಂತ್ರಪುಷ್ಪ, ದವನಾರೋಪಣ, ಫಲಪೂಜೆ, ಪವಿತ್ರಾರೋಪಣ, ಕಾರ್ತಿಕ ಕೃತ್ತಿಕಾ ದೀಪ ಪೂಜೆ ಮತ್ತು ವಸಂತೋತ್ಸವ ಮುಂತಾದ ಪಂಚಪರ್ವಗಳನ್ನು ದೀಪಾವಳಿ, ಶಿವರಾತ್ರಿ, ಯುಗಾದಿ. ಮೊದಲಾದ ಮಹಾತಿಥಿಗಳ ಪೂಜೆ, ನೈವೇದ್ಯವನ್ನು ನಡೆಸಬೇಕೆಂದಿದೆ. ಈ ದಾನದಿಂದ ದೇವರಿಗೆ ಶ್ರೀಗಂಧ, ಧೂಪ, ಪರಿಮಳ ದ್ರವ್ಯ, ವಸ್ತ್ರಗಳನ್ನು ನಡೆಸುವರು ಮತ್ತು ಅರ್ಚಕರು, ಪರಿವಾರದವರಾದ ಬಾಣಸಿಗ, ತೋಟಿಗ, ಭೇರಿ, ಜಾಗಟೆ ವಿನಿಯೋಗದವರ ಜೀವಿತದೊಂದಿಗೆ ದೇವರ ವೈಭವವನ್ನು ನಡೆಸಬೇಕೆಂದು ನಿಶ್ಚಿತವಾಗಿ ತಿಳಿಸಿದೆ. ಶಾಸನವು ಹೀಗೆ ಅಗ್ರಹಾರವನ್ನು ಪುನರಾಭರಣ ಮಾಡಿಸಿದ ಉದ್ದೇಶವನ್ನು ತಿಳಿಸುವಲ್ಲಿ – ನರಸಿಂಗ ಮಹಾರಾಯರಿಗೆ, ನರಸಣ್ಣ ನಾಯಕ ವೊಡೆಯರಿಗೆ ಆಯುರಾರೋಗ್ಯ, ಸಮಸ್ತ ಐಶ್ವರ್ಯವೂ ಸಮಸ್ತ ರಾಜ್ಯಾಭ್ಯುದಯವಾಗಲೆಂದು ಆಶಿಸಿ ದಾನಬಿಟ್ಟರೆಂದು ತಿಳಿಸಿದೆ. ಶಾಸನದಲ್ಲಿ ಸರ್ವಮಾನ್ಯದ ಅಗ್ರಹಾರ ಜಂಬೂರನ್ನು 'ದಕ್ಷಿಣಕೈಲಾಸ'ವೆಂದು ಕರೆಯಲಾಗಿದೆ. ಈ ಶಾಸನವು ಅಗ್ರಹಾರವು ನಶಿಸಿದ್ದನ್ನು ಮತ್ತೆ ಪುನರಾಭರಣಗೊಳಿಸಿದ್ದಕ್ಕೆ ಒಂದು ಉದಾಹರಣೆಯಾಗಿದೆ.

ನವಿಲೆ ಗ್ರಾಮದ ಶಾಸನವು (ಚರಾಪ ೬೩) ಕಟ್ಟುಗುತ್ತಿಗೆ 'ಪಿಂಡದಾನ'ವನ್ನು ನೀಡಿ ಗ್ರಾಮವನ್ನು ಅಗ್ರಹಾರ ಮಾಡಿದ್ದರ ಬಗೆಗೆ ತಿಳಿಸುತ್ತಿದೆ. ನೀರಗುಂದ ನಾಡಿನ ನಾಗರ ನವಿಲೆಯ ಸುತ್ತಲ ಗ್ರಾಮದ ಪ್ರಮುಖರಾದ ಸಮಸ್ತ ಕೂಸುಗಳು ಒಟ್ಟಾಗಿ ಸೇರಿ 'ನವಿಲೆ ಸ್ಥಳವನ್ನು ಅಗ್ರಹಾರ ಮಾಡಬಹುದೆಂದು ನಿಶ್ಚಯಿಸಿಕೊಂಡು, ನಲ್ಲೂರ ಕೊಪ್ಪದಲ್ಲಿ ನೆಲೆಸಿದ್ದ ಹೊಯ್ಸಳ ದೊರೆ ವೀರನಾರಸಿಂಹ ದೇವನನ್ನು ಕಂಡು ಬಿನ್ನವಿಸಿದರು. ರಾಜನ ಮಾತಿನಂತೆ ಕ್ರಿ.ಶ. ೧೨೧೮ರಲ್ಲಿ ನಾರಣಭಟ್ಟರು, ಗೋಪಯ್ಯ ಪ್ರಮುಖರಾದ ನಾನಾ ಗೋತ್ರಜರು ಮತ್ತು ಭೂರಿ ವಿದ್ವಾಂಸರಾದ ೧೬೦ ಜನ ಬ್ರಾಹ್ಮಣೋತ್ತಮರಿಗೆ ಶ್ರೀ ವಜ್ರೇಶ್ವರ ದೇವರ ಮತ್ತು ಶ್ರೀ ನಾರಸಿಂಹ ದೇವರ ಸಂವಿಧಾನದಲ್ಲಿ ನವಿಲೆ ಗ್ರಾಮವನ್ನು "ಕಟ್ಟುಗುತ್ತಿಗೆ ಪಿಂಡದಾನ"ವಾಗಿ ಸರ್ವಬಾಧ ಪರಿಹಾರವಾಗಿ ನೀಡಿ ಪ್ರತಿವರ್ಷವೂ ೫೦೦ ಗದ್ಯಾಣವನ್ನು ತೆತ್ತು ಅನುಭವಿಸುವಂತೆ ದಾನ ನೀಡಲಾಯಿತು ಎಂದು ಶಾಸನ ತಿಳಿಸಿದೆ. ಈ ನವಿಲೆಯ ಸಿದ್ಧಾಯ ಗದ್ಯಾಣ ೫೦೦ರಲ್ಲಿ ರಾಜನು ಮತ್ತೆ ನೆಲೆತೆರವಾಗಿದ್ದ ೨೫ ಗದ್ಯಾಣವನ್ನು ದತ್ತಿಯಾಗಿ ಬಿಟ್ಟನು. ಇದಲ್ಲದೇ ಅದೇ ಸಿದ್ಧಾಯದ ೩೦ ಗದ್ಯಾಣವನ್ನು ಅಲ್ಲಾಳನಾಥನ ಶ್ರೀಕಾರ್ಯಕ್ಕೆಂದು ಬಿಟ್ಟದ್ದರಿಂದ ಮಹಾಜನರು ನವಿಲೆ ಅಗ್ರಹಾರದ ಸಿದ್ಧಾಯವೆಂದು ೪೪೫ ಗದ್ಯಾಣವನ್ನು ತೆರುವರು ಎಂದು ಶಾಸನ ತಿಳಿಸಿದೆ. ಈ ಶಾಸನದಿಂದ ರಾಜನೇ ಸಂತಸದಿಂದ

ನಿರ್ಮಾಣ ಮಾಡುತ್ತಿದ್ದ ಅಗ್ರಹಾರದಂತೆ ಜನರೇ ಆಲೋಚಿಸಿ ತಮ್ಮ ಗ್ರಾಮವನ್ನು ಅಗ್ರಹಾರವಾಗಿ ಮಾಡುತ್ತಿದ್ದರೆಂದೂ ತಿಳಿಯುತ್ತದೆ. ಈ ಶಾಸನವನ್ನು ನಾಗರನವಿಲೆಯ ನಿವಾಸಿ ಜಾತವೇದ ಭಟ್ಟರ ಮಗ 'ಅಭಿನವ ಸರ್ವಜ್ಞ' ಎನ್ನಿಸಿದ್ದ ಸೋಮೇಶ್ವರ ಭಟ್ಟನು ರಚಿಸಿದ್ದಾನೆ.

ದಿಂಡಿಗೂರು ಗ್ರಾಮದ ಕೇಶವ ದೇವಾಲಯದ ಶಾಸನವು (ಚರಾಪ ೩೭) ಅಗ್ರಹಾರದ ವೃತ್ತಿ ವಿಭಾಗದಲ್ಲಿ ಕಾಲಾನಂತರದಲ್ಲಿ ವ್ಯತ್ಯಾಸಗಳಾಗಿದ್ದನ್ನು ತಿಳಿಸುತ್ತಾ 'ಮರುವಿಂಗಡಣೆ' ಮಾಡಿದ ವಿಶೇಷ ಸಂದರ್ಭವೊಂದನ್ನು ದಾಖಲಿಸಿದೆ. ಹೊಯ್ಸಳ ದೊರೆ ವೀರ ನಾರಸಿಂಹದೇವನು ಆಳುತ್ತಿದ್ದಾಗ, ಕ್ರಿ.ಶ. ೧೨೩೧ರಲ್ಲಿ ಶ್ರೀಮದನಾದಿ ಅಗ್ರಹಾರವಾದ ಶ್ರೀ ಮಲ್ಲಿಕಾರ್ಜುನ ಪುರವಾದ ದಿಂಡಿಗೂರಿನ ಅಶೇಷ ಮಹಾಜನರು ಮೊದಲು ಮಾಡಿದ್ದ ವಿಭಾಗವು ಸಮವಲ್ಲವೆಂದು, ಮಧ್ಯಸ್ಥರಿಂದ ಹಳ್ಳಿಗಳ ಗದ್ದೆ ಬೆದ್ದಲನ್ನು ಅಳಸಿ, ತಮ್ಮೊಳ್ಳೈಕಮತ್ಯವಾಗಿ – "ವಸ್ತುವರ್ಣಸಮ ಸಂಖ್ಯಾಸಮ"ವೆಂದು ಸಮಕಟ್ಟಿಧ್ರುವವಾಗಿ ಯಿಚ್ಛಾವೃತ್ತಿ ಯಾಗಿಸಿದ–ವೃತ್ತಿ ವಿಂಗಡಣೆಯ ಕ್ರಮದ ಬಗೆಗೆ ಬೆಳಕು ಚೆಲ್ಲಿದೆ. ಶಾಸನದಲ್ಲಿ ಗೌಡಿಗೆರೆಯವೃತ್ತಿ ೩೨, ಮೊನಗನ ಕಟ್ಟದ ವೃತ್ತಿ ೧೭, ಸೆಟ್ಟಿಯನ ಹಳ್ಳಿಯ ವೃತ್ತಿ ೧೧, ಹಡವನಹಳ್ಳಿಯು ಸೇರಿದ ಕರಿಯ ಮಾರನ ಹಳ್ಳಿಯ ವೃತ್ತಿ ೧೯, ಕಲ್ಲಕೆರೆಯ ವೃತ್ತಿ–೨೩, ದೇವಿಗೆರೆಯ ವೃತ್ತಿ–೨೧, ಸೌತೆಯನಹಳ್ಳಿಯ ವೃತ್ತಿ–೬, ಒಳಗೆರೆಯ ಸೋಮನಹಳ್ಳಿಯ ವೃತ್ತಿ–೯, ಅಂತರನಹಳ್ಳಿಯ ವೃತ್ತಿ–೫, ಹಾರುವ ಸೋಮನಹಳ್ಳಿಯ ವೃತ್ತಿ–೧೫–ಒಟ್ಟು ೧೫೮ ಹೀಗೆ ನಿಶ್ಚಯಿಸಿದ್ದು ಶಾಸನವು "ಹಳ್ಳಿಗಳಿಗೆ ಮಂನ್ನೆಯರ, ದೆಯ್ವಿಕರ, ಅಟವಿಕರ ಬಾಧೆಯಾದಡೆ ಮತ್ತೆ ಸಮವಲ್ಲವೆಂದು ಅಳಿಸಲಾಗದು. ಆವಹಳ್ಳಿಯಲ್ಲಿ ಆವನಾದರೂ, ಕ್ರಯದಾನವ ಕೊಂಡರೆ ಸಲ್ಲದು, ಈ ಅರ್ಥವನಳಿಯಲಾಗದು" ಎಂದೂ ತಿಳಿಸಿದೆ. ಇದರಿಂದ ಊರಲ್ಲಿ ವೃತ್ತಿಗಳ ಬಗೆಗೆ, ಜಗಳಾಗುತ್ತಿದ್ದು ಆಕ್ರಮಣವೂ ನಡೆದಿರಬೇಕು. ಆದರೆ ವೃತ್ತಿ ಸೀಮೆಯನ್ನು ಬದಲಿಸಲು ಸಾಧ್ಯವಿರುತ್ತಿರಲಿಲ್ಲವೆಂದು ಮಹಾಜನರ ಸಭೆ ನಿರ್ಣಯವೇ ಅಂತಿಮ ನಿರ್ಣಯವಾಗುತ್ತಿತ್ತೆಂದೂ ತಿಳಿಯುತ್ತದೆ.

ಚನ್ನರಾಯಪಟ್ಟ ತಾಲೂಕಿನ ಜೈನಮತದ ಕೇಂದ್ರವಾದ ಶ್ರವಣ ಬೆಳಗೊಳದ ಶಾಸನಗಳಲ್ಲೂ ದೇವರಿಗೆಂದು ಬಿಟ್ಟ 'ಪುರದಾನ'ಗಳ ಉಲ್ಲೇಖವಿದೆ. ಶ್ರವಣಬೆಳಗೊಳದ ಭಂಥಾರಿ ಬಸದಿ ಶಾಸನವೊಂದು (ಶಬೆ ೪೭೬ ವಿಕ ೨) ಭಂಥಾರಿ ಹುಳ್ಳಮಯ್ಯನು ಹೊಯ್ಸಳ ನಾರಸಿಂಹ ದೇವನ ಕೈಯಿಂದ ಬೇಡಿ ಪಡೆದು 'ಸವಣೇರು' ಗ್ರಾಮವನ್ನು ಕುಕ್ಕುಟೇಶ್ವರ ಮತ್ತು ಶ್ರೀ ಪಾರ್ಶ್ವನಾಥ ಸ್ವಾಮಿಯ ಅಷ್ಟವಿಧಾರ್ಚನೆಗೆಂದು ಬಿಟ್ಟದ್ದನ್ನು ತಿಳಿಸಿದೆ. ಈ ಶಾಸನದಲ್ಲಿ ಅಗ್ರಹಾರ ಪದದ ಉಲ್ಲೇಖವಿಲ್ಲ. ಆದರೆ ಅಗ್ರಹಾರವನ್ನಾಗಿ ಬಿಡುವಂತೆ ಇಲ್ಲಿಯೂ ಗ್ರಾಮದ ನಾಲ್ಕು ದಿಕ್ಕಿನಲ್ಲೂ ಸೀಮೆಗಲ್ಲನ್ನು ನೆಡೆಸಿ, ರಾಜನೇ ಪುರದಾನ ನೀಡಿದನಲ್ಲದೇ ಶಾಸನದಲ್ಲಿ ಸ್ಪಷ್ಟವಾಗಿ – "ಈ ಸ್ಥಳದಿಂದಾದ ದ್ರವ್ಯದಿಂದ ಇಲ್ಲಿಯ ಆಚಾರ್ಯರು ಈ ಸ್ಥಾನದ ಬಸದಿಗಳ ಖಣ್ಡಸ್ಫುಟಿತ ಜೀರ್ಣೋದ್ಧಾರ ದೇವತಾ ಪೂಜೆ, ರಂಗಭೋಗ ಮತ್ತು ಪ್ರಜೆಗಳ ಋಷಿಗಳ ಆಹಾರದಾನವನ್ನು ನಡೆಸಬೇಕೆಂದು ವಿಧಿಸಲಾಗಿದೆ. ಯಾವುದೇ ಕಂದಾಯದ ಬಗೆಗೆ ತಿಳಿಸಿಲ್ಲ. ಬದಲಾಗಿ ಊರನ್ನು 'ಗೊಮ್ಮಟಪುರ'ವೆಂದು ಕರೆಯಲಾಗಿದೆ.

ಶ್ರವಣ ಬೆಳಗೊಳದ ಜಿನನಾಥಪುರದ ಶಾಸನವು (ಶ್ರ.ಬೆ.೫೩೮) ೧೨ನೇ ಶತಮಾನದಲ್ಲಿ ಹೊಯ್ಸಳ ದೊರೆ ವಿಷ್ಣುವರ್ಧನನ ಹಿರಿಯ ದಂಡನಾಯಕನಾಗಿದ್ದ ಗಂಗಪ್ಪಯ್ಯನು ಶ್ರವಣಬೆಳಗೊಳ ತೀರ್ಥದಲ್ಲಿ ಜಿನನಾಥಪುರವನ್ನು ಮಾಡಿಸಿದ್ದನ್ನು ತಿಳಿಸಿದೆ. ಜಿನನಾಥಪುರದ ಮತ್ತೊಂದು ಶಾಸನವು (ಇತಿಹಾಸ ದರ್ಶನ ಸಂ. ೯ ಪುಟ) ಜಿನನಾಥಪುರದ ಬಗೆಗೆ ಬೆಳಕು ಚೆಲ್ಲುತ್ತಿದ್ದು ಅಲ್ಲಿನ ಶಾಂತಿನಾಥ ತೀರ್ಥಂಕರರ ಅಷ್ಟವಿಧಾರ್ಚನೆಗೆ ಎಂದು ದಾನ ನೀಡಿದ್ದನ್ನು ತಿಳಿಸಿದೆ. ಅಲ್ಲಿದ್ದ ಲಕ್ಕಣಂದಿ ವಠಾರ, ನಾಗದೇವನು ಕಟ್ಟಿಸಿದ ಕೆರೆಯನ್ನು ಬಸದಿಯ ಸುತ್ತಣ ಮನೆಗಾಣವನ್ನು, ನಾಗದೇವನ ವಠಾರವನ್ನು ರಾಚೇಯನಹಳ್ಳಿಯನ್ನು ದಾನವಾಗಿ ಬಿಟ್ಟದ್ದನ್ನು ತಿಳಿಸಿದೆ. ಈ ದಾನವನ್ನು ಲಕ್ಕಣಂದಿ ದೇವರು, ಕನಕಸೇನ ಪಂಡಿತರು, ಮಂಚಿಯಣ್ಣ ಹೆಗ್ಗಡೆ ಮತ್ತು ಸಮಸ್ತ ಗಾವುಂಡರು ಸೇರಿ ಬಿಟ್ಟರೆಂದು ತಿಳಿಯುತ್ತದೆ. ಇದರಿಂದ ಜೈನಮತಕ್ಕೆ ನೀಡಿದ್ದ ಪುರದಾನದಲ್ಲಿ ಊರ ಪ್ರಮುಖರೆಲ್ಲ ಒಟ್ಟಾಗಿ ಸೇರಿ ನಿರ್ವಹಿಸುತ್ತಿದ್ದಂತಿದೆ. ಮಹಾಜನರ ಗುಂಪು ಇದ್ದಂತೆ ತೋರುವುದಿಲ್ಲ.

ಚನ್ನರಾಯಪಟ್ಟಣದ ತಾಮ್ರಶಾಸನವೊಂದು ವಿಜಯನಗರದ ಅರಸ ಕೃಷ್ಣದೇವರಾಯನು ಗೋದ್ವಾದಶಿಯಂದು, ಕಾಮಧೇನು ಮಹಾದಾನವನ್ನು ಮಾಡಿ, ತುಂಗಭದ್ರನದೀ ತೀರದ ವಿರೂಪಾಕ್ಷನ ಸನ್ನಿಧಿಯಲ್ಲಿ 'ಸಣಬ' ಗ್ರಾಮವನ್ನು 'ತಿಂಮಸಂದ್ರ'ವೆಂಬ ಪ್ರತಿನಾಮವಿಟ್ಟು ಬಸವ ದೀಕ್ಷಿತರಿಗೆ ದಾನ ನೀಡುತ್ತಾನೆ. ವಿವೇಕಿಗಳೂ, ಸಕಲ ವೇದ ಪಾರಂಗತರಾದ ಬಸವದೀಕ್ಷಿತರು, ವೀರನರಸಿಂಹನಿಗೂ, ಕೃಷ್ಣರಾಯನಿಗೂ ಗುರುಗಳಾಗಿದ್ದರು. ಹೊಯ್ಸಳ ನಾಡಿನ ಘನಗಿರಿ ರಾಜ್ಯಕ್ಕೆ ಸೇರಿದ ಸಣಬ ಗ್ರಾಮದ (ತಿಂಮಾಸಂದ್ರದ) ಸೀಮೆಕಲ್ಲುಗಳನ್ನು ನೆಡಿಸಿ ಸರ್ವಮಾನ್ಯವಾಗಿ ನೀಡಿದ್ದು, ಶಾಸನದಲ್ಲಿ ಬಸವ ದೀಕ್ಷಿತರನ್ನು 'ಗ್ರಾಮಯಜಮಾನ' ಎಂದೂ

ಕರೆಯಲಾಗಿದೆ. ಇವರು ಈ ಗ್ರಾಮವನ್ನು ೨೭ ವೃತ್ತಿಗಳಾಗಿಸಿ, ಅದರಲ್ಲಿ ಎಂಟು ವೃತ್ತಿಗಳನ್ನು ತಮ್ಮದೆಂದು ತಿಳಿಸಿ ಉಳಿದದ್ದರಲ್ಲಿ ಊರಿನ ವಿಷ್ಣು ಮತ್ತು ಶಿವ ದೇವಾಲಯಗಳಿಗೆ ಒಂದೊಂದು ವೃತ್ತಿಯನ್ನು ನೀಡುತ್ತಾರೆ. ಉಳಿದ ೧೭ ವೃತ್ತಿಗಳನ್ನು ವೇದಸಂಪನ್ನರಾದ ಬ್ರಾಹ್ಮಣರಿಗೆ ನೀಡಲಾಗಿದೆ. ಈ ಶಾಸನದಲ್ಲಿ ಅಗ್ರಹಾರದಲ್ಲಿನ ಉತ್ಪತ್ತಿಗಳಾದ – "ನಿಧಿ ನಿಕ್ಷೇಪ ಪಾಷಾಣಸಿದ್ಧಸಾಧ್ಯ ಜಲ್ವಾನಿತಂ, ಅಕ್ಷಿಣ್ಯಾಗಮಿ ಸಂಯುಕ್ತಂ ಏಕಭೋಗ್ಯಂ ಸಭೂರುಹಂ"–ಎಂದೂ ತಿಳಿಸಿದೆ. ಇದೊಂದು ಸರ್ವಮಾನ್ಯದ ಅಗ್ರಹಾರವಾಗಿತ್ತು. ಹೀಗೆ ವಿಜಯನಗರದರಸರ ಕಾಲದಲ್ಲಿ ತಾವು ನಿರ್ಮಿಸುತ್ತಿದ್ದ ಅಗ್ರಹಾರದ ಆಳ್ವಿಕೆಗೆ ಅನುವಾಗುವಂತೆ ಗ್ರಾಮ ಯಜಮಾನನಿರುತ್ತಿದ್ದ ವಿವರವೂ ಇಲ್ಲಿ ಕಂಡುಬರುತ್ತಿದೆ.

ಭೈರಾಪುರ ಗ್ರಾಮದ ಶಾಸನವು (ಚರಾಪ ೧೩೨) ಕ್ರಿ.ಶ. ೧೬೨೭ರಲ್ಲಿ ನುಗ್ಗೇನಹಳ್ಳಿ ಸಿಂಹಾಸನದ ಗುರುದೇವರಿಗೆ ಸಾಲಿನಾಯಕರ ಮಗನಾದ ಇಮ್ಮಡಿ ಭೈರಪ್ಪ ನಾಯಕನು ತಮ್ಮ ಹೆಸರಿನಿಂದ 'ಭೈರಾಪುರ'ವನ್ನು ಮಾಡಿ 'ಶಿವಾರ್ಪಿತ'ವೆಂದು ಬಿಟ್ಟದ್ದನ್ನು ದಾಖಲಿಸಿದೆ. ಈ ಶಾಸನವು ಈ ತಾಲೂಕಿನ ಶಿವಪುರಗಳಿಗೆ ಒಂದು ಉದಾಹರಣೆಯಾಗಿದೆ. ಈ ತಾಲೂಕಿನ 'ಅಗ್ರಹಾರದಾನ'ದ ಬಗೆಗೆ ಗಮನಿಸಿದಾಗ ಸಿಗುವ ಗ್ರಾಮದಾನದ ಕೊನೆಯ ಉದಾಹರಣೆ ಇದಾಗಿದೆ.

ಒಂದು ತಾಲೂಕಿನಲ್ಲಿ ಲಭ್ಯವಿರುವ ಅಗ್ರಹಾರಗಳ ಅಧ್ಯಯನದಿಂದ ಆ ಪರಿಸರದ ಧಾರ್ಮಿಕ ಇತಿಹಾಸದ ಮಗ್ಗಲುಗಳನ್ನು ತಿಳಿಯಲು ಅನುವಾಗುತ್ತದೆ. ಅಗ್ರಹಾರಗಳು ಕೇವಲ ಬ್ರಾಹ್ಮಣರಿಗೆ ಸೀಮಿತವಾಗದೇ, ನಂತರದ ಕಾಲದಲ್ಲಿ ಹೇಗೆ ಪುರದಾನದಂತೇ ವಿವಿಧ ವರ್ಗದ ಗಣ್ಯರು ನೆಲೆಸಲು ಗ್ರಾಮಾಡಳಿತದಲ್ಲಿ ನೇರವಾಗಿ ಪಾಲ್ಗೊಳ್ಳಲು ಸಾಧ್ಯವಾಯಿತೆಂದು ತಿಳಿಯುತ್ತದೆ. ಇದಲ್ಲದೇ 'ಅಗ್ರಹಾರ'ವಾಗಿ ನಿರ್ಮಿಸುವಲ್ಲಿ ಊರಿಗೆ ನೀಡಿದ ಪ್ರತಿನಾಮಗಳ ಹಿನ್ನೆಲೆಯೂ ಮತ್ತು ಆಯಾ ಸಂದರ್ಭಗಳೂ ಗಮನ ಸೆಳೆಯುತ್ತಿವೆ. ಹೀಗಾಗಿ ಸಾಮಾಜಿಕ ಸ್ಥಿತಿಗತಿಯ ಆಯಾಮಗಳನ್ನರಿಯುವಲ್ಲಿ ಅಗ್ರಹಾರಗಳ ಅಧ್ಯಯನವು ಅಗತ್ಯವಾಗಿದೆ.

[ವಿಶೇಷ ಸೂಚನೆ : ಈ ಪ್ರಬಂಧದಲ್ಲಿ ಚನ್ನರಾಯಪಟ್ಟಣ ತಾಲೂಕಿನ ಶಾಸನಗಳನ್ನು ಎಪಿಗ್ರಾಫಿಯ ಕರ್ನಾಟಕ ಸಂ. ೧೦ರಿಂದಲೂ, ಶ್ರವಣ ಬೆಳಗೊಳದ ಶಾಸನವನ್ನು ಎಪಿಗ್ರಾಫಿಯಾ ಕರ್ನಾಟಿಕಾ ಸಂ. ೨ರಿಂದಲೂ ಸಂಗ್ರಹಿಸಲಾಗಿದೆ. ಇತಿಹಾಸ ದರ್ಶನ ಸಂ. ೯ರ ಶಾಸನವನ್ನು ಬಳಸಿದೆ.]

೩೦

ಶಾಸನೋಕ್ತ ಬಾಲಚಂದ್ರ ಜೈನಯತಿಗಳು

ಡಾ. ಎಸ್. ನಂಜುಂಡಸ್ವಾಮಿ*

ಬಾಲಚಂದ್ರ ಎಂಬ ಹೆಸರಿನ ಅನೇಕ ಜೈನಯತಿಗಳು ಶಾಸನೋಕ್ತರಾಗಿದ್ದಾರೆ. **ಸಂಘ, ಗಚ್ಛ, ಗಣ ಮತ್ತು ಕಾಲ, ಗುರುಪರಂಪರೆ, ಅವರಿಗಿರುವ ವಿಶೇಷಣಗಳ ಆಧಾರದ ಮೇಲೆ ಶಾಸನೋಕ್ತ ಬಾಲಚಂದ್ರರು ಯತಿಗಳು ಎಷ್ಟು ಜನ ಎಂಬುದನ್ನು ಗುರುತಿಸಬೇಕಾಗುತ್ತದೆ.** ಬಾಲಚಂದ್ರ ಎಂಬ ಹೆಸರಿನ ಕೆಲವರು ಜೈನಯತಿಗಳಲ್ಲದೇ ಇದ್ದರೂ ಇರಬಹುದು. ಕರ್ನಾಟಕದ ಜೈನ ಶಾಸನಗಳನ್ನು ಆಮೂಲಾಗ್ರವಾಗಿ ಹುಡುಕಿದರೆ ಇನ್ನೂ ಕೆಲವು ಬಾಲಚಂದ್ರ ಯತಿಗಳು ದೊರೆಯಬಹುದು.

ಇದುವರೆಗೆ ಗುರುತಿಸಲ್ಪಟ್ಟಿರುವ ಬಾಲಚಂದ್ರಯತಿಗಳು

ಕವಿಚರಿತೆಕಾರರು ಮೂರು ಜನ ಬಾಲಚಂದ್ರರನ್ನು ಗುರುತಿಸಿದ್ದಾರೆ. (೧) ನಯಕೀರ್ತಿಯ ಶಿಷ್ಯ ಬಾಲಚಂದ್ರ (ಕ್ರಿ.ಶ. ೧೧೭೦) ಇವನು ಬರೆದಿರುವ ಕೆಲವು ಕೃತಿಗಳ ಹೆಸರುಗಳನ್ನು ನೀಡಿದ್ದಾರೆ. ಈತನು ಮೂಲಸಂಘದ ದೇಶೀಯಗಣದ ಪುಸ್ತಕ ಗಚ್ಛದ ಕುಂದಕುಂದಾನ್ವಯಕ್ಕೆ ಸೇರಿದವನು. ಇವನ ಗುರು ಕ್ರಿ.ಶ. ೧೧೭೬ ರಲ್ಲಿ ಗತಿಸಿದ ನಯಕೀರ್ತಿ. ಇವನ ಅಣ್ಣ ದಾಮನಂದಿ. ಇವನಿಗೆ ಆಧ್ಯಾತ್ಮಿ ಬಾಲಚಂದ್ರ ಎಂದು ಹೆಸರಿತ್ತು. ಈತನು ಕ್ರಿ.ಶ. ೧೧೮೧ ರಲ್ಲಿ ಬದುಕಿದ್ದನು. ಬೊಪ್ಪಣ್ಣ ಪಂಡಿತನಿಂದ ಜಿನಸುತ್ತಿಯನ್ನು ಬರೆಸಿದನು. (೨) ಬಾಲಚಂದ್ರ ಕವಿಕಂದರ್ಪ (೧೨೦೪): ಕವಿಕಂದರ್ಪ ಬಾಲಚಂದ್ರನು ಜನ್ನನ ಪತ್ನಿ ಲಕುಮಾದೇವಿಯ ಗುರು. ಸಕಲಚಂದ್ರನ ಮಗನಾದ ಮಾಧವಚಂದ್ರನ ಶಿಷ್ಯ. ಪಾರ್ಶ್ವಪಂಡಿತನು ಸ್ತುತಿಸಿರುವ ಬಾಲಚಂದ್ರನೂ ಇವನೇ ಆಗಿರಬಹುದು. ಬೆಳಗಾವಿಯ ಎರಡು ಶಾಸನಗಳನ್ನು ಬಾಲಚಂದ್ರಕಂದರ್ಪನು ಬರೆದಿದ್ದು ಇವನು ಮಾಧವಚಂದ್ರ ತ್ರೈವಿದ್ಯನ ಶಿಷ್ಯನೆಂದು ತಿಳಿದುಬರುತ್ತದೆ. ಈತನ ಸೌದತ್ತಿಯ ರಟ್ಟರ ನಾಲ್ಕನೇ ಕಾರ್ತವೀರ್ಯ ಮತ್ತು ಅವನ ಶ್ರೀಕರಣ ಬೀಚಿರಾಜನ ಗುರು ಎಂದು ಹೇಳಿದ್ದಾರೆ. (೩) ಬಾಲಚಂದ್ರಪಂಡಿತ (೧೨೭೩). ಈತನು ದ್ರವ್ಯ ಸಂಗ್ರಹ ಸೂತ್ರ ಕರ್ಣಾಟಕ ಟೀಕೆಯನ್ನು, ಪಂಚಪರಮೇಷ್ಠಿಗಳ ಬೊಲ್ಲಿಯನ್ನು ಬರೆದಿದ್ದಾನೆ. ಇವನು ಜೈನ ಕವಿ. ಈ ಟೀಕೆಯನ್ನು ಕ್ರಿ.ಶ. ೧೨೭೩ ರಲ್ಲಿ ಬರೆದಿದ್ದಾನೆ. ಈತ ಗುರುಗಳು ನೇಮಿಚಂದ್ರ ಮತ್ತು ಅಭಯಚಂದ್ರ ಎಂದು ಬರೆದಿದ್ದಾರೆ. ಈತನು ಕ್ರಿ.ಶ. ೧೨೭೫ ರಲ್ಲಿ ಗತಿಸಿದಂತೆ ತಿಳಿದುಬರುತ್ತದೆ ಎಂದು ಬೇಲೂರು ಶಾಸನದಿಂದ ತಿಳಿದುಬರುತ್ತದೆ ಎಂದು ಹೇಳಿದ್ದಾರೆ.

ಡಾ. ಎ. ವೆಂಕಟಸುಬ್ಬಯ್ಯನವರು ರಾಜಾದಿತ್ಯ ದುರ್ಗಸಿಂಹಾದಿ ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರದಲ್ಲಿ ಕವಿಚರಿತೆಕಾರರ ಅಭಿಪ್ರಾಯಕ್ಕೆ ತಿದ್ದುಪಡಿ ಸೂಚಿಸುತ್ತಾ ಪ್ರಾಭೃತಕ ತ್ರಯ, ಪರಮಾತ್ಮ ಪ್ರಕಾಶಿಕೆ, ಸಮಯಸಾರ ಮೊದಲಾದ ಗ್ರಂಥಗಳಿಗೆ ಕನ್ನಡ ವ್ಯಾಖ್ಯಾನ ವನ್ನು ಬರೆದ ಬಾಲಚಂದ್ರನು ನಯಕೀರ್ತಿಯ ಮಗನಲ್ಲ ವೆಂದೂ ಅವನ ಶಿಷ್ಯ ಬಾಲಚಂದ್ರನೆಂದು ಇವನಿಗೆ ಅಧ್ಯಾತ್ಮಿ ಬಾಲಚಂದ್ರನೆಂದು ಹೆಸರಿದ್ದು ಇವನು ೧೨೩೧ ರವರೆಗೆ ಬದುಕಿದ್ದನೆಂದು ಹೇಳಿದ್ದಾರೆ. ಉದ್ಯೋಗಸಾರ ಕವಿಯು ನೇಮಿಚಂದ್ರನ ಶಿಷ್ಯನಾದ ಬಾಲಚಂದ್ರನೆಂದು ಹೇಳಿರುವುದು ಸರಿಯಲ್ಲ ಇದಕ್ಕೆ ಯಾವ ಆಧಾರವೂ ಇಲ್ಲ ಎಂದು ಹೇಳಿದ್ದಾರೆ.

ಹಂಪನಾ ಅವರು 'ಕಾಣೂರ್ಗಣ ಒಂದು ಟಿಪ್ಪಣಿ' ಲೇಖನದಲ್ಲಿ ನಾಲ್ಕು ಜನ ಬಾಲಚಂದ್ರ ಯತಿಗಳನ್ನು ಗುರುತಿಸಿದ್ದಾರೆ. ಹಳೇಬೀಡು ಶಾಸನದ ಮೂಲಸಂಘದ ಕೊಂಡಕುಂದಾನ್ವಯದ ಕಾಣೂರ್ಗಣದ ತಿಂತ್ರಿಣೀಕ ಗಚ್ಛದ ಮಾಧವಚಂದ್ರದೇವನ (ಸು೧೦೯೦) ಶಿಷ್ಯ – ಬಾಲಚಂದ್ರ ಸಿದ್ಧಾಂತ ದೇವ (ಸು. ೧೧೩೦)– ಅವನ ಶಿಷ್ಯ ಬಾಲಚಂದ್ರ ತ್ರೈವಿದ್ಯದೇವ (ಸು. ೧೧೫೦) ಈ ಇಬ್ಬರನ್ನು ಗುರುತಿಸಿದ್ದಾರೆ. ಮದ್ದೂರು ತಾಲ್ಲೂಕು ತಿಪ್ಪೂರು ಶಾಸನದ ಉಭಯ ಭಾಷಾ ಕವಿಚಕ್ರವರ್ತಿ ಕಂದರ್ಪದೇವರ ಮದವಳಿಗೆ ಸೊಂನಾ ದೇವಿಯರ ಮಗ ಕಾಣೂರ್ಗ್ಗಣ ತಿಳಕ ಬಾಲಚಂದ್ರದೇವ ಶಿವಮೊಗ್ಗ ಜಿಲ್ಲೆಯ (ಎಕ ೭ ಶಿವ ೪ – ೧೧೨೨) ಶಾಸನದಲ್ಲಿ ಬರುವ ಮೂಲಸಂಘದ ಕಾಣೂರ್ಗ್ಗಣದ ಮೂಲಸಂಘದ ಬೆಟ್ಟದ ದಾಮನಂದಿಯ ಶಿಷ್ಯ ಬಾಲಚಂದ್ರ ಭಟ್ಟಾರಕ ೧.

* ನಾಗಾರ್ಜುನ ಪದವಿ ಕಾಲೇಜು, ಯಲಹಂಕ, ಬೆಂಗಳೂರು–೫೬೦೦೬೪.

ಹಂಪ ನಾಗರಾಜಯ್ಯನವರು "ಯಾಪನೀಯ ಸಂಘ" ಕೃತಿಯಲ್ಲಿ ಯಾಪನೀಯ ಸಂಘದ ನಾಲ್ಕು ಬಾಲಚಂದ್ರರನ್ನು ಗುರುತಿಸಿದ್ದಾರೆ. (೧) ಕಂಬದಹಳ್ಳಿ ಶಾಸನೋಕ್ತ ಸೂರಸ್ಥ ಗಣದ ಬಾಲಚಂದ್ರ (೨) ಬೇಲೂರು ಶಾಸನೋಕ್ತ ಕಾಣೂರ್ಗ್ಗಣದ ತಿಂತ್ರಿಣೀಕ ಗಚ್ಛದ ಮಾಧವ ಚಂದ್ರ ದೇವರ ಶಿಷ್ಯರಾದ ಬಾಲಚಂದ್ರ ಸಿದ್ಧಾಂತ ದೇವ ಮತ್ತು ಬಾಲಚಂದ್ರ ತ್ರೈವಿದ್ಯ ದೇವ (೩) ಹೂಲಿ ಶಾಸನದ ಬಾಲಚಂದ್ರ ಭಟ್ಟಾರಕ ಹೀಗೆ ಮೂವರನ್ನು ಗುರುತಿಸಿದ್ದಾರೆ. **ಡಾ|| ಷ. ಶೆಟ್ಟರ್ ಅವರು "ಸಾವಿಗೆ ಆಹ್ವಾನ" ಕೃತಿಯಲ್ಲಿ** ನಯಕೀರ್ತಿಯ ಶಿಷ್ಯ ಬಾಲಚಂದ್ರದೇವನು ಅಕ್ಕನ ಬಸದಿಯನ್ನು ನಿಭಾಯಿಸಲು ಆಚಿಯಕ್ಕನಿಂದ ಬೊಮ್ಮನಹಳ್ಳಿಯನ್ನು ದತ್ತಿಯಾಗಿ ಪಡೆದನು, ಇವನು ಬೊಪ್ಪಣ್ಣ ಪಂಡಿತನ ಗುರು ಈತ ೧೨ನೇ ಶತಮಾನದ ಅಂತ್ಯದವರೆಗೆ ಜೀವಿಸಿದ್ದನು ಎಂದು ಹೇಳಿದ್ದಾರೆ. ಶ್ರವಣಬೆಳಗೊಳದ ವಕ್ರಗಚ್ಛದ ಬಸದಿಗಳನ್ನು ಮತ್ತು ಬಾಲಚಂದ್ರನನ್ನು ಗುರುತಿಸಿದ್ದಾರೆ. **ಬಿ.ಆರ್.ಹಂದೂರ್ ಅವರು ಜೈನಪರಂಪರೆಗೆ ಬೆಳಗಾವಿ ಪ್ರಾದೇಶಿಕ ಕೊಡುಗೆ ಎಂಬ ಕೃತಿಯಲ್ಲಿ** ೧) ಕ್ರಿ.ಶ. ೧೧೪೫ರ ಕಲ್ಯಾಣದ ಚಾಲುಕ್ಯರ ನಾಲ್ಕನೆಯ ಸೋಮೇಶ್ವರ ಹೂಲಿ ಗ್ರಾಮದ ಶಾಸನೋಕ್ತ ಯಾಪನೀಯ ಸಂಘದ ಪುನ್ನಾಗ ವೃಕ್ಷದ ಮೂಲ ಗಣದ ಬಾಲಚಂದ್ರ ಭಟ್ಟಾರಕ ದೇವ ೨) ಬೈಲಹೊಂಗಲ ಗ್ರಾಮದ ಉಗರಖೋಡ್ ಗ್ರಾಮದ ಯಾಪನೀಯ ಸಂಘದ ಕಂಡೂರು ಗಣದ ಬಾಲಚಂದ್ರಮುನಿ.

ತಮಿಳು ಸೆಲ್ವಿ ಅವರು ತಮ್ಮ ಲೇಖನದಲ್ಲಿ ತಿಪ್ಪೂರು ಶಾಸನೋಕ್ತ ಕಾಣೂರ್ಗಣದ ಬಾಲಚಂದ್ರನನ್ನು ಗುರುತಿಸಿದ್ದಾರೆ.[೧]

ಈ ಪೂರ್ವಪೀಠಿಕೆಯೊಂದಿಗೆ ಬಾಲಚಂದ್ರರ ಬಗ್ಗೆ ಶಾಸನೋಕ್ತವಾದ ಹೆಚ್ಚಿನ ವಿವರಗಳನ್ನು ಈ ಕೆಳಗಿನಂತೆ ಪರಿಶೀಲಿಸಬಹುದು.

ಕಾಣೂರ್ಗಣದ ಬಾಲ(ಳ)ಚಂದ್ರರು

ಜೈನಧರ್ಮದ ಯಾಪನೀಯ ಪಂಥಕ್ಕೆ ಸೇರಿದ ಒಂದು ಪ್ರಬಲವಾದ ಗಣ ಕಾಣೂರ್ಗಣ. ಇದರ ಸಂಸ್ಕೃತ ರೂಪ ಕಾಲೋಗ್ರಗಣ. ಶ್ರವಣಬೆಳಗೊಳದ ಯಾವುದೇ ಶಾಸನದಲ್ಲೂ ಈ ಕಾಣೂರ್ಗಣದ ಪ್ರಸ್ತಾಪವಿಲ್ಲ. ಮದ್ದೂರು, ಮಳವಳ್ಳಿ, ಮಂಡ್ಯ ಮತ್ತು ನಾಗಮಂಗಲ ಪರಿಸರದಲ್ಲಿ ಯಾಪನೀಯ ಸಂಘದ ಕಾಣೂರ್ಗಣದ ತಿಂತ್ರಿಣೀಕ ಗಚ್ಛದ ಪ್ರಾಬಲ್ಯ ಇದ್ದಿತು. ಬೆಳಗಾವಿ ಜಿಲ್ಲೆಯ ಜೈನಶಾಸನಗಳಲ್ಲೂ ಈ ಕಾಣೂರ್ಗಣದ ಪ್ರಸ್ತಾಪವಿದೆ. ಈ ಗಣದಲ್ಲಿ ತಿಂತ್ರಿಣೀಕಗಚ್ಛ, ತಗರಿಗಲ್ ಗಚ್ಛ, ಮೇಷಪಾಷಾಣ ಗಚ್ಛ ಎಂಬ ಮೂರು ಗಚ್ಛಗಳು ಶಾಸನೋಕ್ತವಾಗಿವೆ.[೨] ಎಂದು ವಿದ್ವಾಂಸರು ಹೇಳಿದ್ದಾರೆ.

೧. ತಿಪ್ಪೂರು ಶಾಸನೋಕ್ತ ಕಾಣೂರ್ಗ್ಗಣ ತಿಳಕ, ಉಭಯಭಾಷಾ ಕವಿ ಚಕ್ರವರ್ತಿ ಬಾಳಚಂದ್ರ

ಮದ್ದೂರು ತಾಲ್ಲೂಕಿನ ತಿಪ್ಪೂರು ಗ್ರಾಮದ ಗುಡ್ಡದ ಮೇಲೆ ಬಿದ್ದುಹೋಗಿರುವ ಬಸದಿಯ ಬಳಿ ಇರುವ ಪಾರ್ಶ್ವನಾಥ ಜಿನಬಿಂಬದ ಪೀಠದ ಮೇಲಿನ ಶಾಸನದಲ್ಲಿ ಕಾಣೂರ್ಗಣದ ಬಾಳಚಂದ್ರ ದೇವನ ಉಲ್ಲೇಖವಿದೆ. **'ಉಭಯಭಾಷಾ ಕವಿಚಕ್ರವರ್ತಿ ಕಂದರ್ಪ ದೇವರ ಮದವಳಿಗೆ ಸೊಂನ್ನಾದೇವಿಯರ ಮಗ ಕಾಣೂರ್ಗ್ಗಣ ತಿಳಕ ಬಾಲಚಂದ್ರದೇವನು ತನ್ನ ಗುರುಗಳಿಗೆ ಪರೋಕ್ಷವಾಗಿ ಮಾಡಿದ ಪ್ರತಿಷ್ಠೆ' ಎಂದು ಹೇಳಿದೆ.**[೩] **ಕವಿಕಂದರ್ಪನು ಗೃಹಸ್ಥನಾಗಿರುವುದರಿಂದ ಅವನು ಜೈನಯತಿಯಂತೂ ಅಲ್ಲವೆಂದೇ ಹೇಳಬಹುದು.**

ತಿಪ್ಪೂರಿನ ಇನ್ನೊಂದು ಶಾಸನದಲ್ಲಿ **'ತಿಪ್ಪೂರು ಶ್ರೀ ವೀರಬಲ್ಲಾಳ ದೇವನು ಪೃಥ್ವೀ ರಾಜ್ಯಂಗೆಯ್ಯುತ್ತಿರಲು......ದ ತಿಪ್ಪೂರ ಕವಿ ಕಂದರ್ಪ್ಪರ ಸಿಷ್ಯ ಬಾಲಚಂದ್ರದೇವರ ಮಕ್ಕಳ ಗುಂಮ(ಟಂಣ)ನು'** (ಕವಿ) ಕಂದರ್ಪ.....ನ ಮಕ್ಕಳು ಬೋವಂಣನು ಚಂನಂಣನ ಉಲ್ಲೇಖವಿದೆ.[೪] ಇದರಿಂದ ಬಾಲಚಂದ್ರರು ಕವಿಕಂದರ್ಪನ ಶಿಷ್ಯ ಎಂದೂ, ಈ ಬಾಲಚಂದ್ರನ ಶಿಷ್ಯ ಗುಂಮಟಂಣ ಎಂದು ಹೇಳಬಹುದು.

ಕವಿಕಂದರ್ಪ + ಸೊನ್ನಾದೇವಿ

(ಶಿಷ್ಯ) ಬಾಲಚಂದ್ರ (ಮಕ್ಕಳ) ಬೊಂವಣ್ಣ (ಬೊಂಮಂಣ) ಚಂನಂಣ

(ಮಗ–ಶಿಷ್ಯ)

ಗುಂಮ(ಂಣ) (ಟಣ್ಣ)

೨. ಬೆಳಗಾವಿ ಜಿಲ್ಲೆಯ ಶಾಸನೋಕ್ತ ಕವಿಕಂದರ್ಪ ಬಾಲಚಂದ್ರ

ಕವಿಕಂದರ್ಪ ಮತ್ತು ಬಾಲಚಂದ್ರರಿಬ್ಬರೂ ಬೇರೆ ಬೇರೆ ಎಂಬುದು ತಿಪ್ಪೂರು ಶಾಸನದಿಂದ ಖಚಿತವಾಗಿ ತಿಳಿದು ಬರುತ್ತದೆ. ಕಾಣೂರ್ಗ್ಗಣ ತಿಳಕ ಬಾಲಚಂದ್ರನು ತನ್ನ ಗುರು ಕವಿಕಂದರ್ಪನ ಹೆಸರನ್ನು ವಿಶೇಷವಾಗಿ ಬಳಸಿಕೊಂಡು **ಕವಿಕಂದರ್ಪ ಬಾಲಚಂದ್ರ ಎಂಬ ಹೆಸರನ್ನು ಇಟ್ಟುಕೊಂಡಿರಬಹುದು.** ತಿಪ್ಪೂರಿನ ಕಡೆಯಿಂದ ಬೆಳಗಾವಿಯ ಕಡೆಗೆ ಹೋಗಿರಬಹುದು. **ತಿಪ್ಪೂರು ಪ್ರದೇಶವನ್ನು ಆಳುತ್ತಿದ್ದ ಸಗರವಂಶದವರು ಅಂದರೆ ಮಣಲೇರನ ವಂಶದವರು ಬೆಳುವಲ ನಾಡಿಗೆ ಹೋದಂತೆ ಕೂಡಾ ಬೆಳಗಾವಿಯು ಕಡೆಗೆ ಹೋಗಿ ನೆಲೆಸಿರಬಹುದು.** ಬಾಳಚಂದ್ರ ಕವಿಕಂದರ್ಪನು ಜೈನಯತಿಯಾಗಿದ್ದಂತೆ ತೋರುವುದಿಲ್ಲ. ಕವಿಕಂದರ್ಪ ಬಾಳಚಂದ್ರನು ಯಾವ ಗಣ ಗಚ್ಛದವನು ಎಂಬ ವಿವರಗಳು ಸಿಗುವುದಿಲ್ಲ.

ಕವಿಚರಿತೆಕಾರರು ಬಾಳಚಂದ್ರಕಂದರ್ಪನ ಗುರು ಮಾಧವಚಂದ್ರ ತ್ರೈವಿದ್ಯರೆಂದು ತಿಳಿದುಬರುತ್ತದೆ ಎಂದು ಹೇಳಿದ್ದಾರೆ. ಆದರೆ ಬಾಲಚಂದ್ರನು ಬರೆದಿರುವ ಶಾಸನದಲ್ಲಿ ಶ್ರೀಮನ್ಮಾಧವ ತ್ರೈವಿದ್ಯಚಕ್ರವರ್ತಿ ಎಂದು ಹೇಳಿದೆಯೇ ಹೊರತು ಅವನ ಗಣ ಗಚ್ಛಗಳನ್ನು ನೀಡಿಲ್ಲ.

ಅನೇಕ ಮಾಧವಚಂದ್ರರು ಅಥವಾ ಮಾಧವೇಂದು ಯತಿಗಳು ಶಾಸ ನೋಕ್ತರಾಗಿದ್ದಾರೆ. (ಯಲಬುರ್ಗ (೫)ಶಾಸನದ, ಮೂಲಸಂಘ, ದೇಸೀಗಣ, ಪುಸ್ತಕ ಗಚ್ಛದ ಯಿಂಗಳೀಶ್ವರ ಬಳಿಯ ಮಾಧವ ಚಂದ್ರಭಟ್ಟಾರಕ, ಹಳೇಬೀಡು (೩೮೧) ಶಾಸನೋಕ್ತ ಮೂಲಸಂಘ, ಕೊಂಡಕುಂದಾನ್ವಯ, ದೇಶೀಯಗಣದ ಪದ್ಮಪ್ರಭ ಮುನಿಯ ಶಿಷ್ಯ ಮಾಧವೇಂದುಮುನಿ ಅಥವಾ ಮಾಧವಭಟ್ಟಾಕರ, ಶ್ರವಣಬೆಳಗೊಳ (೫೩೨) ಶಾಸನೋಕ್ತ ಮೂಲಸಂಘ ದೇಸಿಗಣ ಪುಸ್ತಗಚ್ಛದ ಶುಭಚಂದ್ರ ಸಿದ್ಧಾಂತ ದೇವರ ಶಿಷ್ಯ ಮಾಧವಚಂದ್ರದೇವ, ಹುಂಚ ಶಾಸನದ (೯೧) ಮಾಧವಚಂದ್ರ ವಿದ್ಯದೇವ, ಶ್ರವಣಬೆಳಗೊಳದ (೭೦) ದೇವಕೀರ್ತಿಪಂಡಿತನ ಶಿಷ್ಯ ಲಖ್ಖಣಂದಿಯ ಸಾಧರ್ಮಿ ಮಾಧವೇಂದು ಅಥವಾ ಮಾಧವಚಂದ್ರ ಮುನಿ (ಕ್ರಿ.ಶ. ೧೧೬೩) ಈ ರೀತಿ ಇನ್ನೂ ಅನೇಕ ಮಾಧವಚಂದ್ರರಿದ್ದಾರೆ.

ಇವರಲ್ಲಿ ಸಾಗರ ತಾಲ್ಲೂಕು ಮಳಲಿ ಗ್ರಾಮದ ೧೨–೧೩ನೇ ಶತಮಾನದ ಲಿಪಿಯಲ್ಲಿರುವ ಶಾಸನೋಕ್ತ ಮೂಲಸಂಘದ ಕಾಣೂರ್ಗ್ಗಣದ ಮಾಧವಚಂದ್ರನು ಕವಿಕಂದರ್ಪ ಬಾಳಚಂದ್ರನ ಗುರು ಆಗಿರಬಹುದು.

ಆದುದರಿಂದ ತಿಪ್ಪೂರು ಶಾಸನೋಕ್ತ ಕವಿಕಂದರ್ಪನ ಶಿಷ್ಯ(ಮಗ) ಕಾಣೂರ್ಗಣದ ಬಾಳಚಂದ್ರನೂ, ಬೆಳಗಾವಿಯ ಶಾಸನೋಕ್ತ ಕವಿಕಂದರ್ಪ ಬಾಳಚಂದ್ರನೂ ಭಿನ್ನರೇ ಅಭಿನ್ನರೇ ಎಂಬ ಸಂಶಯ ಹಾಗೇ ಉಳಿಯುತ್ತದೆ. **ಆದರೆ ಕವಿಕಂದರ್ಪರ ಶಿಷ್ಯ ಕಾಣೂರ್ಗ್ಗಣದ ಬಾಳಚಂದ್ರನೇ, ಕವಿಕಂದರ್ಪ ಬಾಳಚಂದ್ರ ಆಗಿರುವ ಸಾಧ್ಯತೆಗಳಿವೆ.**

೩. ಕಾಣೂರ್ಗಣದ ತಿಂತ್ರಿಣೀಕಗಚ್ಛದ ಮಾಧವ ಚಂದ್ರ ದೇವರ ಶಿಷ್ಯಪರಂಪರೆಯ ಬಾಳಚಂದ್ರ ಸಿದ್ಧಾಂತ ಮತ್ತು ಬಾಳಚಂದ್ರ ತ್ರೈವಿದ್ಯದೇವರು.

ಜವಳಿಗೆಯ ಮುನಿಭದ್ರಸಿದ್ಧಾಂತನ ಜೈನಮುನಿ ಪರಂಪರೆಯನ್ನು ಉಲ್ಲೇಖಿಸುವ ೧೨೬೬ ರ ಬೇಲೂರು ತಾಲ್ಲೂಕಿನ ಹಳೇಬೀಡು ವಸ್ತುಸಂಗ್ರಹಾಲಯದ ಆವರಣದಲ್ಲಿರುವ ಶಾಸನ ನೀಡುವ ಕೊಂಡಕುಂದಾನ್ವಯದ ಕಾಣೂರ್ಗಣದ ತಿಂತ್ರಿಣೀಕ ಗಚ್ಛದ ಜೈನಯತಿಪರಂಪರೆಯನ್ನು ನೀಡಿದೆ.[೫]

ಮೂಲಸಂಘದ ಕ್ರಾಣೂರ್ಗಣದ ಜಟಾಸಿಂಹ ನಂದ್ಯಾಚಾರ್ಯರಿಂದ – ಪುಂನಮಯ್ಯನ ಗುರುಗಳು ಇಂದ್ರನಂದಾಚಾರ್ಯರಿಂದ ಹಿಡಿದು – ಹೇಮಚಂದ್ರ ತ್ರೈವಿದ್ಯದೇವರ ವರೆಗೆ ಗುರು ಪರಂಪರೆಯನ್ನು ನೀಡಿದೆ.

ಈ ಶಾಸನದಲ್ಲಿ ಮಾಧವಚಂದ್ರ ಸಿದ್ಧಾಂತ ದೇವರ ಶಿಷ್ಯರಾದ ಬಾಳಚಂದ್ರ ಸಿದ್ಧಾಂತ ದೇವರು – ಅವರ ಶಿಷ್ಯ ಬಾಳಚಂದ್ರ ತ್ರೈವಿದ್ಯ ದೇವರು ಎಂದು ಇಬ್ಬರು ಬಾಳಚಂದ್ರರು ಬರುತ್ತಾರೆ. ಇವರ ಶಿಷ್ಯ ಪರಂಪರೆಯಲ್ಲಿ ಕೊನೆಯವನಾದ ಹೇಮಚಂದ್ರ ತ್ರೈವಿದ್ಯದೇವನು ಕ್ರಿ.ಶ. ೧೨೬೬ ಜುಲೈ ೧೫ ರಂದು ಸಮಾಧಿ ಮರಣವನ್ನು ಹೊಂದಿದನೆಂದು ಈ ಶಾಸನ ತಿಳಿಸುತ್ತದೆ.

ಒಂದು ತಲೆಮಾರಿಗೆ ೨೫ ವರ್ಷ ಎಂದು ಇಟ್ಟುಕೊಂಡು ಹೇಮಚಂದ್ರ ತ್ರೈವಿದ್ಯ ದೇವನಿಂದ ಹಿಂದಕ್ಕೆ ಲೆಕ್ಕಹಾಕಿದರೆ, ದಡಗ ಶಾಸನೋಕ್ತ ಜಾವಳಿಯ ಮುನಿಚಂದ್ರ ಸಿದ್ಧಾಂತ ದೇವನ ಕಾಲ ಸುಮಾರು. ಕ್ರಿ.ಶ. ೧೧೩೦ ರಿಂದ ೧೧೬೦ ಆಗಬಹುದು. ಅದೇ ರೀತಿ ಬಾಳಚಂದ್ರರ ತ್ರೈವಿದ್ಯ ಮತ್ತು ಬಾಳಚಂದ್ರಯತಿಗಳ ಕಾಲ ಸು. ೧೧೦೦ ರಿಂದ ೧೧೨೫ ಆಗಬಹುದು. ಅದೇ ರೀತಿ ಹಂಪನಾ ಅವರು ಲೆಕ್ಕಹಾಕಿ ನೀಡಿದ್ದಾರೆ.

"ಬಾಳಚಂದ್ರ ತ್ರೈವಿದ್ಯ ದೇವನನ್ನು ಕವಿತ್ವೇ ಗಮಕಿತ್ವೇಚ ವಾದಿತ್ವೇಚ ವಾಗ್ಮೀಯತೇ ತ್ರೈವಿದ್ಯಾಬಾಳಚಂದ್ರಸ್ಯ ಸದೃಕ್ಷೋ ನಾಸ್ತಿಃ" ಎಂದು ಶಾಸನಗಳು ಸ್ತುತಿಸಿವೆ.[೬]

೪. ಕಾಣೂರ್ಗಣದ ಸಿಂಹನಂದಿಯ ಶಿಷ್ಯ ಬಾಲಚಂದ್ರ

ಕ್ರಿ.ಶ. ೧೧೧೨ರ ಶಿವಮೊಗ್ಗ ಜಿಲ್ಲೆ ಪುರಲೆ ಶಾಸನವೂ ಕೂಡಾ ಕಾಣೂರ್ಗಣದ ಜೈನ ಯತಿಪರಂಪರೆಯನ್ನು ಉಲ್ಲೇಖಿಸುತ್ತದೆ. ಈ ಶಾಸನದಲ್ಲಿ ಮೊದಲನೆಯ ಗುರು **ಸಿಂಹನಂದಿಯ ಶಿಷ್ಯ ಬಾಳಚಂದ್ರ** ಮುನಿಯೊಬ್ಬನ ಉಲ್ಲೇಖವಿದೆ. ಹಾಗೂ **ತ್ರೈವಿದ್ಯ ಬಾಳಚಂಧ್ರ ಮುನೀಂದ್ರ ಮತ್ತು ಬಾಳಚಂದ್ರಬ್ರತಿಪತಿ ಇವರುಗಳನ್ನು ಮಾಧವ ಚಂದ್ರ ಸಧರ್ಮರು ಎಂದು ಹೇಳಿದೆ.**

೫. ಕಾಣೂರ್ಗ್ಗಣದ ಮೇಷಪಾಷಾಣ ಗಚ್ಛದ ಬಾಲಚಂದ್ರ

ಶಿವಮೊಗ್ಗ ಜಿಲ್ಲೆ ಕಲ್ಲೂರುಗುಡ್ಡ ಶಾಸನದಲ್ಲಿ ಕಾಣೂರ್ಗ್ಗಣದ **ಮೇಷಪಾಷಾಣ ಗಚ್ಛಕ್ಕೆ** ಸೇರಿದ ಜೈನಮುನಿ ಪರಂಪರೆಯನ್ನು ನೀಡಲಾಗಿದೆ. ಈ ಶಾಸನದಲ್ಲಿ ಇಬ್ಬರು

ಬಾಲಚಂದ್ರರು ಬರುತ್ತಾರೆ. ಇಬ್ಬರ ಕಾಲಕ್ಕೂ ಬಹಳ ಅಂತರವಿದೆ. ಬಾಳಚಂದ್ರ ತ್ರೈವಿದ್ಯ ದೇವನು ಕ್ರಿ.ಶ. ೧೧೦೦ರ ಹೊತ್ತಿಗೆ ಇದ್ದನೆಂದು ಊಹಿಸಬಹುದು.[೭]

ಸಿಂಹನಂದಿಮುನಿ – ಅರ್ಹದ್ಬಲಾಚಾರ್ಯರು – **ಬೆಟ್ಟದ ದಾಮನಂದಿ ಭಟ್ಟಾರಕರು – ಬಾಳಚಂದ್ರ ಭಟ್ಟಾರಕರು** – ಮೇಘಚಂದ್ರ ತ್ರೈವಿದ್ಯ ದೇವರು – ಗುಣಚಂದ್ರ ಪಂಡಿತ ದೇವರು – ಶ್ರೀ ಮೂಲಸಂಘದ ಕೊಂಡಕುಂದಾನ್ವಯದ ಕ್ರಾಣೂರ್ಗ್ಗಣದ ಮೇಷಪಾಷಾಣ ಗಚ್ಛದ ಪ್ರಭಾವಚಂದ್ರ ಸಿದ್ಧಾಂತ ದೇವರು – ಮಾಘನಂದಿ ಸಿದ್ಧಾಂತ ದೇವರು – ಪ್ರಭಾಚಂದ್ರ ಸಿದ್ಧಾಂತ ದೇವರು [ಅವರ ಸಾಧರ್ಮಿಗಳು ಮುನಿಚಂದ್ರ ದೇವರು] – ಶ್ರುತಿಕೀರ್ತಿ – **ಕನಕನಂದಿ ತ್ರೈವಿದ್ಯದೇವ(ವಾದಿರಜ) [ಅವರ ಸಾಧರ್ಮಿಗಳು ಕಾಣೂರ್ಗ್ಗಣದ ಅಗ್ರಗಣ್ಯ ಮಾಧವಚಂದ್ರ] – ಬಾಳಚಂದ್ರ ತ್ರೈವಿದ್ಯ ದೇವರು** – ಪ್ರಭಾವಚಂದ್ರ ಸಿದ್ಧಾಂತ ದೇವರು – ಬುಧಚಂದ್ರದೇವರು.

ಪ್ರಭಾಚಂದ್ರ ಸಿದ್ಧಾಂತ ದೇವರ ಗುಡ್ಡ ಬರ್ಮದೇವ ಭುಜಬಳಗಂಗ ಪೆರ್ಮಾಡಿ ದೇವನು ದಡಿಗ ಮಾಧವರು ಮಾಡಿಸಿದ್ದ ಬಸದಿಯನ್ನು ಕ್ರಿ.ಶ. ೧೧೨೨ ರಲ್ಲಿ ಜೀರ್ಣೋದ್ಧಾರ ಮಾಡಿ ದತ್ತಿಯನ್ನು ಬಿಡುತ್ತಾನೆ. ಮಂಡಲಿಯ ಪಟ್ಟಣದ ತೀರ್ಥಬಸದಿಗೆ ಹೆಗ್ಗಣಿಗಲೆ ಗ್ರಾಮವನ್ನು ದತ್ತಿಯಾಗಿ ಬಿಡುತ್ತಾನೆಂದು ಈ ಶಾಸನದಲ್ಲಿ ಹೇಳಿದೆ. ಇಂದು ಈ ಶಾಸನವು ಸಿದ್ಧೇಶ್ವರಗುಡಿಯ ಪಕ್ಕದಲ್ಲಿ ಬಿದ್ದಿದೆ. ಕಾಣೂರ್ಗ್ಗಣದ ತಗರಿಗಲ್ಲಗಚ್ಛದ ಗಂಡವಿಮುಕ್ತ ದೇವನ ಪ್ರಸ್ತಾಪ ಸುಳಗೋಡು ಸೋಮವಾರ ಶಾಸನದಲ್ಲಿದೆ. ಇವರ ಗುರು ಪ್ರಭಾಚಂದ್ರ ಸಿದ್ಧಾಂತನೆಂದು ಕಂಡುಬರುತ್ತದೆ.[೮]

೬. ಅಧ್ಯಾತ್ಮಿ ಬಾಳಚಂದ್ರ

ಮೂಲಸಂಘ ದೇಸಿಯ ಗಣದ ಪುಸ್ತಕಗಚ್ಛದ ಕೊಂಡಕುಂದಾನ್ವಯದ ನಯಕೀರ್ತಿ ಸಿದ್ಧಾಂತ ಚಕ್ರವರ್ತಿಗಳ ಶಿಷ್ಯ ಬಾಳಚಂದ್ರದೇವ. ಇವನಿಗೆ ಅಧ್ಯಾತ್ಮಿ ಬಾಳಚಂದ್ರ ಎಂದು ಹೆಸರಿತ್ತು. ಈತನು ಶ್ರವಣಬೆಳಗೊಳದ ಸುಮಾರು ೧೨ ಶಾಸನ, ಸುತ್ತಮುತ್ತಲ ಊರಿನ ೩ ಶಾಸನ, ಬೇಲೂರಿನ ಒಂದು, ಮಂಡ್ಯ ಜಿಲ್ಲೆಯ ಹಟ್ಟಣ ಮತ್ತು ತೊಣ್ಣೂರು ಶಾಸನಗಳಲ್ಲಿ ಉಲ್ಲೇಖಿತನಾಗಿದ್ದಾನೆ. ಇಷ್ಟೊಂದು ಶಾಸನ ಗಳಲ್ಲಿ ಉಲ್ಲೇಖಿತನಾದ ಜೈನಯತಿ ಇವನೊಬ್ಬನೇ ಎಂದು ತೋರುತ್ತದೆ.

ಶ್ರವಣಬೆಳಗೊಳದ **ದೊಡ್ಡಬೆಟ್ಟದಲ್ಲಿ ಇವನ ೯ ಶಾಸನಗಳು ದೊರೆಕಿವೆ. ಸುತ್ತಾಲಯ ನಿರ್ಮಾಣ, ಸುತ್ತಾಲಯದಲ್ಲಿ ಚವ್ವಿಸ ತೀರ್ಥಂಕರರ ವಿಗ್ರಹ ಸ್ಥಾಪನೆ, ಕೂಷ್ಮಾಂಡಿನಿ ವಿಗ್ರಹ, ಗೊಮ್ಮಟನ ಅಷ್ಟವಿಧಾರ್ಚನೆಗೆ ದತ್ತಿ, ಬೊಪ್ಪಣ್ಣ ಪಂಡಿತನಿಂದ ಗೊಮ್ಮಟ ಸ್ತುತಿ ರಚನೆ, ಮೊದಲಾದ ಕಾರ್ಯಗಳನ್ನು ಇವನು ಮಾಡಿದನು. ಚಿಕ್ಕಬೆಟ್ಟದಲ್ಲಿ ಇವನ ಮೂರು ಶಾಸನಗಳಿವೆ. ಕಂಚಿನದೊಣೆಗೆ ಹೋಗುವ ದಾರಿಯಲ್ಲಿ ಒಂದು ತುಂಡಾಗಿರುವ ತೇದಿರಹಿತ ಶಾಸನ ಇದ್ದು, ಬಾಲಚಂದ್ರನಸ್ತುತಿಯನ್ನು ಒಳಗೊಂಡಿರುವುದರಿಂದ ಅದು ಇವನ ನಿಸಿದಿ ಶಾಸನವಾಗಿರಬಹುದು.**

ಶ್ರವಣಬೆಳಗೊಳ ಊರಿನಲ್ಲಿ ಇವನ ಎರಡು ಶಾಸನಗಳು ದೊರಕಿವೆ. ಊರಿನ ನಿರ್ಮಾಣದಲ್ಲೂ ಇವನ ಪಾಲಿದೆ. ನಗರ ಜಿನಾಲಯದ ನಿರ್ಮಾಣದಲ್ಲಿ ಇವನು ಮಹತ್ವದ ಪಾತ್ರ ಹೊಂದಿದ್ದಾನೆ. ಆಚಲ ದೇವಿಯಿಂದ ಪಾರ್ಶ್ವನಾಥ ಬಸದಿಯನ್ನು ನಿರ್ಮಿಸಿ ದತ್ತಿ ಬಿಡಿಸಿದ್ದಾನೆ.

ಶ್ರವಣಬೆಳಗೊಳದ ಹತ್ತಿರ ಇರುವ ಬೊಮ್ಮೇನ ಹಳ್ಳಿಯಲ್ಲಿ ಕೂಡಾ ಬಸದಿಯನ್ನು ನಿರ್ಮಿಸಿದ್ದಾನೆ. ಮತ್ತು ಕಾಂತರಾಜಪುರದ ಜಿನಾಲಯವನ್ನು ಎಕ್ಕೋಟಿ ಜಿನಾಲಯ ವನ್ನಾಗಿ ಮಾಡಿಸಿದ್ದಾನೆ.

ಕ್ರಿ.ಶ. ೧೧೩೩ರ ಬೇಲೂರು ತಾಲ್ಲೂಕು ಬಸ್ತಿಹಳ್ಳಿ ಶಾಸನದಲ್ಲಿ ಶ್ರೀಮನ್ನಯಕೀರ್ತಿ ಸಿದ್ಧಾಂತ ಚಕ್ರವರ್ತಿಗಳ ಶಿಷ್ಯರು ನೇಮಿಚಂದ್ರ ಪಂಡಿತದೇವರು ಎಂದು ಹೇಳಿದ್ದು, ಇದು ಇವನ ಮೊದಲ ಶಾಸನವೆಂದು ಹೇಳಬಹುದು. ಕ್ರಿ.ಶ. ೧೧೮೫ರ ಶ್ರವಣಬೆಳಗೊಳದ ಚಿಕ್ಕಬೆಟ್ಟದ ಗಂಧವಾರಣ ಬಸದಿಯ ಶಾಸನ, **ಕ್ರಿ.ಶ. ೧೧೭೬ರ ಏಪ್ರಿಲ್ ೨೪ರ ಮಹಾನವಮಿ ಮಂಟಪದ ನಯಕೀರ್ತಿ ಮುನಿಯ ನಿಸಿದಿಗೆ ಶಾಸನ,** ಕ್ರಿ.ಶ. ೧೧೮೧ ರ ಬೊಮ್ಮೇನಹಳ್ಳಿ ಶಾಸನ, ಕ್ರಿ.ಶ೧೧೮೫ರ ಚನ್ನರಾಯಪಟ್ಟಣ ಶಾಸನ, ಕ್ರಿ.ಶ. ೧೧೯೫ರ ಶ್ರವಣಬೆಳ ಗೊಳದ ನಗರ ಜಿನಾಲಯ ಶಾಸನ ಇವನ ತೇದಿ ಇರುವ ಶಾಸನಗಳು.

ನಗರ ಜಿನಾಲಯ ಶಾಸನ, ಮತ್ತು ಚಿಕ್ಕಬೆಟ್ಟದ ಶಾಸನದಲ್ಲಿ ನಯಕೀರ್ತಿಯ ಶಿಷ್ಯರುಗಳ ಹೆಸರನ್ನು ಉಲ್ಲೇಖಮಾಡಲಾಗಿದೆ. ಬೆಳ್ಗೊಳತೀರ್ಥದ ಮಹಾ ಮಂಡಲಾಚಾರ್ಯ **ಸಿದ್ಧಾಂತ ಚಕ್ರೇಶ ನಯಕೀರ್ತಿ ಬತ್ರಿರಾಜನ ಶಿಷ್ಯರು–ದಾಮನಂದಿ ತ್ರೈವಿದ್ಯದೇವ, ಬಾನುಕೀರ್ತಿ ಸಿದ್ಧಾಂತ ದೇವ, ಬಾಳಚಂದ್ರದೇವ, ಪ್ರಭಾಚಂದ್ರದೇವ, ಮಾಘನಂದಿ ಭಟಾರಕ, ಮಂತ್ರವಾದಿ ಪದ್ಮನಂದಿ ದೇವ, ನೇಮಿಚಂದ್ರ ಪಂಡಿತರು ಎಂದು ಹೇಳಿದೆ.**

ಕ್ರಿ.ಶ. ೧೧೭೬ರ ಏಪ್ರಿಲ್ ೨೪ರ ಮಹಾನವಮಿ ಮಂಟಪದ ನಯಕೀರ್ತಿ ಮುನಿಯ ನಿಸಿದಿಗೆ ಶಾಸನದಲ್ಲಿ ಅವನ ಶಿಷ್ಯ ಪರಂಪರೆಯನ್ನು ನೀಡಿದೆ. ಮೇಘಚಂದ್ರ, ಅಣ್ಣಿತಟಾಕವಾಸಿ ಮಲಧಾರಿದೇವ, ಶ್ರೀಧರದೇವ, ದಾಮನಂದ ತ್ರೈವಿದ್ಯದೇವ, ಭಾನಕೀರ್ತಿ ಬಾಳಚಂದ್ರಮುನಿ.

ಕ್ರಿ.ಶ. ೧೨೩೧ರ ಸುತ್ತಾಲಯದಲ್ಲಿರುವ ಶಾಸನ. ಗೊಮ್ಮಟದೇವರ ಚವ್ವಿಸ ತೀರ್ಥಂಕರರ ಅಷ್ಟವಿಧಾರ್ಚನೆಗೆ

೧೨ ಗದ್ಯಾಣ ದತ್ತಿ ನೀಡಿದ ಶಾಸನವೇ ಇವನ ತೇದಿ ಇರುವ ಕೊನೆಯ ಶಾಸನ.

ನಯಕೀರ್ತಿಯ ಶಿಷ್ಯ ಬಾಳಚಂದ್ರನು ೧೨ನೇ ಶತಮಾನದ ಅಂತ್ಯದವರೆಗೆ ಜೀವಿಸಿದ್ದನು ಎಂದು ಪ್ರೊ. ಷ. ಶೆಟ್ಟರ್ ಅವರು ಹೇಳಿದ್ದಾರೆ. ಆದರೆ ಅವನ ತೇದಿ ಇರುವ ಶಾಸನ ೧೨೩೧ ಆಗಿರುವುದರಿಂದ ಅವನು ಹದಿಮೂರನೆಯ ಶತಮಾನದ ಆದಿಭಾಗದವರೆಗೆ ಜೀವಿಸಿದ್ದನೆಂದು ಹೇಳಬಹುದು.

ಬಾಲಚಂದ್ರನು ಗೊಮ್ಮಟೇಶ್ವರನ ಸುತ್ತಾಲವನ್ನು ಮಾಡಿಸುವಲ್ಲಿ, ಅಲ್ಲಿ ಚವ್ವಿಸ ತೀರ್ಥಂಕರ ಮೂರ್ತಿಯನ್ನು ಮಾಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದನೆಂಬುದನ್ನು ಆ ಪ್ರತಿಮೆಗಳ ಕೆಳಗಿರುವ ೪-೫ ಶಾಸನಗಳಿಂದ ತಿಳಿದುಬರುತ್ತದೆ.

ಶ್ರ.ಬೆ (೮೧) ಚಂದ್ರಗುಪ್ತಬಸದಿಯ ಶಾಸನದಲ್ಲಿ ಭಾನಿಕೀರ್ತಿಯು ಕೂಂಡಿನಾಡ ಪೂವಿನಬಾಗೆಯಲ್ಲಿ ಸನ್ಯಸನ ವಿಧಯಿಂದ ಮರಣಹೊಂದಿದಾಗ ಅವನ ಅಗ್ರಶಿಷ್ಯ ಬಾಳಚಂದ್ರದೇವನ ಶಿಷ್ಯೆ ಬಾಗಣಬ್ಬೆ ಸಂದಿವಿಗ್ರಹಿ ಮಲ್ಲಿಯಣ್ಣ ನಿಸಿದಿಗೆ ಮಾಡಿದಸಿದರೆಂದು ಹೇಳಿದೆ. ಭಾನುಕೀರ್ತಿಯು ಬಾಳಚಂದ್ರದೇವನಿಗಿಂತ ಹಿರಿಯ ಶಿಷ್ಯನಾಗಿದ್ದರಿಂದ ಬಾಳಚಂದ್ರನನನ್ನು ಅವನ ಶಿಷ್ಯ ಎಂದು ಹೇಳಿದೆ.

ಪಟ್ಟಣಸ್ವಾಮಿ ಸೋವಿಸೆಟ್ಟಿಯ ನಿಜಗುರುವಾಗಿದ್ದ ಅಧ್ಯಾತ್ಮಿ ಬಾಳಚಂದ್ರಮುನೀಂದ್ರನು ಪಟ್ಟಣ ಶಾಸನದಲ್ಲಿ ಸ್ತುತ್ಯನಾಗಿದ್ದಾನೆ. ಈ ಶಾಸನದಲ್ಲಿ ಅವನ ಗುರುಪರಂ ಪರೆಯನ್ನು ನೀಡಿದೆ.[೯] ಈ ಶಾಸನದಲ್ಲಿ ದಾಮನಂದಿಯ ಅನುಜ ಅಧ್ಯಾತ್ಮಿ ಬಾಲಚಂದ್ರ ಎಂದು ಹೇಳಿದ್ದು ಅನುಜ ಎಂದರೆ ಕಿರಿಯ ಸಹಪಾಠಿ ಎಂದು ಹೇಳಬಹುದು.

ಇವನು ಜಿನಸ್ತುತಿಯನ್ನು ಬರೆದಿದ್ದಾನೆ. ಇದಲ್ಲದೆ ಕುಂದಕುಂದಾಚಾರ್ಯರ ಪಂಚಾಸ್ತಿಕಾಯ, ಪ್ರವಚನಸಾರ, ಸಮಯಸಾರ, ಪ್ರಾಭೃತಗಳಿಗೂ ಉಮಾಸ್ವಾಮಿಯ ತತ್ವಾರ್ಥಸೂತ್ರಕ್ಕೂ ಕನ್ನಡ ಟೀಕೆಗಳನ್ನು ಬರೆದಿದ್ದಾನೆಂದು ಕವಿಚರಿತೆಕಾರರು ಹೇಳಿದ್ದಾರೆ. ಆದರೆ ಇವುಗಳನ್ನು ಬರೆದಿರುವುದಕ್ಕೆ ಯಾವ ಆಧಾರವೂ ಇಲ್ಲ ಎಂದು ಆ.ನೆ. ಉಪಾಧ್ಯ ಅವರು ಹೇಳಿದ್ದಾರೆ. ಪರಮಾತ್ಮ ಪ್ರಕಾಶಕ್ಕೆ ಮಲಧಾರಿ ಬಾಲಚಂದ್ರದೇವನೆಂಬುವವನು ಒಂದು ಕನ್ನಡ ಟೀಕೆಯನ್ನು ಬರೆದಿದ್ದಾನೆಂದು ಆನೆ ಉಪಾಧ್ಯೆ ಹೇಳಿದ್ದಾರೆ. (ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ, ಭಾಗ ೪ ಸಂಪುಟ ೧ ಪುಟ ೮೮೯-೮೯೦)

೭. ಸೂರಸ್ಥಗಣದ ಬಾಲಚಂದ್ರ

ಸೂರಸ್ಥಗಣದ ಅನಂತವೀರ್ಯನ ಶಿಷ್ಯ ಬಾಲಚಂದ್ರ ಅವನ ಶಿಷ್ಯ ಪ್ರಭಾಚಂದ್ರರ ಪ್ರಸ್ತಾಪ ಕಂಬದಹಳ್ಳಿ ಶಾಸನದಲ್ಲಿದೆ.[೧೦] ಪಲ್ಲಪಂಡಿತನ ಜೈನಮುನಿಪರಂಪರೆಯನ್ನು ನೀಡುವ ಈ ಶಾಸನದ ಕಾಲ ಕ್ರಿ.ಶ. ೯೦೦ ಎಂದು ಹೇಳಬಹುದು. ಕ್ರಿ.ಶ. ೧೧೧೮. ರ ಗಂಗರಾಜನ ಶಾಸನವನ್ನು ಕೆಳಗೆ ಬರೆದಿದೆ.

೮. ಮೂಲಸಂಘದ ದೇಸಿಯಗಣದ ಪುಸ್ತಕಗಚ್ಛದ ಇಂಗಳೇಶ್ವರ ಬಳಿಯ ಸಮುದಾಯದ ಮಾಘನಂದಿ ಭಟ್ಟಾರಕ ದೇವರ ಶಿಷ್ಯ ಬಾಳಚಂದ್ರ ಪಂಡಿತ ದೇವ (೧೨೧೩)

ಕ್ರಿ.ಶ. ೧೨೧೩ರ ಜಿನನಾಥಪುರದ ಶಾಸನದಲ್ಲಿ ಮಹಾಮಂಡಳಾಚಾರ್ಯ ರಾಜಗುರು ಬೆಳಿಕುಂಬದ ನೇಮಿಚಂದ್ರ ಪಂಡಿತದೇವರ ಪ್ರಿಯಶಿಷ್ಯ ಬಾಳಚಂದ್ರ ದೇವರ ಉಲ್ಲೇಖವಿದೆ.[೧೧] ಅದೇ ರೀತಿ ಕ್ರಿ.ಶ. ೧೨೮೨ರ ಶ್ರವಣ ಬೆಳಗೊಳದ ನಗರ ಜಿನಾಲಯದ ಶಾಸನದಲ್ಲೂ ಕೂಡಾ ಮೂಲಸಂಘದ ದೇಸಿಯಗಣದ ಇಂಗಳೇಶ್ವರ ಬಳಿಯ ರಾಜಗುರು ಮಾಘನಂದಿ ಸೈದ್ಧಾಂತ ಚಕ್ರವರ್ತಿಯ ಶಿಷ್ಯ ನೇಮಿಚಂದ್ರ ಪಂಡಿತದೇವರ ಶಿಷ್ಯ ಬಾಳಚಂದ್ರದೇವನ ಉಲ್ಲೇಖವಿದೆ.[೧೨] ಮಾಘನಂದಿಗೆ ಸಮುದಾಯದ ಮಾಘನಂದಿ ಎಂಬ ಹೆಸರಿತ್ತು.[೧೩] ಈ ಬಾಳಚಂದ್ರ ಪಂಡಿತ ದೇವನಿಗೆ ಸಂಬಂಧಿಸಿದ ಅನೇಕ ಶಾಸನಗಳು ಬೇಲೂರು ತಾಲ್ಲೂಕು ಬಸ್ತಿಹಳ್ಳಿಯಲ್ಲಿವೆ.[೧೪] ಈತನು ಅಲ್ಲಿಯೇ ಸಮಾಧಿಮರಣವನ್ನು ಹೊಂದಿದ ವಿಚಾರ ತಿಳಿದುಬರುತ್ತದೆ. **ಬಸ್ತಿಹಳ್ಳಿಯ ಕ್ರಿ.ಶ. ೧೨೭೪ರ ಶಾಸನವು ಮೂಲಸಂಘದ ದೇಸಿಯ ಗಣದ ಪುಸ್ತಕ ಗಚ್ಛದ ಕೊಂಡಕುಂದಾನ್ವಯದ ಇಂಗಳೇಶ್ವರ ಬಳಿಯ ಶ್ರೀ ಸಮುದಾಯದ ಮಾಘನಂದಿಗಳ ಪ್ರಿಯಶಿಷ್ಯರಾದ ನೇಮಿಚಂದ್ರಭಟ್ಟಾರಕ ದೇವರು ಮತ್ತು ಶ್ರೀಮದ ಭಯಚಂದ್ರ ಸೈದ್ಧಾಂತ ಚಕ್ರವರ್ತಿಗಳ ಶಿಷ್ಯ ತಪಶ್ರುತಗಳಿಂದ ಜಗದೊಳು ವಿಖ್ಯಾತಿಯನ್ನು ಪಡೆದ ಶ್ರೀಮದ್‌ಬಾಳಚಂದ್ರ ಪಂಡಿತ ದೇವರು ಸಮಾಧಿಮರಣ ಹೊಂದಿದರೆಂದು ಹೇಳುತ್ತದೆ.** ಈ ಶಾಸನದಲ್ಲಿ ಸಮಾಧಿಮರಣದ ಮೊದಲು ಯತಿಗಳು ಅನುಸರಿಸುತ್ತಿದ್ದ ಕೆಲವು ಕ್ರಮಗಳನ್ನು ನಿರೂಪಿಸ ಲಾಗಿದೆ. ಬಾಲಚಂದ್ರ ಪಂಡಿತದೇವನಿಗೆ ನೇಮಿಚಂದ್ರ ಭಟ್ಟಾರಕರು ಮತ್ತು ಅಭಯಚಂದ್ರ ಸೈದ್ಧಾಂತಿಕರು ಕ್ರಮವಾಗಿ ದೀಕ್ಷಾಗುರುಗಳು ಮತ್ತು ಶ್ರುತುಗುರುಗಳೂ ಆಗಿದ್ದರೆಂಬುದು ಈ ಶಾಸನದಿಂದ ತಿಳಿದುಬರುತ್ತದೆ.[೧೫] ಈ ಬಾಲಚಂದ್ರ ಪಂಡಿತದೇವನ ಶಿಷ್ಯ ಶ್ರೀ ರಾಮಚಂದ್ರ ಮಲಧಾರಿದೇವನು ಸಮಾಧಿಮರಣವನ್ನು ಹೊಂದಿದ ವಿಚಾರವನ್ನು ಇಲ್ಲಿರುವ ಇನ್ನೊಂದನ್ನು ಶಾಸನ ತಿಳಿಸುತ್ತದೆ.[೧೬] **ಇವನನ್ನೇ ದ್ರವ್ಯಸಂಗ್ರಹ ಸೂತ್ರಕ್ಕೆ ಕರ್ನಾಟಕ ಟೀಕೆಯನ್ನು ಬರೆದ ಬಾಳಚಂದ್ರ ಪಂಡಿತನೆಂದು ಕವಿಚರಿತೆಕಾರರು ಗುರುತಿಸಿದ್ದಾರೆ. ಈ ಟೀಕೆಯನ್ನು ೧೨೭೩ರಲ್ಲಿ ಬರೆದಿದೆ ಎಂದು ಹೇಳಿದ್ದಾರೆ.**[೧೭]

ಕುಷ್ಟಗಿ ತಾಲ್ಲೂಕಿನ ಅಂಟೂರ್‌ತಾಣಾದ ಕ್ರಿ.ಶ. ೧೨೭೬ರ ಶಾಸನದಲ್ಲಿ ಮಹಾಪ್ರದಾನ ಸರ್ವಾಧಿಕಾರಿ ತಿಪ್ಪರಸರ ಹೆಂಡತಿ ಗೋನಮಾದೇವಿಯ ಸೋದರಳಿಯ ಮಾರಸೆಟ್ಟಿ, ಮಾಯಿಸೆಟ್ಟಿ, ಪದುಮಸೆಟ್ಟಿ ಇವುರಗಳು ಚೌವೀಸ ತೀರ್ಥಂಕರರ ಪ್ರತಿಮೆಯನ್ನು ಮಾಡಿಸಿದಾಗ, ವರ್ಧಮಾನ ತೀರ್ಥಂಕರರ ಪ್ರಭಾವಳಿಯ ಬಲಭಾಗಕ್ಕೆ ಶ್ರೀಮೂಲಸಂಘದ ದೇಸಿಯಗಣದ ಪೊಸ್ತಕಗಚ್ಛದ, ಕೊಂಡಕುಂದಾನ್ವಯದ ಯಿಂಗಳೀಶ್ವರಬಳಿಯ ಬಾಳಚಂದ್ರತ್ರೈವಿದ್ಯದೇವನ ಪ್ರತಿಮೆಯನ್ನು ಮಾಡಿಸಿದರೆಂದು ಹೇಳಿದೆ.[೧೮] ಈ ಬಾಲಚಂದ್ರನು ಅಷ್ಟೊಂದು ಪ್ರಸಿದ್ಧನಾಗಿದ್ದನೆಂದು ಇದರಿಂದ ತಿಳಿದುಬರುತ್ತದೆ.

ಕವಿಚರಿತೆಕಾರರು ಗುರುತಿಸಿರುವ ಬಾಲಚಂದ್ರಪಂಡಿತ ಇವನೇ ಇರಬಹುದು. ಬಸ್ತಿಹಳ್ಳಿಯ ಶಾಸನದಲ್ಲಿ ಶ್ರೀಮದ್ಬಾಲಚಂದ್ರನ ಪಂಡಿತದೇವರು ಸಾರಚತುಷ್ಟಯಾದಿ ಗ್ರಂಥಗಳ ವ್ಯಾಖ್ಯಾನ ಮಾಡಿದರು ಎಂದು ಹೇಳಿದ. ಕವಿಚರಿತೆಕಾರರು ಅಧ್ಯಾತ್ಮಿ ಬಾಲಚಂದ್ರನ ಹೆಸರಿಗೆ ಆರೋಪಿಸಿರುವ ಕುಂದಕುಂದಾಚಾರ್ಯರ ಪಂಚಾಸ್ತಿಕಾಯ, ಪ್ರವಚನಸಾರ, ಸಮಯಸಾರ, ಪ್ರಭೃತಗಳಿಗೂ ಉಮಾಸ್ವಾಮಿಯ ತತ್ವಾರ್ಥಸೂತ್ರಕ್ಕೂ **ಗ್ರಂಥಗಳನ್ನು ಬಾಲಚಂದ್ರನೇ ಬರೆದಿರುವ ಸಾಧ್ಯತೆ ಇದೆ.** ಕಾರಣ ಇಲ್ಲಿ ಚತುಷ್ಟಯಾದಿ ಗ್ರಂಥಗಳು ಎಂದರೆ ನಾಲ್ಕು ಗ್ರಂಥಗಳು ಎಂದೂ ಹೇಳಬಹುದು. (ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ ೪ ಭಾಗ ೨ ಪುಟ ೧೬೬೮-೬೯)

೯. ಮೂಲಸಂಘದ ವಕ್ರಗಚ್ಛದ ತಿಳಕ ಮಾಂಡವಿಯ ಬಾಳಚಂದ್ರಸಿದ್ಧಾಂತ ದೇವ (೧೩೧೫)

ಬೇಲೂರು ತಾಲ್ಲೂಕು ಬಸ್ತಿಹಳ್ಳಿಯಲ್ಲಿರುವ ಪಾರ್ಶ್ವನಾಥ ಬಸದಿಯಲ್ಲಿರುವ ಮೂರನೆಯ ಬಲ್ಲಾಳನ ಕಾಲದ ಶಾಸನವು ವಕ್ರಗಚ್ಛದ ಬಾಲಚಂದ್ರನನ್ನು ಉಲ್ಲೇಖಿಸುತ್ತದೆ. ಮೂಲಸಂಘ ಕಮಲಾಕರ ರಾಜಹಂಸ, ದೇಶೀಯ ಸದ್ಗಣಗುಣೇಂದ್ರ, ವಕ್ರಗಚ್ಛದ ತಿಳಕಮುನಿ ಬಾಲಚಂದ್ರ ದೇವನನ್ನು ಶ್ರೀಮನ್ಮಹಾಮಂಡಲಾಚಾರ್ಯ ಮಾಂಡವೀಯ ಬಾಳಚಂದ್ರ ಸಿದ್ಧಾಂತ ದೇವನೆಂದು ಈ ಶಾಸನ ವರ್ಣಿಸಿದೆ. ಈತನು ಶಿಷ್ಯನ ಹೆಸರೂ ರಾಮಚಂದ್ರದೇವ.[೧೯] ಈ ಶಾಸನದಲ್ಲಿ ಇವರ ಗುರುಪರಂಪರೆಯನ್ನು ನೀಡಿರುವುದಿಲ್ಲ.

೧೦. ದ್ರಮಿಳ ಸಂಘದ ಬಾಲಚಂದ್ರ

ದ್ರಮಿಳ ಸಂಘದ ಶ್ರೀಪಾಳ ತ್ರೈವಿದ್ಯದೇವರ ಶಿಷ್ಯರಾದ ವಾಸುಪೂಜ್ಯ ಸಿದ್ಧಾಂತ ದೇವ ಮತ್ತು ಬಾಲಚಂದ್ರ ದೇವರ ಉಲ್ಲೇಖ ಮರ್ಕ್ಕುಲಿ ಶಾಸನದಲ್ಲಿದೆ.[೨೦]

೧೧. ಯಾಪನೀಯ ಸಂಘದ ಪುನ್ನಾಗ ವೃಕ್ಷದ ಬಾಲಚಂದ್ರ ಭಟ್ಟಾರಕ

ಸವದತ್ತಿ ತಾಲೂಕಿನ ಹೂಲಿ ಗ್ರಾಮದ ಕ್ರಿ.ಶ.೧೧೪೫ರ ಶಾಸನದಲ್ಲಿ ಯಾಪನೀಯ ಸಂಘದ, ಪುನ್ನಾಗ ವೃಕ್ಷದ ಮೂಲಗಣದ ಶ್ರೀ ಬಾಲಚಂದ್ರ ಭಟ್ಟಾರಕ ದೇವನ ಹೆಸರಿದ್ದು ಅವನ ಶಿಷ್ಯ ಪರಂಪರೆಯನ್ನು ನೀಡಿದೆ. ಬಾಳಚಂದ್ರ ಭಟ್ಟಾರಕ – ರಾಮಚಂದ್ರ – ಜಿನದೇವ.[೨೧]

೧೨. ಯಾಪನೀಯ ಸಂಘದ ಕಂಡೂರ ಗಣದ ಬಾಲಚಂದ್ರ

ಕ್ರಿ.ಶ. ಸು. ೧೨ನೇ ಶತಮಾನದ ಶಾಸನದಲ್ಲಿ ಯಾಪನೀಯ ಸಂಘದ ಕಂಡೂರ ಗಣದ ಬಾಲಚಂದ್ರನ ಉಲ್ಲೇಖವಿದೆ.[೨೨]

೧೩. ಮೂಲಸಂಘದ ದೇಶೀಯಗಣದ ವಕ್ರಗಚ್ಛದ ಕೊಂಡಕುಂದಾನ್ವಯದ ಪರಿಯಳಿಯ ಬಡ್ಡದೇವರಬಳಿಯ ಮಾಘನಂದಿ ಸಿದ್ಧಾಂತ ದೇವರ ಶಿಷ್ಯ ಬಾಳಚಂದ್ರ ಸಿದ್ಧಾಂತ ದೇವ (೧೧೭೬)

ಚಿಕ್ಕಮಗಳೂರು ಜಿಲ್ಲೆಯ ಕಳಸಾಪುರ ಶಾಸನದಲ್ಲಿ ಮೂಲಸಂಘದ ಕೊಂಡ ಕುಂದಾನ್ವಯದ, ದೇಶಿಗಣದ ವಕ್ರಗಚ್ಛದ ಜೈನಪರಂಪರೆಯೊಂದು ಉಲ್ಲೇಖಿತವಾಗಿದೆ. ಈ ಜೈನಮುನಿ ಪರಂಪರೆಯಲ್ಲೂ ಕೂಡಾ ಬಾಲಚಂದ್ರಮುನಿ ಎಂಬುವವನು ಕಾಣಿಸಿಕೊಳ್ಳುತ್ತಾನೆ.[೨೩] ಈ ಶಾಸನದ ಜೈನಮುನಿ ಪರಂಪರೆ ಈ ರೀತಿ ಇದೆ. ದೇವೇಂದ್ರ ಸೈದ್ಧಾಂತಿಕ ಮುನಿ – ವೃಷಭನಂದಿ (ಕಾರ್ಯೋತ್ಸರ್ಗದಿಂದ ಮರಣ ಹೊಂದುತ್ತಾನೆ) ಅವನ ಅಗ್ರಶಿಷ್ಯ ಗೋಪನಂದಿ ಪಂಡಿತದೇವ – ಮಾಘನಂದಿ ಸೈದ್ಧಾಂತಿಕ – ರತ್ನನಂದಿ ಮುನಿ – ಬಾಲಚಂದ್ರಮುನಿ – . . . . ಹಜಿಾಚಾರ್ಯ. ಇವರ ಗುಡ್ಡ ಶ್ರೀಮನ್ ಮಹಾವಡ್ಡವ್ಯವಹಾರಿ ಕವಡಮಯ್ಯದೇವಿಸೆಟ್ಟಿ ವೀರಬಲ್ಲಾಳ ಜಿನಾಲಯವನ್ನು ಮಾಡಿಸುತ್ತಾನೆ.

ಶ್ರವಣಬೆಳಗೊಳದ ಚಿಕ್ಕಬೆಟ್ಟದ ಮೇಲಿರುವ ಸು.೧೨ನೇ ಶತಮಾನದ ಕತ್ತಲೆಯ ಬಸದಿಯಲ್ಲಿರುವ ಜೈನಯತಿ ಪರಂಪರೆಯನ್ನು ಹೇಳುವ ಶಾಸನದಲ್ಲಿ ಶ್ರೀಮನ್ ಮೂಲ ಸಂಘದ, ದೇಶೀಯಗಣದ, ವಕ್ರಗಚ್ಛದ, ಕೊಂಡಕುಂದಾನ್ವಯದ ಪರಿಯಳಿಯ ವಡ್ಡದೇವರ ಬಳಿಯ ದೇವೇಂದ್ರ ಸಿದ್ಧಾಂತ ದೇವರ ಶಿಷ್ಯ ಪರಂಪರೆಯಲ್ಲಿ ಬರುವ **ಮಾಘನಂದಿ ಸಿದ್ಧಾಂತ ದೇವರ ಶಿಷ್ಯ ಬಾಳಚಂದ್ರ ಸಿದ್ಧಾಂತ ದೇವನೆಂದು ಹೇಳಿದೆ. ತ್ರಿರತ್ನನಂದಿಭಟ್ಟಾರಕರು, ಕಲ್ಯಾಣಕೀರ್ತಿಭಟ್ಟಾರಕರು, ಮೇಘಚಂದ್ರ ಪಂಡಿತದೇವರು ಇವರ ಸಾಧರ್ಮಿಗಳೆಂದು ಹೇಳಿದೆ.[೨೪] ಕತ್ತಲೆ ಬಸದಿಯನ್ನು ವಕ್ರಗಚ್ಛದ ಬಸದಿ ಎಂದು ಶೆಟ್ಟರ್ ಅವರು ಗುರುತಿಸಿದ್ದಾರೆ.**

೧೪. ನಂದಿಸಂಘದ ದೇಸಿಗಣದ ಪುಸ್ತಕಗಚ್ಛದ ಇಂಗುಳೇಶ್ವರ ಬಳಿಯ ಬಾಲಚಂದ್ರ (೧೩೯೮)

ಶ್ರವಣಬೆಳಗೊಳದ ದೊಡ್ಡಬೆಟ್ಟದ ಸಿದ್ಧರ ಬಸದಿಯಲ್ಲಿರುವ ಶಾಸನದಲ್ಲಿ ನಂದಿಸಂಘದ, ದೇಸಿಗಣದ, ಪುಸ್ತಕಗಚ್ಛದ ಇಂಗುಳೇಶ್ವರ ಬಳಿಯ ನಾಗಚಂದ್ರನ ಮುನಿ ಪರಂಪರೆಯನ್ನು ಹೇಳಿದ್ದು, ಇದರಲ್ಲಿ ಪ್ರಭಾಚಂದ್ರನ ಶಿಷ್ಯ ಬಾಲಚಂದ್ರ–ಜಿನಚಂದ್ರ–ಮೇಘಚಂದ್ರ–ಪ್ರಭಾಚಂದ್ರ–ಬಾಲಚಂದ್ರ.[೨೫]

೧೫. ಮೂಲಸಂಘದ ದೇಶೀಯಗಣದ ಪುಸ್ತಗಚ್ಛದ ಬೆಳ್ಳಿಕುಂಬದ ನೇಮಿಚಂದ್ರಪಂಡಿತ ದೇವರ ಶಿಷ್ಯ ಬಾಳಚಂದ್ರದೇವರು

ಕ್ರಿ.ಶ.೧೨೧೩ರ ಜಿನನಾಥಪುರ ಶಾಸನದಲ್ಲಿ ಮಹಾಮಂಡಳಾಚಾರ್ಯ ರಾಜಗುರು ಬೆಳ್ಳಿಕುಂಬದ (ಇಂದಿನ ತಿಪಟೂರು ತಾಲ್ಲೂಕು ಬೆಳಗುಂಬ–ಅರಸೀಕೆರೆ ಬಳಿ ಇದೆ) ಶ್ರೀ ನೇಮಿಚಂದ್ರಪಂಡಿತ ದೇವರ ಶಿಷ್ಯ ಬಾಳಚಂದ್ರದೇವರ ಉಲ್ಲೇಖವಿದೆ. ಕ್ರಿ.ಶ. ೧೨೧೪ ಬೆಳ್ಳಿಕುಂಬದ ನೇಮಿಚಂದ್ರ ಪಂಡಿತರು ದಿವಿಜವಧುಗೆ ವಲ್ಲಭನಾದನೆಂದು ಇದರಲ್ಲಿ ಹೇಳಿದೆ.[೨೬] ಕ್ರಿ.ಶ. ೧೨೮೨ರ ಶ್ರವಣಬೆಳಗೊಳದ ನಗರ ಜಿನಾಲಯದ ಶಾಸನದಲ್ಲಿ ಕೂಡಾ ಶ್ರೀಮನ್ಮಹಾಮಂಡಳಾಚಾರ್ಯ ಶ್ರೀ ಮೂಲಸಂಘದ ಇಂಗಳೇಶ್ವರಬಳಿಯ ದೇಸಿಯಗಣದ ರಾಜಗುರುಗಳುಮಪ್ಪ ನೇಮಿಚಂದ್ರಪಂಡಿತ ದೇವರ ಶಿಷ್ಯರು ಬಾಳಚಂದ್ರ ದೇವರು ಎಂದು ಹೇಳಿದೆ. ಇವನ ಸಮ್ಮುಖದಲ್ಲಿ ನಗರ ಜಿನಾಲಯಕ್ಕೆ ರಾಚೇನಹಳ್ಳಿಯನ್ನು ಬಲಾತ್ಕರ ಗಣಕ್ಕೆ ಸೇರಿ ನಖರರು ನಖರ ಜಿನಾಲಯದ ಆದಿದೇವರಿಗೆ ದತ್ತಿ ಬಿಟ್ಟರೆಂದು ಹೇಳಿದೆ.[೨೭] ಜಿನನಾಥಪುರದ ಇನ್ನೊಂದು ಶಾಸನದಲ್ಲಿ ರಾಜಗುರು ಬೆಳ್ಳಿಕುಂಬದ ಶ್ರೀನೇಮಿಚಂದ್ರ ಪಂಡಿತ ದೇವರ ಪ್ರಿಯಶಿಷ್ಯ ಶ್ರೀಮದ್ ಬಾಳಚಂದ್ರ ದೇವರು ಎಂದು ಹೇಳಿದ್ದು, ಬಾಳಚಂದ್ರದೇವರ ಗುಡ್ಡನೊಬ್ಬ ಸನ್ಯಸನ ವಿಧಿಯಿಂದ ಮರಣ ಹೊಂದಿದನೆಂದೂ ಅವನ ಶರೀರವನ್ನು ಅಲ್ಲೇ ಸಮಾಧಿ ಮಾಡಲಾಯಿತೆಂದು ಹೇಳಿದೆ.[೨೮]

೧೬. ಮೂಲಸಂಘದ ದೇಶಿಯಗಣದ ಪುಸ್ತಕಗಚ್ಛದ ಕೊಂಡಕುಂದಾನ್ವಯದ ಇಂಗಳೇಶ್ವರ ಬಳಿಯ ಸಮುದಾಯದ ಮಾಘನಂದಿ ಭಟ್ಟಾರಕ ದೇವರ ಮತ್ತು ಅಭಯಚಂದ್ರ ಸೈದ್ಧಾಂತಿಕರ ಶಿಷ್ಯ ಬಾಲಚಂದ್ರಪಂಡಿತ.

ಬೇಲೂರು ತಾಲ್ಲೂಕು ಬಸ್ತಿಹಳ್ಳಿಯ ಕ್ರಿ.ಶ. ೧೨೭೪ರ ಶಾಸನದಲ್ಲಿ ಮೂಲಸಂಘದ ದೇಶಿಯಗಣದ ಪುಸ್ತಕಗಚ್ಛದ ಕೊಂಡಕುಂದಾನ್ವಯದ ಇಂಗಳೇಶ್ವರ ಬಳಿಯ ಶ್ರೀ ಸಮುದಾಯದ ಮಾಘನಂದಿ ಭಟ್ಟಾರಕರ (ದೀಕ್ಷಾಗುರು) ಮತ್ತು ಶ್ರೀಮದಭಯಚಂದ್ರ ಸೈದ್ಧಾಂತಿಕ ಚಕ್ರವರ್ತಿಗಳ (ಶ್ರುತಗುರು) ಶಿಷ್ಯ ಬಾಲಚಂದ್ರಪಂಡಿತನ ಉಲ್ಲೇಖವಿದೆ.[೨೯]

ಈ ಶಾಸನದಲ್ಲಿ ಎರಡು ಉಬ್ಬು ಪ್ರತಿಮೆಗಳಿದ್ದು, ಒಂದರ ಕೆಳಗೆ ಬಾಲಚಂದ್ರ ಪಂಡಿತದೇವರು ಸಾರಚತುಷ್ಟಯ ಗ್ರಂಥಗಳನ್ನು ವ್ಯಾಖ್ಯಾನ ಮಾಡಿದರೆಂದೂ, ಇನ್ನೊಂದು ಉಬ್ಬುಶಿಲ್ಪದ ಕೆಳಗೆ ನೇಮಿಚಂದ್ರಪಂಡಿತ ದೇವರು ಕೇಳಿದರೆಂದೂ ಹೇಳಿದೆ. ನಂತರ ಬಾಳಚಂದ್ರಪಂಡಿತ ದೇವರು ಸನ್ಯಸನಪೂರ್ವಕವಾಗಿ ಸಕಲ ನಿವೃತ್ತಿ ಮಾಡಿ ಪಲ್ಯಂಕಾಸನದೊಳುಪಂಚಪರಮೇಷ್ಟಿಗಳ ಸ್ವರೂಪವನ್ನು ಧ್ಯಾನಿಸುತ್ತಾ ಸಮಾಧೀಮರಣ ಹೊಂದಿದರೆಂದು ಹೇಳಿದೆ.

ಅಲ್ಲಿಯೇ ಇರುವ ಇನ್ನೊಂದು ಶಾಸನ ಶಿಲ್ಪದಲ್ಲಿ ಶ್ರುತಗುರುಗಳಾದ ಅಭಯಚಂದ್ರ ಪಂಡಿತರು ವ್ಯಾಖ್ಯಾನ ಮಾಡಿದರು ಬಾಳಚಂದ್ರಪಂಡಿತ ದೇವರು ಕೇಳಿದರೆಂದು ಹೇಳಿದೆ. ಇದು ಸನ್ಯಸನ ವಿಧಿಗೆ ಮೊದಲಿನ ಘಟನೆ ಇರಬಹುದು. ಅಥವಾ ಅಭಯಚಂದ್ರಪಂಡಿತರು ಮೊದಲಿಗೆ ಇವರಿಗೆ ವಿದ್ಯಾಭ್ಯಾಸ ಮಾಡಿಸಿದರ ಸಂಕೇತ ಇರಬಹುದು.[೩೦]

ಇಲ್ಲೇ ಇರುವ ಕ್ರಿ.ಶ. ೧೨೮೦ರ ಶಾಸನದಲ್ಲಿ ಬಾಳಚಂದ್ರದೇವನ ಗುರು ಅಭಯಚಂದ್ರ ಸೈದ್ಧಾಂತಿಕ ದೇವರು ಪರ್ಯಂಕಾಸನದಲ್ಲಿ ಸನ್ಯಸನ ವಿಧಿಯಿಂದ ಹೊಂದಿದ ವಿಚಾರವಿದೆ.[೩೧]

ಇಲ್ಲೇ ಇರುವ ಇನ್ನೊಂದು ಕ್ರಿ.ಶ. ೧೩೦೦ರ ಶಾಸನದಲ್ಲಿ ಬಾಳಚಂದ್ರಪಂಡಿತನ ಪ್ರಿಯ ಅಗ್ರ ಶಿಷ್ಯ ಶ್ರೀಮದ್ ರಾಮಚಂದ್ರ ಮಲಧಾರಿದೇವನ ಉಲ್ಲೇಖವಿದ್ದು, ಬಾಳಚಂದ್ರ ಪಂಡಿತನು ರಾಮಚಂದ್ರ ಮಲಧಾರಿ ದೇವನಿಗೆ ಸಾರಚತುಷ್ಟಯ ಮೊದಲಾದ ಗ್ರಂಥಗಳನ್ನು ವ್ಯಾಖ್ಯಾನ ಮಾಡಿದನೆಂದು ಹೇಳಿದೆ.[೩೨]

ಬಾಲಚಂದ್ರನ ಉಬ್ಬುಶಿಲ್ಪವಿರುವುದು ಇಲ್ಲಿನ ವಿಶೇಷ.

ಆಧಾರಸೂಚಿ ಮತ್ತು ಅಡಿಟಿಪ್ಪಣಿಗಳು

೧. ತಮಿಳ್‌ಸೆಲ್ವಿ, ಕವಿಕಂದರ್ಪ ಮತ್ತು ಬಾಳಚಂದ್ರಮುನಿ–ಒಂದು ಪರಿಶೀಲನೆ, ಇತಿಹಾಸದರ್ಶನ ಸಂ.೧೩, ಪುಟ ೨೧೭–೧೮.

೨. ನಾಗರಾಜಯ್ಯ ಡಾ॥ ಹಂ.ಪ. ಕಾಣೂರ್ಗಣ ಒಂದು ಟಿಪ್ಪಣಿ, ಚಂದ್ರಕೊಡೆ, ಪುಟ ೨೩೪–೨೪೮.

೩. ಎಕ ೭ ಮ ೫೩ ತಿಪ್ಪೂರು ಸು. ೧೨–೧೩ನೇ ಶ.

೪. ಎಕ ೭ ಮ ೫೨ ತಿಪ್ಪೂರು ೧೨–೧೩ನೇ ಶ.

೫. ಎಕ ೯ ಹಾಸನ ೩೮೩ ಬೇಲೂರು.

೬ ಎಕ ೧೫ ಹೊಸನಗರ ೧೦೦ ಹುಂಚ ೧೧೭೭.

೭. ಎಕ ೧೩ ಶಿವಮೊಗ್ಗ ೧೪ ಕಲ್ಲೂರ ಗುಡ್ಡ ೧೧೨೨.

೮. ಎಕ ೮ ರ ೧೩೩ ಸುಳಗೋಡು ಸೋಮವಾರ ೧೦೮೦.

೯. ಎಕ ೭ ನಾಮಂ ೧೧೮ ಹಟ್ಟಣ ೧೧೭೮.

೧೦. ಎಕ ೭ ನಾಮಂ ೩೩ ಕಂಬದಹಳ್ಳಿ ೧೧೧೮.

೧೧. ಎಕ ೨ ಶ್ರಬೆ ೫೩೯ ಜಿನನಾಥಪುರ ೧೨೧೩.

೧೨. ಎಕ ೨ ಶ್ರಬೆ ೪೫೬ ನಗರಜಿನಾಲಯ ೧೨೮೨.

೧೩. ಎಕ ೯ ಬೇ ೪೦೬ ಬಸ್ತಿಹಳ್ಳಿ ೧೩೦೦.

೧೪. ಎಕ ೯ ಬೇ ೪೦೨, ೪೦೫.

೧೫. ಎಕ ೯ ಬೇ ೪೦೧ ಬಸ್ತಿಹಳ್ಳಿ ೧೨೭೪.

೧೬. ಎಕ ೯ ಬೇ ೪೦೬ ಬಸ್ತಿಹಳ್ಳಿ ೧೩೦೦.

೧೭. ನರಸಿಂಹಾಚಾರ್ ಆರ್., ಕರ್ನಾಟಕ ಕವಿಚರಿತೆ, ಪ್ರಥಮ ಸಂಪುಟ, ಪುಟ ೪೫೩.

೧೮. ಕವಿವಿಶಾ ಸಂ ೨, ಕುಷ್ಟಗಿ ೨೬ ಅಂಟೂರ್ ಠಾಣಾ ೧೨೬೭.

೧೯. ಎಕ ೯ ಬೇ ೩೯೪ ಬಸ್ತಿಹಳ್ಳಿ ೧೩೧೫.

೨೦. ಎಕ ೮ ಹಾಸನ ೧೭೪ ಮರ್ಕುಲಿ ೧೧೭೩.

೨೧. ಹಂದೂರ ಡಾ॥ ಬಿ.ಆರ್., ಜೈನಪರಂಪರೆಗೆ ಬೆಳಗಾವಿಯ ಪ್ರಾದೇಶಿಕ ಕೊಡುಗೆ, ಪುಟ ೨೩೬.

೨೨. ಅದೇ, ಪುಟ ೨೪೪.

೨೩. ಎಕ ೧೧ ಚಿಮಂ ೨೧೮ ಕಳಸಾಪುರ ೧೧೭೬.

೨೪. ಎಕ ೨ ಶ್ರಬೆ ೭೯ ಚಿಕ್ಕಬೆಟ್ಟ ಕತ್ತಲೆಯ ಬಸದಿ ೧೨ನೇ ಶ.

೨೫. ಎಕ ೨ ಶ್ರಬೆ ೩೬೦ ದೊಡ್ಡಬೆಟ್ಟ, ಸಿದ್ಧರ ಬಸದಿ ೧೩೯೮.

೨೬ ಎಕ ೨ ಶ್ರಬೆ ೫೩೯ ಜಿನನಾಥಪುರ ೧೨೧೪.

೨೭. ಎಕ ೨ ಶ್ರಬೆ ೪೫೬ ನಗರ ಜಿನಾಲಯ ೧೨೮೨.

೨೮. ಎಕ ೨ ಶ್ರಬೆ ೫೩೯ ಜಿನನಾಥಪುರ ೧೨೧೪.

೨೯. ಎಕ ೯ ಬೇಲೂರು ೪೦೧ ಬಸ್ತಿಹಳ್ಳಿ ೧೨೭೪.

೩೦. ಎಕ ೯ ಬೇಲೂರು ೪೦೨ ಬಸ್ತಿಹಳ್ಳಿ ೧೩ನೇ ಶ.

೩೧. ಎಕ ೯ ಬೇಲೂರು ೪೦೫ ಬಸ್ತಿಹಳ್ಳಿ ೧೨೮೦.

೩೨. ಎಕ ೯ ಬೇಲೂರು ೪೦೬ ಬಸ್ತಿಹಳ್ಳಿ ೧೩೦೦.

೩೧

ಕೆಲವು ಶಾಸನೋಕ್ತ ವ್ಯಕ್ತಿನಾಮಗಳ ಕೆರೆಗಳು

ಆರ್. ವೆಂಕಟೇಶ್‌ಮೂರ್ತಿ*

ಇಂದಿನಂತೆಯೇ ಪ್ರಾಚೀನ ಕರ್ನಾಟಕದಲ್ಲಿಯೂ ವ್ಯವಸಾಯವೇ ಅತಿ ಮುಖ್ಯವಾದ ಜೀವನೋಪಾಯವಾಗಿತ್ತು. ತನ್ನ ಗರ್ಭದಲ್ಲಿ ಬೆಳೆದ ಧಾನ್ಯಾದಿಗಳಿಂದ ಜನರನ್ನು ಸಾಕುವ ಭೂಮಿಯನ್ನು ತಾಯಿಯೆಂದೂ, ಬೆಳೆಗಳನ್ನು ಬೆಳೆಯುವ ರೈತರನ್ನು ಒಕ್ಕಲ ಮಕ್ಕಳೆಂದೂ ಶಾಸನಗಳು ಕರೆದಿವೆ. ದಾನವನ್ನು ಕೆಡಿಸಿದವನಿಗೆ ಒದಗಬಹುದಾದ ಮಹಾ ಪಾತಕಗಳಲ್ಲಿ ಅವರ ಭೂಮಿಯು ಬೆಳೆಯದಿರುವುದೂ ಒಂದು. "ಇದಾನ್ ಕೊಳೆ ಈರೇಳ್ಪತ್ತರಳುಂ ಒಕ್ಕಲ್ತನಂ ಕೆಯ್ವೊನಾ ವಿತ್ತಿದಲ್ಲಿ ವೆಳೆಯಾದೆ ಕೆಡುಗೆ. ಇದಾನ್ ಕಾದು ಸಲ್ವೋನ್ ಪರಮ ಕಲ್ಯಾಣ ತೀರ್ಥಂಗಳ್ ಅಪ್ಪಾರ್. ನೆಲನುಂ ವೆಳೆಗೆ ಪಾರ್ವರುಂ ಪ್ರಜೆಯುಂ ತಣಿಗೆ" ಈ ಮಾತುಗಳಲ್ಲಿ ರೈತನು ಬೆಳೆದರೆ ಲೋಕವು ಬದುಕುತ್ತದೆ ಎನ್ನುವ ಧ್ವನಿಯಿದೆ ಎಂಬುದಾಗಿ ಡಾ. ಎಂ. ಚಿದಾನಂದ ಮೂರ್ತಿಗಳು ಗುರುತಿಸಿದ್ದಾರೆ.[೧]

ನೀರಾವರಿಯು ಮುಖ್ಯವಾಗಿ ನದಿ, ಕೆರೆ, ಬಾವಿಗಳನ್ನು ಅವಲಂಬಿಸಿದ್ದಿತು. ಕೆರೆ, ಬಾವಿಗಳನ್ನು ನಿರ್ಮಿಸುವುದು ಅತ್ಯಂತ ಶ್ರೇಯಸ್ಕರ ಎಂದು ನಂಬಿದ್ದ ಅರಸರು, ಅಧಿಕಾರಿಗಳು, ಸಾಮಾನ್ಯರು ತಮ್ಮ ಅಥವಾ ತಮ್ಮ ವಂಶಜರ ಹೆಸರಿನಲ್ಲಿ ಮತ್ತು ಅರಸರ ಹೆಸರಿನಲ್ಲಿ ಕೆರೆಯನ್ನು ಕಟ್ಟಿಸುತ್ತಿದ್ದರು. ಕಟ್ಟಿಸಿದ ಕೆರೆ, ಬಾವಿಗಳನ್ನು ಯಾರೇ ಆಗಲಿ ನಾಶಪಡಿಸುವುದು ಅತ್ಯಂತ ಪಾಪಕರ ಎಂಬ ಭಾವನೆ ಇತ್ತು. ಆದುದರಿಂದಲೇ ಪ್ರಾಚೀನ ಕಾಲದ ಕೆರೆಗಳು ಹಲವಾರು ಶತಮಾನಗಳು ಉಳಿದುಕೊಂಡು ಬಂದಿವೆ.

ಕೆರೆಗಳ ನಿರ್ಮಾಣವನ್ನು ಕೆಲವು ಶಾಸನಗಳು ನೇರವಾಗಿ ದಾಖಲಿಸಿದರೆ, ದಾನ ಶಾಸನಗಳು ದಾನವಾಗಿ ಕೊಟ್ಟ ಪ್ರದೇಶದ ಸರಹದ್ದುಗಳ ವಿವರಣೆಯಲ್ಲಿ ಕೆರೆಗಳ ಇರುವಿಕೆಯನ್ನು ನಮ್ಮ ಗಮನಕ್ಕೆ ತರುತ್ತವೆ.

ಅರಸರಿಂದ ನಿರ್ಮಿಸಲಾದ/ಜೀರ್ಣೋದ್ಧಾರ ಗೊಳಿಸಲಾದ ದಾಖಲೆಗಳು

ಬನವಾಸಿಯಲ್ಲಿ ದೊರೆತ ನಾಗಶಿಲ್ಪದ ಜೊತೆಗಿನ ಶಾಸನದ ಪ್ರಕಾರ ಕ್ರಿ.ಶ. ೨ನೆಯ ಶತಮಾನಕ್ಕಾಗಲೇ ತಟಾಕವೊಂದು ನಿರ್ಮಿತವಾಗಿತ್ತು. ಕದಂಬ ಮಯೂರ ವರ್ಮನು ಬೆಟ್ಟಗಳ ನಡುವೆ ಕೆಳಭಾಗದಲ್ಲಿದ್ದ ವಿಶಾಲವಾದ ಜಾಗದಲ್ಲಿದ್ದ **ಕೆರೆಗೆ ಸುಂದರ ರೂಪವನ್ನು ರಚಿಸಿ ಬಲಪಡಿಸಿದನು** ಎಂದು ಕ್ರಿ.ಶ. ೩೫೦ರ ಚಂದ್ರವಳ್ಳಿ ಶಾಸನವು ದಾಖಲಿಸಿದೆ.[೨] ಈ ಕೆರೆಯ ನೀರು ಸ್ಥಳೀಯ ಜನರಿಗೆ ಮತ್ತು ಅವರ ವ್ಯವಸಾಯದ ಜಮೀನುಗಳಿಗೆ ಉಪಯೋಗ ವಾಗುತ್ತಿತ್ತು. ಈಗಲೂ ಸಹ ಈ ಕೆರೆಯು ದುರಸ್ತಿಗೊಂಡು ಉಪಯೋಗದಲ್ಲಿದೆ.

ಕ್ರಿ.ಶ. ೪೫೦ರ ತಾಳಗುಂದ ಶಾಸನವು[೩] "ಸುಕೃತಿಭಿರವನೀಶ್ವರೈರಾತ್ಮ ನಿಶ್ರೇಯಸಂಪ್ರೇಪ್ಸುಭಿಸ್ನಾತ ಕಾರ್ಣಾಭಿಶ್ರದ್ಧಯಾಭ್ಯರ್ಚಿತೇ ಇದಮುರು ಸಲಿಲೋಪಯೋಗಾಶ್ರಯಂ ಭೂಪತಿಃ ಕಾರಯಾ ಮಾಸ ಕಾಕುಸ್ಥವರ್ಮಾ ತಟಾಕಂ ಶುಭಂ" ಎಂದು **ಕಾಕುಸ್ಥವರ್ಮನು ಕಟ್ಟಿಸಿದ ತಟಾಕದ** ವಿಷಯವನ್ನು ತಿಳಿಸುತ್ತದೆ.

ಪಲ್ಲವ ಯುವರಾಜನ ಪ್ರಿಯತನಯರಾದ ಜಯ ಮತ್ತು ವೃದ್ಧಿಯ ಕೋರಿಕೆಯ ಮೇರೆಗೆ ಕೆರೆಗೋಡು ಗ್ರಾಮದ ಉತ್ತರ ಪಾರ್ಶ್ವದಲ್ಲಿನ ಕಿಳಿನೀ ನದಿಗೆ ಸೇತುವೆಯನ್ನು ಕಟ್ಟಿಸಿ ಕೆರೆಗೋಡು, ಕೊಳುಗೊಳ, ಬೆಳ್ಕರೆ, ಬೆಮ್ಬುಮ್ಪಾ ಮತ್ತು ಪುಣಸೆಪ್ಪಟ್ಟಿ ಗ್ರಾಮಗಳಿಗೆ **ಪಲ್ಲವ ತಟಾಕ** ಎಂದು ಪುನರ್ ನಾಮಕರಣ ಮಾಡಲಾಗಿದೆ.[೪]

ಒಂದನೇ ಬುಕ್ಕರಾಯನು ವಿಜಯನಗರ ಮತ್ತು ಅದರ ಆಸು ಪಾಸಿನ ಕೃಷಿ ಭೂಮಿಗೆ ನೀರನ್ನು ಒದಗಿಸುತ್ತಿದ್ದ ತುಂಗಭದ್ರಾ ನದಿಗೆ ಅಣೆಕಟ್ಟೆಯನ್ನು ಕಟ್ಟಿಸಿ, ಮಧ್ಯೆ ೫–೬ ಚಿಕ್ಕ ಅಣೆಕಟ್ಟೆಗಳನ್ನು ನಿರ್ಮಿಸಿ, ಪಟ್ಟಣದೊಳಕ್ಕೆ ನೀರು ಸರಬರಾಜು ಮಾಡಿಕೊಳ್ಳುವ ಸಲುವಾಗಿ ಬೆಟ್ಟಗಳ ಕೆಳಭಾಗದ ಗಟ್ಟಿಯಾದ ಬಂಡೆಗಳನ್ನು ಕಡಿಸಿ, ನೀರು ವೇಗದಿಂದ ಸರಾಗವಾಗಿ ಚಲಿಸುವಂತೆ ಅಗಲವಾದ ಕಲ್ಲಿನ ಕಾಲುವೆಯನ್ನು ಸುಮಾರು ೧೧ ರಿಂದ ೧೫ ಮೈಲಿಗಳವರೆಗೆ ನಿರ್ಮಿಸಿರುತ್ತಾನೆ.[೫] ಈ ತುರ್ತಾ ಕಾಲುವೆಯನ್ನು ಕಟ್ಟಿಸುವುದಕ್ಕೆ ಬುಕ್ಕನ ಭಂಡಾರವೆಲ್ಲ ಖಾಲಿಯಾಗಿತ್ತು ಎಂದು ನ್ಯೂನಿಜ್

* ನಂ. ೨೭/೧, ನವಸುಮ, ೨೩ನೆಯ ಮುಖ್ಯರಸ್ತೆ, ಮುನೇಶ್ವರ ಬ್ಲಾಕ್, ಬೆಂಗಳೂರು-೫೬೦೦೮೫.

ತಿಳಿಸಿದ್ದಾನೆ.[೬] ಅರಸರು ಕೆರೆ, ಕಟ್ಟೆ, ಕಾಲುವೆಗಳನ್ನು ನಿರ್ಮಿಸಬೇಕಾದಲ್ಲಿ ಸ್ಥಳ ಶೋದನೆ ಮಾಡಿ ಯೋಜನೆಯನ್ನು ರೂಪಿಸುವುದಕ್ಕೋಸ್ಕರ ತಾಂತ್ರಿಕವಾಗಿ ಪರಿಣಿತಿ ಹೊಂದಿದ್ದವರೊಂದಿಗೆ ಸಮಾಲೋಚಿಸುತ್ತಿದ್ದರು. ಇಂತಹ ಪರಿಣಿತರನ್ನು ಶಾಸನಗಳು ಜಲಸೂತ್ರದಾರರು, ತಂತ್ರಪಾಲರು ಎಂದು ಕರೆದಿವೆ. ಜೀವಂಗಳಿಗೆಲ್ಲಾ ಉದಕವೇ ಪ್ರಾಣವಾಗಿ ಪೆನುಗೊಂಡೆಗೆ ಹೆಂನೆಯ ನದಿಯನೂ ತರಬೇಕೆಂದು ಶ್ರೀ ವೀರಪ್ರತಾಪ ಬುಕ್ಕರಾಯ ಚಾವಡಿ ಒಳಗೆ ದಶವಿದ್ಯಾ ಚಕ್ರವರ್ತಿ ಜಲಸೂತ್ರದ ಸಿಂಗಾಯ ಭಟ್ಟನಿಗೆ ನಿರೂಪವ ಕೊಟ್ಟ, ಆ ಸಿಂಗಾಯ ಭಟ್ಟನು ಆ ಕಾಲುವೆಯನು ಸಿರುವೆರದ ಕೆರೆಗೆ ತಂದು ಆ ಕಾಲುವೆಯ ಹೆಸರನೂ **ಪ್ರತಾಪ ಬುಕ್ಕರಾಯ ಮಂಡಲದ ಕಾಲುವೆ**ಯಾಗಿ ಮಾಡಿಸಿ ಶಾಸನವನೂ ಬರೆಸಿದನು ಎಂದು ಅರಸನ ಹೆಸರನ್ನು ಕಾಲುವೆಗೆ ಇಟ್ಟಿರುವುದನ್ನು ಗೌರಿಬಿದನೂರು ಶಾಸನವು ದಾಖಲಿಸಿದೆ.[೭] ಅರಸರು ಕೇವಲ ಕೆರೆ ಕಟ್ಟಿಸುವುದಷ್ಟೇ ತಮ್ಮ ಕೆಲಸವೆಂದು ತಿಳಿಯದೆ, ಎಲ್ಲಾ ಜೀವಗಳ ಹಿತರಕ್ಷಣೆಗೂ ಕಾಳಜಿ ವಹಿಸುತ್ತಿದ್ದರು. ಈಶ್ವರ ಸಮುದ್ರ ಎಂಬ ಕೆರೆಯನ್ನು ಕಟ್ಟುವ ಸಂದರ್ಭದಲ್ಲಿ ತಂತ್ರಪಾಲ ಲಕುಮನಾಯಕ ಎಂಬುವನನ್ನೂ, ಅಯ್ಯಾವೊಳವಿನಲ್ಲಿ ಒಂದು ಕೆರೆಯನ್ನು ಕಟ್ಟಿದಾಗ ಅರಸಪ್ಪಯ್ಯ ಎಂಬ ತಂತ್ರಪಾಲನನ್ನೂ ಹೆಸರಿಸಿರುವುದು ಕಂಡು ಬರುತ್ತದೆ.[೮]

ಈ ರೀತಿ ಸ್ಥಳೀಯ ತಂತ್ರಪಾಲರನ್ನೇ ಅಲ್ಲದೆ, ಹೊರದೇಶದ ಪರಿಣಿತರನ್ನೂ ಕರೆಸಿ ಅವರ ಸಹಾಯವನ್ನು ಪಡೆಯುತ್ತಿದ್ದರು. ಕೃಷ್ಣ ದೇವರಾಯನು ಕಟ್ಟಿಸಿದ ಅನೇಕ ಕೆರೆಗಳಲ್ಲದೆ, ಹೊಸಪೇಟೆಯ ಬಳಿ ಈಗ ಉಪಯೋಗಿಸದೇ ಇರುವ ಮತ್ತು **ರಾಯರಕೆರೆ** ಎಂದು ಕರೆಯುವ ದೊಡ್ಡ ಕೆರೆಯನ್ನು ಕಟ್ಟಿಸುವ ಸಂದರ್ಭದಲ್ಲಿ, ಗೋವಾ ದೇಶದ ರಾಜ್ಯಪಾಲನನ್ನು ಸಂಪರ್ಕಿಸಿ ಕಲ್ಲುಗಳ ಕೆಲಸದಲ್ಲಿ ವಿಶೇಷವಾಗಿ ನುರಿತ ಕೆಲಸಗಾರರನ್ನು ಕಳುಹಿಸಿಕೊಡುವಂತೆ ಕೋರಿದಾಗ, ಆತನು ಅತ್ಯುತ್ತಮ ಹಾಗೂ ವಿಶೇಷ ಪರಿಣಿತಿಯನ್ನು ಹೊಂದಿದ್ದ ಎಂಚಿಂ ಜಜಟಟಚಿ ಠಿಂಟಣಜ ಎಂಬ ವ್ಯಕ್ತಿಯನ್ನು ಕಳುಹಿಸಿಕೊಡುತ್ತಾನೆ. ಕೃಷ್ಣದೇವರಾಯನು ಈತನ ಸಹಾಯದಿಂದ ಕಣಿವೆಗಳ ಮಧ್ಯದಲ್ಲಿ ನೀರು ಹರಿಯುವಂತೆ ವಿಶಾಲವಾಗಿ ತೆರೆದ ಕೆರೆಯನ್ನು ಕಟ್ಟಿಸಿ ಅದರ ಕೆಳಗೆ ನೀರು ವ್ಯಯವಾಗದಂತೆ ಕಲ್ಲಿನ ಪೈಪುಗಳನ್ನು ಹಾಕಿಸುತ್ತಾನೆ. ಹಾಗೂ ಈ ಕೆರೆಯ ನೀರನ್ನು ಉಪಯೋಗಿಸಿಕೊಂಡು ಬೆಳೆ ಬೆಳೆಯುವ ಭೂಮಿಗಳು ಅಭಿವೃದ್ಧಿ ಹೊಂದಿ ಪೂರ್ಣವಾಗಿ ಫಸಲು ಬರುವುದಕ್ಕೆ ಅನುಕೂಲವಾಗುವಂತೆ ಅವುಗಳಿಗೆ ೫ ವರ್ಷಗಳವರೆವಿಗೆ ತೆರಿಗೆ ಮನ್ನಾ ಮಾಡುತ್ತಾನೆ.[೯] ಈ ಕೆರೆಯು ವ್ಯವಸಾಯಕ್ಕೆ ಮಾತ್ರವಲ್ಲದೆ ಅನೇಕ ತೋಟಗಳಿಗೆ, ಉದ್ಯಾನವನಗಳಿಗೆ, ಮರ ಗಿಡಗಳಿಗೆ ನೀರುಣಿಸುತ್ತಿತ್ತು.

ಅರಸರಷ್ಟೇ ಅಲ್ಲದೆ ಅರಸಿಯರೂ ಕೂಡ ಕೆರೆಗಳನ್ನು ಕಟ್ಟಿಸುತ್ತಿದ್ದರು. ದುದ್ದರಸ ನೃಪನ ವಂಶಾವಳಿಯನ್ನು ನೀಡಿ, ದುದ್ದರಸ ಮತ್ತು ಮೇಚಲದೇವಿಯ ಮಗ ಕದಂಬ ಪ್ರಧಾನಿ ದಯಸಿಂಹ ನೃಪನನ್ನು ಹೆಸರಿಸುವ ಕ್ರಿ.ಶ. ೧೦೯೫ರ ಶಾಸನವು[೧೦] ಮಹಾಗ್ರಹಾರವಾದ ಹಾರುವ ಬೆಲುಹೂರಿನಲ್ಲಿ ದೇವಾಲಯವನ್ನು ನಿರ್ಮಿಸಿ, ವಾಸುದೇವ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿಸಿದ ಮೇಚಲದೇವಿ ಕಟ್ಟಿಸಿದ ಕೆರೆಯು "ಅಂತು ನೆಗರ್ತೆವೊಡೆದ ದೇವಿಯುರು ಕಟ್ಟಿಸಿದ ಕೆರೆಯದೆಂತೆನೆ// ಸರಸಿಜ ಸಂಕುಳದಿಂದಂ ತರದಿಂ ತುಂಬಿಗಳ ಹಂಸೆಗಳ ಬಳಗದಿನಚ್ಚರಿಯೆನಿಸಿ ತೋರ್ಪುದಿನ್ತಿ ಧರಣಿಗೆ **ಮೇಚಲಸಮುದ್ರವೆಂಬ** ತಟಾಕಂ//" ಎಂದು ವರ್ಣಿಸುತ್ತಾ ಮೇಚಲದೇವಿ ಅರಸಿ ತನ್ನ ಹೆಸರಿನಲ್ಲಿ ಕಟ್ಟಿಸಿದ ಕೆರೆಯನ್ನು ಉಲ್ಲೇಖಿಸುತ್ತದೆ.

ದಾನಶಾಸನಗಳಲ್ಲಿ ಆಳಿದ ಅರಸನ ಹೆಸರಿನಲ್ಲಿ ಇದ್ದ ಕೆರೆಗಳನ್ನು, ದಾನ ನೀಡಿದ ಪ್ರದೇಶಗಳ ಸರಹದ್ದುಗಳ ವಿವರಣೆಯಲ್ಲಿ ದಾಖಲಿಸಿವೆ.

ಗಂಗರ ವಂಶಾವಳಿಯನ್ನು ಶ್ರೀಪುರಷನವರೆಗೆ ನೀಡುವ ಕ್ರಿ.ಶ.೭೭೬–೭೭ರ ಶಾಸನವೊಂದು[೧೧] ಬಾಣರ ದುಣ್ಡುವನ್ನು ಹಾಗೂ ಪಲ್ಲವಾಧಿ ರಾಜನ ಪತ್ನಿ ಸಗರ ವಂಶದ ಕುಂದಾಚಿಯನ್ನು ಉಲ್ಲೇಖಿಸಿ, ಈಕೆಯು ಶ್ರೀಪುರದಲ್ಲಿ ಲೋಕತಿಲಕವೆಂಬ ಬಸದಿಯನ್ನು ಕಟ್ಟಿಸಿ, ಇದರ ದುರಸ್ತಿಗಾಗಿ ಮತ್ತು ದೇವರ ಪೂಜೆಗಾಗಿ ದತ್ತಿ ನೀಡಿದ ಸಂದರ್ಭದಲ್ಲಿ ಸರಹದ್ದುಗಳನ್ನು ತಿಳಿಸುತ್ತಾ, ಇಮಾನ್ಯಾನ್ಯಾನಿ ಕ್ಷೇತ್ರನ್ತರಾಣಿ ದತ್ತಾ **ದುಣ್ಡುಸಮುದ್ರ** ದಾವಯಲುಕ್ಕಿರುದಾರಾಮೇಗೆ ಪದಿರ್ಕ್ಕಣ್ಡುಗಂ ಎಂದು ದುಣ್ಡು ಅರಸನ ಹೆಸರಿನ ಕೆರೆಯನ್ನು ದಾಖಲಿಸಿದೆ. ಮಹೇಂದ್ರಾದಿರಾಜ ನೊಳಂಬನನ್ನು ಗಂಗವಂಶದ ಪೆರ್ಮಾಡಿಗಳ ಮಗಳಾದ ಜಾಅಬ್ಬೆ ಮತ್ತು ನೊಳಂಬಾಧಿರಾಜನ ಮಗನೆಂದು ದಾಖಲಿಸಿರುವ ಕ್ರಿ.ಶ.೮೯೨ ಶಾಸನವು[೧೨] ತಗಡೂರಿನಲ್ಲಿ (ಈಗಿನ ಧರ್ಮಪುರಿ) ಚಂಡಿಯಣ್ಣ ಮತ್ತು ನಿಧಿಯಣ್ಣ ಎಂಬುವರು ಬಸದಿಯನ್ನು ಮಾಡಿಸಿದ ಸಂದರ್ಭದಲ್ಲಿ, ರಾಜನು ಆ ಬಸದಿಗೆ ಪೂಜಾಕೈಂಕರ್ಯಕ್ಕಾಗಿ ಹಾಗೂ ಜೀರ್ಣೋದ್ಧಾರಕ್ಕಾಗಿ ಮೂಲಹಳ್ಳಿ ಎಂಬ ಗ್ರಾಮವನ್ನು ಸರ್ವಬಾಧಾ ಪರಿಹಾರವಾಗಿ ನೀಡುತ್ತಾನೆ. ಈ ಗ್ರಾಮಕ್ಕೆ ಸೇರುವ ಎಲ್ಲೆಗಳನ್ನು ಸೂಚಿಸುವಾಗ **ನೊಳಮ್ಬ ಸಮುದ್ರಕ್ಕೆ** ಬರ್ಪ ಪಳ್ಳಂ ಎಂದು ನೊಳಂಬ ರಾಜನ ಹೆಸರಿನ ಕೆರೆ ಇದ್ದುದನ್ನು ದಾಖಲಿಸಿದೆ.

ವಿನಯಾದಿತ್ಯನು ಗಂಗವಾಡಿ ೯೬೦೦೦ವನ್ನು ಆಳುತ್ತಿದ್ದಾಗ ಶ್ರೀಮನ್ಮಹಾ ಸಾಮಂತ ಬಮ್ಮಯಗಳ ಕಿರಿಯಯ್ಯ ನೇರಿಲಿಗೆಯ ಪೆರ್ಗಡೆ ಆಲಮಯ್ಯಂ **ನೊಳಂಬನ ಕೆರೆಯ** ಕಾಳೆಗದಲು ಮೇಲಾಳು ಕುದುರೆಯನಿರಿದು ವೀರಸರ್ಗಕ್ಕೆ ಸೇರಿದ ಎಂಬುದಾಗಿ ಕ್ರಿ.ಶ.೧೦೮೪-೮೫ರ ಶಾಸನವು ತಿಳಿಸುದತ್ತದೆ.[೧೩]

ಮಾಧವಯ್ಯನ ಮಗನಾದ ನಾಗಯ್ಯನು, ನಿಧನ ಹೊಂದಿದ ನೀತಿಮಾರ್ಗನ ನೆನಪಿಗಾಗಿ ಕೆರೆಯೊಂದನ್ನು ಕಟ್ಟಿಸಿ **ಕೊಂಗಣಿ ಕೆರೆ** ಎಂದು ಹೆಸರಿಸಿ, ಆ ಕೆರೆಯನ್ನು ತಮ್ಮ ಊರಿನಲ್ಲಿ ನಡೆದ ಕಾಳಗದಲ್ಲಿ ಶೌರ್ಯವನ್ನು ಮೆರೆದ ಬೋವ ಜನಾಂಗದವರಿಗೆ ಕೊಡುಗೆಯಾಗಿ ನೀಡಿರುತ್ತಾನೆ.[೧೪]

ಕ್ರಿ.ಶ.೧೨೦೧ರ ಶಾಸನವು ತ್ರಿಭುವನ ಚತುರ್ವೇದಿ ಮಂಗಲದ ವೀರುಂಡ ಪೆರುಮಾಳ್ ದೇವರಿಗೆ ಒಬ್ಬ ವ್ಯಕ್ತಿ ಭೂಮಿಯನ್ನು ದಾನ ನೀಡಿದಾಗ, ಅದರ ಸರಹದ್ದುಗಳಲ್ಲಿ ಕೊಜ್ಞಣಿ ಕಿರ್‍ಯೆಯಿಲಿಲ್ ತಿಟ್ಟಕ್ಕಿರಕ್ಕು ಎಂದು ಕೊಂಗಣಿ ವರ್ಮನ ಹೆಸರಿನಲ್ಲಿರುವ ಕೆರೆಯನ್ನು ದಾಖಲಿಸಿದೆ.[೧೫] ವೀರ ಬುಕ್ಕಣವೊಡೆಯರ ಅಂಗಜಾವದ ಅಲ್ಲಪ್ಪನಾಯಕ್ಕರ ಮಕ್ಕಳು ಪೋಲೆಯ ನಾಯಕ್ಕರು ಆನೆ ಬಿದ್ದ ಸರಿಯ ಮೇಗೋಟೆಯ ಜಾಳದಗೊಂದಿಯ ಬಡಗಣ ಭಾಗೆಯ ಪಡುವಣ ಭಾಗದಲು ಕಟ್ಟಿಸಿದ ದೊಣೆ **ಬುಕ್ಕರಾಯಸಮುದ್ರ** ಮೂಡಣ ಭಾಗೆಯಲು ಕಟ್ಟಿಸಿದರ್ ಈ ಪೋಲಸಮುದ್ರ ಎನ್ನುವ ತುಮಕೂರು ಜಿಲ್ಲೆಯ ಶಾಸನವು ಬುಕ್ಕರಾಯ ಸಮುದ್ರ ಎಂಬುದನ್ನು ದಾಖಲಿಸಿದೆ.[೧೬] ಹೊಯ್ಸಳ ಸೋಮೇಶ್ವರ, ಮುಮ್ಮಡಿ ನರಸಿಂಹ ಹಾಗೂ ಮುಮ್ಮಡಿ ಬಲ್ಲಾಳನ ಕೈಕೆಳಗೆ ಸೇವೆಸಲ್ಲಿಸುತ್ತಿದ್ದ ಪೆರುಮಾಳೆ ದಂಡನಾಯಕನು ತನ್ನ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ಹಾಗೂ ಇತರೆ ಅನೇಕ ಕೆರೆಗಳನ್ನು ಕಟ್ಟಿಸಿದ್ದಾನೆ. ಮೂರನೇ ನರಸಿಂಹನ ಆಡಳಿತ ಕಾಲದ ಕ್ರಿ.ಶ.೧೨೬೯ರ ಎರಡು ಶಾಸನಗಳಲ್ಲಿ,[೧೭] ಒಂದು ಈತನು ಶ್ರೀರಂಗಪುರದಲ್ಲಿ **ಅಲ್ಲಾಳಸಮುದ್ರ ಕೆರೆ**ಯನ್ನು ಕಟ್ಟಿಸಿ ಖಾಯಂ ನೀರು ಸರಬರಾಜು ವ್ಯವಸ್ಥೆಯನ್ನು ಮಾಡಿದನೆಂದು ತಿಳಿಸಿದರೆ ಮತ್ತೊಂದು **ಅಲ್ಲಾಳ ಸಮುದ್ರ, ತಗಚಗೆರೆ, ಅವ್ವೆಯರಕೆರೆ**ಗಳನ್ನು ಕಟ್ಟಿಸಿ ಕಾಲುವೆಗಳನ್ನೂ ನಿರ್ಮಿಸಿ ಖಾಯಂ ನೀರು ಸರಬರಾಜು ವ್ಯವಸ್ಥೆಯನ್ನು ಮಾಡಿಸಿದ ನೆಂದು ದಾಖಲಿಸಿದೆ. ಬಿಜ್ಜಳಾಪುರ ಪ್ರತಿನಾಮಧೇಯವಾದ ಹಾನುಗಲ್‌ನ ಮುಂಭಾಗದಲ್ಲಿ **ಪೆರೆಮಾಳೆಸಮುದ್ರವೆಂಬ ಕೆರೆಯನ್ನು** ನಿರ್ಮಿಸಿದನ್ನು ಕ್ರಿ.ಶ. ೧೨೮೦ರ ಶಾಸನ ತಿಳಿಸಿದರೆ,[೧೮] ಚಿತ್ರದುರ್ಗದ ಕ್ರಿ.ಶ.೧೨೮೬ರ ಶಾಸನವು[೧೯] ನಗರೇರು ಗ್ರಾಮದಲ್ಲಿನ **ಕುರುಬನ ಕಾಳೆಯ ಕೆರೆಯನ್ನು ಪುನಃ ಹೊಸದಾಗಿ ನಿರ್ಮಿಸಿ ಅದಕ್ಕೆ ಪೆರುಮಾಳೆಸಮುದ್ರವೆಂದು** ನಾಮಕರಣ ಮಾಡಿದುದನ್ನೂ, ಚನ್ನರಾಯಪಟ್ಟಣದ ಶಾಸನವೊಂದು[೨೦] ಕುಂದೂರಿನ ತೆಂಕಣ ಗಡಿಯಲ್ಲಿ **ಪೆರೆಮಾಳೆಸಮುದ್ರವನ್ನೂ** ಕಟ್ಟಿಸಿದನೆಂದು ತಿಳಿಸುತ್ತದೆ.

ವಿಜಯನಗರ ಸಾಮ್ರಾಜ್ಯದ ಬುಕ್ಕರಸನಲ್ಲದೆ ಮತ್ತೊಬ್ಬ ಬುಕ್ಕನು ಆರುವನಹಳ್ಳಿಯ ಶಾಸನದಲ್ಲಿ ದಾಖಲಾಗಿದ್ದಾನೆ. ಮದ್ದೂರು ತಾಲ್ಲೂಕು ಆರುವನ ಹಳ್ಳಿಯ ಹಲವು ಶಾಸನಗಳಲ್ಲಿ ಬಡವಾರ ವಂಶದ ಭಟ್ಟರ ಬಾಚಿಯಪ್ಪ ಮತ್ತು ಅವರ ವಂಶದವರ ವಿವರಗಳು ದೊರೆಯುತ್ತವೆ. ಕ್ರಿ.ಶ. ೧೩೧೬ರ ಶಾಸನದಲ್ಲಿ ದಾಖಲಿಸಿರುವಂತೆ ಈ ಬಾಚಿಯಪ್ಪನು ಹೊಯ್ಸಳ ಮುಮ್ಮಡಿ ಬಲ್ಲಾಳನಿಂದ ಪ್ರತಿಗ್ರಹಿಯಾಗಿ ಕೆಲವು ಗ್ರಾಮಗಳನ್ನು ದತ್ತಿಪಡೆದ ಕೀರ್ತಿದೇವನ ಪುತ್ರ.[೨೧] ಈ ಬಾಚಿಯಪ್ಪನು **ಬುಕ್ಕರಾಯಸಮುದ್ರ, ಕೀರ್ತಿಸಮುದ್ರ, ಬಾಚಪ್ಪನ ಕೆರೆ, ಚವುಡಪ್ಪನ ಕಾಲುವೆ** ಮತ್ತು ತನ್ನ ತಾಯಿಯ ಹೆಸರಿನಲ್ಲಿ ಮಾಳಉವೆಯ ಕೆರೆಗಳನ್ನು ಕಂನಗೆರೆ (ಹೊಸಕೆರೆ) ಯಾಗಿ ಕಟ್ಟಿಸಿ ನಾಲ್ಕು ದಿಕ್ಕುಗಳಲ್ಲಿ ಸಾಲು ಮರಗಳು, ಅರಳಿಯ ಮರಗಳು ಇತ್ಯಾದಿಗಳನ್ನು ನೆಡಿಸಿ ತನ್ನ ಹೆಸರಿನಲ್ಲಿ ಬಾಚಪಟ್ಟಣವನ್ನೂ ನಿರ್ಮಾಣ ಮಾಡಿಸಿದನು ಎಂದು ಕ್ರಿ.ಶ. ೧೩೫೮ರ ಶಾಸನ ದಾಖಲಿಸಿದೆ.[೨೨] ಇವುಗಳೊಂದಿಗೆ ಬಾಚಪಟ್ಟಣದ ಅಡಕೆ ತೋಟ, ಮಲ್ಲಿಕಾರ್ಜುನ ದೇವರ ಪ್ರತಿಷ್ಠಾಪನೆ ಮುಂತಾದ ಧರ್ಮಕಾರ್ಯಗಳನ್ನು ಮಾಡಿದ ಆ ಬಾಚಿಯಪ್ಪನವರು ಪರಮಪದವೆಯಿದಿದಲ್ಲಿ ಅವರ ಹಿರಿಯ ಮಗ ಬುಕ್ಕಂಣನು ವಿರೂಪಾಕ್ಷದಲ್ಲಿ ಪ್ರಾಯಶ್ಚಿತ್ತದ ವಿಧಿಸಿ ಅಸ್ತಿಯನು ವಾರಣಾಸಿಗೆ ಕಳಿಹಿ ಶಿಲಾಶಾಸನವನು ಸುಪ್ರತಿಷ್ಠೆಯ ಮಾಡಿದವರು ಬುಕಂಣನವರು ಎಂದು ಕ್ರಿ.ಶ. ೧೩೮೧ರ ಶಾಸನವು[೨೩] ಬುಕ್ಕಂಣನ ಹೆಸರನ್ನು ದಾಖಲಿಸುತ್ತದೆ. ಕ್ರಿ.ಶ. ೧೩೫೮ರಲ್ಲಿ ನಾಲ್ಕು ಕೆರೆಗಳು, ಒಂದು ಕಾಲುವೆ ಒಂದು ಗ್ರಾಮದೊಂದಿಗೆ ನಾಲ್ಕು ದಿಕ್ಕಿನಲ್ಲಿ ಸಾಲು ಮರಗಳನ್ನು ನೆಡಿಸಿ ಉತ್ತಮ ಪರಿಸರವನ್ನು ನಿರ್ಮಾಣ ಮಾಡಿ ಕ್ರಿ.ಶ. ೧೩೮೧ರಲ್ಲಿ ವಿಧಿವಶನಾದ ಬಾಚಿಯಪ್ಪನಿಗೆ ಉತ್ತರಕ್ರಿಯಾ ವಿಧಿಗಳನ್ನು ಪೂರೈಸಿದ ಹಿರಿಯ ಮಗ ಬುಕ್ಕಣನೂ ಸೇರಿದಂತೆ ಕಂಪಣ್ಣ, ಚವುಡಪ್ಪ ಮತ್ತು ಕೀರ್ತಿದೇವ ಎಂಬ ನಾಲ್ಕು ಜನ ಮಕ್ಕಳಿದ್ದರು ಎಂಬುದು ಕ್ರಿ.ಶ. ೧೩೮೮ರ ಶಾಸನದಲ್ಲಿ ಪ್ರಸ್ತಾಪವಾಗಿದೆ.[೨೪] ಈ ಬಾಚಿಯಪ್ಪನು ತಾನು ಕಟ್ಟಿಸಿದ ಕೆರೆಗಳಲ್ಲಿ ಒಂದಕ್ಕೆ ಬುಕ್ಕಸಮುದ್ರ ವೆಂಬ ಹೆಸರಿಟ್ಟಿದುದೂ, ತನ್ನ ಮಕ್ಕಳನ್ನು ಬುಕ್ಕಣ, ಕಂಪಣ್ಣ ಎಂಬ ಹೆಸರಿನಿಂದ ಕರೆದುದೂ ಅವನಿಗೆ ವಿಜಯನಗರ ಅರಸರಲ್ಲಿದ್ದ ನಿಷ್ಠೆಯನ್ನು ಸೂಚಿಸುತ್ತದೆಯೇ ಹೊರತು ಇಲ್ಲಿ ಉಲ್ಲೇಖಿತನಾಗಿರುವ ಬುಕ್ಕಣ್ಣನು ಅರಸೊತ್ತಿಗೆಗೆ ಸೇರಿದವನಲ್ಲ ಎಂದು ಸ್ಪಷ್ಟವಾಗಿ ಹೇಳಬಹುದು.

ಕ್ರಿ.ಶ. ೧೪೮೭ ಶಾಸನವು[೨೫] ಪ್ರತಾಪದೇವರಾಯನನ್ನು ಉಲ್ಲೇಖಿಸಿ ಲಖಿಂಣನು ಮುಳುವಾಯ ರಾಜ್ಯವನ್ನು ಆಳುತ್ತಿದ್ದಾಗ ಆದಂಣಗುಡನ ದಂಡಿನ ಜೀವಿತಕ್ಕೆಂದು ದೇವರಾಯನ ಸಮುದ್ರಕ್ಕೆ ಸಲುವ ಗದ್ದೆ, ಬೆದ್ದಲು, ತೋಟ ತುಡಿಕೆ ಮುಂತಾದವುಗಳನ್ನು ದಾನ ನೀಡಿದ ಸಂದರ್ಭದಲ್ಲಿ **ದೇವರಾಯನ ಹೆಸರಿನ ಕೆರೆಯನ್ನು** ಉಲ್ಲೇಖಿಸಿದೆ. ರಾಮಮಂತ್ರಿ ಮತ್ತು ತೆಲಗಮಾಂಬ ರವರ ಪುತ್ರ ಪೆದ್ದತಿಮ್ಮಯ್ಯ ಮತ್ತು ಲಕ್ಕಾಂಬಿಕ ರವರ ಮಗ ಬಯಕಾರ ರಾಮಪ್ಪಯ್ಯನು ಮೂರು ಅಗ್ರಹಾರಗಳನ್ನು ನಿರ್ಮಿಸಿ, ಏಳು ದೇವಾಲಯಗಳನ್ನು ಕಟ್ಟಿಸಿ ಗ್ರಾಮವನ್ನು ನೀಡಿದುದೇ ಅಲ್ಲದೆ, ತನ್ನ ಮಗಳು ಲಕ್ಕರಸಮ್ಮನಿಗೆ ಪುಣ್ಯವಾಗಲಿ ಎಂದು **ಕಾಮಸಮುದ್ರವೆಂಬ** ಕೆರೆಯನ್ನು ಕಟ್ಟಿಸುವುದರೊಂದಿಗೆ **ಅಚ್ಯುತಮ್ಮ ಸಮುದ್ರ, ಬಾಚಸಮುದ್ರ, ರಾಮಸಮುದ್ರ, ಅಕ್ಕಸಮುದ್ರ, ಕಾಮಸಮುದ್ರ, ಅಮ್ಮಸಮುದ್ರ, ವೀರಸಮುದ್ರ, ಅಚ್ಯುತೇಂದ್ರಸಮುದ್ರ, ವೆಂಕಟೇಂದ್ರಸಮುದ್ರ, ಪೆದ್ದಲಕ್ಕಸಮುದ್ರ, ಚಿನ್ನ ಲಕ್ಕಸಮುದ್ರ, ಲಿಂಗಾಲಯತಟಾಕ, ವೆಂಕಟಯ್ಯ ತಟಾಕ, ಪೆದ್ದತಿಮ್ಮಸಮುದ್ರ ಮತ್ತು ಚಿನ್ನಬಾಚಸಮುದ್ರ** ಎಂಬ ೧೫ ಕೆರೆಗಳನ್ನು ಕಟ್ಟಿಸಿರುವುದನ್ನು ಕ್ರಿ.ಶ.೧೫೪೪ರ ಶಾಸನ ದಾಖಲಿಸಿದೆ.[೨೬]

ಕೆರೆಯ ನಿರ್ಮಾಣ ಕಾರ್ಯ, ಅದರ ವೆಚ್ಚ ಹಾಗೂ ಅದರ ರಕ್ಷಣೆ, ದುರಸ್ತಿಗಳ ಬಗ್ಗೆ ಕೆಲವು ಶಾಸನಗಳು ವಿವರಗಳನ್ನು ನೀಡುತ್ತವೆ.

ವಿಜಯನಗರ ಸಂತತಿಯ ಮೊದಲನೆಯ ಅರಸನ ಕಾಲದಲ್ಲಿ ಒಂದು ದೊಡ್ಡ ಕೆರೆಯನ್ನು ಕಟ್ಟಿಸಿದಾಗ ಸುಮಾರು ೧೦೦೦೦ ಕೆಲಸಗಾರರನ್ನು ಮತ್ತು ಸಾಮಗ್ರಿಗಳನ್ನು ಸಾಗಿಸಲು ೧೦೦ ಗಾಡಿಗಳನ್ನು ತೊಡಗಿಸಿಕೊಂಡನೆಂದೂ, ಈ ಕೆರೆ ನಿರ್ಮಾಣವು ಪೂರ್ಣಗೊಳ್ಳಲು ಎರಡು ವರ್ಷಗಳು ಬೇಕಾಯಿತೆಂದೂ ಒಂದನೇ ಬುಕ್ಕರಾಯನ ಶಾಸನವೊಂದು ತಿಳಿಸುತ್ತದೆ.[೨೭] ಹೊಸದಾಗಿ ಕೆರೆಗಳನ್ನು ಕಟ್ಟಿಸುವಾಗ ಕಾಡಂ ಕಡಿದು ಕನ್ನೆಗೆರೆಯಂ ಕಟ್ಟಿಸಿ ವೂರಂ ಮಾಡುತ್ತಿದ್ದರು. ಅರಸರು, ಕೆರೆ ಕಟ್ಟಿಸಿದವರನ್ನು ಪ್ರೋತ್ಸಾಹಿಸಲು ಕೆಲವು ರಿಯಾಯಿತಿಗಳನ್ನು ನೀಡುತ್ತಿದ್ದರು. ವೀರಬಲ್ಲಾಳನ ಆಡಳಿತ ಕಾಲದಲ್ಲಿ, ಶ್ರೀಮನ್ಮಹಾಪ್ರಧಾನಿ, ಸರ್ವಾಧಿಕಾರಿ, ಶ್ರೀಕರಣಾಗ್ರಗಣ್ಯ ಸರ್ವಾಧ್ಯಕ್ಷ ಎನಿಸಿಕೊಂಡ ಅಚ್ಚುತನ ಅಣ್ಣನಾದ ವೀರಯ್ಯ ದಂಡನಾಯಕನು (ವೀರದೇವ) ತನ್ನ ಸ್ವಾಮಿಯಾದ ವೀರಬಲ್ಲಾಳ ದೇವನಿಗೆ ಒಳ್ಳೆಯದಾಗಲಿ ಎಂದು ತಾನೆ ಕರುವಿಟ್ಟು ಕಾಡಕಡಿದು ಮಾಡಿದ ವೀರಬಲ್ಲಾಳ ಪುರದೊಳು **ರುದ್ರಸಮುದ್ರ, ಗಂಗಾಸಮುದ್ರ, ಅಚ್ಯುತಸಮುದ್ರ ಮತ್ತು ವೀರಸಮುದ್ರ** ಎಂಬ ಕೆರೆಗಳನ್ನು ಕಟ್ಟಿಸಿದಾಗ, ಅರಸ ವೀರಬಲ್ಲಾಳನು ಕೆರೆಯಂ ಕಟ್ಟಿದವರ್ಗೆ ಹನ್ನೆರಡು ವರಿಷ ಮಾನ್ಯವಲ್ಲಿಂ ಮೇಲೆ ಹತ್ತು ಸಲಗ ಗದ್ದೆಯ ಮಾನ್ಯವಂ ಸಲಿಸಿಯುಳಿದುದಂ ಹಚ್ಚು ಕುಡುವಸ್ತಾಗಿ ಮಾಡಿ ಧಾರೆತಯನೆರೆದು ಕೊಟ್ಟ ಎಂದು ಕ್ರಿ.ಶ. ೧೧೮೬ರ ಶಾಸನವು ತಿಳಿಸುತ್ತದೆ.[೨೮]

ಶಾಸನಗಳಲ್ಲಿ ಕೆಲವೊಮ್ಮೆ ಕೆರೆಯನ್ನು ಕಟ್ಟಿಸುವಂತೆ ಆದೇಶಿಸಿರುವುದೂ ಉಂಟು. ಗುತ್ತಲ ಕೇಶವದೇವರ ಸ್ಥಾನಿಕ ನಂಬಿಪಳ್ಳಿಯ ಮಗ ಪುರುಷೋತ್ತಮದೇವ ಮತ್ತು ಅವರ ಅಣ್ಣ ಅದೂರನ ಮಗ ನಂಬಿಪಿಳ್ಳಿ ಇಬ್ಬರೂ ಆ ಕೇಶವದೇವರ ದೇವದಾನದ ವೂರು ಮರ ಕಾಡನನು ಕುಡಿನಿಂಕಾ ದೇವದಾನವಾಗಿ ಮಕ್ಕಳು ಮಕ್ಕಳು ತಪ್ಪದೆ ಆ ಚತುಸ್ಸೀಮೆಯಲ್ಲುಳ್ಳ ಆ ಮರ ಕಾಡಿನ ಗದ್ದೆ ಬೆದ್ದಲೊಳಗಾದ ಭೂಮಿಯೊಳಗೆ ತೆಂಗು ಕವುಂಗು ಮುಖ್ಯವಾದ ಸಮಸ್ತ ಫಲವೃಕ್ಷಗಳನ್ನೂ ಯಿಕ್ಕಿಕೊಂಡು **ಕೆರೆಯ ಕಟ್ಟಿಕೊಂಡು ಕಾಲುವೆಯನ್ನೂ ತಂದುಕೊಂಡು** ಸಂತಾನ ಗಾಮಿಯಾಗಿ ಭೋಗಿಸುವುದು ಎಂದು ಆದೇಶವನ್ನು ನೀಡಿ ಶಾಸನವನ್ನು ನೀಡಿರುತ್ತಾರೆ.[೨೯] ಮೂರನೇ ವೀರಬಲ್ಲಾಳನ ಕಾಲದಲ್ಲಿ ಅಂಕೆಯ ದಂಡನಾಯಕನ ಅಳಿಯನಾದ ಮಾಚಯ ದಂಣ್ಣಾಯಕನ ತಾಯಿ ಅವ್ವೆಮಾಯಕ್ಕನು **ಮಾಚಸಮುದ್ರವೆಂಬ ಕೆರೆಯನ್ನು ೩೫೦೦ ಗದ್ಯಾಣಗಳನ್ನು** ವೆಚ್ಚಮಾಡಿ ಕಟ್ಟಿಸಿರುತ್ತಾಳೆ.[೩೦] ಶ್ರೀಮನ್ಮಹಾವಡ್ಡಬ್ಯವಹಾರಿ ದೇವಿಸೆಟ್ಟಿಯು **ಬಾಯಿಕಲ್ಲಿಗೆ ಸೇರಿದಂತ ಕೆರೆಯನ್ನು ೨೦ ಹೊನ್ನನು** ಕೊಟ್ಟು ಕಟ್ಟಿಸಿರುತ್ತಾನೆ.[೩೧] ಹರಿಗಲ ಅಬ್ಬರಾಜನ ಮಗನಾದ ಪೆರಿರಾಜನು ಶ್ರೀ ಭಂಡಾರದ ತಿರುವಿಡಿಯಾಟ ಸೀಮೆಯೊಳಗೆ ಕದಳಗೆರೆಯು ಹೊಸಕೆರೆಯೂ, ಕ್ರಿಷ್ಣದೇವವೊಡೆಯರ ಕೆರೆಯೂ ವೊಡೆದು ಖಿಲವಾಗಿ ಯಿರಲಾಗಿ **ಆ ವೊಡೆದ ಕೆರೆಗಳನ್ನು ೧೫೦ ಗದ್ಯಾಣಗಳನ್ನು ವೆಚ್ಚಮಾಡಿ** ಕಟ್ಟಿಸಿದನು ಎಂದು ತಿಳಿಸುವುದಲ್ಲದೆ, ಕೃಷ್ಣ ದೇವರಾಯ ಹೆಸರಿನ ಕೆರೆ ಇದ್ದುದನ್ನು ಮೇಲುಕೋಟೆ ಶಾಸನವು ದಾಖಲಿಸಿದೆ.[೩೨]

ಸಾಮಾನ್ಯವಾಗಿ ಶಾಸನಗಳಲ್ಲಿ ಕೆರೆಯನ್ನು ಕಟ್ಟಿಸಿದವರಿಗೆ ಭೂಮಿಯನ್ನು ನೀಡಿರುವುದನ್ನೋ ಅಥವಾ ತೆರಿಗೆಯನ್ನು ಮನ್ನಾ ಮಾಡಿರುವುದನ್ನೋ ಕಾಣುತ್ತೇವೆ. ಆದರೆ ಮೇಲ್ಕಂಡ ಮೇಲುಕೋಟೆಯ (ಕ್ರಿ.ಶ.೧೫೩೪) ಶಾಸನದಲ್ಲಿ ಎರಡು ಕೆರೆಗಳನ್ನು ದುರಸ್ತಿಗೊಳಿಸಿದ ಪೆರಿರಾಜನಿಗೆ, ಶ್ರೀಭಂಡಾರದವರು ದೇವರ ಅಮ್ರಿತಪಡಿಯ ಪ್ರಸಾದವನ್ನು ಆಚಂದ್ರಸ್ಥಾಯಿಯಾಗಿ ಪುತ್ರ ಪೌತ್ರಪರಂಪರೆಯಾಗಿ ಉಳಿಯದೆ ನಡೆಸಿಬಹೆವು, ರಾಜಿಕದೇವಿಕವಾಗಿ ಕೆರೆಯಿಂದ ಭೋಗ ತಪ್ಪಿದರೂ ನಿಂಮ

ಧರ್ಮದ ಅವಸರವನೂ ವುಳಿಯದೆ ಶ್ರೀ ಭಂಡಾರದಲಿ ನಡೆಸಿ ಅಂಶಕೆ ಬಿಟ್ಟುಕೊಟ್ಟ ಪ್ರಸಾದವನು ನಿಮಗೆ ಉಳಿಯದೆ ನೀವು ಆರಿಗೆ ಕಟ್ಟು ಮಾಡಿಕೊಟ್ಟರಿ ಅವರಿಗೆ ಆಚಂದ್ರಾರ್ಕ ಸ್ಥಾಯಿಯಾಗಿ ನಡೆಸಿ ಬಹೆವು ಎಂದು ಶಾಸನವನ್ನು ಬರೆಸಿರುವುದು ವಿಶೇಷವಾಗಿದೆ.

ಲಕ್ಷ್ಮಿದೇವಿಯ ಮಗನಾದ ಒಂದನೇ ನರಸಿಂಹನು ದೋರಸಮುದ್ರದಿಂದ ರಾಜ್ಯವಾಳುತ್ತಿದ್ದ ಸಂದರ್ಭದಲ್ಲಿ ಹೊಯ್ಸಳ ಬೋವ ಮತ್ತು ಮಾದಿಕವ್ವೆಯರ ಮಗನಾದ ಬಿಟ್ಟಿಬೋವನು **ಹೊಯ್ಸಳ ಸಮುದ್ರದ ಬಡಗಣ ಕೋಡಿಯಲು ಕಲ್ಲು ತುಂಬಿ ಲೇಸಾಗಿ ಗೆಯ್ಸಿ ಕೆರೆಯ ಹಳೆವೊಡವುಗಳಂ ಹೂಳಿಸಲು** ಎಂದು ಹೊಯ್ಸಳ ಕೆರೆಗೆ ಕಲ್ಲಿನ ತಡೆಯನ್ನು ನಿರ್ಮಿಸಿ ದುರಸ್ತಿ ಮಾಡಿಸಿದ (ರಿವೆಟ್‌ಮೆಂಟ್) ಎಂದು ಕ್ರಿ.ಶ. ೧೧೬೪ರ ಶಾಸನವು ತಿಳಿಸಿದೆ.[೩೩]

ಹೊಯ್ಸಳ ಅರಸನಾದ ವಿಷ್ಣುವರ್ಧನನನ್ನು ಶಾಸನಗಳಲ್ಲಿ ಹೊಯ್ಸಳದೇವ, ಹೊಯ್ಸಳ ಭೂಭುಜ, ಹೊಯ್ಸಳ ಕುಳತಿಲಕ ಇತ್ಯಾದಿಯಾಗಿ ಕರೆದಿರುವುದರಿಂದ, ಈ ಕೆರೆಯನ್ನು ವಿಷ್ಣುವರ್ಧನನು ಕಟ್ಟಿಸಿರಬಹುದು ಅಥವಾ ಇವನ ಹೆಸರಿನಲ್ಲಿ ಅನ್ಯರು ಕಟ್ಟಿಸಿರಬಹುದು ಎಂದು ಊಹಿಸಬಹುದಾಗಿದೆ. ಚೋಳರ ಕಾಲದಲ್ಲಿ ನಿರ್ಮಾಣ ವಾಯಿತೆಂದು ಹೇಳಲಾಗುವ ಬಂಗಾರಪೇಟೆ ತಾಲ್ಲೂಕಿನ ಪ್ರಸಿದ್ಧ **ರಾಮಸಾಗರದ ಕೆರೆಯು,** ಅದೇ ಊರಿನಲ್ಲಿರುವ ಒಂದನೇ ದೇವರಾಯನ ಶಾಸನದ ಪ್ರಕಾರ ಬುಕ್ಕರಾಯನ ಕಾಲದಲ್ಲಿ **ಬುಕ್ಕಸಾಗರ ಎಂಬ ಹೆಸರಿನಲ್ಲಿ** ನಿರ್ಮಾಣ ವಾಯಿತೆಂದು ತಿಳಿಯುತ್ತದೆ. ಮುರಾರ್ಜಿ ಹಿಂದೂರಾವ್ ಘೋರ್ಪಡೆಯ (೧೭೫೧–೧೭೮೩) ಕಾಲದಲ್ಲಿ ದುರಸ್ತಿ ಗೊಂಡು ಈ ಕೆರೆಯು ತನ್ನ ಮೂಲ ಹೆಸರನ್ನೇ ಉಳಿಸಿ ಕೊಂಡಿತಾದರೂ ನಂತರ ದಿವಾನ್ ಪೂರ್ಣಯ್ಯ (೧೮೦೦–೧೮೧೧)ನವರು ಜೀರ್ಣವಾಗಿದ್ದ ಕೆರೆ ಏರಿಯನ್ನು ಜೀರ್ಣೋದ್ಧಾರ ಮಾಡಿಸಿದಾಗ ರಾಮಸಾಗರ ಎಂಬ ಹೆಸರಿನಿಂದ ಕರೆಯಲಾಗಿದೆ.[೩೪]

ಕೆರೆಗಳನ್ನು ಯಾರೇ ಕಟ್ಟಿಸಲಿ ಅದರ ಯೋಗಕ್ಷೇಮದ ಹೊಣೆಯನ್ನು ಆ ಊರಿನ ಜನರು ಹೊರುತ್ತಿದ್ದರು. ಅವುಗಳ ದುರಸ್ತಿಗೆ ಭೂಮಿಗಳನ್ನು ಮತ್ತು ಕಾಣಿಕೆಗಳನ್ನು ಪ್ರಜೆಗಳು ನೀಡುತ್ತಿದ್ದರು. ಇದನ್ನು ನೋಡಿದರೆ ಕೆರೆಯು ರಕ್ಷಣೀಯವಾದ ಅಮೂಲ್ಯ ವಸ್ತು ಎಂದು ಅವರು ಭಾವಿಸಿದ್ದುದು ವ್ಯಕ್ತವಾಗುತ್ತದೆ. ಆಗಿಂದಾಗ್ಗೆ ಕೆರೆಗಳನ್ನು ದುರಸ್ತಿ ಮಾಡಿಸಲು ಬಿಟ್ಟುಕೊಡುತ್ತಿದ್ದ ಭೂಮಿಯನ್ನು ಬಿತ್ತುವಟ್ಟ ಎಂದು ಶಾಸನಗಳು ಕರೆದಿವೆ. ಆಗಾಗ್ಗೆ ಕೆರೆಯಲ್ಲಿ ಸೇರಿಕೊಳ್ಳುತ್ತಿದ್ದ ಮಣ್ಣನ್ನು ಬಂಡನ್ನು ತೆಗೆಯಿಸುವುದೇ ಕೆರೆಗೆ ಮಾಡಬೇಕಾಗಿದ್ದ ಮುಖ್ಯ ದುರಸ್ತು ಕಾರ್ಯವಾಗಿತ್ತು.

ಕ್ರಿ.ಶ. ೭೯೮ರಲ್ಲಿ[೩೫] ನೊಳಂಬ ಮಹೇಂದ್ರನು **ಒಂದು ಕೆರೆಯನ್ನು ಕಟ್ಟಿಸಿ ೫ ಖಂಡುಗ ಭೂಮಿಯನ್ನು** ದತ್ತಿ ಬಿಟ್ಟಿರುತ್ತಾನೆ. ಕ್ರಿ.ಶ.೯ನೆಯ ಶತಮಾನದ ಶಾಸನವು ಪೊಲೆತಮ್ಮನು ಕಟ್ಟಿಸುವ ಕೆರೆಗೆ, **ಸಾಗುವಳಿಗೆ ಯೋಗ್ಯವಾದ ಭೂಮಿಯನ್ನು** ದಾನ ನೀಡಿರುವುದನ್ನು ತಿಳಿಸಿದರೆ,[೩೬] ಕ್ರಿ.ಶ. ೯೬೭ರ ಅಮೋಘವರ್ಷನ ಕಾಲದಲ್ಲಿ ಮೊರಿಯರ ಕಲೆ ಭಿಟ್ಟಯ್ಯನು **ಕೆರೆ ಕಟ್ಟಲು ಜಮೀನನ್ನು** ದಾನ ನೀಡಿದ್ದನು,[೩೭] ಒಂದು ಊರಿನ ಬ್ರಾಹ್ಮಣರು ತಮ್ಮ ಊರಿನ **ವಿವಾಹ, ಉಪನಯನ** ಮುಂತಾದುವುಗಳಿಂದ **ಬರುವ ಹಣವನ್ನೂ,** ಪ್ರಾಯಶ್ಚಿತ್ತವಾಗಿ **ಬರುವ ಹಣವನ್ನೂ** ಕೆರೆಗೆ ಬಿಟ್ಟಿರುತ್ತಾರೆ. (IA.XII.p.222, 929-30AD).[೩೮] ಬೂದನೂರಿನ ಗಾವುಂಡ ಗಳಾದ ಚಾವಯ್ಯ ಮತ್ತು ಜಯಮ್ಮ ಎಂಬುವವರು ಸೋವರಾಸಿ ಪಂಡಿತ ಕಟ್ಟಿಸಿದ **ಕೆರೆಗೆ ಹನ್ನೆರಡು ಕೊಳಗ ಬೆಳೆವ ಭೂಮಿಯನ್ನು ಬಿತ್ತು ವಾಟವಾಗಿ** ದಾನ ನೀಡಿರುತ್ತಾರೆ.[೩೯] ಚಾವುಂಡಯ್ಯ ಎನ್ನುವವನು ಕಟ್ಟಿಸಿದ ಕೆರೆಗೆ ಬಿಟ್ಟ ಭೂಮಿಯನ್ನು **ಆ ಊರಿನ ಜನರು ಪ್ರತಿ ಪಾಲಿಸುತ್ತಿದ್ದರು** (BK.I.I.ii 151, 1102 AD).[೪೦] ಕೃಷ್ಣಗಿರಿ ತಾಲ್ಲೂಕಿನ ಕ್ರಿ.ಶ. ೧೪೮೬ರ ಶಾಸನವು[೪೧] ಪೌಢದೇವರಾಯನ ಆಳ್ವಿಕೆಯ ಕಾಲದಲ್ಲಿ ಲಖಂಣರಸನು ಅವಧಾನಿ ಶ್ರೀಕಂಠಭಟ್ಟನಿಗೆ ದೇವರಾಯಸಮುದ್ರದ ಕೆಳಗಿನ ಅಡಕೆಮರ ಮತ್ತು ಬಾಳೆಗಿಡಗಳನ್ನು ಬಿತ್ತುವಟ್ಟವಾಗಿ ದಾನ ನೀಡಿದ ವಿಷಯವನ್ನು ತಿಳಿಸಿದರೆ, ತೊಣ್ಣೂರಿನ ಶಾಸನವು[೪೨] ಪ್ರತಾಪ ಚಕ್ರವರ್ತಿ ವೀರನರಸಿಂಹನು ಹರಹಿನ ಕಾಲಂ ವರ್ಷಂಪ್ರತಿತಿದ್ದುವಲ್ಲಿಗೆ ಕುರುವಂಕನಾಡ ಹೊಳೆಯ ಸುಂಕದಿಂ **ಗದ್ಯಾಣವರುವತ್ತು ನಾಲ್ಕಂ** ತೊಂಡನೂರಿನ ಮಹಾಜನಗಳಿಗೆ ಬಿಟ್ಟು ಕೊಟ್ಟಿರುತ್ತಾನೆ.

ಶ್ರೀಮಂತ ಜನರು ಅರಸನ ಅನುಮತಿಯೊಂದಿಗೆ ಕೆರೆ, ಗ್ರಾಮ, ಕಾಲುವೆಗಳನ್ನು ನಿರ್ಮಿಸುತ್ತಿದ್ದರು ಮತ್ತು ಅಂದಿನ ಅರಸರು ನೀರಾವರಿ ಸೌಲಭ್ಯವನ್ನು ಒದಗಿಸುವ ಸಂದರ್ಭದಲ್ಲಿ ಪ್ರಜೆಗಳ ಹಿತರಕ್ಷಣೆ ಬಗ್ಗೆ ವಿಶೇಷ ಕಾಳಜಿ ವಹಿಸುತ್ತಿದ್ದರು ಎಂದು ಮನದಟ್ಟಾಗುತ್ತದೆ. ಬುಕ್ಕಣ್ಣ ಒಡೆಯನ ಆಳ್ವಿಕೆಯನ್ನು ಉಲ್ಲೇಖಿಸುವ ರುದ್ರಪಟ್ಟಣದ ಶಾಸನವೊಂದು[೪೩] ನೀರಾವರಿಗೆ ಸಂಬಂಧಿಸಿದ ಕುತೂಹಲಕಾರಿಯಾದ ಅಂಶವೊಂದನ್ನು ತಿಳಿಸುತ್ತದೆ. ನಾನಾದೇಶೀಯ (ವ್ಯಾಪಾರಿ ಸಂಘದ) ಪ್ರಮುಖನಾದ ಮಹದೇವಣ್ಣ ಎಂಬುವನು ಅರಸನ ಅನುಮತಿ ಪಡೆದು ಗ್ರಾಮವೊಂದನ್ನು ಲಕ್ಷ್ಮೀಪುರವಾಗಿ ಪರಿವರ್ತಿಸಿ ಕಾಲುವೆಯೊಂದನ್ನು ತೋಡಿಸುತ್ತಾನೆ. ಈ ಕಾಲುವೆಯು ಮಾವನೂರು, ಅಲ್ಲಾಳಪಟ್ಟಣ ಮುಂತಾದ ಗ್ರಾಮಗಳಿಗೆ ಸೇರಿದ ಜಮೀನಿನಲ್ಲಿ ಸಾಗುವುದರಿಂದ

ಹುಕ್ಕಣವೊಡೆಯರು ತಮ್ಮ ಕುಮಾರ ಬುಕ್ಕಣ್ಣವೊಡೆಯರನೂ ಕರದು ಮಹದೇವರಸರು ಮಾಡುವ ಲಕ್ಷ್ಮೀಪುರದ ರಾಜಕಾಲುವೆಗೆ ನಿನ್ನ ಚಂಗನಾಡೊಳಗಣ ಮಾವನೂರು, ನವಿಲೆ.... ಅಲ್ಲಾಳಪಟ್ಟಣದ ಭೂಮಿಯೊಳಗೆ ಬಹ ಲಕ್ಷ್ಮೀಪುರದ ಕಾಲುವಿಗೆ ಕಟ್ಟ ಕಟ್ಟೆಗೆ ಕಲುಗೂಡು ಗೋಲುಗಳ ಮೊರಡಿಗಳ ಕೊಣಂಗಡ ಮೇಹಿನ ಬಲಕ್ಕೆ ಕಲ್ಲುನೆಟ್ಟ ಆ ಕಟ್ಟೆಯ ಬಡಗಣ ಹೊಲ, ಮೊದಲಾಗಿ ಆ ಕಾಲುವೆಯ ಪಾರಿಶ್ವದಲ್ಲಿ ಕಲ್ಲು ನೆಟ್ಟುಕೊಟ್ಟು ಪನಬಕೊಡಗಿ...ಹವನೂ ಮಾಡಿಕೊಟ್ಟನ್ನು..... ಎಂದು ಆಜ್ಞೆ ನೀಡಿದಾಗ ಬುಕ್ಕಣ್ಣವೊಡೆಯನು ತನ್ನ ಪ್ರಧಾನಿ ಸೋವಪ್ಪನಿಗೂ ಅರಸನ ಆಜ್ಞೆಯನು ತಿಳಿಸಿ ಪರಿಶೀಲಿಸಲು ಆಣತಿ ನೀಡುತ್ತಾನೆ. ಸೋವಪ್ಪನು ಗ್ರಾಮಾಧಿಕಾರಿಗಳ ಜೊತೆಗೂಡಿ ಕಾಲುವೆಯನ್ನು ಪರಿಶೀಲಿಸಿದುದೇ ಅಲ್ಲದೆ ತನಗೆ ಸೇರಿದ ಸ್ವಲ್ಪ ಭೂಮಿಯನ್ನು ಬಿಟ್ಟುಕೊಟ್ಟು, ಅದಕ್ಕೆ ಬದಲಾಗಿ ಕಾಲುವೆ ಕೆಳಗಿನ ಕೆಲವು ಪ್ರದೇಶಗಳನ್ನು ಪಡೆಯುತ್ತಾನೆ. ಈ ವಿವರದಲ್ಲಿ ಊರಿನೊಳಗೆ ಬರುವ ಕಾಲುವೆಗೆ ಅಕ್ಕ ಪಕ್ಕದಲ್ಲಿ ಕಲ್ಲಿನ ಗೋಡೆಯನ್ನು ನಿರ್ಮಿಸಿಕೊಡುವಂತೆ ಆದೇಶಿಸಿರುವುದನ್ನು ಗಮನಿಸಿದಾಗ, ಈ ಗೋಡೆಗಳು ಇಲ್ಲದಿದ್ದ ಪಕ್ಷದಲ್ಲಿ ಕಾಲುವೆಯು ತುಂಬಿ ಹರಿದಾಗ ನೀರು ಊರಿನೊಳಗೆ ಹರಿದು ಆ ಊರಿನ ಜನರ ಮನೆಗಳು ಹಾಗೂ ಮನೆಯಲ್ಲಿ ದಾಸ್ತಾನು ಮಾಡಿರುವ ಧಾನ್ಯಗಳು ನಾಶವಾಗುವ ಸಂಭವವಿದ್ದುದರಿಂದ ಮುನ್ನೆಚ್ಚರಿಕೆ ಕ್ರಮವನ್ನು ತೆಗೆದುಕೊಂಡಿರುವುದು ಆಗಿನ ಕಾಲದಲ್ಲಿನ ಅರಸರ ಮುಂದಾಲೋಚನೆಯನ್ನು ಸೂಚಿಸುತ್ತದೆ.

ಪ್ರಾಚೀನ ಕಾಲದಲ್ಲಿ ಗ್ರಾಮಗಳಿಗೆ ವ್ಯಕ್ತಿಯ ಹೆಸರಿನ ಮುಂದೆ ಪುರ, ಪಟ್ಟಣ ಎಂದು ಸೇರಿಸಿ ಹೆಸರಿಸುತ್ತಿದ್ದರು. ಹಾಗೆಯೇ ಕೆರೆಗಳನ್ನು ಕಟ್ಟಿಸಿದಾಗ ವ್ಯಕ್ತಿಯ ಹೆಸರಿನ ಜೊತೆಗೆ ಕೆರೆ ಎಂದಲ್ಲದೆ ಸಾಗರ, ಸಮುದ್ರ, ಅಂಬುಧಿ ಎಂದೂ ಸೇರಿಸಿ ಹೆಸರಿಸುತ್ತಿದ್ದರು. ಸಾಮಾನ್ಯವಾಗಿ ಜಲವಸತಿ ಇದ್ದಲ್ಲಿ ಜನವಸತಿ ನಿರ್ಮಾಣವಾಗುವುದು ಸಹಜ ಪ್ರಕ್ರಿಯೆ. ಹೀಗೆ ಜನವಸತಿಯು ಹೆಚ್ಚಾಗಿ ಅದು ಗ್ರಾಮವಾದಾಗ ಅಲ್ಲಿನ ಜನರು ತಮ್ಮ ಗ್ರಾಮವನ್ನು ಅಲ್ಲಿದ್ದ ಕೆರೆಯ ಹೆಸರಿನಲ್ಲಿಯೇ ಗುರುತಿಸಿಕೊಂಡಿರುವುದು ಕಂಡುಬರುತ್ತದೆಯಲ್ಲದೆ, ಗ್ರಾಮಗಳ ಹಳೆಯ ಹೆಸರುಗಳನ್ನು ಬದಲಾಯಿಸಿ ಕೆರೆಗಳ ಹೆಸರಿನಿಂದಲೇ ಕರೆದಿರುವುದೂ ತಿಳಿದುಬರುತ್ತದೆ. **ಬುಕ್ಕಸಾಗರದ ಬಾಚರ್ಸನ ಮಕ್ಕಳು**[೪೪] ಸುಮತಿನಾಥದೇವರ ಬಸದಿಗೆ ದಾನ ನೀಡಿರುವ ವಿಷಯುವನ್ನು ಪಿರಿಯಾಪಟ್ಟಣದ ಶಾಸನ ತಿಳಿಸುತ್ತದೆ. **ಬುಕ್ಕಸಾಗರದಲ್ಲಿದ್ದ ಹಂಪೆ ಮಠದಲ್ಲಿನ ಜಂಗಮರಿಗೆ**[೪೫] ಆಹಾರದಾನ ಮಾಡುವ ಸಲುವಾಗಿ ವೀರಶೈವ ಗುರು ಸಿದ್ಧ ಬಸವರಾಜದೇವನಿಗೆ ಗಂಗಾವತಿ ಸೀಮೆಯ ಕಲ್ಲುಗುಡಿ ಗ್ರಾಮವನ್ನು ದಾನ ನೀಡಿರುವುದಾಗಿ ಹೊಸಪೇಟೆಯ ಶಾಸನ ತಿಳಿಸುತ್ತದೆ.

ಮೇಲಿನ ಪಿಯಾಪಟ್ಟಣ ಮತ್ತು ಹೊಸಪೇಟೆಯ ಶಾಸನಗಳಲ್ಲಿ ಬುಕ್ಕಸಾಗರದ ಬಾಚರ್ಸನ ಮಕ್ಕಳು ಹಾಗೂ ಬುಕ್ಕಸಾಗರದಲ್ಲಿದ್ದ ಹಂಪೆ ಮಠದಲ್ಲಿನ ಎಂಬ ಬಳಕೆಯನ್ನು ಗಮನಿಸಿದಾಗ **ಬುಕ್ಕಸಾಗರ ಎಂಬುದು ಗ್ರಾಮವನ್ನೇ ಸೂಚಿಸುತ್ತದೆ**. ಹಾಗೆಯೇ ಕಡೂರು ತಾಲ್ಲೂಕು ಚಿಕ್ಕಬುಕ್ಕಸಾಗರ, ದೊಡ್ಡಬುಕ್ಕಸಾಗರ, ಆನೇಕಲ್ ತಾಲ್ಲೂಕಿನ ಬುಕ್ಕಸಾಗರ, ಹೊಸದುರ್ಗದ ಬಲ್ಲಾಳಸಮುದ್ರ ಇತ್ಯಾದಿಗಳನ್ನು ಉದಹರಿಸಬಹುದು.

ಹಂಪಿಯ ವಿಠಲ ದೇವಾಲಯದ ಬಳಿ ಶಿಥಿಲ ಮಂಟಪದಲ್ಲಿರುವ ಕ್ರಿ.ಶ.೧೫೪೫ರ ತೆಲುಗು ಭಾಷೆಯ ಶಾಸನವು ಕಂದನವ್ರೋಲಿ ಕಂದಾಳ ಶ್ರೀರಂಗಾಚಾರ್ಯುಲ ಶಿಷ್ಯುಲಯಿನ ಶ್ರೀಮನ್ ಮಹಾಮಂಡಳೇಶ್ವರ ಸೋಮವಂಶಂ ಜಂಬಲದಿನ್ನೆ ಶ್ರೀರಂಗರಾಜುಂಗಾರಿ ಕುಮಾರುಂಡು ಚಿಕ್ಕರಾಜುಗಾರು ಯಿಚ್ಚಿನ ಧರ್ಮಶಾಸನ ಕ್ರಮಮೆಟ್ಲನ್ನನು ಗುಡ್ಡಗಂಗಾವತಿ ಶಿಮಲೋನಿ **ಕೆರೆಹಳ್ಳಿಕಿ ಪ್ರತಿನಾಮಮಯಿನ ಅಚ್ಚುತರಾಯಸಮುದ್ರಂ ಅನೇಟೆ**ಗ್ರಾಮಮಂದು.[೪೬] ಎಂದು ದಾಖಲಿಸಿದೆ.

ಈ ಶಾಸನದಲ್ಲಿ ಮೇಲೆ ತಿಳಿಸಿದಂತೆ ಕೆರೆ ನಿರ್ಮಾಣವಾದ ನಂತರ ಪಕ್ಕದಲ್ಲೊಂದು ಗ್ರಾಮವಾಗಿ ಅದನ್ನು ಕೆರೆಹಳ್ಳಿ ಎಂದು ಕರೆದಿರಬಹುದಾಗಿದ್ದು, ಈ ಕೆರೆಹಳ್ಳಿ ಎಂಬ ಗ್ರಾಮಕ್ಕೆ ಅಚ್ಚುತರಾಯಸಮುದ್ರ ಎಂದು ಪುನರ್ ನಾಮಕರಣ ಮಾಡಲಾಗಿದೆ. ಇದು ಕೆರೆಯ ಹೆಸರನ್ನೇ ಸೂಚಿಸುತ್ತದೆ.

ಹೀಗೆ ಅದೇ ಕಾಲದಲ್ಲಿ ಅಥವಾ ನಂತರದಲ್ಲಿ ಗ್ರಾಮಗಳನ್ನು ಕೆರೆಗಳ ಹೆಸರಿನಿಂದಲೇ ಗುರುತಿಸಿರುವುದನ್ನು ನಾವು ಗಮನಿಸಬಹುದು. ಕೆರೆಗಳು ನಾಶವಾಗಿದ್ದರೂ.. ಈ ರೀತಿಯಿಂದಲಾದರೂ ಇದ್ದ ಕೆರೆಗಳನ್ನು ಪ್ರತಿನಿಧಿಸಲು ಕೆಲವಾರು ಗ್ರಾಮಗಳಾದರೂ ಜೀವಂತವಾಗಿವೆ.

ಈ ಅವಲೋಕನದಿಂದ ರೈತನು ಬೆಳೆದರೆ ಲೋಕವು ಬದುಕುತ್ತದೆ ಎಂಬ ಸತ್ಯವನ್ನು ಕಂಡುಕೊಂಡ ಹಿಂದಿನ ಕಾಲದ ಅರಸರು, ಅಧಿಕಾರಿಗಳು ಹಾಗೂ ಸಾಮಾನ್ಯರು ಕೃಷಿ ಜನಾಂಗದ ಅಭಿವೃದ್ಧಿಗಾಗಿ ಮತ್ತು ಪ್ರಜೆಗಳ ಹಿತಕ್ಕಾಗಿ ಹಾಗೂ ಸಾಮ್ರಾಜ್ಯದ ಯಶೋಭಿವೃದ್ಧಿಗಾಗಿ ಅನೇಕ ಕೆರೆ, ಕಟ್ಟೆ ಮತ್ತು ಕಾಲುವೆಗಳನ್ನು ನಿರ್ಮಿಸಲು ಶ್ರಮಿಸುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಡಾ. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ೩೬೪.

೨. ಡಾ. ಬಿ. ರಾಜಶೇಖರಪ್ಪ, ಇತಿಹಾಸ ಕಥನ, ಪುಟ ೩೪.

೩. ಡಾ. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ೩೬೭.

೪. ಎ.ಕ. ೭, ಮಂಡ್ಯ ಶಾಸನ ಸಂ. ೩೫, ಕ್ರಿ.ಶ. ೭೧೩.

೫. T.M. Srinivasan, Irrigation & Water supply - South India 200 BC-1600 AD. p. 36.

೬. G.S. Dikshit, G.R. Kuppuswamy: Tank Irrigation in Karnataka-A historical survey-p. 67.

೭. ಎ.ಕ. ೧೦, ಗೌರಿಬಿದನೂರು, ಶಾಸನ ಸಂ. ೬.

೮. C.T.M. Kotraiah, Irrigation system under Vijayanagara Empire, P. 44.

೯. ಅದೇ ಪುಟ ೬೬–೬೭.

೧೦. ಎ.ಕ. ೯, ಸಕಲೇಶಪುರ, ಶಾಸನ ಸಂ. ೧೩೬.

೧೧. ಎ.ಕ. ೭, ಸಕಲೇಶಪುರ, ಶಾಸನ ಸಂ. ೧೪೯.

೧೨. ಕರ್ನಾಟಕ ವಿಶ್ವವಿದ್ಯಾನಿಲಯ, ಶಾಸನ ಸಂ. ೪, ತಮಿಳು ನಾಡಿನ ಕನ್ನಡ ಶಾಸನಗಳು, ಧರ್ಮಪುರಿ, ಶಾಸನ ಸಂ. ೯೩.

೧೩. ಎ.ಕ. X, ನೇರ್ಲಿಗೆ.

೧೪. ಪೂರ್ವೋಕ್ತಃ C.T. MKotraiah.

೧೫. ಎ.ಕ. ೪, ಶಾಸನ ಸಂ. ೫.

೧೬. ಎ.ಕ. XII, ತುಮಕೂರು ಜಿಲ್ಲೆ, ಶಾಸನ ಸಂ. ೩೯, ಕ್ರಿ.ಶ. ೧೩೮೭.

೧೭. ಎ.ಕ. ೭, ನಾಗಮಂಗಲ, ಶಾಸನ ಸಂ. ೮೨, ೮೩.

೧೮. ಎ.ಕ. ೮, ಅರಕಲಗೂಡು, ಶಾಸನ ಸಂ. ೩೯.

೧೯. ಎ.ಕ. ೧೧, ಶಾಸನ ಸಂ. ೧೨.

೨೦. ಎ.ಕ. X, ಶಾಸನ ಸಂ. ೫೩.

೨೧. ಎ.ಕ. ೭, ಮಳವಳ್ಳಿ, ಶಾಸನ ಸಂ. ೮೪.

೨೨. ಅದೇ ಮದ್ದೂರು, ಶಾಸನ ಸಂ. ೯೩.

೨೩. ಅದೇ ಶಾಸನ ಸಂ. ೮೭.

೨೪. ಅದೇ ಶಾಸನ ಸಂ. ೧೧೦.

೨೫. ಅದೇ ತಮಿಳು ನಾಡಿನ ಕನ್ನಡ ಶಾಸನಗಳು, ಕುಮ್ಮಲಂ, ಶಾಸನ ಸಂ. ೫೭.

೨೬. ಅದೇ ಹಂಪಿ ಶಾಸನಗಳು, ಮಗಿಮಾವಿನಹಳ್ಳಿ, ಶಾಸನ ಸಂ. ೪೩.

೨೭. T.M. Srinivasan, Irrigation & Water supply, South India 200 BC-1600, AD. p.36.

೨೮. ಎ.ಕ. ೯, ಬೇಲೂರು, ಶಾಸನ ಸಂ. ೪೩೮.

೨೯. ಎ.ಕ. ೭, ಮಂಡ್ಯ ಶಾಸನ ಸಂ. ೫೬, ಕ್ರಿ.ಶ. ೧೨೭೬.

೩೦. ಎ.ಕ. ೮, ಹಾಸನ, ಶಾಸನ ಸಂ. ೨೦೬, ಕ್ರಿ.ಶ. ೧೩೧೪.

೩೧. ಎ.ಕ. ೯, ಬೇಲೂರು, ಶಾಸನ ಸಂ. ೩೯೪, ಕ್ರಿ.ಶ. ೧೩೧೫.

೩೨. ಎ.ಕ. ೬, ಮೇಲುಕೋಟೆ, ಶಾಸನ ಸಂ. ೧೩೮, ಕ್ರಿ.ಶ. ೧೫೩೪.

೩೩. ಎ.ಕ. ೯, ಬೇಲೂರು, ಶಾಸನ ಸಂ. ೧೩೬.

೩೪. G.S. Dikshit, G.R. Kuppuswamy: Tank Irrigation in Karnataka-A historical survey-Apendix-3, p. 253.

೩೫. ಅದೇ ತಮಿಳುನಾಡಿನ ಕನ್ನಡ ಶಾಸನಗಳು, ಶಾಸನ ಸಂ. ೯೨, ಕ್ರಿ.ಶ. ೮೭೮.

೩೬. ಅದೇ ಹೊಸೂರು, ಶಾಸನ ಸಂ. ೧೩೨.

೩೭. ARSIE, BK. No. 36, Hubli.

೩೮. ಅದೇ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ೩೬೮.

೩೯. ಎ.ಕ. ೭, ಮಂಡ್ಯ ಶಾಸನ ಸಂ. ೫೪, ಕ್ರಿ.ಶ. ೧೦-೧೧ನೆಯ ಶತಮಾನ.

೪೦. ಅದೇ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ೩೬೮.

೪೧. ಅದೇ ತಮಿಳುನಾಡಿನ ಕನ್ನಡ ಶಾಸನಗಳು, ಕುಪ್ಪಂ, ಶಾಸನ ಸಂ. ೪೩.

೪೨. ಎ.ಕ. ೬, ಪಾಂಡವಪುರ, ಶಾಸನ ಸಂ. ೫೬.

೪೩. ಎ.ಕ. ೮, ಅರಕಲುಗೂಡು, ಶಾಸನ ಸಂ. ೧೦೭, ಕ್ರಿ.ಶ. ೧೩೫೭.

೪೪. ಅರೇನಹಳ್ಳಿ, ಶಾಸನ ಸಂ. ೧೩೦, ಕ್ರಿ.ಶ. ೧೪೧೭.

೪೫. ARSIE, 1959-60, Hospet Tq. 1612 AD.

೪೬ ಕನ್ನಡ ವಿಶ್ವವಿದ್ಯಾನಿಲಯ, ಶಾಸನ ಸಂ ೩, ಹಂಪಿ, ಶಾಸನ ಸಂ. ೨೦೫.

೩೨

ಮಂಡ್ಯ ಜಿಲ್ಲೆಯ ಹೊಯ್ಸಳರ ಕಾಲದ ಶಾಸನೋಕ್ತ ಮಹಿಳೆಯರು

ಡಾ. ಎಸ್. ಶಿವರಾಮು*

ಮಂಡ್ಯ ಜಿಲ್ಲೆಯ ಶಾಸನಗಳಲ್ಲಿ ಅದರಲ್ಲೂ ವಿಶೇಷವಾಗಿ ಹೊಯ್ಸಳರ ಕಾಲಘಟ್ಟದಲ್ಲಿ ವಿವಿಧ ಹಂತದ ಮಹಿಳೆಯರು ಉಕ್ತರಾಗಿದ್ದಾರೆ. ಜಿಲ್ಲೆಯಲ್ಲಿ ಇದುವರೆಗೂ ದೊರೆತಿರುವ ಶಾಸನಗಳಲ್ಲಿ ಮಹಿಳೆಯರ ಜೀವನ, ಅವರ ವ್ಯಕ್ತಿತ್ವಗಳು ವೈವಿಧ್ಯಮಯವಾಗಿವೆ. ರಾಜ ಪರಿವಾರದ ಮಹಿಳೆಯರು, ಸಾಮಂತೆಯರು ವಿವಿಧ ಆಡಳಿತ ವರ್ಗದ ಮಹಿಳೆಯರು ಅವರು ನೀಡಿರುವ ದಾನದತ್ತಿಗಳು ಹಾಗೂ ಕೊಡುಗೆಗಳು ಜಿಲ್ಲೆಯ ಇತಿಹಾಸವನ್ನು ಶ್ರೀಮಂತಗೊಳಿಸಿವೆ. ಆ ಮೂಲಕ ಈ ನೆಲದ ಬಗೆಗೆ ಹಾಗೂ ಅವರ ಮನೆತನಗಳ ಬಗ್ಗೆ ಅವರು ತೋರಿರುವ ಅಭಿಮಾನ ಅಪ್ರತಿಮವಾದುದು ಹಾಗೂ ಸ್ಫೂರ್ತಿದಾಯಕವೂ ಆಗಿದೆ.

ಮಂಡ್ಯ ಜಿಲ್ಲೆಯ ಇದುವರೆಗೂ ಲಭ್ಯವಿರುವ ಶಾಸನಗಳಲ್ಲಿ ಸರಿಸುಮಾರು ೧೭೫ಕ್ಕೂ ಹೆಚ್ಚು ವಿವಿಧ ವರ್ಗದ ಮಹಿಳೆಯರು ಉಲ್ಲೇಖಗೊಂಡಿದ್ದಾರೆ. ಈ ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ನಾಗಮಂಗಲ ತಾಲ್ಲೂಕಿನ ಶಾಸನಗಳಲ್ಲಿ ಅತಿ ಹೆಚ್ಚು ಸ್ತ್ರೀಯರ ಉಲ್ಲೇಖವಿದೆ. ಕೆ.ಆರ್.ಪೇಟೆ, ಪಾಂಡವಪುರಗಳು ಕ್ರಮವಾಗಿ ಎರಡು ಮೂರನೇ ಸ್ಥಾನವನ್ನು ಹೊಂದಿವೆ. ಮಂಡ್ಯ, ಮದ್ದೂರು, ಮಳವಳ್ಳಿ, ಶ್ರೀರಂಗಪಟ್ಟಣ ತಾಲ್ಲೂಕಿನ ಶಾಸನಗಳಲ್ಲಿ ದೊರೆಯುವ ಮಹಿಳೆಯರ ಸಂಖ್ಯೆ ಕಡಿಮೆ ಎಂದು ಹೇಳಬಹುದಾಗಿದೆ. ಇದಕ್ಕೆ ಬೇರೆಯೇ ರಾಜಕೀಯ ಮತ್ತು ಆಡಳಿತಾತ್ಮಕ ಕಾರಣಗಳಿರಬಹುದು. ಹೊಯ್ಸಳರ ಅನೇಕ ರಾಣಿಯರು, ದಂಡನಾಯಕರು, ಮಂತ್ರಿ, ಪ್ರಧಾನಿಗಳು ಈ ಪ್ರದೇಶದಿಂದ ಹೋದವರು ಈ ಹಿನ್ನೆಲೆಯಲ್ಲಿ ಅನೇಕ ಮಹಿಳೆಯರ ವಿವರಗಳು ಇಲ್ಲಿನ ಶಾಸನಗಳಲ್ಲಿ ದೊರೆಯುತ್ತವೆ.

ನಾಗಮಂಗಲದ ಭುವನೇಶ್ವರ ದೇವಾಲಯದಲ್ಲಿರುವ ಶಾಸನ ಹೊಯ್ಸಳ ವಿಷ್ಣುವರ್ಧನನ ಪಟ್ಟದರಾಣಿ ಬಮ್ಮಲದೇವಿಯು ಕಲ್ಕುಣಿ ನಾಡಿನಲ್ಲಿದ್ದ 'ನಾಗಮಂಗಲ'ದಲ್ಲಿ ಶಂಕರನಾರಾಯಣ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ ಅರಿಕನಕಟ್ಟ ಬಾಚಿಗಟ್ಟಗಳನ್ನು ಸರ್ವಮಾನ್ಯವಾಗಿ ಸೂರ್ಯಾಭರಣಪಂಡಿತರಿಗೆ ದತ್ತಿ ನೀಡಿದ್ದನ್ನು ದಾಖಲಿಸುತ್ತದೆ. ಅಂದರೆ ಕ್ರಿ.ಶ. ೧೧೩೮ರ ವೇಳೆಗಾಗಲೇ 'ನಾಗಮಂಗಲ'ವು ಇಡಗೂರು ಗ್ರಾಮದ ವ್ಯಾಪ್ತಿಯಲ್ಲಿ ಸ್ವತಂತ್ರ ಅಗ್ರಹಾರವಾಗಿ ಜನ್ಮತಾಳಿತ್ತೆಂದು ಊಹಿಸಬಹುದು. ಈ ದೇವಾಲಯವನ್ನು ನಿರ್ಮಿಸಿದ ಬಮ್ಮಲದೇವಿಯು ಪಲ್ಲವಗೋವಿಂದರ ಹಾಗೂ ಚಾವುಂಡಬ್ಬೆಯವರ ಕುವರಿಯಾಗಿದ್ದು, ಇವಳು ಈ ಭಾಗದ ಗಣ್ಯಕುಟುಂಬಕ್ಕೆ ಸೇರಿದವಳಾಗಿರಬಹುದೆಂದು ಹಾಗೂ ಈ ಬಮ್ಮಲದೇವಿ ನಾಗಮಂಗಲ ತಾಲ್ಲೂಕಿನ ಬೊಮ್ಮಲಾಪುರ ದವಳೆಂಬ ನಂಬಿಕೆಯಿದೆ.[೧]

ಕೃಷ್ಣರಾಜಪೇಟೆ ತಾಲೂಕಿನ ಹೊಸಹೊಳಲು ಗ್ರಾಮದ ಪಾರ್ಶ್ವನಾಥ ಬಸದಿಯಲ್ಲಿ ಕ್ರಿ.ಶ. ಸುಮಾರು ೧೧೨೫ಕ್ಕೆ ಸೇರುವ ಶಾಸನವೊಂದಿದೆ. ಸಾಹಸೋತ್ತುಂಗ ಚಲದಂಕರಾಮ ಸಾಹಸಭೀಮ ದೀನಾನಾಥ ಬುಧಜನಕಲ್ಪವೃಕ್ಷ ದ್ವಿತೀಯ ಚವುಂಡಾಡಿ ಎಂಬ ಹೆಸರನ್ನು ಪಡೆದಿದ್ದ ದೋರಸಮುದ್ರದ ಪಟ್ಟಣಸ್ವಾಮಿ ಹೊಯ್ಸಳಸೆಟ್ಟಿಯಾದ ನೊಳಬಿಸೆಟ್ಟಿ ಮತ್ತು ಈತನ ಪತ್ನಿಯಾದ ಶ್ರೀ ಶುಭಚಂದ್ರ ಸಿದ್ಧಾಂತದೇವರ ಶಿಷ್ಯ ಜಿನಗಂಧೋದಕಿ ಪವಿತ್ರೀಕೃತೋತ್ತಮಾಂಗ ಆಹಾರಾಭಯ ಭೇಷಜ ಶಾಸ್ತ್ರದಾನವಿನೋದೆಯಾದ ದೇಮಿಕಬ್ಬೆಯು ತ್ರಿಕೂಟಜಿನಾಲಯವನ್ನು ಮಾಡಿಸಿ ತಮ್ಮ ಗುರುಗಳಾದ ಶುಭಚಂದ್ರ ಸಿದ್ಧಾಂತದೇವರಿಗೆ ಕೊಟ್ಟಿದ್ದರು. ಆ ಬಸದಿಗಾಗಿ ಅರುಹನಹಳ್ಳಿ ಮತ್ತು ಬಸದಿಯ ಬಡಗಲು ತೆಂಕಲುಗಳ ಭೂಮಿ, ದಾನಶಾಲೆ, ಎರಡುಗಾಣ, ಎರಡುತೋಟಗಳು, ಗಂಡಕೊಟ್ಟಭೂಮಿ, ಇವಿಷ್ಟನ್ನೂ ನೊಳಬಿಸೆಟ್ಟಿಯು ಶ್ರೀ ಶುಭಚಂದ್ರ ಸಿದ್ಧಾಂತದೇವರಿಗೆ ದತ್ತಿಯಾಗಿ ಬಿಟ್ಟುಕೊಟ್ಟನೆಂದು ಈ ಶಾಸನದಿಂದ ತಿಳಿದುಬರುತ್ತದೆ.[೨] ನಾಗಮಂಗಲದ ಅಳೀಸಂದ್ರದಲ್ಲಿರುವ ಕ್ರಿ.ಶ. ೧೧೮೪ರ ಒಂದು ಜೈನದತ್ತಿ ಶಾಸನವು ಸುದೀರ್ಘ ಶಾಸನಗಳಲ್ಲೊಂದಾಗಿದ್ದು, ಅತ್ಯಂತ

* ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು, ಮೈಸೂರು ಜಿಲ್ಲೆ–೫೭೧೩೦೧.

ಅಮೂಲ್ಯ ವಿಚಾರಗಳನ್ನು ತಿಳಿಸಿಕೊಡುತ್ತದೆ.[೩] ಹೊಯ್ಸಳ ವಂಶದ ವಿನಯಾದಿತ್ಯನ ರಾಣಿ ಕೆಳೆಯಲದೇವಿಯು ಮರಿಯಾನೆ ದಂಡನಾಯಕನನ್ನು ತನ್ನ ತಮ್ಮನಂತೆ ರಕ್ಷಿಸಿದಳು, ವಿನಯಾದಿತ್ಯ ಮತ್ತು ಕೆಳೆಯಲದೇವಿ ಇಬ್ಬರೂ ಸೇರಿ ದೇಕವ್ವೆಯನ್ನು ಅವನಿಗೆ ಮದುವೆ ಮಾಡಿಕೊಟ್ಟು ಸಿಂದಗೆರೆಯ ಪ್ರಭುತ್ವಸಹಿತ ಅವರನ್ನು ನೆಲೆಯಾಗಿಸಿದರು. ಈ ಕನ್ಯಾದಾನ ಮತ್ತು ಭೂದಾನವು ಕ್ರಿ.ಶ. ೧೦೫೪ರಲ್ಲಿ ನಡೆಯಿತು. ಕೆಳೆಯಲದೇವಿಯ ಮಗ ಎರೆಯಂಗ, ಎರೆಯಂಗ ಮತ್ತು ಏಚಲದೇವಿಯರಿಗೆ ಬಲ್ಲಾಳ, ವಿಷ್ಣು, ಉದಯಾದಿತ್ಯ- ಮೂವರು ಮಕ್ಕಳು.

ನಾಗಮಂಗಲ ತಾಲ್ಲೂಕಿನ ಬಿಂಡಿಗನವಿಲೆಯಲ್ಲಿ ಕ್ರಿ.ಶ. ೯೭೫ರ ಒಂದು ನಿಷಧಿಶಾಸನವಿದೆ.[೪] ಅಮೃತಬ್ಬೆ ಎಂಬ ಕಂತಿಯು ಜೈನ ಸನ್ಯಾಸಿನಿಯಾಗಿದ್ದು ನೋಂತು ಸಮಾಧಿ ಮರಣವನ್ನು ಹೊಂದಿದರು. ಅವಳ ಮಗ ಅನಿಮಿತ್ತ ಪರೋಪಕಾರಿಗಳಾದ ಪದ್ಮನಂದಿ ಭಟ್ಟಾರಕರು ಈ ನಿಷಧಿಯನ್ನು ನಿಲ್ಲಿಸಿದರೆಂದು ತಿಳಿಯುತ್ತದೆ. ಅಳೀಸಂದ್ರದಲ್ಲಿ ಶ್ರೀ ಪ್ರಭಾಚಂದ್ರಸಿದ್ಧಾಂತಿಗಳ ಶಿಷ್ಯತಿಯರಾದ ರುಕುಮವ್ವೆ ಮತ್ತು ಜಾಕವ್ವೆ ಕಂತಿಯರಿಗೆ ನಿಲ್ಲಿಸಿದ ನಿಷಧಿಗಳು ಕಂಡುಬರುತ್ತವೆ.[೫] ಕೋಡಿಯಲ್ಲಿ ಗ್ರಾಮದಲ್ಲಿ ಸುಮಾರು ೧೧ನೇ ಶತಮಾನಕ್ಕೆ ಸೇರುವ ಒಂದು ನಿಷಧಿಯಿದೆ. ಸನ್ಯಸನ ವಿಧಿಯಿಂದ ನೋಂತು ಅಥವಾ ಸಮಾಧಿಮರಣದಿಂದ ಸತ್ತವನೊಬ್ಬನ ನೆನಪಿಗೆ ಅವನ ಮಗಳು ಬಿಡಕ್ಕ ಎಂಬುವವಳು ಈ ಶಾಸನವನ್ನು ನಿಲ್ಲಿಸಿದ್ದಾಳೆ.[೬]

ಕೆ.ಆರ್.ಪೇಟೆ ತಾಲ್ಲೋಕಿನ ಅಕ್ಕಿಹೆಬ್ಬಾಳು ಹೋಬಳಿ ಶ್ರವಣನಹಳ್ಳಿಯ ಶಾಸನವು ಹೊಯ್ಸಳ ವಿಷ್ಣುವರ್ಧನನ ಕಾಲಕ್ಕೆ ಸೇರಿದ್ದಾಗಿದೆ. ವೀರಕೊಂಗಾಳ್ವ ಜಿನಾಲಯದ ದೇವರ ಪೂಜೆಗಾಗಿ, ಮುನಿಗಳ ಆಹಾರದಾನಕ್ಕಾಗಿ ಹೊಯ್ಸಳದೇವನ ಪಿರಿಯರಸಿ ಶಾಂತಲದೇವಿ ಮತ್ತು ಅವಳ ತಮ್ಮ ದುದ್ದಮಲ್ಲ ದೇವ ಇವರಿಬ್ಬರೂ ಮಂದಗೆರೆ ಬಳಿಯ ಕಾವನಹಳ್ಳಿಯನ್ನು ಪ್ರಭಾಚಂದ್ರ ಸಿದ್ಧಾಂತದೇವರಿಗೆ ದತ್ತಿ ಬಿಟ್ಟ ವಿಚಾರವು ಈ ಶಾಸನದಿಂದ ತಿಳಿದುಬರುತ್ತದೆ.[೭] ಶಾಂತಲೆಗೆ ದುದ್ದಮಲ್ಲನೆಂಬ ಹೆಸರಿನ ಸೋದರನಿದ್ದನೆಂಬುದಕ್ಕೆ ಆಧಾರಗಳು ದೊರೆತಿಲ್ಲ. ಅಲ್ಲದೆ ದಾನ ನೀಡಿರುವುದು ವೀರಕೊಂಗಾಳ್ವ ಜಿನಾಲಯದ ಜೀರ್ಣೋದ್ಧಾರ ಮತ್ತಿತರ ಕಾರ್ಯಗಳಿಗೆ ಎಂಬುದೂ ಗಮನಾರ್ಹ ದುದ್ದಮಲ್ಲನೆಂಬ ಹೆಸರಿನ ಒಬ್ಬ ಕೊಂಗಾಳ್ವ ದೊರೆಯೂ ನಮಗೆ ಕಾಣುತ್ತಾನೆ.[೮] ಆದ್ದರಿಂದ ಜೆ.ಡಿ.ಎಂ. ಡೆರೆಟ್ ಭಾವಿಸುವಂತೆ ಚಂದಲದೇವಿ ಕೊಂಗಾಳ್ವ ಮನೆತನದ ರಾಜಪುತ್ರಿ ಇರಬೇಕು.[೯]

ನಾಗಮಂಗಲದ ಸೌಮ್ಯಕೇಶವ ದೇವಾಲಯದ ರಂಗಮಂಟಪದ ಕಂಬವೊಂದರ ಮೇಲಿರುವ ಕ್ರಿ.ಶ.೧೩೨೯ರ ಶಾಸನ ಮುಮ್ಮಡಿಬಲ್ಲಾಳನ ಆಳ್ವಿಕೆಗೆ ಸೇರಿದ್ದು, ಶ್ರೀಬಲ್ಲಾಳ ಚತುರ್ವೇದಿ ನಾಗಮಂಗಲದ ಚನ್ನಕೇಶವದೇವರ ಸೇವೆಗೆಂದು ಕರದಾಳ (ಕರಡಹಳ್ಳಿ) ಮಲ್ಲಿದೇವ ಮತ್ತವನ ಮಡದಿ ಚನ್ನಾದೇವಿ ಸಂಯುಕ್ತವಾಗಿ ಹೊಲತ್ತಿಯಲ್ಲಿ (ಹಾಲ್ತಿ) ದೇವರ ಕೊಡುಗೆಯಾಗಿ ಭೂದಾನ ನೀಡಿದ್ದನ್ನು ದಾಖಲಿಸುತ್ತದೆ.[೧೦]

ನಾಗಮಂಗಲದ ಹೊನ್ನೇನಹಳ್ಳಿಯ ೧೦೬ನೇಯ ಶಾಸನ ದೇಗುಲಗೌಂಡಿಯೆಂಬ ಮಹಿಳೆಯನ್ನು ಉಲ್ಲೇಖಿಸುತ್ತದೆ. ಹೊಯ್ಸಳ ವೀರಬಲ್ಲಾಳನ ಕಾಲದ ಈ ಶಾಸನದಲ್ಲಿ ಕುಂನಯ ಬೀರಯನಾಯಕನ ಮಗ ಸಾಮಂತ ದೇಕೆಯ ನಾಯಕನ ಮೇಲಾಳಿಕೆಯನ್ನು ಹೇಳಿದೆ. ಈ ದೇಗುಲ ಗೌಂಡಿಯ ಮಗ ಹೊನ್ನಗೌಡ ತುರುವಮರಳ್ಚಿ ವನಿತೆಯರ ಮಾನ ರಕ್ಷಿಸಿ ಸುರಲೋಕ ಪ್ರಾಪ್ತನಾದ ಈತನ ಅಣ್ಣ ಮಂಚಗೌಡ ತಮ್ಮಂದಿರು ಜಕ್ಕಾಯ, ಕಾಳಯರು ವೀರಗಲ್ಲು ನಿಲ್ಲಿಸಿದರು. “ಕುಂನಿಯಕೋಲ ಹಡವಳ ಹೊನ್ನಯನ ಭಾರ್ಯೆ ಎಂತಪ್ಪಳೆಂದಡೆ ಶಿವಪಾದಶೇಖರೆ, ಶಿವಕಥಾಳಾಪೆ, ಶಿವಪಾದೋದಕೆ ದೇಗುಲಗೌಡಿ” ಎಂದು ಶಾಸನ ಈಕೆಯನ್ನು ಹೊಗಳಿದೆ.[೧೧]

ನಾಗಮಂಗಲದ ಅಳೀಸಂದ್ರದ ೨ನೆಯ ಶಾಸನವು ಒಂದನೆಯ ಬಲ್ಲಾಳ ಮೂವರು ಕನ್ಯೆಯರನ್ನು ಒಂದೇ ಹಸೆಯ ಮೇಲೆ ಮದುವೆಯಾದ ಸಂಗತಿ ಈ ಶಾಸನದ ಕುತೂಹಲಕಾರಿಯಾಗಿದೆ. ಈ ಮೂರು ಕನ್ಯೆಯರು ಹೊಯ್ಸಳ ದಂಡನಾಯಕ ಮರಿಯಣ್ಣ, ಚಾಮವ್ವೆ ದಂಪತಿಗಳ ಪುತ್ರಿಯರು. ಚಾಮವ್ವೆ ಹೊಯ್ಸಳ ಮಹಾಪ್ರಧಾನ ಗಂಗರಾಜನ ಸಹೋದರಿ, ಈ ಹೆಣ್ಣುಮಕ್ಕಳ ಬಗ್ಗೆ ಶಾಸನ ಹೀಗೆ ಹೇಳುತ್ತದೆ. “ಮರಿಯಣ್ಣ ದಂಡನಾಯಕನ ದ್ವಿತೀಯಲಕ್ಷ್ಮೀ ಸಮಾನೆಯರಪ್ಪ ಚಾಮವೆದಂಡನಾಯಕಿತಿಗಂ ಪುಟ್ಟಿದ ಪದುಮಲದೇವಿ, ಚಾಮಲದೇವಿ, ಬೊಪ್ಪದೇವಿಯರಿನ್ತೀ ಮೂವರುಂ ಶಾಸ್ತ್ರಗೀತ ನೃತ್ಯದಲು ಪ್ರವುಡೆಯರುಂ ಮೂರುರಾಯರ ಕಟಕಪಾತ್ರ ಜಗದಳೆಯರೆನಸಿ ಬಳೆಯಲಾ ಮೂವರು ಕನ್ಯಕೆಯರ ನೊಂದೇಹಸೆಯೊಳು ಬಲ್ಲಾಳದೇವಂ ವಿವಾಹ ಮಾಡಿ ಸಕವರ್ಷಂ ೧೦೨೫ನೆಯ (ಕ್ರಿ.ಶ.೧೧೦೩) ಸುಭಾನು ಸಂವತ್ಸರದ ಕಾರ್ತಿಕ ಶುದ್ಧ ದಶಮಿ ಬೃಹವಾರ ದಂದು ಮೊಲೆವಾಲ ರಿಣಕ್ಕೆ ಮರಿಯಣ್ಣ ದಂಡನಾಯಕಂಗೆ ಸಿಂಧಗೆರೆಯ ಎರಡನೆಯ ಪರ್ಯ್ಯಾಯದಲು ಪ್ರಭುತ್ವ ಸಹಿತಂ ನೆಲೆಯಾಗಿ ಪುನರ್ಧಾರಾಪೂರ್ವಕಂ ಕೊಟ್ಟು” ಎಂದಿದೆ.[೧೨]

ಪಾಂಡವಪುರದ ಶಂಭುನಹಳ್ಳಿಯ ಶಾಸನ ಮೊದಲಮಹಾದೇವಿ ಎಂಬ ಮಹಿಳೆಯನ್ನು ಉಲ್ಲೇಖಿಸುತ್ತದೆ. ಇದು ವಿಷ್ಣುವರ್ಧನನ ಕಾಲದ ಶಾಸನ. ತುವ್ವಲೇಶ್ವರ ದೇವರಿಗೆ ಸಂಕರಹಳ್ಳಿಯನ್ನು ಹೆಸರಿಟ್ಟು ತಾಮ್ರಶಾಸನ ಕೊಟ್ಟ ಸಂಗತಿ ಇದರಲ್ಲಿದೆ. ಈ ದತ್ತಿ ಕೊಟ್ಟವನು ಈಕೆಯ ಗಂಡನೆ ಮಗನೆ ಎಂಬುದು ತಿಳಿಯುವುದಿಲ್ಲ.[೧೩] ನಾಗಮಂಗಲ ತಾಲ್ಲೂಕಿನ ದೊಡ್ಡಜಟಕ ಗ್ರಾಮದ ೧೩೦ನೆಯ ಶಾಸನ ಹೊಯ್ಸಳ ತಿರುವವ್ವೆ ಎಂಬ ಮಹಿಳೆಯನ್ನು ಉಲ್ಲೇಖಿಸುತ್ತದೆ. ಈಕೆಯ ಗಂಡ "ಸರಳಶಾಸ್ತ್ರದಾನ ವಿನೋದಂ ಧೀರ ಪರಾಕ್ರಮಿ ಹೆಮ್ಮಣ್ಣ" ತಿರುವವ್ವೆಯನ್ನು ಶಾಸನವು 'ಅನ್ನದಾನಿ ಪತಿಬ್ರತಾಗುಣೆ' ಎಂಬುದಾಗಿ ಉಲ್ಲೇಖಿಸಿದೆ.[೧೪]

ಇದೇ ತಾಲ್ಲೂಕಿನ ಕಸಲಗೆರೆಯ ೧೬೮ನೆಯ ಶಾಸನ ಹೊಯ್ಸಳ ಮಹಾದೇವ ಎಂಬುವವನ ತಾಯಿ ನನ್ನವ್ವೆಯ ಕೀರ್ತಿಯನ್ನು ವಿವರಿಸುತ್ತದೆ. ಈತನ ತಾಯಿ ಸರಿರತಿಗೆಣೆ ಸೀತೆಗೆ ತೊಣೆ ಸಿರಿವೆಣ್ಗೆ ಸಮಾನಮದ್ರಿಸುತೆಗೆನೆ ಗುಣದಿಂ ದೊರೆಯಾರ್ನ್ನಿಜರತ್ನ ತ್ರಯ ಭರಿತೆಗೆ ನನ್ನವೆಗೆ ಪತಿಯರೀ ವಸುಮತಿಯೊಳು ಎಂದು ಉಲ್ಲೇಖಿಸಿದೆ.[೧೫] ಇದೇ ಗ್ರಾಮದ ೧೭೨ನೆಯ ಶಾಸನ ಕೂಡಲೂರು ಕುಲದ ಕಲ್ಕಣಿ ನಾಡನಾಳುವ ಸಾಮಂತ ಮಾಚಿದೇವನ ಪತ್ನಿ ಕೇತಲ ದೇವಿಯನ್ನು ಉಲ್ಲೇಖಿಸುತ್ತದೆ. ಈತನ ತಾಯಿ ಕೇತಲದೇವಿಯ ಬಗ್ಗೆ ಶಾಸನ ಹೀಗೆ ಹೇಳುತ್ತದೆ. "ರತಿಯೆಸೆವ ರೂಪಿನಿಂಮತ್ತತಿಶಯಲಾವಣ್ಯ ಭರಿತ ಕೇತಲದೇವಿ" ಎಂದು ಉಲ್ಲೇಖಿಸುತ್ತದೆ.[೧೬] ಇದೇ ಗ್ರಾಮದ ೧೬೯ನೆಯ ಶಾಸನ ಹೊಯ್ಸಳ ವಿಷ್ಣುವರ್ಧನನ ಕಾಲದಾಗಿದ್ದು, ಸಾಮಂತ ಸೋಮನ ಸತಿಯರಾದ ಮಾಚವ್ವೆ ಮಾರವ್ವೆಯನ್ನು ಉಲ್ಲೇಖಿಸುತ್ತದೆ. ಈ ಮಾಚವ್ವೆ ಮಾರವ್ವೆಯನ್ನು ಕುರಿತು ಶಾಸನ ಹೀಗೆ ಹೇಳುತ್ತದೆ: 'ಮಾರನಸತಿಗಂ ಸೀತೆಗೆ ರೇವತಿಗರುಂಧತಿಗೆ ಅತ್ತಿಮಬ್ಬೆಗೆ ಸಾರಗುಣಂ ಸೋಮನ ಸುತೆಗುದಾರಗಣಂ ನಿನ್ನೆಯರಾರ್‍ರ....... ಧರಣೆಯಲಿ' ಎಂದು ಶಾಸನ ತಿಳಿಸುತ್ತದೆ.[೧೭]

ಹೊಯ್ಸಳರ ಕಾಲದಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡುಬರುವ ಗರುಡರಲ್ಲಿ ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಅಗ್ರಹಾರಬಾಚಹಳ್ಳಿಯ ಮುಗಿಲಮನೆತನದ ಗರುಡರು ಗಮನಾರ್ಹರು. ಇವರು ಸುಮಾರು ಏಳು ತಲೆಮಾರಿಗೆ ಗರುಡರಾಗಿದ್ದರು. ಹೊಯ್ಸಳ ರಾಜ್ಯದಲ್ಲಿ ಅಧಿಕಾರಿಗಳೂ ಪ್ರಜೆಗಳೂ ಅರಸನಿಗೆ ನಿಷ್ಠರಾಗಿದ್ದರು, ಅರಸನಿಗಾಗಿ ರಾಜ್ಯಕ್ಕಾಗಿ ಪ್ರಾಣಾರ್ಪಣೆಗೆ ಹಿಂಜರಿಯುತ್ತಿರಲಿಲ್ಲ. ಗರುಡ ಪದ್ದತಿಯಂತೂ ಸ್ವಾಮೀ ನಿಷ್ಠೆಯ ಪರಮಾವಧಿ, ಅಗ್ರಹಾರ ಬಾಚಹಳ್ಳಿಯ ಶಾಸನ ೮೨ ಹೊಯ್ಸಳ ಅರಸರೊಡನೆ ಗರುಡರಾದವರ ವಂಶಾವಳಿಯನ್ನೇ ನೀಡುತ್ತದೆ.[೧೮] ಹೊಯ್ಸಳ ಎರೆಯಂಗನಿಗೆ ಗರುಡರಾದವರು ಗಂಡನಾರಾಯಣ ಸೆಟ್ಟಿ ಮತ್ತು ಆತನ ಹೆಂಡತಿ ಮಾರವ್ವೆ ನಾಯಕಿತಿ. ಬಿಟ್ಟಿದೇವ ಅಥವಾ ವಿಷ್ಣುವರ್ಧನನಿಗೆ ಹೊಯಿಸಳಸೆಟ್ಟಿ ಮತ್ತು ಮಾಚವ್ವೆ ನಾಯಕಿತಿ; ಒಂದನೆಯ ನರಸಿಂಹನಿಗೆ ಕೊರೆಯ ನಾಯಕ, ಮಾರವ್ವೆ, ಚಿಕ್ಕಮಾದವ್ವೆ ಹಾಗೂ ಏಳು ಜನ ಲೆಂಕರು, ಇಮ್ಮಡಿ ಬಲ್ಲಾಳನಿಗೆ ಸಿವನೆಯ ನಾಯಕ ಮತ್ತು ಐದು ಜನ ಲೆಂಕರು. ಇಮ್ಮಡಿ ನರಸಿಂಹನಿಗೆ ಲಖ್ಖೆಯನಾಯಕ. ಗಂಗಾದೇವಿ ಹಾಗೂ ಮೂವರು ಲೆಂಕರು. ಸೋಮೇಶ್ವರ ಮೃತನಾದಾಗ ಕಂನೆಯನಾಯಕ, ಉಮವ್ವೆ, ಕಲ್ಲವ್ವೆ, ಜವನವ್ವೆ, ಹತ್ತು ಮಂದಿ ಲೆಂಕಿತಿಯರು ಹಾಗೂ ಇಪ್ಪತ್ತೊಂದು ಮಂದಿ ಲೆಂಕರು 'ಆರು ಬಾರಿ ಗರುಡನನಪ್ಪಿ ಭಾಷೆಯನ್ನು ಪೂರೈಸಿದರು. ಹಾಗೆಯೇ ಮುಮ್ಮಡಿ ನರಸಿಂಹನೊಡನೆ ರಂಗೆಯನಾಯಕ ಕೇತವ್ವೆ, ಹೊನ್ನವ್ವೆ, ಮಂಚವ್ವೆ ೧೦ ಜನ ಲೆಂಕತಿಯರು ಮತ್ತು ೨೧ ಮಂದಿ ಲೆಂಕರು ಗರುಡರಾಗಿ ವೀರ ಸ್ವರ್ಗಕ್ಕೈದಿದರೆಂದು ತಿಳಿದು ಬರುತ್ತದೆ. ಇದರಿಂದ ಅಂದಿನ ಜೀವನದಲ್ಲಿ ಗಂಡನೊಂದಿಗೆ ಮಹಿಳೆಯರೂ ಆತ್ಮಾಹುತಿ ಮಾಡಿಕೊಂಡಿದ್ದುದ್ದನ್ನು ಇದರಿಂದ ತಿಳಿಯಬಹುದು.[೧೯]

ಮದ್ದೂರು ತಾಲ್ಲೂಕಿನ ತಿಪ್ಪೂರಿನ ೩೪ನೆಯ ಶಾಸನ ಮಾಣಕಬ್ಬೆ, ಪೋಚಿಕಬ್ಬೆಯರನ್ನು ಉಲ್ಲೇಖಿಸುತ್ತದೆ. ಈ ಶಾಸನ ಹೊಯ್ಸಳ ಪ್ರಧಾನ ಗಂಗರಾಜನ ದತ್ತಿ ಶಾಸನವಾದುದರಿಂದ ಇವರು ಅವನ ಹಿರಿಯರು, ಮಾಣಕಬ್ಬೆ ವಚನತಾಯಿ ಗಂಗರಾಜನ ಅಜ್ಜಿ ಈಕೆಯ ಗಂಡ ಮಾರಯ್ಯ ಈಕೆಯನ್ನು ವಿಬುಧ ಪ್ರಖ್ಯಾತೆ, ಧರ್ಮಪ್ರಯುಕ್ತೆ, ನಕಾಮಾತ್ರಚರಿತ್ರೆ ಎಂದು ಹೊಗಳಲಾಗಿದೆ. ಪೋಚಿಕಬ್ಬೆ ಏಚಿರಾಜನಪತ್ನಿ 'ಉತ್ತಮ ಗುಣತತಿ ವನಿತಾ ವೃತ್ತಿಯ ನೊಳಕೊಂಡು ಜಗವೆಲ್ಲಂ ಕೈಯೆತ್ತುವಿನಮಳ ಸಂಪತ್ತಿಗೆ ನೋನ್ತ'ವಳೆಂದು ಹೊಗಳಲಾಗಿದೆ.[೨೦]

ಮಂಡ್ಯದ ಬಸರಾಳಿನ ೨೯ನೆಯ ಶಾಸನವು ಹೊಯ್ಸಳ ದಂಡನಾಯಕ ಹರಿಹರದಂಡ ನಾಯಕನಪತ್ನಿ ಗುಜ್ಜಲೆಯನ್ನು ಉಲ್ಲೇಖಿಸುತ್ತದೆ. ಈ ಹರಿಹರ ದಂಡನಾಯಕ ತಾಯಿ ನಾಗಲೆ. ಈ ಹರಿಹರ ದಂಡನಾಯಕ ಬಸರಾಳಿನ ಮಲ್ಲಿಕಾರ್ಜುನ ದೇವಾಲಯ ಕಟ್ಟಿಸಿದ ಸಂದರ್ಭದಲ್ಲಿ ಈಕೆಯ ಹೆಸರು ಉಕ್ತವಾಗಿದೆ.[೨೧]

ನಾಗಮಂಗಲದ ಲಾಳನಕೆರೆ ೬೩ನೆಯ ಶಾಸನವು ಮಹಾಪ್ರಧಾನ ಹೆಗ್ಗಡೆ ಕಂಟೆಮಯ್ಯ ಎಂಬುವನು ಮಧುಕೇಶ್ವರ ದೇವರಿಗೆ ದತ್ತಿ ಬಿಟ್ಟ ಸಂದರ್ಭದಲ್ಲಿ ಕಾಳಿಯಕ್ಕ ಹೆಸರು ಉಕ್ತವಾಗಿದೆ. ಈಕೆ ಕಂಟೆಮಯ್ಯನ ಪತ್ನಿ. ಇದೇ

ಶಾಸನದಲ್ಲಿ ಕಂಟೆಮಯ್ಯನ ತಂಗಿ ದುಗ್ಗಲೆಯ ಬಗ್ಗೆಯೂ ಪ್ರಸ್ತಾಪವಿದೆ.[೨೨] ನಾಗಮಂಗಲದ ಯಲ್ಲಾದಹಳ್ಳಿಯ ೬೪ನೆಯ ಶಾಸನವು ಕಾಮಲಾದೇವಿ ಮತ್ತು ಕಿರುಗಣಬ್ಬೆ ಎಂಬ ಸ್ತ್ರೀಯರನ್ನು ಉಲ್ಲೇಖಿಸುತ್ತದೆ. ವಿಷ್ಣುವರ್ಧನನ ಮಹಾಪ್ರಧಾನ ದೇವರಾಜ ಎಂಬುವವನು ಸೂರನಹಳ್ಳಿಯಲ್ಲಿ ಪಾರ್ಶ್ವಜಿನಾಲಯ ನಿರ್ಮಿಸಿ ದತ್ತಿ ಬಿಟ್ಟ. ಈತನ ಪತ್ನಿ ಕಮಲಾದೇವಿ ಈ ದೇವರಾಜನ ತಾಯಿ ಕಿರುಗಣಬ್ಬೆ ಅಜ್ಜಿ ಕಾಮಿಕಬ್ಬೆ.[೨೩] ನಾಗಮಂಗಲದ ೦೨ನೆಯ ಶಾಸನ ಚನ್ನದೇವಿಯನ್ನು ಉಲ್ಲೇಖಿಸುತ್ತದೆ. ಈಕೆ ಮಲ್ಲಿದೇವ ಎಂಬುವವನ ಹೆಂಡತಿ ಇವರು ಚನ್ನಕೇಶವ ದೇವರಿಗೆ ಕೊಡುಗೆ ಬಿಟ್ಟ ಸಂದರ್ಭದಲ್ಲಿ ಈಕೆಯನ್ನು ಹೆಸರಿಸಿದೆ.[೨೪] ಇದೇ ತಾಲ್ಲೂಕಿನ ಬೆಳ್ಳೂರಿನ ೮೧ನೆಯ ಶಾಸನವು ಚಾಗಲೆಯ ಬಗ್ಗೆ ಪ್ರಸ್ತಾಪಿಸುತ್ತದೆ. ಮಹಾಸಾಮಂತ ಕಾಚಿದೇವ ಎಂಬುವನು ಬೆಳ್ಳೂರು ಗ್ರಾಮದಲ್ಲಿ ಸಿದ್ದೇಶ್ವರ, ಲಕ್ಷ್ಮೀನಾರಾಯಣ ಮತ್ತು ಗೋಪಾಲ ದೇವಾಲಯಗಳನ್ನು ಕಟ್ಟಿಸಿದ ಸಂದರ್ಭದಲ್ಲಿ ಈಕೆಯ ಉಲ್ಲೇಖವಿದೆ.[೨೫] ನಾಗಮಂಗಲದ ಬೋಗಾದಿಯ ೧೮೩ನೆಯ ಶಾಸನವು ಉಮೆಯವ್ವೆ ಎಂಬುವಳ ಬಗ್ಗೆ ತಿಳಿಸುತ್ತದೆ. ಗಂಗಮಂಡಲದ ಮಾದಿರಾಜ ವಿಭುಜಿನಾಯಲಕ್ಕೆ ದತ್ತಿಯೊಂದನ್ನು ಬಿಟ್ಟ ಸಂದರ್ಭದಲ್ಲಿ ಈಕೆಯ ಉಲ್ಲೇಖವಿದೆ. ಈಕೆಗೆ ಜಗವಿನೂತೆ, ವನತಾರತ್ನ, ಭಾಗ್ಯಶಕ್ತಿ ವಿಶ್ವಾವನ, ಭಾರತಿರತಿ ಮುಂತಾದ ವಿಶೇಷಣಗಳಿದ್ದವು.[೨೬]

ಪಾಂಡವಪುರ ತಾಲ್ಲೂಕಿನ ಕನ್ನಂಬಾಡಿಯ ೪೨ನೆಯ ಶಾಸನವು ಹೊಯ್ಸಳ ನಾರಸಿಂಹದೇವನ ಪಿರಿಯರಸಿ ಪಟ್ಟಮಹಾದೇವಿ ಮೈಳಲದೇವಿಯು ಮೊದರುನಾಡನ್ನು ಆಳುತ್ತಿದ್ದಳೆಂದು ಉಲ್ಲೇಖಿಸಿದೆ.[೨೭] ಕೃಷ್ಣರಾಜಪೇಟೆ ತಾಲ್ಲೂಕಿನ ಬೋರಾಪುರ ಗ್ರಾಮದ ಶಾಸನವು ವೀರಬಲ್ಲಾಳನ ರಾಣಿಪದ್ಮಲೆಯನ್ನು ಉಲ್ಲೇಖಿಸಿದೆ. ಈ ಶಾಸನಗಳಿಂದ ಹೊಯ್ಸಳರ ಕಾಲದಲ್ಲಿ ಮಂಡ್ಯ ಜಿಲ್ಲೆಯ ಹಲವು ಭಾಗಗಳಲ್ಲಿ ರಾಣಿಯರು ಆಡಳಿತ ನಡೆಸಿದ್ದು ಅವರ ರಾಜ್ಯಾಡಳಿತದ ಕಾರ್ಯಕ್ಷಮತೆಯನ್ನು ತಿಳಿಯಬಹುದಾಗಿದೆ.

ಕೆ.ಆರ್.ಪೇಟೆ ತಾಲ್ಲೂಕಿನ ಕಿಕ್ಕೇರಿಯ ೨೬ನೆಯ ಶಾಸನವು ಹೊಯ್ಸಳ ನಾರಸಿಂಹದೇವನ ಸಾಮನ್ತ ಬೊಮ್ಮಯ್ಯನ ಪತ್ನಿ ಬಮ್ಮವ್ವನಾಯಕಿತಿಯು, ಕಿಕ್ಕೇರಿಯಲ್ಲಿ ಬ್ರಹ್ಮದೇವರ ದೇವಾಲಯವನ್ನು ನಿರ್ಮಿಸಿ, ಬ್ರಹ್ಮರಾಣಿ ದೇವರಿಗೆ ಭೂಮಿದಾನ ನೀಡಿದ್ದನ್ನು ತಿಳಿಸಿದೆ. ಸುಂದರವಾದ ಹೊಯ್ಸಳ ಶೈಲಿಯ ಈ ದೇವಾಲಯ ಗಮನಾರ್ಹವಾಗಿದೆ. ಅಂದಿನ ಕಾಲದಲ್ಲಿ ಸಾಮಾನ್ಯ ಸ್ತ್ರೀಯರು ದೇವಾಲಯ ನಿರ್ಮಿಸಲು ಕಷ್ಟವಾದರೆ, ತಮ್ಮ ಆರ್ಥಿಕ ಸ್ಥಿತಿಗನುಗುಣವಾಗಿ ದೇವತಾ ಮೂರ್ತಿ ದೇವಾಲಯದ ವಿವಿಧ ಭಾಗಗಳ ರಚನೆಗೆ ನೆರವಾಗುತ್ತಿದ್ದಂತೆ ತೋರುತ್ತದೆ.[೨೮] ನಾಗಮಂಗಲ ತಾಲ್ಲೂಕಿನ ಅರಣಿ ಗ್ರಾಮದ ೧೦೧ನೆಯ ಶಾಸನವು ಸೋಮೇಶ್ವರ ಪಂಡಿತರ ಸ್ತ್ರೀ ಚಾಮವ್ವೆಯು ಚಾಮುಂಡೇಶ್ವರಿ ಮೂರ್ತಿಯನ್ನು ಪ್ರತಿಷ್ಠೆ ಮಾಡಿಸಿದ್ದಳೆಂದು ಆ ಮೂರ್ತಿಪೀಠ ಶಾಸನವು ತಿಳಿಸುತ್ತದೆ.[೨೯] ನಾಗಮಂಗಲ ತಾಲ್ಲೂಕಿನ ಸುಬ್ಬರಾಯನಕೊಪ್ಪಲ ಸಿದ್ದೇಶ್ವರ ದೇವಾಲಯದ ೪೨ನೆಯ ಶಾಸನವು ಜವನಿಕೆ ನಾರಾಯಣ ಎನ್ನಿಸಿದ್ದ ಬಲ್ಲಪ್ಪ ಡಣ್ಣಾಯಕರ ದಾದಿ ಗೋವಿದೇವಿಯರು ನವರಂಗದ ಕಂಬವೊಂದನ್ನು ಮಾಡಿಸಿದ್ದನ್ನು ತಿಳಿಸಿದೆ.[೩೦]

ಶ್ರೀರಂಗಪಟ್ಟಣ ತಾಲ್ಲೂಕಿನ ಅರಕೆರೆಯ ೯೮ನೆಯ ಶಾಸನವು ಕ್ರಿ.ಶ. ೧೨೫೪ರ ಹೊಯ್ಸಳ ಸೋಮೇಶ್ವರನ ಕಾಲದ್ದಾಗಿದ್ದು, ಆತನ ಆಳ್ವಿಕೆಯ ೨೧ನೇ ವರ್ಷದಲ್ಲಿ ಹುಟ್ಟಿಕೊಂಡಿದೆ. ಈ ಶಾಸನದಲ್ಲಿ ಸರ್ವನಮಸ್ಯದಪಟ್ಟದ ಮಹಾಗ್ರಹಾರ ಸರ್ವಜ್ಞ ಶ್ರೀ ವೀರನಾರಸಿಂಹಪುರವೆನಿಸಿದ ಇಂದಿನ ಅರಕೆರೆಯಲ್ಲಿ ಕುಮಂಡೂರಾಚನ ಹೆಂಡತಿ ಐಯ್ಸಿದ್ಯೆಕೆ ಆ ಗ್ರಾಮದಲ್ಲಿ ತನ್ನ ಪಾಲಿಗೆ ಬಂದ ಭೂಮಿಯ ವೃತ್ತಿಯಲ್ಲಿ ಕಾಲುಭಾಗವನ್ನು ಕೇಶವದೇವರಿಗೆ ತಿರುನಾಮದ ಕಾಣಿಕೆಯಾಗಿತ್ತಳು. ತಿರುನಾಮ ಕಾಣಿಕೆ ಎಂಬುದು ಶೈವ ದೇವಾಲಯಗಳಿಗೆ ಕೊಡಲಾದ ಸೇರಿದ ಭೂಮಿಗೆ ಅನ್ವಯ ವಾಗುವ ಹೆಸರು. ಆದರೆ ಇಲ್ಲಿನ ಕೇಶವದೇವರು ವೈಷ್ಣವ ದೇವರು. ಇದನ್ನು ಗಮನಿಸಿದರೆ ತಿರುನಾಮ ಕಾಣಿಕೆಯೆಂಬುದು ಬಹಳ ಸಾಮಾನ್ಯವಾದ ಅರ್ಥದಲ್ಲಿ ದೇವಾಲಯಗಳಿಗೆ ನೀಡಿದ ಭೂಮಿ ಎನ್ನಬೇಕಾಗುತ್ತದೆ. ಶಾಸನದಲ್ಲಿ ಇದನ್ನು ಪ್ರೀತಿದಾನ ಎನ್ನಲಾಗಿದೆ.[೩೧]

ಕೆ.ಆರ್.ಪೇಟೆ ತಾಲ್ಲೂಕಿನ ಬೈರಾಪುರದ ೯೮ನೆಯ ಶಾಸನವು ಹೊಯ್ಸಳ ನಾರಸಿಂಹ ದೇವರು ಆಳುತ್ತಿದ್ದಾಗ, ಮಹಾಪ್ರಧಾನಿ ಸೋಮೇಯ ದಂಡನಾಯಕರ ಅಕ್ಕ ರೇಕವ್ವೆ ಡಣ್ಣಾಯಕಿಯು ಭೈರವೇಶ್ವರ ದೇವಾಲಯವನ್ನು ನಿರ್ಮಿಸಿ ಹೊಸ ಅಗ್ರಹಾರ ಭೈರಾಪುರವನ್ನು ನಿರ್ಮಿಸಿದ್ದನ್ನು ತಿಳಿಸಿದೆ. ಈ ಭೈರವೇಶ್ವರ ದೇವರ ನಾಲ್ಕು ವಿತ್ತಿಯನ್ನು ಅಳಿಯ ಮಾರೆಯನಾಯಕ ಮಗಳು ತಿಪ್ಪವ್ವೆ ಮತ್ತು ಮೊಮ್ಮಗಳು ಸೋಯಕ್ಕನಿಗೆ ಕೊಡುಗೆಯಾಗಿ ಕೊಟ್ಟಳೆಂದು ತಿಳಿಸಿದೆ.[೩೨] ಇದೇ ತಾಲ್ಲೂಕಿನ ಹಿರೀಕಳಲೆಯ ಬಸವ ದೇವಾಲಯದ ಬಳಿಯಿರುವ ಶಾಸನ ತ್ರಿಭುವನಮಲ್ಲ ಹೊಯ್ಸಳ ವಿಷ್ಣುವರ್ಧನನು ಗಂಗವಾಡಿ–೯೬೦೦೦ದಲ್ಲಿ ತನ್ನ ಆಡಳಿತ ಹತೋಟಿಯನ್ನು ಪ್ರತಿಷ್ಠಾಪಿಸಿದ ತರುವಾಯ ಪಿರಿಯ ಕಳಿಲೆಯು ಕಿಕ್ಕೇರಿ–೧೨ ಆಡಳಿತ ವಿಭಾಗದ ವ್ಯಾಪ್ತಿಯಲ್ಲಿದ್ದು, ಅಲ್ಲಿ ಚಿನ್ನಮ್ಮ ಎಂಬ ಅಧಿಕಾರಿಯು ಆಡಳಿತ ನಡೆಸುತ್ತಿದ್ದುದರ

ಬಗ್ಗೆ ತಿಳಿಸುತ್ತದೆ.[೩೩] ಇದೇ ತಾಲ್ಲೂಕಿನ ಮಾಳಗೂರು ಕೆರೆಯ ಹಿಂದಿರುವ ಈಶ್ವರ ದೇವಾಲಯದಲ್ಲಿರುವ ಶಾಸನದಲ್ಲಿ ಕ್ರಿ.ಶ. ೧೧೧೭ರಲ್ಲಿ ಹೊಯ್ಸಳ ವಿಷ್ಣುವರ್ಧನನು ಆಳ್ವಿಕೆ ಮಾಡುತ್ತಿದ್ದಾಗ ಕಬ್ಬಾಹು-೧೦೦೦ದ ವ್ಯಾಪ್ತಿಯಲ್ಲಿದ್ದ ಮಾಳಿಗೆ ಎಂಬ ಆಡಳಿತ ವಿಭಾಗವನ್ನು ಪಟ್ಟಮಹಾದೇವಿ ಶಾಂತಲೆಯು ತನ್ನ ಮೈದುನ ಬಲ್ಲೆಯನಾಯಕನ ಅಧೀನದಲ್ಲಿ ಆಳ್ವಿಕೆ ಮಾಡುತ್ತಿದ್ದುದನ್ನು ಉಲ್ಲೇಖಿಸಿದೆ.[೩೪]

ಕೆ.ಆರ್.ಪೇಟೆ ತಾಲ್ಲೂಕಿನ ವರಾಹನಾಥ ಕಲ್ಲಹಳ್ಳಿಯ ೧೦೮ನೆಯ ಶಾಸನವು ಮೂರನೆಯ ಬಲ್ಲಾಳನ ಮಹಾಪ್ರಧಾನಿ ಆದಿಸಿಂಗೇಯನಾಯಕನು ಕ್ರಿ.ಶ. ೧೩೩೪ರಲ್ಲಿ ರಾಣಿವಾಸದ ದೇವಲಾದೇವಿಯ ಹೆಸರಿನಲ್ಲಿ ಅಗ್ರಹಾರವನ್ನು ಮಾಡಿ ದೇವಲಾಪುರವೆಂದು ಹೆಸರಿಟ್ಟು ದಾನ ಬಿಟ್ಟಿದ್ದನ್ನು ಉಲ್ಲೇಖಿಸಿದೆ.[೩೫] ನಾಗಮಂಗಲ ತಾಲ್ಲೂಕಿನ ಪುರದಕಟ್ಟೆಯ ೧೭ನೆಯ ಶಾಸನವು ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ ಬೋಕಿಸೆಟ್ಟಿಯು ತನ್ನ ತಂದೆ-ತಾಯಿಯರ ಹೆಸರಿನಲ್ಲಿ ಮಾಚಸಮುದ್ರ ಮತ್ತು ಮಾಕಸಮುದ್ರವೆಂಬ ಎರಡು ಕೆರೆಗಳನ್ನು ನಿರ್ಮಿಸಿದ್ದನ್ನು ತಿಳಿಸಿದೆ.[೩೬] ಕೆ.ಆರ್.ಪೇಟೆ ತಾಲ್ಲೂಕಿನ ತೆಂಗಿನಘಟ್ಟದ ೪೨ನೆಯ ಶಾಸನವು ಚಾವುಂಡವ್ವೆ ಎಂಬ ಮಹಿಳೆಯನ್ನು ಉಲ್ಲೇಖಿಸಿದೆ. ಈ ವೀರನಾರಸಿಂಹನ ಹಡವಳಕೊಳ್ಳಿ ಅಯ್ಯನ ಸರ್ಭಾಂಗ ಲಕ್ಷುಮಿ. ಈಕೆಯ ಸುಪುತ್ರರಾದ ಹಡವಳಕಾವಣ್ಣ, ಕಂಚ, ಕಾಳಯ ಚಿಕ್ಕಾಟೆಯ ಮುಂತಾದವರು ತೆಂಗಿನಘಟ್ಟದ 'ಹೊಯ್ಸಳೇಶ್ವರ ದೇವಾಲ್ಯವ ಮಾಡಿಸಿ ಕೆರೆಯಂ ಕಟ್ಟಿಸಿ ಹೊಯ್ಸಳೇಶ್ವರ ದೇವರ್ಗೆ ದತ್ತಿ' ಬಿಟ್ಟ ವಿಷಯ ಹೇಳಿದೆ.[೩೭]

ಒಟ್ಟಿನಲ್ಲಿ ಮಂಡ್ಯ ಜಿಲ್ಲೆಯ ಹೊಯ್ಸಳರ ಕಾಲದ ಶಾಸನಗಳು ಆ ಕಾಲದ ಮಹಿಳೆಯರ ಬದುಕಿನ ಹಲವು ಸಂಗತಿಗಳನ್ನು ತೆರೆದಿಟ್ಟಿದ್ದು ಸಮಾಜದಲ್ಲಿ ಮಹಿಳೆಯರಿಗಿದ್ದ ಸ್ಥಾನಮಾನಗಳನ್ನು ತಿಳಿಸಿವೆ. ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸದ ಯಶಸ್ಸಿಗೆ ಮಹಿಳೆಯರು ಕಾರಣಕರ್ತರಾಗಿದ್ದನ್ನಿಲ್ಲಿ ಗುರುತಿಸಬಹುದಾಗಿದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿಗಳು

೧. E.C.VII.Ng.7.PP 6.8.
೨. E.C.IV.K.R.Pet. 3.
೩. E.C.IV. Ng.76.P.53.54.
೪. MAR.1939-65.
೫. E.C.IV. Ng.21.
೬. MAR.1940-34.
೭. MAR.1927-115.
೮. ಮಾನವಿಕ ಕರ್ನಾಟಕ., ಸಂ. ೩, ಸಂಚಿಕೆ ೨, ಮೈ.ವಿ.ವಿ., ಪುಟ ೧೧.೧೨.
೯. Derrett:The Hoysalas-P.48.
೧೦. E.C.VII. Ng.2.P.4.5.
೧೧. E.C.VII. Ng.106, PP.99.100.
೧೨. E.C.VII. Ng.72.PP.54.55.
೧೩. E.C.VI. PP.11.P.110.111.
೧೪. E.C.VI. Ng.130.PP.125.126.
೧೫. E.C.VII Ng.168.PP.165.166.
೧೬. E.C.VII Ng.172.PP170.171.
೧೭. E.C.VII.Ng.169.PP.167.171.
೧೮. E.C.VI.Kr.82.1179.AD.PP.66.68.

೧೯. Procedings of the south Indian History Congress. 31 Annual Session 2011 Dr.S.Shivaramu-Agrahara Bachahalli Garudas-As depicted By inscriptions-PP.824.826.

೨೦. E.C.VII.Mu 54.PP.282.283.

೨೧. E.C.VII.Md.29.P.211.

೨೨. E.C.VII.Ng.63.PP.41-42.

೨೩. E.C.VII.Ng. 64.PP.45.46.

೨೪. E.C.VII.Ng. 4.PP.4.5.

೨೫. EC.VII.Ng.81.PP.79.80.

೨೬. E.C.VII.Ng. 183.PP.177.178.

೨೭. E.C.VI.PP.42.P.131.

೨೮. E.C.VI.Kr.Pet.27.P.17.

೨೯. E.C.VI.Ng.101.P.97.

೩೦. E.C.VII.Ng.42.P.26.

೩೧. E.C.VI.Sr.98 PP.420.421.

೩೨. E.C.VI.Kr.Pet.98.P.80.81.

೩೩. E.C.VI.Kr.Pet.73.P.59.

೩೪. E.C.VI.Kr.Pet.66.P.48.

೩೫. E.C.VI.Kr.Pet.108.P.96.

೩೬. E.C.VII.Ng.17.P.13.14.

೩೭. E.C.VI.Kr.Pet.42.P.32.

೩೩

ಬೆಂಗಳೂರು ಜಿಲ್ಲೆಯ ಧಾರ್ಮಿಕ ಶಾಸನಗಳು

ಡಾ|| ಡಿ.ಎಂ. ನಾಗರಾಜು*

ಪ್ರಾಚೀನ ಕರ್ನಾಟಕದಲ್ಲಿನ ಧಾರ್ಮಿಕ ಜೀವನವನ್ನು ನಾವು ಗಮನಿಸಿದಾಗ ಹಿಂದಿನಿಂದಲೂ ಹಲವಾರು ಧರ್ಮಗಳು ಬೆಳೆದುಬಂದಿವೆ. ಇಲ್ಲಿಯ ಜನತೆಯ ಧಾರ್ಮಿಕ ಶ್ರದ್ಧೆ, ಸಮನ್ವಯತೆ, ಔದಾರ್ಯ ಹಾಗೂ ಇಲ್ಲಿನ ವಾತಾವರಣ ಪ್ರಾಚೀನ ಕಾಲದಿಂದಲೂ ಧಾರ್ಮಿಕ ನಂಬಿಕೆಗಳನ್ನು ಹಾಗೂ ಧರ್ಮಗಳನ್ನು ಆಕರ್ಷಿಸುತ್ತಿತ್ತು.

ಕರ್ನಾಟಕದಲ್ಲಿ ಎಲ್ಲಾ ಧರ್ಮಗಳು ದೇವಾಲಯಗಳ ನಿರ್ಮಾಣ ಮತ್ತು ನಿರ್ವಹಣೆಗೆ ಅಪಾರವಾಗಿ ಶ್ರಮಿಸಿವೆ. ವೈದಿಕ ತತ್ವಗಳನ್ನು ಬಿಡದೆಯೇ ದೇವಾಲಯಗಳು ಬೆಳೆಯಲು ಶೈವ ಧರ್ಮವು ಅತಿಹೆಚ್ಚಿನ ನೆರವು ನೀಡಿದೆ. ದೇವಸ್ಥಾನಗಳು ವಿದ್ಯಾಸ್ಥಾನಗಳಾಗಿ ಅನ್ನದಾನ ಸ್ಥಾನಗಳಾಗಿ ವಿಸ್ತಾರಗೊಳ್ಳಲು ಶೈವಧರ್ಮದ ಕಾಣಿಕೆ ಅಪಾರವಾದುದು.

ಬೆಂಗಳೂರು ಜಿಲ್ಲೆಯನ್ನು ಆಳಿದ ಮನೆತನಗಳಲ್ಲಿ ಗಂಗರು, ಕಳಿಂಗ ಗಂಗರು, ರಾಷ್ಟ್ರಕೂಟರು, ಪಲ್ಲವರು, ಕದಂಬರು, ಚಾಳುಕ್ಯರು, ಚೋಳರು, ವೈದುಂಬರು, ಚಂಗಾಳ್ವರು, ಹೊಯ್ಸಳರು, ಸಿಗಲನಾಡ, ಕುಕ್ಕಲನಾಡ ವಿಜಯನಗರ, ಯಲಹಂಕ ಮರ್ದಟ್ಟರು, ಸುಗಟೂರು, ಆವತಿ, ಚನ್ನಪಟ್ಟಣ, ಮೊಗಲರು, ಮೈಸೂರು. ಈ ಮೇಲಿನ ಮನೆತನದ ಶಾಸನಗಳನ್ನು ಗಮನಿಸಿದಾಗ ಕೆಲವು ಧಾರ್ಮಿಕ ವಿಚಾರಗಳನ್ನು ತಿಳಿಯಬಹುದು.

ಶೈವ ಶಾಸನಗಳು

ರಾಷ್ಟ್ರಕೂಟರ ಕಾಲದ ಕ್ರಿ.ಶ. ೯೬೫ರ ಮೂರನೇಕೃಷ್ಣನ ಕಾಲದ ಶಾಸನದಲ್ಲಿ ದುರ್ವಿನೀತನು ಮಣ್ಣೆದೇಶದಲ್ಲಿ ದೇವಾಲಯ ಕಟ್ಟಿಸಿ, ಗಂಗ-ಗಚ್ಚಿಯ ಹಿರಿಯ ಮಗ ದಡಿಗ, ಮಣ್ಣೆ-ಮೂನ್ನೂರ ನಾಳಗಾವುಂಡ ಯುದ್ಧದಲ್ಲಿ ಮಡಿದ ಜ್ಞಾಪಕಾರ್ಥಕ ದಡಿಗೇಶ್ವರ ದೇವಾಲಯ ಕಟ್ಟಿಸಿದ ದಾಖಲೆ ಯಿಂದ ಇಲ್ಲಿ ಇವನ ವೀರ ಮರಣವನ್ನು ಅಪ್ಪಿದ್ದರಿಂದ ರಾಜನ ಹೆಸರಾಗಲೀ ಸಾಮಂತನ ಮಹಾಮಂಡಳೇಶ್ವರ ಹೆಸರಿನಲ್ಲಿ ದೇವಾಲಯ ಕಟ್ಟಿಸಿದನ್ನು ನಾವು ಇಲ್ಲಿ ಗಮನಿಸಿಬಹುದು.

ಕ್ರಿ.ಶ. ೧೧೪೦ರ ವಿಷ್ಣುವರ್ಧನೆಂಬುವವನು ಶಿವಗಂಗಾಪರ್ವತದಲ್ಲಿ (ಶಿವಗಂಗೆ) ಗಂಗಾಧರೇಶ್ವರ ದೇವಾಲಯ ಕಟ್ಟಿಸಿ ದಾನನೀಡಿದ ವಿವರ ಹಾಗೂ ತನ್ನ ತಂದೆಯ ಹೆಸರಿನಲ್ಲಿ ಬ್ರಹ್ಮಸಮುದ್ರ ಗ್ರಾಮದಲ್ಲಿ ಬ್ರಹ್ಮೇಶ್ವರ ದೇವಾಲಯ ಮಾಡಿಸಿ, ಪಕ್ಕದಲ್ಲಿ ಜಿನಾಲಯಗಳೂ, ಅದಳೇಶ್ವರ ದೇವಾಲಯಗಳು, ವಿಷ್ಣು ಸಮುದ್ರ ಕೆರೆ, ಒಂದು ಬೂಚಸಮುದ್ರ ಕೆರೆ ತನ್ನ ತಾಯಿಯ ಹೆಸರಿನಲ್ಲಿ ಒಂದು ಕೇಶವ ದೇವಾಲಯ ಕಟ್ಟಿಸಿ ದಾನದತ್ತಿ ನೀಡಿದ್ದನ್ನು ಗಮನಿಸಬಹುದು. ಇಲ್ಲಿಯೂ ಒಂದು ವಿಶೇಷವಿದೆ. ಅಂದರೆ ಬ್ರಹ್ಮಸಮುದ್ರ ಗ್ರಾಮದಲ್ಲಿ ಬ್ರಹ್ಮೇಶ್ವರ ದೇವಾಲಯ ಕಟ್ಟಿಸಿದ್ದು ಮತ್ತು ಈ ಶಾಸನದಲ್ಲಿ ಜೈನ, ಶೈವ, ವೈಷ್ಣವ ದೇವರುಗಳನ್ನು ರಾಜನು ಪೂಜಿಸಿದ್ದು ಈ ಎಲ್ಲಾ ಮೂರು ಧಾರ್ಮಿಕ ವಿಧಿವಿಧಾನಗಳನ್ನು ಮಾಡಿ ತ್ರೈಪುರುಷ ದೇವಾಲಯದ ವಿಶೇಷತೆಯನ್ನು ಈ ಶಾಸನದಲ್ಲಿ ಕಾಣಬಹುದು.

ಕ್ರಿ.ಶ. ೧೧೯೬ ವೀರಬಲ್ಲಾಳದೇವನ ನಿರ್ದೇಶನದ ಮೇರೆಗೆ ಕೆಂಕೆಜಿಯಸಿವಗಂಗೆನಾಥ ದೇವರ ಅಮೃತ ಪಡಿಗೋಸ್ಕರ ರಾಘವದೇವರಸನ ಮಕ್ಕಳು ತಿಪ್ಪರಸ, ಭೈರವದೇವ ಮತ್ತು ಬೂಂಮರಸ ಸರ್ವಮಾನ್ಯವಾಗಿ ದಾನನೀಡಿದ ದಾಖಲೆಯಿದೆ. ವೀರನರಸಿಂಹನ ಕ್ರಿ.ಶ. ೧೨೬೭ರ ಶಾಸನದಲ್ಲಿ ಗವರೇಶ್ವರದೇವರ ಸೇವೆಗೋಸ್ಕರ ಮತ್ತು ದೀಪಾಲಂಕಾರಕ್ಕಾಗಿ ಅಲಂಕರಣ ಸಿಂಗರಿಸುವವರಿಗೆ, ಪೂಜೆಗೋಸ್ಕರ, ೧೬ ಬಗೆಯ ನೈವೇದ್ಯಗೋಸ್ಕರ ಹಾಗೂ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಅಯ್ಯವೊಳೆಐನ್ನೂರ್ವರು (ವ್ಯಾಪಾರಿಗಳು) ನಾನಾದೇಶಿಗಳು ಪಟ್ಟಣದ ಮುಖ್ಯಸ್ವಾಮಿಗಳು ಭಲ್ಲಾಳಸೆಟ್ಟಿ ಮತ್ತು ಹೆಚ್ಚಿನ ಸಂಖ್ಯೆಯ ಸೆಟ್ಟಿಗಳು ಒಟ್ಟುಗೂಡಿ ದಾನನೀಡಿದ್ದಾರೆ. ಈ ಶಾಸನದಲ್ಲಿ ಎಲ್ಲಾ ವರ್ಗದ ಜನರು ಅದರಲ್ಲಿಯೂ ವ್ಯಾಪಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ದೇವರಿಗೆ ದಾನ ನೀಡುವುದನ್ನು ಕಾಣಬಹುದು. ಇದೇ ರಾಜನ ಕ್ರಿ.ಶ. ೧೨೭೭ರ ಶಾಸನದಲ್ಲಿ ಶಿವಪುರನರಸಿಂಹ ಚತುರ್ವೇದಿ ೭೨ ಮಂಗಲದ ಸ್ವಯಂಭುವ್ಯೆಯಿಜನಾಥದೇವರ ಚಿಕ್ಕಗಂಗವಾಡಿಯಲ್ಲಿರುವ

* ಅಧೀಕ್ಷಕ ಶಾಸನತಜ್ಞ, ಶಾಸನ ನಿರ್ದೇಶಕರ ಕಛೇರಿ, ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ, ಹೆಬ್ಬಾಳ ೩ನೇ ಹಂತ ಸಂಕ್ರಾಂತಿ ಸರ್ಕಲ್, ಮೈಸೂರು-೫೭೦೦೧೭.

ಮದ್ದೂರು, ಬೂಡರಹಳ್ಳಿ ಹಲಗೂರಿನಲ್ಲಿರುವ ಪೂಜಾರಿಗಳಿಗೆ ದಾನನೀಡಿದ ದಾಖಲೆಯಿದೆ. ಕ್ರಿ.ಶ. ೧೩ನೇ ಶತಮಾನದ ನಿಜಗಲಿಪುರದ ಶಿವಮಲ್ಲಿಕಾರ್ಜುನ ದೇವರ ಪೂಜೆಗೋಸ್ಕರ ನಿಗದಿಪಡಿಸಿದ ಭೂಮಿಯನ್ನು ಪ್ರಧಾನ ಕಂಬಯ್ಯ ದಂಡನಾಯಕ ದಾನ ನೀಡಿ ಹಾಗೂ ನಿಜಗಲಿಪುರದ ವಾಸವಿರುವವರು ನೌಕರರು ಕೆರೆಯ ಕೆಲಸಕ್ಕೆ ಹಾಗೂ ದೇವರಿಗೆ ದಾನ ನೀಡಿದ ವಿವರವಿದೆ. ಕ್ರಿ.ಶ. ೧೩೦೦ರ ಮುಳಹಳ್ಳಿ ಶಾಸನದಲ್ಲಿ ಅಗರದ ಬ್ರಹ್ಮೇಶ್ವರ ದೇವರಿಗೋಸ್ಕರ ಸಿಗಲನಾಡಿನಲ್ಲಿರುವ ಆಳುವ ಮಾರದೇವ ಮತ್ತು ಸಮಸ್ತಗವುಡ ಪ್ರಜೆಗಳು ದಾನ ನೀಡಿದ ದಾಖಲೆಯಿದೆ. ಕ್ರಿ.ಶ. ೧೩೨೮ರ ಕಾಲದ ಶಿವಪುರ ಹೊಯ್ಸಳ ಶ್ರೀಮುಂಯಲಳೆಪರ್ಸರು ಪುಣ್ಣಾಡಯಪತ್ತನಾಡವರಸ ರಾಜ್ಯವಾಳುತ್ತಿರುವಾಗ ವರಹರೇಶ್ವರ ದೇವರಿಗೆ ನೈವೇದ್ಯ ದಾನನೀಡಿದ ವಿವರವಿದೆ.

ವಿಜಯನಗರ ಮನೆತನದ ಕ್ರಿ.ಶ. ೧೩೫೨ ನಾಗಂಣ ದಂಣಾಯ್ಕ ಒಡೆಯರು ರಾಜ್ಯಭಾರ ಮಾಡುತ್ತಿರುವಾಗ ಅಂಜಡನಾಡ ವಡಿಗೆಯಹಳ್ಳಿ ಮಹಾಸಾಮಂತನಾಗಿರುವಾಗ ತಮ್ಮಯ ನಾಯಕನ ಮಗ ಬಲವಂಕದಱಿಂಮಕಿಯ ನಾಯ್ಕರ ಮಕ್ಕಳು ತಂಮೆಯನಾಯಕನು ಗವಱೀಶ್ವರ ದೇವರಿಗೆ ದಾನನೀಡಿದ ದಾಖಲೆಯಿದೆ. ಕ್ರಿ.ಶ. ೧೩೬೨ರ ವೀರಬುಕ್ಕಂಣವೊಡೆಯರ ಕುಮಾರ ಮಲ್ಲಪ ಒಡೆಯರು ರಾಜ್ಯಭಾರ ಮಾಡುತ್ತಿರುವಾಗ ವೆಂಣಿಕಲಮಾಯಿನಾಯ್ಕನ ಕುಮಾರ ಮಲ್ಲಪ್ಪನು ಬನ್ನೂರಘಟ್ಟದ ಶ್ರೀದಾಮೋದರ ದೇವರಿಗೆ ವೊಪ್ಪಾರನಂದಾ ದೀವಿಗೆಗೆ, ದೀಪಾಲಂಕಾರಕ್ಕೆ ಮತ್ತು ಹೂವಿನಹಾರಕ್ಕೆ ದಾನ ಕೊಟ್ಟ ದಾಖಲೆಯಿದೆ.

ದೇವರಾಯನ ಕ್ರಿ.ಶ. ೧೪೨೫ರ ಜೋಡಿಸಾದಹಳ್ಳಿ ನಾಗರಿ ಭಾಷೆಯಲ್ಲಿರುವ ತಾಮ್ರಶಾಸನದಲ್ಲಿ ತುಂಗಭದ್ರಾ ದಂಡೆಯ ಭಾಸ್ಕರ ಕ್ಷೇತ್ರದಲ್ಲಿ ಚಂದ್ರಮೌಳಿ ದೇವರ ಮುಂದೆ ರಾಜನು ಯಲಹಂಕನಾಡಿನ, ಶಿವನ ಸಮುದ್ರ ಸೀಮೆಯ ಆಲಸೂರು ಸ್ಥಳಕ್ಕೆ ಹೊಂದಿಕೊಂಡಿರುವ ಇಲಿತೊರೆ ಗ್ರಾಮವನ್ನು ದಾನ ನೀಡಿದ ವಿವರವಿದೆ.

ಕ್ರಿ.ಶ. ೧೪೯೯ರ ಇಮ್ಮಡಿ ನರಸಿಂಗರಾಯರ ಕೋಡಂಬಳ್ಳಿ ಶಾಸನದಲ್ಲಿ ಮುಂಮಡಿ ದೇವಗಳ ಮಕ್ಕಳು ತಿಂಮರಸರು ಪೊಯಿಸಣನಾಡ ಚಂನಪಟ್ಟಣದ ಕೋಡಂಬಳ್ಳಿಯ ಮಳಲೇಶ್ವರ ದೇವರಿಗೆ ಹಾಗೂ ಕೋಡಂಬಳ್ಳಿಯ ಸೀಮೆಯೊಳಗೆ ನಿಟ್ಟೂರು ಭಟವಿತ್ತಿಯ ಸ್ತಳದೊಳಗಣ ಸಿಗೆಯ ಗ್ರಾಮವನ್ನು ದಾನ ನೀಡಿದ ದಾಖಲೆಯಿದೆ. ಕ್ರಿ.ಶ. ೧೫೦೬ರ ಸಾಳುವ ಹಿಮ್ಮಡಿ ನರಸಿಂಗ ರಾಯನ ಕಾಲದ ಜ್ಯೋತಿಪುರದ ಶಾಸನದಲ್ಲಿ ಸೋಮೇಶ್ವರ ದೇವಾಲಯಗೋಸ್ಕರ ಸೋಮಯ್ಯಗಾರನ ಮಗ ಕೇಶರಸ ಭೂಮಿ ದಾನ ಕೊಟ್ಟ ಹಾಗೂ ತಿರುಶಿವಮಂದೂರು ಸ್ಥಳದ ೧೨ ಗ್ರಾಮಗಳ ಭೂಮಿಗಳು ಸೇರಿಕೊಂಡಿವೆ.

ಕ್ರಿ.ಶ. ೧೫೩೧ರ ಅಚುತರಾಯನ ಕಲ್ಯ ಶಾಸನದಲ್ಲಿ ಸಿಂಗರಾಜ ಒಡೆಯರ ಮಗ ನೀಲಿಕರಾಜನು ಕಲ್ಲೇಶ್ವರ ದೇವರಿಗೆ ಪುರಗ್ರಾಮವನ್ನು ದಾನ ನೀಡಿದ ವಿವರವಿದೆ. ೧೫೩೨ರ ಶಿವಗಂಗೆ ಬೆಟ್ಟದ ಶಾಸನದಲ್ಲಿ ಗಂಗಾಧರದೇವರ ಅಭಿಷೇಕ ಪೂಜೆ ನೈವೇದ್ಯ ದೀಪಾರಾಧನೆ ಮೊದಲಾದ ಅಮೃತಪಡಿ ಸರ್ವಕಾಲದಲ್ಲೂ ನಡೆಸಿಕೊಂಡು ಬರುವುದಕ್ಕೆ ರಾಜನು ಶ್ರೀಪತಿಹಳ್ಳಿ ಗ್ರಾಮವನ್ನು ಕೊಟ್ಟ ವಿವರವಿದೆ.

ಸದಾಶಿವರಾಯನ ಕಾಲದ ಕ್ರಿ.ಶ. ೧೫೫೮ರ ಕಲ್ಯ ಗ್ರಾಮದ ಶಾಸನದಲ್ಲಿ ವೀರಭದ್ರ ದೇವರಿಗೆ ಕೆಂಪಶಿದ್ದದೇವರಿಗೆ ಕೂರ್ಲಕುಂಟೆ ಕೊಂಡಮಾನಾಯ್ಕನವರು ಕಲ್ಯಹದ ಅಚಪದಂಣಾಯ್ಕರು ತೆರಿಗೆರಹಿತವಾಗಿ ದಾನ ನೀಡಿದ ವಿವರವಿದೆ. ೧೫೫೯ರ ನಂಜಿಗುಳಿಯ ಅಮೃತ ಮಲ್ಲಿಕಾರ್ಜುನ ಲಿಂಗಕ್ಕೆ ಅಮೃತಪಡಿ ನೈವೇದ್ಯಗೋಸ್ಕರ ನಂಜಿಗುಳಿಯಗ್ರಾಮದ ಸಿಮಸಂದ್ರವನ್ನು ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. ೧೫೬೧ರ ಚಿಕ್ಕಣಸೆಟ್ಟಿಯ ಬೇಡಿಕೆ ಮೇರೆಗೆ ಶ್ರೀರಂಗರಾಜಯ ಮಹಾಅರಸು ವೀರಭದ್ರದೇವರಿಗೋಸ್ಕರ ಹೊಸಹಳ್ಳಿ ಗ್ರಾಮವನ್ನು ದಾನನೀಡಿದ ವಿವರವಿದೆ. ಕ್ರಿ.ಶ. ೧೫೬೪ರ ಮೂಗಬಾಳ ತಾಮ್ರಶಾಸನದಲ್ಲಿ ಚಿಕ್ಕರಾಯ ತಮ್ಮಗೌಡರ್ಯೆಯನ ಮಗ ತಿಮ್ಮಯ್ಯಗೌಡರ್ಯೆಯನ ಮೊಮ್ಮಗ ಸೊಗಟ್ಟೂರು ಮುಮ್ಮಡಿ ಚಿಕ್ಕರಾಯ ತಮ್ಮಪ್ಪಗೌಡರ್ಯೆಯನು ತನ್ನ ನೆಚ್ಚಿನ ಸೋಮೇಶ್ವರ ಮತ್ತು ವೀರಭದ್ರದೇವರ ನೈವೇದ್ಯಗೋಸ್ಕರ ಹೊಸಕೋಟೆಸೀಮೆಯ ಹುಲ್ಲೂರು ಪಟ್ಟಾಡಿಯ ಮುಗುಬಾಳು ಗ್ರಾಮವನ್ನು ದಾನನೀಡಿದ ವಿವರವಿದೆ.

ಕ್ರಿ.ಶ. ೧೬೩೦ರ ಶ್ರೀ ರಂಗದೇವನ ಮಾಗಡಿಯ ತಾಮ್ರಶಾಸನದಲ್ಲಿ ಮಾಗಡಿ ಸೀಮೆಯಲ್ಲಿ ಹೊಂದಿ ಕೊಂಡಿರುವ ಎರಡು ಗ್ರಾಮಗಳಾದ ಕಂಚುಗಾರನಹಳ್ಳಿ ಮತ್ತು ಹಾಲು ಸಿಂಗನಹಳ್ಳಿ ರಾಮೇಶ್ವರಸ್ವಾಮಿದೇವರ ನಿತ್ಯಪೂಜೆಗಳಿಗೆ ಮತ್ತು ಮಹಾರಥೋತ್ಸವ ಪರ್ವತಿಥಿ ಸಕಲ ಉತ್ಸವ, ದೀಪಾಲಂಕಾರಗಳಿಗೆ ಎಲ್ಲಾ ಹಬ್ಬಗಳಿಗೆ ಪ್ರಿಯ ಭಕ್ತರಾದ ಯಲಹಂಕನಾಡ ಪ್ರಭುಗಳಾದ ಕೆಂಪನಂಜೇಗೌಡರ ಪೌತ್ರರಾದ ಹಿರೀಕೆಂಪೇಗೌಡರ ಪುತ್ರರಾದ ಯಿಂಮಡಿ ಕೆಂಪೇಗೌಡರು ದಾನ ನೀಡಿದ ದಾಖಲೆಯಿದೆ. ಮತ್ತೊಂದು ತಾಮ್ರ ಶಾಸನದಲ್ಲಿ ಕ್ರಿ.ಶ. ೧೬೬೯ರಲ್ಲು ಮಾಗಡಿ ಸೀಮೆಯ ಹಂಚಿಕುಪೆ, ವೊೀತ, ಅತಿಮಿಗೆರೆ, ಕೆಂಪಾಪುರ ನಾಲ್ಕು

ಗ್ರಾಮಗಳನ್ನು ವೀರೇಶ್ವರಸ್ವಾಮಿಯ ದೇವರ ನಿತ್ಯಪೂಜೆ ದೀಪಾಲಂಕಾರಕ್ಕೆ, ರಥೋತ್ಸವ ಮತ್ತು ಎಲ್ಲಾ ಹಬ್ಬಗಳಿಗೆ ಹಿರಿಯ ಕೆಂಪೇಗೌಡರ ಪುತ್ರರಾದ ಯಿಂಮಡಿ ಕೆಂಪೇಗೌಡರ ದಿನಹಂ ಮಾಡಿ ಕೊಟ್ಟ ತಾಂಬ್ರ ಶಾಸನ ನೀಡಿದಂತೆ ಹೇಳಿದೆ.

ಕ್ರಿ.ಶ. ೧೭೩೨ರ ಚಾಮರಾಜ ಒಡೆಯರ್ ಹಲಸಬೇಲ ಶಾಸನದಲ್ಲಿ ದೊಡ್ಡದೇವರ ದೇವತೆಗಳ ಚಕ್ರವರ್ತಿಯ ಸೇವರುಗಳಿಗೆ ಚಾಮುಂಡೇಶ್ವರಿ ದೇವತೆಗೆ ರಾಜನು ದಾನ ನೀಡಿದ ವಿವರವಿದೆ. ಕ್ರಿ.ಶ. ೧೭೫೦ರ ಕೃಷ್ಣರಾಜ ಒಡೆಯರ ಮಹದೇವ ಕೊಡಿಗೆಹಳ್ಳಿಯ ಶಾಸನದಲ್ಲಿ ನಂಜನಗೂಡು ನಂಜುಡೇಶ್ವರ ದೇವರ ಚನರಾಯಪಟ್ಟಣದ ಹೋಬಳಿಗೆ ಸೇಲುವ ದ್ಯಾವಂಡಹಳ್ಳಿ ಸ್ಥಳದ ಮಹದೇವ ಕೊಡಿಗೆ ಗ್ರಾಮ ೧, ಗೆರೆಪುರ ಗ್ರಾಮ ೧, ಯಡಯೂರು ಗ್ರಾಮ ೧, ಪುರ ಗ್ರಾಮ ೧, ಅಂತುಗ್ರಾಳ ೪, ಕೆರೆ ೧, ಸಅಗ್ರಾಮಾಯಿಯವರಿಗೆ ಸರ್ವಮಾನ್ಯವಾಗಿ ಬಿಟ್ಟ ವಿವರವಿದೆ. ಕ್ರಿ.ಶ. ೧೭೬೩ರ ಇದೇ ರಾಜನ ಸೊಂಡೇಕೊಪ್ಪ ಮಸೀದಿಗೋಸ್ಕರ ನೆಲಮಂಗಲದ ಮುಟ್ಟೇಣಕರುಚಿ ಡಾಬನಾಯಕನಹಳ್ಳಿ ಗ್ರಾಮಗಳ ಕಂದಾಯ ಬರುವ ೨೭ ವರಹಗಳನ್ನು ಪಡೆದ ದಾಖಲೆಯಿದೆ. ಕ್ರಿ.ಶ. ೧೭೬೫ ವಾಜರಹಳ್ಳಿ ಶಾಸನದಲ್ಲಿ ರಾಜನ ಆದೇಶದ ಮೇರೆಗೆ ಬೆಂಗಳೂರಿನ ಜಿಗಣಿ ಹೋಬಳಿಯ ವಾಜರಹಳ್ಳಿ ಹತ್ತಿರ ಪವಿತ್ರವಾದ ಶ್ರೀಯವರ ದೇವಾಲಯದ ಸೇವೆಗೆ ದೀಪ ಆರಾಧನೆಗೆ ಪುಷ್ಪ ಸಹಸ್ರನಾಮಮಂತ್ರ ಪುಷ್ಪ ಚತುರ್ವೇದ ಪಾರಾಯಣ, ಹಬ್ಬಗಳು ಮತ್ತು ಬೆಳಕು ನೈವೇದ್ಯಗೋಸ್ಕರ ಮಹಾರಾಜರ ಅಧಿಕಾರಿಗಳು, ಪಾರುಪತ್ಯಗಾರ, ಶಾನುಭೋಗ, ಗೌಡ ಮತ್ತು ಪಂಚಾನಾನರು, ದೇವಸ್ಥಾನಕ್ಕೆ ಭೂಮಿ ನೀಡಿದ ಬಗ್ಗೆ ವಿವರವಿದೆ. ಕ್ರಿ.ಶ. ೧೮೮೫ರ ಬೆಂಗಳೂರಿನ ಅರಳೇಪೇಟೆ ಮಂಚಿಸೋಮೇಶ್ವರ ದೇವರ ಪೂಜೆ, ದೀಪಾಲಂಕಾರಕ್ಕೆ ಪೂಜಾರಿ ಮತ್ತು ಸೇವಕರುಗಳಿಗೆ ಶಾಂಭಟ್ಟನ ನೊಮ್ಮಗ ಧರ್ಮದೀಕ್ಷಿತರು ೪೦೦ ರೂಗಳನ್ನು ಶಿಮೂಗಳಿಂದ ತಂದು ದಾನ ನೀಡಿದ್ದಾನೆ.

ಕ್ರಿ.ಶ. ೧೬೩೯ರ ದೇವರಾಜಒಡೆಯರ ಕಾಲದ ಮುಳಗಾಳ ಶಾಸನದಲ್ಲಿ ರಾಜನು ಮಹದೇಶ್ವರ ದೇವರ ನೈವೇದ್ಯ, ದೀಪಾಲಂಕಾರ, ತೆಪ್ಪೋತ್ಸವ ಸೇವೆಗೋಸ್ಕರ, ಗುರಿಕಾರರು ೧೯ ಪಾರುಪತ್ಯಗಾರರು ೩, ಪಣ ಪಂಕಮಣಿಯಗಾರರು, ಸೇನಭೋಗರು, ರಾಹುತರು ೨ ಪಣ, ರಾಣವುಗರು, ೧ ಪಣ, ಮತ್ತು ಇತರರು ಕಾನಕಾನಹಳ್ಳಿ ಸೀಮೆಯ ಗಡಿಗಳು ಈ ಸುಂಕವನ್ನು ಪ್ರತಿವರ್ಷ ಖಜಾನೆಗೆ ಸಲ್ಲಿಸಿ ದೇವರಿಗೆ ಕೊಡುವುದಕ್ಕೆ ಆದೇಶವಿದೆ ಎಂದು ತಿಳಿಸುತ್ತದೆ.

ತೇದಿ ಇಲ್ಲದ ಬನ್ನಿಮುಕ್ಕೊಡ್ಲು ಗ್ರಾಮದ ಶಾಸನದಲ್ಲಿ ವೀರೇಶ್ವರ ಒಡೆಯರ ಮಗ ಬೇಸಿಗೆನಾಡಿನ ಪ್ರಭುಚನ್ನವೀರಣೊಡೆಯರು ರಾಮದೇವಾಲಯ ಕಟ್ಟಿಸಲು ಹಣ ೧೨೦, ಹೊನ್ನು ಮತ್ತು ೧೨೦ ಸಲಿಗೆ ಭತ್ತ ಮತ್ತು ಕಲ್ಲುಗಳನ್ನು ಕೊಟ್ಟ ಬಗ್ಗೆ ವಿವರವಿದೆ. ವೊಳಗೆರೆ ಕಲ್ಲುಹಳ್ಳಿಯ ಶಾಸನದಲ್ಲಿ ಲಕ್ಕನಾಯಕ, ಕಾಟಯನಾಯಕರು ಹನುಮಂತ ಮತ್ತು ರಘುನಾಥದೇವರ ನೈವೇದ್ಯ ನಂದಾದೀವಿಗೆಗೋಸ್ಕರ ಬಿಲಗೊಂಡನಹಳ್ಳಿ ಸೀಮೆಗೆ ಹೊಂದಿಕೊಂಡಿರುವ ಕತ್ತರಿಕುಪ್ಪ ಗ್ರಾಮುವನ್ನು ದಾನವಾಗಿ ಭೂಳದಾಸಯ್ಯನಿಗೆ ಕೊಟ್ಟ ವಿವರವಿದೆ.

ವೈಷ್ಣವ ಶಾಸನಗಳು : ಕ್ರಿ.ಶ. ೧೨೯೯ರ ವೀರಬಲ್ಲಾಳನ ನಿಟ್ಟೂರಿನ ಅಂಕನಾಥಸ್ವಯಂಭು ದೇವರ ಅಮೃತಪಡಿಗೆ ನಂದಾದೀವಿಗೆಗೆ, ಹಿರಯ ವ್ಯಾಪಾರಿಗಳು, ನಾನಾದೇಶಿಗಳು ಮಲಯಾಳ ಮುಖ್ಯಸ್ಥ ವಾಸುದೇವನಾಯಕನ ಮಗ ಮತ್ತು ಬೇರೆಯವರು ಒಟ್ಟಿಗೆ ಕೂಡಿ ದಾನನೀಡಿದ ದಾಖಲೆಯಿದೆ.

ಕ್ರಿ.ಶ. ೧೩೧೫ರ ಕಲ್ಲೂರು ಶಾಸನದಲ್ಲಿ ಅಲ್ಲಳನಾಥ ದೇವರಿಗೋಸ್ಕರ ಮರಗೆಲಸಗಾರರು, ಕಬ್ಬಿಣ ಕೆಲಸಗಾರರು, ಚಿನ್ನ, ಬೆಳ್ಳಿ, ಕೆಲಸಗಾರರು ಮತ್ತು ವೀರಪಾಂಚಲರು ನಾಲ್ಕು ನಾಡಿನವರು ಒಟ್ಟುಗೂಡಿರುವುದನ್ನು ಕ್ರಿ.ಶ. ೧೩೧೯ರ ಮಣ್ಣೆ ಶಾಸನದಲ್ಲಿ ಹಿರಿತಿರುಮಲೆದೇವರ ಪೂಜೆ ಮತ್ತು ಸೇವೆಗೆ ಹಾಲು ಮತ್ತು ಬೆಣ್ಣೆಗೆ ಅಂಬಲಿಗೆಜ್ ಪುರುಶನಹಳ್ಳಿ ಮಾಥಗಜಿ ಪ್ರಭುಗೌಡನಿಗೆ ಕೊಟ್ಟ ಸ್ತಾನಮಾನ್ಯದ ಶಾಸನ. ಕ್ರಿ.ಶ. ೧೩೨೮ ಚಿಕ್ಕಜಾಲದ ಶಾಸನದಲ್ಲಿ ಪ್ರಧಾನ ಪೊಂನಯನವರ ಮಕ್ಕಳು ಶ್ರೀ ಹೊಯದಂಣಾಯಕರೂ ಎಲ್ಲಹಕ್ಕಗೌಡ ಮಯಿಲಗೆ ಗುಉಡ ಮತ್ತು ಇತರರು ಪ್ರಜೆಗಳ ಜಾಲದ ಚನ್ನಕೇಶ್ವ ದೇವರಿಗೆ ಸಾಮೂಹಿಕವಾಗಿ ದಾನನೀಡಿದ್ದಾರೆ.

ಕ್ರಿ.ಶ. ೧೩೮೨ರ ಚಿಕ್ಕಜಾಲದ ಶಾಸನದಲ್ಲಿ ಜಾಲದ ಕೇಶವನಾಥದೇವರಿಗೆ ಎಲಹಂಕನಾಡ ಸುಂಕಾಧಿಕಾರಿ ರಾಮರಸನ ಮಕ್ಕಳು ದೇವರ್ಸರು ಗ್ರಾಮದಿಂದ ೩ ಹೊನ್ನನ್ನು ನಂದಾದೀವಿಗೆಗೆ ದಾನ ನೀಡಿದ ವಿವರವಿದೆ. ಮತ್ತೊಂದು ಶಾಸನದಲ್ಲಿ ಇದೇ ದೇವರಿಗೆ ಮೊರಸನಾಡು ಸುಂಕಾಧಿಕಾರಿ ರಾಮರಸನ ಮಕ್ಕಳು ದೇವರಶರು ಹಾಗೂ ಗ್ರಾಮದ ಮಗ್ಗದ ವರು, ಬಡಗಿಗಳು, ಅಗಸರು, ನಾವಿಂದರು ಕುಂಬಾರರು, ಸಮಸ್ತ್ರ ಜನರು, ಕುಲಕಸಬಿನವರೂ ದೇವರಿಗೆ ದಾನನೀಡಿದ ವಿವರವಿದೆ. ಕ್ರಿ.ಶ. ೧೩೮೬ರ ನಲ್ಲೂರು ಶಾಸನದಲ್ಲಿ ಮಹಾ ಸಾಮಂತಾಧಿಪತಿ ಸೊಂಣಯನಾಯಕರ ಕುಮಾರ ಚಿಕಅಂತಿಯನಾಯಕರು ತಿರುಮಲನಾಥ ದೇವರಿಗೆ ದೀಪಮಾಲೆ ಕಂಭವನ್ನು ದೇವರ ಮುಂದೆ ನಿಲ್ಲಿಸಿದ ದಾಖಲೆಯಿದೆ.

ವಿಜಯನಗರ ಒಂದನೇ ದೇವರಾಯನ ೧೪೦೮ರ ಕಾಲದ ದೊಮ್ಮಲೂರು ಶಾಸನದಲ್ಲಿ ನಾಗಪ್ಪದಂಡನಾಯಕ ಎಲಕ್ಕನಾಡು ಆಳುತ್ತಿರುವಾಗ ದೊಮ್ಮಲೂರು ಬೊಕ್ಕನಾಥ ದೇವರ ನಂದಾದೀವಿಗೆಗೆ ನಿಗದಿಪಡಿಸಿದ ಸಮಯದಿಂದ ಆದಾಯ ಸುಂಕಗಳಿಂದ ದಾನನೀಡಿದ ವಿವರವಿದೆ.

ಕ್ರಿ.ಶ. ೧೪೩೦ರ ಎರಡನೇ ದೇವರಾಯನ ಬೆಳತೂರು ಶಾಸನದಲ್ಲಿ ಪೆಂಮೆಯನಾಯಕರು ರಾಜ್ಯವಾಳುತ್ತಿರುವಾಗ ತೊಱವಳಿನಾಡ ಮಹಾಪ್ರಭು ಮಾಚಿದೇವನಮಗ ದೇವಜೀಯ ದೇವಿಜೀಯನಮಗ ಚೊಕಿಜೀಯನ ಮಗ ದೇವಜೀಯನು ತಿರುಮಲದೇವರ ಸೇವೆಗೆ ಮಾಡಿಸಿದ ಕಂಭ, ಹಾಗೂ ದೇವರ ನಯಿವೇದ್ಯಕೆ ಹೊಲ ೮೪ ಗದ್ದೆ ಕೊಟ್ಟ ದಾಖಲೆಯಿದೆ. ಇದೇ ರಾಜನ ಕ್ರಿ.ಶ. ೧೪೪೦ರ ಶಾಸನದಲ್ಲಿ ಹೆಜ್ಜುಂಕದ ಅಧಿಕಾರಿ ಮಲ್ಲರಸರು ದೊಂಬಲೂರು ಚೊಕ್ಕನಾಥದೇವರಿಗೆ ನಾಲ್ಕು ಕಡೆಯ ಗಡಿರೇಖೆಗಳಿಂದ ಹೆಜ್ಜುಂಕ ತೆರಿಗೆಗಳಿಂದ ಆಹಾರಕ್ಕೆ ಧಾರಾಪೂರ್ವಕವಾಗಿ ದಾನ ನೀಡಿದ ವಿಷಯವನ್ನು ತಿಳಿಸುತ್ತದೆ.

ಕ್ರಿ.ಶ. ೧೫೨೪ರ ಕೃಷ್ಣದೇವರಾಯನ ಮಾರೇನಹಳ್ಳಿ ಶಾಸನದಲ್ಲಿ ತಿಂಮಣ್ಣದಂಡನಾಯಕರು ಕಲ್ಲೂರು ವರದರಾಜದೇವರ ಸಾಯಂಕಾಲದ ಪೂಜೆಗೋಸ್ಕರ ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. ೧೫೩೦ರ ಅಚ್ಯುತರಾಯರ ಹಾರೋಹಳ್ಳಿ ಪೂಜೆ ಸಿಂಗಾಪುರದ ತಿರುವೆಂಗಲನಾಥ ದೇವರ ಪೂಜೆ, ಅಂಗರಂಗ ವೈಭೋಗ ಅಮೃತಪಡಿ, ನೈವೇದ್ಯ ರಾಮಾನುಜ ಕೋಟಕ್ಕೆ ಸಲಬೇಕೆಂದು ಕೃಷ್ಣಪ್ಪನಾಯಕ ಸೋಲುರ ಬಸವಪ್ಪನಾಯಕನ ಮಕ್ಕಳು ದಾನ ನೀಡಿದ ವಿವರವಿದೆ. ಕ್ರಿ.ಶ. ೧೪೩೧ರ ಇದೇ ರಾಜನ ಕಾಲದ ಶಾಸನದಲ್ಲಿ ಕಾಡನೂರ ಚನ್ನಕೇಶವ ದೇವರಿಗೆ ನಾಗಪ್ಪನಾಯಕನ ಮಗ ಸೊಣ್ಣಪ್ಪನಾಯಕ ದಳವಾಯಿ ಗಂಡರಗೊಳ್ಳಿ ಎಲ್ಲಾ ತೆರಿಗೆಗಳನ್ನು ಮನ್ನಾ ಮಾಡಿ ತುಂಗಭದ್ರಾ ದಂಡೆಯ ಹತ್ತಿರ ವಿರೂಪಾಕ್ಷ ದೇವರ ಮುಂದೆ ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. ೧೫೪೪ರ ಸದಾಶಿವರಾಯನ ಶಾಸನದಲ್ಲಿ ಎಲಕನಾಡ ಸಿವನಸಮುದ್ರ ಸೀಮೆವೊಳಗಣ ಅಲ್ಲಾಳಸಂದ್ರ ಗ್ರಾಮವನ್ನು ವಿಠಲೇಶ್ವರ ಅರಸುಗಳಿಗೆ ಪುಣ್ಯವಾಗಬೇಕೆಂದು ಕೆರೆ, ಕುಂಟೆ, ಗದ್ದೆ, ಬೆದ್ದಲು, ತೋಟವನ್ನು ಜಕ್ಕೂರ ಅಲ್ಲಾಳನಾಥದೇವರ ಅಮೃತಪಡಿ ನೈವೇದ್ಯಗೋಸ್ಕರ ರಾಚುರ ನರಸಿಂಹಯ್ಯಗಳು ದಾನನೀಡಿದ ದಾಖಲೆಯಿದೆ. ಕ್ರಿ.ಶ. ೧೫೫೪ರ ಇದೇ ರಾಜನ ಕುಂಟಗ್ರಾಮದ ಶಾಸನದಲ್ಲಿ ಸೋಲೂರಿ ನಿಲಗಿರಿ ತಿರುವೆಂಗಳನಾಥದೇವರ ಆರಾಧನೆ ಅಮೃತಪಡಿಗೆ ಶಂಕರಯ್ಯನು ದಾನ ನೀಡಿದ ವಿವರವಿದೆ.

ಆವತಿ ಮನೆತನದ ಶಾಸನಗಳು : ಕ್ರಿ.ಶ. ೧೬೯೮ರ ದೇವರನಹಳ್ಳಿ ೨೩ ತಾಮ್ರಶಾಸನಗಳು ನಾಡಪ್ರಭುಗಳಾದ ಮುದಬಯಿರೆಗೌಡ್ರ ಪುತ್ರರಾದ ಯಿಂಮ್ಮಡಿ ಸೊಣಬಯಿರೆಗೌಡನ ಧರ್ಮಪತ್ನಿ ಕೆಂಪಂಮ್ಮನವರ ಪುತ್ರರಾದ ಗೋಪಾಲಗೌಡರು ಶ್ರೀಮಂತು ಗೋಪಾಲಸ್ವಾಮಿ ಸೇವೆಗೋಸ್ಕರ ಹಲವು ಗ್ರಾಮಗಳನ್ನು ಸಮರ್ಪಿಸಿದ ವಿವರವಿದೆ. ಮತ್ತೊಂದು ಶಾಸನದಲ್ಲಿ ಮದನಗೋಪಾಲ ದೇವರ ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವ, ರಥೋತ್ಸವ ಸೇವಾರ್ಥವಾಗಿ ವಡಿಗೇನಹಳ್ಳಿ ಹೋಬಳಿ ಮೇಲೂರು ಗ್ರಾಮ ೧ ಮಳ್ಳೂರು ಗ್ರಾಮ ೧ ಅರ್ಚಕರಿಗೆ ಸೋಮತ್ತನಹಳ್ಳಿ ಹೋಬಳಿ ಆವರವಳ್ಳಿ ಗ್ರಾಮ ೧ ಹೊಸಕೆರೆ ೧ ಕೆಂಪಂಮ್ಮನವರ ತೋಟ ಇತ್ಯಾದಿಗಳನ್ನು ದಾನ ನೀಡಿದ ವಿವರವಿದೆ. ಇನ್ನೊಂದು ಶಾಸನ ಮದನಗೋಪಾಲಸ್ವಾಮಿ ದೇವರಿಗೆ ಕೆಲವು ಗ್ರಾಮಗಳನ್ನು ದತ್ತಿ ನೀಡಿದ ವಿವರವಿದೆ.

ಮೈಸೂರಿನ ಒಡೆಯರ ಮನೆತನ : ಕ್ರಿ.ಶ. ೧೭೨೦ ಕೃಷ್ಣರಾಜ ಒಡೆಯರ ನರಸಿಂಹಪುರ ಶಾಸನದಲ್ಲಿ ಬಿಳಿಗಲಿ ದೇಸರಾಜಯ್ಯನ ಬೇಡಿಕೆ ಮೇರೆಗೆ ಕೊರಗಿರಿದುರ್ಗ್ಗದ ಲಕ್ಷ್ಮೀನರಸಿಂಹಸ್ವಾಮಿಯವರ ದೀಪಾರಾಧನೆ ಸಕಲ ಸೇವೆಗೋಸ್ಕರ ದಾನ ನೀಡಿದ ವಿವರವಿದೆ. ಕ್ರಿ.ಶ. ೧೭೯ರ ಇದೇ ರಾಜನ ಕಾಲದ ಶಾಸನದಲ್ಲಿ ದೇವನಪುರ ರಾಜ್ಯಕ್ಕೆ ಹೊಂದಿಕೊಂಡಿರುವ ವಡಿಗೆಹಳ್ಳಿ ಚನ್ನಕೇಶವಸ್ವಾಮಿ ಸೇವೆಗೋಸ್ಕರ ದೊಡ್ಡ ಬೈರಪಗೌಡನು ಕೆಲವು ಗ್ರಾಮಗಳನ್ನು ದತ್ತಿ ಬಿಟ್ಟ ವಿವರವಿದೆ.

ಕ್ರಿ.ಶ. ೧೮೨೦ರ ರಾಜಕಂಠೀರವರ ಬೆಂಗಳೂರಿನ ತಾಮ್ರಶಾಸನದಲ್ಲಿ ಸುಗ್ರೀವ ವೆಂಕಟೇಶ್ವರ ದೇವರಿಗೋಸ್ಕರ ಪೂಜೆ, ದೀಪಾಲಂಕಾರಕ್ಕೆ ಮತ್ತು ಹಬ್ಬಗಳಿಗೋಸ್ಕರ ಈ ಸ್ಥಳದ ಮೇಲುಸರಕಾರು ವಂಶದ ೩೯ ಗೋತ್ರದ ಕ್ಷತ್ರಿಯರು ದಾನ ನೀಡಿದ ತಾಮ್ರ ಶಾಸನವಾಗಿದೆ.

ಬೆಂಗಳೂರು ಜಿಲ್ಲೆಯ ಶಾಸನಗಳಲ್ಲಿ ರಾಷ್ಟ್ರಕೂಟರು, ಹೊಯ್ಸಳರು, ಆವತಿ, ವಿಜಯನಗರ, ಮೈಸೂರಿನ ಒಡೆಯರ ಶಾಸನಗಳನ್ನು ಅಧ್ಯಯನ ಮಾಡಿದಾಗ ಎಲ್ಲಾ ಧರ್ಮದವರನ್ನು ಅಂದರೆ ಶೈವ, ವೈಷ್ಣವ ಶಾಸನಗಳನ್ನು ಗಮನಿಸಿದಾಗ ರಾಜರು ಎಲ್ಲಾ ಧರ್ಮದವರನ್ನು ಪರಮಧರ್ಮ ಸಹಿಷ್ಣುತೆಯನ್ನು ಕಾಪಾಡಿಕೊಂಡು ಬಂದಿರುವುದಕ್ಕೆ ಇವರ ಶಾಸನಗಳೇ ಸಾಕ್ಷಿಯಾಗಿವೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಎ.ಆರ್.ಐ. ರಿಪೋರ್ಟುಗಳು.

೨. ಎ.ಕ. ಸಂಪುಟ ಸಂಖ್ಯೆ ೯.

೩೪

ವಿಜಯನಗರ ಇತಿಹಾಸಕ್ಕೆ ಸಂಬಂಧಿಸಿದ ಕೆಲವು ಪ್ರಾಚೀನ ಶಾಸನಗಳ ಮರು ಅಧ್ಯಯನ

ಡಾ. ಪಿ.ಎನ್.ನರಸಿಂಹಮೂರ್ತಿ*

ವಿಜಯನಗರ ಸಾಮ್ರಾಜ್ಯದ ಪ್ರಾರಂಭಿಕ ಕಾಲದ ಬಗ್ಗೆ ಹೊಸಹೊಸ ಪುರಾವೆಗಳು ದೊರಕುತ್ತಿವೆ. ಆದರೂ ವಿದ್ವಾಂಸರಲ್ಲಿ ಈ ಬಗ್ಗೆ ಅನುಮಾನಗಳು ಇನ್ನೂ ಹೊಗೆಯಾಡುತ್ತಿವೆ. ಹಳೆಯ ಅಭಿಪ್ರಾಯಗಳಿಗೆ ಜೋತು ಬೀಳುವ ಪರಿಪಾಠ ಮುಂದುವರೆದಿದೆ. ಹೊಸ ಆಧಾರಗಳನ್ನು ಹಳೆಯ ವಿಚಾರಗಳೊಂದಿಗೆ ತಾಳೆಹಾಕುವ ಇಲ್ಲವೆ ಅದನ್ನು 'ಕೂಟ' ಎಂದು ವರ್ಗೀಕರಿಸುವ ಕಾರ್ಯವೂ ನಡೆದಿದೆ. ಇದರಿಂದಾಗಿ ವಿಜಯನಗರದ ಹುಟ್ಟು ಕ್ರಿ.ಶ. ೧೩೩೬, ೧೩೪೬, ೧೩೬೬ರಲ್ಲಾಯಿತು ಎಂಬ ಅಭಿಪ್ರಾಯಗಳು ಮೂಡಿಬಂದಿವೆ. ಇವು ಸಾಕಷ್ಟು ಚರ್ಚೆಗೆ ಗ್ರಾಸವೂ ಆಗಿವೆ.

ಈ ರೀತಿಯ ಅಭಿಪ್ರಾಯಗಳು ಮೂಡಲು ಮುಖ್ಯ ಕಾರಣವಾದ ಸಂಗತಿ ಎಂದರೆ ಶಾಸನಗಳ ಅಧ್ಯಯನ. ಬಹುತೇಕ ಸಂದರ್ಭಗಳಲ್ಲಿ ವಿಜಯನಗರದ ಪ್ರಾರಂಭಿಕ ಕಾಲದ ಶಾಸನಗಳು ಸರಿಯಾಗಿ ಅರ್ಥೈಸಲ್ಪಟ್ಟಿಲ್ಲ. ಈ ಬಗ್ಗೆ ಈಗಲಾದರೂ ಗಮನಹರಿಸುವುದು ಸೂಕ್ತ. ಪ್ರಸಕ್ತ ಅಧ್ಯಯನಕ್ಕೆ ಕೆಲವು ಶಾಸನಗಳನ್ನು ಆಯ್ಕೆಮಾಡಿಕೊಂಡು ವಿಜಯನಗರ ಹುಟ್ಟಿನ ಕಾಲವನ್ನು ನಿರ್ಧರಿಸುವ ಪ್ರಯತ್ನ ಮಾಡಲಾಗಿದೆ.

೧. ಶೃಂಗೇರಿ ಶಿಲಾಶಾಸನ

ಶೃಂಗೇರಿಯಲ್ಲಿ ದೊರೆತಿರುವ ಅತ್ಯಂತ ಪ್ರಮುಖ ಶಾಸನ ಇದು (ಎ.ಕ. ೧೧ಸಂ. ೧) ಬಹುತೇಕ ವಿದ್ವಾಂಸರ ಗಮನವನ್ನು ಇದು ಸೆಳೆದಿದೆ. ಇದಕ್ಕೆ ಮುಖ್ಯ ಕಾರಣ ವೀರಹರಿಯಪ್ಪೊಡೆಯನು ತನ್ನ ಸೋದರರೊಡಗೂಡಿ ಶ್ರೀ ಭಾರತೀತೀರ್ಥ ಶ್ರೀ ಪಾದಂಗಳ ದರ್ಶನಾರ್ಥ ಶೃಂಗೇರಿಗೆ ಬಂದದ್ದು. ಈ ಶಾಸನದ ಕಾಲ ಕ್ರಿ.ಶ. ೧೩೪೬ ಮಾರ್ಚ್ ೯. ಈ ಶಾಸನದಲ್ಲಿ ಇರುವ ಒಂದು ಮುಖ್ಯ ಶ್ಲೋಕ ಇಂತಿದೆ.

> **ಪೂರ್ವಾಪರ ಸಮುದ್ರಾಂತವ್ ಜಿತ್ವಾಹರಿಹರೋ ಭೂವವ್ ।**
> **ಜಯೋತ್ಸವಮ್ ಖ್ಯಾಪಯಿತುಮಕರೋಧರ್ಮ ಮುತ್ತಮ್॥**
> **(ಶಾಸನ ಪಾಠ ಸಾಲು ೯-೧೦)**

ಪೂರ್ವ ಮತ್ತು ಪಶ್ಚಿಮ ಸಮುದ್ರಗಳ ನಡುವಿನ (ವಿಶಾಲವಾದ) ಭೂಪ್ರದೇಶವನ್ನು ಗೆದ್ದು ಅಲ್ಲಿ ಉತ್ತಮವಾದ ಧರ್ಮವನ್ನು ಸ್ಥಾಪಿಸಿ ಜಯಸಾಧಿಸಿದ ಹರಿಹರ ಎಂದು ಇದರ ಅರ್ಥ. ಹರಿಹರ ಇಲ್ಲಿ ಪಟ್ಟಾಭಿಷಿಕ್ತನಾಗಿ ವಿಜಯೋತ್ಸವ ಆಚರಿಸಿದ ಎಂದು ಹಲವರು ಇದನ್ನು ಅರ್ಥೈಸಿದ್ದಾರೆ. ಶಾಸನದಲ್ಲಿ ಈ ಅರ್ಥ ಕಲ್ಪಿಸುವುದಕ್ಕೆ ಎಲ್ಲೂ ಅವಕಾಶಗಳೇ ಇಲ್ಲ. ಆದರೂ ಹರಿಹರ ಪಟ್ಟಾಭಿಷಿಕ್ತನಾದ ಕಾರಣ ವಿಜಯನಗರದ ಹುಟ್ಟು ೧೩೪೬ರಲ್ಲಿ ಎಂದು ಕೆಲವರು ವಾದಿಸುತ್ತಾರೆ.

ಕ್ರಿ.ಶ. ೧೩೪೬ ಫೆಬ್ರವರಿ ೪ಕ್ಕೆ ಸೇರುವ ಮಂಗಳೂರಿನ ಅತ್ತಾವರದಲ್ಲಿ ದೊರೆತಿರುವ ಶಾಸನ ಪಶ್ಚಿಮ ಸಮುದ್ರದವರೆಗೆ ವಿಜಯನಗರ ಸಾಮ್ರಾಜ್ಯ ಹರಡಿದ್ದುದನ್ನು ತಿಳಿಸುತ್ತದೆ. ಅಷ್ಟೇ ಅಲ್ಲ ಇಲ್ಲಿಯ ಆಡಳಿತ ವ್ಯವಸ್ಥೆಯ ಬಗ್ಗೆಯೂ ಬೆಳಕು ಚೆಲ್ಲುತ್ತದೆ. (ಎಸ್.ಐ.ಐ. ೭-೧೭೯) ಅಂದರೆ ಎರಡೂ ಸಮುದ್ರಗಳ ನಡುವಿನ ಸ್ಥಳವನ್ನು ವಶಪಡಿಸಿಕೊಂಡು ಇಲ್ಲಿ ಸುವ್ಯವಸ್ಥಿತವಾದ ಆಡಳಿತವನ್ನು ಸ್ಥಾಪಿಸಿದ. ಶೃಂಗೇರಿ ಶಾಸನ ಶ್ಲೋಕದ ಅರ್ಥವೂ ಇದೆ.

ಹರಿಹರನ ಈ ವಿಜಯ ಕ್ರಿ.ಶ. ೧೩೪೬ರ ವೇಳೆಗೆ ಆದುದಲ್ಲ. ಬದಲಿಗೆ ಕ್ರಿ.ಶ. ೧೩೪೦ಕ್ಕೂ ಮೊದಲೇ ಈ ಕಾರ್ಯ ಸಾಧನೆ ಆಗಿದೆ ಎಂಬುದನ್ನು ಕುಗ್ವೆ ಮತ್ತು ತಟ್ಟುಕೋಟೆ ಶಾಸನಗಳು ಸಿದ್ಧಪಡಿಸುತ್ತವೆ. ಈ ಶಾಸನಗಳ ಕಿರು ಅವಲೋಕನವನ್ನು ಇಲ್ಲಿ ಮಾಡಲಾಗಿದೆ.

೨. ಕುಗ್ವೆ ಶಾಸನ

ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕಿನ ತಾಳಗುಪ್ಪ ಹೋಬಳಿಯ ಕುಗ್ವೆಯಲ್ಲಿ ವಿಜಯನಗರ ಕಾಲೀನ ಕೆಲವು ಶಿಲಾ ಶಾಸನಗಳು ದೊರತಿವೆ.[೧] ಅಲ್ಲಿ ಹರಿಹರನ ಉಲ್ಲೇಖ ಇರುವ ಎರಡು ಶಾಸನಗಳನ್ನು[೨] ಪ್ರಸಕ್ತ ಪರಿಶೀಲನೆಗೆ ಆಯ್ದುಕೊಳ್ಳಲಾಗಿದೆ. ಈ ಎರಡೂ ವೀರಗಲ್ಲು ಶಾಸನಗಳು. ಇವುಗಳಲ್ಲಿ ಒಂದು[೩] ವಿಜಯನಗರ ಸ್ಥಾಪನಾ ಕಾಲ ನಿರ್ಧಾರಕ್ಕೆ ತುಂಬಾ ಸಹಕಾರಿಯಾಗಿದೆ. ಇದನ್ನು ಇಲ್ಲಿ ವಿಶೇಷ ಪರಿಶೀಲನೆಗೆ ಒಳಪಡಿಸಲಾಗಿದೆ.

* "ಗುರುಕೃಪ" # ೨೦೩೧, ೧೦ನೇ ಕ್ರಾಸ್, ಕಲ್ಲಹಳ್ಳಿ, ವಿ.ವಿ. ನಗರ, ಮಂಡ್ಯ-೫೭೧೪೦೧.

೧ನೆಯ ವೀರಗಲ್ಲು

ಇದು ತುಂಬಾ ತ್ರುಟಿತವಾಗಿದೆ. ತುರುಕಾಳವೊಂದರಲ್ಲಿ ಸನ್ನಪಗೌಡನ ಮಗ ವೀರಪಗೌಡನು ಸ್ವರ್ಗಸ್ಥಾನಾದ. ಈತನ ಜ್ಞಾಪಕಾರ್ಥ ನೆಟ್ಟ ಸ್ಮಾರಕ ಇದು. ಇಲ್ಲಿ ರಾಜ ಹರಿಹರನನ್ನು "ಸ್ವಸ್ತಿ ಶ್ರೀಮನ್ನಹಾರಾಜಾಧಿರಾಜ (ರಾಜಪರ) ಮೇಸ್ವರ ಶ್ರೀ ವೀರಪ್ರತಾಪ ಹರಿಹರ ದೇವ ಮಹಾರಾಯ ಸಾಂಬ್ರಾಜ್ಯಂ..." ಎಂದು ಉಲ್ಲೇಖಿಸಲಾಗಿದೆ.[೪] ತೇದಿವಿವರ ಇರುವ ಬರಹ ಬಹಳ ಹಾಳಾಗಿದ್ದು ಅಸ್ಪಷ್ಟವಾಗಿದೆ. ಇದು ಪ್ರಾಯಶಃ (೧೩೧)ಳ ಆಂಗೀರಸ (ಸಂವತ್ಸ)ರದ (ವೈಶಾಖ ಬ) ೧೨ ಆದಿವಾರ. ಈ ವಿವರ ಕ್ರಿ.ಶ. ೧೪೫೨ ಮೇ ೧೯ ಭಾನುವಾರಕ್ಕೆ ಸರಿಹೊಂದುತ್ತದೆ. ಶಾಸನದಲ್ಲಿರುವ ಪ್ರಶಸ್ತಿ ಮತ್ತು ತೇದಿ ವಿವರ ಎರಡೂ ಇಮ್ಮಡಿ ಹರಿಹರನ ಕಾಲಕ್ಕೆ ತಾಳೆ ಹೊಂದುವುದರಿಂದ ಇಲ್ಲಿ ಉಲ್ಲೇಖಿತವಾಗಿರುವ ರಾಜ ಇಮ್ಮಡಿ ಹರಿಹರ ಶಾಸನದಲ್ಲಿ ಉಳಿದ ವಿವರಗಳೆಲ್ಲಾ ನಷ್ಟವಾಗಿದೆ.

೨ನೆಯ ವೀರಗಲ್ಲು

ಹನ್ನೊಂದು ಸಾಲು ಬರಹ ಇರುವ ಈ ಶಾಸನ[೫] ಸುಸ್ಥಿತಿಯಲ್ಲಿದೆ. ಹಾಗಾಗಿ ಶಾಸನದ ಪೂರ್ಣ ಪಾಠ ಲಭ್ಯವಾಗಿದೆ. ಪ್ರಾಯಶಃ ತುರುಕಾಳಗವೊಂದರಲ್ಲಿ ವೈರಿಗಳ ವಿರುದ್ಧ ಕಾದಾಡುವಾಗ ಕೋಗುವೆಚೀಲದ ಬೊಮ್ಮೆಯನು ಮಡಿದ. (ಸುದ್ದಿ ತಿಳಿದ) ಆತನ ಪತ್ನಿ ಚಿಯಕ್ಕ ಪ್ರಾಣತ್ಯಾಗ ಮಾಡಿ ಮಹಾಸತಿಯಾದಳು. ಈ ಈರ್ವರಿಗೂ ಬೊಮ್ಮೆಗೌಡನ ಚೆನಿಯಗನು ಸ್ಮಾರಕ ಶಿಲೆ ಹಾಕಿಸಿದ.

ಶಾಸನದಲ್ಲಿ ಹರಿಹರನ ಉಲ್ಲೇಖ "ಶ್ರೀ ವೀರಹರಿಹರ ವೊಡೆಯರು"[೬] ಎಂದಷ್ಟೇ ಇದೆ. ಇದರಲ್ಲಿ ತೇದಿ ವಿವರ "ಪ್ರಮಾಧಿ ಸಂವತ್ಸರದ ವೈಶಾಖ ಸುಶಿಆ....[೭] ಎಂದಿದೆ. ಶಕವರ್ಷದ ಉಲ್ಲೇಖವಿಲ್ಲ. ಲಿಪಿ ಆಧಾರದಲ್ಲಿ ಹದಿನಾಲ್ಕನೆಯ ಶತಮಾನದ ಪೂರ್ವಾರ್ಧಕ್ಕೆ ಸೇರುವ ಈ ಶಾಸನ ಪ್ರಾಯಶಃ ಶಕ ೧೨೬೧ ಕ್ಕೆ ಸೇರುತ್ತದೆ. ಈ ಆಧಾರದಲ್ಲಿ ಇದರ ತೇದಿ ವಿವರ ಕ್ರಿ.ಶ. ೧೩೩೯ ಏಪ್ರಿಲ್ ೧೩ಕ್ಕೆ ಸರಿಹೊಂದುತ್ತದೆ. ಆದರೆ ವಾರ ಮಾತ್ರ ಮಂಗಳವಾರ (ಆದಿವಾರವಲ್ಲ). ತೇದಿ ವೈಶಾಖ ಶು೨ ಮಾತ್ರ ಏಪ್ರಿಲ್ ೧೧ ಭಾನುವಾರ ಮತ್ತು ೧೨ನೇ ಸೋಮವಾರ – ಎರಡೂ ದಿನ ಇತ್ತು. ಪ್ರಾಯಶಃ ವೈಶಾಖ ಶು೨ ಈ ಶಾಸನದ ನಿಜ ಕಾಲ ಇರಬಹುದು. ಕೆತ್ತುವ ದೋಷದಿಂದ ಶು೩ ಆಗಿದೆ. ಇದನ್ನು ಸರಿಪಡಿಸಿದಲ್ಲಿ ಆಗ ಶಾಸನದ ತೇದಿ ವಿವರ ಕ್ರಿ.ಶ. ೧೩೩೯ ಏಪ್ರಿಲ್ ೧೧ ಭಾನುವಾರ (ಆದಿವಾರ) ಕ್ಕೆ ಸರಿಹೊಂದುತ್ತದೆ.

ಇಲ್ಲಿ ರಾಜನನ್ನು ಬಹಳ ಸರಳವಾಗಿ "ಶ್ರೀ ವೀರಹರಿಹರವೊಡೆಯ" ಎಂದಷ್ಟೇ ಉಲ್ಲೇಖಿಸಿದೆ. ಇದು ಮತ್ತು ತೇದಿ ವಿವರ ಎರಡೂ ಒಂದನೆಯ ಹರಿಹರನ ಕಾಲಕ್ಕೆ ಸರಿಹೊಂದುತ್ತದೆ. ಒಂದನೆಯ ಹರಿಹರನ ಯಾವ ಶಾಸನದಲ್ಲೂ ಸಾರ್ವಭೌಮ ಸೂಚಕ ಪ್ರಶಸ್ತಿ ಇಲ್ಲ. ಈ ಎಲ್ಲ ಆಧಾರಗಳಿಂದ ಕುಗ್ವೆಯ ಎರಡನೆಯ ವೀರಗಲ್ಲು ಶಾಸನ ಒಂದನೆಯ ಹರಿಹರನ ಕಾಲಕ್ಕೆ ಸೇರಿದ್ದಾಗಿದೆ. ಅಷ್ಟೇ ಅಲ್ಲ ಇದು ಅವನ ಆಳ್ವಿಕೆಯನ್ನೂ ಉಲ್ಲೇಖಿಸಿದೆ. "ಶ್ರೀ ವೀರಹರಿಹರವೊಡೆಯರು ಪೃಥುವೀರಾಜ್ಯವನಾಳುವ ಕಾಲದಲ್ಲಿ"[೮] ಎಂಬ ಉಲ್ಲೇಖ ಸ್ಪಷ್ಟವಾಗಿದೆ. ಅಂದರೆ ಕ್ರಿ.ಶ. ೧೩೩೯ರ ಪ್ರಾರಂಭಕ್ಕೆ ಒಂದನೆಯ ಹರಿಹರ ರಾಜ್ಯವನ್ನಾಳುತ್ತಿದ್ದ.

ಒಂದನೆಯ ಹರಿಹರ ವಿಜಯನಗರ ರಾಜ್ಯದ ಪ್ರಥಮ ರಾಜ ಹಾಗೂ ಸ್ಥಾಪಕ ಎಂಬ ವಿಚಾರ ಅದರ ಇತಿಹಾಸ ದಿಂದ ತಿಳಿಯುತ್ತದೆ. ಈತ ರಾಜ್ಯ ಸ್ಥಾಪನೆ ಮಾಡಿದ ಕಾಲದ ಬಗ್ಗೆ ಏಕೋ ಇನ್ನೂ ವಿದ್ವಾಂಸರಲ್ಲಿ ಗೊಂದಲವಿದೆ. ಕುಗ್ವೆಯ ಶಾಸನ ಈ ಗೊಂದಲ ನಿವಾರಣೆಗೆ ಎಷ್ಟು ಸಹಕಾರಿ ಎಂಬುದರ ವಿವೇಚನೆ ಇಲ್ಲಿದೆ.

ಕ್ರಿ.ಶ. ೧೩೩೯ ಏಪ್ರಿಲ್ ೧೧ರಂದು ಹಾಕಿರುವ ಕುಗ್ವೆಯ ಈ ವೀರಗಲ್ಲು ಅದಕ್ಕೆ ಸ್ವಲ್ಪ ಮೊದಲು ನಡೆದ ಪ್ರಾಯಶಃ ತುರುಕಾಳಗದಲ್ಲಿ ಮಡಿದ ಈ ವೀರಯೋಧನನ್ನು ಮತ್ತು ಆಗ ಹರಿಹರನ ಆಳ್ವಿಕೆ ಇದ್ದುದನ್ನೂ ಉಲ್ಲೇಖಿಸಿದೆ. ಪಶ್ಚಿಮ ಕರಾವಳಿಗೆ ಅತಿ ಸಮೀಪ ಇರುವ ತಾಳಗುಪ್ಪ ಹೋಬಳಿಯ ಗ್ರಾಮವೊಂದರಲ್ಲಿ ದೊರೆತಿರುವುದು ವಿಜಯನಗರದ ಈ ಅತ್ಯಂತ ಪ್ರಾಚೀನ ಶಿಲಾಶಾಸನ. ಅಂದರೆ ಆ ವೇಳೆಗೆ ಪಶ್ಚಿಮ ಕರಾವಳಿವರೆಗೆ ವಿಜಯನಗರದ ಆಡಳಿತ ಹರಡಿತ್ತು. ಈ ಕಾರ್ಯಸಾಧನೆ ಆಗ ಬೇಕಾದರೆ ಕ್ರಿ.ಶ. ೧೩೩೯ಕ್ಕೂ ಮುಂಚೆ ಹರಿಹರನ ಆಡಳಿತ ಅಸ್ತಿತ್ವಕ್ಕೆ ಬಂದಿರಲೇಬೇಕು. ಹಂಪೆಯ ಪರಿಸರವನ್ನೇ ಕೇಂದ್ರವಾಗಿರಿಸಿ ಕೊಂಡು ಹುಟ್ಟಿದ ಈ ರಾಜ್ಯದ ಅಧಿಕಾರ ದೂರದ ಪಶ್ಚಿಮ ಭಾಗಕ್ಕೆ ಹರಡಲು ಸ್ವಲ್ಪ ಸಮಯವಾದರೂ ಬೇಕು. ಪಶ್ಚಿಮ ಕರಾವಳಿ ಪ್ರದೇಶವು ಆರ್ಥಿಕ ದೃಷ್ಟಿಯಿಂದ ಬಹಳ ಪ್ರಮುಖವಾಗಿದ್ದ ಕಾರಣ ಅದನ್ನು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ತಂದು ಅಲ್ಲಿ ವ್ಯವಸ್ಥಿತ ಆಡಳಿತ ಸ್ಥಾಪಿಸುವುದು. ಬಹಳ ಮುಖ್ಯವಾದ ವಿಷಯ. ವಿಜಯನಗರ ಪ್ರಾರಂಭಿಕ ಕಾಲದಿಂದಲೇ ಕರಾವಳಿಯನ್ನು ಆಡಳಿತಾತ್ಮಕವಾಗಿ ವಿಭಜಿಸಿ ಮಂಗಳೂರು ಮತ್ತು ಬಾರಕೂರು ರಾಜ್ಯಗಳೆಂಬ ಎರಡು ಪ್ರಾಂತ್ಯಗಳನ್ನು ಮಾಡಿ ಅವುಗಳಿಗೆ ಸಾಮ್ರಾಜ್ಯದ ನೇರ ಪ್ರತಿನಿಧಿಯಾದ ರಾಜ್ಯಪಾಲರನ್ನು ನೇಮಿಸಿರುವುದನ್ನು ಕಂಡರೆ – ಆ ಭಾಗವನ್ನು ವಶಪಡಿಸಿಕೊಳ್ಳುವ ಕಾರ್ಯ ಬಹಳ ಬೇಗ ನಡೆದಿದೆ. ಕರಾವಳಿಯಲ್ಲಿ ಆಗ ಆಳುಪ ಮತ್ತು

ಹೊಯ್ಸಳರ ಆಡಳಿತ ನೆಲೆಗೊಂಡಿತ್ತು. ಹೊಯ್ಸಳ ಮೂರನೆಯ ಬಲ್ಲಾಳನ ರಾಣಿ ಚಿಕ್ಕಯಿತಾಯಿಯ ನೇರ ಆಳ್ವಿಕೆ ಇಲ್ಲಿ ನೆಲೆಗೊಂಡಿತ್ತು. ಅದರೊಂದಿಗೆ ವಿಜಯನಗರದ ಆಡಳಿತವೂ ಇಲ್ಲಿ ನೆಲೆಗೊಳ್ಳಬೇಕಾದರೆ ಅದಕ್ಕೆ ಹೊಯ್ಸಳರ ಸಹಕಾರ ಅಪಾರವಾಗಿರಲೇಬೇಕು. ಮೂರನೆಯ ಬಲ್ಲಾಳನ ಪಾತ್ರ ಮತ್ತು ದೂರದರ್ಶಿತ್ವ ಇದರಲ್ಲಿ ಬಹಳಷ್ಟಿದೆ. ಅಂದಿನ ರಾಜಕೀಯ ಪರಿಸ್ಥಿತಿಯ ಸವಾಲನ್ನು ಎದುರಿಸಲು ಸೂಕ್ತವಾದ ಯೋಜನೆಗಳನ್ನು ರೂಪಿಸಿಕೊಂಡು ಆಯಕಟ್ಟಿನ ಸ್ಥಳಗಳಲ್ಲಿ ಯೋಗ್ಯ ಮತ್ತು ಸಮರ್ಥ ಅಧಿಕಾರಿ ಸಾಮಂತರನ್ನು ಸ್ವತಂತ್ರ ಅಧಿಕಾರದೊಂದಿಗೆ ನೇಮಿಸಿಕೊಂಡು ಕಾರ್ಯ ಪ್ರವೃತ್ತನಾಗಿದ್ದ ವೀರಬಲ್ಲಾಳ ಎಂದು ಪಿ.ಬಿ. ದೇಸಾಯಿ ಹೇಳುತ್ತಾರೆ.[೯] ಹೀಗೆ ಸ್ವಾತಂತ್ರ ಅಧಿಕಾರ ಪಡೆದವರಲ್ಲಿ ಹರಿಹರ ಪ್ರಮುಖನಾದವ.

"The year around 1336 A.D. was a ciritical Juncture in the freedom struggle of Ballala. Though successful, he was yet to win the last war by conquering the territory under the occupation of the Muslim governor of Madura. In the north the Delhi sultan was striving to keep under his control the Hampi Anegondi region which had revolted against his rule. To a man nearing the age of seventy five, that was Ballala, it was beyond possibility effectivly extend his authority to these further limits".

"Hence, Carrying his mesure of decentralisation of power to the extreme, Ballala appears to have conferred upon Harihara not only full freedom of action, but even autonomy over the areas under his jurisdication. Harihara in the mean while succeeded in paciyfying the rebellious chiefs in the Hampi territory, who were glad to accept him as their ruler"[೧೦]

ಇದರಿಂದ ಹುಟ್ಟಿತು ವಿಜಯನಗರ ಎಂಬ ಹೆಸರಿನಿಂದ ಮುಂದೆ ಕರೆಯಲ್ಪಟ್ಟ ಒಂದು ಹೊಸ ರಾಜ್ಯ.

"Thus, came into being the new state of Vijayanagara in the decade of Ballala last 1 1 1s reign. It was the cumulative product of broad vision, farsighted diplomacy and politcial generosity of a great monarch and patriotic fervour, spirity of freedom and sacrifice and loyalty to the cause evinced by his official ranks and popular leaders"[೧೧]

ಹೀಗೆ ಹುಟ್ಟಿಕೊಂಡ ಹೊಸ ರಾಜ್ಯ ಬಲುಬೇಗ ಪೂರ್ವ – ಪಶ್ಚಿಮ ಸಮುದ್ರಗಳ ನಡುವಿನ ಇಡೀ ಭೂಪ್ರದೇಶಕ್ಕೆ ಹರಡಿತು.

"with in four years from 1336 A.D. invested with powers of an autonomous prince, Harihara, aided by his younger brothers Kampanna and Bukka , resuced the northern territoriess from east to west, from the hands of the enemy and assumed the title, Lord of the Eastern and Western seas, along with the specific Vijayanagara epithets like Arirayavibhada and Bhashege - tappuva - rayara - ganda"[೧೨]

ನಾಲ್ಕು ವರ್ಷಗಳಲ್ಲಿ ಹರಿಹರನು ಮಾಡಿದ ಸಾಧನೆಗಳನ್ನು ವಿವರಿಸುತ್ತಾ ವಿಜಯನಗರ ಹುಟ್ಟಿದ್ದು ೧೩೩೬ರಲ್ಲಿ ಎಂದು ಪಿ.ಬಿ. ದೇಸಾಯಿ ಹೇಳುತ್ತಾರೆ. ಈ ಹೇಳಿಕೆಗೆ ಕುಗ್ವೆಶಾಸನ ಸೂಕ್ತ ಆಧಾರವೂದಗಿಸುತ್ತದೆ. ಕ್ರಿ.ಶ. ೧೩೩೬ರಲ್ಲಿ ಹೊಸರಾಜ್ಯ ಉದಯವಾಗದಿದ್ದರೆ ಅದರ ಸ್ಥಾಪಕ ಅರಸನನ್ನು ಕುಗ್ವೆಶಾಸನದಲ್ಲಿ ಉಲ್ಲೇಖಿಸುವ ಪ್ರಮೇಯವೇ ಇರಲಿಲ್ಲ. ಹರಿಹರನ ಆಳ್ವಿಕೆ ಆ ವೇಳೆಗೆ ಕರಾವಳಿಯವರೆಗೆ ವಿಸ್ತರಿಸಿದ್ದರ ಪರಿಣಾಮವೇ ಸಾಗರ ತಾಲೂಕಿನ ಈ ಪ್ರಥಮ ವಿಜಯನಗರ ಶಾಸನದಲ್ಲಿ ಹರಿಹರನ ಆಳ್ವಿಕೆ ಉಲ್ಲೇಖಗೊಳ್ಳುವಂತಾದುದು ಮತ್ತು ಆ ಭಾಗದ ಜನ ಮತ್ತು ಅಧಿಕಾರಿಗಳು ಅದನ್ನು ಮಾನ್ಯ ಮಾಡಿದ್ದರು.

ಕ್ರಿ.ಶ. ೧೩೩೬ರಲ್ಲಿ ಹೊಯ್ಸಳ ರಾಜನಿಂದ ತನಗೆ ದತ್ತವಾದ ಅಧಿಕಾರ ಮತ್ತು ಸ್ವಾತಂತ್ರ್ಯವನ್ನು ಬಹಳ ಜತನದಿಂದ ಕಾಯ್ದುಕೊಂಡು ಆ ವೇಳೆಗೆ ದೆಹಲಿ ಸುಲ್ತಾನರ ಧಾಳಿಗೆ ಸಿಲುಕಿ ಛಿದ್ರವಾಗಿದ್ದ ಕರ್ನಾಟಕದ ರಾಜಕೀಯ ವ್ಯವಸ್ಥೆಯನ್ನು ತಹಬದಿಗೆ ತಂದು ಅಲ್ಲೆಲ್ಲಾ ವ್ಯವಸ್ಥಿತ ಆಡಳಿತವನ್ನು ಜಾರಿಗೆ ತಂದು, ಶಾಂತಿ ಕಾಪಾಡಿ ಹಿಂದಿನ ಅಧಿಕಾರಿ ಮನೆತನಗಳನ್ನು ಪುನರುದ್ದೀಪನಗೊಳಿಸಿ ಆಡಳಿತದ ಕೊಂಡಿಗಳನ್ನು ಬಲಗೊಳಿಸುವುದರ ಮೂಲಕ ತನ್ನ ಅಧಿಕಾರವನ್ನು ಎಲ್ಲೆಡೆ ವಿಸ್ತರಿಸಿದ ಒಂದನೆಯ ಹರಿಹರ. ಇದಕ್ಕೆ ಬಾದಾಮಿಯ ತಟ್ಟುಕೋಟೆ ಶಾಸನ ಒಂದು ಪ್ರಮುಖ ಆಧಾರವಾಗಿ ನಿಲ್ಲುತ್ತದೆ. [೧೩]

೩. ತಟ್ಟುಕೋಟೆ ಶಾಸನ

ಈ ಶಾಸನ ಹರಿಹರನನ್ನು "ಮಹಾಮಂಡೇಲೇಸ್ವರಂ ಅರಿರಾಯ ವಿ (ಭಾಡ*;) ಭಾಸೆಗೆ ತಪ್ಪುವ ರಾಯರಗಂಡ ಪೂರ್ವಪಶ್ಚಿಮ ಸಮುದ್ರಾಧಿಪತಿ ಶ್ರೀವೀರ ಹರಿಯಪ್ಪವೊಡೆಯ" ಎಂದು ಉಲ್ಲೇಖಿಸಿದೆ. ಈತ ಇಲ್ಲಿ ಕೋಟೆಯೊಂದನ್ನು ಕಟ್ಟಿಸಿ ಹಲವು ದಾನಗಳನ್ನು ಮಾಡಿದ ಎಂದು ಶಾಸನ ತಿಳಿಸುತ್ತದೆ. (ಇದರ ಕಾಲ ಕ್ರಿ.ಶ. ೧೩೪೦).

ಈ ಶಾಸನ ಕೊಡುವ ಮಾಹಿತಿ ಅತಿ ಮುಖ್ಯವಾದುದು. ಪ್ರಾಯಶಃ ಕುಗ್ವೆ ಶಾಸನದ ಆಧಾರದಲ್ಲಿ ತಟ್ಟುಕೋಟೆ ಶಾಸನದ

ವಿಶ್ಲೇಷಣೆ ಈವರೆಗೆ ಸರಿಯಾಗಿ ಆಗಿಲ್ಲ ಎಂದು ಕಾಣುತ್ತದೆ. ಹರಿಹರ ಶಾಸನ ಕಾಲಕ್ಕೆ ಮಹಾಮಂಡಲೇಶ್ವರನಾಗಿದ್ದು ಪೂರ್ವ ಪಶ್ಚಿಮ ಸಮುದ್ರಾಧಿಪತಿಯಾಗಿದ್ದ ಈತ ಹೊಯ್ಸಳ ಬಲ್ಲಾಳನ ಮಹಾಮಂಡಲೇಶ್ವರನಾಗಿದ್ದ ಎಂದು ಬೇರೆ ಹೇಳಬೇಕಾಗಿಲ್ಲ. ಏಕೆಂದರೆ ಆಗ ಇಡೀ ದಕ್ಷಿಣ ಭಾಗಕ್ಕೆ ಇದ್ದ ಒಬ್ಬನೇ ಪ್ರತಿಷ್ಠಿತ ರಾಜನೆಂದರೆ ಹೊಯ್ಸಳ ವೀರಬಲ್ಲಾಳ. ಈ ಹಿರಿತನದ ಅಧಿಕಾರ ಹೊಂದಿದ ರಾಜ (ಹರಿಹರ) 'ಪೂರ್ವಪಶ್ಚಿಮ ಸಮುದ್ರಾಧಿಪತಿಯೂ ಆಗಿದ್ದ'; ಇದೇನೂ ಕೇವಲ ಹೊಗಳಿಕೆಯ ಮಾತಾಗಿರಲಿಲ್ಲ, ಆನಂತರದ ಕಾಲದ ಶಾಸನದಲ್ಲೂ ಇದು ಧ್ವನಿತವಾಗಿದೆ[೧೪].

ಅಂದರೆ ಪ್ರಕ್ಷುಬ್ಧ ರಾಜಕೀಯ ಪರಿಸ್ಥಿತಿಯನ್ನು ನಿವಾರಿಸಿ ಅಲ್ಲಿ ಶಾಂತಿ ನೆಲೆಸುವಂತೆ ಮಾಡಿ, ಪೂರ್ವ – ಪಶ್ಚಿಮ ಸಮುದ್ರಗಳ ನಡುವಿನ ವಿಶಾಲವಾದ ಭೂ ಪ್ರದೇಶದಲ್ಲಿ ತನ್ನ ಆಳ್ವಿಕೆಯನ್ನು ಹರಿಹರ ಆ ವೇಳೆಗೆ ನೆಲೆಗೊಳಿಸಿದ್ದ ಎಂಬುದು ಇಲ್ಲಿ ಪ್ರತಿಧ್ವನಿಸಿದೆ. ಇದೇನೂ ಸಾಮಾನ್ಯ ಸಾಧನೆಯಲ್ಲ ಇದನ್ನು ಪುಷ್ಠೀಕರಿಸುತ್ತದೆ ಶಾಸನದಲ್ಲಿರುವ ಈತನ ಪ್ರಶಸ್ತಿ – "ಅರಿರಾಯ ವಿಭಾಡಭಾಸೆಗೆ ತಪ್ಪುವ ರಾಯರಗಂಡ". ಇವುಗಳ ಸಾಧನೆ ನಿಜವಾದ ಒಬ್ಬ ಶೂರನ ಕಾರ್ಯಗಳಾಗಿವೆ. ಇದನ್ನು ಸಾಧಿಸಲು ಹರಿಹರನಿಗೆ ೩–೪ ವರ್ಷಗಳ ಅವಧಿ ಇಲ್ಲದಿರುತ್ತಿದ್ದರೆ ಆಗುತ್ತಿರಲಿಲ್ಲ. ಈ ನೆಲೆಯಲ್ಲಿ ವಿಜಯನಗರದ ಉದಯ ಕ್ರಿ.ಶ. ೧೩೩೬ರಲ್ಲಾಯಿತು ಎಂದು ನಿರ್ಧರಿಸಬಹುದು.

ಇತ್ತೀಚೆಗೆ ಬೆಳಕಿಗೆ ಬಂದಿರುವ ಹಾಲ್ಕವಟಿಗೆ ತಾಮ್ರಶಾಸನ[೧೫] ಈ ಬಗ್ಗೆ ಇದ್ದ ಸಂಶಯ ನಿವಾರಿಸಿದೆ. ಕ್ರಿ.ಶ. ೧೩೩೬ರಲ್ಲಿ ರಾಜ್ಯ ಸ್ಥಾಪನಾ ಕಾರ್ಯದ ಜ್ಞಾಪಕಾರ್ಥ ಹರಿಹರ ಕೆಲವು ದಾನಗಳನ್ನು ಮಾಡಿದ ಎಂದು ಈ ಶಾಸನ ತಿಳಿಸುತ್ತದೆ. ಈ ತಾಮ್ರ ಶಾಸನದ ಕಾಲ ಕ್ರಿ.ಶ. ೧೩೩೬ ಏಪ್ರಿಲ್ ೧೮, ಈ ದಿನದಂದು ಹರಿಹರ ಪಟ್ಟಾಭಿಷಿಕ್ತನಾದ ಎಂದು ಶಾಸನ ತಿಳಿಸುತ್ತದೆ.

೧೪ನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ನಂದಿನಾಗರಿ ಲಿಪಿ ಇಲ್ಲಿ ಬಳಕೆಯಾಗಿದೆ. ಹೊಯ್ಸಳರ ಉತ್ತರ ಕಾಲೀನ ತಾಮ್ರಪಟಗಳೊಂದಿಗೆ ಇದರ ಹೋಲಿಕೆ ಇದೆ[೧೬]. ಇಲ್ಲಿ "ಕೊಟ ಶಾಸನ" ಎಂದು ವರ್ಗೀಕರಿಸ ಬಹುದಾದ ಯಾವ ಅಂಶವೂ ಇಲ್ಲ. ಪೂರ್ವಾಗ್ರಹ ದೃಷ್ಟಿಯಿಂದ ಇಲ್ಲಿ ವಿದ್ಯಾರಣ್ಯರ ಹೆಸರಿದೆ ಎಂಬ ಕಾರಣಕ್ಕಾಗಿ ಇದನ್ನೊಂದು ಕೃತಕಸೃಷ್ಠಿ[೧೭] ಎಂದು ಹೇಳುವಲ್ಲಿ ಅಡಗಿರುವ ತರ್ಕವಾದರೂ ಏನು? ವಿದ್ಯಾರಣ್ಯರನ್ನು ಉಲ್ಲೇಖಿಸುವ ಹಲವಾರು ಶಿಲಾಶಾಸನಗಳು ಮಲೆನಾಡು ಮತ್ತು ಪಶ್ಚಿಮ ಕರಾವಳಿಯಲ್ಲಿ ಲಭ್ಯವಾಗಿವೆ[೧೮]. ಹೀಗಿರುವಲ್ಲಿ ಕ್ರಿ.ಶ. ೧೩೩೬ರ ಶಾಸನದಲ್ಲಿ ವಿದ್ಯಾರಣ್ಯರ ಉಲ್ಲೇಖ ಇದೆ ಎಂಬ ವಿಚಾರವನ್ನು ಸ್ವಾಗತಾರ್ಹ ಎಂದೇ ಪರಿಗಣಿಸಬೇಕು.

ಹಾಲ್ಕವಟಿಗೆ ತಾಮ್ರ ಪಟಗಳ ಪರಿಶೀಲನೆ ಮಾಡಿರುವ ಡಾ. ಸೂರ್ಯನಾಥಕಾಮತರು ಹೇಳಿರುವ ಮಾತುಗಳು ಇಲ್ಲಿ ಬಹಳ ಪ್ರಸ್ತುತವಾಗಿದೆ.

"Vidyaranya urged the establishment of vijayanagara empire and he crowned Harihara 1 on 18th of April 1336. (A `stapances'u yugalaika sankhaya samyute sakanrpasava-vatsare Dhatna madhava-lavaksa saptami. This saka era 1258, cyclic year Dhatru 7th day of Vaishaka month). This has been proved by the recently discovered Halkavatigi copper plates, found in the village Halkavtigi (near Navali) in Lingasugur taluk, Raichur Disrict"[೧೯].

ವಿಜಯನಗರ ಸ್ಥಾಪನಾ ಕಾರ್ಯಗಳಲ್ಲಿ ವಿದ್ವಾರಣ್ಯರ ಪಾತ್ರವನ್ನು ಮತ್ತು ಆ ಬಗೆಗಿನ – ಈವರೆಗಿನ ವಾದ – ವಿವಾದಗಳನ್ನು ಇವರು ಪರಿಶೀಲಿಸಿ ಅದರಲ್ಲಿರುವ ಜೊಳ್ಳು ಮತ್ತು ಗಟ್ಟಿತನಗಳನ್ನು ತೋರಿಸಿದ್ದಾರೆ[೨೦]. ಕೊನೆಯಲ್ಲಿ ಕಾಮತರು ಹೇಳಿರುವ ಮಾತುಗಳು ವಿವೇಚನಾರ್ಹವಾಗಿವೆ.

"Vidyaranya not only helped founding the empire but also gave an ideogical and intellectual frame work to the rulers. Emperor I Harihara 11s copper plate dated 1384 says that "he secured such treasure house of knowledge" from vidyaranya which no other king could have secured. Later, on the dimise of Vidyaranya in 1386, Harihara 11 created Vidyaranyapura Agrahara in his memory."[೨೧]

ಈ ಹಿಂದೆ ದೊರೆತಿದ್ದ ಬೆಸ್ತರಪಲ್ಲಿ[೨೨] ಮತ್ತು ಕಾಪಲೂರು[೨೩] ಶಾಸನಗಳೊಂದಿಗೆ ಈಗ ದೊರೆತಿರುವ ಹಾಲ್ಕವಟಿಗೆ ತಾಮ್ರ ಪಟಗಳ ಆಧಾರದಲ್ಲಿ ವಿಜಯನಗರ ಸ್ಥಾಪನಾ ಕಾಲ. ೧೩೩೬ ಏಪ್ರಿಲ್ ೧೮ ಎಂಬುದನ್ನು ಸೂರ್ಯನಾಥಕಾಮತರು ಪುರಸ್ಕರಿಸಿ ಹೇಳಿರುವ ಮಾತುಗಳು ಈ ಬಗೆಗಿನ ವಿವಾದಕ್ಕೆ[೨೪] ಇನ್ನಾದರೂ ತೆರೆ ಎಳೆಯಬಹುದು. ಈ ಆಧಾರದಲ್ಲೇ ೧೩೩೬ – ೧೩೪೦ರ ನಾಲ್ಕು ವರ್ಷಗಳ ಅವಧಿಯಲ್ಲಿ ಹರಿಹರ ಬಹಳಷ್ಟು ಸಾಧನೆ ಮಾಡಿದ ಎಂದು ದೇಸಾಯಿಯವರು ಹೇಳಿರುವುದು[೨೫] "ಪೂರ್ವಪಶ್ಚಿಮ ಸಮುದ್ರಾಪತಿ" ಎಂದು ಈತನನ್ನು ಉಲ್ಲೇಖಿಸಿರುವ ತಟ್ಟುಕೋಟೆ ಶಾಸನ ಇದನ್ನು ಪುಷ್ಠೀಕರಿಸುತ್ತದೆ. ಈ ನಿಟ್ಟಿನಲ್ಲಿ ಕ್ರಿ.ಶ. ೧೩೩೯ ಏಪ್ರಿಲ್ ೧೧ಕ್ಕೆ ಸೇರುವ ಕುಗ್ವೆಯ ವೀರಗಲ್ಲು ಶಾಸನ ವಿಜಯನಗರದ ಪ್ರಸ್ತುತ ದೊರೆತಿರುವ

ಶಿಲಾಶಾಸನಗಳಲ್ಲೇ ಪ್ರಥಮದ್ದಾಗಿದ್ದು ಐತಿಹಾಸಿಕ ಪ್ರಾಮುಖ್ಯತೆಯನ್ನು ಗಳಿಸಿಕೊಂಡಿದೆ.

ಈ ಶಾಸನ "ಶ್ರೀ ವೀರ ಹರಿಹರ ವೊಡೆಯರು ಪೃಥುವಿ ರಾಜ್ಯವನಾಳುವ ಕಾಲದಲ್ಲಿ ಎಂದು ಹೇಳಿರುವುದು ಇದೇ ಪೂರ್ವ – ಪಶ್ಚಿಮ ಸಮುದ್ರಗಳ ನಡುವಿನ ವಿಸ್ತಾರವಾದ ರಾಜ್ಯವನ್ನೆ.

ಕ್ರಿ.ಶ. ೧೩೩೬ರಲ್ಲಿ ವಿಜಯನಗರ ಸ್ಥಾಪನೆ ಆಗದಿದ್ದಲ್ಲಿ ಈತ ಈ ಸಾಧನೆ ಮಾಡಲು ಸಾಧ್ಯವಿತ್ತು? ಕುಗ್ವೆ ಶಾಸನ ಕಾಲಕ್ಕೆ ಈ ಕಾರ್ಯ ಸಾಧನೆ ಪೂರ್ಣಗೊಂಡಿತ್ತು. ಹಾಗಾಗಿ ಹರಿಹರನ ರಾಜ್ಯವನ್ನು "ಪೃಥುವೀ ರಾಜ್ಯ" ಎಂದು ಶಾಸನ ಉಲ್ಲೇಖಿಸಿರುವುದು. ತಟ್ಟುಕೋಟೆ ಶಾಸನದಲ್ಲಿ ಇದು ಸ್ಪಷ್ಟವಾಗಿ "ಪೂರ್ವ ಪಶ್ಚಿಮ ಸಮುದ್ರಾಧಿಪತಿ" ಎಂದು ಹೇಳಿರುವುದು. ಈ ಆಧಾರಗಳ ನೆಲೆಯಲ್ಲಿ ವಿಜಯನಗರದ ಸ್ಥಾಪನೆ ಕ್ರಿ.ಶ. ೧೩೩೬ರಲ್ಲಿ ಎಂದು ಹೇಳಲು ಯಾವ ಅಡ್ಡಿಯೂ ಇಲ್ಲ ಎಂದು ಭಾವಿಸುತ್ತೇನೆ.

ಕುಗ್ವೆವೀರಗಲ್ಲು (೨) – ಶಾಸನಪಾಠ

೧ ಪ್ರಮಾದಿ ಸಂವತ್ಸರದ
೨ ವೈಶಾಖ ಸುಇ ಆ
೩ ಶ್ರೀವೀರ ಹರಿಹರ ವೊ
೪ ಡೆಯರು ಪೃಥುವೀ ರಾಜ್ಯವ
೫ ನಾಳುವ ಕಾಲದಲ್ಲಿ ಕೊಗುವು
೬ ಚೀಲದ ಬೊಮ್ಮೆಯ ಕಲೌ
೭ ರಲಿ ಅನ್ನವನು ಕಾದಿ ಮಾರಾನ್
೮ ..ತರ ಕೊಂದನು ಆತನ ಮ –
೯ ಹಾಸತಿ ಚಿಯಕ್ಕನು ಕಲುವೆ –
೧೦ ಸ ಬೊಮ್ಮೆಗೌಡನ ಚಿನ್ನಿ –
೧೧ ಯಗನು.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. Mysore Archaeological Report for the year 1933.
೨. Ibid. Nos. 77 and 78
೩. Ibid. No.78
೪. Ibid. No.77
೫. Ibid. No. 78
೬ Ibid. Text lines - 3-4
೭. Ibid. lines 1-2
೮. Ibid. lines 3-5
೯. B. Sheikali (ed) The Hoysala Dynasty (Mysore uni. 1972) p.p 329 - 343.
೧೦. Ibid. p.p 341-42
೧೧. Ibid.p. 342.
೧೨. Ibid. p. 342.
೧೩. Ind. Ant vol X no. 87; ಡಾ. ಆರ್. ಗೋಪಾಲ್ (ಸಂ) ವಿಜಯನಗರ ಅಧ್ಯಯನ ಸಂ. ೧೪. (೨೦೧೦) ಪುಟ. ೨೯
೧೪. B. sheikali (ed) the Hoysal Dynasty (1972) pp. 340-41.
೧೫. ಡಾ. ಆರ್. ಗೋಪಾಲ್ (ಸಂ) ವಿಜಯನಗರ ಅಧ್ಯಯನ (೨೦೦೫) ಸಂ. ೧೦. ಪುಟ. ೧೬–೨೯
೧೬. Quarterly journal of the Mythic socytei (GJMS) vol. XCIX. No. 1 2008, plates pp. 55,57,59.
೧೭. ಡಾ. ಆರ್. ಗೋಪಾಲ್ (ಸಂ) ವಿಜಯನಗರ ಅಧ್ಯಯನ (೨೦೦೬) ಸಂ. ೧೧. ಪುಟ. ೩೧–೩೨
೧೮. QJms vol. XCVII. NO 2(2006) pp. 54-69. Also K. V.Ramesh (ed) "sri pushpanjali" vol. 11 (2004) Dr. C.R. Srinivasan (Commemoration Volume pp. 376-78
೧೯. QJms vol. XCIX. NO 1 (2008) p. 52.
೨೦. Ibid. p. 52-60
೨೧. Ibid. p. 58.
೨೨. Epigraphia Carnatica (Rice) vol. X. Bg No.70
೨೩. Inscriptions in Nellore District 104-105
೨೪. ವಿಜಯನಗರ ಅಧ್ಯಯನ ಸಂ. ೧೧. ಪುಟ. ೩೧–೩೨; QJMs - XCIX - 1 pp. 52.60
೨೫. Sheikali (ed). (1972) the Hoysala Dynasty p. 342.

೩೫

ಕನಕಪುರ ಶಾಸನಗಳಲ್ಲಿ ಕುಲ ಸಂಬಂಧಿ ಕಲಹಗಳು

ಡಾ. ಕೆ.ಪಿ. ಪ್ರಕಾಶ್*

ಕಾನಕಾನಹಳ್ಳಿ ತಾಲ್ಲೂಕಿನ ಶಾಸನಗಳಲ್ಲಿ ಎರಡು (ನಂ. ೮೯, ೯೦/ಸು. ೧೭೦೦?) ಜನಪದ ನಂಬಿಕೆ ಆಚರಣೆಗಳ ದೃಷ್ಟಿಯಿಂದ ಕುತೂಹಲಕರವಾದವು. ಇವು ಕಾನಕಾನಹಳ್ಳಿಯಲ್ಲಿಯೇ ಅಗಸರ ನಾಗನೆಂಬುವನು ತಂದುಕೊಟ್ಟ ತಾಮ್ರಶಾಸನಗಳ ನಕಲುಗಳೆಂದು ಎ.ಕ.ದ ಸಂಪಾದಕರು ತಿಳಿಸಿದ್ದಾರೆ. ಈ ಶಾಸನಗಳಲ್ಲಿ ಯಾವ ಚಾರಿತ್ರಿಕ ಸಾಕ್ಷ್ಯಗಳೂ ಇಲ್ಲವಾದುದರಿಂದ, ಯಾವ ಒಡೆಯರ ಕಾಲದಲ್ಲಿ ಹುಟ್ಟಿವೆಯೆಂದು ಹೇಳುವುದು ಕಷ್ಟ. ಮೊದಲನೆಯದರ (ತೆಲುಗು ಭಾಳೆಯದು) ಆರಂಭದಲ್ಲಿ "ರಾಯಲುವಾರಿ ಸಂ(ವ)ತ್ಸರಂನಾಡು ಪುಟ್ಟಿನದಿ ಶಾಸನಂ" ಎಂದು ಹೇಳಿದೆ ಯಾದರೂ, ಅದರಿಂದ ಕಾಲನಿರ್ಣಯ ಸಾಧ್ಯವಾಗದು. ಎರಡನೆಯದರ (ಕನ್ನಡ ಭಾಳೆಯದು) ಆದಿಯಲ್ಲಿ ಶಾಲಿವಾಹನ ಶಕೆ ೧೬೨೨ ಎಂಬುದರ ಆಧಾರದಿಂದ ಕ್ರಿ.ಶ. ೧೭೦೦ ಎಂದೇ ಗುರುತಿಸಲಾಗಿದೆ. ಬಹುಶಃ ಇದರ ವಸ್ತುಸಾದೃಶ್ಯ ಗಮನಿಸಿ ಮೊದಲನೆಯದರ ತೇದಿಯೂ ಅದೇ ಇರಬಹುದೆಂದು (ಸು. ೧೭೦೦?) ಊಹಿಸಿದೆ.

೧. ಪ್ರಸ್ತುತ ತೆಲುಗು ಶಾಸನದ ಸಾಮಾನ್ಯವಾದ ಅನುವಾದ ಹೀಗೆ

"ರಾಯರ ಸಂವತ್ಸರದಂದು ಹುಟ್ಟಿದ್ದು ಶಾಸನ. ಇದನ್ನು ಅಲ್ಲ ಎನ್ನುವವರು ಕತ್ತೆಜನ್ಮದಲ್ಲಿ ಹುಟ್ಟುವರು.

ಕಲ್ಯಾಣಪಟ್ಟಣದಲ್ಲಿ ಈಶ್ವರನ ಬೆವರಿನಿಂದ ವೀರಭದ್ರನು ಹುಟ್ಟಿದನು. ಕಲ್ಯಾಣಪಟ್ಟಣದಲ್ಲಿ ಶಿಲಾಶಾಸನವಾಗಿ ವೀರಗಂಟಿ ಮಡಿವಾಳಯ್ಯನ ಜನನ. ಅ ಕಲ್ಯಾಣಪಟ್ಟಣದ ಪಶ್ಚಿಮ ಭಾಗದಲ್ಲಿ[೧] ಮಡಿವಾಳಯ್ಯನ ಮಠವುಂಟು. ಅಲ್ಲಿ ಶಿಲಾಶಾಸನವಿಲ್ಲ (?) ಎನ್ನುವವನು ಕತ್ತೆಯ ಹೊಟ್ಟೆಯಲ್ಲಿ ಹುಟ್ಟುತ್ತಾನೆ. ಇಲ್ಲಿ ಚತುಃಸಮುದ್ರಗಳಿಗೂ ಅನ್ವಯಿಸುವಂತೆ ಸಾಂಬಶಿವನು ಮಾಡಿದ ನಿರ್ಣಯ ಹೀಗಿದೆ; ಹಾಗೆಯೇ ಮಡಿವಾಳಯ್ಯನು ಚತುಃಸಮುದ್ರಗಳ ಸೀಮೆಯೊಳಗೆ ಅದನ್ನು ಜಾರಿಗೆ ತಂದನು. ಆ ಮಡಿವಾಳಿಗಳಿಗೆ ಎಡದಿಂದ ಬಲಕ್ಕೆ ವರಸೆಯಾಗಿ ಪ್ರತಿ ಮನೆಯಲ್ಲಿಯೂ ಊಟಕ್ಕೆ ಇಟ್ಟು, ಎಲೆ ಅಡಿಕೆ ಕೊಡುವುದಾಗಬೇಕು. ಈ ಪ್ರಕಾರವಾಗಿ ಕೊಡದವರು ಕುಲಕ್ಕೆ ದೂರಸ್ಥರಾಗುತ್ತಾರೆ. ಅದು ಕಾರಣ, ಈಶ್ವರನು ನಿರ್ಣಯಿಸಿದ್ದು ಹೀಗೆ : ಗಂಡುಮಗು ಹುಟ್ಟಿದರೆ ೧ ರೂಪಾಯಿ, ಹೆಣ್ಣು ಮಗು ಹುಟ್ಟಿದರೆ ಅರ್ಧ ರೂಪಾಯಿ. ರಜಸ್ವಲೆಯಾದರೆ ವಸ್ತ್ರ. ಕೊಡುವ ಪದಾರ್ಥಗಳು ಅಕ್ಷತೆ, ಗಂಧ, ವಸ್ತ್ರ, ತುಪ್ಪ, ಬೊಗಸೆ ಅಡಕೆ, ೧೨ ಎಲೆ, ಅರಿಶಿನದ ಕೊಂಬು ೧೨ ಇತ್ಯಾದಿ. ಈ ಪ್ರಕಾರವಾಗಿ ದೇಶದಲ್ಲಿ ಜನವೆಲ್ಲಾ ಮಡಿವಾಳಿಗೆ ನಡಸುವುದಾಗಬೇಕು. ಅಲ್ಲದೆ ಕೇಶಶೃಂಗಾರಕ್ಕೆ ೧ ಗದ್ಯಾಣ, ಮದುವೆಗೆ ೧ ಗದ್ಯಾಣ ಕೊಡುವುದಾಗಬೇಕು. ಇದು ಕಲ್ಯಾಣಪಟ್ಟಣದಲ್ಲಿ ಬಸವೇಶ್ವರ ಸ್ವಾಮಿಗಳು ನಿರ್ಣಯ ಮಾಡಿದ್ದು, ಮಡಿವಾಳಯ್ಯನಗೆ ಸಲ್ಲತಕ್ಕದ್ದು".

೨. ಕನ್ನಡ ಶಾಸನದ ಈಚಿನ ಕಾಲದ ಗದ್ಯರೂಪ

ಗುಂಡಲಪೇಟೆ ಹತ್ತಿರದ ಭೂತನಹಳ್ಳಿಯ ಹಜಾಮರು ಚನ್ನಿಗರಾಯಸ್ವಾಮಿ ದೇವಸ್ಥಾನದಲ್ಲಿ ತಮ್ಮ ವಾಲಗಕ್ಕೆ ಮಲ್ಲಿಗೆ ಹೂ ಮುಡಿಸಿ, ಜುಟ್ಟಿಗೆ ಹೂ ಮುಡಿದುಕೊಂಡು ವಾಲಗ ಮಾಡುತ್ತಿದ್ದರು. ಅದೇ ಗ್ರಾಮದ ಮಡಿವಾಳರ ಚನ್ನಶೆಟ್ಟಿ ಎಂಬುವನು ಈ ವಾಲಗದವರನ್ನು "ನೀವುಗಳು ಮಲ್ಲಿಗೆ ಹುವ್ವ ಮುಡಿಯತಕ್ಕ ಪದ್ಧತಿಯಲ್ಲ" ಎಂದು ಹೇಳಿ ಹೂವನ್ನು ಕೀಳಲು ಹೋದನು. ಅಷ್ಟರಲ್ಲಿ ಹಜಾಮರು "ನಮಗೆ ಸಲ್ಲುವುದೇ ಇಲ್ಲವೇ ಎನ್ನುವುದನ್ನು ತಿಳಿಯಲು ನಾವೂ ನೀವೂ ದೇಶನಾಡಿನವರ ಹತ್ತಿರಕ್ಕೆ ಹೋಗಿ ಕೇಳೋಣ" ಎಂದರು. ಆಮೇಲೆ ಇವರಲ್ಲಿ ಪ್ರತಿಷ್ಠಿತ ವ್ಯಕ್ತಿಗಳೂ ಅವರಲ್ಲಿ ಪ್ರತಿಷ್ಠಿತ ವ್ಯಕ್ತಿಗಳೂ ವಿಕರ್ತರೂ (?) ಶೆಟ್ಟಿ ಗ್ರಾಮಾದಿಗಳ ಮುಖ್ಯರೂ ದೇಶನಾಡಿನವರೂ ಇನ್ನೂ ಮುಂತಾದ ಜನಗಳೂ ಮಡಿವಾಳ ಶೆಟ್ಟಿಗಳನ್ನು "ನೀವುಗಳು ಹಜಾಮರು ಮುಡಿದುಕೊಂಡಿದ್ದ ಮಲ್ಲಿಗೆಯ ಹೂವನ್ನು ಹೇಗೆ ಕಿತ್ತಿರಿ?" ಎಂದು ಕೇಳಿದರು. ಆಗ ಈ ಮಡಿವಾಳಿ ಶೆಟ್ಟಿಗಳು "ನಮ್ಮ ತಾಯಿ ಮಲ್ಲಿಗೆ ಹೂವನ್ನು ಹಜಾಮರು ಮುಡಿಯಕೂಡದು" ಎಂಬುದಾಗಿ ದೇಶನಾಡಿನವರಿಗೆ ಹೇಳಿದರು.

ಆಗ ಹಜಾಮರಲ್ಲಿ ಪ್ರತಿಷ್ಠಿತ ವ್ಯಕ್ತಿಯಾದ ರಾಮಪುರಿ ವೆಂಕಟಚಲುವನನ್ನು ದೇಶನಾಡಿನವರು "ನಿಮಗೆ ಮಲ್ಲಿಗೆ

* ಸಹಾಯಕ ಪ್ರಾಧ್ಯಾಪಕ, ಶ್ರೀ ಜೆ.ಸಿ.ಬಿ.ಎಂ. ಕಾಲೇಜು, ಶೃಂಗೇರಿ.

ಹೂವು ಸಲ್ಲುವುದಿಲ್ಲ ಎಂದು ಮಡಿವಾಳ ಶೆಟ್ಟಿಗಳು ಹೇಳುತ್ತಾರೆ. ನೀವು ಹೇಗೆ ಮುಡಿದಿರಿ?" ಎಂಬುದಾಗಿ ಪ್ರಶ್ನಿಸಿದರು. ಅದಕ್ಕೆ ರಾಮಪುರಿ ವೆಂಕಟಚಲುವನು ಅವರನ್ನೂ ನಮ್ಮನ್ನೂ ಕಂಚಿಗೆ ಕಳಿಸಿಕೊಡಿ; ಅಲ್ಲಿ ಶಾಸನದಲ್ಲಿ ಹೇಗೆ ಇರುತ್ತದೋ ಹಾಗೆ ನಡೆಯುತ್ತೇವೆ" ಂದು ಉತ್ತರಿಸಿದನು. ಅದಕ್ಕೆ ದೇಶನಾಡಿನವರು ಮಡಿವಾಳ ಶೆಟ್ಟಿಗಳಲ್ಲಿ ಪ್ರತಿಷ್ಠಿತ ವ್ಯಕ್ತಿಯಾದ ದೊಡ್ಡಪೇಟೆ ಪಾಳ್ಯದ ವೆಂಕಟಶೆಟ್ಟಿಯನ್ನು ಕರೆಸಿ, "ಹಜಾಮರು ಕಂಚಿಗೆ ಕರೆಯುತ್ತಾರೆ, ಏನು ಹೇಳುತ್ತೀರಿ?" ಎಂಬುದಾಗಿ ಕೇಳಿದರು. ಅದಕ್ಕೆ ಆತನು "ನಾವುಗಳು ಸುಮ್ಮನೆ ಹೋಗುವುದಿಲ್ಲ. ಕಂಚಿಯಲ್ಲಿ (ಶಾಸನ ನೋಡಿಸಿದಾಗ) ಮಲ್ಲಿಗೆ ಹೂವು ನಮಗೆ ಇಲ್ಲವಾದರೆ ನಾವುಗಳು ದೇಶನಾಡಿನವರಿಗೂ ಕುಲಕ್ಕೂ ತಪ್ಪುದಂಡ ಕೊಡುತ್ತೇವೆ; ಹಜಾಮರಿಗೆ ಇಲ್ಲವಾಯಿತೇ, ಅವರುಗಳು ಇದೇ ತಪ್ಪುದಂಡ ಕೊಡುವ ಹಾಗೆ ಕರಾರು ಪತ್ರ ಬರೆಸಿ ಕಳಿಸಿಕೊಟ್ಟರೆ ನಾವು ಹೋಗುತ್ತೇವೆ" ಎಂದು ದೇಶನಾಡಿನವರಿಗೆ ತಿಳಿಸಿದನು. ಇದಕ್ಕೆ ಮತ್ತೆ ದೇಶನಾಡಿನವರು ಹಜಾಮರಲ್ಲಿ ರಾಮಪುರಿ ವೆಂಕಟಚಲುವನನ್ನು ಕರೆಸಿ ಕೇಳಿದಾಗ, ಅದಕ್ಕೆ ಅವನು "ಹಾಗೆಯೇ ಆಗಲಿ" ಎಂದು ತಿಳಿಸಿದನು.

ಇಬ್ಬರೂ ಸೇರಿ ದೇಶನಾಡಿನವರಿಗೆ ಕರಾರು ಪತ್ರ ಬರೆದುಕೊಟ್ಟರು. ಕಂಚಿಗೆ ಪ್ರಯಾಣ ಮಾಡಿದರು. ಮಡಿವಾಳ ಶೆಟ್ಟಿಗಳ ಪೈಕಿ ದೊಡ್ಡಪೇಟೆ ವೆಂಕಟಶೆಟ್ಟಿ, ಅನಂತಗೌಡನ ಹಳ್ಳಿಯ ಚನ್ನವೀರಶೆಟ್ಟಿ, ಗುಂಡ್ಲು ರಾಮಶೆಟ್ಟಿ, ಸಾಲಿಗ್ರಾಮದ ಮುದ್ದುವೀರಶೆಟ್ಟಿ, ಪಾಳ್ಯದ ಬಸವಶೆಟ್ಟಿ ಮುಂತಾದ ಮಡಿವಾಳಿಗಳೂ ಹಜಾಮರಲ್ಲಿ ದೊಡ್ಡಪೇಟೆ ಗುಂಡಯ್ಯ ಮಾರಯ್ಯಗಳು, ಬಾತನಹಳ್ಳಿ (ಬೂತನಹಳ್ಳಿ) ಬಸವಯ್ಯ, ಸಾಲಗ್ರಾಮದ ಮುದ್ದಯ್ಯ ಮುಂತಾದವರೂ ಹೀಗೆ ಎರಡೂ ಕಡೆಗಳ ಪ್ರತಿಷ್ಠಿತ ವ್ಯಕ್ತಿಗಳು ಹೊರಟರು. ಇನ್ನು ದೇಶದವರಲ್ಲಿ ಧನಪಾಲ ಶೆಟ್ಟಿ, ಗುಂಡ್ಲು ಅಲ್ಲಯ್ಯನವರು ಸಹ ಕೂಡಿಕೊಂಡು ಕಂಚಿಗೆ ಇವರನ್ನು ಕರೆದುಕೊಂಡು ಹೋದರು. ಕಂಚಿಗ್ರಾಮದ ಅಧಿಪತಿಗಳೂ ಕರಣಿಕರೂ ದೇಶದವರೂ ನಾಡಿನವರೂ ದೊಡ್ಡ ದೊಡ್ಡ ಮನುಷ್ಯರೂ ಸುಬ್ಬಾದೀಕ್ಷಿತರೂ (?) ಮೈಸೂರು ಮಹಾಶಾಸ್ತ್ರಿಗಳೂ ವರದಯ್ಯಂಗಾರ್ಯರೂ ರಾಮಾನುಜಯ್ಯನವರೂ ಕೊಂಡಾವಧಾನಿಗಳು ತಮ್ಮ ಸ್ಥಳದವರೂ (ಸದರಿ) ಧನಪಾಲಶೆಟ್ಟರೂ ಇನ್ನೂ ಮುಂತಾದ ಸಮಸ್ತರೂ ಕೂಡಿ, ಕಂಚಿಯ ದೇಶ ನಾಡಿವರನ್ನು ಕಂಡರು. "ಹಜಾಮರು ಮಲ್ಲಿಗೆ ಹೂವು ಮುಡಿದುಕೊಂಡಿದ್ದು ಕಾರಣವಾಗಿ ಮಡಿವಾಳ ಶೆಟ್ಟಿಗಳು ಅದನ್ನು ಕಿತ್ತು ಹಾಕಿದರು. ಅದರಿಂದಾಗಿ ನಾವುಗಳು ಇವರನ್ನು ಕರೆದುಕೊಂಡು ಬಂದಿರುತ್ತೇವೆ" ಎಂಬುದಾಗಿ ಅವರಲ್ಲಿ ಧನಪಾಲಶೆಟ್ಟರು ಕೇಳಿ ಅರಿಕೆ ಮಾಡಿದರು.

ಆಗ ಕಂಚಿಯ ದೇಶ ನಾಡಿನವರು, "ನಿಶಾಕಂಭದ ದೇವಸ್ಥಾನದಲ್ಲಿ ಇರುವ ಶಾಸನವನ್ನು ತೆಗೆಸಿ ನೋಡಿದರೆ ಹೇಳುತ್ತೇವೆ" ಎಂದರು. ಅದಕ್ಕೆ ಇವರು "ತೆಗೆಯಿರಿ" ಎಂದರು. "ಆದಕ್ಕೆ ಅದರ ಖರ್ಚು ೪೦ ರೂಪಾಯಿ ಆಗುವುದು" ಎಂಬುದಾಗಿ ಅಲ್ಲಿಯ ಗ್ರಾಮಾಧಿಪತಿಗಳು ಹೇಳಿದಾಗ, ಹಜಾಮರ ಕೈಯಲ್ಲಿ ೨೦ ರೂಪಾಯಿ ಮತ್ತು ಮಡಿವಾಳಿ ಶೆಟ್ಟಿಗಳ ಕೈಯಲ್ಲಿ ೨೦ ರೂಪಾಯಿ ಹೀಗೆ ೪೦ ರೂಪಾಯಿ ಖರ್ಚು ಕೊಟ್ಟು ಶಾಸನವನ್ನು ತೆಗೆಸಿ ಓದಿಸಲಾಯಿತು. ಹೀಗೆ ಮಾಡಿದಾಗ, ಹಜಾಮರಿಗೆ ಕೆಂಪು ಗಣಿಗಿಲೆ ಹೂ, ಕೆಂಪು ಹೊದಪು ಸಾಣೆ (?) ಕಟ್ಟಕಡೆ ಬಾಗಿಲು ಸಲ್ಲುವುದು ಎಂಬುದಾಗಿ ಶಾಸನದಲ್ಲಿತ್ತು. ಇದರಿಂದ ಹಜಾಮರಿಗೆ ಮಲ್ಲಿಗೆ ಹೂವು ಸಲ್ಲುವುದಿಲ್ಲವೆಂದು ದೇಶನಾಡಿನವರೂ ಗ್ರಾಮಾಧಿಪತಿಗಳೂ ಕರಣಿಕರೂ ಸಹ ಹೇಳಿದರು. ಮತ್ತು ಮಡಿವಾಳಿ ಶೆಟ್ಟಿಗಳೂ ಶಾಸನವನ್ನು ತೆಗೆಸುವಲ್ಲಿ, ಮಡಿವಾಳಿಗೆ ಮಲ್ಲಿಗೆ ಮಹಾದೇವಿ ಸಲ್ಲುವುದು; ಅವಳು ಮಲ್ಲಿಗೆ ಹೂವು ಬಿಳಿಗಣಿಗಲೆ ಹೂವು ಬಿಳಿಯ ಛತ್ರಿ ಬಿಳಿಯ ಹೊದಪು ಕೂಡಿ ಕುದುರೆ ಏರಿ ಇರುವವಳು. ಹೀಗೆ ಮಲ್ಲಿಗೆ ಮಹಾದೇವಿ ಮಡಿವಾಳ ಶೆಟ್ಟರಿಗೆ ಸಲ್ಲುವುದು ಎಂದು ಕಂಚಿಶಾಸನದಲ್ಲಿ, ಕಂಚಿ ನಿಶಾಕಂಬದ ದೇವಸ್ಥಾನದಲ್ಲಿ ಇರುವುದು ಕಂಡುಬಂದಿತು.

ಇದನ್ನು ಕಲ್ಯಾಣಪಟ್ಟಣದ ಬಸವಪ್ಪನವರು ಮಾಡಿದ ಶಾಸನ ಎಂದು ಹೇಳುವರು. ಇದನ್ನು ಭೇದವಾಗಿ ತಿಳಿದರೆ ಕಾಶಿಯಲ್ಲಿ ಗೋಹತ್ಯೆ ಮಾಡಿದ ಹಾಗೆ, ಶಿಶುಹತ್ಯೆ ಮಾಡಿದ ಹಾಗೆ, ರಾಮೇಶ್ವರದಲ್ಲಿ ಬ್ರಾಹ್ಮಣರನ್ನು ವಧಿಸಿದ ಹಾಗೆ, ಸುಬ್ರಹ್ಮಣ್ಯದಲ್ಲಿ ಸರ್ಪವನ್ನು ಕೊಂದ ಹಾಗೆ.

ಇದನ್ನು ನೋಡಿದವರು ಚೆನ್ನಾಗಿ ವಿವೇಚಿಸಿ ತಿಳಿಯುವುದು. ಹಜಾಮರು ದೇಶನಾಡಿನವರಿಗೆ ತಪ್ಪುದಂಡ ಕೊಟ್ಟು, ಇನ್ನು ತಾವು ಮಲ್ಲಿಗೆ ಹೂವನ್ನು ಮುಡಿಯುವುದಿಲ್ಲ ಎಂದು ಕಂಚಿಯಲ್ಲಿ ಕರಾರು ಬರೆದುಕೊಟ್ಟು ಬಂದಿರುತ್ತಾರೆ. ಇದರ ನಕಲನ್ನು ನಮ್ಮ ಕುಲಸ್ಥರಿಗೆ ಕಳಿಸಿರುತ್ತೇವೆ. ಇದರ ಓಲೆಪ್ರತಿ ದೊಡ್ಡಪೇಟೆಯಲ್ಲಿರುತ್ತದೆ. ಇದನ್ನು ತಿಳಿದಿರುವುದು."

ಈ ಎರಡು ಶಾಸನಗಳ ಬಗೆಗೆ ಕೆಲವು ವಿಮರ್ಶೆಯ ಮಾತುಗಳನ್ನು ಹೇಳಬಹುದಾಗಿದೆ

ಈ ಶಾಸನಗಳು ಸಮುದಾಯದವರು ಮಾಡಿಕೊಂಡ ವಿಧಿಯಂತೆ ತಾವು ಪಡೆದುಕೊಂಡು ತಮ್ಮಲ್ಲಿರಿಸಿಕೊಂಡಿದ್ದ ಕಟ್ಟಳೆಯ ಅಧಿಕೃತ ಪತ್ರಗಳು ಎನ್ನಬಹುದಾದವು. ಎರಡನೆಯದಕ್ಕೆ ತಾಲೆಯೋಲೆ ಪ್ರತಿಯೂ ಉಂಟು ಎಂದಿದ್ದರೂ ಅದು ಇನ್ನೂ ಬೆಳಕಿಗೆ ಬಂದಂತಿಲ್ಲ.

ಮೊದಲನೆಯದು ತೆಲುಗು ಭಾಷೆಯದು. ಬಸವಣ್ಣ ಮತ್ತು ಶಿವಶರಣ ಮಡಿವಾಳ ಮಾಚಿದೇವರ ಪ್ರಸ್ತಾವವನ್ನು ಕಟ್ಟಳೆಗೆ ಒಂದು ಘನತೆ, ಪ್ರಾಚೀನತೆ, ಅಧಿಕೃತತೆ ತರುವ ಸಲುವಾಗಿ ಮಾಡಿದ್ದೆಂದು ಊಹಿಸಬಹುದು. ತಾವು ತಮ್ಮ ಶ್ರಮದ ದುಡಿಮೆಗೆ ತಕ್ಕ ಪ್ರತಿಫಲ ಪಡೆಯುವುದು ತಮ್ಮ ಹಕ್ಕೆಂದೂ ಅದನ್ನು ಅನ್ಯ ಸಾಮಾಜಿಕರು ನಡೆಸಿಕೊಡುವುದು ಅವರ ಕರ್ತವ್ಯವೆಂದೂ ಇಲ್ಲಿ ತೋರಿಸುವ ಯತ್ನವಿದೆ. ಬಟ್ಟೆ ಮಡಿ ಮಾಡುವುದು, ಪ್ರಸಾಧನ, ಮದುವೆಯಂಥ ಶುಭಕಾರ್ಯ ಇವುಗಳಲ್ಲಿ ಮಡಿವಾಳರ ಪಾತ್ರ ಏನೆಂಬುದನ್ನು ಇಲ್ಲಿ ಬಿಡಿಸಿಯೇ ಹೇಳಿದೆ.

ಎರಡನೆಯ ಶಾಸನದಲ್ಲಿ ನಾವಿದರಿಗೂ (ಸವಿತಾ ಸಮಾಜದವರಿಗೂ) ಮಡಿವಾಳರಿಗೂ ಪುಷ್ಪ ಪ್ರಸಾಧನ ಸಂಬಂಧವಾದ ಆಚಾರವೊಂದರಲ್ಲಿ ಬಂದ ಭಿನ್ನಾಭಿಪ್ರಾಯ ಮತ್ತು ಅದರ ಪರಿಹಾರಗಳ ಪ್ರಸ್ತಾವವಿದೆ. ಒಂದು ಕಾಲಕ್ಕೆ ಬಹಿರಾಚಾರಗಳು ಎಷ್ಟು ಬಲವಾಗಿ ಪಂಗಡಗಳಿಗೆ ಅಂಟಿದ್ದುವು ಎನ್ನುವುದನ್ನು ಇಲ್ಲಿ ಕಾಣಬಹುದು. ಅಲ್ಲದೆ ಈ ವಿವಾದದಲ್ಲಿ ಇಡಿಯ ಒಂದು ಸಮುದಾಯವಲ್ಲದೆ, ಸ್ಥಳ ಪರಸ್ಥಳಗಳ ಎಲ್ಲಾ ಸಮುದಾಯಗಳೂ ಹೇಗೆ ಪಾತ್ರ ವಹಿಸುತ್ತಿದ್ದುವು ಎನ್ನುವುದೂ ಗಮನಾರ್ಹ ವಿಷಯವೇ. ವಿವಾದದ ಪರಿಹಾರಕ್ಕೆ ಕಂಚಿಯೇ ಏಕೆ ನ್ಯಾಯಧೀಶನ ಪಾತ್ರ ವಹಿಸಬೇಕು, ಅಲ್ಲಿದ್ದ ನಿಶಾಕಂಭದ ದೇವಸ್ಥಾನ ಎನ್ನುವುದೂ ಶಾಸನ ಎನ್ನುವುದೂ ಯಾವುವು ಇವು ದಿಟವಾಗಿ ವಿಚಾರಯೋಗ್ಯವಾದ ಸಂಗತಿಗಳು. ಮಡಿವಾಳರಿಗೇ ಮಲ್ಲಿಗೆ ಹೂವು ಏಕೆ ಸಲ್ಲಬೇಕು, ನಾವಿದರಿಗೆ ಕೆಂಪುಗಣಗಿಲೆ, ಕಟ್ಟಕಡೆಬಾಗಿಲು ಏಕೆ? ಇವೆಲ್ಲ ಸಮಾಜಶಾಸ್ತ್ರೀಯವಾದ ಅಧ್ಯಯನಗಳಿಂದ ವಿಶದವಾಗಬೇಕು. ಬಟ್ಟೆಗಳು ಬೆಳ್ಳಗೆ ಮಡಿಯಾಗುವ ಆದರ್ಶಕ್ಕೆ ಒಂದರ ಸಂಕೇತ ಅರ್ಥವಾದರೂ, ನಾವಿದರಿಗೆ ಕಟ್ಟಳೆಯಾಗುವ ಕೆಂಪು ಯಾವ ಸಂಕೇತ? ಇದು ಏನೇ ಇದ್ದರೂ, ಸಾಮಾಜಿಕ ಕಟ್ಟುಕಟ್ಟಳೆಗಳಿಗೆ ಇಲ್ಲಿ ವಿಚಾರದ ಗ್ರಾಸವುಂಟು.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಕರ್ನಾಟಕ ವಿಷಯ ವಿಶ್ವಕೋಶ, ಪುಟ ೬೫೬.

೨. ಕಾನಕಾನ ಹಳ್ಳಿ ಚರಿತ್ರೆ, ಲೇ. ಡಾ. ಟಿ.ವಿ.ವಿ., ಪುಟ ೭೦.

೩. ಅರ್ಕಾವತಿ ಗ್ರಾಮ ದೇವತೆಗಳು ಮತ್ತು ಐತಿಹ್ಯಗಳು, ಡಾ. ಎಂ. ಬೈರೇಗೌಡ.

೪. ಹೊಸತು ಮಾಸ ಪತ್ರಿಕೆ, ಡಿಸೆಂಬರ್ ೨೦೦೩, ಲೇ. ಮುತ್ತುರಾಜ್.

೨೬

ಬಳ್ಳಾರಿ ಜಿಲ್ಲೆಯ ಕಾಳಾಮುಖ ಸ್ಥಾನಾಚಾರ್ಯರು (ಶಾಸನಗಳನ್ನಾಧರಿಸಿ)

ಮಂಜುಳ ಆಚಾರಿ*

ಭಾರತೀಯ ಶೈವ ಪ್ರಪಂಚ ತುಂಬಾ ವಿಸ್ತಾರವಾದುದು. ಅದರ ಶಾಖೋಪಶಾಖೆಗಳಾದ ಪಾಶುಪತ, ಲಾಕುಳ, ಕಾಳಾಮುಖ, ಕಾಶ್ಮೀರ ಶೈವ, ತಮಿಳು ಶೈವ, ವೀರಶೈವ, ಶುದ್ಧ ಶೈವ ಮೊದಲಾದವುಗಳಲ್ಲಿ ದೇಶವ್ಯಾಪಿಯಾಗಿದ್ದ ಪಾಶುಪತ, ಲಾಕುಳಗಳು, ಕಾಳಾಮುಖ ಮತ್ತು ನಮ್ಮ ನಾಡಿನ ವೀರಶೈವಗಳು ಪ್ರಮುಖವಾಗಿವೆ. ಇವುಗಳಲ್ಲಿ ಸಿಂಧೂ ನಾಗರೀಕತೆಯಷ್ಟು ಪ್ರಾಚೀನವಾದುದು ಪಾಶುಪತ, ಮಧ್ಯಯುಗದ ಇದರ ಪರಿಷ್ಕೃತ ರೂಪ ಲಾಕುಳ, ನ್ಯಾಯ ವೈಶೇಷಿಕ ದರ್ಶನಗಳ ದಕ್ಷಿಣದ ಶೈವೀಯ ಶಾಖೆ ಕಾಳಾಮುಖ.

ಮಧ್ಯಯುಗದಲ್ಲಿ ಕರ್ನಾಟಕದಲ್ಲಿ ಅತ್ಯಂತ ಪ್ರಭಾವ ಶಾಲಿಯಾದ ಏಕೈಕ ಶೈವ ಪಂಥ ಕಾಳಾಮುಖ. ಕರ್ನಾಟಕದಲ್ಲಿ ಸು. ೯ನೇ ಶತಮಾನದಿಂದ ೧೩ನೇ ಶತಮಾನದವರೆಗೆ ಕಾಳಾಮುಖ ಉಲ್ಲೇಖಗಳು ಶಾಸನಗಳಲ್ಲಿ ಸಿಗುತ್ತವೆ. ಈವರೆಗೆ ಸು.೧೩೦ಕ್ಕೂ ಹೆಚ್ಚು ಕಾಳಾಮುಖರ ನೇರ ಉಲ್ಲೇಖಿತ ಶಾಸನಗಳು ದೊರೆತಿವೆ. ಕರ್ನಾಟಕದಲ್ಲಿ ಕ್ರಿ.ಶ. ೮೧೦ರ ನಂದಿಬೆಟ್ಟದ ಶಾಸನವು ಮೊಟ್ಟ ಮೊದಲು ಕಾಳಾಮುಖ ಉಲ್ಲೇಖ ನೀಡುತ್ತದೆ. ಇದು ರಾಷ್ಟ್ರಕೂಟ ದೊರೆ ಮೂರನೇ ಗೋವಿಂದನ ಕಾಲಕ್ಕೆ ಸೇರಿದೆ.[೧]

ಮಧ್ಯಯುಗದಲ್ಲಿ ಕರ್ನಾಟಕದ ಬಳ್ಳಾರಿ ಜಿಲ್ಲೆ ಶೈವರ ಅಧ್ಯಯನದ ದೃಷ್ಟಿಯಿಂದ ತುಂಬ ವಿಶೇಷವಾದ ಮತ್ತು ಮಹತ್ವದ ಆಕರಗಳನ್ನು ಒಳಗೊಂಡಿದೆ. ಬಳ್ಳಾರಿ ಜಿಲ್ಲೆಯಲ್ಲಿನ ಧಾರ್ಮಿಕ ಜೀವನವನ್ನು ಗಮನಿಸಿದರೆ ಹಲವಾರು ಧರ್ಮಗಳು ಬೆಳೆದು ಬಂದಿರುವುದು ತಿಳಿಯುತ್ತದೆ. ಅವುಗಳಲ್ಲಿ ಶೈವ ಧರ್ಮದ ಕಾಳಾಮುಖ ಪರಂಪರೆಯು ವ್ಯಾಪಕವಾಗಿ ಹರಡಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಕಾಳಾಮುಖ ನೇರ ಉಲ್ಲೇಖವುಳ್ಳ ಶಾಸನಗಳ ಸಂಖ್ಯೆ ೭, ಅವು ಬಳ್ಳಾರಿ ತಾಲೂಕಿನಲ್ಲಿ ೦೩, ಹಡಗಲಿ, ಕೊಟ್ಟೂರು, ಹಗರಿ ಬೊಮ್ಮನ ಹಳ್ಳಿ ತಾಲೂಕಿನಲ್ಲಿ ತಲಾ ಒಂದೊಂದು ಶಾಸನಗಳಿವೆ. ಇವುಗಳಲ್ಲಿ ಕಲ್ಯಾಣ ಚಾಲುಕ್ಯರ ಕಾಲಕ್ಕೆ ೦೬, ಕಳಚೂರಿಗಳು ಮತ್ತು ಕುರುಗೋಡ ಸಿಂಧರ ಅವಧಿಯ ೦೧ ಶಾಸನ ಲಭ್ಯವಾಗಿದೆ. ರಾಜಮನೆ ತನದ ಉಲ್ಲೇಖವಿಲ್ಲದಿರುವುದು ೦೧ ಶಾಸನವಿದೆ.

ಕುರುವತ್ತಿ ಶಾಸನದಲ್ಲಿ ಬ್ರಾಹ್ಮಣರು ತಮ್ಮ ಮಕ್ಕಳಿಗೆ ಪುಣ್ಯವಾಗಲಿ ಎಂದು (ಕ್ರಿ.ಶ.೧೦೬೭) ದಾನ ಮಾಡಿದ್ದಾರೆ. ಇದು ವರ್ಗ/ವರ್ಣ ಸಾಮರಸ್ಯವನ್ನು ತೋರಿಸುತ್ತದೆ. ಮಹಾ ಮಂಡಳೇಶ್ವರ ಘಟ್ಟಿಯರಸನು ಅಮೃತರಾಶಿ ಪಂಡಿತರಿಗೆ ಎರೆಯ ಕೆರೆಯ ಮತ್ತರು ಭೂಮಿ, ೪೫೦ ಸಾವಿರ ಒಳ್ಳೆಯ ತೋಟ, ಗಾಣ, ಕೋಟೆಯೊಳಗಿನ ಮನೆ ಇತ್ಯಾದಿ ದಾನ ನೀಡಿದ್ದಾನೆ. ಸಾಮಂತರಾದ ತ್ರಿಭುವನ ಮಲ್ಲಪಾಂಡ್ಯ ಸೋಮ ಕರ್ತ್ತಾರರಿಗೆ ಗ್ರಾಮ, ಗದ್ದೆ, ೧ ಗಾಣ ಒಕ್ಕಲು ದಾನ ನೀಡಿದ್ದಾರೆ. ಸಾಮಂತ ಕುರುಗೋಡಸಿಂದರ ರಾಚಮಲ್ಲನು ಬಾಲಶಿವಾಚಾರ್ಯರಿಗೆ ಮತ್ತು ಅಮೃತರಾಶಿ ಪಂಡಿತರಿಗೆ ತೆಕ್ಕಲ ಮತ್ತರು ೨, ಕಂಬ ೨೨೫ನ್ನು ದಾನ ಮಾಡಿದ್ದಾರೆ.

ಕಾಳಾಮುಖ ಸ್ಥಾನಾಚಾರ್ಯರು

೧. ಜ್ಞಾನೇಶ್ವರ ಪಂಡಿತ

ಕ್ರಿ.ಶ. ೧೦೬೭ರ ಕುರುವತ್ತಿ ಶಾಸನದಲ್ಲಿ "ಕಾಳಾಮುಖ ಸರಸ್ವತಿ ಕರ್ಣ್ನಾ ವತಂಸ" ಎಂದು ಜ್ಞಾನೇಶ್ವರ ಪಂಡಿತರನ್ನು ಹೊಗಳಿದೆ.[೨] ಚಾಲುಕ್ಯ ಆಹವಮಲ್ಲ ತುಂಗಭದ್ರೆಯಲ್ಲಿ ಮುಳುಗಿ ಸತ್ತಾಗ, ಅವನ ಹೆಸರಿನಲ್ಲಿ ಚಾಳುಕ್ಯ ಮಲ್ಲೇಶ್ವರ ಎಂಬ ದೇವಾಲಯ ನಿರ್ಮಿಸಿ, ಅದಕ್ಕೆ ಅಭಿನವವಾದಿ ದೇವರು ಎಂದು ಪರ್ಯಾಯವಾಗಿ ಇಲ್ಲಿ ಕರೆಯಲಾಗಿದೆ. ಇಲ್ಲಿಯ ಸ್ಥಾನಾಚಾರ್ಯ ಜ್ಞಾನೇಶ್ವರ ಪಂಡಿತ ಶಾಸನದಲ್ಲಿ 'ಜ್ಞಾನೇಶ್ವರ ಪಂಡಿತ ವಿಜಯೀಭವತು' ಎಂದಿರುವುದು ಮತ್ತು ಬ್ರಾಹ್ಮಣ ರಿಂದ ದಾನ ಪಡೆದಿರುವುದು ಈ ಪಂಡಿತನ ವ್ಯಕ್ತಿತ್ವವನ್ನು ತೋರಿಸುತ್ತದೆ.

೨. ಸೋಮಕರ್ತ್ತಾರ ಪಂಡಿತ

ಹಗರಿಬೊಮ್ಮನಹಳ್ಳಿಯ ಕ್ರಿ.ಶ. ೧೧೧೧ರ ಶಾಸನದಲ್ಲಿ ಈ ಯತಿಯ ವಿವರವಿದ್ದು, ಕಾಳಾಮುಖಸ್ಥಾನ ಕರ್ತ್ತಾರ

* ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಠಕಿ ಎಂದು ಹೇಳಿದೆ. ಇಲ್ಲಿ ಸೋಮಕರ್ತ್ಥಾರ ಮತ್ತು ಕಾಳಾಮುಖ ಕರ್ತ್ಥಾರ ಮಠಕ್ಕೆ ಏನೋ ಸಂಬಂಧವಿರುವಂತೆ ತೋರುತ್ತದೆ. ಪರಶುರಾಮೇಶ್ವರ ದೇವರ ಸೇವೆಗೆ ದಾನ ಕೊಡುವಾಗ ಕರ್ತ್ಥಾರ ಮಠದ ಯತಿಗೂ ದಾನ ನೀಡಿದ್ದಾರೆ. ಅಂದರೆ ಇಲ್ಲಿ ಪರಶುರಾಮೇಶ್ವರ ದೇವಾಲಯಕ್ಕೆ ಹೊಂದಿ ಕೊಂಡೇ ಕಾಳಾಮುಖ ಕರ್ತ್ಥಾರ ಮಠವೂ ಇದ್ದಿರಬೇಕು. ಸೋಮಕರ್ತ್ಥಾರರ ಹೆಸರಿನಲ್ಲಿ ಬಹುಶಃ ಮಠ ಸ್ಥಾಪನೆಯಾಗಿರಬೇಕೆನ್ನಿಸುತ್ತದೆ. ಯಮ ನಿಯಮಸ್ವಾಧ್ಯಾಯಧ್ಯಾನ ಧಾರಣಾಷಾವಿಣ ಜಪಸಮಾಃಧಿ ಶೀಳ ಗುಣಸಂಪನ್ನರಪ್ಪ ಎಂದು ಯತಿಯನ್ನು ವರ್ಣಿಸಲಾಗಿದೆ.

೩. ನಿರ್ವಾಣಿ ದೇವರು

ಕ್ರಿ.ಶ. ೧೧೪೧ರ ಸಿಂದಿಗೆರೆ ಶಾಸನದಲ್ಲಿ ಎಕ್ಕೋಟಿ ಚಕ್ರವರ್ತಿಯ ಮಠದ ಉಲ್ಲೇಖವಿದೆ. ಇದರಲ್ಲಿ ಕಾಳಾಮುಖ ಸಮಯ ಸಮುದ್ಧರಣ ಮುಳುಗುಂದದ ಸ್ವಯಂಭುದೇವರ ಆಚಾರ್ಯನಾದ ಎಕ್ಕೋಟಿ ಚಕ್ರವರ್ತಿ ವಾಮದೇವರ ಶಿಷ್ಯ ಶ್ರೀಮತ್ ತ್ರಿಲೋಚನದೇವರ ಶಿಷ್ಯ ಕುಮಾರದೇವ, ಇವರ ಶಿಷ್ಯ ನಿರ್ವಾಣಿದೇವರು ಎಂದು ಹೇಳಿದೆ. ನಿರ್ವಾಣಿ ದೇವರು ಸಿಂದಿಗೆರೆಯ ಮಲ್ಲಿಕಾರ್ಜುನ ದೇವರನ್ನು "ಎಕ್ಕೋಟಿ ಚಕ್ರವರ್ತಿ ಮಠ" ಎಂದು ಹೇಳಿದೆ. ದತ್ತಿಭೂಮಿಯನ್ನು ಕಾಶ್ಮೀರ ಭೂಮಿ ಎಂದು ಉಲ್ಲೇಖಿಸಿದೆ.

ಇದೇ ಶಾಸನದಲ್ಲಿ ವಾಮದೇವನನ್ನು ವ್ಯಾಕರಣ ತರ್ಕ, ಸಿದ್ಧಾಂತ, ಕಾವ್ಯ, ನಾಟಕ, ನೃತ್ಯ, ಪುರಾಣ, ಇತಿಹಾಸ, ಮೀಮಾಂಸೆ, ನೀತಿಶಾಸ್ತ್ರ ಮುಂತಾದವುಗಳಲ್ಲಿ ಪ್ರವೀಣನಾಗಿದ್ದನೆಂದು ಉಲ್ಲೇಖಿಸಿದೆ. ಇಲ್ಲಿ ಮುಳುಗುಂದದ ಶ್ರೀ ಸ್ವಯಂಭುದೇವರಾಚಾರ್ಯರುಂ ನಿರ್ವಾಣಿದೇವರ ಕಾಲಂ ಕರ್ಚಿ ಧಿರಾಪ್ರದಾನಂ ಮಾಡಿ ಕೇಮನಕೇಸಿ(ಯ)ಣ ನಾಯಕ ಕೊಟ್ಟ ಧರ್ಮ

> **"ಮುಳುಂಗದ ಶ್ರೀ ಸ್ವಯಂಭು ದೇವರಾಚಾರ್ಯರು**
> **ನಿರ್ವಾಣಿದೇವರು**
> **ಸಿಂದಗೆಱೆಯ ಶ್ರೀಮಲ್ಲಿಕಾರ್ಜುನ ....**
> **...... ಇದು ಎಕ್ಕೋಟಿ ಚಕ್ರವರ್ತಿಮಠ ಅಲ್ಲೆಂದನ ಬಾಯ ಕೋಷ್ಟ ಮೂಡುಗು....**
> **ಅವಾರಿಭದ್ರ ಈಡಿಲ್ಲೆಂದನ ಬಾಯು ಕೋಷ್ಟಿ ಮೂಡುಗು!"**....೪

ಅಂದರೆ ಮುಳುಗುಂದದ ಸ್ವಯಂಭು ದೇವರು ಹಾಗೂ ಸಿಂದಗೆರೆಯ ಮಲ್ಲಿಕಾರ್ಜುನ ದೇವರು ಎರಡು ಸಹ ಎಕ್ಕೋಟಿ ಚಕ್ರವರ್ತಿ ಮಠಗಳೆಂದು ತಿಳಿಯುತ್ತದೆ. ಅಲ್ಲದೆ ನಿರ್ವಾಣಿ ದೇವರು ಮುಳುಗುನ್ದದ ಸ್ವಯಂಭು ದೇವರ ಆಚಾರ್ಯ ಸ್ಥಾನವನ್ನು ಸಹ ವಹಿಸಿಕೊಂಡಿದ್ದಿರಬೇಕು ಎಂಬುದು ತಿಳಿದು ಬರುತ್ತದೆ.

ಕ್ರಿ.ಶ. ೧೧೧೩ರ ಕೊಟ್ಟೂರು ಶಾಸನದಲ್ಲಿ ದಶಬ್ರಹ್ಮರಾಯ ಮತ್ತು ನಾಗಲಾದೇವಿಯರ ಮಗನಾದ ಪೃಥ್ವಿದೇವನು ಕೇದಾರ ಪಂಡಿತರ ಶಿಷ್ಯನಾಗಿ ನಿರ್ಬ್ಬಾಣಿ ಎಂಬ ಹೆಸರನ್ನು ಪಡೆದು ಡಕ್ಕೇಶ್ವರ ಮತ್ತು ಮಲ್ಲಿಕಾರ್ಜುನ ದೇವರ ದೇವಾಲಯಗಳ ಒಡೆಯನಾಗುತ್ತಾನೆ ಎಂಬ ವಿವರ ಇದೆ. ಇದರಿಂದ ನಿರ್ವಾಣಿ ದೇವ ಮೊದಲು ಪೃಥ್ವಿದೇವನೆಂಬ ಹೆಸರಿನ ರಾಜಕುಮಾರನಾಗಿದ್ದು ಅನಂತರ ಈ ಗುರು ಪರಂಪರೆಗೆ ಸೇರಿರುವ ವಿಷಯ ತಿಳಿದುಬರುತ್ತದೆ. ಬಹುಶಃ ಎಕ್ಕೋಟಿ ಮಠಗಳಿಗೆ ದೀಕ್ಷೆ ಪಡೆದು ಯಾರೂ ಬೇಕಾದರೂ ಗುರುಗಳಾಗಬಹುದಿತ್ತು ಎಂದು ತಿಳಿಯುತ್ತದೆ...[೫]

ನಿರ್ವಾಣಿ ದೇವನು ಗುರುದೀಕ್ಷೆ ಪಡೆದ ಕೇದಾರ ಪಂಡಿತರು ಸಿರಿಯಮೇಶ್ವರ ಮತ್ತು ರಾಮೇಶ್ವರ ದೇವರುಗಳ ಸ್ಥಾನಾಚಾರ್ಯರಾಗಿದ್ದರೆಂದು ಕ್ರಿ.ಶ. ೧೧೧೩ರ ಕೊಟ್ಟೂರು ಶಾಸನ ತಿಳಿಸುತ್ತದೆ.

೪. ಅಮೃತರಾಸಿ ಮುನಿ

ಕ್ರಿ.ಶ. ೧೧೭೬ರ ಕುರುಗೋಡು ಶಾಸನದಲ್ಲಿ "ಶಿವಶಕ್ತಿ ಸುತನು ಕಲಿದೇವರ ಪೂಜಕನೂ ಕಾಳಾಮುಖ ತಿಲಕನೂ ಆದ ಅಮೃತರಾಸಿಮುನಿ" ಎಂಬ ಉಲ್ಲೇಖವಿದೆ. ಕಲಿದೇವರ ಸ್ಥಾನಾಚಾರ್ಯನಾದ ಈತನ ಕಾಲ್ತೊಳೆದು ಕಲ್ಲಿಸೆಟ್ಟಿ ಭೂಮಿದಾನ ಮಾಡಿದ್ದಾನೆ.[೬]

ಕ್ರಿ.ಶ. ೧೧೧೨ರ ಕೊಟ್ಟೂರಿನ ಶಾಸನವು "ಕೊಟ್ಟೂರಿನ ರಾಮೇಶ್ವರ ದೇವರ ಆಚಾರ್ಯ" ಎಂದು ಹೇಳಿದೆ. ಅಂದರೆ ಕುರುಗೋಡಿನ ಕಲಿದೇವರ ಹಾಗೂ ಕೊಟ್ಟೂರಿನ ರಾಮೇಶ್ವರ ದೇವಾಲಯಗಳಿಗೆ ಈತ ಆಚಾರ್ಯನಾಗಿರಬೇಕು.

೫. ಬಾಲಶಿವಾಚಾರ್ಯ

ಕ್ರಿ.ಶ. ೧೧೮೧ರ ಕುರುಗೋಡು ಶಾಸನದಲ್ಲಿ ಸ್ವಯಂಭೂ ದೇವರ ಸ್ಥಾನಾಚಾರ್ಯ ಬಾಲಶಿವಾಚಾರ್ಯರ ಬಗ್ಗೆ ಹೇಳಲಾಗಿದೆ.[೭] ಯಮ ನಿಯಮ ಸ್ವಾಧ್ಯಾಯಧ್ಯಾಯ ಧಾರಣ ಮೋ ಮೌನಾನುಷಾವಿನ ಶಿವಪೂಜಾ ತತ್ಪರಪ್ಪವರ ಮಹಿಮೆಂತೆದಡೆ ಆ ಲಕುಳೀಶ್ವರಾಗಮ ಕಾಳಾ (ಲಾ) ಮುಖ ದರ್ಶನಂಗಳನ್ತಾಳ್ದಿತಪೋಲೀಕಿಗೆ ವೈವಾಂತಿರ್ಪ್ಪಂ ಬಾಲಶಿವಾಚಾರ್ಯ ವರ್ಯ್ಯನಗಣಿತ ಧೈರ್ಯ್ಯನ್॥ ಅಂತೆನಿಸಿದ ಬಾಲಶಿವಾಚಾರ್ಯ್ಯರ್॥ ಎಂದಿದೆ. ಇಲ್ಲಿ ಲಾಕುಳಕ್ಕೆ ಆಗಮ ಸಂಬಂಧ, ಕಾಳಾಮುಖಕ್ಕೆ ದರ್ಶನ ಸಂಬಂಧ ಕಲ್ಪಿಸಿರುವುದು, ವೈಶೇಷಿಕ ವ್ಯಾಖ್ಯಾನದ ಬಗ್ಗೆ ಹೇಳಿರುವುದು ಈ ಯತಿಯ ಉದಾರ ಸ್ವಭಾವಕ್ಕೆ ಸಾಕ್ಷಿ ಈ ಹಿನ್ನಲೆಯಲ್ಲಿ ಬಾಲಶಿವಾಚಾರ್ಯರು ಎರಡು ಸಮಯಗಳ ಸಮನ್ವಯ ಕಾರರಂತೆ ಇಲ್ಲಿ ಚಿತ್ರಿಸಲಾಗಿದೆ.

ಇವರುಗಳಲ್ಲದೇ "ಕಾಳಾಮುಖ" ಎಂಬ ಸ್ಪಷ್ಟ ಉಲ್ಲೇಖವಿಲ್ಲದಿರುವ ಹಲವು ಶಾಸನಗಳಲ್ಲಿ ಸುರೇಶ್ವರ ಪಂಡಿತ, ಲೋಕಾಭರಣ ಪಂಡಿತ, ಚಿಲ್ಲುಕಾಚಾರ್ಯ, ರುದ್ರರಾಸಿಭಟಾರ, ದೇವರಾಸಿ ಪಂಡಿತ, ತ್ರಿಲೋಚನದೇವ, ಭೀಮರಾಶಿ ಪಂಡಿತ ಮುಂತಾದ ಹಲವು ಆಚಾರ್ಯಗಳ ಉಲ್ಲೇಖಗಳು ಸಿಗುತ್ತವೆ.

ಬಳ್ಳಾರಿ ಜಿಲ್ಲೆಯ ಮೋರಗೇರಿಯ ನೊಳಂಬೇಶ್ವರ ದೇವಾಲಯ, ಹೂವಿನ ಹಡಗಲಿಯ ಕಲಿದೇವ ದೇವಾಲಯ, ಕೊಳಗೊಂದಿಯ ಬಾಳೇಶ್ವರ ದೇವಾಲಯ, ಬೆಣ್ಣೆಕಲ್ಲು ಮುಂತಾದ ಸ್ಥಳಗಳು ಪಾಶುಪತರ ಕೇಂದ್ರಗಳೆಂದು ಗುರುತಿಸಬಹುದು.

ಕುರುವತ್ತಿಯ ಮಲ್ಲೇಶ್ವರ ದೇವಾಲಯ, ಹನಶಿಯ ಪರಶುರಾಮೇಶ್ವರ ದೇವಾಲಯ, ಕುರುಗೋಡಿನ ಸ್ವಯಂಭು ದೇವಾಲಯ, ಕೊಟ್ಟೂರಿನ ರಾಮೇಶ್ವರ ದೇವಾಲಯ, ಸಿಂದಗೆರೆ ಮೊದಲಾದವು ಕಾಳಾಮುಖರ ಸ್ಥಳಗಳಾಗಿದ್ದ ವೆಂದು ತಿಳಿದುಬರುತ್ತದೆ.

ಈ ಶೈವ ಯತಿಗಳ ಕೊಡುಗೆಗಳನ್ನು ಈ ರೀತಿ ಗುರುತಿಸಬಹುದು. ಬೇರೆ ಬೇರೆ ಮೂಲಗಳಿಂದ ದಾನದತ್ತಿಗಳನ್ನು ಪಡೆದು, ದೇವಾಲಯಗಳನ್ನು ಸಂಪತ್ತಿನ ಕೇಂದ್ರಗಳನ್ನಾಗಿ ಮಾಡಿದರು.

ಅಧಿಕಾರಿವರ್ಗಕ್ಕೂ, ಜನಸಾಮಾನ್ಯರಿಗೂ ಧಾರ್ಮಿಕ ಸೇತುವೆಯಾಗಿ ಕಾರ್ಯನಿರ್ವಹಿಸಿದರು.

ಶಿವ ಪಾರಮ್ಯದ ಏಳಿಗೆಗಾಗಿ ಬೇರೆ ಮತದೊಂದಿಗೆ ಸಂಘರ್ಷ ಅಥವಾ ರಾಜೀಯ ತಂತ್ರದಿಂದ ಶೈವ ಸಂಸ್ಕೃತಿಗೆ ಹೊಸ ಆಯಾಮ ನೀಡಿದರು.

ಶೈವ ಧರ್ಮವನ್ನು ಪರಿವರ್ತಿಸಿ ಜನಮುಖಿಯಾಗು ವಂತೆ ನೋಡಿಕೊಂಡರು.

ಶೈವ ಸ್ಥಾನಾಚಾರ್ಯರು ಪ್ರಚಂಡ ಪಂಡಿತರು ವೇದ, ಆಗಮ, ವ್ಯಾಕರಣ, ಶಾಸ್ತ್ರ, ಛಂದಸ್ಸು ಹಾಗೂ ಕಲೆಗಳಲ್ಲಿ ಪಾರಂಗತರಾಗಿದ್ದು, ಅವುಗಳನ್ನು ಇವರ ಆಶ್ರಯದಲ್ಲಿದ ಹಲವಾರು ವಿದ್ಯಾರ್ಥಿಗಳಿಗೆ ಕಲಿಸುವ ಮೂಲಕ ಹೊಸ ಚೈತನ್ಯ ತುಂಬುತ್ತಿದ್ದರು. ತರ್ಕಶಾಸ್ತ್ರದಲ್ಲಿ ಚಕ್ರವರ್ತಿ ಎಂಬ ಉಲ್ಲೇಖ ಇವರ ಬಹುತರ ಪಾಂಡಿತ್ಯಕ್ಕೆ ಸಾಕ್ಷಿಯಾಗಿದೆ. ಇದರಿಂದ ಇವರು ಕೇವಲ ಸ್ಥಾನಾಚಾರ್ಯರಾಗಿದ್ದುದ್ದಲ್ಲದೇ ಸಮಾಜೋಪಕಾರಿ ಕೆಲಸಗಳಲ್ಲೂ ತೊಡಗಿರುತ್ತಿದ್ದರೆಂದು ತಿಳಿದುಬರುತ್ತದೆ. ಕೆಲವೊಮ್ಮೆ ರಾಜಗುರುಗಳಾಗಿಯೂ ಇವರು ಸೇವೆ ಸಲ್ಲಿಸುತ್ತಿದ್ದರು. ೧೩ನೆಯ ಶತಮಾನದ ನಂತರ ರಾಜಾಶ್ರಯದ ಕೊರತೆಯಿಂದಾಗಿ ಈ ಯತಿ ಪರಂಪರೆ ಸಮಾಜದಿಂದ ಹಿಂದಕ್ಕೆ ಸರಿಯಿತು. ಇದಕ್ಕೆ ಶರಣ ಚಳುವಳಿಯ ಪ್ರಭಾವವೂ ಆಗದೇ ಇಲ್ಲ.

ಒಟ್ಟಾರೆ ಧಾರ್ಮಿಕ, ಸಾಮಾಜಿಕ, ಸಂಸ್ಕೃತಿಗೆ ಬಳ್ಳಾರಿ ಜಿಲ್ಲೆಯ ಕಾಳಾಮುಖ ಯತಿಗಳ ಕೊಡುಗೆ ಶ್ಲಾಘನೀಯ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ನಂ. ೬೬, ಇ.ಸಿ. x, ಚಿಕ್ಕಬಳ್ಳಾಪುರ.
೨. ನಂ. ೭, ಹಡಗಲಿ, ಕ.ವಿ.ಶಾ.ಸಂ–೧.
೩. ನಂ. ೧, ಹನಶಿ, ಹಗರಿಬೊಮ್ಮನಹಳ್ಳಿ, ಕ.ವಿ.ಶಾ.ಸಂ–೧.
೪. ನಂ. ೬೧, ಸಿಂದಗೆರೆ, ಕ.ವಿ.ಶಾ.ಸಂ–೧.
೫. ನಂ. ೨೬, ಕೊಟ್ಟೂರು, ಕ.ವಿ.ಶಾ.ಸಂ–೧, ಪುಟ–೬೭೪.
೬. ನಂ. ೭, ಕುರುಗೋಡು, ಕ.ವಿ.ಶಾ.ಸಂ–೧.
೭. ನಂ. ೧೮, ಕುರುಗೋಡು, ಕ.ವಿ.ಶಾ.ಸಂ–೧.

೩೭

ಪಾವಗಡದ ಜಂಗಮರ ಮಠದ ಕೈಫಿತ್ತು

ಪಾವಗಡ ಚೆಲುವರಾಜ್*

ಪಾವಗಡ ದುರ್ಗವು ತುಮಕೂರು ಜಿಲ್ಲೆಯಲ್ಲಿ ಪ್ರಸಿದ್ಧಿ ಹೊಂದಿದ ಐತಿಹಾಸಿಕ ಸ್ಥಳವಾಗಿದೆ. ಇಲ್ಲಿರುವ ಬೆಟ್ಟ ಎತ್ತರವಾಗಿಯೂ, ವಿಶಾಲವಾಗಿಯೂ ಇದ್ದು. ದುರ್ಭೇದ್ಯವಾದ ಕೋಟೆ ಕೊತ್ತಲಗಳನ್ನು ಹೊಂದಿದೆ.

ಬೆಟ್ಟದ ಕೆಳಭಾಗದಲ್ಲಿ ವೀರಶೈವರ ಪ್ರಾಚೀನ ಮಠವೊಂದಿದೆ, ಸದರಿ ಮಠವನ್ನು ಹಿರೇಮಠ, ಜಂಗಮರ ಮಠ ಎಂದು ಕರೆಯುತ್ತಾರೆ. ಆದರೆ ಇದು ಮಠದಂತೆ ಕಾಣದೆ ಮನೆಯಂತೆ ಕಾಣುತ್ತದೆ. ಈ ಕಟ್ಟಡದೊಳಗೆ ಎರಡು ಸಮಾಧಿಗಳಿವೆ. ಒಂದನ್ನು "ರುದ್ರಮುನಿಸ್ವಾಮಿಗಳ ಸಮಾಧಿ" ಎಂದೂ ಇನ್ನೊಂದನ್ನು "ಕರಿಬಸಪ್ಪ ಸ್ವಾಮಿಯ ಸಮಾಧಿ" ಎಂದು ಹೇಳುತ್ತಾರೆ. ಹಳೆಯದಾದ ಕಾಶಿವಿಶ್ವೇಶ್ವರನ ಗುಡಿ ಮಠದ ಪಕ್ಕದಲ್ಲಿದೆ.

ರುದ್ರಮುನಿಸ್ವಾಮಿಗಳು ಪಾವಗಡದ ಮೊದಲ ಪಾಳೆಗಾರರ ಗುರುಸ್ವಾಮಿಗಳಾಗಿದ್ದು ಜೀವಸಮಾಧಿ ಹೊಂದಿರುವರೆಂದು ಭಕ್ತರು ಹೇಳುತ್ತಾರೆ. ಸದರಿ ಮಠದ ಸ್ವಾಮಿಗಳು ಸಂಸಾರಸ್ಥರಾಗಿದ್ದರು. ಈಗಿನವರೂ ಸರ್ಕಾರಿ ಉದ್ಯೋಗದಲ್ಲಿರುತ್ತಾರೆ. ದಿ॥ ಸಿದ್ದಲಿಂಗಸ್ವಾಮಿಗಳು ತಹಶೀಲ್ದಾರರಾಗಿದ್ದು ಮಠವನ್ನು ನಡೆಸಿಕೊಂಡು ಹೋಗುತ್ತಿದ್ದರು. ಇತ್ತೀಚೆಗೆ ಅವರ ಮಕ್ಕಳು ಅಧಿಕಾರವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

೧೯೭೦ರಲ್ಲಿ ಸಿದ್ದಲಿಂಗಸ್ವಾಮಿಗಳು ತಮ್ಮ ಬಳಿಯಿದ್ದ ಬಿಳಿಯ ಹಾಳೆಯಲ್ಲಿ ಬರೆಸಿದ್ದ ವಿಷಯವನ್ನು ಅರ್ಧಮಾತ್ರ ಬರೆದುಕೊಳ್ಳಲು ಅವಕಾಶ ಮಾಡಿಕೊಟ್ಟರು. ಸದರಿ ಕಾಗದವು ಸುಮಾರು ೫೦ ವರ್ಷಗಳ ಕಾಗದವಾಗಿದ್ದು ಜೀರ್ಣವಾಗಿತ್ತು. ಇದನ್ನು ಹಿಂದೆ ಕೋರಿಕಾಗದದಲ್ಲಿ ಬರೆದಿದ್ದ ಪ್ರತಿಯಿಂದ ಬರೆದುಕೊಳ್ಳಲಾಯಿತೆಂದು ತಿಳಿಸಿದರು. ಆ ಕಾಗದದಿಂದ ಬರೆದಕೊಂಡ ಅಂಶಗಳೇ ಜಂಗಮರ ಮಠದ ಕೈಫಿಯತ್ತು. ಕೈಫಿಯತ್ತು ಪಾವಗಡ ಪಾಳೆಪಟ್ಟು ವೆಂಕಟಪತಿ ಮಹಾರಾಜನಿಂದ ಪ್ರಾರಂಭವಾಯಿತೆಂದು ಹೇಳುತ್ತದೆ.

ಕೈಫಿಯತ್ತಿನ ಪಾಠ

ಓ ನಮಃ ಶಿವಾಯ ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೆ, ತ್ರೈಲೋಕ್ಯ ನಗರಾರಂಭ ಮೂಲಸ್ಥಂಭಾಯ ಶಂಭವೇ ಸ್ವಸ್ತಿ ವಿಜಯಾಬ್ಯುದಯ ಶಾಲೀವಾಹನ ಶಕವರ್ಷಗಳು ನೆಯ ಚಂದ್ರಮಾನ ವ್ಯಯ ಸಂವತ್ಸರದ ವೈಶಾಖ ಶುದ್ಧ ಪಂಚಮಿ ಗುರುವಾರದಲ್ಲಿ ಶ್ರೀ ವಿಜಯನಗರ ದೇಶದಿಂದ ಶ್ರೀಮನ್ ಮಹಾರಾಜಾಧಿರಾಜ ವೆಂಕಟಪತಿನಾಯ್ಕ ಪಾಳ್ಳೆಗಾರರು ಪೆನುಗೊಂಡೆಯ ಸಂಸ್ಥಾನದಿಂದ ಗುಮ್ಮಗಟ್ಟೆಯ ಮಾರ್ಗವಾಗಿ ದಂಡುದಳವಾಯಿಗಳೊಡನೆ ಒಂದು ದಿನ ಗುಮ್ಮಘಟ್ಟೆಯ ಉತ್ತರ ಭಾಗದಲ್ಲಿ ವಾಸ ಮಾಡಿಕೊಂಡು ಅಲ್ಲಿಂದ ಸೈನ್ಯದೊಡನೆ ಶ್ರೀಮನ್ ಮಹಾ ಮೈಸೂರು ಸಂಸ್ಥಾನಕ್ಕೆ ಸೇರಿದ "ಪಾಮುಕೊಂಡ" ಅಂಬುವ ಬೆಟ್ಟಕ್ಕೆ ನೋಡಲು ಬಂದು ಅಲ್ಲಿ ಐದು ದಿನ ವಾಸ ಮಾಡಿದರು. ಆಗ ಈ ಬೆಟ್ಟದ ಸುತ್ತಮುತ್ತ ಸಂಚಾರ ಮಾಡುವಲ್ಲಿ ಕೀಕಾರಣ್ಯವೇ ಹೊರತು ಮತ್ತೇನೂ ಇಲ್ಲ. ಈ ಬೆಟ್ಟದ ದಕ್ಷಿಣ ಭಾಗದಲ್ಲಿ "ರುದ್ರಮುನಿ ಸ್ವಾಮಿಗಳು ಅಂಬುವವರು ಕುಟುಂಬದೊಡನೆ ಆಶ್ರಮ ಮಾಡಿಕೊಂಡಿದ್ದರು. ಅವರುಗಳನ್ನು ದೊರೆಗಳು ಭೇಟಿ ಮಾಡಿಕೊಂಡು ನೀವ್ಯಾರೆಂದು ವಿಚಾರಿಸುವಲ್ಲಿ ನಾವುಗಳು ರುದ್ರಪುರಿ ಅಮ್ಮನವರ ಕಡೆಯವರು. ನಾವು ಗುರುಗಳು ಪಳ್ಳವಳ್ಳಿ ಸಂಸ್ಥಾನದಲ್ಲಿ ನಮ್ಮ ಅಣ್ಣ ಹುಚ್ಚು ವೀರೊಡೆಯರಿಂದ ಕಲಹಿಸಿಕೊಂಡು ಇಲ್ಲಿಗೆ ಬಂದಿದ್ದೇವೆ. ನೀವುಗಳ್ಯಾರೆಂದು ಕೇಳಲು ನಂತರ ದೊರೆಗಳು ಒಳಿತಾಯಿತು ನಾವುಗಳು ಈ ಬೆಟ್ಟದಲ್ಲಿ ಕೋಟೆ ಕೊತ್ತಲಗಳನ್ನು ವಗೈರೆಗಳನ್ನು ಕಟ್ಟಿಸಿ ವಾಸ ಮಾಡಿಬೇಕೆಂದು ಇರಾದೆ ಇರುತ್ತದೆ ಎನ್ನಲು ಇದಕ್ಕೆ ತಮ್ಮಗಳ ದರ್ಶನ ಸಾಕ್ಷಾತ್ ಪ್ರಭುದರ್ಶನವಾದಂತಾಯಿತು. ನಮ್ಮಗಳಿಗೆ ಅಪ್ಪಣೆ ಏನೆಂದು ಕೇಳಿದಲ್ಲಿ ಸದರಿ ಸ್ವಾಮಿಗಳು ತಥಾಸ್ತು ಎಂದು ಹೇಳುವಲ್ಲಿ ಈ ಸ್ಥಳ ಬಹಳ ಶ್ರೇಯಸ್ಸನ್ನುಂಟು ಮಾಡುತ್ತದೆ ಎನ್ನಲು ಅಪ್ಪಣೆ ಕೊಟ್ಟಲ್ಲಿ ದೊರೆಗಳು ಹೇಳಿದ್ದು ನೀವುಗಳು ಏತದಾರಭ್ಯ ನಮ್ಮ ಆ ಸ್ಥಾನದ ಗುರುಸ್ವಾಮಿ

* ಮುನಿಸಿಪಲ್ ಕಚೇರಿ ರಸ್ತೆ, ಪಾವಗಡ-೫೬೧೨೦೨.

ಬೇಕೆಂತಲೂ ಬೇಡಿದರು. ಅದಕ್ಕೆ ಸ್ವಾಮಿಗಳು ಗುಮಾಡಿಸಿ ತದುಪರಿ ಶ್ರೀರಾಮ ಜೋಯಿಸರೆಂಬವವರನ್ನು ಮ್ಮ ಸಮ್ಮುಖದಲ್ಲಿದ್ದವರನ್ನು ಕರೆಸಿ ಕೋಟೆ ಪ್ರಾರಂಭ ಾಡಲು ವೊಳ್ಳೆಯ ಮಹೂರ್ತ ಯಾವುದೆಂದು ಹೇಳಿರಿ ನ್ನಲಾಗಿ ದಶಮಿ ಶ್ರೇಷ್ಠವಲ್ಲ ತ್ರಯೋದಶಿ ಪ್ರಶಸ್ತವೆಂದು ೇಳಿದರು. ಇದಕ್ಕೆ ಮಾಡುವ ಸಂಗೋಪಾಂಗ ಏನೆಂದು ೇಳಿದಲ್ಲೂ ಎಲ್ಲವನ್ನು ಜೋತಿಷರು ಹೇಳಿದರು. ತದನಂತರ ಮ್ಮಡನೆ ಬಂದಿದ್ದವರು ಲಿಂಗೇಗೌಡ ಶ್ಯಾನುಭೋಗ ೀತಾರಾಮಯ್ಯ ಪಾಪಯ್ಯ ತಳವಾರ ತಿಮ್ಮ ಬಂದೂಕ ಾರಿ, ದಾಸರಿ ಅಲ್ಲೋಬ ದೊಡ್ಡ ಭೀಮ ಚಿಕ್ಕಭೀಮ, ರಿಕಾರ ಪ್ರೋಕ್ರುದ್ದೀನ್ ವುಗ್ರಾಣದ ನರಸಿಂಹಯ್ಯ ಳವಾಯಿ ರಂಗನಾಯಕ, ಮಡಿವಾಳ ನರಸಿಂಹಲು, ಲವಾದಿ ಓಬಪ್ಪ ನರಸಿಂಹುಡು, ಕದರಪ್ಪ, ದುರುಗಪ್ಪ, ಲೋಡ, ಮಣೇಗಾರಭೀಮ ವಗೈರೆಯವರನ್ನು ಕರೆಸಿ ಟ್ಟದ ಬುಡದಲ್ಲಿ ಪಂಚ ಬಣ್ಣದ ರಂಗಾ ಹಾಕಿಸಿ ುಗ್ಗಿಹೋಯ್ದು ಅವರ ಕುಲದೈವ ವೆಂಕಟರವಣ ್ವಾಮಿಯನ್ನು ಪೂಡಿಸಿ ಬಲಿಸುತ್ತು ಬಲಿ ವಗೈರೆಗಳನ್ನು ಾಡಿ ಜೊತೆಗೆ ರುದ್ರಮುನಿ ಸ್ವಾಮಿಗಳ ಕೈಯ್ಯಮುಟ್ಟಿ ಂಕಟಾಬೋಯಿ ಎಂಬುವನಿಂದ ತಳಾ ಹಾಕಿಸಿದರು. ರಡನೇ ಬೆಟ್ಟದ ಮಧ್ಯೆ ಹುಗ್ಗಿ ಹೋಯಿಸಿ ಬಲಿ ಹಾಕಿಸಿದರು. ಾರನೆ ಬೆಟ್ಟದ ಮೇಲೆ ದೊರೆಗಳ ಮನೆ ಪಕ್ಕದಲ್ಲಿ ಹುಗ್ಗಿ ೋಯ್ದು ಬಲಿ ವಗೈರೆಗಳನ್ನು ಹಾಕಿಸಿ ದೊರೆಗಳ ಮನೆಗೆ ಾಯಹಾಕಿಸಿದರು. ತದ ನಂತರ ಕೋಟೆ ಕಟ್ಟಲು ್ರಾರಂಭಿಸಿದರು.

ಒಂದು ಬಾರಿ ರುದ್ರಮುನಿಸ್ವಾಮಿಗಳು ಕಾರ್ಯನಿಮಿತ್ತ ಷ್ಯರೊಡಗೂಡಿ ಶಿಷ್ಯರನ್ನು ಕರೆಕೊಂಡು ಸೀರ್‍ಯಾ ್ರಾಂತ್ಯದಲ್ಲೂ ಹಲವು ಗ್ರಾಮಗಳಿಗೆ ಭೇಟಿ ನೀಡಿದ್ದರು. ಸ್ತೂರಿರಂಗಪ್ಪ ಎಂಬ ಹರತೇ ವಂಶದ ಪಾಳೇಗಾರನು ತ್ನಗಿರಿಸ್ಥಳದವನು ರತ್ನಗಿರಿ ರಂಗಪ್ಪನಾಯಕ ಎಂಬ ಮೂಲ ಸರನ್ನು ಪಡೆದಿದ್ದವನು ಕೋಟೆಕೊತ್ತಲ ಅರಮನೆ ರುಮನೆ ಮೊದಲಾದುವನ್ನು ನಿರ್ಮಾಣ ಮಾಡಬೇಕೆಂಬ ರಾದೆಯಿಂದ ಜೋಯಿಸರಿಂದ ಕಣಿ ಕೇಳಿಸಿಕೊಂಡು ಶ್ಚಿಮ ದಿಕ್ಕಿನಲ್ಲಿ ಪಶಸ್ತುವಾದ ಸ್ಥಳ ದೊರೆಯುವುದೆಂದು ೇಳಿ ತಿಳಿದು ಅನೇಕ ಜನರನ್ನು ಕರೆದುಕೊಂಡು ಬಂಡಿಗಳಲ್ಲಿ ಮುಗ್ರಿಯಗಳನ್ನು ತುಂಬಿಕೊಂಡು ಹತ್ತು ಜನ ಖಾಸಾ ರಿಚಾರಕರನ್ನು ಕರೆಕೊಂಡು ತನ್ನ ಇಷ್ಟದೈವ ರಂಗನಾಥ ೇವರ ಪೆಟ್ಟಿಗೆಯನ್ನು ಮುಂದೆ ಕರೆಸಿಕೊಂಡು ಹೋಗುತ್ತಾ ದ್ದಲ್ಲಿ ಸೂರ್ಯನು ನೆತ್ತಿಯ ಮ್ಯಾಲೆ ಬರಲು ಕಸ್ತೂರಿ ಂಗಪ್ಪನಾಯಕನ ಸಿಬ್ಬಂದಿ ಎಲ್ಲಾ ಪ್ರಯಾಣವನ್ನು ನಿಲ್ಲಿಸಿ ಹುಣಸೆಮರದ ತೋಪಿನಲ್ಲೂ ಠಾಣ್ಯ ಮಾಡಿ ದೇವರ ಪೆಟ್ಟಿಗೆಯನ್ನಿಳಿಸಿ ಜೋಯಿಸರಿಗೆ ಪೂಜಾಸವಲತ್ತು ಪರಿಕರಗಳನ್ನು ಅಣಿ ಮಾಡಿಸಿ ತಾವೂ ಸ್ನಾನ ಮಾಡಿ ಹೊಸ ವಸ್ತ್ರಗಳನ್ನು ಧರಿಸಿ ಸಿದ್ದರಾಗಿ ಸ್ವಾಮಿಯ ಪೂಜೆ ವಗೈರೆಗಳನ್ನು ಮಾಡಿಸಿ ತೀರ್ಥಪ್ರಸಾದ ತೆಗೆದುಕೊಂಡರು. ಬಾಣಸಿಗರು ಆರೋಗಣೆಗೆ ಸಿದ್ದ ಮಾಡುತ್ತಿದ್ದರು.

ಆಗ ಅಲ್ಲಿಗೆ ಇಬ್ಬರು ಗೊಲ್ಲರು ಅಣ್ಣತಮ್ಮಂದಿರು ಬಂದು ಇದು ನಮ್ಮ ಸ್ಥಳ ನೀವು ಯಾರು ಇಲ್ಲಿಗೆ ಏಕೆ ಬಂದಿರಿ ಕಾರಣ ಈ ದಂಡು ದಳವಾಯಿಗಳು ಯಾರು ಎಂದು ಕೇಳಿದಲ್ಲಿ ನಾಯಕರ ಸಂಗಡ ಬಂದಿದ್ದ ವೆಂಕಟಪ್ಪ ನೆಂಬ ಸರದಾರನು ಎಲ್ಲಾ ಹೇಳಿದನು, ನಾವು ರತ್ನಗಿರಿಯ ರಂಗಪ್ಪನಾಯಕರ ಸಿಬ್ಬಂದಿಯವರು. ಅವರೇ ನಮಗೆ ದೊರೆಗಳು ಅವರಿಗೆ ಪೂರ್ವದಲ್ಲಿ ಭೂಸ್ಥಾಪನೆಯಾಗಿದ್ದ ಅಪಾರ ದ್ರವ್ಯವು ಪ್ರಾಪ್ತವಾಗಿದೆ. ಅದರ ಸಲುವಾಗಿ ಕೋಟೆಕೊತ್ತಲ ರಾಜಭವನ, ಉಗ್ರಾಣ ದೇವರಗುಡಿ ಭಾವಿ ಮೊದಲಾದುವನ್ನು ಕಟ್ಟಿಸುವ ಇರಾದೆ ಇದೆ. ಅ ಸಲುವಾಗಿ ಸ್ಥಳ ಪರಿಶೀಲನೆಗೆ ಬಂದಿದ್ದೇವೆ ಎಂದು ಹೇಳಿದರು. ಅದೇ ಸಮಯದಲ್ಲಿ ರುದ್ರಮುನಿಸ್ವಾಮಿಗಳು ಶಿಷ್ಯರೊಡನೆ ಅಲ್ಲಿ ಬಂದು ರಂಗಪ್ಪನಾಯಕರನ್ನು ಹರಸಿ ಶುಭವಾಗಲಿ ಎಂದು ಹೇಳಿ ಅವರಿಂದ ಮರ್ಯಾದೆ ಪಡೆದು ಪ್ರಯಾಣ ಮುಂದುವರಿಸಿದರು.

ಅದೇ ಸಮಯದಲ್ಲಿ ರಂಗನಾಥ ಸ್ವಾಮಿಯು ಅದೇ ಹೆಸರಿನ ಓಲೆಕಾರನ ಮೇಲೆ ಮೂಡಿ ಬಂದು ಇದೇ ಸ್ಥಳ ಪ್ರಶಸ್ತವಾಗಿದೆ ಇಲ್ಲೆ ಖಿಲ್ಲೆಯನ್ನು ಕಟ್ಟಿಸಿ ಎಂದು ಹೇಳಲು ಅದೇ ಸ್ಥಳದಲ್ಲಿ ಕೋಟೆಯನ್ನು ಕಟ್ಟಲು ಪ್ರಾರಂಭ ಮಾಡಲಾಯಿತು. ಗೊಲ್ಲರ ಸಹೋದರರು ತಮಗೆ ಸೇರಿದ ಸ್ಥಳವನ್ನು ನಗರ ನಿರ್ಮಾಣಕ್ಕೆ ಬಿಟ್ಟುಕೊಟ್ಟರು.

ತಮ್ಮ ಕಾರ್ಯಗಳನ್ನು ಮುಗಿಸಿಕೊಂಡ ರುದ್ರಮುನಿ ಸ್ವಾಮಿಗಳು ಶಿಷ್ಯರ ಸಮೇತ ಪ್ರಯಾಣ ಮಾಡಿ ದಾರಿ ಮಧ್ಯದಲ್ಲಿದ ತಿಳಿನೀರಿನಿಂದ ತುಂಬಿದ್ದ ಇಳಿಯುವ ಭಾವಿಯ ಬಳಿಯಿದ್ದ ಮಂಟಪದಲ್ಲಿ ಮೊಕ್ಕಾಮ್ ಮಾಡಿ ಶಿವಪೂಜಾ ಮಗ್ನರಾದರು. ಪೂಜೆ ಮೂಗಿಯುವ ವೇಳೆಗೆ ದೂರದ ಹಳ್ಳಿಯಲ್ಲಿ ಬಹಳವಾಗಿ ಶಬ್ಧವಾಗುತ್ತಿದ್ದು ಅತಿಯಾದ ಗಲಾಟೆ ನಡೆಯುತ್ತಿತ್ತು. ಜನ ಬಹುವಾಗಿ ದಾಂಧಲೆಯಲ್ಲಿ ತೊಡಗಿದ್ದರು.

ಗುರುಗಳು ಶಿಷ್ಯನನ್ನು ಕರೆದು ಯಾವ ಪ್ರಯುಕ್ತ ಜನರು ಜಗಳದಲ್ಲಿ ತೊಡಗಿದ್ದಾರೆ ನೋಡಿ ಬಾ ಎನ್ನಲು ಶಿಷ್ಯನು ಹಾಗೆ ಆಗಲೆಂದು ಹೊರಟು ನೋಡಲು ಎರಡು ಹಳ್ಳಿಗಳವರು ದೇವರ ಉತ್ಸವ ನಡೆಸುವ ಸಲುವಾಗಿ ಬಹಳವಾಗಿ ಕ್ಲೇಶ ಮಾಡಿಕೊಂಡಿದ್ದರು. ಶಿಷ್ಯನನ್ನು ನೋಡಿದ

ಹಲವರು ನೀವು ಯಾವ ಮತದ ಮರಿಗಳು ಎಂದು ಕೇಳಿದಲ್ಲಿ ಶಿಷ್ಯನು ಎಲ್ಲವನ್ನೂ ಹೇಳಿದರು. ಪ್ರಮುಖರನ್ನು ಬೇಟಿ ಮಾಡಿ ಉಭಯತ್ರರನ್ನೂ ಸ್ವಾಮಿಗಳ ಬಳಿಗೆ ಬರಮಾಡಿಸಲಾಗಿ. ಬಂದವರು ಸ್ವಾಮಿಗಳಿಗೆ ತಮ್ಮ ಕ್ಲೇಶದ ಕಾರಣ ಹೇಳಲು ಸ್ವಾಮಿಗಳು ಉಭಯತ್ರರಿಗೂ ಬುದ್ಧಿವಾದ ಹೇಳಿ ಅವರ ಕೈಲಿ ಕವಡೆ ಹಾಕಿಸಿ ಇಬ್ಬರಲ್ಲಿಯೂ ಸ್ನೇಹ ಮಾಡಿ ಕ್ಲೇಶವನ್ನು ನಿವಾರಣೆ ಮಾಡಿದರು.

ಆಗ ಅವರೆಲ್ಲರೂ ಸ್ವಾಮಿಗಳನ್ನು ಬಾಜಾ ಬಜಂತ್ರಿಗಳೊಡನೆ ಊರಿಗೆ ಕರೆದುಕೊಂಡು ಹೋಗಿ ಅವರಿಗೆ ಪಾದಪೂಜೆ ಮಾಡಿಸಿ ಒಂದು ಬೆಳ್ಳಿಯ ಕಟ್ಟಿನ ಬೆತ್ತವನ್ನು ಬಹೂಕರಿಸಿ ಪೂಜೆಗೆ ಅನುಕೂಲವಾಗುವಂತೆ ಅಡ್ಡವಣೆ ಪಾತ್ರೆಯನ್ನು ಭಯಭಕ್ತಿಯಿಂದ ಕೊಟ್ಟರು. ಮುಂದೆ ಪ್ರಯಾಣ ಮಾಡಿ ಪಾಗೊಂಡೆಗೆ ಸೇರಿದರು.

೩೮

ಸುರಪುರದ ಮಜಮುದಾರ ಹಕೀಕತ್ತು

ಡಾ. ಅಮರೇಶ ಯತಗಲ್*

ಸುರಪುರ ಸಂಸ್ಥಾನವು ಹೈದರಾಬಾದ್ ಕರ್ನಾಟಕ ಭಾಗದ ಪ್ರಮುಖವಾದ ಸಂಸ್ಥಾನವಾಗಿದೆ. ಕ್ರಿ.ಶ. ೧೬೩೬ ರಿಂದ ಕ್ರಿ.ಶ. ೧೯೪೮ರವರೆಗೆ ಅಸ್ತಿತ್ವದಲ್ಲಿದ್ದ ಈ ಸಂಸ್ಥಾನದ ಕುರಿತಾಗಿ ಈಗಾಗಲೇ ಕೆಲವು ಸಂಶೋಧನೆಗಳಾಗಿವೆ. ಈ ಸಂಸ್ಥಾನದ ರಾಜಕೀಯ ಚರಿತ್ರೆಯ ಕುರಿತಾದ ಅಧ್ಯಯನಗಳಿಗೇನೂ ಕೊರತೆಯಿಲ್ಲ. ಅನೇಕ ಕೃತಿಗಳು ಹಾಗೂ ಮಹಾಪ್ರಬಂಧಗಳು ಪ್ರಕಟಗೊಂಡಿವೆ.

ಪ್ರಕಟಿತ ಕೃತಿಗಳಲ್ಲಿ Framurz Jung Bahadur Nawab ನ Shorapur : An Ancient Beydur Raj (1907), Philip Meadows Taylor £À 'The Story of My Life' (1920), ಎಂ.ವಿ. ಕೃಷ್ಣರಾವ್ ಮತ್ತು ಜಿ.ಎಸ್. ಹಾಲಪ್ಪ ಅವರ ಸಂಪಾದಕತ್ವದಲ್ಲಿ ಹೊರಬಂದ 'History of Freedom Movement in Karnataka' Vol. I (1962), ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡಕ್ಕೆ ಸಾದರಪಡಿಸಿದ ಡಾ. ಎನ್. ಹೆಚ್. ಕುಲಕರ್ಣಿ ಅವರ ಪಿಎಚ್.ಡಿ. ಮಹಾಪ್ರಬಂಧ 'The British Relationship with the Principally of Surpur' (1972), ರಾಜಪುರೋಹಿತ ಜಯತೀರ್ಥರವರ 'ಸುರಪುರದ ಶೂರ ನಾಯಕರು' (೧೯೭೩), ಕಪಟರಾಳ ಕೃಷ್ಣರಾವ್ ಅವರ 'ಸುರಪುರ ಸಂಸ್ಥಾನ ಇತಿಹಾಸ' (೧೯೭೭), ಡಾ. ಆರ್.ಎಸ್. ಚುಳಕಿ ಅವರ 'The Image of India in the works of Phillip Meadows Taylor' (1985), ರೇವಣಸಿದ್ಧಯ್ಯ ರುದ್ರಸ್ವಾಮಿಮಠ ಇವರ 'ಸುರಪುರ ತಾಲ್ಲೂಕ ದರ್ಶನ' (೧೯೮೬), ಡಾ. ರಂಗರಾಜ ವನದುರ್ಗರವರ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಕ್ಕೆ ಸಾದರಪಡಿಸಿದ ಪಿಎಚ್.ಡಿ ಮಹಾಪ್ರಬಂಧ 'ಸುರಪುರ ಸಂಸ್ಥಾನ : ಒಂದು ಅಧ್ಯಯನ' (೧೯೯೫), ಡಾ. ಎಸ್.ಕೆ. ಅರುಣಿಯವರು ಪೂನಾ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್. ಡಿ. ಮಹಾಪ್ರಬಂಧ Surapur Samsthana Historical and Archaeological study of Palegars state in South India, ಭಾಸ್ಕರರಾವ್ ಮುಡಬೂಳರವರ 'ಮರೆತುಹೋದ ಸುರಪುರ ಇತಿಹಾಸ' (೨೦೦೧), ಬಿ. ಕೃಷ್ಣಮಾಚಾರ್ಯರ 'ಮರೆಯಲಾಗದ ಸುರಪುರ ರಾಜರ ಚರಿತ್ರೆ (೨೦೦೩), ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಡಾ. ಲಕ್ಷ್ಮೀಕಾಂತ ವಿ. ಮೋಹರೀರ ಅವರ ಪಿಎಚ್.ಡಿ ಮಹಾಪ್ರಬಂಧ 'ಸಂಸ್ಕೃತ ಸಾಹಿತ್ಯಕ್ಕೆ ಸುರಪುರ ಸಂಸ್ಥಾನದ ಕೊಡುಗೆ ಒಂದು ಅಧ್ಯಯನ' (೧೯೯೫), ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ ಅವರ 'ಸುರಪುರ ಚಿತ್ರಕಲೆ' (೨೦೧೦), ಡಾ. ಹನುಮಂತಪ್ಪ ತಾರೀಹಳ್ಳಿ ಅವರು ಸಂಪಾದಿಸಿದ 'ನಾಯಕರ ಮಹಾಸಂಸ್ಥಾನ: ಸುರಪುರ (೨೦೧೩) ಇನ್ನೂ ಮುಂತಾದವುಗಳು ಸುರಪುರದ ರಾಜಕೀಯ ಹಾಗೂ ಸಾಂಸ್ಕೃತಿಕ ಚರಿತ್ರೆಗೆ ಸಂಬಂಧಿಸಿದ ಪ್ರಮುಖವಾದ ಆಕರಗಳಾಗಿವೆ.

ಅಲ್ಲದೇ ಈ ಸಂಸ್ಥಾನದ ಕುರಿತಾಗಿ ಕೆಲವು ಬಿಡಿ ಲೇಖನಗಳನ್ನು ಬರೆದು ಪ್ರಕಟಿಸಿದವರಲ್ಲಿ ಡಾ. ಪದ್ದಯ್ಯ, ಆದ್ಯ ರಾಮಾಚಾರ್ಯ, ಸೀತಾರಾಮ ಜಾಗೀರದಾರ, ಎ. ಕೃಷ್ಣ, ಜೆ. ಅಗಸ್ಟೀನ್, ಬಿ.ಆರ್. ಸುರಪುರ, ಪೆರುಮಾಳ್ಳ ಗುಂಡಾಚಾರ್ಯ, ಪ್ರಕಾಶಚಂದ ತಾರಾಚಂದ ಜೈನ್, ಹನುಮಾಕ್ಷಿ ಗೋಗಿ, ಟಿ. ಸುಚರಿತಾ, ಪಾಂಡುರಂಗ ಚಿನ್ನಾಕರ ಇನ್ನೂ ಮುಂತಾದವರು ಪ್ರಮುಖರಾಗಿದ್ದಾರೆ.

ಆದರೆ ಇಲ್ಲಿಯವರೆಗಿನ ಬಹುತೇಕ ಪ್ರಕಟಿತ ಕೃತಿಗಳಲ್ಲಿ ಹಾಗೂ ಲೇಖನಗಳಲ್ಲಿ 'ಮುಜುಮದಾರ ಲಿಂಗಪ್ಪನ ಹಕೀಕತ್ತು'[೧]ನ್ನು ಯಾರೂ ಆಕರವಾಗಿ ಬಳಕೆ ಮಾಡಿಕೊಂಡಿಲ್ಲ. ಆದರೆ ಡಾ. ರಂಗರಾಜ ವನದುರ್ಗ ಅವರು ತಮ್ಮ ಪಿಹೆಚ್.ಡಿ ಮಹಾಪ್ರಬಂಧದಲ್ಲಿ ಕೆಲ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ.[೨] ಕಪಟರಾಳ ಕೃಷ್ಣರಾವ್‌ರವರು 'ಸುರಪುರ ಸಂಸ್ಥಾನ ಇತಿಹಾಸ' ದಲ್ಲಿ 'ರಾಜನು ಕೊನೆಯ ಪ್ರಯತ್ನಕ್ಕಾಗಿ ಹೈದರಾಬಾದಿಗೆ ಹೋಗುವುದು' ಎಂಬ ಶೀರ್ಷಿಕೆಯಡಿಯಲ್ಲಿ ಕೆಂಬೆಲ್ಲನು[೩] ಸುರಪುರಕ್ಕೆ ಆಗಮಿಸಿದ ತರುವಾಯ ಇಲ್ಲಿಯ ಆಂತರಿಕ ಸ್ಥಿತಿಗತಿಯನ್ನು ಅರಿಯುವಲ್ಲಿ ಮುಜಮದಾರ ಲಿಂಗಪ್ಪನು ಬರೆದಿಟ್ಟಿರುವ 'ಸಂಸ್ಥಾನದ ಕೊನೆಯ ಕೈಫಿಯತ್ತು'[೪] ಸಹಾಯಕವಾದುದರ ಕುರಿತು ಹೇಳುತ್ತಾರೆ. ನಾಲ್ವಡಿ

* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ, ತೊರವಿ, ಬಿಜಾಪುರ-೫೮೬೧೦೮.

ವೆಂಕಟಪ್ಪನಾಯಕ (ಕ್ರಿ.ಶ. ೧೮೪೨-೧೮೫೮) ಕಾಲದ ಸಂಸ್ಥಾನದ ಸ್ಥಿತಿಗತಿ ರಾಜನು ಹೈದರಾಬಾದ್‌ಗೆ ತೆರಳಿದ ವಿಷಯ ಹಾಗೂ ಸುರಪುರ ಸಂಸ್ಥಾನವು ಬ್ರಿಟಿಷ್‌ರ ವಶವಾದ ಮೇಲೆ ಇಲ್ಲಿಯ ಸ್ಥಿತಿಗತಿಯ ಕುರಿತಾದ ಅಧಿಕೃತವಾದ ವಿವರಣೆಯನ್ನು ಇಲ್ಲಿ ನೀಡಿದ್ದಾರೆ.

ಕಪಟರಾಳರು ಸುರಪುರ ಸಂಸ್ಥಾನದ ಅಂತಿಮ ಕಾಲಕ್ಕೆ ಸಂಬಂಧಿಸಿದಂತೆ ವಿವಿಧ ಆಕರಗಳನ್ನು, ಅದರಲ್ಲೂ ಬ್ರಿಟಿಷ್‌ರ ದಾಖಲೆಗಳು ಅಂದರೆ ರೆಸಿಡೆಂಟ್‌ನಾದ ಡ್ಯಾವಿಡ್ಸ್‌ನ್‌ನು ಫೆಬ್ರವರಿ ೧೮, ೧೮೫೮ರಲ್ಲಿ ಜನರಲ್‌ನಿಗೆ ಬರೆದ ಪತ್ರ ಹಾಗೂ ಮೆಡೋಸ್ ಟೇಲರ್‌ನ ಆತ್ಮಚರಿತ್ರೆ 'The Story of my life' ಹಾಗೂ ಮುಜಮದಾರ ಲಿಂಗಪ್ಪನ ಬರಹವನ್ನು ನೀಡುತ್ತಾರೆ. "ಈ ಮೂರು ಆಕರ ಸಾಮಗ್ರಿಗಳು ನಮ್ಮ ಎದುರಿಗಿವೆ. ಆದರೆ ಅವುಗಳಲ್ಲಿಯ ಸಂಗತಿಗಳಲ್ಲಿ ವ್ಯತ್ಯಾಸ ಗಳಿವೆ. ಹೀಗಾಗಿ ಅವುಗಳಲ್ಲಿಯ ಸಂಗತಿಗಳನ್ನು ತಿಳಿದು ಕೊಳ್ಳಬೇಕೆಂಬ ಉದ್ದೇಶದಿಂದ ಅವುಗಳನ್ನು ನೀಡಲಾಗಿದೆ" ಎಂಬುದನ್ನು ಕಪಟರಾಳ ಕೃಷ್ಣರಾವ್ ಹೇಳುತ್ತಾರೆ. ಆದರೆ ಇಲ್ಲಿಯವರೆಗಿನ ಸುರಪುರ ಸಂಸ್ಥಾನದ ಕುರಿತು ಸಂಶೋಧನೆ ಕೈಗೊಂಡ ಬಹುತೇಕ ಸಂಶೋಧಕರು ಬ್ರಿಟಿಷ್‌ರ ದಾಖಲೆ ಗಳನ್ನೇ ಕೇಂದ್ರೀಕರಿಸಿಕೊಂಡಿದ್ದಾರೆ. ಹೆಚ್ಚು ಆಕರಗಳಾಗಿ ಬಳಸಿಕೊಂಡಿದ್ದಾರೆ; ಅವುಗಳೇ ಸತ್ಯವೆಂದು ನಂಬಿದ್ದಾರೆ. ಆದರೆ ಲಿಂಗಪ್ಪನ ಬರಹವನ್ನು ಅಷ್ಟೇನೂ ಗಮನಿಸಿಲ್ಲ. ಆದುದರಿಂದ ಈ ಲೇಖನದಲ್ಲಿ ಲಿಂಗಪ್ಪ ಯಾರು? ಮತ್ತು ಸುರಪುರದ ಕುರಿತು ಆತ ಕಣ್ಣಾರೆ ಕಂಡದ್ದನ್ನು ಹೇಗೆ ವಿವರಿಸಿ ದ್ದಾನೆ ಎಂಬುದನ್ನು ಇಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ.

ಮುಜಮದಾರ ಲಿಂಗಪ್ಪನು[೫] ಲಿಂಗೋಭೀಮರಾವ ಮುಜಮುದಾರ,[೬] ಲಿಂಗೋಪಂತ ಮುಜಮುದಾರ[೭] ಲಿಂಗೋಪಂತ[೮] ಎಂಬ ಹೆಸರುಗಳಿಂದ ಕರೆಯಲ್ಪಟ್ಟಿದ್ದನು. ಈತನಗೆ 'ರಾಜಋಷಿ' ಎಂದು ಕರೆಯುತ್ತಿರುವುದನ್ನು ನೋಡಿದರೆ, ಬಹುಶಃ ಈ ಸಂಸ್ಥಾನಕರಿಗೆ ಗುರುಸ್ಥಾನದಲ್ಲಿದ್ದ ಮನೆತನದ ಹಿನ್ನೆಲೆಯನ್ನು ಹೊಂದಿದವನಾಗಿರಬಹುದಾದ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಈ ಮನೆತನದ ವಂಶಸ್ಥರು ಇಂದಿಗೂ ಸುರುಪುರದಲ್ಲಿದ್ದಾರೆ. ಇವರು ಪೇಶ್ವೆಯರು ಹಾಗೂ ಸುರಪುರ ಸಂಸ್ಥಾನಿಕರಿಗೆ ರಾಜಕೀಯ ಸಂಬಂಧ ಗಳಿದ್ದ ಅವಧಿಯಲ್ಲಿ ಪೇಶ್ವೆ ಆಡಳಿತದಿಂದ ಸುರಪುರಕ್ಕೆ ಬಂದ ಮನೆತನದವರು. ಇದೊಂದು ಮುಜಮದಾರ ಎಂಬ ಅಡ್ಡ ಹೆಸರನ್ನು ಹೊಂದಿದ ಬ್ರಾಹ್ಮಣ ಸಮುದಾಯದ ಮನೆತನವಾಗಿದೆ.

ಸುರಪುರ ಸಂಸ್ಥಾನದ ಕೈಫಿಯತ್ತು್‌ಗಳ ಉಲ್ಲೇಖವನ್ನು ಕಪಟರಾಳ ಕೃಷ್ಣರಾವ್‌ರವರು 'ಸುರಪುರ ಸಂಸ್ಥಾನ' ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಹಾಗೂ ಆಕರಗಳಾಗಿ ಬಳಸಿ ಕೊಂಡಿದ್ದಾರೆ. ಅವರು ಕೈಫಿಯತ್ತು ೧, ೨, ೩ ಎಂದು ಉಲ್ಲೇಖಿಸುತ್ತಾರೆ[೧೦]. ಸಂಸ್ಥಾನದ ಪ್ರಾಮಾಣಿಕ ಉದ್ಯೋಗಸ್ಥ ಮುಜಮದಾರ ಲಿಂಗಪ್ಪನು ಬರೆದಿರುವುದೇ 'ಸಂಸ್ಥಾನದ ಕೊನೆಯ ಕೈಫಿಯತ್ತು'[೧೧] ಎನ್ನುತ್ತಾರೆ. ಸುರಪುರ ಸಂಸ್ಥಾನದ ರಾಜಗುರುಗಳಾಗಿದ್ದ ಬಿ. ಕೃಷ್ಣಮಾಚಾರ್ಯರು ತಮ್ಮ 'ಮರೆಯ ಲಾಗದ ಸುರಪುರ ರಾಜರ ಚರಿತ್ರೆ'[೧೨] ಕೃತಿಯಲ್ಲಿಯೂ ಕೈಫಿಯತ್ತುಗಳ ಉಲ್ಲೇಖ ನೀಡುತ್ತಾರೆ. ಆದರೆ ಡಾ. ರಂಗರಾಜ ವನದುರ್ಗ ಅವರು ಆರು ಕೈಫಿಯತ್ತುಗಳು ಉಪಲಬ್ಧವಿರುವ ಕುರಿತು ತಿಳಿಸುತ್ತಾರೆ.[೧೩] ಆದರೆ ಅವುಗಳು ಇಲ್ಲಿಯವರೆಗೆ ಲಭ್ಯವಾಗಿಲ್ಲ. ಅವುಗಳನ್ನು ಸಂಶೋಧಿಸಿ ಪ್ರಕಟಿಸಿದರೆ, ಈ ಸಂಸ್ಥಾನದ ಕುರಿತಾದ ಇನ್ನಷ್ಟು ಮಾಹಿತಿಗಳು ಲಭ್ಯವಾಗುವು ದರಲ್ಲಿ ಎರಡು ಮಾತಿಲ್ಲ. ಕಪಟರಾಳರು ಕೊನೆಯ ಕೈಫಿಯತ್ತನ್ನೇ ಮುಜಮದಾರ ಲಿಂಗಪ್ಪನ್ನು ಬರೆದಿಟ್ಟಿರುವ 'ಹಕೀಕತ್ತು' ಎಂದು ಸಂಬೋಧಿಸುತ್ತಾರೆ. 'ಹಕೀಕತ್ತು' ಎಂದರೆ ನಜವಾದ ವರ್ತಮಾನ, ಸತ್ಯವಾರ್ತೆ, ವಾಸ್ತವ ಸುದ್ದಿ ಎಂಬ[೧೪] ಅರ್ಥ ಬರುತ್ತದೆ. ಹೀಗಾಗಿ ಲಿಂಗಪ್ಪನ ಈ ಬರಹ ಸತ್ಯವಾದುದೇ ಆಗಿದೆ. ಸಂಸ್ಥಾನದ ಪರಂಪರೆಗೆ ಹೊಂದಿದ, ರಾಜನಿಷ್ಠನಾದ ಲಿಂಗಪ್ಪನು ತಾನು ಕಣ್ಣಾರೆ ಕಂಡದ್ದನ್ನು ಸೆರೆಹಿಡಿದಿದ್ದಾನೆ. ಇದು ಒಬ್ಬ ವ್ಯಕ್ತಿಯಿಂದ ಬರೆಯಲ್ಪಟ್ಟಿರು ವುದರಿಂದ ಅಧಿಕೃತವಾದ ನೈಜಚಿತ್ರಣ ಇಲ್ಲಿದೆ. ಇದೂ ಕೂಡ ಸುರಪುರದ ಚರಿತ್ರೆಗೆ ಹೊಸ ದಾಖಲೆಯಾಗಿದೆ. ಈ ಅಧಿಕೃತ ದಾಖಲೆಯು ಪ್ರತ್ಯೇಕವಾಗಿ ಪ್ರಕಟಗೊಳ್ಳದಿರುವ ಕೊರತೆಯನ್ನು ನೀಗಿಸಲು ಇದನ್ನು ಪ್ರತ್ಯೇಕವಾಗಿ ಪ್ರಕಟಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಸುರಪುರದ ಚರಿತ್ರೆ ಬರೆಯುವವರೂ ಸಹಿತ ಇತರ ದಾಖಲೆಗಳೊಂದಿಗೆ ಕಪಟರಾಳ ಕೃಷ್ಣರಾವ್‌ರವರು 'ಲಿಂಗಪ್ಪನ ಹಕೀಕತ್ತು'ನ ಕೆಲವು ಭಾಗಗಳನ್ನು ಉದ್ಧರಿಸಿರುವುದನ್ನು ಗಮನಿಸುವ ಅವಶ್ಯಕತೆ ಇದೆ. ಏಕೆಂದರೆ ಸ್ವತಃ ಲಿಂಗಪ್ಪನೇ ಈ ಇತಿಹಾಸಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿ, ಕಣ್ಣಾರೆ ನೋಡಿದುದನ್ನು ಬರೆದಿಟ್ಟಿದ್ದಾನೆ. ಈ ಬರಹ ಸುರಪುರ ಸಂಸ್ಥಾನದ ಕುರಿತಾಗಿ ಅನೇಕ ಕುತೂಹಲಕಾರಿಯಾದ ಅಂಶಗಳನ್ನು ಹೊರಗೆಡು ವುತ್ತದೆ. ಇಂದಿಗೂ ಸುರಪುರ ಚರಿತ್ರೆಗೆ ಸಂಬಂಧಿಸಿದ ಸ್ಥಳೀಯವಾದ ಮೌಖಿಕ ಹಾಗೂ ಇತರ ಪ್ರಾಥಮಿಕ ಆಕರಗಳಲ್ಲಿಯ ಕೆಲ ಅಂಶಗಳಿಗೆ ಇದು ಹೋಲಿಕೆಯಾಗುತ್ತದೆ. ಹೀಗಾಗಿ ಇದರ ಪ್ರಮುಖವಾದ ಪಠ್ಯವನ್ನು ಬೇರ್ಪಡಿಸಿ ಈ ಪ್ರಬಂಧದಲ್ಲಿ ಈ ಕೆಳಗಿನಂತೆ ಕೊಡಲಾಗಿದೆ.

ನಾಲ್ವಡಿ ವೆಂಕಟಪ್ಪ ನಾಯಕನು ಬ್ರಿಟಿಷರ ವಿರುದ್ಧ ಹೋರಾಡಲು ಸಂಘಟನಾತ್ಮಕ ಚಟುವಟಿಕೆಗಳನ್ನು

ಮಾಡುತ್ತಿರುವುದು ಹಾಗೂ ಅರಬ್, ರೋಹಿಲ್‌ರನ್ನು ಸೈನ್ಯದಲ್ಲಿ ಸೇರಿಸಿಕೊಳ್ಳುತ್ತಿರುವುದು ಬ್ರಿಟಿಷರಿಗೆ ಗೊತ್ತಾಗಿತ್ತು. ಆದರೆ ಅದಕ್ಕೆ ಯಾವುದೇ ನಿರ್ದಿಷ್ಟ ಪುರಾವೆಗಳು ಸಿಕ್ಕಿರಲಿಲ್ಲ. ಆದರೆ ಬ್ರಿಟಿಷರ ಪರವಾಗಿ ಕೆಲಸ ಮಾಡುತ್ತಿದ್ದ ಹಾಗೂ ನಾಲ್ವಡಿ ವೆಂಕಟಪ್ಪ ನಾಯಕನಿಗೆ ದ್ರೋಹ ಮಾಡಲು ಅನೇಕ ಕುತಂತ್ರಗಳನ್ನು ಹೆಣೆಯುತ್ತಿದ್ದ ದಿವಾನ ಭೀಮರಾಯನ ತಂತ್ರಗಾರಿಕೆಯನ್ನು ಮುಜಮದಾರ ಲಿಂಗಪ್ಪನ ಹಕೀಕತ್ತು ಈ ರೀತಿ ವಿವರಣೆಯನ್ನು ನೀಡುತ್ತದೆ: "ರಾಜನ ಮೇಲಿರುವ ಆರೋಪಗಳು ಪುರಾವೆಗಳಿಂದ ಸಿದ್ಧವಾಗಲಿಲ್ಲವೆಂದು ತಿಳಿದು, ರಾಜನ ನಿರಂಕುಶ ಪ್ರಭುತ್ವವನ್ನು ಮರ್ಯಾದಿತ ಮಾಡಬೇಕೆಂದು, ದಿವಾಣ ಭೀಮರಾಯನು ಪುನಃ ಮತ್ತೊಂದು ಯೋಚನೆಯನ್ನು ಹೂಡಿದನು. ಪೂರ್ವದಲ್ಲಿ ಫೌಜದಾರಿ ಕೆಲಸಗಳಿಗಾಗಿ ನೌಕರಿಯಲ್ಲಿಟ್ಟುಕೊಂಡ, ಅರಬ, ರೋಹಿಲೇರನ್ನು ಕರೆಯಿಸಿ, ಅವರನ್ನು ನೇಮಿಸಿಕೊಳ್ಳುವಾಗ ಕೊಡಲ್ಪಟ್ಟ ಹುಕುಮನ್ನು ತಂದುಕೊಡಿರೆಂದು ಕೇಳಿದನು. ಅವರು ಭೀಮರಾಯನ ಮಾತಿಗೊಪ್ಪದೆ, ಈ ಸಲ ಕೇಳಿದಂತೆ ಇನ್ನೊಂದು ಬಾರಿ ಕೇಳಿದರೆ ನಿಮ್ಮ ಜೀವ ಉಳಿಯಲಿಕ್ಕಿಲ್ಲೆಂದು ಖಂಡಿತವಾಗಿ ಉತ್ತರ ಕೊಟ್ಟರು. ನಂತರದಲ್ಲಿ ಲಿಂಗೋಭೀಮರಾವ ಮುಜಮದಾರನು ಕಚೇರಿಯಲ್ಲಿದ್ದೆಡೆಗೆ ಬಂದು, ಮುದ್ದೋಭೀಮರಾಯ ದಿವಾಣನು ಕೇಳಿದ್ದೇನೆಂದರೆ, ಜಮಿಯತನ್ನು ಇಡುವುದಕ್ಕಾಗಿ ದೊರೆಯು ಹುಕುಮು ಕೊಟ್ಟಿರುವನೋ ಇಲ್ಲವೋ? ಈ ವಿಷಯದಲ್ಲಿ ತಾವು ಸ್ವತಃ ರಾಜನನ್ನು ವಿಚಾರಿಸಬೇಕಲ್ಲದೆ ನನ್ನನ್ನು ಕೇಳಕೂಡದೆಂದು" ಲಿಂಗೋ ಪಂತನು ಉತ್ತರ ಕೊಟ್ಟನು. "ಈ ಮಾತನ್ನು ಕೇಳಿ, ಕೇಮಲ ಸಾಹೇಬನನ್ನು ಕರೆತಂದು, ನಿಮ್ಮ ಕಚೇರಿಯನ್ನು ಝಡತಿ ಮಾಡಿ ನಿನಗೆ ಕೇಳುವುದನ್ನೆಲ್ಲ ಆಗ ಕೇಳಲಾದೀತೆಂದು ನುಡಿದು, ಭೀಮರಾಯನು ಸಿಟ್ಟಿನಿಂದ ಹೊರಟು ಹೋದನು."[೧೫]

ದಿವಾನ ಭೀಮರಾಯ ಮಾಡುತ್ತಿರುವ ಕುಹಕ ಕೆಲಸವನ್ನು ರಾಜನಿಗೆ ತಿಳಿಸುವ ವಿವರ ಈ ಇಂತಿದೆ: "ಇತ್ತ ಮುಜಮದಾರ ಲಿಂಗೋಪಂತನು, ಹರಪನಹಳ್ಳಿಯ ಬಸಪ್ಪನ ದ್ವಾರಾ ಈ ಎಲ್ಲ ಸಂಗತಿಯನ್ನು ರಾಜನಿಗೆ ತಿಳಿಸಿದನು."[೧೬]

ಆಗ ರಾಜಾ ನಾಲ್ವಡಿ ವೆಂಕಟಪ್ಪನಾಯಕನು ಲಿಂಗೋಪಂತನಿಗೆ ಹೀಗೆ ಹೇಳುತ್ತಾನೆ: "ನೀನು ಭಯಪಡುವ ಕಾರಣವಿಲ್ಲ. ಇದಕ್ಕೆ ತಕ್ಕ ಉಪಾಯವನ್ನು ಮಾಡುವೆನು. ನೀನು ಭೋಜನಕ್ಕೆ ಹೋಗೆಂದು ಮುಜಮದಾರನಿಗೆ ರಾಜನ ಅಪ್ಪಣೆಯಾಯಿತು."[೧೭]

ನಂತರ ರಾಜನು ಈ ರೀತಿ ಆಲೋಚಿಸಿ, ಈ ಕೆಳಗಿನಂತೆ ಕ್ರಮವನ್ನು ತೆಗೆದುಕೊಳ್ಳುತ್ತಾನೆ. ಅದು ಇಂತಿದೆ: "ಈ ಭೀಮರಾಯನು ಇಲ್ಲದ ಆರೋಪಗಳನ್ನು ನನ್ನ ಮೇಲೆ ತರುವನೆಂದು, ಇವನನ್ನು ರಾಜ್ಯದಿಂದ ತಳ್ಳಿದ್ದಾಯಿತು. ಪುನಃ ಅವನನ್ನು ಕರೆಯಿಸಿ, ದಿವಾಣಗಿರಿಯನ್ನು ಕೊಟ್ಟದ್ದಾಯಿತು. ಇನ್ನೂ ಇವನು ತನ್ನ ಕೊಂಕಬುದ್ಧಿಯನ್ನು ಬಿಡಲೊಲ್ಲನು. ನಮ್ಮಲ್ಲಿ ಫೌಜದಾರಿ ಕೆಲಸ ಅಂದರೆ ಪಹರೆ ಚೌಕೀಗಾಗಿ, ಬೇಕಾದ ಜನರನ್ನು ನೌಕರಿಯಲ್ಲಿಟ್ಟುಕೊಳ್ಳುವುದು, ಬೇಕಾಗಲಾರದಾಗ ಈ ಜನರನ್ನು ತೆಗೆಯುವುದು, ಈ ರೀತಿಯಾಗಿ ಅನೇಕ ಸಲ ಮಾಡುತ್ತ ಬಂದಿರುವೆವು. ಇದನ್ನು ಇವನು ಬೇರೊಂದು ರೀತಿಯಾಗಿ ಕೇಮಲ ಸಾಹೇಬನಿಗೆ ತಿಳಿಸಿ, ನಮ್ಮ ಮೇಲೆ ಇಲ್ಲದ ಸಂಕಟವನ್ನು ತರುವನೆಂದು ಧೊರೆಯು ಆಲೋಚಿಸಿ, ಆ ಸಿಪಾಯಿಗಳನ್ನು ಕರೆಯಿಸಿ, ಅವರನ್ನು ನೇಮಿಸಿಕೊಳ್ಳುವಾಗ ತಾನು ಕೊಟ್ಟ ಹುಕುಮನ್ನು ತಿರುಗಿ ಕೊಡಿರೆಂದು ಕೇಳಿದನು."[೧೮]

ನಂತರದಲ್ಲಿ ರಾಜನು ದಿವಾನ ಭೀಮರಾಯನಿಗೆ ಹುಕುಮನ್ನು ಕೊಡುವುದು ಹಾಗೂ ಅದರ ಪರಿಣಾಮ ವೇನಾಯಿತು ಎಂಬುದು ಇಂತಿದೆ: "ಕೂಡಲೇ ಅವರು ಆ ಹುಕುಮನ್ನು ತಂದು ಧೊರೆಯ ಮುಂದಿಟ್ಟರು. ಧೊರೆಯು ಈ ಜನರನ್ನು ಕೆಟ್ಟ ಕೆಲಸಕ್ಕಾಗಿ ನೇಮಿಸಿದ್ದಿಲ್ಲ. ಆದಾಗ್ಯೂ ವೇಳೆ ಮಾತ್ರ ಸಂಕಟದ್ದಾಗಿತ್ತು. ಆ ಹುಕುಮನ್ನು ಹರಿದು ಹಾಕಿದ್ದರೆ ಒಳಿತಾಗುತ್ತಿತ್ತು. ಆದರೆ ಮುಂದಾಗುವ ಭವಿಷ್ಯವನ್ನು ತಪ್ಪಿಸುವವರಾರು? ಭೀಮರಾಯ ದಿವಾಣನನ್ನು ಕರೆಯಿಸಿ, ಆ ಹುಕುಮನ್ನು ಅವನೆದುರು ಒಗೆದನು. ಅದನ್ನು ನೋಡಿ, ಭೀಮರಾಯನು ಆ ಹುಕುಮಿನ ಒಂದು ಪ್ರತಿಯನ್ನು ಲಿಂಗೋಪಂತ ಮುಜಮದಾರನಿಂದ ಬರೆಯಿಸಿ, ಅದರ ಮೇಲೆ ಮೋಹರು ಮಾಡಿಸಿಕೊಡಿರೆಂದು ಧೊರೆಗೆ ಕೇಳಿಕೊಂಡನು. ಹರಕಾರೇರು ಲಿಂಗೋಪಂತನನ್ನು ಕರೆದೊಯ್ದರು. ಯಾವ ಹುಕುಮಿನ ಸಲುವಾಗಿ ಇಷ್ಟು ಅನರ್ಥ ಉಂಟಾಗಿರುವುದೋ, ಅದು ಕೈಸಿಕ್ಕ ನಂತರದಲ್ಲಿ ಪುನಃ ಅದರ ಪ್ರತಿಯನ್ನು ಮಾಡುವುದೇನು ಕಾರಣವೆಂದು ಮುಜುಮದಾರನು ನುಡಿದನು. ರಾಜನು ಬರೆದು ಕೊಡಲು ಅಪ್ಪಣೆಯನ್ನು ಮಾಡಿರಲು, ನೀನು ತಕರಾರು ಮಾಡುವುದು ಉಚಿತವಲ್ಲ ಎಂದು, ಭೀಮರಾಯನು ದೊರೆಯಿದ್ದೆಡೆಗೆ ಹೋಗಿ, ಲಿಂಗೋಪಂತನನ್ನೂ ಕರೆಯಿಸಿಕೊಂಡನು. ಅದರ ಮತ್ತೊಂದು ಪ್ರತಿಯನ್ನು ಮಾಡಿಕೊಡು ಎಂದು ಅಪ್ಪಣೆಯಾಯಿತು. ಮುಜಮದಾರನು ಬೇರೊಂದು ಪ್ರತಿಯನ್ನು ಮಾಡಿ ಅದನ್ನು ದೊರೆಯಲ್ಲಿಗೆ ಒಯ್ದನು. ಅದನ್ನು ನೋಡಿ, ಮೊಹರು ಮಾಡಿಸಿಕೊಂಡು ಬಾ ಎಂದು, ದೊರೆಯ ಅಪ್ಪಣೆಯಾಯಿತು. ಆಗ ಮೊಹರು ಮಾಡುವವನು ಇದ್ದಿಲ್ಲ ಆ ಎರಡು ಪ್ರತಿಗಳನ್ನು ದೊರೆಯ ಬಳಿಯಲ್ಲಿಟ್ಟು, ಮುಜಮದಾರನು ಮನೆಗೆ ಹೋದನು."[೧೯]

ಭೀಮರಾಯನು ಕೇಮಲ ಸಾಹೇಬನ ಭೇಟಿಗಾಗಿ ತೆರಳುವ ವಿಷಯವನ್ನು ಈ ರೀತಿ ಹೇಳುತ್ತಾನೆ: "ಅನಂತರ ಭೀಮರಾಯನು ಬಂದು ಕೇಮಲ ಸಾಹೇಬನು ಮೋತಿ ಗೀರನ ತೋಟದಲ್ಲಿ ಇಳಿದುಕೊಂಡಿರುವನು. ಅವನಿಗೆ ಬೇಕಾಗುವ ಸಾಮಾನುಗಳನ್ನು ಒದಗಿಸಿಕೊಟ್ಟು ಸರಬರಾಯಿ ಮಾಡುವುದಕ್ಕಾಗಿ ಹೋಗುತ್ತೇನೆಂದು ರಾಜನ ಅಪ್ಪಣೆ ಪಡೆದು, ಹೋಗುವಾಗ ಆ ಹುಕುಮುಗಳನ್ನು ತೆಗೆದುಕೊಂಡು ಹೋದನು. ಆ ಹುಕುಮುಗಳನ್ನು ಕೈಯಲ್ಲಿ ಹಿಡಿದು ಕೊಂಡಿದ್ದುದನ್ನು ನೋಡಿ, ನೀನು ಆ ಹುಕುಮುಗಳನ್ನು ನಿನ್ನ ಸಂಗಡ ಒಯ್ಯುವ ಕಾರಣವಿಲ್ಲ. ಲಿಂಗಪ್ಪನಲ್ಲಿಯಾಗಲಿ, ಅಥವಾ ಹರಪನಹಳ್ಳಿ ಬಸಪ್ಪನಲ್ಲಾಗಲಿ ಕೊಟ್ಟು ಹೋಗೆಂದು ದೊರೆಯು ದಿವಾಣನಿಗೆ ಹೇಳಿದನು. ಹಾಗೆಯೇ ಮಾಡುವೆನೆಂದು ಹೇಳಿ, ಭೋಜನಕ್ಕಾಗಿ ಮನೆಗೆ ಹೋಗದೆ, ಎಷ್ಟು ಕಷ್ಟಪಟ್ಟರೂ ಸಿಗದಿದ್ದ ಹುಕುಮುಗಳು, ಅನಾಯಾಸ ವಾಗಿ ದೊರೆತುದ್ದರಿಂದ ಅವನು ನೆಟ್ಟಗೆ ಕೇಮಲ ಸಾಹೇಬ ನಲ್ಲಿಗೆ ಹೋದನು."[೨೦]

ಭೀಮರಾಯನು ಕೇಮಲ ಸಾಹೇಬನಲ್ಲಿಗೆ ಹೋದ ವಿಷಯ ಹಾಗೂ ಆತನು ಅಲ್ಲಿ ಏನು ಮಾಡುತ್ತಿದ್ದಾನೆಂಬುದನ್ನು ತಿಳಿಯಲು ದೊರೆಯು ಬಸವಂತಸಿಂಗನಿಗೆ ಹೀಗೆ ಹೇಳುತ್ತಾನೆ: "ಇವನು ಹೋದನಂತರದಲ್ಲಿ, ರಾಜನಿಗೆ ಸಂಶಯ ಬಂದಿತು. ಬಸವಂತಸಿಂಗನನ್ನು ಕಳುಹಿ ಮುಜುಮದಾರನನ್ನು ಕರೆಯಿಸಿಕೊಂಡು ದಿವಾಣನು ನಿನ್ನಲ್ಲಿ ಆ ಹುಮುಕುಗಳನ್ನು ಕೊಟ್ಟಿರುವನೇನೆಂದು ಕೇಳಿದನು. ಅದಕ್ಕೆ ಮುಜುಮದಾರನು ಇಲ್ಲೆಂದು ಹೇಳಲು, ಅದರಂತೆ ಹರಪನಹಳ್ಳಿ ಬಸಪ್ಪನನ್ನು ಕೂಡ ಕರೆಯಿಸಿ ವಿಚಾರಿಸಿದನು. ಅವನೂ ಅದೇ ಉತ್ತರವನ್ನು ಕೊಟ್ಟನು. ದೊರೆಯು ಸಂತಾಪದಿಂದ ಕುದಿದು, ಆ ದುಷ್ಟನು ಹುಕುಮುಗಳನ್ನು ಬಹಳ ಮಾಡಿ ಕೇಮಲ ಸಾಹೇಬನಗೆ ತೋರಿಸಲು ಹೋದಂತೆ ಕಾಣುತ್ತದೆ. ನೀನು ಹೋಗಿ, ಅವನ ಕಣ್ಣಿಗೆ ಬೀಳದಂತೆ, ಅವನು ಏನು ಮಾಡುತ್ತಿರು ವನೆಂಬುದನ್ನು ನೋಡಿಕೊಂಡು ಬಾ, ಎಂದು ಬಸವಂತ ಸಿಂಗನನ್ನು ಕಳಿಸಿದನು."[೨೧]

ಬಸವಂತಸಿಂಗನು ಭೀಮರಾಯ ಹಾಗೂ ಕೇಮಲ ಸಾಹೇಬನ ನಡುವೆ ನಡೆದ ಸಂಗತಿಯನ್ನು ಲಿಂಗಪ್ಪನು ಈ ರೀತಿ ಹೇಳುತ್ತಾನೆ: "ಬಸವಂತಸಿಂಗನು ಕೇಮಲ ಸಾಹೇಬನ ಡೇರೆಗೆ ಹೋಗಿ ನೋಡಿದನು. ಕೇಮಲ ಸಾಹೇಬನ ಮೇಜಿನ ಮೇಲೆ ಎರಡು ಕಾಗದಗಳು ಹರಡಿದ್ದು, ಅವನ್ನು ಭೀಮರಾಯನು ಕೇಮಲಸಾಹೇಬನಿಗೆ ತೋರಿಸುತ್ತಿದ್ದುದನ್ನು ನೋಡಿ, ತಿರುಗಿಬಂದು, ಅರಸನಿಗೆ ಅರುಹಿದನು. ಈ ಸಂಗತಿಯನ್ನು ದೊರೆಯ ಬಳಿ ಕೇಳಿ, ನಮ್ಮ ಪೂರ್ವಜರು ಗಳಿಸಿದ ಸಂಸ್ಥಾನವು ಈ ದುಷ್ಟನ ಸಲಹೆಗಳಿಂದ ಕಳೆದು ಕೊಳ್ಳುವ ವೇಳೆ ಬಂದಿತೆಂದು ನುಡಿದು, ಭೀಮರಾಯನಿಗೆ ಬಯ್ಯುತ್ತ, ಅವನ ಮನೆಯ ಮೇಲೆ ಪಹರೆಯನ್ನಿಟ್ಟು, ಅವನು ಬಂದ ಕೂಡಲೇ ಹಿಡಿದು ತರಬೇಕೆಂದು ಹುಜರಾತಿಯವರಿಗೆ ಹುಕುಮು ಕೊಟ್ಟನು. ಅತ್ತ ಬಸವಂತಸಿಂಗನು ಕೇಮಲ ಸಾಹೇಬನ ಡೇರೆಯ ಸಮೀಪದಲ್ಲಿರುವಾಗ, ಭೀಮರಾಯ ಮತ್ತು ಕೇಮಲ ಸಾಹೇಬರಿಬ್ಬರು, ಆಗಾಗ್ಗೆ ಹೊರಗೆ ಬಂದು ನೋಡುತ್ತಿರುವುದನ್ನು ಕಂಡನು."[೨೨]

ಕೇಮಲ ಸಾಹೇಬನು ಭೀಮರಾಯನೊಂದಿಗೆ ಮಾತನಾಡಿದ ವಿಷಯವನ್ನು ಹೀಗೆ ಹೇಳುತ್ತಾನೆ: "ಕೇಮಲ ಸಾಹೇಬನು, ಭೀಮರಾಯನಿಗೆ ಅಂದುದೇನೆಂದರೆ, "ನಾನು ಸಂಸ್ಥಾನಕ್ಕೆ ಹೋಗಿ ಅರಸನ ಭೆಟ್ಟಿಯಾದೆನು. ಕಾಲಾನುಸಾರ ಕೆಲವು ದೋಷಗಳು ಕಂಡುಬಂದರೂ, ಅವುಗಳನ್ನು ಬಯಲಿಗೆ ತರದೆ, ರಾಜನ ಮೇಲೆ ಮಾಡಿದ ಫಿರ್ಯಾದಿಗಳು ಸುಳ್ಳೆಂದು ನನಗೆ ತೋರಿತ್ತು. ರಾಜನು ಬುದ್ಧಿಪೂರ್ವಕವಾಗಿ ಈ ಕಾರ್ಯವನ್ನು ಮಾಡಿದ್ದುದಾದರೆ, ಇತರ ಯುದ್ಧದ ಸಾಮಗ್ರಿಗಳು ಕಾಣುವದಿಲ್ಲ. ಎಲ್ಲ ಕಿಲ್ಲೆಗಳನ್ನು ಸಹ ನೋಡಿ ಬಂದೆನು. ಅಲ್ಲಿಯೂ ಏನೂ ಕಾಣಲಿಲ್ಲ. ಸಂಸ್ಥಾನದಲ್ಲಿ ಹೊಸದಾಗಿ ನೇಮಿಸಲ್ಪಟ್ಟ ಜಮಿಯತ್ತು ಸಹ ಇಲ್ಲ. ಬುರಾಣಿ ಜನರನ್ನು ದೊರೆಯು ಇದಕ್ಕಿಂತ ಪೂರ್ವದಲ್ಲಿ ನೌಕರಿ ಯಲ್ಲಿಟ್ಟುಕೊಂಡು, ಬೇಕಾಗಲಾರದಾಗ ತೆಗೆದುಹಾಕುತ್ತ ಬಂದಿರುವನು. ಇದಲ್ಲದೆ ಈಗಿರುವ ಜನರನ್ನು ಸಹ ನಿನ್ನೆಯ ದಿನ, ಅವರಿಗೆ ಬಿಟ್ಟು ಹೋಗಲು ಅಪ್ಪಣೆ ಕೊಟ್ಟಿರುವನು ಮತ್ತು ನಾನೂ ಕೂಡ ಅದರಂತೆ ಸರಕಾರಕ್ಕೆ ತಿಳಿಸಿರುವೆನು. ವಸ್ತು-ಸ್ಥಿತಿ ಹೀಗಿರಲು, ನೀನು ರಾಜನ ತಾಬೇದಾರನಾಗಿದ್ದು, ಇಂತಹ ಹುಕುಮನ್ನು ನಮಗೆ ತೋರಿಸಬಾರದಾಗಿತ್ತು. ಈ ಸಂಗತಿಯನ್ನು ರೆಸಿಡೆಂಟನಗೆ ತಿಳಿಸದ ವಿನಃ ಗತ್ಯಂತರವಿಲ್ಲ" ಎಂದು ಹೇಳಿ ಅದೇ ಕ್ಷಣದಲ್ಲಿ ಬರೆಯತಕ್ಕದೆಲ್ಲವನ್ನು ಬರೆದು, ಕಳುಹಿಸಿ, ಕುದುರೆಯನ್ನೇರಿ ದೇವದುರ್ಗಕ್ಕೆ ಹೋದನು."[೨೩]

ದೊರೆಯ ಹತ್ತಿರ ಭೀಮರಾಯನನ್ನು ಕರೆದು ತಂದಾಗ ನಡೆದ ವಿಷಯು ಇಂತಿದೆ: "ಕೇಮಲ ಸಾಹೇಬನು ಹೋದನಂತರದಲ್ಲಿ ಭೀಮರಾಯನು ತನ್ನ ಮನೆಗೆ ತಿರುಗಿ ಬಂದ ಕೂಡಲೆ, ಹುಜರೆಯವರು ದೊರೆಯ ಅಪ್ಪಣೆಯಂತೆ ಅವನನ್ನು ಸನ್ನಿಧಿಗೆ ಕರೆದೊಯ್ದರು. ರಾಜನು ಸಿಟ್ಟಿನಿಂದ ಆ ಎರಡು ಹುಕುಮುಗಳನ್ನು, ಇಬ್ಬರಲ್ಲಿ ಯಾರಾದರೊಬ್ಬರಿಗೆ ಕೊಟ್ಟು ಹೋಗೆಂದು ನಾನು ಹೇಳಿರಲು, ನೀನು ಅವನ್ನು ಕೇಮಲ ಸಾಹೇಬನಿಗೆ ಏಕೆ ತೋರಿಸಿದೆ ಎಂದು ಕೇಳಿದಾಗ, ನಾನು ತೋರಿಸಿಲ್ಲೆಂದು ಸುಳ್ಳು ಹೇಳಿದ್ದನ್ನು ಕೇಳಿ, ಈ ದುಷ್ಟನನ್ನು ಇಲ್ಲಿಂದ ದಬ್ಬಿರಿ, ಮನೆ ಬಿಟ್ಟು ಹೋಗದಂತೆ

ಕಾವಲಿಡಿರೆಂದು ಹುಜರಾತಿಯವರಿಗೆ ಅಪ್ಪಣೆ ಮಾಡಿದನು. ಹುಜರಾತಿಯವರು ಅದರಂತೆ ಮಾಡಿದರು."[೨೪]

ಕೇಮಲ ಸಾಹೇಬನು ಬ್ರಿಟಿಷ್ ಸರ್ಕಾರಕ್ಕೆ ಬರೆದ ಪತ್ರದ ನಂತರದಲ್ಲಾದ ಬದಲಾವಣೆಗಳ ವಿವರವನ್ನು ಈ ರೀತಿ ಹೇಳುತ್ತಾನೆ: "ಕೇಮಲ ಸಾಹೇಬನು ಬರೆದುಕೊಂಡು ಪತ್ರಕ್ಕೆ ಉತ್ತರವು, ಅವನು ದೇವದುರ್ಗದಲ್ಲಿರುವಾಗ ಬಂದಿತು. ಅನೇಕ ಮಾತುಗಳ ಚೌಕಸಿಯೊಡನೆ ವಿಶೇಷವಾಗಿ ಮತ್ತು ಸೂಕ್ಷ್ಮವಾಗಿ ಪರಿಶೀಲನೆ ಮಾಡಿಕೊಳ್ಳಬೇಕೆಂದು ಬರೆಯಲಾಗಿತ್ತು. ಕೇಮಲ ಸಾಹೇಬನು ತನ್ನ ಪತ್ರವನ್ನು ಬರೆದು ಕಳಿಸುವುದಕ್ಕಿಂತ ಪೂರ್ವದಲ್ಲಿಯೇ ಹಿಂದುಸ್ಥಾನದಲ್ಲಿ ಅನೇಕ ಸ್ಥಳಗಳಲ್ಲಿ ಬಂಡು ನಡೆದಿತ್ತು. ಆದುದರಿಂದ ನಾಲ್ಕೂ ಕಡೆಯಿಂದ ಇಂಗ್ರೇಜರ ಸೈನ್ಯವು ಬಂದು ದೇವದುರ್ಗದಲ್ಲಿ ಮುಕ್ಕಾಮು ಮಾಡಿತ್ತು. ಆ ಸೈನ್ಯದ ಕೆಲಭಾಗವು ದೇವದುರ್ಗವನ್ನು ಬಿಟ್ಟು, ಸುರಪುರದ ಮೇಲೆ ಏರಿಬಂದು, ಹಲ್ಲೆ ಮಾಡಬೇಕೆಂದು ರುಕಮಾಪೂರದ ಬೈಲಿನಲ್ಲಿ ಮಾಘವದ್ಯ ನವಮಿಯ ದಿನ ಬಂದು ಇಳಿಯಿತು. ಎರಡನೇ ದಿನ ಅಂದರೆ ಮಾಘವದ್ಯ ದಶಮಿ ಆದಿತ್ಯವಾರ ಶಕ ೧೭೬೭ನೆಯ ಅರುಣೋದಯದಿಂದ ಎರಡು ತಾಸಿನಲ್ಲಿ ಎಲ್ಲ ಸೈನ್ಯವು ಬಂದಿತು. ಸುಮಾರು ಮೂರು ತಾಸಿನ ಮೇಲೆ ಹಲ್ಲೆ ಮಾಡುವವರಿದ್ದರು. ಇದೇ ಸಮಯದಲ್ಲಿ ಹೊರಗಿನಿಂದ ಬಂದ ನೂರು ಜನರು ರೋಹಿಲೇರು ಊರಿನ ಹೊರಭಾಗದಲ್ಲಿ ನಡೆದ ಗದ್ದಲವನ್ನು ಕೇಳಿ, ಅರಮನೆಯ ದೇವಡಿಗೆ ಬಂದು ಧಾಂದಲಿ ಮಾಡಹತ್ತಿದರು."[೨೫]

ನಾಲ್ವಡಿ ವೆಂಕಟಪ್ಪ ನಾಯಕನು ರೋಹಿಲರಿಗೆ ಹೇಳಿದ ವಿಷಯ ಹಾಗೂ ಆತ ತೆಗೆದುಕೊಂಡ ನಿರ್ಧಾರಗಳನ್ನು ಲಿಂಗಪ್ಪನು ಈ ರೀತಿ ವಿವರಿಸುತ್ತಾನೆ: "ದೊರೆಯು ಇವರನ್ನು ಉದ್ದೇಶಿಸಿ, ನಿಮ್ಮನ್ನು ನಾವು ಕರೆಯಿಸಿಲ್ಲ. ಇಂಥ ನಾಜೂಕ ಪ್ರಸಂಗದಲ್ಲಿ ನೀವು ಇಲ್ಲಿರಕೂಡದು, ಬಂದಂತೆ ತಿರುಗಿ ಹೋಗಿರೆಂದು ಹೇಳಿದನು. ಅವನು ಅರಮನೆಯನ್ನು ಬಿಟ್ಟು, ಇಂಗ್ರೇಜರ ಲಷ್ಕರ ಬಂದಿರುವ ಗಲಾಟೆಯನ್ನು ಕೇಳಿ, ಅದೇ ಭಾಗಕ್ಕಿಳಿದು, ಆ ಲಷ್ಕರದವರನ್ನು ನೋಡುತ್ತ ನಿಂತರು. ಈ ಸುದ್ದಿಯನ್ನು ಕೇಳಿ ಭೀಮರಾಯನು ತಳಮಳಗೊಂಡನು ಮತ್ತು ದೊರೆಯು ನಡುನಡುವೆ ಎಚ್ಚರ ತಪ್ಪಿ ಬೀಳುತ್ತಿದ್ದನು. ಊರೆಲ್ಲವು ನಿಃಶಬ್ದವಾಯಿತು. ಇದೆಲ್ಲವನ್ನು ನೋಡಿ ದೊರೆಯು ತನ್ನ ಜನಾನಿಯನ್ನು ಕಳಿಸಿಕೊಡಬೇಕೆಂದು ಆಲೋಚಿಸಿ ಮಾಘವದ್ಯ ೧೦ ಪ್ರಾತಃಕಾಲದಲ್ಲಿ, ರಾಣಿ ರಂಗಮ್ಮನನ್ನು ಸಂಗಡ ಜಮಿಯತ್ತನ್ನು ಕೊಟ್ಟು ಮತ್ತು ಸಂಸ್ಥಾನಕ್ಕೆ ಸಂಬಂಧಿಸಿದ ಬಾದಶಾಹಿ ಸನದುಗಳನ್ನು ಆಕೆಯ ಸ್ವಾಧೀನಮಾಡಿ, ಹರಪನಹಳ್ಳಿ ಬಸಪ್ಪನನ್ನು ಜೊತೆ ಮಾಡಿ ಕಳಿಸಿಕೊಟ್ಟನು. ಉಳಿದ ರಾಣಿಯರು ಹಿರೇ ಹೆಂಡತಿಯ ಸಂಗಡ ಇದ್ದುಕೊಂಡು, ಎಲ್ಲರೂ ಒತ್ತಟ್ಟಿಗೆ ಇರಬೇಕೆಂದು ಅಪ್ಪಣೆ ಮಾಡಿ, ಎಲ್ಲರನ್ನು ಕಳುಹಿದನು. ಊರ ಜನರು ತನ್ನ ಅಪ್ಪಣೆಯಿಲ್ಲದೆ, ಇಂಗ್ರೇಜರ ಲಷ್ಕರನ್ನು ನೋಡಲಿಕ್ಕಾಗಿ ಹೋಗುತ್ತಿರುವರು. ಅವರನ್ನು ಶತ್ರುಗಳೆಂದು ಭಾವಿಸಿ, ಆಗಾಗ್ಗೆ ತೋಪುಗಳನ್ನು ಲಷ್ಕರದವರು ಹಾರಿಸುತ್ತಿದ್ದರು. ಅವರನ್ನು ತಡೆಯಲು ದೊರೆಯು ಬಳವಂತರಾವ ಘೋರಪಡೆ ಎಂಬುವನನ್ನು ಪಹರೆಗಾಗಿ ನೇಮಿಸಿ, ಅವನಿಗೆ ತಾಕೀದಿ ಮಾಡಲು, ವೆಂಕಟಾಪುರದಿಡ್ಡಿಯವರೆಗೆ ತಾನೇ ಸ್ವತಃ ಹೋಗಬೇಕೆಂದು, ಕುದುರೆಯನ್ನೇರಿ ದರ್ಬಾರಿನಿಂದ ಹೊರಟನು. ಯಾರೂ ಸಂಗಡವಿದ್ದಿಲ್ಲ. ಈ ರೀತಿ ಒಬ್ಬೊಂಟಿಗನಾಗಿ ತಾವು ಹೋಗತಕ್ಕದ್ದಲ್ಲ. ಬಳವಂತರಾಯನು ಅದೇ ಕಾರ್ಯಕ್ಕಾಗಿ ಅಲ್ಲಿರುವನು. ಸಂಸ್ಥಾನವನ್ನು ಯಾವ ರೀತಿಯಾಗಿ ಉಳಿಯಿಸಿಕೊಳ್ಳಬೇಕೆಂಬುದನ್ನು ವಿಚಾರ ಮಾಡಿರಿ ಮುಂತಾಗಿ ಲಕ್ಷ್ಮೀಗೀರನು ರಾಜನನ್ನು ಹಿಂದುರುಗಿಸಿದನು. ರಾಜನು ಅರಮನೆಗೆ ಬಂದು ಚಿಂತಿಸುತ್ತ ಕುಳಿತುಕೊಂಡನು. ಇಷ್ಟರಲ್ಲಿ ಇಂಗ್ರೇಜರು ಲಷ್ಕರ ಸಹಿತವಾಗಿ ಊರೊಳಗೆ ಬರುತ್ತಾರೆಂದು ಸುದ್ದಿಯು ಹರಡಿತು."[೨೬]

ಬ್ರಿಟಿಷ್‌ರು ಸುರಪುರವನ್ನು ಆಕ್ರಮಣ ಮಾಡಿದ ರೀತಿಯನ್ನು ಈ ರೀತಿ ವಿವರಿಸುತ್ತಾನೆ: "ಮತ್ತೊಂದು ಕಡೆ ಇಂಗ್ರೇಜರು ನಾಲ್ಕೂ ಕಡೆಯಿಂದ ಬರಹತ್ತಿದರು. ಮಾಘವದ್ಯ ದಶಮಿ ಪ್ರಾತಃಕಾಲದವರೆಗೆ ಅವರ ಎಲ್ಲ ಸೈನ್ಯವು ನೆರೆಯಿತು. ಮೊದಲು ಸಿದ್ದಾಪುರವನ್ನು ಹಸ್ತಗತ ಮಾಡಿಕೊಳ್ಳಬೇಕೆಂದು, ಇಂಗ್ರೇಜರು ತಮ್ಮ ಲಷ್ಕರ ಸಹಿತವಾಗಿ, ವೆಂಕಟಾಪುರ ದಿಡ್ಡಿಯ ಮಾರ್ಗವಿಡಿದು ಮುಂಜಾನೆ ಬರಹತ್ತಿದರು. ನಿರುದ್ಯೋಗಿಗಳಾದ ಬುರಾಣಿ ಜನರು ನಿಂತದ್ದನ್ನು ನೋಡಿ, ಕ್ಯಾಪ್ಟನ್ ನ್ಯುಬೆರ್ರಿ ಎಂಬುವನು, ಬಾಂದ್ರಿಯ ನಿಶೆಯಲ್ಲಿ ಮುಂದೆ ಬಂದು, ರೋಹಿಲೇ ಜನರ ಪತಾಕೆ ಇದ್ದೆಡೆಗೆ ಬಂದನು. ರೋಹಿಲೇರನ್ನು ಹೊಡೆದು ಅವರ ಪತಾಕೆಯನ್ನು ಕಸಿದನು. ಉಳಿದ ರೋಹಿಲೇರು ಇದನ್ನು ನೋಡಿ, ಕರಾಬಿನ್ನಿನಿಂದ ಅವನನ್ನು ಹೊಡೆದು, ಅವನ ರುಂಡವನ್ನು ಕೊಯ್ದು, ಅದನ್ನು ಅಗಸಿಯಲ್ಲಿ ತೂಗುಹಾಕಿದರು. ಇಂಗ್ರೇಜ ಲಷ್ಕರದವರು ತಮ್ಮ ಸರದಾರನ ಕುದುರೆಯನ್ನು ಹಿಂತಿರುಗಿಸಿ ತಮ್ಮ ಸ್ಥಳಕ್ಕೆ ಹೋದರು. ಇಷ್ಟರಲ್ಲಿ ಆರು ತಾಸಾಯಿತು. ಬಿಸಿಲು ಹೆಚ್ಚಿತು. ಇಂಗ್ರೇಜರು ತಾವು ಇಳಿದುಕೊಂಡಿದ್ದ ಸ್ಥಳವನ್ನು ಬಿಟ್ಟು ದೂರದಲ್ಲಿ ಮತ್ತೊಂದು ಕಡೆ ಹೋಗಿ ತಮ್ಮ ಡೇರೆಗಳಲ್ಲು ನೆಲೆಸಿದರು. ಆದಾಗ್ಯೂ ಅಲ್ಲಿಂದ ಸಂಜೆಯವರೆಗೆ ಮತ್ತು ಆ ರಾತ್ರಿ ಆಗಾಗ್ಗೆ ತೋಪುಗಳನ್ನು ಹೊಡೆಯುತ್ತಿದ್ದರು."[೨೭]

ನಾಲ್ವಡಿ ವೆಂಕಟಪ್ಪನಾಯಕನು ಹೈದರಾಬಾದಿಗೆ ಹೋಗುವ ಯೋಚನೆಯ ವಿವರಣೆ ಹೀಗಿದೆ: "ನಿರುದ್ಯೋಗಿಗಳಾದ ರೋಹಿಲೇರು ಕ್ಯಾಪಟನ್ ನ್ಯುಬೇರಿಯೆಂಬವನನ್ನು ಕೊಂದ ಸುದ್ದಿಯನ್ನು ಕೇಳಿ ದೊರೆಯು ಚಿಂತಾಗ್ರಸ್ತನಾದನು. ಈ ಭಯಂಕರ ಪ್ರಸಂಗವು ಹೇಗಾದರೆ ತಪ್ಪೀತೆಂದು ಆಲೋಚಿಸಿ, ಹೈದರಾಬಾದಕ್ಕೆ ಹೋಗಬೇಕೆಂದು ನಿಶ್ಚೈಸಿಕೊಂಡನು. ದಶಮಿ ಮಧ್ಯಾನ ಪುನಃ ಭೀಮರಾಯನನ್ನು ಕರೆಯಿಸಿಕೊಂಡನು. ಭೀಮರಾಯ ಮತ್ತು ಅವನ ಅಳಿಯನಾದ ವಾಗಿಣ ರಾಮಣ್ಣ ಇಬ್ಬರೂ ಕೂಡಿ ದೊರೆಯಿದ್ದಲ್ಲಿ ಬಂದರು. ಹೇಗಾದರೆ ಈ ಭಯಂಕರ ಪ್ರಸಂಗವು ತಪ್ಪುವುದು ಮತ್ತು ಮುಂದೇನು ಮಾಡಬೇಕೆಂದು, ಅವರೊಡನೆ ದೊರೆಯು ಆಲೋಚನೆಗೈದನು. ಇಲ್ಲಿ ಏನೂ ಆಗುವಂತಿಲ್ಲ. ಹೈದರಾಬಾದಕ್ಕೆ ಹೋಗಿ ಉಭಯ ಸರಕಾರದವರನ್ನು ಭೆಟ್ಟಿಯಾಗಿ, ಅಲ್ಲಿ ಏನಾದರೂ ಮಾಡಬಹುದೆಂದು ಅವರು ಸಲಹೆ ಕೊಟ್ಟರು. ಇದನ್ನು ದೊರೆಯು ಒಪ್ಪಿಕೊಂಡನು. ಹೊರಡುವ ತಯಾರಿಯನ್ನು ಮಾಡಲಾಯಿತು."[೨೮]

ವೆಂಕಟಪ್ಪನಾಯಕನಿಗೆ ಕೆಲವರು ಹೇಳಿದ ವಿಷಯ ಹಾಗೂ ದೊರೆಯು ತೆಗೆದುಕೊಂಡ ನಿರ್ಣಯವನ್ನು ಲಿಂಗಪ್ಪನು ಹೇಳುವುದು ಹೀಗೆ: "ಇದೇ ಸಮಯದಲ್ಲಿ ಕೇಮಲ ಸಾಹೇಬನನ್ನು ಭೆಟ್ಟಿಯಾಗಬೇಕೆಂದು ಕೆಲವರು ದೊರೆಗೆ ಆಲೋಚನೆಯನ್ನು ಹೇಳಿದರು. ಈ ಪ್ರಸಂಗದಲ್ಲಿ ಅವನನ್ನು ಭೆಟ್ಟಿಯಾದರೆ ಯಾವ ಕಾರ್ಯಸಾಧನೆಯಾಗದೆ, ವೇಳೆ ಮಾತ್ರ ವ್ಯರ್ಥ ಹೋಗುವುದು, ಆದುದರಿಂದ ಕಾಲವನ್ನು ಕಳೆಯದೆ, ಹೈದರಾಬಾದಕ್ಕೆ ಹೋಗುವುದೇ ಲೇಸೆಂದು ಬಗೆದು, ನಾಲ್ಕು ಕುದುರೆಗಳನ್ನು ಸಿದ್ದನ ತೋಟಕ್ಕೆ ಕಳಿಸಿದನು. ಖರ್ಚಿನ ಸಲುವಾಗಿ ಜಮದಾರ ಖಾನಿಯಲ್ಲಿದ್ದ ಒಡವೆಗಳನ್ನು ಸಂಗಡ ಇಟ್ಟುಕೊಳ್ಳಬೇಕೆಂದು ಆಲೋಚಿಸಿ, ಜಮದಾರ ಖಾನಿಗೆ ತೋಷಾಖಾನಿಯಲ್ಲಿಯ ವಸ್ತುಗಳನ್ನು ತರಲು ಅಪ್ಪಣೆ ಮಾಡಿದನು. ಬಸಣ್ಣನೆಂಬವನು ಎಲ್ಲ ವಸ್ತು, ಒಡವೆಗಳನ್ನು ತಂದು ದೊರೆಯ ಮುಂದಿಟ್ಟನು. ಅವನನ್ನು ಹೊರಗೆ ಕಳಿಸಿ, ಅರಸನು ಆ ಎಲ್ಲ ಒಡವೆಗಳನ್ನು ಭೀಮರಾಯ ಮತ್ತು ರಾಮಣ್ಣನ ಸ್ವಾಧೀನ ಮಾಡಿದನು. ಅವರು ಅವನ್ನು ತೆಗೆದುಕೊಂಡು ಅಸ್ತಮಯ ಕಾಲ ಸಮೀಪಿಸಿರುವುದು, ವೇಳೆಗೆ ಸರಿಯಾಗಿ ತಡವಿಲ್ಲದೆ ಹೊರಡಬೇಕು, ಮನೆಗೆ ಹೋಗಿ ಬರುತ್ತೇನೆಂದು ತಮ್ಮ ಮನೆಗಳಿಗೆ ಹೊರಟು ಹೋದರು. ದಶಮಿಯ ದಿನ ಸೂರ್ಯಾಸ್ತವಾಗಿ ಕತ್ತಲೆ ಕವಿದ ನಂತರದಲ್ಲಿ ದೊರೆಯು, ಅರಮನೆಯ ಹಿಂದಿನ ದಿಡ್ಡಿ ಬಾಗಿಲಿಂದ ಹೋಗಬೇಕೆಂದು ನಿಶ್ಚೈಸಿಕೊಂಡನು."[೨೯]

ಮೊದಲೇ ನಿರ್ಧರಿಸಿದಂತೆ ವೆಂಕಟಪ್ಪನಾಯಕನ ಜೊತೆಗೆ ಹೈದರಾಬಾದಿಗೆ ತೆರಳುವವರು ಮಾಡಿದ ಮೋಸ ಹಾಗೂ ಅವರೊಂದಿಗೆ ಹೋದವರ ವಿವರಣೆ ಹೀಗಿದೆ: "ದೊರೆಯ ಸಂಗಡ ಬೊನ್ಹಾಳ ರಾಮಪ್ಪ, ದಾಸೀಪುತ್ರ ಕೃಷ್ಣಾ ಎಂಬುವರು ಹೊರಟರು. ಮೂವರೂ ಕೂಡಿ, ಮೊದಲೇ ಗೊತ್ತಾದಂತೆ, ಸಿದ್ದನ ತೋಟಕ್ಕೆ ಹೋದರು. ಅಲ್ಲಿಂದ ನಾಲ್ಕು ಕುದುರೆಯ ಸಾಮಾನುಗಳನ್ನು ತರಿಸಿಕೊಂಡರು. ಕೆಲ–ವೇಳೆಯ ನಂತರದಲ್ಲಿ ವಾಗಿಣಗೇರಿ ರಾಮಣ್ಣನು ಬಂದನು. ಮೃಗರಾಜ ಎಂಬ ತನ್ನ ಸ್ವಂತ ಕುದುರೆಯನ್ನು ವಾಗಿಣಗೇರಿ ರಾಮಣ್ಣನಿಗೆ ಕೊಟ್ಟು, ಅದರ ಮೇಲೆ ಒಡವೆಗಳನ್ನಿಟ್ಟುಕೊಂಡು ನೀನು ಕೂಡೆಂದು ಹೇಳಿದನು. ರಾಮಣ್ಣನು ಕುದುರೆಯನ್ನು ಏರಿದನು. ದೊರೆಯು ಬೇರೊಂದು ಕುದುರೆಯ ಮೇಲೆ ಕೂಡುವಷ್ಟರಲ್ಲಿ, ರಾಮಣ್ಣನು ತಾನು ಕುಳಿತುಕೊಂಡಿದ್ದ ಕುದುರೆಯನ್ನು ಪರಾಕಾಷ್ಟೆಯಿಂದ ಓಡಿಸುತ್ತ, ಮತ್ತೊಂದು ಮಾರ್ಗವಿಡಿದನು. ಇದನ್ನು ನೋಡಿ, ನಾವು ಹೋಗುವ ಮಾರ್ಗವೆತ್ತ, ಇವನು ಹಿಡಿದಿರುವ ಮಾರ್ಗವೆತ್ತ ಎಂದು ಕೂಗುವಷ್ಟರಲ್ಲಿ ರಾಮಣ್ಣನು ಕಣ್ಣಿಗೆ ಕಾಣದಂತಾದನು. ಭೀಮರಾಯನಂತೂ ವೇಳೆಗೆ ಸರಿಯಾಗಿ ಬರುತ್ತೇನೆಂದು ಹೇಳಿ ಬರಲಿಲ್ಲ".[೩೦]

ವೆಂಕಟಪ್ಪನಾಯಕನು ಹೈದರಾಬಾದ್‌ಗೆ ತೆರಳುವಾಗ ದಾರಿಯಲ್ಲಿ ಭೇಟಿಯಾದ ಮನೆತನದವರು ಮತ್ತು ಜೊತೆಗೆ ಇದ್ದವರ ವಿವರವು ಇಂತಿದೆ: "ದೊರೆಯು ಬಲವಂತರಾವ ಘೋರಪಡೆಗೆ ಒಂದು ಜಾಗೀರಿಯನ್ನು ಕೊಟ್ಟು ಅವನಿಂದ ಒಂದು ಹೆಣ್ಣು ಕುದುರೆಯನ್ನು ಪಡೆದಿದ್ದನು. ತಾನು ಆ ಕುದುರೆಯನ್ನೇರಿದನು. ರಾಮಪ್ಪ ಮತ್ತು ಕೃಷ್ಣಪ್ಪ ಇಬ್ಬರೂ ಒಂದೊಂದು ಕುದುರೆಯನ್ನೇರಿ, ಮೂವರೂ ಕೂಡಿ ಮಾರ್ಗವಿಡಿದರು. ಅದೇ ರಾತ್ರಿ ಭೀಮಾನದಿಯನ್ನು ದಾಟಿ, ನಾಲ್ವಾರಕ್ಕೆ ತಲ್ಪಿದರು. ದೊಡ್ಡಪ್ಪನೆಂಬ ಆ ಊರ ಗೌಡನು ಹಿಂದೊಮ್ಮೆ ಸುರಪುರಕ್ಕೆ ಬಂದಾಗ ದೊರೆಗೆ ಭೆಟ್ಟಿಯಾಗಿದ್ದನು. ಆ ಗುರುತಿನಿಂದ ಮೂವರೂ ಅವನ ಮನೆಗೆ ಹೋದರು. ಆ ಗೌಡನು ದೊರೆಯನ್ನು ಗುರುತಿಸಿ, ಏನೋ ಭಯಂಕರ ಸಂಕಷ್ಟದಲ್ಲಿರುವನೆಂದು ತಿಳಿದು, ಬಹಳ ಮರ್ಯಾದೆಗೈದು ಆದರದಿಂದ ಸತ್ಕರಿಸಿದನು. ಅಲ್ಲಿಂದ ಅವರು ಮುಂದೆ ಸಾಗಿದರು. ಹಗಲಿರುಳೆನ್ನದೆ, ಪಾಕಲಪರವಿ, ಹಣಮನಗಡ್ಡಿಯ ಮಲೆಯಲ್ಲಿ ಹೋಗುವಾಗ, ಸಂಸ್ಥಾನಕ್ಕೆ ಸಂಬಂಧಪಟ್ಟ ಎಲೇರಿಯಂಬ ಊರಿನ ಒಬ್ಬ ಸಾಹುಕಾರನು ವ್ಯಾಪಾರಕ್ಕಾಗಿ ಷಮಸಾಬಾದಿಗೆ ಹೋಗಿ ತಿರುಗಿ ಬರುವಾಗ ತನ್ನ ಹೇರಾಟದ ಎತ್ತುಗಳೊಡನೆ ಇಳಿದುಕೊಂಡಿದ್ದನು.

ಏಲೇರಿ ಎಂಬ ಗ್ರಾಮವು ರಾಣಿಯ ಜಾಗೀರಿ ಗ್ರಾಮವಾಗಿತ್ತು. ಅವರಿಂದ ನೀರು ಇಸಕೊಂಡು ಕುಡಿದರು. ಆ ಸಾಹುಕಾರನು ದೊರೆಯನ್ನು ಗುರುತಿಸಿ, ತನ್ನ ಸಂಗಡಿದ್ದ ಮಾದಿಗನನ್ನು ಜೊತೆಯಾಗಿ ಕೊಟ್ಟನು. ಅಲ್ಲಿಂದ ಎಲ್ಲಿಯೂ ನಿಲ್ಲದೆ ಷಮಸಾಬಾದಿಗೆ ಬರುವಷ್ಟರಲ್ಲಿ ಬೆಳಗಾಯಿತು. ರಾಮಪ್ಪ ಕೃಷ್ಣಪ್ಪನ ಕುದುರೆಗಳು ಹೆಜ್ಜೆಯಿಕ್ಕಲಾರದೆ ನಿಂತುಬಿಟ್ಟವು. ಅವರೂ ಅಲ್ಲಿಯೇ ನಿಂತರು. ಆ ಏಲೇರಿಯ ಮಾದಿಗನೂ ಅವರೊಡನೆ ನಿಂತುಕೊಂಡನು. ದೊರೆಯ ಕುದುರೆಯು ಮುಂದೆ ಸಾಗಿತು."[೩೧]

ದೊರೆಯು ಹೈದರಾಬಾದ್ ನಿಜಾಮನನ್ನು ಭೇಟಿಯಾಗಲು ಹೋದಾಗ ಪಟ್ಟ ಕಷ್ಟವನ್ನು ಹಾಗೂ ಅವಮಾನವಾದ ವಿವರಣೆಯನ್ನು ಈ ರೀತಿ ನೀಡುತ್ತಾನೆ ಲಿಂಗಪ್ಪ: "ಷಮಸಾಬಾದಿನಿಂದ ದೊರೆಯು ಒಬ್ಬನೇ ಹೊರಟು ಸುಮಾರು ಹಗಲು ನಾಲ್ಕು ತಾಸಿನ ಸುಮಾರಿಗೆ ಹೈದರಾಬಾದಕ್ಕೆ ತಲ್ಪಿದನು. ಹೈದರಾಬಾದಿನಲ್ಲಿ ವಿಚಾರಿಸುತ್ತ ನಿಜಾಮನ ದೇವಡಿಗೆ ಬಂದನು. ತನ್ನ ಕುದುರೆಯ ಮೇಲೆ ಕುಳಿತುಕೊಂಡು, ದೇವಡಿಯಲ್ಲಿದ್ದ ಜನರನ್ನುದ್ದೇಶಿಸಿ, ತಾನು ಸುರಪುರ ಅರಸನೆಂದೂ, ನಿಜಾಮನ ಭೆಟ್ಟಿಯಾಗಿ ಬಂದಿರುವೆನೆಂದೂ ಈ ಸಂಗತಿಯನ್ನು ಹುಜೂರವರಿಗೆ ತಿಳಿಸಬೇಕೆಂದೂ ಕೇಳಿಕೊಂಡನು. ಈ ಮಾತನ್ನು ಕೇಳಿ, ಅವರು ಸುರಪುರದ ಅರಸನು ದಿನಾಲು ನೂರಾರು ಇಂಗ್ರೇಜಿ ಸಾಹೇಬರನ್ನು ಕೊಲ್ಲಿಸುತ್ತಿರುವನೆಂದು ಸುದ್ದಿ ಬರುತ್ತಲಿದೆ. ನೀನು ರಾಜನೆಂದು ಸುಳ್ಳು ಹೇಳಿಕೊಳ್ಳುವ ಲಫಂಗನು ಇಲ್ಲಿ ನಿಲ್ಲಬೇಡ ನಡೆ ಎಂದು ಬೆದರಿಸುತ್ತ ದೇವಡಿ ಸಮೀಪದಲ್ಲಿ ದೊರೆಯನ್ನು ನಿಲ್ಲಗೊಡಲಿಲ್ಲ. ಅಲ್ಲಿಂದ ನಿರಾಶನಾಗಿ ಕೇಳುತ್ತ ಕೇಳುತ್ತ ಸಾಲಾರ ಜಂಗನ ದೇವಡಿಗೆ ಹೋದನು. ಅವರೂ ಕೂಡ ರಾಜನೆಂದು ನಂಬದೆ ತಿರುಗಿ ಕಳಿಸಿದರು. ಸಾಲಾರ ಜಂಗನ ದೇವಡಿಯಿಂದ ಮುಂದೇನು ಮಾಡಬೇಕೆಂದು ವಿಚಾರ ಮಾಡುತ್ತ ಚಾರಮಿನಾರದ ಚೌಕಿನಲ್ಲಿ ಹೋಗುತ್ತಿರುವಾಗ, ಆಕಸ್ಮಾತ್ತಾಗಿ ವನಪರ್ತಿಯ ಸಂಸ್ಥಾನಿಕನ ನೆನಪಾಯಿತು. ಪತ್ರದ್ವಾರಾ ಅವನ ಪರಿಚಯವಾಗಿತ್ತು. ಅವನ ಹೆಸರು ರಾಜಾರಾಮೇಶ್ವರರಾವ್, "ಸುಖಾಹೌಜ" ದಲ್ಲಿ ಬಂದು ಕೇಳುತ್ತಿರುವಾಗ ಆಕಸ್ಮಾತ್ತಾಗಿ ರಾಮೇಶ್ವರರಾಯನೇ ಮೇನೆಯಲ್ಲಿ ಕುಳಿತು ಎದುರು ಬಂದನು. ಅದೇ ಮೇನೆಯವರನ್ನು ವನಪರ್ತಿ ರಾಮೇಶ್ವರರಾಯನ ಮನೆ ಎಲ್ಲಿ ಎಂದು ಕೇಳಿದನು. ಇವನೇ ವನಪರ್ತಿಯ ರಾಮೇಶ್ವರರಾಯನೆಂದು ತಿಳಿಯಿತು. ಅವನಲ್ಲಿ ತಾನು ಸುರಪುರದ ದೊರೆಯೆಂದು ಹೇಳಿಕೊಂಡನು. ಸುರಪುರ ದೊರೆಯೆಂದು ಕೇಳಿದ ಕೂಡಲೇ ರಾಯನು ಮೇನೆಯಿಂದ ಕೆಳಗಿಳಿದನು. ಪರಸ್ಪರ ಭೆಟ್ಟಿಯಾಯಿತು. ಸಾಲಾರ ಜಂಗನನ್ನು ಭೆಟ್ಟಿ ಮಾಡಿಸುವೆನೆಂದು ತನ್ನ ಮೇನೆಯಲ್ಲಿ ದೊರೆಯನ್ನು ಕೂಡಿಸಿ, ತಾನು ದೊರೆಯ ಕುದುರೆಯನ್ನೇರಿ ಸಾಲಾರ ಜಂಗನ ಮನೆಗೆ ಕರೆದೊಯ್ದನು. ದೊರೆಯನ್ನು ದೇವಡಿಯಲ್ಲಿ ಕೂಡಿಸಿ ತಾನು ಒಳಗೆ ಹೋದನು. ತಿರುಗಿ ಬರಲಿಲ್ಲ. ಸಾಲಾರಜಂಗನಾದರೂ ದೊರೆಯನ್ನು ಒಳಗೆ ಕರೆಯಿಸಿಕೊಳ್ಳದೆ ರೆಸಿಡೆಂಟನಿಗೆ ಈ ಸುದ್ದಿಯನ್ನು ತಿಳಿಸಿದನು."[೩೨]

ವೆಂಕಟಪ್ಪನಾಯಕನನ್ನು ಮೋಸದಿಂದ ಸೆರೆಹಿಡಿದ ಕುರಿತಾದ ವಿವರಣೆ ಹೀಗಿದೆ: "ಕೂಡಲೇ ರಾಜನನ್ನು ಕರೆದೊಯ್ಯಲು ಸೋಲ್ಜರರೊಡನೆ ಒಂದು ಮೇನೆಯು ಸಾಲಾರಜಂಗನ ದೇವಡಿಗೆ ಬಂದಿತು. ಆ ಮೇನೆಯಲ್ಲಿ ಕುಳಿತು ಅವರ ಸಂಗಡ ತೆರಳಬೇಕೆಂದು ಸಾಲಾರ ಜಂಗನು ಹೇಳಿಕಳಿಸಿದನು. ದೊರೆಗೆ ಈ ಮಾತಿನ ಅರ್ಥವಾಯಿತು. ಸಾಲಾರಜಂಗನಿಗೆ ತಿರುಗಿ ಹೇಳಿಕಳಿಸಿದನು. ನಾನು ಬಂಡುಗಾರನಲ್ಲ. ಬಂಡುಗಾರನಾಗಿದ್ದರೆ ಇಲ್ಲಿಯವರೆಗೆ ನನಗೆ ಬರುವ ಕಾರಣವೇ ಇದ್ದಿಲ್ಲ. ನಿಜಸಂಗತಿಯನ್ನು ಉಭಯ ಸರಕಾರಕ್ಕೆ ಅರಿಕೆ ಮಾಡಿಕೊಳ್ಳಬೇಕೆಂದು ಬಂದಿರುವೆನಷ್ಟೆ. ಈ ರೀತಿ ನುಡಿದು ತನ್ನ ಕೈಯಲ್ಲಿದ್ದ ಕಟ್ಟಿಗೆಯನ್ನು ಮೇನೆಯ ಮೇಲೆ ಒಗೆದು ಅದರಲ್ಲಿ ಕುಳಿತುಕೊಂಡನು. ಹುಸೇನಸಾಗರಕ್ಕೆ ತಂದು ಕೈದು ಮಾಡಿ, ಸೋಲ್ಜರರ ಪಹರೆಯಲ್ಲಿಟ್ಟರು. ಸುರಪುರದಿಂದ ಹೈದರಾಬಾದವು ೮೦ ಹರಿದಾರಿ ಇದ್ದು, ಎರಡು ರಾತ್ರಿ, ಒಂದು ಹಗಲು, ಅನ್ನ ನೀರಿಲ್ಲದೆ ಮಾರ್ಗಾಯಾಸದಿಂದ ಬಳಲಿ ಕೊನೆಗೆ ಸೆರೆಸಿಕ್ಕನು ದೊರೆಯು".[೩೩]

ರಾಜನು ಬಿಟ್ಟುಹೋದ ನಂತರದಲ್ಲಿ ಇತ್ತ ಸುರಪುರದಲ್ಲಿ ಜನರ ಸ್ಥಿತಿಗತಿಯ ಕುರಿತಾಗಿ ಮುಜಮದಾರ ಲಿಂಗೋಪಂತನು ಈ ರೀತಿ ಬರೆಯುತ್ತಾನೆ: "ರಾತ್ರಿ ನಾಲ್ಕು ತಾಸುಗಳ ನಂತರ, ರಾಜನು ಊರು ಬಿಟ್ಟು ತೆರಳಿದನು. ರಾಜನು ಬಿಟ್ಟು ಹೋದ ಸಂಗತಿಯು ಎಲ್ಲರಿಗೂ ತಿಳಿಯಿತು. ರಾಣಿಯರಂತೂ ಮೊದಲೆ ಹೋಗಿದ್ದರು. ಊರನ್ನು ರಕ್ಷಣೆ ಮಾಡುವವರಾರೂ ಇಲ್ಲದಂತಾಯಿತು. ಇಂಗ್ರೇಜರು ೨೫,೦೦೦ ಫೌಜು ಮತ್ತು ತೋಪುಗಳೊಡನೆ ಮೂರನೇ ದಿನ ಊರೊಳಗೆ ಪ್ರವೇಶಿಸಿದರು. ಅವರನ್ನು ತಡೆದು ಊರಲ್ಲಿ ಶಾಂತತೆಯನ್ನು ಪ್ರಸ್ಥಾಪಿಸುವುದಕ್ಕೆ ಯಾರೂ ಇಲ್ಲದಂತಾಯಿತು. ಅರಸನಲ್ಲದೆ ಇಂಥ ಭಯಂಕರ ಸ್ಥಿತಿಯಲ್ಲಿ ಊರೊಳಗಿರುವುದು ಕಷ್ಟವಾಗಿ ಕಂಡುಬಂದಿತು. ರಾಜನು ಇಂಗ್ಲೀಷರ ವಿರುದ್ಧ ಯುದ್ಧ ಮಾಡಬೇಕೆಂದು ಎಂದಿಗೂ ಯೋಚಿಸಿದ್ದಿಲ್ಲ. ದುಷ್ಟಜನರು ರಾಜನನ್ನು ಕೆಡಿಸಬೇಕೆಂದು ವರ್ಷಾರು ತಿಂಗಳುಗಳಿಂದ ಪ್ರಯತ್ನಿಸುತ್ತಿದ್ದುದು ಎಲ್ಲರಿಗೂ ವಿದಿತವಿಗಿದೆ. ರಾಜನು ಮಾತ್ರ ಈ ದುಷ್ಟ ಆಲೋಚನೆ ಮಾಡಿದ್ದಿಲ್ಲ. ಕೇಮಲ ಸಾಹೇಬನು

ಒಳ್ಳೆಯುವನು. ರಾಜನ ಮೇಲೆ ಅನುಗ್ರಹ ಮಾಡಿ ಹೋಗುವನೆಂದು ಜನರಲ್ಲಿ ವಾರ್ತೆಯಿತ್ತು. ಮಧ್ಯಂತರದಲ್ಲಿ ದುಷ್ಟ ಜನರು ಕೇಮಲ ಸಾಹೇಬನ ಮನಸ್ಸನ್ನು ಕೆಡಿಸಿದರೆಂದು ಎರಡು ಮೂರು ದಿನಗಳಿಂದ ಜನರು ಅಂದಾಡುತ್ತಿದ್ದರು." (ಯಥಾರ್ಥ ಜನರು ಕೇಮಲ ಸಾಹೇಬನ ಇಂದ್ರಜಾಲವನ್ನು ತಿಳಿಯದಿರುವುದು ಸಹಜವಿದೆ. ಸಮೀಪದಲ್ಲಿರುವ ಸ್ವಜನರು ದೋಷಿಗಳೆಂದು ಭಾವಿಸುವುದು ಸಹಜವಿದೆ. "ಇಂತಹ ನಾಜೂಕ ಪರಿಸ್ಥಿತಿಯಲ್ಲಿ ರಾಜನು ಉಳಿಯುವುದು ಕಷ್ಟ. ಊರ ಜನರು ಇಂಗ್ಲೀಷ್ ಸರಕಾರದಿಂದ ಅಪಾಯ ವಾಗಲಿಕ್ಕಿಲ್ಲೆಂದು ಭಾವಿಸಿಕೊಂಡಿದ್ದರು. ಆದರೆ ಇಂಥ ಪ್ರಸಂಗ ಗಳಲ್ಲಿ ಸ್ತ್ರೀಯರ ಮರ್ಯಾದೆಯೂ ಈ ಲಷ್ಕರೀ ಜನರಿಂದ ಉಳಿಯುವುದಿಲ್ಲೆಂದು ಹಿಂದಿನ ಸಂಗತಿಗಳನ್ನು ಕೇಳಿದ್ದರು. ಇಂಥ ಪ್ರಸಂಗವು ನಮ್ಮ ಮೇಲೆ ಬಂದಿತೆಂದು ಊರಲ್ಲಿ ಹಾಹಾಕಾರೆದ್ದಿತು. ಕೆಲವರು ಊರು ಬಿಟ್ಟು ಹೋಗುವುದನ್ನು ನೋಡಿ, ಕೇಳಿ ಗಡಿಬಿಡಿಯಿಂದ ಎಚ್ಚರ ತಪ್ಪಿದವರಂತೆ ಹೋಗಹತ್ತಿದರು. ಶಕ್ತಿಹೀನರು, ಕುರುಡರು, ನೂರು ವರ್ಷದ ಮುದುಕರು ಇಂಥವರೇ ಉಳಿದುಕೊಂಡರಲ್ಲದೆ ಪ್ರಸವ ವೇದನೆಯುಳ್ಳ ಗರ್ಭಿಣಿಯರು ಕೂಡ, ಎಲ್ಲರೂ ಅದೇ ರಾತ್ರಿ ಬೆಳಗಾಗುವುದರೊಳಗಾಗಿ ಊರು ಬಿಟ್ಟು ಹೋದರು. ಊರೆಲ್ಲ ನಿರ್ಜನವಾಯಿತು".[೩೪]

ಕೇಮಲ ಸಾಹೇಬನು ಸುರಪುರವನ್ನು ತನ್ನ ಅಧೀನಕ್ಕೆ ವಶಪಡಿಸಿಕೊಂಡು ನಡೆಸಿದ ಆಡಳಿತದ ವಿವರಣೆಯು ಹೀಗಿದೆ: ಮಾಘವದ್ಯ ೧೧ನೇ ಪ್ರಾತಃಕಾಲಕ್ಕೆ ತಯ್ಯಬ ಅಲಿಯೆಂಬ ವ್ಯಾಪಾರಿಯ ತಮ್ಮನಾದ ಮೊಹಮ್ಮದ ಅಲಿ ಎಂಬುವನು, ಕೇಮಲ ಸಾಹೇಬನಲ್ಲಿಗೆ ಹೋಗಿ ರಾಜನು ರಾತ್ರಿಯಲ್ಲಿ ಓಡಿಹೋಗಿರುವನು, ಜನರೆಲ್ಲರು ಆತ್ಮರಕ್ಷಣೆಗಾಗಿ ಬಿಟ್ಟು ಹೋಗಿರುವರು. ಊರಲ್ಲಿ ಹೆಣ್ಣು ಗಂಡು ಯಾರೂ ಉಳಿದಿಲ್ಲ. ನೀವು ಬಂದು ನಿಮ್ಮ ಮನಸ್ಸಿನ ಪ್ರಕಾರ ಊರ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಕೇಮಲ ಸಾಹೇಬನಿಗೆ ತಿಳಿಸಿದನು. ಮೊಹಮ್ಮದ ಅಲಿಯು ಹೇಳಿದ ಸಂಗತಿ ಸಟೆಯೊ ದಿಟವೊ ಎಂಬುದನ್ನು ತಿಳಿಯುವವರೆಗೆ ಅವನನ್ನು ಪಹರೆಯಲ್ಲಿಟ್ಟು, ಸುರಪುರದ ಮೇಲೆ ಹಲ್ಲೆ ಮಾಡಲು ಲಷ್ಕರಕ್ಕೆ ಅಪ್ಪಣೆ ಕೊಟ್ಟನು. ಬಿಗುಲು ಹಿಡಿದ ಕೂಡಲೇ ಲಷ್ಕರನವರು ಸುರಪುರದ ಮಾರ್ಗವಿಡಿದರು. ಮುಂದೆ ತೋಪುಗಳನ್ನು ಹಾರಿಸುತ್ತ ಲಷ್ಕರವು ಬರಹತ್ತಿತು. ಲಷ್ಕರವು ಅರಮನೆಯ ವರೆಗೆ ಬಂದರೂ ಯಾರೂ ಕಣ್ಣಿಗೆ ಬೀಳಲಿಲ್ಲ. ಕೂಡಲೇ ಮೊಹಮ್ಮದ ಅಲಿಯನ್ನು ಬಿಟ್ಟು ನಿರೋಪ ಕೊಟ್ಟರು. ಇಂಗ್ಲೀಷು ಅಧಿಕಾರಿಗಳಿಗೆ ಮತ್ತು ಸೋಲ್ಜರರಿಗೆ ಕಿಂಚಿತ್ ಶ್ರಮವಿಲ್ಲದೆ ಪುಕ್ಕಟ್ಟೆಯಾಗಿ ಸುರಪುರವು ಅವರ ಪದರೊಳಗೆ ಬಿದ್ದಿತು. ಅನಾಯಾಸವಾಗಿ "ಇಂಗ್ಲೀಷ್ ಸರಕಾರಕ್ಕೆ ಲಾಭವಾದುದರಿಂದ ಮತ್ತು ಲಷ್ಕರೀ ಜನರಿಗೆ ಲೂಟಿ ಸಿಗುವುದೆಂಬ ಭರವಸೆಯಿಂದ ಎಲ್ಲೆಂದರಲ್ಲೇ ಇಳಿದುಕೊಂಡು ನಿಶ್ಚಿಂತೆಯಿಂದ ಊಟ ಉಡುಗೆಗಳನ್ನು ತೀರಿಸಿಕೊಳ್ಳಹತ್ತಿದರು. ಸುರಪುರದ ಭಯವು ಇಂಗ್ಲೀಷರಿಗೆ ಬಹಳವಿತ್ತು. ಈ ಸ್ಥಳಕ್ಕೆ ಬೇಕಾಗುವ ಯುದ್ಧ ಸಾಮಗ್ರಿಯು ಮೊದಲಿನಿಂದಲೇ ಒದಗಿಸಿದ್ದರೆ, ಸುರಪುರದ ಮುಂದೆ ಇಂಥ ಎಷ್ಟೋ ಲಷ್ಕರಗಳು ದಿಂಡು ಉರುಳಬೇಕಾಗುತ್ತಿತ್ತು. ಈ ಇಂಗ್ರೇಜರು ಸುರಪುರದ ಅನ್ನ ನೀರು ಪಡೆದುಬಂದಿರುವ ಕಾರಣ ನಿಮಿತ್ತ ಮಾತ್ರವನ್ನು ಹಸ್ತಂಗತ ಮಾಡಿಕೊಂಡರು. ಇಲ್ಲಿ ಬಂದ ಲಷ್ಕರೀ ಜನರು ಮಾಡಿದ ಅಪಕೃತ್ಯಗಳನ್ನು ಅವರೇ ಬಲ್ಲರು. ಊಟ-ಉಡಿಗೆ ತೀರಿಕೊಂಡವ ನಂತರದಲ್ಲಿ, ನಿರ್ಜನವಾದ ಊರಲ್ಲಿ ಆತಂಕವಿಲ್ಲದೆ ಲೂಟಿಗೈದುದೇನಾಶ್ಚರ್ಯ. ಒಂದು ದಿನ ಸೂರ್ಯಾಸ್ತವಾಗುವ ವೇಳೆಯಲ್ಲಿ, ಅಧಿಕಾರಿಗಳು ತಮ್ಮ ಸೋಲ್ಜರರಿಗೆ ಲೂಟಿ ಮಾಡಲು ಅಪ್ಪಣೆ ಕೊಟ್ಟರು. ಅರಮನೆಯ ಸ್ಥಿತಿಯಂತು ಹೇಳಲಸಾಧ್ಯ. ನೂರಾರು ವರ್ಷ ಸಂಸ್ಥಾನವನ್ನು ಅನುಭೋಗಿಸುತ್ತಿದ್ದು, ವೈಭವದ ಸಾಮಾನು ಗಳಿಂದಲೂ, ಅಮೌಲ್ಯವಾದ ಅಗಣಿತ ವಸ್ತುಗಳಿಂದಲೂ ತುಂಬಿ ಸೂಸುತ್ತಿರುವ ಅರಮನೆ ಮತ್ತು ತುಂಬಿದ ಕೋಠಿ ಗಳನ್ನು-ರಾಜನ ಅಪ್ಪಣೆಯಾದ ಕೂಡಲೆ ರಾಣಿಯರು ಭಯದಿಂದ, ಇದ್ದಕ್ಕಿದ್ದ ಹಾಗೆ ಬಿಟ್ಟುಹೋಗಿದ್ದರು. ಪಹರೆ ಯವರು ಸಹ ಭಯದಿಂದ ಓಡಿಹೋಗಿದ್ದರು. ಯಾರೂ ಇಲ್ಲದ ಇಂಥ ಅರಮನೆಯಲ್ಲಿ ಒಡವೆಗಳನ್ನು ತೆಗೆದು ಕೊಳ್ಳುವುದಕ್ಕೆ ಅಭ್ಯಂತರವೇನತ್ತು. ಅಧಿಕಾರಿಗಳು ಎದುರು ನಿಂತು ಎಲ್ಲ ಸಾಮಾನುಗಳನ್ನು ತಮ್ಮ ಸ್ವಾಧೀನ ಮಾಡಿ ಕೊಂಡರು. ೧೨ ಆನೆ, ೫೦ ಒಂಟೆಗಳು, ಒಳ್ಳೇ ಕುದುರೆಗಳು ೫೦೦, ರಥದ ಬಂಡಿ, ಎತ್ತಿನ ಬಂಡಿಗಳು ನೂರಾರು, ಇನ್ನೂ ಎಷ್ಟೋ ಸಾಮಾನುಗಳನ್ನು ತಮ್ಮ ಹಸ್ತಗತ ಮಾಡಿ ಕೊಂಡರು. ಸಂಸ್ಥಾನದ ಹಾನಿಯು, ಎಲ್ಲವೂ ಕೂಡಿ ಕೋಟ್ಯಾವಧಿ ರೂಪಾಯಿಗಳದ್ದಾಯಿತು. ಈ ಅರಮನೆ ಯಲ್ಲಿದ್ದ ಸಾಮಾನುಗಳು ಲಷ್ಕರೀ ಜನರಿಗೆ ಸಿಗಲಿಲ್ಲ."[೩೫]

ಸುರಪುರದ ಜನಸಾಮಾನ್ಯರ ಚಿಂತಾಜನಕ ಸ್ಥಿತಿಯನ್ನು ಹಾಗೂ ಅವರು ಊರನ್ನು ತೊರೆದ ಸಂಗತಿಯನ್ನು ವಸ್ತುನಿಷ್ಠವಾಗಿ ಹೀಗೆ ಹೇಳುತ್ತಾನೆ: "ಪಟ್ಟಣದ ಸ್ಥಿತಿಯನ್ನು ಏನೆಂದು ಹೇಳಬೇಕು. ಊರ ಜನರು ತಮ್ಮ ತಮ್ಮ ಯೋಗ್ಯತೆಗನುಸರಿಸಿ ಜಿಂದಗಿಯನ್ನು ಮಾಡಿದ್ದರು. ಈ ಜಿಂಗದಿಯೆಂದರೆ ದ್ರವ್ಯ ಮೊದಲ್ಗೊಂಡು, ಅರಿವೆ, ಅಂಚಡಿ, ಹಂಡೆಭಾಂಡೆ ಮುಂತಾದ ಸಂಸಾರಕ್ಕೆ ಬೇಕಾದ ವಸ್ತುಗಳು ಭಿಕ್ಷುಕನ ಮನೆಯಲ್ಲಿಯ ಒಂದು ಕುಡಿಯುವ ತಂಬಿಗೆ

ಸಹ ಅದೇನೇ ಇರಲಿ, ಇವುಗಳು ಹೋದರೆ ನಷ್ಟವಾಯಿತೆನ್ನುವರು. ಇಂಥ ಭಯಂಕರ ಪ್ರಸಂಗದಲ್ಲಿ ಇವೆಲ್ಲವು ಮನೆಯಲ್ಲಿಟ್ಟರೆ ಕಳೆದುಹೋಗುವವೆಂಬ ಭಯ. ಸಂಗಡ ಒಯ್ಯುವುದಂತೂ ಸಾಧ್ಯವೇ ಇದ್ದಿಲ್ಲ. ಅಂಥ ಸಮಯದಲ್ಲಿ ಬಡವರು ಮತ್ತು ಶ್ರೀಮಂತರು ಇಬ್ಬರಿಗೂ ಸಾಮಾನುಗಳನ್ನು ಒಯ್ಯಲು ಅನುಕೂಲವೆಲ್ಲಿ? ಒಂದು ಪ್ರಹರ ರಾತ್ರಿ ಕಳೆದರೆ ಪ್ರಸಂಗವು ಜೀವದ ಮೇಲೆ. ಇಂಥ ಸ್ಥಿತಿಯಲ್ಲಿ ಊರ ಜನರು ತಮ್ಮ ಬಂಧು ಬಳಗ, ಮುದುಕ, ತದಕರು, ಊನರನ್ನು ಬಿಟ್ಟು ದಿಕ್ಕು ತೋರದಂತೆ, ಕಂಡ ಕಂಡವರ ಸಂಗಡ ಜೊತೆಯಾಗಿ ಹೋದರು. ಹಿಂದೆ ಬಿದ್ದವರನ್ನು ಹುಡುಕಿ ಕರೆದೊಯ್ಯಲಾಗಲಿಲ್ಲ. ತಾಯಿಗಳು ಭಯಕ್ಕಾಗಿ ತೊಟ್ಟಿಲಲ್ಲಿ ಮಲಗಿದ್ದ ಕೂಸುಗಳನ್ನು ಮರೆತುಹೋದರು. ಬುದ್ಧಿಭ್ರಮೆಯಾಗಿ ಯಾರಿಗೂ ಏನೂ ತೋಚಲಿಲ್ಲ. ಗಂಡಸರು ತಮ್ಮ ಎದುರಿಗಿದ್ದ ಮನೆಯ ಹೆಂಗಸರನ್ನು ಕರಕೊಂಡು ತುಂಬಿದ ಮನೆಗಳನ್ನು ತೊರೆದುಹೋದರು."[೩೬]

ಬ್ರಿಟಿಷ್‌ರು ಸುರಪುರವನ್ನು ಲೂಟಿ ಮಾಡಿದ ನಂತರದಲ್ಲಿ ಸುರಪುರದ ಜನ ವಾಪಸ್ಸು ಸುರಪುರಕ್ಕೆ ಬಂದ ಸಂಗತಿಯನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಾನೆ: "ಏಕಾದಶಿ ರಾತ್ರಿ, ದ್ವಾದಶಿ ಹಗಲು, ತ್ರಯೋಗಶಿ ಹಗಲಿರುಳು ಎರಡೆರಡು ಸಲ ಒಟ್ಟು ಏಳು ಸಾರೆ ಊರು ಲೂಟಿಯಾಯಿತು. ಜನರ ಮನೆಯಲ್ಲಿ ಸಣಬಿನ ತುಣುಕು ಸಹ ಉಳಿಯಲಿಲ್ಲ. ಎಲ್ಲವನ್ನು ಕಳೆದುಕೊಂಡ ಜೀವ ಮಾತ್ರ ಉಳಿಯಿತು. ಕಡೆಗೆ ಈ ಲೂಟಿಯ ಧಾಮ ಭೂಮಿಯು ಇಂಗ್ರೇಜಿ ಅಧಿಕಾರಿಗಳಿಗೂ ಅಸಹ್ಯವಾಗಿ ಲೂಟಿ ಮಾಡಗೊಡದಂತೆ ಕಾವಲಿಕ್ಕಿದರು. ಸಮೀಪದಲ್ಲಿದ್ದವರು ಕೆಲವರು ಶಾಂತತೆ ನೆಲೆಸಿದ ಸುದ್ದಿಯನ್ನು ಕೇಳಿ ತಮ್ಮ ತಮ್ಮ ಮನೆಗೆ ತಿರುಗಿ ಬರಹತ್ತಿದರು. ಕೆಲವರು ಎಂಟು, ಕೆಲವರು ಹತ್ತು ಹದಿನೈದು ದಿನಗಳು, ಅಥವಾ ತಿಂಗಳ ನಂತರದಲ್ಲಿ ತಿರುಗಿ ಬಂದರು. ಲೂಟಿಯಾದ ಹದಿನೈದು ದಿನಗಳವರೆಗೆ ಎಲ್ಲ ಲಷ್ಕರವು ಇಲ್ಲಿಯೇ ಇತ್ತು. ಅನಂತರ ಕೇಮಲ ಸಾಹೇಬನು ಸರಕಾರಿ ಹುಕುಮಿನ ಪ್ರಕಾರ ಒಂದು ಸಾವಿರ ಸೋಲ್ಜರರು, ತೋಪಖಾನೆಗಳನ್ನು ಸುರಪುರದಲ್ಲಿಟ್ಟು, ರಾಜನ ಆನೆ, ಒಂಟೆ, ಕುದುರೆ ಮುಂತಾದ ಎಲ್ಲವುಗಳನ್ನು ತಕ್ಕೊಂಡು, ಉಳಿದ ಸೈನ್ಯದೊಡನೆ ಹೊರಟು ಹೋದನು. ಇಲ್ಲಿ ಸೋಲ್ಜರರು ಮಾತ್ರ ಒಂದು ವರ್ಷದವರೆಗಿದ್ದರು. ಈ ಅವಧಿಯಲ್ಲಿ ಕೇಮಲ ಸಾಹೇಬನೇ ಸಂಸ್ಥಾನದ ವ್ಯವಸ್ಥೆ, ಮಾಲಿ, ಫೌಜದಾರಿ, ಗಾವಗನ್ನು ಮುಂತಾದವುಗಳನ್ನು ನೋಡಿಕೊಳ್ಳುತ್ತಿದ್ದನು."[೩೭]

ನಾಲ್ವಡಿ ವೆಂಕಟಪ್ಪ ನಾಯಕನ ರಾಣಿಯರು ಸುರಪುರವನ್ನು ತೊರೆದುದು, ನಂತರದಲ್ಲಿ ಅವರು ಪಟ್ಟ ಕಷ್ಟ ಕಾರ್ಪಣ್ಯಗಳು ಮುಂತಾದ ಸಂಗತಿಗಳು ಹೀಗಿವೆ: "ಪಟ್ಟದರಸಿಯಾದ ರಾಣಿ ರಂಗಮ್ಮ ಮತ್ತು ಇತರ ರಾಣಿಯರಿಗೆ, ಊರು ಬಿಟ್ಟು ಹೋಗುವುದಕ್ಕಾಗಿ ರಾಜನ ಅಪ್ಪಣೆಯಾದ ಕೂಡಲೇ ವನವಾಸ ಪ್ರಾಪ್ತವಾಯಿತು. ಅವರು ಅನುಭೋಗಿಸಿದ ಕಷ್ಟಗಳನ್ನು ಹೇಳಲಸಾಧ್ಯ. ಸಿದ್ದಾಪುರದ ಉತ್ತರ ದಿಕ್ಕಿಗೆ ದಾರಿ ನಡೆದು, ನಡುನಡುವೆ ಇಳಿದುಕೊಳ್ಳುತ್ತ ಭೀಮಾನದಿಯನ್ನು ದಾಟಿ ಮೊಗಲಾಯಿ ಇಲಾಖೆಗೆ ಸೇರಿದ ಚಿನಮೊಳ್ಳಿ ಎಂಬ ಊರಿಗೆ ಹೋದರು. ಈ ಚಿನಮೊಳ್ಳಿ ರಾಯರು ಸಂಸ್ಥಾನದಲ್ಲಿ ಹಿಂದೆ ದಿವಾಣಗಿರಿಯನ್ನು ಮಾಡಿದ್ದರು. ಆದುದರಿಂದ ಅವರಿಗೆ ಸುರಪುರ ಸಂಸ್ಥಾನದಲ್ಲಿ ಜಾಗೀರು ಇನಾಮು ಕೊಡಲ್ಪಟ್ಟಿದ್ದವು. ಈ ರಾಯರು ದೊಡ್ಡ ಮನೆತನದವರು. ಇಂಥ ಸಮಯದಲ್ಲಿ ಯಾರಿಗೂ ಮನೆ ಎದುರಿಗೆ ಬರಗೊಡುತ್ತಿದ್ದಿಲ್ಲ. ಆದಾಗ್ಯೂ ಪಟ್ಟದರಸಿಯು ಅದೇ ಊರವರೆಂದು ಹೇಳಿಕೊಂಡು ರಾತ್ರಿಯಲ್ಲಿ ಊರೊಳಗೆ ಪ್ರವೇಶ ಮಾಡಿದಳು. ನಂತರದಲ್ಲಿ ಚಿನಮಳ್ಳಿ ವೆಂಕಟರಾಯನು ರಾಣಿಯನ್ನು ಗುರುತಿಸಿ, ಆದರೋಪಚಾರಗಳಿಂದ ಸನ್ಮಾನಗೈದು, ಒಂದು ತಿಂಗಳದವರೆಗೆ ಯಾವ ಕೊರತೆ, ಕಷ್ಟವಾಗದಂತೆ ಅವರನ್ನು ಸತ್ಕರಿಸಿದನು. ಇಷ್ಟರಲ್ಲಿ ದೊರೆಯು ಹೈದ್ರಾಬಾದದಲ್ಲಿ ಇಂಗ್ಲೀಷರ ಕೈದಿನಲ್ಲಿರುನೆಂದೂ, ಸುರಪುರ ಲೂಟಿಯಿಂದ ಶಾಂತವಾಗಿ ಜನರು ಹಿಂತಿರುಗಿ ಬಂದಿರುವರೆಂದು ಸುದ್ದಿ ಬಂದಿತು. ಊರಿಗೆ ಹಿಂತಿರುಗಿ ಬರಬಹುದೋ ಇಲ್ಲವೊ ಎಂದು ಕೇಮಲ ಸಾಹೇಬನಿಗೆ ರಾಣಿಯು ಬರೆದು ಕೇಳಿದಳು. ಅದಕ್ಕವನು ತಾವು ಸಂತೋಷದಿಂದ ಬರಬೇಕೆಂದೂ, ತಮ್ಮ ಮರ್ಯಾದೆಗೆ ಯಾವ ತರದ ಕೊರತೆ ಬರುವಂತಿಲ್ಲೆಂದು ಬರೆದು ಕಳಿಸಿದನು. (೧೭ನೇ ಮಾರ್ಚ್ ೧೮೫೮) ಈ ಪತ್ರ ಬಂದ ನಂತರದಲ್ಲಿ ರಂಗಮ್ಮ ರಾಣಿಯು, ಇತರ ರಾಣಿಯರೊಡನೆ ಸುರಪುರಕ್ಕೆ ಹಿಂತಿರುಗಿ ಬಂದಳು. ಅರಮನೆಯಲ್ಲಿ ಕಮೀಷನರನಿದ್ದನು. ಹಳೇ ದರ್ಬಾರದಲ್ಲಿ ಲಷ್ಕರಿ ಜನರಿದ್ದರು. ಆದುದರಿಂದ ರಾಣಿಯು ತನ್ನ ತಂದೆಯಾದ ನಂದರಾಜನ ಮನೆಗೆ ಹೋದಳು. ಉಳಿದ ರಾಣಿಯರು ತಮ್ಮ ತಮ್ಮ ಆಪ್ತೇಷ್ಟರಲ್ಲಿಳಿದುಕೊಂಡರು."[೩೮]

ನಾಲ್ವಡಿ ವೆಂಕಟಪ್ಪ ನಾಯಕನನ್ನು ಬಂಧಿಸಿದ ಮೇಲೆ ಆತನನ್ನು ವಿಚಾರಣೆಗೊಳಪಡಿಸಿದುದು ಹಾಗೂ ಸ್ವತಃ ಮಜಮದಾರ ಲಿಂಗಪ್ಪನೂ ಸಾಕ್ಷಿನುಡಿದ ಪರಿಯು ಇಂತಿದೆ: "ರಾಜನ ಚೌಕಸಿ ನಡೆದಿರುವಾಗ, ರೆಸಿಡೆಂಟನ ಹುಕುಮಿನ ಪ್ರಕಾರ ಸಾಕ್ಷಿಕೊಡುವುದಕ್ಕಾಗಿ ಟೇಲರನು ಕಳಿಸಿಕೊಟ್ಟ ಜನರು (೧) ನಂದರಾಜಪ್ಪ ರತ್ನಗಿರಿ (೨) ಕೇಶವರಾವ ಆಲಂಪೂರ (೩) ಲಿಂಗೋಭಿರಾವ ಮುಜಮುದಾರ (೪) ನಾನಾ ಸಾಹೇಬ ಗುರ್ಲ ಹೊಸೂರು (೫) ಮುದ್ದೋ ಭೀಮರಾವ

ದಿವಾಣ (೬) ವಾಗಿಣಗೇರಿ ರಾಮಣ್ಣ (೭) ವಿದ್ಯಾಗುರು ಭಾಸ್ಕರಯ್ಯ (೮) ಬಳಂವಂತರಾವ ಘೋರ್ಪಡೆ. ಮೈಸೂರಿನ ಲಷ್ಕರಕ್ಕೆ ಸಂಬಂಧಪಟ್ಟ ಸರದಾರ ಲಕ್ಷ್ಮಣರಾವ ಎಂಬವನು ರೆಜಿಡೆಂಟನ ಹುಕುಮಿನ ಪ್ರಕಾರ ಈ ಜನರನ್ನು ಕರೆದೊಯ್ಯಲಿಕ್ಕೆ ಬಂದಿದ್ದನು. ಎಲ್ಲರು ವೈಶಾಖ ವದ್ಯ ೧೦ಗೆ ಹೈದರಾಬಾದಕ್ಕೆ ತಲ್ಪಿದರು. ಚಂದ್ರಘಾಟದಲ್ಲಿ ಬಾವು ಶೇಠನ ಬಂಗೆಯಲ್ಲಿ ಇವರನ್ನು ಇಳಿಸಿದರು. ಹುಸೇನ ಸಾಗರದ ಸಮೀಪ ಸೋಲ್ಜರ ಜನರ ಒಂದು ಬಂಗಲೆಯಲ್ಲಿ 'ಕೋರ್ಟ್ ಹಾಲ್' ಇತ್ತು. ಏಳು ಜನ ಗೋರಾ ಸಾಹೇಬರು ಚೌಕಸಿ ಮಾಡತಕ್ಕವರೆಂದು ಗೊತ್ತಾಗಿತ್ತು. ಅವರ ಹೆಸರುಗಳು ಗೊತ್ತಿಲ್ಲ. ಇದಲ್ಲದೆ ಸಾಕ್ಷಿದಾರರು ಹೇಳಿದ್ದುದನ್ನು ಪರಿವರ್ತನೆ ಮಾಡಿ, ಆ ಗೋರಾ ಜನರಿಗೆ ತಿಳಿಸುವ ಒಬ್ಬ 'ದುಭಾಷಿ' ಇದ್ದನು. ಮೊದಲನೇ ಕೋರ್ಟಿನಲ್ಲಿ ರಾಜನನ್ನು ಕರೆದು ಕೇಳಿದರು. ಅದು ನಮಗೆ ಗೊತ್ತಾಗಲಿಲ್ಲ. ರಾಜನ ಜವಾಬು ಮುಂದೆ ಆಗುವುದಿದ್ದು, ಆಲಂಪೂರ ಕೇಶವರಾಯನನ್ನು ರಾಜನ ಕಡೆಯಿಂದ ನೇಮಿಸಿದರು. ಬಲವಂತರಾವ ಘೋರ್ಪಡೆಯು ಹೇಳಿದ್ದೇನೆಂದರೆ–ಮಾಘವದ್ಯ ೯ನೆಯ ದಿನ ಪ್ರಾತಃಕಾಲದಲ್ಲಿ ಲಷ್ಕರ ತೋಪಖಾನೆ ಬಂದುದರಿಂದ ಪಟ್ಟಣದ ಜನರು ಲಷ್ಕರಿ ಜನರನ್ನು ನೋಡಲಿಕ್ಕೆಂದು ಹೋಗುವರು. ಇವರನ್ನು ಶತ್ರುಗಳೆಂದು ಭಾವಿಸಿ ತೋಪುಗಳನ್ನು ಹೊಡೆಯುವರು. ಆದುದರಿಂದ ರಾಜನು ಇನ್ನೂ ಕೆಲವರನ್ನು ನನ್ನ ಜೊತೆಗೆ ಕೊಟ್ಟು, ಊರ ಜನರಿಗೆ ಲಷ್ಕರ ಜನರ ಸಮೀಪಕ್ಕೆ ಹೋಗಗೊಡಲಾಗದಂತೆ ನೋಡಿಕೊಳ್ಳಲು ನನಗೆ ಅಪ್ಪಣೆ ಕೊಟ್ಟನು. ಇದರ ವ್ಯವಸ್ಥೆಯ ಸಲುವಾಗಿ ಅಲ್ಲಿಯೇ ಇರಬೇಕೆಂದು ಹೇಳಿದನು. ಆದ ಕಾರಣ ನಾನು ಹಗಲಿರುಳು ಆ ದಿನ ಅಲ್ಲಿಯೇ ಇದ್ದೆನು. ಮೈಸೂರಿನ ಲಕ್ಷ್ಮಣರಾಯನು ಹೇಳಿದ್ದೇನೆಂದರೆ, ನ್ಯುಬೆರಿಯು ಬ್ರಾಂಡಿ ಕುಡಿದು ಎಚ್ಚರತಪ್ಪಿ, ಲಷ್ಕರದ ಇತರ ಜನರು ಹೋಗಬೇಡ ವೆಂದು ಹೇಳಿದ್ದನ್ನು ಕೇಳದೆ ಹನ್ನೆರಡು (೧೨) ಜನರು ರೋಹಿಲೇರಿದ್ದೆಡೆಗೆ ಹೋಗಿ, ಅವರ ಪತಾಕೆಯನ್ನು ಹಿಡಿದ ಸಿಪಾಯಿಗೆ ಕತ್ತಿಯಿಂದ ಹೊಡೆಯಲು, ಉಳಿದವರು ನ್ಯುಬೆರಿಗೆ ಕರಾಬಿನ್ನಿನಿಂದ ಹೊಡೆದು, ಅವನ ರುಂಡವನ್ನು ಕೊಯ್ದು ಕೊಂಡು ಹೋದರು. ರಾಜನ ಸಿಪಾಯಿಗಳಿಂದ ನಮ್ಮ ಲಷ್ಕರಿ ಜನರಿಗೆ ಇನ್ನೇನು ಅಪಾಯವಾಗಲಿಲ್ಲ".[೩೯]

ದೊರೆಯನ್ನು ವಿಚಾರಣೆ ಮಾಡುವಾಗ ಸ್ವತಃ ಸಾಕ್ಷಿಯಾಗಿದ್ದ ಮುಜಮದಾರ ಲಿಂಗಪ್ಪನು ಹೇಳಿದ್ದೇನೆಂದರೆ: "ಐದು ಜನ ಜಮಾದಾರರು ಹುಕುಮನ್ನು ಬರೆದುಕೊಡುವುದಕ್ಕಾಗಿ ನನ್ನನ್ನು ಕೇಳಲು, ಅದಕ್ಕೆ ನಾನು ರಾಜನ ಅಪ್ಪಣೆಯಿಲ್ಲದೆ ಬರೆಯಲಾರೆನೆಂದು ಹೇಳಿದೆನು. ನೀನು ಬರೆದುಕೊಡದಿದ್ದರೆ ಕೊಲ್ಲುತ್ತೇವೆಂದು ಭಯಪಡಿಸಿದರು. ಜೀವದ ಭಯಕ್ಕಾಗಿ ಐದು ಜನರಿಗೆ ಐದು ಹುಕುಮುಗಳನ್ನು ಬರೆದುಕೊಟ್ಟೆನು. ಅವರೊಳಗಿನ ಒಬ್ಬ ಜಮಾದಾರನು, ನನ್ನನ್ನು ಆ ಹುಕುಮುಗಳೊಡನೆ ರಾಜನಲ್ಲಿ ಕರೆದೊಯ್ದನು. ರಾಜನು ಎಚ್ಚರತಪ್ಪಿ ಬಿದ್ದಿದ್ದನು. ಕೆಳಗೆ ಬ್ರಾಂಡಿಯ ಶೀಶೆಗಳಿದ್ದವು. ಅನಂತರ ಒಬ್ಬ ಜಮಾದಾರನು 'ರಾಜಮುದ್ರೆ' ಮೊಹರು ಮಾಡಿಸುವುದಕ್ಕಾಗಿ, ರಾಜನ ಮುದ್ರೆಯನ್ನಿಟ್ಟುಕೊಂಡು ಕಾಯುವ ಬಸಪ್ಪನನ್ನು ಕರೆತಂದು, ಮೊಹರು ಮಾಡೆಂದು ಬಲಾತ್ಕಾರ ಮಾಡಹತ್ತಿದನು. ಇಷ್ಟೆಲ್ಲ ನಾವು ಮಾಡಿದ್ದು ರಾಜನಿಗೆ ತಿಳಿದಿರಲಿಲ್ಲ, ಯಾಕೆಂದರೆ, ಆ ಜನರು ರಾಜನಗೆ ಮಿತಿಮೀರಿ ಕುಡಿಸಿ ಎಚ್ಚರ ತಪ್ಪಿಸಿದ್ದರು. ಕಡೆಗೆ ಜೀವದ ಭಯಕ್ಕಾಗಿ ಮೊಹರನ್ನು ಕೂಡ ಮಾಡಿ ಕೊಟ್ಟೆವು. ಕೋರ್ಟು ಮುಗಿಯಿತು. ಸುರಪುರದಿಂದ ಬಂದ ಜನರಿಗೆ ಮತ್ತೆಲ್ಲಿಯೂ ಹೋಗಬಾರದೆಂದು ಅಪ್ಪಣೆಯಾಯಿತು. ರಾಜನ ಸಂಗಡ ಇದ್ದ ಕೃಷ್ಣಾ ಮತ್ತು ರಾಮಪ್ಪರನ್ನು ರಾಜನ ಸುಶ್ರೂಷೆಯ ಸಲುವಾಗಿ ಸೆರೆಯಲ್ಲಿಡಲ್ಪಟ್ಟಿದ್ದರು. ಆಗ ಮುದ್ದೋಭೀಮ ರಾಯ ದಿವಾಣನು ಇವರನ್ನು ರಾಜನಲ್ಲಿಂದ ತೆಗೆದು, ಅವರ ಬದಲಾಗಿ ಕನಕಗಿರಿಯ ಕನಕಪ್ಪನನ್ನು ಕಳುಹಿಸಿದರು. ಅವನು ರಾಜನಿಗೆ ಉಪದೇಶ ಮಾಡುವುದಕ್ಕಾಗಿ ಕಳಿಸಲ್ಪಟ್ಟನು. ನಾಲ್ಕನೇ ದಿನ ಕೋರ್ಟಿನವರು ಯಾರಿಗೂ ಕರೆಯದೆ ರಾಜನನ್ನು ಮಾತ್ರ ಕರೆದು ಕೇಳಿದರು. ರಾಜನು ಏನೂ ಹೇಳಿದನೋ ತಿಳಿಯ ಲಿಲ್ಲ. ಅಂದಿನಿಂದ ಮೂರು ದಿನಗಳೊಳಗಾಗಿ ನೀವೆಲ್ಲರೂ ಸುರಪುರಕ್ಕೆ ತೆರಳಬೇಕು, ಇಲ್ಲಿರಕೂಡದೆಂದು ನಮಗೆ ಅಪ್ಪಣೆ ಯಾಯಿತು. ನಾಲ್ಕನೇ ದಿನ ಸರಕಾರಿ ಮನುಷ್ಯನು ಬಂದು ನಮ್ಮನ್ನು ಸುರಪುರಕ್ಕಟ್ಟಿದನು."[೪೦] ಹೀಗೆ ಮುಜಮುದಾರ ಲಿಂಗಪ್ಪನು ರಾಜನ ವಿಚಾರಣೆಯ ಸಂದರ್ಭದಲ್ಲಿ ಪ್ರತ್ಯಕ್ಷ ಸಾಕ್ಷಿಯಾಗಿ ಕಣ್ಣಾರೆ ಕಂಡದ್ದನ್ನು, ಅನುಭವಿಸಿದ್ದನ್ನು ತನ್ನ ಬರವಣಿಗೆಯಲ್ಲಿ ಸೆರೆಹಿಡಿದಿದ್ದಾನೆ.

ನಾಲ್ವಡಿ ವೆಂಕಟಪ್ಪ ನಾಯಕನನ್ನು ವಿಚಾರಣೆ ಮಾಡಿದ ಬ್ರಿಟಿಷ್ ನ್ಯಾಯಾಲಯವು, ಈತನು ಬ್ರಿಟಿಷರ ವಿರೋಧಿ ಚಟುವಟಿಕೆಗಳನ್ನು ಮಾಡುತ್ತಿದ್ದಾನೆಂದು ದೇಹಾಂತ ಶಿಕ್ಷೆಯನ್ನು ನೀಡಿತು. ಆದರೆ ರೆಸಿಡೆಂಟ್‌ನು ಈ ಶಿಕ್ಷೆಯನ್ನು ಕಡಿಮೆಗೊಳಿಸಿ ಅಮರಣಾಂತ ಗಡಿಪಾರು ಮಾಡಬೇಕೆಂದು ಬರೆದರೆ, ಗವರ್ನರ್ ಜನರಲ್‌ನು ಈ ಶಿಕ್ಷೆಯನ್ನು ಇನ್ನೂ ಕಡಿಮೆ ಮಾಡಿ ನಾಲ್ಕು ವರ್ಷಗಳವರೆಗೆ ಮದ್ರಾಸ್ ಹತ್ತಿರದ ಚಂಗಲ್‌ಪೇಟೆಯ ದುರ್ಗದಲ್ಲಿ ಈತನ ರಾಣಿಯರೊಂದಿಗೆ ಸೆರೆಯಲ್ಲಿಡಬೇಕೆಂದು, ನಂತರದಲ್ಲಿ ಈತನಲ್ಲಿ ಒಳ್ಳೆಯ ನಡವಳಿಕೆ ಉಂಟಾದರೆ ಸಂಸ್ಥಾನವನ್ನು ಪುನಃ ಮರಳಿ ನೀಡಬೇಕು[೪೧] ಎಂದು ಮಾನವೀಯತೆಯನ್ನು ಮೆರೆಯುತ್ತಾ

ಕಪಟ ನಾಟಕವನ್ನಾಡಿದನು. ಆಗ ಚಂಗಲ್‌ಪೇಟೆಗೆ ಕರೆದು ಕೊಂಡು ಹೋಗುವಾಗ ಅಂಬರಪೇಟೆಯ ಡೇರೆಯಲ್ಲಿ ತಂಗಿದಾಗ, ರಿವಲ್ವಾರ್‌ನಿಂದ ಗುಂಡುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡನೆಂದು ಕಟ್ಟುಕಥೆ ಕಟ್ಟಿದರು. ಆದರೆ ಆತನನ್ನು ಮೋಸದಿಂದ ಕೊಲೆ ಮಾಡಿದರು.[೨]

ನಂತರದಲ್ಲಿ ಸುರಪುರ ಸಂಸ್ಥಾನವು ಸಂಪೂರ್ಣವಾಗಿ ಬ್ರಿಟಿಷರ ವಶವಾಯಿತು. ಆಗ ನಾಲ್ವಡಿ ವೆಂಕಟಪ್ಪನಾಯಕನ ಪಟ್ಟದರಾಣಿಯಾದ ರಂಗಮ್ಮಳು ಸಂಸ್ಥಾನದ ಅಧಿಕಾರವನ್ನು ತನಗೆ ಮರಳಿ ಕೊಡಬೇಕೆಂದು ಬ್ರಿಟಿಷ ಸರ್ಕಾರಕ್ಕೆ ಪತ್ರ ಬರೆದು ಕೇಳಿಕೊಂಡಳು. ಮುಜಮುದಾರ ಲಿಂಗಪ್ಪನು ರಾಣಿಯ ಪರವಾಗಿ ಹೈದರಾಬಾದ್ ಮತ್ತು ಕಲ್ಕತ್ತೆಗೆ ಹೋಗಿ ಎರಡು–ಮೂರು ವರ್ಷಗಳ ಕಾಲ ಪ್ರಯತ್ನಿಸಿದನು. ಆದರೆ ಫಲ ದೊರೆಯಲಿಲ್ಲ. ಕೊನೆಯವರೆಗೂ ಹೈದರಾಬಾದ್ ನಿಜಾಮನ ಅಧೀನದಲ್ಲಿಯೇ ಸಂಸ್ಥಾನಿಕರು ಕಾಲ ನೂಕಬೇಕಾಯಿತು.

ಹೀಗೆ ಮಜಮುದಾರ ಲಿಂಗಪ್ಪನು ಸಂಸ್ಥಾನದ ಪತನದ ನಂತರವೂ ಸಂಸ್ಥಾನದ ರಕ್ಷಣೆಗಾಗಿ ರಾಣಿಯ ಪರವಾಗಿ ಪ್ರಯತ್ನಿಸಿದುದು ಆತನ ಸಂಸ್ಥಾನದ ಸ್ವಾಮಿನಿಷ್ಠೆಯನ್ನು ಎತ್ತಿ ತೋರಿಸುತ್ತದೆ. ಈತ ತಾನು ತನ್ನ ಸುತ್ತಲಿನ ರಾಜಕೀಯ ವಾತಾವರಣದಲ್ಲಿ ಕಣ್ಣಾರೆ ಕಂಡದ್ದನ್ನು, ಅನುಭವಿಸಿದುದನ್ನು ವಿವರವಾಗಿ, ವಸ್ತುನಿಷ್ಠವಾಗಿ ದಾಖಲಿಸಿದ್ದಾನೆ. ಕ್ರಿ.ಶ. ೧೮೯೦ರ ನಂತರದ ಕಾಲಾವಧಿಯಲ್ಲಿ ಸುರಪುರ ಸಂಸ್ಥಾನ ದಲ್ಲಿ ನಡೆದ ಘಟನೆಗಳ, ಸಂಗತಿಗಳ ವಿವರಣೆಯು ಈ ಹಕೀಕತ್ತಿನಲ್ಲಿರುವುದರಿಂದ ಇದನ್ನು ಸಂಸ್ಥಾನದ ಪತನದ ನಂತರವೇ ಲಿಂಗಪ್ಪನು ಬರೆದಿರುವ ಸಾಧ್ಯತೆ ಇದೆ. ಇದರ ಮೂಲಪ್ರತಿ ದೊರೆತಲ್ಲಿ ಇನ್ನಷ್ಟು ವಿಚಾರಗಳು ಹೊರಬೀಳುವ ಸಾಧ್ಯತೆಗಳಿವೆ. ಇದರ ಮೂಲಪ್ರತಿಯನ್ನು ಇಟ್ಟುಕೊಂಡ ಮಹನೀಯರು, ತಾವಾಗಲಿ ಇಲ್ಲವೇ ಸಂಶೋಧಕರಿಗೆ ನೀಡುವ ಮೂಲಕ ಪ್ರಕಟಣೆಯ ಕೃಪೆತೋರಲು ಕೋರಿಕೆ. ಅಲ್ಲಿಯವರೆಗೆ ಸುರಪುರ ಸಂಸ್ಥಾನದ ಕುರಿತಾಗಿ ಕಪಟರಾಳ ಕೃಷ್ಣರಾವ್‌ರವರು 'ಸುರಪುರ ಸಂಸ್ಥಾನ' ಕೃತಿಯಲ್ಲಿ ಉದ್ಧರಿಸಿದ ಈ ಮೇಲಿನ ಪತ್ರವನ್ನು ವಿದ್ವಾಂಸರು, ಸಂಶೋಧಕರು ಉಪಯೋಗಿಸಿಕೊಂಡರೆ ಸುರಪುರದ ಚರಿತ್ರೆಯನ್ನು ಮತ್ತಷ್ಟು ಅಧಿಕೃತವಾಗಿ ರಚಿಸಲು ಸಾಧ್ಯವಾಗುತ್ತದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿಗಳು

೧. ಕಪಟರಾಳ ಕೃಷ್ಣರಾವ್, **ಸುರಪುರ ಸಂಸ್ಥಾನ ಇತಿಹಾಸ**, ೧೯೭೭, ಪುಟ ೧೮೭.

೨. ರಂಗರಾಜ ವನದುರ್ಗ, **ಸುರಪುರ ಸಂಸ್ಥಾನ: ಒಂದು ಅಧ್ಯಯನ**, ೧೯೯೫, ಪುಟ ೧೨೮.

೩. **ಕ್ಯಾಪ್ಟನ್ ಕ್ಯಾಂಬೆಲ್** (ಕೆಂಬೆಲ್ಲ ಎಂದು ಮುಜಮದಾರ ಲಿಂಗಪ್ಪನು ತನ್ನ ಹಕೀಕತ್ತುನಲ್ಲಿ ಹೆಸರಿಸುತ್ತಾನೆ) ನ್ನು ಬ್ರಿಟಿಷ್ ಸರ್ಕಾರವು ಕ್ರಿ.ಶ.೧೮೫೪ ಏಪ್ರಿಲ್ ೧೨ರಂದು ಬ್ರಿಟಿಷರ ರಾಜಕೀಯ ಪ್ರತಿನಿಧಿಯೆಂದು 'ದೋಅಬ್' ಪ್ರದೇಶಕ್ಕೆ ನೇಮಕಮಾಡಿದ್ದರು. ಆಗ ಸುರಪುರ ಸಂಸ್ಥಾನದ ಆಡಳಿತದ ಬಗ್ಗೆಯೂ ವರದಿ ಮಾಡಲು ನಿರ್ದೇಶನ ನೀಡಿದ್ದರು. ಹೀಗಾಗಿ ಈತನು ಸುರಪುರ ಸಂಸ್ಥಾನದಲ್ಲಿ ನಡೆಯುತ್ತಿದ್ದ ಘಟನೆಗಳನ್ನು ಆಗಾಗ ಬ್ರಿಟಿಷ್ ಸರ್ಕಾರಕ್ಕೆ ಹಾಗೂ ಹೈದರಾಬಾದ್ ನಿಜಾಮನಿಗೆ ತಿಳಿಸುತ್ತಿದ್ದನು.

೪. ಕಪಟರಾಳ ಕೃಷ್ಣರಾವ್, **ಪೂರ್ವೋಕ್ತ**, ೧೯೭೭, ಪುಟ ೧೮೭.

೫. **ಅದೇ**, ಪುಟ ೧೮೭.

೬. **ಅದೇ**, ಪುಟ ೧೮೮.

೭. **ಅದೇ**, ಪುಟ ೧೮೯, ೨೦೪, ೨೦೮.

೮. **ಅದೇ**, ಪುಟ ೧೮೮, ೧೮೯.

೯. **ಕೈಫಿಯತ್ತು** = ಕೈಪೇತು, ಕೈಫೀತು, ಕೈಫೀಯತ್ತು, ಕೈಯಫಿಯತ್ತು ಎಂಬ ಹೆಸರುಗಳಿವೆ. ಇದರ ಅರ್ಥ ಸ್ಪಷ್ಟವಾದ ಹೇಳಿಕೆ, ನಿರೂಪಣೆ, ವರ್ಣನೆ, ವಿವರಣೆ, ತಪಶೀಲು ಎಂದರ್ಥ. ಒಂದು ಸ್ಥಳದ ಅಥವಾ ವಂಶದ ವಿವರಗಳನ್ನೊಳಗೊಂಡ ದಾಖಲೆ, ವಾಸ್ತವಿಕ ವಿಷಯಗಳ ಲಿಖಿತ ಸಂಗ್ರಹದ ಕಡತವಾಗಿದೆ.

೧೦. **ಅದೇ**, ಪುಟ ೧೪.

೧೧. **ಅದೇ**, ಪುಟ ೧೮೭.

೧೨. ಬಿ. ಕೃಷ್ಣಮಾಚಾರ್ಯ, **ಮರೆಯಲಾಗದ ಸುರಪುರ ರಾಜರ ಚರಿತ್ರೆ**, ೨೦೦೩, ಪುಟ ೨೨೮.

೧೩. ರಂಗರಾಜ ವನದುರ್ಗ, **ಪೂರ್ವೋಕ್ತ**, ೧೯೭೭, ಪುಟ ೭.

೧೪. ಎನ್. ಬಸವರಾಧ್ಯ ಮತ್ತು ಇತರರು (ಸಂ), **ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು** (ಸಂಪುಟ-೮), ೧೯೯೫, ಪುಟ ೮೮೦೦.

೧೫. ಕಪಟರಾಳ ಕೃಷ್ಣರಾವ್, **ಪೂರ್ವೋಕ್ತ,** ೧೯೭೭, ಪುಟ ೧೮೮.

೧೬. **ಅದೇ,** ಪುಟ ೧೮೮.

೧೭ **ಅದೇ,** ಪುಟ ೧೮೮.

೧೮. **ಅದೇ,** ಪುಟ ೧೮೮.

೧೯. **ಅದೇ,** ಪುಟ ೧೮೯.

೨೦. **ಅದೇ,** ಪುಟ ೧೮೯.

೨೧. **ಅದೇ,** ಪುಟ ೧೯೦.

೨೨. **ಅದೇ,** ಪುಟ ೧೯೦.

೨೩. **ಅದೇ,** ಪುಟ ೧೯೦.

೨೪. **ಅದೇ,** ಪುಟ ೧೯೦.

೨೫. **ಅದೇ,** ಪುಟ ೧೯೧.

೨೬. **ಅದೇ,** ಪುಟ ೧೯೨.

೨೭ **ಅದೇ,** ಪುಟ ೧೯೨.

೨೮. **ಅದೇ,** ಪುಟ ೧೯೨.

೨೯. **ಅದೇ,** ಪುಟ ೧೯೩.

೩೦. **ಅದೇ,** ಪುಟ ೧೯೩.

೩೧. **ಅದೇ,** ಪುಟ ೧೯೪.

೩೨. **ಅದೇ,** ಪುಟ ೧೯೪.

೩೩ **ಅದೇ,** ಪುಟ ೧೯೫.

೩೪. **ಅದೇ,** ಪುಟ ೨೦೫

೩೫. **ಅದೇ,** ಪುಟ ೨೦೫-೨೦೬.

೩೬. **ಅದೇ,** ಪುಟ ೨೦೭.

೩೭ **ಅದೇ,** ಪುಟ ೨೦೭.

೩೮. **ಅದೇ,** ಪುಟ ೨೦೮.

೩೯. **ಅದೇ,** ಪುಟ ೨೧೨.

೪೦. **ಅದೇ,** ಪುಟ ೨೧೨.

೪೧. **ಅದೇ,** ಪುಟ ೨೧೪

೪೨. ನಾಲ್ವಡಿ ವೆಂಕಟಪ್ಪ ನಾಯಕನ ಸಾವಿನ ಕುರಿತಾದ ವಿವರಕ್ಕಾಗಿ ನನ್ನ ಕೃತಿ 'ವಾಲ್ಮೀಕಿ ಸಮುದಾಯ ಮತ್ತು ಚರಿತ್ರೆ'ಯಲ್ಲಿಯ '**ಸುರಪುರ ನಾಲ್ವಡಿ ವೆಂಕಟಪ್ಪನಾಯಕನ ಅಂತ್ಯ**' ಲೇಖನವನ್ನು ಗಮನಿಸಿದರೆ, ಆತನನ್ನು ಬ್ರಿಟಿಷರು ಹೇಗೆ ಮೋಸದಿಂದ ಕೊಂದು ಆತ್ಮಹತ್ಯೆಯ ನಾಟಕವನ್ನಾಡಿದರು ಎಂಬ ವಿಷಯ ತಿಳಿಯುತ್ತದೆ.

೩೮

ಪುತ್ತೂರಿನಲ್ಲಿ ಬೆಳಕು ಕಂಡ ಚಿನ್ನದ ನಾಣ್ಯಗಳು

ಡಾ. ಪುಂಡಿಕ್ಯಾ ಗಣಪಯ್ಯ ಭಟ್*
ಮಂದರ್ಕೆ ನಿತ್ಯಾನಂದ ಪೈ**

ಪುತ್ತೂರು ದಕ್ಷಿಣ ಕನ್ನಡ ಜಿಲ್ಲೆಯ ಒಂದು ತಾಲೂಕುಕೇಂದ್ರ. ಈ ನಗರದ ಹೃದಯ ಭಾಗದಲ್ಲಿರುವ ಶ್ರೀ ಮಹಾಲಿಂಗೇಶ್ವರ ದೇವಾಲಯವು ನೂರಾರು ವರ್ಷಗಳ ಇತಿಹಾಸವನ್ನು ಹೊಂದಿರುವ ಒಂದು ಪ್ರಸಿದ್ಧ ಧಾರ್ಮಿಕ ಕ್ಷೇತ್ರ. ಗಜಪೃಷ್ಠಾಕೃತಿಯಲ್ಲಿ ನಿರ್ಮಾಣಗೊಂಡಿರುವ ಈ ಶಿವಾಲಯಕ್ಕೆ ಸಂಬಂಧಿಸಿದಂತೆ ಗುರುತಿಸಲಾದ ಮೂರು ಶಾಸನಗಳು ಇದರ ಐತಿಹಾಸಿಕ ಮತ್ತು ಧಾರ್ಮಿಕ ಮಹತ್ವಕ್ಕೆ ಸಾಕ್ಷಿಗಳಾಗಿವೆ. ಲಿಪಿಶಾಸ್ತ್ರದ ದೃಷ್ಟಿಯಿಂದ ಕ್ರಿ.ಶ. ಸುಮಾರು ೧೨ನೇ ಶತಮಾನಕ್ಕನ್ವಯಿಸುವ ಶಾಸನವು[೧] ಈ ದೇವಾಲಯದ ಕೆರೆಯ ನಿರ್ಮಾಣದ ಕುರಿತ ಮಾಹಿತಿಯನ್ನೊದಗಿಸುತ್ತದೆ. ಇದರ ಆಧಾರದಂತೆ ದೇವಾಲಯದ ಇತಿಹಾಸವನ್ನು ಕ್ರಿ.ಶ. ೧೨ನೇ ಶತಮಾನಕ್ಕೂ ಪೂರ್ವಕ್ಕೆ ಕೊಂಡೊಯ್ಯಲು ಸಾಧ್ಯವಾಗುತ್ತದೆ. ಇದಲ್ಲದೆ ಕ್ರಿ.ಶ. ೧೪೩೧ರ ಒಂದು ದೀರ್ಘವಾದ ಶಿಲಾಶಾಸನ[೨] ಮತ್ತು ಅದೇ ಕಾಲದ ಒಂದು ತಾಮ್ರಶಾಸನವೂ[೩] ಕಂಡುಬಂದಿದ್ದು ಇವು ವಿಜಯನಗರದ ಇಮ್ಮಡಿ ದೇವರಾಯನ ಆಳ್ವಿಕೆಯಲ್ಲಿ ಬಂಗಾಡಿಯ ಬಂಗ ಅರಸರ ರಾಜ್ಯ ವ್ಯಾಪ್ತಿಗೊಳಪಟ್ಟಿದ್ದ ಈ ದೇವಾಲಯಕ್ಕೆ ನೀಡಲಾದ ದಾನಗಳ ಕುರಿತ ವಿವರಗಳನ್ನೊಳಗೊಂಡಿವೆ.



ಕಾಲಗತಿಯಿಂದಾಗಿ ಶಿಥಿಲಗೊಳ್ಳುತ್ತಿದ್ದ ಮಹಾ ಲಿಂಗೇಶ್ವರ ದೇವಾಲಯದ ಪುನರ್ನಿರ್ಮಾಣ ಕಾರ್ಯಗಳನ್ನು ದೇವಾಲಯದ ಆಡಳಿತ ಮಂಡಳಿಯವರು ಊರವರ ಸಹಕಾರದೊಂದಿಗೆ ಕೈಗೆತ್ತಿಕೊಂಡ ಸಂದರ್ಭ ೨೦೧೨ರ ಸಪ್ಟೆಂಬರ್ ತಿಂಗಳಲ್ಲಿ ಗರ್ಭಗುಡಿಯ ಹಿಂಭಾಗದಲ್ಲಿ, ಶಿವಲಿಂಗದ ಕೆಳಭಾಗದಲ್ಲಿ, ಸುಮಾರು ಎರಡು ಅಡಿ ಆಳದಲ್ಲಿ ತಾಮ್ರದ ಕರಂಡ ಒಂದರಲ್ಲಿ ಇರಿಸಲಾಗಿದ್ದ ೩೭೦ಕ್ಕೂ ಹೆಚ್ಚು ಚಿನ್ನದ ನಾಣ್ಯಗಳು ಪತ್ತೆಯಾದವು. ದೀರ್ಘಕಾಲ ಮಣ್ಣಿನ ಅಡಿಯಲ್ಲಿದ್ದ ಕಾರಣ ನಾಣ್ಯಗಳನ್ನು ಹೊಂದಿದ್ದ ತಾಮ್ರಕರಂಡವು ಅತ್ಯಂತ ಶಿಥಿಲ ಸ್ಥಿತಿಯಲ್ಲಿತ್ತು. ಪುನರ್ನಿರ್ಮಾಣ ಕಾರ್ಯಗಳು ಕೊನೆಗೊಳ್ಳುವ ತನಕ ಈ ನಾಣ್ಯಗಳನ್ನು ಸ್ಥಳೀಯ ಬ್ಯಾಂಕೊಂದರ ಭದ್ರತಾಕೋಶ ದಲ್ಲಿರಿಸಲಾಗಿತ್ತು. ನಾಣ್ಯಗಳು ಪತ್ತೆಯಾದ ಕುರಿತ ಪತ್ರಿಕಾ ವರದಿಗಳನ್ನು ಗಮನಿಸಿದ ಪ್ರಸ್ತುತ ಲೇಖಕರಿಗೆ ದೇವಾಲಯದ ಆಡಳಿತ ಮಂಡಳಿಯವರ ಸಹಕಾರದೊಂದಿಗೆ ನಾಣ್ಯಗಳ ವಿವರವಾದ ಅಧ್ಯಯನವನ್ನು ಕೈಗೊಳ್ಳಲು ಸಾಧ್ಯವಾಯಿತು.

ಬೆಳಕಿಗೆ ಬಂದ ಒಟ್ಟು ೩೭೦ಕ್ಕೂ ಮಿಕ್ಕಿ ಚಿನ್ನದ ನಾಣ್ಯಗಳ ಪೈಕಿ ೩ ನಾಣ್ಯಗಳು ವಿಜಯನಗರದ ಅರಸ ಕೃಷ್ಣದೇವರಾಯನ (೧೫೦೯–೧೫೨೯) ನಾಣ್ಯಗಳು. ಇನ್ನುಳಿದ ೭೧ ನಾಣ್ಯಗಳು ಕೆಳದಿ ಸದಾಶಿವನಾಯಕನ (೧೫೧೩–೧೫೬೩) ನಾಣ್ಯಗಳು ಮತ್ತು ಸುಮಾರು ೩೦೦ ನಾಣ್ಯಗಳು 'ವೀರರಾಯ ಪಣ' ವರ್ಗಕ್ಕೆ ಸೇರಿದವು. ಈ ಎಲ್ಲಾ ನಾಣ್ಯಗಳನ್ನು ಚಿನ್ನದ ನಾಣ್ಯಗಳೆಂದು ಗುರುತಿಸುವು ದಾದರೂ, ಇವುಗಳಲ್ಲಿರುವ ಚಿನ್ನದ ಅಂಶ ಗಣನೀಯ ಪ್ರಮಾಣದಲ್ಲಿಲ್ಲ ಎಂಬುದನ್ನಿಲ್ಲಿ ಗಮನಿಸಬೇಕು.

ಕೃಷ್ಣದೇವರಾಯನ ಮೂರು ನಾಣ್ಯಗಳು ಒಂದೇ ಮಾದರಿಯವುಗಳಾಗಿದ್ದು ಅವುಗಳ ಮುಂಭಾಗದಲ್ಲಿ ಬೆಣ್ಣೆಯನ್ನು ಹಿಡಿದ ಬಾಲಕೃಷ್ಣನ ಚಿತ್ರ ಮತ್ತು ಹಿಂಭಾಗದಲ್ಲಿ ಮೂರು ಸಾಲಿನಲ್ಲಿ ನಾಗರೀ ಲಿಪಿಯ "ಶ್ರೀ ಪ್ರತಾಪ ಕೃಷ್ಣರಾಯ" ಎಂಬ ಬರಹವನ್ನು ಹೊಂದಿವೆ. ಪ್ರತಿಯೊಂದು ನಾಣ್ಯ ಸುಮಾರು ೧೦ ಮಿ.ಮೀ. ವ್ಯಾಸದ್ದಾಗಿದ್ದು ಸುಮಾರು ೧.೬೫ ಗ್ರಾಂ ತೂಕವನ್ನು ಹೊಂದಿದೆ. ವಿಜಯನಗರದ

* ಶ್ರೀ ಧವಲಾ ಕಾಲೇಜು, ಮೂಡುಬಿದಿರೆ–೫೭೪೨೨೭.
** ಗಣೇಶ್ ಎಂಟರ್‌ಪ್ರೈಸಸ್, ಮೂಡುಬಿದಿರೆ–೫೭೪೨೨೭.



"ಪ್ರತಾಪ" (ಅರ್ಧವರಹ) ವರ್ಗಕ್ಕೆ ಸೇರುವ, ಬಾಲಕೃಷ್ಣನ ಚಿತ್ರವನ್ನು ಹೊಂದಿರುವ ಇಂತಹ ನಾಣ್ಯಗಳನ್ನು ಕ್ರಿ.ಶ. ೧೫೧೩ರಲ್ಲಿ ಉದಯಗಿರಿಯ ಮೇಲಿನ ತನ್ನ ಯಶಸ್ವೀ ಸೈನಿಕ ಕಾರ್ಯಾಚರಣೆಯ ನೆನಪಿಗಾಗಿ ಕೃಷ್ಣದೇವರಾಯನು ಹೊರಡಿಸಿದ ಎನ್ನಲಾಗಿದೆ."[೪]

ಎಪ್ಪತ್ತೊಂದು ನಾಣ್ಯಗಳು ಇಕ್ಕೇರಿ ವರಹಗಳಾಗಿದ್ದು ನಾಣ್ಯಶಾಸ್ತ್ರಜ್ಞರ ಅಭಿಮತದಂತೆ ಇಂತಹ ನಾಣ್ಯಗಳು ಪ್ರಥಮವಾಗಿ ಕೆಳದಿ ಸದಾಶಿವ ನಾಯಕನ ಆಳ್ವಿಕೆಯಲ್ಲಿ ಹೊರಡಿಸಲ್ಪಟ್ಟವು. ಈ ನಾಣ್ಯಗಳ ಮುಂಭಾಗದಲ್ಲಿ ಶಿವಪಾರ್ವತಿಯ ಚಿತ್ರವಿದೆ. ಶಿವನು ಬಲಗೈಯಲ್ಲಿ ತ್ರಿಶೂಲ ಮತ್ತು ಎಡಕೈಯಲ್ಲಿ ಜಿಂಕೆಯನ್ನು ಹಿಡಿದುಕೊಂಡಿರುವಂತೆ ತೋರಿಸಲಾಗಿದ್ದು ಶಿವನ ಎಡತೊಡೆಯ ಮೇಲೆ ಪಾರ್ವತಿಯು ಆಸೀನಳಾಗಿರುವಂತೆ ಚಿತ್ರಿಸಲಾಗಿದೆ. ನಾಣ್ಯದ ಹಿಂಭಾಗದಲ್ಲಿ ಮೂರು ಸಾಲಿನಲ್ಲಿ, ನಾಗರಿ ಲಿಪಿಯಲ್ಲಿ "ಶ್ರೀಸದಾಶಿವ" ಎಂಬ ಬರಹ ಕಂಡುಬರುತ್ತದೆ. ಈ ನಾಣ್ಯಗಳು ಸುಮಾರು ೧೨ ಮಿ.ಮಿ ವ್ಯಾಸವನ್ನು ಹೊಂದಿದ್ದು ಇವುಗಳ ತೂಕ ಸುಮಾರು ೩.೪ ಗ್ರಾಂ ಆಗಿರುತ್ತದೆ. ಬೆಳಕಿಗೆ ಬಂದ ಈ ಮಾದರಿಯ ಕೆಲವು ನಾಣ್ಯಗಳ ಒಂದು ಭಾಗದಲ್ಲಿ ಮಾತ್ರ ಚಿತ್ರದ ಮುದ್ರೆ ಇದ್ದು ಇನ್ನೊಂದು ಭಾಗ ಖಾಲಿಯಾಗಿಯೇ ಇದೆ. ಸದಾಶಿವನಾಯಕನ ನಂತರ ಪಟ್ಟವನ್ನೇರಿದ ಅರಸರೂ ತಮ್ಮ ಹೆಸರಿನಲ್ಲಿ ನಾಣ್ಯಗಳನ್ನು ಮುದ್ರಿಸುವ ಬದಲಾಗಿ 'ಶ್ರೀ ಸದಾಶಿವ' ಎಂಬ ಬರಹವನ್ನು ಹೊಂದಿರುವ ನಾಣ್ಯಗಳನ್ನೇ ಮುದ್ರಿಸುವ ಪರಂಪರೆಯನ್ನು ಮುಂದುವರಿಸಿದ್ದರೆಂಬುದು ಉಲ್ಲೇಖನೀಯ. ಈ ಮಾದರಿಯ ನಾಣ್ಯಗಳನ್ನು ಸದಾಶಿವನಾಯಕನ ಆಳ್ವಿಕೆಯ ನಂತರ ಸುಮಾರು ಒಂದೂವರೆ ಶತಮಾನಗಳ ಕಾಲ ಟಂಕಿಸಿ ಚಲಾವಣೆಗೆ ಬಿಡಲಾಗುತ್ತಿತ್ತು ಎಂಬುದಿಲ್ಲಿ ಗಮನಾರ್ಹ.

ಇನ್ನುಳಿದ ಸುಮಾರು ೩೦೦ ನಾಣ್ಯಗಳು 'ವೀರರಾಯ ಪಣ' ಮಾದರಿಯವು. ೩೫೦ ರಿಂದ ೩೮೦ ಮಿ. ಗ್ರಾಂ ವರೆಗೆ ತೂಕದ ಸುಮಾರು ೭ ಮಿ.ಮೀ. ವ್ಯಾಸದ ಈ ಚಿನ್ನದ ನಾಣ್ಯಗಳಲ್ಲಿ ಚಿನ್ನದ ಅಂಶ ಕಡಿಮೆ ಇರುವುದರಿಂದ ಮೇಲ್ನೋಟಕ್ಕೆ ಇವು ಬೆಳ್ಳಿಯ ನಾಣ್ಯಗಳಂತೆ ತೋರುತ್ತವೆ. ಈ ನಾಣ್ಯಗಳ ಮುಂಭಾಗದಲ್ಲಿ ಚುಕ್ಕೆ, ಗೆರೆಗಳಿಂದ ರೂಪಿಸಿದ ಶೈಲೀಕೃತ ಸಿಂಹ ಮತ್ತು ಹಿಂಭಾಗದಲ್ಲಿ ಶೈಲೀಕೃತ ವರಾಹದ ಚಿತ್ರವನ್ನು ಕಾಣಬಹುದು. ಈ ರೀತಿಯ ನಾಣ್ಯಗಳನ್ನು 'ವೀರರಾಯ ಪಣ' ಎಂಬ ಹೆಸರಿನಿಂದ ಗುರುತಿಸಲಾಗುತ್ತದೆ. ಈ ಮಾದರಿಯ ನಾಣ್ಯಗಳನ್ನು ಟಂಕಿಸುವ ಪರಂಪರೆ ಹೊಯ್‌ಸಳರ ಕಾಲದಲ್ಲಿ ಪ್ರಾರಂಭವಾಗಿದ್ದು ನಂತರ ಇದು ವಿಜಯನಗರದ ಕಾಲದಲ್ಲೂ ಮುಂದುವರಿಯಿತು. ಈ ರೀತಿಯ ನಾಣ್ಯಗಳು ಕರ್ನಾಟಕ, ತಮಿಳ್ನಾಡು, ಕೇರಳ ಮತ್ತು ಆಂಧ್ರಪ್ರದೇಶದ ವಿವಿಧ ಸ್ಥಳಗಳಲ್ಲಿ ಬೆಳಕಿಗೆ ಬಂದಿವೆ. ಕೇರಳದಲ್ಲಿ ಈ ನಾಣ್ಯ ಪರಂಪರೆ ಕ್ರಿ.ಶ. ೧೮ನೇ ಶತಮಾನದ ತನಕವೂ ಮುಂದುವರಿದಿತ್ತು[೫]. ಈ ಹಿನ್ನೆಲೆಯಲ್ಲಿ ಪುತ್ತೂರಿನಲ್ಲಿ ಕಂಡು ಬಂದ ವೀರರಾಯ ಪಣಗಳನ್ನು ಖಚಿತವಾದ ಕಾಲಮಾನದ ಚೌಕಟ್ಟಿನೊಳಗೆ ಗುರುತಿಸುವುದು ಕಷ್ಟಸಾಧ್ಯ. ಸಾಂದರ್ಭಿಕ ಆಧಾರಗಳಂತೆ ಇವುಗಳನ್ನು ಕೆಳದಿ ಅರಸರ ಕಾಲಕ್ಕೆ, ಅಂದರೆ ಸುಮಾರು ಕ್ರಿ.ಶ. ೧೬–೧೭ನೇ ಶತಮಾನಕ್ಕೆ ಅನ್ವಯಿಸಿದರೆ ತಪ್ಪಾಗಲಾರದು.



ದೇವಾಲಯುಗಳನ್ನು ನಿರ್ಮಿಸುವ ಅಥವಾ ಪುನರ್ನಿರ್ಮಾಣಗೊಳಿಸುವ ಸಂದರ್ಭ ದೇವತಾ ವಿಗ್ರಹ ಅಥವಾ ಶಿವಲಿಂಗದ ತಳಭಾಗದಲ್ಲಿರಿಸುವ ನಿಧಿಕುಂಭದಲ್ಲಿ ಚಿನ್ನದ ನಾಣ್ಯಗಳನ್ನಿರಿಸುವ ಸಂಪ್ರದಾಯ ಪ್ರಾಚೀನ ತುಳುನಾಡಿನಲ್ಲಿತ್ತು ಎಂಬುದಕ್ಕೆ ಹಲವು ನಿದರ್ಶನಗಳು ದೊರಕುತ್ತವೆ. ಉಳ್ಳಾಲದ ಸೋಮೇಶ್ವರ ದೇವಾಲಯದ ಶಿವಲಿಂಗದ ತಳಭಾಗದಲ್ಲಿ ಕಂಡುಬಂದ ಕ್ರಿ.ಶ. ೧೧ನೇ ಶತಮಾನಕ್ಕನ್ವಯಿಸುವ ಬಾಗ್ದಾದಿನ ಖಲೀಫರ ಐದಾರು ಚಿನ್ನದ ನಾಣ್ಯಗಳು,[೬] ಬಂಟ್ವಾಳ ತಾಲೂಕಿನ ವಗೆನಾಡಿನ ದೇವಾಲಯದ ಸ್ಕಂದನ ವಿಗ್ರಹದ ಅಡಿಯಲ್ಲಿ ಗುರುತಿಸಲಾದ ಆಳುಪರ ನಾಲ್ಕು ಚಿನ್ನದ ನಾಣ್ಯಗಳು ಮತ್ತು ಬೆಳ್ತಂಗಡಿ ತಾಲೂಕಿನ ನಾಳ ದುರ್ಗಾಪರಮೇಶ್ವರಿ ದೇವಾಲಯದ ವಿಗ್ರಹದ ತಳಭಾಗದ ನಿಧಿಕುಂಭದಲ್ಲಿ ಬೆಳಕಿಗೆ ಬಂದ ಕೆಳದಿ ಅರಸರ 'ಶ್ರೀ ಸದಾಶಿವ' ಅಂಕಿತವಿರುವ ಚಿನ್ನದ ನಾಣ್ಯಗಳು ಈ ಮೇಲಿನ ಮಾತನ್ನು ದೃಢೀಕರಿಸುತ್ತವೆ.[೭]

ತುಳುನಾಡಿನ ಹವಾಮಾನದ ಪರಿಸ್ಥಿತಿಯಿಂದಾಗಿ ಇಲ್ಲಿನ ದೇವಾಲಯಗಳು ಶಿಥಿಲಗೊಳ್ಳುವ ಸಂದರ್ಭಗಳು ಹೆಚ್ಚಿದ್ದು, ಆ ಸಂದರ್ಭಗಳಲ್ಲಿ ಅವುಗಳ ಜೀರ್ಣೋದ್ಧಾರ ಅಥವಾ ಪುನರ್ನಿರ್ಮಾಣ ಕಾರ್ಯಗಳು ನಡೆಯುವುದು

ಸಹಜ. ಸುಮಾರು ಒಂದು ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿರುವ ಪುತ್ತೂರಿನ ಮಹಾಲಿಂಗೇಶ್ವರ ದೇವಾಲಯವೂ ವಿವಿಧ ಕಾಲಘಟ್ಟಗಳಲ್ಲಿ ಜೀರ್ಣಾವಸ್ಥೆಯನ್ನು ಕಂಡಾಗ ಅದರ ಜೀರ್ಣೋದ್ಧಾರ ಕಾರ್ಯಗಳು ಆಯಾ ಕಾಲದಲ್ಲಿ ನಡೆದಿರಬೇಕು. ಕೆಳದಿ ಅರಸರ ಆಳ್ವಿಕೆಯ ಕಾಲದಲ್ಲಿ, ಅಂದರೆ ಕ್ರಿ.ಶ. ೧೬–೧೭ನೇ ಶತಮಾನದಲ್ಲಿ ಅಂತಹ ಒಂದು ಕಾರ್ಯ ಇಲ್ಲಿ ನಡೆದಿರಬೇಕು ಎಂಬುದಕ್ಕೆ ಇಲ್ಲಿ ಬೆಳಕಿಗೆ ಬಂದ ನಾಣ್ಯಗಳು ಪುರಾವೆಗಳನ್ನೊದಗಿಸುತ್ತವೆ.

ನಾಣ್ಯಗಳ ಸ್ವರೂಪ ಮತ್ತು ವಿನ್ಯಾಸದ ದೃಷ್ಟಿಯಿಂದ ಪುತ್ತೂರಿನಲ್ಲಿ ಬೆಳಕು ಕಂಡ ಚಿನ್ನದ ನಾಣ್ಯಗಳಲ್ಲಿ ಹೊಸ ಅಂಶಗಳೇನೂ ಇಲ್ಲ ಎಂಬುದು ನಿಜ. ಯಾಕೆಂದರೆ ಇದೇ ರೀತಿಯ ನಾಣ್ಯಗಳು ಈಗಾಗಲೇ ದಕ್ಷಿಣ ಭಾರತದ ವಿವಿಧೆಡೆಗಳಲ್ಲಿ ಕಂಡುಬಂದಿದ್ದು ಅವುಗಳ ಕುರಿತು ವ್ಯಾಪಕ ಅಧ್ಯಯನಗಳೂ ನಡೆದಿವೆ. ಆದರೆ ವಿಭಿನ್ನ ಕಾರಣಗಳಿಗಾಗಿ ಪುತ್ತೂರಿನಲ್ಲಿ ಕಂಡುಬಂದ ಚಿನ್ನದ ನಾಣ್ಯಗಳ ಶೋಧಕ್ಕೆ ವಿಶೇಷ ಮಹತ್ವವಿದೆ. ಪುತ್ತೂರಿನ ನಾಣ್ಯಗಳ ವಿಶೇಷವೆಂದರೆ ಅವುಗಳ ನೆಲದ ಅಡಿಯಲ್ಲಿ, ಒಂದು ವಿಶಿಷ್ಟ ಸಾಂಸ್ಕೃತಿಕ ಸನ್ನಿವೇಶದಲ್ಲಿ (Cultural Context) ಪತ್ತೆಯಾಗಿರುವುದು. ಇಂತಹ ಉದಾಹರಣೆಗಳು ಅಪರೂಪ. ಅಲ್ಲದೆ, ಈಗ ದೇವಾಲಯದ ಪುನರ್ನಿರ್ಮಾಣದ ಸಂದರ್ಭ ಈ ನಾಣ್ಯಗಳನ್ನು ಶಿವಲಿಂಗದ ತಳಭಾಗದಲ್ಲಿ, ನಿಧಿಕುಂಭದಲ್ಲಿರಿಸಿರುವುದರಿಂದ ಇವುಗಳು ಪುನಃ ಭೂಗರ್ಭವನ್ನು ಸೇರಿದ್ದು ಇನ್ನು ಮುಂದೆ ಅಧ್ಯಯನಕ್ಕೆ ಲಭ್ಯವಾಗಲಾರವು. ಆದ್ದರಿಂದ, ದಾಖಲೀಕರಣದ ದೃಷ್ಟಿಯಿಂದ ಮತ್ತು ದೇವಾಲಯದ ಇತಿಹಾಸದ ಅಧ್ಯಯನದ ದೃಷ್ಟಿಯಿಂದ ಈ ನಾಣ್ಯಗಳು ವಿಶೇಷ ಮಹತ್ವವನ್ನು ಪಡೆದುಕೊಂಡಿವೆ ಎಂದರೆ ತಪ್ಪಾಗಲಾರದು.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. SII, Vol XXVII, No. 317, ಅಸ್ಪಷ್ಟವಾದ ಈ ಶಾಸನವನ್ನು ಕೆಲವು ಸಂಶೋಧಕರು ಹೊಯ್ಸಳ ವಿಷ್ಣುವರ್ಧನನ ಶಾಸನ ಎಂದು ಅಭಿಪ್ರಾಯಪಟ್ಟಿರುವುದು ಅಚ್ಚರಿಯ ವಿಚಾರ. ಈ ಶಾಸನದಲ್ಲಿ ಪಾಂಡ್ಯರಸ ಎಂಬ ಒಂದು ಹೆಸರನ್ನು ಹೊರತುಪಡಿಸಿ ಇನ್ಯಾವುದೇ ವ್ಯಕ್ತಿಯ ಹೆಸರಿನ ಉಲ್ಲೇಖವಿಲ್ಲ. ವಿಷ್ಣುವರ್ಧನನ ಹೆಸರಾಗಲಿ ಬಿರುದುಗಳಾಗಲಿ ಇಲ್ಲವೇ ಇಲ್ಲ. ಅಲ್ಲದೆ ಹೊಯ್ಸಳ ವಿಷ್ಣುವರ್ಧನನ ಯಾವುದೇ ಶಾಸನವೂ ಈ ತನಕ ತುಳುನಾಡಲ್ಲಿ ಪತ್ತೆಯಾಗಿಲ್ಲ. ಆದ್ದರಿಂದ ಈ ಶಾಸನ ಹೊಯ್ಸಳ ವಿಷ್ಣುವರ್ಧನನದು ಎಂಬುದಕ್ಕೆ ಯಾವುದೇ ಸಮರ್ಥನೆ ಇಲ್ಲ.

೨. SII Vol XXVII, No. ೧೦೫.

೩. ARIE 1976-77, A, ೧.

೪. ನರಸಿಂಹಮೂರ್ತಿ ಎ.ವಿ. ೨೦೦೩, ಕರ್ನಾಟಕ ನಾಣ್ಯ ಪರಂಪರೆ, ಬೆಂಗಳೂರು, ಪುಟ ೧೬೩.

೫. Ravishankar T.S. 'Viraraya Fanam from Thiruvananthapuram', Studies In south Indian coins vol. XIV, pp. ೯೮–೧೦೧.

Ganesh K, 2009, Studies in Vijayanagara coins, Bangalore 2009, pp, ೧೨೯–೧೩೬.

೬ ಮುಕುಂದ ಪ್ರಭು ಅವರಿಂದ ವೈಯಕ್ತಿಕ ಮಾಹಿತಿ.

೭. Ganappayya Bhat P 'Gold coins of Alupas from Vogenadu in Karnataka' Studies.in S.I.coins vol VII, ೧೯೯೭, pp ೭೭–೮೦.

ನಾಳ ದೇವಾಲಯದ ನಾಣ್ಯಗಳು–ವೈಯಕ್ತಿಕ ಪರಿಶೀಲನೆ.

ಪುನರ್ನಿರ್ಮಾಣಕ್ಕಾಗಿ ಪುತ್ತೂರಿನ ಮಹಾಲಿಂಗೇಶ್ವರ ದೇವಾಲಯದ ಮಾಡನ್ನು ಕಳಚುವ ಸಂದರ್ಭ ಮಾಡಿನ ಮೇಲೆ ತಾಮ್ರದ ಹಾಳೆಗಳನ್ನು ಕೂರಿಸಲು ಬಡಿಯಲಾದ ಮೊಳೆಗಳ ಕೆಳಗೆ ಬಿಗಿಬಿಲ್ಲೆಗಳಾಗಿ ತಾಮ್ರದ ನಾಣ್ಯಗಳನ್ನು ಬಳಸಲಾಗಿರುವುದು ಕಂಡುಬಂತು. ಈ ನಾಣ್ಯಗಳು ೧೮೭೮ ರಿಂದ ೧೯೫೦ರ ತನಕದ ಅರ್ಧ ಆಣೆ, ಒಂದು ಆಣೆ ನಾಣ್ಯಗಳಾಗಿದ್ದು, ಈ ಆಧಾರದಂತೆ ಪ್ರಾಯಶಃ ಸುಮಾರು ಅರುವತ್ತು ವರ್ಷಗಳ ಹಿಂದೆ ದೇವಾಲಯ ತಾಮ್ರದ ಮಾಡಿನ ದುರಸ್ತಿ ಕಾರ್ಯ ನಡೆದಿತ್ತು ಎನ್ನಬಹುದು.

೪೦

ಈಸ್ಟ್ ಇಂಡಿಯಾಗ ಕಂಪನಿಯ ಮೂರು ಅಪರೂಪದ ನಾಣ್ಯಗಳು : ಒಂದು ವಿಶ್ಲೇಷಣೆ

ಬಿ.ಎಸ್. ಗುರುಪ್ರಸಾದ್*

ಇತ್ತೀಚಿನ ಕ್ಷೇತ್ರಕಾರ್ಯದಲ್ಲಿ, ನನ್ನ ಗಮನ ಸೆಳೆದ ಮೂರು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ನಾಣ್ಯಗಳನ್ನು ಇತಿಹಾಸಕ್ತರ ಗಮನಕ್ಕೆ ತರುವ ಪ್ರಯತ್ನವೇ ಈ ಲೇಖನದ ಉದ್ದೇಶ. ಬೆಂಗಳೂರಿನಲ್ಲಿ ಶ್ರೀ ಭುವನ್ ಎಂಬುವರ ಬಳಿ ಅವರ ಪೂರ್ವಜರು ಸಂಗ್ರಹಿಸಿದ್ದ, ಅನೇಕ ನಾಣ್ಯಗಳ ಪೈಕಿ, ಈ ಮೂರು ನಾಣ್ಯಗಳು ವಿಶೇಷವಾಗಿ ನನ್ನ ಗಮನ ಸೆಳೆಯಿತು. ಈ ನಾಣ್ಯಗಳು ಕೆಲಮಟ್ಟಿಗೆ ಧರ್ಮ, ಕಲೆ, ಸಾಂಸ್ಕೃತಿಕ ಮತ್ತು ಆರ್ಥಿಕ ಅಂಶಗಳನ್ನೊಳಗೊಂಡು ಮೂಲಸಾಮಗ್ರಿಗಳ ಸ್ಥಾನವನ್ನು ಪಡೆದಿದೆ ಎಂದು ಹೇಳಬಹುದು.

ನಾಣ್ಯ: ೧ ಅರ್ಧ ಆಣೆ ಮೌಲ್ಯದ ಈಸ್ಟ್ ಇಂಡಿಯಾ ಕಂಪನಯ ನಾಣ್ಯ– ಕ್ರಿ.ಶ. ೧೭೧೭ [ಚಿತ್ರ–೧] ದ್ವಿಮುದ್ರಾ ವಿಧಾನದ ಅಚ್ಚು]

ಲೋಹ: ತಾಮ್ರ

ಮೌಲ್ಯ: ಅರ್ಧಆಣೆ

ಆಕಾರ: ವೃತ್ತಾಕಾರ

ತೂಕ: ೧೧.೪೮ ಗ್ರಾಂ

ವ್ಯಾಸ: ೩.೦೦ ಸೆಂ.ಮೀ.

ಗ್ರೇನ್: ೧೭೮

ಮುಮ್ಮುಖ:– ಸಿಂಹದ ಮೇಲೆ ಯಾನಕ ಸ್ಥಾನದಲ್ಲಿರುವ ದುರ್ಗೆ. ಎಡದಿಂದ ಬಲಕ್ಕೆ ಚಲಿಸುತ್ತಿರುವಂತಿದೆ. ಎಂಟು ಭುಜವನ್ನು ಹೊಂದಿರುವ ದುರ್ಗೆ, ತನ್ನ ಒಂದು ಕೈಯನ್ನು ಸಿಂಹದ ಮೇಲಿರಿಸಿದ್ದಾಳೆ. ಕೈಗಳಲ್ಲಿ ಶಂಖ, ಚಕ್ರ, ಖಡ್ಗ, ಕೇತಕ, ಕಮಲದ ಹೂ, ಚಾಮರ, ಬಾಣವಿದೆ. ದುರ್ಗಿ ಕಿರೀಟಧಾರಿಯಾಗಿದ್ದಾಳೆ. ಆಭರಣ ಭೂಷಿತಳಾಗಿದ್ದಾಳೆ. ಸಿಂಹವೂ ಸಾಲಂಕೃತವಾಗಿ ಚಿತ್ರಿತವಾಗಿದೆ. ಈ ಸಿಂಹದಿಂದಾಗಿ ಕುಳಿತಿರುವವಳು ದುರ್ಗಿ ಎಂದು ಗುರುತಿಸಬಹುದು.

ಹಿಮ್ಮುಖ:– ಗೆರೆಯ ವರ್ತುಲದಲ್ಲಿ ಸುತ್ತಲೂ ಇಂಗ್ಲೀಷ್‌ನಲ್ಲಿ "ಈಸ್ಟ್ ಇಂಡಿಯಾ ಕಂಪನಿ" ಎಂಬ ಬರಹವಿದೆ. ಕೆಳಗೆ ಅಚ್ಚಾದ ಇಸವಿ "೧೭೧೭" ಎಂದು ನಮೂದಿಸಿದೆ. ಇದರ ಎಡಭಾಗದಲ್ಲಿ "U" ಮತ್ತು ಬಲಭಾಗದಲ್ಲಿ "K" ಎಂದು ಸಣ್ಣ ಅಕ್ಷರದಲ್ಲಿ ಅಚ್ಚಾಗಿದೆ. ನಾಣ್ಯದ ಮೌಲ್ಯವನ್ನು "HALF ANNA" ಎಂದು ಎರಡು ಗಿಡದ ಗೊಂಚಲಿನ ಮಧ್ಯದಲ್ಲಿ ಎರೆಡು ಸಾಲಿನಲ್ಲಿ ಅಚ್ಚಾಗಿದೆ.

ದೇವತೆಗಳ ಚಿತ್ರವನ್ನು ಮುದ್ರಿಸುವ ಇತಿಹಾಸವನ್ನು ಗಮನಸಿದರೆ, ಬಹುತೇಕ ನಾಣ್ಯಗಳಲ್ಲಿ ದುರ್ಗಿ/ಲಕ್ಷ್ಮಿಯ ಚಿತ್ರವನ್ನು ಮುದ್ರಿಸಿರುವ ನಾಣ್ಯಗಳು ಕಂಡುಬರುತ್ತದೆ. ಉದಾಹರಣೆಗೆ, ಅತ್ಯಂತ ಪ್ರಾಚೀನ ನಾಣ್ಯಗಳಲ್ಲಿ ಕುಷಾಣರು ಒಬ್ಬ ದೇವಿಯನ್ನು ಸಿಂಹಾಸನಾರೂಢಳಾಗಿ ಚಿತ್ರಿಸಿರುವುದು ಕಂಡುಬಂದಿದೆ. ಹೊಯ್ಸಳರ ವಿಷ್ಣುವರ್ಧನನು ಚಿನ್ನದ ವರಹಗಳಲ್ಲಿ ದುರ್ಗಿಯ ಚಿತ್ರವಿರುವ ನಾಣ್ಯಗಳನ್ನು ಅಚ್ಚು ಹಾಕಿಸಿದ್ದನು. ಹೊಯ್ಸಳರ ಮೂರನೆ ನರಸಿಂಹ ಬಲ್ಲಾಳನು ತನ್ನ ಚಿನ್ನದ 'ಪಣಂ' ನಾಣ್ಯಗಳಲ್ಲಿ ನಾಲ್ಕು ಕೈಗಳುಳ್ಳ ದುರ್ಗಿಯ ಚಿತ್ರವನ್ನು ಅಚ್ಚು ಹಾಕಿಸಿದ್ದನು. ಚಿತ್ರದುರ್ಗದ ಸುತ್ತಮುತ್ತ ಪ್ರದೇಶಗಳಲ್ಲಿರುವ ಕೆಲವು ನಾಣ್ಯ ಸಂಗ್ರಹಕಾರರು "ದುರ್ಗಿಪಗೋಡ" ಮತ್ತು "ದುರ್ಗಿವರಹ"ವೆಂಬ ಚಿನ್ನದ ನಾಣ್ಯಗಳು ಚಿತ್ರದುರ್ಗದ ಪಾಳೆಯಗಾರರ ಆಳ್ವಿಕೆಯಲ್ಲಿ ಮುದ್ರಿಸಿರುವುದನ್ನು ಖಚಿತಪಡಿಸಿದ್ದಾರೆ.

ಪ್ರಾಚೀನ ಕಾಲದಿಂದಲೂ ಭಾರತೀಯ ಪರಂಪರೆಯಲ್ಲಿ ಸಿಂಹಕ್ಕೆ ವಿಶೇಷ ಸ್ಥಾನವಿದೆ. ಸಿಂಹವನ್ನು ರಾಜ ಲಾಂಛನವಾಗಿ ಬಳಸಿದೆ. ಇಂತಹ ಪ್ರಾಣಿಯು ನಾಣ್ಯಗಳ ಮೇಲೆ ವಿಜೃಂಭಿಸಿದುದು ಆಶ್ಚರ್ಯವೇನಲ್ಲ. ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ಗೋವೆಯ ಕದಂಬರು, ಮುಮ್ಮಡಿ ಕೃಷ್ಣದೇವರಾಜ ಒಡೆಯರ್, ಇವರೆಲ್ಲರೂ ಕಲಾತ್ಮಕ ವಾದ ಸಿಂಹದ ಚಿತ್ರವಿರುವ ನಾಣ್ಯಗಳನ್ನು ಟಂಕಿಸಿದ್ದರು.

* # ೩೧, ೩೩ನೇ 'ಎ' ಕ್ರಾಸ್, ೪ನೇ ಬ್ಲಾಕ್, ಜಯನಗರ, ಬೆಂಗಳೂರು–೫೬೦೦೪೧.

ನಾಣ್ಯ: ೨ ಅರ್ಧ ಆಣೆ ಮೌಲ್ಯದ ಈಸ್ಟ್ ಇಂಡಿಯಾ ಕಂಪನಿಯ ನಾಣ್ಯ– ಚಿತ್ರ–೨ [ದ್ವಿಮುದ್ರಾ ವಿಧಾನದ ಅಚ್ಚು]

ಲೋಹ: ತಾಮ್ರ

ಆಕಾರ: ವೃತ್ತಾಕಾರ

ವ್ಯಾಸ: ೩.೦೦ ಸೆಂ.ಮೀ.

ತೂಕ: ೧೨.೩೩ ಗ್ರಾಂ

ಗ್ರೇನ್: ೧೯೦

ಮುಮ್ಮುಖ: ರಾಮ ಪಟ್ಟಾಭಿಷೇಕದ ಚಿತ್ರಣದಲ್ಲಿ ರಾಮ, ಲಕ್ಷ್ಮಣ, ಭರತ, ಶತ್ರುಘ್ನ ಮತ್ತು ಸೀತೆ, ಒಂದೇ ಸಾಲಿನಲ್ಲಿ ಒಂದೇ ವೇದಿಕೆಯ ಮೇಲೆ ನಿಂತಿರುವ ಚಿತ್ರಣ. ರಾಮ, ಸೀತೆಯರು ಛತ್ರಿಯ ಕೆಳಗೆ ನಿಂತಿದ್ದರೆ, ಉಳಿದ ಮೂವರೂ ಅಕ್ಕಪಕ್ಕದಲ್ಲಿದ್ದಾರೆ. ವೇದಿಕೆಯ ಕೆಳಗೆ ಹನುಮಂತ ಮಂಡಿ ಯೂರಿ ಕುಳಿತಿದ್ದು, ಅಂಜಲಿ ಬದ್ಧನಾಗಿದ್ದಾನೆ. ಯಾರ ಕೈಗಳಲ್ಲೂ ಆಯುಧವಿಲ್ಲ. ಉಡುಗೆ, ತೊಡುಗೆಗಳು, ಈಶಾನ್ಯ/ಉತ್ತರ ಭಾರತದ ಶೈಲಿಯದೆಂದು ಗುರುತಿಸಬಹುದು. ಐದು ಜನರ ತಲೆಯ ಮೇಲೆ ಪ್ರಭಾವಳಿ ರೀತಿಯಲ್ಲಿ ಅಲಂಕೃತವಾಗಿ ಚಿತ್ರಿಸಿದೆ.

ಹಿಮ್ಮುಖ: ನಾಣ್ಯದ ಸುತ್ತಲೂ ಚುಕ್ಕೆಗಳಿಂದಾದ ವರ್ತುಲದಲ್ಲಿ "ಈಸ್ಟ್ ಇಂಡಿಯಾ ಕಂಪನಿ" ಎಂಬ ಇಂಗ್ಲೀಷ್ ಬರಹವಿದೆ. ಮಧ್ಯದಲ್ಲಿ ಎರಡು ಸಾಲಿನಲ್ಲಿ HALF ANNA ಎಂದು ಇಂಗ್ಲೀಷಿನಲ್ಲಿ, ಅದರ ಕೆಳಗೆ ಕ್ರಿ.ಶ. "೧೮೧೮" ಎಂದು ಅಚ್ಚಾದ ಇಸವಿಯಿದೆ. ಅರ್ಧ ಆಣೆಯ ಮೇಲುಗಡೆ ಪರ್ಶಿಯನ್ ಭಾಷೆಯಲ್ಲಿ ಮುದ್ರಿತವಾದ ಇಸವಿಯನ್ನು ಮುದ್ರಿಸಿದೆ. ನಾಣ್ಯ ಅಚ್ಚಾದ ಸ್ಥಳದ ಮಾಹಿತಿಯಿಲ್ಲ.

ಪ್ರಾಚೀನ ಕಾಲದಿಂದಲೂ, ವಿಷ್ಣುವಿನ ದಶಾವತಾರಗಳು ಬಹಳ ಪ್ರಸಿದ್ಧ ಮತ್ತು ಹಿಂದೂ ಧರ್ಮದಲ್ಲಿ ದಶಾವತಾರ ಗಳನ್ನು ಬಿಂಬಿಸುವ ಅನೇಕ ಪುರಾಣಗಳಿವೆ. ಶಿಲ್ಪಿಗಳು ದೇವಸ್ಥಾನದ ಭಿತ್ತಿಗಳಲ್ಲಿ, ಪಟ್ಟಿಕಾಂಗಗಳಲ್ಲಿ ಮುಂತಾದೆಡೆ ದಶಾವತಾರದ ಪ್ರಸಂಗಗಳನ್ನು ಬಿಡಿಸಿದ್ದಾರೆ. ಹಾಗೆಯೇ ವರ್ಣಚಿತ್ರಗಳಲ್ಲಿಯೂ ಸಹ ದಶಾವತಾರದ ಚಿತ್ರಗಳಿವೆ. ವಾಗ್ಗೇಯ ಕಾರರು ದಶಾವತಾರಗಳನ್ನು ಕುರಿತು ನೂರಾರು ಕೃತಿಗಳನ್ನು ರಚಿಸಿದ್ದಾರೆ. ಶಾಸನಗಳಲ್ಲಿ, ರಾಜರ ಅರಮನೆ ಗಳಲ್ಲಿ, ಗುರು ಮನೆಗಳಲ್ಲಿ ದಶಾವತಾರಗಳ ರೂಪಗಳನ್ನು ಕಾಣುತ್ತೇವೆ. ೨೧ನೇ ಶತಮಾನದಲ್ಲೂ ಸಹ ದಶಾವತಾರದ ಕಲ್ಪನೆ ಚಲನ ಚಿತ್ರಗಳಲ್ಲಿ ಮತ್ತು ಸಮಾಜೋ–ಧಾರ್ಮಿಕ ಜೀವನದಲ್ಲಿ ಹಾಸು ಹೊಕ್ಕಾಗಿದೆ. ಹೀಗಿರುವಾಗ ಅನೇಕ ರಾಜವಂಶಗಳು ದಶಾವ ತಾರದ ಚಿತ್ರಗಳಿರುವ ನಾಣ್ಯಗಳನ್ನು ಮುದ್ರಿಸಿ ತಮ್ಮ ಗೌರವ ಮತ್ತು ದನ್ಯತಾಭಾವವನ್ನು ತೋರ್ಪಡಿಸಲು ಹಿಂದೆ ಬಿದ್ದಿಲ್ಲ.

ಪ್ರಾಚೀನ ಕಾಲದಿಂದಲೂ ವಾಲ್ಮೀಕಿ ರಾಮಾಯಣ ಜನಪ್ರಿಯವಾಗಿದ್ದರೂ ರಾಮನನ್ನು ನಾಣ್ಯಗಳಲ್ಲಿ ಚಿತ್ರಿಸಿರುವ ಪದ್ಧತಿ ಬಹಳ ತಡವಾಗಿ ಆರಂಭವಾಗಿದೆ ಎನ್ನಬಹುದು. ನಾಣ್ಯದ ಇತಿಹಾಸವನ್ನು ಗಮನಿಸಿದರೆ ಮೊಗಲ್ ದೊರೆ ಅಕ್ಬರ್ ತನ್ನ ಐವತ್ತನೇ ವಯಸ್ಸಿನಲ್ಲಿ ಶ್ರೀರಾಮ ಮತ್ತು ಸೀತೆಯರಿರುವ ನಾಣ್ಯಗಳನ್ನು ಮುದ್ರಿಸಿದ್ದನು. ಉತ್ತರ ಭಾರತದಲ್ಲಿ "ರಾಮಸಿಯಾ" ನಾಣ್ಯವೆಂದು ಕರೆಯಲ್ಪಡುತ್ತಿತ್ತು. ದಕ್ಷಿಣ ಭಾರತದಲ್ಲಿ, ಮೊದಲನೆ ತಿರುಮಲರಾಯನ ಆಳ್ವಿಕೆಯಲ್ಲಿ ಶ್ರೀರಾಮನ ನಾಣ್ಯಗಳು ಅಚ್ಚಾಗಿದ್ದವು ಎಂದು ಇತಿಹಾಸದಿಂದ ತಿಳಿದುಬರುತ್ತದೆ. ಈ ನಾಣ್ಯಗಳು ರಾಮಟಂಕ ವರಹಗಳೆಂದು ಪ್ರಸಿದ್ಧಿಯಾಗಿತ್ತು ಮತ್ತು ಇವು ಬೆಳ್ಳಿನಾಣ್ಯ ಗಳಾಗಿದ್ದವು. ಒಂದನೇ ತಿರುಮಲರಾಯನ ಕಾಲದಲ್ಲಿ ಮತ್ತು ನಂತರವೂ, ಚಿತ್ರದಲ್ಲಿರುವಂತೆ ರಾಮ ಪಟ್ಟಾಭಿಷೇಕದ ಚಿತ್ರಣದಲ್ಲಿ, ಐದೂ ಮಂದಿಯಿರುವ ಬೆಳ್ಳಿನಾಣ್ಯಗಳು ಚಲಾವಣೆ ಯಲ್ಲಿದ್ದು, ಈಗಲೂ ಸಹ ರಾಮಟಂಕ ವರಹಗಳೆಂದು ಪೂಜಿಸಲ್ಪಡುತ್ತಿದೆ. ಈಸ್ಟ್ ಇಂಡಿಯಾ ಕಂಪನಿಯೂ ಸಹ, ತಾನು ಜನಾನುರಾಗಿಯಾಗಿರಬೇಕೆಂಬ ಉದ್ದೇಶದಿಂದ ತಾಮ್ರದಲ್ಲಿಯೂ ಸಹ ಇದೇ ರೀತಿ ನಾಣ್ಯಗಳನ್ನು ಮುದ್ರಿಸಿ ಚಲಾವಣೆಗೆ ತಂದಿತು.

ನಾಣ್ಯ: ೩ ಒಂದು ಆಣೆ ಮೌಲ್ಯದ ಈಸ್ಟ್ ಇಂಡಿಯಾ ಕಂಪನಿಯ ನಾಣ್ಯ – ಚಿತ್ರ–೩ [ದ್ವಿಮುದ್ರಾ ಮುದ್ರಾವಿಧಾನದ ಅಚ್ಚು]

ಲೋಹ: ತಾಮ್ರ

ವ್ಯಾಸ: ೩.೦೫ ಸೆಂ.ಮೀ.

ತೂಕ: ೨೩.೯೯ ಗ್ರಾಂ

ಗ್ರೇನ್: ೩೫೮.೨

ಆಕಾರ: ವೃತ್ತಾಕಾರ

ಮುಮ್ಮುಖ: ನಿಂತಿರುವ ಭಂಗಿಯಲ್ಲಿ ಕೊಳಲನ್ನು ನುಡಿಸುತ್ತಿರುವ ಕೃಷ್ಣ ಮತ್ತು ರಾಧೆ. ಇವರ ಹಿಂದೆ ಗೋವು ಎಡದಿಂದ ಬಲಭಾಗಕ್ಕೆ ಚಲಿಸುತ್ತಿರುವಂತಿದೆ. ಕೊಳಲನ್ನು ಅಲಂಕೃತವಾಗಿ ಚಿತ್ರಿಸಿದೆ. ರಾಧೆಯೂ ಸಹ ತನ್ನ ಎಡಗೈ ಯಿಂದ ಕೊಳಲನ್ನು ಹಿಡಿದಿದ್ದಾಳೆ. ರಾಧೆಯ ಬಲಗೈ ಕೃಷ್ಣನ ಬಲಭಾಗದ ಭುಜದ ಮೇಲಿದೆ. ಕೃಷ್ಣ ನವಿಲು ಗರಿಯಿಂದ ಅಲಂಕೃತಗೊಂಡ ಕಿರೀಟಧಾರಿಯಾಗಿದ್ದಾನೆ. ಕೃಷ್ಣನ ಕೊರಳಿ ನಲ್ಲಿ ವೈಜಯಂತೀಹಾರ ಚೆನ್ನಾಗಿ ಮೂಡಿಬಂದಿದೆ. ಇವರಿಬ್ಬರ ಮುಖಚರ್ಯೆ ಮತ್ತು ವಸ್ತ್ರಗಳೂ ಉತ್ತರ ಭಾರತದ/ಈಶಾನ್ಯ ಭಾರತದ ಶೈಲಿಯದೆಂದು ಹೇಳಬಹುದು. ಒಟ್ಟಿನಲ್ಲಿ ಗೋಪಾಲ ಕೃಷ್ಣನ ಚಿತ್ರ ಬಹಳ ಸೊಗಸಾಗಿ ಮೂಡಿಬಂದಿದೆ ಎನ್ನಬಹುದು.

ಹಿಮ್ಮುಖ: ನಾಣ್ಯದ ಸುತ್ತಲೂ ಗೆರೆಯ ವರ್ತುಲದಲ್ಲಿ "ONE ANNA" ಎಂದು ಎರಡು ಸಾಲಿನಲ್ಲಿ ಮುದ್ರಿಸಿದೆ, ಮತ್ತು ಎರಡು ಗಿಡದ ಗೊಂಚಲಿನ ಮಧ್ಯೆಯಿದ್ದು, ಅಚ್ಚಾದ ಇಸವಿ ೧೮೧೮ ಮತ್ತು UKL ಎಂದು ಸಣ್ಣ ಅಕ್ಷರದಲ್ಲಿದೆ. [ಯುನೈಟೆಡ್ ಕಿಂಗ್‌ಡಮ್, ಲಂಡನ್]

ಕೃಷ್ಣನ ಚಿತ್ರವಿರುವ ನಾಣ್ಯಗಳ ಇತಿಹಾಸವನ್ನು ಅವಲೋಕಿಸಿದರೆ, ಭಾರತದ ಈಶಾನ್ಯ ರಾಜ್ಯದಲ್ಲಿರುವ ತ್ರಿಪುರದ ರತ್ನತ್ರಯನಾಯಕನ ವಂಶದವನೇ ಆದ ಯಶೋಧರ ಮಾಣಿಕ್ಯನೆಂಬ ದೊರೆಯು ಕೃಷ್ಣನ ಚಿತ್ರಗಳಿರುವ ನಾಣ್ಯಗಳನ್ನು ಬಳಕೆಗೆ ತಂದನು. ಆ ನಾಣ್ಯಗಳಲ್ಲಿ ಹಿಮ್ಮುಖದಲ್ಲಿ ರಾಜನ ಹೆಸರನ್ನು ಮುದ್ರಿಸಿದೆ. ಈ ನಾಣ್ಯಗಳಲ್ಲಿ "ರಾಧಕೃಷ್ಣಪಾದ" ಎಂದು ಬರಹವಿದೆ. ದಕ್ಷಿಣದಲ್ಲಿ ಕೃಷ್ಣನ ಚಿತ್ರವಿರುವ ನಾಣ್ಯಗಳನ್ನು ವಿಶೇಷವಾಗಿ ಅಚ್ಚುಹಾಕಿಸಿದವರು ಕೆಲವು ರಾಜವಂಶಗಳು. ಈಗಿನ ಹಂಪಿಯಲ್ಲಿರುವ ಕೃಷ್ಣದೇವಾಲಯ, ವಿಜಯನಗರದ ಅರಸು ಶ್ರೀ ಕೃಷ್ಣದೇವ ರಾಯನು ಉದಯಗಿರಿ ರಾಜ್ಯದ ಗಜಪತಿಯನ್ನು ಸೋಲಿಸಿ, ಅಲ್ಲಿಂದ ಕೃಷ್ಣನ ವಿಗ್ರಹವನ್ನು ತಂದು ಪ್ರತಿಷ್ಠಾಪಿಸಿ, ಆ ವಿಜಯದ ಸಂಕೇತವಾಗಿ, ಬಾಲಕೃಷ್ಣ ನಮೂನೆಯ ನಾಣ್ಯಗಳನ್ನು ಚಲಾವಣೆಗೆ ತಂದನು. ನಂತರದಲ್ಲಿ ಮೈಸೂರಿನ ಚಿಕ್ಕದೇವರಾಜ ಒಡೆಯರ್‌ರವರು ನಾಟ್ಯಭಂಗಿಯ ಚಿನ್ನದ ಕೃಷ್ಣನ ನಾಣ್ಯಗಳನ್ನು ಮುದ್ರಿಸಿದ್ದರು, ಮತ್ತು ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರೂ ಅರ್ಧಪಣ ಮೌಲ್ಯದ ನಾಣ್ಯಗಳನ್ನು, ಮುದ್ರಿಸಿದ್ದರು.

ಈಸ್ಟ್ ಇಂಡಿಯಾ ಕಂಪನಿಗಳು ನಾಣ್ಯಗಳ ಚಲಾವಣೆಯಲ್ಲಿ ಅನುಸರಿಸಿದ ಅಸಮರ್ಪಕ ರೀತಿ, ನೀತಿ ಮತ್ತು ಗೊಂದಲ. ನಂತರದಲ್ಲಿ ಬ್ರಿಟಿಷ್ ಸರ್ಕಾರದ ಪಾತ್ರ

ನಮಗೆಲ್ಲಾ ತಿಳಿದಿರುವಂತೆ, ಬ್ರಿಟೀಷರ ವಿರುದ್ಧ ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮ (ಸಿಪಾಯಿದಂಗೆ) ಕ್ರಿ.ಶ.೧೮೫೭ರಲ್ಲಿ ನಡೆದು, ಭಾರತೀಯರು ಸೋತು, ಬ್ರಿಟಿಷರ ಯುನೈಟಡ್ ಈಸ್ಟ್ ಇಂಡಿಯಾ ಕಂಪನಯ ಆಡಳಿತ ಕೊನೆಗೊಂಡು, ಬ್ರಿಟಿಷ್ ಸರ್ಕಾರದ ನೇರ ಆಡಳಿತ ಭಾರತದಲ್ಲಿ ಜಾರಿಗೆ ಬಂದಿತು. ಆಗ ವಿಕ್ಟೋರಿಯಾ ರಾಣಿಯು ಭಾರತದ ಸಾಮ್ರಾಜ್ಞೆಯಾಗಿ ಅಧಿಕಾರವನ್ನು ವಹಿಸಿಕೊಂಡಳು. ಅದಕ್ಕೂ ಹಿಂದೆ, ಅಂದರೆ ಕ್ರಿ.ಶ. ೧೬೦೦ ರಿಂದ ಕ್ರಿ.ಶ. ೧೮೫೭ರ ಅವದಿಯಲ್ಲಿ (೨೫೭ ವರ್ಷಗಳು), ಬ್ರಿಟಿಷ್ ವ್ಯಾಪಾರ ಕಂಪನಿಗಳು ತಮ್ಮ ಒಂದೊಂದೇ ಕಂಪನಿಗಳನ್ನು ಸೂರತ್‌ನಲ್ಲೂ (ಕ್ರಿ.ಶ. ೧೬೦೦ರಲ್ಲಿ ಜಹಾಂಗೀರನ ಅನುಮತಿ ಪಡೆದು), ನಂತರ ಕ್ರಮೇಣ ಆಗ್ರ, ಅಲಹಾಬಾದ್, ಗುಜರಾತ್‌ನ ಬ್ರೋಚ್, ಬೊಂಬಾಯಿ, ಮದ್ರಾಸ್, ಕ್ರಿ.ಶ. ೧೬೧೧ರಲ್ಲಿ ಮಚಲಿಪಟ್ಟಣ, ಕ್ರಿ.ಶ. ೧೬೩೯ರಲ್ಲಿ ಮದರಾಸ್‌ನಲ್ಲಿ ಪೋರ್ಟ್ ಸೇಂಟ್ ಜಾರ್ಜ್ ಎಂಬ ವಸಾಹತನ್ನು ನಿರ್ಮಿಸಿದರು. ಕ್ರಿ.ಶ. ೧೬೩೩ರಲ್ಲಿ ಮಹಾನದಿಯ ಡೆಲ್ಟದಲ್ಲಿ ಹರಿಹರಪುರ ಮತ್ತು ಬಾಲಸೂರ್‌ನಲ್ಲಿ, ಕ್ರಿ.ಶ. ೧೬೫೧ರಲ್ಲಿ ಹೂಗ್ಲಿಯಲ್ಲಿಯೂ, ನಂತರ ಪಾಟ್ನಾ ಮತ್ತು ಕಾಸಿಂಬಜಾರ್‌ನಲ್ಲಿ ವ್ಯಾಪಾರ ಮಳಿಗೆಗಳನ್ನು ಸ್ಥಾಪಿಸಿ, ಒಂದು ವಿಧವಾದ ವ್ಯಾಪಾರಿ ಸಾರ್ವಭೌಮತ್ವವನ್ನೇ ಭಾರತದಲ್ಲಿ ಎಲ್ಲಾ ಕಡೆಗೂ ವಿಸ್ತರಿಸಿದರು.

ಕ್ರಿ.ಶ.೧೭೦೨ರಲ್ಲಿ, ತಮ್ಮ ವ್ಯಾಪಾರದ ಚತುರತೆ ಮತ್ತು ವ್ಯಾಪಾರದಲ್ಲಿ ಕಂಡ ಬೆಳವಣಿಗೆ ಮತ್ತು ಸ್ಪರ್ಧೆಯನ್ನು ಗಮನಿಸಿ, ತಮ್ಮ ಎಲ್ಲಾ ಕಂಪನಿಗಳನ್ನು ಒಟ್ಟುಗೂಡಿಸಿ "ಯುನೈಟೆಡ್ ಈಸ್ಟ್ ಇಂಡಿಯಾ ಕಂಪನಿ" ಎಂದು ನಾಮಕರಣಮಾಡಿದರು. ಕ್ರಿ.ಶ. ೧೭೧೫ರಲ್ಲಿ ಕಲ್ಕತ್ತಾವನ್ನು ತಮ್ಮ ಆಡಳಿತದ ಕೇಂದ್ರವಾಗಿ ಮಾಡಿಕೊಂಡರು. ಇದರಿಂದಾಗಿ ಕಲ್ಕತ್ತಾ ಹೆಚ್ಚು ಪ್ರಗತಿಯನ್ನು ಕಾಣಲು ಸಾಧ್ಯವಾಯಿತು. ಈ ಬೆಳವಣಿಗೆಯಿಂದಾಗಿ ಈಸ್ಟ್ ಇಂಡಿಯಾ ಕಂಪನಯು ಭಾರತದಲ್ಲಿ ಭದ್ರವಾಗಿ ಬೇರೂರಲು ಸಾಧ್ಯವಾಗಿ, ದೇಶದ ಪ್ರಮುಖ ಭಾಗಗಳಲ್ಲಿ, ಅವರ ಪ್ರಭುತ್ವ ಸ್ಥಾಪನೆಗೆ ಅವಕಾಶವಾಯಿತು. ಪಶ್ಚಿಮದಲ್ಲಿ ಈಗಿನ ಮುಂಬೈ ಈಸ್ಟ್ ಇಂಡಿಯಾ ಕಂಪನಿಯ ಅತ್ಯಂತ ಪ್ರಮುಖ ವ್ಯಾಪಾರ ಕೇಂದ್ರವಾಗಿ, ಇದು ಬ್ರಿಟೀಷರಿಗೆ ಭಾರತದ ಹೆಬ್ಬಾಗಿಲಾಯಿತು. ಈಸ್ಟ್ ಇಂಡಿಯಾ ಕಂಪನ ಅಸ್ಥಿತ್ವಕ್ಕೆ ಬಂದ ನಂತರ, ಭಾರತದಲ್ಲಿ ಆಗ ಆಳುತ್ತಿದ್ದ ಅನೇಕ ರಾಜರು, ಸಂಸ್ಥಾನಗಳು, ರಾಜವಂಶಗಳು ಒಗ್ಗಟ್ಟಿನಿಂದ ಒಂದಾಗದೆ ತಮ್ಮ ತಮ್ಮಲ್ಲಿದ್ದ ದ್ವೇಷ ಮತ್ತು ಅಸೂಯೆಗಳನ್ನು ಬಿಡಲಿಲ್ಲ. ಬ್ರಿಟೀಷರು ಈ ಲೋಪದೋಷಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿ, ರಾಜಕೀಯವಾಗಿ ತಮ್ಮ ಅಸ್ಥಿತ್ವವನ್ನು ಕ್ರಮವಾಗಿ ಖಾಯಂ ಗೊಳಿಸುತ್ತಾ ಬಂದರು. ಈ ಅವಧಿಯಲ್ಲಿ, ಈಸ್ಟ್ ಇಂಡಿಯಾ ಕಂಪನಿಗಳು ದೇಶದ ನಾನಾ ಭಾಗಗಳಲ್ಲಿ ತಮ್ಮದೇ ಆದ ಟಂಕಶಾಲೆಗಳನ್ನು ಮದರಾಸು,ಕಲ್ಕತ್ತ, ಪಾಟ್ನ, ಮುರ್ಷಿದಾಬಾದ್, ಬನಾರಸ್, ಫರೂಖಾಬಾದ್ ಮುಂತಾದೆಡೆ ಸ್ಥಾಪಿಸಿದರು. ಆ ಕಾಲದಲ್ಲಿ ಮೊಘಲ್ ನಾಣ್ಯಗಳು ಚಲಾವಣಿಯಲ್ಲಿದ್ದು, ದೇಶದೆಲ್ಲೆಡೆ ಹೆಚ್ಚು ಜನಾನುರಾಗಿಯಾಗಿದ್ದವು. ಬ್ರಿಟಿಷರು ಟಂಕಿಸಿದ ನಾಣ್ಯಗಳು ಜನಪ್ರಿಯವಾಗದೆ ವ್ಯಾಪಾರಿಗಳು ಸಾಮಾನ್ಯ ಜನರು ಅವುಗಳನ್ನು ನಿರಾಕರಿಸುತ್ತಿದ್ದರು.

ಈಸ್ಟ್ ಇಂಡಿಯಾ ಕಂಪನಿಗಳು ಭಾರತದಾದ್ಯಂತ ಏಕ ರೂಪದ ನಾಣ್ಯ ಚಲಾವಣೆಯ ನೀತಿಗಳನ್ನು ಜಾರಿಮಾಡಲಿಲ್ಲ ಮತು ಜಾರಿ ಮಾಡಲಾಗಲಿಲ್ಲ. ಕಾರಣ ಅವರ ಆಳ್ವಿಕೆಯ ಅವಧಿಯಲ್ಲಿ ದೇಶದಲ್ಲಿ ಸುಮಾರು ನೂರು

ರಾಜವಂಶದ ಆಳ್ವಿಕೆಗಳಿದ್ದು, ಅವರುಗಳು ತಮ್ಮದೇ ಆದ ನಾಣ್ಯ ಪದ್ಧತಿ ಇರಬೇಕೆಂಬ ಅಭಿಪ್ರಾಯ ಮತ್ತು ಹಠವನ್ನು ಮುಂದುವರೆಸಿದವು. ಇವುಗಳನ್ನೇ ತಮ್ಮ ಉಪಯೋಗಕ್ಕಾಗಿ ಬಳಸಿಕೊಂಡ ಈಸ್ಟ್ ಇಂಡಿಯಾ ಕಂಪನಗಳು ನಾಣ್ಯಗಳನ್ನು ಟಂಕಿಸುವ ವಿಷಯದಲ್ಲಿ ಸರಿಯಾದ ಮಾರ್ಗವನ್ನು ಅನುಸರಿಸಲಿಲ್ಲ. ದೇಶದ ಅನೇಕ ಸ್ಥಳಗಳಲ್ಲಿ ಸ್ಥಳೀಯ ರಾಜರ/ರಾಜವಂಶದ/ನವಾಬರ ನಾಣ್ಯಗಳನ್ನೇ ಮೋಸದಿಂದ ಅಚ್ಚು ಹಾಕಿಸಿ ಚಲಾವಣೆಗೆ ತಂದರು. ಉದಾಹರಣೆಗೆ :-

೧. ಮುಘಲ್ ದೊರೆಗೆ ಗೊತ್ತಾಗದಂತೆ ಮುಘಲ್ ನಾಣ್ಯಗಳನ್ನು ಟಂಕಿಸಲು ಪ್ರಾರಂಭಿಸಿದರು. ನಂತರ ಮುಘಲರ ಅನುಮತಿ ಪಡೆದು ಮುದ್ರಿಸಿದುದಾಗಿ ಘೋಷಿಸಿದರು.
೨. ಸೂರತ್ತಿನ ನವಾಬನ ಅಪ್ಪಣೆಯನ್ನು ಪಡೆದು, ಬೊಂಬಾಯಿಯಲ್ಲಿಯೂ ಸೂರತ್ತಿನ ನಾಣ್ಯಗಳನ್ನು ಚಲಾವಣೆಗೆ ತಂದರು.

ಹೀಗೆ ದೇಶದ ವಿವಿದೆಡೆ ಕಾನೂನು ಬಾಹಿರವಾಗಿ ಈಸ್ಟ್ ಇಂಡಿಯಾ ಕಂಪನಿ, ಜನಾನುರಾಗಿಯಾಗಿರಬೇಕೆಂಬ ಮೂಲ ಉದ್ದೇಶದಿಂದ ಮೋಸದಿಂದ ತಾವು ಸ್ಥಾಪಿಸಿದ ಟಂಕಶಾಲೆಗಳಲ್ಲಿ ನಾಣ್ಯ ಮುದ್ರಿಸುವ ಕಾರ್ಯವನ್ನು ಅವಿರತವಾಗಿ ನಡೆಸಿಕೊಂಡು ಬಂದರು. ಬ್ರಿಟಿಷರಿಗೆ ನಾಣ್ಯ ಟಂಕಿಸುವ ಕಾರ್ಯದಲ್ಲಿ ಒಂದು ಭದ್ರವಾದ ಹಿಡಿತ ಸ್ಥಾಪಿಸಲಾಗದೆ, ಒಂದು ರೀತಿಯ ಅವ್ಯವಸ್ಥೆ ತಲೆದೋರಿ, ಜನರಲ್ಲಿ, ವ್ಯಾಪಾರಸ್ಥರಲ್ಲಿ ಮತ್ತು ಅಧಿಕಾರಿಗಳಲ್ಲಿ ಪ್ರತಿರೋಧ ಉಂಟಾಗಿ ಭಾರತದಾದ್ಯಂತ ಅಶಾಂತತೆಯ ವಾತಾವರಣವಿತ್ತು. ಇದಲ್ಲದೆ ಕೆಲವು ನಾಣ್ಯಗಳನ್ನು ಈಸ್ಟ್ ಇಂಡಿಯಾ ಕಂಪನಿ ತನ್ನ ದೇಶದಲ್ಲಿಯೂ ಅಚ್ಚುಮಾಡಿಸಿ ಭಾರತದಲ್ಲಿ ಚಲಾವಣೆಗೆ ಬಿಡುಗಡೆಮಾಡುತ್ತಿತ್ತು. ಇಂಗ್ಲೇಂಡಿನಲ್ಲಿ ಅಚ್ಚಾದ ನಾಣ್ಯಗಳಿಗೆ ಟಂಕಶಾಲೆಯ ಹೆಸರನ್ನು ಸೂಚಿಸುವ ಸಲುವಾಗಿ "UK" ಮತ್ತು "UKL" ಎಂಬ ಸಂಕ್ಷಿಪ್ತಾಕ್ಷರಗಳನ್ನು ಬಳಸಿರುವುದನ್ನು, ಛಾಯಾಚಿತ್ರಗಳಲ್ಲಿ ಕಾಣಬಹುದು.

ಲಾರ್ಡ್ ವೆಲ್ಲೆಸ್ಲಿಯ ವೈದ್ಯ ಹ್ಯಾಮಿಲ್ಟನ್ ಬುಕಾನನ್ ತನ್ನ ಭಾರತದ ಪ್ರವಾಸ ಕಥನದಲ್ಲಿ (A Journey through Mysore, Canara and Malabar) ಈಸ್ಟ್ ಇಂಡಿಯಾ ಕಂಪನಿಗಳು ಮೋಸದಿಂದ ಮತ್ತು ಸಮರ್ಪಕವಾದ ನಾಣ್ಯ ನೀತಿಯನ್ನು ಅನುಸರಿಸದೆ ನಾಣ್ಯಗಳನ್ನು ಇಂಗ್ಲೆಂಡಿನಲ್ಲೂ ಮತ್ತು ಭಾರತದ ಟಂಕಸಾಲೆಗಳಲ್ಲೂ ಮುದ್ರಿಸುತ್ತಿದ್ದನ್ನು ದಾಖಲಿಸಿದ್ದಾನೆ.

ಒಂದು ಪ್ರಬಲ ವ್ಯಾಪಾರಿ ಮತ್ತು ರಾಜಕೀಯ ಶಕ್ತಿಯಾಗಿ ಬೆಳೆದ ಈಸ್ಟ್ ಇಂಡಿಯಾ ಕಂಪನಿಯ ವಿರುದ್ಧ ಕ್ರಿ.ಶ. ೧೮೫೭ರಲ್ಲಿ ಭಾರತೀಯರು ದಂಗೆಯೆದ್ದರು. ಇದನ್ನು ಸಿಪಾಯಿದಂಗೆ ಎಂದು ಭಾವಿಸಿ ಮತ್ತು ಕಂಪನಿಯ ಅಸಮರ್ಥ ಆಡಳಿತವನ್ನು ಗಮನಿಸಿದ ಬ್ರಿಟಿಷ್ ಸರ್ಕಾರವೇ, ಕಂಪನಿಯ ಆಡಳಿತವನ್ನು ಕೊನೆಗಾಣಿಸಿ ನೇರವಾಗಿ ಭಾರತದ ಆಡಳಿತವನ್ನು ವಹಿಸಿಕೊಂಡಿತು. ಆಗ ಭಾರತವು ವಿಕ್ಟೋರಿಯಾ ರಾಣಿಯ ಆಡಳಿತಕ್ಕೆ ಒಳಪಟ್ಟಿತು. ಆದ ಕಾರಣ ನಾಣ್ಯಗಳ ಮುಮ್ಮುಖದಲ್ಲಿ ಕಿರೀಟಧಾರಿ ರಾಣಿಯ ಚಿತ್ರವನ್ನು ಟಂಕಿಸಲಾಯಿತು. ನಂತರದಲ್ಲಿ ಬ್ರಿಟಿಷ್ ಸರ್ಕಾರದ ದೊರೆಗಳ ಚಿತ್ರವಿರುವ ನಾಣ್ಯಗಳು ಬರಲಾರಂಭಿಸಿದವು.

ಪ್ರಸ್ತುತ ಚಿತ್ರದಲ್ಲಿರುವ ಮೂರು ನಾಣ್ಯಗಳು, ಕ್ರಿ.ಶ.೧೭೦೨ರಲ್ಲಿ ಅಸ್ತಿತ್ವಕ್ಕೆ ಬಂದ ಯುನೈಟೆಡ್ ಈಸ್ಟ್ ಇಂಡಿಯಾ ಕಂಪನಿಯ ಕಾಲದಲ್ಲಿ ಮುದ್ರಿತವಾದವುಗಳೆಂದು ಪರಿಗಣಿಸಬಹುದು. ಈ ಮೂರು ವಿಶೇಷವಾದ ನಾಣ್ಯಗಳನ್ನು ಪರಿಚಯ ಮಾಡಲು ಸಹಕರಿಸಿದ ಶ್ರೀ ಬಿ.ಎಸ್. ನಟರಾಜರವರ ಪುತ್ರರಾದ ಶ್ರೀ ಭುವನ್ ಅವರಿಗೆ ನಾನು ಋಣಿಯಾಗಿದ್ದೇನೆ.

ಆಧಾರಸೂಚಿ

೧. ಭಾರತೀಯ ನಾಣ್ಯ ಪರಂಪರೆ, ಮೊದಲ ಮುದ್ರಣ ೨೦೦೮, ಡಾ. ಎ.ವಿ. ನರಸಿಂಹಮೂರ್ತಿ ಪ್ರಸಾರಾಂಗ ಮತ್ತು ವಿಶ್ವವಿದ್ಯಾನಿಲಯ, ಮೈಸೂರು.
೨. ನಾಣ್ಯ ಕರ್ನಾಟಕ, ಖಂಡೋಬರಾವ್.ಎಚ್, ಎಂ.ಎ, ಬಿ.ಎಡ್. ಖಂಡೋಬ ರಾವ್, ಶಿವಮೊಗ್ಗ.

೪೧

೧೨ನೇ ಶತಮಾನದ ಅಪ್ರಕಟಿತ ಜಿನಶಿಲ್ಪ ಶಾಸನ

ಡಾ. ಬಿ.ಸಿ. ರಾಕೇಶ್*

ಚಿಕ್ಕಗೋಣಿಗೆರೆಯಲ್ಲಿ ದೊರೆತಿದ್ದು, ಇದು ಹೊನ್ನಾಳಿ ತಾಲ್ಲೂಕು ದಾವಣಗೆರೆ ಜಿಲ್ಲೆಯಲ್ಲಿದೆ. ಚಿಕ್ಕಗೋಣಿಗೆರೆಯ ಶಾಂತಿನಾಥ ಬಸದಿಯ ಮೊದಲ ಅಂತಸ್ತಿನ ಗೋಪುರದ ಒಳಗಡೆಯ ಮೂರ್ತಿಯನ್ನು ನಿತ್ಯಪೂಜೆ ಮಾಡುತ್ತಾರೆ. ಬಸದಿಯು ಹೊನ್ನಾಳಿಯಿಂದ ನಂದಿಗುಡಿ ಮಾರ್ಗದ ಬಲಗಡೆಗೆ ಉತ್ತಾರಾಭಿಮುಖವಾಗಿದೆ. ಇದರ ಎದುರುಗಡೆ ಆಂಜನೇಯ ದೇವಾಲಯ ಹಿಂಭಾಗದಲ್ಲಿ ಮಸೀದಿ, ಎಡ ಪಕ್ಕದಲ್ಲಿ ಚೌಡಮ್ಮನ ದೇವಾಲಯಗಳು ಹಾಗೂ ಪೂರ್ವಕ್ಕೆ ಊರು ಇದೆ. ಹಳೆಯ ಊರು ನದಿ ದಂಡೆಯ ಬಳಿ ಇದ್ದು ನಂತರದಲ್ಲಿ ಊರನ್ನು ಸ್ಥಳಾಂತರಿಸಲಾಗಿದೆ. ಸ್ಥಳಾಂತರ ಮಾಡುವಾಗ ಜಿನನ ಮೂರ್ತಿಯನ್ನು ತಂದು ಈಗಿರುವ ಊರಿನಲ್ಲಿ ಪ್ರತಿಷ್ಠಾಪನೆಯನ್ನು ಮಾಡಿದ್ದಾರೆ. ಮೂರ್ತಿಯ ಪಾದಪೀಠದಲ್ಲಿ ಶಾಸನವಿದೆ, ಊರಿನ ಇನ್ನೊಂದು ಈಶ್ವರ ದೇವಾಲಯದಲ್ಲಿರುವ ಶಾಸನದಲ್ಲಿ ಈ ಊರನ್ನು ಚಿಕ್ಕಗೋಳಿಗೆರೆ ಎಂದು ಉಲ್ಲೇಖಿಸಿದೆ.

ಶಾಸನದ ವಿವರಣೆಯನ್ನು ನಾವು ಈ ಕೆಳಗಿನಂತೆ ಗಮನಿಸಬಹುದು

ಶಾಸನವು ಶಾಂತಿನಾಥ ಬಸದಿಯ ಮೊದಲ ಅಂತಸ್ತಿನ ಗೋಪುರದ ಒಳಭಾಗದಲ್ಲಿದೆ. ಮೂರ್ತಿಯನ್ನು ಎತ್ತರವಾದ ಪೀಠದ ಮೇಲೆ ನಿಲ್ಲಿಸಿದ್ದಾರೆ. ಮೂರ್ತಿಯ ೪ ಅಡಿ ಎತ್ತರವಿದ್ದು ಸುಂದರವಾಗಿದೆ. ಮೂರ್ತಿಯ ಪಾದದ ಕೆಳಗೆ ಐದು ಸಾಲುಗಳ ಶಾಸನವಿದೆ. ಶಾಸನದ ಪಾಠವನ್ನು ನಾವು ಕೆಳಗಿನಂತೆ ಕಾಣಬಹುದು.

೧) ಜನನಿ ಜನಸ್ತುತ ಕೇತವೆ ಜನಕಾ ಚೆಳ್ಳಾಕೇತಿ ಸೆಟ್ಟಿಯರೆ.......

೨) ವಿನಯ ನಿಧಿ ಚಟ್ಟಿಸೆಟ್ಟಿಯರನುಪಮ ಗುಣಕಾರ ಜಿನೇಂದ್ರನಂ ಮಾಡಿಸಿ.......

೩) ದಲ್ ಲಲಿತತರ ಗಾತ್ರೆ ಚಾಮವೆ ಕುಲ(ಲ*) ಲನೆ ವಿನೆಯ ಮಾಳಿಕಾ (ಯು*).......

೪) ತ ಬಾಚಂ ಕುಳದೀಪಕ ಸುತನೆನಲ್ಕೆ ವಿಳಸನತಿ ಚಟ್ಟಿ ಸೆಟ್ಟಿ ನೆಗ(ಳ್ದನಿಳೆ*).......




೫) ಯೋಳ್ ಶ್ರೀ. ಮುನಿಚಂದ್ರ ಸಿದ್ಧಾಂತ ದೇವರ ಶಿಷ್ಯರು ಶ್ರೀಮ.......*

ಶಾಸನದ ಬಲ ಮತ್ತು ಎಡ ಭಾಗಗಳು ಗಾರೆಯಲ್ಲಿ ಮುಚ್ಚಿವೆ

ಜನರಿಂದ ಬಹಳಷ್ಟು ಹೊಗಳಿಕೆಗೆ ಪಾತ್ರಳಾದ ಕೇತವ್ವೆಯನ್ನು ತಾಯಿಯಾಗಿ, ಚೆಳ್ಳಾಲ ಕೇತಿಸೆಟ್ಟಿಯನ್ನು ತಂದೆಯಾಗಿ ಪಡೆದ, ವಿನಯವೇ ಸಂಪತ್ತು ಎಂದು ತಿಳಿದುಕೊಂಡ ಚಟ್ಟಿಸೆಟ್ಟಿಯರು ಉಪಮಾತೀತ ಗುಣಗಳಿಂದ ಕೂಡಿದ ಜಿನೇಂದ್ರನ ಪ್ರತಿಮೆಯನ್ನು ಮಾಡಿಸಿ ಬಹುಶಃ ಬಸದಿಯನ್ನು ಕಟ್ಟಿಸಿ ಪ್ರತಿಷ್ಠಾಪಿಸಿರಬಹುದು, ಸುಂದರ ಮನೋಹರ ಆಕಾರವನ್ನು ಪಡೆದ ಕುಲೀನಸತಿ ಚಾಮವ್ವೆಯನ್ನು ಪತ್ನಿಯನ್ನಾಗಿ ಕುಲದೀಪಕನೆನಿಸಿದ ಬಾಚನನ್ನು ಸುತನಾಗಿ ಪಡೆದ ಚಟ್ಟಿಸೆಟ್ಟಿ ಭೂಮಿಯಲ್ಲಿ

* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜು, ಎಸ್. ನಿಜಲಿಂಗಪ್ಪ ಬಡಾವಣೆ, ದಾವಣಗೆರೆ-೦೪.



ಪ್ರಸಿದ್ಧಿಯನ್ನು ಹೊಂದಿದನು. ಶ್ರೀ ಮುನಿಚಂದ್ರ ಸಿದ್ಧಾಂತದೇವರ ಶಿಷ್ಯರಾದ ಇನ್ನೊಬ್ಬ ಆಚಾರ್ಯರನ್ನು ಉಲ್ಲೇಖಿಸುವಲ್ಲಿಗೆ ಶಾಸನ ಗಾರೆಯಲ್ಲಿ ಮುಚ್ಚಿಹೋಗಿ ಅಪೂರ್ಣಗೊಳ್ಳುತ್ತದೆ. ಅವರ ಶಿಷ್ಯರ ಹೆಸರು ತಿಳಿಯುವುದಿಲ್ಲ. ಇವರ ಉಲ್ಲೇಖ ವಿರುವುದಕ್ಕೆ ಕಾರಣವೆಂದರೆ ಬಹುಶಃ ಆ ಆಚಾರ್ಯರ ಶ್ರಾವಕ ಶಿಷ್ಯ ಚಟ್ಟಿಸೆಟ್ಟಿ ಆಗಿರಬಹುದು ಎಂದು ತೋರುತ್ತದೆ. ಬಸದಿಯನ್ನು ಯಾವ ಊರಿನಲ್ಲಿ ಸ್ಥಾಪಿಸಿದರೆಂದು ತಿಳಿದು ಬರುವುದಿಲ್ಲ. ಆದರೆ ಶಾಸನ ದೊರೆತ ಚಿಕ್ಕಗೋಣಿಗೆರೆ ಊರಿನಲ್ಲಿಯೇ ಬಸದಿ ಇದ್ದಿರಬಹುದು ಎಂಬ ಊಹೆಯನ್ನು ಮಾಡಬಹುದು.

ಕ್ರಿ.ಶ. ೧೧೯೭ರ ಸುಮಾರಿಗೆ ಸಿಂಧವಂಶದ ದೊರೆ ಮಲ್ಲಿದೇವರಸನ ಆಳ್ವಿಕೆಯು ಈ ಭಾಗದಲ್ಲಿ ನಡೆಯುತ್ತಿತ್ತು. ಚಾಲುಕ್ಯದೊರೆ ಸೋಮೇಶ್ವರದೇವನ ಮಹಾಮಂಡಲೇಶ್ವರ ಈ ಮಲ್ಲಿದೇವರಸನು ಬೆಳಗುತ್ತಿಯ ಪ್ರಾಂತವನ್ನು ಆಳುತ್ತಿದ್ದನು. ಎಪಿಗ್ರಾಫಿಯ ಕರ್ನಾಟಕ ಸಂಪುಟ ಏಳರಲ್ಲಿ ಹೊನ್ನಾಳಿ ಶಾಸನ ಸಂಖ್ಯೆ ೩೯ರ ಬೆಳಗುತ್ತಿ ಶಾಸನದಲ್ಲಿ ಕೇತ ಎನ್ನುವ ಪದ ಕಂಡುಬರುತ್ತದೆ. ಕೇತ ಪದದ ಮುಂದಿನ ಭಾಗ ಒಡೆದು ಹೋಗಿದೆ. ಮುಕ್ಕಾಗಿರುವ ವೀರಗಲ್ಲಾಗಿದ್ದು ಕೋಪಣ ದಂಡನಾಯಕ ಮತ್ತು ಬೆಳಗುತ್ತಿಯ ಉಲ್ಲೇಖವಿದೆ. ಇದು ಶ್ರೀ ಶಕೆ ೧೧೧೯ (ಕ್ರಿ.ಶ. ೧೧೯೭) ಪಿಂಗಳ ಸಂವತ್ಸರದಂದು ಬಹುಶಃ ಕೇತಶೆಟ್ಟಿ ಎನ್ನುವನು ಕಾದಾಟದಲ್ಲಿ ಮರಣ ಹೊಂದಿದ ದಾಖಲಾಗಿದೆ. ಶಾಸನದಲ್ಲಿ ಬಹಳಷ್ಟು ಅಕ್ಷರಗಳು ಹಾಳಾಗಿವೆ.

ಎಪಿಗ್ರಾಫಿಯಾ ಕರ್ನಾಟಕ ಏಳರಲ್ಲಿ ಶಾಸನ ಸಂಖ್ಯೆ ೫೨ರ ತೀರ್ಥರಾಮೇಶ್ವರದಲ್ಲಿ ದೊರೆತ ಶಾಸನ ದೇವಾಲಯದ ಬಳಿ ಬಿದ್ದಿದ್ದ ಜಿನಬಿಂಬದ ಪದ್ಮಪೀಠದಲ್ಲಿದೆ. ಶಾಸನದಲ್ಲಿ ಕೆಲವು ಅಕ್ಷರಗಳು ತೃಟಿತವಾಗಿವೆ. ಇದರಲ್ಲಿ ಕೇತಿಶೆಟ್ಟಿ ಮತ್ತು ಅವನ ಹೆಂಡತಿಯ ಉಲ್ಲೇಖ ಶ್ರೀಮೂಲ ಸಂಘ ಕಾಣಲಾದ (ಕಾಣೂರ್?) ಗಣಕ್ಕೆ ಸಂಬಂಧಿಸಿದ್ದಾಗಿದೆ.

ಮೇಲಿನ ಅಂಶಗಳನ್ನು ಗಮನಿಸಿದಾಗ ಹೊನ್ನಾಳಿ ತಾಲ್ಲೂಕಿನ ಹಲವು ಊರುಗಳಲ್ಲಿ ಜೈನ ಸಮುದಾಯದವರು ಕಂಡುಬರುತ್ತಾರೆ ತಾಲ್ಲೂಕಿನ ತುಂಬ ಜೈನಧರ್ಮಕ್ಕೆ ಸಂಬಂದಿಸಿದ ಅನೇಕ ಕುರುಹುಗಳು ನಮಗೆ ಸಿಗುತ್ತವೆ. ಒಟ್ಟಾರೆಯಾಗಿ ಚಿಕ್ಕಗೋಣಿಗೆರೆಯ ಶಾಸನವು ಐತಿಹಾಸದ ಹಲವು ಬೆಳವಣಿಗೆಗೆ ಉತ್ತಮ ಆಕರವಾಗಿದೆ.

[ಶಾಸನವನ್ನು ಓದುವಲ್ಲಿ ಸಹಕರಿಸಿದ ಬುರುಡೆಕಟ್ಟೆ ಮಂಜಣ್ಣ, ಶ್ರೀಮತಿ ಹನುಮಾಕ್ಷಿ ಗೋಗಿ ಮತ್ತು ನಾಗರಾಜು ಹೆಚ್.ಪಿ. ಅವರಿಗೆ ತುಂಬು ಹೃದಯದ ಅಭಿನಂದನೆಗಳನ್ನು ಅರ್ಪಿಸುತ್ತಿದ್ದೇನೆ.]

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. **'ಎಪಿಗ್ರಪಿಯಾ ಕರ್ನಾಟಕ'**, ಶಿವಮೊಗ್ಗ ಜಿಲ್ಲೆಯ, ಶಾಸನಗಳು ಭಾಗ ಒಂದು ಸಂಪುಟ ಏಳು, ಲೂಯೀಸ್ ರೈಸ್ ಬಿ, ಮೈಸೂರು ಸರ್ಕಾರದ ಪ್ರೆಸ್, ಬೆಂಗಳೂರು ೧೯೦೨.

೨. ನಾ ಕೊಟ್ರೇಶ್ ಉತ್ತಂಗಿ., **'ಹೊನ್ನೆಲೆಗಳು'**, ಸಹನಾದ್ರಿ ಪ್ರಕಾಶನ, ಹೊನ್ನಾಳಿ, ೨೦೦೪.

೩. ಟಿ. ಗಿರಿಜಾ., **'ದಾವಣಗೆರೆ ಇದು ನಮ್ಮ ಜಿಲ್ಲೆ'**, ನಿಹಾರಿಕ ಪ್ರಕಾಶನ, ದಾವಣಗೆರೆ, ೨೦೦೧.

೪೨

ನವಶೋಧಿತ ಜೈನ ಶಿಲ್ಪಮೂರ್ತಿಗಳು

ಡಾ. ಎಸ್.ಕೆ. ಮೇಲಕಾರ*

ಪ್ರೊ. ಎಂ.ಎನ್. ಬೆನ್ನೂರ**

ಕರ್ನಾಟಕದ ಬಾಗಲಕೋಟೆ ಜಿಲ್ಲೆಯ ಜಮಖಂಡಿಯಿಂದ ೨೭ ಕಿ.ಮೀ. ದೂರದಲ್ಲಿರುವ ಹಳಂಗಳಿಯು ಕೃಷ್ಣಾನದಿ ತೀರದ ಪ್ರದೇಶವಾಗಿದೆ. ಪ್ರಾಚೀನ ಕಾಲದಿಂದಲೂ ಈ ಗ್ರಾಮ ಜೈನಧರ್ಮದ ಕೇಂದ್ರವಾಗಿತ್ತು. ಈ ಗ್ರಾಮದಲ್ಲಿ ಇಂದಿಗೂ ಜೈನರೇ ಬಹುಸಂಖ್ಯಾತರಾಗಿದ್ದಾರೆ. ತೇರದಾಳ-೧೨ರ ಭಾಗದಲ್ಲಿ ಬರುವ ಹಳಂಗಳಿಯಲ್ಲಿ ಎರಡು ಬಸಿದಿಗಳು ಕಂಡುಬರುತ್ತವೆ. ತೇರದಾಳದ ಗೊಂಕ ಜಿನಾಲಯಕ್ಕೂ ಹಾಗೂ ಹಳಂಗಳಿಯಲ್ಲಿರುವ ಮಹಾವೀರನ ಜಿನಾಲಯಕ್ಕೂ ಸಾಮ್ಯತೆವಿದೆ. ಈ ಗ್ರಾಮಕ್ಕೆ ಪ್ರಾಚೀನದಲ್ಲಿ ಭದ್ರಬಾಹು ಮುನಿಗಳು ತಮ್ಮ ಸಂಘವನ್ನು ಕರೆದುಕೊಂಡು ಶ್ರವಣಬೆಳಗೊಳಕ್ಕೆ ಹೋಗುವಾಗ ಚತುರ್ಮಾಸವನ್ನು ಕಳೆದಿದ್ದರೂ ಎಂದು ಸ್ಥಳೀಯರ ಅಭಿಪ್ರಾಯವಾಗಿದೆ. ಹಳಂಗಳಿಯಲ್ಲಿರುವ ಒಂದು ಗುಡ್ಡಕ್ಕೆ ಭದ್ರಗಿರಿಬೆಟ್ಟ ಎಂದು ಕರೆಯುತ್ತಾರೆ. ಈ ಗುಡ್ಡದಲ್ಲಿ ಜೈನಗುಂಪು (ಗುಹೆ)ಗಳು ಇವೆ. ಇದೇ ಬೆಟ್ಟದಲ್ಲಿ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದ ಅನೇಕ ಶಿಲಾಗೋರಿಗಳು ಇವೆ. ಶ್ರೀ ೧೦೮ ಮುನಿಕುಲರತ್ನ ಭೂಷಣ ಮಹಾರಾಜರು ಭದ್ರಗಿರಿ ಬೆಟ್ಟದಲ್ಲಿ ವಿಹಾರ ಕಟ್ಟಿಸಲು ಭೂಮಿಯನ್ನು ಜೆ.ಸಿ.ಬಿ.ಯಿಂದ ಅಗೆಯುತ್ತಿರುವಾಗ ದಿನಾಂಕ ೦೧/೧೧/೨೦೧೨ರಂದು ಶನಿವಾರ ಅಪರೂಪವಾದ ಜೈನ ಧರ್ಮದ ೬ನೇ ತೀರ್ಥಂಕರ ಪದ್ಮಪ್ರಭ ವಿಗ್ರಹ ದೊರೆತಿದೆ.

ಪದ್ಮಪ್ರಭ ಶಿಲ್ಪ

ಮುನಿಗುಂಪಾ(ಜೈನಗುಂಪಾ)ದಲ್ಲಿ ದೊರೆತ ೬ನೇ ತೀರ್ಥಂಕರ ಶ್ರೀ ೧೦೦೮ ಪದ್ಮಪ್ರಭ ವಿಗ್ರಹವು ಅಮೃತ ಶಿಲೆಯಿಂದ ಕೆತ್ತಲ್ಪಟ್ಟಿದೆ. ಈ ಮೂರ್ತಿಯ ವಾಸ್ತು ಲಕ್ಷಣವನ್ನು ಗಮನಿಸಿದಾಗ ಇದು ೧೭ನೇ ಶತಮಾನಕ್ಕೆ ಸೇರಿರಬಹುದು. ಕಾರಣ ಇದೇ ಬೆಟ್ಟದಲ್ಲಿ ದಿನಾಂಕ ೫.೯.೨೦೧೨ರಂದು ಪಾರ್ಶ್ವನಾಥ ಭಗವಾನ ಮೂರ್ತಿ ದೊರೆತಿತ್ತು. ಹಾಗೂ ಪ್ರೊ. ಎಂ.ಎನ್.ಬೆನ್ನೂರ ಡಾ. ರು.ಮ.ಷಡಕ್ಷರಯ್ಯ ಮತ್ತು ಡಾ. ಎಸ್.ಕೆ.ಮೇಲಕಾರ ನೇತೃತ್ವದಲ್ಲಿ ಮೂರ್ತಿಯ ಲಕ್ಷಣಗಳನ್ನು ಕಂಡು ಇದು ಕ್ರಿ.ಶ. ೧೬ರಿಂದ ೧೭ನೇ ಶತಮಾನಕ್ಕೆ ಸೇರಿದೆ ಎಂದು ತೀರ್ಮಾನಿಸಲಾಯಿತು. ಪದ್ಮಪ್ರಭ ತೀರ್ಥಂಕರ ಲಕ್ಷಣಗಳು ಕೂಡ ಪಾರ್ಶ್ವನಾಥ ಲಕ್ಷಣಗಳನ್ನು ಹೋಲುವಂತಿದೆ.

ಸಾಮಾನ್ಯವಾಗಿ ಇಂತಹ ಶಿಲ್ಪಮೂರ್ತಿಯೂ ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಿದ್ದಲ್ಲ ಎಂಬುದು ಸ್ಪಷ್ಟ ಮಾಹಿತಿಯಾಗಿದೆ. ಇದು ಮಾನಸಸ್ತಂಭ, ಕೋಷ್ಠಕ ಹಾಗೂ ದೇವಾಲಯದ ಜಾಲಂದ್ರ ಗೋಡೆಗಳಲ್ಲಿ ಇರುವಂತದ್ದಾಗಿದೆ. ಹಾಗೆಯೇ ಅಂದು ಮುನಿಗಳು ಪೂಜಿಸಲು ಉಪಯೋಗಿಸಲಿಕ್ಕೆ ಸಾಧ್ಯವಿರಬಹುದು.

ಪದ್ಮಪ್ರಭ ಮೂರ್ತಿಯ ಪ್ರಭಾವಳಿ ಸೇರಿದಂತೆ ಒಟ್ಟು ಉದ್ದ ೧೭.೨ ಇಂಚು ಹಾಗೂ ೫.೪ ಇಂಚು ಅಗಲವಾಗಿದೆ. ಪ್ರಭಾವಳಿ ಹೊರತಾಗಿ ಮೂರ್ತಿಯ ಉದ್ದ ೯.೯ ಇಂಚುಗಳಷ್ಟಿದೆ. ಮೂರ್ತಿಯ ಪೀಠದಲ್ಲಿ ಪದ್ಮ (ಕಮಲ) ಲಾಂಛನವಿರುವುದರಿಂದ ಜೈನಧರ್ಮದ ೬ನೇ ತೀರ್ಥಂಕರ ಭಗವಾನ ಪದ್ಮಪ್ರಭ ಮೂರ್ತಿ ಎಂಬುದು ಖಚಿತವಾಗಿದೆ. ಇಂತಹ ಮೂರ್ತಿಗಳು ಸಿಗುವುದು ಬಹಳ ವಿರಳವಾಗಿದೆ.

ಮೂರ್ತಿಯ ಲಕ್ಷಣಗಳು

ಅಮೃತ ಶಿಲೆಯ ಪದ್ಮಪ್ರಭ ತೀರ್ಥಂಕರ ಮೂರ್ತಿಯು ಖಡ್ಗಾಸನದಲ್ಲಿ ನಿಂತಿದ್ದಾನೆ. ವಿಗ್ರಹದ ಅಕ್ಕ-ಪಕ್ಕದಲ್ಲಿ ಯಕ್ಷ-ಯಕ್ಷಿಣಿಯರು ಇರದೆ, ಪ್ರಭಾವಳಿ ಕಂಬಗಳು ಮೂರ್ತಿಯ ಸಮತೋಲನ ಕಾಯ್ದುಕೊಳ್ಳಲು ನೆರವಾಗುವಂತಹ ಕೊಂಬೆಗಳಿವೆ. ಭೂಮಿಗೆ ತಾಗಿದಂತೆ ಕಂಡುಬರುವ ಎರಡು ಕೈಗಳಲ್ಲಿನ ಮಗ್ಗಿನ ಕಮಲದ ಎಸಳನ್ನು ಹೊಂದಿರುವ ಭಕ್ತನು ಕರ ಜೋಡಿಸಿ ಭಕ್ತಿ ಮಾಡುತ್ತಿರುವ ಮತ್ತು ಭಕ್ತನನ್ನು ಮುಕ್ತಿಯತ್ತ ಸೆಳೆಯುವ ಭಾವದರ್ಶಿಯವಾಗಿದೆ. (ಕುಂದಕುಂದಚಾರ್ಯರ-ದಶಭಕ್ತಿಗಳಲ್ಲಿ-ಅಂಚಲಿಕ ಪುಸ್ತಕ)

ವೃಕ್ಷಸ್ಥಳದಲ್ಲಿ ಅಸ್ಪಷ್ಟ ಶ್ರೀವತ್ಸ ಚಿಹ್ನೆಗಳಿದ್ದು, ಇವು ನಾಲ್ಕು ಕರ್ಮಗಳನ್ನು ನಾಶಪಡಿಸುವ ಸೂಚನೆ ನೀಡುವಂತೆ

* ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

** ಮುಖ್ಯಸ್ಥರು, ಎಸ್.ಟಿ.ಸಿ. ಕಾಲೇಜು, ಬನಹಟ್ಟಿ.



ತೋರುತ್ತವೆ. ನಾಭಿಯ ಕೆಳಭಾಗದಲ್ಲಿ ಮೂರು ಮಡಿಕೆಯ ರೇಖೆಗಳಿವೆ. ಎರಡೂ ಕರ್ಣಗಳು ಭುಜಕ್ಕೆ ತಾಗಿ ಸುಂದರ ವಾದ ಮುಖಲಕ್ಷಣ ಹೊಂದಿದ್ದು, ಅರ್ಧ ತೆರೆದ ಕಣ್ಣುಗಳಿಂದ ನಾಶಿಕಾಗ್ರವನ್ನು ವಿಕ್ಷಿಸುವಂತಿದೆ. ಚಪ್ಪಟೆಯಾದ ಮೂಗು ಸವಕಳಿಯಾಗಿದ್ದು, ಮೋಹಕ ಹುಬ್ಬುಗಳನ್ನು ಹೊಂದಿರುವ ವಿಗ್ರಹ ಗುಂಗುರು ತಲೆಕೂದಲನ್ನು ಹೊಂದಿದೆ.

ಶಿರೋಭಾಗ ಎರಡೂ ಬದಿಯ ಮಂಟಪಾಕೃತಿಯಲ್ಲಿ ವೃತ್ತಾಕಾರದ ಪದ್ಮಗಳಿವೆ. ಇವುಗಳು ಜಾಲಂದ್ರಗಳನ್ನು ಹೋಲುವಂತಿವೆ. ಮೂರ್ತಿಯ ಪ್ರಭಾವಳಿಯ ಎಡಬದಿಯಲ್ಲಿ ಸ್ವಲ್ಪ ಭಗ್ನಗೊಂಡಿದೆ. ಕಾರಣ ಇದು ಯಾವುದೋ ಗೋಡೆಗೆ ಅಥವಾ ಮಾನಸಸ್ತಂಭಕ್ಕೆ ಹೊಂದಿಕೊಂಡಿರಬಹುದು. ಕಾರಣಾಂತರದಿಂದ ಇದು ತೃಟಿತಗೊಂಡಿದೆ. ಈ ಶಿಲ್ಪ ಮೂರ್ತಿಯ ಪೀಠದ ಕೆಳಭಾಗದಲ್ಲಿ ಯಾವುದೇ ಲಿಪಿಗಳು ಗೋಚರಿಸುತ್ತಿಲ್ಲ. ಶಿಲ್ಪಮೂರ್ತಿಯೂ ಶಿಲಾಗೋರಿಯ ಪಕ್ಕದ ಪೂರ್ವ ಈಶಾನ್ಯದಲ್ಲಿ ೪೮ ಇಂಚು ಆಳ, ೨೫ ಇಂಚು ಅಗಲದ ಜಾಗೆಯಲ್ಲಿ ಬೋರಲು ಸ್ಥಿತಿಯಲ್ಲಿ ದೊರೆತಿದೆ.

ಚತುರ್ಮುಖ ಜಿನಬಿಂಬ ಮೂರ್ತಿ

ಹಳಂಗಳಿ ಗ್ರಾಮದಲ್ಲಿ ದಿನಾಂಕ ೪.೬.೨೦೧೨ ಮಂಗಳವಾರ ಭದ್ರಗಿರಿ ಬೆಟ್ಟದ ಮುನಿಗುಂಪಾ (ಗುಹೆ)ದಲ್ಲಿ ಚತುರ್ಮುಖ ಜಿನಬಿಂಬ ಮೂರ್ತಿ ಪತ್ತೆಯಾಗಿದೆ. ಶ್ರೀ ೧೦೮ ಮುನಿ ಕುಲರತ್ನಭೂಷಣ ಮಹಾರಾಜರು ಹಾಗೂ ಊರಿನ ಗ್ರಾಮಸ್ಥರು ಗುಂಪವೊಂದನ್ನು ಪುನರುತ್ಥಾನಕ್ಕಾಗಿ ಭೂಮಿಯನ್ನು ಅಗೆಯುವಾಗ ಗುಂಪಾದ ಈಶಾನ್ಯ ಮೂಲೆಯ ಕೋಟೆಯ ಬುರ್ಜಿನ ಕೆಳಭಾಗದಲ್ಲಿ ಈ ಜಿನಬಿಂಬ ದೊರೆತಿದೆ. ಮೂರ್ತಿ ಸಿಕ್ಕಂತಹ ಸ್ಥಳ ಹಾಗೂ ಮೂರ್ತಿಯ ಲಕ್ಷಣಗಳನ್ನು ವೀಕ್ಷಿಸಿದಾಗ, ಇದು ಕ್ರಿ.ಶ.೧೩ ರಿಂದ ೧೪ನೇ ಶತಮಾನಕ್ಕೆ ಸೇರಿದ್ದಿರಬಹುದು ಎಂದು ಅಂದಾಜಿಸಲಾಗಿದೆ.

ಮೂರ್ತಿಯ ಲಕ್ಷಣಗಳು

ಜಿನಬಿಂಬ ಶಿಲ್ಪಮೂರ್ತಿ ಅಮೃತ ಶಿಲೆಯಿಂದ ರಚನೆಗೊಂಡಿದೆ. ಈ ಶಿಲ್ಪ ಮೂರ್ತಿಯ ಪೀಠದಲ್ಲಿ ಯಾವುದೇ ಲಿಪಿಗಳು ಮತ್ತು ಲಾಂಛನಗಳು ಇರದೇ ಇದ್ದುದರಿಂದ ನಿಖರವಾಗಿ ಯಾವ ತೀರ್ಥಂಕರನ ಮೂರ್ತಿಯಾಗಿದೆ ಎಂಬುದು ಹೇಳುವುದು ಕಷ್ಟವಾಗಿದೆ. ಚತುರ್ಮುಖ ಜಿನಬಿಂಬ ಮಂಟಪದಲ್ಲಿದೆ. ಮೂರ್ತಿಯೂ ೧೬ ಇಂಚು ಎತ್ತರವಾಗಿದೆ. ಹಾಗೂ ೮ ಇಂಚು ಅಗಲವಾಗಿದೆ.

ಕಮಲಪೀಠದ ಮೇಲೆ ಮಂಟಪವಿದೆ. ನಾಲ್ಕು ಕಡೆಗೆ ಪದ್ಮಾಸನದಲ್ಲಿ ಕುಳಿತ ಸುಂದರವಾದ ಮೂರ್ತಿಗಳಿವೆ. ಮಂಟಪದ ಮೇಲ್ಭಾಗದಲ್ಲಿ ಚೌಕಾಕಾರದ ಪಟ್ಟಿಕೆ, ಅದರ ಮೇಲೆ ಗುಮ್ಮಟವಿದೆ. ಈ ಗುಮ್ಮಟವನ್ನು ವೀಕ್ಷಿಸಿದಾಗ ದೆಹಲಿಯ ಸುಲ್ತಾನರ ಪ್ರಭಾವಕ್ಕೆ ಒಳಗಾಗಿ ಅವರ ಕಟ್ಟಡಗಳ ವಾಸ್ತುಶಿಲ್ಪ ಶೈಲಿಯನ್ನು ಅಳವಡಿಸಿಗೊಂಡಿದ್ದರಿಂದ ಇಂಡೋ-ಇಸ್ಲಾಮಿಕ್ ಶೈಲಿಯಲ್ಲಿ ಇದು ರೂಪುಗೊಂಡಿದೆ. ಗುಮ್ಮಟದ ಸುತ್ತಲೂ ರೇಖೆಗಳು ಕಂಡು ಬರುತ್ತವೆ. ಈ ಗುಮ್ಮಟ ನೆಲ್ಲಕಾಯಿ ಆಕೃತಿಯನ್ನು ಹೋಲುವಂತಿದೆ. ಗುಮ್ಮಟದ ಮೇಲ್ಭಾಗದಲ್ಲಿ ಚಿಕ್ಕದಾದ ಶಿಖರ ತೃಟಿತಗೊಂಡಿದೆ.

ಮಂಟಪದ ಮುಂಬದಿಯ ಮತ್ತು ಬಲಬದಿಯ ಮೂರ್ತಿಗಳು ಸ್ಪಷ್ಟ ಕೆತ್ತನೆ ಹಾಗೂ ನಿಳವಾದ ಮೂಗುಗಳು ಗುಂಗೂರು ಕೂದಲುಗಳನ್ನು ಹೊಂದಿವೆ. ಮಂಟಪದ ಎಡ ಮತ್ತು ಹಿಂಬದಿಯ ಜಿನಬಿಂಬಗಳು ಕೆತ್ತನೆಯ ನುಣಪನ್ನು ಹೊಂದಿಲ್ಲದಿರುವುದು ಸ್ಪಷ್ಟ ಮೂರ್ತಿಗಳ ಎದೆ ಮಧ್ಯಭಾಗದಲ್ಲಿ ಶ್ರೀವತ್ಸ ಚಿಹ್ನೆ ಕಂಡುಬಂದಿರುತ್ತದೆ. ಮೂರ್ತಿಗಳ ಕಿವಿಗಳು ಭುಜಕ್ಕೆ ಅಂಟಿಕೊಂಡಿವೆ. ಪದ್ಮಾಸನದಲ್ಲಿ ವೀತರಾಗ ಮುದ್ರೆಯನ್ನು ಹೊಂದಿದೆ. ಸಾಮಾನ್ಯವಾಗಿ ಇಂತಹ





ಚತುರ್ಮುಖ ಜಿನಬಿಂಬ ಮೂರ್ತಿಗಳನ್ನು ಮಾನಸ್ತಂಭದ ಮೇಲೆ ಪ್ರತಿಷ್ಠಾಪಿಸಲಾಗುತ್ತದೆ. (ಹಾಡುವಳ್ಳಿ ಜಿನ ಶಾಸನ–ವಾಸ್ತು–ಮೂರ್ತಿಶಿಲ್ಪ–ಪು.೩೩–೩೮)

ಶ್ರೀ ೧೦೮ ಮುನಿಕುಲರತ್ನಭೂಷಣ ಮಹಾರಾಜರು ಮುನಿಗುಂಪಾವನ್ನು ಒಂದು ಪ್ರವಾಸಿ ತಾಣವನ್ನಾಗಿ ಮಾಡಲು ಈ ಬೆಟ್ಟದಲ್ಲಿ ಸಿಕ್ಕಂತಹ ಪಾರ್ಶ್ವನಾಥ ಭಗವಾನ, ಪದ್ಮಪ್ರಭ ಭಗವಾನ ಹಾಗೂ ಚತುರ್ಮುಖ ಜಿನಬಿಂಬಗಳನ್ನು ಸಂರಕ್ಷಿಸಲು ಒಂದು ವಿಹಾರ ಕಟ್ಟಿಸಿ ಅಲ್ಲಿ ಪಾರ್ಶ್ವನಾಥ ಭಗವಾನನ ಮೂರ್ತಿಯನ್ನು ಎತ್ತರವಾದ ಪೀಠದ ಮೇಲೆ ಪ್ರತಿಷ್ಠಾಪಿಸಿ, ಅದರ ಕೆಳಗೆ ನೆಲಮಾಳಿಗೆಯನ್ನು ಮಾಡಿ, ಮುನಿಗಳು ತಪಸ್ಸು ಮಾಡಲು ಅನುಕೂಲ ಮಾಡಿದ್ದಾರೆ. ಎದುರಿಗೆ ಹೊಸ ಮಾನಸ್ತಂಭ ಮಾಡಿಸಿ, ಅದರ ಮೇಲ್ಭಾಗದಲ್ಲಿ ನವಶೋಧಿತ ಚತುರ್ಮುಖ ಜಿನ ಬಿಂಬವನ್ನು ಪ್ರತಿಷ್ಠಾಪಿಸಿದ್ದಾರೆ.

ಈ ಗುಂಪಾದ ಸುತ್ತಲೂ ಕಟಾಂಜನ ನಿರ್ಮಿಸಿದ್ದಾರೆ. ಗುಡ್ಡದಲ್ಲಿ ಗಿಡಮೂಲಿಕೆ ಔಷಧಗಳನ್ನು ನೆಟ್ಟಿದ್ದಾರೆ. ಹಾಗೆಯೇ ಬಿಹಾರದ ಪಾವಪುರಿಯಲ್ಲಿ ನಿರ್ಮಿಸಿದ ಜಲಮಂದಿರದಂತೆ, ಹಳಂಗಳಿ ಗ್ರಾಮದಲ್ಲಿ ಲಕ್ಷಾಂತರ ಹಣವನ್ನು ಖರ್ಚುಮಾಡಿ ಅದೇ ರೀತಿಯಲ್ಲಿ ಜಲಮಂದಿರವನ್ನು ನಿರ್ಮಿಸಲು ಮುಂದಾಗಿದ್ದಾರೆ. ಮುನಿಗಳು ಹಾಗೂ ಗ್ರಾಮದವರು ಅಪರೂಪದ ಈ ಎಲ್ಲಾ ಮೂರ್ತಿಗಳನ್ನು ಇಲ್ಲಿ ಸಂರಕ್ಷಿಸಿದ್ದು ಹೆಮ್ಮೆಯ ಸಂಗತಿಯಾಗಿದೆ.

ಹಳಂಗಳಿ ೨೫೦೦ ವರ್ಷಗಳಷ್ಟು ಪುರಾತನ ಚರಿತ್ರೆಯನ್ನು ಹೊಂದಿದೆ. ಇಂತಹ ಸ್ಥಳದ ಸುತ್ತಲಿನ ಕೃಷ್ಣಾನದಿತೀರದಲ್ಲಿ ಹನಗಂಡಿ, ಅಸ್ಕಿ, ಆಸಂಗಿ, ತಮದಡ್ಡಿ ಹಾಗೂ ತೇರದಾಳ ಹೀಗೆ ಅನೇಕ ಗ್ರಾಮಗಳು ಜೈನ ಧರ್ಮದ ಕೇಂದ್ರಗಳಾಗಿವೆ. (ದಕ್ಷಿಣಾಪಥೇಶ್ವರ–ಪುಟ ೩೭–೪೦)



[ನನ್ನ ಈ ಸಂಶೋಧನಾ ಕಾರ್ಯದಲ್ಲಿ ನನ್ನೊಂದಿಗೆ ಇದ್ದು ಸಹಾಯ ಸಹಕಾರ ಮತ್ತು ಸಲಹೆ ನೀಡಿದ ಶ್ರೀ ೧೦೮ ಮುನಿಕುಲರತ್ನಭೂಷಣ ಮಹಾರಾಜರು, ಡಾ. ಎಸ್.ಕೆ. ಮೇಲಕಾರ, ಡಾ. ಸುಜಾತ ಶಾಸ್ತ್ರಿ ಮತ್ತು ಡಿ.ಎನ್. ಅಕ್ಕಿಯವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ].

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಬಿಜಾಪುರ ಜಿಲ್ಲಾ ಗೆಜೆಟಿಯರ್.

೨. ಬಾಗಲಕೋಟೆ ಜಿಲ್ಲಾ ಶಾಸನ ಸೂಚಿ.

೩. ಕರ್ನಾಟಕದಲ್ಲಿ ಜೈನಧರ್ಮ, ಮಿರ್ಜಿ ಅಣ್ಣಾರಾಯ.

೪. ದಕ್ಷಿಣಾ ಪಥೇಶ್ವರ, ಎಚ್.ಎನ್. ಸಿದ್ದಣ್ಣ, ೩೭, ೪೦.

೫. ದಶಭಕ್ತಿಗಳಲ್ಲಿ, ಅಂಚಲಿಕ, ಕುಂದಕುಂದ ಆಚಾರ್ಯ.

೬. ಮಹಾಸಾಧ್ವಿಚಂದನಬಾಲ ನಾಟಕ ಹಾಗೂ ಪಂಚಕಲ್ಯಾಣಕಗಳು, ಶ್ರೀ ೧೦೮ ಮುನಿಕುಲರತ್ನಭೂಷಣ ಮಹಾರಾಜರು.

೪೩

ಯಲವಟ್ಟಿಯಲ್ಲಿ ನವಶೋಧಿತ ಜೈನ ಶಿಲ್ಪ

ಡಾ. ಬಾಲಕೃಷ್ಣ ಹೆಗಡೆ*

ಭಾರತದ ಪ್ರಾಚೀನ ಧರ್ಮಗಳಲ್ಲಿ ಒಂದಾದ ಜೈನ ಧರ್ಮ ದೇಶದ ದರ್ಮ, ಸಂಸ್ಕೃತಿ, ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪಗಳಿಗೆ ತನ್ನದೇ ಆದ ಕೊಡುಗೆ ನೀಡಿದ್ದನ್ನು ನಾವು ಕಾಣುತ್ತೇವೆ.

ಕರ್ನಾಟಕದ ವಿವಿಧ ಭಾಗಗಳಲ್ಲಿ ಆಳಿದ ಹಲವು ಜಿನ ಸಾಮಂತರು ಜೈನರಾಗಿದ್ದಾರೆ. ಸಾಂಸ್ಕೃತಿಕವಾಗಿ ಕರ್ನಾಟಕದ ವಾಸ್ತು ಶಿಲ್ಪವನ್ನು ಶ್ರೀಮಂತಗೊಳಿಸಿದ ಶ್ರವಣಬೆಳಗೊಳ, ಹುಂಚ, ಗೇರುಸೊಪ್ಪೆ, ಬೀಳಗಿ, ಹಾಡುವಳ್ಳಿ, ಮೂಡಬಿದಿರೆ, ಕಾರ್ಕಳ, ವೇಣೂರು ಇವು ಇಂದಿಗೂ ಜೈನ ಕ್ಷೇತ್ರಗಳಾಗಿವೆ.

ಯಲವಟ್ಟಿ ಇದು ಒಂದು ಪುಟ್ಟ ಹಳ್ಳಿ. ಶಿವಮೊಗ್ಗ ತಾಲೂಕಿನ ನಿದಿಗೆ ಹೋಬಳಿ ವ್ಯಾಪ್ತಿಯಲ್ಲಿ ಬರುವ ಒಂದು ಗ್ರಾಮ. ಇಲ್ಲಿಯ ಕೆರೆ ಹೂಳೆತ್ತುವ ಸಂದರ್ಭದಲ್ಲಿ ಮಣ್ಣಿನಡಿಯಲ್ಲಿ ಹೂತು ಹೋಗಿದ್ದ ಈ ವಿಗ್ರಹ ಬೆಳಕಿಗೆ ಬಂದಿದೆ.

ನೀಲಿ ಮಿಶ್ರಿತ ಬಳಪದ ಕಲ್ಲಿನಲ್ಲಿ ಅತ್ಯಂತ ಸುಂದರವಾಗಿ ಕೆತ್ತಲಾದ ಈ ಮೂರ್ತಿಯ ಒಟ್ಟೂ ಎತ್ತರ ೩೨ ಸೆ.ಮೀ. ಇದ್ದು, ಅಗಲ ೨೧ ಸೆ.ಮೀ. ಇದೆ. ಮೂರ್ತಿಯ ದಪ್ಪ ೧೦ ಸೆ.ಮೀ. ಇದೆ. ಇದರಲ್ಲಿ ಒಟ್ಟೂ ಐದು ಜೈನ ಮೂರ್ತಿಗಳನ್ನು ಖಂಡರಿಸಲಾಗಿದ್ದು ಐದು ಮೂರ್ತಿಗಳ ಗುಂಪಿನ ಒಂದು ವಿಗ್ರಹ ಇದಾಗಿದೆ. ಮಧ್ಯದಲ್ಲಿ ಒಂದು ಸ್ವಲ್ಪ ದೊಡ್ಡ ಮೂರ್ತಿ, ಅದರ ಸುತ್ತಲೂ ಎಡ–ಬಲಗಳಲ್ಲಿ ಮೇಲೊಂದು, ಕೆಳಗೊಂದು ಹೀಗೆ ನಾಲ್ಕು ಚಿಕ್ಕ ಜೈನ ಮೂರ್ತಿಗಳನ್ನು ಕೆತ್ತಲಾಗಿದೆ.

ಮಧ್ಯದಲ್ಲಿರುವ ಮೂರ್ತಿ ೧೪ ಸೆ.ಮೀ. ಎತ್ತರವಿದ್ದು ೧೨.೫ ಸೆ.ಮೀ. ಅಗಲವಿದೆ. ಪ್ರಭಾವಳಿ ಸುಂದರವಾದ ಲತಾ ಬಳ್ಳಿಗಳ ಕೆತ್ತನೆಯಿಂದ ಕೂಡಿದ್ದು ೧೫ ಸೆ.ಮೀ. ಎತ್ತರವಿದೆ. ಮೂರ್ತಿಯ ತಲೆಯ ಮೇಲ್ಗಡೆ ಜೈನ ಮುಕ್ಕೊಡೆ ಇದ್ದು ಅದು ೮.೫ ಸೆ.ಮೀ. ಎತ್ತರವಿದೆ.

ಸಿಂಹಪೀಠದ ಮೇಲೆ ಈ ಮೂರ್ತಿಗಳನ್ನು ಕೆತ್ತಲಾಗಿದ್ದು, ಪೀಠದ ಇಕ್ಕೆಲೆಗಳಲ್ಲಿ ಸಿಂಹಯ್ಯಾಳಿ ಚಿತ್ರಗಳನ್ನು ಕೊರೆಯಲಾಗಿದೆ. ಕೆಳಭಾಗದಲ್ಲಿರುವ ಮುಖ್ಯ ಮೂರ್ತಿಯೂ ಸೇರಿದಂತೆ ಇನ್ನಿತರ ಎರಡು ಚಿಕ್ಕ ಮೂರ್ತಿಗಳು ಕಮಲದ ದಳಗಳ ಮೇಲೆ ಕುಳಿತಂತೆ ಚಿತ್ರಿಸಲಾಗಿದೆ. ಬಲಭಾಗದ ಮೂತಿಯ ಶಿರ ಜೆ.ಸಿ.ಬಿ. ತಾಗಿ ಭಗ್ನವಾಗಿದೆ. ಎಲ್ಲಾ ಐದು ಮೂರ್ತಿಗಳು ಎಡಗಾಲ ಮೇಲೆ ಬಲಗಾಲನ್ನಿಟ್ಟು, ಪಾದದ ಮೇಲೆ ಎಡಗೈ ಮೇಲೆ ಬಲಗೈಯನ್ನಿಟ್ಟು ಧ್ಯಾನ ಭಂಗಿಯಲ್ಲಿ ಪರ್ಯಂಕಾಸನದಲ್ಲಿ ಕುಳಿತಿರುವಂತೆ ಕೊರೆಯಲಾಗಿದೆ. ಮುಖ್ಯ ಮೂರ್ತಿಯ ಹಿಂಭಾಗದಲ್ಲಿ ಎಡ–ಬಲಗಳಲ್ಲಿ ಭುಜದಿಂದ ಮೇಲಕ್ಕೆ ಎರಡು ಮರದ ರೆಂಬೆಗಳನ್ನು ಕೆತ್ತಲಾಗಿದ್ದು, ಅವುಗಳ ತುದಿಯಲ್ಲಿ ಪರ್ಯಂಕಾಸನದಲ್ಲಿ ಕುಳಿತ ಎರಡು ಮೂರ್ತಿಗಳನ್ನು ಕೆತ್ತಲಾಗಿದೆ.

ಪೀಠದಲ್ಲಿ ಸಿಂಹಲಾಂಛನವಿರುವುದರಿಂದ ಇದೊಂದು ಮಹಾವೀರ ತೀರ್ಥಂಕರ? ಮೂರ್ತಿ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ. ಸಾಮಾನ್ಯವಾಗಿ ನಾಲ್ಕು ಮೂರ್ತಿಗಳಿರುವ ವಿಗ್ರಹಗಳು ದೊರೆಯುತ್ತವೆ. ಆದರೆ ಈ ರೀತಿಯ ಐದು ವಿಗ್ರಹಗಳಿರುವ ಮೂರ್ತಿ ದೊರೆಯುವುದು ಬಹಳ ವಿರಳ. ಈ ಮೂರ್ತಿ ಅತ್ಯಂತ ವಿಶಿಷ್ಟವಾಗಿದ್ದು, ಇದೊಂದು 'ಪಂಚತೀರ್ಥಿ' ಜೈನ ವಿಗ್ರಹ ಎಂದು ಇತಿಹಾಸಕಾರರಾದ ಡಾ. ಶ್ರೀನಿವಾಸ ಪಾಡಿಗಾರ ಅಭಿಪ್ರಾಯಪಟ್ಟಿದ್ದಾರೆ.

ತೀರ್ಥಂಕರ ಪರ್ಯಂಕಾಸನದಲ್ಲಿ ಧ್ಯಾನಮುದ್ರೆಯಲ್ಲಿದ್ದು, ಏಕಚಿತ್ತವಾಗಿ ನಾಸಿಕದ ತುದಿ, ನೀಳವಾದ ಜೋತು ಬಿದ್ದ ಕಿವಿಗಳು, ಗಂಭೀರವಾದ ಏಕಚಿತ್ತ ಮುಖ ಭಾವ, ಗುಂಗುರು ಕೂದಲು, ಕಮಲದ ದಳಗಳ ಮೇಲೆ ಪದ್ಮಾಸನದಲ್ಲಿ ಕುಳಿತ ತೀರ್ಥಕರನ ಕಾಲುಗಳು ಒಂದರ ಮೇಲೊಂದು. ತಲೆಯ ಮೇಲೆ ಮುಕ್ಕೊಡೆ ಈ ಮೂರ್ತಿ ಶಿಲ್ಪದ ವೈಶಿಷ್ಟ್ಯವಾಗಿದೆ. ಈ ಶಿಲ್ಪ ಕಲಾಸೌಂದರ್ಯ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಮಹತ್ವದ್ದಾಗಿದೆ. ಕೆತ್ತನೆ ಶೈಲಿಯಿಂದ ಈ ವಿಗ್ರಹ ಸುಮಾರು ಕ್ರಿ.ಶ. ೧೨–೧೩ನೇ ಶತಮಾನದ ಹೊಯ್ಸಳ ಕಾಲದ್ದಿರಬಹುದೆಂದು ಊಹಿಸಬಹುದು.

ಮೂರ್ತಿಯ ಹಿಂಭಾಗ ಸಂಪೂರ್ಣ ನುಣುಪಾಗಿದ್ದು ಯಾವುದೇ ಶಾಸನವಾಗಲೀ ಕೆತ್ತನೆಯಾಗಲೀ ಇಲ್ಲ. ಈ

* ಇತಿಹಾಸ ವಿಭಾಗ, ಕಮಲಾ ನೆಹರು ಮಹಿಳಾ ಕಾಲೇಜು, ಶಿವಮೊಗ್ಗ.



ಮೂರ್ತಿಯ ಮಾಟವನ್ನು ಗಮನಿಸಿದರೆ ಇದೊಂದು ಭಕ್ತರು ಹರಕೆ ಹೊತ್ತು ಕೆತ್ತಿಸಿ ನೀಡಿದ ಮೂರ್ತಿಯಂತೆ ಕಾಣುತ್ತದೆ.

ನಿದಿಗೆ ಗ್ರಾಮದ ದೊಡ್ಡಕೆರೆ ಏರಿ ಮೀಲಿನ ಕಲ್ಲಿನಲ್ಲಿನ ಆರು ಸಾಲಿನ ಶಾಸನ ಯಲವಟ್ಟಿ ಕುರಿತು ಉಲ್ಲೇಖವನ್ನು ನೀಡುತ್ತಿದೆ. ಆ ಶಾಸನದ ಪಾಠ ಇಂತಿದೆ:

೧ ಸ್ವಸ್ತಿ ಸಮಸ್ತ ಸಕಳಗುಣ ಸಂಪಂನರಪ್ಪ ಶ್ರೀಮೂಲ

೨ ಸಂಘ ದೇಸಿಯುಗಣ ಕೊಂಡಕುಂದಾನ್ವಯು ವೋಸ್ತಕಗಛ್ಛದ

೩ .....

೪

೫ ಗೌಡನ ಮಗ ಎಲವಟ್ಟಿಯ ದಾಸೆಯನಾಯಕನ ಸಿದ್ದಯಪ್ಪ ಭೂಮಿ

೬ ಯಿದು ಮಂಗಳಮಹಾ ಶ್ರೀಶ್ರೀಶ್ರೀ

ಜೈನ ಧರ್ಮದ ಸಂಪ್ರದಾಯದಂತೆ ಸಲ್ಲೇಖನ ವ್ರತ ಆಚರಿಸಿ ನಿರ್ವಾಣ ಹೊಂದಲು ಜೈನರು ಶ್ರವಣಬೆಳಗೊಳ, ಕೊಪ್ಪಳ ಮೊದಲಾದ ಪ್ರಸಿದ್ಧ ಜೈನ ಕ್ಷೇತ್ರಗಳಿಗೆ ಹೋಗುತ್ತಿದ್ದಂತೆ ನಿದಿಗೆ, ಯಲವಟ್ಟಿ ಗ್ರಾಮಗಳಿಗೂ ಬರುತ್ತಿದ್ದರೆಂಬುದು ಈ ವಿಗ್ರಹದಿಂದ ತಿಳಿಯಬಹುದು.

ಯಲವಟ್ಟಿ, ಇಲ್ಲಿಗೆ ಸಮೀಪದ ಹೊಸೂಡಿ, ಪುರಲೆ, ಗುರುಪುರ, ನಿದಿಗೆ ಮೊದಲಾದ ಗ್ರಾಮಗಳು ಜೈನ ಧರ್ಮದ ಪ್ರಭಾವವಿದ್ದ ಗ್ರಾಮಗಳಾಗಿದ್ದವೆಂಬುದು ಇದರಿಂದ ವೇದ್ಯವಾಗುತ್ತದೆ. ಅಲ್ಲದೆ ಈ ಗ್ರಾಮಗಳಲ್ಲಿ ದೊರಕಿದ, ದೊರಕುತ್ತಿರುವ ಜೈನ ಶಿಲ್ಪಗಳು, ಶಾಸನಗಳು, ನಿಷಿಧಿ ಕಲ್ಲುಗಳು ಈ ಭಾಗದಲ್ಲಿ ಜೈನ ಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿತ್ತು ಎಂಬುದನ್ನು ಪುಷ್ಟೀಕರಿಸುತ್ತವೆ.

ಈ ಮೂರ್ತಿಯನ್ನು ಅರ್ಥೈಸುವಿಕೆಯಲ್ಲಿ ಸಹಕರಿಸಿದ ನನ್ನ ಗುರುಗಳಾದ ಡಾ. ಶ್ರೀನಿವಾಸ ಪಾಡಿಗಾರ ಅವರಿಗೂ ಮಿತ್ರರಾದ ಡಾ. ಜಗದೀಶ ಅಗಸಿಬಾಗಿಲ ಅವರಿಗೂ, ಅಲ್ಲದೆ ಈ ವಿಗ್ರದ ಮಾಹಿತಿ ನೀಡಿದ ನನ್ನ ವಿದ್ಯಾರ್ಥಿನಿ ನಯನಾಳಿಗೂ ಮೂರ್ತಿಯನ್ನು ಜೋಪಾನವಾಗಿರಿಸಿ ಕೊಂಡ ಚಂದ್ರಪ್ಪ ಶಿವಣ್ಣ ಯಲವಟ್ಟಿ ಅವರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಇ.ಸಿ. ಸಂಪುಟ VII P-I, ನಂ. ೫೮, ಪುಟ ಸಂಖ್ಯೆ ೬೧.

೨. ಡಾ.ವಾಸುದೇವನ್ ಸಿ.ಎಸ್. (ಸಂ) 'ಮುಕ್ಕೊಡೆ' ಜೈನ ಸಂಸ್ಕೃತಿಯ ಕುರಿತ ಲೇಖನಗಳು, ಹಂಪಿ.

೩. ಭಟ್ ಸೂರಿ ಕೆ.ಜಿ., 'ಹಾಡುವಳ್ಳಿ' ಜೈನ ಶಾಸನ ವಾಸ್ತು-ಮೂರ್ತಿ ಶಿಲ್ಪ, ಹಂಪಿ.

೪. ಡಾ. ಕಲಘಟಗಿ ಟಿ.ಜಿ., 'ಜೈಟಿಸಮ್ ಚಿಂಡ್ ಕರ್ನಾಟಕ ಕಲ್ಚರ್' (ಸಂ). ಕ.ವಿ.ವಿ., ಧಾರವಾಡ.

೪೪

ಪೆರುವಾಜೆಯಲ್ಲಿ ಪತ್ತೆಯಾದ ಪ್ರಾಚೀನ ಬುದ್ಧನ ವಿಗ್ರಹ ಮತ್ತು ಇತರ ಪ್ರಾಚ್ಯಾವಶೇಷಗಳು

ಡಾ. ಜಿ. ಲಕ್ಷ್ಮೀ ಪ್ರಸಾದ*

ಪೆರುವಾಜೆ ಗ್ರಾಮವು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಬೆಳ್ಳಾರೆಗೆ ಹೊಂದಿಕೊಂಡಿರುವ ಸಣ್ಣ ಗ್ರಾಮ. ಹಿಂದೆ ಇದು ಬೆಳ್ಳಾರೆ ಮಾಗಣೆಗೆ ಸೇರಿತ್ತು. ಇಲ್ಲಿ ಬೆಳ್ಳಾರೆ ಸವಣೂರು ಮಾರ್ಗದಲ್ಲಿ ಬೆಳ್ಳಾರೆಯಿಂದ ಒಂದು ಒಂದೂವರೆ ಕಿಲೋಮೀಟರ್ ದೂರದಲ್ಲಿ ಒಂದು ಪ್ರಸಿದ್ಧವಾದ ಜಲದುರ್ಗಾ ದೇವಾಲಯುವಿದೆ. ಈ ದೇವಾಲಯದಿಂದ ಸುಮಾರು ಅರ್ಧ ಕಿಲೋಮೀಟರ್ ದೂರದಲ್ಲಿ ಒಂದು ಸಣ್ಣ ಇಳಿಜಾರಾದ ಗುಡ್ಡವಿದೆ. ಇಲ್ಲಿ ಸುಮಾರು ವರ್ಷದಿಂದ ಗುಳಿಗ ರಕ್ತೇಶ್ವರಿ ದೈವಗಳ ನೆಲೆ ಇದೆ ಎಂಬ ನಂಬಿಕೆ ಇತ್ತು. ಇತ್ತೀಚೆಗೆ ಅಲ್ಲಿ ಈ ದೈವಗಳಿಗೆ ಗುರಿ ಕಟ್ಟಿರುವ ಬಗ್ಗೆ ಜಾಗ ಸ್ವಚ್ಛ ಮಾಡುವಾಗ ಅಲ್ಲಿ ೧೦ x ೧೦ ಅಡಿ ವಿಸ್ತೀರ್ಣದ ಎರಡಡಿ ಎತ್ತರದ ಒಂದು ಕಟ್ಟಡದ ಅಡಿಪಾಯ ಕಾಣಸಿಕ್ಕಿತು. ಅಲ್ಲಿಯೇ ಒಂದು ಬದಿಯಲ್ಲಿ ಒಂದು ಗಿಡ ಕಂಟಿಗಳ ಪೊದೆಲಿನಲ್ಲಿ ಅನೇಕ ಪ್ರಾಚೀನ ವಿಗ್ರಹಗಳು ಪತ್ತೆಯಾದವು. ದಕ್ಷಿಣ ಕನ್ನಡ ಜಿಲ್ಲೆ ತುಳುವರ ನಾಡು ಇಲ್ಲಿ ಭೂತಾರಾಧನೆ ಪ್ರಸಿದ್ಧವಾದುದು. ಹಾಗಾಗಿ ಇಲ್ಲಿ ಸಿಕ್ಕಿದ ವಿಗ್ರಹಗಳನ್ನು ಭೂತಗಳದ್ದು ಎಂದು ಸ್ಥಳೀಯರು ಭಾವಿಸಿದ್ದರು. ಈ ಬಗ್ಗೆ ಅಲ್ಲೇ ಸಮೀಪದ ಶಿವರಾಮ ಕಾರಂತ ಕಾಲೇಜಿನ ವಿದ್ಯಾರ್ಥಿ ರಜನೀಶ ಅವರು ಇಲ್ಲಿ ಅನೇಕ ಭೂತಗಳ ವಿಗ್ರಹಗಳು ಇವೆ ಎಂದು ನಮಗೆ ತಿಳಿಸಿದರು. ಅದನ್ನು ನೋಡಲೆಂದು ನಾನು ಮಗನೊಂದಿಗೆ ೧೬ ಫೆಬ್ರವರಿ ೨೦೧೨ರಂದು ಆ ಸ್ಥಳಕ್ಕೆ ಹೋದೆ.

ಅಲ್ಲಿ ಅನೇಕ ಭಿನ್ನಗೊಂಡಿರುವ ವಿಗ್ರಹಗಳು ಇದ್ದವು. ಅಲ್ಲಿ ಮಣ್ಣಿನಲ್ಲಿ ಹೂತಿದ್ದು ಸ್ವಲ್ಪ ಮಾತ್ರ ಕಾಣುವ ವಿಗ್ರಹ ಒಂದನ್ನು ಎಳೆದು ಹೊರತೆಗೆದು ನೋಡಿದಾಗ ಅದು ಬುದ್ಧನ ವಿಗ್ರಹವಾಗಿತ್ತು. ಇದರ ಮುಖದ ಭಾಗ ವಿರೂಪ ಗೊಂಡಿದ್ದರೂ ಸ್ಪಷ್ಟವಾಗಿ ಬುದ್ಧನ ವಿಗ್ರಹ ಎಂದು ಗುರುತಿಸ ಬಹುದಾಗಿದೆ. ಮುಖದ ಭಾಗ ಉದ್ದೇಶಪೂರ್ವಕವಾಗಿ ಜಜ್ಜಿ ಹಾಕಿದಂತಿದ್ದು ಇಲ್ಲಿ ಸಂಘರ್ಷ ನಡೆದಿರುವ ಸಾಧ್ಯತೆಯನ್ನು ಸೂಚಿಸುತ್ತದೆ.

ಶಾಸನ ಹಾಗು ಇತರ ಅನೇಕ ಆಧಾರಗಳ ಮೇಲೆ ಡಾ. ಬಿ.ಎ. ಸಾಲೆತೂರ್, ಡಾ. ಗುರುರಾಜ ಭಟ್, ಗೋವಿಂದ ಪೈ, ಡಾ. ರಮೇಶ್ ಕೆ.ವಿ., ಡಾ. ವಸಂತಕುಮಾರ್ ತಾಳ್ತಜೆ ಮೊದಲಾದವರು ಕರ್ನಾಟಕದಲ್ಲಿ ಬೌದ್ಧಾರಾಧನೆ ಇತ್ತು ಎನ್ನುವುದನ್ನು ಈ ಹಿಂದೆಯೇ ತೋರಿಸಿಕೊಟ್ಟಿದ್ದಾರೆ. ಆದರೆ ನೇರವಾಗಿ ಬುದ್ಧನದೆಂದು ಗುರುತಿಸಬಹುದಾದ ಬುದ್ಧನ ವಿಗ್ರಹ ಈತನಕ ಸುಳ್ಯ-ಪುತ್ತೂರು ತಾಲೂಕುಗಳಲ್ಲಿ ಎಲ್ಲೂ ಪತ್ತೆಯಾಗಿರಲಿಲ್ಲ. ಮಂಗಳೂರಿನ ಕದ್ರಿಯ ಮಂಜುನಾಥೇಶ್ವರ ದೇವಾಲಯದಲ್ಲಿರುವ ಮೂರು ಮುಖದ ಲೋಕೇಶ್ವರ ಮೂರ್ತಿ (ಇದನ್ನು ಬ್ರಹ್ಮ ಎಂದು ಭಾವಿಸಿದ್ದರು)ಯನ್ನು ಅದರ ಕೆಳಗಿನ ಶಾಸನ ಹಾಗು ಇತರ ಕೆಲವು ಆಧಾರಗಳಿಂದ ಬುದ್ಧನ ಇನ್ನೊಂದು ಸ್ವರೂಪ ಅವಲೋಕಿತೇಶ್ವರ ಎಂದು ಗುರುತಿಸಿ ಕದ್ರಿ ಬೌದ್ಧ ವಿಹಾರವಾಗಿತ್ತು ಎಂದು ವಿದ್ವಾಂಸರು ಸ್ಪಷ್ಟಪಡಿಸಿದ್ದಾರೆ. ಕದ್ರಿ ಬಿಟ್ಟರೆ ಮಂಗಳೂರು, ಸುಳ್ಯ, ಬಂಟ್ವಾಳ, ಬೆಳ್ತಂಗಡಿ, ಪುತ್ತೂರು, ಕಾಸರಗೋಡು ತಾಲ್ಲೂಕುಗಳಲ್ಲಿ ಎಲ್ಲಿಯೂ ಬೌದ್ಧಾರಾಧನೆ ಇದ್ದುದಕ್ಕೆ ಯಾವುದೊಂದೂ ಆಧಾರ ಈತನಕ ಸಿಕ್ಕಿರಲಿಲ್ಲ.

ಈ ಎರಡು ಕಾರಣಗಳಿಂದ ಸುಳ್ಯ ತಾಲೂಕಿನ ಬೆಳ್ಳಾರೆ-ಸವಣೂರು ಮಾರ್ಗದಲ್ಲಿ ಬೆಳ್ಳಾರೆ ಸಮೀಪದಲ್ಲಿರುವ ಪೆರುವಾಜೆಯ ದೇವಸ್ಥಾನದ ಸಮೀಪದ ಇಳಿಜಾರಾದ ಗುಡ್ಡದಲ್ಲಿ ಪತ್ತೆಯಾದ ಬುದ್ಧನ ವಿಗ್ರಹ ಬಹಳ ಮುಖ್ಯವಾದ ದಾಖಲೆಯಾಗಿದೆ. ಇಲ್ಲಿ ಒಂದು ಮುಖದ ಭಾಗ ವಿರೂಪ ಗೊಂಡಿದ್ದರೂ ಎಡ ಬಲ ಭಾಗದ ಬುದ್ಧನ ಉದ್ದನೆಯ ವಿಶಿಷ್ಟ ಕಿವಿಗಳು, ಮೇಲೆ ಎತ್ತಿ ಕಟ್ಟಿದ ಉಷ್ಣೀಶ (ಜಟೆ) ಗಳಿಂದ ಸ್ಪಷ್ಟವಾಗಿ ಬುದ್ಧನದೆಂದು ಗುರುತಿಸಬಹುದಾದ ಬುದ್ಧನ ತಲೆ ಸಿಕ್ಕಿದೆ. ಇನ್ನೊಂದು ಸ್ಪಷ್ಟವಾಗಿ ಕಾಣುವ

* ಕನ್ನಡ ಉಪನ್ಯಾಸಕಿ, ಸರ್ಕಾರಿ ಪದವಿಪೂರ್ವ ಕಾಲೇಜು, ಬೆಳ್ಳಾರೆ, ಸುಳ್ಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.





ಮಾನವ ರೂಪಿನ ಮುಖ ಸಿಕ್ಕಿದೆ. ಇದನ್ನು ಡಾ. ಮುರುಗೇಶಿ ಅವರು 'ಅಮಿತಾಬ ಬುದ್ಧ, ಬೋಧಿಸತ್ವ ಇಲ್ಲವೇ ಯಕ್ಷ ಇರಬಹುದೆಂದು' ತಿಳಿಸಿದ್ದಾರೆ. ಉಬ್ಬಿದ ಕಣ್ಣುಗಳು ಇರುವ ನಂದಿಯ ಮುಖ ಹಾಗೂ ಮುಖವಿಲ್ಲದ ದೇಹ ಮಾತ್ರ ಇರುವ ಎರಡು ನಂದಿಯ ವಿಗ್ರಹಗಳಿವೆ. ಒಂದು ಪೂರ್ಣ ವಿಗ್ರಹ ಇದ್ದು ಮೇಲ್ನೋಟಕ್ಕೆ ಹುಲಿಯನ್ನು ಹೋಲುತ್ತದೆ. ಒಂದು ಮಾನವನ ಕಾಲು ಮಾತ್ರ ಸಿಕ್ಕಿದೆ. ಈ ಕಾಲಿನಲ್ಲಿ ಕಾಲುಂಗರ ಇರುವುದರಿಂದ ಇದು ಸ್ತ್ರೀ ವಿಗ್ರಹದ ಅವಶೇಷ ಎಂದು ಹೇಳಬಹುದು. ೧೦ x ೧೦ ವಿಸ್ತಾರ ಹಾಗು ಒಂದಡಿ ಎತ್ತರದ ಮುರುಕಲ್ಲಿನಲ್ಲಿ ಕಟ್ಟಿದ ಅಡಿಪಾಯ ಕೂಡಾ ಇತ್ತು.

ಪೆರುವಾಜೆಯಲ್ಲಿ ಬುದ್ಧನ ಅಪರೂಪದ ಮೂರ್ತಿ ಪತ್ತೆ ಎಂಬ ನನ್ನ ಲೇಖನ ೨೦೧೨ರ ಮಾರ್ಚ್ ೩೦ರಂದು ಪ್ರಜಾವಾಣಿಯ ಕರಾವಳಿ ದರ್ಶನ ಪುರವಣಿಯಲ್ಲಿ ಪ್ರಕಟವಾಯಿತು. ಇಲ್ಲಿ ಹೆಚ್ಚಿನ ಅಧ್ಯಯನ ನಡೆಯಬೇಕೆಂಬ ಉದ್ದೇಶದಿಂದ ಸಂಶೋಧಕರ ಗಮನಕ್ಕೆ ತರುವುದಕ್ಕಾಗಿಯೇ ಈ ಲೇಖನ ಬರೆದಿದ್ದೆ.

ನನಗೂ ಸಂಶೋಧನೆ ಆಸಕ್ತಿ ಇದ್ದ ಕಾರಣ ಮುರುಗೇಶಿ ಅವರು ಬಂದಾಗ ಆ ವಿಗ್ರಹಗಳನ್ನು ತೋರಿಸಿದೆ. 'ನಾನು ಮೊದಲು ಲೇಖನದಲ್ಲಿ ಬರೆದ ವಿಚಾರಗಳನ್ನು ದೃಢಪಡಿಸಿದ್ದಲ್ಲದೆ ಅಲ್ಲಿ ಪ್ರಾಗೈತಿಹಾಸಿಕ ಕಾಲದ ಕುರುಹುಗಳನ್ನು ತೋರಿಸಿದ್ದಾರೆ ಇಲ್ಲಿ ಸಿಕ್ಕಿದ ನಂದಿಯ ವಿಗ್ರಹಗಳು ಶಾತವಾಹನವರ ಕಾಲದ್ದೆಂದು ಗುರುತಿಸಿ ಇದರ ಕಾಲ ಸುಮಾರು ಕ್ರಿ.ಶ. ಎರಡನೇ ಶತಮಾನ' ಎಂದು ಡಾ. ಮುರುಗೇಶಿ ಅವರು ತಿಳಿಸಿದ್ದಾರೆ. ಇಲ್ಲಿನ ಜಲದುರ್ಗಾದೇವಿ ದೇವಾಲಯ ಹಿಂದೆ ಬೌದ್ಧ ವಿಹಾರವಾಗಿದ್ದು ಈಗ ಲಿಂಗ ರೂಪಿಮೂರ್ತಿಯ ಬದಲು ಮಾನವ ರೂಪಿನ ವಿಗ್ರಹ ಇದ್ದಿರುವ ಸಾಧ್ಯತೆ ಇದೆ.

ಈ ಬುದ್ಧನ ಮೂರ್ತಿಯ ಫೋಟೋ ಅನ್ನು ನಾನು ಖ್ಯಾತ ಸಂಶೋಧಕರಾದ ಡಾ. ಸುಂದರ ಅವರಿಗೆ ತೋರಿಸಿದಾಗ ಅವರು 'ಈ ವಿಗ್ರಹದ ತಲೆಯ ಮೇಲೆ ಗಂಟಿನ ತರಾ ಉಬ್ಬು ಇದೆ ಇದನ್ನು ಉಷ್ಣೀಶ ಎನ್ನುತ್ತೇವೆ. ಇದು ಇರುವುದರಿಂದ ಮತ್ತು ಕಿವಿ ತುಂಬಾ ಅಗಲವಾಗಿ ಇರುವುದರಿಂದ ಇದೊಂದು ವಿಶಿಷ್ಟ ಮಾನವನ ಮೂರ್ತಿ ಎನ್ನಬಹುದು ಬಹು ಶ್ರುತಃ ಎಂದರೆ ಜ್ಞಾನಿಯಾದ ಮನುಷ್ಯನ ವಿಗ್ರಹ ಎನ್ನಬಹುದು. ಯಾರು ಜ್ಞಾನವನ್ನು ಪಡೆದು ಕೊಂಡಿರುತ್ತಾರೆ, ಆತ್ಮ ಸಾಕ್ಷಾತ್ಕಾರವನ್ನು ಅವರಿಗೆ ತಲೆ ಮೇಲೆ ಈ ರೀತಿಯ ಉಬ್ಬು ಇರುತ್ತದೆ ಅದಕ್ಕೆ ನಾವು ಉಷ್ಣೀಶ ಎಂದು ಕರೆಯುತ್ತೇವೆ. ಇಲ್ಲಿ ಉಷ್ಣೀಶ ಇರುವುದರಿಂದ ಇದರ ಆಕಾರವು ಬುದ್ಧನನ್ನು ಹೋಲುತ್ತಿರುವುದರಿಂದ ಇದನ್ನು ಬುದ್ಧನ ಮೂರ್ತಿ ಎನ್ನಬಹುದು' ಎಂದು ಅಭಿಪ್ರಾಯಪಟ್ಟಿದ್ದಾರೆ.

ಮಡಿಕೇರಿ ಪರಿಸರದಲ್ಲಿ ಬುದ್ಧಾರಾಧನೆ ಇದ್ದುದಕ್ಕೆ ಅನೇಕ ಆಧಾರಗಳು ಸಿಕ್ಕಿವೆ. ಪೆರುವಾಜೆ ಮಡಿಕೇರಿ ನಡುವೆ ತುಂಬಾ ಅಂತರ ಇಲ್ಲ ಆದ್ದರಿಂದ ಇಲ್ಲಿ ಬುದ್ಧನ ಆರಾಧನೆ ಇದ್ದಿರುವ ಸಾಧ್ಯತೆ ಇದೆ ಎಂದು ಖ್ಯಾತ ಸಂಶೋಧಕರಾದ ಡಾ. ಎಂ.ಜಿ. ನಾಗರಾಜ್ ಅವರು ಅಭಿಪ್ರಾಯಪಟ್ಟಿದ್ದಾರೆ. ಇಲ್ಲಿ ಇನ್ನು ಕೂಡಾ ಹೆಚ್ಚಿನಾಧ್ಯಯನಕ್ಕೆ ಅವಕಾಶವಿದೆ.





ಇಲ್ಲಿ ಈ ವಿಗ್ರಹಗಳನ್ನು ಸ್ಥಳೀಯರು ಹರಿಕೆಯಾಗಿ ಬಂದ ಭೂತ ಸಂಬಂಧಿ ವಿಗ್ರಹಗಳೆಂದು ಭಾವಿಸಿದ್ದು, ಭೂತದ ಗುಡಿಯಲ್ಲಿ ಪ್ರತಿಷ್ಠಾಪನೆ ಮೊದಲಾದ ವೈದಿಕ ವಿಧಿಗಳು ಮುಗಿದ ನಂತರ ಜಲ ವಿಸರ್ಜನೆ ಮಾಡುತ್ತಾರೆ. ಅನಂತರ ಈ ವಿಗ್ರಹಗಳು ಎಲ್ಲೋ ಜಲ ಸಮಾಧಿಯಾಗಿ ಬಿಡುತ್ತವೆ. ಆದ್ದರಿಂದ ಈ ವಿಗ್ರಹಗಳನ್ನು ಅವರ ಕೈಯಿಂದ ಪಡೆದು ರಕ್ಷಿಸುವ ಕಾರ್ಯ ಜರೂರಾಗಿ ಆಗಬೇಕಾಗಿದೆ. ಇಲ್ಲವಾದರೆ ಈ ಅಪರೂಪದ ದಾಖಲೆ ನಾಶವಾಗಿ ಬಿಡಬಹುದು.

[ವಿ.ಸೂ: ಈ ವಿಗ್ರಹಗಳನ್ನು ಪ್ರಶ್ನೆಯಲ್ಲಿ ಕಂಡುಬಂದಂತೆ ಉಪ್ಪಿನಂಗಡಿ ಹೊಳೆಯಲ್ಲಿ ಬಿಸಾಡಿರುವ ಬಗ್ಗೆ ಈಗ ಮಾಹಿತಿ ದೊರೆತಿದೆ. ಇತಿಹಾಸ ಪ್ರಜ್ಞೆಯ ಕೊರತೆಯಿಂದಾಗಿ ಅಮೂಲ್ಯ ದಾಖಲೆಯೊಂದು ನಾಶವಾಗಿದೆ.]

೩೫

ಪಂಪಾಪತಿ ಸ್ಥಾಪನೆ

ಶ್ರೀಮತಿ ವಸುಂದರಾದೇಸಾಯಿ ಮಹಾಪುರುಷ*

ಬಿಷ್ಟಪ್ಪಯ್ಯರು ಅಲ್ಲಲ್ಲಿ ಬಿಡಿಬಿಡಿಯಾಗಿ ಗುಡಿಗಳ ನಿರ್ಮಾಣ, ಜೀರ್ಣೋದ್ಧಾರ ಮಾಡಿದ್ದಾರಾದರೂ, ಇಡೀ ಕ್ಷೇತ್ರದ ಪುನರುತ್ಥಾನ ಕಾರ್ಯ ಕೈಗೊಂಡಿದ್ದೆಂದರೆ ಹಂಪಿ ಮತ್ತು ತಮ್ಮ ಪ್ರೀತಿಯ ನೆಲೆಯಾಗಿದ್ದ ರಂಗಾಪುರ-ಬಿದಿರಹಳ್ಳಿ ಪರಿಸರದಲ್ಲಿ ಅವರ ಶತನಾಮಗಳಲ್ಲಿ

ರಂಗಾಪುರ ನಿವಾಸಶ್ಚ । ರಾಮೇಶಾಲಯ ದರ್ಶಕಃ ॥
ವೇಣುಪಲ್ಲಿ ಮಹಾಕ್ಷೇತ್ರ । ಜೀರ್ಣೋದ್ಧಾರ ವಿಶಾರದಃ
ವಿರೂಪಾಕ್ಷೈಕ ನಿಷ್ಠಾತ್ಮ । ಮಹಾಗೋಪುರ ನಿರ್ಮಾಪಕಃ॥

ಎಂಬವೂ ಸೇರಿವೆ.

ಹಂಪಿಯನ್ನು ತರ್ಕಬದ್ಧವಾದ ಊಹೆಯೊಂದಿಗೆ ಯೋಚಿಸಿದಲ್ಲಿ ಮತ್ತೊಂದು ಮಹತ್ವದ ಇತಿಹಾಸದ ತುಣುಕಿನ ಮೇಲೆ ಬೆಳಕು ಚೆಲ್ಲಬಹುದಾಗಿದೆ.

ಕೃಷ್ಣದೇವರಾಯರ ಕಾಲದಲ್ಲಿ ಡೊಮಿಂಗೋ ಪಾಯೆಷ್ (Paes) ಎಂಬ ವಿದೇಶಿ ಪ್ರವಾಸಿ ಹಂಪಿಗೆ ಭೇಟಿ ನೀಡಿದ್ದು ತನ್ನ ಅನುಭವವನ್ನು ಈ ರೀತಿ ದಾಖಲಿಸಿದ್ದಾನೆ. ಆಗ ವಿದೇಶೀಯರಿಗೆ ಗುಡಿಯ ಒಳಗೆ ಪ್ರವೇಶ ವಿರಲಿಲ್ಲವಂತೆ, ಆದರೂ ಆತ ಪೂಜಾರಿಗೆ ಏನೋ ಕೊಟ್ಟು ವಿರೂಪಾಕ್ಷನ ಗುಡಿಯ ಒಳಗೆಲ್ಲ ಓಡಿಯಾಡಿದ್ದನಂತೆ. ಆಗ ತಾ ಕಂಡ ಮಹಿಷಾಸುರ ಮರ್ದಿನಿಯ ಮೂರ್ತಿ ಅಮೃತಶಿಲೆಯದ್ದಾಗಿದ್ದು ಅದಕ್ಕೆ ಆರು ಕೈಗಳಿವೆ ಎಂದು ಹೇಳಿದ್ದಾನೆ. ಈಗಿನ ವಿಗ್ರಹ ಕಪ್ಪು ಶಿಲೆಯದಾಗಿದ್ದು ಅದಕ್ಕೆ ಎಂಟು ಕೈಗಳಿವೆ. ಪಾಯೆಷ್ ಹೇಳಿದ ವಿಗ್ರಹ ಭಿನ್ನವಾಗಿದ್ದು ಈಗ ಪಂಪಾ ಸರೋವರದ ಗುಹೆಯಲ್ಲಿದೆ ಎಂದು ಫಿಲಿಯೋಜ಼ಾ ಅವರು 'ಅಳುದುಳಿದ ಹಂಪಿ' ಪುಸ್ತಕದಲ್ಲಿ ಹೇಳಿದ್ದಾರೆ.

ಪಂಪಾಪುರ ಆದಿಕಾಲದಿಂದಲೂ ಕೇವಲ ವಿರೂಪಾಕ್ಷನ ರಾಜ್ಯ. ಬುಕ್ಕ ಸಾಗರ ಸಮೀಪದ ದಿಬ್ಬದ ಮೇಲಿರುವ ಕಿನ್ನರೇಶ್ವರ, ಪೂರ್ವದ ಗಡಿ, ಜಂಬುಕೇಶ್ವರ ಆತನ ದಕ್ಷಿಣದ ಗಡಿ, ಕೊಪ್ಪಳದ ಸೋಮೇಶ್ವರ ಪಶ್ಚಿಮದ ಗಡಿ, ಯಲ್ಲಾಪುರದ ವಾಣಿ ಭದ್ರೇಶ್ವರ ಉತ್ತರದ ಗಡಿ. ಈಗಲೂ ಕೆಲಭಕ್ತರು ತಲಕಾಡಿನ ಪಂಚಲಿಂಗೇಶ್ವರನ ದರ್ಶನದ ರೀತಿಯಲ್ಲಿ ವಿರೂಪಾಕ್ಷನ ಮತ್ತು ಈ ನಾಲ್ಕೂ ಲಿಂಗಗಳನ್ನು ಒಟ್ಟಾಗಿ ದರ್ಶಿಸುವ ಆಚರಣೆ ಇಟ್ಟುಕೊಂಡಿದ್ದಾರೆ. ಅಂದರೆ ಪಂಪಾಪತಿ ಊರ್ಧ್ವಮುಖವಾಗಿದ್ದು ಈ ನಾಲ್ಕೂ ಲಿಂಗಗಳು ಅವನ ನಾಲ್ಕು ಮುಖಗಳು ಎಂಬುದು ಡಾ. ಚಿದಾನಂದ ಮೂರ್ತಿ ಮತ್ತು ಕೆಲ ಹಿರಿಯರ ಅಭಿಪ್ರಾಯ (ಎಂದು ತಮ್ಮ 'ಹೊಸ ಬೆಳಕಿನಲ್ಲಿ ಹಂಪಿ' ಪುಸ್ತಕದಲ್ಲಿ ಚಿದಾನಂದ ಮೂರ್ತಿ ಹೇಳಿದ್ದಾರೆ.

ಹಾಗಾದರೆ ದುರ್ಗೆ, ಪಂಪಾಪತಿ ವಿಗ್ರಹಗಳು ಯಾವಾಗ ಬದಲಾದವು? ಈ ಸಾಧ್ಯತೆ ಇರಬಹುದಲ್ಲವೆ?

ಬಿಷ್ಟಪ್ಪಯ್ಯನವರು ಹಂಪಿಯ ಪುನರುತ್ಥಾನ ಕೈಗೊಂಡು ಮಹಾಗೋಪುರವನ್ನು ಪುನಃ ನಿರ್ಮಿಸಿ ಪಂಪಾಪತಿ ಆವರಣ ಮುಂತಾದವುಗಳನ್ನು ಜೀರ್ಣೋದ್ಧಾರಗೊಳಿಸಿದ ಸಮಯದಲ್ಲಿಯೇ ಈ ಬದಲಾವಣೆಗಳಾಗಿರುವ ಸಾಧ್ಯತೆಗಳಿವೆ.

ಇಡೀ ಹಂಪಿಯಲ್ಲಿ ಭಿನ್ನವಾಗದೇ ಉಳಿಸಿದ್ದ ವಿಠ್ಠಲ, ಅನಂತಶಯನ, ಅಶ್ವತ್ಥನಾರಾಯಣನ ವಿಗ್ರಹಗಳನ್ನು ತಮ್ಮ ನೆಲೆಯಾಗಿದ್ದ ರಂಗಾಪುರ, ಬಿದಿರಹಳ್ಳಿ, ವಿಠ್ಠಲಾಪುರ, ಹೊಳೆಲುಗಳಲ್ಲಿ ಸ್ಥಾಪಿಸಿ ಉಳಿದವುಗಳನ್ನು ರಂಗಾಪುರದ ನೃಸಿಂಹ ದೇವರ ಗುಡಿಯಲ್ಲಿ (ಬಳ್ಳಾರಿ ಜಿ. ಹೂವಿನಹಡಗಲಿ ತಾ.) ಸಂರಕ್ಷಿಸಿ ಇಟ್ಟುಕೊಂಡಿರುವ ವಿದ್ಯಮಾನವೂ ಕಣ್ಮುಂದೆ ಇದೆ.

ಬಿಷ್ಟೇಶ ವಿಜಯ ಚರಿತ್ರೆಯಲ್ಲಿ ಬಿಷ್ಟಪ್ಪಯ್ಯನವರು ಗುಹೆಯಲ್ಲಿ ಧ್ಯಾನಮಗ್ನರಾಗಿದ್ದರು. ಆಗ ಅಲ್ಲಿನ ಕ್ಷೇತ್ರ ದೇವತೆಗಳೆಲ್ಲ ಯತಿರೂಪ ಧರಿಸಿ ಈ ಯೋಗಿಯ ಬಳಿಗೆ ಬಂದರು ಮತ್ತು ವೆಲ್ಲಿರಿವರ ಉಪಟಳದಿಂದಾಗಿ ನಮ್ಮೆಲ್ಲರ ಕ್ಷೇತ್ರಗಳು ಧ್ವಂಸವಾಗಿದೆ. ಅಪವಿತ್ರವಾದ ಸ್ಥಾನದಲ್ಲಿ ನಾವು ಇರದಂತಾಗಿ ಪವಿತ್ರವಾದ ತುಂಗಭದ್ರಾ ಜಲದಲ್ಲಿ ನಾವು ವಾಸವಾಗಿದ್ದೇವೆ. ಧರ್ಮೋದ್ಧಾರವೇ ನಿನ್ನ ಅವತಾರ ಕಾರ್ಯವಾಗಿದ್ದರಿಂದ ನೀನು ನಮ್ಮ ಕ್ಷೇತ್ರಗಳನ್ನು ಪುನರುದ್ಧರಿಸಿ ಪಾವನಗೊಳಿಸಬೇಕು ಎಂದು ಕೇಳಿಕೊಂಡರು. ಅದರಂತೆ ಈ ಯೋಗಿ ಆ ಕ್ಷೇತ್ರಗಳ ಪುನರುತ್ಥಾನ ಕೈಗೊಂಡರು' ಎಂದಿದೆ.

ಈ ಮಾಹಿತಿಯ ಸತ್ಯಾಸತ್ಯತೆ ಏನೇ ಇರಲಿ ಬಿಷ್ಟಪ್ಪಯ್ಯನವರು ಹಂಪಿ ಮತ್ತು ಬಿದಿರಹಳ್ಳಿ, ರಂಗಾಪುರ ಕ್ಷೇತ್ರಗಳ ಪುನರುತ್ಥಾನ ಕಾರ್ಯ ಕೈಗೊಂಡಾಗ ಅಲ್ಲಿನ

ವಿಗ್ರಹಗಳು ಧ್ವಂಸಗೊಂಡಿದ್ದವು ಎಂಬುದಕ್ಕಂತೂ ಪುರಾವೆ ಇದೆ.

ಕುಟುಂಬದ ಹಿರಿಯರು ಧಾರ್ಮಿಕ ಮುಖಂಡರು 'ವಿರೂಪಾಕ್ಷನ ಈಗಿನ ಲಿಂಗವನ್ನು ಪುನಃ ಸ್ಥಾಪಿಸಿದ್ದು ಬಿಷ್ಟಪ್ಪಯ್ಯನವರೇ ಹಾಗಾಗಿಯೇ ತತ್ಕಾಲಿನ ಶಂಕರಾಚಾರ್ಯರೂ ಸೇರಿದಂತೆ ಇಡೀ ಸಮಾಜವೇ ಅವರನ್ನು 'ಸಾಕ್ಷಾತ್ ವಿರೂಪಾಕ್ಷ ಅವತಾರೀ' ಎಂದು ಗೌರವಿಸಿ ಪೂಜಿಸಿತು ಎಂದು ಹೇಳುತ್ತಾರೆ.

ಮತ್ತು ಬಿಷ್ಟಪ್ಪಯ್ಯನವರ ಕಾರ್ಯಗಳನ್ನು ಸೇರಿಸಿ ಅವರ ಮೊಮ್ಮಗ ಮಹಾದೇವಪ್ಪಯ್ಯನವರಿಗೆ ಶೃಂಗೇರಿ ಗುರುಗಳಿಂದ ಕ್ರಿ.ಶ. ೧೯೩೫ ರಲ್ಲಿ ಸನ್ಮಾನ ನಡೆದಿದ್ದು ಆಗ ಅವರಿಗೆ ೬೦ ಬಿರುದುಗಳು ಸಂದಿವೆ. ಅವುಗಳಲ್ಲಿ 'ಶ್ರೀ ಮತ್ ಪಂಪಾಧಿಪಾಲಯ, ಮಹಾಗೋಪುರ ಪ್ರತಿಷ್ಠಾಪಕ' ಎಂಬುವೂ ಎರಡು ಬಿರುದು ಸೇರಿವೆ. ಹೆಚ್ಚಿನ ಅಧ್ಯಯನವು ಈ ಸಂಗತಿಯ ಮೇಲ ಹೆಚ್ಚಿನ ಬೆಳಕು ಚೆಲ್ಲಿತು.

ವಿರೂಪಾಕ್ಷನ ಗುಡಿ ಆವರಣದಲ್ಲಿ ಸಂಖ್ಯೆ ೫೮ ಮಹತ್ವ ಎಂಬ ತಮ್ಮ ಪ್ರಬಂಧದಲ್ಲಿ ಡಾ. ಸಿ.ಎಸ್. ವಾಸುದೇವನ್ ಅವರು 'ಶಿಲಾಶಾಸನದ ಆಧಾರದಲ್ಲಿ ಹೇಳುವುದಾದರೆ ವಿರೂಪಾಕ್ಷನ ಮೂಲ ಲಿಂಗವೂ ಪಂಚಮುಖಿ ಲಿಂಗವಾಗಿತ್ತು. ಅದನ್ನು ತೆಗೆದು ಈಗಿನ ಉದ್ಭವ ರೂಪೀ ಲಿಂಗ ಸ್ಥಾಪಿಸಲ್ಪಟ್ಟಿದೆ. ಉದ್ಭವ ರೂಪೀ ಲಿಂಗಗಳು ಅಕಸ್ಮಾತ್ ಭಿನ್ನವಾದರೂ ಅವು ಪೂಜಾರ್ಹ ಎಂದು ಆಗಮ ಶಾಸ್ತ್ರ ಹೇಳುತ್ತದೆ. ಆ ಕಾರಣದಿಂದ ಬದಲಾಗಿರಬಹುದು. ಮತ್ತು ಈಗ ವಿರೂಪಾಕ್ಷನ ಗರ್ಭಗುಡಿಯ ಹೊಸ್ತಿಲ ಬದಿ ಇರುವ ಪಂಚಮುಖಿ ಶಿವಲಿಂಗವೇ ಮೂಲ ವಿರೂಪಾಕ್ಷನದ್ದಿರಬಹುದು ಎಂಬ ಮಾಹಿತಿ ಅಭಿಪ್ರಾಯ ಕೊಡುತ್ತಾರೆ.

೪೬

ಹಂಪೆಯ ವಿರೂಪಾಕ್ಷ ದೇವಾಲಯದಲ್ಲಿರುವ ಅಪರೂಪದ ನೃತ್ಯ ಕಾಳಿ ಶಿಲ್ಪ

ಶ್ರೀಮತಿ ಪದ್ಮಜಾ ದೇಸಾಯಿ*

ಪ್ರಸ್ತಾವನೆ

ವಿಜಯನಗರ ಸಾಮ್ರಾಜ್ಯದಲ್ಲಿರುವ ರಾಜಕೀಯ, ಆರ್ಥಿಕ, ಸಾಮಾಜಿಕ ಅಂಶಗಳಿಗಿಂತ ಸಾಂಸ್ಕೃತಿಕ ಅಂಶಗಳು ಇತಿಹಾಸವನ್ನು ಸಾರುವ ಆಕರಗಳಾಗಿವೆ. ಅವುಗಳಲ್ಲಿ ಪ್ರಮುಖವಾಗಿ ವಾಸ್ತುಶಿಲ್ಪಕ್ಕಿಂತ ಮೂರ್ತಿಶಿಲ್ಪದಲ್ಲಿ ಅನೇಕ ವೈವಿಧ್ಯತೆಯನ್ನು ಹೊಂದಿದ ಶಿಲೆಯಲ್ಲಿ ಅರಳಿಸಿದ ಶಿಲ್ಪಗಳು ಶೈವ, ವೈಷ್ಣವ, ಜೈನ ಮತ್ತು ಶಾಕ್ತ ಶಿಲ್ಪಗಳು ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತವೆ. ವಿಜಯನಗರದ ಅರಸರು ಶಕ್ತಿದೇವತೆಯ ಆರಾಧನೆಗೆ ಪ್ರಾಮುಖ್ಯತೆಯನ್ನು ನೀಡಿದ್ದರು ಎಂಬುದಕ್ಕೆ ಈ ಸಾಮ್ರಾಜ್ಯದಲ್ಲಿರುವ ಶಕ್ತಿದೇವತೆಗಳ ದೇವಾಲಯಗಳಾದ ದುರ್ಗಾದೇವಾಲಯ, ಪಂಪಾದೇವಿ ದೇವಾಲಯ, ಭುವನೇಶ್ವರಿ ದೇವಾಲಯ, ಕಾಳಿ ದೇವಾಲಯ, ಪಟ್ಟಣದ ಎಲ್ಲಮ್ಮ, ಹತ್ತು ಕೈ ಅಮ್ಮ ಈ ಎಲ್ಲಾ ಪ್ರಮುಖ ದೇವಾಲಯಗಳು ಇಂದಿಗೂ ಪೂಜಾರ್ಹ ದೇವಾಲಯಗಳಾಗಿವೆ. ಈ ದೇವಾಲಯಗಳಿಂದ ವಿಜಯನಗರದ ಅರಸು ಮಾತೃದೇವತೆ ಆರಾಧಕರಾಗಿದ್ದರು ಎಂಬುದು ತಿಳಿದು ಬರುತ್ತದೆ.[೧]

ಪ್ರಸ್ತುತ ಪ್ರಬಂಧದ ಶೀರ್ಷಿಕೆಯು ಹಂಪೆಯ ವಿರೂಪಾಕ್ಷ ದೇವಾಲಯದಲ್ಲಿರುವ ಅಪರೂಪದ ನೃತ್ಯ ಕಾಳಿ ಶಿಲ್ಪ ಎಂಬುದಾಗಿದ್ದು ಈ ಕಾಳಿ ಶಿಲ್ಪವು ಶಾಕ್ತಾಗಮಗಳ ಹಿನ್ನೆಲೆಯಲ್ಲಿ ರಚನೆಯಾಗಿದೆಯೋ ಅಥವಾ ಆಗಮಗಳನ್ನು ಹೊರತುಪಡಿಸಿ ಶಿಲ್ಪಿಯು ಈ ಶಿಲ್ಪವನ್ನು ಕೆತ್ತಿದ್ದಾನೆ ಎಂಬುದನ್ನು ಈ ನೃತ್ಯ ಕಾಳಿಯ ಶಿಲ್ಪದ ಪ್ರತಿಮಾ ಲಕ್ಷಣಗಳನ್ನು ಗುರುತಿಸಿದಾಗ ಈ ಕಾಳಿ ಶಿಲ್ಪವು ಕಾಳಿಯ ಮೂರ್ತಿ ಭೇದದಲ್ಲಿ ಯಾವ ಕಾಳಿಯ ಶಿಲ್ಪಕ್ಕೆ ಸೇರುತ್ತದೆ ಎಂಬುದನ್ನು ಚರ್ಚಿಸುವುದು ಈ ಲೇಖನದ ಉದ್ದೇಶವಾಗಿದೆ.

ಹಂಪೆಯ ವಿರೂಪಾಕ್ಷ ದೇವಾಲಯದ ಮುಖ್ಯ ಗೋಪುರ ದ್ವಾರದ ಪಶ್ಚಿಮ ದಿಕ್ಕಿಗಿರುವ ಒಳ ಬದಿಯ ಬಲಭಿತ್ತಿಯಲ್ಲಿ ಈ ನೃತ್ಯ ಕಾಳಿಯ ಉಬ್ಬುಶಿಲ್ಪದ ಶಿಲಾಫಲಕವನ್ನು ಅಳವಡಿಸಲಾಗಿದೆ. ಹಂಪಿ ಪರಿಸರದಲ್ಲಿ ವಿವಿಧ ಮತದ ದೇವಾಲಯಗಳು ಇರುವಂತೆ ವಿವಿಧ ಮತದ ಶಿಲ್ಪಗಳು ಸಾಕಷ್ಟು ಪ್ರಮಾಣದಲ್ಲಿ ರಚನೆಯಾಗಿವೆ. ಅಂದಿನ ರಾಜರ ವಿವಿಧ ಧರ್ಮಗಳಿಗೆ ನೀಡಿದ ಪ್ರಾಶಸ್ತ್ಯವನ್ನು ಇಲ್ಲಿ ಕಾಣಬಹುದಾಗಿದೆ. ಇಂತಹ ಶಿಲ್ಪಗಳ ಸೂಕ್ಷ್ಮವಾದ ಮತ್ತು ಕ್ರಮಬದ್ಧವಾದ ಅಧ್ಯಯನಗಳು ನಡೆದಾಗ ಆ ಶಿಲ್ಪಗಳು ಆಗಮಸಹಿತ ಶಿಲ್ಪಗಳೇ ಅಥವಾ ಆಗಮರಹಿತ ಶಿಲ್ಪಗಳೇ ಎಂಬುದನ್ನು ತಿಳಿಯಬಹುದು ಮತ್ತು ಶಿಲ್ಪದ ಮೂರ್ತಿ ಭೇದವನ್ನು ಕೂಡಾ ಆ ಶಿಲ್ಪದ ಪ್ರತಿಮಾಲಕ್ಷಣಗಳನ್ನು ಗುರುತಿಸಿದಾಗ ಮಾತ್ರ ಸಾಧ್ಯ.

ಹಂಪಿ ಪರಿಸರದಲ್ಲಿರುವ ಪ್ರಮುಖ ಶಾಕ್ತ ದೇವಾಲಯಗಳಾದ ದುರ್ಗಾ ದೇವಾಲಯ. ಈ ದೇವಾಲಯ ವಿರೂಪಾಕ್ಷ ದೇವಾಲಯದ ಆವರಣದಲ್ಲಿದೆ. ಇದು ನೊಳಂಬರ ಕಾಲದ ನಿರ್ಮಾಣ. ವಿಜಯನಗರದ ಕಾಲದಲ್ಲಿ ರಚನೆಯಾದ ದೇವಾಲಯಗಳಾದ ಪಟ್ಟಣದ ಎಲ್ಲಮ್ಮ, ಹತ್ತು ಕೈಯಮ್ಮ, ಹಾಗೆಯೇ ಕಮಲಾಪುರದ ಕೇಂದ್ರ ಪುರಾತತ್ವ ವಸ್ತು ಸಂಗ್ರಹಾಲಯದಲ್ಲಿ ಅನೇಕ ದುಂಡು ಶಿಲ್ಪಗಳು ಮತ್ತು ಉಬ್ಬುಶಿಲ್ಪಗಳು ಇಲ್ಲಿ ದೊರೆಯುತ್ತವೆ. ಅಂತಹ ಶಿಲ್ಪಗಳಲ್ಲಿ ನೃತ್ಯ ಭಂಗಿಯಲ್ಲಿರುವ ಈ ಶಿಲ್ಪವು ವಿಶೇಷವಾಗಿದೆ.

ಈ ದೇವಿ ಶಿಲ್ಪವು ಚೌಕಾಕಾರದ ಮಂಟಪದ ರಚನೆಯಂತಿರುವ ಶಿಲಾಫಲಕದಲ್ಲಿ ಕೆತ್ತಲಾಗಿದೆ. ದೇವಿಯು ಕಿರೀಟ ಮಕುಟವನ್ನು ಧರಿಸಿದ್ದಾಳೆ. ಈ ದೇವಿಯ ತಲೆಯ ಮೇಲೆ ಹೂವಿನ ಅಲಂಕರಣೆ ಇದೆ. ಈ ದೇವಿಯ ಶಿಲ್ಪವು ಹದಿನಾರು ಕೈಗಳನ್ನು ಹೊಂದಿದೆ.

ಶಿಲ್ಪಫಲಕದ ವಿಶ್ಲೇಷಣೆಗಳು

ಈ ದೇವಿಯ ಶಿಲ್ಪವು ಹದಿನಾರು ಕೈಗಳನ್ನು ಹೊಂದಿದೆ. ಕ್ರಮವಾಗಿ ಬಲಭಾಗದಲ್ಲಿ ಎಂಟು ಕೈಗಳು ಮತ್ತು ಎಡ ಭಾಗದಲ್ಲಿ ಎಂಟು ಕೈಗಳಿವೆ. ಈ ದೇವಿ ಶಿಲ್ಪವು ವಿಶೇಷವಾದ ಆಯುಧಗಳನ್ನು ಹೊಂದಿದೆ. ಅವುಗಳು ಈ ಕೆಳಗಿನಂತಿವೆ.

* ಗುಮಾಗೇರ ತಾಲ್ಲೂಕು, ಕುಷ್ಟಗಿ ಜಿಲ್ಲೆ, ಕೊಪ್ಪಳ-೫೮೪೧೨೧.

* ಬಲಭಾಗದ ಕೈಯಲ್ಲಿರುವ ಆಯುಧಗಳು: ಚಕ್ರ, ಶೂಲ, ಖಡ್ಗ, ಬರ್ಚಿ, ಗದೆ, ಸ್ಪಷ್ಟವಿಲ್ಲದ ದುಂಡನೆಯ ವಸ್ತು, ಕಠಾರಿ, ಕಟಕಮುದ್ರೆ.

* ಎಡ ಭಾಗದ ಕೈಯಲ್ಲಿರುವ ಆಯುಧಗಳು: ಶಂಖ, ಉದ್ದವಾಗಿರುವ ದಂಡ, ಈಟಿ, ಡಮರು, ಘಂಟೆ, ಅಭಯ, ಇನ್ನೆರಡು ಸ್ಪಷ್ಟವಿಲ್ಲ.

ದೇವಿಯು ಧರಿಸಿರುವ ಆಭರಣಗಳು ಹೀಗಿವೆ: ಕೊರಳಹಾರ, ಕಂಠಿಹಾರ, ಯಜ್ಞೋಪವೀತ, ಉದ್ದವಾದ ವನಮಾಲಾ, ಹದಿನಾರು ಕೈಗಳಲ್ಲಿ ಬಳೆಗಳು, ಕಾಲುಗಳಲ್ಲಿ ಪಾದವಲಯಗಳಿವೆ, ಎರಡು ಸ್ತನಗಳ ಮಧ್ಯೆ ಈ ವನಮಾಲಾ ಮತ್ತು ಯಜ್ಞೋಪವೀತಗಳು ಹಾದುಹೋಗಿವೆ. ಈ ದೇವಿಯ ಶಿಲ್ಪವು ತೋರ ಸ್ತನಗಳನ್ನು ಹೊಂದಿದೆ. ದೇವಿಯು ಕಿರೀಟ ಮಕುಟ ಕಿವಿಗಳಲ್ಲಿ ವೃತ್ತ ಕುಂಡಲಗಳು ಸುಂದರವಾಗಿ ಕೆತ್ತಲಾಗಿದೆ ದೇವಿಯ ನೃತ್ಯ ಭಂಗಿಯಲ್ಲಿರುವ ಈ ದೇವಿ ಶಿಲ್ಪವು ಮಂದಸ್ಮಿತಪೂದ ಮುಖ. ಮುಖದಲ್ಲಿರುವ ಹಾವಭಾವಗಳು ಆಕರ್ಷಕವಾಗಿವೆ. ಇವುಗಳು ದೇವಿಯ ತಾರುಣ್ಯವನ್ನು ಬಿಂಬಿಸುತ್ತವೆ. ಸೊಂಟದಿಂದ ಕೆಳಭಾಗದಲ್ಲಿ ಸೀರೆಯು ನೆರಿಗೆಗಳು ಸ್ಪಷ್ಟವಾಗಿ ಕೆತ್ತಲಾಗಿದೆ. ಈ ಶಿಲ್ಪವು ನೃತ್ಯ ಭಂಗಿಯಲ್ಲಿದ್ದು, ಬಲಗಾಲನ್ನು ಮೇಲೆತ್ತಿದೆ. ಎಡಗಾಲನ್ನು ಪೀಠದ ಮೇಲೆ ಇಟ್ಟಿದೆ. ಸೀರೆಯ ನೆರಿಗೆಯ ಜೊತೆಗೆ ಅಕ್ಕಪಕ್ಕದಲ್ಲಿ ಉತ್ತರೀಯವು ಇಳಿಬಿದ್ದಿದೆ. ಈ ಭಂಗಿಯು ಭರತನ ನಾಟ್ಯಶಾಸ್ತ್ರದಲ್ಲಿರುವ ಕರಣಗಳಲ್ಲಿರುವ ವೇಷಾರೇಚಿತ ಮತ್ತು ಪಾದಪವಿದ್ಧಕ ಎಂಬ ಎರಡು ಕರಣಗಳನ್ನು ಹೊಂದಿದೆ. ಎರಡು ಕರಣಗಳನ್ನು ಹೊಂದಿರುವ ಈ ಶಿಲ್ಪವು ವಿಶೇಷವಾಗಿದೆ. ದೇವಿ ಶಿಲ್ಪದ ಅಕ್ಕಪಕ್ಕದಲ್ಲಿ ಎರಡು ಯತಿ ಶಿಲ್ಪಗಳಿವೆ. ಈ ಶಿಲ್ಪಗಳು ದೇವಿಯ ಅರ್ಚನೆಯಲ್ಲಿ ತೊಡಗಿದ್ದಾರೆ. ಬಲ ಭಾಗದಲ್ಲಿರುವ ಯತಿ ಶಿಲ್ಪವು ಕಾಳಾಮುಖ ಯತಿ ಶಿಲ್ಪದಂತೆ ತೋರುತ್ತದೆ. ಈ ಯತಿಯು ಉದ್ದವಾದ ಜಟೆಯನ್ನು ಹೊಂದಿದ್ದಾನೆ. ದೇವಿಯ ಅರ್ಚನೆ ಮಾಡುತ್ತಿರುವುದು ಅವನ ಕೈಯಲ್ಲಿರುವ ಹೂವಿನ ಪಾತ್ರೆ ಕೈ ಇದೆ. ಎಡ ಭಾಗದಲ್ಲಿರುವ ಯತಿ ಶಿಲ್ಪವು ಬಲಗೈಯಲ್ಲಿ ಧೂಪಾರತಿಯನ್ನು ಬೆಳಗುತ್ತಿದ್ದು, ಎಡಗೈಯಲ್ಲಿ ಘಂಟೆಯನ್ನು ಬಾರಿಸುವಂತೆ ತೋರಿಸಲಾಗಿದೆ. ಈ ಯತಿ ಶಿಲ್ಪದ ತಲೆಯ ಹಿಂಬದಿಯುಲ್ಲಿ ತುರುಬುನ್ನು ಕಟ್ಟಿದ ಹಾಗಿದೆ. ಈ ಶಿಲಾಫಲಕದಲ್ಲಿ ಹಂಸವನ್ನು ದೇವಿಯು ಧರಿಸಿರುವ ಕಿರೀಟದ ಎಡ ಭಾಗದಲ್ಲಿ ಹಂಸವನ್ನು ಕೆತ್ತಿರುವುದು ವಿಶೇಷವಾಗಿದೆ.

ಪ್ರತಿಮಾಶಾಸ್ತ್ರದ ವಿವರಗಳು

ಶಾಕ್ತಾಗಮಗಳನ್ನು ತಂತ್ರಗಳೆಂದು ಹೆಸರಿಸಲಾಗಿದೆ. ಕಾಳಿಯ ಮೂರ್ತಿಭೇದದಲ್ಲಿ ಹಲವು ವಿಧಗಳಿವೆ. ತಾಂತ್ರಿಕ ಪ್ರಕ್ರಿಯೆಯಲ್ಲಿ ಕಾಳಿಭೇದ ಮೂರ್ತಿ ಶಿಲ್ಪದ ದೃಷ್ಟಿಯಿಂದ ಸ್ವಾರಸ್ಯವಾದುದು. ಉಗ್ರಶಕ್ತಿಯರೆಲ್ಲ ಕಾಳಿಕಾಸ್ವರೂಪದವರೇ. ಇವರ ಮೂರ್ತಿಲಕ್ಷಣಗಳನ್ನು ಕೆಲವು ತಂತ್ರಪ್ರಕರಣ ಗ್ರಂಥಗಳು ವಿವರಿಸುತ್ತವೆ. ಜಯದ್ರಥಯಾಮಳದಲ್ಲಿ ಶಕ್ತಿಯರನ್ನು ನರ್ದೇಶಿಸುವಾಗ ಕಾಳಿಕಾ, ಡಾಂಬರಕಾಳಿ, ರಕ್ತಾಕಾಳಿ, ಇಂದಿವರಕಾಳಿ, ಧನದಕಾಳಿಕಾ, ರಮಣೀಕಾಳಿಕಾ, ಈಶಾನಕಾಳಿಕಾ, ಜೀವಕಾಳಿ, ವೀರ್ಯಕಾಳಿ, ಪ್ರಜ್ಞಾಕಾಳಿ, ಸಪ್ತಾರ್ಣಾಕಾಳಿ, ಮೊದಲಾದ ವಿಧಗಳಿವೆ. 'ತಂತ್ರಸಾರ'ದಲ್ಲಿ ದಕ್ಷಿಣಕಾಳಿ, ಶ್ಮಶಾನಕಾಳಿ, ಗುಹ್ಯಕಾಳಿ, ಭದ್ರಕಾಳಿ, ಸಿದ್ಧಕಾಳಿ, ಚಾಮುಂಡಕಾಳಿ, ಹಂಸಕಾಳಿ, ಕಾಮಕಲಾಕಾಳೀ ಮೊದಲಾದ ಭೇದಗಳನ್ನು ಹೇಳಿದೆ. ಇವಲ್ಲದೆ ಅಭಿನವಗುಪ್ತನು "ತಂತ್ರಲೋಕ"ದಲ್ಲಿ ಸೃಷ್ಟಿಕಾಳಿ, ಸಂಹಾರಕಾಳಿ, ಸ್ಥಿತಿಕಾಳಿ, ರಕ್ತಕಾಳಿ, ಸುಕಾಳಿ, ಯಮಕಾಳಿ, ಮೃತುಕಾಳಿ, ರುದ್ರಕಾಳಿ, ಪರಮಾರಕಕಾಳಿ, ಮಾರ್ತಾಂಡಕಾಳಿ, ಕಾಲಾಗ್ನಿರುದ್ರಕಾಳಿ, ಮಹಾಭೈರವಘೋರ ಚಂಡಕಾಳಿ ಎಂಬ ಮೂರ್ತಿಭೇದ ಗಳನ್ನು ಹೇಳಿದ್ದಾನೆ. ಇವುಗಳ ಮೂರ್ತಿಲಕ್ಷಣಗಳೇನೊ ಅಷ್ಟು ಸ್ಪಷ್ಟವಾಗಿಲ್ಲ. ಜೈನರ ಶಾಸನದೇವತೆಗಳಲ್ಲಿಯೂ ಕಾಳಿಕಾ, ಮಹಾಕಾಳಿ, ಶ್ಯಾಮ, ಚಂಡಾ, ಬಲಾ, ಅಂಬಿಕಾ, (ದುರ್ಗಾ) ಮೊದಲಾದ ಕಾಳಿಭೇದಗಳು ಕಾಣಿಸಿಕೊಳ್ಳುತ್ತವೆ. ಇವಕ್ಕೆ ಮಧ್ಯಯುಗದ ಮೂರ್ತಿ ಶಿಲ್ಪದಲ್ಲಿ ಲಕ್ಷಣಗಳು ನಿರ್ದಿಷ್ಟ ವಾಗಿವೆ. ಸುಪ್ರಭೇಧಾಗಮವು ಕಾಳಿ ಶಿಲ್ಪದ ಮೂರ್ತಿ ಲಕ್ಷಣಗಳನ್ನು ತಿಳಿಸುತ್ತದೆ. ದೇವಿ ಶಿಲ್ಪವು ಹದಿನಾರು ಕೈಗಳನ್ನು ಹೊಂದಿದೆ ಮತ್ತು ವಿವಿಧ ಆಯುಧಗಳನ್ನು ಹಿಡಿದು ನೃತ್ಯ ಭಂಗಿಯಲ್ಲಿರುವುದು ವಿಶೇಷವಾಗಿದೆ. ಈ ಕಾಳಿ ಶಿಲ್ಪವು ಹಂಸಕಾಳಿಯ ಪ್ರಭೇದಕ್ಕೆ ಸರಿಹೊಂದುವ ಲಕ್ಷಣಗಳನ್ನು ಈ ಶಿಲ್ಪದಲ್ಲಿ ಕಾಣಬಹುದು.[೨]

ಈ ಶಿಲಾಫಲಕದ ಕೆಳಗೆ ಎರಡು ಶಿಲಾಫಲಕಗಳನ್ನು ಅಳವಡಿಸಲಾಗಿದೆ. ಮೊದಲನೆ ಶಿಲಾಫಲಕದಲ್ಲಿ ನಾಲ್ಕು ಜನ ನೃತ್ಯಗಾರರನ್ನು ಕೆತ್ತಲಾಗಿದೆ. ಒಬ್ಬನು ಪುರುಷ ವಾದ್ಯಗಾರ ನಂತರ ಸ್ತ್ರೀ ನೃತ್ಯಗಾರತಿ, ತಪ್ಪಡಿ ಹಿಡಿದ ಪುರುಷ ವಾದ್ಯಗಾರ, ಮೃದಂಗ ನುಡಿಸುವ ನೃತ್ಯಗಾರರು ಈ ಶಿಲಾಫಲಕದಲ್ಲಿದ್ದಾರೆ. ಎರಡನೆ ಶಿಲಾಫಲಕದಲ್ಲಿ ಮಾವುತನು ಅಂಕುಶದಿಂದ ಆನೆಯನ್ನು ಪಳಗಿಸುತ್ತಿರುವಂತೆ ಈ ಶಿಲ್ಪವನ್ನು ಕೆತ್ತಲಾಗಿದೆ. ಆನೆಯು ಸೊಂಡಿಲಿನಿಂದ ಮರವನ್ನು ಕಿತ್ತುತ್ತಿರುವಂತಿದೆ.

ಹಂಪೆಯಲ್ಲಿ ಕಾಳೀಪೂಜೆಯ ಹಿನ್ನೆಲೆ

ಕಾಳೀಯ ಆರಾಧನೆಯು ಶೈವ ಸಂಪ್ರದಾಯಕ್ಕೆ ಸೇರಿದೆ. ವಿಜಯನಗರದ ಅರಸರು ಕಾಳಾಮುಖ ಪಂಥಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ್ದರೆಂದು ಇಲ್ಲಿರುವ ಶಕ್ತಿದೇವತೆಗಳ ದೇವಾಲಯವು ಮತ್ತು ಶಿಲ್ಪಗಳು ಸಾಕಷ್ಟು ಸಂಖ್ಯೆಯಲ್ಲಿ

ದೊರೆತಿರುವುದು ಕಂಡುಬರುತ್ತದೆ.[೩] ಕಾಳಾಮುಖರು ಭೈರವ ಮತ್ತು ಕಾಳೀಯ ಉಪಾಸಕರು ಆಗಿದ್ದರು. ಇಮ್ಮಡಿ ಪ್ರೌಢದೇವರಾಯನ ಕಾಲಾವಧಿಯಲ್ಲಿ ಈ ಕಾಳಾಮುಖ ಪಂಥ ಮತ್ತು ವೀರಶೈವ ಪಂಥವು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಈ ನೃತ್ಯ ಕಾಳಿಶಿಲ್ಪವು ಶೈವ ಸಂಪ್ರದಾಯಕ್ಕೆ ಸೇರಿದ ಶಿಲ್ಪ ವಾಗಿದೆ. ತಮಿಳುನಾಡಿನ ಚಿದಂಬರಂನ ದೇವಾಲಯದಲ್ಲಿರುವ ಒಂದು ಐತಿಹ್ಯದ ಪ್ರಕಾರ ಕಾಳಿಯು ನೃತ್ಯದ ಸ್ಪರ್ಧೆಯ ಸಂದರ್ಭದಲ್ಲಿ ಶಿವನನ್ನು ಸೋಲಿಸುತ್ತಾಳೆ ಎಂಬ ಐತಿಹ್ಯವಿದೆ. ಈ ನೃತ್ಯ ಶಿಲ್ಪದಲ್ಲಿ ವಾಹನವು ಇಲ್ಲ, ವೈರಿಯು ಇಲ್ಲ. ಮಂದಸ್ಮಿತವು ಮುಖದಲ್ಲಿ ಅರಳಿದಂತೆ ಕಾಣುತ್ತದೆ. ಸರ್ವಾಭರಣ, ಅಲಂಕರಣ ಹೊಂದಿದ ಈ ಶಿಲ್ಪವು ವಿಜಯನಗರದ ಸಂಗಮರ ಕಾಲದಲ್ಲಿ ನಿರ್ಮಾಣವಾದ ಶಿಲ್ಪವಾಗಿದೆ.[೪]

ಉಪಸಂಹಾರ

ಒಟ್ಟಾರೆಯಾಗಿ ವಿಜಯನಗರದ ಅರಸರು ಶಕ್ತಿದೇವತೆಯ ಆರಾಧನೆಗೆ ಆದ್ಯತೆಯನ್ನು ನೀಡಿದ್ದರು. ಅದರಲ್ಲಿ ಸಂಗಮರ ಕಾಲದಲ್ಲಿ ಈ ಕಾಳಾಮುಖ ಪಂಥವು ಪ್ರಬಲವಾಗಿತ್ತು. ವಿಜಯನಗರದ ಅರಸರು ತಮ್ಮ ಆಡಳಿತ ಅವಧಿಯಲ್ಲಿ ಎಲ್ಲಾ ಧರ್ಮಗಳಿಗೂ ಪ್ರಾಮುಖ್ಯತೆಯನ್ನು ನೀಡಿದ್ದರು ಎಂಬುದು. ಇಲ್ಲಿರುವ ಸಾಂಸ್ಕೃತಿಕ ಕೊಡುಗೆಗಳು ಮಧ್ಯಯುಗದಲ್ಲಿ ಸ್ಥಾಪನೆಯಾದ ಹಿಂದೂ ಧರ್ಮದ ಪ್ರತೀಕಗಳಾಗಿವೆ. ವಿಜಯನಗರದ ಅರಸರು ಕಲೆ, ವಾಸ್ತುಶಿಲ್ಪ ಮತ್ತು ಸಾಹಿತ್ಯ ಇವುಗಳ ಅಭಿವೃದ್ಧಿಗೆ ಶ್ರಮಿಸಿದರು. ಅದರಲ್ಲೂ ಕಲೆಯನ್ನು ಈ ಪರಿಸರದಲ್ಲಿ ದೊರೆಯುವ ಗಟ್ಟಿ ಶಿಲೆಯಾದ ಗ್ರಾನೈಟ್ ಶಿಲೆಯಲ್ಲಿ ದೇವಾಲಯಗಳನ್ನು ಮತ್ತು ಶಿಲ್ಪಗಳನ್ನು ಕೆತ್ತಿರುವ ಆ ಶಿಲ್ಪಿಗಳ ಬುದ್ಧಿವಂತಿಕೆ ಮತ್ತು ಅವರ ಕೈಚಳಕ ಗಮನಾರ್ಹವಾದುದು. ಇಲ್ಲಿ ರಚನೆಯಾದ ಶಿಲ್ಪಗಳು ವೈವಿಧ್ಯಮಯವಾದ ಅಂಶಗಳನ್ನು ಪ್ರಚುರ ಪಡಿಸುತ್ತವೆ ಎಂಬುದರಲ್ಲಿ ಸಂಶಯವಿಲ್ಲ.

ಆಧಾರಸೂಚಿ

೧) ಪಿ.ಬಿ. ದೇಸಾಯಿ, ಕರ್ನಾಟಕದ ಇತಿಹಾಸ, ಪುಟ ೬೫–೭೦.

೨) ಎಸ್.ಕೆ. ರಾಮಚಂದ್ರರಾವ್, ಮೂರ್ತಿಶಿಲ್ಪದ ಹಿನ್ನೆಲೆ, ಪುಟ ೩೪೧–೩೪೫.

೩) ಎ.ಕೆ.ರಾಮಚಂದ್ರರಾವ್, ಪೂರ್ವೋಕ್ತ, ಪುಟ ೧೬೫–೧೭೧.

೪) ಟಿ.ಎ.ಗೋಪಿನಾಥರಾವ್, ಪೂರ್ವೋಕ್ತ, ಪುಟ ೩೪೫–೩೫೪.

೪೭

ಹಂಪಿಯ ಮಹಾನವಮಿ ದಿಬ್ಬದ ಬೇಟೆಗಾರ್ತಿಯರ ಶಿಲ್ಪಗಳು

ಶಶಿಕಲಾ ರಾ. ಇಂಜಿನಿ*

ಕರ್ನಾಟಕದ ಹಂಪಿ ಪರಿಸರದಲ್ಲಿ ಪ್ರಾಗಿತಿಹಾಸ ಕಾಲದಿಂದಲೂ ಬೇಟೆಗಾರಿಕೆಯು ಕಂಡುಬರುತ್ತದೆ. ಈ ಬೇಟೆಗಾರಿಕೆಯನ್ನು ಕುರಿತಾದ ಪ್ರಾಗಿತಿಹಾಸ ಕಾಲದ ಅನೇಕ ಬೇಟೆಚಿತ್ರಗಳು ಇಲ್ಲಿನ ಬೆಟ್ಟಗುಡ್ಡಗಳಲ್ಲಿ ಕಾಣಸಿಗುತ್ತವೆ. ಈ ಪರಂಪರೆ ಮುಂದುವರೆದು ಆದಿಇತಿಹಾಸ ಮತ್ತು ಇತಿಹಾಸ ಕಾಲಘಟ್ಟಗಳಲ್ಲಿ ಬೇಟೆಯ ಪರಂಪರೆ ಮುಂದುವರೆದಿರುವುದನ್ನು ಕಾಣಬಹುದು. ಹಾಗೆಯೇ ವಿಜಯನಗರ ಕಾಲದಲ್ಲಿ ಬೇಟೆಗಾರರು ಇದ್ದರು ಎನ್ನುವುದಕ್ಕೆ ನಮಗೆ ಇಲ್ಲಿನ ದೇವಾಲಯಗಳ ಗೋಡೆಯ ಮೇಲಿನ ಶಿಲ್ಪಗಳಿಂದ ತಿಳಿದುಬರುತ್ತದೆ.

ಬೇಟೆಯು ಪ್ರಧಾನವಾಗಿ ಪುರುಷರ ಕಾಯಕವಾಗಿದ್ದರೂ ಅವರೊಂದಿಗೆ ಸ್ತ್ರೀಯರು ಬೇಟೆಯಲ್ಲಿ ತೊಡಗಿಕೊಳ್ಳುತ್ತಿದ್ದರು ಎಂಬ ಸಂಗತಿಯು ಹಂಪಿ ಪರಿಸರದಲ್ಲಿರುವ ಅನೇಕ ದೇವಾಲಯಗಳ ಗೋಡೆ ಮತ್ತು ಕಂಬಗಳ ಮೇಲೆ ಕಂಡುಬರುತ್ತದೆ. ಬೇಟೆಯು ಗಂಡಸಿನ ಕಸಬು/ವೃತ್ತಿಯಾಗಿದ್ದರೂ, ವಿಜಯನಗರ ಕಾಲದಲ್ಲಿ ಗಂಡಸಿರಿಗೆ ಸಮಾನರಾಗಿ ಸ್ತ್ರೀಯರು ಬೇಟೆಯಲ್ಲಿ ನಿರತರಾಗಿದ್ದರೆಂಬುದನ್ನು ಹೇಳಬಹುದಾಗಿದೆ.


ಮಹಾನವಮಿ ದಿಬ್ಬವು ೧೪ ರಿಂದ ೧೬ನೇ ಶತಮಾನಕ್ಕೆ ಸೇರುತ್ತದೆ. ಇದನ್ನು ನಾಲ್ಕು ಕಾಲಘಟ್ಟಗಳಲ್ಲಿ ಕಟ್ಟಲಾಗಿದೆ. (Anilaverghes, 2002, Hampi, Oxford University p-N-62) ಒಂಬತ್ತು ದಿನಗಳವರೆಗೆ ನಡೆಯುವ ಉತ್ಸವಗಳನ್ನು ಪೂರ್ವದ ಖಾಸಗಿ ಬಾಗಿಲಿನಿಂದ ರಾಜನು ಬಂದು ಕುಳಿತು ವೀಕ್ಷಿಸುತ್ತಿದ್ದನು. ದಿಬ್ಬದ ಪಶ್ಚಿಮದ ಭಾಗದ ಗೋಡೆಯ ಮೇಲೆ ವಿದೇಶಿ ಪ್ರವಾಸಿಗರ ಉಬ್ಬುಶಿಲ್ಪಗಳನ್ನು ತೋರಿಸಲಾಗಿದೆ. ಅದೇ ರೀತಿಯಾಗಿ ದಕ್ಷಿಣದ ಗೋಡೆಯ ಮೇಲೆ ಹಜಾರರಾಮ ದೇವಾಲಯದ ಹೊರಗೋಡೆಯ ಮೇಲೆ ತೋರಿಸಿರುವಂತೆ ಶಿಲ್ಪಗಳನ್ನು ಕೆತ್ತಲಾಗಿದೆ.

ಪಶ್ಚಿಮ ದಿಕ್ಕಿನ ಮೊದಲನೆ ಜಗಲಿಯ ಮೂರನೇ ಫಲಕದಲ್ಲಿರುವ ಬೇಟೆಗಾರ್ತಿಯು ಶಿಲ್ಪವು ತ್ರಿಭಂಗಿಯಲ್ಲಿ ನಿಂತಿದ್ದು, ಅವಳ ಕಿವಿಯಲ್ಲಿ ವೃತ್ತಾಕಾರದ ಓಲೆ, ಕೈಯಲ್ಲಿ ಕಡಗ, ಕಾಲಗಡಗ ಹಾಕಿಕೊಂಡಿರುವಳು. ಮೇಲೆ ರವಿಕೆ ಮತ್ತು ಸೊಂಟದಿಂದ ಕಚ್ಚೆಯ ಸೀರೆಯಂತಹ ವಸ್ತ್ರವನ್ನು ಮೊಣಕಾಲಿನವರೆಗೆ ಧರಿಸಿರುವಳು. ಕೈಯಲ್ಲಿ ಬಿಲ್ಲನ್ನು ಹಿಡಿದು ಮಣಿಸುತ್ತಿರುವುದು ಕಂಡುಬರುತ್ತದೆ.

ದಕ್ಷಿಣ ದಿಕ್ಕಿನ ಎರಡನೇ ಜಗಲಿಯ ಗೋಡೆಯಲ್ಲಿ ಕೆಳಗಿನ ಸಾಲಿನಲ್ಲಿ ಬೇಟೆಗಾರ್ತಿಯು ತ್ರಿಭಂಗಿಯಲ್ಲಿ ನಿಂತಿರುವಳು ಅವಳು ಬೆನ್ನ ಹಿಂದೆ ಬಾಣಗಳನ್ನು ಹಾಕಿಕೊಂಡು ಬಲಗೈ ಬಿಲ್ಲಿನ ಮೇಲಿನ ತುದಿಯನ್ನು ಹಿಡಿದು ಎಡಕಾಲಿನಿಂದ ಮಣಿಸುತ್ತಿರುವಳು. ಇವಳು ಕಿವಿಯಲ್ಲಿ ವೃತ್ತಾಕಾರದ ಓಲೆ ಹಾಕಿಕೊಂಡಿರುವಳು. ರವಿಕೆ ಮತ್ತು ತುಂಡುವಸ್ತ್ರ ಧರಿಸಿರುವಳು. ದಕ್ಷಿಣ ದಿಕ್ಕಿನ ಮೂರನೇ ಜಗಲಿಯ ಎಡಗಡೆಯಿಂದ ಎರಡನೇ ಫಲಕದಲ್ಲಿ ತ್ರಿಭಂಗಿಯಲ್ಲಿ ನಿಂತಿರುವ ಬೇಟೆಗಾರ್ತಿಯ ಶಿಲ್ಪವು ಮೇಲೆ ವಿವರಿಸಿದ ಶಿಲ್ಪವನ್ನು ಹೋಲುತ್ತದೆ. ಆದರೆ ವಸ್ತ್ರಗಳಲ್ಲಿ ಬದಲಾವಣೆ ಕಂಡುಬರುತ್ತದೆ. ಇಲ್ಲಿ ರವಿಕೆ ಮತ್ತು ಉದ್ದನೆ ಕಚ್ಚೆಯನ್ನು ಹಾಕಿರುವಳು ಮತ್ತು ಸೊಂಟದ ಮೇಲಿಂದ ಇಳಿಬಿದ್ದಿರುವಂತಹ ಕೆಲವು ಆಭರಣಗಳನ್ನು ಹಾಕಿಕೊಂಡಿರುವಳು. ಮತ್ತೊಂದು ಅದೇ ಫಲಕದಲ್ಲಿರುವ ಶಿಲ್ಪವು ಆನೆಯನ್ನು ನೋಡುತ್ತ ತ್ರಿಭಂಗಿಯಲ್ಲಿ ನಿಂತಿರುವಂತಿದೆ. ಮುಖವನ್ನು ಎಡಗಡೆ ಆನೆಯನ್ನು ನೋಡುತ್ತ ಎಡಕೈಯಲ್ಲಿ ಬಾಣ ಬಲಕೈಯಿಂದ ಹೆಗಲಿಗೆ ಬಿಲ್ಲನ್ನು ಹಾಕಿಕೊಂಡು ಬಲಗಾಲನ್ನು ಮಣಿಸಿ ಕತ್ತರಿಕಾಲಿನ ಭಂಗಿಯಲ್ಲಿ ಗಂಟು ಹಾಕಿ ನಿಂತಿರುವಳು. ಇವಳು ತಲೆಯ ಕೂದಲನ್ನು ಶೃಂಗರಿಸಿಕೊಂಡಿರುವಳು ಹಾಗೂ ಕಿವಿಗೆ ವೃತ್ತಾಕಾರದ ಓಲೆಯನ್ನು ಹಾಕಿದ್ದಾಳೆ. ಕೊರಳಲ್ಲಿ ಮಾಲೆಗಳನ್ನು, ತೋಳುಬಂಧಿ ಮತ್ತು ಕೈಕಡಗ ಧರಿಸಿರುವಳು. ರವಿಕೆ ಮತ್ತು ತುಂಡುಲಂಗ ಹಾಕಿ ಅದರ ಮೇಲೆ ಮತ್ತೊಂದು ಎಲೆಯನ್ನು ಧರಿಸಿರುವುದನ್ನು ಕಾಣಬಹುದು.

ಪೂರ್ವ ದಿಕ್ಕಿನ ಮೂರನೇ ಜಗಲಿಯ ಬಲಗಡೆಯಿಂದ ಮೂರನೇ ಬೇಟೆಗಾರ್ತಿಯ ಶಿಲ್ಪದಲ್ಲಿ ಆಯುಧಗಳು ಸ್ಪಷ್ಟವಾಗಿ ಕಂಡುಬರುವದಿಲ್ಲ. ಇವಳ ಬಲಗೈ ಬಿಲ್ಲಿನ್ನು ಮೇಲಿನ ತುದಿಯನ್ನು ಹಿಡಿದು ಎಡಕಾಲಿನಿಂದ ಕೆಳ ಬಿಲ್ಲಿನ

* ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ, ಕನ್ನಡ ವಿವಿ, ಹಂಪಿ, ವಿದ್ಯಾರಣ್ಯ-೫೮೩೨೭೬.



ಪಶ್ಚಿಮ ದಿಕ್ಕಿನ ಬೇಟೆಗಾರ್ತಿ ಶಿಲ್ಪ



ಪಶ್ಚಿಮ ದಿಕ್ಕಿನ ಎರಡನೆ ಅಂತಸ್ತಿನ ಬೇಟೆಗಾರ್ತಿ ಶಿಲ್ಪ



ಪಶ್ಚಿಮ ದಿಕ್ಕಿನ ಎರಡನೆ ಮೊಗ್ಗಲಿನ ಬೇಟೆಗಾರ್ತಿ ಶಿಲ್ಪ

ತುದಿಯನ್ನು ತುಳಿದು ಎಡಗೈಯಿಂದ ಮಣಿಸುತ್ತಿರುವಳು. ಇವಳು ಕೂಡ ಕಿವಿಯಲ್ಲಿ ಓಲೆ ಮತ್ತು ಕಾಲಕಡಗ ಹಾಕಿರುವಳು ಹಾಗೂ ರವಿಕೆ ಮತ್ತು ನೆರಿಗೆ ಹೊಂದಿರುವ ಸೀರೆನ್ನು ತೊಟ್ಟಿರುವಳು.


ಉತ್ತರ ದಿಕ್ಕಿನಲ್ಲಿ ಎರಡನೇ ಜಗಲಿಯಲ್ಲಿ ಎಡಗಡೆ ಯಿಂದ ಎರಡನೇ ಫಲಕದಲ್ಲಿ ಬೇಟೆಗಾರ್ತಿಯು ತನ್ನ ಮುಖವನ್ನು ಬಲಗಡೆ ಹೊರಳಿಸಿ ಎಡಕಾಲನ್ನು ಎತ್ತಿ ತನ್ನ ಬಲಕೈಯಿಂದ ಕಾಲಿಗೆ ಸಿಕ್ಕಿರುವ ಮುಳ್ಳನ್ನು ತೆಗೆಯುತ್ತಿರುವ ರೀತಿಯಲ್ಲಿ ನಿಂತಿರುವಳು. ಇವಳ ವಸ್ತ್ರಾಭರಣಗಳು ಅಸ್ಪಷ್ಟ ವಾಗಿ ಕಂಡುಬರುತ್ತದೆ. ಅದೇ ಸಾಲಿನ ಐದನೇ ಫಲಕದಲ್ಲಿ ಮೊದಲಿನ ರೀತಿ ಅಂದರೆ ದಕ್ಷಿಣ ದಿಕ್ಕಿನಲ್ಲಿರುವ ಶಿಲ್ಪ ತ್ರಿಭಂಗಿಯಲ್ಲಿ ನಿಂತಿರುವಳು. ಇವಳು ಕಿವಿಯಲ್ಲಿ ಓಲೆ, ಕೊರಳ ಮಾಲೆ, ಕಾಲಕಡಗ, ಸೊಂಟದ ಪಟ್ಟಿ ಮತ್ತು ಹಾಕಿರುವಳು, ಅಲ್ಲದೆ ರವಿಕೆ ಹಾಗೂ ಮೊಣಕಾಲಿನವರಗೆ ಕಚ್ಚೆಯನ್ನು ನೆರಿಗೆ ಬೀಳುವ ರೀತಿಯಲ್ಲಿ ಕಟ್ಟಿಕೊಂಡಿರುವಳು.

ಪಶ್ಚಿಮ ದಿಕ್ಕಿನ ಬಲಗಡೆಯ ಮೂರನೇ ಸಾಲಿನ ಎರಡನೆಯ ಫಲಕದಲ್ಲಿರುವ ಬೇಟೆಗಾರ್ತಿಯ ಶಿಲ್ಪದಲ್ಲಿ ಅವಳು ಕಾಲಿಗೆ ಸಿಕ್ಕಿರುವ ಮುಳ್ಳನ್ನು ತೆಗೆಯುತ್ತಿರುವಂತಿದ್ದು, ಇದರಲ್ಲಿ ಬೇಟೆಗಾರ್ತಿಯು ತನ್ನ ಬಿಲ್ಲನ್ನು ಎಡಗೈಯಿಂದ ಹಿಡಿದು ಬಲಗಾಲನ್ನು ಎತ್ತಿ ತನ್ನ ನಾಯಕನ ತಲೆಯ ಮೇಲೆ ಬಲಗೈಯನ್ನು ಇಟ್ಟು ಆಸರೆಯನ್ನು ಪಡೆದುಕೊಂಡು ಕಾಲಿಗೆ ಸಿಕ್ಕಿರುವ ಮುಳ್ಳನ್ನು ತೆಗೆಸಿಕೊಳ್ಳುತ್ತಿರುವಳು. ಇವಳು ಕಿವಿಯಲ್ಲಿ ವೃತ್ತಾಕಾರದ ಓಲೆ ಹಾಕಿಕೊಂಡಿರುವಳು ಕೊರಳ ಹಾರ, ತೋಳುಬಂಧಿ ಕೈಕಡಗ, ನಡುಪಟ್ಟಿ ಮತ್ತು ಜನವಾರದ ರೀತಿಯಲ್ಲಿ ಹಾಕಿರುವ ಆಭರಣಗಳನ್ನು ಧರಿಸಿರುವಳು. ವಸ್ತಗಳಲ್ಲಿ ಅವಳು ರವಿಕೆ ಹಾಗೂ ಮೊಣಕಾಲಿನಂದ ಮೇಲೆ ಕಚ್ಚೆಯನ್ನು ಕಟ್ಟಿರುವಳು.

ದಕ್ಷಿಣ ದಿಕ್ಕಿನ ಮೊದಲನೇ ಜಗಲಿಯ ಗೋಡೆಯ ಕೆಳಗಿನಿಂದ ಎರಡನೇ ಸಾಲಿನ ಮೊದಲನೇ ಫಲಕದಲ್ಲಿ ಮೂರು ಜನ ಬೇಟೆಗಾರರು ಇದ್ದು, ಅವರಲ್ಲಿ ಇಬ್ಬರು ಪುರುಷರು ತಮ್ಮ ಬಿಲ್ಲನ್ನು ಸಿದ್ಧಮಾಡಿಕೊಂಡು ಜಿಂಕೆಗಳನ್ನು ಬೇಟೆಯಾಡುತ್ತಿರುವರು. ಅವರೊಂದಿಗೆ ಓರ್ವ ಬೇಟೆಗಾರ್ತಿಯು ಅವರ ಸಹಾಯಕ್ಕಾಗಿ ತನ್ನ ಬೆನ್ನಿಗೆ ಬಾಣಗಳನ್ನು ಇಟ್ಟಕೊಂಡು ಹೊರಟಿರುವಳು. ಇಲ್ಲಿ ಬೇಟೆಗಾರ್ತಿಯು ತಲೆಯ ಕೂದಲನ್ನು ತುರಬಿನ ರೀತಿಯಲ್ಲಿ ಕಟ್ಟಿರುವಳು. ಕಿವಿಯ ಓಲೆಯು ವೃತ್ತಾಕಾರವಾಗಿದೆ.



ದಕ್ಷಿಣ ದಿಕ್ಕಿನ ಎರಡನೇ ಸಾಲಿನ ಹದಿಮೂರನೇ ಫಲಕದ ದಂಪತಿ ಬೇಟೆಗಾರರ ಶಿಲ್ಪ



ದಕ್ಷಿಣ ದಿಕ್ಕಿನ ಬೇಟೆಗಾರ್ತಿ ಶಿಲ್ಪ



ಪಶ್ಚಿಮ ದಿಕ್ಕಿನ ಬೇಟೆಗಾರ್ತಿ ಶಿಲ್ಪ

ಉದ್ದವಾದ ರವಿಕೆ ಹಾಗೂ ಕೆಳಗಡೆ ನೀಳವಾದ ಲಂಗವನ್ನು ಧರಿಸಿರುವಳು ಮತ್ತು ಬಲಗೈಯಿಂದ ಬೆನ್ನಿಗೆ ಹಾಕಿಕೊಂಡಿರುವ ಬಾಣದ ಬತ್ತಳಿಕೆ ಹಿಡಿದುಕೊಂಡಿರುವಳು.

ದಕ್ಷಿಣ ದಿಕ್ಕಿನ ಮೊದಲನೆಯ ಜಗಲಿಯ ಗೋಡೆಯ ಕೆಳಗಿನಿಂದ ಎರಡನೇ ಸಾಲಿನ ಹದಿಮೂರನೇ ಫಲಕದಲ್ಲಿ ಬೇಟೆಗಾರ್ತಿಯು ತನ್ನ ನಾಯಕನೊಂದಿಗೆ ತೋರಿಸಲಾಗಿದೆ. ಇದರಲ್ಲಿ ನಾಯಕನು ಬೇಟೆಯಾಡಿದ ಪ್ರಾಣಿಯನ್ನು ಹೊಡೆದು ತನ್ನ ಹೆಗಲ ಮೇಲೆ ಹಾಕಿಕೊಂಡಿರುವನು. ಬೇಟೆಗಾರ್ತಿಯು ನಾಯಕನ ಬಿಲ್ಲನ್ನು ಬಲಕೈಯಿಂದ ಮೇಲಿನ ತುದಿಯನ್ನು ಹಿಡಿದುಕೊಂಡು ಎಡಕಾಲಿನಿಂದ ಕೆಳಗಿನ ತುದಿಯನ್ನು ತುಳಿದು ಎಡಕೈಯಿಂದ ಬಿಲ್ಲನ್ನು ಮಣಿಸುತ್ತಿರುವಳು. ಇವಳು ಕಿವಿಯಲ್ಲಿ ಓಲೆ, ಕೊರಳಲ್ಲಿ ಅಗಲವಾದ ಹಾರ, ಉದ್ದನೆ ತೋಳಿನ ರವಿಕೆ ಮತ್ತು ಮೊಣಕಾಲಿನ ಮೇಲೆ ಕಟ್ಟಿದ ಕಚ್ಚೆ ಅದರ ಮೇಲೆ ಹಾಕಿದ ಎಲೆಯ ಆಕಾರದ ವಸ್ತ್ರ, ಮತ್ತು ಕೈಕಡಗ ಹಾಗೂ ಕಾಲಕಡಗ ಹಾಕಿಕೊಂಡಿರುವಳು. ಕಾಡಿನಲ್ಲಿರುವ ಮರ, ಸಸ್ಯ, ಪ್ರಾಣಿ ಮುಂತಾದ ದೃಶ್ಯಗಳನ್ನು ಉಬ್ಬುಶಿಲ್ಪದಲ್ಲಿ ತೋರಲಾಗಿದೆ.

ದಕ್ಷಿಣ ದಿಕ್ಕಿನ ಎರಡನೇ ಜಗಲಿಯ ಗೋಡೆಯ ಕೆಳಗಿನಿಂದ ಎರಡನೇ ಸಾಲಿನಲ್ಲಿ ಹದಿನಾರನೇ ಶಿಲ್ಪದಲ್ಲಿ ಬೇಟೆಗಾರ್ತಿಯು ಕಟ್ಟಿಗೆಯನ್ನು ಹಿಡಿದುಕೊಂಡು ನಾಯಕನೆಡೆಗೆ ಪ್ರಾಣಿಗಳನ್ನು ಓಡಿಸುತ್ತಿರುವಳು ಮತ್ತು ನಾಯಕನು ಬಾಣದಿಂದ ಜಿಂಕೆಯನ್ನು ಹೊಡೆಯವುದು. ಇಲ್ಲಿ ಬೇಟೆಗಾರ್ತಿಯು ತನ್ನ ಕೂದಲನ್ನು ತುರುಬಿನ ರೀತಿಯಲ್ಲಿ ಸುತ್ತಿರುವಳು. ಕಿವಿಗೆ ವೃತ್ತಾಕಾರದ ಓಲೆಯನ್ನು ಹಾಕಿರುವಳು. ಮೇಲೆ ರವಿಕೆ ಕೆಳಗೆ ನೆರಿಗೆ ಹೊಂದಿದ ಸೀರೆ ತೊಟ್ಟಿರುವಳು. ಕೊರಳಲ್ಲಿ ಹಾರ, ಕೈಯಲ್ಲಿ ಕಡಗ, ಮೇಲಿನ ಎಡಗೈಯಿಂದ ಮತ್ತು ಕೆಲಗೆ ಬಲಗೈಯಿಂದ ಒಂದು ಕಟ್ಟಿಗೆಯನ್ನು ಹಿಡಿದುಕೊಂಡಿರುವಳು.

ದಕ್ಷಿಣ ಭಾಗದ ಎರಡನೇ ಜಗಲಿಯ ಕೆಳಗೆ ಇಬ್ಬರು ಬೇಟೆಗಾರ್ತಿಯು ಪ್ರಾಣಿಯನ್ನು ಹಿಡಿದು ಕೊಲ್ಲುತ್ತಿರುವ ರೀತಿಯಲ್ಲಿದೆ. ಒಬ್ಬಳು ಬಲಗೈಯನ್ನು ಮತ್ತು ಇನ್ನೂ ಒಬ್ಬಳು ಎಡಗೈಯನ್ನು ಎತ್ತಿರುವಳು ಹಾಗೂ ಎಡ ಮತ್ತು ಬಲ ಕೈಯಿಂದ ಪ್ರಾಣಿಯನ್ನು ಹಿಡಿದಿರುವರು ಇವರು ನೀಳವಾದ ಜಡೆಯನ್ನು ಹೊಂದಿರುವರು. ಅವರ ವಸ್ತ್ರಾಭರಣಗಳು ಸ್ಪಷ್ಟವಾಗಿ ಕಾಣುವುದಿಲ್ಲ.

ಒಟ್ಟಾರೆಯಾಗಿ ಹೇಳುವದಾದರೆ ವಿಜಯನಗರ ಕಾಲದಲ್ಲಿ ಪುರುಷರು ಮಾತ್ರವಲ್ಲದೆ ಮಹಿಳೆಯರು ಕೂಡ ಸ್ವಾವಲಂಬಿಯಾಗಿ ಜೀವನವನ್ನು ಸಾಗಿಸುವಷ್ಟು ಧೈರ್ಯವನ್ನು ಹೊಂದಿದ್ದಳು. ಕೆಲವೊಂದು ವೇಳೆಯಲ್ಲಿ ಒಬ್ಬಳೇ ಬೇಟೆಗೆ ಹೋಗುತ್ತಿದ್ದಳು ಮತ್ತು ತನ್ನ ಕುಟುಂಬದವರ ಸಹಾಯಕಳಾಗಿ ಹೋಗುತ್ತಿರುವುದನ್ನು ಈ ಶಿಲ್ಪಗಳಿಂದ ಕಾಣಬಹುದು.

೩೮

ಹಾಸನ ಜಿಲ್ಲೆಯ ತೂಬುಗಳ ಮೇಲಿರುವ ಉಬ್ಬು ಶಿಲ್ಪಗಳು

ಪದ್ಮ ಬಿ.ಎಸ್.*

ಕರ್ನಾಟಕದ ನೈರುತ್ಯ ಭಾಗದ ಮೈದಾನ ಪ್ರದೇಶಲ್ಲಿರುವ ಹಾಸನ ಜಿಲ್ಲೆಯಲ್ಲಿ ಸುಮಾರು ೩೦೦೦ಕ್ಕೂ ಹೆಚ್ಚು ಸಣ್ಣ ಮತ್ತು ದೊಡ್ಡ ಕೆರೆಗಳು ಕಂಡುಬಂದಿವೆ. ಕೆರೆಗಳ ಗಾತ್ರವನ್ನು ಆಧರಿಸಿ ತೂಬುಗಳು ಮತ್ತು ಕೋಡಿಗಳನ್ನು ನಿರ್ಮಾಣ ಮಾಡಲಾಗಿದೆ. ತೂಬುಗಳ ಮೇಲೆ ಕಂಡುಬಂದ ಉಬ್ಬುಶಿಲ್ಪಗಳನ್ನು ಕುರಿತು ಈ ಲೇಖನದಲ್ಲಿ ಚರ್ಚಿಸಲಾಗಿದೆ.

ಹಾಸನ ಜಿಲ್ಲೆಯ ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲೂಕಿನ ಹಲವು ಸ್ಥಳಗಳ ಕೆರೆಯ ತೂಬುಗಳ ಮೇಲೆ ಗಜಲಕ್ಷ್ಮಿ ಮತ್ತು ಇತರ ದೇವರುಗಳಿಗೆ ಸಂಬಂಧಿಸಿದ ಉಬ್ಬುಶಿಲ್ಪಗಳು ಹಾಗೂ ಜಲಚರ ಪ್ರಾಣಿ ಮತ್ತು ಶಿಬಾರದ ಚಿತ್ರಣವಿರುವ ಉಬ್ಬುಶಿಲ್ಪಗಳನ್ನು ನೋಡಬಹುದು. ಅವುಗಳಲ್ಲಿ ಗಜಲಕ್ಷ್ಮಿ ಉಬ್ಬು ಶಿಲ್ಪವು ಹೆಚ್ಚು ತೂಬುಗಳ ಮೇಲೆ ಸಾಮಾನ್ಯವಾಗಿ ಕಂಡುಬಂದಿವೆ. ಈ ಉಬ್ಬುಶಿಲ್ಪಗಳನ್ನು ಗಮನಿಸಿದಾಗ ಬಹುಶಃ ಜಲಸಂವೃದ್ಧಿಯ ಸಾಂಕೇತಿಕವಾಗಿ ಕೆತ್ತಿರಬಹುದು. ಗಜಲಕ್ಷ್ಮಿ ಉಬ್ಬುಶಿಲ್ಪಗಳ ಪ್ರಾಚೀನತೆಯು ಶೃಂಗರ ಕಾಲದಿಂದ ಕಂಡುಬಂದಿರುವುದಾಗಿ "ಚುಡಾಮಣಿ ನಂದಾಗೋಪಾಲ್‌ರವರು ಗಜಲಕ್ಷ್ಮಿಯ ಸಾಂಕೇತಿಕ ವಿನ್ಯಾಸ ಒಂದು ಅಧ್ಯಯನ" ಎಂಬ ಲೇಖನದಲ್ಲಿ ವಿವರಿಸಿದ್ದಾರೆ[೧].

ಸಿಂಗಿನಕೆರೆ

ಹಾಸನ ಜಿಲ್ಲೆಯ ಅರಸೀಕೆರೆ ಹೋಬಳಿಯಲ್ಲಿ ಬರುವ ಒಂದು ಗ್ರಾಮ ಶಂಕರನಹಳ್ಳಿ. ಗ್ರಾಮದ ಪಶ್ಚಿಮಕ್ಕೆ ಕೆರೆ ಇದೆ. ಅದನ್ನು ಸಿಂಗಿನಕೆರೆ ಅಥವಾ ಊರ ಮುಂದಿನ ಕೆರೆ ಎಂದು ಕರೆಯುತ್ತಾರೆ. ಕೆರೆಯು ಯಾವಾಗ ನಿರ್ಮಾಣವಾಯಿತು. ಎಂಬುದರ ಬಗೆಗೆ ಯಾವುದೇ ರೀತಿಯ ಶಾಸನಗಳ ದಾಖಲೆಗಳಿಲ್ಲ. ತೂಬಿನ ರಚನೆ ಮತ್ತು ಅದರ ಮೇಲಿರುವ ಉಬ್ಬುಶಿಲ್ಪಗಳಿಂದ ಬಹುಶಃ ಹೊಯ್ಸಳ ಕಾಲದಲ್ಲಿ ನಿರ್ಮಾಣವಾಗಿರುವಂತೆ ಕಂಡುಬರುತ್ತದೆ. ಏರಿಯಿಂದ ಸುಮಾರು ೧೨ ಅಡಿ ದೂರದಲ್ಲಿ ಒಂದು ತೂಬನ್ನು ಇರಿಸಲಾಗಿದೆ. ಇಂದು ನಿರ್ವಹಣೆಯಲ್ಲಿಲ್ಲದೆ ಹಾಳಾಗಿದೆ. ಈ ತೂಬಿನ ಒಂದು ಬದಿಯಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಅದರ ಮೇಲ್ಭಾಗದಲ್ಲಿ ನೃತ್ಯ ಭಂಗಿಯಲ್ಲಿರುವ ಉಬ್ಬುಶಿಲ್ಪಗಳಿವೆ. ತೂಬಿನ ಮತ್ತೊಂದು ಬದಿಯಲ್ಲಿ ಕಾಲ್ಪನಿಕ ಪ್ರಾಣಿಯ ಮೇಲೆ ಸ್ತ್ರೀ ಮತ್ತು ಪುರುಷ ಶಿಲ್ಪಗಳನ್ನು ಬಿಡಿಸಲಾಗಿದೆ. ಅದರ ಮೇಲಿನ ಪಟ್ಟಿಕೆಯಲ್ಲಿ ಗರುಡನ ಉಬ್ಬುಶಿಲ್ಪವಿದೆ. ತೂಬಿನಲ್ಲಿರುವ ಶಿಲ್ಪಗಳನ್ನು ಗಮನಿಸಿದಾಗ ಗಜಲಕ್ಷ್ಮಿ ಶಿಲ್ಪವು ಸಂವೃದ್ಧಿಯ ಸಾಂಕೇತಿಕವಾಗಿದ್ದರೆ, ಗರುಡ ಶಿಲ್ಪವು ವೈಷ್ಣವ





ಸಿಂಗಿನಕೆರೆ ತೂಬಿನ ಮೇಲಿರುವ ಉಬ್ಬುಶಿಲ್ಪಗಳು, ಶಂಕರನಹಳ್ಳಿ

* ಪಿ.ಎಚ್.ಡಿ. ವಿದ್ಯಾರ್ಥಿನಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

ಧರ್ಮವನ್ನು ಸೂಚಿಸುತ್ತದೆ. ಹಾಗೆಯೇ ನೃತ್ಯ ಭಂಗಿಯ ಶಿಲ್ಪಗಳು ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಇಲ್ಲಿ ಕಾಲ್ಪನಿಕ ಪ್ರಾಣಿಯನ್ನು ಮಕರವೆಂದು ಅದರ ಮೇಲೆ ಕುಳಿತಿರುವ ಸ್ತ್ರೀ ಮತ್ತು ಪುರುಷ ಶಿಲ್ಪಗಳನ್ನು ವರುಣ ಮತ್ತು ಆತನ ಪತ್ನಿಯ ಶಿಲ್ಪಗಳೆಂದು ಗುರುತಿಸಲಾಗಿದೆ. ತೂಬು ಸವೆದಿರುವ ಕಾರಣ ಶಿಲ್ಪಗಳನ್ನು ಸ್ಪಷ್ಟವಾಗಿ ಗುರುತಿಸುವುದು ಕಷ್ಟಕರವಾಗಿದೆ.

ಹೊಸಹಳ್ಳಿಕೆರೆ

ಶ್ರವಣಬೆಳಗೊಳದಿಂದ ೨ ಕಿ.ಮೀ. ದೂರದಲ್ಲಿ ಹೊಸಹಳ್ಳಿ ಕೆರೆ ಬರುತ್ತದೆ. ಕೆರೆಯ ದಕ್ಷಿಣ ದಿಕ್ಕಿಗೆ ಏರಿಕಾಳಮ್ಮ ದೇವಸ್ಥಾನ. ಉತ್ತರ ದಿಕ್ಕಿಗೆ ಜೈನರ ಜಕ್ಕಳದಮ್ಮ ಬಸದಿ ಇದೆ. ಹೊಸಹಳ್ಳಿಯ ಕ್ರಿ.ಶ. ೧೧೧೮ರ ಶಾಸನದಲ್ಲಿ[೨] ವಿಷ್ಣುವರ್ಧನನ ದಂಡನಾಯಕ ಗಂಗಪ್ಪಯನು ಕೆರೆ ಕಟ್ಟಿಸಿ ಅದಕ್ಕೆ ಗಂಗಸಮುದ್ರವೆಂಬ ಹೆಸರನ್ನಿಟ್ಟಿರುವುದರ ಉಲ್ಲೇಖ ವಿದೆ. ಕೆರೆ ಏರಿಯಿಂಡ ೧೨ ಅಡಿ ಅಂತರದಲ್ಲಿ ಒಂದು ಹಳೆಯ ತೂಬು ಇದೆ. ತೂಬಿನ ಒಂದು ಬದಿಯ ನಡುವೆ ಮುಕ್ಕೊಡೆ ಇರುವ ಜಿನತೀರ್ಥಂಕರನ ಶಿಲ್ಪವಿದ್ದು. ಅದರ ಎರಡು ಬದಿಯಪಕ್ಕದಲ್ಲಿ ಯಕ್ಷ ಯಕ್ಷಿಯರ ಉಬ್ಬುಶಿಲ್ಪಗಳು ಮತ್ತು ಶಾಸನ ಲಿಪಿಗಳಿವೆ. ಮತ್ತೊಂದು ಕಡೆ ಗಜಲಕ್ಷ್ಮಿಯ ಉಬ್ಬುಶಿಲ್ಪಗಳನ್ನು ಚಿತ್ರಿಸಲಾಗಿದೆ. ಈ ತೂಬು ಇತ್ತೀಚಿನ ದಿನಗಳಲ್ಲಿ ನಿರ್ವಹಣೆಯಲಿಲ್ಲ. ಕೆರೆಯ ಪಕ್ಕದಲ್ಲಿ ಜೈನಬಸದಿ ಇರುವುದರಿಂದ ಅದರ ಪ್ರತೀಕವಾಗಿ ತೂಬಿನ ಮೇಲೆ ಜೈನಶಿಲ್ಪವನ್ನು ಕೆತ್ತಿರಬಹುದು. ಹಾಗೆಯೇ ಗಜಲಕ್ಷ್ಮಿ ಶಿಲ್ಪವನ್ನು ಸಂವೃದ್ಧಿಯ ಸಾಂಕೇತಿಕವಾಗಿ ಬಳಸಿರುವಂತೆ ಕಂಡು ಬರುತ್ತದೆ.

ಹಿರಿಯೂರು ಕೆರೆ

ಅರಸೀಕೆರೆಯಿಂದ ೧೧ ಕಿ.ಮೀ. ದೂರದಲ್ಲಿ ಬರುವ ಒಂದು ಗ್ರಾಮ ಹಿರಿಯೂರು. ಗ್ರಾಮದ ಪಶ್ಚಿಮಕ್ಕೆ ಕೆರೆ ಇದೆ. ಕ್ರಿ.ಶ. ೧೨೦೭ರ ಹಿರಿಯೂರಿನ ಶಾಸನದಲ್ಲಿ[೩] ಮಾರಜೀಯನು ದೇವಾಲಯವನ್ನು ಮಾಡಿಸಿ ಅಲ್ಲಿ ಶಂಕರ ದೇವರನ್ನು ಪ್ರತಿಷ್ಠಾಪಿಸಿ ಕೆರೆಯನ್ನು ಕಟ್ಟಿಸಿದರೆಂದು ದಾಖಲಿಸಲಾಗಿದೆ. ಕೆರೆಯು ೭೦.೦೯ ಎಂ.ಸಿ.ಎಫ್.ಟಿ ರಷ್ಟು ನೀರನ್ನು ಸಂಗ್ರಹಿಸುವ ಸಾಮಾರ್ಥ್ಯ ಹೊಂದಿದ್ದು, ೯೦.೨೨ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸುತ್ತದೆ. ಕೆರೆಯಲ್ಲಿ ಮೂರು ತೂಬುಗಳಿದ್ದು ಇದರಲ್ಲಿ ೨ ತೂಬು ಗಳನ್ನು ಇತ್ತೀಚೆಗೆ ಏರಿಗೆ ಇರಿಸಲಾಗಿದೆ. ಒಂದು ಹಳೆಯ ತೂಬು ಇದ್ದು ಪ್ರಸ್ತುತ ದಿನಗಳಲ್ಲಿ ಕಾರ್ಯನಿರ್ವಹಿಸುತ್ತಿಲ್ಲ.

ಈ ತೂಬಿನ ಮೇಲೆ ಗಜಲಕ್ಷ್ಮೀಯ ಉಬ್ಬುಶಿಲ್ಪವಿದ್ದು ಶಿಲ್ಪದ ಎರಡು ಭಾಗದಲ್ಲಿ ಕಲಶಗಳಿವೆ. ಬಲಭಾಗದ ಕಲಶದ ಪಕ್ಕ ಒಂದು ಚಕ್ರ ಇದೆ. ಎಡ ಭಾಗದ ಚಕ್ರವು ಕಾಣದಂತೆ ತೂಬು ಮುರಿದು ಹಾಳಾಗಿದೆ. ಈ ತೂಬಿನ ಉಬ್ಬುಶಿಲ್ಪಗಳು ಜಲ ಹಾಗೂ ವ್ಯವಸಾಯ ಸಂವೃದ್ಧಿಯ ಸಾಂಕೇತಿಕವಾಗಿವೆ ಎನ್ನಬಹುದು. ಇಲ್ಲಿನ ಉಬ್ಬುಶಿಲ್ಪಗಳ ಮೇಲೆ ಶಾಸನಗಳನ್ನು ಕೆತ್ತಲಾಗಿದೆ.

೪ ನುಗ್ಗೇಹಳ್ಳಿ ಕೆರೆ

ಚನ್ನರಾಯಪಟ್ಟಣ ತಾಲೂಕಿನಲ್ಲಿ ಬರುವ ಒಂದು ಗ್ರಾಮ ನುಗ್ಗೇಹಳ್ಳಿ. ಇಲ್ಲಿನ ಕ್ರಿ.ಶ. ೧೪೩೫ರ ಶಾಸನದಲ್ಲಿ[೪] ನುಗ್ಗೇಹಳ್ಳಿಯನ್ನು ಸೋಮನಾಥಪುರ ಅಗ್ರಹಾರವೆಂದು ಮತ್ತು ನುಗ್ಗಿಹಳ್ಳಿ ಎಂದು ಉಲ್ಲೇಖಿಸಲಾಗಿದೆ. ಗ್ರಾಮದ ಉತ್ತರಕ್ಕೆ ಹಿರಿಯ ಕೆರೆ ಇದೆ. ಕ್ರಿ.ಶ. ೧೨೫೨ರ ನುಗ್ಗೇಹಳ್ಳಿಯ ಶಾಸನದಲ್ಲಿ[೫] ಕಮ್ಮಟದ ಬಸವಣ್ಣನು ಗೊಟ್ಟಿಕೆರೆಯಲ್ಲಿ ಬ್ರಾಹ್ಮಣರಿಗೆ ಛತ್ರ ನಿರ್ಮಿಸಿ 'ಬ್ರಹ್ಮಸಮುದ್ರ' ಎಂಬ ಕೆರೆ ಕಟ್ಟಿಸಿದನು ಎನ್ನಲಾಗಿದೆ. ಬ್ರಾಹ್ಮಣರಿಗಾಗಿಯೇ ಕೆರೆಯನ್ನು ಕಟ್ಟಿಸಿರುವುದು ಗಮನಾರ್ಹ ಕೆರೆಯ ಏರಿಯಿಂದ ಸುಮಾರು ೧೮ ಅಡಿ ದೂರದಲ್ಲಿ ಒಂದು ತೂಬನ್ನು ಇರಿಸಲಾಗಿದೆ. ಈ ತೂಬು ಸುಮಾರು ೧೦ ಅಡಿಗಳಷ್ಟು ಎತ್ತರವಿದ್ದು, ದೇವಾಲಯದ ಶಿಖರದ ಮಾದರಿಯಲ್ಲಿ ನಿರ್ಮಿಸಲಾಗಿದೆ.

ಪ್ರಸ್ತುತ ಈ ತೂಬು ನಿರ್ವಹಣೆಯಲಿಲ್ಲ ತೂಬಿನ ಮುಂಭಾಗದಲ್ಲಿ ಸಂವೃದ್ಧಿಯ ಸಾಂಕೇತಿಕವಾಗಿ ಗಜಲಕ್ಷ್ಮೀ ಉಬ್ಬು ಶಿಲ್ಪವನ್ನು ಬಿಡಿಸಲಾಗಿದೆ. ಇದರ ಮೇಲ್ಭಾಗದ ಪಟ್ಟಿಕೆಯಲ್ಲಿ ನಡುವೆ ಯೋಗನರಸಿಂಹ ಶಿಲ್ಪವಿದ್ದು, ಎಡಭಾಗದಲ್ಲಿ ವೇಣುಗೋಪಾಲ ಮತ್ತು ಲಕ್ಷ್ಮೀಯ ಉಬ್ಬು ಶಿಲ್ಪಗಳಿವೆ. ಬಲ ಭಾಗದಲ್ಲಿ ಗೋವರ್ಧನ ಕೃಷ್ಣ ಮತ್ತ ಗರುಡನ ಉಬ್ಬು ಶಿಲ್ಪಗಳಿವೆ. ತೂಬಿನ ಹಿಂಭಾಗದಲ್ಲಿ ನಡುವೆ ವಿಷ್ಣುವಿನ ಶಿಲ್ಪವಿದ್ದು, ಎಡ ಭಾಗದಲ್ಲಿ ಗರುಡ ಮತ್ತು ಲಕ್ಷೀಯ ಶಿಲ್ಪವಿದ್ದರೆ, ಬಲ ಭಾಗದಲ್ಲಿ ಕಾಳಿಂಗ ಮರ್ಧನ ಕೃಷ್ಣ ಮತ್ತು ಗಣೇಶನ ಶಿಲ್ಪಗಳಿವೆ. ತೂಬು ಸವೆದಿರುವ ಕಾರಣ ಶಿಲ್ಪಗಳು ಸ್ಪಚ್ಚವಾಗಿ ಕಾಣಿಸುತ್ತಿಲ್ಲ. ಗ್ರಾಮದಲ್ಲಿ ಲಕ್ಷೀನಾರಾಯಣ ದೇವಾಲಯವಿದೆ. ಆ ದೇವಾಲಯದಲ್ಲಿರುವ ಶಿಲ್ಪಗಳನ್ನು ಈ ತೂಬಿನ ಮೇಲೆ ಬಿಡಿಸಿದಂತೆ ಕಂಡುಬರುತ್ತದೆ. ಇದು ವೈಷ್ಣವ ಧರ್ಮವನ್ನು ಸಾಂಕೇತಿಸುತ್ತದೆ.

೫ ನೇರ್ಲಿಗೆ ಕೆರೆ

ಅರಸೀಕೆರೆ ತಾಲೂಕಿನ ನೇರ್ಲಿಗೆ ಗ್ರಾಮದ ಪೂರ್ವಕ್ಕೆ ಕೆರೆ ಇದೆ. ಕ್ರಿ.ಶ. ೧೪೨೯ರ ನೇರ್ಲಿಗೆಯ ಶಾಸನದಲ್ಲಿ[೬] ವಿರೂಪಣ್ಣನಾಯಕನು ನೇರ್ಲಿಗೆಯ ಹಿರಿಯ ಕೆರೆಯ ಭಂಡಿಯ ನಿರ್ವಹಣೆಗಾಗಿ ಚತುಸೀಮೆಯೊಳಗೊಂಡ ಗದ್ದೆ ಬೆದ್ದಲು ತೋಟ ತುಡಿಕೆಗಳನ್ನು ದಾನ ನೀಡಿರುವುದನ್ನು ದಾಖಲಿಸಲಾಗಿದೆ. ಹಾಗೆಯೇ ಕ್ರಿ.ಶ. ೧೪೩೨ರ ತಿಮ್ಮನ

ಹಳ್ಳಿಯ ಶಾಸನದಲ್ಲಿ[೭] ಬಸವಶೆಟ್ಟಿನಾಯಕ ಎಂಬುವನು ನೇರ್ಲಿಗೆಯ ದೊಡ್ಡ ಕೆರೆಯ ಭಂಡಿ ನಿರ್ವಹಣೆಗಾಗಿ ಚತುಸೀಮೆಯನ್ನು ಒಳಗೊಂಡ ಭೂಮಿಯನ್ನು ದಾನ ನೀಡಿರುವುದನ್ನು ಉಲ್ಲೇಖಿಸಲಾಗಿದೆ. ನೇರ್ಲಿಗೆ ಕೆರೆಯು ನೇರ್ಲಿಗೆ ಗ್ರಾಮದಿಂದ ಪೂರ್ವಕ್ಕೆ ಮತ್ತು ತಿಮ್ಮನಹಳ್ಳಿ ಗ್ರಾಮದಿಂದ ಪಶ್ಚಿಮಕ್ಕಿದೆ. ಕೆರೆಯು ಎರಡು ತೂಬು ಮತ್ತು ಎರಡು ಕೋಡಿಗಳನ್ನು ಹೊಂದಿದೆ. ದಕ್ಷಿಣ ದಿಕ್ಕಿನ ಕೋಡಿ ಸಮೀಪ ಒಂದು ತೂಬು ಇದೆ. ಅದರ ಮೇಲೆ ಗಜಲಕ್ಷ್ಮೀಶಿಲ್ಪ ಮತ್ತು ಕಲಶವನ್ನು ಸಂವೃದ್ಧಿಯ ಸಾಂಕೇತಿಕವಾಗಿ ಕೆತ್ತಲಾಗಿದೆ. ಅವುಗಳ ಜೊತೆಗೆ ಕೆರೆಯ ನೀರಿನಲ್ಲಿ ವಾಸಿಸುವ ಜಲಚರ ಪ್ರಾಣಿಗಳಾದ ಆಮೆ ಮತ್ತು ಮೀನುಗಳ ಉಬ್ಬುಶಿಲ್ಪಗಳನ್ನು ತೂಬಿನ ಮೇಲೆ ಅಲಂಕಾರಿಕವಾಗಿ ಕಂಡರಿಸಲಾಗಿದೆ.

೬. ಪುರಲ್ಲೇಹಳ್ಳಿಕೆರೆ

ಅರಸೀಕೆರೆ ತಾಲೂಕಿನಿಂದ ಸುಮಾರು ೧೦ ಕಿ.ಮೀ. ದೂರದಲ್ಲಿ ಬರುವ ಒಂದು ಗ್ರಾಮ ಪುರಲ್ಲೇಹಳ್ಳಿ. ಗ್ರಾಮದ ಉತ್ತರ ದಿಕ್ಕಿಗೆ ಕೆರೆ ಇದೆ. ಕೆರೆಯು ಯಾವಾಗ ನಿರ್ಮಾಣವಾಯಿತು ಎಂಬುದರ ಬಗ್ಗೆ ಯಾವುದೇ ಶಾಸನಗಳ ಉಲ್ಲೇಖವಿಲ್ಲ, ಕೆರೆಯ ಏರಿಯಿಂದ ಸುಮಾರು ೫ ಅಡಿ ದೂರದಲ್ಲಿ ಹಳೆಯ ತೂಬು ಇದ್ದು, ಪ್ರಸ್ತುತ ದಿನಗಳಲ್ಲಿ ನಿರ್ವಹಣೆಯಲಿಲ್ಲ. ತೂಬಿನ ಮೇಲೆ ಶಿಬಾರದ ಸಾಂಕೇತವು ಕಂಡುಬಂದಿದೆ. ಈ ರೀತಿಯ ರಚನೆಯು ಉತ್ತರ ಕರ್ನಾಟಕ ಬಳ್ಳಾರಿ, ಗದಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬಂದಿವೆ.

ಇದನ್ನು ಮೈಲಾರ ಸಂಪ್ರದಾಯದವರು ಶಿಬಾರ ಕಟ್ಟೆ ಎಂದು ಕರೆಯುತ್ತಿದ್ದರು. ಕುರುಬ ಜನಾಂಗದವರು ಹೆಚ್ಚಾಗಿ ಮೈಲಾರನ ಆರಾಧನೆ ಮಾಡುತ್ತಿದ್ದರು. ಅದರ ಸಾಂಕೇತಿಕವಾಗಿ ಎರಡು ಕಲ್ಲುಗಳ ಮೇಲೆ ಒಂದು ಅಡ್ಡಪಟ್ಟಿ ಇಟ್ಟು, ಅದರ ಎರಡು ಕೊನೆ ಅಂಚಿನಲ್ಲಿ ಕಲಶ ಮಾದರಿಯಂತೆ ಕೆತ್ತಿದ್ದು ಮಧ್ಯದಲ್ಲಿ ತ್ರಿಶೂಲವನ್ನು ಕಂಡರಿಸಲಾಗಿದೆ. ಈ ಮಾದರಿಯನ್ನು ಶಿಬಾರ ಕಟ್ಟೆ ಎಂದು ಕರೆಯುತ್ತಿದ್ದರು. ಈ ಮಾದರಿಯ ಸಾಂಕೇತವು ದಕ್ಷಿಣ ಕರ್ನಾಟಕದ ನಾಗಮಂಗಲ ಪರಿಸರದಲ್ಲಿಯೂ ಕಂಡುಬಂದಿವೆ. ಆದರೆ ತೂಬಿನ ಮೇಲೆ ಈ ಬಗೆಯ ರಚನೆ ಕಂಡುಬಂದಿರುವುದು ವಿಶೇಷ ಎನ್ನಬಹುದು. ಬಹುಶಃ ಈ ಪರಿಸರದಲ್ಲಿ ಹೆಚ್ಚಾಗಿ ಕುರುಬ ಜನಾಂಗ ಇರುವುದರಿಂದ ಮೈಲಾರನ ಸಂಪ್ರದಾಯ ಇಲ್ಲಿಯೂ ಕೂಡ ಬೆಳೆದು ಬಂದಿರಬಹುದು. ಅದರ ಸಾಂಕೇತಿಕವಾಗಿ ತೂಬಿನ ಮೇಲೆ ಶಿಬಾರವನ್ನು ನಿರ್ಮಿಸಿರಬಹುದು.

ಹಾಸನ ಜಿಲ್ಲೆಯ ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲೂಕಿನ ತೂಬುಗಳ ಮೇಲಿನ ಉಬ್ಬುಶಿಲ್ಪಗಳನ್ನು ಗಮನಿಸಿದಾಗ ಹೆಚ್ಚಿನ ತೂಬುಗಳ ಮೇಲೆ ಗಜಲಕ್ಷೀಶಿಲ್ಪ ಸಾಮಾನ್ಯವಾಗಿ ಕಂಡುಬಂದಿವೆ. ಹಾಗೆಯೇ ಇತರೆ ದೇವರುಗಳಿಗೆ ಸಂಬಂಧಿಸಿದ ಉಬ್ಬುಶಿಲ್ಪಗಳು ಕೂಡ ಇವೆ. ಅವುಗಳು ಧಾರ್ಮಿತೆಯನ್ನು ಸೂಚಿಸುತ್ತವೆ. ಇಲ್ಲಿ ಶಿಬಾರ ಮಾದರಿಯ ರಚನೆ ತೂಬಿನ ಮೇಲೆ ಕಂಡರಿಸುವುದು ವಿಶೇಷ ಎನ್ನಬಹುದು. ಇದು ಮೈಲಾರ ಸಂಪ್ರದಾಯವನ್ನು ಪರಿಚಯಿಸುತ್ತದೆ. ಇತರೆ ಶಿಲ್ಪಗಳಾದ ಜಲಚರ ಮತ್ತು ಕಾಲ್ಪನಿಕ ಪ್ರಾಣಿಗಳ ಉಬ್ಬುಶಿಲ್ಪಗಳು ಹಾಗೂ ನೃತ್ಯ ಭಂಗಿಯ ಉಬ್ಬುಶಿಲ್ಪಗಳು ತೂಬಿನ ಮೇಲೆ ಅಲಂಕರಿಕವಾಗಿ ಬಿಡಿಸಿರುವುದನ್ನು ಗಮನಿಸಬಹುದು.

[ಡಾ. ಸಿ. ಮಹದೇವ, ಪ್ರಾಧ್ಯಪಕರು ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವ ವಿದ್ಯಾಲಯ ಹಂಪಿ ಇವರು ಈ ಲೇಖನ ಸಿದ್ಧಪಡಿಸುವ ಸಂದರ್ಭದಲ್ಲಿ ಸೂಕ್ತ ಸಲಹೆ ಸೂಚನೆ ನೀಡಿ ಸಹಕರಿಸಿದ್ದಾರೆ.]

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಚೂಡಾಮಣಿನಂದಗೋಪಾಲ್, ೧೯೯೨, ಗಜಲಕ್ಷ್ಮೀಯ ಸಾಂಕೇತಿಕ ವಿನ್ಯಾಸ–ಒಂದು ಅಧ್ಯಯನ, ಇತಿಹಾಸ ದರ್ಶನ, ಸಂ ೭.

೨. ಎಪಿಗ್ರಾಫಿಯ ಕರ್ನಾಟಕ, ೧೯೭೩, ಸಂ. ೨, ನಂ. ೫೫೮, ಶ್ರವಣಬೆಳಗೊಳ, ಪುಟ ೩೪೧.

೩. ಎಪಿಗ್ರಾಫಿಯ ಕರ್ನಾಟಕ, ೧೯೯೭, ಸಂ ೧೦, ನಂ. ೩೧೯, ಹಿರಿಯೂರು, ಪುಟ ೩೯೬.

೪. ಎಪಿಗ್ರಾಫಿಯ ಕರ್ನಾಟಕ, ೧೯೯೭, ಸಂ ೧೦, ನಂ. ೧೦೩, ನುಗ್ಗೇನಹಳ್ಳಿ, ಪುಟ ೫೪೨.

೫. ಎಪಿಗ್ರಾಫಿಯ ಕರ್ನಾಟಕ, ೧೯೯೭, ಸಂ ೧೦, ನಂ. ೧೧೨, ನುಗ್ಗೇನಹಳ್ಳಿ. ಪುಟ ೫೪೮.

೬ ಎಪಿಗ್ರಾಫಿಯ ಕರ್ನಾಟಕ, ೧೯೯೭, ಸಂ ೧೦, ನಂ. ೨೮೫, ನೇರ್ಲಿಗೆ, ಪುಟ ೩೪೮.

೭. ಎಪಿಗ್ರಾಫಿಯ ಕರ್ನಾಟಕ, ೧೯೯೭, ಸಂ ೧೦, ನಂ. ೨೮೦, ತಿಮ್ಮನಹಳ್ಳಿ, ಪುಟ ೩೪೪.

೪೯

ಶಿವಗಣ ಸೂಚಕ ನಂದಿ ಶಿಲ್ಪಗಳು

ಡಾ. ಜಗದೀಶ, ಎಂ.ಹೆಚ್. ಅಗಸಿಬಾಗಲವರ*

ನಂದಿ ಶಿಲ್ಪಗಳನ್ನು ದೇವಾಲಯ, ದೇವಾಲಯಗಳ ಶಿಖರಗಳಲ್ಲಿ, ವೀರಗಲ್ಲುಗಳಲ್ಲಿ ಮತ್ತು ಸಮಾಧಿಗಳಲ್ಲಿ ಬಿಂಬಿಸಲಾಗಿರುತ್ತದೆ. ವ್ಯಕ್ತಿಯೊಬ್ಬರ ಸಮಾಧಿ ಸೂಚಕ ನಂದಿಯ ಶಿಲ್ಪ ಮತ್ತು ಇತರ ನಂದಿಯ ಶಿಲ್ಪಗಳು ಭಿನ್ನವಾಗಿರುತ್ತವೆ. ಕುಳಿತ ನಂದಿಯ ಶಿಲ್ಪಗಳ ಮುಂದಿನ ಕಾಲುಗಳನ್ನು ಬಿಂಬಿಸುವ ರೀತಿಯಲ್ಲಿ ವ್ಯತ್ಯಾಸ ಇರುತ್ತದೆ. ಈ ವ್ಯತ್ಯಾಸವನ್ನು ಗುರ್ತಿಸುವುದೇ ಈ ಸಂಪ್ರಬಂಧದ ಉದ್ದೇಶ.

ವೀರಗಲ್ಲುಗಳ ಚಿತ್ರಣದ ವಿವಿಧ ಹಂತವಿರುತ್ತದೆ. ಈ ಹಂತಗಳ ಚಿತ್ರಣ ಕೆಳಗಿನಿಂದ ಮೇಲಕ್ಕೆ ಇರುತ್ತವೆ. ಮೊದಲನೆಯ ಹಂತದಲ್ಲಿ ಹೋರಾಟದ ದೃಶ್ಯ, ಎರಡನೆಯ ಹಂತದಲ್ಲಿ ಅಪ್ಸರೆಯರು ಮೃತಪಟ್ಟ ವೀರನನ್ನು ವಿಮಾನದಲ್ಲಿ ಇಲ್ಲವೆ ತೋಳುಗೊಟ್ಟು ಮೇಲಕ್ಕೆ ಹಾರುತ್ತಿರುವಂತೆ ಚಿತ್ರಿಸಲಾಗಿರುತ್ತದೆ, ಮೂರನೆಯ ಹಂತದಲ್ಲಿ ಸ್ವರ್ಗದಲ್ಲಿರುವ ವೀರ, ಶಿವಪೂಜಾನರತನಾಗಿರುವ ಗುರು, ನಂದಿ ಚಿತ್ರಣವಿರುತ್ತದೆ. ಸಾಮಾನ್ಯ ತಿಳುವಳಿಕೆ ಎಂದರೆ ವೀರನು ಶಿವಗಣ ಆಗುತ್ತಾನೆ ಎಂಬ ನಂಬಿಕೆ. ಈ ಚಿತ್ರಣದಲ್ಲಿ ನಂದಿಯ ಬಲಗಾಲು ನೆಲಕ್ಕೆ ಊರಿದಂತೆ ಚಿತ್ರಸಲಾಗಿರುತ್ತದೆ.

ನಮಗೆ ತಿಳಿದಿರುವ ಸಮಾಧಿಗಳ ಮೇಲೆ ಇರುವ ನಂದಿಗಳ ಚಿತ್ರಣವನ್ನು ಪರಿಶೀಲಿಸೋಣ. ಮಡಿಕೇರಿಯ ರಾಜರ ಗದ್ದುಗೆಗಳ ಮುಂದೆ ಇರುವ ನಂದಿಯ ಶಿಲ್ಪಗಳಿವೆ. ೧೮೦೭ರಲ್ಲಿ ತೀರಿದ ಬಿದ್ದಂಡ್ರ ಬೋಪಯ್ಯ ಮತ್ತು ೧೮೪೭ರಲ್ಲಿ ತೀರಿದ ಬಿದ್ದಂಡ್ರ ಸೋಮಯ್ಯ ಇವರ ಸಮಾಧಿಗಳು ರಾಜರ ಸಮಾಧಿಗಳ ಮುಂದೆ ಇದೆ. ಸಮಾಧಿ ಮೇಲೆ ಇರುವ ಬೃಹತ್ ನಂದಿಗಳ ಶಿಲ್ಪದಲ್ಲಿ ಬಲಗಾಲು ನೆಲಕ್ಕೆ ಊರಿದಂತಿವೆ. ಕಿತ್ತೂರಿನ ದೇಸಾಯಿಗಳ ಸಮಾಧಿ ಕಿತ್ತೂರ ಊರಿನಲ್ಲಿದೆ. ಒಂದು ಸಮಾಧಿಯ ಲಲಾಟ ಬಿಂಬದಲ್ಲಿ ಬಲಗಾಲನ್ನು ನೆಲಕ್ಕೆ ಊರಿದಂತೆ ಇರುವ ನಂದಿಯ ಚಿತ್ರಣವಿದೆ.

ಬನವಾಸಿ ಮಧುಕೇಶ್ವರ ದೇವಾಲಯದ ಆವರಣದಲ್ಲಿ ವಾಯವ್ಯ ಭಾಗದಲ್ಲಿ ಬಸವಲಿಂಗೇಶ್ವರ ದೇವಾಲಯವಿದೆ. ಈ ದೇವಾಲಯ ಗರ್ಭಗೃಹ ಮತ್ತು ಅಂತರಾಳ ಹೊಂದಿದೆ. ಅಂತರಾಳದಲ್ಲಿರುವ ನಂದಿಯ ಬಲಗಾಲನ್ನು ನೆಲಕ್ಕೆ ಊರಿದಂತಹ ಶಿಲ್ಪವಿದೆ. ಪ್ರಾಯಶಃ ಇದು ಬಸವಲಿಂಗನ ಸಮಾಧಿ ಆಗಿರಬೇಕು ಮಧುಕೇಶ್ವರ ದೇವಾಲಯದ ಹೊರಗೋಡೆಯ ದಕ್ಷಿಣ ಭಾಗದಲ್ಲಿ ಅನೇಕ ಶಿವಲಿಂಗ ಮತ್ತು ನಂದಿಯ ಶಿಲ್ಪಗಳಿವೆ ಅಲ್ಲದೆ ಒಂದು ಸಾಲಿನ ಶಾಸನಗಳಿವೆ. ಈ ಎಲ್ಲ ಶಾಸನಗಳು ಸೋದೆ ಅರಸರ ಕಾಲದಲ್ಲಿ ಹಾಕಿಸಲಾಗಿದೆ. ಲಿಂಗಕ್ಕೆ ಎದುರಾಗಿರುವ ಪ್ರತಿಯೊಂದು ನಂದಿಯ ಮುಂಭಾಗದ ಬಲ ಕಾಲು ನೆಲಕ್ಕೆ ತಾಗಿದಂತೆ ಇದೆ.

ಹಂಪಿ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಸಂಗ್ರಹದಲ್ಲಿ ಇಂತಹ ಬಲಗಾಲನ್ನು ಭೂಮಿ ಸ್ಪರ್ಶ ಮಾಡುತ್ತಿರುವ ನಂದಿಯ ಶಿಲ್ಪ ಇರುವ ನಂದಿ ಕಂಭವಿದೆ. ಮುಂಭಾಗದಲ್ಲಿ ಅಂಜಲೀಬದ್ಧ ವ್ಯಕ್ತಿಯೊಬ್ಬನ ನಿಂತ ಶಿಲ್ಪವಿದೆ. ಪ್ರಾಯಶಃ ಈ ವ್ಯಕ್ತಿ ಮೃತಪಟ್ಟಿರುವುದನ್ನು ಸೂಚಿಸುತ್ತಿರಬಹುದು. ಮಡಿಕೇರಿ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಸಂಗ್ರಹದಲ್ಲಿ ಒಂದು ನಂದಿಯ ಕಂಬ ಇದೆ. ಈ ನಂದಿಯ ಬಲಗಾಲು ನೆಲಕ್ಕೆ ಊರಿದಂತೆ ಇದೆ. ನಂದಿಯ ಕೆಳಗಡೆ ಇರುವ ಕಂಭದ ಪಟ್ಟಿಕೆಯಲ್ಲಿ ಮೂರೂ ಕಡೆ ಮುಂದುವರಿದ ಶಾಸನವಿದೆ. ಶಾಸನದ ಅಂತ್ಯದಲ್ಲಿ ಸಮಾಧಿ ಎಂಬ ಪದವಿದೆ. ಶಾಸನವು ಕ್ರಿ.ಶ. ೧೮೪೯ಕ್ಕೆ ಸೇರುತ್ತದೆ.


ಶಾತವಾಹನರ ಕಾಲದ ಕೆಲವು ವೀರಗಲ್ಲುಗಳಲ್ಲಿ ನೊಗ ಹರಿದ ಬಂಡಿಯ ಚಿತ್ರಣಗಳಿವೆ. ಬಂಡಿಗಳು ಚಲನೆಯನ್ನು ನಿಲ್ಲಿಸಿದ ದ್ಯೋತಕವಾಗಿ ನೊಗವನ್ನು ಬಿಚ್ಚಲಾಗಿರುವುದು ಮತ್ತು ಬಂಡಿಯ ಮೂಕು ನೆಲಕ್ಕೆ ತಾಗಿರುತ್ತದೆ. ಇದು ಅನೇಕರು ಊಹಿಸಿರುವಂತೆ ಪ್ರಯಾಣದ ಅಂತ್ಯದ ಚಿತ್ರಣ. ಬಂಡಿಯಲ್ಲಿ ಕುಳಿತಿರುವ ವ್ಯಕ್ತಿ ಮರಣವನ್ನು ಹೊಂದಿರುವ ಸೂಚನೆ ಆಗಿರಬಹುದೆಂದು ನಂಬಲಾಗಿದೆ.

ವೀರಶೈವ ಕೆಲವು ಪಂಗಡಗಳಲ್ಲಿ ಮೃತರ ಸಮಾಧಿ ಮಾಡುವ ಮುನ್ನ ಜಂಗಮರು ತಮ್ಮ ಬಲಗಾಲನ್ನು ಮೃತ

* # ೩೩, ಮೊದಲ ಅಡ್ಡ ರಸ್ತೆ, ಹೊಸಮನೆ ಬಡಾವಣೆ, ಶಿವಮೊಗ್ಗ-೫೭೭೨೦೧.




ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಗುಲಬರ್ಗಾ ಸಂಗ್ರಹ–ಶಾತವಾಹನರ ಕಾಲ



ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಂಪಿ ಸಂಗ್ರಹ–ವಿಜಯನಗರ ಕಾಲ

ವ್ಯಕ್ತಿಯ ತಲೆಯ ಇಡುವ ಸಂಪ್ರದಾಯವನ್ನು ಇಂದೂ ಕಾಣಬಹುದು. ವೃಷಭೋದ್ದರಣೆ ಎಂಬ ಹೆಸರಿನ ಉದ್ದರಣೆ ಪಟಲಗಳಲ್ಲಿ ಇಂತಹ ಚಿತ್ರಗಳಿವೆ ಎಂದು ಡಾ. ಬಿ. ನಂಜುಂಡಸ್ವಾಮಿ ತಿಳಿಸಿದ್ದಾರೆ.

ಸಂಪ್ರದಾಯ ಮತ್ತು ನಂದಿಯ ಶಿಲ್ಪಗಳನ್ನು ಸಮೀಕರಿಸಬಹುದು. ಈ ರೀತಿಯ ನಂದಿಯ ಶಿಲ್ಪಗಳು



ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಂಪಿ ಸಂಗ್ರಹ ವಿಜಯನಗರ ಕಾಲ



ಮಧುಕೇಶ್ವರ ದೇವಾಲಯ ಆವರಣ ಬಸವಲಿಂಗೇಶ್ವರ ದೇವಾಲಯದಲ್ಲಿನ ನಂದಿ ಶಿಲ್ಪ–ವಿಜಯನಗರೋತ್ತರ ಕಾಲ

ಸಮಾಧಿಯ ಸೂಚಕ ಆಗಿರಬೇಕು ಎಂದು ಪರಿಗಣಿಸಬಹುದಾಗಿದೆ.

[ಮಡಿಕೇರಿಯ ಶಾಸನದ ಬಗ್ಗೆ ಮಾಹಿತಿ ಒದಗಿಸಿದ ಕುಮಾರಿ ರೇಖಾ ಬಿ ಅವರಿಗೆ ಮತ್ತು ಪ್ರಕಟಣಗೆ ಅನುಮತಿ ನೀಡಿದ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪಂರಂಪರೆ ಇಲಾಖೆಗೆ ಧನ್ಯವಾದಗಳು.]

ಹರಿಹರದ ಹರಿಹರೇಶ್ವರ ಮೂರ್ತಿ ಶಿಲ್ಪ ಇತ್ತೀಚಿನ ವಿಶ್ಲೇಷಣೆ

ಡಾ. ಹರಿಹರ ಶ್ರೀನಿವಾಸರಾವ್*

ಶಾಸನೋಕ್ತವಾಗಿ ಹರೀಶ, ಹರಿಹರ, ಹರಿಶಂಕರ ಪ್ರಸನ್ನ ಶಂಕರ ನಾರಾಯಣ, ಹರಿಹರನಾಥ ದೇವ, ಹರಿಹರೇಶ್ವರ ಮುಂತಾಗಿಯೂ ಹಾಗೂ ಜನಪದರ ಬಾಯಿಯಲ್ಲಿ "ಹರಿಹರ ಲಿಂಗಪ್ಪ" ಎನ್ನುವ ಹೆಸರುಗಳಿಂದ ಕರೆಯಲಾಗುವ ಈತ ಗುಹಾರಣ್ಯ ಕ್ಷೇತ್ರಧಿಪ. ವಿದ್ವಾಂಸರಿಂದ ಅತ್ಯಂತ ಹಳೆಯು ಪುರಾಣಗಳಲ್ಲಿ ಒಂದೆಂದು ಗುರುತಿಸಲಾಗುವ ಸ್ಕಾಂದ ಪುರಾಣದ ತುಂಗಭದ್ರಾ ಖಂಡದ ಎಂಟು ಅಧ್ಯಾಯಗಳಲ್ಲಿ ಹರಿಹರೇಶ್ವರನ ಕುರಿತಾದ ವಿವರಗಳು ಲಭ್ಯವಿದೆ. ಈ ಕಥೆಯ ಕಾಲ ಮಾನವು ೮ನೇ ಶತಮಾನದಿಂದ ಇತ್ತೀಚಿನದಾಗಿದ್ದರೂ ಪ್ರಚಲಿತ ಅನುವಂಶಿಕ ದಂತ ಕಥೆಯೇ ಇದಕ್ಕೆ ಆಧಾರಿತವಾಗಿರಬೇಕು. (ಡಾ. ಅ. ಸುಂದರ, ಪ್ರದೀಪಿಕೆ, ಪು. ೪ ಕೆ. ವೆಂಕಟರಾಯಾಚಾರ್ಯರ ಸನ್ಮಾನ ಗ್ರಂಥ, ೧೯೭೬). ಹರಿಯಿಂದಾಗಲೀ ಹರ ನಿಂದಾಗಲೀ ಮರಣ ಸಂಭವಿಸಬಾರದೆಂದು ಬ್ರಹ್ಮನಿಂದಲೇ ವರ ಪಡೆದ ಗುಹಾಸುರ. ಪ್ರಾಯಶಃ ಈ ವರ ಪಡೆಯಲು ಕಾರಣವನ್ನು ನೋಡುವುದಾದರೆ, ಈತನು ಹಿರಣ್ಯ ಕಶಿಪುವಿನ ಉದಾರಣೆಯನ್ನು ಗಮನಿಸಿದಂತೆ ತೋರುತ್ತದೆ. ಅಲ್ಲದೇ ಗುಹಾಸುರನು ಹಿರಣ್ಯ ಕಶಿಪುವಿನ ನಂತರದವನು ಎನ್ನಲು ಆಧಾರವಾಗುತ್ತದೆ. ಬ್ರಹ್ಮನಿಗೆ ನಿರಾಕಾರ ಪೂಜೆ ಎಂದು ಸಾಂಪ್ರದಾಯಕ ನಂಬಿಕೆ ಇದ್ದರೂ, ಇಲ್ಲಿಯೇ ಹತ್ತಿರದಲ್ಲಿರುವ ಬ್ರಹ್ಮಪುರಿ (ದೇವಸ್ಥಾನದಿಂದ ೧ ಕಿ.ಮಿ. ಇಲ್ಲಿ ಬ್ರಹ್ಮನ ದೇಗುಲ ಈಗ ಕಂಡುಬರುವುದಿಲ್ಲ), ಹರಪನಹಳ್ಳಿಯಲ್ಲಿ ದಾವಣಗೆರೆ ಜಿಲ್ಲೆ ಈಗಲೂ ಕಾಣಸಿಗುವ ಚಿಕ್ಕ ಮೂರ್ತಿ ಇರುವ ಬ್ರಹ್ಮನ ದೇವಾಲಯ ಮುಂತಾದ ಉದಾಹರಣೆಗಳು ಈ ಭಾಗದಲ್ಲಿ ಬ್ರಹ್ಮನ ಸಗುಣೋಪಾಸನೆಯನ್ನು ಧೃಡ ಪಡಿಸುತ್ತವೆ. ಸೃಷ್ಟಿಕರ್ತ ಬ್ರಹ್ಮನಿಂದಲೇ ಸಾವಿನಿಂದ ಬಿಡುಗಡೆಯಾದ ಮೇಲೆ ಇನ್ನಾರ ಭಯದ ಹಂಗು ನನಗಿಲ್ಲ ಎಂಬ ಅಹಂಕಾರ, ಅಟ್ಟಹಾಸಗಳಿಂದ ಉನ್ಮತ್ತನಾಗಿ ಮೆರೆಯುತ್ತಾ ಲೋಕ ಕಂಟಕನಾದ ಗುಹಾಸುರ. ಹೀಗಾಗಿ ಅವನನ್ನು ನಿಗ್ರಹಿಸಿ ಸಂಹರಿಸಲು ಹರಿಹರರು ಒಂದಾಗಿ ಬರಬೇಕಾಯಿತು. ಇಂತಹ ಹಿನ್ನೆಲೆಯುಳ್ಳ ಹರಿಹರ ಶಿಲ್ಪ, ಅವರಿಬ್ಬರ ಏಕೀಕರಣದ ಶಕ್ತಿಯ ಬಿಂಬವಾಗಿ ಶಿಲ್ಪ ಸೌಂದರ್ಯದ ಸ್ನಿಗ್ಧತೆಯೊಂದಿಗೆ ಇಲ್ಲಿ ಮೈದಾಳಿ ನಿಂತಿದೆ.

ಜಯಂತಿ ಸ್ಥಾಣಹರಯೋರದ್ವೆತದ್ಯೋತ ನೋದ್ಯತಾಃ।
ಅಕ್ಷರಮಾಲಾ ತ್ರಿಶೂಲಾದಿ ಪಾಂಚಜನ್ಯ ಧರಾಃ ಕರಾಃ।
(ದಾವಣಗೆರೆ ಶಾ.ಸಂ. ೩೯ ಕ್ರಿಶ. ೧೦೮೯)


ಈ ಮೂರ್ತಿ ಶಿಲ್ಪದ ಬಗೆಗೆ ಡಾ. ಎಂ.ಎಚ್. ಕೃಷ್ಣ ಆರ್. ನರಸಿಂಹಾಚಾರ್ಯ, ಡಾ. ಅ. ಸುಂದರ, ಪ್ರೊ. ಹೆಚ್.ಎಂ. ಶಂಕರನಾರಾಯಣರಾವ್, ಗುರುರಾವ್ ಕಲಮದಾನಿ ಮುಂತಾದವರು ಬರೆದಿರುತ್ತಾರೆ. ಈ ಎಲ್ಲ ಹಿರಿಯರ ಅಭಿಪ್ರಾಯಗಳನ್ನು ಒಳಗೊಂಡಂತೆ ೨೦೧೩ರ ಜುಲೈ ತಿಂಗಳಿನಲ್ಲಿ ಶ್ರೀ ಹರಿಹರೇಶ್ವರ ಮೂರ್ತಿಯನ್ನು ಸ್ವತಃ ಅಭಿಷೇಕ ಮಾಡುವ ಸೌಲಭ್ಯ ದೊರೆತುದರ ಫಲವಾಗಿ ಅನೇಕ ಹೊಸ ವಿಷಯಗಳು ಕಂಡು ಬಂದಿವೆ. ಈ ಮಾಹಿತಿಗಳನ್ನು ಚಿತ್ರ ಸಹಿತ ಪ್ರಕಟಿಸಲು ಈ ಸಂಪ್ರಬಂಧದಲ್ಲಿ ಇಚ್ಛೆಸುತ್ತೇನೆ.

ಡಾ. ಅ. ಸುಂದರ ಅವರ ಪ್ರಕಾರ ಮೂರ್ತಿಯ ಎತ್ತರ ಸು. ೨ ೧/೨ಯಿಂದ ೩ ಮಿ. (ಸು೯ ಅಡಿ). ಎತ್ತರದ ಸಮಭಂಗದಲ್ಲಿರುವ ಈ ದುಂಡು ಶಿಲ್ಪದ ಭವ್ಯ ಮೂರ್ತಿಯ ಕೈಗಳು ಮತ್ತು ತೊಡೆಗಳ ಬದಿಯ ಉಂಗುರಾಕಾರದ ವಸ್ತ್ರದ ನೆರಿಗೆ, ಮೊಳಕಾಲಿನ ಕೆಳಭಾಗ ಒಡೆದು ಹೋಗಿವೆ. ದಷ್ಟ ಪುಷ್ಟವಾದ ಮೈ ಕಟ್ಟು, ಅದಕ್ಕೆ ತಕ್ಕನಾದ ನಿಲುವು. ಇದು ಚತುರ್ಭುಜವುಳ್ಳದ್ದಾಗಿ ಕೆಳ ಬಲಗೈ ಅಭಯ ಮುದ್ರೆಯಲ್ಲಿ, ಮೇಲಿನ ಕೈಗಳಲ್ಲಿ ತ್ರಿಶೂಲ, ಚಕ್ರವು, ಕೆಳ ಎಡಗೈಯಲ್ಲಿ ಶಂಖವು ಇವೆ. ತಲೆಯ ಮೇಲೆ ಚಂದ್ರ ಸಹಿತ ಅರ್ಧಜಟಾ ಅರ್ಧಕಿರೀಟ ಮುಕುಟವಿದೆ. ಕಿರೀಟದೊಳಗಿಂದ ಇಳಿ ಬಿದ್ದ ತಲೆಕೂದಲು ಸುರಳಿ ಸುರುಳಿಯಾಗಿ ಎಡ ಭುಜದ ಮೇಲಿದೆ. ಕುತ್ತಿಗೆಗೆ ಮಣಿಖಚಿತ ಒಂದು ಸರವು ಮತ್ತು ಪೋಣಿಸಿದ ದುಂಡು ಮಣಿಗಳ ಮತ್ತೊಂದು ಸರವು (ಇಲ್ಲಿ ಇರುವುದು ಮಣಿಹಾರಗಳಲ್ಲ; ಶಿವನ ಶಿರೋಭಾಗದಲ್ಲಿಯಂತೇ ಇರುವ ಸಾಲಿಗ್ರಾಮ ಸರಗಳು. ಹೊಟ್ಟೆಯ ಮೇಲೆ ಉದರ ಪಟ್ಟಿಕೆ, ತೋಳಿಗೆ

* "ಸಮರ್ಥ" ೬೫/೧೬, ವಿಕಾಸ್ ಹೈಸ್ಕೂಲ್ ಎದುರು, ೫ನೇ ಬ್ಲಾಕ್, ೩ನೇ ಫೇಸ್, ಬನಶಂಕರಿ ೩ನೇ ಹಂತ, ಬೆಂಗಳೂರು-೫೬೦೦೮೫.



ಹರಿ ಮತ್ತು ಹರ ಎರಡೂ ಒಂದೇ ಆಗಿರುವ ಮೂಲ ವಿಗ್ರಹ



ಎಡಪಾರ್ಶ್ವದಲ್ಲಿಯ ವಿಷ್ಣುವಿನ ಕಿರೀಟ ಭಾಗ. ಕಿವಿಯಲ್ಲಿ ಕರ್ಣ ಕುಂಡಲ ಮತ್ತು ಗುಂಗುರು ಕೂದಲು



ಬಲಪಾರ್ಶ್ವದಲ್ಲಿಯ ಶಿವನ ಸಂಯುಕ್ತ ಉದ್ದಜಡೆ ಮುಕುಟ. ಕಿವಿಯಲ್ಲಿ ನಾಗಾಭರಣ



೮ ಭಾಗದ ವಿಶೇಷ ಕೇಶಾಲಂಕಾರ. ೨ರಲ್ಲಿ ೮ ವಿಶಿಷ್ಟ ಸಾಲಿಗ್ರಾಮ ಸರಣಿ

ಸರಳ ಮಣಿಖಚಿತ ಪಟ್ಟಿ. ಕೈಗೆ ರತ್ನ ಖಚಿತ ಉಬ್ಬು ಬಳೆ ಇವೆ. ಎರಡು ಕಡೆಗಳಲ್ಲಿ ಉಂಗುರಗಳ ಮಾಲೆಯಂತೆ ಇಳಿಬಿದ್ದ ಧೋತ್ರವನ್ನೂ ಕಚ್ಚೆ ಹಾಕಿ ಬಿಗಿದು ಕಟ್ಟಲಾಗಿದೆ. ಮುಂದೆ ಮಾಲಾಕಾರವಾಗಿ ಕಟಿ ಸೂತ್ರದಿಂದ ಇಳಿಬಿದ್ದ ವಸ್ತ್ರ ಪಟ್ಟಿಯಿದೆ. ಕೈಗಳು ತುಂಡಾಗಿದ್ದು ಪುನಃ ಪ್ರತಿಷ್ಠಾಪನೆ ಕಾಲದಲ್ಲಿ ಭುಜಕ್ಕೆ ಸೇರಿಸಲಾಗಿದೆ. ಅದರಲ್ಲೂ ಮೂರ್ತಿಯ ದುಂಡು ತೋಳುಗಳನ್ನು ಮೊಣಕೈಯವರೆಗೂ ಮುಕ್ಕಾಗದ (ಕೈಗಳೂ ಮುಕ್ಕಾಗಿವೆ) ದುಂಡು ಕೈಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅದು ಮೂಲತಃ ದ್ವಿಭುಜವಾಗಿತ್ತೆಂದು (ನನಗೆ ಮೂರ್ತಿಯ ಹಿಂಬದಿಗೆ ಹೋಗಿ ಈ ಸಂಶಯ ಪರಿಹಾರ ಮಾಡಿಕೊಳ್ಳಲು ಆಗ ಅವಕಾಶವಿರಲಿಲ್ಲ.) ಸುಮಾರು ೨–೫ನೇ ಶತಮಾನಗಳಲ್ಲಿ ಗಣೇಶ, ದುರ್ಗಾ, ವಿಷ್ಣು, ವರಾಹ, ನರಸಿಂಹ ಮುಂತಾದ ಮೂರ್ತಿ ಶಿಲ್ಪಗಳಲ್ಲಿ ದ್ವಿಭುಜಗಳನ್ನು ಮಾತ್ರ ಬಿಡಿಸಲಾಗಿದೆ. ಇಂಥ ಮೂರ್ತಿಗಳು ತಕ್ಕ ಪರಮಾಣದಲ್ಲಿ ಹೆಚ್ಚಾಗಿ ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ ಹಾಗೂ ವಿರಳವಾಗಿ ವಿಜಾಪುರ ಜಿಲ್ಲೆಗಳಲ್ಲಿ ಇವೆ) ಬಹಳ ಮಟ್ಟಿಗೆ ಅನಿಸುವುದು. ಪಾಳೇಗಾರರ ಕಾಲದಲ್ಲಿ ಪುನಃ ಪ್ರತಷ್ಠಾಪನೆ ಕಾಲದಲ್ಲಿ ತಲೆ ಮಾರಿನಿಂದ ಬಂದ ಪ್ರತಿಮಾ ಲಕ್ಷಣ ಪದ್ಧತಿಯಂತೆ ಈ ಮೂರ್ತಿಯೂ ಚತುರ್ಭುಜ ವಾಗಿತ್ತೆಂದು ಬಗೆದು ಜೋಡಿಸಲಾಯಿತೆಂದು ತೋರುವುದು. ಮೇಲಿನ ಎರಡು ಕೈಗಳ ಬುಡದಲ್ಲಿ ಅವುಗಳಿಗೆ ಆಧಾರವಾಗಿ ಚಿತ್ರ ಫಲಕಗಳಿವೆ. ಈ ಜೋಡಣೆ ಹೊಂದಾಣಿಕೆ ಯಿಲ್ಲದೆ ಅಸಹಜವಾಗಿದೆ. ಚಿತ್ರ ಫಲಕಗಳಲ್ಲಿ ಬಲಕ್ಕೆ ಪಾರ್ವತಿ, ಎಡಕ್ಕೆ ಲಕ್ಷ್ಮಿಯ ಉಬ್ಬು ಶಿಲ್ಪಗಳಿವೆ. ಬುಡದ ಮೇಲೆ ಬಲ ಬದಿಗೆ ಗಣೇಶ ಎಡ ಬದಿಗೆ ಸನತ್ಕುಮಾರನ (?) ಉಬ್ಬು ಶಿಲ್ಪಗಳಿವೆ.

ಚಿತ್ರ ಫಲಕಗಳಂತೂ ಶಿಲ್ಪ ಲಕ್ಷಣದ ಮೇಲೆ ಪಾಳೆಯಗಾರರ ಕಾಲದ್ದೆಂದು ಸ್ಪಷ್ಟವಾಗಿ ಹೇಳಬಹುದು. ತ್ರಿಶೂಲ, ಚಕ್ರ ಮತ್ತು ಶಂಖಗಳ ಮಾದರಿಗಳನ್ನು ನೋಡಿದರೆ ಅವೂ ಕೂಡ ಇದೇ ಕಾಲದ್ದೆಂದು ಸಂಶಯ. ಇನ್ನು ಮೂರ್ತಿಯ ಉಳಿದಭಾಗ, ಮಕುಟ, ಆಭರಣಗಳ ಶೈಲಿ, ಧೋತ್ರ ಉಟ್ಟ ರೀತಿ ಮತ್ತು ಕಟಿ ಸೂತ್ರ ಮಾದರಿ ಮತ್ತು ದೈಹಿಕ ಮಾಟ; ಮುಖ್ಯವಾಗಿ ಯಜ್ಞೋಪವೀತ ಹಾಗೂ ವೈಜಯಂತಿ ಇಲ್ಲದಿರುವಿಕೆ ಇವುಗಳೆಲ್ಲವುಗಳಿಂದ ಈ ಮೂರ್ತಿ ಐದು ಇಲ್ಲವೆ ಆರನೇ ಶತಮಾನದ ಆದಿ ಭಾಗದ್ದೆಂದು ಅನ್ನಿಸುತ್ತದೆ.

ಪ್ರೊ. ಹೆಚ್.ಎಂ. ಶಂಕರ ನಾರಾಯಣ ಅವರ ವಿಶ್ಲೇಷಣೆ (ಶ್ರೀ ಹರಿಹರ ದೇವಾಲಯ ಪು. ೧೩೪ ರಿಂದ ೧೩೬, ೧೯೮೨).

ಗರ್ಭ ಗೃಹದಲ್ಲಿ ಭವ್ಯವಾದ ಆದರೆ ಭಿನ್ನವಾದ ಹರಿಹರ ಮೂರ್ತಿ ಇದೆ. ಸ್ವಲ್ಪ ಮಟ್ಟಿಗೆ ತೆಳು ಹಸಿರಿನ ಅಗ್ನಿ ಶಿಲೆ (Green Basalt) ಮೂರ್ತಿಇದು. **ಆರು ಅಡಿಗಳಿಗಿಂತಲೂ ಹೆಚ್ಚಿನ ಪ್ರಮಾಣದ** ಈ ಮೂರ್ತಿ ಗರ್ಭ ಗೃಹದಲ್ಲಿ ಮೂಲತಃ ಪ್ರತಿಷ್ಠೆಗೊಂಡದ್ದೆಂದು ಹೇಳುವುದು ಕಷ್ಟ. ಕ್ರಿ.ಶ. ಹನ್ನೊಂದನೆಯ ಶತಮಾನದ ವೇಳೆಗೆ ಈ ದೇವಸ್ಥಾನದ ಅಸ್ಥಿತ್ವದಲ್ಲಿ ಇತ್ತೆನ್ನುವುದಕ್ಕೆ ಶಾಸನಾಧಾರಗಳಿವೆ. ಉಚ್ಚಂಗಿ ಪಾಂಡ್ಯರು ಈ ದೇವರ ಭಕ್ತರಾಗಿದ್ದರೆಂಬುದು ಅವರ ಶಾಸನಗಳಿಂದ ತಿಳಿದು ಬರುವ ವಿಷಯ. ಆದರೆ ಈ ದೇವಾಲಯವಿರುವ ಅಂದಿನ ನೊಳಂಬವಾಡಿ ಪ್ರದೇಶವನ್ನು ಇವರಿಗೂ ಮೊದಲು ಎಂಟನೇಯ ಶತಮಾನದಿಂದ ಹನ್ನೊಂದನೆಯ ಶತಮಾನದ ಮಧ್ಯ ಭಾಗದವರೆಗೂ

ನೊಳಂಬ ಪಲ್ಲವರು ಆಳುತ್ತಿದ್ದರು. ಇವರೂ ಸಹ ಕಲ್ಯಾಣದ ಚಾಲುಕ್ಯರ ಸಾಮಂತಿಕೆಯನ್ನು ಒಪ್ಪಿದ್ದರು. ಮೂರ್ತಿಯ ಲಕ್ಷಣಗಳನ್ನು ಗಮನಿಸಿದಾಗ ಇದು **ಕಲ್ಯಾಣದ ಚಾಲುಕ್ಯರ ಆರಂಭಕಾಲಕ್ಕೆ ಸೇರಿದ ಮೂರ್ತಿ ಎನಿಸುತ್ತದೆ.** ಮೂರ್ತಿಯ ಮುಖದಲ್ಲಿ ವಾಸ್ತವಿಕತೆಯ ಲಕ್ಷಣಗಳಿವೆ. ಮುಗುಳು ನಗೆಯನ್ನು ಸೂಸುವ ಸ್ವಾಮಿಯ ಮುಖದಲ್ಲಿ ಪುರುಷ ಯೋಗ್ಯ ಚಿಹ್ನೆಗಳಿವೆ. ಮೂರ್ತಿಯ **ಮೈ ಕಟ್ಟಿಗೆ ಅನುಗುಣವಾದ ಅವಯವಗಳಿಲ್ಲದೆ ಇದು ಅಪೂರ್ಣವಾಗಿದೆಯೆಂದು ಡಾ. ಎಂ.ಹೆಚ್. ಅವರು ಅಭಿಪ್ರಾಯಪಟ್ಟಿರುವರಲ್ಲದೆ ಇದರ ಶಿರೋಭಾಗ ಚಾಳುಕ್ಯರ ಕಾಲದ್ದಾಗಿದ್ದು ದೇಹದ ಇತರ ಭಾಗಗಳು ಬಹುಶಃ ಪಾಳೆಯಗಾರರ ಕಾಲದಲ್ಲಿ ಕಡೆಯಲ್ಪಟ್ಟಿರ ಬಹುದೆಂದು ಊಹಿಸಿದ್ದಾರೆ.**

೧೯೧೨ನೆಯ ವರ್ಷದ ಪುರಾತತ್ವ ಇಲಾಖೆಯ ವಾರ್ಷಿಕ ವರದಿಯಲ್ಲಿ ಆರ್. ನರಸಿಂಹಾಚಾರ್ಯರು ಈ ದೇವಾಲಯದ ವಿಷಯಗಳನ್ನು ಕುರಿತು ಬರೆಯುತ್ತಾ ಈ ಮೂರ್ತಿಯು ಸುಮಾರು ನಾಲ್ಕು ಅಡಿಗಳಷ್ಟು ಎತ್ತರವಾಗಿದೆ ಎಂದಿದ್ದಾರೆ. ಮೂರ್ತಿಯನ್ನು ಕುರಿತು ಇನ್ನಾವ ವಿವರಗಳನ್ನೂ ಅವರು ಒದಗಿಸಿಲ್ಲ.

ಎಂ.ಎಚ್. ಕೃಷ್ಣ ಅವರ ಊಹೆಯನ್ನು ಒಪ್ಪುವುದು ಕಷ್ಟವಾಗುತ್ತದೆ.

ಮೂರ್ತಿ ಭಿನ್ನವಾಗಿದ್ದರೂ, ಇದರ ಶಿರಸ್ಸು ಹಾಗೂ ಇತರ ಭಾಗಗಳು ಸಮ ಪ್ರಮಾಣದವಾಗಿಲ್ಲವೆಂಬ ಅವರ ಅಭಿಪ್ರಾಯ ಸಹ ಬಹುಮಟ್ಟಿಗೆ ಗ್ರಾಹ್ಯವಲ್ಲ. ಇಡೀ ವಿಗ್ರಹವನ್ನು ಅಭಿಷೇಕದ ಸಮಯದಲ್ಲಿ (ಶ್ರೀ ಶಂಕರ ನಾರಾಯಣ ರಾಯರು ಹರಿಹರೇಶ್ವರ ಮೂರ್ತಿಯ ಅಭಿಷೇಕದ ಮನೆತನದವರೇ ಆಗಿದ್ದು ಹರಿಹರ ದೇವಾಲಯ ಪುಸ್ತಕವನ್ನು ಅವರ ತಂದೆ ಹರಿಹರ ಮಲ್ಲಾರಿಭಟ್ಟ ಅಭಿಷೇಕಿ ಅವರಿಗೆ ಸಮರ್ಪಿಸಿದ್ದಾರೆ.) ನೋಡಿದಾಗ ಈ ಎರಡು ಪಕ್ಕಗಳಲ್ಲಿ ಲಕ್ಷ್ಮಿಪಾರ್ವತಿಯರ ವಿಗ್ರಹಗಳ ಮೇಲೆ ನಿಲ್ಲಿಸಿರುವ ಹಾಗೂ ಮೂರ್ತಿಯ ಮೇಲಿನ ಎಡಬಲಗೈಗಳು ಮೂಲ ವಿಗ್ರಹದ ಭಾಗಗಳೇ ಆಗಿದ್ದುವೆಂದು ಖಚಿತವಾಗಿ ಹೇಳಬಹುದು. ಏಕೆಂದರೆ ಈ ಭಾಗಗಳ ಶಿಲೆ ಒಂದೇ ತೆರನಾದ ದಪ್ಪ, ಬಣ್ಣಗಳನ್ನು ಹೊಂದಿರುವುದಲ್ಲದೆ, ಈ ಭಾಗಗಳು ಪ್ರಮಾಣ ಏಕ ರೀತಿಯಾಗಿದೆ. ಇದನ್ನು ಗಮನಿಸಿದರೆ ಭಿನ್ನ ಮೂರ್ತಿಯನ್ನು ಮತ್ತೆ ಪ್ರತಿಷ್ಠೆ ಮಾಡುವ ಸಮಯದಲ್ಲಿ ತ್ರಿಶೂಲ ಚಕ್ರಗಳ ಕೈಗಳನ್ನು ವಿಗ್ರಹದೊಂದಿಗೆ ಸೇರಿಸದೆ, ಪಕ್ಕದಲ್ಲಿ ನಿಲ್ಲಿಸಿದಂತೆ ತೋರುತ್ತದೆ. ವಿಗ್ರಹದ ಪಾದಗಳ ಭಾಗ ಭಿನ್ನವಾಗಿದ್ದು ಅವು ತಗ್ಗಾದ ಪೀಠದ ಅಡಿಯಲ್ಲಿ ಹೂತು ಹೋಗಿದ್ದು ಈಗ ಕಾಣದಾಗಿದೆ. ಎಂದಿದ್ದಾರೆ ಡಾ.ಎಂ.ಎಚ್. ಕೃಷ್ಣ **ಆದರೆ ಮಹಮ್ಮದೀಯರ ದಾಳಿಗೆ ಈ ಪ್ರದೇಶ ತುತ್ತಾದಾಗ ವಿಗ್ರಹ ಭಿನ್ನವಾಗಿ ಅದನ್ನು ಅಲ್ಲಿಂದ ತೆಗೆದು ನೀರಿನಲ್ಲಿಟ್ಟಿದ್ದು ಅದರ ಸ್ಥಳದಲ್ಲಿ ತಾತ್ಕಾಲಿಕವಾಗಿ ಸಣ್ಣದೊಂದು ವಿಗ್ರಹವನ್ನು ಸ್ಥಾಪಿಸಲಾಗಿತ್ತೆಂದೂ, ಕಾಲಾನಂತರ ಭಿನ್ನವಾಗಿದ್ದ ವಿಗ್ರಹವನ್ನು ಪುನಃ ಕೂಡಿಸಿ ಪ್ರತಿಷ್ಠೆ ಮಾಡಲಾಯಿತೆಂದೂ, ಎಪ್ಪತ್ತು ವರ್ಷಗಳ ಹಿಂದೆಯೇ ಪ್ರಚಲಿತವಾಗಿದ್ದ (ಈಗಲೂ ಇರುವ) ಪ್ರತೀತಿಯನ್ನು ಆರ್, ನರಸಿಂಹಾಚಾರ್ಯರು ಗಮನಿಸಿದ್ದಾರೆ.** (M.A.R.1912 q.21) ಈಗಿನ ವಿಗ್ರಹವನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಅದರ ಕೆಳಭಾಗ ನಷ್ಟವಾಗಿರುವುದು ಸ್ಪಷ್ಟವಾಗುತ್ತದೆ. ಬಹುಶಃ ಆ ಭಾಗ ದೊರಕಲೇ ಇಲ್ಲವೇನೋ! (ಶ್ರೀ ಹರಿಹರ ದೇವಾಲಯ ಪು.೧೩೬)... ಹರಿಹರದಲ್ಲಿನ ಈ ವಿಗ್ರಹ ನೊಳಂಬಪಲ್ಲವರದೆನಿಸಿದ ಹೇಮಾವತಿಯ (ತುಮಕೂರು ಜಿಲ್ಲೆ) ಮೂರ್ತಿ ಶಿಲ್ಪಗಳನ್ನು ಒಂದು ವಿಧದಲ್ಲಿ ಹೋಲುತ್ತಿದೆ ಎನ್ನ ಬಹುದು. ನೊಳಂಬ ಪಲ್ಲವರ ಕಾಲದ ಮೂರ್ತಿ ಶಿಲ್ಪಗಳಲ್ಲೂ ಕೆಲವು ಬಾರಿ ಹಸ್ತಗಳು ಭುಜಗಳು ಅಸ್ವಾಭಾವಿಕವಾದ ನಿಲುವಿನಲ್ಲಿರುವುದನ್ನು ಗಮನಿಸಿದಾಗ ಈ ಹರಿಹರಮೂರ್ತಿಯ ಬಿದ್ದುಹೋಗಿ ಕೂಡಿಸಿರುವ ಎರಡು ಹಸ್ತಗಳು ಅಸ್ವಾಭಾವಿಕ ನಿಲುವಿನಲ್ಲಿದೆಯೆಂಬುದನ್ನು ಗಮನಿಸಬೇಕು. **"ಕಲ್ಯಾಣದ ಚಾಳುಕ್ಯರ ಆಳ್ವಿಕೆಯ ಆರಂಭದಲ್ಲಿ ರೂಪುಗೊಂಡ ಶಿಲ್ಪ ಶೈಲಿಯ ಪ್ರಭಾವವನ್ನು ಇದರಲ್ಲಿ ಕಾಣಬಹುದು."** ವಿಗ್ರಹದ ಮೇಲೆ ಸಾಮಾನ್ಯವಾಗಿ ಚಾಳುಕ್ಯ ಶೈಲಿಗಳಲ್ಲಿ ಕಾಣಿಸಿಕೊಳ್ಳುವ ಪ್ರಭಾವಳಿ (ತೋರಣ) ಇಲ್ಲದಿರುವುದೊಂದು ಗಮನಾರ್ಹವಾದ ಸಂಗತಿ (ibd.137)

ಕಲಮುದಾನಿ ಗುರುರಾಯರ ಅಭಿಪ್ರಾಯ (ಶ್ರೀ ಹರಿಹರೇಶ್ವರ ಮಹಿಮೆ ಪು. ೭-೮, ೧೯೯೨)

ಈ ದೇವಾಲಯದಲ್ಲಿಯ ಶ್ರೀ ಹರಿಹರೇಶ್ವರ ಮಾನವಾಕಾರದಷ್ಟೇ ಎತ್ತರವಾಗಿದ್ದು **ಸಾಲಿಗ್ರಾಮ ಶಿಲೆಯದಾಗಿದೆ**(?). ಆದರೆ ಈ ಮೂರ್ತಿಗೆ **ಪಾದಗಳಿಲ್ಲ. ಪಾದ ತಲದಿಂದ ಸುಮಾರು ಅರ್ಧಘೂಟಿನಷ್ಟು ಕಾಲುಗಳಿಲ್ಲ.** ಈ ದೇವರು ಪೂರ್ವಾಭಿಮುಖನಾಗಿ ನಿಂತಿದ್ದಾನೆ. ಈ ಮೂರ್ತಿಯ ಬಲ ಭಾಗವು ಪಾರ್ವತೀ ಪತಿಯಾದ ಪರಮೇಶ್ವರನ ಅರ್ಧ ದೇಹವಾಗಿದ್ದು, ಎಡಭಾಗವು ಶ್ರೀ ಲಕ್ಷೀಪತಿಯಾದ ವಿಷ್ಣುವಿನ ದೇಹದ ಅರ್ಧ ಭಾಗವಾಗಿದೆ. ಹರಿಯ ಎಡದ ಅರ್ಧಭಾಗ, ಹರನ ಬಲದ ಅರ್ಧ ಭಾಗಗಳೆರಡೂ ಬೆಸೆದು ಒಂದಾಗಿ ಹರಿಹರೇಶ್ವರನಾಗಿ ನಿಂತು ಶೋಭಿಸುತ್ತಿದ್ದಾನೆ ಈ ದೇವರು. ಶ್ರೀ ಹರಿಹರೇಶ್ವರ ಮೂರ್ತಿಯ ಹರಾಂಶವಾದ ಬಲಭಾಗದ ಒಂದು ಕೈಯಲ್ಲಿ ತ್ರಿಶೂಲವಿದೆ ಇನ್ನೊಂದು ಕೈ ಅಭಯ ಹಸ್ತ, **ಬಲಗಿವಿಯು**

ನಾಗಭೂಷಣವಾಗಿದೆ. ಬಲ ಪಾರ್ಶ್ವದ ಅರ್ಧ ತಲೆಯು ಜಟಾ, ಗಂಗಾದೇವಿ ಮತ್ತು ಚಂದ್ರನಿಂದ ಅಲಂಕರಿಸಲ್ಪಟ್ಟಿರುವುದು.

ಹರಿಯ ಅಂಶವಾದ ಎಡಭಾಗದ ಒಂದು ಕೈಯಲ್ಲಿ ಶಂಖವೂ ಇನ್ನೊಂದು ಕೈಯಲ್ಲಿ ಚಕ್ರವೂ ಇರುವುದು ಹರಿಭಾಗದ ಕಿವಿಯಲ್ಲಿ ಕರ್ಣಕುಂಡಲಗಳು ಶೋಭಿಸುವುವು. ಹರಿ ಭಾಗದ ಶಿರದಲ್ಲಿ ಕಿರೀಟವಿದೆ. **ಇಡೀ ಹರಿಹರೇಶ್ವರ ಮೂರ್ತಿಯ ಏಕ ಕಂಠದಲ್ಲಿ ರುಂಡ ಮಾಲೆ, ವೈಜಯಂತೀ ಮಾಲೆ** ಗಮನಿಸಿದಾಗ ಅದರಲ್ಲಿ ೧೨ ವಕ್ರ ರೇಖೆಯ ಗುರುತುಗಳನ್ನು ತೋರಿಸಿದ್ದು ಅವು ದ್ವಾದಶ ಲಿಂಗದ ಪ್ರತೀಕವೆನಿಸಿವೆ. ಲಿಂಗಾಕಾರವನ್ನೇ ಸೂಚಿಸಬೇಕೆಂದು ಕಡ್ಡಾಯವೇನಿಲ್ಲ. ಏಕೆಂದರೆ ಮೇಲೆ ತಿಳಿಸಿರುವಂತೆ ವೈಕುಂಠದ ಏಳು ಬಾಗಿಲುಗಳಂತೆಯೇ ಇವೂ ಕೂಡ ಸೂಚ್ಯಾರ್ಥವಾಗಿಯೇ ಇರುತ್ತವೆ. **ಮತ್ತು ಶಾಲಿಗ್ರಾಮದ ಮಾಲೆಗಳು ಅಲಂಕೃತವಾಗಿದೆ. ಈ ಮೂರ್ತಿಯ ಬಲ ಭಾಗದಲ್ಲಿ ಪಾರ್ವತಿ ಮತ್ತು ಗಣಪತಿಯರ ಮೂರ್ತಿಗಳಿರುವವು. ಎಡಭಾಗದಲ್ಲಿ ಶ್ರೀ ಲಕ್ಷ್ಮಿದೇವಿ ಮತ್ತು ಋಷ್ಯ ಶೃಂಗ ಋಷಿಗಳಿರುವರು. ಇವಿಷ್ಟು ಈಗ ನಮಗೆ ಕಾಣುವ ದೇವರು. ಚಿತ್ರ (೧)**

ಮೇಲೆ ತಿಳಿಸಿರುವ ಹಿರಿಯ ವಿದ್ವಾಂಸರ ಅಭಿಪ್ರಾಯಗಳನ್ನು ಗಮನಿಸಿ ಈಗ ಕಾಣುವ ಹರಿಹರೇಶ್ವರನ ಬಗೆಗೆ ಕೆಲವು ಹೊಸ ಅಂಶಗಳನ್ನು ಮೊದಲ ಬಾರಿಗೆ ಹೀಗೆ ಪಟ್ಟಿ ಮಾಡಲಾಗಿದೆ.

೧. ಹರಿಹರದ ಕೈಫಿಯತ್ತಿನ ಪ್ರಕಾರ ಈ ವಿಗ್ರಹವು ಕಡಿಮೆ ಎಂದರೆ ಐದು ಸಲ ಒಡೆಯಲಾಗಿದೆ. ಕಂಪ್ಯೂಟರ್ ಮೂಲಕ ಮೂಲ ವಿಗ್ರಹ ಚಿತ್ರವನ್ನು ದೊಡ್ಡದು ಮಾಡಿ ನೋಡಿದಾಗ ಮುಖ ಭಾಗದಲ್ಲಿಯ ಮೂಗು, ತುಟಿ, ಭುಜ ಇತ್ಯಾದಿಗಳನ್ನು ಕೂಡಿಸಿ ಬೆಸೆದಿರುವುದು ಕಂಡು ಬರುತ್ತಿದ್ದು ಐದಕ್ಕಿಂತಹೆಚ್ಚುಬಾರಿ ಈ ವಿಗ್ರಹವನ್ನು ಭಂಜಿಸಿರುವುದು ಕಂಡು ಬರುತ್ತದೆ. ವಿಗ್ರಹ ಭಿನ್ನವಾಗಿರುವ ವಿಷಯ ಬಿ.ಎಲ್. ರೈಸ್, ಥಾಮಸ್ ಫೋಕ್ಸ್ ಮತ್ತು ಮೇಲೆ ಹೇಳಿರುವ ವಿದ್ವಾಂಸರುಗಳ ಪ್ರಕಾರವೂ ಸ್ಪಷ್ಟವಾಗುತ್ತದೆ.

೨. ವಿಗ್ರಹದ ಪೂರ್ಣ ಎತ್ತರ: ೧೦'೮" ಮೂರ್ತಿಯ ಎತ್ತರ ಪೀಠದ ಮೇಲ್ಭಾಗದಿಂದ: ೮" ೨", ಅಗಲ ೪'೬"

೩. ಹರಿಹರೇಶ್ವರನ ಶಿರೋಭಾಗದಲ್ಲಿ ಹರಿಹರರನ್ನು ಪ್ರತಿನಿಧಿಸುವ ಕಿರೀಟದ ಭಾಗವನ್ನು ವಿಶಿಷ್ಠ ರೀತಿಯಲ್ಲಿ ತೋರಿಸಲಾಗಿದೆ. (ಚಿತ್ರ೨)

ಅ) ಬಲಭಾಗದ ಶಿವನ ಜಡೆಯ ಭಾಗ. ಆ) ಎಡ ಭಾಗದಲ್ಲಿಯ ವಿಷ್ಣುವಿನ ಭಾಗದ ಕಿರೀಟ.

ಆ) ಎಡದಲ್ಲಿಯ ವಿಷ್ಣುವಿನ ಕಿರೀಟ ಭಾಗದ ವಿವರ:

ಕಿರೀಟದಲ್ಲಿ ನಾಲ್ಕು ವಿಭಾಗಗಳಿದ್ದು ಮೇಲಿನಿಂದ ಕೆಳಭಾಗಕ್ಕೆ ನಾಲ್ಕು ಹೆಸರುಗಳುಂಟು: ೧) ಕಲಶ ೨) ವಿಸ್ತಾರ ೩) ಆಧಾರ ೪) ಕಲ್ಪ

೧) ಕಳಶ : ಗೋಪುರದ ರೀತಿಯಲ್ಲಿ ಚೂಪಾಗಿರುತ್ತದೆ. ಈ ಭಾಗಕ್ಕೆ ದೇವತಿ ಆಕಾಶ. ಯಾವುದೇ ರೂಪ ಇರುವುದಿಲ್ಲ.

೨) ಆಧಾರ: ಇಲ್ಲಿ ಸಣ್ಣ ಸಣ್ಣ ಗೆರೆಗಳನ್ನು ಎಲೆ ಅಥವಾ ಬೊಗಸೆಯ ಆಕಾರದಲ್ಲಿ ಬಿಡಿಸಿರುತ್ತಾರೆ. ಇದನ್ನು **"ಪತ್ರಶೇಷ"** ಎನ್ನುವರು. ಆಕಾಶದ ನಂತರ ಭೂಮಿಯ ಸ್ವರೂಪವನ್ನು ಇದು ಒಳಗೊಂಡಿರುತ್ತದೆ.

೩. ಪ್ರಸ್ತಾರ : ಈ ಭಾಗದಲ್ಲಿ ಪ್ರತಿಷ್ಠಾಪನೆಗೊಂಡಿರುವ ಆಯಾ ದೇವರುಗಳ ವಿಶಿಷ್ಟ ಅಂಶಗಳನ್ನು ಒಳಗೊಂಡಿರುತ್ತದೆ ಈ ಅಂಶವನ್ನು ಕಿರೀಟದ ಕಮಾನಿನ ಅಂಶದಲ್ಲಿ ಸಂಕೇತಿಸಿರುತ್ತಾರೆ. ಉ.ದಾ. ಶ್ರೀ ಹರಿಹರೇಶ್ವರನ ವಿಷ್ಣು ಭಾಗದಲ್ಲಿ ಏಳು ಕಮಾನುಗಳಿದ್ದು ಅವು ವೈಕುಂಠದ ಏಳು ಬಾಗಿಲುಗಳನ್ನು ಸೂಚಿಸುತ್ತದೆ. ಒಮ್ಮೊಮ್ಮೆ ವೈಕುಂಠ ಪರಿಸರದಲ್ಲಿರ ಬಹುದಾದ ವಸ್ತುಗಳನ್ನೂ ಒಳಗೊಂಡಿರುತ್ತದೆ.

೪. ಕಲ್ಪ : ದೇವತೆಯು ಯಾವ ವಸ್ತುವನ್ನು ಪ್ರತಿನಿಧಿಸುತ್ತದೆ? ಎನ್ನುವ ಸಂಕೇತ ಉ.ದಾ. ನವಗ್ರಹಗಳಿಗೆ ಒಂದೊಂದು ಬಗೆಯ ಹರಳುಗಳು ಇರುವ ಹಾಗೆ. ಕಿರೀಟದ ಮುಂಭಾಗದಲ್ಲಿ ಸ್ವಲ್ಪ ದೊಡ್ಡದಾದ **"ಮುಖ ಚಕ್ರ ಪದಕ"** ಇರುತ್ತದೆ. ಆಯಾ ದೇವತೆಯ ಮೂಲ ಅಂಶ, ಮೂಲ ವಸ್ತು, ಧಾತು ಯಾವುದು? ಅದಕ್ಕೆ ಸಂಬಂಧಿಸಿದ ಹರಳುಗಳನ್ನು ಜೋಡಿಸಿರುತ್ತಾರೆ. ಪದಕದಲ್ಲಿ ದೇವತೆಗೆ ಸಂಬಂಧಪಟ್ಟ ವಜ್ರ ವೈಢೂರ್ಯಗಳ ಜೊತೆಗೆ ಅಲಂಕಾರಿಕ ಹರಳುಗಳನ್ನೂ ಜೋಡಿಸಿರುತ್ತಾರೆ. ಖನಿಜಾಂಶ ಅಂದರೆ ಭೂಮಿಗೆ ಸಂಬಂಧಪಟ್ಟ ಅಂಶ, ಸಮುದ್ರದಲ್ಲಿ ಸಿಗುವ ಖನಿಜಾಂಶಗಳನ್ನು ಒಳಗೊಂಡ ಹವಳ, ಮುತ್ತು ಇತ್ಯಾದಿ.

ಅ) ಬಲಭಾಗದ ಶಿವನ ಜಡೆಯ ಭಾಗ

ಇದರಲ್ಲಿಯೂ ಶಿಲ್ಪಿಯು ಬೇರೆ ಬೇರೆ ೮ ಪ್ರಭೇಧಗಳನ್ನು ತೋರಿಸಿದ್ದಾನೆ. ಇದರ ವಿವರ ಹೀಗಿದೆ: ಜಡೆ ಎಂದರೆ ಹರಿಹರೇಶ್ವರನ ಶಿರೋ ಭಾಗದಲ್ಲಿರುವ ಕೂದಲಿನ ಗಂಟು ಎಂದಷ್ಟೇ ಅರ್ಥವಲ್ಲ. ಇದು **ಜಟಾ ಸಂಯುಕ್ತ ಅಂದರೆ ಹಲವು ವಿಶೇಷಗಳನ್ನು ಒಳಗೊಂಡಿರುವ ಗುಂಪು**. ಇಲ್ಲಿ ಜಡೆ ಭೂಮಿ, ಪರ್ವತ, ಹರಿಯುವ ನದಿ ಇವುಗಳ ಸಂಕೇತ. ಈ ಜಡೆಯಲ್ಲಿ ಗಂಗೆ ಹರಿಯುತ್ತಿರುವುದನ್ನು ಗುರುತಿಸಬಹುದು. ಚಂದ್ರನಿರುವ ನಾಲ್ಕನೇ ಜಟಾ ಭಾಗವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅದರಲ್ಲಿ ೧೨ ವಕ್ರ ರೇಖೆಯ

ಗುರುತುಗಳನ್ನು ತೋರಿಸಿದ್ದು ಅವು ದ್ವಾದಶ ಲಿಂಗದ ಪ್ರತೀಕವೆನಿಸಿವೆ. ಲಿಂಗಾಕಾರವನ್ನೇ ಸೂಚಿಸಬೇಕೆಂದು ಕಡ್ಡಾಯವೇನಿಲ್ಲ. ಏಕೆಂದರೆ ಮೇಲೆ ತಿಳಿಸಿರುವಂತೆ ವೈಕುಂಠದ ಏಳು ಬಾಗುಲುಗಳಂತೆಯೇ ಇವೂ ಕೂಡ ಸೂಚ್ಯಾರ್ಥವಾಗಿಯೇ ಇರುತ್ತವೆ. ಶಿವನ ಜಡೆಯಲ್ಲಿಯ ಕೂದಲು ಶಕ್ತಿಯ ಸಂಕೇತ. ಇಲ್ಲಿ ಶಕ್ತಿ ಸ್ತ್ರೀ ದೇವತೆಯಲ್ಲ. ಸಂಪೂರ್ಣ ಸೃಷ್ಟಿ ಶಕ್ತಿಯನ್ನು ಧಾರಣ ಮಾಡಿಕೊಂಡು (ತಾಳಿಕೊಂಡು) ಪಾಲನೆ ಮಾಡುವ ಶಕ್ತಿ. ಹೀಗಾಗಿ ಇಲ್ಲಿ **"ಶಿವ-ಶಿಖೆ" "ಧಾರಣ-ತಾರಣ" ರೂಪವಾಗಿದೆ.** ಶಿಖೆ ಋಷಿ ಸಂಕೇತವೂ ಹೌದು. ಋಷಿ ಸದಾ ಕಾಲವೂ ಜಗತ್ತಿಗೆ ಒಳ್ಳೆಯದನ್ನೇ ಬಯಸುವ, ಒಳ್ಳೆಯದನ್ನೇ ಮಾಡುವ ಮಂಗಳ ಗುಣ ಸ್ವರೂಪನು.

ಶಿವನ ಜಟೆ/ಜಡೆಯನ್ನು ಒಟ್ಟು ಎಂಟು ಭಾಗಗಳಾಗಿ ವಿಂಗಡಿಸಿದ್ದು ಮೇಲಿನ ಸುತ್ತು ಹರಿಹರರಿಬ್ಬರಿಗೂ ಒಂದೇ ರೂಪದಲ್ಲಿ ಬರುವಂತೆ ನೋಡಿ ಕೊಳ್ಳಲಾಗಿದೆ. ಕೆಳ ಭಾಗದಲ್ಲಿ (ಕಿವಿಯ ಮೇಲ್ಭಾಗದಲ್ಲಿ) ಶಿವಾರ್ಧದಲ್ಲಿ ಸಾಲಿಗ್ರಾಮಗಳಿದ್ದರೆ ವಿಷ್ಣುವಿನ ಕಿರೀಟದಲ್ಲಿ ಪಟ್ಟಿಯಲ್ಲಿ ತೊರಿಸಲಾಗಿದೆ. ಇಲ್ಲಿರುವ ಒಟ್ಟು ಸಾಲಿಗ್ರಮಗಳ ಸಂಖ್ಯೆ ಎಂಟು. ಇವೆಲ್ಲವೂ ಶಕ್ತಿ ಸಾಲಿಗ್ರಾಮಗಳೆನಿಸಿದ್ದು ಜಗದಂಬೆಯ ಅಸ್ತಿತ್ವವನ್ನೂ ಒಳಗೊಂಡಿವೆ. ಈಗ ದೊರೆತಿರುವ ಮಾಹಿತಿಯ ಪ್ರಕಾರ ಇಲ್ಲಿ ಆಯಾ ಸಾಲಿಗ್ರಾಮಗಳು ಏನನ್ನು ಸಂಕೇತಿಸುತ್ತಿವೆ ಎನ್ನುವ ಕೆಲವು ವಿಚಾರವನ್ನೂ ಹೀಗೆ ಸಂಗ್ರಹಿಸಲಾಗಿದೆ.

೧) ನಾಗ-ನಾಗನ ಅಂಗಾಂಗಳ ಸಹಿತ ಇದೆ ೨) ಯಕ್ಷ ೩) ಚಂದ್ರವರ್ಣ ೪) ಹೃದಯತಮ ೫) ಆತ್ಮಲಿಂಗ – ಶಿವ ತತ್ವ ಶಕ್ತಿ ೬) ಜ್ಯೋತಿರ್ಲಿಂಗ- ದ್ವಾದಶ ಜ್ಯೋತಿರ್ಲಿಂಗಗಳು ೭) ವಾಯು ಮತ್ತು ೮) ಮೂಲ ಶಿವನ ಪಂಚಾಕ್ಷರಿ ಲಿಂಗ – ವಾಮ ದೇವಾದಿ ಪಂಚ ಲಿಂಗಗಳ ಮೂಲ ಭೂತ ಶಕ್ತಿಯ ಸಂಕೇತವಾಗಿದೆ.

೪. ಶಿವನ ಕಿವಿಯಲ್ಲಿ ಹಾವನ್ನು ಬಿಡಿಸಲಾಗಿದ್ದು ಕೊರಳಲ್ಲಿ ಅದು ಕಂಡು ಬರುವುದಿಲ್ಲ. ವಿಷ್ಣುವಿನ ಕಿವಿಯಲ್ಲಿ ಕರ್ಣ ಕುಂಡಲಗಳಿವೆ. ಭುಜದ ಮೇಲಿನ ಕೂದಲು ಶಿವನ ಭಾಗದಲ್ಲಿ ನೀಳವಾಗಿದ್ದರೆ, ವಿಷ್ಣು ಭಾಗದಲ್ಲಿ ಗುಂಗುರು ಕುರುಗಳಿವೆ.

೫. ಬಲಪಾಶ್ವದ ಜಡೆಯ ಮುಡಿಯ ಮೊದಲ ಭಾಗದಲ್ಲಿ ನೀರು ಚಿಮ್ಮುತ್ತಲಿರುವ ಗಂಗೆಯನ್ನೂ ಮೂರು ಮತ್ತು ನಾಲ್ಕನೇ ಭಾಗದ ಮಧ್ಯದಲ್ಲಿ ಚಂದ್ರನು ಇದ್ದರೆ ಕಿರೀಟದ ಭಾಗದಲ್ಲಿ ಸುಂದರ ಕೆತ್ತನೆಯು ಕಂಡು ಬರುತ್ತದೆ. ಗಂಗೆ ಬಾಯಿ ಯಿಂದ ಹರಿದು ಬರುವ ನೀರೂ ಮುಡಿಯುಭಾಗವೇ ಆಗಿದ್ದು ಕಿರೀಟದಂತೆಯೇ ಗೋಪುರಾಕಾರವಾಗಿ ಮಧ್ಯೆ ಸುಂದರವಾಗಿ ತಿದ್ದಿ ತೀಡಿದ ಗಂಟುಗಳು ಇಂದಿನ ಜಡೆ ಸಂಸ್ಕೃತಿ (Hair Care) ಯನ್ನೂ ನಾಚಿಸುವಷ್ಟು ನಯವಾಗಿ ಶಿಲ್ಪಿ ರೇಖಿಸಿದ್ದಾನೆ.

೬. ಕೊರಳಿನ ಮೊದಲ ಹಾರದಲ್ಲಿ ೨೪ಕ್ಕೂ ಹೆಚ್ಚು ಗುಂಡು (ಸಾಲಿಗ್ರಾಮಗಳಿವೆ?)ಗಳಿವೆ. ಹಾಗೆಯೇ ೨ನೆಯ ಸರದಲ್ಲಿ ೧೬ ಇಂತಹುದೇ ಗುಂಡುಗಳಿವೆ. ಈ ಮುಂಚಿನವರು ಗುರುತಿಸಿರುವಂತೆ ಭುಜಗಳು ಸಮನಾಗಿಲ್ಲ ಎನ್ನುವುದು ಸರಿಯಾಗಿಯೇ ಇದ್ದರೂ ಎಷ್ಟೋಸಾರಿ ಒಡೆದು ಚೂರು ಚೂರು ಮಾಡಿದ್ದ ಮೂರ್ತಿಯನ್ನು ಈ ಮಟ್ಟಕ್ಕೆ ಬೆಸೆದಿರುವುದು ಅಂದಿನಿಂದ ಇಂದಿನವರೆಗೂ ನಮ್ಮ ನಾಡಿನ ಶಿಲ್ಪಿಗಳ ಜಾಣ್ಮೆ, ಚತುರತೆಯನ್ನು ತೋರಿಸುತ್ತದೆ.

೭. ಇಲ್ಲಿ ತೋರಿಸಿರುವ ಚಿತ್ರವನ್ನು ಕಂಪ್ಯೂಟರ್ ಮೂಲಕ ದೊಡ್ಡದು ಮಾಡಿ (Zoom) ನೋಡಿದಾಗ ಶಿರೋಭಾಗವನ್ನು ಮುಂಡದ ಒಳಗೆ ಕೂಡಿಸಿದಂತೆ ಕಂಡು ಬರುತ್ತಿದ್ದು, ೯೦ತ್ತರ ದಶಕದಲ್ಲಿ ಈ ಶಿಲ್ಪಕ್ಕೆ ವಜ್ರಲೇಪನ ಮಾಡುವ ಕಾಲದಲ್ಲಿ ಜಾನ್ ಎನ್ನುವ ಶಿಲ್ಪಿಯು ಈ ವಿಷಯವನ್ನು ಇಲ್ಲಿಯ ದೇವಸ್ಥಾನದ ಆವರಣದಲ್ಲಿರುವವರ ಆಸಕ್ತರಿಗೆ ತೋರಿಸಿರುತ್ತಾರೆ. ಅಷ್ಟೇ ಅಲ್ಲದೆ ಕೊರಳ ಭಾಗದಲ್ಲಿದ್ದ ವೃತ್ತಾಕಾರದ ದೊಡ್ಡ ರಂಧ್ರಕ್ಕೆ ಕಿವಿಗೊಟ್ಟು ಕೇಳಿದಾಗ ಜುಳು ಜುಳು ಹರಿಯುವ ತುಂಗಭದ್ರೆಯ ನೀರಿನ ನಿನಾದವೂ ಕೇಳಿ ಬರುತ್ತಿತ್ತೆಂದು ತಿಳಿದು ಬರುತ್ತದೆ. ನಾನು ಚಿಕ್ಕವನಾಗಿದ್ದಾಗ (ಕ್ರಿ.ಶ. ೧೯೫೩) ಹರಿ ಹರೇಶ್ವರನ ಗರ್ಭಗುಡಿಯಲ್ಲಿ ಮಳೆಗಾಲದಲ್ಲಿ ನೀರು ಹರಿಯುತ್ತಿದ್ದುದನ್ನು ಕಂಡಿದ್ದೇನೆ. ಈಗ ನದಿಯನ್ನೇ ಮರಳು, ಇಟ್ಟಿಗೆ, ಇತ್ಯಾದಿಗಳ ಆಮಿಷಗಳಿಗಾಗಿ, ಚರಂಡಿ ನೀರು ಬೆರೆಸಿ ಅಸ್ತವ್ಯಸ್ತಗೊಳಿಸಲಾಗಿದ್ದರೂ ಇನ್ನೂ ಇಂತಹ ಸಂಗತಿಗಳು ಉಳಿದಿವೆ. ಅವರಿಗೆ ತಿಳಿದಿರಬಹುದಾದ ಇಂತಹ ಅನೇಕ ವಿಶೇಷಗಳನ್ನು ಪ್ರಾಯಶಃ ಜಾನ್ ಅವರು ದಾಖಲಿಸಿರಬಹುದೆಂದು ನನ್ನ ಅನಿಸಿಕೆ. ಈ ಕುರಿತಾದ ವಿಷಯಗಳು ಚಿತ್ರದುರ್ಗದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಲಭ್ಯವಿರಬಹುದು. ಸಂಶೋಧಕರು ಈ ಬಗೆಗೆ ಆಸಕ್ತಿವಹಿಸಲಿ ಎನ್ನುವುದು ನನ್ನ ಆಶಯ.

೮. ಶ್ರೀ ಡಾ. ಅ.ಸುಂದರ ಅವರು ಜನಿವಾರ ಕಂಡು ಬರುತ್ತಿಲ್ಲವೆನ್ನುತ್ತಾರೆ. ಆದರೆ ಸೂಕ್ಷ್ಮವಾಗಿ ಗಮನಿಸಿದರೆ ಕಂಡು ಬರುತ್ತಿದೆ. ಇದು ಆಮೇಲೆ ಸೇರಿಸಿದುದು ಅಲ್ಲ. ಏಕೆಂದರೆ ಮೂರ್ತಿಯನ್ನು ಅವರು ಹಿಂದುಗಡೆ ನೋಡಲು ಅವರಿಗೆ ಸಾಧ್ಯವಾಗಲಿಲ್ಲವೆಂದು ಷರಾ ಬರೆದಿದ್ದಾರೆ. ಇದನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಮೂರ್ತಿಯ ಹಿಂದುಗಡೆ ಭಾಗದಲ್ಲಿಯೂ ಜನಿವಾರ ಇರುವುದು ಕಂಡು ಬಂದಿದೆ.

೯. ಶ್ರೀ. ಅ. ಸುಂದರ ಅವರು ತಮ್ಮ ಮೇಲಿನ ಲೇಖನದಲ್ಲಿ ತಿಳಿಸಿರುವಂತೆ ಕೊರಳೊಳಗಿನ ಎರಡು ಹಾರಗಳು ದುಂಡು ಮಣಿ ಸರಗಳಲ್ಲ. ದೊಡದ್ದು ಮಾಡಿ ನೋಡಿದಾಗ ಅವು ಶಿವನ ಶಿರೋಭಾಗದಲ್ಲಿ ಇರುವಂತೆ ಬೇರೆ ಬೇರೆ ಸಾಲಿಗ್ರಾಮಗಳಿಂದ ಮಾಡಿದ ಹಾರಗಳಾಗಿವೆ. ಎನ್ನುವುದನ್ನು ಸ್ಪಷ್ಟವಾಗಿ ಗುರುತಿಸ ಬಹುದಾಗಿದೆ. ಕೊರಳ ಕೆಳಗಿನಿಂದ, ಶಿಲ್ಪದ ಡಿಂಭ ಭಾಗವರೆಗೆ, ಹಿಂದಿನಿಂದ ನೋಡಿದಾಗ, ಅದಕ್ಕೆ ಆಸರೆಯಂತಿರುವ ಒಂದು ನೇರ ಕಂಭ ನೆಟ್ಟಿರುವುದು ಕಂಡು ಬರುತ್ತದೆ. ಅಲ್ಲದೆ ದೇವರ ಶಿರೋಭಾಗದ ಮೇಲಿನಿಂದ ಅಭಿಷೇಕ ಮಾಡಲು ಅನುಕೂಲವಾಗುವಂತೆ ಮೆಟ್ಟಿಲುಗಳನ್ನೂ ನಿರ್ಮಿಸಿರುತ್ತಾರೆ. ಆದರೆ ಈ ಮೆಟ್ಟಿಲುಗಳು ಎಷ್ಟು ಪ್ರಾಚೀನ ಎಂದು ಹೇಳಲಾಗದು.

೧೦. ಇಲ್ಲಿಯ ಶಾಸನಗಳಲ್ಲಿ ಬನವಾಸಿ ಕದಂಬರಿಂದ ಮೊದಲಾಗಿ, ಬಾದಾಮಿ ಚಾಲುಕ್ಯರೂ, ಕಲ್ಯಾಣದ ಚಾಲುಕ್ಯರೂ, ಬ್ರಿಟಿಷರ ವರೆಗೂ ದೇವಸ್ಥಾನದ ಅಳಿವು ಉಳಿವುಗಳ ಬಗೆಗೆ ದಾಖಲೆಗಳು ಇರುವುದರಿಂದ ಅಲ್ಲದೇ, ಈ ಶಿಲ್ಪವು ೫ ಅಥವಾ ೬ನೇಶತಮಾನದ ಆದಿಭಾಗದಲ್ಲಿ ನಿರ್ಮಾಣಗೊಂಡಿರುವ ಸಾಧ್ಯತೆ ಇದೆ ಎನ್ನುವ ಶ್ರೀ ಡಾ. ಅ.ಸುಂದರ ಅವರ ಅಭಿಪ್ರಾಯವನ್ನು ಒಪ್ಪಬಹುದಾಗಿದೆ. ಒಂದೊಮ್ಮೆ ಇದು ನಿಜವೇ ಆಗಿದ್ದಲ್ಲಿ ಶಿಲ್ಪದ ವಿವಿಧಭಾಗಗಳನ್ನು ಬೇರೆ ಬೇರೆ ತಯಾರಿಸಿ ನಂತರ ಜೋಡಿಸುವ ಶಿಲ್ಪ ತಂತ್ರಜ್ಞತೆ ನಮ್ಮ ನಾಡಿನಲ್ಲಿ ಇತ್ತೆನ್ನುವ ವಿಶೇಷತೆಗೂ ನಮ್ಮ ಹರಿಹರೇಶ್ವರನು ಕಾರಣನಾಗುತ್ತಾನೆ.

೧೧. **ಈ ಮೂರ್ತಿಯ ಕಾಲದ ಬಗೆಗೆ ಇತ್ತೀಚಿಗೆ ಡಾ. ಜಗದೀಶ್ ಅವರು ಶೋಧಿಸಿರುವಂತೆ ಕದಂಬರ ಅರಸ ಕಾಕುಸ್ಥವರ್ಮನ ಮೊಮ್ಮಗನಾಗಿದ್ದ ಹರಿಹರದಲ್ಲಿ ಪಟ್ಟಾಭಿಷಿಕ್ತನಾಗಿದ್ದಾನೆ. ಅಂದರೆ ಕ್ರಿ.ಶ. ೨ನೇ ಶತಮಾನದಲ್ಲಿ ಆಗಲೇ ಹರಿಹರ ಕರ್ನಾಟಕದಲ್ಲಿ ಇಂತಥಹ ಪೌರಾಣಿಕ, ಸಾಂಸ್ಕೃತಿಕ, ಆಯಕಟ್ಟಿನ ಪ್ರಾಮುಖ್ಯತೆಯನ್ನು ಪಡೆದಿದ್ದ ಪಟ್ಟಣವಾಗಿತ್ತು. ಎನ್ನುವ ಹೊಸ ಮಹತ್ವದ ಸಂಗತಿ ಬೆಳಕಿಗೆ ಬರುತ್ತದೆ.** ಶ್ರೀಯುತ ಡಾ. ಆ.ಸುಂದರ ಅವರು ಹರಿಹರೇಶ್ವರ ಮೂರ್ತಿ ಶಿಲ್ಪವನ್ನು ೫-೬ನೇ ಶತಮಾನದ ಕಾಲಘಟ್ಟದ್ದೆಂದು ಗುರುತಿಸಿದ್ದರೂ, ಈ ಇತ್ತೀಚಿನ ಡಾ. ಜಗದೀಶ್ ಅವರ ಶೋಧನೆಯ ಪ್ರಕಾರ ಕ್ರಿ.ಶ. ೧ ಅಥಾವಾ ೨ನೇ ಶತಮಾನದಲ್ಲಿ ಸ್ಥಾಪಿಸಲ್ಪಟ್ಟಿದ್ದೆನ್ನುವ ಅಭಿಪ್ರಾಯವೇ ಹೆಚ್ಚು ಸೂಕ್ತ ಎನ್ನಲು ಅಡ್ಡಿಯಿಲ್ಲ. ಈ ಬಗೆಗೆ ಇನ್ನಷ್ಟು ಕೂಲಂಕಷವಾದ ಶೋಧನೆಗೆ ಅವಕಾಶವಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಬಿ.ಎಲ್. ರೈಸ್ ಅವರ ಇ.ಸಿ. ಸಂ.೬.

೨. ಎಂ.ಎ.ಆರ್. ೧೯೩೨ ಮತ್ತು ೧೯೩೭

೩. ಡಾ. ಅ. ಸುಂದರ ಪ್ರದೀಪಿಕೆ, ಪು. ೪ ಕೆ. ವೆಂಕಟರಾಯಾಚಾರ್ಯರ ಸನ್ಮಾನ ಗ್ರಂಥ, ೧೯೭೯. ಈ ಬರಹಕ್ಕೆ ಸ್ಫೂರ್ತಿ ಹಾಗೂ ಪ್ರದೀಪಿಕೆಯಸೆಲ್ಲಿ ೧೯೭೯, ಪ್ರಕಟಿತವಾದ ತಮ್ಮ ಲೇಖನವನ್ನಿತ್ತ ಶ್ರೀಯುತ ಡಾ. ಅ.ಸುಂದರ, ಅವರಿಗೆ ನನ್ನ ಹೃತ್ಪೂರ್ವಕ ನಮನಗಳು.

೪. ಶ್ರೀ ಹರಿಹರ ದೇವಾಲಯ - ಎಚ್.ಎಂ.ಶಂಕರನಾರಾಯಣ ರಾವ್ ೧೯೮೨.

೫. ಶ್ರೀ ಹರಿಹರೇಶ್ವರ ಮಹಿಮೆ ೧೯೯೨-ಶ್ರೀಕಲಮದಾನಿ

೬. ಶ್ರೀ ದತ್ತಾತ್ರೇಯ ವಿರೂಪಕ್ಷ ಭಟ್, ಸಂಸ್ಕೃತ ವಿದ್ವಾಂಸರು, ವಿದೂಷಿ ಶ್ರೀಮತಿ ಪದ್ಮಜ ಶೇಷಗಿರಿರಾವ್ ಹಾಗೂ ಹರಿಹರ ದೇವಾಲಯದ ಅರ್ಚಕ ವೃಂದಕ್ಕೆ ನನ್ನ ವಿಶೇಷ ಕೃತಜ್ಞತೆಗಳು.

೭. ಚಿತ್ರ ಸಹಾಯ : ಶ್ರೀಮತಿ ಎಸ್. ಮಾಲತಿರಾವ್, ಬೆಂಗಳೂರು.

೫೧

ಕೊಳ್ಳೇಗಾಲ ಪಟ್ಟಣದಲ್ಲಿ ರಾವಳೇಶ್ವರ-ರಾವಣೇಶ್ವರ ಶಿಲ್ಪಗಳು

ಬಸವರಾಜು ತಗರಪುರ* ಎಂ.ಎಸ್. ನಿರ್ಮಲ** ಆರ್.ರಘು***

ಹಳೇ ಮೈಸೂರು ಸಂಸ್ಥಾನದ ಪ್ರಾಂತ್ಯಕ್ಕೆ ಸೇರಿದ ಪ್ರದೇಶಗಳಾದ ಕೊಳ್ಳೆಗಾಲ ಅಥವಾ ತೊರೆಯನಾಡು ಚಾಮರಾಜನಗರ ಜಿಲ್ಲೆಗೆ ಸೇರಿದೆ. ಚೋಳರ ಕಾಲದಲ್ಲಿ ಚಾಮರಾಜನಗರ ಜಿಲ್ಲೆ, ಮೈಸೂರು ಜಿಲ್ಲೆ, ಮಂಡ್ಯ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ರಾವಳೇಶ್ವರನ ಸಂಸ್ಕೃತಿ ಕಂಡು ಬರುತ್ತದೆ. ಅದರಲ್ಲಿ ಚಾಮರಾಜನಗರ ಜಿಲ್ಲೆಗೆ ಸೇರಿದ ಕೊಳ್ಳೆಗಾಲ ಪಟ್ಟಣದಲ್ಲೂ ರಾವಳೇಶ್ವರ - ರಾವಣೇಶ್ವರ ಸಂಸ್ಕೃತಿ ವಿಶೇಷವಾಗಿ ಕಂಡುಬರುತ್ತದೆ. ಅಲ್ಲದೆ ಅದಕ್ಕೆ ಪೂರಕವಾಗಿ ಶಿಲ್ಪ ಸಂಸ್ಕೃತಿಯೂ ಸಹ ಕಂಡುಬರುತ್ತದೆ.[೧] ಕೊಳ್ಳೆಗಾಲ ತಾಲ್ಲೂಕಿನಲ್ಲೂ ಸಹ ಹಲವಾರು ಗ್ರಾಮಗಳಲ್ಲಿ ಶಿಲ್ಪಗಳು ದೊರೆಯುತ್ತದೆ. ರಾವಳೇಶ್ವರನ ಸಂಸ್ಕೃತಿಯ ಶಿಲ್ಪಗಳು ಸಾಂಸ್ಕೃತಿಕವಾಗಿ ಕೊಳ್ಳೆಗಾಲ ತಾಲ್ಲೂಕಿನ ಪ್ರಮುಖ ಗ್ರಾಮಗಳಾದ ತಗರಪುರ, ಕಜ್ಜಿಹುಂಡಿ, ಕುಂತೂರು, ತೇರಂಬಳ್ಳಿ, ಉತ್ತಂಬಳ್ಳಿ, ಮುಡಿಗುಂಡ, ಕುಣಗಳ್ಳಿ, ಕೊಳ್ಳೆಗಾಲ, ಹಳೇ ಅಣಗಳ್ಳಿ, ಹೊಸ ಅಣಗಳ್ಳಿ, ಮಧುವನಹಳ್ಳಿ, ಪಾಳ್ಯ, ದೊಡ್ಡಹಿಂಡುವಾಡಿ, ಸತ್ತೆಗಾಲ, ಕಾಮಗೆರೆ, ಹನೂರು, ಅಜ್ಜೀಪುರ, ಮುಳ್ಳೂರು, ಧನಗೆರೆ, ಕೆಂಪನ ಪಾಳ್ಯ, ಹೊಂಡರಬಾಳು, ಶಿವನಸಮುದ್ರ ಇನ್ನೂ ಮೊದಲಾದ ಊರುಗಳಲ್ಲಿ ರಾವಳೇಶ್ವರ ಶಿಲ್ಪಗಳು ಕಂಡುಬರುತ್ತವೆ. ಆದರೆ ಪ್ರಸ್ತುತ ಈ ಲೇಖನ ಕೊಳ್ಳೆಗಾಲ ನಗರ ಪಟ್ಟಣಕ್ಕೆ ಸೀಮಿತವಾಗಿರುತ್ತದೆ.

ಮೇಲೆ ಹೇಳಿದ ಪ್ರದೇಶಗಳಲ್ಲಿ ಒಂದು ತಲೆಯ ರಾವಣ ಹತ್ತು ತಲೆಯ ರಾವಣ ಎಂದು ಹೇಳುತ್ತಾ ಈ ಭಾಗದಲ್ಲಿ ಶಿಲ್ಪಗಳನ್ನು ಕಾಣಬಹುದಾಗಿದೆ. ಇದು ಅಲ್ಲದೆ ರಾಜನ ಶಿಲ್ಪವನ್ನು ಪರಿಗಣಿಸಿ ರಾಜಪ್ರತ್ಯಕ್ಷ ದೇವತಾ ಎಂದು ಕರೆಯುವ ವಾಡಿಕೆ ಸಹ ಇದೆ. ಈ ಶಿಲ್ಪಗಳ ಪಕ್ಕದಲ್ಲಿ ರಾಜರು ಕುಟುಂಬ ಸಮೇತರಾಗಿರುವುದು ಸಹ ಕಂಡುಬರುತ್ತದೆ. ಕುಟುಂಬದಲ್ಲಿ ಇಬ್ಬರು ಪತ್ನಿಯರು ಮಗ, ಮಕ್ಕಳು, ಗಂಗಮಾಳಮ್ಮ, ರಾಕಸಮ್ಮ ಮತ್ತು ರಾಜಪುತ್ರ ಮಗುವಿನ ರೂಪದಲ್ಲಿ ಈ ಶಿಲ್ಪದಲ್ಲಿ ಕೆಲವು ಊರುಗಳಲ್ಲಿ ಕಂಡುಬರುತ್ತವೆ. ಪ್ರಾಯಶಃ ಈ ಭಾಗದಲ್ಲಿ ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ ಈ ರೀತಿಯ ಶಿಲ್ಪಗಳು ತಲಕಾಡಿನ ಗಂಗರ ಕೊನೆಯ ಕಾಲಘಟ್ಟದಲ್ಲಿ ಮತ್ತು ತಂಜಾವೂರಿನ ಚೋಳರ ಕಾಲದಲ್ಲಿ ಕೆತ್ತಲ್ಪಟ್ಟಿವೆ ಎಂದು ಸ್ಥಳೀಯರು ಹೇಳುತ್ತಾರೆ.[೨] ಆದಕಾರಣ ಚೋಳರ ಕಾಲದ ಶಿಲ್ಪಗಳು ಮತ್ತು ದೇವಾಲಯಗಳು ಹಾಗೂ ಶಾಸನಗಳು ಸಹ ಕೊಳ್ಳೆಗಾಲ ಪ್ರಾಂತ್ಯದಲ್ಲಿ ಕಂಡುಬರುತ್ತದೆ. ಹಾಗೂ ಇನ್ನಿತರ ಭಾಗಗಳಲ್ಲಿ ಸಹ ಕಂಡುಬರುವುದುಂಟು.[೩] ಆದಿ ಕರ್ನಾಟಕ, ಆದಿಜಾಂಬವ, ನಾಯಕ (ಗಂಗಾಮತ), ಕುರುಬಗೌಡ, ಕುಂಬಾರ, ಲಿಂಗಾಯಿತ, ನಯನಕ್ಷತ್ರಿಯ, ಕೆಲಸಿ, ಮಡಿವಾಲ, ಗಾಣಿಗಶೆಟ್ಟರು, ಉಪ್ಪಾರಶೆಟ್ಟರು, ಆಚಾರರು, ಬೆಳ್ಳಾಳಗೌಡರು, ಕಣಿಯರು, ಈಡಿಗರು ಇನ್ನೂ ಮುಂತಾದವರು ಈ ಮೇಲಿನ ಶಿಲ್ಪಗಳನ್ನು ಪೂಜಿಸುವರು. ಪೂಜಿಸುವ ಶಿಲ್ಪಗಳು ಒಂದೇ ತೆರನಾದ ಮಾದರಿಯಲ್ಲಿ ಕಂಡುಬರುತ್ತವೆ. ಅಲ್ಲದೆ ರಾವಳೇಶ್ವರನನ್ನು ಅನೇಕ ಹೆಸರುಗಳಿಂದ ಕರೆಯುವ ವಾಡಿಕೆ ಸಹ ಇದೆ. ರಾವಳೇಶ್ವರ, ರಾವಣೇಶ್ವರ, ಕಾಳರಾಯ, ಕವಗಾರಪ್ಪ, ಬೆಂಡಗಾಳರಾಯ, ಕಾಮರಾಯ, ರವಾಳಪ್ಪ, ಹೊನ್ನಸಿದ್ದೇಶ್ವರ, ಮಹಾಲಿಂಗೇಶ್ವರ, ಬ್ರಹ್ಮೇಶ್ವರ, ವೀರಪ್ಪ (ವೀರಗಲ್ಲು), ವೈದ್ಯನಾಥೇಶ್ವರ, ಮಲ್ಲಿಗೆಮಾದಮ್ಮ, ಕಥೆಗಾರಯ್ಯ, ಕೇತೆದೇವರು, ಕಾಳಭಂಟರಾಯ, ಕರುಪ್ಪಸ್ವಾಮಿ ಹೀಗೆ ಬೇರೆ ಬೇರೆ ಕೆಸರುಗಳಿಂದ ಕರೆಯುತ್ತಾರೆ. ಶಾಸನಗಳಲ್ಲಿ ರಾವಣ, ರಾವಳ, ರಾವಳಮೊದಲಿಯಾರ್, ರಾವಳನಾಯಕ, ಬೆಂಡ್ಗಾಳರಾವಣ, ದೊಡ್ಡರಾವಳ, ಚಿಕ್ಕರಾವಳ, ದೊಡ್ಡರವಳಯ್ಯ ಚಿಕ್ಕರಾವಳಯ್ಯ, ರಾವಳೇಗೌಡ, ಶಮರಾಯ, ನಾಯಕರು, ಮುಂತಾದ ದೇವರ ಹೆಸರುಗಳಿಂದ ಕರೆಯುವ ವಾಡಿಕೆ ಕೊಳ್ಳೆಗಾಲ ಪ್ರಾಂತ್ಯದಲ್ಲಿ ಪ್ರಚಲಿತವಾಗಿ ಕಂಡು ಬರುವುದುಂಟು.

ಇತ್ತೀಚಿನ ಶತಮಾನದಲ್ಲಿ ರಾವಳೇಶ್ವರ ಗುಡಿಗಳನ್ನು ಈ ಭಾಗದಲ್ಲಿ ಕಟ್ಟುತ್ತಾ ಬರುತ್ತಿದ್ದಾರೆ. ಒಂದು ಕಾಲದಲ್ಲಿ

* ಲೇಟ್ ಬಸವಯ್ಯ, ತಗರಪುರ ಗ್ರಾಮ, ಚಿಲಕವಾಡಿ (ಅಂಚೆ), ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ-೫೭೧೪೦೦.
** c/o ಎಸ್.ದಿವಾಕರ್, # ೨೯ಲ, ಹೆಚ್.ಬಿ.ಬಿ. ಮತ್ತು ಆರ್.ಎಂ.ಎಸ್. ಬಡಾವಣೆ, ಸಾತ್‌ಗಲ್ಲಿ ಬಡಾವಣೆ, ಮೈಸೂರು.
*** ಚಿತ್ರಕಲಾ ಶಿಕ್ಷಕರು, ಚಿತ್ರಚಾವಡಿ ಬೀದಿ, ಕೊಳ್ಳೇಗಾಲ.

ಈ ಶಿಲ್ಪಗಳಿಗೆ ಒಂದೇ ದಿನದಲ್ಲಿ ದೇವಾಲಯವನ್ನು ಕಟ್ಟಬೇಕು ಎಂದು ಶಾಸನ ವಿಧಿಸಿದ್ದರು. ಆದ್ದರಿಂದ ಹೆಚ್ಚಾಗಿ ಈ ಶಿಲ್ಪಗಳು ಬಿಸಿಲಿನಲ್ಲಿ, ಮಳೆಯಲ್ಲಿ, ಬಾಗಿಲುಗಳು ಇಲ್ಲದ ಗುಡಿಗಳಾಗಿ ಪೂಜಿಸಲ್ಪಡುತ್ತಿವೆ.

ರಾವಣಶಿಲ್ಪ : – ರಾವಣ ಶಿಲ್ಪಗಳು ಅಳತೆಯಲ್ಲಿ ೨ ರಿಂದ ೨.೬ ಅಡಿ ಆಳತ್ತೆರ ತನಕ ದುಂಡಾದ ಒರಟು ಕಲ್ಲಿನಿಂದ ಕೆತ್ತಲ್ಪಟ್ಟಿರುತ್ತದೆ. ರಾವಣನಿಗೆ ೧೦ ತಲೆಗಳು, ೨೦ ಕೈಗಳಿರುತ್ತವೆ. ಆಯುಧಗಳ ಸ್ವರೂಪ ಸ್ಪಷ್ಟವಾಗಿ ಕಾಣಬರುವುದಿಲ್ಲ. ರಾವಣನು ವೀರನಂತೆ ನಿಂತು ಹೋರಾಟ ಮಾಡುತ್ತಿರುವಂತೆ ಕಂಡುಬರುತ್ತದೆ. ಎದುರಾಳಿ ಖಡ್ಗ ಹಿಡಿದು ನಿಂತಿರುವಂತೆ ಕಂಡುಬರುವುದುಂಟು. ಬಲಗಡೆ ಮಹಿಳೆಯೂ ಕೂಡ ಹೋರಾಟಕ್ಕೆ ಸಿದ್ಧವಿರುವಂತೆಯೂ ಕಂಡುಬರುವುದುಂಟು. ರಾವಣನ ಎಡಭಾಗದಲ್ಲಿ ರಾಕಾಸಮ್ಮನು ಮಗುವನ್ನು ಸೊಂಟದಲ್ಲಿ ಎತ್ತಿಕೊಂಡತ್ತಿದ್ದು ತನ್ನ ಕೈಗಳಲ್ಲಿ ಹಿಡಿದಿರುವಂತೆಯೂ ಕಂಡುಬರುವುದುಂಟು. ಈ ರೀತಿಯ ಶಿಲ್ಪಗಳು ಈ ಭಾಗದಲ್ಲಿ ಕಂಡುಬರುತ್ತದೆ.

ಕದಗಾರಪ್ಪನ ಶಿಲ್ಪಗಳು ಕೊಳ್ಳೇಗಾಲ ಪ್ರಾಂತ್ಯದಲ್ಲಿ ಕಂಡುಬರುತ್ತವೆ. ಇಂತಹ ಶಿಲ್ಪಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ವೀರನಂತೆ ನಿಂತಿದ್ದು ನಾಲ್ಕು ಕೈಗಳನ್ನು ಹೊಂದಿರುತ್ತಾನೆ. ವೀರಖಡ್ಗ, ಬಿಲ್ಲುಬಾಣ ಮತ್ತೊಂದು ಕೈಯಲ್ಲಿ, ಈ ವೀರನನ್ನು ವರ್ಣಿಸಿ ಚತುರ್ಭುಜಧಾರಿಯಾಗಿ ಮಾಡಿ ದೇವತಾ ಸ್ವರೂಪವಾಗಿ ಶಿಲ್ಪಗಳನ್ನು ಕೆತ್ತಿರುವುದು ಕಂಡುಬರುವುದುಂಟು.

ರಾವಳೇಶ್ವರ ಶಿಲ್ಪ : ರಾವಳೇಶ್ವರನ ಶಿಲ್ಪಗಳು ಎರಡುವರೆ ಅಡಿಯಿಂದ ಹಿಡಿದು ನಾಲ್ಕು ಅಡಿ ಎತ್ತರ ಅಲ್ಲದೆ ಒಂದೂವರೆಯಿಂದ ಎರಡು ಅಡಿ ಅಗಲವಿರುತ್ತದೆ. ಕೊಳ್ಳೆಗಾಲ ಪ್ರಾಂತ್ಯದಲ್ಲಿ ಮೇಲೆ ತಿಳಿಸಿರುವ ಅನೇಕ ಊರುಗಳಲ್ಲಿ ಹತ್ತು ತಲೆಯ ರಾವಳೇಶ್ವರನ ಶಿಲ್ಪಗಳು ಕಂಡುಬರುತ್ತದೆ. ಪ್ರಮುಖ ಶಿಲ್ಪಗಳಲ್ಲಿ ರಾವಳೇಶ್ವರನಿಗೆ ಒಂದು ತಲೆ ನಾಲ್ಕು ಕೈಗಳು ಇರುವುದರಿಂದ ಸಾಮಾನ್ಯವಾಗಿ ದೇವರು ಎಂಬುದಾಗಿ ಚಿತ್ರದ ಹೋಲಿಕೆಯಾಗಿದೆ. ರಾವಳೇಶ್ವರನಿಗೆ ಬಲಗೈಯಲ್ಲಿ ಚಕ್ರ ಮೇಲಿನ ಎಡಗೈಯಲ್ಲಿ ಬಿಲ್ಲು ಕೆಳಗಿನ ಎಡಗಡೆಯಲ್ಲಿ ಶಂಖ ಮುದ್ರೆಯಿಂದ ಕೂಡಿದ ಗದೆ ಇದೆ. ಮತ್ತೊಂದು ಕೈಯಲ್ಲಿ ವೀರ ರಾಜಗಾಂಭೀರ್ಯದಿಂದ ಇಳಿಬಿಟ್ಟ ಖಡ್ಗ, ಕೈಸೊಂಟದ ಮೇಲ್ಭಾಗದಲ್ಲಿ ವೇಷ ಭೂಷಣಗಳಲ್ಲೂ ರಾಜನಂತೆಯೂ ಇರುತ್ತವೆ. ಪೀಠದಲ್ಲಿ ಹೋರಾಟದ ಟಗರುಗಳಿವೆ. ಆಯುಧ ಹಿಡಿದಿರುವ ಸೈನಿಕರು ಸಹ ಇರುತ್ತಾರೆ. ಈ ರೀತಿಯ ಶಿಲ್ಪಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿದರೆ ಶಿಲ್ಪ ಬೇರೆ ಬೇರೆ ಸಂದರ್ಭಕ್ಕೆ ಕಥೆಯನ್ನು ಹೇಳಬಹುದು. ಇದು ರಾವಣನ ಶಿಲ್ಪವೂ ಅಥವಾ ಭೈರವನೋ ಎಂಬುದನ್ನು ವಿದ್ವಾಂಸರು ನಿರ್ಣಯಿಸುವ ಅಂಶವಾಗಿ ಉಳಿದಿದೆ. ಒಟ್ಟಾರೆಯಾಗಿ ಈ ರೀತಿಯ ಸಂಸ್ಕೃತಿ ಇಲ್ಲಿ ಕಂಡುಬರುವುದು. ವಿಶೇಷತೆ ಎಂದೇ ಹೇಳಬಹುದು.

ರಾವಳೇಶ್ವರ ಅಥವಾ ರಾವಣನ ಶಿಲ್ಪಗಳನ್ನು ನೋಡಿದಾಗ ಒಂದೇ ಮಾದರಿಯನ್ನು ಹೊಂದಿರುತ್ತವೆ. ಈ ರೀತಿಯ ಶಿಲ್ಪಗಳನ್ನು ನಾವು ಗಮನಿಸಿದಾಗ ಇಲ್ಲಿಯ ಸ್ಥಳೀಯ ಕಥೆಗೂ ರಾಮಾಯಣಕ್ಕೂ ಸಂಬಂಧ ಇಲ್ಲ. ರಾಮಾಯಣ ಪುರಾಣದ ಕಥೆಯಾದರೂ ರಾವಳೇಶ್ವರನ ಕಥೆ ಈ ಪ್ರಾಂತ್ಯದಲ್ಲಿ ಕಂಡುಬರುವುದರಿಂದ ಇತಿಹಾಸವಾಗುತ್ತದೆ ಎಂದು ಹೇಳಬಹುದು. ರಾವಣದ ಶಿಲ್ಪ ಸ್ವರೂಪ ರಾವಳೇಶ್ವರನ ತಂದೆಯಾಗಿ ಈ ಭಾಗಗಳಲ್ಲಿ ಕಾಣಿಸುತ್ತವೆ. ಕೆಲವು ಶಿಲ್ಪಗಳಲ್ಲಿ ಹಲವು ಬದಲಾವಣೆಗಳು ಮೂರು ತಲೆ, ಐದು ತಲೆ ಹಾಗೂ ಹತ್ತು ತಲೆ ಶಿಲ್ಪಗಳು ಮಹಿಷಮಂಡಲ ಪ್ರಾಂತ್ಯದಲ್ಲಿ ಕಂಡುಬರುತ್ತವೆ. ರಾಕಸಮ್ಮ (ತಾಯಿ) ಮಗುವನ್ನು ಸೊಂಟದಲ್ಲಿ ಕೂರಿಸಿಕೊಂಡಂತೆ ಇದೆ. ಈ ಬದಲಾವಣೆ ಮುಖ್ಯವಾಗಿದೆ. ಉಳಿದ ಸ್ವರೂಪಗಳು ಸಾಮಾನ್ಯವಾಗಿ ಒಂದೇ ಮಾದರಿಯಲ್ಲಿ ಕಂಡುಬರುತ್ತವೆ. ಒಟ್ಟಾರೆ ಶಿಲ್ಪ ರಚನೆ ಅಂದು ಕಲಾವಿದರು ಭಾವನೆಯಾಗಿರುವುದರಿಂದ ಬೇರೆ ಬೇರೆ ಗ್ರಾಮಗಳಲ್ಲಿ ಶಿಲ್ಪರಚನೆ ಮಾಡಿರುವುದರಿಂದ ಆ ಸಂದರ್ಭಕ್ಕೆ ಅನುಸಾರವಾಗಿ ಶಿಲ್ಪ ರಚನೆ ಮಾಡಿರುವುದು. ಅಥವಾ ರಾವಣನ ಕಥೆಯನ್ನು ಬಹುಶಃ ಕ್ರಿ.ಶ. ೧೦ನೇ ಶತಮಾನದಲ್ಲಿ ರಾಜನ ಕಥೆಯಾಗಿದೆಯೆಂದು ಹೇಳಬಹುದು. ಏಕೆಂದರೆ ಮೈಸೂರು ಪ್ರಾಂತ್ಯದ ಮಹಿಷಮಂಡಲದ ಪ್ರಾಂತ್ಯದಲ್ಲಿ ಹೇರಳವಾಗಿ ಈ ರೀತಿಯ ಶಿಲ್ಪಕಲೆಗಳನ್ನು ಕಾಣಬಹುದಾಗಿದೆ. ಆದ ಕಾರಣ ರಾಜನನ್ನು ಅವನ ಶಕ್ತಿ ಸಾಮರ್ಥ್ಯ ದೃಷ್ಟಿಕೋನದಿಂದ ಶಿಲ್ಪಕಲೆಯನ್ನು ಪ್ರತಿಬಿಂಬಿಸಲಾಗಿದೆ. ಶಿಲ್ಪಗಳಲ್ಲಿ ಸ್ತ್ರೀಯರು ಅಕ್ಕ–ಪಕ್ಕದಲ್ಲಿ ಪ್ರತಿಬಿಂಬಿತಗೊಂಡಿದ್ದಾರೆ. ಈ ಹಿನ್ನೆಲೆಯಿಂದ ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಪ್ರಾಂತ್ಯಗಳಲ್ಲಿ ರಾಕಸಮ್ಮ ಮತ್ತು ಗಂಗಮಾಳಮ್ಮ ಎಂಬ ದೇವಾಲಯಗಳು ಕಂಡುಬರುವುದುಂಟು. ಈಗಲೂ ಹಲವಾರು ಊರುಗಳಲ್ಲಿ ಇಂತಹ ದೇವಾಲಯಗಳಿವೆ. ಪೂಜೆ ಪುನಸ್ಕಾರಗಳು ಈ ಭಾಗಗಳಲ್ಲಿ ಕಂಡು ಬರುತ್ತವೆ. ಅದೇ ಮಾದರಿಯಲ್ಲಿ ಕೊಳ್ಳೇಗಾಲ ತಾಲ್ಲೂಕಿನ ಕೆಲವೊಂದು ಊರುಗಳಲ್ಲಿ ರಾಕಸಮ್ಮನ ದೇವಾಲಯಗಳು ಕಂಡುಬರುತ್ತವೆ. ಕೆಲವು ಹೇಳಿಕೆಗಳ ಪ್ರಕಾರ ರಾಕಸಮ್ಮ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ತೊಣ್ಣೂರು ಗ್ರಾಮದಿಂದ ಮೂಗೂರಿಗೆ ಬಂದು ನೆಲೆಸಿರುತ್ತಾಳೆ ಎಂಬ ನಂಬಿಕೆ ಇದೆ.

ಈ ತೊಣ್ಣೂರು ರಾಕಾಸಮ್ಮನ ಪೂಜೆಗೆ ಬೇರೆ ಬೇರೆ ರಾಜ್ಯಗಳಿಂದ ಬಂದು ಪೂಜೆ ಸಲ್ಲಿಸುತ್ತಾರೆ ಎಂಬ ಹೇಳಿಕೆಗಳು ಈ ಪ್ರಾಂತ್ಯದಲ್ಲಿ ಕೇಳಿಬರುತ್ತದೆ.[೨] ಕೊಳ್ಳೇಗಾಲ ಪರಿವಾರ ನಾಯಕರ ಚಿಕ್ಕಬೀದಿಯ ರಾಕಸಮ್ಮನ ದೇವಾಲಯದಲ್ಲಿ ರಾಕಸಮ್ಮನ ಶಿಲ್ಪಕಲೆಯನ್ನು ಕಾಣಬಹುದಾಗಿದೆ. ಇದು ಅಲ್ಲದೆ ಕೊಳ್ಳೇಗಾಲ ತಾಲ್ಲೂಕಿಗೆ ಇನ್ನಿತರ ಗ್ರಾಮಗಳಲ್ಲಿ ಈ ಸಂಸ್ಕೃತಿ ಈಗಲೂ ಕಂಡುಬರುತ್ತದೆ.

ಕೊಳ್ಳೇಗಾಲದಲ್ಲಿ ಭೂತಕಾಳಯ್ಯನ ತೋಟದಲ್ಲಿ ಅರುಣಾಚಲೇಶ್ವರ ದೇವಾ ಲಯದಲ್ಲಿ ರಾವಣೇಶ್ವರ ಶಿಲ್ಪವಿದೆ. ಗರ್ಭಗುಡಿಯ ಅಂಗಳದ ಎಡಭಾಗದಲ್ಲಿರುವ ರಾವಣೇಶ್ವರ (ರಾವಳೇಶ್ವರ) ಶಿಲ್ಪವನ್ನು ಸ್ಥಳೀಯ ದೇವಾಂಗ ಜನಾಂಗದವರು ಪೂಜಿಸುತ್ತಾರೆ. ರಾಜ ಪ್ರತ್ಯಕ್ಷ ದೇವತಾ ಎಂದು ರಾಜನ ಗೌರವಕ್ಕೆ ಪೂರಕವಾಗಿ ಪ್ರತಿರೂಪಕ್ಕೆ ಸಾಕ್ಷಿಯಾಗಿ ಚಿನ್ನದ ಖಡ್ಗವನ್ನು ಇಟ್ಟು ಪೂಜಿಸಿ ಕೊಳ್ಳೇಗಾಲದ ಕತ್ತಿ ಹಬ್ಬವನ್ನು ಆಚರಿಸುವ ಸಂಪ್ರದಾಯ–ಪರಂಪರೆ ಇಂದಿಗೂ ಪ್ರಸ್ತುತ.

ರಾವಣೇಶ್ವರ ಶಿಲ್ಪ ಲಕ್ಷಣವು ಉಬ್ಬು, ಬಿಡಿ ಶಿಲ್ಪವಾಗಿದ್ದು ಸುಂದರವಾಗಿದೆ. ರಾಜನು ಚತುರ್ಭುಜವನ್ನು ಹೊಂದಿದ್ದು ಗಾಂಭೀರ್ಯದಿಂದ ನಿಂತಿದ್ದಾನೆ. ಬಲಗೈಯಲ್ಲಿ ಪ್ರಯೋಗ ಚಕ್ರವನ್ನು ಎಡಗೈಯಲ್ಲಿ ಬಿಲ್ಲು ಬಾಣ ಮತ್ತೊಂದು ಕೈಯಲ್ಲಿ ಇಳಿಬಿಟ್ಟ ಖಡ್ಗ, ಹಾಗೂ ಎಡಗೈಯಲ್ಲಿ ಶಾಂತ ಮುದ್ರೆಯ ಗದೆ, ಕಾಲ್ಗಡಗ, ಜನಿವಾರ, ತಲೆಯ ಮುಡಿಯನ್ನು ಗಂಟು ಹಾಕಿ ತುರುಬನ್ನು ಶೃಂಗರಿಸಿದೆ. ಕಚ್ಚೆಯು ಲಕ್ಷಣದಿಂದ ಶೃಂಗಾರಗೊಂಡಿದೆ. ಇಕ್ಕೆಲಗಳಲ್ಲಿ ಸೇವಕರಿದ್ದಾರೆ. ಬಲಭಾಗದಲ್ಲಿ ಚಾಮರದಾರಿಯು ಸುಂದರ ಛತ್ರಿಯನ್ನು ತಲೆಯ ಮೇಲ್ಭಾಗಕ್ಕೆ ಹಿಡಿದಿರುವಂತಿದೆ. ವೇಷಭೂಷಣಗಳು ಸಹ ರಾಜನಂತೆ ಕಾಣುತ್ತದೆ. ವೈದಿಕ ಸಂಸ್ಕೃತಿಯಲ್ಲಿ ರಾಜನಿಗೆ ಮತ್ತು ದೇವರಿಗೆ ಚಾಮರ ಹಿಡಿದು ಗೌರವ ಸಲ್ಲಿಸುವ ಸಂಪ್ರದಾಯವಿದೆ. ರಾಜನು ಬಹು ಪತ್ನಿವಲ್ಲಭ. ಈ ಹಿನ್ನೆಲೆಯಿಂದ ರಾಣಿಯರ ಹೆಸರಿನಲ್ಲೂ ಅನೇಕ ದೇವಾಲಯಗಳಲ್ಲಿ ಶಿಲ್ಪಗಳು ಕಂಡುಬರುವುದುಂಟು. ಕೊಳ್ಳೇಗಾಲ ಪಟ್ಟಣದಲ್ಲಿ ಅನೇಕ ಕಡೆ ರಾವಣೇಶ್ವರ ಮತ್ತು ರಾವಳೇಶ್ವರನ ಶಿಲ್ಪಗಳು ಕಂಡುಬರುವ ದೇವಾಲಯ ಇದೆ. ಆದಿ ಕರ್ನಾಟಕ ಜನಾಂಗದವರು ರಾವಣ ಶಿಲ್ಪವನ್ನು ದೇವಾಲಯದಲ್ಲಿಟ್ಟು ಪೂಜಿಸುತ್ತಾರೆ. ನಾಯಕರ ಬೀದಿಯ ಚಿತ್ರ ಚಾವಡಿ ದೇವಾಲಯದ ಸಮೀಪದಲ್ಲಿ ರಾವಳೇಶ್ವರ ನೆಲೆಯನ್ನು ಭೈರವರ ನೆಲೆಯೆಂದು ಕರೆಯುತ್ತಾರೆ. ಹೀಗೆ ಇಲ್ಲಿ ಈ ಸಂಸ್ಕೃತಿಯನ್ನು ಆಚರಿಸುವ ಪರಿಪಾಠವಿದೆ. ಕೊಳ್ಳೇಗಾಲದಲ್ಲಿ ಮರಡಿ ಗುಡ್ಡದ ಕೆಳಗಿರುವ ಬೀರೇಶ್ವರ ದೇವಾಲಯದ ಪ್ರಾಕಾರದಲ್ಲಿ ಒಂದು ರಾವಳೇಶ್ವರ ಶಿಲ್ಪವಿದೆ. ಇದು ಅಲ್ಲದೆ ಕೊಳ್ಳೇಗಾಲದ ಪೀಸ್ ಪಾರ್ಕ್‌ನಲ್ಲೂ ಸಹ ಈ ರೀತಿಯ ರಾವಣೇಶ್ವರ ಮತ್ತು ರಾವಣನ ಶಿಲ್ಪಗಳು ಕಂಡುಬರುವುದುಂಟು. ಪೀಸ್ ಪಾರ್ಕ್‌ನಲ್ಲಿ ಹತ್ತು ತಲೆಯ ರಾವಣ ಶಿಲ್ಪವು ವಿಶೇಷತೆಯನ್ನು ಹೊಂದಿದೆ. ಕಾವೇರಿ ರಸ್ತೆಯಲ್ಲಿ ಇರುವ ರಾಘವೇಂದ್ರ ದೇವಾಲಯದ ಎದುರು ಖಾಲಿ ಮಂಟಪದಲ್ಲಿ ಎರಡು ರಾವಳೇಶ್ವರ ಶಿಲ್ಪಗಳಿವೆ. ಈ ಮೇಲಿನ ಶಿಲ್ಪಗಳ ಆಧಾರದಿಂದ ಈ ಭಾಗದಲ್ಲಿ ರಾವಳೇಶ್ವರ ಮತ್ತು ರಾವಣನ ಸಂಸ್ಕೃತಿಯ ಪ್ರಭಾವ ಇಂದಿಗೂ ಜೀವಂತವಾಗಿ ಉಳಿದಿದೆ. ಪ್ರಾಯಶಃ ಈ ಭಾಗದಲ್ಲಿ ತಲಕಾಡಿನ ಗಂಗರ ಕೊನೆಯ ಕಾಲದಲ್ಲಿ ಮತ್ತು ಚೋಳರು ನಂತರ ಹೊಯ್ಸಳರ ಕಾಲಘಟ್ಟದಲ್ಲಿ ಮುಂದುವರಿದು ಕೊನೆಗೊಂಡಿತು ಎಂಬುದನ್ನು ಈ ಶಿಲ್ಪಗಳ ಸಂಶೋಧನೆಯಿಂದ ನಿರ್ಧರಿಸಬಹುದಾಗಿದೆ. ಅಲ್ಲದೆ ಶೋಧನೆಯಿಂದ ಸುಮಾರು ೧೬ ಜಾತಿಯವರು ರಾವಳೇಶ್ವರನ ಆರಾಧಿಸುವ ಕುಲದವರಿದ್ದಾರೆ. ಎಂಬುದನ್ನು ಸಹ ಈ ಭಾಗದಲ್ಲಿ ಗುರುತಿಸಲಾಗಿದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಮೆಕೆಂಜೆ ಸಂಪುಟ ೧೬೧ರ ತೊಣ್ಣೂರು ರಾಕ್ಷಸಿ, ಕೈಪಿಯತ್ತು ಪುಟ ೨೦.

೨. ಡಾ. ಬಿ. ಬಸವರಾಜುತಗರಪುರರವರ ಪತ್ರಿಕ ಪ್ರಕಟಣೆಗಳು.

೩. ಡಾ. ಬಿ. ಬಸವರಾಜುತಗರಪುರರವರ ಐತಿಹ್ಯ ದರ್ಶನ ಕೃತಿಯಲ್ಲಿ ಕಂಡುಬರುವ ಕೆಲವೊಂದು ಹೇಳಿಕೆಯನ್ನು ತಿಳಿಸಲಾಗಿದೆ.

೪.ತೊಣ್ಣೂರು ಗ್ರಾಮದ ರಾಕಾಸಮ್ಮನ ದೇವಾಲಯದ ಪೂಜಾರಿ ಹೇಳಿಕೆ ಪ್ರಕಾರ ಹೇಳಲಾಗಿದೆ.

೫೨

ಶಹಾಪುರ ತಾಲೂಕಿನ ದೇವಾಲಯಗಳು

ರಮೇಶ ನಾಯಕ*

ಯಾದಗಿರಿ ಜಿಲ್ಲೆಯ ಪ್ರಮುಖ ಪಟ್ಟಣವಾಗಿರುವ ಶಹಾಪುರ, ಪ್ರಾಚೀನ ಸಗರನಾಡಿನ ರಾಜಧಾನಿ ಆಗಿತ್ತು ಎಂಬ ಅಭಿಪ್ರಾಯಗಳಿವೆ (ಸಗರನಾಡು ದರ್ಶನ). ಆದರೆ ಕೆಲವು ವಿದ್ವಾಂಸರು ಇಂದಿನ ಸಗರ ಗ್ರಾಮವೇ (ಶಹಾಪುರ ಪಟ್ಟಣದಿಂದ ೧೨ ಕಿ.ಮೀ. ದೂರದಲ್ಲಿದೆ) ಪ್ರಾಚೀನ ಸಗರನಾಡಿನ ಕೇಂದ್ರಸ್ಥಾನವಾಗಿತ್ತು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ (ಸುರಪುರ ತಾಲೂಕಿನ ಶಾಸನಗಳು). ಆದರೆ ಹೆಮ್ಮಡಗೆ (ಸುರಪುರ ತಾಲೂಕು) ಶಾಸನವು ಪ್ರಾಚೀನ ಪಟ್ಟಣವಾಗಿದ್ದ ದೇವಪುರವೇ (ಇಂದಿನ ದೇವಾಪುರ) ಸಗರ ನಾಡಿನ ರಾಜಧಾನಿಯಾಗಿತ್ತು ಎಂದು ಉಲ್ಲೇಖಿಸಿದೆ. ಈ ಎಲ್ಲ ಅಭಿಪ್ರಾಯಗಳನ್ನು ಗಮನಸಿದಾಗ ಪ್ರಾಚೀನ ಸಗರ ರಾಜಧಾನಿ ಪಟ್ಟಣ ಯಾವುದು ಎಂಬ ಕುತೂಹಲ ಹಾಗೇ ಉಳಿಯುತ್ತದೆ. ಐತಿಹಾಸಿಕ ಸಗರನಾಡಿನಲ್ಲಿ ಹಲವಾರು ಮಹತ್ವದ ದೇವಾಲಯಗಳು ನಿರ್ಮಾಣವಾದವು. ಸಗರ ನಾಡಿನ ಹೃದಯ ಭಾಗದಲ್ಲಿರುವ ಶಹಾಪುರ ತಾಲೂಕಿನ ಶಿರವಾಳ ಹಾಗೂ ಅದರ ಸುತ್ತಮುತ್ತಲಿರುವ ಗ್ರಾಮಗಳಲ್ಲಿರುವ ಸ್ಮಾರಕಗಳೇ ಸಗರನಾಡಿನ ಪ್ರಾಚೀನ ದೇವಾಲಯಗಳೆಂದರೆ ತಪ್ಪಾಗಲಾರದು. ಈ ಪ್ರದೇಶದಲ್ಲಿ ಶಾತವಾಹನ ಕಾಲದಲ್ಲಿಯೇ ರಚನೆಯಾದ ಶಿಲ್ಪಾವಶೇಷಗಳು ಇರುವುದನ್ನು ಸಂಶೋಧಕರು ಪತ್ತೆಹಚ್ಚಿದ್ದಾರೆ. ಅಣಬಿ, ಹುರಸಗುಂಡಗಿ ಹಾಗೂ ಶಿರವಾಳ ಗ್ರಾಮಗಳಲ್ಲಿರುವ ಕುರುಹುಗಳು ಕ್ರಿ.ಶ. ೪–೫ನೇ ಶತಮಾನ ನಿರ್ಮಾಣವಾದವುಗಳೆಂದು ಅಭಿಪ್ರಾಯಿಸಲಾಗಿದೆ. ಈ ಅಭಿಪಾಯವು ಸಕಾರಣ ಎನ್ನುವುದಕ್ಕೆ ಪಮುಖ ಆಧಾರ ಗಳೆಂದರೆ ಭೀಮಾ ನದಿಯ ಆಚೆ ಎಡದಡದಲ್ಲಿರುವ ಸನ್ನತಿ ಹಾಗೂ ಕಣಗಿನಹಾಳ ಗ್ರಾಮದಲ್ಲಿ ಅದೇ ಕಾಲಾವಧಿಯಲ್ಲಿ ಅಗಣಿತ ಸಂಖ್ಯೆಯಲ್ಲಿ ಅವಶೇಷಗಳು ಇರುವುದನ್ನು ಸಂಶೋಧಕರು ಈಗಾಗಲೇ ಪ್ರಚುರ ಪಡಿಸಿದ್ದಾರೆ. ಸನ್ನತಿ ಹಾಗೂ ಕಣಗಿನಹಾಳಗಳಲ್ಲಿ ಕಂಡುಬಂದಿರುವ ಉತ್ಕೃಷ್ಟವಾದ ಮತ್ತು ಹೆಚ್ಚಿನ ಪ್ರಮಾಣದಲ್ಲಿರುವ ಅವಶೇಷಗಳು ಕಂಡುಬಂದಿದ್ದರೂ ಅಲ್ಪಪ್ರಮಾಣದಲ್ಲಿ ಈಗಲೂ ಶಹಾಪುರ ತಾಲೂಕಿನ ಕೆಲವು ಗ್ರಾಮಗಳಲ್ಲಿ ಸಿಗುತ್ತಲಿವೆ. ಅಲ್ಲದೆ, ಶಾತವಾಹನ ಅವಧಿಯಲ್ಲಿ ನಿರ್ಮಿಸುತ್ತಿದ್ದ ತಳಪಾಯ ಕಟ್ಟಡ ರಚನೆಗೆ ಉಪಯೋಗಿಸುತ್ತಿದ್ದ ಜಂಬಿಟ್ಟಿಗೆಗಳು ಹೇರಳವಾಗಿ ಈ ಪ್ರದೇಶದಲ್ಲಿ ಕಂಡುಬಂದಿವೆ. ಆದರೆ ದುರ್ದೈವವಶಾತ್ ಪರಿಪೂರ್ಣವಾದ ಕಟ್ಟಡ ರಚನೆಗಳು ಲವಲೇಶ ಪಮಾಣ ದಲ್ಲಿಯೂ ಉಳಿದುಕೊಂಡು ಬಂದಿಲ್ಲ. ಹುರಸಗುಂಡಗಿ ಗ್ರಾಮದಿಂದ ಉಲ್ಲೇಖವಾದ ಅವಶೇಷಗಳಲ್ಲಿ ಆಸೀನ ಭಂಗಿಯಲ್ಲಿ ಇರುವ ಗಜಲಕ್ಷ್ಮಿಯ ಸುಂದರ ಕೆತ್ತನೆಯುಳ್ಳ ಪದಕವಿರುವ ಕೊರಳಹಾರವನ್ನು ಧರಿಸಿರುವ ಯಕ್ಷನ ಶಿಲ್ಪವು ಮಹತ್ವದ್ದಾಗಿದ್ದೂ ದಕ್ಷಿಣ ಭಾರತದಲ್ಲಿ ಲಭ್ಯವಿರುವ ಗಜಲಕ್ಷ್ಮಿಯ ಅತ್ಯಂತ ಪ್ರಾಚೀನ ಉದಾಹರಣೆ ಇದಾಗಿದೆ ಎಂದು ಅಭಿಪ್ರಾಯಿಸಲಾಗಿದೆ (ಗುಲ್ಬರ್ಗಾ ಜಿಲ್ಲೆಯ ಗ್ಯಾಜೆಟಿಯರ್, ಪುಟ ೪೦೭). ಆದರೆ ಇಂಥ ಮಹತ್ವದ ಆಕರಗಳನ್ನು ಹೊಂದಿರುವ ಸಗರನಾಡಿನಲ್ಲಿ ರಾಷ್ಟ್ರಕೂಟ ಕಾಲದ ರಚನೆ ಗಳಿಗಿಂತ ಪೂರ್ವದಲ್ಲಿ ನಿರ್ಮಾಣವಾದ ಯಾವೊಂದು ದೇವಾಲಯದ ಕುರುಹುಗಳು ಇಲ್ಲದಿರುವುದು ದುರದೃಷ್ಟಕರ.

ಶಹಾಪುರ ತಾಲೂಕಿನಲ್ಲಿ ಪಮುಖವಾಗಿ ಶಿರವಾಳ, ಅಣಬಿ, ಭೀಮರಾಯನಗುಡಿ, ಹಯ್ಯಾಳ ಬಿ, ತುಮಕೂರು, ಕೊಡಾಲ, ಸಂಗಮ, ದೋರನಹಳ್ಳಿ, ತಂಗಡಗಿ, ಚಟ್ನಳ್ಳಿ, ಗುರುಸುಣಗಿ, ಅಣಬಿ, ಮದಕಿ ಮತ್ತು ಮುಡಬಾಳ ಗ್ರಾಮಗಳಲ್ಲಿ ಪರಿಪೂರ್ಣವಾಗಿ ಉಳಿಯದಿದ್ದರೂ ಅಲ್ಲಲ್ಲಿ ತ್ರುಟಿತಗೊಂಡು ಮತ್ತು ಜೀರ್ಣೋದ್ಧಾರಗೊಂಡಿರುವ ದೇವಾಲಯಗಳನ್ನು ಈವರೆಗೂ ಕಾಣುತ್ತೇವೆ. ಅಲ್ಲದೇ ಕನ್ನೆಕೋಳೂರು, ಅನ್ವರ, ತಡಿಬಿಡಿ, ಮರಮಕಲ್, ಬಿಳಾರ, ಮಾಚನೂರು, ಸಗರ, ಐಕೂರು, ಅನಕಸೂಗೂರು ಹುರುಸಗುಂಡಗಿ, ಹಾರಣಗೇರಿ ಹಾಗೂ ಶಹಾಪುರ ಪಟ್ಟಣಗಳಲ್ಲಿ ಪಾಚೀನ ದೇವಾಲಯಗಳಿದ್ದಿರುವ ಬಗೆಗೆ ಪಬಲ ಸಾಕ್ಷಿಗಳು ಈವರೆಗೂ ಉಳಿದುಕೊಂಡಿವೆ. ಅಲ್ಲದೇ ಭೀಮರಾಯನಗುಡಿ ಹಾಗೂ ಹೊಸಕೆರೆಯಲ್ಲಿ ರಚನೆ ಯಾಗಿರುವ ಸ್ಮಾರಕಗಳು ಸುರಪುರ ಪಾಳೇಗಾರರ ಆಡಳಿತಾ ವಧಿಯಲ್ಲಿ ರಚನೆಯಾದಂತವುಗಳು.

ಶಿರವಾಳ ಗ್ರಾಮವೊಂದರಲ್ಲಿಯೇ ನಲವತ್ತಾರು ಪ್ರಾಚೀನ ಸ್ಮಾರಕಗಳಿರುವುದನ್ನು ಉಲ್ಲೇಖಿಸಲಾಗಿದೆ

* ಸಹ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

(ಶಿರವಾಳ, ಪುಟ.೧). ಅಣಬಿ, ದೋರನಹಳ್ಳಿ, ಸಗರ, ಗೋಗಿ, ಮದ್ರಕಿ ಹಾಗೂ ಗುರಸುಣಗಿ ಗ್ರಾಮಗಳಲ್ಲಿ ಹತ್ತಾರು ದೇವಾಲಯಗಳು ನಿರ್ಮಾಣವಾಗಿದ್ದಿರ ಬಗೆಗೆ ಕುರುಹು ಗಳನ್ನು ಈಗಲೂ ಕಾಣುತ್ತೇವೆ. ಅಲ್ಲದೇ ಅವುಗಳಲ್ಲಿ ಹೆಚ್ಚಿನವು ಅಳಿದುಳಿದು ಕ್ಷೀಣಗೊಂಡ ಸ್ಮಾರಕಗಳಾಗಿ ನಿಂತಿವೆ.

ಇಲ್ಲಿ ನಿರ್ಮಾಣವಾಗಿರುವ ದೇವಾಲಯಗಳು ವಿಭಿನ್ನ ಕಾಲಘಟ್ಟದಲ್ಲಿ ಭಿನ್ನ ಶೈಲಿಯನ್ನು ಮೈಗೂಡಿಸಿಕೊಂಡು ಬೆಳೆದಿರುವಂತವುಗಳು. ಹೆಚ್ಚಿನವು ೧೧ರಿಂದ ೧೩ನೇ ಶತಮಾನದಲ್ಲಿಯೇ ರಚನೆಯಾಗಿರುವಂಥವು. ಒಂದೆರಡು ಗ್ರಾಮಗಳಲ್ಲಿ ಹತ್ತನೆಯ ಶತಮಾನದಲ್ಲಿ ರಚನೆಯಾದ ಮತ್ತು ಹದಿಮೂರನೆಯ ಶತಮಾನದ ನಂತರವು ಕಟ್ಟಲ್ಪಟ್ಟಿರುವ ದೇವಾಲಯಗಳು ಈವರೆಗೂ ಕಂಡುಬರುತ್ತವೆ. ಕಲ್ಯಾಣದ ಚಾಲುಕ್ಯ, ಕಲಚೂರಿ ಹಾಗೂ ದೇವಗಿರಿ ಯಾದವರ ಆಡಳಿತಾವಧಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದೇವಾಲಯಗಳು ರಚನೆಯಾಗಿರುವ ಬಗೆಗೆ ಸ್ಪಷ್ಟ ಉಲ್ಲೇಖಗಳಿವೆ. ಆದರೆ ಇದಕ್ಕೆ ಅಪವಾದವೆಂಬಂತೆ ಕಲ್ಯಾಣದ ಚಾಲುಕ್ಯರ ಆಡಳಿತಾವಧಿಗಿಂತ ಮೊದಲೇ ಅಂದರೆ ರಾಷ್ಟ್ರಕೂಟರ ಕಾಲದಲ್ಲಿ ಶಿರವಾಳ, ದೋರನಹಳ್ಳಿ ಮತ್ತು ಮದಕಿ ಗ್ರಾಮಗಳಲ್ಲಿ ಸ್ಮಾರಕಗಳು ನಿರ್ಮಾಣವಾಗಿರುವ ಕುರುಹು ಗಳಿವೆ. ಶಹಾಪುರ ತಾಲೂಕಿನ ಕೆಲವೇ ಗ್ರಾಮಗಳಲ್ಲಿ ಇಂಥ ಅಪರೂಪದ ಸಾಕ್ಷಿಗಳಿವೆ.

ಕಲಚೂರಿಗಳ ನಂತರ ಈ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ಸೇವುಣರ ಕಥೆಯು ಸಹ ಕಳಚೂರಿಗಳಿಗಿಂತ ಭಿನ್ನವಾಗಿರ ಲಿಲ್ಲ. ಹಗರಟಗಿ (ಸುರಪುರ ತಾಲೂಕು) ಹಾಗೂ ಶಿರವಾಳ ಗ್ರಾಮದಲ್ಲಿ ಕೆಲವು ದೇವಾಲಯಗಳಿಗೆ ದಾನ-ದತ್ತಿಗಳನ್ನು ನೀಡಿರುವ ಉಲ್ಲೇಖಗಳು ಮಾತ್ರ ದಾಖಲಾಗಿವೆ ಹೊರತು ಭವ್ಯವಾಗಿರುವ ದೇವಾಲಯ ನಿರ್ಮಾಣ ಮಾಡಿರುವುದಾಗಲಿ ಅಥವಾ ಅವುಗಳನ್ನು ಕಡ್ಡಾಯವಾಗಿ ಪೋಷಿಸುವಂತಹ ಹೆಚ್ಚಿನ ಮಾಹಿತಿಗಳೇನು ಸೇವುಣರ ಆಡಳಿತಾವಧಿಯಲ್ಲಿ ಕಂಡುಬಂದಿರುವುದಿಲ್ಲ.

ಅಣಬಿ

ಶಿರವಾಳ ಗ್ರಾಮದಿಂದ ಸುಮಾರು ಮೂರು ಕಿ.ಮೀ. ದೂರದಲ್ಲಿ ಅಣಬಿ ಗ್ರಾಮವಿದೆ. ಇದು ಸಹ ಶಾತವಾಹನ ಕಾಲದ ಹಲವಾರು ಸಂಗತಿಗಳನ್ನು ತನ್ನ ಒಡಲಲ್ಲಿ ಇಟ್ಟುಕೊಂಡಿರುವ ಪ್ರಾಚೀನ ಗ್ರಾಮ. ಇಲ್ಲಿ ಮುಖ್ಯವಾಗಿ ರಾಮಲಿಂಗೇಶ್ವರ, ಕುಂಬಾರ ಓಣಿಯಲ್ಲಿರುವ ದೇಗುಲ ಹಾಗೂ ಗ್ರಾಮದ ಹೊರಭಾಗದಲ್ಲಿ ನದಿಯ ದಂಡೆಯಲ್ಲಿ ಕೆಲವು ಅನಾಮಧೇಯ ದೇಗುಲಗಳಿವೆ. ಇವೆಲ್ಲವು ಹೆಚ್ಚು ಕಡಿಮೆ ೧೧-೧೨ನೇ ಶತಮಾನದಲ್ಲಿ ನಿರ್ಮಾಣ ವಾದಂಥವುಗಳು. ಕುಂಬಾರರ ಓಣಿಯಲ್ಲಿರುವ ದೇಗುಲ ಬಹುಶಃ ಪಂಚಕೂಟವಾಗಿದ್ದಿರಬಹುದು. ಆದರೆ ಅದರ ಭಾಗಗಳು ಇನ್ನಿತರ ಕೆಲಸ ಕಾರ್ಯಗಳಿಗೆ ಬಳಕೆಯಾಗುತ್ತಿವೆ. ಗ್ರಾಮದಲ್ಲಿರುವ ರಾಮಲಿಂಗೇಶ್ವರ ಗುಡಿಯು ಸಹ ಪ್ರಾಚೀನ ದೇವಾಲಯವೇ ಆಗಿದೆ. ಅದು ತಗ್ಗಿನಲ್ಲಿದೆ. ಹಾಗಾಗಿ ಗರ್ಭಗುಡಿಯಲ್ಲಿ ಸದಾ ನೀರು ನಿಂತಿರುತ್ತದೆ. ಗ್ರಾಮದ ಹೊರಭಾಗದಲ್ಲಿ ಅಂದರೆ ನದಿಯ ದಂಡೆಯ ಸಮೀಪವಿರುವ ದೇಗುಲ ಸಂಕೀರ್ಣ ತುಂಬಾ ವಿಶಾಲವಾಗಿದೆ. ಬಹುಶಃ ಇದು ಅಣಬಿಯಲ್ಲಿರುವ ಎಲ್ಲ ದೇವಾಲಯಗಳಿಗಿಂತ ಹೆಚ್ಚಿನ ಅನಾಥಾರಕ್ಕೆ ಒಳಗಾಗಿದೆ. ಈ ಸಂಕೀರ್ಣವನ್ನು ಪ್ರವೇಶಿ ಸುವುದು ತುಂಬಾ ಕಷ್ಟವಾಗಿದೆ. ಈ ಗ್ರಾಮದಲ್ಲಿ ನಿರ್ಮಾಣವಾಗಿರುವ ಹೆಚ್ಚಿನ ದೇವಾಲಯಗಳು ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿವೆ. ಸರಳವಾದ ಅಧಿಷ್ಠಾನ ಹಾಗೂ ಭಿತ್ತಿಯನ್ನು ಹೊಂದಿವೆ. ಕೆಲವು ದೇವಾಲಯಗಳು ಕದಂಬ-ನಾಗರ ಅಥವಾ ಫಂಸಾನ ಮಾದರಿಯ ಶಿಖರವನ್ನು ಹೊಂದಿವೆ. ಹೆಚ್ಚಿನವು ನಿರಾಲಂಕರಣೆಯಿಂದ ಕೂಡಿವೆ. ನೊಗ ಸಿಡಿದ (ಮೊಕ ಹಾರಿದ) ಚಕ್ಕಡಿಯ ಶಿಲಾಫಲಕ ಈ ಗ್ರಾಮದಲ್ಲಿಯೂ ಕಂಡುಬಂದಿದೆ. ಇದು ಶಾತವಾಹನ ಕಾಲದ್ದೆಂದು ಗುರುತಿಸಲಾಗಿದೆ. ಗ್ರಾಮದ ಅಗಸಿಯಲ್ಲಿ ಹನುಮಂತ ಗುಡಿಯಿದ್ದು ಅದನ್ನು ಸುರಪುರ ಪಾಳೇಗಾರರ ಕಾಲದಲ್ಲಿ ಕಟ್ಟಲಾಗಿದೆ. ಈ ಗುಡಿಯ ಕೈಪಿಡಿ ಗೋಡೆಯಲ್ಲಿ ವಿವಿಧ ಭಂಗಿಯಲ್ಲಿ ಆಸೀನವಾಗಿರುವ ಸುಂದರವಾದ ಮಿಥುನ ಶಿಲ್ಪಗಳನ್ನು ಅಳವಡಿಸಲಾಗಿದೆ.

ಕನ್ನೆ ಕೋಳೂರು

ಈ ಗ್ರಾಮದಲ್ಲಿ ಪ್ರಮುಖವಾಗಿ ಚನ್ನಕೇಶ್ವರಿ, ರಾಮಲಿಂಗ ಹಾಗೂ ಪರಮಾನಂದನ ಗುಡಿಗಳಿವೆ. ಇವುಗಳೆಲ್ಲವು ಹನ್ನೆರಡನೆಯ ಶತಮಾನದಲ್ಲಿಯೇ ನಿರ್ಮಾಣ ಗೊಂಡಂತವು. ಆದರೆ ಪ್ರಸ್ತುತ ಚನ್ನಕೇಶ್ವರಿ ದೇವಾಲಯವು ಹಲವಾರು ಬದಲಾವಣೆಗೆ ಒಳಗಾಗಿ ಹೊಸ ರೂಪವನ್ನು ಪಡೆದುಕೊಂಡಿದೆ. ರಾಮಲಿಂಗೇಶ್ವರ ಹಾಗೂ ಪರಮಾನಂದನ ಗುಡಿಗಳು ತೃಟಿತಗೊಂಡ ಸ್ಮಾರಕಗಳಂತಿವೆ. ಪರಮಾನಂದನ ಗುಡಿಯ ಮೇಲ್ಛಾವಣಿ ಸಂಪೂರ್ಣವಾಗಿ ಬಿದ್ದಿದೆ. ಅದರ ಪ್ರಾಚೀನ ಕಂಬಗಳು ಗುಡಿಯ ಮುಂಭಾಗದಲ್ಲಿ ಇದುವರೆಗೂ ಅನಾಥವಾಗಿ ಉಳಿದುಕೊಂಡಿವೆ. ಇದೇ ಸ್ಥಳದಲ್ಲಿ ಪ್ರಾಚೀನವಾದ ವೀರಗಲ್ಲನ್ನು ಇಡಲಾಗಿದೆ. ರಾಮಲಿಂಗೇಶ್ವರ ದೇವಾಲಯದ ಸ್ಥಿತಿಯು ಇದಕ್ಕಿಂತ ಭಿನ್ನವಾಗಿಲ್ಲ. ತಗ್ಗಿನಲ್ಲಿರುವ ಪ್ರಾಚೀನ ಗುಡಿಯಲ್ಲಿ ಸದಾ ನೀರು ನಿಂತಿರುತ್ತದೆ. ಕನ್ನೆಕೋಳೂರು ಗ್ರಾಮದಲ್ಲಿರುವ ಸ್ಮಾರಕಗಳಲ್ಲಿ

ವಿಶೇಷ ಮಹತ್ವವನ್ನು ಪಡೆದ ದೇವಾಲಯವೆಂದರೆ ಚನ್ನಕೇಶ್ವರಿ. ಇದನ್ನು ಇತ್ತೀಚೆಗೆ ನಿರ್ಮಿಸಲಾಗಿದೆ. ಕನ್ನಡ ಸಾಹಿತ್ಯದಲ್ಲಿ ಉಲ್ಲೇಖವಾಗುವ ಕೊಡಗೂಸು ಐತಿಹ್ಯ ಪುರುಷನ ಐತಿಹ್ಯಗಳಿಗೆ ಸಂಬಂಧಿಸಿದಂತೆ ಇದೊಂದು ಮಹತ್ವದ ಗ್ರಾಮವೆಂದು ಸಿದ್ಧಯ್ಯ ಪುರಾಣಿಕರು ಅಭಿಪ್ರಾಯಿಸಿದ್ದಾರೆ. ಕನ್ಯೆ (ಅವಿವಾಹಿತೆ) ಚಕೇಶ್ವರಿಯು ತನ್ನ ಆತ್ಮದಲ್ಲಿಯೇ ಶಿವ ಅಥವ ಕೊಡಗೂಸನ್ನು ಇಷ್ಟಪಟ್ಟು ಭಕ್ತಿಪೂರ್ವಕವಾಗಿ ಪೂಜಿಸಿರುತ್ತಾಳೆ. ಆ ಕೊಡಗೂಸು ಮತ್ತಾರು ಅಲ್ಲ, ಸದ್ಯ ಅಸ್ತಿತ್ವದಲ್ಲಿರುವ ರಾಮಲಿಂಗೇಶ್ವರನೆಂದು ಸ್ಥಳೀಯರು ಅಭಿಪ್ರಾಯಿಸುತ್ತಾರೆ. ಚನ್ನಕೇಶ್ವರಿಯು ತನ್ನ ಮನೆಯಿಂದ ರಾಮಲಿಂಗೇಶ್ವರನ ಗುಡಿಯ ಸ್ಥಳಕ್ಕೆ ಗುಪ್ತ ಮಾರ್ಗವಾಗಿ ವಿಹರಿಸುತ್ತಾ ನಿತ್ಯವು ರಾಮಲಿಂಗೇಶ್ವರನನ್ನು ಭೇಟಿ ಯಾಗುತ್ತಿದ್ದಳು ಎಂಬ ಐತಿಹ್ಯಗಳು ಈ ಭಾಗದಲ್ಲಿ ಜನಜನಿತ ವಾಗಿವೆ. ಕೊನೆಯವರೆಗೂ ಕನ್ಯೆಯಾಗಿಯೇ ಉಳಿದ ಇಂಥ ಶಿವಭಕ್ತೆಯ ನೆನಪಿಗಾಗಿ ಈ ಊರಿಗೆ ಕನ್ನೆಕೋಳೂರು ಎಂಬ ಹೆಸರು ಬಂದಿತು ಎಂಬ ಅಭಿಪ್ರಾಯವಿದೆ. ಹಾವೇರಿ ಜಿಲ್ಲೆಯ ಕಲ್ಲೇನಹಳ್ಳಿಯಲ್ಲಿಯೂ ಸಹ ಕೊಡಗೂಸಿನ ಬಗೆಗಿರುವ ಇಂಥದ್ದೇ ಕಥೆಯು ಪ್ರಚಲಿತದಲ್ಲಿದೆ.

ಕೋಡಾಲ

ಕೋಡಾಲ ಗ್ರಾಮವು ಶಹಾಪುರ ಪಟ್ಟಣದಿಂದ ಸುಮಾರು ೫೦ ಕಿ.ಮೀ. ದೂರದಲ್ಲಿದೆ. ಇಲ್ಲಿ ರಾಮಲಿಂಗೇಶ್ವರ ಮತ್ತು ಶಂಕರಲಿಂಗೇಶ್ವರ ಎಂಬ ಹೆಸರಿನ ಕ್ಷೀಣವಾಗಿರುವ ಎರಡು ಗುಡಿಗಳಿವೆ. ಆಯತಾಕಾರದಲ್ಲಿ ರಚನೆಯಾಗಿರುವ ಈ ಗುಡಿಗಳು ಒಂದೇ ಆವರಣದಲ್ಲಿಯೇ ನಿರ್ಮಾಣವಾಗಿವೆ. ಅವುಗಳು ಕಲ್ಯಾಣ ಚಾಲುಕ್ಯರ ಕಾಲದ ನಿರ್ಮಿತಿಗಳು. ಸರಳವಾದ ಬಾಗಿಲವಾಡಗಳು, ಚೌಕಾಕರದ ಕಂಬಗಳು ಹಾಗೂ ಗಜಲಕ್ಷ್ಮೀ ಶಿಲ್ಪವುಳ್ಳ ಲಲಾಟವು ಈ ದೇವಾಲಯ ಗಳಿಗಿವೆ. ದೇವಾಲಯದ ಹೊರಗೋಡೆಯ ಹಾಗೂ ಅಧಿಷ್ಠಾನ ಭಾಗದಲ್ಲಿ ಗಜ ಸಾಲುಗಳ ಪಟ್ಟಿಕೆಯನ್ನು ತುಂಬಾ ಮೋಹಕವಾಗಿ ಕೆತ್ತಲಾಗಿದೆ. ಇಂಥ ವಿಶೇಷ ಪಟ್ಟಿಕೆ ಬಹುಶಃ ಸಗರನಾಡಿನಲ್ಲಿರುವ ಇನ್ನಿತರ ದೇವಾಲಯಗಳಲ್ಲಿ ವಿರಳ ವೆಂದೇ ಹೇಳಬಹುದು. ಆದರೆ ಸ್ಮಾರಕಗಳ ಸ್ಥಿತಿ ತುಂಬಾ ಚಿಂತಾಜನಕ ಸ್ಥಿತಿಗೆ ಬಂದು ತಲುಪಿದೆ.

ಗ್ರಾಮದಲ್ಲಿರುವ ಹನುಮಂತನ ಗುಡಿಯ ಮುಂಭಾಗ ದಲ್ಲಿರುವ ಕೆಲವು ಬಿಡಿ ಶಿಲ್ಪಗಳು ತುಂಬಾ ಮಹತ್ವದವು. ಸಪ್ತಮಾತೃಕೆಯ ಶಿಲ್ಪ ಹಾಗೂ ದೊಡ್ಡದಾಗಿರುವ ಫಲಿಶಿಲ್ಪ (ವೀರಗಲ್ಲು?). ಇದನ್ನು ಸ್ಥಳೀಯರು ಇದೇ ಹೆಸರಿನಿಂದ ಸಂಬೋಧಿಸುತ್ತಾರೆ. ಇದಕ್ಕೊಂದು ಚಿಕ್ಕದಾದ ಗುಡಿಯನ್ನೇ ಕಟ್ಟಲಾಗಿದೆ. ಸುಮಾರು ನಾಲ್ಕು ಅಡಿ ಅಗಲ ಹಾಗೂ ಐದು ಅಡಿ ಎತ್ತರವಾಗಿರುವ ಶಿಲಾಫಲಕದ ಮೇಲೆ ಇದನ್ನು ಕೆತ್ತಲಾಗಿದೆ.

ಗುರುಸುಣಗಿ

ಸಗರನಾಡಿನಲ್ಲಿ ಗುರುಸುಣಗಿ (ಗುಲ್‌ಸರಾಮ್) ಗ್ರಾಮವು ಐತಿಹಾಸಿಕ ಮಹತ್ವವನ್ನು ಪಡೆದಿದೆ. ಶಾಸನಗಳಲ್ಲಿ ಈ ಗ್ರಾಮವನ್ನು ಗುರುಸಣಂಬೆ ಎಂದು ಉಲ್ಲೇಖಿಸಲಾಗಿದೆ. ಗ್ರಾಮದ ಪಕ್ಕದಲ್ಲಿರುವ ಎತ್ತರದ ಬೆಟ್ಟದ ಮೇಲೆ ಸಿದ್ದೇಶ್ವರ ಮತ್ತು ಚಂದಾಹುಸೇನಿ ದರ್ಗಾ ಇದೆ. ಸಿದ್ದೇಶ್ವರ ದೇವಾಲಯವು ಭಾಗಶಃ ಜೀರ್ಣೋದ್ಧಾರವಾಗಿದ್ದರೆ ಚಂದಾಹುಸೇನಿ ದರ್ಗಾ ಮೂಲತಃ ದೇವಾಲಯವಾಗಿತ್ತು. ಕಾರಣಾಂತರಗಳಿಂದ ಅದು ದರ್ಗಾ ಆಗಿ ರೂಪಾಂತರ ಗೊಂಡಿದೆ. ಈ ಗುಡಿಯ ಶಿಖರವು ವೇಸರ ಮಾದರಿಯದ್ದು. ಕಲ್ಯಾಣ ಚಾಲುಕ್ಯ ಕಾಲದಲ್ಲಿ ನಿರ್ಮಾಣವಾದ ಈ ದೇವಾಲಯಕ್ಕೆ ಸುಂದರವಾದ ಶಿಖರವನ್ನು ನಿರ್ಮಿಸಲಾಗಿದೆ. ಸಗರನಾಡಿನಲ್ಲಿ ಅಳಿದುಳಿದ ದೇವಾಲಯಗಳ ಶಿಖರಗಳಿಗೆ ಸಂಬಂಧಿಸಿ ಅಭಿಪ್ರಾಯಿಸಬಹುದಾದರೆ ಉಳಿದುಕೊಂಡಿರುವ ಕೆಲವೇ ಶಿಖರಗಳಲ್ಲಿ ಇದು ಒಂದು. ಸಿದ್ದೇಶ್ವರ ಗುಡಿಯ ಪಕ್ಕದಲ್ಲಿ ಹುಟ್ಟು ಬಂಡೆಯ ಮೇಲೆ ಅಗಲ ಮತ್ತು ವಿಸ್ತಾರವಾಗಿ ಮೂರು ಶಾಸನಗಳನ್ನು ಕೆತ್ತಲಾಗಿದೆ. ಅವುಗಳಲ್ಲಿ ಒಂದು ಕಲ್ಯಾಣದ ಚಾಲುಕ್ಯರ ಕಾಲಕ್ಕೆ ಸಂಬಂಧಿಸಿದರೆ ಇನ್ನೆರಡು ಕಲಚೂರಿಗಳ ಕಾಲದಲ್ಲಿ ರಚಿತವಾದವುಗಳು. ಇವು ಸಿದ್ದೇಶ್ವರ ಗುಡಿಗೆ ದಾನದತ್ತಿ ನೀಡಿರುವ ಉಲ್ಲೇಖವನ್ನು ಹೊಂದಿವೆ.

ಈ ಗುಡಿಯ ಸುತ್ತಮುತ್ತಲಿನ ಗುಡ್ಡದಲ್ಲಿ ಮೌರ್ಯ ಹಾಗೂ ಶಾತವಾಹನ ಕಾಲದ ಅವಶೇಷಗಳು ಹೇರಳ ಪ್ರಮಾಣದಲ್ಲಿ ಕಂಡುಬರುತ್ತವೆ. ಇದು ಬೌದ್ಧಮತ ಪಂಥಕ್ಕೆ ಸಂಬಂಧಿಸಿದ ಪಮುಖ ನೆಲೆಯಾಗಿತ್ತು ಎಂಬ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ. (ಯಾದಗಿರಿ ಜಿಲ್ಲೆಯ ಶಾಸನಗಳು, ಪುಟ ೧೮೭) ಜಂಬಟ್ಟಿಗೆಗಳು, ಮಡಿಕೆ ಚೂರುಗಳು, ಹಾಳು ಅಥವ ಬೂದಿಬಣ್ಣದ ಅವಶೇಷವಿರುವ ಸ್ಥಳವು ಈ ಗುಡಿಗಳಿಗೆ ಹೋಗುವ ದಾರಿಯಲ್ಲಿ ಕಂಡುಬರುತ್ತದೆ. ಈ ನೆಲೆಯ ಬಗೆಗೆ ವಿಸ್ತೃತವಾದ ಅಧ್ಯಯನದ ಅವಶ್ಯಕತೆ ಇವೆ.

ಚಟ್ನಳ್ಳಿ

ಶಹಾಪುರ ಮತ್ತು ಯಾದಗಿರಿ ಪಟ್ಟಣಗಳಿಗೆ ಸಮಾನಾಂತರ ಅಂತರದಲ್ಲಿರುವ ಈ ಗ್ರಾಮದಲ್ಲಿ ಕೋಟಿ ಬಸವೇಶ್ವರನ ಸುಂದರವಾದ ದೇವಾಲಯವಿದೆ. ಇದು ವಿಶಿಷ್ಟವಾದ ತಲವಿನ್ಯಾಸವನ್ನು ಹೊಂದಿದೆ. ಮೂರು ಪ್ರತ್ಯೇಕವಾದ ಗರ್ಭಗೃಹಗಳನ್ನು ಜೋಡಿಸುವ ನವರಂಗವನ್ನು ನಿರ್ಮಿಸಲಾಗಿದೆ. ಹಾಗಾಗಿ ನವರಂಗದ ಮೂಲಕವೇ ಮೂರು ಗರ್ಭಗೃಹಗಳಿಗೆ ಪ್ರವೇಶಿಸಬೇಕಾಗುತ್ತದೆ.

ದಕ್ಷಿಣಾಭಿಮುಖವಾಗಿರುವ ಮುಖ್ಯಗರ್ಭಗೃಹದಲ್ಲಿ ಸುಂದರವಾದ ಹಾಗೂ ತಕ್ಕಮಟ್ಟಿಗೆ ಎತ್ತರವಾದ ನಂದಿಶಿಲ್ಪವನ್ನು ಸ್ಥಾಪಿಸಲಾಗಿದ್ದು ಅದುವೇ ಪ್ರಧಾನ ಮತ್ತು ಮುಖ್ಯವಾದ ದೇವರು. ಚಟ್ನಳ್ಳಿಯ ಈ ದೇವಾಲಯದ ಮೂರು ಗರ್ಭಗೃಹಗಳ ಬಾಗಿಲವಾಡಗಳು ಹಾಗೂ ನವರಂಗದಲ್ಲಿರುವ ನಾಲ್ಕು ಕಂಬಗಳನ್ನು ಅತ್ಯಂತ ಸುಂದರ ವಾಗಿ ಕೆತ್ತಲಾಗಿದೆ. ಈ ಬಾಗಿಲವಾಡಗಳು ಪಂಚಪಟ್ಟಿಕೆಗಳನ್ನು ಒಳಗೊಂಡಿದ್ದು ಉತ್ತರಾಂಗದ ಭಾಗಗಳನ್ನು ಅಷ್ಟೇ ನಯ ನಾಜೂಕಿನಿಂದ ಕೆತ್ತಲಾಗಿದೆ. ಚಟ್ನಳ್ಳಿಯ ಬಸವೇಶ್ವರ ದೇವಾಲಯು ವಾಸ್ತುಶಿಲ್ಪ ದೃಷ್ಟಿಯಿಂದ ಮಹತ್ವದ ಸ್ಮಾರಕವೆಂದೆನಿಸುತ್ತದೆ.

ತಡಿಬಿಡಿ

ತಡಿಬಿಡಿ ಗ್ರಾಮಕ್ಕೆ ಹೊಂದಿಕೊಂಡಿರುವ ಹಾಗೂ ವಿಶಾಲವಾಗಿ ವಿಸ್ತರಿಸಿಕೊಂಡಿರುವ ಬೆಟ್ಟದ ಮೇಲೆ ಸಂಗಮೇಶ್ವರ ದೇವಾಲಯುವಿದೆ. ಇದು ತ್ರಿಕೂಟ ದೇವಾಲಯವಾಗಿತ್ತು, ಅಲ್ಲದೇ ತುಂಬಾ ಪ್ರಸಿದ್ಧಿಯನ್ನು ಪಡೆದಿತ್ತು. ಆದರೆ ಪ್ರಸ್ತುತ ದೇವಾಲಯವನ್ನು ಸಂಪೂರ್ಣವಾಗಿ ನವೀಕರಿಸಲಾಗಿದೆ. ಹೀಗಾಗಿ ಪ್ರಾಚೀನವೆನ್ನಬಹುದಾದ ಹೆಚ್ಚಿನ ಅವಶೇಷಗಳು ಗುಡಿಯ ಮುಂಭಾಗದಲ್ಲಿ ಅನಾಥವಾಗಿ ಬಿದ್ದಿವೆ. ಇದೇ ಸ್ಮಾರಕದ ಹತ್ತಿರವೇ ಇನ್ನು ಎತ್ತರವಾದ ಬೆಟ್ಟದ ತುದಿಯಲ್ಲಿ ಮೈಲಾರನು ಸ್ಥಾಪಿತನಾಗಿದ್ದಾನೆ.

ಗ್ರಾಮದಲ್ಲಿ ಹನುಮಂತ ಹಾಗೂ ಬಸವಣ್ಣನ ಗುಡಿಗಳು ಇವೆ. ಇವು ಸಹ ನವೀಕರಣದ ಕಾರ್ಯಕ್ಕೆ ಒಳಗಾಗಿವೆ. ಕಲ್ಯಾಣದ ಚಾಲುಕ್ಯರ ನಂತರ ಸಗರ ನಾಡಿನಲ್ಲಿ ಆಳ್ವಿಕೆ ಮಾಡಿದ ದೇವಗಿರಿ ಸೇವುಣರಿಗೆ ಸಂಬಂಧಿಸಿದ ಸ್ಪಷ್ಟ ಉಲ್ಲೇಖ ಈ ಗ್ರಾಮದಲ್ಲಿ ಲಭ್ಯವಾಗಿರುವ ಶಾಸನದಲ್ಲಿ ಉಲ್ಲೇಖವಾಗಿದೆ. ಅಲ್ಲದೇ ಗ್ರಾಮದಲ್ಲಿ ಬ್ರಹ್ಮೇಶ್ವರ ದೇವಾಲಯ ನಿರ್ಮಿಸಿರುವ ಬಗೆಗೆ ಖಚಿತ ಮಾಹಿತಿ ಇದೆ. ತೃಟಿತಗೊಂಡು ನವೀಕರಣ ಪ್ರಕ್ರಿಯೆಗೆ ಒಳಗಾಗಿ ಅಸ್ತಿತ್ವದಲ್ಲಿರುವ ಬಸವಣ್ಣನ ಗುಡಿಯೇ ಬಹುಶಃ ಪ್ರಾಚೀನ ಬ್ರಹ್ಮೇಶ್ವರ ದೇವಾಲಯುವಾಗಿದ್ದಿರಬಹುದೇ ಎಂದು ಅಭಿಪ್ರಾಯಿಸಬಹುದಾಗಿದೆ. ತಡಿಬಿಡಿಯನ್ನು ಶಾಸನಗಳಲ್ಲಿ ತಳಬೀಡಿ ಎಂದು ಉಲ್ಲೇಖಿಸಲಾಗಿದೆ. ತಳಬೀಡು ಮಹಾಪ್ರಭುಗಳಾದ ಬೀರಗಾವುಂಡ ಮತ್ತು ನನ್ನಗಾವುಂಡರು ಬ್ರಹ್ಮೇಶ್ವರ ದೇವಾಲಯದ ಆಚಾರ್ಯರಾದ ಚಿಕ್ಕಯ್ಯನಿಗೆ ಭೂಮಿದಾನ ನೀಡಿದ ಉಲ್ಲೇಖವಿದೆ. ಸೇವುಣ ಅರಸರ ಬಗೆಗೆ ಸಗರನಾಡಿನಲ್ಲಿ ಸಿಗುವ ಕೆಲವೇ ಆಧಾರಗಳಲ್ಲಿ ಈ ಗ್ರಾಮದಲ್ಲಿ ದೊರಕಿರುವ ಪ್ರಾಚ್ಯಾವಶೇಷಗಳು ಬಹಳ ಮುಖ್ಯವಾದವು. ಇಲ್ಲಿ ನಿರ್ಮಿಸಲ್ಪಟ್ಟಿರುವ ದೇವಾಲಯಗಳು, ಶಿಲ್ಪಗಳು ಹಾಗೂ ಶಾಸನಗಳು ಅವರ ಕಾಲದಲ್ಲಿ ನಿರ್ಮಾಣವಾದವುಗಳು ಎಂಬುದು ನಿರ್ವಿವಾದ. ಪ್ರಾಚೀನ ತಳಬೀಡಿನಲ್ಲಿ ಶೈವ ಮತ್ತು ಜೈನ ಮತ-ಪಂಥಗಳು ಹೆಚ್ಚಿನ ಪ್ರಾಧಾನ್ಯತೆಯನ್ನು ಪಡೆದಿದ್ದವು. ಭೈರವ, ಲಿಂಗ, ಗಣೇಶ ಹಾಗೂ ವಿಷ್ಣು ಮತ್ತು ಸೂರ್ಯನ ಶಿಲ್ಪಗಳು ಇಲ್ಲಿರುವ ಬಸವಣ್ಣನ ಗುಡಿಯ ಮುಂಭಾಗದಲ್ಲಿ ಕಂಡುಬರುತ್ತವೆ. ಅಲ್ಲದೆ, ತಡಿಬಿಡಿ ಗ್ರಾಮದ ಸುತ್ತಲಿರುವ ಜಮೀನುಗಳಲ್ಲಿ ಕೆಲವು ಬಿಡಿಶಿಲ್ಪಗಳು ಪತ್ತೆ ಆಗಿವೆ. ಅವು ಜೈನ ಪಂಥಕ್ಕೆ ಸಂಬಂಧಿಸಿದವುಗಳಾಗಿವೆ. ಮುಖ್ಯವಾಗಿ ನೇಮಿನಾಥನ ಶಿಲ್ಪ, ಕೂಷ್ಮಾಂಡಿನಿ ಯಕ್ಷಿ, ನಿಷಿಧಿ ಶಿಲ್ಪ, ಪಾಲಕಮ್ಮ ಮತ್ತು ಸಂಕಮ್ಮ ಎಂದು ಕರೆಯಲ್ಪಡುವ ವೀರಗಲ್ಲುಗಳು ಹೊಲಗಳಲ್ಲಿ ಕಂಡುಬಂದಿವೆ (ಹಕ್ಕತೆನೆ, ಪುಟ.೭೮-೮೧).

ತುಮಕೂರು

ಇಲ್ಲಿರುವ ರಾಮಲಿಂಗೇಶ್ವರ ದೇವಾಲಯವು ತ್ರಿಕೂಟ ರಚನೆಯಾಗಿತ್ತು. ಇದನ್ನು ದುರಸ್ತಿ ಮಾಡಲಾಗಿದೆ. ಈ ದೇವಾಲಯವು ತ್ರೈಪುರುಷ ದೇವಾಲಯವಾಗಿತ್ತು ಎಂಬ ಉಲ್ಲೇಖಗಳು ಶಾಸನಗಳಲ್ಲಿವೆ. ತ್ರೈಪುರುಷ ದೇವಾಲಯದಲ್ಲಿ ಸೂರ್ಯ, ಶಿವ ಹಾಗೂ ವಿಷ್ಣು ಅಥವಾ ಬ್ರಹ್ಮ ವಿಷ್ಣು ಹಾಗೂ ಸೂರ್ಯನನ್ನು ಆರಾಧಿಸಲಾಗುತ್ತದೆ. ದೇವಾಲಯದ ಕಂಬಗಳು ಹಾಗೂ ಬಾಗಿಲವಾಡದ ಅಲಂಕರಣೆಯನ್ನು ಗಮನಿಸಿದಾಗ ಇದು ಕಲ್ಯಾಣ ಚಾಲುಕ್ಯ ಕಾಲದ ನಿರ್ಮಾಣವೆಂದು ಹೇಳಬಹುದಾಗಿದೆ. ಇಲ್ಲಿರುವ ಭೈರವ ಹಾಗೂ ವಿಷ್ಣು ಶಿಲ್ಪಗಳು ಸುಂದರವಾಗಿವೆ. ಕಲ್ಯಾಣದ ಚಾಲುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸಂಬಂಧಿಸಿದ ಎರಡು ಶಾಸನಗಳು ಈ ಗ್ರಾಮದಲ್ಲಿದ್ದ ಮಲ್ಲಿಕಾರ್ಜುನ ಹಾಗೂ ಜಕ್ಕೇಶ್ವರ ದೇವರ ಬಗೆಗೆ ಉಲ್ಲೇಖಿಸುತ್ತವೆ. ಆದರೆ ಆ ಹೆಸರಿನ ದೇವಾಲಯಗಳು ಪ್ರಸ್ತುತ ಈ ಊರಲ್ಲಿ ಇಲ್ಲ. ಬಹುಶಃ ತ್ರಿಕೂಟ ರಚನೆಯಲ್ಲಿ ಖಾಲಿ ಇರುವ ಗರ್ಭಗೃಹಗಳಲ್ಲಿರುವ ದೇವಾಲಯಗಳೇ ಇವು ಆಗಿರುವುದೇ?

ದೋರನಹಳ್ಳಿ

ಶಹಾಪುರ ಮತ್ತು ಯಾದಗಿರಿ ರಸ್ತೆಯಲ್ಲಿರುವ ದೋರನಹಳ್ಳಿ ಪ್ರಾಚೀನ ಪ್ರಸಿದ್ಧ ಗ್ರಾಮವಾಗಿದ್ದಿತು. ಈ ಗ್ರಾಮದಲ್ಲಿ ಮಲ್ಲಯ್ಯ ಅಥವಾ ಮಲ್ಲಿಕಾರ್ಜುನ, ಕಲ್ಲಿನಾಥ ಪರಮಾನಂದ ಹಾಗೂ ಇನ್ನಿತರ ಪ್ರಾಚೀನ ಅವಶೇಷಗಳನ್ನು ಕಾಣುತ್ತೇವೆ. ಸಗರನಾಡಿನಲ್ಲಿ ಪ್ರಸಿದ್ಧವಾಗಿದ್ದ ಈ ಗ್ರಾಮವು ಸುರಪುರ ಸಂಸ್ಥಾನದ ಆಡಳಿತ ಕಾಲಾವಧಿಯವರೆಗೂ ತನ್ನ ಐತಿಹಾಸಿಕ ಮಹತ್ವವನ್ನು ಉಳಿಸಿಕೊಂಡು ಬಂದಿದೆ. ಆದ್ದರಿಂದಲೇ ಸಗರನಾಡಿನಲ್ಲಿ ಈ ಗ್ರಾಮ ಕುರಿತು "ಸಗರ ಸಾವಿರದ ಹಳ್ಳಿ ಏಕ ದೋರನಹಳ್ಳಿ" ಎಂಬ ನಾಣ್ಣುಡಿ

ಬಹಳ ಮಹತ್ವವನ್ನು ಪಡೆದಿದೆ. ಶಿರವಾಳ ಗ್ರಾಮವೊಂದನ್ನು ಹೊರತುಪಡಿಸಿದರೆ ಸಗರ ನಾಡಿನಲ್ಲಿ ಅತೀ ಪ್ರಾಚೀನ ಎನ್ನಬಹುದಾದ ಶಾಸನವು ಈ ಗ್ರಾಮದಲ್ಲಿಯೇ ಕಂಡು ಬಂದಿದೆ.

ಊರಿನಲ್ಲಿರುವ ಮಲ್ಲಿಕಾರ್ಜುನ ಅಥವಾ ಮಲ್ಲಯ್ಯನ ಹೆಸರಿನಿಂದ ಕರೆಯಲ್ಪಡುವ ದೇವಾಲಯದ ಮುಂಭಾಗದಲ್ಲಿ ರಾಷ್ಟ್ರಕೂಟ ಕಾಲದೆನ್ನಬಹುದಾದ ತ್ರುಟಿತ ಶಾಸನವಿದೆ. ಮಲ್ಲಿಕಾರ್ಜುನ ಅಥವಾ ಮಲ್ಲಯ್ಯನ ಗುಡಿಯು ಅದೇ ಕಾಲದ್ದಾಗಿರಬಹುದು. ಆದರೆ ಅದನ್ನು ಸಂಪೂರ್ಣವಾಗಿ ನವೀಕರಿಸಿ ಕಟ್ಟಲಾಗಿದೆ.

ಗ್ರಾಮದ ಹೂಗಾರ ಓಣಿಯಲ್ಲಿರುವ ಪರಮಾನಂದನ ಗುಡಿಯು ೧೨ನೇ ಶತಮಾನದಲ್ಲಿ ರಚನೆಯಾಗಿರುವಂಥದ್ದು. ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖ ಮಂಟಪವಿದೆ. ಮುಖಮಂಟಪದಲ್ಲಿ ಕಕ್ಷಾಸನವಿದೆ. ಗುಡಿಯಲ್ಲಿರುವ ಕಂಬಗಳು ಬುಡದಲ್ಲಿ ಚೌಕಾಕಾರದವುಗಳಾಗಿದ್ದು ದಂಡಾಗ (ಮಧ್ಯ)ಭಾಗದಲ್ಲಿ ವೃತ್ತಾಕಾರದ ಪಟ್ಟಿಕೆಗಳನ್ನು ರಚಿಸಲಾಗಿದೆ. ದೇವಾಲಯದಲ್ಲಿರುವ ಕಂಬಗಳು, ಭುವನೇಶ್ವರಿಯ ಕೆತ್ತನೆ ಹಾಗೂ ಬಾಗಿಲವಾಡಗಳು ಹಗರಟಗಿಯಲ್ಲಿರುವ ದೇವಾಲಯಗಳಲ್ಲಿರುವ ರಚನಾ ವಿನ್ಯಾಸಗಳನ್ನು ನೆನಪಿಸುತ್ತವೆ.

ಕಲ್ಲಿನಾಥನ ಗುಡಿಯು ಗ್ರಾಮದ ಹೊರಭಾಗಕ್ಕೆ ಹೊಂದಿಕೊಂಡ ಜಮೀನಿನಲ್ಲಿದೆ. ಈ ದೇವಾಲಯದ ಪಕ್ಕದಲ್ಲಿ ಚಿಕ್ಕ ಹಳ್ಳವಿದೆ. ಈ ಗುಡಿಯನ್ನು ಹತ್ತನೆಯ ಶತಮಾನದ ಪ್ರಾರಂಭದಲ್ಲಿಯೇ ಕಟ್ಟಿರಬಹುದಾಗಿದೆ. ಆದರೆ ಕಾಲಾನಂತರ ಅಂದರೆ ಸು. ೧೫-೧೬ನೇ ಶತಮಾನದಲ್ಲಿ ಇದನ್ನು ಜೀರ್ಣೋದ್ಧಾರಗೊಳಿಸಲಾಗಿದೆ. ಈ ಗುಡಿಯ ಮುಂಭಾಗದಲ್ಲಿಯೇ ಶಾಸನಸ್ತಂಭ ಇದ್ದು ಅದನ್ನು ದೀಪದ ಎಣ್ಣೆಯನ್ನು ಹೊತ್ತಿಸಲು ಉಪಯೋಗಿಸಲಾಗುತ್ತಿದೆ. ಅಲ್ಲದೇ ಹಲವು ವಾಸ್ತು ಅವಶೇಷಗಳು ಗುಡಿಯ ಆವರಣದಲ್ಲಿ ಬಿದ್ದಿವೆ.

ಈ ದೇವಾಲಯವು ಅಧಿಷ್ಠಾನ, ಉಪಾನ, ತ್ರಿಪಟ್ಟ ಕುಮುದ, ಗಳ ಹಾಗೂ ಕಪೋತಗಳ ರಚನೆಯನ್ನು ಹೊಂದಿದೆ. ಶಿಖರ ಭಾಗದಲ್ಲಿ ಪ್ರಸ್ತರ ಮಾತ್ರ ಉಳಿದುಕೊಂಡಿದ್ದು ಅದರಲ್ಲಿ ಆಲಿಂಗ, ಪ್ರತಿ ಆಲಿಂಗ, ಗಳ ಹಾಗೂ ಕಪೋತ ಭಾಗಗಳ ರಚನೆಗಳಿವೆ. ಸಗರನಾಡಿನಲ್ಲಿ ನಾಥ ಪರಂಪರೆಗೆ ಸಂಬಂಧಿಸಿದ ದೇವಾಲಯಗಳು ಹತ್ತನೆಯ ಶತಮಾನದ ಪ್ರಾರಂಭದಲ್ಲಿ ಕಂಡುಬಂದಿವೆ. ಬಹುಶಃ ಈ ಭಾಗದಲ್ಲಿ ಅವು ಕಾಳಾಮುಖ ಪರಂಪರೆಗೆ ಒಳಗಾಗಿ ಇನ್ನಷ್ಟು ಮಹತ್ವ ಪಡೆದುಕೊಂಡವು. ಅಲ್ಲದೇ ಈ ಪ್ರದೇಶದಲ್ಲಿ ಭೈರವನ ಆರಾಧನೆಯ ಹೆಚ್ಚಿನ ಪ್ರಮಾಣದಲ್ಲಿ ಇದ್ದಿರುವ ಪ್ರಬಲ ಕುರುಹುಗಳು ಸಾಕಷ್ಟು ಪ್ರಮಾಣದಲ್ಲಿ ಕಂಡುಬಂದಿವೆ.

ಬಿಳಾರ

ಕ್ಷೇತ್ರಕಾರ್ಯಾವಧಿಯಲ್ಲಿ ಬಿಳಾರದಲ್ಲಿ ಎರಡು ಪ್ರಾಚೀನ ದೇವಾಲಯಗಳು ಕಂಡುಬಂದಿವೆ. ಶಂಕರಲಿಂಗೇಶ್ವರ ಮತ್ತು ಈಶ್ವರ ಅಥವಾ ಕಾಳಮ್ಮ ಎಂಬ ಹೆಸರಿನ ದೇವಾಲಯಗಳು ಇಲ್ಲಿವೆ. ಇವು ಸಾಮಾನ್ಯವಾಗಿ ಗರ್ಭಗೃಹ, ಅಂತರಾಳ, ನವರಂಗ ಹೊಂದಿವೆ. ಅಧಿಷ್ಠಾನವು ಸರಳ ರಚನೆಯಿಂದ ಕೂಡಿದೆ. ಬಾಗಿಲವಾಡಗಳಲ್ಲಿ ತ್ರಿಶಾಖೆಗಳನ್ನು ಕಂಡರಿಸಲಾಗಿದೆ. ಶಿಲ್ಪಗಳಲ್ಲಿ ಮುಖ್ಯವಾಗಿ ಸಪ್ತಮಾತೃಕೆ, ನಂದಿ, ಸಿಂಹಶಿಲ್ಪ, ಮಹಿಷಾಸುರಮರ್ದಿನಿ ಶಿಲ್ಪಗಳು ಕಂಡುಬಂದಿವೆ. ಕಾಳಮ್ಮ ಅಥವಾ ಸ್ಥಳೀಯವಾಗಿ ದುಬಲಮ್ಮಳೆಂದು ಕರೆಯುವ ಮಹಿಷಾಸುರಮರ್ದಿನಿ ಶಿಲ್ಪವು ಸುಂದರವಾಗಿದೆ. ಸುಮಾರು ನಾಲ್ಕು ಅಡಿ ಎತ್ತರದ ಈ ಶಿಲ್ಪವು ಕಪ್ಪುಕಲ್ಲಿನಲ್ಲಿ ನಿರ್ಮಾಣವಾಗಿದೆ. ಪ್ರತಿ ಭಾಗವನ್ನು ಪ್ರಮಾಣಬದ್ಧವಾಗಿ, ಕೆತ್ತಿರುವ ಶಿಲ್ಪಗಾರನ ಕೌಶಲ್ಯಕ್ಕೆ ಹಿಡಿದ ಕನ್ನಡಿಯಂತಿದೆ. ಶಂಕರಲಿಂಗೇಶ್ವರ ಗುಡಿಯ ಪಕ್ಕದಲ್ಲಿ ಭುಂವಾರ ಎಂದು ಕರೆಯುವ ಕಟ್ಟಡವಿದೆ. ಬಹುಶಃ ಅದು ಪ್ರಾಚೀನ ವಿದ್ಯಾಕೇಂದ್ರ ಅಥವಾ ಕೋಷ್ಠಗೃಹವಾಗಿತ್ತೆಂದು ಹೇಳಬಹುದಾಗಿದೆ.

ಪಾಲಕಮ್ಮನ ಪಟ್ಟಿಯಲ್ಲಿ ಕಂಡುಬರುವ ವೀರಗಲ್ಲುಗಳನ್ನು ಸ್ಥಳೀಯವಾಗಿ ಗುಡ್ಡೇದಕಲ್ಲುಗಳೆಂದು ಕರೆಯುತ್ತಾರೆ. ಇಲ್ಲಿ ಬೂದಿಗುಡ್ಡದ ಸೂಚನೆಗಳು ಕಂಡುಬಂದಿವೆ ಎಂದು ಡಿ.ಎನ್.ಅಕ್ಕಿ ಅವರು ಅಭಿಪ್ರಾಯಿಸಿದ್ದಾರೆ. ಬಹುಶಃ ಈ ಗ್ರಾಮವು ಬೃಹತ್ ಶಿಲಾಯುಗದಿಂದಲೇ ತನ್ನ ಮಹತ್ವ ಸಾರುತ್ತಾ ಬಂದಿದೆ.

ಭೀಮರಾಯನ ಗುಡಿ

ಸಗರ ನಾಡಿನಲ್ಲಿ ವಿಜಯನಗರೋತ್ತರ ಕಾಲದಲ್ಲಿ ನಿರ್ಮಾಣವಾಗಿರುವ ಪ್ರಮುಖ ಸ್ಮಾರಕಗಳಲ್ಲಿ ಭೀಮರಾಯನ ಗುಡಿಯಲ್ಲಿರುವ ಬಲಭೀಮನ ಗುಡಿಯು ಬಹಳ ಮುಖ್ಯವಾದುದು. ಸುರಪುರ ಪಾಳೇಗಾರರ ಕಾಲದಲ್ಲಿ ಅದನ್ನು ಜೀರ್ಣೋದ್ಧಾರಗೊಳಿಸಿ ವಿಸ್ತಾರವಾಗಿ ಕಟ್ಟಲಾಗಿದೆ. ಇದಕ್ಕಿಂತ ಪೂರ್ವದಲ್ಲಿ ಇಲ್ಲೊಂದು ಈಶ್ವರನ ಗುಡಿಯಿರುವುದರ ಬಗೆಗೆ ಶಾಸನ ಉಲ್ಲೇಖಗಳಿವೆ. ಪ್ರಾಚೀನ ಗುಡಿಯ ಅವಶೇಷಗಳನ್ನೇ ಪ್ರಸ್ತುತ ಗುಡಿಯಲ್ಲಿ ಬಳಸಿಕೊಳ್ಳಲಾಗಿದೆ. ಅಲ್ಲದೇ ಶೈವ ಪಂಥಕ್ಕೆ ಸಂಬಂಧಿಸಿದ ದೇವಾಲಯವೊಂದು ಕಾಲಕ್ರಮೇಣ ಬದಲಾದ ಸ್ಥಿತಿಗೆ ಒಳಪಟ್ಟು ವೈಷ್ಣವ ಪಂಥದ ಹನುಮಂತ ಅಥವಾ ಬಲಭೀಮನ ಗುಡಿಯಾಗಿ ಪರಿತವರ್ತನೆಯಾಗಿರುವ ಪ್ರಮುಖ ಉದಾಹರಣೆ ಇದಾಗಿದೆ. ಇಂಥ ಬದಲಾವಣೆಗಳನ್ನು ಸಗರನಾಡಿನ ಕೆಲವು ಗ್ರಾಮಗಳಲ್ಲಿರುವ ದೇವಾಲಯಗಳಲ್ಲಿ ಗುರುತಿಸಬಹುದಾಗಿದೆ.

ಇಲ್ಲಿರುವ ಪ್ರಾಚೀನ ಕಂಬಗಳು ಕಲ್ಯಾಣದ ಚಾಲುಕ್ಯರ ಕಾಲದವುಗಳು. ಗುಡಿಯ ಸುತ್ತಲೂ ನಿರ್ಮಿಸಿರುವ ಪೌಳಿ ಅಥವಾ ಹಜಾರ ಹಾಗೂ ಶಿಖರವನ್ನು ಪಾಳೇಗಾರರ ಕಾಲದಲ್ಲಿ ನಿರ್ಮಿಸಲಾಗಿದೆ.

ಮದ್ರಕಿ

ಮದಕಿ ಗ್ರಾಮದಲ್ಲಿ ಬಸವೇಶ್ವರ, ಸಿದ್ಧಲಿಂಗೇಶ್ವರ ಹಾಗೂ ರಾಮಲಿಂಗೇಶ್ವರ ಹೆಸರಿನ ಮೂರು ಗುಡಿಗಳಿವೆ. ಬಸವೇಶ್ವರನ ಗುಡಿಯ ಗರ್ಭಗೃಹ ಹಾಗೂ ಅಂತರಾಳ ಹೊರತುಪಡಿಸಿದರೆ ಉಳಿದೆಲ್ಲ ಭಾಗಗಳು ಬಿದ್ದುಹೋಗಿವೆ. ಬಹುಶಃ ಈ ದೇವಾಲಯ ಪ್ರಾಚೀನ ಕಾಲದಲ್ಲಿ ಬೇರೆ ಹೆಸರಿನಿಂದ ಕರೆಯಲ್ಪಡುತ್ತಿತ್ತು. ಅದಕ್ಕೆ ಪುಷ್ಟಿವಿದಾಯಕ ಸಂಗತಿಗಳಾಗಿ ಬಸವಣ್ಣನ ಗುಡಿಯ ಗರ್ಭಗೃಹದಲ್ಲಿರುವ ಮೂರ್ತಿಯ ಪೀಠವು ಸೂರ್ಯನದು. ಇಲ್ಲೊಂದು ಭೈರವನ ಶಿಲ್ಪವಿದೆ. ಅದನ್ನು ಮನಮೋಹಕವಾಗಿ ಕೆತ್ತಲಾಗಿದೆ. ಗರ್ಭಗೃಹ ಹಾಗೂ ಅಂತರಾಳಗಳ ಬಾಗಿಲವಾಡಗಳು ಸಾದಾ ರಚನೆಯಿಂದ ಕೂಡಿವೆ. ದೇವಾಲಯದ ಹೊರಗೋಡೆಯ ಭಾಗದಲ್ಲಿ ಮಿಥುನ ಉಬ್ಬು ಶಿಲ್ಪಗಳನ್ನು ಅಳವಡಿಸಲಾಗಿದೆ. ಗ್ರಾಮದಲ್ಲಿ ಅಂತರ್ಗತವಾಗಿರುವ ರಾಮಲಿಂಗೇಶ್ವರನ ದೇವಾಲಯವಿದೆ. ಗರ್ಭಗೃಹದಲ್ಲಿ ನೀರು ಸದಾ ಜಿನುಗುತ್ತಿರುತ್ತದೆ. ಗರ್ಭಗೃಹ ಹಾಗೂ ನವರಂಗವನ್ನು ಮಾತ್ರ ಹೊಂದಿರುವ ಈ ದೇವಾಲಯದ ಬಾಗಿಲವಾಡಗಳು ಸಾದಾ ರಚನೆಯಿಂದ ಕೂಡಿವೆ. ನವರಂಗದಲ್ಲಿರುವ ಕಂಬಗಳು ಕಲ್ಯಾಣದ ಚಾಲುಕ್ಯರ ಕಾಲದವುಗಳು.

ಸಿದ್ಧಲಿಂಗೇಶ್ವರ ದೇವಾಲಯವು ಪ್ರಾಚೀನವಾದುದು. ಆದರೆ ಅದನ್ನು ಜೀರ್ಣೋದ್ಧಾರ ಮಾಡಲಾಗಿದೆ. ಗರ್ಭಗೃಹ, ಅಂತರಾಳ ಹಾಗೂ ನವರಂಗಗಳಿವೆ. ನವರಂಗದಲ್ಲಿರುವ ಕಂಬಗಳು ಕಲ್ಯಾಣದ ಚಾಲುಕ್ಯರ ಅಂದರೆ ೧೨ನೇ ಶತಮಾನದಲ್ಲಿ ನಿರ್ಮಾಣವಾದವುಗಳು. ಸಿದ್ದೇಶ್ವರ ದೇವರಿಗೆ ದಾನಕೊಟ್ಟ ಉಲ್ಲೇಖಗಳು ಶಾಸನದಲ್ಲಿವೆ.

ಇದೇ ಗುಡಿಯ ಮುಂಭಾಗದಲ್ಲಿ ಈಶ್ವರನ ಗುಡಿ ಇದ್ದರೆ, ಹಿಂಭಾಗದಲ್ಲಿ ಪಾಲಕಮ್ಮ ಹಾಗೂ ಮುದಕಮ್ಮ ಎಂಬ ಹೆಸರಿನ ಚಿಕ್ಕ ಗುಡಿಗಳಿವೆ. ಈ ಗುಡಿಗಳನ್ನು ಇತ್ತೀಚೆಗೆ ನಿರ್ಮಿಸಲಾಗಿದೆ. ಆದರೆ ಗುಡಿಯಲ್ಲಿರುವ ಶಿಲ್ಪಗಳು ನೋಡಲಿಕ್ಕೆ ಪ್ರಾಚೀನವಾದವು ಹಾಗೂ ಸುಂದರವಾಗಿವೆ. ಉಮಾ-ಮಹೇಶ್ವರ ಮತ್ತು ವಿಷ್ಣು ಶಿಲ್ಪಗಳು ಇಲ್ಲಿವೆ. ಮತ್ತೊಂದು ಹಳ್ಳದ ದಂಡೆಯ ಮೇಲಿರುವ ನಾಗದಂಪತಿಯ ಶಿಲ್ಪ ಮಾತ್ರ ಅತೀ ಸುಂದರವಾಗಿದೆ. ಅಲ್ಲದೇ ಇದೇ ಸ್ಥಳದಲ್ಲಿರುವ ಸಪ್ತಮಾತೃಕೆಯ ಶಿಲ್ಪವು ಮೋಹಕ ವಾಗಿದೆ. ಇದನ್ನು ಸ್ಥಳೀಯರು ಬಾಣಂತಿಕಲ್ಲು ಎಂದು ಕರೆಯುತ್ತಾರೆ.

ಗ್ರಾಮದಿಂದ ದೂರವಿರುವ ಇನ್ನೊಂದು ಹಳ್ಳದ ಆಚೆಯ ದಂಡೆಯ ಮೇಲೆ ಲಿಂಗಯ್ಯನ ಗುಡಿ ಇದೆ. ಇದನ್ನು ಸ್ಥಳೀಯರು ದಮ್ಮೇತಿ ತೋಟದಲ್ಲಿರುವ ದೇವಾಲಯವೆಂದು ಕರೆಯುತ್ತಾರೆ. ಇದರ ಸಮೀಪದಲ್ಲೇ ಎರಡು ಪುರಾತನ ಬಾವಿಗಳಿವೆ. ಧರ್ಮೇತಿ ತೋಟದಲ್ಲಿರುವ ಬಾವಿಯಂತೂ ತುಂಬಾ ವಿಶಾಲವಾಗಿದ್ದು, ಇಂಥದ್ದೇ ಇನ್ನೊಂದು ಬಾವಿ ಗ್ರಾಮದಲ್ಲಿದೆ. ಅದು ಸಹ ಆಳವಾದ ಸುಂದರವಾದ ಕಟ್ಟಡವಾಗಿದೆ. ಈ ಬಾವಿಯಲ್ಲಿ ಆಳತ್ತೆರ ಅಳತೆಯ ಯಕ್ಷಿಯ ಶಿಲ್ಪವು ಇದ್ದು ಅದು ಬಹು ಸುಂದರವಾಗಿದೆ.

ಶಾಸನಗಳಲ್ಲಿ ಮದಕಿ ಗ್ರಾಮವನ್ನು ಮೇಲ್ದರ್ಕೆ, ಮರ್ದಿರ್ಕೆ ಹಾಗೂ ಮರ್ದಿರುಕೆ ಎಂದು ಕರೆಯಲಾಗಿದೆ. ಇದು ಸಹ ಪ್ರಾಚೀನ ಪ್ರಸಿದ್ಧ ಅಗ್ರಹಾರವಾಗಿತ್ತು. ಕಲ್ಯಾಣ ಚಾಲುಕ್ಯ ಅರಸರುಗಳಾದ ಜಗದೇಕಮಲ್ಲ ಹಾಗೂ ಒಂದನೆಯ ಸೋಮೇಶ್ವರನ ಕಾಲದಲ್ಲಿ ಬಹು ಪ್ರಸಿದ್ಧಿಯನ್ನು ಪಡೆದ ಗ್ರಾಮ ಇದಾಗಿತ್ತು.

ಮಾಚನೂರು

ಇಲ್ಲಿರುವ ಬಸವೇಶ್ವರ ದೇವಾಲಯವು ಪ್ರಾಚೀನ ವಾಗಿದ್ದು. ಅದನ್ನು ಕಾಲಕಾಲಕ್ಕೆ ದುರಸ್ತಿ ಮಾಡುತ್ತಾ ಬರಲಾಗಿದೆ. ಮಾಚನೂರು ಬಸವೇಶ್ವರ ದೇವಾಲಯ ದಲ್ಲಿರುವ ಲಿಂಗವು ಬಹಳ ಸುಂದರವಾಗಿದೆ. ಮೂರು ಹಂತಗಳಲ್ಲಿ ಅಂದರೆ ಕಲಶದ ಮೇಲೆ ಕಲಶ ಇಟ್ಟರೆ ಹೇಗೆ ಕಾಣುತ್ತದೆಯೋ ಹಾಗೆ ಈ ಲಿಂಗವು ಕಾಣಿಸಿಕೊಳ್ಳುತ್ತದೆ. ಇದಕ್ಕೆ ಮೂರು ಹಂತದಲ್ಲೂ ಪಾಣಿಪೀಠವು ಇದೆ. ಇಂಥ ಆಕರ್ಷಕವಾದ ಲಿಂಗವು ಇಡೀ ಯಾದಗಿರಿ ಅಥವಾ ಸಗರನಾಡಿನಲ್ಲಿ ಸಿಗುವುದಿಲ್ಲವೆಂದರೆ ಅತಿಶಯೋಕ್ತಿ ಯಾಗಲಾರದು. ಇದೇ ಗ್ರಾಮದಲ್ಲಿ ಕೆಲವು ತೃಟಿತವಾದ ಬಿಡಿಶಿಲ್ಪಗಳು ಕಂಡುಬಂದಿವೆ. ಅವುಗಳಲ್ಲಿ ಮುಖ್ಯವಾಗಿ ಸಪ್ತಮಾತೃಕೆಯ ಶಿಲ್ಪ, ಮಸಬಪಟ್ಟಿ ಎಂದು ಕರೆಯಲ್ಪಡುವ ಹೊಲದಲ್ಲಿ ವೀರಯೋಧನ ಸುಂದರವಾದ ಶಿಲ್ಪವಿದೆ.

ಶಿರವಾಳ

ಭೀಮಾನದಿಯ ಬಲದಂಡೆಯ ಮೇಲಿರುವ ಶಿರವಾಳ ಗ್ರಾಮವು ತಾಲೂಕು ಕೇಂದ ಶಹಾಪುರ ಪಟ್ಟಣದಿಂದ ಸುಮಾರು ೧೦ ಕಿ.ಮೀ. ದೂರದಲ್ಲಿದೆ. ಎಡದಂಡೆಯ ಮೇಲೆ ಇತಿಹಾಸ ಪ್ರಸಿದ್ಧ ಸನ್ನತಿ ಹಾಗೂ ಕಣಗಿನಹಾಳ (ಚಿತ್ತಾಪುರ ತಾಲೂಕು) ಗ್ರಾಮಗಳಿವೆ. ಶಿರವಾಳ ಗ್ರಾಮದಲ್ಲಿರುವ ಶಾಸನ, ದೇವಾಲಯ ಹಾಗೂ ತತ್ಸಸಂಬಂಧಿ ವಿಷಯಗಳ ಕುರಿತು ೧೯ನೇ ಶತಮಾನದ ಮಧ್ಯಭಾಗದಿಂದ ಅಧ್ಯಯನಗಳು ಪ್ರಾರಂಭವಾಗಿವೆ. ಸರ್ ವಾಲ್ಟರ್ ಇಲಿಯೆಟ್, ಎಸ್.ಸಿ. ನಂದಿಮಠ, ಆರ್.ಸಿ. ಹಿರೇಮಠ, ಎಂ.ಎಂ.

ಕಲಬುರ್ಗಿ, ಹನುಮಾಕ್ಷಿ ಗೋಗಿ, ಎಂ.ಎಸ್. ನಾಗರಾಜ ರಾವ್, ಎಸ್. ರಾಜಶೇಖರ, ಕೆ.ವಿ. ಸೌಂದರರಾಜನ್ ಹಾಗೂ ಎಸ್.ಕೆ. ಅರುಣಿ ಅವರು ಈ ಪ್ರಾಚೀನ ಪ್ರಸಿದ್ಧ ಪಟ್ಟಣ ದಲ್ಲಿರುವ ದೇವಾಲಯಗಳು, ಶಿಲ್ಪಗಳು ಹಾಗೂ ಶಾಸನಗಳ ಕುರಿತು ಹೊಸಬೆಳಕನ್ನು ಹರಿಸುವ ಪ್ರಯತ್ನ ಮಾಡಿದ್ದಾರೆ (ಶಿರವಾಳ, ಪುಟ.೧). ಆದರೆ ಈ ಗ್ರಾಮದಲ್ಲಿರುವ ಪ್ರತಿ ವಿವರಗಳನ್ನು ವಿಸ್ತೃತವಾಗಿ ಅಧ್ಯಯನ ಮಾಡಿದ ಕೀರ್ತಿ ಸಿ.ಎಸ್. ಪಾಟೀಲ ಹಾಗೂ ಬಾಲಸುಬ್ರಹ್ಮಣ್ಯ ಅವರಿಗೆ ಸಲ್ಲುತ್ತದೆ. ರಾಜ್ಯ ಪುರಾತತ್ವ ಇಲಾಖೆಯಿಂದ ೨೦೦೧ರಲ್ಲಿ ಶಿರವಾಳ ಕುರಿತು ವಿಸ್ತಾರವಾದ ಮಾಹಿತಿವುಳ್ಳ ಗ್ರಂಥ ವೊಂದನ್ನು ಇಂಗ್ಲೀಷ್ ಭಾಷೆಯಲ್ಲಿ ಪ್ರಕಟಿಸಿದ್ದಾರೆ. ಅಲ್ಲದೇ ಅವುಗಳಿಗೆ ಸಂಬಂಧಿಸಿದಂತೆ ಸುಂದರವಾದ ಛಾಯಾಚಿತ್ರ ಗಳನ್ನು, ತಲನಕ್ಷೆ ಹಾಗೂ ಇತರೆ ವಿವರಗಳನ್ನು ನೀಡಲಾಗಿದೆ.

ಹತ್ತನೆಯ ಶತಮಾನದ ಮಧ್ಯಾವಧಿಯಿಂದ ಈ ಪಟ್ಟಣದಲ್ಲಿ ದೇವಾಲಯ ಹಾಗೂ ಇತರ ಚಟುವಟಿಕೆಗಳ ನಿರ್ಮಾಣದ ಬಗೆಗೆ ಖಚಿತ ಮಾಹಿತಿಗಳು ಸಿಕ್ಕುತ್ತವೆ. ರಾಷ್ಟ್ರಕೂಟ ಅರಸ ಮೂರನೆಯ ಕೃಷ್ಣನ ಕಾಲಕ್ಕೆ ಸಂಬಂಧಿಸಿದ ಕಿ.ಶ. ೯೫೯ರ ಶಾಸನವು ಈ ಗ್ರಾಮ ಕುರಿತು ಮಾಹಿತಿ ನೀಡುವ ಮೊದಲ ಶಾಸನವಾಗಿದೆ. ಶಿರವಾಳದಲ್ಲಿ ಕಂಡುಬಂದಿರುವ ನಲವತ್ತಾರು ಸ್ಮಾರಕಗಳಲ್ಲಿ ಮುವತ್ತನಾಲ್ಕು ದೇವಾಲಯಗಳು, ಐದು ಕಲಾತ್ಮಕವಾದ ಬಾವಿಗಳು ಹಾಗೂ ಏಳು ಕೋಷ್ಠಾಗೃಹ ಅಥವ ಮಠಗಳು ಕಂಡುಬಂದಿವೆ. ಅವುಗಳಲ್ಲಿ ಹೆಚ್ಚಿನವು ಶೈವಪಂಥಕ್ಕೆ ಸೇರಿದವುಗಳಾಗಿದ್ದರೆ ಒಂದೆರಡು ದೇವಾಲಯಗಳು ವೈಷ್ಣವ ಮತ್ತು ಜೈನ ಮತಗಳಿಗೆ ಸಂಬಂಧಿಸಿವೆ.

ಹೆಚ್ಚಿನ ಸಂಖ್ಯೆಯಲ್ಲಿರುವ ಬಹುತೇಕ ದೇವಾಲಯಗಳು ರಾಷ್ಟ್ರಕೂಟ ಕಾಲಾವಧಿಯಲ್ಲಿ ರಚನೆಗೊಂಡಂಥವು. ಆ ನಂತರ ಕಲ್ಯಾಣದ ಚಾಲುಕ್ಯರ ಹಾಗೂ ವಿಜಯನಗರ ಆಡಳಿತಾ ವಧಿಯಲ್ಲಿ ಒಂದೆರಡು ದೇವಾಲಯಗಳು ನಿರ್ಮಾಣ ವಾಗಿರುವ ಕುರುಹುಗಳಿವೆ. ಶಿರವಾಳ ಗ್ರಾಮದಲ್ಲಿ ಮುಖ್ಯವಾಗಿ ನಾದಯ್ಯ, ನನ್ನಯ್ಯ, ಕದಂಬೇಶ್ವರ, ಈಶ್ವರ, ಕುಂಬಾರಗುಡಿ, ಮಲ್ಲಿಕಾರ್ಜುನ, ಸಿದ್ದೇಶ್ವರ, ಜೋಡಿ ಹನುಮಂತ ಹಾಗೂ ಜೈನ ದೇವಾಲಯಗಳಿವೆ. ಅಲ್ಲದೇ ಹೆಸರಿಲ್ಲದ ಗುಡಿಗಳು ಹಾಗೂ ಕೋಷ್ಠವಿಗ್ರಹಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಪ್ರಾಚೀನ ಕಾಲದಲ್ಲಿಯೇ ನಿರ್ಮಾಣವಾದ ಕಲಾತ್ಮಕ ಬಾವಿಗಳು ಶಿರವಾಳ ಗ್ರಾಮದ ಸಾಂಸ್ಕೃತಿಕ ಪರಂಪರೆಗೆ ಮುಕುಟಪ್ರಾಯದಂತಿವೆ. ಸೋಜಿಗ ಪಡುವಷ್ಟು ಈ ಗ್ರಾಮದಲ್ಲಿ ಬಾವಿಗಳು ನಿರ್ಮಾಣವಾಗಿವೆ. ಅಳಿದುಳಿದ ಕೆಲವು ಬಾವಿಗಳು ಅಲ್ಲಿರುವ ದೇವಾಲಯದಷ್ಟೇ ಸುಂದರವಾಗಿ ನಿರ್ಮಾಣವಾಗಿವೆ. ಅವುಗಳ ಗೋಡೆಗಳ ಭಾಗಗಳಲ್ಲಿ ಪಂಚತಂತ್ರ, ರಾಮಾಯಣ ಮತ್ತು ಮಹಾಭಾರತ ಪ್ರಸಂಗಗಳನ್ನು ಅತ್ಯಂತ ಮನಮೋಹಕವಾಗಿ ಕೆತ್ತಲಾಗಿದೆ. ರಾಷ್ಟ್ರಕೂಟರ ಕಾಲದ ಉತ್ಕೃಷ್ಟ ಶೈಲಿಯು ಇಲ್ಲಿನ ದೇವಾಲಯಗಳಲ್ಲಿಯೂ ಪ್ರವೇಶಿಸಿದೆ. ಅಲಂಕಾರಿಕವಾದ ಅಧಿಷ್ಠಾನ, ಹೊರಗೋಡೆಗಳು, ಶಿಖರದ ಭಾಗಗಳು ಹಾಗೂ ಕಂಬಗಳನ್ನು ಮನಮೋಹಕವಾಗಿ ಕೆತ್ತಲಾಗಿದೆ. ಅಧಿಷ್ಠಾನದಲ್ಲಿ ಉಪಪೀಠವು ಸಹ ಅಳವಡಿಕೆಯಾಗಿದೆ (ಶಿರವಾಳ, ಪುಟ ೧೪೭). ರಾಷ್ಟ್ರಕೂಟ ಆಡಳಿತದಲ್ಲಿಯೇ ನಿರ್ಮಾಣವಾಗಿರುವ ನನ್ನಯ್ಯ ಮತ್ತು ನಾದಯ್ಯ ಮತ್ತು ಮಲ್ಲಿಕಾರ್ಜುನ ಗುಡಿಗಳ ಭಾಗಗಳು ಹೆಚ್ಚಿನ ಕಲಾತ್ಮಕತೆಯಿಂದ ಕೂಡಿವೆ. ಹನ್ನೆರಡನೆಯ ಶತಮಾನದಲ್ಲಿ ನಿರ್ಮಾಣವಾಗಿರುವ ಸಿದ್ದೇಶ್ವರ ಅಥವ ಸಿದ್ಧಶಾಂತೇಶ್ವರ ದೇವಾಲಯವಂತೂ ರೂಪುಗೊಂಡಿದೆ. ನಾಲ್ಕೂ ಕಡೆಗು ಮುಖ ಮಾಡಿರುವ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮಂಟಪ ಅಥವ ಸಭಾಮಂಟಪಗಳನ್ನೊಳಗೊಂಡಿದ್ದು, ಮಧ್ಯಭಾಗದಲ್ಲಿ ಮುಖ್ಯಗರ್ಭಗೃಹವನ್ನು ನಿರ್ಮಿಸಲಾಗಿದೆ. ಈ ತರಹದ ರಚನೆಗೆ "ಸರ್ವತೋಭದ್ರ" ಪ್ರಕಾರದ ದೇವಾಲಯವೆಂದು ಕರೆಯಲಾಗುತ್ತದೆ. ಈ ದೇವಾಲಯ ದಲ್ಲಿರುವ ಗರ್ಭಗೃಹ, ಅಂತರಾಳ ಹಾಗೂ ನವರಂಗದ ಬಾಗಿಲವಾಡಗಳು ಅತ್ಯಂತ ಕಲಾತ್ಮಕವಾಗಿ ಮೂಡಿಬಂದಿವೆ. ಪಂಚಪಟ್ಟಿಕೆಗಳನ್ನೊಳಗೊಂಡ ಈ ಬಾಗಿಲವಾಡಗಳು ಪೇದ್ಯ(ಕೆಳ)ಭಾಗದಲ್ಲಿ ದ್ವಾರಪಾಲಕ ಉಬ್ಬುಶಿಲ್ಪಗಳನ್ನು ಹೊಂದಿವೆ. ಉತ್ತರಾಂಗದ ಭಾಗವು ಮುಂಚಾಚಿದ್ದು ಅದು ಸಹ ವಿಶೇಷ ಕೆತ್ತನೆಗಳಿಂದ ಕೂಡಿವೆ.

ಸಿದ್ದೇಶ್ವರ ದೇವಾಲಯದಲ್ಲಿರುವ ಕಂಬಗಳನ್ನು ಸೂಕ್ಷ್ಮ ಕೆತ್ತನೆಯ ಉಬ್ಬುಶಿಲ್ಪಗಳಿಂದ ಉತ್ಕೃಷ್ಟಗೊಳಿಸಲಾಗಿದೆ. ಕಂಬದ ಪ್ರತಿಭಾಗದಲ್ಲಿ ಇಂಥ ಶಿಲ್ಪಗಳನ್ನು ಕೆತ್ತಿರುವುದು ನಿರ್ಮಾತೃವಿನ ಕೌಶಲ್ಯಕ್ಕೆ ಹಿಡಿದ ಕೈಗನ್ನಡಿಯಂತಿವೆ. ಸಗರನಾಡಿನಲ್ಲಿ ಕಂಡುಬರುವ ಯಾವುದೇ ದೇವಾಲಯಗಳಲ್ಲಿ ಬಹುಶಃ ಇಷ್ಟು ಮನಮೋಹಕವಾಗಿ ಕೆತ್ತಿರುವ ಕಂಬಗಳು ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಈ ದೇವಾಲಯ ವನ್ನು ಸ್ವತಃ ರೇವಣಸಿದ್ದರೆ ಕಟ್ಟಲು ಕಾರಣಕರ್ತರು ಎಂಬ ಶಾಸನ ಉಲ್ಲೇಖವಿದೆ. ಆದರೆ, ಉಲ್ಲೇಖಿತ ರೇವಣಸಿದ್ಧರು ಯಾರು? ಯಾವ ಕಾಲದವರು ಎಂಬ ಜಿಜ್ಞಾಸೆಗಳು ವಿದ್ವಾಂಸ ವಲಯದಲ್ಲಿ ಹಾಗೇ ಉಳಿದುಕೊಂಡಿವೆ.

ಶಿರವಾಳ ಗ್ರಾಮದಲ್ಲಿ ಪ್ರತಿ ದೇವಾಲಯಗಳಿಗೆ ಹೊಂದಿಕೊಂಡಂತೆ ಕೋಷ್ಠವಿಗ್ರಹಗಳು ಅಥವಾ ಮಠಗಳು ರಚನೆಯಾಗಿವೆ. ಪ್ರಾಚೀನ ಶಿರವಾಳ ಕೇವಲ ವ್ಯಾಪಾರಿ

ಪಟ್ಟಣ ಮಾತ್ರವಾಗಿರದೇ ಆ ಕಾಲದ ಅಗ್ರಹಾರ ಮತ್ತು ಘಟಿಕಾಸ್ಥಾನವನ್ನೊಳಗೊಂಡ ಪ್ರಸಿದ್ಧ ವಿದ್ಯಾಪ್ರಸಾರದ ಮುಖ್ಯ ಕೇಂದ್ರವು ಆಗಿತ್ತು. ಎಳಮೇಲು ಹಾಗೂ ಮುದನೂರಿನ ಸಿಂಹ ಪರ್ಷಗೆ(ಅಭಿನವ ಪಾಶುಪತ)ಕ್ಕೆ ಸಂಬಂಧಿಸಿದ ಗುರುಗಳ ಹಾಗೂ ಅವರ ಶಿಷ್ಯ-ಪ್ರಶಿಷ್ಯರ ಪ್ರಭಾವವು ಶಿರವಾಳದ ಮೇಲೆ ಆಗಿರಬಹುದೆಂದು ಊಹಿಸಬಹುದಾಗಿದೆ.

ಶಿರವಾಳ ಗ್ರಾಮದಲ್ಲಿನ ಬಾವಿಗಳನ್ನು ಇಲ್ಲಿರುವ ದೇವಾಲಯಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಉಬ್ಬುಶಿಲ್ಪಗಳಿಂದ ಅಲಂಕರಣಗೊಳಿಸಲಾಗಿದೆ. ವಿಶೇಷವಾಗಿ ಪಂಚತಂತ್ರ, ರಾಮಾಯಣ ಹಾಗೂ ಮಹಾಭಾರತದ ಸನ್ನಿವೇಶಗಳನ್ನು ಕಲಾತ್ಮಕವಾಗಿ ಚಿತ್ರಿಸಲಾಗಿದೆ.

ಸಗರ

ಸಗರ ಗ್ರಾಮವು ಶಹಾಪುರ ಪಟ್ಟಣದಿಂದ ಸುಮಾರು ೧೨ ಕಿ.ಮೀ. ದೂರದಲ್ಲಿದೆ. ಈ ಹೆಸರಿನ ಕುರಿತು ಹಲವು ಜಿಜ್ಞಾಸೆಗಳು ಹಾಗೂ ಚರ್ಚೆಗಳು ವಿದ್ವಾಂಸರಲ್ಲಿ ಈವರೆಗೂ ಉಳಿದುಕೊಂಡು ಬಂದಿವೆ. ಸಗರನಾಡಿನ ಮುಖ್ಯಕೇಂದ್ರ ಪ್ರಸ್ತುತ ಸಗರ ಗ್ರಾಮವೇ ಆಗಿತ್ತು ಎಂಬ ಅಭಿಪ್ರಾಯವಿದೆ (ಗುಲ್ಬರ್ಗಾ ಗ್ಯಾಜಿಟಿಯರ್). ಅಲ್ಲದೆ, ಕೆಲವರು ಪ್ರಸ್ತುತ ಶಹಾಪುರ ಪಟ್ಟಣದಲ್ಲಿರುವ ಹಳೇಸಗರ ಎಂಬ ಪ್ರದೇಶ ಇದರ ಕೇಂದ್ರ ಸ್ಥಾನವಾಗಿತ್ತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಸಗರ ಗ್ರಾಮದಲ್ಲಿ ಪ್ರಾಚೀನ ದೇವಾಲಯಗಳಿದ್ದವು ಎಂಬ ಬಗೆಗೆ ಕೆಲವು ಕುರುಹುಗಳು ಅದೇ ಗ್ರಾಮದಲ್ಲಿರುವ ತಾಜುದ್ದೀನ್ ಫತೆಹ ಮುನಾವರ್ ಬಾದಾಷಾನ್ ದರ್ಗಾದ ಮುಂಭಾಗದಲ್ಲಿ ಬಿದ್ದಿರುವುದನ್ನು ಕಾಣುತ್ತೇವೆ. ಕೆಲವು ತೃಟಿತವಾದ ಕಂಬಗಳು ಇಲ್ಲಿ ಬಿದ್ದಿವೆ. ಇವುಗಳ ರಚನಾ ವಿನ್ಯಾಸವನ್ನು ಗಮನಿಸಿದಾಗ ಇವು ಕಲ್ಯಾಣ ಚಾಲುಕ್ಯ ಕಾಲದವುಗಳೆಂದು ಅಭಿಪ್ರಾಯಿಸಬಹುದಾಗಿದೆ. ಇವುಗಳನ್ನು ಹೊರತುಪಡಿಸಿದರೆ ಹೆಚ್ಚಿನ ಕುರುಹುಗಳು ಸಿಗುವುದಿಲ್ಲ. ಆದರೆ ಸಗರ ಗ್ರಾಮದಲ್ಲಿ ಹತ್ತಾರು ದರ್ಗಾಗಳು ರಚನೆಯಾಗಿವೆ. ಖಿಲ್ಜಿಯ ಸೈನದೊಂದಿಗೆ ಅಂದರೆ ಮಲ್ಲಿಕಾಫರನು ದ್ವಾರಸಮುದ ಹಾಗೂ ಮಧುರೈ ಮೇಲೆ ದಾಳಿ ಮಾಡಿದ ಸಂದರ್ಭದಲ್ಲಿ ಪ್ರಾಚೀನ ಪ್ರಸಿದ್ಧ ಸಗರದ ಮೇಲೂ ದಾಳಿ ಮಾಡಿ ಸ್ವಲ್ಪ ದಿನಗಳ ಕಾಲ ಇಲ್ಲಿ ತಂಗಿದ್ದ. ಆ ಸಂದರ್ಭದಲ್ಲಿ ಈತನ ಸೈನ್ಯದ ಜೊತೆಗೆ ಸರ್ಮಸ್ತರ ಎಂಬ ಸೇನಾನಾಯು ಬಂದಿದ್ದ. ಅವನು ಕೇವಲ ಸೈನಿಕನಾಗಿರದೇ ಸೂಫಿಸಂತನು ಆಗಿದ್ದ. ಖಿಲ್ಜಿಯ ಸೈನ್ಯ ತನ್ನ ಕಾರ್ಯವನ್ನು ಅಚ್ಚುಕಟ್ಟಾಗಿ ಮುಗಿಸಿ ಹೋದ ನಂತರವು ಸರ್ಮಸ್ತರನು ವಾಪಸ್ಸು ಹೋಗದೇ ಇಲ್ಲಿಯೇ ನೆಲೆನಿಂತನು. ಕರ್ನಾಟಕದಲ್ಲಿಯೇ ಶಾಶ್ವತವಾಗಿ ನೆಲೆನಿಂತ ಮೊದಲ ಸೂಫಿ ಎಂದು ವಿದ್ವಾಂಸರಾದ ಈಟನ್ ಅವರು ಅಭಿಪ್ರಾಯಿಸುತ್ತಾರೆ. ಈತನ ಗೌರವಾರ್ಥವಾಗಿ ಕಿ.ಶ. ೧೫ನೇ ಶತಮಾನದಲ್ಲಿ ಕೊತ್ವಾಲ್ ಮುಬಾರಕ್‌ನು ದರ್ಗಾವೊಂದನ್ನು ಗ್ರಾಮದ ಹೊರಭಾಗದಲ್ಲಿ ಕಟ್ಟಿಸಿದನು. ದರ್ಗಾಕ್ಕೆ ಹೈದ್ರಾಬಾದ್-ಕರ್ನಾಟಕದ ಹಾಗೂ ದೇಶದ ಬೇರೆ ಬೇರೆ ಸ್ಥಳಗಳಲ್ಲಿರುವ ಭಕ್ತರು ವರ್ಷಕ್ಕೆ ಒಮ್ಮೆ ಬಂದು ತಮ್ಮ ಹರಕೆ ತೀರಿಸಿ ಹೋಗುವ ಸಂಪ್ರದಾಯ ವಿದೆ. ಈ ದರ್ಗಾ ಮಾತ್ರವಲ್ಲದೇ ಅಷೂರ್‌ಖಾನಾ, ತಾಜುದ್ದೀನ್ ಷೇಕ ಮುನಾವರ್ ಬಾದಾಷನ ದರ್ಗಾಗಳಿವೆ. ಅಲ್ಲದೇ ವಿಜಾಪುರ ಆದಿಲ್‌ಷಾಹಿಗಳ ಕಾಲದಲ್ಲಿ ಜುಮ್ಮಾಮಸೀದಿ, ಮಹಲ್‌ರೋಜಾ ಹಾಗೂ ಐದು ಗುಮ್ಮಟಗಳನ್ನು ಸಗರದಲ್ಲಿ ನಿರ್ಮಾಣ ಮಾಡಲಾಯಿತು.

ಇಲ್ಲಿರುವ ಎಲ್ಲಮ್ಮನ ಗುಡಿಯು ಬಹಳ ಪ್ರಸಿದ್ಧಿ ಪಡೆದಿದೆ. ಈ ಕ್ಷೇತ್ರವು ಸವದತ್ತಿ ಎಲ್ಲಮ್ಮನ ಕ್ಷೇತ್ರದಷ್ಟೇ ಮಹತ್ವ ಪಡೆದಿದೆ. ಇಲ್ಲಿ ಎರಡು ಗರ್ಭಗೃಹಗಳಿದ್ದು ಒಂದನ್ನು ಸ್ಪೃಶ್ಯ ಜಾತಿಯ ಜನರು ಪೂಜಿಸಿದರೆ ಇನ್ನೊಂದನ್ನು ಅಸ್ಪೃಶ್ಯ ಜಾತಿಯ ಜನರು ಮಾತ್ರ ಪೂಜಿಸುತ್ತಾರೆ. ಸಗರಕ್ಕೆ ಸಂಬಂಧಿಸಿದಂತೆ ಸುಮಾರು ೩೦ಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಶಾಸನಗಳು ಕಂಡುಬಂದಿವೆ. ಅವುಗಳಲ್ಲಿ ಹೆಚ್ಚಿನವು ಅರೇಬಿಕ್ ಭಾಷೆಯಲ್ಲಿವೆ. ಸಗರ ಗ್ರಾಮವು ಬ್ರಿಟಿಷ್ ಆಡಳಿತ ಕಾಲಾವಧಿಯವರೆಗೂ ತುಂಬಾ ಮಹತ್ವವನ್ನು ಪಡೆದಿತ್ತು. ಔರಂಗಜೇಬನ ಕಾಲದಲ್ಲಿ ಇಲ್ಲೊಂದು ಟಂಕಶಾಲೆಯನ್ನು ಸಹ ಸ್ಥಾಪಿಸಲಾಗಿತ್ತು.

ಸಂಗಮ

ಭಾರತ ದೇಶದ ಎರಡು ಪ್ರಮುಖ ನದಿಗಳಾದ ಕೃಷ್ಣಾ ಮತ್ತು ಭೀಮಾ ಒಂದಕ್ಕೊಂದು ಸೇರುವ ಈ ಸ್ಥಳವನ್ನು ರೂಢಿಗತದಲ್ಲಿ ಸಂಗಮವೆಂದು ಕರೆಯಲಾಗುತ್ತದೆ. ಇದು ಸಹ ಶಹಾಪುರ ಪಟ್ಟಣದಿಂದ ಸುಮಾರು ೫೦ ಕಿ.ಮೀ. ದೂರದಲ್ಲಿದೆ. ಎರಡು ಬೃಹತ್ ನದಿಗಳು ಸೇರುವ ನಯನ ಮನೋಹರವಾದ ಸ್ಥಳದಲ್ಲಿ ಭವ್ಯವಾದ ದೇವಾಲಯವನ್ನು ಹನ್ನೆರಡನೆಯ ಶತಮಾನದಲ್ಲಿ ಕಟ್ಟಲಾಯಿತು. ಮೊದಲಿನಷ್ಟೇ ಸುಂದರವಾಗಿ ಇತ್ತೀಚಿನ ವರ್ಷಗಳಲ್ಲಿ ಮರುನಿರ್ಮಿಸಲಾಗಿದೆ. ಸಂಗಮೇಶ್ವರ ಅಥವ ಸಂಗಮನಾಥನೆಂಬ ಹೆಸರಿನ ಈ ದೇವಾಲಯವು, ಕಲಾಸೌಂದರ್ಯಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ. ಸಗರನಾಡಿನ ಏವೂರ, ಕೆಂಭಾವಿ, ಶಿರವಾಳ ಹಾಗೂ ಹಗರಟಗಿ ಗ್ರಾಮಗಳಲ್ಲಿರುವ ಕೆಲವು ದೇವಾಲಯಗಳನ್ನು ಹೊರತುಪಡಿಸಿದರೆ ಈ ದೇವಾಲಯವು ಆಕಾರ ಮತ್ತು ಭವ್ಯತೆಯಲ್ಲಿ ಮೊದಲ ಸ್ಥಾನದಲ್ಲಿ ನಿಲ್ಲುತ್ತದೆ.

ದೇವಾಲಯವು ಗರ್ಭಗೃಹ, ಅಂತರಾಳ ಹಾಗೂ ತೆರದ ನವರಂಗವನ್ನು ಹೊಂದಿದೆ. ನವರಂಗದ ಪ್ರವೇಶದಲ್ಲಿ ಕಕ್ಷಾಸನ ನಿರ್ಮಿಸಲಾಗಿದೆ. ಈ ದೇವಾಲಯದಲ್ಲಿರುವ ಬಾಗಿಲವಾಡಗಳು ಪಂಚಪಟ್ಟಿಕೆಯಿಂದ ಕೂಡಿದ್ದು, ಉತ್ತರಾಂಗದ ಭಾಗದಲ್ಲಿ ಶಿಖರ ಪಟ್ಟಿಕೆಗಳನ್ನು ಕೆತ್ತಲಾಗಿದೆ. ದೇವಾಲಯದಲ್ಲಿರುವ ಕಂಬಗಳಂತೂ ಬೃಹತ್ ಗಾತ್ರದ ಆಕಾರ ಪಡೆದಿದ್ದು, ಅವು ಬುಡದಲ್ಲಿ ಚೌಕಾಕಾರವಾಗಿದ್ದು, ಅವುಗಳ ನಾಲ್ಕು ಭಾಗದಲ್ಲಿ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ದಂಡಾಗ್ರ ಭಾಗವನ್ನು ತುಂಬಾ ನಯವಾದ ಕುಸುರಿನ ಕಲೆಯಿಂದ ಸುಂದರಗೊಳಿಸಲಾಗಿದೆ. ನವರಂಗದಲ್ಲಿ ಒಂಭತ್ತು ಭುವನೇಶ್ವರಿಗಳನ್ನು ನಿರ್ಮಿಸಲಾಗಿದ್ದು, ಮಧ್ಯದ ಭುವನೇಶ್ವರಿಯ ಭಾಗವಂತೂ ನಯನ ಮನೋಹರವಾಗಿದೆ. ಕಮಲ ಪುಷ್ಪ ಅಲಂಕರಣೆಯ ಭುವನೇಶ್ವರಿ ಕೆತ್ತನೆಯೂ ಕಲಾ ಸಿರಿವಂತಿಕೆಗೆ ಹೇಳಿ ಮಾಡಿಸಿದಂತಿದೆ.

ಹೊರಗೋಡೆಯ ಭಾಗವು ಸರಳ ರಚನೆಯದ್ದು. ಕಾರಣ ಇದನ್ನು ಬಿಚ್ಚಿ ಕಟ್ಟಿದ್ದರಿಂದ ಹೊಸ ಗೋಡೆಯನ್ನು ನಿರ್ಮಿಸಲಾಗಿದೆ. ಅಧಿಷ್ಠಾನವು ಉಪಾನ, ಜಗತಿ, ತ್ರಿಪಟ್ಟಕುಮುದ, ಗಳ ಹಾಗೂ ಕಪೋತ ಭಾಗಗಳನ್ನು ಹೊಂದಿದೆ. ಮುಂಭಾಗದಲ್ಲಿರುವ ಶಿಲ್ಪಗಳಲ್ಲಿ ಗಜಲಕ್ಷ್ಮಿ ಹಾಗೂ ವಿವಿಧ ಭಂಗಿಯಲ್ಲಿರುವ ನಾಗಶಿಲ್ಪಗಳು ಮುಖ್ಯವಾಗಿವೆ.

ಈ ದೇವಾಲಯವು ಭೈರವನಿಗೆ ಸಂಬಂಧಿಸಿದ ದೇವಾಲಯವಾಗಿದ್ದಿರಬಹುದು. ಇದಕ್ಕೆ ಪುಷ್ಟಿದಾಯಕ ಅಂಶವೆಂಬಂತೆ ಈ ದೇವಾಲಯದ ನವರಂಗದಲ್ಲಿರುವ ಕಂಬವೊಂದರಲ್ಲಿ ಸುಂದರವಾದ ಮಹಾಕಾಳ ಅಥವಾ ಭೈರವನ ಉಬ್ಬುಶಿಲ್ಪವಿದೆ. ಚಾಮುಂಡಿ ಅಥವ ಭದ್ರಕಾಳಿಗೆ ಇಲ್ಲೊಂದು ಗುಡಿಯನ್ನು ನಿರ್ಮಿಸಲಾಗಿದೆ. ಕಟ್ಟಡ ಮತ್ತು ಮೂರ್ತಿಶಿಲ್ಪವು ಇತ್ತೀಚಿನದು. ಪ್ರಾರಂಭದಲ್ಲಿ ನಾಥ ಸಂಪ್ರದಾಯಕ್ಕೆ ಸಂಬಂಧಪಟ್ಟಿದ್ದ ಈ ದೇವಾಲಯವು ಕಾಲಾನಂತರ ಲಾಕುಳ ಶೈವಾಗಮವನ್ನು ಅನುಸರಿಸುವ ಕಾಳಾಮುಖ ಪರಂಪರೆಗೆ ಬದಲಾಗಿರಬಹುದು. ಅಲ್ಲದೇ ಈ ದೇವಾಲಯದ ಚಟುವಟಿಕೆಗಳ ಮೇಲೆ ಎಳಮೇಲು ಸಿಂಹಪರ್ಷೆಯ ಅಥವ ಅಭಿನವ ಪಾಶುಪತರ ಬಹುತೇಕ ಪ್ರಭಾವವು ಆಗಿರಬಹುದೆಂದು ಊಹಿಸಬಹುದು.

ಈ ದೇವಾಲಯದ ಪ್ರಭಾವವು ಸುತ್ತಲಿರುವ ಗ್ರಾಮಗಳನ್ನು ಸೋಂಕಿಸಿವೆ. ಸಿಕ್ಕಿರುವ ಶಾಸನಗಳು ಇದಕ್ಕೆ ಸ್ಪಷ್ಟ ಆಧಾರಗಳನ್ನು ನೀಡುತ್ತವೆ. ಸಂಗಮನಾಥನ ದೇವಾಲಯವು ಕೇವಲ ಪೂಜೆ ಪುನಸ್ಕಾರಗಳಿಗೆ ಸಂಬಂಧಿಸಿದಂತೆ ಮಾತ್ರ ತನ್ನ ಪಾತ್ರವನ್ನು ನಿರ್ವಹಿಸಿಲ್ಲ. ಅದು ಆ ಕಾಲದಲ್ಲಿ ಪ್ರಸಿದ್ಧಿ ಪಡೆದ ಬಹುಮುಖ್ಯ ವಿದ್ಯಾಕೇಂದ್ರವಾಗಿತ್ತು.

ಹನ್ನೆರಡನೆಯ ಶತಮಾನದಲ್ಲಿ ಸಾಮಾಜಿಕ ಕ್ರಾಂತಿಯ ಹರಿಕಾರನಾಗಿ ಶ್ಲಾಘನೀಯ ಕಾರ್ಯ ಮಾಡಿದ ಬಸವೇಶ್ವರರು ಕೃಷ್ಣಾ ಮತ್ತು ಭೀಮಾ ನದಿ ಕೂಡುವ ಸ್ಥಳದಲ್ಲಿ ಐಕ್ಯವಾದರು ಎಂಬ ಅಭಿಪ್ರಾಯಗಳು ಸಹ ಬಹಳ ಕಾಲದವರೆಗೂ ವಿದ್ವಾಂಸ ವಲಯದಲ್ಲಿತ್ತು.

ಹಯ್ಯಾಳ ಬಿ.

ಈ ಗ್ರಾಮವು ಪ್ರಾಚೀನ ಪ್ರಸಿದ್ಧಿಯನ್ನು ಪಡೆದಿತ್ತು. ಸಾವುಕಾರ ಓಣಿಯಲ್ಲಿರುವ ರಾಮಲಿಂಗೇಶ್ವರ, ಗ್ರಾಮದ ನಡುವೆ ಇರುವ ಈಶ್ವರ, ಗ್ರಾಮದ ಹೊರಭಾಗದಲ್ಲಿರುವ ಅಯ್ಯಾಳಲಿಂಗೇಶ್ವರ ಸ್ಮಾರಕಗಳು ಈ ಊರಿಗೆ ಹೆಚ್ಚಿನ ಮಹತ್ವವನ್ನು ತಂದುಕೊಟ್ಟಿವೆ. ಇದೇ ಗ್ರಾಮದಲ್ಲಿರುವ ಹನುಮಂತನ ಗುಡಿಯ ಮುಂಭಾಗದಲ್ಲಿ ಪ್ರಾಚೀನವಾಗಿರುವ ಸುಂದರ ಶಿಲ್ಪಗಳು ಸಂಸ್ಕೃತಿ ಅಧ್ಯಯನಕಾರರ ಗಮನವನ್ನು ಸೆಳೆಯದೇ ಇರಲಾರವು.

ಸಗರನಾಡಿನ ವಾಸ್ತುಶಿಲ್ಪ ಅಧ್ಯಯನದ ಸಂದರ್ಭದಲ್ಲಿ ಪರಿಗಣಿಸಲ್ಪಡಬಹುದಾದ ಕೆಲವೇ ಕೆಲವು ಸ್ಮಾರಕಗಳಲ್ಲಿ ರಾಮಲಿಂಗೇಶ್ವರ ದೇವಾಲಯವು ಒಂದೆನ್ನಬಹುದು. ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖ ಮಂಟಪವನ್ನು ಹೊಂದಿದೆ. ಇಲ್ಲಿರುವ ಬಾಗಿಲವಾಡಗಳು ಅವುಗಳಲ್ಲಿರುವ ಉತ್ತರಾಂಗದ ಭಾಗಗಳು ಹಾಗೂ ಕಂಬಗಳು ಮನಮೋಹಕವಾಗಿ ಕೆತ್ತಲ್ಪಟ್ಟಿವೆ. ನವರಂಗದಲ್ಲಿ ಚೌಕಾಕಾರದ ಕಂಬಗಳು ಹಾಗೂ ದುಂಡನೆಯ ಕಂಬಗಳನ್ನು ಅಳವಡಿಸಲಾಗಿದೆ. ಉತ್ಕೃಷ್ಟವಾಗಿದ್ದ ಈ ಸ್ಮಾರಕವು ಹೆಚ್ಚಿನ ಅನಾದಾರಕ್ಕೆ ಒಳಗಾಗಿ ಅತ್ಯಂತ ದುಸ್ಥಿತಿಗೆ ತಲುಪಿದೆ. ಈಶ್ವರ ದೇವಾಲಯದ ಸ್ಥಿತಿಯು ಇದಕ್ಕಿಂತ ಭಿನ್ನವಾಗಿಲ್ಲ. ಆದರೆ ಇತ್ತೀಚೆಗೆ ಸ್ಥಳೀಯರು ಇದನ್ನು ಜೀರ್ಣೋದ್ಧಾರಗೊಳಿಸಿದ್ದಾರೆ.

ಗ್ರಾಮದಲ್ಲಿರುವ ರಾಮಲಿಂಗೇಶ್ವರನ ಗುಡಿಯಲ್ಲಿ ಭೈರವ, ರಾಜದಂಪತಿ ಶಿಲ್ಪ, ಭಕ್ತರ ಶಿಲ್ಪಗಳು ಹಾಗೂ ಋಷಿಯ ಶಿಲ್ಪ ಕಂಡುಬರುತ್ತವೆ. ಗ್ರಾಮದಲ್ಲಿರುವ ಹನುಮಂತನ ಗುಡಿಯ ಮುಂಭಾಗದಲ್ಲಿ ಕೆಲವು ಶಿಲ್ಪಗಳಿವೆ. ಅವುಗಳಲ್ಲಿ ಮುಖ್ಯವಾದುದು ಎಂದರೆ ಕುದುರೆಯ ಮೇಲೆ ಕುಳಿತ ಭೈರವನ ಪ್ರತಿಮೆ. ಇದು ಬ್ರಹ್ಮಯಕ್ಷನನ್ನು ಹೋಲುತ್ತದೆ ಎಂದು ಅಭಿಪ್ರಾಯಿಸಲಾಗಿದೆ (ಹಕ್ಕಲುತೆನೆ, ಪುಟ.೭೧). ಬಹುಶಃ ಇದು ಮೈಲಾರನಿಗೆ ಸಂಬಂಧಿಸಿದ್ದಾಗಿರಬಹುದು.

ಅಯ್ಯಾಳಲಿಂಗೇಶ್ವರ ದೇವಾಲಯದ ಆವರಣದಲ್ಲಿ ಸುಂದರವಾಗಿ ಕೆತ್ತಲ್ಪಟ್ಟಿರುವ ಕೆಲವು ನಾಗಶಿಲ್ಪಗಳಿವೆ.

ಹಾರಣಗೇರಿ

ಈ ಗ್ರಾಮವು ಸಹ ಪ್ರಾಚೀನ ಪ್ರಸಿದ್ಧ ಗ್ರಾಮವೇ ಆಗಿತ್ತು. ಇಲ್ಲಿ ಪೂರ್ವೇತಿಹಾಸ ಕಾಲದ ಕುರುಹುಗಳು (ಬೂದಿದಿಬ್ಬದ ಅವಶೇಷಗಳು)ಕಂಡುಬಂದಿವೆ. ಗ್ರಾಮದ ಬಸ್‌ನಿಲ್ದಾಣದ ಮುಂಭಾಗದಲ್ಲಿಯೇ ಇರುವ ಬಸವೇಶ್ವರನ ಗುಡಿ ಪ್ರಾಚೀನವಾದುದು. ಆದರೆ ಅದನ್ನು ನವೀಕರಿಸಿ ಕಟ್ಟಲಾಗಿದೆ. ಬಸವೇಶ್ವರನ ಗುಡಿಯ ಮುಂಭಾಗದ ಆಲದ ಮರದ ಕಟ್ಟೆಯ ಮೇಲೆ ಕೆಲವು ಶಿಲ್ಪಗಳಿವೆ. ಅವು ತುಂಬಾ ಮಹತ್ವವಾದವುಗಳು. ಅದರಲ್ಲಿ ಕೌಳ ಸಂಪ್ರದಾಯಕ್ಕೆ ಸಂಬಂಧಿಸಿದ ಶಿಲ್ಪ, ಸಪ್ತಮಾತೃಕೆಯ ಶಿಲ್ಪ ಹಾಗೂ ವೀರಗಲ್ಲು ಶಾಸನಶಿಲ್ಪವನ್ನು ಇಲ್ಲಿಡಲಾಗಿದೆ. ಗ್ರಾಮಕ್ಕೆ ಸಂಬಂಧಿಸಿದ ಶಾಸನಗಳಲ್ಲಿ ಪ್ರಾಚೀನ ಹಾರಣಗೇರಿಯು ಅಗ್ರಹಾರವಾಗಿತ್ತು ಮತ್ತು ಇಲ್ಲೊಂದು ತ್ರೈಪುರುಷ ದೇವಾಲಯ ಇತ್ತು ಎಂಬುದರ ಸೂಚನೆ ನೀಡುತ್ತವೆ.

ಹುರುಸಗುಂಡಗೆ

ಹುರುಸಗುಂಡಗೆಯು ಶಿರವಾಳ, ಸನ್ನತಿ ಹಾಗೂ ಅಣಬಿಯಷ್ಟೇ ಪ್ರಾಚೀನ ಸಂಗತಿಗಳನ್ನು ಒಳಗೊಂಡಿರುವ ಐತಿಹಾಸಿಕ ಗ್ರಾಮ. ಇಡೀ ದಕ್ಷಿಣ ಭಾರತದಲ್ಲಿಯೇ ಪ್ರಥಮ ಎನ್ನಬಹುದಾದ ಗಜಲಕ್ಷ್ಮೀ ಉಬ್ಬುಶಿಲ್ಪವಿರುವುದು ಈ ಗ್ರಾಮದಿಂದ ಪತ್ತೆಯಾಗಿದೆ (ಗುಲ್ಬರ್ಗಾ ಗ್ಯಾಜೆಟಿಯರ್, ಪುಟ.೮೦೭). ಅಲ್ಲದೇ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದ ಶಿಲಾಫಲಕವೊಂದು ಶಾತವಾಹನ ಕಾಲದ್ದು ಎಂಬುದರಲ್ಲಿ ಸಂಶಯವಿಲ್ಲ. ಭೀಮಾನದಿಗೆ ಇತ್ತೀಚೆಗೆ ಕಟ್ಟಿರುವ ಸೇತುವೆಯ ಬಳಿ ಇರುವ ಜಮೀನಿನಲ್ಲಿ ಈ ಫಲಕವಿದೆ. ಇದರಲ್ಲಿ ಹಾರಿದ (ಮೋಕು) ಚಕ್ಕಡಿಯ ಚಿತ್ರವಿದೆ. ಇದು ಏನನ್ನು ಸೂಚಿಸುತ್ತದೆ ಎಂಬುದು ಸ್ಪಷ್ಟವಿಲ್ಲ. ಈ ಗ್ರಾಮದ ಸುತ್ತಲಿರುವ ಜಮೀನುಗಳಲ್ಲಿ ಬೌದ್ಧಪಂಥಕ್ಕೆ ಸಂಬಂಧಿಸಿದ ಕುರುಹುಗಳಿರುವುದನ್ನು ಉಲ್ಲೇಖಿಸಲಾಗಿದೆ (ಗುಲ್ಬರ್ಗಾ ಗ್ಯಾಜೆಟಿಯರ್, ಪು. ೮೦೭). ಗ್ರಾಮದಲ್ಲಿ ಕೆಲವು ದೇವಾಲಯಗಳಿದ್ದು ಅವುಗಳಲ್ಲಿ ಹೆಚ್ಚಿನವು ಜೀರ್ಣೋದ್ಧಾರ ಗೊಂಡಂಥವುಗಳು. ಆದರೆ ಪ್ರಾಚೀನ ಗುಡಿಯ ಅವಶೇಷ ಗಳನ್ನು ಗುಡಿಗಳ ಮುಂಭಾಗದಲ್ಲಿ ಇಡಲಾಗಿದೆ.

ಹುರುಸುಗುಂಡಗಿ ಗ್ರಾಮದಿಂದ ಭೀಮಾನದಿಗೆ ಹೋಗುವ ಮಾರ್ಗದಲ್ಲಿ ಹುಲಸಮ್ಮಾಯಿ ಗುಡಿ ಸಿಗುತ್ತದೆ. ಒಂದೇ ಗರ್ಭಗೃಹವನ್ನು ಹೊಂದಿರುವ ಈ ದೇವಾಲಯದಲ್ಲಿ ಅದ್ಭುತವಾದ ಬಿಡಿಶಿಲ್ಪವೊಂದಿದೆ. ಅದನ್ನು ಹುಲಸಮ್ಮಾಯಿ ಎಂದು ಸ್ಥಳೀಯರು ಕರೆಯುತ್ತಾರೆ. ಆದರೆ ಅದು ನಾಗರಾಜನಿಗೆ ಸಂಬಂಧಿಸಿದ ಶಿಲ್ಪ. ಇಂಥದೊಂದು ಶಿಲ್ಪವು ಸಗರನಾಡಿನ ಗ್ರಾಮಗಳಲ್ಲಿರುವ ಸದ್ಯಕ್ಕೆ ಅಸ್ತಿತ್ವದಲ್ಲಿರುವ ಯಾವ ದೇವಾಲಯಗಳಲ್ಲೂ ಕಂಡುಬರುವುದಿಲ್ಲ. ಸುಮಾರು ಐದು ಅಡಿಗಿಂತ ಎತ್ತರವಾಗಿರುವ ಈ ಶಿಲ್ಪವು ನಾಗರಹಾವಿನ ಬಾಲದೊಂದಿಗೆ ಪ್ರಾರಂಭವಾಗಿ ಮಧ್ಯಭಾಗದಲ್ಲಿ ಮನುಷ್ಯನ ಆಕಾರ ಪಡೆಯುತ್ತಾ ಹೋಗುತ್ತದೆ. ಆತನಗಿರುವ ಕಿರೀಟ ಹಾಗೂ ಅಲಂಕಾರ ಮಾಡಿದ ತುರುಬು ಬಹು ಸುಂದರವಾಗಿ ಮೂಡಿಬಂದಿದೆ. ಬೌದ್ಧ ಧರ್ಮದ ಪ್ರಭಾವವು ಈ ಭಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪ್ರಸಾರದಲ್ಲಿತ್ತು. ಕಾಲಾನಂತರ ಅದು ಕ್ಷೀಣಿಸುತ್ತಾ ಹೋದಾಗ ಅದರ ಪ್ರಭಾವದಿಂದ ನಾಗಶಿಲ್ಪಗಳು ವಿಶೇಷವಾಗಿ ಕಂಡುಬಂದಿವೆ.

ಹೊಸಕೇರಿ

ಹೊಸಕೇರಿಯಲ್ಲಿ ಸುರಪುರ ಅರಸರ ಬೇಸಿಗೆಯ ತಂಗುದಾಣವಿತ್ತು ಎಂಬ ಹೇಳಿಕೆಗಳಿವೆ. ಆ ಸಂದರ್ಭದಲ್ಲಿ ಅವರು ತಂಗಲು ಮಹಲನ್ನು ಕಟ್ಟಿದ್ದರು. ಅದು ಇಂಡೋ-ಇಸ್ಲಾಮಿಕ್ ಮತ್ತು ಬ್ರಿಟಿಷ್ ವಾಸ್ತುಶಿಲ್ಪ ವಿನ್ಯಾಸವನ್ನು ಹೊಂದಿರುವ ಭವ್ಯವಾದ ಕಟ್ಟಡವಾಗಿತ್ತು. ಎತ್ತರದ ದಿಣ್ಣೆ ಹಾಗೂ ಕೆರೆಯ ದಂಡೆಯು ಅದರ ಸೌಂದರ್ಯ ಹಾಗೂ ಸೌಲಭ್ಯಗಳನ್ನು ಇನ್ನಷ್ಟು ಇಮ್ಮಡಿಸಿವೆ. ಇಂಥ ಭವ್ಯವಾದ ಮಹಲ್ ಅನಾಧಾರಕ್ಕೆ ಒಳಗಾಗಿ ಹಾಳು ಬಂಗಲೆಯಂತೆ ಕಾಣುತ್ತಿದೆ.

ಈ ಮೇಲೆ ವಿವರಿಸಿದ ಗ್ರಾಮಗಳಲ್ಲದೇ ಶಹಾಪುರ, ಮುಡಬಾಳ, ಹಾಲಗೇರಿ, ಮರಮಕಲ್, ಅನ್ವರಿ, ಐಕೂರು, ಅನಕಸುಗೂರು, ತಂಗಡಗಿ ಹಾಗೂ ವನದುರ್ಗ ಗ್ರಾಮಗಳಲ್ಲಿಯೂ ಕೆಲವು ಪ್ರಾಚೀನ ದೇವಾಲಯಗಳಿವೆ. ಆದರೆ ಅವು ಹೆಚ್ಚೂಕಡಿಮೆ ನಾಶದ ಅಂಚಿಗೆ ಬಂದು ತಲುಪಿವೆ. ವಾಗಣಗೇರಿ ಹಾಗೂ ವನದುರ್ಗಗಳಲ್ಲಿ ಸುರಪುರ ಅರಸರ ಕಾಲದಲ್ಲಿ ನಿರ್ಮಾಣವಾದ ಭವ್ಯವಾದ ಕೋಟೆಗಳಿವೆ. ಅವು ಸಹ ಅವಜ್ಞೆಗೆ ಒಳಗಾಗಿವೆ. ಈ ಲೇಖನದಲ್ಲಿ ಶಹಾಪೂರ ತಾಲೂಕಿನ ದೇವಾಲಯಗಳ ಬಗೆಗಿರುವ ಮಾಹಿತಿಗಳನ್ನು ಸಂಕ್ಷಿಪ್ತವಾಗಿ ವಿವರಿಸುವ ಹಾಗೂ ಅವುಗಳ ಬಗೆಗೆ ಸಂಶೋಧನೆಯ ಸಾಧ್ಯತೆಯ ಅಭಿಪ್ರಾಯಗಳನ್ನು ದಾಖಲಿಸುವ ಪ್ರಯತ್ನ ಮಾಡಲಾಗಿದೆ. ಇಲ್ಲಿರುವ ದೇವಾಲಯಗಳ ಶಿಲ್ಪಗಳು ಹಾಗೂ ಶಾಸನಗಳ ಬಗೆಗೆ ವಿವರವಾದ ತಲಸ್ಪರ್ಶಿಯ ಅಧ್ಯಯನಗಳ ಅಗತ್ಯತೆ ಇನ್ನೂ ಇದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಗುಲಬರ್ಗಾ ಜಿಲ್ಲಾ ಗ್ಯಾಸೆಟಿಯರ್, ಸಂ. ಪಾಟೀಲ ಎಂ.ಬಿ, ೧೯೯೭, ಕರ್ನಾಟಕ ಸರಕಾರ, ಬೆಂಗಳೂರು.

೨. ಮಾರ್ಗ ಸಂಪುಟಗಳು, ಕಲಬುರ್ಗಿ ಎಂ.ಎಂ. ೨೦೧೨, ಸಪ್ನ ಬುಕ್ ಹೌಸ್, ಬೆಂಗಳೂರು.

೩. ಹೈದರಾಬಾದು ಕರ್ನಾಟಕ ಭಾಗದ ಕನ್ನಡ ಶಿಲಾಶಾಸನಗಳು, ಶಿವಾನಂದ ವಿ, ೧೯೯೨, ಬನಾರಸ ಹಿಂದೂ ವಿಶ್ವವಿದ್ಯಾಲಯ, ವಾರಣಾಸಿ.

೪. ಸುರಪುರ ತಾಲೂಕಿನ ಶಾಸನಗಳು, ಸಂ. ಗೋಗಿ ಹನುಮಾಕ್ಷಿ, ೧೯೯೨, ಶಿವಗಂಗಾ ಪಬ್ಲಿಷರ್ಸ್, ಹುಬ್ಬಳ್ಳಿ.

೫. ಸಗರನಾಡು ದರ್ಶನ, ಸಂ.ಕೃಷ್ಣ ಎ, ೧೯೮೫, ಮಹಾಕವಿ ಲಕ್ಷ್ಮೀಶ ವಚನ ಸಂಘ, ಸುರಪುರ.

೬. ಹಕ್ಕಲುತೆನೆ, ಅಕ್ಕಿ ಡಿ.ಎನ್., ೨೦೧೧, ಕವಿಕುಂಚ ಪ್ರಕಾಶನ, ಗೋಗಿ.

೭. ಜಿನದನ,-ಅಕ್ಕಿ ಡಿ.ಎನ್, ೨೦೧೦, ಪಾವನ ಪ್ರಕಾಶನ, ಗುಲ್ಬರ್ಗಾ

೮. ಶಿರವಾಳ, ಸಂ.ಪಾಟೀಲ ಸಿ.ಎಸ್ ಮತ್ತು ಬಾಲಸುಬ್ರಮಣ್ಯ, ೨೦೦೧, ಡೈರೆಕ್ಟೋರೇಟ್ ಆಫ್ ಆರ್ಕಿಯಾಲಜಿ ಆಂಡ್ ಮ್ಯೂಸಿಯಂ, ಮೈಸೂರು.

೯. ದೇವಾಲಯ ವಾಸ್ತುಶಿಲ್ಪ ಪರಿಚಯ, ಅಪರ್ಣ ಕೂ.ಸ, ೧೯೯೯, ಕವಿವಿ, ಹಂಪಿ.

೧೦. ಕಾಪಾಲೀಕರು ಮತ್ತು ಕಾಳಾಮುಖರು, ಲಾರೆಂಜೆನ್ ಡೆವಿಡ್, (ಅನು: ಕುಲಕರ್ಣಿ ವಿರೂಪಾಕ್ಷ) ೨೦೦೫, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೫೩

ರಾಯಬಾಗ ಪರಿಸರದ ದೇವಾಲಯಗಳು

ಡಾ. ಸಿ.ಎನ್. ಕೋಳಗುಡ್ಡೆ*

ಡಾ. ಎಂ.ಎನ್. ಕೋಳಗುಡ್ಡೆ**

ರಾಯಬಾಗ ಪ್ರದೇಶವು ಹಲವಾರು ಸಮುದಾಯಗಳ ದೇವಾಲಯಗಳು ಪ್ರಾಚೀನ ಮತ್ತು ಆಧುನಿಕ ಕಾಲದಲ್ಲಿ ತನ್ನದೇ ಆದ ಐತಿಹಾಸಿಕ ಮತ್ತು ಚಾರಿತ್ರಿಕ ಅಂಶಗಳಿಂದ ಕಂಡುಬರುತ್ತದೆ. ದೇವಾಲಯಗಳ ವಿವಿಧ ಮುಖಗಳ ವಿಶ್ಲೇಷಣೆಯು ಒಂದು ಕಾಲದ, ಒಂದು ಸಮುದಾಯದ ಧಾರ್ಮಿಕ ರೂಪವನ್ನು ಸ್ಪಷ್ಟಪಡಿಸಿಕೊಳ್ಳಲು ಅನುಕೂಲ ವಾಗಿದೆ. ರಾಯಬಾಗದ ಪರಿಸರ ದೇವಾಲಯಗಳನ್ನು ಅಧ್ಯಯನದ ಅನುಕೂಲಕ್ಕಾಗಿ ಐದು ಭಾಗಗಳಾಗಿ ವಿಂಗಡಿಸಲಾಗಿದೆ.

೧. ಶೈವ ದೇವಾಲಯಗಳು ೨. ವೈಷ್ಣವ ದೇವಾಲಯ ಗಳು ೩. ಜಿನಾಲಯಗಳು ಅಥವಾ ಜೈನ ಬಸದಿಗಳು ೪. ಹಾಲುಮತದ ಸಮುದಾಯದ ದೇವಾಲಯಗಳು ೫. ಇತರೆ ದೇವಾಲಯಗಳು.

ಹೀಗೆ ಐದು ಪ್ರಕಾರದ ದೇವಾಲಯಗಳು ಕಂಡು ಬರುತ್ತವೆ. ಈ ಪ್ರದೇಶದ ದೀರ್ಘಕಾಲದವರೆಗೆ ಅಂದರೆ ಕ್ರಿ.ಶ. ೯೭೩ರಿಂದ ೧೧೮೯ರವರೆಗೆ ಕಲ್ಯಾಣದ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತ್ತು. ಹೀಗಾಗಿ ಅವರ ವಾಸ್ತುಶಿಲ್ಪ ಶೈಲಿಯ ಹಲವು ದೇವಾಲಯಗಳು ಈ ಪ್ರದೇಶದಲ್ಲಿ ನಿರ್ಮಾಣವಾಗಿವೆ. ಅದಕ್ಕೆ ಸಾಕ್ಷಿ ಎಂಬಂತೆ ಇಲ್ಲಿಯ ಪ್ರಸಿದ್ಧ ದೇವಾಲಯಗಳಾದ ಸೋಮನಾಥ, ಸಿದ್ದೇಶ್ವರ ದೇವರ ವಿಗ್ರಹಗಳು ಚಾಲುಕ್ಯರ ಕಲೆಯ ಉತ್ಕೃಷ್ಟತೆಯನ್ನು ಎತ್ತಿ ತೋರಿಸುತ್ತದೆ.

ಸೌದತ್ತಿಯ ರಟ್ಟರ ಆಳ್ವಿಕೆಯಲ್ಲಿ ರಾಯಬಾಗ ಪ್ರದೇಶದಲ್ಲಿ ಅನೇಕ ಜಿನಾಲಯಗಳು ನಿರ್ಮಾಣವಾದವು. ಈ ಜಿನಾಲಯಗಳಲ್ಲಿ ಆದಿನಾಥ ಬಸದಿ, ಮಹಾವೀರ ಬಸದಿ ಪ್ರಮುಖವಾದವುಗಳು.

೧. ಶೈವ ದೇವಾಲಯ

ರಾಯಬಾಗ ಪರಿಸರದಲ್ಲಿ ಶೈವ ಪರಂಪರೆಯುಳ್ಳ ದೇವಾಲಯಗಳು ಕಂಡುಬರುತ್ತವೆ. ಮೂಲತಃ ಜೈನ ದೇವಾಲಯಗಳಿಗಿಂತ ಭಿನ್ನವಾದ ಈ ದೇವಾಲಯಗಳು ತಮ್ಮದೇ ಆದ ತತ್ವಗಳಿಗೆ ಅನುಗುಣವಾಗಿ ನಿರ್ಮಾಣವಾಗಿವೆ. ಇಲ್ಲಿ ಪುರಾತನ ಹಾಗೂ ಆಧುನಿಕ ದೇವಾಲಯಗಳೆರಡು ರಾಯಬಾಗದಲ್ಲಿ ಕಂಡುಬರುತ್ತದೆ. ಅಂತಹ ದೇವಾಲಯ ಗಳಲ್ಲಿ ಸಿದ್ದೇಶ್ವರ ದೇವಾಲಯ, ಸೋಮನಾಥ ದೇವಾಲಯ, ಬಂಕನಾಥ ದೇವಾಲಯ ಪ್ರಮುಖವಾದವು.

೨. ಸಿದ್ದೇಶ್ವರ ದೇವಾಲಯ

ಸಿದ್ದೇಶ್ವರನು ರಾಯಬಾಗ ಗ್ರಾಮದ ದೇವರಾಗಿದ್ದು ರಾಯಬಾಗದ ಪಶ್ಚಿಮ ದಿಕ್ಕಿನಲ್ಲಿ ನಿರ್ಮಾಣಗೊಂಡಿವೆ. ಸಿದ್ದೇಶ್ವರ ದೇವಾಲಯವು ಎತ್ತರವಾದ ಕಟ್ಟೆಯ ಮೇಲೆ ನಕ್ಷತ್ರಾಕಾರದಲ್ಲಿ ನಿರ್ಮಾಣಗೊಂಡಿದ್ದು, ಗರ್ಭಗುಡಿ ಒಳಗೆ ಹೊರಗೆ ಕಮಾನುಗಳನ್ನು ಒಳಗೊಂಡಿದ್ದು, ಮುಖಮಂಟಪಕ್ಕೆ ಮೂರು ಕಡೆಯಿಂದ ಪ್ರವೇಶದ್ವಾರವಿದೆ. ಗರ್ಭಗೃಹದಲ್ಲಿ ಶಿವಲಿಂಗ ನಂದಿ ವಿಗ್ರಹಗಳಿದ್ದು, ಮುಖ್ಯ ಪ್ರವೇಶ ದ್ವಾರದಲ್ಲಿ ನಾಲ್ಕು ಕಂಬಗಳುಳ್ಳ ನಗಾರಿ ಖಾನೆಯಿದೆ. ಇದು ವಿಜಾಪುರದ ಆದಿಲ್ ಷಾಹಿಗಳ ಆಡಳಿತಾವಧಿಯಲ್ಲಿ ನಿರ್ಮಾಣವಾಗಿದೆ. ಈ ದೇವಾಲಯವು ಮಂಟಪ ಹೊಂದಿದ್ದು ಗರ್ಭಗೃಹದಲ್ಲಿ ಲಿಂಗವು ಉತ್ತರಾಭಿಮುಖವಾಗಿ ಪ್ರತಿಷ್ಠಾಪಿತಗೊಂಡಿದೆ.

ವೈಷ್ಣವ ದೇವಾಲಯ

ವೈಷ್ಣವ ದೇವಾಲಯಗಳಲ್ಲಿ ನರಸಿಂಹ ದೇವಾಲಯ, ಆಂಜನೇಯ ದೇವಾಲಯ, ದತ್ತ ಮಂದಿರ ಪ್ರಮುಖವಾಗಿ ಕಂಡುಬರುತ್ತವೆ.

ಆಂಜನೇಯ ದೇವಾಲಯ

ಉಗ್ರ ನರಸಿಂಹನ ಸಭಾಮಂಟಪದ ಬಳಿ ಎಡಭಾಗದಲ್ಲಿ ಆಂಜನೇಯ, ಲಿಂಗ, ನಂದಿ, ನಾಗದೇವತೆಗಳ ಮೂರ್ತಿಗಳು ಕಂಡುಬರುತ್ತವೆ.

ನಂದಿ ವಿಗ್ರಹವು ಕುಳಿತ ಭಂಗಿಯಲ್ಲಿದ್ದು, ಸುಂದರ ವಾದ ಶಿಲ್ಪವಾಗಿದೆ. ಕೊರಳಿನಲ್ಲಿ ಸರಮಾಲೆ, ಹಣೆಪಟ್ಟಿ

* ಸಹ ಪ್ರಾಧ್ಯಾಪಕರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ಅಧ್ಯಯನ ವಿಭಾಗ, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ವಚನ ಸಂಗಮ, ಬಿಜಾಪುರ.

** ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ಅಧ್ಯಯನ ವಿಭಾಗ, ರಾಣಿ ಚೆನ್ನಮ್ಮ ವಿವಿ, ವಚನ ಸಂಗಮ, ಬಿಜಾಪುರ.

ಇವೆ. ಲಿಂಗವು ಉತ್ತರಾಭಿಮುಖವಾಗಿದ್ದು, ಕಪ್ಪು ಶಿಲೆಯಲ್ಲಿ ಕೆತ್ತಲಾಗಿದೆ. ಇವುಗಳ ಜೊತೆಗೆ ಎರಡು ಸರ್ಪಗಳು ಸುತ್ತಿಕೊಂಡು ಮೋಹಿಸುವಂತೆ ನಾಗಸರ್ಪಶಿಲ್ಪ ಕಂಡು ಬರುತ್ತವೆ. ಇವುಗಳ ಮುಂದೆ ಚೌಕಾಕಾರವಾದ ಕಲ್ಲಿನ ಮೇಲೆ ಉಬ್ಬು ಶಿಲ್ಪದ ಎರಡು ಪಾದಗಳು ಕಂಡುಬರುತ್ತವೆ.

ಜಿನಾಲಯಗಳು

ರಾಯಬಾಗವು ಸೌದತ್ತಿಯ ರಟ್ಟರು ದೊರೆ ಕಾರ್ತವೀರ್ಯನ ಅವಧಿಯಲ್ಲಿ ಪ್ರಮುಖ ಜೈನ ಕೇಂದ್ರವಾಗಿತ್ತು. ಸೌದತ್ತಿಯ ರಟ್ಟರು ಜಿನ ಸಂಸ್ಕೃತಿಯ ಆರಾಧಕರಾಗಿದ್ದರು. ಅವರು ತಮ್ಮ ಆಳ್ವಿಕೆಯಲ್ಲಿ ಅನೇಕ ಜಿನಾಲಯಗಳನ್ನು ನಿರ್ಮಿಸಿದರು. ಅವುಗಳಲ್ಲಿ ಆದಿನಾಥ ಬಸದಿ, ಚಂದ್ರನಾಥ ಮೂರ್ತಿ, ಗಡದ ಬಸದಿ ಮುಂತಾದವುಗಳು ಪ್ರಮುಖ ವಾಗಿವೆ. ಜೊತೆಗೆ ಈ ಕ್ಷೇತ್ರ ಜೈನ ಕ್ಷೇತ್ರವಾಗಿತ್ತೆಂಬುದಕ್ಕೆ ೨೦೦೮ರಲ್ಲಿ ದೊರೆತ ಇಪ್ಪತ್ತೈದು ಜೈನರ ವಿಗ್ರಹಗಳು ಇದಕ್ಕೆ ಸಾಕ್ಷಿಯಾಗಿದೆ.

ಹಾಲಮತ ದೇವಾಲಯಗಳು

ಪೂರ್ವಕಾಲದಿಂದಲೂ ಹಾಲುಮತ ಸಮುದಾಯ ದವರು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುವುದರಿಂದ ತಮ್ಮ ಸಮುದಾಯದ ದೇವರುಗಳನ್ನು ಆ ಗ್ರಾಮದಲ್ಲಿ ಗುಡಿಕಟ್ಟಿ ಪೂಜಿಸುತ್ತಿದ್ದಾರೆ. ಅವುಗಳಿಗೆ ಪ್ರಮುಖವಾದವುಗಳು ಏಡಿಮಾಯಕ್ಕನ ದೇವಾಲಯ, ಹಾಲಸಿದ್ಧನ ದೇವಾಲಯ, ಬೀರಪ್ಪನ ದೇವಾಲಯ ಪ್ರಮುಖವಾಗಿವೆ.

ಏಡಿಮಾಯಕ್ಕನ ದೇವಾಲಯ

ಹಾಲುಮತದ ದೇವತೆಗಳ ಪರಂಪರೆಯಲ್ಲಿ ಮಾಯಕ್ಕನದು ವಿಶೇಷವಾದ ಸ್ಥಾನ ವಿಶಿಷ್ಟ ಸಾಂಸ್ಕೃತಿಕ ಆಚರಣೆಗಳನ್ನು ಒಳಗೊಂಡಿರುವ ಹಾಲುಮತ ಸ್ತ್ರೀ ದೇವತೆಗಳಲ್ಲಿ ಮಾಯಕ್ಕಳು ಒಬ್ಬಳು ಮಾಯಕ್ಕನ ಜಾಗೃತ ಸ್ಥಳ ಚಿಂಚಲಿಯಾದರೂ ಸಹ ರಾಯಬಾಗದಲ್ಲಿ ದೇವಾಲಯ ವನ್ನು ನಿರ್ಮಿಸಿದ್ದಾರೆ. ಊರ ಹೊರ ಭಾಗದಲ್ಲಿರುವ ಈ ದೇವಾಲಯವು ಗೋಪುರಾಕೃತಿಯ ಕಟ್ಟಡಗಳನ್ನು ಒಳಗೊಂಡಿದ್ದು, ೨೦೦೨ರಲ್ಲಿ ಈ ದೇವಸ್ಥಾನವು ನಿರ್ಮಿಸಿ ದರು. ದೇವಾಲಯದ ಎದುರುಗಡೆ ೨೫ ಅಡಿ ಎತ್ತರದ ಕಲ್ಲಿನ ಸ್ತಂಭದ ಗೋಪುರವಿದೆ. ಅದರ ಮೇಲುಗಡೆ ಕೇಸರಿಯ ಧ್ವಜ ನೆಟ್ಟಿದ್ದಾರೆ. ಏಡಿಯಕ್ಕ ಎಂಬ ಹೆಸರು ಚಿಂಚಲಿಯಲ್ಲಿರುವ ಮಾಯಕ್ಕನ ದೇವಾಲಯ ಎಡಕ್ಕೆ ಇರುವುದರಿಂದ ಏಡಿ ಮಾಯಕ್ಕ ಎಂದಿರಬಹುದಾಗಿದೆ. ಅಥವಾ ದೇವರಿಗೆ ಭಕ್ತರು ಏಡಿಯನ್ನು ಹರಕೆ ಹೊತ್ತು ಕೊಡುವುದರಿಂದ ಏಡಿ ಮಾಯಕ್ಕ ಆಗಿರಬಹುದು ಎಂದು ಊಹಿಸಬಹುದಾಗಿದೆ.

ರಾಯಬಾಗ ಪರಿಸರದ ದೇವಾಲಯಗಳು ಹತ್ತು ಹಲವು ವೈಶಿಷ್ಟ್ಯತೆಗಳಿಂದ ರಚನೆಗಳಾಗಿರುವಂತವುಗಳು ಐತಿಹಾಸಿಕ ದೃಷ್ಟಿಯಿಂದ ಪ್ರತಿಯೊಂದು ಸಮುದಾಯದ ದೇವಾಲಯದ ಕುರಿತು ಅವುಗಳ ಸಾಮಾಜಿಕ, ಧಾರ್ಮಿಕ ಕೊಡುಗೆಗಳ ಕುರಿತು ಇನ್ನೂ ಅಧ್ಯಯನ ನಡೆಯಬೇಕಾಗಿದೆ.

ಆಧಾರಸೂಚಿ

೧. ಎಸ್.ಬಿ. ಆಜೂರೆ, ರಾಯಬಾಗದ ದೇವಾಲಯಗಳು.

೨. ಜೈನ ಐತಿಹ್ಯ, ಪಿ.ಜಿ. ಕೆಂಪನ್ನವರ.

೩. ಜೈನ ಪರಂಪರೆ, (೨೦೦೨, ಜಿಲ್ಲಾಧಿಕಾರಿಗಳು ಭಗವಾನ ಮಹಾವೀರ ಕಲ್ಯಾಣಕರ ಮಹೋತ್ಸವ ಸಮಿತಿ, ಬೆಳಗಾವಿ).

೪. ಸಂಗಮರ ದೇವಾಲಯಗಳು, ಡಾ. ಶ್ರೀಮತಿ ಸಿ.ಎಸ್. ಅಪರ್ಣ, (ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳ, ಧಾರವಾಡ, ೨೦೦೭-೨೦೦೭) ಪುಟ ಸಂಖ್ಯೆ ೫೧ರಿಂದ ೫೨.

೫. ಕರ್ನಾಟಕ ಭಾರತಿ ವಾರ್ಷಿಕ ಪತ್ರಿಕೆ, ಸಂ. ಡಾ. ಹೆಚ್.ಎಂ. ಮಹೇಶ್ವರಯ್ಯಾ, (ಕ.ವಿ.ವಿ., ಧಾರವಾಡ, ಜುಲೈ ೨೦೦೮), ಪುಟ ಸಂಖ್ಯೆ ೨೦೭ ರಿಂದ ೨೧೩.

೫೪

ಇಬ್ಬಳಿಕೆ ಹಳ್ಳಿಯ ವೀರಭದ್ರ ದೇವಾಲಯ ಮತ್ತು ಪರಿಸರ ಒಂದು ಅಧ್ಯಯನ

ಡಾ. ಕನ್ಯಾಕುಮಾರ್.ಪಿ.*

ಜಿಲ್ಲಾಕೇಂದ್ರ ರಾಮನಗರದಿಂದ ಮಾಗಡಿಯನ್ನು ತಲುಪುವ ಮಾರ್ಗದಲ್ಲಿ ಯರೇಹಳ್ಳಿ ಎಂಬ ಗ್ರಾಮದ ಬಲಭಾಗದಲ್ಲಿ ೨ (ಎರಡು) ಕಿ.ಮೀ. ಸಾಗಿದರೆ ಜೋಗಿದೊಡ್ಡಿ ಸಿಗುತ್ತದೆ. ಅಲ್ಲಿಂದ ಮತ್ತೆ ಬಲಕ್ಕೆ ಕಾಲುದಾರಿಯಲ್ಲಿ ಸ್ವಲ್ಪ ಸಾಗಿದರೆ ಸಿಗುವ ತಗ್ಗಾದ ಬಯಲು ಪ್ರದೇಶವೇ ಇಬ್ಬಳಿಕೆ ಹಳ್ಳಿ. ಸರ್ಕಾರಿ ದಾಖಲೆಗಳಲ್ಲಿ ಇಬ್ಬಳಿಕಳ್ಳಿ ಎಂದು ನಮೂದಾಗಿದೆ. ಗಂಗರು, ಚೋಳರ ಆಳ್ವಿಕೆಗೆ ಒಳಪಟ್ಟಿದ್ದ ಈ ಹಳ್ಳಿ ಕಿಳಲೆನಾಡಿನ ಭಾಗವಾಗಿತ್ತು. ವಿಜಯನಗರ ಮತ್ತು ಕೆಂಪೇಗೌಡರ ಆಳ್ವಿಕೆಯಲ್ಲಿ ಪ್ರಮುಖ ನಾಡಾಗಿತ್ತು.

ಈ ಹಳ್ಳಿಯ ತಗ್ಗುಪ್ರದೇಶದ ಕೊನೆಯಲ್ಲಿರುವುದೇ ಇಂದಿಗೂ ಪೂಜೆಗೊಳ್ಳುತ್ತಿರುವ ಪುರಾತನ ವೀರಭದ್ರ ದೇವಾಲಯ. ಇದು ಇಂದಿಗೂ ಅಜ್ಞಾತವಾಗಿಯೇ ಉಳಿದುಕೊಂಡಿದೆ. ಸುಮಾರು ೧೫-೧೮ ಅಡಿ ಎತ್ತರದ ರಾಜಗೋಪುರವನ್ನು ಹೊಂದಿರುವ ಈ ದೇವಾಲಯ ಪೂರ್ವಾಭಿಮುಖವಾಗಿದೆ. ಗೋಪುರದಲ್ಲಿ ಪುರಾಣ ದೇವತೆಗಳು, ವೀರಭದ್ರ ನರ್ತನದ ದೃಶ್ಯಗಳು, ನಟರಾಜ, ಶಿವಲಿಂಗಗಳ ಕೆತ್ತನೆಗಳು, ನಂದಿ, ಆದಿಶೇಷ, ತ್ರಿಶೂಲ, ಡಮರುಗಳ ಶಿಲ್ಪಗಳನ್ನು ಕಂಡರಿಸಲಾಗಿದೆ. ಈ ದೇವಾಲಯ ಸಂಪೂರ್ಣವಾಗಿ ಕಲ್ಲುಚಪ್ಪಡಿಗಳಿಂದ ನಿರ್ಮಾಣಗೊಂಡಿದೆ. ಗರ್ಭಗೃಹ ನಂದಿ ಮಂಟಪದಿಂದ ಕೂಡಿದೆ. ಗರ್ಭಗುಡಿ ನೋಡಲು ಸುಂದರವಾಗಿದ್ದು, ಸುಮಾರು ೫ ಅಡಿ ಎತ್ತರದ ಉತ್ತರಾಭಿಮುಖದ ವೀರಭದ್ರ ವಿಗ್ರಹವನ್ನು ನಕ್ಷತ್ರಾಕಾರಾದ ರೂಪದ ಚಿಕ್ಕದಾದ ಜಗುಲಿಯ ಮೇಲೆ ನಿಲ್ಲಿಸಲಾಗಿದೆ. ವೀರಭದ್ರ ವಿಗ್ರಹವು ಪ್ರಸನ್ನಮುಖದ ಸ್ವರೂಪಿಯಾಗಿದ್ದು, ಕರಂಡಮುಕುಟ, ಚತುರ್ಭುಜವನ್ನು ಹೊಂದಿರುವ ವೀರಭದ್ರನ ವಿಗ್ರಹವು, ಮೇಲಿನ ಎರಡು ಕೈಗಳಲ್ಲಿ, ಬಲಗೈಯಲ್ಲಿ, ಬಾಣವನ್ನು ಎಡಗೈಯಲ್ಲಿ ಬಿಲ್ಲನ್ನು ಹೊಂದಿದ್ದಾನೆ. ಕೆಳಗಿನ ಬಲಗೈಯಲ್ಲಿ ಖಡ್ಗವನ್ನು ಹೊಂದಿದ್ದು, ಎಡಗೈಯನ್ನು ಒತ್ತಾಸೆಯಾಗಿ ಊರಿದ್ದಾನೆ. ವಿಗ್ರಹದ ಬಲ ಭಾಗದ ಕೆಳಗಡೆ ಟಗರುದಕ್ಷನಿದ್ದಾನೆ. ವೀರಭದ್ರನ ಕಾಲುಗಳು ಹಾವಿಗೆ (ಆವಿಗೆ)ಯ ಮೇಲೆ ಇದ್ದು, ಎಡಗಾಲು ಸ್ವಲ್ಪ ಪಾರ್ಶ್ವಕ್ಕೆ ತಿರುಗಿದೆ. ರುಂಡಮಾಲೆಯನ್ನು ಹೊಂದಿರುವ ವೀರಭದ್ರ ೨೨ ರುಂಡಗಳನ್ನು ಮಾಲೆಯಾಗಿ ಧರಿಸಿದ್ದಾನೆ. ಒಟ್ಟಾರೆಯಾಗಿ ವೀರಭದ್ರರ ವಿಗ್ರಹದ ಲಕ್ಷಣಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ವಿಗ್ರಹದ ಕೆತ್ತನೆ ವಿಜಯನಗರೋತ್ತರದ್ದು ಎಂಬುದು ಸ್ಪಷ್ಟವಾಗುತ್ತದೆ.

ಇನ್ನು ಗರ್ಭಗುಡಿಯ ನಂತರದ ಭಾಗದಲ್ಲಿ ಒಂದು ಅಡಿ ಎತ್ತರದ ನಂದಿ ವಿಗ್ರಹವಿದ್ದು, ಗ್ರಾಮೀಣ ಶೈಲಿಯಲ್ಲಿಯೇ ರಚನೆಗೊಂಡಿದೆ. ಇದನ್ನು ಸಹ ಸಣ್ಣ ಜಗುಲಿಯ ಮೇಲೆ ರಚಿಸಲಾಗಿದೆ. ದೇವಾಲಯದ ಪ್ರವೇಶದ್ವಾರದಲ್ಲಿ ಭೈರವನ ದ್ವಾರಬಂಧದ ಶಿಲ್ಪಗಳನ್ನು ಅಭಯಹಸ್ತದ ದ್ವಾರಪಾಲಕರಾಗಿ ಕಂಡರಿಸಲಾಗಿದೆ. ದೇವಾಲಯದ ಹೊರಭಾಗದಲ್ಲಿ ೧೮-೨೦ ಅಡಿ ಎತ್ತರದ ಧ್ವಜಸ್ತಂಭವಿದೆ. ಪಕ್ಕದಲ್ಲಿ ಪುಟ್ಟನಂದಿ ವಿಗ್ರಹವನ್ನು ಗ್ರಾಮ್ಯಶೈಲಿಯಲ್ಲಿ ಕೆತ್ತಲಾಗಿದೆ. ಧ್ವಜಸ್ತಂಭದ ಬುಡಭಾಗದಲ್ಲಿ ನಂದಿ ಮತ್ತು ಶಿವಲಿಂಗವನ್ನು ಬಿಡಿಸಲಾಗಿದೆ. ನಾಗಬಂಧವನ್ನು ಧ್ವಜಸ್ತಂಭದ ನಾಲ್ಕು ಮೂಲೆಗಳಲ್ಲಿ ಬಿಡಿಸಲಾಗಿದೆ. ಈ ದೇವಾಲಯದ ವೀರಭದ್ರನಿಗೆ ಪ್ರತಿ ವರ್ಷ ಯುಗಾದಿಹಬ್ಬದ ನಂತರದ ೨ನೇ ವಾರದಲ್ಲಿ ವಿಜೃಂಭಣೆಯ ಜಾತ್ರೆ ಪುರಾತನ ಕಾಲದಿಂದಲೂ ನಡೆಯುತ್ತಾ ಬಂದಿದೆ. ಈ ದೇವಾಲಯದ ವೀರಭದ್ರನಿಗೆ ದೀಪಾವಳಿಯಲ್ಲಿ ವಂಶಸ್ಥರು ದೀಪವನ್ನು ಹಚ್ಚುತ್ತಾರೆ ಮತ್ತು ಶ್ರಾವಣ, ಸಂಕ್ರಾಂತಿ, ರಥಸಪ್ತಮಿ, ಮುಂತಾದ ಪ್ರಮುಖ ಸಮಯಗಳಲ್ಲಿ ಪೂಜಾಕಾರ್ಯಗಳು, ಅಭಿಷೇಕ, ಮಹೋತ್ಸವಗಳು ಜರುಗುತ್ತವೆ.

ಇಬ್ಬಳಿಕೆ ಹಳ್ಳಿಯ ಪರಿಸರದಲ್ಲಿ ಇರುವ ಮತ್ತೊಂದು ಪ್ರಾಚೀನ ದೇವಾಲಯ 'ಈಶ್ವರೀ ದೇವಾಲಯ'. ಇದು ಚೋಳರ ಕಾಲದಲ್ಲಿ ನಿರ್ಮಾಣವಾದ ದೇವಿ ದೇವಾಲಯವಾಗಿದೆ. ಇದು ಪೂರ್ವಾಭಿಮುಖವಾಗಿ

* ಉಪನ್ಯಾಸಕರು, ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ರಾಮನಗರ.

ನಿರ್ಮಾಣಗೊಂಡಿದ್ದು, ಪ್ರವೇಶದ್ವಾರ, ನವರಂಗ, ಗರ್ಭಗುಡಿ, ನಂದಿ ಮಂಟಪಗಳನ್ನು ಒಳಗೊಂಡಿದೆ. ಇಲ್ಲಿನ ಈಶ್ವರಿಯ ಮಾತೆಯ ವಿಗ್ರಹವನ್ನು ರಾಮನಗರಕ್ಕೆ ತೆಗೆದುಕೊಂಡು ಹೋಗಿ ಸ್ಥಾಪಿಸಿದರೆಂಬ ಪ್ರತೀತಿ ಇದೆ. ಈ ದೇವಾಲಯದ ಪ್ರವೇಶದ್ವಾರದಲ್ಲಿ ಅನೇಕ ಶಿಲ್ಪಗಳನ್ನು ಕೆತ್ತಲಾಗಿದೆ. ನಟರಾಜ, ಗೂಳಿ, ಕಾಮಧೇನು, ಸ್ತ್ರೀ ಲಿಂಗಕ್ಕೆ ಅಭಿಷೇಕ ಮಾಡುತ್ತಿರುವ ದೃಶ್ಯ, ಆನೆ, ದ್ವಾರಪಾಲಕ, ಭಕ್ತಶಿಲ್ಪಗಳನ್ನು ಕೆತ್ತಲಾಗಿದೆ. ೧೨ ಕಂಬಗಳನ್ನು ಹೊಂದಿರುವ ಈ ದೇವಾಲಯ ವೀರಭದ್ರ ದೇವಾಲಯಕ್ಕಿಂತ ಸುವಿಸ್ತಾರವಾಗಿದೆ. ಆದರೆ ವಿಗ್ರಹಗಳಿಲ್ಲದ ದೇವಾಲಯ ತನ್ನ ಚಾಪನ್ನು ಕಳೆದುಕೊಂಡಿದೆ. ಈ ಪರಿಸರದ ಮತ್ತೊಂದು ದೇವಾಲಯುವೆಂದರೆ 'ಸೋಮೇಶ್ವರ ದೇವಾಲಯ. ಇದಕ್ಕೆ ತಿಮ್ಮಪ್ಪನಾಯಕನು ಕ್ರಿ.ಶ. ೧೫೩೦ರ ಕೂಟಗಲ್ಲುಶಾಸನದಲ್ಲಿ ತಾನು ರಾಜ್ಯಾಧಿಪತಿಯಾಗಿದ್ದಾಗ ಅಮೃತಪಡಿ ಸೇವೆಗೆ ವಿಕ್ರಮ ಸಂವತ್ಸರದ ಆಶ್ವಯುಜದಂದು ದಾನವನ್ನು ಕೊಟ್ಟ ವಿಷಯ ಶಾಸನದಲ್ಲಿ ದಾಖಲಾಗಿದ್ದರೂ ಏನನ್ನು ದಾನವಾಗಿ ನೀಡಿದ್ದಾರೆ ಎಂಬುದು ಮಾತ್ರ ತಿಳಿದು ಬಂದಿಲ್ಲ. ಕೂಟಗಲ್ ಸಮೀಪದ ಪೀಳೇನಹಳ್ಳಿಯನ್ನು ಸೋಮೇಶ್ವರ ದೇವರಿಗೆ ದಾನವಾಗಿ ನೀಡಿದ ವಿಷಯ ಧಾರ್ಮಿಕ ಮಹತ್ವವನ್ನು ತಿಳಿಸುತ್ತದೆ[೧]. ಹಾಗೆಯೇ ಧಾರ್ಮಿಕ ಐತಿಹಾಸಿಕ ಮಹತ್ವವನ್ನು ಹೊಂದಿರುವ ಇಬ್ಬಳಿಕೆ ಹಳ್ಳಿಯ ಇತಿಹಾಸ ಪ್ರಾಗೈತಿಹಾಸಿಕ ಕಾಲಕ್ಕೆ ಸೇರಿದೆ ಎಂಬುದನ್ನು ಅಲ್ಲಿ ದೊರೆಯುತ್ತಿರುವ (ದೊರೆತಿರುವ) ಪ್ರಾಚ್ಯಾವಶೇಷಗಳ ಸಹಾಯದಿಂದ ನಿರ್ಧರಿಸಬಹುದು. ಪ್ರಾಚೀನ ದೇವಾಲಯವಾದ ವೀರಭದ್ರ ದೇವಾಲಯದ ಹಿಂಭಾಗದ ಹೊಲಗಳಲ್ಲಿ ಇಂದಿಗೂ ಸಹ ಮಡಿಕೆ ಚೂರುಗಳು ಸಿಗುತ್ತಲಿವೆ. ಅವುಗಳ ಒಳಗೆ ಬೂದಿ, ಮೂಳೆಗಳು ವಿರಳವಾಗಿ ದೊರೆಯುತ್ತಿವೆ. ಅಲ್ಲಿ ದೊರೆತಿರುವ ಮಡಿಕೆ ಚೂರುಗಳು, ಬಣ್ಣ, ಗಾತ್ರ, ಚಿತ್ತಾರದ ಲಕ್ಷಣಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅವುಗಳು ಪ್ರಾಗೈತಿಹಾಸಿಕ ನೆಲೆಯ ಪಳೆಯುಳಿಕೆಗಳು ಎಂಬುದ ನಿರ್ಧರಿಸಬಹುದು. ಹಾಗಾಗಿ ಇಬ್ಬಳಿಕಳ್ಳಿ ಪ್ರಾಚೀನ ರಾಜಮನೆತನಗಳ ಕಾಲದ ಇತಿಹಾಸದ ಪ್ರಮುಖ ಸ್ಥಳವಾಗಿರದೆ ಪ್ರಾಗೈತಿಹಾಸಿಕ ಬೃಹತ್ ಶಿಲಾಯುಗದ ಕಾಲದ ಪ್ರದೇಶವಾಗಿತ್ತೆಂಬುದನ್ನು ನಿರ್ಧರಿಸಬಹುದಾಗಿದೆ[೨].

ಒಟ್ಟಿನಲ್ಲಿ ಇಬ್ಬಳಿಕೆಹಳ್ಳಿಯ ಪರಿಸರನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಈ ಅಂಶಗಳನ್ನು ನಿರ್ಧರಿಸಬಹುದು.

೧. ಇಬ್ಬಳಿಕೆಹಳ್ಳಿಯ ಎಲ್ಲಾ ದೇವಾಲಯಗಳು ಶೈವ ಪರಂಪರೆಯ ಮತ್ತು ಸಂಸ್ಕೃತಿಯದಾಗಿವೆ.

೨. ಇಲ್ಲಿನ ವೀರಭದ್ರ ದೇವಾಲಯ, ಕಾಡುಸಿದ್ದೇಶ್ವರ ದೇವಾಲಯ, ಪಾಳು ಸ್ಥಿತಿಯಲ್ಲಿರುವ ಸೋಮೇಶ್ವರ ದೇವಾಲಯಗಳೆಲ್ಲವೂ ಶೈವ ಪರಂಪರೆಯವು ಎಂಬುದನ್ನು ಶ್ರುತಪಡಿಸುತ್ತವೆ. ವೀರಭದ್ರ ದೇವಾಲಯದ ಬಲಭಾಗದಲ್ಲಿ ಕಾಣುವ ಯತಿರಾಜ ಬೆಟ್ಟ ಒಂದು ಕಾಲದಲ್ಲಿ ಶೈವರ ಸಿದ್ದಬೆಟ್ಟವಾಗಿದ್ದು, ನಂತರ ವೈಷ್ಣವ ಕೇಂದ್ರವಾಗಿ ಮಾರ್ಪಟ್ಟು, ಇಬ್ಬಳಿಕೆಹಳ್ಳಿ ನಾಶವಾಗಿರುವುದಕ್ಕೆ ಧಾರ್ಮಿಕ ಸಂಘರ್ಷದ ಸೂಚನೆಯನ್ನು ನೀಡುತ್ತದೆ.

೩. ಇಬ್ಬಳಿಕೆಹಳ್ಳಿ ಒಂದು ಗಮನಾರ್ಹ ವ್ಯಾಪಾರ ಕೇಂದ್ರವಾಗಿತ್ತು. ಇದಕ್ಕೆ ಈ ಊರಿನ ಹೆಸರು ಮತ್ತು ಸಮೃದ್ಧತೆಯು ಬೆಂಬಲಿಸುತ್ತದೆ.

೪. ಇಲ್ಲಿನ ಸೋಮೇಶ್ವರ ದೇವರಿಗೆ ಕೂಟಗಲ್‌ನ ತಿಮ್ಮಪ್ಪನಾಯಕ ಪೀಳೇನಹಳ್ಳಿಯನ್ನು ದಾನವಾಗಿ ನೀಡಿದ್ದಾನೆ.

೫. ಈ ಗ್ರಾಮ ಚೋಳರ ಕಾಲದಲ್ಲಿ ಪ್ರಮುಖ ಶೈವಕೇಂದ್ರವಾಗಿದ್ದು, ನಂತರ ವಿಜಯನಗರೋತ್ತರ ಕಾಲದಲ್ಲಿಯೂ ಸಹ ಪ್ರಾಮುಖ್ಯತೆಯನ್ನು ಪಡೆದಿತ್ತು.

೬. ದೇವಾಲಯದ ಆಚರಣೆಗಳು ಇಂದಿಗೂ ಸಹ ಜನತೆಯಲ್ಲಿ ಸಂಸ್ಕೃತಿಯ ಕೊಂಡಿಯಾಗಿ ಹರಿದು ಬರುತ್ತಿವೆ.

೭ ಈ ಹಳ್ಳಿಯಲ್ಲಿ ನಮಗೆ ದೊರೆತಿರುವ ಪ್ರಾಚ್ಯಾವಶೇಷಗಳ ಆಧಾರದಿಂದ ಇದು ಪ್ರಾಗೈತಿಹಾಸಿಕ ನೆಲೆಯಾಗಿತ್ತೆಂಬುದನ್ನು ತಿಳಿಸಬಹುದು.

೮. ಇಂದು ಜೀರ್ಣೋದ್ದಾರಕ್ಕೋಸ್ಕರ ಮೂಲ ದೇವಾಲಯವನ್ನು ಸಂಪೂರ್ಣವಾಗಿ ಕೆಡವಲಾಗಿದೆ.

[ಈ ಸಂಶೋಧನಾ ಲೇಖನವನ್ನು ಸಿದ್ದಪಡಿಸುವಾಗ ನನ್ನ ಜೊತೆ ಕ್ಷೇತ್ರಕಾರ್ಯಕ್ಕಾಗಿ ಬಂದಂತಹ ನನ್ನ ವಿದ್ಯಾರ್ಥಿ ಧನರಾಜ್ ಜೆ.ಎಸ್.ಗೆ ಧನ್ಯವಾದಗಳು ಹಾಗೂ ನನ್ನ ಮಾರ್ಗದರ್ಶಕರಾದ ಡಾ. ಎಂ.ಜಿ. ನಾಗರಾಜ್‌ರವರು ನನ್ನ ಜೊತೆ ಕ್ಷೇತ್ರಕಾರ್ಯಕ್ಕೆ ಬಂದು ಕ್ಷೇತ್ರದ ವೈಶಿಷ್ಟ್ಯವನ್ನು ಖುದ್ದಾಗಿ ವಿವರಿಸಿ ಅಧ್ಯಯನಕ್ಕೆ ನೆರವಾಗಿದ್ದಾರೆ. ಅವರಿಗೆ ನನ್ನ ತುಂಬು ಹೃದಯದ ನಮನಗಳು.]









ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಅರ್ಕಾವತಿ, ಎಂ. ಬೈರೇಗೌಡ, ತಾ.ಸಿ. ತಿಮ್ಮಯ್ಯ (ಪ್ರ.ಸಂ.), ಸ್ಮರಣ ಸಂಚಿಕೆ, ೧೯೯೯, ಕ.ಸಾ.ಪ., ಬೆಂಗಳೂರು, ಪುಟ ೨೨೩, (ಡಾ. ಎಂ.ಜಿ. ನಾಗರಾಜುರವರ ಲೇಖನ) +ಎಕ್-೯.

೨. ಕ್ಷೇತ್ರಕಾರ್ಯ, ೨೫-೦೩-೨೦೧೪, ಡಾ. ಎಂ.ಜಿ. ನಾಗರಾಜ್ ಮತ್ತು ನನ್ನ ವಿದ್ಯಾರ್ಥಿ ಧನರಾಜ್‌ನೊಂದಿಗೆ.

ಕಲಾ ಕುಸುರಿನ ಕಡಕೋಳದ ಶ್ರೀ ಕಲ್ಮೇಶ್ವರ ದೇವಾಲಯ

ಪ್ರೊ. ಕೆ.ಸಿ. ಮಲ್ಲಿಗವಾಡ*

ಹಾವೇರಿ ಜಿಲ್ಲೆಯ ಸವಣೂರು ತಾಲೂಕಿನ ಕಡಕೋಳದ ಹೊರವಲಯದಲ್ಲಿ ಕಲ್ಯಾಣದ ಚಾಲುಕ್ಯರ ಕಾಲದ್ದೆಂದು ಗುರುತಿಸಲ್ಪಡುವ ಶ್ರೀ ಕಲ್ಮೇಶ್ವರ ದೇವಾಲಯವು ಬಹು ಸುಂದರವಾಗಿದೆ. ಪೂರ್ವಾಭಿಮುಖವಾಗಿ ನಿರ್ಮಾಣವಾಗಿರುವ ದೇಗುಲ ೩೦ ಅಡಿ ಅಗಲ ೪೫ ಅಡಿ ಉದ್ದವಿರುವುದು. ಪ್ರವೇಶದ್ವಾರ, ಸಭಾ ಮಂಟಪ, ನವರಂಗ, ಗರ್ಭಗೃಹ, ಸುತ್ತಲೂ ಪ್ರದಕ್ಷಿಣಾ ಪಥವಿದೆ. ದೂರದಿಂದಲೂ ಇದು ಸಭಾಭವನ ಕಂಡಂತೆ ಭಾಸವಾಗುವುದು. ೨೮ ಶಿಲಾಕಂಬಗಳ ಮೇಲೆ ನಿರ್ಮಿತವಾಗಿದ್ದು ಮಧ್ಯದಲ್ಲಿ ಅಚ್ಚು ಪ್ರವೇಶದ್ವಾರ ಅಪೂರ್ಣವಾಗಿದ್ದು ಇನ್ನು ನಿರ್ಮಾಣದ ಹಂತದಲ್ಲಿರುವ ಸಾಧ್ಯತೆಗಳಿವೆ. ಶ್ರೀಕಲ್ಮೇಶ್ವರನು ಕಲ್ಯಾಣಿ ಚಾಲುಕ್ಯರ ಆರಾಧ್ಯ ದೇವನಾಗಿದ್ದಾನೆ. ಅವನ ಸ್ಮರಣಾರ್ಥ ನಿರ್ಮಿಸಿದ ದೇವಸ್ಥಾನ ಇದಾಗಿದೆ. ಗೋಡೆಗುಂಟ ಮಹತ್ವದ ಕಲಾಸ್ಮಾರಕಗಳನ್ನು ಅಳವಡಿಸಿ ದೇಗುಲಕ್ಕೆ ಮೆರಗು ತಂದಿದ್ದಾರೆ.

ಸಭಾ ಮಂಟಪದಲ್ಲಿ ನಾಟ್ಯಗೃಹದ ಬದಲಾಗಿ ವಿಶೇಷ ವಿಗ್ರಹ ನಿರ್ಮಿಸಿ ಸುಮಾರು ೩೬ ಅಡಿ ಎತ್ತರದ ಜಗುಲಿ ನಿರ್ಮಿಸಿ ಶ್ರೀದೇವರ ಪಾದುಕೆಗಳನ್ನು ಬಿಡಿಸಿದ್ದಾರೆ. ನವರಂಗದ ಎಡಬಲದ ದ್ವಾರದಲ್ಲಿ ದ್ವಾರ ಪಾಲಕರಿದ್ದು ಮೇಲ್ಭಾಗದಲ್ಲಿ ಸುರಳಿಗೆತ್ತನೆಗಳಿದ್ದು ಹಣೆಪಟ್ಟಿಯಲ್ಲಿ ಗಜಲಕ್ಷ್ಮಿ ವಿಗ್ರಹವಿದೆ. ನವರಂಗದ ಗೋಡೆಗಳಲ್ಲಿ ಶ್ರೀ ಗಣೇಶ ವಿಗ್ರಹ, ವೀಣಾಪಾಣೀ, ವಿಷ್ಣು ಮೊದಲಾದವುಗಳನ್ನು ಪ್ರತಿಷ್ಠಾಪನೆಗೊಳಿಸಿದ್ದಾರೆ. ಎಡಭಾಗದ ಗೋಡೆಯಲ್ಲಿ ಸಪ್ತ ಮಾತೃಕೆಯರನ್ನು ಹೊತ್ತು ನಿಂತ ಒಂದೇ ಕಲ್ಲು ತನ್ನ ಗತವೈಭವವನ್ನು ಸಾರುತ್ತಿರುವುದು ಈ ದೇವಾಲಯಕ್ಕೆ ಹೊಸ ಮೆರುಗು ತರುವಂತಿದೆ. ಅಲ್ಲದೇ ತ್ರುಟಿತ ವಿಗ್ರಹಗಳು, ಶಿಲಾಮೂರ್ತಿಗಳು ಅಲ್ಲಲ್ಲಿ ಚದುರಿದಂತೆ ದೇವಾಲಯದ ತುಂಬೆಲ್ಲ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ.

ದೇಗುಲದ ಗರ್ಭಗೃಹದ ದ್ವಾರದಲ್ಲಿ ಸುಂದರವಾದ ಅಚ್ಚುಕಟ್ಟಾಗಿ ಜೋಡಿಸಿದ ಬಾಗಿಲು ಚೌಕಟ್ಟು ಚಿತ್ತಾಕರ್ಷಣೀಯವಾಗಿದೆ. ಬೃಹತ್ ಹೊಸ್ತಿಲು ಇದ್ದು ಬಾಗಿಲುವಾಡಗಳು ನಯನ ಮನೋಹರವಾಗಿವೆ. ಎಡಬಲದ ಕೆಳಭಾಗದಲ್ಲಿ ದ್ವಾರ ಪಾಲಿಕೆ ದೇವತೆಯರು ಕೈಯಲ್ಲಿ ಚಾಮರ ಗಧೆ ಹಿಡಿದು ನಿಂತಿದ್ದಾರೆ. ಇದರ ಮೇಲ್ಭಾಗದ ಚೌಕಟ್ಟಿನಲ್ಲಿ ಮಕರ ತೋರಣ, ಲತಾ, ಬಳ್ಳಿ, ಪುಷ್ಪಗಳ ಚಿತ್ತಾರಗಳನ್ನು ಚಿತ್ತಾಕರ್ಷಕವಾಗಿ ಶಿಲ್ಪಿ ಕೆತ್ತಿದ್ದಾನೆ. ಅಲ್ಲಲ್ಲಿ ಮಧ್ಯಭಾಗದಲ್ಲಿ ಕುಂಭಗಳನ್ನು ನಿರ್ಮಿಸಿ ಭಕ್ತರಿಗೆ ಹೆಚ್ಚು ಭಕ್ತಿ ಉಂಟಾಗುವಂತೆ ವ್ಯವಸ್ಥೆಗೊಳಿಸಲಾಗಿದೆ.

ಬಾಗಿಲದ ಮೇಲಿನ ಹಣೆ ಪಟ್ಟಿಯಲ್ಲಿ ಚಿತ್ತಾಕರ್ಷಕವಾಗಿ ಮಕರತೋರಣಗಳನ್ನು ವಿವಿಧ ತರಹದ ಹೂಗುಚ್ಛಗಳನ್ನು ಕೆತ್ತಲಾಗಿದೆ. ಮಧ್ಯಭಾಗದಲ್ಲಿ ವಿಶೇಷವಾದ ಗೂಡು ನಿರ್ಮಿಸಿ ಅದರಲ್ಲಿ ಶ್ರೀ ಗಜಲಕ್ಷ್ಮಿ ವಿಗ್ರಹವನ್ನು ಕೆತ್ತಲಾಗಿದೆ. ಗರ್ಭಗೃಹದ ಶ್ರೀ ಕಲ್ಮೇಶ್ವರ ದೇವರ ಸ್ಥಾವರ ಲಿಂಗವಿದ್ದು, ಅಷ್ಟಕೋನಾಕೃತಿಯಲ್ಲಿರುವ ಶಿವಲಿಂಗವಿದೆ. ಸುಮಾರು ೪ ಅಡಿ ಉದ್ದ (ಜಲಹರಿ ಸಮೇತ) ೨ ಅಡಿ ಅಗಲವಾದ ೧ ಅಡಿ ಎತ್ತರವಾಗಿದೆ. ಪ್ರತ್ಯೇಕ ಬಾಣಪೀಠವನ್ನು ಅಳವಡಿಸಲಾಗಿದ್ದು ಕಲ್ಯಾಣದ ಚಾಲುಕ್ಯರ ಕಾಲದ ಶೈಲಿಯಲ್ಲಿರುವ ಸ್ಥಾವರಲಿಂಗ ದೇವಾಲಯವು ಅಂದಿನ ಇತಿಹಾಸ ಸಾರುವಂತಹುದಾಗಿದೆ.

ದೇಗುಲಕ್ಕೆ ಸುತ್ತುಲೂ ಪ್ರದಕ್ಷಿಣಾ ಪಥವಿದ್ದು ವಿಶಾಲವಾದ ಬಯಲು ಜಾಗೆ ಹೊಂದಿದೆ. ದೇಗುಲದ ಬಲಭಾಗದ ಗೋಡೆ ಹತ್ತಿರ ರಸ್ತೆಗೆ ಹೊಂದಿ ಇತಿಹಾಸ ಸಾರುವ ೩ ವೀರಗಲ್ಲುಗಳು ನಿಂತಿವೆ. ಕಲ್ಯಾಣಿ ಚಾಲುಕ್ಯರ ಕಾಲದ ವೀರಗಲ್ಲುಗಳು, ಮಹಾಸತಿ ಕಲ್ಲುಗಳು ಕ್ರಿ.ಶ. ೧೧–೧೨ನೇ ಶತಮಾನಕ್ಕೆ ಸಂಬಂಧಿಸಿದವುಗಳಾಗಿವೆ. ವೀರರ ಕಥನ ಮಹಾಸತಿಯ ಪ್ರಾಣತ್ಯಾಗದ ಮಹಿಮೆ ಅಪಾರವಾಗಿದೆ.

ಗಜಲಕ್ಷ್ಮಿ ವಿಗ್ರಹ

ಕಲ್ಯಾಣಿ ಚಾಲುಕ್ಯರ ಕ್ರಿ.ಶ. ೧೨ನೇ ಶತಮಾನದ ಮಧ್ಯ ಭಾಗದಲ್ಲಿ ಕೆತ್ತಿದ ಗಜಲಕ್ಷ್ಮಿ ವಿಗ್ರಹವು ಕಪ್ಪು ಮಿಶ್ರಿತ ಬಿಳಿಯ ಕಲ್ಲಿನಲ್ಲಿ ಕೊರೆದು ವಿಗ್ರಹಕ್ಕೆ ಮೆರಗು ನೀಡಿದ್ದಾರೆ. ವಿಗ್ರಹದ ಮೇಲ್ಭಾಗದಲ್ಲಿ ಸೂರ್ಯ ಚಂದ್ರಬಿಂಬಗಳಿದ್ದು ಎರಡು (ಗಜ) ಆನೆಗಳು ಬಲಗಾಲನ್ನು ಮೇಲೆತ್ತಿ ಸೊಂಡಿಲಿನಲ್ಲಿ ಅಭಿಷೇಕಕ್ಕೆ

* ನಿ. ಪ್ರಾಚಾರ್ಯರು ಜ.ಇ.ಸಿ. ಪ.ಪೂ. ಕಾಲೇಜು, ರೊಟ್ಟಿಗವಾಡ, ತಾ. ಕುಂದಗೋಳ, ಜಿ. ಧಾರವಾಡ. ಮೊ: ೯೯೭೯೭ ೨೩೯೯೭

ಸಜ್ಜಾಗಿ ನಿಂತಂತಿವೆ. ಮಧ್ಯಭಾಗದಲ್ಲಿರುವ ಶ್ರೀ ಲಕ್ಷ್ಮಿ ವಿಗ್ರಹವು ಕಮಲ ಪೀಠದಲ್ಲಿ ಆಸಿನಳಾದ ಶ್ರೀ ಲಕ್ಷ್ಮಿ ದೇವಿ ಚತುರ್ಭುಜ ಹೊಂದಿದೆ.

ವಿಗ್ರಹದ ಕೆಳಭಾಗದಲ್ಲಿ ಸಖಿಯರು ಬಲಗೈಯಲ್ಲಿ ಚಾಮರ, ಛತ್ರಿಗಳನ್ನು ಹಿಡಿದು ಶ್ರೀ ದೇವಿಗೆ ಜೈಕಾರ ಮಾಡುವ ಭಂಗಿ/ಶೈಲಿಯಲ್ಲಿರುವುದು ಹಾಗೂ ವಾದ್ಯ ಮೇಳದವರು ತಮ್ಮ ವಾದ್ಯಗಳೊಂದಿಗೆ ಮುನ್ನಡೆಯುತ್ತಿರುವುದು ವೈಶಿಷ್ಟ್ಯಪೂರ್ಣವಾಗಿದೆ. ಸುಮಾರು ಆರು ಅಡಿ (೬') ಉದ್ದ, (೩') ಅಡಿ ಎತ್ತರವಿರುವ ಈ ಶಿಲಾವಿಗ್ರಹ ವಟ್ಟು ಕೆತ್ತನೆಯ ಚಿತ್ರಣವಿದೆ. ಅಳತೆಗೆ ತಕ್ಕಂತೆ ವಿಗ್ರಹದ ಭಾಗಗಳನ್ನು ಬಿಡಿಸಿದ್ದಾರೆ.

ದೇವಾಲಯದ ಬಲಭಾಗದ ಗೋಡೆಯ ಮೇಲೆ ನವ ಮಾತೃಕೆಯ ದೇವತೆಗಳನ್ನು ಒಂದೇ ಕಲ್ಲಿನಲ್ಲಿ ಬಿಡಿಸಿ ಪ್ರತಿಷ್ಠಾಪನೆಗೊಳಿಸಲಾಗಿದೆ. ನವರಂಗ ಸಭಾಮಂಟಪದ ಮಧ್ಯದಲ್ಲಿ ನಂದಿ ವಿಗ್ರಹ ಪ್ರತಿಷ್ಠಾಪಿಸಲಾಗಿದ್ದು ಎಡಗಾಲನ್ನು ಮುಂದೆ ಮಾಡಿ ಮಲಗಿದ ಭಂಗಿಯಲ್ಲಿ ನಿರ್ಮಿಸಿದ್ದಾರೆ. ಕೊರಳಲ್ಲಿ ಗೆಜ್ಜೆ ಸರ, ಗಂಟೆ, ಗುಮಡಿ ಹಾಗೂ ಹಣೆಯಲ್ಲಿ ಹಣೆಕಟ್ಟು, ಕೋಡಿನಲ್ಲಿ ಕೋಡಣಸು, ಮುಖವಾಡ, ಬೆನ್ನಿನ ಮೇಲೆ ಜೂಲವಿದ್ದು, ವಿವಿಧ ಚಿತ್ರಗಳಿಂದ ಅಲಂಕಾರಗೊಳಿಸಲಾಗಿದೆ.

ದೇಗುಲದ ಹೊರ ಆವರಣದಲ್ಲಿ ಚಿಕ್ಕ ಶಾಸನವಿದ್ದು ಚಾಲುಕ್ಯ ವಲ್ಲಭನನ್ನು ವರ್ಣಿಸಿದ ವಿವರ ಇದರಲ್ಲಿದೆ. ಗ್ರಾಮದ ಇತಿಹಾಸ ಸಾರುವ ಹಲವು ಶಿಲಾಲೇಖಗಳು ನಮಗೆ ಗೋಚರಿಸುತ್ತವೆ. ಕಡಕೋಳದಲ್ಲಿ ಗ್ರಾಮದೇವಿ, ಹನುಮಂತದೇವರು, ಬಸವಣ್ಣ ದೇವರ ದೇವಾಲಯಗಳನ್ನು ಅಂದಿನ ಆಳರಸರು ನಿರ್ಮಿಸಿ ಇವೆಲ್ಲವುಗಳ ಶ್ರೇಯೋಭಿವೃದ್ಧಿಗೆ ಭೂದಾನ ಗೈದ ವಿವರ ಇದನ್ನು ಪುಷ್ಟೀಕರಿಸುತ್ತದೆ.

[ದೇವಾಲಯದ ಕ್ಷೇತ್ರ ಕಾರ್ಯ ಕೈಗೊಂಡಾಗ ಸಂಶೋಧನೆಗೆ ಸಹಾಯ ಸಹಕಾರ ನೀಡಿದ ಶ್ರೀ ಶಂಕರಗೌಡ ಪಾಟೀಲ ಸಾ. ಶಿರೂರ, ಗಡೆಪ್ಪನವರ, ಈಶ್ವರಪ್ಪ ಗುಂಜಾಳ ಚನವೀರಪ್ಪ ಮಲ್ಲಿಗವಾಡ, ಶ್ರೀ ಮಂಜುನಾಥ ಕಡ್ಲಿ, ಪ್ರೊ. ರಾಜೇಂದ್ರಪ್ಪ, ಎಂ.ಬಿ.ಎಚ್. ಪಾಟೀಲ, ಶ್ರೀಮತಿ ಗಿರಿಜಾ ಕ. ಮಲ್ಲಿಗವಾಡ, ಎಸ್.ಎನ್. ಬಸವಣ್ಣವರ, ಡಾ. ಮೂಗಪ್ಪ ತಡಸ, ಮಹಾದೇವಪ್ಪ ಲಕ್ಕಪ್ಪನವರ ಶ್ರೀ ಗಿರೀಶ ಪಾಟೀಲ ಮೊದಲಾದವರು ಸಹಕರಿಸಿದ್ದಕ್ಕೆ ಅಭಿನಂದನೆಗಳು.]

೫೬

ಪಾಶುಪತ ಮತ್ತು ಕಾಳಾಮುಖ ಸಂಪ್ರದಾಯಗಳು

ಎಂ.ಎನ್. ಪ್ರಭಾಕರ್*

ಶೈವಾಗಮಗಳು ಪ್ರಕಟಗೊಳ್ಳುವ ಮುನ್ನ ಶೈವಧರ್ಮದ ಹೆಸರಿನಲ್ಲಿ ಪಾಶುಪತವು ಪ್ರಚಲಿತದಲ್ಲಿತ್ತು. ಪಶು ಮತ್ತು ಪತಿ ಇವೆರಡರ ನಡುವಣ ಸಂಬಂಧವೇ ಪಾಶುಪತಕ್ಕೆ ನಾಂದಿ. ಪಶು ಮತ್ತು ಪತಿ ಶಬ್ದಗಳು ಕ್ರಮವಾಗಿ ಕಾರ್ಯಕಾರಣಗಳನ್ನು ಪ್ರತಿನಿಧಿಸುತ್ತವೆ. ಕಾರ್ಯವು ಪರತಂತ್ರಾಭಿವ್ಯಕ್ತಿ; ಸ್ವಾತಂತ್ರ್ಯವುಳ್ಳದ್ದಲ್ಲ. ಕಾರಣ ಮಾತ್ರದಿಂದಲೇ ಪರತಂತ್ರತ್ವ ಕಾರಣವು ಈಶ್ವರ ಸಂಬಂಧೀ ಪಾಶುಪತದ ಅಂತಿಮ ಗುರಿಯು ಮೋಕ್ಷ ಸಾಧನೆಯೇ ಆಗಿದೆ. ಇದನ್ನು ಪರಮೈಶ್ವರ್ಯ ಎಂದು ಗುರುತಿಸಲಾಗಿದೆ. ಪಾಶುಪತವು ಯೌಗಿಕ ಸಾಧನೆಗಳ ಹಾಗೂ ವ್ರತಾಚರಣೆಗಳ ಮೊತ್ತವಾಗಿದ್ದು ಪಾಶುಪತಯೋಗ, ಪಾಶುಪತವ್ರತ ಎಂಬ ಹೆಸರುಗಳಲ್ಲಿ ಪ್ರಸಿದ್ಧಿ ಪಡೆದಿತ್ತು. ಪಾಶುಪತದ ಪ್ರಾಚೀನ ಉಲ್ಲೇಖ ಮಹಾಭಾರತ ಕಾವ್ಯದಲ್ಲಿ ಲಭ್ಯ.

ಮಹಾಭಾರತ ಕಾವ್ಯದಲ್ಲಿ ಪರತತ್ವದ ಅನ್ವೇಷಣೆಯು ಭಕ್ತಿ ಹಾಗೂ ಯೋಗಗಳ ಮೂಲಕ ಕ್ರಮವಾಗಿ ಪಾಂಚರಾತ್ರ ಮತ್ತು ಪಾಶುಪತ ಸಂಪ್ರದಾಯಗಳಲ್ಲಿ ಪ್ರಕಟಗೊಂಡವು. ಮಹಾಭಾರತದಲ್ಲಿ ಇವುಗಳ ಉಲ್ಲೇಖವನ್ನು ಕಾಣಬಹುದು.

ಸಾಂಖ್ಯಂ ಯೋಗಂ ಪಾಂಚರಾತ್ರಂ ವೇದಾ ಪಾಶುಪತಂ ತಥಾ
ಜ್ಞಾನಾನಿ ವತಾನಿ ರಾಜರ್ಷೇ ವಿದ್ಧಿ ನಾನಾ ಮತಾನಿ ವೈ॥
[ಮಹಾಭಾರತ: ಶಾಂತಿಪರ್ವ: ಅ. ೩೪೯: ಗ್ಲೋ. ೬೪]

ಸಾಂಖ್ಯಯೋಗ, ಪಾಂಚರಾತ್ರ, ವೇದ ಹಾಗೂ ಪಾಶುಪತವು ಸೀಮಿತ ಜ್ಞಾನರಾಶಿಗಳಾಗಿ ಉಳಿಯದೆ, ಪ್ರಚಲಿತದಲ್ಲಿದ್ದ ಸಂಪ್ರದಾಯಗಳನ್ನೂ ಪ್ರತಿನಿಧಿಸುತ್ತವೆ. ಸಾಂಖ್ಯಯೋಗಗಳು ಶುದ್ಧದರ್ಶನ ಸ್ವರೂಪಗಳನ್ನು ಪ್ರತಿನಿಧಿಸಿದರೆ ಪಾಂಚರಾತ್ರ ಪಾಶುಪತವು ಅನ್ವಯಿಕೆ ಶಾಸ್ತ್ರ ಸಂಪ್ರದಾಯಗಳೆನಿಸಿವೆ. ಇವೆರಡು ಸಾಂಖ್ಯ ಯೋಗ ದರ್ಶನಗಳನ್ನು ಆಧರಿಸಿ ಬೆಳೆದಿವೆ. ಮಹಾಭಾರತಕಾವ್ಯದ ಆರಂಭದಲ್ಲಿ ಗುರುತಿಸಲ್ಪಟ್ಟು ಸಾತ್ವತ ಧರ್ಮವು ಭಕ್ತಿಯ ನೆಲೆಯಲ್ಲಿ ಕಾಣಿಸಿಕೊಂಡು, ತದನಂತರದ ಕಾಲದಲ್ಲಿ ಪಾಂಚರಾತ್ರದಲ್ಲಿ ಲೀನವಾಯಿತು. ಪಾಂಚರಾತ್ರವು ತಾತ್ವಿಕವಾಗಿ ಸಾಂಖ್ಯ ತತ್ವಗಳನ್ನೂ ಚತುರ್ವ್ಯೂಹಗಳ ಪ್ರಮೇಯವನ್ನು ಸ್ವೀಕರಿಸಿ ವೃದ್ಧಿಸಿತು. ಪಾಶುಪತವು ಯೋಗಸಾಧನೆಯನ್ನು ಪಾಶುಪತಯೋಗದಡಿಯಲ್ಲಿ, ಆಚರಣೆಗಳನ್ನು ಪಾಶುಪತ ವ್ರತದ ಹೆಸರಿನಲ್ಲಿ ಒಳಗೊಂಡು ಬೆಳೆಯಿತು. ಪಾಶುಪತವು ಶಿವನಿಂದಲೇ ಉದಿಸಿದ ಜ್ಞಾನವೆಂದು ಹೇಳಲಾಗಿದೆ.ಆದರೆ ಹೆಚ್ಚಿನ ವಿವರಗಳನ್ನು ಕಾಣಲಾಗದು. (ರಂಗಸ್ವಾಮೀ ೧೯೯೦. ೨೨೫೮/೨೬)

ಉಮಾಪತಿರ್ಭೂತ ಪತಿಃ ಶ್ರೀಕಂಠೋ ಬ್ರಹ್ಮಣಃ ಸುತಃ
ಉಕ್ತವಾನಿದಮವ್ಯಗ್ರೋ ಜ್ಞಾನಂ ಪಾಶುಪತಂ ಶಿವಃ
[ಶಾಂತಿಪರ್ವ: ಅ. ೩೪೯. ಶ್ಲೋ: ೬೭]

ಮಹಾಭಾರತಕ್ಕೆ ಮುನ್ನ ಪ್ರಚಲಿತದಲ್ಲಿದ್ದ ಶೈವಧರ್ಮದ ಸ್ವರೂಪ ಲಭ್ಯವಿಲ್ಲ. ಹರಪ್ಪ, ಮಹೆಂಜೊದಾರೋ ಉತ್ಖನನಗಳಲ್ಲಿ ದೊರೆತ ಮುದ್ರೆಯೊಂದನ್ನು ಪಾಶುಪತಿಯ ಮುದ್ರೆ ಎಂದು ಅರ್ಥೈಸಲಾಗಿದೆ. ಆರಂಭದ ಶೈವ ಸ್ವರೂಪವನ್ನು ಜಾನಪದ ಮೂಲಕ್ಕೆ ಆರೋಪಿಸಲು ಸಾಧ್ಯವೇ?

ಕ್ರಿ.ಶ. ಹದಿನಾಲ್ಕನೆಯ ಶತಮಾನದಲ್ಲಿ ಸಾಯಣ ಮಾಧವಾಚಾರ್ಯರಿಂದ ಸರ್ವದರ್ಶನ ಸಂಗ್ರಹವು ರಚಿತವಾಗಿದೆ. ಈ ಗ್ರಂಥದಲ್ಲಿ "ಲಾಕುಲೀಶ–ಪಾಶುಪತ ದರ್ಶನ"ವಿದೆ. ಈ ದರ್ಶನವು "ಅಥಾತಃ ಪಶುಪತೇ: ಪಾಶುಪತ ಯೋಗವಿಧಿಂ ವ್ಯಾಖ್ಯಾಸ್ವಾಮಃ" ಎಂದು ಆರಂಭವಾಗುತ್ತದೆ." ತದುಕ್ತಂ ಲಾಕುಲೀಶೇನ" ಎಂಬ ಒಕ್ಕಣೆಯೂ ಉಂಟು. ಪಾಶುಪತ ಸಂಪ್ರದಾಯವು ಲಾಕುಲೀಶನ ಹೆಸರಿನಿಂದ ಪ್ರಚಾರಗೊಂಡಿತು. ಕೂರ್ಮ ಪುರಾಣ, ವಾಯುಪುರಾಣ, ಲಿಂಗಪುರಾಣ, ಶಿವಪುರಾಣಗಳಲ್ಲಿ ಲಾಕುಲೀಶನ ಪ್ರಸ್ತಾಪವಿದೆ. ಕನ್ನಡ ಶಾಸನಗಳಲ್ಲಿಯೂ ಲಾಕುಳಾಗಮ, ಲಾಕುಳ ದೇವಾಗಮಗಳ ಪ್ರಸ್ತಾಪವಿದೆ. ಸರ್ವದರ್ಶನ ಸಂಗ್ರಹದಲ್ಲಿ ಅಂದಿನವರೆಗೆ ಲಭ್ಯವಿದ್ದ ಗ್ರಂಥ, ಸಾಹಿತ್ಯಗಳನ್ನಾಧರಿಸಿ, ಪ್ರಮುಖ ವಿಷಯಗಳನ್ನು ಅಚ್ಚುಕಟ್ಟಾಗಿ ಸಂಗ್ರಹಿಸಿ 'ಲಾಕುಲೀಶ

* # ೮೨, ಬ್ಲಾಕ್:೧೭, ಬ್ಯಾಂಕ್‌ಕಾಲೋನಿ, ಶ್ರೀರಾಂಪುರ ಎರಡನೇ ಹಂತ, ಮೈಸೂರು - ೫೭೦೦೨೩

ಪಾಶುಪತ'ವೆಂದು ವಿವರಿಸಲಾಗಿದೆ. ಈ ಗ್ರಂಥದ ವಿವರಗಳು ಮೊದಲು ಪ್ರಕಟಗೊಂಡದ್ದು ಕ್ರಿ.ಶ. ೧೮೨೮ರಲ್ಲಿ ವಿದ್ವಾಂಸ ವಿಲ್ಸನ್, ಏಷ್ಯಾಟಿಕ್ ರಿಸರ್ಚಸ್ ಜರ್ನಲ್‌ನಲ್ಲಿ ಹಿಂದೂ ಧರ್ಮದ ಧಾರ್ಮಿಕ ಸಂಪ್ರದಾಯಗಳ ರೂಪುರೇಷೆಯನ್ನು ಗುರುತಿಸಿ ಲೇಖನವೊಂದನ್ನು ಪ್ರಕಟಿಸಿದ್ದರು. ಈ ಲೇಖನಕ್ಕೆ ಸರ್ವದರ್ಶನ ಸಂಗ್ರಹವು ಆಧಾರವಾಗಿತ್ತು. ಕ್ರಿ.ಶ. ೧೮೫೮ರಲ್ಲಿ ಈಶ್ವರಚಂದ್ರ ವಿದ್ಯಾಸಾಗರ ಅವರಿಂದ ಸರ್ವದರ್ಶನ ಸಂಗ್ರಹವು ಸಂಪಾದಿತವಾಗಿ ಪ್ರಕಟವಾಯಿತು.

ಕ್ರಿ.ಶ. ೧೯೪೦ರಲ್ಲಿ ತಿರುವನಂತಪುರದಿಂದ ಅನಂತ ಕೃಷ್ಣಶಾಸ್ತ್ರಗಳಿಂದ ಸಂಪಾದಿತವಾದ ಪಾಶುಪತ ಸೂತ್ರಗಳು ಕೌಂಡಿನ್ಯನ ಪಂಚಾರ್ಥಭಾಷ್ಯದೊಂದಿಗೆ ಪ್ರಕಟವಾಯಿತು. ಕಾರ್ಯಕಾರಣ–ಯೋಗ–ವಿಧಿ–ದುಃಖಾಂತಗಳೇ ಪಂಚಾರ್ಥಗಳು; ಕೌಂಡಿನ್ಯಭಾಷ್ಯದಲ್ಲಿ ಇವನ್ನು ವಿವರಿಸಲಾಗಿದೆ. ಈಗ ಲಭ್ಯವಿರುವ ಪಾಶುಪತ ಸೂತ್ರಗಳು ಶುದ್ಧಪಾಠವೆಂದು ಪೇಳಲಾಗದು. ಈಗ ಲಬ್ಧವಿರುವ ಪಾಶುಪತ ಸೂತ್ರಗಳೇ ಪಾಶುಪತಕ್ಕೆ ಸಂಬಂಧಿಸಿದ ಪ್ರಾಚೀನ ಸಾಹಿತ್ಯವೆನಿಸಿದೆ. ಪಾಶುಪತ ಸೂತ್ರಗಳಿಗೆ ರಚಿಸಲಾಗಿರುವ ರಾಶೀಕರ ಭಾಷ್ಯ, ಪಂಚಾರ್ಥ–ಭಾಷ್ಯದೀಪಿಕಾ ಮೊದಲಾದ ಗ್ರಂಥಗಳನ್ನು ಸರ್ವದರ್ಶನ ಸಂಗ್ರಹಕಾರರು ಉಲ್ಲೇಖಿಸಿದ್ದಾರೆ. ಆದರೆ ಈ ಗ್ರಂಥಗಳು ಇಂದು ಲಭ್ಯವಿಲ್ಲ.

ಆಧುನಿಕ ಜಗತ್ತಿಗೆ ಪಾಶುಪತ ಸೂತ್ರಗಳು ಕೇವಲ ಕಳೆದೆರಡು ಶತಮಾನಗಳಿಂದ ಪರಿಚಯಿಸಲ್ಪಟ್ಟಿದ್ದರೂ, ಪ್ರಾಚೀನ ಆಚಾರ್ಯ ಪರಂಪರೆಗೆ, ವೇದಾಂತಿಗಳಿಗೆ ಕ್ರಿ.ಶ. ಎಂಟು–ಒಂಬತ್ತನೆಯ ಶತಮಾನದಲ್ಲಿ ಇದರ ಪೂರ್ಣ ಮಾಹಿತಿ ಲಭ್ಯವಿತ್ತು. ಆಚಾರ್ಯ ಶಂಕರರು ಬ್ರಹ್ಮಸೂತ್ರಕ್ಕೆ ಬರೆದ ಭಾಷ್ಯದಲ್ಲಿ "ಪಾಶುಪತಾಧಿಕರಣ" ಪ್ರಕರಣದಲ್ಲಿ ಪಂಚಾರ್ಥಗಳನ್ನು ಕುರಿತು ಹೇಳಿದ್ದಾರೆ. ಈ ಭಾಷ್ಯದ ಮೇಲೆ ಟೀಕೆಯನ್ನು ಬರೆದ ಶಂಕರಾನಂದನೂ ಪಂಚಾರ್ಥಗಳನ್ನು ತನ್ನ ಗ್ರಂಥದಲ್ಲಿ ವಿಮರ್ಶಿಸಿದ್ದಾನೆ.

ವಾಚಸ್ಪತಿ ಮಿಶ್ರನು ರಚಿಸಿದ "ಭಾಮತಿ"ಯಲ್ಲಿ ಪಾಶುಪತರಲ್ಲಿದ್ದ ಗೂಢಾಚಾರಣೆಯನ್ನು ಗಮನಿಸಿದ್ದಾನೆ. ಯಾಮುನಾಚಾರ್ಯರು ತಮ್ಮ "ಆಗಮ ಪ್ರಾಮಾಣ್ಯ"ದಲ್ಲಿ "ಗೂಢಾಚಾರ ಮುಖಾ" ಎಂದು ಪ್ರಸ್ತಾಪಿಸಿದ್ದಾರೆ. ಯಾಮುನಾಚಾರ್ಯರೂ, ರಾಮಾನುಜಾಚಾರ್ಯರೂ ದಕ್ಷಿಣದಲ್ಲಿ ನೆಲಸಿದ್ದ ಕಾಳಾಮುಖರನ್ನು ಸ್ಪಷ್ಟವಾಗಿ ಹೆಸರಿಸಿದ್ದಾರೆ.

ಮಹಾಭಾರತ ಕಾವ್ಯದ ಉಲ್ಲೇಖದೊಂದಿಗೆ ಶೈವಧರ್ಮದ ಆರಂಭವನ್ನು ಲಾಕುಲೀಶ–ಪಾಶುಪತದೊಂದಿಗೆ ಗುರುತಿಸಬೇಕು. ಡಾ. ಆರ್.ಜಿ. ಭಂಡಾರ್‌ಕರ್‌ರವರು, ಲಾಕುಲೀಶನ ಕಾಲವನ್ನು ಕ್ರಿ.ಶ. ಒಂದನೆಯ ಅಥವಾ ಎರಡನೆಯ ಶತಮಾನವೆಂದಿದ್ದಾರೆ. ಪತಂಜಲಿಯ ಶಿವಭಾಗವತರ ಉಲ್ಲೇಖ ಕ್ರಿಸ್ತಪೂರ್ವಕ್ಕೆ ಒಯ್ಯುತ್ತದೆ ಎಂದು ಕೆಲವು ವಿದ್ವಾಂಸರ ಅಭಿಪ್ರಾಯ ಈ ಪತಂಜಲಿ ಯಾರು? ಎನ್ನುವುದೇ ಸನ್ನಿಗ್ಧ (ಕ್ರಿ.ಶ. ಮೂರನೆಯ ಶತಮಾನದ ಕುಷಾಣರ ನಾಣ್ಯಗಳಲ್ಲಿ ತ್ರಿಶೂಲ ಹಿಡಿದ ಶಿವನ ಚಿತ್ರಣವಿದೆ. ಪಾಶುಪತವು ಶಿವನಿಂದಲೇ ಉದಿಸಿದ್ದು ಎನ್ನುವುದು ಮಹಾಭಾರತದೊಳಗಿನ ಉಲ್ಲೇಖ. (ರಂಗಸ್ವಾಮಿ. ೧೯೮೨, ೨೫೯೦/೨೫)

ಮಯಾ ಪಾಶುಪತಂದಕ್ಷ ಶುಭಮುತ್ಪಾದಿತಂ ಪುರಾ
ತಸ್ಯಚೀರ್ಣಸ್ಯ ತತ್ಸಮ್ಯಕ್ಫಲಂ ಭವತಿ ಪುಷ್ಕಲಂ ॥
[ಶಾಂತಿಪರ್ವ: ಅ. ೨೮೪ ಶ್ಲೋ: ೧೯೦]

ಶಿವನು ದಕ್ಷನಿಗೆ ಯಜ್ಞಾನಂತರ ನೀಡಿದ ಉಪದೇಶದಲ್ಲಿ ಈಶ್ಲೋಕವಿದೆ. ಶೈವ ಧರ್ಮಾನುಸಾರಿಗಳನ್ನು ಮಾಹೇಶ್ವರರೆಂದೇ ಮೊದಲಿನಿಂದಲೂ ಗುರುತಿಸಲಾಗಿದೆ. ಕ್ರಿಸ್ತಶತಕದ ಆರಂಭದಿಂದ ಶೈವಮತದ ಸುಳಿವುಗಳು ಲಭ್ಯ. ಮೊದಲಿಗೆ ಪಾಸುಪತ ಸಂಪ್ರದಾಯದದ ವಿವರಗಳನ್ನೇ ಗಮನಿಸಬೇಕು.

ಶೈವಮತದಲ್ಲಿರುವ ಪ್ರಭೇದಗಳನ್ನು ಈವರೆಗೆ ಖಚಿತವಾಗಿ ಗುರತಿಸಲು ಸಾಧ್ಯವಾಗಿಲ್ಲ. ಆಚರಣೆಗಳ ವ್ಯತ್ಯಯದಿಂದ ಈ ಪ್ರಭೇದಗಳು ಎಂದು ದಲಾಲ್‌ರವರು ಪ್ರಕಟಿಸಿರುವ ಷಡ್ದರ್ಶನ ಸಮುಚ್ಚಯದಲ್ಲಿ ಹರಿಭದ್ರ ಸೂರಿಯು ಸ್ಪಷ್ಟಪಡಿಸಿದ್ದಾನೆ. (ದಲಾಲ್ ೧೯೨೦. ಪರಿಶಿಷ್ಟ II, ಪು.೩೦)

ಆಧಾರ ಭಸ್ಮಕೌಪೀನ ಜಟಾಯಜ್ಞೋಪವೀತಿನಃ
ಸ್ವಸ್ವಾಚಾರಾದಿ ಭೇದೇನ ಚತುರ್ದಾಸ್ಸುಸ್ತಪಸ್ವಿನಃ ॥
ಶೈವಾಃ ಪಾಶುಪತಾಶ್ಚೈವ ಮಹಾವ್ರತಧರಸ್ತಥಾ
ತುಯಾಃ ಕಾಳಾಮುಖಾ ಮುಖ್ಯಾಭೇದಾ ಏತೇ
ತಪಸ್ವಿನಪಿಂ ॥

ಈ ವಿವರಣೆಯ ಪ್ರಕಾರ ಶೈವರಲ್ಲಿ ಪ್ರಮುಖವಾಗಿ ನಾಲ್ಕು ಭೇದಗಳು. ಶೈವ, ಪಾಶುಪತ, ಮಹಾವ್ರತಧರ, ಕಾಳಾಮುಖ ಎನ್ನಲಾಗಿದೆ. ಕೆಲವೆಡೆ ಕಾಳಾಮುಖರಿಗೆ ಪರ್ಯಾಯವಾಗಿ ಕಟಕಸಿದ್ಧಾಂತಿ ಅಥವಾ ಕಾರುಣಿಕ ಸಿದ್ಧಾಂತಿ ಎನ್ನಲಾಗಿದೆ. ಕೆಲವೆಡೆ ಕಾಪಾಲಿಕರ ಉಲ್ಲೇಖವಿದೆ.

ಬ್ರಹ್ಮಶಿವನ ಸಮಯ ಪರೀಕ್ಷೆಯಲ್ಲಿ ಕಾಳಾಮುಖ್ಯಾಖ್ಯ ಕಪಾಳಿ ಪಾಶುಪತ ಶೈವರೊಳೋರ್ವ ಮಹಾವ್ರತಿ ಗೊರವನ್ ರುದ್ರ ಮಾರ್ಗದಿ ನಡೆವನ್ ಉಳಿದ ಮೂವರ್ ನಡೆಯರ್" ಎಂದಿದೆ (ಚಿದಾನಂದಮೂರ್ತಿ ೧೯೬೬ ಪು. ೧೩೬ ಅಡಿಟಿಪ್ಪಣಿ) ಮಹಾವ್ರತಿಯ ಬಗ್ಗೆಯಾಗಲಿ, ರುದ್ರಮಾರ್ಗದ ವಿವರಗಳಾಗಲಿ ಖಚಿತವಾಗಿ ದೊರೆತಿಲ್ಲ. ಇದು

ಕಾಳಾಮುಖರಿಗೆ ಸಂಬಂಧಿಸಿದ್ದೇ ಅಥವಾ ಕಾಪಾಲಿಕರಿಗೆ ಸಂಬಂಧಿಸಿದ್ದೇ ಎನ್ನುವುದು ಸ್ಪಷ್ಟವಿಲ್ಲ.

ರಾಜಶೇಖರ್ ಸೂರಿ ರಚಿಸಿದ ಗ್ರಂಥವೂ "ಷಡ್ದರ್ಶನ ಸಮುಚ್ಚಯ" ವೆಂದೇ ಹೆಸರಿಸಿದ್ದು, ಇವನ ಪ್ರಕಾರ ಜೈನ, ಸಾಂಖ್ಯ, ಜೈಮಿನೀಯ, ಯೌಗ, ವೈಶೇಷಿಕ, ಸೌಗತ ಎಂದು ಷಡ್ದರ್ಶನಗಳನ್ನು ಗುರುತಿಸಲಾಗಿದೆ. "ಅಥ ಯೌಗ ಮತಂ ಬ್ರೂಮಃ ಶೈವಮಿತ್ಯ ಪರಾಭಿಧಂ" ಎಂದು ಶೈವಮತದ ಆರಂಭದ ಒಕ್ಕಣೆ ಇದೆ. ಯೋಗದ ಆಚರಣೆ ಸಾಮಾನ್ಯವಾಗಿ ಎಲ್ಲರಲ್ಲಿಯೂ ಹರಡಿತ್ತು. ತರ್ಕ, ಪ್ರಮಾಣ, ಮುಕ್ತಿ ಮೊದಲಾದ ವಿಚಾರಗಳಲ್ಲಿ ತಾತ್ವಿಕ ಭಿನ್ನಾಭಿಪ್ರಾಯಗಳಿದ್ದರೂ ಯೋಗದ ಆಚರಣೆ ಸಾರ್ವತ್ರಿಕವಾಗಿ ಪ್ರಚಲಿತದಲ್ಲಿತ್ತು. ಅಷ್ಟಾಂಗ ಯೋದಲ್ಲಿ ನಿಷ್ಣಾತರಾದ ಶೈವರಲ್ಲಿ ವೈಶೇಷಿಕ, ನೈಯ್ಯಾಯಿಕ ದರ್ಶನಗಳ ಆಚಾರ್ಯರನ್ನು ಕಾಣಬಹುದು. ರಾಜಶೇಖರ ಸೂರಿ ವಿವರಿಸಿದ ಶೈವ ಮತದ ವಿವರಗಳು ಇಂತಿವೆ. (ದಲಾಲ್ ೧೯೨೦ ಪರಿಶಿಷ್ಟ , ಪು. ೩೫)

ತೇ ದಂಡಧಾರಿಣಿ: ಪ್ರೌಢಕೌಪೀನ ಪರಿಧಾಯಿನಃ
ಕಂಬಲಿಕಾ ಪ್ರಾವರಣಾಜಟಾಪಟಲ ಶಾಯಿನಃ
ಭಸ್ಮೋದ್ಧೂಲನಕರ್ತಾರೋ ನೀರಸಾಹಾರ ಸೇವಿನಃ
ದೋಮರ್ಲಾಲೇ ತುಂಬಕ ಧೃತಃ ಪ್ರಾಯೇಣವನವಾಸಿನಃ
ಆತಿಥ್ಯಕರ್ಮ ನಿರತಾಃ ಕಂದಮೂಲ ಫಲಾಶನಾಃ

ಇವರು ದಂಡಧಾರಿಗಳು, ಕೌಪೀನಧಾರಿಗಳು, ಕಂಬಳಿ ಹೊದ್ದವರು, ಜಟಾಧಾರಿಗಳು, ಭಸ್ಮಲೇಪಿತರು, ಅರಣ್ಯವಾಸಿಗಳು, ಅತಿಥಿ ಸತ್ಕಾರದಲ್ಲಿ ನಿಷ್ಠೆಯುಳ್ಳವರು, ಸರಳ ಆಹಾರ ಸೇವಿಸುವಂಥವರು, ಗೆಡ್ಡೆ ಗೆಣಸು, ಹಣ್ಣು ಹಂಪಲುಗಳನ್ನು ತಿಂದು ಜೀವಿಸತಕ್ಕವರು. ಬಹುಶಃ ಅರಣ್ಯ ವಾಸಿಗಳಾದ್ದರಿಂದ ಸರಳ ಆಹಾರ ಕ್ರಮವಿರಬಹುದು. ದೋಮರ್ಲಾಲೇ ತುಂಬಕ ಧೃತಃ – ಕಂಕುಳಲ್ಲಿ ಸೋರೆಕಾಯಿ (ಯಂಥದ್ದನ್ನು) ಹಿಡಿದಿರುವವರು ಎಂದಿದೆ; ಇದರ ಅರ್ಥ ಸ್ಪಷ್ಟವಾಗದು. ಲಾಗುಡದ ರೂಪ ಕೆಲವೊಮ್ಮೆ ತುಂಬಕದಂತೆ ಶೈವರಲ್ಲಿ ಲಾಕುಲೀಶನ ಚಿತ್ರಣವಿದೆ. ಲಾಕುಲೀಶನೊಂದಿಗೆ ಲಗುಡ ಅಥವಾ ಲಾಗುಡವನ್ನು ಗುರುತಿಸಬಹುದು. ದಂಡಧಾರಿ ಎಂದು ಆರಂಭದಲ್ಲಿ ಗುರುತಿಸಲಾಗಿದೆ.

ಯತಿಗಳ ಹಾಗೂ ನೈಷ್ಠಿಕರ ಆಚಾರ ವಿಚಾರಗಳನ್ನು ಕಂಡು, ಇವರ ಕೈಯಲ್ಲಿ ದೇವಾಲಯಗಳ ಆಡಳಿತವನ್ನು ಒಪ್ಪಿಸಲಾಗುತ್ತಿತ್ತು. ಇವರಲ್ಲಿ ಬಹುಜನರು ಶ್ರೇಷ್ಠ ವಿದ್ವಾಂಸರೂ ಹೌದು. ಘಟಿಕಾಸ್ಥಾನಗಳನ್ನು ನೋಡಿಕೊಳ್ಳುತ್ತಿದ್ದರು. ಈ ಪರಿಸ್ಥಿತಿಯಲ್ಲಿ ಅರಣ್ಯವಾಸವನ್ನು ತೊರೆದು ದೇವಾಲಯಗಳಲ್ಲಿ ಆಶ್ರಯ ಪಡೆದರು. ಇವರ ನೈಷ್ಠಿಕತೆಯಲ್ಲಿ ಕುಂದುಂಟಾದರೆ ಇವರ ಬದಲಿಗೆ ಬೇರೆ ಯತಿಗಳನ್ನು ನೇಮಿಸುವ ಅಧಿಕಾರ ಅಲ್ಲಿನ ಮಹಾಜನಗಳಿಗೆ ಇತ್ತು. ಈ ವಿವರಗಳನ್ನು ಅಂದಿನ ಶಾಸನಗಳು ಸ್ಪಷ್ಟಪಡಿಸಿವೆ:

"ಇದು ನೈಷ್ಠಿಕಸ್ಥಾನಮಿಲ್ಲಿ ನೈಷ್ಠಿಕರಲ್ಲದ ತಪೋಧನ ಮಿರಲಾಗದು. ಬ್ರಹ್ಮಚರ್ಯದಿಂದ ಕೆಟ್ಟುನಡೆವ ತಪೋಧನರಂ ನಾಡನಾಳ್ವರಸುಂ ಮನ್ನೆಯನು ಮೊರಿಂಗೆಱಿಯ ಪೆನ್ನಿರ್ವರೂರೊಡೆಯರು ಮಿರ್ದು ಪೊರ ಮಡಿಸಿಯವರ ಸಂತತಿಯ ನೈಷ್ಠಿಕರ ನಿರುಸುವರಿದನುಪೇಕ್ಷೆಗೆಯ್ದವರ್ಗೀ ಧರ್ಮಮನಳಿದ ದೋಷಮಕ್ಕು....."

[ಬಳ್ಳಾರಿಜಿಲ್ಲೆ ಶಾಸನ **ಸಂಪುಟ** : ಹಗರಿಬೊಮ್ಮನಹಳ್ಳಿ: ಕ್ರಿ.ಶ. ೧೧೪೫]

ದೇವಾಲಯಗಳಿಗೆ ದಾನ ನೀಡುವಾಗ ಇವರನ್ನು ವಿಶೇಷವಾಗಿ ಗೌರವಿಸಿ ಇವರ ಸಮ್ಮುಖದಲ್ಲಿ ದಾನದತ್ತಿಗಳನ್ನು ನೀಡಿ, ಅವುಗಳ ಉಸ್ತುವಾರಿಯನ್ನು ವಹಿಸುತ್ತಿದ್ದರು. "ಕಾಲಂಕರ್ಚಿ" ಎಂಬ ವಿಶೇಷ ಪ್ರಯೋಗದಲ್ಲಿ ಇವೆಲ್ಲವನ್ನೂ ಒಳಗೊಂಡಿದೆ ಎನ್ನಬಹುದು. ಈ ರೀತಿ ನೀಡಿದ ದಾನಗಳನ್ನು ದೇವದಾನಗಳೆನ್ನಲಾಗಿದೆ. ಇವರನ್ನು ಸ್ಥಾನಪತಿಗಳು, ಸ್ಥಾನಿಕರು ಎಂದು ಗುರುತಿಸಲಾಗುತ್ತಿತ್ತು. ಈ ವಿವರಗಳನ್ನು ಶಾಸನಗಳಲ್ಲಿ ಕಾಣಬಹುದು.

ಶಾಸನಗಳಲ್ಲಿ ಶೈವ, ಶುದ್ಧಶೈವ, ಪಾಶುಪತ, ಮಹಾಪಾಶುಪತ, ದೇಶಾಂತರಿಪಾಶುಪತ, ಅಭಿನವ ಪಾಶುಪತ, ಕಾಪಾಲಿಕ, ಕಾಳಾಮುಖ ಮೊದಲಾದ ಉಲ್ಲೇಖಗಳನ್ನೂ ಕಾಣಬಹುದು. ಇವರಲ್ಲಿ ಶ್ರೌತಿಗಳೂ ಅಶ್ರೌತಿಗಳೂ ಇದ್ದರು. ಆದರೆ ವರ್ಣಾಶ್ರಮದ ಕಟ್ಟುಪಾಡುಗಳು ಎಲ್ಲಾ ಶೈವ ಸಂಪ್ರದಾಯಿಗಳಿಗೆ ಇಲ್ಲ. ಹುಟ್ಟಿನಿಂದ ಬ್ರಾಹ್ಮಣನಾದ ಶೈವ ವರ್ಣಾಶ್ರಮ ಧರ್ಮವನ್ನು ಅನುಸರಿಸಲು ಅಡ್ಡಿ ಇಲ್ಲ. ಶೈವಸಂಪ್ರದಾಯದ ಪ್ರವೇಶಕ್ಕೆ ದೀಕ್ಷೆ ಪಡೆಯುವುದು ಅನಿವಾರ್ಯವಾಗಿತ್ತು. ಕಡೂರು ತಾಲೂಕಿನ ಬ್ರಹ್ಮ ಸಮುದ್ರದ ಶಾಸನವು ನೈಷ್ಠಿಕ ತಪೋಧನರಾದ "ಶುದ್ಧಶೈವ ಕಾಲೋತ್ತರಗಿರ್ಧ್ವ ಶ್ರೌತಿಯೊಳಗೀ ಶಂಖಮತ ಪರಮಗುಹ ಇಂದ್ರವನೀ ಕದಂಬ ವೃಕ್ಷಾನ್ವಯರುಮಪ್ಪ ಶ್ರೀಮತ್ ತ್ರಿಲೋಚನಾಚಾರ್ಯ" ಎಂದು ಗುರುತಿಸಿದೆ. ಈತ ನೈಷ್ಠಿಕ ಬ್ರಾಹ್ಮಣಯತಿ ಎನ್ನುವುದು ಸ್ಪಷ್ಟ. ಕಾಲೋತ್ತರಾಗಮ ಶೈವ ಸಿದ್ಧಾಂತದ ಉಪಾಗಮಗಳಲ್ಲೊಂದು. "ಇಂದ್ರವನೀಕದಂಬ ವೃಕ್ಷಾನ್ವಯ ಶ್ರೀಮತ್ತ್ರಿಲೋಚನಾಚಾರ್ಯ" (ಇ.ಅ. ೬೫೫ ಕಡೂರು: ೧೫೦. ಕ್ರಿ.ಶ. ೧೧೯೬) ಎಂಬ ಪದಪುಂಜ, ಬಳ್ಳಾರಿ ಜಿಲ್ಲೆಯ "ಕಾರ್ತಿಕೇಯ ತಪೋವನಾಧಿಪತಿಗಳಪ್ಪ ಶ್ರೀಮತ್ ದಂಡಾನೀ ಗದಾಧರ ಬ್ರಹ್ಮಚಾರಿ" ಪರಂಪರೆಯನ್ನು ನೆನಪಿಸುತ್ತದೆ. ಮಧ್ಯಯುಗೀನ ಕರ್ನಾಟಕದಲ್ಲಿ ಪ್ರಮುಖವಾಗಿ ಲಾಕುಲೀಶ, ಕಾಳಾಮುಖ ಪರಂಪರೆಗಳಿದ್ದವು.

ಇವುಗಳೊಂದಿಗೆ ಇತರ ಯತಿ ಸಂತತಿಗಳೂ ಅಸ್ತಿತ್ವದಲ್ಲಿದ್ದವು. ಶ್ರೀಮತ್ ದಂಡಾಸನೀಗದಾಧರ ಬ್ರಹ್ಮಚಾರಿ ಸಂತತಿ, ಆವನಿಯ "ಶ್ರೀಮತ್ ತ್ರಿಭುವನ ಕರ್ತಾರ ಭಟಾರರ ಸಂತತಿ", ಅಲಂಪುರದ "ಹತಂಪುರವರ ಪ್ರತೀಕ ಮಹೋದಯ ಸಕಳ ಭುವನೈಕನಾಥ ಶ್ರೀ ಬ್ರಹ್ಮೇಶ್ವರ ದೇವರ ಸಂತತಿ" ಇತ್ಯಾದಿಗಳನ್ನು ಹೆಸರಿಸಬಹುದು.

ಪಾಶುಪತದ ಪ್ರಾಚೀನ ಉಲ್ಲೇಖ ಶೃಂಗೇರಿಯ ಬಳಿ ಕಗ್ಗದ ಶಾಸನದಲ್ಲಿ "ಪಾಶುಪತ ಮರಿಯಾದೆ" ಎಂದಿದೆ (ಇ.ಅ. ಥ ೧೧ಶೃಂಗೇರಿ ೫೭ ಪು. ೩೩೦) ಇದರ ಕಾಲವನ್ನು (ಕ್ರಿ.ಶ. ಏಳನೆಯ ಶತಮಾನವೆಂದು ವಿದ್ವಾಂಸರು ಸೂಚಿಸಿದ್ದಾರೆ. ಕಡೂರು ತಾಲೂಕಿನ ಪಟ್ಟಣಗೆರೆ ಶಾಸನವು "ದೇಸಾಂತರಿ ಪಾಶುಪತ"ರನ್ನು ಉಲ್ಲೇಖಿಸಿದೆ. (ಇ.ಅ. ಥಿಖಖ ಕಡೂರು ೧೧೯ ಕ್ರಿ.ಶ. ೧೨೩೭) ಇವರು ಒಂದೆಡೆನಿಲ್ಲದ ಜಂಗಮಯತಿ ಪರಂಪರೆಯವರಿರಬಹುದು. ಇವುಗಳೊಂದಿಗೆ "ಅಭಿನವ ಪಾಶುಪತ" (ಬಳ್ಳಾರಿ ಜಿಲ್ಲೆ ಶಾಸನಗಳು ಹಗರಿಬೊಮ್ಮನಹಳ್ಳಿ ೨) ಕ್ರಿ.ಶ. ೧೧೪೮ ಪು ೨೫೩) "ಮಹಾಪಾಶುಪತ" (ಇ.ಅ. ನಂಜನಗೂಡು ೩೦೮ ಕ್ರಿ.ಶ. ೧೩೭೬) ಎಂಬ ಪ್ರಯೋಗಗಳೂ ದೊರೆಯುತ್ತವೆ. ಇವರುಗಳ ಆಚಾರ ವಿಚಾರಗಳ ಬಗ್ಗೆ ಹೆಚ್ಚಿನ ವಿವರವಿಲ್ಲ. ಪಾಶುಪತದ ಬಗ್ಗೆ "ಪಂಚಾಗ್ನಿಸಾಧನಪರಾಃ ಪ್ರಾಣಲಿಂಗ ಧರಾಕರೇ" ಎಂಬ ವಿವರವನ್ನು ಈ ಹಿಂದೆ ಗಮನಿಸಲಾಗಿದೆ. ಶಿವಪುರಾಣದಲ್ಲಿ "ಪಂಚಪತ್ರ ವಿಧಾನಂಚ ಪಾರ್ಥಿವೇನ ವಿಚಾರಯೇತ್" ಎಂದಿದೆ. ಡಾ. ಎಸ್.ಎಲ್. ಶ್ರೀನಿವಾಸ ಮೂರ್ತಿಯವರು ಕಳೆದ ಶತಮಾನದ ಅಂತ್ಯದವರೆಗೆ ಆಚರಣೆಯಲ್ಲಿದ್ದ ಪಾರ್ಥಿವೇಶ್ವರ ಪೂಜೆಯ ಕಡೆಗೆ ಗಮನ ಹರಿಸಿದ್ದಾರೆ. (ಇತಿಹಾಸ ದರ್ಶನ: ಸಂ. ೨೮. ೨೦೧೩ ಪು ೧೦೨-೧೦೪). ಪಾರ್ಥಿವೇಶ್ವರ ಪೂಜೆ ಶೃಂಗೇರಿಯ ಕೆಲವು ವೈದಿಕರಲ್ಲಿ ಕಳೆದ ಶತಮಾನದ ಅಂತ್ಯದವರೆಗೆ ಆಚರಣೆಯಲ್ಲಿದ್ದ "ಕರಸ್ಥಳ ಲಿಂಗ ಪೂಜೆ"ಯೂ ಹೌದು.

> **ಉತ್ತಮಾಂಗೇ ಗಲೇಕಕ್ಷೇ ತಥಾ ವಕ್ಷಃ ಸ್ಥಲೇಪಿವಾ**
> **ಕರಸ್ಥೆಲೇಪಿ ವಾ ನಿತ್ಯಂ ಸಾವಧಾನೇನ ಧಾರಾಯ ॥**
> **[ಅ.೫. ಶ್ಲೋ: ೪೭]**

ಇದು ಸೂಕ್ಷ್ಮಾಗಮದ ಹೇಳಿಕೆ (ವಜ್ರವಲ್ಲಭ ದ್ವಿವೇದ: ೧೯೯೪ ಪು. ೫೭) ಶೈವಸಂಪ್ರದಾಯಿಗಳು ಕಂಠದಲ್ಲಿ, ವಕ್ಷಸ್ಥಲದಲ್ಲಿ, ಕರಸ್ಥಲದಲ್ಲಿ ಅಥವಾ ಉತ್ತಮಾಂಗದೊಡನೆ ಲಿಂಗವನ್ನು ಧರಿಸುತ್ತಿದ್ದರು. ಪೂಜಾಸಮಯದಲ್ಲಿ ಕರಸ್ಥಳದಲ್ಲಿ ಲಿಂಗವನ್ನು ಕಾಣಬಹುದಾಗಿತ್ತು. ಕರಸ್ಥಳದಲ್ಲಿರಿಸಿದ ಪಾರ್ಥಿವೇಶ್ವರ ಲಿಂಗಪೂಜೆಯನ್ನು ಶ್ರೀನಿವಾಸಮೂರ್ತಿಯವರು ಗುರುತಿಸಿದ್ದಾರೆ.

"ಪೂಜಾಕೃತ್ವಾಥಲಿಂಗಂ ಶಿರಸಾಧಾರಯೇತ್ ಸದಾ" – ಪೂಜಾ ನಂತರಲಿಂಗವನ್ನು ಶಿರದಲ್ಲಿ ಧರಿಸುವ ಪದ್ಧತಿಯೂ ಇತ್ತು. ಪಂಚಾಗ್ನಿ ಹವನ ಹೋಮಗಳೊಂದಿಗೆ ಪಾಶುಪತರು ಕರಸ್ಥಳದಲ್ಲಿ ಲಿಂಗವನ್ನು ಪೂಜಿಸುತ್ತಿದ್ದರು. ಕರ್ನಾಟಕದ ಕೆಲವು ದೇವಾಲಯಗಳಲ್ಲಿ ಕರಸ್ಥಳದಲ್ಲಿ ಲಿಂಗವನ್ನು ಧರಿಸಿ ಪೂಜಿಸುವ ಹಲವು ಶಿಲ್ಪಗಳನ್ನು ಗುರುತಿಸಲಾಗಿದೆ. ಡಾ. ರಾಜಾರಾಮ ಹೆಗ್ಗಡೆಯವರು ಬಳ್ಳಿಗಾವೆ ದೇವಾಲಯದಲ್ಲಿ ಕೈಯಲ್ಲಿ ಲಿಂಗ ಹಿಡಿದು ಧ್ಯಾನಾಸಕ್ತನಾದ ಯತಿಯ ಶಿಲ್ಪವನ್ನು ಗುರುತಿಸಿದ್ದಾರೆ. ಈ ದೇವಾಲಯ ಹನ್ನೊಂದನೆಯ ಶತಮಾನದ ಮಧ್ಯಭಾಗದ ರಚನೆ, ಬಸವಪೂರ್ವಯುಗದ ಶಿಲ್ಪವಿದು. ಡಾ. ಎಂ. ಎಸ್. ಕೃಷ್ಣಮೂರ್ತಿಯವರು ಕೈಯಲ್ಲಿ ಲಿಂಗವನ್ನು ಹಿಡಿದು ನಿಂತ ಹಲವು ಭಂಗಿಯ ಶಿಲ್ಪಗಳನ್ನು ಗುರುತಿಸಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ದೇವನೂರಿನ ಸಿದ್ಧೇಶ್ವರ ದೇವಾಲಯದಲ್ಲಿ ಬಾಗಿಲುವಾಡದ ಬಲಕೆಳಬದಿಯಲ್ಲಿ ಒಂದು ಉಬ್ಬು ಶಿಲ್ಪವಿದೆ. ಇದರಲ್ಲಿ ಶೈವ ಸಂಪ್ರದಾಯಿಯೊಬ್ಬ ಧ್ಯಾನಭಂಗಿಯಲ್ಲಿ ಕುಳಿತಿದ್ದಾನೆ. ಎಡಗೈಯಲ್ಲಿ ಗೋಲಾಕಾರದ ಲಿಂಗವಿದೆ. ಬಲಗೈಯಲ್ಲಿ ಅಕ್ಷಮಾಲೆ ಇದೆ. ಈತ ಕಿರೀಟಧಾರಿ. ಮೂಲತಃ ಸುಂದರವಾಗಿ ಕಡೆದ ಶಿಲ್ಪವನ್ನು ಹಾಳುಗೆಡವಿದಂತಿದೆ. ಇದು ಹೊಯ್ಸಳರ ಕಾಲದ ದೇವಾಲಯ ಸ್ಥಳೀಯರ ಪ್ರಕಾರ ಈತ ಜಗನ್ನಾಥ ವಿಜಯ ರಚಿಸಿದ ರುದ್ರಭಟ್ಟ. ಈತ ವೈದಿಕ ಮನೆತನದವನು. ಪಾರ್ಥಿವೇಶ್ವರ ಲಿಂಗದ ಪೂಜೆ ಮಾಡುತ್ತಿದ್ದವರು ವೈದಿಕರೆ ಆಗಿದ್ದರು. ಶಿವಮಹಾಪುರಾಣದ ಕೆಲವು ಉಕ್ತಿಗಳನ್ನು ಇಲ್ಲಿ ಸ್ಮರಿಸುವುದು ಸೂಕ್ತ (ವೆಂಕಟರಾವ್. ೧೯೪೫. ೩೪೧-೩೪೩).

ಲಿಂಗನಿರ್ಮಾಣಕ್ಕಾಗಿ ಮೃತ್ತಿಕೆಯನ್ನು ಸಂಗ್ರಹಿಸಿ, ಅತ್ಯಂತ ಸ್ವಚ್ಛ ಪ್ರದೇಶದಲ್ಲಿ ಶೇಖರಿಸಿ ಇಡಬೇಕು. ನೀರಿನಲ್ಲಿ ಮೃತ್ತಿಕೆಯನ್ನು ಶೋಧಿಸಿ, ಗೋಲಾಕಾರದ ಪಿಂಡಿಗಳನ್ನು ರಚಿಸಬೇಕು. ಈ ಪಿಂಡಿಗಳೇ ಪಾರ್ಥಿವ ಲಿಂಗಗಳು. ಶುಭ್ರವಾದ ಈ ಪಾರ್ಥಿವ ಲಿಂಗಗಳನ್ನು ವೇದೋಕ್ತ ವಿಧಾನದಂತೆ ಅರ್ಚಿಸಬೇಕು. (೨೦.೭.೪.೯) ದೇವನೂರಿನ ಸಿದ್ಧೇಶ್ವರ ದೇವಾಲಯದ ಶಿಲ್ಪವು ಶೈವಬ್ರಾಹ್ಮಣನದು. ಈತನ ಕೈಯಲ್ಲಿ ಇರುವುದು ಗೋಲಾಕಾರದ ಲಿಂಗ ಕರಸ್ಥಳದಲ್ಲಿರುವ ಲಿಂಗದ ಪೂಜೆ ಪಾಶುಪತ ಸಂಪ್ರದಾಯದ ಆಚರಣೆ ಎನ್ನುವುದು ಖಚಿತ.

ದೇವನೂರಿನ ಲಕ್ಷ್ಮೀಕಾಂತ ದೇವಾಲಯದ ಲಕ್ಷ್ಮೀಶ ಮಂಟಪದ ಕಂಭವೊಂದರಲ್ಲಿ ಮತ್ತೊಂದು ಉಬ್ಬು ಶಿಲ್ಪವಿದೆ. ಅದೂ ಕರಸ್ಥಳದಲ್ಲಿ ಇರಿಸಿದ ಆಕಾರವೊಂದರ ಪೂಜೆ

ಅಥವಾ ಧ್ಯಾನಕ್ಕೆ ಸಂಬಂಧಿಸಿದ್ದು ಈ ಮಂಟಪ ವಿಜಯನಗರೋತ್ತರ ಕಾಲದ್ದು. ಬಹುಶಃ ಈ ರೀತಿಯ ಹಲವಾರು ಶಿಲ್ಪಗಳು ಸೂಕ್ಷ್ಮವಾಗಿ ಗಮನಿಸಿದಾಗ ಹಲವೆಡೆ ದೊರೆಯಬಹುದು.

"ಲಿಂಗ ಯಜ್ಞೋಪವೀತಧಾರೀ ಪಾಶುಪತ ಮಹೇಶ್ವರ ಧರ್ಮವನ್ನು, ಬಸವೇಶ್ವರರು ಸಂಸ್ಕರಿಸಿದರು" ಎಂಬ ಟಿ.ಎನ್. ಮಲ್ಲಪ್ಪನವರ ಹೇಳಿಕೆಯನ್ನು ಡಾ. ಶ್ರೀನಿವಾಸ ಮೂರ್ತಿಯವರೂ ಗಮನಿಸಿದ್ದಾರೆ. (ಇತಿಹಾಸ ದರ್ಶನ ಸಂ. ೨೮-೨೦೧೩ ಪು ೧೦೪) ಬಸವೇಶ್ವರರ ಮಾತಾಪಿತೃಗಳು ವೈದಿಕ ಸಂಪ್ರದಾಯದ ಪಾಶುಪತ ಮೂಲದವರಿರಬಹುದು. ಇವರು ಕರಸ್ಥಳದಲ್ಲಿ ಇರಿಸಿದ ಲಿಂಗದ ಪೂಜಾ ವಿಧಾನವನ್ನು ಅನುಸರಿಸುತ್ತಿದ್ದರು. ಬಸವೇಶ್ವರರು ಇದನ್ನೇ ಇಷ್ಟಲಿಂಗದ ಪೂಜೆಗೆ ಅನುಸರಿಸಿರುವ ಸಾಧ್ಯತೆಗಳಿವೆ. ಪಾಶುಪತದ ಆಚಾರ ವಿಚಾರಗಳನ್ನು ತಿಳಿಯಲು ಗ್ರಂಥಗಳೇ ಆಧಾರ. ರಾಜಶೇಖರ ಸೂರಿಯು ಶೈವಮತ ಅಥವಾ ಯೌಗಮತದಡಿಯಲ್ಲಿ ಕೆಲವು ದೈನಂದಿಕ ಆಚರಣೆಗಳ ಬಗ್ಗೆ ಮಾಹಿತಿ ನೀಡಿದ್ದಾನೆ. ದಂತ, ಹಸ್ತ, ಮುಖಾದಿಗಳನ್ನು ಶುದ್ಧಿಗೊಳಿಸಿಕೊಂಡ ನಂತರ, ಶಿವಧ್ಯಾನ ತತ್ಪರರು ದಿನದಲ್ಲಿ ಮೂರು ಬಾರಿ ದೇಹದ ಅಂಗಾಂಗಗಳನ್ನು ಭಸ್ಮದಲ್ಲಿ ಲೇಪಿಸಿಕೊಳ್ಳಬೇಕು. ಗೃಹಸ್ಥನು ಅಂಜಲೀ ಬದ್ಧನಾಗಿ "ಓಂ ನಮಃ ಶಿವಾಯ" ಮಂತ್ರವನ್ನು ಜಪಿಸಬೇಕು. ಇತರರು, ಎಂದಲ್ಲಿ ಗುರು ಪರಂಪರೆಯವರು "ಶಿವಾಯ ನಮಃ" ಮಂತ್ರವನ್ನು ಜಪಿಸಬೇಕು. ಶಂಕರನೇ ಇವರ ದೈವವು. ಸೃಷ್ಟಿಸಂಹಾರಗಳನ್ನು ನಿಯಂತ್ರಿಸುವ ಶಂಕರನಿಗೆ ಹದಿನೆಂಟು ಅವತಾರವೆಂದು ಹೇಳಲಾಗಿದೆ. (ದಲಾಲ್ ೧೯೨೦: ಪರಿಶಿಷ್ಟ ಖಖಖ ಪು.೩೫) ನಕುಲೀಶ, ಕೌಶಿಕ, ಗಾರ್ಗ್ಯ, ಕೌರುಷ, ಈಶಾನ, ಪಾರಗಾರ್ಗ್ಯ, ಕಪಿಲಾಂಡ, ಮನುಷ್ಯಕ, ಅಪರ ಕೌಶಿಕ, ಅತ್ರಿ, ಪಿಂಗಳಾಕ್ಷ, ಪುಷ್ಪಕ, ಬೃಹದಾರ್ಯ, ಆಗಸ್ತಿ, ಸಂತಾನ, ರಾಶೀಕರ ಮತ್ತು ವಿದ್ಯಾಗುರು ಇವೇ ಶಿವನ ಅವತಾರಗಳು ಎನ್ನಲಾಗಿದೆ. ಇವರನ್ನು ಪ್ರಾಚೀನ ಪಾಶುಪತದ ಗುರುಪರಂಪರೆ ಎಂದು ಪರಿಗಣಿಸಲಾಗಿದೆ.

ನಕುಲೀಶನೇ ಮೂಲ ಪುರುಷ; ಕೌಶಿಕ, ಗಾರ್ಗ್ಯ, ಮೈತ್ರ್ಯ, ಕೌರುಷ್ಕರು ಅವನ ಶಿಷ್ಯರೆಂದು ಹಲವೆಡೆ ಉಲ್ಲೇಖಗೊಂಡಿದೆ. ಬಾದಾಮಿಯ ವಿಷ್ಣುಗುಹೆಯಲ್ಲಿ ನಕುಲೀಶ ಹಾಗೂ ಅವನ ನಾಲ್ಕು ಶಿಷ್ಯರನ್ನೊಳಗೊಂಡ ಉಬ್ಬು ಚಿತ್ರಣವಿದೆ. ಇನ್ನಿತರರ ಬಗ್ಗೆ ಮಾಹಿತಿ ಇಲ್ಲ. ವಿದ್ವಾಂಸ ಡೇವಿಡ್ ಲೊರೆಂಜನ್ ಅವರು ಮಧ್ಯಕಾಲೀನ ಸಮಾಜದಲ್ಲಿದ್ದ ಎರಡು ಶೈವ ಸಂಪ್ರದಾಯಗಳಾದ ಕಾಪಾಲಿಕ, ಕಾಳಾಮುಖರ ಬಗ್ಗೆ ಅಧ್ಯಯನ ಕೈಗೊಂಡು, ಸುದೀರ್ಘ ಗ್ರಂಥವನ್ನು ರಚಿಸಿದ್ದಾರೆ. ಈ ಸಂಪ್ರದಾಯಗಳನ್ನು ಗುರುತಿಸುವಾಗ ತತ್ವ ಸಿದ್ಧಾಂತ, ಗುರು ಪರಂಪರೆ ಹಾಗೂ ಅನುಯಾಯಿಗಳು ಎಂದು ಮೂರು ಹಂತದಲ್ಲಿ ವಿಷಯ ಮಂಡನೆ ಅಗತ್ಯವೆನ್ನುತ್ತಾರೆ. (a specific doctrine, a priest hood and well defined and exclusive Laity) ವಿಶಿಷ್ಟ ತತ್ವ ಸಿದ್ಧಾಂತವನ್ನು ಅರಿಯಬೇಕಾದರೆ ಪ್ರಾಚೀನ ಧಾರ್ಮಿಕ ಸಮಾಜದ ಅರಿವು ಅಗತ್ಯ. ಅಂದಿನ ಸಾಮಾಜಿಕ ಪರಿಸರದ ಚಿತ್ರಣವೂ ನೆರವಿಗೆ ಬರುತ್ತದೆ. ಗುರುಪರಂಪರೆಯನ್ನು ಗುರುತಿಸುವಲ್ಲಿ ಸಮಕಾಲೀನ ಶಾಸನಗಳು ನೆರವಾಗಿವೆ. ಸಂಪ್ರದಾಯದ ಅನುಯಾಯಿಗಳನ್ನು ಗುರುತಿಸಲು ಸಾಧ್ಯವಾಗದೆ ಕಾಪಾಲಿಕ, ಕಾಳಾಮುಖ ಎಂದು ಹೆಸರು ಹೊತ್ತ ಜನಸಾಮಾನ್ಯರಿಲ್ಲ ಎಂದು ನಿರಾಶೆಗೊಳ್ಳುತ್ತಾರೆ. (ಲೊರೆಂಜನ್ ೧೯೭೨ ಪ್ರಸ್ತಾವನೆ) ವರ್ಣಾಶ್ರಮ ಡಾ. ಚಿದಾನಂದ ಮೂರ್ತಿಯವರು ಗೊರವ ಅಥವಾ ಗುರುವ ಹಾಗೂ ಜೀಯರುಗಳನ್ನು ತಮ್ಮ ಶಾಸನಗಳ ಸಾಂಸ್ಕೃತಿಕ ಅಧ್ಯಯನದಲ್ಲಿ ಉಲ್ಲೇಖಿಸಿದ್ದಾರೆ. ಇವರೊಂದಿಗೆ ಕೊತ್ತಳಿಗಳನ್ನು ಅವಶ್ಯಕವಾಗಿ ಸ್ಮರಿಸಬೇಕು. ಇವುಗಳು ಶೈವದ ಪಾರಿಭಾಷಿಕ ಪದಗಳು ಗೊರವ ಅಥವಾ ಗುರುವ ಪದಗಳು ಸಾಮಾನ್ಯವಾಗಿ 'ಗುರು' ಶಬ್ದ ಮೂಲದ್ದು ಎಂದು ಅಭಿಪ್ರಾಯ ಪಡಲಾಗಿದೆ. ಮೈಲಾರ ಲಿಂಬನ ಭಕ್ತರು ಗೊರವರೆಂದೇ ಗುರುತಿಸಲ್ಪಡುತ್ತಾರೆ. ಪಾಶುಪತರಲ್ಲಿ ಶ್ರೌತಿ, ಅಶ್ರೌತಿಗಳನ್ನು ಗೊರವರೆಂದೇ ಗುರುತಿಸಲ್ಪಡುತ್ತದೆ. ಪಾಶುಪತದಲ್ಲಿ ಶ್ರೌತಿ, ಅಶ್ರೌತಿಗಳಿದ್ದಾರೆಂದು ಮೊದಲಿಗೇ ಗಮನಿಸಿದೆ. ಗೊರವರನ್ನು ಅಶ್ರೌತಿಗಳೆನ್ನಬಹುದು. ಗುರುವಸ್ಥಾನದಲ್ಲಿದ್ದ ಅಶ್ರೌತಿಗಳನ್ನು ಗೊರವರೆಂದು ಹೆಸರಿಸಲು ಸಾಧ್ಯ. ಧಾರವಾಡ ಜಿಲ್ಲೆ ಅಮ್ಮಿನಭಾವಿಯಲ್ಲಿ ಹನ್ನೆರಡನೆಯ ಶತಮಾನದಲ್ಲಿ ಗೊರಗೇರಿಯೂ ಇತ್ತು. (ಕಲಬುರ್ಗಿ ೧೯೭೬.೬) ಚಾಮರಾಜನಗರ ಜಿಲ್ಲೆ ಬಾಗುಳಿಯ ಹತ್ತನೆಯ ಶತಮಾನದ ಶಾಸನವು ಇಂತಿದೆ. (ಇಅ ೪ ೧೧೪ ೧೦ನೆಯ ಶತಮಾನ ಪು.೬೬)

ಬಾಮ್ಮಿಗಿಜೆಯೂರ ಭುಜಂಗೇಶ್ವರ ದೇವಸ್ಥಾನ ವೊಡೆಯರ್
ಬಾಳಬೊಜಜ್ಗರ ಸಿಷ್ಯರಭಿಮಾನ ಶಕ್ತಿಗಳ ಸಿಷ್ಯರ್
ಕೂಚಿ ಬಟಾರಕರ್ನಿಗುನ್ದದ ಗೊರವರೆನ್ದು ಪೆಸರಿತ್ತು....

ಚಾಮರಾಜನಗರ ಜಿಲ್ಲೆಯ ಎಲ್ಲೂರು, ಉಮ್ಮತ್ತೂರು, ಬಾಗಳಿ ಚಾಮರಾಜನಗರಗಳಲ್ಲಿ ಭುಜಂಗೇಶ್ವರ ದೇವಸ್ಥಾನಗಳಿವೆ. ಮೇಲ್ಕಂಡ ವಿವರವನ್ನುಳಿದು ಇತರ ದೇವಾಲಯಗಳಲ್ಲಿ ಪಾಶುಪತ, ಕಾಳಾಮುಖರ ಪ್ರಸ್ತಾಪವಿಲ್ಲ. 'ನೀರ್ಗುಂದ ಗೊರವರ'ನ್ನು ಇಲ್ಲಿ ಹೆಸರಿಸಲಾಗಿದೆ. ಭುಜಂಗಾವಳಿ ಕಾಳಾಮುಖ ಸಂಪ್ರದಾಯದ ಒಂದು ಟಿಸಲು

ಭುಜಂಗೇಶ್ವರನಿಗೂ ಭುಜಂಗಾವಳಿಗೂ ಇರುವ ಸಂಬಂಧದ ಸೂಚನೆಯೂ ಇಲ್ಲ. ಹಾವೇರಿ ಜಿಲ್ಲೆ ತಿಳವಳ್ಳಿಯ ಶಾಸನವು "ಎಲೆಯ ಭೊಜಂಗರ ಕೊತ್ತಳಿಯೈನೂರ ನಾಲ್ವರ" ಸಮುದಾಯವನ್ನು ಸೂಚಿಸಿದೆ (ಗೋಪಾಲ್ ೧೯೭೯ ಪು ೬೧). ಧಾರವಾಡ ತಾಲ್ಲೂಕಿನ ಮನಗುಂಡಿಯ ಶಾಸನಗಳು ಎಲೆಯ ಭೊಜರಂಗರನ್ನೂ, ಭೊಜಗೇಶ್ವರ ದೇವರನ್ನು ಹೆಸರಿಸಿವೆ (ಕಲಬುರ್ಗಿ ೧೯೭೬ ಪು. ೯೬, ೧೦೫) ಪಾಶುಪತ, ಕಾಳಾಮುಖ ಅನುಯಾಯಿಗಳನ್ನು ಕೊತ್ತಳಿಗಳೆಂದು ಕರೆದಿರುವುದು ಸ್ಪಷ್ಟ ಭೊಜಂಗರ ವೃತ್ತಿಯ ಬಗ್ಗೆ ಹೆಚ್ಚು ಮಾಹಿತಿ ಇಲ್ಲ.

ಹಾಸನ ಜಿಲ್ಲೆಯ ಹಳೆಬೀಡು, ಅರಸೀಕೆರೆ, ಕಣಕಟ್ಟೆ ಮೊದಲಾದವು, ಕಾಳಾಮುಖ ಆಚಾರ್ಯರುಗಳಿದ್ದ ಪ್ರಮುಖ ಸ್ಥಾನಗಳಾಗಿದ್ದವು. ಈ ಸ್ಥಳಗಳಲ್ಲಿ ಹಲವಾರು ಶೈವ ಸಮುದಾಯದ ದೇವಾಲಯಗಳಿವೆ. ಈ ಪರಿಸರದಲ್ಲಿದ್ದ ವೃತ್ತಿವಂತ ಶೈವರು ಈ ದೇವಾಲಯಗಳಿಗೆ ಹಾಗೂ ಉಸ್ತುವಾರಿ ನೋಡುತ್ತಿದ್ದ ಕಾಳಾಮುಖಾಚಾರ್ಯರುಗಳಿಗೂ ನಡೆದುಕೊಳ್ಳುತ್ತಿದ್ದರು. ಇವರನ್ನು ಕೊತ್ರಳಿಗಳೆಂದು ಗುರುತಿಸಲಾಗಿದೆ. ಜಗತಿಗಳು, ಕೊಯ್ಲಳ್ಗಳು, ತೆಲ್ಲಿಗರು, ಗೊಜ್ಜರು, ಭೊಜಂಗರು ಇವರನ್ನು ಶೈವರೆಂದೇ ಗುರುತಿಸಬೇಕು. ಇವರಲ್ಲದೆ ಅರಸೀಕೆರೆ ಕೊತ್ತಳಿ, ಹಲಕೂರು ಕೊತ್ತಳಿ, ಜೇಡ ಕೊತ್ತಳಿ ಎಂದು ಹೆಸರಿಸಿದ ಶೈವರೂ ಇದ್ದಾರೆ. ಜಗತಿಗಳು, ಕೊಯ್ಲಳ್ಗಳು, ಹೊಯ್ಸಳರ ಸೈನ್ಯದಲ್ಲಿ ಯೋಧರಾಗಿ ಸೇವೆ ಸಲ್ಲಿಸಿದವರು. (ರೈಸ್. ೧೯೦೫ ಹಾಸನ ಜಿಲ್ಲೆ ಪು. ೩೮೮)

ಜಗತಿ ಕೊತ್ತಳಿಗಳು ಜಗತೇಶ್ವರನ ಪಾದಾರಾಧಕರು. ಭೊಜಗರು ಮತ್ತು ಕೊಯ್ಲಾಳ್ಗಳು ಸೇರಿ ಕೊಯ್ಲಳೇಶ್ವರ ದೇವಾಲಯವನ್ನು ಕಟ್ಟಿಸಿದ ಉಲ್ಲೇಖವಿದೆ. ತೆಲ್ಲಿಗರಲ್ಲಿ ತೆಲ್ಲಿಗರೈವತ್ತು ಎಂಬ ಸಮೂಹವಿತ್ತು. ಇವರು ತೆಲ್ಲಿಗೇಶ್ವರ ದೇವಾಲಯವನ್ನು ಕಟ್ಟಿಸಿದ್ದಾರೆ. ಇವರಲ್ಲಿ ದೇವರ ನಂದಾದೀಪಕ್ಕಾಗಿ ಎಣ್ಣೆಯ ಗಾಣಕ್ಕೆ ದಾನ ನೀಡಿದವರು ಹಲವರಿದ್ದಾರೆ. ತೈಲ ಮತ್ತು ತೆಲ್ಲಿಗ ಪರಸ್ಪರ ಸಂಬಂಧವುಳ್ಳ ಪದಗಳು.

ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂನಲ್ಲಿರುವ ಶಾಸನವು ಕುರುಂಬಸೇಣಿಗರನ್ನು ಮಹಾ ಮಹೇಶ್ವರರೆಂದು ಹೆಸರಿಸಿದೆ. ಇವರು ಸೇಣಿಗೇಶ್ವರ ದೇವಾಲಯದ ಕೈಂಕರ್ಯಗಳಿಗೆ ದಾನ ನೀಡಿದ್ದಾರೆ. (ಉಪಾಧ್ಯೆ ೨೦೦೧ ಕ್ರಿ.ಶ. ೧೧೩೮ ಪು. ೧೪೮.೧೪೯) ಶಿವಗೇಹದ ಜೀರ್ಣೋದ್ಧಾರ ಕಾರ್ಯದಲ್ಲಿಯೂ ಪಾಲ್ಗೊಂಡಿದ್ದಾರೆ. ಇವರನ್ನು ಕುರಿ ಸೇಣಿಗರು, ಕುರಿಬ ಸೇಣಿಗರು ಎಂದೂ ಹೆಸರಿಸಲಾಗಿದೆ. ಕುರಿಬ, ಕುರುಬ ಎರಡೂ ವ್ಯಕ್ತಿಸೂಚಕ ಪದಗಳು ಎನ್ನುವುದು ಖಚಿತ.

ಜೀಯ ಎಂದು ಕೊನೆಗೊಳ್ಳುವ ಪಾಶುಪತ, ಕಾಳಾಮುಖರನ್ನು ಶಾಸನಗಳು ಗುರುತಿಸಿವೆ. ಆರಂಭದ ಶಾಸನಗಳಲ್ಲಿ ಈ ಉತ್ತರ ಪದದ ಬಳಕೆ ವಿರಳ ಅಥವಾ ಇಲ್ಲವೆಂದೇ ಗಮನಿಸಬಹುದು. ಅವು ಶಕ್ತಿ, ರಾಶಿ, ಪಂಡಿತ, ದೇವ ಎಂದು ಕೊನೆಗೊಂಡಿವೆ. ಶ್ರೀ ವೈಷ್ಣವ ಸಂಪ್ರದಾಯದಲ್ಲಿ ಇಂದಿಗೂ ಜೀಯರ್‌ಗಳಿದ್ದಾರೆ. ಇವರು ಗುರುಗಳು; ಗೃಹಸ್ಥಾಶ್ರಮದ ನಂತರ ಸನ್ಯಾಸ ಸ್ವೀಕರಿಸಿ ಗುರುಗಳೆನಿಸಿದ್ದಾರೆ. ಪಾಶುಪತ, ಕಾಳಾಮುಖರಲ್ಲಿ ನೈಷ್ಠಿಕ ಬ್ರಹ್ಮಚಾರಿಗಳಾಗಿದ್ದ ಕೆಲವರು ಸಂನ್ಯಾಸ ತೊರೆದು ಸಂಸಾರಿಗಳಾಗಿಯೂ ಸ್ಥಾನಪತಿಗಳಾಗಿ ಮುಂದುವರೆದಿರಬಹುದು. ಅಂಥವರನ್ನು ಜೀಯ ಎಂದು ಗುರುತಿಸಿರುವ ಸಾಧ್ಯತೆ ಹೆಚ್ಚು ಶಾಸನಗಳಲ್ಲಿ ಶಿಷ್ಯರನ್ನೂ ಪುತ್ರರೆಂದು ಸಂಬೋಧಿಸಿದ್ದಾರೆ. ಶಿವಮಹಾಪುರಾಣವು ಜಾತಪುತ್ರ, ಮಂತ್ರ-ಪುತ್ರ ಎಂದು ವಿಭಾಗಿಸುತ್ತದೆ. ಜೀಯರುಗಳು ಸಂಸಾರಿಗಳು, ಸಸ್ತ್ರೀಕರು, ಕೆಳಗಿನ ಶಾಸನದಿಂದ ಅದು ಖಚಿತವಾಗಿದೆ. (ಅದೇ. ಪು. ೩೯೨)

"ಯಿಂತೀ ದೇವರಿಗೆ ಬಿಟ್ಟುದತ್ತಿಯುಂ ಲೋಕೋತ್ತಮರಪ್ಪ ಬೆಟ್ಟದ ಜೀಯರ ಮಮ್ಮ ಸಿಕರಜೀಯರ ಕಾಲಂಕರ್ಚಿ ಧಾರಾಪೂರ್ವಕಂ ಮಾಡಿಕೊಟ್ಟರು" ಬಸವಪೂರ್ವ ಯುಗದ ಶೈವಮತದ ಅಧ್ಯಯನ ಪಾಶುಪತ, ಕಾಳಾಮುಖರ ಅಧ್ಯಯನವೇ ಆಗಿದೆ. ಬಾದಾಮಿ ಚಲುಕ್ಯರ ಕಾಲದಲ್ಲಿ ಲಾಕುಲೀಶ ಪಾಶುಪತರು, ಭಾಗವತ ಹಾಗೂ ವೈದಿಕ ಸಂಪ್ರದಾಯಗಳೊಂದಿಗೆ ಸಮಾನವಾಗಿ ಬೆಳೆದರು. ಬಾದಾಮಿಯ ವಿಷ್ಣುಗುಹೆಯಲ್ಲಿ ಲಗುಡ ಹಿಡಿದ ಲಾಕುಲೀಶನ ಹಾಗೂ ಅವನ ಶಿಷ್ಯರ ಚಿತ್ರಣವಿದೆ. ಬಾದಾಮಿ, ಮಹಾಕೂಟ, ಪಟ್ಟದಕಲ್ಲುಗಳಲ್ಲಿ ಲಗುಡಹಿಡಿದು, ಅಪಸ್ಮಾರ ಪುರುಷನ ಮೇಲೆ ನಿಂತ ಹಲವು ಸ್ಥಾನಕ ಶಿಲ್ಪಗಳಿವೆ. ಇದರೊಂದಿಗೆ ಲಾಕುಲೀಶನ ಆರಾಧನೆಯೂ ಇದ್ದಿರಬೇಕು. ಇದು ಈ ಪರಿಸರಕ್ಕೆ ಸೀಮಿತ ಕ್ರಿ.ಶ. ೬೬೦ರಲ್ಲಿ ಒಂದನೆಯ ವಿಕ್ರಮಾದಿತ್ಯ ಸುದರ್ಶನಾಚಾರ್ಯರಿಂದ ಶಿವಮಂಡಲ ದೀಕ್ಷೆ ಪಡೆದು ಶೈವಧರ್ಮದ ಬೆಳವಣಿಗೆಗೆ ಕಾರಣನಾದ. ನಂದಿಯ ಭೋಗನಂದೀಶ್ವರ, ಆವನಿಯ ಲಕ್ಷ್ಮಣೇಶ್ವರ, ಹಾವೇರಿಯ ಸಿದ್ಧೇಶ್ವರ ಮೊದಲಾದ ಕಡೆಗಳಲ್ಲಿ ಸಿದ್ಧರ ಋಷಿಮುನಿಗಳ ಶಿಲ್ಪಗಳನ್ನು ಕಾಣುತ್ತೇವೆ. ಹಾವೇರಿ ಮತ್ತು ನಂದಿಯ ದೇವಾಲಯದ ಒಳಭಾಗದಲ್ಲಿ ಉತ್ತರಮುಖನಾಗಿ ಸಿದ್ಧರ ಶಿಲ್ಪವಿದೆ. ಆವನಿಯ ದೇವಾಲಯದ ಉತ್ತರದ ಹೊರಭಿತ್ತಿಯಲ್ಲಿ ಉತ್ತರಮುಖವಾಗಿ ತ್ರಿಭುವನ ಕರ್ತಾರರ

ಉಬ್ಬು ಶಿಲ್ಪವಿದೆ. ಇವುಗಳ ಪಾಶುಪತ, ಕಾಳಾಮುಖ ಗುರುಗಳ ಶಿಲ್ಪಗಳಾಗಿರಲೂ ಸಾಧ್ಯ.

ಕಾಳಾಮುಖರ ಪ್ರಾಚೀನ ಉಲ್ಲೇಖ ಚಿಕ್ಕಬಳ್ಳಾಪುರದ ಕ್ರಿ.ಶ. ೮೧೦ರ ತಾಮ್ರ ಶಾಸನದಲ್ಲಿದೆ. (ಎಂ.ಎ.ಆರ್. ೧೯೧೪ ಪು ೨೯). ಕಾಳಾಮುಖಗುರು ಕಾಳಶಕ್ತಿ ಹಾಗೂ ಶಿಷ್ಯ ಈಶ್ವರ ದಾಸನನ್ನು ಹೆಸರಿಸಲಾಗಿದೆ. ಬಾಣವಿದ್ಯಾಧರನ ಪತ್ನಿ ರತ್ನಾವಳಿ ನಂದಿಯಲ್ಲಿ ಶಿವಾಲಯವನ್ನು ಮಾಡಿಸಿದ್ದನ್ನು, ದೇವಭೋಗಕ್ಕಾಗಿ ದಾನ ನೀಡಿದ್ದನ್ನು ಪ್ರಸ್ತಾಪಿಸುತ್ತದೆ. ಕ್ರಿ.ಶ. ಎಂಟನೆಯ ಶತಮಾನದಿಂದ ಕರ್ನಾಟಕ ಹಾಗೂ ನೆರೆಯ ಆಂಧ್ರ ಪ್ರದೇಶದಲ್ಲಿ ಕಾಳಾಮುಖರ ವಾಸ್ತವ್ಯವನ್ನು ಗುರುತಿಸ ಬಹುದು. ಆಂಧ್ರದಲ್ಲಿ ಕಾಳಾಮುಖರನ್ನು ಹೆಸರಿಸುವ ಪ್ರಾಚೀನ ಶಾಸನ ಮಹಾನಂದಿಯಲ್ಲಿದೆ (ಕನ್ನಡ ವಿಶ್ವವಿದ್ಯಾಲಯ ಶಾಸನಸಂಪುಟ: ೫ ಮಹಾನಂದಿ ೩೫೪) ಲಿಪಿಯ ಸ್ವರೂಪವನ್ನಾಧರಿಸಿ ಶಾಸನವು ೮-೯ನೆಯ ಶತಮಾನದ್ದು ಎಂದು ವಿದ್ವಾಂಸರು ಗುರುತಿಸಿದ್ದಾರೆ. ಕಾಳಾಮುಖರ ಉತ್ಪತ್ತಿ ಪಿಡುಗು ಶಾಖೆಯ ಆಯೋಗ ವಾಂಛಿತನ್ ಎಂಬ ಮುನಿಯ ಉಲ್ಲೇಖವಿದೆ. ಚಿಕ್ಕಬಳ್ಳಾಪುರದ ತಾಮ್ರಪಟಗಳಲ್ಲಿ ನಂದಿಮಲೆಯ ಉಲ್ಲೇಖವಿದೆ. ಕಾಳಾಮುಖರ ಪರ್ವತಾವಳಿ ಶಾಖೆಯು ಆಂಧ್ರಮೂಲದ್ದು ಎಂಬ ಅಭಿಪ್ರಾಯವಿದೆ. ಆರಂಭದಲ್ಲಿ ಕಾಳಾಮುಖ ಗುರುಗಳು ಜನಜಂಗುಳಿಯಿಂದ ದೂರವಿದ್ದು ಮಲೆಪ್ರದೇಶಗಳಲ್ಲಿ ವಾಸಿಸುತ್ತಾ ಯೋಗನಿರತರಾಗಿರುತ್ತಿದ್ದರು. ದೇವಾಲಯ, ಘಟಿಕಾಸ್ಥಾನಗಳ ಸ್ಥಾಪನೆಯೊಂದಿಗೆ ಅವುಗಳ ಉಸ್ತುವಾರಿ ನೋಡಿಕೊಳ್ಳುವ ಸಲುವಾಗಿ ಈ ಪರಿಸರದಲ್ಲಿ ವಾಸಿಸತೊಡಗಿದರು. ಕರ್ನಾಟಕದಲ್ಲಿ ಶಕ್ತಿಪರಿಷೆ ಮತ್ತು ಸಿಂಹ ಪರಿಷೆ ಶಾಖೆಗಳು ವ್ಯಾಪಕವಾಗಿ ಹರಡಿವೆ. ಶಾಸನಗಳನ್ನು ಆಧರಿಸಿದ ವಿಸ್ತಾರವಾದ ಅಧ್ಯಯನವನ್ನು ಡೇವಿಡ್ ಲೊರೆಂಜನ್ ಕೈಗೊಂಡಿದ್ದಾರೆ. ಪಾಶುಪತ, ಕಾಳಾಮುಖ ಗುರುಗಳು ಯೋಗವಿದರೇ ಅಲ್ಲದೆ ಶಾಸ್ತ್ರ ಸಂಪನ್ನರೂ ಹೌದು. ಕರ್ನಾಟಕದ ಶಾಸನಗಳು ಇವರನ್ನು ಶ್ರೇಷ್ಠ ವಿದ್ವಾಂಸರೆಂದು ಹೊಗಳಿವೆ. ಅಂದು ಅಷ್ಟಾಂಗ ಯೋಗವಲ್ಲದೆ, ಮಾಹೇಶ್ವರ ಯೋಗ, ಪಾಶುಪತ ಯೋಗ, ಮೊದಲಾದವೂ ಪ್ರಚಲಿತದಲ್ಲಿತ್ತು. ಪತಂಜಲಿಯ ಅಷ್ಟಾಂಗ ಯೋಗ ಅಥವಾ ಯೋಗಸೂತ್ರಗಳು ಇವುಗಳಿಗೆ ತಾಯಿಬೇರು ಇದ್ದಂತೆ. ಪತಂಜಲಿಯ ಯೋಗ ಸೂತ್ರಗಳಿಗೆ ವ್ಯಾಸಭಾಷ್ಯವಿದೆ. ಭಾಷ್ಯವಿಲ್ಲದೆ ಯೋಗಸೂತ್ರಗಳನ್ನು ಅರ್ಥೈಸುವುದು ಕಷ್ಟ. ಯೋಗಕ್ಕೆ ಸಂಬಂಧಿಸಿದ ಎಲ್ಲ ವಿವರಗಳನ್ನೂ ಇಲ್ಲಿ ಚರ್ಚಿಸಲಾಗಿದೆ. ಮಾಹೇಶ್ವರ ಯೋಗ ಅಥವಾ ಪಾಶುಪತ ಯೋಗದಲ್ಲಿ ಕೆಲವು ಅಂಶಗಳನ್ನು ಕಾಣಲು ಸಾಧ್ಯ.

ಶಾಸನಗಳಲ್ಲಿ ಪತಂಜಲಿ ಗುರುತಿಸಿದ ಆಸನ, ಪ್ರಾಣಾಯಾಮ, ಪ್ರತ್ಯಾಹಾರಗಳಿಗೆ ಬದಲಾಗಿ ಸ್ವಾಧ್ಯಾಯ, ಮೌನಾನುಷ್ಠಾನ, ಜಪ ಮೊದಲಾದವು ಸ್ಥಾನ ಪಡೆದಿದೆ. ಇವುಗಳೊಂದಿಗೆ 'ಹುತ' ಎಂಬ ಒಂಬತ್ತನೆಯ ಅಂಗವೂ ಕೆಲವೆಡೆ ಸೇರ್ಪಡೆಯಾಗಿದೆ.

ಪಾಶುಪತ, ಕಾಳಾಮುಖರನ್ನು ಪ್ರತ್ಯೇಕವಾಗಿ ಗುರುತಿಸಲು ಸಾಧ್ಯವೇ? ಈ ಪ್ರಶ್ನೆ ವಿದ್ವಾಂಸರನ್ನು ಬಹುದಿನಗಳಿಂದ ಕಾಡಿದೆ. ತಮಿಳುನಾಡಿನ ಶಾಸನವೊಂದರಲ್ಲಿ ಅಸಿತವಕ್ತ್ರ ಎಂಬ ಉಲ್ಲೇಖವಿದೆ. ಇದು ಕಾಳಾಮುಖದ ಅನುವಾದವೇ ಆಗಿದೆ. ಇದರಿಂದಾಗಿ ಮುಖದಲ್ಲಿ ಕಪ್ಪುಗೆರೆಗಳನ್ನು ಧರಿಸಿದವರನ್ನು ಅಥವಾ ಹಚ್ಚಿಕೊಂಡವರನ್ನು ಕಾಳಾಮುಖ ಎಂದು ನಂಬಲಾಗಿದೆ. ಕರ್ನಾಟಕದ ಶಾಸನಗಳಲ್ಲಿ ಕಾಳಾಮುಖರನ್ನು ಹೆಚ್ಚಾಗಿ ಗುರುತಿಸಲಾಗಿದೆ. ಕಾಳಾಮುಖರನ್ನು ಲಾಕುಲಾಗಮ ಪಂಡಿತರೆಂದು ಹೆಸರಿಸಿರುವುದರಿಂದ ಪಾಶುಪತ ಶೈವರಲ್ಲಿ ಕಾಳಾಮುಖವೂ ಪ್ರಮುಖಶಾಖೆ. ಕಾಳಾಮುಖ ಪದವನ್ನು ಪದಶಃ ಅರ್ಥೈಸುವುದರಿಂದ ಹೆಚ್ಚಿನ ಸ್ಪಷ್ಟತೆಯಾಗಲಿ, ವಿಶ್ಲೇಷಣೆಯಾಗಲಿ ಈವರೆಗೆ ಸಾಧ್ಯವಾಗಿಲ್ಲ. ಬದಲಿಗೆ ಕಾಳಾಮುಖವನ್ನು ಲಾಕುಲೀಶ ಪಾಶು ಪತದ ಇನ್ನೊಂದು ಮುಖವೆಂದು ನೋಡುವುದು ಒಳಿತು. ಈ ಮುಖ ಪಾಶುಪತದ ಗೋಪ್ಯಮುಖ ಅಥವಾ ಕಪ್ಪುಮುಖವಾಗಿರಲೂ ಸಾಧ್ಯ! ಇದರ ಸಾಧ್ಯಾ ಸಾಧ್ಯತೆಯನ್ನು ಪರಿಶೀಲಿಸಬೇಕು. ಡಾ. ಚಿದಾನಂದಮೂರ್ತಿಯವರು ಪಾಶುಪತ, ಕಾಳಾಮುಖ ಗುರುಗಳನ್ನು ಗುರುತಿಸುವಾಗ ಅಷ್ಟಾಂಗ ಯೋಗದೊಂದಿಗೆ "ಷಡಂಗೋಪಹಾರ ಸಂಪನ್ನರ್" ಎಂದು ಉಲ್ಲೇಖವಿರುವ ಎರಡು ಶಾಸನಗಳನ್ನು ಗಮನಿಸಿದ್ದಾರೆ (ಚಿದಾನಂದ ಮೂರ್ತಿ ೧೯೬೬.೧೪೭ ಅಡಿ ಟಿಪ್ಪಣಿ) ಷಡಂಗಗಳ ವಿವರಣೆಗೆ ಸರ್ವದರ್ಶನ ಸಂಗ್ರಹದ ವಿವರಣೆಯನ್ನು ಆಶ್ರಯಿಸಿದ್ದಾರೆ. ಹಸಿತ, ನೃತ್ಯ, ಗೀತ, ಹುಡುಕ್ಕಾರ, ನಮಸ್ಕಾರ, ಜಪ್ಯ – ಇವೇ ಷಡಂಗ ಉಪಹಾರಗಳು. ಸಾಯಣ ಮಾಧವರು ಈ ಷಡಂಗಗಳನ್ನು ವಿವರಿಸತ್ತಾ "ಯತ್ರ ಲೌಕಿಕಾ ಭವಂತಿ ತತ್ರೈತತ್ ಸರ್ವಂ ಗೂಡ್ಮಂ ಪ್ರಯೋಕ್ತವ್ಯಂ" ಎಂದು ಸ್ಪಷ್ಟಪಡಿಸಿದ್ದಾರೆ. (ಜೋಶಿ ೨೦೦೬.೧೪೯) ಲೌಕಿಕರಿದ್ದ ಎಡೆಯಲ್ಲಿ ಇದನ್ನು ಗೂಢವಾಗಿ ಆಚರಿಸಬೇಕು. ಆದ್ದರಿಂದ ಈ ಷಡಂಗಗಳ ಆಚರಣೆಗೆ ಮುಕ್ತ ಅವಕಾಶವಿಲ್ಲ ಹಾಗೂ ಗೋಪ್ಯ ಎನ್ನುವುದು ಸ್ಪಷ್ಟ "ಷಡಂಗೋಪಹಾರ ಸಂಪನ್ನರ್" ಎಂಬ ಉಲ್ಲೇಖಗಳಿಗಾಗಿ ಮತ್ತಷ್ಟು ಶಾಸನಗಳನ್ನು ಪರಿಶೀಲಿಸಿದಾಗ ಒಂದು ಸೋಜಿಗದ ಅಂಶ ಕಂಡು ಬಂದಿದೆ. ಎರಡು ಶಾಸನಗಳಲ್ಲಿ ಷಡಂಗ/ಷಡಂಗೋಪ ಎಂಬ

ಅಕ್ಷರಗಳನ್ನು ಅಳಿಸಿ ಹಾಕಲಾಗಿದೆ! ಇದು ಗೋಪ್ಯದ ಆಚರಣೆಯನ್ನು ಖಚಿತಪಡಿಸಿದೆ (ಗೋಪಾಲ್ ೧೯೬೯.೨೦೭;) ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್ ೨೦ ಕ್ರಿ.ಶ. ೧೧೭೬ ಪು ೨೯೯) ಕಾಳಾಮುಖ ಮತ್ತು ಷಡಂಗೋಪಹಾರ ಇವೆರಡನ್ನೂ ಒಟ್ಟಿಗೆ ಉಲ್ಲೇಖಿಸುವ ಶಾಸನಗಳಿವೆಯೇ ಎಂದು ಪರಿಶೀಲಿಸಿದಾಗ ಎರಡು ಶಾಸನಗಳು ಲಭ್ಯವಾಯಿತು. ಇದು ಕಾಳಾಮುಖರಿಗೂ ಷಡಂಗೋಪಹಾರ ವಿಧಿಗಳಿಗೂ ಇರುವ ಸಂಬಂಧವನ್ನು ಸ್ಪಷ್ಟಪಡಿಸುತ್ತದೆ (ಬಳ್ಳಾರಿ ಜಿಲ್ಲೆ ಹರಪನಹಳ್ಳಿ ೪ ಪು. ೪೫೮–೪೫೯; ಕರ್ನೂಲ್ ಜಿಲ್ಲೆ ಚಿನ್ನತಂಬುಳಂ ೨೮೯. ಪು. ೩೨೨).

ಡಾ. ವಸುಂಧರಾ ಫಿಲಿಯೋಜಾರವರು "ಕಾಳಾಮುಖ ಪೂಜಾ ಪದ್ಧತಿ" ಎಂಬ ಪಂಪಾ ಮಹಾತ್ಮೆಯಲ್ಲಿರುವ ಅಧ್ಯಾಯವನ್ನು ಕೇವಲ ಒಂದು ಕಾಗದದ ಪ್ರತಿಯನ್ನು ಆಧರಿಸಿ ಪ್ರಕಟಿಸಿದ್ದಾರೆ. ಇದು ಮೈಸೂರು ಪ್ರಾಚ್ಯ ಸಂಶೋಧನಾಲಯದ ಪ್ರತಿ. ಇದರಲ್ಲಿ ಪಂಚೀವರಣ ಪೂಜಾ ಪದ್ಧತಿ ಇದೆ. ಈ ಅಧ್ಯಾಯ ಇನ್ನೆಲ್ಲಿಯೂ ದೊರಕದು ಎಂದಿದ್ದಾರೆ. ಇದು ಮೂಲ ಪುರಾಣಕ್ಕೆ ಪ್ರಕ್ಷೇಪವಾಗಿ ಸೇರಿರುವ ಸಾಧ್ಯತೆ ಹೆಚ್ಚು. ಬಹುಪಾಲು ಪುರಾಣಗಳನ್ನು ಕ್ರೋಢೀಕರಿಸಿದವರು ಉತ್ತರ ಭಾರತದವರು. ಕರ್ನಾಟಕ ಮತ್ತು ಆಂಧ್ರಭಾಗಗಳಲ್ಲಿ ಕಾಳಾಮುಖರ ವಾಸ್ತವ್ಯ. ಈ ಪ್ರಕ್ಷೇಪದ ರಚನೆ ಕರ್ನಾಟಕದಲ್ಲಿ ಸಾಧ್ಯ. ಆದ್ದರಿಂದ ಕರ್ನಾಟಕದಲ್ಲಿ ಈ ಹಸ್ತಪ್ರತಿ ದೊರೆತಿದೆ ಎಂದು ಖಚಿತವಾಗಿ ಹೇಳಬಹುದು (ವಸುಂಧರಾ ಫಿಲಿಯೋಜಾ ೨೦೦೧ ಪು. ೧೦೮–೧೧೦).

ಪ್ರಸ್ಥಾನ ತ್ರಯಗಳಲ್ಲೊಂದಾದ ಬ್ರಹ್ಮಸೂತ್ರಗಳಿಗೆ ಹಲವು ಪ್ರಾಚೀನ ವಿದ್ವಾಂಸರುಗಳು ಭಾಷ್ಯ, ಟೀಕೆಗಳನ್ನು ರಚಿಸಿದ್ದು ಆಚಾರ್ಯತ್ರಯರಾದ ಶಂಕರ, ರಾಮಾನುಜ, ಮಧ್ವಾಚಾರ್ಯರಲ್ಲದೆ, ಯಾಮುನಾಚಾರ್ಯ, ಭಾಸ್ಕರ, ವಾಚಸ್ಪತಿ ಮಿಶ್ರ ಮೊದಲಾದವರ ಗ್ರಂಥರಚನೆಗಳೂ ಗಮನಾರ್ಹವೆನಿಸಿವೆ. ಬ್ರಹ್ಮಸೂತ್ರಗಳಲ್ಲಿ "ಪಾಶುಪತಾಧಿಕರಣ" ವೆಂಬ ಅಧ್ಯಾಯವಿದೆ. ಇದನ್ನು ಕುರಿತ ಭಾಷ್ಯಗಳಲ್ಲಿ ಪಾಶುಪತರು ಅಂಗೀಕರಿಸಿದ ಪಂಚಪದಾರ್ಥಗಳಾದ ಕಾರ್ಯ ಕಾರಣ, ಯೋಗ, ವಿಧಿ, ದುಃಖಾಂತಗಳಿಗೆ ಸಂಬಂಧಿಸಿದಂತೆ ವಿಶ್ಲೇಷಣೆ, ಟೀಕೆಗಳಿವೆ. ವೇದಬಾಹ್ಯವಾದ ಈಶ್ವರನ ಕಲ್ಪನೆ, ಸಾಂಖ್ಯ ಯೋಗಗಳಲ್ಲಿ ಈಶ್ವರನ ಸ್ಥಾನಮಾನಗಳು, ಪರಮೈಶ್ವರ್ಯಸಾಧನೆಗಾಗಿ ಯೋಗ, ವಿಧಿಗಳ ಆಚರಣೆ ಇವೆಲ್ಲವೂ ಚರ್ಚೆಗೆ ಒಳಪಡುತ್ತವೆ. ಆಚಾರ್ಯ ಶಂಕರರು ಪಾಶು ಪತರನ್ನು ವೇದಬಾಹ್ಯರೆಂದು ಗುರುತಿಸಿದ್ದಾರೆ. ಭಾಸ್ಕರ, ವಾಚಸ್ಪತಿಮಿಶ್ರರು ಪಾಶುಪತ ವಿಧಿಗಳ ಆಚರಣೆಯನ್ನು "ತ್ರಿಶವಣಸ್ನಾನಾದಿಗೂಢಾ ಚರ್ಯಾವಸಾನಃ" ಎಂದು ಉಲ್ಲೇಖಿಸಿದ್ದಾರೆ.

ಗೂಢಾಚರಣೆ ಎಂದಲ್ಲಿ ಷಡಂಗೋಪಹಾರಗಳನ್ನು ಗುರುತಿಸಿದೆಯಷ್ಟೆ. ಅದರೊಂದಿಗೆ ಮೂರುಬಾರಿ ಭಸ್ಮಸ್ನಾನಾದಿಗಳನ್ನೂ ಒಳಗೊಳ್ಳುತ್ತದೆ. ಹಸಿತ ಎಂದಲ್ಲಿ ಕಂಠ ಹಾಗೂ ಓಷ್ಠಪುಟಗಳಿಂದ ಹೊರಡಿಸಲಾದ ಅಟ್ಟಹಾಸದ "ಅಹ್ಹಹಾ" ಎಂಬ ಅಟ್ಟಹಾಸದ ನಗು, ನೃತ್ಯ ಎಂದಲ್ಲಿ ನಾಟ್ಯಶಾಸ್ತ್ರೋಕ್ತ ಅಂಗ, ಪ್ರತ್ಯಂಗ, ಉಪಾಂಗಗಳಿಂದ ಕೂಡಿದ ನರ್ತನ, ಗೀತವು ಸಂಗೀತಶಾಸ್ತ್ರ ಪ್ರಕಾರ ಗುಣಧರ್ಮಾಧರಿತ ಚಿಂತನೆ, ಹುಡುಕ್ಕಾರವು ನಾಲಿಗೆಯ ತುದಿ, ತಾಲುಗಳ ಸಂಯೋಗದೊಡನೆ ಹೊರಡಿಸಲಾದ ಗೂಳಿಯ ಗುಟುರು ಶಬ್ದ, ಮಂದ ಮಂತ್ರೋಚ್ಚಾರಣೆಗಳನ್ನೊಳಗೊಂಡ ನಮಸ್ಕಾರ, ಸದ್ಯೋಜಾತಾದಿ ಮಂತ್ರಪೂರ್ವಕ ಮಾನಸಿಕ ಜಪ ಇವುಗಳನ್ನು ಷಡಂಗೋಪಹಾರ ಎನ್ನಲಾಗಿದೆ. ಇವನ್ನು ಗೋಪ್ಯವಾಗಿ ಆಚರಿಸಬೇಕು.

ಇವುಗಳು ಗೊರವರಲ್ಲಿ ಆಚರಣೆಯಲ್ಲಿತ್ತು ಎನ್ನುವುದಕ್ಕೆ ಮಧುರ ಕವಿಯ ಧರ್ಮನಾಥ ಪುರಾಣದ ಉಲ್ಲೇಖ ಸಾಕ್ಷಿಯಾಗಿದೆ. (ಚಿದಾನಂದ ಮೂರ್ತಿ ೧೯೬೬ ಪು. ೧೪೭ ಅಡಿ ಟಿಪ್ಪಣಿ).

> **ಪಂಡಿತರೂ ವಿವಿಧ ಕಳಾಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್**
> **ಕಂಡರ್ ಕೇಳ್ವೊಕೆ ಗೊರವರಡುಂಡುಚಿಯೇ ಬೀದಿವರಿಯೆ ಬೀರನ ಕತೆಯೇ**

ಸಾಯಣ ಮಾಧವರು ಗುರುತುಸಿದ ಹುಡುಕ್ಕಾರವು ಮಧುರಕವಿಯ ಪದ್ಯದಲ್ಲಿ ಗೊರವರ ಡುಂಡುಚಿಯಾಗಿದೆ. ಸರ್ವದರ್ಶನ ಸಂಗ್ರಹದಲ್ಲಿ ಪಾಶುಪತ ಸೂತ್ರಗಳನ್ನು ಗುರುತಿಸುವಾಗ ಷಂಡಗೋಪಹಾರಗಳಲ್ಲಿ "ಹುಡುಕ್ಕಾರ" ಎಂದಿದೆ (ಜೋಷಿ ೨೦೦೬ ೧೪೮). ಪಾಶುಪತ ಸೂತ್ರಗಳಿಗೆ ರಚಿಸಿದ ಕೌಂಡಿನ್ಯಭಾಷ್ಯದ ಮೂಲದಲ್ಲಿ "ಡುಂಡುಂಕಾರ" ಎನ್ನಲಾಗಿದೆ. ಮೂಲ ಪಾಠ ಡುಂಡುಂಕಾರ ವಿರಲು ಸಾಧ್ಯ.

> **ಡುಂಡುಂಕಾರೋನಾಮ ಯುವಷಜಿಹ್ವಾಗ್ರತಾಲು ಸಂಯೋಗಾತ್ ನಿಷ್ಪದ್ಯತೇ ಪುಣ್ಯೋವೃಷನಾದ ಸದೃಶಃ ಸಃ । ಡುಂಡುಂಕರಣಂ ಡುಂಡುಂಕಾರಃ । – ಇದು ಕೌಂಡಿನ್ಯಭಾಷ್ಯ (ತ್ರಿಪಾಠಿ ೧೯೫೮.೯).**

ಎಲ್ಲ ದರ್ಶನ, ಮತ, ಸಂಪ್ರದಾಯಗಳ ಗುರಿ ಮೋಕ್ಷ. ಪಾಶುಪತದಲ್ಲಿ ಇದನ್ನು ಪರಮೈಶ್ವರ್ಯ ಸಿದ್ಧಿ ಎಂದಿದ್ದಾರೆ. ಈ ಸಿದ್ಧಿಗಾಗಿ ಹಲವಾರು ಮಾರ್ಗೋಪಾಯಗಳು ಡುಂಡುಂಕರಣ ಅಥವಾ ಡುಂಡುಂಕಾರವು ಕಾಳಾಮುಖರ

ಅಂತಹ ಮಾರ್ಗೋಪಾಯಗಳ ಒಂದು ಭಾಗ, ಆಚಾರ್ಯ ಶಂಕರರು ಈ ರೀತಿಯ ಆಚರಣೆಯನ್ನು ವಿರೋಧಿಸಿದ್ದರೇ? ಮೋಹಮುದ್ಗರದ ಸಾಲುಗಳನ್ನು ನೆನೆಯಬೇಕು.

ಭಜಗೋವಿಂದಂ ಭಜಗೋವಿಂದಂ ಗೋವಿಂದಂ ಭಜ ಮೂಢಮತೇ
ಸಂಪ್ರಾಪ್ತೇ ಸನ್ನಿಹಿತೇ ಕಾಲೇ ನಹಿ ನಹಿ ರಕ್ಷತಿ ಡುಕೃಂಕರಣೇ

ಮೇಲಿನ ಸಾಲಿನ ಕೊನೆಯ ಪದ "ಡುಂಡುಂಕರಣೇ" ಆಗಿರಲೂ ಸಾಧ್ಯ ! 'ಡುಕೃಂಕರಣೆ'ಯನ್ನು ಪಾಣಿನಿಯ ಸೂತ್ರದ ಭಾಗವೆಂದು ವಿದ್ವಾಂಸರು ವಿವರಿಸುತ್ತಾರೆ. 'ಡುಂಡುಂಕರಣೆ' ಆಗಿದ್ದಲ್ಲಿ ಆಚಾರ್ಯ ಶಂಕರರು ಪಾಶುಪತದ ಗೂಢಾಚರಣೆಯನ್ನು ವಿರೋಧಿಸಿರಲೂ ಸಾಧ್ಯ. ಮೋಹ ಮುದ್ಗರದ ಮೂಲ ಮಾತೃಕೆಯನ್ನು ಹುಡುಕಿ ನೋಡಬೇಕು. ಆಗ ಪಾಶುಪತಸೂತ್ರದ ಮೂಲ ಪಾಠವೂ ಖಚಿತಗೊಳ್ಳುತ್ತದೆ. ಯಾಮುನಾಚಾರ್ಯರು ಪಾಶುಪತ ಸೂತ್ರದ ಮೂಲ ಪಾಠವೂ ಖಚಿತಗೊಳ್ಳುತ್ತದೆ. ಯಾಮುನಾಚಾರ್ಯರು ಪಾಶುಪತ ಪ್ರಕ್ರಿಯೆಯನ್ನು ವಿವರಿಸುವಾಗ ತಮ್ಮ ಆಗಮ ಪ್ರಾಮಾಣ್ಯ ಗ್ರಂಥದಲ್ಲಿ "ಗೂಢಾಚಾರ ಮುಖಾ ಸ್ಮಶಾನ ಭಸಿತ ಸ್ನಾನಾವಸಾನಃ ಪರಃ" ಎಂದು ವಿವರಿಸಿದ್ದಾರೆ. ವಿದೇಶೀ ವಿದ್ವಾಂಸ, ಬುಟಿನೆನ್ ಇದು ಸುಲಭವಾಗಿ ಗ್ರಾಹ್ಯವಾಗದ ಅಶುದ್ಧ ಪಾಠ ಎನ್ನುತ್ತಾರೆ. ನಮ್ಮ ಗಮನ "ಗೂಢಾಚಾರ ಮುಖಾ" ಎಂಬ ಪ್ರಯೋಗವನ್ನು ಕುರಿತದ್ದು. ಯಾಮುನಾಚಾರ್ಯರಿಗೆ ಕಾಳಾಮುಖರ ಅಸ್ತಿತ್ವದ ಅರಿವಿತ್ತು. ಅವರ ಗೂಢ ಆಚರಣೆಗಳ ಬಗಗೆ ಮಾಹಿತಿ ಇತ್ತು. ಆದ್ದರಿಂದ "ಗೂಢಾಚಾರ ಮುಖಾ" ಪದ ಪ್ರಯೋಗವಿದೆ ಎನ್ನಬಹುದು. ಗೂಢಾಚಾರದೊಡನೆ ಸೇರಿದ 'ಮುಖಾ'ಪದ ಕಾಳಾಮುಖರ ಸ್ಮರಣೆಯಿಂದ ಉದ್ಧರಿಸಿದ್ದು ಎನ್ನುವುದು ಸ್ಪಷ್ಟ ಈ ವಿವರಗಳು ಕಾಳಾಮುಖರನ್ನು ಪಾಶುಪತರಿಂದ ಪ್ರತ್ಯೇಕಿಸಿ ನೋಡಲು ನೆರವಾಗಿವೆ.

ಆಧಾರಸೂಚಿ

೧. ಎಪಿಗ್ರಾಪಿಯಾ ಕರ್ನಾಟಿಕಾ, ಸಂ. ೩, ಮೈಸೂರು ಜಿಲ್ಲೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು (೧೯೭೪)
೨. ಉಪಾಧ್ಯೆ ಜಿ. ಎನ್. ಮತ್ತು ದೇವರಕೊಂಡಾರೆಡ್ಡಿ (ಸಂ) ಮಹಾರಾಷ್ಟ್ರ ಕನ್ನಡ ಶಾಸನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ (೨೦೦೧)
೩. ಕಲಬುರ್ಗಿ ಎಂ.ಎಂ. (ಸಂ) ಧಾರವಾಡ ತಾಲ್ಲೂಕಿನ ಶಾಸನಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, (೧೯೭೬).
೪. ಗಣೇಶ ಕೆ.ಆರ್. ಮತ್ತು ಶೇಷಶಾಸ್ತ್ರಿ ಆರ್. (ಸಂ) ಆಂಧ್ರ ಪ್ರದೇಶದ ಕನ್ನಡ ಶಾಸನಗಳು ಭಾಗ -೧, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ (೨೦೦೧)
೫. ಗೋಪಾಲ್ ಬಿ.ಆರ್. (ಸಂ) ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್, ಸಂ:೫, ಕರ್ನಾಟಕ ಯೂನಿವರ್ಸಿಟಿ, ಧಾರವಾಡ್, ೧೯೬೯.
೬ ಚಿದಾನಂದಮೂರ್ತಿ ಎಂ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು (೧೯೬೬)
೭. ಜೋಷಿ ಕೆ.ಎಲ್ (ಸಂ), ಸರ್ವದರ್ಶನ ಸಂಗ್ರಹ, (ಮಾಧವಾಚಾರ್ಯ ಪ್ರಣೀತಃ) ಪರಿಮಲ್ ಪಬ್ಲಿಕೇಷನ್ಸ್, ದೆಹಲಿ, ೨೦೦೬.
೮. ಡೇವಿಡ್ ಎನ್. ಲೊರೆಂಜೆನ್, ದಿ ಕಾಪಾಲಿಕಾಸ್ ಅಂಡ್ ಕಾಳಾಮುಖಾಸ್ ಟುಲಾಸ್ಟ್ ಶೈವೈಟ್ ಸೆಕ್ಟ್ಸ್, ಮೋತೀಲಾಲ್ ಬನಾರಸಿದಾಸ್ ಪಬ್ಲಿಷರ್ಸ್ ಪ್ರೈ.ಲಿ. ಡೆಲ್ಲಿ, (೧೯೭೨).
೯. ತ್ರಿಪಾಠಿ ಅಲೋಕ್‌ಮಣಿ (ಸಂ) ಪಾಶುಪತಸೂತ್ರ ಪಂಚಾರ್ಥಭಾಷ್ಯ, ಪ್ರತಿಭಾ ಪ್ರಕಾಶನ, ಡೆಲ್ಲಿ (೧೯೯೮),
೧೦. ದಲಾಲ್ ಸಿ.ಡಿ. (ಸಂ) ಗಣಕಾರಿಕಾ, ಗಾಯಕವಾಡ್ ಓರಿಯೆಂಟಲ್ ಸೀರೀಸ್, ಬರೋಡಾ (೧೯೨೦)
೧೧. ರಂಗಸ್ವಾಮೀ ಎಚ್.ಎಸ್ ಮತ್ತು ಇತರರು (ಸಂ.), (ಶ್ರೀಮನ್ಮಹಾಭಾರತ, ಭಾರತದರ್ಶನ ಪ್ರಕಾಶನ, ಬೆಂಗಳೂರು, ಸಂ: ೨೫/೧೯೮೨, ಸಂ. ೨೬/೧೯೯೦).
೧೨. ರೈಸ್ ಬಿ.ಎಲ್. (ಸಂ) ಎಪಿಗ್ರಾಪಿಯಾ ಕರ್ನಾಟಕ ಸಂ:೫, ಹಾಸನಜಿಲ್ಲೆ (೧೯೦೫)
೧೩. ಎಪಿಗ್ರಾಪಿಯಾ ಕರ್ನಾಟಕ, ಸಂ. ೧೦ ಕೋಲಾರ ಜಿಲ್ಲೆ (೧೯೦೫)
೧೪. ವಸುಂಧರಾ ಫಿಲಿಯೋಜಾ, ಕಾಳಾಮುಖಾ ಅಂಡ್ ಪಾಶುಪತ ಟೆಂಪಲ್ಸ್ ಇನ್ ಧಾರವಾಡ, ಕುಪ್ಪುಸ್ವಾಮಿ ಶಾಸ್ತ್ರಿ ರೀಸರ್ಚ್ ಇನ್‌ಸ್ಟಿಟ್ಯೂಟ್, ಚೆನ್ನೈ (೨೦೦೧)
೧೫. ವೆಂಕಟರಾವ್ (ಅನು) ಶಿವಮಹಾಪುರಾಣ, ಶ್ರೀ ಜಯ ಚಾಮರಾಜೇಂದ್ರ ಗ್ರಂಥಮಾಲಾ, ಮೈಸೂರು (೧೯೪೫).
೧೬. ವ್ರಜವಲ್ಲಭ ದ್ವಿವೇದ (ಸಂ), ಸೂಕ್ಷ್ಮಾಗಮ, ಶೈವಭಾರತೀ ಶೋಧ ಪ್ರತಿಷ್ಠಾನಂ, ವಾರಣಾಸಿ, (೧೯೯೪)
೧೭. ಶ್ರೀನಿವಾಸಮೂರ್ತಿ ಎಸ್.ಎಲ್. ಕರಸ್ಥಳಲಿಂಗ ಪೂಜೆಯ ವೈದಿಕ ರೂಪಃ ಪಾರ್ಥಿವೇಶ್ವರ ಪೂಜೆ, – ಇತಿಹಾಸದರ್ಶನ, ಸಂ. ೨೮, ಕರ್ನಾಟಕ ಇತಿಹಾಸ ಅಕಾಡೆಮಿ, (೨೦೧೩).
೧೮. ಶ್ರೀನಿವಾಸ ಶರ್ಮಾ (ಸಂ) ಷಡ್ದರ್ಶನ ಸಮುಚ್ಚಯ, ಚೌಕಾಂಬಾ ಕೃಷ್ಣದಾಸ ಅಕಾಡೆಮಿ, ವಾರಣಾಸಿ (೨೦೧೨).

ಕಲ್ಯಾಣ ಪರಂಪರೆಯ ಮತ್ತೊಂದು ಕೇಂದ್ರ ಕಕ್ಕಳಮೇಳಿ

ಡಾ. ಕೆ. ರವೀಂದ್ರನಾಥ*

ಕರ್ನಾಟಕ ಇತಿಹಾಸ ಅಕಾಡೆಮಿಯ ಈ ಹಿಂದಿನ ಸಮ್ಮೇಲನಗಳಲ್ಲಿ ಯಾದಗಿರಿ ಜಿಲ್ಲೆ ಶಹಾಪುರ ತಾಲೂಕಿನ ದಿಗ್ಗಿ ಸಂಗಮನಾಥ ಸ್ಥಾಪಿಸಿದ ಅಮರಕಲ್ಯಾಣ ಮತ್ತು ಗುಲಬರ್ಗಾ ಜಿಲ್ಲೆ ಚಿತ್ತಾಪುರ ತಾಲೂಕಿನ ನಾಗಾವಿ ಗುಂಡಬಸವೇಶ್ವರ ಸ್ಥಾಪಿಸಿದ ಧರ್ಮಕಲ್ಯಾಣ ಕುರಿತು ಪ್ರಬಂಧ ಮಂಡಿಸಿದ್ದೆನು. ಈಗ ಈ ಕಲ್ಯಾಣ ಪರಂಪರೆಯ ಮತ್ತೊಂದು ಕೇಂದ್ರ ಕಕ್ಕಳ ಮೇಳಿ ಕುರಿತು ತಜ್ಞ ವಿದ್ವಾಂಸರ ಗಮನಕ್ಕೆ ತರಬಯಸುತ್ತೇನೆ.

೧. **ಆಕರ ಸಾಮಗ್ರಿ:** ೧. ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ ೨೦೮ನೇ ನಂಬರಿನ ಕಾಗದ ಪ್ರತಿ "ಗುಂಡಬಸವ ಅಂಕಿತದ ೬೩ ಸ್ವರವಚನಗಳಿವೆ. ಇವುಗಳನ್ನು ೧೯೮೬ರಲ್ಲಿ 'ಬಸವಪಥ'ದ ೮ ಸಂಚಿಕೆಯಲ್ಲಿ ಡಾ. ಬಿ.ಆರ್. ಹಿರೇಮಠರು ಸಂಪಾದಿಸಿ ಪ್ರಕಟಿಸಿದ್ದಾರೆ.

೨. ಶಹಾಪುರದ ಶ್ರೀ ಗದ್ದಿಗಿರಾಯ ಒಡೆಯರ್ ಅವರಲ್ಲಿಯ ವಚನ-ಸ್ವರವಚನ ಕಾಗದ ಪ್ರತಿ. ಇವುಗಳನ್ನು ಬಳಸಿಕೊಂಡು ಕೊಡೇಕಲ್ಲ ವಚನವಾಕ್ಯ ಹೆಸರಿನ ೪ನೇ ಸಂಪುಟವನ್ನು ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಗೆ ಪ್ರಕಟಿಸಲು ಡಾ. ಎಂ.ಎಂ. ಕಲಬುರ್ಗಿ ಅವರು ಸಂಪಾದಿಸಿದ ಕರಡು ಪ್ರತಿ.

೩. ಕಕ್ಕಳಮೇಲಿಯಲ್ಲಿರುವ ಅಲ್ಲಮಯ್ಯನ ಗದ್ದುಗೆ, ಅಲ್ಲಿ ನಡೆಯುವ ಧಾರ್ಮಿಕ ಆಚರಣೆ, ಉತ್ಸವ ಮುಂತಾದ ಕ್ಷೇತ್ರಕಾರ್ಯದ ಮಾಹಿತಿ.

ಇದಿಷ್ಟು ನನ್ನ ಪ್ರಬಂಧಕ್ಕೆ ಬಳಸಿಕೊಂಡ ಆಕರ ಸಾಮಗ್ರಿ. ಬಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಕಕ್ಕಳಮೇಲಿಯಲ್ಲಿ ಅಲ್ಲಮಪ್ರಭು ಮತ್ತು ಆತನ ತಾಯಿ ಜಕ್ಕಮ್ಮನ ಗದ್ದುಗೆಗಳಿವೆ. ಈ ಜಕ್ಕಮ್ಮ ಧರ್ಮಕಲ್ಯಾಣದ ಕರ್ತೃ ಗುಂಡಬಸವೇಶ್ವರನ ಹೆಂಡತಿ. ಈಕೆ ಗುಲಬರ್ಗಾ ಜಿಲ್ಲೆಯ ಗುಂಡಗುರ್ಕಿ ತುಪ್ಪದ ಶಂಕರಸೆಟ್ಟಿ ಮತ್ತು ಲಕ್ಕಾಯಿಯವರ ಮಗಳು. ಗುಂಡಬಸವೇಶ್ವರ-ಜಕ್ಕಮ್ಮನಿಗೆ ಅಲ್ಲಮಯ್ಯ, ಈರಪ್ಪಯ್ಯ, ಸಂಗಪ್ಪಯ್ಯ ಮತ್ತು ಹೆಸರು ಉಲ್ಲೇಖವಿರದ ೨ ಜನ ಒಟ್ಟು ಐದು ಜನ ಮಕ್ಕಳೆಂಬುದು ಗುಂಡಬಸವೇಶ್ವರ ಚರಿತ್ರೆ ಎಂಬ ಕೃತಿಯಿಂದ ತಿಳಿದುಬರುತ್ತದೆ.

ಗುರುಗುಂಡರಾಯ ಗರ್ಭದಲಿ
ಪರಂಜ್ಯೋತಿ ಉದ್ಭವಿಸಿತೆಂದು
ಅರುಹು ಜ್ಞಾನದ ಪಿಂಡವೆಂದೆನುತ
ಅರುವಿಯ ನಿತ್ತನು ॥

ಹಿರಿಯ ತಿಪ್ಪಣ್ಣಯ್ಯ ಶರಣದೇವನು
ಕರುಣಮೂರ್ತಿ ತಾ
ತರುಣಿ ಜಕ್ಕಾಂಬಿಕೆಗೆ ಕರಮುಗಿದನೀ
ಶರಣ ಮುಟ್ಟಿಸೆಂದು ॥

ಈಶ ಭಕ್ತನು ತಿಪ್ಪಣ್ಣಯ್ಯನು ಹೇಳಿ ಕೈ
ಲಾಸಕ್ಕೆ ಬಿಜಯ ಮಾಡಲು
ದೇಶದೊಳಲ್ಲಮರಾಯನೆಂದೆಂಬಮ
ಹೇಳ ತಾ ಜನಿಸಿದ ॥

ಎಂಬ ಸ್ವರವಚನಗಳು ಗುಂಡಬಸವೇಶ ಹಾಗೂ ಜಕ್ಕಾಂಬೆಗೆ ಅಲ್ಲಮ ಪ್ರಭು ಜನಿಸಿದ್ದನ್ನು ನಿರೂಪಿಸುತ್ತವೆ. ನಾಗಾವಿಯಲ್ಲಿ ಜನಿಸಿದ ಅಲ್ಲಮರಾಯ ಕಕ್ಕಳಮೇಲಿಯಲ್ಲಿ ಮಠವನ್ನು ಕಟ್ಟಿಸಿದನು. ಧರ್ಮಕಲ್ಯಾಣದ ಕರ್ತೃವಾದ ತಂದೆ ಗುಂಡ ಬಸವೇಶ್ವರನ ಮಹಿಮೆಯನ್ನು ಸಾರಲು ಕಕ್ಕಳಮೇಲಿಯಲ್ಲಿ ನೆಲೆನಿಂತನು.

ವರವಸ್ತು ಗುರುಗುಂಡ ಬಸವೇಶ್ವರನ
ಮಹಿಮೆ ಪ್ರಭೆ ಮಾಡಬಂದ ಅಲ್ಲಮಲಿಂಗನ
ಹರಣ ಮಾರಾಯತಿಗೆ ಸಂಚಕಾರಮ॥
ಅಲ್ಲಮ ಪ್ರಭುವನೆ ಪೊಗಳತ ನೀ
ವೆಲ್ಲರು ವಸಂತನಾಡಬನ್ನಿ
ಸೃಷ್ಟಿಗಧಿಕವೆಂದು ಕಕ್ಕಯ್ಯನ ಯಳಮೇಲಿ
ದೃಷ್ಟ ಮಾರುತಿ ಅಲ್ಲಮ ಪ್ರಭು
ಕೊಟ್ಟನು ಸಂಗನ ಸುತಗೆ ವರಗಳ ಮನ
ಮುಟ್ಟಿ ವಸಂತನಾಡಬನ್ನಿ ಅಲ್ಲಮ ॥

ಸೃಷ್ಟಿಗೆ ಅಧಿಕವಾದ ಕಕ್ಕಯ್ಯನ ಯಳಮೇಲಿ ಅಂದರೆ ಕಕ್ಕಳಮೇಲಿಯಲ್ಲಿ ನೆಲೆನಿಂತು ಅಲ್ಲಮ ಪ್ರಭು 'ಸಂಗನ

* ಪ್ರಾಧ್ಯಾಪಕರು, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬.

ಸುತಗೆ' ವರಗಳನ್ನು ಮನಮುಟ್ಟಿಕೊಟ್ಟನು. ಇಲ್ಲಿ ಉಲ್ಲೇಖಿತ ಸಂಗನ ಸಂತ ಯಾರು? ಅಲ್ಲಮಪ್ರಭುವಿನ ಹಾಗೂ ಜಕ್ಕಾಂಬೆಯರ ಪಕ್ಕದಲ್ಲಿ ಇನ್ನೆರಡು ಗದ್ದುಗೆಗಳಿವೆ ಇವು ಯಾರವು? ಇದರಲ್ಲಿ 'ಸಂಗನಸುತ'ನೆಂಬ ವಿಶೇಷಣದ 'ಕಕ್ಕಯ್ಯ'ನೆಂಬ ವ್ಯಕ್ತಿಯದಾಗಿರಬೇಕೆ? ಕೇವಲ ಯಳಮೇಲಿ ಎಂಬ ಸ್ಥಳನಾಮ ಕಕ್ಕಯನ ಪ್ರಸಿದ್ಧಿಯಿಂದ 'ಕಕ್ಕನಯ ಲಮೇಲಿ'> ಕಕ್ಕಳಮೇಲಿಯಾಗಿರಬೇಕೆ?–ಇಂಥ ಪ್ರಶ್ನೆಗಳಿಗೆ ಇನ್ನೂ ಹೆಚ್ಚಿನ ಆಕರಗಳ ನೆರವಿನಿಂದ ಉತ್ತರ ಕಂಡುಕೊಳ್ಳ ಬೇಕಾಗಿದೆ.

ಅಲ್ಲಮಯ್ಯನ ವ್ಯಕ್ತಿತ್ವ: ಕಕ್ಕಳಮೇಲಿಯಲ್ಲಿ ೧೫–೧೬ನೇ ಶತಮಾನದಲ್ಲಿ ರಚಿಸಿರಬಹುದಾದ ಎರಡು ಜೋಡಿ ಗದ್ದುಗೆಗಳಿವೆ. ಗುಮ್ಮಟ ಮಾದರಿಯ ಗೋಪುರಗಳಿವೆ. ಸದ್ಯ ಇವು ಅಂಬಿಗರ ವಂಶದವರಿಂದ ಪೂಜೆಗೊಳ್ಳುತ್ತಿವೆ. ಅಲ್ಲಮನ ಭಕ್ತರು ಗುಲಬರ್ಗಾ ಜಿಲ್ಲೆಯಲ್ಲಿ ಹೆಚ್ಚಾಗಿದ್ದು ಪ್ರತಿವರ್ಷ ಶ್ರಾವಣ ಮಾಸದಲ್ಲಿ ಇಲ್ಲಿಗೆ ಬಂದು ದರ್ಶನ ಪಡೆಯುತ್ತಾರೆ.

ಕೊಡೇಕಲ್ಲ ಬಸವಣ್ಣ ಮೂಲತಃ ಹಂಪಿಯವನು. ಈತನ ಸಮಕಾಲೀನನಾದ ಅಲ್ಲಮಯ್ಯ ವಿಜಯನಗರದ ರಾಯನ (ಪ್ರಾಯಶಃ ಕೃಷ್ಣದೇವರಾಯನಾಗಿರಬೇಕು?) ಆಸ್ಥಾನಕ್ಕೆ ನಡೆಯುತ್ತಾನೆ.

ನಿತ್ಯನಲ್ಲಮರಾಯನ ವಿ
ರಕ್ತನು ಈತನು ವಿಜಯನಗರದೊಳು
ಭಕ್ತಿಯ ಮೆರೆವನೆಂದ ॥
ಮತ್ತು
ಆತನಲ್ಲಮ ಲಿಂಗ ಭೀತಿಯಿಲ್ಲದೆ ಹೋಗಿ
ಓತು ರಾಯನಕಂಡು
ಮಾತನಾಡೆನುತ ಮನ್ನಣೆಗೊಡೆದೆ
ಆತುರವನು ಮಾಡಿದ

ಎನ್ನುವಲ್ಲಿ ಮತ್ತು ರಾಯನಿಗೆ ನೇರವಾಗಿ ಅಲ್ಲಮಯ್ಯ ವಿಜಯನಗರದಲ್ಲಿ ಬಸವನಾಚಾರ ಅಪಚಾರವಾದುದನ್ನು ವಿವರಿಸುತ್ತಾನೆ.

ವಸುಧೆಯೊಳೆಲ್ಲ ಬಸವನಾಚಾರ
ಪಸರಿಸಿದ್ದುದನು
ನಸುವ ಬುದ್ಧಿಗಳಿಂದ ಹಸಗೆಡಿಸಿದಿರಿದು
ಬಸವನ ಮೊರೆಯೆಂದನು

ಮುಂದೆ ರಾಯನಿಂದ ಆನೆಯ ಮೇಲೆ ಮೆರವಣಿಗೆ ಗೌರವ ಪಡೆಯುತ್ತಾನೆ. ರಾಜನಿಗೆ ಒಂದು ಸೂಚನೆಯನ್ನು ನೀಡುತ್ತಾನೆ. ಜನ ಮಾತಿಗೆ ಬಗ್ಗುವುದಿಲ್ಲ. ಶಿಕ್ಷೆಗೆ, ದಂಡನೆಗೆ ಬಗ್ಗುತ್ತಾರೆ.

ಶಿಕ್ಷೆ ದೀಕ್ಷೆ ತಂದಲ್ಲದೆ ಲೋಕ ಬರಿ
ವಾಕಿಗೆ ಮಣಿಯದೆಂದ ॥

ಎಂಬ ಹೇಳಿಕೆಯಿಂದಲೂ "ಧರೆಯ ನಾಳಲು ಶರಣರ ದಂಡ ತರಲು ಹೋದನು" ಎಂಬಲ್ಲಿ ಸೈನ್ಯ ಕಟ್ಟಲು ಸೂಚಿಸುತ್ತಾನೆ. ಈ ಕಲ್ಯಾಣಪರಂಪರೆ ಹೋರಾಟವನ್ನು ಆಪೇಕ್ಷಿಸುವ ಪಂಥವಾಗಿ ಕಾಣಿಸುತ್ತದೆ. ಈತನ ತಂದೆ ಗುರುಗುಂಡ ಬಸವೇಶನ ಚರಿತ್ರೆಯಲ್ಲಿ

ಕಲ್ಯಾಣ ನಾಲ್ಕರೊಳಗೆ ಬಂದ ಶರಣರ
ಸೊಲ್ಲಕೇಳದಾಯಿತು ಲೋಕ
ಬಲ್ಲದ ದೀಕ್ಷೆ ಶಿಕ್ಷೆಯ ಕೊಂಡುಬಂದು
ಹೊಸಕಲ್ಯಾಣವನ್ನು ನಿರ್ಮಿಸಿದನು॥

ಇವೆಲ್ಲ ಹೇಳಿಕೆಗಳು ಇವರ ಹೋರಾಟದ ಮನೋಧರ್ಮವನ್ನು ತಿಳಿಸುತ್ತವೆ. ಒಟ್ಟಿನಲ್ಲಿ ಕಲ್ಯಾಣ ಪರಂಪರೆಯಲ್ಲಿ ಬರುವ ಧರ್ಮ ಕಲ್ಯಾಣದ ಗುಂಡ ಬಸವೇಶ್ವರನ ಹೆಂಡತಿ ಜಕ್ಕಮ್ಮ ಮತ್ತು ಮಗ ಅಲ್ಲಮರಾಯ ಕಕ್ಕಲಮೇಲಿಯಲ್ಲಿ ನೆಲೆನಿಂತರು. ಈಗಲೂ ಅಲ್ಲಿರುವ ಗದ್ದುಗೆಗಳಿಗೆ ಪೂಜೆ, ಪ್ರತಿವರ್ಷ ಜಾತ್ರೆ ನಡೆಯುತ್ತದೆ. ಮುಂದೆ ಈ ಕಲ್ಯಾಣ ಪರಂಪರೆಯು ಸಾಲೋಟಗಿ ಶಿವಯೋಗಿ, ತೇರದಾಳದ ಅಲ್ಲಮರಾಯರವರೆಗೆ ಮುಂದುವರಿಯುವಂತೆ ತೋರುತ್ತದೆ.

೫೮

ವಿಜಯವಿಠಲ ದೇವಾಲಯದ ಮಹಾಮಂಟಪದಲ್ಲಿರುವ ಸಂಯುಕ್ತ ಸ್ತಂಭಗಳ ಸ್ವರೂಪ

ಡಾ. ಮನೋಜ್*

ಹಂಪಿಯ ವಿಜಯವಿಠಲ ದೇವಾಲಯವು ವಿಜಯನಗರ ಕಾಲದ ದೇವಾಲಯಗಳಲ್ಲಿ ಉತ್ಕೃಷ್ಟತರವಾದ ದೇವಾಲಯಗಳಲ್ಲೊಂದು. ವಿಜಯನಗರ ಕಾಲದ ಹೊತ್ತಿಗೆ ದೇವಾಲಯದ ವಾಸ್ತು ಅಂಗಗಳು ಪರಿಪೂರ್ಣವಾಗಿ ಬೆಳದಿದ್ದವು. ಹೀಗಾಗಿ ವಿಜಯವಿಠಲ ದೇವಾಲಯವು ಪ್ರಧಾನ ದೇವಾಲಯ ಮುಖಮಂಟಪ ಪಾರ್ಶ್ವಗಳಲ್ಲಿ ಮುಖಮಂಟಪ ಮಾನಸೂತ್ರಕ್ಕೆ ಹೊಂದಿಕ್ಕೊಂಡಂತೆ ಮಹಾಮಂಟಪ, ಆಗ್ನೇಯದಲ್ಲಿ ಕಲ್ಯಾಣಮಂಟಪ, ಈಶಾನ್ಯದಲ್ಲಿ ರಂಗಮಂಟಪ, ಇವುಗಳೊಂದಿಗೆ ನಾಲ್ಕು ಪ್ರವೇಶ ದ್ವಾರಗಳು, ಮಹಾದ್ವಾರಗಳು, ಪ್ರಾಕಾರ, ಮಾಲಿಕ ಇತ್ಯಾದಿ ಎಲ್ಲಾ ಅಂಗಗಳನ್ನು ಹೊಂದಿದೆ. ಈ ಎಲ್ಲಾ ಅಂಗಗಳು ಹೇರಳವಾದ ಅಲಂಕರಣಗಳನ್ನು ಹೊಂದಿದ್ದು ವೈಭವಪೂರಿತವಾಗಿವೆ. ಇವುಗಳ ಪೈಕಿ ವಿಶಾಲವಾದ ಮಹಾಮಂಟಪವು ವೈವಿಧ್ಯಮಯವಾದ ಸಂಯುಕ್ತ ಸ್ತಂಭಗಳಿಂದ ಅಲಂಕೃತವಾಗಿದೆ. ಪ್ರಸ್ತುತ ಲೇಖನದಲ್ಲಿ ಈ ಸಂಯುಕ್ತ-ಸ್ತಂಭಗಳ ಸ್ವರೂಪದ ವಿವರಣೆಯನ್ನು ನೀಡಲಾಗಿದೆ.

ವಿಜಯವಿಠಲ ದೇವಾಲಯದ ಮಹಾಮಂಟಪದ ವಿನ್ಯಾಸದಲ್ಲಿ ಆವರಣದ ಮೂರು ಮುಖಗಳ ಕಡೆಗೂ ಮೂರು ಹಂತಗಳಲ್ಲಿ ವಿನ್ಯಾಸ ಸೂತ್ರವು ಮುಂಚಾಚಿರುವುದನ್ನು ಕಾಣಬಹುದು. ಹೀಗಾಗಿ ವಿನ್ಯಾಸದಲ್ಲಿ ಭದ್ರ ಮತ್ತು ಸುಭದ್ರಗಳಂತೆ ಮುಂಚಾಚುಗಳು ಬಂದಿದ್ದು ದಿಕ್ಕಿಗೆ ಆರು ಮೂಲೆಗಳನ್ನು ಹೊಂದಿದೆ. ಈ ಮಹಾಮಂಟಪದಲ್ಲಿ ೫೬ ಸಂಯುಕ್ತ ಸ್ತಂಭಗಳನ್ನು ಕಾಣಬಹುದು. ವಿಜಯನಗರ ಕಾಲದಲ್ಲಿ ಸಂಯುಕ್ತ ಸ್ತಂಭಗಳ ಬಳಕೆ ಹೇರಳವಾದದ್ದು ತಿಳಿದ ಸಂಗತಿಯೇ ಆಗಿದೆ. ಅವುಗಳು ಸಾಮಾನ್ಯವಾಗಿ ಶಾಸ್ತ್ರೋಕ್ತವಾದಂತಹ ಸುಪ್ರತೀ ಕಾಂತ, ವ್ಯಾಳಕಾಂತ, ಸಿಂಹಕಾಂತ, ಅಶ್ವಕಾಂತ ಇತ್ಯಾದಿ ವರ್ಗಗಳಿಗೆ ಸೇರಿದವು ಆಗಿರುತ್ತವೆ. ವಿಜಯವಿಠಲ ದೇವಾಲಯದ ಮಹಾಮಂಟಪದ ಸ್ತಂಭಗಳ ವೈಶಿಷ್ಟ್ಯವೇನೆಂದರೆ ಕೇವಲ ಶಾಸ್ತ್ರೋಕ್ತವಾದ ಸ್ತಂಭಗಳು ಮಾತ್ರವಲ್ಲದೆ ಹಲವು ಪ್ರಕಾರಗಳ ಸ್ತಂಭಗಳ ಲಕ್ಷಣಗಳನ್ನು ಸಂಮಿಶ್ರಣ ಮಾಡಿ ಒಂದು ಹೊಸ ರೀತಿಯ ಸ್ತಂಭವನ್ನು ರೂಪಿಸಲಾಗಿದೆ. ಇವುಗಳನ್ನು ಮಿಶ್ರ ಜಾತಿಯ ಸಂಯುಕ್ತ-ಸ್ತಂಭಗಳೆಂದು ಪರಿಗಣಿಸಬಹುದು. ಇವು ಸಮಕಾಲಿನ ಶಿಲ್ಪಿಗಳಲ್ಲಿದ್ದ ಅಭಿವ್ಯಕ್ತ ಸ್ವಾತಂತ್ರ್ಯವನ್ನು ಪ್ರತಿಬಿಂಬಿಸುತ್ತದೆ. ಇಲ್ಲಿ ಸ್ವಾತಂತ್ರ್ಯವೆಂದರೆ ಶಾಸ್ತ್ರೋಲ್ಲಂಘನವೆಂದು ಪರಿಗಣಿಸತಕ್ಕದಲ್ಲ. ಶಾಸ್ತ್ರಸಮ್ಮತವಾದ ಸಾವಯವ ಉಪಸ್ತಂಭಗಳನ್ನು ಬಳಸಿಕೊಂಡು ಸಂಯುಕ್ತ ಸ್ತಂಭಗಳಿಗೆ ಹೊಸ ರೂಪವನ್ನು ಕೊಡಲಾಗಿದೆ.

ಈ ಸಂಯುಕ್ತ-ಸ್ತಂಭಗಳ ಸ್ವರೂಪವಲ್ಲದೆ ಮತ್ತೊಂದು ವೈಶಿಷ್ಟ್ಯವೆಂದರೆ ಇದರ ನಿರ್ಮಾಣ ಕ್ರಮ. ಒಂದು ಸ್ತಂಭವನ್ನು ಕಂಡರಿಸಲು ಗಾತ್ರದಲ್ಲಿ ಸುಮಾರು ಎಂಟು ಅಡಿ ಅಗಲ ಎತ್ತರದಲ್ಲಿ ೧೬ ಅಡಿಗಳಿಗಿಂತಲೂ ಹೆಚ್ಚಿನ ಏಕಶಿಲೆಯನ್ನು ಸಿದ್ದಪಡಿಸಿಕೊಂಡು ತಂದು ನಿಲ್ಲಿಸಿ ಸ್ತಂಭಗಳನ್ನು ಕಂಡರಿಸಲಾಗಿದೆ. ಆಧುನಿಕ ತಂತ್ರಜ್ಞಾನದ ಪರಿಚಯವಿಲ್ಲದ ಕಾಲದಲ್ಲಿ ಶಿಲ್ಪಿಗಳಿಂದ ಆಗಿರುವ ಈ ಸಾಹಸವು ಶ್ಲಾಘನೀಯವೆ ಸರಿ.

ಗೂಢಮಂಟಪದಿಂದ ಮಹಾಮಂಟಪಕ್ಕೆ ಪ್ರವೇಶಿಸುವ ದ್ವಾರದ ಇಕ್ಕೆಲಗಳಲ್ಲಿ ಎರಡು ಬ್ರಾಹ್ಮಣಕಾಂತ ಸಂಯುಕ್ತ-ಸ್ತಂಭಗಳಿವೆ. ಪ್ರಧಾನ ಸ್ತಂಭದ ನಾಲ್ಕು ಮುಖಗಳಲ್ಲಿಯೂ ಒಂದೊಂದು ಉಪಸ್ತಂಭವಿದ್ದಲ್ಲಿ ಅದನ್ನು ಬ್ರಾಹ್ಮಣ ಕಾಂತವೆಂದು ಕರೆಯಲಾಗುವುದು. ಈ ಪ್ರಕಾರದ ಶಾಸ್ತ್ರೋಕ್ತ ಸಂಯುಕ್ತ-ಸ್ತಂಭಗಳು ಹಂಪಿಯ ವಿಜಯವಿಠಲ ಮತ್ತು ಕಮಲಾಪುರದ ಪಟ್ಟಾಭಿರಾಮ ದೇವಾಲಯದ ರಂಗಮಂಟಪದಲ್ಲಿ ಕಾಣಬಹುದು.

ಮಹಾಮಂಟಪದ ಮೂಲೆಯಲ್ಲಿ ಇರುವ ಸಂಯುಕ್ತ ಸ್ತಂಭಗಳು ಹತ್ತು ಅಥವ ಹನ್ನೊಂದು ಉಪಸ್ತಂಭಗಳನ್ನು ಹೊಂದಿದೆ. ಈ ಉಪಸ್ತಂಭಗಳು ಸಾಮಾನ್ಯ ಸ್ತಂಭದ ಎಲ್ಲಾ

* ಸಂಶೋಧಕರು, ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿ ಸಂಶೋಧನಾ ಕೇಂದ್ರ, ಮಲ್ಲೇಶ್ವರಂ, ಬೆಂಗಳೂರು-೧೨.

ಅವಯವಗಳನ್ನು ಹೊಂದಿವೆ. ಕೆಲವು ಸ್ತಂಭಗಳ ಬುಡಭಾಗವು ಕುಂಭಾಕಾರವಾಗಿದ್ದರೆ ಕೆಲವು ಸ್ತಂಭಗಳ ಬುಡಭಾಗವು ಚತುರಶ್ರಾಕಾರವಾಗಿರುವುದು ಕಾಣಬಹುದು. ಸುತ್ತಲೂ ಉಪಸ್ತಂಭಗಳನ್ನು ಹೊಂದಿದ್ದರೂ ಪ್ರಧಾನ ದಿಂಡು ಚಿತ್ರಖಂಡ ಸ್ತಂಭದ ಅವಯವಗಳು ಹೊಂದಿರುವುದು ಶಿಲ್ಪಿಯ ನೈಪುಣ್ಯ ಮತ್ತು ಶ್ರದ್ಧೆಗಳಿಗೆ ಸಂಕೇತಗಳಾಗಿವೆ. ಏಕಶಿಲೆಯಿಂದ ಸುತ್ತಲಿನ ಉಪಸ್ತಂಭಗಳ ಅವಯವಗಳನ್ನು ಕಂಡರಿಸುವುದರೊಂದಿಗೆ ಪ್ರಧಾನ ದಿಂಡಿನ ಅವಯವಗಳನ್ನು ಕೆತ್ತುವುದು ಶ್ರಮಸಾಧ್ಯವಾದ ಕಾರ್ಯವೇ ಸರಿ.

ಇಲ್ಲಿಯ ಸಂಯುಕ್ತ ಸ್ತಂಭಗಳು ತ್ರಿವರ್ಗಗಳನ್ನು ಉಳ್ಳದ್ದಾಗಿದೆ. ಹೇಗೆ ದೇವಾಲಯದಲ್ಲಿ ವಿಮಾನವನ್ನು ಹೊರತುಪಡಿಸಿ, ಉಳಿದ ಎಲ್ಲಾ ಭಾಗಗಳು ಅಧಿಷ್ಠಾನ, ಭಿತ್ತಿ, ಮತ್ತು ಪ್ರಸ್ತರಗಳೆಂಬ ತ್ರಿವರ್ಗಗಳನ್ನು ಹೊಂದಿರುತ್ತದೆಯೋ ಅದೇ ರೀತಿ ಈ ಸ್ತಂಭಗಳು ಸಹ ತ್ರಿವರ್ಗದ ಪರಿಕಲ್ಪನೆಯನ್ನು ಸ್ಪಷ್ಟವಾಗಿ ಹೊಂದಿವೆ. ಇವುಗಳ ಪೀಠ ಭಾಗವು ಪ್ರತಿಭದ್ರ ಉಪಪೀಠ ಮತ್ತು ಶ್ರೀಬಂಧ ಅಧಿಷ್ಠಾನವನ್ನು ಹೋಲುತ್ತದೆ. ಅಧಿಷ್ಠಾನದ ಗಳಭಾಗದಲ್ಲಿ ಭಾರವಾಹಕರನ್ನು ಕೆತ್ತಲಾಗಿದೆ. ಇದರ ಮೇಲೆ ನಾನಾ ಪ್ರಕಾರದ ಉಪಸ್ತಂಭಗಳನ್ನು ಕಂಡರಿಸಲಾಗಿದೆ. ಇದರ ಮೇಲೆ ಸಾಮಾನ್ಯವಾಗಿ ಕೂಡಿಸಲ್ಪಟ್ಟ ಪುಷ್ಪಪೋತಿಕೆಗಳ ಬದಲಿಗೆ ವಲ್ಲಭಿ ಕಪೋತಗಳನ್ನುಳ್ಳ ಪ್ರಸ್ತರದಂತಹ ಅಲಂಕರಣವನ್ನು ಕಾಣಬಹುದು.

ಕೆಲವು ಸ್ತಂಭಗಳು ಮೇರುಕಾಂತದಂತೆ ಎಂಟು ಉಪಸ್ತಂಭಗಳನ್ನು ಮತ್ತು ಸಿಂಹಕಾಂತದಂತಹ ಮಿಶ್ರಲಕ್ಷಣಗಳನ್ನು ಹೊಂದಿವೆ. ಸಿಂಹಕಾಂತದಲ್ಲಿಯೂ ಸಹ ಒಂದು ಜಿಗಿಯುತ್ತಿರುವ ಸಿಂಹ ಅಥವ ಎರಡು ಜಿಗಿಯುತ್ತಿರುವ ಸಿಂಹಗಳನ್ನು ಒಂದಕ್ಕೊಂದು ಹೊಂದಿಕೊಂಡಂತೆ ಅಥವ ಎರಡೂ ಮುಖಗಳಲ್ಲಿಯೂ ಜಿಗಿಯುತ್ತಿರುವ ಸಿಂಹಗಳನ್ನು ಕೆತ್ತಲಾಗಿದೆ. ಇನ್ನು ಕೆಲವು ಸ್ತಂಭಗಳು ಕೈಲಾಸಕಾಂತ ವರ್ಗ ಅಂದರೆ ಎರಡೂ ಪಾರ್ಶ್ವಗಳಲ್ಲಿ ಎರಡೆರಡು ಉಪಸ್ತಂಭಗಳನ್ನು ಹೊಂದಿದ್ದು ಒಂದು ದಿಕ್ಕಿಗೆ ಸಿಂಹಕಾಂತವನ್ನು ಮತ್ತೊಂದು ದಿಕ್ಕಿಗೆ ದೇವತಾ ಪ್ರತಿಮೆಯನ್ನು ಹೊಂದಿದೆ. ಇವಲ್ಲದೆ ಶಾಸ್ತ್ರಗ್ರಂಥಗಳಲ್ಲಿ ಉಲ್ಲೇಖವಾಗಿರದಷ್ಟು ಉಪಸ್ತಂಭಗಳನ್ನು ಹೊಂದಿರುವ ಸಂಯುಕ್ತ-ಸ್ತಂಭಗಳನ್ನು ಕಾಣಬಹುದು. ಇವುಗಳನ್ನು ಸಾಮಾನ್ಯವಾಗಿ ಸಂಗೀತ ಸ್ತಂಭಗಳೆಂದು ಕರೆಯಲಾಗುವುದು. ಇಂತಹ ಸ್ತಂಭಗಳನ್ನು ಮಂಟಪದ ಮುಂಚಾಚಿನ ಮೂಲೆಗಳಲ್ಲಿ ಮಾತ್ರ ಕಾಣಬಹುದು. ಇವುಗಳ ಉಪಸ್ತಂಭಗಳೂ ದೇವಾಲಯದ ಆವರಣದ ಕಡೆಗೆ ಇರುತ್ತವೆ. ಈ ಸ್ತಂಭಗಳ ಮಧ್ಯದ ಸ್ತಂಭಗಳು ಸಿಂಹಕಾಂತ ಸ್ತಂಭಗಳಾಗಿವೆ.

ವಿಜಯನಗರ ಕಾಲದ ಸಂಯುಕ್ತ-ಸ್ತಂಭಗಳ ಮತ್ತೊಂದು ವಿಶೇಷ ಲಕ್ಷಣವೆಂದರೆ ಮೂರ್ತಿಶಿಲ್ಪಗಳ ಕಂಡರಣೆ. ಬಾದಾಮಿ ಚಾಲುಕ್ಯರ ಕಾಲದಷ್ಟು ಹಿಂದೆಯೇ ಈ ಲಕ್ಷಣಗಳು ಅಂಕುರಿಸಿದ್ದರೂ ಇದು ಪಕ್ವವಾಗಿ ಬೆಳೆದು ಹೇರಳವಾಗಿ ಬಳಸಲ್ಪಟ್ಟದ್ದು ವಿಜಯನಗರ ಕಾಲದಲ್ಲಿಯೆ. ಕೆಲವೊಮ್ಮೆ ಸಂಯುಕ್ತ-ಸ್ತಂಭಗಳ ಉಪಸ್ತಂಭಗಳಿಗೆ ಹೊಂದಿಕೊಂಡಂತೆ ಅಥವಾ ಸಿಂಹಕಾಂತ, ವ್ಯಾಳಕಾಂತ, ಇತ್ಯಾದಿ ಸ್ತಂಭಗಳಲ್ಲಿ ಕಂಡುಬರುವಂತೆ ಪ್ರಧಾನ ದಿಂಡಿಗೆ ಹೊಂದಿಕೊಂಡಂತೆ ಮೂರ್ತಿಶಿಲ್ಪಗಳನ್ನು ಕೆತ್ತಲಾಗಿರುತ್ತವೆ. ಇವುಗಳು ಕೇವಲ ಉಬ್ಬು ಶಿಲ್ಪಗಳಂತೆ ಇರುವುದಿಲ್ಲ. ಕೋಷ್ಟ ಪ್ರತಿಮೆಗಳಂತೆಯೂ ಅಥವ ಪರಿವಾರ ದೇವತೆಗಳಂತೆಯೂ ಬಿಡಿಶಿಲ್ಪಗಳ ಲಕ್ಷಣಗಳನ್ನು ಹೋಲುತ್ತವೆ. ಇವುಗಳ ಪೈಕಿ ದೇವತಾ ಪ್ರತಿಮೆಗಳು, ಭಕ್ತರು, ದಾಸರು, ನಿರ್ಮಾತೃಗಳ, ನರ್ತಕ/ನರ್ತಕಿಯರು, ವಾದ್ಯಗಾರರು, ಇತ್ಯಾದಿಯಾಗಿ ಹಲವಾರು ವಸ್ತುವಿಷಯಗಳನ್ನು ಕಾಣಬಹುದು. ಪ್ರಸ್ತುತ ಮಹಾಮಂಟಪದಲ್ಲಿರುವ ಸಂಯುಕ್ತ-ಸ್ತಂಭಗಳು ಇಂತಹ ವೈವಿಧ್ಯಮಯವಾದಂತಹ ಶಿಲ್ಪಗಳನ್ನು ಹೊಂದಿವೆ.

ಇಲ್ಲಿಯ ಸಂಯುಕ್ತ ಸ್ತಂಭಗಳ ಮೇಲ್ಭಾಗದಲ್ಲಿ ಪುಷ್ಪಪೋತಿಕೆಗಳ ಕೆಳಗೆ ಷಡ್ವರ್ಗಗಳುಳ್ಳ ವಿಮಾನದ ಚಿಕಣಿ ಮಾದರಿಗಳನ್ನು ಕೆತ್ತಿರುವುದು ಕಾಣಬಹುದು. ಇವು ಪ್ರಾಯಶಃ ದೇವತೆಗಳು ಆಕಾಶದಿಂದ, ತಮ್ಮ ಭವನಗಳಲ್ಲೆಯಿದ್ದು ಇಲ್ಲಿ ಉತ್ಸವಗಳನ್ನು ವೀಕ್ಷಿಸುತ್ತಿದ್ದರೆಂಬ ಪರಿಕಲ್ಪನೆಯ ಹಿನ್ನಲೆಯಲ್ಲಿ ಕೆತ್ತಿರಬಹುದು. ಸೂಕ್ಷ್ಮವಾಗಿ ಅವಲೋಕಿಸಿದರೆ ಇಂತಹ ವಿಮಾನಗಳ ನಿರ್ಮಾಣದ ಸ್ಫೂರ್ತಿಯನ್ನು ಔತ್ತರೇಯ ನಾಗರ ಪ್ರಾಸಾದ ಅಥವ ಶೇಖರಿ ಪ್ರಾಸಾದದ ವರಂಡಿಕೆಗಳಿಂದ ಹೊಂದಿರುಬಹುದು ಎನ್ನಿಸುತ್ತದೆ. ವರಂಡಿಕೆಗಳೆಂದರೆ ನಾಗರ ವಿಮಾನದ ಭಿತ್ತಿ ಅಥವ ಶೇಖರಿ ಪ್ರಾಸಾದಕ್ಕೆ ಹೊಂದಿಕ್ಕೊಂಡಂತೆ ನಿರ್ಮಿಸಲಾಗುವ, ಉಪ್ಪರಿಗೆಗಳನ್ನು ಹೋಲುವ ವಾಸ್ತು ಅಂಗಗಳು. ಇವುಗಳು ಸಹ ಮುಂಚಾಚಿದ ಪೀಠದ ಮೇಲೆ ಎರಡು ಸ್ತಂಭಿಕೆಗಳನ್ನು ಮತ್ತು ಅದರ ಮೇಲೆ ಮಂಟಪಗಳಿರುವಂತೆ ಪ್ರಾಸಾದಗಳನ್ನು (ಶಿಖರ) ಹೊಂದಿರುತ್ತವೆ. ವಿಜಯವಿಠಲ ದೇವಾಲಯದ ಸಂಯುಕ್ತ-ಸ್ತಂಭಗಳಲ್ಲಿ ಇಂತಹ ಹಲವಾರು ವಿಮಾನದ ಮಾದರಿಗಳನ್ನು ಅಸಂಖ್ಯಾತವಾಗಿ ಕಾಣಬಹುದು.

ಸಂಯುಕ್ತ ಸ್ತಂಭಗಳ ಸ್ವರೂಪವನ್ನು ಚರ್ಚಿಸುವಾಗ ಉಪಸ್ತಂಭಗಳ ಬಗ್ಗೆಯೂ ಚರ್ಚಿಸುವುದೂ ಯುಕ್ತವಾಗುವುದು. ಈ ಉಪಸ್ತಂಭಗಳು ಸಾವಯವ ಸ್ತಂಭಗಳಂತೆ ಪೀಠ, ದಿಂಡು, ಕುಂಭ, ಮಂಡಿ ಮತ್ತು ಫಲಕಗಳನ್ನು ಹೊಂದಿವೆ. ಅಲ್ಲದೆ ಶಾಸ್ತ್ರೋಕ್ತವಾದ ವಿವಿಧ ಸ್ತಂಭಗಳ

ಸ್ವರೂಪವನ್ನು ಹೊಂದಿದೆ. ಸಾಮಾನ್ಯವಾಗಿ ಕಂಡುಬರುವ ಬ್ರಹ್ಮಕಾಂತ, ವಿಷ್ಣುಕಾಂತ, ಸೌಮ್ಯಕಾಂತಗಳೊಂದಿಗೆ ಕುಂಭಸ್ತಂಭ ಮತ್ತು ಭದ್ರಕಾಂತ ಸ್ತಂಭಗಳನ್ನು ಹೋಲುವ ಉಪಸ್ತಂಭಗಳನ್ನು ಕಾಣಬಹುದು. ಇನ್ನೊಂದು ಅಪರೂಪದ ವಿಶೇಷವೆಂದರೆ ಕೆಲವು ಕುಂಭಸ್ತಂಭಗಳನ್ನು ವರ್ಧಮಾನ ಅಥವ ಭದ್ರಕಾಂತ ಸ್ತಂಭಗಳಂತೆ ಮುಂಚಾಚುಗಳೊಂದಿಗೆ ಕೆತ್ತಲಾಗಿದೆ. ಮತ್ತೊಂದು ವಿಶೇಷ ಅಂಶವೆಂದರೆ ಕೆಲವು ಸಂಯುಕ್ತ–ಸ್ತಂಭಗಳ ಪ್ರಧಾನ ದಿಂಡಿಗೆ ಹೊಂದಿಕೊಂಡಂತೆ ಭದ್ರಕ ಸ್ತಂಭಗಳನ್ನು ಹೊಂದಿವೆ. ಅಂದರೆ ದಿಂಡಿಗೆ ಹೊಂದಿಕೊಂಡಂತೆ ಪೂರ್ಣವಾಗಿ ನಾಲ್ಕೂ ಕಡೆಗಳಲ್ಲೂ ಬಿಡಿಸದೆ ಕೆತ್ತಲಾದ ಸಾವಯುವ ಸ್ತಂಭಗಳು ಇವು. ಔಪಯೋಗಿಕವಲ್ಲದಿದ್ದರು ಭದ್ರಕ ಸ್ತಂಭದ ಸ್ವರೂಪವನ್ನು ಹೊಂದಿವೆ.

ಒಟ್ಟಾರೆ ಹೇಳುವುದಾದರೆ ವಿಜಂಯುವಿಠಲ ದೇವಾಲಯದ ಮಹಾಮಂಟಪ ಬಹಳ ವಿಶೇಷವಾದದ್ದು. ಇದಕ್ಕೆ ಹೋಲುವಂತಹ ಸಮಕಾಲಿನ ಮಂಟಪಗಳನ್ನು ಕಾಣುವುದು ಅಪರೂಪ. ಹಲವು ದೇವಾಲಯಗಳ ಕಲ್ಯಾಣ ಮಂಟಪಗಳ ಅಥವ ವಸಂತ ಮಂಟಪಗಳಲ್ಲಿ ಸೂಕ್ಷ್ಮವಾದಂತಹ ಕೆತ್ತನೆಗಳನ್ನು ಹೊಂದಿದ್ದರು ಇಂತಹ ಮಿಶ್ರಲಕ್ಷಣಗಳನ್ನು ಮತ್ತು ಅಭಿವ್ಯಕ್ತ ಸ್ವಾತಂತ್ರ್ಯವನ್ನು ಕಾಣುವುದು ಸಾಧ್ಯವಿಲ್ಲ ಮಧುರೈ, ತೆಂಕಾಶಿ, ತಿರುನೆಲ್ವೇಲಿ ಇತ್ಯಾದಿ ದಕ್ಷಿಣ ಭಾಗದ ಹಲವು ದೇವಾಲಯಗಳಲ್ಲಿ ಭವ್ಯವಾದ ಸಂಯುಕ್ತ ಸ್ತಂಭಗಳನ್ನು ಕಾಣಬಹುದಾದರು ಅವುಗಳು ಬಹುಪಾಲು ವಿಜಯನಗರೋತ್ತರ ಕಾಲಕ್ಕೆ, ಅಂದರೆ ನಾಯಕರ ಕಾಲಕ್ಕೆ (ಕ್ರಿ.ಶ. ೧೬ ಶತಮಾನ) ಸೇರುತ್ತವೆ. ಹೀಗಾಗಿ ಇವುಗಳು ವಿಜಯವಿಠಲ ದೇವಾಲಯದಿಂದ ಸ್ಫೂರ್ತಿ ಹೊಂದಿದೆಯೆಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು. ಈ ಮೇಲಿನ ಅಂಶಗಳಿಂದ ವಿಜಯವಿಠಲ ದೇವಾಲಯದ ಮಹಾಮಂಟಪದ ಸಂಯುಕ್ತ ಸ್ತಂಭಗಳ, ತಮ್ಮ ಸ್ವರೂಪದಿಂದ ಸಮಕಾಲಿನ ನಿರ್ಮಾಣಗಳಿಗಿಂತ ಭಿನ್ನವಾಗಿದ್ದವು ಮತ್ತು ವೈವಿಧ್ಯವು ಆಗಿವೆ. ಈ ಸ್ತಂಭಗಳನ್ನು ಹೊಂದಿರುವ ಮಹಾಮಂಟಪವು, ವಿಶೇಷವಾಗಿ ಕರ್ನಾಟಕದಲ್ಲಿ, ಅದ್ವಿತೀಯವಾಗಿ ಕಾಣಬಹುದು.

ಪ್ರಾಚೀನ ಶಕ್ತಿ ದೇವತೆಯ ಆರಾಧನಾ ಕೇಂದ್ರ ದಿವ್ಯಾದಪೊಸವೂರು

ಶಿವಯೋಗಿ ಕೋರಿಶೆಟ್ಟರ*

ಹಾವೇರಿ ತಾಲೂಕಿನ ಒಂದು ಪ್ರಾಚೀನ ಐತಿಹಾಸಿಕ ಗ್ರಾಮ ದೇವಿಹೊಸೂರು. ಹಾವೇರಿಯಿಂದ ನೈಋತ್ಯಕ್ಕೆ ಸುಮಾರು ೮ ಕಿ.ಮಿ. ದೂರದಲ್ಲಿದೆ. ಅತ್ಯಂತ ಪ್ರಾಚೀನವಾಗಿರುವ ಗ್ರಾಮದಲ್ಲಿ ಹಲವಾರು ಶಿಲಾಶಾಸನಗಳು, ವೀರಗಲ್ಲುಗಳು, ಗೋಸಾಸಗಳು, ಕೋಣನತಲೆಶಿಲ್ಪ ವಿವಿಧ ದೇವಾಲಯಗಳು ಮೂರ್ತಿಶಿಲ್ಪಗಳು ಮುಂತಾದ ಪ್ರಾಚ್ಯ ಸ್ಮಾರಕಗಳನ್ನು ಕಾಣಬಹುದು. ಈ ಗ್ರಾಮವು ಶಾಸನಗಳಲ್ಲಿ ಪೊಸವೂರು, ದಿವ್ಯಾದ ಪೊಸವೂರು, ದೆಯ್ವದ ಪೊಸವೂರು, ದೇವಿಯ ಹೊಸವೂರು ಎಂಬುದಾಗಿ ಉಲ್ಲೇಖಿತಗೊಂಡಿದೆ. ರಾಷ್ಟ್ರಕೂಟರ ಕಾಲದಷ್ಟು ಪ್ರಾಚೀನತೆ ಹೊಂದಿರುವ ದಿವ್ಯಾದಪೊಸವೂರು ಪ್ರಾಚೀನ ಕುಂತಳ ದೇಶದ ಬನವಾಸಿ-೧೨೦೦೦ದ ಒಂದು ಕಂಪಣ ಬಾಸವೂರು-೧೪೦ರ ಆಧೀನಕ್ಕೆ ಒಳಪಟ್ಟಿತ್ತು. ಮಲ್ಲಾರಿ ಮಾರ್ತಾಂಡನ ದೇವಿ ಮಾಳಚಿ ಇಲ್ಲಿ ನೆಲೆಗೊಂಡಿದ್ದರಿಂದಲೇ ದೇವಿಹೊಸೂರ ಎಂಬ ಹೆಸರು ಈ ಊರಿಗೆ ಬಂದಿತೆನ್ನಬಹುದು.

ದೇವಿಹೊಸೂರು ಪ್ರಾಚೀನ ಕಾಲದಲ್ಲಿ ಒಂದು ಅಗ್ರಹಾರವಾಗಿತ್ತು. ರಾಷ್ಟ್ರಕೂಟ ೩ನೇ ಕೃಷ್ಣನ ಕ್ರಿ.ಶ. ೯೬೧ರ ಶಾಸನವು ದೇವಿಹೊಸವೂರು ಅಗ್ರಹಾರದ ಮೊದಲ ಉಲ್ಲೇಖ ಹೊಂದಿದ್ದು, ಇದು ಪೊಸವೂರಿನ ಮಹಾಜನರನ್ನು ಉಲ್ಲೇಖಿಸುತ್ತದೆ. ಈ ಗ್ರಾಮವು ಮಾಳಜದೇವಿ ಲಬ್ದವರ-ಪ್ರಸಾದರಾಗಿದ್ದ ಸಾವಿರ ಮಹಾಜನರನ್ನು ಹೊಂದಿದ್ದ ಅಗ್ರಹಾರವಾಗಿತ್ತು. ದೇವಿಹೊಸವೂರಿನ ಅಗ್ರಹಾರವನ್ನು ಶಾಸನವು ಜನಮೇಜಯುದತ್ತಿ ಅಗ್ರಹಾರ ಎಂದು ಉಲ್ಲೇಖಿಸಿರುವುದರಿಂದ ಈ ಅಗ್ರಹಾರವು ಅತ್ಯಂತ ಪ್ರಾಚೀನವಾದುದೆಂದು ತಿಳಿಯುತ್ತದೆ. ಇಲ್ಲಿನ ಮಹಾಜನ ಸಾಸಿರ್ವರು ದೇವಿಹೊಸವೂರು ಆಡಳಿತದ ಒಡೆತನ ಹೊಂದಿದ್ದು, ಇವರ ಸಮ್ಮುಖದಲ್ಲಿಯೇ ಮಾಳಚಿ ದೇವಿಗೆ ದಾನದತ್ತಿಗಳನ್ನು ನೀಡಲಾಗಿದೆ. ಸಾಸಿರ್ವರೂ ಕೂಡಾ ದಾನಗಳನ್ನು ನೀಡಿದ ಮತ್ತು ಸ್ವೀಕರಿಸಿದ ಬಗ್ಗೆ ಶಾಸನಗಳು ಉಲ್ಲೇಖಿಸಿವೆ. ರಾಷ್ಟ್ರಕೂಟರ ಕಾಲದಿಂದ ಹಿಡಿದು ಯಾದವರ ಕಾಲದವರೆಗೂ ಈ ಗ್ರಾಮದ ಮೇಲೆ ಹಿಡಿತ ಹೊಂದಿದ್ದ ಮಹಾಜನ ಸಾಸಿರ್ವರು ಅಲ್ಲಿನ ಶಾಸನೋಕ್ತ ಮಾಳಚಿ, ಭೋಗೇಶ್ವರ, ಹಾಗೂ ಗವರೇಶ್ವರ ದೇವಾಲಯಗಳಲ್ಲದೇ, ಗ್ರಾಮದ ಇತರೆ ಅಭಿವೃದ್ದಿಗೆ ಶ್ರಮಿಸಿದ್ದಾರೆ.

ದಿವ್ಯಾದ ಪೊಸವೂರನ ಮಾಳಚಿ ದೇವಾಲಯ ಹಾಗೂ ಮೈಲಾರಲಿಂಗ ದೇವಾಲಯಕ್ಕೂ ಸಾಂಸ್ಕೃತಿಕ ಸಂಬಂಧ ಇರುವಂತೆ ತೋರುತ್ತದೆ. ಜನಪದ ಪುರುಷ ದೇವತೆ ಏಳುಕೋಟಿ ಅಥವಾ ಮೈಲಾರಲಿಂಗ ಭಕ್ತರಿಗೆ ಪ್ರತ್ಯಕ್ಷ ಶಿವ ಮಣಿಮಲ್ಲರೆಂಬ ದೈತ್ಯರನ್ನ ಸಂಹರಿಸಲು ಭೂಲೋಕಕ್ಕೆ ಬಂದು ಕಂಬಳಿ ಕಂತೆಯ ವೇಷತೊಟ್ಟನು. ತಲೆಯ ಮೇಲೆ ಮುರುಗಿ-ಮುಂಡಾಸ, ಕೈಯಲ್ಲಿ ತ್ರೀಶೂಲ, ಡಮರು, ಭಂಡಾರ ಚೀಲ, ಗಂಟೆ, ಡೋಣಿ ಧರಿಸಿ ದೇವರಗುಡ್ಡ ಸಮೀಪ ಶಿಡಗಿನಹಾಳ ಗ್ರಾಮದ ಪಶ್ಚಿಮದ ಕರಿಯಾಲದಲ್ಲಿ ಹಲವಾರು ರಾಕ್ಷಸರನ್ನ ಸಂಹರಿಸಿ ಅಂತಿಮವಾಗಿ ಬಳ್ಳಾರಿ ಜಿಲ್ಲೆಯ ಮೈಲಾರದಲ್ಲಿ ಮಲ್ಲಾಸುರನನ್ನು ಸಂಹರಿಸಿದನೆಂದು ಹೇಳಲಾಗುತ್ತದೆ. ಏಳುಕೋಟಿ, ಮೈಲಾರಲಿಂಗ, ಮಲ್ಲಾರಿ, ಮಾರ್ತಾಂಡಭೈರವ, ಖಂಡೋಬಾ, ಮಾಲತೇಶ ಮುಂತಾದ ಹೆಸರುಗಳಿಂದ ಈತನನ್ನು ಕರೆಯಲಾಗಿದೆ.

ಗಂಗಿಮಾಳವ್ವ ಅಥವಾ ಮಾಳಚಿದೇವಿ ಮೈಲಾರಲಿಂಗನ ಪಟ್ಟದ ಹೆಂಡತಿ, ಕುರುಬತೆವ್ವ ಅಥವಾ ಕುರುಬರ ಮಾಳವ್ವ ಎರಡನೇ ಹೆಂಡತಿ. ಗಂಗಿಮಾಳವ್ವನ ಮೇಲಿನ ಹಠದಿಂದ ಇವಳನ್ನು ತಂದನೆಂಬುದು ನಂಬುಗೆ. ಇವರೀರ್ವರಿಗೂ ಹೆಗ್ಗಡೆಯೇ ಅಣ್ಣ. ಬನಾಯಿ, ಬನಶಂಕರಿ, ಬಾಣಾಯಿ ಮುಂತಾದ ಹೆಸರುಗಳಿಂದಲೂ ಈ ದೇವತೆಯನ್ನು ಕರೆಯಲಾಗಿದೆ. ಮೈಲಾರ ಮತ್ತು ದೇವರಗುಡ್ಡದಲ್ಲಿನ ಮಾಳಚಿ ಹಾಗೂ ಕುರುಬತೆವ್ವನ ಮೂರ್ತಿಗಳಲ್ಲಿ ಹೋಲಿಕೆಯನ್ನು ಕಾಣಬಹುದು. ಇವು

* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಗುದ್ಲೆಪ್ಪ ಹಳ್ಳಿಕೇರಿ ಮಹಾವಿದ್ಯಾಲಯ, ಹಾವೇರಿ-೫೮೧೧೧೦.

ಮೈಲಾರಲಿಂಗನ ತದ್ವತ್ತಾದ ಸ್ತ್ರೀಮೂರ್ತಿಗಳಾಗಿವೆ. ಅಂದರೆ ಬಲದ ಕೈಗಳಲ್ಲಿ ಖಡ್ಗ ತ್ರಿಶೂಲಗಳು, ಎಡದ ಕೈಯಗಳಲ್ಲಿ ಪಾನಪಾತ್ರೆ ಡಮರುಗಳೂ ಇವೆ. ಮೈಲಾರಲಿಂಗನಗೆ ಮೈಲಾರ ಹಾಗೂ ದೇವರಗುಡ್ಡ ನೆಲೆಗಳಾಗಿರುವ ಹಾಗೆ ಮಾಳಚಿದೇವಿಗೆ ದೇವಿಹೊಸವೂರು ನೆಲೆಯಾಗಿತ್ತು.

ಪ್ರಸ್ತುತ ಗ್ರಾಮದ ಹೊರಗೆ ಇರುವ ಬನಶಂಕರಿ ದೇವಸ್ಥಾನವೇ ಮಾಳಚಿ ದೇವಸ್ಥಾನವಾಗಿದೆ. ಈ ಬಗ್ಗೆ ಇಲ್ಲಿನ ಶಾಸನಗಳು ಉಲ್ಲೇಖ ಹೊಂದಿವೆ. ಯೋಗಪೀಠಕ್ಕಿಂತ ಮಿಗಿಲಾದ ಮಾಳಜ ಪೀಠ ಇದೆಂದು ಶಾಸನವೊಂದು ಬಣ್ಣಿಸಿದೆ. ಊರಿನ ಉತ್ತರಕ್ಕೆ ಇರುವ ದೊಡ್ಡಕೆರೆಯ ಸಮೀಪ ದಲ್ಲಿರುವ ಮಾಳಚಿ ದೇವಾಲಯವು ಭೌಗೋಳಿಕವಾಗಿ ಎತ್ತರದ ದಿನ್ನೆಯ ಆಯಕಟ್ಟಿನ ಜಾಗದಲ್ಲಿದೆ. ವಿಶಾಲ ಭೂಪ್ರದೇಶದಲ್ಲಿ ನಿರ್ಮಾಣಗೊಂಡಿರುವ ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ತನ್ನದೇ ಆದ ವಾಸ್ತುಶಿಲ್ಪ ಹಾಗೂ ಸಾಂಸ್ಕೃತಿಕ ಇತಿಹಾಸವನ್ನು ಹೊಂದಿದೆ. ಕ್ರಿ.ಶ. ಸುಮಾರು ೧೧ನೇ ಶತಮಾನದಲ್ಲಿ ಇಟ್ಟಿಗೆಯಿಂದ ನಿರ್ಮಿಸಲ್ಪಟ್ಟಿರುವ ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪವನ್ನು ಹೊಂದಿದೆ. ದೇವಾಲಯದ ಗರ್ಭಗೃಹದಲ್ಲಿನ ಮೂರ್ತಿಯು ಕಾಲಾಂತರದಲ್ಲಿ ಸ್ಥಳಾಂತರಗೊಂಡಿದ್ದು, ಈಗ ಗಣಪತಿಯ ಮೂರ್ತಿ ಇದೆ. ಇಲ್ಲಿನ ದೇವಿ ಮೂರ್ತಿಯನ್ನು ಊರಿನಲ್ಲಿರುವ ಬನಶಂಕರಿ ಗುಡಿಯಲ್ಲಿ ಪ್ರತಿಷ್ಠಾಪಿಸಲಾಗಿದೆ ಎಂಬುದು ಸ್ಥಳಿಕರ ಅಭಿಪ್ರಾಯ. ಸುಕನಾಸಿಯ ದ್ವಾರದ ಮೇಲ್ಭಾಗದ ಪಟ್ಟಿಕೆಯಲ್ಲಿ ಎರಡು ಮಕರಗಳ ನಡುವೆ ಮಾಳಚಿಯ ವಿಗ್ರಹವನ್ನು ಕೆತ್ತಲಾಗಿದೆ. ಚತುರ್ಭುಜೆಯಾಗಿರುವ ಮಾಳಚಿ ಕೈಗಳಲ್ಲಿ ಕ್ರಮವಾಗಿ ಕತ್ತಿ, ಡಮರು, ತ್ರಿಶೂಲ ಮತ್ತು ಕಪಾಲಗಳಿವೆ. ಇನ್ನುಳಿದಂತೆ ಬಾಗಿಲುವಾಡ ಸರಳವಾದ್ದು, ಪಕ್ಕದಲ್ಲಿ ಸುಂದರ ಜಾಲಂದ್ರಗಳಿವೆ. ನವರಂಗ ದಲ್ಲಿ ನಾಲ್ಕು ಕಂಬಗಳು ಕಲಾತ್ಮಕವಾಗಿ ನಿರ್ಮಿಸಲ್ಪಟ್ಟಿವೆ.ಅವುಗಳ ಮಧ್ಯದ ಛತ್ತಿನಲ್ಲಿ ಕಮಲದಳಗಳ ಉಬ್ಬು ಚಿತ್ರದ ವಿತಾನವಿದೆ. ಬದಿಗಳಲ್ಲಿ ನಾಗಗಳಿವೆ. ದೇವಾಲಯದ ಗರ್ಭಗೃಹ ಹಾಗೂ ಅಂತರಾಳದ ಭಿತ್ತಿಗಳು ಇಟ್ಟಿಗೆಯಿಂದ ನಿರ್ಮಿಸಲ್ಪಟ್ಟಿವೆ. ಗೋಡೆಗುಂಟ ಅರ್ಧಕಂಭಗಳಿದ್ದು ಪೀಠ, ಕಾಂಡ, ಕಂಠ ಹಾಗೂ ಭೋದಿಗೆಗಳಿಂದ ಅಲಂಕೃತಗೊಂಡಿವೆ. ಮುಖಮಂಟಪವು ಹನ್ನೆರಡು ಕಂಭಗಳನ್ನು ಹೊಂದಿದ್ದು, ನವೀಕರಣಗೊಂಡಿದೆ. ಗರ್ಭಗೃಹದ ಶಿಖರವು ಶಿಥಿಲಗೊಂಡು ದುರಸ್ಥಿಯಾಗಿದೆ.

ಮಾಳಚಿ ದೇವಾಲಯವು ವಿಶಾಲವಾದ ಪ್ರಾಕಾರ ಹೋದಿದ್ದು, ದೇವಾಲಯದ ಸುತ್ತಲೂ ನಿರ್ದಿಷ್ಟಪಡಿಸಿದ ದಿಕ್ಕಿನಲ್ಲಿ ಚಿಕ್ಕ ಚಿಕ್ಕ ಗುಡಿಗಳ ಅವಶೇಷಗಳಿವೆ. ಇವುಗಳಲ್ಲಿನ ಮೂರ್ತಿಗಳು ಕಾರಣಾಂತರಗಳಿಂದ ಚದುರಿ ಹೋಗಿವೆ. ದೇವಾಲಯದ ಸುತ್ತಲೂ ಇರುವ ಆವಾರದಲ್ಲಿ ಶಿವಲಿಂಗಗಳು ಹಾಗೂ ಚಿಕ್ಕ ಚಿಕ್ಕ ಗುಡಿಗಳ ಅವಶೇಷಗಳನ್ನು ಗುರುತಿಸುವುದು ಕಷ್ಟವೆನಿಸಿದರೂ, ಈ ಚಿಕ್ಕ ಮಂದಿರಗಳು ಮೈಲಾರಲಿಂಗ ಹಾಗೂ ಮಾಳಚಿಯರ ಪರಿವಾರ ದೇವತೆಗಳಾದ ರಣದಾಗ್ನಿ, ಕೋಮಾಲೆ, ಚಿಕ್ಕಯ್ಯ, ಜುಂಜಯ್ಯ, ಹೆಗ್ಗಡೆ ಮುಂತಾದವರಿಗಾಗಿ ನಿರ್ಮಿಸಿದವುಗಳಂತೆ ತೋರುತ್ತವೆ. ಮಾಳಚಿ ದೇವಾಲಯದ ಮುಂದೆ ಸಾಲಾಗಿ ಅಲ್ಲಲ್ಲಿ ಕಲ್ಲಿನಲ್ಲಿ ನಿರ್ಮಿಸಿದ ಪಾದ ಪೀಠಗಳನ್ನು ಕಾಣಬಹುದು. ದೇವಾಲಯದ ಪ್ರಾಕಾರದಲ್ಲಿ ಇಂತಹ ಮೂರು ಪಾದ ಪೀಠಗಳಿವೆ. ಪಾದಪೀಠಗಳು ಪ್ರಾಕಾರದ ಹೊರಗೂ ರಸ್ತೆಬದಿಯ ಹೊಲದಲ್ಲಿಯೂ ವಿಸ್ತರಿಸಿವೆ. ಇಂತಹ ಜೋಡುಪಾದ ಮುದ್ರೆಗಳನ್ನು ಹೆಡೆಬಿಚ್ಚಿದ ಹಾವುಗಳು ಸುತ್ತಿದಂತೆ ಕೆತ್ತಲಾಗಿದೆ. ಈ ಪ್ರಾಕಾರದ ಹಿಂಬದಿಯಲ್ಲಿ ಅಯ್ಯನ ಹೊಂಡವಿದ್ದು, ಇದರ ದಂಡೆಯ ಮೇಲೆ ಗಜಲಕ್ಷ್ಮಿ ಹಾಗೂ ಕೋಣನತಲೆ ಶಿಲ್ಪಗಳಿವೆ. ಗಜಲಕ್ಷ್ಮಿ ಶಿಲ್ಪವು ಅತ್ಯಂತ ಆಕರ್ಷಕವಾಗಿದ್ದು, ನಾಲ್ಕು ಆನೆಗಳ ಮಧ್ಯದಲ್ಲಿ ಕುಳಿತ ಗಜಲಕ್ಷ್ಮಿಯ ಮೇಲ್ಭಾಗದ ಎರಡು ಆನೆಗಳು ತಮ್ಮ ಸೊಂಡಿಲುಗಳಲ್ಲಿ ಕುಂಭಗಳನ್ನು ಹೊತ್ತು ದೇವಿಗೆ ಅಭಿಷೇಕ ಮಾಡುತ್ತಿವೆ. ಈ ಗಜಲಕ್ಷ್ಮಿ ಶಿಲ್ಪದ ಬಳಿಯಲ್ಲಿಯೆ ಕೋಣನ ತಲೆಯುಳ್ಳ ಶಿಲ್ಪವಿದೆ. ಹರವಾದ ಕಲ್ಲುಚಪ್ಪಡಿಯ ಮೇಲೆ ನೆಲಕ್ಕೆ ಒರಗಿದಂತೆ ಕಂಡುಬರುವ ಇದರ ನಾಲಿಗೆ ಹೊರಚಾಚಿದೆ. ಕೊಡುಗಳ ಮಧ್ಯದಲ್ಲಿ ಅರಳಿದ ಕಮಲವಿರುವ ಉಬ್ಬುಶಿಲ್ಪ ಇದಾಗಿದೆ. ಕೆರೆ ಕಟ್ಟೆಗಳ ಬಳಿಯಲ್ಲಿ ಜೋಡಾಗಿಯೇ ಕಂಡುಬರುವ ಇಂತಹ ಶಿಲ್ಪಗಳು ವನದುರ್ಗೆಯ ಸಂಕೇತವನ್ನು ಪ್ರತಿನಿಧಿಸುತ್ತವೆ.

ದೇವಾಲಯ ಪ್ರಾಕಾರದ ಸುತ್ತಲೂ ಶಿಲೆಯ ಸಮುಚ್ಚಯದ ಪ್ರಾಕಾರ ನಿರ್ಮಿಸಿದ್ದು, ಅದು ಅಲ್ಲಲ್ಲಿ ಶಿಥಿಲಗೊಂಡಿದೆ. ದೇವಾಲಯಕ್ಕೆ ಪ್ರಾಕಾರದ ಒಳಗೆ ಪ್ರವೇಶಿಸಲು ಎತ್ತರವಾದ ಸ್ಥಂಭಗಳುಳ್ಳ ಆಕರ್ಷಕ ಮಕರ ತೋರಣವಿದೆ. ಎರಡು ಸ್ಥಂಭಗಳ ಮೇಲೆ ಅಡ್ಡಲಾಗಿ ಕೂಡಿಸಿದ ಪಟ್ಟಿಕೆಯ ಹೊರಮುಖದ ಮಕರತೋರಣದ ಮಧ್ಯದಲ್ಲಿ ಸವ್ಯ ಲಲಿತಾಸನದಲ್ಲಿ ಕುಳಿತಿರುವ ಮೂವರು ದೇವತೆಗಳನ್ನು ಖಂಡರಿಸಲಾಗಿದೆ. ಬದಿಯಲ್ಲಿ ಕುದುರೆ ಸವಾರರು ಒಬ್ಬ ಭಕ್ತೆ ಹಾಗೂ ಮೂವರು ಆನೆ ಸವಾರರಿದ್ದಾರೆ. ಈ ಮಕರ ತೋರಣದ ಒಂದು ಸ್ಥಂಭದಲ್ಲಿ ಕಲ್ಯಾಣ ಚಾಲುಕ್ಯ ದೊರೆ ೧ನೇ ಸೋಮೇಶ್ವರನ ಆಳ್ವಿಕೆಯ ಕಾಲದ ಶಾಸನವಿದ್ದು, ಇದು ಮಹಾಸಾಮಂತ ಜೋಮದೇವರಸನ ರಕ್ಷಕ

ಇಂದಪಯ್ಯ ಈ ಮಕರ ತೋರಣವನ್ನು ನಿರ್ಮಿಸಿದನೆಂದು ಉಲ್ಲೇಖಿಸಿದೆ. ಇದರಿಂದಾಗಿ ಮಾಳಚಿ ದೇವಾಲಯವು ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಾಣಗೊಂಡಿದ್ದರೂ, ನಂತರದಲ್ಲಿ ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಈ ದೇವಾಲಯದ ಇತರೆ ಅಭಿವೃದ್ಧಿಗಳಾಗಿರುವ ಸಂಗತಿಯನ್ನು ಗುರುತಿಸಬಹುದು.

"ಕಾಳಿಗೆ, ಕಾಳರಾಕ್ಷಸಿಗೆ, ರೌದ್ರೆಗೆ,
ಭೈರವಿ ಗುಗ್ರೇಗಾ ಮಹಾಕಾಳಿಗೆ,
ಕಾಳಯೋಗಿನಿಗೆ, ಮಾಲಿಚದೇವತೆಗಿನ್ದರಂ"

ಎಂಬುದಾಗಿ ಇಲ್ಲಿನ ಶಾಸನವೊಂದು ಮಾಳಚಿದೇವಿಯ ವಿವಿಧ ರೂಪಗಳನ್ನು ವರ್ಣಿಸಿದೆ. ದೇವಿಹೊಸವೂರಿನ ಮಾಳಚಿದೇವಿ ಆ ಕಾಲದ ಪ್ರಸಿದ್ಧ ಶಕ್ತಿ ದೇವತೆಯಾಗಿದ್ದು, ಸಹಜವಾಗಿಯೆ ಅಪಾರ ಭಕ್ತಸಮೂಹವನ್ನು ಹೊಂದಿದ್ದಳು. ಇವಳ ಆಶೀರ್ವಾದ ಪಡೆದು ಕೃತಾರ್ಥರಾಗಲು ಅರಸರು, ಸಾಮಂತರು, ಅಧಿಕಾರಿಗಳು ಇಲ್ಲಿಗೆ ಭೇಟಿ ನೀಡಿ ತಮ್ಮ ಇಷ್ಟಾರ್ಥಗಳ ಈಡೇರಿಕೆಗಾಗಿ ಹರಕೆಹೊತ್ತು ಹಲವಾರು ದಾನದತ್ತಿಗಳನ್ನು ನೀಡುತ್ತಿದ್ದರು. ಕಲ್ಯಾಣದ ಚಾಲುಕ್ಯ ದೊರೆ ೨ನೇ ಜಗದೇಕಮಲ್ಲನ ಕಾಲದ ಇಲ್ಲಿನ ಶಾಸನವು ದಂಡನಾಯಕ ರೇಚರಸ ಬನವಾಸಿ-೧೨೦೦೦ವನ್ನು ಆಳುತ್ತಿದ್ದ ಉಲ್ಲೇಖವನ್ನು ಹೊಂದಿದೆ. ದಂಡನಾಯಕ ರೇಚರಸ ಮತ್ತು ಸುಂಕಾಧಿಕಾರಿ ದೇವಧರದಂಡನಾಯಕರು, ಅಲ್ಲಿನ ಮಹಾಜನ ಸಾಸಿರ್ವರ ಸಮ್ಮುಖದಲ್ಲಿ, ದೇವಿಯ ಪರ್ವದಂದು, ಅಗ್ರಹಾರ ದಿವ್ಯಾದ ಪೊಸವೂರಿನ ಮಾಳಚಿದೇವಿಯ ಉಯ್ಯಲ ಪರ್ವಕ್ಕೆ ಭೂದಾನಮಾಡಿ, ತನ್ನ ಹರಕೆ ತೀರಿಸಿದ್ದ ಸಂಗತಿಯನ್ನು ಉಲ್ಲೇಖಿಸಿದೆ. ಸಿಂಧರ ಅರಸನು ಇವಳ ಭಕ್ತನಾಗಿದ್ದ ಬಗ್ಗೆ, ಸುಂಕದಾನ ಮತ್ತು ಇನ್ನತರ ದಾನಗಳ ಬಗ್ಗೆ ಬೇರೆ ಶಾಸನಗಳಲ್ಲಿ ಉಲ್ಲೇಖನಗಳನ್ನು ಕಾಣಬಹುದು.

ರಾಷ್ಟ್ರಕೂಟರ ಕಾಲದಿಂದಲೂ ಅರಸರು, ಮಾಂಡಳೀಕರು, ಅಧಿಕಾರಿಗಳ ಪ್ರೋತ್ಸಾಹ ಹಾಗೂ ಮಹಾಜನ ಸಾಸಿರ್ವರ ನೇತೃತ್ವದಲ್ಲಿ ಪ್ರಸಿದ್ಧ ಶಕ್ತಿ ದೇವತೆಯ ಆರಾಧನಾ ಕೇಂದ್ರ ಎನಸಿದ್ದ ಇದು ಕಲ್ಯಾಣದ ಚಾಲುಕ್ಯರು, ದೇವಗಿರಿಯ ಯಾದವ ದೊರೆಗಳ ಕಾಲದಲ್ಲಿ ಪ್ರಖ್ಯಾತಿಯ ಪರಾಕಾಷ್ಠೆ ತಲುಪಿತ್ತೆನ್ನಬಹುದು. ಆನಂತರದಲ್ಲಿ ಈ ಮಾಳಜಪೀಠ ಕ್ರಮೇಣವಾಗಿ ತನ್ನ ಪ್ರಖ್ಯಾತಿ ಕಳೆದುಕೊಂಡಿದ್ದಿರಬಹುದಾದರೂ, ಇಂದಿಗೂ ಅಪಾರ ಭಕ್ತಸಮೂಹವನ್ನು ಈ ದೇವಿ ಹೊಂದಿರುವುದಕ್ಕೆ ದೇವಾಲಯದಲ್ಲಿ ಈಗಲೂ ನಡೆಯುವ ಪೂಜೆ ಹಾಗೂ ಪರ್ವಗಳೇ ಸಾಕ್ಷಿಯಾಗಿವೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಸೌಥ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್ : ಸಂಪುಟ ೧೮, ನ್ಯೂಡೆಲ್ಲಿ, ೧೯೭೫.
೨. ಸೂರ್ಯನಾಥ ಕಾಮತ್. (ಸಂ) ಧಾರವಾಡ ಜಿಲ್ಲಾ ಗೆಸೆಟಿಯರ್, ಬೆಂಗಳೂರು, ೧೯೯೫.
೩. ಎಂ. ಬಿ. ನೇಗಿನಹಾಳ, ನೇಗಿನಹಾಳ ಪ್ರಬಂಧಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೪. ಮಹದೇವ. ಸಿ. ಹಾಗೂ ಇತರರು, ಕರ್ನಾಟಕ ದೇವಾಲಯ ಕೋಶ, ಹಾವೇರಿ ಜಿಲ್ಲೆ, ಹಂಪಿ, ೧೯೯೯.
೫. ಭೋಜರಾಜ ಬ. ಪಾಟೀಲ, ನಾಗರಖಂಡ-೭೦ ಒಂದು ಅಧ್ಯಯನ, ಆನಂದಪುರಂ, ೧೯೯೫.

೬೦

ಹೂಲಿ : ಕಾಳಾಮುಖ ಮಹಾಅಗ್ರಹಾರ

ಡಾ. ಕೆ.ಎಸ್. ಪಾಟೀಲ*

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನಲ್ಲಿರುವ ಹೂಲಿ ಗ್ರಾಮವು ಸವದತ್ತಿಯಿಂದ ಪೂರ್ವಕ್ಕೆ ೮ ಕಿ.ಮೀ. ಅಂತರದಲ್ಲಿದೆ. ಇದು ಅಂದು ಬೆಳ್ವೊಲ-೩೦೦ ಆಡಳಿತ ವಿಭಾಗದಲ್ಲಿ ಅಂತರ್ಗತವಾಗಿತ್ತು. ಆ ಆಡಳಿತ ವಿಭಾಗವು ಕ್ರಿ.ಶ. ಸುಮಾರು ೧೧ನೆಯ ಶತಮಾನದಿಂದ ೧೩ನೆಯ ಶತಮಾನದ ಪ್ರಾರಂಭದವರೆಗೂ ಉತ್ತರಕರ್ನಾಟಕದಲ್ಲಿ ಮಹತ್ವದ ಆಡಳಿತ ವಿಭಾಗವಾಗಿತ್ತು. ಅದು ಇಂದಿನ ಧಾರವಾಡ, ಬೆಳಗಾವಿ, ಬಾಗಲಕೋಟ, ಕೊಪ್ಪಳ ಮತ್ತು ಗದಗ ಜಿಲ್ಲೆಗಳ ಕೆಲವು ಪ್ರದೇಶಗಳನ್ನೊಳಗೊಂಡು, ಕರ್ನಾಟಕದ ಇತಿಹಾಸದುದ್ದಕ್ಕೂ ರಾಜಕೀಯ, ಆಡಳಿತ, ಸಾಂಸ್ಕೃತಿಕ, ಧಾರ್ಮಿಕ ಚಟುವಟಿಕೆಗಳ ಆಗರವಾಗಿತ್ತು[೧]. ಈ ವಿಭಾಗದ ವಾಯವ್ಯ ದಿಕ್ಕಿನಲ್ಲಿರುವ ಹೂಲಿ ಪಟ್ಟಣವು ಶಾಸನಗಳಲ್ಲಿ 'ಪೂಲಿ', 'ಪೂವಲ್ಲಿ', 'ಪೂಲಿಗ್ರಾಮ', 'ಹೂಲಿ' 'ಚಾಳುಕ್ಯ ಚಕ್ರವರ್ತಿ ಮಹಾಅಗ್ರಹಾರ' ಎಂದು ವರ್ಣಿತ ವಾಗಿದೆ.[೨] ಇದು ನೇರವಾಗಿ ಅರಸನ ಪ್ರೋತ್ಸಾಹದಲ್ಲಿತ್ತು. ಇಲ್ಲಿಯ ಮಹಾಜನರೇ ಊರೊಡೆಯರಾಗಿದ್ದು, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಇತ್ಯಾದಿ ಚಟುವಟಿಕೆಗಳಿಗೆ ಅವರ ಮನ್ನಣೆ ಮತ್ತು ಪರವಾನಿಗೆ ಅಗತ್ಯವಾಗಿತ್ತು. ಮೇಲಾಗಿ ಈ ಪಟ್ಟಣವು ಶೈವ ಧರ್ಮದ ಕಾಳಾಮುಖ ಪಂಥದ ಕೇಂದ್ರವೂ ಆಗಿತ್ತು. ಹೂಲಿ ಪರಿಸರದಲ್ಲಿ ಬಾದಾಮಿಚಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದಚಾಳುಕ್ಯರು, ಕಳಚೂರಿಗಳು, ದೇವ ಗಿರಿಯ ಸೇವುಣರು, ಆಳ್ವಿಕೆ ಮಾಡಿದ ಕುರಿತಾಗಿ ಶಾಸನಾಧಾರಗಳಿವೆ.

ಕಾಳಾಮುಖ ಮಹಾಅಗ್ರಹಾರ

ಹೂಲಿ ಪರಿಸರದಲ್ಲಿ ದೊರೆತ ಶೈವಧರ್ಮದ ಅವಶೇಷ ಗಳ ಹಿನ್ನೆಲೆಯಲ್ಲಿ ಇದು ಪ್ರಸಿದ್ಧ ಶೈವಪಂಥದ ಕೇಂದ್ರವಾಗಿ ತ್ತೆಂಬುದು ಸ್ಪಷ್ಟವಾಗುತ್ತದೆ. ಇಲ್ಲಿ ಇದುವರೆಗೆ ೧೨ ಶೈವ ಶಾಸನಗಳು ಬೆಳಕಿಗೆ ಬಂದಿವೆ. ಮದನೇಶ್ವರ ಮತ್ತು ಅಂಧಾಸುರ (ಅಂಧಕಾಸುರ) ದೇವಾಲಯದಲ್ಲಿನ ಶಾಸನಗಳು ಕಾಳಾಮುಖ ಶೈವಪಂಥದ ಆರಾಧನಾ ಚಟುವಟಿಕೆಗಳನ್ನು ಬಿಂಬಿಸುತ್ತವೆ. ಕಾಳಾಮುಖ ಯತಿಗಳನ್ನು ಸಾಮಾನ್ಯವಾಗಿ ಯಮ, ನಿಯಮ, ಸ್ವಾಧ್ಯಾಯ, ಧ್ಯಾನ, ಧಾರಣ, ಮೌನಾನು ಷ್ಠಾನ, ಜಪ, ಸಮಾಧಿ, ಶೀಲ, ಗುಣ ಸಂಪನ್ನರೆಂದು ಹೂಲಿ ಶಾಸನಗಳಲ್ಲಿ ವರ್ಣಿಸಿದೆ. ಇವರ ಹೆಸರುಗಳು ಶಕ್ತಿ, ಜೀವ, ರಾಶಿ, ಪಂಡಿತ, ಶಿವಪಂಡಿತ ಇತ್ಯಾದಿಯಾಗಿ ಅಂತ್ಯಗೊಂಡಿವೆ. ಉತ್ತರಕರ್ನಾಟಕದಲ್ಲಿ ಕಾಳಮುಖ ಶೈವ ಪರಂಪರೆಗೆ ಸಂಬಂಧಿಸಿದಂತೆ ಕಲ್ಯಾಣದಚಾಳುಕ್ಯರ ಕಾಲದಲ್ಲಿ ಅನೇಕಾ ನೇಕ ಸಂಖ್ಯೆಯಲ್ಲಿ ತ್ರೈಪುರುಷ ದೇವಾಲಯಗಳು ನಿರ್ಮಾಣ ಗೊಂಡಿದ್ದವು. ಹೂಲಿಯ ವೀರಭದ್ರ ದೇವಾಲಯದ ಕ್ರಿ.ಶ. ೧೦೯೭ರ ಶಾಸನದ ಪ್ರಕಾರ ನಾಕಿಮಯ್ಯನು ಶ್ರೀಮನ್ಮಹಾ ಗ್ರಹಾರ ಪೂಲಿಯ ಊರೊಡೆಯ ಪ್ರಮುಖ ಸಾಸಿರ್ವರ ಸನ್ನಿಧಾನದಲ್ಲಿ ಶ್ರೀ ಹರಿಹರದೇವರ ನೈವೇದ್ಯ, ಚೈತ್ರಪವಿತ್ರ, ಖಂಡಸ್ಫುಟಿತಜೀರ್ಣೋದ್ಧಾರ ಮತ್ತು ಪೂಜಾರಿಯ ಜೀವಿತಕ್ಕೆ ಮೂರು ಮತ್ತರು ಭೂಮಿ, ೧ ಪಣ, ೨ ಹಾಗ ದಾನ ಮಾಡಿದನು.[೩] ಅಂಧಕೇಶ್ವರ ದೇವಾಲಯದ ಕ್ರಿ.ಶ. ೧೧೦೪ರ ಶಾಸನವು 'ಮಹಾಸಮನ್ತಾಧಿಪತಿ', ಮಹಾಪ್ರಚಂಡ ದಂಡನಾಯಕ, ಶ್ರೀಮನ್ಮಹಾಪ್ರಧಾನ ಬಾಣಸುವೆರ್ಗ್ಗಡೆ ಅನಂತಪಾಳರಸರ ಅಳಿಯನಾದ ದಂಡನಾಯಕ ಲಕ್ಕರಸನು ಬೆಳ್ವೊಲನಾಡನ್ನು ಆಳುತ್ತಿರುವಾಗ ಪೆರ್ಗ್ಗಡೆ ಸಿಂಗರಸನು ಪೂಲಿಯ (ಹೂಲಿ) ಅಂಧಾಸುರ ದೇವರಅಂಗಭೋಗ ಮತ್ತು ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಇನ್ತೆನಿಸಿದ ಸ್ಥಾನಾಚಾರ್ಯರಾದ ತತ್ಪುರುಷಪಂಡಿತರ ಸಮಕ್ಷಮದಲ್ಲಿ ಮತ್ತು ಊರೊಡೆಯ ಪ್ರಮುಖಸಾಸಿರ್ವ್ವಮಹಾಜನಂಗಳ ಸನ್ನಿಧಾನದಲ್ಲಿ ನೆಲವರ್ತಿಗೆ ಸಾಸಿರಕ್ಕೆ ಹನ್ನೊಂದು ಅಡಕೆ, ನೂರು ಎಲೆಯನ್ನು ದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ.[೪] ಅದೇ ರೀತಿಯಾಗಿ ಕ್ರಿ.ಶ. ೧೧೦೭ರ ಕೆರೆಸಿದ್ದೇಶ್ವರ ದೇವಾಲಯದಲ್ಲಿನ ಶಾಸನದಲ್ಲಿ ಶ್ರೀಮದ್ ಅಂಧಾಸುರ ದೇವರ ಸ್ಥಾನಾಚಾರ್ಯರಾದ ಶ್ರೀ ಜ್ಞಾನಶಕ್ತಿದೇವರು ಅಗ್ರಹಾರ ಪೂಲಿಯ ಊರೊಡೆಯ ಪ್ರಮುಖಸಾಸಿರ್ವ್ವರನ್ನು ದ್ರವ್ಯಪೂರ್ವಕ ಆರಾಧಿಸಿ ಅಂಧಾಸುರದೇವರ ಸ್ನಾನ, ನೈವೇದ್ಯಕ್ಕೆಂದು, ಕೊಕ್ಕಳಗೇರಿಯ ಹಾಳ ಹಸುಗೆಯೊಳಗೆ

* ಇತಿಹಾಸ ಸಹಾಯಕ ಪ್ರಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಕುಂದಗೋಳ, ಜಿಲ್ಲೆ ಧಾರವಾಡ-೫೮೧೧೧೩.

ಕೊಂಡು ಬಿಟ್ಟು ಮತ್ತರು ಏಳು ಮತ್ತು ಒಂದು ಹಣವನ್ನು ದಾನ ಮಾಡಿದ ಪ್ರಸ್ತಾಪವಿದೆ.[೫]

ಪಂಚಲಿಂಗೇಶ್ವರ ದೇವಾಲಯದ ಮೂರನೆಯ ಗರ್ಭಗೃಹದ ದ್ವಾರಬಂಧದಲ್ಲಿರುವ ಕ್ರಿ.ಶ. ೧೨-೧೩ನೇ ಶತಮಾನದ ಶಾಸನದಲ್ಲಿ ಶ್ರೀ ಪ್ರಭಾಚಂದ್ರ ಸಿದ್ಧನ್ತದೇವರ ಶಿಷ್ಯರಾದ ಬೋಸಣ್ಣನ ಮಗ ಸೋಮಯ್ಯ ಹೆಗ್ಗಡೆ ಬಮ್ಮಯ್ಯ, ಧಾರವಾಡದ ಬಸವಿಶೆಟ್ಟಿ, ಕಂಬದ ನೇಮಿಸೆಟ್ಟಿ ಮತ್ತು ಬಲ್ಲಿಸೆಟ್ಟಿ ಮುಖ್ಯವಾಗಿ ಸಮಸ್ತಭವ್ಯಜನರು ಹೂಲಿಯ ಮಾಣಿಕ್ಯ ತೀರ್ಥದ (ಜಿನಾಲಯ) ದ್ವಾರಶಾಖೆಯನ್ನು ಮಾಡಿಸಿದನು. ಹಾಗೂ ಈ ದ್ವಾರಶಾಖೆಯನ್ನು ಕುರುವನೂರರಾಚೋಜನು ಖಂಡರಿಸಿದನು ಎಂದು ಪ್ರಸ್ತಾಪಿಸಲಾಗಿದೆ.[೬] ಹಾಗೆಯೇ ಇದೇ ದೇವಾಲಯದಲ್ಲಿರುವ ಕ್ರಿ.ಶ. ೧೨-೧೩ನೆಯ ಶತಮಾನದ ಶಾಸನವು ಉಲ್ಲೇಖಿಸುವ ಹಾಗೆ ಭಾಗಲೆ ಮತ್ತು ಬಾಚಿಸಜ್ಜೆಯರ ಮಗನಾದ ಮತ್ತು ನಾಗರಾಶಿಮುನಿಯ ಶಿಷ್ಯನೂ ಆದ ಕವದಿಯಮಾದಿಗೌಡನು ಪಂಚಲಿಂಗೇಶ್ವರ ದೇವಾಲಯದ ಸಭಾಮಂಟಪದ ಮಧ್ಯದ ನಾಲ್ಕು ಕಂಬಗಳಲ್ಲಿ ನಾಗರಾಶಿಯ ಕಂಬದ ದಕ್ಷಿಣಕ್ಕಿರುವ ಕಂಬವನ್ನು ಮಾಡಿಸಿದನು.[೭] ಹೀಗೆ ಅನೇಕ ಕಾಳಾಮುಖ ಪಂಡಿತರು ದೇವಾಲಯಗಳಿಗೆ ದಾನ, ದತ್ತಿಗಳನ್ನು ನೀಡಿದ್ದನ್ನು ಗಮನಿಸಬಹುದು.

ಶೈವ ಆಚಾರ್ಯರು (ಪಂಡಿತರು)

ಶೈವ ಆಚಾರ್ಯ ಅಥವಾ ಪಂಡಿತರು ಪ್ರಾಚೀನ ಕಾಲದಿಂದಲೂ ತಮ್ಮನ್ನು ವಿವಿಧ ನಾಮಾಂಕಿತಗಳಿಂದ ಗುರುತಿಸಿಕೊಳ್ಳುತ್ತಾ ಬಂದಿದ್ದಾರೆ. ಇಂತಹ ನಾಮಾಂಕಿತ ಶೈವಪಂಡಿತರು ಹೂಲಿ ಪರಿಸರದಲ್ಲಿಯೂ ಗೋಚರಿಸುತ್ತಾರೆ. ಇಲ್ಲಿಯ ಶೈವಶಾಸನಗಳಲ್ಲಿ ಶಕ್ತಿ, ಪಂಡಿತ, ಆಚಾರ್ಯ ಇವುಗಳ ಉಲ್ಲೇಖಗಳಿವೆ.

ಶ್ರೀ ಜ್ಞಾನಶಕ್ತಿ : ಕ್ರಿ.ಶ. ೧೨ನೆಯ ಶತಮಾನದ ಶಾಸನದಲ್ಲಿ ಉಲ್ಲೇಖಿತಗೊಳ್ಳುತ್ತಾರೆ. ಪಂಚಲಿಂಗೇಶ್ವರ ದೇವಾಲಯದ ಅಗ್ರಮಂಟಪದಲ್ಲಿರುವ ಮೊದಲನೆಯ ಸ್ತಂಭವನ್ನು ಇವರ ಶಿಷ್ಯನಾದ ನಾಗರಾಶಿಯು ಮಾಡಿಸಿದನು.

ತತ್ಪುರುಷ ಪಂಡಿತ : ಕ್ರಿ.ಶ. ೧೧೧೦ರ ಶಾಸನದಲ್ಲಿ ಉಲ್ಲೇಖಿತ ಈ ಪಂಡಿತರು ಅಂಧಕೇಶ್ವರ ದೇವಾಲಯದ ಸ್ಥಾನಾಚಾರ್ಯರಾಗಿದ್ದರು. ಇವರ ಸಮಕ್ಷಮದಲ್ಲಿ ಶ್ರೀಮದ್ ಅಂಧಾಸುರದೇವರಿಗೆ ಪೆರ್ಗ್ಗಡೆಸಿಂಗರಸನು ಹನ್ನೊಂದು ಅಡಕೆ, ನಾಲ್ಕುನೂರು ಎಲೆಯನ್ನು ದಾನ ಮಾಡಿದನು.

ಸಿದ್ದೇಶ್ವರ ಪಂಡಿತ : ಕ್ರಿ.ಶ. ೧೧೦೭ರ ಶಾಸನದಲ್ಲಿ ಉಲ್ಲೇಖಿತ ಈ ಪಂಡಿತರು ಕಳಶೇಶ್ವರ ದೇವರ ಆಚಾರ್ಯರಾಗಿದ್ದರು. ಕಳಸವಳ್ಳಿಗೇರಿಯ ಮಹಾಜನಗಳು ಕಳಸೇಶ್ವರ ದೇವರ ಖಂಡಸ್ಫುಟಿತಜೀರ್ಣೋದ್ಧಾರಕ್ಕೆ, ನೈವೇದ್ಯ ಮತ್ತು ತಪೋಧನರ ಆಹಾರ ದಾನಕ್ಕೆ ಇವರ ಸಮ್ಮುಖದಲ್ಲಿ ನಾಲ್ಕು ಕಮ್ಮ (ಭೂಮಿ) ದಾನ ಮಾಡಿದನು.

ವಾಮಶಕ್ತಿ ದೇವರು : ಕ್ರಿ.ಶ. ೧೨೨೪ರ ಶಾಸನದಲ್ಲಿ ಉಲ್ಲೇಖಿತ ಈ ಪಂಡಿತದೇವರು ಅಂಧಾಸುರ ದೇವರ ಸ್ಥಾನಾಚಾರ್ಯರಾಗಿದ್ದರು.

ನಾಗರಾಶಿ ಪಂಡಿತ : ಕ್ರಿ.ಶ. ೧೧-೧೨ನೆಯ ಶತಮಾನದ ಶಾಸನದಲ್ಲಿ ಉಲ್ಲೇಖಿತ ಈ ಪಂಡಿತರು ಶ್ರೀ ಜ್ಞಾನಶಕ್ತಿ ಗುರುಗಳ ಶಿಷ್ಯರಾಗಿದ್ದಾರೆ. ಇವರು ಪಂಚಲಿಂಗೇಶ್ವರ ದೇವಾಲಯದ ಅಗ್ರಮಂಟಪದ ಆಶ್ರಮದಲ್ಲಿರುವ ನೈಋತ್ಯ ಕಂಬವನ್ನು ಮಾಡಿಸಿದರು.

ಶೈವ ದೇವಾಲಯಗಳು : ಹೂಲಿಯಲ್ಲಿ ಒಟ್ಟು ಎಂಟು ದೇವಾಲಯಗಳಿವೆ. ಅದರಲ್ಲಿ ಅಂಧಾಸುರ ದೇವಾಲಯ ಮತ್ತು ಮಧುಕೇಶ್ವರ ದೇವಾಲಯ ಕಾಳಾಮುಖಶೈವ ಪಂಥದ ಆರಾಧನಾ ಚಟುವಟಿಕೆಯ ಕೇಂದ್ರಗಳಾಗಿವೆ. ಅಂಧಕೇಶ್ವರ ದೇವಾಲಯವು ದ್ವಿಕೂಟ ಮಾದರಿಯಲ್ಲಿದ್ದು, ಎರಡೂ ಗರ್ಭಗೃಹಗಳು ಎದುರು ಬದುರಾಗಿವೆ. ಎರಡು ಅಂತರಾಳಗಳು ಮತ್ತು ಒಂದೇ ಗೂಢಮಂಟಪವಿದೆ. ದಕ್ಷಿಣಕ್ಕೆ ಪ್ರವೇಶದ್ವಾರವಿದೆ. ಗರ್ಭಗೃಹದ ಪ್ರವೇಶದ್ವಾರದ ಮೇಲ್ಭಾಗದಲ್ಲಿರುವ ಉತ್ತರಾಂಗದಲ್ಲಿ ಕಾಳುಮುಖ ಯತಿಗಳನ್ನು ಚಿತ್ರಿಸಲಾಗಿದೆ. ಅಂತರಾಳದಲ್ಲಿರುವ ಮಕರತೋರಣವನ್ನು ಅಂಧಕಾಸುರ ದೇವಾಲಯದ ಆಚಾರ್ಯರಾದ ಶ್ರೀ ಜ್ಞಾನಶಕ್ತಿಯು ಮಾಡಿಸಿದರು ಇದನ್ನು ಕಂಡರಿಸಿದವನು ಮಾರ್ತಾಂಡ. ಮಕರತೋರಣದಲ್ಲಿ ಶಿವನತಾಂಡವ ನೃತ್ಯವಿದೆ. ಶಿವನು ಅಷ್ಟಭುಜಗಳನ್ನು ಹೊಂದಿದ್ದು, ಅಪಸ್ಮಾರನ ಮೇಲೆ ನಿಂತುಕೊಂಡು ನೃತ್ಯ ಮಾಡುತ್ತಿದ್ದಾನೆ. ಕೈಗಳಲ್ಲಿ ಖಡ್ಗ, ತ್ರಿಶೂಲ, ಖಟ್ವಾಂಗ, ಪಾನಪಾತ್ರ, ಅಗ್ನಿ, ಲೋಲ, ಜಪಮಾಲೆಯನ್ನು ಹಿಡಿದುಕೊಂಡಿದ್ದಾನೆ. ಶಿವನ ಬಲಭಾಗದಲ್ಲಿ ಚತುರ್ಮುಖ ಬ್ರಹ್ಮನು ಹಂಸದ ಮೇಲೆ ಲಲಿತಾಸನದಲ್ಲಿ ಆಸೀನನಾಗಿದ್ದಾನೆ. ಈತನು ಪಕ್ಕದಲ್ಲಿರುವ ವೈಕುಂಠ ವಿಷ್ಣುವಿಗೆ ಮೂರು ತಲೆಗಳಿರುವುದು ವಿಶೇಷವಾಗಿದೆ. ಈತನು ಪದ್ಮಪೀಠದ ಮೇಲೆ ಮಹಾರಾಜಾ ಲೀಲಾಸನದಲ್ಲಿ ಕುಳಿತಿದ್ದು, ಕೈಗಳಲ್ಲಿ ತಾಳ, ಪ್ರಯೋಗಚಕ್ರ, ಪದ್ಮವನ್ನು ಹಿಡಿದುಕೊಂಡಿದ್ದಾನೆ. ವಿಷ್ಣುವಿನ ಮೂರು ಮುಖಗಳಲ್ಲಿ ೧. ಪೂರ್ವಕ್ಕೆ ಮುಖವಾಗಿ (ಮಧ್ಯದಲ್ಲಿ ಸೌಮ್ಯ), ೨. ದಕ್ಷಿಣಕ್ಕೆ ಮುಖವಾಗಿ ನರಸಿಂಹ, ೩. ಉತ್ತರಕ್ಕೆ ಮುಖವಾಗಿ ವರಾಹ ಮುಖಗಳಿರುವುದು ವಿಶೇಷವಾಗಿದೆ. ಈ ಮಕರತೋರಣದ ಕೆಳಪಟ್ಟಿಯಲ್ಲಿ ಎರಡು ಸಾಲಿನ ಶಾಸನವಿದೆ.

ಶಿಲ್ಪಗಳು : ಹೂಲಿಯಲ್ಲಿ ದೊರೆತ ಶಿಲ್ಪಗಳಲ್ಲಿ ಕಾರ್ತಿಕೆಯ ಗಣೇಶ, ನಟರಾಜ ಮತ್ತು ಭೈರವನ ಶಿಲ್ಪಗಳು ಪ್ರಮುಖವಾಗಿವೆ. ಇವೆಲ್ಲವೂ ಕ್ರಿ.ಶ. ೧೧-೧೨ನೆಯ ಶತಮಾನದ್ದಾಗಿವೆ.

ಹೂಲಿಯು ವಾಸ್ತುಕಲೆಯ ದೃಷ್ಟಿಯಿಂದ ವಿಭಿನ್ನ ಪರಂಪರೆಯ ಪ್ರತೀಕವಾಗಿದೆ. ಆದ್ದರಿಂದ ಆ್ಯಡಮ್ ಹಾರ್ಡಿ ಎಂಬ ವಿದ್ವಾಂಸರು **'ಹೂಲಿ ಶೈಲಿ'** (Huli School) ಎಂಬ ವೈಶಿಷ್ಟ್ಯ ಸೂಚಕ ವರ್ಣನೆಯನ್ನು ಗುರುತಿಸಿದ್ದಾರೆ. ಈ ಗ್ರಾಮವು ಬೆಳ್ವೊಲ-೩೦೦ ಆಡಳಿತ ವಿಭಾಗದಲ್ಲಿದ್ದರೂ ವಾಸ್ತು ವಿವರಗಳಲ್ಲಿ ಸಾಕಷ್ಟು ವೈಷಮ್ಯ ಕಾಣುತ್ತಿರುವುದು ವಿಶೇಷ. ಶೈವ ಶಾಸನಗಳಲ್ಲಿ ಆಚಾರ್ಯರ ಮತ್ತು ಪಂಡಿತರ ಉಲ್ಲೇಖಗಳಿದ್ದು, ಅವರೆಲ್ಲರುಗಳು ಸ್ಥಾನಾಚಾರ್ಯರಾಗಿದ್ದುಕೊಂಡು ಧರ್ಮವನ್ನು ಪುನರುಜ್ಜೀವನಗೊಳಿಸಿದ್ದಾರೆ. ಹೀಗಾಗಿ ಹೂಲಿ : ಒಂದು ಕಾಳಮುಖ ಮಹಾಅಗ್ರಹಾರವಾಗಿತ್ತೆಂದು ಹೇಳಬಹುದು.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ರಿತ್ತಿ ಶ್ರೀನಿವಾಸ, "ಬೆಳ್ವೊಲ ಮುನ್ನೂರು," (೧೯೬೯) ಕರ್ನಾಟಕ ಭಾರತಿ, ಸಂಪುಟ-೬, ಸಂಚಿಕೆ-೧, ಪುಟ ೮೦.

೨. E.I. ಸಂಪುಟ XVIII, ಶಾ.ಸಂ. ೨೨/A, ಪುಟ ೧೭೨-೧೭೨.

೩. E.I. ಸಂಪುಟ XVIII, ಶಾ.ಸಂ. ೨೨/D, ಪುಟ ೧೮೩-೧೮೬.

೪. E.I. ಸಂಪುಟ XVIII, ಶಾ.ಸಂ. ೨೨/E, ಪುಟ ೧೯೮-೧೯೩.

೫. E.I. ಸಂಪುಟ XVIII, ಶಾ.ಸಂ. ೨೨/E, ಪುಟ ೧೯೭-೧೯೮.

೬ A.R.S.I.E., 1940-41, Appendix-E, No-25, P. 242.

೭. S.I.I. ಸಂಪುಟ V, ಶಾ.ಸಂ. ೮೪೩, ಪುಟ ೩೪೩.

೬೧

ಅಳಿಯಕಟ್ಟು ಮತ್ತು ಬಾರ್ಕೂರು ಕುಂಡೋದರ: ಒಂದು ಅಧ್ಯಯನ

ಡಾ. ಇಂದಿರಾ ಹೆಗ್ಗಡೆ*

ತುಳು ರಾಜ್ಯದ ರಾಜಧಾನಿ ಬಾರ್ಕೂರು ಆಗಿತ್ತು. ಆರಂಭದಲ್ಲಿ ಆಳುಪರು, ಅನಂತರ ಹೊಯ್ಸಳರು, ವಿಜಯನಗರದ ಅರಸರು ಬಾರ್ಕೂರಿನಿಂದ ಆಳುತ್ತಿದ್ದರು. ಪಾಡ್ದನ ಕಥನಗೀತಗಳಲ್ಲೂ ಬಾರ್ಕೂರು ತುಳುರಾಜ್ಯದ ರಾಜಧಾನಿ ಆಗಿದ್ದ ಬಗ್ಗೆ ಮಾಹಿತಿ ದೊರಕುತ್ತದೆ. ಬಾರ್ಕೂರು ಐತಿಹಾಸಿಕ ಪಟ್ಟಣ.

ಕರ್ನಾಟಕದ ಕರಾವಳಿ ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ ೧೭ರಲ್ಲಿ ಬ್ರಹ್ಮಾವರ ಬಸ್ ನಿಲ್ದಾಣದಿಂದ ೩ ಕಿಲೋಮೀಟರ್ ಉತ್ತರಕ್ಕೆ ಸೀತಾನದಿಯ ಆಚೆ ದಡದಲ್ಲಿ ಬಾರ್ಕೂರು ಪಟ್ಟಣ ಇದೆ.

ಬಾರ್ಕೂರಿನಲ್ಲಿ ಒಟ್ಟು ೩೬೫ ದೇವಸ್ಥಾನಗಳಿವೆ. ಅಂದಿನ ಅರಸರು ದಿನಕ್ಕೊಂದು ದೇವಸ್ಥಾನಕ್ಕೆ ಭೇಟಿ ನೀಡುತ್ತಿದ್ದರೆನ್ನುವುದು ಪ್ರತೀತಿ. ಬಾರ್ಕೂರು ಸಂಸ್ಥಾನಕ್ಕೆ ಸುಮಾರು ೮ ಕೇರಿಗಳಿವೆ.

ಬಾರ್ಕೂರು ಪಂಚಲಿಂಗೇಶ್ವರ ದೇವಸ್ಥಾನದ ಹಿಂಭಾಗದಲ್ಲಿ ಸಿಂಹಾಸನ ಗುಡ್ಡೆ ಇದೆ. ಸಿಂಹಾಸನ ಗುಡ್ಡೆಯಲ್ಲಿ ತುಳುನಾಡಿನ ಆರಂಭದ ಅರಸರಾದ ಆಳುಪರ ಅರಮನೆ ಇದ್ದ ಮೈದಾನ ಇದೆ. ಅರಮನೆ ಮೈದಾನದ ಬಳಿ ರಾಜರಾಜೇಶ್ವರಿಯ ಗುಡಿ ಬಳಿ ನಿತ್ಯ ಪೂಜೆ ನಡೆಯುವ ಶಮೀ ವೃಕ್ಷ ಇದೆ. ಗುಡಿಯ ಮುಂದೆ ಬಲಿ ಕಂಬ ಮತ್ತು ಬಲಿ ಕಟ್ಟೆ ಇದೆ. ಬಾರ್ಕೂರಿನ ೩೬೫ ದೇವಸ್ಥಾನಗಳಿಂದ ರಾಜರಾಜೇಶ್ವರಿ ದೇವರಿಗೆ ಕಪ್ಪ ಕಾಣಿಕೆ ಬರುವ ಪದ್ಧತಿ ಇದೆ.

ಗುಡಿಯಲ್ಲಿ ರಾಜರಾಜೇಶ್ವರಿ ಪ್ರತಿಮೆಯ ಪೀಠದಲ್ಲಿ ಶ್ರೀಚಕ್ರ ಪ್ರತಿಷ್ಠಾಪಿಸಲಾಗಿದೆ. ಪ್ರತಿಮೆಯ ಮುಂದೆ ಗರ್ಭಗುಡಿಯಲ್ಲಿಯೇ ಸುಮಾರು ಎಂಟು ಅಡಿ ಚಚೌಕದ ಕಟ್ಟೆ ನೆಲದಿಂದ ಸುಮಾರು ಒಂದೂವರೆ ಅಡಿ ಎತ್ತರಕ್ಕೆ ಎದ್ದಿದೆ. ಇದನ್ನು 'ವಿಕ್ರಮಾದಿತ್ಯನ ಸಿಂಹಾಸನ ಕಟ್ಟೆ' ಎನ್ನುತ್ತಾರೆ. ಅದರ ಮೇಲೆ ಪುಟ್ಟ ಪಾಣಿಪೀಠ ಮತ್ತು ಲಿಂಗ ಇದೆ. ಯಾವ ವಿಕ್ರಮಾದಿತ್ಯ ಈತ ಎಂಬ ಬಗ್ಗೆ ಗುರುರಾಜ ಭಟ್ಟರು ಚರ್ಚಿಸುತ್ತಾರೆ. ಈ 'ಸಿಂಹಾಸನ'ದಿಂದಾಗಿ ಈ ಕ್ಷೇತ್ರಕ್ಕೆ 'ಸಿಂಹಾಸನ ಗುಡ್ಡೆ' ಎಂಬ ಹೆಸರಾಯಿತು ಎನ್ನುವ ಮಾಹಿತಿಯನ್ನು ಇಲ್ಲಿಯ ಅರ್ಚಕ ಗಣಪಯ್ಯ ಅಡಿಗರು ನೀಡಿದ್ದರು. ಅಡಿಗರ ಪ್ರಕಾರ "ವಿಕ್ರಮಾದಿತ್ಯನ ಕಾಲಾನಂತರ ಭೂಗತ ಆದ ಆತನ ಸಿಂಹಾಸನ ಕುಂಡೋದರ ಭೂತದ ಕೃಪೆಯಿಂದ ಭೂತಾಳ ಪಾಂಡ್ಯನೆಗೆ ಸಿಗುತ್ತದೆ".

ನವರಾತ್ರಿಯ ದಶಮಿ ದಿನ ಊರವರು ಸೇರಿ ಶಮಿ ಪೂಜೆ ಮಾಡಿ ದಾನಧರ್ಮಾದಿಗಳನ್ನು ಮಾಡುವ ಪದ್ಧತಿ ಇದೆ. ಈ ಕ್ಷೇತ್ರ ತ್ಯಾಂಪಾಡಿ ಹನೆಹಳ್ಳಿ ಅರ್ಥಾತ್ ಪನ್ನೀರ್ಪಳ್ಳಿ (ಕ್ರಿ.ಶ. ೧೨ನೆಯ ಶತಮಾನದ ಕವಿ ಆಳುಪೇಂದ್ರನ ಕಾಲದಲ್ಲಿ ಪಾಂಡ್ಯಮಹಾದೇವಿಯು ಪನ್ನೀರ್ಪಳ್ಳಿಯನ್ನು ಆಳುತ್ತಿದ್ದಳು.) ಮಾಗಣೆಯ ಅಧಿಕಾರ ವ್ಯಾಪ್ತಿಗೆ ಬರುತ್ತದೆ. ದಶಮಿಯಂದು ಹನೆಹಳ್ಳಿಯ ತ್ಯಾಂಪಾಡಿ ಮನೆಯ ಸೆಟ್ರು ಸಿಂಹಾಸನ ಗುಡ್ಡೆಗೆ ಬಂದು ಎಲ್ಲಾ ವ್ಯವಸ್ಥೆ ಮಾಡಬೇಕು. ಅರ್ಚಕ ಅಡಿಗರ ಪ್ರಕಾರ "ಅಳಿಯ ಸಂತಾನ'ದವರೇ ಈ ಕಾರ್ಯಗಳನ್ನು ನಡೆಸಿ ಕೊಡಬೇಕು. ಚೌಟರಿಗೆ ಬಾರ್ಕೂರು ಮೂಲ. ಬಂಗರೂ ಸಿಂಹಾಸನ ಗುಡ್ಡೆಯ ಈ ಕ್ಷೇತ್ರಕ್ಕೆ ಬರಬೇಕಿತ್ತು. ಹೀಗೆ ಚೌಟರು, ಬಂಗರು, ಆಳುಪರು ಮುಂತಾದ ಊರಿನವರಿಗೆ ಗೌರವ ಸಂದಾಯ ಆಗುವ ಪದ್ಧತಿ ಇದೆ. ಓಲಗದಲ್ಲೂ ಇದೇ ಪದ್ಧತಿ. ಬಂದವರಿಗೆ ಊಳಿಗದವರು ಚಾಪೆ ಹಾಸಿ ಕೊಡಬೇಕು.'

ರಾಜರಾಜೇಶ್ವರಿ ಗುಡಿಯಲ್ಲಿ ತೂಗು ಹಾಕಿರುವ ಹಾಸಿಗೆ ಕೆಳಗಿಟ್ಟು ದಶಮಿ ದಿವಸ ಪಟ್ಟಾಭಿಷೇಕ (ರಾಜರಾಜೇಶ್ವರಿಗೆ?) ಮಾಡಬೇಕು. ತ್ಯಾಂಪಾಡಿ ಮನೆಯವರು ಪಟ್ಟಾಭಿಷೇಕ ವಿಧಿಯನ್ನು ನಡೆಸಿಕೊಡುವವರು.

ಹಿಂದೆ ತಾಲೂಕು ಆಫೀಸಲ್ಲಿ ಪಟ್ಟದ ಉಂಗುರ, ಪಟ್ಟದ ಕತ್ತಿ ಮತ್ತು ಈ ಹಾಸಿಗೆ ಇತ್ತಂತೆ. ಅದನ್ನು ಪಾಡ್ಯದ ದಿವಸ ಇಲ್ಲಿಗೆ ತಂದು ದಶಮಿಯ ಮರುದಿನ ತಾಲೂಕಿಗೆ

* ನಂ. ೬. ಕೃಷ್ಣಾ ರೆಸಿಡೆನ್ಸಿ, ಆನೆಯ ಅಡ್ಡರಸ್ತೆ, ಅಮರಜ್ಯೋತಿನಗರ, ಬೆಂಗಳೂರು-೫೬೦೦೪೦.

ಮರಳಿ ಕೊಂಡುಹೋಗುತ್ತಿದ್ದರಂತೆ. ಈಗ ಹಾಸಿಗೆಯನ್ನು ಗುಡಿಯಲ್ಲಿ ತೂಗು ಹಾಕಿ ಇಟ್ಟಿದ್ದಾರೆ. ಪಟ್ಟದ ಉಂಗುರ ಮತ್ತು ಪಟ್ಟದ ಕತ್ತಿ ಕಳೆದುಹೋಗಿದೆ.

ದಶಮಿಯ ದಿನ ಎಲ್ಲಾ ದೇವಸ್ಥಾನಗಳಿಂದ ಕಪ್ಪಕಾಣಿಕೆ, ಫಲ ಹೊರೆಕಾಣಿಕೆಯನ್ನೂ ನೀಡಬೇಕು. ಬಾರ್ಕೂರಿನಲ್ಲಿ ರಾಜರಾಜೇಶ್ವರಿಗೆ ಪ್ರಥಮವಾಗಿ ಪೂಜೆ ಆಗಬೇಕು. ಬಾರ್ಕೂರಿನ ಸೀಮೆದೇವರಾದ ಪಂಚಲಿಂಗ ರಥೋತ್ಸವ ದಲ್ಲೂ ಮೊದಲ ಪೂಜೆ ನಡೆಯಬೇಕು. (ಹೇಳಿದವರು : ಗಣಪಯ್ಯ ಅಡಿಗ ವ. ೮೦ ೧೬-೪-೨೦೧೧)

ಪಂಚಲಿಂಗೇಶ್ವರ ದೇವಸ್ಥಾನ ಸಿಂಹಾಸನ ಗುಡ್ಡೆಯಿಂದ ೨೦೦ ಮೀಟರ್ ಆಗ್ನೇಯಕ್ಕೆ ಇದೆ. ಇನ್ನೂ ಆಗ್ನೇಯಕ್ಕೆ ಸುಮಾರು ಅರ್ಧ ಕಿ.ಮೀ. ದೂರ ಹೋದರೆ ಹೊಯ್ಸಳ, ವಿಜಯನಗರ ಕಾಲದ ಅರಮನೆ ಮೈದಾನ ಸಿಗುತ್ತದೆ. ಈ ಮೈದಾನದ ಸಮೀಪ ವಿಶಾಲ ಬಯಲು ಭೂಮಿ ಇದೆ. ಕುಂಡೋದರ ಗುಡಿ ಇದೆ.

ಅಳಿಯಸಂತಾನ ಪದ್ಧತಿ ಅಥವಾ ಮಾತೃವಂಶೀಯ ಪದ್ಧತಿ

ಅಳಿಯಸಂತಾನ ಸಾಮಾಜಿಕ ಪದ್ಧತಿ ಜಾರಿ ಇದ್ದ ರಾಜ್ಯ ಐತಿಹಾಸಿಕ ತುಳುನಾಡು ಮತ್ತು ಕೇರಳ. ಈಗಲೂ ಅಳಿಯಸಂತಾನ ಪದ್ಧತಿ ನಾಶವಾಗಿಲ್ಲ ರಾಜಕೀಯ ಮತ್ತು ಆಸ್ತಿಯಧಿಕಾರ ತಂದೆಯಿಂದ ಮಗನಿಗೆ ಹೋಗಲು ಕಾನೂನಿನಲ್ಲಿ ಅವಕಾಶ ಕಲ್ಪಿಸಲಾಗಿದ್ದರೂ ಇನ್ನಿತರ ಸಾಮಾಜಿಕ, ಕೌಟುಂಬಿಕ ಮತ್ತು ಧಾರ್ಮಿಕ ಅಧಿಕಾರಗಳು ಮಾತೃವಂಶೀಯ ಅಳಿಯಸಂತಾನ ಪದ್ಧತಿಯಲ್ಲಿ ಮುಂದುವರಿಯುತ್ತಿದೆ.

ತುಳುನಾಡಿನಲ್ಲಿ ಮಾತೃವಂಶೀಯ ಅಳಿಯಸಂತಾನ ಪದ್ಧತಿಯನ್ನು ಜಾರಿಗೆ ತಂದವ ಭೂತಾಳಪಾಂಡ್ಯ ಎಂಬ ಕಥೆ ಗ್ರಾಮಪದ್ಧತಿಯಲ್ಲಿ ದಾಖಲಾಗಿದೆ. ಆದರೆ ಇದೇ ಆಶಯವನ್ನು ಹೊಂದಿದ್ದ ಇನ್ನೂ ಎರಡು ಜನಪದ ಕಥೆಗಳು ಇವೆ.

ಕಥೆ ೧: ಡಾ. ಗುರುರಾಜ ಭಟ್ಟರು ಬಾರಕೂರು ಕೃತಿಯಲ್ಲಿ ವಿಮರ್ಶೆಗೆ ಒಳಪಡಿಸಿರುವ, ಗ್ರಾಮಪದ್ಧತಿಯಲ್ಲಿ ದಾಖಲಾಗಿ ರುವ ಕಥೆ.

"ಭೂತಾಳಪಾಂಡ್ಯನು ಮಧುರೆಯ ರಾಜವಂಶದವನು. ಬಹಳ ಪೂರ್ವಕಾಲದಲ್ಲಿ ಇವನ ಸಂತತಿಯವರು ಮಧುರೆ ಯನ್ನು ಬಿಟ್ಟು ತುಳುನಾಡಿಗೆ ಬಂದರು. ಭೂತಾಳಪಾಂಡ್ಯನು ಸೌಮ್ಯ ವೀರಪಾಂಡ್ಯನ ಮಗನು. ಇವನಿಗೆ ಜಯಪಾಂಡ್ಯ ನೆಂದು ಮೊದಲು ಹೆಸರಿದ್ದಿತು. ಇವನು ಜೈನ ಮತಸ್ಥನಾಗಿ ದ್ದನು. ಇವನ ತಂದೆಯು ಭೂತನಾಥನಾದ ಕುಂಡೋದರನ (ಮಹಿಷಾಸುರ) ಭಕ್ತನಾಗಿದ್ದನು. ಜಯಪಾಂಡ್ಯನು ದೇವಪಾಂಡ್ಯನ ಸೋದರಳಿಯನು. ದೇವಪಾಂಡ್ಯನಿಗೆ ಒಬ್ಬಳು ತಂಗಿ ಇದ್ದಳು. ಇವಳ ಹೆಸರು ಸತ್ಯವತಿ. ಇವಳಿಗೆ ಸೌಮ್ಯ ವೀರಪಾಂಡ್ಯನೊಡನೆ ವಿವಾಹವಾಗಿತ್ತು. ಜಯಪಾಂಡ್ಯನು ಸೌಮ್ಯವೀರಪಾಂಡ್ಯ ಮತ್ತು ಸತ್ಯವತಿಯ ಮಗನು. ದೇವಪಾಂಡ್ಯನು ವ್ಯಾಪಾರಾರ್ಥವಾಗಿ ಒಂದು ದೊಡ್ಡ ಹಡಗನ್ನು ಬಾರಕೂರಲ್ಲಿ ಕಟ್ಟಿಸಿ ಅದನ್ನು ನೀರಿಗಿಳಿಸಲು ದ್ಯುಕ್ತನಾದನು. ಆಗ ಆ ಹಡಗಿನಲ್ಲಿದ್ದ ಭೂತರಾಜನಾದ ಕುಂಡೋದರನು ತನಗೆ ನರಾಹುತಿಯನ್ನು ಕೊಡಬೇಕೆಂದೂ, ಕೊಡದಿದ್ದಲ್ಲಿ ಹಡಗನ್ನು ನೀರಿಗಿಳಿಸಲಿಕ್ಕೆ ಬಿಡಲಿಕ್ಕಿಲ್ಲವೆಂದೂ ತಿಳಿಸಿದನು. ಇದರಿಂದ ಚಿಂತಿತನಾದ ದೇವಪಾಂಡ್ಯನು ತನ್ನ ಮಡದಿಯಲ್ಲಿ ಒಬ್ಬ ಮಗನನ್ನು ಆಹುತಿ ನೀಡಲು ಕೇಳಿಕೊಳ್ಳುತ್ತಾನೆ ಅವಳು ಒಪ್ಪುವುದಿಲ್ಲ.

ಈ ವಿಷಯ ತಿಳಿದ ಸತ್ಯವತಿ ಅಣ್ಣನನ್ನು ಸಂಕಟದಿಂದ ಪಾರುಮಾಡಲು ತನ್ನ ಮಗನಾದ ಜಯನನ್ನು ಕುಂಡೋದರನಿಗೆ ನರಾಹುತಿ ನೀಡಲು ಒಪ್ಪುತ್ತಾಳೆ. ಆದರೆ ಕುಂಡೋದರನು ಜಯಪಾಂಡ್ಯನಲ್ಲಿರುವ ರಾಜಲಕ್ಷಣಗಳನ್ನು ಕಂಡು ತನಗೆ ನರಾಹುತಿ ಅಗತ್ಯ ಇಲ್ಲ ಎಂದು ಹೇಳಿ ಹಡಗನ್ನು ನೀರಿಗಿಳಿಸಲು ಒಪ್ಪುತ್ತಾನೆ. ಆ ಹಡಗು ಹಲವು ಬಂದರುಗಳಲ್ಲಿ ವ್ಯಾಪಾರ ಮುಗಿಸಿ ಸಂಪತ್ತು ಹೇರಿಕೊಂಡು ಮರಳಿ ಬಾರಕೂರಿಗೆ ಬರುತ್ತದೆ. ಆಗ ಮತ್ತೆ ಕುಂಡೋದರ ಭೂತ ಮೈದೋರಿ ಹಡಗಿನ ಸಂಪತ್ತು ಇಳಿಸುವ ಮೊದಲು ನರಾಹುತಿ ನೀಡಲು ಹೇಳುತ್ತದೆ. ಮತ್ತೆ ಮಡದಿಯನ್ನು ಕೇಳಿದಾಗ ಅವಳು ನಿರಾಕರಿಸುತ್ತಾಳೆ. ಇದನ್ನು ಸತ್ಯವತಿ ಕೇಳಿ ತನ್ನ ಮಗ ಜಯಪಾಂಡ್ಯನನ್ನು ನರಾಹುತಿ ನೀಡಲು ಒಪ್ಪಿಕೊಳ್ಳುತ್ತಾಳೆ. ಇದನ್ನು ನೋಡಿ ಕುಂಡೋದರನು "ಈ ಕುವರ ತನ್ನ ಭಕ್ತರ ಕುಟುಂಬಕ್ಕೆ (ತನ್ನ ಕುಟುಂಬ – ಮಾತೃವಂಶೀಯ?) ಸೇರಿದವನಾದುದರಿಂದ ಅವನ ಮೇಲೆ ಕರುಣೆಪಟ್ಟು ತನಗೆ ನರಾಹುತಿ ಬೇಡವೆಂದು ಹೇಳಿ ಜಯಪಾಂಡ್ಯನ ಪ್ರಾಣವನ್ನು ಉಳಿಸಿದುದು ಮಾತ್ರವಲ್ಲದೆ ಕುಂಡೋದರನು ಈ ರೀತಿಯಾಗಿ ಆಜ್ಞಾಪಿಸಿದನು: "ಈ ಹಡಗಿನಲ್ಲಿ ತಂದ ಯಾವತ್ತೂ ಸರಕಿಗೆ ದೇವಪಾಂಡ್ಯನ ಮಕ್ಕಳು ಬಾಧ್ಯಸ್ಥರಲ್ಲ. ಅವೆಲ್ಲವನ್ನೂ ಸೋದರಳಿಯನಾದ ಸತ್ಯವತಿಯ ಪುತ್ರನಾದ ಜಯಪಾಂಡ್ಯನಗೆ ಕೊಡಬೇಕು. ಆತನನ್ನು ದೇವಪಾಂಡ್ಯನು ತನ್ನ ಮರಣಾನಂತರ ಉತ್ತರಾಧಿಕಾರಿಯನ್ನಾಗಿ ಮಾಡಿ ತನ್ನ ಎಲ್ಲಾ ಸ್ಥಿರ, ಚರ ಆಸ್ತಿಗಳನ್ನು ಅವನಿಗೆ ಕೊಡಬೇಕು" ಕುಂಡೋದರನ ಆದೇಶದಂತೆ ದೇವಪಾಂಡ್ಯನ ಉತ್ತರಾಧಿಕಾರಿಯಾಗಿ ಆತನ ಅಧಿಕಾರ ಆಸ್ತಿಗಳಿಗೆ ಸೋದರಳಿಯ ಉತ್ತರಾಧಿಕಾರಿ

ಯಾಗುತ್ತಾನೆ. ಭೂತದ ಕೃಪೆಗೆ ಪಾತ್ರನಾದ ಜಯಪಾಂಡ್ಯ ಭೂತಾಳಪಾಂಡ್ಯನಾಗುತ್ತಾನೆ. ಭೂತಾಳ ಪಾಂಡ್ಯನು ಕುಂಡೋದರನ ಸಹಾಯದಿಂದ ಸಿದ್ಧವರ್ಮನೆಂಬ ಅರಸನನ್ನು ಯುದ್ಧದಲ್ಲಿ ಸೋಲಿಸಿ ಬಾರಕೂರಿನ ಅರಸನಾದನು. ಈತನ (ಅಳಿಯಸಂತಾನ) ಸಂತತಿ ಹಲವಾರು ವರ್ಷಗಳಿಂದ ಬಾರಕೂರಿನಲ್ಲಿ ಆಳಿಕೊಂಡಿದ್ದರು. ಇವನ ಕಾಲದಿಂದ ತುಳುನಾಡಿನಲ್ಲಿ ಅಳಿಯಸಂತಾನ ಪದ್ಧತಿ ಜಾರಿಗೆ ಬರುತ್ತದೆ. ಮುಂದೆ ಕುಂಡೋದರಭೂತ ಶಿವನ ಸಭಗೆ ಹೋಗಿ ಶಿವನಿಂದ ಉಜ್ಜಯಿನಿಯ ವಿಕ್ರಮಾದಿತ್ಯನ ಸಿಂಹಾಸನವನ್ನು ಕೇಳಿ ಪಡೆದು ಆ ಸಿಂಹಾಸನದಲ್ಲಿ ಭೂತಾಳ ಪಾಂಡ್ಯನಿಗೆ ಪಟ್ಟ ಕಟ್ಟುತ್ತದೆ. (ಕ್ರಿ.ಶ. ೭೭-೧೪೪) ಹಾಗೂ ಮುಂದೆ ಜಯಪಾಂಡ್ಯನು ಅಳಿಯಕಟ್ಟು ಕಟ್ಟಲೆಗಳನ್ನು ರಚಿಸುತ್ತಾನೆ. (ಗುರುರಾಜ ಭಟ್: ಬಾರಕೂರು ಪು. ೪೧-೪೪) ಭೂತಾಳಪಾಂಡ್ಯನು ಕುಂಡೋದರನಿಗೆ ಗುಡಿಯೊಂದನ್ನುಕಟ್ಟಿಸಿದನು......"

ಜಯಪಾಂಡ್ಯ ಭೂತಾಳ ಪಾಂಡ್ಯ ಆಗುವವರೆಗಿನ ಕಥೆ ಪ್ರಾರ್ಥಮಿಕ ಶಾಲಾ ಪಠ್ಯದಲ್ಲಿ ಪದ್ಯ ರೂಪದಲ್ಲಿ ಸೇರಿ ಹಾಡಿನ ಮೂಲಕ ತುಳುನಾಡಿನ ಮನೆಮನೆ ತಲುಪಿತು. ಹೀಗೆ ಅಳಿಯ ಸಂತಾನ ಪದ್ಧತಿಯನ್ನು ಜಾರಿಗೆ ತಂದವನು ದೇವ ಪಾಂಡ್ಯ ಅಥವಾ ಭೂತಾಳ ಪಾಂಡ್ಯ ಎನ್ನುವುದು ಪ್ರಸಿದ್ಧವಾಯಿತು. ಆದರೆ ಈ ಕಥೆಯನ್ನು ವಿದ್ವಾಂಸರು ಒಪ್ಪುವುದಿಲ್ಲ.

"ಭೂತಾಳಪಾಂಡ್ಯನ ಕತೆಗೆ ನಮಗಿಷ್ಟರ ತನಕ ಯಾವ ಆಧಾರವೂ ದೊರಕಿಲ್ಲ. ಭೂತಾಳಪಾಂಡ್ಯನೆಂಬ ಈ ಹೆಸರು ಯಾವ ಕಲ್ಬರಹದಲ್ಲಿಯೂ ತಾಮ್ರಶಾಸನದಲ್ಲಿಯೂ ಕಂಡುಬರುವುದಿಲ್ಲ. ಕ್ರಿ.ಶ. ೧೫ನೆಯ ಶತಕದ ಒಂದು ಶಿಲಾಲೇಖದಲ್ಲಿ 'ಭೂತಪಾಂಡ್ಯನ ಜತಿಕಲ್ಲು' ಎಂಬ ಉಲ್ಲೇಖವಿದೆ. ಈ ಶಾಸನವು ಉಡುಪಿ ತಾಲೂಕಿನ ಚೊಕ್ಕಾಡಿ ಎಂಬಲ್ಲಿ ದೊರಕಿದ್ದು ಕ್ರಿ.ಶ. ೧೪೭೪ರದ್ದಾಗಿದೆ. ಇದು ವಿಜಯನಗರದ ಚಕ್ರಾಧಿಪತಿಯಾದ ವಿರೂಪಾಕ್ಷನ ಕಾಲದ್ದಾಗಿದೆ........ ಅಳಿಯುಸಂತಾನ ಕಟ್ಟುಕಟ್ಟಳೆಗಳನ್ನು ಒಳಗೊಂಡ ಸಾಹಿತ್ಯವನ್ನೋದಿದರೆ ಅದು ಅರ್ವಾಚೀನವೆಂಬುದಕ್ಕೆ ಯಾವ ಸಂದೇಹವೂ ಇಲ್ಲ. ತುಳುನಾಡಿನಲ್ಲಿ ಎಷ್ಟೋ ಕಾಲದಿಂದ ಪ್ರಚಾರದಲ್ಲಿದ್ದ ಅಳಿಯಸಂತಾನವೆಂಬ ಪ್ರಾಚೀನ ಸಾಮಾಜಿಕ ವ್ಯವಸ್ಥೆಯ ಪರವಾಗಿ ಒಂದು ಕಟ್ಟುಕಥೆ ಕಳೆದ ಶತಮಾನದಲ್ಲಿ ಹುಟ್ಟಿಕೊಂಡಿಂತೆಂದು ಊಹಿಸಬಹುದು. ಈ ಸ್ಥಳಪುರಾಣದಲ್ಲಾಗಲೀ, ಭೂತಾಳಪಾಂಡ್ಯರಾಯನ ಕಥೆಯಲ್ಲಾಗಲೀ ಆಳುಪರ ಉಲ್ಲೇಖವಿಲ್ಲದಿರುವುದನ್ನು ಕಂಡಾಗ ಈ ಹಲವಾರು ಶಾಸನಗಳ ಅಭ್ಯಾಸ ಮಾಡುವ ಮೊದಲು ಹುಟ್ಟಿಕೊಂಡ ಕಥೆ ಇದೆಂದು ಭಾಸವಾಗುತ್ತದೆ. ಐತಿಹ್ಯವು ಒಂದು ವಿಕ್ರಮಾದಿತ್ಯನ ಕಥೆಯನ್ನು ತಿಳಿಸುತ್ತದೆ ನಮ್ಮ ಜಿಲ್ಲೆಯಲ್ಲಿ ಯಾವ ದಾಖಲೆಯೂ ಇಷ್ಟರವರೆಗೆ ಈ ವಿಕ್ರಮಾದಿತ್ಯನ ಪ್ರಸ್ತಾಪ ಮಾಡುವುದಿಲ್ಲ. ಬಾರಕೂರಿನ ಮೇಲೆ ಯಾವನಾದರೂ ಒಬ್ಬ ವಿಕ್ರಮಾದಿತ್ಯನೆಂಬ ಅರಸನು ಅಧಿಕಾರ ಅಧಿಪತ್ಯ ನಡೆಸಿದ್ದರೆ ಅದು ಕಲ್ಯಾಣ ಚಾಲುಕ್ಯ ವಂಶದ ೬ನೆಯ ವಿಕ್ರಮಾದಿತ್ಯನೆಂದು ಅಭಿಪ್ರಾಯ ಪಡಬಹುದು. ಈತನ ಕಾಲ ಕ್ರಿ.ಶ. ೧೧-೧೨ನೆಯ ಶತಮಾನ. ಈ ವಿಕ್ರಮಾದಿತ್ಯನ ಅಧಿಪತ್ಯಕ್ಕೆ ಆಳುವಖೇಡ"ವು ಸೇರಿತ್ತೆಂಬುದಕ್ಕೆ ಅನುಮಾನ ಇಲ್ಲ. (ಗುರುರಾಜ ಭಟ್ಟ: ಬಾರ್ಕೂರು ಪು. ೨೦)

"ಕುಂಡೋದರನ ಕಥೆ ಜಾನಪದ ಕಥೆಯಾಗಿರದೆ ಬ್ರಾಹ್ಮಣ ಅಕ್ಷರಕಾರರಿಂದ ಗ್ರಾಮಪದ್ಧತಿಯಲ್ಲಿ ಕಳೆದ ಶತಮಾನದಲ್ಲಿ ಬರೆದ ಕಥೆ ಎನ್ನುವುದನ್ನು ವಿದೇಶಿ ವಿದ್ವಾಂಸರು ಮತ್ತು ಸಂಶೋಧನಕಾರರು ಒಮ್ಮತದಿಂದ ಒಪ್ಪಿದ್ದಾರೆ. ೧೮೪೪ರಲ್ಲಿ ಭಾರತಕ್ಕೆ ಬಂದಿದ್ದ ಎ.ಸಿ. ಬರ್ನೆಲ್ ಅವರು ಇದು ಸುಮಾರು ೩೦ ವರ್ಷಗಳ ಹಿಂದೆ ಬರೆದ ಕಟ್ಟುಕಥೆ ಎಂದು ಹೇಳಿದ್ದಾರೆ. ಮಾತ್ರವಲ್ಲ ಯಾರೋ "Notorious forgers and scroundrels" ಬರೆದಿರಬೇಕು ಎನ್ನುತ್ತಾರೆ. (ಸೂರ್ಯನಾಥ್ ಯು. ಕಾಮತ್. ವಿಜಯನಗರ ಕಾಲದ ತುಳುವರು ಅಪ್ರಕಟಿತ)

'ಭೂತಾಳಪಾಂಡ್ಯನ ಕಟ್ಟುಕಟ್ಟಲೆ' ಎನ್ನುವ ಕಥೆಯನ್ನು ಸುಮಾರು ೧೮೪೦ರಲ್ಲಿ ರಚಿಸಲಾಗಿರಬಹುದು ಎಂಬ ಥರ್ಸ್ಟನ್ ಅವರ ಅಭಿಪ್ರಾಯವನ್ನು ಗುರುರಾಜ ಭಟ್ಟರು ಸಮರ್ಥಿಸುತ್ತಾರೆ. "It is rightly remarked by Thurston that the kattu-kattale of Bhutala-Pandaya is a forgery composed about A.D. 1840" (ಇಂದಿರಾ ಹೆಗ್ಗಡೆ ೨೦೦೯ ಪು. ೧೬೨)

ಈ 'ಅಳಿಯಸಂತಾನದ ಕಟ್ಟುಕಟ್ಟಲೆ' ಕಥೆಯಲ್ಲಿ ಚೌಟ, ಬಂಗರಸರ ಮುಂತಾದ ತುಳುನಾಡಿನ ತುಂಡರಸರ ಪ್ರಸ್ತಾಪ ಇದೆ. ಇತಿಹಾಸಕಾರರ ಪ್ರಕಾರ ಇವರು ವಿಜಯನಗರ ಕಾಲಾನಂತರ ಬೆಳಕಿಗೆ ಬಂದ ಅರಸರು ಎಂದು ತುಳು ಸಂಶೋಧಕ ಶೀನಪ್ಪ ಹೆಗ್ಗಡೆಯವರು ಈ ಕಥೆ ಕಟ್ಟುಕಥೆ ಎನ್ನುವುದಕ್ಕೆ ಸಮರ್ಥನೆ ಒದಗಿಸುತ್ತಾರೆ.

ದೇವಪಾಂಡ್ಯನನ್ನು ಜೈನ ವ್ಯಾಪಾರಿ ಎನ್ನುವ ಈ ಕಥೆಯು ಆತ ನರಬಲಿ ಕೊಡಲು ಸಿದ್ಧತೆ ಮಾಡುವ ಬಗ್ಗೆ ಹೇಳುತ್ತದೆ.

ಕಥೆ ೨: ಕುಂಜಿಬೆಟ್ಟು ಸುಬ್ರಹ್ಮಣ್ಯ ಸಂಪಾದಿಸಿದ ಹಾಡಿಗೆ ಹನ್ನೆರಡು ಕಬರು ಕೃತಿಯಲ್ಲಿ ಇರುವ ಬಾರ್ಕೂರು ಹಿರಿಯಣ್ಣ ಸೆಟ್ರು

'ಬಾರ್ಕೂರು ಹಿರಿಯಣ್ಣ ಸೆಟ್ರು ಮುತ್ತು ರತ್ನ ವ್ಯಾಪಾರಿಗಳು. ಒಮ್ಮೆ ರತ್ನ ವ್ಯಾಪಾರಕ್ಕಾಗಿ ತಮ್ಮದೇ ಹಡಗಿನಲ್ಲಿ ಪ್ರಯಾಣಿಸಲು ಮುಂದಾಗುತ್ತಾರೆ. ಪ್ರಯಾಣಕ್ಕೆ ಹೊರಟರೆ ಅವರ ಹಡಗು ಚಲಿಸುವುದಿಲ್ಲ. ಹಡಗು ಯಾಕೆ ಚಲಿಸುವುದಿಲ್ಲ ಎಂದು ಚಿಂತಿತರಾದ ಹಿರಿಯಣ್ಣಸೆಟ್ರು ಜೋಯಿಸರ ಮನೆಗೆ ಹೊರಡುತ್ತಾರೆ. ಜೋಯಿಸರು ಹಡಗು ನರಾಹುತಿ ಬೇಡುತ್ತದೆ ಎನ್ನುತ್ತಾರೆ. ಮನೆಗೆ ಬಂದ ಹಿರಿಯಣ್ಣ ಸೆಟ್ರು, 'ಮುತ್ತು ರತ್ನ ವ್ಯಾಪಾರಕ್ಕೆ ಹೊರಟಿದ್ದೆ. ಹಡಗು ಮುಂದೆ ಚಲಿಸುವುದಿಲ್ಲ. ನರಾಹುತಿ ಬೇಡುತ್ತಿದೆ. ನಮಗೆ ಹತ್ತು ಮಕ್ಕಳು ಇದ್ದಾರಲ್ಲ ಒಂದನ್ನು ಬಲಿಕೊಡುವ' ಎನ್ನುತ್ತಾರೆ. 'ಹಡಗು ಬಿದ್ದೇ ಹೋಗಲಿ. ಮುತ್ತು ರತ್ನವೂ ಬೇಡ ಮಗನನ್ನೂ ಕೊಡುವುದಿಲ್ಲ' ಎಂದು ಹಿರಿಯಣ್ಣ ಸೆಟ್ರ ಮಡದಿ ಹೇಳುತ್ತಾರೆ.

ಹಿರಿಯಣ್ಣ ಸೆಟ್ರು ತಂಗಿ ಮನೆಗೆ ಹೋಗುತ್ತಾರೆ. ಎಂದೂ ಬಾರದಿದ್ದ ಅಣ್ಣಯ್ಯ ಇಂದೇಕೆ ಬಂದ ಎನ್ನುತ್ತಾ ಆಕೆ ಸಡಗರದಿಂದ ಅವನನ್ನು ಸ್ವಾಗತಿಸುತ್ತಾಳೆ. ಅಣ್ಣ ಹಡಗಿನ ಕಥೆ ಹೇಳಿ 'ಹಡಗು ನರಬಲಿ ಕೇಳುತ್ತದೆ. ನಮಿತ್ತ ಕೇಳಿದ ಜೋಯಿಸರು ಹೇಳಿದರು' ಎನ್ನುತ್ತಾರೆ. 'ಮನೆಗೆ ಬಂದು ಮಡದಿಯ ಬಳಿ ಒಂದು ಮಗು ಕೊಡು ಎಂದೆ. ಆಕೆ ಹಡಗು ಬಿದ್ದೇ ಹೋಗಲಿ, ಮುತ್ತು ರತ್ನವೂ ಬೇಡ ಮಗನನ್ನೂ ಕೊಡಲಾರೆ ಎಂದಳು, ನೆಟ್ಟಗೆ ಇಲ್ಲಿಗೆ ಬಂದೆ' ಎನ್ನುತ್ತಾನೆ. ಅಷ್ಟು ಕೇಳಿದ ತಂಗಿ ಹೊನ್ನಮ್ಮ ನೆರೆಮನೆಯ ಆಟಕ್ಕೆ ಹೋಗಿದ್ದ ಗೆಜ್ಜೆಕಾಲಿನ ಒಬ್ಬನೇ ಮಗನನ್ನು ಕರೆಯುತ್ತಾಳೆ. ಆತ ಓಡೋಡಿ ಬರುತ್ತಾನೆ. 'ಯಾಕಮ್ಮ ಕರೆದಿ, ಎಂದೂ ಬಾರದ ಮಾವಯ್ಯ ಇಂದ್ಯಾಕಮ್ಮ ಬಂದ' ಎನ್ನುತ್ತಾನೆ. ಮಗನಿಗೆ 'ಮಾವಯ್ಯ ಹಡಗು ಹೊಡಿಸಿದ್ದಾರೆ' ಎಂದು ಅಂಗಿ ಬಿಚ್ಚಿ ಮಾವನ ಸಂಗಡ ಕಳುಹಿಸುತ್ತಾಳೆ.

ಮಾವ ಅಳಿಯ ಒಟ್ಟಾಗಿ ಹಡಗಿನತ್ತ ನಡೆಯುತ್ತಾರೆ. ದಾರಿಯಲ್ಲಿ ಅಳಿಯ ಮಾವಿನ ಹಣ್ಣನ್ನು ತೆಗೆಸಿಕೊಡಲು ಮಾವನಿಗೆ ಹೇಳುತ್ತಾನೆ. ಹಣ್ಣು ತೆಗೆಸಿಕೊಟ್ಟರೆ ಒಂದು ಚೂರಿಯನ್ನು ಕೊಡಿಸಲು ಹೇಳುತ್ತಾನೆ. ಇಬ್ಬರೂ ಹಡಗಿನ ಬಳಿ ಬರುತ್ತಾರೆ. ಅಳಿಯ ಮಾವಿನಹಣ್ಣು ಕುಯ್ಯುತ್ತಾನೆ. ಆಗ ಅವನ ಕಿರು ಬೆರಳು ಕಡಿದು ರಕ್ತ ಹಡಗಿಗೆ ಬೀಳುತ್ತದೆ. ಹಡಗು ಚಲಿಸುತ್ತದೆ. ಮಾವ ಅಳಿಯ ಇಬ್ಬರೂ ಸೇರಿ ಹಡಗು ಹೊರಡಿಸಿ ತರುತ್ತಾರೆ.

ಮಾವ ಅಳಿಯ ಮುತ್ತು ರತ್ನ ಹೇರಿ ಹಡಗಿನೊಂದಿಗೆ ಬರುತ್ತಿರುವುದನ್ನು ಹಿರಿಯಣ್ಣ ಸೆಟ್ರ ಮಡದಿ ಮಕ್ಕಳು ನೋಡುತ್ತಾರೆ. ಸಡಗರದಿಂದ ಬಳಿಗೆ ಬರುತ್ತಾರೆ. ಹಿರಿಯಣ್ಣ ಸೆಟ್ರು ಹಡಗನ್ನು ತಂಗಿ ಮನೆಗೆ ಕೊಂಡು ಒಯ್ದು ಮುತ್ತು ರತ್ನಗಳನ್ನು ಅಳಿಯನಿಗೆ ಮತ್ತು ತಂಗಿಗೆ ನೀಡುತ್ತಾರೆ. ಮರಳಿ ಮನೆಗೆ ಬಂದ ಹಿರಿಯಣ್ಣ ಸೆಟ್ರಿಗೆ ಅವರ ಮಡದಿ ಬಾಗಿಲು ತೆರೆಯುವುದಿಲ್ಲ. 'ಹಾದಿ ಬೀದಿಯಲ್ಲಿ ಹೋಗುವವರು ಮನೆಗೆ ಬರಬೇಡಿ. ತಮ್ಮದು ಗಂಡುಸರಿಲ್ಲದ ಮನೆ' ಎನ್ನುತ್ತಾಳೆ. ಮಾತು ಕೇಳಿದ ಹಿರಿಯಣ್ಣ ಸೆಟ್ರು ತಂಗಿಯ ಮನೆಗೆ ಬಂದು, ತಂಗಿಯ ಮನೆಯಲ್ಲಿ ಇರುತ್ತಾರೆ.

ಕಥೆ ೩: ಭೂತಾಳಪಾಂಡ್ಯನ ಕಥೆಯ ಆಶಯ ಇರುವ ಇನ್ನೊಂದು ಪಾಡ್ದನ ಕಥೆ ಸುರತ್ಕಲ್ ಬಳಿಯ ಚೇಳಾರು ಗ್ರಾಮದ ಕಂಡೆವು ಬೀಡಿನ ದೇವರಾಯ, ಕಾಮರಾಯ ಬಲ್ಲಾಳರ ಕಥೆ.

ದೇವರಾಯ, ಕಾಮರಾಯ ಬಲ್ಲಾಳರು ಕೂಡಿ ಕಂಡೆವುಬೀಡಿನಲ್ಲಿ ಇದ್ದರು. ಅವರಿಗೆ ನಡು ಇರುಳು ಸರಿಯುವ ಹೊತ್ತಿನಲ್ಲಿ ಸ್ವಪ್ನ ಬೀಳುತ್ತದೆ.

ಬೆಳಗೆದ್ದು ಸ್ವಪ್ನ ನೆನೆಪಿಸಿಕೊಂಡು 'ಕಾನಗಳ ಕಾನ ಮಜಲೊಟ್ಟು ಕಾನ'ಕ್ಕೆ ಹೋಗಿ ಬಿಳಿಯ ಕಿಸಗಾರ (ಕೇಪುಲ) ಮರ ಹುಡುಕುತ್ತಾರೆ. ಕದಿಕೆ ಸಾವಿರ, ಮುಲ್ಕಿ ಮುನ್ನೂರು ಒಕ್ಕಲು ಮಕ್ಕಳನ್ನು ಹಿಡಿದು ಅಳತೆ ಹಾಕಿಸಿದರು, ಕೋಲು ಹಿಡಿದರು ....ಮಲೆನಾಡ ಆಚಾರಿ ತುಳುನಾಡ ಕೊಲ್ಲನ್ ಹಿಡಿದು ಬಿಳಿಯ ಕೇಪುಲದ ಮರವೊಂದು ಕಡಿಸಿದರು. ಆ ಹೊತ್ತು ಏನಾಯಿತು ಕೇಳಿದರೆ ಮರ ಬೀಳದೇ ಹೋಯಿತು. ಆಗ ಕದಿಕೆಸಾವಿರ, ಮುಲ್ಕಿ ಮುನ್ನೂರು ಒಕ್ಕಲು ಮಕ್ಕಳನ್ನು ಪೊದೆ ಪೊದೆ ಹಿಡಿದು ಕೇಪುಲ ಪೂ ಕೊಯ್ಯಿಸಿದರು. ಹತ್ತು ಸೇರಿ (ಸರ್ವರು) ಪುಷ್ಪ ಹಿಡಿದು ಕೈಮುಗಿಯುತ್ತಾರೆ. ಈ ಮರ ಬಿದ್ದರೆ ಕಡೆ ತುಂಡು ಕಾಂತೇಶ್ವರಗೆ ಒಪ್ಪಿಸುತ್ತೇವೆ, ಕೊಡಿ(ತುದಿ) ಕೋಟೇಶ್ವರಗೆ ಒಪ್ಪಿಸುತ್ತೇವೆ, ನಡು ಭಾಗ ಕಂಡೆವುಬೀಡಿಗೆ ಹಡಗು ಕಟ್ಟಲು ಸೀಳುತ್ತೇವೆ' ಎನ್ನುವಾಗ ಮರ ಬೀಳುತ್ತದೆ. ಹಾಗೆಯೇ ಕಡೆ ತುಂಡು ಕಾಂತೇಶ್ವರ, ಕೊಡಿ ಕೋಟೇಶ್ವರದೇವರಿಗೆ ಒಪ್ಪಿಸಿ, ನಡುಭಾಗ ಕಂಡೆವುಬೀಡಿಗೆ ಹಡಗು ಕಟ್ಟಲು ಸೀಳುತ್ತಾರೆ. ಹಡಗು ಕಟ್ಟಿ ಹಡಗನ್ನು ಜರಗಿಸುವ ಮೊದಲು ಲೆಕ್ಕ (ಜ್ಯೋತಿಷ್ಯ) ಕೇಳಬೇಕು ಎನ್ನುತ್ತಾರೆ. ಜ್ಯೋತಿಷ್ಯ ಕೇಳುತ್ತಾರೆ. "ನೀವು ಯಾವ ಗದ್ದಲ ಮಾಡಿದರೂ ಹಡಗು ಚಲಿಸದು. ಹಡಗು ಚಲಿಸಲು "ಜೀವರಾಶಿ" (ನರಬಲಿ) ನೀಡಬೇಕು ಎಂಬ ವಿಷಯ ಹೊರಬರುತ್ತದೆ.

ಹಡಗನ್ನು ಮಜಲೊಟ್ಟು ಕಾನದಲ್ಲಿ ಬಿಟ್ಟು ಮರಳುತ್ತಾರೆ. 'ಭಾವ ನೀವು ಇಲ್ಲಿಯೇ ಇರಿ ನಾನು ಕಂಡೆವುಬೀಡಿಗೆ ಹೋಗಿ ಬರುತ್ತೇನೆ' ಎಂದರು. ನನ್ನ ಮಡದಿಯ ಬಳಿ ೧೬ ಮಕ್ಕಳಿದ್ದಾರೆ. ಅವುಗಳಲ್ಲಿ ಒಬ್ಬ ಮಗನನ್ನು ನಾನು ತರುತ್ತೇನೆ' ಎಂದು ಕಾನದಲ್ಲಿ ಕಾನ ಮಜಲೊಟ್ಟು ಕಾನದಿಂದ

ಕೊಡಿ ಕಂಡೆವು ಬೀಡಿಗೆ ಬರುತ್ತಾರೆ. ಬೀಡಿಗೆ ಬಂದು ಮಡದಿಗೆ ವಿಷಯ ತಿಳಿಸುತ್ತಾರೆ. "ಪಡವು ಒಂದು ಜೀವರಾಶಿ ಕೊಡಬೇಕಾಗುತ್ತದೆ. ಒಂದು ಮಗನನು ಕೊಡುವೆಯಾ? ಹದಿನಾರು ಮಕ್ಕಳಲ್ಲಿ?' ಎನ್ನುತ್ತಾರೆ. ಆ ಸಮಯದಲ್ಲಿ ಮಡದಿ 'ನಾನು ಮಗನನ್ನು ಯಾತಕ್ಕೂ ನೀಡಲಾರೆ, ಹೆರಲು ಸಾಕಲು ನಾನಾಗುವಾಗ ಆ ಮಕ್ಕಳು ನನಗೇ ಸೇರಿದವು. ಎಷ್ಟು ಮಾತ್ರಕ್ಕೂ ನೀಡಲಾರೆ' ಎನ್ನುತ್ತಾರೆ.

ಕೋಪಿಸಿಕೊಂಡ ದೇವರಾಯ ಬಲ್ಲಾಳರು ಕಂಡೆವು ಬೀಡಿನಿಂದ ಕಂಡೆವು ಗುತ್ತು ಇಳಿದು ಹೋಗುತ್ತಾರೆ. ಕಂಡೇವುಗುತ್ತಿಗೆ ಹೋಗಿ "ಯಾರು ಮಗಾ ತಂಗೀ, ಕೇಳಿದೆಯಾ ಕೊಡಿ ಕಂಡೆವುಬೀಡಿನಿಂದ ಹೋಗಿ, ಮಗು ತಂಗಿ, ಹಡಗೊಂದನ್ನು ಕಟ್ಟಿಸಿದ್ದೇನೆ. ಕಟ್ಟಿಸಿದ ಹಡಗು ಜರುಗುವುದಿಲ್ಲ. ನನ್ನ ಮಡದಿಯ ಬಳಿ ನಾನೊಂದು ಮಗನನ್ನು ಕೇಳಿದೆನೇ, ಅವಳು ಕೊಡಲಾರೆನೆಂದಳು. ಹೆರಲು ಸಾಕಲು ಅವಳಿಗೆ ಅಂತೆ ನನಗೆ ಸಂದ ಮಕ್ಕಳಲ್ಲವಂತೆ, ಕೊಡಲಾರೆನೆಂದಳು ಏನು ಮಾಡಲಿ?" ಎನ್ನುತ್ತಾರೆ.

"ನೀವು ಅಳುವುದು ಬೇಡ. ನನಗೆ ಒಬ್ಬ ಮಗನಾದರೂ ನಾನು ಕೊಡುತ್ತೇನೆ' ಎಂದರು ತಂಗಿ. ಮಗನನ್ನು ಕರೆದು ಸೋದರಮಾವನೊಂದಿಗೆ ಕಳಿಸಿಕೊಟ್ಟರು. ಅಲ್ಲಿಂದ ಬೇಗನೇ ಮಜಲೊಟ್ಟು ಕಾನಗೆ ಹೋಗುತ್ತಾರೆ. ಅಲ್ಲಿ ಅಂಡೆಯಲ್ಲಿ ಕಳ್ಳು(ನೀರಾ) ತುಂಬಿಸುತ್ತಾರೆ, ಕದ್ಯದಲ್ಲಿ ಓಕುಳಿ(ಕುದ್ರಿ) ನೀರು ತುಂಬಿಸುತ್ತಾರೆ. ದೊಡ್ಡ ಹೆಡಿಗೆಯಲ್ಲಿ ಅರಳು ತುಂಬಿಸುತ್ತಾರೆ. ಬೊಂಡದ ಗೊಂಚಲು, ಹೆಣೆದ ಜೋಡು ತೆಂಗಿನಕಾಯಿ ಸೇರಿಸಿ ನಟ್ಟ ನಡುರಾತ್ರಿ ಸರಿಯುವ ಹೊತ್ತಲ್ಲಿ ಹಡಗಿಗೆ ಆವಾರ(ಬಲಿ) ಕೊಡಲು ಮಗುವನ್ನು ಕರೆ ತರುತ್ತಾರೆ. ಅಷ್ಟಾಗುವಾಗ ಮಗು "ಮಾವ ನೀವು ಕೇಳಿದಿರೆ, ನನ್ನ ತಲೆಯನ್ನೇ ಕಡಿದರೆ ಸಾಕೇ ಮಾವ? ನನ್ನ ಬೆರಳು ಕಡಿದರೆ ಸಾಕೆ ಮಾವ?" ಎಂದು ಕೇಳುತ್ತಾನೆ. 'ಬೆರಳು ಕಡಿದರೆ ಮಗಾ ಹಡಗು ಸರಿಯದು. ನನಗೆ ಹಡಗು ಸರಿದರೆ ಸಾಕು' ಎನ್ನುತ್ತಾರೆ ಬಲ್ಲಾಳರು. ಮಗುವಿನ ಜೊತೆಗೆ ಆವಾರಕ್ಕೆ ಇಟ್ಟ ಎಲ್ಲಾ ಸಾಯಿತಿ (ಸಾಮಾನು) ಹಿಡಿದು ಹಡಗಿಗೆ ಆವಾರ ಕೊಟ್ಟರು. ಮಗುವಿನ ಕೈ ಬೆರಳು ಕಡಿದು ಮೂರು ಸುತ್ತು ಆವಾರ ಕೊಡುವಾಗ ಹಡಗು ಚಲಿಸುತ್ತದೆ.......ಅವರು ಬರುವಾಗ ಏಳು ಗಂಗೆಗೆ ಹೋಗಿ ಮುತ್ತು ರತ್ನ ತರಬೇಕು ತಂಗಿಗೆ ನೀಡಬೇಕು ಎಂದು ಏಳು ಕಡಲಾಚೆ ಹೋಗಿ ಮುತ್ತು ರತ್ನ ಹೇರಿ ಬರುತ್ತಾರೆ. ಅವರಿಗೆ ಗಂಗೆಯಲ್ಲಿ ಉಲ್ಲಾಯ ದೈವದ ಬಾಳ್ ಭಂಡಾರ ಸಿಗುತ್ತದೆ. ಅದನ್ನು ಹಡಗಲ್ಲಿ ತುಂಬಿಸಿ ಬರುವಾಗ ಹಡಗು ಶಶಿಹಿತ್ತಿನಲ್ಲಿ (ಸುರತ್ಕಲ್ ಸಮೀಪ) ದಡ ಸೇರುತ್ತದೆ. ಬಾಳ್ ಭಂಡಾರದಲ್ಲಿ ಇದ್ದ ಉಲ್ಲಾಯ ದೈವ (ಅರಸು ದೈವ/ಧರ್ಮ ದೈವ) ಓಡಂತಾಯ ಗರಡಿ ಪ್ರವೇಶಿಸುತ್ತದೆ. ಧರ್ಮ ದೈವದ ಪ್ರವೇಶ ನೋಡಿ ಅಲ್ಲಿ ಆ ಮೊದಲಿದ್ದ 'ಕಾಂತಾ ಬಾರೆ ಬೂದಾ ಬಾರೆ' ಅವಳಿ ದೈವಗಳು ಹಿಂಬಾಗಿಲಿನಿಂದ ಹೊರಡು ಹೋಗುತ್ತಾರೆ. ಆದರೆ ಉಲ್ಲಾಯ ಮೈದೋರಿ "ನನಗೆ ವರ್ಷಕ್ಕೆ ಒಮ್ಮೆ ಈ ಕ್ಷೇತ್ರದಲ್ಲಿ ನನ್ನ ಭಂಡಾರ ಸಮೇತ ಇಲ್ಲಿಗೆ ಬಂದು ನೇಮ ಆಗಬೇಕು" ಎಂದು ಆದೇಶಿಸುತ್ತದೆ. ಅಲ್ಲಿಂದ ಹಡಗು ಉತ್ತರ ದಿಕ್ಕಿಗೆ ಕಂಡೆವುಗೆ ಪ್ರಯಾಣಿಸುತ್ತದೆ. ದಾರಿಯಲ್ಲಿ ಸುವರ್ಣ ಸಂತಾಣದ ಕುಮಾರ ಸಿಗುತ್ತಾನೆ. ಅವನನ್ನೂ ಅವನ ಏಳುಜನ ತಂಗಿಯರನ್ನೂ ಕರೆದುಕೊಂಡು ಕಂಡೆವುಕಾಡಿನ ಬಳಿ ಬೀಡಿಗೆ ಹಡಗು ಬರುತ್ತದೆ. ಬೀಡಿನ ಬಳಿ ಹಡಗು ನಿಲ್ಲಿಸಿದ ಬಲ್ಲಾಳರು ತಂಗಿಗೆ, ಐತ ಅಲಂಕಾರ ಗೊಂಡು ಬರಲು ಕರೆ ಕಳುಹಿಸುತ್ತಾರೆ. ದೈವದ ಭಂಡಾರವನ್ನು ಬೀಡಿಗೆ ತುಂಬಿಸುತ್ತಾರೆ. ಮಗುವನ್ನು (ನರಾಹುತಿಗೆ ಹೋದ) ಮಾಯ ಮಾಡುತ್ತಾರೆ. ತಂಗಿ ಬರುತ್ತಾಳೆ. "ಇಂದಿನಿಂದ ಕಂಡೆವು ಬೀಡು ಇದ್ದವಳಿಗಾ ಬಂದವಳಿಗಾ" ಎನ್ನುತ್ತಾರೆ. ಆಕೆ ಇದ್ದವಳಿಗೆ ಎನ್ನುತ್ತಾಳೆ.

ಒಬ್ಬ ಕುಮಾರ (ಏಳು)ಎಳ್ವರ್ ಸಿರಿಗಳು ಸಾವಿರಾರು ದೈವ ದೇವರನ್ನು ಜೊತೆಗೂಡಿ ಬಂದು ಕಂಡೆವು ಬೀಡಿನಲ್ಲಿ ಕೊನ ಊರಿದರು ಉಲ್ಲಾಯ ಧರ್ಮರಸು. (ಆಧಾರ ಗಣೇಶ ಸಂಕಮಾರ್ : ಪಾಡ್ದನ ಸಂಗ್ರಹ ೫-೫-೧೯೯೩, ಹಾಡುಗಾರರು ಅಚ್ಚಕ್ಕ, ಸುವರ್ಣಬಳಿ: ಕೃತಿ: ಧರ್ಮರಸು ಉಲ್ಲಾಯ : ಸಿರಿ ಪ್ರಕಾಶನ ೨೦೦೦)

ವ್ಯಾಪಾರಿ ಹಡಗು ಕಟ್ಟಲು ಮರ ಕಡಿಯುವುದು, ಆ ಮರದಲ್ಲಿ ಇದ್ದ ದೈವ ಮಾನವ ಬಲಿ ಕೇಳುವುದು –ಇವು ಮೂರೂ ಕಥೆಗಳಲ್ಲಿಯೂ ಒಂದೇ ಆಶಯದಿಂದ ಕೂಡಿವೆ. ಎರಡು ಕಥೆಗಳ ಕಥಾನಾಯಕ ವ್ಯಾಪಾರಿ. ಮೂರನೆಯ ಕಥೆ ಸುರತ್ಕಲ್ ಬಳಿಯ ಕಂಡೇವು ಕ್ಷೇತ್ರದ ಬಲ್ಲಾಲರು ಹಡಗು ಕಟ್ಟಲು ಮರಕಡಿಯುವ ಬಗ್ಗೆ ಹೇಳುತ್ತದೆ.

ಸುರತ್ಕಲ್ ಬಳಿಯ ಕಂಡೇವು ಬಲ್ಲಾಳರು ಆ ಕಾಲದ ಪಾಳೆಯಗಾರರು. ಕದಿಕೆ ಸಾವಿರಾಳು ಮುಲ್ಕಿ ಮುನ್ನೂರು ಒಕ್ಕಲುಮಕ್ಕಳು ಅವರ ಅಂಕೆಯಲ್ಲಿ ಇತ್ತು ಎಂದು ಪಾಡ್ದನ ನಿರೂಪಿಸುತ್ತದೆ.

ಕಂಡೇವು ಆಲಡೆ ಕ್ಷೇತ್ರ ಕೂಡಾ (ಗುರ್ಜರ /ಗುಜರನ್ನ ವಂಶದವರ – ಬಿಲ್ಲವ, ಬಂಟ, ಬೆಸ್ತ) ಕಾಡಿನಲ್ಲಿ ಇದ್ದ ಆದಿ ಮೂಲಸ್ಥಾನ. ಮೇತಿಂಗಳ ೧೪ರಂದು ಮೀನು ಬೇಟೆ ಯೊಂದಿಗೆ ಸಿರಿಬಳಗ ಕುಮಾರ–ನಾಗಬ್ರಹ್ಮ ಮಹಿಷಂತಾಯ ಉತ್ಸವ ನಡೆಯುತ್ತದೆ. ಇಲ್ಲಿ ನಂದಿಗೋಣ/ಮಹಿಷ ಬಹಳ ಕಾರಣಿಕದ ದೈವ ಎಂಬ ನಂಬಿಕೆ ಇದೆ.

ಹಡಗು ಕಟ್ಟಲು ಮರ ಕಡಿದ ಕ್ಷೇತ್ರ "ಮುಜಲೊಟ್ಟು ಕಾಡು ಮೂಲಸ್ತಾನ. ಪಂಚಶಕ್ತಿಗಳ ಕಾಡು. ಅಲ್ಲೂ ನಂದಿಗೋನ /ಮಹಿಷ ಮತ್ತು ನಾಗಬೆರ್ಮ ಸಿರಿ ಶಕ್ತಿಗಳಿವೆ". ಈಗಲೂ ಮೂಲಸ್ಥಾನದ ಉಪಾಸನೆ ಅದ್ದೂರಿಯಾಗಿ ನಡೆಯುತ್ತಿದೆ.

ಸ್ಥಳೀಯ ವಕ್ತೃಗಳ ಪ್ರಕಾರ ಒಂದನೆಯ ಕಥೆಯ ದೇವಪಾಂಡ್ಯನು ಬಾರ್ಕೂರಿನ ಮಂದರ್ತಿ ಎಂಬ ಮೂಲಸ್ಥಾನ ಕಾಡಿನ ಕ್ಷೇತ್ರದ ಮರವನ್ನು ಹಡಗು ಕಟ್ಟಲು ಕಡಿಯುತ್ತಾನೆ. ಆ ಮರದಲ್ಲಿ ಮಹಿಷ/ನಂದಿಗೋನ ದೈವ (ತುಳುವರ ಕುಲದೈವ) ಇತ್ತು. ಅದು ನರಬಲಿ ಕೇಳುತ್ತದೆ. ಮುಂದೆ ಆ ದೈವವನ್ನು ಬಾರ್ಕೂರಿನ ಈ ಕ್ಷೇತ್ರದಲ್ಲಿ "ನಂಬು"(ಪ್ರತಿಷ್ಠಾಪಿಸು)ತ್ತಾರೆ. ಇದು ನೆಲಮೂಲ ಐತಿಹ್ಯ.

ಈ ಮೂರೂ ಕಥೆಗಳಲ್ಲಿ ಬಹುಮುಖ್ಯವಾಗಿ ಗಮನಿಸಬೇಕಾದುದು ನರಾಹುತಿ ಕೊಡುವ ಪದ್ಧತಿಯನ್ನು. ಅಂದರೆ ಈ ಘಟನೆ ನಡೆದ ಕಾಲ ಅಥವಾ ಈ ಕಥೆ ಸೃಷ್ಟಿಯಾದಾಗ ಮಾನವ ಬಲಿ ನೀಡುವ ಪದ್ಧತಿ ಇದ್ದಿರಬಹುದು. ಆದಾಗಲೇ ಮೌಖಿಕ ಪರಂಪರೆಯಲ್ಲಿ ಮುಂದುವರಿಯುತ್ತಿದ್ದ ಕುಂಡೋದರ ಭೂತದ ಕಥೆಯನ್ನು ಗ್ರಾಮಪದ್ಧತಿಯಲ್ಲಿ ಅಕ್ಷರರೂಪಕ್ಕೆ ಇಳಿಸಿರುವ ಸಾಧ್ಯತೆ ಇದೆ. (ಗುರುರಾಜ ಭಟ್ಟರ ಕಾಲದಲ್ಲಿ ಮೌಖಿಕ ಪರಂಪರೆಯ ಕಥನ ಶೋಧವಾಗಿರಲಿಲ್ಲ)

ಮನೆ ಕಟ್ಟುವಾಗ ಕೋಳಿ ಬಲಿ ಕೊಡುತ್ತಿದ್ದ ಪದ್ಧತಿ ನನ್ನ ಬಾಲ್ಯದಲ್ಲಿ ನಾನು ಕಂಡಿದ್ದೆ. ಮುಳಿ ಹುಲ್ಲಿನ ಮಾಡು ನಿರ್ಮಿಸುವಾಗ ಅಥವಾ ಹೆಂಚಿನ ಮನೆಗೆ ಹೆಂಚು ಹೊದೆಯಲು ಮರದ ಚೌಕಟ್ಟನ್ನು ಸಿದ್ಧಪಡಿಸುತ್ತಾರೆ. ಈ ಚೌಕಟ್ಟನ್ನು ತುಳು ಭಾಷೆಯಲ್ಲಿ 'ಕೂಟು' ಎನ್ನುತ್ತಾರೆ. ಇದರ ಮೇಲೆ ಮಾಡಿನ ರಚನೆಯಾಗುತ್ತದೆ. ಈ ಕೂಟನ್ನು ಗೋಡೆಯ ಮೇಲೆ ಇರಿಸುವ ಮೊದಲು ನೆಲದ ಮೇಲಿರುವಾಲೇ ನಾಲ್ಕು ಮೂಲೆಗಳಿಗೂ ಪ್ರಾಣಿ ಬಲಿ ನೀಡಿ ರಕ್ತ ಚೆಲ್ಲುವ ಪದ್ಧತಿ ಇದೆ.

ಹೀಗೆ ಹಡಗು, ಮನೆ – ಇತ್ಯಾದಿ ನಿರ್ಮಿಸುವಾಗ ಪ್ರಾಣಿ/ರಕ್ತ ಬಲಿ ಕೊಡುವ ಪದ್ಧತಿ ಇತ್ತು. ಮೇಲಿನ ಮೂರು ಸಂದರ್ಭಗಳಲ್ಲಿಯೂ ವ್ಯಾಪಾರಿಯ ಸೋದರಿ ಅಣ್ಣನ ರಕ್ಷಣೆಗೆ ಧಾವಿಸುತ್ತಾಳೆ. ಮಡದಿ ತನ್ನ ಮಕ್ಕಳ ಮೇಲೆ ತನ್ನ ಹಕ್ಕನ್ನು ಸ್ಥಾಪಿಸುತ್ತಾಳೆ. ಕಂಡಿಗೆ ಬೀಡಿನ ಪಾಡ್ದನ ಕಥೆಯಲ್ಲಿ ಬಲ್ಲಾಳರು ತನ್ನ ಸಹೋದರಿಯ ಬಳಿ ಹೀಗೆ ಹೇಳುತ್ತಾರೆ, "ಹೆರಲು ಸಾಕಲು ಆಕೆಗಂತೆ. ಅವು ನನಗೆ ಸೇರಿದ ಮಕ್ಕಳಲ್ಲವಂತೆ ನನಗೆ ಕೊಡಲಾರೆನೆಂದಳು" ಹೀಗೆ ಮೂರು ಸಂದರ್ಭಗಳಲ್ಲಿಯೂ ಗಂಡನನ್ನು ತೊರೆದು ತವರಿಗೆ ತೆರಳುವ ಮೂಲಕ ತನಗೆ ತವರಿನಲ್ಲಿ ಇರುವ ಹಕ್ಕನ್ನು ಮಡದಿ ಪ್ರತಿಪಾದಿಸುತ್ತಾಳೆ. ಈ ಕಥೆಯು ಆ ಕಾಲದಲ್ಲಿ ಮಾತೃವಂಶೀಯತೆ ಜಾರಿಯಲ್ಲಿತ್ತು ಎನ್ನುವುದನ್ನು ಸಾಕ್ಷೀಕರಿಸುತ್ತದೆ.

ಬಾರ್ಕೂರಿನಲ್ಲಿ ಪ್ರಚಲಿತವಿದ್ದ ಹಳೆಯ (ಬಾರ್ಕೂರು ಹಿರಿಯಣ್ಣ ಸೆಟ್ರು)ಕಥೆಯೊಂದನ್ನು ಇತಿಹಾಸದಲ್ಲಿ ದಾಖಲಾಗಿರುವ ಪಾಂಡ್ಯ ಹೆಸರನ್ನು ಉಪಯೋಗಿಸಿ ದೇವಪಾಂಡ್ಯನ ಹೆಸರಲ್ಲಿ ಮರುರಚಿಸಿ ಗ್ರಾಮಪದ್ಧತಿಯಲ್ಲಿ ಅಳಿಯಸಂತಾನ ಕಟ್ಟುಕಟ್ಟಲೆಗಳನ್ನು ಮರು ಸ್ಥಾಪಿಸಲು ಮಾಡಿದ ಪ್ರಯತ್ನ ಇದಾಗಿರಬಹುದು.

ಕುಂಡೋದರ

ತುಳುನಾಡಿನ ಶಾಸನಗಳಲ್ಲಿ ಕುಂಡೋದರ ಭೂತದ ಬಗ್ಗೆ ಅಥವಾ ಭೂತಾಳಪಾಂಡ್ಯನ ಬಗ್ಗೆ ಉಲ್ಲೇಖ ಇಲ್ಲ. ಕುಂಡೋದರ ಗುಡಿ ಬಾರ್ಕೂರಿನ ಮಹಿಷಾಸುರ ಗುಡ್ಡದಲ್ಲಿ ಇದೆ ಎಂದು ನನಗೆ ಮಾಹಿತಿ ನೀಡಿದವರು ಸಿಂಹಾಸನ ಗುಡ್ಡೆಯ ಅರ್ಚಕರಾದ ಗಣಪಯ್ಯ ಅಡಿಗರು. ಈ ಗುಡಿಯ ಬಗ್ಗೆ ಗುರುರಾಜ ಭಟ್ಟರು ಹೀಗೆ ಬರೆಯುತ್ತಾರೆ:

"ಮಹಿಷಾಸುರ ದೇಗುಲದ ರೇವಂತ (ಕ್ರಿ.ಶ. ೧೦–೧೨ನೇ ಶತಕ) – ಇದೊಂದು ಮೂರು ಅಡಿ ಎತ್ತರದ ಶಿಲ್ಪ. ಕುದುರೆಯ ಮೇಲೆ ಸವಾರಿ ಮಾಡಿಕೊಂಡ ರೇವಂತನ ನಿರ್ದೇಶನವೂ ಕುದುರೆಯ ನಿರ್ದೇಶನವೂ ಚೈತನ್ಯ ಪೂರ್ಣವಾಗಿವೆ. ಕುದುರೆಯ ಮುಂಗಾಲಿನ ಕೈಕೆಳಗೆ ಹುಲಿಯ ನಿರ್ದೇಶನವಿದೆ. ಕುಂಡೋದರ ಮತ್ತು ಭೂತಾಳ ಪಾಂಡ್ಯರಾಯನಿಗೆ ಸಂಬಂಧಿಸಿದ ಕತೆಗೂ ಈ ದೇಗುಲಕ್ಕೂ ಸಂಬಂಧವಿದೆ ಎಂದು ಪ್ರತೀತಿ. ಆದರೆ ಈ ಬಿಂಬವು ಜೈನ ಬ್ರಹ್ಮನಂತೆ ಕಂಡುಬರುತ್ತದೆ. ಇಲ್ಲಿಯೇ ಮರದಿಂದ ಮಾಡಿದ ಪಂಚಮುಖ ನಂದಿಯೂ ಒಂದು ಕೋಡಿನಂದ ಕೂಡಿದ ನಂದಿಯೂ ಇವೆ. ಈ ದೇಗುಲವು ಈಗ ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ." (ಬಾರ್ಕೂರು ಪು. ೩೪.)"

ಬಾರ್ಕೂರಿನ ಪಂಚಲಿಂಗೇಶ್ವರ ದೇವಸ್ಥಾನದ ಹಿಂದೆ ಇರುವ ಗುಡಿಯಲ್ಲಿ ಕುದುರೆ ಸವಾರನ ಶಿಲ್ಪ ಇದೆ. ಇಲ್ಲಿ "ರೇವಂತ ದೇವಸ್ಥಾನ" ಎಂಬ ಫಲಕ ಇದೆ. ಇದು ಭವ್ಯ ಶಿಲ್ಪ ಅಲ್ಲ. ಎಡದ ಕೈಯಲ್ಲಿ ಖಡ್ಗ, ಬಲದ ಕೈಯಲ್ಲಿ ಫಲ ಇರುವ ಕಿರೀಟಧಾರಿ ಶಿಲ್ಪ. ಕುದುರೆ ನಿಂತ ಭಂಗಿಯಲ್ಲಿ ಇದೆ. ಇದು ಬಾರ್ಕೂರಿನ 'ಕಾವಲು ದೈವ' ಎಂದೂ ಹೇಳುತ್ತಾರೆ. ಈ ರೇವಂತ ಶಿಲ್ಪಕ್ಕೂ ಕುಂಡೋದರ ಗುಡಿಯಲ್ಲಿ ಕುದುರೆ ಮೇಲೆ ಕುಳಿತ ಸುಂದರ ಶಿಲ್ಪಕ್ಕೂ ಸಾಕಷ್ಟು ವ್ಯತ್ಯಾಸ ಇದೆ. ರೇವಂತ ಶಿಲ್ಪದ ಮುಂದೆ ಹುಲಿ ಇಲ್ಲ.

ಭಟ್ಟರು ಮೇಲಿನ ವ್ಯಾಖ್ಯಾನ ನೀಡುವಾಗ ಸ್ಥಳೀಯ ಉಪಾಸಕರ ಬಳಿ ಮಾಹಿತಿ ಕೇಳಿದ್ದಿರಲಾರರು. ಅವರದು ಶಿಲ್ಪಶಾಸ್ತ್ರೀಯ ಅಧ್ಯಯನ. ಕುದುರೆಯ ಮೇಲೆ ಕುಳಿತ ಶಿಲ್ಪದ ಪೀಠದ ಒತ್ತಿನಲ್ಲಿ ಅಷ್ಟೇ ಪ್ರಾಮುಖ್ಯತೆ ನೀಡಲಾದ, ಪೂಜೆಗೊಳ್ಳುವ ಸ್ಥಳೀಯ ಹಾಸುಕಲ್ಲಿನ ಶಿಲ್ಪ ಇದೆ. ಇದು ಕೋಣದ ಶಿಲ್ಪ. ಕೋಣವನ್ನು ಮಹಿಂಷಂತಾಯ ಎಂದು ಸಂಸ್ಕೃತೀಕರಿಸಿ ಹೇಳುವ ರೂಢಿ ತುಳುನಾಡಿನಲ್ಲಿ ಇದೆ. ಈ ಶಿಲ್ಪವು ಪುರಾತನವಾದುದು. ಅದಕ್ಕಿಂತಲೂ ಪುರಾತನವಾದ ಮೂಲ ಮಹಿಷಂದಾಯನ ಭಗ್ನ ಶಿಲ್ಪ ಪ್ರಧಾನ ಶಿಲ್ಪಗಳ ಎಡಮೂಲೆಗೆ ಇದೆ.

ಮಹಿಷಂತಾಯ ಹೆಸರು ಇರಬೇಕಾದಲ್ಲಿ 'ಮಹಿಷಾಸುರ' ಎಂದು ಅಸುರ ಹೆಸರನ್ನು ಯಾವ ಕಾರಣದಿಂದ ಈ ದೇವಾಲಯಕ್ಕೆ ನೀಡಲಾಯಿತು ಎಂದು ತಿಳಿದುಬಂದಿಲ್ಲ. ತುಳುವರು ಮಹಿಷ ರಾಕ್ಷಸನಲ್ಲ, ಕೃಷಿ ಸಂಸ್ಕೃತಿಯ ಪೋಷಕ ದೈವ. ತುಳುವರು ಕೋಣವನ್ನು 'ಎರು' ಎನ್ನುತ್ತಾರೆ. ಎರುವನ್ನು ಸಂಸ್ಕೃತದಲ್ಲಿ 'ಮಹಿಷ' ಎಂದು ಕರೆಯುತ್ತಾರೆ. ತುಳುವರೂ ಸಂಸ್ಕೃತ ಹೆಸರನ್ನು ತುಳುವೀಕರಿಸಿ ಮಹಿಷಂದಾಯ ಎಂದು ಉಪಾಸನೆಗೊಳ್ಳುವ ಕೋಣಗಳನ್ನು ಕರೆಯುವುದು ರೂಢಿ. ಸಾಮಾನ್ಯವಾಗಿ 'ಮೂಲದ ಮಹಿಷಂದಾಯ' ಎಂದು ಕರೆಯುತ್ತಾರೆ. 'ಆದಿ ಮೂಲತಾನದ ಮಹಿಷಂದಾಯ.' ಈ ಶಕ್ತಿಗೆ ಇಡಿಯ ತುಳುನಾಡಿನಲ್ಲಿ ಅಗ್ರಪೂಜೆ. ಮೊದಲ ಉಪಾಸನಾ ಆಚರಣೆ ಅರ್ಥಾತ್ ಕೋಲ ನಡೆಯುತ್ತದೆ.

ಮಹಿಷಂತಾಯ ನಾಗಬೆರ್ಮನ ಪರಿವಾರ ದೈವ. ಪರಿವಾರ ದೈವಗಳಲ್ಲಿ ಪಂಚಶಕ್ತಿಗಳು ಇವೆ.

ಇಡಿಯ ತುಳುನಾಡಿನಲ್ಲಿ ಮೂಲಸ್ಥಾನದ ಪ್ರಧಾನ ದೈವ ನಾಗಬೆರ್ಮರ್ ಅರ್ಥಾತ್ ನಾಗಬ್ರಹ್ಮ (ಸರ್ಪ). ಹುತ್ತದ ರೂಪದಲ್ಲಿ ಅಥವಾ ಭಿನ್ನ ಸಂಕೇತದ ಮೂಲಕ ನಾಗಬೆರ್ಮರ ಉಪಾಸನೆ ನಡೆಯುತ್ತದೆ. ನೇಮ/ಕೋಲದ ಉಪಾಸನೆಯೂ ಮುಂದುವರಿದಿದೆ. ಮಹಿಷನ/ಗುಡಿಯಲ್ಲೂ ಪಂಚ ಶಕ್ತಿಗಳಿವೆ. ಹೀಗಿರುವಾಗ ಇಲ್ಲಿ ಕಾಣುವ ಸುಂದರವಾದ ಶಿಲ್ಪ 'ನಾಗಬೆರ್ಮ' ಎನ್ನುವುದರಲ್ಲಿ ಅನುಮಾನ ಇಲ್ಲ. ಕುಂಭ/ಕುಂಡದಿಂದ ಉದಿಸಿದ ನಾಗಶಕ್ತಿ. ಮಹಿಷ ನಾಗಬೆರ್ಮರ ಪರಿವಾರ ಶಕ್ತಿ.

ಕುಂಡೋದರ : ಕುಂಡ ಪದದ ವ್ಯುತ್ಪತ್ತಿ

ಕುಂಡ = ೧. ಮಡಕೆ (ಕ.ನಿ.) ೨. ನೀರು ತುಂಬಿದ ಕೊಳ. ೩. ಕುಂಡಣಿ =ಹಾವು ಸರ್ಪ(ಕುಂಡಲಿನಿ) ಕುಂಡಲಿನಿಶಕ್ತಿ ಯೋಗಶಾಸ್ತ್ರದಲ್ಲಿ ಸರ್ಪರೂಪವಾಗಿ ರೂಪಿಸಲ್ಪಟ್ಟ ಒಂದು ಶಕ್ತಿ, ದುರ್ಗೆ. ೪. 'ಕುಂಡಲೀಶ'=ಹಾವುಗಳ ಒಡೆಯ ೫. ಕುಂಡಲೀ ಶಯನ: ಶೇಷನ ಮೇಲೆ ಮಲಗಿದವನು ೬. 'ಕುಂಡಲೀಶ್ವರ ಕುಂಡಲ' ಎಂದರೆ ಸರ್ಪರಾಜನನ್ನೇ ಕಿವಿಯ ಆಭರಣ ಮಾಡಿಕೊಂಡವನು (ಕ.ನಿ.)

ನಾಗ ಬೆರ್ಮರ ಪರಿವಾರ ದೈವಗಳಾದ ರೆಕ್ಕೆಸಿರಿಯೂ ಕುಂಭದಿಂದ (ಕಡ್ಯ/ಮಡಕೆ)ಯಿಂದ ಉದಿಸಿದ ನಾಗ ಕನ್ಯಾಶಕ್ತಿ. ಕೊಡಮಣಿತ್ತಾಯ ದೈವ ಕೊಡ/ಕುಂಭದಿಂದ ಉದಿಸಿದ ನಾಗಕನ್ಯಾಶಕ್ತಿ. ಕಾಸರಗೋಡಿನಲ್ಲಿ ನೆಲೆಯಾಗಿರುವ ತುಳುವರ ದೈವ ಬಿರ್ನಾಳ್ ಶಕ್ತಿಯೂ ಕೊಡದಿಂದ ಉದಿಸಿದ ನಾಗಶಕ್ತಿ. ಕಾಸರಗೊಡಿನ ಬಂಬ್ರಾಣ ಮನೆಯ ರಾಜನ್ ದೈವ 'ಕುಂಡಕ್ಕರ". ತುಳುವರ ಮೂಲಸ್ಥಾನದ ಮೂಲರೂಪದ ಆರಾಧನೆಯಲ್ಲಿ ಈಗಲೂ ಮಡಕೆಯಲ್ಲಿ ನೀರು ಹಾಕಿ ನಾಗಶಕ್ತಿಗಳನ್ನು ಉಪಾಸನೆ ಮಾಡಲಾಗುತ್ತದೆ. ಕಾಡಿನಲ್ಲೂ ನಾಡಿನಲ್ಲೂ ಈ ರೀತಿಯ ಉಪಾಸನೆ ಮುಂದುವರಿದಿದೆ. (ನೋಡಿ ಇಂದಿರಾ ಹೆಗ್ಗಡೆ: ತುಳುವರ ಮೂಲತಾನ ಆದಿ ಆಲಡೆ ಪರಂಪರೆ ಮತ್ತು ಪರಿವರ್ತನೆ. ೨೦೧೨, ನವಕರ್ನಾಟಕ) ಈ ಅರ್ಥದಲ್ಲಿ ಕುಂಡೋದರ ಎಂದರೆ ಕುಂಡದ ಉದರದಿಂದ/ಗರ್ಭದಿಂದ ಉದಿಸಿದ ತುಳುವರು ಪೂಜಿಸುವ ಮೂಲಸ್ಥಾನ ದೈವ, ಸಂಕಪಾಲ ಸರ್ಪ. ನಾಗಬೆರ್ಮರ ನೆಲ ಮೂಲ ಸಂಕೇತದ ಬದಲಿಗೆ ಕುದುರೆ ಮೇಲೆ ಕುಳಿತ ಸುಂದರ ಶಿಲ್ಪವನ್ನು ೧೦/೧೨ನೆಯ ಶತಮಾನದಲ್ಲಿ ಪ್ರತಿಷ್ಠಾಪಿಸಿದ್ದಿರಬೇಕು. ಈ ರೀತಿಯ ಪರಿವರ್ತನೆಗಳು ಸರ್ವೇಸಾಮಾನ್ಯವಾಗಿ ನಡೆಯುತ್ತಿದೆ.

ಲೀಲಾ ಭಟ್ ಅವರ ಕುಂಡೋದರಿ ಶಕ್ತಿಯ ವಿವರಣೆ ಹೀಗಿದೆ

"ಶಾಂತಾ ದುರ್ಗಾಗಳಂತೆ ಕುಂಡೋದರಿಯೂ (ಕೈಗಳಲ್ಲಿ ಸರ್ಪ ಧರಿಸಿದ) ಭೂಮಿತಾಯಿಯ ಉಗ್ರ ರೂಪವೇ ಆಗಿದ್ದಾಳೆ) ಹುತ್ತವನ್ನು ಭೂಮಿಯೆಂದೂ ಸರ್ಪವನ್ನು ಅವಳ ಪುತ್ರನೆಂದೂ ಬಗೆಯುವುದು ಒಂದು ಕಲ್ಪನೆ. ಭೂಮಿ ತಾಯಿಯು ದುರ್ಗೆಯೊಡನೆ ಅಭೇದ ಭಾವದಿಂದ ಶಾಂತಾ ದುರ್ಗಾ (ಸಾಂತೇರಿ)ಆಗಿ ಗೋವಾ ಉತ್ತರ ಕನ್ನಡದಲ್ಲೆಲ್ಲಾ ಆರಾಧಿಸಲ್ಪಡುತ್ತಾಳೆ. ನಾಗನೆಂದರೆ ಕ್ಷೇತ್ರಪಾಲನೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಶಾಂತ ದುರ್ಗೆಯನ್ನು ಸರ್ಪರೂಪದಲ್ಲಿ (ಸುಬ್ರಹ್ಮಣ್ಯನನ್ನು ಪೂಜಿಸಿದಂತೆ ಪೂಜಿಸುತ್ತಾರೆ. (ಅದೇ ಪುಟ)"

ಕುಡೆಲ್ತಿ ಮಾರ್ : ಬಂಟ್ವಾಳ ಅನಂತಾಡಿ ಮೂಲಸ್ಥಾನ ನಾಗಬನ ಕುಡೆಲ್ತಿ ಬನ ಆದರೆ ಅದರ ಬಳಿಯ ಕಂಬುಲ ಗದ್ದೆ ಕುಡೆಲ್ತಿ ಮಾರ್. ತಿಮರು/ತಿಮಾರ್ ಅಂದರೆ ಗದ್ದೆ. ಕುಡೆಲ್ತಿ ಎಂದರೆ ನಾಗ ಶಕ್ತಿಯ ಹೆಸರು ಇರಬಹುದು.

ಮೂಲಸ್ಥಾನ ದೈವವಾದ ನಾಗಬೆರ್ಮೆ ಪುರುಷನಾಗಿ ಉಲ್ಲಾಯನಾದರೆ ಆತನೊಳಗೆ ಇರುವ ಸ್ತ್ರೀ ಶಕ್ತಿ ಉಲ್ಲಾಲ್ತಿ. ಇವೆರಡೂ ಸೋದರ ಶಕ್ತಿಗಳು. ತುಳುನಾಡಿನ ಪರಂಪರೆಯಲ್ಲಿ ಉಲ್ಲಾಯ ಅರಸು ದೈವವಾಗಿ ಕುದುರೆ ಮೇಲೆ ಕುಳಿತರೆ, ಉಲ್ಲಾಲ್ತಿ ಹುಲಿಯ ಮೇಲೆ ಸವಾರಿ ಮಾಡುತ್ತಾಳೆ. "ಪಿಲಿ ಚಂಡಿ (ಹುಲಿಚಾಮುಂಡಿ)" ಯೂ ಮೂಲಸ್ಥಾನ ದೈವ. ಈ ಗುಡಿಯ ಉಪಾಸನೆಯ ಸಂದರ್ಭದಲ್ಲಿ ಕುಂಡೋದರನ ಮಾಧ್ಯಮನಾಗುವುದು ಬ್ರಾಹ್ಮಣ ಪಾತ್ರಿ.

ಕೆಲವೊಂದು ಮೂಲಸ್ಥಾನಗಳಲ್ಲಿ ಹುಲಿಯ ಪ್ರತಿಮೆಗಳು ಇವೆ. ಬಾಯ್ದೆರೆದು ಅರಚುವ ರೀತಿಯಲ್ಲಿ ಹುಲಿಯ ಪ್ರತಿಮೆಗಳು ಇರುತ್ತವೆ. ಮೂಲಸ್ಥಾನ ಮೂಲತಃ ಇದ್ದುದು ಕಾಡಿನೊಳಗೆ. ಈಗಲೂ ಹೆಚ್ಚಿನ ಕಡೆ ಕಾಡೊಳಗೆ ಮೂಲಸ್ಥಾನ ಇದೆ. ಸಾಂಕೇತಿಕವಾಗಿ ಮರ ಮತ್ತು ಶಿಲೆಗಳಲ್ಲಿ ತಾವು ಉಪಾಸಿಸುವ ಶಕ್ತಿಗಳನ್ನು ಆರೋಪಿಸಿ ಉಪಾಸನೆ ಮಾಡುವ ಪರಂಪರೆ ತುಳುನಾಡಿನಲ್ಲಿ ಇದೆ. ಮಹಿಷಾಸುರ ದೇಗುಲದ ಶಿಲ್ಪ ನಾಗರಿಕ ಜಗತ್ತಿನ ಕೊಡುಗೆ. ತುಳುನಾಡಿನಲ್ಲಿ ಬ್ರಾಹ್ಮಣ ಅರ್ಚಕರ ಪ್ರವೇಶ ಆದ ನಾಗಬ್ರಹ್ಮಸ್ಥಾನಗಳಲ್ಲಿ ತುಳು ನೆಲಮೂಲದ ಶಕ್ತಿಗಳಿಗೆ ಸಂಸ್ಕೃತ ಹೆಸರನ್ನು ಆರೋಪಿಸಲಾಗುತ್ತಿದೆ. ಉದಾ "ಕೊಡಮಣಿತ್ತಾಯಿ=ಕುಂಭ ಕಂಠಿಣಿ, ರೆಕ್ಕೆಸಿರಿ=ರಕ್ತೇಶ್ವರಿ, ಪಿಲಿಚಂಡಿ=ವ್ಯಾಘ್ರಚಾಮುಂಡಿ, ಮಲರಾಯಿ ಮತ್ತು ಪಂಜುರ್ಲಿಗೆ=ವರಾಹಿ, ಬೊಬ್ಬರ್ಯ =ಬಾರ್ಬರಿಕಾ –ಹೀಗೆ ಅನೇಕ ಹೆಸರುಗಳು ಸಂಸ್ಕೃತೀಕರಣ ಗೊಂಡಿವೆ. ತುಳುವರ ನಂಬಿಕೆಯಂತೆ ನಾಗಬ್ರಹ್ಮ ಭೂತಗಳ ಒಡೆಯ. (ನೋಡಿ: ಡಾ. ಇಂದಿರಾ ಹೆಗ್ಗಡೆ ಅದೇ. ೨೦೧೨) ಹಾಗಾಗಿ ಇಲ್ಲೂ ನಾಗಬ್ರಹ್ಮನ ಹೆಸರನ್ನು ಸಂಸ್ಕೃತೀಕರಿಸಿರುವ ಸಾಧ್ಯತೆ ಇದೆ.

ಕುಂಡೋದರನ ಕುದುರೆ ಕೆನೆಯುವ ಭಂಗಿಯಲ್ಲಿದೆ. ಕುದುರೆಯ ಮೇಲೆ ಕುಳಿತ ಸವಾರನ ಎಡದ ಕೈಯಲ್ಲಿ 'ಸುರಿಯ' ಎನ್ನುವ ಯುದ್ಧಾಯುಧ ಇದೆ. ಬಲದ ಅಂಗೈಯಲ್ಲಿ ಫಲ ಇದೆ. ಕುದುರೆಯ ಎತ್ತಿದ ಬಲಗಾಲ ಬಳಿ ಇರುವ ಹುಲಿಯ ಶಿಲ್ಪ ನಡಿಗೆಯ ಗಂಭೀರ ಭಂಗಿಯಲ್ಲಿದೆ. ನಮ್ಮನ್ನು ದಿಟ್ಟಿಸುತ್ತಿದೆ. ಗುರುರಾಜ ಭಟ್ಟರ ಪ್ರಕಾರ 'ಕುದುರೆ ಮೇಲೆ ಕುಳಿತ ಶಿಲ್ಪ ಜೈನ ಬ್ರಹ್ಮ, ಸುಮಾರು ಕ್ರಿ.ಶ. ೧೧ನೆಯ ಶತಮಾನಕ್ಕೆ ಇದನ್ನು ರಚಿಸಿರಬಹುದು. ಜಯ ಪಾಂಡ್ಯ ಜೈನ ಮತಸ್ಥ. ಇವನ ತಂದೆ ಭೂತನಾಥ ಕುಂಡೋದರನ (ಮಹಿಷಾಸುರ)ನ ಭಕ್ತನಾಗಿದ್ದನು. (ಅದೇ ಪು. ೪೧) ಆದರೆ ನನ್ನ ಪ್ರಕಾರ ಇದು ನಾಗ ಬ್ರಹ್ಮನ ಶಿಲ್ಪ. ಮಹಿಷ ಖಂಡಿತಾ ಅಲ್ಲ. ಮಹಿಷನ ಶಿಲಾ ಶಿಲ್ಪ ನಾಗಬ್ರಹ್ಮ ಶಿಲ್ಪದ ಬಳಿ ಪ್ರತ್ಯೇಕ ಇದೆ. ಇನ್ನೂ ೫ ಮಹಿಷ ಶಿಲ್ಪಗಳು ಇಲ್ಲಿವೆ. ಇಲ್ಲಿ ಈಗಲೂ ಉಳಿದು ಬಂದಿರುವ ಆಚರಣೆಗಳನ್ನು ಗಮನಿಸುವಾಗ ಈ ಕ್ಷೇತ್ರವು ತುಳುವರ ಆದಿ ಮೂಲಸ್ಥಾನ ಎನ್ನುವುದು ಖಚಿತವಾಗುತ್ತದೆ. ಅಲ್ಲದೆ ಮಹತ್ವದ ಸಂಗತಿ ಯೆಂದರೆ ಇಲ್ಲಿ ಏಕಶೃಂಗದ ಮಹಿಷ (ಒಂದು ಕೊಂಬಿನ ಕೋಣ ಅಥವಾ ಎತ್ತು) ಇರುವುದು. ಉಡುಪಿಯಿಂದ ಉತ್ತರಕ್ಕೆ ಕೆಲವೆಡೆ ಏಕಶೃಂಗಿ ಶಿಲ್ಪ ಇದೆ.

ಮಹಿಷಾಸುರ ದೇಗುಲದ ಕುಂಡೋದರ (ನಾಗ ಬ್ರಹ್ಮ) ಶಿಲ್ಪಕ್ಕೆ ಹೊಂದಿಕೊಂಡಂತೆ ಮೂಲ ಮಹಿಷ ಶಿಲ್ಪ ಇದೆ. ಅದರ ಬಲ ಭಾಗದಲ್ಲಿ ಸರಳ ರೇಖೆಯಿಂದ ಸ್ವಲ್ಪ ಮುಂದಕ್ಕೆ ಐದು ಮೊಗದ ಕೋಣ (ಪಂಚ ಮುಖಿ ನಂದಿಗೋನ) ಇದೆ. ಅದರ ಹಿಂದೆ ಮೂಲೆಗೆ ಬಹಳ ಹಿಂದೆ ನೆಲಮೂಲ ಸಂಸ್ಕೃತಿಯಲ್ಲಿ ದೈವವನ್ನು ಆರೋಪಿಸ ಲಾಗುವ ಮರದ ಮುಂಡಿಗೆ ಇದೆ. (ಹಳೆಯ ಭಗ್ನ ಪ್ರಧಾನ ಮಹಿಷ ಶಿಲ್ಪವೂ ಅಲ್ಲಿಯೇ ಎಡ ಮೂಲೆಗೆ ಇದೆ)ಕುಂಡೋದರ ಗುಡಿಯ ಒಳಗಿನ ಹೊರ ಆವರಣದ ಬಲ ಭಾಗದಲ್ಲಿ ಎರಡು ಸ್ತ್ರೀ ಪ್ರತಿಮೆಗಳಿವೆ. ಅವುಗಳ ಮಧ್ಯೆ ಒಂದು ಮಹಿಷ ಇದೆ. ಅದರ ಮುಂದೆ ಒಂದು ಮಹಿಷ ಇದೆ ಅದಕ್ಕೂ ಮುಂದೆ ಮತ್ತೊಂದು ಏಕಶೃಂಗಿ ಮಹಿಷ ಇದೆ. ಅವುಗಳ ಮುಂದೆ ಎರಡು ಮರದ 'ಮುಂಡಿಗೆ'ಗಳಿವೆ. ಎರಡು ಸ್ತ್ರೀ ವಿಗ್ರಹಗಳಲ್ಲಿ ಒಂದರ ಗಾತ್ರ ಎತ್ತರ ಇದೆ. ಇನ್ನೊಂದು ಪುಟ್ಟ ಪ್ರತಿಮೆ. ಅವುಗಳ ಎಡದ ಕೈಯಲ್ಲಿ ತ್ರಿಶೂಲ ಇದೆ. ಬಲದ ಕೈ ಇಳಿಬಿಡಲಾಗಿದೆ. ಕುದುರೆ ಮೇಲೆ ಕುಳಿತ ಮತ್ತು ಮೂಲ ಮಹಿಷ ಮಾತ್ರ ಶಿಲಾ ಶಿಲ್ಪ. ಉಳಿದವು ಮರದಿಂದ ರಚಿಸಿದವು.

ಇವುಗಳ ಎಡ ಭಾಗದಲ್ಲಿ ಕುದುರೆ ಏರಿ ಕುಳಿತ ಮಾನವನ ಮರದ ಪ್ರತಿಮೆ ಇದೆ. ಇವನ ಎಡದ ಕೈಯಲ್ಲಿ ಬಾಕು ಇದೆ. ಬಲದ ಕೈಯಲ್ಲಿ ಖಡ್ಗ ಇದೆ. ಈ ಮಾನವ ಪ್ರತಿಮೆಯನ್ನು 'ಜಯಂತ' ಎಂದು ಈ ಕ್ಷೇತ್ರದ ಅರ್ಚಕರಾದ ಭಾಸ್ಕರ ಶಾಸ್ತ್ರಿಯವರು ಹೇಳುತ್ತಾರೆ. ಈ ಕ್ಷೇತ್ರದ ರಕ್ಷಕ ದೈವ ಕುದುರೆ ಮೇಲೆ ಕುಳಿತ ಜಯಂತ. ದೇವಪಾಂಡ್ಯನ ಕಥೆಯ ಕಾಲಕ್ಕೂ ಹಿಂದೆ ಬಾರ್ಕೂರನ್ನು 'ಜಯಂತಿಕಾ ನಗರ'ವೆಂದು ಕರೆಯಲಾಗುತ್ತಿತ್ತು. ಕುದುರೆಯ ಆಸು ಪಾಸಿನಲ್ಲಿ ಎರಡು 'ಮುಂಡಿಗೆ'ಗಳಿವೆ. ಕುಂಡೋದರ ಮತ್ತು ಅದರ ಒತ್ತಿನಲ್ಲಿರುವ ಶಿಲ್ಪಗಳು ಮಾತ್ರ ಶಿಲೆಯಲ್ಲಿ ರಚನೆಯಾಗಿವೆ. ಉಳಿದೆಲ್ಲ ಶಿಲ್ಪಗಳು ಮರದಿಂದ ರಚನೆಯಾಗಿವೆ.

ಬಾರ್ಕೂರಿನಿಂದ ಉತ್ತರಕ್ಕೆ ಮರದಿಂದ ರಚಿಸಲಾದ ಐದು ಮುಖದ ನಂದಿಗೋನ ವಿಗ್ರಹಗಳು ಮೂಲಸ್ಥಾನ ಗಳಲ್ಲಿ ಹೆಚ್ಚಾಗಿ ಇವೆ. ಮೂಲದ ಮಹಿಷಂದಾಯ ಎಂದು ಕರೆಯುವ ಈ ಪ್ರತಿಮೆ ಬಾಯ್ದೆರೆದು 'ಅಂಬಾ ಎನ್ನುವ

ಆರ್ತನಾದ' ಮಾಡುವಂತೆ ರಚಿಸಲಾಗುತ್ತದೆ. ಮೂಲಸ್ಥಾನಗಳ ಹುಲಿಗಳ ಪ್ರತಿಮೆಯೂ ಆರ್ತನಾದ ಮಾಡುವಂತೆ ಇವೆ.

ಕೆಲವು ಕಡೆ ಬಾಯ್ದೆರೆದ ಐದು ತಲೆಗಳ ಮಹಿಷನ ಐದು ಹೆಡೆಬಿಚ್ಚಿದ ನಾಗನನ್ನು ನೆನಪಿಸುತ್ತವೆ. ತುಳುನಾಡಿನಲ್ಲಿ ನಡೆಯುವ ಕೃಷಿ ಸಂಸ್ಕೃತಿಯ ದೆಯ್ಯೊಲೆ ನಲಿಕೆಯ ಅವಳಿ ಸಿರಿಗಳು ತುಳುನಾಡಿಗೆ ಬರುವಾಗ ಅವುಗಳ ಜೊತೆಗೆ ಅತಿಕಾರೆ ಭತ್ತ (ಬೀಜಕ್ಕೆ) ಮತ್ತು ನಾಗಬ್ರಹ್ಮ, ಮಯಿಸಂದಾಯ ದೈವ ಮತ್ತು ಪರಿವಾರ ದೈವಗಳು ಬರುತ್ತವೆ. ಕಂಬುಲ ನಡೆಯುವ ಮೊದಲು ಇವುಗಳಿಗೆ ಅದ್ದೂರಿಯ ಉಪಾಸನೆ ನಡೆಯುತ್ತಿತ್ತು.

ತುಳುನಾಡ ಸಿರಿ ಪಾಡ್ದನದ ಅವಳಿ ಶಕ್ತಿಗಳಾದ ಅಬ್ಬಗದಾರಗರು ಸಾಕಿದ ಕೋಣಗಳು ಮಯಿಸಂದಾಯ ಎಂಬ ಕಥೆ ಇದೆ. ಅಬ್ಬಗ ದಾರಗರು ಅಕಾಲಮರಣಕ್ಕೆ ಈಡಾದಾಗ ಅವರ ಕಾಷ್ಟದಿಂದ ಎದ್ದ ಹೊಗೆಯಲ್ಲಿ ಬೆಳ್ಳಿ ದುಂಬಿಗಳಾಗಿ ಅಬ್ಬಗ ದಾರಗರು ಮಹಿಷಂತಾಯನಗೆ ಗೋಚರಿಸುತ್ತಾರೆ. ಅವರು ಆಕಾಶದಲ್ಲಿ ಹೋಗುವುದನ್ನು ಕಂಡು 'ಅಂಬಾ' ಎಂದು ಅದು ಆರ್ತನಾದ ಮಾಡುತ್ತದೆ. ಆಗ ಅಬ್ಬಗ ದಾರಗರು "ನೀನು ಮೂಲಸ್ಥಾನಕ್ಕೆ ಹೋಗು ನಿನಗೆ ಮೊದಲ ಉಪಾಸನೆ ಅಲ್ಲಿ" ಎಂದು ಹರಸುತ್ತಾರೆ. ಈ ಗುಡಿಯ ಎರಡು ಸ್ತ್ರೀ ವಿಗ್ರಹಗಳು ಮತ್ತು ಅವುಗಳ ನಡುವೆ ಇರುವ ಮಹಿಷ 'ಅಬ್ಬಗ ದಾರಗ' ಸಿರಿ ಶಿಲ್ಪಗಳು ಹಾಗೂ ಅವರ ಸಾಕು ಕೋಣವನ್ನು ನೆನಪಿಸುತ್ತದೆ.

ಮಹಿಷ/ ಕೋಣ, ಕೃಷಿ ಸಂಸ್ಕೃತಿಯ ಪೋಷಕ ದೈವ. ಕಂಬುಲದ ಆಚರಣೆಯಲ್ಲಿ ಇವನಿಗೆ ಉಪಾಸನೆ ಇದೆ. ನಾಗಬ್ರಹ್ಮರ ಉಪಾಸನೆಯೇ ಕಂಬುಲ. ಕಂಬುಲದ ಕೋಣ ಗಳಿಗೆ ಪಾವಿತ್ರ್ಯ ಇದೆ. ಮೈಲಿಗೆಯವರು ಯಾವತ್ತೂ ಅದನ್ನು ಮುಟ್ಟಬಾರದು. ಕಂಬುಲ ನಡೆಯುವ ದಿನ ಮನೆಯ ಕೋಣಗಳನ್ನು "ಮುರ್ತದ ಎರು" ಎನ್ನುತ್ತಾರೆ, ಆ ದಿನ ಇವುಗಳಿಗೂ ಉಪವಾಸ. ಇವುಗಳಿಗೆ ದೈವಾವೇಶ ಬರುತ್ತದೆ. ಕಾಡಿನಿಂದ ಚಾವಡಿಗೆ ಮಹಿಷ ಪ್ರಸರಣ ಆದ ಬಗ್ಗೆ ಪಾಡ್ದನ ಇದೆ. (ವಾಸ್ತವದಲ್ಲೂ ಕೋಣಗಳು ಕಾಡಿನಿಂದಲೇ ಬರುವುದು) ಚಾವಡಿಯಲ್ಲೂ ಪ್ರಧಾನ ರಾಜನ್ ದೈವಗಿಂತ ಮೊದಲು ಮಹಿಷಂತಾಯ ಕೋಲ ನಡೆಯಬೇಕು.

ಮಹಿಷಾಸುರ ಗುಡಿಯ ಮುಂದೆ ನೇರವಾಗಿ ೧೦೦ ಮೀಟರ್ ದೂರದಲ್ಲಿ ಕಟ್ಟೆ ಇದೆ. ಇದನ್ನು 'ಸಿಡಿ ಕಟ್ಟೆ' ಎನ್ನುತ್ತಾರೆ. ಅಲ್ಲಿಂದ ಮೂರು ಮೀಟರ್ ನೇರ ದೂರದಲ್ಲಿ ಸಿಡಿ ಕಂಬ ಇದೆ.

ಈ ಗುಡಿಯಲ್ಲಿ ದರ್ಶನ ಇದೆ. ಇಬ್ಬರು ದರ್ಶನ ಪಾತ್ರಿಗಳಿದ್ದಾರೆ. ಕುಂಡೋದರ ಭೂತಕ್ಕೆ ಬ್ರಾಹ್ಮಣ ಪಾತ್ರಿ. ಹೆಸರು ಗೋಪಾಲರಾವ್. ಈಗ ನಿಧನರಾಗಿದ್ದಾರೆ. ಹಾಯ್ಗುಳಿ ಪಾತ್ರಿಯಾಗಿ ಕುಂಬಾರ ಜಾತಿಯವರು. ಅವರ ಹೆಸರು ಬಾಬು. ಬಾಬು ಈಗಲೂ ದರ್ಶನ ಪಾತ್ರಿಯಾಗಿ ದ್ದಾರೆ. ಗುಡಿಯ ಮುಂದಿನ 'ದರ್ಶನ ಕಟ್ಟೆ'ಯಲ್ಲಿ ದರ್ಶನ ನಡೆಯುತ್ತದೆ. ಸ್ಥಳೀಯರ ಪ್ರಕಾರ ಕುಂಡೋದರ ದರ್ಶನ ಬಂದವರು ಈ ಕಟ್ಟೆಯ ಮೇಲೆ ನಿಂತುಕೊಳ್ಳುತ್ತಾರೆ. ಆಗ ಕಷ್ಟ ಪರಿಹಾರವನ್ನು ದೈವಗಳ ಬಾಯಿಯಿಂದ ಭಕ್ತರು ಬಯಸುತ್ತಾರೆ. ಗುಡಿಯ ಮುಂದೆ ಎಡ ಮೂಲೆಯಲ್ಲಿ ಬಾವಿ ಇದೆ.

ಗುಡಿಯ ಎಡಭಾಗದಲ್ಲಿ ಬಲಿಕಂಬ ಇದೆ. ಈ ಕಂಬ ದಡಿ ಒಂದು ನಾಗ ಶಿಲ್ಪ ಇದೆ. ಬಹಳ ಹಿಂದೆ ಈ ಕಂಬದ ಬುಡದಲ್ಲಿ ಕೋಳಿ ಬಲಿ ನೀಡಲಾಗುತ್ತಿತ್ತು ಎಂದು ಕೆಲವರು ಮಾಹಿತಿ ನೀಡಿದ್ದರು. ಆದರೆ ಈಗಿನ ಅರ್ಚಕರಿಗೆ ಈ ಬಗ್ಗೆ ಮಾಹಿತಿ ಇಲ್ಲ.

ಪೂಜಾ ಪದ್ಧತಿ ಮತ್ತು ಉಪಾಸನಾ ವಿಧಿ

ಕುಂಡೋದರ ಗುಡಿಯಲ್ಲಿ ಅರ್ಚಕ ವೃತ್ತಿ ಹಿಂದೆ ಕೃಷ್ಣ ಬಾಯರಿ ಕುಟುಂಬದವರಲ್ಲಿ ಇತ್ತು. ಮಕ್ಕಳಿಲ್ಲದ ಅವರು ಅರ್ಚಕ ಹಕ್ಕನ್ನು ಈಗಿನ ನರಸಿಂಹ ಶಾಸ್ತ್ರಿ ಕುಟುಂಬಕ್ಕೆ ಹಸ್ತಾಂತರಿಸಿದರು. ಈಗ ನರಸಿಂಹ ಶಾಸ್ತ್ರಿಯವರ ಮಗ ಗಣೇಶ ಶಾಸ್ತ್ರಿ ಅರ್ಚನೆಯ ಕೆಲಸ ಮಾಡುತ್ತಾರೆ. ನತ್ಯ ಅರ್ಚನೆ ಇದೆ.

ಉಪಾಸನಾ ವಿಧಿ: ಪ್ರತಿ ತಿಂಗಳ ಸಂಕ್ರಾಂತಿಯ ಮೊದಲ ರಾತ್ರಿ ಕುಂಡೋದರನ ಬಳಗದಲ್ಲಿ ಇರುವ ಏಳು ದೈವಗಳಿಗೆ ಚರು (ಅನ್ನ ನೈವೇದ್ಯ ಹಾಕುತ್ತಾರೆ) ಸಂಕ್ರಾಂತಿಯ ದಿನ ಗುಡಿಯ ಹೊರಗೆ ಎರಡು 'ಚರು' ಹಾಕುತ್ತಾರೆ. ಅದರ ಮಾರನೆಯ ದಿನ ಎರಡು ಪ್ರಾಣಿ ಆಹುತಿ/ಬಲಿ ಇದೆ.

ಮಾಯಿ ಹೋಗಿ ಸುಗ್ಗಿ ಬರುವ ಸಂಕ್ರಾಂತಿಗೆ (ಮಾರ್ಚ್ ೧೪) ವಾರ್ಷಿಕ ಜಾತ್ರೆ. ಅಂದು ಗುಡಿಯ ಮುಂದೆ ಕೆಂಡದ ಗುಡ್ಡ ನಿರ್ಮಿಸಿ ಕೆಂಡಸೇವೆ ನಡೆಸುತ್ತಾರೆ. ಕೆಂಡವನ್ನು ತುಳಿಯುವವರು ಮಹಿಳೆಯರು ಮತ್ತು ಮಕ್ಕಳು. ಈ ಸೇವೆ ಹಾಯ್ಗುಳಿಗೆ. (ಏಕಶೃಂಗಿ ಮಹಿಷನಿಗೆ)

ಮಹಿಷ ಮಂದರ್ತಿಯ ಕಾಡಿನ ದೈವ

ಕುಂಡೋದರ/ಮಹಿಷನ ಗುಡಿಯು ಮುಂದೆ ಉರಿಸಲಾದ ಕೆಂಡದ ರಾಶಿಯಿಂದ ಕೆಂಡವನ್ನು ಅನತಿ ದೂರದಲ್ಲಿ ಇರುವ ಮಂದರ್ತಿ ಕ್ಷೇತ್ರದ ಕೆಂಡ ಸೇವೆಗೆ

ಕೊಂಡು ಹೋಗುವ ಪದ್ಧತಿಯು ಕುಂಡೋದರ ಭೂತಕ್ಕೆ ಸಂಬಂಧಿಸಿದೆ.

ಮಂದರ್ತಿ ಮೂಲತಃ ನಾಗಮೂಲ ಕ್ಷೇತ್ರ. ಇಲ್ಲಿಯ ಹುತ್ತದ ಮುಂದೆ ದುರ್ಗಾ ಶಿಲ್ಪವನ್ನು ಪ್ರತಿಷ್ಠಾಪಿಸಿದ್ದು ಅನಂತರದ ಬೆಳವಣಿಗೆ.

ಸ್ಥಳೀಯರ ಪ್ರಕಾರ ಐತಿಹ್ಯದ ದೇವ ಪಾಂಡ್ಯ ಹೊಸ ಹಡಗು ಕಟ್ಟಲು ಮರ ಕಡಿದುದು ಮಂದರ್ತಿಯ ಕಾಡಿನಿಂದ. ಕಡಿದ ಮರದಲ್ಲಿ ಮೂಲ ದೈವ ಮಹಿಷಂತಾಯ ನೆಲೆಸಿದ್ದ. ಮೂಲಸ್ಥಾನದ ಮರ ಕಡಿದಾಗ ಆತ ನರ ಬಲಿ ಕೇಳಿದ್ದ.

ಈ ಪ್ರದೇಶದ ಬಾಬು ಪೂಜಾರಿ ಮತ್ತು ಕೆಲವರ ಪ್ರಕಾರ ಮಂದರ್ತಿಯ ಮಹಿಷಂತಾಯ ಕುಂಡೋದರ ಆದುದು ಕುದುರೆ ಮೇಲೆ ಕುಳಿತ ಶಿಲ್ಪ ರೂಪ ಪಡೆದುದು ಅನಂತರದ ಬೆಳವಣಿಗೆ. ಕುಂಡೋದರ ಗುಡಿಯ ಮುಂದೆ ಕೆಂಡ ಸೇವೆ ಆದ ಮೇಲೆ ಕೆಂಡದ ರಾಶಿಯಿಂದ ಕೆಂಡವನ್ನು ಮಂದರ್ತಿಗೆ ತೆಗೆದುಕೊಂಡು ಹೋಗುವ ಪದ್ಧತಿ ಇತ್ತು. ಈ ಕೆಂಡದಲ್ಲಿ ಮಂದರ್ತಿಯ ಕೆಂಡ ಸೇವೆಗೆ ಕೆಂಡ ಉರಿಯ ಬೇಕಿತ್ತು. ಕೆಲವು ವರ್ಷಗಳಿಂದ ಮಂದರ್ತಿ ಜಾತ್ರೆಯನ್ನು ಎಪ್ರಿಲ್ ತಿಂಗಳಿಗೆ ಮುಂದೂಡಲಾಗಿದೆ. ಹೀಗಾಗಿ ಕೆಂಡವನ್ನು ಮಂದರ್ತಿಗೆ ಕೊಂಡು ಹೋಗುವ ಪದ್ಧತಿ ನಿಂತು ಹೋಗಿದೆ.

ಸಿಡಿ ಆಚರಣೆ

ಕೆಂಡ ಸೇವೆಯ ಮರುದಿನ ಸಿಡಿ ಆಚರಣೆ ನಡೆಯುತ್ತದೆ. ಈ ಪದ್ಧತಿ ಪೂರ್ವ ಕಾಲದಿಂದ ಮುಂದುವರಿದಿದೆ. ಆದರೆ ಆಚರಣೆಯ ಸ್ವರೂಪದಲ್ಲಿ ಬದಲಾವಣೆ ಬಂದಿದೆ. ಸಿಡಿ ಕಂಬದ ತುದಿಯಲ್ಲಿ 'ಅಡ್ಡಮರ ಪಟ್ಟಿ' ಕಟ್ಟುತ್ತಾರೆ. ಇದನ್ನು ಗಿರಗಿರನೇ ತಿರುಗಿಸುವ ತಂತ್ರ ಇದೆ. ಸುಮಾರು ಕಾಲದ ಹಿಂದೆ ಬೆನ್ನಿನ ಚರ್ಮಕ್ಕೆ ಕೊಕ್ಕೆ ಸಿಕ್ಕಿಸುವ ಸಿಡಿ ಆಚರಣೆ ಇಲ್ಲಿ ನಡೆಯುತ್ತಿತ್ತು. ಬದಲಾದ ಪದ್ಧತಿಯಂತೆ ತಿರುಗಣೆ ಚಕ್ರಕ್ಕೆ ತೊಟ್ಟಿಲು ಕಟ್ಟುತ್ತಾರೆ. ಸಿಡಿ ಸೇವೆ ನೀಡುವವರು ತೊಟ್ಟಿಲಲ್ಲಿ ಕುಳಿತು ಸಿಡಿ ಸೇವೆ ನೀಡುತ್ತಾರೆ. ತೊಟ್ಟಿಲು ಮೇಲ್ಭಾಗದಲ್ಲಿ ಬಾಳೆ ಹಣ್ಣಿನ ಗೊನೆ ಕಟ್ಟುತ್ತಾರೆ. ತೊಟ್ಟಿಲು ಗಿರ ಗಿರನೇ ತಿರುಗುತ್ತದೆ. ಬಾಳೆ ಗೊನೆಯೂ ತಿರುಗುತ್ತದೆ. ತೊಟ್ಟಿಲಲ್ಲಿ ಇರುವವರು ಬಾಳೆ ಹಣ್ಣನ್ನು ಕಿತ್ತು ಕೆಳಗೆ ನೆರೆದ ಜನಸ್ತೋಮದ ಮಧ್ಯೆ ಎಸೆಯುತ್ತಾರೆ. ಅದನ್ನು ಪ್ರಸಾದ ಎಂದು ಹಿಡಿಯಲು ಪೈಪೋಟಿ ನಡೆಯುತ್ತದೆ. ಸಿಡಿ ಸೇವೆ ನೀಡುವವರು ಗಂಡು ಮಕ್ಕಳು ಮತ್ತು ಪುರುಷರು ಮಾತ್ರ.

ಮಾರಿ ಪೂಜೆ ಮತ್ತು ಕುಂಡೋದರ

ಕುಂಡೋದರ/ಮಹಿಷ ಗುಡಿಯ ಪಶ್ಚಿಮಕ್ಕೆ 'ಬಾರ್ಕೂರು ಶಿವರಾಯ ಗರಡಿ' ಇದೆ. ಈ ಗುಡಿಯ ಒಳಗೆ ಕುದುರೆ ಮೇಲೆ ಕುಳಿತ ತುಳು ಬ್ರಹ್ಮ (ಬೆರ್ಮೆರ್) ಪ್ರಧಾನ ಶಿಲ್ಪ ಇದೆ. ಕೋಟಿ ಚೆನ್ನಯರ ಮತ್ತು ಇತರ ಪರಿವಾರ ದೈವಗಳಿವೆ. ಹೊರಗೆ ಶಿವರಾಯ ಶಿಲ್ಪ ಇದೆ. ಇಲ್ಲಿಂದ ವರ್ಷಕ್ಕೆ ಒಮ್ಮೆ ಮಾರಿ ಓಡಿಸುತ್ತಾರೆ. ಗರಡಿಯಿಂದ ರಾತ್ರಿಯಲ್ಲಿ ಹೊರಡುವ 'ಮಾರಿ' ಓಟ ಬಾರ್ಕೂರು ವರ್ತುಲ ರಸ್ತೆಯಲ್ಲಿ ಇರುವ ಕಲ್ಲು ಚಪ್ಪರದ ಬಳಿಗೆ ಬರುತ್ತದೆ. ಕಲ್ಲು ಚಪ್ಪರದಲ್ಲಿ ಕುಚಲಕ್ಕಿ ಅನ್ನದ ಚರು ಹಾಕಿ ಪೂಜೆ ಮಾಡುತ್ತಾರೆ. ಅಲ್ಲಿಂದ ಮಾರಿ ಓಡಿಸುತ್ತಾ ಕುಂಡೋದರ ಗುಡಿಯ ಬಳಿಗೆ ಬರುತ್ತಾರೆ. ಗುಡಿಯ ಒಳಗೆ ಚರು ಹಾಕಿ ಪೂಜೆ ಮಾಡುತ್ತಾರೆ. ಅನಂತರ ಬಾವಿ ಕಟ್ಟೆಯಲ್ಲಿ ಬಾಳೆ ಎಲೆಹಾಕಿ ಬಿಳಿ ಬಟ್ಟೆ ಹಾಕಿ ಚರು ಹಾಕುತ್ತಾರೆ. ಚರುವಿನ ಮೇಲೆ ಕುಂಕುಮ (ಅಥವಾ ಓಕುಳಿ ನೀರು) ಉದುರಿಸುತ್ತಾರೆ. ಕೆಲವು ಕೋಳಿಗಳನ್ನು ಕಡಿದು ಈ ಚರುವಿನ ಮೇಲೆ ರಕ್ತ ಹಿಂಡುತ್ತಾರೆ. ಅಲ್ಲಿಂದ ಮಾರಿ ಓಡಿಸುವ ಕೂಗು ಹಾಕುತ್ತಾ ಬಾರ್ಕೂರಿನ ಗಡಿ ಪ್ರದೇಶ ಎಡ್ತಾಡಿಯವರೆಗೆ ಓಡುತ್ತಾರೆ. ಅಲ್ಲಿ ಗಡಿಯಲ್ಲಿ ಕೋಳಿ ಕಡಿಯುತ್ತಾರೆ. ಮರಳಿ ಎಲ್ಲರೂ ಶಿವರಾಯನ ಗುಡಿಗೆ ತೆರಳುತ್ತಾರೆ. ಶಿವರಾಯ ಕಟ್ಟೆಯಲ್ಲಿ ಶಿವರಾಯ ದರ್ಶನ ಇದೆ. ಹೀಗೆ ಈ ಗುಡಿಯ ಬಳಿ ಪ್ರಾಣಿ ಬಲಿ ಈಗಲೂ ನಡೆಯುತ್ತಿದೆ.

ಉಪಸಂಹಾರ

ಬಾರ್ಕೂರಿನ ಕುಂಡೋದರ ಕ್ಷೇತ್ರ ಮೂಲತಃ ತುಳುವರ ಮೂಲಕ್ಷೇತ್ರ. ನಾಗ ಬ್ರಹ್ಮ ಮತ್ತು ಪರಿವಾರ ದೈವಗಳ ಕ್ಷೇತ್ರ. ಇಲ್ಲಿ ಇರುವ ದೈವಗಳು ತುಳುವರ ಮೂಲತಾನದಲ್ಲಿ/ಹುಟ್ಟಿನ ಚಿತ್ತೇರಿಯಲ್ಲಿ ಇರುವ ದೈವಗಳು. ಕೃಷಿಪೋಷಕ ದೈವಗಳು. ಹಿಂದೆ ಇದು ಕಾಡು ಆಗಿದ್ದಿರಬಹುದು. ಇತ್ತೀಚಿನವರೆಗೂ ಬಿಲ್ಲವರು ಮಾವಿನ ರೆಂಬೆಗಳ ಪೊರಕೆ ಕಟ್ಟಿ ಈ ಗುಡಿ ಗುಡಿಸುತ್ತಾ ಒಳಗೆ ಪ್ರವೇಶಿಸುವ ಪದ್ಧತಿ ಇತ್ತು. ಇಂತಹ ಅನೇಕ ಆಚರಣೆಗಳು ಈ ಕ್ಷೇತ್ರ ಕಾಡಿನ ಮೂಲದ ಮಾನವನ ಉಪಾಸನಾ ಕ್ಷೇತ್ರ ಎನ್ನುವುದನ್ನು ಸಾಕ್ಷೀಕರಿಸುತ್ತದೆ.

ಮಹಿಷ ಅಥವಾ ನಂದಿಕೋಣ ಮೊದಲ ಉಪಾಸನೆ ಪಡೆಯುವ ದೈವ ಆದುದರಿಂದ ಈ ದೇಗುಲಕ್ಕೆ ಮಹಿಷಂತಾಯ ದೇಗುಲ ಎಂದು ಹೆಸರಾಗಿರಬೇಕು.

ಅಳಿಯ ಸಂತಾನವನ್ನು ಜಾರಿಗೆ ತಂದನೆಂಬ ಐತಿಹ್ಯದ ಕಥಾನಾಯಕ ದೇವಪಾಂಡ್ಯ ಮತ್ತು ಮೇಲೆ ನಾನು ತಿಳಿಸಿದ ಕಥಾನಾಯಕ ಹಿರಿಯಣ್ಣ ಸೆಟ್ರು ಇವರಿಬ್ಬರೂ ಬಾರ್ಕೂರಿನ ವ್ಯಾಪಾರಿಗಳು. ಬಹುಶಃ ಬಾರ್ಕೂರು ಹಿರಿಯಣ್ಣ ಸೆಟ್ರ ಕಥೆಯೇ ಮರುರಚನೆಗೊಂಡು ದೇವಪಾಂಡ್ಯ ಕಥೆ ಆಗಿ ಬೆಳಕಿಗೆ ಬಂದಿರಬಹುದು. ಆದರೆ ಇವರು ಆಡಳಿತಕ್ಕೆ ಸಂಬಂಧಪಟ್ಟವರಲ್ಲ. ಮಂಗಳೂರು ತಾಲೂಕಿನ ದೇವರಾಯ

ಕಾಮರಾಯ ಬಲ್ಲಾಳರು ಒಂದು ಬೀಡಿನ ಆಡಳಿತದಾರರು. ಕಂಡೆವು ಬೀಡು ಇಂದೂ ಮೂಲಸ್ಥಾನದ ಉಪಸನಾ ಆಚರಣೆಗಳನ್ನು ಮುಂದುವರಿಸಿದೆ. ಇಲ್ಲಿ ಮೂಲ ಮಹಿಷಂದಾಯ ಬಹಳ ಪ್ರಭಾವಶಾಲಿ. ಕುಮಾರ ಸಿರಿಶಕ್ತಿಗಳು ಹಾಗೂ ಧೂಮಾವತಿ, ಜಾರಂದಾಯ ಕೊಡಮಣಿತ್ತಾಯ–ಮುಂತಾದ ಪರಿವಾರ ಶಕ್ತಿಗಳು ಇವೆ. ಆದರೂ ಇವರು ಇಡಿಯ ತುಳುನಾಡಿನ ಪಿತೃಪ್ರಧಾನ ಸಮಾಜವನ್ನು ಮಾತೃಪ್ರಧಾನ ಸಮಾಜವನ್ನಾಗಿ ಪರಿವರ್ತಿಸುವಷ್ಟು ದೊಡ್ಡ ಅರಸರಲ್ಲ. ಮಾನವಶಾಸ್ತ್ರಜ್ಞರ ಪ್ರಕಾರ ಮಾತೃಪ್ರಧಾನತೆ ಪಿತೃಪ್ರಧಾನತೆಗೆ ಜಗತ್ತಿನ ಅನೇಕ ಕಡೆ ಪರಿವರ್ತನೆ ಆಗಿವೆ. ಆದರೆ ಪಿತೃಪ್ರಧಾನ ಸಮಾಜ ವ್ಯವಸ್ಥೆ ಮಾತೃಪ್ರಧಾನತೆಗೆ ಪರಿವರ್ತನೆಗೊಂಡಿರುವ ಉದಾಹರಣೆ ಇಲ್ಲ.

[ಅಧ್ಯಯನಕ್ಕೆ ನೆರವಾದವರು : ಗಣಪಯ್ಯ ಅಡಿಗ ಅರ್ಚಕರು ಸಿಂಹಾಸನ ಗುಡ್ಡೆ, ಭಾಸ್ಕರ ಶಾಸ್ತ್ರಿ, ಅರ್ಚಕರು, ಮಹಿಷಾಸುರ ದೇವಸ್ಥಾನ, ಅನೆ ಹಳ್ಳಿ ಗ್ರಾಮ, ಬಾರ್ಕೂರು ಉಡುಪಿ, ಬಾಬು ಪೂಜಾರಿ ಬಾರ್ಕೂರು ಮುಂಬೈ.]

ಆಧಾರಸೂಚಿ ಮತ್ತು ಅಡಿಟಿಪ್ಪಣಿಗಳು

೧. ಬಿ. ಲೀಲಾಭಟ್, ಶಕ್ತಿಯ ಶೋಧನೆಯಲ್ಲಿ ೧೯೯೯, ಕರ್ನಾಟಕ ಸಂಘ, ಪುತ್ತೂರು.

೨. ಗುರುರಾಜ ಭಟ್, ಬಾರ್ಕೂರು.

೩. ಕುಂಜಿಬೆಟ್ಟು ಸುಬ್ರಹ್ಮಣ್ಯ ಕೆದಿಲಾಯ, ಹಾಡಿಗೆ ಹನ್ನೆರಡು ಕಬರು.

೪. ಇಂದಿರಾ ಹೆಗ್ಗಡೆ, ಬಂಟರು ಒಂದು ಸಮಜೋ ಸಾಂಸ್ಕೃತಿಕ ಅಧ್ಯಯನ (ಕನ್ನಡ ಪುಸ್ತಕ ಪ್ರಾಧಿಕಾರ ೨೦೦೯).

೫. ಇಂದಿರಾ ಹೆಗ್ಗಡೆ, ತುಳುವರ ಮೂಲತಾನ ಆದಿ ಆಲಡೆ, ಪರಂಪರೆ ಮತ್ತು ಪರಿವರ್ತನೆ. (ನವಕರ್ನಾಟಕ ೨೦೧೨).

೬ ಸೂರ್ಯನಾಥ್ ಯು. ಕಾಮತ್, (ವಿಜಯನಗರ ಕಾಲದ ತುಳಿವರು).

೭. ಶೀನಪ್ಪ ಹೆಗ್ಗಡೆ ಸಮಗ್ರ ಸಾಹಿತ್ಯ, (೧೯೯೧).

೬೨

ಪ್ರಾಚೀನ ಕರ್ನಾಟಕದ ಅರಸು ಮನೆತನಗಳ ಮೂಲವನ್ನು ಸಾರುವ ಬಿರುದಾವಳಿಗಳು

ಡಾ. ಎಸ್.ವೈ. ಸೋಮಶೇಖರ್*

ಕರ್ನಾಟಕದಲ್ಲಿ ವಿವಿಧ ಅರಸು ಮನೆತನಗಳು ಆಳ್ವಿಕೆ ನಡೆಸಿರುವುದು ತಿಳಿದ ವಿಷಯ. ಈ ಮನೆತನಗಳ ಆಳ್ವಿಕೆಯ ಅವಧಿಯಲ್ಲಾದ ಅನೇಕ ಸಂಗತಿಗಳು ಚರಿತ್ರೆಯಲ್ಲಿ ದಾಖಲಾಗಿವೆ. ಅವುಗಳ ಮೂಲಕ ಪ್ರಾಚೀನ ಕರ್ನಾಟಕದ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಅಂಶಗಳನ್ನು ಕಟ್ಟಿಕೊಡುವ ಪ್ರಯತ್ನ ನಡೆಯುತ್ತಾ ಬಂದಿದೆ. ಅಂತೆಯೇ ಕರ್ನಾಟಕದ ಪ್ರಾಚೀನ ಅರಸು ಮನೆತನಗಳ ಮೂಲವನ್ನು ಕುರಿತ ಚರ್ಚೆಗಳು ನಡೆದಿವೆ ಮತ್ತು ಇಂದಿಗೂ ನಡೆಯುತ್ತಲಿವೆ. ಅದರಲ್ಲೂ ಪ್ರಾಚೀನ ಅರಸು ಮನೆತನಗಳ ಮೂಲ ಕುರಿತ ಮಾಹಿತಿಯನ್ನು ಹೊರಹಾಕಲು ಬಿರುದಾವಳಿಗಳು ಪ್ರಮುಖ ಆಕರಗಳಾಗಿ ಕಂಡುಬಂದಿರುವುದು ಗಮನಾರ್ಹ. ಪ್ರಾಚೀನ ಅರಸರು ತಮ್ಮನ್ನು ಅನೇಕ ಬಗೆಯ ಬಿರುದುಗಳಿಂದ ಬಣ್ಣಿಸಿಕೊಂಡಿರುವುದನ್ನು ಕಾಣಬಹುದು. ಕರ್ನಾಟಕದ ಪ್ರಾಚೀನ ಶಾಸನ–ಸಾಹಿತ್ಯಗಳಲ್ಲಿ ಉಲ್ಲೇಖಗೊಂಡಿರುವ ಬಿರುದುಗಳನ್ನು ಗಮನಿಸಿದರೆ ಬಿರುದಾವಳಿಗಳು ಪ್ರಾಚೀನರ ಬದುಕಿನ ಅವಿಭಾಜ್ಯ ಅಂಗಗಳೇನೋ ಎಂಬಂತೆ ಭಾಸವಾಗುತ್ತದೆ. ಈ ಬಗೆಯ ಬಿರುದುಗಳು ಹೆಚ್ಚಾಗಿ ವಿಶೇಷಣಗಳೇ ಆಗಿವೆ. ಹಾಗಿದ್ದೂ ಮನೆತನಗಳ ಮೂಲವನ್ನು ಕುರಿತಂತೆ ಹೇಳುವುದಾದರೆ ಇವು ಅಧಿಕೃತ ಆಕರಗಳಾಗಿಯೇ ನಿಲ್ಲುತ್ತಿರುವುದು ಗಮನೀಯ ಅಂಶ. ಬಿರುದಾವಳಿಗಳಲ್ಲಿ ಅರಸು ಮನೆತನ, ಕುಲಮೂಲ, ವಂಶ, ರಾಜಧಾನ ಮೊದಲಾದ ವಿವರಗಳಿವೆ. ಅವುಗಳನ್ನು ಗುರುತಿಸಿ ವಿಶ್ಲೇಷಿಸುವ ಪ್ರಯತ್ನ ಪ್ರಸ್ತುತ ಪ್ರಬಂಧದ್ದು.

ಆಕರಗಳ ಹಿನ್ನೆಲೆಯಲ್ಲಿ ಹೇಳುವುದಾದರೆ ಕರ್ನಾಟಕದಲ್ಲಿ ಮನೆತನಗಳನ್ನು ಕುರಿತ ಬಿರುದಾವಳಿಗಳು ಕಂಡುಬರುವುದು ಕದಂಬರ ಕಾಲದಿಂದ. ತಮ್ಮ ಕುಲಮೂಲ, ವಂಶ, ಮನೆತನ, ರಾಜಧಾನಿ ಪ್ರದೇಶಗಳನ್ನು ತಿಳಿಸುವ ಬಿರುದುಗಳು ಕದಂಬರಿಂದ ಆರಂಭವಾಗಿ ಪಾಳೆಯಗಾರರ ಕಾಲದವರೆಗೂ ಮುಂದುವರಿದಿವೆ.

ಕದಂಬ ಮನೆತನದ ಆರಂಭದ ಅರಸರು ತಾವು ಆಳುತ್ತಿದ್ದ ಪ್ರದೇಶವನ್ನೂ ಬಿರುದುಗಳ ಮೂಲಕ ಪ್ರಕಟಪಡಿಸಿದ್ದಾರೆ. ಆರಂಭದ ಅರಸ ಕಂಗವರ್ಮನು ತನ್ನನ್ನು ಕುಂತಲ ಭೂವಲ್ಲಭನೆಂದು ಕರೆದುಕೊಂಡಿದ್ದಾನೆ. ಇದರಿಂದ ಕುಂತಲನಾಡು ಇವರ ಆಳ್ವಿಕೆಯ ನೆಲೆವೀಡಾಗಿದ್ದುದು ಸ್ಪಷ್ಟವಾಗುತ್ತದೆ. ಹಾಗೆಯೇ ಇವರ ಮನೆತನವನ್ನು ಕುರಿತ ಬಿರುದುಗಳು ಕಾಕುಸ್ಥವರ್ಮನ ಕಾಲದಿಂದ ಕಂಡುಬರುತ್ತವೆ. ಇವನನ್ನು ಶಾಸನಗಳಲ್ಲಿ ಕದಂಬಕುಲ ಶಿರೋಮಣಿ, ಕದಂಬಕುಲ ಭೂಷಣನೆಂದು ಹೊಗಳಿವೆ. ರವಿವರ್ಮನನ್ನು ಕದಂಬತ್ರಣೇತ, ಕದಂಬ ಕಂಠೀರವನೆಂದು ಕರೆಯುವ ಜೊತೆಗೆ ಅವನ ರಾಜಧಾನಿ ವಿವರವುಳ್ಳ ಕುಂತಲ ಭೂವಲ್ಲಭ, ಬನವಾಸಿ ಪುರವರಾಧೀಶ್ವರ, ಬನವಾಸಿ ವಿಷಯಾಧೀಶ್ವರ ಎಂಬ ಬಿರುದುಗಳು ಕಾಣಬರುತ್ತವೆ. ಈ ಬಗೆಯ ಬಿರುದುಗಳನ್ನು ಕದಂಬರು ಸ್ವತಂತ್ರವಾಗಿ ಆಳ್ವಿಕೆ ಮಾಡುವಾಗಲೂ, ಸಾಮಂತ, ಮಾಂಡಲಿಕರಾಗಿ ಆಳುತ್ತಿದ್ದಾಗಲೂ ಧರಿಸಿರುವರು. ಕದಂಬರಲ್ಲಿ ಅನೇಕ ಶಾಖೆಗಳಿವೆ. ಅವು ಗೋವಾ ಕದಂಬರು, ಹಾನಗಲ್ಲು ಕದಂಬರು ಇತ್ಯಾದಿ. ಈ ಎಲ್ಲ ಶಾಖೆಗಳವರೂ ತಮ್ಮ ಮನೆತನದ ಮೂಲ ಬಿರುದುಗಳನ್ನು ಧರಿಸುವ ಪರಿಪಾಠವನ್ನು ಮುಂದುವರಿಸಿದ್ದಾರೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಸಾಮಂತ, ಮಾಂಡಲಿಕರಾಗಿ ಆಳುತ್ತಿದ್ದ ಆದಿತ್ಯವರ್ಮರಸ(ಕ್ರಿ.ಶ. ೯೯೨), ಹರಿಕೇಶ್ವರದೇವ (ಕ್ರಿ.ಶ. ೧೦೫೫) ಬನವಾಸಿ ಪುರವರಾಧೀಶ್ವರರೆಂದು ಕರೆದಕೊಂಡಿದ್ದಾರೆ. ಹರಿಕೇಶ್ವರದೇವನು ಕದಂಬ ಚಕ್ರವರ್ತಿ. ಕದಂಬಕುಳಕಮಳ ಮಾರ್ತಾಂಡ, ಕಾದಂಬ ಚಕ್ರಿಯೆಂದೂ[೧] ತೋಯಿಮರಸದೇವ (ಕ್ರಿ.ಶ. ೧೦೬೭) ಕದಂಬಕುಲ ಭೂಷಣ,[೨] ನಾಗವರ್ಮರಸ (ಕ್ರಿ.ಶ. ೧೦೭೭) ಕದಂಬಾಭರಣ,[೩] ನಾಚಿದೇವರಸ (ಕ್ರಿ.ಶ. ೧೦೮೫) ಕದಂಬಕುಲಕಮಲ ಮಾರ್ತಾಂಡ,[೪] ವೀರಪೆರ್ಮಾಡಿದೇವರಸ (ಕ್ರಿ.ಶ. ೧೧೭೩) ಕದಂಬವಂಶ ಮಹೋದಯ, ಕಾದಂಬ

* ಸಹ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಚೂಡಾಮಣಿ ಎಂದು ವಿಶಿಷ್ಟವಾಗಿ ಬಣ್ಣಿಸಿಕೊಂಡಿದ್ದಾನೆ.[೫] ಹಾಗೆಯೇ ಹಾನಗಲ್ಲಿನ ಕದಂಬರಾದ ೨ನೇ ಶಾಂತಿವರ್ಮ (ಕ್ರಿ.ಶ. ೧೦೭೫) ಕದಂಬ ಕಂಠೀರವನೆಂದೂ,[೬] ೧ನೇ ಕೀರ್ತಿವರ್ಮ ಕಾದಂಬಚಕ್ರಿ, ಕಾದಂಬರಾಭರಣನೆಂದು ಕರೆದುಕೊಂಡಿದ್ದಾರೆ.[೭] ವಿಜಯನಗರ ಕಾಲದಲ್ಲಿ ಬನವಾಸಿ ಪ್ರದೇಶವನ್ನು ನೋಡಿಕೊಳ್ಳುತ್ತಿದ್ದ ಬಿಕ್ಕಿದೇವ ಒಡೆಯ (ಕ್ರಿ.ಶ. ೧೩೬೯)ನನ್ನು ಕದಂಬರಾಯ ಕುಲಾಚಾರ್ಯನೆಂದು ಕರೆಯಲಾಗಿದೆ.[೮] ಒಟ್ಟಿನಲ್ಲಿ ಈ ಮೇಲಿನ ಬಿರುದಾವಳಿಗಳಿಂದ ಕದಂಬ ಮನೆತನ ಕುರಿತು ಹಾಗೂ ಅವರ ಆಳ್ವಿಕೆ ಕ್ರಿ.ಶ. ೪ನೆಯ ಶತಮಾನದಿಂದ ಹಿಡಿದು ೧೪ನೆಯ ಶತಮಾನದ ವರೆಗೆ ಒಂದಲ್ಲಾ ಒಂದು ಬಗೆಯಲ್ಲಿ ಕರ್ನಾಟಕದಲ್ಲಿ ಮುಂದುವರಿದದ್ದು ಸ್ಪಷ್ಟವಾಗುತ್ತದೆ.

ಕದಂಬರ ಬಳಿಕ ಕಾಣಬರುವ ಅರಸು ಮನೆತನ ಗಂಗರದು. ಗಂಗರು ಕರ್ನಾಟಕದಲ್ಲಿ ಸುದೀರ್ಘ ಆಳ್ವಿಕೆ ನಡೆಸಿದ್ದಾರೆ. ಕೊಂಗಣಿವರ್ಮ ಈ ಮನೆತನದ ಮೂಲಪುರುಷ. ಈತನಗೆ ಪ್ರಥಮ ಗಂಗನೆಂಬ ಬಿರುದಿತ್ತು. ಅಲ್ಲದೆ ಮೂಲಪುರುಷನಾದ ಇವನ ಹೆಸರನ್ನು ನಂತರ ಬಂದ ಈ ಮನೆತನದ ಅರಸರು ವಿಶೇಷಣವಾಗಿ ಧರಿಸಿದ್ದುದು ಕಂಡುಬರುತ್ತದೆ. ಅಂತೆಯೇ ಅವರು ಕೊಂಗಣಿವರ್ಮ ಧರ್ಮಮಹಾರಾಜ, ಸ್ಥಿರಪೃಥಿವೀ ಕೊಂಗಣಿ ಎಂಬುದಾಗಿ ತಮ್ಮನ್ನು ಕರೆದುಕೊಂಡಿದ್ದಾರೆ. ಹಾಗೆಯೇ ಗಂಗ ಎಂಬುದನ್ನು ಬಹಳ ವಿಶಿಷ್ಟವಾಗಿ ಬಿರುದುಗಳಲ್ಲಿ ಬಳಸಿದ್ದಾರೆ. ೧ನೇ ನೀತಿಮಾರ್ಗ ಎರೆಯಂಗ(ಕ್ರಿ.ಶ. ೮೪೩-೮೭೦)ನು ಗಂಗಚಕ್ರಾಯುಧಾಂಕ, ಗಂಗನಾರಾಯಣ ನೆಂದು[೯] ಕರೆದುಕೊಂಡರೆ, ಸಾಮಂತ, ಮಾಂಡಲಿಕರಾಗಿ ಆಳ್ವಿಕೆ ನಡೆಸಿದ ೨ನೇ ಬೂತುಗ (ಕ್ರಿ.ಶ. ೯೩೬-೯೬೧)ನು ಗಂಗಗಾಂಗೇಯ, ನನ್ನಿಯಗಂಗ, ಗಂಗಾನ್ವಯ ಕುಲತಿಲಕ ನೆಂದೂ,[೧೦] ಮರುಳದೇವನು ಗಂಗಮಾರ್ತಾಂಡ, ೨ನೇ ಮಾರಸಿಂಹನು ಗಂಗಕಂದರ್ಪ, ಗಂಗಚೂಡಾಮಣಿ, ಗಂಗರಸಿಂಹ, ಗಂಗವಜ್ರ, ಗುತ್ತಿಯಗಂಗನೆಂದೂ[೧೧] ಬಣ್ಣಿಸಿ ಕೊಂಡಿದ್ದಾರೆ. ಕಲ್ಯಾಣ ಚಾಲುಕ್ಯ ಅವಧಿಯಲ್ಲಿದ್ದ ಗಂಗರಸ (ಕ್ರಿ.ಶ. ೧೧೨೦)ನನ್ನು ಕೊಳಾಲ ಪುರವರಾಧೀಶ್ವರ, ನನ್ನಿಯ ಗಂಗನೆಂದು ಶಾಸನದಲ್ಲಿ ಕರೆಯಲಾಗಿದೆ.[೧೨] ಹೀಗೆ ತಮ್ಮ ಮನೆತನವನ್ನು ಸೂಚಿಸುವ ಗಂಗ ಪದವನ್ನು ಹಾಗೂ ತಮ್ಮ ಮೂಲ ರಾಜಧಾನಿ ಕೋಳಾಲಪುರ(ಕೋಲಾರ)ವನ್ನು ಬಿರುದಿನಲ್ಲಿ ಧರಿಸುವ ಮೂಲಕ ತಮ್ಮ ಮೂಲವನ್ನು ಉಲ್ಲೇಖಿಸುವ ಪ್ರಯತ್ನ ಮಾಡಿರುವುದು ಗಮನಾರ್ಹ.

ಕರ್ನಾಟಕದ ಚರಿತ್ರೆಯಲ್ಲಿ ಚಾಲುಕ್ಯ ಮನೆತನದ ಪಾತ್ರ ಮಹತ್ವದ್ದು. ಇವರು ಬಾದಾಮಿ, ವೆಂಗಿ ಹಾಗೂ ಕಲ್ಯಾಣದ ಚಾಲುಕ್ಯರೆಂದೇ ಪ್ರಸಿದ್ಧರಾಗಿದ್ದಾರೆ. ಈ ಮನೆತನಗಳ ಅರಸರು ತಮ್ಮ ಮೂಲವನ್ನು ಚಲುಕ್ಯ, ಚಳುಕ್ಯ, ಚಾಲುಕ್ಯ ಎಂಬುದಾಗಿ ಸ್ಪಷ್ಟಪಡಿಸಿರುವರು. ಇದಕ್ಕೆ ಅನೇಕ ಬಿರುದುಗಳು ಸಾಕ್ಷ್ಯಗಳಾಗಿವೆ.

ಬಾದಾಮಿ ಚಾಲುಕ್ಯ ಮನೆತನದ ಆರಂಭಿಕ ಅರಸನಾದ ಜಯಸಿಂಹನು ವಲ್ಲಭೇಶ್ವರನೆಂದು ಕರೆದುಕೊಂಡಿದ್ದರೆ, ೧ನೇ ಪುಲಕೇಶಿ (ಕ್ರಿ.ಶ. ೫೪೩-೫೬೭) ಚಾಳುಕ್ಯ ವಲ್ಲಭೇಶ್ವರನೆಂದು ಬಣ್ಣಿಸಿಕೊಂಡಿದ್ದಾನೆ.[೧೩] ೧ನೇ ಕೀರ್ತಿವರ್ಮನನ್ನು ಚಾಲುಕ್ಯ ವಂಶಾಂಬರನೆಂದು ಕರೆದರೆ,[೧೪] ಇಮ್ಮಡಿ ಪುಲಕೇಶಿಯನ್ನು ಚಲುಕಿ ಕುಲಾಲಂಕಾರನೆಂದೂ ವರ್ಣಿಸಲಾಗಿದೆ.[೧೫] ಈ ಬಿರುದುಗಳನ್ನು ಮುಂದೆ ಬಂದ ಅರಸರು ಸಾಮಾನ್ಯವಾಗಿ ಧರಿಸಿದ್ದಾರೆ.

ರಾಷ್ಟ್ರಕೂಟರ ಅವಧಿಯಲ್ಲಿ ಮಹಾಸಾಮಂತನಾಗಿ ಕೋಗಳಿ-೫೦೦ನ್ನು ಆಳುತ್ತಿದ್ದ ಕತ್ಯೆರ (ಕ್ರಿ.ಶ. ೯೪೪)ನು ತನ್ನನ್ನು ಚಾಳುಕ್ಯ ವಂಶೋದ್ಭವನೆಂದೂ,[೧೬] ಅದೇ ಅವಧಿಯ ಧೋರಪಯ್ಯ (ಕ್ರಿ.ಶ. ೯೫೪)ನು ಚಾಳುಕ್ಯ ನಾರಾಯಣನೆಂದು ಕರೆದುಕೊಂಡಿದ್ದಾರೆ.[೧೭] ಇದರಿಂದ ರಾಷ್ಟ್ರಕೂಟರ ಅವಧಿಯಲ್ಲಿ ಚಾಲುಕ್ಯರು ಸ್ವತಂತ್ರವಾಗಿ ಆಳ್ವಿಕೆ ನಡೆಸದಿದ್ದರೂ ಸಾಮಂತರಾಗಿ ಅಧಿಕಾರದಲ್ಲಿ ಮುಂದುವರಿದುದು ದೃಢವಾಗುತ್ತದೆ. ಹಾಗೆಯೇ ರಾಷ್ಟ್ರಕೂಟರನ್ನು ಹತ್ತಿಕ್ಕಿಬಂದ ಕಲ್ಯಾಣ ಚಾಲುಕ್ಯರು ತಮ್ಮ ಮೂಲವನ್ನು ಹೆಮ್ಮೆಯಿಂದ ದಾಖಲಿಸುವ ಪ್ರಯತ್ನವನ್ನು ಮಾಡಿದ್ದಾರೆ.

ಕಲ್ಯಾಣ ಚಾಲುಕ್ಯ ಮನೆತನದ ಮೊದಲ ಅರಸ ೨ನೇ ತೈಲಪನು ಚಾಳುಕ್ಯ ರಾಮ, ಚಾಳುಕ್ಯಾಭರಣ, ಚಾಳುಕ್ಯ ವಂಶೋದ್ಭವನೆಂದು ಕರೆಯುವ ಮೂಲಕ ಚಾಳುಕ್ಯ ಮನೆತನದವನೆಂದು ತನ್ನನ್ನು ಸ್ಪಷ್ಟಪಡಿಸಿಕೊಂಡಿದ್ದಾನೆ.[೧೮] ಹಾಗೆಯೇ ಇವನು ರಾಷ್ಟ್ರಕೂಟರನ್ನು ಅಧಿಕಾರದಿಂದ ಕಿತ್ತೊಗೆದು ರಟ್ಟಘರಟ್ಟನೆಂದು ಕರೆದುಕೊಂಡಿದ್ದಾನೆ. ಇವನ ನಂತರ ಬಂದ ಸತ್ಯಾಶ್ರಯ (ಕ್ರಿ.ಶ. ೯೯೭-೧೦೦೮)ನು ಚಾಳುಕ್ಯ ಕಂದರ್ಪ, ಚಾಳುಕ್ಯ ಮಾರ್ತಾಂಡನೆಂದೂ,[೧೯] ೫ನೇ ವಿಕ್ರಮಾದಿತ್ಯ ಸತ್ಯಾಶ್ರಯ ಕುಳತಿಳಕ,[೨೦] ೧ನೇ ಸೋಮೇಶ್ವರ ಚಾಳುಕ್ಯ ಚೂಡಾಮಣಿ,[೨೧] ವಿಜಯಾದಿತ್ಯ ಚಾಳುಕ್ಯ ಮಾಣಿಕ್ಯ,[೨೨] ೬ನೇ ವಿಕ್ರಮಾದಿತ್ಯ ಚಾಳುಕ್ಯ ನಾರಾಯಣ, ಚಾಳುಕ್ಯಾಭರಣ, ಚಾಳುಕ್ಯ ಚಕ್ರೇಶ್ವರ ಎಂದು ಕರೆದುಕೊಂಡಿದ್ದಾರೆ.[೨೩] ೨ನೇ ಜಗದೇಕಮಲ್ಲನು ಮುಂದುವರಿದು ಚಾಳುಕ್ಯ ಪ್ರತಾಪಚಕ್ರವರ್ತಿ, ಚಾಲುಕ್ಯ ವಂಶಲಲಾಮನೆಂದೂ,[೨೪] ೩ನೇ ತೈಲಪನು ಶ್ರೀಮದ್ವಿಕ್ರಮ ಚಕ್ರವರ್ತಿಯೆಂದೂ ಕರೆದುಕೊಂಡಿರುವರು.[೨೫] ಕಲ್ಯಾಣ ಚಾಲುಕ್ಯ ಮನೆತನದ ಕೊನೆಯ ಅರಸನಾದ ೪ನೇ

ಸೋಮೇಶ್ವರನು ಈ ಮೇಲಿನ ಬಿರುದುಗಳಲ್ಲದೆ ಕಲಚೂರ್ಯರಿಂದ ಸಾಮ್ರಾಜ್ಯವನ್ನು ವಶಮಾಡಿಕೊಂಡ ನೆನಪಿಗೆ ಕಲಚೂರ್ಯ ಕುಲನಾಶಕನೆಂಬ ಬಿರುದನ್ನು ಧರಿಸಿದ್ದಾನೆ.[೨೬] ಹಾಗೆಯೇ ಚಾಲುಕ್ಯ ಸಾಮ್ರಾಜ್ಯವನ್ನು ಪುನರ್‌ಸ್ಥಾಪಿಸಿದ ಹಿನ್ನೆಲೆಯಲ್ಲಿ ಚಾಲುಕ್ಯರಾಜ ಸಮುದ್ದರಣನೆಂದೂ ತನ್ನನ್ನು ಕರೆದುಕೊಂಡಿರುವನು.

ಚಾಲುಕ್ಯ ಮನೆತನವು ಕಲ್ಯಾಣ ಚಾಲುಕ್ಯರ ಕಾಲಕ್ಕೇ ಕೊನೆಗೊಳ್ಳಲಿಲ್ಲ. ವಿಜಯನಗರ ಕಾಲದಲ್ಲಿ(ಕ್ರಿ.ಶ. ೧೪೮೭) ಆಳುತ್ತಿದ್ದ ವಲ್ಲಭರಾಯ ಮಹಾರಾಜ ಎಂಬುವವನು ತನ್ನನ್ನು ಚಾಳುಕಿ ಚಕ್ರವರ್ತಿ, ಚಾಳುಕಿ ನಾರಾಯಣನೆಂದು ಕರೆದುಕೊಂಡಿದ್ದಾನೆ.[೨೭] ಇದರಿಂದ ಚಾಲುಕ್ಯ ಮನೆತನದ ಅಸ್ತಿತ್ವ ಕ್ರಿ.ಶ. ೬ನೇ ಶತಮಾನದಿಂದ ೧೪ನೇ ಶತಮಾನದವರೆಗೂ ಕರ್ನಾಟಕದ ಇತಿಹಾಸದಲ್ಲಿ ವಿರಾಜಮಾನರಾಗಿ ಇದ್ದುದನ್ನು ಬಿರುದಾವಳಿಗಳಿಂದ ಗುರುತಿಸಬಹುದಾಗಿದೆ.

ಕರ್ನಾಟಕದಲ್ಲಿ ಚಾಲುಕ್ಯರಂತೆಯೇ ರಾಷ್ಟ್ರಕೂಟರು ವಿಶಿಷ್ಟವಾದ ಕೊಡುಗೆಗಳನ್ನು ನೀಡಿದ್ದಾರೆ. ಇವರಲ್ಲಿ ಒಬ್ಬೊಬ್ಬ ಅರಸ ಒಂದೊಂದು ಬಗೆಯ ವಿಶಿಷ್ಟ ಬಿರುದಿನ ಮೂಲಕ ತಮ್ಮನ್ನು ಗುರುತಿಸಿಕೊಳ್ಳುವ ಪ್ರಯತ್ನವನ್ನು ಮಾಡಿದ್ದಾರೆ. ೧ನೇ ಕೃಷ್ಣನು ಅಕಾಲವರ್ಷನೆಂದೂ, ೨ನೇ ಗೋವಿಂದನು ಪ್ರಭೂತವರ್ಷ, ಧ್ರುವನು ಧಾರಾವರ್ಷ, ಅಮೋಘವರ್ಷನು ನಿತ್ಯವರ್ಷ, ೪ನೇ ಗೋವಿಂದನು ಸುವರ್ಣವರ್ಷ ಎಂದು ಬಣ್ಣಿಸಿಕೊಂಡಿರುವುದು ಗಮನಾರ್ಹ. ಹಾಗೆಯೇ ಈ ಮನೆತನದವರು ತಮ್ಮ ಮನೆತನ, ವಂಶ, ರಾಜಧಾನಿಗಳನ್ನೂ ಬಿರುದಾವಳಿಗಳ ಮೂಲಕ ದಾಖಲಿಸಿದ್ದಾರೆ. ಅದರಲ್ಲೂ ತಮ್ಮ ಮೂಲ ರಾಜಧಾನ ಲಟ್ಟಲೂರೆಂದೂ, ತಾವು ರಟ್ಟರು ಹಾಗೂ ಯಾದವ ವಂಶದವರೆಂದು ಗುರುತಿಸಿಕೊಂಡಿದ್ದಾರೆ. ೧ನೇ ಕೃಷ್ಣನು ತನ್ನನ್ನು ಯಾದವ ವಂಶೋದ್ಭವನೆಂದು[೨೮] ಕರೆದುಕೊಳ್ಳುವ ಮೂಲಕ ಯಾದವ ವಂಶದವನೆಂದು ದಾಖಲಿಸುತ್ತಾನೆ. ಅಮೋಘವರ್ಷನು ತನ್ನ ಮೂಲ ರಾಜಧಾನಿ ಕುರಿತಂತೆ ಲಟ್ಟಲೂರ ಪುರವರಾಧೀಶ್ವರನೆಂದೂ ಕರೆದುಕೊಂಡಿದ್ದಾನೆ. ಹಾಗೆಯೇ ತನ್ನ ಕುಲಮೂಲವನ್ನು ಕುರಿತಂತೆ ಯದುಕುಳನರಪಾಳನೆಂದೂ ಕರೆದುಕೊಂಡಿರುವನು.[೨೯] ೩ನೇ ಇಂದ್ರನು ರಟ್ಟಕಂದರ್ಪ, ರಟ್ಟರ ಮೇರು, ಲತ್ತಲೂರಪುರಪರಮೇಶ್ವರನೆಂದೂ,[೩೦] ೩ನೇ ಕೃಷ್ಣನು ರಟ್ಟಕುಲ ಚಕ್ರವರ್ತಿ, ರಟ್ಟಕುಲಾನ್ವಯನೆಂದೂ,[೩೧] ಕೊಟ್ಟಿಗದೇವನು ರಟ್ಟತಿಲಕನೆಂದೂ,[೩೨] ಬನವಾಸಿಯ ಸಾಮಂತನಾಗಿದ್ದ ಶಂಕರಗಂಡನು (ಕ್ರಿ.ಶ. ೯೨೪) ರಟ್ಟರ ಮೇರು ಎಂಬುದಾಗಿ ಕರೆದುಕೊಂಡಿದ್ದಾರೆ.[೩೩] ೪ನೇ ಕೃಷ್ಣನು ಮಾನ್ಯಖೇಟ ಪುರಭೂಷಣನೆಂದು ಕರೆದುಕೊಳ್ಳುವ ಮೂಲಕ ಲತ್ತಲೂರಿನಿಂದ ರಾಜಧಾನಿಯನ್ನು ಮಾನ್ಯಖೇಟಕ್ಕೆ ವರ್ಗಾಯಿಸಿದ್ದುದು ತಿಳಿಯುತ್ತದೆ.[೩೪] ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಅವಧಿಯಲ್ಲಿ ರಾಷ್ಟಕೂಟರು ಸಾಮಂತರಾಗಿ ಆಳಿದ ವಿವರಗಳು ಶಾಸನಗಳಲ್ಲಿ ಗೋಚರಿಸುತ್ತದೆ. ಕ್ರಿ.ಶ. ೧೦೬೨ ರಲ್ಲಿ ಮಹಾರಾಷ್ಟ್ರ ಭಾಗದಲ್ಲಿ ಮಹಾಸಾಮಂತನಾಗಿದ್ದ ಕಾಳಸೇನರಸನನ್ನು ರಟ್ಟಕುಲಭೂಷಣನೆಂದು ಶಾಸನವೊಂದರಲ್ಲಿ ಕರೆಯಲಾಗಿದೆ.[೩೫] ಈ ಮೇಲಿನ ಬಿರುದುಗಳಿಂದ ರಾಷ್ಟ್ರಕೂಟರು ತಮ್ಮನ್ನು ರಟ್ಟರು, ರಾಷ್ಟ್ರಕೂಟರು, ರಟ್ಟ ಕುಲದವರೆಂದೂ, ಹಾಗೆಯೇ ಯಾದವ ಅಥವಾ ಯದುಂಶದವರೆಂದು ಕರೆದುಕೊಂಡಿರುವುದು ಗಮನೀಯ ಸಂಗತಿ.

ಕಲ್ಯಾಣ ಚಾಲುಕ್ಯರ ಬಳಿಕ ಆಳಿದ ಕಲ್ಯಾಣದ ಕಲಚೂರಿಗಳು ತಮ್ಮ ಮನೆತನದ ಮೂಲವನ್ನು ಬಿರುದುಗಳಲ್ಲಿ ದಾಖಲಿಸಿದ್ದಾರೆ. ಇಮ್ಮಡಿ ಬಿಜ್ಜಳದೇವ ತನ್ನನ್ನು ಕಳಚೂರ್ಯ ಚಕ್ರವರ್ತಿ, ಕಳಚೂರ್ಯ ಕುಳಕಮಳಮಾರ್ತಾಂಡ, ಕಾಳಂಜರ ಪುರವರಾಧೀಶ್ವರನೆಂದು ಕರೆದುಕೊಂಡಿದ್ದಾನೆ. ಹಾಗೆಯೇ ತನ್ನ ರಾಜಧಾನಿ ಕುರಿತಂತೆ ಕಲ್ಯಾಣ ಪುರವರಾಧೀಶನೆಂದೂ ಬಣ್ಣಿಸಿಕೊಂಡಿರುವನು.[೩೬] ಇವೇ ಬಿರುದುಗಳನ್ನು ಈ ಮನೆತನದ ಮುಂದಿನ ಅರಸರೂ ಧರಿಸಿದ್ದಾರೆ. ಮಲ್ಲುಗಿದೇವನು ಕಳಚೂರ್ಯ ಪ್ರತಾಪಚಕ್ರವರ್ತಿಯೆಂದು ತನ್ನನ್ನು ಕರೆದುಕೊಂಡಿರುವನು.

ನೊಳಂಬ ಅರಸರ ಆಳ್ವಿಕೆಯನ್ನು ಕರ್ನಾಟಕ, ಆಂಧ್ರ ಪ್ರದೇಶಗಳಲ್ಲಿ ಕಾಣುತ್ತೇವೆ. ಇವರಲ್ಲಿ ಸಿಂಹಪೋತಕಲಿಯು ತನ್ನನ್ನು ನೊಳಂಬಾಧಿರಾಜ, ಪಲ್ಲವಾನ್ವಯ, ಪಲ್ಲವ ಕುಲತಿಲಕನೆಂದು ಕರೆದುಕೊಂಡಿದ್ದಾನೆ.[೩೭] ಇದರಿಂದ ನೊಳಂಬರು ಪಲ್ಲವ ವಂಶಕ್ಕೆ ಸೇರಿದವರೆಂದು ಗೊತ್ತಾಗುತ್ತದೆ. ನೊಳಂಬ ದಿಲೀಪನು ನೊಳಂಬ ನಾರಾಯಣ, ಪಲ್ಲವರಮ, ಪಲರೊಡೆಗಂಡ, ಪಲ್ಲವಮುರಾರಿ, ಪಲ್ಲವಾದಿತ್ಯ, ಪಲ್ಲವೋಳ್ಗಂಡ ಎಂಬ ವಿಶಿಷ್ಟ ಬಿರುದುಗಳಿಂದ ಖ್ಯಾತಿ ಹೊಂದಿದ್ದುದಲ್ಲದೆ ಅವನು ತಾನು ಪಲ್ಲವ ಮನೆತನದವನೆಂಬುದನ್ನು ಒತ್ತಿ ಹೇಳಿಕೊಂಡಿದ್ದಾನೆ. ಹಾಗೆಯೇ ೨ನೇ ಮಹೇಂದ್ರನು ಪಲ್ಲವಾಭರಣ,[೩೮] ೨ನೇ ಇರಿವ ನೊಳಂಬನು ಕಾಂಚೀಪುರವರೇಶ್ವರ, ಉದಯಾದಿತ್ಯ ಕಾಂಚಿಪುರವರೇಶ್ವರ, ನೊರೆಯೂರು ಪುರವರಾಧೀಶ್ವರ, ಪಲ್ಲವ ಕುಲಾನ್ವಯನೆಂದು ಕರೆದುಕೊಂಡಿದ್ದಾರೆ.[೩೯] ಹೀಗೆ ನೊಳಂಬರು ತಾವು ಮೂಲತಃ ತಮಿಳುನಾಡಿನ ಕಂಚಿಯವರಾಗಿದ್ದು ಪಲ್ಲವ ಮನೆತನಕ್ಕೆ ಸೇರಿದವರೆಂಬುದನ್ನು ದಾಖಲಿಸಿರುವುದು ಗಮನಾರ್ಹ.

ಕಲ್ಯಾಣ ಚಾಲುಕ್ಯರ ನಂತರ ಬಂದ ದೇವಗಿರಿ ಯಾದವರು ಅಥವಾ ಸೇವುಣರು ತಮ್ಮನ್ನು ಯಾದವರೆಂದೇ

ಗುರುತಿಸಿಕೊಂಡಿದ್ದಾರೆ. ಈ ಮನೆತನದ ೫ನೇ ಭಿಲ್ಲಮ ಯಾದವ ನಾರಾಯಣ, ಯಾದವ ಚಕ್ರವರ್ತಿ, ವಿಷ್ಣು ವಂಶೋದ್ಭವನೆಂಬ ಬಿರುದುಗಳನ್ನು ಹೊಂದಿದ್ದನು.[೪೦] ಜೈತುಗಿಯು ದ್ವಾರಾವತಿ ಪುರವರಾಧೀಶ್ವರ, ಯಾದವ ವಂಶಾಂಬರದ್ಯುಮಣಿ, ಯಾದವಕುಳಕಮಲನೆಂದೂ ಬಣ್ಣಿಸಿಕೊಂಡಿದ್ದಾನೆ.[೪೧] ಹಾಗೆಯೇ ೨ನೇ ಸಿಂಗಣನನ್ನು ಯಾದವಕುಳಕಮಲ ಮಾರ್ತಾಂಡನೆಂದು ಕರೆದರೆ,[೪೨] ಕನ್ನರ ದೇವನನ್ನು ಯಾದವಕುಲತಿಲಕನೆಂದು ಬಣ್ಣಿಸಲಾಗಿದೆ.[೪೩] ಇವೇ ಬಿರುದುಗಳನ್ನು ಮುಂದೆ ಬಂದ ಅರಸರೂ ಧರಿಸಿ ದ್ದಾರೆ. ಸೇವುಣರು ತಾವು ಯಾದವ ಕುಲದವರೆಂಬುದನ್ನು ಬಿರುದುಗಳ ಮೂಲಕ ಒತ್ತಿ ಹೇಳಿಕೊಂಡಿರುವುದನ್ನು ಇಲ್ಲಿ ಗಮನಿಸಬಹುದು. ಇದೇ ಅವಧಿಯಲ್ಲಿ ಆಳ್ವಿಕೆ ನಡೆಸಿದ ಹೊಯ್ಸಳರು ಕೂಡ ತಮ್ಮನ್ನು ದ್ವಾರಾವತೀ ಪುರವರಾಧೀಶ್ವರ ರೆಂದು ಕರೆದುಕೊಂಡಿದ್ದಾರೆ. ವಿಷ್ಣುವರ್ಧನ, ವೀರ ನರಸಿಂಹ, ೨ನೇ ನರಸಿಂಹ ಮೊದಲಾದವರು ಯಾದವಕುಲತಿಲಕ, ಯಾದವನಾರಾಯಣ, ಯಾದವ ಕುಲಾಂಬರದ್ಯು ಮಣಿಯೆಂದು ಹೇಳಿಕೊಳ್ಳುವ ಮೂಲಕ ತಾವು ಯಾದವ ವಂಶಕ್ಕೆ ಸೇರಿದವರೆಂದು ಹೇಳಿಕೊಂಡಿದ್ದಾರೆ.[೪೪]

ಕಮ್ಮಟದುರ್ಗದ ಕಂಪಿಲರಾಯನು ತನ್ನನ್ನು ಯಾದವ ನಾರಾಯಣನೆಂದು ಕರೆದುಕೊಡಿದ್ದಾನೆ.[೪೫] ವಿಜಯನಗರ ಅರಸರ ಕಾಲದಲ್ಲಿ ಅನೇಕ ಬಗೆಯ ಬಿರುದುಗಳನ್ನು ಶಾಸನ–ಸಾಹಿತ್ಯಗಳಲ್ಲಿ ಕಾಣುತ್ತೇವೆ. ಅವರು ಹಿಂದೂರಾಯ ಸುರತ್ರಾಣ, ದಕ್ಷಿಣ ಸಮುದ್ರಾಧೀಶ್ವರ, ಉತ್ತರದಕ್ಷಿಣಪೂರ್ವಪಶ್ಚಿಮ ಸಮುದ್ರಾಧಿಪತಿ ಮುಂತಾಗಿ ಬಣ್ಣಿಸಿಕೊಂಡಿದ್ದಾರೆ. ಹಾಗೆಯೇ ಇವರ ಬಿರುದುಗಳಲ್ಲಿ ತಮ್ಮ ಮನೆತನವನ್ನು ಹೇಳಿಕೊಳ್ಳುವ ಪ್ರಯತ್ನವನ್ನೂ ಮಾಡಿದ್ದಾರೆ. ೨ನೇ ಹರಿಹರನು ಪಡವಾರ ವಂಶೋದ್ಭವನೆಂದೂ,[೪೬] ೨ನೇ ದೇವರಾಯನು ವಿಜಯ ನಗರ ಪುರವರಾಧೀಶ್ವರ,[೪೭] ಶ್ರೀಕೃಷ್ಣದೇವರಾಯನು ತೌಳವಂಶಾಬ್ಧಿಚಂದ್ರ, ಯಾದವಕುಲಾಂಬರದ್ಯುಮಣಿಯೆಂದು ತಮ್ಮನ್ನು ಕರೆದುಕೊಂಡಿದ್ದಾನೆ.[೪೮] ಈ ಮೇಲಿನ ಬಿರುದುಗಳಿಂದ ವಿಜಯನಗರ ಅರಸರ ಮೂಲವನ್ನು ಕುರಿತು ಚರ್ಚಿಸುವ ಅಗತ್ಯವಿದೆ.

ವಿಜಯನಗರ ನಂತರ ಬಂದ ಮೈಸೂರು ಒಡೆಯರು ಅನೇಕ ಬಿರುದುಗಳನ್ನು ಧರಿಸಿದ್ದರು. ಅವುಗಳಲ್ಲಿ ಬಿರುದಂತೆಂಬರ ಗಂಡ ಎಂಬುದು ಚಿರಪರಿಚಿತವಾದುದು. ಈ ಮನೆತನದ ಮೂಲವನ್ನು ಕುರಿತ ಬಿರುದುಗಳಲ್ಲಿ ಚಿಕ್ಕದೇವರಾಯ ಒಡೆಯರು ಯಾದವಕುಲೋದ್ಧರಣ ಧುರೀಣ ಎಂದೂ,[೪೯] ಮುಮ್ಮಡಿ ಕೃಷ್ಣರಾಜ ಒಡೆಯ ಯದುಕುಲಪಯಃ ಪಾರಾವಾರ ಕಳಾನಿಧಿ ಎಂದು ಕರೆದಿರುವುದು ಪ್ರಮುಖ ವಾಗಿದೆ.[೫೦] ಇವುಗಳಿಂದ ಒಡೆಯರು ತಮ್ಮನ್ನು ಯಾದವ ವಂಶದವರೆಂದು ಹೇಳಿಕೊಂಡಂತಾಗಿದೆ.

ಪ್ರಾಚೀನ ಕರ್ನಾಟಕದ ಅನೇಕ ಅರಸು ಮನೆತನಗಳಲ್ಲಿ ರಾಷ್ಟ್ರಕೂಟರಿಂದ ಹಿಡಿದು ಮೈಸೂರು ಒಡೆಯರವರೆಗೆ ತಮ್ಮನ್ನು ಯಾದವ ಅಥವಾ ಯದುವಂಶದವರೆಂದು ಕರೆದುಕೊಂಡಿರುವುದು ಗಮನಾರ್ಹ. ರಾಷ್ಟ್ರಕೂಟರು ಯಾದವ ವಂಶೋದ್ಭವ, ಯದುಕುಳನರಪಾಳ, ದೇವಗಿರಿ ಯಾದವರು ಯಾದವನಾರಾಯಣ, ಯಾದವ ಚಕ್ರವರ್ತಿ, ಕಮ್ಮಟದುರ್ಗದ ಕಂಪಿಲರಾಯ ಯಾದವನಾರಾಯಣ, ಹೊಯ್ಸಳ ಮತ್ತು ವಿಜಯನಗರ ಅರಸರು ಯಾದವ ಕುಳಾಂಬರದ್ಯುಮಣಿ, ಮೈಸೂರು ಒಡೆಯರು ಯಾದವ ಕುಲೋದ್ಧರಣದುರೀಣ, ಯದುಕುಲಪಯಃ ಪಾರಾವಾರ ಕಳಾನಿಧಿ ಎಂದು ಬಣ್ಣಿಸಿಕೊಂಡಿದ್ದಾರೆ. ಇದರಿಂದ ಯದು ಅಥವಾ ಯಾದವ ಕುಲದವರೆಂದು ಗುರುತಿಸಿಕೊಳ್ಳುವುದು ಪ್ರಾಚೀನ ಅರಸರಿಗೆ ಹೆಮ್ಮೆಯ ಸಂಗತಿಯಾಗಿತ್ತೆಂದು ತಿಳಿದುಬರುತ್ತದೆ. ಯದು ಯಯಾತಿ ಚಕ್ರವರ್ತಿ ಮತ್ತು ದೇವಯಾನಿಯರ ಹಿರಿಯ ಮಗ. ಇವನ ವಂಶದವರನ್ನು ಸಾಮಾನ್ಯವಾಗಿ ಯದುವಂಶದವರೆಂದು ಕರೆಯಲಾಗಿದೆ.

ಒಟ್ಟಿನಲ್ಲಿ ಬಿರುದಾವಳಿಗಳ ಮೂಲಕ ಪ್ರಾಚೀನ ಕರ್ನಾಟಕದ ಅರಸು ಮನೆತನಗಳ ಮೂಲ, ವಂಶ, ಕುಲ, ರಾಜಧಾನಿ ಮತ್ತು ಆಳ್ವಿಕೆಯ ಪ್ರದೇಶಗಳನ್ನು ತಿಳಿಯಲು ಸಾಧ್ಯವೆಂಬುದು ಪ್ರಸ್ತುತ ಪ್ರಬಂಧದ ಮುಖ್ಯ ಆಶಯ. ಬಿರುದಾವಳಿಗಳು ಪ್ರಾಚೀನ ಚರಿತ್ರೆಯ ಪುನಾರಚನೆಗೆ ಮಹತ್ವದ ಆಕರಗಳಾಗುವುದರ ಜೊತೆಗೆ ಅಂದಿನ ಮೂಲ ನೆಲೆಗಳನ್ನು ಪ್ರಕಟಪಡಿಸುವ ಸಂವಹನ ಮಾಧ್ಯಮಗಳೆಂದರೆ ಅತಿಶಯೋಕ್ತಿಯಾಗಲಾರದು.

ಆಧಾರಸೂಚಿ ಮತ್ತು ಅಡಿಟಿಪ್ಪಣಿಗಳು

೧. Karnataka Inscriptions, vol-i, p.17, Karnataka University, Dharwad.

೨. Epigraphia Indica-xvi, p.11.

೩. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೧, ಪುಟ ೧೨೬.

೪. ಅದೇ, ಪುಟ ೨೨೩–೨೨೪.
೫. Karnataka Inscriptions, vol-v, p.241.
೬ Indian Antiquary-x, 27.
೭. Karnataka Inscriptions, vol.v, p.20.
೮. Vijyanagar Inscriptions, vol.ii, KN.918.
೯. ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು, ರಾಗೌ. ಪುಟ ೬೪.
೧೦. ರಾಷ್ಟ್ರಕೂಟರ ಶಾಸನಗಳು–೨, ಪುಟ ೫೪೪.
೧೧. ಅದೇ, ಪುಟ ೭೮೭.
೧೨. Epigraphia Carnatica-xi, Hol.68.
೧೩. Inscriptions of the Chalukyas of Badami, Ed.Padigar, p.1.
೧೪. Ibid, p.10.
೧೫. Ibid, p.333.
೧೬. ರಾಷ್ಟ್ರಕೂಟರ ಶಾಸನಗಳು–೨, ಪುಟ ೫೧೮.
೧೭. ಅದೇ, ಪುಟ ೫೬೩.
೧೮. ಕಲ್ಯಾಣ ಚಾಲುಕ್ಯರ ಶಾಸನಗಳು–೧, ಪುಟ ೮.
೧೯. ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು, ರಾಗೌ. ಪುಟ೧೪೬.
೨೦. ಕಲ್ಯಾಣ ಚಾಲುಕ್ಯರ ಶಾಸನಗಳು–೧, ಪುಟ ೧೫೧.
೨೧. ಕನ್ನಡ ವಿಶ್ವವಿದ್ಯಾ॰ಯ ಶಾಸನ ಸಂಪುಟ–೧, ಪುಟ ೬೧.
೨೨. ಅದೇ, ಪುಟ ೪೨೦, ೪೬೭.
೨೩. ಅದೇ, ಸಂ. ೧, ಪುಟ ೨೧; ಸಂ. ೧೦, ಪುಟ ೨೫೭.
೨೪. Karnataka Inscriptions, vol.v, p.104; South Indian Inscriptions-15, p.188.
೨೫. Ibid, p.114.
೨೬. Ibid, p.121; South Indian Inscriptions-15, No.69.
೨೭. Epigraphia Carnatica-xi, p.388.
೨೮. ರಾಷ್ಟ್ರಕೂಟರ ಶಾಸನಗಳು–೧, ಪುಟ ೨೩೭.
೨೯. ಅದೇ, ಪುಟ ೨೯೧.
೩೦. ಅದೇ, ಪುಟ ೪೦೮, ೪೩೫.
೩೧. ಅದೇ, ಪುಟ ೬೯೭, ೫೦೦.
೩೨. ಅದೇ, ಪುಟ ೪೮೩, ೪೮೮.
೩೩. ಅದೇ, ಪುಟ ೩೧೬, ೪೭೨.
೩೪. ಅದೇ, ಪುಟ ೭೮೭.
೩೫. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೬, ಪುಟ ೭೦.
೩೬. ಅದೇ, ಪುಟ ೨೧೩; Epigraphia Carnatica-vii, p.132.
೩೭. The Nolambas, M.S.Krishnamurthy, p. 57.
೩೮. Ibid, p.126.
೩೯. Ibid, p.71, 84, 94; ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೧, ಪುಟ ೨೮೩.
೪೦. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೧೦, ಪುಟ ೧೩೧.
೪೧. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೧, ಪುಟ ೨೭೪.
೪೨. K.I-V, pp.165-166; ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೧೦, ಪುಟ ೨೮೦; ಅದೇ–೯, ಪುಟ ೪೫೦.
೪೩. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೨, ಪುಟ ೧೮೦, ೬೦೬; ಅದೇ, ಸಂ. ೧, ಪುಟ ೨೯೬.
೪೪. ಎಪಿಗ್ರಾಫಿಯ ಕರ್ನಾಟಿಕ–೯, ಪುಟ ೫೧, ೪೬೫; ಅದೇ, ಸಂ. ೩, ಪುಟ ೭೬.
೪೫. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೨, ಪುಟ ೧೫೮.
೪೬ EC-vii, Mu.89; iii, Mi-20.
೪೭. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೩, ಪುಟ ೭೨, ೨೦೦.
೪೮. ಕೃಷ್ಣದೇವರಾಯನ ಶಾಸನಗಳು, ಡಿ.ವಿ.ಪರಮಶಿವಮೂರ್ತಿ(ಸಂ.), ಪುಟ ೬೨೪, ೬೨೫.
೪೯. ಎಪಿಗ್ರಾಫಿಯ ಕರ್ನಾಟಿಕ–೫, ಪುಟ ೨೦೯–೨೨೩.
೫೦. ಅದೇ, ಪುಟ ೧೬೦–೧೬೩.

೬೩

ಅರಸೀಕೆರೆ ತಾಲ್ಲೂಕಿನಲ್ಲಿ ಹೊಯ್ಸಳರ ಕಾಲದ ಮಲೆಯಾಳಿ ವೈದ್ಯರು ಮತ್ತು ವ್ಯಾಪಾರಿಗಳು

ಎಸ್. ಪರಶಿವಮೂರ್ತಿ*

ದ್ವಾರಸಮುದ್ರದ ಹೊಯ್ಸಳರು ಕರ್ನಾಟಕದ ದಕ್ಷಿಣ ಭಾಗವನ್ನು ಆಳಿದ ಅರಸರಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದ್ದಾರೆ. ಈ ವಂಶ ಕ್ರಿ.ಶ. ೯೫೦ ರಿಂದ ಆಳುತ್ತಿದ್ದರೂ ಇತಿಹಾಸದಲ್ಲಿ ಗುರುತಿಸಬಹುದಾದ ಕಾಲ ಕ್ರಿ.ಶ. ೧೦೨೨ರಿಂದ ಆಳುತ್ತಿದ್ದ ನೃಪಕಾಮನಿಂದ ಪ್ರಾರಂಭವಾಗಿ ಕ್ರಿ.ಶ. ೧೩೪೨ರ ನಾಲ್ಕನೆಯ ಬಲ್ಲಾಳನವರೆಗೆ ಆಳಿ ಆನಂತರ ವಿಜಯನಗರ ಸಾಮ್ರಾಜ್ಯಕ್ಕೆ ಬುನಾದಿಯನ್ನು ಹಾಕಿ ಕಣ್ಮರೆಯಾಯಿತು. ಇವರು ಪ್ರಾರಂಭದಲ್ಲಿ ತಲಕಾಡಿನ ಗಂಗರ ಅಧೀನರಾಗಿದ್ದು ಆನಂತರ ಕಲ್ಯಾಣ ಚಾಲುಕ್ಯರ ಸಾಮಂತರಾಗಿ, ಮಹಾಮಂಡಲೇಶ್ವರರಾಗಿ ಕೊನೆಗೆ ಚಾಲುಕ್ಯ ರಾಜ್ಯದ ದಕ್ಷಿಣ ಭಾಗವನ್ನು ಗೆದ್ದು ಚಕ್ರವರ್ತಿಗಳೆಂದು ಘೋಷಿಸಿಕೊಂಡರು. ತಲಕಾಡು ಗಂಗರ ರಾಜ್ಯ ಕಣರೆಯಾದ ಕಾಲಕ್ಕೆ ಅವರ ವಾರಸುದಾರರಾಗಿ ತಲಕಾಡನ್ನು ವಶಪಡಿಸಿಕೊಂಡಿದ್ದ ಚೋಳರನ್ನು ಸೋಲಿಸಿ ದಕ್ಷಿಣ ಕರ್ನಾಟಕದಿಂದ ಹೊರದೂಡಿದರು. ಈ ವಿಜಯವು ಮುಂದೆ ಹೊಯ್ಸಳರು ತಮಿಳು ರಾಜ್ಯಗಳ ರಾಜಕೀಯದಲ್ಲಿ ಪ್ರಭಾವಶಾಲಿಗಳಾಗಲು ಸಹಾಯ ಮಾಡಿತು. ಈ ಜಯದ ನಂತರ ಚೋಳರ ಸೈನ್ಯದಲ್ಲಿದ್ದ ಅನೇಕ ತಮಿಳು ಸೈನ್ಯಾಧಿಕಾರಿಗಳು ಹೊಯ್ಸಳ ಸೈನ್ಯವನ್ನು ಸೇರಿದರು. ಹೀಗೆ ವಲಸೆ ಬಂದವರಲ್ಲಿ ಕೆಲವು ಮಲೆಯಾಳಿ ಅಧಿಕಾರಿಗಳು ಇದ್ದರು. ಹೊಯ್ಸಳ ರಾಜ್ಯಕ್ಕೆ ಸೇರಿದ ಅರಸೀಕೆರೆ ಪ್ರದೇಶದಲ್ಲಿಯೂ ಕೆಲವು ಮಲೆಯಾಳಿ ಸೈನ್ಯಾಧಿಕಾರಿಗಳೂ ವೈದ್ಯರೂ, ಗಜವೈದ್ಯರೂ, ವರ್ತಕರು ನೆಲೆಸಿದ ದಾಖಲೆಗಳಿವೆ.

ಕ್ರಿ.ಶ. ೧೧೩೦ರಿಂದ ಕ್ರಿ.ಶ. ೧೧೭೩ರವರೆಗೆ ಆಳಿದ ಒಂದನೇ ನರಸಿಂಹನ ಕಾಲದಲ್ಲಿ ಅವನ ಗಜಸೈನ್ಯದ ವೈದ್ಯನಾಗಿದ್ದ ಮಲೆಯಾಳ ದೇಶದ "ಜೈತು" ಅರಸೀಕೆರೆ ತಾಲ್ಲೂಕಿನ ದೇಶವಣಿ, ಈಗಿನ ದೇಶಾಣಿ ಗ್ರಾಮದಲ್ಲಿ ನೆಲೆಸಿದ್ದು ಕ್ರಿ.ಶ. ೧೧೩೯ರ ಶಾಸನ ಸಂಖ್ಯೆ ೨೫೩ನೇ ಶಾಸನದಲ್ಲಿ ಉಲ್ಲೇಖವಾಗಿದೆ.[೧] ಇವನು ಶಿವನ ಪರಮ ಭಕ್ತನಾಗಿದ್ದು ದೇಶಾಣಿಯಲ್ಲಿ ಒಂದು ದೇವಾಲಯವನ್ನು ಕಟ್ಟಿಸಿ ಭೂದಾನ ನೀಡಿದನು. ಇವನಿಗೆ ಇಬ್ಬರು ಪತ್ನಿಯರಿದ್ದು ಮೊದಲನೇ ಪತ್ನಿ ಬಡಿಯವ್ವೆ, ಎರಡನೇ ಪತ್ನಿ ಮೇಲಾದೇವಿಕೆಯವ್ವೆ ಇವರ ಮಗ ನಾರಾಯಣದೇವ, ಜೈತುವಿನ ತಮ್ಮ ಸುಪ್ಪಟ್ಟಿ, ಅಳಿಯ ಕಾಮದೇವ, ಮೈದುನ ಪರುಶುರಾಮ ಇವರೆಲ್ಲರ ಸಮ್ಮುಖದಲ್ಲಿ ಜೈತು ತಾನು ಕಟ್ಟಿಸಿದ ದೇವಾಲಯದಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಿ ಜೈತೇಶ್ವರ ಎಂದು ಹೆಸರಿಟ್ಟು ಭೂದಾನವನ್ನು ಕೊಟ್ಟನು. ಈ ದಾನವನ್ನು ಪಡೆದವನು ಕಾಳಮುಖಯತಿ ವಾಮಶಕ್ತಿ ಪಂಡಿತ.

ಇದೇ ತಾಲ್ಲೂಕಿನ ಕ್ರಿ.ಶ. ೧೨೫೪ರ ಶಾಸನ ಸಂಖ್ಯೆ ೩೧೭ ಹಿರಿಯೂರಿನ ಶಾಸನ[೨] ಇದು ಅನೇಕ ವೈಶಿಷ್ಟ್ಯಗಳನ್ನೊಳಗೊಂಡಿದೆ. ಮಲೆಯಾಳ ದೇಶದ ವರ್ತಕರ ವಂಶ ಚರಿತ್ರೆಯನ್ನೇ ಕೊಟ್ಟಿದೆ. ಕ್ರಿ.ಶ. ೧೧೯೩ರಲ್ಲಿ ಎರಡನೇ ಬಲ್ಲಾಳನು ಉಚ್ಚಂಗಿ ದುರ್ಗದ ಮೇಲೆ ದಾಳಿ ಮಾಡಿ ವಶಪಡಿಸಿಕೊಂಡಾಗ ಅವನ ಸೈನ್ಯದಲ್ಲಿ ವೀರಾವೇಶದಿಂದ ಹೋರಾಡಿ ಜಯಕ್ಕೆ ಕಾರಣನಾದ ಕುಂಜಶೆಟ್ಟಿಯನ್ನು ಬಲ್ಲಾಳನು ಸೈನ್ಯದ ಮುಂಭಾಗಕ್ಕೆ ಕರೆಸಿ ಅವನಿಗೆ "ವೀರದ ಪೆರ್ಮೆ" ಮತ್ತು "ಜಸದ ಸೋಂಪ" ಎಂಬ ಬಿರುದುಗಳನ್ನು ಕೊಟ್ಟು ಸುಭಟಪಟ್ಟವನ್ನು ಕರುಣಿಸಿದನು. ಅಷ್ಟೇ ಅಲ್ಲದೇ ಹೊಯ್ಸಳ ದೇಶದ ಪಟ್ಟಣ ಶೆಟ್ಟಿಯನ್ನಾಗಿಯೂ ಮಾಡಿದನು. ಇವನು ಕೇರಳ ದೇಶ ಲಕ್ಷ್ಮಿಯ ಮುಖಾರವಿಂದಕ್ಕೆ ಕನ್ನಡಿಯಂತಿದ್ದ ಕೊಳಮೂಖಪಟ್ಟಣದ ನಾನಾ ದೇಶಿಗಳ ಪ್ರಮುಖನೂ, ವೈಶ್ಯ ಕುಲಾಭರಣನೂ ಗುಣಶೀಲಗಳ ಗಣಿಯೂ ಕುಡುಕುಂದಿಯ ಭದ್ರಕಾಳಿಯ ಪರಮಭಕ್ತನು ಆಗಿದ್ದನು. ಇವನು ವೈಶ್ಯ ವೃತ್ತಿಯೊಂದಿಗೆ ಮಹಾಯೋಧನು, ಹೊಯ್ಸಳ ಬಲ್ಲಾಳನ ಸೈನ್ಯದಲ್ಲಿ ದಂಡನಾಯಕನು ಆಗಿದ್ದನು. ಇವನ ಅಳಿಯಂದಿರು ಕಂಡನಂಬಿಶೆಟ್ಟಿ, ದಾಮೋದರಶೆಟ್ಟಿ ಮತ್ತು ಕುಂಜನಂಬಿಶೆಟ್ಟಿ ಈ ಮೂವರು ಕೊಳಮೂಕ ಪಟ್ಟಣದ ಆಡಳಿತಗಾರನಾಗಿದ್ದ ಗೋವಿಂದನ ಮೊಮ್ಮಕ್ಕಳು.

* ಮೇಲಿನ ಮಠ, ಶಾನುಭೋಗರ ಬೀದಿ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ-೫೭೩೧೦೩.



ಗೋವಿಂದನ ಮಗ ನಂಬ್ಯಕ್ಕ ಮಣವಾಳ ಮತ್ತು ಅವನ ಪತ್ನಿ ಚರನ ಇವರ ಮಕ್ಕಳು. ಕಂಡನಂಬಿ ಮತ್ತು ದಾಮೋದರರಿಗೆ ಮಕ್ಕಳಿಲ್ಲದ ಕಾರಣ ಮೂರನೇ ಅಳಿಯ ಕುಂಜನಂಬಿಯಿಂದ ಈ ವಂಶ ಮುಂದುವರೆದಿದೆ. ಹಿರಿಯ ಅಳಿಯ ಕಂಡನಂಬಿಯು ಹರಿಹರ, ಸೇತು, ಪಂಡರಿಗೆ ಮತ್ತು ವಾರಣಾಸಿಗಳಲ್ಲಿ ಛತ್ರಗಳನ್ನು ಸಂತಾನ ಪ್ರಾಪ್ತಿಗಾಗಿ ಕಟ್ಟಿಸಿದನು. ಇವನ ತಮ್ಮ ದಾಮೋದರನು ಕೂಡ ಅರಸೀಕೆರೆ ತಾಲ್ಲೂಕಿನ ಉದ್ಭವ ಸರ್ವಜ್ಞಪುರಿ ಎಂದು ಹೆಸರುಪಡೆದಿದ್ದ ಅರಕೆರೆಯಲ್ಲಿ ಒಂದು ವಿಷ್ಣು ದೇವಾಲಯುವನ್ನು ಬೆಂಡೇಕೆರೆಯಲ್ಲಿ ಶಿವದೇವಾಲಯುವನ್ನು ಕಟ್ಟಿಸಿ ದಾಮೋದರೇಶ್ವರ ಎಂದು ಹೆಸರಿಟ್ಟಿದ್ದನು. ಮೂರನೇ ಯವನಾದ ಕುಂಜನಂಬಿಯು ತನ್ನ ವ್ಯಾಪಾರ ಜೊತೆಗೆ ನಾನಾವಿಧದ ರತ್ನಗಳ ಪರೀಕ್ಷೆಯಲ್ಲಿ ನಿಪುಣನಾಗಿದ್ದನು. ಅಷ್ಟೇ ಅಲ್ಲದೇ ಕುಶಲರಾಯಭಾರಿಯು ಆಗಿದ್ದು ದಕ್ಷಿಣದ ಚಕ್ರವರ್ತಿ ಮತ್ತು ಉತ್ತರದ ಬಲ್ಲಹರಿಗೂ ಮೈತ್ರಿಯನ್ನು ಏರ್ಪಡಿಸಿದನು.

ಈ ಕುಂಜನಂಬಿಯ ಅಳಿಯ ಭಂಡಿನಂಬಿಶೆಟ್ಟಿ ಇವನು ಭಂಡಿಗಟ್ಟಲೆ ಧನ ದಾನವಮಾಡಿದ್ದರಿಂದ ಇವನಿಗೆ ಭಂಡಿನಂಬಿಶೆಟ್ಟಿ ಎಂಬ ಹೆಸರು ಪ್ರಾಪ್ತವಾಯಿತಂತೆ. ಭಂಡಿ ನಂಬಿಶೆಟ್ಟಿಯ ಅಳಿಯ ಕಂಡನಂಬಿಶೆಟ್ಟಿ ಇವನ ತಂದೆ ಕಾಕರಮಣವಾಳ ತಾಯಿ ಸೋವಿಯಕ್ಕ ಮತ್ತು ಅವನ ಪತ್ನಿ ಚಂದಿಯಕ್ಕ. ಕಂಡನಂಬಿಗೆ ಸೋವಕ್ಕ, ಕುಂಜಶೆಟ್ಟಿ ಮತ್ತು ಚಂದವೆ ಮಕ್ಕಳು. ಕುಂಜಶೆಟ್ಟಿಯು ಮಹಾಶಿವಭಕ್ತ. "ಹರಪೂಜೆಯೊಳ್ ಹರಕಥೋಚಿತ ತತ್ವ ಸುಖಾನು ಸೇವೆಗಳೊಳ್ ಹರಸ್ಮರಣದೊಳಾವಗಂ ತನು, ಮನ, ಧನವನ್ನು ವಿನಯೋಗಿಸಿ ಕೃತಪುಂಜನಾಗಿದ್ದನು. "ತನುವಂಜಂಗಮದೆಡೆಯೊಳ್ ಮನಮಂ ಶ್ರೀ ಸೋಮನಾಥ ಪದಪಂಕಜದೊಳ್ ವಿನಯೋಗಿಸಿ ಶಿವಪದವನ್ನು ಪಡೆದನು. ಇವನು ವೀರಶೈವ ಧರ್ಮವನ್ನು ಅವಲಂಬಿಸಿದ್ದು ಸೋಮನಾಥನ ಪರಮ ಭಕ್ತನಾಗಿದ್ದನು. ಎರಡನೇ ನರಸಿಂಹ ಮತ್ತು ಸೋಮೇಶ್ವರರ ಕಾಲಕ್ಕೆ ವೀರಶೈವ ಧರ್ಮ ಹೊಯ್ಸಳ ನಾಡಿನಲ್ಲಿ ನೆಲೆಯೂರುತ್ತಿತ್ತು. ಕುಂಜಶೆಟ್ಟಿಯು ಚಿಕ್ಕವಯಸ್ಸಿನಲ್ಲಿಯೇ ಮರಣ ಹೊಂದಿದ್ದರಿಂದ ಅವನ ತಂದೆ ಕಂಡನಂಬಿಯು ಹಿರಿಯ ಮುತ್ತನ ಹೊಸ ಊರಿನಲ್ಲಿ ಶಿವದೇವಾಲಯವನ್ನು ಕಟ್ಟಿಸಿ ಮಗನ ನೆನಪಿಗೆ ಕುಂಜೇಶ್ವರ ದೇವಾಲಯವೆಂದು ಹೆಸರಿಟ್ಟು ಭೂದಾನ ನೀಡಿದನು. ಮತ್ತು ದೇವಾಲಯದ ಆಡಳಿತವನ್ನು ನೋಡಿಕೊಳ್ಳಲು ಕುಂಜಶೆಟ್ಟಿಯ ಸೋದರಿಯಾದ ಚಂದವ್ವೆಯನ್ನು ನೇಮಿಸಿದನು. ಆಕೆಗೆ ಹೊಯ್ಸಳ ರಾಜಗುರು ರುದ್ರಶಕ್ತಿ ದೇವರು. ಮತ್ತು ಅರಸೀಕೆರೆಯ ಅಸಂಖ್ಯಾತ ಗಣಂಗಳು ವಿಭೂತಿ ಪಟ್ಟವನ್ನು ಕಟ್ಟಿ ಗಣಕುಮಾರಿತನವನ್ನು ಕೊಟ್ಟರು. ಬಹುಶಃ ಕರ್ನಾಟಕದ ಧಾರ್ಮಿಕ ಇತಿಹಾಸದಲ್ಲಿ ಒಬ್ಬ ಹೆಣ್ಣು ಮಗಳಿಗೆ ಸನ್ಯಾಸ ದೀಕ್ಷೆಯನ್ನು ನೀಡಿ ಒಂದು ದೇವಾಲಯದ ಆಡಳಿತವನ್ನು ಕೊಟ್ಟ ಮೊದಲನೇ ಉದಾಹರಣೆ ಇದಾಗಿದೆ. ಇದೇ

ದೇವಾಲಯದಲ್ಲಿರುವ ಮತ್ತೊಂದು ಶಾಸನ ಸಂಖ್ಯೆ ೩೧೮ರಲ್ಲಿ ಕ್ರಿ.ಶ. ೧೨೫೮ಕ್ಕೆ ಸೇರಿದ್ದು[3] ಹೊಯ್ಸಳ ೩ನೇ ನರಸಿಂಹನ ಕಾಲದ್ದಾಗಿದೆ. ಈ ಶಾಸನದಲ್ಲಿ ಬಾಣ, ಉದ್ಭಟ, ಚೋಳ, ಸಿಂಧುಬಲ್ಲಾಳ, ಸಿರಿಯಾಳ್ವ ಮುಂತಾದ ಪುರಾತನ ಶಿವಭಕ್ತರನ್ನು ಉಲ್ಲೇಖಿಸಿ ಅವರೊಂದಿಗೆ ಬಸವೇಶ್ವರ ಮತ್ತು ಜೇಡರ ದಾಸಿಮಯ್ಯನ ಹೆಸರುಗಳನ್ನು ಹೇಳಿದೆ. ಈ ಹೇಳಿಕೆ ಕ್ರಿ.ಶ. ೧೧೬೮ರಲ್ಲಿ ಐಕ್ಯನಾದ ಬಸವೇಶ್ವರ ಹೆಸರು ಮತ್ತು ಅದರೊಂದಿಗೆ ಅವನ ಹಿರಿಯ ಸಮಕಾಲೀನನಾಗಿದ್ದ ಜೇಡರ ದಾಸಿಮಯ್ಯನನ್ನು ಉಲ್ಲೇಖಿಸಿರುವುದರಿಂದ ಪ್ರಸ್ತುತ ಶಾಸನವು ಬಸವೇಶ್ವರನು ಐಕ್ಯನಾದ ೯೦ ವರ್ಷಗಳಲ್ಲಿ ಬರೆಯಲ್ಪಟ್ಟಿರುವುದು. ಬಸವೇಶ್ವರನ ಹೆಸರು ಅವನು ಐಕ್ಯನಾದ ನಂತರ ಪ್ರಥಮ ಬಾರಿಗೆ ಶಾಸನದಲ್ಲಿ ಉಲ್ಲೇಖವಾಗಿರುವುದು ಬಸವೇಶ್ವರನ ಬಗ್ಗೆ ದೊರಕಿರುವ ಶಾಸನಗಳಲ್ಲಿ ಇದೇ ಮೊದಲನೆಯದು.[4]

ಇದೇ ತಾಲ್ಲೂಕಿನ ಮತ್ತೊಂದು ಶಾಸನ ಕ್ರಿ.ಶ. ೧೨೮೭ರ ಶಾಸನ ಸಂಖ್ಯೆ ೨೮೮[5] ಮೊಸಳೆ ದಾಖಲೆ ಗ್ರಾಮ ಮಲ್ಲೇಯ್ಯನಹಳ್ಳಿಯಲ್ಲಿ ಕೂತಣಹೆಗ್ಡೆ ಎಂಬುವವನು ಚನ್ನಕೇಶವ ದೇವಾಲಯವನ್ನು ಕಟ್ಟಿಸಿದನು. ಇವನ ಮಗ ಬಲ್ಲಣ್ಣನು ಭೂದಾನವನ್ನು ಕೊಟ್ಟನು. ಈ ದಾನವನ್ನು "ನೂತನ ವೈದ್ಯ ಕಲಾ ವಿಖ್ಯಾತ" ಎಂದು ಪ್ರಸಿದ್ಧಿ ಪಡೆದಿದ್ದ ದೇವಪಿಳ್ಳೆಯಣ್ಣನ ಮಗ ಸಿದ್ದಣ್ಣ ಮತ್ತು ದೇವಣ್ಣರು ಸ್ವೀಕರಿಸಿದರು. ಹೊಯ್ಸಳ ಮೂರನೇ ನರಸಿಂಹನ ದಂಡಾಧಿಪತಿಯಾಗಿದ್ದ ಬೀರ ದಂಡಾಧಿಪತಿಯು "ಸರ್ವ ಸಮಯ ಸಮದರ್ಶಿ" ಎಂಬ ಖ್ಯಾತಿಗೆ ಭಾಜನನಾಗಿದ್ದನು. ಇವನ ಮನೆ ವೈದ್ಯನೇ ಮಲೆಯಾಳದ ದೇವಪಿಳ್ಳೆಯಣ್ಣ. ಇವನು ಬೀರದಂಡಾಧಿಪತಿಯ ಪತ್ನಿ ತಾಯಮ್ಮನನ್ನು ಈ ದೇವಾಲಯವನ್ನು ಜೀರ್ಣೋದ್ದಾರ ಮಾಡುವಂತೆ ಕೇಳಿಕೊಂಡಿದ್ದರಿಂದ ಆಕೆ ದೇವಾಲಯವನ್ನು ಜೀರ್ಣೋದ್ದಾರ ಮಾಡಿಸಿ ಇಟ್ಟಿಗೆಯಿಂದ "ಹೊರಥರ"ವನ್ನು ಕಟ್ಟಿಸಿ ಕಳಸ ಸ್ಥಾಪನೆ ಮಾಡಿಸಿದಳು. ಈ ದೇವಾಲಯವನ್ನು ಪಡೆದಿದ್ದ ಪತ್ರ ಶಾಸನವನ್ನು ಶಿಲಾ ಶಾಸನವನ್ನಾಗಿ ಬರೆಸಿದಳು. ದೇವಪಿಳ್ಳೆಯಣ್ಣನು ಬೀರೆ ದಂಡನಾಯಕ ಮತ್ತು ಅವನ ಪತ್ನಿ ತಾಯಮ್ಮನಿಗೆ ಸಂತಾನ ಅಭಿವೃದ್ಧಿಯಾಗಲೆಂದು ಭೂದಾನ ಮಾಡಿದನು. ಆನಂತರ ಬೀರೆದಂಡನಾಯಕನು ಬಲ್ಲಣ್ಣನಿಂದ ಕೊಡುಗೆ ಹೊಲವನ್ನು ೩೦ ಗದ್ಯಾಣಗಳಿಗೆ ಕೊಂಡು ದೇವಪಿಳ್ಳೆಯಣ್ಣನಿಗೆ ನೀಡಿದನು. ದೇವಪಿಳ್ಳೆಯಣ್ಣನು ಆ ಸ್ಥಳದಲ್ಲಿ ಗೌರೀಶ್ವರ ದೇವಾಲಯವನ್ನು ಕಟ್ಟಿಸಿ ತನ್ನ ಒಡೆಯ ಬೀರೆದಂಡನಾಯಕನಿಗೆ ಒಳ್ಳೆಯದಾಗಲೆಂದು ಭೂದಾನ ನೀಡಿದನು.

ಮತ್ತೊಂದು ಶಾಸನ ಸಂಖ್ಯೆ ೧೦೭ ಅರಸೀಕೆರೆ ತಾಲ್ಲೂಕಿನ ಶಂಕರನಹಳ್ಳಿಯ ವೀರಗಲ್ಲು. ಕ್ರಿ.ಶ. ೧೨೯೯ ಹೊಯ್ಸಳ ೩ನೇ ಬಲ್ಲಾಳನ ಕಾಲದ್ದು[6] ಮತ್ತೊಬ್ಬ ಮಲೆಯಾಳದ ವೈಶ್ಯ ಶಂಕರಶೆಟ್ಟಿ ಎಂಬುವವನು. ಇವನ ಪೂರ್ಣ ಹೆಸರು ಶಂಕರಶೆಟ್ಟಿ ಚಾಚಾ ಪಣಿಕರ್ ಮತ್ತು ಅವನ ತಮ್ಮ ಜಗತ್ ಚಾಚಾನಾಯರ್ ಇವರು ಹುಳಿಯಾರಿನ ಕೆಸವೆಯ ಬೊಮ್ಮನೆಂಬುವವನನ್ನು ಕೊಂದು ಶಂಕರಶೆಟ್ಟಿ ಹಗಳ್ಳಿಗೆ ಬಂದು ನೆಲೆಸಿ ಶಂಕರೇಶ್ವರ ದೇವಾಲಯವನ್ನು ಕಟ್ಟಿಸಿದರು. ಹುಳಿಯಾರಿನ ಕೆಸವೇ ಬೊಮ್ಮನ ಮಗ ಮಲೆಯನಾಯಕನು ತನ್ನ ಜನರೊಂದಿಗೆ ಬಂದು ಶಂಕರನಹಳ್ಳಿಯ ತುರುಗಳನ್ನು ಸೆರೆಹಿಡಿದಾಗ ಶಂಕರ ಶೆಟ್ಟಿ ಚಾಚಾ ಮತ್ತು ಅವನ ತಮ್ಮ ಜಗತ್ ಚಾಚಾ ಅವರೊಂದಿಗೆ ಹೋರಾಡಿ ತುರುಗಳನ್ನು ಬಿಡಿಸಿ ಹತ್ತಿಪ್ಪತ್ತು ಜನರನ್ನು ಕೊಂದು ಹೋರಾಟದಲ್ಲಿ ಗಾಯಗೊಂಡು ಮರಣ ಹೊಂದಿದರು. ಇವರ ಜ್ಞಾಪಕಾರ್ಥವಾಗಿ ಉಣ್ಣಿಕೋರಿಶೆಟ್ಟಿ ಎಂಬುವವನು ವೀರಗಲ್ಲನ್ನು ನಿಲ್ಲಿಸಿದನು.

ಹೊಯ್ಸಳ ಒಂದನೇ ನರಸಿಂಹನ ಕಾಲ ಕ್ರಿ.ಶ. ೧೧೫೯ರಿಂದ ಕ್ರಿ.ಶ. ೧೩೫೯ರ ವರೆಗೆ ಆಳಿದ ಮೂರನೇ ಬಲ್ಲಾಳನವರೆಗೆ ಒಂದು ಭಾಷಿಕ ಪ್ರದೇಶದಿಂದ ಇನ್ನೊಂದು ಭಾಷಿಕ ಪ್ರದೇಶಕ್ಕೆ ವಲಸೆ ಬಂದು ನೆಲೆಸಿ ಸ್ಥಳಿಯರೊಂದಿಗೆ ಒಂದಾಗಿ ಕನ್ನಡ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಕನ್ನಡಿಗರೇ ಆಗಿ ಬದುಕಿದ ಕೆಲವು ಮಲೆಯಾಳಿ ವೈದ್ಯ ಮತ್ತು ವೈಶ್ಯ ಕುಟುಂಬಗಳ ವಿವರಗಳನ್ನೊಳಗೊಂಡ ಶಾಸನಗಳು ಅರಸೀಕೆರೆ ತಾಲ್ಲೂಕಿನಲ್ಲಿವೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಎಪಿಗ್ರಾಫಿಯಾ ಕರ್ನಾಟಕ, ಸಂಪುಟ ಹತ್ತು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
೨. ಎಪಿಗ್ರಾಫಿಯಾ ಕರ್ನಾಟಕ, ಸಂಪುಟ ಹತ್ತು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
೩. ಎಪಿಗ್ರಾಫಿಯಾ ಕರ್ನಾಟಕ, ಸಂಪುಟ ಹತ್ತು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
೪. "ಶಾಸನದಲ್ಲಿ ಶಿವಶರಣರು", ಪುಟ ೫೯, ಡಾ. ಎಂ.ಎಂ. ಕಲಬುರ್ಗಿ.
೫. ಎಪಿಗ್ರಾಫಿಯಾ ಕರ್ನಾಟಕ, ಸಂಪುಟ ಹತ್ತು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
೬. ಎಪಿಗ್ರಾಫಿಯಾ ಕರ್ನಾಟಕ, ಸಂಪುಟ ಹತ್ತು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೬೪

ವಿಜಯನಗರದಲ್ಲಿ ವಿಠ್ಠಲಪಂಥ

ಗುರುಮೂರ್ತಿ ಪೆಂಡಕೂರು*

ವಿಜಯನಗರ ಸ್ಥಾಪನೆಗೆ ಮೊದಲೇ ಉತ್ತರಭಾರತದಲ್ಲಿ ಇಸ್ಲಾಂಧರ್ಮ. ಮತ್ತು ಆ ಧರ್ಮ ಅಧಿಪತಿಗಳಿಂದಲೂ, ಇಸ್ಲಾಂ ಮತವನ್ನು ಪ್ರಚಾರ ಮಾಡುತ್ತಿದ್ದ ಮತೀಯ ಗುರುಗಳಿಂದಲೂ ಹಿಂದೂ ಧರ್ಮವು ನಾನಾರೀತಿಯ ತೊಂದರೆಗಳಿಗೆ ಸಿಲುಕಿತ್ತು. ಕೆಲ ಪ್ರದೇಶಗಳಲ್ಲಿ ಇಸ್ಲಾಂ ಧರ್ಮವು ಭದ್ರವಾಗಿ ನೆಲೆಯೂರಿತ್ತು. ಈ ಧರ್ಮದ ಕೆಲ ಸೈದ್ಧಾಂತಿಕ ಮತ್ತು ಆಚರಣಾಂಶಗಳನ್ನು ಹಿಂದೂ ಧರ್ಮದ ಕೆಲ ಪಂಥಗಳು ಅಳವಡಿಸಿಕೊಳ್ಳಲು ಮುಂದಾದವು. ಒಂದು ಕಡೆ ಕಬೀರರೂ, ಮತ್ತೊಂದು ಕಡೆ ಚೈತನ್ಯಪ್ರಭುಗಳಿಗೂ, ಇನ್ನೊಂದು ಕಡೆ ನರಸೀಮೆಹತಾನಂಥವರೂ, ಮೀರಾಬಾಯಿ ಮುಂತಾದ ಭಕ್ತರೂ ಭಕ್ತಿಪಂಥದ ವಿಸ್ತರಣೆಗೆ ಕಾರಣರಾದರು.

ದೇವಗಿರಿಯನ್ನು ವಶಪಡಿಸಿಕೊಂಡ ಅಲ್ಲಾವುದ್ದೀನ್ ಖಿಲ್ಜಿ ಕಾಲದಲ್ಲಿ ಹಿಂದೂ ಜನಸಮುದಾಯದವರು ಪವಿತ್ರವೆಂದು ಭಾವಿಸಿದ ಎಲ್ಲವನ್ನು ನಾಶಮಾಡಿ ಜನರನ್ನು ಬಲಾತ್ಕಾರದಿಂದ ಮತಾಂತರ ಮಾಡಲಾಯಿತು. ಶ್ರೀಮಂತರೂ, ಯೋಧರೂ, ಆಡಳಿತಗಾರರೂ ತಂತಮ್ಮ ರಕ್ಷಣೆಗಾಗಿ ಮುಸಲ್ಮಾನರಾದರು.

ಆ ಕಾಲಕ್ಕೆ ಹಿಂದೂ ಮತ್ತು ಸಂಸ್ಕೃತಿಯ ರಕ್ಷಣೆಗೆಂದೇ ಉದಯಿಸಿದ 'ವಿಜಯನಗರ ಸಾಮ್ರಾಜ್ಯ'ವು ತುಂಗಭದ್ರೆ – ಕೃಷ್ಣಾ ನದಿಗಳಿಂದ ಅತ್ತ ದಕ್ಷಿಣದ ಪ್ರದೇಶದ ಜನರನ್ನು ರಕ್ಷಿಸಲು ಕೂಡಾ ನಿರಂತರವಾಗಿ ಬಹಮನಿ ಸುಲ್ತಾನರೊಂದಿಗೆ ಹೋರಾಡಬೇಕಾಯಿತು. ಮುಸಲ್ಮಾನ ದೊರೆಗಳು ಇತರ ಧರ್ಮಗಳ ವಿರುದ್ಧ 'ಜಿಹಾದೀ' ಭಾವನೆಯಿಂದ ವರ್ತಿಸಿದ ಕಾರಣ ಪೂರ್ವದಿಂದ ಬಂದ ಧಾರ್ಮಿಕ ವ್ಯವಸ್ಥೆ ನಾಶವಾಯಿತು. ದೇವಾಲಯ, ಮಠ ಮತ್ತು ಅಗ್ರಹಾರಗಳು ಲೂಟಿಯಾಗಿ ಧ್ವಂಸವಾದವು ಕರ್ನಾಟಕದ ಧಾರ್ಮಿಕ ರಂಗದಲ್ಲಿ ಅದರ ಧೋರಣೆ ಮತ್ತು ಸ್ವರೂಪ ಕಾಲಕ್ಕೆ ತಕ್ಕಂತೆ ಬದಲಾದವು.

ಕರ್ನಾಟಕಕ್ಕೆ ಈ ಕಾಲದಲ್ಲಿ ಅನೇಕ ಸೂಫಿಸಂತರು ಬಂದರು. ಇವರು ಧಾರ್ಮಿಕ ಸಂಘರ್ಷವನ್ನು ಹತೋಟಿಗೆ ತಂದರು. ಇದರಿಂದಾಗಿ ಹಿಂದೂ ಧಾರ್ಮಿಕ ರೀತಿನೀತಿಗಳು ತಮ್ಮ ಹಳೆಯ ಪೊರೆಕಳಚಿ ಹೊಸರೀತಿಯಲ್ಲಿ ಬೆಳೆಯಬೇಕಾಯಿತು. ಸರ್ವಸಮಾನತೆ, ಏಕದೇವೋಪಾಸನೆಯ ತತ್ವಗಳಿಂದ ವೀರಶೈವ ಮತ್ತು ವೈಷ್ಣವಾದಿ ಪಂಥಗಳು ಬಲವಾಗಿ ಪ್ರಸಾರಗೊಂಡವು.

ಈ ಎಲ್ಲಾ ಗೊಂದಲಗಳ ನಡುವೆ ತಮ್ಮ ಅಸ್ತಿತ್ವ ರಕ್ಷಣೆಗಾಗಿ ಮತ್ತು ಸ್ವಧರ್ಮದಲ್ಲಿಯೇ ಇರಲು ನಿರ್ಧರಿಸಿದ ಜನಸಮುದಾಯಕ್ಕೆ ಮಾರ್ಗದರ್ಶನ ಮಾಡಲು ಹೊಸಧಾಟಿಗಳನ್ನು ಹುಡುಕಬೇಕಾಯಿತು.

೧. ಮುಸಲ್ಮಾನರ ಭಯವಿದ್ದ ಕಾರಣ ವೈಭವ ಮತ್ತು ಪ್ರದರ್ಶನಾತ್ಮಕ ಆಚರಣೆ ಮತ್ತು ಸಂಪ್ರದಾಯಗಳನ್ನು ಬದಿಗಿರಿಸಬೇಕಾಯಿತು.

೨. ಸಮಾಜದ ಉಳ್ಳವರು ಆಳುವವರ ಪರವಾಗಿದ್ದ ಕಾರಣ ಸುಲಭ ಆಚರಣಾ ವಿಧಾನದ ಭಕ್ತಿಪಂಥಗಳು ಜನಪ್ರಿಯವಾದವು. ಈ ದಾರಿಯಲ್ಲಿ ಯೋಗ–ಭೋಗ ಮಾರ್ಗದ **"ನಾಥಸಂಪ್ರದಾಯ"** ಮತ್ತು 'ಮಹಾನುಭಾವ ಪಂಥಗಳು' ಪ್ರಚಲಿತವಿದ್ದವು. ಆದರೆ ಈ ಪಂಥಗಳು ಕರ್ನಾಟಕದಲ್ಲಿ ಪ್ರಭಾವ ಪಡೆಯಲಿಲ್ಲ ಈ ತತ್ವಗಳನ್ನು ಅಳವಡಿಸಿಕೊಂಡ ಭಕ್ತಿಮಾರ್ಗಗಳೆಂದರೆ ದತ್ತ ಅಥವಾ ಅವಧೂತ ಸಂಪ್ರದಾಯ ಮತ್ತು ಪಂಡರಿನಾಥನ ಭಕ್ತರೆನಿಸಿದ **'ವಾರಕರೀ'** ಗಳ ಮಾರ್ಗ.

ಮಹಾರಾಷ್ಟ್ರದಲ್ಲಿ ಪಂಢರಪುರದ ವಿಠ್ಠಲದೇವರ ಭಕ್ತನಾದ ಪುಂಡಲೀಕನೇ ಈ ಸಂಪ್ರದಾಯದ ಆದ್ಯಪುರುಷ. ಪೈಠಣದ ಏಕನಾಥರೂ, ದೌಲತಾಬಾದಿನ ಜನಾರ್ದನ ಸ್ವಾಮಿಗಳು ಈ ಪಂಥಕ್ಕೊಂದು ಸ್ವರೂಪ ನೀಡಿದರು. ಆಗ ರಚಿಸಲ್ಪಟ್ಟ ಮರಾಠೀ ಗ್ರಂಥ. 'ಭಾವಾರ್ಥ ರಾಮಾಯಣ' ವೇ ಪಂಢರಿಯ ಭಕ್ತರ ಮೊದಲ ಗ್ರಂಥ ಕ್ರಿ.ಶ. ೧೨೯೦ ರಲ್ಲಿ ಸಂತ ಜ್ಞಾನೇಶ್ವರರು **'ಜ್ಞಾನೇಶ್ವರೀ'** ಮಹಾಗ್ರಂಥವನ್ನು ರಚಿಸಿದರು. ಅದಕ್ಕು ಮೊದಲು ಕ್ರಿ.ಶ. ೧೨೫೦ ರಲ್ಲಿ ಸಂತ ಬಹಿನಾಭಾಯಿಯ 'ಅಭಂಗ' – ಪುಂಡಲೀಕ ವರದ

* # ೪೦೧, ಬಾಲಾಜಿ ಇಲೈಟ್, ೨೪ನೇ ಮುಖ್ಯರಸ್ತೆ, ಎಚ್‌ಎಸ್‌ಆರ್ ಲೇಔಟ್, ಸೆಕ್ಟರ್ ೨, ಪರಂಗಿಪಾಳ್ಯ, ಬೆಂಗಳೂರು–೫೬೦೧೦೨.

ಹರಿವಿಠಲ-ವೇದಾವಾಕ್ಯವೆನಿಸಿತು. ಅಲ್ಲಾವುದ್ದೀನನು ಪಂಢರಪುರದ ದೇವಸ್ಥಾನವನ್ನು ಧ್ವಂಸಮಾಡಿದಾಗ ಸಂತ ಭಾನುದಾಸರು ಪುಂಡರೀಕ ವಿಠಲನ ಮೂರ್ತಿಯನ್ನು ರಕ್ಷಿಸಿದರು.

ಈ ಅಂಧಕಾರ ಯುಗದಲ್ಲಿ ಗೋದಾವರಿ ಕಣಿವೆಯ ಪ್ರದೇಶದಲ್ಲಿ 'ವಾರಕರೀ' ಸಂಪ್ರದಾಯ ಅಥವಾ 'ವಿಠ್ಠಲ ಪಂಥ' ಜನಿಸಿ ಎಲ್ಲೆಡೆಗೆ ವ್ಯಾಪಿಸಿತು ಮಹಾರಾಷ್ಟ್ರದ ಸಂತ ನಾಮದೇವರು ಪಂಢರಪುರದ ವಿಠೋಬನ ಪರಮಭಕ್ತರು. ಅವರು ಸಾವಿರಾರು ಅಭಂಗಗಳನ್ನು ರಚಿಸಿ ವಿಠೋಬನನ್ನು ಕೊಂಡಾಡಿದ್ದಾರೆ. ಕ್ರಿ.ಶ. ೧೩ನೇ ಶತಮಾನದಲ್ಲಿ ಅವರು ರಚಿಸಿದ **'ನಾಮದೇವಗಾಥಾ'** ಪರಮ ಭಕ್ತಿಯ ಕತೆಗಳಿಂದ ತುಂಬಿದೆ. ಭಕ್ತವಿಜಯ ಗ್ರಂಥದ 'ಪುಂಡರೀಕನೇ' ವಿಠ್ಠಲನು ಪಂಢರಪುರದಲ್ಲಿ ನೆಲೆಸಲು ಕಾರಣವೆಂದು ವಿಶ್ವಾಸ. ಭಕ್ತ ಪಂಡರೀಶನ ಕತೆಯೇ 'ವಾರಕರಿ' ಸಂಪ್ರದಾಯದ ಆಧಾರ ಸಂತ ಜ್ಞಾನೇಶ್ವರರು ವಾರಕರೀ ಸಂಪ್ರದಾಯವನ್ನು ಆರಂಭಿಸಿದರು.

ವಾರಿ ಎಂದರೆ ಬಾರಿಬಾರಿಗೆ ತಪ್ಪದೇ ಮಾಡುವ ಯಾತ್ರೆ **ಕರೀ** ಎಂದರೆ ಮಾಡುವವನು. ಅಂದರೆ ನಿಶ್ಚಿತ ಕಾಲದಲ್ಲಿ ತಪ್ಪದೇ ಪಂಢರಪುರ ಯಾತ್ರೆಯ ವ್ರತವನ್ನು ಆಚರಿಸುವವನೇ **ವಾರಕರೀ**. ಈ ವ್ರತವನ್ನು ಯಾರು ಬೇಕಾದರೂ ಆಚರಿಸಿ ವಾರಕರೀ ಆಗಬಹುದು. ವಾರಕರಿಗಳು ಶಿವ ಮತ್ತು ವಿಷ್ಣು ತತ್ವದ ಪ್ರತಿರೂಪವಾದ ಪಂಢರೀನಾಥನನ್ನು ಆರಾಧಿಸುತ್ತಾರೆ. ಇದನ್ನು ಕೆಲವರು ಬುದ್ಧ – ವಿಷ್ಣು ತತ್ವವೆನ್ನುವರು. ಅವರು ಪಾಂಡುರಂಗ ವಿಠಲನನ್ನು ಬುದ್ಧನೆಂದು ಪರಿಗಣಿಸುವರು. ಕನ್ನಡದ ಬಟ್ವನೇ ಮರಾಠಿಯ ವಿಠ್ಠಲನೆನ್ನುವರೂ, ಬೌದ್ಧರ ಶ್ರೀ ಮತ್ತು ಪಶ್ಚಿಮ ಬಿಹಾರದ 'ಅಹರ್ ಜನರ' ಬೀರ್ – ಕೌರ್ ನೇ ವಿಠಲನೆಂದು ವಾದಿಸುವವರಿದ್ದಾರೆ.

ಯಾರು ಏನೇ ಹೇಳಿದರೂ ವಾಸ್ತವ ಸಂಗತಿಯೆಂದರೆ ಇದೊಂದು ಭಾಗವತಪಂಥ, ಇದೊಂದು ಮತವಲ್ಲ, ಇದರಲ್ಲಿ ಯಾರಾದರೂ ಸೇರಬಹುದು. ಸೇರಿಸಿಕೊಳ್ಳಲು ಯಾವುದೇ ರೀತಿಯ ಸಂಸ್ಕಾರ ಬೇಕಿಲ್ಲ.

ವಾರಕರಿಗೆ ಸೇರುವವರು ಈಗಾಗಲೇ ವಾರಕರಿ ಯಾಗಿರುವ ಸ್ನೇಹಿತನೊಂದಿಗೆ ಗುರುವಿನಲ್ಲಿ ಹೋಗಬೇಕು. ತಾವೇ ಒಂದು ತುಳಸೀ ಮಾಲೆಯನ್ನು ಒಯ್ಯಬೇಕು. ಆ ಮಾಲೆಯನ್ನು ಗುರುವಿನ ಎದುರಿಗೆ ಇರುವ 'ಜ್ಞಾನೇಶ್ವರಿ' ಗ್ರಂಥದ ಮೇಲಿಟ್ಟು ವಾರಕರೀ ಸಂಪ್ರದಾಯದಂತೆ ವರುಷಕ್ಕೆರಡು ಸಲ ಅಂದರೆ ಆಷಾಡ ಏಕಾದಶಿ ಮತ್ತು ಕಾರ್ತಿಕ ಏಕಾದಶಿಗಳಿಗೆ ತಪ್ಪದೇ ಪಂಢರಪುರಕ್ಕೆ ನಡೆದು ಕೊಂಡು ಹೋಗಿ ವಿಠಲನ ದರ್ಶನ – ಪೂಜನ ಮಾಡುವು ದಾಗಿ ಪ್ರಮಾಣಮಾಡಬೇಕು. ಹಿಂದೂ ಧರ್ಮ ಶಾಸ್ತ್ರಗಳ ಪ್ರಕಾರ ಬದುಕಬೇಕು. ಆಗ ಗುರುವು ತುಳಸೀಮಾಲೆಯನ್ನು ಅನುಗ್ರಹಿಸಿ, ಉಪದೇಶ ಮಾಡುತ್ತಾನೆ. ವಾರಕರೀ ಪ್ರಕಾರ ಪ್ರತಿ ಸೋಮವಾರ, ಎರಡು ಪವಿತ್ರ ಏಕಾದಶಿಗೆ ಮತ್ತು ಎರಡು ಪ್ರದೋಷಗಳಿಗೆ ಉಪವಾಸ ಮಾಡಬೇಕು. ವಾರಕರೀ ಪಂಥದವರೆಲ್ಲ ಸೋದರ-ಸೋದರೀ ಭಾವದಿಂದ ಇರಬೇಕು. ಭಜನೆ-ಕೀರ್ತನೆಗಳಲ್ಲಿ ತೊಡಗಿರಬೇಕು. ಭಾನುದಾಸರು ವಿಠಲನನ್ನು ಪುನಃ ಪ್ರತಿಷ್ಠಾಪಿಸಿದ್ದು ಚೈತ್ರ ಏಕಾದಶಿಯಂದು. ಆದ್ದರಿಂದ ಚೈತ್ರ ಏಕಾದಶಿಯಂದು ಉಪವಾಸ ಇರಬೇಕು. ಸಾಧ್ಯವಾದರೆ ಪಂಢರೀಯಾತ್ರೆ ಮಾಡಬೇಕು.

ಸಂತರು ಎಲ್ಲಾ ಜಾತಿಗೆ ಸೇರಿದವರಾದ ಅವರಲ್ಲಿ ಜಾತಿಯ ತಾರತಮ್ಯವಿಲ್ಲ ಅವರ ಸಾಹಿತ್ಯವೆಂದರೆ ಸಂತಸಾಹಿತ್ಯ. ಅವರ ದೈವವೆಂದರೆ ಪಂಢರೀನಾಥ. ಜ್ಞಾನದೇವರು ಬಹಿಷ್ಕೃತ ಬ್ರಾಹ್ಮಣರು, ನಾಮದೇವರು ದರ್ಜಿಯಾದರೆ, ಗೋರಾ-ಕುಂಬಾರ, ನರಹರಿ-ಅಕ್ಕಸಾಲಿ ಚೋಬಾ-ಮಹಾರ್ (ಅಂತ್ಯಜ), ತುಕಾರಾಂ-ಶೂದ್ರ ಪ್ರಮುಖವಾಗಿ ಗಮನಿಸಬೇಕೆಂದರೆ ವಾರಕರಿ ಸನ್ಯಾಸಿಯಲ್ಲ. ಅವನು ಸಂಸಾರಿ ಮತ್ತು ಸಾಮಾಜಿಕ ವ್ಯಕ್ತಿ. ವಾರಕರೀ ಅವರನ್ನು ಮಾಜ್‌ಕರೀ ಎಂದೂ ಕರೆಯುತ್ತಾರೆ. ಅವನು ಕೃಷ್ಣ ಭಕ್ತ ಮತ್ತು ಸಸ್ಯಹಾರಿ. ಅವನು ವಾಸಿಸುವ ಸ್ಥಳ **'ಸಂತ ಸಜ್ಜನಾಂಚಿ ಮಂಡಿ'** ವಾರಕರಿಗಳಾಗಿ ಪಂಢರಪುರಕ್ಕೆ ಹೋದವರು ತಪ್ಪದೇ ದೇಹು-ಅಳಂದಿ ಮತ್ತು ಪಂಢರಪುರ ದರ್ಶಿಸಲೇಬೇಕು.

ವಿಜಯನಗರದಲ್ಲಿ ಕೃಷ್ಣದೇವರಾಯರ ಕಾಲದಲ್ಲಿ ರಾಮಕೃಷ್ಣ ಕವಿಯು 'ತೆಲುಗಿನಲ್ಲಿ ರಚಿಸಿದ ಪ್ರಬಂಧಕಾವ್ಯ' 'ಪಾಂಡುರಂಗ ಮಹಾತ್ಮಮು' ಭಕ್ತ ಪುಂಡಲೀಕನ ಕತೆಯ ನ್ನೊಳಗೊಂಡಿದೆ. ವಾರಕರಿ ಸಂತರು ವಿಠ್ಠಲನನ್ನು ಪರಬ್ರಹ್ಮ ನೆಂತಲೂ, ಶಿವನೂ, ಪಾಂಡುರಂಗನೂ, ಹರಿಹರನೂ ಅವನೇ ಎಂದು ವರ್ಣಿಸಿದ್ದಾರೆ. ಇದರಿಂದ ಪ್ರಭಾವಿತರಾದ ಪುರಂದರ ರಾದಿ ದಾಸವರೇಣ್ಯರು ಆಂಧ್ರದ ತಾಳ್ಳಪಾರ ಅನ್ನಮಾ ಚಾರ್ಯರೂ ಭಕ್ತಿಪಂಥವನ್ನು ಅನೇಕ ಮುಖವಾಗಿ ಜನಪ್ರಿಯ ಗೊಳಿಸಿದರು.

ಆ ಕಾಲದಲ್ಲಿ ವಿಠ್ಠಲನಾಯಕ, ವಿಟ್ಟಯಕ್ಕನ್, ವಿಠ್ಠಣ್ಣ, ವಿಠವಾರ್ಯ, ವಿಠ್ಠಲದೇವ, ವಿಠ್ಠಲಯ್ಯದೇವ, ಪ್ರಸನ್ನ ವಿಠಲ ಎಂಬ ಹೆಸರುಗಳು ಪ್ರಸಿದ್ಧ. ವಿಠಲಾಪುರವೆಂಬ ಊರು ಇತ್ತು ವಿಜಯನಗರದಲ್ಲಿ ವಿಠ್ಠಲಾಪುರವೆಂಬ ಉಪನಗರವು ಸ್ಥಾಪಿಸಲ್ಪಟ್ಟು ಅಲ್ಲಿ ವಿಜಯವಿಠಲ ದೇವಾಲಯ ನಿರ್ಮಿಸಲ್ಪಟ್ಟಿತು. ದೇವರಾಯ ಭಟ್ಟರ್ ತಿರುಪತಿಯಲ್ಲಿ ವಿಠಲೇಶ್ವರ ದೇವಾಲಯ



ನಿರ್ಮಿಸಿದರು. ಈ ದೇವಸ್ಥಾನದ ಪೂಜಾದಿಗಳಿಗಾಗಿ ಮಹಾರಾಣಿ ಚನ್ನಮಾಂಬಾ ಅವರು ವೆಂಕಾಯಲಪಾಡು ಎಂಬ ಗ್ರಾಮದಾನ ಮಾಡಿದರು. ಕರ್ನಾಟಕದ ಮುಳಬಾಗಿಲು, ಕಡೂರು, ಬಸರಾಳು ಮತ್ತು ಮೈಸೂರಿನ ಗೋವಿಂದನ ಹಳ್ಳಿಯಲ್ಲಿ ವಿಠಲನ ನಾನಾರೀತಿಯ ಶಿಲ್ಪಗಳನ್ನು ಗುರುತಿಸಲಾಗಿದೆ.

ರಾಮಕೃಷ್ಣ ಕವಿಯು ತನ್ನ ಕಾವ್ಯ 'ಪಾಂಡುರಂಗ ಮಹಾತ್ಮೆ'ಯಲ್ಲಿ ವಿಠಲನನ್ನು 'ಕೊಯ್ಯವಿಠಲ' ಎಂದು ವರ್ಣಿಸಿದ್ದಾನೆ. ಅಂದರೆ ಅವನು ಕಾಷ್ಠಶಿಲ್ಪವೇನೋ?



ಹಗರಿಬೊಮ್ಮನಹಳ್ಳಿಯಲ್ಲಿರುವ ಶ್ರೀ ಪಾಂಡುರಂಗ ವಿಠಲ ರುಕುಮಾಯಿ ದೇವಸ್ಥಾನ ಮತ್ತು ಪೂಜಾ ವಿಗ್ರಹಗಳು

ಅನ್ನಮಾಚಾರ್ಯರ ಪ್ರಕಾರ ಸುಮಾರು ೭೭೦ ಜನ ದಾಸರು ಪುರಂದರ ವಿಠಲನನ್ನು ಸುತ್ತಿಸಿ ಕೀರ್ತನೆಗಳನ್ನು ರಚಿಸಿದ್ದಾರೆ.

ವಿಜಯನಗರದ ತುಳುವ ಮತ್ತು ಅರವೀಡು ಅರಸರು ವಿಠ್ಠಲನ ಪರಮಭಕ್ತರು. ಹಂಪೆಯ ತುಂಗಭದ್ರಾ ತೀರದಲ್ಲಿ ಪುರಂದರಾದಿದಾಸರು ನಿತ್ಯ ಸಂಕೀರ್ತನೆಗೆ ಮಾಡುತ್ತಿದ್ದರು. ರಾಯಲಸೀಮೆಯ ಒಳನಾಡಿನಲ್ಲಿ ಅನ್ನಮಾಚಾರ್ಯ ಮುಂತಾದವರು, ಕೃಷ್ಣ, ರಾಮ, ವಿಠ್ಠಲ, ವೆಂಕಟೇಶ ಮುಂತಾದ ವಿಷ್ಣುವಿನ ನಾನಾ ರೂಪಗಳ ಉಪಾಸನೆಯನ್ನು ಮೋಕ್ಷಕ್ಕಾಗಿ ಪ್ರಚಾರ ಮಾಡಿದರು. ಕಷ್ಟಕಾಲದಲ್ಲಿ, ಧಾರ್ಮಿಕ ಸಂಕಷ್ಟ ಸಮಯದಲ್ಲಿ ತೊಳಲಾಡುತ್ತಿದ್ದ ಜನರಿಗೆ ಈ ತತ್ವಗಳು ಜನರಿಗೆ ಜೀವನಾಧಾರ ನೀಡಿದವು.

ಈ ತತ್ವಗಳು ವಿಜಯನಗರ ಸಾಮ್ರಾಜ್ಯವು ನಿರ್ಬಲವಾದ ಮೇಲೆ ಅವತರಿಸಿದ ಶಿವಾಜಿ ಮಹಾರಾಜ್ ಮತ್ತು ಅವರು ಗುರುದಾಸರಿಂದ ಪುನಃ ಬೆಂಬಲ ಪಡೆದವು. ದಕ್ಷಿಣದ ಜಿಂಜಿ, ತಂಜಾವೂರು ಪ್ರದೇಶಗಳಲ್ಲಿ ಕೂಡಾ ಆಸ್ತಿಕ ಮನೋಭಾವವನ್ನು ಬಲಪಡಿಸಿದವು. ಮಹಾರಾಷ್ಟ್ರದಲ್ಲಿ ಆಗ ಅವತರಿಸಿದ ಸಂತ ತುಕಾರಾಂ ಅವರು ವಿಠ್ಠಲ ಪಂಥವನ್ನು ಎಲ್ಲೆಡೆ ಪ್ರಚಾರ ಮಾಡಿದರು.

ಆಧಾರಸೂಚಿ

೧. The cult of Vithoba, G.A. DELELIRY, Deccan College, Pune.

೨. The cult of Vithoba in Vijayanagara, K. Sarojini devi N.Venkataramanayya Commemoration Volume. Govt of A.P. Hyderabad, 1987.

೬೫

ಆಚಾರ್ಯ ಸೋಮದೇವಸೂರಿಯ 'ನೀತಿವಾಕ್ಯಮೃತಂ'ನಲ್ಲಿಯ 'ರಾಜನೀತಿ'ಯ ಪ್ರಸ್ತುತತೆ

ಡಾ. ವಿಠ್ಠಲ ಪೋತದಾರ*

ಆಚಾರ್ಯ ಸೋಮದೇವ ಸೂರಿಯ 'ನೀತಿ ವಾಕ್ಯಾಮೃತಂ' ಗ್ರಂಥವು ಕೌಟಿಲ್ಯನ 'ಅರ್ಥಶಾಸ್ತ್ರ' ಗ್ರಂಥವನ್ನು ಹೆಚ್ಚಾಗಿ ಅನುಸರಿಸಿ ಕ್ರಿ.ಶ. ೯೬೦ರಲ್ಲಿ ರಚಿಸಿದ್ದಾಗಿ ತಿಳಿದು ಬರುತ್ತದೆ. ಈತನು ರಾಷ್ಟ್ರಕೂಟರ ದೊರೆ ಮೂರನೆಯ ಕೃಷ್ಣನ ಸಮಕಾಲೀನನಾಗಿದ್ದನೆಂದು ಗ್ರಂಥದಲ್ಲಿ ಬರುವ ಉಲ್ಲೇಖಗಳಿಂದ ಊಹಿಸಲಾಗಿದೆ.

ನೀತಿ ವಾಕ್ಯಾಮೃತವು ೩೨ ಸಮುದ್ದೇಶಗಳನ್ನು ಒಳಗೊಂಡಿದೆ. ಇದು ಸೂತ್ರಪ್ರಾಯವಾದ ವಾಕ್ಯಗಳಲ್ಲಿ ರಚಿತವಾಗಿರುವ ಸಂಸ್ಕೃತ ರಾಜನೀತಿಶಾಸ್ತ್ರ ಗ್ರಂಥವಾಗಿದೆ. ಜೈನ ವಿದ್ವಾಂಸನಾದ ಸೋಮದೇವಸೂರಿಯು "ಅಥ ಧರ್ಮಾರ್ಥ ಕಾಮ ಫಲಾಯ ರಾಜ್ಯಯ ನಮಃ" ಎಂದು ತನ್ನ 'ನೀತಿ ವಾಕ್ಯಾಮೃತ'ವನ್ನು ಪ್ರಾರಂಭಿಸುತ್ತಾನೆ. ಪ್ರಜೆಗಳ ಧರ್ಮ, ಅರ್ಥ, ಕಾಮಗಳ ಫಲವು ರಾಜ್ಯ. ರಾಜ್ಯದಿಂದಲೇ ಧರ್ಮ, ಅರ್ಥ, ಕಾಮಗಳು ರಾಜ್ಯದ ಪ್ರಜೆಗಳಿಗೆ ದೊರೆಯುತ್ತದೆ ಎಂಬುದು ಗ್ರಂಥಕರ್ತೃವಿನ ಅಭಿಪ್ರಾಯ. ಜೀವನ, ಸಮಾಜ, ಧರ್ಮ, ರಾಜನೀತಿ, ವಿದ್ಯೆ. ಮುಂತಾದ ಅನೇಕ ಜೀವನೋಪಯೋಗಿ ವಿಷಯಗಳಿಗೆ ಸಂಬಂಧಿಸಿದಂತೆ ರಾಜನೀತಿಜ್ಞನ ಸೂಕ್ಷ್ಮ ವಿಚಾರ ಮತ್ತು ಸಂದೇಶವನ್ನು ಸೂತ್ರ ರೂಪದಲ್ಲಿ ಸೂಚ್ಯವಾಗಿ ತಿಳಿಸಲಾಗಿದೆ.

ದೇಶದ ಅಸ್ತಿತ್ವ,ಆಡಳಿತ ಮತ್ತು ಅದರ ಮುಂದುವರಿಯುವಿಕೆಯಲ್ಲಿ ಆಡಳಿತಗಾರನ ಪಾತ್ರ ಪ್ರಮುಖವಾದದ್ದು. ಸದೃಢವಾದ, ನ್ಯಾಯಸಮ್ಮತವಾದ, ಜನಪರವಾದ ಆಡಳಿತವನ್ನು ನೀಡಬೇಕಾದರೆ ಆಡಳಿತಗಾರನಾದವನು ಧರ್ಮದ ತಳಹದಿಯ ಮೇಲೆ ನಿಶ್ಚಯವಾಗಿಯೂ ಮುಂದುವರಿಯಬೇಕಾಗುತ್ತದೆ. ಆತನಗೆ ಧರ್ಮಾಧರ್ಮಗಳ ಅರಿವು ಪ್ರತಿಯೊಂದು ಹೆಜ್ಜೆಯಲ್ಲಿಯೂ ಇರಬೇಕಾದುದು ಅತ್ಯವಶ್ಯಕ. ಈ ಅರಿವನ್ನು ಸಮಾಜದಲ್ಲಿ ಮೂಡಿಸಲು ಪ್ರಾಚೀನ ಕಾಲದಲ್ಲಿ 'ರಾಜನೀತಿ' ಗ್ರಂಥಗಳನ್ನು ರಚಿಸಲಾಯಿತು. ಧರ್ಮಶಾಸ್ತ್ರಕ್ಕೆ ಅನುಗುಣವಾಗಿ ಯುಕ್ತಾ ಯುಕ್ತ ಚಿಂತನೆಯನ್ನು ಒಳಗೊಂಡ ಆಡಳಿತ ನೀತಿಗೆ ಸಂಬಂಧಿಸಿದ ಗ್ರಂಥಗಳೇ ರಾಜನೀತಿ ಗ್ರಂಥಗಳು. 'ಕೌಟಿಲ್ಯನ 'ಅರ್ಥಶಾಸ್ತ್ರ, ' ಸೋಮದೇವ ಸೂರಿಯ 'ನೀತಿ ವಾಕ್ಯಮೃತಂ' ಗ್ರಂಥಗಳು ಈ ಸಾಲಿಗೆ ಸೇರಿದ ಉದ್ಗ್ರಂಥಗಳು.

ಗ್ರಂಥದಲ್ಲಿರುವ ೩೨ ಸಮುದ್ದೇಶಗಳಲ್ಲಿ ಕಂಡುಬರುವ ತತ್ವಗಳನ್ನು ಸಮಕಾಲೀನ ಸಮಾಜ, ರಾಜಕೀಯ ವ್ಯವಸ್ಥೆ ಮತ್ತು ಆಡಳಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಅಧ್ಯಯನ ಮಾಡಿದಾಗ ಅಲ್ಲಿರುವ ಸಂದೇಶವು ಸಮಕಾಲೀನ ಜಗತ್ತಿನಲ್ಲಿ ಹೆಚ್ಚು ಪ್ರಚಲಿತವು ಮತ್ತು ಪ್ರಸ್ತುತವು ಎನಿಸುತ್ತದೆ. ಉದಾಹರಣೆಗೆ, ಧರ್ಮಸಮುದ್ದೇಶದಲ್ಲಿರುವ "ಖಲಸಂಸರ್ಗಃ ಕಂ ನಾಮಕಂ ಅನರ್ಥಂ ನ ಕರೋತಿ" ಎಂಬ ವಾಕ್ಯವನ್ನು ದುರ್ಜನರ ಸಹವಾಸವು ಯಾವ ಅನರ್ಥವನ್ನುಂಟು ಮಾಡುವುದಿಲ್ಲ ಎಂಬ ಹೇಳಿಕೆಯು ಆಡಳಿತಗಾರನು ದುರ್ಜನರು, ಶತ್ರುಗಳ ಬಗ್ಗೆ ಜಾಗರೂಕನಾಗಿರಬೇಕೆಂದು ತಿಳಿಸುತ್ತದೆ.

ಅರ್ಥ ಸಮುದ್ದೇಶದಲ್ಲಿರುವ "ಸಃ ಅರ್ಥಸ್ಯ ಭಾಜನಂ ಯಃ ಅರ್ಥಾನುಬಂಧೇನ ಅರ್ಥಂ ಅನುಭವತಿ" ಶ್ಲೋಕವು 'ಯಾವನು ಅರ್ಥವನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸುತ್ತಾನೋ ಅವನು ಅರ್ಥಕ್ಕೆ ಅರ್ಹನು' ಎಂಬ ಭಾವಾರ್ಥವು ಆಡಳಿತದಲ್ಲಿ ಹಣಕಾಸು ವ್ಯವಸ್ಥೆಯಲ್ಲಿರಬೇಕಾದ ದಕ್ಷತೆಯನ್ನು ಕುರಿತು ಸೂಚಿಸುತ್ತದೆ.

ವಿದ್ಯಾವೃದ್ಧ ಸಮುದ್ದೇಶದಲ್ಲಿಯ 'ರಾಜ್ಞೋಹಿ ದುಷ್ಟನಿಗ್ರಹ ಶಿಷ್ಟಪರಿಪಾಲನಂ ಚ ಧರ್ಮೋ' ಎಂಬ ಶ್ಲೋಕವು 'ದುಷ್ಟನಿಗ್ರಹವೂ ಶಿಷ್ಟ ರಕ್ಷಣೆಯೂ ಅರಸನ ಧರ್ಮ' ಎಂದು ತಿಳಿಸುತ್ತದೆ. 'ಅರಾಜಕಂ ಭುವನಂ ನ ಮುರ್ಖೋ ರಾಜಾ' ಎಂಬುದು 'ಮುರ್ಖನಾದ ರಾಜನಿರುವುದಕ್ಕಿಂತ ದೇಶಕ್ಕೆ ರಾಜನಿಲ್ಲದಿರುವುದೇ ಮೇಲು' ಎಂಬ ಸಂದೇಶವು ರಾಜನಿಗಿರಬೇಕಾದ ಅರ್ಹತೆಯನ್ನು ತಿಳಿಸುತ್ತದೆ. 'ಯಮ ಇವ ಅಪರಾಧಿಷು ದಂಡಪ್ರಣಯನೇನ ವಿದ್ಯಮಾನೇ ರಾಜ್ಞಿ' ಯನ್ನು

* ನಾಗಾರ್ಜುನ ಪದವಿ ಕಾಲೇಜು, ಯಲಹಂಕ, ಬೆಂಗಳೂರು-೫೬೦೦೬೪.

'ಅಪರಾಧಿಗಳನ್ನು ಯಮನಂತೆ ದಂಡಿಸುವ ರಾಜನಿದ್ದಲ್ಲಿ ಪ್ರಜೆಗಳು ತಮ್ಮ ತಮ್ಮ ಮೇರೆಗಳನ್ನು ಮೀರುವುದಿಲ್ಲ'ಎಂದು ಅರ್ಥೈಸಬಹುದು. ಈ ವಾಕ್ಯವು ರಾಜ್ಯದಲ್ಲಿ ದೊರೆಯಿಂದ ಜನರಿಗಿರಬೇಕಾದ ಕಾನೂನಿನ ಭಯದ ವಿವರವನ್ನು ನೀಡುತ್ತದೆ. 'ಅಜಾತ ವಿದ್ಯಾವೃದ್ಧಸಂಯೋಗಃ ಹಿ ರಾಜಾ ನಿರಂಕುಶೋ ಗಜ ಇವ ಸದ್ಯಃ ವಿನಶ್ಯತಿ' ಶ್ಲೋಕವು 'ಜ್ಞಾನವೃದ್ಧರ ಸಂಪರ್ಕವಿಲ್ಲದ ಅರಸನು ಅಂಕುಶವಿಲ್ಲದ ಆನೆಯಂತೆ ತಟ್ಟನೆ ನಶಿಸುತ್ತಾನೆ' ಎಂದು ಅರ್ಥೈಸುತ್ತದೆ. ಆಡಳಿತದಲ್ಲಿ ಜ್ಞಾನವೃದ್ಧರು, ಕುಶಲಮತಿಗಳು ಪರಿಣಿತರು ಎಷ್ಟು ಅವಶ್ಯಕ ಎಂಬ ಮಾತನ್ನು ಪ್ರಸ್ತುತ ಸಾಲು ವಿಶದ ಪಡಿಸುತ್ತದೆ.

ಆನ್ವೀಕ್ಷಿಕೀ ಸಮುದ್ದೇಶದಲ್ಲಿ 'ಅಪರಾಧಕಾರಿಷು ಪ್ರಶಮೋ ಯತಿನಾಂ ಭೂಷಣಂ ನ ಮಹೀಪತೀನಾಂ' 'ಅಪರಾಧಿಗಳಲ್ಲಿ ಕ್ಷಮೆಯು ಯತಿಗಳಿಗೆ ಭೂಷಣ, ರಾಜರಿಗಲ್ಲ' ಈ ಹೇಳಿಕೆಯು ರಾಜನಾದವನು ಅಪರಾಧಿಗಳ ಕುರಿತಂತೆ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳುವಂತೆ ಸೂಚಿಸುತ್ತದೆ. 'ಅನ್ಯಥಾ ಪುನಃ ನರಕಾಂತಂ ರಾಜ್ಯಂ' 'ದುಷ್ಟ ಶಿಕ್ಷೆ ಮಾಡದಿದ್ದರೆ ರಾಜ್ಯ ನರಕವಾಗುದು'. 'ವಿಪದಾಂತಾ ಖಲಮೈತ್ರೀ' ದುಷ್ಟರ ಸ್ನೇಹವು ವಿಪತ್ತಿನಲ್ಲಿ ಕೊನೆಗೊಳ್ಳುವುದು'.

ತ್ರಯಿ ಸಮುದ್ದೇಶದಲ್ಲಿ 'ಸ ಕಿಂ ರಾಜಾ ಯೋ ನ ರಕ್ಷಿತಿ ಪ್ರಜಾಃ 'ಪ್ರಜೆಗಳನ್ನು ರಕ್ಷಿಸದವನು ರಾಜನೇ? ಈ ಸಾಲು ಪ್ರಜಾರಕ್ಷಣೆಯಲ್ಲಿಆಡಳಿತಗಾರನ ಪಾತ್ರವನ್ನು ವಿವರಿಸುತ್ತದೆ.

ವಾರ್ತಾಸಮುದ್ದೇಶದಲ್ಲಿರುವ 'ನಿತ್ಯಂ ಹಿರಣ್ಯವ್ಯಯೇನ ಮೇರುರಪಿ ಕ್ಷೀಯತೆ' 'ನಿತ್ಯವೂ ಹಣವನ್ನು ವ್ಯಯಿಸುವುದರಿಂದ ಮೇರು ಪರ್ವತವು ಸವೆದುಹೋಗುತ್ತದೆ' ಎಂಬ ವಾಕ್ಯವು ಆರ್ಥಿಕ ನಿರ್ವಹಣೆಗೆ ಸಂಬಂಧಿಸಿದಂತೆ ಆಡಳಿತಗಾರರ ಪಾತ್ರವೇನು ಎಂಬುದರ ಸ್ಪಷ್ಟ ಚಿತ್ರಣವನ್ನು ನೀಡುತ್ತದೆ.

ದಂಡನೀತಿ ಸಮುದ್ದೇಶದಲ್ಲಿ'ಯಥಾ ದೋಷಂ ದಂಡಸ್ಯ ಪ್ರಣಯನಂ ಹಿ ದಂಡನೀತಿಃ' ಶ್ಲೋಕವು 'ಅಪರಾಧಕ್ಕೆ ತಕ್ಕಂತೆ ದಂಡವನ್ನು ವಿಧಿಸುವುದೇ ದಂಡನೀತಿ' ಎಂದು ವಿವರಿಸುತ್ತದೆ. 'ಅಪ್ರಣೀತೋ ಹಿ ದಂಡೋ ಮತ್ಸ್ಯನ್ಯಾಯಂ ಉದ್ಭಾವಯತಿ ಬಲೀಯಾನ್ ಅಬಲಂ ಗ್ರಸತೇ' 'ದಂಡವನ್ನು ವಿಧಿಸದಿದ್ದರೆ ಮತ್ಸನ್ಯಾಯಕ್ಕೆ ಕಾರಣವಾಗುತ್ತದೆ.

ಮಂತ್ರಿ ಸಮುದ್ದೇಶದಲ್ಲಿ 'ಮಂತ್ರಪೂರ್ವಃ ಸರ್ವೋಪಿ ಆರಂಭಃ ಕ್ಷಿತಿಪತೀನಾಂ' 'ರಾಜರ ಎಲ್ಲ ಕಾರ್ಯೋದ್ಯೋಗ ಗಳೂ ಮುಂದಾಲೋಚನೆ ಮಾಡಿ ಮಾಡಬೇಕಾದವು'.

ಸಮಕಾಲೀನ ಜಗತ್ತಿನಲ್ಲಿ ಗ್ರಂಥದ ಪ್ರಸ್ತುತತೆ

ರಾಜನೀತಿಯ ತತ್ವಗಳು ಸಾರ್ವಕಾಲಿಕ ಸತ್ಯವನ್ನು ಹೇಳುತ್ತವೆ. ಪ್ರಾಚೀನ ಕಾಲದ ನಮ್ಮ ಧರ್ಮಶಾಸ್ತ್ರದ ಗ್ರಂಥಗಳನ್ನು ನಾವು ಸಮಕಾಲೀನ ಜಗತ್ತಿನ ವಾಸ್ತವಾಂಶದ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದು ಪ್ರಸ್ತುತದಲ್ಲಿ ಅವಶ್ಯಕ ವಾಗಿವೆ. ಆಡಳಿತದ ವಿವಿಧ ಆಯಾಮಗಳಿಗೆ ಸಂಬಂಧಿಸಿ ದಂತೆ ಈ ಗ್ರಂಥಗಳಲ್ಲಿ ನಿರೂಪಿತವಾದ ಸೂತ್ರಗಳು ಇಂದಿಗೂ ಬಹಳ ಪ್ರಸ್ತುತವಾಗಿವೆ. ಹಳೆಯದು out dated, ಅದರ ಅಧ್ಯಯನ ಅನುಪಯುಕ್ತ ಎಂದು ನಾವು ಅಧುನಿಕ ಕಾಲದಲ್ಲಿ ಪ್ರತಿಪಾದಿಸುವದು ಸೂಕ್ತವಲ್ಲ. ಅಧುನಿಕ ಸಮಾಜದ ಹಿನ್ನೆಲೆಯಲ್ಲಿ ಈ ಸಿಧ್ಧಾಂತಗಳನ್ನು ಹೊಸದೃಷ್ಟಿಕೋನದಿಂದ ಅಧ್ಯಯನ ಮಾಡಿ, ಅವುಗಳಲ್ಲಿರುವ ಸಾರವನ್ನು ಇಂದಿನ ಸಮಾಜದ ಏಳಿಗೆಗೆ ಅಳವಡಿಸಿಕೊಳ್ಳುವ ಕೆಲಸ ಸಮರೋಪಾ ದಿಯಾಗಿ ನಡೆಯಬೇಕಾಗಿದೆ. ಹೀಗಾದಾಗ, ಸಮಕಾಲೀನ ಜಗತ್ತಿನ ಜನತೆಗೆ ಇತಿಹಾಸ ಮತ್ತು ಅದು ತಿಳಿಸುವ ಐತಿಹಾಸಿಕ ಮೌಲ್ಯದ ಅರಿವು ಉಂಟಾಗುವುದು ಸಾಧ್ಯವಾಗು ತ್ತದೆ. ಇಲ್ಲದಿದ್ದರೆ, ಮುಂಬರುವ ಜನಾಂಗ ಇತಿಹಾಸದ ಬಗೆಗಿರುವ ಅರಿವು, ಗೌರವ, ಮಹತ್ವವನ್ನು ಸಂಪೂರ್ಣವಾಗಿ ಮರೆಯುವ ಅಪಾಯವಿದೆ. ಆದ್ದರಿಂದ, ಅಂತಃಶಿಸ್ತೀಯ ಅಧ್ಯಯನದ ಮೂಲಕ (Interdisplinary approach) ಪ್ರಾಚೀನ ಕಾಲದ ಇತಿಹಾಸದ ಆಕಾರಗಳನ್ನು ಅಧ್ಯಯನ ಮಾಡುವುದು ಪ್ರಸ್ತುತದಲ್ಲಿ ಅತ್ಯವಶ್ಯಕವಾಗಿವೆ.

ಆಧಾರಸೂಚಿ

೧. ಜಿ.ಎಸ್. ದೀಕ್ಷಿತ್, ಬಿ. ರಾಮಸ್ವಾಮಿ, ಶ್ರೀನಿವಾಸ ರಿತ್ತಿ, '*ಆಚಾರ್ಯ ಸೋಮದೇವ ಸೂರಿ ವಿರಚಿತಂ ನೀತಿ ವಾಕ್ಯಮೃತಂ*', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೨. ಶ್ರೀ ಕೂಡಲೀ ಶೃಂಗೇರಿ ಜಗದ್ಗುರು ಶ್ರೀ ಸಚ್ಚಿದಾನಂದ ಶಂಕರ ಭಾರತೀ ಸ್ವಾಮಿಗಳು, ***ಕೌಟಲೀಯ ಅರ್ಥಶಾಸ್ತ್ರದ ಕನ್ನಡ ಅನುವಾದ***, ಮೈಸೂರು ರಾಜ್ಯ ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಇಲಾಖೆ, ೧೯೬೩.

೬೬

ಚಾರಣ್ಯಕವಿ ಚರಿತ್ರಕಾರನಾದಾಗ; ಕವಿ ಗೋವಿಂದ ವೈದ್ಯರ ಕಾವ್ಯ, ಕಂಠೀರವ ನರಸರಾಜ ವಿಜಯ*

ಡಾ. ಲೀಲಾ ಬಿ.*

ಚಾರಣ ಕವಿಯೆಂದು ಕವಿ ಗೋವಿಂದ ವೈದ್ಯರನ್ನು ಮೊದಲು ಗುರುತಿಸಿ ಕರೆದವರು ಬೆಟಗೇರಿ ಕೃಷ್ಣಶರ್ಮರು[೧]. ಚಾರಣ ಗೀತೆಗಳನ್ನು ಹಾಡುವ ಕವಿಗಳು ರಾಜಸ್ಥಾನ ದಲ್ಲಿಯೂ ಮತ್ತು ಮಹಾರಾಷ್ಟ್ರದಲ್ಲಿಯೂ ಬಹಳ ಜನ ಸಿಗುವರು. ರಾಜರ ಸಾಹಸ, ಶೌರ್ಯ, ಯುದ್ಧ ಕೈಗೊಂಡ ರೀತಿ ಮನಮುಟ್ಟುವಂತೆ ಕಥಾರೂಪಕದಲ್ಲಿ ಹಾಡುವರು ಮತ್ತು ಹಾಡಿನ ಮೂಲಕ ದೇಶಪ್ರೇಮವನ್ನು ಹೊಡೆದೆಬ್ಬಿಸು ವದು ಈ ಕವಿಗಳ ಉದ್ದೇಶ. ಮಧ್ಯಯುಗದಲ್ಲಿ ಇವರನ್ನು 'ಷಾಹಿದ್' ಎಂದು ಕರೆದರು. ಷಾಹಿದ್ ಎಂದರೆ ಪರ್ಷಿಯನ್ ಭಾಷೆಯಲ್ಲಿ ಹುತಾತ್ಮರು ಎಂದರ್ಥ. ಮಹಾರಾಷ್ಟ್ರದಲ್ಲಿ 'ಶಾಹಿರ್‌ಗೀತ' ಎಂದು ಕರೆಯಲ್ಪಟ್ಟಿತು. ಶಾಹಿರ್‌ಗೀತೆಗಳಲ್ಲಿ ವಿರಸ ತುಂಬಿದೆ. ಕರ್ಣಾಟಕದಲ್ಲಿ ಗೀಗಿ ಪದಮೇಳಗಳು ಇದನ್ನು ಹೋಲಿದರೂ, ಅದರಲ್ಲಿ ವೀರರಸಕ್ಕಿಂತ ಹೆಣ್ಣು, ಗಂಡುಗಳ ಹೊಡೆದಾಟವನ್ನು ಮಾತ್ರ ಕಾಣುತ್ತೇವೆ.

ಹಲವಾರು ಕನ್ನಡ ಸಾಮ್ರಾಜ್ಯಗಳು (ಕದಂಬರಿಂದ ಹೊಯ್ಸಳದವರೆಗೆ) ಅಂದರೆ ೫–೬ ಶತಮಾನದದಿಂದ ೧೫ನೇ ಶತಮಾನದವರೆಗೆ ಆಳಿದ್ದರೂ, ಅವರ ವೀರ ಪರಂಪರೆಯನ್ನು ಬಿಂಬಿಸುವ, 'ಶಾಹಿರ್ ಗೀತೆ' ಕಂಡು ಬರುವುದಿಲ್ಲ. ಆದರೆ ೧೯ನೇ ಶತಮಾನದಲ್ಲಿ ನಮಗೆ ಹಲವಾರು ಗೀತೆಗಳು ಕಂಡುಬರುವದು. ಬಹುಷಃ ಕನ್ನಡಿಗರ ಪರಾಧೀನ ಜೀವನ ಪರಂಪರೆಯಲ್ಲಿ ನಷ್ಟವಾಗಿರಬಹುದು.

ನಮಗೆ ಸಿಕ್ಕುವ ಮೊದಲನೆ ಚಾರಣ ಕವಿ ರಚನೆ; ಕವಿ ನಂಜುಂಡನ ಕುಮಾರರಾಮನ ಚರಿತ್ರೆ (೧೫೨೫). ಗಂಗಕವಿ, ಕುಮಾರ ರಾಮನನ್ನು ಆಧಾರವಗಿಟ್ಟು ಬರೆದ ಕಥೆ 'ಕುಮಟಿರಾಮ' (೧೬೫೧). ಕವಿ ನಂಜುಂಡನ 'ಕುಮಾರ ರಾಮನ ಕಥೆ' ಮೊದಲ ಚಾರಣಕವಿತೆಯೆಂದು ಬೆಟ್ಟಗೇರಿ ಕೃಷ್ಣಶರ್ಮರು ಖಚಿತವಾಗಿ ಅಭಿಪ್ರಾಯ ಪಡುತ್ತಾರೆ. ಇದು ಒಂದು ಐತಿಹಾಸಿಕವಾದ ಸಂಗತಿ. ಇದರಲ್ಲಿ ತುರುಕರೊಡನೆ ಕಾದಾಡಿದ ವೀರಕಥೆ ಇದೆ. ಇದರ ಸಮಗ್ರ ಕಥಾನಕವನ್ನು M.H.Ramasharma ರವರು 'Studies in Vijayanagar History' ಎಂಬ ಪ್ರಬಂಧದಲ್ಲಿ ಚರ್ಚಿಸಿರು ವರು[೨]. ಮತ್ತೊಂದು ಪ್ರಬಂಧ 'Exploits of Kampila and Kumara Ramanatha[೩], ಸುದೀರ್ಘವಾಗಿ ಕೊಟ್ಟಿದೆ. ಮುಂದೆ ಹುಲ್ಲೂರು ಶ್ರೀನಿವಾಸ ಜೋಯಿಸರು[೪] ತಮ್ಮ 'Kumara Rama' ಪ್ರಬಂಧದಲ್ಲಿ ಸಂಕ್ಷಿಪ್ತ ವರದಿ ಕೊಟ್ಟಿರು ತ್ತಾರೆ. ಇವೆಲ್ಲಾ ಆಧಾರದಿಂದ ನಮಗೆ ಕುಮಾರರಾಮನ ಸಾಹಸ ಕಥಾನಕ ಚಿಂತನೆ ಇವುಗಳ ಲಭ್ಯವಿದೆ. ೧೯೬೦ ರಲ್ಲಿ ಅನಂತರಂಗಾಚಾರ್ಯರ ಸಂಪಾದಕತ್ವದಿಂದ ಹೊರಬಂದ ಕುಮಾರರಾಮನ ಸಾಂಗತ್ಯ ಸಂಗ್ರಹದಲ್ಲಿ ಮೂಲರೂಪದಲ್ಲಿ ಸಾಹಿತ್ಯ ದೊರಕುತ್ತದೆ. "ಕುಮಾರ ರಾಮನ" ಸಾಂಗತ್ಯ ಕರ್ಣಾಟಕದಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ.

ಕವಿ ಗೋವಿಂದ ವೈದ್ಯ: ಗೋವಿಂದ ವೈದ್ಯರ ತಂದೆ ಶ್ರೀನಿವಾಸ ಪಂಡಿತರು, ಗೋವಿಂದ ವೈದ್ಯರ ಜೀವನದ ಬಗ್ಗೆ ಹೆಚ್ಚಿನ ಮಾಹಿತಿ ದೊರಕಿಲ್ಲ. ಕವಿ ತನ್ನ ಸ್ಥಳವನ್ನು ಹೇಳಿಲ್ಲ. ಆದರೆ 'ಶ್ರೀ ಕಂಠೀರವ ನರಸರಾಜ ವಿಜಯ' ಗ್ರಂಥದ ಆರಂಭದಲ್ಲಿ, ಮತ್ತು ಕೊನೆಯಲ್ಲಿ ಶ್ರೀರಂಗನಾಥನ ಸ್ತುತಿ ಇದೆ. ಅವರು ರಾಜನ ಆಸ್ಥಾನ ಕವಿಯಾದ್ದರಿಂದ, ಮೂತಃ ಶ್ರೀರಂಗಪಟ್ಟಣ ಸ್ಥಳವಾಗಿರಬಹುದೆಂದು ಅಭಿಪ್ರಾಯವಿದೆ[೫]. ಕವಿ ಸಂಸ್ಕೃತ ಮತ್ತು ಕನ್ನಡದಲ್ಲಿ ಹೆಚ್ಚು ಪರಿಶ್ರಮ ಪಡೆದಿದ್ದರು. ಈ ಗ್ರಂಥವನ್ನು ೧೬೪೮ರಲ್ಲಿ ರಚಿಸಿದ್ದಾಗಿ ಗ್ರಂಥದ ಕೊನೆಯ ಪದ್ಯದಿಂದ ತಿಳಿದುಬರುತ್ತೆ. ಈ ಕಾವ್ಯವನ್ನು ತಾನು ಪದ್ಯದಿಂದ ರಚಿಸಿ ಭಾರತಿ ನಂಜುಂಡ ನೆಂಬುವನಿಂದ ರಾಜಾಸ್ಥಾನದಲ್ಲಿ ಓದಿಸಿದರು ಎಂಬುವಾಗಿ ಮುನ್ನುಡಿಯಲ್ಲಿ ತಿಳಿಸಿದೆ. ಇದರಲ್ಲಿ ೨೬ ಸಂಧಿಗಳಿವೆ. ಇದರ ಶೈಲಿ ಷಟ್ಪದಿ ಗ್ರಂಥ ಶೈಲಿಯನ್ನು ಅನುಸರಿಸಿದೆ. ಸಾಮಾನ್ಯ ಮನುಷ್ಯನಿಗೆ ಅರ್ಥವಾಗುವ ಸಾಂಗತ್ಯ ವಾಕ್ಯದಿಂದ ರಚಿಸಿದೆ. ಇದರಲ್ಲಿ ವೀರರಸ ಪ್ರಧಾನವಗಿದೆ. ದ್ರಾಕ್ಷಾಪಾಕದಂತಿದೆ

* ಈ ಗ್ರಂಥವನ್ನು ಬೇರೊಬ್ಬರು ಬರೆದಿರುವರು ಎಂಬ ಅಭಿಪ್ರಾಯವಿದೆ

* 'ಶ್ಯಾಮಲ', ಫ್ಲಾಟ್ ೪೬, ೧ನೇ ಮಹಡಿ, ಡಾನ್‌ಬಾಸ್ಕೋ ಹೈಸ್ಕೂಲ್ ಹತ್ತಿರ, ಮಾತುಂಗ, ಮುಂಬೈ-೪೦೦೦೧೯.



ಎಂದಿದ್ದಾನೆ ಕವಿ. ಇದರಲ್ಲಿರುವ ವಿಶೇಷ ಚರಿತ್ರಾಂಶವೆಂದರೆ ಕವಿ ತಾನು ನೋಡಿದನ್ನು, ಕಂಡಿದ್ದನ್ನು ಮತ್ತು ಹಲವರಿಂದ ಕೇಳಿದ್ದನ್ನು ಯಥಾವತ್ತಾಗಿ ಬರೆದಿರುವದರಿಂದ ಈ ಪುಸ್ತಕ ಚರಿತ್ರಕಾರನಿಗೆ ಮಹತ್ವವೆನಸುತ್ತದೆ.

ಕಂಠೀರವ ನರಸರಾಜ ವಿಜಯ (೧೬೪೮): ಮೈಸೂರು ರಾಜರಾಗಿದ್ದ ಕಂಠೀರವ ನರಸ ರಾಜರನ್ನು ವರ್ಣಿಸುವ ರೋಮಾಂಚಕವಾದ ಶೂರರಾದ ಕಥೆ. ಇದರಲ್ಲಿ ಕನ್ನಡಿಗರು ತಮ್ಮ ದೊರೆಯ ಬಗ್ಗೆ ಹೆಮ್ಮೆ ಮತ್ತು ಸ್ಫೂರ್ತಿ ಪಡೆಯುವಂತಿದೆ. ರಾಜಸ್ಥಾನದಲ್ಲಿದ್ದರೂ ಕವಿ ಮುಖ್ಯವಾಗಿ ಜನ ಸಾಮಾನ್ಯರನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಬರೆದದ್ದಾಗಿದೆ. ಈ ಕಾವ್ಯ ಸ್ವದೇಶಾಭಿಮಾನದಿಂದ ಕೂಡಿದೆ. ಕವಿ ತನ್ನ ಸ್ವದೇಶಾಭಿಮಾನವನ್ನು ಹಲವಾರು ಬಾರಿ ಹೇಳಿರುವನು.

ಕಂಠೀರವ ನರಸರಾಜ ೧೬೩೮–೫೯: ತಾಳೀಕೋಟೆಯ ಯುದ್ಧದ ನಂತರ ಇನ್ನೂರು ವರ್ಷದಲ್ಲಿ ದಕ್ಷಿಣ ಭಾರತದಲ್ಲಿ ಅತ್ಯಂತ ಪ್ರಭಾವ ಬೀರಿದ್ದು ಮೈಸೂರು ಒಡೆಯರ ವಂಶಸ್ಥರು. ಮೈಸೂರು ಕಂಠೀರವ ನರಸರಾಜ ಒಡೆಯರ್ (ಬೆಟ್ಟದ ಚಾಮರಾಜ ಒಡೆಯರ ಪುತ್ರ) ಎಲ್ಲಾ ವಿದ್ಯೆಯಲ್ಲೂ ಪಾರಂಗತರಿದ್ದರು. ನಂಜರಾಜ, ಲಿಂಗರಾಜ ಇವರ ಗುರುಗಳು. ಅಲಸಿಂಗಾಚಾರ್ಯರೂ ಇವರ ಗುರು. ಕಂಠೀರವ ನರಸರಾಜ ಒಡೆಯರ್ ಶೀರಂಗ ಪಟ್ಟಣದಲ್ಲಿ ರಾಜ್ಯವನ್ನು ಕಟ್ಟಿ ಸಕಲ ಸಾಮಂತರನ್ನೂ ಸ್ವಾಧೀನ ಪಡಿಸಿಕೊಂಡಿದ್ದರು. ಸುಲ್ತಾನ್ ಮಹಮೂದ್ ಖಾನ್ ಪಾದುಷ, ಬಿಜಾಪುರದ ರಾಜನು, ಕರ್ಣಾಟಕವನ್ನು ವಶಪಡಿಸಿಕೊಳ್ಳಲೆಂದು ರಣದುಲ್ಲಾಖಾನ್ ಎಂಬ ಸೇನಾಪತಿಯನ್ನು ಅಸಂಖ್ಯಾತ ಸೈನ್ಯದೊಂದಿಗೆ ಕಳುಹಿಸಿದನು. ರಣದುಲ್ಲಾಖಾನನು ಹಲವು ಪಾಳೇಗಾರರನ್ನು ಗೆದ್ದನಾದರೂ, ಶ್ರೀರಂಗ ಪಟ್ಟಣಕ್ಕೆ ಮುತ್ತಿಗೆ ಹಾಕಿ, ಆಕ್ರಮಿಸಿದರೆ, ಮಿಕ್ಕವರೆಲ್ಲಾ ತನ್ನ ಕೈವಶ ಆಗುವರೆಂದು ಶ್ರೀರಂಗ ಪಟ್ಟಣಕ್ಕೆ ಮುತ್ತಿಗೆ ಹಾಕಿದನು. ಆದರೆ ರಣಧೀರ ಕಂಠೀರವ ನರಸರಾಜ ಒಡೆಯರ್ ಮಹಾರಾಜರು ತಮ್ಮ ಸಾಹಸ ಶೌರ್ಯದಿಂದ ತುರುಕರನ್ನು ಸೋಲಿಸಿದ್ದಲ್ಲದೆ ಬಹಳ ಜನರಿಗೆ ಮೂಗು ಕತ್ತರಿಸಿ ಮುಖ ಭಂಗ ಮಾಡಿದರು. ೧೬೩೯ ರಲ್ಲಿ ಖಾನ್‌ಖಾನ್ ಎಂಬುವನು ಶ್ರೀರಂಗ ಪಟ್ಟಣದ ದೊರೆಯ ಮೇಲೆ ತಾನು ಸಮರ್ಥವಾಗಿ ಯುದ್ಧ ಮಾಡಲಾರೆ ಎಂದು ದೂರದಿಂದಲೇ ಹಿಂದಿರುಗಿದನು. ಇನ್ನೊಬ್ಬ ಮುಸ್ತಾಫಾ ಖಾನ್ ದೊಡ್ಡದಾದ ಸೈನ್ಯದೊಡಗೂಡಿ ಬಂದರೂ ಕಂಠೀರವ ನರಸರಾಜರಿಂದ ಪರಾಜಿಸಲ್ಪಟ್ಟನು.

ಹೀಗೆ ಕಂಠೀರವ ನರಸರಾಜ ವಿಜಯ ಕನ್ನಡಿಗರು ತಮ್ಮ ಮತ್ತು ತಮ್ಮ ರಾಜನು, ತನ್ನ ದೇಶಕ್ಕಾಗಿ ಅಭಿಮಾನದಿಂದ ವೈರಿಗಳೊಂದಿಗೆ ಹೊಡೆದಾಡಿ ನಡೆಸಿದ ಯುದ್ಧ. ಆದ್ದರಿಂದ ಇದು ಚಾರಣ ಕವಿತೆ. ಇನ್ನು ಈ ಕಾವ್ಯದಲ್ಲಿರುವ ವೈವಿಧ್ಯತೆಯೆನ್ನು ಗುರುತಿಸೋಣ.

ರೂಡಿಯಿಂದ ಕೂಡಿದ ತಿಳಿಕನ್ನಡದಲ್ಲಿ ಜನ ಸಾಮಾನ್ಯನಿಗೆ ಅರ್ಥವಾಗುವ ಶೈಲಿಯಲ್ಲಿ ಇರುವ ಈ ಕಾವ್ಯದಲ್ಲಿ; ಜನರ ವೈವಿಧ್ಯತೆ, ಉಡುಪುಗಳು, ಸಾಮಾಜಿಕ ಜನಜೀವನ, ಯುದ್ಧ ತಯಾರಿಕೆ ಮತ್ತು ಶತ್ರುಗಳನ್ನು ಎದುರಿಸುವ ರೀತಿ ಹೇಳಿದೆ. ಅಂದಿನ ಸಾಮಾಜಿಕ ಜೀವನದ ಸಮಗ್ರ ಚಿತ್ರ ಇಲ್ಲಿದೆ. ಆದ್ದರಿಂದ ಇದನ್ನು ಸಾಮಾಜಿಕ ಚರಿತ್ರೆಯೆಂದರೆ ಉತ್ಪ್ರೇಕ್ಷೆಯಾಗಲಾರದು. ಇಲ್ಲಿ ಕರ್ಣಾಟಕದ ವರ್ಣನೆ ಕೇವಲ ಮೈಸೂರಿಗೆ ಮಾತ್ರ ಸೀಮಿತ. ಬಿಜಾಪುರ,

ಉತ್ತರ ಕರ್ನಾಟಕ ಸೇರಿಸಿಲ್ಲ. ಈ ಕಾವ್ಯದಲ್ಲಿ ೨೬ ಸಂಧಿಗಳಿವೆ. ೫೧೧ ಪುಟದ ಪುಸ್ತಕದಲ್ಲಿ ಹಲವಾರು ಚಾರಿತ್ರಿಕ, ಸಾಮಾಜಿಕ ವಿಷಯಗಳು ಇದ್ದರೂ ಕೂಡ ಹಲವನ್ನು ಮಾತ್ರ ಆರಿಸಿ ಕಾಣಿಸಿದೆ. (ವಿವರಗಳಿಗೆ ಅಡಿ ಟಿಪ್ಪಣಿ ನೋಡಿ)

ಕವಿಯ ದೇಶಾಭಿಮಾನ: ಮೈಸೂರು ಮತ್ತು ಮೈಸೂರು ರಾಜನ ಮೇಲೆ ಕವಿ ಅತ್ಯಂತ ಅಭಿಮಾನ ಹೊಂದಿದ್ದನು. ಕಂಠೀರವ ನರಸರಾಜರ ಶೌರ್ಯವನ್ನು ವಿವರಿಸುತ್ತಾ,

(೬) ಕರ್ನಾಟಕವನ್ನು ಕೆಡಿಸಲು ಬಂದ ತುರುಕರ
ನಿರ್ನಾಮ ಮಾಡಿ ಜಗವ
ಪೂರ್ಣದೆ ಸಲಹಿದ ಕಂಠೀರವೇಂದ್ರ ಸು
ಪರ್ಣವಾಹನ ಮೂರ್ತಿಯೈಸೆ ।

ಎಂದು ಹೆಮ್ಮೆಯಿಂದ ಹೊಗಳಿರುವನು.

ಮಹಮ್ಮದೀಯರು ದಂಡೆತ್ತಿ ಬಂದ ಸಂಗತಿಯನ್ನು ಮತ್ತು ರಣದುಲ್ಲಾಖಾನನ ಸೈನ್ಯವು ಶ್ರೀರಂಗಪಟ್ಟಣಕ್ಕೆ ಧಾಳಿ ಮಾಡಿ ಮೊದಲು ಚಿಕ್ಕಪುಟ್ಟ ಪಾಳೆಗಾರರನ್ನೂ ಆಕ್ರಮಿಸಿ, ಹಲವು ಪ್ರದೇಶಗಳನ್ನೂ ಧೂಳಿಪಟ ಮಾಡಿದ್ದನು. ಕವಿ ಬಣ್ಣಿಸಿರುವುದು ಹೀಗೆ.

(೭) ಕಣ್ಣಿನೊಳಗೆ ಖಾನ ಕನಸಿನೊಳಗೆ ಖಾನ
ಬಣ್ಣಿಸೆ ಮನದೊಳಗೆ ಖಾನ
ಕಿಣ್ಣವಡೆದ ಖಾನನ ಸುದ್ಧಿ ಜಪವಾಗಿ
ಬಣ್ಣ ಗೆಟ್ಟುದು ಲೋಕವೆಲ್ಲ
ಖಾನನ ಹಾವಳಿಗೆ ಕಂಗೆಟ್ಟು

(೮) ಗಿಡುವಿನೊಳಗೆ ಹೆತ್ತವರ ಗರ್ಭಿಣಿಯರ
ನೊಡನೆ ಸಾಗಿಸಲಾರದವರು
ಕಡುಗಲಿ ರಣಧೂಳಿ ಖಾನನೊಬ್ಬರ ರಂಜಿ
ಯಡವಿಯ ಹೊಕ್ಕರೇನೆಂಬ

ಆದರೆ ರಣಧೂಳಿ ಖಾನನ ಆಟ ಹೆಚ್ಚು ದಿವಸ ನಡೆಯಲಿಲ್ಲ. ಕಗ್ಗೋಲೆ ಕಾಳಗದಲ್ಲಿ ಮೈಸೂರಿನ ವೀರರು ಹೆಸರುವಾಸಿ ಎಂಬುದನ್ನು ಕವಿ ತಿಳಿಸಿರುವನು.

ಕಗ್ಗೊಲೆಗಳ ಕಾಳಗದೆ ಮೈಸೂರವ
ರಗಳೆಯರು ಜನದೊಳಗೆ
ಬಗ ನಿಲ್ಲಿಂದೈದಿ ನಾವು ನಮ್ಮಯ ಗುಡಿ
ದುರ್ಗ ಹೊತ್ತಲಿ ನಿಲ್ಪೆನೆಂದ

ರಣಧೂಲಿಖಾನ್ ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದಾಗ ಕಂಠೀರವ ನರಸಿಂಹರಾಜರು, ಖಾನರನ್ನು ಸದೆಬಡಿದರು.

(೯) ನರಸಿಂಹನ ದಿವ್ಯನಾಮಸ್ಮರಣೆಗೆ
ತರಿಕಗಲ್ ಪರಿದೋಡುವಂತೆ
ದೊರೆರಾಯ ಕಂಠೀರವೇಂದ್ರನ ಶೌರ್ಯವು
ಮುರಿಗೆಡೆದೋಡಿದರ್ಖಳರು

ನರಸಿಂಹನನ್ನು ಕೆಣಕಿದ ತುರುಕರು ತಮ್ಮ ದುರ್ಗತಿಯನ್ನು ತಾವೆ ಕಂಡುಕೊಂಡರು. ಅದಲ್ಲದೆ ತುರುಕರ ಬಲ ಕುಗ್ಗಿತು.

(೧೦) ತುರುಗವ ಸುಳಿದು ಖಂಡೆಯವ ಬಿಸುಟು ನಮ್ಮ
ಹೊರಟ ಸಲಹಿಕೊಳ್ಳೆನುತ
ಕರವ ಮುಗಿದು ಕಲಿಗಳಿಗೆ ಬಿಡಿಸಿಕೊಂಡು
ತುರುಕ ರಾವುತರೋಡಿದರು

ಖಾನ್ ಪರಾಭವಗೊಂಡು ತನ್ನ ಊರಿಗೆ ಹಿಂತಿರುಗಿದನು.

ಇದೆಲ್ಲಾ ಪದ್ಯಗಳನ್ನು ಓದುವಾಗ ಸ್ವದೇಶಾಭಿಮಾನ ಜಾಗ್ರತಗೊಳ್ಳುತ್ತದೆ.

ನಾವು ಈಗ ಶ್ರೀರಂಗ ಪಟ್ಟಣದ ವರ್ಣನೆ ನೋಡೋಣ: ಇಲ್ಲಿ ಬ್ರಾಹ್ಮಣರ ಬೀದಿ, ಕವಿಗಳ ಬೀದಿ, ಮಂತ್ರಿಗಳ ಶೃಂಗಾರ ಗೃಹ, ಕರುಣಿಕರ ಮನೆ, ರಾಜರಿಗೆ ನಿಮಿಷದಲ್ಲಿ ಸಲಹೆ ಕೊಡಲು, ಸಕಾಲದಲ್ಲಿ ಸೂಕ್ತ ಉತ್ತರ ನೀಡಲು ಹಲವಾರು ವಿದ್ವಾಂಸರಿದ್ದರು. ಮತ್ತು ಸಕಲರಿಗೂ ಔಷಧಿ ಒದಗಿಸಲು ಘನವೈದ್ಯರ ನಿಕರಕೇರಿ ಒಂದಿತ್ತು. ಇವರು ನಾಟಿ ವೈದ್ಯರಲ್ಲ. ಇವರಲ್ಲಿ ಘನವೈದ್ಯರಿದ್ದರು.

(೧೧) ಸಕಲ ರುಜೆಯ ಔಷದಿಗಳನಿತ್ತು
ಸುಖವ ಪುಟ್ಟಿಸಿ ಸರ್ವಜನಕೆ
ಅಕಳಂಕರೆನಿಸಿ ಮೆರೆವ ಘನವೈದ್ಯರ
ನಿಕರದ ಕೇರಿಯೊಪ್ಪಿದುವು.

ಶ್ರೀರಂಗಪಟ್ಟಣದ ವರ್ಣನೆಯಲ್ಲಿ ಮತ್ತೊಂದು ವಿಷಯ ಸರ್ವಕಾಲಕ್ಕೂ ಪ್ರಸ್ತುತವಾಗಿದೆ. ಧಾನ್ಯವನ್ನು ಬೆಳೆದು ಅದನ್ನು ಸರಿಯಾಗಿ ವಿತರಣೆ ಮಾಡುವದು, ಪಾಲಿಸಬೇಕಾದ ನಿಯಮ. ಆದರೆ, ನಿಯಮ ಈ ಕಾಲದಲ್ಲಿ ತಪ್ಪುತಿರುವದರಿಂದ ಈ ಪದ್ಯ ಇಂದಿಗೂ ಪ್ರಸ್ತುತವಾಗಿದೆ.

(೧೨) ಅಕ್ಕರೊಳಗೆ ಬಹುಬಗೆಯ ಧಾನ್ಯಗಳನು
ಚೊಕ್ಕಟವಾಗಿಯೆ ಬೆಳೆದು
ಎಕ್ಕರುಳದೆ ಧರ್ಮಮಾರ್ಗದೆ ರಾಜಿಸು
ವೊಕ್ಕಲಿಗರ ಕೇರಿಯಿಹುವು

ಮತ್ತೊಂದು ಕಡೆ ಮುತ್ತುಗಳನ್ನು ಮಾರಾಟ ಮಾಡುವ ಹಲವಾರು ಮಳಿಗೆಗಳಿದ್ದವು.

(೧೩) ಹರಸಖ ನವನಿಧಿಗಳನೀ ಪುರದೊಳ
ಗಿರಿಸಿದನೆಂಬಂದದಲಿ
ಪಿರಿದೆನಿಸುವ ಹೊನ್ನ ರಾಸಿಗಳಿಂ ಬಿನ್ನ
ವರದರ ಮಳಿಗೆಯೊಪ್ಪಿದುವು.

ಮುತ್ತಿನ ಮಳಿಗೆಗಳಲ್ಲಿ ಹಲವಾರು ವೈವಿಧ್ಯಮಯವಾದ ಮುತ್ತುಗಳನ್ನು ಜೋಡಿಸಿಟ್ಟಿರುವದನ್ನು ಮಳಿಗೆಗಳಲ್ಲಿ ಕಾಣಬಹುದಿತ್ತು. ಜಿಳಿಮುತ್ತು, ಕೆನ್ನೀರಮುತ್ತು, ಕಟ್ಟಾಣಿ ಮುತ್ತು, ಮೂಕುತಿ ಮುತ್ತು, ಕಂಠ ಮಾಲೆಯ ತೋರಮುತ್ತು ಹೀಗೆ ಹಲವು ಮುತ್ತಿಗಳಿದ್ದವು.

ಒಂದೆಡೆ ಮುತ್ತಿನ ಮಳಿಗೆ ಇದ್ದಂತೆ, ಇನ್ನೊಂದೆಡೆ ಪವಳದ ಮಳಿಗೆ, ಸಣ್ಣ ಪವಳ, ಕೈಕಟ್ಟಿನ ಪವಳ, ಬಣ್ಣ ಸಂದ ಜಾತಿ ಪವಳ, ಹೀಗೆ ಉತ್ಕೃಷ್ಟವಾದ ಪವಳ ದೊರೆಯುತ್ತಿತ್ತು. ನೀಲದ ಸರ, ಮಾಣಿಕದ ಕುಚ್ಚು, ವಜ್ರದ ಮೇಲು ಗೊಂಚಲು ವೈಡೂರ್ಯದ ಬಲು ಸುಂದರವಾದ ಅಂಗಡಿಗಳು ಸಾಲಾಗಿದ್ದವು.

ಅತ್ಯುತ್ತಮವಾದ ಸೀರೆ ಜವಳಿಗಳ ಮಳಿಗೆಗಳ ಸುಂದರ ವರ್ಣನೆ ಇಲ್ಲಿ ಇದೆ. ನಾನಾ ವಿಧವಾದ, ವಸ್ತ್ರ ವಿನ್ಯಾಸ ಹಲವಾರು ಬಣ್ಣದೊಂದಿಗೆ ಅಂದವಾಗಿ ಜೋಡಿಸಿದೆ. ಪಪ್ಪುಳಿ ಸೀರೆ ಜವಳಿ ಮಳಿಗೆ ಸುಂದರವಾಗಿದೆ. ಮತ್ತೊಂದು ಕಡೆ ಇಲ್ಲಿ ಬೆಳೆಯುವ ಎಲ್ಲಾ ಹೂವುಗಳನ್ನು ಅಲಂಕರಮಾಡಿ ಜೋಡಿಸಿಟ್ಟಿರುವದು ವೈಶಿಷ್ಟ್ಯ.

ಕಸ್ತೂರಿ (ಕಸ್ತೂರಿ ಇರಬಹುದು) ಸೇವಂತಿಗೆ, ದುಂಡುಮಲ್ಲಿಗೆ, ಮೊತ್ತದ ಜಾಜಿ, ಸಂಪಿಗೆ ಹೂವು ಕಟ್ಟಿ ಮಾರುತಿರುವ ದೃಶ್ಯ. ಹೆಂಗಸರು ಅಂದವಾಗಿ ಹೂವುಗಳನ್ನು ಕಟ್ಟಿ ರಸ್ತೆಯ ಬದಿಯಲ್ಲಿ ಇಟ್ಟು ಮಾರುತಿದ್ದರು.

ಮತ್ತೊಂದು ಅತಿ ಮುಖ್ಯವಾದ ಕೆಲಸವೆಂದು ರಾಜ ಪರಿಗಣಿಸಿದ್ದು ಪ್ರಔಹಿತವನ್ನು ಸದಾ ಬಯಸುವ ವರ್ಗ. ಇವರ ಮುಖ್ಯವಾದ ಕೆಲಸ

(೧೪) ಭುವನದ ಬಡವರ ಬಿನ್ನಹವನಿತಂ
ದವನೀಶ್ವರರಿಗೆ ಪೇಳಿ
ತವಕದೆ ಕಾಣಿಸಿಯಿಷ್ಟಾರ್ಥಗೊಳಿಸುತಿ
ರ್ಪವರ ಕೇರಿಗಳೊಪ್ಪುತಿಹುವು

ವರ್ತಕರನ್ನು ಕವಿ (ಹರದರ) ಎಂದು ಕರೆದಿದ್ದಾನೆ. ಇಲ್ಲಿ ಹಲವಾರು ಜನ ಯಾರಿಗೂ ವಂಚನೆ ಮಾಡದೆ ವ್ಯಾಪಾರ ಮಾಡುತ್ತಿರುವರು. ಬೀದಿಗೆ ಹತ್ತಿರವಾಗಿಯೇ ಸೂಳೆಗೇರಿ ಇದೆ. ಅನೇಕ ಹೆಂಗಳೆಯರು ಶೃಂಗಾರ ಮಾಡಿಕೊಂಡು ಪಗಡೆ, ಜೂಜಾಟ ನೆಪದಿಂದ ತಿರುಗುವರು (ಸೂಳೆಗೇರಿಯ ಸವಿಸ್ತಾರವಾದ, ವಾಸ್ತವವಾದ ಚಿತ್ರ ಕವಿ ವರ್ಣಿಸಿರುವನು).

ಕಲಾಜೀವನ: ಪ್ರಾಚೀನರು ಕಲೆಗೆ ಮಹತ್ವಸ್ಥಾನವನ್ನು ಕೊಟ್ಟಿರುವದನ್ನು ಕವಿ ಸುಂದರವಾಗಿ ಚಿತ್ರಿಸಿರುವನು. ಸಂಗೀತ ನೃತ್ಯದಲ್ಲಿ ಸ್ತ್ರೀಯರು ಅತ್ಯಂತ ಪರಿಣಿತರಾಗಿ ಭಾವಪೂರ್ಣ ಪ್ರದರ್ಶನವನ್ನು ದೊರೆಯ ಮುಂದೆ ಪ್ರದರ್ಶಿಸಿದಾಗ ದೊರೆಗಳು ಮೆಚ್ಚಿದರು.

(೧೫) ಕರದೊಳು ಪಿಡಿದು ವೀಣೆಯ ವಾಣಿಯಂದದೆ
ಕೊರಳು ಬೆರಳನೊಂದುಗೂಡಿ
ಹರುಷದೆ ಪಾಡಿ ಗಾನಾಮೃತವನು ಕರ್ಣ
ಕಿರದೆ ಸೂಸಿದಳೊರ್ವ ನೀರೆ

ಇಲ್ಲಿ ಹೆಂಗಳೆಯರು, ಮುಖ್ಯ ಪಾತ್ರವಹಿಸುವುದನ್ನು ನಾವು ಕಾಣಬಹುದು. ತರ್ಕಶಾಸ್ತ್ರ, ಪುರಾಣ ನೀತಿ ಚಿಂತಾಮಣಿ ಇವುಗಳ ಬಗ್ಗೆ ರಾಜರಿಗೆ ಬಣ್ಣಿಸಿ ರಾಜರ ಹೆಗ್ಗಳಿಕೆಗೆ ಹೆಂಗಳೆಯರು ಪಾತ್ರವಾಗಿರುವುದನ್ನು ಕಾಣಬಹುದು.

ಕವಿ, ಜನಸಾಮಾನ್ಯರ ಊಟದ ಬಗ್ಗೆ ಹೇಳದಿದ್ದರೂ, ಶ್ರೀಮಂತರ ಊಟ ಹೇಗೆ ಇರುತ್ತಿತ್ತೆಂದು ವರ್ಣಿಸಿರುವನು. ಇಲ್ಲಿ ನಮಗೆ ಹಲವಾರು ಉಪ್ಪಿನಕಾಯಿಗಳ ಪರಿಚಯ ವಾಗುವದು.

ಬಾಳಕ ಸಂಡಿಗೆ*, ಎಣ್ಣೆಯಲ್ಲಿ ಹುರಿದು ಮಾಡಿದ ಪಲ್ಯ ಸೀಕರಣೆ, ಕೋಸಂಬರಿ, ಪಚ್ಚಡಿ, ತೊಗರಿಬೇಳೆ ಸೂಪ (ತೊವ್ವೆ), ಸೊಪ್ಪಿನ ಮೇಲೋಗರ, ಹಾಲುಂಡೆ (ನಮ್ಮ ಫೆಡ) ಜೇನೊಡ (ಫೀವರ್) ಉದ್ದಿನಕಡುಬು, ಹೂರಣ ಕಡುಬು, ರೊಟ್ಟಿ ಉಂಡಲಿಗೆ ಮತ್ತು ವಿಧವಿಧವಾದ ಪಾಯಸ, ಮಂಡಿಗೆ ಬಿಸಿಯದೋಸೆ, ಸಣ್ಣಕ್ಕಿಯ ಪಾಯಸ, ಸಕ್ಕರೆಯ ಪಾಯಸ, ಗೌಲೆಯ ಪಾಯಸ, ನಾನಾ ತರಹದ ಪಾಯಸದ ಪರಿಚಯವಾಗುವದು.

ಇಂದಿನ ಕಲಬೆರಿಕೆ ಕಾಲದಲ್ಲಿ, ಆಗಿನ ಕಾಲದ, ಅಪ್ಪಟ ಹಾಲಿನ ವಿವರ ದೊರಕುವದು. ಚೆಲುಪಾಲು, ಕಂಬಾಲು, ಕೆನೆವೆರೆಸಿದ ಪಾಲು, ಬಟ್ಟಪಾಲು, ಗಟ್ಟಿಯಾದ ಕಟ್ಟು ಮೊಸರು ಸಿಕ್ಕುತ್ತಿತ್ತು.

ಊಟವಾದ ಮೇಲೆ ಕರ್ಪೂರದ ವೀಳ್ಯವನ್ನು ಕೊಡುವ ಪದ್ಧತಿ ಇತ್ತು.

ಉಡುಪುಗಳು: ಈಗಿನ ಕಾಲದಲ್ಲಿ ಎಲ್ಲರ ಉಡುಪು ಸಾಮಾನ್ಯವಾಗಿ ಒಂದೇ ತರಹ ಇರುತ್ತದೆ. ಆದರೆ ಅಧಿಕಾರ ವರ್ಗದಲ್ಲಿ, ಇದ್ದವರ ಆಗಿನ ಜನರ ಉಡುಪು ಆಕರ್ಷಕ ಪ್ರದರ್ಶನೀಯವಾಗಿದ್ದವು.

ಮಾಂಡಲೀಕರು: ಚೌಕಳಿ, ಹೊನ್ನಸರ ಕಡಗ, ಕಂಕಣ ಮೊದಲಾದ ಆಭರಣ ಧರಿಸಿ ಜನರು ನೋಡಿದ ತಕ್ಷಣ ಇವನು ಮಾಂಡಲೀಕ ಎಂದು ಗುರುತಿಸುತ್ತಿದ್ದರು. ಪೈರಣಿ ಮೇಲೆ ದುಪ್ಪಟ, ತಲೆಗೆ ಮುಂಡಾಸು ಧರಿಸುತ್ತಿದ್ದರು.

* ಇಂದಿಗೂ ಮೈಸೂರಿನ ಅತ್ಯಂತ ಜನಸಾಮಾನ್ಯರ ಪ್ರೀತಿಯ ಖಾದ್ಯ

ನಾಯಕರು: ಮುಂಗೈಯ ಮುರಿ, ಮುರಡಿಯ ಸರಪಳಿ ಉಂಗುರ, ತೋಳು ಬಾಪುರಿಗಳಿಂದ ಸಿಂಗರಿಸಿಕೊಂಡಿರುತ್ತಿದ್ದರು. ರಾವುತರು ಮೈಗೆ ಹೊಕ್ಕಿಕೊಂಡಿರುವ ಹೊನ್ನದಗಲೆ, ದಿವ್ಯಾಯಕದ ಆಭರಣಗಳು ಬಿರುದಿನ ಚಂದೆಗಳಿಂದ ಕೂಡಿರುವರು. ಭಟರುಗಳು ಪಟ್ಟಿಯದಟ್ಟಿ, ಕುಂಕುಮ ಗಾಸೆ ಉಟ್ಟಿರುವರು ಒಂಟೆಯ ಸವಾರರು, ಉತ್ತರಿಗ, ಹೊನ್ನರಸ, ಘಂಟೆ ಸರಪಳಿ ಮುತ್ತಿನ ಕಡುಕಗಳಿಂದ ಶೋಭಿತರಾಗಿರುತ್ತಿದ್ದರು!

ಮೈಗಾವಲು ಊಳಿಗದವರು, ಚಿನ್ನದ ಹಂಡೆ, ಬಿರುದಿನ ಬೆಳ್ಳಿ ಕಟ್ಟಿನ ಬರ್ಜಿಗಳನ್ನು ಕೈಯಲ್ಲಿ ಹಿಡಿದುಕೊಂಡಿರುವರು.

ಹೆಂಗಸರ ಆಭರಣಗಳು: ವಿಧ ವಿಧವಾದ ಆಭರಣ ಪ್ರಿಯರಾದ ಹೆಂಗಸರ ಒಡವೆಗಳನ್ನು ಕವಿ ವರ್ಣಿಸಿರುವನು. ಅಂಗುಟಿಕೆ, ವೀರಮುದ್ರೆ, ಹೊನ್ನ ಕಾಲುಂಗರ, ಪಿಲ್ಲಿ, ಮೆಂಟಿಕೆ, ತಿರುಪಲ್ಲಿ, ಚರಣ ಪಂಡೆಯ, ಪಾಯವಟ್ಟ, ಹೊನ್ನನ ಘಂಟೆಸರ, ಕಟಿಸೂತ್ರ, ಕಾಂಚಿಧಾಮ, ಪ್ರಸ್ತ ಮುಕ್ತಳಿ, ರತ್ನ ಪದಕ, ರತ್ನದ ಬೊಟ್ಟು, ಹರಳೋಲೆ, ಚಿತಾಕು, ಮೂಗುತಿ, ಕಡಗ, ಕಂಕಣ, ಮುದ್ರೆಯುಂಗರ, ಚೌಸರ, ನೂಪರ ಕೊಪ್ಪು ವೆಂಟಿಯ ಚೌಳಿ, ಜಡೆಬಂಗಾರ, ಮೊದಲಾದ (ಕೊರಳು, ಕಿವಿ, ಮೂಗು, ಸೊಂಟ, ಕಾಲು, ತಲೆಗಳ ಚೆಲುವನ್ನು ಇಮ್ಮಡಿಸುವ ಆಭರಣ) ವನ್ನು ಧರಿಸುತ್ತಿದ್ದರು.

ಸರಿಗೆ ಅಂಚಿನ ರವಿಕೆ ಧರಿಸುತ್ತಿದ್ದರು, ಬೇರೆ ಬೇರೆ ಪ್ರಾಂತ್ಯದಿಂದ ಬಂದಂತ; ತೆಲುಗು, ಮಲಯಾಳ, ಕೊಡಗು, ತಿಗುಳ್ಯ ತುರುಕು ನಾರಿಯರ ಉಡಿಗೆ ತೊಡಗೆಗಳ ವರ್ಣನೆ ಕೂಡ ಸಿಗುತ್ತದೆ.

ಕುದುರೆಗಳು: ಕುದುರೆಗಳೂ ರಾಜರ ಆಸ್ಥಾನದಲ್ಲಿ ಮುಖ್ಯ ಸ್ಥಾನವನ್ನು ತೊಟ್ಟಿರುವುದು ಕಾಣುತ್ತದೆ. ಕುದುರೆಗಳನ್ನು ಅತ್ಯಂತ ಸುಂದರವಾಗಿ ಅಲಂಕರಿಸಲ್ಪಡುತ್ತಿದ್ದು, ಅದಕ್ಕೆ ನವರತ್ನದ ಕಾಲುಂಗುರ, ಗೆಜ್ಜೆ, ಮುತ್ತಿನ ಕುಚ್ಚು, ಜೇನುಗಳನ್ನು ಬಂಗಾರದ ಬಣ್ಣದ ಕಡಿವಾಣ, ಮೊಗಗನ್ನಡಿ, ಇರುತ್ತಿತ್ತು. ಕೊರಳಿಗೆ ಮುತ್ತಿನ ಸರದಿಂದ, ಸಿಂಗಾರ ಮಾಡಿರುತ್ತಿತ್ತು. ಹೊಕ್ಕುಳಲ್ಲಿ ಪುಟಾಣಿ ಘಂಟೆ ಇರುತ್ತಿತ್ತು.

ಇಲ್ಲಿ ಆನೆಗಳ ವರ್ಣಮೆ ಕೂಡ ಇದೆ. ಆನೆಗಳ ಎರಡು ಕಿವಿಗಳಲ್ಲಿ ಮುತ್ತಿನ ಗೊಂಚಲನ್ನು ಕಟ್ಟಿರುವರು. ಎದೆಗೆ ದಪ್ಪಗಿನ ಹಗ್ಗಗಳನ್ನು ಕಟ್ಟಿರುವರು. ಹಣೆಯ ಮೇಲೆ ಕನ್ನಡಿಯಿಂದ ಶೋಭಿತವಾಗಿದ್ದು ಕೊರಳಲ್ಲಿ ಸರಘಂಟೆ ಪಕ್ಕೆಯಲ್ಲಿ ಘಂಟೆ ಬಿರುದಿನ ಪಟ, ಇವೆಲ್ಲದರಿಂದ ಸಿಂಗರಿಸ ಹೊರಟ ಆನೆಗಳು ರಾಜಠೀವಿಯಿಂದ ನಡೆಯುತ್ತಿದ್ದವು.

ದೇವಸ್ಥಾನದಲ್ಲಿ ನಡೆಯುವ ಸೇವೆ, ಕಟ್ಮಲೆ, ಉತ್ಸವ ಕವಿ ಸುಂದರವಾಗಿ ವರ್ಣಿಸಿದ್ದರೂ, ಅವುಗಳು ಸಂಪ್ರದಾಯವಾಗಿ ೨೧ನೇ ಶತಮಾನದಲ್ಲೂ ನಡೆಯುತ್ತಿರುವದರಿಂದ ಅವುಗಳನ್ನು ವಿವರಿಸಿಲ್ಲ.

ಹೀಗೆ ಚಾರಣಕವಿ ಗೋವಿಂದ ವೈದ್ಯರು ೧೬೪೮ರಲ್ಲೇ ಕನ್ನಡಿಗರ ಜನರ ಸಂಸ್ಕೃತಿಯನ್ನು ಸರಳ ಕನ್ನಡಿಯಲ್ಲಿ ಬಿಂಬಿಸಿರುವದರಿಂದ, ಕಂಠೀರವ ನರಸರಾಜ ವಿಜಯ ಗ್ರಂಥವು ಕರ್ಣಾಟಕದ ಸಾಮಾಜಿಕ ಚರಿತ್ರೆಗೆ ಒಂದು ಅಮೂಲ್ಯ ಕೊಡುಗೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಮತ್ತು ಹಲವಾರು ವಿಷಯಗಳು, ಇಂದಿಗೂ ಆಚರಣೆಯಲ್ಲಿದೆ ಮತ್ತು ಅನುಕರಣೀಯವಾಗಿದೆ.

ಆಧಾರಸೂಚಿ

೧. ಬೆಟಗೇರಿ ಕೃಷ್ಣಶರ್ಮ, ಕರ್ಣಾಟಕ ಜನಜೀವನ, ಬೆಂಗಳೂರು ವಿಶ್ವ ಕನ್ನಡ ಸಮ್ಮೇಳನ, ೧೯೮೫.

೨. Quarterly Journal of the Mythic Society, Vol. XX. 1929-30.

೩. QJMS Vol. XX Dec. 1929.

೪. QJMS Vol. XXXII, 1941-42.

೫. ಗೋವಿಂದ ವೈದ್ಯ; ಕಂಠೀರವ ನರಸರಾಜ ವಿಜಯ, ಪುಟ ೯.

೬ ಸಂಧಿ ೧೮, ಪದ್ಯ ೧೩೪ ಪುಟ ೩೫೧.

೭. ಸಂಧಿ ೧೧, ಪದ್ಯ ೫೪, ಪುಟ ೨೧೦.

೮. ಸಂಧಿ ೧೧, ಪದ್ಯ ೫೩, ಪುಟ ೨೧೦.

೯. ಸಂಧಿ ೧೫, ಪದ್ಯ ೧೦೫, ಪುಟ ೨೯೨.

೧೦. ಸಂಧಿ ೧೫, ಪದ್ಯ ೧೦೦, ಪುಟ ೨೯೦.

೧೧. ಸಂಧಿ ೬, ಪದ್ಯ ೪೨, ಪುಟ ೯೨.

೧೨. ಸಂಧಿ ೬, ಪದ್ಯ ೫೫, ಪುಟ ೯೫.

೧೩. ಸಂಧಿ ೬, ಪದ್ಯ ೬೫, ಪುಟ ೯೫.

೧೪. ಸಂಧಿ ೬, ಪದ್ಯ ೪೬, ಪುಟ ೯೧.

೧೫. ಸಂಧಿ ೮, ಪದ್ಯ ೭೪, ಪುಟ ೧೫೦.

೬೭

ಕಿತ್ತೂರು ಸಂಸ್ಥಾನದ ಅಪ್ರಕಟಿತ ಮೋಡಿ ದಾಖಲೆಗಳು

(ಮಲ್ಲಸರ್ಜನನ ರಕ್ಷಣೆಗೆ ಸಂಬಂಧಿಸಿದ ದಾಖಲೆಗಳು)

ಡಾ. ನರಹರಿ ಕೆ.ಎನ್.*

೧೫೬೫ರಲ್ಲಿ ವಿಜಯನಗರ ಸಾಮ್ರಾಜ್ಯ ಪತನಗೊಂಡ ಬಳಿಕ ಉತ್ತರ ಕರ್ನಾಟಕದಲ್ಲಿ ಮುಸ್ಲಿಂ ಸಾಮ್ರಾಜ್ಯ ಪ್ರಬಲ ಗೊಂಡಿದ್ದರಿಂದ ಸಾಂಸ್ಕೃತಿಕವಾಗಿ ಜನರ ಮೇಲೆ ಪ್ರಭಾವ ಬೀರಿವೆ. ಕಾರಣ ಉತ್ತರ ಕರ್ನಾಟಕದ ಎಲ್ಲಾ ಭಾಗದಲ್ಲಿ ಪಾರ್ಸಿ ಮತ್ತು ಮರಾಠಿ ಕಾಗದ ಪತ್ರಗಳ ವ್ಯವಹಾರ ನಡೆದಿರುವುದು ಇದಕ್ಕೆ ಸಾಕ್ಷಿ. ಸಾಮಾನ್ಯವಾಗಿ ಪತ್ರಗಳ ವ್ಯವಹಾರಗಳು ಮರಾಠಿ ಮೂಡಿ ಲಿಪಿಯಲ್ಲಿ ಬರೆಯಲ್ಪಟ್ಟಿದ್ದರೂ ಇದರ ಭಾಷೆ ಮಾತ್ರ ದೇವನಾಗರಿ ಮತ್ತು ಮರಾಠಿಯನ್ನು ಬಳಸಲಾಗಿದೆ. ಕೆಲವೊಮ್ಮೆ ಮೋಡಿ ಲಿಪಿಯಲ್ಲಿದ್ದರೂ ಕನ್ನಡ ಭಾಷೆಯಲ್ಲಿ ಪತ್ರ ಬರೆದಿರುವುದು ವಿಶೇಷವಾಗಿದೆ.[೧]

ಮೋಡಿ ಇದು ಮಹಾರಾಷ್ಟ್ರದಲ್ಲಿಯ ಒಂದು ಲಿಪಿ. ಇದನ್ನು ದೇವಗಿರಿಯ ದಿವಾನ ಹೇಮಾಡಪಂತ ಇವರು ಶೋಧಿಸಿದರು. ಛತ್ರಪತಿ, ಪೇಶ್ವೆ, ಫಡಣೀಸ, ಶಿಂಧೆ, ಹೋಳಕರ, ಭೋಸಲೆ, ಚಟ್ನೀಸ ಮೊದಲಾದ ಅರಸರು ಮತ್ತು ಸರದಾರರು ಮೋಡಿಯಲ್ಲಿಯೇ ಪತ್ರ ವ್ಯವಹಾರ ಪ್ರಾರಂಭಿಸಿದರು. ಈ ಲಿಪಿಯಲ್ಲಿ ಪರಿಣಿತರಾದ ಆಗಿನ ಕಾರ್ಯಸ್ಥ ಪ್ರಭುಗಳು ಇದಕ್ಕೆ ರಾಷ್ಟ್ರೀಯ ಸ್ವರೂಪವನ್ನು ಕೊಟ್ಟರು.

ಮೋಡಿ ದಾಖಲೆಗಳು ಹೆಚ್ಚಾಗಿ ಪುಣೆಯ ಪತ್ರಾಗಾರದಲ್ಲಿ ಸಿಗುತ್ತವೆ. ಕ್ರಿ.ಶ. ೧೮೧೮ರಲ್ಲಿ ಪೇಶ್ವೆಯರೊಡನೆ ಕೊನೆಯ ಯುದ್ಧ ಮುಗಿದ ನಂತರ ಅಂದಿನ ಮುಂಬೈ ಗೌರ್ನರ್ ಎಲಿಫನ್‌ಸ್ಟನ್‌ನು ಪೇಶ್ವೆ ಹುಜುರ ದಫ್ತರನ್ನು ತನ್ನ ವಶಕ್ಕೆ ತೆಗೆದುಕೊಂಡು ಪುಣೆಯ ಚೀಫ್ ಡೆಕ್ಕನ್ ಕಮೀಶನರ್ ಇವರ ಮೇಲ್ವಿಚಾರಣೆಯಲ್ಲಿ ಇಟ್ಟರು. ಈ ಇನಾಮ ಕಮೀಷನ್ (೧೮೪೩–೧೮೬೩) ಸಂಗ್ರಹಿಸಿದ ಅನೇಕ ಮೋಡಿ ಕಡತಗಳನ್ನು ಪುಣೆಯ ಪತ್ರಾಗಾರದಲ್ಲಿ ಇಡಲಾಗಿದೆ.

ಈ ಪತ್ರಾಗಾರದಲ್ಲಿ ಸುಮಾರು ೩೪,೯೭೨ ಗಂಟುಗಳು ಇವೆ. ಅವುಗಳಿಗೆ 'ದಫ್ತರ್' ಅಥವಾ 'ರುಮಾಲು' ಎಂದು ಕರೆಯುತ್ತಾರೆ. ಉದಾ: ಶಾಹು ದಫ್ತರ, ಪೇಶ್ವೆ ದಫ್ತರ, ಸಾತಾರಾ ಮಹಾರಾಜಾ ದಫ್ತರ, ಕರ್ನಾಟಕ ದಫ್ತರ, ಸೊಲ್ಲಾಪುರ ದಫ್ತರ ಇತ್ಯಾದಿ. ಕರ್ನಾಟಕ ದಫ್ತರದಲ್ಲಿ ಸುಮಾರು ೨೪೬೧ ರುಮಾಲುಗಳಿವೆ. ಅವುಗಳಲ್ಲಿ ಕಿತ್ತೂರಿಗೆ ಸಂಬಂಧಪಟ್ಟ ಕಡತಗಳು.

ಪುಣೆ ಪತ್ರಾಗಾರದಲ್ಲಿ ಸಾವಿರಾರು ತಾಳೆಬರಹದ ಪ್ರತಿಗಳು ಸಂಗ್ರಹವಾಗಿದೆ. ಅವುಗಳಲ್ಲಿ ಕಂಡುಬರುವ ಅಂಶಗಳೆನೆಂದರೆ ಆಯಾ ಪ್ರದೇಶದ ಆಯ–ವ್ಯಯ ಜೊತೆಗೆ ಅವರು ಕೊಡಮಾಡಿದ ಪೂಜೆ–ಪುನಸ್ಕಾರ, ಗಣಾಚಾರಿಕೆ ಹೀಗೆ ಇನ್ನಿತರ ಬಾಬ್ತುಗಳಿಗೆ ಕೊಡಮಾಡಿದ ಉಲ್ಲೇಖ ಇದೆ.

ಪುಣೆಯ ಡೆಕ್ಕನ್ ಕಾಲೇಜಿನ ವಸ್ತುಸಂಗ್ರಹಾಲಯ ದೊರೆತ ರುಮಾಲ್ ನಂ. ೭೪ ರ ಕಡತದಲ್ಲಿ ಹಲವು ಪತ್ರಗಳಿದ್ದೂ ಬ್ರಿಟೀಷ್ ಹಾಗು ಪೇಶ್ವೆಯವರ ಪತ್ರ ವ್ಯವಹಾರಗಳ ದಾಖಲೆಗಳಿವೆ.

ಪತ್ರಗಳಲ್ಲಿ ಹೆಚ್ಚಿನವುಗಳು ಅರಬ್ಬಿ ಭಾಷೆಯ/ಪಾರ್ಸಿ ಭಾಷೆಯ ಅಂಕೆಗಳನ್ನು ಬಳಸಿರುತ್ತಾರೆ ಅಲಫ್, ತಿಸ್ನಯ್ಯ, ಮಯ್ಯಾತೀನ್, ಸುಮಾ ಎಂಬ ಪದಗಳಿಂದ ಅಂದಿನ ವರ್ಷಗಳನ್ನ ತಿಳಿಸುವ ಪದಗಳಾಗಿವೆ.[೨] ಆದ್ದರಿಂದ ಈ ಮೂಡಿ ಪತ್ರಗಳಲ್ಲಿ ಅರಬ್ಬಿ/ಪಾರ್ಸಿ, ಹಾಗೂ ಹಿಂದೂ ಪಂಚಾಂಗದ ಕಾಲಮಾನವನ್ನು ಬಳಸುತ್ತಿರುವುದರಿಂದ, ಅರಬ್ಬಿ ಭಾಷೆಯ ಕೋಷ್ಟಕವನ್ನು ಕೂಡಿಸಿ ಕಾಲಮಾನವನ್ನು ನಿರ್ಧರಿಸುವುದು ಕಷ್ಟಕರ. ಕೆಲವೊಮ್ಮೆ ಹಿಂದೂ ತಿಂಗಳು ಮತ್ತು ಅರಬ್ಬಿ ತಿಂಗಳು ಎರಡನ್ನು ಬಳಸಿದ ಉದಾಹರಣೆಯನ್ನು ಕಾಣುತ್ತೇವೆ.

ಕಿತ್ತೂರು ಸಂಸ್ಥಾನದಲ್ಲಿ ರಕ್ಷಣೆಗಾಗಿ ೧೨೦೦೦ ಸಾವಿರ ಸೈನ್ಯವಿತ್ತು ಸೈನ್ಯದ ಅವಶ್ಯಕತೆ ಬಿದ್ದಾಗ ಹಳ್ಳಿಯ ಓಲೆಕಾರರನ್ನು ಕರೆಯಿಸಿಕೊಂಡು ಗ್ರಾಮದ ಜನತೆಯ ಸಹಕಾರದಿಂದ ಸೈನಿಕರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದರು.

* ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಚನ್ನಮ್ಮನ ಕಿತ್ತೂರು–೫೯೧೧೧೫. ಬೆಳಗಾವಿ ಜಿಲ್ಲೆ.

ಪ್ರತಿಯೊಬ್ಬ ಓಲೆಕಾರರಿಗೂ ಕತ್ತಿ, ಡಾಲು, ಖಡ್ಗಗಳನ್ನು ನೀಡುವ ಪದ್ಧತಿ ಇದ್ದವು. ಯುದ್ಧದ ಉಪಯೋಗಕ್ಕಾಗಿ ೬೦ ತೋಪುಗಳಿದ್ದವು. ಕಿತ್ತೂರು ಅರಮನೆಯಲ್ಲಿ ೫೦೦೦ ಸಶಸ್ತ್ರ ಸೈನ್ಯ, ಗಜದಳ, ಅಶ್ವದಳ, ಓಂಟೆಗಳು, ಮಂತ್ರಿಗಳು, ಕಾರಭಾರಿಗಳು, ದಳವಾಯಿಗಳು ಮುಂತಾದ ಅಧಿಕಾರಿ ವರ್ಗಗಳಿದ್ದವೆಂದು ತಿಳಿದುಬರುತ್ತದೆ. ಸಂಸ್ಥಾನಕ್ಕಾಗಿ ಪ್ರಾಣ ತೆರ

ಲು ಸಿದ್ಧರಿರುವ ವೀರ ಭಟರುಗಳು ಕೂಡಾ ಇದ್ದರು. ಇದಕ್ಕೆ ರಾಜಗುರುಗಳ ಆಶೀರ್ವಾದವು ಇರುತ್ತಿತ್ತು.

ಕಿತ್ತೂರು ಸಂಸ್ಥಾನವು ವ್ಯಾಪ್ತಿಯ ದೃಷ್ಟಿಯಿಂದ ಒಂದು ಸಣ್ಣ ಸಂಸ್ಥಾನ. ಸಮಕಾಲೀನ ಟಿಪ್ಪುವಿನದು ದೊಡ್ಡ ಸಾಮ್ರಾಜ್ಯ. ಹಾಗಿದ್ದರೂ ಕಿತ್ತೂರು ಕೋಟೆ ಮತ್ತು ಸೈನ್ಯದ ಸಾಮರ್ಥ್ಯದ ಬಗ್ಗೆ ಬ್ರಿಟಿಷರಿಗೆ ಕೂಡ ಭಯವಿತ್ತು.[೩] ಕಿತ್ತೂರಿನ ಗಢಾದ ಮರಡಿ, ಕೆಮ್ಮನಮರಡಿ ಮತ್ತು ಮುನೋಳಿಯಲ್ಲಿ ಸೈನ್ಯದ ತರಬೇತಿಯ ಕೇಂದ್ರವಾಗಿತ್ತು. ಸರ್ದಾರ ಗುರುಸಿದ್ಧಪ್ಪ, ಅವರಾಧಿ ಸರದಾರ ವೀರಪ್ಪ, ಗುರುಪುತ್ರಪ್ಪ, ನರಸಿಂಹರಾವ್, ಗೋಲಂದಾಜ್ ಹಿಮ್ಮತ್‌ಸಿಂಗ್, ಸಂಗೊಳ್ಳಿ ರಾಯಣ್ಣ, ಗಜವೀರ, ಬಿಚ್ಚುಗತ್ತಿ ಚೆನ್ನಬಸಪ್ಪ ಮುಂತಾದ ಸೇನಾ ನಾಯಕರುಗಳಿದ್ದರು.

ಕಿತ್ತೂರು ಸಂಸ್ಥಾನದ ಇತಿಹಾಸದಲ್ಲಿ ಸೈನಿಕ ವ್ಯವಹಾರ ತುಂಬ ಮಹತ್ವದ ಪಾತ್ರವನ್ನು ವಹಿಸುತ್ತದೆ. ಮಲ್ಲಸರ್ಜನನ ಕಾಲದಲ್ಲಿ ಸಂಸ್ಥಾನದ ಉಳಿವಿಗಾಗಿ ಸೈನಿಕರು ಮತ್ತು ಗ್ರಾಮದ ಜನರುಗಳು ಸಾಕಷ್ಟು ಪ್ರಯತ್ನ ಮಾಡಿರುವುದನ್ನು ಪತ್ರಗಳಲ್ಲಿ ಕಾಣುತ್ತೇವೆ. ಒಕ್ಕುಂದ, ದೇಗಾವಿ ಮತ್ತು ಬೀಡಿ ಸುತ್ತಮುತ್ತಲ ಪ್ರದೇಶಗಳಲ್ಲಿ ಮಲ್ಲಸರ್ಜನನ್ನು ರಕ್ಷಣೆ ಮಾಡುತ್ತಿರುವುದನ್ನು ಪುಣೆಯ ನಾನಾ ಫಡ್ನೀಸನಿಗೆ ಆತನ ಕಿರಿಯ ಅಧಿಕಾರಿಗಳು ಬರೆದ ಅಂಶಗಳಿವೆ.

ಒಂದನೆ ಪತ್ರದಲ್ಲಿ ಸೇವೆಯಲ್ಲಿರುವ ಬಾಪೂಜಿ ನಾರಾಯಣ ಪರಚುರೆ ಮಾಡುವ ಸಾಷ್ಟಾಂಗ ನಮಸ್ಕಾರಗಳು. ತಾರೀಖ್ ಚ. ೨೬ ಸಾಬಾನ ಕಿತ್ತೂರು ತಾಲೂಕಿನ ಒಕ್ಕುಂದ ಗ್ರಾಮದ ಸೇವಕನು ಬರೆಯುವ ವರ್ತಮಾನ ಇಲ್ಲಿ ವಿಶೇಷವೇನೆಂದರೆ ದೇಸಾಯಿಯವರು ದೇಗಾವಿಯಲ್ಲಿದ್ದಾರೆ ಎಂದು ತಿಳಿದು ರಾಜಶ್ರೀ ಮಹದಜೀ ಪಂಥ್ ಬೆಹರೆಯವರು ಸೈನ್ಯದ ಸಮೇತವಾಗಿ ದೇಗಾವಿಗೆ ಸಮೀಪಕ್ಕೆ ಹೋದರು. ಆಗ ಮಧ್ಯಾಹ್ನವಾಗಿತ್ತು. ಮುಂದೆ ಹೋಗಬಾರದೆಂದು ಮಾತುಕತೆ ನಡೆದಿತ್ತು. ಇಷ್ಟರಲ್ಲೇ ಮಲ್ಲಸರ್ಜನ ದೇಸಾಯಿಯವರ ಕಡೆಗಿನ ಮೂರು ಕುದುರೆ ಸವಾರರು ಒಂದು ಸಾವಿರ ಸೈನಿಕರು ಮತ್ತು ಲೂಟಿಕೋರರು ಮುಂದೆ ಹೋಗಿದ್ದಾರೆಂದು ಗೊತ್ತಾದ ಮೇಲೆ ರಾಜಶ್ರೀ ದೊಂಡೋ ಪಂಥ್ ಗೋಖಲೆ ತಮ್ಮ ಶೂರ ಸೈನಿಕರೊಂದಿಗೆ ಬೆನ್ನತ್ತಿದರು. ಅವರು ಮುಂದೆ ಹೋಗಿ ಕುದುರೆಗಳನ್ನು ನಿಲ್ಲಿಸಿದಾಗ ಮಲ್ಲಸರ್ಜನ ದೇಸಾಸಿಯವರ ಕುದುರೆ ಸವಾರರು ಓಡಿ ಹೋದರು. ನಂತರ ಸುಮಾರು ನೂರು ಸೈನಿಕರ ಸಾವನ್ನು ಅನುಭವಿಸಿದರು. ಅನೇಕರು ಗಾಯಾಳುಗಳಾದರು. ಇದೇ ಸಂಸರ್ಭದಲ್ಲಿ ರಾಸ್ತೆಯವರ ಕಡೆಯ ಸೈನಿಕರು ನೂರೈವತ್ತೂ ಹೆಚ್ಚು ಜನ ಬೇರೆ ಕಡೆಯಿಂದ ಬಂದರು. ಅವರು ೧೦-೧೫ ಜನರನ್ನು ಕೊಂದು ಹಾಕಿದರು. ಈ ಘಟನೆಯು ದೇಗಾವಿಯ ಸಮೀಪ ನಡೆಯಿತು. ಸಂಕೋಜಿ ಕಾಟೆ ಇವರ ಸೈನ್ಯವು ಇಲ್ಲಿಗೆ ಬಂದಾಗ ಯುದ್ಧ ಮಾಡುವ ಸಂದರ್ಭದಲ್ಲಿ ಇವರ ಎದೆಗೆ ಕಲ್ಲು ಬಡಿದು ಮೂತ್ರ ಬಂದಾಗಿತ್ತು. ಆಗ ನಾಲ್ಕೈದು ತಾಸುಗಳ ಕಾಲ ವಿಶ್ರಾಂತಿ ಪಡೆದು ಚೇತರಿಸಿಕೊಂಡರು. ಗೋಖಲೆಯವರ ಕಡೆಗಿನ ಎಂಟು ಕುದುರೆಗಳು ಬೆಹರೆಯವರ ನಾಲ್ಕೈದು ಕುದುರೆಗಳು ಕ್ಫಟೆಯವರ ಒಂದೆರಡು ಕುದುರೆಗಳು ಗಾಯಾಳುಗಳಾಗಿದ್ದವು. ರಾಸ್ತೆಯವರ ಒಂದು ಕುದುರೆ ಸತ್ತು ಹೋಗಿದೆ ಎಂದು ವರ್ತಮಾನ ಬಂದಿದೆ ಎಂದು ಮಾಹಿತಿಗಾಗಿ ಪತ್ರದಲ್ಲಿ ಉಲ್ಲೇಖವಿದೆ.[೪]

ಎರಡನೆ ಪತ್ರದಲ್ಲಿ ಮಹದಜೀ ಖಂಡೆರಾವ್ ಮಾಡುವ ನಮಸ್ಕಾರಗಳು. ವಿನಂತಿ. ಚ. ೨೮ ಸಾಬಾನ (ಉರ್ದು ಮಾಸ) ಇಲ್ಲಿಯವರೆಗೆ ಎಲ್ಲವೂ ಕ್ಷೇಮ. ಕಿತ್ತೂರು ತಾಲೂಕಿನ ಒಕ್ಕುಂದ ಗ್ರಾಮದಲ್ಲಿರುವ ಸೇವಕನಾಗಿರುವ ನಾನು ತಿಳಿಸುವುದೇನೆಂದರೆ ಚ. ೨೫ರಂದು ರಾಜಶ್ರೀ ಮಹದಜೀ ಪಂಥ್ ಬೆಹೆರೆ ಅವರು ತಮ್ಮ ಸೈನ್ಯವನ್ನು ದೇಗಾವಿಗೆ ತೆಗೆದುಕೊಂಡು ಹೋದರು. ಆಗ ಮಧ್ಯಾಹ್ನವಾಗಿತ್ತು. ಅಲ್ಲಿಂದ ಸುಮಾರು ೫೦ ಜನ ಕುದುರೆ ಸವಾರರು ಸುಮಾರು ೫೦೦ ಜನ ಸೈನಿಕರು ಮುಂದೆ ಹೋಗಿ ದೊಂಡೋಪಂಥ್ ಗೋಖಲೆ ಆನಂದ ಬಾಬರ ಮತ್ತು ಸಕೋಜಿ ಕಾಟೆ ಇವರ ನಾಯಕತ್ವದಲ್ಲಿ ಮೂರು ತಂಡಗಳನ್ನಾಗಿ ವಿಂಗಡಿಸಿ ಮಲ್ಲಸರ್ಜನ ದೇಸಾಯಿಯ ಸೈನ್ಯವನ್ನು ತಡೆ ಹಿಡಿಯಲು ಪ್ರಯತ್ನಮಾಡಿದರು. ಆಗ ಯುದ್ಧ ನಡೆಯಿತು. ಅಲ್ಲಿ ಸೇರಿದಂತಹ ಜನರು ಕುದುರೆ ಸವಾರರನ್ನು ಕಂಡು ತಾವೂ ಕುದುರೆಯನ್ನು ಹತ್ತಿ ಯುದ್ಧವನ್ನು ಆರಂಭಿಸಿದರು. ಸುಮಾರು ೭೫-೧೦೦ ಜನರನ್ನು ಈ ಯುದ್ಧದಲ್ಲಿ ಕೊಲ್ಲಲಾಯಿತು. ಅನೇಕ ಜನರಿಗೆ ಗಾಯವಾಯಿತು. ನಂತರ ಮೂರೂ ಜನ ಸೈನ್ಯದ ಮುಖ್ಯಸ್ಥರೂ ಒಂದು ಕಡೆ ಸೇರಿದ್ದಾಗ ಅಲ್ಲಿಗೆ ಬೆಹೆರೆಯವರು ಆಗಮಿಸಿದರು. ಆಗ ಸ್ಥಳೀಯ ಜನರು ಪರಾಭವ ಗೊಂಡಿದ್ದರು. ಸಂಜೆಯ ವೇಳೆಗೆ ಸೈನ್ಯವು ಠಾಣೆಗೆ ಬಂದಿತು. ಆಗ ರಾಸ್ತೆಯವರ ಸೈನ್ಯದ ಒಂದು ಕುದುರೆ

ಸತ್ತು ಬಾಬರನ ಒಬ್ಬ ಸೈನಿಕ ಸತ್ತಿದ್ದನು. ಐದಾರು ಕುದುರೆಗಳು ಗಾಯಗಳಾಗಿದ್ದವು. ಹತ್ತರಿಂದ ೧೨ ಜನರು ಪೆಟ್ಟನ್ನು ತಿಂದಿದ್ದರು. ಮರುದಿವಸ ಅಂದರೆ ಚ. ೨೬ ರಂದು ಸ್ಥಳೀಯ ಜನರು ಹೆದರಿಕೆಯಿಂದ ರಾತ್ರಿ ವೇಳೆಯಲ್ಲಿ ದೇಗಾವಿಯನ್ನು ಬಿಟ್ಟು ಓಡಿಹೋದರು. ಅವರ ಜೊತೆಯಲ್ಲಿ ಸುಮಾರು ೧೫೦೦ ಸೈನಕರು ನೂರು ಕುದುರೆ ಸವಾರರು ಇದ್ದರೆಂದು ತಿಳಿದುಬರುತ್ತದೆ. ಅರ್ಧ ದಾರಿಯಲ್ಲಿ ಹೋದಾಗ ಅವರ ಜೊತೆಗಿದ್ದ ಸುಮಾರು ೫೦೦ ಸೈನಕರಲ್ಲಿ ಕೆಲವರು ಬಿಟ್ಟು ಓಡಿ ಹೋದರು. ಹನುಮಂತ ಗಡ ಮತ್ತು ಬಿಜಗರಣಿ ಸಮೀಪವಿರುವ ಹಲಸಿಯ ಅಡವಿಯಲ್ಲಿ ಅವರು ತಂಗಿದ್ದರು. ಜೊತೆಗೆ ಸಮೀಪದ ಸಂಗೊಳ್ಳಿ, ಶೀಗಿ ಹಳ್ಳಿ, ದೇಗಾವಿ ಮತ್ತು ಗಂದಿಗವಾಡದಿಂದ ಸುಮಾರು ೨೦೦೦ ಸೈನಕರು ಇದ್ದಾರೆ ಒಟ್ಟಿನಲ್ಲಿ ೩–೫ ಸಾವಿರ ಜನ ಕೂಡಿಸಿರಬಹುದೆಂದು ತಿಳಿದುಬರುತ್ತದೆ. ನಮ್ಮಲ್ಲಿ ಕೇವಲ ಎರಡು ಸಾವಿರದ ಐದುನೂರು ಸೈನಿಕರು ಮಾತ್ರವಿದ್ದು ಮೊದಲು ೨ ಠಾಣೆಗಳಿದ್ದವು. ಆವಾಗ ಎಲ್ಲವೂ ಸರಿ ಎನಿಸುತ್ತಿತ್ತು. ಆದರೆ ಈಗ ಕೆಲವು ಠಾಣೆಗಳು ಕಿತ್ತೂರಿನಲ್ಲಿಯೇ ಉಳಿದವು. ಮತ್ತೆ ಕೆಲವು ದೇಸಾಯಿಯವರ ಕಡೆಗೆ ಉಳಿದವು. ಹೀಗಾಗಿ ಒಟ್ಟಿನಲ್ಲಿ ಬಂದೋಬಸ್ತ್ ಆಗುವವರೆಗೂ ಮುಖ್ಯಠಾಣೆಯ ಮೇಲೆ ಬಹಳಷ್ಟು ಸೈನಿಕರನ್ನು ನೇಮಿಸಬೇಕಾಗಿದೆ. ಸಣ್ಣ ಪುಟ್ಟ ಠಾಣೆಗಳನ್ನು ರಕ್ಷಣೆ ಮಾಡಲು ಕೆಲವು ಸೈನಿಕರನ್ನು ಇಡಲಾಗಿದೆ. ಇದನ್ನು ಮಾಡದಿದ್ದರೆ ಬಂದೋವಸ್ತ್ ಆಗುವುದಿಲ್ಲ. ನಮ್ಮ ಸಿಬ್ಬಂದಿಯನ್ನು ಹೆಚ್ಚು ಮಾಡಬೇಕಾಗಿದೆ. ಬೆಹೆರೆಯುವರ ಕಡೆಯಿಂದಲೂ ಬಂದೋಬಸ್ತ್ ಆಗಬೇಕಾಗಿದೆ. ಠಾಣೆಗಳಲ್ಲಿ ಸಿಬ್ಬಂಧಿಗಳ ಕಡಿಮೆಯಾಗಿದೆ. ದೇಸಾಯಿಯವರು ಅಡವಿಯಲ್ಲಿ ಅಡಗಿಕೊಂಡಿದ್ದರೆ ಸೈನಕರಿಲ್ಲದೆ ಅವರನ್ನು ಸೋಲಿಸಲು ಸಾದ್ಯವಿಲ್ಲ. ಆದ್ದರಿಂದ ಸುಮಾರು ೨ ಸಾವಿರ ಸೈನಿಕರನ್ನು ಕಳಿಸುವ ವ್ಯವಸ್ಥೆ ಮಾಡಬೇಕು. ಇಲ್ಲಿನ ಬಂದೋಬಸ್ತ್ ಬಗ್ಗೆ ಸ್ವಾಮಿಯವರಿಗೆ ಎಲ್ಲವೂ ತಿಳಿದ ವಿಷಯವಾಗಿದೆ. ಮುಂದೆ ಏನು ಆಗುತ್ತದೆ ಎನ್ನುವುದನ್ನು ಬರೆದು ಕಳಿಸುತ್ತೇನೆ. ಇದು ತಮ್ಮ ಮಾಹಿತಿಗಾಗಿ ಇಂತಿ ನಿಮ್ಮ ಸೇವಕನೆಂದು ದಾಖಲಿಸಿದೆ.[೫]

ಮೂರನೆ ಪತ್ರದಲ್ಲಿ ಕಿತ್ತೂರಿನ ತಾಲೂಕಿನ ಸುದ್ದಿ ತಮಗೆ ತಲುಪಿದೆ ಚ. ೧೫ ಜಿಲಕಾದ (ಉರ್ದು ಮಾಸ)ದಂದು ರಾಜಶ್ರೀ ಮಹದಜಿ ಪಂಥ್ ಬೆಹೆರೆ ಇವರ ಸೈನ್ಯದ ವಾಸ್ತವ್ಯ ಬೀಡಿಯಲ್ಲಿದೆ. ಅಲ್ಲಿಂದ ಎರಡು ಸಾವಿರ ಸೈನಿಕರನ್ನು ತೆಗೆದುಕೊಂಡು ಕ್ರೂರ ಸೈನಿಕರ ಜೊತೆಗೆ ಹಲಸಿಯ ಸಮೀಪವಿರುವ ಹನುಮಂತಗಡದಲ್ಲಿದ್ದಾರೆ. ಹಲಸಿಯ ಮೇಲೆ ದಾಳಿ ಮಾಡಿ ಆ ಪೇಟೆಯನ್ನು ವಶಪಡಿಸಿಕೊಂಡರು. ನಂತರದಲ್ಲಿ ಕೋಟೆಯಲ್ಲಿ ಬಹಳಷ್ಟು ಚಟುವಟಿಕೆಗಳು ನಡೆದವು. ಅ ಸಂದರ್ಭದಲ್ಲಿ ಯಾವುದೇ ನಿರ್ಣಯಗಳನ್ನು ಕೈಗೊಳ್ಳಲು ಆಗಲಿಲ್ಲ. ಪೇಟೆಯನ್ನು ಬಿಟ್ಟು ಸೈನ್ಯದ ಪಡೆ ಮತ್ತೆ ಹಿಂತುರಿಗಿ ಬಂದಿತು. ಆಗ ೫೦–೬೦ ಜನ ಸಾವಿಗೆ ಈಡಾದರು. ಸುಮಾರು ೭೫ ಜನರು ಗಾಯಾಳುಗಳಾದರು. ಚ. ೧೬ ರಂದು ರಾಜಶ್ರೀ ಮೋರೋ – ಬಾಪು ಫಡ್ಕೆ ಇವರು ಬೆಹೆರೆಯವರ ಸೈನ್ಯದಲ್ಲಿ ಹಾಜರಾದರು. ನಂತರದಲ್ಲಿ ಹಲಸಿಯ ಸಮೀಪದಲ್ಲಿರುವ ಹನುಮಂತಗಡಕ್ಕೆ ಹೋಗಲು ತೀರ್ಮಾನಿಸಿದರು. ಆಗ ಕಿತ್ತೂರ್‌ಕರ್ ದೇಸಾಯಿಯವರು ತಮ್ಮ ಕ್ರೂರ ಸೈನಿಕರೊಂದಿಗೆ ಹಲಸಿಯಿಂದ ಹನುಮಂತ ಗಡದ ಅಡವಿಯ ಕಡೆಗೆ ಓಡಿ ಹೋದರು. ಮುಫ್ತಿಯಲ್ಲಿದ್ದ ಕೆಲವು ಸೈನಿಕರನ್ನು ಖಾನಾಪುರದಲ್ಲಿಟ್ಟರು. ಸೈನ್ಯವನ್ನು ತೆಗೆದುಕೊಂಡು ದೇಸಾಯಿಯವರನ್ನು ಬೆನ್ನತ್ತಿಕೊಂಡು ಹೋಗಲು ನಿರ್ಧರಿಸಲಾಯಿತು. ಆಗ ಪೆದ್ರು ಫಿರಂಗಿ ಶಿವರುದ್ರಪ್ಪ ವಾಣಿ ಇವರು ಕಿತ್ತೂರಕರ್ ದೇಸಾಯಿಯವರ ಕಡೆಗೆ ಇದ್ದರು. ಇವರ ಕುಟುಂಬದ ಜನರನ್ನು ಖಾನಾಪುರಲ್ಲಿ ಬಂಧಿಸಿದಾಗ ಇವರು ಅಡವಿಯಿಂದ ಓಡಿಬಂದರು ಎಂಬುದು ಖಚಿತ ಸುದ್ಧಿಯಾಗಿದೆ, ಮಾಹಿತಿಗೆ ತಿಳಿಸಲಾಗಿದೆ ಎಂದು ದಾಖಲಿಸಿದೆ.[೬]

ಅಪ್ರಕಟಿತ ದಾಖಲೆಗಳಿಂದ ತಿಳಿದುಬರುವ ಅಂಶಗಳೇನೆಂದರೆ

ಕಿತ್ತೂರಿನ ಮಲ್ಲಸರ್ಜನ ದೇಸಾಯಿಯ ಸೈನ್ಯ ಮತ್ತು ರಾಜಶ್ರೀ ಮಹದಜಿ ಪಂಥ ಬೆಹೆರೆಯವರ ಸೈನ್ಯದ ಮಧ್ಯೆ ನಡೆದ ಕದನದ ವಿವರ ಕದನದಿಂದಾಗುವ ಪರಿಣಾಮಗಳನ್ನು ಪ್ರಸ್ತಾಪಗೊಂಡಿದೆ. ಮಲ್ಲಸರ್ಜನನ ಸೈನ್ಯದ ಬಲದ ಬಗ್ಗೆ ಉಲ್ಲೇಖ ಮಾಡಿರುವುದು ಇಲ್ಲಿಯ ಒಂದು ವಿಶೇಷತೆಯಾಗಿದೆ. ರಾಜಶ್ರೀ ದುಂಡೋಪಂಥ ಬೆಹೆರೆಯವರು ತಮ್ಮ ಸೈನಿಕರನ್ನು ಒಡಗೂಡಿ ಮಲ್ಲಸರ್ಜನನ್ನು ಬೆನ್ನತ್ತಿಕೊಂಡು ಹೋದಾಗ ಉಂಟಾದ ಯುದ್ಧದಲ್ಲಿ ಸೈನ್ಯದ ಮುಖ್ಯಸ್ಥನಾದ ಸಂಕೋಜಿ ಕಾಟೆಯವರಿಗೆ ಪೆಟ್ಟು ತಗುಲಿ ಕೆಲವು ಕಾಲ ಚೇತರಿಸಿಕೊಳ್ಳಬೇಕಾಯಿತು. ಬೆಹೆರೆಯವರ ಕೆಲವು ಕುದುರೆಗಳು ಗಾಯವಾಗಿದೆಯೆಂಬುದು ಈ ಪತ್ರದಲ್ಲಿ ಕಂಡುಬಂದಿದೆ. ಮಲ್ಲಸರ್ಜನನು ಒಕ್ಕುಂದದಿಂದ ಖಾನಾಪುರದ ಕಡೆಗೆ ಓಡಿಹೋದನೆಂದು ಇದರಿಂದ ತಿಳಿದುಬರುತ್ತದೆ.

ಎರಡನೆ ಪತ್ರವು ಹಿಂದಿನ ಪತ್ರದ ಮುಂದುವರೆದ ಭಾಗವಾಗಿದ್ದು, ದೇಗಾವಿಯಲ್ಲಿ ನಡೆದ ಬೆಹೆರೆ ಮತ್ತು ಮಲ್ಲಸರ್ಜನನ ಸೈನ್ಯದ ನಡುವೆ ನಡೆದ ಘರ್ಷಣೆಯ ವಿವರ ಸಂಪೂರ್ಣವಾಗಿ ತಿಳಿದು ಬರುತ್ತದೆ. ಬೆಹೆರೆಯವರ ಸೈನ್ಯವು ದೇಗಾವಿಗೆ ಹೋಗುವವರೆಗೆ ಮೂರು ಭಾಗಗಳನ್ನಾಗಿ ವಿಂಗಡಿಸಲಾಗಿತ್ತು. ಇವುಗಳ ನೇತೃತ್ವವನ್ನು ದುಂಡೋಪಂಥ

ಗೋಖಲೆ, ಆನಂದ ಬಾಬರ್ ಮತ್ತು ಸಂಕೋಜಿ ಕಾಟೆ ವಹಿಸಿಕೊಂಡಿದ್ದರು. ಇವರೆಲ್ಲರೂ ಕೂಡಿ ಮಲ್ಲಸರ್ಜನನ ಸೈನ್ಯವನ್ನು ತಡೆಯಲು ಪ್ರಯತ್ನಿಸಿ ವಿಫಲರಾದರು ಕಾರಣ ದೇಗಾವಿ, ಗಂಧಿಗವಾಡ, ಸಂಗೊಳ್ಳಿ ಮತ್ತು ಶೀಗಿಹಳ್ಳಿಯ ಜನರು ಸುಮಾರು ೨೦೦೦ದಷ್ಟಿದ್ದು, ಮಲ್ಲಸರ್ಜನ ಫಲಾಯನಗೈಯಲು ಸಹಾಯಕರಾದರು. ಈ ಪತ್ರದಿಂದ ತಿಳಿದುಬರುವ ಅಂಶವೆಂದರೆ ಮಲ್ಲಸರ್ಜನ ದೇಸಾಯಿಯವರು ಸಂಕಷ್ಟ ಬಂದಾಗ ಅಡವಿಯಲ್ಲಿ ಅಡಗಿಕೊಂಡು ತಮ್ಮನ್ನು ರಕ್ಷಿಸಿಕೊಳ್ಳುತ್ತಿದ್ದರು. ಹಾಗೂ ತಮ್ಮ ಬಂದೋಬಸ್ತಿಗಾಗಿ ಗ್ರಾಮಗಳ ಜನರನ್ನು ಬಳಸಿಕೊಳ್ಳುತ್ತಿದ್ದರು ಎಂಬುದು ತಿಳಿದುಬರುತ್ತದೆ.

ಮೂರನೆ ಪತ್ರದಲ್ಲಿ ಕಿತ್ತೂರ್‌ಕರ್ ದೇಸಾಯಿಯವರು ಹಲಸಿ ಮತ್ತು ಹನುಮಂತಗಡದಲ್ಲಿದ್ದಾರೆ ಎಂಬುದನ್ನು ತಿಳಿದು ಮಹದಜಿ ಪಂತ್ ಬೆಹರೆಯವರು ಇವರನ್ನು ಬೆನ್ನಟ್ಟಿಕೊಂಡು ಹಲಸಿ ಪೇಟೆಯ ಮೇಲೆ ದಾಳಿ ನಡೆಸಿದರು. ಅಷ್ಟರ ವೇಳೆಗಾಗಲೇ ಕಿತ್ತೂರ್‌ಕರ್ ದೇಸಾಯಿಯ ಸೈನ್ಯವು ಹಲಸಿಯನ್ನು ಬಿಟ್ಟು ಹನುಮಂತಗಡದ ಅಡವಿಯನ್ನು ಸೇರಿದ್ದರು. ಆಗ ಜನರಿಗೂ ಮತ್ತು ಸೈನಿಕರಿಗೂ ಯುದ್ಧ ನಡೆದಾಗ ೫೦–೬೦ ಜನರು ಸಾವನ್ನು ಅನುಭವಿಸಿದರು. ಸುಮಾರು ೭೫ ಕ್ಕೂ ಹೆಚ್ಚು ಜನ ಗಾಯಾಳುಗಳಾದರು. ಗುಪ್ತದಳದವರ ಸಹಾಯದಿಂದ ಮಲ್ಲಸಜ್ಜನ ದೇಸಾಯಿಯ ಭಟರಾದ ಪೆದ್ರು ಪಿರಂಗಿ ಮತ್ತು ಶಿವರುದ್ರಪ್ಪ ವಾಣಿಯವರ ಕುಟುಂಬದ ಸದಸ್ಯರನ್ನು ಬೆಹರೆಯವರು ಬಂಧಿಸಿದಾಗ ಸುದ್ಧಿಯನ್ನು ತಿಳಿದ ಅಡವಿಯಲ್ಲಿದ್ದ ಇವರಿಬ್ಬರೂ ವಾಪಸು ಬಂದರೆಂದು ಈ ಪತ್ರದಿಂದ ತಿಳಿದುಬರುತ್ತದೆ.

ಒಟ್ಟಾರೆ ಆಪ್ರಕಟಿತ ದಾಖಲೆಗಳು ಕಿತ್ತೂರು ಮಲ್ಲಸರ್ಜನ ದೇಸಾಯಿ ಸೈನ್ಯ ಮತ್ತು ರಾಜಶ್ರೀ ಮಹಾದಜಿ ಪಂಥ ಬೆಹರೆಯವರ ನಡುವೆ ಕದನ, ಅದರಿಂದುಂಟಾದ ಪರಿಣಾಮ, ಬುದ್ಧಿವಂತಿಯಿಂದ ಸೈನ್ಯ ಬೇರ್ಪಡಿಸಿದ ನೀತಿ, ರಕ್ಷಿಕೊಳ್ಳುವುದಕ್ಕಾಗಿ ಗ್ರಾಮದ ಜನರನ್ನು ಬಳಸಿಕೊಳ್ಳುವಿಕೆ, ಗುಪ್ತದಳವನ್ನು ಬಳಸಿಕೊಳ್ಳುವಿಕೆ, ಜನರ ಸಾವು–ನೋವುಗಳ ಚಿತ್ರಣ ಈ ಅಪ್ರಕಟಿತ ದಾಖಲೆಗಳಿಂದ ತಿಳಿದು ಬರುತ್ತದೆ.

ಆಧಾರಸೂಚಿ

೧. ನರಹರಿ ಕೆ.ಎನ್., 'ಕಿತ್ತೂರು ಸಂಸ್ಥಾನದ ಆಡಳಿತ ವಿಭಾಗ–ವಿಸ್ತಾರ', ಅಪ್ರಕಟಿತ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೩, ಪುಟ–೧೪೯.

೨. ಅದೇ ಪುಟ–೧೯೦.

೩. ಅದೇ ಪುಟ–೨೩೮.

೪. ಅದೇ ಪುಟ–೨೧೪.

೫. ಅದೇ ಪುಟ–೨೧೫.

೬ ಅದೇ ಪುಟ–೨೧೬.

ಆಕರಗ್ರಂಥ

೧. ಕಡತದ ಸಂಖ್ಯೆ ೧೧, ರುಮಾಲ್ ನಂ. ೭೪, ಪತ್ರದ ಸಂಖ್ಯೆ ೦೭, ಡೆಕ್ಕನ್ ಕಾಲೇಜು ವಸ್ತು ಸಂಗ್ರಹಾಲಯ, ಪುಣೆ.

೨. ಕಡತದ ಸಂಖ್ಯೆ– ೧೧, ರುಮಾಲ್ ನಂ ೭೪, ಪತ್ರದ ಸಂಖ್ಯೆ–೦೩, ಡೆಕ್ಕನ್ ಕಾಲೇಜು ವಸ್ತು ಸಂಗ್ರಹಾಲಯ, ಪುಣೆ.

೩. ಕಡತದ ಸಂಖ್ಯೆ– ೦೨, ರುಮಾಲ್ ನಂ ೭೪, ಪತ್ರದ ಸಂಖ್ಯೆ–೦೩, ಡೆಕ್ಕನ್ ಕಾಲೇಜು ವಸ್ತು ಸಂಗ್ರಹಾಲಯ, ಪುಣೆ

೩೮

ತುರವಿಹಾಳ ಗ್ರಾಮದಲ್ಲಿ ಹಾಲುಮತ ದಾಖಲೆಗಳ ಶೋಧ

ಡಾ. ಎಫ್.ಟಿ. ಹಳ್ಳಿಕೇರಿ*

ಹಾಲುಮತ ಗುರುಪರಂಪರೆಯಲ್ಲಿ ರೇವಣಸಿದ್ಧ-ಸಿದ್ಧರಾಮ-ಅಮೋಘಸಿದ್ಧ ಎಂಬ ಮೂರು ಸಂಪ್ರದಾಯಗಳಿವೆ. ಕ್ರಮವಾಗಿ ಸರೂರ(ರೇವಣಸಿದ್ಧ)-ಸೊಲ್ಲಾಪುರ (ಸಿದ್ಧರಾಮ)-ಅರಕೇರಿ (ಅಮೋಘಸಿದ್ಧ) ಗ್ರಾಮಗಳು ಈ ಮೂರು ಸಂಪ್ರದಾಯಗಳ ಮುಖ್ಯಕೇಂದ್ರಗಳು. ನಂತರದಲ್ಲಿ ಈ ಸಂಪ್ರದಾಯಕ್ಕೆ ಗುರುಗಳಾಗಿ ಬಂದವರು ಶಾಂತ ಮುತ್ತಯ್ಯ-ಸಿದ್ಧಮಂಕ-ಅಮೋಘಸಿದ್ಧ ಒಡೆಯರು. ಈ ಮೂರು ಸಂಪ್ರದಾಯಗಳನ್ನು ಪರಂಪರಾನುಗತವಾಗಿ ಮುಂದುವರೆಸಿಕೊಂಡು ಬರುತ್ತಿರುವ ಗುರುಗಳಿಗೆ ಒಡೆಯರು, ಗುರುವಿನವರು ಎಂದು ಕರೆಯಲಾಗುತ್ತಿದೆ. ಕುರುಬರ ಈ ಗುರುಪರಂಪರೆಗಳು ಕರ್ನಾಟಕ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳುದ್ದಕ್ಕೂ ಈಗಲೂ ಮುಂದುವರೆದಿವೆ. ಇದಕ್ಕೆ ಈಗಲೂ ಹಳ್ಳಿಗಳಲ್ಲಿ ಅಸ್ತಿತ್ವದಲ್ಲಿರುವ ರೇವಣಸಿದ್ಧ-ಸಿದ್ಧರಾಮ-ಅಮೋಘಸಿದ್ಧ ಮಠಗಳು ನಿದರ್ಶನಗಳಾಗಿವೆ. ಈ ಮಠಗಳ ಪೀಠಾಧಿಪತಿಗಳಾಗಿ ಕುರುಬರಿಗೆ ಗುರುಗಳಾಗಿ ಒಡೆಯರು ಕಾರ್ಯನಿರ್ವಹಿಸುತ್ತಿದ್ದಾರೆ. ಅಂಥವರಲ್ಲಿ ತುರವಿಹಾಳದ ಮಾದಪ್ಪಯ್ಯ ಒಡೆಯರ ಅವರು ಪ್ರಮುಖರಾಗಿದ್ದಾರೆ.

೧. ತುರವಿಹಾಳದ ಮಾದಪ್ಪಯ್ಯ ಒಡೆಯರು

ತುರವಿಹಾಳ, ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಒಂದು ಗ್ರಾಮ. ಸಿಂಧನೂರನಿಂದ ಪಶ್ಚಿಮಕ್ಕೆ ೧೮ ಕಿ.ಮೀ. ಅಂತರ (ಸಿಂಧನೂರು-ಕುಷ್ಟಗಿ ಮುಖ್ಯರಸ್ತೆ) ದಲ್ಲಿರುವ ಈ ಗ್ರಾಮದಲ್ಲಿ ಕುರುಬರ ಗುರುಪರಂಪರೆಗೆ ಸೇರಿದ ರೇವಣಸಿದ್ಧ ಮತ್ತು ಅಮೋಘಸಿದ್ಧ ಸಂಪ್ರದಾಯದ ಒಡೆಯರ ಮನೆತನಗಳಿವೆ. ಈ ಮನೆತನಗಳಲ್ಲಿ ನೂರು ವರ್ಷಗಳ ಹಿಂದೆ ಆಗಿಹೋದ ಮಾದಪ್ಪಯ್ಯ ತಂದೆ ಓಗಪ್ಪಯ್ಯ ಗುರುವಿನ ಅವರು ಕುರುಬರ ಗುರುಪರಂಪರೆಯಲ್ಲಿ ಒಂದಾದ ಅಮೋಘಸಿದ್ಧ ಸಂಪ್ರದಾಯಕ್ಕೆ ಸೇರಿದವರು. ಮಾದಪ್ಪಯ್ಯ ಅವರು ಬಿಜಾಪುರ ಜಿಲ್ಲಾ ಮುದ್ದೇಬಿಹಾಳ ತಾಲೂಕಿನ ತಂಗಡಗಿ ಮತ್ತು ತುರವಿಹಾಳದಲ್ಲಿರುವ ಅಮೋಘಸಿದ್ಧ ಶಾಖಾಮಠಗಳೆರಡಕ್ಕೂ ಗುರುಗಳಾಗಿದ್ದರು. ಮಾದಪ್ಪಯ್ಯ(ಮರಣ:೧೦-೮-೧೯೬೪)ನವರಿಗೆ ಗಂಗಮ್ಮ ಮತ್ತು ನಾಗಮ್ಮ ಎಂಬ ಇಬ್ಬರು ಹೆಂಡಂದಿರಿದ್ದರು. ಇವರ ಮಗ ಸಿದ್ಧಯ್ಯ(ಮರಣ:೨೧-೪-೨೦೦೬). ಇವರಿಗೂ ಗಂಗಮ್ಮ ಮತ್ತು ನೀಲಮ್ಮ ಎಂಬಿಬ್ಬರು ಹೆಂಡಂದಿರು. ನೀಲಮ್ಮನವರಿಗೆ ಮಾದಯ್ಯ-ಗಂಗಾಧರಯ್ಯ-ಯೋಗಪ್ಪಯ್ಯ ಎಂಬ ಮೂವರು ಮಕ್ಕಳಿದ್ದಾರೆ.

ಮದುವೆ, ಉಡಕಿ, ಬಿಡಕಿ ಮೊದಲಾದ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಿಗೆ ಹಾಗೂ ವಾರ್ಷಿಕವಾಗಿ ಭಕ್ತರು ಆತ್ಮಸಂತೋಷದಿಂದ ಇಂತಿಷ್ಟು ಕಾಣಿಕೆಯನ್ನು ಮಠಕ್ಕೆ ಸಲ್ಲಿಸಬೇಕೆಂಬುದನ್ನು ಮೇಲಿನ ಉಲ್ಲೇಖದಿಂದ ತಿಳಿದು ಬರುತ್ತದೆ. ಭಕ್ತರು ಕೊಟ್ಟಂಥ ಹಣ ದವಸ-ಧಾನ್ಯ-ವಸ್ತ್ರ ರೂಪದ ಕಾಣಿಕೆಯ ವಿವರಗಳನ್ನು ಖಾತೆಕೀರ್ದಿ (ರಜಿಸ್ಟರ ಬುಕ್) ಪುಸ್ತಕದಲ್ಲಿ ಮಾದಪ್ಪಯ್ಯನವರು ದಾಖಲಿಸಿದ್ದಾರೆ. **ಆ ಪುಸ್ತಕದ ಪ್ರತಿಯೊಂದು ಪುಟದ ಮೇಲ್ಭಾಗದಲ್ಲಿ ಈ ಕೆಳಗಿನ ವಿವರಗಳು ಮುದ್ರಿತವಾಗಿವೆ.**

"ಶ್ರೀ ಭೂರಮಾಧೃತ ನವಖಂಡಪೃಥ್ವೀ ರತ್ನಹಾರ ನಾಯುಕಶಿಖಾರತ್ನ ಪರಿರವ್ಯೋದಕ ದಶದಿಗ್ಭಾಗ ಮಣಿಚಂಡಕಿರಣ ರಾಜಾತಮಪ್ಪ ಭರತಾಖ್ಯ ಭೂಮಾನಿನೀಸಿ ಮಂತದಂತಿಪ್ಪ ವಿಂಧ್ಯಾಚಲ ದಕ್ಷಿಣ ದೇಶೆಯೊಳ್ ಸೇರಿದ ವಿಜಾಪುರ ಜಿಲ್ಲಾ ವ, ತಾಲೂಕು ಪೈಕಿ ಹರಕೇರಿ ವ, ಮಂಕಣಾಪೂರ ಅಮೋಗಸಿದ್ಧೇಶ್ವರ ಸಿಂಹಾಸನ ಶಾಖಾ ಮಲಪ್ರಭಾ, ಕೃಷ್ಣ ಸಂಗಮವಾಹಿನಿ ಧಡದೋಳ್ ಶೋಭಿಸುತಿರ್ಪ ತಂಗಡಗಿ ಮತ್ತು ನಿಜಾಮ ಇಲಾಖೆಗೆ ಸೇರಿದ ರಾಯಚೂರು ಜಿಲ್ಲಾ ಸಿಂಧನೂರ ತಾಲೂಕ ಪೈಕಿ ತುರ್ವಿಹಾಳ ಹಾಲಮತದ ಧರ್ಮಗುರು ಮಠಾಧ್ಯಕ್ಷರಾದ ಸೃಷ್ಟಿ-ಸ್ಥಿತಿಲಯ ಕಾರ್ಯ ಕೃತಕೃತ್ಯರಾದ ಪರತರ ಪರಂಜ್ಯೋತಿ ಪರಬ್ರಹ್ಮ ಪರಶಿವ ಸ್ವರೂಪಿಗಳಾದ ಶ್ರೀ ಮಾದಪ್ಪಯ್ಯ ಓಘಪ್ಪಯ್ಯ ಮಹಾಸ್ವಾಮಿ ಒಡೆಯರು ಇವರಿಗೆ ಕೆಳಗೆ ನಮೂದಿಸಲ್ಪಟ್ಟ ಯಾವತ್ತೂ ಶಿಷ್ಯಮಂಡಳಿಯವರು ತಮ್ಮ ಧರ್ಮಕಾರ್ಯಗಳಿಗೆ ಆತ್ಮಸಂತೋಷದಿಂದ ಒಪ್ಪಿ ಬರಕೊಟ್ಟ ಕಾಣಿಕೆಯ ವಿವರ: ವಿವಾಹ ಕಾರ್ಯಕ್ಕೆ

* ಪ್ರಾಧ್ಯಾಪಕ, ಹಸ್ತಪ್ರತಿ ಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಬಳ್ಳಾರಿ ಜಿಲ್ಲೆ-೫೮೩೨೭೬.

ವರಪಕ್ಷದಿಂದ ೨ ರೂಪಾಯಿ ವಧುಪಕ್ಷದಿಂದ ೧ ರೂಪಾಯಿ, ಉಡಕೀ ಕಾರ್ಯಕ್ಕೆ ಪ್ರತಿಪಕ್ಷದಿಂದ ೩ ರೂಪಾಯಿ ಬಿಡಕೀ ಕಾರ್ಯಕ್ಕೆ ಪ್ರತಿಪಕ್ಷದಿಂದ ೬ ರೂಪಾಯಿ ಮತ್ತು ವರ್ಷಾಶನ ಕಾಣಿಕೆ ೧ ರೂಪಾಯಿ, ೨೫ ನಯಾಪೈಸೆ ಈ ಪ್ರಕಾರ ಮಠಕ್ಕೆ ಸಲ್ಲಿಸತಕ್ಕದ್ದು."

ಓದಲು ಮತ್ತು ಬರೆಯಲು ಬರುವಷ್ಟು ವಿದ್ಯೆಯನ್ನು ಸಂಪಾದಿಸಿ ತಂದೆ ಓಗಪ್ಪಯ್ಯನವರ ನಿಧನದ ನಂತರ ಗುರುಪಟ್ಟವನ್ನು ಸ್ವೀಕರಿಸಿದರು. ರಾಯಚೂರು ಬಿಜಾಪುರ ಬಾಗಲಕೋಟ ಜಿಲ್ಲೆಗಳ ೧೩೫ ಹಳ್ಳಿಗಳ ಕುರುಬರ ಮನೆತನಗಳು ಇವರ ವ್ಯಾಪ್ತಿಯಲ್ಲಿದ್ದವು. ಆ ಮೂಲಕ ಶಿಷ್ಯರನ್ನು ಕಟ್ಟಿಕೊಂಡು ಸಾಮಾಜಿಕವಾಗಿ ಮತ್ತು ಧಾರ್ಮಿಕ ವಾಗಿ ಕುರುಬ ಸಮುದಾಯವನ್ನು ಜಾಗೃತಗೊಳಿಸಲು ನಿರಂತರವಾಗಿ ಶ್ರಮಪಟ್ಟರು. ಸಮುದಾಯದ ಮನೆತನ ಅಥವಾ ಸದಸ್ಯರಲ್ಲಿ ವಾದವಿವಾದಗಳು ನಡೆದಾಗ ಅವುಗಳನ್ನು ಬಗೆಹರಿಸಿದ್ದು, ತಪ್ಪು ಮಾಡಿದವರಿಗೆ ಶಿಕ್ಷೆ ವಿಧಿಸಿದ್ದು, ದಂಡ ಹಾಕಿದ್ದು, ಶಿಕ್ಷೆ ಮುಗಿದ ನಂತರ ಮತ್ತೆ ಸಮಾಜದೊಳಗೆ ಅವರಿಗೆ ಪ್ರವೇಶ ನೀಡಿದ್ದು, ಬಡವರಿಗೆ ಹಣ ದವಸ ದಾನ್ಯಗಳ ರೂಪದಲ್ಲಿ ಸಹಾಯ ಮಾಡಿದ್ದಾರೆ. ಈ ಕುರಿತು ತುರವಿಹಾಳದ ಒಡೆಯರ ಮನೆಯಲ್ಲಿ ಸನದು ನಿರೂಪಗಳಂಥ ನೂರಾರು ದಾಖಲೆಗಳ ಸಂಗ್ರಹವಿದೆ. ಆ ಸಂಗ್ರಹದಲ್ಲಿರುವ ಕೆಲವು ದಾಖಲೆಗಳನ್ನು ಅಧ್ಯಯನಕ್ಕೊಳಪಡಿಸಿ, ಅವುಗಳ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಮಹತ್ವವನ್ನು ಅರಿತುಕೊಳ್ಳುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

೨. ದಾಖಲೆಗಳ ಸ್ವರೂಪ ಮತ್ತು ಮಹತ್ವ

ತುರವಿಹಾಳದಲ್ಲಿ ಲಭ್ಯವಾದ ದಾಖಲೆಗಳು ಕೋರಿ ಕಾಗದ, ಆಧುನಿಕ ಕಾಗದ ಮತ್ತು ಸ್ಟಾಂಫ್‌ಪೇಪರಗಳ ರೂಪದಲ್ಲಿವೆ. ಎಳ ಅಳತೆಯ ಒಂದು ಪುಟದಿಂದ ಹಿಡಿದು ನಾಲ್ಕೈದು ಪುಟಗಳಷ್ಟು ಮಾಹಿತಿಯಿರುವ ಸನದು ನಿರೂಪಗಳಿವೆ. ವಿಷಯ ದೀರ್ಘವಾಗಿದ್ದರೆ ಕಾಗದಗಳನ್ನು ಒಂದಕ್ಕೊಂದು ಅಂಟಿಸಲಾಗಿದೆ. ವಸ್ತುವಿನ ದೃಷ್ಟಿಯಿಂದ ಇಲ್ಲಿನ ದಾಖಲೆಗಳನ್ನು ಈ ಕೆಳಗಿನಂತೆ ವಿಂಗಡಿಸಬಹುದು.

೧. ಕುರುಬರ ಗುರು ಯಾರು ಎಂಬುದಕ್ಕೆ ವಾದ-ವಿವಾದ ಮಾಡಿ ನಿರ್ಣಯಿಸಿದ ದಾಖಲೆಪತ್ರಗಳು.

೨. ಮಾದಪ್ಪಯ್ಯ ಒಡೆಯರು ಶಿಷ್ಯಸಮೂಹಕ್ಕೆ ಬರೆದ ದಾಖಲೆಪತ್ರಗಳು.

೩. ಕುರುಬ ಸಮುದಾಯದ ಶಿಷ್ಯಬಳಗವು ಒಡೆಯರಿಗೆ ಬರೆದ ದಾಖಲೆಪತ್ರಗಳು.

೪. ಕುಲಾಚಾರಕ್ಕೆ ಸಂಬಂಧಿಸಿದ ನಿರ್ಣಯದ ದಾಖಲೆಪತ್ರಗಳು.

೫. ಸುಡುಗಾಡ ಸಿದ್ಧನ ಮಜೂರಿಯನ್ನು ತಿಳಿಸುವ ದಾಖಲೆಪತ್ರ.

೬. ಇತರೆ ದಾಖಲೆಗಳು

೧. ಕುರುಬರ ಗುರು ಯಾರು ಎಂಬುದಕ್ಕೆ ವಾದ-ವಿವಾದ ಮಾಡಿ ನಿರ್ಣಯಿಸಿದ ದಾಖಲೆಪತ್ರಗಳು.

ಕುರುಬರ ಗುರು ಯಾರು ಎಂಬುದು ೧೯ನೆಯ ಶತಮಾನದ ಮಧ್ಯಭಾಗದಿಂದ ೨೦ನೆಯ ಶತಮಾನದ ಮಧ್ಯಭಾಗದವರೆಗೆ ಸಾಕಷ್ಟು ವಾದ-ಪ್ರತಿವಾದಗಳು ನಡೆದಿವೆ. ರೇವಣಸಿದ್ಧ ಅಥವಾ ಸಿದ್ಧರಾಮ, ಶಾಂತಮುತ್ತಯ್ಯ ಅಥವಾ ಸಿದ್ಧಮಂಕ, ಸಿದ್ಧಮಂಕ ಅಥವಾ ಅಮೋಘಸಿದ್ಧ, ರೇವಣಸಿದ್ಧ ಅಥವಾ ಅಮೋಘಸಿದ್ಧ,-ಇವರಲ್ಲಿ ಯಾರು ಗುರುಗಳು ಎಂಬುದನ್ನು ನಿರ್ಣಯಿಸುವ ದಾಖಲೆಗಳು ಅಧಿಕ ಪ್ರಮಾಣ ದಲ್ಲಿ ಪತ್ರಗಳು ನಾಡಿನಾದ್ಯಂತ ದೊರೆಯುತ್ತವೆ. ಅಂಥ ಪತ್ರಗಳು ತುರವಿಹಾಳದ ಈ ಸಂಗ್ರಹದಲ್ಲಿವೆ. ವಿಶೇಷವಾಗಿ ಅಮೋಘಸಿದ್ಧ ಮತ್ತು ರೇವಣಸಿದ್ಧ-ಸಿದ್ಧಮಂಕ ಸಂಪ್ರದಾಯ ದವರ ನಡುವೆ ನಡೆದ ವಾದಗಳ ವಿವರಗಳು ಇಲ್ಲಿವೆ. ಕುರುಬರಿಗೆ ಗುರುಗಳಾಗಿ ಅರಕೇರಿ ಸಿದ್ಧಯ್ಯ ವಡೆಯರು-ಮಕಣಾಪುರದ ಅಮ್ಮಣ್ಣ ವಡೆಯರು ಹಾಗೂ ಸರವೂರಿನ ಮಂಕಣ್ಣ-ರೇವಣ್ಣ ವಡೆಯರಲ್ಲಿ ಯಾರಾಗಬೇಕು ಎಂಬುದರ ಬಗೆಗೆ ಸರ್ವಸಭಾನಾಯಕರಲ್ಲಿ ಚರ್ಚೆ ನಡೆದು ಹೀಗೆ ತೀರ್ಮಾನಿಸಿದರು.

> **"ಕುರುಬಯೆಂಬ ಕುಲದೊಳಗೆ ಶಿವಾಚಾರ ವಡಿಯ ಅರಕೇರಿ ಮಕಣಾಪುರದ ಅಮ್ಮಣ್ಣ ಸಿದ್ಧಯ್ಯ ಒಡೆಯರು ಗುರುಮುಖ್ಯ ಕರ್ತರು । ಭಿಕ್ಷಾವರ್ತಿಚಂತಿದೈವದ ಮುಂದೆ ನಿರ್ಣಯ ಮಾಡಿ ಸನದು ಬರಸಿದರು । ಸರವರೆಲ್ಲ ಹರಕತ್ತ ಮಾಡಿದರೆ ದಿವಾಣ ದೈವದ ಗುನ್ನೆಗಾರಿ ಸರವಸಿತಾ ಪರಿಹಾರಯೆತ್ತಲಾಗದು । ಕುಲಾಚಾರದಲ್ಲಿ ದೈವದ ವಡಿಯರು ಕರಿಸಿ ವಿಭೂತಿ ಧರಿಸೆಂದರೆ ಧರಿಸಬೇಕು। ಬ್ಯಾಡಯೆಂದರೆ ಬಿಡಬೇಕು । ಹಾಲುಮತದೊಳು ಯಾವನಾದರೆ ಸರವರವರು ಗುರುವೆಂದು ನುಡಿದವ ಶಿವಾಚಾರಕ್ಕೆ ಹೊರಗುಯೆಂದರು । ಇದು ಹುಸಿಯೆಂದರೆ ನರಕ ತಪ್ಪದು ।"**

ಇಂಥ ದಾಖಲೆಗಳು ಸ್ಥಳೀಯ ಸಂಸ್ಕೃತಿ ಅಧ್ಯಯನಕ್ಕೆ ಅನೇಕ ಮಾಹಿತಿಗಳನ್ನು ಒದಗಿಸುತ್ತವೆ.

೨. ಮಾದಪ್ಪಯ್ಯ ಒಡೆಯರು ಶಿಷ್ಯಸಮೂಹಕ್ಕೆ ಬರೆದ ದಾಖಲೆಪತ್ರಗಳು

ಸಮುದಾಯದ ಶ್ರೇಯೋಭಿವೃದ್ಧಿಗಾಗಿ ಒಡೆಯರು ಆಜ್ಞೆಗಳನ್ನು ಹೊರಡಿಸುತ್ತಿದ್ದರು. ಅಂಥ ಆಜ್ಞೆಯನ್ನು

ಒಳಗೊಂಡ ಪತ್ರಗಳು ಮಾದಪ್ಪಯ್ಯನವರು ಹೊರಡಿಸಿದ್ದರು. ಉದಾಹರಣೆಗೆ ಈ ಪತ್ರವನ್ನು ಗಮನಿಸಬಹುದು

"॥ಶ್ರೀಗುರು॥ ಶ್ರೀಮತ್ ಸಂಸ್ಥಾನ ವಿಜಾಪೂರ ತಾಲೂಕು ಪೈಕಿ ಪರಕೇರಿ ಮಂಕಣಾಪುರ ಅಮೋಘಸಿದ್ಧೇಶ್ವರ ಸಿಂಹಾಸನ ಹಾಲುಮತ ಅಧ್ಯಕ್ಷರಾದ ಶ್ರೀಮಾದಪ್ಪಯ್ಯ ಒಡೆಯರ ಕಡೆಯಿಂದಾ ಯಾವತ್ತು ಭಕ್ತಮಂಡಳಿಗೆ ಈ ನೋಟಿಸದ್ವಾರಾ ತಿಳಿಸುವದೇನೆಂದರೆ ನೀವು ಯಾವತ್ತರೂ ಮೇಲೆ ಕಾಣಿಸಿದ ಸಿಂಹಾಸನಕ್ಕೆ ಶಿಷ್ಯರಾಗಿದ್ದು ಸದಾ ಆಶೀರ್ವಾದ ಹೊಂದುತ್ತ ಬಂದಿದ್ದೀರಿ । ಆದರೆ ನಾನು ಇಷ್ಟು ದಿವಸ ಬಾಲ್ಯಾವಸ್ಥೆಯಲ್ಲಿದ್ದೆನು । ಆ ಕಾಲಕ್ಕೆ ಶಿದ್ದಯ್ಯ ವ॥ ಮದ್ದವೀರಯ್ಯನವರು ನಮ್ಮ ಯಾವತ್ತೂ ಭಕ್ತಾದಿಗಳಿಗೆ ಹೋಗಿ ನಿಷ್ಕಾರಣ ಅಧಿಕಾರದ ದರ್ಪ ತೋರಿಸಿ ಕಾಣಿಕೆ ವಗೈರೆ ವಸೂಲ ಮಾಡುತ್ತ ಬಂದಿರುವರು । ಆದರೆ ಈಗ ನಾವು ವಯಸ್ಸಿಗೆ ಬಂದ ಮೇಲೆ ಯಾವತ್ತು ಅಧಿಕಾರಿಗಳು ಕೈಯಲ್ಲಿ ತೆಗೆದುಕೊಂಡು ಭಕ್ತಾದಿಗಳಿಗೆ ಆಶೀರ್ವಾದ ಮಾಡುತ್ತ ಪ್ರಸಾದ ಜರುಗಿಸಿರುವೆವು । ಸದ್ರಿ ಸಿದ್ದಯ್ಯನವರು ಇದುವರಿಗೂ ನಮ್ಮ ಹೆಸರಿನ ಮೇಲೆ ಎನ್ನಿ ಕಾಣಿಕೆ ವಗೈರೆ ವಸೂಲ ಮಾಡುತ್ತ ಬಂದರು । ಅದು ತಪ್ಪು ಇರುತ್ತದೆ । ಮುಂದೆ ಅವರು ಯಾವ ಗ್ರಾಮಕ್ಕೆ ಬಂದರೂ ನೀವು ನಮ್ಮ ಗುರುಸ್ಥಳಕ್ಕೆ ಯಾವ ತರಹದ ಸಂಬಂಧವಿಟ್ಟಿರು ವದಿಲ್ಲವೆಂದು ನಿರಾಕರಿಸಿ ಅವರಿಗೆ ಯಾವ ತರಹದ ಕಾಣಿಕೆ ವಗೈರೆ ಸಲ್ಲಿಸಕೂಡದು । ಆಕಸ್ಮಾತ ನೀವು ಸಲ್ಲಿಸಿದ್ದರೆ ಸಂಸ್ಥಾನ ಜವಾಬ್ದಾರಿ ಅಲ್ಲಾ । ಮೇಲೆ ಬರೆದ ನೋಟಿಸಿನ ಪ್ರಕಾರ ಪಾಲಿಸುವದಕ್ಕಾಗಿ ಸಿಂಹಾಸನದ ಕಡಿಯಿಂದ ಯಾವತ್ತು ಭಕ್ತ ಮಂಡಳಿಗೆ ಆಗ್ನೆ ಇರುತ್ತದೆ ॥ ಫಕ್ತ॥"

೩. ಭಕ್ತರು ಒಡೆಯರಿಗೆ ಬರೆದ ದಾಖಲೆಪತ್ರಗಳು

ಸಮುದಾಯದ ಭಕ್ತರು ತಮ್ಮ ಮಧ್ಯ ಉದ್ಭವಿಸಿದಂಥ ತಂಟೆ ತಕರಾರುಗಳನ್ನು ಅಥವಾ ಕೌಟುಂಬಿಕ–ಸಾಮಾಜಿಕ–ವಯಕ್ತಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಗುರುಗಳಲ್ಲಿ ಮನವಿ ಮಾಡಿಕೊಂಡು ಅವರ ಸಮ್ಮುಖದಲ್ಲಿ ಬಗೆಹರಿಸಿ ಕೊಳ್ಳುತ್ತಿದ್ದರು. ೨೩–೧೧–೧೯೧೪ರಂದು ಹುನಗುಂದ ಸೀಮೆಯ ಗೋಸಲ ಮಾಫೆ ಬಾನರಾಮ ಸೋಮಪ್ಪ ನಾಯಕದೇಸಾಯಿ ಪರಗಣೆ ಹುನಗುಂದದರ ಜಾಗಾಲ್ವಿಹೊಳ್ಳ ಯಿವರು ಬರೆದುಕೊಟ್ಟ ಕರಾರು ಪತ್ರದ ಸಾರಾಂಶ ಹೀಗಿದೆ.

"ವಿಜಾಪುರ ಜಿಲ್ಹಾ ತಾಲುಕು ಪೈಕಿ ಅರಕೇರಿ ಮಂಕಮಾಪುರದ ತಂಗಡಗಿ ಮಠಕ್ಕೆ ವಡಿಯರಾದ ಶಿದ್ದಪ್ಪಯ್ಯ ತಂದಿ ಮಾದಪ್ಪಯ್ಯ ಯಿವರಿಗೆ ಬರಿಸುವದೇನೆಂದರೆ–ವಳಗಡೆ ಉಜ್ಜನಿ ಸಿಂಹ್ಮಾಸನದಲ್ಲಿ ನೀವು ನಿಮ್ಮ ಪ್ರತಿವಾದಿ ಮಂಕಯ್ಯನು ಸಹ ವುಭಯರು ಸದರಿ ಸಂಸ್ಥಾನದಲ್ಲಿ ನಿಮ್ಮ ನಿಮ್ಮ ನ್ಯಾಯ ವಿಚಾರಾಗಿ ಆದ ಹುಕುಂ ನಮಗೆ ಮತ್ತು ಅಲಮ್ಮಗೀರಬಾದಶಹನ ಸನದು–ವ–ಏನಕೆ ಕಾಗದಪ್ರತಿಗಳು ತೋರಿಸಿದ್ದರಿಂದ ನಾವು ವಡಂಬಟ್ಟು ಯೀ ಹೊತ್ತಿನ ದಿವಸ ಹಾಲುಮಥ ಕುರುಬ ಮುಂತಾದ ಸರ್ವರು ಯಿವರಿಗೆ ನಡಕೊಳ್ಳುವದಕ್ಕೆ ನಮ್ಮ ವಡಂಬಡಿಕೆಯಿರುತ್ತದೆ. ಅದರಂತೆ ನೀವು ತಡಕೊಳ್ಳಲಿಕ್ಕೆ ಜೀಕು–ಜೀರ ನೀವು ನಡಕೊಳ್ಳದಿದ್ದರೆ ಶಿವಾಚಾರ ಕುಲಾಚಾರಕ್ಕೆ ಹೊರ್ತಾಗಬೇಕಾದೀತು. ಹೀಗೆ ತಿಳಿದು ಈಗ ಬಂದ ಗುರುಗಳು ಅಂದರೆ ಶಿದ್ದಪ್ಪಯ್ಯ ಯಿವರಿಗೆ ನಡಕೊಳ್ಳಲಿಕ್ಕೆಬೇಕು. ಯಿವರು ಹುನಗುಂದ ಶೀಮೆ ಕಿರಸೂರು ಕಟ್ಟೆಗೆ ಯಿವರೇ ಬಾಧ್ಯರು ಮತ್ತು ದೀಕ್ಷಾ–ವ–ಕಾಣಿಕಾ ಮುಂತಾದವುಗಳನ್ನು ಮಾಡಲಿಕ್ಕೆ ಯಿವರೆ ಬಾಧ್ಯಸ್ಥರುಯಿರುತ್ತಾರೆ. ನೀವು ಆಯಾ ಸಮಂಧ ಬಾಬು ನಮಗೆ ಮುಟ್ಟಿಸಬೇಕು. ಅವ್ವಳ್ಳಿ–ಕಳ್ಳಿಗುಡ್ಡ ವ. ನಿಂಬಲಗುಂದಿ ವ. ಮುಳ್ಳೂರು ವ. ಹೂವಿನಳ್ಳಿ ವ. ಕ್ಯಾದಿಗ್ಗೇರಿ ವ. ಚೀಲಾಪೂರ ವ. ಕುಣಿಬೆಂಚಿ ಯೀ ಗ್ರಾಮಗಳಲ್ಲಿ ಯಿರುವ ಹಾಲುಮಥದ ಜನರು ಸದರಿ ಮೇಲೆ ನಮೋದಿಶಿದ ಗುರುಗಳಿಗೆ ಯೇಕನಿಷ್ಟೆಯಿಂದ ನಡಕೊಳ್ಳತಕ್ಕದ್ದು ಎಂದು ಯೀ ಹೊತ್ತಿನ ದಿವಸ ಬರಕೊಟ್ಟ ಪತ್ರ ಸಹಿ...".

ಇಂಥ ಅನೇಕ ಸಮಸ್ಯೆಗಳನ್ನು ತಂಟೆ–ತಕರಾರುಗಳನ್ನು ಮಾದಪ್ಪಯ್ಯ ಮತ್ತು ಸಿದ್ದಯ್ಯ ಒಡೆಯರ ಅವರು ಬಗೆಹರಿಸಿದ್ದುಂಟು. ಭಕ್ತರು ತಪ್ಪು ಮಾಡಿದಾಗ ಕ್ಷಮಾಪಣೆ ಕೋರಿ ಬರೆದ ಪತ್ರಗಳೂ ಇಲ್ಲಿವೆ.

೪. ಕುಲಾಚಾರಕ್ಕೆ ಸಂಬಂಧಿಸಿದ ನಿರ್ಣಯದ ದಾಖಲೆಪತ್ರಗಳು

ಸಮಾಜದ ಯಾವುದೇ ವ್ಯಕ್ತಿ ತಪ್ಪು ಮಾಡಿದಾಗ ಆ ವ್ಯಕ್ತಿ ಮತ್ತು ಆತನ ಮನೆತನದ ಎಲ್ಲ ಸದಸ್ಯರನ್ನು ಕುಲದಿಂದ ದೈವದಿಂದ ಹಾಗೂ ಗುರುಸನ್ನಿಧಿಯಿಂದ ಹೊರಗಿಡುವ ಪದ್ಧತಿ ಇದೆ. ಮತ್ತೆ ಕೆಲವು ದಿವಸಗಳ ನಂತರ ಆ ವ್ಯಕ್ತಿಗೆ ಕ್ಷಮಾದಾನ ನೀಡಿ ಒಳಗೆ ಕರೆದುಕೊಳ್ಳುವ ನಿಯಮವು ಬಹುಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಅಂಥ ಸಂದರ್ಭದಲ್ಲಿ ಹೊರಗಿಟ್ಟ ಆ ವ್ಯಕ್ತಿ ದೈವದರಿಗೆ ಕ್ಷಮಾಪಣೆ ಅಥವಾ ಮಾಡಿದ ತಪ್ಪನ್ನು ಮನ್ನಿಸಬೇಕೆಂಬ ಪತ್ರವನ್ನು ನೀಡುತ್ತಾನೆ. ದಾಖಲೆಗಳಲ್ಲಿ ಅಂಥ ಪತ್ರಕ್ಕೆ "ಶರಣಾಗತ ಪತ್ರ" ಎಂದು ಕರೆಯಲಾಗಿದೆ. ಆ ಶರಣಾಗತ ಪತ್ರವನ್ನು ಪರಿಶೀಲಿಸಿದ ದೈವದವರು ಅಂಥ ವ್ಯಕ್ತಿಗಳನ್ನು ಸಮಾಜ

ದೊಳಗೆ ಮತ್ತೆ ಬರಮಾಡಿಕೊಳ್ಳಲು ಒಪ್ಪಿ ಪತ್ರವನ್ನು ಗುರುಸನ್ನಿಧಿಗೆ ಕೊಡುತ್ತಾರೆ. ಆ ಪತ್ರಕ್ಕೆ "ಸಮ್ಮತಿ ಪತ್ರ"ಎಂದು ಕರೆಯಲಾಗಿದೆ. ಆ ಸಮ್ಮತಿ ಪತ್ರದ ಆಧಾರದಿಂದ ಕುಲಗುರುಗಳು ಆ ವ್ಯಕ್ತಿಯನ್ನು ಕುಲದೊಳಗೆ ತೆಗೆದುಕೊಳ್ಳಲು ಅನುಮತಿ ಪತ್ರವನ್ನು ನೀಡುತ್ತಾರೆ. ಅದಕ್ಕೆ "ಶುದ್ಧಿಸಂಸ್ಕಾರ ಪತ್ರ" ಎಂದು ಕರೆಯಲಾಗಿದೆ. ಸಮುದಾಯದಲ್ಲಿ ದೈವಸ್ಥರು ಮತ್ತು ಕುಲಗುರುಗಳು ಸಮುದಾಯದಲ್ಲಿ ಶಿಸ್ತು ಬರಬೇಕೆಂಬ ಉದ್ದೇಶದಿಂದ ಕೆಲವು ನಿಯಮಗಳನ್ನು ಜಾರಿಗೆ ತರಲಾಗಿದೆ. ಇಂಥ ಮಾಹಿತಿಯನ್ನು ನೀಡುವ ದಾಖಲೆಪತ್ರಗಳು ತುರ್ವಿಹಾಳದ ಒಡೆಯರ ಮನೆಯಲ್ಲಿ ಲಭ್ಯವಾಗಿವೆ. ೧೯೪೪ರಲ್ಲಿ ಗಂಜಿಹಾಳ ಗ್ರಾಮದ ಲಕ್ಕಪ್ಪ ವ. ಬಸ್ಸಪ್ಪ ರಾಘಾಪುರ ಅವರು ಯಾವುದೋ ಕಾರಣದಿಂದ ಸಮಾಜ ದಿಂದ ಬಹಿಷ್ಕೃತಗೊಂಡಿರುತ್ತಾರೆ. ಕೆಲವು ದಿವಸಗಳ ನಂತರ ಲಕ್ಕಪ್ಪ ಅವರು–

> **"ತಾವು ಮತ್ತು ನಮ್ಮ ದೈವದವರು ಕೂಡೆ ನಮ್ಮ ಮನೆಯವರನ್ನೆಲ್ಲ ದೀಕ್ಷಾದಿಂದ ಶುದ್ಧಿ ಸಂಸ್ಕಾರ ಕೊಟ್ಟು ಉದ್ಧಾರ ಮಾಡಬೇಕೆಂದು ಬಿದ್ದುಬೇಡಿಕೊಳ್ಳುತ್ತೇವೆ ಮತ್ತು ಮುಂದಾದರೂ ಶ್ರೀಗಳವರ ದೈವದವರ ಅನುಮತಿ ಪ್ರಕಾರ ನಡೆದುಕೊಂಡು ಹೋಗುತ್ತೇವೆ."**

ಎಂದು ಸ್ವಸಂತೋಷದಿಂದ ದೈವದವರಿಗೆ ಮತ್ತು ಶ್ರೀ ಮಾದಪ್ಪಯ್ಯ ಒಡೆಯರ ಅವರಿಗೆ ಶರಣಾಗತ ಪತ್ರವನ್ನು ಕೊಡುತ್ತಾರೆ. ಆ ಪತ್ರವನ್ನು ಪರಾಮರ್ಶಿಸಿದ ದೈವದವರು ಗುರುಸನ್ನಿಧಿಗೆ–

> **"ಈ ದಿವಸ ತಮ್ಮ ಸನ್ನಿಧಿಯಲ್ಲಿ ನಮ್ಮ ಸಮಕ್ಷಮ ಸದರಿ ಘರಾಣೆದವರು(ಲಕ್ಕಪ್ಪ ವ.ಬಸ್ಸಪ್ಪ) ಇವರು ಶರಣಾಗತ ಪತ್ರದಿಂದ ದೈವದ ಸನ್ನಿಧಿಯಲ್ಲಿ ಬಿದ್ದುಬೇಡಿಕೊಂಡಿದ್ದರಿಂದ ಮತ್ತು ತಾವಾದರೂ ನಮ್ಮೆಲ್ಲರ ಕಬೂಲ ಕೇಳಿದ್ದರಿಂದ ನಾವೆಲ್ಲರೂ ನಮ್ಮ ಸ್ವಸಂತೋಷದಿಂದ ಲಕ್ಕಪ್ಪ ವ. ಬಸ್ಸಪ್ಪ ರಾಘಾಪುರ ಇವರ ಮನೆಯವರನ್ನೆಲ್ಲಾ ದೀಕ್ಷಾ ಮಾಡಿಕೊಳ್ಳಲಿಕ್ಕೆ ಅಡ್ಡಿಯಿಲ್ಲೆಂದು ಮತ್ತು ಮುಂದೆ ತಮ್ಮ ಆಜ್ಞೆಯ ಪ್ರಕಾರ (ಲಕ್ಕಪ್ಪ ವ. ಬಸ್ಸಪ್ಪ) ಇವರ ಸಂಗಡ ಬಳಕೆ ಭೋಜನ ವ ಹವ್ಯಕವ್ಯ ಕಾರ್ಯದಲ್ಲಿ ಕೂಡಿಕೊಂಡು ನಡೆಯಲಿಕ್ಕೆ ನಮ್ಮೆಲ್ಲರ ಕಬೂಲ ಮಾಡಿ ಸಮ್ಮತಿ ಪತ್ರ ಬರಕೊಟ್ಟಿರುತ್ತೇವೆ."**

ಈ ಎರಡು ಪತ್ರಗಳನ್ನು ಗಮನಿಸಿದ ಕುಲಗುರುಗಳು ಶುದ್ಧಿಸಂಸ್ಕಾರ ಪತ್ರವನ್ನು ನೀಡುತ್ತಾರೆ. ಆ ಪತ್ರದ ವಿವರಗಳು ಹೀಗಿವೆ.

> **"ಶ್ರೀಮತ್ ಸಂಸ್ಥಾನ ವಿಜಾಪುರ ತಾಲುಕು ಪೈಕಿ ಅರಕೇರಿ ವ. ಮೊಂಕಣಾಪುರದ ಅಮೋಘಶಿದ್ದೇಶ್ವರ ಸಿಂಹಾಸನದ ವ. ತಂಗಡಗಿ ಮಠದ ಹಾಲುಮತಕ್ಕೆ ಅಧ್ಯಕ್ಷರಾದ ಶ್ರೀಮಾದಪ್ಪಯ್ಯಸ್ವಾಮಿ ಮೊಕ್ಕಾಂ ಗಂಜಿಹಾಳ ಇವರ ಸನ್ನಧಿಯಿಂದಾ–ಶುದ್ಧಿಸಂಸ್ಕಾರ ಪತ್ರ ಬೈ॥ ಗಂಜಿಹಾಳ ಹಾಲುಮತ ದೈವದವರಿಗೆ ವ. ಇನ್ನುಳಿದ ಪರಸ್ಥಲದ ಸಮಸ್ತ ಹಾಲುಮತ ದೈವಾಚಾರದವರಿಗೆ ಈ ಶುದ್ಧಿ ಸಂಸ್ಕಾರ ಪತ್ರದಿಂದ ತಿಳಿಸುವದರಲ್ಲಿ ಬರುತ್ತದಲ್ಲಾ. ಗಂಜಿಹಾಳ ಹಾಲುಮತ ದೈವದ ಪೈಕಿ ಅಂದರೆ (ಲಕ್ಕಪ್ಪ ವ.ಬಸ್ಸಪ್ಪ ತಂದಿ ಹನುಮಪ್ಪಾ ರಾಘಾಪೂರ) ಇವರನ್ನು ಸ್ಥಾನಿಕ ದೈವದವರು ಮತ್ತು (ಶ್ರೀಗಳವರು) ಕೂಡೆ ಏನಿಕೆ ಸಂಸರ್ಗ ದೋಷದಿಂದ ಅವರನ್ನು ಬಹುದಿವಸಗಳ ಲಾಗಾಯತ ಬಹಿಷ್ಕೃತರನ್ನಾಗಿ ಮಾಡಿದ್ದು ಈಗ ತಾರೀಖು ೨೨–೬–೧೯೪೪ಲ ದಿವಸ ಸದರಿ ಲಕ್ಕಪ್ಪ ವ.ಬಸ್ಸಪ್ಪ ತಂದಿ ಹನುಮಪ್ಪ ರಾಘಾಪೂರ ಇವರು ಸ್ಥಾನಿಕ ದೈವ ಮತ್ತು ಶ್ರೀಗಳವರ ಸನ್ನಿಧಿಯಲ್ಲಿ ಶರಣಾಗತ ಪತ್ರದಿಂದ ನಮ್ಮನ್ನು ಶುದ್ಧಿಸಂಸ್ಕಾರ ಕೊಟ್ಟು ಉದ್ಧಾರ ಮಾಡಬೇಕೆಂದು ಬಿದ್ದು ಬೇಡಿಕೊಂಡಿದ್ದಕ್ಕೆ ಸ್ಥಾನಕ ದೈವದವರು ಸದರಿಯವರನ್ನು ಉದ್ಧಾರ ಮಾಡಲಿಕ್ಕೆ ಎಲ್ಲರೂ ಸಮ್ಮತಿ ಕೊಟ್ಟದ್ದರ ಮೇಲಿಂದ ಸದರಿಯವರನ್ನು ಈ ದಿವಸ ಅಂದರೆ ತಾರೀಖು ೨೮–೬–೧೯೪೪ಲ ಇಶ್ವಿ ದಿವಸ ಸದರಿಯವರ ಘರಾಣೆದಲ್ಲಿ ಸ್ಥಾನಿಕ ದೈವದವರನ್ನು ಕೂಡಿಕೊಂಡು ಪಂಚಗವ್ಯ ವಿಧಿಪ್ರಕಾರ ಶುದ್ಧಿ ಸಂಸ್ಕಾರ ಕೊಟ್ಟು ಉದ್ಧಾರ ಮಾಡಿರುತ್ತದೆ. ಕಾರಣ ಇನ್ನು ಮೇಲೆ ಸದರಿಯವರ ಸಂಗಡ ಸಮಾಜದಲ್ಲಿ ಕೂಡಿಕೊಂಡು ಬಳಕೆ ಭೋಜನ ಕಾರ್ಯಗಳಲ್ಲಿ ಕೂಡಿಕೊಂಡು ಹೋಗಬೇಕು. ಜೇರ ತಪ್ಪಿದಲ್ಲಿ ಸದರಿ (ಲಕ್ಕಪ್ಪ ವ.ಬಸ್ಸಪ್ಪ ರಾಘಾಪೂರ)ಇವರಿಗೆ ಆದ ಪ್ರಾಯಶ್ಚಿತ ನಿಮಗೆ ಮಾಡುವದರಲ್ಲಿ ಬರುವದೆಂದು ಸನ್ನಧಿಯಿಂದಾ ತಿಳಿಸಿದ ಶುದ್ಧಿಸಂಸ್ಕಾರ ಪತ್ರ ಸಹಿ॥**

ತಾರೀಖು: ೨೯–೬–೧೯೪೪ಲ ಇಶ್ವಿ

ದ। ಶ್ರೀ ಮಾದಪ್ಪಯ್ಯಸ್ವಾಮಿ ಒಡೆಯರು

ಶ್ರೀಮಾದಪ್ಪಯ್ಯಸ್ವಾಮಿ ಒಡೆಯರು ಮೊಕ್ಕಾಮು ಗಂಜಿಹಾಳ.

ಇದರ ಪ್ರತಿ ಒಂದು ಬರಿಸಿ ಬಸ್ಸಪ್ಪ ರಾಘಾಪುರ ಇವರಿಗೆ ಕೊಟ್ಟಿರುತ್ತದೆ. ತಾರೀಖು: ೧–೭–೧೯೪೪ಲ ಇಶ್ವಿ

ಇನ್ನು ಕೆಲವು ಸಂದರ್ಭಗಳಲ್ಲಿ ದೈವದವರು ಕುಲ ಗುರುಗಳಿಂದಲೂ ಬಗೆಹರಿಯಲಾದ ಸಮಸ್ಯೆಗಳನ್ನು ಬೇರೆ ಸಮುದಾಯದ ಗುರುಗಳಿಂದ ಬಗೆಹರಿಸಿಕೊಂಡಿರುವುದಕ್ಕೆ ಕೆಲವು ದಾಖಲೆಗಳು ಸಾಕ್ಷಿಯಾಗಿದೆ. ಅಂಥ ದಾಖಲೆಗಳು ತುರ್ವಿಹಾಳದಲ್ಲಿ ದೊರೆತಿವೆ. ಹುನಗುಂದ ತಾಲೂಕಿನ ಪ್ರತಿಯೊಂದು ಗ್ರಾಮದಲ್ಲಿರುವ ಹಾಲುಮತ ಸಮುದಾಯದ ದೈವದವರಿಗೆ ಸರೂರ ಮಂಕಯ್ಯ ಮತ್ತು ತಂಗಡಗಿ ಮಾದಯ್ಯ ಇವರಿಬ್ಬರಲ್ಲಿ ಕುಲಗುರುಗಳು ಯಾರು ಎಂಬ ಬಗ್ಗೆ ಉಜ್ಜನಿಪೀಠದ ಸ್ವಾಮಿಗಳ ಸಮ್ಮುಖದಲ್ಲಿ ನ್ಯಾಯವನ್ನು ನಿರ್ಣಯಿಸಲಾಗಿದೆ. ಆ ನ್ಯಾಯನಿರ್ಣಯ ಮಾಡಿದ ವಿವರಗಳು ಹೀಗಿವೆ–

"ಶ್ರೀಮತ್ಪರಶಿವ ದಕ್ಷಿಣಲನೋದ್ಭವ ಜಗದ್ಗುರು ದಾರುಕಾಚಾರ್ಯ ಪರಂಪರಾಗತ ಶ್ರೀಮತ್ರಮಪಾವನ ಭೂಸುರಕ್ಷೇತ್ರ ಶ್ರೀಮದುಜ್ಜನೀಶ ಧರ್ಮ ಸಾಂಹ್ಮಾಸಸ್ಯ ಸರ್ವಸ್ವತಂತ್ರಾವತಾರ ಶಿಖಾಮುದ್ರಾಧೃತಾರಾದ ಮೌಕ್ತಿಕಾಸನವರ್ಷ ಲಾಂಛನ ಪರಿಶೋಭಿತ ಶಿವಚರ ಪಟ್ಟಾಧ್ಯಕ್ಷ ಮರುಳಶಿದ್ಧರಾಜದೇಶಿಕೇಂದ್ರ ಮಹಾಸ್ವಾಮಿ ಸನ್ನಿಧಿ ಅಧಿಕಾರ ಸ್ಥಾನದಿಂದಾ––

ಕೇವಲಾಸ್ಮದೀಯ ಕಾರುಣ್ಯಾಮೃತ ಸರಸೀಬಾಲ ಮರುಳೋಪಮಾನರಾದ ಹುನಗುಂದ ತಾಲೂಕು ಗೂಡೂರು ಆಜುಬಾಜು ಗ್ರಾಮಗಳ ಪಟ್ಟಚರಂತರು ಮಠದಮುಹತ್ತು ದೇಸಾಯಿ ದೇಶಪಾಂಡ್ಯೆ ನಾಡಗೌಡರು ಶಟ್ರುಗೌಬಾ ಯುಜಮಾನರು ಯಿನ್ನೂರು ಮುಂತಾದ ಸಮಸ್ತ ವೀರಶೈವ ಭಕ್ತಾವಳಿಗಳಿಗೆ ಮತ್ತು ಹಾಲುಮಥ ದೈವದವರಿಗೆ ಲಿಖಿಸಿದ ಅಮೋಘ ಆಶೀರ್ವಾಚನ ನಿರೂಪಸ್ತದು ಪರಿವಯಂ ಶ್ರೀ ಶಿವಯೋಗಾನಂದ ತಪಸಾಮ್ರಾಜ್ಯ ವೈಭವೈಶ್ವಾಸಾವುಃಯುಷೋದಾ ಶುಭಾಂಗ ಯೋಗಾಕ್ಷೇಮಾತಿ ಶಯನಾಂ ಪದೇಪದೇ ಬಿನ್ನಹ ಪತ್ರಿಕಾಪ್ರೆಪಣೀಯತ್ರತಃ––

ಯೀಗ ನಿಮ್ಮಗೆ ಅಪ್ಪಣೆ ಕೊಡಿಸುವದೇನಂದರೆ ಸದರೀ ಹಾಲುಮಥ ದೈವಕ್ಕೆ ಸರೂರು ಮಂಕಯ್ಯ–ತಂಗಡಗಿ ಮಾದಯ್ಯ–ಯೀವುಭಯರು ಹುನಗುಂದ ತಾಲೂಕು ಪ್ರತಿಗ್ರಾಮಗಳಲ್ಲಿರುವ ಹಾಲುಮಥದ ದೈವದವರಿಗೆ ಗುರುಗಳೆಂಬೊ ಹಂಶದಲ್ಲಿ ಉಭಯರಿಗೆ ನ್ಯಾಯದಿಂದ ಸದರೀ ದೈವಕ್ಕೆ ತಸ್ತಿ ಕೊಡುವ ಅಂಶವನ್ನೂ ಸನ್ನಿಧಿಗೆ ಶೃತವಾಗಿ ಸದರೀ ಮಂಕಯ್ಯನಿಗೆ ಮಾದಯ್ಯನಿಗೆ ಗೂಡೂರು ಮೊಕ್ಕಾಮಿಗೆ ಹಾಜರಾಗಿ ನಿಮ್ಮ ನಿಮ್ಮ ಕಾಗದ ಪತ್ರಗಳು ಹಾಜರಪಡಿಸಿ ನ್ಯಾಯ ಹೊಂದಿದ್ದಕ್ಕೆ ಯುರಡನೇ ಹುಕುಂ ಪಡದೇ ಹೋಗುವಂತೆ ಸನ್ನಿಧಿಯಿಂದಾ ಹುಕೂಂ ಅಪ್ಪಣೆಯಾದಕ್ಕೆ ಸದರೀ ಮುದ್ದತ್ತಿಗೆ ಸರಿಯಾಗಿ ಓಮಾದಯ್ಯನು ಮಾತ್ರ ಹಾಜರಾಗಿರುತ್ತಾನೆ. ಮಂಕಯ್ಯ ಯೆಂಬುವನು ತಾನು ಗ್ರಾಮದಲ್ಲಿ ಯಿದ್ದು ಗೈರಾಜರೆನಿಶಿ ಕೊಂಡು ಮುದ್ದತ್ತು ತಪ್ಪಿಶಿರುತ್ತಾನೆ. ಆದ ಕಾರಣಾ ಸದರೀ ಮಂಕಯ್ಯಯೆಂಬುವನು ಸನ್ನಿಧಿರೂಬರೂಬ ಹಾಜರಾಗಿ ಮುದ್ದತ್ತು ತಪ್ಪಿಶಿದ್ದಕ್ಕೆ ತಕ್ಕ ಸಂಜಾಯಿಷಿ ಕೊಟ್ಟು ಯೆರಡನೇ ಹುಕೂಂ ತಂದ ನಿಮ್ಮಲ್ಲಿ ಭಯಾನ ಪಡಿಸೋವರಿಗೂ ಸದರ ಮಂಕಯ್ಯನಿಗೆ ಯಾವದೊಂದು ಮರ್ಯಾದೆ ಕೊಡದೆ ಸದರ ಮಾದಯ್ಯನಿಗೆ ಗುರುಮನೆ ಹುಕೂಂ ಪ್ರಕಾರ ಮಾನಸನ್ಮಾನ ವಗೈರೆ ಕೊಟ್ಟು ಯೇನೊಂದು ಅಭ್ಯಂತರವಿಲ್ಲದೆ ಆಚರಿಸಿಕೊಂಡು ಹೋಗ ತಕ್ಕದ್ದು. ಏತದ್ವಿಷಯ ಗುರುಸಂಸ್ಥಾನವಾಂಛಾಸುಶೀಲರಾದ ಗುರುಪುತ್ರರಿಗೆ ಬಾಹುಲ್ಯವಾಗಿ ಲಿಖಿಸತಕ್ಕನಿರುತ್ತೆ.


ಮೊಕ್ಕಾಮು ಗೂಡೂರು ತಾಲೂಕು ಹುನಗುಂದ

ಮಿತಿ ಕೀಲಕನಾಮ ಸಂ॥ರದ ಬಾದ್ರಪದ ಶು॥೪॥.

ತಾ॥ ೩೧–೮–೧೭೦೮ನೇ ಯಿಸ್ವಿ"

೫. ಸುಡುಗಾಡ ಸಿದ್ಧನ ಕಥೆಯನ್ನು ನಿರೂಪಿಸುವ ದಾಖಲೆಪತ್ರ

ಅಲೆಮಾರಿ ಜನಸಮುದಾಯಗಳಲ್ಲಿ ಒಂದಾದ ಸುಡುಗಾಡ ಸಿದ್ಧರ ಕುರಿತು ಒಂದು ದಾಖಲೆ ಲಭ್ಯವಾಗಿದೆ. ಕುರುಬ ಸಮಾಜದ ಸಿದ್ಧ ಎಂಬ ಹೆಸರಿನ ವ್ಯಕ್ತಿಯು ಬಸವಣ್ಣನ ಸಮ್ಮುಖದಲ್ಲಿ ಸುಡುಗಾಡ ಸಿದ್ಧನಾಗಿ ಪ್ರಸಿದ್ಧನಾದದ್ದನ್ನು ಪವಾಡ ಕಥನದ ಮುಖಾಂತರ ದಾಖಲೆಯೊಂದು ನಿರೂಪಿಸುತ್ತದೆ. ಆರಂಭದಲ್ಲಿ ಶ್ರೀಗುರುಬಸವ ಲಿಂಗಾಯನಮಃ ಎಂದು ಆರಂಭವಾಗುತ್ತದೆ. ನಂತರದಲ್ಲಿ "ಕಲ್ಯಾಣಪುರದೊಳಗೆ ಶುಡುಗಾಡ ಶಿದ್ಧನು ನಿರ್ಮಾಣ ಆದದ್ದು ಬರಿಯುವದಕ್ಕೆ ಶುಭಮಸ್ತು" ಎಂದಿದೆ. ಬಿಜ್ಜಳನು ಬಸವಣ್ಣನನ್ನು ಪರೀಕ್ಷೆ ಮಾಡಬೇಕೆಂದು ಯೋಚಿಸಿದನು. ಒಂದು ದಿನ ಬಿಜ್ಜಳನು ಸಿದ್ಧನ ಹೆಂಡತಿಯನ್ನು ಕರೆಯಿಸಿ "ಗಂಡನು ಸ್ವರ್ಗವಾಶಿಯಾಗಿಯಿದಾನೆ" ಎಂದು ಬಸವಣ್ಣನಿಗೆ ಹೇಳಬೇಕೆಂದು ತಾಕೀತು ಮಾಡಿದನು. ಅದರಂತೆ ಅವಳು "ಮುಂದೆ ನನಗೇನು ಗತಿ ನಂನ್ನ ಉದ್ದಾರ ಮಾಡಬೇಕು" ಎಂದು ಕಪಟತನದಿಂದ ಬಸವಣ್ಣನಿಗೆ ಹೇಳಿದಳು. ಬಸವಣ್ಣನು ಆಕೆಯ ಕಪಟತನವನ್ನು ಅರಿತು "ನಿನ್ನ ಗಂಡಾ ಸತ್ತುಯಿದ್ದಾನೆ ರುದ್ರಭೂಮಿಗೆವೈದು ಸಮಾಧಿ ತೈಗೆದು ಮಣ್ಣ ತೋಡು" ಎಂದು ಹೇಳಿದನು. ಈ ವಾಕ್ಯವನ್ನು ಕೇಳಿದ ಆಕೆ ಮನೆಗೆ



ತಾಮ್ರಪತ್ರ

ಬಂದು ಗಂಡನನ್ನು ಮಾತನಾಡಿಸಲು, ಆತ ಸತ್ತು ಹೋಗಿದ್ದನು. ಬಸವಣ್ಣನು ನುಡಿದ ಮಾತು ಸತ್ಯವಿದೆ ಅಂದುಕೊಂಡು ರೋಧಿಸುತ್ತ ಬಿಜ್ಜಳನಲ್ಲಿಗೆ ಬಂದು"ಯಲೋ ರಾಜನೇ, ಮಕ್ಕಳು ಮರಿಗೆ ಯೇನು ಗತಿ ಮಾಡಲಿ. ತಾವು ಸತ್ಪುರುಷರ ಸಂಗಡ ಜಿದ್ದು ಮಾಡಿದ್ದೀರಿ. ಅದೇ ಕರೇವು ಆಯಿತ್ತು" ಎನ್ನಲು ಬಿಜ್ಜಳರಾಯನು ನಾಲ್ಕು ಸಾವಿರ ವರಹಗಳ ಕೊಟ್ಟು ಕಳಿಸಿದನು. ಕುರುಬರ ಮಂಡಳಿ ಕೂಡಿ ಶವಕ್ಕೆ ಶೃಂಗಾರ ಮಾಡಿ ಸ್ಮಶಾನಕ್ಕೆ ಹೋಗಿ ಸಮಾಧಿಯನ್ನು ತೋಡುವ ಸಂದರ್ಭದಲ್ಲಿ ಬಸವಣ್ಣನು ಮನೆಯೊಳಗಿದ್ದನು. ಆತನ ಬಳಿಗೆ ಮಂಡಳಿಯು ಬಂದು ದೀರ್ಘದಂಡ ನಮಸ್ಕಾರವನ್ನು ಮಾಡಿ "ತಾವು ಮೂರು ಲೋಕಕ್ಕೆ ಕರ್ತೃಯಿದ್ದೀರಿ. ಯಿಂದು ವಂದು ಅಪರಾಧವನ್ನು ಮನಶಿಗೆ ತಾರದೆ ಕುರುಬರ ಶಿದ್ದನು ಸತ್ತದ್ದು ಲೋಕಗೆ ಸಂಜೀವನವ ಮಾಡಿ ತೀರ್ಥ ತೆಗೆದುಕೊಳ್ಳಬೇಕು" ಎಂದು ಬೇಡಿಕೊಂಡರು. ಬಸವಣ್ಣನು ಮಸ್ತಕದ ಮೇಲೆ ಹಸ್ತವನ್ನಿಡಲು ಶಿದ್ಧನು ಎದ್ದು ನಿಂತನು. ಆಗ ಸರ್ವರು "ಹೇ ಸ್ವಾಮಿ ನಿಮ್ಮ ಕೀರ್ತಿದೂರ ಬೇಳೋಣವಾಯಿತ್ತು" ಎನ್ನುತ್ತ ದೀರ್ಘದಂಡ ನಮಸ್ಕಾರವ ಮಾಡಿದರು. ಸಮಾಧಿಗೆ ಕುರಿಹಾರವನ್ನು ಕೊಟ್ಟು ಸಮಾಧಿ ಮುಚ್ಚಿಸಿದರು. ಸ್ಮಶಾನದಲ್ಲಿ ಜೀವಂತವಾದವರು ಮರಳಿ ಮನೆಗೆ ಬರುವಂತಿಲ್ಲ. ಹೀಗಾಗಿ ಅವರಿಗೆ ಅಲ್ಲಿಯೇ ಒಂದು ಮಠ ಕಟ್ಟಿಕೊಂಡು ಪೂಜೆಪುನಸ್ಕಾರಗಳನ್ನು ಮಾಡುತ್ತ ಇರಬೇಕು. ಹಾಲುಮತದ ಕುಲ ಕುರುಬರಟ್ಟಿಗೆ ಒಂದು ಕೋಡಿನ ಮರಿ, ಗೊಲ್ಲರಟ್ಟಿಗೆ ಒಂದು ಕೋಡಿನ ಮರಿಯನ್ನು ಜೀವನಾಧಾರಕ್ಕಾಗಿ ಸಿದ್ದನಿಗೆ ಕೊಡಬೇಕು. ಆ ಸಿದ್ಧನಿಗೆ ಸುಡುಗಾಡ ಸಿದ್ಧ ಎಂದು ಹೆಸರಿಟ್ಟು ಬಸವಣ್ಣನು ಕಲ್ಯಾಣಕ್ಕೆ ಹೋದನು.

ಬಳ್ಳಾರಿ ಜಿಲ್ಲಾ ಕೂಡ್ಲಗಿ ತಾ॥ ಮೌಜೆ ದಸುಮಾಪುರದೊಳಗಿರುವ ಸುಡುಗಾಡ ಶಿದ್ಧರ ವೀರಭದ್ರಶಿದ್ಧ ಶಿದ್ಧರಾಮ ಶಿದ್ಧ ಇವರು ಹರಪನಹಳ್ಳಿ ಹಡಗಲಿ ತಾಲೂಕುಗಳಲ್ಲಿ ಪ್ರಯಾಣ ಮಾಡುತ್ತಿದ್ದರು. ಆಗ ಅಲ್ಲಿನ ದೇಶಾಯಿ ಅಮಲ್ದಾರ ಶಿರಸ್ತೆದಾರು ಕುಲಕರಣಿ ಮುಂತಾದ ಸಮಸ್ತ ದೈವಾಚಾರದವರು ಮನಿವಂದಕ್ಕೆ ಒಂದು ದುಡ್ಡಿನ ಪ್ರಕಾರ ಕೊಡುತ್ತ ಹೋಗಬೇಕು. ಈ ಪ್ರಕಾರ ನಯಮಗಳನ್ನು ರೂಪಿಸಲಾಗಿದೆ. "ಸಂ ೯೦೦ ಫಸಲಿ ಶ್ರೀಮನೃಪ ಶ್ಯಾಲಿವಾಹನ ಶಖ ವರುಷಂಗಳು ಹದಿನಾರುನೂರಾ ಹನ್ನೆರಡು" ಅಂದರೆ ಕ್ರಿ.ಶ. ೧೬೯೦ರಲ್ಲಿ ಈ ಪತ್ರವು ಸಿದ್ಧವಾಗಿದೆ.

ಈ ವರೆಗಿನ ಶಾಸನ-ನಿರೂಪ-ಸನದುರೂಪದ ದಾಖಲೆಪತ್ರಗಳ ಪರಾಮರ್ಶನದಿಂದ ಕಂಡು ಬರುವ ಸಂಗತಿಗಳನ್ನು ಕೆಳಗಿನಂತೆ ಕ್ರೋಢೀಕರಿಸಿ ಹೇಳಬಹುದು.

೧. ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ತುರವಿಹಾಳ ಹಾಗೂ ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ತಂಗಡಗಿಯಲ್ಲಿ ಅಮೋಘಸಿದ್ಧ ಪರಂಪರೆಯ ಮಠಗಳಿದ್ದವು. ಈ ಎರಡೂ ಮಠಗಳಿಗೆ ಶ್ರೀ ಮಾದಪ್ಪಯ್ಯ ಒಡೆಯರ ಅವರು ಗುರುಗಳಾಗಿದ್ದುದು ಇಲ್ಲಿನ ದಾಖಲೆಗಳು ಸ್ಪಷ್ಟಪಡಿಸುತ್ತವೆ.

೨. ಅರಕೇರಿ ಅಮೋಘಸಿದ್ಧ ಸಂಪ್ರದಾಯದ ಒಡೆಯರಿಗೂ ಸರೂರ ರೇವಣಸಿದ್ಧ ಸಂಪ್ರದಾಯದ ಒಡೆಯರಿಗೂ ಆಗಾಗ ವಾದವಿವಾದಗಳು ನಡೆಯುತ್ತಿದ್ದವು. ಆ ವಿವಾದಗಳನ್ನು ಗುರುಹಿರಿಯರ ಸಮ್ಮುಖದಲ್ಲಿ ಬಗೆಹರಿಸಿಕೊಳ್ಳುತ್ತಿದ್ದರೆಂಬುದಕ್ಕೆ ಅನೇಕ ದಾಖಲೆ ಪತ್ರಗಳು ಸಾಕ್ಷಿಯಾಗಿವೆ.

೩. ಬಿಜಾಪುರ ಮತ್ತು ಬಾಗಲಕೋಟ ಜಿಲ್ಲೆಯ ಅನೇಕ ಗ್ರಾಮಗಳ ಕುರುಬ ಮನೆತನಗಳ ಕುರಿತು ಅನೇಕ ಮಾಹಿತಿಗಳನ್ನು ಈ ದಾಖಲೆಗಳು ಒದಗಿಸುತ್ತವೆ.

೪. ಮಾದಪ್ಪಯ್ಯ ಒಡೆಯರ ಹಾಗೂ ಸಿದ್ದಯ್ಯ ಒಡೆಯರ ಅವರು ಹಳ್ಳಿ-ಹಳ್ಳಿಗಳನ್ನು ಸುತ್ತಾಡಿ ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಕುರುಬ ಸಮುದಾಯವನ್ನು ಜಾಗೃತಗೊಳಿಸುವಲ್ಲಿ ಹಾಗೂ ಅಭಿವೃದ್ಧಿ ಮಾಡುವಲ್ಲಿ

ಸಾಕಷ್ಟು ಪರಿಶ್ರಮವಹಿಸಿದ್ದರೆಂಬುದು ಲಭ್ಯವಾದ ದಾಖಲೆಗಳು ತಿಳಿಸುತ್ತವೆ.

೫. ಮಾದಪ್ಪಯ್ಯನವರು ಭಕ್ತರು ಕಾಣಿಕೆರೂಪದಲ್ಲಿ ಕೊಡುತ್ತಿದ್ದ ಹಣ ದವಸಧಾನ್ಯ ವಸ್ತ್ರ ಇತ್ಯಾದಿಗಳ ಮಾಹಿತಿಯನ್ನು ರಜಿಸ್ಟರ್ ಬುಕ್‌ನಲ್ಲಿ ದಾಖಲಿಸುತ್ತಿದ್ದರು. ಗ್ರಾಮದ–ತಾಲೂಕು–ಜಿಲ್ಲೆಯ ಹೆಸರು, ಗ್ರಾಮಕ್ಕೆ ಆಗಮಿಸಿದ ದಿನಾಂಕ, ನಿರ್ಗಮಿಸಿದ ದಿನಾಂಕ, ಶಿಷ್ಯರ ಪೂರ್ಣಹೆಸರು, ಶಿಷ್ಯರ ಗೋತ್ರ–ಮನೆದೇವರು, ಹಿಂದಿನ ರಜಿಸ್ಟರ್ ನಂಬರು, ಪೂಜಾಕಾಣಿಕೆ ರಕಮು, ಕಾಣಿಕೆ ರಕಮು, ಫಡಿಕಾಣಿಕೆ, ಅಂತೂ ಒಟ್ಟು ರಕಮು, ಕಾಣಿಕೆ ಕೊಟ್ಟವರ ಹಸ್ತೆ(ಸಹಿ), ಕಾಣಿಕೆ ಕೊಟ್ಟ ತಾರೀಖು, ಶರಾ ಹೀಗೆ ಹನ್ನೊಂದು ಕಾಲಂಗಳಲ್ಲಿ ಸಮಗ್ರ ಮಾಹಿತಿಯನ್ನು ರಜಿಸ್ಟರ್(ಖಾತೆಕೀರ್ದಿ) ಪುಸ್ತಕದಲ್ಲಿ ದಾಖಲಿಸಿರುವುದು ಮಾದಪ್ಪಯ್ಯನವರ ಪ್ರಾಮಾಣಿಕತೆಗೆ ಮತ್ತು ಲೆಕ್ಕಪತ್ರಗಳ ಪಾರದರ್ಶಕತೆಗೆ ನಿದರ್ಶನವಾಗಿದೆ.

೬. ಕುಲಬಾಂಧವರ ನಡುವೆ ತಂಟೆ–ತಕರಾರುಗಳು ಬಂದರೆ ದೈವದವರು ಮತ್ತು ಒಡೆಯರ ಸಮ್ಮುಖದಲ್ಲಿ ಬಗೆಹರಿಸಿಕೊಳ್ಳುತ್ತಿದ್ದರು. ತಪ್ಪು ಮಾಡಿದವರಿಗೆ ಶಿಕ್ಷೆಯನ್ನು ನೀಡುತ್ತಿದ್ದರು. ಆ ಶಿಕ್ಷೆಯು ಕುಲಬಾಂಧವರಿಂದ ಬಹಿಷ್ಕಾರ, ದಂಡವನ್ನು ಕಟ್ಟುವುದು ಇತ್ಯಾದಿ ರೂಪದಲ್ಲಿರುತ್ತಿತ್ತು. ಮಾಡಿದ ತಪ್ಪನ್ನು ಒಪ್ಪಿಕೊಂಡು ಕ್ಷಮೆಯಾಚಿಸಿದರೆ ಅಂಥವರನ್ನು ಮತ್ತೆ ಸಮುದಾಯದೊಳಗೆ ಸೇರಿಸಿಕೊಳ್ಳುವ ಪದ್ಧತಿಯಿತ್ತು. ಆ ಪದ್ಧತಿ ಮೂರು ಹಂತಗಳಲ್ಲಿ ನಡೆಯುತ್ತಿತ್ತೆಂಬುದು ಇಲ್ಲಿನ ದಾಖಲೆಗಳು ತಿಳಿಸುತ್ತವೆ. ತಪ್ಪು ಮಾಡಿದ ವ್ಯಕ್ತಿ ಶರಣಾಗತ ಪತ್ರವನ್ನು ದೈವದವರಿಗೆ ನೀಡುವುದು, ಆ ಪತ್ರವನ್ನು ಪರಿಶೀಲಿಸಿ ಆ ವ್ಯಕ್ತಿಗೆ ಕ್ಷಮಾಪಣೆ ನೀಡ ಬೇಕೆಂಬ ಸಮ್ಮತಿ ಪತ್ರವನ್ನು ಕೊಡುತ್ತಾರೆ. ಆ ಶರಣಾಗತ ಪತ್ರ ಹಾಗೂ ಸಮ್ಮತಿ ಪತ್ರವನ್ನು ಪರಿಶೀಲಿಸಿ ಮಾದಪ್ಪಯ್ಯ ಒಡೆಯರು ಕ್ಷಮಾಪಣೆ ಮಾಡಿ ಶುದ್ಧಿ ಸಂಸ್ಕಾರ ಪತ್ರವನ್ನು ನೀಡಿದ್ದನ್ನು ಇಲ್ಲಿನ ಮೂರು ದಾಖಲೆ ಪತ್ರಗಳು ತಿಳಿಸುತ್ತವೆ.

೭. ಎಲ್ಲ ದಾಖಲೆಗಳನ್ನು ಸಮಗ್ರವಾಗಿ ಪರಿಶೀಲನೆಗೊಳಪಡಿಸಿದಾಗ ಇನ್ನೂ ಅನೇಕ ವಿಷಯಗಳು ತಿಳಿದು ಬರುತ್ತವೆ. ಈ ನಿಟ್ಟಿನಲ್ಲಿ ಈ ಸಂಪ್ರಬಂಧ ಮೊದಲ ಪ್ರಯತ್ನವಾಗಿದೆ.

** ಮಾದಪ್ಪಯ್ಯನವರ ವಂಶಸ್ಥರೂ, ಸರಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಚಿದಾನಂದಯ್ಯ ಗುರುವಿನ ಅವರ ಸೂಚನೆಯ ಮೇರೆಗೆ ನಾನು ೨೦೧೦ ಡಿಸೆಂಬರ್ ತಿಂಗಳಲ್ಲಿ ತುರವಿಹಾಳಕ್ಕೆ ಭೇಟಿ ಕೊಟ್ಟೆನು. ಆ ಸಂದರ್ಭದಲ್ಲಿ ಚಿದಾನಂದಯ್ಯ ಅವರು ತಮ್ಮ ವಂಶಸ್ಥರ ಬಗೆಗೆ, ತಮ್ಮ ಮನೆತನಗಳಲ್ಲಿ ಕಾಪಾಡಿಕೊಂಡು ಬಂದಿದ್ದ ಅನೇಕ ದಾಖಲೆ ಪತ್ರಗಳನ್ನು ತೋರಿಸಿ ಸಾಕಷ್ಟು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ನನ್ನೊಂದಿಗೆ ತುರವಿಹಾಳಕ್ಕೆ ಬಂದು ಸಹಕರಿಸದವರು, ಗಂಗಾವತಿಯ ಸರಕಾರಿ ಪದವಿ ಕಾಲೇಜಿನ ಕನ್ನಡ ಅಧ್ಯಾಪಕ ಡಾ.ಜಾಜಿ ದೇವೇಂದ್ರಪ್ಪ ಮತ್ತು ನನ್ನ ಸಂಶೋಧನ ವಿದ್ಯಾರ್ಥಿ ಮಿತ್ರ ಎನ್. ವಿರೂಪಾಕ್ಷಿ. ಇವರೆಲ್ಲರ ನೆರವನ್ನು ನಾನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

೬೮

ಕುರುಬರ ಕೈಪಿಡಿ: ಒಂದು ಅವಲೋಕನ

ಡಾ. ಅನ್ನಪೂರ್ಣ ಗೋಸ್ವಾಳ್*

ಪ್ರಸ್ತುತ ಸಂದರ್ಭದಲ್ಲಿ ಪ್ರಾದೇಶಿಕ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕಗಳಂಥ ಅನ್ಯಜ್ಞಾನ ಶಿಸ್ತುಗಳ ಅಧ್ಯಯನಗಳು ಪ್ರಾಮುಖ್ಯತೆ ಪಡೆಯುತ್ತಿವೆ. ಈ ನಿಟ್ಟಿನಲ್ಲಿ ಚಾರಿತ್ರಿಕ ಪೌರಾಣಿಕ ಆಕರಗಳು ವಿಶೇಷ ಪಾತ್ರ ವಹಿಸುತ್ತವೆ.

'ಕುರುಬರ ಕೈಪಿಡಿ' ಕೃತಿಯು ಸ್ವಾತಂತ್ರ್ಯ ಪೂರ್ವ (೧೯೧೧) ಬಳಕೆಯಲ್ಲಿದ್ದ ಭಾಷೆ-ಶೈಲಿ, ಆರ್ಥಿಕ-ಧಾರ್ಮಿಕ-ಸಾಮಾಜಿಕ ಸ್ಥಿತ್ಯಂತರಗಳು, ಸ್ವಮತನಿಷ್ಠೆಯಲ್ಲಿ ಪ್ರಕಟಗೊಂಡ ಪತ್ರಿಕೆಗಳು ಮೊದಲಾದವನ್ನು ತಿಳಿಸುವ ವಿಶೇಷ ದಾಖಲೆಯೆನಿಸುತ್ತದೆ. ಮುಖ್ಯವಾಗಿ ಕ್ರಿ.ಶ. ೧೯೧೧ರಲ್ಲಿ ಎರಡು ಜಾತಿಗಳ ನಡುವೆ ೩ ವರ್ಷ ಜಗಳದ ವಾದ-ಪ್ರತಿವಾದಗಳನ್ನು ಮತ್ತು ಕ್ರಿ.ಶ. ೧೯೧೪ರಲ್ಲಿ ಕೋರ್ಟು ನೀಡಿದ ತೀರ್ಪನ್ನು ಎಂ.ಎನ್.ಲಿಂಗಪ್ಪ ಸಂಗ್ರಹಿಸಿ ಕ್ರಿ.ಶ. ೧೯೧೭ರಲ್ಲಿ ಈ ಕೃತಿ ಪ್ರಕಟಿಸಿದರು.

೧. ಕೃತಿ ಸ್ವರೂಪ

ಕೃತಿಯು ೪೦ ಪುಟಗಳನ್ನು ಹೊಂದಿದೆ. ಆದಿ-ಅಂತ್ಯದಲ್ಲಿ ವಿಜ್ಞಾಪನೆ, ಒಕ್ಕಲಿಗರ ಪತ್ರಿಕೆಯ ಆರು ನಿರ್ಧಾರಗಳು, ಅರ್ಜಿ ದಾಖಲೆಯ ಹದಿನೇಳು ಕಾರಣಗಳು, ಜಡ್ಜಮೆಂಟಿನ ಇಪ್ಪತ್ನಾಲ್ಕು ವಿವರಗಳು, ತಪ್ಪಿತಸ್ಥರಿಗೆ ನೀಡಿದ ದಂಡ, ದಾನಗಳ ಪಟ್ಟಿ ಇತ್ಯಾದಿಗಳನ್ನು ಹೊಂದಿದ ಪುಟ್ಟ ಕೃತಿಯು ಬೆಂಗಳೂರಿನ ಇಂದಿರಾ ಪ್ರಕಾಶನದಲ್ಲಿ ಪ್ರಕಟಗೊಂಡಿದೆ.

ಆರಂಭದಲ್ಲಿ "ಬೀರೇಶ್ವರಾಯ ನಮಃ" ಎಂದು ದೇವರನ್ನು ಸ್ಮರಿಸುತ್ತ ಕುರುಬರ ಪ್ರಾಚೀನ ವೈಭವದ ಆಡಳಿತ ಮತ್ತು ನಂತರದ ದುರ್ಗತಿಗೆ ಕಾರಣಗಳನ್ನು ಚರ್ಚಿಸಲಾಗಿದೆ. ಮತೀಯ ಸಂಬಂಧದ ಗಲಭೆ-ದಂಗೆ, ದೆಹಲಿ ಸುಲ್ತಾನರ ದುರಾಡಳಿತ, ಮಹಮದೀಯರ ಕ್ರೂರತೆಯಿಂದಾದ ಅನಾಹುತಗಳನ್ನು ವಿಮರ್ಶಿಸ ಲಾಗಿದೆ.. ತ್ಯಾಗ-ಶ್ರಮದ ಆಡಳಿತದಿಂದ ಶಾಂತಿ-ಸುಖ-ಸಮೃದ್ಧಿ ನೀಡಿದ ಅಹಲ್ಯಾ ಬಾಯಿ, ಶಿವಾಜಿ, ಹಕ್ಕ-ಬುಕ್ಕರುಗಳನ್ನು ಸಂಪಾದಕರು ಸ್ಮರಿಸಿದ್ದಾರೆ. ರಾಷ್ಟ್ರದಲ್ಲೇ ಮೂರನೆಯ ಸ್ಥಾನದಲ್ಲಿರುವ ಕುರುಬರನ್ನು ಉದ್ದೇಶಿಸಿ ಲಿಂಗಪ್ಪಾ ಅವರು ಹೀಗೆ ನುಡಿದಿದ್ದಾರೆ "ಬಹುದೊಡ್ಡ ರಾಜ್ಯವಾದ ಇಂಡಿಯಾ ದೇಶದಲ್ಲಿ ಮಹಾರಾಷ್ಟ್ರ, ಗುಜರಾತ, ಹಿಂದುಸ್ಥಾನ್, ಪಂಜಾಬ್, ಬಂಗಾಳಾ, ತೆಲುಗುರಾಜ್ಯ, ತಮಿಳು ದೇಶ ಎಲ್ಲಾ ಕಡೆಯಲ್ಲಿಯೂ ನಮ್ಮ ಭ್ರಾತೃವರ್ಗವು ಇದರ ಬಲದಿಂದಲೇ ಅದ್ಯಾಪಿ ಯಾವದೊಂದು ತೊಂದರೆಯೂ ಇಲ್ಲದೆ ನೆಲಸಿರುವುದಲ್ಲದೆ-ತಾಳೀಕೋಟೆ ಯುದ್ಧವು ಸಮಾಪ್ತವಾದ ನಂತರ ವಿದ್ಯಾನಗರದ ವೈಭವವು ಮುಸಲ್ಮಾನರ ಕೈ ಸೇರಲು ಆ ರಾಜರುಗಳ ವಂಶಕ್ಕೆ ಸೇರಿದ್ದ ನಮ್ಮವರು ತಮ್ಮ ಅನುಯಾಯಿ ವರ್ಗದವರೊಡನೆ ನಮ್ಮ ಕನ್ನಡ ನಾಡಿನಲ್ಲಿ ಸರ್ವತೋಮುಖವಾಗಿ ಚದುರಿಹೋಗಿ ಎಲ್ಲೆಲ್ಲಿಯೂ ವಾಸಿಸುತ್ತಾ ಇದ್ದಾರೆ" (ಆರಂಭದ ವಿಜ್ಞಾಪನೆ, ಪುಟ-೪).

ಕುರುಬರ ಪ್ರಾಚೀನ ಗೌರವದ ಸ್ಥಾನಮಾನಗಳನ್ನು ವಿಜಯನಗರದ ಪತನಾನಂತರ ಕಳೆದುಕೊಂಡುದನ್ನು "ಸಿಂಹವಾಗಿದ್ದುದು ಹುಲ್ಲನು ಮೇಯುತ್ತಾ ಗೋವಾದುದು" ಎಂಬ ನುಡಿಯ ಮೂಲಕ ನೋವನ್ನು ಹಂಚಿಕೊಂಡಿದ್ದಾರೆ. ಅಲ್ಲದೆ ಇಂದಿನ ದಿನಗಳಲ್ಲಿ ಕುರುಬರಿಗೆ ದೊರೆತ ಸ್ಥಾನಮಾನಗಳ ಕುರಿತು "ಕುರುಬರೆಂದರೆ ಕರೀಕಂಬಳಿಯಲ್ಲಿ ಹುರಳೀ ತಿನ್ನುವವರು" ಎಂದು ಆರೋಪಿಸಿ, ಪರಂಪರೆಯ ವೈಭವ ಪಡೆಯಲು "ಕುರುಬನೆಂದರೆ ಕಿರುಬನಂತಾಗಬೇಕು" ಎಂದು ಪ್ರಗತಿಗಾಗಿ ಕರೆ ನೀಡಿದ್ದಾರೆ. ಆರಂಭದ ವಿಜ್ಞಾಪನೆಯನ್ನು 'ತಮ್ಮ ಸಹೋದರರಲ್ಲಿ ಒಬ್ಬನಾದ ಎಂ.ಎನ್.ಲಿಂಗಪ್ಪ ಕುಲಚಿಂತಾಮಣಿ' ಎಂದು ಮುಕ್ತಾಯ ಮಾಡುತ್ತಾರೆ (ಪುಟ-೬).ಜಾತಿ ನಿಂದನೆಯ ಕುರಿತು (ಪುಟ-೩) ಲಿಂಗಪ್ಪ ಅವರು "ಮನುಷ್ಯನಾದವನು ತನ್ನ ಜಾತಿಯ ಧರ್ಮವಿಷಯಗಳನ್ನು ಪರೀಕ್ಷಿಸಿ ತಿಳಿಯುವುದು ಅತ್ಯಗತ್ಯವು. ಹಾಗೆ ತಮ್ಮ ಜಾತಿಯ ಪುರೋವೃದ್ಧಿಯಲ್ಲಿ ಉದಾಸೀನವಾಗಿರುವುದರಿಂದಲೇ ಆಗಾಗ್ಯೆ ನಮ್ಮ ಕುರುಬ ಜಾತಿಯವರನ್ನು ನಮ್ಮ ಪ್ರಿಯ ಸ್ನೇಹಿತರಾದ ಒಕ್ಕಲಿಗರು ಜಾತಿಯ ವಿಷಯವಾಗಿಯೂ ಮನಸ್ವಿಯಾಗಿ ಆಡಿಕೊಳ್ಳುತ್ತ ತುಮಕೂರು ಡಿಸ್ಟ್ರಿಕ್ಟು ಕುಣಿಗಲ್ ತಾಲೂಕು ಅಮೃತೂರು-

* ಕೇರಾಫ್ ರೇವಣಸಿದ್ದೇಶ್ವರ ಜನರಲ್ ಸ್ಟೋರ್ಸ್, ರಾಮ ಟಾಕೀಸ್ ಹತ್ತಿರ, ಎಸ್.ಆರ್. ನಗರ, ಹೊಸಪೇಟೆ.

ಹೊಸಕೆರೆ ಗ್ರಾಮದ ಈಶ್ವರ ದೇವರ ಸನ್ನಿಧಾನದಲ್ಲಿ ಕುಣಿಗಲ್ ತಾಲೂಕು ನಾಗಮಂಗ್ಲದ ತಾಲೂಕಿನ ಒಕ್ಕಲಿಗರೆಲ್ಲರು ೧೯೧೨ನೇ ಯಿಸವಿ ಜುಲೈ ೧೧ನೇ ತಾರೀಖಿನಲ್ಲಿ ಒಂದು ಸಭೆ ಸೇರಿ ಆ ಸಭೆಯಲ್ಲಿ ಒಕ್ಕಲಿಗರ ಪುರೋವೃಧ್ಯರ್ತವಾದ ಕೆಲವು ಅಂಶಗಳನ್ನು ಚರ್ಚಿಸಿ ಕೊನೆಗೆ ನಮ್ಮ ಕುರುಬರನ್ನು ಮತ್ತು ಕುಂಬಾರ, ಅಗಸ, ನಾಯಿಂದ, ಬೆಸ್ತ, ಬೇಡರನ್ನು ವಿಲೋಮ ಜಾತಿಯವರೆಂದು ತೀರ್ಮಾನಮಾಡಿ ಜಾತಿಯವರಲ್ಲಿ ಒಕ್ಕಲಿಗರು ಊಟಮಾಡಕೂಡದೆಂತಲೂ, ಇವರ ಎಂಜಲು ಮೈಲಿಗೆಗಳು ಸಂಪರ್ಕವಾಗದಂತೆ ಇರಬೇಕೆಂತಲು ತೀರ್ಮಾನ ಮಾಡಿ–ಪ್ರಚಾರಮಾಡಿಸಲೋಸುಗ ಬೆಂಗಳೂರು ಸಿಟಿ ಅರಳೇಪೇಟೆಯಲ್ಲಿರುವ ಒಕ್ಕಲಿಗರ ಮುದ್ರಣಾಲಯಕ್ಕೆ ಮೇಲ್ಕಂಡ ಅಮೃತೂರಿನಲ್ಲಿರುವ ಅನ್ನದಾನಿಲಿಂಗೇಗೌಡರ ಮಗ ಪೋಸ್ಟಜವಾನ ಎಲ್.ಬೋರಯ್ಯನು ಕಳುಹಿಸಿಕೊಟ್ಟನು. ಈ ತೀರ್ಮಾನವನ್ನು ಉದಾಶೀನವಾಗಿ ತಿಳಿದು ೧೯೧೨ನೇ ಯಿಸವಿ ಅಗಸ್ಟು ೭ನೇ ತಾರೀಖಿನಲ್ಲಿ ಪ್ರಕಟಿಸಿದರು" ಎಂದು ತಿಳಿಸಿದ್ದಾರೆ.

ಮೇಲಿನ ವಿಷಯ ಸ್ಪಷ್ಟತೆಗಾಗಿ ಪೂರಕವಾಗಿ (ಪುಟ–೯) ಕ್ರಿ.ಶ. ೧೯೧೨ ಅಗಸ್ಟ್ ೭ರ ಒಕ್ಕಲಿಗರ ಪತ್ರಿಕೆಯಲ್ಲಿ 'ದಿ ರೆಜುಲುಶನ್ ಆಫ್ ಅವರ್ ಒಕ್ಕಲಿಗರ ಮೀಟಿಂಗ್ ಹೊಸಕೆರೆ' ಎಂಬ ಶೀರ್ಷಿಕೆಯಲ್ಲಿ ಪ್ರಕಟಗೊಂಡ ಇಂಗ್ಲೀಷಿನ ಆರು ತೀರ್ಮಾನಗಳನ್ನು ಸಂಪಾದಕರು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದರು.

೧. ಹುಟ್ಟು ಮತವನ್ನು ಬಿಟ್ಟು ಮತಾಂತರ ಅವಲಂಬಿಸಿದ ಮತಭ್ರಷ್ಟರು ತಾವು ಹೆಚ್ಚಿನ ಆಚಾರಗಳನ್ನು ಆಚರಿಸುತ್ತೇವೆಂದು ಹೇಳುತ್ತಾರೆ. ಅವರ ಮಾತಿಗೆ ಮರುಳಾಗದೆ ಅಂಥ ಜನಗಳಲ್ಲಿ ಅನ್ನಪಾನಾದಿಗಳನ್ನು ಸ್ವೀಕರಿಸಬಾರದು.
೨. ಕುಲ, ಶೀಲ, ಸ್ವಭಾವ ತಿಳಿಯದ ಜನರಿಗೆ ಅನ್ನೋದಕಗಳನ್ನು ಕೊಟ್ಟಾಗ್ಯೂ ಅವರ ಎಂಜಲು ಮೈಲಿಗೆಗಳು ಸಂಪರ್ಕವಾಗದಂತೆ ನೋಡಿಕೊಳ್ಳಬೇಕು.
೩. ಅಂಥಾ ಕುಲ ಶೀಲಗಳು ತಿಳಿಯದವರಲ್ಲಿ ಅನ್ನೋದಕ ಗಳನ್ನು ಅಂಗೀಕರಿಸಬಾರದು.
೪. ದಾಸವಣವೆಂತಲೂ, ಜೋಗಿಗಳೆಂತಲೂ, ಪೂರ್ವಾಚಾರವೆಂತಲೂ ಮುಂತಾಗಿ ಹೇಳಿಕೊಂಡು ಕೆಲವರು ಮಧ್ಯಪಾನ ಮಾಡುವುದನ್ನು ಬಿಡದಿದ್ದರೆ ಅವರನ್ನು ಕುಲದಲ್ಲಿ ಸೇರಿಸಬಾರದು.
೫. ನಮ್ಮ ಕೆಲಸಗಳಿಗಾಗಿ ಬರುವ ಅಗಸ, ಹಜಾಂ, ಮತ್ತು ಕುರುಬ, ಕುಂಬಾರ, ಬೆಸ್ತ, ಬೇಡ ಮುಂತಾದ ವಿಲೋಮಜಾತಿ ಜನರಿಗೆ ಅನ್ನೋದಕಗಳನ್ನು ಕೊಟ್ಟರೆ ಅವರ ಎಂಜಲು ಮೈಲಿಗೆಗಳ ಸಂಪರ್ಕವಾಗದಂತೆ ಇರಬೇಕು.
೬. ನಮ್ಮಲ್ಲಿ ಭಿನ್ನಾಭಿಪ್ರಾಯದಿಂದ ಬೇರೆಯಾಗಿ ಮನಸ್ಸು ಬಂದಂತೆ ಇಷ್ಟವುಳ್ಳವರನ್ನು ಕೂಡಿಕೆ ಮಾಡಿಕೊಳ್ಳುವ ದುಷ್ಟ ಪದ್ಧತಿಯನ್ನು ಬಿಡಬೇಕು. ಅನಿವಾರ್ಯ ಕಾರಣ ಗಳಿಗೆ ನಿಷೇಧವನ್ನಿಡಬಾರದು.

ಹೀಗೆ ಪ್ರಕಟಗೊಂಡ ೫ನೆಯ ತೀರ್ಮಾನವನ್ನು ಖಂಡಿಸಿ ಬೆಂಗಳೂರು ಮೈಸೂರು ಪರಿಸರದ ಕುರುಬರ ಮುಖಂಡರಾದ ಬೋಜಪ್ಪ ಮತ್ತು ಲಕ್ಕಣ್ಣನವರ ಇವರು ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಡಿಸೆಂಬರ ೬ರಂದು ೧೯ ಕಾರಣಗಳನ್ನು ನೀಡಿ ದಾವಾ ಹೂಡಿದರು. ಅಂದಿನ ದಿವಾನ ಬಹದ್ದೂರ ರಾಘಯ್ಯ ಅವರು ಅರ್‍ಗ್ಯುಮೆಂಟ್ ಮಾಡಿದರು. ನಂತರ ಮುಖ್ಯ ತೀರ್ಪುದಾರರಾದ ಬಿ.ಎಸ್. ರಾಣೋಜಿ ರಾವ್ ಅವರು 'ವಿಲೋಮಜಾತಿ' ಎಂಬ ಪದ ಬಳಕೆ ಸಂಕರಜಾತಿ, ವ್ಯಭಿಚಾರ ಸಂಬಂಧ ಎಂಬ ಅಭಿಪ್ರಾಯ ನೀಡುವ ತಿರಸ್ಕಾರದ ನಿಂದನಾರೂಪವಾಗಿ ಉಪಯೋಗಿಸ ಲ್ಪಟ್ಟಿದೆ (ಪುಟ–೨೧). ಕಾರಣ ಫಿರ್ಯಾದುದಾರನಿಗೆ ಅವಮಾನವಾಗಿದ್ದು ಕುರುಬರು ನೀಚ ಸಂತತಿಯವರೆಂದು ಪ್ರಸಿದ್ಧಪಡಿಸಿ–ಜಾತಿಯ ವಿಷಯದಲ್ಲಿ ಬಹಿರಂಗವಾದ ಹಾಸ್ಯಾಸ್ಪದಕ್ಕೆ ಗುರಿಮಾಡಿದರು. ಜಾತಿಯ ವಿಷಯದಲ್ಲಿ ಅವಮಾನಿಸಲ್ಪಟ್ಟಿದೆ (ಪುಟ–೨೪)ಎಂಬ ನಿರ್ಧಾರದ ಹೇಳಿಕೆ ನೀಡಿದರು. ೧೯೧೪ ನವೆಂಬರ ೨೦ರಂದು ತಪ್ಪಿತಸ್ಥರು ಪ್ರತಿಯೊಬ್ಬರು ನೂರು ರೂಪಾಯಿ ದಂಡ ಕೊಡಬೇಕು. ತಪ್ಪಿದರೆ ಒಂದು ತಿಂಗಳು ಶಿಕ್ಷೆ ಅನುಭವಿಸಬೇಕು ಎಂಬ ತೀರ್ಪನ್ನು ಘೋಷಿಸಲಾಯಿತು. ಅದಕ್ಕೆ ಪೂರಕವಾಗಿ ಶ್ರೇಣೀಕೃತ ವರ್ಗವ್ಯವಸ್ಥೆ ಯನ್ನು ಚರ್ಚಿಸುತ್ತಾ ವಾದ ಪುರಾವೆಗಳ ಹಿನ್ನೆಲೆಯಲ್ಲಿ ಸ್ಪಷ್ಟಪಡಿಸಿದರು. ಶಾಸ್ತ್ರ ಸಮ್ಮತವಾದ ಅನುಲೋಮ, ಶಾಸ್ತ್ರಸಮ್ಮತವಲ್ಲದ ವಿಲೋಮ, ಪ್ರತಿಲೋಮ, ವರ್ಣಸಂಕರ ಜಾತಿಗಳನ್ನು ವಿವರಿಸಿದ್ದಾರೆ.

ಅಂತ್ಯದ ವಿಜ್ಞಾಪನೆಯಲ್ಲಿ (ಪುಟ–೩೮) 'ಕುರುವಿಜಯ ಪತ್ರಿಕೆ' ಪ್ರಕಟಣೆಗಾಗಿ ವಾಚಕರಲ್ಲಿ ಧನಸಹಾಯ ಯಾಚಿಸಿ ದ್ದಾರೆ. 'ಕುರುಬರ ಕೈಪಿಡಿ–೨' ಪ್ರಕಟಣೆಯಲ್ಲಿದ್ದು ಅದು ಕುರುಬರ ಕೈಪಿಡಿ–೧ರ ವಿಷಯಗಳಿಗಿಂತ ಬೇರೆ ವಿಷಯ ಗಳನ್ನು ತಿಳಿಸುವುದಾಗಿ; ಈ ಎರಡು ಕೃತಿಗಳನ್ನು ಮಾರಿದ ಹಣದಿಂದ ಸ್ವಂತ ಪ್ರಿಂಟಿಂಗ್ ಪ್ರೆಸ್ ತೆಗೆದು 'ಕುರುವಿಜಯ' ಎಂಬ ವಾರಪತ್ರಿಕೆ ಪ್ರಕಟಿಸುವ ಹಂಬಲವನ್ನು ವ್ಯಕ್ತಪಡಿಸಿ ದ್ದಾರೆ. ತಮ್ಮ ಕನಸಿಗೆ ಕೈಜೋಡಿಸಿದ ಹಲವು ದಾನಿಗಳ ಪಟ್ಟಿ ನೀಡಿದ್ದಾರೆ. ಅವರಲ್ಲಿ ಮುಖ್ಯವಾಗಿ ಅನ್ಯಮತದ ಚಿತ್ರದುರ್ಗದ ಹುಸೇನಸಾಬ, ಗುರುವರ್ಗದ ಶ್ರೀ ಕರಿಸಿದ್ಧಯ್ಯ

ಒಡೆಯರ, ದಾವಣಗೆರೆಯ ಗುಡ್ಡಯ್ಯ, ಪಟೇಲ್ ಸಿದ್ಲಿಂಗಪ್ಪ, ದೊಡ್ಡಯ್ಯ ಯಾಪಣ್ಣ ತಿಮ್ಮಣ್ಣನವರ, ಸಿದ್ದಪ್ಪ, ಕರಿಯಪ್ಪ ಹೀಗೆ ಅನೇಕ ಹೆಸರುಗಳ ಪಟ್ಟಿಯನ್ನು ಗಮನಿಸಬಹುದು.

೨. ಸಂಪಾದಕರು

ಮೂಲತಃ ಸ್ವಾಭಿಮಾನಿಗಳಾದ ಎಮ್.ಎನ್.ಲಿಂಗಪ್ಪ ಅವರು ೧೯ನೆಯ ಶತಮಾನದ ಅಂತ್ಯದಲ್ಲಿ ಜನಿಸಿರಬಹುದು. ಗಂಭೀರ ಚಿಂತಕರಾದ ಇವರು ನಿಷ್ಠುರತೆಯನ್ನು ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಂಡಿದ್ದರು. ಪ್ರಗತಿಗಾಗಿ ಕನಸು ಕಟ್ಟಿ ಮತಬಾಂಧವರು ಪ್ರಜ್ಞಾವಂತರಾಗಿ ವೈಚಾರಿಕತೆಯನ್ನು ಬೆಳೆಸಿಕೊಳ್ಳ ಬೇಕೆಂದು ಬಯಸಿದರು. ಮತದ ಶ್ರೇಯೋಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದರು. ಅಂಥವುಗಳಲ್ಲಿ ಮುಖ್ಯವಾಗಿ ಪತ್ರಿಕೆ ಪ್ರಕಟಿಸುವುದು. ಅವರು ತಮ್ಮ ಉದ್ದೇಶ ಕುರಿತು “ಕುರುಬರ ಜಾತಿ ಕೇವಲ ನಿಕೃಷ್ಟವಾದುದೆಂದು ಭಾವಿಸುವ ನರಾಮಧೇಯರ ಅವಗಾಹನೆಗಾಗಿ ಕುರುಬರ ಜಾತಿ ಎಂಥಹದು? ಇವರ ಮೂಲ ಚರಿತ್ರೆಗಳೇನು? ಎಂದು ಮುಂತಾದ ವಿಷಯಗಳನ್ನು ನಮ್ಮ ಕನ್ನಡ ನಾಡಿನಲ್ಲಿರುವ ಮಹಾಜನಗಳ ಅವಗಾಹನೆಗೆ ತರಬೇಕೆಂಬ ಸದುದ್ದೇಶದಿಂದ ೧೯೧೪ನೇ ಇಸವಿಯಲ್ಲಿ ‘ಕುರುವಿಜಯ’ವೆಂಬ ವಾರಪತ್ರಿಕೆಯನ್ನು ಆರಂಭಿಸಿದೆವು. ಈ ವಾರಪತ್ರಿಕೆ ಸ್ವಂತ ಪ್ರಿಂಟಿಂಗ್ ಆಫೀಸು ಇಲ್ಲದ ಕಾರಣ ಮತ್ತೊಬ್ಬರ ಛಾಪಾಖಾನೆಯಲ್ಲಿ ಒಂದು ವರ್ಷದವರೆಗೂ ಪ್ರಿಂಟಾಗುತ್ತಾ ಬಂದು ನಿಂತಿತು”(ಕುರುಬರ ಜಗತ್ಪಾವನ ಪತ್ರಕೆ, ೧೯೩೨ ಮಾರ್ಚ ಪು-೨೧) ನುಡಿದಿದ್ದಾರೆ. ಇವರು ಅನೇಕ ಪತ್ರಿಕೆಗಳ ಸಂಪಾದಕರಾಗಿದ್ದರು. ಅವುಗಳಲ್ಲಿ ಮುಖ್ಯವಾಗಿ

* ೧೯೧೪ರಲ್ಲಿ ‘ಕುರುವಿಜಯ’ ವಾರಪತ್ರಿಕೆ.
* ೧೯೨೬ ನವೆಂಬರನಲ್ಲಿ ‘ಕುರುಬರ ಜಗತ್ಪಾವನ ಪತ್ರಿಕೆ’
* ‘ಕುರುಕುಲ ದರ್ಪಣ’ ಎಂಬ ದೊಡ್ಡ ಕೃತಿ ಪ್ರಕಟಣೆಗಾಗಿ ಧನಸಹಾಯ ಕೋರಿ ಓದುಗರಲ್ಲಿ ವಿಜ್ಞಾಪನೆ(ಕುರುಬರ ಜಗತ್ಪಾವನ ಪತ್ರಿಕೆ, ೧೯೩೫ ಮಾರ್ಚ ಪು. ೧೪).
* ‘ಕುರುಕುಲ ಪ್ರಭಾ’ ಎಂಬ ಮತಗ್ರಂಥ ಪ್ರಕಟಿಸುವುದಾಗಿ ವಾಚಕರ ಗಮನಕ್ಕೆ ಪತ್ರಿಕೆಯ ಮೂಲಕ(ಕು.ಜ.ಪ.ದಲ್ಲಿ) ತಿಳಿಸಿದ್ದಾರೆ.
* ‘ಕುರುಬರ ಕುಲ ಕೀರ್ತಿ’ ವಾರಪತ್ರಿಕೆಯನ್ನು ೧೯೩೪ರಲ್ಲಿ ಪ್ರಕಟಿಸುವುದಾಗಿ ವಾಚಕರ ಗಮನಕ್ಕೆ ಪತ್ರಿಕೆಯ ಮೂಲಕ (ಕು.ಜ.ಪ ೧೯೩೫ ಜನೆವರಿ ಪು-೧) ತಿಳಿಸಿದ್ದಾರೆ. ಹೀಗೆ ಮತೋದ್ಧಾರಕ್ಕಾಗಿ ಪತ್ರಿಕೋದ್ಯಮದ ಮೂಲಕ ವಿಶೇಷ ಸೇವೆ ಸಲ್ಲಿಸಿದ್ದಾರೆ.

ಸ್ವಮತ ನಿಷ್ಠರಾದ ಸಂಪಾದಕರು ಒಂದೆಡೆ “ಸ್ವದೇಶಾಭಿಮಾನ, ಸ್ವಜನಾಭಿಮಾನ, ಐಕ್ಯಮತ, ಪರಸ್ಪರ ಮೈತ್ರಿ ಎಂಬ ಗುಣಗಳು ಅಸಾಧಾರಣವಾದವು. ಇವನ್ನು ಆಚರಣೆಯಲ್ಲಿ ತರಬೇಕಾದರೆ ನಮ್ಮ ಜನಾಂಗ (ಜಾತಿ)ವೆಲ್ಲವೂ ಒಂದೇ ಮನೆಯೆಂಬ ಭಾವನೆಯು ಹುಟ್ಟಬೇಕು” ಹೀಗೆ ಹೇಳಿದರೆ, ಇನ್ನೊಂದೆಡೆ “ನಮ್ಮವರಲ್ಲಿ ಐಕ್ಯಮತ್ಯ ವಿದ್ಯಾ ಈಯರಡು ಭಾಗದಲ್ಲಿ ಕುಂದಿರುವುದರಿಂದ ನಮ್ಮ ಜಾತಿಯ ಧರ್ಮಗಳೇ ಆಗಲಿ ಇಲ್ಲಿರುವ ವಿದ್ಯವೇ ಆಗಲಿ ಪ್ರಚಾರವಾಗುವುದಕ್ಕೆ ಅವಕಾಶವಿಲ್ಲದ ತಾಟಸ್ಥ್ಯವನ್ನು ವಹಿಸಿದೆ” ಎಂದು ಹಿನ್ನೆಡೆಗೆ ಕಾರಣ ತಿಳಿಸಿದ್ದಾರೆ. ಪತ್ರಿಕೆಯ ಮುಖಾಂತರ ಸಮಾಜವನ್ನು ಪ್ರಗತಿಪಥದತ್ತ ಮುನ್ನಡೆಸಿ ಯಶಸ್ವಿಯಾದ ಸಂತೋಷನ್ನು ಕುರುಬರ ಜಗತ್ಪಾವನ ಪತ್ರಿಕೆಯಲ್ಲಿ (೧೯೨೬ ಡಿಸೆಂಬರ ಪುಟ ೩೦)ತಿಳಿಸಿದ್ದಾರೆ.

೩. ಕೃತಿ ವಿಶೇಷ

ಕುರುಬರ ಪ್ರಥಮ ಚಾರಿತ್ರಿಕ ದಾಖಲೆಯಾಗಿದ್ದು, ೧೯ನೆಯ ಶತಮಾನದ ಆರ್ಥಿಕ, ಧಾರ್ಮಿಕ, ಸಾಮಾಜಿಕ ಸ್ಥಿತ್ಯಂತರಗಳನ್ನು ತಿಳಿಸುವ ಆಕರವಾಗಿದೆ. ದೇಶಿ ಪದಗಳೊಂದಿಗೆ ರೆಗ್ಯುಲೇಷನ್, ಸೆಕ್ಷನ್, ಅರ್ಗುಮೆಂಟ್, ಡಿಫೆನ್ಸುವಾದ, ಚಾರ್ಜ, ತಹಸೀಲು, ಸಬೂಬು, ಫಿರ್ಯಾದಿ, ದಾಖಲ್, ರುಜುವಾತು, ಛಾಪಾಕರ್ತ, ಜುಲ್ಮಾನೆ ಮುಂತಾದ ವಿದೇಶಿ ಪದಗಳನ್ನು ಹೇರಳವಾಗಿ ಬಳಸಲಾಗಿದೆ. ಒಂದೇ ಅರ್ಥ ನೀಡುವ ಬೇರೆ ಬೇರೆ ಅಕ್ಷರಗಳನ್ನು ಬಳಸಲಾಗಿದೆ. ಉದಾ-ಯೇನಾದರೂ(ಏನಾದರು), ಅವಮಾನಿಸಲ್‌ಪಡು(-ಸಲ್ಪಡು), ರೀತ್ಯಾ(ರೀತಿ), ಹೊರ್ತು(ಹರತು) ಮೊದಲಾದವು.

ಒಟ್ಟಾರೆ ಈ ಕೃತಿ ಸ್ವತಂತ್ರಪೂರ್ವದ ಪ್ರಮುಖ ಪತ್ರಿಕೋದ್ಯಮಿಯನ್ನು ಪರಿಚಯಿಸುತ್ತದೆ. ಕುರುಬರ ಪಾರಂಪರಿಕ ಕುಲಕಸಬು, ಪ್ರಥಮದಲ್ಲಿ ಅಜಾಜೀವಿಗಳಾದ, ಉಗ್ರಿಕ ಕುಲ, ಅವರು ಅನುಲೋಮಜಾತಿಗೆ ಒಳಪಡುವಂಥ ಅನೇಕ ವಿಷಯಗಳನ್ನು ಚರ್ಚೆಗೆ ಒಳಪಡಿಸಲಾಗಿದೆ.

ಈವರೆಗೂ ‘ಕುರುಬರ ಕೈಪಿಡಿ-೨’ ಮತ್ತು ೧೯೩೫ರ ನಂತರದ ‘ಕುರುಬರ ಜಗತ್ಪಾವನ ಪತ್ರಿಕೆಗಳು’ ದೊರೆತಿಲ್ಲ. ಅವರ ಇತರ ಕೃತಿಗಳನ್ನು ಸಂಗ್ರಹಿಸುವುದು ಸಂಶೋಧಕರ ಜವಾಬ್ದಾರಿಯಾಗಿದೆ. ಸಮಾಜಕ್ಕೆ ಎಂ.ಎನ್.ಲಿಂಗಪ್ಪ ಅವರ ಕೊಡುಗೆ ಅಪಾರವಾಗಿದ್ದು, ಶ್ಲಾಘನೀಯವಾಗಿದೆ.

ಆಕರಗಳು

೧. ಕುರುಬರ ಕೈಪಿಡಿ ೧.

೨. ಕುರುಬರ ಜಗತ್ಪಾವನ ಪತ್ರಿಕೆಗಳು.

ಇಟಲಿ ಪ್ರವಾಸಿ ಕಥನದಲ್ಲಿರುವ ಕೆಳದಿ ಅರಮನೆ ರಾಜಧಾನಿ ಕೋಟೆಗಳ ಉತ್ಖನನ

ಡಾ. ಕೆಳದಿ ಗುಂಡಾಜೋಯ್ಸ್*

ಭಾರತದ ಚರಿತ್ರೆಯಲ್ಲಿ ಕೆಳದಿ ಇತಿಹಾಸವು ಪ್ರಾಮುಖ್ಯವಾದುದು. (ಅಂತರಾಷ್ಟ್ರೀಯವಾಗಿ) ಕ್ರಿ.ಶ. ೧೪೯೯ ರಿಂದ ೧೭೬೩ ರವರೆಗೂ ಕೆಳದಿಯನ್ನಾಳಿದ ಅರಸರೇ ವಿಜಯನಗರವನ್ನೂ ಉದ್ಧರಿಸಿ ರಕ್ಷಿಸಿದವರು. ವಿಶೇಷವಾಗಿ ಪಶ್ಚಿಮ ಘಟ್ಟದ ಕಡಲ ತೀರಗಳೆಲ್ಲವೂ ಇವರ ಅಧೀನವಾಗಿದ್ದು ಈ ಕುರಿತ ಪೋರ್ಚುಗೀಸ್, ಡಚ್, ಫ್ರೆಂಚ್, ಇಂಗ್ಲೀಷ್ ಅಪ್ರಕಟಿತ ಮೂಲದಾಖಲೆಗಳು ದೇಶವಿದೇಶಗಳಲ್ಲಿ ಚದುರಿ ಹೋಗಿವೆ. ಅಪ್ರಕಟಿತ ಪುರಾತತ್ವ ವಿಶೇಷಗಳು, ಪ್ರಾಚೀನ ಹಸ್ತ ಪ್ರತಿಗಳು, ಚಾರಿತ್ರಿಕ ದಾಖಲೆಗಳು ವಿಫಲವಾಗಿದ್ದು ದೇಶಾದ್ಯಂತ ಕಾಣಬಹುದು. ಲಂಡನ್, ಲಿಸ್ಬನ್, ಇಟಲಿ, ಹಾಲೆಂಡ್, ಸ್ಪೈಯಿನ್, ನವದೆಹಲಿಗಳಲ್ಲಿ ಈಗಲೂ ಅವಲೋಕಿಸಬಹುದು. ಅವುಗಳಲ್ಲಿ ೧೬೨೩ರಲ್ಲಿ ಇಟಲಿ ಪ್ರವಾಸಿ ಪಿಯತ್ರೋಡೆಲ್ಲವಲ್ಲಯಾ ದಾಖಲಿಸಿದ ಕೆಳದಿ ರಾಜಧಾನಿ ಇಕ್ಕೋರಿಯ ಕೋಟೆ-ಅರಮನೆಗಳು ಪ್ರಧಾನ ವಾದುದು. ಇಟಲಿ ಭಾಷೆಯಲ್ಲಿ ಇಟಲಿ ತ್ರಿಯೋಸ್ಥ ವಸ್ತು ಸಂಗ್ರಹಾಲಯದಲ್ಲಿದ್ದ ಈ ಪುರಾತನ ಹಸ್ತ ಪ್ರತಿಯನ್ನು ಇಟಲಿ ಸರಕಾರದ G. Havens ರವರು ೧೬೬೪ ರಲ್ಲಿ ಭಾಷಾಂತರಿಸಿದ್ದು, Edward Gray ರವರು ಪರಿಷ್ಕರಿಸಿ ಸಂಘಟೀಕರಿಸಿದ್ದಾರೆ. ಈ ಸಂಪುಟಗಳಲ್ಲಿ ಕಂಡುಬರುವ ಕೋಟೆ ವಿವರಗಳು ಕೆಳದಿ ರಾಜಧಾನಿ ಇಕ್ಕೇರಿಯಲ್ಲಿದ್ದು ಈಗಲೂ ವಿನಾಶದ ಅಂಚಿನಲ್ಲಿವೆ. ಇದರಿಂದ ಕೆಳದಿ - ಇಟಲಿ ಇತಿಹಾಸಾಧ್ಯಯನಕ್ಕೆ ಮುಂದಿನ ಪೀಳಿಗೆಗೆ ಧಕ್ಕೆಯುಂಟಾಗಲಿದೆ. ಇವುಗಳ ಉತ್ಖನನಗಳಿಂದ ಕೆಳದಿ ಮತ್ತು ಇಟಲಿ ಇತಿಹಾಸಗಳಲ್ಲಿ ರೋಮಾಂಚಕ ಸಂಗತಿಗಳು ಬೆಳಕು ಕಾಣುತ್ತವೆ. ಸ್ವತಹ ಇಂಜಿನೀಯರ್ ಆಗಿದ್ದ ಇಟಲಿಯ ಡೆಲ್ಲವಲ್ಲೆಯು ಆ ಕಾಲದಲ್ಲಿಯೇ ದೇವಾಲಯವನ್ನು ನಕ್ಷೆಯ ಮುಖಾಂತರ ದಾಖಲಿಸಿರುವುದು ಸಮಕಾಲೀನ ಪುರಾತತ್ವ ಇತಿಹಾಸದಲ್ಲಿಯೇ ಅಮೂಲ್ಯ ಮಾಹಿತಿಯನ್ನೊದಗಿಸ ಬಲ್ಲದು. ಈ ಕೋಟೆಯ ಮುಖಾಂತರ ೫-೧೨-೧೬೨೩ರಲ್ಲಿ ಇಟಲಿ ಡೆಲ್ಲವಲ್ಲೆಯೂ ಕೆಳದಿ ಅರಮನೆಗೆ ಭೇಟಿಯಿತ್ತು ಕೆಳದಿ ರಾಜನನ್ನು ಸಂದರ್ಶಿಸಿದ ವಿವರ ಇಂತಿದೆ.

"When I came Before the king his men made me come near to the little Porch in the midst of them, where standing by myself, after the first salutations, the king presently bid me cover my head; which I forthwith did without further intreaty; though with his Mother, being a Lady, I was willing to super abound in courtesie, speaking to her all the time uncover'd But with the son. Who was a Man. I was minded to enjoy the privilege of my descent and to receive the favour which he did me as due to my quality. At first they offered me nothing to sit upon, nor was it fitting sit down upon the bare ground. Yet to show some difference between myself and the by standers, after I had put on my Hat I leaned upon my sword and so talk'd as long as I was standing, which was not long, the king, who at first sat side-wise, turning himself directly towards me, although by so doing he turn'd his back to his Nephew. He asked me almost all the same Questions as his Mother had done. I came? what countries I had travell'd through? what princes I had seen? whether I had left my own country upon any misfortune? or why ? How I would have done this alone in strange countries, in case of sickness or other accidents? To all which I answer'd as I had done to his Mother ; and upon my saying that I wander'd thus alone, up and down, rusting in the help of God, he ask'd me, who was my God? I answered him (pointing upwards) "The God of Heaven, the creater of the Universe." where upon certain soldiers there present, (in all likely hood moors) as if applauding me, said, Ah ! **chodia,chodia,**which in the Persian Tounge signifies **Lord** and is meant for God; inferring that I worship'd the true God, whom the Moors Pretend to know, in apposition to the Idols of The **Gentiles** of the country ; and they us'd the Persian


* ಕೆಳದಿ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ-೫೭೭೪೦೧.

word **chodia** because that probably the Sect of Mahomet came into these parts from **Persia,** (which is not very remote from **India**) as also from Arebia ; or, perhaps because the Indians of the Territory of **Idal-Sciah** and **Decan** being in great part **moors** use much the Persian Tongue, which is spoken in the courts of those Princes no less than their natural Language with whom these other Indians more inland to the south, have, by reason of neighbourhood, communication both in Religion and Speech.

The king told me several times that he had very great contentment in seeing me and that no European of any quality had ever been in his country ; that my person well show'd of what quality I was. Nor was he mistaken here-in ; for what other person would ever go out of **Europe** into his country? Unless some **Portugal** Merchant, one of those who come hither for the most part to seek wood to make masts and yards for ships ; these woods abounding with very goodly trees. I told him I was sorry I had nothing worthy to present to him; that in my Country there wanted not gallant things for his Highness ; but it being so many years since my departure thence, and my Travels extending so far, I had nothing left as I desir'd; yet, as a memorial of my service, I should venture to give him a small trifle from my country. Whereupon I caus'd my interpreter who carried it to offer him little Map of the world which I had brought with me out of ITALY : telling him what it was, and how all the countries, lands, seas and Islands of the world were cxactly delineated in it with their Names set to each place in our Tongue and all that was necessary to make him understand what it was. The king was greatly pleas'd with it and desir'd to see several countries, where they lay, and how great they were asking me sundry questions about them; but being he understood not our letters written there in, he satisfi'd himself with the sight onely and with showing it to all the by- standers as a curious and ingenious Work of Art, then he ask'd me whether I could eat in their Houses or of their meats; for he desir'd to give me something to eat. I answer'd that I could, and that the purity of owr Religion consisted not in the eating or touching of things, but in doing good works. He earnestly desird of me that I would stay awhile till some meat were prepar'd for me; for by all means he would have me eat something in his House, and would himself see me eating. I told him that, if his intention were onely to give me meat, the time was already past, nor was I dispos'd to eat; but if it were to see me eat, I could not eat in that place, after the fashion of my country; not having there the preperations necessary thereunto, so that his Highness would not see what, perhaps, he desir'd ; and therefore I besought him excuse me. Nevertheless he was so urgent for it, that not to appear discourteous I consented to obey him. And till the meat came, the king commanded some of his servants to conduct me to sit down by them in the porch, where I might sit after our manner, but not in the king's sight.

Hereupon I withdrew with some of his men to entertain me, and in the mean time, the king remain'd talking with the rest of them concerning me, commanding me much for several things, but, above all, for a good presence, for speaking truely and discreetly like a Gentleman, and for my civil department. But, before I proceed further, I will here present you with a rough and unmeasur'd draught of the Kings House and the place wherein he was ; so far as may suffice for the better understanding of what is already said and is to follow after.


ಈ ರೀತಿಯ ಉಲ್ಲೇಖನದೊಂದಿಗೆ ಡೆಲ್ಲವಲ್ಲೆಯು ಅರಮನೆಯ ಸ್ಥೂಲ ನಕ್ಷೆಯೊಂದಿಗೆ ಭೇಟಿಯಿತ್ತ ವಿವರಣೆಯು ಇಂತಿದೆ. ಇದನ್ನು Edward Grey ರವರು ಪರಿಷ್ಕರಿಸಿದಂತಿದೆ.



Description

1. At the foot of this design is the Gate of the palace.
2. The walk leading to it, and included within the enclosure of the palace.
3. A great plain and sown field.
4. The turning of the walk before the House, where the shont lines, intersecting the outward line towards the field, represent the trees planted at equal distances and in order.
5. Seven or eight wooden stairs leading up to the porch.
6. The porch of the House, in which the little squares, near the outer lines are the wooden pillars which support it, and the surrounding lines are the walls,
7. The Kings servants standing on either side without the little porch of the chamber.
8. I, **Pietro Della Valle,** when I first talk'd with the king, standing.
9. The Room wherein the King was,
10. The King, sitting on the ground upon a little, coarse cloth.
11. The King's Nephew, sitting on the ground upon a little mat.
12. The King's servants standing.
13. I, **Pietro Della Valle** of Italy sitting in the said room on the ground upon a little low table, whilst I ate and discours'd with the king a very long time togethere ; the place mark'd with the number 13 being that where they set the meat before me.
14. A small open court.
15. A small slope, or bank, in the said court, leading from the more inward chambers to that where the king was.
16. Inner chambers and Lodgings, which what they were I saw not ; but they were of very bad earthernbuildings, low and covered with thatch, like cottages, that is with plam leaves ; which are always to be understood when I speak of cottages, or Houses, cover'd with thatch in India.
17. I, **Pietro Della Valle of Italy** sitting between two of the King's servants upon the side of the porch, (after having spoken the first time which the King) entertaining me while the meat was preparing.

ಇಟಲಿ ಪ್ರವಾಸಿಯು ದಾಖಲಿಸಿದ ಕೆಳದಿ ಅರಸರ ಅರಮನೆಯೂ ಸಮಕಾಲೀನ ಇತಿಹಾಸದಲ್ಲಿ ಪ್ರಾಮುಖ್ಯ ವಾದುದು. ಅದು ಈ ಕೆಳಕಂಡಂತಿದೆ.



1. The little piazza without the first Gate of the palace.
2. The first Gate guarded with Balusters.
3. A great court within the first Gate which should be longer in proportion to the breadth, but is drawn thus in regard of the scantness of the paper ; it hath lodgings about it in several places.
4. The Kings house and the Apartment of his women.
5. The porch of the said House.
6. The second Gate.
7. Entrance with iron bar, kept shut.
8. A Door leading into the little court.
9. Several Lodgings.
10. The little court.
11. The place whence the wild pig was brought.
12. The king, denoted in several places, according as he moved whilst he was speaking.
13. The king's two Nieces.
14. The grate man of the king who serv'd for interpreter.


15. The Queen in the higher cloyster.

16. Our Company with a greater number of courtiers on each side of us than the place allows here to be denoted.

17. Our captain at the close of the Audience and when he received the (Lagne).

The king of KELADI had a record office (kaditada chavadi) in this place. copper plates, Palmyra leaf books and ancient paper formed the archives of this office, According to contemporary history Peter Mundi (England) who had seen this office at Ikkeri fort in 1637 documented: The country people write on palm leaves with an iron bodkin, as before mentioned. They say they will endure 100 years. Att my beeing att Eccary I was att the kings Secretaries, where in his house, I saw many hundreds (I may say Thousands) of those written palme leaves, beeing very long and Narrow, handsomely rouled uppe, those again tied into bundles, hung upp in order about his roome or office so that hee may (not improperly) bee stiled Master of the Rules.

The ground plan of the temple documented by Della Valle of Italy is very interesting in the Contemporary history of India and Italy seen thus: (Description of the temple in the Italian language and script).Depictor of Edward Grey as the keladi (Ikkeri) temple Ground plan documented in the Italian's MSS.




1. The street.
2. The stairs of the Entrance.
3. An high wall of Earth before the outer porch.
4. The outward porch with an high Earthen Floor.
5. Two small Idols in two Niches on outside of the ends of the porch.
6. The Gate, level with the Earthen wall No 3.
7. The Inner porch with an Earthen Floor higher, and that of the Gate, the wall, and the outer porch.
8. A void space between the porch and the Temple.
9. Part of the first Entrance of the Temple, lower than the plane of the gate and the said void space.
10. Part of the same, but one step higher.
11. (?) The said step, dividing the first Entrance in the middle.
12. The body of the Temple, situate between the first Entrance and the penetrate, or chancel, the dots denoting the rows of Torches.
13. A little door to go out at,
14. The penetrale, or chancel, where the oval denotes the statue of Bone, or **Basava**, upon the ground, (Even today Basava may be seen)
15. The Inmost part of the chancel, where the Idol **virena** stands.
16. A high Earthen wall encompassing the Temple.
17. Three little cells; in the first of which the oval represents the statue of Bone, or Basava.
18. An open square-court, or inclosure, surrounding the Temple which stands in the middle of it.
19. The walls thereof.
20. The Houses of such Men and Women as keep the temple.

ಲ್ಯೂಯಿ ರೈಸ್, ಪ್ರಾಚ್ಯವಸ್ತು ಸಂಗ್ರಹಾಲಯ ನಿರ್ದೇಶಕರ ಕಾಲದಲ್ಲಿ ಸಿದ್ಧಪಡಿಸಿದ ಇಕ್ಕೇರಿ ದೇವಾಲಯದ ತಳಪಾಯದ ನಕ್ಷೆ.

ಉತ್ಖನನದ ಪ್ರಾಮುಖ್ಯತೆ

ಅಂತರ ರಾಷ್ಟ್ರೀಯವಾಗಿ ಕೆಳದಿ ಇತಿಹಾಸದ ಪುರಾತತ್ವ ಪಳೆಯುಳಿಕೆಗಳು ಗಮನಾರ್ಹವಾದುದು. ಇಟಲಿಯ ಪಿಯತ್ರೋ ಡೆಲ್ಲವಲ್ಲೆಯು ಈ ಇತಿಹಾಸ ಮತ್ತು ಸಂಸ್ಕೃತಿಯನ್ನು ಕ್ರಿ.ಶ. ೧೬೨೩ ರಲ್ಲಿ ಇಲ್ಲಿ ಬಹುಕಾಲವಿದ್ದು



ಮನಗಂಡು, ತಾನು ಕಣ್ಣಾರೆ ಕಂಡುದನ್ನು ಕಿವಿಯಾರೆ ಕೇಳಿದುದನ್ನು ತನ್ನದೇ ಆದ ಇಟಲಿ ಭಾಷೆಯಲ್ಲಿ ಉದ್ಗರಿಸಿದುದು ಕೆಳದಿ–ಇಟಲಿ ಪುರಾತತ್ವ ಇತಿಹಾಸದಲ್ಲಿ ಪ್ರಾಮುಖ್ಯವಾದುದು. ಕೆಳದಿಗೂ ಭೇಟಿಯಿತ್ತು ಇಲ್ಲಿಯ ನಿವಾಸಿಗಳಾಗಿದ್ದ ಜೋಯಿಸರ ಮನೆಯಿಂದಲೂ ಈ ಭಾಗದ ಇತಿಹಾಸವನ್ನು ಸಂಗ್ರಹಿಸಿದ್ದಾರೆ. ಇಟಲಿ ಲಿಪಿ–ಭಾಷೆಯಲ್ಲಿರುವ ಕೆಳದಿ ಕೋಟೆ, ದೇವಾಲಯ ಅರಮನೆ ಮುಂತಾದ ಪ್ರಮುಖಾಂಶಗಳಿಂದ ಕೂಡಿದ ಡೆಲ್ಲವಲ್ಲೆಯ ಹಸ್ತಪ್ರತಿ ಇಟಲಿ ತ್ರಿಯಸ್ಥೆ ಮ್ಯೂಜಿಯಂನಲ್ಲಿದೆ. ಕನ್ನಡ ಹಸ್ತಪ್ರತಿ ಅಧ್ಯಯನಕ್ಕೆ ಕೆಳದಿಗೆ ಭೇಟಿಯಿತ್ತಿದ್ದ ಶ್ರೀಮತಿ ತಿಝಿಯಾನ ರಿಪೇಪಿಯವರು ಇದನ್ನು ತಿಳಿಸಿ ಉಪಕರಿಸಿದ್ದಾರೆ. ಈ ಹಸ್ತಪ್ರತಿಯನ್ನು ೧೬೬೪ ರಲ್ಲಿ ಜಿ.ಹಾವೆರ್ಸ್ (Havers) ರವರು ಲಿಪ್ಯಂತರಿಸಿ ಬೆಳಕಿಗೆ ತಂದಿದ್ದಾರೆ. ಎಡ್ವರ್ಡ್ ಗ್ರೇ (Edward Grey) ರವರು ಪರಿಷ್ಕರಿಸಿ ಎರಡು ಸಂಪುಟಗಳಲ್ಲಿ ಪ್ರಕಟಿಸಿದ್ದು ಕಂಡು ಬರುತ್ತದೆ. ಡೆಲ್ಲವಲ್ಲೆಯ ದಾಖಲೆ ಗಳಲ್ಲಿರುವ ಎಲ್ಲಾ ಪುರಾತತ್ವ ಇತಿಹಾಸದ ಪಳೆಯುಳಿಕೆಗಳನ್ನು ಇದರಲ್ಲಿ ನಾನು ವಿವರಿಸಿದಂತೆ ಈಗಲೂ ಅವಲೋಕಿಸ ಬಹುದು. ಕೆಳದಿ–ಇಟಲಿ ಪುರಾತತ್ವ ಬಾಂಧವ್ಯದಲ್ಲಿ ವೈಜ್ಞಾನಿಕವಾಗಿ ಉತ್ಖನನ ಕೈಗೊಂಡು ಮುಂದಿನ ಯುವ ಪೀಳಿಗೆಗೆ, ಅಧ್ಯಯನ ಕಾಂಕ್ಷಿಗಳಿಗೆ ಯೋಜನೆ ಕೈಗೊಂಡು ಜನಸಾಮಾನ್ಯರ ಸಲುವಾಗಿ ಉಳಿಸುವುದು ಅತ್ಯಗತ್ಯ.

ಉತ್ಖನನದಲ್ಲಿ ಕಂಡುಬರುವ ಸಂಶೋಧನೆ ಅಘೋರೇಶ್ವರ ದೇವಾಲಯ

ಇಟಲಿ ಪ್ರವಾಸಿಯು ೧೬೨೩ ರಲ್ಲಿ ದಾಖಲಿಸಿದ ದೇವಾಲಯ ನಕ್ಷೆ, ೧೬೬೪ ರಲ್ಲಿ ಜಿ. ಹ್ಯಾವೆರ್ಸ್ (G.Havers) ಇಟಲಿ ಭಾಷೆಯಿಂದ ಪ್ರಾಚೀನ ಇಂಗ್ಲೀಷ್‌ಗೆ ಭಾಷಾಂತರಿಸಿದ ಭಾಗಗಳು. (ಹಕ್ಲುಯಿತ್ ಸೊಸೈಟಿ ೪, ಲಿಂಕನ್ಸ್ ಇನ್ ಫೀಲ್ಡ್ಸ್, ಡಬ್ಲ್ಯೂ ಸಿ, ಲಂಡನ್ Hakluyt Society 4, Lincolns in Fields, W.C)ನಿಂದ ಪ್ರಕಟವಾದ ಎಡ್ವರ್ಡ್ ಗ್ರೇ (Edward Grey) ರವರ ಪರಿಷ್ಕೃತ ಸಂಪಾದನೆಗಳಲ್ಲಿರುವ ನಕ್ಷೆ. ಮೈಸೂರು ಪ್ರಾಚ್ಯವಸ್ತು ಸಂಶೋಧನಾಲಯದಿಂದ ಲ್ಯೂಯಿ ರೈಸ್ ನಿರ್ದೇಶನದಲ್ಲಿ ಪ್ರಕಟವಾದ ನಕ್ಷೆಗಳು ಕ್ರಮವಾಗಿ ೧೬೨೩ ರಿಂದ ಸ್ವಾತಂತ್ರ್ಯ ಪೂರ್ವದವರೆಗೆ ಪುರಾತತ್ವದಲ್ಲಿ ಈ ಕೆಳಗಿನ ಅಂಶಗಳು ಕಂಡುಬಂದದ್ದು ಸಂಶೋಧನೆ ಯಾಗುವುದು ಅಗತ್ಯ.

೧. ಡೆಲ್ಲವಲ್ಲೆಯ ನಕ್ಷೆಯಲ್ಲಿ ಈಗಿನ ತಳಪಾಯದಲ್ಲಿ ಬಸವನ ದೇವಾಲಯ, ಬಲಿಪೀಠ ಇರುವುದಿಲ್ಲ. ಕೆಳದಿ ನೃಪ ವಿಜಯ ಪ್ರಕಾರ ೧೬೨೩ರ ನಂತರ ಇದು ನಿರ್ಮಾಣವಾಗಿರಬೇಕು ಹಾಗೆಯೇ ಮುಖ ಮಂಡಪ, ಪಾರ್ವತೀ ದೇವಾಲಯುವೂ ಹಂತ ಹಂತವಾಗಿ ನಿರ್ಮಾಣವಾಗಿರುವುದು ಕಂಡು ಬರುತ್ತದೆ. ಅಮೃತ ಶಿಲೆಯ ಬಸವನ ವಿಗ್ರಹ ಗಮನಾರ್ಹ.

೨. ಇಟಲಿ ವಿದ್ವಾಂಸನ ಕೃತಿಯಲ್ಲಿ ಕಂಡುಬರುವ ಪುರಾತತ್ವ ಅಂಶಗಳು ಬಹು ಮಟ್ಟಿಗೆ ಈಗಿನ ಕೆಳದಿ ಅವಶೇಷಗಳಲ್ಲಿ ಸಾಮ್ಯತೆ ಕಂಡುಬರುವುದರಿಂದ ವೈಜ್ಞಾನಿಕ ಉತ್ಖನನ ಇಟಲಿ ವಿದ್ವಾಂಸರು, ಪುರಾತತ್ವಜ್ಞರು, ಕೆಳದಿ ಸಂಶೋಧನಾ ಕೇಂದ್ರಗಳ ಸಹಭಾಗಿತ್ವದಲ್ಲಿ ಭಾರತ ಸರಕಾರ ಯೋಜನೆ ಹಮ್ಮಿಕೊಂಡು ಮುಂದಿನ ಪೀಳಿಗೆಗೆ ಉಳಿಸಲು ಕಾರ್ಯಪ್ರವೃತ್ತವಾಗುವುದು ಅಗತ್ಯ.

ಮೈಸೂರು ತಲಕಾಡು ಉತ್ಖನನಗಳು ದೇಶೀಯ ಉತ್ಖನನಗಳಾಗಿವೆ. ಅಂತರಾಷ್ಟ್ರೀಯವಾಗಿ ಇತಿಹಾಸದ ಇಕ್ಕೇರಿ, ಕೋಟೆ, ಅರಮನೆ ಉತ್ಖನನವು ದೇಶ–ವಿದೇಶಗಳ ವಿದ್ವಾಂಸರನ್ನು ಆಕರ್ಷಿಸುವ ಸಾಮರ್ಥ್ಯತೆಯಿದೆಯೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಕೆಳದಿ ಸಂಶೋಧನಾ ಕೇಂದ್ರದ ನೇತೃತ್ವದಲ್ಲಿ ಭಾರತದ ಪುರಾತತ್ವ ಇಲಾಖೆಯು

ಇದನ್ನು ಕಾರ್ಯಗತಗೊಳಿಸುವುದು ಅತ್ಯಗತ್ಯ. ಭೂದಾಹಿಗಳ ಆಕ್ರಮಣಕ್ಕೆ ಸಿಕ್ಕದಂತೆ ಇದನ್ನು ಮುಂದಿನ ಇತಿಹಾಸಾಧ್ಯಯನ ಪೀಳಿಗೆಗೆ ಉಳಿಸುವುದೂ ಅಷ್ಟೇ ಪ್ರಾಮುಖ್ಯವಾದುದು.

ಪ್ರವಾಸೋದ್ಯಮದಲ್ಲಿಯೂ ಆಕರ್ಷಣೀಯ ಈ ಕ್ಷೇತ್ರವು ಅಂತರಾಷ್ಟ್ರೀಯ ಖ್ಯಾತಿ ಗಳಿಸಬಲ್ಲುದು. ಇದರಿಂದ ಕರ್ನಾಟಕ ಚರಿತ್ರೆಯಲ್ಲಿ ಕನ್ನಡದ ಹಿರಿಮೆ ಹಿಗ್ಗುವುದಲ್ಲದೆ, ಇಟಲಿ ವಿದ್ವಾಂಸರನ್ನೂ ಆಕರ್ಷಿಸಲು ಉತ್ತೇಜನ ಲಭಿಸಿದಂತಾಗುತ್ತದೆ. ಡೆಲ್ಲವಲ್ಲೆಯ ಪೂರ್ತಿ ಹಸ್ತ ಪ್ರತಿಯನ್ನು ಕೆಳದಿ ಮ್ಯೂಜಿಯಂನಲ್ಲಿ ಪ್ರದರ್ಶನಕ್ಕಿಡುವುದೂ ಅಗತ್ಯ. ತನ್ಮೂಲಕ ವಿಶ್ವಸಾಂಸ್ಕೃತಿಕ ಪರಂಪರೆಗೆ ಇಕ್ಕೇರಿ ಅರಮನೆ-ಕೋಟೆಗಳು ಸೇರುವಲ್ಲಿ ಸರಕಾರವು ಕಾರ್ಯೋನ್ಮುಖ ವಾಗುವಂತೆ ಮನವಿ ಮಾಡಿಕೊಳ್ಳುವೆನು.

೭೧

ವೈವಿಧ್ಯಮಯ ನಗರಗಳು ಮತ್ತು ಶಾಸ್ತ್ರಗ್ರಂಥಗಳು

ಡಾ. ಕೂ.ಸ. ಅಪರ್ಣ*

"ಜನ್ಯೈಃ ಪರಿವೃತಂ ದ್ರವ್ಯ ಕ್ರಯವಿಕ್ರಯಕಾದಿಭಿಃ ॥
ಅನೇಕ ಜಾತಿ ಸಂಯುಕ್ತಂ ಕರ್ಮಕಾರ್ಯೈ; ಸಮನ್ವಿತಂ ।
ಸರ್ವದೇವತಾ ಸಂಯುಕ್ತಂ ನಗರಂ ಚಾಭಿಧೀಯತೇ ॥

ನಗರದ ಬಗ್ಗೆ ಕಾಮಿಕಾಗಮವು(I.೨೦.೫-೬) ಮೇಲಿನಂತೆ ವಿವರಿಸಿದೆ. ಗ್ರಾಮಕ್ಕಿಂತ ದೊಡ್ಡದಾದುದು ನಗರ

(City/Town) ಎಂದು ಸ್ಥೂಲವಾಗಿ ಹೇಳಬಹುದು. ಹಲವು ವಿದ್ವಾಂಸರ ಅಭಿಪ್ರಾಯದಂತೆ, ಹಲವು ಗ್ರಾಮಗಳ ಗುಂಪು ದೊಡ್ಡ ನಗರಕ್ಕೆ ದಾರಿ ಮಾಡಿಕೊಟ್ಟಿತು.[೧] ಹೀಗಾಗಿ, ಗ್ರಾಮದ ವಿಸ್ತೃತ ರೂಪವೇ ನಗರ ಎನಿಸಿದೆ. 'Large majority of Indian Towns had their origin in Villages......The towns had a smaller beginning from a village' ಎಂದು ದತ್ತ್ ಅವರು ಹೇಳಿದ್ದಾರೆ.[೨] ಮಾನಸಾರದ ಪ್ರಕಾರ ಗ್ರಾಮ, ನಗರ ಮತ್ತು ದುರ್ಗ-ಇವುಗಳಿಗೆ ವ್ಯತ್ಯಾಸವಿಲ್ಲ. ಗ್ರಾಮ, ನಗರ ಎಂಬುವು ವಸತಿಗಾಗಿ ಇದ್ದುದು; ದುರ್ಗವು ರಕ್ಷಣೆಗಾಗಿ ಇದ್ದುದು; ಹೀಗಾಗಿ, ಎಲ್ಲವೂ ಜನವಸತಿಯ ಉದ್ದೇಶದಿಂದ ನಿರ್ಮಾಣವಾದದ್ದು ಎಂದು ಹೇಳಬಹುದು.[೩] ಪ್ರಾಚೀನ ಭಾರತದಲ್ಲಿ ಗ್ರಾಮ, ನಗರ ಮತ್ತು ದುರ್ಗದ ಮಧ್ಯೆ ವ್ಯತ್ಯಾಸವಿರಲಿಲ್ಲವೆಂದೂ ಒಂದೆಡೆ ಸ್ಪಷ್ಟಪಡಿಸಲಾಗಿದೆ.[೪] ಇದರಂತೆ, ಗ್ರಾಮಮೂಲದಿಂದ ರೂಪುಗೊಂಡ ನಗರಗಳು ಸ್ಥಳ, ವಸತಿವ್ಯವಸ್ಥೆ, ಉದ್ದೇಶ-ಇತ್ಯಾದಿ ಭೇದಗಳ ಆಧಾರದಿಂದ ವಿವಿಧ ಪ್ರಕಾರಗಳಾಗಿ ರೂಪುಗೊಂಡವು. ಶಾಸ್ತ್ರಗ್ರಂಥಗಳು ಅದನ್ನು ದಾಖಲಿಸಿದವು. ಮಾನಸಾರ, ಮಯಮತ ಮುಂತಾದ ವಾಸ್ತುಶಾಸ್ತ್ರ ಗ್ರಂಥಗಳಲ್ಲಿ ವಿವಿಧ ರೀತಿಯ ನಗರಗಳ ಬಗ್ಗೆ ವಿವರಗಳಿವೆ. ಕಾಮಿಕಾಗಮ(I.೨೦), ಸಮರಾಂಗಣಸೂತ್ರಧಾರ (i.೧೦ ಮತ್ತು ೧೮), ವಿಶ್ವಕರ್ಮ ವಾಸ್ತುಶಾಸ್ತ್ರ(ಅ.೮ ಮತ್ತು ೯) ಕೌಟಿಲ್ಯನ ಅರ್ಥಶಾಸ್ತ್ರ(I.೧ ಮತ್ತು ೪),[೫] ವಿಮಾನಾರ್ಚನಕಲ್ಪ (ಅ.೩)[೬] – ಈ ಗ್ರಂಥಗಳಲ್ಲೂ ನಗರಗಳನ್ನು ಕುರಿತು ವಿವರಣೆಗಳಿವೆ.[೭] ಶಿಲ್ಪರತ್ನ (ಅ.೫), ಈಶಾನಶಿವ ಗುರುದೇವಪದ್ಧತಿ (ಕ್ರಿಯಾ.ಅ.೨೫)-ಇವುಗಳಲ್ಲೂ ನಗರಗಳ ಬಗ್ಗೆ ವಿವರಗಳಿರುವುದಾಗಿ ತಿಳಿದುಬರುತ್ತದೆ.[೮] ಈ ಲೇಖನದಲ್ಲಿ, ಮಾನಸಾರ ಮತ್ತು ಮಯಮತದಲ್ಲಿರುವ ವಿವರಗಳನ್ನು ಮಾತ್ರ ಮುಖ್ಯವಾಗಿ ಪರಿಗಣಿಸಲಾಗಿದೆ. ಈ ಎರಡೂ ಗ್ರಂಥಗಳ ೧೦ನೇ ಅಧ್ಯಾಯದಲ್ಲಿ ಈ ವಿವರಗಳಿವೆ. ಇವುಗಳನ್ನು ಗಮನಿಸಿದರೆ, 'ನಗರ' ಎಂಬುದು ಒಂದು ಸಾಮಾನ್ಯ ಶಬ್ದವಾಗಿರುವಂತೆಯೇ ಒಂದು ಪಾರಿಭಾಷಿಕ ಪದವೂ ಆಗಿದೆ ಎಂಬುದು ಅರ್ಥವಾಗುತ್ತದೆ.

ಮಾನಸಾರದಲ್ಲಿ ಮೊದಲಿಗೆ ವಿವಿಧ ಹಂತದ ರಾಜರ ನಗರಗಳ ಅಳತೆಯ ಬಗ್ಗೆ ಹೇಳಿದೆ (೧೦.೨-೧೬).

ಉದಾ: ಅಸ್ತ್ರಗ್ರಾಹಿನ್, ಪ್ರಾಹಾರಕ-ಇತ್ಯಾದಿ (ಮಯಮತದಲ್ಲಿ ಈ ವಿವರವಿಲ್ಲ). ನಗರಗಳ ಸಾಮಾನ್ಯ ಅಳತೆಯ ಬಗ್ಗೆ ಹೇಳುವಾಗ, ಅದರ ಉದ್ದವು ಅಗಲದ ೧ ೧/೨, ೧ ೩/೪ ಅಥವಾ ಎರಡರಷ್ಟಿರಬಹುದೆಂದಿದೆ. ಇನ್ನೊಂದು ರೀತಿಯಲ್ಲಿ, ಅದೇ ಕ್ರಮದಲ್ಲಿ (ದಂಡದ ಅಳತೆಯಂತೆ), ೧ ದಂಡದಷ್ಟು ಅಂತರವನ್ನು ಹೆಚ್ಚಿಸುತ್ತಾ ಉದ್ದವು ಅಗಲದ ಎರಡರಷ್ಟಿರಬೇಕು

(೧೦.೧೬-೧೮); ಅಲ್ಲದೆ ಖೇಟ, ಖರ್ವಟ ಇತ್ಯಾದಿ ನಗರಗಳ ಅಳತೆಯು ಅದೇ ಹೆಸರಿನ ಗ್ರಾಮದ ಅಳತೆಯಷ್ಟೇ ಇರಬೇಕು ಎಂದೂ ಮಾನಸಾರವು ಹೇಳಿದೆ (೧೦.೧೮). ಮಾನಸಾರದ ಪ್ರಕಾರ, ನಗರದ ಚಿಕ್ಕ ಅಳತೆಯು ೧೦೦x೨೦೦x೪ ಹಸ್ತ ಹಾಗೂ ದೊಡ್ಡ ಅಳತೆಯು ೭೨೦೦x೧೪೪೦೦x೪ ಹಸ್ತ ಎಂದೂ ಒಂದೆಡೆ ಉಲ್ಲೇಖಿಸಿದೆ.[೯] ಮಯಮತವು ನೀಡುವ ಅಳತೆಯು ಈ ರೀತಿ ಇದೆ: ನಗರದ ಅಳತೆಯು ೩೦೦ ದಂಡದಿಂದ ೮೦೦೦ ದಂಡದವರೆಗಿರಬಹುದು. ಮಧ್ಯೆ ೧೦೦ ದಂಡಗಳನ್ನು ಕ್ರಮವಾಗಿ ಹೆಚ್ಚಿಸುತ್ತಾ ಹೋದರೆ, ಒಟ್ಟು ೭೮ ರೀತಿಯ ಅಳತೆಯನ್ನು (ಅಗಲ) ಪಡೆಯಬಹುದು. 'ಕ್ಷುದ್ರ' ನಗರದಲ್ಲಿ, ಇದೇ ರೀತಿ ೧೦ ದಂಡಗಳ ಅಂತರವನ್ನು ಹೆಚ್ಚಿಸುತ್ತಾ, ೧೦೦ ದಂಡದಿಂದ ೩೦೦ ದಂಡದವರೆಗೆ ೨೧ ವಿವಿಧ ಅಳತೆ(ಅಗಲ)ಗಳನ್ನು ಪಡೆಯಬಹುದು(೧೦.೧-೩).[೧೦] ಇದರೊಂದಿಗೆ ಮಯಮತವು, ಖೇಟ, ಖರ್ವಟ ಮುಂತಾದ ನಗರಗಳ

* ೧೬೪೮, ೧೭ನೇ ಮುಖ್ಯರಸ್ತೆ, ಬನಶಂಕರಿ ೧ನೇ ಹಂತ, ಬೆಂಗಳೂರು-೫೦.

ಅಗಲವನ್ನು ಹೇಳಿದೆ (೧೦.೫-೧೧);[೧೧] ನಂತರ, ನಗರಗಳ ಉದ್ದವು, ಅಗಲದ ಎರಡರಷ್ಟು ಅಥವಾ ೧೪ರಷ್ಟು, ಇರಬೇಕು; ಇಲ್ಲವಾದಲ್ಲಿ ಉದ್ದವು ಅಗಲದ ೬ರಷ್ಟು ಅಥವಾ ೮ರಷ್ಟಿರಬಹುದೆಂದೂ ಸೂಚಿಸಿದೆ (೧೦.೧೧-೧೨). ನಗರದ ಸುತ್ತಲಿರುವ 'ವಪ್ರ'ವು (Surrounding Wall), ಚೌಕ, ಆಯುತ, ವೃತ್ತ, ಗೋಲವೃತ್ತ ಅಥವಾ ವೃತ್ತಾಯತ-ಈ ಆಕಾರದಲ್ಲಿರಬಹುದು; ಅದರ ಉದ್ದವು, ೭/೧೦, ೬/೮, ೫/೭, ೪/೫ ಅಥವಾ ೩/೪-ಈ ಅಳತೆಯಲ್ಲಿರಬಹುದು

(ಮಯ-೧೦.೧೩-೧೪); 'ಉತ್ಕೃಷ್ಟಪುರ'ದಲ್ಲಿ ಸುತ್ತಲ ವಪ್ರವು(ಪರಿಧಿ) ೧೬೦೦೦ ದಂಡದಿಂದ ೪೦೦೦ ದಂಡದವರೆಗಿರುತ್ತದೆ. ಅದನ್ನು ೫೦೦ ದಂಡಗಳ ಅಂತರದಿಂದ ಗಳಿಸಬಹುದು (೧೦.೪). 'ವಪ್ರ'ದ ಗಾತ್ರದ ಬಗ್ಗೆಯೂ ಇದರಲ್ಲಿ ವಿವರವಿದೆ. ಸುತ್ತಲ ವಪ್ರ('ಸಾಲಾ')ವು ('ವಪ್ರ'ದ ಅಡಿಭಾಗವು) ೨, ೩ ಅಥವಾ ೪ ಹಸ್ತವಿರಬೇಕು; ಉದ್ದವು ೭, ೧೦ ಅಥವಾ ೧೧ ಹಸ್ತವಿರಬೇಕು. ಅಂತೇ ಅದರ ಗಾತ್ರವು ಮೇಲ್ಭಾಗದಲ್ಲಿ ಅಡಿಭಾಗದ ೨/೩ರಷ್ಟಿರಬೇಕು. ಸುತ್ತ 'ಪರಿಖಾ' (Moat) ಇದ್ದು, ಒಳ-ಹೊರಗೆ ದೇವಾಲಯ ಇತ್ಯಾದಿಗಳಿರಬೇಕು (೧೦.೧೫-೧೬). 'ಸಮರಾಂಗಣ ಸೂತ್ರಧಾರ'ದ ಒಂದು ವಿವರದಂತೆ, ಪುರದಲ್ಲಿ (Town) ದೊಡ್ಡದು, ಮಧ್ಯಮ ಮತ್ತು ಚಿಕ್ಕದು ಎಂದು ೩ ವರ್ಗಗಳಿದ್ದು, ಅವುಗಳು ಕ್ರಮವಾಗಿ ೪೦೦೦ ಚಾಪ, ೨೦೦೦ ಹಾಗೂ ೧೦೦೦ ಚಾಪ ಉದ್ದವಾಗಿರುತ್ತವೆ. ಇವುಗಳ ಅಗಲವು ಉದ್ದದ ೧/೮, ೧/೪ ಅಥವಾ ೧/೨ರಷ್ಟು ಇರಬೇಕು (೧೦.೨).

ಮಾನಸಾರವು, ವಿವಿಧ ಪ್ರಕಾರದ ನಗರಗಳನ್ನು ಉಲ್ಲೇಖಿಸಿದೆ. ಗ್ರಂಥದಲ್ಲಿ ಹೇಳಿರುವ ೮ ಪ್ರಕಾರದ ನಗರಗಳೆಂದರೆ, ಕೇವಲ ನಗರ, ರಾಜಧಾನೀಯ, ಪುರ, ನಗರಿ, ಖೇಟ, ಖರ್ವಟ, ಕುಬ್ಜಕ ಮತ್ತು ಪತ್ತನ (೧೦.೧೯-೨೦). ಇದರೊಂದಿಗೇ ಅದು ಹೇಳಿರುವ ೮ ರೀತಿಯ ದುರ್ಗ/ದುರ್ಗನಗರ (Fortified Cities)ಗಳೆಂದರೆ-ಶಿವಿ(ಬಿ)ರ, ವಾಹಿನೀಮುಖ/ಸೇನಾಮುಖ, ಸ್ಥಾನೀಯ, ದ್ರೋಣಕ, ಸಂವಿದ್ಧ, ಕೊಲಕ, ನಿಗಮ ಮತ್ತು ಸ್ಕಂಧಾವಾರ. ಈ ೮ ನಗರಗಳು, ಸಂಗ್ರಾಮದ ಸಂದರ್ಭದಲ್ಲಿ ಅಥವಾ ವ್ಯಾವಹಾರಿಕವಾಗಿ, 'ದುರ್ಗ' ಎಂದೂ ಹೇಳಲ್ಪಡುತ್ತದೆಂದು ಮಾನಸಾರವು ಸ್ಪಷ್ಟಪಡಿಸಿದೆ (೧೦.೨೦-೨೧).

ಮಯಮತವೂ ಇದೇ ರೀತಿ ಒಟ್ಟಾರೆ ೧೬ ವಿಧದ ನಗರಗಳನ್ನು ಹೇಳಿದೆ (೧೦.೧೯, ೨೬-೩೬). ವ್ಯತ್ಯಾಸವೆಂದರೆ, ಮಾನಸಾರದಲ್ಲಿ ಪುರ ಮತ್ತು ನಗರೀ ಎಂದು ಬೇರೆ ಬೇರೆ ಪ್ರಕಾರಗಳಿದ್ದರೆ, ಇದರಲ್ಲಿ ಆ ಎರಡನ್ನೂ ಒಂದೇ ಆಗಿ ಹೇಳಿದೆ; 'ಕುಬ್ಜಕ' ರೀತಿಯನ್ನು ಇಲ್ಲಿ 'ಜನಸ್ಥಾನಕುಬ್ಜ' ಎಂದಿದೆ; 'ಸೇನಾಮುಖ' ರೀತಿಗೆ 'ವಾಹಿನೀಮುಖ' ಎಂಬ ಮತ್ತೊಂದು ಹೆಸರನ್ನು ಮಯಮತದಲ್ಲಿ ಹೇಳಿಲ್ಲ; ಅಲ್ಲದೆ, ಮಾನಸಾರದ 'ದ್ರೋಣಕ'ವನ್ನು 'ದ್ರೋಣಮುಖ' ಎಂದೂ, 'ಕೊಲಕ'ವನ್ನು 'ಕೊತ್ಮಕೊಲಕ' ಎಂದೂ, 'ಸಂವಿದ್ಧ' ರೀತಿಯನ್ನೇ ಬಹುಶಃ 'ವಿಡಂಬ' ಎಂದೂ ಮಯಮತದಲ್ಲಿ ಹೇಳಿದೆ. ಮಾನಸಾರದಲ್ಲಿ 'ಚೆರಿಕಾ' ರೀತಿಯನ್ನು ಪಟ್ಟಿಯಲ್ಲಿ ಸೇರಿಸಿಲ್ಲ; ಆದರೆ ಮಯಮತದ ಪಟ್ಟಿಯಲ್ಲಿ ಅದನ್ನು ಪ್ರತ್ಯೇಕವಾಗಿ ಹೇಳಿದೆ. ಸ್ಥಾನೀಯ, ದುರ್ಗ, ಪುರ, ಪತ್ತನ, ಕೊತ್ಮಕೊಲಕ, ದ್ರೋಣಮುಖ, ನಿಗಮ, ಖೇಟ, ಗ್ರಾಮ ಮತ್ತು ಖರ್ವಟ-ಈ ೧೦ ಪ್ರಕಾರಗಳನ್ನು ಸಂದರ್ಭಕ್ಕೆ ಅನುಸಾರವಾಗಿ ಸ್ಥಾಪಿಸಬೇಕು ಎಂದೂ ಮಯಮತವು ಹೇಳಿದೆ (೧೦.೯೨).[೧೨]

ವಿಶ್ವಕರ್ಮ ವಾಸ್ತುಶಾಸ್ತ್ರವು ೨೦ ರೀತಿಯ ನಗರಗಳನ್ನು ಹೇಳುತ್ತದೆ. ಅವು-ಪದ್ಮ, ಶ್ರೀಪ್ರತಿಷ್ಠಿತ, ಗುಹಾನಗರ, ಸರ್ವತೋಭದ್ರ, ಬಲಿದೇವ, ಅಷ್ಟಮುಖ, ವಿಶ್ವೇಶಭದ್ರ, ಪುರ, ನಂದ್ಯಾವರ್ತ, ಕಾರ್ಮುಕ, ದೇವನಗರ, ರಾಜಧಾನೀ, ಪ್ರಸ್ತರ, ವೈಜಯಂತ, ಮಾನುಷನಗರ, ಸ್ವಸ್ತಿಕ, ಪುಟಭೇದನ, ಗಿರಿನಗರ, ಚತುರ್ಮುಖ ಹಾಗೂ ಜಲನಗರ (೯.೪೧-೧೯೪).[೧೩] ಇದರೊಂದಿಗೆ, 'ಸಪ್ತವಿಧನಗರ' ಎಂದೂ ಒಂದೆಡೆ ಹೇಳಿದ್ದು, ಅವುಗಳೆಂದರೆ, ನಿಗಮನಗರ, ಸ್ಕಂಧಾವಾರ, ದ್ರೋಣಕ, ಕುಬ್ಜನಗರ, ಪಟ್ಟಣನಗರ, ಶಿಬಿರನಗರ ಹಾಗೂ ವಾಹಿನೀಮುಖ (೮.೩೮-೩೯). ಇವುಗಳಲ್ಲಿ ಕುಬ್ಜ ಮತ್ತು ಪಟ್ಟಣನಗರ ಬಿಟ್ಟು ಉಳಿದೆಲ್ಲವೂ 'ದುರ್ಗನಗರ'ಗಳಾಗಿವೆ.

ಅಪರಾಜಿತಪೃಚ್ಛ ಗ್ರಂಥವೂ ಅವುಗಳಿಗೇ ವಿಶಿಷ್ಟವಾದ ಆಕಾರವುಳ್ಳ ೨೦ ರೀತಿಯ ನಗರಗಳನ್ನು ಹೇಳಿರುವುದಾಗಿ ತಿಳಿದುಬರುತ್ತದೆ.[೧೪] ಅವು ಮಹೇಂದ್ರ, ಸರ್ವತೋಭದ್ರ, ಸಿಂಹಾವಲೋಕ, ವಾರುಣ, ನಂದ್ಯಾವರ್ತ, ನಂದ, ಪುಷ್ಪಕ, ಸ್ವಸ್ತಿಕ, ಪಾರ್ಶ್ವದಂಡ, ಜಯಂತ, ಶ್ರೀಪುರ, ರೂಪಮರ್ದನ, ಸ್ನಾಹ, ದಿತ್ಯ, ಉತ್ತರ, ಧರ್ಮ, ಕಮಲದ, ಶಕ್ರದ, ಮಹಾಜಯ ಹಾಗೂ ಪೌರುಷ. 'ವಿಮಾನಾರ್ಚನಕಲ್ಪ'ದಲ್ಲಿ ವಿವಿಧ ಪ್ರಕಾರದ ಗ್ರಾಮಗಳನ್ನು ಹೆಸರಿಸುವಾಗ, ನಗರಪ್ರಕಾರಗಳಾದ ನಗರ, ಪತ್ತನ, ಸೇನಾಮುಖ, ರಾಜಧಾನೀ, ಶಿಬಿರ-ಇವುಗಳನ್ನೂ ಹೇಳಿರುವುದು ಗಮನಾರ್ಹವಾಗಿದೆ (ಅ.೧೦, ಪು.೧೪). ಇದರಲ್ಲಿ ದುರ್ಗನಗರಗಳೂ ಸೇರಿವೆ.

'ಸಮರಾಂಗಣ ಸೂತ್ರಧಾರ'ದ ಒಂದು ಅಧ್ಯಾಯದಲ್ಲಿ ನಗರಗಳ ಬಗ್ಗೆ ವಿವರಗಳಿವೆ. ಅದರಲ್ಲಿ ಹೇಳಿರುವ ವಿವಿಧ ಪ್ರಕಾರಗಳೆಂದರೆ-(i) ರಾಜಧಾನೀ (ii) ಶಾಖಾನಗರ-a) ಕರ್ವಟ b) ನಿಗಮ c) ಗ್ರಾಮ d) ಘೋಷ[೧೫] (iii) ಇತರೆ

ಗ್ರಾಮಗಳು–a) ಪತ್ತನ, b) ಪುಟಭೇದನ, c) ಪಲ್ಲೀ ಮತ್ತು ಪಲ್ಲಿಕಾ(೧೮.೧–೬). ಸಮರಾಂಗಣ ಸೂತ್ರಧಾರದ ಮತ್ತೊಂದು ವಿವರದಂತೆ, ೯೮೯೦ ಅಥವಾ ೯೦೬೪[೧೬] ಗ್ರಾಮಗಳಿದ್ದರೆ, ಅದು ಉತ್ತಮವಾದ/ಪ್ರಶಸ್ತವಾದ ರಾಷ್ಟ್ರ (ಜ್ಯಾಯೋರಾಷ್ಟ್ರ), ಅಂದರೆ, ದೊಡ್ಡ ರಾಷ್ಟ್ರ; ೫೩೮೪ ಗ್ರಾಮಗಳಿದ್ದರೆ, ಅದು 'ಮಧ್ಯಮ ರಾಷ್ಟ್ರ'; ಹಾಗೂ ೧೫೪೮ ಗ್ರಾಮಗಳಿದ್ದರೆ, ಅದು 'ಕನೀಯರಾಷ್ಟ್ರ' (೧೦.೮೩–೮೬). ಹೀಗೆ, ಗ್ರಾಮಗಳ ಗುಂಪೇ 'ನಗರ' ಎಂಬುದನ್ನು ಇದು ಪರೋಕ್ಷವಾಗಿ ಹೇಳುತ್ತಿದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಗ್ರಾಮಗಳ ಬಗ್ಗೆ ಹೇಳುವಾಗ, ಸ್ಥಾನೀಯ, ದ್ರೋಣಮುಖ, ಕಾರ್ವಟಿಕ, ಸಂಗ್ರಹಣ–ಈ ದುರ್ಗ ನಗರಗಳನ್ನೂ ಪಟ್ಟಿಯಲ್ಲಿ ಸೇರಿಸಿದೆ (II.೧.(ಕ)ಪು.೮೮); ಸ್ಕಂಧಾವಾರದ ಬಗ್ಗೆಯೂ ಅದು ಇನ್ನೊಂದೆಡೆ ಹೇಳಿದೆ(X.೧.೧). ಕಾಮಿಕಾಗಮದಲ್ಲಿ ಗ್ರಾಮ–ನಗರಗಳ ಬಗ್ಗೆ ಒಟ್ಟಿಗೇ ಹೇಳುತ್ತಾ ಶಿಬಿರ, ಸೇನಾಮುಖ, ಮಠ, ರಾಜಧಾನೀ, ಕುಬ್ಜ, ಕೇವಲ, ಚೆರಿಕಾ– ಈ ವಿಧಗಳನ್ನು ಹೇಳಿದೆ. ಜೊತೆಗೆ, ನಗರ, ಖರ್ವಟ, ಪಟ್ಟಣಗಳ ಬಗ್ಗೆಯೂ ವಿವರಿಸಿದೆ (I.೨೦).

ಹೀಗೆ, ವಿವಿಧ ಪ್ರಕಾರಗಳನ್ನು ಗ್ರಂಥಗಳು ಹೇಳಿದ್ದು, ಅವುಗಳ ಲಕ್ಷಣಗಳನ್ನೂ ವಿವರಿಸಿವೆ. ಈ ಬಗ್ಗೆ ಈಗಾಗಲೇ ಕೃಷಿ ಮಾಡಿರುವ ಡಿ.ಎನ್. ಶುಕ್ಲಾ, ಬಿ.ಬಿ. ದತ್ ಮುಂತಾದ ವಿದ್ವಾಂಸರು ಈ ಪ್ರಕಾರಗಳ ವಿವರಗಳನ್ನು ಒಟ್ಟಾರೆಯಾಗಿ ನೀಡಿದ್ದಾರೆ; ಆದರೆ ಈ ಲೇಖನದಲ್ಲಿ, ಮಾನಸಾರ ಮತ್ತು ಮಯಮತ ಈ ಗ್ರಂಥಗಳೊಂದೊಂದನ್ನೇ ಪ್ರತ್ಯೇಕವಾಗಿ ತೆಗೆದುಕೊಂಡು, ಪೂರಕ ಗ್ರಂಥಗಳೊಂದಿಗೆ ತುಲನಾತ್ಮಕವಾಗಿ ವಿವರ ನೀಡಲಾಗಿದೆ. ಅದರಂತೆ, ಮಾನಸಾರ ಮತ್ತು ಮಯಮತ ಗ್ರಂಥಗಳಲ್ಲಿ ಹೇಳಿರುವ ನಗರಗಳ ಸ್ವರೂಪವನ್ನು ಇಲ್ಲಿ ಗಮನಿಸಬಹುದು.

೧. ಕೇವಲನಗರ : ನಾಲ್ಕು ದಿಕ್ಕಲ್ಲಿ ೪ ಗೋಪುರ ಇರಬೇಕು; ರಕ್ಷಾಗೃಹ ಇರಬೇಕು; ವಿಷ್ವಕ್ಸೇನಾಲಯ(?) ಇರಬೇಕು[೧೭]; ವಣಿಕರು, ಅಂಗಡಿಗಳಿಂದ ಕೂಡಿರಬೇಕು; ಅನೇಕ ಜನಗಳಿಂದ ತುಂಬಿರಬೇಕು; ಇದು 'ಕೇವಲನಗರ' ಎಂದು ಮಾನಸಾರವು ಹೇಳಿದೆ (೧೦.೨೪–೨೬). ಇದರೊಂದಿಗೆ, ರಾಷ್ಟ್ರಮಧ್ಯದಲ್ಲಿದ್ದು, ನದಿಯ ಹತ್ತಿರವಿದ್ದು, ಸಜ್ಜನರಿಂದ ಕೂಡಿದ್ದರೆ, ಅದು 'ಕೇವಲನಗರ' ಎಂದು ಮಯಮತವು ಕೆಲವು ವಿಶೇಷಣಗಳನ್ನು ಹೇಳಿದೆ (೧೦.೧೯–೨೦); ಜೊತೆಗೆ ಎಲ್ಲ ದೇವರ ದೇವಾಲಯಗಳಿರಬೇಕೆಂದೂ ಇದರಲ್ಲಿದೆ(೧೦.೨೧). 'It is a place of Inland trade and the headquarter of the district' ಎಂದೂ ಒಂದೆಡೆ ವಿಶ್ಲೇಷಿಸಲಾಗಿದೆ.[೧೮] ಕಾಡಿನಲ್ಲಿದ್ದು, ಜನಪದರಿಂದ ತುಂಬಿದ್ದು, ಅಲ್ಲಿ ಶೂದ್ರರಿದ್ದರೆ, ಅದು 'ಕೇವಲ' ಎಂದು ಕಾಮಿಕಾಗಮವು ಹೇಳಿರುವುದು ವಿಭಿನ್ನವಾಗಿದೆ (I.೨೦.೧೦).[೧೯]

೨. ರಾಜಧಾನೀ: ಮಯಮತವು 'ಕೇವಲನಗರ'ಕ್ಕೆ ಹೇಳಿದ ಕೆಲವು ವಿಶೇಷಣಗಳನ್ನು ಮಾನಸಾರವು 'ರಾಜಧಾನೀ'ಗೆ ಹೇಳಿದೆಯಲ್ಲದೆ, ಮಧ್ಯೆ ರಾಜ(–ಅರಮನೆ) ಇರಬೇಕು; ಹಾಗೂ ವಿಷ್ಣುವಿನ ದೇವಾಲಯ ಇರಬೇಕು ಎಂದಿದೆ (೧೦.೨೨–೨೪). ಮಯಮತದ ಪ್ರಕಾರ 'ಕೇವಲ ನಗರ'ದಲ್ಲಿ ಅರಮನೆ ಇದ್ದರೆ, ಅದು ರಾಜಧಾನಿ; ಇದಕ್ಕೆ ಸುತ್ತ ಗೋಡೆ, ಕಂದಕ, ವಪ್ರ (Rampart) ಇದ್ದು, ಎಲ್ಲ ದೇವರ ದೇವಾಲಯಗಳಿರಬೇಕು; ಚತುರಂಗ ಬಲವಿರಬೇಕು (೧೦.೨೧). ಹೀಗೆ ವಿವರಿಸುತ್ತಾ ಮಯಮತವು, ರಾಜಧಾನಿಯ ಬಗ್ಗೆ ಹೆಚ್ಚಿನ ವಿವರಗಳನ್ನು ನೀಡಿದೆ (೧೦.೨೧–೨೫). ಈ ಬಗ್ಗೆ ಹೇಳುತ್ತಾ ಡಿ.ಎನ್. ಶುಕ್ಲಾರವರು, ಇದನ್ನು 'Modern Metropolis' ಎಂದಿದ್ದಾರೆ.[೨೦] ಶುಕ್ಲಾಚಾರ್ಯರ ಶುಕ್ರನೀತಿಯಂತೆ, ಇದು ಅರ್ಧಚಂದ್ರ, ವೃತ್ತಾಕಾರ ಅಥವಾ ಚೌಕಾಕಾರದಲ್ಲಿರಬಹುದು[೨೧] ಹಾಗೂ ಕೇಂದ್ರದಲ್ಲಿ/ ಮಧ್ಯದಲ್ಲಿ 'ಸಭಾ' (Council Hall) ಇರಬೇಕೆಂದು ತಿಳಿದುಬರುತ್ತದೆ.[೨೨] ಕಾಮಿಕಾಗಮದಲ್ಲಿ, ಅರಮನೆ ಇದ್ದರೆ ಅದು ರಾಜಧಾನಿ ಎಂದು ಮಾತ್ರ ಹೇಳಿದೆ (I.೨೦.೧೫). ಚತುರಂಗ(ಬಲ)ಯುತವಾಗಿದ್ದು, ರಾಜ ಮತ್ತು ಅವನ ಭೃತ್ಯರಿದ್ದರೆ, ಅದು ರಾಜಧಾನೀ ಎಂಬುದು 'ವಿಮಾನಾರ್ಚನಕಲ್ಪ'ದ ಅಭಿಪ್ರಾಯ (ಅ.೩, ಪು.೧೩).

೩. ಪುರ : ಇದರ ವಿಸ್ತಾರವು ೧೦೦ ದಂಡದಿಂದ ೫೦೦ ದಂಡದವರೆಗಿರಬಹುದು. ಮಧ್ಯೆ ೧೦೦ ದಂಡಗಳ ಅಂತರವನ್ನು ಹೆಚ್ಚಿಸುತ್ತಾ ಈ ಗ್ರಾಮ ಪ್ರಕಾರದಲ್ಲಿ ೫ ರೀತಿಯ ಅಳತೆಗಳನ್ನು ಪಡೆಯಬಹುದು ಎಂದು ಮಯಮತವು ಹೇಳಿದೆ(೧೦.೧೦).[೨೩] ಕಾನನ, ಉದ್ಯಾನಗಳಿದ್ದು, ನಾನಾವಿಧದ ಜನಗಳ ಮನೆಗಳಿರಬೇಕು; ಮಾರುವವರು, ಕೊಳ್ಳುವವರ ಓಡಾಟವಿರಬೇಕು;[೨೪] ವೈಶ್ಯರ ಧ್ವನಿ ಕೇಳಿಸುತ್ತಿರಬೇಕು (ಅಂದರೆ, ವೈಶ್ಯರು ಹೆಚ್ಚಾಗಿರಬೇಕು); ೭ ದೇವರ ದೇವಾಲಯಗಳಿರಬೇಕು; ಇದು ಮಾನಸಾರದ ಪ್ರಕಾರ 'ಪುರ'ದ ರಚನೆ (೧೦.೨೭–೨೮).[೨೫] ಮಯಮತವು, 'ಪುರ'ದ ಸ್ಥಳ, ವ್ಯಾಪಾರ ಹಾಗೂ ಜನಗಳ ಬಗ್ಗೆ ಇದೇ ರೀತಿ ಹೇಳಿದ್ದರೂ, ವೈಶ್ಯರ ಬಗ್ಗೆ ವಿಶೇಷವಾಗಿ ಹೇಳಿಲ್ಲ. ದೇವಾಲಯದ ಬಗ್ಗೆಯೂ ಹೇಳಿಲ್ಲ (೧೦.೨೫–೨೬).[೨೬]

೪. ನಗರೀ : ಮೇಲೆ ಹೇಳಿದಂಥಾ 'ಪುರ' ರಚನೆಯಲ್ಲಿ ಅರಮನೆಯೂ ಇದ್ದರೆ, ಅದು 'ನಗರೀ' ಎಂದು ಮಾನಸಾರವು ಮಾತ್ರ ಹೇಳಿದೆ (೧೦.೨೮). ಮಯಮತವು ನಗರದ ಬಗ್ಗೆ ಹೇಳಿಲ್ಲ. 'ಪುರ'ದ ಬಗ್ಗೆ ಹೇಳಿದೆ; ಹೀಗೆ

ಹೇಳುವಾಗ ಅದು 'ಪುರ'ವನ್ನು 'ನಗರ'ವೆಂದೂ ಕರೆಯುಬಹುದೆಂದು ಹೇಳಿದೆ(೧೦.೨೬). [ಆದರೆ, ಮಾನಸಾರದಲ್ಲಿ 'ನಗರ'ದ ಬಗ್ಗೆ ಹೇಳಿದಂತೆ, ಇಲ್ಲಿ ಅರಮನೆಯನ್ನೇನೂ ಹೇಳಿಲ್ಲ]. ಶುಕ್ಲಾರವರೂ ಪುರ ಮತ್ತು ನಗರ–ಎರಡೂ ಒಂದೇ ಎಂದೇ ಸಮರ್ಥಿಸಿದ್ದಾರೆ.[೨೭] 'ನಗರ' ಶಬ್ದದ ಬಗ್ಗೆ ಹೇಳುತ್ತಾ ಆಚಾರ್ಯರವರು, 'Naga' lit. immovable, or rock, implying permanence and strength with reference to stone walls etc' ಎಂದಿದ್ದಾರೆ. ಅಲ್ಲದೆ, 'Pura' might have been prototype of pura, a developed city and Nagara is a full fledged capital city' ಎಂದು ಗುರುತಿಸಿದ್ದಾರೆ.[೨೮] ಇದರಂತೆ, 'ಪುರ'ವೇ ಹೆಚ್ಚು ಬೆಳೆದಾಗ, ಪರಿಪೂರ್ಣವಾಗಿ ಬೆಳೆದಾಗ, ಅದು 'ನಗರ' ಎನಸುತ್ತದೆನ್ನಬಹುದು. 'ಪುರ'ದ ಬಗ್ಗೆ ಏನನ್ನೂ ಹೇಳಿರದ ವಿಮಾನಾರ್ಚನಕಲ್ಪವು, ಅನೇಕ ಜನಗಳಿಂದ ಕೂಡಿದ್ದು, ಅನೇಕ ಶಿಲ್ಪಿ ಜನಗಳಿದ್ದು, ಕ್ರಯವಿಕ್ರಯಗಳಿಂದ ಕೂಡಿದ್ದರೆ, ಅದು 'ನಗರ' ಎಂದು ಹೇಳಿದೆ (ಅ.೩, ಪು.೧೩).[೨೯]

೫. ಖೇಟ : ಖೇಟ ರೀತಿಯ ನಗರದ ವಿಸ್ತಾರವು ೩೦೦ ದಂಡದಿಂದ ೪೦೦ ದಂಡದವರೆಗಿರಬಹುದಾಗಿದ್ದು, ಇದರ ಮಧ್ಯೆ ೨೦ ದಂಡಗಳನ್ನು ಹೆಚ್ಚಿಸುತ್ತಾ ಹೋಗಬಹುದು. ಹೀಗೆ ಮಾಡುತ್ತಾ, ೨ ಶ್ರೇಷ್ಠ, ೨ ಮಧ್ಯಮ ಮತ್ತು ೨ ಚಿಕ್ಕದು–ಹೀಗೆ ೬ ರೀತಿಯ ವಿಸ್ತಾರಗಳನ್ನು ಪಡೆಯ ಬಹುದಾಗಿದೆ. ಇದು ಮಯಮತದ ವಿವರ(೧೦.೫). ಇದನ್ನು ಚಿಕ್ಕನಗರ ಎಂದು ಒಂದೆಡೆ ಹೇಳಲಾಗಿದೆ.[೩೦] ಖೇಟವು ನದಿ ಅಥವಾ ಬೆಟ್ಟದಿಂದ ಸುತ್ತುವರಿದಿರಬೇಕು ಹಾಗೂ ಅಲ್ಲಿ ಶೂದ್ರರ ಮನೆಗಳಿರಬೇಕೆಂದು[೩೧] ಎರಡೂ ಗ್ರಂಥಗಳು ಹೇಳಿವೆ(ಮಾನ.೧೦.೨೯, ಮಯ–೧೦.೨೬). ಸುತ್ತ ಎತ್ತರವಾದ ಗೋಡೆ ಇರಬೇಕೆಂದೂ ಮಾನಸಾರವು ಹೇಳಿದೆ (೧೦.೨೯). ಇದು ಗ್ರಾಮಗಳ ಮಧ್ಯೆ ಇರುವುದೆಂದು ಶಿಲ್ಪರತ್ನವು ಹೇಳಿದೆ.[೩೨] ದತ್ ಅವರು, ವಿಸ್ತಾರದ ಆಧಾರದ ಮೇಲೆ ಈ ಪ್ರಕಾರವನ್ನು ೩ ಬಗೆಗಳಾಗಿ ವಿಂಗಡಿಸಲಾಗಿದೆ ಎಂದು ಹೇಳಿದ್ದಾರೆ; ಅದರಂತೆ, ಅವುಗಳ ಅಗಲವು ಕ್ರಮವಾಗಿ ೨೫೬, ೩೨೦ ಅಥವಾ ೩೮೪ ದಂಡಗಳಾಗಿದ್ದು, ಉದ್ದವು ಅಗಲದ ೧, ೧, ೧, ೧, ೧ ಅಥವಾ ಎರಡರಷ್ಟು ಅಥವಾ ಅದರಷ್ಟೇ ಇರುವುದೆಂದಿದ್ದಾರೆ.[೩೩] ಆದರೆ, ಈ ಅಗಲದ ಬಗ್ಗೆ ಮಯಮತವು ಗ್ರಾಮದ ಸಂದರ್ಭದಲ್ಲಿ ಹೇಳಿದೆ ಹಾಗೂ ನಗರದ ಸಂದರ್ಭದಲ್ಲಿ ಬೇರೆಯ ರೀತಿಯಲ್ಲೇ ಹೇಳಿದೆ.

೬. ಖರ್ವಟ : ಇದರ ವಿಸ್ತಾರದ ಬಗ್ಗೆ ಮಯಮತವು, ಇದು ೨೦೦ ದಂಡದಿಂದ ೪೦೦ ದಂಡದವರೆಗಿದ್ದು, ೫೦ ದಂಡಗಳನ್ನು ಹೆಚ್ಚಿಸುತ್ತಾ ೫ ರೀತಿಯ ವಿಸ್ತಾರಗಳನ್ನು ಪಡೆಯಬಹುದೆಂದಿದೆ (೧೦.೭). ಕೌಟಿಲ್ಯನ ಪ್ರಕಾರ ಇದು ೨೦೦ ಗ್ರಾಮಗಳ ಮಧ್ಯೆ ಇರಬೇಕು(II.೧(ಕ) ಪು.೮೯); ಶಿಲ್ಪರತ್ನದ ಪ್ರಕಾರ (೫–೨೮, ೬೭–೬೮)[೩೪] ಇದು ರಾಷ್ಟ್ರದ ಮಧ್ಯದಲ್ಲಿರುವುದು. ಸುತ್ತ ಪರ್ವತವಿದ್ದು, ವಿವಿಧ ಜಾತಿಯ ಜನರ ಮನೆ ಇರಬೇಕೆಂದು ಎರಡೂ ಗ್ರಂಥಗಳು ಹೇಳಿವೆ (ಮಾನ–೧೦.೩೦, ಮಯ–೧೦.೨೭).[೩೫] (ಸುತ್ತಲ 'ವಪ್ರ'ದ ಬಗ್ಗೆ ಇವು ಏನನ್ನೂ ಹೇಳಿಲ್ಲ; ಕಾರಣ, ಬಹುಶಃ ಸುತ್ತ ಪರ್ವತವಿರುವುದು ಎನಸುತ್ತದೆ).[೩೬] ಇದರೊಂದಿಗೆ ಮಾನಸಾರವು, 'ಸರ್ವಪ್ರಚಾರ ಸಂಯುಕ್ತಂ' ಎಂದು ಹೇಳಿದೆ. ಇದನ್ನು 'all kinds of pasturage' (ಹುಲ್ಲುಗಾವಲು, ಗೋಮಾಳ) ಎಂದು ಅನುವಾದಿಸಲಾಗಿದೆ. 'ಪ್ರಚಾರ' ಎಂಬುದಕ್ಕೆ ನಿಘಂಟಿನಲ್ಲಿ ಸಂಚರಿಸುವುದು, ನಡೆಯುವುದು ಎಂಬ ಅರ್ಥವಿದೆ. ಆದ್ದರಿಂದ, ಇದನ್ನು 'ಸಂಚಾರಕ್ಕೆ ಅನುಕೂಲವಾಗಿರಬೇಕು', ಎಂದು ಅರ್ಥೈಸಬಹುದೆನಸುತ್ತದೆ. ಈ ನಗರದಿಂದ ಪಕ್ಕದ ನಗರಗಳಿಗೆ ದಿನನಿತ್ಯದ ಆಹಾರ ಮತ್ತಿತರ ಸಾಮಗ್ರಿಗಳು ಸರಬರಾಜಾಗುವುದೆಂದು ಒಂದೆಡೆ ಹೇಳಲಾಗಿದೆ.[೩೭] ಈ ಹಿನ್ನೆಲೆಯಲ್ಲಿ ನೋಡಿದಾಗ, ಮೇಲಿನಂತೆ ಅರ್ಥೈಸುವುದು ಸೂಕ್ತವೆನಿಸುತ್ತದೆ. ವಣಿಕರಿಂದ ಕೂಡಿದ್ದು, ಬ್ರಾಹ್ಮಣರೂ, ಪುರವಾಸಿಗಳೂ ಇರುವುದು 'ಖರ್ವಟ' ಎಂಬುದು ಕಾಮಿಕಾಗಮದ ಒಕ್ಕಣಿಕೆ (I.೨೦.೭).

ಖರ್ವಟ ನಗರವು ಖೇಟದಂತೇ ಇರುವುದೆಂದು ಹೇಳಿರುವ ದತ್ ಅವರು, ಖೇಟದಂತೇ ಇದರ ಉದ್ದ–ಅಗಲಗಳ ಅನುಪಾತವು ಸಮನಾಗಿರಬಹುದೆಂದು ಹೇಳಿದ್ದಾರೆ. ಅಲ್ಲದೆ, ಇದು ಖೇಟಕ್ಕಿಂತ ದೊಡ್ಡದೆಂದೂ ಹೇಳಿದ್ದಾರೆ. ಆದರೆ, 'ಖರ್ವಟ' ಗ್ರಾಮವು 'ಖೇಟ' ಗ್ರಾಮಕ್ಕಿಂತ ದೊಡ್ಡದಾಗಿರುವುದೇ ಹೊರತು 'ಖರ್ವಟ' ನಗರವಲ್ಲ.[೩೮] ಮೇಲೆ ಹೇಳಿದಂತೆ, ಮಯಮತದ ವಿವರವನ್ನು ಗಮನಿಸಿದರೆ, ಖರ್ವಟಕ್ಕಿಂತ ಖೇಟನಗರವೇ ಹೆಚ್ಚು ವಿಸ್ತಾರವಾಗಿರುವುದು ಕಂಡುಬರುತ್ತದೆ(ವಿಸ್ತಾರದ ಆರಂಭದ ಮಿತಿ ಖರ್ವಟದಲ್ಲಿ ಕಡಿಮೆ ಇದೆ).[೩೯] ಆದರೆ, ದತ್ ಅವರು ಹೇಳಿರುವಂತೆ, (ಕಾರ್ಯದ ದೃಷ್ಟಿಯಿಂದ) ಇದೊಂದು ಪ್ರಮುಖಪಟ್ಟಣ ಎನ್ನಬಹುದು.

೭. ಕುಬ್ಜಕ : ಖೇಟ ಮತ್ತು ಖರ್ವಟ ನಗರಗಳ ಮಧ್ಯೆ ಇದ್ದು, ಎಲ್ಲಾ ತರಹದ ಜನ ಇರಬೇಕು.[೪೦] ಸುತ್ತ 'ವಪ್ರ' (Ramparts) ಇರಬಾರದೆಂಬುದು ಮಾನಸಾರದ ಅಭಿಪ್ರಾಯ (೧೦.೩೧). ಕುಬ್ಜಕದ ಸ್ಥಾನವನ್ನು ಮಯಮತವೂ ಇದೇ ರೀತಿ ಹೇಳಿದ್ದು ಜನಸಾಂದ್ರತೆ ಇರಬೇಕೆಂದಿದೆ; 'ವಪ್ರ'ದ ಬಗ್ಗೆ ಹೇಳಿಲ್ಲ(೧೦.೨೭).[೪೧]

ಗ್ರಾಮಗಳ ಸಮೀಪದಲ್ಲಿರುವುದು 'ಕುಬ್ಜ' ಎಂದು ಕಾಮಿಕಾಗಮದಲ್ಲಿ ಹೇಳಿದೆ (I.೨೦.೧೫). ಹೀಗೆ ನಗರಗಳ ಮಧ್ಯದಲ್ಲಿ/ಗ್ರಾಮದ ಸಮೀಪದಲ್ಲಿದ್ದು, ಅವುಗಳಿಂದ ರಕ್ಷಿತಗೊಂಡಿರುವುದರಿಂದಲೇ ಬಹುಶಃ ಇದಕ್ಕೆ ಪ್ರತ್ಯೇಕವಾಗಿ 'ವಪ್ರ' ಇರಬಾರದೆಂದು ಮಾನಸಾರವು ಹೇಳಿದೆ ಎನಿಸುತ್ತದೆ. ಇದು ಎರಡು ನಗರಗಳ ಮಧ್ಯೆ ಇರುವುದರಿಂದ ದತ್ತ್ ಅವರು 'ಖರ್ವಟ'ದ ಬಗ್ಗೆ ಹೇಳಿದಂತೆ, ಸುತ್ತಲ ಗ್ರಾಮ/ನಗರಗಳಿಗೆ ಆಹಾರ ಸಾಮಗ್ರಿ ಇತ್ಯಾದಿ ಸರಬರಾಜಿನ ಕಾರ್ಯ ನಿರ್ವಹಿಸುತ್ತಿದ್ದಿರಬಹುದು ಎಂದು ಊಹಿಸಲು ಸಾಧ್ಯವಿದೆ.

೮. ಪತ್ತನ : 'ಪತ್ತನ'ದ ಬಗ್ಗೆ ಮಾನಸಾರವು, ಇದು ಸಮುದ್ರದ ಹತ್ತಿರ ಇರಬೇಕು,[೪೨] ನಾನಾ ಜಾತಿಯವರಿರಬೇಕು, ಉದ್ದವಾದ 'ವಪ್ರ' ಇರಬೇಕು, ಕ್ರಯ-ವಿಕ್ರಯ ವ್ಯಾಪಾರ ಯಾವಾಗಲೂ ಇರಬೇಕು, ರತ್ನ, ರೇಷ್ಮೆ, ಕರ್ಪೂರ ಮುಂತಾದ ಪದಾರ್ಥಗಳನ್ನು ನಿತ್ಯವೂ ದ್ವೀಪಾಂತರಗಳಿಂದ ಆಮದು/ರಫ್ತು ಮಾಡುವ ಕೇಂದ್ರಸ್ಥಾನವಾಗಿರಬೇಕು-ಎಂದಿದೆ (೧೦.೩೨-೩೩). 'ಪತ್ತನ' ಎಂದರೆ ವೈಶ್ಯರು ಹೆಚ್ಚಾಗಿರುವರೆಂದೂ ಗ್ರಾಮದ ಸಂದರ್ಭದಲ್ಲಿ ಒಂದೆಡೆ ಹೇಳಿದೆ. (ಮಾನ-೯.೨೨೮-೯).[೪೩] 'ಪತ್ತನ'ದ ಬಗ್ಗೆ ಇದೇ ರೀತಿ ಹೇಳಿರುವ ಮಯಮತವು, ಅದು ಸಮುದ್ರದ ಬಳಿ ಇದ್ದು, ಕರಾವಳಿಯುದ್ದಕ್ಕೂ ವಿಸ್ತಾರವಾಗುವುದೆಂದೂ ಹೇಳಿದೆ. 'ಪತ್ತನ'ದಲ್ಲಿ ಒಂದು ನೇರ ರಸ್ತೆ ಇದ್ದು, ಮಾರುಕಟ್ಟೆ (Bazaar) ಇರುವುದಿಲ್ಲವೆಂದೂ,[೪೪] ಬೇರೆ ಎಲ್ಲಾ ನಗರಗಳಿಗೆ ಅದು ಇರಬಹುದೆಂದೂ ಈ ಗ್ರಂಥವು ಇನ್ನೊಂದೆಡೆ ಹೇಳಿದೆ (೧೦.೯೧). ಒಟ್ಟಾರೆಯಾಗಿ, ಇದೊಂದು ದೊಡ್ಡ ವ್ಯಾಪಾರೀ ಕೇಂದ್ರ. ದೇಶಾಂತರ/ದ್ವೀಪಾಂತರಗಳಿಂದ ವಸ್ತುಗಳು ಬರುತ್ತಿದ್ದು, ವಣಿಕರು ವ್ಯಾಪಾರಕ್ಕಾಗಿ ಬರುತ್ತಿರುವರು; ಇದು 'ಪತ್ತನ'(ವಿಮಾ.ಕಲ್ಪ-ಅ. ೩ ಪು. ೧೩). ಇದರೊಂದಿಗೆ ಕಾಮಿಕಾಗಮವು ವನಸ್ಥಾನವನ್ನೂ 'ಅಬ್ಧಿತೀರ'ವನ್ನೂ ಹೇಳಿದೆ. ಅಲ್ಲದೆ, ಕ್ರಯ-ವಿಕ್ರಯಗಳಿಂದ ಕೂಡಿದ್ದು, ದೇಶಾಂತರಗಳಿಂದ ಬರುವವರೂ, ನಾನಾ ಜಾತಿಯವರೂ, ವೈಶ್ಯರೂ ಇರುವುದು 'ಪಟ್ಟಣ' ಎಂದೂ ಅದು ಹೇಳಿದೆ(ಕಾಮಿಕಾ.I.೨೦.೮-೯).

ಇವೆಲ್ಲವೂ, ೮ ರೀತಿಯ ನಗರಗಳ ಬಗ್ಗೆ ಗ್ರಂಥಗಳು ಹೇಳಿರುವ ವಿವರಗಳು. ಇನ್ನುಳಿದ ೮ ದುರ್ಗನಗರ (Fortified cities)ಗಳ ಬಗ್ಗೆ ಇರುವ ವಿವರಗಳನ್ನಿಲ್ಲಿ ಗಮನಿಸಬಹುದು.

೧. ಶಿವಿ(ಬಿ)ರ : ರಾಜನು ಪರರಾಜ್ಯವನ್ನು ಗೆಲ್ಲಲೆಂದು ದಂಡಯಾತ್ರೆ ಹೊರಟಾಗ, ಬೇರೆ(ಶತ್ರು) ರಾಜರ ಗಡಿಯಲ್ಲಿ/ಅದರ ಸಮೀಪದಲ್ಲಿ ನಿರ್ಮಿತವಾದದ್ದು-ಶಿಬಿರ (Military encampment). ಸೇನೆಯು ತಂಗುವ ಸ್ಥಳ, ರಾಜನ ಬಿಡಾರ ಎಂದೂ ಹೇಳಬಹುದು. ಇದು ಸೇನಾಪತಿ ಹಾಗೂ ಸೈನ್ಯದಿಂದ ಕೂಡಿರಬೇಕು (ಮಾನ. ೧೦.೩೪-೩೫, ಮಯ-೧೦.೩೦).[೪೫] ಶಿಲ್ಪರತ್ನವು ಇದನ್ನು ಸ್ವದೇಶದಲ್ಲೂ ಸ್ಥಾಪಿಸಬಹುದೆಂದಿದೆ (೫.೫೮-೫೯).[೪೬] ಕಾಮಿಕಾಗಮವು ಇದರೊಂದಿಗೆ, ಇಲ್ಲಿ ಆನೆ, ಕುದುರೆಗಳಿಂದ ಕೂಡಿದ ಸೇನೆಯೂ ಇರಬೇಕೆಂದಿದೆ (I.೨೦.೧೧). ಶಿಲ್ಪರತ್ನವೂ ಕೂಡಾ, ಶಿಬಿರವು ಚತುರ್ವಿಧ ಬಲದಿಂದ ಕೂಡಿರ ಬೇಕೆಂದಿದೆ (ಪೂರ್ವೋಕ್ತ).[೪೭] ವಿಮಾನಾರ್ಚನಕಲ್ಪದಂತೆ, ನೃಪ, ಸೇನೆ, ಚಮೂಪತಿಗಳಿಂದ ಕೂಡಿರುವುದು-ಶಿಬಿರ (ಅ.೩, ಪು.೧೩). ಮಯಮತದ ವಿವರವು ಕೌಟಿಲ್ಯನು ಹೇಳುವ (X.೧.೧), ರಾಜನಿಂದ ಸ್ಥಾಪಿತವಾದ ಸ್ಕಂಧಾವಾರಕ್ಕೆ ಅನ್ವಯಿಸುತ್ತದೆಂದು ಹೇಳಲಾಗಿದೆ.[೪೮]

೨. ಸೇನಾಮುಖ/ವಾಹಿನೀಮುಖ : ಈ ಬಗ್ಗೆ ಮಾನಸಾರ ಮತ್ತು ಮಯಮತ-ಎರಡೂ ಗ್ರಂಥಗಳು, ಅನೇಕ ರಕ್ಷಣೆಗಳಿರಬೇಕು, ಅರಮನೆ ಇರಬೇಕು, ನಾನಾ ಜನಗಳಿರಬೇಕು; ಇದು 'ಸೇನಾಮುಖ' ಎಂದಿವೆ (ಮಾನ-೧೦.೩೫-೩೬, ಮಯ-೧೦.೩೦-೩೧). ಈ ನಗರದಲ್ಲಿ ಸರ್ವಜಾತಿಯ ಜನಗಳಿದ್ದು, ಅರಮನೆ ಇರಬೇಕೆಂದು ವಿಮಾನಾರ್ಚನಕಲ್ಪವೂ ಹೇಳಿದೆ (ಅ.೩, ಪು.೧೩). ಇದರೊಂದಿಗೆ, ಇದು ಗುಹ್ಯ ಪ್ರದೇಶಗಳಿಂದ ಕೂಡಿರ ಬೇಕೆಂದು ಕಾಮಿಕಾಗಮವು ಹೇಳಿದೆ (I.೨೦.೧೩). ಅವಶ್ಯಕ ಸಂದರ್ಭಗಳಲ್ಲಿ ಇಲ್ಲಿ ರಾಜನ ಬಿಡಾರವೂ (Royal camp) ಇರುತ್ತಿತ್ತೆಂದು ಹೇಳಲಾಗಿದೆ.[೪೯] ಗ್ರಂಥಗಳು ಇಲ್ಲಿ ಅರಮನೆ ಇರಬೇಕೆಂದು ಹೇಳಿದ್ದರೂ, ಬಹುಶಃ ಅದು ತಾತ್ಕಾಲಿಕ ನೆಲೆ ಎನಿಸುತ್ತದೆ. 'ಸೇನಾಮುಖ' ಮತ್ತು 'ಸ್ಕಂಧಾವಾರ'ವನ್ನು 'ಶಿಬಿರ'ದ ಎರಡು ವಿಧಗಳೆಂದು ಗುರುತಿಸಿರುವ ಶುಕ್ಲಾರವರು, 'ಇಲ್ಲಿ ಸೈನ್ಯದ ಸಿಬ್ಬಂದಿಗಳಿದ್ದು ಯುದ್ಧಭೂಮಿಯಿಂದ ದೂರವಾದ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ' ಎಂದಿದ್ದಾರೆ.[೫೦] ಮುಖ್ಯನಗರದ ಒಂದು ಭಾಗವಾಗಿರುವ 'ಸೇನಾಮುಖ'ವು, ಅದರಿಂದ ಸ್ವಲ್ಪ ದೂರದಲ್ಲಿದ್ದು, ನಗರವನ್ನು ರಕ್ಷಿಸುತ್ತದೆಂಬ ಅಭಿಪ್ರಾಯವೂ ಇದೆ.[೫೧]

೩. ಸ್ಕಂಧಾವಾರ-ಚೆರಿಕಾ : ಮಾನಸಾರ (೧೦.೪೩) ಮತ್ತು ಈಶಾನಶಿವಗುರುದೇವಪದ್ಧತಿಗಳ ಪ್ರಕಾರ (ಕ್ರಿಯಾ. ೨೫.೩೭-೩೮) ಇದೊಂದು ದುರ್ಗನಗರ ಎನ್ನಲಾಗಿದೆ.[೫೨] ಸುತ್ತ ನದಿ, ಪರ್ವತ,[೫೩] ಕಾನನಗಳಿದ್ದು, ರಾಜಮಂದಿರ (ಅರಮನೆ) ಇರಬೇಕು. ಇದು 'ಸ್ಕಂಧಾವಾರ' ರೀತಿಯ ನಗರ (ಮಾನ-೧೦.೪೩, ಮಯ-೧೦.೩೫). ದಂಡೆಯ ಮೇಲೆ ಮನೆಗಳಿರಬೇಕು ಎಂದೂ ಮಾನಸಾರ ದಲ್ಲಿದೆ (೧೦.೪೩). ಶಿಲ್ಪರತ್ನದಲ್ಲಿ ಮೇಲಿನಂತೆ ಅರಮನೆ ಇತ್ಯಾದಿ

ಗಳನ್ನು ಹೇಳಿಲ್ಲ. ರಾಜರಕ್ಷಣೆಯನ್ನು ಬಯಸಿ ಬಂದ ಜನವಸತಿಯ ಪ್ರದೇಶ ಇದೆಂದು ದತ್ತ್ ಅವರು ಹೇಳಿದ್ದಾರೆ.[೫೪] ಮಾನಸಾರವು ಹೇಳುವ ವಸತಿ ಇದೇ ಆಗಿರಬೇಕೆನಿಸುತ್ತದೆ. ಸ್ಕಂಧಾವಾರವು, ಯುದ್ಧಭೂಮಿಯಿಂದ ಹೆಚ್ಚು ದೂರವಿರದ ಸೈನಿಕರ ಶಿಬಿರವೆಂದು ಶಿಲ್ಪರತ್ನವು ಹೇಳಿದೆ (೫.೬೦–೬೧).[೫೫] 'ಅರ್ಥಶಾಸ್ತ್ರ'ದಲ್ಲೂ ಇದೇ ರೀತಿ ಹೇಳಿದ್ದು, ವೃತ್ತಾಕಾರ, ದೀರ್ಘಾಕಾರ, ಚತುಷ್ಕೋಣಾಕಾರ ಅಥವಾ ಆ ಪ್ರದೇಶಕ್ಕನು ಗುಣವಾದ ಆಕಾರದಲ್ಲಿಯಾಗಲೀ ಸ್ಕಂಧಾವಾರವನ್ನು ರಚಿಸಬೇಕೆಂದು ಹೇಳಿದೆ (X.೧.(ಕ)ಪು.೪೭೭). ಇದರ ಸುತ್ತ ನದಿ, ಪರ್ವತ, ಮರಗಳ ರಕ್ಷಣೆ ಇರಬೇಕಲ್ಲದೆ, ಇಲ್ಲಿ ರಾಜಭವನ (Imperial Quarters)ಗಳಿರಬೇಕೆಂದು ಒಂದೆಡೆ ಹೇಳಲಾಗಿದೆ.[೫೬] ಈ ವಿವರಗಳನ್ನು ಗಮನಿಸಿದರೆ ಯುದ್ಧದ ಸಂದರ್ಭದಲ್ಲಿ ಸೇನಾಮುಖ ಮತ್ತು ಸ್ಕಂಧಾವಾರ ಎರಡೂ 'ಶಿಬಿರ'ಕ್ಕೆ ಆಸರೆಯಾಗಿರುತ್ತದೆಂದು ಹೇಳಬಹುದೆನಿಸುತ್ತದೆ. ಎರಡೂ ಕಡೆಗಳಲ್ಲಿ ಅರಮನೆಯನ್ನೂ ಹೇಳಿದೆ.

ಸ್ಕಂಧಾವಾರದ ಪಕ್ಕದಲ್ಲಿರುವುದೇ 'ಚೆರಿಕಾ'[೫೭] ಎಂದು ಮಯಮತವು ಹೇಳಿದ್ದರೆ (೧೦.೩೬), ಅಲ್ಲಿ ಬ್ರಾಹ್ಮಣರು ಮತ್ತು ವೈಶ್ಯರ ಮನೆಗಳಿರಬೇಕೆಂದು ಮಾನಸಾರವು ಹೇಳಿದೆ (೧೦.೪೪).[೫೮] ಇದನ್ನು 'ಕುಬ್ಜ'ದೊಂದಿಗೆ ಹೇಳಿರುವ ಕಾಮಿಕಾಗಮವು, ಅಲ್ಲೇ 'ತಂತುವಾಯು' (ನೇಕಾರರು) ಗಳಿದ್ದರೆ, ಅದು 'ಚೆರಿಕಾ' ಎಂದಿದೆ (I.೨೦.೧೬). ಇದರ ಕಾರ್ಯವಿಶೇಷದ ಬಗ್ಗೆ ಗ್ರಂಥಗಳು ಹೇಳಿಲ್ಲ. ಸ್ಕಂಧಾವಾರದ ಬಗ್ಗೆ ದತ್ತ್ ಅವರು ಹೇಳಿದ ಉದ್ದೇಶವು ಇದಕ್ಕೂ ಅನ್ವಯಿಸುವಂತಿದೆ.

೪. ಸ್ಥಾನೀಯ : ನದಿ/ಪರ್ವತದ ಬಳಿ ಇದ್ದು, ಅನೇಕ ರಕ್ಷಣೆಗಳಿದ್ದು, ಅರಮನೆಯೂ ಇದ್ದರೆ ಅದು 'ಸ್ಥಾನೀಯ' ಎಂದು ಮಾನಸಾರವು ಹೇಳಿದೆ. ಅಲ್ಲದೆ, ಇಲ್ಲಿ ಒಳ್ಳೆಯ ರಾಜನಿದ್ದು, ಅದು ಸುಖವನ್ನುಂಟುಮಾಡುವುದೆಂದೂ ಹೇಳಲಾಗಿದೆ (೧೦.೩೬–೩೭). ಇದರೊಂದಿಗೆ ಮಯ ಮತವು, ಸ್ಥಾನೀಯವು ರಾಜನಿಂದ ಸ್ಥಾಪನೆಯಾಗುವುದೆಂದಿದೆ (೧೦.೩–೩೨).[೫೯] ಕೌಟಿಲ್ಯನ 'ಅರ್ಥಶಾಸ್ತ್ರ'ವು, ೮೦೦ ಗ್ರಾಮಗಳ ಮಧ್ಯದಲ್ಲಿ ಅಷ್ಟೂ ಗ್ರಾಮದ ಜನರಿಗೆ ವ್ಯಾಪಾರ ವಹಿವಾಟುಗಳನ್ನು ನಡೆಸಲು 'ಸ್ಥಾನೀಯ'ವೆಂಬ ರಮಣೀಯವಾದ ಮಹಾಗ್ರಾಮವನ್ನು ನಿರ್ಮಿಸಬೇಕೆಂದು ಹೇಳಿದೆ(II.೧.(ಕ)ಪು.೮೮). ಇನ್ನೂ ಹೆಚ್ಚಿನ ವಿವರಗಳನ್ನೂ ಅದು ನೀಡಿದೆ.[೬೦] ಈಶಾನಶಿವಗುರುದೇವಪದ್ಧತಿ (ಕ್ರಿಯಾ–೨೫.೩೮–೩೯) ಮತ್ತು ಶಿಲ್ಪರತ್ನ (೫.೩೨–೩೩)ಗಳ ಪ್ರಕಾರ, ಸ್ಥಾನೀಯವು, ಅಂತಪಾಲನಿಂದ[೬೧] ರಕ್ಷಿತವಾದ ಗಡಿನಗರ ಎನ್ನಲಾಗಿದೆ.[೬೨] ಈ ಬಗ್ಗೆ ದತ್ತ್ ಅವರು, 'It is a Muffassil town and headquarters of the district or divisional officer' ಎಂದಿದ್ದಾರೆ. ಅಲ್ಲದೆ, 'ಸ್ಥಾನೀಯ'ದ ಶಬ್ದಾರ್ಥವು 'ಸ್ಥಳೀಯ' ಎಂದಿರುವ ಅವರು, ಇದನ್ನು 'ಸ್ಥಳೀಯ ದುರ್ಗನಗರ'ವೆಂದೂ, (Local fortified town) ರಾಜನಿಗೆ ಕೆಲವು ಸಂದರ್ಭಗಳಲ್ಲಿ ಈ ದುರ್ಗನಗರದ ಅವಶ್ಯಕತೆ ಇರುವುದೆಂದೂ ಹೇಳಿ ಆ ಬಗ್ಗೆ ವಿವರಿಸಿದ್ದಾರೆ.[೬೩]

೫. ದ್ರೋಣಕ :[೬೪] ಇದರ ವಿಸ್ತಾರದ ಬಗ್ಗೆ ಮಯಮತವು ಹೀಗೆ ಹೇಳಿದೆ: ೪೦೦ ದಂಡದಿಂದ ೪೯೬ ದಂಡದವರೆಗೆ ೫ ರೀತಿಯ ಅಳತೆಗಳು/ವಿಸ್ತಾರಗಳು 'ದ್ರೋಣಮುಖ'ದಲ್ಲಿ ದೊರೆಯುತ್ತವೆ. ಈ ಅಳತೆಗಳನ್ನು ೨೪ ದಂಡಗಳ ಅಂತರದಿಂದ ಪಡೆಯಬಹುದಾಗಿದೆ (೧೦.೬). ಇದರ ಉದ್ದ–ಅಗಲಗಳು ಸಮನಾಗಿರುತ್ತವೆನ್ನಲಾಗಿದೆ.[೬೫] ಮಾನಸಾರದ ಪ್ರಕಾರ, ಇದು ಸಮುದ್ರದೊಂದಿಗೆ ಸಂಪರ್ಕವಿರುವ ನದಿಯ ಎರಡೂ ದಂಡೆಗಳ (ಈ ಪ್ರದೇಶವೇ ದ್ರೋಣಮುಖ) ಮೇಲಿರುತ್ತದೆ.[೬೬] ಈ ದಡದ ಮೇಲೆ ದಕ್ಷಿಣೋತ್ತರವಾಗಿ ವಣಿಕರೂ, ನಾನಾ ಜನಗಳೂ ಇರುವರು. ನಗರದ ಪ್ರತೀತಟವು ಗ್ರಾಹಕರಿಂದ ತುಂಬಿದ್ದು, ಮಾರುವವರು, ಕೊಳ್ಳುವವರ ವ್ಯಾಪಾರ–ವ್ಯವಹಾರ ಇರುತ್ತದೆ (೧೦.೩೮–೩೯).[೬೭] ಮಾನಸಾರದಂತೇ ಮಯಮತವೂ ನದೀ ದಂಡೆಗಳ ಮೇಲೆ ವಣಿಕರು ಇರಬೇಕೆಂದು ಹೇಳಿದೆ (೧೦.೩೨–೩೩). ನದಿಯು ಬಳಿ ಇದ್ದು ದ್ವೀಪಾಂತರ ವ್ಯಾಪಾರವಿರುವುದು 'ದ್ರೋಣಕ' ಎಂದು ಶಿಲ್ಪರತ್ನವು ಹೇಳಿದೆ (೫.೫೬–೫೭).[೬೮] ಈಶಾನ ಶಿವಗುರುದೇವಪದ್ಧತಿಯ ಪ್ರಕಾರ (ಕ್ರಿಯಾ.೨೫.೩೮–೩೯) ದ್ರೋಣಮುಖವು ಪಟ್ಟಣದಂತಿರುವುದು.[೬೯] ಕೌಟಿಲ್ಯನ ಪ್ರಕಾರ ೪೦೦ ಗ್ರಾಮಗಳ ಮಧ್ಯೆ ಇರುವುದು ದ್ರೋಣಮುಖ(I.೧.(ಕ)ಪು.೮೮). ಒಂದು ಜಿಲ್ಲೆಯ ಮುಖ್ಯಪಟ್ಟಣ ಎಂದೂ ಅರ್ಥೈಸಲಾಗಿದೆ (ನಿಘಂಟು). 'ದ್ರೋಣಕ'ದ ಬಗ್ಗೆ ದತ್ತ್ ಅವರು 'It is a market town, harbour' ಎಂದೇ ಹೇಳಿದ್ದಾರಲ್ಲದೆ, ಅಲ್ಲಿ ಆಡಳಿತಾತ್ಮಕ ಕಾರ್ಯಸಾಧನೆಗಾಗಿ ಆರಕ್ಷಕ ಕಾವಲುದಳ (Police outpost) ಇರುವುದೆಂದೂ ಹೇಳಿದ್ದಾರೆ.[೭೦]

೬. ಸಂವಿದ್ಧ–ವಿಡಂಬ : ಈ ದುರ್ಗನಗರದಲ್ಲಿ ಬ್ರಾಹ್ಮಣರು[೭೧] ಇರುವುದರಿಂದ ಅದನ್ನು 'ಸಂವಿದ್ಧ'[೭೨] ಎಂದು ಕರೆಯಲಾಗುತ್ತದೆ ಎಂದು ಮಾನಸಾರವು ಹೇಳಿದೆ. ಇದು ದೊಡ್ಡ ಗ್ರಾಮದ (ಮಹಾಗ್ರಾಮ) ಹತ್ತಿರ ಇರುವುದಲ್ಲದೆ ಇದರೊಳಗೇ ಇನ್ನೊಂದು 'ಕ್ಷುದ್ರಗ್ರಾಮ' ಇರುತ್ತದೆಂಬುದು ಮಾನಸಾರದ ಉಕ್ತಿ(೧೦.೪೦–೪೧).[೭೩] ಮಯಮತದಲ್ಲಿ 'ಸಂವಿದ್ಧ'ವನ್ನು ಹೇಳಿಲ್ಲ. ಆದರೆ, 'ವಿಡಂಬ' ಎಂಬ ಪ್ರಕಾರವನ್ನು ಹೇಳಿದ್ದು, ಅದು ಗ್ರಾಮ ಸಮೀಪವಿದ್ದು,

ಜನವಾಸದಿಂದ ಕೂಡಿರುತ್ತದೆಂದು ಹೇಳಿದೆ (೧೦.೩೩). (ಬಹುಶಃ ಇದು ಮಾನಸಾರದ ಸಂವಿದ್ಧ ಸ್ವರೂಪದ್ದೇ ಆಗಿರಬಹುದೇ ಎನಿಸುತ್ತದೆ). ಇದರ ವಿಸ್ತಾರವು ೨೦೦ ದಂಡದಿಂದ ೫೦೦ ದಂಡದವರೆಗಿರುವುದು. ಮಧ್ಯೆ ೫೦ ದಂಡಗಳನ್ನು ಹೆಚ್ಚಿಸುತ್ತಾ ಹೋಗುವುದರಿಂದ ವಿಡಂಬ ಪ್ರಕಾರದಲ್ಲಿ ೭ ರೀತಿಯ ವಿಸ್ತಾರವನ್ನು ಪಡೆಯಬಹುದು (ಮಯ–೧೦.೧೦–೧೧). ಈ ವಿಸ್ತಾರದ ಆಧಾರದಿಂದ ದತ್ ಅವರು, 'ಇದು ನಗರವಲ್ಲ, ಗ್ರಾಮದ ಪ್ರಮುಖ ಮಾರುಕಟ್ಟೆ' ಎಂದಿದ್ದಾರೆ.[೭೪] ಶಿಲ್ಪರತ್ನದ ಪ್ರಕಾರ 'ವಿಡಂಬ'ವು ರೈತರಿಂದ ಕೂಡಿರುತ್ತದೆ (೫.೩೨).[೭೫]

೭. ಕೊಲಕ : ಇದನ್ನು 'ಕೊತ್ಮಕೊಲಕ' ಎಂದಿರುವ ಮಯಮತದಂತೆ ಇದರ ವಿಸ್ತಾರವು ೧೦೦ ದಂಡದಿಂದ ೫೦೦ ದಂಡದವರೆಗಿರುತ್ತದೆ. ಮಧ್ಯೆ ೧೦೦ ದಂಡಗಳಂತೆ ಹೆಚ್ಚಿಸುತ್ತಾ ಈ ಗ್ರಾಮ ರೀತಿಯಲ್ಲಿ ೫ ರೀತಿಯ ಅಳತೆಗಳನ್ನು ಪಡೆಯುಬಹುದು (ಈ ಅಳತೆಯು 'ಪುರ'ಕ್ಕೂ ಅನ್ವಯಿಸುತ್ತದೆ) (೧೦.೯). 'ಸಂವಿದ್ಧ' ರೀತಿಯಲ್ಲೇ ಇದ್ದು, ಮಧ್ಯದಲ್ಲಿ 'ಮಹಾರಾಜ'ನ ಅರಮನೆ ಇದ್ದರೆ, ಅದಕ್ಕೆ 'ಕೊಲಕ' ಎಂದು ಹೆಸರೆಂದು ಮಾನಸಾರವು ಹೇಳಿದೆ (೧೦.೪೧). ಮಯಮತವು, ಇದು ಅರಣ್ಯದ ಮಧ್ಯೆ ಇದ್ದು, ಜನವಾಸದಿಂದ ಕೂಡಿರುತ್ತದೆ ಎಂದು ಮಾತ್ರ ಹೇಳಿದೆ; (೧೦.೩೪) (ಅರಮನೆಯನ್ನು ಹೇಳಿಲ್ಲ) (೧೦.೩೪). ಶಿಲ್ಪರತ್ನದಂತೆ 'ಕೊತ್ಮಕೊಲಕ'ದಲ್ಲಿ ಬುಡಕಟ್ಟು ಜನಾಂಗದವರು/ಆ ರೀತಿಯ ಜನ ವಾಸಮಾಡುತ್ತಾರೆ.[೭೬]

೮. ನಿಗಮ : ಮಯಮತದಂತೆ, ೨೦೦ ದಂಡದಿಂದ ೩೪೦ ದಂಡದವರೆಗೆ ಇದರ ವಿಸ್ತಾರವಿರುವುದು. ಮಧ್ಯೆ ೧೦ ದಂಡಗಳ ಅಂತರದಿಂದ 'ನಿಗಮ' ಗ್ರಾಮದ ೧೫ ಅಳತೆ ದೊರೆಯುತ್ತದೆ (೧೦.೮). 'ದ್ವಿಜಾತೀಚತುರ್ವರ್ಣಂ ವರ್ಣಾಂತರೇ ಜನೈವೃತಂ' ಎಂಬುದು ಮಾನಸಾರದ ಅಭಿಪ್ರಾಯ. ಬ್ರಾಹ್ಮಣರು, ಬ್ರಾಹ್ಮಣೇತರರು, ವಿವಿಧ ಕರ್ಮಚಾರಿಗಳೂ ಇರುವುದು 'ನಿಗಮ' ಎಂದು ಎರಡೂ ಗ್ರಂಥಗಳು ಹೇಳಿವೆ(ಮಾನ–೧೦.೪೨, ಮಯ–೧೦.೩೪–೩೫).[೭೭] ವಿಕ್ರಯಿಸಲು ಯೋಗ್ಯವಾದ ಧನ–ಧಾನ್ಯಗಳಿಂದ ಕೂಡಿರುವುದು 'ನಿಗಮ' ಎಂಬುದು ಶಿಲ್ಪರತ್ನದ ಹೇಳಿಕೆ (೫.೬೫–೬೬).[೭೮] ಇದು ಮುಖ್ಯವಾಗಿ ಕೈಕಸುಬುದಾರರ ಮಾರುಕಟ್ಟೆ (Artisans Market) ಎಂದು ಹೇಳಿರುವ ದತ್ ಅವರು, 'ನಿಗಮ' ಶಬ್ದದ ಅರ್ಥ– ವ್ಯಾಪಾರಮಾರ್ಗ (Trade Route); ವ್ಯಾಪಾರಿಗಳಿಗೆ ಹಾಗೂ ಯಾತ್ರಿಕರಿಗೆ (Caravans) ಇದೊಂದು ನಿಗದಿತ ಸ್ಥಳವಾಗಿತ್ತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅಲ್ಲದೆ, 'Again Nigama may be a market with a police outpost situated on the approaches to the capital or kingdom' ಎಂದೂ ಸ್ಪಷ್ಟಪಡಿಸಿದ್ದಾರೆ.[೭೯] ಹೀಗೆ, ವಿವಿಧ ಪ್ರಕಾರಗಳನ್ನು ಗ್ರಂಥಗಳು ವಿವರಿಸಿವೆ.

ಇಷ್ಟೇ ಅಲ್ಲದೆ, ಶಿಲ್ಪರತ್ನವು ಹೇಳುವ ಮಠ/ವಿಹಾರ (University town),[೮೦] ದೇವಾಲಯನಗರ (Temple cities), ಉದ್ಯಾನನಗರ (Garden cities)–ಇವುಗಳ ಬಗ್ಗೆಯೂ ವಿದ್ವಾಂಸರುಗಳು ವಿಶ್ಲೇಷಿಸಿದ್ದಾರೆ.[೮೧] ವಿವಿಧ ಪ್ರಕಾರದ ನಗರಗಳನ್ನು ವಿವರಿಸುವ ಈ ಗ್ರಂಥಗಳು, ಎಲ್ಲಾ ನಗರಗಳಿಗೆ ಅನ್ವಯವಾಗುವಂತೆ ಮಾರ್ಗಗಳ ಬಗ್ಗೆಯೂ ವಿವರಿಸಿವೆ.

ನಗರದಲ್ಲಿರಬೇಕಾದ ದೇವತಾಸ್ಥಾನಗಳ ಬಗ್ಗೆ ಮಯಮತವು ನೀಡಿರುವ ವಿವರವೆಂದರೆ ಶಾಸ್ತಾ, ದುರ್ಗಾ ಗಜಮುಖ ಮತ್ತು ಲಕ್ಷ್ಮಿಯನ್ನು ಕ್ರಮವಾಗಿ ಆರ್ಯ (ಪೂರ್ವ), ವಿವಸ್ವತ್ (ದಕ್ಷಿಣ), ಮಿತ್ರ (ಪಶ್ಚಿಮ) ಮತ್ತು ಪೃಥ್ವೀಧರರ (ಉತ್ತರ) ಪದಗಳಲ್ಲಿ/ಸ್ಥಾನಗಳಲ್ಲಿ ಪೂಜಿಸಬೇಕು.[೮೨] ಇದರಿಂದ ಮುಂದೆ ಸುತ್ತ ಬೇರೆ ದೇವಾಲಯಗಳನ್ನು ಗ್ರಾಮದಲ್ಲಿದ್ದಂತೆ ನಿರ್ಮಿಸಬೇಕು. ಅದರ ಹತ್ತಿರದ ವಸತಿಗಳ ಬಗ್ಗೆ ಎಲ್ಲಾ ಜನರ ಮನೆಗಳನ್ನು ಇನ್ನೂ ಸ್ವಲ್ಪ ದೂರದಲ್ಲಿ ಸುತ್ತ ನಿರ್ಮಿಸಬೇಕು. ಚಂಡಾಲ ಮತ್ತು ಕೊಲಿಕಾಗಳ ಕುಟೀರವನ್ನು ನಗರದಿಂದ ೨೦೦ ದಂಡ ದೂರದಲ್ಲಿ, ಪೂರ್ವ ಮತ್ತು ನೈಋತ್ಯದಲ್ಲಿ ರಚಿಸಬೇಕು (೧೦.೮೮–೯೦) ಎಂದಿದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ, 'ಪಟ್ಟಣದ ಮಧ್ಯದಲ್ಲಿ ದುರ್ಗೆ, ವಿಷ್ಣು, ಸುಬ್ರಹ್ಮಣ್ಯ, ಇಂದ್ರ ಈ ದೇವತೆಗಳ ಆಲಯಗಳನ್ನೂ, ಶಿವ, ಕುಬೇರ, ಅಶ್ವಿನೀ ದೇವತೆಗಳು, ಲಕ್ಷ್ಮೀ ಮದಿರಾ ದೇವಾಲಯಗಳನ್ನೂ ಏರ್ಪಡಿಸಬೇಕು' ಎಂದಿದೆ (I.೧(ಕ) ಪು.೧೦೦); ಈ ಬಗ್ಗೆ ಹೆಚ್ಚಿನ ವಿವರ ನೀಡಿದೆ.

ಮಯಮತವು ವಸತಿ ಹಾಗೂ ಅಂತರಾಪಣ (Bazars)ಗಳ ಬಗ್ಗೆ ನೀಡಿರುವ ವಿವರಗಳನ್ನಿಲ್ಲಿ ಗಮನಿಸಬಹುದು (೧೦.೭೭–೮೭). ನಗರದ ಸುತ್ತ ರಥಪಥವಿದ್ದು, ಅದರೊಳಗೆ[೮೩] ವಣಿಕರ ವಸತಿ ಇರಬೇಕು. ಅದರ ದಕ್ಷಿಣಕ್ಕೆ ಪಕ್ಕದಲ್ಲಿ ನೇಕಾರರ ಮನೆಗಳಿರಬೇಕು ಹಾಗೂ ಉತ್ತರಕ್ಕೆ ಕುಂಬಾರರಿರಬೇಕು; ಅದೇ ಮಾರ್ಗದಲ್ಲಿ ಕರ್ಮಚಾರಿಗಳೂ ವಾಸಮಾಡಬೇಕು (೧೦.೭೭–೭೯). ಇದರೊಂದಿಗೆ, ಇಲ್ಲಿರಬೇಕಾದ ಅಂಗಡಿಗಳ (Bazars) ವ್ಯವಸ್ಥೆಯ ವಿವರ ಈ ರೀತಿ ಇದೆ: ಬ್ರಹ್ಮವೀಥಿಯಲ್ಲಿ ವೀಳ್ಯ ಮತ್ತು ಆ ತರಹದ ಪದಾರ್ಥಗಳ ಅಂಗಡಿ, ಹಣ್ಣು ಮತ್ತು ಮೌಲ್ಯಯುಕ್ತ (ಸಾರಾನ್ವಿತಂ) ಪದಾರ್ಥಗಳ ಅಂಗಡಿ ಇರಬೇಕು. ಈಶ (ಈಶಾನ್ಯ) ಮತ್ತು ಮಹೇಂದ್ರ (ಪೂರ್ವ) ಪದಗಳ ದ್ವಾರದಲ್ಲಿ ಮೀನು, ಮಾಂಸ, ತರಕಾರಿ ಇರಬೇಕು; ಮಹೇಂದ್ರ (ಪೂರ್ವ)

ಮತ್ತು ಅಗ್ನಿದ್ವಾರದಲ್ಲಿ(ಆಗ್ನೇಯ) ಭಕ್ಷ್ಯ, ಭೋಜ್ಯಗಳ (Food stuffs) ಅಂಗಡಿಗಳೂ, ಅಗ್ನಿ (ಆಗ್ನೇಯ) ಮತ್ತು ಗೃಹಕ್ಷತ (ದಕ್ಷಿಣ) ದ್ವಾರದ ಮಧ್ಯೆ ಕಬ್ಬಿಣದ ವ್ಯಾಪಾರಿಗಳೂ (ಭಾಂಡಾನಿ), ಗೃಹಕ್ಷತ (ದಕ್ಷಿಣ) ಮತ್ತು ನಿರುತಿ (ನೈಋತ್ಯ) ಮಧ್ಯೆ ತಾಮ್ರದ ಕೆಲಸದವರೂ, ಪಿತೃ (ನೈಋತ್ಯ) ಮತ್ತು ಪುಷ್ಪದಂತ (ಪಶ್ಚಿಮ) ಪದದ ಮಧ್ಯೆ ವಸ್ತ್ರ (clothes)ದ ಅಂಗಡಿಗಳೂ ಇರಬೇಕು. ಪುಷ್ಪದಂತ (ಪಶ್ಚಿಮ) ಮತ್ತು ಸಮೀರಣ (ವಾಯುವ್ಯ) ಪದಗಳ ಮಧ್ಯೆ ಧಾನ್ಯ, ಅಕ್ಕಿ, ಒಣಹುಲ್ಲುಗಳ ಅಂಗಡಿಗೆ ಸ್ಥಳ; ವಾಯು (ವಾಯವ್ಯ) ಮತ್ತು ಭಲ್ಲಾಟ (ಉತ್ತರ) ಪದಗಳ ಮಧ್ಯೆ ವಸ್ತ್ರ (Fabrics) ಮತ್ತು ಆ ರೀತಿಯ ಅಂಗಡಿಗಳಿಗೆ ಸ್ಥಾನ; ಅಲ್ಲೇ ಉಪ್ಪು, ಎಣ್ಣೆ ಮುಂತಾದ ದಿನಸಿ ಸಾಮಾನುಗಳ ಅಂಗಡಿಗೆ ಸ್ಥಾನ. ಭಲ್ಲಾಟ (ಉತ್ತರ) ಮತ್ತು ಈಶಾನ (ಈಶಾನ್ಯ)ದ ಮಧ್ಯೆ ಸುಗಂಧ, ಹೂ ಇತ್ಯಾದಿ ಅಂಗಡಿಗಳಿಗೆ ಸ್ಥಾನ. ಹೀಗೆ ಅಲ್ಲಿ ೯ ಅಂತರಾಪಣಗಳು ನಗರದ ಮಧ್ಯೆ ಮತ್ತು ಸುತ್ತ ಇರಬೇಕು. ಕೇಂದ್ರ ಸ್ಥಾನದೆಡೆಗೆ ಹೋಗುವ ಮಾರ್ಗದಲ್ಲಿ ರತ್ನ (Gems), ಹಾಟಕ (Gold), ವಸ್ತ್ರ, ಹರಿದಳ (ಹರಿದ್ರಾ), ಕರಿಮೆಣಸು, ಅಶ್ವತ್ಥ ಬೀಜ(?), ಜೇನುತುಪ್ಪ, ತುಪ್ಪ, ಎಣ್ಣೆ ಮತ್ತು ಔಷಧ ಪದಾರ್ಥಗಳು ದೊರೆಯುವಂತಿರಬೇಕು (೧೦.೮೦–೮೭). ಇಷ್ಟೇ ಅಲ್ಲದೆ, 'ಪತ್ತನ' ಒಂದನ್ನು ಬಿಟ್ಟು, ಉಳಿದೆಲ್ಲೆಡೆಗಳಲ್ಲೂ ಮಾರುಕಟ್ಟೆ ಇರಬಹುದೆಂದಿದೆ.

ಹೀಗೆ ಗ್ರಂಥಗಳು, ನಗರದ ಪ್ರಕಾರಗಳು ಮಾತ್ರವಲ್ಲದೆ ಅವುಗಳ ಅಳತೆ, ವಸತಿ ವ್ಯವಸ್ಥೆ, ದೇವತಾಸ್ಥಾನ ಮುಂತಾಗಿ ಹೆಚ್ಚಿನ ವಿವರಗಳನ್ನು ನೀಡಿವೆ.[೮೪] ಜೊತೆಗೆ, ಇಲ್ಲಿ ಹೇಳದೆ ಬಿಟ್ಟ ವಿವರಗಳನ್ನು ಗ್ರಾಮದ ಸಂದರ್ಭದಲ್ಲಿ ಹೇಳಿದಂತೆ ಮಾಡಬೇಕೆಂದು ಎರಡೂ ಗ್ರಂಥಗಳು ಹೇಳಿವೆ(ಮಾನ–೧೦.೩೭, ಮಯ–೧೧.೯೧). ಅಲ್ಲದೆ, ಹೀಗೆ ವಿವರಿಸಿರುವ ನಗರವಿನ್ಯಾಸದ ಬಗ್ಗೆ ತಿಳಿದು ಸ್ಥಪತಿಯು ಅವಶ್ಯವಿದ್ದಲ್ಲಿ ಅವನ ವಿವೇಚನೆಯನ್ನು ಉಪಯೋಗಿಸಬೇಕೆಂದು ಮಾನಸಾರವು ಹೇಳಿದರೆ (೧೦.೩೮), ರಾಜನ ಇಚ್ಛೆಯ ಮೇರೆಗೆ ಮಾಡಬೇಕೆಂದು ಮಯಮತವು ಹೇಳಿದೆ (೧೦.೭೬).

ಈ ವಿವರಗಳನ್ನು ಗಮನಿಸಿದರೆ, ಒಂದೊಂದು ಪ್ರಕಾರಕ್ಕೂ ಇರುವ ವ್ಯತ್ಯಾಸಗಳು ವೇದ್ಯವಾಗುತ್ತವೆ. ನಗರಗಳ ಸಾಮಾನ್ಯ ಲಕ್ಷಣವೆಂದರೆ, ನಾನಾಜಾತಿಯ ಜನ, ರಕ್ಷಣಾಯುಕ್ತ ಮತ್ತು ವ್ಯಾಪಾರ. ಆದರೂ ಪ್ರತಿಯೊಂದು ಪ್ರಕಾರಕ್ಕೂ ವಿಶಿಷ್ಟ ಲಕ್ಷಣಗಳಿವೆ (Exclusive character). ಅವುಗಳನ್ನು ಈ ಕೆಳಗಿನಂತೆ ಸಂಗ್ರಹಿಸಬಹುದು: ೪ ದಿಕ್ಕಲ್ಲಿ ೪ ಗೋಪುರವಿರುವುದು 'ಕೇವಲನಗರ'ವಾದರೆ, ರಾಷ್ಟ್ರ ಮಧ್ಯದಲ್ಲಿರುವುದು/ಕೇವಲನಗರದಲ್ಲೇ ಅರಮನೆಯಿಂದ ಕೂಡಿರುವುದು 'ರಾಜಧಾನಿ' ಎನಿಸುತ್ತದೆ. ಶೂದ್ರರಿರುವುದು 'ಖೇಟ' ಎನಿಸಿದರೆ, ಕರ್ಮಚಾರಿಗಳೂ ಇರುವುದು–'ನಿಗಮ' ಎನಿಸುತ್ತದೆ. ದೊಡ್ಡ ಗ್ರಾಮದ ಪಕ್ಕವಿರುವುದು ಹಾಗೂ ಬ್ರಾಹ್ಮಣರೇ ಇರುವುದು 'ಸಂವಿದ್ಧ' ಮತ್ತು ಅದರಲ್ಲೇ ಅರಮನೆ ಇದ್ದರೆ, ಅದು 'ಕೊಲಕ' ಎನಿಸುತ್ತದೆ. ಅಂತೇ ಸ್ಕಂಧಾವಾರದ ಪಕ್ಕದಲ್ಲಿರುವುದು–ಚೆರಿಕಾ; ಹಾಗೂ ಖೇಟ–ಖರ್ವಟದ ಮಧ್ಯೆ ಇರುವುದು–ಕುಬ್ಜಕ; ಪುರ, ಪತ್ತನ ಮತ್ತು ದ್ರೋಣಕಕ್ಕೆ ಹೆಚ್ಚಿನ ವ್ಯತ್ಯಾಸವಿಲ್ಲ; ಆ ನಗರವಿರುವ ಸ್ಥಳದಲ್ಲಿ ಮಾತ್ರವೇ ವ್ಯತ್ಯಾಸ. ಅಂದರೆ, ಪುರವು ಕಾನನದೊಂದಿಗೆ/ಕಾನನದ ಬಳಿ ಇದ್ದರೆ, ಪತ್ತನವು ಸಮುದ್ರದ ಹತ್ತಿರವೂ, ದ್ರೋಣಕವು ನದೀ ದಂಡೆಯ ಮೇಲೂ ಇರುತ್ತದೆ. ಅಲ್ಲದೆ, ಪತ್ತನ ಮತ್ತು ದ್ರೋಣಕದಲ್ಲಿ ದ್ವೀಪಾಂತರ ವ್ಯಾಪಾರ ಹೆಚ್ಚಾಗಿರುತ್ತದೆ. ಪುರದಲ್ಲೇ ಅರಮನೆ ಇದ್ದರೆ, ಅದು ನಗರ. ರಾಜನು ದಂಡಯಾತ್ರೆಗೆ ಹೊರಟಾಗ ನಿರ್ಮಿತವಾಗುವುದು 'ಶಿಬಿರ'ವಾದರೆ, ಯುದ್ಧಭೂಮಿಯಿಂದ ದೂರವಾಗಿರುವುದು ಸೇನಾಮುಖ ಹಾಗೂ ಯುದ್ಧ ಭೂಮಿಯ ಹತ್ತಿರವಿರುವುದು ಸ್ಕಂಧಾವಾರ. ಅಂತೇ, ಸ್ಥಾನೀಯದ ಲಕ್ಷಣಗಳೊಂದೊಂದೂ ಪ್ರತ್ಯೇಕವಾಗಿ ಬೇರೆ ಬೇರೆ ಪ್ರಕಾರಗಳಲ್ಲೂ ಕಂಡುಬರುತ್ತದೆ. ಆದ್ದರಿಂದ, ಅರ್ಥಶಾಸ್ತ್ರವು ಹೇಳುವ, ೮೦೦ ಗ್ರಾಮಗಳ ಮಧ್ಯದಲ್ಲಿರುವುದು ಎಂಬುದನ್ನೋ ಅಥವಾ ಆ ನಗರದ ಉದ್ದೇಶವನ್ನೋ ಗಮನದಲ್ಲಿಟ್ಟುಕೊಂಡು ಗುರುತಿಸಬೇಕಾಗುತ್ತದೆ. ಖರ್ವಟ ನಗರದ ವಿಶಿಷ್ಟ ಲಕ್ಷಣ ಮಾತ್ರ ಅಸ್ಪಷ್ಟವಾಗಿದೆ. ಕೆಲವೊಮ್ಮೆ ವಿವಿಧ ಪ್ರಕಾರಗಳ ನಡುವಿನ ವ್ಯತ್ಯಾಸ ಸೂಕ್ಷ್ಮವಾಗಿದೆಯಾದರೂ, ಸ್ಥಳ, ಉದ್ದೇಶ ಅಥವಾ ವಿಸ್ತಾರದಲ್ಲಿರುವ ವ್ಯತ್ಯಾಸದಿಂದ ಪ್ರತ್ಯೇಕ ಪ್ರಕಾರವನ್ನು ಗುರುತಿಸಬಹುದಾಗಿದೆ. ಈ ಬಗ್ಗೆ ಬರೆಯುತ್ತಾ ಶುಕ್ಲಾರವರು, ಈ ವಿವಿಧ ಪ್ರಕಾರಗಳ ನಡುವಿನ ವ್ಯತ್ಯಾಸ ಹೆಚ್ಚಾಗಿಲ್ಲ('ಪುರ'ಬಿಟ್ಟು); '...the difference is not in kind, but in quality-the particular shape or form in which a village/town is planned' ಎಂದಿದ್ದಾರೆ.[೮೫] ಆದರೆ, ಈ ಮೊದಲು ಗಮನಿಸಿದಂತೆ ಒಂದೊಂದಕ್ಕೂ ವ್ಯತ್ಯಾಸವಿದೆಯೆಂದು ಹೇಳಬಹುದು.

ಈ ಅಧ್ಯಯನದಿಂದ ಕಂಡುಬರುವ ಇನ್ನಿತರ ಅಂಶಗಳನ್ನು ಈ ಕೆಳಗಿನಂತೆ ಸಂಕ್ಷೇಪಿಸಬಹುದು.

೧) ಪ್ರತಿಯೊಂದು ಪ್ರಕಾರದ ನಗರಗಳೂ ಬೇರೆ ಬೇರೆ ಉದ್ದೇಶದಿಂದ ನಿರ್ಮಿತವಾಗುತ್ತವೆ. ಅಂದರೆ, ಕೆಲವು ನಗರಗಳಲ್ಲಿ ಅರಮನೆ ಇರುತ್ತದೆ (ರಾಜಧಾನೀ, ನಗರೀ, ಕೊಲಕ ಇ); ಕೆಲವು ನಗರಗಳ ಉದ್ದೇಶ–ವ್ಯಾಪಾರವಾಗಿರುತ್ತದೆ (ದ್ರೋಣಕ, ಪುರ ಇ); ಕೆಲವು ನಗರಗಳು ಒಂದು ಜಾತಿಯ ಜನರಿಗಾಗಿ ರೂಪುಗೊಂಡಿರುತ್ತವೆ

(ಖೇಟ, ಸಂವಿದ್ಧ E); ಕೆಲವು ನಗರಗಳು ಯುದ್ಧದ ಸಂದರ್ಭ ದಲ್ಲಿ ಸ್ಥಾಪನೆಯಾಗುತ್ತವೆ (ಶಿಬಿರ, ಸೇನಾಮುಖ E). ಹೀಗೆ ವಿವಿಧ ಉದ್ದೇಶಗಳ ಹಿನ್ನೆಲೆಯಲ್ಲಿ ವಿವಿಧ ಪ್ರಕಾರಗಳಿರುವುದನ್ನು ಗಮನಿಸಬಹುದು.

೨) ಕೆಲವು ಪ್ರಕಾರಗಳಿಗೆ, ನದೀ ಅಥವಾ ಅರಣ್ಯಗಳ ಪಕ್ಕದಲ್ಲಿ ಅಥವಾ ಸುತ್ತ ಪರ್ವತವಿರುವ ಪ್ರದೇಶದಲ್ಲಿ ನಗರ ರಚನೆಯಾಗಬೇಕೆಂದಿದೆ. ಆದರೆ, ಕೇವಲ, ಕುಬ್ಜಕ, ಶಿವಿ(ಬಿ)ರ, ಸೇನಾಮುಖ, ಸಂವಿದ್ಧ, ಕೊಲಕ, ನಿಗಮ–ಈ ಪ್ರಕಾರಗಳಿಗೆ ಮಾತ್ರ ಅಂತಹ ಪರಿಸರವನ್ನು ಹೇಳಿಲ್ಲ. ಬಹುಶಃ ಸಮೃದ್ಧಿ, ವ್ಯಾಪಾರ ಹಾಗೂ ರಕ್ಷಣೆಯ ದೃಷ್ಟಿಯಿಂದ ಈ ಪರಿಸರವನ್ನು ಹೇಳಿರಬಹುದು.

೩) ರಾಜಧಾನೀ, ನಗರೀ, ಸೇನಾಮುಖ, ಸ್ಕಂಧಾವಾರ, ಸ್ಥಾನೀಯ, ಕೊಲಕ–ಈ ಪ್ರಕಾರಗಳಲ್ಲಿ ಅರಮನೆ ಇರುವುದು; ಉಳಿದ ಪ್ರಕಾರಗಳಲ್ಲಿ ಇರುವುದಿಲ್ಲ.

೪) ಎಲ್ಲ ನಗರ ಪ್ರಕಾರಗಳಲ್ಲೂ ನಾನಾ ವರ್ಗ/ಜಾತಿಯ ಜನರಿರಬೇಕು, ಜನಸಾಂದ್ರತೆ ಇರಬೇಕೆಂದು ಹೇಳಿದ್ದರೂ, ಕೆಲವಕ್ಕೆ ಮಾತ್ರ ಪ್ರತ್ಯೇಕ ಜನವಾಸವನ್ನು ಹೇಳಲಾಗಿದೆ. ಉದಾ: ಖೇಟ ನಗರದಲ್ಲಿ ಶೂದ್ರರೂ, ಪುರ, ಪತ್ತನ, ದ್ರೋಣಕ, ಚೆರಿಕಾಗಳಲ್ಲಿ ವೈಶ್ಯರೂ, ಸಂವಿದ್ಧದಲ್ಲಿ ಬ್ರಾಹ್ಮಣರು, ಬ್ರಾಹ್ಮಣೇತರರು ಹಾಗೂ ಕರ್ಮಚಾರಿಗಳೂ ಇರುವರು. ಹೀಗೆ ಎಲ್ಲ ಜಾತಿಯ ಜನರಿಗೂ ಅವಕಾಶ ಇರುವುದರ ಜೊತೆ ಜೊತೆಗೇ ಪ್ರತ್ಯೇಕ ವ್ಯವಸ್ಥೆಗಳೂ ಇತ್ತು ಎಂಬುದನ್ನಲ್ಲಿ ಗಮನಿಸಬಹುದು.

೫) ವಿವಿಧ ನಗರಗಳಲ್ಲಿರಬೇಕಾದ ದೇವಾಲಯಗಳ ಬಗ್ಗೆ ಹೆಚ್ಚಿನ ಉಲ್ಲೇಖವಿಲ್ಲ. 'ಕೇವಲ' ಮತ್ತು ರಾಜಧಾನೀ ಪ್ರಕಾರಗಳಲ್ಲಿ ಎಲ್ಲ ದೇವರ ದೇವಾಲಯಗಳಿರಬೇಕೆಂದು ಮಯಮತದಲ್ಲಿದ್ದರೆ, 'ರಾಜಧಾನೀ'ಯಲ್ಲಿ ವಿಷ್ಣು ದೇವಾಲಯವೂ, 'ಪುರ'ದಲ್ಲಿ ೭ ದೇವರ ದೇವಾಲಯವೂ ಇರಬೇಕೆಂದು ಮಾನಸಾರದಲ್ಲಿದೆ. ಉಳಿದ ಪ್ರಕಾರಗಳಲ್ಲಿ ಈ ಬಗ್ಗೆ ಏನನ್ನೂ ಹೇಳಿಲ್ಲ. ಮಯಮತವು ಮಾತ್ರ ನಗರದಲ್ಲಿರಬೇಕಾದ ದೇವತಾಸ್ಥಾನಗಳ ಬಗ್ಗೆ ಒಟ್ಟಾರೆಯಾಗಿ ಸ್ವಲ್ಪ ಹೇಳಿದೆ. ಆದರೆ, ಗ್ರಾಮ ಪ್ರಕಾರಗಳ ಬಗ್ಗೆ ಹೇಳುವ ಸಂದರ್ಭದಲ್ಲಿ ದೇವಾಲಯಗಳ ಬಗ್ಗೆ ವಿಶೇಷವಾಗಿ ಹೇಳಿರುವುದನ್ನು ಗಮನಿಸಬಹುದು.[೮೬] ಈ ನಗರಗಳಿಗೆ ವ್ಯಾಪಾರ, ಅರಮನೆ, ಯುದ್ಧ–ಮುಂತಾದ ಹಿನ್ನೆಲೆಗಳೂ ಇರುವುದರಿಂದ ದೇವಾಲಯಗಳ ವಿವರ (ಸ್ಥಾನ?) ಹಿಂದಿಕ್ಕಿತೆನ್ನಬಹುದು.

೬) ಅನೇಕ ನಗರಗಳು ವ್ಯಾಪಾರ–ವ್ಯವಹಾರಗಳ ಕೇಂದ್ರವಾಗಿರುತ್ತವೆ. ಉದಾ: ಕೇವಲ, ರಾಜಧಾನೀ, ಪುರ, ನಗರೀ, ಪತ್ತನ, ದ್ರೋಣಕ ಹಾಗೂ ಚೆರಿಕಾ; ಉಳಿದ ಪ್ರಕಾರಗಳಿಗೆ ಈ ವಿಶೇಷತೆ ಇಲ್ಲ.

೭) ಇನ್ನು ಗ್ರಾಮ–ನಗರಗಳಿಗಿರುವ ಸಂಬಂಧದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಹುದು. ಕಾಮಿಕಾಗಮ, ವಿಮಾನಾರ್ಚನಕಲ್ಪ–ಈ ಗ್ರಂಥಗಳು ಗ್ರಾಮಕ್ಕೆ ಸಂಬಂಧಿಸಿ ದಂತೆ ಹೇಳುವಾಗಲೇ ದುರ್ಗನಗರ/ನಗರಗಳ ವಿವರಗಳನ್ನು ಸೇರಿಸಿವೆ. ಕೆಲವು ಸಂದರ್ಭಗಳಲ್ಲಿ ನಗರದ ಬಗ್ಗೆ ವಿವರಿಸು ವಾಗ, ಗ್ರಂಥಗಳಲ್ಲಿ, 'ಆ ಹೆಸರಿನ ಗ್ರಾಮದಂತೇ ಮಾಡಿ'– ಎಂದೂ ಹೇಳಲಾಗಿದೆ (ಮಾನ–೧೦.೧೮). 'ಅರ್ಥಶಾಸ್ತ್ರ'ವು ಸ್ಥಾನೀಯವನ್ನು 'ಮಹಾಗ್ರಾಮ' ಎಂದೇ ಗುರುತಿಸಿದೆ. ಕೆಲವೆಡೆ, ಖೇಟ, ಖರ್ವಟ, ಪುರ, ನಗರ, ಪಟ್ಟಣ–ಈ ಹೆಸರುಗಳನ್ನು ಎರಡೂ ಸಂದರ್ಭಗಳಲ್ಲಿ ಬಳಸಿವೆ(ಎಲ್ಲಾ ಗ್ರಾಮ ಪ್ರಕಾರಗಳ ಹೆಸರೂ ಇಲ್ಲಿ ಬಂದಿಲ್ಲ ಎಂಬುದನ್ನೂ ಗಮನಿಸಬೇಕು). ಆದರೆ, ಕೊಟ್ಟಿರುವ ಲಕ್ಷಣಗಳು/ವಿಸ್ತಾರಗಳು ಬೇರೆ ಬೇರೆಯಾಗಿಯೇ ಇವೆ.

ಮಾನಸಾರವು ಗ್ರಾಮದ ಸಂದರ್ಭದಲ್ಲಿ ಹೇಳುವ ಪುರ–ನಗರಗಳ ಲಕ್ಷಣಕ್ಕೂ, ನಗರದ ಸಂದರ್ಭದಲ್ಲಿ ಹೇಳುವ ಅವುಗಳ ಲಕ್ಷಣಕ್ಕೂ ವ್ಯತ್ಯಾಸವಿದೆ; ಆ ಪ್ರಭೇದಗಳಿಗೆ ಆಯಾ ಸಂದರ್ಭದಲ್ಲಿ ನೀಡುವ ಆಧಾರಗಳೇ ಬೇರೆ ಬೇರೆಯಾಗಿವೆ. ಮಯಮತವು, ಖೇಟ, ಖರ್ವಟ ಇತ್ಯಾದಿ ಗ್ರಾಮಭೇದಗಳನ್ನು ಗ್ರಾಮದ ಸಂದರ್ಭದಲ್ಲಿ ವಿಸ್ತಾರದ ಆಧಾರದಿಂದ ಹೇಳಿದೆ; ಅದೇ, ನಗರದ ಸಂದರ್ಭದಲ್ಲಿ ಅದೇ ಹೆಸರಿನ ನಗರಗಳ ವಿವರಗಳು ಬೇರೆ ರೀತಿಯಾಗಿವೆ. ಗ್ರಾಮ–ನಗರ–ಇವುಗಳ ವಿಸ್ತಾರದ ಬಗ್ಗೆ ಹೇಳಿದ್ದರೂ, ಮಯಮತದಲ್ಲಿ, ಒಂದೇ ಹೆಸರಿನ ಗ್ರಾಮ ಮತ್ತು ನಗರ–ಇವುಗಳ ವಿಸ್ತಾರದಲ್ಲಿ ವ್ಯತ್ಯಾಸವಿದೆ. ಅಲ್ಲದೆ, ನಗರದ ಸಂದರ್ಭದಲ್ಲಿ ಪುರ/ನಗರದ ಬಗ್ಗೆ ಹೇಳುವಾಗ, ರಾಜ/ಅರಮನೆ ಬಗ್ಗೆ ಏನನ್ನೂ ಹೇಳದ ಮಯಮತವು, ಗ್ರಾಮದ ಸಂದರ್ಭದಲ್ಲಿ, 'ಪುರ'ದಲ್ಲಿ ರಾಜನಿರಬೇಕು ಎಂದಿದೆ.[೮೭] ಹೀಗೆ, ಈ ಹೊಂದಾಣಿಕೆಗಳು, ಗ್ರಾಮ ಮತ್ತು ನಗರ–ಎಲ್ಲವೂ ಒಂದೇ ಎಂಬುದನ್ನು ಸೂಚಿಸಿ ದರೆ, ವ್ಯತ್ಯಾಸಗಳು, ಗ್ರಾಮಕ್ಕಿಂತ ಹೆಚ್ಚು ವಿಸ್ತೃತವಾದುದು, ಸಂಕೀರ್ಣವಾದುದು 'ನಗರ' ಎಂದು ಸೂಚಿಸುತ್ತವೆ. ಒಟ್ಟಾರೆ, ಜನಸಾಂದ್ರತೆ, ವಿವಿಧ ಜಾತಿಗಳ ಆವಾಸಸ್ಥಾನ, ವ್ಯಾಪಾರ ಮಹತ್ವ, ದೇವಾಲಯಗಳ ಅಪ್ರಾಮುಖ್ಯತೆ, ಕೆಲವೊಮ್ಮೆ ರಾಜ/ ಅರಮನೆಯ ಅಸ್ತಿತ್ವ–ಇವು ಗ್ರಾಮಕ್ಕಿಂತ ಭಿನ್ನವಾದ ನಗರ ಸ್ವರೂಪವನ್ನು ತಿಳಿಸುತ್ತವೆ.

೮) ಮಯಮತ ಮತ್ತು ಶಿಲ್ಪರತ್ನಗಳು ಕೊಡುವ ವಿವಿಧ ಪ್ರಕಾರಗಳಿಗೂ ಮಾನಸಾರವು ಕೊಡುವ ವಿವಿಧ ಪ್ರಕಾರ ಗಳಿಗೂ ಹೆಚ್ಚು ವ್ಯತ್ಯಾಸವಿಲ್ಲ; ಪಟ್ಟಣ ಮಾತ್ರ ದೊಡ್ಡ

ವ್ಯಾಪಾರೀನಗರ; ನದೀದಂಡೆ ಮೇಲಿರುತ್ತದೆ ಎಂದು ಹೇಳಲಾಗಿದೆ.[೮೮] ಹೆಸರಿನ ದೃಷ್ಟಿಯಿಂದ ಹೆಚ್ಚಿನ ವ್ಯತ್ಯಾಸ ವಿಲ್ಲವಾದರೂ ವಿವರಣೆಗಳಲ್ಲಿ ಕೆಲವು ವ್ಯತ್ಯಾಸಗಳಿವೆ.

ಎ) ಮಾನಸಾರದಲ್ಲಿ ರಾಜರುಗಳ ವಿವಿಧ ವರ್ಗ (Hierarchy)ಗಳ ಪ್ರಕಾರ ನಗರಗಳ ಬೇರೆ ಬೇರೆ ಅಳತೆ ಯನ್ನು ಹೇಳಿದೆ. ಇದು ಮಯಮತದಲ್ಲಿಲ್ಲ. ಮಯಮತದಲ್ಲಿ ಅದು ಹೇಳಿರುವ ನಗರ ಪ್ರಕಾರಗಳಿಗೆ ಬೇರೆ ಬೇರೆ ಅಳತೆ ಹೇಳಿದೆ (ಕೆಲವು ಬಿಟ್ಟು). ಅಂತೇ, ಮಯಮತದಂತೆ, ಬೀದಿ ಗಳ ಸಂಖ್ಯೆ ಮತ್ತು ಅವುಗಳ ದಿಕ್ಕುಗಳ ಆಧಾರದ ಮೇಲೆ ನೀಡಿರುವ ವಿವಿಧ ವಿನ್ಯಾಸಗಳ ವಿವರ–ಮಾನಸಾರದಲ್ಲಿಲ್ಲ.

ಬಿ) ಮಯಮತದ 'ಕೇವಲನಗರ'ದ ವಿವರವು ಮಾನಸಾರದ 'ರಾಜಧಾನೀ'ಯಲ್ಲಿದೆ. ಆ ವಿವರಗಳನ್ನು 'ರಾಜಧಾನಿ'ಗೆ ಅನ್ವಯಿಸುವುದೇ ಹೆಚ್ಚು ಸೂಕ್ತವೆನಿಸುತ್ತದೆ.

ಸಿ) ಮಯಮತದಲ್ಲಿ 'ಪುರ'ದ ಬಗ್ಗೆ ಮಾತ್ರವಿದೆ, ನಗರದ ಬಗ್ಗೆ ಇಲ್ಲ; ಇಲ್ಲಿರಬೇಕಾದ ವೈಶ್ಯರು ಹಾಗೂ ದೇವಾಲಯದ ಬಗ್ಗೆ ಮಾನಸಾರದಲ್ಲಿದೆ; ಆದರೆ ಮಯಮತವು ಈ ಬಗ್ಗೆ ವಿಶೇಷವಾಗಿ ಹೇಳಿಲ್ಲ. ಅದು, ಪುರ ನಗರ ಒಂದೇ ಎಂದಿದ್ದರೂ, ನಗರದಲ್ಲಿರುವಂತೆ, ಅಲ್ಲಿ ಅರಮನೆ ಇರಬೇಕೆಂದೇನೂ ಹೇಳಿಲ್ಲ.

ಡಿ) ವೈಶ್ಯರ ಬಗ್ಗೆ ಮಯಮತವು 'ದ್ರೋಣಕ'ದಲ್ಲಿ ಮಾತ್ರ ಹೇಳಿದೆ; ಆದರೆ ಮಾನಸಾರವು ಇದರೊಂದಿಗೆ, ಪುರ, ಪತ್ತನ ಹಾಗೂ ಚೆರಿಕಾಗಳಲ್ಲೂ ವೈಶ್ಯರಿರಬೇಕೆಂದಿದೆ. ಅಂದರೆ, ಮಯಮತದ ಪ್ರಕಾರ ದ್ರೋಣಕ ಮಾತ್ರವೇ ಪ್ರಮುಖ ವ್ಯಾಪಾರೀ ಸ್ಥಳ ಆಗಿರಬೇಕು.

ಇ) ನಗರದ ಸುತ್ತಲಿರುವ 'ವಪ್ರ'ದ ಬಗ್ಗೆ ಮಯಮತವು ಒಟ್ಟಾರೆಯಾಗಿ ಹೇಳಿದೆ; ಮಾನಸಾರವು ಕೆಲವೆಡೆ ಪ್ರತ್ಯೇಕವಾಗಿ ಹೇಳಿದೆ.

ಎಫ್) 'ಕೊಲಕ' ಪ್ರಕಾರದ ನಗರವು ಅರಣ್ಯದ ಮಧ್ಯೆ ಇರಬೇಕೆಂದು ಹೇಳಿರುವ ಮಯಮತವು, ಅಲ್ಲಿರಬೇಕಾದ ಅರಮನೆಯ ಬಗ್ಗೆ ಹೇಳಿಲ್ಲ; ಅದೇ, ಮಾನಸಾರವು ಈ ನಗರದ ಸ್ಥಳದ ಬಗ್ಗೆ ಹೇಳಿಲ್ಲ, ಅರಮನೆ ಇರಬೇಕೆಂದಿದೆ. ಹಾಗೆ ನೋಡಿದರೆ 'ಕೊಲಕ' ನಗರವು ಅರಮನೆಗೆ ಸೂಕ್ತವಲ್ಲವೇನೋ ಎನಿಸುತ್ತದೆ.

ಜಿ) ಮಯಮತವು ನೀಡುವ ಅಂತರಾಪಣ (Bazaar) ಗಳ ವಿವರ ಮಾನಸಾರದಲ್ಲಿಲ್ಲ. ಅನೇಕ ನಗರಗಳ ಪ್ರಮುಖ ಉದ್ದೇಶಗಳಲ್ಲೊಂದು–ವ್ಯಾಪಾರ. ಆದ್ದರಿಂದ ಮಯಮತವು ಈ ವಿವರಗಳನ್ನು ನೀಡಿರುವುದು ಸೂಕ್ತವೆನಿಸುತ್ತದೆ. ಹೀಗೆ, ಈ ಗ್ರಂಥಗಳ ನಡುವೆ ಕೆಲವು ವ್ಯತ್ಯಾಸಗಳನ್ನು ಗುರುತಿಸ ಬಹುದಾಗಿದೆ.

ಎಂ. ಚಿದಾನಂದಮೂರ್ತಿಯವರು ಸೂಚಿಸಿರು ವಂತೆ,[೮೯] ವಿವಿಧ ಪ್ರಕಾರದ ಗ್ರಾಮ–ನಗರಗಳ ಬಗ್ಗೆ ಪಂಪನ ಆದಿಪುರಾಣವು ನೀಡುವ ಕೆಲವು ವಿವರಗಳನ್ನು ಕುತೂಹಲ ಕ್ಕಾಗಿ ಇಲ್ಲಿ ಗಮನಿಸಬಹುದಾಗಿದೆ. ಇಂದ್ರನು ನಿರ್ಮಿಸಿದ ವಿವಿಧ ಗ್ರಾಮ–ನಗರಗಳನ್ನಿದು ಸೂಚಿಸುತ್ತಿದೆ. ಶಾಸ್ತ್ರ ಗ್ರಂಥಗಳು ನೀಡುವ ವಿವರಗಳಿಗೆ ಇದು ಹೊಂದುವುದೇ ಎಂದೂ ಇಲ್ಲಿ ಕೆಲಮಟ್ಟಿಗೆ ಚಿಂತಿಸಲಾಗಿದೆ. '...... ಗಡಿ ಕಾವಲುಗಾರರಿಂದ ರಕ್ಷಿತ ದುರ್ಗ[೯೦] ಪರಿವೃತಾಂತ ಪ್ರದೇಶ ಗಳನ್ನೂ ...... ಕರ್ಣಾಟಕ ...... ವಿವಿಧ ದೇಶಗಳನ್ನೂ, ಆ ದೇಶಗಳ ಮಧ್ಯದಲ್ಲಿನ ಅಗಳ್ತೆ, ಕೋಟೆಯ ಬುರುಜು, ಕೋಟೆ, ಗೋಪುರ, ಕೊತ್ತಲಗಳಿಂದ ಅಲಂಕೃತವಾದ ರಾಜಧಾನೀ ಗಳನ್ನೂ,[೯೧] ಒಂದೆರಡು ಕ್ರೋಶದಷ್ಟಿರುವ ಎಲ್ಲೆಕಟ್ಟಿನ ಪ್ರದೇಶದಲ್ಲಿ ವಾಸಿಸುತ್ತಿರುವ ನೂರು ಮತ್ತು ಐನೂರು ಅಧಮೋತ್ತಮ ಕುಟುಂಬಗಳುಳ್ಳ[೯೨] ಚಿಕ್ಕ ದೊಡ್ಡ ಭೇದ ಗಳಿರುವ ಮತ್ತು ನದಿ, ಬೆಟ್ಟ, ತಗ್ಗುಭೂಮಿ, ಮರ, ಸೇತು, ಕಾಡು ಮುಂತಾದ ಪ್ರದೇಶಗಳಿಂದ ಕೂಡಿದ ಮಹಾಗ್ರಾಮ ಗಳನ್ನೂ,[೯೩] ಪೂರ್ವೋತ್ತರವಾಗಿ ಹರಿಯುವ ನೀರಿನ ಪ್ರವಾಹ ಗಳನ್ನೂ, ಅಗಳ್ತೆ, ಕೋಟೆಯ ಬುರುಜು, ಕೋಟೆ, ಗೋಪುರ ಗಳಿಂದ ಯುಕ್ತವಾದ ವಿವಿಧಾಕೃತಿಗಳಲ್ಲಿ ಕಟ್ಟಲ್ಪಟ್ಟ ಮನೆ, ಉದ್ಯಾನ ಮತ್ತು ಜಲಾಶಯಗಳಿರುವ, ಪ್ರಧಾನ ಪುರುಷರಿಂದ ವಾಸಿಸಲ್ಪಡುವ ಪಟ್ಟಣಗಳನ್ನೂ,[೯೪] ಬೆಟ್ಟ, ನದಿಗಳಿಂದ ಸುತ್ತುವರೆಯಲ್ಪಟ್ಟ ಖೇಟವೆಂಬ ಹಳ್ಳಿ ಗಳನ್ನೂ,[೯೫] ಬೆಟ್ಟಗಳಿಂದ ಸುತ್ತುವರೆಯಲ್ಪಟ್ಟ ಖರ್ವಡವೆಂಬ ಗ್ರಾಮಗಳನ್ನೂ,[೯೬] ಐದುನೂರು ಹಳ್ಳಿಗಳಿಂದ ಸುತ್ತು(ವರಿಯ) ಲ್ಪಟ್ಟ ಮಡಂಬ ಗ್ರಾಮಗಳನ್ನೂ,[೯೭] ಸಮುದ್ರ ತೀರದಲ್ಲಿರುವ ಪಟ್ಟಣಗಳನ್ನೂ,[೯೮] ನದಿಯ ದಡದಲ್ಲಿರುವ ದ್ರೋಣಾಮುಖ ಗಳನ್ನೂ,[೯೯] ಮಸ್ತಕದವರೆಗೆ ಪೇರಿಸಿದ ಧಾನ್ಯಗಳನ್ನೂ ಭವಿಸುವ ಜನನಿವಾಸಿಗಳಾದ ಸಂವಾಹಗಳನ್ನೂ,[೧೦೦] ಘೋಷ,[೧೦೧] ಸಂಗ್ರಹ,[೧೦೨] ಗೋವ್ರಜ ಎಂಬ ಗ್ರಾಮಗಳನ್ನೂ .... ನಿರ್ಮಿಸಿ ದನು' (೮.೬೩ ವ(ಅನು)). ಹೀಗೆ ಗ್ರಾಮಗಳ ಸ್ವರೂಪವನ್ನು ಇವು ಸಂಕ್ಷಿಪ್ತವಾಗಿ ವಿವರಿಸುತ್ತಿದ್ದರೂ, ಗ್ರಂಥಗಳ ವಿವರಣೆಗೆ ಇವು ಕೆಲವೆಡೆ ಅನುನಯವಾಗಿವೆ. ಅಂತೇ, ಗ್ರಂಥಗಳು ಕೆಲವೆಡೆ ಅಸ್ಪಷ್ಟವಾಗಿ ಹೇಳಿರುವ ವಿಷಯಗಳನ್ನು ಸ್ಪಷ್ಟಪಡಿಸು ವುದೂ ಉಂಟು. ಹೀಗೆ, ಶಾಸನ, ಸಾಹಿತ್ಯ ಹಾಗೂ ಶಾಸ್ತ್ರ ಗ್ರಂಥಗಳ ಸಹಾಯದಿಂದ ಕ್ಷೇತ್ರಕಾರ್ಯ ಮಾಡಿದಾಗ ಇವುಗಳ ಬಗ್ಗೆ ಹೆಚ್ಚಿನ ಮಾಹಿತಿ ದೊರೆಯಲು ಸಾಧ್ಯವಿದೆ.

[ವಿ.ಸೂ. : ಕೆಲವು ಸಂಸ್ಕೃತ ಶ್ಲೋಕಗಳನ್ನು ಅರ್ಥೈಸುವಲ್ಲಿ ಸಹಾಯ ಮಾಡಿದ ಡಾ. ಕೆ. ವಸಂತಲಕ್ಷ್ಮಿಯವರಿಗೆ ಧನ್ಯವಾದಗಳು.]

ಆಧಾರಸೂಚಿ ಮತ್ತು ಅಡಿಟಿಪ್ಪಣಿಗಳು

೧. D.N. Shukla, Vastusastra, Vol I, P. 243.
೨. Dutt, B.B.-Town planning in Ancient India, P.22
೩. (qtd.) D.N. Shukla, Op.cit, P. 247.
೪. Op.cit, P. 246.
೫. ಈ ಗ್ರಂಥಕರ್ತನ ಹೆಸರು, ಕೌಟಿಲ್ಯ ಅಲ್ಲ, ಕೌಟಲ್ಯ ಎಂದು ಹೇಳಲಾಗಿದೆ. ಕೆ. ಕೃಷ್ಣಭಟ್ಟ (ಅನು), ಮುನ್ನುಡಿ, ಪು. ೧೩.
೬. ಈ ಗ್ರಂಥದಲ್ಲಿ ಗ್ರಾಮದೊಂದಿಗೇ ನಗರಗಳ ವಿವರವನ್ನು ನೀಡಲಾಗಿದೆ.
೭. 'ಶಿವತತ್ತ್ವರತ್ನಾಕರ'ದಲ್ಲೂ 'ನಗರ'ಗಳ ಬಗ್ಗೆ ವಿವರವಿದೆ (ಪ್ರ.ಸಂ. ೬ನೇ ಕಲ್ಲೋಲ, ಮೊದಲನೇ ತರಂಗ).
೮. FN-1. Mayamata, P. 89.
೯. P.K. Acharya - Indian Architecture According to Manasara (Manasara series, Vol-II), P. 40.
೧೦. ವಿವಿಧ ನಗರಗಳಿಗೆ ಪ್ರತ್ಯೇಕವಾಗಿಯೇ ಅಳತೆ ಹೇಳಿದ್ದರೂ, ಇಲ್ಲಿ ಮತ್ತೆ ಏಕೆ ಹೇಳಿದೆಯೋ ತಿಳಿಯುವುದಿಲ್ಲ.
೧೧. ಇವುಗಳ ಬಗ್ಗೆ ಆಯಾ ಸಂದರ್ಭದಲ್ಲೇ ವಿವರಿಸಲಾಗಿದೆ.
೧೨. ಮಯಮತದಲ್ಲಿ ಖೇಟ, ಖರ್ವಟ, ದುರ್ಗ, ನಗರ ಭೇದಗಳನ್ನು ವಿಸ್ತಾರದ ದೃಷ್ಟಿಯಿಂದ ವಿವಿಧ ಪ್ರಕಾರಗಳಾಗಿ, ಗ್ರಾಮದ ಸಂದರ್ಭದಲ್ಲೂ ಹೇಳಲಾಗಿದೆ(೯.೧೦-೧೬). ಅಂತೇ, ವಿವಿಧ ಹಿನ್ನೆಲೆಗಳಲ್ಲಿ ಗ್ರಾಮಗಳ ಬಗೆಗಳನ್ನು ಹೇಳುವಾಗ, ಪುರ, ನಗರ, ಪಟ್ಟಣಗಳ ಉಲ್ಲೇಖವೂ ಇದೆ. (ನೋಡಿ: ಅಪರ್ಣ, ಕೂ.ಸ., 'ಗ್ರಂಥೋಕ್ತ ಗ್ರಾಮವೈವಿಧ್ಯ' (ಲೇಖನ), ಇತಿಹಾಸದರ್ಶನ, ಸಂ.೨೭, ಪು. ೧೮೬-೧೯೦).
೧೩. ಇವುಗಳಲ್ಲಿ, ಗ್ರಾಮದ ಪಟ್ಟಿಯಲ್ಲಿರುವ ೮ ಪ್ರಕಾರಗಳೂ ಸೇರಿವೆ ಎಂದು ಒಂದೆಡೆ ಹೇಳಲಾಗಿದೆ (D.N. Shukla, Op.cit, P. 250). ಆದರೆ, ಈ ಶಾಸ್ತ್ರಗ್ರಂಥವು ನೀಡುವ ಗ್ರಾಮಪಟ್ಟಿಯಲ್ಲಿರುವ ೧೨ ರೀತಿಯ ಗ್ರಾಮಗಳಲ್ಲಿ (೭.೬-೮) ೪ ಗ್ರಾಮಗಳ ಹೆಸರುಗಳು ಮಾತ್ರವೇ (ಪ್ರಸ್ತರ, ಚತುರ್ಮುಖ, ದೇವರಾಟ್ ಹಾಗೂ ವಿಶ್ವೇಶ) ನಗರ ಪ್ರಕಾರಗಳಲ್ಲೂ ಸೇರಿದೆ. ಈ ಪ್ರಕಾರಗಳಲ್ಲಿ ಆರನ್ನು ಮಾತ್ರ ಶುಕ್ಲಾರವರು ವಿವರಿಸಿದ್ದಾರೆ.
೧೪. Shukla, Op-cit - P. 252.
೧೫. ಇದನ್ನು ಶುಕ್ಲಾರವರು ಹೇಳಿಲ್ಲ (Ibid).
೧೬. ಇದನ್ನು ೯೧೫ಳ ಗ್ರಾಮ ಎಂದು ಶುಕ್ಲಾರವರು ಹೇಳಿದ್ದಾರೆ (Op.cit, P. 245).
೧೭. ಮಾನಸಾರದ ಈ ಶ್ಲೋಕದಲ್ಲಿ 'ವಿಷ್ವಕ್ಸೇನಾಲಯಾನ್ವಿತಂ' ಎಂದಿರುವುದನ್ನು (೧೦.೨೫) (See P.K. Acharya, Op.cit-Vol.IV, P.95, lines 48-52) ಅನುವಾದದಲ್ಲಿ ಸೇರಿಸಿಲ್ಲ ಎನಿಸುತ್ತದೆ (ಅಥವಾ ಬೇರೆ ರೀತಿಯಲ್ಲಿದೆ). ವಿಷ್ವಕ್ಸೇನನ ದೇವಾಲಯ ಇರಬೇಕು ಎಂಬುದು ಇದರ ಅರ್ಥವಿರಬೇಕು. ಈ ಬಗ್ಗೆ ಮಯಮತದಲ್ಲಿಲ್ಲ.
೧೮. Dutt, B.B.(Op.cit) P. 254.
೧೯. ಶ್ಲೋಕದಲ್ಲಿ 'ವನೇ ಜನಪದೇ ಚೈವ ಕೇವಲೇ ಶೂದ್ರಸೇವಿತಃ' ಎಂದಿದೆ.
೨೦. Shukla, D.N.(Op.cit), P. 273.
೨೧. (qtd.) Dutt, Op.cit, P. 274.
೨೨. ಹೆಚ್ಚಿನ ವಿವರಗಳಿಗೆ ನೋಡಿ: Dutt, Op.cit., P. 274.
೨೩. ಈ ಅಳತೆಯನ್ನು ಅದು 'ಕೊತ್ಮಕೊಲಕ' ಪ್ರಕಾರಕ್ಕೆ ಹೇಳಿದ್ದು, ಅದು 'ಪುರ'ಕ್ಕೂ ಅನ್ವಯಿಸುವುದೆಂದು ಮಯಮತವು ಹೇಳಿದೆ. ಒಂದೆಡೆ, 'Pura is applied to a big capital as well as to a small settlement and all the names of villages ending in 'Puram' ಎಂದಿದೆ (FN. 26 Mayamata, P. 67). ಇಲ್ಲಿ ಹೇಳಿರುವ ವಿಸ್ತಾರವು ಕೊತ್ಮಕೊಲಕ ಬಿಟ್ಟು ಉಳಿದ ಎಲ್ಲ ಪ್ರಕಾರಗಳಿಗಿಂತ ಕಡಿಮೆ ಇದೆ. ದೊಡ್ಡ 'ಪುರ'ದ ಸುತ್ತಲ ಗೋಡೆಯ ವಿಸ್ತಾರವು ೧೬೦೦೦ ದಂಡವಿರುತ್ತದೆ (೧೦.೪-೫).
೨೪. ಅನೇಕ ಮಾರುಕಟ್ಟೆ (ವ್ಯಾಪಾರಸ್ಥಳ)ಗಳಿಂದ ಕೂಡಿದ ಊರು, ಮುಖ್ಯ ಗ್ರಾಮ, ಶಾಖಾನಗರ, ಉಪನಗರ, ನಗರದ ಬಡಾವಣೆ ಎಂದು 'ಪುರ'ದ ಬಗ್ಗೆ ನಿಘಂಟಿನಲ್ಲಿದೆ.
೨೫. 'ಪುರ'ದ ಬಗ್ಗೆ ದತ್ತ್ ಅವರಾಗಲೀ, ಶುಕ್ಲಾ ಅವರಾಗಲೀ ಬರೆದಿಲ್ಲ, ಪುರ ಮತ್ತು ನಗರ ಎರಡೂ ಒಂದೇ ಎಂಬ ಅಭಿಪ್ರಾಯ ಅವರದು (ಅಡಿಟಿಪ್ಪಣಿ ೧೯೦ ನೋಡಿ)
೨೬. ಮಾನಸಾರ ಮತ್ತು ಮಯಮತಗಳು ಗ್ರಾಮದ ಸಂದರ್ಭದಲ್ಲಿ ಹೇಳುವ ಪುರ/ನಗರಗಳ ಲಕ್ಷಣಕ್ಕೂ ನಗರದ ಸಂದರ್ಭದಲ್ಲಿ ಹೇಳುವ ಅವುಗಳ ಲಕ್ಷಣಕ್ಕೂ ವ್ಯತ್ಯಾಸವಿದೆ (ನೋಡಿ: ಅಪರ್ಣ, ಕೂ.ಸ. (ಪೂರ್ವೋಕ್ತ) ಹಾಗೂ 'ಗ್ರಾಮಗಳ ವಿವಿಧ ಪ್ರಕಾರಗಳು' (ಲೇಖನ), ಇತಿಹಾಸದರ್ಶನ, ಸಂ. ೨೮, ಪು. ೨೩೨-೨೪೦).
೨೭. ಈ ಬಗ್ಗೆ ಗ್ರಂಥಗಳ ವಿವರವನ್ನು ವಿಮರ್ಶಿಸುತ್ತಾ, ಶುಕ್ಲಾ ಅವರು (Op.cit, P.253), 'Pura is a synonym of nagara; Nagara is surely a fortified town as its etymology signifies' ಎಂದಿದ್ದಾರೆ.
೨೮. P.K. Acharya, Op.cit., Vol-VII, P.247 (ನಗರ).
೨೯. ಕಾಮಿಕಾಗಮವೂ ಕೂಡಾ 'ಪುರ'ದ ಬಗ್ಗೆ ಹೇಳದೆ 'ನಗರ'ದ ಬಗ್ಗೆ ಮಾತ್ರ ಹೇಳಿದ್ದು, ಅದನ್ನು ಲೇಖನದ ಆರಂಭದಲ್ಲೇ ನೀಡಲಾಗಿದೆ. ಮಾನಸಾರ ಬಿಟ್ಟು ಉಳಿದೆಲ್ಲವೂ ಪುರ ಅಥವಾ ನಗರ-ಎರಡರಲ್ಲೊಂದನ್ನು ಮಾತ್ರ ಹೇಳಿವೆ.
೩೦. Dutt (Op.cit.) P. 277.

೩೧. ಕಾರ್ಮುಕ ಗ್ರಾಮದ ಉಪಪ್ರಕಾರವಾಗಿ 'ಖೇಟ'ವನ್ನು ಹೇಳುವಾಗಲೂ, ಅಲ್ಲಿ ಶೂದ್ರರಿರಬೇಕೆಂದೇ ಹೇಳಿದೆ(ನೋಡಿ: ಅರ್ಪಣ, ಕೂ.ಸ. 'ಗ್ರಂಥೋಕ್ತ ಗ್ರಾಮವೈವಿಧ್ಯ' (ಪೂರ್ವೋಕ್ತ).

೩೨. 5.28, 67-68 (qtd - Dutt, Op.cit., P. 278).

೩೩. Dutt(Op.cit.), P.278. 'Such a town if thrown out by local industries, such as mining, it is known as Shakhanagara' ಎಂದು ಶಿಲ್ಪರತ್ನದ ಆಧಾರದಿಂದ (೫.೨೮, ೬೭-೬೮) ದತ್ತ್ ಅವರು ಹೇಳಿದ್ದಾರೆ. ಆದರೆ, ಅವರು ಕೊಟ್ಟಿರುವ ಶ್ಲೋಕದಲ್ಲಿ ನನಗೆ ಈ ರೀತಿಯ ಅರ್ಥ ತೋರಲಿಲ್ಲ (ಶ್ಲೋಕದಲ್ಲಿ 'ಕ್ಷೇತ್ರಾರಾಮ ಕರೋಪೇತಂ ಶಾಖಾನಗರ ಮಿಷ್ಯತೇ' ಎಂದಿದೆ).

೩೪. (qtd.) Dutt (Op.cit.) P. 278.

೩೫. ಮೂರು ಕಡೆ ಪರ್ವತಗಳಿದ್ದು, ಒಂದು ಕಡೆ ಮಾತ್ರ ಬಯಲಿದ್ದರೆ, ಅಂತಹ ಊರನ್ನು 'ಖರ್ವಟ'ವೆಂದು ಕರೆಯುತ್ತಾರೆಂದು ಒಂದು ಶಾಸನದ ಆಧಾರದಿಂದ (Kl. I.೨೫, ೧೧೮೬ ಕ್ರಿ.ಶ.) ಚಿದಾನಂದಮೂರ್ತಿಗಳು ಗುರುತಿಸಿದ್ದಾರೆ; ಅಲ್ಲದೆ, 'ಮಾನಸಾರವೂ ಹೆಚ್ಚು ಕಡಿಮೆ ಅದೇ ರೀತಿಯಲ್ಲಿ 'ಖರ್ವಟ'ವನ್ನು ವಿವರಿಸುತ್ತದೆ ಎಂದಿದ್ದಾರೆ (ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೨೮೯).

೩೬. ಒಂದೆಡೆ, ಖರ್ವಟವು, ಕ್ಷುಲ್ಲಕ ಪ್ರಾಕಾರದಿಂದ ಕೂಡಿರುವುದೆಂದು ಹೇಳಲಾಗಿದೆ (P.K. Acharya, Manasara series Vol.VII, P. 137).

೩೭. Dutt (Op.cit.); ಈ ವಿಷಯ ಇಲ್ಲಿ ಹೇಳಿರುವ ಶಾಸ್ತ್ರಗ್ರಂಥಗಳಲ್ಲಿಲ್ಲ.

೩೮. ನೋಡಿ ಲೇಖನ: ಅರ್ಪಣ, ಕೂ.ಸ. (ಪೂರ್ವೋಕ್ತ).

೩೯. ಅವರು ಹೇಳಿರುವ (Dutt. Op.cit. P. 278) ೪೪೮, ೫೧೨, ೫೭೬ ದಂಡಗಳ ಅಗಲವು 'ಖರ್ವಟ' ಗ್ರಾಮಕ್ಕೆ ಅನ್ವಯಿಸುತ್ತದೆ.

೪೦. ಗ್ರಂಥದಲ್ಲಿ 'ಸರ್ವಮಧ್ಯಾಲಯ' ಎಂದಿರುವುದನ್ನು ಸಂಪಾದಕರು 'ಸರ್ವಮರ್ತ್ಯಾಲಯ' ಎಂದು ತಿದ್ದಿದ್ದಾರೆ.

೪೧. 'ಕುಬ್ಜಕ' ನಗರದ ಬಗ್ಗೆ ಶುಕ್ಲಾ ಅವರಾಗಲೀ, ದತ್ತ್ ಅವರಾಗಲೀ ವಿವರ ನೀಡಿಲ್ಲ. ದತ್ತ್ ಅವರು ಸಂಬಂಧಿತ ಶ್ಲೋಕವನ್ನು ಬಿಟ್ಟಿದ್ದಾರೆ; ಶುಕ್ಲಾ ಅವರು ನಗರಗಳ ಹೆಸರಿನ ಪಟ್ಟಿಯಲ್ಲೂ ಅದನ್ನು ಸೇರಿಸಿಲ್ಲ (Op.cit.P. 253) ಕಾರಣ ತಿಳಿದಿಲ್ಲ. 'ಕುಬ್ಜಕ'ದ ಬಗ್ಗೆ ಕಾಮಿಕಾಗಮ, ಶಿಲ್ಪರತ್ನ(?)ಗಳೂ ಹೇಳಿಲ್ಲ.

೪೨. ಇದನ್ನು 'ಮನುಷ್ಯಾಲಯ ಚಂದ್ರಿಕಾ' ಕೂಡಾ ಹೇಳಿರುವುದಾಗಿ ತಿಳಿದುಬರುತ್ತದೆ (qtd. Dutt (Op.cit.) P. 275).

೪೩. ಒಂದು ಶ್ಲೋಕದ ಹಿನ್ನೆಲೆಯಲ್ಲಿ ಪತ್ತನ ಮತ್ತು ಪಟ್ಟನಕ್ಕೆ ವ್ಯತ್ಯಾಸವಿರಬಹುದೆಂಬ ಅನುಮಾನವನ್ನು ದತ್ತ್ ಅವರು ವ್ಯಕ್ತಪಡಿಸಿದ್ದಾರೆ (Op.cit.) F.N. 1). ಅವರೇ ಉಲ್ಲೇಖಿಸಿರುವ ಇನ್ನೊಂದು ಶ್ಲೋಕದಲ್ಲೂ 'ದ್ರೋಣಮುಖ'ವನ್ನು 'ಪಟ್ಟಣ' ಎಂದಿದೆ. (Op.cit.) P.282, F.N.1); ಕಾಮಿಕಾಗಮದಲ್ಲೂ 'ಪತ್ತನ'ದ ಬದಲು 'ಪಟ್ಟಣ' ಎಂದಿದೆ (I.20.9).

೪೪. ಈ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿರುವ ಮಯಮತದ ಸಂಪಾದಕರು, 'However it is perhaps to understand that pattana being built along a shore according to a linear pattern shops cannot be arranged in bazaar as it is the case in centred plan settlement' ಎಂದಿದ್ದಾರೆ (FN-50, Mayamata. P. 111).

೪೫. ಶ್ಲೋಕದಲ್ಲಿ 'ಸೇನಾನಾಮಯುತಾನಾಂಚ ಪೃತನಾಭಿ ಸಮನ್ವಿತಂ' ಎಂದಿದೆ (ಪೃತನಾ=ಸೇನೆ). ಮಾನಸಾರದ ಅನುವಾದದಲ್ಲಿ 'Each ten thousand soldiers', (P.K. Acharya, Op.cit., Vol-IV P. 96, lines 67-69) ಎಂದಿರುವುದರ ಬಗ್ಗೆ ಅನುಮಾನವಿದೆ.

೪೬ (qtd), Dutt (Op.cit.) P.279.

೪೭. (qtd.) Dutt(Op.cit); ಈ ಚತುರ್ವಿಧ ಬಲವನ್ನು(ಆನೆ, ಕುದುರೆ, ಪದಾತಿ, ರಥ) ವಿಮಾನಾರ್ಚನಕಲ್ಪವು 'ರಾಜಧಾನೀ'ಗೆ ಹೇಳಿದೆ.

೪೮. FN.20, Mayamata, P. 95.

೪೯. Dutt. Op.cit.

೫೦. Shukla, Op.cit. P. 254.

೫೧. Dutt, Op.cit. P. 280.

೫೨. FN.24, Mayamata, P. 97.

೫೩. ಮಾನಸಾರದ ಶ್ಲೋಕದಲ್ಲಿ 'ನದ್ಯಾದಿ' ಎಂದಿದೆ. ಅದು (ಮಯಮತದಂತೆ) 'ನದ್ಯಾದ್ರಿ' ಎಂದಿರಬೇಕು.

೫೪. Dutt, Op.cit.

೫೫. (qtd.) Dutt, Op.cit.

೫೬ Ibid.

೫೭. 'ಚರಿಕಾ' ಎಂಬುದು ತಮಿಳು 'ಚೆರಿ'ಯ ಸಂಸ್ಕೃತ ರೂಪವೆಂದು ಹೇಳಲಾಗಿದೆ (FN.24, Mayamata, P. 97).

೫೮. 'ಪಾರ್ಶ್ವೇಚಾನ್ಯದ್ವಿಜಾತೀನಾಂ' ಎಂಬುದನ್ನು 'Other twice born(the brahmanas and vaisyas) on the sides of the royal palace' ಎಂದು ಅನುವಾದಿಸಲಾಗಿದೆ (P.K. Acharya, Op.cit. Vol-IV, P.97 (lines 85-87)).

೫೯. ಈ ಬಗ್ಗೆ Dutt ಅವರು, 'Stationed by the King' ಎಂದಿದ್ದಾರೆ (Op.cit.).

೬೦. 'ಅರ್ಥಶಾಸ್ತ್ರ'ದಲ್ಲಿರುವ 'ಸ್ಥಾನೀಯ'ದ ವಿವರ ಈ ರೀತಿ ಇದೆ: "ಜನಪದದ ಮಧ್ಯದಲ್ಲಿ ವಾಸ್ತುವಿದ್ಯೆಯನ್ನು ತಿಳಿದವರು ಹೇಳುವ ಸ್ಥಳದಲ್ಲಿ ಎರಡು ನದಿಗಳು ಬಂದು ಸೇರುವಲ್ಲಿಯಾಗಲೀ, ಯಾವಾಗಲೂ ನೀರಿರುವ ಹ್ರದದ, ಸರೋವರದ, ಕೆರೆ ಸಮೀಪದಲ್ಲಾಗಲೀ ಧನೋತ್ಪತ್ತಿಗೆ ಸ್ಥಾನವಾಗಿರುವ ಸ್ಥಾನೀಯವನ್ನು ರಚಿಸಬೇಕು. ಅದನ್ನು ವಾಸ್ತುಶಾಸ್ತ್ರಾನುಸಾರವಾಗಿ ವರ್ತುಲವಾಗಿಯೋ, ದೀರ್ಘವಾಗಿಯೋ, ಚತುರಶ್ರವಾಗಿಯೋ ನಿರ್ಮಿಸಬೇಕು. ಪ್ರದಕ್ಷಿಣಾಕಾರವಾಗಿ ಹರಿಯುವ ನೀರಿನಿಂದಲೂ, ನೆಲ-ಜಲ ಮಾರ್ಗಗಳಿಂದ ಬಂದ ವಿಕ್ರೇಯ ವಸ್ತುಗಳಿಂದಲೂ ಕೂಡಿದ ಸ್ಥಾನೀಯವನ್ನೇರ್ಪಡಿಸಬೇಕು". 'ಸ್ಥಾನೀಯ'ದಲ್ಲಿ ವ್ಯಾಪಾರ-ವಿಕ್ರಯಗಳು, ಧನಸ್ಥಾನ-ಈ ಬಗ್ಗೆ ಹೇಳಿರುವುದು ಈ ಗ್ರಂಥದಲ್ಲಿ ಮಾತ್ರ ಎನಿಸುತ್ತದೆ (II.3.(ಕ) ಪು೧ ೯೪).

೬೧. 'ರಾಜ್ಯದ ಗಡಿಗಳು ಸುರಕ್ಷಿತವಾಗಿರಲು ರಾಜರು ಅಲ್ಲಲ್ಲಿ ಕೆಲವು ಸೇನಾ ಕೇಂದ್ರಗಳನ್ನು ಸ್ಥಾಪಿಸುತ್ತಿದ್ದರು (Military checkposts); ಅಂತಹ ಕೇಂದ್ರಗಳಲ್ಲಿದ್ದು ಗಡಿಗಳನ್ನು ಕಾಯುತ್ತಲಿದ್ದವರನ್ನು 'ಅಂತಪಾಲ'ರೆಂದು ಕರೆಯುತ್ತಾರೆ' ಎಂದು ಒಂದು ಶಾಸನದ ಆಧಾರದಿಂದ ಚಿದಾನಂದಮೂರ್ತಿಯವರು ಹೇಳಿದ್ದಾರೆ (ಪೂರ್ವೋಕ್ತ. ಪು. ೨೮೫).

೬೨. FN. 21, Mayamata, P. 97.

೬೩. Dutt, Op.cit. P. 281.

೬೪. 'ದ್ರೋಣಕ' ಶಬ್ದಕ್ಕೆ, 'ಬೆಟ್ಟಗಳ ಮಧ್ಯದಲ್ಲಿ ವಾಸ ಮಾಡುವವರು' ಎಂದು ನಿಘಂಟಿನಲ್ಲಿ ಹೇಳಿರುವುದು ಇಲ್ಲಿಗೆ ಅನ್ವಯಿಸುವುದಿಲ್ಲ.

೬೫. Dutt, Op.cit. P. 282.

೬೬ ಇದಕ್ಕೆ 'ಜಲಸ್ಥಲಮಾರ್ಗವನ್ನುಳ್ಳ ಪುರ' ಎಂದು ಅರ್ಥ ನೀಡಿ, ಈ ಬಗ್ಗೆ ಭಿನ್ನಾಭಿಪ್ರಾಯಗಳಿವೆ ಎಂದೂ ಕನ್ನಡ ನಿಘಂಟಿನಲ್ಲಿ ಹೇಳಿದೆ.

೬೭. ಶಾಸನವೊಂದರಲ್ಲಿ ((qtd.) SII.IX.i.226, 1132A.D), 'ಗಿರಿನಿಝ್ಝರದಿಂ ಸಿಂಧುವ ಪರಿಕಾಲಿಂಬಳೆದ ಗಂಧಶಾಳಿಯ ವನದಿಂ ವರಪುಂಡ್ರೇಕ್ಷುವಾಟೋತ್ಕರದಿಂ ದ್ರೋಣಾಮುಖಾಖ್ಯವದು ಸೊಗಯಿಸುಗುಂ' ಎಂಬ ವರ್ಣನೆ ಇದೆ. ಅಲ್ಲಿ ಗಿರಿನದಿಗಳೂ ಅದರಿಂದ ಬೆಳೆದ ಗಂಧಶಾಳಿಯ ವನವೂ ಇತ್ತೆಂದು ಹೇಳಿರುವುದು, 'ದ್ರೋಣಮುಖ'ದ ಇನ್ನೊಂದು ಲಕ್ಷಣವನ್ನು ಸೂಚಿಸುತ್ತಿದೆಯೇ ಎಂಬ ಅನುಮಾನವಿದೆ. ಈ ಶಾಸನದ ಬಗ್ಗೆ ವಿವರ ನೀಡಿರುವ ಚಿದಾನಂದಮೂರ್ತಿಯವರು, ಗುತ್ತಿಕಲು ಎಂಬುದೇ ಈ ಶಾಸನವು ಹೇಳುವ ದ್ರೋಣಮುಖ ಎಂದು ಹೇಳಿದ್ದಾರೆ (ಪೂರ್ವೋಕ್ತ, ಪು.೩೬೬).

೬೮. (qtd.) Dutt, Op.cit. P. 282.

೬೯. (qtd.) FN. 22, Mayamata, P. 97.

೭೦. Dutt, Op.cit.

೭೧. 'ತನ್ನಗರಂ ಸ್ಯಾದಾಶ್ರಯಾದ್ ಪ್ರಹಾರೋಪಜೀವಿನಾಂ' ಎಂಬುದನ್ನು 'Residence therein of the free-holder brahmins' ಎಂದು ಅನುವಾದಿಸಲಾಗಿದೆ (P.K. Acharya, (Op.cit.) lines 79-81) (ಪ್ರ=ಪ್ರಧಾನವಾದ, ಪ್ರಮುಖವಾದ, ಶ್ರೇಷ್ಠವಾದ. ಆಹಾರ=ಭೂಮಿ); ಈ ಶ್ರೇಷ್ಠವಾದ (ಕರರಹಿತ) ಭೂಮಿಯನ್ನು ಅನುಭವಿಸುವವರು 'ಪ್ರಹಾರೋಪಜೀವಿ'ಗಳು ಎನ್ನಬಹುದು.

೭೨. 'ಸಂವಿಧ್' ಎಂದರೆ ಜ್ಞಾನ, ತಿಳುವಳಿಕೆ ಎಂದರ್ಥ. ಅದನ್ನು ಉಳ್ಳವರು (ಬ್ರಾಹ್ಮಣರು) ಇರುವ ನಗರ 'ಸಂವಿದ್ಧ'.

೭೩. ಈ ಪ್ರಕಾರದ ಬಗ್ಗೆ ದತ್ ಹಾಗೂ ಶುಕ್ಲಾ ಅವರು ಉಲ್ಲೇಖಿಸಿಲ್ಲ.

೭೪. Dutt, Op.cit. P. 283.

೭೫. (qtd.) FN. 23, Mayamata, P. 97.

೭೬. Ibid.

೭೭. ಸಾಕಷ್ಟು ಸ್ಥಳ ಇಲ್ಲದಿರುವುದರಿಂದ ಬೇರೆ ಬೇರೆ ಜಾತಿ ಮತ್ತು ವೃತ್ತಿಗಳವರಿಗೇ ಪ್ರತ್ಯೇಕ ಸ್ಥಳ ಗೊತ್ತುಮಾಡುವ ನಿಯಮವನ್ನು ಇಲ್ಲಿ ಅನುಸರಿಸಿಲ್ಲವೆನಿಸುತ್ತದೆ ಎಂದು ದತ್ ಅವರು ಹೇಳಿದ್ದಾರೆ (Op.cit.).

೭೮. (qtd.) Dutt, Op.cit. (ಮಯಮತ ಮತ್ತು ಮಾನಸಾರಗಳು ಹೇಳದ ನಗಮದ ಉದ್ದೇಶವನ್ನು ಇದು ಸ್ಪಷ್ಟಪಡಿಸುತ್ತಿದೆ).

೭೯. Dutt, Op.cit.

೮೦. ಈ ಬಗ್ಗೆ ಕಾಮಿಕಾಗಮದಲ್ಲೂ ಉಲ್ಲೇಖವಿದೆ (I.20.13-14).

೮೧. Dutt, Op.cit. P.284 ff, Shukla, P. 255 ff.

೮೨. ವಿವಸ್ವತ್, ಮಿತ್ರ ಮುಂತಾದವು ವಾಸ್ತುಪುರುಷನ ಮೇಲಿರುವ ದೇವತೆಗಳ ಸ್ಥಾನವನ್ನೂ, ದಿಕ್ಕನ್ನೂ ಸೂಚಿಸುತ್ತವೆ. ವಿವರಗಳಿಗೆ ನೋಡಿ: ಅಪರ್ಣ, ಕೂ.ಸ., 'ಪದನಿರ್ಣಯ ಅಥವಾ ವಾಸ್ತುಮಂಡಲ' (ಲೇಖನ), ಇತಿಹಾಸದರ್ಶನ, ಸಂ. ೨೨. ಪು. ೩೨-೪೦.

೮೩. 'Houses are to be in its inner side, not against the wall' ಎಂದು ಸಂಪಾದಕರು ಹೇಳಿದ್ದಾರೆ (FN.47, Mayamata, P.107).

೮೪. ನಗರ ನಿರ್ಮಾಣದಲ್ಲಿ ಪೇಚಕ (೪ ಪದಗಳು) ಹಾಗೂ ಆಸನ (೧೦೦ ಪದಗಳು) ಅಥವಾ ಅವುಗಳ ನಡುವಿನ ನಕ್ಷೆಯನ್ನು ಬಳಸಬೇಕೆಂದು ಮಯಮತದಲ್ಲಿದೆ; ಜೊತೆಗೆ, ನಕ್ಷೆಯೊಳಗಿನ ಗೆರೆಗಳು (ಸೂತ್ರ) ಮತ್ತು ಇತರೆ ನಿಷೇದಿಸಲ್ಪಟ್ಟ ಸ್ಥಳಗಳನ್ನು ಬಳಸಬಾರದೆಂದೂ ಅದು ಹೇಳಿದೆ (೧೦.೧೬-೧೭). (ನಿಷೇಧಿಸಲ್ಪಟ್ಟ ಸ್ಥಳಗಳ ವಿವರಗಳಿಗೆ ನೋಡಿ: ಮಯಮತ-೯.೫೫,೮೬ ಮತ್ತು ೭.೫೫).

೮೫. Shukla, Op.cit. P. 251.

೮೬. ನೋಡಿ: ಅಪರ್ಣ, ಕೂ.ಸ., 'ಗ್ರಾಮಗಳ ವಿವಿಧ ಪ್ರಕಾರಗಳು' (ಪೂರ್ವೋಕ್ತ).

೮೭. ವಿವರಗಳಿಗೆ ನೋಡಿ: ಅಪರ್ಣ, ಕೂ.ಸ. 'ಗ್ರಂಥೋಕ್ತಗ್ರಾಮವೈವಿಧ್ಯ' (ಪೂರ್ವೋಕ್ತ).

೮೮. Shukla, Op.cit. P. 253.

೮೯. ಚಿದಾನಂದಮೂರ್ತಿ, ಪೂರ್ವೋಕ್ತ, ಪು. ೨೮೯.

೯೦. 'ಸ್ಥಾನೀಯ'ವನ್ನು ಕೆಲವು ಗ್ರಂಥಗಳು ಅಂತಪಾಲನಿಂದ ರಕ್ಷಿತವಾದ ಗಡಿನಗರ ಎಂದಿರುವುದರಿಂದ, ಈ ವಿವರವನ್ನು ಅಷ್ಟರಮಟ್ಟಿಗೆ 'ಸ್ಥಾನೀಯ'ಕ್ಕೆ ಅನ್ವಯಿಸಬಹುದಾಗಿದೆ.

೯೧. ಈ ವಿವರಗಳಲ್ಲಿ ಅರಮನೆಯನ್ನೇ ಹೇಳಿಲ್ಲದಿರುವುದರಿಂದ ಇದು 'ರಾಜಧಾನೀ' ಎನಿಸುವುದಿಲ್ಲ. ಕೆಲಮಟ್ಟಿಗೆ ಇದು 'ಕೇವಲ' ನಗರಕ್ಕೆ ಅನ್ವಯಿಸುವುದು.

೯೨. ಇಲ್ಲಿ ಹೇಳಿರುವ ನೂರು ಮತ್ತು ಐನೂರು ಅಧಮೋತ್ತಮ ಕುಟುಂಬಗಳುಳ್ಳ (ಗ್ರಾಮವು) ಕೌಟಿಲ್ಯನ ಹೇಳಿಕೆಗೆ ಅನ್ವಯಿಸುವಂತಿದೆ. ಅವನು 'ಅರ್ಥಶಾಸ್ತ್ರ' ಕೃತಿಯಲ್ಲಿ ಶೂದ್ರಕೃಷಿಕರು ಅಧಿಕವಾಗಿದ್ದು, ನೂರಕ್ಕಿಂತ ಕಡಿಮೆಯಾಗದ ಐನೂರಕ್ಕಿಂತ ಹೆಚ್ಚಾಗದ ಕುಟುಂಬಗಳುಳ್ಳದ್ದು 'ಗ್ರಾಮ' ಎಂದಿದ್ದಾನೆ (II.1(ಕ) ಪು.೮೮).

೯೩. ಕೌಟಿಲ್ಯನು 'ಸ್ಥಾನೀಯ'ದ ಬಗ್ಗೆ ಹೇಳುವಾಗ, 'ರಮಣೀಯವಾದ ಮಹಾಗ್ರಾಮ' (ಅನು) ಎಂದಿರುವುದನ್ನು ಇದಕ್ಕೆ ಅನ್ವಯಿಸಬಹುದೇ ಎಂಬ ಅನುಮಾನವಿದೆ (ಅದೇ.).

೯೪. 'ಪಟ್ಟಣ'ದಲ್ಲಿ ವ್ಯಾಪಾರವೇ ಮುಖ್ಯ ಲಕ್ಷಣ. ಆದರೆ ಇಲ್ಲಿ ಆ ವೃತ್ತಿಯ ವೈಶ್ಯರ ಬಗ್ಗೆ ಏನನ್ನೂ ಹೇಳಿಲ್ಲ. ಆದರೆ, ಇಲ್ಲಿ ಪ್ರಧಾನಪುರುಷರಿರುವರೆಂದು ಹೇಳಿರುವುದು ವಿಶೇಷವಾಗಿದೆ.

೯೫. 'ಖೇಟ'ದ ವಿವರವು ಸರಿಯಾಗಿದೆ. ಅಲ್ಲದೆ, ಹಳ್ಳಿ ಎಂದು ಅದರ ಬಗ್ಗೆ ಹೇಳಿರುವುದು, ಅದು ಶೂದ್ರರ ಆವಾಸ ಸ್ಥಾನ ಎಂದು ಗ್ರಂಥಗಳು ಹೇಳಿರುವುದನ್ನು ಸಮರ್ಥಿಸುತ್ತದೆ.

೯೬. 'ಖರ್ವಟ'ದ ವಿವರವೂ ಶಾಸ್ತ್ರಗ್ರಂಥದಂತೇ ಇದೆ.

೯೭. 'ಮಡಂಬ' ಎಂಬ ಪ್ರಕಾರದ ಹೆಸರು ನಾನು ಗಮನಿಸಿದ ಗ್ರಂಥಗಳಲ್ಲಿಲ್ಲ. 'ಅರ್ಥಶಾಸ್ತ್ರ'ದಲ್ಲೂ ೪೦೦ ಗ್ರಾಮಗಳ ಉಲ್ಲೇಖವಿದೆಯೇ ಹೊರತು ೫೦೦ ಗ್ರಾಮಗಳ ಉಲ್ಲೇಖವಿಲ್ಲ (II.೧(ಕ) ಪು.೮೮).

೯೮. ಇಲ್ಲಿ ಹೇಳಿರುವ 'ಪಟ್ಟಣ'ದ ವಿವರವು ಸರಿಯಾಗಿದೆ. ಬಹುಶಃ ಈ ವಿವರವು ಮೇಲೆ ಹೇಳಿದ 'ಪಟ್ಟಣ'ಕ್ಕೆ ಪೂರಕವಾಗಿರುವಂತಿದೆ.

೯೯. 'ದ್ರೋಣಾ(ಣ)ಮುಖ'ದ ವಿವರವೂ ಸರಿಯಾಗಿದೆ.

೧೦೦. 'ಸಂವಾಹ'ದ ಬಗ್ಗೆ ನೀಡಿರುವ ಈ ವಿವರವು ಮಾನಸಾರದ 'ಸಂವಿದ್ಧ' ರೀತಿಯನ್ನು ಹೋಲಬಹುದೇ ಎನಿಸುತ್ತದೆ. ಮಾನಸಾರವು ಇದರ ಲಕ್ಷಣದ ಬಗ್ಗೆ ಹೇಳುವಾಗ, 'ಪ್ರಹಾರೋಪಜೀವಿನಾಂ' ಎಂದಿರುವುದರ ಅರ್ಥವನ್ನು (ಅಡಿಟಿಪ್ಪಣಿ-೫೨ ನೋಡಿ), ಇದು ಸ್ಪಷ್ಟಪಡಿಸುವಂತಿದೆ. ಆದ್ದರಿಂದ, ಮಾನಸಾರದ 'ಸಂವಿದ್ಧ'ವನ್ನೇ ಆದಿಪುರಾಣವು 'ಸಂವಾಹ' ಎಂದು ಗುರುತಿಸಿದೆ ಎನಿಸುತ್ತದೆ.

೧೦೧. 'ಘೋಷ' ಎಂಬ ಒಂದು ಪ್ರಕಾರವನ್ನು ಸಮರಾಂಗಣಸೂತ್ರಧಾರವು ಹೇಳಿದೆ(೧೮.೧-೬).

೧೦೨. 'ಅರ್ಥಶಾಸ್ತ್ರ' ಗ್ರಂಥದಲ್ಲಿ, 'ಹತ್ತು ಗ್ರಾಮಗಳಿಗೆ 'ಸಂಗ್ರಹಣ'ವೆಂಬ ಗ್ರಾಮಗಳನ್ನು ಸ್ಥಾಪಿಸಬೇಕು' ಎನ್ನಲಾಗಿದೆ (ಪೂರ್ವೋಕ್ತ). ಆದಿಪುರಾಣದಲ್ಲಿ ಅದನ್ನೇ 'ಸಂಗ್ರಹ' ಎಂದು ಕರೆದಿರಬಹುದು.

ಗ್ರಂಥಋಣ

Acharya, P.K. (Ed. & Tr.), Manasara series, Vol. II, III (Sans.), IV, V and VII, Munshiram Manoharlal Publishers Pvt. Ltd., New Delhi., 1996, 1995, 1994, 1995 and 1993 (resp).

Bruno Dagens (Ed. & Tr.), Mayamata (Sans.), An Indian Treatise on Housing Architecture and Iconography-Indira Gandhi National Centre for the Arts, New Delhi, 1985.

Dutt, B.B.., Town Planning in Ancient India, Isha Books, Delhi, Reprint, 2009.

Sudarshan Kumar Sharma (Tr.), Samarangana Sutradhara of Bhojadeva(Sans.)-(Vol-I), Parimal Publiscations, Delhi – 2007.

Shukla. D.N., Vastusastra(Hindu Science of Architecture(Vol-I), Munshiram Manoharlal Publishers Pvt. Ltd., New Delhi, 1998.

Shri Krishna 'Jugnu' and B.L. Sharma (Tr.-Hindi)., Visvakarma's Visvakarma Vastusastram, Parimal Publications, Delhi, 2010.

ವೇದಾಂತ ಶ್ರೀ ವಿಷ್ಣುಭಟ್ಟಾಚಾರ್ಯ (ಸಂಸ್ಕೃತ ನಿಬಂಧ), ವಿಮಾನಾರ್ಚನಾಕಲ್ಪಸ್ಯ ಸಮಾಲೋಚನಾತ್ಮಕಮಧ್ಯಯನಂ ತಿರುಪತಿ, ೨೦೦೪.

ಕೆ.ಎಲ್. ನರಸಿಂಹಶಾಸ್ತ್ರಿ (ಗದ್ಯಾನುವಾದಕರು), ಪಂಪಮಹಾಕವಿ ವಿರಚಿತ ಆದಿಪುರಾಣ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯.

ಸ್ವಾಮಿ ಶಿವಾಚಾರ್ಯ, ಜಿ. (ಸಂ.), ಕಾಮಿಕಾಗಮ (ಪೂರ್ವಭಾಗ) (ಸಂ.) ಮದ್ರಾಸು, ೧೯೭೬.

ಕೆ. ಕೃಷ್ಣಭಟ್ಟ (ಅನು), ಕೌಟಲ್ಯನ ಅರ್ಥಶಾಸ್ತ್ರ (ಸಂ.), ಸಮಾಜ ಪುಸ್ತಕಾಲಯ, ಧಾರವಾಡ, ೨೦೦೦.

ಚಿದಾನಂದಮೂರ್ತಿ. ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, (ಕ್ರಿ.ಶ. ೪೫೦-ಕ್ರಿ.ಶ. ೧೧೫೦).

ಮೈಸೂರು ವಿಶ್ವವಿದ್ಯಾನಿಲಯ, ೧೯೭೯.

ಮಲ್ಲೇಪುರಂ ಜಿ. ವೆಂಕಟೇಶ (ಸಂ), ಕೆಳದಿ ಬಸವರಾಜ ಭೂಪಾಲ ಸಂಕಲಿಸಿದ ಶಿವತತ್ತ್ವ ರತ್ನಾಕರ(ಸಂ.) (ಎರಡು ಸಂಪುಟಗಳು), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

ಸಂಸ್ಕೃತ-ಕನ್ನಡ ಶಬ್ದಕೋಶ, ಚಕ್ರವರ್ತಿ ಶ್ರೀನಿವಾಸಗೋಪಾಲಾಚಾರ್ಯ.

ಕನ್ನಡ-ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು

English-Kannada Dictionary, Mysore University.

೭೨

ಮೊಗರ್ನಾಡ ಸಾಗರದ ದಾಮರಸಪ್ಪೈ ದೇವಸ್ಥಾನದ ಮೋಡಿಲಿಪಿ ಚಾರಿತ್ರಿಕ ದಾಖಲೆಗಳು

ಡಾ. ಕೆಳದಿ ವೆಂಕಟೇಶ್ ಜೋಯಿಸ್*

ತುಳು ನಾಡಿನಲ್ಲಿ ಆಡಳಿತ ನಡೆಸಿದ ಅರಸರಲ್ಲಿ ಜೈನ ಬಂಗ ಅರಸರಿಗೆ ಪ್ರಮುಖ ಸ್ಥಾನವಿದೆ. ಇಂದಿನ ದಿನಗಳಲ್ಲಿಯೂ ಸಹ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಜೈನ ರಾಜರೂ, ಬಲ್ಲಾಳರೂ, ಹೆಗ್ಗಡೆಯರೂ ಮೊದಲಾದವರು ಈಗ ಉಳಿದು ಬಂದಿರುವ ಬಂಗ ಅರಸ ವಂಶಸ್ಥರಿಗೆ ಮೊದಲ ಮರ್ಯಾದೆ ಕೊಡುವುದು ರೂಢಿಯಲ್ಲಿದೆ. ಆದರೆ ಬಂಗ ಅರಸರ ಚರಿತ್ರೆಯೇ ಮೊದಲಾಗಿ ಯಾವ ಕೃತಿಗಳಲ್ಲಿ ಇವರ ವಿಷಯ ಹೆಚ್ಚು ಪ್ರಸ್ತಾಪವಾಗುವುದಿಲ್ಲ. ಹಾಗಾಗಿ ಈ ಕುರಿತು ಹೆಚ್ಚಿನ ಸಂಶೋಧನೆ ಆಗಬೇಕಿದೆ ದೊರೆತಿರುವ ಆಧಾರಗಳಿಂದ ಕ್ರಿ.ಶ. ೧೧೫೭ಕ್ಕೂ ಮುಂಚಿನ ಇವರ ಇತಿಹಾಸ ತಿಳಿಯಲು ಸಾಧ್ಯವಾಗುತ್ತಿಲ್ಲ. ಈ ಅರಸರ ಮೂಲ ಕುರಿತು ಭಿನ್ನಾಭಿಪ್ರಾಯವಿದೆ. ಅದರ ಕುರಿತು ನಾನಿಲ್ಲಿ ಚರ್ಚಿಸಲು ಹೋಗುತ್ತಿಲ್ಲ. ಬಂಗ ಅರಸರು ಮತ್ತು ಕೆಳದಿ ಇತಿಹಾಸಕ್ಕೆ ಸಂಬಂಧ ಇರುವುದರಿಂದ ಕ್ರಿ.ಶ. ೧೫೩೩–೧೫೪೫ರಿಂದ ಅಂದರೆ ಬಂಗರ ೧೩ನೆಯ ದೊರೆಯಾದ ೩ನೇ ಹಾವಳಿ ಬಂಗರಾಜನ ನಂತರ ಕೆಳದಿ ಇತಿಹಾಸದಲ್ಲಿ ಬಂಗರ ಪ್ರಸ್ತಾಪ ಬರುವುದರಿಂದ ಅದಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ದೊರೆತ ಮೊಗರ್ನಾಡ ದಾಮರಸ ಪೈ ದೇವಸ್ಥಾನದ ಮೋಡಿ ದಾಖಲೆಗಳನ್ನಾಧರಿಸಿ ಹೊಸ ವಿಚಾರವನ್ನಿಲ್ಲಿ ಪ್ರಸ್ತಾಪಿಸಲು ಪ್ರಯತ್ನಿಸಿದ್ದೇನೆ.

ಚೌಟ ರಾಣಿ ಅಬ್ಬಕ್ಕಾದೇವೆಯನ್ನು ಲಕ್ಷ್ಮಣ ಬಂಗರಾಜ ಮದುವೆ ಆಗಿದ್ದು, ಆ ಕಾಲದಲ್ಲಿ ಕೆಳದಿ ವೆಂಕಟಪ್ಪನಾಯಕನ ಆಡಳಿತವಿದ್ದುದು, ಇವರಿಗೂ ಬಂಗರಸರಿಗೂ ದ್ವೇಷ ಇದ್ದುದು, ನಂತರ ಬಂದ ೨ನೇ ಲಕ್ಷ್ಮಪ್ಪರಸ ಬಂಗರಾಜ, ೩ನೇ ಕಾಮರಾಯ, ೩ನೇ ಲಕ್ಷ್ಮಪ್ಪರಸ ಬಂಗರಾಜ ಈ ಮೊದಲಾದವರ ಕಾಲದಲ್ಲಿ ಈ ಇಬ್ಬರಲ್ಲಿ ಯುದ್ಧ ನಡೆದಿರುವುದು ಈ ವಿಷಯುಗಳು ಇತಿಹಾಸದಲ್ಲಿ ಪ್ರಸ್ತಾಪವಾಗಿವೆ. ಕಾಮರಾಯನ ತರುವಾಯ ಅವನ ಅಳಿಯ ಮೂರನೇ ಲಕ್ಷ್ಮಣ ಬಂಗರಾಜ (ಕ್ರಿ.ಶ. ೧೬೧೨–೧೬೨೯) ಶಾ.ಶ. ೧೫೩೪ನೇ ಪರಿಧಾವಿ ಸಂ.ರದ ಆಶ್ವೀಜ ಬ ೧೨ರಲ್ಲಿ ಪಟ್ಟಕ್ಕೆ ಬಂದನು. ಈ ಅರಸನು ಪೋರ್ತುಗೀಸರ ಸಂಗಡ ಒಪ್ಪಂದವನ್ನು ಮಾಡಿ ವೆಂಕಟಪ್ಪನಾಯಕನಿಗೆ ಕಪ್ಪ ಕೊಡದೆ ಇದ್ದುದರಿಂದ ಪೋರ್ಚುಗೀಸರ ಹಾವಳಿಯು ಹೆಚ್ಚಾಗಿ ಕೆಳದಿ ಅರಸರಿಗೆ ಸಿಗುತ್ತಿದ್ದ ಬಂದರದ ಸುಂಕವು ಕಡಿಮೆಯಾಗಿತ್ತು. ಕೆಳದಿ ವೆಂಕಟಪ್ಪನಾಯಕನು ೧೨ ಸಾವಿರ ಸೈನ್ಯದೊಡನೆ ಪೋರ್ಚುಗೀಸರ ಮೇಲೆ ಯುದ್ಧ ಮಾಡಿ ಅವರನ್ನು ಸೋಲಿಸಿ ಮಂಗಳೂರು ಕೋಟೆಯನ್ನು ವಶಪಡಿಸಿಕೊಂಡಿದ್ದನು. ಆಗ ಲಕ್ಷ್ಮಣ ಬಂಗರಾಜನು ಕಾಸರಗೋಡಿನಲ್ಲಿ ಆಶ್ರಯ ಪಡೆಯ ಬೇಕಾಯಿತು. ಈ ಸಂದರ್ಭದಲ್ಲಿ ಪೋರ್ಚುಗೀಸರಿಗೂ ವೆಂಕಟಪ್ಪನಾಯಕನಿಗೂ ಒಪ್ಪಂದ ಏರ್ಪಟಿತ್ತು. ಕೆಳದಿ ವೆಂಕಟಪ್ಪನಾಯಕನ ನಂತರ ಅವನ ಮಗ ವೀರಭದ್ರ ನಾಯಕನು ಕ್ರಿ.ಶ. ೧೬೩೦ರಲ್ಲಿ ಪಟ್ಟಕ್ಕೆ ಬಂದನಾದರೂ ಅಧಿಕಾರವೆಲ್ಲಾ ಶಿವಪ್ಪನಾಯಕನ ಕೈಯಲ್ಲಿತ್ತು. ತುಳು ನಾಡಿನಲ್ಲಿ ಆಡಳಿತ ನಡೆಸುತ್ತಿದ್ದ ಜೈನ ಅರಸರಲ್ಲಿ ಮುಖ್ಯಸ್ಥನಾದ ಬಂಗರಾಜನಿಗೆ ಲಿಂಗಾಯತರಾದ ಕೆಳದಿ ಅರಸರ ಕೈಕೆಳಗಿರುವುದಕ್ಕೆ ಸಮ್ಮತಿ ಇರಲಿಲ್ಲ. ಹಾಗಾಗಿ ಆಗಾಗ್ಗೆ ಈ ಬಂಗರಾಜನು ಕೊಲತ್ತರಸನ ಸಹಾಯ ಪಡೆದು ದಂಗೆ ಎಬ್ಬಿಸುತ್ತಿದ್ದನು. ಕೆಳದಿ ಶಿವಪ್ಪನಾಯಕನು ದೊಡ ಸೈನ್ಯದೊಡನೆ ಬೇಕಲದವರೆಗೆ ಮುನ್ನುಗ್ಗಿ ಕೊಲತ್ತರಸನ ರಾಜ್ಯವನ್ನು ವಶಪಡಿಸಿಕೊಂಡುದಲ್ಲದೆ ಅನಂತರ ಬಂಗರಾಜನು ೩೫೦೦ ವರಹ ಕಪ್ಪ ಕೊಡಬೇಕೆಂದು ನಿಶ್ಚಯಿಸಿ ಒಪ್ಪಂದ ಮಾಡಿಕೊಂಡಿದ್ದನು.

೧೭ನೇಯವನಾದ ಲಕ್ಷ್ಮಣ ಬಂಗರಾಜನ ತರುವಾಯ ಅವನ ಅಳಿಯ ನಾಲ್ಕನೆ ಹಾವಳಿ ಬಂಗರಾಜನು (ಕ್ರಿ.ಶ ೧೬೨೮–೧೬೩೧) ಶಾ.ಶ. ೧೫೫೦ನೇ ವಿಭವ ಸಂ॥ದ ಮಾಘ ಬ ೭ರಲ್ಲಿ ಪಟ್ಟಕ್ಕೆ ಬಂದನು ಕ್ರಿ.ಶ. ೧೬೩೧ರಲ್ಲಿ ಕೆಳದಿ ಶಿವಪ್ಪನಾಯಕನು ಈ ಹಾವಳಿ ಬಂಗಾರಾಜನು ಮಾಡಿಕೊಂಡಿದ್ದ ಒಪ್ಪಂದದಂತೆ ೩೫೦೦ ವರಹಗಳನ್ನು

* ಕೆಳದಿ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ–೫೭೭೪೦೧.

ಕೊಡದೆ ಇದ್ದುದಕ್ಕಾಗಿ ಅವನನ್ನು ಕೆಳದಿ ರಾಜಧಾನಿಗೆ ಕರೆಸಿ ಪಹರೆಯಲ್ಲಿಟ್ಟನು. ಆ ಸಂದರ್ಭದಲ್ಲಿ ಆಗ ಪಾಣೆ ಮಂಗಳೂರಿನ ಹತ್ತಿರದ ಮೊಗರನಾಡಿನಲ್ಲಿದ್ದ ಗೌಡ ಸಾರಸ್ವತ ಬ್ರಾಹ್ಮಣ ದಾಮರ್ಸ ಪೈ ಎಂಬ ದೊಡ್ಡ ಸಾಹುಕಾರನು ಈ ೩೫೦೦ ವರಹಗಳಿಗೆ ಜಾಮೀನಾಗಿ ನಿಂತು ಅರಸನನ್ನು ಬಿಡಿಸಿದನು.

ವಿಜಯನಗರ ಕಾಲದಿಂದಲೂ ವೈಷ್ಣವ ಸಾರಸ್ವತರು ಹೊನ್ನಾವರ, ಭಟಕಲ ಮಂಗಳೂರು ಮೊದಲಾದ ಕಡೆಗಳಲ್ಲಿ ವ್ಯಾಪಾರ ವ್ಯವಹಾರಗಳಲ್ಲಿ ಹೆಸರು ಮಾಡಿದವರಾಗಿದ್ದರು. ಇವರು ಸುಂದರವೂ ಬೃಹತ್ತಾದ ದೇವಾಲಯಗಳನ್ನು ನಿರ್ಮಿಸಿರುವುದಿದೆ. ಅಂತಹ ದೇವಾಲಯವೊಂದು ಭಟಕಳ ಮೊದಲಾದ ಕಡೆಗಳಲ್ಲಿ ಉಳಿದು ಬಂದಿದೆ. ವಿಜಯ ನಗರದ ನಂತರ ಈ ಸಾರಸ್ವತರು ಕೆಳದಿ ಅರಸರ ಸೇವೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಈ ಸಾರಸ್ವತರಲ್ಲಿ ಸಾಗರದ ದಾಮರ್ಸ ಪೈ ಸಹ ಒಬ್ಬನಾಗಿದ್ದನು. ಇವನು ನರ್ರಿಕೊಂಬು ಗ್ರಾಮದಲ್ಲಿ ಶ್ರೀ ಲಕ್ಷ್ಮೀ ನರಸಿಂಹ ದೇವಾಲಯ ನಿರ್ಮಿಸಿರುವುದು ಕಂಡು ಬರುತ್ತದೆ. (ಎ ಹಿಸ್ಟರಿ ಆಫ್ ಕೆನರ ಎಂಡ್ ದಿ ಸರಸ್ವತಾಸ್ ಇನ್ ಕರ್ನಾಟಕ ಪುಟ ೧೧೭)

ದಾಮರ್ಸ ಪೈ ಮಾಡಿದ ಸಹಾಯಕ್ಕಾಗಿ ವೀರ ನರಶಿಂಹ ಹಾವಳಿ ಬಂಗರಾಜನು ಮೊಗರನಾಡು ಸಾವಿರ ಸೀಮೆಯಿಂದ ಮೊಗರನಾಡು ದಾಮರ್ಸ ಪೈ ಸ್ಥಾಪಿಸಿದ ಶ್ರೀ ಲಕ್ಷ್ಮೀ ನರಸಿಂಹ ದೇವಸ್ಥಾನಕ್ಕೆ ಉಂಬಳಿ ಬಿಟ್ಟನು. (ಎಂ. ಗಣಪತಿರಾವ್ ಐಗಳ್. ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ಬಂಗರ ಸರು ಪುಟ ೨೮೧-೨೮೩) ಈ ಶ್ರೀ ಲಕ್ಷ್ಮೀ ನರಸಿಂಹ ದೇವಾಲಯವು ಇಂದೂ ಸಹ ಈ ಮೊಗರ ನಾಡು ಸೀಮೆಯಲ್ಲಿ ಅಸ್ಥಿತ್ವದಲ್ಲಿದ್ದು ಅಂದಿನಿಂದ ನಡೆದು ಬರುತ್ತಿರುವ ಪೂಜಾ ವಿಧಾನದಂತೆಯೇ ಮುಂದುವರೆದು ಕೊಂಡು ಬರುತ್ತಿರುವುದನ್ನು ಕಾಣಬಹುದು.

ಮೊಗರನಾಡು ಸೀಮೆಯ ನರಿಕೊಂಬು ಗ್ರಾಮ ದಲ್ಲಿರುವ ಈ ದೇವಾಲಯಕ್ಕೆ ಸಂಬಂಧಿಸಿದ ಮೋಡಿ ಲಿಪಿಯ ದಾಖಲೆಗಳು ಈ ದೇವಾಲಯದ ಇತಿಹಾಸದ ಮೇಲೆ ಬೆಳಕು ಚೆಲ್ಲಲು ಸಹಕಾರಿಯಾಗಿದೆ. ಈಗಾಗಲೇ ಸಾಕಷ್ಟು ದಾಖಲೆಗಳು ನಾಶವಾಗಿರುವುದಾಗಿ ತಿಳಿದು ಬರುತ್ತದೆ ಯಾದರೂ ಈಗ ದೊರೆತಿರುವ ಸುಮಾರು ಎಂಟುನೂರು ಪುಟಗಳಷ್ಟಿರುವ ದಾಖಲೆಗಳು ಈ ದೇವಾಲಯದ ಮತ್ತು ಈ ಸುತ್ತಮುತ್ತಲಿನ ಇತಿಹಾಸದ ಮೇಲೆ ಬೆಳಕು ಚೆಲ್ಲಲು ಸಹಕಾರಿಯಾಗಿದೆ. ಇದರ ಜೊತೆಗೆ ಈ ದೇವಾಲಯದ ಅರ್ಚಕ ಕುಟುಂಬದಲ್ಲಿ ಸುಮಾರು ನಲವತ್ತಕ್ಕೂ ಹೆಚ್ಚು ನಂದಿನಾಗರಿ ಲಿಪಿಯ ಹಸ್ತಪ್ರತಿಗಳು ದೊರೆತಿದ್ದು ಇದು ದೇವತಾರ್ಚನೆಯೇ ಮೊದಲಾದ ವಿಷಯವನ್ನು ಒಳಗೊಂಡಿದೆ. ದಾಖಲೆಗಳ ವಿವರ ಈ ಕೆಳಗಿನಂತಿದೆ.

ಕ್ರಮ ಸಂಖ್ಯೆ	ವಿವರ	ಪುಟಗಳು
೦೧	ಯಾದಾಸ್ತು ಮಂಗಳೂರು ತಾಲ್ಕು ನರೀಕೊಂಬು ಮಾಗಣೆ ಕೈಬಾ ಗ್ರಾಮದ ದಾಮರ್ಸಪೈ ದೇವಸ್ಥಾನದ ಶ್ರೀ ಲಕ್ಷ್ಮೀ ನರಸಿಂಹ ದೇವಸ್ಥಾನದ ಮೊಕ್ತೆಸರ ಕೃಷ್ಣಭಟ್ಟರ್ರ ಮಗ ನರಸೀಂಹ ಭಟ್ಟರ ಮಾರಿಹತ್ತೆ ೧೯೦೬ ಯಿವಿ ಪರಾಭವ ಸಂವತ್ಸರದ ಚೈತ್ರ ಶುದ್ಧ ೧ ಲಾಗಾಯಿತ್ತು ಫಾಲ್ಗುಣ ಬ ೩೦ವರೆಗೆ ವರುಷ ೯ಕ್ಕೆ ಸಾಲಿಯಾನ ತಸ್ತಿಕು ಬಂದ ರುಪೈಯಿ ೧೯೬ ಹಾ ೧।ಕ್ಕೆ ಶ್ರೀ ಲಕ್ಷ್ಮೀ ನರಸಿಂಹ ದೇವರ ವಿನಿಯೊಗಕ್ಕೆ ಮಾಡಿದ ಖರ್ಚಿನ ವರ್ಗದ ಪುಸ್ತಕವಾಗಿರುತ್ತದೆ.	೧೧ ಪುಟ
೦೨	ಶ್ರೀ ಶುಭಮಸ್ತು ಶ್ರೀ ಲಕ್ಷ್ಮೀ ನರಸಿಂಹ ಪ್ರಸನ್ನಃ (ನಾಗರಿ) ಸಂ೧೯೧೩ನೆ ಯಿವಿ ಜನವರಿ ತಾ ೨ರಲ್ಲು ಪರಿಧಾವಿ ಸಂವತ್ಸರದ ಮಾರ್ಗಶಿರ ಬಹುಳ ೧೦ಗುರುವಾರ ಮೊಗರ್ನಾಡ ದಾಮರ್ಸ ಪೈಗಳ ಶ್ರೀಲಕ್ಷ್ಮಿನರಶಿಂಹ್ವ ದೇವರ ಸನ್ನಿಧಿಯಲ್ಲಿ ನಡೆದ ಮುಖ ಮಂಟಪ, ಗೋಪುರ ವಗೈರೆ ದುರುಸ್ತಿ ಮಾಡಿದ ಖರ್ಚಿನ ವಿವರಾ ಕ್ರಿ.ಶ. ೧೯೧೩.	೫ ಪುಟ
೦೩	**ಶೀಮೆ ಬೆಕಲು ತಾಲ್ಕು ಮೊಗರ್ನಾಡ ಮಾಗಣೆ ನರ್ರಿಕೊಂಬು ಗ್ರಾಮದ ದೇವಸ್ಥಾನದ ಶ್ರೀಕೃಷ್ಣ ಭಟಗೆ ಬರಸಿಕೊಟ್ಟ ಚಿಟಿ.	೦೩ ಪುಟ
೦೪	ಶ್ರೀ ಭವ ಸಂವತ್ಸರದ ಶ್ರಾವಣ ಬ ೭ಲು ಶ್ರೀ ಲಕ್ಷುಮೀ ನರಶಿಂಹ್ವ ದೇವರ ಪಾದವೇ ಗತಿ (ನಾಗರಿಯಲ್ಲಿಯೂ ಇದೆ) ದೇವಸ್ಥಾನ ಜೀರ್ಣೋದ್ದಾರ ಮಾಡಿದ ಕುರಿತ ಲೆಕ್ಕ ಪತ್ರಗಳ ವಿವರ, ಊಳಿಗದದವರು ಬರೆದುಕೊಟ್ಟ ರಸೀತಿಗಳು	೦೪ ಪುಟ
೦೫	ದಾಮರ್ಸಪೈಗಳ ಶ್ರೀ ನರಶಿಂಹ ದೇವರ ದೆವಸ್ಥಾನದ।ಹೊಸ ರಥದ ಕಾಮಗಾರ್ರಿಕೆ ಬಗ್ಯೆ ಜಮಾ ಖರ್ಚಿನ ಉಳಿಗಾ ಬರವುದಕ್ಕೆ ಶುಭಮಸ್ತು, ಆಯುರಾಗೋಗ್ಯಮಸ್ತು ॥ ಶ್ರೀ	೦೫ ಪುಟ
೦೬	ಶುಭಮಸ್ತು ಸ್ವಸ್ತಿ ಶ್ರೀ ಜಯಾಭ್ಯುದಯ ನೃಪ ಶಾಲಿವಾಹನ ಶಕ ವರುಶ ೧೭೪೧ನೆ ಸಂ ೧೮೧೯ ನೇಯ ಪ್ರಮಾತ್ತಿ ಸಂವತ್ಸರಕ್ಕೆ ಬೆಕಲ ತ್ತಾಲ್ಕು ಮೊಗರ್ನಾಡು ಮಾಗಣೆ ನರ್ರಿಕೊಂಬಿನ ಗ್ರಾಮದಲ್ಲು। ಸಾಗರ್ರಾ ದಾಮರ್ಸಪಯಿಗಳ ದೇವಸ್ಥಾನದ ಶ್ರೀ ಲಕ್ಷ್ಮುಮಿ ನರಶಿಂಹ್ವ ದೇವರ ಪ್ರಾಕಾರ್ರ ಚಂದ್ರಶಾಲೆ ಜೀರ್ಣೋದ್ದಾರ ಕೆಲ್ಸದ ಜಮಾ ಖರ್ಚಿನ ಬುಕ್ಕಿಗೆ ಶುಭಂ ಶೋಭನಮಸ್ತು ಶ್ರೀ	೦೬ ಪುಟ

೦೭ ಶುಭಮಸ್ತು ಸೋಮೆಶ್ವರ ಬಡಿಗೆಯವರ್ರ ಆಸಾಮಿ ದಿನಮಾಲೆ ಕೆಲ್ಸದ ಲೆಖ್ಖದ ವಿವರ್ರ, ವಿಕ್ರಮ ಸಂವತ್ಸರಕ್ಕೆ ಕಾಮಗಾರ್‍ರಿ ವಿವರ್ರ — ೦೭ ಪುಟ

೦೮ ಶುಭಮಸ್ತು ಸಂ ೧೮೮೯ನೇಯ ಪ್ರಮಾತ್ತಿ ಸಂವತ್ಸರಕ್ಕೆ ನರ್‍ರಿಕೊಂಬಿನ ಗ್ರಾಮದಲ್ಲುಸಾಗರ್‍ರಾ ದಾಮರ್ಸಪಯಿಗಳ ದೇವಸ್ಥಾನದ ಶ್ರೀ ಲಕ್ಷ್ಮುಮಿ ನರಶಿಂಹ್ಹ ದೇವರ ಪ್ರಾಕಾರ್ರ ಚಂದ್ರಶಾಲೆ ಜಿಣೋ೯ದ್ಧಾರ ಕೆಲ್ಸದ ಜಮಾ ಖರ್ಚಿನ ಬುಕ್ಕಿಗೆ ಶುಭಂ ಶೋಭನಮಸ್ತು ಶ್ರೀ — ೦೩ ಪುಟ

೦೯ ಶ್ರೀ ಲಕ್ಷ್ಮಿ ನರಶಿಂಹಾಯನಮಃ । ನಿರ್ವಿಘ್ನಮಸ್ತು – ಶಾಲಿವಾಹನ ಶಕ ೧೮೦೦ನೆ ಬಹುಧಾಂನ್ಯ ಸಂವತ್ಸರಕ್ಕೆ ಸರ್‍ರಿಯಾದ ೧೮೭೮ ಮತ್ತು ೭೯ನೇ ಯ್ಸಿವಿ ಲಾಗಾಯ್ತು ಪ್ರಮಾಥಿ ಸಂ। ಚಯಿತ್ರ ಬ ೯ ಕುಜವಾರದವರೆಗೆ ಮೊಗರ್ನಾಡ ದಾಮರ್ಸಪೈ ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನದ ಮೊಕ್ತೆಸರ ಕೃಷ್ಣಭಟ್ಟ್ರ ಮಗಾ ಆಸ್ತೆಭಟ್ಟರ್‍ರು ಸದ್ರಿ ದೇವಸ್ಥಾನದ ಶಿಖ್ರಕ್ಕೆ ತಾಂಬ್ರ ಶಾಸನ ಹಾಕ್ಕುವರೆ ತಗಲಿದ ಜಮಾ ಖರ್ಚಿನ ತಪ್ಸೀಲು ಕಾಣ್ಣುವ ಲೆಖದ ಬುಕ್ಕು, ತಾಂಬ್ರಶಾಸನದ ಬಗ್ಯೆ ೧ನೇ ಪಾನು ಲಾಗೈತ್ತು ೪ನೆ ಪಾನಿನವರೆಗೆ ಜುಮ್ಲಾ ವಟ್ಟು ತಗಲಿದ ಖರ್ಚು ರ್‍ರು ಪೈ ೧೦೪೩೪ ಆಗಿರುತ್ತದೆ. — ೦೯ ಪುಟ

೧೦ ಶ್ರೀ ಲಕ್ಷ್ಮೀ ನರಸಿಂಹ ಪ್ರಸನ್ನಃ ಭವತು॥ ಮೊಗರ್ನಾಡ ದಾರ್ಮ್ಸಪೈ ದೇವಸ್ಥಾನದ ಉಪೈದ್ರ ಭಟ್ಟರ ಮಗ ವಿಟ್ಠಲಭಟ್ಟ ಲಕ್ಷ್ಮೀನರಸಿಂಹ ದೇವರಿಗೆ ಉತ್ಸವದವಾರ್‍ಯೈನುತನವಾಗಿ ಮಾಡಿದ ವಾಹನ ಯಾನೆ ಭಂಡಿಗೆ ತಗ್ಲಿದ ಖರ್ಚು ಇತರೆ (ನಾಗರಿಯಲ್ಲಿದೆ) — ೧೦ ಪುಟ

೧೧ ಶ್ರೀಲಕ್ಷ್ಮೀನರಸಿಂಹ ಪ್ರಸನ್ನಃ ಶ್ರೀ ಶುಭಮಸ್ತು ಎಂಬುದು ನಾಗರಿಯಲ್ಲಿದ್ದು ಯಾದಾಸ್ತು ದೇವಸ್ಥಾನದ ಮೊಕ್ತೆಸರ ಕೃಷ್ಣಭಟ್ಟರ ಮಗ ಉಪೇಂದ್ರ ಭಟ್ಟರ ಮಾರಿಷತ್ ಸಂ ೧೯೧೩ನೆ ಯ್ಸಿವಿ ಯೆಪ್ರಿಲ ತಾರಿಕು ೭ನೆ ಪ್ರಮಾತೀಚ ಸಂವತ್ಸರ ಚೈತ್ರ ಶುದ್ಧ ೧ ಚಂದ್ರವಾರ ಲಾಗೈತು ಬರುವ ಫಾಲ್ಗುಣ ಬ ೩೦ ವರೆಗೆ ವರ್ಷ ೧ಕ್ಕೆ ಸಾಲಿಯಾನ ತಸ್ತೀಕು ಬಂದ ಪ್ರಕಾರ ರೂಪ್ಯೆ ೧೯೬ ಪೈಶೆ ೧ಕ್ಕೆ ಶ್ರೀ ಲಕ್ಷ್ಮೀನರಸಿಂಹ್ವ ದೇವರ ವಿನಿಯೋಗಕ್ಕೆ ಮಾಡಿದ ಖರ್ಚಿನ ವಿಲೆವಾರಿ ತಪ್ಸಿಲು ವರ್ಗದ ಪುಸ್ತಕವಾಗಿರುತ್ತದೆ ಶ್ರೀಶ್ರೀಶ್ರೀಶ್ರೀಶ್ರೀ — ೧೧ ಪುಟ

೧೨ ಕ್ರಿ. ಶ.೧೮೩೩ರಲಿ ಮಿರ್‍ಝಾರದ ಅನಂತಪೈರವರ ಮಗ ವೆಂಕಟರಮಣಪೈ ಮೊಗರ್ನಾಡ ಈ ದೇವಸ್ಥಾನಕ್ಕೆ ಕೊಟ್ಟ ದಾನದ ವಿವರ (ಲಿಪಿ ನಾಗರಿ ಮತ್ತು ಭಾಷೆ ಕೊಂಕಣಿಯಲ್ಲಿದೆ) — ೦೨ ಪುಟ

೧೩ ೧೮೮೮ರ ಮಾರ್ಚ್ ತಾರೀಖುರಲ್ಲಿ ಮಂಗಳೂರು ತಾಲ್ಕು ಬಂಟ್ವಾಳ ಕ್ಸಬೆಯಲ್ಲಿರುವ ಅನಂತಪೈಯಾನೆ ವಿಟ್ಠಲ ಪೈ ಬರಕೊಂಡ ಅರ್ಜಿ ದೇವಾಲಯಕ್ಕೆ ಕೊಟ್ಟ ದಾನದ ಉಪಯೋಗ ಕುರಿತು. — ೦೬ ಪುಟ

೧೪ ಪ್ಲವಂಗ ಸಂವತ್ಸರದ ಶ್ರಾವಣ ಶು ೧ಲ್ಲು ಶ್ರೀಮತ್ತು। ತ್ತೊದೇಕಾನಿ ಭಂಡಾರಕ್ಕೆ। ಧಾಮರಸಪಯಿ ದೇವಸ್ಥಾನದ ಕೃಷ್ಣಭಟ್ಟರು ಬರೆದುಕೊಟ್ಟ ಭಿನ್ನವತ್ತಳೆ ಕಮವೆಂತೆಂದರೆ। ನರ್‍ರಿಕೊಂಬಿನ ಲಕ್ಷ್ಮಿಮಿ।ನರಸಿಂಹ್ಯ ದೆವರ್‍ರಿಗ್ಯೆ ಪ್ರಾಕು ಪ್ರಭಾನು ಸಂವತ್ಸರದಾರಭ್ಯ । ಅರಮನೆಯಿಂದ ಬರದುಕೊಟ್ಟ । ಗ ೪೦ ನಾಲ್ಕುವತ್ತು ವರಹಾಕ್ಕೆ।ವೆಚ್ಚ ಸಿಸ್ತು ಬರದೆ ಕೊಟ್ಟ ವಿವರ ಪ್ರಕಾರ।ನಾನು ಶಾರ್ವರ್‍ರಿ ಸಂ।ದವರ್‍ರಿಗೆ ನಡಸಿಕೊಂಡು ಬಂದಿದೆನೆ। ಮುಂದೆ ಅರಮನೆಯಿಂದ ಬರ್ಸಕೊಟ್ಟ ಮೆರೆಗೆ ದೇವರ್‍ರಿಗ್ಯೆ ನಡವ ಕಟ್ಟಳೆ।ಕಂದಾಚಾರವಂನ್ನು ನಡಶಿಕೊಂಡು ಬಂದೆನು। ಯಿದರಲ್ಲು ಯಿ ಪ್ರಕಾರ ನಡಸದೆ। ವಂದೇ ವಿಲಾತ್ತಿ ನಿಂತ್ತು ಬಿಟ್ರೆ ಯಿಬಾಚೆ।ಯು ಬಿಟ್ಟು ಅರಮನೆ ಅಪವಾದಲು ಕಾಟಲಿ ಬುಧಿಗಲಿಸ್ತರ್‍ರಿತ್ತಿ ತಿಳಿಉಳ್ಳವದೆಂದು ಕೊಟ್ಟ ಬಿಂನವತ್ತಳೆ ಪ್ರತಿ. ಇದರ ಜೊತೆ ಈ ೪೦ ವರಹಾಕ್ಕೆ ನಡೆಯುವ ಪೂಜಾ ವಿವರಗಳು ಬರೆಯಲ್ಪಟ್ಟಿದೆ. — ೦೪ ಪುಟ

೧೫ ದೇವಸ್ಥಾನದ ಪಾರುಪತ್ಯಗಾರ ವೆಂಕಟೇಶ ಪ್ರಭುವಿನ ಪತ್ರ. ದುರ್ಮುಖಿ ಸಂವತ್ಸರದ ಪುಶ್ಯ ಬ ೪. — ೨ ಪುಟ

೧೬ ದೇವಸ್ಥಾನ ಜೀರ್ಣೋದ್ಧಾರ ಮಾಡಿದ ಕುರಿತ ಲೆಕ್ಕ ಪತ್ರಗಳ ವಿವರ, ಊಳಿಗದದವರು ಬರೆದುಕೊಟ್ಟ ರಸೀತಿಗಳು — ೦೪ ಪುಟ

೧೭ ಸನ್ ೧೮೮೧ ಮಾರ್ಚ್ ತಾ ೧ ರಂದು ದೇವಸ್ಥಾನದ ಮೊಕ್ತೆಸರ ಕೃಷ್ಣಭಟ್ಟರ ಮಗ ಉಪೇಂದ್ರ ಭಟ್ಟರ ಹೆಂಡತಿ ಸತ್ಯಮ್ಮ ಯಾನೆ ಪದ್ಮಾವತಿ ಅಮ್ಮನವರಿಗೆ ಪಾಣೆ ಮಂಗಳೂರಿನಲ್ಲಿರುವ ಬರೆದು ಕೊಟ್ಟಿರುವ ರಸೀತಿ — ೦೨ ಪುಟ

೧೮ ಯಾದಾಸ್ತು, ಪಿಂಗಳ ಸಂವತ್ಸರಕ್ಕೆ ನರ್‍ರಿಕೊಂಬಿನ ಲಕ್ಷುಮೀ ನರಸಿಂಹ ದೇವರ್‍ರಿಗೆ ಸಲುವ ತಸ್ತಿಕ್ ಗ ೪೦ ವಿವರ — ೦೨ ಪುಟ

೧೯ ಯಾದಸ್ತು ಪಿಂಗಳ ಸಂವತ್ಸರದ ಜೇಷ್ಠ ಶು ೨ಲು ಬರಕೊಟ್ಟ ಪಟ್ಟಿ ೧ ರ ನರಿಕೊಂಬಿನ ದಾಮರಸ ಪಯಿ ದೇವ ಶ್ರೀ ಲಕ್ಷುಮೀನರಸಿಂಹ್ವ ದೆವರ್‍ರಿಗೆ ಅರ್ರೆವಾಶಿ ಪ್ರಕಾರ ಸಲುವ ಉತ್ತಾರ ವಿವರ — ೦೨ ಪುಟ

೨೦ ದುರ್ಮುಖಿ ಸಂ।ದಲ್ಲೂ। ಜೇಷ್ಟ ಶು ೪ ಲೂ ಕೊಟದು, ವಿಳಂಬಿ ಸಂ।ದಲ್ಲೂ ದೇವಸ್ಥಾನ। ಜೀರ್ಣೋಧಾರ ಸಮಯದಲ್ಲೂ ಗೋಳತ್ತಮ ೪ ಲ್ಲೂ ಭೂಮಿ ಅಡಊ ಮಾಡಿ ಬಿಟ್ಟು ಕೊಡುತ್ತೆನೆಂತಾ ಹೇಳಿದ ಪ್ರಕಾರ ಮೊದಲಾದ ವಿವರ — ೦೨ ಪುಟ

೨೧ ಮೊಗರ್ನಾಡ ಮಾಗಣೆ ನರ್‍ರಿಕೊಂಬಿನ ದಾಮರ್ಸಪೈ ದೇವಸ್ಥಾನ ಲಕ್ಷುಮೀ ನರಶಿಂಹ್ವ ದೇವರ್‍ರಿಗೆ – ದಾಮರ್ಸಪೈ ಪ್ರತಿಷ್ಟೆ ಮಾಡಿದ್ದು ಶಾಲಿವಾಹನ ಸಕ ವರುಶ ೧೬೩೬ (೧೭೧೪)ನೆ ಜಯ ಸಂವತ್ಸರ — ೦೨ ಪುಟ

ದಲ್ಲು ಅರ್ಚಕ ಕೃಷ್ಣಭಟನ ಮಂಮಗ ನರಶಿಂಹ ಭಟನ ಮಾರಿಪತ್ತು ದೇವರ ಗರ್ಭ ಗೃಹ ಅಂಕಣ, ಮುಖ ಮಂಟಪ ಮೊದಲಾಗಿ ಜೀರ್ಣೋದ್ಧಾರ ಮಾಡಿದ ವಿವರವಿದೆ.

೨೨ ಮೊಗರ್ನಾಡ ಮಾಗಣೆ ನರ್‍ರಿಕೊಂಬಿನ ದಾಮರ್ಸಪ್ಪೈ ದೇವಸ್ಥಾನ ಲಕ್ಷುಮೀ ನರಶಿಂಹ್ವ ದೇವರ್‍ರ ಇತ್ಯಾದಿ ವಿವರ. ೦೨ ಪುಟ

೨೩ ಶ್ರೀ ಲಕ್ಷ್ಮ್ಮಿ ನರಸಿಂಹ ಪ್ರಸನ್ನಃ (ನಾಗರಿ) ಏಪ್ರಿಲ್ ತಾರೀಖು ೨ ಯಾದಸ್ತು ಮಂಗಳೂರು ತಾಲ್ಲೂಕು ನರಿಕೊಂಬು ಮಾಗಣೆ ಕ್ಸಬಾ ಗ್ರಾಮದ ದಾಮರ್ಸಪ್ಪೈ ಶ್ರೀ ಲಕ್ಷ್ಮಿನರಸಿಂಹ ದೇವಸ್ಥಾನದ ಮೊಕ್ತೆಸರ ಕೃಷ್ಣಭಟ್ಟ್ರ ಮಗ ನರಸಿಂಹಭಟ್ಟರ ಮಾರಿಹಕ್ಕು ೧೯೦೮ನೇ ಯ್ಸಿವಿ ಕೀಲಕ ಸಂವತ್ಸರ ಚೈತ್ರ ಶುದ್ಧ ೧ ಲಾಗ್ಯೆಯಿತು ಫಾಲುಗುಣ ಬ ೩೦ರವರೆಗೆ ವರುಷ ೧ಕ್ಕೆ ಸಾಲಿಯಾನ ತಸ್ತಿ ಕು ಬಂದ ಪ್ರಕಾರ ರೂಪ್ಪೈ ೧೯೬೧ಕ್ಕೆ ಶ್ರೀ ಲಕ್ಷ್ಮೀ ನರಶಿಂಹದೇವರ ವಿನಿಯೋಗಕ್ಕೆ ನಡ್ಸಿದ ಖರ್ಚಿನ ವಿಲೇವಾರಿ ತಪಸ್ಸೀಲ್ ವರ್ಗದ ಪುಸ್ತಕಗಾಗಿರುತ್ತದೆ. ೦೯ ಪುಟ

೨೪ ಸಂನ್ ೧೮೮೯ನೇ ಯಿಸವಿ ಸ್ವಸ್ತಿ ಶ್ರೀ ಜಯಾಭ್ಯುದಯ ನೃಪ ಶಾಲಿವಾಹನ ಶಕ ವರುಶ ೧೭೪೧ ನೆಯ (೧೮೮೯) ಪ್ರಮಾಧಿ ಸಂವತ್ಸರಕ್ಕೆ ಬೇಕಲ್ಲ ತಾಲ್ಲುಕ್ಕು ಮೊಗರ್ನಾಡ ಮಾಗಣೆ ನರ್‍ರಿಕೊಂಬ ಗ್ರಾಮದಲ್ಲು ದಾಮರ್ಸ ಪಯಿಗಳ ದೇವಸ್ಥಾನದ ಶ್ರೀ ಲಕ್ಷ್ಮ್ಮಿ ನರಶಿಂಹ್ವ ದೇವರ ಪ್ರಾಕಾರ ಚಂದ್ರಶಾಲೆ ಜೀರ್ಣೋದ್ಧಾರ ಕೆಲ್ಸದ ಜಮಾ ಖರ್ಚಿನ ಲೆಕ್ಕದ ಬುಕ್ಕುಃ ನಿರ್ವಿಘ್ನಮಸ್ತು ಶ್ರೀ. ೧೫ ಪುಟ

೨೫ ದೇವಸ್ಥಾನದ ಪೂಜಾ ವಿನಿಯೋಗದ ಲೆಕ್ಕದ ವಿವರ ೦೨ ಪುಟ

೨೬ ಮೊಗರ್ನಾಡ ಮಾಗಣೆ ದಾಮರ್ಸಪ್ಪೈಯಿ ದೇವಸ್ಥಾನದ ಶ್ರೀ ಶ್ರೀಲಕ್ಷ್ಮೀ ನರಶೀಂಹ್ವ ದೇವರ್‍ರ ಹ್ರೊಸರಥ ಕಟ್ಟುವ ಬಗ್ಗೆ ಅಡಿಗಳ ಕೃಷ್ಣ ಭಟ್ಟರ ಸ್ವಾದೀನ ರಾಜಶ್ರೀ ಬಾಲುವಾಳ ಅಪ್ಪಯ ಪ್ರಭುಗಳೂ ತಂನ ಲೆಖಕ್ಕೆ ಸಂಕಲ್ಪ ಮಾಡಿ ಪರಾಭವ ಸಂವತ್ಸರದ ವೈಶಾಖ ಶು ೧೨ ದಿವ್ಸಲು ಚಾರಣೆ ಮಾಡಿದರೂ ಅದರ ಲೆಕ್ಕದ ವಿವರ. ೦೨ ಪುಟ

೨೭ ಮೊಗರ ನಾಡ ಮಾಗಣೆ ನರ್‍ರಿಕೊಂಬಿನ ಗ್ರಾಮದಲ್ಲು ಲಕ್ಷ್ಮೀನರಶಿಂಹ ದೇವರ್‍ರಿಗೆ ಸಾಗರ ದಾಮ ರ್ಸಪ್ಪೈ ಪ್ರತಿಷ್ಠೆ ಮಾಡ್ಸಯಿರ್‍ರುವದು ಶಾಲಿವಾಹನ ಶಕ ವ ೧೬೩೬ನೇ ಜಯ ಸಂವತ್ಸರದಲು ಕೃಷ್ಣಭಟರು ಮಾರ್‍ರಿಪತ್ತು. ಹಂಚಿನ ಚಾವಣಿ, ಅಂಕಣ ಗರ್ಭಗೃಹ ಮುಂತಾದನ್ನು ಜೀರ್ಣೋದ್ಧಾರ ಮಾಡಿದ್ದು. ೧೬ ಪುಟ

೨೮ ನಿರ್ವಿಘ್ನಮಸ್ತು। ಶುಭಮಸ್ತು। ಶ್ರೀಲಕ್ಷ್ಮಿನರಸಿಂಹ್ವಾಯನಮಃ। ನಮಸ್ತುಂಗ ಶಿರಭುಂಬಿ। ಚಂದ್ರಚಾಮರ ಚಾರವೆ। ತ್ರೈಲೊಕ್ಯನಗರಾರಂಭ। ಮೂಲಸ್ತಂಭಾಯ ಶಂಭವೆ। ಸ್ವಸ್ತಿ ಶ್ರೀ ಜಯಾಭ್ಯುಯ ನೃಪ ಶಲಿವಾಹನ ಶಕ ವರುಷ ೧೬೩೬ನೆಯ ಸಲುವ ಜಯ ಸಂವತ್ಸರದ ಮಾರ್ಗಶಿರ ಶು ೬ ಪುಂಣ್ಯ ಪರ್ವಣ ಕಾಲದಲ್ಲು ಶ್ರೀಮತು ಸಾಗರದ ದಾಮರಸಪಯಿಗಳ ಪೌತ್ರರು– ಪುತ್ರರಾದ ದಾಮರಸ ಪಯಿಗಳಿಗೆ ಮೊಗರನಾಡ್ ಸೀಮೆ ಪಾಂಡ್ಯ ಮಂಗಲಪೇಠೆ ಮೂರು ವರ್ಗದವರು ಹತ್ತು ವಕ್ಕಲು ಸಮಸ್ತ ಪ್ರಜೆಗಳು ಬರಕೊಟ್ಟ ಭೂಸ್ವಾಸ್ತಿ ಪಟ್ಟಿ ವಿವರ. ೨ ಪುಟ

೨೯ ಶ್ರೀ ಕಾಶಿ ಮಠದ ಶ್ರೀಮದಾಭುವನೇಂದ್ರ ತೀರ್ಥ ಶ್ರೀಪಾದಂಗವರ್‍ರು ಆರಾಧಿಸುವ ಶ್ರೀ ದೇವರ ಭಂಡಾರಕ್ಕೆ ಕೃಷ್ಣ ಭಟ್ಟನು ಬರಕೊಟ್ಟ ಅಡವು ಪ್ರಮಾಣ ಪತ್ರ ೦೧ ಪುಟ

೩೦ ನಿರ್ವಿಘ್ನಮಸ್ತು। ಶುಭಮಸ್ತು। ಶ್ರೀಲಕ್ಷ್ಮಿನರಸಿಂಹ್ವಾಯನಮಃ। ನಮಸ್ತುಂಗಶಿರಭುಂಬಿ ।ಚಂದ್ರಚಾಮರ ಚಾರವೆ।ತ್ರೈಲೊಕ್ಯನಗರಾರಂಭ। ಮೂಲಸ್ತಂಭಾಯ ಶಂಭವೆ।ಸ್ವಸ್ತಿ ಶ್ರೀ ಜಯಾಭ್ಯುಯ ನೃಪ. ಶಲಿವಾಹನ ಶಕ ವರುಷ ೧೬೩೬ನೆಯ ಸಲುವ ಜಯ ಸಂವತ್ಸರದ ಮಾರ್ಗಶಿರ ಶು ೬ ಪುಂಣ್ಯ ಪರ್ವ ಕಾಲದಲ್ಲು ಶ್ರೀಮತು ಸಾಗರದ ದಾಮರಸಪಯಿಗಳ ಪೌತ್ರರು ಸುರಪಯಿ ಪೊಉತ್ರರಾದ ದಾಮರಸಪಯಿಗಳಿಗೆ ಮೊಗರ್ನಾಡ ಶಿಮೆ ಪಾಣಿ ಮಂಗಲ ಪೇಠೆ ಮೂರು ವರ್ಗದ ಹತ್ತು ವಕ್ಕಲು ಸಮಸ್ತ ಪ್ರಜೆಗಳು ಬರಸಿಕೊಟ್ಟ ಭೂಸ್ವಾಸ್ತಿ ಪಟ್ಟಿ ವಿವರ. ೦೨ ಪುಟ

೩೧ ಶ್ರೀ ಜಯಾಭ್ಯುದಯ ನೃಪ ಶಾಲಿವಾಹನ ಶಕ ವರ್‍ರಿಶ ೧೬೮೪ನೇಯ ಚಿತ್ರಭಾನು ಸಂವತ್ಸರದ ಆಶ್ವೀಜ ಶು ೧೦ ಚಂದ್ರವಾರದ ಪುಂಣ್ಯ ಕಾಲದಲ್ಲಿ ವವುಚ ಗೋತ್ರದ ಆಶ್ವಲಾಯನ ಸಂಕ್ರದ। ರುಕ ಶಾಕೆಯ ಮರ್‍ರೆಷತ್ತ ದಾಮೋದರ ಭಟ್ಟ ಶರ್ಮಣ ಪ್ರಪೌತ್ರರಾದ ತಿಂಮ್ಮರ್ಸ ಭಟ್ಟ ಶರ್ಮಣ ಪೌತ್ರರಾದ ವಿಠಲ ಭಟ್ಟ ಶರ್ಮಣ ಪುತ್ರರಾದ ಕೃಷ್ಣ ಭಟ್ಟರ್‍ರಿಗೆ ಕಊಶಿಕ ಗೋತ್ರದ ಆಶ್ವಲಾಯನ ಸೂತ್ರದ ರುಕ್ಷಾಕೆಯ ಸಾಗರದ ಸೂರಪ್ಪೈ ಪ್ರಪೌತ್ರರಾದ ದಾಮರಸಪ್ಪೈ ಪ್ರಪೌತ್ರರಾದ ಸುರಪ್ಪೈ ಪುತ್ರರಾದ ಕೃಷ್ಣಪ್ಪೈಯು ಬರ್‍ರಶಿಕೊಟ್ಟ ದೇವಸ್ಥಾನ ಗೃಹರಾಮಕ್ಷೇತ್ರ ಸಹಾ।ಭುವನಷಿಷ್ಟಿ ಕ್ರಮವೆಂತೆಂದ್ರೆ ಕುಮಾರ್‍ರಧಾರ್‍ರ ನೇತ್ರಾವತಿ ತೀರದಲ್ಲಿ ವೆಂಗನಾಡು ಶಿಮೆ ನರ್‍ರಿಕೊಂಬಿನ ಗ್ರಾಮದಲ್ಲು ನಂನ ಅಜ ದಾಮರ್ಸಪ್ಪೈಗಳು ದೇವಸ್ಥಾನ ಕಟ್ಟಿಶಿ ಪ್ರತಿಷ್ಠೆ ಮಾಡಿದ ಶ್ರೀ ಲಕ್ಷುಮಿ ನರಶಿಂಹ್ವ ದೇವರ್‍ರಿಗೆ ನಡವ ಅಮೃತ ಪಡಿನಂದಾ ದೀಪ್ತಿ ಪಂಚಪರ್ವ ಮುಂತಾದ ನಡುವ ವಿನಿಯೊಗದ ಬಗ್ಯೆ ಈ ಶೀಮೆ ಪ್ರಜೆಗಳಿಗೆ ಹೇಳಿದಲ್ಲಿ ಅವರ್‍ರು ತಂಮ ಶಿಸ್ತಿನ ಮೇಲೆ ಗ ೧ಕ್ಕೆ ॥ ೦ ಮುಪಾಗದ ಪವರಾಡ ಶಿಕೊಟ್ಟು ದೇವತ್ತಾ ಶೇವೆಯು ನಡದು ಬಾಹ ರ್‍ರೀತ್ತಿ ಅವರ್‍ರು ಸಾಧನ ಬರ್‍ರಶಿಕೊಟ್ಟು ಯಿ ಸಾದನವು ಪ್ರಾಕು ವಿಳಂಬ ಸಂವತ್ಸರದಲ್ಲು ಶ್ರೀಮತು ಕೆಳದಿ ಸೋಮಶೇಖರ ನಾಯರರ್‍ರಿಗೆ ಅರಿಕೆ ಮಾಡಿಕೊಂಡು ಪ್ರಜೆಗಳು ಬರ್‍ರಶಿಕೊಟ್ಟ ಸಾಧನ ಇದು. ೦೩ ಪುಟ

೩೨ ಊಳಿಗ, ಉಫಾದಿ, ಪೂಜೆ ಮುಂತಾದ ಲೆಕ್ಕದ ವಿವರ ೦೪ ಪುಟ

೩೩ ಮಂತ್ರ ಮತ್ತು ಊಳಿಗದ ಲೆಕ್ಕದ ವಿವರ ೦೮ ಪುಟ

೩೪ ಯಾದಾಸ್ತು ಬೆಕಲ ತಾಲ್ಲು ಮೊಗರನಾಡ ಮಾಗಣೆ ನರ್‍ರಿಕೊಂಬು ಗ್ರಾಮದ ಶ್ರೀ ಲಕ್ಷ್ಮಿನರಸಿಂಹ ದೇವರ್‍ರಿಗೆ ಅಡಿಗಳು ನರಸಿಂಹ ಭಟರ ಮಗ ಕೃಷ್ಣ ಭಟರ ಮಾರ್‍ರಿ ಪತ್ತು ಸಂನ್ ೧೮೫೧ನೇ ಪ್ಲವ ಸಂವತ್ಸರದ ಜುಲಾಯಿ ಆರಭ್ಯ ಶುಭಕೃತ್ ಸಂವತ್ಸರದ ಜುಲಾಯಿ ಅಖ್ಯೆರವರೆಗೆ ವರುಷ ೧ರ ಸಾಲಿಯಾನ ಬಂದ ತಸ್ತಿಕು ಗ ೪೯ ಹಾ೦-ಕ್ಕೆ ಶ್ರೀ ದೇವರ ವಿನಿಯೊಗಕ್ಕೆ ನಡಶಿದ ಖರ್ಚಿನ ತಪಶಿಲು ೦೬ ಪುಟ

೩೫ ಶ್ರೀ ಲಕ್ಷ್ಮೀನರಸಿಂಹ ದೇವರ ಉತ್ತಾರ ಅರೆವಾಸಿ ಪ್ರಕಾರ ಶೋಭಕೃತು ಸಂವತ್ಸರದ್ದು ಲೆಕ್ಕ ವಿವರ ೦೮ ಪುಟ

೩೬ ನಾಗರಿ ಲಿಪಿಯಲ್ಲಿರುವ ಪೂಜಾ ವಿವರ ೦೨ ಪುಟ

೩೭ ಕೊಳಕೆರೆ ವಿಟ್ಠಪ್ಪ ಶ್ಯಾನುಭೋಗರಿಂದ ಶಾಲಿವಾಹನ ಶಕ ವರ್ಷ ೧೮೨೫ನೆ ಶೋಭಕೃತು ನಾಮ ಸಂವತ್ಸರದ ಮಾಘ ಶುದ್ಧ ೯ ಯು ಬುಧವಾರ ಶ್ರೀ ಲಕ್ಷ್ಮೀನಾರಸಿಂಹ ದೇವರ ಸನ್ನಿಧಿಯಲ್ಲು ಮುಖ್ಯ ಪ್ರಾಣ ದೇವರಿಗೆ ಪಂಚಮೃತ ಅಭಿಷೇಕ ಶಿಯಾಳ ೧ ಕ್ಕೆ ಹೀಗೆ ಶಾಶ್ವತ ಪೂಜಾ ವಿವರ ಪುಸ್ತಕ. ೨೬ ಪುಟ

೩೮ ಮೊದಲೆರಡು ಸಾಲು ನಾಗರಿಯಲ್ಲಿ. ಯಾದಾಸ್ತು. ಮಂಗಳೂರು ಶೀಮೆ ನರಿಕೊಂಬು ಮಾಗಣೆ ಕ್ಸಬಾ ಗ್ರಾಮದ ದಾಮರ್ಸಪ್ಪೆ ದೇವಸ್ಥಾನದ ಶ್ರೀ ಲಕ್ಷ್ಮಿನರಸಿಂಹ ದೇವರ ನಿತ್ಯ ಪೂಜೆಗೆ ಸನ್ ೧೯೦೭ನೆಯ ವಿಶ್ವಾವಸು ಸಂವತ್ಸರದ ಚೈತ್ರ ಶು ೧ ಆರಭ್ಯ ಜಮಾ ಖರ್ಚಿನ ವಿವರದ ಪುಸ್ತಕ ೦೫ ಪುಟ

೩೯ ಶ್ರೀ ಲಕ್ಷ್ಮುಮಿ ನರಸಿಂಹ ದೇವರ ಪಂಚಪರ್ವದ ಖರ್ಚಿನ ವಿವರ ಚೈತ್ರ ಶು ೧ ಆರಭ್ಯ ಪುಷ್ಯ ಮಾಸದ ವರೆಗೆ ೨೪ ಪುಟ

೪೦ ಶ್ರೀ ಮಧ್ವ ನವಮಿ ದಿವಸ ಶ್ರೀ ಪ್ರಾಣ ದೇವರಿಗೆ ದೀಪಾರಾಧನೆ ವಗ್ಯೆರೆ ಖರ್ಚಿನ ವಿವರದ ಪತ್ರಗಳು. ೦೭ ಪುಟ

೪೧ ೧೯೦೮ರಲ್ಲಿಶ್ರೀ ದೇವರ ಪೂಜಾ ವಿನಿಯೋಗಕ್ಕೆ ಕೊಟ್ಟಿರುವ ದಾನ ಸದುಪಯೋಗವಾಗಬೇಕೆಂದೂ, ಸರಿಯಾಗಿ ಪೂಜಾ ಕಾರ್ಯಕ್ರಮಗಳು ನಡೆಯಬೇಕೆಂದೂ ಬರೆದುಕೊಂಡಿರುವ ಪತ್ರ ೦೨ ಪುಟ

೪೨ ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಹೊರಡಿಸಿರುವ ೪.೧೨.೧೯೩೪ರ ಪತ್ರದ ಪ್ರತಿ ಮತ್ತು ದೇವಸ್ಥಾನದ ಮೊಕ್ತೆಸರ ನೇಮಕ ವಿವರ ಪಟ್ಟಿ. ೦೨ ಪುಟ

೪೩ ಮೊಗರನಾಡು ಮಾಗಣೆ ನರ್‍ರಿಕೊಂಬು ಗ್ರಾಮದ ಶ್ರೀ ಲಕ್ಷ್ಮುಮೀ ನರಸಿಂಹ್ವದೇವರ ಚಿಂದಿನ ವಿವರ ೦೨ ಪುಟ

೪೪ ಶ್ರೀಲಕ್ಷೀನರಸಿಂಹ ದೇವಾಲಯದ ಜೀರ್ಣೋದ್ಧಾರದ ಮುಂಚೆ ಸಿದ್ಧಪಡಿಸಿಕೊಂಡಿದ್ದ ನಕ್ಷೆ ೦೧ ಪುಟ

ಈ ದೇವಾಲಯದ ದಾಖಲೆಯೊಂದರ ಪಾಠ ಹೀಗಿದೆ.

ಮೊಗರ್ನಾಡ ಮಾಗಣೆ ನರ್‍ರಿಕೊಂಬು ಗ್ರಾಮದ । ಶ್ರೀ ಲಕ್ಷ್ಮೀನ್ಸಂಹ್ವ ದೇವರ ಜಿಂದಿಗೆ ವಿವರ್ರ ದಾಖಲೆ: ೧

ಕ್ರಮ ಸಂಖ್ಯೆ	ವಿವರ
೧	೧ ಲಕ್ಷುಮಿ ನರಸಿಂಹ್ವ ದೆವರ ಪಥುಮೆ
೨	೧ ಉತ್ಸಹ ತಾಂಬ್ರದಾತು ಲಕ್ಷುಮಿ ನರಸಿಂಹ್ವ ದೆವರ ಪ್ರಥುಮೆ
೩	೩ ಪ್ರಭಾವಳಿ ಕಂಚಿನ ಸುಮಾರ್‍ರು ಸೆರ್‍ರು
೪	೨ ಪಿಟ ಹಿತಾಳಿ ಸುಮಾರ್‍ರು ಸೆರ್‍ರು
೫	೧॥ ದೆವರ ಕಿರ್‍ರಿಟ ಕರ್ನಕುಂಡಲಲಕ್ಷ್ಮುಮಿ ಅಂಮರಕಿರ್ಟೀಟ ಕಂರ್ನಕುಂಡಲ ದ್ರಿಷ್ಟಿ ಸಹಾ ಸುಮಾರ್‍ರು ಜಯಿಸೆರ್‍ರು
೬	೧.ತಾಮ್ರದ ಸಂಪುಷ್ಪ ಸುಮಾರ್‍ರು ಸೆರ್‍ರು
೭	೧ ನರಶಿಂಹ್ವ ದೆವರ ಸಾಲಿಗ್ರಾಮ
೮	೧.ಚಕ್ರಣಿಕೆ ಹಾ
೯	೭ ತ್ತಾಂಬ್ರದ ಹರ್‍ರಿವಾಣ ೧ರ ಸುಮಾರ್‍ರು ಸೆರ್‍ರು
೧೦	೨ಕಂಚಿನ ಆರತಿ ೨ ರ ಸುಮಾರ್‍ರು ಸೆರ್‍ರು
೧೧	೧ ಅಭಿಶೇಖದ ಶಂಖ ೧೦।೦।೦ ಇದ್ರ ಅಡಿ ೧ರ ಸುಮಾರು ಸೆರ್‍ರು ಕಂಚು
೧೨	೯ದೆವರ್‍ರಿಗೆ ಅಭಿಗಾರ್‍ರದ ತಾಂಮ್ರದ ಚರ್‍ರಿಗೆ ೧ರ। ಸುಮಾರ್‍ರು ಸೆರು
೧೩	೭ ಕೊಡಪಾನ ೧ ವರ್‍ತಂಬ್ರಸುಮಾರ್‍ರುಸೆರ್‍ರು
೧೪	೩॥೦ ತ್ತಾಂಬ್ರದ ತ್ತಂಬಿಗೆ ೧ರ ಸುಮಾರ್‍ರು ಸೆರ್‍ರು
೧೫	೩ಜಲಹರ್‍ರಿ ೧ರ ಸುಮಾರ್‍ರು ತ್ತಾಂಬ್ರಸೆರ್‍ರು
೧೬	೨ಯ್ದುರ ಮುಚ್ಚಲು ೧ರ ಸುಮಾರು ಸೆರ್‍ರು
೧೭	೩ಕಂಚಿನ ಘಂಟಾಮಣಿ ೧ರ ಸುಮಾರ್‍ರು ಸೆರ್‍ರು
೧೮	ಸರದಿಪ ೧ರ ಹಿತ್ತಾಳಿಸುಮಾರ್‍ರು ಸೆರ್‍ರು

೧೯ ಕಂಚಿನ ಜಾಗಟೆ ೧ರ ಸುಮಾರು ಸೆರ್‍ರು

೨೦ ೧ಹಿತ್ತಾಳಿ ಪಂಚಾರ್ತಿ ೧ರ ಸುಮಾರ್‍ರು ಸೆರ್‍ರು

೨೧ ೩ಹಿತಾಳಿ ಹರ್‍ರಿವಾಣ ೨ರ ಸುಮಾರ್‍ರು ಸೆರ್‍ರು

೨೨ ೨೦ ದೆವರ ಶಿಖರಕ್ಕೆ ಯಿಟ್ಟ ತಾಂಬ್ರದ ಕಲಶ ೧ರ ಸೆರ್‍ರು

೨೩ ೨ತೀರ್ಥದ ಸಲುಟು ೧ರ ಸುಮಾರ್‍ರು ದುಡು ತೂಕ

೨೪ ೭ದೇವರ್ ನೆವಿದ್ಯಕೆ ತಾಂಬ್ರದ ತಪಾಲೆ ೧ರ ಸುಮಾರ್‍ರು ಸೆರ್‍ರು

೨೫ ೫ನೈವಿದ್ಯದ ತ್ತಾಂಬ್ರದ ತಪಾಲೆ ೧ರ ಸುಮಾರ್‍ರು ಸೆರ್‍ರು

೨೬ ೩ತಪಾಲೆ ೧ರ ಸುಮಾರ್‍ರು ಸೆರ್‍ರು

೨೭ ೧ಪರ್‍ರಿವಾರ್‍ರ ದೆವರ ಗರ್‍ರುಡದೆವರ ಶಿಲಾಪ್ರಥುಮೆ

೨೮ ೧ಹಣುಮಂತ್ತದೆವರ ಪ್ರಥುಮೆ

ಹಿಂಭಾಗ

೨೯ ೧ ಹೊಸ್ತಾಗಿ ಮಾಡಿಶಿದ ಪಾಲಕಿ

೩೦ ೧ಕೊಂಬು

೩೧ ೧ರಥ ಉತ್ಸಹದ ರಥ

೩೨ ೨೩॥) ಯಿವ ಸಂವತ್ಸರದಲು ಹಿತ್ತಾಳಿ ಹೊಸ ದೀಪ ಮಾಡಿಶಿದ ಜೋಡು ೧ರ ಸುಮಾರ್‍ರು ಸೆರ್‍ರು

೩೩ ಸದ್ರಿ ದಾಮ್ರರ್ರ ಪೈಗಳು ಮಾಡಿದ್ದು ದೆವರ ಚಿಂನ ಬೆಳ್ಳಿ ಕಂಚಿ ತಾಂಬ್ರ ಪಾಲಕಿ ಸಂನ್ನಹ ಸಹಾ । ಸಾಲಿಗ್ರಾಮ ಸಾಹಾ ಯಿ ಹೊಸ ರಥದ ಪತಾಕಿ ಮಾಚಿ ಅರಸ್ತಾನದಲ್ಲು ಅವಾಂತ್ತರದಲ್ಲು ಸುಲುಕೊಂಡು ಹೊದ್ರು ಜುಮಲ ಕಂಚು ಸೆರ್‍ರು ೩೬॥೦ ಜುಮಲ ತಾಂಬ್ರ ಸೆರ್‍ರು ೬೭॥೨ ಜುಮಲಾ ಹಿತ್ತಾಳಿ ಸೆರ್‍ರು ೧೧ ಬೆಳಿ ಸೆರ್‍ರು ॥೦ಯಿದೆ ಪ್ರಕಾರ್‍ರ ಸರಕಾರಕೆ ಬಹುಧಾಂನ್ಯ ಸಂವತ್ಸರದ ಚೈತ್ರ ಶು ೫ಲು ಸಂನ ೧೨೨೭ನೇ ಫಸಲಿ ಜುನು ತಾರಿಕು ೨೪ಲು ಬರಕೊಟ ಪಟ್ಟಿ ಪ್ರಕಾರ –ಪಾರ್ಥಿವ ಸಂ।ಕಾರ್ತಿಕ ಬ ೫ ಲು ಬುಧವಾರ್‍ರ ಮಹಾರಾಜೆ ಶ್ರೀ ಅಗಟಿಂಗ ತಹಸಿಲದಾರ್‍ರು ರಾಮಪೈ ಯ್ಯಂಕಣಾತ್ತಹಶಿಲದಾರ್‍ರು ಸಹಾ ಜಮಾಬಂದಿಗೆ ದೇವಸ್ಥಾನದಲ್ಲು ಮುಕ್ಕಾಂ ಆದಲ್ಲಿ ಶ್ರೀ ದೇವರ್‍ರಿಗೆ ಕಾಣಿಕೆ ಮಾಡಿದ ರೂಪಾಯಿ ೧ರ್‍ರ ದೇವರ್‍ರಿಗೆ ಮಾಡ್ಸದ ನಿರಾಂಜನ ಜೊಡು ೧ರ ಹಿತಾಳಿ ರಕ್ಷ ದೀಪ ೭ ಕಾಶಿ ಮಟದ ಗುರ್‍ರುಗಳ ಕಾವೇರ್‍ರಿ ಯಾತ್ರೆ ಹೋಹುವಾಗ್ಯೆ ನಿತ್ತಾಗ್ಯೆ ಕಾಣಿಕೆ ಮಾಡಿದರ್‍ರು ೧ರ ಮಾಡಿಶಿದ ಕಂಚಿನ ಹರ್‍ರಿವಾಣ ೧ರ್‍ರ ಸೆರ್‍ರು ೩ ಉಭಯಂ ಸೆರ್‍ರು ೩ ॥) ರ್‍ರ ಕೊಟ್ಟ ರೂಪಾಯಿ ೨

ನಂದಿನಾಗರಿ/ನಾಗರಿ ಮತ್ತು ಕನ್ನಡ ಲಿಪಿಯಲ್ಲಿರುವ ಶ್ರೀ ದೇವಾಲಯದ ಅರ್ಚಕರಲ್ಲಿ ಇರುವ ಹಸ್ತಪ್ರತಿಗಳು.

೧ ಅಮರಕೋಶ/ಉಪಾಕರ್ಮ/ಬಾದಹರ ಸ್ತೋತ್ರ

೨ ವಿಧ್ಯಾಮಾಧವೀ ಕರಳಾ ಪ್ರಣಶ ಪ್ರಮಾಣ ಪದ್ಧತಿ ಜೈಮುನಿ ಸ್ತೋತ್ರಾಣೆ

೩ ಶ್ರೀಮನ್ಮಹಾರಥ ನಿರ್ಣಯ ಉತ್ತಮ

೪ ಅಮರ/ಆರ್ಯಾಸಪ್ತತಿ/ಸಂತಾನದೀಪಿಕಾ/ಅನ್ನಪ್ರರ್ಣಾಷ್ಟಕ/ಪಂಚಶ್ಲೋಕಿ/ಹನುಮನ್ನಾಮಳಿ

೫ ಶಾಂತಿಗಳು/ವಿಧಿಗಳು/ನಿರ್ಣಯ/ಪೂಜಾವಿಧಿ/ಅಪರ/ಅಶೌಚ

೬ ವಿಷ್ಣು ರಹಸ್ಯ

೭ ಸ್ಮಾರ್ತ ನಿರೂಪಣಂ/ಫಲಜ್ಯೋತಿಷ/ಉಪದೇಶಕಾರಿಕಾ

೮ ಮಾಧವಿಜ್ಯೋತಿಷ

೯ ದೇವಿಮಹಾತ್ಮೆ

೧೦ ಆನಂದತೀರ್ಥ ಭಗವತ್ಪಾದ ವಿರಚಿತ ಜಯತೀರ್ಥವಿವರಣಂ ಇತ್ಯಾದಿ.

೧೧ ಭಾಗವತ

೧೨ ಸಂಗ್ರಹ ರಾಮಾಯಣ

೧೩ ವ್ರತಗಳು

೧೪ ಪಾರಾಶರೀ ಹೋರಾಶಾಸ್ತ್ರ/ಭಾರ್ಗವಸ್ತೋತ್ರ/ಮುಹೂರ್ತಸಾರ

೧೫ ಸೂರ್ಯ ಸಿದ್ಧಾಂತ ಭಾಗವತ ನಾರಾಯಣ ಭಾಟ್ಟ
ಪ್ರಯೋಗಃ, ಆರ್ಯಭಟ ಶಾಸ್ತ್ರ, ಕನ್ನಡ ವ್ಯಾಖ್ಯಾನ.

೧೬ ಖಾಲಿ ಗರಿಗಳು

೧೭ ಸುಂದರ ಕಾಂಡ/ ವಿಷ್ಣು ಸಹಸ್ರನಾಮ

೧೮ ಸಂಗ್ರಹಜಾತಕಂ

೧೯ ಮಂತ್ರ

೨೦ ನಾರಸಿಂಹೀತಾಯಾಂ ಉಪಾಕರ್ಮವಿಧಿಃ
೨೧ ವ್ರತ ಜಯಂತಿ
೨೨ ಕಾಶೀನಾಥ ವಿರಚಿತ ಶೀಘ್ರ ಭೋಧಾಯನ ಸಂಗ್ರಹ
೨೩ ವಿಪ್ರಾಚಾರ
೨೪ ರಾಮಾಯಣ ವ್ಯಾಖ್ಯಾ
೨೫ ಪೂಜಾವಿಧಿಃ
೨೬ ಆರ್ಯಭಟ ಶಾಸ್ತ್ರೈ
೨೭ ಧರ್ಮಪ್ರವೃತ್ತಿ ಸ್ತೋತ್ರಗಳು
೨೮ ಪ್ರಯೋಗವಿಧಿಃ
೨೯ ರಾಮಾಯಣ
೩೦ ಚಾತುರ್ಮಾಸ್ಯ ಮಹಾತ್ಮೆ
೩೧ ಪರಾಶರೀಯ
೩೨ ಮಂತ್ರ
೩೩ ಮಂತ್ರ
೩೪ ಷೋಡಶ ಸಂಸ್ಕಾರ
೩೫ ರುಕ್ಮಾಂಗದ ನಾರದೀಯ ಪುರಾಣ/ಕಾರ್ತೀಕ ಮಹಾತ್ಮೆ
೩೬ ಕಾರ್ತೀಕ ಮಹಾತ್ಮೆ/ವೆಂಕಟ ಮಹಾತ್ಮೆ
೩೭ ಅಪರವಿಧಿಃ
೩೮ ಪುರಾಣ
೩೯ ವ್ರತಕಲ್ಪಪೂಜಾವಿಧಿಃ
೪೦ ಚಿಂತಾಮಣಿ
೪೧ ಮಹಾಭಾರತ ತಾತ್ಪರ್ಯನಿರ್ಣಯ
೪೨ ಪುಣ್ಯಾಹವಾಚನಂ ಮಾತೃಕಾ ಪೂಜೆ ಉತ್ತಮ

ಮಾದರಿಗಾಗಿ ಎರಡು ದಾಖಲೆಗಳ ಪಾಠ:

ದಾಖಲೆ ೨

ಪ್ಲವ ಸಂ।ದ ಶ್ರಾವಣ ಶು ೧ ಲ್ಲು । ಶ್ರೀಮತ್ತು।
ತ್ತೊದೇಖಾನಿ ಭಂಡಾರಕ್ಕೆ
ಧಾಮರಸ ಪಯಿ ದೆವಸ್ಥಾನದ । ಕೃಷ್ಣ
ಭಟ್ಟನು ಬರಶಿಕೊಟ್ಟ ಬಿಂನ್ನವತ್ತಳೆ ಕ್ರಮ।
ವೆಂತ್ತೆಂದರ್ರೆ। ನರ್ರಿಕೊಂಬಿನ ಲಕ್ಷ್ಮುಮಿ।
ನರಸಿಂಹ್ಯ ದೆವರ್ರಿಗೆ ಪ್ರಾಕು ಸ್ವಭಾನು ಸಂ।
ದಾರಭ್ಯ ಅರಮನೆಯಿಂದ ।ಬರಸಿಕೊಟ್ಟ।
ಗ ೪೦ ನಾಲ್ಕು ವತ್ತು ವರಹಾಕ್ಕೆ।
ವೆಚ್ಚ ಸಿಸ್ತು ಬರಶಿಕೊಟ್ಟ ವಿವರ ಪ್ರಕಾರ।
ನಾನು ಶಾರ್ವರ್ರಿ ಸಂ।ದ ವರ್ರಿಗೆ ನಡಶಿ
ಕೊಂಡು ಬಂದೆದೆನೆ। ಮುಂದೆ ಅರಮನೆಯಿಂದ।
ಬರ್ಸಕೊಟ್ಟಮೆರ್ರೆಗ್ಯೆ ದೆವರ್ರಿಗ್ಯೆ ನಡವಸ್ ಕಟ್ಟಳೆ।
ಕಂದಾಚಾರವಂನ್ನು ನಡಶಿಕೊಂಡು ಬಂ
ದೆನ್ನು।ಯಿದರಲ್ಲು ಯೀ ಪ್ರಕಾರ ನಡಸದೆ।
ವಂದೆ ವಿಲಾತ್ತಿ ನಿಂತ್ತು ಬಂದ್ರೆ ಯೀ ಪೂಜೆ।
ಯು ಬಿಟ್ಟಲಿ ಅರಮನೆ ಆಪರಾಧ ಉ ಕಾಟ್ಟಲಿ
ಬುಧಿಗವಿಸ್ತರ್ರಿತ್ತಿ ಕೇಳಿಉಳ್ಳವದೆಂದು ಕೊಟ್ಟ
ಬಿನ್ನವತ್ತಳೆ ಪ್ರತಿ.
ಶ್ರೀ
ಮೊಗರನಾಡ ಮಾಗಣೆ।
ನರ್ರಿಕೊಂಬಿನ।

ಲಕ್ಷ್ಮಿನರಸಿಂಹ್ವ ದೇವರ್ರಿಗೆ।
ಉತ್ತಾರ ।ಗ ೮೫
ವಿಚಾರ ಮುಖದಪ್ಪಗತನಷ್ಪಸಹಾ।
ಗಳಃ ಹಾ ೩॥೦
ಉಭಯಂ ।ಗ ೧೨೮ಹಾ ೩ ಲ್॥ ೦ ಕ್ಕೆ।
ಅರವಾಶಿ ಗ ॥ ೦ ಲ್ಲು ।ಗ ೬೪ ಹಾ ೧॥= ಗ್ಯೆ
ಕಂಚಾಚಾರದ ಪಗುದಿ ಬಗೆಯಲ್ಲು।
ಅರಮನೆಗೆ ಸಲುವದ್ದು ಗ ೫ ಹಾ ೩= ಹಾ
ಶುಧ । ಗ ೫೮ ॥೩॥೦ ಕ್ಕೆ
ವಿವರ।
ಅಕ್ಕಿ ಮು ೯೦ಕ್ಕೆ ಗ ೧೫
ಮೆಲಾಗಿ ರುಖ ಗ ೪೩॥೩॥೦
೨. ಸಲುವ ವೆಚ್ಚ
ದೇವತ್ತಾವೆಚಕ್ಕೆ
ಅಮ್ರುತಪಡಿ ಬಗ್ಯೆ। ದ್೧ಕ್ಕೆ ಅಕ್ಕಿ ಹಾ ೪ಲ್ಲು।
ಮು ೩೨
ನಂದಾದಿಪ್ತಿ ಬಗ್ಯೆ ವಳಗೆ ದಿಪ್ತಿ ೨ರ।
ದಿ ೧ಕ್ಕೆ ದಿಪ್ತಿ ೧ಕ್ಕೆ ಯಂಣೆ ಕೊ ॥೦ । ದಿಪ್ತಿ ೨ರ ।
ಕು ೧ ॥೦ ಲ್ಲು ತ್ತಿಂ ೧ಕ್ಕೆ ಕು ೪೫ ಲ್ಲು।
ತ್ತಿಂ ೧೨ಕ್ಕೆ ಕು ೫೪೦ಕ್ಕೆ ಕಾ ೧ರ ಕು ೨೫ರಲ್ಲು।
ಕಾ ೨೧।೨॥೦
ಅಲಂಕಾರದಿಪ್ತಿ ೧೦
ಮುಟ್ಪು ದಿಪ್ತಿ । ಬಗ್ಯೆ ಸಹಾ ದಿ ೧ರ ಕು ॥೦
ಆರತ್ತಿ ಬಗ್ಯೆ ಕು ॥೦
ಉಭಯಂ।ದಿ ೧ರ ಕು ೧ಲ್ಲು ವರುಷ ೧ರ ।
ಯೆಂಣಿಕಾಲಾ ೧೪।೩॥೦
ಶ್ರೀ ಗಂಧದ ಬಗ್ಯೆ ಹಾ ೨॥೦
ಆರತ್ತಿ ಬತ್ತಿ ಹತ್ತಿ ಬಗ್ಯೆ ಗ ॥೦
ಲೊಭಾನು ಅರತ್ತಿ ಕರ್ಪೂರದ ಬಗ್ಯೆ ಗ ॥೦
ಅಂನ್ನಶುದ್ಧ್ ಹಾ ೩ ॥೦
ನಿತ್ಯತ್ತಾಂಬುಲದ ಬಗ್ಯೆ ।
ದಿ ೧ರ ವಿಳೆದೆಲೆ ಸುಪು ।೦ ಲ್ಲು ಪು ೯೦ಕ್ಕೆ ೧॥–
ಅದಕ್ಕೆ ೨ ಲ್ಲು ಅದ್ರೆ ೭೭೦ಕ್ಕೆ ಹಾ ॥=-
ಉಭಯಂ । ಹಾ ೨॥೦
ಮುಖಾವದಿ ಗ ೨ರ ಗ॥೦
ಅಂತ್ತು ।ಗ ೨ ಹಾ ೩॥ ೦
ಯೆಂಣೆ ಕಾ ೩೬ಕ್ಕೆ ॥ಕ್ರಯ ಗ ೧ರ।
ಕಾ ೫ಲ್ಲು ।ಸಲುವದು ಗ ೭ ಹಾ ೨
ಉಭಯಂ ।ಗ೯॥೦॥೦
ಅಕ್ಕಿ ಮು ೩೨
ಮುಖ್ಯ ಪ್ರಾಣ ದೆವರ್ರಿಗೆ
ಅಮೃತ ಪಡಿ ಬಗ್ಯೆ ದಿ ೧ರ ಅಕ್ಕಿ ಹಾ ॥೦ ಲ್ಲು।
ಮು ೬
ನಂದಾದಿಪ್ತಿ ಗ ।೨॥೦
ಶ್ರೀ ಗಂಧಆರತ್ತಿ ಬತ್ತಿ ದೂಪ ದಿಪ।
ವಸ್ತ ಸಹಾ ಹ ೨ ॥೦
ಗರುಢ ದೆವರ್ರಿಗೆ ಅಮೃತಪಡಿ ಬಗ್ಯೆ
ದಿ ೧ರ ಅಕ್ಕಿ ಹಾ ॥೦ ಲ್ಲುಮು ೬
ನಂದಾದಿಪ್ತಿ ಯೆಂಣೆ ಗ ।೨॥೦
ಶ್ರೀಗಂಧಆರತ್ತಿ ಬತ್ತಿ ದೂಪ ದಿಪ
ವಸ್ತಸಹಾ ಹಾ ೨॥೦
ಪಂಚಪರ್ವ ಸಂಬಂಧ।
ಕಾರ್ತಿಕ ಶು ೧ಲ್ಲುವಾಮದ ಪೂಜೆ ಬಗ್ಯೆ
ಅಕ್ಕಿ ಕಾಯಿ ಹಂಣು ಬೆಲ್ಲ ಸಹಾ ಹಾ ೧।೦
ಕಾರ್ತಿಕ ಪೂಜೆ ಪಶ್ಚಿಮ ಭಾಗರರ।
ಬಗ್ಯೆ ದಿಪಾರಾದನೆ ಬಗ್ಯೆ
ಸಹಾ ದಿ ೧ರ ಯಂಣೆ ಕು ೧ಲ್ಲು ದಿ ೩೦ರ ।
ಕು ೩೦ಕ್ಕೆ ಹಾ ೨ ॥೦
ಅವಲಕ್ಕಿ ಹಾ ೧ಲ್ಲು ಹಾ ೩೦ಕ್ಕೆ
ಅಕ್ಕಿ ಮು ॥೭॥೦
ತ್ತೆಸ್೦।ಕ್ಯೆ ೧ಲು ಕಾ ೩೦ರ ।ಹಾ ೧।೦
ವಿಳೆದೆಲೆ ಅಡ್ಕೆ ಹಂಣು ಬೆಲ್ಲ ಸಹ ಹ ೧।=
ಉತ್ತಾನದ್ವಾದಶಿ ಬಗ್ಯೆ ಶ್ರಿರಾಬ್ದಿ ಗ್ಯೆ
ಬೆಲ್ಲ ಕಾಯಿ ಕಬ್ಬು ಹಂಣು ಸಹ ಹಾ ॥=
ದೀಪಾರಾಧನೆ ಬಗ್ಯೆ ಯಂಣೆ ಕಾ ೧ರ ಹಾ ೨।೨
ಕಾರ್ತಿಕ ಹುಂಣಿಮೆ ಸಂಮಂಧ।
ವನಬೋಜನದ ಬಗ್ಯೆ ಅಕ್ಕಿ ಮು ೧॥೦
ಉದ್ದು ಹೆಸರ್ರು ಸಹಾ ಹಾ ೧।೦
ಬೆಲ್ಲ ಮ ॥೦ ಗ್ಯೆ ಹಾ ೧॥= ತುಪ್ಪ ಶೆ ೩ರ ಹಾ ॥ =
ಕಾಯಿ ೪೦ರ ಹಾ ೧॥–
ಯೆಲೆಅಡಕ್ಕೆ ಹಂಣು ಸಹಾ ಹಾ ॥=
ಸಂಬಾರಜಿನಿಸು ಹಾ ।–
ಅಂತ್ತೂ।
ಸಾಯಂಕಾಲದಲ್ಲು।ದಿಪಾರಾಧನೆ।
ಬಗ್ಯೆ ಯೆಂಣೆ ಕಾ೩ಕ್ಕೆ ಗ ।೨।೨
ಕಾಯಿ ೫ರ ಹಾ।– ಅವಲಕ್ಕಿ ಮು।೦ ರ।ಲ್ರಯು।೦
ಅಂ।ಗ ೧॥೧॥– ಕ್ಕೆ ಗ ೧ ಹಾ ೪ –
ಅಕ್ಕಿ ಮು ೧॥೦
ಸಂಪೆಶ್ರಷ್ಟಿಸಂಮಂಧ।ಹಾ ೧।೦
ಹದುಪೂಜೆ ಸಂಮಂಧ।
ದಿ ೧ರ ಅಕ್ಕಿ ಹಾ ೧ಲ್ಲು ಹಾ ೩೦
ಕಾಯಿ ೩೦ರ ಹಾ ೧।೦
ಹಂಣು ಬೆಲ್ಲ ತುಪ್ಪ ಸಹಾ ೨॥=
ಸಿಸ್ತು ಹಾ ।– ಅಂತ್ತು ಗ ೨=–
ಅಕ್ಕಿ ಮು ॥೭॥೦
ರಥಸಪ್ತಮಿಸಂಮಂಧ ಹಾ ೨॥೦
ಮದ್ವನೋಮಿಸಂಮಂಧ । ಹಾ ೧।೦
ಯುಗಾದಿ ಹಬ್ಬ ಸಂಮಂಧ ಹಾ ೩॥೦
ವಸವಂತ್ತ ಪೂಜೆ ಸಂಮಂಧ।ದಿ ೧ರ।
ಬೆಲ್ಲ ಸೆ ೧ಲ್ಲು।ಸೆ ೩೦ಕ್ಕೆ। ಹಾ ೨॥=
ಕಾಯಿ ೩೦ಕ್ಕೆ ಹಾ ೧।೦
ಕದಲಿ ಹಾ ॥=
ಹಂನು ಯಲೆ ಅಡಕೆ ಸಹಾ ।ಹಾ ॥=
ಅಂತ್ತು ।ಗ॥೦
ರಾಮನಮಿ ಸಂಮ್ಮಂಧ।
ಸಮಾರಾಧನೆ ಬಗ್ಯೆ ಹಾ ೨।೨
ಅಕ್ಷತದಿಗೆ ಸಂಮ್ಮಂಧ ಸಮಾರಾಧನೆ।
ಮೆಲುವೆಚದ ಬಗ್ಯೆ ಹಾ ೨।೦
ವದ್ರಂತ್ತಿ ಸಂಮ್ಮಂಧ।
ಸಮಾರಾಧನೆ ಬಗ್ಯೆ ಅಕ್ಕಿ ಮು ೧
ಮೆಲುವೆಚ್ಚ ಹಾ ೩॥೦
ಪ್ರಥಮ ಯೆಕಾದಶಿ ಸಂಮ್ಮಂಧ।
ಪಂಚಾಮ್ರುತ ಅಬಿಶೇಕ್ಷ್ಪ ಹಾ ೧।೦
ನಾಗರಪಂಚ್ಯಮಿ ಸಂಮ್ಮಂಧ । ಹಾ ॥=
ನೂಲುಹುಂಣಿಮೆ ಸಂಮ್ಮಂಧ।
ಉಪಾಕರ್ಮಕ್ಕೆ।ಅಕ್ಕಿ ಕಾಯಿ ಹಂಣು।

ಯೆಲೆಅಡಕ್ಕೆ ಸಹಾ । ಹಾ ೧।೦
ಗೊಕಲಾಷ್ಟಮಿ ಸಂಮ್ಮಂಧ।
ಪಂಚಾಮ್ರುತ್ತ ಅಬಿಸೇಖ ರಾತ್ರಿ ಪೂಜೆ।
ಬಗ್ಯೆ ಸಹಾ।ಹಾ ೧॥=
ವಿನಾಯಕಚಉತ್ತಿ ಸಂಮಯಣ್ಣೆ।
ತುಪ್ಪ ಯೆಲೆಅಡ್ಕೆ ಮುಂತ್ತಾಗಿ ।ಗ ॥೦
ದಕ್ಷಿಣಿ ಹಾ ॥= ದಿಪಾರಾಧನೆ।ಯಂಣಿ ಹಾ ೧।
ಕಥೆ ಮಾಡಿದ ಬ್ರಾಂಹ್ಮಣಗ್ಯೆ ಹ ॥=
ಅಂತ್ತು ।ಗ ॥೨॥೦ ಅಕ್ಕಿ ಮು ೧
ಮಾಹಾನೊಮಿ ಸಂಮ್ಮಂಧ।
ದಿ ೧ರ ಹಾ ॥= ಲ್ಲು ದಿ ೧೦ಕ್ಕೆ ಗ ॥೧।೦
ಸಮಾರಾಧನೆ ಬಗ್ಯೆ ಅಕ್ಕಿ ಮು ೧
ಹೊಸ್ತು ತ್ತುಂಬ್ಬುವ ಬಗ್ಯೆ ಹಾ ೧।೦
ಅಂತ್ತೂ।ಗ ।೨।೦ ಅಕ್ಕಿ ಮು ೧
ದಿವಳಿಗೆ ಹಬ್ಬ ಸಂಮ್ಮಂಧ ಗ ॥೦
ಅಂತ್ತು ಪಂಚಪರ್ವ
ರಥೊತ್ಸಹಸಂಮ್ಮಂಧ।
ವೈಶಾಖ ಶು ೧೦ ರಿಂದ।ಶು ೧೫ ಗ್ಯೆ ದಿ ೫ ರ।
ಧಜಾರೊಹಣ ಅಂಕರಾರ್ಪಣ ಕಉ
ಸ್ತುಕ ಬಂದದ।ಯೆಜ್ನಪೂಜೆ ಬಗ್ಯೆ ವಾಸ್ತು
ಹರನಾ ಪ್ರಾರ್ಥನೆ ವಿನಾಯಕ ಪೂಜೆ
ಪುಂನ್ಯಾಬ್ರ । ನೈವಿದ್ಯ ಸಮಾರಾಧನೆ
ಸಾಯಂಕಾಲದಲ್ಲು ವಸಂವತ್ತ ಪೂಜೆ
ಉತ್ಸಹದಲ್ಲು ದಿಪಾರಾಧನೆ।ಹೂವಿನ
ತ್ತೆರು।ಬ್ರುಗುಲಿ ತ್ತೆರತೊತ್ಸಹ।
ಅವಬ್ರುತ ಸ್ನಾನ ಮುಂತ್ತಾದ ಬಗ್ಯೆ।
ಮುಟ್ಟುವ ವೆಚ್ಚ।ದಿ ೫ ಕ್ಕೆ ಗ ೧೦
ಕಂದಾಚಾರಕ್ಕೆ।
ಪೂಜೆ ಕೃಷ್ಣಭಟಗ್ಯೆ ಗ ೩
ವಾಸ್ತೆವಾಚಾರ್ರು ಗ ೩
ನಾರಾಯಣ ಅವಧಾನಿಗ್ಯೆ ಗ ೧॥೦
ವೆಂಕಟೇಶ ಭಟ್ಟ ಗ ೧॥೦
ಅಂತ್ತೂ । ಗ ೯
ಅಂಗಳ ಗುಡಿಸುವ ಹೆಂಗಿಶಿಗ್ಯೆ
ದಿ ೧ರ ಅಕ್ಕಿ ಹಾ ೧ಲ್ಲು + ಮು ೮
ವಾದ್ಯದವರ್ಗಿಗ್ಯೆ ದಿ ೫ರ ಗ ೬ ಅಕ್ಕಿ ಮು ೩೦
ಹರ್ಲಿ ಮುರ್ರಿ ಹೊಚ್ಚುವ ಬಗ್ಯೆ ।
ಅಕ್ಕಿ ಮು ೧॥೦
ಅಂತೂ । ವೆಚ್ಚ ಗ ೪೩॥೩॥೦
ಅಕ್ಕಿ ಮು ೯೦

ಮೊಗರನಾಡು ಸೀಮೆಯ ನರಿಕೊಂಬು ಗ್ರಾಮದಲ್ಲಿರುವ ಈ ದೇವಾಲಯದ ದಾಖಲೆಗಳು ಭಾಷೆ ಮತ್ತು ಲಿಪಿ ಎರಡೂ ಕನ್ನಡದಲ್ಲಿವೆ. ಮಂತ್ರದ ಪುಸ್ತಕಗಳು ಮಾತ್ರ ತಾಳೆಯೋಲೆ ಹಸ್ತಪ್ರತಿಯಲ್ಲಿ ಬರೆಯಲ್ಪಟ್ಟಿದ್ದು ಅವು ನಾಗರಿಲಿಪಿಯಲ್ಲಿವೆ. ಭಾಷೆ ಸಂಸ್ಕೃತ ಆಗಿದೆ. ಈ ದಾಖಲೆಗಳಲ್ಲಿ ಮೂವತ್ತೊಂದನೆಯದಾದ ಶಕ ವರುಷ ೧೬೮೪ನೇಯ ಚಿತ್ರಭಾನು ಸಂವತ್ಸರದ ಆಶ್ವೀಜ ಶು ೧೦ ಚಂದ್ರವಾರ ಅಂದರೆ ಕ್ರಿ.ಶ ೧೭೬೨ಕ್ಕೆ ಸರಿಹೊಂದುವ ದಾಖಲೆಯು ಕೆಳದಿಯ ಕೊನೆಯ ದೊರೆ ವೀರಮ್ಮಾಜಿಯ ಮಗ ಸೋಮಶೇಖರ ನಾಯಕನ ಕಾಲಕ್ಕೆ ಸರಿಯೊಂದುತ್ತದೆ. ಈ ಕಾಲದಲ್ಲಿ ವವುಚ ಗೋತ್ರದ ಆಶ್ವಲಾಯನ ಸೂತ್ರದ। ರುಕ ಶಾಕೆಯ ಮರ್‍ರೆಷತ್ತ ದಾಮೋದರ ಭಟ್ಟ ಶರ್ಮಣ ಪ್ರಪೌತ್ರರಾದ ತಿಂಮ್ಮರ್ಸ ಭಟ್ಟ ಶರ್ಮಣ ಪೌತ್ರರಾದ ವಿಠಲ ಭಟ್ಟ ಶರ್ಮಣ ಪುತ್ರರಾದ ಕೃಷ್ಣ ಭಟ್ಟರ್‍ರಿಗೆ ಕಉಶಿಕ ಗೋತ್ರದ ಆಶ್ವಲಾಯನ ಸೂತ್ರದ ರುಕ್ಷಾಕೆಯ ಸಾಗರದ ಸೂರಪ್ಪೈ ಪ್ರಪೌತ್ರರಾದ ದಾಮರಸಪ್ಪೈ ಪ್ರಪೌತ್ರರಾದ ಸುರಪ್ಪೈ ಪುತ್ರರಾದ ಕೃಷ್ಣಪ್ಪೈಯು ಬರ್‍ರಶಿಕೊಟ್ಟ ದೇವಸ್ಥಾನ ಗೃಹ ರಾಮಕ್ಷೇತ್ರದ ವಿವರವನ್ನು ಇದು ಒಳಗೊಂಡಿದೆ. ಕುಮಾರ್‍ರಧಾರ್‍ರ ನೇತ್ರಾವತಿ ತೀರದಲ್ಲಿ ವೆಂಗನಾಡು ಶಿಮೆ ನರ್‍ರಿಕೊಂಬಿನ ಗ್ರಾಮದಲ್ಲು ನಂನ ಅಜ ದಾಮರ್ಸಪ್ಪೈಗಳು ದೇವಸ್ಥಾನ ಕಟ್ಟಿಶಿ ಪ್ರತಿಷ್ಠೆ ಮಾಡಿದ ಶ್ರೀ ಲಕ್ಷುಮಿ ನರಶಿಂಹ್ವ ದೆವರ್‍ರಿಗೆ ನಡವ ಅಮೃತ ಪಡಿನಂದಾ ದೀಪ್ತಿ ಪಂಚಪರ್ವ ಮುಂತಾದ ನಡುವ ವಿನಿಯೋಗದ ಕುರಿತಂತೆ ಆ ದೇವರ ಪೂಜೆಗೆ ಕರೆತಂದು ಇಟ್ಟಿದ್ದ ಈ ಕೃಷ್ಣಭಟ್ಟರ ಕುಟುಂಬಕ್ಕೇ ದೇವಾಲಯದ ಮೊಕ್ತೆಸರರಾಗಿ ಮತ್ತು ಪೂಜಾ ವಿನಿಯೋಗ ಮಾಡಿಕೊಂಡು ಬರುವಂತೆ ವಹಿಸಿಕೊಟ್ಟ ವಿವರವನ್ನು ಈ ಪತ್ರ ತಿಳಿಸುತ್ತದೆ. ಸಾಕಷ್ಟು ದಾಖಲೆಗಳು ನಾಶವಾಗಿದ್ದರೂ ಉಳಿದಿರುವ ಈ ಮೋಡಿ ಲಿಪಿಯ ಈ ದಾಖಲೆಗಳು ದೇವಾಲಯದ ಮತ್ತು ಈ ಸುತ್ತಮುತ್ತಲಿನ ಇತಿಹಾಸದ ಮೇಲೆ ಬೆಳಕು ಚೆಲ್ಲಲು ಸಹಕಾರಿಯಾಗಿದೆ. ಈ ದಾಖಲೆಯಲ್ಲಿ ಉಲ್ಲೇಖಿಸಿರುವ ತಾಮ್ರ ಪಟ ಇಂದಿಲ್ಲ. ಕಾಸರಗೋಡು ಪ್ರದೇಶ ಅಚ್ಚ ಕನ್ನಡ ಮಾತನಾಡುವ, ಆಡಳಿತದಲ್ಲಿ ಕನ್ನಡವನ್ನು ಬಳಸುವ ಪ್ರದೇಶವಾಗಿತ್ತು ಎನ್ನುವುದನ್ನು ಈ ದಾಖಲೆಗಳು ಎತ್ತಿ ತೋರಿಸುತ್ತವೆ. ಆದರೆ ಸಾಗರದ ದಾಮರ್ಸಪ್ಪೈ ಕುರಿತು ನಮಗೆ ಹೆಚ್ಚಿನ ಮಾಹಿತಿ ದೊರೆತಿಲ್ಲ. ಈ ಕುರಿತಂತೆ ಸಂಶೋಧನೆ ಮುಂದುವರೆದಿದೆ.

[ಈ ಪ್ರಬಂಧ ರಚಿಸಲು ಮಾಹಿತಿ ಒದಗಿಸಿದ ದೇವಾಲಯದ ಮೊಕ್ತೆಸರ ಕುಟುಂಬಕ್ಕೆ, ಸಲಹೆ ಸೂಚನೆಗಳನ್ನಿತ್ತ ಶ್ರೀ ಕೆಳದಿ ಗುಂಡಾಜೋಯಿಸ್, ಶ್ರೀ ಹೆದ್ದಿ ಅಶೋಕ್ ಇವರುಗಳಿಗೆ ನಾನು ಅಭಾರಿಯಾಗಿದ್ದೇನೆ.]

೭೩

ಲಕ್ಕಣ್ಣ ದಂಡೇಶ ವಿರಚಿತ ಶಿವತತ್ವ ಚಿಂತಾಮಣಿ ಕೃತಿಯಲ್ಲಿ ಬಸವಣ್ಣನವರ ಉಲ್ಲೇಖ-ಒಂದು ಅಧ್ಯಯನ

ಡಾ. ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ* ಜಯದೇವಪ್ಪ ಜೈನಕೇರಿ**

ವಿಜಯನಗರದ ಸಾಮ್ರಾಜ್ಯದ ಉಚ್ಛ್ರಾಯ ಕಾಲದಲ್ಲಿ ದಂಡನಾಯಕನೂ, ಪ್ರಧಾನಮಂತ್ರಿಯೂ, ಕವಿಯೂ, ಚರಿತ್ರಕಾರನೂ ಆಗಿದ್ದ "ಲಕ್ಕಣ್ಣ ದಂಡೇಶ" ರಚಿಸಿರುವ ಅಪೂರ್ವ ಪುರಾಣಗ್ರಂಥ "ಶಿವತತ್ವ ಚಿಂತಾಮಣಿ". ಐತಿಹಾಸಿಕ ಸಂಗತಿಗಳನ್ನು ಒಳಗೊಂಡಿರುವ ಈ ಕೃತಿ ಚಾರಿತ್ರಿಕ ವಾಗಿಯೂ ಮುಖ್ಯವಾಗಿದೆ. ವಿಜಯನಗರ ಸಾಮ್ರಾಜ್ಯವನ್ನು ಆಳಿದ ಸಂಗಮ ವಂಶದ ದೊರೆಗಳಲ್ಲಿ ಪ್ರಸಿದ್ಧನಾದ ಎರಡನೇ ದೇವರಾಯ ಅಥವಾ ಪ್ರೌಢದೇವರಾಯನ (ಕ್ರಿ.ಶ. ೧೪೨೪ರಿಂದ ೧೪೪೬) ಮಹಾಮಂತ್ರಿಯಾಗಿ, ಆತ್ಮೀಯ ಗೆಳೆಯನೂ ಆಗಿದ್ದ. ಲಕ್ಕಣ್ಣ ದಂಡೇಶನ, ತಂದೆ ಹೆಗ್ಗಡದೇವ, ತಾಯಿ ಒಮ್ಮಾಯಮ್ಮ. ಈತನ ಜನ್ಮಸ್ಥಳ ಮುಳಬಾಗಿಲು ತಾಲ್ಲೂಕಿನ ವಿರೂಪಾಕ್ಷ ಪುರವಿರಬಹುದೆಂದು ನಿರ್ಣಯಿಸ ಲಾಗಿದೆ. ಈತನು ಕ್ರಿ.ಶ. ೧೪೦೫ರಿಂದ ೧೪೫೧ರ ವರೆಗೆ ವಿಜಯನಗರ ಸಾಮ್ರಾಜ್ಯದ ಸೇವೆಯಲ್ಲಿದ್ದನೆಂದು ತಿಳಿದು ಬರುತ್ತದೆ. ಈತನ ಜನನ ಬಹುಶಃ ಕ್ರಿ.ಶ. ೧೩೮೦ರಲ್ಲಿ ಆಗಿರಬಹುದು ಎಂದು ವಿದ್ವಾಂಸರು ಊಹಿಸಿದ್ದಾರೆ. ಈ ಕಾಲದಲ್ಲಿ ದಕ್ಷಿಣ ಭಾರತದ ಬಹುಪಾಲು ಮತ್ತು ಸಿಂಹಳ ದ್ವೀಪಗಳು ವಿಜಯನಗರ ಸಾಮ್ರಾಜ್ಯದ ಆಡಳಿತಕ್ಕೆ ಒಳಪಟ್ಟಿದ್ದವೆಂದು ತಿಳಿದುಬರುತ್ತದೆ.

ಲಕ್ಕಣ್ಣ ದಂಡೇಶ ವೀರಶೈವನಾದರೂ, ತನ್ನನ್ನು ವಿಷ್ಣುವರ್ಧನ ಗೋತ್ರದವನೆಂದು "ಶಿವತತ್ವ ಚಿಂತಾಮಣಿ" ಕೃತಿಯಲ್ಲಿ ಹೇಳಿಕೊಂಡಿರುವುದರಿಂದ ಈತ ಹೊಯ್ಸಳ ವಂಶಕ್ಕೆ ಸೇರಿದವನಿರಬಹುದೆಂದು ವಿದ್ವಾನ್ ಪಂಡಿತ ಎಸ್. ಬಸಪ್ಪನವರು ಊಹಿಸಿದ್ದಾರೆ. ಈತ ವಿರೂಪಾಕ್ಷಪುರವನ್ನು ಹಂಪೆಯ ಮಾದರಿಯಲ್ಲಿ ಅಭಿವೃದ್ಧಿಪಡಿಸಿದನೆಂದು ತಿಳಿದುಬರುತ್ತದೆ. ಅನೇಕ ದಾನದತ್ತಿಗಳನ್ನು ನೀಡಿರುವ ಸಂಗತಿ ಶಾಸನಗಳಿಂದ ತಿಳಿದುಬರುತ್ತದೆ. ತನ್ನ ಗೆಳೆಯರು, ಚಕ್ರವರ್ತಿಯೂ ಆದ ಪ್ರೌಢದೇವರಾಯನಿಗೆ ನಿಷ್ಠನಾಗಿ, ಮಹಾಮಂತ್ರಿಯಾಗಿ, ಧರ್ಮ ಪ್ರಸಾರದಲ್ಲಿ ವೀರಶೈವ ತತ್ವ ಪ್ರದೀಪಕನಾಗಿ ಕವಿಯಾಗಿ, ಪ್ರಸಿದ್ಧನಾಗಿದ್ದಾನೆ. ಭಾರತೀಯ ಸಂಸ್ಕೃತಿಯ ವೇದ, ಆಗಮ ಪುರಾಣಗಳ ಸಾರವಾದ "ಶಿವತತ್ವ ಚಿಂತಾಮಣಿ" ಗ್ರಂಥವನ್ನು ರಚಿಸಿ ಅಜರಾಮರನಾಗಿದ್ದಾನೆ.

ಹನ್ನೆರಡನೆ ಶತಮಾನದ ಮಧ್ಯಭಾಗದಲ್ಲಿ ದೇದೀಪ್ಯ ಮಾನವಾಗಿ ಬೆಳಗಿದ ಕಲ್ಯಾಣ ರಾಜ್ಯದ ಏಳು ಬೀಳುಗಳನ್ನು ಜಗಜ್ಯೋತಿ ಬಸವೇಶ್ವರರ ನೇತೃತ್ವದಲ್ಲಿ ನಡೆದ ಧಾರ್ಮಿಕ ಚಳುವಳಿಯನ್ನು ಹಿಂದುಳಿದವರ ಶ್ರಮಜೀವಿಗಳ ಕಾಯಕ ಪ್ರಧಾನ ಶರಣರ ಜೀವನ ಸಾಧನೆಗಳನ್ನು ಆಧಾರವಾಗಿರಿಸಿ ಕೊಂಡು ಲಿಂಗತತ್ವ, ಶಿವತತ್ವಗಳ ಸ್ವರೂಪ ಸಾಕಾರವೂ, ನಿರಾಕಾರವೂ ಆದ ಸದಾ ಶಿವತತ್ವದ ಹಿರಿಮೆಯನ್ನು ದಾಖಲಿಸಿದ್ದಾನೆ. ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಗಳ, ಪರಶಿವನ ನಿಷ್ಕಲತತ್ವದ ನೆಲೆಯನ್ನು ಅರುಹಿದ್ದಾನೆ.

ಕಲ್ಯಾಣ ಕ್ರಾಂತಿ ವಿಫಲವಾಗಿ ಶರಣರು ವಚನ ಸಾಹಿತ್ಯದ ಕಟ್ಟುಗಳನ್ನು ಹೊತ್ತು ಅವುಗಳ ಸಂರಕ್ಷಣೆಗಾಗಿ ನಾನಾ ದಿಕ್ಕುಗಳಿಗೆ ಚದುರಿ ಹೋದರು. ಹನ್ನೆರಡನೆ ಶತಮಾನದ ಉತ್ತರಾರ್ಧದಲ್ಲಿ ನಡೆದು ಹೋದ ವಿಪ್ಲವದಲ್ಲಿ ಅಳಿದುಳಿದ ವಚನಗಳ ಕಟ್ಟುಗಳನ್ನು ಸಂರಕ್ಷಿಸಿ, ಪ್ರತಿ ಮಾಡುವ, ವ್ಯಾಖ್ಯಾನ ಬರೆಸುವ ಕಾರ್ಯ ಸುಮಾರು ಎರಡು ಶತಮಾನದ ನಂತರ ದೊಡ್ಡ ಪ್ರಮಾಣದಲ್ಲಿ ನಡೆಯಲು ಕಾರಣನಾದವನು ಲಕ್ಕಣ್ಣ ದಂಡೇಶ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಸಂವರ್ಧನೆ ಕಾರ್ಯದಲ್ಲಿ ಈತನ ಸೇವೆ ಅನುಪಮವಾದದ್ದು. ಪರ್ಷಿಯಾ ದೇಶದ ರಾಯಭಾರಿ ಅಬ್ದುಲ್ ರಜಾಕ್ ೧೪೪೩ ಏಪ್ರಿಲ್‌ನಿಂದ ಡಿಸೆಂಬರ್ ೫ರವರೆಗೆ ವಿಜಯನಗರದಲ್ಲಿಯೇ ಇದ್ದು ವಿಜಯನಗರ ವೈಭವವನ್ನು ಕಣ್ಣಾರೆ ಕಂಡು ತನ್ನ ಪ್ರವಾಸ ಕಥನದಲ್ಲಿ ವರ್ಣಿಸಿದ್ದಾನೆ.

ಶಿವತತ್ತ ಚಿಂತಾಮಣಿ ಗ್ರಂಥವು ಸುಮಾರು ಕ್ರಿ.ಶ. ೧೪೫೦ರಲ್ಲಿ ರಚಿತವಾಗಿರಬಹುದು. ಈ ಕೃತಿಯಲ್ಲಿ ೫೪

* ಕವಲೇದುರ್ಗ ಅಂಚೆ, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ-೫೭೭೪೩೨.
** # ೮೭, 'ಶಾಂತಲಾ', ಜಿಲ್ಲಾ ಪಂಚಾಯತ್ ಎದುರು, ಕುವೆಂಪು ರಸ್ತೆ, ಶಿವಮೊಗ್ಗ-೫೭೭೨೦೧.

ಸಂಧಿಗಳು, ೨೨೨೧ ಪದ್ಯಗಳಿವೆ. ಎಲ್ಲ ಪದ್ಯಗಳಲ್ಲಿಯೂ, ಕೊನೆಯಲ್ಲಿ "ಚರಣಾಂಬುಜಕೆ ಶರಣು" ಎಂಬ ಅಂಕಿತದಿಂದ ಮುಕ್ತಾಯವಾಗಿರುವುದು ವಿಶೇಷ. ಈ ಕೃತಿಯಲ್ಲಿ ವಿಶ್ವಗುರು ಬಸವಣ್ಣನವರ ಮೂರು ವಚನಗಳು ನೇರವಾಗಿ ಉಲ್ಲೇಖ ವಾಗಿದೆ. ಅನೇಕ ವಚನಗಳ ಸಾಲುಗಳ ಸಂದರ್ಭೋಚಿತವಾಗಿ ಬಳಸಲಾಗಿದೆ.

ಬಸವಣ್ಣನವರ ಉಲ್ಲೇಖ : ಶಿವತತ್ವ ಚಿಂತಾಮಣಿ ಗ್ರಂಥದ ಇಪ್ಪತ್ತೊಂಬತ್ತನೆ ಸಂಧಿಯಲ್ಲಿ ಪುರಾಣದ ಮಾದರಿಯಲ್ಲಿ ಬಸವಣ್ಣನವರ ಜನನ ಪೂರ್ವದ ಕಥೆ ಶಿವ–ನಂದಿಕೇಶ್ವರ ಸಂವಾದ ೪೩ ಪದ್ಯಗಳಲ್ಲಿ ಷಟ್‌ಪದಿಯಲ್ಲಿ ನಿರೂಪಿತವಾಗಿದೆ. ೩೦ನೇ ಸಂಧಿಯಲ್ಲಿ ಬಸವೇಶ್ವರರ ಜನನ ಮತ್ತು ಬಾಲ್ಯದ ಚರಿತ್ರೆ ಪುರಾಣದ ವಿವರಣೆಯೊಂದಿಗೆ ೫೯ ಷಟ್ಪದಿಗಳಲ್ಲಿ ನಿರೂಪಿಸಲಾಗಿದೆ. ೩೧ನೇ ಸಂಧಿಯಲ್ಲಿ ಬಸವೇಶ್ವರರ ಮದುವೆ, ಪ್ರಧಾನಿಪಟ್ಟ ನಿಧಿಲಿಪಿ ಓದಿದ ಪವಾಡ ಪ್ರಸಂಗಗಳ ಉಲ್ಲೇಖವಿದೆ. "ಬಸವ ಕಲ್ಯಾಣದೊಳು ಮದುವೆಯಾದ ಬಳಿಕ ವಸುದೇವ ಲಿಪಿ ಪವಾಡಂದೋರಿ ಲೊಸೆದು ಕೊಟ್ಟಂ ಪ್ರಧಾನಿಕೆಯನಾ ಚರಿತಮಂ ಕೇಳಿ ಕೃತಕೃತ್ಯರಹುದು" ಎಂಬ ಪಲ್ಲವ ೩ ಸಾಲುಗಳಿಂದ ಆರಂಭಿಸಿದ್ದಾನೆ. ೩೧ನೇ ಸಂಧಿಯಲ್ಲಿ ೭೫ ಷಟ್ಪದಿಗಳಿವೆ. ೩೨ನೇ ಸಂಧಿಯಲ್ಲಿರುವ ೮೭ ಷಟ್ಪದಿಗಳಲ್ಲಿ ಬಸವೇಶ್ವರರು ನಡೆಸಿದ ವೈಚಾರಿಕ ಕ್ರಾಂತಿಯನ್ನು ಸಮಾಜೋಧಾರ್ಮಿಕ, ಸಮಾನತೆ, ಸತ್ಯಶುದ್ಧ ಕಾಯಕ ಮತ್ತು ದಾಸೋಹಗಳ ಸಂಗತಿಗಳನ್ನು ಬಸವೇಶ್ವರರ ಪವಾಡಗಳೆಂಬ ಹೆಸರಿನಲ್ಲಿ ಚಿತ್ರಿಸಿರುವುದನ್ನು ಕಾಣಬಹುದು.

೩೩ನೇ ಸಂಧಿಯ ಮೀಮಾಂಸಕನ ಪವಾಡ ಹೆಸರಿನಲ್ಲಿ ೩೬ ಪದ್ಯಗಳಿವೆ. ಇವುಗಳಲ್ಲಿ ಆಳವಾದ ವಿಚಾರ ಮಾಡುವ ಷಡ್ದರ್ಶನಗಳ ಉಲ್ಲೇಖಗಳಿವೆ. ತತ್ವಗಳ ಜಿಜ್ಞಾಸೆಗಳ ಚಿತ್ರಣವಿದೆ. ಜೊತೆಗೆ ಬಸವೇಶ್ವರರು ಕಾರಣ ಪುರುಷರೆಂಬ ಚಿತ್ರಣವಿದೆ. ೩೦ನೇ ಸಂಧಿಯಿಂದ ೩೩ನೇ ಸಂಧಿಯವರೆಗೆ ಸುಮಾರು ೨೫೭ ಷಡ್ಪದಿಗಳಲ್ಲಿ ಬಸವೇಶ್ವರರ ಜೀವನದ ಚಾರಿತ್ರಿಕ ಅಂಶಗಳೊಂದಿಗೆ ಪೌರಾಣಿಕ ಅಂಶಗಳನ್ನು ಸೇರಿಸಿ ಸುಂದರವಾದ ರೂಪಕಗಳನ್ನು ಬಳಸಿ ಕವಿ ತನ್ನ ಪ್ರತಿಭೆಯನ್ನು ತೋರಿದ್ದಾನೆ. ಜಗಜ್ಯೋತಿ ಬಸವೇಶ್ವರರು ಚಾರಿತ್ರಿಕ ಪುರುಷರು, ವರ್ಗಭೇದ, ವರ್ಣಬೇಧ, ಅಸ್ಪೃಶ್ಯತೆ ವಿರುದ್ಧ ಸೌಮ್ಯವಾದ ಪ್ರತಿಭಟನೆ ಮೂಲಕ ಸರ್ವ ಸಮಾನತೆಯನ್ನು ಜಾರಿಗೆ ತಂದ ಮಹಾಮೇಧಾವಿ, ಸತ್ಯಶುದ್ಧ ಕಾಯಕ ಮತ್ತು ದಾಸೋಹಗಳ ಮೂಲಕ ಕಲ್ಯಾಣ ರಾಜ್ಯವನ್ನು ಆರ್ಥಿಕವಾಗಿ ಬಲಗೊಳಿಸಿದ ಚಿಂತಕರು. ಅವರ ಜೀವನ ಚರಿತ್ರೆಯನ್ನು ೧೪–೧೬ನೇ ಶತಮಾನದ ಕವಿಗಳು ಪವಾಡ ಪುರುಷನನ್ನಾಗಿ ಕಂಡಿರುವುದು, ಅಂದಿನ ಕಾವ್ಯ ಲಕ್ಷಣಗಳ ಪ್ರಭಾವ ಇರಬಹುದೆಂದು ಭಾವಿಸಬಹುದು.

೭೪

ಲಕ್ಕುಂಡಿಯ ಶರಣ ಅಜಗಣ್ಣ ಒಂದು ಹೊಸ ಸುಳಿವು

ಡಾ. ಮಲ್ಲಿಕಾರ್ಜುನ ಕುಂಬಾರ*

ಅಜಗಣ್ಣನನ್ನು ಕುರಿತು ಚನ್ನಬಸವಣ್ಣನು ತನ್ನೊಂದು ವಚನದಲ್ಲಿ 'ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ, ಅಜಗಣ್ಣನ ಐದು ವಚನಕ್ಕೆ ಮಹಾದೇವಿಯ ಒಂದು ವಚನ, ನಿರ್ವಚನ ಕಾಣಾ ಕೂಡಲ ಚನ್ನಸಂಗಮದೇವ' ಎಂದು ಹೇಳುವಲ್ಲಿ ಇತನು ಬಹು ದೊಡ್ಡ ವಚನಕಾರ ನಿರಬೇಕು. ಮಹಾದೇವಿಯಕ್ಕನನ್ನು ಬಿಟ್ಟರೆ ಅಜಗಣ್ಣನೆ ಅತೀ ಶ್ರೇಷ್ಠ ವಚನಕಾರನೆಂದು ಚನ್ನನ್ನಬಸವಣ್ಣನು ಭಾವಿಸಿದ್ದಾನೆ. ಇತನ ಸಹೋದರಿ ಮುಕ್ತಾಯಕ್ಕನೂ ದೊಡ್ಡ ವಚನಕಾರ್ತಿ. ಈ ಇರ್ವರು ಲಕ್ಕುಂಡಿಯವರೆಂದು ತಿಳಿದು ಬರುತ್ತದೆ. ಶೂನ್ಯಸಿಂಹಾಸನಾಧೀಶ್ವರ ಅಲ್ಲಮಪ್ರಭು ತನ್ನೂರು ಬಳ್ಳಿಗಾವಿಯಿಂದ ಕಲ್ಯಾಣಕ್ಕೆ ತೆರಳುವ ಮಾರ್ಗದಲ್ಲಿ ಲಕ್ಕುಂಡಿಯಲ್ಲಿ ಲಿಂಗೈಕ್ಯನಾದ ಅಜಗಣ್ಣನಿಗಾಗಿ ಶೋಕಿಸುತ್ತಿರುವ ತಂಗಿ ಮುಕ್ತಾಯಕ್ಕನಿಗೆ ಜ್ಞಾನದ ಬೀಜವನ್ನು ಬಿತ್ತಿ ಆಕೆಗೆ ಸಾಂತ್ವನ ಹೇಳಿದ ಅಪೂರ್ವ ಪ್ರಸಂಗವು ಶೂನ್ಯಸಂಪಾದನೆಯಲ್ಲಿ ವರ್ಣಿತವಾಗಿದೆ.

ಈ ಶರಣ ಸಹೋದರ ಸಹೋದರಿಯರ ಬಗ್ಗೆ ಇತಿಹಾಸಕಾರರಲ್ಲಿ ಬಹಳಷ್ಟು ಭಿನ್ನಾಭಿಪ್ರಾಯಗಳಿವೆ."ಗದಗಿನ ಪಕ್ಕದ ಲಕ್ಕುಂಡಿ ಗ್ರಾಮದಲ್ಲಿ ಶಿವಭಕ್ತ ಅಜಗಣ್ಣನಿದ್ದನು. ತನ್ನ ತಂಗಿಯನ್ನು ಲಗ್ನ ಮಾಡಿಕೊಟ್ಟ ಮಸಳಿಕಲ್ಲಿಗೆ (ರಾಯಚೂರ ಜಿಲ್ಲೆ) ಹೋಗಿ ಪಂಚಾಕ್ಷರಿ ಮಂತ್ರವನ್ನು ಗಟ್ಟಿಯಾಗಿ ಜಪಿಸುತ್ತಾ ಬೇಸಾಯವನ್ನು ಮಾಡುತ್ತಿದ್ದನು. ಒಮ್ಮೆ ಸರ್ಪವೊಂದು ತನ್ನ ತಲೆಯಲ್ಲಿದ್ದ ಮಾಣಿಕ್ಯವನ್ನು ಹೊರಗಿಟ್ಟು ಅದರ ಬೆಳಕಿನಲ್ಲಿ ಆಹಾರವನ್ನು ಅರಸುತ್ತಾ ಸಂಚರಿಸುತ್ತಿತ್ತು. ಅಲ್ಲಿ ಹೋಗುತ್ತಿದ್ದ ಅಜಗಣ್ಣನನ್ನು ನೋಡಿದ ಸರ್ಪವು ಆ ರತ್ನವನ್ನು ನುಂಗಿ ಹುತ್ತವನ್ನು ಹೊಕ್ಕುಬಿಟ್ಟಿತು. ಅದರಿಂದ ಪಾಠವನ್ನು ಕಲಿತ ಅಜಗಣ್ಣನು ಮಾಣಿಕ್ಯದಂತಿರುವ ಪಂಚಾಕ್ಷರಿ ಮಂತ್ರವನ್ನು ಗುಪ್ತ ಭಕ್ತನಾಗಿ ಅಂತರಂಗದಲ್ಲಿ ಜಪಿಸಲಾರಂಭಿಸಿದನು. ಹೀಗಿರುವಾಗ ಒಂದು ದಿನ ತನ್ನ ಮನೆಯ ಬಾಗಿಲು ತಲೆಗೆ ತಗುಲಿದಾಗ ತಕ್ಷಣ ಆತನ ಬಾಯಿಂದ ಪಂಚಾಕ್ಷರಿ ಮಂತ್ರವು ಹೊರಬಂತು. ಅದರೊಂದಿಗೆ ಆತನ ಪ್ರಾಣ ಪಕ್ಷಿಯು ಹಾರಿಹೋಯಿತು.

ಇನ್ನೊಂದು ಹೇಳಿಕೆಯಂತೆ ಇತನು ಲಿಂಗವನ್ನು ಇತರರಿಗೆ ಕಾಣದಂತೆ ಒಳಗಿಟ್ಟುಕೊಂಡಿದ್ದನು ಶೀಲವಂತರಾದ ಇತನ ತಂದೆ ತಾಯಿಗಳು ಮತ್ತು ಹೆಂಡತಿಯು ಅಜಗಣ್ಣನನ್ನು ನಿರಾಕರಿಸಿದ ಕಾರಣ ಅನಿವಾರ್ಯವಾಗಿ ತಂಗಿಯನ್ನು ಕೊಟ್ಟ ಮಸಳಿಕಲ್ಲಿ ಸೇರಬೇಕಾಯಿತೆಂದು ಹೇಳುತ್ತಾರೆ."[೧] ಈ ಶರಣನನ್ನು ಕುರಿತು ಪಾಲ್ಕುರಿಕೆ ಸೋಮನಾಥನ ಸೋಮನಾಥ ಪುರಾಣ, ಶಾಂತಲಿಂಗ ದೇಶಿಕರ ಭೈರವೇಶ್ವರ ಕಥಾ ಸೂತ್ರರತ್ನಾಕರ, ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ, ಸಿದ್ದ ನಂಜೇಶನ ಗುರುರಾಜ ಚರಿತ್ರೆ, ಯಳಂದೂರು ಹರೀಶ್ವರ ಕವಿಯ ಪ್ರಭುದೇವರ ಪುರಾಣ, ಹಳಕಟ್ಟಿಯವರ ಅಮರಗಣಾಧೀಶ್ವರ ಚರಿತ್ರೆ, ಶಿವಶರಣರ ಚರಿತ್ರೆಗಳಲ್ಲಿ ಶರಣ ಅಜಗಣ್ಣನು ಉಲ್ಲೇಖಗೊಂಡಿದ್ದಾನೆ. ಕವಿಚರಿತ್ರೆಕಾರರು ಈತನ ಕಾಲವನ್ನು ಕ್ರಿ.ಶ. ೧೧೬೦ ಎಂದು ಗುರುತಿಸುತ್ತಾರೆ. ಅಜಗಣ್ಣನು ಬರೆದ ವಚನಗಳ ಅಂಕಿತದ ಬಗ್ಗೆ ಬಹಳಷ್ಟು ಭಿನ್ನಾಭಿಪ್ರಾಯಗಳಿವೆ. ಅವುಗಳೆಂದರೆ ಮಹಾಘನ ಸೋಮೇಶ್ವರ, ಅಜಗಣ್ಣ ತಂದೆ ಎಂಬ ಅಂಕಿತಗಳು. ಸಂಶೋಧಕರಾದ ಡಾ. ಎಂ. ಚಿದಾನಂದಮೂರ್ತಿಗಳು "ಇತನ ಬಗ್ಗೆ ಹಲವಾರು ಕೃತಿಗಳಲ್ಲಿ ಸಣ್ಣ ಪುಟ್ಟ ಪಾಠಭೇಧಗಳಿದ್ದರೂ ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ, ಅಂಕಿತ; ಇಲ್ಲೆಲ್ಲಾ ಇರುವದು 'ಮಹಾಲಿಂಗ ಸೋಮೇಶ್ವರ' ಅಲ್ಲ, 'ಮಹಾಘನ ಸೋಮೇಶ್ವರ' ವೇ ಆತನ ನಿಜವಾದ ವಚನಾಂಕಿತ, ಲಕ್ಕುಂಡಿಯಲ್ಲಿ ಪ್ರಾಚೀನವಾದ ಸೋಮೇಶ್ವರ ದೇವಾಲಯವಿರುವದು 'ಮಹಾಘನ ಸೋಮೇಶ್ವರ'ವೇ ಅಜಗಣ್ಣನ ಅಂಕಿತವೆಂಬುದಕ್ಕೆ ಒಂದು ಚಿಕ್ಕ ಸಹಾಯಕ ಸಾಕ್ಷ್ಯಾಧಾರವಾಗಿದೆ. 'ಘನ'ವೆಂಬುದು ಆಳವನ್ನು, ಉದಾತ್ತತೆಯನ್ನು, ನಿಗೂಢತೆಯನ್ನು, ಗಾಂಭಿರ್ಯವನ್ನು ಹೇಳುವ ಪದ. ಮತ್ತು ಬಾಹ್ಯಕ್ಕಿಂತ ಆತ್ಮ ಪ್ರಪಂಚದಲ್ಲೇ ವಿಹರಿಸುತ್ತ ಬದುಕಿದ ಅಜಗಣ್ಣನ ವ್ಯಕ್ತಿತ್ವಕ್ಕೆ ಹೆಚ್ಚು ಹೊಂದುವಂತಹುದು. ಆ ಕಾರಣ ಆತನ ವಚನಾಂಕಿತ 'ಮಹಾಘನ ಸೋಮೇಶ್ವರ' ವಾಗಿತ್ತೆಂದೇ ಭಾವಿಸುವುದರಲ್ಲಿ ತಪ್ಪೇನೂ ಇಲ್ಲ"[೨] ಎಂದು ಅಭಿಪ್ರಾಯಪಡುತ್ತಾರೆ.

* 'ವಚನ', ರೋಣ ತಾಲ್ಲೂಕು, ಗದಗ ಜಿಲ್ಲೆ, ರಾಜೂರ–೫೮೨೨೩೦.



ಬಿದ್ದು ಬಯಲಾದ ಬೇರೆ ಮೂರ್ತಿಯುಳ್ಳ ಅಜಗಣ್ಣನ ಗುಡಿ



ಗುಡಿಯಲ್ಲಿ ನಂತರ ತಂದು ಇಟ್ಟ ಮೂರ್ತಿ(ವೀರಗಲ್ಲ)

ಇದೆಲ್ಲವನ್ನು ಗಮನಿಸಿದಾಗ ಈತನ ಊರು ಲಕ್ಕುಂಡಿ ಎನ್ನುವದರಲ್ಲಿ ಯಾವುದೇ ಸಂಶಯವಿಲ್ಲ. ಅದರೆ ಈವರೆಗೆ ಆತನ ಕುರುಹುಗಳು ಸಿಕ್ಕಿರಲಿಲ್ಲ. ಲಕ್ಕುಂಡಿಯ ಬಸ್ ನಿಲ್ದಾಣದ ಪೂರ್ವಕ್ಕೆ ಊರಿಗೆ ಸನಿಹದಲ್ಲಿರುವ ಕುಂಬಾರರಿಗೆ ಸೇರಿದ ಹೊಲವಿದೆ. ಅದರ ಮೂಲೆಯಲ್ಲಿ ಪೂರ್ತಿ ಬಿದ್ದು ಹೋದ ತೀರಾ ಚಿಕ್ಕದಾದ ಕುರುಹಾಗಿ ಉಳಿದ ಗುಡಿ ಇದೆ. ಅದರ ಬದಿಗಳಲ್ಲಿ ಚಾಲುಕ್ಯರ ಶೈಲಿಯ ಅಳಿದುಳಿದ ಒಂದೆರಡು ಕಂಬಗಳಿವೆ. ಆದರೆ ಅದರ ಮೇಲೆ ಹಾಕಿದ ಮೇಲ್ಛಾವಣಿ ಇಲ್ಲದೆ ಅದು ಬಯಲಿನಲ್ಲಿದೆ. ಮೊದಲು ಇಲ್ಲಿ ಗುಡಿಯೊಂದು ಇದ್ದ ಸೂಚನೆಗಳು ಕಾಣಿಸುತ್ತವೆ.. (ಅದರ ಒಳಗೆ ಅರ್ಧ ಹೂತು ಹೋದ ಮೂರ್ತಿ ಇದ್ದು. ಅದರ ಒಂದು ಕೈಯಲ್ಲಿ ಬಿಲ್ಲು ಮತ್ತೊಂದು ಕೈಯಲ್ಲಿ ದಪ್ಪನೆಯ ಕೋಲು ಇದೆ. ತಲೆಯ ಹಿಂಭಾಗದಲ್ಲಿ ಕೂದಲನ್ನು ತುರುಬಿನಂತೆ ಕಟ್ಟಿದೆ. ಈ ಶಿಲ್ಪವನ್ನು ನಂತರ ಇಲ್ಲಿ ತಂದು ಇಟ್ಟರೆಂದು ಸ್ಥಳಿಯರು ಹೇಳುತ್ತಾರೆ. ಆದರೆ ಇದು ವೀರಗಲ್ಲಿನಂತೆ ತೋರುತ್ತದೆ.) ಈ ಸ್ಥಳವನ್ನು ಸ್ಥಳಿಕರು 'ಅಜ್ಜಣ್ಣ'ನ ಗುಡಿ ಎಂದು ಕರೆಯುತ್ತಾರೆ. ಆದರ ಸುತ್ತಮುತ್ತಲಿನ ಹೊಲದ ಕೃಷಿಕರು ತಮ್ಮ ಕೃಷಿ ಕೆಲಸದಲ್ಲಿ ತೊಡಗುವಾಗ, ರಾಶಿಯನ್ನು ಮಾಡುವಾಗ ಇಲ್ಲಿ ಪೂಜೆಯನ್ನು ಸಲ್ಲಿಸುವ ಸಂಪ್ರದಾಯವನ್ನು ಹೊಂದಿದ್ದಾರೆ. ಲಕ್ಕುಂಡಿಯ ಹಿರಿಯರು ಈ ಸ್ಥಳದಲ್ಲಿ ಗುಡಿ ಇತ್ತು. ಅದು ನಮ್ಮೂರಿನ ಶರಣ ಅಜ್ಜಣ್ಣನದೆಂದು ಬಹಳ ಹೆಮ್ಮೆಯಿಂದ ಹೇಳುತ್ತಾರೆ. ಅವರ ಬಾಯಲ್ಲಿ ಅಜಗಣ್ಣ ಅಜ್ಜಣ್ಣನಾಗಿದ್ದಾನೆ. ಈ ಸ್ಥಳದಲ್ಲಿ ಮೊದಲು ಒಂದು ಮೂರ್ತಿ ಇತ್ತೆಂದು ಸುತ್ತಲಿನ ಹೊಲದವರು ಹೇಳುತ್ತಾರೆ. ಅದು ಈಗ ಎಲ್ಲಿದೆ ಎಂದು ಶೋಧಿಸಬೇಕಾಗಿದೆ. ಈ ಸ್ಥಳವು ಈಗ ಪೂರ್ತಿ ಮುಚ್ಚುತ್ತಿದ್ದು. ಇತಿಹಾಸವು ಕಾಲಾಂತರದಲ್ಲಿ ದಂತ ಕಥೆಯಾಗಿ ಜನಮಾನಸದಲ್ಲಿ ಉಳಿದುಬಿಡುತ್ತದೆ. ಅದನ್ನೆ ಜನರು ತಮಗೆ ತಿಳಿದಂತೆ ಪರಿವರ್ತಿಸುತ್ತಾರೆ. ಇದು ಹಾಗೇ ಆಗಿರಬೇಕು. ಈ ಸ್ಥಳದ ಬಗ್ಗೆ ಸಂಶೋಧಕರು ಗಮನ ಹರಿಸಬೇಕು.

ಆಧಾರಸೂಚಿ

೧. ಶಿವಶರಣ ಕಥಾರತ್ನ ಕೋಶ, ತ.ಸು. ಶಾಮರಾವ್ (ಪುಟ ೬–೭), ೨೦೦೩.

೨. ವಚನಶೋಧ–೨, ಡಾ. ಎಂ. ಚಿದಾನಂದ ಮೂರ್ತಿ (ಪುಟ ೭೬), ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರ, ೧೯೯೮.

೭೫

ನಾಕಂಡ ಐತಿಹಾಸಿಕ ಪುರುಷ ಶ್ರೀ ಬಸವೇಶ್ವರ

ಡಾ. ಎಸ್.ಕೆ.ಜೋಶಿ*

ಇಲ್ಲೊಂದು ಮರೆಯಲಾರದ ಕಥೆ. ಶ್ರೀ ಬಸವೇಶ್ವರರದು! ಇತಿಹಾಸದಲ್ಲಿ. ಅಂದು ಇತ್ತೀಚೆಗೆ ಫೆಬ್ರುವರಿ ೨೦೧೩, ಬಸವೇಶನ ಜನ್ಮ ತಾಣವಾದ ಹಾಗೂ ಕಾರ್ಯ ಕ್ಷೇತ್ರವಾದ ಬಸವನ ಬಾಗೇವಾಡಿಗೆ ರಾಜ್ಯಮಟ್ಟದ ಶರಣ ಚಿಂತನ ವಿಚಾರ ಸಂಕಿರಣಕ್ಕೆ ಭಾಗವಹಿಸಲು ಹೋಗಿದ್ದೆ. ಹನ್ನೆರಡನೆಯ ಶತಮಾನದ ಮಹಾಮನೆಯ ಭೂಷಿತರಾದ ಭಗೃಭೂಷಿತ ಶಿವಭಕ್ತರನ್ನು ಶಿವ ಸಂಪ್ರದಾಯದವರನ್ನು ಆ ಊರ ತುಂಬೆಲ್ಲಾ ಶಿವಾರ್ಚನೆಯ ಆಚಾರ್ಯರು, ಗುರುಕುಲದಲ್ಲಿ ಕಲಿವ ಮುದ್ದಾದ ಬಾಲಶಿವರು, ಎತ್ತಣವೂ ಶಿವಸಂಪ್ರದಾಯದ ಕಾಯಕಸ್ಥರು, ಶಿವಶರಣ ಚಿಂತಕರು. ಎಲ್ಲವೂ ಶಿವಮಯ ಶಿವ-ಸ್ವಾಸೋಚ್ಛ್ವಾರದ ಸಾಮಾನ್ಯರ ಸರ್ವರ ಬದುಕು ಕಂಡುದು ನಾನು ಅಲ್ಲಿ.

ಶಿವ ಸಂಪ್ರದಾಯವು ಮುಂದಿದ್ದು, ಉಳಿದ ವಿಷ್ಣು ಸಂಪ್ರದಾಯ, ಬ್ರಹ್ಮ ಸಂಪ್ರದಾಯ, ಶಕ್ತಿ ಸಂಪ್ರದಾಯಗಳ ಪಾಶ್ವದಲ್ಲಿ ಆ ಹನ್ನೆರಡನೆಯ ಶತಮಾನದಲ್ಲಿ ಪಾರ್ಶ್ವದಲ್ಲಿ ಅಡಗಿದುದು, ಆ ದೂರದ ಹನ್ನೆರಡನೆಯ ಶತಮಾನದ ದೂರದ ಸತ್ಯಕಥೆ. ಸಮಾಜಕ್ಕೆ ಆ ಹೊಸ ಕಥೆ ಬೇಕಾಗಿತ್ತು. ಪ್ರಚಲಿತ ಹಾಗೂ ಪಭಾವಿ ಆಚರಣೆಯು ಘನೀಭೂತವಾಗಿ, ಸಾವು ಸಾಕಾರಗೊಂಡ ಸಮಯವದು.

ಆ ಈತನು ಸಾಕಾರದ ಆಚರಣೆಗಳಿಂದ, ದೂರದಲ್ಲಿ ಕಾಣುವ ಸದಾಚಾರದ, ಸಮಾಚರಣೆಯ, ಸಮತೋಲನದ ಸಮಭಾವದ, ಸಮ ನಡೆನುಡಿಗಳ, ಸಮಾನತೆಯ ಸಮಾಜದ ನವ್ಯ ನಿರ್ಮಾಣದ ಧರ್ಮ ಸಂವಿಧಾನ ಆಗಬೇಕಾದ ಅವಶ್ಯವೆನಿಸಿದ್ದ ಇನಸಂಘ ಆಗಬೇಕಾಗಿರುವ ಅದನ್ನು, ಬ್ರಹ್ಮಸ್ಯನಾದ ಬಸವೇಶ ನಿರ್ಮಿಸಿದನು. ಅದು ಈ ಮೊದಲು ಭಾರತವು ಕಂಡರಿಯುದ ಸಾಮಾಜಿಕ ಕ್ರಾಂತಿ. ಮಹಾಮನೆಯೆಂಬ ಪರಸ್ಪರ ಗೌರವ ನೀಡುವ, ಕಾಯಕಕ್ಕೆ ಕುಂದಣ ನೀಡುವ, ಸಮಾನತೆಯ ಪ್ರಾರ್ಥನೆ ಹಾಡುವ ಮಂಗಲದಾಯಕ 'ಧರ್ಮಸಂವಿಧಾನ' ಬೇಕಾಗಿತ್ತು. ಅದನ್ನು ಶ್ರೀ ಬಸವೇಶ ಅಲ್ಲಮ, ಚೌಡಯ್ಯ, ಮಾದಯ್ಯ, ಚೆನ್ನಯ್ಯ ಮುಂತಾದ ೭೦೦ 'ಪ್ರಮಥರು' ಅಕ್ಕ ಮಹಾದೇವಿ, ಲಕ್ಕಮ್ಮ, ನೀಲಾಂಬ ಇತ್ಯಾದಿ ೩೪ ಮಹಿಳಾ ಶರಣೆಯರ ಭಕ್ತಿ ಮಂಡಲದಲ್ಲಿ ರೂಪುಗೊಂಡಿತ್ತು. ಆ ಶರಣ್ಯಭಾವ (ಶ್ರೀ ಸಿದ್ಧೇಶ್ವರ ಸ್ವಾಮಿಗಳು ಬಿಜಾಪುರ ಅವರ ಪ್ರವಚನಗಳಿಂದ).

ಆ ಶತಮಾನದ ನವ್ಯ ಸಮಾಜ ನಿರ್ಮಾಪಕನಾದ ಬಸವೇಶನಿಗೆ ತನ್ನ ಕುಲಗೋತ್ರದ, ಪೂರ್ವಾಶ್ರಮಗಳ, ವೈದಿಕ ಸಂಪ್ರದಾಯ ಅರಿವು ಚೆನ್ನಾಗಿ ಗೊತ್ತಿತ್ತು. ವೇದ, ಉಪನಿಷತ್ತುಗಳು ಬ್ರಾಹ್ಮಣ್ಯಗಳು ವೇದಾಂಗಗಳು ತಾನು ಕಲಿತ ಗುರುವಿನ ಮುಖಾಂತರ ಗೊತ್ತಾಗಿತ್ತು. ಆ ನವ ಧರ್ಮ ನಿರ್ಮಾಪಕನಿಗೆ.

ಜಾತಿಗಳೆಂಬುದು ವ್ಯಕ್ತಿ ಮಾಡುವ ಕಾಯಕದಿಂದ ಉದ್ಭವಿಸಿದವು. 'ಜಾತುರ್ವಣ್ಯಂ ಮಯಾಶ್ರುಷ್ಠ, ಇದಂ ಕರ್ಮಫಲ ಹೇತುಃ, ಎಂಬ ಭಗವದ್ಗೀತೆಯ ವ್ಯಾಖ್ಯೆ-ವ್ಯಾಖ್ಯಾನ ಆ ಮಹಾಮಹಿಮ ಭಗವಂತ ಭಕ್ತ ಶ್ರೀ ಬಸವೇಶನಿಗೆ ಗೊತ್ತು. ಶಿಲಾಯುಗದ ಮಾನವನಿಗೆ ಜಾತಿಗಳು ಗೊತ್ತಿರಲಿಲ್ಲ, ಆತ ಶತಮಾನಗಳು ಕಳೆದಂತೆ, ಆತ ಸಮಾಜ ಕಟ್ಟಿದಂತೆ, ಅದರ ಅವಶ್ಯಕತೆಗಳಿಗೆ ತಕ್ಕಂತೆ ಆವಶ್ಯಕ ಕಸಬುಗಳು ಕಸಬುದಾರರು (Caste System is and was a Social new and living together is a social interdependence) (ಡಾ. ಎಸ್. ರಾಧಾಕೃಷ್ಣನ್ : 'ದಿ ಹಿಂದು ವೇ ಆಫ್ ಲೈಫ್)

ಈ ಮೇಲಣ ಅವಶ್ಯಕತೆಗಳು, ಪ್ರತಿದೇಶಕ್ಕೂ ಪ್ರತಿ ಸಮುದಾಯಕ್ಕೂ ಪ್ರತಿಕಾಲಕ್ಕೂ ಬೇಕಾದ ಅವಶ್ಯಕತೆಗಳೇ. ಪ್ರತಿಯೊಂದು ಧರ್ಮ ಬದುಕಿನಲ್ಲಿ ಈ ಸಾಮಾಜಿಕ ಭದ್ರತೆಯಲ್ಲಿ ಒಂದಿಲ್ಲೊಂದು ತರಹದ ಜಾತುರ್ವರ್ಣ್ಯ ಇದ್ದೇ ಇದೆ. ಕೆಲವೊಂದು ಧರ್ಮಾಚರಣೆಯಲ್ಲಿ - ಕಸಬುಗಳ ಪಾರ್ಶ್ವದಲ್ಲಿ ಒಂದೇ ಅಧಿಷ್ಠಾನದ ಮೇಲೆ (Same single platform), ಕುಳಿತುಕೊಳ್ಳುತ್ತಾರೆ. ಈ ವಾಸ್ತವತೆ ಈ ದೇಶದ ಸ್ವಾಶೋಚ್ಛ್ವಾಸವೇ ಆದ 'ಹಿಂದು ಧರ್ಮದಲ್ಲಿ' ಆದಿಯಲ್ಲಿ ಕಾರ್ಲಮಾರ್ಕ್ಸ್ ಹಾಗೂ ಬಸವಣ್ಣನವರು ಎಷ್ಟೊಂದು ಸಮೀಪ! ಇತ್ತಾದರೂ, ಕಾಲಗತಿಸಿದಂತೆ, ಒಬ್ಬರೊಳಗೊಬ್ಬರು ಕಲೆಯದಂತೆ 'ವಾಟರ್‌ಟೈಟ್ ಕಂಪಾರ್ಟ್‌ಮೆಂಟ್'ಗಳು ನಿರ್ಮಾಣವಾದವು. ಹೀಗಾಗಿ, ಮೇಲುಕೀಳು, ಸ್ಪೃಶ್ಯ-ಅಸ್ಪೃಶ್ಯ,

* ಶ್ರೀ ಸಿಲ್ವರ್ ಆರ್ಚರ್ಡ್, ಶ್ರೀರಂಗಮಾರ್ಗ, ಧಾರವಾಡ-೧

ಕಲಿತ-ದಲಿತ ಎಂಬ ದೂರತೆಗಳು ನಿರ್ಮಾಣವಾಗಿ, ಹಿಂದೂ ಸಮಾಜಕ್ಕೆ ಶಿಥಿಲತೆಯನ್ನು ತಂದೊಡ್ಡಿದವು.

ಈ ಶಿಥಿಲತೆಯಡಿ ಬಸವೇಶನಂತಹ ೧೨ನೇ ಶತಕದ ಶರಣ ಸಮೂಹ, ಜೀರ್ಣೋದ್ಧಾರಗೊಳಿಸಿ, ಸಮಾನತ್ವದ ಸಮಾಜ ನಿರ್ಮಾಣಕ್ಕೆ ಪ್ರಚುರವಾಯಿತು, ಸಾಧನ ಸಂಪತ್ತಾಯಿತು. 'ಕಾಯಕ-ಪ್ರಸಾದ-ದಾಸೋಹ' ತ್ರಿವಿಧ ಕರ್ತವ್ಯಗಳು ಪ್ರತಿಯೊಬ್ಬರೂ ಕೈಗೊಳ್ಳುವ ಅನುಶಾಸನಗಳು.

ಹನ್ನೆರಡನೆಯ ಶತಮಾನ ಬಹು ಧರ್ಮಗಳ ತಾಕಲಾಟದ ಕಾಲ. ವೈದಿಕ ಧರ್ಮದ ಪರಂಪರಾಗತ ಆಳ ಬೇರಿನ ವೃಕ್ಷ, ಜೈನ ಜಾಗೃತಿಯ ಕಲ್ಯಾಣ ಚಾಲುಕ್ಯರ ಬಿಜ್ಜಳನಂಥ ಮಹಾಗಟ್ಟಿಗ ಅರಸರ ರಾಜಸ್ವದ ವರ್ಚಸ್ವ, ಉತ್ತರ ಭಾರತದ ವಿಂಧ್ಯ ಪರ್ವತ ದಾಟಿ ಬರುವಲ್ಲಿ ಪ್ರಯತ್ನಿಸುವ ಮುಸ್ಲಿಮ್‌ರ ಆಕ್ರಮಣದ ಅಲೆಗಳು, ಕರ್ನಾಟಕದಲ್ಲಿ ಹಿಂದು ಸಾಮ್ರಾಜ್ಯ ಸ್ಥಾಪಿಸಲು ಪ್ರಬುದ್ಧತೆಯ ವಿದ್ಯಾರಣ್ಯ, ರಾಯಣ, ಹಕ್ಕ ಬುಕ್ಕರಂಥ ಗುರುಸ್ವ + ರಾಜಸ್ವಗಳ ಉಗಮಕಾಲ. ಹೀಗೆ ವೈಚಾರಿಕ ಹಾಗೂ ರಾಜಕೀಯ ದ್ವಂದ್ವತೆಗಳ ಕಾಲವದು. ೧೨ರ ಅಂತ್ಯ ಹಾಗೂ ೧೩ರ ಶತಮಾನಗಳ ಉದಯಕಾಲ. ಈ ದ್ವಂದ್ವತೆಯ, ಉಪವತೆಯ, ಸಾಮಾಜಿಕ ಹಾಗೂ ರಾಜಕೀಯ ಸಂಘರ್ಷದ ಕಾಲದಲ್ಲಿ ಸಾಮಾಜಿಕ ಧಾರ್ಮಿಕ ಹಾಗೂ ರಾಜಕೀಯ ಕ್ರಾಂತಿ ಕಹಳೆಯನ್ನು ಈ ಪೂರ್ವದಲ್ಲಿಯೇ ಮೊಳಗಿಸಿ ಒಂದು ತರಹದ ಗಟ್ಟಿಯಾದ 'ಲಿಂಗವಂತರ ಶಕ್ತಿಯನ್ನು' ಅನುಷ್ಠಾನಗೊಳಿಸಿದ ಚೇತನ ಶ್ರೀ ಬಸವೇಶ್ವರ.

ವ್ರಾತ್ಯ (ವ್ರತಸ್ಥ) ಸ್ಥಾನದಿಂದ ಕೆಳಗಿಳಿದು ನಿಮ್ನ ವರ್ಗದಲ್ಲಿ ಐಕ್ಯತೆಯನ್ನು ಸಮಾನತೆಯನ್ನು ತಂದ ಚಿಂತಕಶಕ್ತಿ ಬಸವಣ್ಣ. ಸಮಾಜದ 'ಕಸಬುಗಾರರನ್ನು, ಒಕ್ಕಲಿಗ, ಊಳಿಗ, ಅಂಬಿಗ, ಜೇಡ, ಬೇಡ, ಕಮ್ಮಾರ, ಕುಂಬಾರ, ಕಲ್ಕುಟಿಕ, ಶೈವ, ಬ್ರಾಹ್ಮಣ, ಒಕ್ಕಲಿಗ, ಬಣಜಿಗ, ಬಾಣಸಿಗ, ಮ್ಯಾದಾರ, ಮಾದಿಗ, ಚರ್ಮಗಾರ, ವಾಲಿಕಾರ, ನೇಕಾರ ಇವರೆಲ್ಲ ಅವರೇ ಇನ್ನುಳಿದ ಅವರೆಲ್ಲ ಕಸಬುಗಾರರು. ಇವರು ಬಸವ ನಿರ್ಮಿತ ಒಂದೇ ವೇದಿಕೆಯ ಮೇಲೆ ನಿಂತರು. ಅವರೆಲ್ಲ ಸಮಾಜದ ಅವಶ್ಯಕ ಅಂಗಗಳಾಗಿ ಅಭಿಮಾನದಿಂದ ಎದೆ ಸೆಟೆಸಿ ನಿಲ್ಲುವಂತಾಯಿತು. ಬಸವಣ್ಣನ ಈ ಧಾರ್ಮಿಕ ಕ್ರಾಂತಿ ಪ್ರಾಯಶಃ ಜಗತ್ತಿನ ಯಾವುದೇ ಭಾಗದಲ್ಲಿ ಡೋಹರ ಈ ತರಹದ ಐಕ್ಯಭಾವದ ಸಮಾನ ನಡವಳಿಕೆಯ ಸಮಾಜದ ಕಟ್ಟುವಿಕೆ ಇತಿಹಾಸದಲ್ಲಿ ಕಾಣಸಿಗದು. ಇಂಥ ಸಾಮಾಜಿಕ ಬಂಧ ಹಾಗೂ ಹಾರ್ದಿಕ ಬಂಧ, ಮೋಸೆಸ್‌ನ ಅನುರಿತ್ಯಾಯಿಗಳಲ್ಲಿ ಸಿಗದು, ಬುದ್ಧನ ಸಂಘಗಳಲ್ಲಿ ದೊರೆಯದು, ಜೀಸಸ್‌ನ ಬದುಕಿನಲ್ಲಿ, ಭಗವದ್ಗೀತೆಯಲ್ಲಿ ದೊರೆಯದು. ಶಂಕರನ ಸಾಂಖ್ಯಯೋಗದಲ್ಲಿ, ರಾಮಾನುಜ, ಮಧ್ವರ ಧಾರ್ಮಿಕ ಪ್ರಯೋಗಗಳಲ್ಲಿ ದೊರೆಯಲಾರದು. ಇದು ದೊರೆತುದು ಕೇವಲ ಭಾರತದ ಕರುನಾಡಿನ ಶಿವಶರಣ ಬಸವೇಶ್ವರನ ನವ್ಯ ಧರ್ಮದ ಅನುಷ್ಠಾನದಲ್ಲಿ ಮಾತ್ರ (Prof. Nilakanta Shastri on Indology).

> **"ಅಪ್ಪ ಚೌಡಯ್ಯನಿಗೆ ಅಂಬಿಗನೆನ್ನಲೇ**
> **ಅಣ್ಣ ಚೆನ್ನಯ್ಯನಿಗೆ ಮ್ಯಾದಾರನೆನ್ನಲೇ**
> **ಕಕ್ಕ ಕಕ್ಕಯ್ಯನಿಗೆ ಡೋಹರನೆನ್ನಲೇ**
> **ಎನಗೆ ಹಾರುವನೆನ್ನಲೇ.....ಅಂದುದಾದರೆ,**
> **ಕೂಡಲಸಂಗಮ ನಗುವನಯ್ಯ....."**
> **ಇಲ್ಲಿದ್ದ ವಿವಿಧ ಕಾಯಸ್ಥರ ಹಿರಿಮೆ-ಗರಿಮೆ ಬಸವಣ್ಣ ಕಂಡುದು.**

ಹೀಗೆ ಮೇಲು ಕೀಳೆನ್ನದೆ ಗುರುಲಿಂಗ ಜಂಗಮ ತ್ರಿಸೂತ್ರಗಳಲ್ಲಿ ನಂಬುಗೆ ಇರಿಸಿ, ಕಾಯಕವನ್ನು (Work, Work & Work) ಜನತೆಯ ದಿನಚರಿಯಲ್ಲಿ ತುಂಬಿ, ಅವರನ್ನು ವಿವಿಧ ಕಾರ್ಯಪ್ರವೃತ್ತರನ್ನಾಗಿ ಮಾಡಿ, ಸದೃಢ ಆರ್ಥಿಕ ತಳಹದಿಯ ಸಮಾಜವನ್ನು ನಿರ್ಮಿಸಿದ ಸೈದ್ಧಾಂತಿ ಬಸವಣ್ಣ ಹಾಗೆ ನೋಡಿದಲ್ಲಿ ಕಾರ್ಲ್‌ಮಾರ್ಕ್ಸ್‌ನ ಕಾಯಕದಂಶದಂತೆ 'ಸರ್ವರಿಗೆ ಸಮಪಾಲು ಸರ್ವರಿಗೆ' ಎಂಬ ಸಿದ್ಧಾಂತವನ್ನು ಹನ್ನೆರಡನೆಯ ಶತಮಾನದಷ್ಟು ಹಿಂದೆ ಬಸವಣ್ಣನವರಲ್ಲಿ ಕಾಣುತ್ತೇವೆ (Prof. K. Raghavendra Rao. Pol. Science, Karnatak U'sity).

'ಸ್ತ್ರೀ ಶಕ್ತಿ' ಮಹಾಶಕ್ತಿ ಮಹಾಮನೆಯ ಕಲ್ಯಾಣದ ಶರಣರ ಪಾರ್ಲಿಮೆಂಟ್‌ನಲ್ಲಿ ೭೦೦ಜನ ಶರಣರು ೩೪ ಜನ ಶರಣೆಯರು ಅದರ ಸದಸ್ಯರಾದುದು ದಾಖಲೀಕೃತ ವಾಗಿದೆ. ಹೀಗಾಗಿ ಸ್ತ್ರೀಯರಿಗೆ ಸಮಾನ ಸ್ಥಾನ ನೀಡಿ ಅವರಿಗೂ ಗೌರವದ ನಿಲುಮೆ ನೀಡಿದ ಅಧಿಕೃತತೆ ಅಲ್ಲಿ ಆಗ ಕಾಣುತ್ತಿದೆ. ಇಪ್ಪತ್ತನೆಯ-ಇಪ್ಪತ್ತೊಂದನೆಯ ಶತಮಾನಗಳ ಆಧುನಿಕ ಸ್ತ್ರೀಯ ಸಮಾನತೆಯ ಕೂಗು ಎಂಟು ನೂರು ವರುಷಗಳ ಹಿಂದೆ ಬಸವ ಕಲ್ಯಾಣದ 'ಮಹಾಮನೆ'ಯಲ್ಲಿ ಪ್ರತಿಧ್ವನಿಸಿದೆ. 'ಯತ್ರ ನಾರ್ಯಸ್ತು ಪೂಜ್ಯಂತೆ, ರಮಂತೇ ತತ್ರ ದೇವತಾಃ' ಎಂಬುದು ಕೇವಲ ಧ್ಯೇಯ ವಾಕ್ಯವಾಗಲಿಲ್ಲ, ಅದನ್ನು ವ್ಯವಹಾರೀಕರಿಸಿದನು ಅಣ್ಣ ಬಸವಣ್ಣನು.

'ನುಡಿ ಚೆನ್ನ, ನಡೆ ಚೆನ್ನ, ಮಾತು ಜ್ಯೋತಿರ್ಲಿಂಗ ವಾಗಬೇಕು. ಸಲುಕದ ಸಲಾಕೆಯಂತಿರಬೇಕು, ನುಡಿದರೆ ಲಿಂಗ 'ಅಹುದಹುದೆನ್ನಬೇಕು'. 'ಅಯ್ಯಾ' ಎಂದರೆ ಸ್ವರ್ಗ, ಎನಗಿಂತ ಕಿರಿಯರಿಲ್ಲ ವಿನೀತ ಭಾವ, ಕಳಬೇಡ – ಕೊಲಬೇಡ ಅನ್ಯರಿಗೆ ಅಸಹ್ಯ ಪಡಬೇಡ' ಎಂಬ ಅಂತರಂಗದ ಶುದ್ಧೀಕರಣ ಬಗೆ ತೋರಿಸಿದಂತ ಮಹಾನುಭವ, 'ದೇಹವೇ ದೇಗುಲ, ಎಂಬ ನುಡಿಯಿಂದ ಮೂರ್ತಿ ಉಪಾಸನೆಯನ್ನು

ದೂರೀಕರಿಸಿದ. ಗುಡಿ ಗುಂಡಾರಗಳನ್ನು ನಿರ್ಮಿಸುವ ಪ್ರಕ್ರಿಯೆಗೆ ಸ್ಥಗಿತ. ಹೀಗೆ ನಾನಾ ವೈವಿಧ್ಯಮಯ ಸದ್ವಚನಗಳಿಂದ ಸುಂದರ ಸುಸಂಸ್ಕೃತ ಸಮಾಜವನ್ನು ನಿರ್ಮಿಸಲು ಹವಣಿಸಿದ 'ಶಿವಭಕ್ತ ಬಂಡಾರಿ ಬಸವಣ್ಣ' ಎಂತು ಬಣ್ಣಿಪುದು ಆ ಮಹಿಮನನು 'ಶಬ್ದಗಳು ಬಡವಾಗುತ್ತಿವೆ'.

ಅಂತಃ ಭಕ್ತಿ ಬಂಡಾರಿ ಬಸವೇಶ್ವರರ ಬದುಕು ಹಾಗೂ ಕೊಡುಗೆಗಳನ್ನು ಇತಿಹಾಸದ ವಿದ್ಯಾರ್ಥಿಯಾದ ನಾನು 'ಇತಿಹಾಸ–ಚಕ್ಷು'ವಿನಿಂದ ನೋಡಿದಂತೆ. ಕಲ್ಯಾಣ ರಾಜ್ಯದ ಬಿಜ್ಜಳ ಅರಸುವಿನ ರಾಜಸ್ವದ ಪ್ರಧಾನ ಮಂತ್ರಿಯಾಗಿ, ಕಲ್ಯಾಣದ ಏಳುನೂರು ಪ್ರಮಥರ ಹಾಗೂ[೩,೪] ಶಿವಶರಣೆಯ 'ಮಹಾಮನೆ' (Religious Parliament) ಕಟ್ಟಿ, ಅವರನ್ನೆಲ್ಲ ನಾಡಿನ ತುಂಬೆಲ್ಲ ಹರಡಿಸಿ ಎಂಟು ನೂರು ಸಂವತ್ಸರಗಳನ್ನು ಕಳೆದು ಆತನ ಅನುಯಾಯಿಗಳು ಕರ್ನಾಟಕದ ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಯಲ್ಲಿ ಒಂದು 'ಮಹಾಜನಶಕ್ತಿ'ಯನ್ನಾಗಿ ಬೆಳೆಸಲು ಮೂಲ ಕಾರಣ ಪುರುಷನಾದ ಬಸವೇಶ್ವರ ಈ ಭಾರತ ಕಂಡ ಒಬ್ಬ ಮಹಾನ್ ಐತಿಹಾಸಿಕ ಪುರುಷನಲ್ಲದೆ ಮತ್ತೇನು! ಕರೆಯಲಿ ಇನ್ನೇನು?

"ಕಲ್ಯಾಣವೆಂಬ ಪ್ರಣತಿಯಲ್ಲಿ
'ಭಕ್ತಿರಸ'ವೆಂಬ ತೈಲವ ಹಾಕಿ
ಸದಾಚಾರವೆಂಬ ಬತ್ತಿಯ ಹಾಕಿ,
ಬಸವಣ್ಣನೆಂಬ ದೀಪವ ಹೊಂದಿಸಿ,
ಆ ದೀಪದ ಪ್ರಭೆಯಲ್ಲಿ
ಬೆಳಗುವ ಪ್ರಮಥರ ನೋಡಾ!
ರಾಮನಾಥಾ!!" (ಅಲ್ಲಮ ಪ್ರಭು)

ಆಧಾರಸೂಚಿ

೧. ಫೆಬ್ರುವರಿ ೨೦೧೩ ಬಸವ ಜನ್ಮಸ್ಥಳ ಇಂಗಳಗಿ, ಬಸವನ ಬಾಗೇವಾಡಿ. ಆತನ ಕಾರ್ಯಸ್ಥಳಕ್ಕೆ ಭೇಟಿ ಡಾ. ಶೀಲಾಕಾಂತ ಪತ್ತಾರ, ಡಾ. ಆಯ್.ಕೆ.ಪತ್ತಾರ, ಹಾಗೂ ಡಾ. ವಾಸುದೇವ ಬಡಿಗೇರ್.ಡಾ. ಎಸ್. ಮೇಲ್ದಕಾರ, ಡಾ. ಆರ್.ಎಂ. ಷಡಕ್ಷರಯ್ಯ ಅವರೊಂದಿಗೆ ಸ್ಥಳ ಸಮೀಕ್ಷೆ.

೨. ಪ್ರೊ. ಕೆ. ರಾಘವೇಂದ್ರರಾವ್ ಅವರ ಭಾಷಣ.

೩. ಪ್ರೊ. ಸಿದ್ಧಣ್ಣ ಲಂಗೋಟಿ, ಬಸವಣ್ಣನವರ ವಚನಗಳು.

೪. Hindu - way of dire, ಡಾ. ಎಸ್. ರಾಧಾಕೃಷ್ಣನ್.

೫. Advanced History of India Prof. N. Nilakanta Shastri

೬ ಪ್ರೊ॥ ಹಲ್ಯಾಳ, 'ಮಾನವ ಶಾಸ್ತ್ರ', ಕರ್ನಾಟಕ ವಿಶ್ವವಿದ್ಯಾಲಯ.

೭೬

ಶ್ರೀ ಆನಂದಾಶ್ರಮರ ಕಾಲದಲ್ಲಿ ಚಿತ್ರಾಪುರ ಸಾರಸ್ವತರು

ಡಾ. ಎ.ಕೆ. ಶಾಸ್ತ್ರಿ*

ಆದಿ ಶಂಕರಾಚಾರ್ಯರ ಅದ್ವೈತ ಸಿದ್ಧಾಂತವನ್ನು ಒಪ್ಪಿಕೊಂಡ ಚಿತ್ರಾಪುರ ಸಾರಸ್ವತರ[೧] ಮಠ, ೩೦೦ ವರ್ಷಗಳ ಹಿಂದೆ, ಕ್ರಿ.ಶ. ೧೭೦೮ರಲ್ಲಿ ಶ್ರೀ ಗೋಕರ್ಣ ಕ್ಷೇತ್ರದ ಭಂಡಿಕೇರಿ[೨]ಯಲ್ಲಿ ಸ್ಥಾಪನೆಯಾಯಿತು. ಪ್ರಥಮ ಶ್ರೀ ಪರಿಜ್ಞಾನಾಶ್ರಮ ಸ್ವಾಮಿಗಳು (ಕ್ರಿ.ಶ. ೧೭೦೮–೧೭೨೦) ಬಂಡಿಕೇರಿ ಮಠದ ಪ್ರಥಮ ಗುರುಗಳು. ಪ್ರಥಮ ಶ್ರೀ ಶಂಕರಾಶ್ರಮ ಸ್ವಾಮಿಗಳು (೧೭೨೦–೧೭೫೭) ಪೀಠದಲ್ಲಿ ಎರಡನೆಯವರಾಗಿದ್ದು, ಅವರ ಸಮಾಧಿಯು ಉತ್ತರಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನ ಶಿರಾಲಿಗೆ ಹೊಂದಿಕೊಂಡಿರುವ ಚಿತ್ರಾಪುರ ಮಠದಲ್ಲಿದೆ. ಅಂದಿನಿಂದ ಮಠ ಭಂಡಿಕೇರಿಯಿಂದ ಚಿತ್ರಾಪುರಕ್ಕೆ ಸ್ಥಳಾಂತರಗೊಂಡಿತು. ನಂತರದಲ್ಲಿ ಪೀಠವನ್ನಲಂಕರಿಸಿದವರು, ಕ್ರಮವಾಗಿ, ದ್ವಿತೀಯ ಶ್ರೀ ಪರಿಜ್ಞಾನಾಶ್ರಮ (೧೭೫೭–೭೦), ದ್ವಿತೀಯ ಶ್ರೀಶಂಕರಾಶ್ರಮ (೧೭೭೦–೧೭೮೫), ಶ್ರೀ ಕೇಶವಾಶ್ರಮ (೧೭೮೫–೧೮೨೩), ಶ್ರೀ ವಾಮನಾಶ್ರಮ (೧೮೨೩–೧೮೩೯), ಶ್ರೀಕೃಷ್ಣಾಶ್ರಮ (೧೮೩೯–೧೮೬೩), ಶ್ರೀ ಪಾಂಡುರಂಗಾಶ್ರಮ (೧೮೬೩–೧೯೧೫), ಶ್ರೀ ಆನಂದಾಶ್ರಮ (೧೯೧೫–೧೯೬೬), ತೃತೀಯ ಶ್ರೀ ಪರಿಜ್ಞಾನಾಶ್ರಮ (೧೯೬೬–೧೯೯೧_ ಮತ್ತು ಈಗ ವಿರಾಜಮಾನರಾಗಿರುವ ಶ್ರೀ ಸದ್ಯೋಜಾತ ಶಂಕರಾಶ್ರಮ ಸ್ವಾಮಿಗಳು. ಪ್ರಸ್ತುತ ಲೇಖನವು ಶ್ರೀ ಆನಂದಾಶ್ರಮ ಸ್ವಾಮಿಗಳವರ ಕಾಲದ ಚಿತ್ರಾಪುರ ಸಾರಸ್ವತ ಸಮಾಜಕ್ಕೆ ಸೀಮಿತವಾಗಿರುವುದರಿಂದ, ಆ ವಿಷಯದ ಮೇಲೆ ಬೆಳಕು ಬೀರುವ, ಶ್ರೀ ಮಠದಲ್ಲಿ ಲಭ್ಯವಿರುವ ಚಾರಿತ್ರಿಕ ದಾಖಲೆಗಳ ಸ್ವರೂಪ ಇಂತಿದೆ:

ಶ್ರೀ ಪಾಂಡುರಂಗಾಶ್ರಮ ಸ್ವಾಮಿಗಳ ಶಿಷ್ಯರಾದ ಶ್ರೀ ಆನಂದಾಶ್ರಮ ಸ್ವಾಮಿಗಳು ಗುರುಪರಂಪರೆಯಲ್ಲಿ ೯ನೆಯವರಾಗಿದ್ದು, ಸುಮಾರು ೫೦ ವರ್ಷಗಳ ಕಾಲ ಚಿತ್ರಾಪುರ ಮಠದ ಮತ್ತು ಶಿಷ್ಯರ ಸಾರಥ್ಯ ವಹಿಸಿದರು. ಶ್ರೀಗಳವರ ಪೀಠಾಧಿಪತ್ಯದ ಪ್ರಾಥಮಿಕ ಹಂತದಲ್ಲಿ, ಸಂಪ್ರದಾಯಗಳಿಗೆ ಬದ್ಧರಾದ ಶಿಷ್ಯರು ಮತ್ತು ಪಾಶ್ಚಿಮಾತ್ಯ ವಿದ್ಯೆ ಕಲಿತ ಪ್ರಗತಿಪರರ ನಡುವಿನ ಬಿರುಕು, ಶ್ರೀ ಪಾಂಡುರಂಗಾಶ್ರಮ ಸ್ವಾಮಿಗಳವರ ಕಾಲದಲ್ಲಿದ್ದಂತೆ, ಮುಂದುವರಿದಿದ್ದು ಸ್ಪಷ್ಟವಾಗಿ ಕಂಡುಬರುತ್ತದೆ.

ಶ್ರೀ ಮಠದಿಂದ ಶಿಷ್ಯರಿಗೆ ಹೊರಡಿಸಿದ ರಾಯಸ ಅಪ್ಪಣೆ[೩], ಗುರು–ಶಿಷ್ಯ ಸಂಬಂಧ ಪೂರ್ವದಿಂದಲೂ ಚೆನ್ನಾಗಿ ನಡೆದು ಬಂದಿದ್ದು, ಇತ್ತಿತ್ತಲಾಗಿ (೧೯ನೆಯ ಶತಮಾನದ ಅಂತ್ಯ ಮತ್ತು ೨೦ ನೆಯ ಶತಮಾನದ ಆದಿ), ಧರ್ಮವಿರುದ್ಧ ಸಂಗತಿಗಳು ಮತ್ತು ಅನೇಕ ಸಾಮಾಜಿಕ ಅಂಶಗಳನ್ನು ಬೆಳಕಿಗೆ ತರುತ್ತದೆ. ಕೆಲವು ಶಿಷ್ಯಜನರು ಬ್ರಹ್ಮೋಸಮಾಜ[೪] ಅವಲಂಬಿಸಿದ್ದು, ಶಿಷ್ಯ ಜನರ ಅವಿಧೇಯತ್ವ, ಸ್ವಧರ್ಮಾಚರಣೆಗಳ ಶಿಥಿಲತೆ, ಸಭಾಶಾಸನ ಮತ್ತು ವಂತಿಗೆ ಶಾಸನಗಳ ಉಲ್ಲಂಘನೆ, ಮಠದ ಆಜ್ಞೆಗಳ ವಿರುದ್ಧ ನಡವಳಿಕೆ, ಶ್ರೀ ಸಂಸ್ಥಾನದ ಹಕ್ಕುಗಳಿಗೆ ಬಾಧೆ ತರುವಂಥ ಮತ್ತು ಸಂಸ್ಥಾನದವರಿಗೆ ಕೋರ್ಟ್–ಕಛೇರಿಗಳಿಗೆ ಒಯ್ದು, ಮಾನಹಾನಿಯಾಗುವ ಕಷ್ಟ ಪರಂಪರೆಗಳಿಗೆ ಕಾರಣವಾದ ಕೆಲವರ ದುರಾಲೋಚನೆ ಮುಂತಾದ ಬೆಳವಣಿಗೆಯಿಂದಾಗಿ, ಹಿಂದಿನ ಶ್ರೀ ಪಾಂಡುರಂಗಾಶ್ರಮ ಸ್ವಾಮಿಗಳಿಗೆ ಶಿಷ್ಯ ಸ್ವೀಕಾರ ಮಾಡುವಾಗ ಉಂಟಾದ ಅಡಚಣೆ ಕುರಿತು ದಾಖಲೆಯಲ್ಲಿ ಪ್ರಸ್ತಾಪಿಸಲಾಗಿದೆ. ಯಾವುದೇ ತರದ ಕಷ್ಟಗಳು ಬಾರದಂತೆ, ಹಿಂದೆ ಆದ ಶಾಸನ, ಕರಾರು, ಮಹಾಸಭೆಗಳ ಠರಾವುಗಳು ಮತ್ತು ಆಯಾ ಕಾಲದಲ್ಲಿ ಶ್ರೀ ಸಂಸ್ಥಾನದಿಂದ ಆಗುವ ಅಪ್ಪಣೆಗಳಿಗೆ ಅನುಸರಿಸಿ, ತಾವು ಇನ್ನು ಮುಂದೆ ವಿಧೇಯರಾಗಿ ನಡಕೊಳ್ಳುತ್ತೇವೆಂದು ಆಗಾಗ್ಯೆ ಕೂಡಿದ ಗೃಹಸ್ಥರು ಬಹಳ ಅರಿಕೆ ಮಾಡಿಕೊಂಡಿದ್ದರಿಂದ, ಪಾಂಡುರಂಗಾಶ್ರಮ ಸ್ವಾಮಿಗಳು, ಮಠದಲ್ಲಿ ಅರ್ಚಕರಾಗಿದ್ದ ಹರಿದಾಸ ರಾಮಚಂದ್ರರ ೧೨ ವರ್ಷದ ಶಾಂತಮೂರ್ತಿ ಎಂಬ ಬಾಲಕನಿಗೆ ಜೂನ್ ೧೯೧೫ರಲ್ಲಿ ಸನ್ಯಾಸ ದೀಕ್ಷೆ ನೀಡಿ, ಆನಂದಾಶ್ರಮ ಎಂಬ ಹೊಸ ಅಭಿದಾನ ಕರುಣಿಸಿ, ತಮ್ಮ ಶಿಷ್ಯನನ್ನಾಗಿ ಮತ್ತು ಉತ್ತರಾಧಿಕಾರಿಯನ್ನಾಗಿ ಸ್ವೀಕರಿಸಿದರು.

ಶ್ರೀ ಪಾಂಡುರಂಗಾಶ್ರಮ ಸ್ವಾಮಿಗಳು ಮುಕ್ತರಾಗಿ ಶ್ರೀ ಆನಂದಾಶ್ರಮ ಸ್ವಾಮಿಗಳು ಪಟ್ಟಕ್ಕೆ ಬಂದ ನಂತರವೂ,

* 'ಭವಾನಿ', ಟಿ.ಎಸ್.ಎಸ್. ರೈಸ್‌ಮಿಲ್ ಕೆಳಗೆ, ವಿದ್ಯಾಗಿರಿ, ಶಿರಸಿ, ಉತ್ತರ ಕರ್ನಾಟಕ–೫೮೧೪೦೨.

ಕೆಲವು ಶಿಷ್ಯರ ಅವಿಧೇಯತೆ ಮುಂದುವರಿದಿದ್ದು ಅದೇ ರಾಯಸ ಅಪ್ಪಣೆಯಿಂದ ತಿಳಿದುಬರುತ್ತದೆ. ಶಿಷ್ಯರಿಗೆ ಹೊರಡಿಸಿದ ರಾಯಸ ಅಪ್ಪಣೆ ಗಮನಾರ್ಹವಾಗಿದ್ದು, ಅದರ ಅಂತಿಮ ಭಾಗ ಇಂತಿದೆ.[೫]

"......ಸಂಸ್ಥಾಭಿಮಾನಿ ಶಿಷ್ಯ ಜನರಾದ ನಿಮಗೆಲ್ಲಾ ಅಪ್ಪಣೆ ಕೊಡುವದೇನಂದ್ರೆ ನೀವೆಲ್ಲರೂ ಸ್ವಧರ್ಮಾಚರಣೆಯಲ್ಲಿ ತತ್ಪರರಾಗಿರುವದು ಹಾಗೂ ವರ್ಣಾಶ್ರಮ ಧರ್ಮಬಾಹ್ಯವಾದ ನಡವಳಿಕೆಗಳಿಂದ ನಿಷಿದ್ಧ ದೇಶಗಮನಾಗಮನಗಳಿಂದ ಕೂಡಾ ಪ್ರಾಪ್ತವಾಗುವಂಥ ವರ್ಣ ಸಾಂಕರ್ಯಗಳನ್ನು ತಪ್ಪಿಸಿಕೊಂಡು ಶ್ರೀ ಸಂಸ್ಥಾನದ ನಿತ್ಯ ನೈಮಿತ್ತಿಕ ಸಕಲ ಕಾರ್ಯಗಳನ್ನು ನಿರ್ವಹಿಸಲು ನಿಮ್ಮ ಪೂರ್ವಜರು, ನೀವು ಕೂಡಾ ಯಿದುವರೇಗೆ ನಡಕೊಂಡಂತೆ ಯಿನ್ನು ಮುಂದೆಯೂ ನಡಕೊಳ್ಳುವುದು ಯಿವೇ ಮೊದಲಾದ ಯಲ್ಲಾ ಸಂಗ್ತಿಗಳ ಬಗ್ಗೆ ಸ್ಮರಣಾರ್ಥವಾಗಿ ಈರ್‍ಯಾಸ ಅಪ್ಪಣೆ ತಲ್ಪುತ್ತಲೇ ನೀವೆಲ್ಲರೂ ಸಭೆ ಶೇರಿ ಶ್ರೀ ಪೂಜ್ಯರಾದ ಶ್ರೀಗುರು ಸನ್ನಿಧಿಯಿಂದ ಈ ಮೊದ್ಲು ಕೊಡೋಣಾದ ಸರ್ಕಿಲಾರ ಅಪ್ಪಣೆಗಳನ್ನು ಹಿಂದೆ ಆದ ಶಾಸನಗಳನ್ನೂ ಮಹಾಸಭೆಗಳ ಠರಾವುಗಳನ್ನೂ ನೀವೆಲ್ಲರೂ ಬರಕೊಟ್ಟ ಕರಾರುಗಳನ್ನೂ, ಯಿನ್ನೊಮ್ಮೆ ಓದಿನೋಡಿಕೊಂಡು ಅದರಂತೆ ನಡಕೊಳ್ಳುವದು. ಶ್ರೀ ಸಂಸ್ಥಾನಕ್ಕೆ ವಿಧೇಯರಾಗಿ ನಡಕೊಂಡು ಶ್ರೀ ಸಂಸ್ಥಾನದ ಮೇಲೆ ಯಾವದೇ ತರದ ಸಂಕಷ್ಟಗಳು ವದಗದಂತೆ ಮನಃಪೂರ್ವಕವಾಗಿ ಪ್ರಯತ್ನಿಸುತ್ತೇವೆಂದು ಶ್ರೀಗುರು ಸ್ವಾಮಿಗಳವರಿಗೆ ಖಂಡಿತ ಆಶ್ವಾಸನ ಕೊಟ್ಟಂಥ ಶ್ರೀ ಸಂಸ್ಥಾನಾಭಿಮಾನಿ ಶಿಷ್ಯ ಜನರಾದ ನೀವು ಶ್ರೀ ಸಂಸ್ಥಾನದ ಮೇಲೆ ಬರಬಹುದಾಗಿ ಮೇಲೆ ಉಲ್ಲೇಖಿಸಿದ ಭಯಂಕರ ಪರಿಣಾಮಗಳು ಬಾರದಂತೆ ತಕ್ಕ ಉಪಾಯ ಮಾಡುವದು ಕೂಡಾ ನಿಮ್ಮ ಕರ್ತವ್ಯವಿರುತ್ತದೆಂಬ ಸಂಗ್ತಿ – ಈ ಮೂಲಕ ಸೂಚಿಸೋಣಾಗುತ್ತೆ. ಈರ್‍ಯಾಸ ಅಪ್ಪಣೆ ನಿಮಗೆ ತಲ್ಪಿದ್ದಕ್ಕು ಈ ಬಗ್ಯೆಲ್ಲಾ ನೀವು ನಡ್ಸಿದ ವಿವರಕ್ಕು ನಿಮ್ಮ ಯಲ್ಲರ ಕುಲ ವಾರ್ತೆಗೂ ತ್ವರ್ಯ ಬರಕೊಳ್ಳಬೇಕಾಗಿರುತ್ತದೆ"–

ಬಿಲ್ಲವರು, ಮಹಮ್ಮದೀಯರು, ಹೊಲೆಯರು ಮತ್ತು ಕ್ರೈಸ್ತರೊಂದಿಗೆ ಸಹಪಂಗ್ತಿ ಭೋಜನ, ಬ್ರಹ್ಮ ಸಮಾಜದ ಸಹಪಂಗ್ತಿ ಭೋಜನ, ಬಹಿಷ್ಕಾರ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಪ್ರಶ್ನೋತ್ತರ ರೂಪದಲ್ಲಿರುವ ದಾಖಲೆಯೊಂದು ಲಭ್ಯವಾಗಿದೆ.

ಪ್ರಶ್ನೋತ್ತರಗಳು ಇಂತಿವೆ :

ಪ್ರ. ೧ : ತಂಮಗಳ ಸ್ವಜಾತಿಯ ಶಿಷ್ಯವರ್ಗದವರಲ್ಲಿ ಯಾವನಾದರೂ ಬಿಲ್ಲವರಿಂದಲೂ, ಮಹಮ್ಮದೀಯ ರಿಂದಲೂ ಬಳಿಸಿದ ಅನ್ನವನ್ನು, ಹೊಲೆಯರಿಂದಲೂ, ಕ್ರೈಸ್ತರಿಂದಲೂ, ಮಹಮ್ಮದೀಯರಿಂದಲೂ ಕೂಡಿ ಸಹ ಪಂಕ್ತಿ ಭೋಜನ ಮಾಡಿದರೆ, ಅವನ ಸಂಗಡ ಭೋಜನಾದಿ ಸಂಪರ್ಕ ಮಾಡುವರೆ ? ತಮ್ಮ ಸ್ವಜಾತಿಯ ಶಿಷ್ಯವರ್ಗದವರಿಗೆ ತಾವುಗಳು ಸಮ್ಮತಿ ಕೊಡುವಿರೊ ?

ಉ. ಎಲ್ಲಾ ಸಮ್ಮತಿ ಕೊಡಲಿಕ್ಕೆ ಕಾರಣವಿಲ್ಲ.

ಪ್ರ. ೨ : (ಸಂಮತಿ ಕೊಡಲಾರೆವೆಂದು ಹೇಳಿದುದಾದರೆ), ಅವನನ್ನು ತಾವು ಬಹಿಷ್ಕರಿಸುವಿರೊ ?

ಉ. ಯಿಂಥಾ ಪ್ರಸಂಗ ನಂಮ ಶಿಷ್ಯವರ್ಗದಲ್ಲಿ ಈವರೆಗೆ ನಡದ್ದು ನಂಮ ತಿಳುವಳಿಕೆಗೆ ಯಿಲ್ಲಾ, ಕೇಳಿದ್ದೂ ಯಿಲ್ಲಾ. ಆ ಪ್ರಕಾರ ನಡದ ಪಕ್ಷಕ್ಕೆ ಅಂಥವನಿಗೆ ಯಾವ ಥರದ ಶಿಕ್ಷೆ ಕೊಡಬೇಕಾದೀತು ಎಂತ ಹೇಳಲಿಕ್ಕೆ ಈಗ ನಮಗೆ ಸಾಧ್ಯವಿಲ್ಲಾ.

ಪ್ರ. ೩ : (ಬಹಿಷ್ಕರಿಸುವೆವು ಯೆಂದು ಹೇಳಿದುದಾದರೆ) ತಾವುಗಳ ಯಾವ ವಿಷಯದ್ದಾಗಲಿ ಬಹಿಷ್ಕಾರವೆಂಬುದನ್ನು, ಧರ್ಮಶಾಸ್ತ್ರವನ್ನನಸರಿಸಿಯೊ, ರೂಢಿಯಂನೆಂದರೆ, ಸಂಪ್ರದಾಯವನ್ನನುಸರಿಸಿಯೊ ಕೊಡುವದು ?

ಉ. ೨ನೆ ಸವಾಲಿನ ಜವಾಬಿನಲ್ಲಿ ಹೇಳಿದ ಕಾರಣಗಳಿಂದ ಈ ಸವಾಲಿಗೂ ಜವಾಬು ಕೊಡಲಿಕ್ಕೆ ಸಾಧ್ಯವಿಲ್ಲಾ.

ಪ್ರ. ೪ : ತಂಮಗಳ ಸ್ವಜಾತಿಯ ಶಿಷ್ಯವರ್ಗದವರಲ್ಲಿ ಯಾವದಾದರೂ ಆಗತಕ್ಕ ಧಾರ್ಮಿಕ ಗ್ರಹ್ಯವು ಯಾ ಏನಾದರೂ ಅನಿರ್ವಾಹದ ಅಡಚಣೆಯ ಪ್ರಸಂಗವು ಸಮೀಪಿಸಿ ಬಂದೊದಗಿದಾಗ, ಸದ್ರಿ ಶಿಷ್ಯವರ್ಗದವರು ಸ್ವಜಾತಿಯ ಕುಲಾಚಾರಗಳಿಗೆ ವಿರುದ್ಧವಾದ ಯಾವುದಾದರೂ ಆಪಾದಿತನ ಕೃತ್ಯವಂನು ತಂಮುಗಳ ಸಂನಿಧಾನಕ್ಕೆ ಮುಚ್ಚಳಿಕೆಯ ದ್ವಾರಾ ಬಿನ್ನೈಸಿದ ಪಕ್ಷಕ್ಕೆ, ಆಗ ತಾವುಗಳು ಆ ಆಪಾದಿತನಂನು ವಿಚಾರಿಸುವ ಮೊದಲು, ಸದರಿ ಶಿಷ್ಯವರ್ಗದವರಿಗೆ ಎರಡನೆಯ ರಾಯಸಪತ್ರ ಕೊಡುವವರೆಗೆ ಆ ಆಪಾದಿತನಂನು ಸದ್ರಿ ಶಿಷ್ಯವರ್ಗದವರು ಸಂಪರ್ಕಿಸಿ ನಡೆಯಕೂಡದೆಂಬರ್ಥದಿಂದ, ತಾವುಗಳು ಜರೂರ ಟೆಂಪುರರಿ (ಹಂಗಾಮಿ) ರಾಯಸಪತ್ರ ಕೊಡುವ ಸಂಪ್ರದಾಯವು ತಮ್ಮಗಳಲ್ಲಿ ಉಂಟಲ್ಲವೆ ?

ಉ. ನಂಮಗೆ ಆಶ್ರಮವಾದ ನಂತ್ರ ಯಿಂಥಾ ಸಂಗತಿ ನಂಮ ಶಿಷ್ಯವರ್ಗದಲ್ಲಿ ನಡಿಯಲಿಲ್ಲ. ಆ ಮೊದಲು ನಡದ ಸಂಗತಿ ನಂಮ ತಿಳುವಳಿಕೆಗೆ ಬರಲಿಲ್ಲಾ.

ಪ್ರ. ೫ : ಇದರ ಮುಂಚೆ ಪ್ರಾಕು ಎಂದಾದರೂ ತಂಮಗಳ ಸ್ವಜಾತಿಯ ಶಿಷ್ಯವರ್ಗದವರಲ್ಲಿ ಯಾವನಾದರೂ ಹೊಲೆಯರು ಮೊದಲಾದ ಅಂತ್ಯಜರ ಸಂಗಡ ಭೋಜನಾದಿ

ಸಂಪರ್ಕ ಮಾಡಿದುದುಂಟೆ ? ಉಂಟಾದರೆ ತಂಮಗಳ ಮಠದಿಂದ ಆ ವಿಷಯದಲ್ಲಿ ಯಾವ ಪ್ರಕಾರ ತೀರ್ಮಾನಿಸೋಣಾಗಿಯದೆ ? ಆ ತೀರ್ಮಾನದ ರಿಕಾರ್ಡು ತಂಮಗಳ ಮಠದಲ್ಲಿ ಇರುವದೋ ? ಇದ್ದರೆ ಅದಂನು ಹಾಜರ ಪಡಿಸಬಹುದು.

ಉ. ೪ ಸವಾಲಿಗೆ ಕೊಟ್ಟ ಜವಾಬೇ ಯಿ ಸವಾಲಿಗೂ ಆಗಿರುತ್ತದೆ. ಆ ಕುರಿತು ರಿಕಾರ್ಡ ಏನಾದರೂ ಉಂಟೋ ಎಂಬುದು ಈವರೆಗೆ ನಂಮ ತಿಳುವಳಿಕೆಗೆ ಬರಲಿಲ್ಲಾ.

ಸೂಚನೆ = ಇವುಗಳಲ್ಲದೆ ಶ್ರೀ ಚಿತ್ರಾಪುರ ಮಠದ ಶ್ರೀ ಸ್ವಾಮಿಗಳವರಿಗೆ ಕೇಳತಕ್ಕ ಹೆಚ್ಚು ಸವಾಲುಗಳು –

ಪ್ರ. ೬ : ತಂಮಗಳ ಸವಾರಿ ಎರಡುವರೆ ತಿಂಗಳುಗಳ ಮುಂಚೆ ಮಂಗ್ಲುರಿಗೆ ಚಿತ್ತೈಸಿದಾಗ ಅಲ್ಲಿ ಬ್ರಹ್ಮಸಮಾಜ – ಆರ್ಯ ಸಮಾಜಕ್ಕೆ ಶೇರಿದ ಮತ್ತು ವಿಲಾಯತಿಗೆ ಹೋಗಿ ಬಂದ ಮತ್ತು ಬ್ರಹ್ಮಸಮಾಜದ ಸಹಪಂಕ್ತಿ ಭೋಜನಕ್ಕೆ ಸಹಭಾಗಿಗಳಾಗಿ ಭೋಜನ ಮಾಡಿದ ಸ್ವಜಾತಿಯ ಶಿಷ್ಯವರ್ಗದವರಿಗೆ ಪ್ರಯಶ್ಚಿತ್ತ ಕೊಟ್ಟು ಸ್ವಜಾತಿಯ ವರ್ಗದಲ್ಲಿ ತಾವುಗಳು ತೆಗೆದುಕೊಳ್ಳಲಿಲ್ಲವಷ್ಟೆ ?

ಪ್ರ. ೭ : ಬ್ರಹ್ಮ ಸಮಾಜಕ್ಕೆ ಸೇರಿದವರೇ ಮೊದಲಾದ ಸ್ವಜಾತಿಯವರ ಕೂಡೆ ಭೋಜನ ಸಂಪರ್ಕ ಮಾಡಿದ ಶಿಷ್ಯವರ್ಗದವರಂನು ಪ್ರಾಯಶ್ಚಿತ್ತಕೊಟ್ಟು ಸ್ವಜಾತಿಯ ವರ್ಗದಲ್ಲಿ ತಾವುಗಳು ತೆಗೆದುಕೊಂಡಿದ್ದಿರಷ್ಟೆ –

ಪ್ರ. ೮ : ತಂಮಗಳ ಸ್ವಜಾತಿಯ ಶಿಷ್ಯವರ್ಗದವರ ಪೈಕಿ ಬೈಂದೂರ ಆನಂದರಾಯರೆಂಬವರು ತಾರಿಕು ೨೪–೧೦–೨೦ಲ್ಲು ಮಂಗ್ಲುರಲ್ಲಿ ನಡದ ಬ್ರಹ್ಮಸಮಾಜದ ಸಹಪಂಕ್ತಿ ಭೋಜನಕ್ಕೆ ತಾನು ಸಹಭಾಗಿಯಾಗಿಲ್ಲವೆಂದೂ ಅಲ್ಲಿ ಹಾಲನ್ನು ಮಾತ್ರ ತಾನು ಕುಡಿದಿದ್ದೆನೆಂದೂ ತಾನು ಕೊಡುನೆಂದೂ ಬರದುಕೊಟ್ಟ ಮೇಲೆ ಅವರಿಗೆ ಪ್ರಾಯಶ್ಚಿತ್ತ ಕೊಟ್ಟು ಸ್ವಜಾತಿ ವರ್ಗದಲ್ಲಿ ತಾವುಗಳು ತೆಗೆದುಕೊಂಡಿದ್ದಿರಷ್ಟೆ?

ಪ್ರ. ೬, ೭, ೮ಕ್ಕೆ ಉತ್ತರ : ಈ ಸವಾಲುಗಳಲ್ಲಿ ನಮೂದಿಸಿದ ಸಂಗತಿಗಳು ನಂಮ ಶಿಷ್ಯವರ್ಗಕ್ಕೆ ಮಾತ್ರ ಸಂಬಂಧಪಟ್ಟು ಯಿರುವದ್ರಿಂದ ಆ ಸವಾಲುಗಳಿಗೆ ಜವಾಬು ಕೊಡಲಿಕ್ಕೆ ನಾಂವೇ ಸಮರ್ಥರಲ್ಲ.

ಸ್ವಾಮಿಗಳು ಪ್ರಶ್ನೆಗಳಿಗೆ ಉತ್ತರಿಸಿದರೆಂಬುದು ಮೇಲ್ಕಾಣಿಸಿದ ದಾಖಲೆಯಿಂದ ಸ್ಪಷ್ಟವಾಗುತ್ತದೆ. ಆದರೆ ಪ್ರಶ್ನೆಗಳನ್ನು ಕೇಳಿದವರು ಯಾರೆಂಬುದನ್ನು ನಮೂದಿಸಲಾಗಿಲ್ಲ. ಆದರೂ, ಕೆಲವು ಶಿಷ್ಯವರ್ಗದವರು "ಮಠದವರನ್ನು ಕೋರ್ಟ್–ಕಛೇರಿಗೆ ಖಂಡಿತ ವಯ್ಯುವದಾಗಿ", ಎಂದು ಆಡಿದ ಮಾತು ಹಿಂದಿನ ದಾಖಲೆಯೊಂದರಲ್ಲಿ ಉಲ್ಲೇಖವಾಗಿದ್ದನ್ನು ಗಮನಿಸಿದರೆ, ಸಹಪಂಕ್ತಿ ಭೋಜನ ವಿಷಯ ಕೋರ್ಟ್‌ನಲ್ಲಿ ದಾಖಲಾಗಿ, ನ್ಯಾಯಾಲಯದಿಂದಲೇ ಈ ಪ್ರಶ್ನೆಗಳು ಮಠಕ್ಕೆ ಬಂದವೆಂಬುದಾಗಿ ಊಹಿಸಬಹುದಾಗಿದೆ. ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದ ಪ್ರಶ್ನೆಗಳು ಬಹು ಸೂಕ್ಷ್ಮವಾಗಿದ್ದರಿಂದ, ಸೂಕ್ಷ್ಮಮತಿಗಳಾದ ಸ್ವಾಮಿಗಳೂ, ಇಂಥ ಪ್ರಶ್ನೆಗಳಿಗೆ ವಿಸ್ತಾರವಾದ ಮತ್ತು ನಿಖರವಾದ ಉತ್ತರ ನೀಡದೆ, ಕೆಲವು ಪ್ರಶ್ನೆಗಳಿಗೆ ಅಸ್ಪಷ್ಟ ಉತ್ತರ ನೀಡಿದಂತೆ ಕಂಡು ಬರುತ್ತದೆ. ಬದಲಾಗುತ್ತಿರುವ ಸಮಾಜ ವ್ಯವಸ್ಥೆಯನ್ನು ಅರಿತ ಸ್ವಾಮಿಗಳು, ಮಠದ ಛತ್ರದಡಿಯಲ್ಲಿ ಶಿಷ್ಯವರ್ಗದವರನ್ನು ತರಲು ಪ್ರಯತ್ನಿಸುತ್ತಿದ್ದ ಸಂದರ್ಭದಲ್ಲಿ, ಈ ರೀತಿಯಾಗಿ ಉತ್ತರಿಸಿದ್ದು ಸ್ವಾಭಾವಿಕ.

ಒಟ್ಟಿನಲ್ಲಿ, ಶ್ರೀ ಪಾಂಡುರಂಗಾಶ್ರಮ ಮತ್ತು ಶ್ರೀ ಆನಂದಾಶ್ರಮ ಸ್ವಾಮಿಗಳವರ ಕಾಲದ ಚಿತ್ರಾಪುರ ಮಠದ ಚಾರಿತ್ರಿಕ ದಾಖಲೆಗಳನ್ನು ಪರಿಶೀಲಿಸಿದಾಗ, ಚಿತ್ರಾಪುರ ಮಠ, ಸ್ವಾಮಿಗಳು ಮತ್ತು ಅವರ ಶಿಷ್ಯವರ್ಗಕ್ಕೆ ಸಂಬಂಧಿಸಿ ಅನೇಕ ವಿಷಯಗಳು ಬೆಳಕಿಗೆ ಬರುತ್ತವೆ. ಶ್ರೀಮಠದ ಚರಿತ್ರೆಯಲ್ಲಿ ಇದೊಂದು ಸಂಕ್ರಮಣ ಕಾಲ ಎಂದೇ ಹೇಳಬೇಕಾಗುತ್ತದೆ. ಬ್ರಹ್ಮಸಮಾಜ, ಆರ್ಯಸಮಾಜ ಮತ್ತು ಪಾಶ್ಚಿಮಾತ್ಯ ಶಿಕ್ಷಣ, ಇವೆಲ್ಲವುಗಳ ಪ್ರಭಾವದಿಂದಾಗಿ, ಚಿತ್ರಾಪುರ ಸಾರಸ್ವತ ಸಮಾಜದ ಮುಖ್ಯ ಪಥದಲ್ಲಿ ಕವಲು ದಾರಿಯೊಂದನ್ನು ಗುರುತಿಸಬಹುದಾಗಿದೆ. ಅನ್ಯ ಜಾತಿಯವರೊಂದಿಗೆ ವೈವಾಹಿಕ ಸಂಬಂಧ ಬೆಳೆಸುವ ಏಕೀಕರಣ ಪದ್ಧತಿ, ಬೇರೆ ಜಾತಿಯಲ್ಲಿ ಸಹಪಂಕ್ತಿ ಭೋಜನ, ವಿದೇಶ ಯಾತ್ರೆ, ವಿಧವಾ ವಿವಾಹ ಮುಂತಾದ ನೂತನ ಪದ್ಧತಿಗಳನ್ನು ಕೆಲವು ಶಿಷ್ಯವರ್ಗದವರು ಅನುಸರಿಸಲು ಪ್ರಾರಂಭಿಸಿದರು. ಶಿಷ್ಯರ ಇಂಥ ವರ್ತನೆಯನ್ನು, ಸ್ವಾಭಾವಿಕವಾಗಿ, ಸ್ವಾಮಿಗಳು ಮತ್ತು ಸಂಪ್ರದಾಯಸ್ಥರು ಪುರಸ್ಕರಿಸಲಿಲ್ಲ. ಪ್ರಾಚೀನ ಕಾಲದಿಂದಲೂ ಬಂದ ಧರ್ಮಶಾಸ್ತ್ರಗಳಿಗೆ ವಿರೋಧವಾಗಿ ನಡೆದಂಥವರನ್ನು, ಪ್ರಾರಂಭಿಕ ಹಂತದಲ್ಲಿ, ಸಾರಸ್ವತ ಸಮಾಜದಿಂದ ಬಹಿಷ್ಕರಿಸಲಾಯಿತೆಂಬ ಅಂಶವೂ ದಾಖಲೆಗಳಿಂದ ಬೆಳಕಿಗೆ ಬರುತ್ತದೆ. ಜೊತೆ ಜೊತೆಗೇ, ಶಿಷ್ಯ ವರ್ಗದವರನ್ನೆಲ್ಲ ಮಠದ ಒಂದೇ ಛತ್ರದಡಿಯಲ್ಲಿ ತರುವ ಪ್ರಯತ್ನವೂ ಸಾಗಿತ್ತು. ಮುಂಬಯಿ ವಾಸಿಗಳಾದ ಭಾನಪಗಳು ಮಠದ ಆರ್ಥಿಕ ಸ್ಥಿತಿಗಳನ್ನು ಸುಧಾರಿಸಿ, ಸ್ವಾಮಿಗಳು ಮತ್ತು ಶಿಷ್ಯರ ನಡುವೆ ಸೌಹಾರ್ದ ಭಾವನೆ ಬೆಳೆಸಲು ಪ್ರಯತ್ನಿಸಿದರು. ಈ ರೀತಿಯಾಗಿ, ಸಂಪ್ರದಾಯಸ್ಥರು ಮತ್ತು ಪ್ರಗತಿಪರರ ಮಧ್ಯೆ ಹೊಂದಾಣಿಕೆ ಪ್ರಾರಂಭವಾಯಿತೆನ್ನಬಹುದು. ಸ್ವಾತಂತ್ರ್ಯೋತ್ತರ ಕಾಲದಲ್ಲಂತೂ, ಬಹಿಷ್ಕಾರ, ಪ್ರಾಯಶ್ಚಿತ್ತ ಮೊದಲಾದವುಗಳೆಲ್ಲ ಮಹತ್ವ ಕಳೆದುಕೊಂಡವು. ವಿದೇಶ ಪ್ರಯಾಣ ಮಾಡಿ,

ಪಾಶ್ಚಿಮಾತ್ಯ ವಿದ್ಯೆ ಪಡೆದು, ಹೆಚ್ಚಿನ ವಿದ್ಯಾರ್ಹತೆ ಪಡೆದವರಿಗೆ ಸರಕಾರೀ ಕೆಲಸದಲ್ಲಿ ಉನ್ನತ ಹುದ್ದೆ ಮತ್ತು ಅದಕ್ಕೆ ತಕ್ಕಂತೆ ಸಮಾಜದಲ್ಲಿ ಸ್ಥಾನಮಾನ ಲಭಿಸತೊಡಗಿತು. ಇನ್ನುಳಿದ ಸಮಾಜಗಳಲ್ಲಿಯೂ ಬದಲಾವಣೆ ಕಾಣಲು ಪ್ರಾರಂಭವಾಯಿತು. ಆದರೂ, ಈ ದಿಶೆಯಲ್ಲಿ ಚಿತ್ರಾಪುರ ಸಾರಸ್ವತ ಸಮಾಜವು ಮಂಚೂಣಿಯಲ್ಲಿತ್ತೆಂದು ಹೇಳಬಹುದು. ಹೀಗೆ, ಶ್ರೀ ಆನಂದಾಶ್ರಮ ಸ್ವಾಮಿಗಳವರ ಕಾಲದಲ್ಲಿಯೇ ಗುರು-ಶಿಷ್ಯ ಸಂಬಂಧ ಪುನಃ ಅನ್ಯೋನ್ಯವಾಗಿ ಬೆಳೆದು ಬಂದಿತು.

ಆಧಾರಸೂಚಿ

೧. ಉತ್ತರ ಕನ್ನಡ ಜಿಲ್ಲೆಯ ಗಂಗಾವಳಿ ನದಿಯ ದಕ್ಷಿಣ ಪ್ರದೇಶದಲ್ಲಿ ವಾಸಿಸುವ ಚಿತ್ರಾಪುರ ಸಾರಸ್ವತರು (ಕುಶಸ್ಥಳಿಗಳು) ಮೂಲತಃ ೮೦-೯೦ ಮನೆತನಗಳಿಂದ ಬಂದ ಶೇಣವಿಗಳು ೬ ಗೋತ್ರಗಳಿಗೆ ಸೇರಿದವರಾಗಿದ್ದಾರೆ, ಎಂದು ಶ್ರೀ ವಿ.ಎನ್. ಕುಡವ ಅವರು, 'ಹಿಸ್ಟೊರಿ ಆಫ್ ದಿ ದಕ್ಷಿಣಾತ್ಯ ಸಾರಸ್ವತ್ಸ್' (ಸಂಯುಕ್ತ ಗೌಡ ಸಾರಸ್ವತ ಸಭಾ, ಮದ್ರಾಸ, ೧೯೭೨) ಎಂಬ ಗ್ರಂಥದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ. ಕೌಂಡಿಣ್ಯ, ಕೌಶಿಕ, ವತ್ಸ, ಅತ್ರಿ, ಭಾರದ್ವಾಜ ಮತ್ತು ಶಂಕ-ಪಿಂಗಳ-ಕುತ್ಸ, ಇವೇ ಆ ೬ ಗೋತ್ರಗಳು ದಾಖಲೆಗಳಲ್ಲಿ ಚಿತ್ರಾಪುರ ಸಾರಸ್ವತರನ್ನು 'ಗೌಡಸಾರಸ್ವತ' ಎಂದೇ ಉಲ್ಲೇಖಿಸಲಾಗಿದೆ.

ಚಿತ್ರಾಪುರ ಸಾರಸ್ವತರ ಚರಿತ್ರೆಗೆ ಸಂಬಂಧಿಸಿ, ಫ್ರಾಂಕ್ ಎಫ್. ಕಾನ್‌ಲಾನ್ ಬರೆದ 'ಎ ಕಾಸ್ಟ್ ಇನ್ ಎ ಚೇಂಜಿಂಗ್ ವರ್ಲ್ಡ್', ಥಾಮ್‌ಸನ್ ಪ್ರೆಸ್, ಹೊಸದಿಲ್ಲಿ, ೧೯೭೭, ಎಂಬ ಸಂಶೋಧನಾತ್ಮಕ ಗ್ರಂಥವನ್ನು ಓದಿರಿ.

೨. ಪೂರ್ವದಲ್ಲಿ, ಭಂಡಿ (ಚಕ್ಕಡಿ, ಗಾಡಿ)ಗಳನ್ನು ಗೋಕರ್ಣದ ಈ ಓಣಿ (ಕೇರಿ)ಯಲ್ಲಿ ನಿಲ್ಲಿಸುತ್ತಿದ್ದುದರಿಂದ ಈ ಕೇರಿಗೆ 'ಭಂಡಿಕೇರಿ' ಎಂದು ಕರೆಯಲಾಯಿತು. ಇದೇ ಸ್ಥಳದಲ್ಲಿ ಸಾರಸ್ವತ ಬ್ರಾಹ್ಮಣರ ಮಠ ಸ್ಥಾಪನೆಯಾಗಿದ್ದರಿಂದ, ಈ ಮಠ 'ಭಂಡಿಕೇರಿ ಮಠ' ಎಂಬ ಹೆಸರಿನಿಂದ ಪ್ರಸಿದ್ಧವಾಯಿತು.

೩. ಡಾ॥ ಎ.ಕೆ. ಶಾಸ್ತ್ರಿ, 'ದಿ ರಿಕಾರ್ಡ್ಸ್ ಆಫ್ ಶ್ರೀ ಚಿತ್ರಾಪುರ ಮಠ' (ಚಿ.ದಾ.) ಶ್ರೀ ಚಿತ್ರಾಪುರ ಮಠ, ೨೦೦೮, ಚಿ.ದಾ. ೧೫೫, ಪು. ೪೨೨.

೪. ರಾಜಾರಾಮ ಮೋಹನ ರಾಯರು ೧೮೨೮ರಲ್ಲಿ ಬ್ರಹ್ಮೋಸಮಾಜವನ್ನು ಸ್ಥಾಪಿಸಿದರು. ದೇವರು ಒಬ್ಬನೇ, ಭ್ರಾತೃತ್ವ ಇವೇ ಬ್ರಹ್ಮೋಸಮಾಜದ ಮೂಲಮಂತ್ರಗಳು. ಪುರಾತನ ಭಾರತೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದರ ಜೊತೆಗೆ, ಪಾಶ್ಚಿಮಾತ್ಯರ ಪ್ರಗತಿಪರ ಹೊಸ ವಿಚಾರಗಳನ್ನು ಅಳವಡಿಸಿಕೊಳ್ಳುವುದೇ ಸಮಾಜದ ಧ್ಯೇಯವಾಗಿತ್ತು. ನಂತರದಲ್ಲಿ, ಮಹರ್ಷಿ ದೇವೇಂದ್ರನಾಥ ಟಾಗೋರರು ಬ್ರಹ್ಮೋಸಮಾಜವನ್ನು ಬೆಳೆಸಿದರು.

೫. ಚಿ.ದಾ. ೧೫೫.

೬ ಚಿ.ದಾ. ೧೬೧.

೭. ಸ್ವಾಮಿ ದಯಾನಂದ ಸರಸ್ವತಿಗಳು ೧೮೭೫ರಲ್ಲಿ ಆರ್ಯಸಮಾಜವನ್ನು ಸ್ಥಾಪಿಸಿದರು. ಲಾಲಾ ಲಜಪತರಾಯ, ಸ್ವಾಮಿ ಶ್ರದ್ಧಾನಂದ ಮೊದಲಾದ ಮಹಾನ್ ವ್ಯಕ್ತಿಗಳು ಆರ್ಯ ಸಮಾಜದ ಪ್ರಮುಖರಾಗಿದ್ದರು. ಡಿ.ಎ.ವಿ. ವಿದ್ಯಾಸಂಸ್ಥೆಗಳಲ್ಲಿ ಅನೇಕ ಸ್ವಾತಂತ್ರ್ಯಯೋಧರು ಸಿದ್ಧರಾದರು. ಅಸ್ಪೃಶ್ಯತೆ ನಿವಾರಣೆ, ಮಹಿಳೆಯರಿಗೆ ಶಿಕ್ಷಣ, ಜಾತಿ ಕಟ್ಟುಪಾಡುಗಳನ್ನು ಸಡಿಲಿಸುವದು, ವಿಧವಾ ವಿವಾಹ, ಬಾಲ ವಿವಾಹ ತಡೆಗಟ್ಟುವದು ಇತ್ಯಾದಿ ಅನೇಕ ಸಮಾಜ ಸುಧಾರಣಾ ಕಾರ್ಯಗಳನ್ನು ಆರ್ಯಸಮಾಜ ಹಮ್ಮಿಕೊಂಡಿತ್ತು. ವೈದಿಕ ಧರ್ಮ ಪ್ರಚಾರ ಮತ್ತು ಹಿಂದೂ ಸಮಾಜ ಸುಧಾರಣೆಗಾಗಿ ದಯಾನಂದರು ತಮ್ಮ ಜೀವನವನ್ನೇ ಮುಡುಪಾಗಿಟ್ಟರು.

೭೭

ಸಾಳುವ ಗೋವಿಂದಯ್ಯನ ಕೈಂಕರ್ಯಗಳು

ಡಾ. ಎಚ್.ಎಸ್. ಉಷಾರಾಣಿ*

ಶ್ರೀ ಕೃಷ್ಣದೇವರಾಯ ಅಧಿಕಾರಾರೂಢನಾದಾಗ ಪ್ರತಿಭಟಿಸಿದವರಲ್ಲಿ ಉಮ್ಮತ್ತೂರಿನ ಪಾಳೆಯಗಾರ ಮೊದಲಿಗ. ಆಗ ಉಮ್ಮತ್ತೂರಿನ ಪ್ರಭುವಾಗಿದ್ದ ಗಂಗರಾಜ ಒಮ್ಮೆ ೧೫೧೦ರಲ್ಲೂ ಮಗದೊಮ್ಮೆ ೧೫೧೧ರಲ್ಲೂ ದಂಗೆ ಎದ್ದು ತನ್ನ ಸ್ವತಂತ್ರ ಪ್ರವೃತ್ತಿ ಪ್ರದರ್ಶಿಸಿದ್ದ. ಹಾಗಾಗಿ ಎರಡು ಬಾರಿ ವಿಜಯನಗರದ ಅರಸ ಕೃಷ್ಣದೇವರಾಯ ಆಂತರಿಕ ಭದ್ರತೆಗಾಗಿ ಉಮ್ಮತ್ತೂರಿನ ಪ್ರಭುವನ್ನು ನಿಯಂತ್ರಿಸಲು ದಂಡೆತ್ತಿ ದಕ್ಷಿಣದತ್ತ ಗಮನಹರಿಸುವಂತಾಗಿತ್ತು. ಗಂಗರಾಜನ ದಂಗೆಯನ್ನಡಗಿಸಿದ ಬಳಿಕ ತನ್ನ ಶಿರಪ್ರಧಾನ ಸಾಳುವ ಗೋವಿಂದರಾಜಯ್ಯನನ್ನು ಉಮ್ಮತ್ತೂರು ಸೀಮೆ ಮತ್ತು ತೆರಕಣಾಂಬಿ ಸೀಮೆಯ ಮೇಲ್ವಿಚಾರಣೆಗೆ ನೇಮಿಸಿದ್ದ. ಕೃಷ್ಣದೇವರಾಯನ ೨೦ ವರ್ಷಗಳ ಆಳ್ವಿಕೆಯ ಯಶಸ್ಸಿಗೆ ಶ್ರಮಿಸಿದ ಅಧಿಕಾರಿಗಳಲ್ಲಿ ಸಾಳುವ ಗೋವಿಂದರಾಜಯ್ಯ ಒಬ್ಬ. ಈ ಅಧಿಕಾರಿಯ ಕಾರ್ಯವೈಖರಿಯ ಬಗ್ಗೆ ಇದುವರೆಗೂ ಹೆಚ್ಚಿನ ಅಧ್ಯಯನ ನಡೆದಿಲ್ಲ. ಹಾಗಾಗಿ ಗೋವಿಂದರಾಜಯ್ಯ ತನ್ನ ಉಸ್ತುವಾರಿಯಲ್ಲಿ ಹಮ್ಮಿಕೊಂಡಿದ್ದ ಯೋಜನೆಗಳ ಮೇಲೆ ಬೆಳಕು ಚೆಲ್ಲಲು ಪ್ರಸ್ತುತ ಪ್ರಬಂಧದಲ್ಲಿ ಯತ್ನಿಸಲಾಗಿದೆ. ಈ ನಿಟ್ಟಿನಲ್ಲಿ ಲಭ್ಯವಿರುವ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಶಾಸನಗಳನ್ನು ಆಧರಿಸಿ ಪ್ರಬಂಧ ಸಿದ್ಧಪಡಿಸಲಾಗಿದೆ.

ಮೊದಲಿಗೆ ಸಾಳುವ ನರಸಿಂಹನಿಗೂ ಸಾಳುವ ಗೋವಿಂದರಾಜಯ್ಯನಿಗೂ ಸಂಬಂಧ ಹುಡುಕಲು ಹೊರಟಾಗ ಅಂಥ ಸಂಬಂಧ ಕಲ್ಪಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ಲಭ್ಯವಿರುವ ಶಾಸನಗಳು[1] ಸಾಳುವ ಗೋವಿಂದ ರಾಜಯ್ಯನು ರಾಚಿರಾಜ ಅಥವಾ ರಾಜರಾಜನ ಮಗನೆಂದೂ ಸಾಳುವ ತಿಮ್ಮರಸನ ತಮ್ಮನೆಂದೂ ತಿಳಿಸುತ್ತವೆ. ಇವರು ಅಂದರೆ ಈ ಕುಟುಂಬದವರು ಕೌಂಡಿನ್ಯ ಗೋತ್ರ, ಆಪಸ್ತಂಭ ಸೂತ್ರ, ಯಜುಶಾಖಾಧ್ಯಾಯಿಗಳೆಂದು ಶಾಸನಗಳು ಹೇಳುತ್ತವೆ.

ಇನ್ನು ಕ್ರಿ.ಶ. ೧೫೧೩ ರಿಂದ ೧೫೨೮ ರವರೆಗಿನ ಶಾಸನಗಳು ಗೋವಿಂದರಾಜಯ್ಯನ ಕಾರ್ಯವೈಖರಿ ಯನ್ನರಿಯಲು ನೆರವಾಗುತ್ತವೆ. ಅವು ಹೀಗಿವೆ:

ಕ್ರಿ.ಶ.೧೫೧೩ರ ತ್ರಿಯಂಬಕಪುರ ಶಾಸನ[2] ಪ್ರಕಾರ ಸ್ಥಳೀಯ ದೇವರ ಅನುಗ್ರಹಕ್ಕೆ ಪಾತ್ರನಾಗಲು ತನ್ನ ಅಧಿಕಾರ ಕೇಂದ್ರ ತೆರಕಣಾಂಬಿ ಸೀಮೆಗೆ ಸೇರಿದ್ದ ೧೪ ಗ್ರಾಮಗಳ ಸರ್ವತೆರಿಗೆಗಳನ್ನು ಕೃಷ್ಣದೇವರಾಯನಿಗೆ ಧರ್ಮವಾಗ ಬೇಕೆಂದು ಕರ್ಪೂರ ವೀಳೆಯ ಮರ್ಯಾದೆ ಸಲ್ಲುವಂತೆ ತೆರಿಗೆಯ ಹೊನ್ನನು ನಾಡದೇವರಿಗೆ ಅರ್ಪಿಸುವ ಸಲುವಾಗಿ ಧಾರೆಯೆರೆದು ಕೊಟ್ಟನು. ಇದರಿಂದ ದೈವೀ ಅನುಗ್ರಹಕ್ಕೆ ಪಾತ್ರನಾದ ಗೋವಿಂದರಾಜಯ್ಯ ಈ ಸೀಮೆಯಲ್ಲಿ ದೀರ್ಘಕಾಲ ರಚನಾತ್ಮಕ ಸೇವೆ ಸಲ್ಲಿಸಲು ಅವಕಾಶ ವಾಯಿತೆಂದು ತೋರುತ್ತದೆ. ಕ್ರಿ.ಶ.೧೫೧೪ರ ತಗರಪುರ ಶಾಸನ[3]ದಿಂದ ಸಕಲಾಗಮ ಸಂಪನ್ನರಾದ ಬಾಲನಾಥ ಗುರೋತ್ತಮ ಮೋಗೂರ ಬಾಲೊಡಿಯರ ತನೂಭವ ಸೋಮಯ್ಯ ದೇವವೊಡೆಯರಿಗೆ ದಾನಾರ್ಥವಾಗಿ ತಗರಪುರ ಗ್ರಾಮ (ಕುಂತೂರು, ಬೆಳಕವಾಡಿ, ತಗರಪುರ ಸೇರಿದಂತೆ)ವನ್ನು ಧರ್ಮವಾಗಿ ಕೊಟ್ಟನು. ಇದರಿಂದ ಈ ಭಾಗದ ಗುರುಪರಂಪರೆ ಹಾಗೂ ವಿದ್ವಜ್ಜನರನ್ನು ಗೌರವಿಸಿ ಅವರ ವಿಶ್ವಾಸಕ್ಕೆ ಪಾತ್ರವಾದುದಂತೂ ಹೌದು. ಅದೇ ವರ್ಷ ದಕ್ಷಿಣದೇಶದ ದಿಗ್ವಿಜಯವಾಗಿ ಚಿತ್ತೈಸಿದ ವೀರಕೃಷ್ಣದೇವ ರಾಯನ ಶ್ರೀ ಮನುಪ್ರಧಾನ ಸಾಳುವ ತಿಮ್ಮರಸ(ಸಹೋದರ) ಗಜಾರಣ್ಯ ಕ್ಷೇತ್ರ ತಲಕಾಡಿನ ಕೀರ್ತಿನಾರಾಯಣ ದೇವರಿಗೆ ತಾಯೂರ ಸ್ಥಳದ ಕಾನಹಳ್ಳಿ ಗ್ರಾಮದ ಆದಾಯ ಗದ್ಯಾಣ ೧೩೦ ೨ವರಹವನ್ನು ಮಧ್ಯಾಹ್ನದ ಮೂರು ಅವಸರಕೆ ಅಷ್ಟಭೋಗ ತೇಜಸ್ವಾಮ್ಯವಾಗಿ ಅನುಭವಿಸಲೆಂದು ವಿರೂಪಾಕ್ಷಲಿಂಗ ಸನ್ನಿಧಿಯಲ್ಲಿ ಧಾರೆಯೆರೆದು ಕೊಟ್ಟನೆಂದು ಕಾಳಿಹಳ್ಳಿ ಶಾಸನ[4] ದಲ್ಲಿ ಹೇಳಲಾಗಿದೆ. ಅದೇ ಸಮಯದಲ್ಲಿ ವಿಜಯನಗರದ ದೇವ ದೇವಿಯರು ಆಭರಣಸಹಿತವಾಗಿ ಶ್ರೀ ಕೀರ್ತಿನಾರಾಯಣ ದೇವರ ಭಂಡಾರಕ್ಕೆ ಆಚಂದ್ರಾರ್ಕ

* ಡಾ. ಎಚ್.ಎಸ್. ಉಷಾರಾಣಿ, ನಂ.೪೩೩, 'ಇ' ಬ್ಲಾಕ್, ಜಯಪ್ರಕಾಶ್‌ನಗರ, ಮೈಸೂರು ೫೭೦೦೦೮

ಸ್ಥಾಯಿಯಾಗಿ ನಡೆವುದು ಎಂದು, ಇದನ್ನು ಭಾರದ್ವಾಜ ಗೋತ್ರ, ಯಜುಶಾಖೆ, ಆಪಸ್ತಂಭಸೂತ್ರದ ಉಪವಾಸಿ ಆಚಾರಿಯ ಬಿನ್ನಹದ ಮೇರೆಗೆ, ಕೃಷ್ಣರಾಯ ಮತ್ತು ಸಾಳುವ ತಿಮ್ಮರಸನಿಗೆ ಧರ್ಮವಾಗಬೇಕೆಂದು ಕೊಡಿಸಿದ ಗ್ರಾಮವೆಂದು ತಿಳಿಸಲಾಗಿದೆ. ಇದರಿಂದ ಸ್ಥಳೀಯರ ಮನವಿಯನ್ನು ಪರಿಗಣಿಸಲಾಗುತ್ತಿತ್ತೆಂದು ತಿಳಿಯಬಹುದು. ಕ್ರಿ.ಶ.೧೫೧೫ರ ಚಾಮರಾಜನಗರ ಶಾಸನ[೫] ಪ್ರಕಾರ, ದೊಡ್ಡಣ್ಣಸೆಟ್ಟಿಯ ೧೦ ಅಂಕಣದ ಮನೆಯನ್ನು ಅರಮನೆಗೆ ತೆಗೆದುಕೊಂಡು ಅದಕ್ಕೆ ಪ್ರತಿಯಾಗಿ ಗೃಹ ನಿವೇಶನವೊಂದನ್ನು ಮತ್ತೊಂದೆಡೆ ನೀಡಲಾಯಿತು. ಈ ಮನೆ ಸೀಮೆ ನಂಜದೇವಪ್ಪನಿಗೆ ಸೇರಿದ್ದು ಆತ ತೆರಿಗೆ ಕಟ್ಟಲಾಗದೆ ಅರಮನೆಗೆ ಬಿಟ್ಟದ್ದಾಗಿತ್ತು. ಅದು ಹತ್ತು ಅಂಕಣ ಸೀಮೆಯಾಗಿದ್ದು ಪರಿವರ್ತನೆಯಾಗಿ ಗೋವಿಂದರಾಜಯ್ಯನ ನಿರೂಪದಿಂದ ಆತನ ಪಾರುಪತ್ಯಗಾರ ಬಿಟ್ಟದೆಂದು ಉಕ್ತವಾಗಿದೆ. ಅಂದು ಈ ಮನೆ ಸಾಳುವ ಗೋವಿಂದ ರಾಜಯ್ಯನ ಚಟುವಟಿಕೆಗೆ ಬಳಸಲ್ಪಟ್ಟಿರಬಹುದೆಂದು ಊಹಿಸಬಹುದು. ಕ್ರಿ.ಶ. ೧೫೧೭ರ ಇರಸವಾಡಿ ಶಾಸನ[೬] ಪ್ರಕಾರ ಸಾಳುವ ಗೋವಿಂದರಾಜೊಡೆಯರು ಉಮ್ಮತ್ತೂರಿನ ಮಲ್ಲಿಕಾರ್ಜುನನವೊಡೆಯ ದೇವರಿಗೆ ಅಮ್ಮಳೆಯ ಸ್ಥಳದ ಜಗ್ಗಣ್ಣನಪುರಕ್ಕೆ ಸಲ್ಲುವ ಎಲ್ಲಾ ಸ್ವಾಮ್ಯ (ಗದ್ದೆ ಬೈಲು ಸುಂಕ ಸುವರ್ನಾದಾಯ ಗಣಾಚಾರ)ವನ್ನು ಸರ್ವಮಾನ್ಯವಾಗಿ ಮಾಡಿದ ಗ್ರಾಮ ಶಾಸನವೆಂದು ಉಲ್ಲೇಖಿಸಲಾಗಿದೆ. ಕ್ರಿ.ಶ. ೧೫೧೭ರ ದೇಮಳ್ಳಿ ಶಾಸನ[೭] ಸಾಳುವ ಗೋವಿಂದರಾಜಯ್ಯ ಉಮ್ಮತ್ತೂರಿನ ಭುಜಂಗೇಶ್ವರ ದೇವರಿಗೆ ಉಮ್ಮತ್ತೂರು ಸ್ಥಳದ ಬಾಗಳಿಪುರವನ್ನು ಸರ್ವಮಾನ್ಯವಾಗಿ ಬಿಟ್ಟದ್ದನ್ನು ತಿಳಿಸುತ್ತದೆ. ಸ್ಥಳೀಯ ಈ ದೇವಾಲಯ ವಿಶಾಲ ಆವರಣದಲ್ಲಿದ್ದು ಶೈವ ಪರಂಪರೆಯ ದ್ಯೋತಕದಂತಿದೆ. ಅದೇ ವರ್ಷ ಹೊಂಗನೂರಿನ ಶಾಸನ[೮] ಹೊಂಗನೂರನ್ನು ಅಘ್ರಾರವಾಗಿ ಮಾಡಿದ್ದನ್ನು ಅರುಹುತ್ತದೆ. ಇಂದಿಗೂ ಗೋವಿಂದರಾಜ ಅಗ್ರಹಾರ ಅಸ್ತಿತ್ವದಲ್ಲಿದೆ.

ಕ್ರಿ.ಶ. ೧೫೧೮ರ ಹೊಂಗಲವಾಡಿ ಶಾಸನ[೯]ದಲ್ಲಿ ಅಂದು ಗೋವಿಂದರಾಜನ ಕಾರ್ಯಕ್ಕೆ ಕರ್ತನಾದ ತಿಂಮ್ಮಣ್ಣ ನಾಯಕರು ನವಿಲೂರನ್ನಾಳುತ್ತಿದ್ದು ಮಂಟಪದ ಕೆಲಸಕ್ಕೆ ಸುಂಕದ ಹೊನ್ನು ಗದ್ಯಾಣ ೩೩ನ್ನು ಬಿಟ್ಟಂತಿದೆ. ಕ್ರಿ.ಶ. ೧೫೧೯ರ ಮಾದಾಪುರ ಶಾಸನವು[೧೦] ಸಾಳುವ ಗೋವಿಂದರಾಜಯ್ಯ ಉಮ್ಮತ್ತೂರು ಸೀಮೆಯ ಮೂಗೂರು ಸ್ಥಳದ ಮಾದಾಪುರವನ್ನು ಉಮ್ಮತ್ತೂರ ದೇವರಾಯ ಅರಸರ ಮಕ್ಕಳು ನಂಜಯ ಅರಸರಿಗೆ ವಿರೂಪಾಕ್ಷ ವಿಠಲದೇವರ ಸನ್ನಿಧಿಯಲ್ಲಿ ಸರ್ವಮಾನ್ಯ ಅಘ್ರಾರವಾಗಿ ಧಾರೆಯೆರೆದು ಕೊಟ್ಟದ್ದನ್ನು ದಾಖಲಿಸಿದೆ. ಕ್ರಿ.ಶ. ೧೫೧೯ರ ಹೊಸಪುರ ಶಾಸನ[೧೧] ವು ಗೋವಿಂದರಾಜಯ್ಯ ತನ್ನ ನಾಯಕತನಕ್ಕೆ ಸೇರಿದ್ದ ಮೂಗೂರು ಸ್ಥಳದ ಹೊಸಪುರ ಗ್ರಾಮವನ್ನು ದಕ್ಷಿಣ ವಾರಣಾಸಿ ತಿರುಮಕೂಡಲು ಶ್ರೀ ಅಗಸ್ತ್ಯನಾಥದೇವರ ಪಡಿತರ ಅಮೃತಪಡಿಗೆ ಧಾರೆಯೆರೆದು ಕೊಟ್ಟನೆಂದು ತಿಳಿಸುತ್ತದೆ. ದಾನ ನೀಡಿದ ಸ್ಥಳ ಸ್ಪಷ್ಟವಾಗಿಲ್ಲ. ಕ್ರಿ.ಶ. ೧೫೨೦ರ ಅಂಚವಾಡಿ ಶಾಸನ[೧೨]ವು ಸಾಳುವ ಗೋವಿಂದರಾಜವೊಡೆಯರ ನಿರೂಪದಿಂದ ತಿಂಮನಾಯಕರು ಬಸವರಸರಿಗೆ ಕೊಟ್ಟ ದಾನ ಕೊಡುಗೆಯನ್ನು ಉಲ್ಲೇಖಿಸುತ್ತದೆ. ಕ್ರಿ.ಶ. ೧೫೨೧ರ ತ್ರಿಯಂಬಕಪುರ ಶಾಸನ[೧೩]ದಲ್ಲಿ ಕೃಷ್ಣದೇವ ರಾಯನಗೆ ಬಹ್ವಶ್ವಗಜಸೇನಾ ಸಮೃದ್ಧಿಯಾಗಬೇಕೆಂದು ದಿಗ್ವಿಜಯ ಸಾಮ್ರಾಜ್ಯವಾಗಬೇಕೆಂದು ಕೋಡಿಹಳ್ಳಿಯ ಗದ್ಯಾಣ ೪೭೭ ಆದಾಯವನ್ನು ತೆರಕಣಾಂಬಿಯ ಲೆಕ್ಕದಲ್ಲಿ ತ್ರಿಯಂಬಕ ದೇವರ ಅಮೃತಪಡಿ ಅಂತರಂಗವೈಭವ ನಡೆಯಬೇಕೆಂದು ತುಂಗಭದ್ರಾತೀರದ ವಿರೂಪಾಕ್ಷದೇವರ ಸನ್ನಿಧಿ ಭಾಸ್ಕರ ಕ್ಷೇತ್ರದಲ್ಲಿ ಧಾರೆಯೆರೆದು ಕೊಟ್ಟ ಧರ್ಮಶಿಲಾಶಾಸನವೆಂದು ಸ್ಪಷ್ಟಪಡಿಸುತ್ತದೆ. ಕ್ರಿ.ಶ. ೧೫೨೧ರ ಕಲಿಯೂರು ಶಾಸನ[೧೪] ಕೃಷ್ಣದೇವರಾಯನ ಶಿರಪ್ರಧಾನ ಸಾಳುವ ಗೋವಿಂದರಾಜ ಮುಳೂರು ಸ್ಥಳದ ಬಿಲವಾಗಿದ್ದ ಕಲವೂರನ್ನು (ಕಲಿಯೂರು) ಕೃಷ್ಣರಾಯನಗೆ ಧರ್ಮವಾಗಬೇಕೆಂದು ಜೀರ್ಣೋದ್ಧಾರ ಮಾಡುವ ಸಲುವಾಗಿ ಕೃಷ್ಣಾಪುರ ಎಂಬ ಹೆಸರನ್ನಿಟ್ಟು ೩೭ ವೃತ್ತಿಯಾಗಿ ವಿಭಜಿಸಿ ಬ್ರಾಹ್ಮಣರಿಗೆ ವಿತರಿಸಿದ. ಅಂದು ಕಲವೂರು ಹೊಯ್ಸಳ ಬಲ್ಲಾಳ ತಾಂಮ್ರಶಾಸನವನ್ನಿತ್ತ ಗ್ರಾಮವಾಗಿತ್ತು. ಇಲ್ಲಿರುವ ಕ್ರಿ.ಶ. ೧೧೦೭ರ ಶಾಸನ ಒಂದನೇ ರಾಜರಾಜನಗೂ ಸ್ಥಳೀಯ ಪ್ರಭುಗಳಿಗೆ ನಡೆದ ಹೋರಾಟ, ನೆಟ್ಟ ಜಯಸ್ತಂಭದ ವಿವರವನ್ನೊಳಗೊಂಡಿದೆ. ಕಲಿಗಳಿಗೆ ಹೆಸರಾದ ನಾಡಿದು. ಈ ನಾಡನ್ನು ವಿಜಯನಗರದರಸರು ವಿದ್ವಜ್ಜನರಿಗೆ ನೀಡಿ ಅವರ ಅನುಗ್ರಹಕ್ಕೆ ಪಾತ್ರರಾಗುವ ಆಕಾಂಕ್ಷೆ ಹೊಂದಿದ್ದನ್ನು ಗಮನಿಸಬಹುದು. ಈ ಧರ್ಮಕಾರ್ಯವನ್ನು ಪಂಪಾಕ್ಷೇತ್ರದ ವಿರೂಪಾಕ್ಷದೇವರ ಸನ್ನಿಧಿಯಲ್ಲಿ ಕೈಗೊಂಡದ್ದೆಂದು ಶಾಸನದಲ್ಲಿ ದಾಖಲಿಸಲಾಗಿದೆ.

ಕ್ರಿ.ಶ. ೧೫೨೧ರ ತೆರಕಣಾಂಬಿ ಶಾಸನ[೧೫] ಮಹಾ ಪ್ರಧಾನ ಸಾಳುವ ಗೋವಿಂದರಾಜಯ್ಯ ತೆರಕಣಾಂಬಿಯ ಆಳ್ವಾರು ದೇವರಿಗೆ ರಥೋತ್ಸವಕ್ಕೆಂದು ಪ್ರತಿಗ್ರಾಮಕ್ಕೆ ಎರಡು ಹಣವಿನ ಲೆಕ್ಕದಲ್ಲಿ ಬಿಟ್ಟದ್ದನ್ನು ದಾಖಲಿಸುತ್ತದೆ. ಈ ದಿಸೆಯಲ್ಲಿ ತೆರಕಣಾಂಬಿಯ ಪಾರುಪತ್ಯಗಾರ ಅಯ್ಯಪ್ಪಗಳ ಮಂಟರಸರಿಗೆ ಹಾಗೂ ಮಾಗಯರ ನಂಜಯ ಅರಸರಿಗೆ ಅಪ್ಪಣೆ ಕೊಟ್ಟು ರಥೋತ್ಸವವನ್ನು ಆಚಂದ್ರಾರ್ಕಸ್ಥಾಯಿಯಾಗಿ ನಡೆಸಬೇಕೆಂದು ಕೊಟ್ಟ ಧರ್ಮ ಶಿಲಾಶಾಸನವೆಂದು ತಿಳಿಸಲಾಗಿದೆ. ಕ್ರಿ.ಶ.

೧೫೨೨ರ ಹನೂರು ಶಾಸನ[೧೬] ಸಾಳುವ ಗೋವಿಂದ ರಾಜಯ್ಯನ ನಾಯಕತನಕ್ಕೆ ಪಾಲಿಸಿದ ಉಮ್ಮತ್ತೂರು ರಾಜ್ಯದ ಹೊಸವಾಡಿ ಸ್ಥಳದ ಕಲಿಯುಗವಾಡಿಯ ಗ್ರಾಮವನ್ನು ನರಸೀಪುರದ ಕಾವೇರಿ ಕಪಿನಿ ಹೊಳೆ ಅಲರೆ ಕಟ್ಟುವ ತಿರುಪಣಿ ಕೆಲಸಕ್ಕೆ ಹಾಗೂ ಅಗಸ್ತ್ಯನಾಥದೇವರ ಅಮೃತಪಡಿಗೆ ತುಂಗಭದ್ರಾತೀರದ ವಿರೂಪಾಕ್ಷನ ಸನ್ನಿಧಿಯಲ್ಲಿ ಕೊಟ್ಟ ಭೂದಾನಧರ್ಮಶಾಸನ ಎಂದು ಹೇಳಲಾಗಿದೆ. ಕ್ರಿ.ಶ. ೧೫೨೩ರ ಕೊಟಗನಹಳ್ಳಿ ಶಾಸನ[೧೭] ಪ್ರಕಾರ, ಸಾಳುವ ಗೋವಿಂದರಾಜಯ್ಯನ ಕಾರ್ಯಕ್ಕೆ ಕರ್ತರಾದ ತಿಮ್ಮಣ್ಣ ನಾಯಕರ ನಿರೂಪದಿಂದ ಮದನಿಯರುದ್ರಲಿಂಗಯ್ಯನ ಮಗ ಸಂಕರಲಿಂಗನಿಗೆ ಕೊಟ್ಟ ಶಿಲಾ ಶಾಸನದಲ್ಲಿ ಚತುಸೀಮೆ ಭೂ ವಿವರವಿದೆ. ಆದರೆ ಶಾಸನ ಸವೆದಿದೆ. ಕ್ರಿ.ಶ. ೧೫೨೩ರ ಹರಳಕೋಟೆ ಶಾಸನ[೧೮]ದಲ್ಲಿ ಸಾಳುವ ಗೋವಿಂದರಾಜನ ಮಾಗಣಿಕಾರರಾದ ತುರುಮುಡಿಯಾರ್ ತಿರುವೆಂಗಡ ಮೊದಲಿಯಾರ್‌ರ ಮಕ್ಕಳು ಜಡೆಯಾರ್ ಮೊದಲಿಯಾರ್ ತಮ್ಮ ಮಾಗಣಿಯ ಹಟ್ಟಲಕೋಟೆಯ ಗ್ರಾಮದಲ್ಲಿ ಗ್ರಾಮ ರಕ್ಷಕ ವೀರಭದ್ರದೇವರನ್ನು ಪ್ರತಿಷ್ಟೆ ಮಾಡಿದರೆಂದು, ಅಂಗಭೋಗಕ್ಕೆಂದು ದೇವರ ಸ್ಥಾನಕ್ಕೆ – ನೀತಿ ಕರ್ತನಾದ ಅಲ್ಲಪ್ಪನು ದೇವರ ಸೀಮೆಯನ್ನು ಅನುಭವಿಸಿಕೊಂಡು ಬರುವಂತೆ ಹಾಗೂ ತನ್ನ ಇಟ್ಟೆಯ ಅರ್ಚಕರನ್ನು ನೇಮಿಸಿ ಶ್ರೀಕಾರ್ಯ ನಡೆಸುವಂತೆ ಕೊಟ್ಟದೆಂದು ತಿಳಿಸಲಾಗಿದೆ.

ಕ್ರಿ.ಶ.೧೬ನೇ ಶತಮಾನದ ಶಾಸನದಲ್ಲಿ[೧೯] ಮರಸಗವುಡ ಮತ್ತು ವೀರಯಗವುಡ ವಿಜಯನಗರಕ್ಕೆ ಹೋಗಿ ಕೃಷ್ಣರಾಯ, ಸಾಳುವ ತಿಮ್ಮರಸ, ಸಾಳುವ ಗೋವಿಂದರಾಜಯ್ಯ, ಚಿಕ್ಕರಸಯ್ಯ, ತಿಮ್ಮಯ್ಯನನ್ನು ಕಂಡರೆಂದೂ, ಉದ್ದೇಶ ತಿಳಿಯ ದಿದ್ದರೂ ಸ್ಥಳೀಯರು ಹಂಪೆಗೆ ತೆರಳುವ ಪರಿಪಾಠವಿದ್ದುದು ಮನದಟ್ಟಾಗುತ್ತದೆ.

ಕ್ರಿ.ಶ. ೧೫೨೮ರ ಮರಡೀಪುರ ಶಾಸನ[೨೦] ಕೃಷ್ಣದೇವರಾಯನ ಬಾಗಿಲ ಸರ್ವಪ್ರಧಾನಾಗಿಯಿದ್ಧಂತಾ ಸಾಳುವ ಗೋವಿಂದರಾಜವೊಡೆಯ ಮೊರಡಿಪುರವೆಂಬ ಗ್ರಾಮವನ್ನು ಸರ್ವಮಾನ್ಯದ ಅಗ್ರಹಾರವಾಗಿ ಸಹಿರಣ್ಯೋದಕ ದಾನ ಧಾರಾಪೂರ್ವಕವಾಗಿ ತುಂಗಭದ್ರಾ ತೀರದಲ್ಲಿ ಕೊಟ್ಟನೆಂದು ಹೇಳುತ್ತದೆ.

ಇದುವರೆಗೆ ಲಭ್ಯವಿರುವ ಶಾಸನಗಳ ವಿಶ್ಲೇಷಣೆಯಿಂದ ಪ್ರಧಾನಿಯೋರ್ವನಗೆ ಪಾಲಿಸಿದ ನಾಯಕತನದ ಸೀಮೆಯ ನಿರ್ವಹಣೆಗಾಗಿ ಪ್ರಧಾನಿ ಸಾಳುವ ಗೋವಿಂದರಾಜಯ್ಯ ತೆರಕಣಾಂಬಿ ಉಮ್ಮತ್ತೂರು ಭಾಗಗಳಲ್ಲಿ ಕೆಲವು ಕಾಲವಿದ್ದು (೫ ವರ್ಷ) ತದನಂತರ ತನ್ನ ಹುದ್ದೆಯಲ್ಲಿ ಮುಂದುವರೆದು ತುಂಗಭದ್ರಾತೀರದಿಂದಲೇ ಕಾವೇರಿಕೊಳ್ಳದ ವ್ಯವಹಾರವನ್ನು ನಿಭಾಯಿಸುತ್ತಿದ್ದ. ಆತನ ಪ್ರತಿನಿಧಿಗಳಾಗಿ ಅಥವಾ ಕಾರ್ಯಕರ್ತರಾಗಿ ತಿಮ್ಮಣ್ಣನಾಯಕ ಕಾರ್ಯ ನಿರ್ವಹಿಸುತ್ತಿದ್ದನೆಂದೂ, ಕ್ರಮೇಣ ಸ್ಥಳೀಯರು ತಟಸ್ಥರಾಗಿದ್ದು ನಿಷ್ಠೆ ವ್ಯಕ್ತಪಡಿಸುತ್ತಿದ್ದುದು ವೇದ್ಯವಾಗುತ್ತದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿಗಳು

೧. ಎ.ಕ. (ಪರಿಷ್ಕೃತ ಆವೃತ್ತಿ) ಸಂಪುಟ ೩. ಗುಂಡ್ಲುಪೇಟೆ ೧೩೪, ಅದೇ ಸಂಪುಟ ನಂಜನಗೂಡು ೨೮೫, ಅದೇ ಸಂಪುಟ ೫, ತಿ.ನರಸೀಪುರ೨.
೨. ಎ.ಕ.೩. ನಂಜನಗೂಡು ೨೮೫.
೩. ಎ.ಕ.೪. ಕೊಳ್ಳೇಗಾಲ ೧೧.
೪. ಎ.ಕ.೩. ನಂಜನಗೂಡು ೨೪೮.
೫. ಎ.ಕ.೪. ಚಾಮರಾಜನಗರ ೧೬೨.
೬ ಎ.ಕ.೪. ಚಾಮರಾಜನಗರ ೧೫೩.
೭. ಎ.ಕ.೪. ಚಾಮರಾಜನಗರ ೧೧೯.
೮. ಎ.ಕ.೪. ಚಾಮರಾಜನಗರ ೧೬೦.
೯. ಎ.ಕ.೪. ಚಾಮರಾಜನಗರ ೨೩೯.
೧೦. ಎ.ಕ.೫. ತಿ.ನರಸೀಪುರ ೧೨೮.
೧೧. ಎ.ಕ.೫. ತಿ.ನರಸೀಪುರ ೨೮೯.
೧೨. ಎ.ಕ.೪. ಚಾಮರಾಜನಗರ ೨೫೫.
೧೩. ಎ.ಕ.೩. ಗುಂಡ್ಲುಪೇಟೆ ೧೩೪ ಮತ್ತು ೧೫೬.
೧೪. ಎ.ಕ.೫. ತಿ.ನರಸೀಪುರ ೨೨೫.
೧೫. ಎ.ಕ.೩. ಗುಂಡ್ಲುಪೇಟೆ ೧೧೯.
೧೬. ಎ.ಕ.೪. ಕೊಳ್ಳೇಗಾಲ ೮೨.
೧೭. ಎ.ಕ.೪. ಚಾಮರಾಜನಗರ ೨೫೮.
೧೮. ಎ.ಕ.೪. ಚಾಮರಾಜನಗರ ೨೨೪.
೧೯. ಎ.ಕ.೪. ಕೊಳ್ಳೇಗಾಲ ೮೩.
೨೦. ಎ.ಕ.೫. ತಿ.ನರಸೀಪುರ ೧೩೨.

೨೮

ಚಿತ್ರಕಲೆಯಲ್ಲಿ ನೃತ್ಯಾಭಿನಯದ ಅಷ್ಟನಾಯಿಕೆಯರು

ಡಾ. ಸಿ. ರಾಧಿಕಾರಂಜನಿ*

ಚಿತ್ರಕಲೆ ಆದಿಮಾನವನ ಆವಿಷ್ಕಾರದಲ್ಲಿ ಲಿಖಿತರೂಪದ **ಸಂವಹನ ಭಾಷೆಯಾಗಿತ್ತು**. ಅಜಂತ, ಎಲ್ಲೋರ, ಬಾಗ್, ಬಾದಾಮಿ, ಸಿತ್ತನ್‌ವಾಶರ್ ಮುಂತಾದ ಗುಹಾಂತರ ದೇವಾಲಯಗಳಲ್ಲಿ ಪಲ್ಲವ ಮತ್ತು ಚೋಳರ ಕಾಲದಲ್ಲಿ ಲೇಪಾಕ್ಷಿ ಮುಂತಾದ ಕಡೆಗಳಲ್ಲಿ ಭಿತ್ತಿ ಚಿತ್ರಗಳಿವೆ. ಚಿತ್ರಕಲೆಯಲ್ಲಿ ನೃತ್ಯಕ್ಕೆ ಸಾಮ್ಯವೆನಿಸುವ ಷಡಂಗ ಕ್ರಿಯೆಗಳನ್ನು ಕ್ರಿ.ಶ.೩ನೇ ಶತಮಾನದಲ್ಲಿ ವಾತ್ಸಾಯನ ವಿವರಿಸಿದ್ದಾನೆ. ಅವುಗಳೆಂದರೆ **ರೂಪಭೇದ, ಪ್ರಮಾಣ, ಭಾವ, ಲಾವಣ್ಯ, ಸದೃಶ್ಯ ಹಾಗೂ ವರ್ಣಿಕಾಭಂಗ ಎಂದು ಆರು ವಿಧಗಳು.**

ಅವುಗಳ ವಿವರಗಳು ಹೀಗಿವೆ.

೧. ರೂಪಭೇದ: ಕಣ್ಣಿಗೆ ಕಾಣುವ ರೂಪದ ಜ್ಞಾನ.

೨. ಪ್ರಮಾಣ : ಸರಿಯಾದ ಗ್ರಹಣಶಕ್ತಿ ಮತ್ತು ಅನುಭವ ರಚನೆ.

೩. ಭಾವ : ಬಣ್ಣಗಳಿಂದ, ನಡೆದ ಘಟನೆ, ಸ್ತ್ರೀ, ಪುರುಷರ ಮೊಗದ, ಆಂಗಿಕದ ಭಾವಾಭಿವ್ಯಕ್ತಿ.

೪. ಲಾವಣ್ಯಯೋಜನ : ಲಾಲಿತ್ಯ, ಸೌಂದರ್ಯಗಳನ್ನು ಅಭಿವ್ಯಕ್ತಿಸುವ ವರ್ಣನೆಗಳಲ್ಲಿ ಕಂಡು ಬರುವ ಸಾಮ್ಯತೆ.

೫. ಸದೃಶ್ಯ : ಹೋಲಿಕೆ/ ತದ್ರೂಪ ವ್ಯಕ್ತಿ, ಪ್ರಾಣಿ, ಪಕ್ಷಿ, ಚಿತ್ರಗಳು.

೬. **ವರ್ಣಿಕಾಭಂಗ : ಕುಂಚ ಮತ್ತು ಅದರಿಂದ ಹೊರಬರುವ ಬಣ್ಣಗಳ ವಿವರಗಳು** ಹಿನ್ನಲೆಗೆ ಹೊಂದಿಕೊಂಡಂತೆ, ರಾತ್ರಿ, ಸಂಜೆ, ಬೆಳಗು ಹೇಗೆ ಇವುಗಳಂತೆ ನೃತ್ಯಕಲಾವಿದರೂ ಕುಂಚ ಕಲಾವಿದರಿಂದ ಬಣ್ಣಗಳ (ಸೌಂದರ್ಯ ಪ್ರಜ್ಞೆ) ಬಗ್ಗೆ ತಿಳುವಳಿಕೆ ಪಡೆಯುತ್ತಾರೆ. ಇದು, ಅವರುಗಳು ನೃತ್ಯ ಮಾಡುವಾಗ ಅವರಿಗೆ ಬೇಕಾದ ವಸ್ತ್ರ, ಆಭರಣ, ಹಿನ್ನಲೆಯ ರಂಗವೇದಿಕೆ ಇವುಗಳ ಪರಿಕಲ್ಪನೆಗೆ ನೂತನ ಆಯಾಮ ನೀಡುತ್ತವೆ. ನೃತ್ಯದ ಅಭಿನಯ ಕ್ಷೇತ್ರಕ್ಕೆ ಮೇಲೆ ತಿಳಿಸಿದ ಆರು ಷಡಂಗಗಳು, ಕಿರುವರ್ಣಚಿತ್ರಗಳ ಪ್ರಮುಖ ಅಂಗಗಳಾಗಿ ನಾಯಕ/ಕಿಯರ ಪ್ರೇಮ, ವಿರಹ, ಶೃಂಗಾರಗಳನ್ನು ವೈಭವೀಕರಿಸುವುದರೊಂದಿಗೆ ಕೃಷ್ಣ-ರಾಧೆಯರ ರಾಸಲೀಲಾ, ಗೀತಗೋವಿಂದ ರಚನೆಯ ಜಯದೇವ ಕವಿಯ **ಅಷ್ಟಪದಿ**ಗಳಿಗೆ ತಕ್ಕಂತೆ ಭಾವರಸ ಸಂಯೋಜನೆಗಳು ಮೂಡಿ ಬಂದಿರುವುದು ವಿಶೇಷ **ಜಯದೇವ** ೧೨ನೇ ಶತಮಾನದ **ಕವಿ ಲಕ್ಷಣ ದೇವನ** ಆಸ್ಥಾನದಲ್ಲಿದ್ದವ. ಅಂತೆಯೇ **ಡಿ.ವಿ.ಜಿ.**ಯವರ **ಅಂತಃಪುರ ಗೀತೆಗಳು** ಕೃತಿಗಳಲ್ಲಿನ ಶಿಲಾಬಾಲಿಕೆಯರ ಕಾವ್ಯ ಸೃಷ್ಟಿಯಲ್ಲಿ ಬರುವ **ದರ್ಪಣಸುಂದರಿ ವಾಸಕ ಸಜ್ಜಾ** ಅಷ್ಟನಾಯಿಕೆಯಲ್ಲಿನ ಪ್ರತಿನಿದಿ. ತನ್ನನ್ನು ತಾನು ಅಲಂಕರಿಸಿಕೊಂಡು, ಮನೆಯನ್ನು ತನ್ನನ್ನು ತಾನು ಅಲಂಕರಿಸಿಕೊಂಡು, ಮನೆಯನ್ನು ಶೃಂಗರಿಸಿ ನಾಯಕನ ಬರುವಿಕೆಗಾಗಿ ಕಾಯುವ ನಾಯಕಿ ಎಲ್ಲಾ ಚಿತ್ರಕಾರರ, ಶಿಲ್ಪಕಾರರ ಕೈ ಚಳಕದಲ್ಲಿ ಪ್ರಮುಖವಾಗಿ ಕಂಡು ಬರುವ ಅಷ್ಟನಾಯಿಕೆಯರಲ್ಲಿ ಪ್ರಮುಖಳು.

ಬರೋಡಾದ ಓರಿಯಂಟಲ್ ಇನ್‌ಸ್ಟಿಟ್ಯೂಟ್‌ನಲ್ಲಿ ಗೀತ-ಗೋವಿಂದ, ಭಾಗವತ ಪುರಾಣಗಳು ನಾಟ್ಯಶಾಸ್ತ್ರದ ಹಸ್ತಪ್ರತಿಗಳಿಗನುಗುಣವಾಗಿ ವರ್ಣ ಚಿತ್ರಗಳು ಮುಪ್ಪರಿಗೊಂಡಿವೆ. **"ರಾಗಮಾಲಾ" ಎಂಬದು ಸಂಗೀತದ ರಾಗಗಳಿಗೆ (ಉತ್ತರ ಭಾರತದ) ತಕ್ಕಂತೆ ಚಿತ್ರಗಳನ್ನು ಅವುಗಳ ರಾಗ ಲಕ್ಷಣಗಳನ್ನು, ಆರೋಹಣ ಅವರೋಹಣಗಳ** ಬರೆಯುವಿಕೆಗಳೊಂದಿಗೆ ಚಿತ್ರಿಸಿರುವುದು ಆಶ್ಚರ್ಯವನ್ನುಂಟು ಮಾಡುತ್ತದೆ. ಕಲೆಗಳು ಒಂದಕ್ಕೊಂದು ಹೇಗೆ ಪೂರಕವಾಗಿರುತ್ತವೆ ಎನ್ನುವುದು ಇದು ನಿದರ್ಶಿಸುತ್ತದೆ.

ಛಾಯಾಚಿತ್ರದಲ್ಲಿ ಶಿಲೆಯ ಮಧ್ಯದಲ್ಲಿ ಮಂಟಪದೊಳಗೆ ವಿರಹಿಣಿಯ ಭೈರವಿರಾಗದ ಪ್ರತೀಕವಾಗಿ ಕೇಶವನ್ನು ಕೆದರಿಕೊಂಡು, ವೇಷ-ಭೂಷಣ ಯಾವುಗಳಲ್ಲೂ ಆಸಕ್ತಿಯಿಲ್ಲದಂತಿದ್ದು, ಸುತ್ತಲ ಪರಿಸರ ಅವುಗಳಿಗೆ ತುಪ್ಪ ಸುರಿಯುವಂತೆ ಪಕ್ಷಿಗಳ ಪ್ರೇಮ ಕಲರವ ಬೆಂಕಿಯಂತೆ ಅವಳನ್ನು ಸುಡುವುದನ್ನು ಧ್ವನಿಸುತ್ತದೆ.

೧೨ನೇ ಶತಮಾನದಲ್ಲಿ ವರ್ಣಚಿತ್ರ ಕಲೆಗೆ ಪುನರುತ್ಥಾನ ದೊರಕಿತು. ಭಿತ್ತಿ ಚಿತ್ರಗಳ ಬದಲಾಗಿ ಧಾರ್ಮಿಕ, ಆಧ್ಯಾತ್ಮಿಕ

* ನೃತ್ಯಕಲಾವಿದೆ, ಸಂಶೋಧಕಿ, ಉಪನ್ಯಾಸಕಿ, ಕವಯಿತ್ರಿ, # ೬೩೦/೬, ೨ನೇ ಮುಖ್ಯರಸ್ತೆ, ಬಿ.ಎಸ್.ಕೆ. ಮೊದಲನೇ ಹಂತ, ಬೆಂಗಳೂರು-೫೦.

ಗ್ರಂಥಗಳ ಹಸ್ತ ಪ್ರತಿಗಳಲ್ಲಿ ಅಂಟಿಸಲು ಸಾಧ್ಯವಾಗುವಂತೆ **ಕಿರುಚಿತ್ರ**ಗಳನ್ನು ರಚಿಸಿರುವುದು ಹೆಚ್ಚು ಪರಿಣಾಮ ಬೀರುತ್ತವೆ. **ತಾಳೆಗರಿ**ಗಳ ಸೀಮಿತ ಸ್ಥಳಾವಕಾಶದಲ್ಲಿ ಸಾಂದರ್ಭಿಕ ಕಿರು ಚಿತ್ರಗಳು ಕವಿ–ಕಲಾವಿದರ ಪ್ರತಿಭೆಗೆ ದರ್ಪಣವನ್ನುದಗಿಸುತ್ತದೆ. ಗುಜರಾತ್, ಮಾನ್ವ ರಾಜಾಸ್ಥಾನಗಳಲ್ಲಿ ಪೋಷಣೆಗೊಂಡು ಇತರೆಲ್ಲೆಡೆ ಪಸರಿಸಿವೆ. ಅದಕ್ಕೆ ಹಿನ್ನಲೆಯಲ್ಲಿ ತುಮಕೂರಿನ ಸಿಬಿಯಲ್ಲಿನ ದೇವಾಲಯದ ಚಿತ್ರಕಲೆಗಳು ಕಾಣಸಿಗುತ್ತವೆ. ಇಂದಿಗೂ ಅವುಗಳ ಬಣ್ಣ ಮಾಸದಿರುವುದು ವೈಶಿಷ್ಯ. ಆನೆ, ರಾಜಹಂಸಗಳ ಸಾಲು, ಹೊಬಳಿ, ನಕ್ಷೆ, –ಹಸ್ತ ಪ್ರತಿಗಳ ಸಂಪುಟಗಳ ಅಂಚುಗಳ ಅಲಂಕಾರ, ಕೆಂಪು, ಕಪ್ಪು, ಹಿತ್ತಾಳೆ, ಚಿನ್ನ, ಹಾಗೂ ಬೆಳ್ಳಿ ವರ್ಣಗಳ ಲೇಪನಗಳೊಂದಿಗೆ ಪಡಿಮಾಡಿಸಿರುವುದು ಮೈಸೂರು ಶೈಲಿಯ ಸಂಪ್ರದಾಯಕ್ಕೆ ತಳಹದಿಯನ್ನು ಒದಗಿಸಿವೆ. ಜೈಪುರ, ರಜಪೂತ, ಜಮ್ಮು, ಬಸೋಲಿ, ಕಾಂಗ್ರ, ಹಿಮಾಲಯ ಪರ್ವತ ಪ್ರದೇಶಗಳಲ್ಲಿ **ಪಹಾಡಿ ಕಲೆ**ಯಾಗಿ ರೂಪುಗೊಂಡು ಇಂದಿಗೂ ಎಲ್ಲೆಡೆ ಪ್ರಸಿದ್ಧಿಗೊಂಡಿದೆ.

೧೬೦೫ರಲ್ಲಿ ಮೇವಾಡದ ರಾಜಧಾನಿ ಚಾವಂಡದಲ್ಲಿ ನಾಸಿರುದ್ದೀನ ಎಂಬ ಕಲಾವಿದ ರಾಗಮಾಲಾ ಚಿತ್ರಗಳನ್ನು ರಚಿಸಿ, **೩೬ಕ್ಕೂ** ಹೆಚ್ಚು ರಾಗ, ರಾಗಿಣಿಯರನ್ನು ಬಣ್ಣಿಸುವ ವರ್ಣಚಿತ್ರಗಳನ್ನು ಸಣ್ಣ ಸಣ್ಣ ರಾಗಗಳ ವಿವರಗಳೊಂದಿಗೆ "ಪ್ರೇಮ"ದ ವಸ್ತುವನ್ನು ಅದಕ್ಕೆ ನೀಡಿದ್ದಾರೆ. ಬಶೋಲಿ ಚಿತ್ರಗಳು ಜನಪದ ತಳಹದಿ ಹೊಂದಿದೆ. ರಾಜ ಕೃಪಾಲಪಾಲನ ಆಳ್ವಿಕೆಯ ಕಾಲದಲ್ಲಿ **ಭಾನುದತ್ತನ ಚಿತ್ರರಸ ಮಂಜರಿ'** ಹಸ್ತ ಪ್ರತಿಗಾಗಿ ಸುಪ್ರಸಿದ್ಧ **ದೇವೀದಾಸ್** ಚಿತ್ರಕಾರ ರಚಿಸಿದ ಕಿರುಚಿತ್ರ ಬಶೋಲಿ ಶೈಲಿಗೆ ಪ್ರಥಮ ಅಂಕುರ.

"ಮಾಣುಕು" ಎಂಬ ಸ್ತ್ರೀ ಕಲಾವಿದೆ "ಗೀತ ಗೋವಿಂದ"ಕ್ಕಾಗಿ ರಚಿಸಿದ ಚಿತ್ರಗಳು **ಬಶೋಲಿ** ಶೈಲಿಯನ್ನು ಪ್ರತಿನಿಧಿಸುತ್ತವೆ. ೧೮ನೇ ಶತಮಾನದಲ್ಲಿ ಹೈದರಾಬಾದ್ ಸ್ವತಂತ್ರ ಸಂಸ್ಥಾನವಾಗಿ ಭಾವ ಚಿತ್ರಣ ಮತ್ತು **ರಾಗ ಮಾಲಾ** ಚಿತ್ರಗಳಿಗೆ ಆಶ್ರಯ ಸ್ಥಾನ ನೀಡಿತು. ನಂತರ ದಕ್ಷಿಣಕ್ಕೆ ಹರಡಿತು. **ಶರಭೋಜಿ ಮಹಾರಾಜರ** ಪೋಷಣೆಯಲ್ಲಿ **"ತಂಜಾವೂರು ಶೈಲಿ"** ಅಂದರೆ ಚಿನ್ನದ ಹಾಳೆಗಳಿಂದ ಆಭರಗಳನ್ನು ಚಿತ್ರಿಸುವ ನೂತನ ಚಿತ್ರಕಲೆ ವಿಶ್ವಮಾನ್ಯತೆ ಪಡೆಯಿತು. ೧೪ ರಿಂದ ೧೭ನೇ ಶತಮಾನದ ಅವಧಿಯಲ್ಲಿ ಈ ಕಲೆ ಅಭಿವೃದ್ಧಿಗೊಂಡು ಚೋಳ ಮತ್ತು ಪಾಂಡ್ಯ ಸಂಪ್ರದಾಯಗಳ ಶೈಲಿ ರೂಪುತಾಳಿತು. ಇವುಗಳನ್ನು ಆನೆಗೊಂದಿ, ತಾಡಪ್ರತಿ, ಕಾಂಚಿಪುರ , ಕಾಳಹಸ್ತಿ ಮುಂತಾದ ಕಡೆ ಕಾಣಬಹುದಾಗಿದೆ. **ಲೇಪಾಕ್ಷಿಯ** ಭಿತ್ತಿ ಚಿತ್ರಗಳಲ್ಲಿಯೂ ಕಂಡುಬರುತ್ತದೆ.

ಹಂಪೆಯ ವಿರೂಪಾಕ್ಷ ದೇವಾಲಯದ ಮಂಟಪದ ಒಳ ಛಾವಣಿಗಳಲ್ಲಿ ಗಿರಿಜಕಲ್ಯಾಣ, ತ್ರಿಪುರ ಸಂಹಾರ, ವಿಷ್ಣುವಿನ ದಶಾವತಾರ ಮುಪ್ಪರಿಗೊಂಡಿವೆ. ಚಿಕ್ಕದೇವರಾಜ ಒಡಯರ ಕಾಲದಲ್ಲಿ ಮೈಸೂರಿ ಶೈಲಿ ಶಿರಾ, ಹಿರಿಯೂರು, ಸಿಬಿ, ಕೆರೆಗೋಡು, ರಂಗಾಪುರ ದೇವಾಲಯಗಳಲ್ಲಿ ಕಂಡು ಬರುತ್ತವೆ. **"ಶ್ರೀ ತತ್ತ್ವನಿಧಿ"** ಗ್ರಂಥದಲ್ಲಿ (೧೮೮೬ರಲ್ಲಿ) ವರ್ಣರಂಚಿತ ರೇಖಾ ಚಿತ್ರಗಳಿವೆ. ಮೈಸೂರಿನ **ಜಗನ್ಮೋಹನ** ಅರಮನೆಯಲ್ಲಿ **ರಾಜಾರವಿವರ್ಮನ** ವರ್ಣಚಿತ್ರಗಳು ಪುರಾಣಗಳಲ್ಲಿನ ಸ್ತ್ರೀಯರನ್ನು ನಾಯಿಕೆಯರನ್ನಾಗಿಸಿರುವುದು ವಿಶೇಷ. **ಚಾಮರಾಜ ಒಡೆಯರ್** ಹಾಗೂ **ನಾಲ್ವಡಿ ಕೃಷ್ಣರಾಜ ಒಡೆಯರ್** ಕಾಲದಲ್ಲಿ ಹೆಚ್ಚು ಬೆಳಕು ಕಂಡಿವೆ. ಶ್ರೀರಂಗಪಟ್ಟಣದ ದರಿಯಾ ದೌಲತ್‌ನಲ್ಲಿ ಚಿತ್ರಗಳ ಬಣ್ಣಗಳು ಇನ್ನೂ ಮಾಸಿಲ್ಲ ಕಾಂಗ್ರ, ಕೃಷ್ಣಗರ್, ಗೀತಗೋವಿಂದ, ಭಾಗವತ ಪುರಾಣಗಳಲ್ಲಿ ಪ್ರಾಣಿ, ಪಕ್ಷಿಗಳ ಸಂಕೇತ ಚಿತ್ರಗಳಲ್ಲಿ ಹೆಚ್ಚಾಗಿದ್ದರೆ, ಕೆಲವೆಡೆ **ಕಮಲದ ಹೂಗಳು** ಸಾಂಕೇತಿಕವಾಗಿ ಬಳಸಿದ್ದಾರೆ.

ಎಂ.ಎಸ್.ರಾಂಥವ ಅವರ "ಕಾಂಗ್ರ ಪೈಂಟಿಂಗ್ಸ್ ಆಫ್ ಲವ್" ಕಿರುವರ್ಣ ಚಿತ್ರಗಳು ಅಷ್ಟ ನಾಯಕಿಯರಿಗೆ ಪುಷ್ಟಿ ಯನ್ನು ನೀಡಿವೆ. ಇವರ ಕೃತಿ ೧೦ ಅಧ್ಯಾಯಗಳನ್ನೊಳ ಗೊಂಡು ಶೃಂಗಾರ, ಭಕ್ತಿ, ವಿಯೋಗ, ಸಮ್ಮಿಲನಗಳು ೯ ಅಧ್ಯಾಯಗಳಲ್ಲಿದ್ದರೆ ೧೦ನೇ ಅಧ್ಯಾಯದಲ್ಲಿ ಬಾರಾಮಾಸ ಎಂದರೆ ೧೨ ತಿಂಗಳು (ಋತುಮಾಸ) ಎಂಬ ಅಧ್ಯಾಯ ದೊಂದಿಗೆ ಕೊನೆಗೊಂಡಿದೆ ಹಿಂದಿಯಲ್ಲಿ ಕೇಶವದಾಸರು ಬರೆದಿರುವ "ರಸಿಕ ಪ್ರಿಯ" ಗ್ರಂಥವನ್ನು ಅನುಸರಿಸಿದ್ದಾರೆ. ೧೫ನೆ ಶತಮಾನದ ಕೊನೆ ೧೬ನೆಯ ಶತಮಾನದ ಆದಿಯಲ್ಲಿದ್ದ ಕೇಶವದಾಸ ರಾಜ ಮಧುಕರಶಾಹನ ಆಸ್ಥಾನದಲ್ಲಿದ್ದವನು. ಈತನು ಮೂಲ ಚಿತ್ರಗಳಿಗೆ ಹಿಂಬದಿಯ ವಿಶ್ಲೇಷಣೆ ಮೇರೆಗೆ ಚಿತ್ರಗಳಿಗೆ ವಿವರಗಳನ್ನು ನೀಡಿ ನಂತರ ಮೂಲ ಪ್ರತಿಗಳಿಗೆ ಇಲ್ಲದ ವಿವರಗಳಿಗೆ ತನ್ನ ಸ್ವಂತ ಕವನಗಳನ್ನು ರಚಿಸಿದ್ದಾನೆ. ನಾಯಕ/ಕಿ ಯರನ್ನು ದೂತ/ತಿಯರೊಂದಿಗೆ ವಿವರಿಸಿದ್ದಾನೆ. ರಸಭಾವಗಳಿಗೆ ಅಷ್ಟನಾಯಿಕಾ ಭೇದಗಳು ಪ್ರಮುಖವಾಗಿ ಪದ್ಮಿನಿ, ಚಿತ್ರಿಣಿ, ಶಾಖಿನಿ, ಹಸ್ತಿನಿ, ಎಂಬ ೪ ನಾಯಕಿಯರು ಭಿನ್ನವಾಗಿ ಜೊತೆಗೂಡಿದ್ದಾರೆ ಭರತನ ಅಷ್ಟನಾಯಕಿಯರಂತೆ ಎಂಬುದು ವಿಶೇಷ.

ಇದಕ್ಕನುಗುಣವಾಗಿ **ನವೋಢನಾಯಕಿ** ಸಜ್ಜೆ ಮನೆಗೆ ಹೋಗಲು ನಾಚುವ ದೃಶ್ಯ ಕಣ್ಣಿಗೆ ಕಟ್ಟುವಂತೆ ಚಿತ್ರಕಲಾವಿದ ರಚಿಸಿದ್ದಾನೆ. ಛಾಯಾಚಿತ್ರದಲ್ಲಿ ಕಾಣಬಹುದಾಗಿದೆ. ರಾಧೆಯಿಲ್ಲಿ ಜಿಂಕೆಮರಿಯಂತೆ ಹೆದರಿ ಕಂಗಾಲಾಗಿದ್ದಾಳೆ. ಸಖಿಯರ ದೃಢವಾದ ಮಾತುಗಳು ಅವಳಿಗೆ ರುಚಿಸುತ್ತಿಲ್ಲ. ಸಜ್ಜೆಮನೆಗೆ

ಹೋಗುವ ಪ್ರಥಮ ರಾತ್ರಿ ಎಲ್ಲಾ ಹೆಣ್ಣುಮಕ್ಕಳ ಸ್ಥಿತಿ ಇದೇ ರೀತಿ ಇರುತ್ತದೆ ಎಂಬುದು ಚಿತ್ರಪಟ ಧ್ವನಿಸುತ್ತವೆ. ನವೋಢನಾಯಕಿ ಮುಗ್ಧತೆಯ ಪ್ರತೀಕ ಚಿತ್ರಗಳ ಸಮೀಕರಣ ಒಂದೆಡೆಯಾದರೆ, ಕೃಷ್ಣನು ರಾಧೆಗಾಗಿ ಕಾಯುತ್ತಿರುವ ದೃಶ್ಯ, ದಾಸಿಯರು ನಾಯಕಿಯನ್ನು ಕಳಿಸುತ್ತಿರುವ ದೃಶ್ಯಗಳು ಮನಮೋಹಕ.

ಅಷ್ಟನಾಯಕಿಯೆ ವಿಪ್ರಲಬ್ದ ಇದರಲ್ಲಿ **ಉತ್ಕಾನಾಯಕಿ** ಯಾಗಿ ಹೇಳಿದ ಸಮಯಕ್ಕೆ ನಾಯಕ ಬಾರದಿರುವಲ್ಲಿ ಆತಂಕ ನಿವಾರಣೆಗಾಗಿ ಸುತ್ತಲಿರುವ ಮರಗಳ ಕೊಂಬೆಗಳಿಗೆ, ಮಲ್ಲಿಗೆ ಹೂಗಳಿಂದ ಹಾರಗಳನ್ನು ಮಾಡಿ ಶೃಂಗರಿಸಿ, ಗಾಢಾಂಧ ಕಾರದ ಕತ್ತಲ್ಲೋಡಿಸುತ್ತಾಳೆ ಎಂಬುದು ಕಲಾವಿದನ ಮತ. ಮಲ್ಲಿಗೆ ಹೂಗಳು ಬೆಳಕಿನ ಜ್ಞಾನದ ಪ್ರತೀಕ ಎಂಬುದು ಕಲಾವಿದನ ಪ್ರತಿಭೆಯನ್ನು ಧ್ವನಿಸುತ್ತವೆ. **ಅಷ್ಟನಾಯಕಿಯರು ಭರತನ** ಮತದಂತೆ ೮. **ಅವರುಗಳು ಪ್ರೋಷಿತ ಪತಿಕ/ಭರ್ತೃಕ/ಪ್ರಿಯ, ಕಲಹಾಂತರಿತ, ವಿಪ್ರಲಬ್ಧ, ವಾಸಕಸಜ್ಜಿಕ, ಸ್ವಾಧೀನ ಪತಿಕ/ಭರ್ತೃಕ, ಖಂಡಿತ, ವಿರಹೋತ್ಕಂಠಿತ** ಹಾಗೂ **ಅಭಿಸಾರಿಕ**. ಇವುಗಳ ವಿವರಗಳನ್ನು ಚಿತ್ರಗಳೊಂದಿಗೆ ಸಮೀಕರಿಸಿದ್ದೇನೆ. ಕೆಲವು ಚಿತ್ರಗಳು ಈ ನಾಯಿಕೆಯರ ಅವಸ್ಥೆ ಒಂದೇ ಆದರೂ ಹೆಸರುಗಳು ಮಾತ್ರ ಬೇರೆಯಾಗಿವೆ.

ಪ್ರಥಮವಾಗಿ ಇಲ್ಲಿ ಅಭಿಸಾರಿಕಾ ನಾಯಕಿಯ ಚಿತ್ರಣವನ್ನು ನೀಡಿದ್ದೇನೆ.

೧. ಅಭಿಸಾರಿಕಾ ನಾಯಕಿ– ಇವಳು ನಾಯಕನನ್ನು ತಾನೇ ಅರಸಿಕೊಂಡು ಹೋಗುವವಳು.

ಈ ಶೀರ್ಷಿಕೆಯಡಿಯಲ್ಲಿ ಸುಮತಿ ಮುರಾರ್ಜಿ ಸಂಗ್ರಹ ಬಾಂಬೆಯ ಕಾಂಗ್ರಾ ಕಲಾಕೃತಿ ತುಂಬಾ ಪರಿಣಾಮಕಾರಿಯಾಗಿ ಚಿತ್ರಿತಗೊಂಡಿದೆ. ಗುಡುಗು, ಮಿಂಚು, ಯಾವುದನ್ನು ಲೆಕ್ಕಿಸದೆ ಸಾಗುತ್ತಿರುವ ನಾಯಕಿ! ಮಿಂಚು, ಬೆಳಕನ್ನು ಅವಳ ಹಾದಿಗೆ ನೀಡಿದರೆ, ಹಾವು ಅವಳನ್ನು ಹೆದರಿಸಲು ಬಂದಂತಿದೆ. ಗುರುಗೋವಿಂದಸಿಂಗ್ **"ಸುಖಭಿಸಾರಿಕಾ"** ಎಂಬ ತಮ್ಮ ದಶಗ್ರಂಥದಲ್ಲಿ ಬೆಳದಿಂಗಳಲ್ಲಿ, ನಾಯಕಿ ಹೊರಟಿರುವಿಕೆಯನ್ನು ಧ್ವನಿಸಿದ್ದಾರೆ. **ಚಂದ್ರನೂ** ಅಭಿಸಾರಿಕಾನಾಯಕಿಯ ಸೌಂದರ್ಯಕ್ಕೆ ಮಂಕಾದನಂತೆ! ಬಿಳಿಯ ವಸ್ತ್ರಧಾರಿಣಿ ಶ್ವೇತಾಂಬರೆ ಚಿತ್ರಪಟದ ಹಿಂದೆ ಈ ರೀತಿ ರಚನೆ ಇದೆ.

"ಚಾಕಿ ಪ್ರೇಮ ನೇಮ ಚಚ್ಚಿ ಚೈಲ
ಚೈಲಕಿ ಬಾಸುರಿಯಾ ಕಿ ಚಲನಿ
ಚಾಂದಿನಿ ಮೇ ಚಂದ್ರಮುಖಿ ಚೌಂಕತ್ ಚಲಿಗಯೀ"

ಅಂದರೆ ಚಂದ್ರ ಚಿಕೋರ ಪಕ್ಷಿಗಳನ್ನು ಮರೆತು, ಇವಳೊಡನೆ ಹೊರಟನಂತೆ! ಈ ಸುಖಾಭಿಸಾರಿಕೆ ಶುಕ್ಲಾಭಿಸಾರಿಕೆಯಾಗುತ್ತಾಳೆ. ಅದೆಂದರೆ ಹುಣ್ಣಿಮೆಯ ಬೆಳದಿಂಗಳಲ್ಲಿ ನಡೆಯುವ ನಾಯಿಕೆ, ನೀಲಿ ಬಣ್ಣದ ಉಡುಪಿನಲ್ಲಿ ಗಾಢಾಂಧಕಾರದ ಕತ್ತಲಲ್ಲಿ ಹಾವುಗಳು ಬಂದು ಹೆದರಿಸಿದರೂ ಹೆದರದೆ ತನ್ನ ನಾಯಕನನ್ನು ಅರಸುತ್ತಾ ಹೋಗುತ್ತಿರುವಾಕೆ **ಶುಕ್ಲಾಭಿಸಾರಿಕೆ ಎಂಬುದು ಚಿತ್ರಕಲಾವಿದನ ಪ್ರತಿಭೆಯ ಹೊಳಹು.**

ರಾಜಕೀರ್ಪಲ್‌ಪಾಲ್‌ನ ಆಳ್ವಿಕೆಯ ಕಾಲದಲ್ಲಿ "ಭಾನು ದತ್ತನ ರಸಮಂಜರಿ" ಗ್ರಂಥದ ವರ್ಣನಾತ್ಮಕತೆ ಹಿನ್ನಲೆಯಲ್ಲಿ ಪರಕೀಯ ಅಭಿಸಾರಿಕಾ ನಾಯಕಿ ಪ್ರತಿಬಿಂಬಿತಗೊಂಡಿದ್ದಾಳೆ.

೧೯೫೦ರಿಂದ ೧೯೫೫ರಲ್ಲಿ ೧೨.೫*೮.೯ ನಲ್ಲಿ ರಜಿತಗೊಂಡ ಕಲಾಕೃತಿಯಿದು. ಉದುರಿದ ಎಲೆಗಳು ಬಾಣದ ಶಿರದಂತೆ ಹರಿತವಾಗಿ ಆಕೆಯ ಪಾದಗಳನ್ನು ಸೋಂಕಿವೆ ಯಂತೆ. ಇದನ್ನು ಕಂಪಾರಿ ಪಾಲ್‌ರವರು ಸೌಂದರ್ಯಪ್ರಜ್ಞೆಯ ಹಿನ್ನಲೆಯಲ್ಲಿ ಅವಲೋಕಿಸಿದ್ದಾರೆ. ಇಂಡಿಯನ್ ಲವ್ ಪೇಂಟಿಂಗ್ಸ್ ಗ್ರಂಥದ ಹಿಲ್ಡೆಬಕ್‌ನ ಅಭಿಸಾರಿಕೆ ಮುಂದುವರೆದ ಸ್ತ್ರೀ ಎಂದಿದ್ದಾನೆ. ಪ್ರೇಮಾಭಿಸಾರಿಕೆ, ಗರ್ವಾಭಿಸಾರಿಕೆ, ಕಾಮಾಭಿಸಾರಿಕೆ ಹಿನ್ನಲೆಯಲ್ಲಿ ಅಭಿಸಾರಿಕೆ ವಿಭಿನ್ನವಾಗಿ ಮನಸ್ಸಿನ ಸ್ಥಿತಿಗತಿಗನುಗುಣವಾಗಿ ವ್ಯಕ್ತಿತ್ವದ ಹಿನ್ನಲೆ ಪ್ರತಿನಿಧಿಗೊಂಡಿದೆ. ಇವುಗಳಲ್ಲಿ ಸ್ವರ್ಶೀಯಾ ಪ್ರತೀಯಾ ಹಾಗೂ ಸಾಮಾನ್ಯ ಅಭಿಸಾರಿಕೆ ಭೇದಗಳೂ ಇವೆ. ಇದರೊಂದಿಗೆ ಸಂಧ್ಯಾ, ಕೃಷ್ಣಾ (ಬೆಳದಿಂಗಳು), ದಿವ್ಯಾಭಿಸಾರಿಕೆ ಬೆಳಗಿನಲ್ಲಿ ನಾಯಕನನ್ನರಸಿ ಹೋಗುವವಳು. ರಾಕೇಶ್ ಗುಪ್ತಾರವರ" ೧೬ ನಾಯಕಿಯರು ಗ್ರಂಥದಲ್ಲಿ ರೂಪಾ ಹಾಗೂ ಗರ್ವಾನಾಯಕಿಯರ ವಿವರಗಳು ಇವುಗಳಿಗೆ ಸ್ಫೂರ್ತಿಯಾಗಿ ನಿಂತಿವೆ.

೨. ಸ್ವಾಧೀನಪತಿಕ: ಎರಡನೆಯ ಅಷ್ಟನಾಯಿಕ.. ಚಿತ್ರಕಲೆಗಳಿಗಿಂತ ಶಿಲ್ಪಗಳಲ್ಲಿ ಮುಪ್ಪರಿಗೊಂಡಿವೆ. ತನ್ನ ಗಂಡ ಹತ್ತಿರದಲ್ಲಿರುವುದರಿಂದ ಸಂತೃಪ್ತಿ ಹೊಂದಿರುವವಳು. ಅದಕ್ಕೆ ತನ್ನ ರೂಪ ಕಾರಣವೆಂಬ ಗರ್ವ. ಸ್ವಾಧೀನ ಪತಿಕೆಯಲ್ಲಿ ಸ್ವಂತ ಪುರಷ, ಅಭಿಸಾರಿಕೆಯಲ್ಲಿ ಪರಪುರುಷನಾಗಿರುತ್ತಾನೆ.

೩. ವಾಸಕಸಜ್ಜಾನಾಯಕಿ: ಇಲ್ಲಿ ನಾಯಕಿ ತನ್ನನ್ನು ಅಲಂಕರಿಸಿಕೊಂಡು ನಾಯಕನಿಗಾಗಿ ಕಾಯುತ್ತಿರುವವಳು. ಸಜ್ಜಾ ಎಂದರೆ ಮನೆ ಅಥವಾ ಮಲಗುವ ಕೋಣೆ/ಮಂಚ ಎಂಬ ಅರ್ಥಗಳು ಹೊಳೆಯುತ್ತವೆ. ಭಾನುದತ್ತನ 'ರಸಮಂಜರಿ'ಯಲ್ಲಿ ಗಣಿಕಾ ನಾಯಕಿ ವಾಸಕಸಜ್ಜ. ನಾಯಕಿ ವಿದ್ಯಾವಂತೆಯಾಗಿದ್ದು ಸುಸಂಸ್ಕೃತ ಹೆಣ್ಣಾಗಿ, ಪ್ರೌಢತೆ ಹೊಂದಿರುತ್ತಾಳೆ. ಆದರೆ ಕೆಲವೆಡೆ ನಾಯಕಿ ಮದುವೆ ಯಾಗಿದ್ದು, ತನ್ನ ಪ್ರೀಯಕರನ ಬರುವಿಕೆಗಾಗಿ ಅತ್ತೆ, ನಾದಿನಿಯರನ್ನು ಮಲಗಿಸಿ, ಗಂಡನಿಲ್ಲದ ವೇಳೆ ನಾಯಕನಿಗೆ ಸೂಚನೆ ನೀಡಿ ಕಾಯುತ್ತಿರುವಿಕೆ. ೧೨.೧"*೧೨.೧"

ಅಳತೆಯಲ್ಲಿ ರಚಿತಗೊಂಡ ಕಲಾಕೃತಿಯ ಹಿಂದೆ ಭಾನುದತ್ತನು ನೀಡಿರುವ ಪದ್ಯಚಿತ್ರಣವಿದೆ. ಕಿಟಕಿಯ ಮೂಲಕ ಬರುವ ನಾಯಕ ಪರಕೀಯ ವಾಸಕ ಸಜ್ಜ ಇಲ್ಲಿ ೨.೯"*೮.೫" ಅಳತೆಯಲ್ಲಿ ಅಮೃತ ಪಾಲನ ಆಳ್ವಿಕೆಯಲ್ಲಿ ಪಹಾಡಿ ಶೈಲಿಯ ಕಲಾಕೃತಿ ಪರಿಣಾಮಕಾರಿಯಾಗಿ ಮೂಡಿ ಬಂದಿದೆ.

ದೆರನಿ ಜರ ನಿಸಾಸ ನನದ ಸಬರಾಶಿ ಸ್ವಯಿ..........
ದಬೆ ನಿಜ ಸಾಸ ಕರೋತಿ ರತಿ ಕರನಿಸೋ

ಎಂದು ಕೊನೆಗೊಳ್ಳುವ ಪದ್ಯದ ವಿವರ ಕಥೆಯನ್ನು ಹೇಳಿ ಅತ್ತೆ ನಾದಿನಿಯರನ್ನು ಮಲಗಿಸಿ, ಪ್ರಿಯಕರನಿಗಾಗಿ ಸಜ್ಜಾಗಿದ್ದಾಳೆ. ವಿರಹಿಣಿ ನಾಯಕಿಯರನ್ನು ಬೂಂದಿಶೈಲಿಯಲ್ಲಿ ಸಿಂಹಾಸನರೂಢೆಯಾಗಿದ್ದರೂ ಯಾವುದರಲ್ಲೂ ಆಸಕ್ತಿ ಇಲ್ಲದಂತಿದ್ದಾಳೆ. ನಾರದ ಮಹರ್ಷಿ ೧೧ನೇ ಶತಮಾನದಲ್ಲಿ ಗಂಡು ಹೆಣ್ಣು ಭಾವಗಳಿಗನುಗುಣವಾಗಿ "ಸಂಗೀತ ಮಕರಂದ" ಗ್ರಂಥದಲ್ಲಿ ಗಂಡು ಮನೋಭಾವ "ರಾಗ" ವೆಂದು, ಹೆಣ್ಣು ಮನೋಭಾವ 'ರಾಗಿಣಿ' ಎಂದು ದೃಶ್ಚೀಕರಿಸಿದ್ದಾನೆ. ೬ರಾಗಗಳು ಒಂದೊಂದು ರಾಗಗಳಿಗೂ ೬ ರಾಗಿಣಿಯರಾಗಿ ೩೬ ರಾಗರಾಗಿಣಿಯರನ್ನು ನೀಡಿದ್ದಾನೆ. ಸಂಗೀತ ಅಭಿವೃದ್ಧಿಗೊಂಡಂತೆ ಒಂದೊಂದು ಮುಖ್ಯ ರಾಗಗಳಲ್ಲೂ ೮ ಜನ ಗಂಡು ಮಕ್ಕಳನ್ನು ನೀಡಿ ೮೪ ಸಂಖ್ಯೆಯಾಗಿದ್ದಾರೆ. ಇದರಿಂದ ರಾಗಮಾಲ ಚಿತ್ರಗಳು ರೂಪಿತಗೊಳ್ಳಲು ರಹದಾರಿಯಾಯಿತು.

೪. ವಿರಹೋತ್ಕಂಠಿತ: ಈ ನಾಯಕಿ ನಾಯಕನ ಅನುಪಸ್ಥಿತಿಯಿಂದಾಗಿ ಉಂಟಾದ ದುಃಖದಿಂದ ವಿರಹಿಣಿ ವಿರಹೋತ್ಕಂಠಿತ. ಉತ್ಕಂಠಿತೆಯೂ ಹೌದು. ಕಾಮ ಭಾದೆತಾಳಲಾರದವಳು. "ಸೀತ್ ಮಲಹಾರಿನ" ವಿರಹಿಣಿ ರಾಗಿಣಿ ಈ ಚಿತ್ರದಲ್ಲಿ ರಾಗದ ಹರೋಹಣ ಅವರೋಹಣ ಮೇಲೆ ಇದ್ದು, ಅದಕ್ಕನುಗುಣವಾಗಿ ಮೂಲದ ವಿವರಣೆಯಂತೆ ಚಿತ್ರಿತಗೊಂಡಿದೆ. ಕೆಲವೊಮ್ಮೆ ಹಿಂಬದಿಯಲ್ಲೂ ವಿವರಣೆ ಇರುತ್ತದೆ.

ಅಕ್ಬರನ ಕಾಲದಲ್ಲಿ ಮೊಗಲ್ ಚಿತ್ರಕಲೆ ಬೆಳಕಿಗೆ ಬಂತು ಕಾವ್ಯದ, ಸಂಗೀತದ, ಸಾಹಿತ್ಯದ ವಿವರಣೆಗಳು ಪರಿಪಾಠ ರೂಢಿಸಿದ "ಚಿತ್ರಾವಧಾನ ಕಲೆ" ಈಗ ರೂಢಿಗೊಂಡಿದೆ. ಗೀತಗೋವಿಂದದ ಮೊದಲನೆ ಸರ್ಗ ಜಯದೇವನ ಕೃತಿಯಂತೆ "ಸಾವೋದ ದಾವೋದರ" ದಲ್ಲಿನ ಲಲಿತಲವಂಗದಲ್ಲಿ "ಉನ್ಮದ ಮದನ ಮನೋಹರ......... ಬಕುಲ ಕಲಾಪೇ" ಎಂಬುದರ ಹಿನ್ನಲೆಯಲ್ಲಿ ಚೌರಾಪದಕ ೧೬೨೩-೧೫೭೫ರಲ್ಲಿ ವಿರಹಿಣಿರಾಧೆ ಅಷ್ಟಪದಿಯ ಹಿನ್ನಲೆಯಲ್ಲಿ ರಚಿತಗೊಂಡಿದೆ. ಮೇಲಿನ ವಿವರಣೆಯಂತೆ ಕಪ್ಪು ಬಿಳುಪಿನ ಚಿತ್ರ ಹೆಚ್ಚು ಪರಿಣಾಮಕಾರಿಯಾಗಿದ್ದರು ಜೀವಂತ ಮನುಷ್ಯರ ಆಕೃತಿಯಂತೆ ಎತ್ತರವಾಗಿರುವುದು ಬೆಳವಣಿಗೆಯ ಮುಂದಿನ ಹಂತವಾದರು, ಕಾಂಗ್ರಾ ಚಿತ್ರಗಳು, ಕಿರುವರ್ಣ ಚಿತ್ರಗಳು, ಜನಾದರಣೀಯವಾಗಿವೆ. ನಿರಾಸಕ್ತಿಯಲ್ಲಿ ವಿರಹಿಣಿ ರಾಧೆ ೧೭೩೦ರಲ್ಲಿ ಪೂರ್ಣವಾದ ವರ್ಣನಾತ್ಮಕ ಚಿತ್ರಗಳು ಕಲಾವಿದರ ಕುಂಚದಲ್ಲಿ ಜೀವಂತ ತಾಳಿದೆ.

"ಫಾಲಿಂಗ್ ಆಫ್ ದಿ ಫೀಟ್" ಕಲಾಕೃತಿ ಮುಂದಿನ ಅಷ್ಟನಾಯಕಿ ಪ್ರತೀಕ.

೫. ಕಲಾಹಂತರಿಕ ನಾಯಕಿ : ಈಕೆ ಪತಿ/ನಾಯಕನೊಡನೆ ಜಗಳವಾಡಿ ಆತ ಹೋದ ಬಳಿಕ ಪಶ್ಚಾತಾಪ ಪಡುವವಳು. ಆತನು ಕಾಲಿಗೆ ಬಿದ್ದರೂ ಆತನನ್ನು ಕ್ಷಮಿಸದವಳು. ಚಿತ್ರದ ಶೀರ್ಷಿಕೆಯ ಧ್ವನಿಸುವಂತೆ "ಫಾಲಿಂಗ್ ಆಫ್ ದಿ ಫೀಟ್" ಕಾಲಿಗೆ ಬೀಳುವಿಕೆ ಕ್ರಿ.ಶ. ೧೮೧೦-೧೮೧೫ರಲ್ಲಿ ೩೬.೨೭ಸೆಂ.ಮೀ. ಅಳತೆಯಲ್ಲಿ ರಚಿತಗೊಂಡಿವೆ. ಬಣ್ಣದಲ್ಲಿರುವುದಕ್ಕಿಂತ ಕಪ್ಪು ಬಿಳುಪಿನ ಕಲಾಕೃತಿ ಹೆಚ್ಚು ಪರಿಣಾಮ ಬೀರುತ್ತವೆ. ಜಯದೇವನ ಗೀತಗೋವಿಂದದ ಅಷ್ಟಪದಿಯಲ್ಲಿನ ದಶಮ ಸರ್ಗದ "ಚತುರ ಚತುರ್ಭುಜ" ಶೀರ್ಷಿಕೆಯಲ್ಲಿ "ಸ್ಮರಗಲನ ಖಂಡನಂ ಮಮ ಶಿರಸಿ ಮಂಡನಂ ದೇಹಿ ಪದ ಪಲ್ಲವ ಮುದಾರಂ ಜ್ವಲತಿ ಮಮ ದಾರುಣೋ ಮನಕರುನಾರುಣೋ ಹರತು ತಮ ಪಾಹಿತ ವಿಕಾರಂ" ಎಂದಿದ್ದಾನೆ. ನಿನ್ನ ಪಾದಗಳನ್ನು ನನ್ನ ತಲೆಯ ಮೇಲಿಟ್ಟು, ನನ್ನ ವಿರಹವನ್ನು ನಿಗಿಸು ಎಂದು ಕೃಷ್ಣ ರಾಧೆಯನ್ನು ಕೇಳುವಿಕೆ. ಮುಂದಿನ ನಾಯಕಿ ಖಂಡಿತಾ ಅಷ್ಟನಾಯಕಿಗೂ ಈ ವಿವರಗಳು ಬೆಳಕು ಚೆಲ್ಲುತ್ತವೆ.

೬. ಖಂಡಿತಾ ನಾಯಕಿ: ನಾಯಕನು ಹಿಂದಿನ ರಾತ್ರಿ ಮನೆಗೆ ಬಾರದೆ ಬೆಳ್ಳಂಬೆಳಗ್ಗೆ ಕಾಣುವಂತೆ ಬಂದಿರುವುದೇ ಅಲ್ಲದೆ, ರಾತ್ರಿ ಇನ್ನೊಬ್ಬಳೊಂದಿಗೆ ಇದ್ದದ್ದನ್ನು ಆತನ ಅಂಗ ವಿಕಾರಗಳು, ವಸ್ತ್ರಗಳು ತಿಳಿಸುತ್ತಿದ್ದರೂ, ಇಲ್ಲವೆಂದು ಸುಳ್ಳು ಹೇಳುತ್ತಿರುವುದನ್ನು ಖಂಡಿಸುವುದೇ ಖಂಡಿತಾ ನಾಯಕಿ. ನಿನ್ನ ನಿಜ ಸ್ವರೂಪ ನನಗೆ ತಿಳಿದಿದೆ. ನೀನು ಏನು ಹೇಳದಿದ್ದರು ನನಗೆಲ್ಲಾ ತಿಳಿಯುತ್ತದೆ. ಆತನ ಕಣ್ಣಗಳು ಹಿಂದಿನ ರಾತ್ರಿ ನಿದ್ರೆ ಮಾಡಿರದ ಕಾರಣ ಕೆಂಪೇರಿವೆ. ಕುಂಕುಮ, ಕಣ್ಣಿನ ಕಾಡಿಗೆ ಕೆನ್ನೆಗೆ ಮೆತ್ತಿ ಪುಷ್ಟಿ ನೀಡುತ್ತಿವೆ ಎಂದು ಆತನ ತಪ್ಪುಗಳನ್ನು ಖಂಡಿಸಿ, ಖಂಡಿತ ನಾಯಕಿ ನಾಯಕನನ್ನು ಮನೆಯಿಂದ ಹೊರಗೆ ಹಾಕುವವಳು. ನಾಯಕ ಕಾಲಿಗೆ ಬಿದ್ದು ಕ್ಷಮೆ ಕೇಳಿದರೂ ಕಲಹಾಂತರಿಕೆಯಾಗಲಿ, ಖಂಡಿತೆಯಾಗಲಿ ಕ್ಷಮಿಸುವುದಿಲ್ಲ ಎಂಬುದು ಇದರ ಹಿನ್ನಲೆ. "ರಾಂಕಲಿ ರಾಗಿಣಿ" ಇದನ್ನು ಧ್ವನಿಸುತ್ತಾಳೆ. "ಯಾಹಿ ಮಾಧವ ಯಾಹಿ ಕೇಶವ........." ಅಷ್ಟಪದಿ ಇದನ್ನು ದೃಢಪಡಿಸುತ್ತದೆ.

ಸ್ವಾಧೀನ ಪತಿಕೆ ಗಂಡನ ಜೊತೆಯಲ್ಲಿದ್ದು ಸಂತೋಷ ಪಡುವವಳು. ನಾಯಕ/ಕೃಷ್ಣ ರಾಧೆಯ ಕಾಲಿಗೆ ಅಲತಿಯನ್ನು ಹಾಕುತ್ತಿರುವಿಕೆ ಚಿತ್ರ ಹಾಳಾದ್ದರಿಂದ ಅದರ ಪ್ರತಿಯನ್ನು ಪುನರಚಿಸಿದ್ದೇನೆ.

೭. ವಿಪ್ರಲಬ್ದ ನಾಯಕಿ: ಈ ನಾಯಕಿ ಹೇಳಿದ ಸಮಯಕ್ಕೆ ಸರಿಯಾಗಿ ನಾಯಕ ಬಾರದಿದ್ದಾಗ ಆ ಸ್ಥಳದಲ್ಲಿ ತಾನು ಬಂದು ಹೋದುದರ ಗುರುತಿಗಾಗಿ ಒಡವೆಗಳನ್ನು ಬಿಸಾಡಿರುತ್ತಾಳೆ. ಜೊತೆಗೆ ಎಲೆಗಳಿಗೆ ಗೆಜ್ಜೆಗಳನ್ನು ಕಟ್ಟಿರುತ್ತಾಳೆ ನಾಯಕನು ಬಾರದ ಕಾರಣ ದುಃಖ ತಪ್ತಳಾಗಿ ಲತಾ ಕುಂಜ ಬೆಂಕಿಯ ಕುಂಡಗಳಾಗಿ, ಸುಂದರ ಹೂದೋಟ, ಕಾಡಿನ ಮರಗಳಾಗಿ, ಚಂದ್ರನ ಕಿರಣಗಳು ಆಕೆಯ ಶರೀರವನ್ನು ಸುಡುತ್ತಿರುವುದೆಂದು ಸಖಿಯೊಂದಿಗೆ ವಿವರಿಸುತ್ತ ಕಣ್ಣೀರಿಡುತ್ತಾಳೆ. ಚಿತ್ರಕಲಾವಿದರು ಇದನ್ನು ಅತ್ಯುತ್ತಮವಾಗಿ ಚಿತ್ರಿಸಿದ್ದಾರೆ. ಮರದ ಕೆಳೆಗೆ ನಿಂತಿರುವ ನಾಯಕಿಯ ಪಾದದ ಬಳಿ ಒಣಗಿರುವ ಎಲೆಗಳು ಹಾಸಿಗೆ ಹಾಸಿವೆ. ಹಿಂದಿನ ಇರುಳೆಲ್ಲಾ ನಾಯಕ ನಾಯಕನಿಗೆ ಕಾದು ಬಸವಳಿದ ಪರಿಗೆ ಸಾಕ್ಷಿಯಂತೆ ಎಲೆಗಳು ಚಿತ್ರಕಾರನ ಕೈಚಳಕದಲ್ಲಿ ಸಂಕೇತ ಗಳಾಗಿವೆ ನಾಯಕಿ ಇಲ್ಲಿ ಸ್ತಬ್ದ ಚಿತ್ರಣವಾಗದೆ, ಚಲನೆ ಯಲ್ಲಿರುವುದು ಈ ಕಲಾಕೃತಿಯ ವೈಶಿಷ್ಟ್ಯ. ನಾಯಕಿಯ ಹಿಂಬದಿಯ ಬಯಲು ಆಕೆಯ ಏಕಾಂಗಿತನವನ್ನು ಧ್ವನಿಸಿವೆ ಅವನು ವಿಪ್ರಲಬ್ದನಾಯಕಿಯನ್ನು ಸಖಿ ವರ್ಣಿಸುವ ರೀತಿ ಕಲಾಕೃತಿಗೆ ಹಿಡಿದ ದರ್ಪಣವಾಗಿದೆ. ವಿ.ರಾಘವನ್ ಇದಕ್ಕೆ ಈ ರೀತಿ ವಿವರಣೆ ನೀಡಿದ್ದಾರೆ. ವಿಪ್ರಲಬ್ಧ ನಾಯಕಿ ಕಾಯಿತ್ತಿರುವಲ್ಲಿ ಹೂಗಳೇ ಬಾಣದ ಮೊನೆಗಳಂತೆ ಚುಚ್ಚುತ್ತಿವೆ. ಅದರ ಪರಿಮಳ ದುರ್ಗಂಧವಾಗಿ ತಾಳಲಾಗಿದೆ. ಅವಳ ಹೃದಯದ ಪ್ರೀತಿಯನ್ನು ಹುಲಿಯೊಂದು ಬಗೆದಂತಿದೆ. ಸುಮಧುರ ಹಾಡು, ನೋಟ ಬೈಗಳಾಗಿವೆ. ವಿಳ್ಯೆ ವಿಷವಾಗಿದೆ ಎಂಬ ವಿವರಣೆಗಳು ವಿಪ್ರಲಬ್ಧ ನಾಯಕಿಯ ವ್ಯಕ್ತಿತ್ವವನ್ನು ಪ್ರತಿನಿಧಿಸುತ್ತದೆ.

೮. ಪ್ರೋಷಿತ ಭರ್ತೃಕ/ಪತಿತ: ಈಕೆಯ ನಾಯಕನು ಪರ ಊರಿಗೆ ಕಾರ್ಯ ನಿಮಿತ್ತ ಹೋಗಿರುವವನು. ಆಕಾರಣದಿಂದಾಗಿ ಅವಳಲ್ಲಿ ಯಾವುದರ ಬಗ್ಗೆಯೂ ಆಸಕ್ತಿ ಇಲ್ಲ. ಯಾವ ಕಾರ್ಯದಲ್ಲೂ ಮನಸ್ಸಿಲ್ಲ. ಉತ್ತಮ ನಿದರ್ಶನ ಶಕುಂತಲೆ ದುಷ್ಯಂತನ ನೆನಪಿನಲ್ಲಿರುವಿಕೆ. "ಡೆಕ್ಕನಿ ಪೈಂಟಿಂಗ್ಸ್" ಕಲಾಕೃತಿ ಸಂಗ್ರಹ ಗ್ರಂಥದಲ್ಲಿ "ಮಾರ್ಕ್ ಜೆಬ್ರೋವೆಸ್ಕಿ" ಯವರ ಕಲಾಕೃತಿಗಳನ್ನು ಸಂಗ್ರಹಿಸಿ ನೀಡಿರುವುದು ಪರಿಣಾಮಕಾರಿಯಾಗಿದೆ. ಈ ಕಲಾಕೃತಿಗಳು ಹಳೆಯ ದಾದರೂ ಗಾಢವಾದ ಬಣ್ಣಗಳ ಬಳಕೆ ಇಂದಿಗೂ ಆಕರ್ಷಣೀಯವಾಗಿರುವುದು. ಉತ್ತರ ಡೆಕ್ಕನ್ನಿನ ೧೬ನೇ ಶತಮಾನದಲ್ಲಿ ೨೩.೮*೧೮.೩ ಸೆಂ.ಮೀ. ಅಳತೆಯಲ್ಲಿ "ಗೌರಿ ರಾಗಿಣಿ" ಇದಕ್ಕೆ ಪ್ರತಿನಿಧಿಯಾಗಿ ಮನಸ್ಸೆಳೆಯುತ್ತದೆ. ನವದೆಹಲಿಯ ನ್ಯಾಷನಲ್ ಮ್ಯೂಸಿಯಂನಲ್ಲಿ ಸಂಗ್ರಹದಲ್ಲಿದೆ. ಮರಗಳು ಎತ್ತರವಾಗಿದ್ದು, ಹಿನ್ನೆಲೆಯಲ್ಲಿ ಮಸೀದಿಗಳಿವೆ.

ಹೀಗೆ ಕೆಲವು ಕಲಾಕೃತಿಗಳು ನೃತ್ಯದಲ್ಲಿನ ಅಷ್ಟನಾಯಕಿಯರ ಚಿತ್ರಣದೊಂದಿಗೆ ಅಭಿನಯಕ್ಕೆ ಹಿನ್ನಲೆ ಒದಗಿಸುವ ಕಲಾಕೃತಿಗಳನ್ನು ಇಲ್ಲಿ ವಿವರಿಸಿದೆ. ಯಾವುದೇ ಕಲೆ ಇನ್ನೊಂದು ಕಲೆಗೆ ಪೂರಕವಾಗಿ ನಿಲ್ಲುತ್ತದೆ. ಶಿಲ್ಪಕಾರರು ಚಿತ್ರಗಳನ್ನು ಬರೆದು, ನಂತರ ಶಿಲೆಗಳಲ್ಲಿ ಪ್ರತಿ ಮೂಡಿಸು ತ್ತಿದ್ದುದು ಕೆಳದಿಯ ನಾಡಕಳಸಿ ದೇವಾಲಯಗಳ ಸ್ಥಂಭಗಳ ಚಿತ್ರಕಲೆಗಳಿಂದ ತಿಳಿದು ಬರುತ್ತದೆ.

ಭರತನಾಟ್ಯದಲ್ಲಿ ಅಭಿನಯಕ್ಕೆ ಹೆಚ್ಚಿನ ಪ್ರಾಧಾನ್ಯತೆಯಿದ್ದು, ಭಾವರಸಗಳ ತಳಹದಿಯ ಸಾತ್ವಿಕಾಭಿನಯಕ್ಕೆ ಈ ಅಷ್ಟನಾಯಿಕೆಯರು ನೃತ್ಯಾಭಿನಯಕ್ಕೆ ಪ್ರಧಾನ ಸ್ಥಾನ ಪಡೆದವರು. ಈ ಹಿನ್ನಲೆಯಲ್ಲಿ ಚಿತ್ರಕಲಾವಿದರು ರಚಿಸಿರುವ ಕಲಾಕೃತಿಗಳು ನೃತ್ಯಕಲಾವಿದರು ಅಭಿನಯಿಸುವ ಅಷ್ಟನಾಯಿಕೆ ಯರ ಪಾತ್ರಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿಸುವಲ್ಲಿ, ನೂತನ ಆಯಾಮಗಳನ್ನು ನೀಡಿವೆ. ಇವುಗಳು ನೃತ್ಯ ಕಲಾವಿದರಿಗೆ ಹೆಚ್ಚು ಪ್ರಯೋಜನಕಾರಿಯಾಗಿ ಸಂಚಾರಿಗಳಲ್ಲಿ ಏಕತಾನತೆ ಹೊಡೆದೋಡಿಸಿ ವೈವಿಧ್ಯತೆ ನೀಡಲು ಈ ಚಿತ್ರಕಲೆಯ ಅಷ್ಟನಾಯಕಿಯರ ಕಲಾಕೃತಿಗಳು ನೂತನ ರಹದಾರಿಯನ್ನು ಸೃಷ್ಟಿಸಿವೆ. ನೃತ್ಯ ಕಲಾವಿದರು ಕೇವಲ ಗುರುಗಳು ಹೇಳಿದಂತೆ ನರ್ತಿಸಿ ನಂತರ ಚಿತ್ರಕಲೆ, ಶಿಲ್ಪಕಲೆ ಗಳಿಂದ ಹೆಚ್ಚಿನ ಅಭಿನಯವನ್ನು ರೂಢಿಗೊಳಿಸಲು ಈ ಲೇಖನ ಮಾರ್ಗಸೂಚಿಯಾಗಿದೆ.

ಆಧಾರಸೂಚಿ

೧. ಎಸ್.ಕೆ. ರಾಮಚಂದ್ರರಾವ್, ಮೂರ್ತಿಶಿಲ್ಪ : ನೆಲೆ-ಹಿನ್ನೆಲೆ, ೧೯೭೫.
೨. ಡಿ.ವಿ. ಗುಂಡಪ್ಪ, ಅಂತಃಪುರ ಗೀತೆಗಳು, ೧೯೮೧.
೩. ಸಿ.ಆರ್. ತಿಪ್ಪೇಸ್ವಾಮಿ, ಚಿತ್ರಕಲಾ ದರ್ಪಣ, ಚಿತ್ರಕಲಾ ಅಕಾಡೆಮಿ.
೪. ಎಂ.ಎಸ್. ರಾಂಧವ, ಬಾಶೋಲಿ ಚಿತ್ರಕಲೆ, ೧೯೫೫.
೫. ಸುನೀಲ್ ಕುಮಾರ್ ಜಯದೇವ ಶಾಂತದೇವಿ ಮಳವಾಡ, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೯೬.
೬. ಕುಲವರ್ಮ ಬಾಲಕೃಷ್ಣ (ಅ), ಜಯದೇವ (ಮೂಲ) "ಗೀತಗೋವಿಂದ-ಧಾರವಾಡ, ೧೯೯೬.
೭. ರಾಕೇಶ್ ಗುಪ್ತಾ, ಸಿಕ್ಸ್‌ಟೀನ್ ಹಿರೋಯಿನ್ಸ್, ಆಲಿಗರ್, ೧೯೯೨.

೭೬

ನಾಲವಾರ ವಾರದ್ ಮನೆಯಲ್ಲಿನ ಭಿತ್ತಿ ಚಿತ್ರಗಳು

ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ*

ನಾಲವಾರ; ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ತಾಲೂಕಿನಲ್ಲಿ ಬರುವ ಹೋಬಳಿ ಗ್ರಾಮ. ಈ ಗ್ರಾಮದ ತುಸು ದೂರದಲ್ಲೇ ಭೀಮಾ ನದಿಯ ಸಂಗಮವಿರುವುದು. ಸನ್ನತಿ, ಕನಗನಹಳ್ಳಿಗಳಂತಹ ಐತಿಹಾಸಿಕ ಸ್ಥಳಗಳು ಹತ್ತಿರದಲ್ಲೇ ಇದೆ. ದೈವೀಪುರುಷ ಶ್ರೀ ಕೋರಿಸಿದ್ದೇಶ್ವರರು ನೆಲೆಸಿದ ಪುಣ್ಯ ಭೂಮಿಯೂ ಇದಾಗಿದೆ.

ಸದ್ಯ ಚಿಕ್ಕ ಗ್ರಾಮವೆನಿಸಿದ ನಾಲವಾರ, ನೂರೈವತ್ತು ವರ್ಷಗಳ ಹಿಂದೆ (ಬ್ರಿಟೀಷ್ ವಸಾಹತು ಸಂದರ್ಭದಲ್ಲಿ) ತೆಲಂಗಾಣ ಪ್ರದೇಶದಿಂದ ಮರಾಠಾ ಪ್ರಾಂತ್ಯಕ್ಕೆ ತೆರಳಲು ಮುಖ್ಯ ಮಾರ್ಗವಾಗಿತ್ತು. ರಸ್ತೆ ಮಾರ್ಗದ ಜೊತೆಗೆ ರೈಲು ಸಂಪರ್ಕವನ್ನೂ ಹೊಂದಿದೆ. ಇಲ್ಲಿಯ ಕರಿಯ ನೆಲ ಕೃಷಿ ಕಾಯಕಕ್ಕೆ ಅನುಕೂಲಕರವಾಗಿದೆ. ವಾಣಿಜ್ಯ ಬೆಳೆಯಾದ ತೊಗರಿ ಮತ್ತು ಜೋಳ; ಇಲ್ಲಿ ಬೆಳೆಯುವ ಮುಖ್ಯ ಬೆಳೆಗಳು.

ಶ್ರೀ ಕೋರಿ ಸಿದ್ದೇಶ್ವರರು ಈ ಪರಿಸರದಲ್ಲಿ ನೆಲೆನಂತ ಮೇಲೆ, ನಾಲವಾರ ಗ್ರಾಮ ಪುಣ್ಯ ಕ್ಷೇತ್ರವಾಗಿಯೂ ಹೆಸರುವಾಸಿಯಾಗಿದೆ. ಒಂದೊಮ್ಮೆ ಭೀಮಾ ನದಿಯಾಚೆಗಿನ (ಈಗಿನ ಶಹಾಪುರ ಮತ್ತು ಜೇವರ್ಗಿ ತಾಲೂಕುಗಳ ಪ್ರದೇಶಗಳನ್ನು ಒಳಗೊಂಡಂತೆ) ಜನ ಈ ಪವಿತ್ರ ಕ್ಷೇತ್ರಕ್ಕೆ ಬಂದು, ಶತಮಾನಗಳಿಂದಲೂ ಇಲ್ಲೇ ನೆಲೆನಂತ ಉದಾಹರಣೆಗಳಿವೆ. ಪ್ರಸ್ತುತ ವೀರಬಸಪ್ಪ ವಾರದ್ ಅವರ ಪೂರ್ವಿಕರೂ ಇಂಥದೇ ಒಂದು ಸಂದರ್ಭದಲ್ಲಿ ನಾಲವಾರಕ್ಕೆ ಬಂದು, ಇಲ್ಲೇ ನೆಲೆ ನಿಂತಿರಬಹುದೆ? ಎಂದು ತಿಳಿಯಲು ಕೆಲ ದಾಖಲೆಗಳು ಪುಷ್ಠೀಕರಿಸುತ್ತವೆ. (ಸದ್ಯ ಗುಲಬರ್ಗಾ ಜಿಲ್ಲೆಯ ಜೇವರ್ಗಿ ತಾಲೂಕಿನ ಪ್ಯಾರಸಾಬಾದ್ ಮತ್ತು ಯಾದಗಿರಿ ನಗರದಲ್ಲಿ ವಾರದ್ ಹೆಸರಿನ ಕುಟುಂಬಗಳು ನೆಲೆಸಿದ್ದು, ಮೇಲಿನ ಮಾತಿಗೆ ಮತ್ತಷ್ಟು ಪುಷ್ಠಿ ನೀಡುತ್ತದೆ).

ಮನೆತನದ ಹಿನ್ನೆಲೆ: ೧೭೫೦ರ ಸುಮಾರಿಗೆ ಯಾದಗಿರಿ ಪರಿಸರವನ್ನೊಳಗೊಂಡಂತೆ ಶಹಾಪುರ ಮತ್ತು ಜೇವರ್ಗಿ ತಾಲೂಕುಗಳ ಅನೇಕ ಹಳ್ಳಿಗಳು ಸುರಪುರ ದೊರೆಗಳ ಅಧೀನದಲ್ಲಿದ್ದು, ಸಂಸ್ಥಾನಿಕರ ಸಾಂಸ್ಕೃತಿಕ ಪರಂಪರೆಯೊಂದಿಗೆ ಬೆಸೆದುಕೊಂಡಿದ್ದವು. ಈ ಭಾಗದ ಕೆಲ ಶ್ರೀಮಂತ ವ್ಯಕ್ತಿಗಳು ಸುರಪುರ ದೊರೆಗಳಿಂದ ಜಹಗೀರಿಯನ್ನೂ ಪಡೆದದ್ದುಂಟು. ಇವರು ಅಧಿಕಾರಯುತ ಜೀವನಕ್ಕೆಂದು ಭವ್ಯ ಮನೆಗಳನ್ನು ಕಟ್ಟಿಸಿಕೊಳ್ಳುವುದರ ಮೂಲಕ ರಾಜವೈಭವದ ಸವಿ ಸವಿಯುವಲ್ಲೂ ಹಿಂದೆಮುಂದೆ ನೋಡಲಿಲ್ಲ. ಅರಮನೆಯನ್ನೇ ಹೋಲುವ ಈ ಕಟ್ಟಡಗಳು ಭವ್ಯವು ಮಾತ್ರವಲ್ಲ ಕಲಾತ್ಮಕತೆಯನ್ನು ಒಳಗೊಂಡಿದ್ದವು. ಇವರು ಪ್ರಾಪಂಚಿಕ ಬದುಕಿನೊಂದಿಗೆ ತಮ್ಮ ವಿಲಾಸಿ ಜೀವನವನ್ನು ಪ್ರತೀಕಿಸುವ ಸುಂದರ ಕೆತ್ತನೆವುಳ್ಳ ಶಿಲ್ಪರಚನೆಗಳೊಂದಿಗೆ ವಿವಿಧ ಚಿತ್ತಾರಗಳನ್ನು ತಮ್ಮ ಮನೆಯ ಪಡಸಾಲೆ ಇಲ್ಲವೆ ಶಯನಾಗೃಹಗಳಲ್ಲಿ ಬರೆಯಿಸಿದ್ದಾರೆ. ರಾಯಚೂರಿನ ಖಾಜನಗೌಡರ ಮನೆ, ಮೇಣೇಧಾಳದಲ್ಲಿನ ದೇಸಾಯಿಯವರ ಮನೆ, ದುಬಲಗುಂಡಿಯ ಫತ್ತೇಪುರೆ ಯವರ ಮನೆ, ಚಿತ್ತಾಪುರದ ಜಗನ್ನಾಥರ ಮನೆ, ಯಾದಗಿರಿಯ ಲಿಂಗೇರಿ ಕೋನಪ್ಪನವರ ಮನೆ, ಗಣೇಕಲ್‌ನ ನಾಡಗೌಡರ ಮನೆ, ಮದನಾದಲ್ಲಿನ ದೇಶಮುಖರ ಮನೆ; ಹೀಗೆ ಅನೇಕ ಮನೆಗಳನ್ನಿಲ್ಲಿ ಹೆಸರಿಸಬಹುದು. ಪ್ರಸ್ತುತ ನಾಲವಾರದ ವೀರಬಸಪ್ಪನವರ ಮನೆಯನ್ನೂ ಈ ಪರಂಪರೆಗೆ ಸೇರಿಸಬಹುದು. ಸದ್ಯ ವೀರಬಸಪ್ಪನವರ ವಂಶಸ್ಥರು ಈ ಮನೆಯಲ್ಲಿ ವಾಸವಾಗಿದ್ದಾರೆ

ನಾಲವಾರದಲ್ಲಿನ ವಾರದ್ ಅವರ ಮನೆ ಎರಡು ಶತಮಾನಗಳಿಗೂ ಹಳೆಯದು. ಈ ಮನೆಯಲ್ಲಿ ಶತಮಾನಕ್ಕೂ ಹಿಂದೆಯೇ ಚಿತ್ರಿಸಿರಬಹುದಾದ ಭಿತ್ತಿ ಚಿತ್ರಗಳಿವೆ.

ಉತ್ತರಾಭಿಮುಖವಾಗಿ ಕಟ್ಟಲ್ಪಟ್ಟ ಈ ಮನೆ ಎರಡು ಅಂತಸ್ತುಳ್ಳದ್ದು. ಮುಖ್ಯದ್ವಾರವನ್ನು ಪ್ರವೇಶಿಸುತ್ತಲೇ ಸುಂದರ ಕೆತ್ತನೆವುಳ್ಳ ಕಂಬ-ಬೋದಿಗೆಗಳೊಂದಿಗೆ ಎತ್ತರವಾದ ಹಜಾರದಿಂದ ಸುತ್ತುವರಿಯಲ್ಪಟ್ಟಿದೆ. ಅಂಕಣಗಳಿಗೆ ಜೋಡಿಸಲ್ಪಟ್ಟ ಪ್ರತಿಯೊಂದು ಕಂಬದ ಮೇಲಿನ ಕುಸುರಿ ಕೆತ್ತನೆ ವಿಭಿನ್ನವಾಗಿದೆ. ಹಜಾರದ ವಿನ್ಯಾಸವನ್ನೇ ಹೋಲುವ ಮೇಲಂತಸ್ತಿನ ಕೋಣೆ(ಶಯನಾಗೃಹ)ಯೊಂದರ ಗೋಡೆಯ

* ಪ್ರಾಧ್ಯಾಪಕರು, ದೃಶ್ಯಕಲಾ ಅಧ್ಯಯನ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.



ತುಂಬೆಲ್ಲ ವರ್ಣಚಿತ್ರಗಳಿದ್ದು, ಮನೆಯ ಯಜಮಾನನ ಕಲಾ ಪ್ರೇಮವನ್ನು ಸಾಂಕೇತಿಸುತ್ತವೆ.

ಚಿತ್ರರಚನೆಯ ಹಿನ್ನೆಲೆ: ಕ್ರಿ.ಶ. ೧೮೫೦-೬೦ರ ನಂತರದಲ್ಲಿ ಸಂಸ್ಥಾನಕರ ಆಶ್ರಯ ಕಳೆದುಕೊಂಡ ಕಲಾವಿದ ಕುಟುಂಬಗಳು ತಮ್ಮ ಬದುಕಿನ ನೆಲೆ ಕಂಡುಕೊಳ್ಳಲು ಬೇರೆ ರಾಜ್ಯಗಳಿಗೆ ವಲಸೆ ಹೋಗುವಂಥ ಪರಿಸ್ಥಿತಿ ನಿರ್ಮಾಣ ವಾಗುತ್ತದೆ. ಈ ಸಂದರ್ಭದಲ್ಲಿ ಅಧಿಕಾರಿ ವರ್ಗದವರು, (ದೇಶಮುಖ, ದೇಸಾಯಿ, ಗೌಡ, ಕುಲಕರ್ಣಿ ಇತ್ಯಾದಿ) ಶ್ರೀಮಂತ ವ್ಯಕ್ತಿಗಳು ಮತ್ತು ಮಠಾಧೀಶರು ಈ ವಲಸೆ ಕಲಾವಿದರಿಗೆ ತಾತ್ಪೂರ್ತಿಕ ನೆಲೆ ಒದಗಿಸಿ ಅವರಿಂದ ತಮ್ಮ ಮನೆ-ಮಠಗಳನ್ನು ಚಿತ್ರ-ಶಿಲ್ಪಗಳಿಂದ ಅಲಂಕರಿಸಿ ಕೊಂಡಿದ್ದಾರೆ. (ಈ ಪರಂಪರೆ ನಾಲ್ಕಾರು ದಶಕಗಳವರೆಗೆ ರೂಢಿಯಲ್ಲಿರುತ್ತದೆ) ಪ್ರಸ್ತುತ ವಾರದ್ ಮನೆಯಲ್ಲಿನ ಭಿತ್ತಿ ಚಿತ್ರಗಳೂ ಸಹ ಇಂಥ ಸಂದರ್ಭದಲ್ಲೇ ರಚನೆಗೊಂಡಿರ ಬೇಕು?.

ವಾರದ್ ಅವರ ಮನೆಯಲ್ಲಿನ ಭಿತ್ತಿಚಿತ್ರಗಳಿಗೂ ರಾಯಚೂರಿನ ಖಾಜನಗೌಡರ ಮನೆಯಲ್ಲಿನ ಭಿತ್ತಿಚಿತ್ರ ಗಳಿಗೂ ಸಾಮ್ಯತೆ ಇದೆ. (ಖಾಜನಗೌಡರ ಮನೆಯಲ್ಲಿ ರಾಮಾಯಣ, ಮಹಾಭಾರತಗಳಂತಹ ಪೌರಾಣಿಕ ಹಿನ್ನೆಲೆಯ ಚಿತ್ರಗಳೊಂದಿಗೆ, ಅಲಂಕಾರಿಕ ಚಿತ್ರನಮೂನೆಗಳಿದ್ದರೆ, ವಾರದ್ ಅವರ ಮನೆಯಲ್ಲಿ ಮನುಷ್ಯಾಕೃತಿಗಳ ಬದಲು ಕೋಣೆಯ ನಾಲ್ಕೂ ಗೋಡೆಗಳಲ್ಲಿನ ಕಿಟಕಿ, ಮಾಡುಗಳ ಸುತ್ತಲು ಅಂಚುಗಳನ್ನು ಒಳಗೊಂಡಂತೆ ಎಲೆ-ಹೂಬಳ್ಳಿಯ ವಿನ್ಯಾಸ ಗಳನ್ನು ಮಾತ್ರ ಬರೆಯಲಾಗಿದೆ. ಆದರೆ, ಚಿತ್ರಿತ ಶೈಲಿ ಮತ್ತು ವರ್ಣಲೇಪನದಲ್ಲಿ ಖಾಜನಗೌಡರ ಮನೆಯಲ್ಲಿನ ಚಿತ್ರವಿನ್ಯಾಸ ವನ್ನು ಹೋಲುತ್ತವೆ) ಖಾಜನಗೌಡರ ಮನೆಯಲ್ಲಿನ ಚಿತ್ರಗಳು ೧೯೧೦-೨೦ರ ಅವಧಿಯಲ್ಲಿ ರಚನೆಗೊಂಡಿವೆ. ಈ ಮನೆಯಲ್ಲಿನ ಚಿತ್ರರಚನಾ ಕಾರ್ಯ ಮುಗಿದಾದ ಮೇಲೆ ಆ ಕಲಾವಿದ ಕುಟುಂಬ ಮತ್ತೊಂದೆಡೆ ನೆಲೆ ಕಂಡುಕೊಳ್ಳುತ್ತಿರು ವಾಗಲೇ, ಖಾಜನಗೌಡರ ಅಣತಿಯಂತೆ ನಾಲವಾರಕ್ಕೆ ಬಂದು ಇಲ್ಲಿನ ವಾರದ್ ಮನೆಯಲ್ಲಿ ಚಿತ್ರಿಸಿರಲು ಸಾಧ್ಯವಿದೆ.

ಚಿತ್ರರಚನೆಯ ತಾಂತ್ರಿಕ ಹಿನ್ನೆಲೆ: ಚಿತ್ರರಚನೆಗೂ ಮುನ್ನ ಗೋಡೆಯ ಮೇಲ್ಮೈಯನ್ನು ಗಾರೆಯಿಂದ ನುಣುಪಾಗಿಸಿ ಕೊಳ್ಳಲಾಗಿದೆ. ಚಿತ್ರಾವಕಾಶಕ್ಕೆ ಸರಿಹೊಂದುವಂತೆ ಪಟ್ಟಿಕೆಗಳನ್ನು ಮಾಡಿಕೊಂಡು ಚಿತ್ರ ಬಿಡಿಸಲಾಗಿದೆ. ಇಲ್ಲಿ ಚಿತ್ರಾವಕಾಶಕ್ಕೆ ಮಾಡಿಕೊಳ್ಳಲಾದ ಪಟ್ಟಿಕೆಗಳಿಗೂ ಸೇಡಮ್ ಶಿವಶಂಕರಸ್ವಾಮಿ ಮಠದಲ್ಲಿನ ಚಿತ್ರಪಟ್ಟಿಕೆಗಳಿಗೂ ಹೋಲಿಕೆ ಇದೆ. (ಬಹುಶಃ ಚಿತ್ರರಚನೆಗೂ ಮುನ್ನ ಪ್ರತ್ಯೇಕ ಪಟ್ಟಿಕೆಗಳನ್ನು ಮಾಡಿಕೊಳ್ಳುವ ಪದ್ಧತಿ ಈ ವೇಳೆ ರೂಢಿಯಲ್ಲಿತ್ತೆಂದು ಇದರಿಂದ ತಿಳಿಯ ಬಹುದಾಗಿದೆ) ಹೂ-ಬಳ್ಳಿಗಳ ವಿನ್ಯಾಸ, ಎಲೆಗಳ ವಿನ್ಯಾಸ, ಮಾಡುಗಳ ಸುತ್ತಲಿನ ಅಂಚು ಮತ್ತು ಅಶೋಕ ವೃಕ್ಷದ ಚಿತ್ತಾರಗಳು; ರಂಗಂಪೇಟೆಯ ರುದ್ರಸ್ವಾಮಿ ಮಠದಲ್ಲಿನ ಚಿತ್ರಗಳು ಮತ್ತು ರಾಯಚೂರು ಖಾಜನಗೌಡರ ಮನೆಯಲ್ಲಿನ ಚಿತ್ರಗಳನ್ನು ಹೋಲುತ್ತವೆ. ಮೂಲವರ್ಣಗಳನ್ನು ಪ್ರಧಾನವಾಗಿರಿಸಿ ಕೊಂಡಿದೆಯಾದರೂ, ಚಿತ್ರಿತ ವಿಷಯಕ್ಕೆ ಅನುಗುಣವಾಗಿ ಅಲ್ಲಲ್ಲಿ ಮಿಶ್ರವರ್ಣಗಳ ಬಳಕೆ ಮಾಡಿಕೊಳ್ಳ ಲಾಗಿದೆ.

ಕಳೆದೊಂದು ದಶಕದಿಂದ ಮನೆಯ ವಾರಸುದಾರರು ಬೇರೆ ಕಡೆ ನೆಲೆನಿಂತ ಕಾರಣ ಈ ಮನೆ ಪಾಳುಬಿದ್ದಿದೆ. ಕಟ್ಟಡದ ಮೇಲ್ಮಾಳಿಗೆ ಜೀರ್ಣಗೊಂಡಿದ್ದು, ಕೆಲವು ಕಡೆ ಬಿದ್ದುಹೋಗಿದೆ. ಮಳೆಗಾಲದಲ್ಲಿ ಗೋಡೆಗಳ ಬದಿಗೆ ನೀರು ಜಿನುಗುವುದರಿಂದ ಚಿತ್ರಿತ ಗೋಡೆಗಳ ಮೇಲಿನ ಗಾರೆ ಉದುರುತ್ತಲಿದ್ದು, ಚಿತ್ರಗಳೂ ಸಹ ವರ್ಣಕಾಂತಿಯನ್ನು ಕಳೆದುಕೊಳ್ಳುತ್ತಿವೆ. ದೇಸೀ ಚಿತ್ರಸಂಪ್ರದಾಯವನ್ನು ಪ್ರತಿನಿಧಿಸುವ ಈ ಕಲಾಸಂಪತ್ತು ವಿನಾಶ ಹೊಂದುವ ಮುನ್ನ ಒಂದೆಡೆ ದಾಖಲೀಕರಣಗೊಳ್ಳುತ್ತಿರುವುದು ಸಂತಸದ ವಿಷಯ.

೪೦

ಚಾರಿತ್ರಿಕ ದಾಖಲೆಗಳಾಗಿ ಚಿತ್ತಾರ ಗೊಂಬೆಗಳು

ಟಿ. ಗೋವಿಂದರಾಜು*

ರಾಜಕೀಯವೂ ಸೇರಿದಂತೆ, ಸಾಮಾಜಿಕ, ಸಾಂಸ್ಕೃತಿಕ ಆಗುಹೋಗುಗಳೂ ಒಟ್ಟಾರೆ ಬದುಕಿನ ಇತಿಹಾಸದ ಭಾಗವಾಗಿದ್ದು, ಅವೆಲ್ಲವನ್ನೂ ಇಡೀಯಾಗಿ ಅಧ್ಯಯನ ಮಾಡುವ ಅಗತ್ಯವನ್ನು ಇತಿಹಾಸಕಾರರು ಮನಗಂಡಿದ್ದಾರೆ. ಇದರ ಅಂಗವಾಗಿಯೇ, ವಿವಿಧ ರೂಪದ ಸಾಕ್ಷ್ಯಗಳನ್ನು ಅಧ್ಯಯನದ ಆಕರಗಳಾಗಿ ಪರಿಭಾವಿಸಲಾಗುತ್ತಿದೆ. ಆದರೂ, ಈವರೆಗೂ ಗಮನಿಸದ ಅಥವಾ, ನಿರ್ಲಕ್ಷ್ಯ ಮಾಡಿರುವ ಇನ್ನಿತರ ಹೊಸ ರೂಪದ ದಾಖಲೆಗಳನ್ನೂ ಆಕರಗಳಾಗಿ ಬಳಸಿಕೊಳ್ಳಬೇಕಾದ ಅಗತ್ಯವಿದೆ. ಆಧುನಿಕ ತಂತ್ರಜ್ಞಾನದ ಉಪ ಉತ್ಪನ್ನಗಳಾದ ಛಾಯಾಚಿತ್ರ, ಚಲನಚಿತ್ರ, ವಿಡಿಯೊ ಗಳು, ಅಲ್ಲದೆ, ಕಲಾತ್ಮಕ ಅಭಿವ್ಯಕ್ತಿಗಳೆನಿಸಿದ ವರ್ಣಚಿತ್ರ, ಶಿಲ್ಪಕಲಾರೂಪಗಳೂ ಕಾಲಾಂತರದದಲ್ಲಿ ಚಾರಿತ್ರಿಕ ಅಧ್ಯಯನದ ಅಮೂಲ್ಯ ಆಕರಗಳಾಗುತ್ತವೆ. ನಾನು ಗುರುತಿಸಿ ಈಗಾಗಲೇ ಬಳಸಿಕೊಂಡಿರುವಂತೆ, ಗೊಂಬೆ ಆಟದ ಪ್ರಮುಖ ಮಾದರಿಗಳಲ್ಲಿ ಒಂದೆನಿಸಿದ ಚಿತ್ತಾರಗೊಂಬೆ ಕೃತಿಗಳೂ ಅಂತಹ ದಾಖಲೆ ಮಹತ್ವವನ್ನು ಹೊಂದಿವೆ ಎಂಬುದನ್ನು ಪ್ರಾಜ್ಞರ ಮುಂದೆ ಪ್ರಸ್ತುತ ಪಡಿಸಲಿಚ್ಛಿಸುತ್ತೇನೆ. ಇವುಗಳ ಮಹತ್ವ ಹಾಗೂ ಬಳಕೆಯ ಸಾಧಕ-ಬಾಧಕಗಳ ಬಗ್ಗೆ ಪರಿಶೀಲಿಸಬಹುದಾಗಿದೆ. ಚಿತ್ತಾರ ಗೊಂಬೆ ಆಟವನ್ನು ಪ್ರಾದೇಶಿಕವಾಗಿ ಗೊಂಬೆರಾಮರ ಆಟ, ತೊಗಲುಗೊಂಬೆ ಆಟ, ಕಿಳ್ಳೇಕ್ಯಾತರಾಟ, ಕಟಬರಾಟ, ಮೊದಲಾದ ಹೆಸರುಗಳಿಂದ ಗುರುತಿಸಲಾಗುತ್ತಿದೆ. ಇಂಗ್ಲಿಷ್‌ನಲ್ಲಿ ಶಾಡೊ ಪಪೆಟ್ ಅಥವಾ ಲೆದರ್ ಪಪೆಟ್ ಎನ್ನಲಾಗುತ್ತಿದೆ. ಆದರೆ, ಈ ಗೊಂಬೆ ಮಾಧ್ಯಮದಲ್ಲಿ ಚಿತ್ತಾರವೇ ಬಹು ಮುಖ್ಯವಾದು ದರಿಂದ ಈ ಕಲೆಯನ್ನು ಚಿತ್ತಾರ ಗೊಂಬೆಯಾಟ ಎಂದು ಗುರುತಿಸುವುದೇ ಹೆಚ್ಚು ಅರ್ಥಪೂರ್ಣ ಎಂಬುದನ್ನು ಈಗಾಗಲೇ ಸ್ಪಷ್ಟಪಡಿಸಲಾಗಿದೆ (ವಿವರಕ್ಕೆ: ಗೊಂಬೆ ರಾಮರ ಸಂಸ್ಕೃತಿ-ಟಿ. ಗೋವಿಂದರಾಜು; ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಕಟಣೆ, ೧೯೯೩).

ಹೆಸರೇ ಸೂಚಿಸುವಂತೆ, ಇವು ಜಿಂಕೆ (ಈಚೆಗೆ ಮೇಕೆ) ಚರ್ಮದಂತಹ ಮಾಧ್ಯಮದ ಮೇಲೆ ಬರೆದ ಬಣ್ಣದ ಚಿತ್ತಾರಗಳಿಂದಾದ ಗೊಂಬೆಗಳು. ಇವುಗಳಿಗೆ ಧಾರ್ಮಿಕ ಮಹತ್ವ ಇರುವಂತೆ, ಸಾಂಸ್ಕೃತಿಕ ಮತ್ತು ಸಾಮಾಜಿಕ ಮಹತ್ವಗಳೂ ಇವೆ. ಗೊಂಬೆ ಪ್ರದರ್ಶನ ಒಂದು ಪುಣ್ಯದ ಕೆಲಸ ಎಂಬ ನಂಬಿಕೆ ಗ್ರಾಮೀಣರಲ್ಲಿ ಬಲವಾಗಿ ಇದ್ದುದರಿಂದ, ಅನುಕೂಲಸ್ಥರು ಪ್ರದರ್ಶನಕ್ಕೆ ವಿಶೇಷ ಅವಕಾಶ ಒದಗಿಸಿಕೊಡುತ್ತಿದ್ದುದಲ್ಲದೆ, ವಿಶೇಷ ದಾನಗಳನ್ನೂ ಕೊಡುವ ಪದ್ಧತಿ ಇದ್ದಿತು.

ಗೊಂಬೆರಾಮರಲ್ಲಿ "ಗೊಂಬೆ ಕಟ್ಟುವುದು" ಎಂಬ ಪದವೊಂದು ಚಾಲ್ತಿಯಲ್ಲಿದೆ. ಗೊಂಬೆ ಆಟದವರಿಗೆ ಕಿರುಕುಳ ನೀಡಿದ ಅಥವಾ, ಮೋಸ ಮಾಡಿದವರ ಹೆಸರಲ್ಲಿ ಒಂದು ಗೊಂಬೆಯನ್ನು ಬರೆದು, ಅದನ್ನು ಆಟದ ನಡುವೆ ಪ್ರದರ್ಶಿಸಿ, ಊರೂರಲ್ಲಿ ಎಲ್ಲರ ಮುಂದೆ ಅವರನ್ನು ಅವಹೇಳನ ಮಾಡುವುದು ಹಿಂದೆ ಸಾಮಾನ್ಯವಾಗಿತ್ತು. ಊರವರ ಮಾತಿಗೆ ಬೆಲೆ ಕೊಡದ ಕೆಲ ಪೋಕರಿಗಳ ಬಗ್ಗೆ ಗೊಂಬೆ ಕಟ್ಟುವಂತೆ ಮುಖಂಡರೇ ಗೊಂಬೆರಾಮರಿಗೆ ಕುಮ್ಮಕ್ಕು ಕೊಡುತ್ತಿದ್ದರಂತೆ.

ಇಂಥಾ ಗೊಂಬೆಗಳಲ್ಲಿ ಅವರ ಯಾರ ಹೆಸರುಗಳನ್ನೂ ಬರೆಯುತ್ತಿರಲಿಲ್ಲ. ಬದಲಿಗೆ, ಪ್ರದರ್ಶನದಲ್ಲಿ ಮಾತ್ರ ಮಾತಿನಲ್ಲಿಯೇ ಉದ್ದೇಶಿತ ವ್ಯಕ್ತಿಯ ಮಾಹಿತಿ ವಿವರಿಸಿ ಅವರ ಮುಖಭಂಗ ಮಾಡುತ್ತಿದ್ದರು. ಅದಕ್ಕೆ ಹೆದರಿದ ಅಪರಾಧಿಗಳು ತಪ್ಪು ಒಪ್ಪಿಕೊಂಡು, ದಂಡ ಕೊಡುವವರೆಗೂ ಅದು ಮುಂದುವರೆಯುತ್ತಿತ್ತು.

ಇದರ ಹೊರತಾಗಿ, ತಮಗೆ ದಾನ ನೀಡಿ, ಗೌರವಿಸಿದ ಉದಾರಿಗಳ ಹೆಸರಲ್ಲಿ ಗೊಂಬೆ ಪ್ರದರ್ಶಿಸಿ, ಅವರನ್ನು ಕೊಂಡಾಡುವುದೂ ಗೊಂಬೆ ಆಟದಲ್ಲಿ ಪದ್ಧತಿಯಾಗಿತ್ತು. ತಮ್ಮ ಹಿರಿಯರ ಗೌರವಾರ್ಥ ಮಕ್ಕಳು 'ಪಟ ಬರೆಸು' ತ್ತಿದ್ದುದೂ ಉಂಟು (ಈ ಪ್ರಕ್ರಿಯೆಯ ವಿವರಕ್ಕೆ ನೋಡಿ : ಚಿತ್ತಾರ ಗೊಂಬೆ ಚಿತ್ರಕಲೆ- ಟಿ. ಗೋವಿಂದರಾಜು; ಕರ್ನಾಟಕ ಲಲಿತಕಲಾ ಅಕಾಡಮಿ ಪ್ರಕಟಣೆ, ೨೦೦೪). ದಾನಯನ್ನು ಹೋಲುವ ರೀತಿಯ ಗೊಂಬೆ ಚಿತ್ರಿಸಿ, ಅವುಗಳ ಅಡಿ ಭಾಗದಲ್ಲಿ ದಾನದ ವಿವರಗಳನ್ನೂ ಅಕ್ಷರಗಳಲ್ಲಿ ಸ್ಪಷ್ಟವಾಗಿ ದಾಖಲಿಸಲಾಗುತ್ತಿದ್ದಿತು. ದಾನಿಯ ವಿವರ, ಅಂದರೆ, ಯಾರ

* # ೭೬೫, ೩ನೇ ಮುಖ್ಯರಸ್ತೆ, ಕಿರ್ಲೋಸ್ಕರ್ ಬಡಾವಣೆ, ಹೆಸರುಘಟ್ಟ ರಸ್ತೆ, ಬೆಂಗಳೂರು-೫೬೦೦೭೩.

ನೆನಪಿಗಾಗಿ ಆ ಗೊಂಬೆ ಮಾಡಲಾಗಿದೆಯೊ ಅವರ ಹೆಸರು, ದಾನವಾಗಿ ಕೊಟ್ಟ ವಸ್ತ್ರಾಭರಣ ಇತ್ಯಾದಿ ವಿವರ, ದಾನ ಪಡೆದ ಕಲಾವಿದನ ವಿವರ, ಇವರ ಊರು, ದಿನಾಂಕ ಇತ್ಯಾದಿ ಮಾಹಿತಿಗಳು ಅಲ್ಲಿ ದಾಖಲಾಗುತ್ತಿದ್ದವು. ಪ್ರೇಕ್ಷಕರಿಗೆ ಪದೇ ಪದೇ ಕಾಣಿಸಿಕೊಳ್ಳಲೆಂಬ ಉದ್ದೇಶದಿಂದ, ಪ್ರಸಿದ್ಧ ಪೌರಾಣಿಕ ಪಾತ್ರದ ಗೊಂಬೆ ಚಿತ್ರದ ಅಡಿಯಲ್ಲಿಯೇ ದಾನಿಯ ವಿವರ ದಾಖಲಿಸುತ್ತಿದ್ದುದೇ ಹೆಚ್ಚಾಗಿತ್ತು.

ಇಂಥಾ ಗೊಂಬೆಗಳನ್ನು ಕಲಾವಿದರು ಜತನದಿಂದ ತಮ್ಮಲ್ಲಿ ಉಳಿಸಿಕೊಂಡಿದ್ದು, ಮತ್ತೆ ವಾರ್ಷಿಕ ಸುತ್ತಾಟದಲ್ಲಿ ಅದೇ ಊರಿಗೆ ಹೋದಾಗ, ಆಟದ ನಡುವಿನ ಪ್ರಸಂಗದಲ್ಲಿ ಆ ಗೊಂಬೆಯನ್ನು ಪ್ರದರ್ಶಿಸಿ, ಅಥವಾ, ಇತರ ಊರುಗಳಲ್ಲಿಯೂ ಇದೇ ರೀತಿ ಪ್ರದರ್ಶಿಸಿ, ದಾನಿಯನ್ನೂ, ಮತ್ತವರ ಮನೆತನವನ್ನೂ ಕೊಂಡಾಡುತ್ತಿದ್ದರು. ಆ ಮೂಲಕ ಇನ್ನಷ್ಟು ದಾನ ಪಡೆವ, ದಾನ ಕ್ರಿಯೆಗೆ ಇತರರನ್ನೂ ಪ್ರಚೋದಿಸುವ ಪ್ರಯತ್ನ ಮಾಡುತ್ತಿದ್ದರು.

ಗೊಂಬೆ ಕಲಾವಿದರು ಗ್ರಾಮೀಣರಿಂದ ಉಡುಗೆ, ತೊಡುಗೆ, ಸಾಕು ಪ್ರಾಣಿ, ದವಸ (ಕೆಲವೊಮ್ಮೆ ಇನಾಮು ಜಮೀನು) ಇತ್ಯಾದಿಗಳನ್ನು ದಾನವಾಗಿ ಪಡೆಯುತ್ತಿದ್ದುದುಂಟು. ಗೊಂಬೆಗಳನ್ನೇ ದಾನವಾಗಿ ಪಡೆಯುತ್ತಿದ್ದ ನಿದರ್ಶನಗಳಿಲ್ಲವಾದರೂ, ಕೆಲವರು ಬೇಟೆಯಾಡಿದಾಗ ದೊರೆತ ಜಿಂಕೆ ಚರ್ಮವನ್ನು ಕಲಾವಿದರಿಗೆ ಉಚಿತವಾಗಿ ನೀಡುತ್ತಿದ್ದರು. ಇದರಿಂದ ಕಲಾವಿದರ ಆಟಕ್ಕೆ ಕೆಲವು ಹೊಸಾ ಗೊಂಬೆಗಳು ಲಭ್ಯವಾಗುತ್ತಿದ್ದವು. ದಾನಗಳಿಗೆ ಸುತ್ತಲ ಊರುಗಳಲ್ಲಿ ತನ್ನ ಹೆಸರನ್ನು ಕೊಂಡಾಡಲಾಗುತ್ತದೆಂಬ ಹೆಮ್ಮೆ ಇರುತ್ತಿತ್ತು. ಆತನ ಮನೆಯವರಿಗೆ, ತನ್ನ ಪೂರ್ವಿಕರ ದಾಖಲೆಯೊಂದು ಹಾಗೆ ಉಳಿದದ್ದು ವಿಶೇಷವೆನಿಸುತ್ತಿತ್ತು. ಹಣ, ದವಸ, ವಸ್ತ್ರ, ಸಾಕುಪ್ರಾಣಿಗಳು ಅವರಲ್ಲಿ ಬಹಳ ಕಾಲ ಉಳಿಯುತ್ತಿರಲಿಲ್ಲ. ಅಲೆಮಾರಿಗಳಾಗಿದ್ದ ಕಲಾವಿದರು ದಾನದ ಜಮೀನನಲ್ಲಿ ಬೆಳೆ ತೆಗೆವ ಶ್ರಮವನ್ನೂ ಒಲ್ಲದವರಾದ್ದರಿಂದ ಬೇಗ ಮಾರಿಕೊಂಡು ಬಿಡುತ್ತಿದ್ದರು. ಅಲ್ಲದೇ, ಅದನ್ನು ಇತರ ಊರುಗಳಲ್ಲಿ ತೋರಿಸಿ, ಕೊಂಡಾಡುವುದೂ ಸಾಧ್ಯವಿರಲಿಲ್ಲ. ಈ ಎಲ್ಲಾ ದೃಷ್ಟಿಯಿಂದ ಗೊಂಬೆ ಕಟ್ಟುವುದು ಅಥವಾ ಪಟ ಬರೆಸುವ ಪರಿಕಲ್ಪನೆಯನ್ನು ಕಲಾವಿದರೇ ಹುಟ್ಟು ಹಾಕಿಕೊಂಡಿದ್ದರೆ ಆಶ್ಚರ್ಯವೇನಿಲ್ಲ. ಇದರಿಂದ ಅವರಿಗೆ ಎರಡೂ ಮಾರ್ಗದಲ್ಲಿ ಪ್ರತಿಫಲಗಳು ದೊರೆಯುತ್ತಿದ್ದಿತು.

ದಾನಿಯ ಮಾಹಿತಿ ಬರೆದ ಗೊಂಬೆಗಳನ್ನು ಹಾಸನ ಭಾಗದಲ್ಲಿ, ಪಾರಿಭಾಷಿಕವಾಗಿ "ಪಟದ ಗೊಂಬೆ" ಎಂದು ಕರೆಯುತ್ತಾರೆ. 'ಪಟ' ಎಂಬುದು 'ಫೋಟೋ' ಎಂಬರ್ಥದಲ್ಲಿ ಬಳಕೆಯಾಗಿರುವ ಸಾಧ್ಯತೆ ಇದೆ. ಇದು ದಾನಶಾಸನ, ತಾಮ್ರಪತ್ರ ಅಥವಾ ಈಗಿನ ಸರ್ಟಿಫಿಕೇಟ್‌ಗಳಂತೆ ಎನ್ನಬಹುದು. ಈ ಗೊಂಬೆಗಳು ಸಾಮಾನ್ಯವಾಗಿ ಎರಡು ಅಡಿಗೂ ಹೆಚ್ಚು ದೊಡ್ಡ ಆಕಾರದಲ್ಲಿದ್ದು, ಚಿತ್ರದ ತಳ ಭಾಗದ ಖಾಲಿ ಸ್ಥಳದಲ್ಲಿ (ಬಹುಶಃ ಅದಕ್ಕಾಗಿ ಆ ಸ್ಥಳ ಉಳಿಸಿ) ದಾನ ಪ್ರಕ್ರಿಯೆಯ ವಿವರವನ್ನು ತಾಡಪತ್ರ, ವಸ್ತ್ರ, ಅಥವಾ ಕಾಗದದ ಮೇಲೆ ಬರೆದಂತೆ, ಕಪ್ಪು ಬಣ್ಣದಲ್ಲಿ ಲೇಖಿಸುತ್ತಿದ್ದರು. ಕೆಲವೊಮ್ಮೆ, ಒಂದೇ ಗೊಂಬೆ ಮೇಲೆ ಬೇರೆ ಬೇರೆ ಅವಧಿಯಲ್ಲಿನ ದಾನಗಳ ಹೆಸರುಗಳೂ ಉಕ್ತವಾಗುತ್ತಿದ್ದವು.

ಹಳೆಯ ಚಿತ್ತಾರ ಗೊಂಬೆಗಳಿಂದ ನಕಲು ಮಾಡಿ ಹೊಸ ಗೊಂಬೆಗಳನ್ನು ಮಾಡಿಕೊಳ್ಳುವ ಪರಿಪಾಠವೇ ಹೆಚ್ಚು. ಆದರೂ, ಯಾರಾದರೂ ಕುಶಲ ಕಲಾವಿದ ಸ್ವಂತ ಪರಿಕಲ್ಪನೆಯಿಂದ ಗೊಂಬೆಯನ್ನು ಬರೆದಾಗ ಅದರಲ್ಲಿ ಇಂಥಾ ಕಲಾವಿದ ಬರೆದದ್ದು ಎಂದು ತನ್ನ ಹೆಸರನ್ನು ಬರೆದುಕೊಳ್ಳುತ್ತಿದ್ದುದೂ ಇದೆ.

ಇಂಥಾ ಗೊಂಬೆಗಳಿಂದ ಅಧ್ಯಯನಕಾರರಿಗಾಗುವ ಉಪಯೋಗಗಳೆಂದರೆ–

ಆ ಗೊಂಬೆ ಎಷ್ಟು ಹಳೆಯದೆಂಬುದು ಸ್ಪಷ್ಟವಾಗುತ್ತದೆ.

ಆ ಕಾಲದ ಚಿತ್ತಾರ ಶೈಲಿ, ಅಲ್ಲಿ ಚಿತ್ರಿತವಾಗಿರುವ ವಿವರಗಳಿಂದ, ಆಗಿನ ಉಡುಗೆ-ತೊಡುಗೆ, ಜೀವನ ಶೈಲಿ, ಆಯುಧೋಪಕರಣಗಳ ಮಾಹಿತಿ ಇತ್ಯಾದಿಗಳನ್ನು ಗಮನಿಸಿ, ತೌಲನಿಕ ಅಧ್ಯಯನಕ್ಕೆ ಬಳಸಿಕೊಳ್ಳಬಹುದು.

ಆ ಕಾಲದ ಕಲಾವಿದ, ಅವನ ಕುಶಲತೆ, ಆ ಕಲಾವಿದರ ಪ್ರಸರಣ, ಕೌಟುಂಬಿಕ ವಿವರ, ದಾನಿ ಮತ್ತವನ ಕುಟುಂಬದ ಚಾರಿತ್ರಿಕ ವಿವರ, ಆ ಕಾಲದ ಸಾಮಾಜಿಕ, ಧಾರ್ಮಿಕ ಮನೋಭಾವ.. ಇತ್ಯಾದಿಗಳನ್ನು ಖಚಿತವಾಗಿ ಗುರುತಿಸಬಹುದಾಗಿದೆ. ಈ ದಾನಿಗಳು ರಾಜ, ಮಹಾರಾಜರು ಅಲ್ಲವಾದರೂ, ಅವರೆಲ್ಲಾ ಉದಾರ ಮನೋಭಾವದ ಸ್ಥಳೀಯ ಕೃಷಿಕರಾಗಿರುತ್ತಿದ್ದರು. ಹೀಗಾಗಿ, ರಾಜ, ಮಹಾರಾಜರ ದಾಖಲೆಗಳಲ್ಲಿ ಪ್ರಸ್ತಾಪವಾಗದ ಎಷ್ಟೋ ಗ್ರಾಮೀಣ ಮುಖಂಡರ ಮಾಹಿತಿಗೆ ಈ ಗೊಂಬೆಗಳು ಮಹತ್ವದ ದಾಖಲೆಗಳಾಗುತ್ತವೆ. ಅಂದರೆ, 'ಸ್ಥಳೀಯ ಇತಿಹಾಸ'ದ ಅಧ್ಯಯನಕ್ಕೆ ಇವು ಆಕರಗಳಾಗುತ್ತವೆ. ನನ್ನ ಕೆಲವಾರು ವರ್ಷಗಳ ಕ್ಷೇತ್ರಕಾರ್ಯದಲ್ಲಿ ಹಾಸನ, ರಾಯಚೂರು ಮೊದಲಾದೆಡೆಯ ಬೇರೆ ಬೇರೆ ಸ್ಥಳಗಳಲ್ಲಿ ಇಂಥಾ ದಾಖಲೆ ಗೊಂಬೆಗಳು ಕಂಡುಬಂದಿರುವುದರಿಂದ, ಈ ರೀತಿ ಗೊಂಬೆಗಳನ್ನು ದಾನವಾಗಿ ಬರೆಸಿಕೊಡುವ ಪದ್ಧತಿ ರಾಜ್ಯದಲ್ಲಿ ವ್ಯಾಪಕವಾಗಿದ್ದಿತೆಂದು ಊಹಿಸಬಹುದಾಗಿದೆ. ಆದರೂ, ತೀರಾ ಹಾಳಾದ ಹಳೆಯ ಗೊಂಬೆಗಳನ್ನು ಮನೆಯಲ್ಲಿ ಇರಿಸಿಕೊಳ್ಳಬಾರದೆಂದು ಹರಿವ ನೀರಲ್ಲಿ ವಿಸರ್ಜಿಸುವ ನಡವಳಿ ಇದ್ದುದರಿಂದ, ಹಳೆಯ ಮಾದರಿಯ ಹೆಚ್ಚಿನ ಗೊಂಬೆಗಳು ಇಂದು ಅಲಭ್ಯವಾಗಿವೆ. ನಮ್ಮ ಹಿಂದಿನ ವಿದ್ವಾಂಸರು ಗೊಂಬೆ ಕಲೆ ಮತ್ತು, ಆ ಸಮುದಾಯದ

ಅಧ್ಯಯನಕ್ಕಷ್ಟೇ ಗಮನ ಕೊಟ್ಟಿದ್ದುದರಿಂದ, ಗೊಂಬೆಗಳಲ್ಲಿನ ಒಕ್ಕಣೆಯ ಬಗೆಗೆ ನಿರ್ಲಕ್ಷ್ಯ ಮಾಡಿದಂತಿದೆ. ಹಾಗಾಗಿ, ತೀರಾ ಹಿಂದಿನ ದಾಖಲೆಗಳು ನಮಗೆ ಕಂಡುಬರುತ್ತಿಲ್ಲ. ಆದರೂ, ಒಂದು ಶತಮಾನದಷ್ಟು ಹಳೆಯ ದಾಖಲೆಗಳಿರುವ ಗೊಂಬೆಗಳನ್ನಂತೂ ನಾನು ಪತ್ತೆ ಮಾಡಿ, ದಾಖಲಿಸಿ ಕೊಂಡಿದ್ದೇನೆ.

ದಾನ ಒಕ್ಕಣೆಯ ಮಾದರಿಗಳು

ಅಧ್ಯಯನ ಸಂದರ್ಭದಲ್ಲಿ ನಾನು ಗಮನಸಿದ ಕೆಲ ದಾನ ಒಕ್ಕಣೆಯ ಮಾದರಿಗಳು ಹೀಗಿವೆ:

ಮಾದರಿ–೧: ಕುದುರೆ ಸವಾರನ ಚಿತ್ರಣವಿರುವ ಗೊಂಬೆಯ ಅಡಿ ಭಾಗದಲ್ಲಿ ಕಪ್ಪು ಬಣ್ಣದಲ್ಲಿ ಬರೆದ ಸಾಲುಗಳು ಇವು:

ತಾ. ೧೫–೭–೧೯೦೭ರಲ್ಲೂ
ಆಲೂರು ಸಬ್ ತಾಲ್ಕು ಆಲೂರ್‍ರು ಹೋಬಳಿ ಪೂಣುಸು ವಳಿರುವ ಇರೇ ಗೌಡ್ರಮಗ ಬಸ್ಯೆಗೌಡ್ರರು ಕೊಂಬೆ ಆಟದ ಗುಂಡ್ಯೆಯ್ಯನ ಮಗ/ ಹನುಮಂತ್ಯೆಯ್ಯನಿಗೆ ಇನಾಮತೂ ಎಂದು ೨೫ ಇಪ್ಪತ್ತೆದೂ ರೂಪಾಯಿದು ಬೆಳ್ಳಿ ಕಲಪತಿನ ರುಮಾಲೂ ಕೊಟ್ಟು
ಕುದುರೆ ಪಟವಂನ್ನು ಬರಶಿ ಇ/ದೆ– ತಂದೆ ಇರೆಗೌಡ್ರ ಪಟ
ಬಿಕಲಂ/ ವೂಪಾದ್ಯ ಬಸ್ಯೆಗೌಡ್ನ ಬರಹ ಗ್ರಾಮತವನಂಧಿ(?)
ಸಹಿ/

ಈ ಸಾಲುಗಳ ಕೆಳಗೆ ಕರೇಹಳ್ಳಿ ಗ್ರಾಮದ ಇನ್ನೊಬ್ಬ ದಾನಿಯ ಹಸರೂ ಇದೆ. ವಿವರ ಅಸ್ಪಷ್ಟ; ಅಕ್ಷರ ಮಾಸಿದೆ.

ಮಾದರಿ–೨: ಕೃಷ್ಣನು ಸಾರಥಿಯಾಗಿರುವ ರಥದಲ್ಲಿ ಧನುರ್ಧಾರಿಯಾಗಿ ಕುಳಿತಿರುವ ಅರ್ಜುನನ ಚಿತ್ರವಿರುವ ಒಂದು ಸಂಯೋಜಿತ ಗೊಂಬೆಯ ಅಡಿ ಒಂದರ ಪಕ್ಕ ಒಂದರಂತೆ ಮೂರು ಕಾಲಂಗಳಲ್ಲಿ ಎರಡು ಒಕ್ಕಣೆಗಳು ಇವೆ. ಇವನ್ನು ಇಬ್ಬರು ಬೇರೆ ಬೇರೆ ಲಿಪಿಕಾರರು ಬೇರೆ ಬೇರೆ ದಿನಾಂಕಗಳಲ್ಲಿ ಕರೀ ಮಸಿಯ ಲೇಖನಿಯಲ್ಲಿ ಬರೆದಿದ್ದಾರೆ:

೧. ತಾ. ೮–೫–೫೦
ಉಲಿವಾಲದ ಗ್ರಾಮದಲ್ಲಿ ಬರೆದಿದ್ದು
ಸಂಜೀವಯ್ಯನ ಮಗ ರಾಮಯ್ಯ
ಬರೆದಿದ್ದು – ಅರ್ಜುನನ ರಥ
ಸತ್ತಿಗನ ಹಳ್ಳಿ ಕೊಪ್ಪಲು
ಸಂಜೀವಯ್ಯ
೨. ಹಾಸನ ತಾಲ್ಲೂಕು ಕಟ್ಟಾಯ
ಹೋಬಳಿ ಪಾರಸ್ನಹಳ್ಳಿ ಕೊಪ್ಪಲು
ಯಜಮಾನರು ಅಪ್ಪಣ್ಣೈಯ್ಯ
ನ ಮಕ್ಕಳು ತ್ತಿಮ್ಮಪ್ಪ – ವೆಂಕ್ಟಯ್ಯ ನಾವು ಇಬ್ಬ
ರು ನಮ್ಮ ತಂದೆ ಹೆಸರು
ದೇಶ ದೇಶದ ಮೇಲೆ
ಹೊಗಳ ಬೇಕೆಂದು
ಗಡಿಯಪ್ಪನ ಮಗ ರಾಮಯ್ಯ
ನಿಗೆ ವಂದು ಆಡುಮರಿಯನ್ನು
ಕೊಟ್ಟಿದ್ದಕ್ಕೆ
ಲೋಕದ ಮೇಲೆ ನಮ್ಮ ತಂದೆ
ಅಪ್ಪಣ್ಣಯ್ಯನನ್ನು –ಹೊಗಳಬೇಕು
ತಾ ೧೫/೧೧/೫೧ ನೆ ಇಸ್ವಿಯಲ್ಲಿ
ಈ ಪೋಟ ಬರಸಿದ್ದು
ಸಹಿ ತ್ತಿಮ್ಮಪ್ಪ

ಮಾದರಿ– ೩: ರಥದಲ್ಲಿ ಅಭಿಮನ್ಯು ಇರುವ ಗೊಂಬೆ ಚಿತ್ರದ ಅಡಿಯಲ್ಲಿನ ಬರಹ:

ಬಾವನಮಸ್ತ್ರದಲ್ಲಿ ತ್ಯೆರಾಗಿದ್ದು
ಲೆಂಕೆ ಹನುಮಂತ್ಯೆಯನ ಕ್ಯೆಲಿ
ತ್ಯೆರಾಗಿದ್ದು

ಈ ಬರಹದ ದಿನಾಂಕ ನಮೂದಾಗಿಲ್ಲ. ಈ ಬರಹದ ಇನ್ನೊಂದು ಪಕ್ಕ ನೀಲಿ ಅಕ್ಷರಗಳಲ್ಲಿ (ಬಹುಶಃ ಇಂಕ್ ಪೆನ್ನಿನಲ್ಲಿ) ಬರೆದ ಬರೆಹ ಮಾಸಿದ್ದು ಓದಲು ಅಸ್ಪಷ್ಟವಾಗಿದೆ. ಇಲ್ಲಿ ಪ್ರಸ್ತಾಪಿತವಾದ ಲೆಂಕೆ ಹನುಮಂತಯ್ಯ ತನ್ನ ತಂದೆಯ ಅಕ್ಕನ ಮಗ, ತನಗೆ ಸೋದರ ಮಾವ–ಎಂದು ಕಲಾವಿದ ಗುಂಡೂರಾಜು ಗುರುತಿಸಿದ್ದಾರೆ. ತಾ. ೧೫–೭–೧೯೦೭ನೇ ತಾರೀಕು ಇರುವ ಮೇಲೆ ಪ್ರಸ್ತಾಪಿತ ಗೊಂಬೆಯಲ್ಲಿ ದಾಖಲಾಗಿರುವ ಆಟದ ಗುಂಡಯ್ಯನ ಮಗ ಹನುಮಂತಯ್ಯನು ತನ್ನ ತಂದೆ ಗೊಂಬೆರಾಮಯ್ಯನ ಅಪ್ಪ ಅಂದರೆ ತನ್ನ ತಾತ ಎಂದೂ ಈ ಗೊಂಬೆಗಳನ್ನು ಹೊಂದಿರುವ ಹಾಸನದ ಗುಂಡೂರಾಜು ಮಾಹಿತಿ ನೀಡಿದ್ದಾರೆ (ವಿವರಕ್ಕೆ ಉಲ್ಲೇಖೀತ ಕೃತಿ 'ಚಿತ್ತಾರ ಗೊಂಬೆ ಚಿತ್ರಕಲೆ'– ಟಿ. ಗೋವಿಂದರಾಜು; ಪು.೩೩–೩೬).

ಗೊಂಬೆ ಕಲಾವಿದರಿಗೆ ಜಮೀನು ಇತ್ಯಾದಿ ದಾನ ನೀಡುವ ಪದ್ಧತಿ ಹಿಂದಿನಿಂದಲೂ ಇತ್ತು. ಆದರೆ, ಚಿತ್ತಾರ ಗೊಂಬೆಗಳಲ್ಲಿನಂತೆ ಒಕ್ಕಣೆ ಬರೆವ ಸವಲತ್ತು ಸೂತ್ರದ ಅಥವಾ ಕೀಲುಗೊಂಬೆಗಳಿಗೆ ಇಲ್ಲ. ಆದ್ದರಿಂದ, ಚಿತ್ತಾರ ಗೊಂಬೆಗಳನ್ನು ಈ ಬಗೆಯ ಚಾರಿತ್ರಿಕ ದಾಖಲೆಗಳಾಗಿ ಬಳಸಿಕೊಳ್ಳಬಹುದಾದ ಅಗತ್ಯವಿರುವುದರಿಂದ ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ದಾಖಲೆಗಳಿರುವ ಮತ್ತಷ್ಟು ಗೊಂಬೆಗಳನ್ನು ಪರಿಶೋಧಿಸುವುದಲ್ಲದೆ, ಮುಂದಿನ ದಾಖಲೆಗಳಾಗಿ ಅವನ್ನು ಸಂರಕ್ಷಿಸಿಡುವ ಹಾಗೂ ಅಧ್ಯಯನಕಾರರು ತಮ್ಮ ಸಂಶೋಧನೆಗೆ ಬಳಸಿಕೊಳ್ಳುವ ಅಗತ್ಯವಿದೆ.

೮೧

ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದ ಗಾರೆಗಚ್ಚು ಶಿಲ್ಪಗಳು

ಉಮ.ಪಿ.*

ಗಾರೆಯನ್ನು ಕಲಾಮಾಧ್ಯಮವಾಗಿ ಬಳಸುವುದನ್ನು ಭಾರತದಲ್ಲಿ ಗಾಂಧಾರ ಕಲೆಯ ಕಾಲದಿಂದಲೇ ಗುರುತಿಸ ಬಹುದು. ಭಾರತದಲ್ಲಿ ಗಾರೆಯನ್ನು ಗಚ್ಚು ಶಿಲ್ಪಗಳಲ್ಲಿ ಹಾಗೂ ಗುಹೆಗಳ, ಚಿತ್ರಕಲೆಗಾಗಿ ದೇವಾಲಯಗಳ ಭಿತ್ತಿರಚನೆಯಲ್ಲಿ ಬಳಸಿರುವುದನ್ನು ಕಾಣಬಹುದು. ಕರ್ನಾಟಕದಲ್ಲಿ ಗಾರೆಯನ್ನು ವಾಸ್ತುಶಿಲ್ಪಕ್ಕಾಗಿ ಹಾಗೂ ಶಿಲ್ಪಗಳಿಗಾಗಿ ಬಳಸಿಕೊಂಡಿದ್ದಾರೆ. ವಿಜಯನಗರದ ಕಾಲದಲ್ಲಿ ಗಾರೆಕಲೆಯನ್ನು ಹೆಚ್ಚಾಗಿ ಬಳಸಿಕೊಂಡಿದ್ದು, ಮುಂದೆ ಇದನ್ನು ಮೈಸೂರು ಅರಸರ ಕಾಲದಲ್ಲು ಮುಂದುವರಿಸಿಕೊಂಡು ಬರಲಾಯಿತು. ಮೈಸೂರು ಅರಸರ ಕಾಲದಲ್ಲಿಯ ಗಾರೆ ಶಿಲ್ಪಗಳನ್ನು ಮೈಸೂರಿನ ಅರಮನೆ, ಚಾಮುಂಡಿ ಬೆಟ್ಟ, ಶ್ರೀರಂಗಪಟ್ಟಣ, ಮೇಲುಕೋಟೆ, ಚಾಮರಾಜನಗರ, ಮೂಗೂರು, ಸಿಬಿ, ಶ್ರವಣಬೆಳಗೊಳ ಮತ್ತು ನಂಜನಗೂಡಿನ ದೇವಾಲಯಗಳಲ್ಲಿ ಹಾಗೂ ಅವರ ಕಾಲದ ಬಹುತೇಕ ಎಲ್ಲ ದೇವಾಲಯಗಳಲ್ಲಿ ಕಾಣಬಹುದು.

ನಂಜನಗೂಡಿನ ಶ್ರೀಕಂಠೇಶ್ವರ ಅಥವ ನಂಜುಂಡೇಶ್ವರ ದೇವಾಲಯವು ದ್ರಾವಿಡ ಶೈಲಿಯಲ್ಲಿ ನಿರ್ಮಾಣಗೊಂಡಿದ್ದು, ಕರ್ನಾಟಕದ ಅತಿ ದೊಡ್ಡ ದೇವಾಲಯಗಳಲ್ಲಿ ಒಂದಾಗಿದೆ. ನಂಜುಂಡೇಶ್ವರನ ಮೂಲ ದೇವಾಲಯವು ಕ್ರಿಸ್ತಶಕ ಒಂಬತ್ತು ಅಥವ ಹತ್ತನೆಯ ಶತಮಾನಕ್ಕೆ ಸೇರಿದ್ದು ಗಂಗರ ಕಾಲಕ್ಕೆ ಸೇರಿದ ಕಟ್ಟಡವಾಗಿದೆ. ನಂತರದಲ್ಲಿ ಈ ದೇವಾಲಯವು ಚೋಳ, ಹೊಯ್ಸಳ, ವಿಜಯನಗರ ಮತ್ತು ಮೈಸೂರು ಅರಸರ ಕಾಲದಲ್ಲಿ ಅನೇಕ ಬದಲಾವಣೆಗಳೊಂದಿಗೆ ಮತ್ತಷ್ಟು ವಿಸ್ತಾರಗೊಂಡು ಪ್ರಸ್ತುತ ಈಗಿರುವ ರೂಪವನ್ನು ಪಡೆದುಕೊಂಡಿದೆ. ಈ ದೇವಾಲಯವು ಅನೇಕ ಶೈಲಿಯನ್ನು ಬಿಂಬಿಸುವ ವಾಸ್ತುಶಿಲ್ಪವಾಗಿದ್ದು, ಕಲ್ಲಿನ, ಲೋಹದ ಮತ್ತು ಗಾರೆಗಚ್ಚು ಶಿಲ್ಪಗಳ ಭಂಡಾರವಾಗಿದೆ. ಈ ದೇವಾಲಯಕ್ಕೆ ಪೂರ್ವದಲ್ಲಿ ನೂರು ಅಡಿ ಎತ್ತರವಿರುವ, ಏಳಂತಸ್ತಿನ ಶಿಖರ ಹೊಂದಿದ ಮಹಾದ್ವಾರವನ್ನು ಮತ್ತು ದೇವಾಲಯದ ಸುತ್ತ ದೊಡ್ಡ ಪ್ರಾಕಾರವನ್ನು ಮೈಸೂರು ಅರಸರಾದ ಮುಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಕಾಲದಲ್ಲಿ, ಕ್ರಿಸ್ತಶಕ ೧೮೪೫ರಲ್ಲಿ ನಿರ್ಮಿಸಲಾಯಿತು. ಹನ್ನೆರಡು ಅಡಿಗಳಿಗೂ ಹೆಚ್ಚಿರುವ ಎತ್ತರದ ಪ್ರಾಕಾರದ ಎರಡೂ ಬದಿಗಳಲ್ಲಿ ಕೈಪಿಡಿ ಗೋಡೆಗಳನ್ನು ಇಟ್ಟಿಗೆ ಹಾಗೂ ಗಾರೆಯನ್ನು ಬಳಸಿ ನಿರ್ಮಿಸಲಾಗಿದೆ. ಈ ಕೈಪಿಡಿಯ ಗೋಡೆಗಳಲ್ಲಿ ಬಹಳವಾಗಿ ಅಲಂಕೃತಗೊಂಡ ಕೋಷ್ಠಗಳನ್ನು ನಿರ್ಮಿಸಿ, ಗಾರೆಗಚ್ಚು ದೇವತಾ ಶಿಲ್ಪಗಳನ್ನು ಇದರಲ್ಲಿ ಸ್ಥಾಪಿಸಲಾಗಿದೆ. ಕೋಷ್ಠ ಗಳಲ್ಲಿರುವ ಈ ಗಾರೆಶಿಲ್ಪಗಳು ಶಿಲ್ಪಶಾಸ್ತ್ರದ, ಪ್ರತಿಮಾಲಕ್ಷಣದ ಅಭ್ಯಾಸಕ್ಕಾಗಿ ವಿಶಿಷ್ಟವೆನಿಸಿದೆ. ನೂರೈವತ್ತಕ್ಕೂ ಹೆಚ್ಚಿರುವ ಈ ಶಿಲ್ಪಗಳು ಶೈವ ಧರ್ಮಕ್ಕೆ ಸಂಬಂಧಪಟ್ಟ ಮೂರ್ತಿ ಗಳಾಗಿವೆ.

ಪ್ರಾಕಾರದ ಒಳ ಕೈಪಿಡಿಯ ಕೋಷ್ಠಗಳಲ್ಲಿ ನವಗ್ರಹಗಳು, ವಿಷ್ಣು, ಹಾಗೂ ಅರವತ್ನಾಲ್ಕು ಪುರಾತನರ ಶಿಲ್ಪಗಳನ್ನು, ಬಸವನಕಟ್ಟೆಯ ಮುಂಭಗದ ಕೈಪಿಡಿಯ ಕೋಷ್ಠಗಳಲ್ಲಿ ಚಂದ್ರಶೇಖರ, ನಂದಿ, ಮಹಿಷಮರ್ದಿನಿ, ತಾಂಡವೇಶ್ವರ, ವಿಘ್ನೇಶ್ವರ, ಶಣ್ಮುಖ, ಕೇಶವ ಮತ್ತು ದಕ್ಷಿಣಾಮೂರ್ತಿಯ ಶಿಲ್ಪಗಳಿವೆ. ವಸಂತ ಮಂಟಪದ ಮೇಲ್ಭಾಗದ ಕೋಷ್ಠಗಳಲ್ಲೂ ವಿವಿಧ ದೇವತೆಗಳ ಶಿಲ್ಪಗಳಿವೆ. ಪ್ರಾಕಾರದ ಹೊರಗಿನ ಗೋಡೆಗಳಲ್ಲಿ ಸುಮಾರು ನೂರಿಪ್ಪತ್ತೊಂದು ಗಾರೆ ಶಿಲ್ಪಗಳಿವೆ. ಅಷ್ಟದಿಕ್ಪಾಲಕರ ಶಿಲ್ಪಗಳು, ಎಂಟು ವಿಧದ ಭೈರವನ ಶಿಲ್ಪಗಳು, ಹದಿನಾರು ವಿಧಗಳ ಸುಬ್ರಮಣ್ಯ, ಏಳು ವಿಧಗಳ ತಾಂಡವ ಮೂರ್ತಿ, ಹತ್ತು ವಿಧಗಳ ದಕ್ಷಿಣಾಮೂರ್ತಿ, ಶಿವನ ಇಪ್ಪತ್ತೈದು ಲೀಲಾ ಮೂರ್ತಿಗಳು, ಮೂವತ್ತೆರಡು ವಿಧದ ವಿಶಿಷ್ಟ ಗಣಪತಿ ಶಿಲ್ಪಗಳು, ಸಪ್ತಮಾತೃಕಾ ಶಿಲ್ಪಗಳು, ಚಾಮುಂಡೇಶ್ವರಿ ಮತ್ತು ಬ್ರಹ್ಮನ ಶಿಲ್ಪಗಳನ್ನು ಪ್ರಾಕರದ ಹೊರಗಿನ ಕೋಷ್ಠಗಳಲ್ಲಿ ಮೂಡಿಸಲಾಗಿದೆ. ಇಲ್ಲಿರುವ ಭೈರವ, ಸುಬ್ರಮಣ್ಯ, ಗಣಪತಿ,

* ೩ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು–೫೬೦೦೧೯.



ದಕ್ಷಿಣಾಮೂರ್ತಿ ಶಿಲ್ಪಗಳು ಹಾಗೂ ಶಿವನ ಕೆಲವು ಮೂರ್ತಿಗಳು ಬೇರೆಡೆಗಿಂತ ಭಿನ್ನವಾಗಿದ್ದು ಅಪರೂಪದ ಉದಾಹರಣೆಗಳಾಗಿವೆ.

ಇಲ್ಲಿಯ ಗಾರೆ ಶಿಲ್ಪಗಳನ್ನು ಸುಣ್ಣ, ಮರಳು, ನೀರು, ಬೆಲ್ಲ ಮತ್ತು ಮೊಟ್ಟೆ ಮುಂತಾದ ಅಂಟುದ್ರವಗಳನ್ನು ಮಿಶ್ರಮಾಡಿ ನುಣ್ಣಗೆ ಅರೆದು ಗಾರೆಯ ಮಿಶ್ರಣವನ್ನು ಶಿಲ್ಪಕ್ಕಾಗಿ ಉಪಯೋಗಿಸಲಾಗಿದೆ. ಕಬ್ಬಿಣದ ಕಂಬಿಗಳಿಂದ ಶಿಲ್ಪಗಳ ಸ್ಥೂಲ ರಚನೆ ಮಾಡಿಕೊಂಡು ನಂತರ ಗಾರೆಯಿಂದ ಮೂರ್ತಿಗಳನ್ನು ಮಾಡಿದ್ದಾರೆ. ಮೂರ್ತಿಗಳು ಮುಖ್ಯವಾಗಿ ಶೈವಧರ್ಮಕ್ಕೆ ಸಂಬಂಧಪಟ್ಟಿದ್ದು, ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ರಚನೆಯಾದ 'ಶ್ರೀತತ್ವನಿಧಿ' ಹಸ್ತಪ್ರತಿಯಲ್ಲಿ ಚಿತ್ರಿಸಿರುವ ಚಿತ್ರಗಳ ಪ್ರತಿಮಾಲಕ್ಷಣಗಳ ಆಧಾರದ ಮೇಲೆ ರಚಿತವಾಗಿದೆ. ಈ ಗಾರೆ ಶಿಲ್ಪಗಳು ಚೆನ್ನಾಗಿ ಕೆತ್ತಲ್ಪಟ್ಟಿದ್ದು, ಕೆಳಗೆ ನಾಮಾಂಕಿತವಾಗಿದೆ.

ಕೋಷ್ಠದಲ್ಲಿನ ಶಿಲ್ಪಗಳು ಆಕಾರದಲ್ಲಿ ಕುಳ್ಳಾಗಿದ್ದು, ದುಂಡಾದ ಅಂಗಾಂಗಗಳನ್ನು ಹೊಂದಿವೆ. ದುಂಡುಮುಖ, ಅಗಲವಾದ ಕಣ್ಣುಗಳು, ಚೂಪಾದ ಮೂಗು ಮತ್ತು ಮುಗುಳ್ನಗೆಯೊಂದಿಗೆ ದುಂಡಾದ ಗಲ್ಲವನ್ನು ಹೊಂದಿವೆ. ಈ ಶಿಲ್ಪಗಳು ಸ್ವಾಭಾವಿಕ ಲಕ್ಷಣಗಳಿಗಿಂತ ಮುಖ್ಯವಾಗಿ ಸಾಂಪ್ರದಾಯಿಕ ಲಕ್ಷಣಗಳನ್ನು ಬಿಂಬಿಸುವಂತಿವೆ. ವಿಜಯನಗರದ ಮುಂದುವರಿದ ಶೈಲಿಯಾದರೂ, ವಿಜಯನಗರದ ಶಿಲ್ಪಗಳಷ್ಟು ಚಲನೆ ಹಾಗೂ ನಿರಾಳತೆ ಈ ಶಿಲ್ಪಗಳಲ್ಲಿ ಕಂಡುಬರುವುದಿಲ್ಲವಾದರೂ ತಮ್ಮದೇ ಆದ ಗುಣಲಕ್ಷಣಗಳನ್ನು ಹೊಂದಿದ್ದು ಕಲಾವಿದ್ಯಾರ್ಥಿಗಳಿಗೆ ಶಿಲ್ಪಶಾಸ್ತ್ರ ಹಾಗೂ ಪ್ರತಿಮಾಲಕ್ಷಣಗಳ ಅಧ್ಯಯನಕ್ಕಾಗಿ ವಿಶೇಷ ಶಿಲ್ಪಗಳಾಗಿವೆ.

ಮೂರ್ತಿಗಳಿರುವ ಕೋಷ್ಠಗಳು ವಿಶೇಷವಾಗಿ ಹೂವುಗಳು, ಬಳ್ಳಿಗಳು, ಪ್ರಾಣಿಪಕ್ಷಿಗಳು, ಹಾಗೂ ಮಾನವ ಶಿಲ್ಪಗಳಿಂದ ಅಲಂಕೃತಗೊಂಡಿವೆ. ಕೋಷ್ಠಗಳ ಮಧ್ಯದಲ್ಲಿ ಗಾರೆಯಿಂದ ಮಾಡಿದ ಧ್ಯಾನದಲ್ಲಿರುವ ಋಷಿಗಳ ಶಿಲ್ಪಗಳು ಹಾಗೂ ಶೃಂಗಾರ ಶಿಲ್ಪಗಳನ್ನು ಮೂಡಿಸಲಾಗಿದೆ. ಕೋಷ್ಠಗಳ ಸುತ್ತಲಿನ ಅಲಂಕರಣದಲ್ಲಿ ಇಸ್ಲಾಮಿಕ್ ಶೈಲಿಯ ಪ್ರಭಾವವಿರುವುದನ್ನು ಗಮನಿಸಬಹುದಾಗಿದೆ.

ಪ್ರಾಕಾರದ ಕೋಷ್ಠಗಳಲ್ಲಿ ಅಲ್ಲದೆ ದೇವಾಲಯದ ಒಳಗೆ ಬಲಿಪೀಠದ ಕೈಪಿಡಿ ಗೋಡೆಗಳ ಗೂಡುಗಳಲ್ಲಿ, ದೇವಾಲಯ ಶಿಖರಗಳಲ್ಲಿ ಮತ್ತು ಮಹಾದ್ವಾರದ ಗೋಪುರದಲ್ಲಿಯೂ ಗಾರೆ ಶಿಲ್ಪಗಳಿವೆ. ಮುಂದಿನ ಮಹಾದ್ವಾರದಲ್ಲಿ ವಿವಿಧ ದಕ್ಷಿಣಾಮೂರ್ತಿಯ, ಶಿವನ ವಿವಿಧ ರೂಪಗಳು ಹಾಗೂ ದ್ವಾರಪಾಲಕರ ಗಾರೆಶಿಲ್ಪಗಳನ್ನು ಕಾಣಬಹುದು.

ಶ್ರೀಕಂಠೇಶ್ವರ ದೇವಾಲಯದ ಗಾರೆ ಶಿಲ್ಪಗಳು ಮೈಸೂರುಶೈಲಿಯ ಶಿಲ್ಪಗಳು ಅತ್ಯುತ್ತಮ ಉದಾಹರಣೆಯಾಗಿ ಇಂದು ನಮಗೆ ದೊರೆಯುತ್ತವೆ. ಆದರೆ ಈ ಶಿಲ್ಪಗಳು, ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯವರಿಂದ ೧೯೮೪ರಿಂದ ೧೯೮೭ರ ವರೆಗೆ ಒಮ್ಮೆ ದುರಸ್ತಿಗೊಂದಿದ್ದರೂ, ಕೆಲವೆಡೆ ಶಿಲ್ಪಗಳ ಗಾರೆ ಬಿದ್ದು ಒಳಗಿನ ಸರಳುಗಳು ಕಾಣುವಂತಾಗಿದೆ ಮತ್ತೆ ಕೆಲವೆಡೆ ಶಿಲ್ಪಗಳ ಹೆಸರುಗಳು ಅಳಿಸಿ ಹೋಗಿವೆ. ಶ್ರೀಕಂಠೇಶ್ವರ ದೇವಾಲಯದಂತೆಯೇ ಮೈಸೂರು ಶೈಲಿಯ ಗಾರೆ ಶಿಲ್ಪಗಳನ್ನು ಚಾಮರಾಜನಗರ, ಮೇಲುಕೋಟೆ, ಮೂಗೂರು, ಶ್ರವಣಬೆಳಗೊಳ, ಸಿಬಿ ಮುಂತಾದ ದೇವಾಲಯಗಳಲ್ಲಿ ನೋಡಬಹುದಾಗಿದೆ. ಕಲಾಚರಿತ್ರೆಯ ಒಂದು ಭಾಗವಾದ ಗಾರೆಶಿಲ್ಪಗಳು ಇಂದು ಸರಿಯಾದ ಜತನವಿಲ್ಲದೆ ನಶಿಸುತ್ತಿವೆ.

ಆಕರ ಗ್ರಂಥಗಳು

೧. ಎಪಿಗ್ರಾಫಿಯ ಕರ್ನಾಟಿಕ ಸಂಪುಟ–೩;

೨. ಎಮ್.ಎ.ಆರ್. ೧೯೪೦; ಗಾರೆಗಚ್ಚು ಶಿಲ್ಪಗಳು,

೩. ಸಿ.ಆರ್. ಗೋವಿಂದರಾಜು, ಶಿಲ್ಪಕಲಾ ಪ್ರಪಂಚ

೮೨

ಇಗ್ಗನೂರಿನ ಪ್ರಾಚ್ಯಾವಶೇಷಗಳು

ಡಾ. ಮುತ್ತುರಾಜು*

ಇಗ್ಗನೂರು ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕು, ಜವನಗೊಂಡನಹಳ್ಳಿ ಹೋಬಳಿಯ ಒಂದು ಪ್ರಾಚೀನ ಗ್ರಾಮ. ತಾಲ್ಲೂಕು ಕೇಂದ್ರದಿಂದ ೨೭ ಕಿ.ಮೀ. ದೂರದಲ್ಲಿರುವ ಈ ಗ್ರಾಮದ ಸುತ್ತಮುತ್ತಲ ಬಬ್ಬೂರು, ಆಲೂರು, ಟಿ. ನಾಗೇನಹಳ್ಳಿ, ಪಿಟ್ಲಾಲಿ ಮತ್ತು ಕುಂದಲಗುರ, ಹೂವಿನಹೊಳೆ, ಸಮುದ್ರದಹಳ್ಳಿ, ಜವನಗೊಂಡನಹಳ್ಳಿ ಮತ್ತು ದಂಡಿಕೆರೆ ಗ್ರಾಮಗಳಲ್ಲಿ ವಿಫುಲವಾಗಿ ಪ್ರಾಚ್ಯಾವಶೇಷಗಳಾದ ಕೋಟೆ, ಶಾಸನಗಳು, ಮೂರ್ತಿಶಿಲ್ಪ, ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು ಪತ್ತೆಯಾಗಿವೆ. ಪ್ರಸ್ತುತ ಇಗ್ಗನೂರು ಗ್ರಾಮದಲ್ಲಿಯೂ ಸಹ ಪ್ರಾಚ್ಯಾವಶೇಷಗಳು ವಿಫುಲವಾಗಿ ದೊರೆತಿದ್ದು, ಇದೊಂದು ಪ್ರಾಚೀನ ಕಾಲದಿಂದಲೇ ಐತಿಹಾಸಿಕ ಸ್ಥಳವಾಗಿದ್ದಿತು ಎಂಬುದಕ್ಕೆ ಆಧಾರಗಳಾಗಿವೆ. ಈ ಗ್ರಾಮದಲ್ಲಿ ಕಲ್ಲು ಮತ್ತು ಮಣ್ಣಿಗಳಿಂದ ನಿರ್ಮಿತವಾದ ಪ್ರಾಚೀನ ಕೋಟೆಯ ಅವಶೇಷಗಳು ಉಳಿದು ಬಂದಿದ್ದು ಈ ಗ್ರಾಮವನ್ನು ಪಾಳೇಯಗಾರರು ಪಾರಂಪರಿಕವಾಗಿ ಆಳಿಕೊಂಡು ಬರುತ್ತಿದ್ದರು ಎಂಬುದಕ್ಕೆ ಆಧಾರವಾಗಿದೆ.

ಇಲ್ಲಿನ ಮುಖ್ಯ ರಸ್ತೆಯ ಆಂಜನೇಯ ದೇವಾಲಯದ ಬಳಿ ನೊಳಂಬರ ಕಾಲ ಕ್ರಿ.ಶ. ಸು. ೧೧ನೇ ಶತಮಾನಕ್ಕೆ ಸೇರುವ ಎರಡು ದೇವಾಲಯದ ಸ್ಥಂಭಗಳು ಉಳಿದು ಬಂದಿದ್ದು ಇವುಗಳನ್ನು ಆಂಜನೇಯ ದೇವಾಲಯದ ಮುಂದೆ ಎರಡೂ ಕಡೆಗಳಲ್ಲೂ ನಿಲ್ಲಿಸಲಾಗಿದೆ. ಮತ್ತೊಂದು ಸ್ಥಂಭವನ್ನು ಗ್ರಾಮದ ಮಾಧ್ಯಮಿಕ ಶಾಲೆಯ ಆವರಣದಲ್ಲಿ ಇಡಲಾಗಿದೆ. ಅಂದರೆ ಇಲ್ಲಿ ನೊಳಂಬರ ಕಾಲವಾದ ಕ್ರಿ.ಶ. ಸುಮಾರು ೧೧ನೇ ಶತಮಾನದಲ್ಲಿಯೇ ಸುಸಜ್ಜಿತವಾದ ದೇವಾಲಯವೊಂದು ಇದ್ದಿತೆಂಬುದನ್ನು ತಿಳಿಸುತ್ತದೆ.

ಇಲ್ಲಿಯೇ ವಿಜಯನಗರ ಸಾಮ್ರಾಜ್ಯದ ಕಾಲವಾದ ಕ್ರಿ.ಶ. ಸು.೧೫ನೇ ಶತಮಾನದ ನಂತರದ ಎರಡು ಗ್ರಾನೈಟ್ ಸ್ಥಂಭಗಳು ಸಹ ಬಿದ್ದಿದ್ದು ಇಲ್ಲಿನ ದೇವಾಲಯವನ್ನು ಜೀರ್ಣೋದ್ಧಾರ ಮಾಡಿರುವ ಸ್ಪಷ್ಟ ಕುರುಹುಗಳು ಲಭ್ಯವಾಗಿವೆ. ಇದೊಂದು ಶೈವ ದೇವಾಲಯವಾಗಿದ್ದು ಬಳಿಯಲ್ಲಿ ಆಂಜನೇಯ ದೇವಾಲಯವೊಂದು ಇದ್ದು ವಿಜಯನಗರ ಮತ್ತು ಮೈಸೂರು ಅರಸರ ಕಾಲಗಳಲ್ಲಿ ಜೀರ್ಣೋದ್ಧಾರವಾಗಿರುವ ಕುರುಹುಗಳು ಅಲ್ಲಿನ ತಳಪಾಯದ ಭಾಗಗಳಿಂದ ತಿಳಿದುಬರುತ್ತದೆ. ಪ್ರಸ್ತುತ ಆಂಜನೇಯ ದೇವಾಲಯದಲ್ಲಿ ಪೂಜಾ ಕೈಂಕರ್ಯಗಳು ಜರಗುತ್ತಿವೆ. ಇಲ್ಲಿಯೇ ಮುಂದುಗಡೆ ಗರುಡಶಿಲ್ಪ, ಲಿಂಗಮುದ್ರೆ ಕಲ್ಲು ಮತ್ತು ಸ್ಥಂಭದ ಮೇಲಿನ ಬೋದಿಗೆಯ ಭಾಗಗಳು ಉಳಿದುಬಂದಿವೆ. ಕ್ರಿ.ಶ. ಸು.೧೫ನೇ ಶತಮಾನದಿಂದ ಇಂದಿನವರೆಗೂ ಈ ಆಂಜನೇಯ ದೇವಾಲಯ ಬೆಳೆದು ಬಂದಿದೆ.

ಈ ಗ್ರಾಮದ ಮುಖ್ಯರಸ್ತೆಯ ಸೇತುವೆ ಬಳಿಯ ಕಣವೊಂದರಲ್ಲಿ ಐದು ಅಡಿ ಎತ್ತರ ಮತ್ತು ಎರಡು ಅಡಿ ಅಗಲದ ಸಿಸ್ಟ್ ಶಿಲೆಯ ವೀರಗಲ್ಲು ಸ್ಮಾರಕವೊಂದು ಕಂಡು ಬಂದಿದ್ದು ಇದು ನಾಲ್ಕು ಹಂತಗಳಲ್ಲಿ ರಚಿತವಾಗಿದೆ. ಈ ಪ್ರಾಚೀನ ಸ್ಮಾರಕದ ಕೆಳಗಿನ ಮೊದಲ ಹಂತದಲ್ಲಿ ಖಡ್ಗ ಮತ್ತು ಗುರಾಣಿ ಹಿಡದ ಇಬ್ಬರು ವೀರರು ತಮ್ಮ ಮೇಲೆ ಎರಗಿ ಬರುತ್ತಿರುವ ಶತೃಗಳಿಬ್ಬರನ್ನು ವೀರಾವೇಶದಿಂದ ಎದುರಿಸಿ ಹೋರಾಡುತ್ತಿದ್ದಾರೆ. ಆದರೆ ಇವರಲ್ಲಿ ಓರ್ವ ವೀರ ಮರಣವನ್ನು ಹೊಂದಿದ್ದಾನೆ. ಶತೃಗಳಿಬ್ಬರೂ ಸಹ ತಮ್ಮ ಕೈಗಳಲ್ಲಿ ಹಿಡಿದ ಖಡ್ಗಗಳಿಂದ ಇವರೊಡನೆ ಸೆಣಸಾಡುತ್ತಿದ್ದಾರೆ.

ಎರಡನೆಯ ಹಂತದಲ್ಲಿ ಮರಣ ಹೊಂದಿರುವ ವೀರನನ್ನು ಅಪ್ಸರೆಯರಿಬ್ಬರು ತಮ್ಮ ಬಲದ ಕೈಗಳಿಂದ ಚಾಮರಗಳನ್ನು ಬೀಸುತ್ತಾ ಎಡದ ಕೈಗಳಿಂದ ಮಧ್ಯದಲ್ಲಿರುವ ವೀರನ ಕೈಗಳನ್ನಿಡಿದು ಕೈಲಾಸಕ್ಕೆ ಕರೆದುಕೊಂಡು ಹೋಗುತ್ತಿದ್ದಾರೆ.

ಮೂರನೆಯ ಹಂತದಲ್ಲಿ ಶಿವಲಿಂಗ ಅದರ ಎದುರಿಗೆ ಭಕ್ತಿಯಿಂದ ಕುಳಿತಿರುವ ವೀರ ಮತ್ತು ಶಿವಗಣವೊಬ್ಬನ ಚಿತ್ರಣಗಳಿವೆ. ನಾಲ್ಕನೆಯ ಹಂತ ತ್ರಿಕೋನಾಕಾರದ ರೂಪದಲ್ಲಿ ರಚಿತವಾಗಿದ್ದು ಒಳಗೆ ಕಳಸದ ಚಿತ್ರಣವಿದೆ. ಕಳಸದ ಎರಡೂ ಕಡೆ ಸೂರ್ಯಚಂದ್ರರ ಚಿತ್ರಣಗಳಿವೆ. ಯಾವುದೋ ಸ್ಥಳೀಯ ರಾಜಕೀಯ ಕಾರಣವೊಂದರಿಂದ ನಡೆದ ಹೋರಾಟದಲ್ಲಿ

* # ೩೩೩೩, ರೋಹಿಣಿ, ೪೦ ಅಡಿ ಮುಖ್ಯರಸ್ತೆ, ಕುಮಾರಸ್ವಾಮಿ ಬಡಾವಣೆ, ೨ನೇ ಹಂತ, ಬೆಂಗಳೂರು-೫೬೦೦೭೮.

ವೀರನೊಬ್ಬ ಶತ್ರುಗಳಿಂದ ಹತನಾದುದರಿಂದ ಈ ವೀರಗಲ್ಲು ಸ್ಮಾರಕವನ್ನು ನಿರ್ಮಾಣ ಮಾಡಲಾಗಿದೆ. ಕ್ರಿ.ಶ. ಸುಮಾರು ೧೨ನೇ ಶತಮಾನಕ್ಕೆ ಈ ವೀರಗಲ್ಲು ಸ್ಮಾರಕ ಸೇರುತ್ತದೆ.

ಈ ಗ್ರಾಮದಲ್ಲಿ ವಿಶಾಲವಾದ ಪ್ರಾಚೀನವಾದ ಕೆರೆಯೊಂದು ಇದ್ದು ಕೆರೆಯ ಅಂಚಿನಲ್ಲಿ ಮಧ್ಯಮಿಕ ಶಾಲೆ ಹೊಂದಿಕೊಂಡಂತೆ ಇರುವ ಭಾಗದಲ್ಲಿ ನಾಲ್ಕು ಅಡಿ ಎತ್ತರ, ೩ಅಡಿ ಅಗಲ ಮತ್ತು ದಪ್ಪವಿರುವ ಗ್ರಾನೈಟ್ ಸ್ಥಂಭದಲ್ಲಿ ವ್ಯಕ್ತಿಯೊಬ್ಬ ಕೈಗಳನ್ನು ಜೋಡಿಸಿಕೊಂಡು ಮುಗಿಯುತ್ತಾ ನಿಂತಿರುವ ಚಿತ್ರಣವಿದೆ. ಪ್ರಾಯಶಃ ಇವನು ಈ ಕೆರೆಯನ್ನು ನಿರ್ಮಿಸಿದ ಸ್ಥಳೀಯ ಪ್ರತಿಷ್ಠಿತ ವ್ಯಕ್ತಿಯಾಗಿದ್ದಾನೆ. ಈ ಚಿತ್ರಣದ ಸ್ವರೂಪ ಮತ್ತು ವ್ಯಕ್ತಿಯ ವೇಷ ಭೂಷಣಗಳನ್ನು ಗಮನಿಸಿದಾಗ ಈ ಸ್ಮಾರಕದ ಕಾಲಮಾನವನ್ನು ಕ್ರಿ.ಶ. ಸು.೧೨ನೆಯ ಶತಮಾನವೆಂದು ನಿರ್ಧರಿಸಬಹುದಾಗಿದೆ.

ಇದೇ ಕೆರೆಯ ಬದಿಯ ರಸ್ತೆ ಅಂಚಿನಲ್ಲಿ ನಿಲ್ಲಿಸಿರುವ ಐದೂವರೆ ಅಡಿ ಎತ್ತರ, ಮತ್ತು ಒಂದೂವರೆ ಅಡಿ ಅಗಲ ಮತ್ತು ದಪ್ಪವಿರುವ ಗ್ರಾನೈಟ್‌ನ ವೀರಗಲ್ಲುವೊಂದು ನಾಲ್ಕು ಹಂತಗಳ ಕೆತ್ತನೆಯ ಚಿತ್ರಣಗಳನ್ನು ಹೊಂದಿದೆ. ಕೆಳಗಿನ ಮೊದಲನೆಯ ಹಂತದಲ್ಲಿ ವೀರನೊಬ್ಬನು ತನ್ನ ಎಡದ ಕೈನಿಂದ ಬಿಲ್ಲು ಹಿಡಿದುಕೊಂಡಿದ್ದು ಎತ್ತಿದ ಬಲದ ಕೈನಿಂದ ಖಡ್ಗವನ್ನು ಹಿಡಿದು ಎದುರಾಳಿಯ ಜೊತೆ ಹೋರಾಟ ಮಾಡುತ್ತಿದ್ದಾನೆ. ಎದುರಾಳಿಯಾದ ಶತೃವು ಸಹ ತನ್ನ ಬಲದ ಕೈನಲ್ಲಿ ಖಡ್ಗವಿಡಿದು ಹೋರಾಟ ಮಾಡುತ್ತಿದ್ದಾನೆ. ಎರಡನೆಯ ಹಂತದಲ್ಲಿ ಮಡಿದು ಅರೆ ಪದ್ಮಾಸನದಲ್ಲಿ ಕುಳಿತ ವೀರನನ್ನು ಅಪ್ಸರೆಯರಿಬ್ಬರು ಚಾಮರಗಳನ್ನು ಬೀಸುತ್ತಾ ಸೇವೆ ಮಾಡಿ ಕೈಲಾಸಕ್ಕೆ ಕರೆದುಕೊಂಡು ಹೋಗುತ್ತಿದ್ದಾರೆ.

ಮೂರನೆಯ ಹಂತದಲ್ಲಿ ನಂದಿಯ ಮುಂದೆ ವೀರನು ಕುಳಿತಿದ್ದಾನೆ. ಸಾಮಾನ್ಯವಾಗಿ ನಂದಿಯ ಚಿತ್ರಣವನ್ನು ವೀರಗಲ್ಲುಗಳಲ್ಲಿ ಬಲಗಾಲು ಮಡಚಿ ಎಡಗಾಲು ಚಾಚಿ ಕುಳಿತಿರುವ ಭಂಗಿಯಲ್ಲಿ ಚಿತ್ರಣ ಮೂಡಿಸಲಾಗುತ್ತದೆ. ಆದರೆ ಇಲ್ಲಿ ನಂದಿಯ ಚಿತ್ರಣವನ್ನು ನಿಂತಿರುವ ಭಂಗಿಯಲ್ಲಿ ಚಿತ್ರಿಸಿರುವುದು ವಿಶೇಷವಾಗಿದೆ. ಇಲ್ಲಿಯೇ ಮೇಲುಗಡೆ, ತುಂಬುರನ ಚಿತ್ರ ಶಿವಲಿಂಗ ಮತ್ತು ಶಿವಗಣಗಳ ಚಿತ್ರಣಗಳಿವೆ.

ನಾಲ್ಕನೆಯ ಹಂತದಲ್ಲಿ ಸೂರ್ಯ ಚಂದ್ರ ಮತ್ತು ಕಳಸದ ಕೆತ್ತನೆಯ ಚಿತ್ರಣಗಳಿದ್ದು ಈ ಸ್ಮಾರಕದ ಮತ್ತೊಂದು ಮಗ್ಗುಲಲ್ಲಿ ಶಂಖ, ಚಕ್ರಗಳ ರೇಖಾ ಚಿತ್ರಣಗಳಿವೆ. ರಾಜಕೀಯ ಕಾರಣಕ್ಕಾಗಿ ನಡೆದ ಹೋರಾಟವೊಂದರಲ್ಲಿ ವೀರನು ಹತನಾಗಲಾಗಿ ಅದರ ಸ್ಮಾರಕವಾಗಿ ಈ ವೀರಗಲ್ಲು ಸ್ಮಾರಕವನ್ನು ನಿರ್ಮಿಸಲಾಗಿದೆ. ಗ್ರಾನೈಟ್ ಕಲ್ಲಿನ ಉಪಯೋಗದ ಮಾಧ್ಯಮ ಮತ್ತು ಕೆತ್ತನೆಯ ಸ್ವರೂಪಗಳಿಂದ ಈ ವೀರಗಲ್ಲು ಸ್ಮಾರಕದ ಕಾಲಮಾನವನ್ನು ಕ್ರಿ.ಶ. ಸುಮಾರು ೧೫ನೇ ಶತಮಾನವೆಂದು ನಿರ್ಧರಿಸಬಹುದಾಗಿದೆ.

ಈ ಪ್ರಾಚೀನ ಸ್ಮಾರಕದ ಮುಂದೆ ತುಸು ದೂರದಲ್ಲಿ ಬಸವೇಶ್ವರ ದೇವಾಲಯವೆಂಬ ಆಧುನಿಕ ಕಟ್ಟಡದ ಪುಟ್ಟ ದೇವಾಲಯವೊಂದಿದ್ದು ಒಳಗಿರುವ ಶಿವಲಿಂಗ ಗಣಪತಿ ಮತ್ತು ನಂದಿ ಮೂರ್ತಿಗಳು ಪ್ರಾಚೀನವಾದವುಗಳಾಗಿವೆ. ಗರ್ಭಗುಡಿಯಲ್ಲಿರುವ ಶಿವಲಿಂಗ ಮೂರು ಅಡಿ ಎತ್ತರವಾಗಿದೆ. ಅಲ್ಲದೆ ಅತ್ಯಂತ ಆಕರ್ಷಕವೂ ಆದುದಾಗಿದೆ. ಎತ್ತರವಾದ ಪೀಠದ ಮೇಲೆ ಶಿವಲಿಂಗವಿದೆ. ಎದುರಿಗೆ ನಂದಿಯ ಮೂರ್ತಿ ಇದ್ದು ಬಲಬದಿಯಲ್ಲಿ ೩ ಅಡಿ ಎತ್ತರದ ಗ್ರಾನೈಟ್ ಶಿಲೆಯ ಗಣಪತಿ ಇದೆ. ಇದು ದ್ವಿಬಾಹುಗಳನ್ನು ಉಳ್ಳ ಮೂರ್ತಿಯಾಗಿದ್ದು ಸೊಂಡಿಲು ಬಲಗೈನಲ್ಲಿ ಹಿಡಿದಿರುವ ಮೊದಕವನ್ನು ಸವಿಯುವಂತಿದೆ. ಈ ಶಿವಲಿಂಗ, ನಂದಿ ಮತ್ತು ಗಣೇಶ ಶಿಲ್ಪಗಳು ಕ್ರಿ.ಶ. ಸು. ೧೦ನೇ ಶತಮಾನಕ್ಕೆ ಸೇರದವುಗಳಾಗಿದ್ದು, ಪ್ರಮುಖ ದೇವಾಲಯ ಯಾವುದೋ ಕಾರಣಕ್ಕೆ ನಾಶವಾಗಲಾಗಿ ಈ ಶಿಲ್ಪಗಳು ಇಲ್ಲಿಗೆ ಸ್ಥಳಾಂತರವಾಗಿವೆ. ಇವುಗಳಿಗೆ ಇಂದಿಗೂ ಪೂಜೆ ಸಲ್ಲಿಸಲಾಗುತ್ತಿದೆ.

ಈ ದೇವಾಲಯದ ಹೊರಗಡೆ ಪ್ರಾಕಾರದಲ್ಲಿ ಎರಡೂವರೆ ಅಡಿ ಎತ್ತರ ಮತ್ತು ಮೂರು ಅಡಿ ಅಗಲದ ಸಿಸ್ಟ್ ಶಿಲೆಯ ಮಹೀಷ ಮರ್ಧಿನಿಯ ಮೂರ್ತಿ ಶಿಲ್ಪವೊಂದಿದ್ದು ಚತುರ್ಭುಜಧಾರಿಣಿಯಾಗಿದ್ದಾಳೆ. ಬಲದ ಮುಂದಿನ ಕೈನಿಂದ ತ್ರಿಶೂಲವಿಡಿದು ಮಹಿಷನನ್ನು ಕೊಲ್ಲುತ್ತಿದ್ದಾಳೆ ಎಡದ ಮುಂದಿನ ಕೈನಿಂದ ಮಹಿಷನ ಶಿರವನ್ನು ಒತ್ತಿ ಹಿಡಿದಿದ್ದಾಳೆ. ಬಲದ ಹಿಂದಿನ ಕೈ ಮತ್ತು ಎಡದ ಹಿಂದಿನ ಕೈನಲ್ಲಿನ ಆಯುಧಗಳನ್ನು ಗುರುತಿಸುವುದು ಕಷ್ಟಕರವಾಗಿದೆ. ಮೂರ್ತಿಶಿಲ್ಪದ ಬಹುಭಾಗ ಸವೆದು ಹೋಗಿದೆ. ಮಹಿಷ ಮರ್ಧಿನಿ ದೇವಿಯು ವೀರಭಂಗಿಯಲ್ಲಿ ಕುಳಿತ ರಚನೆಯಿದ್ದು ಶಿಲ್ಪದ ಸ್ವಲ್ಪ ಭಾಗ ಮಣ್ಣಿನಲ್ಲಿ ಹುದುಗಿ ಹೋಗಿದೆ. ಕ್ರಿ.ಶ. ಸು.೧೨ನೇ ಶತಮಾನಕ್ಕೆ ಸಲ್ಲುವ ಸ್ಥಳೀಯ ಈ ಶಿಲ್ಪ ಪ್ರಾಚೀನ ದೇವಾಲಯದ ಒಂದು ಮೂರ್ತಿಯಾಗಿದೆ. ಈ ಮೂರ್ತಿಶಿಲ್ಪದ ಮುಂದೆಯೇ ಪುಟ್ಟ ನಂದಿ ಮತ್ತು ಅಲಂಕಾರಿಕ ಶಿಲೆಯ ಫಲಕವೊಂದು ಇದ್ದು ಇವುಗಳೂ ಸಹ ಸಿಸ್ಟ್ ಶಿಲೆಯಿಂದ ಮಾಡಿದವುಗಳಾಗಿದ್ದು ಕ್ರಿ.ಶ. ೧೨ನೇ ಶತಮಾನಕ್ಕೆ ಸೇರಿದವುಗಳಾಗಿವೆ.

ಕ್ರಿ.ಶ. ೧೦ನೇ ಶತಮಾನಕ್ಕೆ ಮುಂದಿನಿಂದಲೂ ಇಂದಿನವರೆಗೂ ಸತತವಾಗಿ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡು ಬಂದಿರುವ ಇಗ್ಗನೂರು ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯವಾಗಿ ಸಾಗುತ್ತಾ ಬಂದು ಚಿತ್ರದುರ್ಗ ಜಿಲ್ಲೆಯ ಇತಿಹಾಸದಲ್ಲಿ ತನ್ನದೇ ಆದ ಪಾತ್ರವನ್ನು ಹೊಂದಿದೆ.

೮೩

ವಿಜಯನಗರ ಸಾಮ್ರಾಜ್ಯ ಇತಿಹಾಸದಲ್ಲಿ 'ಹೊಸಪಟ್ಟಣ'

ಡಾ.ಪಿ.ವಿ. ಕೃಷ್ಣಮೂರ್ತಿ*

ಹೊಯ್ಸಳ ಮೂರನೆಯ ವೀರಬಲ್ಲಾಳನ ಆಳ್ವಿಕೆಯ ಅಂತಿಮ ಘಟ್ಟಕ್ಕಾಗಲೇ ವಿಜಯನಗರ ಸಾಮ್ರಾಜ್ಯ ಅಂಕುರಾರ್ಪಣೆಯಾಗಿತ್ತು. ಹೊಯ್ಸಳರ ಆಳ್ವಿಕೆಯ ಕೊನೆಗಾಲದ ಶಾಸನಗಳು ದೊರೆಯುವ ಎಡೆಗಳಲ್ಲೇ ವಿಜಯನಗರ ಅರಸರ ಶಾಸನಗಳೂ ದೊರೆತಿವೆ. ವೀರಬಲ್ಲಾಳನ **'ಹೊಸಪಟ್ಟಣ'**ದಲ್ಲೇ ವಿಜಯನಗರದ ಅರಸರು ತಮ್ಮ ಆಳ್ವಿಕೆಯನ್ನು ಮೊದಲಿಗೆ ಆರಂಭಿಸಿದರೆಂಬ ಸಂಗತಿಯನ್ನು ವಿದ್ವಾಂಸರು ಗುರುತಿಸಿದ್ದಾರೆ.[೧] ಹೊಯ್ಸಳರಿಗೂ ವಿಜಯನಗರದವರಿಗೂ ಸಂಪರ್ಕಸೇತುವಾಗಿ ಹೊಯ್ಸಳ ಮಹಾಪ್ರಧಾನ ಬಲ್ಲಪ್ಪದಂಡನಾಯಕನು (ಸು.೧೩೦೦–೧೩೬೫) ಪರೋಕ್ಷವಾಗಿ ಕಾರ್ಯ ನಿರ್ವಹಿಸಿದ್ದನೆಂದು ತೋರುತ್ತದೆ.[೨] ಅಲ್ಲದೆ ವಿಜಯನಗರ ಅರಸರ ಶಾಸನೋಕ್ತ **'ಹೊಸಪಟ್ಟಣ'**ವು ಹೊಯ್ಸಳ ದೇಶದೊಳಗೇ ಅಂತರ್ಗತವಾಗಿದ್ದ ಸಂಗತಿಯನ್ನು ಕ್ರಿ.ಶ. ೧೩೫೪ರ ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲೂಕು ಹುಣಸನಹಳ್ಳಿ ಶಾಸನ,[೩] ಕ್ರಿಶ. ೧೩೫೫ರ ಚಿತ್ರದುರ್ಗದ ಶಾಸನ,[೪] ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲೂಕಿನ ಕ್ರಿ.ಶ. ೧೩೬೦ರ ಸಕ್ಕರೆಪಟ್ಟಣದ[೫] ಶಾಸನ ಅನಂತಪುರ ಜಿಲ್ಲೆ ಮಡಕಶಿರಾ ತಾಲೂಕಿನ ಕೊತ್ತಸಿವರಂನ ಕ್ರಿ.ಶ. ೧೩೬೫ರ ಶಾಸನಗಳೇ[೬] ಮೊದಲಾದವುಗಳಿಂದ ತಿಳಿಯಬಹುದು. ಸುಮಾರು ಕ್ರಿ.ಶ. ೧೩೬೫ರ ನಂತರ ಮೊದಲನೆಯ ಬುಕ್ಕರಾಯನ ಕಾಲದಲ್ಲಿ ಅಂದರೆ **ಹಸ್ತಿನಾವತಿ–ಹಂಪಿ–ವಿಜಯನಗರವು** ದೃಢರಾಜಧಾನಿಯಾಗಿ ರೂಪುಗೊಂಡ ನಂತರವೂ **'ಹೊಸಪಟ್ಟಣ'**ದ ಪ್ರಸ್ತಾಪವು ಬಂದಿರುವುದುಂಟು. ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕಿನ ರಾಮಗಿರಿ ಗ್ರಾಮದ ಶಾಸನ,[೭] ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲೂಕಿನ ತ್ರಿಯಂಬಕಪುರದ ಶಾಸನ,[೮] ಹಾಸನ ಜಿಲ್ಲೆಯ ಶ್ರವಣಬೆಳ್ಗೊಳ,[೯] ರಾಮನಗರ ಜಿಲ್ಲೆ ಮಾಗಡಿ ತಾಲೂಕಿನ ಕಲ್ಯ[೧೦] ಮೊದಲಾದ ಸ್ಥಳಗಳಲ್ಲಿನ ಶಾಸನಗಳಲ್ಲೂ ಸಾಂದರ್ಭಿಕವಾಗಿ ಉಲ್ಲೇಖಗೊಂಡಿರುವುದುಂಟು. ಒಟ್ಟಾರೆ ಕ್ರಿ.ಶ. ಸು. ೧೩೬೫ರ ಸುಮಾರಿನಲ್ಲಿ **'ವಿಜಯನಗರ'ಪಟ್ಟಣವು** ಸಾಮ್ರಾಜ್ಯದ ರಾಜಧಾನಿಯಾಗಿ ದೃಢವಾಗುವವರೆಗೂ ಸುರಕ್ಷತೆಯ ದೃಷ್ಟಿಯಿಂದ ರಾಜಧಾನಿಯ ಸ್ಥಳಕ್ಕಾಗಿ ಹುಡುಕಾಟ ನಡಸಿ, ಅನೇಕ ಸ್ಥಳಗಳಿಂದ ಆಡಳಿತ ನಡೆಸಿರುವುದು ಕಂಡುಬರುತ್ತದೆ. ಅಂತಹ ಪ್ರಮುಖ ಸಾಂದರ್ಭಿಕ ನೆಲೆವೀಡು/ರಾಜಧಾನಿಗಳಲ್ಲಿ **'ಹೊಸಪಟ್ಟಣ'**ವಲ್ಲದೆ, ಹೊಸಬೆಟ್ಟ,[೧೧] ಹೊಸನಾಡು,[೧೨] ವಿರೂಪಾಕ್ಷಪಟ್ಟಣ[೧೩] ವಿರೂಪಾಕ್ಷ ಹೊಸದುರ್ಗ[೧೪], ವೀರವಿಜಯ ವಿರೂಪಾಕ್ಷಪುರ[೧೫], ದೋರಸಮುದ್ರ, ಪೆನುಗೊಂಡೆ[೧೬] ಉದಯಗಿರಿ[೧೭] ಮೊದಲಾದವು ಶಾಸನೋಕ್ತವಾಗಿವೆ. ಈ ಎಡೆಗಳ ಬಗ್ಗೆ ವಿದ್ವಾಂಸರು ಸಾಂದರ್ಭಿಕವಾಗಿ ತಮ್ಮ ಬರಹಗಳಲ್ಲಿ ಚರ್ಚಿಸಿರುತ್ತಾರೆ. ಪ್ರಸ್ತುತ **'ಹೊಸಪಟ್ಟಣ'**ವನ್ನು ಮಾತ್ರ ಕುರಿತು ಇಲ್ಲಿ ಪರಿಶೀಲಿಸುವ ಪ್ರಯತ್ನ ಮಾಡಲಾಗಿದೆ.

ಕ್ರಿ.ಶ. ಸು. ೧೩೦೦ ರಿಂದ ೧೪೬೫ರ ವರೆಗೂ ಶಾಸನಗಳಲ್ಲಿ ಈ **'ಹೊಸಪಟ್ಟಣ'**ದ ಉಲ್ಲೇಖಗಳು ಹೆಚ್ಚಾಗಿ ಕಂಡುಬರುತ್ತದೆ. ಆನಂತರದಲ್ಲಿ ಕ್ವಚಿತ್ತಾಗಿ ಕಾಣಸಿಗುತ್ತದೆ. ಅಂದರೆ ಹೊಯ್ಸಳ ಮೂರನೆಯ ಬಲ್ಲಾಳನ ಆಳ್ವಿಕೆಯ ಕಾಲದಿಂದ ಆರಂಭವಾಗಿ ವಿಜಯನಗರದ ಮೊದಲನೆಯ ಬುಕ್ಕರಾಯನ ಕಾಲದವರೆಗೂ ಹೆಚ್ಚಿನ ಉಲ್ಲೇಖಗಳು ಕಂಡುಬರುತ್ತದೆ.

'ಹೊಸಪಟ್ಟಣ'ವನ್ನು ಬೇರೆ ಬೇರೆ ವಿದ್ವಾಂಸರು ವಿಭಿನ್ನವಾಗಿ ಗುರುತಿಸಿರುವುದುಂಟು ವಾಲ್ಟರ್ ಎಲಿಯೆಟ್, ಪಿ.ಬಿ. ದೇಸಾಯಿ ಎಸ್.ಕೆ. ಐಯ್ಯಂಗಾರ್, ವಿಲಿಯಂ ಕೊಯೆಲ್ಹೊ, ಶ್ರೀನಿವಾಸಾಚಾರ್, ಎಸ್. ಶ್ರೀಕಂಠಶಾಸ್ತ್ರಿ, ಬರ್ಟನ್‌ಸ್ಟನ್, ವಸುಂಧರಾ ಫಿಲಿಯೋಜ, ದೇವರ ಕೊಂಡಾರೆಡ್ಡಿ, ಲ.ನ. ಸ್ವಾಮಿ, ಕೆ.ಎಂ. ಸುರೇಶ್ ಮೊದಲಾದವರೆಲ್ಲ **'ಹೊಸಪಟ್ಟಣ'**ವನ್ನು 'ವಿಜಯನಗರ' ವೆಂದೇ ಸಮೀಕರಿಸಿರುವುದು ಕಂಡುಬರುತ್ತದೆ. ಅಲ್ಲದೆ ಫಾದರ್ ಹೆರಾಸ್, ಬಾ.ರಾ. ಗೋಪಾಲ್ ಮತ್ತು ಲ.ನ. ಸ್ವಾಮಿ ಅವರುಗಳು, ತುಂಗಭದ್ರೆಯ ಉತ್ತರಕ್ಕೆ ಬಲ್ಲಾಳನ ಕಾಲದ **'ಹೊಸಪಟ್ಟಣ'**ವಿತ್ತೆಂದು ದಕ್ಷಿಣಕ್ಕೆ ಹರಿಹರನ ಕಾಲದ

* # ೩೭, 'ಶ್ರೀ ಕೃಷ್ಣಕೃಪ', ೩ನೇ ಅಡ್ಡರಸ್ತೆ, ಸುಬ್ಬಣ್ಣ ಲೇಔಟ್, ಹರಿನಗರ ಕ್ರಾಸ್, ಅಂಜನಾಪುರ ಅಂಚೆ, ಬೆಂಗಳೂರು–೫೬೦೧೦೮.

ಹೊಸಪಟ್ಟಣವಿತ್ತೆಂದು ಅಭಿಪ್ರಾಯಪಟ್ಟಿದ್ದಾರೆ.[೧೮] **'ಹೊಸಪಟ್ಟಣ'** ಮತ್ತು **'ವಿರೂಪಾಕ್ಷ ಪಟ್ಟಣ'**ಗಳನ್ನು ಕ್ರಮವಾಗಿ 'ವಿಜಯನಗರ' ಮತ್ತು 'ವಿರೂಪಾಕ್ಷತೀರ್ಥ' (ಹಂಪಿ) ಎಂದೂ ಗುರುತಿಸಿರುವುದುಂಟು. ಬಿ.ಎಲ್. ರೈಸ್ ಅವರು ತಮ್ಮ ಬರಹಗಳಲ್ಲಿ ಹೊಸವೀಡು, ಹೊಸಬೆಟ್ಟ, ಹೊಸನಾಡು ಮುಂತಾದವು ನಾಲ್ಕನೆಯ ಬಲ್ಲಾಳನಿದ್ದ ಸ್ಥಳವೆಂದು ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೆ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ಅಥವಾ ಕೋಲಾರ ಜಿಲ್ಲೆ (ಇಂದಿನ ಚಿಕ್ಕಬಳ್ಳಾಪುರ ಜಿಲ್ಲೆಯ) ಗೌರಿಬಿದನೂರು ತಾಲೂಕಿನ 'ಹೊಸೂರು' ಎಂಬುದೇ 'ಹೊಸಪಟ್ಟಣ್ಣ'ವಾಗಿರಬಹುದೆಂದು ಹೇಳಿದ್ದಾರೆ.[೧೯] ವಿಜಯನಗರ ಇತಿಹಾಸದ ಮೇಲೆ ವ್ಯಾಪಕ ವಾಗಿ ಕೆಲಸ ಮಾಡಿರುವ ಎನ್. ವೆಂಕಟರಮಣಯ್ಯನವರು ಇವರೆಲ್ಲರಿಗೂ ಭಿನ್ನವಾಗಿ **'ಹೊಸಪಟ್ಟಣ'**ವನ್ನು ಗುರುತಿಸಿದ್ದಾರೆ.[೨೦] ಇವರು ಇಂದಿನ ಕೃಷ್ಣರಾಜಪೇಟೆ ತಾಲೂಕಿನ ಹೇಮಾವತಿ ನದಿಯ ಮಧ್ಯದಲ್ಲಿರುವ ದ್ವೀಪವೇ ಆಗಿದೆ ಎಂದು ಗುರುತಿಸಿರುವುದಲ್ಲದೆ ಅಲ್ಲಿ ಹಳೆಯ ಕೋಟೆಯ ಅವಶೇಷಗಳಿರುವುದನ್ನು ದಾಖಲಿಸಿದ್ದಾರೆ.

'ಹೊಸಪಟ್ಟಣ' ಮತ್ತು **'ವಿರೂಪಾಕ್ಷಪಟ್ಟಣ'**ಗಳ ಶೋಧನೆಗೆ ಹೊರಟ ಕೂ.ಸ. ಅಪರ್ಣ ಅವರು ವ್ಯಾಪಕ ಕ್ಷೇತ್ರ ಕಾರ್ಯವನ್ನು ನಡೆಸಿ ಅಂತಿಮವಾಗಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ 'ಸಕ್ಕರೆಪಟ್ಟಣ'ವನ್ನು ಹೊಸಪಟ್ಟಣವೆಂದೂ, ಚಿಕ್ಕಮಗಳೂರು ತಾಲೂಕಿನ 'ಹಂಪಾಪುರವನ್ನು,' ವಿರೂಪಾಕ್ಷಪಟ್ಟಣವೆಂದು ಗುರುತಿಸಿದ್ದಾರೆ.[೨೧] ಆದರೆ ಅವರು ಕೆ.ಆರ್. ಪೇಟೆ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಹಿಂದೆ ವೆಂಕಟರಮಣಯ್ಯ ಅವರು ಸೂಚಿಸಿರುವ **'ಹೊಸಪಟ್ಟಣ'**ದ ಶೋಧಕ್ಕಾಗಿ ಕ್ಷೇತ್ರ ಕಾರ್ಯ ಕೈಗೊಳ್ಳಲಿಲ್ಲವೆಂದು ತೋರುತ್ತದೆ.

ಶಾಸನೋಕ್ತವಾಗಿರುವ **'ಹೊಸಪಟ್ಟಣ'**ವು ಹೊಯ್ಸಳ ದೇಶದಲ್ಲಿತ್ತೆಂದು ಮೇಲೆ ಉಲ್ಲೇಖಿಸಿದ ಶಾಸನಗಳಿಂದ ಖಚಿತವಾಗುತ್ತದೆ. ವಿಜಯನಗರ ಅರಸರ ಕಾಲದಲ್ಲಿ ವಿಶೇಷವಾಗಿ ಪ್ರಸ್ತಾಪಿತವಾಗಿರುವ **ಹೊಯ್ಸಳ ರಾಜ್ಯ**–ದೇಶ–ನಾಡು, ಎಂಬುದು; ವಿಜಯನಗರ ಆಳ್ವಿಕೆಯ ಪೂರ್ವದಲ್ಲಿ ಪ್ರಧಾನವಾಗಿ ಹೊಯ್ಸಳರ ಮೂಲ ರಾಜಧಾನಿ ಸ್ಥಳಗಳನ್ನು ಕೇಂದ್ರವಾಗಿಟ್ಟುಕೊಂಡು ಅವುಗಳ ಸುತ್ತಮುತ್ತಲ ಪ್ರದೇಶದ (Core region) ಸೂಚಕವಾಗಿತ್ತು. ಅದರ ವ್ಯಾಪ್ತಿ ಇಂದಿನ ಹಾಸನ ಮತ್ತು ಮಂಡ್ಯ ಜಿಲ್ಲೆಗಳ ಪೂರ್ಣ ಪ್ರದೇಶ, ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಗಳ ಉತ್ತರ ಭಾಗಗಳು, ಬೆಂಗಳೂರು ಮತ್ತು ತುಮಕೂರು ಜಿಲ್ಲೆಗಳ ಪಶ್ಚಿಮ ಭಾಗಗಳು, ಚಿತ್ರದುರ್ಗ ಜಿಲ್ಲೆಯ ನೈರುತ್ಯ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಆಗ್ನೇಯ ಭಾಗಗಳನ್ನು ಒಳಗೊಂಡಂತೆ ಇದ್ದಿತು. ಇದು ವಿಜಯನಗರ ಆಳ್ವಿಕೆಯ ಅಧಿಕೃತ ಪ್ರಾದೇಶಿಕ ಘಟಕವಾದ ರಾಜ್ಯವಾಗಿದ್ದರೂ ಸಾಂಸ್ಕೃತಿಕ ಗುರುತಿನ ಪಟ್ಟಿಕೆಯಾಗಿ ಉಲ್ಲೇಖಗೊಂಡಿರುವುದೇ. ಅಧಿಕವಾಗಿದೆ. ಒಟ್ಟಾರೆ **'ಹೊಸಪಟ್ಟಣ'**ದ ನೆಲೆಯನ್ನು ಈ **ಹೊಯ್ಸಳ ದೇಶ**ದ ವ್ಯಾಪ್ತಿಯಲ್ಲಿ ಶೋಧಿಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಶೋಧನೆ ಕೈಗೊಂಡಾಗ, ಹೇಮಾವತೀ ನದಿಯು ಹೊಯ್ಸಳ ದೇಶದ ಪ್ರಧಾನ ನದಿಯಾಗಿರುವುದರಿಂದ ಆದರ ಜಾಡನ್ನೇ ಹಿಡಿದು ನಕ್ಷೆಗಳನ್ನು ಪರಿಶೀಲಿಸುತ್ತಾ ಹೋದಂತೆ ಪೂರ್ವರೇಖಾಂಶ ೭೬°೨೫' ಮತ್ತು ಉತ್ತರ ಅಕ್ಷಾಂಶ ೧೨°೩೫' (Topo sheet 57D /6/6/NE)ರಲ್ಲಿ ಬಿಳಿಗಾನಹಳ್ಳಿ ಕಂದಾಯ ಗ್ರಾಮದ ಸ್ಥಳವಾಗಿ ಪಾಳು ಬಿದ್ದಿರುವ **ಹೊಸಪಟ್ಟಣ ಕೋಟೆ**ಯ ನಮೂದು ಕಂಡು ಬಂದಿತು. ಇದು ಹೋಬಳಿಯ ಕೇಂದ್ರವಾದ ಅಕ್ಕಿ ಹೆಬ್ಬಾಳು ಗ್ರಾಮಕ್ಕೆ ಕೇವಲ ಸು.೧ ಕಿ.ಮೀ. ಈಶಾನ್ಯಕ್ಕಿರುವುದು ದೃಢಪಟ್ಟಿತು. ಆ ಸ್ಥಳದ ಕ್ಷೇತ್ರಕಾರ್ಯವನ್ನು ನನ್ನ ಮಿತ್ರರಾದ ಜೋಗುಪಾಳ್ಯದ ಮಾನ್ಯ ತಾಯಪ್ಪನವರೊಂದಿಗೆ ಕೈಗೊಂಡಾಗ ಕೋಟೆಯ ವಿಪುಲ ಅವಶೇಷಗಳು, ಮನೆಗಳ ತಳಪಾಯ, ಮಡಿಕೆಚೂರಿನ ಕುರುಹುಗಳು ದಟ್ಟವಾಗಿ ಬೆಳದಿರುವ ಕುರುಚಲು ಕಾಡು, ಗಿಡಗೆಂಟೆಗಳು ಕಂಡು ಬಂದವು. ಸ್ಥಳೀಯರ ಹೇಳಿಕೆ ಪ್ರಕಾರ ಅದು ದುಷ್ಟ ಮೃಗಗಳ ಆವಾಸ ಸ್ಥಾನವಾಗಿರುವುದು ಮನವರಿಕೆಯಾಯಿತು. ಆದರೂ ಸ್ಥಳೀಯರ ನೆರವನ್ನು ಪಡೆದು ನದಿಯನ್ನು ದಾಟಿ ಪಾಳು ಕೋಟೆ ಮತ್ತು ಅದರ ಹೊರಗಿನ ಪ್ರದೇಶಗಳನ್ನು ವೀಕ್ಷಿಸಲಾಯಿತು. ಈಗ ಅಳಿದುಳಿದಿರುವ ಕೋಟೆಯ ಭಿತ್ತಿ ಹಾಗೂ ೨೧ ಬುರುಜು (ಕೊತ್ತಳ)ಗಳ ಅವಶೇಷಗಳು ಗಮನ ಸೆಳೆದವು. ಮುಳ್ಳು ಗಿಡಗೆಂಟೆಗಳು ಅಧಿಕವಾಗಿ ಬೆಳೆದು ನಿಂತಿರುವುದರಿಂದ ಸೂಕ್ಷ್ಮ ಪರಿಶೀಲನೆಗೆ ಅವಕಾಶ ವಾಗಲಿಲ್ಲ, ಒಟ್ಟಾರೆ ಅದೊಂದು ರಾಜಧಾನಿ ಸ್ಥಳಕ್ಕೆ ಹಾಗೂ ಸುರಕ್ಷಿತ ಕೋಟೆಯಾಗಿ ಉನ್ನತಿ ಪಡೆಯಲು ಯೋಗ್ಯವಾದ ಸ್ಥಳವೆನಿಸಿತು. ಐತಿಹಾಸಿಕವಾಗಿ ಇದು ಹಿಂದೆ ಚಾಲುಕ್ಯ ರಾಜಕುಮಾರ ನಿಜಗಳಿ ಕಟಕರಾಯನ ರಾಜಧಾನಿ ಯಾಗಿತ್ತೆಂದು ತಿಳಿಯುತ್ತದೆ.[೨೨]

ಈ ಸ್ಥಳದ ಸುತ್ತಲೂ ಹೇಮಾವತೀ ನದಿಯು ಸ್ವಾಭಾವಿಕವಾಗಿಯೇ ಸುತ್ತುವರಿದಿರುವುದರಿಂದ ಈ ದ್ವೀಪದಲ್ಲಿ ರಚನೆಗೊಂಡ ಕೋಟೆಗೆ ನೈಸರ್ಗಿಕ ರಕ್ಷಣೆ ಒದಗಿತ್ತು. ಕೋಟೆಯ ಹೊರಗೆ ಪೂರ್ವ ಭಾಗವು ಜನವಸತಿಗೆ ಯೋಗ್ಯ ವಾಗಿದ್ದಿತು. ಇಂತಹ ಆಯಕಟ್ಟಿನ ಸ್ಥಳವನ್ನು ಹೊಯ್ಸಳರ ಕಾಲದಲ್ಲೇ ಗುರುತಿಸಿ ಅಭಿವೃದ್ಧಿ ಪಡೆಸಿದ್ದರೆಂದು ತೋರುತ್ತದೆ. ಆದ್ದರಿಂದಲೇ ಹೊಯ್ಸಳರ ಅಂತಿಮ ಘಟ್ಟದ ಶಾಸನಗಳಲ್ಲಿ ಈ ಸ್ಥಳದ ಉಲ್ಲೇಖಗಳು ಬಂದಿದೆಯೆಂದು






ಹೊಸಪಟ್ಟಣ ಕೋಟೆಯ ಭಿತ್ತಿ ಹೊರಗಡೆ
ಬೆಳೆದಿರುವ ಗಿಡಗಂಟೆಗಳ ಹಿನ್ನೆಲೆಯಲ್ಲಿ



ಹೊಸಪಟ್ಟಣ ಕೋಟೆಯ ಭಿತ್ತಿ ಒಳಗಡೆ
ಬೆಳೆದಿರುವ ಗಿಡಗಂಟೆಗಳ ಹಿನ್ನೆಲೆಯಲ್ಲಿ





ಹೇಳಬಹುದು. ಇನ್ನು ವಿಜಯನಗರ ಸಾಮ್ರಾಜ್ಯದ ಆರಂಭಿಕ ಶಾಸನಗಳು ಸುಮಾರು ಕೋಲಾರ ಜಿಲ್ಲಾ ಪ್ರದೇಶದಿಂದ ಆರಂಭಿಸಿ ಪಶ್ಚಿಮಕ್ಕೆ ಮಂಗಳೂರಿನವರೆಗೂ ಮಂಡ್ಯ, ಹಾಸನ, ಚಿಕ್ಕಮಗಳೂರು ಜಿಲ್ಲಾ ಪ್ರದೇಶಗಳು ಒಳಗೊಂಡಂತೆ ಸುಮಾರು ೧೫೦ಕಿ.ಮೀ. ವ್ಯಾಪ್ತಿಯ ಪಟ್ಟಿಕೆಯಲ್ಲಿಯೇ ವಿಶೇಷವಾಗಿ ಕಂಡು ಬಂದಿರುವುದನ್ನು ಗಮನಿಸಿದರೆ; ವಿಜಯನಗರ ಸಾಮ್ರಾಜ್ಯವು ಆರಂಭದಲ್ಲಿ ಈ ಸ್ಥಳವನ್ನೇ ರಾಜಧಾನಿಯನ್ನಾಗಿ ಅಭಿವೃದ್ಧಿ ಪಡಿಸುವ ಇರಾದೆ ಹೊಂದಿದ್ದಿತೆಂದು ತೋರುತ್ತದೆ. ಈ ಪಟ್ಟಿಕೆಯೊಳಗೆ ಆ ಕಾಲಕ್ಕೆ ಕಾರ್ಯ ನಿರ್ವಹಿಸುತ್ತಿದ್ದ ಹೊಯ್ಸಳ ಮಾಂಡಲಿಕರು, ದಂಡನಾಯಕರು ಹಾಗೂ ಪರೋಕ್ಷವಾಗಿ ಶೃಂಗೇರಿಯ ಯತಿವರ್ಯ ವಿದ್ಯಾರಣ್ಯರು ಪ್ರೇರಕಶಕ್ತಿಯಾಗಿ ವಿಜಯನಗರದ ಸಂಸ್ಥಾಪನೆಯಲ್ಲಿ ಕೈ ಜೋಡಿಸಿದ್ದರೆಂದೂ ಈ ಪ್ರದೇಶಗಳೂ ಮೊದಲಿಗೆ ಯಾವುದೇ ಅಡೆತಡೆ ಇಲ್ಲದೆ ವಿಜಯನಗರ ಸಾಮ್ರಾಜ್ಯದ ಮೂಲ ಬಂಡವಾಳವಾಗಿ ಪರಿಣಮಿಸಿದ್ದ ಅಂಶವನ್ನು ಶಾಸನಗಳ ಅವಲೋಕನದಿಂದ ಮನಗಾಣಬಹುದಾಗಿದೆ.

ಕಾಲಾಂತರದಲ್ಲಿ ರಾಜಧಾನಿ ಸ್ಥಳದ ಶೋಧನೆಯಲ್ಲಿದ್ದ ವಿಜಯನಗರದ ಅರಸರಿಗೆ ಉತ್ತರದಿಂದ ಮುಸ್ಲಿಮ್ ಆಕ್ರಮಣಗಳ ಬಿಸಿ ಅಧಿಕವಾಗಿದ್ದುದರಿಂದ ಅನಿವಾರ್ಯವಾಗಿ ಇನ್ನೂ ಉತ್ತಮವಾದ, ವೈರಿಗಳನ್ನು ನಿಗ್ರಹಿಸಲು ಸೂಕ್ತವಾದ ಸ್ಥಳದ ಶೋಧ ಅಗತ್ಯವಾಗಿತ್ತು. ಹಾಗಾಗಿ ಆ ಮೊದಲೇ ಕಂಪಿಲರಾಯನಿಂದ ನಿರ್ಮಿತವಾಗಿದ್ದ **ಆನೆಗೊಂದಿ** (ಹಸ್ತಿನಾವತಿ) ಸ್ಥಳ ಸೂಕ್ತವೆನಿಸಿರಬೇಕು. ಅಲ್ಲಿನ ಬೆಟ್ಟ ಗುಡ್ಡಗಳು, ತುಂಬಿಹರಿಯುವ ತುಂಗಭದ್ರಾ ನದಿಯ ರಕ್ಷಣೆ, ನೆರೆಯಲ್ಲಿರುವ ವಿರೂಪಾಕ್ಷ ಸ್ಥಾನ (ಹಂಪಿ) ಇವುಗಳು ಹೆಚ್ಚು ಸೂಕ್ತವೆಂದು ಕಂಡು ಬಂದ ಕಾರಣ ವಿಜಯನಗರದ ಮೊದಲನೆಯ ಬುಕ್ಕರಾಯನ ಕಾಲದಲ್ಲೇ, ಹಂಪಿಗೆ ಹೊಂದಿಕೊಂಡಂತೆ 'ವಿಜಯನಗರ ಪಟ್ಟಣ' ಜನ್ಮತಾಳಿತೆಂದು ತೋರುತ್ತದೆ[೨೩]. ಹೀಗಾಗಿ ಆ ನಂತರದಲ್ಲಿ **'ಹೊಸಪಟ್ಟಣ'**ವು

ಕೇವಲ ಪ್ರಾದೇಶಿಕ ರಾಜಧಾನಿ ಸ್ಥಳವಾಗಿ ಮುಂದುವರೆಯಿತಾದರೂ ಕಾಲಾಂತರದಲ್ಲಿ ವಿಜಯನಗರದ ಪತನದೊಂದಿಗೆ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿತೆಂದು ತೋರುತ್ತದೆ. ಈ 'ಹೊಸಪಟ್ಟಣ'ವು ಪ್ರಸಿದ್ಧ ಜೈನ ಕ್ಷೇತ್ರಗಳಲ್ಲಿ ಒಂದಾಗಿದ್ದ 'ಹೊಸಹೊಳಲು'ಸ್ಥಳಕ್ಕೆ ಪಶ್ಚಿಮದಲ್ಲಿ ಸು.೧೦ ಕಿ.ಮೀ.ಗಳ ಅಂತರದಲ್ಲಿದೆ. ಇವುಗಳ ಮಧ್ಯೆ ಬೆಳ್ಳಿಬೆಟ್ಟಗಳೆಂಬ ಬೆಟ್ಟದ ಸಾಲುಗಳಿವೆ. ಈ ಪ್ರದೇಶದಲ್ಲಿ ಸೂಕ್ಷ್ಮವಾದ ಶೋಧನೆ ನಡೆಸಿದರೆ ಇನ್ನೂ ಅನೇಕ ಮೌಲಿಕ ಐತಿಹಾಸಿಕ ವಿವರಗಳು ದೊರಕುವುದರಲ್ಲಿ ಸಂದೇಹವಿಲ್ಲ. ಏಕೆಂದರೆ ಇಲ್ಲಿ ಹೊಸಹೊಳಲು ಮತ್ತು ಹೊಸ ಪಟ್ಟಣಗಳನ್ನು ಸಂವಾದಿ ಹಾಗೂ ಸಂಯುಕ್ತ ಆಯಮಗಳಿಂದ ಅಧ್ಯಯನ ಮಾಡುವ ಅಗತ್ಯವಿದೆ.

ವಿಜಯನಗರ ಇತಿಹಾಸ ಅಧ್ಯಯನಗಳಲ್ಲಿ ಹೆಚ್ಚು ಚರ್ಚಾಸ್ಪದವಾಗಿದ್ದ **'ಹೊಸಪಟ್ಟಣ'**ದ ಶೋಧವು ಪ್ರಸ್ತುತ ಅಧ್ಯಯನದಿಂದ ಒಂದು ನಿರ್ದಿಷ್ಟ ನೆಲೆಯನ್ನು ಗುರುತಿಸುವಲ್ಲಿ ಸಫಲವಾಗಿದೆಂದು ಭಾವಿಸಬಹುದಾಗಿದೆ. ಇನ್ನು ಈ ಸ್ಥಳ ಮತ್ತು ಪರಿಸರವನ್ನು ಇನ್ನೂ ಸೂಕ್ಷ್ಮ ಅಧ್ಯಯನಕ್ಕೆ ಒಳಪಡಿಸಿ ಶೋಧನೆ ನಡೆಸುವ ಸಾಹಸ, ಇತಿಹಾಸ ಸಂಶೋಧಕರ ಮೇಲಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. Saletore B.A., *Social & Political Life under Vijayanagar*, Madras, 1934, p.34.

೨. ಗಂಗಾಂಬಿಕೆ ಎಸ್., 'ಹೊಯ್ಸಳ ಮಹಾಪ್ರಧಾನ ಬಲ್ಲಪ್ಪದಂಡನಾಯಕ ಮತ್ತು ಅವನ ವಂಶೀಯರು,' **ಇತಿಹಾಸದರ್ಶನ** ಸಂ.೨೬ (೨೦೧೧), ಪು.೨೬೭-೨೮೦.

೩. ಮೈಸೂರು ಪುರಾತತ್ತ್ವ ವಾರ್ಷಿಕ ವರದಿ (MAR)೧೯೨೫, ಗೌರಿಬಿದನೂರು ೮೪, ಪು. ೭೩.

೪. **ಎಪಿಗ್ರಾಫಿಯಾ ಕರ್ನಾಟಕ** ಸಂ.XI., ಚಿತ್ರದುರ್ಗ೨. (ರೈಸ್ ಆವೃತ್ತಿ).

೫. ಅದೇ, ಸಂ.೧೨ ಕಡೂರು ೨೧೨ (ಪರಿಷ್ಕೃತ ಆವೃತ್ತಿ).

೬ **ಸೌತ್ಇಂಡಿಯನ್ ಇನ್ಸ್ಕ್ರಿಪ್ಷನ್ಸ್** (SII) vol IX - 2; No. 410.

೭. **ಎಪಿಗ್ರಾಫಿಯಾ ಕರ್ನಾಟಕ** ಸಂ. XI; ಹೊಳಲ್ಕೆರೆ ೭೫, ಕ್ರಿ.ಶ. ೧೪೧೦ (ರೈಸ್ ಆವೃತ್ತಿ).

೮. ಅದೇ, ಸಂ. ೩; ಗುಂಡ್ಲುಪೇಟೆ ೧೪೭, ೧೪೪೭ (ಪರಿಷ್ಕೃತ ಆವೃತ್ತಿ).

೯. ಅದೇ, ಸಂ. ೨; ಶ್ರವಣಬೆಳಗೊಳ ೪೭೫, ಕ್ರಿ.ಶ. ೧೩೬೮ (ಪರಿಷ್ಕೃತ ಆವೃತ್ತಿ).

೧೦. ಅದೇ, ಸಂ. IX; ಮಾಗಡಿ ೧೮, ಕ್ರಿ.ಶ. ೧೩೬೮ (ರೈಸ್ ಆವೃತ್ತಿ).

೧೧. ಅದೇ, ನೆಲಮಂಗಲ ೯; ಕ್ರಿ.ಶ. ೧೫೭೭ (ರೈಸ್ ಆವೃತ್ತಿ).

೧೨. ಅದೇ, ದೊಡ್ಡಬಳ್ಳಾಪುರ ೪೩, ಕ್ರಿ.ಶ. ೧೩೪೦ (ರೈಸ್ ಆವೃತ್ತಿ).

೧೩. ಅದೇ, ಸಂ. ೧೦; ಅರಸೀಕೆರೆ ೧೦೩, ಕ್ರಿ.ಶ. ೧೩೩೦ (ಪರಿಷ್ಕೃತ ಆವೃತ್ತಿ).

೧೪. ಅದೇ, ಸಂ. XII; ಗುಬ್ಬಿ ೩೦, ಕ್ರಿ.ಶ. ೧೩೩೧ (ರೈಸ್ ಆವೃತ್ತಿ).

೧೫. ಅದೇ, ಸಂ. IX; ಹೊಸಕೋಟೆ ೪೩, ಕ್ರಿ.ಶ. ೧೩೩೯ (ರೈಸ್ ಆವೃತ್ತಿ).

೧೬. SII-vol. XVI, No.1.

೧೭. SII-vol. XVI, No.4.

೧೮. ಬಾ.ರಾ. ಗೋಪಾಲ್; **ಕರ್ನಾಟಕ ಇತಿಹಾಸ,** ಮೈಸೂರು ೧೯೮೬, ಪು.೧೧.

೧೯. B.L. Rice; *Mysore and Coorg from Inscriptions,* London,1909, p.114.

೨೦. N. Venktaramanayya; *Vijayanagara : Origin of the City and Empire,* Madras, 1933, p. 41.

೨೧. ಕೂ.ಸ. ಅಪರ್ಣ; 'ಹೊಸಪಟ್ಟಣ ಮತ್ತು ವಿರೂಪಾಕ್ಷ ಪಟ್ಟಣ: ಸ್ಥಳ ಶೋಧನೆ' **ವಿಜಯನಗರ ಅಧ್ಯಯನ** ಸಂ. ೧೪, ಮೈಸೂರು, ೨೦೧೦, ಪು.೧೮೮-೨೧೬.

೨೨. N. Venktaramanayya; *Vijayanagara : Origin of the City and Empire,* Madras, 1933, p. 42.

೨೩. *Vijayanagara : Progress of Research* - 1983-84, Ins No. 2 & 3, Mysore 1985 pp. 21 to 23, & ಪಿ.ವಿ. ಕೃಷ್ಣಮೂರ್ತಿ., 'ಆನೆಗೊಂದಿ ಪ್ರಭುಗಳ ಇತಿಹಾಸ – ಶಾಸನ ಮತ್ತು ಇತರ ಆಕಾರಗಳ ಹಿನ್ನೆಲೆಯಲ್ಲಿ ಒಂದು ಪರಿಶೀಲನೆ', **ಸೂರ್ಯಕೀರ್ತಿ,** ಡಾ. ಸೂರ್ಯನಾಥ ಕಾಮತರ ಅಭಿನಂದನ ಗ್ರಂಥ, ಬೆಂಗಳೂರು ೨೦೦೦ ಪು. ೨೪೩-೫೭.

೮೪

ನಿಂಬಾಪುರದ ಪ್ರಾಚ್ಯಾವಶೇಷಗಳು

ಡಾ. ಎಚ್. ತಿಪ್ಪೇಸ್ವಾಮಿ*

ನಿಂಬಾಪುರವನ್ನು ಹಿಂದೆ 'ಸೋಮಲಾಪುರ' ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಇದು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿದೆ. ವಿಶ್ವವಿಖ್ಯಾತ ಹಂಪಿಯ ತಳವಾರಘಟ್ಟದಿಂದ ಪೂರ್ವಕ್ಕೆ ವೆಂಕಟಾಪುರದ ಆಶ್ರಮ, ಬೂದಿಗುಡ್ಡದವರಗೆ ಮತ್ತು ಉತ್ತರದಲ್ಲಿ ತುಂಗಾಭದ್ರ ನದಿ ದಂಡೆಯಿಂದ (ಆನೆಗೊಂದಿಯ ಚಿಂತಾಮಣಿ ಮಠದ ಬಳಿ ಹರಿಯುವ) ದಕ್ಷಿಣದಲ್ಲಿ ತಳವಾರಘಟ್ಟ ದ್ವಾರದವರೆಗೆ ಇದೆ. ಇದನ್ನು ಕಮಲಾಪುರ ಮತ್ತು ವೆಂಕಟಾಪುರ ಮಾರ್ಗ ವಾಗಿಯೂ ವಾಹನಗಳಲ್ಲಿ, ಹಂಪಿಯಿಂದ ಕಾಲು ದಾರಿಯಲ್ಲಿ ತಲುಪಬಹುದಾಗಿದೆ.

ಬೇಚರಕ್ ಗ್ರಾಮವಾಗಿರುವ ನಿಂಬಾಪುರ ೧೪-೧೬ನೇ ಶತಮಾನದಲ್ಲಿ ಪ್ರಖ್ಯಾತ ಆಗ್ರಹಾರ ಮತ್ತು ಉಪನಗರ ವಾಗಿತ್ತು. ಅಲ್ಲದೆ ಚರಿತ್ರೆಯ ಪೂರ್ವಕಾಲದಲ್ಲಿ ಪ್ರಾಗೈತಿಹಾಸಿಕ ಮಾನವ ಬಿಟ್ಟುಹೋದ ಕೈಗೊಡಲಿ, ಬೂದಿದಿಬ್ಬ, ವರ್ಣಚಿತ್ರ ಮೊದಲಾದ ಕುರುಹುಗಳು ಇಲ್ಲಿ ದೊರೆತಿವೆ. ಇದನ್ನು ಹಿಂದೆ ನಿಂಬಾಪುರ ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಪ್ರಾಯಶಃ ಹಿಂದೆ ಇಲ್ಲಿ ಹೆಚ್ಚಾಗಿ ಬೆಳೆಯುತ್ತಿದ್ದ ನಿಂಬೆಹಣ್ಣುಗಳನ್ನು ವಿಜಯನಗರದ ಮಾರುಕಟ್ಟೆ, ದೇವಾಲಯ ಹಾಗು ಅರಮನೆ, ಗುರುಮನೆಗಳಿಗೆ ಕಳುಹಿಸಿಕೊಡುತ್ತಿದ್ದರಂತೆ ಆ ಕಾರಣಕ್ಕಾಗಿ ಈ ಗ್ರಾಮವನ್ನು ನಿಂಬಾಪುರ ಎಂದು ಅಂದು ಕರೆಯ ಲಾಗುತ್ತಿತ್ತು ಎಂಬದು ಸ್ಥಳೀಯರಲ್ಲಿರುವ ನಂಬಿಕೆ[೧]. ಜನರು ಈ ಭಾಗವನ್ನು ಇಂದಿಗೂ ನಿಂಬಾಪುರ ಮಾಗಣಿ ಎಂದು ಕರೆಯುತ್ತಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ಕೆಲ ಸಾಹಿತ್ಯ ಕೃತಿಗಳು ಮತ್ತು ವಿದೇಶಿ ಪ್ರವಾಸಿಗರು ಈ ಭಾಗದಲ್ಲಿ ಹಲವು ಹಣ್ಣಿನ ತೋಟಗಳಿದ್ದ ಬಗ್ಗೆ ಉಲ್ಲೇಖಿಸಿದ್ದಾರೆ. ಅವುಗಳಲ್ಲಿ ಇಲ್ಲಿನ ನಿಂಬೆವನವು ಸಹ ಒಂದಾಗಿರಬಹುದು. ಮೂಲತಃ ಜನವಸತಿ ಪ್ರದೇಶವಾಗಿದ್ದ ಇಲ್ಲಿ ವಾಸಿಸುತ್ತಿದ್ದ ಜನರು ಪ್ರವಾಹ/ಭೀಕರ ಖಾಯಲೆಗಳಿಗೆ ತುತ್ತಾಗಿ ಇಂದಿನ ಕಮಲಾಪುರ ಮತ್ತು ವೆಂಕಟಾಪುರಗಳಿಗೆ ವಲಸೆ ಹೋಗಿ ನೆಲೆಸಿರಬಹುದೆನಿಸುತ್ತದೆ.

ಈ ಪ್ರಬಂಧವು ಮುಖ್ಯವಾಗಿ 'ನಿಂಬಾಪುರ'ಕ್ಕೆ ಮಾತ್ರ ಸೀಮಿತವಾಗಿದ್ದು, ಕೆಳಗಿನ ಉದ್ದೇಶಗಳನ್ನೊಳಗೊಂಡಿದೆ.

೧. ಅವಸಾನದ ಅಂಚಿನಲ್ಲಿರುವ ಅವಶೇಷಗಳನ್ನು ಪ್ರಾಥಮಿಕವಾಗಿ ಒಂದೆಡೆ ದಾಖಲಿಸುವುದು.

೨. ಇಲ್ಲಿಯವರೆಗೆ ವರದಿ ಆಗದೆ ಇರುವ ಸ್ಮಾರಕ ಮತ್ತು ಪುರಾತತ್ವ ಅವಶೇಷಗಳನ್ನು ವರದಿ ಮಾಡುವುದು.

೩. ಇತ್ತೀಚಿನ ಅನ್ವೇಷಣೆಯಲ್ಲಿ (ಕ್ಷೇತ್ರಕಾರ್ಯ) ಗುರುತಿಸಿದ ಅವಶೇಷಗಳ ಒಂದು ಚಿತ್ರಣ ಒಂದೆಡೆ ದೊರೆಯು ವಂತೆ ಮಾಡುವುದು.

ಅಧ್ಯಯನದ ಅನುಕೂಲಕ್ಕಾಗಿ ಇಲ್ಲಿ ದೊರೆಯುವ ಪುರಾತತ್ವ ಅವಶೇಷಗಳನ್ನು ಈ ಕೆಳಗಿನಂತೆ ವಿಭಾಗಿಸಿ ಕೊಳ್ಳಬಹುದು.

ಅ. ಪ್ರಾಗೈತಿಹಾಸಿಕ ಕಾಲದ ಅವಶೇಷಗಳು

ಆ. ಐತಿಹಾಸಿಕ ಕಾಲದ ಅವಶೇಷಗಳು

ಅ. ಪ್ರಾಗೈತಿಹಾಸಿಕ ಕಾಲದ ಅವಶೇಷಗಳು

ಶಿಲಾಯುಗ ಸಂಸ್ಕೃತಿಗೆ ಸೇರಿದ ಕೆಲವು ಅವಶೇಷಗಳು ಈ ಪ್ರದೇಶದ ಕೆಲಭಾಗಗಳಲ್ಲಿ ದೊರೆತಿವೆ. ಸೂಕ್ಷ್ಮಶಿಲಾಯುಗ ಮತ್ತು ನವಶಿಲಾಯುಗದ ಅವಶೇಷಗಳು ಮುಖ್ಯವಾಗಿ ಇಲ್ಲಿ ದೊರೆತಿದ್ದು, ಅವುಗಳು ಇಂತಿವೆ.

೧. ಸೂಕ್ಷ್ಮಶಿಲಾಯುಗ ಮತ್ತು ನವಶಿಲಾಯುಗದ ಅವಶೇಷಗಳು

ನಿಂಬಾಪುರದ ತಳವಾರಘಟ್ಟ ದ್ವಾರದ ಪೂರ್ವ ಭಾಗದಲ್ಲಿರುವ ಗುಡ್ಡದ (ಶ್ರೀ ಚಿಟ್ಟಿಬಾಬುರವರ ಜಮೀನಿಗೆ ಹೋಗುವ ದಾರಿ ಬಳಿ ಇರುವ) ಸಮೀಪದಲ್ಲಿರುವ ಬೆಟ್ಟದ ಕಲ್ಲಾಸೆರೆಯೊಂದರಲ್ಲಿ ಈ ಕಾಲಕ್ಕೆ (ಕ್ರಿ.ಪೂ. ೩೦೦೦-ಕ್ರಿ.ಪೂ. ೧೫೦೦) ಸೇರಿದ ಎರಡು ವರ್ಣಚಿತ್ರ ಪಟ್ಟಿಕೆಗಳಿವೆ. ಮೊದಲನೆಯ ವರ್ಣಚಿತ್ರ ಪಟ್ಟಿಕೆ ಉತ್ತರಾಭಿಮುಖವಾಗಿದ್ದು, ಇವುಗಳನ್ನು ಕೆಂಪು ಬಣ್ಣ (ಕೆಮ್ಮಣ್ಣು)ದಿಂದ ರಚಿಸಲಾಗಿದೆ.[೨] ಈ ಚಿತ್ರಗಳಲ್ಲಿ ಮನುಷ್ಯ, ಮತ್ತು ಕೆಲವು ಅಂಕಿ ಸಂಖಿಗಳ ಮತ್ತು ರೇಖಾಕೃತಿಗಳ ಚಿಹ್ನೆಗಳಿವೆ. ಅಲ್ಲದೆ ಇವುಗಳ ಆಗ್ನೇಯ ಭಾಗದಲ್ಲಿರುವ ಎರಡನೆಯ ವರ್ಣಪಟ್ಟಿಕೆಯಲ್ಲಿ ಪೂರ್ವಾಭಿಮುಖವಾಗಿರುವ ಬಂಡೆಯ ಮೇಲೆ ಇದೇ ಮಾದರಿಯ ಕೆಲ ಚಿತ್ರಗಳಿವೆ. ಇದರಲ್ಲಿ ಮನುಷ್ಯ, ಜಿಂಕೆ,

* # ೧೩, ಒಳಕೋಟೆ ಹತ್ತಿರ, ಕಮಲಾಪುರ ಪೋಸ್ಟ್, ಹೊಸ ಪೇಟೆ, ಬಳ್ಳಾರಿ, ೫೮೩೨೨೩

ಮೀನು ಮೊದಲಾದ ಪ್ರಾಣಿಗಳ ಮತ್ತು ಕೆಲ ಅಸ್ಪಷ್ಟ ಚಿತ್ರಗಳಿವೆ. ಕೋಟೆ ಸಮೀಪದಲ್ಲಿ ಸುಣ್ಣ(ಬಿಳಿ) ದಿಂದ ರಚಿಸಿರುವ ಮನುಷ್ಯ ಮತ್ತು ಜಿಂಕೆಯಂತಹ ಕೆಲ ಪ್ರಾಣಿಗಳ ಚಿತ್ರಗಳಿವೆ. ಅಲ್ಲದೆ ಇದರ ಸಮೀಪದಲ್ಲಿಯೇ ಬೂದು ಮತ್ತು ಕೆಂಪು, ಕಪ್ಪು ಬಣ್ಣದ ಮಡಿಕೆ ಚೂರುಗಳು ದೊರೆತಿದ್ದು, ಅವುಗಳ ತಯಾರಿಕಾ ಶೈಲಿಯ ಆಧಾರದ ಮೇಲೆ ಇದೇ ಕಾಲಕ್ಕೆ ಸೇರಿದವುಗಳೆಂದು ಹೇಳಬಹುದಾಗಿದೆ. ಅದೇ ರೀತಿ ಇಲ್ಲಿನ ಕೋಟೆ ದ್ವಾರದ ಉತ್ತರಕ್ಕಿರುವ ಗುಡ್ಡದ ಮೇಲಿನ ಮಂಟಪದ ಬಳಿ ಮೂರು ಕಪ್ಪು ಶಿಲೆಯಿಂದ ತಯಾರಿಸಿದ ನವಶಿಲಾಯುಗ ಕಾಲದ ಕೈಕೊಡಲಿಗಳು ದೊರೆಕಿವೆ. ಅವುಗಳ ಮೈಮೇಲೆ ಇರುವ ಚಕ್ಕೆ ಎಬ್ಬಿಸಿದ ಭಾಗಗಳನ್ನು ಗಮನಿಸಿದರೆ ಅವುಗಳು ಇನ್ನು ತಯಾರಿಕಾ ಹಂತದಲ್ಲಿರುವ ಕೈಗೊಡಲಿಗಳೆಂದು ಹೇಳಬಹುದು. ಅದೇ ರೀತಿ ಬೂದಿಗುಡ್ಡೆಯ ಉತ್ತರ ಭಾಗದ ಬಂಡೆಯೊಂದರ ಮೇಲೆ ನೂತನ ಶಿಲಾಯುಗದ ಕೊರೆದು ಮಾಡಿದ ಮನುಷ್ಯ ಮತ್ತು ಜಿಂಕೆಯಂತಹ ಪ್ರಾಣಿಗಳಿವೆ. ಇವು ಸಾಮಾಜಿಕ, ಧಾರ್ಮಿಕ ಆಚರಣೆಯ ಕುರುಹುಗಳಾಗಿದ್ದು, ಅಂದಿನ ಸಂಸ್ಕೃತಿಯನ್ನು ಜನ ಜೀವನವನ್ನು ಅರಿಯಲು ಸಹಾಯಕವಾಗಿವೆ.

ಆ. ಐತಿಹಾಸಿಕ ಅವಶೇಷಗಳು

ಚಾರಿತ್ರಿಕ ಕಾಲಕ್ಕೆ ಸಂಬಂಧಿಸಿದ ಕೆಲವು ದೇವಾಲಯಗಳು, ಕಟ್ಟಡಾವಶೇಷಗಳು, ಶಾಸನ, ವೀರಗಲ್ಲುಗಳು ಮತ್ತು ಕೆಲ ವಿಶಿಷ್ಟ ಶಿಲಾಮೂರ್ತಿಗಳು ಹಾಗು ಕೋಟೆ ಮತ್ತು ಕೊತ್ತಲಗಳು ಇಲ್ಲಿನ ವಿವಿಧ ಭಾಗಗಳಲ್ಲಿದ್ದು, ಅವುಗಳನ್ನು ಮುಂದಿನಂತೆ ವಿವರಿಸಲಾಗಿದೆ.

ದೇವಾಲಯಗಳು : ಇಲ್ಲಿ ಒಟ್ಟು ಎಂಟು ದೇವಾಲಯಗಳಿವೆ. ಅವುಗಳಲ್ಲಿ ಎರಡು ಆರಂಭಿಕ ವಿಜಯನಗರ ಮತ್ತು ಐದು ವಿಜಯನಗರ ಕಾಲಕ್ಕೆ ಹಾಗು ಮತ್ತೊಂದು ವಿಜಯನಗರೋತ್ತರ ಕಾಲಕ್ಕೆ ಸೇರಿದ್ದು, ಆ ವಿವರ ಮುಂದಿನಂತಿದೆ.

೧. **ಸೌಮ್ಯಸೋಮೇಶ್ವರ ದೇವಾಲಯ :** 'ಸೌಮ್ಯ ಸೋಮೇಶ್ವರ ದೇವಾಲಯವು ನಿಂಬಾಪುರದ ಕಪಿಲಾಶ್ರಮದ ಬಳಿಯ ತುಂಗಭದ್ರಾ ನದಿಯ ಬಲದಂಡೆಯ ಮೇಲಿದೆ. ವಿಶ್ವವಿಖ್ಯಾತ ಹಂಪಿಯ ತಳವಾರಘಟ್ಟದಿಂದ ಪೂರ್ವಕ್ಕೆ ವೆಂಕಟಾಪುರಕ್ಕೆ ತೆರಳುವ ಮಾರ್ಗದ ಎಡಬದಿಯಲ್ಲಿರುವ ಜಿಂದಾಲ್‌ಗೆ ಸೇರಿದ ತೋಟದಲ್ಲಿದೆ (ಸರ್ವೆ ನಂ. ೨೯). ಇದನ್ನು ವೆಂಕಟಾಪುರ ಮಾರ್ಗವಾಗಿಯೂ ಸಹಾ ತಲಪಬಹುದಾಗಿದೆ. ಪೂರ್ವಾಭಿಮುಖವಾಗಿರುವ ಈ ದೇವಸ್ಥಾನವು ಗರ್ಭಗುಡಿ, ಅಂತರಾಳ, ನವರಂಗಗಳನ್ನು ಹೊಂದಿದ್ದು ಅತ್ಯಂತ ಸುಂದರವಾಗಿದೆ. ದೇವಾಲಯದ ಅಧಿಷ್ಠಾನವು ಉಪಾನ, ಜಗತಿ, ತ್ರಿಪಟ್ಟ, ಕುಮುದಗಳನ್ನೊಳಗೊಂಡಿದೆ. ಭಿತ್ತಿಯಲ್ಲಿ ಕೋಷ್ಠಗುಡಿ, ಅರೆಗಂಭಗಳ ವಿನ್ಯಾಸವಿದೆ. ಅಂತರಾಳದ ಭಿತ್ತಿಯಲ್ಲಿ ಕುಂಭ ಪಂಜರ ಮತ್ತು ಕೀರ್ತಿಮುಖಗಳ ಅಲಂಕಾರವಿದ್ದು ನೋಡುಗರನ್ನು ಆಕರ್ಷಿಸುತ್ತವೆ. ಗರ್ಭಗೃಹದ ಉತ್ತರ, ದಕ್ಷಿಣ ಮತ್ತು ಪಶ್ಚಿಮದ ಭಿತ್ತಿಯಲ್ಲಿರುವ ಕೋಷ್ಠ ಗುಡಿಗಳನ್ನು ಅರ್ಧಕಂಬಗಳ ನೆರವಿನಿಂದ ಅಲಂಕಾರಕವಾಗಿ ರಚಿಸಲಾಗಿದೆ. ದೇವಸ್ಥಾನದ ಪ್ರಸ್ತರ ಭಾಗವು ಉತ್ತರ, ವಾಜನ, ವಲಭಿ ಹಾಗು ಕಪೋತಗಳನ್ನು ಒಳಗೊಂಡಿದೆ. ಗರ್ಭಗೃಹದ ಮೇಲೆ ಮೂರು ತಳಗಳ ಗಾರೆಯ ಶಿಖರವಿದೆ. ದ್ರಾವಿಡ ಶೈಲಿಯ ವಿಮಾನವು ಸಾಕಷ್ಟು ಶಿಥಿಲವಾಗಿದೆ. ಇದರ ಮೇಲೆ ಶಾಲಾ, ಕೂಟ, ಪಂಜರಗಳ ಹಾಗು ಕೀರ್ತಿ ಮುಖಗಳೊಂದಿಗೆ ಕೆಲ ಶಿಲ್ಪಗಳನ್ನು ಸುಂದರವಾಗಿ ಅಲಂಕರಿಸಲಾಗಿದೆ[೩].

ದೇವಾಲಯವನ್ನು ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ. ಇದರ ಗರ್ಭಗೃಹವು ಚೌಕಾಕಾರವಾಗಿದ್ದು, ಈಗ ಅದರಲ್ಲಿ ಯಾವುದೇ ಮೂಲ ಮೂರ್ತಿ ಇಲ್ಲ. ನಿಧಿಗಳ್ಳರ ಹಾವಳಿಯಿಂದ ಗರ್ಭಗೃಹದ ಮೂರ್ತಿ ಮತ್ತು ಪೀಠವು ಹಾಳಾಗಿದೆ. ಗರ್ಭಗೃಹದ ಮೇಲ್ಛಾವಣಿಯು ಅಷ್ಟಕೋನಕಾರವಾಗಿದ್ದು, ಮಧ್ಯದಲ್ಲಿ ಕಮಲದ ಹೂವಿನ ಅಲಂಕರಣೆಯಿದೆ. ಗರ್ಭಗೃಹ ಮತ್ತು ಅಂತರಾಳಗಳ ಬಾಗಿಲುವಾಡಗಳಲ್ಲಿ ಕೈಯಲ್ಲಿ ತ್ರಿಶೂಲ, ಡಮರು ಮತ್ತು ಗದೆಗಳನ್ನು ಹಿಡಿದಿರುವ ಶೈವ ದ್ವಾರಪಾಲಕರಿದ್ದಾರೆ. ಲಲಾಟದಲ್ಲಿ ಸುಂದರ ಗಜಲಕ್ಷ್ಮಿ ಶಿಲ್ಪವಿದೆ. ಅಂತರಾಳದ ಮೇಲ್ಛಾವಣಿಯು ಚಚ್ಚೌಕಾಕಾರವಾಗಿದ್ದು, ಅದರ ಮಧ್ಯದಲ್ಲಿ ಕಮಲದ ಹೂವಿನ ದಳಗಳ ಅಲಂಕರಣೆಯನ್ನು ಮಾಡಲಾಗಿದೆ. ಅಂತರಾಳದ ಮುಂದಿನ ಭಾಗವನ್ನು ರಂಗಮಂಟಪ ಅಥವಾ ನವರಂಗ ಎಂದು ಕರೆಯಲಾಗುತ್ತದೆ. ಇದನ್ನು ಪ್ರವೇಶಿಸಲು ಪೂರ್ವ, ಉತ್ತರ ಮತ್ತು ದಕ್ಷಿಣದಲ್ಲಿ ಸುಂದರ ಪ್ರವೇಶದ್ವಾರಗಳಿವೆ. ಇದರ ಮಧ್ಯದಲ್ಲಿ ವಿವಿಧ ಶಿಲ್ಪಗಳಿಂದ ಅಲಂಕೃತವಾಗಿರುವ ನಾಲ್ಕು ಮುಖ್ಯ ಕಂಬಗಳು ಮತ್ತು ಭಿತ್ತಿಯ ಒಳಭಾಗಕ್ಕೆ ಹೊಂದಿಕೊಂಡಂತಿರುವ ಹನ್ನೆರಡು ಅರೆಕಂಬಗಳಿವೆ. ಅದರ ಮೇಲ್ಭಾಗದಲ್ಲಿ ಫಲಕ, ಬೋದಿಗೆಗಳಿವೆ. ಇಲ್ಲಿನ ಕಂಬದ ವಿವಿಧ ಭಾಗಗಳಲ್ಲಿ ಮನೋಜ್ಞವಾದ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಅವುಗಳಲ್ಲಿ ಯಾಳಿ, ಕಾರ್ತಿಕೇಯ, ಆಂಜನೇಯ, ಗಣೇಶ, ಹಸು, ನಾಗಲಿಂಗ, ನಂದಿ, ತಪಸ್ವಿಗಳ, ಜೋಡಿ ಭಕ್ತರ, ಮಾರ್ಕಂಡೇಯ, ತ್ರಿಮೂರ್ತಿಗಳ ಮೊದಲಾದ ಆಕರ್ಷಣೀಯ ಶಿಲ್ಪಗಳು ಪ್ರಮುಖವಾಗಿವೆ.

ನವರಂಗದಲ್ಲಿನ ಮಧ್ಯದ ಎರಡು ಕಂಬಗಳಲ್ಲಿ ಮುಖ್ಯವಾಗಿ ಮಾರ್ಕಂಡೇಯ ಅಥವಾ ಕಾಲಾರಿಮೂರ್ತಿ ಶಿವನ ಕಥಾಪ್ರಸಂಗವನ್ನು ಬಿಡಿ ಶಿಲ್ಪಗಳಲ್ಲಿ ವಿಶೇಷವಾಗಿ

ಬಿಡಿಸಲಾಗಿದೆ. ಇಲ್ಲಿನ ಉಬ್ಬುಶಿಲ್ಪಗಳಲ್ಲಿ ಮೃಕಂಡು ಮುನಿ ಮತ್ತು ಅವನ ಮಗನಾದ ಮಾರ್ಕಂಡೇಯನ ಜೀವನಕ್ಕೆ ಸಂಬಂಧಿಸಿದ ಶಿಲ್ಪಗಳಿವೆ. ಶಿವನು ಯಮನನ್ನು ಕ್ಷಮಿಸು ತ್ತಿರುವಂತೆ ಶಿಲ್ಪಿಯು ಸುಂದರವಾಗಿ ಮೂಡಿಸಿದ್ದಾನೆ. ಈ ಕಂಬಗಳ ಮೇಲಿನ ಉಬ್ಬುಶಿಲ್ಪಗಳಲ್ಲಿ ಮಾರ್ಕಂಡೇಯ ಅಥವಾ ಕಾಲಾರಿಮೂರ್ತಿಯ ಸಂಪೂರ್ಣ ಕಥಾವೃತ್ತಾಂತ ವನ್ನು ಶಿಲ್ಪಿಯು ಅತ್ಯಂತ ಮನೋಹಕವಾಗಿ ನಿರೂಪಿಸಿ ರುವುದು ಇಲ್ಲಿಯ ವೈಶಿಷ್ಟವಾಗಿದೆ.

ದೇವಸ್ಥಾನದ ಮುಂಭಾಗದಲ್ಲಿ ಸುಮಾರು ೨೨ ಅಡಿ ಎತ್ತರದ ಅತ್ಯಂತ ನಯವಾದ ಮತ್ತು ಹಂಪಿಯಲ್ಲಿಯೇ ವಿಶೇಷವಾಗಿರುವ ದೀಪಸ್ತಂಭವಿದೆ. ಇದನ್ನು ಚೌಕಾಕಾರದ ಕಟ್ಟೆಯ ಮೇಲೆ ನಿಲ್ಲಿಸಲಾಗಿದ್ದು, ಮೇಲ್ಭಾಗದ ತುದಿಯಲ್ಲಿ ತೆಳುವಾದ ಅಷ್ಟಕೋನಾಕಾರದ ಲಂಬ ಪಟ್ಟಿಯನ್ನೊಂದಿದೆ. ಕಂಬದ ಮೇಲೆ ನಾನಾ ಪುಷ್ಪಗಳನ್ನು ಸುರಳಿ ಮತ್ತು ನಾಗಬಂಧದ ರೀತಿಯಲ್ಲಿ ಕೆತ್ತಲಾಗಿದೆ. ಮೂಲತಃ ಮುಖ್ಯ ದೇವಸ್ಥಾನದ ಉತ್ತರಕ್ಕಿದ್ದ ಸಣ್ಣ ದೇವಸ್ಥಾನವು (ದೇವಿ ಮಂದಿರ)ಈಗ ಸಂಪೂರ್ಣವಾಗಿ ಹಾಳಾಗಿದೆ. ಅದರ ಅಧಿಷ್ಠಾನದ ರಚನೆಯ ಕುರುಹುಗಳು ಮಾತ್ರ ಈಗ ನೋಡಲು ಸಿಗುತ್ತವೆ. ದೇವಾಲಯ ಸಂಕೀರ್ಣದ ಸುತ್ತಲೂ ಪ್ರಾಕಾರ ಗೋಡೆಯನ್ನು ನಿರ್ಮಿಸಲಾಗಿದ್ದು, ಕೇವಲ ಅದರ ತಳಭಾಗ ಮಾತ್ರ ಈಗ ಕಾಣಸಿಗುತ್ತದೆ. ಇದರ ಉತ್ತರ ಪ್ರವೇಶದ್ವಾರವು ಬಿದ್ದುಹೋಗಿದ್ದು, ದಕ್ಷಿಣ ಪ್ರವೇಶದ್ವಾರದ ಕೆಳಭಾಗದ ಕಂಬ ಗಳು ಮಾತ್ರ ಉಳಿದಿವೆ.

ಈ ದೇವಸ್ಥಾನದ ಮತ್ತೊಂದು ಕುತೂಹಲಕಾರಿ ಅಂಶವೆಂದರೆ ಇಲ್ಲಿನ ಪ್ರತಿ ಹಾಸುಗಲ್ಲು, ಕಂಬ, ಬಾಗಿಲುವಾಡ, ಚೌಕಸ್ತಂಭ, ತೊಲೆ ಮೊದಲಾದವುಗಳ ಮೇಲೆ ತಮಿಳಿನಲ್ಲಿ ಸಂಖ್ಯೆ ಮತ್ತು ಅಕ್ಷರಗಳನ್ನು ಬರೆದಿರುವುದು ವಿಶೇಷ ವೆನಿಸುತ್ತದೆ. ಇವುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಹಂಪಿಯ ಮಹಾನವಮಿ ದಿಬ್ಬದ ಬಳಿಯಿರುವ ಕಪ್ಪುಕಲ್ಲಿನ ಬಾವಿಯ ಮೇಲೆ ಬರೆದಿರುವ ಶೈಲಿಯಲ್ಲಿ ಇಲ್ಲಿ ಇವುಗಳನ್ನು ಬರೆಯಲಾಗಿದೆ. ಪ್ರಾಯಶಃ ತಮಿಳು ಬಲ್ಲ ಕುಶಲಕರ್ಮಿಗಳು ದೇವಾಲಯದ ಭಿತ್ತಿ ಮತ್ತು ಇತರೆ ಅಂಗಗಳನ್ನು ನಿರ್ಮಿಸಲು ಸಹಾಯಕವಾಗಲೆಂದು/ಸುಲಭವಾಗಲೆಂದು ಅವುಗಳನ್ನು ತಯಾರಿಸಿದ ಸ್ಥಳದಲ್ಲಿ ಈ ರೀತಿ ಗುರುತು ಮಾಡಿ ಕೊಂಡಿರಬೇಕು.

ಈ ದೇವಾಲಯ ಮತ್ತು ವಿಜಯನಗರದ ಸಂಗಮ ಮನೆತನದ ಮೇಲೆ ಬೆಳಕು ಬೀರುವ ಒಂದು ಮಹತ್ವದ ಶಿಲಾಶಾಸನ ಸಮೀಪದ ಬಂಡೆಯೊಂದರ ಮೇಲಿದೆ. ಇದು ಕನ್ನಡ ಹಾಗು ಸಂಸ್ಕೃತ ಭಾಷೆಯಲ್ಲಿದ್ದು ನಾಗರೀ ಲಿಪಿಯನ್ನೊಂದಿದೆ. ೪೮ ಸಾಲುಗಳಲ್ಲಿರುವ ಈ ಶಾಸನವು ಸೋಮೇಶ್ವರ ದೇವಾಲಯವನ್ನು **ರಾಯಪ್ಪಣ್ಣ** ಎಂಬುವವನು ಕಟ್ಟಿಸುತ್ತಾನೆ ಎಂದು ಉಲ್ಲೇಖಿಸಿದೆ. ಪ್ರೌಢದೇವರಾಯನ ಕಾಲದ ಈ ಶಾಸನವು ಯದುವಂಶದ ಸಂಗಮನಿಂದ ವಂಶಾವಳಿಯನ್ನು ಆರಂಭಿಸುತ್ತದೆ. ಸಂಗಮನ ಮಗ ಬುಕ್ಕ, ಇವರ ಮಗ ಹರಿಹರ ಇವನ ಮಗ ದೇವರಾಯ, ಇವನ ಮಗ ಮಲ್ಲಿಕಾರ್ಜುನ, ಇವನ ಮಗ ಪ್ರೌಢದೇವರಾಯ. ಇವನು ರಾಜಧಾನಿ ವಿಜಯನಗರದಲ್ಲಿ ಆಳುತ್ತಿದ್ದು, ತುಂಗಭದ್ರೆಯ ದಕ್ಷಿಣ ತೀರದ ಕುಮಾರಗಿರಿ ಅಗ್ರಹಾರದ ಬಳಿ ಸೋಮಲಾಪುರದಲ್ಲಿ ಹೊಸದಾಗಿ ಪ್ರತಿಷ್ಠೆಯಾದ ಸೌಮ್ಯ ಸೋಮೇಶ್ವರದೇವರ ಪೂಜೆಗಾಗಿ ಕರಿಯಹಳ್ಳಿ ಗ್ರಾಮ ವೊಂದನ್ನು ಶಾಲಿವಾಹನ ಶಕವರ್ಷ ೧೩೭೭, ಪ್ರಮಾದಿ ಸಂವತ್ಸರ, ಪಾಕ್ಷ, ಬ.೭, ಶುಕ್ರವಾರದಂದು ನೀಡುತ್ತಾನೆ ಎಂಬ ವಿವರಗಳಿವೆ. ಅಲ್ಲದೆ ಶಾಸನವು ದೇವಾಲಯ ನಿರ್ಮಾಣದ ಉಸ್ತುವಾರಿಯನ್ನು ಹುಲಿಗೆರೆಯ ಮಂಗಣ್ಣ ಅಯ್ಯನ ಮಗ ನಾಗಣ್ಣ ಅಯ್ಯನು ನಿರ್ವಹಿಸಿದನೆಂದು ಮತ್ತು ಈ ಶಾಸನವನ್ನು ಮುದ್ದಣ್ಣಾಚಾರ್ಯನ ಮಗ ವೀರಣ ಬರೆದನೆನ್ನುವ ಮಾಹಿತಿಗಳನ್ನು ಸಹಾ ಇದೇ ಶಾಸನದಲ್ಲಿದೆ. ಇದರ ಕಾಲವನ್ನು ಕ್ರಿ.ಶ. ೧೪೫೫ ಎಂದು ಸರಿಯಾಗಿ ಗುರುತಿಸಲಾಗಿದೆ[೪]. ಇದರಿಂದಾಗಿ ದೇವಸ್ಥಾನವು ಕ್ರಿ.ಶ. ೧೪೫೫ರಲ್ಲಿ ರಚನೆಗೊಂಡಿರಬೇಕು ಎಂಬುದು ಸ್ಪಷ್ಟವಾಗು ತ್ತದೆ.

೨) **ಈಶ್ವರ ದೇವಾಲಯ:** ಇದು ಡಾ. ಚಿಟ್ಟಿಬಾಬು ಅವರ ತೋಟದಲ್ಲಿ ಸರ್ವೇ ನಂ. ೧೩/೧ರಲ್ಲಿದೆ.[೫] ಪೂರ್ವಾಭಿಮುಖವಾಗಿರುವ ಈ ದೇವಸ್ಥಾನದ ನಿರ್ಮಾಣ ಕಾಲ ಸುಮಾರು ೧೪-೧೫ನೇ ಶತಮಾನಕ್ಕೆ ಸೇರಿದ್ದಾಗಿದೆ. ವಿಜಯನಗರ ವಾಸ್ತುಶೈಲಿಯನ್ನು ಹೊಂದಿರುವ ಈ ದೇವಸ್ಥಾನವನ್ನು ಗ್ರಾನೈಟ್, ಗಾರೆಗಳಿಂದ ನಿರ್ಮಿಸಲಾಗಿದೆ. ಪ್ರಸ್ತುತ ಈ ದೇವಸ್ಥಾನವನ್ನು ಜೀರ್ಣೋದ್ಧಾರಗೊಳಿಸಲಾಗಿದೆ. ದೇವಸ್ಥಾನವು ಗರ್ಭಗೃಹ, ತೆರೆದ ಅರ್ಧಮಂಟಪ ಮತ್ತು ಮುಖಮಂಟಪಗಳನ್ನು ಒಳಗೊಂಡಿದೆ. ಅಧಿಷ್ಠಾನವು ಭಿತ್ತಿ, ಶಿಖರ, ಸ್ತೂಪಿಗಳನ್ನು ಒಳಗೊಂಡಿದೆ. ಗರ್ಭಗುಡಿಯಲ್ಲಿ ಕಪ್ಪುಶಿಲೆಯ ಶಿವಲಿಂಗವಿದೆ. ಪಕ್ಕದಲ್ಲಿ ನಾಗಶಿಲ್ಪಗಳಿವೆ. ಗರ್ಭಗುಡಿಯ ಮೇಲೆ ಶಿಖರ ಮತ್ತು ಕಲಶವಿದೆ. ಗರ್ಭಗೃಹದ ಮೇಲ್ಛಾವಣಿ ಸರಳವಾಗಿದೆ. ಗರ್ಭಗೃಹವು ಎರಡು ಬಾಗಿಲುಗಳನ್ನು ಹೊಂದಿದೆ. ಗರ್ಭಗೃಹದ ಪ್ರವೇಶ ದ್ವಾರದಲ್ಲಿ ಶೈವ ದ್ವಾರಪಾಲಕರಿದ್ದು, ಕೈಯಲ್ಲಿ ತ್ರಿಶೂಲ ಮತ್ತು ಡಮರುಗಳನ್ನಿಡಿದು ನಿಂತಿರುವರು. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಅರ್ಧಮಂಟಪದಲ್ಲಿ ನಂದಿ ಇದೆ. ಮುಂದೆ ಐದು

ಪೂರ್ಣಕಂಬಗಳಿದ್ದು, ಅವುಗಳ ಮೇಲೆ ದೇವಿ, ಭಕ್ತ, ಆನೆ, ಯಾಳಿ, ಸಿಂಹ, ಆಂಜನೇಯ, ಗರುಡ, ಮಕರ, ನಾಗಲಿಂಗ ಮುಂತಾದ ಉಬ್ಬು ಶಿಲ್ಪಗಳಿವೆ. ಅಧಿಷ್ಠಾನದ ಪಟ್ಟಿಕೆಯಲ್ಲಿ ಲತಾಸುರುಳಿ, ಆನೆಗಳ ಸಾಲು, ನೃತ್ಯಗಾರರನ್ನು ಸುಂದರವಾಗಿ ಜೋಡಿಸಲಾಗಿದೆ. ಅಲ್ಲದೆ ಗಣೇಶನ ಮೂರ್ತಿಯೂ ಸಹ ಇದೆ. ಪಕ್ಕದಲ್ಲಿ ಒಂದು ದೊಡ್ಡ ಸ್ತಂಭವು ಬಿದ್ದಿದೆ. ಅದರ ಮೇಲೆ ಹಸುವು ಶಿವಲಿಂಗಕ್ಕೆ ಹಾಲೂಣಿಸುವ ದೃಶ್ಯವಿದೆ. ಕೆಳಭಾಗದಲ್ಲಿ ಹಂಸದ ಚಿತ್ರವಿದೆ. ಗರ್ಭಗೃಹದ ಮೇಲೆ ಶಿಖರವಿದ್ದು, ಕಳಶವನ್ನೊಂದಿದೆ.

೩. **ನಂದಿ ದೇವಸ್ಥಾನ:** ಆನೆಗುಂದಿ – ವೆಂಕಟಾಪುರ ಮುಖ್ಯ ರಸ್ತೆಯ ಸ. ನಂ: ೨೯ ರಲ್ಲಿರುವ ಇದರ ಕೆಲ ಭಾಗಗಳು ಭಗ್ನವಾಗಿದ್ದು, ಸಾಮಾನ್ಯ ಸ್ಥಿತಿಯಲ್ಲಿದೆ.[೫] ಈ ಗುಡಿಯ ಸುತ್ತಲೂ ಗಿಡ ಮರ ಬೆಳೆದಿವೆ. ಪೂರ್ವಕ್ಕೆ ಮುಖ ಮಾಡಿರುವ ಇದನ್ನು ಗ್ರಾನೈಟ್ ಮತ್ತು ಗಾರೆ ಬಳಸಿ ನಿರ್ಮಿಸಲಾಗಿದೆ. ಇದರಲ್ಲಿ ವಿಜಯನಗರ ಶೈಲಿಯ ನಂದಿಗಳಿದ್ದು, ಆಕರ್ಷಣೀಯವಾಗಿವೆ. ಉಳಿದಂತೆ ಇದು ಸರಳವಾಗಿದೆ. ಸ್ಥಳೀಯರಿಂದ ಮರಡಿ ಬಸವೇಶ್ವರ ಗುಡಿ ಎಂದು ಕರೆಯಲಾಗುವ ಇದನ್ನು ನಂತರ ಕಾಲದಲ್ಲಿ ನಿರ್ಮಿಸಿರುವ ಸಾಧ್ಯತೆ ಇದೆ.

೪. **ವಿಷ್ಣು ದೇವಸ್ಥಾನ:** ಈ ದೇವಸ್ಥಾನ ಉತ್ತರ ಭಾಗದಲ್ಲಿನ ಕೆಡುಗಾಲುವೆಯ ಹತ್ತಿರದ ಸ.ನಂ. ೬೩ ರಲ್ಲಿದೆ. ಇದು ಕ್ರಿ.ಶ. ೧೪–೧೬ಕ್ಕೆ ಸೇರಿದ್ದು, ವಿಜಯನಗರ ಶೈಲಿಯಲ್ಲಿದೆ.[೫] ಇದರ ಅನೇಕ ಮೂಲ ಭಾಗಗಳು ಭಗ್ನವಾಗಿದ್ದು, ಕನಿಷ್ಠ ಸ್ಥಿತಿಯಲ್ಲಿರುವ ಇದರ ಸುತ್ತಲೂ ಗಿಡ ಮರ ಬೆಳೆದಿವೆ. ಗರ್ಭಗುಡಿಯಲ್ಲಿ ಮೂಲ ಮೂರ್ತಿ ಇಲ್ಲ. ಅದರ ದ್ವಾರದಲ್ಲಿ ಚೂಪನೆಯ ಗಡ್ಡವಿರುವ ಹಾಗೂ ಕರಂಡ ಮುಕುಟ ಧರಿಸಿದ ಶಿಲ್ಪಗಳಿವೆ.[೫] ಅಲ್ಲದೆ ಲಲಾಟದಲ್ಲಿ ಸೂರ್ಯ, ಚಂದ್ರ, ಪುಷ್ಪದ ಅಲಂಕಾರವಿದೆ. ಮುಂಭಾಗದ ಅಂತರಾಳದ ದ್ವಾರದಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ. ಲಲಾಟಾಂಗದಲ್ಲಿ ತೆನೆಗಳ ಅಲಂಕಾರವನ್ನು ನಂತರ ಗಾರೆಯನ್ನು ಬಳಸಿ ಮಾಡಲಾಗಿದೆ. ಅಲ್ಲಿರುವ ಕಂಭಗಳಲ್ಲಿ ಯಾಳಿ, ಆಂಜನೇಯ, ನಾಗ ಲಿಂಗ ಮೊದಲಾದ ಶಿಲ್ಪಗಳಿವೆ. ಇದರ ಹೊರ ಭಾಗ ಸರಳವಾಗಿದೆ.

ಇದೇ ಭೌಗೋಳಿಕ ಪ್ರದೇಶದಲ್ಲಿ ಆಂಜನೇಯ, ದೇವಿ ದೇವಾಲಯ (ಲಜ್ಜಾಗೌರಿ) ಮತ್ತು ವೈಷ್ಣವ ದೇವಸ್ಥಾನಗಳಿದ್ದು ಬಹುತೇಕ ಮೇಲಿನ ದೇವಾಲಯಗಳ ಲಕ್ಷಣಗಳನ್ನೇ ಹೊಂದಿವೆ.

ಕೋಟೆ

೧. **ಕೋಟೆ ದ್ವಾರ ಮತ್ತು ಗೋಡೆ** : ಈ ಗ್ರಾಮದ ಸ.ನಂ. ೨೪ರ ಖಾಜೀಮುದ್ದೀನ್ ಜಮೀನಿನಲ್ಲಿ ಕೋಟೆ ದ್ವಾರವಿದ್ದು, ಅದರ ಅನೇಕ ಮೂಲ ಭಾಗಗಳು ಭಗ್ನವಾಗಿವೆ. ಸಮಗಾತ್ರದ ಶಿಲೆಗಳ ಸಹಾಯದಿಂದ ಇದನ್ನು ಪೂರ್ವ–ಪಶ್ಚಿಮವಾಗಿ ನಿರ್ಮಿಸಲಾಗಿದೆ. ಇದರಲ್ಲಿ ಎರಡು ಆಯಾತಾಕಾರದ ಕೊತ್ತಳಗಳಿವೆ. ಇದರ ಎಡಭಾಗದ ಕೊತ್ತಳದ ಭಿತ್ತಿಯಲ್ಲಿ ಆಂಜನೇಯ, ವರಾಹ, ಮತ್ಸ್ಯನಾಥ ಮತ್ತಿತರ ಆಕರ್ಷಕ ಶಿಲ್ಪಗಳಿವೆ. ಇದರ ಒಂದು ಕೋಟೆ ಗೋಡೆಯು ಉತ್ತರಾಭಿಮುಖವಾಗಿ ಮುಂದುವರಿದು ವಿಷ್ಣು ದೇವಸ್ಥಾನದ ಹಿಂಭಾಗದ ಬೆಟ್ಟದ (ಸ.ನಂ.೬೩)ರಲ್ಲಿರುವ ಕೋಟೆಯನ್ನು ಸೇರುತ್ತದೆ. ಮತ್ತೊಂದು ಕೋಟೆಯ ಭಿತ್ತಿಯು ನೈರುತ್ಯಾಭಿಮುಖವಾಗಿ (ಪಶ್ಚಿಮ?)ಮುಂದುವರಿದು ತಳವಾರ ಘಟ್ಟ ಗೇಟ್‌ನ್ನು ಸೇರುತ್ತದೆ. ಇದರ ಮತ್ತೊಂದು ಭಿತ್ತಿ ಪೂರ್ವದೆಡೆ ಮುಂದುವರಿಯುತ್ತದೆ. ಇದರಲ್ಲಿ ಯಾವುದೇ ಶಿಲ್ಪಗಳಿಲ್ಲ. ಕ್ರಿ.ಶ. ೧೪–೧೬ ವಿಜಯನಗರ ಕಾಲವಧಿಯಲ್ಲಿ ನಿರ್ಮಾಣವಾಗಿರುವ ಇದರ ಅನೇಕ ಮೂಲಭಾಗಗಳು ಅಲ್ಲಲ್ಲಿ ಭಗ್ನವಾಗಿರುವುದರಿಂದ ಇದರ ಆಕಾರವನ್ನು ಸ್ಪಷ್ಟವಾಗಿ ಗುರುತಿಸುವುದು ಕಷ್ಟ. ಕೆಲವು ಕಡೆ (ದ್ವಾರದ ಉತ್ತರ ಭಾಗದಲ್ಲಿ) ಬೆಣೆಯಾಕಾರದ ಗ್ರಾನೈಟ್ ಶಿಲೆಗಳನ್ನು ಬಳಸಿ ಇದನ್ನು ನಿರ್ಮಿಸಲಾಗಿದ್ದು, ಇದರಲ್ಲಿ ಎರಡು ಕಡೆ ಚೌಕಕಾರದ ಎರಡು ಕೊತ್ತಳಗಳನ್ನು ನಿರ್ಮಿಸಲಾಗಿದೆ[೫]. ಇದರ ದ್ವಾರದ ಕೆಳಭಾಗದಲ್ಲಿ ನೀರಿನ ಕಾಲುವೆಯೊಂದು ಹರಿದು ಹೋಗುವಂತೆ ನಿರ್ಮಿಸಿರುವುದು ಇದರ ವಿಶೇಷವಾಗಿದೆ. ಗಿರಿದುರ್ಗ ಮತ್ತು ನೆಲದುರ್ಗದ ಸಂಮಿಶ್ರಣ ಲಕ್ಷಣಗಳನ್ನೊಳಗೊಂಡ ಈ ಕೋಟೆಯ ಅಲ್ಪಭಾಗವನ್ನು ರಾಜ್ಯ ಪುರಾತತ್ವ ಇಲಾಖೆ ಸಂರಕ್ಷಿಸಿದೆ.

ಮಂಟಪ: ಈ ಭೂಭಾಗದಲ್ಲಿ ಒಟ್ಟು ನಾಲ್ಕು ಮಂಟಪಗಳಿದ್ದು ಅವುಗಳ ವಿವರ ಇಂತಿದೆ.

೧. **ಗುಡ್ಡದ ಮೇಲಿನ ಮಂಟಪ:** ಸೋಮೇಶ್ವರ ದೇವಾಲಯದ ಪಶ್ಚಿಮಕ್ಕಿರುವ ಬೆಟ್ಟದ ಮೇಲಿನ ಭಾಗದ ಸ.ನಂ. ೨೯ರಲ್ಲಿ ಈ ಮಂಟಪವಿದೆ[೫]. ವಿಜಯನಗರ ಶೈಲಿಯ (ಕ್ರಿ.ಶ. ೧೪–೧೬) ನಾಲ್ಕು ಮುಖದ ಕಂಬಗಳನ್ನು ಹೊಂದಿರುವ ಇದರ ಅನೇಕ ಮೂಲ ಭಾಗಗಳು ಭಗ್ನವಾಗಿರುವುದರಿಂದ ಇದರ ಮೂಲ ಸ್ವರೂಪ ಗುರುತಿಸುವುದು ಕಷ್ಟ. ಗ್ರಾನೈಟ್ ಮತ್ತು ಗಾರೆಯನ್ನು ಬಳಸಿ ನಿರ್ಮಿಸಲಾಗಿರುವ ಇದು ಕನಿಷ್ಠ ಸ್ಥಿತಿಯಲ್ಲಿದ್ದು, ಇದರ ಸುತ್ತಲೂ ಗಿಡ ಮರ ಬೆಳೆದಿವೆ. ಇದರಲ್ಲಿ ಯಾವುದೇ ಮೂಲ ಮೂರ್ತಿ ಇಲ್ಲ. ಇಲ್ಲಿನ ಅಧಿಷ್ಠಾನ, ಭಿತ್ತಿ, ದ್ವಾರಗಳನ್ನು ಸರಳವಾಗಿ ನಿರ್ಮಿಸಲಾಗಿದೆ. ಇದೇ ಲಕ್ಷಣಗಳನ್ನು ಹೋಲುವ ಇನ್ನು ಮೂರು ಕಲ್ಲಿನ ಮಂಟಪಗಳು ಈ ಭೂಬಾಗದಲ್ಲಿದ್ದು, ಅವು ಸಹಾ ಸರಳ ಶೈಲಿಯಲ್ಲಿವೆ.

ಕಟ್ಟಡಾವಶೇಷಗಳು : ಇಲ್ಲಿನ ಆಂಜನೇಯ, ದೇವಿ ಮತ್ತು ವಿಷ್ಣು ದೇವಾಲಯದ ಬಳಿಯಲ್ಲಿ ಒಟ್ಟು ೧೨









ಕಟ್ಟಡಗಳ ಅವಶೇಷಗಳಿವೆ. ಇಲ್ಲಿ ವಿಜಯನಗರ ಕಾಲದ ಮನೆ ಹಾಗೂ ಮತ್ತಿತರ ಕಟ್ಟಡಗಳ ಅಡಿಪಾಯಗಳು ಕಂಡು ಬಂದಿವೆ. ಇವು ಆಯತ ಮತ್ತು ಚೌಕಕಾರವಾಗಿದ್ದು ಅಧ್ಯಯನಯೋಗ್ಯವಾಗಿವೆ. ಇಲ್ಲಿಯೇ ಕೆಲ ಮಡಿಕೆಯ ತುಟಿತ ಭಾಗಗಳು ದೊರೆತಿವೆ. ಈ ಭಾಗಗಳು ಅತೀವ ಕೃಷಿಗೆ ಒಳಪಟ್ಟಿರುವುದರಿಂದ ಮೂಲ ಭಾಗಗಳು ಅವಸಾನಗೊಂಡಿದ್ದು, ಅವುಗಳ ಸ್ಪಷ್ಟತೆಯನ್ನು ನಿರ್ಧರಿಸುವುದು ಕಷ್ಟಕರ.





ಆಕರ ಗ್ರಂಥಗಳು

೧. ಬಸವರಾಜ್ ಇವರು ನೀಡಿದ ಮಾಹಿತಿ

೨. ಡಾ. ಎಚ್.ತಿಪ್ಪೇಸ್ವಾಮಿ.ಮಧ್ಯಕಾಲೀನ ಮಹಾನಗರ ಹಂಪಿ.

೩. ಡಾ. ಕೆ.ಎಂ.ಸುರೇಶ್. ಕರ್ನಾಟಕ ಟೆಂಪಲ್ಸ್

೪. ಡಾ.ದೇವರಕೊಂಡ ರೆಡ್ಡಿ, ಹಂಪಿ ಶಾಸನ ಸಂಪುಟ

೫. ಡಾ.ಎಚ್.ತಿಪ್ಪೇಸ್ವಾಮಿ. ಹಂಪಿ ಪ್ರಾಧಿಕಾರ ವ್ಯಾಪ್ತಿಯ ಸ್ಮಾರಕಗಳು. ಸಂ.೨

೬ George Michell,Vijayanagara Architectural Inventary of The Urben Core.

೭. C.S.Patil, Defence System at Vijayanagara (Hampi).

ಗದಗ ಜಿಲ್ಲೆಯ ಐತಿಹಾಸಿಕ ಬಾವಿಗಳು: ಒಂದು ಅವಲೋಕನ

ಶಂಕರಪ್ಪ ಎಂ. ಬಡಿಗೇರ*

ಗದಗ ಜಿಲ್ಲಾ ಪ್ರದೇಶದ ಬೇಸಾಯವು ಮಳೆಯ ಮೇಲೆ ಅವಲಂಬಿತವಾಗಿತ್ತು. ನದಿಗಳು, ಹಳ್ಳಗಳು ಕೇವಲ ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುತ್ತವೆ. ನದಿ, ಹಳ್ಳ, ಕೆರೆಗಳ ನೀರಾವರಿ ವಿಧಾನದಿಂದ ನೀರಾವರಿ ಕಾರ್ಯಗಳು ಅವಶ್ಯಕತೆ ನಿವಾರಿಸಲಾಗುತ್ತಿದ್ದಿಲ್ಲ. ಕೆರೆಗಳನ್ನು ಕಟ್ಟಲು ಸಾಧ್ಯವಿಲ್ಲದ ಸ್ಥಳಗಳಲ್ಲಿ ಅಂತರ್ಜಲ ಮೂಲಗಳನ್ನು ಅವಲಂಬಿಸಬೇಕಾಯಿತು. ಅದಕ್ಕಾಗಿ ಬಾವಿಗಳನ್ನು ಅಗೆದು ಬೇಸಾಯಕ್ಕೆ ಹಾಗೂ ದೇವಸ್ಥಾನದ ಪೂಜೆಗಾಗಿ ಬಳಸಿ ಕೊಂಡರು. ಹೀಗೆ ತೆಗೆಯಲಾದ ಬಾವಿಗಳಿಂದ ಅಂತರ್ಜಲ ನೀರು ಸದಾ ದೊರಕುತ್ತಿತ್ತು. ಹೀಗೆ ಬಾವಿನೀರಾವರಿ ಕಾರ್ಯ ಸ್ಥಳೀಯ ಮತ್ತು ನಿರ್ದಿಷ್ಟ ಪ್ರಮಾಣದಲ್ಲಿ ಮಾತ್ರ ಸಾಧ್ಯವಾಗು ತ್ತಿತ್ತು. ಹೀಗಾಗಿ ನದಿ ಮತ್ತು ಕಾಲುವೆಗಳಿಂದ ದೂರದಲ್ಲಿರುವ ಪ್ರದೇಶಗಳಲ್ಲಿ ನೂರಾರು ಬಾವಿಗಳು ತೋಡಲ್ಪಟ್ಟವು.

ಬಾವಿಗಳ ರಚನೆ

ನರಗುಂದದ ಸೋಮಾಪುರ ಬಾವಿ: ನರಗುಂದ ತಾಲೂಕಿನ ಸೋಮಾಪುರದ ಕ್ರಿ.ಶ. ೧೦೮೦ರ ಶಾಸನದಲ್ಲಿ

> ***ನಾನಾ ವಿಧಮಪ್ಪ ಚತ್ರರವಂಟಿಗೆ***
> ***ದಿಗ್ಗಿಗೆ ಶಾಲೆ ನನ್ದನಂ ಬಾವಿ ತಟಾಕಂ***
> ***ಗ್ಗಿವೀನೇಯಾರವಿ (ವಿಷ್ಣು) ಗ್ರಹಂ ಶಿವಾಲಯ***

ಶಿವ ಮತ್ತು ವಿಷ್ಣು ದೇವಾಲಯಗಳನ್ನು ಮತ್ತು ಬಾವಿಯನ್ನು ನಿರ್ಮಿಸಿ ದೇವಾಲಯಕ್ಕೆ ದಾನ ದತ್ತಿಗಳನ್ನು ನೀಡಿದ ಬಗ್ಗೆ ಮಾಹಿತಿ ಇದೆ. ಶಾಸನದಲ್ಲಿ ಸೋವಿದೇವ ಪೆರ್ಮನಡಿ ಸಿಂಗದೇವ ಮತ್ತು ಶ್ರೀವಲ್ಲಭ ಎಂಬ ಅಧಿಕಾರಿ ಗಳು ಅನೇಕ ಕಡೆ ನೀರಿನ ತೊಟ್ಟಿಗಳನ್ನು ಕಟ್ಟಿಸಿದರೆಂದು, ಭೋಜನ ಮನೆಗಳನ್ನು, ಬಾವಿಗಳನ್ನು ನಿರ್ಮಿಸಿ ಒಂದು ನೀರಿನ ತೊಟ್ಟಿಗೆ ಈಶ್ವರ ಸಮುದ್ರವೆಂದು ದಾಖಲೆ ಮಾಡಿದ ವಿವರವಿದೆ. ಅಲ್ಲದೇ ಮೇಲ್ವಿಚಾರಣೆಗೋಸ್ಕರ ಭೂದಾನ ಮಾಡಿದನೆಂಬುವುದರ ದಾಖಲೆ ಕೂಡ ದೊರೆಯುತ್ತದೆ. ಇದರಿಂದ ಈ ಗ್ರಾಮದಲ್ಲಿ ಬಾವಿಗಳ ನಿರ್ಮಾಣದಿಂದ ದೈನಂದಿನ ಉಪಯೋಗ ಕಾರ್ಯಗಳಿಗೆ ಸಹಕಾರಿ ಯಾಗಿದ್ದವು.

ಈ ಬಾವಿಯು ಪ್ರಸ್ತುತವಾಗಿ ಸಾಧಾರಣ ಮಟ್ಟದಲ್ಲಿದೆ. ಇದರ ನೀರನ್ನು ಯಾವುದೇ ಕೆಲಸಕ್ಕೆ ಉಪಯೋಗಿಸುವುದಿಲ್ಲ. ಇದು ವೃತ್ತಾಕಾರವಾಗಿ ಇದ್ದು, ಇದರ ಅಂತರ್ಜಲ ಕಡಿಮೆಯಾಗಿದೆ.

ಲಕ್ಷ್ಮೇಶ್ವರದ ಸೋಮೇಶ್ವರ ದೇವಸ್ಥಾನದ ಪುಷ್ಕರಣಿ (ಗೌರಿದೇವಿ ಬಾವಿ):"ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಲಕ್ಷ್ಮೇಶ್ವರವು ಐತಿಹಾಸಿಕವಾದ ಪಟ್ಟಣವಾಗಿದ್ದು, ಶಾಸನಗಳಲ್ಲಿ ಈ ಪಟ್ಟಣವನ್ನು ಪುಲಿಗೆರೆ, ಪುಲಿಕರನಗರ ಮುಂತಾದ ಹೆಸರುಗಳಿಂದ ಕರೆದಿದ್ದಾರೆ.

ಮುಖ್ಯ ದೇವಾಲಯದ ಹಿಂಭಾಗದಲ್ಲಿ ಒಂದು ದೊಡ್ಡ ಬಾವಿ ಇದ್ದು, ಅದಕ್ಕೆ ಸುಂದರವಾದ ಪಾವಟಿಗಳನ್ನು ಇರಿಸಲಾಗಿದೆ. ಈ ಪುಷ್ಕರಣಿಯನ್ನು ಗೌರಿ ಎಂಬ ಭಕ್ತೆಯು ಕಟ್ಟಿಸಿದಳೆಂದು ಸ್ಥಳೀಯರು ತಿಳಿಸುತ್ತಾರೆ. ಈ ಬಾವಿಯ ಬಾಗಿಲಿನ ದಪ್ಪ ಗೋಡೆಯಲ್ಲಿ ದಕ್ಷಿಣ ಭಾಗದಲ್ಲಿ ಒಂದು ಗೂಡು ಇದೆ. ಈ ಗೂಡಿನಲ್ಲಿ ೧೨ನೇ ಶತಮಾನದ ಒಂದು ಶಾಸನವಿದೆ.

> ***"ಇಟ್ಟಿಗೆ ಕಲು ಮರನೆಂಬುದ ನೊಟ್ಟಿದೊಡೇ ನುದ ದಾನಮಧಿಕಮೆನಲು ತಾಂ ಕಟ್ಟಿಸಿದಳ್ ಬಾವಿಯನಳವಟ್ಟಿರ ಗೌರಿ***
> ***ದೇವಿ ಸೋವೇಶ್ವರದೊಳ್ ॥ ಕಪೂರದ ಕರಣ್ಣಗೆಯೆಲ್ಲೊಪ್ಪಿರೆ ವಜ್ರೋಪಳಂಗಳಿಂ ಕಟ್ಟಿಸಿದಳ್ ತಪ್ಪದೆ ಸೋಪಾನದ ಪರಿಜೊ***
> ***ಪ್ಪನೆನಲು ಗೌರಿದೇವಿ ಪುಣ್ಯಾಧಿಕೆಯೊ ॥***
> ***ಕೂಪಾರವಾರಿಯದು ಲವಣೋಪಚ ಯಮಗ್ತ್ರಸ್ಯಪಿತದ ವಿಶೇಷಮದೆಂದಾ ಪರಿಜನುಳಿದು ಗೌರಿಯ ಕೂಪಂ ಗಂಗೋದಮಾನಮಾದುದು ಜಗದೋಳ್ ॥ ಚಾರುವಿಚಿತ್ರ .... ನಕೆ ಗರಿಯೊಳಾರೆಣೆರೂಡಿವೆತ್ತ ಮೈಳಾರದ ಬಾಬನುಂನೆಗ......ಕ್ರದ ಕಾಮನು ವ್ಯಾಕ್ಷ್ಣಿಸಿಸೆಶಾಕಾರೆಯೆ".***

ಈ ಬಾವಿಯನ್ನು ಗೌರಿದೇವಿ ಎಂಬ ಸ್ತ್ರೀ ಕಟ್ಟಿಸಿ ದ್ದಾಳೆಂದು ತಿಳಿಸುತ್ತದೆ. ಕ್ರಿ.ಶ. ೧೩೫೩ರ ವಿಜಯನಗರ ಕಾಲದ ಶಾಸನವು ಚಳ್ಳಕೆರೆ ನಾಯಕನೆಂಬ ಅಧಿಕಾರಿಯು ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿರುವುದನ್ನು

* ಪಿಎಚ್.ಡಿ ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ತಿಳಿಸಿದರೆ, ಕ್ರಿ.ಶ. ೧೫೯೨ ಮತ್ತೊಂದು ಶಾಸನವು ದೇವಾಲಯದ ದಕ್ಷಿಣ ದ್ವಾರವನ್ನು ಜೀರ್ಣೋದ್ಧಾರ ಮಾಡಿದುದನ್ನು ಉಲ್ಲೇಖಿಸುತ್ತದೆ. ಈ ಬಾವಿಗೆ ಪೂರ್ವದಿಕ್ಕಿನಲ್ಲಿ ಪ್ರವೇಶವಿದ್ದು, ಇಲ್ಲಿ ಒಂದು ತೋರಣವಿದೆ. ಬಾವಿಯನ್ನು ಗ್ರಾನೈಟ್‌ನಿಂದ ಕಟ್ಟಿದ್ದಾರೆ. ಈ ಗೂಡು 'ಐ' ಆಕಾರದ ಒಂದು ಕೋಣೆಯಿದ್ದಂತೆ ಕಾಣುತ್ತದೆ. ಈ ಬಾಗಿಲಿನಂದ ಕೆಳಗೆ ೧೨ ಮೆಟ್ಟಿಲುಗಳನ್ನು ಇಳಿದರೆ ಒಂದು ನಡು ನಿಲ್ಲೆಡೆಯಿದೆ. ಇಲ್ಲಿಂದ ಬಾವಿಯ ಪ್ರವೇಶವು ಉತ್ತರ ದಿಕ್ಕಿಗೆ ತಿರುಗುತ್ತದೆ. ಇಲ್ಲಿಂದ ನಾಲ್ಕು ಮೆಟ್ಟಿಲುಗಳನ್ನಿಳಿದ ಮೇಲೆ ಇನ್ನೊಂದು ನಡುನಿಲ್ಲೆಡೆಯಿದೆ. ಇಲ್ಲಿ ಮತ್ತೆ ಪ್ರವೇಶ ಪಶ್ಚಿಮಕ್ಕೆ ತಿರುಗಿಕೊಳ್ಳುತ್ತದೆ. ಇಲ್ಲಿಂದ ೧೨ ಮೆಟ್ಟಿಲು ಗಳನ್ನಿಳಿದರೆ ಇನ್ನೊಂದು ನಡುನಿಲ್ಲೆಡೆಯಿದೆ. ಇಲ್ಲಿಂದ ೧೫ ಮೆಟ್ಟಿಲು ಗಳನ್ನಿಳಿದರೆ ಆಯತಾಕಾರದ ಬಾವಿ ಕಾಣುತ್ತದೆ.

ಯಳವತ್ತಿಯ ಗುಂಡಲಿಂಗನ ಬಾವಿ: ಈ ಗ್ರಾಮವು ಗದಗದಿಂದ ನೈರುತ್ಯಕ್ಕೆ ೨೮ ಕಿ.ಮೀ. ಶಿರಹಟ್ಟಿಯಿಂದ ವಾಯುವ್ಯಕ್ಕೆ ೧೨ ಕಿ.ಮೀ. ದೂರದಲ್ಲಿದೆ. ಗ್ರಾಮದಿಂದ ಪಶ್ಚಿಮ ದಿಕ್ಕಿನಲ್ಲಿರುವ ಗುಂಡೇಶ್ವರ ದೇವಾಲಯದ ಬಲಭಾಗ ದಲ್ಲಿ ಈ ಬಾವಿಯಿದೆ. ಯಳವತ್ತಿಯು ಐತಿಹಾಸಿಕವಾಗಿ ಮಹತ್ವದ ಸ್ಥಳವಾಗಿದೆ. ಇಲ್ಲಿ ಏಳು ಶಾಸನಗಳಿವೆ. ಗುಂಡಲಿಂಗನ ಗುಡಿಯ ಆವರಣದಲ್ಲಿರುವ ಕಂಬದ ಮೇಲಿರುವ ಸುಮಾರು ೮ನೆಯ ಶತಮಾನದ ಶಾಸನದಲ್ಲಿ ಊರಿನ ಮಾಯೆಗೊವಜ್ಜನ ಮಗನಾದ ಶ್ರೀ ಕುಮಾರನು ಕಂಬ ಮಾಡಿಸಿದ್ದನ್ನು ತಿಳಿಸುತ್ತವೆ. ಕ್ರಿ.ಶ. ೧೧೫೯ರ ಶಾಸನ ಮಾಗುಂಡಿ (ಈಗಿನ ಮಾಗಡಿ) ನೀಲಕಂಠ ದೇವರ ಶಿಷ್ಯರಾದ ಸಿಮನಮಲ್ಲಯ್ಯನು ಗುಂಡನಾಥ ದೇವರಿಗೆ ಪುಷ್ಕರಣಿ ಕಟ್ಟಿಸಿ ಭೂಮಿಯನ್ನು ದಾನ ಕೊಟ್ಟ ಅಂಶವನ್ನು ತಿಳಿಸುತ್ತದೆ. ಇಲ್ಲಿನ ಶಾಸನೋಕ್ತ ಗುಂಡೇಶ್ವರ ದೇವಾಲಯವು ಕೆರೆಯ ಏರಿಯ ಮೇಲಿದೆ. ದೇವಾಲಯದ ಪುಷ್ಕರಣಿಗೆ ಪಶ್ಚಿಮಾಭಿಮುಖವಾಗಿ ಮೆಟ್ಟಿಲುಗಳನ್ನು ಅಳವಡಿಸಿದ್ದು ಇದು ಈಗ ಜೀರ್ಣೋದ್ಧಾರ ಗೊಂಡಿದೆ. ಇದು ದಿನಕ್ಕೆ ಮೂರು ಬಣ್ಣಗಳನ್ನು ಹೊಂದುತ್ತದೆ ಎಂಬ ಐತಿಹ್ಯ ಇದೆ. ಬೆಳಗ್ಗೆ ತಿಳಿ ನೀಲಿ, ಮಧ್ಯಾಹ್ನಕಂದುಬಣ್ಣಕ್ಕೆ ಹಾಗೂ ಸಾಯಂಕಾಲ ಕಪ್ಪು ಛಾಯೆಯ ಆಕಾರದಿಂದ ಕೂಡಿರುತ್ತದೆ. ಈ ಗ್ರಾಮದಲ್ಲಿ ಯಾರಿಗಾದರೂ ವಿಷಜಂತುಗಳು ಕಚ್ಚಿದಾಗ ಈ ಬಾವಿಯಲ್ಲಿ ಸ್ನಾನ ಮಾಡಿ ದೇವಾಲಯದ ದ್ವಾರಬಾಗಿಲನ್ನು ದಾಟಿದಾಗ ಗುಣಮುಖ ರಾಗುತ್ತಾರೆ ಎಂಬ ನಂಬಿಕೆ ಇದೆ.

ಕೊಣ್ಣೂರಿನ ರಾಮಲಿಂಗನ ಬಾವಿ: ಇದು ಮಲಪ್ರಭೆಯ ದಡದಲ್ಲಿರುವ ಕೊಣ್ಣೂರು ನರಗುಂದ ತಾಲೂಕಿನ ದೊಡ್ಡ ಊರುಗಳಲ್ಲಿ ಇದು ಒಂದು. ಇಲ್ಲಿ ಕೆಲವು ವೈಶಿಷ್ಟ್ಯಪೂರ್ಣವಾದ ದೇವಾಲಯಗಳು ಇವೆ. ಕ್ರಿ.ಶ. ಸುಮಾರು ೮೬೦ರ ಶಾಸನ ದಲ್ಲಿ ಬಂಕೆಯ ಅರಸ ಕಟ್ಟಿಸಿದ ಈಗಿನ ಪರಮೇಶ್ವರ ದೇವಾಲಯುವು ಮೂಲತಃ ಜೈನಬಸದಿ, ಇದು ತೀರಾ ಸರಳವಾದ ದ್ವಾರಬಂಧವನ್ನು ಹೊಂದಿದ್ದು, ಈ ದೇವಾಲಯದ ಪೀಠದ ಮೇಲೆ ಕುಳಿತ ಶಿವಲಿಂಗವಿದೆ. ಅದರಂತೆ ತೀರ್ಥಂಕರ ಪೀಠದ ಅವಶೇಷಗಳು ಇವೆ. ದೇವಾಲಯದ ಬಲಭಾಗದಲ್ಲಿ ೩೦ ಅಡಿ ಸುತ್ತಳತೆ ಇರುವ ಬಾವಿ ಕಂಡುಬರುತ್ತದೆ. ಪಶ್ಚಿಮಾಭಿಮುಖವಾಗಿ ಮೆಟ್ಟಿಲುಗಳ ಮುಖಾಂತರ ಬಾವಿಯ ಒಳಕ್ಕೆ ಪ್ರವೇಶಿಸಬಹುದು. ಈಗ ಇದು ಮುಳ್ಳುಕಂಟಿಗಳಿಂದ ತುಂಬಿದ್ದರಿಂದ ಇದರ ಪ್ರಾಚೀನತೆಯನ್ನು ಗುರುತಿಸಲಾಗುವುದಿಲ್ಲ.

ಸೂಡಿಯ ನಾಗರಬಾವಿ: ಜೋಡು ಕಳಶದೇವರ ಗುಡಿಯಲ್ಲಿರುವ ಕ್ರಿ.ಶ. ೧೦೬೦ರ ಶಾಸನವು ಈ ನಾಗಗೊಂಡವನ್ನು ನಾಗದೇವನು ಕಟ್ಟಿಸಿದ್ದಾನೆಂದು ತಿಳಿಸುತ್ತದೆ. ಬಾವಿಯು ಚೌಕಾಕಾರದಲ್ಲಿದ್ದು ಪಶ್ಚಿಮಕ್ಕೆ ಮೆಟ್ಟಿಲುಗಳಿವೆ. ಬಾವಿಯ ಕೆಳಭಾಗದಲ್ಲಿ ಸ್ವಲ್ಪ ಭಾಗ ಮಾತ್ರ ಮುಂದಕ್ಕೆ ಚಾಚಿಕೊಂಡಿರುವ ಹಂತಗಳಿವೆ. ಮೆಟ್ಟಿಲುಗಳು ಪ್ರಾರಂಭವಾಗುವ ಹಂತದಲ್ಲಿ ಒಂದು ಚೌಕಟ್ಟು ಇದ್ದು, ಈಗ ಅರೆಗಂಬಗಳು ಮಾತ್ರ ಕಂಡುಬರುತ್ತವೆ. ಇಲ್ಲಿಂದ ಮೆಟ್ಟಿಲುಗಳ ಎರಡು ಸಾಲುಗಳು ಪ್ರಾರಂಭವಾಗಿ ಒಂದು ಸಾಲು ಉತ್ತರಕ್ಕೆ, ಇನ್ನೊಂದು ಸಾಲು ಪಶ್ಚಿಮಕ್ಕೆ ಹೋಗುತ್ತವೆ. ಇದೇ ರೀತಿಯ ಮೆಟ್ಟಿಲುಗಳು ಬಾವಿಯ ಇನ್ನುಳಿದ ಮೂರು ಬದಿಗಳಲ್ಲಿಯೂ ಕಂಡುಬರುವುದು ಒಂದು ವಿಶೇಷ. ಈ ಮೆಟ್ಟಿಲುಗಳ ಮೇಲಿರುವ ಬಾವಿಯ ಗೋಡೆ ಲಂಬವಾಗಿದ್ದು ಇದು ದಾರಿಯವರೆಗೆ ಮುಂದು ವರೆಯುತ್ತದೆ. ಈ ಹಂತದ ಮೇಲೆ ಮುಂದೆ ಚಾಚಿಕೊಂಡಿರುವ ಕಪೋತವಿದೆ. ಈ ಕಪೋತದ ಮೇಲೆ ನಡುನಿಲ್ಲೆಡೆಗಳು ಬಾವಿಯ ನಾಲ್ಕು ಬದಿಗಳಲ್ಲಿ ಮತ್ತು ದಾರಿಗಳಲ್ಲಿ ಕಂಡುಬರುತ್ತವೆ. ಕಪೋತವು ಅಲಂಕಾರರಹಿತ ಗೂಡುಗಳಿಂದ ಅಲಂಕೃತವಾಗಿದೆ. ಈ ನಡುನಿಲ್ಲೆಡೆಯ ಮೇಲಿರುವ ಗೋಡೆಯು ದೇವಾಲಯದ ಗೋಡೆಗಳಂತೆ ಅಲಂಕೃತವಾಗಿದೆ. ಈ ಗೋಡೆಯ ಜಗಲಿ, ಪದ್ಮ (ಎತ್ತರದ), ತ್ರಿಪಟ್ಟ ಕುಮುದ, ಕಪೋತ, ತೊಲೆಗಳ (ಜಂತಿಗಳ) ಕೊನೆ ಮತ್ತು ಪದ್ಮಗಳಿಂದ ಕೂಡಿದ ಅಧಿಷ್ಠಾನವನ್ನೊಳಗೊಂಡಿದೆ.

ಚೌಕಾಕಾರ ಬಾವಿಯ ಮೂರು ಬದಿಯಲ್ಲಿರುವ ಭಿತ್ತಿಯು ಉದ್ದವಾದ ಅರೆಗಂಬಗಳಿಂದ ವಿಂಗಡಿಸಲ್ಪಟ್ಟಿದ್ದು, ಅನೇಕ ಉಬ್ಬು ಮತ್ತು ಗೂಡುಗಳಿಂದ ಅಲಂಕರಿಸಲ್ಪಟ್ಟಿದೆ. ಮಧ್ಯದ ಭಾಗ ಮೂರು ಬಾರಿ (ಸಲ) ಮುಂದೆ ಚಾಚಿಕೊಂಡು ಮಧ್ಯದಲ್ಲಿ ಸರಳವಾದ ಗೂಡನ್ನು ಹೊಂದಿದೆ.

ಮೂಲೆ ಗಳಲ್ಲಿ ಕೋನಗಳುಳ್ಳ ಚಾಚಿಕೊಂಡಿರುವ ಭಾಗಗಳಿದ್ದು, ಇವು ಕೃತಕ ಗೂಡುಗಳಿಂದ ಅಲಂಕೃತವಾಗಿವೆ. ಪ್ರಸ್ತರವು ಶಾಲ, ಕೂಟ, ಪಂಜರಗಳಿಂದ ಕೂಡಿದೆ. ದೇವಾಲಯದ ಗೋಡೆಯಂತಿರುವ ಅಲಂಕಾರಿಕ ಗೋಡೆಯು ಬಾವಿಯ ದಾರಿ ಯಲ್ಲಿಯೂ ಮುಂದುವರೆದಿದೆ. ದಾರಿಯ ಪೂರ್ವಕ್ಕೆ ಕೊನೆಯಲ್ಲಿ ಪ್ರವೇಶಮಂಟಪವಿದ್ದು, ಇದು ನಾಲ್ಕು ಅರೆಗಂಬಗಳ ಮೇಲೆ ನಿಂತಿದೆ. ಈ ಮಂಟಪದ ಗೋಡೆ ಮತ್ತು ಪ್ರಸ್ತರವು ದಾರಿಯ ಇತರೆ ಗೋಡೆಗಳಂತಿವೆ. ಉತ್ತರ ಮತ್ತು ದಕ್ಷಿಣದ ಗೋಡೆಗಳಲ್ಲಿ ಒಂದೊಂದು ಗೂಡುಗಳಿವೆ. ಬಾವಿಯ ದಾರಿಯು ಮಂಟಪದ ಪೂರ್ವಬದಿಯವರೆಗೆ ಮುಂದುವರೆದಿದೆ.

ಲಕ್ಕುಂಡಿಯ ಮಾಣಿಕೇಶ್ವರ ಪುಷ್ಕರಣಿ: ವಿರೂಪಾಕ್ಷ ದೇವಾಲಯದ ಸಮೀಪದಲ್ಲಿ ಚಾಲುಕ್ಯರ ಶೈಲಿಯ ಮಾಣಿಕೇಶ್ವರ ದೇವಾಲಯವಿದೆ. ಈ ದೇವಾಲಯದ ಮುಂಭಾಗದಲ್ಲಿ ವಿಶಾಲವಾದ ಬಾವಿಯಿದೆ. ಇದನ್ನು 'ಮಾಣಿಕೇಶ್ವರ ಕುಂಡ' ಎಂದು ಕರೆಯುತ್ತಾರೆ. ಇದು ಆಯತಾಕಾರದಲ್ಲಿರುವ ಬಾವಿ, ದಕ್ಷಿಣ ದಿಕ್ಕಿನಲ್ಲಿ ಉದ್ದವಾದ ದಾರಿಯಿದೆ. ಪಶ್ಚಿಮಕ್ಕೆ ಇನ್ನೊಂದು ಉದ್ದವಾದ ದಾರಿಯಿದೆ. ಪೂರ್ವಕ್ಕಿರುವ ದಾರಿ ಇಂಗ್ಲೀಷ್ ಅಕ್ಷರ 'ಎಲ್' ಆಕಾರದಲ್ಲಿದೆ. ಎಲ್ಲ ಕಡೆಯ ದಾರಿಗಳಲ್ಲಿ ಮೆಟ್ಟಿಲುಗಳಿವೆ. ಬಾವಿಯ ಕೆಳಗಿನ ಭಾಗವನ್ನು ಬಂಡೆಯುಲ್ಲಿಯೇ ಕೊರೆಯುಲಾಗಿದೆ. ಮೇಲಿನ ಹಂತಗಳನ್ನು ಉದ್ದವಾದ ಗ್ರಾನೈಟ್ ಶಿಲೆಯಿಂದ ಕಟ್ಟಲಾಗಿದೆ. ಈ ಹಂತಗಳು ಮೆಟ್ಟಿಲುಗಳಂತೆ ಮುಂದೆ ಚಾಚಿಕೊಂಡಿವೆ. ೧೨ ಮೆಟ್ಟಿಲುಗಳ ಮೊದಲಿನ ಅಂತಸ್ತಿನ ಒಂದು ನಡು ನಿಲ್ಲೆಡೆಯಿಂದ ಈ ಹಂತದಲ್ಲಿ ಈಶಾನ್ಯ ಮತ್ತು ವಾಯುವ್ಯ ಮೂಲೆಗಳಲ್ಲಿ ಎರಡು ಆಯತಾಕಾರದ ಜಗುಲಿಗಳಿವೆ. ಐದು ಮೆಟ್ಟಿಲುಗಳುಳ್ಳ ಎರಡನೆಯ ಅಂತಸ್ತಿನಲ್ಲಿ ಮತ್ತೆ ಚಿಕ್ಕ ನಡುನಿಲ್ಲೆಡೆಯಿದೆ. ಈ ಅಂತಸ್ತಿನ ಹಂತಗಳು ತುಂಬ ಕಡಿಮೆ ಪ್ರಮಾಣದಲ್ಲಿ ಮುಂದೆ ಚಾಚಿಕೊಂಡಿವೆ. ಈ ಅಂತಸ್ತಿನ ಮೇಲಿರುವ ಅಂದರೆ ಮೂರನೆಯ ಅಂತಸ್ತಿನಲ್ಲಿ ಆರು ಮೆಟ್ಟಿಲುಗಳಿದ್ದು ಇವು ಲಂಬರೇಖೆಯಲ್ಲಿ ಜೋಡಿಸ ಲ್ಪಟ್ಟಿವೆ. ಆರನೆಯ ಹಂತ ಕಪೋತವಾಗಿದ್ದು ಅಲಂಕಾರರಹಿತ ಗೂಡುಗಳನ್ನು ಹೊಂದಿದೆ. ಇಲ್ಲಿ ಸಹ ಚಿಕ್ಕದಾದ ನಡುನಿಲ್ಲೆಡೆಯಿದೆ. ನಾಲ್ಕನೆಯ ಅಂತಸ್ತು ಎಂಟು ಹಂತಗಳ ನ್ನೊಳಗೊಂಡಿದ್ದು ಇವು ಒಂದೇ ಲಂಬರೇಖೆಯಲ್ಲಿ ಜೋಡಿಸಲ್ಪಟ್ಟಿವೆ. ಎಂಟನೆಯ ಅಂತಸ್ತು ಮತ್ತೆ ಕಪೋತ ವಾಗಿದೆ. ಮೂರನೆಯ ಮತ್ತು ನಾಲ್ಕನೆಯ ಅಂತಸ್ತುಗಳಲ್ಲಿ ಪೂರ್ವ ಉತ್ತರ ಮತ್ತು ಪಶ್ಚಿಮ ಬದಿಗಳಲ್ಲಿ ಎರಡೆರಡು ಗೂಡುಗಳಿವೆ. ಈ ಗೂಡುಗಳನ್ನು ಪದರುಗಲ್ಲುಗಳಿಂದ ಕಟ್ಟಿದ್ದು ಇವು ಚಿಕ್ಕ ದೇವಾಲಯಗಳಂತೆ ಕಾಣುತ್ತವೆ. ಈ ಗೂಡುಗಳು ಚೌಕಟ್ಟು ದೊಡ್ಡ ಸೂರು ಮತ್ತು ದ್ವಿತಳ ವಿಮಾನ ಗಳನ್ನೊಳಗೊಂಡಿವೆ. ಎಲ್ಲ ಗೂಡುಗಳು ದ್ವಿತಳ ವಿಮಾನ ಗಳಾಗಿವೆ. ಕೆಲವು ಗೂಡುಗಳಲ್ಲಿ ಪೀಠಗಳು ಮಾತ್ರ ಇವೆ. ಗೂಡಿನ ಮೇಲೆ ಅಗಲವಾದ ಕಂಠವಿದೆ. ಕೂಡು ಅಲಂಕಾರ ರಹಿತವಾಗಿದೆ. ಈ ಕಪೋತವು ಕೊನೆಯ ಹಂತ ವಾಗಿದೆ. ದಕ್ಷಿಣ, ಪೂರ್ವ ಮತ್ತು ಪಶ್ಚಿಮಕ್ಕಿರುವ ಮೆಟ್ಟಿಲು ಗಳ ಎರಡೂ ಬದಿಗಳಲ್ಲಿ ಒಂದೊಂದು ಗೂಡುಗಳಿವೆ. ಈ ಗೂಡುಗಳನ್ನು ದಾಟಿದ ಮೇಲೆ ಪ್ರವೇಶಮಂಟಪವಿದೆ. ಇದು ಎರಡು ಅಂತಸ್ತುಗಳಲ್ಲಿರುವ ಎರಡೂ ಅಂತಸ್ತುಗಳಲ್ಲಿ ಅನೇಕ ಕಂಬಗಳಿವೆ. ಮಾಣಿಕೇಶ್ವರ ದೇವಸ್ಥಾನದ ಒಂದು ಕಂಬದ ಮೇಲೆ ೧೨ನೆಯ ಶತಮಾನದ ಒಂದು ಶಾಸನವಿದೆ. ಈ ಶಾಸನವು ಗುರು ಕ್ರಿಯಾಶಕ್ತಿ ಪಂಡಿತನು ಬಾವಿಯ ಮೇಲೆ ಭೋಗಮಂಟಪ ಕಟ್ಟಿಸಿದ್ದನ್ನು ತಿಳಿಸುತ್ತದೆ. ಮತ್ತು ಬಡ್ಡಿಯರ ಬಸವೆಟ್ಟಿಯ ಉಲ್ಲೇಖವಿದೆ.

ಹೊಸೂರಿನ ಕಲ್ಲುಬಾವಿ: ಹೊಸೂರು ಗ್ರಾಮವು ಗದಗದಿಂದ ದಕ್ಷಿಣಕ್ಕೆ ೧೫ ಕಿ.ಮೀ. ಅಂತರದಲ್ಲಿದ್ದು ಕ್ರಿ.ಶ. ೧೧೪೮ರ ಹೊಸೂರ ಶಾಸನದಲ್ಲಿ ಕಲ್ಲುಬಾವಿಯ ಪ್ರಸ್ತಾಪವಿದೆ. ಈ ಬಾವಿ ಮತ್ತು ತೋಟವನ್ನು ಅಲ್ಲಿಯ ದೇವಾಲಯವೊಂದಕ್ಕೆ ದಾನ ಕೊಟ್ಟಿದ್ದಾಗಿ ತಿಳಿಯುತ್ತದೆ. ಹೊಸೂರಿನ ಆಯಜ್ಜಗಾವುಂಡ ದಂಪತಿಗಳಿಗೆ ೧೫ ತೋಟ ಗಳಿದ್ದು ಅವುಗಳಲ್ಲಿ ಪಟ್ಟವರ್ಧನರ ಒಂದು ತೋಟ ಮತ್ತು ತವರಾಜನ ಒಂದು ತೋಟ ಹೀಗೆ ಎರಡು ತೋಟಗಳನ್ನು ದಾನ ಕೊಟ್ಟ ಉಲ್ಲೇಖಗಳು ಕಂಡುಬರುತ್ತವೆ.

ಗಜೇಂದ್ರಗಡದ ಮಾಲೋಜಿ ಬಾವಿ: ಗಜೇಂದ್ರಗಡ ನಗರವು ಗದುಗಿನಿಂದ ೫೪ ಕಿಲೋಮೀಟರ್ ದೂರದಲ್ಲಿದೆ. ಗಜೇಂದ್ರಗಡದಿಂದ ಉಣಚಗೇರಿಗೆ ಹೋಗುವ ದಾರಿಯ ಎಡಭಾಗಕ್ಕೆ ಈ ಬಾವಿಯಿದೆ. ಘೋರ್ಪಡೆ ಮನೆತನದ ಹಿಂದೂರಾವ್ ದೌಲತ್ತರಾವ್ ಘೋರ್ಪಡೆ ನಿಧನವಾದ ನಂತರ, ಆತನ ಮಗ ಮಾಲೋಜಿರಾಯನು ಈ ಸಂಸ್ಥಾನದ ಚುಕ್ಕಾಣಿ ಹಿಡಿದನು. ತನ್ನ ಹೆಸರು ಅಜರಾಮರವಾಗಿರ ಬೇಕೆಂದು ಕ್ರಿ.ಶ. ೧೮೮೧ರಲ್ಲಿ ವಿಶಿಷ್ಟವಾದ ಮಾಲೋಜಿ ಬಾವಿಯನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ. ಇದಕ್ಕೆ ಆಧಾರವಾಗಿ ಈ ಬಾವಿಯಲ್ಲಿ ಸುಬ್ರಹ್ಮಣ್ಯನ ಸಂಕೇತವಾದ ನಾಗರಾಜನ ಚಿತ್ರ ಕಂಡುಬರುತ್ತದೆ. ಬಾವಿಯು ಚೌಕಾಕಾರ ದಲ್ಲಿದ್ದು ಉತ್ತರ ದಿಕ್ಕಿನಲ್ಲಿ ಇಂಗ್ಲೀಷ್ ವರ್ಣಮಾಲೆಯ 'ಜಡ್' ಆಕಾರದಲ್ಲಿ ಮೆಟ್ಟಿಲುಗಳನ್ನು ನಿರ್ಮಿಸಿದ್ದಾರೆ. ಮೊದಲು ಬಾವಿಯ ನಾಲ್ಕು ಭಾಗಗಳಲ್ಲಿ ಕಂಬಗಳುಳ್ಳ ಮೊಗಸಾಲೆ ಇದ್ದದ್ದು ಕಂಡುಬರುತ್ತದೆ. ಆದರೆ ಈಗ ಇದರ

ಕುರುಹುಗಳು ಮಾತ್ರ ಕಾಣುತ್ತವೆ. ಬಾವಿಯ ನಾಲ್ಕೂ ಮೂಲೆಗಳಲ್ಲಿ ಇಂಗ್ಲೀಷ್ ವರ್ಣಮಾಲೆಯ 'ಎಲ್' ಮಾದರಿಯ ಆಕಾರದಲ್ಲಿ ಮೆಟ್ಟಿಲುಗಳಿದ್ದು, ಇವು ಭಾಗಶಃ ಮುಚ್ಚಲ್ಪಟ್ಟಿವೆ. (Covered) ಈ ಪ್ರವೇಶದ್ವಾರಗಳಿಗೆ ಕಮಾನುಗಳಿವೆ. ಬಾವಿಯ ತುದಿಯ ಭಾಗವು ವಿಜಯನಗರ ಕಾಲದ ಶೈಲಿಯಲ್ಲಿದೆ. ಇದರ ಕೆಳಗೆ ಅಗಲವಾದ ಕಂಠವಿದೆ. ಇದರ ಮೇಲೆ ಹೆಡೆಯುಳ್ಳ ಸರ್ಪ, ಹೆಡೆಯುಳ್ಳ ಸರ್ಪದ ಮುಂದೆ ಕುಳಿತು ಪುಂಗಿ ಊದುತ್ತಿರುವ ಮನುಷ್ಯ, ಪುಂಗಿ ಊದಿ ಹೆಡೆಯುಳ್ಳ ಸರ್ಪವನ್ನು ಬೆನ್ನಟ್ಟಿರುವ ಮನುಷ್ಯ, ಕೋತಿ ಆಡಿಸುವ ಮನುಷ್ಯರ ಉಬ್ಬು ಶಿಲ್ಪಗಳಿವೆ. ಇದರ ಕೆಳಗೆ ಸರಳವಾದ ಹಂತವಿದೆ. ಈ ಎಲ್ಲಾ ಹಂತಗಳು ಅಧಿಷ್ಠಾನದಂತೆ ಕಾಣುತ್ತವೆ. ಇದರ ಕೆಳಗೆ ಮೆಟ್ಟಿಲುಗಳಂತಿರುವ ಮತ್ತು ಮುಂದೆ ಚಾಚಿಕೊಂಡಿರುವ ನಾಲ್ಕು ಅಂತಸ್ತುಗಳಿವೆ. ಪ್ರತಿಯೊಂದು ಅಂತಸ್ತು ಎರಡು ಹಂತಗಳನ್ನು ಹೊಂದಿದೆ. ಇವುಗಳ ಕೆಳಗೆ ನೇರವಾದ ಗೋಡೆಯಿದೆ. ಬಾವಿಯನ್ನು ನೀಟಾಗಿ ಕಡೆದ ಮರುಳುಗಲ್ಲಿನ ದೊಡ್ಡ ಕಲ್ಲುಗಳಿಂದ ಕಟ್ಟಲಾಗಿದೆ. ಬಾವಿಯ ಕೆಳಗಿನ ಹಂತಗಳನ್ನು ಚಿಕ್ಕ ಒರಟು ಕಲ್ಲುಗಳಿಂದ ಕಟ್ಟಲಾಗಿದೆ. ಈಗ ಬಾವಿಯಲ್ಲಿ ನೀರಿಲ್ಲ. ಬಾವಿಯಲ್ಲಿ ದಕ್ಷಿಣದ ಬದಿಯ ನೀರನ್ನು ಮೇಲೆತ್ತಲು ಮುಂದೆ ಚಾಚಿಕೊಂಡಿರುವ ಒಂದು ಜಗುಲಿ ಇದೆ. ಈ ಜಗುಲಿಯ ಕೆಳಗಿನ ಭಾಗದಲ್ಲಿ ಪಲ್ಲಂಗದ ಮೇಲೆ ಕುಳಿತಿರುವ ವಿಲಾಸಿ ದಂಪತಿಗಳಿರುವ ಒಂದು ಚಿಕ್ಕ ಪಟ್ಟಿಕೆಯಿದೆ. ಮೇಲೆ ಮುಂದೆ ಚಾಚಿಕೊಂಡಿರುವ ಕೈಸಾಲೆ ಇದೆ. ಕೈಸಾಲೆಯ ಅಧಿಷ್ಠಾನವು ಕೆಳಗೆ ಬಾಗಿರುವ ಹಂತ ಕಿರಿದಾದ ಲಂಬವಾಗಿರುವ ಪಾರ್ಶ್ವಗಳನ್ನು ಹೊಂದಿದ ತ್ರಿಪಟ್ಟ ಕುಮುದ, ಕಪೋತ ಕಂಠದಂತೆ ಕಾಣುವ ಮೇಲಕ್ಕೆ ಬಾಗಿರುವ ಹಂತ ಗಳನ್ನು ಹೊಂದಿದೆ. ಕಂಠದ ಮೇಲೆ ಶಿಲ್ಪಗಳು ಅರೆಗಂಬ ಗಳಿಂದ ಬೇರ್ಪಟ್ಟಿವೆ. ಮೇಲೆ ಪೂರ್ವ ಮತ್ತು ಪಶ್ಚಿಮಕ್ಕೆ ಒಂದೊಂದು ಮುಂದೆ ಚಾಚಿಕೊಂಡಿರುವ ಆನೆಗಳಿವೆ. ಉತ್ತರದ ಬದಿಯಲ್ಲಿ ಹಿಂಗಾಲುಗಳ ಮೇಲೆ ನಂತಿರುವ ವ್ಯಾಳಿಗಳಿದ್ದು ಇವು ಏತದ ಆಧಾರ ಕಂಬಗಳಂತಿವೆ. ಪಾರ್ಶ್ವಗಳಲ್ಲಿ ಗದೆ ಹಿಡಿದಿರುವ ದ್ವಾರಪಾಲಕರಿದ್ದಾರೆ. ಪಶ್ಚಿಮಕ್ಕಿರುವ ಮೊಗಸಾಲೆಯ ಮಧ್ಯದಲ್ಲಿ ಒಂದು ಸಣ್ಣ ಗುಡಿಯಲ್ಲಿ ಲಿಂಗವಿದೆ. ಲಿಂಗದ ಮುಂದೆ ಮೊಗಸಾಲೆಯಲ್ಲಿ ನಂದಿಯಿದೆ. ಮೊಗಸಾಲೆಯ ಆಚೆ ಉತ್ತರದ ಕೊನೆಗೆ ಆಂಜನೇಯ ದೇವಸ್ಥಾನವಿದೆ. ದೇವಸ್ಥಾನದ ಮುಂದೆ ವಿಶಾಲವಾದ ಮಂಟಪವಿದೆ. ಇಲ್ಲಿ ಪಶ್ಚಿಮಕ್ಕೆ ಇನ್ನೊಂದು ಚಿಕ್ಕ ಗುಡಿಯಿದ್ದು ಈ ಗುಡಿಯ ಮುಂದೆ ಚಿಕ್ಕ ಮಂಟಪವಿದೆ. ಮೊಗಸಾಲೆಯ ದಕ್ಷಿಣ ಮತ್ತು ಉತ್ತರದ ಗೋಡೆಗಳಲ್ಲಿ ಸಣ್ಣ ಕಮಾನುಗಳುಳ್ಳ ನಾಲ್ಕು ಆಮೆಗಳಿವೆ. ಅದೇ ಅಂತಸ್ತಿನ ಉತ್ತರ ದಿಕ್ಕಿನಲ್ಲಿ ಒಂದು ಮೀನಿನ ಶಿಲ್ಪವಿದೆ. ಈ ಬಾವಿಯು ಸುಮಾರು ೫೦ ಅಡಿ ಆಳ, ಮೇಲ್ಭಾಗದ ಅಗಲ ೧೫×೧೫, ಕೆಳಭಾಗದ ಅಗಲ ೮×೮ ಆಕಾರವನ್ನು ಹೊಂದಿದೆ.

ಕಾಲಕಾಲೇಶ್ವರದ ಪುಷ್ಕರಣಿ: ಊರಿನ ಉತ್ತರಾಭಿಮುಖವಾಗಿ ನೆಲೆಸಿರುವ ಕಾಲಕಾಲೇಶ್ವರ ಕ್ಷೇತ್ರವನ್ನು ಪ್ರವೇಶಿಸುತ್ತಿದ್ದಂತೆ ಕಾಲಕಾಲೇಶ್ವರ ಸನ್ನಿಧಿಗೂ ಒಂದು ಕಿ.ಮೀ. ದೂರದಲ್ಲಿ ಪಶ್ಚಿಮಕ್ಕೆ ಅಭಿಮುಖವಾಗಿರುವ ಪುಷ್ಕರಣಿ ಇದೆ. ಪುಷ್ಕರಣಿಯಲ್ಲಿ ಸ್ನಾನ ಮಾಡುವುದರಿಂದ ಕರ್ಮಗಳು ತೊರೆದು ಪುಣ್ಯ ಪ್ರಾಪ್ತಿಯಾಗುತ್ತವೆ ಎನ್ನುವುದು ಪರಂಪರಾಗತ ವಾಗಿ ಬೆಳೆದುಬಂದಿರುವ ನಂಬಿಕೆ. ಪುಷ್ಕರಣಿಯಲ್ಲಿ ಜಲ ನಿರಂತರ ಕ್ಷೀಣಿಸಿತ್ತು. ಆದರೆ ಈ ವರ್ಷ ತುಂತುರು ಮಳೆಯಿಂದ ಭರ್ತಿಯಾಗಿದೆ.

ಹಜ್ರತ್ ಮಲಿಕ್ ಶಹದತ್ ಗುಮ್ಮಟ ಬಾವಿ

ಈ ಬಾವಿಯು ಲಕ್ಷ್ಮೇಶ್ವರದ ದಕ್ಷಿಣ ಭಾಗಕ್ಕಿದ್ದು ಮುಸಲ್ಮಾನರು ಪ್ರತಿದಿನ ತಪ್ಪದೇ ದರ್ಶನಕ್ಕೆ ಬರುತ್ತಾರೆ. ಈ ಗುಮ್ಮಟ ಬಾವಿಗೊಂದು ಪೌರಾಣಿಕ ಕಥೆಯಿದೆ. ವರವಿ ಮೌನೇಶ್ವರರು ಚಾಣಗಳನ್ನು ತೆಗೆದುಕೊಂಡು ತಾವೇ ಕಡಿದ ಬಾವಿಯ ತಳಭಾಗವನ್ನು ನೈಸರ್ಗಿಕ ಕಲ್ಲಿನಲ್ಲಿಯೇ ಕೊರೆಯಲಾಗಿದೆ. ಬಾವಿಯಲ್ಲಿ ನಾಲ್ಕು ಅಂತಸ್ತುಗಳಿವೆ. ಪ್ರತಿಯೊಂದು ಅಂತಸ್ತು ಮುಂದೆ ಚಾಚಿಕೊಂಡಿರುವ ಹಂತದಿಂದ ಬೇರ್ಪಟ್ಟಿದೆ. ದಕ್ಷಿಣ ದಿಕ್ಕಿನ ಮಧ್ಯ ಗೋಡೆಯ ನೀರು ಮೇಲೆತ್ತುವ ಜಗಲಿಯನ್ನು ಎತ್ತಿ ಹಿಡಿಯಲು ಸ್ವಲ್ಪ ಮುಂದೆ ಚಾಚಿಕೊಂಡಿದೆ. ಉತ್ತರದ ಬದಿಯಲ್ಲಿ ಒಂದು ಕಮಾನು ಇದ್ದು, ಇದು ಸೇತುವೆಗೆ ಆಧಾರವಾಗಿದೆ. ಈ ಕಮಾನು ಮುಂದೆ ಚಾಚಿಕೊಂಡಿರುವ ಕಲ್ಲುಗಳಿಂದ ರೂಪು ಗೊಂಡಿದೆ. ಬಾವಿಯ ಮೆಟ್ಟಿಲುಗಳು ಉತ್ತರದ ಕಡೆಯಿಂದ ಪ್ರಾರಂಭವಾಗಿ ದಕ್ಷಿಣಕ್ಕೆ ಹೋಗುತ್ತವೆ. ನಂತರ ಪೂರ್ವಕ್ಕೆ ತಿರುಗಿ ಮತ್ತೆ ದಕ್ಷಿಣಕ್ಕೆ ತಿರುಗಿ ಬಾವಿಗೆ ಸೇರುತ್ತವೆ. ಬಾವಿಯ ಪ್ರವೇಶ ಬಾಗಿಲು ಭೂಮಿ ಮಟ್ಟದಿಂದ ಮೇಲಿದೆ. ಈ ಬಾಗಿಲಿಗೆ ಕಲ್ಯಾಣ ಚಾಲುಕ್ಯರ ಕಾಲದ ದೇವಸ್ಥಾನದ ಚೌಕಟ್ಟುಗಳನ್ನು ಉಪಯೋಗಿಸಲಾಗಿದೆ. ಇಸ್ಲಾಮಿಕ್ ಶೈಲಿಯಲ್ಲಿ ಹೂವಿನ ಆಕಾರದ ಗೋಡೆ ಭಾಗಗಳು ಬಾಗಿಲಿನ ಚೌಕಟ್ಟುಗಳನ್ನು ಜೋಡಿಸಿವೆ. ಬಾಗಿಲಿನ ಹಣೆಪಟ್ಟಿ ಸರಳವಾಗಿದೆ. ಮೇಲೆ ತೆನೆಗಳ ಅಲಂಕಾರಗಳಿವೆ. ಬಾವಿಯ ತುದಿ ಭಾಗದಲ್ಲಿ ಅರ್ಧ ಬಾಗಿದ ತುದಿಯುಳ್ಳ ಭಾಗವಿದೆ. ನೀರೆತ್ತುವ ಜಗಲಿಯು ಇಸ್ಲಾಮಿಕ್ ಶೈಲಿಯಲ್ಲಿರುವ ಹೂವಿನ ಆಕಾರದಲ್ಲಿರುವ ಗೋಡೆಯ ಭಾಗ ಗಳಿಂದ ಎತ್ತಿ ಹಿಡಿಯಲ್ಪಟ್ಟಿವೆ. ಮೇಲೆತ್ತಿದ ನೀರು ಎರಡು ಕಲ್ಲಿನ ಕಾಲುವೆಗಳಿಗೆ ಹರಿದು ಹೋಗುತ್ತಿತ್ತು. ನೈಋತ್ಯ ದಿಕ್ಕಿನಲ್ಲಿರುವ ಒಂದು ಕಾಲುವೆ ಈಗಲೂ

ಸುಸ್ಥಿತಿಯಲ್ಲಿದೆ. ಇದು ನೀರಿನ ತೊಟ್ಟಿಗೆ ಜೋಡಿಸಲ್ಪಟ್ಟಿದೆ. ಈ ತೊಟ್ಟಿಗೆ ನೀರು ಒಳಗೆ ಬರಲು ಒಂದು ಸಿಂಹಮುಖದ ಪ್ರಣಾಳವಿದ್ದು ಇದನ್ನು ಯಾವುದೋ ದೇವಸ್ಥಾನದಿಂದ ತರಲಾಗಿದೆ.

ಲಕ್ಷ್ಮೀಲಿಂಗ ದೇವಸ್ಥಾನದ ಹತ್ತಿರವಿರುವ ಬಾವಿ: ಈ ಬಾವಿ ಲಕ್ಷ್ಮೇಶ್ವರದ ಲಕ್ಷ್ಮೀಲಿಂಗ ದೇವಸ್ಥಾನದ ಉತ್ತರಕ್ಕೆ ಮುನ್ಸೀಫ್ ಕೋರ್ಟಿನ ಹತ್ತಿರವಿದೆ. ರಚನೆಯಲ್ಲಿ ಸೋಮೇಶ್ವರ ದೇವಸ್ಥಾನದ ಆವರಣದಲ್ಲಿರುವ ಬಾವಿಯಂತೆಯೇ ಇದೆ. ಆದರೆ ಇಲ್ಲಿ ತೋರಣ ಮತ್ತು ಸೇತುವೆಗಳಿಲ್ಲ. ಬಾವಿಗೆ ಪ್ರವೇಶ ದಕ್ಷಿಣದಿಕ್ಕಿನಿಂದ ಇದೆ. ದಾರಿಯು ಮೊದಲು ಪಶ್ಚಿಮಕ್ಕೆ ನಂತರ ಉತ್ತರಕ್ಕೆ ತಿರುಗಿ ಚೌಕಾಕಾರದ ಬಾವಿಗೆ ಸೇರುತ್ತದೆ. ಮೆಟ್ಟಿಲುಗಳ ಮಧ್ಯದಲ್ಲಿ ಕೆಲವು ನಿಕ್ಷ್ಮನಿಲ್ಲೆಡೆಗಳಿವೆ. ದಾರಿಯಲ್ಲಿ ಬೇರೆ ಬೇರೆ ಹಂತಗಳಲ್ಲಿ ಅಡ್ಡ ತೊಲೆಗಳನ್ನು ಹಾಕಿದ್ದಾರೆ. ಬಾವಿ ಗೋಡೆಯ ಹಂತಗಳು ಕೆಳಗೆ ಹೋದಂತೆ ಸ್ವಲ್ಪ ಸ್ವಲ್ಪವಾಗಿ ಮುಂದಕ್ಕೆ ಚಾಚಿಕೊಂಡಿವೆ. ಬಾವಿಯ ಗೋಡೆಯಲ್ಲಿ ಅನೇಕ ಅಂತಸ್ತುಗಳಿದ್ದು, ಇವು ಮುಂದಕ್ಕೆ ಚಾಚಿಕೊಂಡು ಒಂದು ಭಾಗದಿಂದ ಬೇರ್ಪಟ್ಟಿವೆ. ಮುಂದಕ್ಕೆ ಚಾಚಿಕೊಂಡಿರುವ ಈ ಭಾಗಗಳು ಗೋಡೆಗಳಿಂದ ಬಂದಿರುವ ಅನೇಕ ಕಲ್ಲುಗಳಿಂದ ಆಧಾರ ಪಡೆದಿವೆ. ಗೋಡೆಗಳಿಂದ ಬಂದಿರುವ ಬಾವಿಯ ತುದಿಯು ಬಾಗಿದಂತೆ ಇದೆ. ಬಾವಿಯಲ್ಲಿ ಈಗ ನೀರಿಲ್ಲ; ಎಂಟು ಅಂತಸ್ತುಗಳು ಕಾಣುತ್ತವೆ. ಒಂಭತ್ತನೇ ಅಂತಸ್ತು ಅವಶೇಷಗಳಿಂದ ತುಂಬಿದೆ.

ದೇಸಾಯಿ ಬಾವಿ: ಈ ಬಾವಿಯು ಲಕ್ಷ್ಮೇಶ್ವರ ಗ್ರಾಮದ ಹತ್ತಿರ ದೇಸಾಯಿಯವರ ಹೊಲದಲ್ಲಿದೆ. ಚೌಕಾಕಾರದಲ್ಲಿರುವ ಈ ಬಾವಿಯನ್ನು ನೈಸರ್ಗಿಕ ಕಲ್ಲಿನಲ್ಲಿ ಕೊರೆಯಲಾಗಿದೆ. ಕಲ್ಲಿನಲ್ಲಿ ಕೊರೆದಿರುವ ಮೂರು ಮೀಟರ್ ಆಳದ ಬಾವಿಯ ಭಾಗ ಕಾಣುತ್ತದೆ. ಈ ಭಾಗದ ಮೇಲೆ ಬಾವಿಯ ಅತ್ಯಂತ ಕೆಳಗಿನ ಎರಡು ಹಂತಗಳ ಮೊದಲನೇ ಅಂತಸ್ತು. ಇದರ ಮೇಲೆ ನಾಲ್ಕು ಹಂತಗಳ ಎರಡನೆಯ ಅಂತಸ್ತು ಕಾಣುತ್ತವೆ. ಈ ಎರಡನೆಯ ಅಂತಸ್ತಿನ ಮೇಲೆ ಮೂರು ಮೀಟರ್ ಅಗಲವಾದ ನಡುನಿಲ್ಲೆಡೆಯಿದೆ. ಈ ನಡುನಿಲ್ಲೆಡೆ ಬಾವಿಯ ಎಲ್ಲ ಬದಿಗಳಿಗಿದ್ದು ಕಮಾನುಳ್ಳ ಮೊಗಸಾಲೆಯನ್ನು ಹೊಂದಿದೆ. ಆದರೆ ಪಶ್ಚಿಮದ ಬದಿಯಲ್ಲಿರುವ ಮೊಗಸಾಲೆ ಮಾತ್ರ ಪರಿಪೂರ್ಣವಾಗಿದೆ. ಉಳಿದ ಬದಿಗಳಲ್ಲಿರುವ ಕಮಾನುಗಳಿಗೆ ಗೋಡೆಯಲ್ಲಿ ಮುಂದಕ್ಕೆ ಚಾಚಿಕೊಂಡಿರುವ ಭಾಗಗಳು ಆಧಾರವಾಗಿವೆ. ಈ ಕಮಾನುಗಳನ್ನು, ಕಲ್ಲನ್ನು ಸ್ವಲ್ಪ ಸ್ವಲ್ಪವಾಗಿ ಮುಂದೆ ಚಾಚಿಕೊಂಡಿರುವಂತೆ ಮಾಡಿ ರಚಿಸಲಾಗಿದೆ. ಇಟ್ಟಿಗೆಯನ್ನು ಉಪಯೋಗಿಸಿಲ್ಲ. ಮಧ್ಯದ ಕಲ್ಲು ಕಮಾನಿನ ತುದಿಯಾಗಿದೆ. ಈ ಹಂತದಲ್ಲಿ ದಕ್ಷಿಣದ ಬದಿಯಲ್ಲಿ ಒಂದರ ಕೆಳಗೆ ಒಂದರಂತೆ ಮೂರು ಸೇತುವೆಗಳಿವೆ. ಕೆಳಗಿನ ಸೇತುವೆಯ ಕೆಳಭಾಗದಿಂದ ಬಾವಿಯ ಮೆಟ್ಟಿಲುಗಳು ಪ್ರಾರಂಭವಾಗಿವೆ. ದಕ್ಷಿಣದ ಬದಿಯಲ್ಲಿ ಮೊಗಸಾಲೆಯ ಮಟ್ಟದಲ್ಲಿ ಮೂರನೆಯ ಸೇತುವೆಗೆ ಹೊಂದಿಕೊಂಡಿರುವಂತೆ ಇನ್ನೊಂದು ಸೇತುವೆಯಿದೆ. ಇದರ ಮೇಲೆ ನಾಲ್ಕು ಕಂಬಗಳುಳ್ಳ ನಾಲ್ಕನೆಯ ಸೇತುವೆಯಿದೆ. ಇದರ ಮೇಲೆ ನಾಲ್ಕು ಕಂಬಗಳು ಮಡಿಕೆಯಂತಿರುವ ತಳಭಾಗ ೪-೮-೪ ಘನಾಕೃತಿ ಮತ್ತು ಕಲಶದ ತುದಿಯನ್ನು ಹೊಂದಿರುವ ದಿಂಡು, ಹೊರಮೈ ದುಂಡಾಗಿರುವ ಅರೆಗಂಬ, ಕೆಳಭಾಗ ವಕ್ರವಾಗಿರುವ ಚೌಕಾಕಾರದ ಚೌಕಟ್ಟು ಬಾಗಿದ ಅಂಚುಳ್ಳ ಗೋಡೆಯ ಭಾಗಗಳನ್ನು ಹೊಂದಿವೆ.

ಗುಮ್ಮಗೋಳದ ಗೋಣಿ ಬಸವೇಶ್ವರನ ಪುಷ್ಕರಣಿ: ಗುಮ್ಮಗೋಳ ಗ್ರಾಮವು ಗದಗದಿಂದ ಆಗ್ನೇಯಕ್ಕೆ ೫೬ ಕಿಮೀ ಅಂತರದಲ್ಲಿದೆ. ಮುಂಡರಗಿ ತಾಲೂಕಿನಲ್ಲಿರುವ ಗುಮ್ಮಗೋಳದ ಗೋಣಿಬಸಪ್ಪನ ಮಠ. ಈ ಮಠವನ್ನು ಗೋಣಿಬಸಪ್ಪ ಎಂಬ ಪವಾಡ ಪುರುಷರು ನಿರ್ಮಿಸಿದ್ದಾರೆಂದು ಸ್ಥಳೀಯರು ತಿಳಿಸುತ್ತಾರೆ. ಆದರೆ ಮೂಲವಾಗಿ ಬಿಷ್ಟಪ್ಪಯ್ಯನೇ ತನ್ನ ಶಿಷ್ಯರಾದ ಗೋಣಿಬಸಪ್ಪನಿಗೆ ಈ ದೇವಾಲಯ ಮತ್ತು ಪುಷ್ಕರಣಿಯನ್ನು ನಿರ್ಮಿಸಿ ಕೊಟ್ಟನೆಂದು ಹೇಳಿಕೆ ಇದೆ.

ಈ ಮಠದ ವಿಸ್ತೀರ್ಣ ಸುಮಾರು ೫೦ ಮೀಟರ್ ಉದ್ದ ೧೫ ಮೀಟರ್ ಅಗಲವಿದೆ. ಇದು ಗರ್ಭಗೃಹ, ತೆರೆದ ಅಂತರಾಳ, ಅರ್ಧಮಂಟಪ, ಕಲ್ಯಾಣಿ (ಪುಷ್ಕರಣಿ), ಸಭಾಮಂಟಪ ಹಾಗೂ ಸುಂದರವಾದ

ಗೋಪುರವನ್ನು ಒಳಗೊಂಡ ಪ್ರವೇಶದ್ವಾರವಿದೆ. ಇದನ್ನು ಸಂಪೂರ್ಣ ಇಟ್ಟಿಗೆ ಗಾರೆಯನ್ನು ಬಳಸಿ ನಿರ್ಮಾಣ ಮಾಡಿದ್ದಾರೆ. ಈ ಮಠದ ಒಳ ಆವರಣದಲ್ಲಿ ಸ್ಥಂಭಗಳು ವೈವಿಧ್ಯತೆಯಿಂದ ಕೂಡಿವೆ. ಈ ಮಠದ ಗರ್ಭಗೃಹದಲ್ಲಿ ಗೋಣಿಬಸವೇಶ್ವರ ಗದ್ದುಗೆ ಮತ್ತು ಅದರ ಮೇಲೆ ಪೀಠವನ್ನು ಹೊಂದಿದ ಶಿವಲಿಂಗವಿದೆ. ಗರ್ಭಗೃಹದ ಎದುರಿಗೆ ತೆರೆದ ಅಂತರಾಳವಿದ್ದು ಮಧ್ಯದಲ್ಲಿ ಪುಷ್ಕರಣಿಯನ್ನು ಒಳಗೊಂಡಿದೆ. ಪುಷ್ಕರಣಿಯ ಮಂಟಪದ ಸುತ್ತಲೂ ೫೪ ಸರಳ ಶಿಲ್ಪಗಳಿದ್ದು ಅವುಗಳಲ್ಲಿ ಬೃಂಗಿ ವೀಣೆ ನುಡಿಸುತ್ತಿರುವ ಶಿಲ್ಪಗಳು, ನಂದಿಯ ಶಿಲ್ಪ, ಮಾರುತಿ ಶಿಲ್ಪ, ನೃತ್ಯ ಮಾಡುತ್ತಿರುವ ಮತ್ತು ಜ್ಞಾನಮುದ್ರೆಯಲ್ಲಿ ಕುಳಿತಿರುವ ಶಿಲ್ಪಗಳು ಕಂಡುಬರುತ್ತವೆ. ಈ ಮಠದ ವಾಸ್ತುಶೈಲಿಯು ಮುಸ್ಲಿಂ ಕಲಾಶೈಲಿಯ ಕಮಾನುಗಳನ್ನು ಹೋಲುತ್ತವೆ. ಶೈಲಿಯ ದೃಷ್ಟಿಯಿಂದ ಈ ಮಠದ ಕಾಲವನ್ನು ಸುಮಾರು ಕ್ರಿ.ಶ. ೧೬ ಮತ್ತು ೧೭ನೇ ಶತಮಾನದಲ್ಲಿ ಆಗಿದೆ ಎಂದು ನಿರೂಪಿಸಬಹುದು.

ಗದಗ ಜಿಲ್ಲೆಯ ಐತಿಹಾಸಿಕ ಬಾವಿಗಳು



ಡಂಬಳದ ಜಪದ ಬಾವಿ



ಗೌರಿದೇವಿ ಬಾವಿ ಲಕ್ಷ್ಮೇಶ್ವರ



ಲಕ್ಕುಂಡಿಯ ಮಾಣಿಕೇಶ್ವರ ಪುಷ್ಕರಣಿ



ಲಕ್ಕುಂಡಿಯ ಮಾಣಿಕೇಶ್ವರ ಪುಷ್ಕರಣಿ



ಸೂಡಿಯ ನಾಗರ ಬಾವಿ



ತ್ರಿಕೋಟೇಶ್ವರ ದೇವಾಲಯ ರುದ್ರತೀರ್ಥ

ನೀಲಗುಂದದ ಬಾವಿ: ಈ ಗ್ರಾಮವು ಗದಗ ಜಿಲ್ಲಾ ಕೇಂದ್ರದಿಂದ ನೈರುತ್ಯಕ್ಕೆ ೨೩ ಕಿ.ಮೀ. ದೂರದಲ್ಲಿದೆ. ಈ ಬಾವಿಯು ಗ್ರಾಮದಿಂದ ಪಶ್ಚಿಮ ದಿಕ್ಕಿನಲ್ಲಿರುವ ವೀರನಾರಾಯಣ ದೇವಾಲಯದ ಬಲಭಾಗದಲ್ಲಿ ಕಂಡು ಬರುತ್ತದೆ. ಇದು ಆಯತಕಾರವಾಗಿದೆ. ಎತ್ತರದ ಕಟ್ಟೆಯ ಮೇಲೆ ನಿರ್ಮಿಸಿ ಗ್ರಾನೈಟ್ ಕಲ್ಲನ್ನು ಬಳಸಿದ್ದಾರೆ. ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ನಿರ್ಮಾಣ ಗೊಂಡು ನಂತರ ಬ್ರಿಟಿಷರ ಕಾಲದಲ್ಲಿ ಜೀರ್ಣೋದ್ಧಾರ ಗೊಂಡಿರಬೇಕು. ಈ ಬಾವಿಯ ನೀರನ್ನು ಮೇಲಕ್ಕೆ ಎತ್ತಲು ಇದಕ್ಕೆ ಗಡೆಗಳನ್ನು ಅಳವಡಿಸಿ ದ್ದಾರೆ. ಇದು ಸುಮಾರು ೩೫ ಅಡಿ ಆಳ ಹೊಂದಿದ್ದು, ಇವತ್ತಿಗೂ ಕೂಡ ಉತ್ತಮ ರೀತಿಯಲ್ಲಿ ಈ ಬಾವಿಯನ್ನು ಗ್ರಾಮಸ್ತರು ಕಾಪಾಡಿಕೊಂಡು ಬಂದಿದ್ದಾರೆ.

ಡಂಬಳದ ಜಪದ ಬಾವಿ: ಈ ಬಾವಿಯು ಗ್ರಾಮದಿಂದ ವಾಯವ್ಯಕ್ಕೆ ಪೂರ್ವಾಭಿಮುಖವಾಗಿದ್ದು, ೧೨-೧೩ನೇ ಶತಮಾನಕ್ಕೆ ಸಂಬಂಧಿಸಿದ್ದಾಗಿದೆ. ಬಾವಿಯ ಸುತ್ತಲಿನ ಪರಿಸರವು ಪ್ರಾಚೀನ ಡಂಬಳ ಪಟ್ಟಣದ ವಸತಿ ಪ್ರದೇಶವಾಗಿತ್ತು. ಚೌಕಾಕಾರದ ಈ ಬಾವಿಯನ್ನು ಕಪ್ಪು ಕಲ್ಲಿನಲ್ಲಿ ನಿರ್ಮಿಸಲಾಗಿದೆ. ಇದರ ಆಳ ಸುಮಾರು ಹದಿನೈದರಿಂದ ಇಪ್ಪತ್ತು ಅಡಿಗಳು. ಒಳಗೋಡೆಯನ್ನು ಕಲ್ಲಿನಿಂದ ಭದ್ರವಾಗಿ ಕಟ್ಟಿದ್ದು ಮೇಲ್ಭಾಗದಲ್ಲಿ ಸುತ್ತಲೂ ಚಿಕ್ಕಮಂಟಪ (ಗೂಡು)ಗಳಿವೆ. ಇಂಥ ಗೂಡುಗಳನ್ನು ಬಾವಿಯ ಪ್ರವೇಶದಲ್ಲಿ ಕೂಡ ನಿರ್ಮಿಸಲಾಗಿದೆ. ಈ ಮಂಟಪಗಳ, ಸೌಂದರ್ಯ ಹೆಚ್ಚಿಸಲು ಅವುಗಳಿಗೆ ಶಿಖರ ಭಾಗವನ್ನು ಕೆತ್ತಿದ್ದಾರೆ. ಕದಂಬರ-ನಾಗರ ಶೈಲಿಯ ಶಿಖರವನ್ನು ಈ ಮಂಟಪಗಳು ಹೊಂದಿವೆ. ಬಾವಿಯ ನಿರ್ಮಾಣದ ಬಗೆಗೆ ಯಾವ ಮಾಹಿತಿಗಳು ಕಂಡುಬಂದಿಲ್ಲ. ಆದರೂ ನಿರ್ಮಾಣದ ಶೈಲಿ ಹಾಗೂ ಅಲಂಕಾರ ಗಮನಿಸಿದರೆ ಹನ್ನೊಂದರಿಂದ ಹನ್ನೆರಡನೆಯ ಶತಮಾನದ ಕಾಲಾವಧಿಯಲ್ಲಿ ಇದನ್ನು ಕಟ್ಟಿರಬಹುದು ಎಂದು ತೋರುತ್ತದೆ.

ತ್ರಿಕೋಟೇಶ್ವರ ದೇವಾಲಯದ ಬಾವಿ: ಗದಗ-ಬೆಟಗೇರಿಯಲ್ಲಿ ಒಟ್ಟು ೧೨ ಪ್ರಾಚೀನ ದೇವಾಲಯಗಳಲ್ಲಿ ಶ್ರೀ ತ್ರಿಕೋಟೇಶ್ವರ ದೇವಾಲಯವು ಅತ್ಯಂತ ಪ್ರಾಚೀನ ವಾದುದು. ಈ ದೇವಾಲಯದ ಪಶ್ಚಿಮಕ್ಕೆ ಹಾಗೂ ಉತ್ತರಕ್ಕೆ ದ್ವಾರಬಾಗಿಲುಗಳನ್ನು ಹೊಂದಿದೆ. ಈ ದೇವಾಲಯದ ಮುಂದೆ ಭವ್ಯವಾದ ಬಾವಿ ಇದ್ದು ಇದನ್ನು ನಾಲ್ಕು ಹಂತಗಳಲ್ಲಿ ನಿರ್ಮಿಸಿದ್ದಾರೆ. ಇದಕ್ಕೆ ಪಶ್ಚಿಮಾಭಿಮುಖವಾಗಿ ಪ್ರವೇಶ ದ್ವಾರವಿದ್ದು ಇದು ಕಲ್ಲಿನ ಕಟ್ಟಡವನ್ನು ಹೊಂದಿದೆ. ಈ ನೀರನ್ನು ಪೂಜಾಕಾರ್ಯಗಳಿಗೆ ಬಳಸಲಾಗುತ್ತದೆ. ದಕ್ಷಿಣಾಭಿಮುಖವಾಗಿ ಕಪಿಲೆಯನ್ನು ಒಳಗೊಂಡಿದ್ದು ಇದರ ಮೂಲಕ ನೀರನ್ನು ಎತ್ತುತ್ತಿದ್ದರು. ಇದು ಪ್ರವೇಶ ದ್ವಾರದಲ್ಲಿ ಇಕ್ಕಟ್ಟಾಗಿದ್ದು ಮುಂದೆ ಸಾಗಿದಂತೆ ಚೌಕಾಕಾರವಾಗಿ ನಿರ್ಮಿಸಿದ್ದಾರೆ. ಇದರ ಆಳ ೭೦ ಮೀ. ಉದ್ದ-೨೫ ಮೀ. ಅಗಲ-೧೦ ಮೀ. ಇದೆ.

ಆಕರ ಗ್ರಂಥಗಳು

೧. South Indian Inscriptions, Vol-XI, XV, XVIII, XX ಸಂಪುಟಗಳು.

೨. ಕಲಬುರ್ಗಿ ಎಂ ಎಂ. ೧೯೭೫, ಧಾರವಾಡ ಜಿಲ್ಲಾ ಶಾಸನಸೂಚಿ.

೩. ಗೋಪಾಲ ಆರ್, ೨೦೦೬, ಗದಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ.

೪. ಎಂ.ಎಸ್. ನರೇಗಲ್ಲ, ೨೦೦೮, ಉತ್ತರ ಗದಗ ಜಿಲ್ಲೆಯ ಶಾಸನಗಳು ಒಂದು ಅಧ್ಯಯನ.

೫. ಪಾಟೀಲ್ ವಿನೋದ, ೨೦೦೬, ಕರ್ನಾಟಕದ ಪುರಾತನ ಬಾವಿಗಳು.

೮೬

ಬಸವಾಪಟ್ಟಣ ಗ್ರಾಮದ ಇತಿಹಾಸ ಮತ್ತು ಸಂಸ್ಕೃತಿ ಒಂದು ಅವಲೋಕನ

ಡಾ. ಬಿ.ವಿ. ಸುಧಾಮಣಿ*

ಕಾವೇರಿ ನದೀ ತೀರದಲ್ಲಿರುವ ಬಸವಾಪಟ್ಟಣವು "ವೇದಗ್ರಾಮ" ಎಂಬ ಖ್ಯಾತಿ ಗಳಿಸಿದೆ.[೧] ಇಂದು ಬಸವಾಪಟ್ಟಣ ಅಭಿವೃದ್ಧಿ ಹೊಂದಿರುವ ದೊಡ್ಡ ಪಟ್ಟಣವೆನಿಸಿದೆ. ಶತಶತಮಾನಗಳಷ್ಟು ಹಿಂದೆಯೇ ಅಸ್ತಿತ್ವದಲ್ಲಿದ್ದ ಈ ಗ್ರಾಮ ಹಲವಾರು ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಿತ್ತು. ಪಾಳೇಗಾರರ ಆಳ್ವಿಕೆಯನ್ನು ನೆನಪಿಸುವ ದೇವಾಲಯಗಳು ಈಗಲೂ ಇವೆ. ಅವರು ಕಟ್ಟಿಸಿದ ಕೋಟೆಯ ಅವಶೇಷಗಳು ೧೯೮೦ರ ದಶಕದವರೆಗೂ ಕಾಣಸಿಗುತ್ತಿತ್ತು. ಈ ಗ್ರಾಮದ ಇತಿಹಾಸ ರಚನೆಗೆ ಲಭ್ಯವಿರುವ ಶಾಸನಗಳು ಹಾಗೂ ಸ್ಮಾರಕಗಳ ಅಧ್ಯಯನದ ಜೊತೆಗೆ ಕ್ಷೇತ್ರಕಾರ್ಯ ಹಾಗೂ ಸಂದರ್ಶನದ ಮೂಲಕ ಮಾಹಿತಿಗಳನ್ನು ಸಂಗ್ರಹಿಸಿ ಲೇಖನ ರಚನೆಗೆ ಪ್ರಯತ್ನಿಸಲಾಗಿದೆ.

ಬಸವಾಪಟ್ಟಣ ಗ್ರಾಮದ ಪ್ರಾಚೀನತೆಯನ್ನರಿಯಲು ದೊರೆತಿರುವ ಕೆಲವೇ ಶಾಸನಗಳು ಹಾಗೂ ಮೌಖಿಕ ಇತಿಹಾಸದ ಅಧಾರದಿಂದ ಆ ನಿಟ್ಟಿನಲ್ಲಿ ಕರ್ತವ್ಯ ನಿರ್ವಹಿಸಲಾಗಿದೆ. ಕ್ರಿಸ್ತಶಕ ಆರಂಭದ ವೇಳೆಗಾಗಲೇ ಇಲ್ಲಿ ಜನವಸತಿ ಇದ್ದುದಾಗಿ ಮೌಖಿಕ ಇತಿಹಾಸ ತಿಳಿಸುತ್ತದೆ. ಒಂಭತ್ತನೇ ಶತಮಾನಕ್ಕೆ ಸೇರಿದ ಶಾಸನವೇ ಅತ್ಯಂತ ಪ್ರಾಚೀನ ಶಾಸನವೆನಿಸಿದೆ.[೨] ಈ ಗ್ರಾಮದಲ್ಲಿರುವ ಒಟ್ಟು ೧೩ ಶಾಸನಗಳಲ್ಲಿ ಮೂರು ಶಾಸನಗಳು ಮಾತ್ರ ಗ್ರಾಮದ ಹೆಸರನ್ನು ಉಲ್ಲೇಖಿಸಿವೆ. ಅವುಗಳಲ್ಲಿ ಎರಡು ಶಾಸನಗಳು ಹದಿನಾರನೇ ಶತಮಾನಕ್ಕೆ ಸೇರಿದ್ದು ಮತ್ತೊಂದರ ಕಾಲ ನಿಗದಿಸಲು ಸಾಧ್ಯವಾಗಿಲ್ಲ.[೩] ಜೊತೆಗೆ ಅರಕಲುಗೂಡಿನ ಒಂದು ಶಾಸನವು ಈ ಗ್ರಾಮದ ಉಲ್ಲೇಖ ಒಳಗೊಂಡಿದೆ.[೪] ಒಂಭತ್ತನೇ ಶತಮಾನದ ವೇಳೆಗಾಗಲೇ ಜನವಸತಿ ಹೊಂದಿತ್ತೆಂದು ಊಹಿಸಲು ಅವಕಾಶವಿದೆ.[೫]

ಇನ್ನು ಈ ಗ್ರಾಮದ ಹೆಸರನ್ನು ಕುರಿತಾಗಿ ಗೊಂದಲವಿದೆ. 'ಬಸವಾಪಟ್ಟಣ' ಎಂಬ ಹೆಸರು ೧೪-೧೫ನೇ ಶತಮಾನದಲ್ಲಿ ಈ ಗ್ರಾಮವನ್ನಾಳುತ್ತಿದ್ದ ಪಾಳೇಗಾರ ಬಸಪ್ಪ/ಬಸವಪ್ಪನಾಯಕನಿಂದ ಬಂದಿದ್ದಾಗಿ ಹೇಳಲಾಗಿದೆ. ಹಾಗಾದರೆ ಈ ಗ್ರಾಮಕ್ಕೆ ಈಗಿನ ಹೆಸರು ಬರುವುದಕ್ಕೂ ಮುನ್ನ ಬೇರೆ ಹೆಸರಿದ್ದಿರಬೇಕು. ಆದರೆ ಆ ಕುರಿತು ಮೌಖಿಕ ಅಥವಾ ಲಿಖಿತ ದಾಖಲೆಗಳು ಈವರೆಗೆ ಅಲಭ್ಯ. ಆದರೆ ಈಗಿರುವ ಬಸವಾಪಟ್ಟಣ ಎಂಬ ಹೆಸರು ಪಾಳೇಗಾರನಿಂದ ಬಂದಿರಬಹುದೆಂದು ಊಹಿಸಲು ಅವಕಾಶವಿರುವ ಸಂದರ್ಭಗಳನ್ನು ಗಮನಿಸಬಹುದು. ಮೌಖಿಕ ಇತಿಹಾಸ ಹೇಳುವಂತೆ ಬಸವಾಪಟ್ಟಣ ಸ್ಥಳವನ್ನು ೧೪-೧೫ನೇ ಶತಮಾನದಲ್ಲಿ ಪಾಳೇಗಾರ ಸಹೋದರರಾದ ಬಸಪ್ಪನಾಯಕ, ರುದ್ರಪ್ಪನಾಯಕ ಹಾಗೂ ಮಲ್ಲಪ್ಪನಾಯಕರು ಆಳುತ್ತಿದ್ದರು. ಆ ವೇಳೆಗಾಗಲೇ ಅಸ್ತಿತ್ವದಲ್ಲಿದ್ದ ಅಕ್ಕಪಕ್ಕದಲ್ಲಿರುವ ಮೂರು ಗ್ರಾಮಗಳಿಗೆ ಈ ಸಹೋದರರ ಹೆಸರನ್ನು ಪುನರ್ ನಾಮಕರಣ ಮಾಡಲಾಯಿತು. ಅವೇ ಬಸವಾಪಟ್ಟಣ, ರುದ್ರಪಟ್ಟಣ ಹಾಗೂ ಮಲ್ಲಪಟ್ಟಣ. ಇಂದಿಗೂ ಈ ಮೂರು ಗ್ರಾಮಗಳನ್ನು ಅದೇ ಹೆಸರುಗಳಿಂದ ಕರೆಯಲಾಗುತ್ತಿದೆ. ಮೇಲಿನ ಉಲ್ಲೇಖಕ್ಕೆ ಸ್ವಲ್ಪ ಪುಷ್ಠಿ ನೀಡುವ ಮಾಹಿತಿಯೊಂದನ್ನು ಶಾಸನ ಒಂದರಲ್ಲಿ ಗುರ್ತಿಸುವ ಪ್ರಯತ್ನ ಮಾಡಲಾಗಿದೆ.[೬] ಆ ಪ್ರಕಾರ ರುದ್ರಪಟ್ಟಣ ಗ್ರಾಮಕ್ಕೆ ಮೊದಲು 'ಹಯಗ್ರೀವಪುರ' ಎಂಬ ಹೆಸರಿದ್ದುದು ಆ ಗ್ರಾಮದಲ್ಲಿ ಲಭ್ಯವಾಗಿರುವ ೧೪-೧೫ನೇ ಶತಮಾನದ ಶಾಸನದಿಂದ ತಿಳಿಯುತ್ತದೆ. ಪಾಳೇಗಾರರ ಕಾಲದಲ್ಲಿ ಆ ಗ್ರಾಮಕ್ಕೆ ಈಗಿರುವ 'ರುದ್ರಪಟ್ಟಣ' ಎಂಬುದಾಗಿ ಪುನರ್ ನಾಮಕರಣ ಮಾಡಲಾಯಿತು. ಅದೇ ರೀತಿ ಬಸವಾಪಟ್ಟಣಕ್ಕೂ ಹಿಂದೆ ಬೇರೆ ಹೆಸರಿದ್ದು ಪಾಳೇಗಾರರ ಕಾಲದಲ್ಲಿ ಈಗಿರುವ ಹೆಸರು ಬಂದಿರಬೇಕೆಂದು ಊಹಿಸಲು ಅವಕಾಶವಿದೆ.

ಇಲ್ಲಿ ದೊರಕಿರುವ ಶಾಸನಗಳಲ್ಲಿ ಹೊಯ್ಸಳರು ಹಾಗೂ ಮೈಸೂರಿನ ಒಡೆಯರ ಉಲ್ಲೇಖಗಳಿವೆ. ಒಂಭತ್ತನೇ ಶತಮಾನಕ್ಕೆ ಸೇರಿರುವ ಶಾಸನವು ನೇರವಾಗಿ ತಲಕಾಡಿನ ಗಂಗರಸರ ಉಲ್ಲೇಖ ಮಾಡದಿದ್ದರೂ (ಶಾಸನ ತ್ರುಟಿತವಾಗಿದೆ) ಸುತ್ತಮುತ್ತಲಿನ ಸ್ಥಳಗಳಲ್ಲಿ ದೊರೆತಿರುವ ಸಮಕಾಲೀನ ಶಾಸನಗಳಲ್ಲಿ ಗಂಗರಸರ ಉಲ್ಲೇಖ ಮಾಡಿರುವುದನ್ನು ಪೂರಕವಾಗಿ ಪರಿಗಣಿಸಿ ಈ ಗ್ರಾಮವೂ

* ಮುಖ್ಯಸ್ಥರು ಹಾಗೂ ಸಹ ಪ್ರಾಧ್ಯಾಪಕರು, # ೨೯೯, ೧೨ನೇ ಅಡ್ಡರಸ್ತೆ, ವಿಜಯನಗರ ರೈಲ್ವೆ ಬಡಾವಣೆ, ಮೈಸೂರು-೫೭೦೦೧೬.

ಅವರ ಆಳ್ವಿಕೆಯ ಭಾಗವಾಗಿತ್ತೆನ್ನಲು ಅಡ್ಡಿಯಿಲ್ಲ. ಪಾಳೇಗಾರರ ಆಳ್ವಿಕೆಗೆ ಸಂಬಂಧಿಸಿದ ಒಂದೇ ಒಂದು ಲಿಖಿತ ದಾಖಲೆಯೂ ಲಭ್ಯವಿಲ್ಲದಿದ್ದರೂ ಅವರು ಜನಮಾನಸದಲ್ಲಿ ನೆಲೆನಿಂತಿದ್ದಾರೆ. ಮೌಖಿಲ ಇತಿಹಾಸ ಅವರ ಆಳ್ವಿಕೆ ಕುರಿತು ಸಾಕಷ್ಟು ಮಾಹಿತಿ ನೀಡುತ್ತದೆ.[೭]

ಇಲ್ಲಿ ದೊರಕಿರುವ ವೀರಗಲ್ಲೊಂದು ಎರಡು ಶಾಸನಗಳನ್ನು ಒಳಗೊಂಡಿದೆ. ಅವೆರಡೂ ಶಾಸನಗಳಲ್ಲಿ ಹೊಯ್ಸಳ ಅರಸು ಮೂರನೇ ನರಸಿಂಹದೇವನ ಉಲ್ಲೇಖವಿದೆ. ಮೂರನೇ ನರಸಿಂಹದೇವ ಹಾಗೂ ಆತನ ಸಹೋದರ ರಾಮನಾಥ ಇವರಿಬ್ಬರ ನಡುವೆ ೧೨೮೦ರಲ್ಲಿ ನಡೆದ ಕುದುರೆ ಕಾಳಗದಲ್ಲಿ ಬಸವಾಪಟ್ಟಣ ಸ್ಥಳದ ಬೆಟ್ಟಹಳ್ಳಿಯ ಮಾಯ್ಯನ ಮಗ ಲಾಳಮಾಚೆಯ ನಾಯಕನು ನರಸಿಂಹದೇವನ ಪರವಾಗಿ ಯುದ್ಧದಲ್ಲಿ ಭಾಗವಹಿಸಿ ವೀರಮರಣವಪ್ಪಿದ.[೮] ಇದೇ ಅರಸ ೧೨೮೬ರಲ್ಲಿ ನಿಡುಗಲ್ಲು ಕೋಟೆಯನ್ನು ವಶಪಡಿಸಿಕೊಳ್ಳಲು ಹರಿಗಿಯಲ್ಲಿ ನಡೆಸಿದ ಕಾಳಗದಲ್ಲಿ ಅದೇ ಬೆಟ್ಟಹಳ್ಳಿಯ ಮಾಯ್ಯನ ಮತ್ತೊಬ್ಬ ಮಗ ಎಕ್ಕಟಿಗ ರಾಮಯ್ಯನಾಯಕ ಯುದ್ಧ ಭೂಮಿಯಲ್ಲಿ ಮರಣವಪ್ಪಿದ.[೯] ಈ ಸಹೋದರರ ನೆನಪಿನಲ್ಲಿ ಮಾಯ್ಯನ ಮತ್ತೊಬ್ಬ ಮಗ ಹೆತ್ತಯ್ಯ ವೀರಗಲ್ಲು ನೆಡೆಸಿ ಶಾಸನ ಹಾಕಿಸಿದ್ದಾಗಿ ಶಾಸನ ಉಲ್ಲೇಖಿಸಿದೆ. ಈ ವೀರಗಲ್ಲು ಇಂದಿಗೂ ಗ್ರಾಮದ ಪ್ರಣತಾರ್ತಿಹರೇಶ್ವರ ಹಾಗೂ ಶಾಂತೇಶ್ವರ ದೇಗುಲಗಳ ಮಧ್ಯದಲ್ಲಿದೆ.

ಈ ಗ್ರಾಮ ಮುಂದೆ ವಿಜಯನಗರದ ಅರಸರ ಹಾಗೂ ಮೈಸೂರಿನ ಒಡೆಯರ ಆಳ್ವಿಕೆಯ ಅವಧಿಯಲ್ಲಿ ಪಾಳೇಗಾರರ ಆಳ್ವಿಕೆಗೆ ಒಳಪಟ್ಟಿತ್ತೆಂದು ತೋರುತ್ತದೆ. ಮೇಲೆ ಉಲ್ಲೇಖಿಸಿರುವ ಪಾಳೇಗಾರರ ಸಹೋದರರ ಆಳ್ವಿಕೆಯನ್ನು ಈ ಭಾಗದ ಜನ ಇಂದಿಗೂ ಸ್ಮರಿಸುತ್ತಿರುವುದು, ಅವರ ಕಾಲದ್ದೆಂದು ಹೇಳುತ್ತಿರುವ ದೇವಾಲಯಗಳು, ಕೋಟೆಯ ಅವಶೇಷಗಳು ಅವನದೆಂದೇ ಹೇಳಲಾಗುತ್ತಿರುವ ಗ್ರಾಮದ ಹೆಸರು ಇವೆಲ್ಲಾ ಪಾಳೇಗಾರರ ಆಳ್ವಿಕೆ ಇತ್ತೆಂಬ ನಂಬಿಕೆಯನ್ನು ಗಟ್ಟಿಗೊಳಿಸುತ್ತದೆ.

ಮೈಸೂರಿನ ಮಹಾರಾಜರ ಕಾಲಕ್ಕೆ ಸೇರಿದ ೧೬೩೫ರ ತಾಮ್ರ ಶಾಸನ ಒಂದು ಲಭ್ಯವಾಗಿದೆ. ಅದರಲ್ಲಿ ಈ ಹಿಂದೆ ಯಜ್ಞನಾರಾಯಣ ಎಂಬಾತನಿಗೆ ವೆಂಕಟಮಹಾರಾಜ, ಬಹುಶಹ ವಿಜಯನಗರದ ಅರಸು, ನೀಡಿದ್ದ ಮಾಕಬಳ್ಳಿ ಗ್ರಾಮಕ್ಕೆ ಮೈಸೂರಿನ ಚಾಮರಾಜ ಅರಸನು ಚಾಮಸಮುದ್ರ ಎಂದು ಪುನರ್ ನಾಮಕರಣ ಮಾಡಿ ಯಜ್ಞನಾರಾಯಣನ ಪುತ್ರ ರಾಮಚಂದ್ರನಿಗೆ ದಾನ ಮಾಡಿದ ವಿವರ ಇದೆ.[೧೦] ಇಲ್ಲಿರುವ ಮತ್ತೊಂದು ಅಸ್ಪಷ್ಟ ಶಾಸನ ೬೦ ವೃತ್ತಿಗಳನ್ನು ದಾನ ಮಾಡಿದ್ದನ್ನು ದಾಖಲಿಸಿದೆ.[೧೧]

ಈ ಗ್ರಾಮದ ಸಮಾಜ ಹಲವಾರು ವರ್ಗಗಳು ಮತ್ತು ವೃತ್ತಿಗಳ ಜನರನ್ನು ಒಳಗೊಂಡಿತ್ತು. ಜೈನ, ವೀರಶೈವ, ಬ್ರಾಹ್ಮಣ ಇತ್ಯಾದಿ ವಿವಿಧ ಮತಗಳ – ವರ್ಗಗಳ ಜನರ ಜೊತೆಗೆ ಆಯಗಾರ ವ್ಯವಸ್ಥೆಯ ವಿವಿಧ ವೃತ್ತಿಗಳನ್ನು ಅವಲಂಬಿಸಿದ್ದ ವರ್ಗಗಳವರೂ ಜೀವಿಸುತ್ತಿದ್ದರು. ಹಿಂದೆ ಗ್ರಾಮದಲ್ಲಿ ಜೈನರು ಇದ್ದಂತೆ ತೋರುತ್ತದೆ. ಜೈನರು ವಾಸಿಸುತ್ತಿದ್ದ ಪ್ರತ್ಯೇಕ ಬೀದಿ ಹಾಗೂ ಬಸದಿಯೊಂದು ಇತ್ತು. ಮುಂದೆ ವೀರಶೈವ ಚಳುವಳಿಯ ಪ್ರಭಾವದಿಂದ ಗ್ರಾಮದ ಅನೇಕರು ವೀರಶೈವ ದೀಕ್ಷೆ ಪಡೆದರು. ಆಗಲೂ ಜೈನ ಹಾಗೂ ವೀರಶೈವ ಮತಗಳು ಸಹಬಾಳ್ವೆಯಿಂದಿದ್ದುದಾಗಿ ತಿಳಿದುಬರುತ್ತದೆ.

ನೇಯ್ಗೆ ವೃತ್ತಿಯನ್ನವಲಂಬಿಸಿದ್ದ ಮಗ್ಗದವರ ಸಂಖ್ಯೆ ಎರಡು ಸಾವಿರ ಮೀರಿತ್ತೆಂಬುದು ಕ್ಷೇತ್ರಕಾರ್ಯದವೇಳೆ ತಿಳಿದುಬಂದಿದೆ. ಅವರ ಕುಟುಂಬಗಳನ್ನು ಎಂಟು ಭಾಗಗಳಾಗಿ ವಿಂಗಡಿಸಿ ಅಷ್ಟಲಕ್ಷ್ಮಿಯರ ಹೆಸರಿಡಲಾಗಿತ್ತು. ಹಾಗೇ ಎಂಟು ಗುಂಪಿಗೂ ಎಂಟುಂದಿ ನಾಯಕರಿದ್ದರು. ಆ ಸಮುದಾಯದ ಸಮಸ್ಯೆಗಳನ್ನು ಹಾಗೂ ವೃತ್ತಿಗೆ ಸಂಬಧಿಸಿದ ವ್ಯವಹಾರಗಳನ್ನು ನಾಯಕರ ಸಭೆಯಲ್ಲಿ ಚರ್ಚಿಸಿ ತೀರ್ಮಾನಗಳನ್ನು ಕೈಗೊಳ್ಳಲಾಗುತ್ತಿತ್ತು. ನೇಯ್ಗೆವೃತ್ತಿಯ ಹಾಗೂ ಸಮುದಾಯದ ನೀತಿನಿಯಮಗಳು ಮತ್ತು ಕಟ್ಟುಪಾಡುಗಳು ಈ ಯಜಮಾನರುಗಳ ಸಭೆಯಲ್ಲಿ ನಿರ್ಧಾರವಾಗುತ್ತಿತ್ತು. ಈ ವರ್ಗದವರೇ ವಾಸಿಸುತ್ತಿದ್ದ ಆರು ಪ್ರತ್ಯೇಕ ಬೀದಿಗಳಿದ್ದವು. ಇಂದು ಈ ಗ್ರಾಮದಲ್ಲಿ ನೇಯ್ಗೆ ಸಂಪೂರ್ಣ ಕಣ್ಮರೆಯಾಗಿದ್ದರೂ ಅವರು ವಾಸಿಸುತ್ತಿದ್ದ ಬೀದಿಗಳಲ್ಲಿ ಬೇರೆ ಬೇರೆ ವರ್ಗದ ಜನ ವಾಸಿಸುತ್ತಿದ್ದರೂ ಇಂದಿಗೂ ಆ ಬೀದಿಗಳನ್ನು ಮಗ್ಗದ ಬೀದಿಗಳೆಂದೇ ಕರೆಯಲಾಗುತ್ತಿದೆ.

ಬಸವಾಪಟ್ಟಣದಲ್ಲಿ ೧೪–೧೫ನೇ ಶತಮಾನದವರೆಗೆ ಬ್ರಾಹ್ಮಣ ಕುಟುಂಬಗಳು ಕೇವಲ ಬೆರಳೆಣಿಕೆಯಷ್ಟಿದ್ದವೆನ್ನಲಾಗಿದೆ. ಅವರು ಪೌರೋಹಿತ್ಯ ಇತ್ಯಾದಿ ವೈದಿಕ ವೃತ್ತಿಗಳಷ್ಟೇ ಮೀಸಲಾಗಿದ್ದರೆನ್ನಲಾಗಿದೆ. ಮೌಖಿಲ ಇತಿಹಾಸ ಹೇಳುವ ಪ್ರಕಾರ ಪಾಳೇಗಾರರ ಕಾಲದಲ್ಲಿ ಪೂಮಗಾಮೆಯಿಂದ ವಲಸೆ ಬಂದ ಸಂಕೇತಿ ಬ್ರಾಹ್ಮಣ ಕುಟುಂಬವೇ ಈ ಗ್ರಾಮಕ್ಕೆ ಬಂದ ಮೊದಲ ಸಂಕೇತಿ ಬ್ರಾಹ್ಮಣ ಕುಟುಂಬ. ಈ ಗ್ರಾಮದ ಕಾವೇರಿ ನದಿ ಆಚೆ ಇರುವ ರುದ್ರ ಪಟ್ಟಣದ ಕೃಷ್ಣದೀಕ್ಷಿತರ ಪೂರ್ವಜರು ನಡೆಸುತ್ತಿದ್ದ ಯಜ್ಞದಲ್ಲಿ ಪಾಲ್ಗೊಳ್ಳಲು ಪೂಮುಗಾಮೆಯ ನಿತ್ಯನಿತುಂದಿಲ ಗೋತ್ರದ ಶ್ರೌತ್ರಿ ಸಹೋದರರು ತಮ್ಮ ವಿದ್ವತ್ತು ಹಾಗೂ ಮಂತ್ರಸಿದ್ಧಿಗಳಿಂದ ಪಾಳೇಗಾರನ ಮನಗೆದ್ದರು.[೧೩] ಪಾಳೇಗಾರನ ಈ ಬ್ರಾಹ್ಮಣ

ಸಹೋದರರಿಗೆ ಪಾಲುಬಿದ್ದಿದ್ದ ಕೃಷಿಭೂಮಿಯನ್ನು ನೀಡಿ ಇದೇ ಗ್ರಾಮದಲ್ಲಿ ಉಳಿಸಿಕೊಂಡ. ವೈದಿಕ ವೃತ್ತಿಯ ಜೊತೆಗೆ ವ್ಯವಸಾಯವೃತ್ತಿಯೂ ಅವರಿಗೆ ಕರಗತವಾಗಿದ್ದರಿಂದ ಜೀವನ ನಿರ್ವಹಣೆಗೆ ಸಹಕಾರಿ ಯಾದ್ದರಿಂದ ಶ್ರೌತ್ರಿಗಳ ಕುಟುಂಬ ಬಸವಾಪಟ್ಟಣದಲ್ಲೇ ನೆಲೆಕಂಡುಕೊಂಡಿತು.

ಸಂಕೇತಿ ಕುಟುಂಬಗಳ ವಲಸೆ ಹಾಗೂ ಮರುವಲಸೆಗಳ ಕುರಿತು ಹೆಚ್ಚಿನ ಅಧ್ಯಯನ ಮಾಡಿರುವ ಡಾ. ಪ್ರಣತಾರ್ತಿ ಹರನ್‌ರವರು ಜೀವನೋಪಾಯ ಅರಸುತ್ತಾ ವಲಸೆ ಹಾಗೂ ಮರುವಲಸೆ ಹೊಂದುವುದು ಈ ಬ್ರಾಹ್ಮಣ ಸಮುದಾಯದವರಿಗೆ ರಕ್ತಗತವಾಗಿತ್ತು ಎಂಬ ಅಭಿಪ್ರಾಯವನ್ನು ಆಧಾರಸಹಿತ ನೀಡಿದ್ದಾರೆ.[೧೪] ರಾಜಾಶ್ರಯ ದೊರೆತಿರುವುದು ಇವರ ವಲಸೆಗೆ ಸಹಕಾರಿಯಾಗಿರುವ ಅಂಶ. ಹೊಯ್ಸಳ, ವಿಜಯನಗರ, ಮೈಸೂರು ಅರಸರುಗಳು, ಪಾಳೇಗಾರರು, ತುಂಡರಸರು, ಮಾಂಡಲಿಕರು ಮುಂತಾದವರು ಇವರಿಗೆ ಆಶ್ರಯ ನೀಡಿರುವುದು ಸಮಕಾಲೀನ ಶಾಸನಗಳಲ್ಲಿ ಮಾಹಿತಿ ಲಭ್ಯ. ಕ್ರಮೇಣ ಈ ಕುಂಟುಂಬದವರು ಹಿರಿಯರ ಶ್ರಾದ್ಧದ ದಿನ ನಿಮಂತ್ರಣಕ್ಕೆ ಹೇಳಲು ಅನ್ಯಗೋತ್ರದವರ ಅವಶ್ಯಕತೆ ಪೂರೈಸಲು, ಯಜ್ಞಯಾಗಗಳನ್ನು ಮಾಡಿಸಲು ಹಾಗೂ ಅಶೌಚಾದಿ ಸಂದರ್ಭಗಳಲ್ಲಿ ಸಹಕಾರ ಪಡೆಯಲು ಅನುಕೂಲವಾಗುವಂತೆ ಬೇರೆಡೆ ಇದ್ದ ಅನ್ಯಗೋತ್ರದ ಸಂಕೇತಿ ಕುಟುಂಬಗಳನ್ನು ಇದೇ ಗ್ರಾಮಕ್ಕೆ ಕರೆಸಿಕೊಂಡು ಪಾಳೇಗಾರ ತಮಗೆ ನೀಡಿದ್ದ ಜಮೀನಿನಲ್ಲಿ ಅವರಿಗೂ ಸ್ವಲ್ಪ ಭೂಮಿನೀಡಿದರು.[೧೫] ಈ ಗ್ರಾಮಕ್ಕೆ ಜೀವನೋಪಾಯವನ್ನರಸಿ ಬೆಟ್ಟದಪುರ, ಒಡ್ಡರಹಳ್ಳಿ, ಹನ್ಯಾಳು, ಚಾಹಳ್ಳಿ, ಹಾನಗಲ್ಲು, ಬರಗೂರು, ಅಗ್ರಹಾರ, ವಿಠಲಾಪುರ, ಮುಂತಾದ ಹಲವಾರು ಹಳ್ಳಿಗಳಿಂದ ಬಂದು ನೆಲೆಸಿದ್ದಾರೆ. ಇವರಲ್ಲಿ ಕೆಲವರು ಕೇವಲ ತೋಟದ ಕೃಷಿಯನ್ನೂ, ಕೆಲವರು ಬರೀ ವೈದಿಕ ವೃತ್ತಿಯನ್ನೂ ಇನ್ನೂ ಕೆಲವರು ಎರಡೂ ವೃತ್ತಿಗಳನ್ನೂ ವಂಶ ಪಾರಂಪರ್ಯವಾಗಿ ಮಾಡಿಕೊಂಡು ಬರುತ್ತಿದ್ದಾರೆ.

ಕಾವೇರಿ ನದೀ ನೀರಿನ ಜೊತೆಗೆ ಇಲ್ಲಿನ ಕೆರೆಗಳು ಕೃಷಿ ಚಟುವಟಿಕೆಗಳಿಗೆ ಸಹಕಾರಿಯಾಗಿವೆ. ಇಲ್ಲಿರುವ ಕೆರೆಗಳಲ್ಲಿ ಊರ ಮುಂದಿನ ಕೆರೆ ಸು. ೬ ಎಕರೆ ವಿಸ್ತಾರವಿದ್ದು ಕೆರೆ ತುಂಬಲು ಮಳೆ ನೀರೇ ಆಧಾರವಾಗಿತ್ತು. ಈ ಗ್ರಾಮದ ಕೆರೆಯಿಂದ ಮೇಲಿರುವ ಗ್ರಾಮಗಳಾದ ಅಂಕನಹಳ್ಳಿ, ಕೂನನಕೊಪ್ಪಲು, ತಟ್ಟವಾಳು, ಅಂಜನಹೊಸಳ್ಳಿ, ಹೊಡಕೆಕಟ್ಟೆ, ಬೆಳವಾಡಿ ಗ್ರಾಮಗಳ ಕೆರೆಗಳು ಮಳೆಗಾಲದಲ್ಲಿ ತುಂಬಿದ ನಂತರ ಬಸವಾಪಟ್ಟಣದ ಕೆರೆಗೆ ನೀರು ಬರುತ್ತಿತ್ತು. ೧೯೨೪ರಲ್ಲಿ ಈ ಗ್ರಾಮದ ಸಮೀಪವಿರುವ ಕಟ್ಟೇಪುರದ ಬಳಿ ಕಾವೇರೀ ನದಿಗೆ ಅಡ್ಡಲಾಗಿ ಅಣೆಕಟ್ಟೆ ಕಟ್ಟಿದುದು ಬಸವಾಪಟ್ಟಣದ ಕೃಷಿ ಚಟುವಟಿಕೆಗೆ ಒತ್ತು ದೊರಕಿತು. ಕಟ್ಟೆಯ ನಿರ್ಮಾಣದ ನಂತರ ಈ ಗ್ರಾಮಕ್ಕೂ ಸೇರಿದಂತೆ ಕಾಲುವೆ ತೋಡಿಸಿದ್ದುದು ಮೇಲೆ ತಿಳಿಸಿದ ಕೆರೆಗೆ ಕಾಲುವೆಯ ನೀರು ಹರಿಯುವಂತಾಯಿತು. ಪರಿಣಾಮವಾಗಿ ಈ ಕೆರೆ ಬೇಸಿಗೆಯಲ್ಲೂ ಪೂರ್ಣವಾಗಿ ಒಣಗುವುದಿಲ್ಲ. ಕೃಷ್ಣರಾಜ ಸಾಗರ ಅಣೆಕಟ್ಟೆಗಿಂತ ಮೊದಲೇ ನಿರ್ಮಾಣವಾಗಿದ್ದ ಈ ಕಟ್ಟೆ ಆ ಭಾಗದ ಗ್ರಾಮಗಳ ಕೃಷಿಚಟುವಟಿಕೆಯಲ್ಲಿ ಮಹತ್ತರ ಪಾತ್ರ ವಹಿಸುತ್ತಿದೆ. ಇಲ್ಲಿರುವ ಕೊಲ್ಲೀಕೆರೆ ಸು.೧೫ ಎಕರೆ ವಿಸ್ತಾರವಾಗಿದೆ. ಕಾವೇರಿ ನದಿ ಪ್ರವಾಹ ಬಂದ ಸಂದರ್ಭದಲ್ಲಿ ಹಿನ್ನೀರಿನಿಂದ ಕೆರೆ ತುಂಬುತ್ತದೆ. ಕೊಲ್ಲೀ ತೋಟ ಹಾಗೂ ಗದ್ದೆಗಳಿಗೆ ಈ ಕೆರೆಯಿಂದಲೇ ನೀರು ಒದಗಿಸಲಾಗುತ್ತಿದೆ. ಇಲ್ಲಿರುವ ಬಸದಿ ಕೆರೆಯೂ ಕೂಡ ಕೃಷಿಗೆ ಅನುಕೂಲ ಕಾರಕವಾಗಿದೆ.

ಗ್ರಾಮಸ್ಥರು ಜೊತೆಯಾಗಿ ಅಥವಾ ವ್ಯಕ್ತಿಗಳು ವೈಯಕ್ತಿಕವಾಗಿ ನೀರಿನ ಅನುಕೂಲ ಮಾಡಿಕೊಡುವ ಕಾರ್ಯ ಅಂದು ಎಲ್ಲೆಡೆ ನಡೆಯುತ್ತಿತ್ತು. ಅಂತಹ ಒಂದು ಶಾಸನ ಈ ಗ್ರಾಮದಲ್ಲಿ ಲಭ್ಯವಾಗಿದ್ದು ಆತನನ್ನು 'ಸಮುದ್ರಾಧಿಪತಿ' ಎಂದು ಕರೆದಿದೆ.[೧೬] ಆದರೆ ಆ ಕೆರೆಯನ್ನು ಈಗ ಗುರ್ತಿಸಲಾಗಿಲ್ಲ. ಇವುಗಳ ಜೊತೆಗೆ ಗ್ರಾಮದ ಅರೆಬಂಡೆಯಲ್ಲಿ ನಿರ್ಮಾಣವಾಗಿರುವ 'ಕಂಚುವಾಳಕಟ್ಟೆ'[೧೭] ಜಾನುವಾರುಗಳಿಗೆ ನೀರೊದಗಿಸಲು ಬಹಳ ಅನುಕೂಲವಾಗಿದೆ. ಜೊತೆಗೆ ಸಮೀಪದ ತೋಟಗಳು ತಂಪಾಗಿರಲು ಈ ಕಟ್ಟೆಯಲ್ಲಿ ವರ್ಷ ಪೂರ್ತಿ ನೀರಿರುವುದು ಒಂದು ಕಾರಣವಾಗಿದೆ. ತೋಟಗಳು ನೀರಿನ ಮೂಲವನ್ನು ಹೊಂದಿದ್ದು ಪ್ರತಿ ತೋಟವೂ ಒಂದು ಅಥವಾ ಎರಡು ನೆಲಭಾವಿಗಳನ್ನು ಹೊಂದಿದ್ದವು. ಅಂದು ಬಾವಿಗಳಿಂದಲೇ ನೇರವಾಗಿ ನೀರನ್ನು ಎಲೆಹಂಬು, ಅಡಿಕೆಗಿಡ/ಮರಗಳು ಹಾಗೂ ಹಣ್ಣು ತರಕಾರಿ ಗಿಡಗಳಿಗೆ ಮಣ್ಣಿನ ಗಡಿಗೆಗಳಿಂದ ನೀರು ಹಾಕಲಾಗುತ್ತಿತ್ತು. ಈ ಬಾವಿಗಿಳಿಯಲು ಮಣ್ಣಿನ ಮೆಟ್ಟಿಲುಗಳಿರುತ್ತಿದ್ದವು. ಏತದ ಪರಿಚಯದ ನಂತರ ಇತರೆಲ್ಲೆಡೆಯಂತೆ ಈ ಗ್ರಾಮದಲ್ಲೂ ಏತವನ್ನು ಬಾವಿಗಳಿಗೆ ಅಳವಡಿಸಲಾಗಿತ್ತು.

ತಲಕಾಡಿನ ಗಂಗರು ಮತ್ತು ಹೊಯ್ಸಳರ ಕಾಲದಲ್ಲಿ ಜೈನಮತದವರು ಹೆಚ್ಚಾಗಿದ್ದಂತೆ ತೋರುತ್ತದೆ. ಜೈನರಬೀದಿ ಎಂದೇ ಕರೆಯುತ್ತಿದ್ದ ಪ್ರತ್ಯೇಕ ಬೀದಿ ಇಲ್ಲಿತ್ತು. ಇದೇ ಬೀದಿಯಲ್ಲೇ ಬಸದಿಯೊಂದು ಇತ್ತು.[೧೮] ಇದೇ ಬೀದಿಯ ಕೊನೆಯಲ್ಲಿ ಸುಮಾರು ಅರ್ಧ ಕಿ.ಮೀ. ದೂರದಲ್ಲಿ ಬಸದಿಕೆರೆ ಇದ್ದು ಅಲ್ಲಿಂದ ಬಸದಿಗೆ ನೀರು ತರಲಾಗುತ್ತಿತ್ತೆಂದು ಹೇಳಲಾಗಿದೆ.[೧೯]

ಪಾಳೇಗಾರರ ಆಳ್ವಿಕೆಯ ಅವಧಿಯಲ್ಲಿ ಶೈವ ಹಾಗೂ ವೀರಶೈವ ಮತಗಳೆರಡೂ ಅಸ್ತಿತ್ವದಲ್ಲಿದ್ದವೆನ್ನಬಹುದು.

ಸಂದರ್ಶನದ ವೇಳೆ ತಿಳಿದುಬಂದಿರುವಂತೆ ಪಾಳೇಗಾರ ಶಿವಾಚಾರದವನಾಗಿದ್ದ. ಅವನ ಕುಲದೇವರೆನ್ನಲಾಗಿರುವ ಬಸವನಿಗೆ ಆತ ಗುಡಿಯೊಂದನ್ನು ಕಟ್ಟಿಸಿರುವುದು ಇಂದಿಗೂ ಇದೆ. ಗ್ರಾಮಸ್ಥರ ಪ್ರಕಾರ ವೀರಶೈವ ಮತ ಈ ಗ್ರಾಮಕ್ಕೆ ನಂತರ ಬಂದಿತು ಎಂಬುದಾಗಿದೆ. ಆದರೆ ಪಾಳೇಗಾರರ ಆಳ್ವಿಕೆಗೂ ಮೊದಲು ಹಾಕಿಸಿರುವ ೧೨೬೧ರ ಶಾಸನ ಒಂದು ಗ್ರಾಮದ ಶಾಂತೇಶ್ವರ ದೇವರಿಗೆ ಭೂದಾನ ಮಾಡಿರುವ ವಿವರ ನೀಡಿದ್ದು, ಅದರಲ್ಲಿ ದಾನಿಗಳ ಹೆಸರನ್ನು ಉಲ್ಲೇಖಿಸಿದೆ. ದಾನಿ ಶಿವಲಿಂಗದೇವ, ಹಾಗೂ ನೆಲುವಿಗೆ ಸಾತಿದೇವ ಹಾಗೂ ಅವನ ಉತ್ತರಾಧಿಕಾರಿಗಳು ಎಂದಿದೆ. ನೆಲುವಿಗೆ ಸಾತಿದೇವನನ್ನು ಶಿವಶರಣರಲ್ಲಿ ಒಬ್ಬನಾದ ಶಾಂತಯ್ಯ ಎಂಬುದಾಗಿ ಗುರ್ತಿಸಲಾಗಿದೆ.[೨೦] ಅದೇನೇ ಇದ್ದರೂ ಪಾಳೇಗಾರನ ಕಾಲದ್ದೆನ್ನಲಾಗಿರುವ ಬಸವನಗುಡಿ, ವೀರಭದ್ರೇಶ್ವರ, ಷಡ್ಭಾವರಹಿತೇಶ್ವರ ಈ ದೇಗುಲಗಳು ಅಂದಿನಿಂದ ಇಂದಿನವರೆಗೂ ವೀರಶೈವ ಮತದವರ ಅಧೀನದಲ್ಲೇ ಇರುವುದು ಗಮನಾರ್ಹ.

ಈ ಗ್ರಾಮ ಹದಿನೈದನೇ ಶತಮಾನದಿಂದೀಚೆಗೆ ವೈದಿಕ ಮತದ ಪ್ರಾಧಾನ್ಯ ಗಳಿಸಿತು. ಇದನ್ನು 'ವೈದಿಕಗ್ರಾಮ' ಎಂಬುದಾಗಿ ಗುರ್ತಿಸಲಾಗುತ್ತಿತ್ತು. ಇವರಲ್ಲಿ ಸ್ಮಾರ್ತ, ಶ್ರೀವೈಷ್ಣವ ಮಧ್ವ ಮತದವರು ಇದ್ದರು. ಇವರಲ್ಲಿ ಪರಸ್ಪರ ಕೊಡುಕೊಳ್ಳುವಿಕೆ ಹಾಗೂ ಸಹಬೋಜನ ಇರಲಿಲ್ಲವಾದರೂ ಗ್ರಾಮದ ಸಾಂಘಿಕ ಚಟುವಟಿಕೆಗಳನ್ನು ಒಗ್ಗಟಿನಿಂದ ಇತರರೊಡಗೂಡಿ ಮಾಡುತ್ತಿದ್ದರು. ಉದಾಹರಣೆಗೆ ಗ್ರಾಮದಲ್ಲಿರುವ ಲಕ್ಷ್ಮೀಕಾಂತಿ ದೇವಾಲಯದ ನಿರ್ವಹಣೆ ತಲತಲಾಂತರದಿಂದ ಅಲ್ಲಿರುವ ಏಕೈಕ ಶ್ರೀವೈಷ್ಣವ ಕುಟುಂಬದವರಿಂದ ಆಗುತ್ತಿದೆ. ಆದರೆ ರಥೋತ್ಸದ ಸಂದರ್ಭದಲ್ಲಿ ಇಡೀ ಊರಿನ ಜನ ಅವರಿಗೆ ಸಹಕರಿಸುತ್ತಾ ಬಂದಿದ್ದಾರೆ.

ಗ್ರಾಮದಲ್ಲಿ ಹಲವು ಪ್ರಾಚೀನ ದೇವಾಲಯಗಳಿದ್ದು ಅವು ಗಾತ್ರದಲ್ಲಿ ಚಿಕ್ಕವೂ ಶೈಲಿಯಲ್ಲಿ ಸರಳವೂ ಆಗಿವೆ. ಇಲ್ಲಿರುವ ಶಿವಾಲಯಗಳಲ್ಲಿ ಕೋಟೆಯ (ಈಗ ಕೋಟೆ ನಾಶವಾಗಿದೆ) ಉತ್ತರ ದ್ವಾರದಲ್ಲಿ ಪೂರ್ವಾಭಿಮುಖವಾಗಿ ಸಾಲಾಗಿ ದೇಗುಲಗಳಿವೆ. ಅವುಗಳಲ್ಲೆಲ್ಲಾ ಪ್ರಣತಾರ್ತಿಹರೇಶ್ವರ ದೇವಾಲಯವೇ ಅತ್ಯಂತ ಪ್ರಾಚೀನವಾದುದೆನ್ನಲಾಗಿದೆ. ಈ ದೇವಾಲಯದ ನಿರ್ಮಾಣದ ಕಾಲ ತಿಳಿದಿಲ್ಲ.[೨೧] ಈ ದೇಗುಲದ ಗರ್ಭಗೃಹ ೩ಅಡಿ ಉದ್ದ ಹಾಗೂ ೨ಅಡಿ ಅಗಲವಿದ್ದು ಸು.೨ ೧/೨ ಅಡಿ ಎತ್ತರದ ಶಿವಲಿಂಗವಿದೆ. ನಂತರ ಸು.೩ ೧/೨ಅಡಿ ಅಗಲದ ಅಂತರಾಳ ಹೊಂದಿದ್ದು ಮುಂದೆ ೪೦ಅಡಿ ಉದ್ದ ೩೦ ಅಡಿ ಅಗಲದ ಹಜಾರವನ್ನೊಳಗೊಂಡಿದೆ. ಬಹಳ ಹಿಂದಿನಿಂದಲೂ ಇಲ್ಲಿ ದಿನನಿತ್ಯ ದ್ವಿಕಾಲ ಪೂಜೆ, ಕಾರ್ತಿಕಮಾಸ ಮತ್ತು ಶಿವರಾತ್ರಿಗಳಲ್ಲಿ ವಿಶೇಷ ಪೂಜೆ ಜರುಗುತ್ತಿದೆ.

ಪ್ರಣತಾರ್ತಿಹರೇಶ್ವರ ದೇವಾಲಯದ ಪಕ್ಕದಲ್ಲಿ ಶಾಂತೇಶ್ವರ ದೇಗುಲವಿದ್ದು ಇದು ಪಾಳೇಗಾರರ ಕಾಲಕ್ಕಿಂತ ಹಿಂದೆಯೇ ಕಟ್ಟಿರುವುದಾಗಿದೆ. ಹೊಯ್ಸಳ ವೀರನರಸಿಂಹನ ಉಲ್ಲೇಖವನ್ನೊಳಗೊಂಡಿರುವ ೧೨೬೧ ಶಾಸನ ಒಂದು ಶಾಂತೇಶ್ವರನ ಅಮೃತಪಡಿಗೆ ಹಲವಾರು ವ್ಯಕ್ತಿಗಳು ಭೂದಾನ ಮಾಡಿದುದಾಗಿ ವಿವರಿಸಿದೆ.[೨೨] ಈ ದೇವಾಲಯ ೧೦ಅಡಿ ಉದ್ದ ಹಾಗೂ ೧೦ಅಡಿ ಅಗಲವಾದ ಗರ್ಭಗೃಹವನ್ನು ಮಾತ್ರ ಹೊಂದಿದೆ. ಒಂದು ಕಾಲದಲ್ಲಿ ಬಹಳ ಮುಖ್ಯವೆನಿಸಿದ್ದ ಈ ದೇವಾಲಯ ಇಂದು ಗ್ರಾಮಸ್ಥರ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಈ ಗ್ರಾಮದಲ್ಲಿ ಇದೊಂದೇ ದೇವಾಲಯ ಪಾಳು ಬಿದ್ದಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಷಡ್ಭಾವರಹಿತೇಶ್ವರ ದೇವಾಲಯ ಶಾಂತೇಶ್ವರ ದೇವಾಲಯದ ಪಕ್ಕದಲ್ಲಿದೆ. ಇದನ್ನು ಪಾಳೇಗಾರರ ಕಾಲದಲ್ಲಿ ಕಟ್ಟಿಸಿದ್ದೆನ್ನಲಾಗಿದೆ. ಮೂಲದೇಗುಲ ೩೦ಅಡಿ ಉದ್ದ ಹಾಗೂ ೪೦ಅಡಿ ಅಗಲವಾಗಿತ್ತು ೨ ೧/೨ಅಡಿ ಎತ್ತರದ ಶಿವಲಿಂಗ ಹಾಗೂ ಒಂದು ಗದ್ದಿಗೆ ಇತ್ತು. ಇಂದು ಈ ದೇವಾಲಯವನ್ನು ಪೂರ್ಣವಾಗಿ ಹೊಸದಾಗಿ ನಿರ್ಮಿಸಿ ಲಿಂಗವು ಭಿನ್ನವಾಗಿತ್ತೆಂಬ ಕಾರಣದಿಂದ ಅದನ್ನೂ ಬದಲಿಸಲಾಗಿದೆ.[೨೩] ವೀರಶೈವ ಮತದವರ ನಿಯಂತ್ರಣದಲ್ಲಿ ಇಲ್ಲಿ ಪೂಜಾ ಕೈಂಕರ್ಯಗಳು ಜರುಗುತ್ತಿವೆ.

ಇನ್ನು ಕೋಟೆಯ ದಕ್ಷಿಣಕ್ಕೆ ಗಣಪತಿ, ಮಾರಮ್ಮ, ವೀರಭದ್ರೇಶ್ವರ, ಹಾಗೂ ಲಕ್ಷ್ಮೀಕಾಂತ ದೇಗುಲಗಳು ಇವೆ. ಕೋಟೆಗಣಪತಿ ಎಂದೇ ಕರೆಯಲಾಗುತ್ತಿರುವ ಗಣಪತಿ ದೇವಾಲಯವು ೩೦ಅಡಿ ಉದ್ದ ಹಾಗೂ ೨೦ಅಡಿ ಅಗಲವಾದ ಒಂದು ಗರ್ಭಗೃಹವನ್ನು ಮಾತ್ರ ಒಳಗೊಂಡಿದೆ. ಪಾಳೇಗಾರರ ಕಾಲದ ಈ ದೇವಾಲಯದಲ್ಲಿ ಕಪ್ಪುಶಿಲೆಯ ೩ಅಡಿ ಎತ್ತರದ ಗಣಪತಿ ವಿಗ್ರಹವಿದೆ. ಈ ದೇವಾಲಯದಿಂದ ೧೫ಹೆಜ್ಜೆ ಮುಂದಕ್ಕೆ ಮಾರಮ್ಮನ ಚಿಕ್ಕ ದೇವಾಲಯವಿದೆ. ಬಾಗಿಲು ಇಲ್ಲದ ಈ ದೇವಾಲಯ ೩ಅಡಿ ಉದ್ದ ಹಾಗೂ ೨ಅಡಿ ಅಗಲದ ಒಂದು ಕೋಣೆಯನ್ನು ಒಳಗೊಂಡಿದ್ದು ಮಾರಮ್ಮನೆಂದು ಹೇಳುವ ನಿರಾಕಾರ ಮೂರು ಕಲ್ಲುಗಳಿವೆ. ಇಲ್ಲಿ ನಿತ್ಯ ಪೂಜೆ ನಡೆಯದಿದ್ದರೂ, ಸೀತಾಳೆ, ಸಿಡುಬು, ಕಾಲರ ಮುಂತಾದ ಕಾಯಿಲೆಗಳು ಬಂದಾಗ ಮೊಸರನ್ನ, ಹರಳೆಣ್ಣೆ ಹಾಗೂ ಬೇವಿನಸೊಪ್ಪನ್ನು ತಂದು ದೇವಿಗೆ ತಂಪು ತೋರಿಸಿ ಹರಕೆ ಪೂರೈಸುತ್ತಾರೆ. ಮಾರಮ್ಮನಿಗೆ ಗ್ರಾಮದ ಎಲ್ಲವರ್ಗದ ಜನರೂ ಭಯಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಈ ದೇಗುಲಕ್ಕೆ ಪೂಜಾರಿ ಇಲ್ಲ. ಬಹಳ ಹಿಂದೆ ಇತರ

ಗ್ರಾಮಗಳಲ್ಲಿರುವಂತೆ ವರ್ಷವರ್ಷ ಪೂಜೆ ನಡೆಯುತ್ತಿದ್ದುದಾಗಿ ತಿಳಿದುಬಂದಿದೆ. ಈ ದೇಗುಲದಿಂದ ಸ್ವಲ್ಪದೂರದಲ್ಲಿ ಪಾಳೇಗಾರರ ಕಾಲದಲ್ಲಿ ನಿರ್ಮಿಸಲಾದ ವೀರಭದ್ರೇಶ್ವರ ದೇಗುಲವಿದೆ. ಇದು ೩೦ಅಡಿ ಉದ್ದ ಹಾಗೂ ೪೦ಅಡಿ ಅಗಲವಾಗಿದ್ದು ಒಂದು ಗರ್ಭಗೃಹ ಹಾಗೂ ಹಜಾರವನ್ನೊಳಗೊಂಡಿದೆ. ಈ ದೇವಾಲಯ ೧೯೭೦ರಲ್ಲಿ ಜೀರ್ಣೋದ್ಧಾರವಾಗಿದೆ.

ಇಲ್ಲಿರುವ ಮತ್ತೊಂದು ಹಳೆಯ ದೇಗುಲವೆಂದರೆ ಶ್ರೀಲಕ್ಷ್ಮೀಕಾಂತ–ಶ್ರೀದೇವಿ–ಭೂದೇವಿ ದೇಗುಲ. ಸು.೫ಅಡಿ ಎತ್ತರದ ಲಕ್ಷ್ಮೀಕಾಂತ ವಿಗ್ರಹ ಹಾಗೂ ೨ಅಡಿ ಎತ್ತರವಿರುವ ಶ್ರೀದೇವಿ ಮತ್ತು ಭೂದೇವಿ ವಿಗ್ರಹಗಳು ಕಪ್ಪುಶಿಲೆಯಿಂದ ನಿರ್ಮಿಸಲ್ಪಟ್ಟಿವೆ. ೨ಅಡಿ ಉದ್ದ ಹಾಗೂ ೨ಅಡಿ ಅಗಲವಿರುವ ಗರ್ಭಗೃಹ, ಒಂದು ಚಿಕ್ಕ ಅಂತರಾಳ, ಹಾಗೂ ಕೆತ್ತನೆ ಇಲ್ಲದ ಸರಳ ಚೌಕಾಕಾರದ ಕಂಬಗಳುಳ್ಳ ಹಜಾರ ಇದೆ. ಈ ದೇಗುಲದ ವಿಗ್ರಹಗಳನ್ನು ಪಾಳೇಗಾರರ ಕಾಲದಲ್ಲಿ ಕೊಡಗಿನಿಂದ ತಂದು ದೇವಾಲಯ ನಿರ್ಮಿಸಿ ವಿಗ್ರಹಗಳ ಪ್ರತಿಷ್ಠಾಪನೆ ಮಾಡಲಾಗಿದೆಯೆಂದು ಹೇಳಲಾಗಿದೆ. ಇಲ್ಲಿ ರಥಸಪ್ತಮಿಯ ದಿನ ನಡೆಯುವ ಜಾತ್ರೆಯಲ್ಲಿ ಸುತ್ತಮುತ್ತಲಿನ ಗ್ರಾಮಗಳೂ ಸೇರಿದಂತೆ ಎಲ್ಲ ವರ್ಗದ ಜನರೂ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ.

ಗ್ರಾಮದ ಪೇಟೆ ಆಂಜನೇಯ ದೇಗುಲವು ಬಹಳ ಹಿಂದಿನದ್ದೆನ್ನಲಾಗಿದೆ. ಮೂಲ ದೇಗುಲ ಕೇವಲ ಒಂದು ಚಿಕ್ಕ ಗರ್ಭಗುಡಿಯನ್ನು ಮಾತ್ರ ಒಳಗೊಂಡಿತ್ತು. ಕಾಲಕ್ರಮೇಣ ಒಂದು ಹಜಾರವನ್ನು ಕಟ್ಟಲಾಗಿದೆ. ಇಲ್ಲಿರುವ ೪ ೧/೨ ಅಡಿಎತ್ತರದ ನಿಂತಿರುವ ಆಂಜನೇಯ ಗ್ರಾಮಸ್ಥರ ನಂಬಿಕೆಯ ದೇವರು. ಈ ದೇವರ ಅಮೃತಪಡಿಗೆ ಭೂದಾನ ನೀಡಿರುವುದು. ಹಾಗೂ ಇಲ್ಲಿ ನಂದಾದೀವಿಗೆ ಬೆಳಗಿಸಲು ಬೇಕಾದ ಎಣ್ಣೆಯನ್ನು ಅರೆಯುವ ಗಾಣವನ್ನು ದಾನಮಾಡಿರುವ ವಿಷಯ ಗಾಣದ ಮೇಲಿರುವ ಶಾಸನದಿಂದ ತಿಳಿದು ಬರುತ್ತದೆ.[೨೫]

ಈ ಗ್ರಾಮದಲ್ಲಿ ಎರಡು ಬಸವನ ಗುಡಿಗಳಿವೆ. ಒಂದು ಪಾಳೇಗಾರ ಬಸವನಾಯಕನ ಕುಲದೇವರೆಂದು ಹೇಳಲಾಗಿದ್ದು ಅದು ಪೇಟೆಬೀದಿಯಲ್ಲಿದೆ. ಮತ್ತೊಂದು ಅರೆಕಲ್ಲು ಬಸವ ಅರೆ ಬಂಡೆಯ ಮೇಲಿದೆ. ಇದರ ನಿರ್ಮಾಣಕಾಲ ತಿಳಿದುಬಂದಿಲ್ಲ. ಆದರೆ ಇದು ಕೃಷಿಕರ ದೇವರಾಗಿದ್ದು ಮಳೆ ಬಾರದಿದ್ದಾಗ ಪರ್ವ ಮಾಡಿದರೆ ವರುಣ ಕೃಪೆಮಾಡುವನೆಂಬ ನಂಬಿಕೆ ಇದೆ. ಜೊತೆಗೆ ಜಾನುವಾರುಗಳು ಕಾಯಿಲೆ ಬಿದ್ದಲ್ಲಿ ಈ ಬಸವನಿಗೆ ಹರಕೆ ಮಾಡಿಕೊಳ್ಳುವುದು ಬಹಳ ಕಾಲದಿಂದ ಬಂದಿರುವ ರೂಢಿ ಇಲ್ಲಿದೆ.

ಇನ್ನು ಊರ ಮುಂದಣ ತೋಟ ಒಂದರಲ್ಲಿ ಮಕ್ಕಿಯ ಮೇಲೆ ಇರುವ ನಿರಾಕಾರ ಕಲ್ಲಿನ ಮಕ್ಕಿಅಮ್ಮ (ನಾಲಕ್ಕು ಕಲ್ಲುಇಟ್ಟಿರುವ ಗುಡಿ) ಅಥವಾ ಆಲದಮ್ಮನಿಗೆ (ಆಲದಮರದ ಕೆಳಗೆ ಇರುವ ಕಾರಣಕ್ಕಾಗಿ) ನಿತ್ಯ ಪೂಜೆ ಇಲ್ಲದಿದ್ದರೂ ಹರಕೆ ಹೊತ್ತವರು ಕಡ್ಡಾಯವಾಗಿ ಪೂಜೆ ಸಲ್ಲಿಸುತ್ತಾರೆ.[೨೬] ಇನ್ನು ಗ್ರಾಮದೇವತೆ 'ಕಾವಲು ಅಮ್ಮ' ಇಡೀ ಗ್ರಾಮದ ಎಲ್ಲ ವರ್ಗಗಳ ನಂಬಿಕೆಯ ದೇವತೆ. ಇವಳನ್ನು 'ಕ್ಷಿಪ್ರಪ್ರಸಾದಿನಿ' ಎಂದೂ ಕರೆಯಲಾಗುತ್ತದೆ. ವರ್ಷ ಪೂರ್ತಿ ಭಾನುವಾರ, ಮಂಗಳವಾರ, ಶುಕ್ರವಾರಗಳಂದು ಊರುತ್ಸವ ನಡೆಯುತ್ತದೆ. ಹತ್ತುವರ್ಷಕ್ಕೊಮ್ಮೆ ನಡೆಯುವ ಬಂಡೀಹಬ್ಬ ಬಹಳ ಪ್ರಮುಖವಾದುದು.[೨೭]

ಪಾಳೇಗಾರರ ಕಾಲದ ಕೋಟೆಯ ಅವಶೇಷಗಳು ೧೯೮೦ರ ದಶಕದವರೆಗೂ ಲಭ್ಯವಿತ್ತು. ಗ್ರಾಮದ ಸುತ್ತ ಮಣ್ಣಿನ ಕೋಟೆ ನಿರ್ಮಿಸಿ ಸುತ್ತ ಕಂದಕ ತೋಡಿಸಲಾಗಿತ್ತು. ಈ ಕಂದಕಕ್ಕೆ ಸಮೀಪದ ಬ್ಯಾಡರ ಕೊಪ್ಪಲಿನ ಕೆರೆಯಿಂದ ನೀರು ಹಾಯಿಸಲಾಗುತ್ತಿತ್ತು. ಕೋಟೆಯಲ್ಲಿ ಬತೇರುಗಳಿದ್ದುದನ್ನು ನೋಡಿರುವುದಾಗಿ ಗ್ರಾಮದ ವೃದ್ಧರು ತಿಳಿಸಿದ್ದಾರೆ. ಇಂದು ಕೋಟೆಯು ಸಂಪೂರ್ಣ ನಾಶವಾಗಿದ್ದು ಅಲ್ಲಲ್ಲಿ ಇದ್ದ ಗೋಡೆಯ ಅವಶೇಷಗಳನ್ನು ಇತ್ತೀಚೆಗೆ ಕಂದಕಕ್ಕೆ ತುಂಬಿ ನೆಲಸಮ ಮಾಡಿ ಜಮೀನು ಒತ್ತುವರಿ ಮಾಡಿಕೊಳ್ಳಲಾಗಿದೆ.[೨೮] ಕೋಟೆಬೀದಿ, ಕೋಟೆ ಗಣಪತಿ ಇತ್ಯಾದಿ ರೂಢಿಯಲ್ಲಿರುವುದು ಕೋಟೆಯ ಅಸ್ತಿತ್ವವನ್ನು ಸ್ಪಷ್ಟಪಡಿಸುತ್ತದೆ.

ಒಟ್ಟಾರೆ ಬಸವಾಪಟ್ಟಣ ಗ್ರಾಮ ಪ್ರಾಚೀನ ಗ್ರಾಮಗಳಲ್ಲಿ ಒಂದಾಗಿದ್ದು ಈ ನಾಡಿನ ಸಂಸ್ಕೃತಿಗೆ ತನ್ನದೇ ಆದ ಕೊಡುಗೆ ಸಲ್ಲಿಸಿದೆ. ದಾಖಲೆಗಳ ಕೊರತೆಯಿಂದಾಗಿ ಈ ಸ್ಥಳದ ಕುರಿತು ಪರಿಪೂರ್ಣ ಅರಿವು ಸಾಧ್ಯವಾಗಿಲ್ಲ. ನೇಮಿನಾಥ ಜಿನಮೂರ್ತಿ ದೊರೆತಿರುವ ಸ್ಥಳದಲ್ಲಿ ಉತ್ಖನನ ಮಾಡಬೇಕಾಗಿದೆ. ಆಗ ಮಾತ್ರ ಅಲ್ಲಿ ಬಸದಿ ಇದ್ದುದರ ಖಚಿತ ಮಾಹಿತಿ ಲಭ್ಯವಾಗುತ್ತದೆ. ಆ ಮೂಲಕ ಗ್ರಾಮದ ಇತಿಹಾಸ ಮತ್ತು ಸಂಸ್ಕೃತಿ ಬಗ್ಗೆ ಮತ್ತಷ್ಟು ಮಾಹಿತಿ ಪಡೆಯಲು ಸಾಧ್ಯ.

[ಲೇಖನ ರಚನೆಗೆ ಕ್ಷೇತ್ರಕಾರ್ಯ ಹಾಗೂ ಸಂದರ್ಶನ ನಡೆಸಿದ ವೇಳೆ ಗ್ರಾಮಸ್ಥರು ತಮಗೆ ತಿಳಿದಿರುವ ಮಾಹಿತಿಗಳನ್ನು ನೀಡಿ ಉಪಕರಿಸಿರುತ್ತಾರೆ; ಅವರಿಗೂ ಹಾಗೂ ಈ ಲೇಖನ ರಚಿಸಲು ಪೂರ್ಣವಾಗಿ ನನ್ನ ಜೊತೆಗಿದ್ದು ಮಾಹಿತಿ ಸಂಗ್ರಹಿಸಲು ಹಾಗೂ ದೇವಾಲಯಗಳ ಛಾಯಚಿತ್ರಗಳನ್ನು ತೆಗೆಯಲು ಸಹಕರಿಸಿದ ನನ್ನ ಪೂಜ್ಯ ತಂದೆ ಶ್ರೀ ಬಿ.ಆರ್.ವೆಂಕಟೇಶ್ ಹಾಗೂ ಮಗ ವಿ.ಕಮಲ್ ಕಾರ್ತಿಕ್‌ರವರಿಗೂ ನನ್ನ ಕೃತಜ್ಞತೆಗಳನ್ನು ಈ ಮೂಲಕ ಸಲ್ಲಿಸುತ್ತೇನೆ.]

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಈ ಗ್ರಾಮದಲ್ಲೂ ಇಂದು ಶಿಕ್ಷಣ ಮತ್ತು ನೌಕರಿಗಳನ್ನರಿಸಿ ಪಟ್ಟಣ ಮತ್ತು ನಗರ ಪ್ರದೇಶಗಳಿಗೆ ತೆರಳುತ್ತಿರುವುದರಿಂದ ವೈದಿಕ ಕುಟುಂಬಗಳು ಗಣನೀಯವಾಗಿ ಕಡಿಮೆಯಾಗುತ್ತಿವೆ.

೨. ಎ.ಕ.ಸಂ.೮, ಬಸವಾಪಟ್ಟಣ, ಶಾ.ಸಂ.೯೩, ಪು. ೧೬೪. ಇಲ್ಲಿಯ ಕೆಲವು ಶಾಸನಗಳಲ್ಲಿ ಕಾಲ ಅಲಭ್ಯ.

೩. ಎ.ಕ. ಅದೇ, ಶಾ.ಸಂ.೯೦ ಮತ್ತು ೯೧, ಕಾಲ ಕ್ರಮವಾಗಿ ೧೫೭೭ ಹಾಗೂ ೧೬ನೇ ಶತಮಾನ, ಪು.೧೬೩

೪. ಎ.ಕ. ಅದೇ. ಅರಕಲಗೂಡು–೧, ೧೬–೧೭ನೇ ಶತಮಾನ, ಪು.೧೦೨, ಈ ಶಾಸನದಲ್ಲಿ ಸಿದ್ದಪ್ಪಗೌಡ ಎಂಬಾತ ಸವಾಪಟ್ಟಣ ಸ್ಥಳದ ಪಾಂಚಾಲರು ನೀಡಬೇಕಾಗಿದ್ದ ಸುಂಕಬಾಕಿಯನ್ನು ಮನ್ನಾಮಾಡಿದ ಮಾಹಿತಿ ಇದೆ.

೫. ಎ.ಕ.ಅದೇ, ಬಸವಾಪಟ್ಟಣ–೯೩, ಕಾಲ:೮೭೭–೮೦, ಈ ಶಾಸನದಲ್ಲಿ ಮಾಚಿದೇವಯ್ಯ ಎಂಬ ವೀರ ತುರುಗಳ ರಕ್ಷಣೆ ಮಾಡುವ ಸಂದರ್ಭದಲ್ಲಿ ವೀರಮರಣವಪ್ಪಿದ್ದನ್ನು ಉಲ್ಲೇಖಿಸಿದೆ.

೬ ಎ.ಕ., ಸಂ.೮, ರುದ್ರಪಟ್ಟಣ – ೧೦೮, ೧೩–೧೪ನೇ ಶತಮಾನ, ಪು:೧೭೫.

೭. ಪಾಳೇಗಾರ ಬಸವಪ್ಪನಾಯಕನ ಬಗ್ಗೆ ಗ್ರಾಮಸ್ಥರು ಬಹಳ ಹೆಮ್ಮೆಯಿಂದ ಮಾಹಿತಿ ನೀಡಿರುತ್ತಾರೆ. ೧). ಹನ್ನಾಳು ನಾರಣಪ್ಪ ನಾಗಪ್ಪ, ಜನ್ಮ ದಿನಾಂಕ: ೨೪ ಡಿಸೆಂಬರ್ ೧೯೧೯, ಕೃಷಿಕರು. ೨). ವೆಂಕಟಸುಬ್ಬಯ್ಯ, ವಯಸ್ಸು ೭೫, ಕೃಷಿಕರು ಹಾಗೂ ನಿವೃತ್ತ ಅಧ್ಯಾಪಕರು. ೩). ವೇದಮೂರ್ತಿ ಬ್ರಹ್ಮಶ್ರೀ ಬಿ.ವೈ.ಸುಬ್ಬಕೃಷ್ಣದೀಕ್ಷಿತರು, ವಯಸ್ಸು ೭೦, ವೃತ್ತಿ– ವ್ಯವಸಾಯ, ಅಧ್ಯಯನ–ಅಧ್ಯಾಪನ, ಯಜನ–ಯಾಜನ ೪). ಬಿ.ಆರ್. ಕುಮಾರಸ್ವಾಮಿ, ೭೦ವರ್ಷ, ವ್ಯವಸಾಯ ವೃತ್ತಿ ಗ್ರಾಮ ಪಂಚಾಯತಿಯ ಮಾಜಿ ಅಧ್ಯಕ್ಷರು.

೮. ಈ ಗ್ರಾಮ ಇಂದಿಗೂ ಅದೇ ಹೆಸರು ಹೊಂದಿದ್ದು ಅಂದು ಬಸವಾಪಟ್ಟಣ ಸ್ಥಳಕ್ಕೆ ಸೇರಿತ್ತು. ಎ.ಕ. ಅದೇ, ಸಂ.೮೬, ೧೨೮೦, ಪು೧೬೧.

೯. ಅದೇ, ೧೨೮೬, ಪು.೧೬೧, ಎಕ್ಕಟಿಗ ವೀರಪಡೆಯ ಕುರಿತು ಹೆಚ್ಚಿನ ಮಾಹಿತಿಗಾಗಿ ಡಾ.ಎನ್. ಆರ್. ಲಲಿತಾಂಬ ಅವರ ಲೇಖನ "ಎಕ್ಕಟಿಗ ವೀರಪಡೆ" ಇತಿಹಾಸ ದರ್ಶನ, ಸಂಪುಟ ೨೫, ಪು.೨೬೩ನ್ನು ನೋಡಿ.

೧೦. ಎ.ಕ. ಅದೇ, ಸಂ. ೧೬೩೫, ಪು–೧೬೪

೧೧. ಅದೇ, ಸಂ.೯೨, ಆನಂದ ಸಂವತ್ಸರ ಜ್ಯೇಷ್ಠ ಬಹುಳ.

೧೨. ಪಾಳೇಗಾರರ ಕಾಲದಲ್ಲಿ ವೀರಶೈವ ಮತ ಈ ಗ್ರಾಮದಲ್ಲಿ ಪ್ರಚಾರದಲ್ಲಿರಲಿಲ್ಲವೆಂದು ಸಂದರ್ಶನದ ವೇಳೆ ಹೇಳಿರುವರಾರೂ ಇದೇ ಗ್ರಾಮದ ೧೨೬೧ರ ಶಾಸನ ಒಂದು ವೀರಶೈವ ಶರಣರ ಉಲ್ಲೇಖ ಮಾಡಿರುವುದು ಗಮನಾರ್ಹ. (ಶಾಸನ ಸಂಖ್ಯೆ–೮೩, ಪು.೧೫೫) ಬಹುಶಃ ಪಾಳೇಗಾರನೂ ವೀರಶೈವನೇ ಇದ್ದಿರಬೇಕು. ಅವನ ಕುಲದೇವರು ಬಸವ, ಹಾಗೂ ಅವನ ಕಾಲದ ವೀರಭದ್ರೇಶ್ವರ ಹಾಗೂ ಷಡ್ಭಾವರಹಿತೇಶ್ವರ ದೇಗುಲಗಳು ಇಂದಿಗೂ ವೀರಶೈವರ ಆರಾಧ್ಯ ದೇವರೆನಿಸಿದ್ದಾರೆ.

೧೩. ನಾಗರಾಜ ಶರ್ಮ ಬಿ.ಆರ್. ಮತ್ತು ಇತರರು, ಟಿ.ಬಿ.ಎಸ್. ವಠಾರ, "ತಿಪ್ಪಾಭಟ್ಟರ ಸುಬ್ಬರಾಯರ ವಠಾರ", ವಂಶ ಪರಿಚಯ, ಪು.೭–೮. ಪೂಮಗಾಮೆಯ ಶ್ರೌತ್ರಿ ಸಹೋದರರು ರುದ್ರಪಟ್ಟಣದ ಯಾಗಕ್ಕಾಗಿ ಆಹ್ವಾನಿಸಲ್ಪಟ್ಟಿದ್ದರು. ಕಾವೇರಿಯಲ್ಲಿ ಮಿಂದು ಹೊಳೆಯ ಈಚೆಗಿರುವ ಬಸವಾಪಟ್ಟಣಕ್ಕೆ ಸಹೋದರರು ಬಂದಾಗ ಪಾಳೇಗಾರ ಬಸವನಾಯಕ ಆಳ್ವಿಕೆ ನಡೆಸುತ್ತಿದ್ದ. ಈತನ ಆಳ್ವಿಕೆಯ ಅಧೀನದಲ್ಲಿದ್ದ ಬಸವಾಪಟ್ಟಣದ ಜಮೀನಿನಲ್ಲಿ ಬೆಳೆಕುಯ್ಲಿಗೆ ಬಂದ ನಂತರ ಕುಯ್ಲಾಗುವ ಮುನ್ನ ನಾಶವಾಗುತ್ತಿತ್ತು. ಈ ವಿಷಯವನ್ನು ಶ್ರೌತ್ರಿ ಸಹೋದರರಲ್ಲಿ ಪಾಳೇಗಾರ ನಿವೇದಿಸಿಕೊಂಡಾಗ ಅವರು ತಮ್ಮ ಮಂತ್ರಶಕ್ತಿಯಿಂದ ಬೆಳೆ ನಾಶವನ್ನು ನಿಲ್ಲಿಸಿದರು. ತೃಪ್ತನಾದ ಪಾಳೇಗಾರ ಅವರಿಗೆ ಆಂಜನಹೊಸಳ್ಳಿಯಿಂದ ಕಾಡನಕಟ್ಟೆ ಕೆರೆಯವರೆಗೆ ಪಾಳುಬಿದ್ದಿದ್ದ ಕೃಷಿಭೂಮಿಯನ್ನು ದಾನಮಾಡಿ ಗ್ರಾಮದಲ್ಲೇ ಉಳಿಸಿಕೊಂಡ. ಸಹೋದರರಿಗೆ ಹಿಂದೆ ತಾವಿದ್ದ ಪೂಮಗಾಮೆಯಲ್ಲಿ ಜೀವನ ನಿರ್ವಹಣೆ ಕಷ್ಟವಾಗಿದ್ದರಿಂದ ಬಸವಾಪಟ್ಟಣದಲ್ಲೇ ಉಳಿದರು. ಈ ಮಾಹಿತಿಯನ್ನು ಶ್ರೌತ್ರಿ ಕುಟುಂಬದ ಎಂಟನೇ ತಲೆಮಾರಿನವರೆನ್ನಲಾದ ಶ್ರೀಯುತ ಸುಬ್ಬಕೃಷ್ಣದೀಕ್ಷಿತರು ತಿಳಿಸಿರುತ್ತಾರೆ.

೧೪. ಪ್ರಣತಾರ್ತಿಹರನ್ ಬಿ.ಎಸ್., ಸಂಕೇತಿ–ಒಂದು ಅಧ್ಯಯನ, ಪು.೫೫, (ಮೈಸೂರು:೨೦೦೩). ಮೌಖಿಕ ಇತಿಹಾಸವೂ ಈ ಮಾಹಿತಿಗಳನ್ನೇ ನೀಡುತ್ತದೆ.

೧೫. ನಾಗರಾಜಶರ್ಮ ಬಿ.ಆರ್. ಮತ್ತು ಇತರರು, ಪೂರ್ವೋಕ್ತ.

೧೬. ಅಂದು ಸಮಾಜದ ಗಣ್ಯರು, ಸಾರ್ವಜನಿಕರು ನೀರಿನ ಅನುಕೂಲಕ್ಕಾಗಿ ಕೆರೆ ಕಟ್ಟೆ ಕಟ್ಟಿಸುವ ಧಾರ್ಮಿಕ ಕಾರ್ಯ ಕೈಗೊಳ್ಳುತ್ತಿದ್ದರು. ಅಂತಹ ವ್ಯಕ್ತಿಯೊಬ್ಬ ಕೆರೆಯೊಂದನ್ನು ಕಟ್ಟಿಸಿದ್ದು ಆತನನ್ನು "ಸಮುದ್ರಾಧಿಪತಿ" ಎಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಎ.ಕ. ಅದೇ, ಶಾ.ಸಂ.೮೮, ಪು.೧೬೨.

೧೭. ಸುಮಾರು ೧ ೧/೨ ಕಿ.ಮೀ. ಸುತ್ತಳತೆಯ ಬೃಹದಾಕಾರದ ಬಂಡೆಯನ್ನು ನೂರಾರು ವರ್ಷಗಳಿಂದ ಒಡೆದು ಕಲ್ಲುಚಪ್ಪಡಿ, ಜೆಲ್ಲಿ, ಸೈಜುಗಲ್ಲುಗಳನ್ನು ಮಾಡುತ್ತಿರುವ ಹಿನ್ನೆಲೆಯಲ್ಲಿ ಒಂದು ಕಟ್ಟೆ ನಿರ್ಮಾಣವಾಗಿದ್ದು ಅದನ್ನು ಕಂಚುವಾಳಕಟ್ಟೆ ಎಂದು ಕರೆಯಲಾಗುತ್ತಿದೆ. ಮಳೆಗಾಲದಲ್ಲಿ ಬಂಡೆಗಳಿಂದ ಜಾರಿ ಈ ಕಟ್ಟಗೆ ಹರಿಯುವ ನೀರು ಬೇಸಿಗೆಯಲ್ಲೂ ಜಾನುವಾರುಗಳ ದಾಹ ಇಂಗಿಸುತ್ತದೆ.

೧೮. ನಾಗಪ್ಪ ಎಂಬುವವರ ಮನೆಯ ಹಿತ್ತಲಿನಲ್ಲಿ ಬಾವಿ ತೋಡಿಸುವಾಗ ಪೀಠದಲ್ಲಿ ಶಾಸನ ಹೊಂದಿರುವ ೪ ೧/೨ ಅಡಿ ಎತ್ತರದ ನೇಮಿನಾಥ ಜಿನವಿಗ್ರಹ ಹಾಗೂ ೧–೨ಅಡಿ ಎತ್ತರದ ಸು.೨೪ ಜಿನಮೂರ್ತಿಗಳು ಲಭ್ಯವಾಗಿವೆ. ಎ.ಕ. ಅದೇ, ಶಾ.ಸಂ.೮೨, ಪು.೧೫೮. ಅದನ್ನು ಈಗ

ಸಾಲಿಗ್ರಾಮದ ನೇಮಿನಾಥೇಶ್ವರ ದೇಗುಲದಲ್ಲಿ ಇಡಲಾಗಿದೆ. ಈ ಮೂರ್ತಿ ದೊರೆತ ಸ್ಥಳದ ಆಸು-ಪಾಸಿನಲ್ಲಿ ಉತ್ಖನನ ಮಾಡಿದರೆ ಆ ಬಗ್ಗೆ ಹೆಚ್ಚಿನ ಮಾಹಿತಿ ದೊರೆಯುವ ಸಾಧ್ಯತೆಗಳು ಹೆಚ್ಚಿಗೆ ಇವೆ.

೧೯. ಇತ್ತೀಚಿನವರೆಗೂ ಬಸದಿಕೆರೆಯ ದಂಡೆಯಲ್ಲಿ ಕೆಲವು ಸಣ್ಣ ಸಣ್ಣ ಜಿನಮೂರ್ತಿಗಳಿದ್ದವೆಂದೂ ಈಗ್ಗೆ ಒಂದು ದಶಕದಿಂದ ಅದು ಕಣ್ಮರೆಯಾಗಿರುವುದಾಗಿ ಕೆರೆಯ ಸಮೀಪ ವಾಸಿಸುತ್ತಿರುವ ಹಳ್ಳಿಗರು ತಿಳಿಸಿದ್ದಾರೆ.

೨೦. ಎ.ಕ. ಅದೇ, ಬಸವಾಪಟ್ಟಣ-೮೩, ಪು.೧೪೯.

೨೧. ಜನಪದರ ನಂಬಿಕೆಯ ಪ್ರಕಾರ ಶೃಂಗೇರಿಯ ಸನ್ಯಾಸಿಗಳೊಬ್ಬರು ಗ್ರಾಮಕ್ಕೆ ಬಂದಾಗ ಈಗಿರುವ ಪ್ರಣತಾರ್ಥಿಹರೇಶ್ವರ ದೇಗುಲ ಮಣ್ಣಿನಲ್ಲಿ ಹೂತುಹೋಗಿರುವ ವಿಷಯ ಅರುಹಿದರೆಂದೂ ಅದನ್ನು ಊರಿನವರೆಲ್ಲಾ ಸೇರಿ ತೆರವು ಮಾಡಿ ಅಂದಿನಿಂದ ಪೂಜಾ ಕಾರ್ಯ ನಡೆಸುತ್ತಿದ್ದಾರೆ.

೨೨. ಎ.ಕ.ಅದೇ, ಬಸವಾಪಟ್ಟಣ-೮೩, ೧೨೬೧. ಪು.೧೪೯.

೨೩. ಈ ದೇವಾಲಯದಲ್ಲಿ ಹಳೆಯ ಗದ್ದುಗೆ ಮಾತ್ರ ಉಳಿಸಿಕೊಳ್ಳಲಾಗಿದೆ.

೨೪. ಎ.ಕ.ಅದೇ, ಅದೇ ಅದೇ ವ್ಯಕ್ತಿಗಳು ಶಾಂತೇಶ್ವರ ಹಾಗೂ ಹನುಮಂತೇಶ್ವರ ದೇವರುಗಳ ಅಮೃತಪಡಿಗೆ ಭೂದಾನ ಮಾಡಿರುವ ವಿವರ ಇದೆ.

೨೫. ಎ.ಕ. ಅದೇ, ಶಾ.ಸಂ.೮೪, ಪು.೧೬೦ ೧೧-೧೨ನೇ ಶತಮಾನ.

೨೬. ದಿ.ಅಣ್ಣೈಮುತ್ತು ಎಂಬುವರ ತೋಟದ ಮಕ್ಕಿಯ ಮೇಲಿದೆ.

೨೭. ಎತ್ತಿನ ಗಾಡಿಗೆ ಅಲಂಕಾರ ಮಾಡಿ ಕಾವಲು ಅಮ್ಮನ ಉತ್ಸವಮೂರ್ತಿಯ ಮೆರವಣಿಗೆ ಮಾಡಲಾಗುತ್ತದೆ. ಪ್ರಾಣಿಬಲಿ ಅಂದು ದೇವಿಗೆ ನಡೆಯುತ್ತಾದರೂ ದೇವಾಲಯದ ಮುಂದೆ ಮಾಂಸಾಹಾರ 'ಷಿಪ್ರಪ್ರಸಾದಿನಿ' ಎಂಬ ನಂಬಿಕೆ ಇದೆ.

೨೮. ಪ್ರಣತಾರ್ತಿಹರೇಶ್ವರ ದೇಗುಲದ ಬಳಿ ಸೂಕ್ಷ್ಮವಾಗಿ ಗಮನಿಸಿದರೆ ಕಂದಕ ತೋಡಿರುವ ಕುರುಹುಗಳು ಕಾಣಸಿಗುತ್ತವೆ.

೮೭

ದಾರವಂದದ ಇತಿಹಾಸ ಮತ್ತು ಪ್ರಾಚ್ಯಾವಶೇಷಗಳು

ಡಿ. ಸ್ಮಿತಾರೆಡ್ಡಿ*

ದಾರವಂದ ಇಂದಿನ ತಮಿಳುನಾಡಿನ ಡೆಂಕಣಿಕೋಟೆ ತಾಲೂಕಿಗೆ ಸೇರಿದ ಒಂದು ಗ್ರಾಮ. ಇದೊಂದು ತ್ರಿಭಾಷಾ ಸಂಕರ ಪ್ರದೇಶವಾಗಿದೆ. ಇಲ್ಲಿ ಕನ್ನಡ, ತೆಲುಗು ಭಾಷೆಗಳು ಪ್ರಾಬಲ್ಯ ಸಾಧಿಸಿವೆ. ಇತ್ತೀಚಿಗೆ ತಮಿಳು ಭಾಷೆ ಹೆಚ್ಚು ಬಳಕೆಗೆ ಬರುತ್ತಿದೆ. ಬಹುಶಃ ಊರಿಗೆ ಪ್ರವೇಶ ನೀಡುತ್ತಿದ್ದಂತೆಯೇ ಆರಂಭದಲ್ಲಿಯೇ ಕೋಟೆ ಬಾಗಿಲಿನ ಅವಶೇಷಗಳು ಇರುವುದರಿಂದ ಈ ಗ್ರಾಮಕ್ಕೆ ದಾರಾವಂದ ಎಂಬ ಹೆಸರು ಬಂದಿರಬಹುದು. ದಾರಾವಂದ ತೆಲುಗು ಭಾಷೆಯ 'ದಾರಂದ' ಎಂಬ ಪದದಿಂದ ನಿಷ್ಪನ್ನವಾಗಿರಬಹುದು. ತೆಲುಗು ಭಾಷೆಯಲ್ಲಿ ದಾರಂದ ಎಂದರೆ 'ಬಾಗಿಲು', 'ಬಾಗಿಲಿನ ದ್ವಾರ' ಎಂದರ್ಥ. ಇದು ಭೌಗೋಳಿಕವಾಗಿ ತಮಿಳುನಾಡಿನ ಭಾಗವಾಗಿದ್ದರೂ, ಹಿಂದೆ ಅಖಂಡ ಕರ್ನಾಟಕದ ಅವಿಭಾಜ್ಯ ಅಂಗವಾಗಿದ್ದ ಅಚ್ಚ ಕನ್ನಡದ ಪ್ರದೇಶವಾಗಿದೆ.ಚೋಳರ ಅವಧಿಯನ್ನು ಹೊರತುಪಡಿಸಿ ಚರಿತ್ರೆಯ ಪ್ರಾರಂಭದ ಕಾಲದಿಂದಲೂ ಕರ್ನಾಟಕದ ಭಾಗವಾಗಿಯೇ ಉಳಿದು ಕೊಂಡು ಬಂದಿದೆ. ಗಂಗರ ಅವಧಿಯಲ್ಲಿ ಗಂಗವಾಡಿ ತೊಂಬತ್ತಾರು ಸಾವಿರ ನಾಡಿನಲ್ಲಿ ಅಂತರ್ಗತವಾಗಿತ್ತು. ಹೊಯ್ಸಳರ ಅವಧಿಯಲ್ಲಿ ದೇವರ್‌ಕುಂದಾಣಿ ನಾಡಿನ ಭಾಗವಾಗಿತ್ತು. ಈ ಭಾಗ ವಿಜಯನಗರ ಅರಸರ ಆಳ್ವಿಕೆಗೂ ಒಳಪಟ್ಟಿತ್ತೆಂಬುದಕ್ಕೆ ಸಾಕ್ಷಿಯಾಗಿ ಈ ಪ್ರದೇಶದಲ್ಲಿ ಅಸಂಖ್ಯ ಶಾಸನಗಳು ಲಭ್ಯವಾಗುತ್ತವೆ. ಅಲ್ಲದೆ, ದಕ್ಷಿಣದ ಪ್ರಖ್ಯಾತ ಶೈವಧರ್ಮದ ಧಾರ್ಮಿಕ ಕೇಂದ್ರವಾದ ಗುಮ್ಮಳಾಪುರ ದಾರವಂದ ಗ್ರಾಮದ ಸಮೀಪದಲ್ಲಿದೆ. ೧೫೧೫ರಲ್ಲಿ ಡೆಂಕಣಿ ಕೋಟೆಯಲ್ಲಿ ತಿಮ್ಮರಾಜ ಒಡೆಯ ಎಂಬುವವನು ಆಳ್ವಿಕೆ ನಡೆಸುತ್ತಿದ್ದ. ಇವನು ಕ್ರಿ.ಶ. ೧೫೩೦ರಲ್ಲಿ ಡೆಂಕಣಿ ಕೋಟೆಯಲ್ಲಿ ಕೋಟೆ ಕಟ್ಟಿಸಿದ. ೧೫೬೫ರಲ್ಲಿ ತಾಳಿಕೋಟೆ ಯದ್ದ ನಡೆದಾಗ ಕೊಂಗುನಾಡಿನಲ್ಲಿದ್ದ ಸಣ್ಣಪುಟ್ಟ ಪಾಳೆಯಪಟ್ಟುಗಳಲ್ಲಿ ಡೆಂಕಣಿಕೋಟೆಯೂ ಒಂದಾಗಿದ್ದು, ಆಗ ಇಲ್ಲಿ ಬಲ್ಲಾಳ ರಾಯನೆಂಬ ಪಾಳೆಯಗಾರ ಆಳ್ವಿಕೆ ನಡೆಸುತ್ತಿದ್ದ. ೧೬೫೪ರಲ್ಲಿ ಡೆಂಕಣಿ ಕೋಟೆಯನ್ನು ಕಂಠೀರವ ನರಸರಾಜ ಒಡೆಯರ್ ರವರು ಗೌತಿ ಮೊದಲಿಯಾರ್‌ರಿಂದ ಸ್ವಾಧೀನಪಡಿಸಿಕೊಂಡರೆಂದು ಹೇಳಲಾಗುತ್ತದೆ. ನಂತರ ಹೈದರ್ ಆಲಿ, ಟೀಪು ಸುಲ್ತಾನರ ಅಧೀನಕ್ಕೆ ಈ ಪ್ರದೇಶ ಬರುತ್ತದೆ.ಟೀಪು ಸುಲ್ತಾನ್ ಹಲವಾರು ಉರ್ದು ಶಾಸನಗಳನ್ನು ಈ ಭಾಗದಲ್ಲಿ ಹಾಕಿಸಿದ್ದಾನೆ. ಡೆಂಕಣಿಕೋಟೆ, ಆಂಗ್ಲೋ ಮೈಸೂರು ಯುದ್ಧದ ಸಮಯದಲ್ಲಿ ಹಾಳಾಯಿತು.[೧]

ಈ ಪ್ರಬಂಧದಲ್ಲಿ ನಾನು ದಾರವಂದ ಗ್ರಾಮದ ಹಾಳುಬಿದ್ದ ಒಂದು ಕೋಟೆ ಹಾಗೂ ಹಲವಾರು ಅವಶೇಷಗಳು, ಡೆಂಕಣಿಕೋಟೆ ಪಾಳೆಗಾರರ ನೇರ ಆಳ್ವಿಕೆಗೆ ಸಂಬಂಧಿಸಿವೆ ಎಂಬುದನ್ನು ಸಾಧಿಸಲು ಪ್ರಯತ್ನಿಸಿದ್ದೇನೆ. ಡೆಂಕಣಿಕೋಟೆಯ ಸುತ್ತಮುತ್ತ ಈ ಅವಧಿಯಲ್ಲಿ ಇನ್ನೂ ಹಲವಾರು ಪಾಳೆಯಪಟ್ಟುಗಳು ಅಸ್ತಿತ್ವದಲ್ಲಿದ್ದವು.ಅವುಗಳಿಗೆ ಈ ಗ್ರಾಮ ಏಕೆ ಸೇರಿರಬಾರದು? ಡೆಂಕಣಿಕೋಟೆ ಪಾಳೆಯಗಾರರಿಗೇ ಏಕೆ ಈ ಗ್ರಾಮ ಸೇರುತ್ತದೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ ಆಧಾರವಾಗಿ ನಾನು ಪ್ರಾಕ್ಚಾರಿತ್ರಿಕ ಆಕರಗಳನ್ನು ಮಾತ್ರವಲ್ಲದೆ, ಪೂರಕವಾಗಿ ಸಾಹಿತ್ಯಿಕ ಆಧಾರಗಳನ್ನು ಅವಲಂಬಿಸಿರುತ್ತೇನೆ. ಅಲ್ಲದೆ ಭೌಗೋಳಿಕವಾಗಿ ದಾರವಂದ ಗ್ರಾಮ ಡೆಂಕಣಿಕೋಟೆಯಿಂದ ಕೇವಲ ೧೦ ಕಿ.ಮೀ.ಗಳ ಅಂತರದಲ್ಲಿದೆ. ಇನ್ನೊಂದು ಬಾಹ್ಯ ಆಧಾರಗಳು. ಈ ಪ್ರದೇಶದಲ್ಲಿ ಡೆಂಕಣಿಕೋಟೆ ಪಾಳೆಯಗಾರರ ಬಗ್ಗೆ ನಮಗೆ ಯಾವುದೇ ಶಾಸನೋಲ್ಲೇಖಗಳು ದೊರೆಯುವುದಿಲ್ಲ. ಆದರೆ ಹಲವಾರು ಸಾಹಿತ್ಯಕಆಕರಗಳಿಂದ ಇಲ್ಲಿ ಒಂದು ಪಾಳೆಯಪಟ್ಟು ಅಸ್ಥಿತ್ವದಲ್ಲಿತ್ತೆಂದು ತಿಳಿದುಬರುತ್ತದೆ.

ಕ್ರಿ.ಶ. ೧೪೫೦ರಲ್ಲಿ ವೀರಶೈವ ಕವಿಯಾದ ಬೊಮ್ಮರಸನು ತನ್ನ ಕೃತಿ 'ಸೌಂದರಪುರಾಣ'ದಲ್ಲಿ ಡೆಂಕಣಿಕೋಟೆ ಪುರವರಾಧೀಶನಾದ ಗುಂಡಬೊಮ್ಮ ಚೋಳನಾರಾಯಣ, ಚೋಳರ ಭೀಮ ಎಂಬ ಬಿರುದುಗಳುಳ್ಳ ಕಾಮ ನೃಪ ಸಿರುಮಯಾಂಬಾ ಪುತ್ರನಾದ ಪರಮ ಮಾಹೇಶ್ವರ ವೈಶ್ಯಕುಲತಿಲಕ ಕವಿಕಮಲ ಭಾಸ್ಕರ ತಿಪ್ಪರಸನು ರಚಿಸಿ ಹೇಳಲು ಚೊಕ್ಕದೇವಪಾರ್ಯನ ಮಗ ಗುಮ್ಮಳಾಪುರವರಾಧೀಶ ಚಿಕ್ಕವೀರಣಾರ್ಯನ ಆಜ್ಞಾನುಸಾರ ತಾನು ಈ ಕಾವ್ಯ ರಚಿಸಿದಂತೆ ಹೇಳಿಕೊಂಡಿದ್ದಾನೆ.[೨]

* ಅಧೀನ ಕಾರ್ಯದರ್ಶಿ, ಭಾಷಾಂತರ ಶಾಖೆ, ಕರ್ನಾಟಕ ವಿಧಾನ ಪರಿಷತ್ತು ಸಚಿವಾಲಯ, ವಿಧಾನಸೌಧ, ಬೆಂಗಳೂರು.

ಅಣ್ಣಾಜಿ ಎಂಬ ಕವಿ ತನ್ನ 'ಸೌಂದರ ವಿಲಾಸ' ಕೃತಿಯಲ್ಲಿ (ಕ್ರಿ.ಶ.೧೭೦೦) ಡೆಂಕಣಿಕೋಟೆ ಪಾಳೆಯಗಾರ ದೊಡ್ಡಯ್ಯನನ್ನು ಉಲ್ಲೇಖಿಸುತ್ತಾನೆ. ಆದರೆ ಆತನ ವಂಶಸ್ಥರ ಬಗೆಗಾಗಲೀ, ಆತನ ಬಗೆಗಾಗಲೀ ನಮಗೆ ಹೆಚ್ಚಿನ ಮಾಹಿತಿ ಗಳು ಲಭ್ಯವಾಗುವುದಿಲ್ಲ. ಕ್ರಿ.ಶ. ೧೭೪೦ರಲ್ಲಿದ್ದ ನೂರೊಂದ ತನ್ನ ಕೃತಿ 'ಸೌಂದರಕಾವ್ಯದಲ್ಲಿ'[೩] ಶ್ರೀರಂಗ ಪಟ್ಟಣದಲ್ಲಿ ಕೃಷ್ಣರಾಜನು ಆಳುತ್ತಿರುವನೆಂದೂ, ಆತನ ಸೇನಾಪತಿಯಾದ ಕಳಲೆ ನಂಜರಾಜನು ತುರುಕರನ್ನು ಜಯಿಸಿದನೆಂದು ಹೇಳಿ ನಂಜರಾಜನನ್ನು ವಿಶೇಷವಾಗಿ ಸ್ತುತಿಸಿರುವುದರಿಂದ ಕವಿ ಈತನ ಆಶ್ರಿತನಾಗಿದ್ದಂತೆ ತೋರುತ್ತದೆ. ಈತ ಕೃಷ್ಣರಾಜನ ಆಸ್ಥಾನ ವರ್ಣನೆ ಮಾಡುತ್ತಾ ಹಲವು ಪ್ರಭುಗಳು ಬಂದಿರುವು ದನ್ನು ತಿಳಿಸುತ್ತಾ ಅವರಲ್ಲಿ ಡೆಂಕಣಿಕೋಟೆ ಪಾಳೆಯಗಾರ ದೊಡ್ಡಯ್ಯನ ಮಗ ಬಂದಿದ್ದನೆಂದು ಹೇಳುತ್ತಾನೆ. ಇಲ್ಲಿ ಕವಿಗೆ ದೊಡ್ಡಯ್ಯನ ಮಗ ಪ್ರಸ್ತುತನಾಗದೆ, ದೊಡ್ಡಯ್ಯನನ್ನು ಮಾತ್ರ ಹೆಸರಿಸುತ್ತಾನೆ.

ಕ್ರಿ.ಶ. ೧೪೫೦ರಲ್ಲಿ ಬೊಮ್ಮರಸನಸೌಂದರ ಪುರಾಣದ ಪ್ರಕಾರ ಈ ವೇಳೆಗೆ ಇಲ್ಲಿ ಪಾಳೆಯಪಟ್ಟಿರುವುದು ಸಾಧ್ಯವಿಲ್ಲ. ಈ ವೇಳೆಗೆ ವಿಜಯನಗರದ ಅಧಿಕಾರಿಗಳು ಅಲ್ಲಿದ್ದು, ಅವರೇ ಆಳ್ವಿಕೆ ನಡೆಸುತ್ತಿದ್ದಿರಬಹುದು. ಅಥವಾ ಒಬ್ಬ ಅಮರನಾಯಕ, ಸಾಮಂತಾಧಿಕಾರಿ ಅಲ್ಲಿ ಆಳ್ವಿಕೆ ನಡೆಸುತ್ತಿದ್ದಿರಬಹುದು.

ಆದರೆ, ೧೭೪೦ರ ಅವಧಿಯಲ್ಲಿ ದೊಡ್ಡಯ್ಯ ಎಂಬ ಒಬ್ಬ ವ್ಯಕ್ತಿಯ ಉಲ್ಲೇಖ ಮಾತ್ರ ನಮಗೆ ದೊರೆಯುತ್ತಿದೆ. ಬಹುಶಃ ಕೈಫಿಯತ್ತಿನಂತಹ ದಾಖಲೆಗಳು ಅಲ್ಲಿ ದೊರೆತರೆ ನಮಗೆ ಹೆಚ್ಚಿನ ಮಾಹಿತಿ ಲಭ್ಯವಾಬಹುದು. ಇಲ್ಲಿ ಈ ವೇಳೆಗಾಗಲೇ ಪಾಳೆಯಪಟ್ಟು ಅಸ್ತಿತ್ವಕ್ಕೆ ಬಂದಿದ್ದಿರಬಹುದು. ಏಕೆಂದರೆ ಬೆಂಗಳೂರು ಸುತ್ತಮುತ್ತ ಇರುವ ಹೊಸೂರು, ಬೇರಿಕೆ, ಬಾಗಲೂರು, ಸೂಳಗಿರಿ, ರಾಯಕೋಟೆ, ರತ್ನಗಿರಿ ಇಲ್ಲೆಲ್ಲಾ ಸಣ್ಣಮಟ್ಟ ಪಾಳೆಯಪಟ್ಟುಗಳು ಅಸ್ತಿತ್ವದಲ್ಲಿದ್ದುದನ್ನು ಕೆಲವು ಆಧಾರಗಳು ಪುಷ್ಟೀಕರಿಸುತ್ತವೆ.[೪]

ಅಲ್ಲದೆ,ಇಲ್ಲಿಲಬ್ಯವಾದ ಹಲವಾರು ಅವಶೇಷಗಳಲ್ಲಿ ಇಲ್ಲಿರುವ ರಾಗಿ ಬೀಸುವ ಕಲ್ಲಿನಲ್ಲಿ ಒಂದು ಸಣ್ಣ ಶಾಸನವಿದೆ. ಅದು **ನಂದನ ಸಂ ದ್ವಾದಶಿ ಮಾರ್ಗಶಿರ ಶುದ್ಧ ೧೧ ಶು**.ಎಂದಿದೆ.ಇದನ್ನು ಸ್ವಾಮಿ ಕಣ್ಣಾಪಿಳ್ಳೆಯವರ ಪಂಚಾಂಗದ ಪ್ರಕಾರ ಪರಿಶೀಲಿಸಿದಾಗ ಇದು ೨೮-೧೧-೧೭೧೨ಕ್ಕೆ ಸರಿಹೊಂದುತ್ತದೆ.

ನೂರೊಂದನ ಸೌಂದರ ಕಾವ್ಯ, ಅಣ್ಣಾಜಿಯಸೌಂದರ ವಿಳಾಸವೂ ಇದೇ ಅವಧಿಗೆ ಸೇರುತ್ತದೆ. ಎಂದರೆ ೧೮ನೇ ಶತಮಾನದಲ್ಲಿ ಇಲ್ಲಿ ಒಂದು ಪಾಳೆಯಪಟ್ಟಿತ್ತು. ಇದಲ್ಲದೆ ದಾರವಂದಕ್ಕೂ ಡೆಂಕಣಿಕೋಟೆಗೂ ಏನು ಸಂಬಂಧ ಎಂಬುದಕ್ಕೆ ಇನ್ನೂ ಕೆಲವು ಮಾಹಿತಿಗಳು ದೊರೆಯುತ್ತವೆ. ಮೈಸೂರು ಅರಸರ ಕಾಲದಲ್ಲಿ ಕಳಲೆ ನಂಜರಾಜ ಮತ್ತಿತರ ದಳವಾಯಿಗಳ ಅವಧಿಯಲ್ಲಿ ಮೈಸೂರು ರಾಜ್ಯದ ಗಡಿ ಡೆಂಕಣಿಕೋಟೆ, ಕೃಷ್ಣಗಿರಿಯವರೆಗೆ ವಿಸ್ತರಿಸಿರುತ್ತವೆ. ಮೈಸೂರು ಅರಸರು ಗಡಿ ಪ್ರದೇಶಗಳಲ್ಲಿದ್ದ ಹಲವಾರು ಪಾಳೆಯಗಾರರಿಗೆ ಆಶ್ರಯ ನೀಡಿ ಅಲ್ಲಿ ಅವರು ಕೋಟೆ-ಕೊತ್ತಲಗಳನ್ನು ಕಟ್ಟಿಕೊಳ್ಳುವುದಕ್ಕೆ, ಸೈನ್ಯವನ್ನು ಇಟ್ಟುಕೊಳ್ಳುವು ದಕ್ಕೆ ಅವಕಾಶ ನೀಡುತ್ತಾರೆ.ಅಲ್ಲದೆ ಮೈಸೂರು ರಾಜ್ಯಕ್ಕೆ ಸಮಯ ಬಂದಾಗ ರಕ್ಷಣೆ ನೀಡಬೇಕೆಂಬ ಷರತ್ತು ವಿಧಿಸುತ್ತಾರೆ. ಅಷ್ಟೇ ಅಲ್ಲದೆ ರತ್ನಗಿರಿ, ರಾಯಕೋಟೆ, ಸೂಳಗಿರಿ ಮುಂತಾದ ಬೆಟ್ಟಗಳ ಮೇಲೆ ಕೋಟೆಗಳಣ್ನು ಕಟ್ಟಿ ಸೈನ್ಯವನ್ನು ಅಲ್ಲಿ ನೆಲೆಗೊಳಿಸುವುದಕ್ಕೆ ಏರ್ಪಾಟು ಮಾಡುತ್ತಾರೆ. ಅದರ ಜೊತೆಗೆ ಮದ್ದಿನ ಕಾರ್ಖಾನೆಗಳನ್ನು ಸ್ಥಾಪನೆ ಮಾಡುತ್ತಾರೆ. ಮೈಸೂರು ಅರಸರು ಕರೆದಾಗ ಹತ್ತಾರು ಜನರು ಕಾಳಗಕ್ಕೆ ಬರಲು ಸಿದ್ಧರಿರಬೇಕೆಂದು ಪಾಳೆಯಗಾರರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುತ್ತಾರೆ.[೫] ಸಮರ್ಥರಾದವರಿಗೆ ರಕ್ತ ಮಾನ್ಯ ಉಂಬಳಿಗಳನ್ನು ಹಾಗೂ ಬುಡಕಟ್ಟು ವೀರರಾದ ಬೇಡ ವಂಶಸ್ಥರಿಗೆ, ಕುರುಬರಿಗೆ ಹಲವಾರು ಮಾನ್ಯಗಳನ್ನು ಉಂಬಳಿ ಯಾಗಿ ನೀಡುತ್ತಾರೆ.ಈ ಪ್ರದೇಶಗಳಲ್ಲಿ ಕ್ಷೇತ್ರ ಪರಿವೀಕ್ಷಣೆಗೆ ಹೋದಾಗ ಈಗಲೂ ಅಲ್ಲಿ ಹಲವಾರು ಕೋಟೆ ಕೊತ್ತಲಗಳು ಗ್ರಾಮಗಳ ಅವಶೇಷಗಳು, ತಾಲೀಂಖಾನಗಳು ಕಂಡು ಬರುತ್ತವೆ. ೧೭೭೧ರಲ್ಲಿ ಲಾರ್ಡ್ ಕಾರ್ನ್‌ವಾಲೀಸನು ಶ್ರೀರಂಗ ಪಟ್ಟಣ ವಶಪಡಿಸಿಕೊಂಡಾಗ ಈ ಪ್ರದೇಶ ಹಲವಾರು ಆಂಗ್ಲೋ-ಮೈಸೂರು ಯುದ್ಧಗಳಿಗೆ ವೇದಿಕೆಯಾಗುತ್ತದೆ.ಆಗ ಡೆಂಕಣಿಕೋಟೆಯ ಕೋಟೆಯೂ ಸೇರಿ ಹಲವಾರು ಕೋಟೆಗಳು ನಾಶವಾಗುತ್ತವೆ.

ಈ ಅಂಶಗಳ ಹಿನ್ನೆಲೆಯಲ್ಲಿ ನಾನು ದಾರವಂದದಲ್ಲಿ ದೊರೆತ ಪ್ರಾಚ್ಯವಶೇಷಗಳನ್ನು ವಿಶ್ಲೇಷಿಸಬಯಸುತ್ತೇನೆ. ದಾರವಂದ ಗ್ರಾಮಕ್ಕೆ ಪ್ರವೇಶಿಸುತ್ತಿದ್ದಂತೆ ಅಲ್ಲೊಂದು ಕೋಟೆಯಿದೆ.ರಾಗಿಕಲ್ಲು, ಮೂರುವರೆ ಅಡಿ ನ್ಯಾಸವಿದ್ದು, ಒಂದೊಂದು ಕಲ್ಲು ಒಂದು ಅಡಿಯಷ್ಟು ದಪ್ಪ ಇದೆ. ಇದರ ಗಾತ್ರ ನೋಡಿದರೆ ಇದು ಒಂದು ಕುಟುಂಬಕ್ಕೆ ಸಂಬಂಧಪ ಡದೆ, ಸಮುದಾಯ ಅಥವಾ ಹೆಚ್ಚು ಜನರಿರುವ ಒಂದು ದೊಡ್ಡ ಕುಟುಂಬಕ್ಕೆ ಸೇರಿದಂತೆ ತೋರುತ್ತದೆ.ಇದರ ಮೇಲೆ ಒಂದು ಶಾಸನವಿದ್ದು ಹಿಂದೆ ಹೇಳಿದಂತೆ ಇದು ಕ್ರಿ.ಶ. ೧೭೧೨ಕ್ಕೆ ಸೇರುತ್ತದೆ. ಅದರಲ್ಲಿ ನಂದನ ಸಂ.ಮಾರ್ಗಶಿರ ಶು ೧೩ ಶು ಎಂದಿದ್ದು ಕೆಳಗಿರುವ ಒಂದು ಅಕ್ಷರ ಅಸ್ಪಷ್ಟವಾಗಿದೆ.

ಇಲ್ಲಿರುವ ನೀರಿನ ತೊಟ್ಟಿ ಒಂಬತ್ತುವರೆ ಅಡಿ ಉದ್ದ ಎರಡೂವರೆ ಅಡಿ ಅಗಲವಿದೆ.ಊರಿನ ಹಿಂಭಾಗದ ಭಾಗದಲ್ಲಿ

ಒಂದು ಉಯ್ಯಾಲೆ ಕಂಬ ಇದೆ. ಸುಮಾರು ೩೦ ಅಡಿ ಉದ್ದ ಇದ್ದು ಇದರ ಮೇಲೆ ಒಬ್ಬ ವಾದ್ಯಗಾರ, ಸ್ತ್ರೀಯ ಶಿಲ್ಪ ಹಾಗೂ ಒಂದು ಹಾವಿನ ಶಿಲ್ಪವಿದೆ.ಇದರಲ್ಲಿರುವ ಕಬ್ಬಿಣದ ಸರಪಳಿಗಳು ಈಗಲೂ ಇದ್ದು ಸ್ವಲ್ಪ ಸವೆದಿವೆ. ಇಲ್ಲಿರುವ ಅಶ್ವತ್ಥ ಕಟ್ಟೆಯ ಬಳಿ ಕ್ರಿ.ಶ. ೧೨ನೇ ಶತಮಾನದ ಭೈರವನ ಸುಮಾರು ಎರಡು ಅಡಿ ಉದ್ದದ ಸುಂದರವಾದ ಶಿಲ್ಪವಿದೆ. ಸ್ಥಳೀಯರ ಪ್ರಕಾರ ಇಲ್ಲಿ ಮೊದಲು ಎರಡು ಸುತ್ತಿನ ಕೋಟೆಯಿತ್ತು. ಈಗ ಊರ ಹೊರಗಿನ ಕೋಟೆ ಸಂಪೂರ್ಣವಾಗಿ ನಾಶವಾಗಿದ್ದು ಒಳಭಾಗದ ಕೋಟೆ ಮಾತ್ರ ಉಳಿದುಕೊಂಡಿದೆ. ಕೋಟೆ ಪ್ರದೇಶ ಭೂಮಟ್ಟದಿಂದ ೨೦ ಅಡಿಗಳಷ್ಟು ಎತ್ತರದ ಭಾಗದಲ್ಲಿದೆ.ಕೋಟೆಗೆ ಪ್ರವೇಶಿಸುವ ಪ್ರವೇಶ ದ್ವಾರದಲ್ಲಿ ಗಣಪತಿಯ ಒಂದು ಉಬ್ಬು ಶಿಲ್ಪವಿದೆ. ಒಳಕೋಟೆಯು ಸುಮಾರು ೩-೪ ಎಕರೆಗಳ ವಿಸ್ತೀರ್ಣದಲ್ಲಿ ವ್ಯಾಪಿಸಿದೆ ಮತ್ತು ಎತ್ತರದ ಪ್ರದೇಶದಲ್ಲಿ ನೆಲೆಗೊಂಡಿದೆ.

ಇಲ್ಲಿ ಹೊಯ್ಸಳರ ಕಾಲದ ಒಂದು ತಮಿಳು ಶಾಸನವಿದೆ. ಇದು ಸಂಪೂರ್ಣವಾಗಿ ಬೇಲಿಯೊಳಗೆ ಸೇರಿಕೊಂಡಿದೆ. ಕ್ಷೇತ್ರಕಾರ್ಯಕೈಗೊಂಡಾಗ ಈ ಶಾಸನಕ್ಕೆ ಹೊಂದಿಕೊಂಡಂತೆ ಬೇಲಿಯಲ್ಲಿ ದೊಡ್ಡದಾದ ಜೇನುಗೂಡು ಇದ್ದುದರಿಂದ ಶಾಸನದ ಛಾಯಾಚಿತ್ರವನ್ನಾಗಲೀ, ಪಡಿಯಚ್ಚನ್ನಾಗಲೀ ತೆಗೆದುಕೊಳ್ಳಲಾಗಲಿಲ್ಲ. ಶಾಸನದ ಮೇಲೆ ಗಂಡಬೇರುಂಢನ ರೇಖಾ ಚಿತ್ರವಿದ್ದು ಇದು ಬನ್ನೇರುಘಟ್ಟದ ಮುಮ್ಮಡಿ ಬಲ್ಲಾಳನ ಶಾಸನದಲ್ಲಿರುವ ರೇಖಾಚಿತ್ರವನ್ನು ಯಥಾವತ್ತಾಗಿ ಹೋಲುತ್ತದೆ.

ಇವಲ್ಲದೆ, ಇನ್ನೂ ಹಲವಾರು ಸಣ್ಣಪುಟ್ಟ ಅವಶೇಷಗಳು ಈ ಗ್ರಾಮದಲ್ಲಿ ಚದುರಿ ಬಿದ್ದಿವೆ. ಹಿಂದೊಮ್ಮೆ ಡೆಂಕಣಿಕೋಟೆ ಪಾಳೆಯಗಾರರ ಪಾಳೆಯಪಟ್ಟಿನ ಅಂಗವಾಗಿದ್ದು ತನ್ನೊಡಲಲ್ಲಿ ಹಲವಾರು ಅವಶೇಷಗಳನ್ನಿಟ್ಟುಕೊಂಡು ಬಂದ ಈ ಗ್ರಾಮ ಇಂದು ಇತಿಹಾಸಕಾರರ ಅವಜ್ಞೆಗೆ ಒಳಗಾದ ಕುಗ್ರಾಮವಾಗಿ ಮಾರ್ಪಟ್ಟಿದೆ.[೬]

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಗೆಝೆಟ್ ಆಫ್ ಇಂಡಿಯಾ ಡಬ್ಲ್ಯು. ಫ್ರಾನ್ಸಿಸ್, ಪುಟ ೪೩-೪೪.

೨. ನರಸಿಂಹಾಚಾರ್. ಆರ್. ಕರ್ಣಾಟಕ ಕವಿಚರಿತೆ-೨, ೧೯೭೪, ಪುಟ ೪೭

೩. ಕರ್ಣಾಟಕ ಕವಿಚರಿತೆ-೩, ೧೯೭೪.

೪. ಸೇಲಂ ಜಿಲ್ಲಾ ಗೆಝೆಟಿಯರ್.

೫. ಶರಣ ಸಾಹಿತ್ಯ ಸಂಪುಟ ೧೭, ಸಂಚಿಕೆ ೩ (ಸಂ.) ಶಿವಮೂರ್ತಿ ಶಾಸ್ತ್ರಿ, ಜೂನ್ ೧೯೫೪.

೬ ಕ್ಷೇತ್ರಕಾರ್ಯದ ಸಮಯದಲ್ಲಿ ನನ್ನೊಂದಿಗೆ ಬಂದು ಸಹಾಯ ಮಾಡಿದ ಚಿಕ್ಕಪ್ಪ ಎಂ. ರಾಮರೆಡ್ಡಿಯವರಿಗೆ ಹಾಗು ಹಲವಾರು ಉಪಯುಕ್ತ ಮಾಹಿತಿಗಳನ್ನು ನೀಡಿದ ಕಾರ್ತಿಕ್.ಎಸ್. ರವರಿಗೆ ಧನ್ಯವಾದಗಳು.

೮೮

ಹಿರೆಹಂದಿಗೋಳ ಗ್ರಾಮದ ಪ್ರಾಚ್ಯಾವಶೇಷಗಳು ಒಂದು ಅಧ್ಯಯನ

ಪ್ರೊ. ಕೆ.ಎಂ. ಗರಗ*

ಗದಗ ತಾಲೂಕಿನ ಪಶ್ಚಿಮಕ್ಕಿರುವ ಹಿರೇಹಂದಿಗೋಳ ಗ್ರಾಮವು ಗದಗದಿಂದ ೧೫ ಕಿ.ಮಿ ಅಂತರದಲ್ಲಿದೆ.

ಸ್ಥಳನಾಮ ಹಿನ್ನಲೆ : ಹಿರೆಹಂದಿಗೋಳ ಗ್ರಾಮವು ಐತಿಹಾಸಿಕ ಹಿನ್ನಲೆವುಳ್ಳದಾಗಿದ್ದು ಬೆಳ್ವೊಲ – ೩೦೦ ಆಡಳಿತ ಘಟಕದ ಒಂದು ಗ್ರಾಮವಾಗಿತ್ತು. ಈ ಗ್ರಾಮವು ನದಿಯನ್ನು ಹೋಲುವಂತಹ ಒಂದು ದೊಡ್ಡದಾದ ೩೨೦ ಏಕರೆ ವಿಸ್ತೀರ್ಣದ ವೀರನಾರಾಯಣ ಜಲಾಶಯವು ಇಕ್ಕೆಲಗಳಲ್ಲಿ ಎರಡು ಗ್ರಾಮಗಳನ್ನು ವಿಭಜಿಸಿದೆ. ಅದುವೆ ಚಿಕ್ಕಹಂದಿಗೋಳ ಮತ್ತು ಹಿರೆಹಂದಿಗೋಳ.

ಈ ಜಲಾಶಯವು ನದಿಯನ್ನು ಹೋಲುತ್ತಿರುವದರಿಂದ ಹಿರೆನದಿಕೊಳ್ಳ ->ಹಿರೇನಂದಿಕೊಳ್ಳ -> ಹಿರೇಹಂದಿಗೋಳ ಮತ್ತು ಚಿಕ್ಕನದಿಕೊಳ್ಳ -> ಚಿಕ್ಕನಂದಿಕೊಳ್ಳ -> ಚಿಕ್ಕಹಂದಿಗೋಳವಾಗಿದೆ.

ಇನ್ನೊಂದು ರೀತಿಯಿಂದ ಹೇಳುವುದಾದರೆ ಈ ಜಲಾಶಯದ ಇಕ್ಕಲಗಳಲ್ಲಿರುವ ಬೆಟ್ಟಗಳು ನಂದಿಯ ಮುಖವನ್ನು ಹೋಲುತ್ತಿರುವುದರಿಂದ ನಂದಿಯ ಬೆಟ್ಟ ನದಿಯ ಬೆಟ್ಟ ನಕಾರ ಹೋಗಿ ಹಕಾರವಾಗಿ ಹಂದಿ ಬೆಟ್ಟ, ಹಂದಿಗೋಳವಾಗಿದೆ. ನಂದಿ+ಗೊಳ=ನಂದಿಗೊಳ, ಹಿರೇಹಂದಿಗೋಳವಾಗಿದೆ. ಕಪ್ಪತಗುಡ್ಡದ ಮೂಲ ಬೆಟ್ಟಗಳಾದ ಈ ಎರಡು ಬೆಟ್ಟಗಳು ನಂದಿಮುಖವನ್ನು ಹೋಲುತ್ತಿವೆ. ಆದ್ದರಿಂದ ನಂದಿಗ್ರಾಮ, ಹಂದಿಗ್ರಾಮ ಹಂದಿಗೋಳವಾಗಿದೆ. ಎಂತಲೂ ಜನಪದ ಸಾಹಿತ್ಯ ಹೇಳುತ್ತದೆ.

ಬಸವಣ್ಣವರ ಕಾಲದಲ್ಲಿ ಕಲ್ಯಾಣದಲ್ಲಿ ಕ್ರಾಂತಿಯಾದಾಗ ಅಕ್ಕ ನಾಗಲಾಂಬಿಕೆಯ ಪುತ್ರರಾದ ಚನ್ನಬಸವಣ್ಣನವರು ಹಿರೇಹಂದಿಗೋಳ ಗ್ರಾಮಕ್ಕೆ ಬಂದು ಸ್ವಲ್ಪ ದಿನ ತಂಗಿದ್ದು ಮುಂದೆ ಶ್ರೀ ಕ್ಷೇತ್ರ ಉಳವಿಗೆ ಪ್ರಯಾಣಿಸಿ ದರೆಂದು ಪ್ರತೀತಿ ಇದೆ ಇಂದಿಗೂ ಈ ಗ್ರಾಮ "ಉಳವಿಯ ಮುಂಬಾಗಿಲು ಕಲ್ಯಾಣದ ಕಡೆ ಬಾಗಿಲು" ಎಂದು ಹೇಳುತ್ತಾರೆ.

ಈ ಹಿರೆಹಂದಿಗೋಳ ಗ್ರಾಮವು ಹಲವಾರು ದೇವಾಲಯಗಳ ಮತ್ತು ಪ್ರಾಚ್ಯಾವಶೇಷಗಳ ಆಗರವಾಗಿದೆ ಅವುಗಳನ್ನು ಈ ಕೆಳಗೆ ಚರ್ಚಿಸಲಾಗಿದೆ.

೧) **ಪಂಚಲಿಂಗೇಶ್ವರ ದೇವಾಲಯ:** ಈ ಊರಿನ ಪ್ರಕೃತಿ ಸೌಂದರ್ಯದ ಮಡಿಲಲ್ಲಿ ಬೆಟ್ಟದ ಮೇಲಿರುವ ಪಂಚಲಿಂಗೇಶ್ವರ ದೇವಾಲಯವು ಭವ್ಯವಾಗಿದೆ ಪೂರ್ವಕ್ಕೆ ಮುಖಮಾಡಿರುವ ಈ ದೇವಾಲಯವು ಜೀರ್ಣೋದ್ದಾರಗೊಂಡಿದ್ದು ಗರ್ಭಗೃಹ ಮತ್ತು ನಂದಿಮಂಟಪವಿದೆ. ಕಪ್ಪುಶಿಲೆಯಲ್ಲಿ ಪರಮಾತ್ಮನ ಪಂಚಮುಖಗಳಾದ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ್ಯ ಎಂಬ ಪಂಚಲಿಂಗ ಗಳನ್ನು ಹೊಂದಿದ ಪಾಣಿಪೀಠವಿದೆ. ಇದು ಉದ್ಭವ ಮೂರ್ತಿ ಸಹ ಎಂದು ಹೇಳುತ್ತಾರೆ. ನಾಡಿನಾದ್ಯಂತ ವಿವಿಧೆಡೆ ಪಂಚಲಿಂಗೇಶ್ವರ ಹೆಸರಿನ ಅನೇಕ ದೇವಾಲಯಗಳಿವೆ. ಆದರೆ ಹಿರೇಹಂದಿಗೋಳ ಗ್ರಾಮದ ಪಂಚಲಿಂಗೇಶ್ವರ ದೇವರಮೂರ್ತಿಯಂತಹ ವಿಶಿಷ್ಟ ಮೂರ್ತಿ ಕಾಶಿ ಹೊರತುಪಡಿಸಿ ಬೇರೆಡೆ ಎಲ್ಲಿಯೂ ಇಲ್ಲ. ಹೀಗಾಗಿ ಇದು "ದಕ್ಷಿಣ ಕಾಶಿ" ಎಂಬ ಅಭಿದಾನ ಪಡೆದಿದೆ. ಕಾಶಿಗೆ ಹೋಗಲಾಗ ದಿದ್ದರೆ ಇಲ್ಲಿನ ಪಂಚಲಿಂಗೇಶ್ವರ ದರ್ಶನ ಪಡೆದರೆ ಕಾಶಿಗೆ ಹೋದ ಪುಣ್ಯ ಬರುತ್ತದೆ ಎಂದು ಈ ಭಾಗದ ಜನರ ನಂಬಿಕೆ. ಕಡೆ ಶ್ರಾವಣ ಸೋಮವಾರದಂದು ಇಲ್ಲಿ ಜಾತ್ರೆ ನಡೆಯುತ್ತದೆ.

೨) **ಅಮೃತೇಶ್ವರ ದೇವಾಲಯ :** (ಅಂಬರೇಶ ದೇವಾಲಯ)

ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿರುವ ಈ ದೇವಾಲಯ ಪೂರ್ವಾಭಿಮುಖವಾಗಿದ್ದು ಗರ್ಭಗೃಹ ಅಂತರಾಳ ಮತ್ತು ಮುಖಮಂಟಪ ಹೊಂದಿದೆ. ಗರ್ಭಗೃಹವು ಚೌಕಾಕಾರ

* ಕೆ.ಎಂ. ಗರಗ, ಇತಿಹಾಸ ಉಪನ್ಯಾಸಕರು, ಜೆ.ಸಿ.ಟಿ.ಎಂ. ಪಿಯೂ ಕಾಲೇಜು, ಹುಲಕೋಟಿ, ಗದಗ ಜಿಲ್ಲೆ ೫೮೨೨೦೫

ವಾಗಿದ್ದು ಅದರಲ್ಲಿ ಶಿವಲಿಂಗವಿದೆ. ಗರ್ಭಗೃಹದ ದ್ವಾರವು ಸರಳ ಕೆತ್ತನೆಯಿಂದ ಕೂಡಿದೆ. ಛತ್ತಿನಲ್ಲಿ ಉರ್ಧ್ವಮುಖ ವಾಗಿರುವ ಪದ್ಮವಿದೆ. ಮುಖಮಂಟಪವನ್ನು ಇತ್ತಿಚೆಗೆ ನಿರ್ಮಿಸಲಾಗಿದೆ. ದೇವಾಲಯದ ಗರ್ಭಗೃಹದ ಹೊರ ಭಿತ್ತಿಯ ಮೇಲ್ಭಾಗದಲ್ಲಿ ಸುತ್ತುವರೆದ ಕಪೋತವಿದೆ. ಗರ್ಭಗೃಹದ ಲಲಾಟದಲ್ಲಿ ಗಣೇಶ ಶಿಲ್ಪವಿದೆ. ಅಂತರಾಳದ ದ್ವಾರಬಾಗಿಲದ ಬಲಕ್ಕೆ ನಾಗಬಂಧವಿದೆ ನಾಗಬಂಧದ ಕೆಳಭಾಗದಲ್ಲಿ ಹುತ್ತವಿದ್ದು ಹುತ್ತವು ನಾಲ್ಕು ಸಣ್ಣ ನಾಗಗಳನ್ನು ಹೊಂದಿದೆ. ದ್ವಾರಬಾಗಿಲದ ಎಡಕ್ಕೆ ಉಮಾಮಹೇಶ್ವರ ಮೂರ್ತಿ ಇದೆ.

ಉಮಾಮಹೇಶ್ವರ ಮೂರ್ತಿಯು ಹಸಿರು ಮಿಶ್ರಿತ ಮೃದುಶಿಲೆಯಲ್ಲಿರುವ ಶಿವನು ಸವ್ಯಲಲಿತಾಸನದಲ್ಲಿದ್ದರೆ ಪಾರ್ವತಿಯು ಶಿವನ ಎಡ ತೊಡೆಯ ಮೇಲೆ ಬಲಗಾಲು ಮಡಚಿ ಎಡಗಾಲು ಇಳಿ ಬಿಟ್ಟಿರುವ ಸವ್ಯಲಲಿತಾಸನ ಭಂಗಿಯಲ್ಲಿ ಕುಳಿತಿರುವಳು.

ಶಿವನು ಜಟಾಮುಕುಟಧಾರಿಯು ಕರ್ಣಕುಂಡಲ ಚತುರ್ಭುಜದಾರಿ ಆಭರಣ – ಡಮರು – ತ್ರಿಶೂಲವಿದ್ದು ಪಾರ್ವತಿಯನ್ನು ಬಳಸಿ ಹಿಡಿದಿರುವ ಕೈಗಳಿವೆ. ಶಿವನಿಗೆ ರುದ್ರಾಕ್ಷಿ, ಕೈಕಟ್ಟು, ಉದರಬಂಧಿ, ರುಂಡಮಾಲೆ, ಕಾಲ್ಗಡಗ ಇವೆ. ಜಟಾಮುಕುಟದಾರಿಯಾದ ಪಾರ್ವತಿ ತನ್ನ ಬಲಗೈಯಿಂದ ಶಿವನ ಬಲಭುಜದ ಮೇಲೆ ಕೈ ಹಾಕಿ ಎಡಗೈಯಲ್ಲಿ ಫಲ ಧರಿಸಿರುವಳು. ನಂದಿವಾಹನ ಪೀಠದ ಮೇಲೆ ಕಂಡುಬಂದ ಈ ಶಿಲ್ಪವು ಸುಂದರವಾಗಿದೆ.

ದೇವಾಲಯದ ಮುಂಭಾಗದ ಗೋಡೆಯಲ್ಲಿ ಒಂದು ಶಾಸನವಿದೆ. ಅದು ಕ್ರಿ.ಶ. ೧೨ನೇ ಶತಮಾನದ್ದಾಗಿದ್ದು ತ್ರಿಕೂಟೇಶ್ವರ ದೇವರ ಸ್ತುತಿಯನ್ನು ಹೊಂದಿದೆ. ಶಾಸನದ ಮೇಲ್ಭಾಗದ ಮಧ್ಯದಲ್ಲಿ ಶಿವಲಿಂಗವಿದೆ ಮತ್ತು ಪೂಜಿಸುವ ಯತಿಯಿದ್ದಾನೆ. ಬಲಕ್ಕೆ ಆಕಳು ಮತ್ತು ಕರು ಎಡಕ್ಕೆ ಕುಳಿತ ನಂದಿಯಿದೆ ಶಾಸನದ ಕೊನೆಭಾಗದಲ್ಲಿ ಚಂದ್ರ-ಸೂರ್ಯರ ಕೆತ್ತನೆಯಿದೆ.

ದೇವಾಲಯದ ಎಡಭಾಗದಲ್ಲಿ ಎರಡು ಪಟ್ಟಿಕೆಯಿರುವ ವೀರಗಲ್ಲು ಇದೆ. ಒಂದನೇ ಪಟ್ಟಿಕೆಯಲ್ಲಿ ವೀರನನ್ನು ಅಪ್ಸರೆಯರು ಸ್ವರ್ಗಸ್ತನಾದ ವೀರನನ್ನು ಕರೆದುಕೊಂಡು ಹೋಗುವ ದೃಶ್ಯವಿದೆ. ಎರಡನೇ ಪಟ್ಟಿಕೆಯಲ್ಲಿ ವೀರನು ಸ್ವರ್ಗಪ್ರಾಪ್ತಿಯಾದ ಪೀಠದ ಮೇಲೆ ಕುಳಿತಿದ್ದಾನೆ. ಇಬ್ಬರು ಅಪ್ಸರೆಯರು ಎಡ-ಬಲಕ್ಕೆ ನಿಂತಿದ್ದಾರೆ.

೩) **ಉಡಚವ್ವನ ದೇವಾಲಯ** :- ಈ ದೇವಾಲಯವು ಕೇವಲ ಗರ್ಭಗೃಹ ಹೊಂದಿದೆ. ಇಲ್ಲಿ ರಾಷ್ಟ್ರಕೂಟರ ಕಾಲದ ಶಾಸನವಿದೆ – ರಾಷ್ಟ್ರಕೂಟರ ಕೊಟ್ಟಿಗನ ಕಾಲಕ್ಕೆ ಸೇರಿದ ಕ್ರಿ.ಶ. ೯೭೦ರಲ್ಲಿ ಮಾರಸಿಂಗ ಪೆರ್ಮಾಡಿ ಪುಲಿಗೆರೆ-೩೦೦ ಆಳುತ್ತಿರುವಾಗ ಕೊಂತ್ತದ ಪೆಗ್ಗಳಯ್ಯನಿಂದ ಸುವರ್ಣದಾನ ನೀಡಿದ ವಿವರವಿದೆ. ಹಸು ಮತ್ತು ಕರು ಮತ್ತು ಅದರ ಮುಂದೆ ಮಂಟಪದಲ್ಲಿ ಶಿವಲಿಂಗವಿದೆ. ಮಂಟಪದ ಮೇಲ್ಗಡೆ ಸ್ವಸ್ತಿಕ ಚಿಹ್ನೆಯಿದ್ದು ಕೊನೆಗೆ ಕಳಸವಿದೆ ಈ ದೇವಾಲಯದ ಇಕ್ಕೆಲಗಳಲ್ಲಿ ಮಹಿಷಮರ್ದಿನಿ ಶಿಲ್ಪಗಳಿವೆ.

೪) **ಕಲ್ಮೇಶ್ವರ ದೇವಾಲಯ** : ಪೂರ್ವಾಭಿಮುಖವಾಗಿದ್ದು ಕಲ್ಯಾಣಿ ಚಾಲುಕ್ಯರ ಕಾಲದ ದೇವಾಲಯವಾಗಿದೆ. ಪ್ರಾಚೀನ ದೇವಾಲಯದ ಭಾಗಗಳನ್ನು ಬಳಸಿ ಗರ್ಭಗೃಹ ಮಾತ್ರವಿರುವ ದೇವಾಲಯವನ್ನು ಇತ್ತೀಚೆಗೆ ನಿರ್ಮಿಸಲಾಗಿದೆ. ದೇವಾಲಯದ ಗರ್ಭಗೃಹದಲ್ಲಿ ಶಿವಲಿಂಗವಿದೆ. ಮುಚ್ಚಿಗೆಯಲ್ಲಿ ಪದ್ಮವಿದೆ. ಬಾಗಿಲುವಾಡ ಸರಳವಾಗಿದೆ.

೫) **ರಾಮಲಿಂಗೇಶ್ವರ ದೇವಾಲಯ** : ಇದೇ ಊರಿನ ಯಲಬುರ್ಗಾ ಮಠದ ಓಣಿಯಲ್ಲಿ ರಾಮಲಿಂಗೇಶ್ವರ ಗುಡಿ ಇದ್ದು ಮೂಲ ದೇವಾಲಯ ನೆಲಸಮವಾಗಿದ್ದು ಶಿವಲಿಂಗ ಮಾತ್ರವಿದೆ.

೬) **ಹನುಮಂತ ದೇವಾಲಯ** : ಈ ದೇವಾಲಯವು ವಿಜಯನಗರೋತ್ತರವಾಗಿದ್ದು ಗರ್ಭಗೃಹದಲ್ಲಿ ಮಾತ್ರ ಆಂಜನೇಯ ಮೂರ್ತಿಯಿದ್ದು ಇಕ್ಕೆಲಗಳಲ್ಲಿ ನಾಗಬಂಧಗಳಿವೆ. ಈ ದೇವಾಲಯದ ಎಡ ಬಲಕ್ಕೆ ಭೈರವಿಯರ ಮೂರ್ತಿಗಳಿವೆ. ಭೈರವಿ ಶಿವನ ಸವ್ಯಲಲಿತಾ ಸನದಲ್ಲಿ ಕುಳಿತಿದ್ದು ನಾಲ್ಕು ಕೈಗಳಲ್ಲಿ ಡಮರು, ತ್ರಿಶೂಲ, ಪಾನ ಬಟ್ಟಲು, ಖಡ್ಗವಿದೆ ಮತ್ತು ಕೊರಳಲ್ಲಿ ರುಂಡಮಾಲೆ ಇದೆ. ಇನ್ನೊಂದು ಭೈರವಿ ಶಿಲ್ಪದಲ್ಲಿ ಸಹ ಭೈರವಿ ಸವ್ಯಲಲಿತಾಸನದಲ್ಲಿ ಕುಳಿತಿದ್ದು ಕೀರಿಟಮುಕುಟ, ಮುತ್ತಿನಹಾರ, ಕೈಕಂಕಣ, ಉಬ್ಬಿದ ಎದೆ, ಸೊಂಟಪಟ್ಟಿ, ಸೀರಿಯುಡೆಗೆ, ಕಾಲ್ಗಡಗ, ವೈಜಯಂತಿ ಹಾರಗಳಿವೆ.

೭) **ದುರ್ಗಾದೇವಿ ಗುಡಿ** : ಇಕ್ಕೆಲುಗಳಲ್ಲಿ ಎರಡು ವಿಶಿಷ್ಟವಾದ ಶಿಲ್ಪಗಳಿವೆ.

೧) ದಕ್ಷಿಣಮೂರ್ತಿ ಶಿಲ್ಪ

೨) ಭೈರವ ಶಿಲ್ಪ

ಶಿವನ ಸ್ವರೂಪದ ದಕ್ಷಿಣಮೂರ್ತಿಯ ಶಿಲ್ಪ: ಕಲ್ಯಾಣ ಚಾಲುಕ್ಯರ ಕಾಲದ ಶಿಲ್ಪವಾಗಿದ್ದು ದ್ವಿಭುಜಧಾರಿಯಾಗಿದ್ದು



ಅಮೃತೇಶ್ವರ ದೇವಾಲಯದ ಮುಂದೆ ೧೨ನೇ ಶತಮಾನದ ಕಲ್ಯಾಣ ಚಾಲುಕ್ಯರ ಶಾಸನ

ವರ್ತುಲಕಾರದ ಪ್ರಭಾವಳಿ, ಕೀರಿಟಮುಕುಟ, ಕರ್ಣಕುಂಡಲ, ಕಂಠೀಹಾರ ಕೈಗಳಲ್ಲಿರುವ ವಸ್ತುಗಳು ಅಸ್ಪಷ್ಟವಾಗಿವೆ.

ಭೈರವ ಶಿಲ್ಪ: ಕಲ್ಯಾಣ ಚಾಲುಕ್ಯರ ಕಾಲದ ದ್ವಿಬಂಗಿಯಲ್ಲಿ ನಿಂತಿರುವ ಭೈರವ ಶಿಲ್ಪದ ಉದರದ ಕೆಳಭಾಗ ಭಗ್ನಗೂಂಡಿದೆ. ಭೈರವನ ತಲೆಯ ಕೂದಲುಗಳನ್ನು ಕರಂಡಮುಕುಟದಲ್ಲಿ ಬಂಧಿಸಲಾಗಿದೆ ಚತುರ್ಭುಜಧಾರಿ ಭೈರವನ ಹಿಂಭಾಗದ ಕೈಗಳು ಭಗ್ನಗೂಂಡಿವೆ. ಕರ್ಣಕುಂಡಲ, ಕಂಠಿಹಾರ, ತೋಳುಬಂಧಿಗಳಲ್ಲಿ ಸರ್ಪಬಂಧಗಳಿವೆ. ಜಟಾಮುಕುಟದ ಹಿಂದೆ ಹರಡಿದ ಕೇಶ ಪ್ರಭಾವಳಿ ಹೊಂದಿದೆ. ಶಿವನ ಉಗ್ರರೂಪ ಭೈರವರೂಪವಾಗಿದ್ದು ಶಿಲ್ಪದಲ್ಲಿ ಉಗ್ರತೆಯನ್ನು ಬಿಂಬಿಸಲಾಗಿದೆ. ಆದರೆ ಮುಖಭಾಗವು ಸವಕಳಿ ಹೊಂದಿದೆ.

ಇದಲ್ಲದೆ ಈ ಊರಲ್ಲಿ ಚದುರಿದ ಶಿವಲಿಂಗಗಳು, ಸಪ್ತಲಿಂಗಗಳು, ಚತುರ್ಭುಜ ಸಪ್ತಮೂರ್ತಿಕೆಯರು, ಭುವನೇಶ್ವರಿ ಶಿಲ್ಪ, ನಂದಿವಿಗ್ರಹ ಕಂಡುಬರುತ್ತವೆ.

ಇವಲ್ಲದೆ ಇಲ್ಲಿ ಇನ್ನು ಹಲವಾರು ತೃಟಿತವಾದ ಶಿಲ್ಪಗಳಿದ್ದು ಅವು ಸಹ ಇತಿಹಾಸ ದೃಷ್ಟಿಯಿಂದ ಪ್ರಮುಖವಾಗಿವೆ. ಈ ಊರಿಲ್ಲಿ ಗಂಭೀರವಾದ ಸಂಶೋಧನೆ ಮಾಡಿದರೆ ಇಲ್ಲಿನ ಇತಿಹಾಸಕ್ಕೆ ಹೆಚ್ಚಿನ ಬೆಳಕನ್ನು ನೀಡಲು ಸಹಾಯಕವಾಗಬಲ್ಲದು ಎಂದು ಹೇಳಬಹುದು.

[ಈ ಪ್ರಬಂಧದ ಕ್ಷೇತ್ರಕಾರ್ಯದಲ್ಲಿ ನೆರವಾದ ಹಿರೇಹಂದಿಗೋಳ ಊರಿನ ಗಣ್ಯರಾದ ಶ್ರೀ ಗಿರಿಯಪ್ಪ ಕುರ್ತಕೋಟಿಯವರಿಗೂ ಮತ್ತು ಜಕ್ಕನಗೌಡ್ರ ಮತ್ತು ಜಿ.ಸಿ.ಟಿ.ಎಂ.ಪಿ.ಯು. ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕರಾದ ಪ್ರೊ. ಬಿ.ವಾಯ್.ನರೆಗಲ್ಲ ಮತ್ತು ಪ್ರಬಂಧ ರಚಿಸಲು ಸಹಕರಿಸಿದ ಕುರ್ತಕೋಟಿಯ ಸಹಕಾರಿ ಪ.ಪೂ. ಕಾಲೇಜು ಇತಿಹಾಸ ಉಪನ್ಯಾಸಕರಾದ ಡಾ. ವಾಯ್. ಆರ್. ಬೇಲೇರಿ ಇವರಿಗೂ ಸಹ ಹೃತ್ಪೂರ್ವಕ ಧನ್ಯವಾದಗಳು.]

ಆಧಾರಸೂಚಿ

೧. ಕರ್ನಾಟಕ ದೇವಾಲಯ ಕೋಶ ಗದಗ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಹೂಗಾರ ಮಾಸಿಕ ಪತ್ರಿಕೆ, ಜನವರಿ, ೨೦೧೩.

೪೯

ಬಿಜಾಪುರದ ಆದಿಲ್‌ಷಾಹಿಗಳ ಧಾರ್ಮಿಕೇತರ ಕಟ್ಟಡಗಳು (ಹಾವೇರಿ ಜಿಲ್ಲೆಗೆ ಸೀಮಿತ)

ಪ್ರೊ. ಎಮ್.ಎನ್. ಬೆನ್ನೂರ*

ಪ್ರಸ್ತಾವನೆ

ದಖ್ಖನ ಚರಿತ್ರೆಯಲ್ಲಿ ಬಿಜಾಪೂರ ಆದಿಲಷಾಹಿಗಳು ಕ್ರಿ.ಶ.೧೪೮೯ರಲ್ಲಿ ಯೂಸುಪ್ ಆದಿಲ್‌ಖಾನ ಸ್ವತಂತ್ರವಾದ ರಾಜ್ಯವನ್ನು ಸ್ಥಾಪಿಸಿ, ಬಿಜಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು. ಒಟ್ಟಿಗೆ ಬಿಜಾಪೂರದಲ್ಲಿ ಒಂಬತ್ತು ಜನ ಸುಲ್ತಾನರು ೨೦೦ ವರ್ಷಗಳ ಕಾಲ ಆಳ್ವಿಕೆ ಮಾಡಿದರು. ಇವರ ಪ್ರಾಬಲ್ಯ ಸಿಕಂದರ ಆದಿಲ್‌ಷಾಹಿ ಕಾಲದಲ್ಲಿ ಅಂದರೆ ಕ್ರಿ.ಶ. ೧೬೮೬ರಲ್ಲಿ ಕೊನೆಗೊಂಡಿತು. ಬಹುಮುಖ್ಯವಾಗಿ ಮಹಮ್ಮದ್ ಆದಿಲ್‌ಷಾಹಿ, ೨ನೇ ಇಬ್ರಾಹಿಂ ಆದಿಲ್‌ಷಾಹಿ ಮತ್ತು ೧ನೇ ಅಲಿ ಆದಿಲ್‌ಷಾಹಿಗಳು ರಾಜ್ಯವನ್ನು ವಿಸ್ತರಿಸಲು ನಿರಂತರವಾಗಿ ವಿಜಯನಗರ, ಮರಾಠರು, ನವಾಬರು ಹಾಗೂ ದೇಶಗತಿಗಳೊಂದಿಗೆ ಹೋರಾಟ ಮಾಡಬೇಕಾಯಿತು. ಪರಿಣಾಮವಾಗಿ ಕರ್ನಾಟಕ, ಗೋವಾ, ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಕೇರಳ ರಾಜ್ಯಗಳವರೆಗೆ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿದರು. ೧೫೬೫ ರಕ್ಕಸತಂಗಡಿಗಿ ಯುದ್ಧದವರೆಗೆ ಆದಿಲ್‌ಷಾಹಿಗಳ ರಾಜ್ಯ ಗಡಿ ತುಂಗಭದ್ರಾ ನದಿ ತೀರದ ಪ್ರದೇಶ ದಾಟಿರಲಿಲ್ಲ. ತಾಳಿಕೋಟೆ ಕದನದ ನಂತರದ ಆದಿಲ್‌ಷಾಹಿಗಳು ತುಂಗಭದ್ರ ನದಿಯನ್ನು ದಾಟಿ ತಮಿಳುನಾಡಿನ ಜಿಂಜಿ ಕೋಟೆಯವರೆಗೆ ದಕ್ಷಿಣದಲ್ಲಿ ಯುದ್ಧದ ನೀತಿಯನ್ನು ಮುಂದುವರಿಸಿ ವಿಜಯಶಾಲಿ ಗಳಾದರು. ಇಂತಹ ವಿಸ್ತಾರವಾದಂತಹ ಸಾಮ್ರಾಜ್ಯದಲ್ಲಿ ವೈರಿಗಳ ರಕ್ಷಣೆಗಾಗಿ ರಾಜ್ಯದ ನಾನಾ ಕಡೆಗಳಲ್ಲಿ ಕೋಟೆಗಳನ್ನು, ಕೊತ್ತಲಗಳನ್ನು, ಅರಮನೆಗಳನ್ನು, ಕಛೇರಿಗಳನ್ನು, ಕಾಲುವೆಗಳನ್ನು, ಬಾವಿಗಳನ್ನು, ಗೋರಿಗಳನ್ನು ಮತ್ತು ಮಸೀದಿಗಳನ್ನು ನಿರ್ಮಿಸಿದರು.

ಹಾವೇರಿ ಜಿಲ್ಲೆಯ ಆದಿಲ್‌ಷಾಹಿಗಳ ಧಾರ್ಮಿಕೇತರ ಕಟ್ಟಡಗಳು

ಹಾವೇರಿ ಜಿಲ್ಲೆಯಲ್ಲಿರುವ ತುಂಗಭದ್ರ ನದಿಯವರೆಗೆ ತಮ್ಮ ರಾಜ್ಯವನ್ನು ವಿಸ್ತರಿಸಿದರು. ಈ ಜಿಲ್ಲೆಯಲ್ಲಿ ಲಭ್ಯವಾಗಿರುವ ಪರ್ಶಿಯನ್, ಅರೆಬಿಕ್ ಶಾಸನಗಳು, ಸ್ಮಾರಕಗಳು ಸಾಕ್ಷಿಯಾಗಿ ನಿಂತಿವೆ. ಮುಖ್ಯವಾಗಿ ರಾಣೆಬೆನ್ನೂರು, ಐರಣಿ, ಬಂಕಾಪುರ, ರಟ್ಟಿಹಳ್ಳಿ, ಮಾಸೂರು, ಮದಗ, ಖಂಡೆಬಾಗೂರು, ಸವಣೂರು, ಬಂಕಾಪುರ, ನೀರಲಗಿ, ತಿಳವಳ್ಳಿ, ಹಿರೇಕೆರೂರ ಹಾಗೂ ಹಾನಗಲ್ ಮುಂತಾದ ಸ್ಥಳಗಳಲ್ಲಿ ನಿರ್ಮಾಣವಾದ ಕೋಟೆ, ಕೊತ್ತಲಗಳು, ಗೋರಿಗಳು, ಮಸೀದಿಗಳು, ದರ್ಗಾ, ಇದ್ಗಾ ಮುಂತಾದವುಗಳನ್ನು ಇಲ್ಲಿ ಅಧ್ಯಯನಿಸಲಾಗಿದೆ.

ಧಾರ್ಮಿಕೇತರ ಕಟ್ಟಡಗಳು

ಕೋಟೆಗಳು, ಕೊತ್ತಲಗಳು, ಅರಮನೆಗಳು, ಬುರುಜುಗಳು, ಆಡಳಿತ ಕಛೇರಿಗಳು, ಸಂಗೀತ ಕಛೇರಿಗಳು ನ್ಯಾಯಾಲಯಗಳು, ಕೆರೆ–ಬಾವಿ, ಕಾಲುವೆ, ಗೋರಿಗಳು ಮುಂತಾದವುಗಳು ಧಾರ್ಮಿಕೇತರ ಕಟ್ಟಡಗಳಾಗಿವೆ. ಕೆಲವು ಸ್ಥಳಗಳಲ್ಲಿ ಹಿಂದೂ ಮುಸ್ಲಿಮರು ಸುಲ್ತಾನರ ಗೋರಿಗಳನ್ನು ಹಾಗೂ ಸೂಫಿಗಳ ದರ್ಗಾಗಳನ್ನು ಆರಾಧಿಸುತ್ತಾರೆ. ಕಾರಣ ಜನರಲ್ಲಿ ಸುಲ್ತಾನನೇ ದೇವರು ಎಂಬ ನಂಬಿಕೆ ಅವರಲ್ಲಿ ಬೆಳೆದು ಬಂದಿರುತ್ತದೆ. ಆದರೆ ನೈಜಸಂಗತಿ ಎಂದರೆ ಸುಲ್ತಾನರ ಸಮಾಧಿಯೂ ಕೂಡ ಧಾರ್ಮಿಕೇತರ ಕಟ್ಟಡವಾಗಿವೆ. ಉದಾ: ಗೋಳಗುಮ್ಮಟ ಮತ್ತು ಇಬ್ರಾಹಿಂ ರೋಜವನ್ನು ಉಲ್ಲೇಖಿಸಬಹುದು.

ಐರಣಿ

ರಾಣೇಬೆನ್ನೂರಿಂದ ೨೨ ಕಿ.ಮೀ. ದೂರದಲ್ಲಿರುವ ತುಂಗಭದ್ರಾನದಿಯ ತೀರ ಪ್ರದೇಶದಲ್ಲಿದೆ. ಈ ಸ್ಥಳ ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು ಹಾಗೂ ವಿಜಯನಗರದ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಹಾಗೆಯೇ ಐರಣಿ ವೀರಶೈವ ಧರ್ಮದ ಪ್ರಮುಖ ನೆಲೆಯಾಗಿದೆ. ಕಾರಣ ಮುಪ್ಪಿನಾರ್ಯರ ಮಠವಿದೆ. ಐರಣಿಯ ಮಠದ ಸಮೀಪದಲ್ಲಿ ಕಲ್ಯಾಣಿ ಚಾಲುಕ್ಯರ ಶಾಸನ ಕೂಡ ಲಭ್ಯವಾಗಿದೆ.

ಐರಣಿ ಊರಿನ ಆಗ್ನೇಯ ದಿಕ್ಕಿನಲ್ಲಿ ಬರುವ ಕೋಟೆಯು ತುಂಗಭದ್ರಾ ನದಿಯ ತೀರದಲ್ಲಿದೆ. ನದಿ

* ಮುಖ್ಯಸ್ಥರು, ಇತಿಹಾಸ ವಿಭಾಗ, ಎಸ್.ಟಿ.ಸಿ. ಕಾಲೇಜು, ಬನಹಟ್ಟಿ.

ಉತ್ತರಾಭಿಮುಖವಾಗಿ ಹರಿಯುತ್ತದೆ. ವಿಜಯನಗರ ಅರಸರ ಕಾಲದಲ್ಲಿ ಕಟ್ಟಿಸಿದ ಕೋಟೆ ಆಗಿದೆ ಎಂಬ ಅಭಿಪ್ರಾಯವಿದೆ. ಆದರೆ ಬಂಕಾಪುರದಲ್ಲಿರುವ ೧೫೫೦-೯೧ ಹಾಗೂ ೧೫೭೭-೯೮ರ ಶಾಸನಗಳನ್ನು, ಹಿರೇಕೆರೂರು ತಾಲೂಕಿನ ಮಾಸೂರಿನಿಂದ ಆರು ಕಿ.ಮೀ. ದೂರದ ಮದಗದಲ್ಲಿರುವ ಕ್ರಿ.ಶ. ೧೬೩೫ರ ಶಾಸನಗಳನ್ನು ಹಾಗೂ ರಾಣೆಬೆನ್ನೂರಿನ ಐರಣಿ ಹತ್ತಿರದ ರಾಣೆಬೆನ್ನೂರು ಶಾಸನಗಳನ್ನು ಆಧಾರ ವಾಗಿಟ್ಟುಕೊಂಡು ಗಮನಿಸಿದಲ್ಲಿ ಬಿಜಾಪುರದ ಮಹಮ್ಮದ ಆದಿಲ್‌ಷಾಹಿಯು ವಿಜಯನಗರದ ಅರಸರೊಂದಿಗೆ ಹೋರಾಟವನ್ನು ಮಾಡಿ ಬಂಕಾಪುರ, ಮಗದ, ರಟ್ಟಿಹಳ್ಳಿ, ರಾಣೆಬೆನ್ನೂರ ಪ್ರದೇಶವನ್ನು ವಶಪಡಿಸಿಕೊಂಡಿದ್ದರು. ಆಗ ತುಂಗಭದ್ರ ನದಿಯನ್ನು ವಿಜಯನಗರ ಅರಸರು ಮತ್ತು ಬಿಜಾಪುರ ಆದಿಲ್‌ಷಾಹಿಗಳು ತಮ್ಮ ಗಡಿಯನ್ನಾಗಿ ಮಾಡಿಕೊಂಡಿದ್ದು ಕಂಡುಬರುತ್ತದೆ. ಹೀಗಾಗಿ ಮಹಮ್ಮದ ಆದಿಲ್‌ಷಾನ ಕಾಲದಲ್ಲಿ ಇಲ್ಲಿರುವ ಕೋಟೆಯನ್ನು ವಶಪಡಿಸಿಕೊಂಡು ಅದನ್ನೇ ಪುನರ್ ನಿರ್ಮಾಣಗೊಳಿಸಿರಲು ಸಾಕು.

ಅರಮನೆ

ಐರಣಿ ಕೋಟೆಯ ಉತ್ತರ ಈಶಾನ್ಯ ದಿಕ್ಕಿನಲ್ಲಿ ಕೋಟೆ, ಅಧಿಕಾರಿಯ ಅರಮನೆಯು ಇಂದು ಶಿಥಿಲಾವಸ್ಥೆಯಲ್ಲಿದೆ. ಅರಮನೆಯು ಉತ್ತರಾಭಿಮುಖವಾಗಿ ಕಟ್ಟಲ್ಪಟ್ಟಿದೆ. ಇದು ಎರಡು ಅಂತಸ್ತಿನ ಕಟ್ಟಡವಾಗಿದೆ. ಇಂಡೋ-ಇಸ್ಲಾಮಿಕ್ ಶೈಲಿಯಲ್ಲಿ ಕಟ್ಟಲ್ಪಟ್ಟಿರುವುದು ಸ್ಪಷ್ಟವಾಗಿದೆ. ಇದು ಸುಮಾರು ೬೦ ಅಡಿ ಅಗಲ ೫೦ ಅಡಿ ಉದ್ದ ಹಾಗೂ ಹಿಂಬದಿಯ ಎತ್ತರ ೨೫ ಅಡಿಯಾಗಿದೆ. ಈ ಕಟ್ಟಡವನ್ನು ಗಾರೆ, ಇಟ್ಟಿಗೆ, ಕಲ್ಲು ಹಾಗೂ ಗಚ್ಚನ್ನು ಬಳಸಿದ್ದಾರೆ. ಅರಮನೆಯ ಮೇಲಿನ ಅಂತಸ್ತಿಗೆ ಹೋಗಲು ಬಲಬದಿಯಲ್ಲಿ ಕಮಾನಿನ ಆಕೃತಿಯುಳ್ಳ ಚಿಕ್ಕ ಪ್ರವೇಶದ್ವಾರವನ್ನು ನಿರ್ಮಿಸಿದ್ದಾರೆ. ಅದಕ್ಕೆ ಸೋಪಾನಗಳು ಕೂಡ ಇವೆ. ಮೇಲಂತಸ್ತಿನ ಪ್ರವೇಶ ದ್ವಾರ ಉತ್ತರದಿಂದ ದಕ್ಷಿಣಕ್ಕೆ ಹೋಗಿ ಪೂರ್ವಕ್ಕೆ ಅರಮನೆಯನ್ನು ಪ್ರವೇಶಿಸಿದೆ. ಒಳಗೋಡೆಯ ಮೇಲಿನ ಅಂತಸ್ತಿನಲ್ಲಿ ಸಣ್ಣ-ಸಣ್ಣ ಕವಾಟಗಳನ್ನು ನಿರ್ಮಿಸಿದ್ದಾರೆ.

ಅರಮನೆಯ ಹಿಂಬದಿಯ ಗೋಡೆ ತನ್ನ ಮೂಲ ಅಸ್ತಿತ್ವವನ್ನು ಉಳಿಸಿಕೊಂಡರೆ, ಮುಂಬದಿಯ ಹಾಗೂ ಅಕ್ಕ-ಪಕ್ಕದ ಗೋಡೆಗಳು ಶಿಥಿಲಗೊಂಡಿವೆ.

ಸೈನಿಕರ ವಸತಿ ಗೃಹಗಳು

ಸೈನಿಕರ ವಸತಿ ನಿಲಯಗಳು ಅರಮನೆಯ ನೈರುತ್ಯ ದಿಕ್ಕಿನಲ್ಲಿ ಕಟ್ಟಲ್ಪಟ್ಟಿವೆ. ಮುಖ್ಯವಾಗಿ ಐದು ಕಟ್ಟಡಗಳ ತಲವಿನ್ಯಾಸವು ಸ್ಪಷ್ಟವಾಗಿ ಕಂಡುಬಂದಿವೆ. ಇನ್ನುಳಿದ ಕಟ್ಟಡಗಳ ಅವಶೇಷಗಳು ಅಸ್ಪಷ್ಟವಾಗಿವೆ. ಇಂದು ಒಂದು ಮನೆ ಮಾತ್ರ ಸ್ಪಷ್ಟವಾದ ಅವಶೇಷ ಉಳಿದಿದೆ. ಅದು ಕಲ್ಲು ಹಾಗೂ ಗಾರೆಯಿಂದ ಕಟ್ಟಲ್ಪಟ್ಟಿದೆ. ಇದರ ಪ್ರವೇಶ ಬಾಗಿಲು ವಾಯುವ್ಯ ಭಾಗದಲ್ಲಿದ್ದು. ಕಟ್ಟಡದ ಒಳಗೆ ಕಮಾನಿನ ಗೋಡೆಗಳು ಹಾಗೂ ಕೋಷ್ಟಕಗಳು ಶಿಥಿಲಾವಸ್ಥೆಯಲ್ಲಿವೆ.

ಕಂದಕ ಮತ್ತು ಕಾಲುವೆಗಳು

ಕೋಟೆಯ ಉತ್ತರ ಮತ್ತು ನೈರುತ್ಯ ಭಾಗದಲ್ಲಿ ಕಾಲುವೆಗಳು ಕಟ್ಟಲ್ಪಟ್ಟಿವೆ. ಕೋಟೆಗೆ ಹೊಂದಿಕೊಂಡಂತೆ ದೊಡ್ಡ ಕಂದಕ. ಅದರ ಪಕ್ಕದಲ್ಲಿಯ ಕಾಲುವೆ ಪಶ್ಚಿಮದಿಂದ ಪೂರ್ವಕ್ಕೆ ಕಂಡುಬಂದಿದೆ. ಕೋಟೆಯ ಕೆಳಭಾಗದಲ್ಲಿ ಜನವಸತಿಗೆ ಅನುಕೂಲವಾಗಲು ಇದನ್ನು ನಿರ್ಮಿಸಿದ್ದರು. ನದಿಯ ಸಮೀಪದಲ್ಲಿ ಚಿಕ್ಕದಾದ ಎರಡು ಬುರುಜುಗಳನ್ನು ಕರಿಕಲ್ಲು, ಇಟ್ಟಿಗೆ ಹಾಗೂ ಕಲ್ಲಿನಿಂದ ಕಟ್ಟಿದ್ದಾರೆ. ಕಂದಕದ ಮಧ್ಯದಲ್ಲಿ ನೀರು ಹೊರಬರಲು ಕಮಾನಿನಾಕೃತಿಯ ತೂಬನ್ನು ಮಾಡಿದ್ದಾರೆ. ಇದು ಬಿಜಾಪುರದ ತೊರವಿ ತೂಬಿನ ಮಾದರಿಯಲ್ಲಿ ಕಟ್ಟಲ್ಪಟ್ಟಿದೆ.

ಕೋಟೆ – ಕೊತ್ತಲಗಳು

ವಿಶಾಲವಾದ ಐರಣಿ ಕೋಟೆ ತುಂಗಭದ್ರ ನದಿಯ ತೀರಕ್ಕೆ ಹೊಂದಿಕೊಂಡ ಕಟ್ಟಡವಾಗಿದೆ. ಇದು ಸುಮಾರು ೨೫೦x೧೦೦ ಚದುರ ಅಡಿಗಳಷ್ಟು ಆವರಣವನ್ನು ಹೊಂದಿದೆ. ಕೋಟೆ ಉತ್ತರಕ್ಕೆ ಎತ್ತರವಾಗಿದ್ದು, ದಕ್ಷಿಣಕ್ಕೆ ಕಡಿದಾಗಿದೆ. ಇಲ್ಲಿರುವ ಕೋಟೆಯ ಗೋಡೆಗಳು ಜೀರ್ಣೋದ್ಧಾರಗೊಂಡಿರುವುದು ಸ್ಪಷ್ಟವಾಗಿದೆ. ಕೆಳಗಿನ ಭಾಗ ವಿಜಯನಗರದ ಕೋಟೆಯ ತಲವಿನ್ಯಾಸವನ್ನು ಹೋಲುವಂತಿದೆ. ಕಪ್ಪುಕಲ್ಲು ಹಾಗೂ ಗಚ್ಚನ್ನು ಅಳವಡಿಸಲಾಗಿದೆ.

ಕಲ್ಲಿನ ಕಟ್ಟಡದ ಮೇಲ್ಭಾಗದಲ್ಲಿ ಕಮಾನಿನ ಆಕೃತಿಯ ಇಂಡೋ-ಇಸ್ಲಾಮಿಕ್ ಸಾರಸೆನಿಕ ಶೈಲಿಯ ಗೋಡೆ ನಿರ್ಮಿಸಿದ್ದಾರೆ. ಇದಕ್ಕೆ ಇಟ್ಟಿಗೆ ಹಾಗೂ ಗಾರೆಯನ್ನು ಅಳವಡಿಸಿದ್ದಾರೆ. ಕಮಾನಿನ ಮಧ್ಯದಲ್ಲಿ ಮದ್ದು-ಗುಂಡುಗಳನ್ನು ಸಿಡಿಸಲಿಕ್ಕೆ ಸಣ್ಣ ಕಂದಕಗಳನ್ನು ನಿರ್ಮಿಸಿದ್ದಾರೆ. ಈ ಕಮಾನುಗಳು ಕೇವಲ ಕೋಟೆಯ ಈಶಾನ್ಯದ ಬುರ್ಜಿನಲ್ಲಿ ಅಳವಡಿಸಿದ್ದಾರೆ. ಅದೇ ರೀತಿ ಪೂರ್ವ ಮತ್ತು ದಕ್ಷಿಣ ನೈರುತ್ಯದ ಬುರ್ಜಗಳು ಹಾಗೂ ಗೋಡೆಗಳಲ್ಲಿ ಜೀರ್ಣೋದ್ಧಾರಗೊಂಡಿದನ್ನು ಕಾಣಬಹುದಾಗಿದೆ. ಈಶಾನ್ಯ ದಿಕ್ಕಿನ ಬುರ್ಜು ಅತಿ ಎತ್ತರವಾದ ಹಾಗೂ ವೃತ್ತಾಕಾರವಾಗಿದ್ದು, ಸುತ್ತಲೂ ಕಮಾನಗಳಿವೆ. ಕೋಟೆಯ ಉತ್ತರ ಮತ್ತು ಪಶ್ಚಿಮದ ಗೋಡೆಗಳು ಸಂಪೂರ್ಣವಾಗಿ ಶಿಥಿಲಗೊಂಡಿದೆ. ಕೋಟೆಯ

ಈಶಾನ್ಯ ದಿಕ್ಕಿನಲ್ಲಿ ವಿಶಾಲವಾದ ಪ್ರವೇಶದ್ವಾರ ಬಾಗಿಲು ಕಂಡುಬರುತ್ತದೆ. ಅದು ಸಂಪೂರ್ಣವಾಗಿ ಶಿಥಿಲಗೊಂಡಿದೆ.

ಕೋಟೆಯು ನೈರುತ್ಯ ದಿಕ್ಕಿನಲ್ಲಿ ಕೋಟೆಯ ನೆಲಮಾಳಿಗೆಯಲ್ಲಿ ನದಿಗೆ ಹೋಗಲು ವಿಶಾಲವಾದ ರಸ್ತೆಯನ್ನು ಮಾಡಿದ್ದಾರೆ. ಕೋಟೆಗೆ ಹೊಂದಿಕೊಂಡಿರುವ ಈ ಮಾರ್ಗದ ಪಕ್ಕದಲ್ಲಿ ಗೋಡೆಯನ್ನು ನಿರ್ಮಿಸಿದ್ದಾರೆ. ಆದರೆ ಆ ಕಟ್ಟಡವನ್ನು ಸೂಕ್ಷ್ಮವಾಗಿ ವೀಕ್ಷಿಸಿದಾಗ ಇದನ್ನು ಪುನರ್ ನಿರ್ಮಾಣ ಮಾಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಕುದುರೆಗಳು ಹಾಗೂ ಸೈನಿಕರು ಒಳಗಿನಿಂದಲೆ ನೀರನ್ನು ಉಪಯೋಗಿಸಲು ಅನುಕೂಲ ಮಾಡಿಕೊಂಡ ವ್ಯವಸ್ಥೆ ಆಗಿದೆ. ನದಿಗೆ ಹೊಂದಿಕೊಂಡಂತೆ ಈ ಒಳಮಾರ್ಗದ ಪಕ್ಕದಲ್ಲಿ ಇಳಿಜಾರಿನ ಬಂಡಿಯ ಹೊದಿಕೆಗಳನ್ನು ನಿರ್ಮಿಸಿದ್ದಾರೆ. ಒಟ್ಟಿಗೆ ಕೋಟೆಯಲ್ಲಿ ನಾಲ್ಕು ಬುರುಜುಗಳು ಕಂಡುಬರುತ್ತವೆ. ಅದರಲ್ಲಿನ ಒಂದು ಬುರುಜು ಕೋಟೆಯ ಹೊರಗಡೆ ದರ್ಗಾಕ್ಕೆ ಹೊಂದಿಕೊಂಡಿದೆ.

ಕೊತ್ತಲಗಳು

ದಂಡನಾಯಕನ ಅರಮನೆಯ ಎದುರಿಗೆ ಹಾಗೂ ಪ್ರವೇಶದ್ವಾರದ ಸಮೀಪದಲ್ಲಿ ೫ ಕೊತ್ತಲಗಳು ಕಂಡುಬಂದಿವೆ. ಅವು ಎತ್ತರವಾದ ವೃತ್ತಾಕಾರದಲ್ಲಿ ಕಲ್ಲು ಹಾಗೂ ಗಾರೆಯಿಂದ ಕಟ್ಟಲ್ಪಟ್ಟಿವೆ. ಈ ಕೊತ್ತಲಗಳು ಸುಮಾರು ೨೫ ಅಡಿಗಳಷ್ಟು ಸುತ್ತಳತೆ ಹಾಗೂ ೧೫ ಅಡಿಗಳಷ್ಟು ಎತ್ತರವಾಗಿದೆ.

(ಭಾರತ ಗೆಜೆಟಿಯರ್ ಮತ್ತು ಧಾರವಾಡ ಜಿಲ್ಲೆ – ಪು.ಸಂ.೮೯೮ & ಪರ್ಶಿಯನ್ ಶಾಸನಗಳು)

ಮದಗದ ಮಾಸೂರು

ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕಿನ ಒಂದು ದೊಡ್ಡ ಗ್ರಾಮ ಮಾಸೂರು. ಇದು ಹಿರೇಕೆರೂರಿನ ದಕ್ಷಿಣ ದಿಕ್ಕಿನ ೧೧ ಕಿ.ಮೀ. ದೂರದಲ್ಲಿದೆ. ಹಾಗೂ ರಾಣೆಬೆನ್ನೂರಿಂದ ನೈಋತ್ಯಕ್ಕೆ ೩೭ ಕಿ.ಮೀ. ದೂರದಲ್ಲಿದೆ. ಆದರೆ ಮದಗ ಮಾಸೂರಿಂದ ೬ ಕಿ.ಮೀ. ದಕ್ಷಿಣ ದಿಕ್ಕಿಗೆ ಇದ್ದು, ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲೂಕಿನಲ್ಲಿ ಬರುತ್ತದೆ. ಆದರೆ ಕೋಟೆಯ ಅವಶೇಷ ಹಿರೇಕೆರೂರು ತಾಲೂಕಿನಲ್ಲಿ ಬಂದರೆ, ಕೆರೆ ಮತ್ತು ಕೆಂಚಮ್ಮನ ಗುಡಿ ಶಿಕಾರಿಪುರ ತಾಲೂಕಿನಲ್ಲಿ ಬರುತ್ತದೆ.

ಮದಗದ ಕೋಟೆ ಮತ್ತು ಬುರುಜುಗಳು:– ಮದಗದ ಕೆರೆಯ ಕೋಟೆಯ ಮೇಲಿರುವ ಶಾಸನದಲ್ಲಿ ಉಲ್ಲೇಖವಾಗಿರುವಂತೆ ಬಿಜಾಪುರದ ಮಹಮ್ಮದ ಆದಿಲ್‌ಷಾಹಿಯ ಆದೇಶದಂತೆ ಆತನ ಮುಖ್ಯ ಸೇನಾಪತಿ, ರಾಜಫರೀದ್‌ನ ಪುತ್ರನಾದ ಮೊಹಮ್ಮದ ಖಾನನು ಹಿಜರಿ ೧೦೪೨ ಎಂದರೆ ಕ್ರಿ.ಶ.೧೬೩೨–೩೩ರಲ್ಲಿ ಇಲ್ಲಿರುವ ಕೋಟೆಯನ್ನು ನಿರ್ಮಿಸಲು ಆರಂಭಿಸಿದನು. ಅದು ಆ.ಹಿ. ೧೦೪೫ ಎಂದರೆ ಕ್ರಿ.ಶ. ೧೬೩೫ರಿಂದ ೧೬೩೬ರಲ್ಲಿ ಕಟ್ಟಡದ ಕೆಲಸ ಪೂರ್ಣವಾಯಿತು.

ಮದಗದ ಕೋಟೆಯು ಎತ್ತರವಾದ ಗುಡ್ಡದ ಮೇಲೆ ನಿರ್ಮಿಸಲ್ಪಟ್ಟಿದೆ. ಹೀಗಾಗಿ ಇದನ್ನು ಗಿರಿದುರ್ಗವೆಂದು ಕರೆಯುವರು. ಕೋಟೆಯ ಸುತ್ತ ಯಾವುದೇ ಕಂದಕಗಳನ್ನು ನಿರ್ಮಿಸಿಲ್ಲ. ಇದು ಆಯತಾಕಾರದ ಕೋಟೆ, ಬಹಳಷ್ಟು ವಿಶಾಲವಾಗಿದೆ. ಕೋಟೆಯ ಪ್ರವೇಶದ್ವಾರ ವಾಯುವ್ಯ ಭಾಗದಲ್ಲಿ ಕಂಡುಬರುತ್ತದೆ. ಇದಕ್ಕೆ ಎರಡು ಭಾಗದಲ್ಲಿ ಬುರುಜುಗಳನ್ನು ಅಳವಡಿಸಲಾಗಿದೆ. ಬುರುಜುಗಳು ವೃತ್ತಾಕಾರವಾಗಿದ್ದು, ಅದರ ಮೇಲ್ಭಾಗದಲ್ಲಿ ಚಿಕ್ಕ ವೃತ್ತಾಕಾರದ ಬುರುಜನ್ನು ಕಾಣಬಹುದಾಗಿದೆ. ಕೋಟೆಯನ್ನು ವೀಕ್ಷಿಸಿದಾಗ ದಕ್ಷಿಣಕ್ಕೆ ಇಳಿಜಾರಾಗಿದ್ದು, ಉತ್ತರಕ್ಕೆ ಎತ್ತರವಾಗಿದೆ. ಕೆಳಗೆ ಕೆರೆ ಕಂಡುಬರುತ್ತದೆ. ಕೋಟೆಯು ಅಗಲಕ್ಕಿಂತ ಉದ್ದವಿರುವುದು ಗೊತ್ತಾಗುತ್ತದೆ. ಕೋಟೆಯ ಗೋಡೆಯು ಸುಮಾರು ೮–೯ ಅಡಿ ಅಗಲದಷ್ಟಿದೆ. ಇದಕ್ಕೆ ಕಪ್ಪಕಲ್ಲು ಹಾಗೂ ಗಚ್ಚಿನಿಂದ ನಿರ್ಮಿಸಲ್ಪಟ್ಟಿದೆ.

ಬುರುಜಗಳು: ಕೋಟೆಯಲ್ಲಿ ಒಟ್ಟು ಆರು ಬುರುಜುಗಳು ಕಂಡುಬಂದಿವೆ. ಕೋಟೆಯ ವಾಯುವ್ಯ ದಿಕ್ಕಿನಲ್ಲಿ ಎರಡು, ನೈರುತ್ಯ ದಿಕ್ಕಿನಲ್ಲಿ ಎರಡು, ಈಶಾನ್ಯ ದಿಕ್ಕಿನಲ್ಲಿ ಎರಡು ಬುರುಜುಗಳು ಕಂಡು ಬರುತ್ತವೆ. ಬಿಜಾಪುರದಲ್ಲಿರುವ ಬುರುಜಿನ ವಾಸ್ತುಶಿಲ್ಪವನ್ನು ಹೋಲುವಂತಿವೆ. ಇವು ಇಂಡೋ–ಇಸ್ಲಾಂ ಸಾರಸೆನಿಕ್ ಶೈಲಿಯನ್ನು ಅಳವಡಿಸಿದ್ದಾರೆ. ಬುರುಜಿನ ಸುತ್ತಲೂ ಚಿಕ್ಕದಾದ ಕಂದಕಗಳಿವೆ. ಬುರುಜನ್ನು ಕೋಟೆಯ ರಕ್ಷಣೆಗಾಗಿ ನಿರ್ಮಿಸಿದ್ದಾರೆ.

ಮದಗದ ಕೋಟೆಯ ಅವಶೇಷಗಳು

ಕೋಟೆಯ ಒಳಗಿನ ಅರಮನೆಯ ಅವಶೇಷಗಳು ಹಾಗೂ ಸೈನಿಕರ ವಸತಿ ನಿಲಯ, ಮದ್ದು–ಗುಂಡುಗಳನ್ನು ಸಂಗ್ರಹಿಸುವ ಕಟ್ಟಡದ ಅವಶೇಷಗಳು ಸಂಪೂರ್ಣವಾಗಿ ಭಗ್ನಗೊಂಡಿವೆ.

ಕೋಟೆಯ ವಾಯುವ್ಯ ಭಾಗದಲ್ಲಿ ಕಟ್ಟಡಗಳ ತಲವಿನ್ಯಾಸಗಳು ಮಾತ್ರ ಉಳಿದುಕೊಂಡಿವೆ. ಕೋಟೆಯ ಆಗ್ನೇಯ ದಿಕ್ಕಿನಲ್ಲಿ ಒಂದು ಕಟ್ಟಡದ ಅವಶೇಷಗಳು ಉಳಿದುಕೊಂಡಿವೆ. ಕೋಟೆಯ ಪೂರ್ವ ಈಶಾನ್ಯ ದಿಕ್ಕಿನಲ್ಲಿ ಒಂದು ದರ್ಗಾ ಹಾಗೂ ಈದಗಾ ಕಂಡು ಬರುತ್ತದೆ. ಆದರೆ ಮದಗದ ಕೋಟೆ ನಿಧಿಕಳ್ಳರ ಹಾವಳಿಗೆ ತುತ್ತಾಗಿದೆ.

ಕೆರೆ ಮತ್ತು ಕಾಲುವೆ

ಮದಗದ ಕೆರೆ ಎಂದಾಕ್ಷಣ ನಮಗೆ ನೆನಪಿಗೆ ಬರುವುದು ಕೆರೆಗೆ ಹಾರ. ಅಂತಹ ಬೃಹತ್ ಪ್ರಮಾಣದ ಕೆರೆಯು ವಿಜಯನಗರ ಕಾಲದ ಕೃಷ್ಣದೇವರಾಯನ ಕಾಲದಲ್ಲಿ ಕಟ್ಟಲಾಗಿದೆ. ಇದನ್ನು ಕೆರೆಯ ಉತ್ತರ ದಿಕ್ಕಿಗೆ ವಿಜಯನಗರ ಕಾಲದ ವಾಸ್ತುಶೈಲಿಯನ್ನು ಹೊಂದಿದ್ದು ದೇವಾಲಯ ಭಗ್ನಗೊಂಡಿದೆ. ಆದರೆ ಈ ಕೆರೆಯನ್ನು ಬಿಜಾಪುರದ ಮಹಮ್ಮದ ಆದಿಲ್‌ಷಾಹಿ ಜೀರ್ಣೋದ್ಧಾರಗೊಳಿಸಿದ್ದಾನೆ. ಇನ್ನೊಂದು ಅರೇಬಿಕ್ ಶಾಸನದಲ್ಲಿ ಸವಣೂರಿನ ನವಾಬ ಕೆರೆಯನ್ನು ದುರಸ್ಥಿಗೊಳಿಸಿದ ಉಲ್ಲೇಖವಿದೆ. ತುಂಗಭದ್ರಾ ನದಿಯ ಉಪನದಿ ಕುಮದ್ವತಿ ನದಿಗೆ ಬೃಹತ್ ಪ್ರಮಾಣದ ಒಡ್ಡನ್ನು ಹಾಕಿ, ದೊಡ್ಡ ಬಂಡೆಗಲ್ಲುಗಳನ್ನು ಬಳಸಿ ಕೆರೆಯನ್ನು ನರ್ಮಿಸಲಾಗಿದೆ. ಕೆರೆಯ ತಳಹದಿ ೧೦೪೮ರಿಂದ ೧೨೪೮ ಅಡಿ ಅಗಲ ಮೇಲ್ಭಾಗದಲ್ಲಿ ೪೦೦-೬೦೦ ಅಡಿ ಅಗಲ ಹೊಂದಿದೆ. ನೀರಿನ ತಳದಿಂದ ೧೪೦ ಅಡಿ ಎತ್ತರವಿದೆ. ೫೩೮ ಹೆಕ್ಟರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಬಹು ದಾಗಿದೆ. ಕೆರೆಯ ಬಲದಂಡೆ ಕಾಲುವೆಯು ಕೆರೆಯಿಂದ ಸುರಂಗ ಮಾರ್ಗದ ಮುಖಾಂತರ ತೂಬಿನ ಸಹಾಯದಿಂದ ಸುಮಾರು ೨೦೦ ಮೀಟರ್ ದೂರಕ್ಕೆ ಹೊರಬಂದು ಕಾಲುವೆ ಮುಖಾಂತರ ಹರಿಯುತ್ತದೆ. ರೈತರು ಇಂದಿಗೂ ಕೂಡ ಇದರ ಉಪಯೋಗವನ್ನು ಪಡೆದುಕೊಳ್ಳುತ್ತಾರೆ. ಈ ಕೆರೆ ಮುಂದೆ ಕ್ರಿ.ಶ. ೧೮೭೯-೮೦ ಬ್ರಿಟಿಷರ ಕಾಲಾವಧಿಯಲ್ಲಿ ದುರಸ್ಥಿಗೊಂಡಿತು. ಹಾಗೂ ತೂಬಿನಲ್ಲಿ ಬ್ರಿಟಿಷರ ಕಾಲದ ಸಿಂಹಲಾಂಛನವನ್ನು ಅಳವಡಿಸಿ ಕಟ್ಟಿಸಲಾಗಿದೆ. ಇನ್ನೊಂದು ತೂಬು ಶಿಕಾರಿಪುರಕ್ಕೆ ಹೋಗುವ ಮಾರ್ಗದಲ್ಲಿದೆ. ಹಾಗೆಯೇ ಕೆರೆಯ ಪೂರ್ವಭಾಗದಲ್ಲಿ ಒಂದು ತೂಬನ್ನು ಅಳವಡಿಸಿದ್ದಾರೆ. ಆದರೆ ಅದು ಇಂದು ಶಿಥಿಲಗೊಂಡಿದೆ. ಕೆರೆಯ ವಾಯುವ್ಯ ಭಾಗದಲ್ಲಿ ಕೊಡೆ ಇದ್ದು, ಹೆಚ್ಚಾದ ನೀರು ಹರಿದು ಹೋಗಲು ಇಕ್ಕಟದ ಗುಡ್ಡಗಳ ಮಧ್ಯದಲ್ಲಿ ನೈಸರ್ಗಿಕವಾಗಿ ಇದನ್ನು ಅಳವಡಿಸಿಕೊಂಡಿದ್ದಾರೆ.

ಖಂಡೇಬಾಗೂರು

ಖಂಡೇಬಾಗೂರು ಹಿರೇಕೆರೂರು ತಾಲೂಕಿನಲ್ಲಿ ಬರುವಂತಹ ಚಿಕ್ಕಗ್ರಾಮ. ಇದು ಕುಮದ್ವತಿ ನದಿಯ ತೀರದ ಗ್ರಾಮವಿದೆ. ನದಿಯ ತೀರದ ಆಗ್ನೇಯ ದಿಕ್ಕಿನ ಗುಡ್ಡದ ಮೇಲೆ ಒಂದು ಕೋಟೆ ಕಟ್ಟಿಸಲ್ಪಟ್ಟಿದೆ. ಇಲ್ಲಿರುವ ಕೋಟೆಯನ್ನು ನೈಸರ್ಗಿಕವಾಗಿ ಇರುವಂತಹ ಬೃಹತ್ ಬಂಡೆಗಲ್ಲುಗಳನ್ನು ಉಪಯೋಗಿಸಿಕೊಂಡು ನಿರ್ಮಿಸಲಾಗಿದೆ. ಕೋಟೆ ಪೂರ್ವ-ಪಶ್ಚಿಮವಾಗಿ ನಿರ್ಮಿಸಲ್ಪಟ್ಟಿದೆ. ಕೋಟೆಯ ಪೂರ್ವದಿಕ್ಕಿನಲ್ಲಿ ವೃತ್ತಾಕಾರದ ಬುರಜು ನಿರ್ಮಿಸಲ್ಪಟ್ಟಿದೆ. ಇದು ಆದಿಲ್‌ಷಾಹಿಗಳಿಂದ ನಿರ್ಮಿಸಲ್ಪಟ್ಟಿದೆ. ಇದರ ವಾಸ್ತುಶೈಲಿಯ ಮದಗದ ಕೋಟೆಯ ಬುರುಜಿನ ಶೈಲಿಯನ್ನು ಹೋಲುತ್ತದೆ. ಈ ಬುರುಜಿನ ಮೇಲೆ ನಂತು ನೋಡಿದರೆ ಮದಗದ ಮಾಸೂರಿನ ಆದಿಲ್‌ಷಾಹಿಯ ಕೋಟೆ ಕಂಡುಬರುತ್ತದೆ. ಎರಡು ಕೋಟೆಗಳ ಅಂತರ ಸುಮಾರು ೧೦ ಕಿ.ಮೀ ಇದೆ. ಖಂಡೇಬಾಗೂರಿನ ನೈಸರ್ಗಿಕ ಕೋಟೆಯ ಬುರುಜನ್ನು ನಿರ್ಮಿಸಲು ಕಾರಣವೇನೆಂದರೆ, ಮದಗದ ಕೋಟೆ ಪ್ರಮುಖ ನೆಲೆಯಾಗಿತ್ತು. ಹೀಗಾಗಿ ಅಲ್ಲಿರುವ ಕೋಟೆ, ಅರಮನೆ, ಗೋರಿ, ಮಸೀದಿ, ದರ್ಗಾ ಹಾಗೂ ವಿಶಾಲವಾದ ಕೆರೆಯನ್ನು ರಕ್ಷಣೆ ಮಾಡಲು ಹಾಗೂ ಶತ್ರುಗಳನ್ನು ವೀಕ್ಷಿಸಿ ಜಾಗೃತಗೊಂಡು ಮುನ್ಸೂಚನೆ ಕೊಡುವುದಕ್ಕಾಗಿ ಈ ಬುರುಜನ್ನು ನಿರ್ಮಿಸಲ್ಪಟ್ಟಿರಬಹುದು. ಈ ಬುರುಜಿನ ಎದುರಿಗೆ ದುರ್ಗಾಪರಮೇಶ್ವರಿ ದೇವಾಲಯವಿದ್ದು ಕಲ್ಯಾಣ ಚಾಲುಕ್ಯರು ಮತ್ತು ವಿಜಯನಗರ ಕಾಲದ ಶಾಸನಗಳು ಹಾಗೂ ಶಿಲ್ಪಮೂರ್ತಿಗಳು ಇಲ್ಲಿ ಕಂಡುಬಂದಿವೆ. ಬುರುಜಿನ ಉತ್ತರ ದಿಕ್ಕಿನ ತಗ್ಗು ಪ್ರದೇಶದಲ್ಲಿ ಮಸೀದಿ ಇದೆ.

ಉಪಸಂಹಾರ

೧೮ ಪರಗಣಿಗಳು ಆದಿಲ್‌ಷಾಹಿಗಳ ಅಧೀನದಲ್ಲಿದ್ದು ಮಹಮ್ಮದ ಆದಿಲ್‌ಷಾಹಿಯು ಈ ಎಲ್ಲಾ ಪ್ರದೇಶಗಳನ್ನು ಗೆದ್ದುಕೊಂಡು ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿಯಲ್ಲಿರುವ ಒಂದು ಕೋಟೆಯನ್ನು ಪುನರ್ ನಿರ್ಮಾಣ ಮಾಡಿ, ಅಲ್ಲಿಂದ ಹಳೇ ಮೈಸೂರು, ಸಿರಾ, ಕೋಲಾರ, ಬೆಂಗಳೂರು, ಚನ್ನಗಿರಿ, ಹೊನ್ನಾಳಿಗಳನ್ನು ಗೆದ್ದುಕೊಂಡು, ತಮಿಳುನಾಡಿನ ಜಿಂಜಿ ಕೋಟೆಯ ಮೇಲೆ ವಿಜಯ ಸಾಧಿಸಿರುವುದನ್ನು ಜುಬೇರಿ ಯಿಂದ ರಚಿತವಾದ ಬಸಾತಿನ-ಸಲಾತಿನ ಎಂಬ ಗ್ರಂಥದ ಉಲ್ಲೇಖದಿಂದ ವಿಷಯ ದಾಖಲಾಗಿದೆ.

[ಈ ಸಂಪ್ರಬಂಧವನ್ನು ತಯಾರಿಸಲಿಕ್ಕೆ ಸಹಾಯ ಸಹಕಾರ ನೀಡಿದ ನನ್ನ ಪಿ.ಎಚ್‌ಡಿ. ಮಾರ್ಗದರ್ಶಕರಾದ ಡಾ. ಎಸ್.ಕೆ. ಮೇಲಕಾರ ಅವರಿಗೆ ಕೃತಜ್ಞತೆಗಳು.]



ಸೈನಿಕರ ವಸತಿ ಕಟ್ಟಡ



ಕೋಟೆಯ ಒಳಭಾಗದಿಂದ ನದಿಗೆ ಹೋಗುವ ಗುಪ್ತ ಮಾರ್ಗ



ನೈಸರ್ಗಿಕ ಕೋಟೆಯ ಬುರುಜು ಖಂಡೆಬಾಗೂರು



ಮದಗದ ಕೆರೆಯ ಉತ್ತರ ದಿಕ್ಕಿನ ತೂಬು

ಆಧಾರಸೂಚಿ

೧. ಪ್ರೊ. ಬಿ. ಶೇಖ ಅಲಿ, ೧೯೭೭, ಕರ್ನಾಟಕ, ಚರಿತ್ರೆ ಸಂಪುಟ ೪, ಪ್ರಸಾರಾಂಗ ಕವಿವಿ ಹಂಪಿ.

೨. ಡಾ. ಚನಬಸಪ್ಪ ಪಾಟೀಲ, ೧೯೯೯, ಕರ್ನಾಟಕದ ಕೋಟೆಗಳು, ಸಂಪುಟ ೧, ಪ್ರಸಾರಾಂಗ ಕವಿವಿ ಹಂಪಿ.

೩. ವೆಂಕಟರಂಗು ಕಟ್ಟಿ, ೧೮೮೩, ಮುಂಬೈ ಕರ್ನಾಟಕ ಗೇಜೆಟಿಯರ್, ಮುಂಬೈ ಸರಕಾರ, ಮುಂಬೈ.

೪. ಕೃಷ್ಣಾ ಕೋಲ್ಹಾರ ಕುಲಕರ್ಣಿ, ಬಿಜಾಪೂರ ಆದಿಲ್‌ಷಾಹಿ, ಬಿಜಾಪೂರ.

೫. ಗೋವಿಂದಮೂರ್ತಿ ದೇಸಾಯಿ, ೧೯೯೯, ಸವಣೂರಿನ ನವಾಬರು, ಪ್ರಸಾರಾಂಗ ಕವಿವಿ ಹಂಪಿ.

೬ ಗೆಜೆಟಿಯರ್ ಆಫ್ ಇಂಡಿಯಾ ೧೯೭೫, ಕರ್ನಾಟಕ, ಶಿವಮೊಗ್ಗ ಜಿಲ್ಲೆ ಪು. ೬೫೪.

೭. ಕನ್ನಡ ವಿಶ್ವಕೋಶ, ಕರ್ನಾಟಕ ಪರಿಷ್ಕೃತ, ಸಂ. ೨, ಪು. ಸಂ. ೬೫೪.

೮. ಭಾರತ ಗೆಜೆಟಿಯರ್, ಧಾರವಾಡ ಜಿಲ್ಲೆ, ೧೯೯೫ ಸಂಪಾದಕರು ಡಾ. ಸೂರ್ಯನಾಥ ಕಾಮತ, ಪು. ಸಂ. ೮೯೮.

೯. ಎಂ.ಯೂಸೀನ್ ಖುದ್ದೂಸಿ, ಸೀತಾರಾಮ ಜಾಗೀರದಾರ್, ೨೦೦೧, ಕರ್ನಾಟಕದ ಪರ್ಶಿಯನ್ ಅರೆಬಿಕ್ ಮತ್ತು ಉರ್ದು ಶಾಸನಗಳು ಪುಟ ಸಂ. ೧೪೬, ೨೬೮.

೧೦. ಮಹಮ್ಮದ್ ಇಬ್ರಾಹಿಂ ಜುಬೇರಿ ವಿರಚಿತ, ೧೮೨೪, ಡಾ. ಕೃಷ್ಣ ಕೋಲ್ಹಾರ ಕುಲಕರ್ಣಿ (ಅನುವಾದ) ಬುಸಾತಿನೆ – ಸಲಾತೀನ ಬಿಜಾಪುರ ಆದಿಲ್‌ಷಾಹಿಗಳ ಚರಿತ್ರೆ ಪುಟ ೨೮೩.

೧೧. ಡಾ. ಚನ್ನಕ್ಕಾ ಎಲಿಗಾರ, ೧೯೯೦ – ಬಂಕಾಪೂರ ಶೋಧನೆ, ಗಂಗಾ ಪ್ರಕಾಶನ, ಧಾರವಾಡ.

೧೨. M.A. Nahim & Joshi 1997 – *External Relations of Bijapur Kingdom* – Hydrabad.

೧೩. *South Indian Inscriptions* Volume No. 15.

೧೪. ಡಾ. ಎಮ್.ಎಮ್. ಕಲಬುರ್ಗಿ, ಧಾರವಾಡ ಜಿಲ್ಲಾ ಶಾಸನ ಸೂಚಿ, ಪ್ರಸಾರಾಂಗ ಕವಿವಿ ಧಾರವಾಡ.

ಚನ್ನಪ್ಪಯ್ಯನಹಳ್ಳಿ – ಪ್ರಾಚ್ಯಾವಶೇಷಗಳು ಮತ್ತು ಅಪ್ರಕಟಿತ ಶಾಸನ

ವೇಮಗಲ್ ಮೂರ್ತಿ *

ಕೋಲಾರ ತಾಲ್ಲೂಕು ವೇಮಗಲ್ ಹೋಬಳಿಗೆ ಸೇರಿದ "ಚನ್ನಪ್ಪಯ್ಯನಹಳ್ಳಿ" ಸುತ್ತಮುತ್ತಲ ಪರಿಸರದಲ್ಲಿನ ಅನೇಕ ಪ್ರಾಚ್ಯಾವಶೇಷಗಳು ಸ್ಮಾರಕ ಶಿಲ್ಪಗಳು ಮತ್ತು ವೀರಗಲ್ಲುಗಳು ಅಪ್ರಕಟಿತ ಶಾಸನವೊಂದರ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ.

ಚನ್ನಪ್ಪಯ್ಯನಹಳ್ಳಿಗೆ ಸಮೀಪ (ಪುರಹಳ್ಳಿ) ಸಣ್ಣ ಗುಡ್ಡವೊಂದಿದ್ದೆ, ಅಲ್ಲಿ ಬೃಹತ್ ಶಿಲಾಯುಗಕ್ಕೆ ಸಂಬಂಧಪಟ್ಟ ಕಲ್ಲಾಸರೆಗಳು, ಗುಹೆಗಳು, ಇದ್ದು ಜನ ವಾಸಿಸುತ್ತಿದ್ದರು. ಮನೆಗಳ ತಳಿಪಾಯಗಳು ಕಂಡುಬಂದಿದ್ದು ಸ್ಥಳೀಯರ ಪ್ರಕಾರ ಬಹಳ ಹಿಂದೆ ಇಲ್ಲಿ ಊರು ಇದ್ದು ಕ್ರಮೇಣ ಗುಡ್ಡದ ತಪ್ಪಲಲ್ಲಿ ಜನ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿರುವುದು ಕಂಡುಬರುತ್ತದೆ.

ಈ ಪ್ರದೇಶಕ್ಕೆ ಸರಿ ಸುಮಾರು ಎರಡು ಫರ್ಲಾಂಗ್ ದೂರದಲ್ಲಿ ಸು. ಉತ್ತರ×ದಕ್ಷಿಣ ೮೦, 'ಪೂರ್ವಥಪಶ್ಚಿಮ ಸುಮಾರು ೬೦' ಅಳತೆಯಿರುವ ಒಂದು ಪುಷ್ಕರಿಣಿ ಇದ್ದು, ಇದರ ಆಳ ಸುಮಾರು ೨೦' ಅಡಿ ಗಿಂತಲೂ ಹೆಚ್ಚಿರಬಹುದೆಂದು ಅನಿಸುತ್ತದೆ. ಇದರ ದಡದ ಮೇಲೆ ದಕ್ಷಿಣದ ಕಡೆಗೆ ಅಗ್ನಿ ಮೂಲೆಯಲ್ಲಿ ಪೂರ್ವಾಭಿಮುಖವಾಗಿ ಪಾಳು ಬಿದ್ದಿರುವ ದೇಗುಲದ ಮಂಟಪವಿದ್ದು, ಸಮೀಪದಲ್ಲಿ ಅನೇಕ ನಾಗರ ಕಲ್ಲುಗಳಿವೆ. ಬಸವನ ಚಿತ್ರ ಬಿಡಿಸಿರುವ ಶಿಲ್ಪವಿದೆ. ಇಂದಿಗೂ ಇವೆರಡಕ್ಕೂ ಪೂಜೆ ಮಾಡಲ್ಪಡುತ್ತದೆ. ಹಾಗೇ ಪುಷ್ಕರಿಣಿಯ ಈಶಾನ್ಯದ ಕಡೆಗೆ ಶಿವನ ದೇಗುಲವಿತ್ತು. ಇಂದು ರಸ್ತೆ ಮಾಡುವ ನೆವದಲ್ಲಿ ದೇಗುಲದ ತಳಪಾಯ ಭೂಮಿಯಲ್ಲಿ ಅಡಗಿದೆ. ಪುಷ್ಕರಿಣಿಯ ವಾಯುವ್ಯ ದಿಕ್ಕಿನಲ್ಲಿ ಒಂದು ಬಿಲ್ವಪತ್ರೆ ಗಿಡವಿದೆ. ಅರಳಿಕಟ್ಟೆ ಹಾಗೂ ಪುಷ್ಕರಿಣಿಯ ಸುತ್ತ ತೆಂಗಿನ ಮರಗಳಿವೆ. ಇದರಿಂದ ಈ ಪುಷ್ಕರಿಣಿಯನ್ನು "ತೆಂಗಿನ ಬಾವಿ" ಎಂದು ಸ್ಥಳೀಯರು ಕರೆಯುತ್ತಾರೆ.

ಬಿಲ್ವಪತ್ರೆ ಮರದ ಬುಡದಲ್ಲಿ ಶಾಸನರಹಿತ ಮಾಸ್ತಿಯ ಕಲ್ಲು ಮತ್ತು ವೀರಗಲ್ಲುಗಳಿವೆ. ವೀರಗಲ್ಲುಗಳಿಗೆ ಪ್ರತ್ಯೇಕವಾಗಿ ಮಂಟಪಗಳಿದ್ದಂತಹ ಕುರುಹುಗಳು ಇಂದಿಗೂ ಕಾಣುತ್ತವೆ. ಒಂದು ದೊಡ್ಡ ಮಾಸ್ತಿಗಲ್ಲಿನ ಅಗಲ ೨ ೩/೪', ಎತ್ತರ ೨ ೩/೪" ಮತ್ತು ದಪ್ಪ ೧'.೮" ಇದೆ. ಎರಡನೆಯ ವೀರಗಲ್ಲಿನ ಅಗಲ ೨ ೩/೪', ಎತ್ತರ ೧'.೮" ಮತ್ತು ದಪ್ಪ ೧'.೮" ಇದೆ. ಮೂರನೆಯ ವೀರಗಲ್ಲು ಮಣ್ಣಿನಲ್ಲಿ ತುಂಬಾ ಹೂತು ಹೋಗಿದೆ. ವೀರಗಲ್ಲುಗಳಿಗೆ ವಿಶೇಷ ದಿನಗಳಲ್ಲಿ ಪೂಜೆ ಮಾಡಲ್ಪಡುತ್ತದೆ.

ಈ ಪರಿಸರಕ್ಕೆ ಸ್ವಲ್ಪ ದೂರದಲ್ಲಿ 'ವೇಣುಗೋಪಾಲ ಸ್ವಾಮಿ' ಗುಡಿಯ ಕಂಬಗಳು ಮತ್ತು ಮೇಲ್ಛಾವಣಿಯ ಕಲ್ಲು ಚಪ್ಪಡಿಗಳನ್ನು ಗೋಡೆಗೆ ಬಳಸಿದ್ದ ಇಟ್ಟಿಗೆಗಳನ್ನು ಇಂದಿಗೂ ಕಾಣಬಹುದು.

ಚನ್ನಪ್ಪಯ್ಯನ ಹಳ್ಳಿಗೆ ಆತುಕೊಂಡಂತೆ ಇರುವ ಹೊಲದ ಅಂಚಿನಲ್ಲಿ ಗಡಿಕಲ್ಲು, ವಾಮನಕಲ್ಲು, ಅಥವಾ ಎಲ್ಲೆ ಕಲ್ಲು ಎಂದು ಕರೆಯುವ ಸ್ಮಾರಕ ಕಲ್ಲನ್ನು ಕಾಣಬಹುದು. ಇಂದಿಗೂ ಇದಕ್ಕೆ ಉಳುಮೆ ಮಾಡುವ ಮೊದಲು, ಬೆಳೆ ಕೊಯ್ಯುವಾಗ ಪೂಜೆ ಸಲ್ಲಿಸುತ್ತಾರೆ.

ಪೂರ್ವಕ್ಕೆ ಮುಖಮಾಡಿ ದಕ್ಷಿಣ ದಿಕ್ಕಿನ ಬಯಲಲ್ಲಿ ನಿಲ್ಲಿಸಿರುವ "ಬಯಲು ಬಸವಣ್ಣ" ಎಂದು ಕರೆಯಲ್ಪಡುವ ಸ್ಮಾರಕ ಶಿಲ್ಪ. ಉದ್ದವಾದ ಕಲ್ಲು ಕಂಬದ ಮೇಲೆ ಬಸವಣ್ಣನನ್ನು ಕೆತ್ತಿ ನಿಲ್ಲಿಸಿದ್ದಾರೆ. ಕಂಬದ ಎತ್ತರ ಸು.೫' ಅಗಲ ೧೧ ೧/೨", ದಪ್ಪ ೮ ೧/೨", ಇದ್ದು, ಈ ಹಿಂದೆ ಇದಕ್ಕೆ ಗುಡಿ ಇದ್ದಿರಬಹುದು ಎನ್ನುವುದಕ್ಕೆ ಗಟ್ಟಿಯಾದ ತಳಪಾಯವನ್ನು ಈ ಸ್ಮಾರಕದ ಸುತ್ತಲೂ ಇಂದಿಗೂ ಕಾಣಬಹುದು. ಮತ್ತು ಈ ಬಸವಣ್ಣನ ಸ್ಮಾರಕದ ಮುಂದೆ ಒಂದು ಗರುಡ ಕಂಬವನ್ನು ನಿಲ್ಲಿಸಿದ್ದಾರೆ. ಇದೇ ಪರಿಸರದಲ್ಲಿ

* # ೫, ಆನೇ ಅಡ್ಡರಸ್ತೆ, ಬಿ.ಎಸ್.ಕೆ. ೩ನೇ ಸ್ಟೇಜ್ ೩ನೇ ಫೇಸ್, ೫ನೇ ಬ್ಲಾಕ್ (ಓಂ ಶಕ್ತಿ ದೇವಾಲಯದ ಹತ್ತಿರ) ಭುವನೇಶ್ವರಿ ನಗರ, ಬೆಂಗಳೂರು – ೮೫. ಮೊ: ೯೭೪೦೦೧೧೦೧೮೭

ಒಂದು ಹೊರೆಕಲ್ಲು, ನೀರಿನ ಕುಂಟೆ ಇವೆ. ಈ ಎಲ್ಲದರ ಹಿನ್ನೆಲೆಯಲ್ಲಿ ಇಲ್ಲೊಂದು ದೇಗುಲ ಇತ್ತೆಂದು ಊಹಿಸಬಹುದಾಗಿದೆ. ವೇಮಗಲ್‌ನಲ್ಲಿರುವ 'ವೀರಭದ್ರಸ್ವಾಮಿಯ ದೇಗುಲದ' ಅರ್ಚಕರೇ ಇಲ್ಲಿಯೂ ಪೂಜೆ ಮಾಡುವ ಪದ್ಧತಿ ಇಂದಿಗೂ ಇದೆ. ಮೊದಲು ವೀರಭದ್ರಸ್ವಾಮಿಗೆ ಪೂಜೆ ಮಾಡಿ ನಂತರ ಬಯಲು ಬಸವಣ್ಣನಿಗೆ ಪೂಜೆ ಮಾಡಿ ನೈವೇದ್ಯ ಇಡುವ ಪದ್ಧತಿ ಇಂದಿಗೂ ಇದೆ.

ಬಯಲು ಬಸವಣ್ಣನಿರುವ ಸ್ಮಾರಕ ಶಿಲ್ಪಕ್ಕೆ ಸ್ವಲ್ಪ ದೂರದಲ್ಲಿ ಆಂಜನೇಯನ ಗುಡಿಯೊಂದು ಇದ್ದು. ವಿಜಯನಗರೋತ್ತರ ಕಾಲದ್ದು. ಇಲ್ಲಿಯೂ ವಿಶೇಷ ದಿನಗಳಲ್ಲಿ ಪೂಜೆ ನಡೆಯುತ್ತದೆ.

ನಂತರ "ಕರೀಕುಂಟೆ" ಎಂಬ ಪ್ರದೇಶವಿದ್ದು, ಇಲ್ಲಿ ಒಂದು ಪುಟ್ಟದಾದ ಪುಷ್ಕರಿಣಿ ಇದ್ದು, ಪ್ರಸ್ತುತ ಪುಷ್ಕರಿಣಿಯನ್ನು ಮುಚ್ಚಿ ಮಳೆನೀರು ಹೆಚ್ಚು ನಿಲ್ಲುವುದಕ್ಕೆ ದೊಡ್ಡ ಹೊಂಡವನ್ನು ನಿರ್ಮಿಸಿದ್ದಾರೆ. ಇಲ್ಲಿಯೂ ಒಂದು ಕಂಬದ ಬಯಲು ಬಸವಣ್ಣನ ಸ್ಮಾರಕ ಶಿಲ್ಪವಿದ್ದು, ಇದರ ಎತ್ತರ ಸು. ೪'.೪", ಅಗಲ ೧'.೪", ದಪ್ಪ ೮" ಇದೆ. ಬಸವಣ್ಣ ತುಂಬಾ ಚೆನ್ನಾಗಿದ್ದಾನೆ. ಇಲ್ಲಿಯೂ ಪ್ರತಿ ಸೋಮವಾರ ಹಾಗೂ ವಿಶೇಷ ದಿನಗಳಲ್ಲಿ ಪೂಜೆ ನಡೆಯುತ್ತದೆ.

ಸಮೀಪದಲ್ಲಿ 'ನಾಗಣ್ಣನ ಕೆರೆ' ಎಂದು ಕರೆಯಲ್ಪಡುವ ಪ್ರದೇಶ. ಚಿಕ್ಕ ಕೆರೆ ಇದ್ದ ಜಾಗ ಇಂದು ಹೊಲವಾಗಿ ಪರಿವರ್ತನೆಯಾಗಿದೆ. ಆದರೆ ಕೆರೆಯ ಕಟ್ಟೆ ಹಾಗೆ ಇದೆ. ಕಟ್ಟೆಯ ಕೆಳಗಡೆ ಒಂದು ಅಪ್ರಕಟಿತ ಕನ್ನಡ ಶಾಸನವಿದ್ದು, ಇದನ್ನು ಪಶ್ಚಿಮಾಭಿ ಮುಖವಾಗಿ ನಿಲ್ಲಿಸಿದ್ದಾರೆ. ಶಾಸನದ ಎತ್ತರ ೨'.೮", ದಪ್ಪ ೬", ಅಗಲ ೧'.೯". ಶಾಸನದ ಎರಡೂ ಬದಿ ಲಿಪಿ ಇದೆ. ಮುಂಬಾಗದಲ್ಲಿ ೮ ಸಾಲುಗಳಿದ್ದರೆ, ಹಿಂಬಾಗದಲ್ಲಿ ನಾಲ್ಕು ಸಾಲುಗಳಿವೆ. ಮುಂಬಾಗದ ಶಾಸನದ ಮೇಲ್ಭಾಗದಲ್ಲಿ ಸೂರ್ಯ ಚಂದ್ರರನ್ನು ಶಿವಲಿಂಗವನ್ನು ಬಿಡಿಸಿರುವುದು ಸ್ಪಷ್ಟವಾಗಿ ಕಾಣುತ್ತದೆ. ಶಾಸನದಲ್ಲಿ ಅಕ್ಷರಗಳು ಅಲ್ಲಲ್ಲಿ ಸವೆದಿವೆ. ಪೂರ್ಣ ಪಾಠ ಓದಲಾಗುವುದಿಲ್ಲ. ಶಾಸನದ ಹಿಂಬದಿಯ ಅಕ್ಷರಗಳು ಅಸ್ಪಷ್ಟವಾಗಿದೆ.

ಶಾಸನದ ಪಾಠ – ಮುಂಭಾಗ

೧. ಶ್ರೀ ನಂದನ ಸಂ
೨. ವತ್ಸರದ ಚೈತ್ರ ಶುದ್ಧ
೩. ೧ ರಂದು....
೪. ನ ನಾಯಕರಾದ ....
೫. ತ್ತ ರಾಯ ....
೬. ಒಡೆಯರಿಗೆ ಬಿಟ್ಟ ಬದ
೭. ನ ಯಾ ಮಾನ್ಯ ಅಂದಾರುವ
೮. ಬ ದ ವ ಸ ಯಾ ಮಾ ಆ ರೋ–

[ಕ್ಷೇತ್ರ ಕಾರ್ಯದಲ್ಲಿ ನೆರವಾದ ಸ್ಥಳೀಯರಾದ ಪಾಪಣ್ಣ ಹಾಗೂ ನನ್ನ ತಮ್ಮ ನಟರಾಜ, ನನ್ನ ಮಗ ದೀಪು ಸುಬ್ರಹ್ಮಣ್ಯಂರವರಿಗೆ ನನ್ನ ಕೃತಜ್ಞತೆಗಳು.]

೬೧

ಕರ್ನಾಟಕದಲ್ಲಿ ಶಿವಾಜಿಯ ಕೋಟೆಗಳು

ಡಾ. ಸುಷಮಾ ಆರೂರ್*

"ಈಗೀನ ಮಹಾರಾಷ್ಟ್ರ ಮತ್ತು ಕರ್ನಾಟಕದ ಉತ್ತರ ಭಾಗವು ಡೆಕ್ಕನ್ ತಪ್ಪಲಿನಲ್ಲಿ ಬರುವದರಿಂದ ಇದರ ಭೌಗೋಲಿಕ – ರಾಜಕೀಯ ಆಗು ಹೋಗುಗಳು ಮತ್ತು ಕೋಟೆಗಳ ಸಂಬಂಧ ಬಹಳ ನಿಕಟವಾಗಿರುತ್ತದೆ" ಎಂದು ಪ್ರಕ. ಘಾಣೇಕರ ಅವರು ತಮ್ಮ 'ಅಥಾತೊ ದುರ್ಗ ಜಿಜ್ಞಾಸಾ' ಎಂಬ ಕುತೂಹಲಕಾರಿ ಮತ್ತು ಅಧ್ಯಯನಪೂರ್ಣ ಮರಾಠಿ ಗ್ರಂಥದಲ್ಲಿ ಬರೆದಿದ್ದಾರೆ. ಮಧ್ಯಯುಗದ ಕೋಟೆಗಳು ರಾಜ್ಯದ ಮುಖ್ಯ ಆಧಾರಸ್ಥಂಭಗಳಾಗಿದ್ದವಲ್ಲದೇ ಪ್ರಜೆಗಳ ಸಂರಕ್ಷಣೆಯ ಭಾರ ಕೂಡ ಕೋಟೆಗಳ ಮೇಲಿತ್ತು. ಶಿವನೇರಿ ಕೋಟೆಯಲ್ಲಿ ಹುಟ್ಟಿದ ಶಿವಾಜಿಯು ಕೋಟೆಗಳ ಮಹತ್ವವನ್ನು ಚೆನ್ನಾಗಿಯೇ ಅರಿತಿದ್ದ. ಮುಂದೆ ತಂದೆ ಶಹಾಜಿಯಿಂದ ಪಡೆದ ಮಹಾರಾಷ್ಟ್ರದ ಪುಣೆ ಮತ್ತು ಇಂದಾಪೂರ ಜಾಗೀರಿಗಳಿಗೆ ಹೊಸ ಪ್ರದೇಶಗಳನ್ನು ಗೆದ್ದು ಸಮರ್ಥ ರಾಜ್ಯವನ್ನು ಕಟ್ಟಿದ.

ಶಿವಾಜಿಯು ಕೆಲವು ಭೂಕೋಟೆಗಳನ್ನು ವಿಜಾಪುರದ ಮುಹಮ್ಮದ ಆದಿಲಶಹನಿಂದ (೧೬೪೬) ಕಿತ್ತುಕೊಂಡಿದ್ದನು. ಆದಿಲಶಹರು ಈ ಬೆಟ್ಟದ ಕೋಟೆಗಳನ್ನು ಬರೀ ಕಾವಲಿಗೊಸ್ಕರ ಮಾತ್ರ ಉಪಯೋಗಿಸುತ್ತಿದ್ದರು. ಶಿವಾಜಿಯೇ ಈ ಕೋಟೆಗಳ ಪೂರ್ತಿ ಉಪಯೋಗ ಮಾಡಿಕೊಂಡನು. ಹೊಸ ಕೋಟೆಗಳನ್ನು ಕಟ್ಟುವಾಗ ಅವುಗಳ ವ್ಯೂಹ ರಚನೆ, ಅವುಗಳ (ಸ್ಟ್ರಟೆಜಿಕ್) ಆಯಕಟ್ಟಿನ ಸ್ಥಳದ ಮಹತ್ವ ಇವುಗಳ ಮೇಲೆ ಅಧ್ಯಯನ ಮಾಡಿ ಕೋಟೆಗಳ ಒಂದು ಸರಪಳಿ ಯನ್ನೇ ತಯಾರಿಸಿದನು. ಈ ಕೋಟೆಗಳ ಬಲದ ಮೇಲೆಯೇ ಶಿವಾಜಿ ತನ್ನ ರಾಜ್ಯ ಸ್ಥಾಪಿಸಿ ಸುತ್ತಮುತ್ತಲಿದ್ದ ತನ್ನ ಎಲ್ಲ ಶತ್ರುಗಳನ್ನು ಹಿಮ್ಮೆಟ್ಟಿಸಿದನು.

ಕೃಷ್ಣಾನದಿಯಿಂದ ಹಿಡಿದು ತುಂಗಭದ್ರೆಯ ವರೆಗಿನ ಪ್ರದೇಶಕ್ಕೆ ದಕ್ಷಿಣದ ಮರಾಠರ ರಾಜ್ಯವೆಂದು (The Southern Maratha Country) ಕರೆಯುತ್ತಿದ್ದರು. ಈ ಪ್ರದೇಶವು ಸ್ವತಂತ್ರವಾದ ಭೌಗೋಲಿಕ ಘಟಕವಾಗಿದ್ದು ಬೆಳಗಾವಿ, ವಿಜಾಪುರ ಮತ್ತು ಧಾರವಾಡಗಳನ್ನು ಒಳಗೊಂಡಿರುತ್ತದೆ. ಈ ಪ್ರದೇಶವು ವಿಜಾಪುರ ರಾಜ್ಯದ ಕೇಂದ್ರವಾಗಿರುವದರಿಂದ ಮರಾಠರು ಇಲ್ಲಿ ಎಡೆಬಿಡದೇ ನಿರಂತರವಾಗಿ ಸುಲಿಗೆ ಮಾಡಿ ಇಲ್ಲಿಯ ಜನಜೀವನವನ್ನು ಹಾಳು ಮಾಡುತ್ತಿದ್ದರು. ಶಿವಾಜಿ ನಾಲ್ಕು ಸಲ ಈ ಪ್ರದೇಶದ ಮೇಲೆ ಏರಿಬಂದು ರಾಯಬಾಗ, ಗದಗ, ಲಕ್ಷ್ಮೇಶ್ವರ ಮತ್ತು ಧಾರವಾಡವನ್ನು ಸುಲಿಗೆ ಮಾಡಿದ್ದಾನೆ[೧]. ಅಷ್ಟೇ ಅಲ್ಲ ಆಂಗ್ಲರಪತ್ರಗಳು ಕೂಡ ಶಿವಾಜಿಯ ಲೂಟಿಯಿಂದ ಯುರೋಪದಿಂದ ತರಿಸಿದ ಮಾಲು ಮಾರಾಟ ಆಗುತ್ತಿಲ್ಲ ಹಾಗೂ ಇಲ್ಲಿಂದ ಹತ್ತಿಯ ನೂಲಿನ ಬಟ್ಟೆಗಳು ಕೂಡ ಹುಬ್ಬಳ್ಳಿಗೆ ಬರುತ್ತಿಲ್ಲವೆಂದು ತಮಗೆ ಆದ ಹಾನಿಯ ಬಗ್ಗೆ ಬರೆದಿದ್ದಾರೆ. ೧೬೬೫ರಿಂದ ೧೬೭೫ರ ನಡುವಿನ ಕಾಲದಲ್ಲಿ ಶಿವಾಜಿಯು ಈಗಿನ ಬೆಳಗಾವಿ ಜಿಲ್ಲೆಯಲ್ಲಿಯ ಖಾನಾಪುರ, ಭೀಮಗಡ, ಸಂಪಗಾಂವ, ಪಾರಸಗಡಗಳನ್ನು ವಶಪಡಿಸಿಕೊಂಡನು. ಸೀಮಂತಗಡ (ಬಳ್ಳಾರಿ ಜಿಲ್ಲೆ) ಕೂಡ ಶಿವಾಜಿಯ ಪಾಲಾಯಿತು. ಸಂಕೇಶ್ವರದ ಪಕ್ಕದಲ್ಲಿಯ ವಲ್ಲಭಗಡ, ಮುರಗೋಡ ಮತ್ತು ಹುಬ್ಬಳ್ಳಿಯಂತಹ ವ್ಯಾಪಾರ ಕೇಂದ್ರವನ್ನು ಶಿವಾಜಿ ತನ್ನದಾಗಿ ಮಾಡಿಕೊಂಡನು. ರಾಮದುರ್ಗ, ತೋರಗಲ ಮತ್ತು ನರಗುಂದ ಕಿಲ್ಲೆಗಳನ್ನು ೧೬೭೬ರ ಸುಮಾರಿಗೆ ಕಟ್ಟಿಸಿದನು. ರಾಮಚಂದ್ರ ಪಂತ ಅಮಾತ್ಯನನ್ನು ಇವುಗಳ ಆಡಳಿತದ ನಿರ್ವಹಣೆಗೆ ನೇಮಿಸಲಾಯಿತು, ಮುಂದೆ ಅಪ್ಪಾಜಿ ಸುರು ಎಂಬವರು ಈ ಕೋಟೆಗಳ ಕಾರ್ಯಭಾರವನ್ನು ಹೊತ್ತುಕೊಂಡನು.[೨]

ಮರಾಠಿ ಆಕರಗಳು ಕರ್ನಾಟಕದಲ್ಲಿರುವ ಶಿವಾಜಿಯ ಇನ್ನತರ (೨೦)ಕೋಟೆಗಳ ಮಾಹಿತಿಯನ್ನು ಒದಗಿಸುತ್ತವೆ.

ಬಾಗಲಕೋಟ (ವಿಜಾಪುರ ಜಿಲ್ಲೆ) ಮಂಗಲಗಡ, ಮಿರಜಕೋಟ, ಮನೋಹರಕೋಟ, ಮೃಗನಕೋಟ, ಮಾಣಿಕಗಡ, ವಿರಾಟಕೋಟ, ಸುರಜಗಡ, ಶಿವಳಗಡ, ಶಾಮಲಕೋಟ, ರಾವಳಗಡ, ತಲಗಿರಿಕೋಟ, ತ್ರಿಚನಪುರ ಕೋಟ, ಪ್ರಮೋದಗಡ, ಗೋಕಾಕಕೋಟ, ಭವಾನಿದುರ್ಗ ಕೋಟ, ತ್ರಿವೇಲಿಕೋಟ, ಗುಜರಗಡ, ಕಾಮಕೋಟ, ಕಾನಪುರಕೋಟ, ಕೋಟ ಬಿದನೂರ, ಕೋಟ ಧಮಕೂರ

* # ೭೦೪, ೮ನೇ ಮೈನ್, ೧೨ನೇ ಕ್ರಾಸ್, ಸದಾಶಿವನಗರ, ಬೆಂಗಳೂರು–೫೬೦೦೮೦.

ಇತ್ಯಾದಿ. ಧಾರವಾಡ ಜಿಲ್ಲೆಯಲ್ಲಿರುವ ಗಜೇಂದ್ರಗಡವನ್ನು ಶಿವಾಜಿ ಕಟ್ಟಿಸಿದನೆಂದು ಹೇಳುತ್ತಾರೆ ಮುರಗೋಡದ ರುದ್ರಪ್ಪ ನಾಯಕನು ಶಿವಾಜಿಯ ಆಜ್ಞೆಯ ಮೇರೆಗೆ ಭುಜಬಲ ಗಡವನ್ನು ಪಡೆದನು. ಮರಾಠಾ ಇತಿಹಾಸಕಾರರಾದ ಜಿ.ಎಚ್ ಖರೆಯವರು ಇದನ್ನು ರಾಮಗಡ ಎಂದು ಗುರುತಿಸುತ್ತಾರೆ.[೩]

ಕರ್ನಾಟಕ ರಾಜ್ಯ ಗೆಜೆಟಿಯರ್ ಕರ್ನಾಟಕದಲ್ಲಿ ಶಿವಾಜಿಯ ೧೮ ಕೋಟೆಗಳನ್ನು ನಮೂದಿಸುತ್ತದೆ.

(ಬಾಂಬೆ ಪ್ರೆಸಿಡೆನ್ಸಿ ಗೆಜೆಟಿಯರ್, ಬೆಳಗಾವಿ ರಾಜ್ಯ, ೧೦ ಕೋಟೆಗಳ ಬಗ್ಗೆ ಮಾಹಿತಿ ಕೊಡುತ್ತದೆ.)

೧) ಮಹಿಪಾಲಗಡ, ಬೆಳಗಾಂವಿಯಿಂದ ೧೦ ಮೈಲು ಪಶ್ಚಿಮಕ್ಕೆ
೨) ಭೀಮಗಡ ಬೆಳಗಾಂವಿಯಿಂದ ೧೬ ಮೈಲು ನೈಋತ್ಯಕ್ಕೆ,
೩) ನಂದಗಡ, ಖಾನಾಪುರದಿಂದ ೭ ಮೈಲು ಆಗ್ನೇಯಕ್ಕೆ
೪) ಗೋಕಾಕಗಡ ಇದಕ್ಕೆ ಪಂಚಮಿ ಗುಡ್ಡ ಎಂದೂ ಕರೆಯುತ್ತಾರೆ.
೫) ಪರಸಗಡ ಸೌಂದತ್ತಿಯ ದಕ್ಷಿಣಕ್ಕೆ
೬) ಕಠಾರಿಗಡ ಸೌಂದತ್ತಿಯ ಈಶಾನ್ಯಕ್ಕೆ
೭) ಹುಳಿ, ೧೬೭೪, ಶಿವಾಜಿ ಕಟ್ಟಿಸಿದ್ದುದು
೮) ಪವಿತ್ರಗಡ ಚಿಕ್ಕೋಡಿಯಿಂದ ೨೦ ಮೈಲು
೯) ವಲ್ಲಭಗಡ ಚಿಕ್ಕೋಡಿಯಿಂದ ೧೫ ಮೈಲು ನೈಋತ್ಯಕ್ಕೆ
೧೦) ಮುರಗೋಡ

ಈ ಕೋಟೆಗಳು ೧೬೮೦ರ ವರೆಗೆ ಶಿವಾಜಿಯ ಹಿಡಿತದಲ್ಲಿದ್ದವು[೪].

ಶಿವಾಜಿ ಸುವೆನಿರ್ ೧೮ ಕೋಟೆಗಳನ್ನು ನಮೂದಿಸುತ್ತದೆ.

೧೧) ನಾಚನಗಡ
೧೨) ಮಯೂರಗಡ ನವಲಗುಂದದ ಹತ್ತಿರ
೧೩) ಮಹಂತಗಡ
೧೪) ಕೊಪ್ಪಳಗಡ ಬೆಳಗಾಂವಿಯ ಪಶ್ಚಿಮಕ್ಕೆ
೧೫) ಗಜೇಂದ್ರಗಡ ಧಾರವಾಡ ಜಿಲ್ಲೆಯಲ್ಲಿ
೧೬) ಮುರ್ಮಗಡ ಅಥವಾ ಶಿದ್ದಗಡ ಕಾರವಾರದ ಸಮೀಪ
೧೭) ಸೀಮಂತ ಗಡ ಬಳ್ಳಾರಿ ಜಿಲ್ಲೆಯಲ್ಲಿ
೧೮) ಭುಜಬಲಗಡ. ಇದಕ್ಕೆ ರಾಮಗಡ ಎಂದು ಕೂಡ ಕರೆಯುವದುಂಟು.

ಕೋಟೆಗಳ ಭೌಗೋಲಿಕ ಸ್ಥಾನ ಮತ್ತು ಸೌಕರ್ಯ

ಕೋಟೆಗಳ ರಕ್ಷಣೆ

ಕೋಟೆಗಳ ರಾಜನಾದ ಶಿವಾಜಿ ತನ್ನ ಕೋಟೆಗಳನ್ನು ಹೇಗೆ ಕಾಪಾಡಿದನು? ಅವುಗಳ ಆಡಳಿತದಲ್ಲಿ ಯಾವ ರೀತಿಯಲ್ಲಿ ಬದಲಾವಣೆ ತಂದನು? ಎಂಬುದರ ಬಗ್ಗೆ ಮರಾಠಿ ಆಕರಗಳಾದ ರಘುನಾಥಪಂತ ಹನುಮಂತೆ ರಚಿಸಿದ 'ರಾಜ್ಯ ವ್ಯವಹಾರ ಕೋಶ'ದ ಎಳನೇಯ ಅಧ್ಯಾಯ ಮತ್ತು ರಾಮಚಂದ್ರ ಪಂತ ಅಮಾತ್ಯನ 'ಆಜ್ಞಾಪತ್ರ' ಕೂಡ ಶಿವಾಜಿಯ ಕಿಲ್ಲೆಗಳ ಮಹತಿ, ಅವುಗಳ ರಚನೆ, ಕಾರ್ಯ ನಿರ್ವಹಣೆ ಮತ್ತು ಅಲ್ಲಿಯ ಉತ್ತಮ ವ್ಯವಸ್ಥೆಯ ಬಗ್ಗೆ ಎಂಟನೇಯ ಅಧ್ಯಾಯದಲ್ಲಿ ನಮೂದಿಸುತ್ತದೆ. ಸಭಾಸದ ಮತ್ತು ೯೧ ಕಲಮಿ ಬಖರಗಳು ಕೂಡ ಶಿವಾಜಿಯ ಕೋಟೆಯ ಬಗ್ಗೆ ವಿವರಗಳನ್ನು ವರದಿ ಮಾಡುತ್ತವೆ.

ಕೋಟೆಗಳ ಮಹತ್ವ ಅರಿತ ಶಿವಾಜಿ ಹಳೆಯ ಕೋಟೆಗಳನ್ನು ದುರಸ್ತಿ ಮಾಡಿಸಿ, ಹೊಸ ಕೋಟೆಗಳನ್ನು ಒಂದೇ ಸಾಲಿನಲ್ಲಿ ಕಟ್ಟಿಸುವ ಪರಿಪಾಠ ಇಟ್ಟುಕೊಂಡಿದ್ದನು. ಇದರಿಂದ ಒಂದು ಪ್ರದೇಶದಿಂದ ಇನ್ನೊಂದಕ್ಕೆ ತ್ವರೆಯಿಂದ ಕುದುರೆ ಸವಾರಿ ಮಾಡಲು ಮತ್ತು ಸಾರಿಗೆಗೆ ಅನುಕೂಲ ವಾಗುತ್ತಿತ್ತು. ಅವನು ಗುಡ್ಡಗಾಡಿನ ಪ್ರದೇಶದ ಒಳ್ಳೇಯ ಉಪಯೋಗ ತೆಗೆದುಕೊಂಡನು. ಮುಘಲರು ಬಯಲು ಪ್ರದೇಶದಲ್ಲಿ ಇದ್ದ ಕಾರಣ ಅವರಿಗೆ ಈ ಗುಡ್ಡಗಾಡು ಮತ್ತು ಅಲ್ಲಿರುವ ಕೋಟೆಗಳು ಎಂದೂ ದಕ್ಕಲಿಲ್ಲ. ದೇಶಮುಖ ಮತ್ತು ದೇಶಪಾಂಡೆಯವರನ್ನು ಮಾರುದ್ದ ದೂರವಿಡಲು ಕೂಡ ಕೋಟೆಗಳ ಸಹಾಯ ಪಡೆದನು. ಎಲ್ಲ ಕೋಟೆಗಳು ಕೇಂದ್ರ ಸರಕಾರದ ಹಿಡಿತದಲ್ಲಿ ಇರುತಿದ್ದವು. ಯಾವ ಜಹಗೀರದಾರ ಅಥವಾ ವತನದಾರರಿಗೆ ಕೋಟೆಯ ಮೇಲ್ವಿಚಾರಣೆಯ ಕೆಲಸ ಒಪ್ಪಿಸುತ್ತಿದ್ದಿಲ್ಲ

ಪರದೇಶದಿಂದ ಬಂದ ಯುರೋಪಿಯನ್ನರ ಯುದ್ಧದ ಸಾಮಗ್ರಿಗಳು ಮತ್ತು ಸೇನೆಯ ಫಿರಂಗಿ ದಳಗಳು ಆಧುನಿಕ ತಂತ್ರ ಜ್ಞಾನದಿಂದ ಶ್ರೇಷ್ಠವಾಗಿರುವದರಿಂದ ಅವರಿಂದ ಹೊಸತು ವಿಜ್ಞಾನವನ್ನು ಕಲೆತು ಕೊಳ್ಳಬೇಕೆಂಬ ಉತ್ಕಟ ಆಸೆ ಶಿವಾಜಿಗೆ ಇರುತ್ತಿತ್ತು. ದಕ್ಷ ಇಂಜಿನಿಯರಗಳನ್ನು ಹುಡುಕಿ ಅವರುಗಳಿಂದ ಬಂದೂಕುಗಳನ್ನು ಸಾಗಿಸುವ ವಾಹನಗಳ ತಯಾರಿಕೆ, ಗಣಿಗಳನ್ನು ಮತ್ತು ದೊಡ್ಡ ಬಂಡೆಕಲ್ಲನ್ನು ಸ್ಫೋಟಿಸುವದು ಮತ್ತು ಇನ್ನೂ ಅನೇಕ ಯುದ್ಧ ಸಾಮುಗ್ರಿಗಳನ್ನು ತಯಾರಿಸುವದಕ್ಕೆ ಪೋರ್ತುಗೀಸ್ ಮತ್ತು ಡಚ್ಚ ನಿಷ್ಣಾತರನ್ನು ನೇಮಿಸಿದ್ದನು[೫]. ಹಳೆಯ ಕೋಟೆಗಳ ಜೀರ್ಣೋಧ್ಧಾರವನ್ನು ಯುರೋಪಿಯನ್ ಮಾದರಿಯಲ್ಲಿ

ಮಾಡಿದ್ದರ ಬಗ್ಗೆ ಎಬ್ಬೆ ಕೇರ್, ಪೀಟರ್ ಮಂಡಿ ಇತ್ಯಾದಿ ವಿದೇಶಿ ಪ್ರವಾಸಿಗರು ತಮ್ಮ ಪ್ರವಾಸ ಕಥನಗಳಲ್ಲಿ ಪ್ರಸ್ತಾಪಿಸಿದ್ದಾರೆ.

ಹೀಗೆ ಕೋಟೆಗಳ ರಕ್ಷಣೆಗೆ, ಪೋಷಣೆಗೆ ಮತ್ತು ನಿರ್ವಹಣೆಗೆ ಬಹಳಷ್ಟು ಖರ್ಚು ಆಗುತ್ತಿತ್ತು. ಇದರ ಬಗ್ಗೆ ಟೀಕೆ ಮಾಡಿದವರಿಗೆ ಶಿವಾಜಿ ಕೊಟ್ಟ ಪ್ರತ್ಯುತ್ತರ ಬಹಳ ಮಹತ್ವಪೂರ್ಣವಾಗಿದೆ. 'ನಿಮ್ಮ ಹೊಲವನ್ನು ಹೇಗೆ ಕಣ್ಣಲ್ಲಿ ಎಣ್ಣೆ ಹಾಕಿ ಕಾಯ್ತಿರಿ, ಹಡಗುಗಳಿಗೆ ಮೊಳೆ ಬಡಿದು ಗಟ್ಟಿ ಮಾಡುತ್ತಿರಲ್ಲ ಅದೇ ತರಹ ರಾಜ್ಯದ ರಕ್ಷಣೆಗೋಸ್ಕರವೇ ಕೋಟೆಗಳು ಇರುವದು. ಈ ಕೋಟೆಗಳಿಂದಲೇ ಔರಂಗಜ಼ೇಬ ನಂತಹನ ಆಯುಷ್ಯ ಕಡಿಮೆ ಆಗುತ್ತಾ ಇದೆ'.

ಕೋಟೆಗಳ ಆಡಳಿತ

ಕೋಟೆಯ ಮೇಲೆ ಕೇಂದ್ರ ಸರಕಾರದ ಸೈನ್ಯವಿರುತ್ತಿತ್ತು. ಬ್ರಾಹ್ಮಣನಾದ ಸಬನೀಸ, ಕಾಯಸ್ಥ ಪ್ರಭು ಜಾತಿಯ ಕಾರಖಾನಿಸ ಮರಾಠಾ ಸರನೌಬತ ಇಲ್ಲವೇ ಕಿಲೇದಾರ, ಹೀಗೆ ಬೇರೆ ಬೇರೆ ಜಾತಿಯವರಿಗೆ ಬೇರೆ ಬೇರೆ ಹುದ್ದೆಗಳಿಗೆ ನೇಮಿಸಿದ್ದನು. ಈ ಮೂರರ ಮೇಲೂ ಕೋಟೆಯ ರಕ್ಷಣೆಯ ಭಾರವಿತ್ತು. ಫಿತೂರಿಗೆ ಯಾವ ಸಾಧ್ಯತೆಯೇ ಇರಲಿಲ್ಲ.

ಕೋಟೆಯ ಕೆಳಗೆ ಮಹಾರ, ಮಾಂಗ, ರಾಮೋಶಿ ಮತ್ತು ಭಿಲ್ಲರ ವಸತಿಗಳಿದ್ದವು. ದಲಿತವರ್ಗದವರಾದ ಇವರು ಕಡುಗಲಿಗಳು, ಕಷ್ಟಸಹಿಷ್ಣುಗಳು ನಿಷ್ಠೆಯಿಂದ ಕಾವಲು ಮಾಡುತ್ತಿದ್ದರು. ಇವರಿಗೆ ತಮ್ಮ ಪ್ರದೇಶದಿಂದ ಹೊರಗಿನಿಂದ ಬಂದ ಮತ್ತು ಹೊರಗೆ ಹೋದ ಜನರ ಲೆಕ್ಕವಿರುತ್ತಿತ್ತಂತೆ. ಕೋಟೆಗಳ ಪ್ರದೇಶದಲ್ಲಿ ಎರಡು ರಾಜಧಾನಿಗಳು ಇರುತ್ತಿದ್ದವು. ಕೋಟೆ ಒಂದು, ಮತ್ತು ಕೋಟೆಯ ಕೆಳಗಿನ ಊರು ಇನ್ನೊಂದು. ಉದಾ–ಸಿಂಹಗಡ–ಪೂನಾ. ಶತ್ರುಗಳು ಕೋಟೆಗೆ ಮುತ್ತಿಗೆ ಹಾಕಿದಾಗ ಕೋಟೆಗಳಲ್ಲಿ ಇದ್ದುಕೊಂಡು ತಿಂಗಳು ಹಾಗೂ ವರುಷಗಟ್ಟಲೇ ಮುಘಲರ ವಿರುದ್ಧ ಹೋರಾಡಿದ ಪ್ರಸಂಗಗಳು ಬಹಳ ಇವೆ.

ಸ್ವಯಂ ಶಿವಾಜಿಯೇ ಎಲ್ಲ ಮುಖ್ಯ ಅಧಿಕಾರಿಗಳನ್ನು ಸಂದರ್ಶಿಸಿ ನೇಮಿಸುತ್ತಿದ್ದನಂತೆ. ಈ ಹುದ್ದೆಗಳು ವಂಶ ಪಾರಂಪಾರಿಕವಾಗಿರದೇ ವರ್ಗಾವಣೆ ಇರುತ್ತಿತ್ತು. ಕೇಂದ್ರದ ಅಧಿಕಾರಿಗಳು ಮತ್ತು ಸ್ವತಹ ಶಿವಾಜಿ ಕೂಡ ನಿಯಮಿತವಾಗಿ ಭೇಟಿ ಕೊಟ್ಟು ಮೇಲ್ವಿಚಾರಣೆ ಮಾಡುತ್ತಿದ್ದ. ತಿಂಗಳುಗಟ್ಟಲೇ ಮುತ್ತಿಗೆ ಹಾಕಿದರೂ ಆಹಾರ, ಮೇವು ಇತ್ಯಾದಿ ಸಾಮಗ್ರಿಗಳ ಪೂರೈಕೆಗೆ ಕಡಿಮೆ ಆಗುತ್ತಿರಲಿಲ್ಲ. ಕೋಟೆಯ ಮೇಲೆ ನಿಯುಕ್ತನಾದವನ ಸಂಬಂಧಿಕರು ಕೋಟೆಯ ಕೆಳಗೆ ಅಷ್ಟೇ ಅಲ್ಲ ಅಕ್ಕಪಕ್ಕದ ಕೋಟೆಗಳಲ್ಲಿ ಕೂಡ ಇರತಕ್ಕದ್ದಲ್ಲವೆಂಬ ನಿಯಮವಿತ್ತು ಒಂದಕ್ಕಿಂತ ಹೆಚ್ಚು ಬಾಗಿಲಗಳು ಪ್ರತಿಯೊಂದು ಕೋಟೆಗೆ ಇರುತ್ತಿದ್ದವು. ಗುಪ್ತದ್ವಾರ ಪ್ರಮುಖವಾಗಿ ಇರುತ್ತಿತ್ತು. ಕೋಟೆಯ ರಹದಾರಿ ಸಾಮಾನ್ಯವಾಗಿ ಸುಗಮವಾಗಿರದೆ ಕಷ್ಟದ್ದಾಗಿರುತ್ತಿತ್ತು. ಅಕ್ಕಪಕ್ಕದಲ್ಲಿ ಹೆಚ್ಚು ಗಿಡಗಂಟಿಗಳನ್ನು ಬೆಳೆಸಿ ಹೊಸಬರಿಗೆ ದಾರಿ ತಪ್ಪುವ ಹಾಗೆ ಮಾಡುತ್ತಿದ್ದರು. ಹೀಗಾಗಿ ಮುಘಲರು ಮರಾಠರ ಕೋಟೆಗಳನ್ನು ಗೆದ್ದರೂ ಕೂಡ ಅವುಗಳನ್ನು ಹೆಚ್ಚು ದಿನ ಇಟ್ಟುಕೊಳ್ಳಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಶಿವಾಜಿಯ ಸುದ್ದಿಗಾರರ ಜಾಲರಿ ಬಹಳ ಪರಿಣಾಮ ಕಾರಿಯಾಗಿತ್ತು ಎಂದು ಆಂಗ್ಲ ಆಕರುಗಳು ಹೇಳುತ್ತವೆ[೬].

ಉತ್ತರ ಕರ್ನಾಟಕದಲ್ಲಿ ತಾನು ಗೆದ್ದ ಪ್ರದೇಶಗಳನ್ನು ಶಿವಾಜಿಯು ೮ ವಿಭಾಗಗಳಲ್ಲಿ ವಿಭಜಿಸಿದನು.

೧) ಬೆಳಗಾಂವಿ ಪಾತಶಾಪುರ

೨) ಸಂಪಗಾಂವ

೩) ಗದಗ

೪) ಲಕ್ಷ್ಮೇಶ್ವರ


೫) ನವಲಗುಂದ

೬) ಕೊಪ್ಪಳ

೭) ಬೆಟಗೇರಿ

೮) ಹಳ್ಯಾಳ

ಈ ವಿಭಾಗಗಳನ್ನು 'ಮಹಲ' ಎಂದು ಕರೆಯುತ್ತಿದ್ದರು. ಇವು ಭೂಕಂದಾಯ ಸ್ವಿಕೃತಿಗಾಗಿ ಮಾಡಿದ ವಿಭಜನೆ ಎಂಬುದು ಪ್ರಾಧ್ಯಾಪಕ ಚಿಟ್ನಿಸರ ಅಭಿಪ್ರಾಯ. ಶುರುವಾತಿಗೆ ಕಂದಾಯ ಪದ್ಧತಿ ವಿಜಯನಗರದ ಮಾದರಿಯಲ್ಲಿತ್ತು. ಕೊನೆಗೆ ಹೆಚ್ಚು ಹೆಚ್ಚು ಪ್ರದೇಶಗಳನ್ನು ಗೆದ್ದ ಹಾಗೆ ಮರಾಠರ ಪ್ರಭಾವ ಹೆಚ್ಚಾಯಿತು. ೧೬೮೭ರ ಕ್ರಯಪತ್ರವೊಂದು ಮೇಲೆ ಹೇಳಿದ ಮಾತನ್ನು ಪ್ರಮಾಣಿಸುತ್ತದೆ. ಇದರಲ್ಲಿ ಹಳ್ಳಿಯ ಅಧಿಕಾರಿಗಳ ಹೆಸರು ಕನ್ನಡದಲ್ಲಿವೆ. ಐವತ್ತು ವರುಷಗಳ ಬಳಿಕ ಮರಾಠಿ ಇಲ್ಲವೇ ಪರ್ಶಿಯನ್ ಭಾಷೆಯ ಪ್ರಭಾವ ಕಾಣಸಿಗುತ್ತದೆ. ಉದಾ:ಸೀಮೆ (ಕನ್ನಡ) ಪರ್ಗಣಾ (ಪರ್ಶಿಯನ್) ನಾಡಗೌಡ (ಕನ್ನಡ), ಮಿರಾಸಿ (ಪರ್ಶಿಯನ್).[೭] ಕರ್ನಾಟಕದಲ್ಲಿ ಹೊಸದಾಗಿ ಗೆದ್ದ ಪ್ರದೇಶಗಳನ್ನು ತಕ್ಷಣ ಘನೀಕರಿಸಿ ಅಧಿಕಾರಿಗಳು ಬೇರೆ ಬೇರೆ ಹುದ್ದೆಗಳಿಗೆ ನೇಮಿಸಲ್ಪಡುತ್ತಿದ್ದರು. ಭದ್ರಾಪುರದಲ್ಲಿಯ ಜುಲೈ ೩೧, ೧೬೭೭ರಲ್ಲಿಯ ಶಾಸನ (ನವಲಗುಂದ ತಾಲೂಕು, ಧಾರವಾಡ ಜಿಲ್ಲೆ) ಮೇರೆಗೆ ಗೌಡ, ಶಾನುಭೋಗ ಮತ್ತು ತಲಾರಿಕೆಯರ ಹುದ್ದೆಗೆ ಲಿಂಗಪ್ಪಯ್ಯ ಮತ್ತು ಸಂಗಪ್ಪರ ಎಂಬವರನ್ನು ನೇಮಿಸಿದರ



ಬಗ್ಗೆ ಹೇಳುತ್ತದೆ. ರಾಮಚಂದ್ರ ಪಂತರು ಉತ್ತರ ಕರ್ನಾಟಕ ದಲ್ಲಿಯ ಕೋಟೆಗಳ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು. ಪ್ರತಾಪರಾವ ಗುಜರ ಮತ್ತು ಅವರ ನಂತರ ಹಂಬೀರರಾವ ಮೋಹಿತೆ ಸರನೊಬತ ಆಗಿದ್ದರು (Com in chief of the army).[೮]

ಕರ್ನಾಟಕದ ಪಶ್ಚಿಮ ಭಾಗದಲ್ಲಿಯ ಕೆನರಾ (ಕರ್ನಾಟಕದ ಈಗಿನ ಉತ್ತರ ಮತ್ತು ದಕ್ಷಿಣ ಜಿಲ್ಲೆಯ ಪ್ರದೇಶ) ಇದು ವಿಜಾಪುರದ ಸುಲ್ತಾನನ ರಾಜ್ಯದ ಭಾಗವಾಗಿತ್ತು. ಶಿವಾಜಿ ಅನೇಕ ಸಲ ದಂಡೆತ್ತಿ ಹೋಗಿ, ಬರಿ ಸುಲಿಗೆ ಮಾಡಿ ತೆರಳಿದ್ದನು. ಆದರೆ ೧೬೭೫ ಮೇ ತಿಂಗಳಲ್ಲಿ ಅಂಕೋಲೆ, ಶಿವೇಶ್ವರ, ಕದ್ರಾ ಮತ್ತು ಕಾರವಾರವನ್ನು ಕೊನೆಗೊಮ್ಮೆ ಶಿವಾಜಿ ವಶಪಡಿಸಿಕೊಂಡನು. ಗೋಕರ್ಣ ದಿಂದ ಸುಪೆಯವರೆಗಿನ ಪ್ರದೇಶ ಶಿವಾಜಿಯ ವಶದಲ್ಲಿತ್ತೆಂದು ಸಭಾಸದ ಬಖರ (ಪುಟ ೭೨) ಮತ್ತು ಸುರತ್ ಫ್ಯಾಕ್ಟರಿ ರಿಕಾರ್ಡು ಹಾಗೂ ಇಂಗ್ಲೀಶ ಫ್ಯಾಕ್ಟರಿ ರಿಕಾರ್ಡುಗಳು ಹೇಳುತ್ತವೆ. ಈ ಪ್ರದೇಶಗಳನ್ನು ಧರ್ಮಾಜಿ ನಾಗನಾಥ ಎಂಬ ದಕ್ಷ ಅಧಿಕಾರಿಗೆ ಒಪ್ಪಿಸಿ ಶಿವಾಜಿ ರಾಯಗಡಕ್ಕೆ ತೆರಳಿದನು.

ಶಿವಾಜಿಯು ಮಹಾರಾಷ್ಟ್ರದ ತನ್ನ ಸ್ವರಾಜ್ಯದಲ್ಲಿ ಕೋಟೆಗಳ ಆಡಳಿತವನ್ನು ಹೇಗೆ ನಡೆಸುತ್ತಿದ್ದನೋ ಅದೇ ರೀತಿ ಕರ್ನಾಟಕದಲ್ಲಿ ಗೆದ್ದ, ಸುಲಿದ ಕೋಟೆಗಳ ನಿರ್ವಹಣೆ ನಿಪುಣ ಅಧಿಕಾರಗಳ ಸಹಾಯದಿಂದ ಮಾಡುತ್ತಿದ್ದನು ಎಂಬ ಈ ಅಭಿಪ್ರಾಯಕ್ಕೆ ಅವನ ಆಡಳಿತದ ಬುಡಕಟ್ಟು ಅವನ ನಂತರವೂ ಗಟ್ಟಿಯಾಗಿರುವ ಕಾರಣದಿಂದಲೇ ಅವನ ಸಾವಿನ ನಂತರವೂ ಸಂಭಾಜಿ ಮತ್ತು ರಾಜಾರಾಮ ಮುಘಲರ ದಾಳಿಯನ್ನು ತಪ್ಪಿಸಿ ಕರ್ನಾಟಕದಲ್ಲಿ ಆಶ್ರಯ ಪಡೆಯಲು ಸುಸೂತ್ರವಾಯಿತು. ಮುಂದೆ ಪೇಶ್ವೆಯರ ಕಾಲದಲ್ಲಿ ಮರಾಠರು ಉತ್ತರ ಭಾರತದಲ್ಲಿ ಸಾರ್ವಭೌಮತ್ವವನ್ನು ಸ್ಥಾಪಿಸಲು ಅನೇಕ ಯುದ್ಧಗಳನ್ನು ಬಯಲುಪ್ರದೇಶದಲ್ಲಿ ಮಾಡಬೇಕಾಯಿತು. ಆದರೆ, ಇಲ್ಲಿ ಕೋಟೆಗಳ ರಕ್ಷಣೆಯೂ ಇಲ್ಲದೇ ಮತ್ತು ತಮ್ಮ ಮುಂಚಿನ ಗೆರಿಲ್ಲಾ ಯುದ್ಧ ಪದ್ಧತಿಯನ್ನು ಬಿಟ್ಟುಕೊಟ್ಟ ಕಾರಣ ೧೭೬೧ರ ಮೂರನೇಯ ಪಾಣಿಪತ್ತ ಯುದ್ಧದಲ್ಲಿ ಮರಾಠಿಗರಿಗೆ ಸೋಲನ್ನು ಅನುಭವಿಸ ಬೇಕಾಯಿತು. ಶಿವಾಜಿಯ ಈ ಗೆರಿಲ್ಲಾ ರಣನೀತಿಗಾಗಿ ಪ್ರಪಂಚದ ಹಿರಿಯ ತಜ್ಞ ಸೇನಾನಿಗಳಲ್ಲಿ ಶಿವಾಜಿಯ ಗಣನೆ ಆಗುತ್ತದೆ ಮತ್ತು ಜರ್ಮನ್ ಸೇನೆಯ ಪ್ರಪಂಚ ಆಕ್ರಮಣದ ವಿರುದ್ಧ ಹೋರಾಡಿದ ಜನರಲ್ ಡಿಗೊಲ್, ಮಾರ್ಶಲ್ ಟಿಟೊ, ಚೀನ ಗಣರಾಜ್ಯದ ಪ್ರವರ್ತಕರೆಂದು ಹೆಸರಾದ ಮಾವೊತ್ಸೆ ತುಂಗರು, ವಿಯಟನಾಮದ ಕೊಮ್ಯುನಿಸ್ಟ್ ಕ್ರಾಂತಿಕಾರಿ ಮತ್ತು ಅದರ ಗಣರಾಜ್ಯದ ಪ್ರಧಾನಮಂತ್ರಿ ಮತ್ತು ಅಧ್ಯಕ್ಷರಾದ ಹೊ ಚಿ ಮಿನ್ ಇವರೆಲ್ಲ ಶಿವಾಜಿಯ ರಣನೀತಿಯನ್ನೇ ಅನುಕರಿಸಿ ಯಶಸ್ವಿಯಾಗಿದ್ದ ಕೆಲ ಗಣ್ಯರು ಎಂದು ಗೌರೀಶ ಕೈಕಿಣಿಯವರ ಅಭಿಪ್ರಾಯ.

ಆಧಾರಸೂಚಿ ಮತ್ತು ಅಡಿಟಿಪ್ಪಣಿಗಳು

೧. ಶಿವಕಾಲೀನ ಪತ್ರ ಸಾರ ಸಂಗ್ರಹ, ನಂ. ೬೬೩, ಶಿವಚರಿತ್ರ ಕಾರ್ಯಾಲಯ,ಪೂನಾ, ೧೯೫೧, ಮರಾಠಿ.

೨. ಗೆಝೆಟಿಯರ ಆಫ್ ಬಾಂಬೆ ಪ್ರೆಸಿಡನ್ಸಿ, ವೊಲ್ಯೂಮ XXI, ಬಾಂಬೆ, ೧೮೮೪, ಪುಟ ೫೫೧.

೩. ಶಿವಚರಿತ್ರ ಸಾಹಿತ್ಯ, ವೊಲ್ಯುಮ ೧–೩, ಮರಾಠಿ, ಪುಟ ೬–೭.

೪. ಗೆಝೆಟಿಯರ ಆಫ್ ಬಾಂಬೆ ಪ್ರೆಸಿಡನ್ಸಿ, ವೊಲ್ಯೂಮ XXI, ಬಾಂಬೆ, ೧೮೮೪, ಪುಟ ೫೫೧.

೫. ಫ್ಲೆಕ್ಟರಿ ರೆಕಾರ್ಡ್ಸ್, ಸುರತ್, ವೊಲ್ಯುಮ್ ೮೮, ಇಂಗ್ಲಿಷ ಫ್ಲೆಕ್ಟರಿಸ್ ಇನ್ ಇಂಡಿಯಾ, ಪುಟ ೩೩೫–೩೬.

೬. ಸೇನ್ ಸುರೇಂದ್ರನಾಥ, ಫೊರೇನ್ ಬಾಯೊಗ್ರಫೀಸ್ ಒಫ್ ಶಿವಾಜಿ, ಕಲಕತ್ತಾ, ೧೯೨೭, ಪುಟ ೨೭೩.

೭. ಚಿಟ್ನಿಸ್ ಕೆ.ಎನ್., ಗ್ಲಿಂಪ್ಸೆಸ್ ಆಫ್ ಮರಾಠಾ ಸೋಶಿಯೊ ಇಕೊನೊಮಿಕ್ ಹಿಸ್ಟರಿ, ಪುಣೆ, ೧೯೯೫, ಪುಟ ೧೮.

೮. ಬಾ.ರಾ ಗೋಪಾಲ, ಕರ್ನಾಟಕ ಇನ್ಸ್‌ಕ್ರಿಪ್ಶನ್ಸ್, ೬, ಸಂಪಾ, ಕರ್ನಾಟಕ ಯುನಿವರ್ಸಿಟಿ, ಧಾರವಾಡ, ೧೯೭೩ ನಂ. ೮೦.
ಘಾಣೆಕರ ಪ್ರ.ಕ. ಅಥಾತೊ ದುರ್ಗ ಜಿಜ್ಞಾಸಾ, ಮರಾಠಿ.

೧ ರಘುನಾಥ ಪಂತ ಹನುಮಂತೆ–ರಾಜ್ಯ ವ್ಯವಹಾರ ಕೋಶ.

೨ ಶಿವ ಛತ್ರಪತಿ, ಕಲಕತ್ತಾ, ೧೯೨೦.

೩ ರಾಮಚಂದ್ರ ಪಂತ ಅಮಾತ್ಯ–ಆಜ್ಞಾಪತ್ರ.

೪ ಚಿಟ್ನಿಸ್ ಕೆ.ಎನ್–ಗ್ಲಿಂಪ್ಸೆಸ್ ಆಫ್ ಮರಾಠಾ ಸೋಶಿಯೊ ಇಕೊನೊಮಿಕ್ ಹಿಸ್ಟರಿ, ಪುಣೆ, ೧೯೯೫.

೫ ಇಂಗ್ಲೀಶ ರೆಕೊರ್ಡ್ಸ್ ಒನ್ ಶಿವಾಜಿ ವೊಲ್ಯುಮ ೨, ನಂ, ೨೫೫ ಫೊಸ್ಟರ್ ವಿಲಿಯಮ–ಇಂಗ್ಲಿಶ ಫ್ಲೆಕ್ಟರೀಸ ಇನ ಇಂಡಿಯಾ, ವೊಲ್ಯುಮ, ೧–೧೩, ಒಕ್ಸಫೊರ್ಡ, ೧೯೦೬.

೬ ಶಿವಕಾಲೀನ ಪತ್ರ ಸಾರ ಸಂಗ್ರಹ–ವೊಲ್ಯುಮ ೧, ಶಿವಚರಿತ್ರ ಕಾರ್ಯಾಲಯ, ಪೂನಾ, ೧೯೫೧, ಮರಾಠಿ.

೭ ಶಿವಚರಿತ್ರ ಸಾಹಿತ್ಯ, ವೊಲ್ಯುಮ ೧–೩, ಮರಾಠಿ.

೮ ಸರದೇಸಾಯಿ ಜಿ.ಎಸ್. ಶಿವಾಜಿ ಸೊವೆನಿರ್, ಸ್ಟದಿಸ್ ಆಂಡ ಡೊಕ್ಯುಮೆಂಟ್ಸ್ ಆನ್ ಮರಾಠಿ ಹಿಸ್ಟರಿ, ರಾಯಲ್ ಪಿರಿಯಡ್, ೧೯೭೮.

೯ ರೊಬೆರ್ಟ್ ಒರ್ಮ–ಹಿಸ್ಟೊರಿಕಲ್ ಫ್ರೆಗಮೆಂಟ್ಸ್ ಆಫ್ ದ್ ಮೊಗಲ್ ಎಂಪಾಯರ, ದ್ ಮೊರಾಟ್ಟಾಸ್ ಎಂಡ ಇಂಗ್ಲಿಶ್ ಕನ್ಸೆರ್ನ್ಸ ಇನ್ ಇಂದೊಸ್ತಾನ ಫ್ರೊಮ್ ೧೬೫೯. ೧೭೮೨.

೧೦ ಗೆಝೆಟಿಯರ ಆಫ್ ಬಾಂಬೆ ಪ್ರೆಸಿಡನ್ಸಿ–ವೊಲ್ಯೂಮ XXI, ಬಾಂಬೆ, ೧೮೮೪.

೧೧ ಬಾ.ರಾ. ಗೋಪಾಲ, ಕರ್ನಾಟಕ ಇನ್ಸಕ್ರಿಪ್ಶನ್ಸ, ೬, ನಂ. ೮೦, ಸಂಪಾ, ಕರ್ನಾಟಕ ಯುನಿವರ್ಸಿಟಿ, ಧಾರವಾಡ, ೧೯೭೩.

೧೨ ಸರದೇಸಾಯಿ ಜಿ.ಎಸ್. ಶಿವಾಜಿ ಸೊವೆನಿರ್, ಸ್ಟಡಿಸ್ ಆಂಡ ಡೊಕ್ಯುಮೆಂಟ್ಸ್ ಆನ್ ಮರಾಠಿ ಹಿಸ್ಟರಿ, ರಾಯಲ್ ಪಿರಿಯಡ್, ೧೯೭೮.

೧೩ ಸೇನ್ ಸುರೇಂದ್ರನಾಥ, ೧. ಫೊರೇನ್ ಬಾಯೊಗ್ರಫೀಸ್ ಒಫ್ ಶಿವಾಜಿ, ಕಲಕತ್ತಾ ೧೯೨೭.
ಗೌರೀಶ ಕಾಯ್ಕಿಣಿ, ಸಮಗ್ರ ಸಾಹಿತ್ಯ, ಪತ್ರ ಲೇಖನಗಳ ಸಂಪುಟ ೯. ೨೦೦೧.

೬೨

ವಾಡೆಗಳ ರಕ್ಷಣಾ ಗೋಡೆಗಳು

ಡಾ. ಸಂತೋಷ ಹಾನಗಲ್ಲ*

ದಕ್ಷಿಣ ಭಾರತದ ಐತಿಹಾಸಿಕ ಬದುಕಿನಲ್ಲಿ ಕರ್ನಾಟಕ ಹಾಗೂ ಮಹಾರಾಷ್ಟ್ರಗಳು ಮಹತ್ವದ ಕೊಡುಗೆ ನೀಡಿವೆ. ಆಧುನಿಕ ಯುಗದ ಪ್ರಾರಂಭದಲ್ಲಿ ಮಹಾರಾಷ್ಟ್ರದ ಪೇಶ್ವೆ ಮನೆತನದ ಕರ್ನಾಟಕದ ನಾಯಕರು, ದೇಸಾಯಿ, ಜಹಗೀರ ದಾರ ಮನೆತನಗಳು ತಮ್ಮ ಸೀಮಿತದ ಊಂಬಳಿಯಲ್ಲಿ ಕಲೆ, ಸಂಸ್ಕೃತಿ, ನ್ಯಾಯ, ಆಡಳಿತ, ವಾಸ್ತು, ಶಿಕ್ಷಣ ಇತ್ಯಾದಿಗಳಿಗೂ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ. ಅಂಥ ಚಿಕ್ಕಪುಟ್ಟ ಹಾಗೂ ಮಧ್ಯಮ ಆಡಳಿತದಲ್ಲಿ ವಾಡೆಗಳ ಆಡಳಿತ, ಕಲೆ, ಸಂಸ್ಕೃತಿ ಹಾಗೂ ಕಟ್ಟಡದ ವಿನ್ಯಾಸ ಗಣನೀಯವಾಗಿದೆ. ವಾಡೆಗಳು ಹೆಚ್ಚಾಗಿ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಕಂಡು ಬರುತ್ತದೆ. ದಕ್ಷಿಣ ಕರ್ನಾಟಕದಲ್ಲಿ ವಾಡಗಳಿಗೆ ಗುತ್ತಿ ಮನೆ, ಉಪ್ಪರಿಗೆ ಮನೆ, ಐ–ಮನೆ, ಬಂಟರ ಮನೆ ಹೀಗೆ ಕರೆಯುತ್ತಾರೆ. 'ವಾಡೆ' ಎಂಬ ಪದ ಕನ್ನಡದ ಪದವಾಗಿದ್ದು 'ವಾಡಾ' ಮರಾಠಿಯಲ್ಲಿ ಬಳಸಲಾಗುತ್ತದೆ. ಪುಣೆಯ ಪೇಶ್ವೆಗಳು ತಮಗಾಗಿ ವಾಸಿಸಲಿಕ್ಕೆ ಕಟ್ಟಿಸಿಕೊಂಡಂತಹ ಮನೆಯೆ ವಾಡಾ (ಶನಿವಾರವಾಡಾ)ವಾಗಿದೆ. ಹಾಗೆಯೇ ಕರ್ನಾಟಕದ ನಾಯಕರುಗಳು, ಊಂಬಳಿಯಾಗಿ ಪಡೆದ ವೀರರು, ಸರದಾರರು, ದೇಸಾಯರು ತಾವು ವಾಸಿಸಲಿಕ್ಕೆ ಮನೆಯನ್ನು ಕಟ್ಟಿಕೊಂಡು ಆ ಮನೆಗೆ 'ವಾಡೆ' ಎಂದು ಕರೆಯಲು ಪ್ರಾರಂಭಿಸಿದರು. ಇಂದಿನವರೆಗೂ ಆ ವಾಡೆಗಳಿಗೆ ರಕ್ಷಣಾಗೋಡೆಗಳನ್ನು (Fortification wall) ಕಟ್ಟಿದ್ದನ್ನು ನೋಡಬಹುದಾಗಿದೆ. ಎಷ್ಟೊ ಕಡೆ ಅರಮನೆ, ವಾಡೆಗಳು ಬಿದ್ದಿದ್ದರು ಅದರ ರಕ್ಷಣಾ ಗೋಡೆಗಳು ಬಿದ್ದಿರುವುದಿಲ್ಲ. ಉದಾ: ಪುಣೆಯ ಶನಿವಾರವಾಡಾದ, ತೊರಗಲ್ಲ ಕಿಲ್ಲಾದ, ಕಿತ್ತೂರಿನ ವಾಡಾದ, ನಿಪ್ಪಾಣಿಯ ಸಿದ್ದೊಜಿರಾವ್ ನಿಂಬಾಳಕರ್ ವಾಡಾದ ಹೀಗೆ ಮುಂತಾದ ವಾಡೆಯ ರಕ್ಷಣಾ ಗೋಡೆಗಳು ಇಂದಿಗೂ ಕಾಣಸಿಗುತ್ತವೆ.

ಮೌರ್ಯರ ಪತನದ ನಂತರ ದಕ್ಷಿಣ ಭಾರತದಲ್ಲಿ ಮೊಟ್ಟ ಮೊದಲು ಸಾಮ್ರಾಜ್ಯವನ್ನು ಕಟ್ಟಿ ಮೆರೆದವರೇ ಶಾತವಾಹನರು (೩ನೇ ಶತಮಾನ). ಶಾತವಾಹನ ಬಗ್ಗೆ ಗುಣಾಢ್ಯನ 'ಬೃಹತ್ ಕಥಾ' ಅರಸ ಹಾಲನ 'ಗಾಥಾಶಪ್ತಶತಿ', ಗ್ರೀಕ್ ಅನಾಮಧೇಯನ 'ಪೆರಿಪ್ಲಸ್ ಆಫ್ ದಿ ಎರಿತ್ರಿಯನ್ ಸೀ' ಇವುಗಳು ಶಾತವಾಹನ ಕಾಲದ ಉಪಯುಕ್ತ ಅಂಶಗಳನ್ನು ಒಳಗೊಂಡಿದೆ. ಅರಮನೆ, ಮಹಲ್ ಮುಂತಾದ ವಾಸಿಸುವ ತಾಣಗಳಿಗೆ ರಕ್ಷಣಾ ಗೋಡೆಗಳನ್ನು ಕಟ್ಟಲು ಪ್ರಾರಂಭಿಸಿದ್ದು ಶಾತವಾಹನರ ಕಾಲದಿಂದ. ಮೇಲೆ ಹೇಳಿದ ಕೃತಿಗಳಲ್ಲಿ ಇದರ ಪ್ರಸ್ತಾಪವನ್ನು ನೋಡಬಹುದು. ಕ್ರಿ.ಶ. ೩ನೇ ಶತಮಾನದಿಂದ ಪ್ರಾರಂಭವಾದ ಈ ರಕ್ಷಣಾ ಗೋಡೆಗಳನ್ನು ಕಟ್ಟುವ ಸಂಪ್ರದಾಯ ವಾಡೆ ಕಟ್ಟಗಳಿಗೂ ಆವರಿಸಿಕೊಂಡಿದೆ. ವಾಡೆಗಳ ನಿರ್ಮಾಣ ಕಾಲವೆಂದರೇ (ಕ್ರಿ.ಶ. ೧೭, ೧೮ನೇ ಶತಮಾನ)ವೆಂದು ಅಂದಾಜಿಸಬಹುದು. ಶಾತವಾಹನರ ಕಾಲದ ಕರ್ನಾಟಕದಲ್ಲಿಯ ನಗರಗಳೆಂದರೇ ಬೆಳಗಾವಿ ಸಮೀಪದ ವಡಗಾವ್, ಮಾಧವಪುರ; ಶಿವಮೊಗ್ಗ ಸಮೀಪ ಮಳವಳ್ಳಿ, ಬನವಾಸಿ, ಗೋವೆಯ ರೇವತಿಪುರ ಈ ಪ್ರದೇಶ ಗಳಲ್ಲಿ ಇಂದಿಗೂ ರಕ್ಷಣಾ ಗೋಡೆಗಳ ಪಳವಳಿಕೆಯನ್ನು ನೋಡಬಹುದಾಗಿದೆ.

ಸಾಮಾನ್ಯವಾಗಿ ವಾಡೆಗಳನ್ನು ಕಟ್ಟುವಾಗ ಪೂರ್ವಭಾವಿ ಯಾಗಿ ಆಯಾ ಪ್ರದೇಶದ ಉಷ್ಣಾಂಶ, ತೇವಾಂಶ, ಶೀತಾಂಶ ಹಾಗೂ ವರ್ಷಾಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದರ ಜೊತೆಗೆ ವಾಡೆಯ ರಕ್ಷಣೆಗಾಗಿ ಗೋಡೆಯನ್ನು ನಿರ್ಮಿಸುವ ಯೋಜನೆಯನ್ನು ಮೊದಲು ಮಾಡುತ್ತಿದ್ದರು. ವಾಡೆಯನ್ನು ಎಷ್ಟು ಸುಂದರ, ಗಟ್ಟಿ ಹಾಗೂ ಕಾಳಜಿಯಿಂದ ಕಟ್ಟಲಾಗು ತ್ತದೆಯೋ, ಅದಕ್ಕಿಂತ ಹೆಚ್ಚು ರಕ್ಷಣಾ ಗೋಡೆಯನ್ನು ಭದ್ರವಾಗಿ ಕಟ್ಟಿದ್ದನ್ನು ನೋಡಬಹುದು. ವಾಡೆಗಳನ್ನು ಮಣ್ಣು ಗಚ್ಚು, ಗಾರಿಯಿಂದ ಕಟ್ಟಿದರೇ, ರಕ್ಷಣಾ ಗೋಡೆಗಳನ್ನು ಕಡ್ಡಾಯವಾಗಿ ಕಲ್ಲು, ಗಚ್ಚಿನಿಂದ ಕಟ್ಟಿದ್ದಾರೆ. ಗಾಳಿ ಬೀಸುವ ಪರಿ (Wind flow) ಭೂತಳ (Topography) ಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ ಹಾಗೂ ಸುತ್ತಮುತ್ತ ದೊರೆಯುವಂತಹ ಕಟ್ಟಡದ ಸಾಮಗ್ರಿಗಳ (Building material) ಬಗ್ಗೆ ವಿಶೇಷ ಗಮನಹರಿಸಿ ರಕ್ಷಣಾ ಗೋಡೆಗಳನ್ನು ಕಟ್ಟಿದ್ದಾರೆ. ಕಟ್ಟಡದ

* ಪ್ರಾಚಾರ್ಯರು (ಪ್ರ) ಎಸ್.ಜಿ.ವ್ಹಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಬೈಲಹೊಂಗಲ, ಜಿ: ಬೆಳಗಾವಿ

ಅಭಿಯಾಂತ್ರಿಕನು (Building Engineer) ರಕ್ಷಣಾ ಗೋಡೆಯ ರಚನಾ ವಿಧಾನವನ್ನು ವೈರಿಗಳಿಗೆ ಒಳನುಗ್ಗಲು ಬಾರದಂತೆ ಅಳವಡಿಸಿದ್ದಾನೆ. ಉದಾ: ನಿಪ್ಪಾಣಿ, ಚಚಡಿ, ಕೊಕಟನೂರು, ಬಂಟರ ಗುತ್ತಿ ಮನೆಗಳಲ್ಲಿ ಗಮನಿಸಬಹುದಾಗಿದೆ.

ವಾಡೆಗಳು ಐದರಿಂದ ಎಂಟು ಎಕರೆ ವಿಸ್ತೀರ್ಣ ಹೊಂದಿದ್ದು, ವಾಡೆಯ ಮುಖ್ಯ ಕಟ್ಟಡ 'ಒಂದು' ಎಕರೆಯಷ್ಟಾಗಿವೆ. ಆದರೇ ವಾಡೆಗಳ ಸುತ್ತುಲು ಒಂದು ದೊಡ್ಡ ಸಮುಚ್ಚಯವನ್ನು ಹೊಂದಿದ್ದು, ಸುತ್ತಲೂ ಭದ್ರವಾದ ಗೋಡೆಯನ್ನು ಕಟ್ಟಿ ನಾಲ್ಕು ದಿಕ್ಕಿಗೆ ವೀಕ್ಷಣಾಗೋಪುರ (Watch Tower)ಗಳನ್ನು ಕಟ್ಟಿಸಿ ಇಪ್ಪತ್ನಾಲಕ್ಕು ಘಂಟೆಗಳ ಕಾಲ ಕಾವಲುಗಾರರು ವೀಕ್ಷಣೆ ಮಾಡುತ್ತಿದ್ದರು. ರಕ್ಷಣಾ ಗೋಡೆಯನ್ನು ಸರಿಸುಮಾರು ೧೫ ರಿಂದ ೨೦ ಪೂಟವರೆಗಿನ ಎತ್ತರ ಕಟ್ಟಿದ್ದನ್ನು ಕಾಣುತ್ತೇವೆ. ವಿಶೇಷವಾಗಿ ಈ ರಕ್ಷಣಾ ಗೋಡೆಗಳಿಗೆ ಬಂದೂಕಿನ ರಂದ್ರಗಳನ್ನು (Gun Slits) ಮಾಡಿದ್ದಾರೆ. ಹೆಚ್ಚಾನು ಹೆಚ್ಚು ವಾಡೆಗಳ ರಕ್ಷಣಾ ಗೋಡೆಗಳಿಗೆ ಹೊಂದಿಕೊಂಡೇ ಯುದ್ಧ ಸಲಕರಣೆಗಳ (ಖಡ್ಗ, ಕತ್ತಿ, ಬಂದೂಕು ಮುಂತಾದವು) ಕೊಠಡಿಯನ್ನು ಕಾಣುತ್ತೇವೆ. ಕಾರಣ ಯಾವುದೇ ಒಬ್ಬ ವ್ಯಕ್ತಿ, ದಂಡು ಸೈನ್ಯ, ವೈರಿಗಳು ಬಂದರೇ ಮೊಟ್ಟಮೊದಲು ರಕ್ಷಣಾ ಗೋಡೆಯನ್ನು ಪ್ರವೇಶಿಸಿ ವಾಡೆಯ ಪ್ರಮುಖ ಕಟ್ಟಡಕ್ಕೆ ಹೋಗಬೇಕಾಗಿತ್ತು. ಆ ವೈರಿಗಳು ಹೋರಾಟ, ದಾಳಿ ಮಾಡಿದರೆ ಸೈನ್ಯರಿಗೆ ತಕ್ಷಣ ಯುದ್ಧ ಸಲಕರಣೆ ದೊರೆಯಲಿ ಎಂಬ ಕಾರಣವಾಗಿತ್ತು. ವಾಡೆಗಳಿಗೆ ಸಾಮಾನ್ಯವಾಗಿ ರಕ್ಷಣೆ ದೃಷ್ಟಿಯಿಂದ ಹಾಗೂ ಆಡಳಿತಾತ್ಮಕ ವ್ಯವಸ್ಥೆಗಾಗಿ ಈ ಗೋಡೆಗಳನ್ನು ಕಟ್ಟುತ್ತಿದ್ದರು. ರಕ್ಷಣಾ ಗೋಡೆಗಳು ಕೆಳಗಿನಿಂದ ಮೇಲಕ್ಕೆ ಹೋದಂತೆ ದೊಡ್ಡದಿಂದ ಸಣ್ಣದಾಗುತ್ತಾ ಹೋಗಿದೆ. ವೈರಿಗಳು ದಾಳಿ ಮಾಡಿ ಒಳಗೆ ಪ್ರವೇಶಿದಿದಾಗ ದಿಕ್ಕು ತಪ್ಪಿಸಲು ಒಳಗಿನ ಪ್ರವೇಶಗಳನ್ನು ತಿರುವು-ಮುರುವು ನಾಲ್ಕು ತಿರುವುಗಳು (Circle)ಗಳ ನಿರ್ಮಿಸಿ ಅವರು ವಾಡೆಯನ್ನು ಪ್ರವೇಶಿಸಲು ಕಠಿಣವಾಗಿ ದಾರಿತಪ್ಪಬೇಕು, ಹಾಗೂ ನಾಲ್ಕು ತಿರುವುಗಳಲ್ಲಿ ಸರಿಯಾದ ತಿರುವನನ್ನು ಬಿಟ್ಟು ಬೇರೆ ತಿರುವಿಗೆ ಹೋದರೇ, ದೊಡ್ಡ ದೊಡ್ಡ ಹಗೆ, ಬಾವಿ (Well)ಗಳನ್ನು ನಿರ್ಮಿಸಿದ್ದರು. ವಾಡೆಗಳ ಮನೆತನಗಳು ಸೀಮಿತವಾದ (Limited) ತಮ್ಮ ಪ್ರದೇಶಗಳಲ್ಲಿ ಉದ್ಭವಿಸುವ ರಾಜಕೀಯ ಏಳು-ಬೀಳುಗಳು ಆಘಾತಗಳನ್ನು ತಡೆದು, ಸಹಿಸಿ, ಕಾಲಕ್ರಮೇಣ ವೈವಿಧ್ಯಪೂರ್ಣ ಸಂಸ್ಕೃತಿ ಹಾಗೂ ಕಲೆ ಮತ್ತು ವಾಸ್ತು ಬೆಳೆಸಿದ್ದಾರೆ. ಈ ಧನಿಗಳ ವಿವಿಧ ಕಲೆಗಳಲ್ಲಿ ವಾಸ್ತುಕಲೆ ಕೂಡ ಅವರ ಶ್ರೇಷ್ಠತೆಗೆ ಮಾದರಿಯಾಗಿದೆ. ವಾಡೆ ಧನಿಗಳು ವಾಸ್ತುವನ್ನು ಬಹಳ ಗಮನದಲ್ಲಿಟ್ಟುಕೊಂಡು ವಾಡೆಯನ್ನು ಹಾಗೇ ಅದಕ್ಕೆ ಸಂಬಂಧಪಟ್ಟ ರಕ್ಷಣಾ ಗೋಡೆಗೂ ಅಷ್ಟೇ ಮಹತ್ವವನ್ನು ನೀಡಿದ್ದರು. ವಾಡೆ ಪೂರ್ವಾಭಿಮುಖ ಮುಖ್ಯ ಕಟ್ಟಡವಿದ್ದರೇ ಆವರಣದ ರಕ್ಷಣಾ ಗೋಡೆಯ ಮುಖ್ಯದ್ವಾರವು ಪೂರ್ವ ಈಶಾನ್ಯ (Eastnorth)ಕ್ಕೆ ಹಾಗೂ ವಾಡೆಯು ಉತ್ತರಾಭಿಮುಖವಾಗಿದ್ದರೇ, ಅದರ ರಕ್ಷಣಾ ಗೋಡೆಯು ಉತ್ತರ ಈಶಾನ್ಯ (Northeast)ಗೆ ಕಟ್ಟಿದ್ದಾರೆ. ಹೀಗೆ ವಾಡೆಯ ಮಾಲಿಕರುಗಳು ವಾಸ್ತುವಿಗೆ ಮಹತ್ವವನ್ನು ನೀಡಿದ್ದಾರೆ. ಅಲ್ಲದೇ ವಾಡೆಯನ್ನು ಕಟ್ಟಿದ ಕಾರ್ಮಿಕ ವರ್ಗದವರಾದ ಕಲ್ಲು ಕುಟಿಗರು, ವಡ್ಡರು, ವಿಶ್ವಕರ್ಮರ ಕೈಚಳಕ ಅದ್ಭುತವಾಗಿದೆ. ವೈಭವೋಪೇತವಾಗಿ ಅಧಿಕಾರ ನಡೆಸಿದ ವಾಡೆಗಳ ಅಧಿಕಾರ ಇಂದು ಸಾವಿನ ಅಂಚಿನಲ್ಲಿದೆ. ವಾಡೆ ಮನೆತನಗಳಲ್ಲಿ ದಾಯಾದಿ ಕಲಹಗಳು ಸ್ವಾತಂತ್ರ್ಯ ನಂತರದ ಪ್ರಜಾಪ್ರಭುತ್ವ ದವಡೆಗೆ ಸಿಲುಕಿ, ದುರ್ವ್ಯಸನಿಗಳಾಗಿ ತಮ್ಮ ಆಸ್ತಿ ಮಾರಾಟ ಇಂಥ ಪರಿಸ್ಥಿತಿಯಲ್ಲಿ ಅವರ ಪತನಕ್ರಿಯೆಯ ಪ್ರಶ್ನೆ ಅವರಿಗೆ ಬಗೆ ಹರಿಯಲಾರದ ಗಗನ ಕುಸುಮವಾಗಿದೆ. ಅಂದರೇ, ವಾಡೆಗಳ ದರ್ಪ, ಪ್ರತಿಷ್ಠೆಗಳು ಕೇವಲ ವಾಡೆಗಳ ದಫ್ತರಗಳಲ್ಲಿ ಮಾತ್ರ ಸೀಮಿತಗೊಂಡಿವೆ. ಹೀಗೆ ವಾಡೆಗಳು ಬಿದ್ದು ನೆಲಸಮವಾಗುತ್ತ ಇತಿಹಾಸದಲ್ಲಿ ಲೀನವಾಗುತ್ತಿವೆ. ಬೃಹದಾಕಾರದ ವಾಡೆಗಳ ನಿರ್ವಹಣೆಯು ವಾರಸುದಾರರಿಗೆ ಅಸಾಧ್ಯವಾಗಿದೆ. ತಮ್ಮ ಮೂಲ ವಾಡೆಗಳನ್ನು ತೊರೆದು ಅಕ್ಕ-ಪಕ್ಕ ವಾಸಿಸುತ್ತಿದ್ದಾರೆ. ಕಾರಣ ಕಲಹಗಳು-ವಾಸ್ತುದೋಷ ಮುಂತಾದವುಗಳನ್ನು ಹೇಳುತ್ತಾರೆ. ಇದರಿಂದ ಕೆಲವು ವಾಡೆಗಳು ಬಿದ್ದು ಅನಾಥವಾಗಿವೆ. ಇನ್ನು ಕೆಲವು ಅವಸಾನದ ಅಂಚಿನಲ್ಲಿವೆ. ಪರಂಪರಾಗತವಾದ ಬಂದು ಗುಣಾತ್ಮಕ ಕಲೆಗಳನ್ನು, ಸೌಧಗಳನ್ನು, ಕೋಟೆಗಳನ್ನು, ಅರಮನೆಗಳನ್ನು, ವಾಡೆಗಳನ್ನು ಹಳೆಯದು ಎಂದು ಮರೆಯುವಂತಿಲ್ಲ ಹಾಗೂ ನಿಷ್ಕಾಳಜಿ ಮಾಡುವಂತಿಲ್ಲ. ಅವು ಸಂದೇಶವನ್ನು ನೀಡುತ್ತವೆ. ವಾಡೆಗಳು 'ಸ್ವಹಿತ' ಮತ್ತು 'ಪ್ರಜಾಹಿತ'ಗಳ ಧ್ಯೇಯವನ್ನು ಇಟ್ಟುಕೊಂಡಿದ್ದವು.

೬೩

ರಟ್ಟಿಹಳ್ಳಿಯ ಪರಿಸರ ಕಬ್ಬಿಣ ತಯಾರಿಕಾ ಕೇಂದ್ರವಾಗಿತ್ತೇ?

ಡಾ. ಹೆಚ್. ಚಂದ್ರಶೇಖರ*

ರಟ್ಟಿಹಳ್ಳಿಯು ಹಾವೇರಿ ಜಿಲ್ಲೆಯಲ್ಲಿರುವ ಒಂದು ಪ್ರಮುಖ ಹಳ್ಳಿ. (ಅಕ್ಷಾಂಶ ೧೪°೨೫' ಮತ್ತು ರೇಖಾಂಶ ೭೫°೩೫') ರಾಷ್ಟ್ರಕೂಟರ ಹೆಸರಿನಿಂದಾಗಿ, ರಾಷ್ಟ್ರಪಲ್ಲಿ ನಂತರ ರಟ್ಟಿಹಳ್ಳಿಯಾಯಿತೆಂದು ಕೆಲ ಇತಿಹಾಸಕಾರರ ಅಭಿಪ್ರಾಯ. ಆದರೆ ಈ ಊರಿನಲ್ಲಿ ರಾಷ್ಟ್ರಕೂಟರ ಕಾಲದ ಯಾವುದೇ ಪುರಾತತ್ವ ಅವಶೇಷಗಳಿಲ್ಲ. ಸುಮಾರು ೧೫ ಸಾವಿರ ಜನವಸತಿ ಇರುವ ಈ ಊರು ಕುಮುದ್ವತಿ ನದಿಯ ಎಡದಂಡೆಯ ಮೇಲಿದೆ. ಇಲ್ಲಿರುವ ಕಡಂಬೇಶ್ವರ ದೇವಾಲಯ ೧೨ನೇ ಶತಮಾನದ ಕಲ್ಯಾಣ ಚಾಳುಕ್ಯರ ಕಾಲದ ದೇವಾಲಯ ಇದೊಂದು ಸುಂದರ ಪ್ರಮುಖ ದೇವಾಲಯ. ಬೇರೆಯೇ ಸ್ವತಂತ್ರ ಅಧ್ಯಯನಕ್ಕೊಳಪಡಬಹುದಾದ ದೇವಾಲಯ. ವಿಶ್ವಕರ್ಮ ಜನಾಂಗಕ್ಕೆ ಸೇರಿದ ಮೂರುಜಾವಿದೇವರ ಮಠ ರಟ್ಟಿಹಳ್ಳಿಗೆ ಸಮೀಪದ ಅಂತರಪಳ್ಳಿಯಲ್ಲಿದೆ.[೧] ಮುಂದೆ ಈ ಮಠದ ಪರಂಪರೆ ಮತ್ತು ನನ್ನ ಸಂಪ್ರಬಂಧದ ಅಂತರ್ ಸಂಬಂಧವನ್ನು ಚರ್ಚಿಸುತ್ತೇನೆ.

ಕಬ್ಬಿಣ ಕಂತೆಯ ಮಠ ಮತ್ತು ಪವಾಡ

ಕಬ್ಬಿಣ ಕಂತೆ ಮಠ: ಈ ಹಳ್ಳಿಯಲ್ಲಿ ಕುಮುದ್ವತಿ ನದಿಯ ದಂಡೆಯ ಬಳಿ ಕಬ್ಬಿಣ ಕಂತೆ ಮಠ ಇದೆ. ಈ ಮಠವು ಪಂಚಪೀಠಗಳಲ್ಲಿ ಒಂದಾದ ಉಜ್ಜಯನಿ ಪೀಠದ ಪರಂಪರೆಗೆ ಸೇರಿದೆ. ಈ ಮಠದಲ್ಲಿ ನಾನು ಭೇಟಿ ಮಾಡಿದಾಗ (೨೭.೦೪.೨೦೧೩) ಸಧ್ಯ ಪೀಠಾಧಿಕಾರಿಗಳಾಗಿರುವ ಷ.ಬ್ರ. ಶ್ರೀ. ಶಿವಲಿಂಗ ಶಿವಾಚಾರ್ಯಸ್ವಾಮಿಗಳನ್ನು ಕೇಳಿದಾಗ ಈ ಮಠದ ಸರಿಯಾದ, ನಂಬಲರ್ಹವಾದ ಇತಿಹಾಸವಿಲ್ಲವೆಂದು ತಿಳಿದು ಬಂತು. ಇವರು, ಲಭ್ಯವಿರುವ ಮಾಹಿತಿಯ ಪ್ರಕಾರ ಏಳನೇ ಪೀಠಾಧಿಪತಿಗಳು. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ೧೨ನೇ ಶತಮಾನದಲ್ಲಿ ಈ ಮಠವನ್ನು ಸ್ಥಾಪಿಸಿದರು. ಇಲ್ಲಿ ನೆಲೆ ನಿಂತು ಅನೇಕ ಪವಾಡಗಳನ್ನು ಮೆರೆದರೆಂದು ಚಂದ್ರಶೇಖರ ನಾರಾಣಪುರ ತಮ್ಮ ಗ್ರಂಥದಲ್ಲಿ ಹೇಳಿದ್ದಾರೆ[೨]. ಈ ಗ್ರಂಥದ ಪ್ರಕಾರ ಈ ಕೆಳಗಿನಂತೆ ಪೀಠಾಧಿಕಾರಿಗಳು ಆಗಿದ್ದಾರೆ.

೧. ಷ.ಬ್ರ. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು (ಕರ್ತೃ ಗುರುಗಳು)
೨. ಷ.ಬ್ರ. ಶ್ರೀ ಎರಡನೇ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ. ಶ್ರೀ ಮೂರನೇ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ. ಶ್ರೀ ಹಾಲು ಸ್ವಾಮಿ ಶಿವಾಚಾರ್ಯ ಸ್ವಾಮಿಗಳು
೫. ಷ.ಬ್ರ. ಶ್ರೀ ನಾಲ್ಕನೆಯ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು
೬. ಷ.ಬ್ರ. ಶ್ರೀ ಜಯಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು
೭. ಷ.ಬ್ರ. ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮಿಗಳು (ಈಗಿರುವವರು)

ಈ ಮಠದಲ್ಲಿ ವಟುಗಳು ವೇದಾಧ್ಯಯನ ಮಾಡುತ್ತಾರೆ. ಸ್ವಾಮಿಗಳು ಭಕ್ತರಿಗೆ ತಾಯತ ಇತ್ಯಾದಿಗಳನ್ನು ಕಟ್ಟುವುದನ್ನು ನಾನು ನೋಡಿದ್ದೇನೆ. ಇದೊಂದು ಸ್ಪಷ್ಟವಾಗಿ ವೈದಿಕ ಪರಂಪರೆಯ (ವೀರ) ಶೈವಮಠವಾಗಿದೆ. ಈ ಮಠದ ಪ್ರತಿಯೊಬ್ಬ ಸ್ವಾಮಿಗಳು ಸುಮಾರು ೫೦ ವರ್ಷಗಳ ಕಾಲ ಪದವಿಯಲ್ಲಿದ್ದರೆಂದು ಲೆಕ್ಕ ಹಾಕಿದರೆ ಈ ಮಠ ಬಹುಶಃ ೨೦೦-೩೦೦ ವರ್ಷಗಳಷ್ಟು ಹಳೆಯದು. ಅತ್ಯಂತ ಪುರಾತನ ಮಠ ಎಂದು ಒಪ್ಪಲಾಗದು.

ಪವಾಡ: ಈ ಮಠದ ಕರ್ತೃ ಗುರುಗಳು ಪೀಠಸ್ಥರಾಗಿರುವಾಗ ಸುತ್ತುಮುತ್ತಲ ಪ್ರದೇಶದಲ್ಲಿ ಭೀಕರ ಬರಗಾಲ ಬಿದ್ದಿತ್ತು. ಮಳೆ ಬರದೆ ಪ್ರಜೆಗಳು ತತ್ತರಿಸಿದ್ದರು. ಆಗ ಅವರು ಸ್ವಾಮಿಗಳನ್ನು ಮಳೆ ತರಿಸಲು ಪ್ರಾರ್ಥಿಸಿದರಂತೆ. ಆಗ ಸ್ವಾಮೀಜಿ ಕಾದ ಕಬ್ಬಿಣದ ಕವಚ ಧರಿಸಿ ತಪಸ್ಸು ಮಾಡಲು, ಧಾರಾಕಾರವಾಗಿ ಮಳೆ ಸುರಿಯಿತಂತೆ. ಭೀಕರ ಕ್ಷಾಮ ದೂರವಾಯಿತು. ಕಬ್ಬಿಣದ ಕವಚದಿಂದ ಹೊರಬಂದ ಶ್ರೀಗಳು ಧರ್ಮಪ್ರಚಾರ ಮಾಡುತ್ತಾ ದೇಶ ಸಂಚಾರ ಮಾಡಿ ಕಣವಿ ಸಿದ್ಧೇಶ್ವರ ಕ್ಷೇತ್ರದಲ್ಲಿ ನೆಲೆಗೊಂಡು ಅಲ್ಲಿಯೇ ಲಿಂಗೈಕ್ಯರಾದರಂತೆ.[೩]

* 'ಸಂಗಮ', ಎಮ್‌ಐಜಿ-೭೭, ೬ನೇ ಕ್ರಾಸ್, ೬ನೇ ಮೇನ್, ಕೆ.ಹೆಚ್.ಬಿ. ಕಾಲೋನಿ, ೨ನೇ ಹಂತ, ಬಸವೇಶ್ವರನಗರ,ಬೆಂಗಳೂರು-೭೯.

ಈ ಪವಾಡದ ಕಾರಣವಾಗಿ ಈ ಮಠಕ್ಕೆ "ಕಬ್ಬಿಣ ಕಂತೆ ಮಠ" ಎಂದು ಹೆಸರು ಬಂತು. ಈಗಲೂ ಈ ಮಠದಲ್ಲಿ ಹಿತ್ತಾಳೆಯ ಹೊದಿಕೆ ಇರುವ (ಕವಚ ಇರುವ) ಕಬ್ಬಿಣ ಕಂತೆ ಇರುವ ಶಿವಲಿಂಗಕ್ಕೆ ಪೂಜೆ ಮಾಡಲಾಗುತ್ತದೆ. ನಾನು ಹೋದಾಗ ನನ್ನ ವಿನಂತಿಯ ಮೇರೆಗೆ ಸ್ವಾಮೀಜಿಗಳು ಶಿವಲಿಂಗದ ಮೇಲಿರುವ ವಸ್ತ್ರವನ್ನು ಕೊಂಚ ಸರಿಸಿ ತೋರಿಸಿದರು. ಮೂಲ ಕಬ್ಬಿಣ ಕವಚ ಇರುವ ಶಿವಲಿಂಗಕ್ಕೆ ಜಂಗು (ತುಕ್ಕು) ಹಿಡಿಯಲು ಆರಂಭಗೊಂಡಾಗ ಕೆಲವು ದಶಕಗಳ ಹಿಂದೆ (ಸರಿಯಾದ ಕಾಲ ಗೊತ್ತಿಲ್ಲ) ಹಿತ್ತಾಳೆಯ ಹೊರ ಕವಚವನ್ನು ಮಾಡಿಸಲಾಯಿತು. ಸಧ್ಯ ಈ ಹಿತ್ತಾಳೆ ಕವಚವನ್ನು ಪ್ರತಿ ದಿನ ಬೆಳಿಗ್ಗೆ ಪೂಜಾ ಸಮಯದಲ್ಲಿ ಉಜ್ಜಿ ಹಳದಿ ಬಣ್ಣವಿರುವಂತೆ ನೋಡಿಕೊಳ್ಳಲಾಗುತ್ತದೆ.

ವೃತ್ತಿಯಿಂದ ಭೂವಿಜ್ಞಾನಿಯಾಗಿರುವ ನನಗೆ, ಈ ಕಬ್ಬಿಣ ಕಂತೆಯ ಪವಾಡದ ಹಿಂದೆ ಮನೋವೈಜ್ಞಾನಿಕ ಸತ್ಯ ಇರಬಹುದೆಂದು ಎನ್ನಿಸಿ ಕಣವಿ ಸಿದ್ಧೇಶ್ವರ ಬೆಟ್ಟ ಮತ್ತು ಅದೇ ಹೆಸರಿನ ಗುಡಿ ಇರುವ ನಿವೇಶನ ಪರೀಕ್ಷಿಸುವ ಕುತೂಹಲ ಉಂಟಾಗಿ ಕಣವಿ ಸಿದ್ಧೇಶ್ವರ ಗುಡಿಗೆ ಹೊರಟೆ.

ಕಣಿವೆ ಸಿದ್ಧೇಶ್ವರ ಬೆಟ್ಟ ಮತ್ತು ಗುಡಿ

ಕಣವಿ ಸಿದ್ಧೇಶ್ವರ ಬೆಟ್ಟ ಮತ್ತು ಗುಡಿ ರಟ್ಟಿಹಳ್ಳಿಯಿಂದ ದಕ್ಷಿಣಕ್ಕೆ ಸುಮಾರು ೧೦ ಕಿ.ಮೀ. ದೂರದಲ್ಲಿದೆ. ಸುತ್ತು ಬಳಸಿ ಕಚ್ಚಾರಸ್ತೆಯ ಮೇಲೆ ಪಯಣಿಸಬೇಕು. ಕಣವಿ ಸಿದ್ಧೇಶ್ವರ ಗುಡಿಯ ಕಂಬಗಳು ಕಲ್ಯಾಣ ಚಾಳುಕ್ಯ ಶೈಲಿಯಲ್ಲಿವೆ. ಇವುಗಳನ್ನು ಎಲ್ಲಿಂದಲೋ ತಂದು ಇಲ್ಲಿ ನಿಲ್ಲಿಸಲಾಗಿದೆ. ಮುಖ ಮಂಟಪದಲ್ಲಿ ನಾಲ್ಕು ಕಂಬಗಳಿವೆ. ಮಧ್ಯದಲ್ಲಿ ನಂದಿ ಶಿಲ್ಪ ಇದೆ. ಗರ್ಭಗುಡಿಯಲ್ಲಿ ಶಿವಲಿಂಗ ಇದೆ. ಕಂಬಗಳಿಗೆ ಬಿಳಿಬಣ್ಣದ ಮಿಂಚುವ ವಾರ್ನಿಷ್‌ನ್ನು ಬಳಿಯಲಾಗಿದೆ. ನೆಲದ ಮೇಲೆ ಶಾಬಾದ ಕಲ್ಲು (Blue Shabad Stone) ಮತ್ತು ಕಪ್ಪು ಶಾಬಾದ ಕಲ್ಲಿನ ಚೌಕಗಳನ್ನು ಅಂದವಾದ ಡಿಜೈನ್‌ನಲ್ಲಿ ಹಾಸಲಾಗಿದೆ. ಎಲ್ಲಾ ತೀರ ಇತ್ತೀಚಿನ ರಚನೆ.

ಶಿವಲಿಂಗದ ಹಿಂಬದಿಯಲ್ಲಿ ಸ್ತರಗಳುಳ್ಳ ಕಬ್ಬಿಣ ಬೆಣಚುಕಲ್ಲಿನಲ್ಲಿ (B.F.Q= Banded Ferruginous Quartzite) ಕೊರೆದ ಗವಿಯಿದೆ. ಇಂಗ್ಲೀಷಿನ ಅವನತ ಮುಖಿಯಾಗಿರುವ ಕಮಾನು ಇದೆ. ಕನ್ನಡದ "೧" ಸಂಖ್ಯೆಯನ್ನು ಹೋಲುವ, ಈ ಗವಿಯ ಎತ್ತರ ಸುಮಾರು ೩ ಮೀ. ಕೊನೆಯಲ್ಲಿ ಒಂದು ಶಿವಲಿಂಗವನ್ನು ಇಡಲಾಗಿದೆ. ಇದು ಸ್ಪಷ್ಟವಾಗಿ ಮಾನವ ನಿರ್ಮಿತ ಗುಹೆಯಾಗಿದೆ. ಈ ಸಿದ್ಧೇಶ್ವರ ಗುಡಿಯ ಎಡಗಡೆ ಇನ್ನೊಂದು ಗವಿ ಇದೆ. ಇದೂ ಹಿಂದಿನ ಗವಿಯಂತೆ ಇದೆ. ಇಲ್ಲಿ ಅಕ್ಕಮಹಾದೇವಿಯ ಶಿಲ್ಪವನ್ನು (ಎತ್ತರ ಸುಮಾರು ೮೦ ಸೆ.ಮೀ.) ಸ್ಥಾಪಿಸಲಾಗಿದೆ. ಈ ಶಿಲ್ಪದ ಅಡಿಯಲ್ಲಿ "ಶಿಲ್ಪಿ ನಾಗಲಿಂಗಾಚಾರಿ, ೧೯೮೨" ಎಂದು ಕೆತ್ತಲಾಗಿದೆ (ಚಿ.೬). ಅಂದರೆ ಪುರಾತನ ಮಾನವ ನಿರ್ಮಿತ ಗವಿಯಲ್ಲಿ ಈ ಶಿಲ್ಪವನ್ನು ಸ್ಥಾಪಿಸಲಾಗಿದೆ. ಈ ಗುಡಿಯನ್ನು ಹತ್ತಲು ಹೋಗುವ ರಸ್ತೆಯ ಬದಿಯಲ್ಲಿ (Road Cutting)B.ಈ.ಕಿನ್ನು ಸ್ಪಷ್ಟವಾಗಿ ಕಾಣಬಹುದು.

ಸಿದ್ಧೇಶ್ವರ ಗುಡಿಯ ಎದುರಿಗೆ ಗುಡ್ಡ ಇದೆ. ಅದರಲ್ಲಿ B.F.Q ಮಡಿಕೆಗಳನ್ನು ಸ್ಪಷ್ಟವಾಗಿ ದೂರದಿಂದಲೇ ನೋಡಬಹುದು. ಗುಡಿ ಮತ್ತು ಬೆಟ್ಟದ ಮಧ್ಯೆ ಕಡಿದಾದ ಕಣಿವೆ ಇದೆ. ಈ ಕಂದರದ ಅಡಿಯಲ್ಲಿ ಬೇಸಿಗೆಯಲ್ಲಿಯೂ ನೀರು ತನ್ನಷ್ಟಕ್ಕೆ ತಾನೇ ಹರಿದು ಬರುತ್ತದೆ. ಇದನ್ನು ಒತ್ತಡದ ಚಿಲುಮೆ (Artesian Spring) ಎಂದು ಕರೆಯಬಹುದು. ಬೆಟ್ಟದ ಮೇಲೆ ಕುರುಚಲು ಗಿಡಗಳು ಯಥೇಚ್ಛವಾಗಿ ಬೆಳೆದಿವೆ. ಇಲ್ಲಿ ಸಿಗುವ B.F.Q ಇದು ಕಡಿಮೆ ದರ್ಜೆಯ (Low Grade) ಕಬ್ಬಿಣದ ಅದಿರು. ನನಗೆ ಇದರ ರಾಸಾಯನಿಕ ವಿಶ್ಲೇಷಣೆ ಮಾಡಿಸಲು ಸಾಧ್ಯವಾಗಿಲ್ಲ. ಆದರೂ ನನ್ನ ದೀರ್ಘ ಅನುಭವದ ಹಿನ್ನೆಲೆಯಿಂದ ಇದರ ಈಜ (ಕಬ್ಬಿಣ)ದ ಅಂಶ ಶೇಕಡ ೧೫ ರಿಂದ ೨೦ರಷ್ಟು ಇರಬಹುದು.

ಚರ್ಚೆ

ಮೇಲೆ ವಿವರಿಸಲಾದ ಪವಾಡದ ಕತೆ, ಕಡಿಮೆ ದರ್ಜೆಯ ಅದಿರು, ಅರಣ್ಯ ಮತ್ತು ಲಭ್ಯವಿರುವ ನದಿ ನೀರು ಇವುಗಳನ್ನು ಒಟ್ಟಾಗಿ ಗ್ರಹಿಸಿದರೆ ಇಲ್ಲಿ ಕಬ್ಬಿಣ ತಯಾರಿಸಲು ಬೇಕಾದ ಎಲ್ಲಾ ಕಚ್ಚಾ ವಸ್ತುಗಳಿವೆ.

ಕಬ್ಬಿಣ ತಯಾರಿಸಲು ಕಬ್ಬಿಣದ ಅದಿರು, ಶಾಖಕ್ಕಾಗಿ (Fuel) ಇದ್ದಿಲು, ಕುಲುಮೆ ತಯಾರಿಸಲು ಜೇಡಿಮಣ್ಣು (ಎರೆಮಣ್ಣು) ದ್ರವರೂಪದಲ್ಲಿ ಹೊರ ಬರುವ ಕಬ್ಬಿಣವನ್ನು ತಂಪಿಸಲು ನೀರು ಬೇಕು. ಇಂಥ ಕಚ್ಚಾ ಸಾಮಗ್ರಿಗಳಿಂದ ಹಿಂದೆ ಚಿತ್ರದುರ್ಗ ಜಿಲ್ಲೆಯ ಚಿಕ್ಕ ಬ್ಯಾಳಿಕೆರೆಯಲ್ಲಿ ಕಬ್ಬಿಣದ ಕುಲುಮೆಗಳು ಕ್ರಿ.ಶ. ೧೮೦೧ ಮೇ ತಿಂಗಳ ೩ನೇ ತಾರೀಖಿನಂದು ಬುಕಾನನ್ ಸಂದರ್ಶಿಸಿ ಕಬ್ಬಿಣಧಾತುವನ್ನು ಎರಕ ಹೊಯ್ಯುವ ಕ್ರಿಯೆಯನ್ನು ವಿವರಿಸಿದ್ದಾನೆ.[೩] ಆದ್ದರಿಂದ ಕೆಲವು ಶತಮಾನಗಳ ಹಿಂದೆ ಇದ್ದ ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ರಟ್ಟಿಹಳ್ಳಿಯ ಪರಿಸರದಲ್ಲಿ ಇಂಥ ಕಬ್ಬಿಣ ಧಾತುಗಳನ್ನು ಉತ್ಪಾದಿಸುವ ಹಲವಾರು ಕುಲುಮೆಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸಿರಬಹುದು. ಹಾಗೆಯೇ ತಮ್ಮ ಮಠದಲ್ಲಿ ಕಬ್ಬಿಣ ಕಂತೆ ಇರುವ ಶಿವಲಿಂಗವನ್ನು ಸ್ಥಾಪಿಸಿದರೆಂದು ಊಹಿಸಿದರೆ ತಪ್ಪಾಗದು.

ಅದೂ ಅಲ್ಲದೆ ಹತ್ತಿರದಲ್ಲಿಯೇ ಇರುವ ಅಂತರವಳ್ಳಿಯ ವಿಶ್ವಕರ್ಮ ಜನಾಂಗಕ್ಕೆ ಸೇರಿದ ಮೂರುಜಾವಿ ದೇವರ

ಮಠವು, ಈ ಕೆಲಸಕ್ಕೆ ಬೇಕಾದ ಕಂಬಾರರನ್ನು ಒದಗಿಸಿರ ಬಹುದೆಂದು ಊಹಿಸಬಹುದು.

ಜನರಿಗೆ ಉದ್ಯೋಗ

ಇಂಥ ಕಬ್ಬಿಣ ತಯಾರಿಕಾ ಘಟಕಗಳಿಂದ, ಮರಗಳನ್ನು ಕಡಿಯುವವರಿಗೆ, ಕಡಿದ ಮರಗಳನ್ನು ಇದ್ದಿಲನ್ನಾಗಿ ಸುಡುವವರಿಗೆ, ಕುಲುಮೆ ತಯಾರಿಸುವ ಕುಂಬಾರರಿಗೆ, ಗಣಿಕೆಲಸ ಮಾಡಿ ಕಬ್ಬಿಣದ ಅದಿರನ್ನು ತೆಗೆಯುವವರಿಗೆ (Mining), ಕಡಿಮೆ ದರ್ಜೆಯ ಅದಿರನ್ನು ಕುಟ್ಟಿ ಪುಡಿ ಮಾಡಿ ಅದರಲ್ಲಿಯ ಕಬ್ಬಿಣೇತರ ಖನಿಜಗಳನ್ನು (ಸಿಲಿಕಾ, ಕ್ವಾರ್ಟ್ಜ್ ಇತ್ಯಾದಿ) ಬೇರ್ಪಡಿಸುವವರಿಗೆ, ಈ ಕಬ್ಬಿಣದ ಪುಡಿಯನ್ನು ಕಣವಿ ಸಿದ್ಧೇಶ್ವರ ಬೆಟ್ಟದಿಂದ ಕತ್ತೆಯ ಮೇಲೆ ಸಾಗಿಸುವವರಿಗೆ ಕೆಲಸ ಸಿಕ್ಕು ಅದೊಂದು ಸಾಮಾನ್ಯರ ದೃಷ್ಟಿಯಲ್ಲಿ ಪವಾಡ ವೆಂಬಂತೆ ಕಂಡಿದೆ. ಇದೊಂದು ರೀತಿಯಲ್ಲಿ ವಿವಿಧ ಬಗೆಯ ಕಾಯಕ ಜೀವಿಗಳಿಗೆ ಜೀವನೋಪಾ ಯಗಳನ್ನು ಸೃಷ್ಟಿಸಿದ ಪ್ರಕ್ರಿಯೆ. ಆದ್ದರಿಂದ ಪವಾಡದ ಕತೆ ಹುಟ್ಟು ಪಡೆದಿದೆ.

ಕಬ್ಬಿಣ ತಯಾರಿಕಾ ಇತಿಹಾಸ

ಭಾರತೀಯರಿಗೆ ಕಬ್ಬಿಣ ಮತ್ತು ಉಕ್ಕು ತಯಾರಿಸುವ ವಿದ್ಯೆಯು (Metallurgical Process) ಬಹು ಪೂರ್ವಕಾಲ ದಿಂದಲೂ ಗೊತ್ತಿತ್ತು. ಇಂದಿಗೂ ಜಂಗು ಹತ್ತದಿರುವ ದೆಹಲಿಯ ಕಬ್ಬಿಣದ ಕಂಬದ ಎತ್ತರ ೨.೫ ಮೀ. ಇದರ ತಳದ ಸುತ್ತಳತೆ ೭.೫ಮೀ. ಈ ಕಂಬವನ್ನು ಕ್ರಿ.ಶ. ೪ರಲ್ಲಿ ಸಿದ್ಧಪಡಿಸಲಾಗಿತ್ತು. ಇದನ್ನು ಸಾಂಚಿಯ ಹತ್ತಿರ ಇರುವ ಉದಮಗಿರಿ (ವಿಷ್ಣು ಪಾದಗಿರಿ)ಯಲ್ಲಿ ಎರಕ ಹೊಯ್ದು ಸಿದ್ಧಪಡಿಸಲಾಗಿತ್ತು. ಈ ಸ್ತಂಭವನ್ನು ಕ್ರಿ.ಶ. ೧೦೫೦ರಲ್ಲಿ ದೆಹಲಿಗೆ ಸ್ಥಳಾಂತರಿಸಲಾಯಿತೆಂದು ಕೆಲ ಇತಿಹಾಸಕಾರರ ಅಭಿಪ್ರಾಯ. ಗುಲಾಮಿ ಸಂತತಿಯ ನಸೀರುದ್ದೀನ ಮಹ್ಮದ್‌ನು ಇಲ್ಲಿಯ ಮಸೀದೆಯ ಆವರಣಕ್ಕೆ ಸ್ಥಳಾಂತರಿಸಿದನೆಂದು (ಕ್ರಿ.ಶ. ೧೨೪೬–೬೫) ಕೆಲ ಇತಿಹಾಸಕಾರರ ಅಭಿಪ್ರಾಯ[೫].

ಕರ್ನಾಟಕದಲ್ಲಿ, ದಕ್ಷಿಣಕನ್ನಡ ಜಿಲ್ಲೆಯ ಕೊಡಚಾದ್ರಿ ಯಲ್ಲಿ ಇರುವ ಕಬ್ಬಿಣದ ಕಂಬದ ಎತ್ತರ ೩೩ ಅಡಿ. ಇದಲ್ಲದೆ ಮಧ್ಯ ಪ್ರದೇಶದಲ್ಲಿ ಇಂದೋರದ ಬಳಿ ಇರುವ ಧರ್ ಎಂಬ ಕಬ್ಬಿಣ ಕಂಬದ ಎತ್ತರ ೪೨ ಅಡಿ. ಹಾಗೆಯೇ ಓಡಿಸ್ಸಾದ ಕೊನಾರ್ಕ್‌ದ ಸೂರ್ಯ ದೇವಸ್ಥಾನದಲ್ಲಿ ಕಬ್ಬಿಣದ ತೊಲೆಗಳಿವೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಕರ್ನಾಟಕವು ಸೇರಿದಂತೆ ಭಾರತದಲ್ಲಿ ಹಲವಾರು ಕಡೆ ಕಬ್ಬಿಣ ತಯಾರಿಕಾ ಕೇಂದ್ರಗಳಿದ್ದವು. ಭಾರತೀಯರಿಗೆ ಕಬ್ಬಿಣ ತಂತ್ರಗಾರಿಕೆಯು ಸುಮಾರು ೩೦೦೦ ವರ್ಷಗಳಷ್ಟು ಹಿಂದೆಯೇ ತಿಳಿದಿತ್ತು ಎಂಬುದು ಸ್ಪಷ್ಟ[೬].


ಈ ಹಿನ್ನೆಲೆಯಲ್ಲಿ ರಟ್ಟಿಹಳ್ಳಿಯ ಪರಿಸರದಲ್ಲಿಯೂ ಕಬ್ಬಿಣ ತಯಾರಿಕಾ ಕೇಂದ್ರಗಳಿದ್ದವು ಎಂದು ಒಪ್ಪಿಕೊಂಡರೆ ತಪ್ಪಾಗದು.

ತೀರ್ಮಾನಗಳು ಮತ್ತು ಸಲಹೆಗಳು

ಮೇಲೆ ವಿವರಿಸಲಾಗಿರುವ ಭೌತಿಕ ವಿವರಣೆಗಳು ಮತ್ತು ಭೂವೈಜ್ಞಾನಿಕ ಅಂಶಗಳನ್ನು ಗಮನಿಸಿ ಈ ಕೆಳಗಿನ ತೀರ್ಮಾನಗಳಿಗೆ ಮತ್ತು ಸಲಹೆಗಳಿಗೆ ಬರಬಹುದು.

* ಕಬ್ಬಿಣ ಕಂತೆ ಮಠದ ಕರ್ತೃ ಗುರುಗಳು ಬರಗಾಲ ಬಿದ್ದಾಗ ಕಾದ ಕಬ್ಬಿಣ ಕವಚ ಧರಿಸಿದರೆಂಬ ಕತೆಯು ಪವಾಡ. ಅದನ್ನೊಂದು ರೂಪಕವೆಂದು ಭಾವಿಸಬೇಕಾಗುತ್ತದೆ.
* ಈ ಪ್ರದೇಶದಲ್ಲಿ ತೀವ್ರ ಬರಗಾಲ ಬಿದ್ದಾಗ ಕಬ್ಬಿಣ ತಯಾರಿಕ ಕೇಂದ್ರಗಳನ್ನು ಸ್ಥಾಪಿಸಲು ಪ್ರೇರಕರಾಗಿ ವಿವಿಧ ಕಸಬುದಾರರಿಗೆ ಜೀವನೋಪಾಯಗಳನ್ನು ಸೃಷ್ಟಿಸಿದರು. ಅದನ್ನೇ ಕೆಲ ದಶಕಗಳ ನಂತರ ಜನರು ಪವಾಡವೆಂಬಂತೆ ಕತೆಯನ್ನು ಸೃಷ್ಟಿಸಿದರು.
* ಇಲ್ಲಿ ಕಬ್ಬಿಣ ಕಂತೆ ಇರುವ ಶಿವಲಿಂಗಕ್ಕೆ ಜಂಗು (ತುಕ್ಕು) ಹತ್ತಲು ಆರಂಭವಾಯಿತೆಂದರೆ, ಇಲ್ಲಿ ತಯಾರಾದ ಕಬ್ಬಿಣದಲ್ಲಿ ಅತ್ಯಂತ ಸಣ್ಣ ಪ್ರಮಾಣ ದಲ್ಲಿಯಾದರೂ ರಂಜಕ (P) ಇರಲಿಲ್ಲ ಎಂದರ್ಥ. ಆದ್ದರಿಂದ ಕಬ್ಬಿಣ ಗಾಳಿಯಲ್ಲಿರುವ ಆರ್ದ್ರತೆಯನ್ನು ಹೀರಿಕೊಂಡು ಕಬ್ಬಿಣದ ಆಕ್ಸೈಡ್ ಆಗಲು (FeO) (ಅಂದರೆ ಸಾಮಾನ್ಯ ಭಾಷೆಯಲ್ಲಿ ತುಕ್ಕು) ಆರಂಭಿಸಿತು ಎಂಬುದು ವೈಜ್ಞಾನಿಕ ಸತ್ಯ. ಸಧ್ಯಕ್ಕೆ ಈ ಶಿವಲಿಂಗಕ್ಕೆ ಹಿತ್ತಾಳೆಯ ಹೊದಿಕೆಯನ್ನು (ಕವಚ) ಹೊದಿಸಲಾಗಿದೆ.
* ನನ್ನ ಸೀಮಿತ ಅವಧಿಯ ಈ ಕ್ಷೇತ್ರ ಕಾರ್ಯದಲ್ಲಿ ಕುಲುಮೆಗಳನ್ನಾಗಲೀ ಮೂಸೆಗಳನ್ನಾಗಲೀ ಹುಡುಕಲು ಸಾಧ್ಯವಾಗಲಿಲ್ಲ. ಆದ್ದರಿಂದ ಯುವಕರು ಕಣವಿ ಸಿದ್ಧೇಶ್ವರ ಬೆಟ್ಟದ ಸುತ್ತುಮುತ್ತಲೂ ಕ್ಷೇತ್ರ ಕಾರ್ಯ ಕೈಗೊಂಡರೆ ಕುಲುವೆಗಳು, ಮೂಸೆಗಳು ಮತ್ತು ಗಣಿಗಾರಿಕೆಯ ಕುಣಿಗಳು (Mining Pits) ಸಿಗುತ್ತವೆ. ಈ ಬಗೆಯ ಕ್ಷೇತ್ರಕಾರ್ಯ ಆಸಕ್ತ ಯುವಕರಿಂದ ಮಾತ್ರ ಸಾಧ್ಯ. ಇತಿಹಾಸ ಮತ್ತು ಭೂವಿಜ್ಞಾನದ ವಿದ್ಯಾರ್ಥಿಗಳು ಮುಂದಾಗಬೇಕು.

[ಕೃತಜ್ಞತೆಗಳು: ಈ ಕ್ಷೇತ್ರ ಕಾರ್ಯಕ್ಕೆ ಅವಶ್ಯಕವಾದ ವಾಹನ ಸೌಕರ್ಯವನ್ನು ಒದಗಿಸಿದ ಗದುಗಿನ ತೋಂಟದಾರ್ಯ ಸ್ವಾಮಿಗಳಿಗೂ, ಹಾವೇರಿಯಲ್ಲಿರುವ ಆಯುರ್ವೇದಿಕ್ ಕಾಲೇಜಿನ ಪ್ರಾಂಶುಪಾಲರಿಗೂ, ತೋಂಟದಾರ್ಯ ಮಠದ ಆಡಳಿತಾಧಿಕಾರಿಯಾಗಿರುವ ಶ್ರೀ ಪಟ್ಟಣ ಶೆಟ್ಟರಿಗೂ ನಾನು ಋಣಿಯಾಗಿರುವೆ.



ಆಧಾರಸೂಚಿ ಮತ್ತು ಅಡಿಟಿಪ್ಪಣಿಗಳು

೧. ಮಂಜುಳಾ ಆಚಾರಿ (೨೦೧೩), ಮೂರು ಜಾವಿ ದೇವರ ಮಠದ ಪರಂಪರೆ, ಇತಿಹಾಸದರ್ಶನ, ಸಂ. ೨೮, ಪುಟ ೩೮೨-೩೮೮, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

೨. ಚಂದ್ರಶೇಖರ, ನಾರಾಯಣಪುರ (೨೦೦೨) ಕರ್ನಾಟಕದ ವೀರಶೈವ ಮಠಗಳು, ೧೩೧೭, ಗೆಳೆಯ ಪ್ರಕಾಶನ, ಚಿಕ್ಕಮಗಳೂರು.

೩. ಚಂದ್ರಶೇಖರ ಹೆಚ್. (೨೦೦೫), ಚಿತ್ರದುರ್ಗ ಜಿಲ್ಲೆಯ ಪ್ರಾಚೀನ ಖನಿಜ್ಯೋದ್ಯಮ... ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಸಂ. ಡಾ. ಆರ್. ಗೋಪಾಲ್, ಪುಟ ೨೬೧-೨೬೬... ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲ ಹೊಸಪೇಟೆ-ಮೈಸೂರು.

೪. Buchanan (1988) A Journey from Madras through the countries of Mysore, Canara out mallar, vol III, Asian Educational Services, New Delhi-Madras.

೫. Bala Subramanian R. (2008), Marvels of Indian Iron through the ages... Rupa, New Delhi, PP. 23-109.

೬ ನಾಗೇಶ್‌ರಾವ್ ಮತ್ತು ಅನಂತರಾಮು ಟಿ.ಆರ್. (೧೯೯೯), ಪ್ರಾಚೀನ ಭಾರತದಲ್ಲಿ ಲೋಹತಂತ್ರಜ್ಞಾನ... ಪುಟ ೪೦-೫೫, ಬ್ಯಾಲದಕೆರೆ ಪ್ರಕಾಶನ, ಬ್ಯಾಲದಕೆರೆ, ನಾಗಮಂಗಲ ತಾ. ಮಂಡ್ಯ ಜಿಲ್ಲೆ.

೬೪

ಕೊಡಗಿನ ಕೆಲವು ನೆಲೆ ಹೆಸರುಗಳು ಮತ್ತು ಇತಿಹಾಸ

ಡಾ. ಎಂ.ಜಿ. ನಾಗರಾಜ್*

ಕುಟುಂಬ, ಮನೆತನ, ವಂಶ, ಜನಾಂಗ, ಬುಡಕಟ್ಟು ಹಾಗು ವ್ಯಕ್ತಿಗಳ ಹೆಸರುಗಳಲ್ಲಿ ಸಾಂಸ್ಕೃತಿಕ ಇತಿಹಾಸವಿರುತ್ತದೆ; ಪರಂಪರೆ ಇರುತ್ತದೆ. ಆದರೂ ಅದು ಸೀಮಾತೀತ ಎಂದು ಪೂರ್ಣವಾಗಿ ಹೇಳುವಂತಿಲ್ಲ. ಆಯಾ ಘಟಕಗಳು ಹಿರಿಮೆಯನ್ನು ವಸ್ತುನಿಷ್ಠವಾಗಿಯೇ ಮಂಡಿಸುತ್ತವೆ ಎಂದು ನಿಖರವಾಗಿ ಹೇಳಲು ಕಷ್ಟ. ಆದರೆ ನೆಲೆ ಹೆಸರುಗಳು ವಸ್ತುನಿಷ್ಠವಾಗಿ ಸಾರ್ವತ್ರಿಕ ಸಮ್ಮತಿಯನ್ನು ಪಡೆದಂಥ ವಾಗಿರುತ್ತವೆ. ಸ್ಥಳೀಯ ಜೀವನ ಮೌಲ್ಯಗಳ ಸೂಚಕವೂ ಆಗಿರಬಲ್ಲವೂ ಹೌದು. ಮಾನವ ಜನಾಂಗದ ಇತಿಹಾಸ ವಿಕಸನದಲ್ಲಿಯೂ ಇದರ ಚಹರೆಗಳನ್ನು ಕಾಣಬಹುದು. ಭೌಗೋಳಿಕ ಜೀವನಕ್ರಮವು ಧಾರ್ಮಿಕ, ಆರ್ಥಿಕ, ವೈಜ್ಞಾನಿಕ ಹಾಗೂ ರಾಜಕೀಯ ವಲಯಗಳಿಂದಲೂ ನೆಲೆ ಹೆಸರು ಗಳನ್ನು, 'ಸ್ಥಳನಾಮ'ಗಳನ್ನು ಆ ನಾಮನಿರ್ದೇಶನಗಳಲ್ಲಿ ಪ್ರಭಾವಗೊಂಡಿರುವುದುಂಟು. ಹಾಗೆ ನೋಡಿದರೆ ಮನುಷ್ಯ ೭-೮ ಲಕ್ಷ ವರ್ಷಗಳ ಕಾಲ ನೆಲೆ ವಾಸ ಮಾಡಿದ್ದರೂ ಅವನು ಆಡುಮಾತುಗಳನ್ನು (ಭಾಷೆ) ಕಲಿತದ್ದು ಅರ್ಥಾತ್ ಬಳಸಲಾರಂಭಿಸಿದ್ದು ಸುಮಾರು ಎರಡೂವರೆ ಲಕ್ಷ ವರ್ಷಗಳ ಹಿಂದೆ ಎನ್ನುತ್ತಾರೆ ಭಾಷಾ ವಿಜ್ಞಾನಿಗಳು. ಬಹುಶಃ ಆ ಕಾಲದಿಂದ ತಾನಿದ್ದ ನೆಲೆಗಳಿಗೆ ಹೋದ ನೆಲೆಗಳಿಗೆ ಹೆಸರು ಕೊಟ್ಟುಕೊಂಡು ಕರೆಯತೊಡಗಿದ. ಅದು ಬೇರೆಯವರ ಬಾಯಲ್ಲಿಯೂ ಪ್ರಚಲಿತವಾಯಿತು. ಸುಮಾರು ಆರು ಸಾವಿರ ವರ್ಷಗಳ ಹಿಂದೆ ಬರೆಹ ಶುರುವಾಯಿತೆಂದಿರುವಲ್ಲಿ ಆಗ ಮಾನವ ನೆಲೆ ಹೆಸರುಗಳು ಕೆಲವಾದರೂ ದಾಖಲೆ ಗೊಂಡವೆನ್ನಬೇಕು. ಅವು ಕಾಲಾಂತರದಲ್ಲಿ ಯಾವುದೇ ಮಾರ್ಪಾಟುಗಳಿಗೆ ಗುರಿಯಾದರೂ ಮೂಲದ ಅಂಶವನ್ನು ಉಳಿಸಿಕೊಂಡೋ, ಹಳೆಯ ಹೆಸರನ್ನೇ ಮತ್ತೆ ಮುಂದುವರಿಸಿ ಕೊಂಡೋ ಬಂದದ್ದು ಕಾಣಬರುತ್ತದೆ.

'ಸ್ಥಳ' ಅಥವಾ 'ನೆಲೆ' ಎಂದಾಗ ಅಲೆದಾಟದ ಹಂಗಿನಿಂದ ಹೊರಗಾಗಿ ಒಂದೆಡೆ ವಾಸ್ತವ್ಯಗೊಳ್ಳುವ ಜಾಯಮಾನದ ಸೂಚಿಯಾಗಿ ಅದು ಮೂಡಿದುದು ಕಾಣಬರುತ್ತದೆ; ಹೀಗೆ ಮಾನವ ಒಂದು ನೆಲೆಯಲ್ಲಿ ನಿಂತು ಅದಕ್ಕೆ ಹೆಸರಿಟ್ಟಾಗ ಅವನ ಸ್ವಂತಿಕೆಗೆ, ಅವನ ವ್ಯಕ್ತಿತ್ವಕ್ಕೆ ಇಂಬು ದೊರಕುವಂತಾಯಿತು. ಹೀಗಾಗಿ ತನ್ನ ಜೊತೆಯ ಪರಿಸರದ ಘಟಕಗಳಿಗೆ ಪ್ರಾಣಿ, ಸಸ್ಯ, ಆರಾಧ್ಯವಸ್ತು, ಧರ್ಮ, ಜಾನಪದ, ಆಚರಣಾ ವೈಶಿಷ್ಟ್ಯ, ಘಟನೆ ಹಾಗೂ ತನ್ನ ಹೆಸರಿ ನಲ್ಲಿಯೂ ತಾ ನಿಂತ ನೆಲೆಗೆ ಹೆಸರು ಕೊಟ್ಟ. ಅದು ದಿನನಿತ್ಯ ದಲ್ಲಿ ನಾಲಗೆಯ ಮೇಲೆ ಅಡ್ಡಾಡುತ್ತ ಜೀವಂತ ಚಾಲಿತೆ ಯಾಯಿತು; ನೆಲೆಯ ಹೆಸರು ಸ್ಥಗಿತಗೊಳ್ಳದೆ ಚಲನಶೀಲವಾಯಿತು.

ನೆಲೆ ಹೆಸರೆನ್ನಿ, ಸ್ಥಳನಾಮವೆನ್ನಿ, ಊರೊಕ್ಕಲೆನ್ನಿ ಅದು ಕೇವಲ ಪ್ರಾಚೀನತೆಯ ಸ್ಮರಣೆಯ ನಿರಂತರ ಅವಶೇಷ ರೂಪವಲ್ಲ. ಬದಲು ಪ್ರೇರಣೆಗಳನ್ನು ನೀಡುವ ಭಾವನಾತ್ಮಕ ಚೈತನ್ಯ ನೀಡುವ ಮಾಧ್ಯಮವೂ ಆಗಿದೆ. ಅಧಿಕಾರ, ಸಂಪತ್ತು, ಉದ್ಯೋಗ ವಲಯದಲ್ಲಿ ಎತ್ತರಕ್ಕೆ ಏರಿರುವ ತನ್ನ ಮೂಲನೆಲೆಯ ಹೆಸರಿನಿಂದ ಪುಳಕಿತನಾಗುವ ಹಾಗೂ ಅದನ್ನು ತನಗೆ ಸಾಧ್ಯವಾಗುವ ಪ್ರಾಕಾರದಲ್ಲಿ ಸಜ್ಜುಗೊಳಿಸುವ ಅಂತರ್ ಪ್ರೇರಣೆ ಪಡೆಯುವುದೂ ಸಹಜ. ಇದು ತಮ್ಮ ಹಳ್ಳಿ, ಊರು, ಪಟ್ಟಣ, ರಾಜ್ಯ, ದೇಶದ ಹೆಸರುಗಳಿಂದ ಸ್ಫೂರ್ತಿಗೊಂಡವರ ಬದುಕಿನಲ್ಲಿ ಕಾಣಬರುತ್ತದೆ. ಅದೇನೇ ಇರಲಿ 'ನೆಲೆ ಹೆಸರುಗಳು' ನಮ್ಮ ಭಾವನೆಗಳನ್ನು ಸ್ಪಷ್ಟವಾಗಿ ಮೀಟುತ್ತವೆ. ಅವುಗಳ ಮೂಲವನ್ನು ಕೆದಕಿದಾಗ ಆ ಪ್ರದೇಶದ ಇತಿಹಾಸ ಹಾಗೂ ಹೆಸರಿನ ಉಗಮಕ್ಕೆ ಕಾರಣ ಅಲ್ಲಿಯ ಅಂದಿನ ಜನರ ಚಿಂತನೆಗಳನ್ನು ಬಿಂಬಿಸುತ್ತವೆ.

ಬುಡಕಟ್ಟು, ಜಾನಪದ, ಹಳ್ಳಿ, ನಗರ ಇತ್ಯಾದಿ ಯಾವುದೇ ಪ್ರಕಾರಗಳಲ್ಲಿನ ವಾಸ್ತವ್ಯದ 'ನೆಲೆ ಹೆಸರು'ಗಳು ಚಾರಿತ್ರಿಕ ರೂಪಗಳನ್ನು ವಿದಿತಗೊಳಿಸುತ್ತವೆ. ಐತಿಹ್ಯ, ಪುರಾಣ, ಘಟನೆ, ಪರಿಸರ, ಮಾನವ ಭಾವನಾರೋಪಗಳ ಸ್ಪರ್ಶಗಳೊಡನೆ ಆಧುನಿಕ ಪರಿವರ್ತನೆಗಳೊಡನೆ ಅವು ಸಾಗಿಬಂದಿವೆ. ಶಾಸನಗಳೂ ಐತಿಹಾಸಿಕವಾಗಿ ಅವಕ್ಕೆ ತಮ್ಮ ದೇಣಿಗೆ ನೀಡಿವೆ. ಭೌಗೋಳಿಕ ಪರಿಸರದಲ್ಲಿ ವಾಸ್ತವ್ಯದ ಸಮುದಾಯದ ಸಾಂಸ್ಕೃತಿಕ ವೈವಿಧ್ಯತೆ, ಬಾಳಿನ ಬಗೆ, ಆಚರಣಾ ಪಾಲನೆಗಳ ಸಂಕೇತವಾಗಿಯೂ ಅವು ಕಾಣಿಸಿಕೊಳ್ಳುತ್ತವೆ. ಮಾರ್ಪಾಟು ಗಳೂ ಅವುಗಳ ಅಸ್ತಿತ್ವಕ್ಕೆ ಅಂಟಿರುವುದುಂಟು.

* 'ಅನರ್ಘ್ಯ' ಶ್ರೀ ಜಟನಿ ಕೃಪೆ, # ೨೨೧, ೩೮ನೇ ಕ್ರಾಸ್, ೫ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-೧೦.

ಬುಡಕಟ್ಟು ನೆಲೆಗಳಲ್ಲಿ, ಮಲೆನಾಡು ಪ್ರದೇಶಗಳಲ್ಲಿ ಆಧುನಿಕ ಸ್ಥಿತ್ಯಂತರಗಳ ನಡುವೆಯೂ ನೆಲೆ ಹೆಸರುಗಳು ತಮ್ಮತನವನ್ನು ಕಾಪಿಟ್ಟುಕೊಂಡಿರುವುದು ಕಾಣಬರುತ್ತದೆ. ಈ ಹಿನ್ನೆಲೆಗಳಲ್ಲಿ ಕೊಡಗು ಪ್ರಾಗೈತಿಹಾಸಿಕ ನೆಲೆಯಾಗಿ, ಬುಡಕಟ್ಟು–ಮಲೆ ಪ್ರದೇಶವಾಗಿ, ಕಾಡುಗಳ ನೆಲೆಯಾಗಿ ಶ್ರಮ ಸಂಸ್ಕೃತಿಯ ನೆಲೆಯಾಗಿ ಅದು ತನ್ನ ನೆಲೆಗಳ ಹೆಸರುಗಳನ್ನು ಹೇಗೆ ರಕ್ಷಿಸಿಕೊಂಡು ಬಂದಿವೆ, ವೈವಿಧ್ಯತೆಗಳನ್ನು ಹೊಂದಿದೆ ಎಂಬುದನ್ನು ಗಮನಿಸಬಹುದು. ಅಲ್ಲಿಯ ಶಾಸನಗಳೂ ಇದಕ್ಕೆ ಒತ್ತಾಸೆಯಾಗಿರುವುದನ್ನು ಕೆಲ ಸಂದರ್ಭಗಳಲ್ಲಿ ಕಾಣಬಹುದು.

ಕೊಡಗು: ಕರ್ನಾಟಕದ ನೈರುತ್ಯ ಮೂಲೆಗಿದೆ ಕೊಡಗು. 'ಕುಡು' ಶಬ್ದದಿಂದ ಹೆಸರುಟ್ಟದ್ದು ಕುಡುಮಲೆನಾಡು ಎನ್ನುವುದುಂಟು. ಹೆಸರಿನ ದೃಷ್ಟಿಯಿಂದ ಕುಡ (=ಪಶ್ಚಿಮ) > ಕೊಡಗು ಎಂಬ ವಿಕಾಸ ಕ್ರಮದಿಂದ ಪಶ್ಚಿಮಕ್ಕೆ ಇರುವುದು ಕೊಡಗು ಎನ್ನುವ ಅರ್ಥವಾಗುತ್ತದೆ. ಆದರೆ ಇದು ಯಾವುದರ ಪಶ್ಚಿಮಕ್ಕೆ ಎಂಬುದು ಸ್ಪಷ್ಟವಿಲ್ಲ ಎನ್ನುವ ಅಭಿಪ್ರಾಯವಿದೆ.[೧] ತಮಿಳು 'ಶಿಲಪ್ಪದಿಕಾರಂ' (ಸಂಗಂ ಸಾಹಿತ್ಯ) ಕೃತಿಯು ಕೊಡಗನ್ನು 'ಕುಡುಮಲೈ ಕುಡಕಂ' ಎಂದಿದೆ. ತಮಿಳಿನಲ್ಲಿ ಕುಡಕಂ>ಕೊಡಗಂ ಎಂಬ ನಿಷ್ಪತ್ತಿ ಇದೆ; ಕುಡ(ಮ್); ಪಶ್ಚಿಮ+ಅಕಂ : ಒಳಗೆ>ಕುಡಕಂ> ಕೊಡಕಂ>ಕೊಡಗ>ಕೊಡಗಿ ಎಂದಿರುವಲ್ಲಿ 'ಪಶ್ಚಿಮದೊಳಗೆ ಅರ್ಥಾತ್ ಒಳಪಶ್ಚಿಮದಲ್ಲಿ' ಎಂಬ ಅರ್ಥ ಒದಗುತ್ತದೆ.[೨] ಇದರಿಂದ ಒಳಪಶ್ಚಿಮ ಘಟ್ಟಗಳ ಒಳಗಿನಲ್ಲಿ ಕೊಡಗು ಇದೆ ಎಂಬ ನೆಲೆ ನಿರ್ದೇಶನವಾಗುತ್ತದೆ. ಕ್ರಿ.ಶ. ಸು. ೧೦೪೪ರ ತಡಿಮಾಲಿಂಗಿ ಶಾಸನದಲ್ಲಿ 'ಕುಡುಮಲೈನಾಡು' ಎಂದೇ ಉಕ್ತವಾಗಿದೆ.[೩] ೭–೮ನೇ ಶತಮಾನದ ಕುಲಗಾಣ ಶಾಸನವು ತೆರಕಣಾಂಬಿ ಪ್ರದೇಶವನ್ನು 'ಕೊಡಗೂರ್ನಾಡಾ ಕೊಡಗೂರ್ವಿಷಯೇ' ಎಂದು ಹೇಳುವ[೪] ಕೊಡಗಿನ ವಿಸ್ತಾರವನ್ನು ಹೇಳಿದಂತಿದೆ. ಕೊಡಗಿನ ಜಾನಪದ ಹಾಡು ಗಬ್ಬರಲ್ಲಿ 'ಪೊಮ್ಮಾಲೆ ಕೊಡಗು', (ಚಿನ್ನದ ಹಾರದಂಥ ಕೊಡಗು) ಎಂದು ಉಕ್ತವಾಗಿದೆ. ಕಾನರ್‌ನ ರೀತ್ಯಾ 'ಕೊಡುಗ ಮಲೆ' ಎಂದರೆ ಲಕ್ಷಾಂತರ ಬೆಟ್ಟಗಳ ಪ್ರದೇಶದ ಆಗಿದೆ. ಪ್ರಾಚೀನದಲ್ಲಿ ಈ ನೆಲೆಗೆ 'ತಂಕೋಣ' ಎಂದೂ ಹೆಸರಿತ್ತು. ಕಾರಣ ಸುಗಂಧ ಯುಕ್ತ ಸಸ್ಯ, ಪುಷ್ಪಗಳ ನಾಡು ಆಗಿತ್ತು.[೫] ಆಗ ಇದರ ವಿಸ್ತಾರ ಎಷ್ಟಿತ್ತು ಎಂಬುದು ತಿಳಿದಿಲ್ಲ. ಪುರಾಣ, ಐತಿಹ್ಯಗಳಲ್ಲಿ, ಬ್ರಹ್ಮದೇಶ, ಬ್ರಹ್ಮಕ್ಷೇತ್ರ, ಮತ್ಸ್ಯದೇಶ, ಕ್ರೋಢದೇಶ ಎಂದೆಲ್ಲ ಕೊಡಗನ್ನು ಕರೆಯಲಾಗಿದೆ. ಇವುಗಳಲ್ಲಿ ಪಂಡಿತ ನಿಷ್ಪತ್ತಿ, ಜಾನಪದ ನಿಷ್ಪತ್ತಿ, ಭಾಷಾ ವೈಜ್ಞಾನಿಕ ನಿಷ್ಪತ್ತಿಗಳಿವೆ. ಆದರೆ 'ಕುಡು' ಅಥವಾ 'ಕುಡ' ಶಬ್ದ ಅರ್ಥವನ್ನು ನದಿಮೂಲ ನಿಷ್ಪತ್ತಿಯಿಂದಲೂ ನೋಡಬಹುದೆನಿಸುತ್ತದೆ.

ಬಹುಶಃ 'ಬತ್ತಿದ ಹೊಳೆಯ' ಪಥವನ್ನು ಆಕ್ರಮಿಸಿದ ಕಾರಣ 'ಬರಪೊಳೆ' ಎಂದು ಹೆಸರುಗೊಳ್ಳಲು ಕಾರಣವಾಗಿರಬೇಕು. ಅದು ವಿವಿಧ ತೋಡು, ಹೊಳೆಗಳನ್ನು ಕೂಡಿಕೊಂಡು ನೀರಿನ ಬೃಹತ್ ಜಾಲವನ್ನು ಪಡೆದು ರಭಸದಿಂದ 'ಮಾಕುಟ್ಟ'ದ ಮೂಲಕ ಕೇರಳಕ್ಕೆ ಸಾಗುತ್ತದೆ. 'ಮಾಕುಟ್ಟ' ಎಂಬ ನೆಲೆ ಹೆಸರು 'ಮಹಾಕೂಟ' (ಸಂಗಮಿಸು) ಶಬ್ದದ ಜನಪದ ಬಾಯ್ದೆರೆಯಾಗಿರುವಂತಿದೆ.

ಪುರಾತತ್ತ್ವವಿದ ಕೆ.ಕೆ. ಸುಬ್ಬಯ್ಯ ಕೂಡ ಈ ಮುನ್ನ ಬರಪೊಳೆ ಪೂರ್ವಕ್ಕೆ ಹರಿಯುತ್ತಿದ್ದು ಕಾವೇರಿಯನ್ನು ಸೇರುತ್ತಿದ್ದಿರಬೇಕು; ಪಶ್ಚಿಮಘಟ್ಟಗಳ ಏರು ಹೆಚ್ಚಿದಾಗ ಕಾವೇರಿಯ ಪಶ್ಚಿಮ ಕವಲೊಂದರ ಪಥವನ್ನು ಆಕ್ರಮಿಸಿ ಸಾಗಿರುವುದು ಇಂದಿನ ಅದರ ಹರಿವಿನಲ್ಲಿ ಕಾಣಬರುತ್ತದೆ. ಬರಪೊಳೆಯು ಎರಡು ಕಡೆ 'u' ಆಕಾರದಲ್ಲಿ ಪೂರ್ವದಿಂದ ಪಶ್ಚಿಮದ ಕಡೆಗೆ ಸಾಗಿರುವುದು ಕಾಣಬರುತ್ತದೆ ಎಂದಿದ್ದಾರೆ.[೬] ಇದಕ್ಕೆಲ್ಲ ಪೋಷಕವಾಗಿ ಈ ಹಿಂದೆ ಹರಿದ ನದೀಪಥದ ಪ್ರದೇಶವೆಲ್ಲ ಫಲವತ್ತಿನದಾಗಿ ಇಂದಿಗೆ[೭] 'ಕೊಡಗಿನ ಭತ್ತದ ಕಣಜ' ಎನಿಸಿದೆ.

ಇಂದಿಗೆ 'ಮಹಾಂದೋಡು'ವು ಸೇರುವ ಬರಪೊಳೆಯ ರಭಸದ ಪಶ್ಚಿಮ ಹರಿವಿನ ಪಥವು ಮುಖ್ಯಪಥವಾಗಿ ಕೇರಳದಲ್ಲಿ 'ಭರತಪುಳವು' ಎಂದು ಹೆಸರಾದಂತಿದೆ. ಅದು ಕೇರಳ ಇರಟ್ಟಿಯಲ್ಲಿ ವಿವಿಧ ಹೊಳೆಗಳನ್ನು ಕೂಡಿ, ಹೆಸರು ಗೊಂಡು ಚರಕಲ್ ಬಳಿ 'ಬಲ್ಯಪಥೇಮಿ'ನಲ್ಲಿ ಅರಬ್ಬಿ ಸಮುದ್ರವನ್ನು ಸೇರುತ್ತದೆ. ಅಂದರೆ ಇದು ಪಶ್ಚಿಮದಲ್ಲಿ ಕೊಡಗಿನ ಬರಪೊಳೆಯ ಪಥವಾಗಿರುವಲ್ಲಿ ಕಾವೇರಿಯ ಕವಲುಗಳು ಪಶ್ಚಿಮದ ಮುಖ್ಯ ಪ್ರದೇಶವಾಗಿ ಲಕ್ಷಾಂತರ ವರ್ಷಗಳ ಹಿಂದೆ ಇತ್ತು ಎಂದಾಗುತ್ತದೆ. ಹೀಗಾಗಿ 'ಕಾವೇರಿ' ಎಂಬ ಹೆಸರುಡುವ ಮುನ್ನ, ಅದರ ಪಶ್ಚಿಮಕ್ಕೂ ಇದ್ದ ಹರಿವಿನ ಪ್ರಾಮುಖ್ಯದ ಕಾರಣ ಪಶ್ಚಿಮಕ್ಕೂ ಇರುವ 'ಪಶ್ಚಿಮ ಹೊಳೆ' ಎಂಬ ಅರ್ಥವಿರುವ 'ಕುಡ' ಅಥವಾ 'ಕುಡಕಂ' ಎಂಬ ಹೆಸರೂ ಅದಕ್ಕಿದ್ದಿರಬೇಕು. ಅರ್ಥಾತ್ 'ಕುಡಪೊಳೆ'– ಕುಡಕಂ ಪೊಳೆ ಎಂಬ ಹೆಸರಿನಿಂದ ಚಾಲ್ತಿಗಿತ್ತೇ ಎಂಬುದನ್ನು ಪರಿಶೀಲಿಸಬೇಕು. 'ಕೊಡಗು' ಎಂಬ ಸ್ಥಳನಾಮ ಈ ಪ್ರಾಚೀನ 'ಕುಡಕಂ ಪೊಳೆ' ಎಂದಾಗಿ ಬಂದಿತೆ? ಕುಡುಕಂಪೊಳೆ ಪ್ರದೇಶವಾದ ಕಾರಣ 'ಕೊಡಗು' ಎಂದಾಯಿತೆ? ಗುಂಡಲ್ ನದಿ ಪ್ರದೇಶವಾಗಿ (ಗುಂಡ್ಲುಪೇಟೆ) ಗುಂಡಲ್‌ಪೇಟೆ ಆದಂತೆ[೮] ಇಲ್ಲಿಯೂ ಹಾಗೆಯೇ ಗಮನಿಸಬಹುದು. ಕೊಡಗಿನ ನಾಪೋಕ್ಲು ಹಳೆ ತಾಲೂಕು ಬಳಿ 'ಕೇಲೆಟ್ಟಿದ' ಮನೆತನವಿದೆ. ಅವರು ಕೊಡಗಿನಾಚೆಯ ಪುತ್ತೂರಿನ ಬಳಿಯ ಕೇಲೆಟ್ಟಿ ಹೊಳೆ ಪ್ರದೇಶದಿಂದ ಬಹುಶಃ ದೊಡ್ಡವೀರರಾಜೇಂದ್ರ

ಒಡೆಯನ ಕಾಲದಲ್ಲಿ ಬಂದವರಾಗಿ ನದಿ ಮೂಲದ ಹೆಸರು ಅವರ ಮನೆತನಕ್ಕೆ ಕೂಡಿಬಂದಿದೆ.[೯] ಹಾಗಿದ್ದರೆ 'ಕಾವೇರಿ' ಎಂಬ ಹೆಸರು ಕೊಡಗಿನ ಈ ಮೂಲದೊಳಗೆ ಬಂದದ್ದು ಯಾವಾಗ? ಕೊಡಗಿನ ಸಂದರ್ಭದಲ್ಲಿ ಅಗಸ್ತ್ಯ ಕಾವೇರಿಯರ ಶರತ್ತುಭಂದ ಕತೆ 'ಕಾವೇರಿ' ಹೆಸರಿನ ಅಸ್ತಿತ್ವದ ಸೂಚಿಯಾಗಿರುವಂತಿದೆ.

ದಕ್ಷಿಣ ಭಾರತದ ಪಶ್ಚಿಮಘಟ್ಟಗಳ ಕಡೆ ತನ್ನ ಜೊತೆಯಲ್ಲಿ ವೆಲೀರರ ೧೮ ಕುಟುಂಬಗಳನ್ನು ಅರುವಲರ್ ಬುಡಕಟ್ಟಿನವರನ್ನು (ಕುರುಬರ ಪೂರ್ವಜರಂತೆ) ಕರೆದುಕೊಂಡು ಬಂದನಂತೆ. ಕಾಡುಗಳನ್ನು ಕಡಿದು ಕ್ರಿ.ಪೂ. ೧೦೭೫ರಲ್ಲಿ ಅವರನ್ನೆಲ್ಲ ಅಲ್ಲಿ ನೆಲೆಗೊಳಿಸಿದನಂತೆ ಎಂದೆಲ್ಲ ಕೇರಳದ ಗ್ರಂಥಗಳು ಬರೆದಿವೆ.[೧೦] 'ಕಾವೇರಿ' ಶುದ್ಧ ಕನ್ನಡ ಪದ. ಕಿಟೆಲ್ ನಿಘಂಟಿನ ರೀತ್ಯಾ 'ಕವ' ಎಂದರೆ ಕವೋಷ್ಣ (ಕವ–ಉಷ್ಣ) ; ತುಸು ಬೆಚ್ಚಗಿನ ನೀರಿನವಳು ; (ಬ್ರಹ್ಮಗಿರಿ) ವಾರಿಇಂದ ಇಳಿದವಳು ಕಾವೇರಿ ; ಕವಲುಗಳಾಗಿ (ಕವ–ಕವಲ್) ಹರಿದವಳು ; ಹರಿದು ಮತ್ತೆ ಕೂಡಿದವಳು. ಕವೇರ ಪುತ್ರಿ 'ಕಾವೇರಿ' ಎಂಬ ಪೌರಾಣಿಕ ಆರೋಪವೂ ಆಕೆಗಿದೆ. ಸ್ಕಾಂದಪುರಾಣದಲ್ಲಿ ಕಾವೇರಿ ತನ್ನ ತನುವನ್ನು ಎರಡಾಗಿ ಮಾಡಿಕೊಂಡು ಲೋಪಾಮುದ್ರೆ ಕಾವೇರಿ ಎಂದು ಹೆಸರುಗೊಂಡಳು ಎಂದಿದೆ ('ದೇವೀ ಸ್ವದೇಹಂ ಚ ದ್ವಿಧಾಕರೋ'ತ್') ; ನಿಜಗುಣ ಶಿವಯೋಗಿಗಳ ವಿವೇಕ ಚಿಂತಾಮಣಿಯಲ್ಲಿ ಮರುದ್ವೃದೆ, ಕಾವೇರಿ ಎಂಬ ಹೆಸರುಗಳಲ್ಲಿ ಆಕೆ ಹರಿದುಬಂದುದನ್ನು ಹೇಳಲಾಗಿದೆ. ಇದರಿಂದ ಕಾವೇರಿ 'ಕವಲಾದವಳು' ಎಂಬ ಸೂಚನೆಯಾಗುತ್ತದೆ.

ಕನ್ನಡ ನಿಘಂಟು (೨ನೇ ಸಂಪುಟ) 'ಕುಡು' ಎಂದರೆ ವಕ್ರವಾಗಿರುವ, ಬಾಗಿರುವಿಕೆ ಎಂದಿದೆ. ಶಬ್ದಮಣಿ ದರ್ಪಣವು 'ಕುಡ್ ಕೊಂಕದಕ್ಕುಂ' ಎಂದಿದೆ. 'ನದಿಯ' ಬಾಗಿ ಬಳುಕುವುದು ಕೊಂಕಾಗಿ ಸಾಗುವುದು, ಇವೆಲ್ಲ 'ಕವಲಾಗಿ' ಹೋಗುವ ನದಿಯ ಸಂದರ್ಭವನ್ನು ಹೇಳುತ್ತವೆ. ಈ ಹಿನ್ನೆಲೆಗಳಲ್ಲಿ 'ಕಾವೇರಿ'ಗೆ ಪೂರ್ವದಿಸೆಯಲ್ಲಿ ಒಂದು ಕವಲು ಹಾಗೂ ಪ್ರಮುಖವಾಗಿ ಮೊದಲಿಗೆ ಪಶ್ಚಿಮ ದಿಸೆಯಲ್ಲಿ ಎರಡು ಕವಲುಗಳನ್ನು ಹೊಂದಿದ್ದ ಕಾರಣ 'ಕುಡಹೊಳೆ, ಕುಡಕಂ ಹೊಳೆ' (ಪಶ್ಚಿಮ ಹೊಳೆ) ಎಂದು ರೂಢಿಗಿದ್ದುದು, ಅಗಸ್ತ್ಯ ಬರುವ ಮುನ್ನ ಕವೇರ ಪುತ್ರಿಯಾಗಿದ್ದ ಕಾರಣ ಕ್ರಿಪೂರ್ವದ ೨ನೇ ಶತಮಾನದಲ್ಲಿ ತಳೆದಂತೆ ಕಾಣುತ್ತದೆ. ಸಂಗಂ ಸಾಹಿತ್ಯದಲ್ಲಿ 'ಕಾವಿರಿ' ಶಬ್ದವೂ ಮುಂದೆ ಸೇರ್ಪಡೆಯಾದಂತೆ ಕಾಣುತ್ತದೆ. 'ಕಾವೇರಿ'ಯು 'ಕೊಡಗು' ಎಂಬ ಹೆಸರನ್ನು ಹೀಗೆ ತನ್ನ ಕಾರಣ ಕೊಟ್ಟುದಲ್ಲದೆ, ಕೊಡಗಿನ ಜನತೆಗೆ ಪ್ರಾಚೀನದಿಂದ ಕುಲದೇವತೆಯೂ ಆದಳು. ಕ್ರಿ.ಶ. ೧೦೦೧ರ ಮಡಿಕೇರಿ ಶಾಸನದಲ್ಲಿ 'ಮೊದಲ್ಕಾವೇರಿ' ಎಂದೂ ಉಕ್ತಳಾಗಿದ್ದಾಳೆ. ಹೀಗಾಗಿ 'ಕೊಡಗು' ನೆಲೆ ಹೆಸರು ನದಿ ಮೂಲದಲ್ಲಿ ಉಗಮಿಸಿ, ಸಾಂಸ್ಕೃತಿಕ ಪರಂಪರೆಯಲ್ಲಿ ಬಿಂಬಿತಗೊಂಡು ಸಮುದಾಯ ಶೋಭೆಯಾಗಿದೆ ; ನಿಸರ್ಗವಾಚಿ ಮೂಲದಿಂದ ಉಗಮಿಸಿ ಸಾಂಸ್ಕೃತಿಕ ಪ್ರಾಗಿತಿಹಾಸವನ್ನು ಮೇಳೈಸಿಕೊಂಡಿದೆ.

ವೀರರಾಜೇಂದ್ರಪೇಟೆ ತಾಲ್ಲೂಕು

ವೀರರಾಜೇಂದ್ರಪೇಟೆ: ಹಾಲೇರಿ ಅರಸು ವಂಶದ ಕ್ರಿ.ಶ. ೧೭೯೨ರ ದೊಡ್ಡವೀರ ರಾಜೇಂದ್ರನು ಕಟ್ಟಿಸಿದ ಊರು ಅವನ ಹೆಸರಿನಲ್ಲಿ ಉಳಿದುಬಂದಿದೆ. ೧೮೯೧ರ ಮೇ ತಿಂಗಳಲ್ಲಿ ಆಂಗ್ಲ ಜನರಲ್ ಸರ್ ರಾಬರ್ಟ್ ಆ್ಯಬರ್ ಕ್ರಾಂಬಿಯನ್ನು ಈ ದೊರೆಯು ಮೊಟ್ಟಮೊದಲೇ ಯೆಡೆನಾಲ್ಕುನಾಡು ವಳಿತವಾದ ಮಗ್ಗುಲ ಗ್ರಾಮಕ್ಕೆ ಅಂಟಿದ ಎತ್ತರವಾದ ಮೈದಾನದಲ್ಲಿ ಭೇಟಿ ಮಾಡಿದ. ಆ ಭೇಟಿಯ ನೆನಪಿಗಾಗಿ ೧೭೯೨ರ ಮೇ ತಿಂಗಳಿನಲ್ಲಿ ಅರಮನೆ ಕೋಟೆಯನ್ನು ಕಟ್ಟಿಸಲಾರಂಭಿಸಿ ಅದೇ ಮುಗಿಸಿದ. ಅರಮನೆ ದಕ್ಷಿಣ ಬದಿಗೆ ಕೆರೆ ತೋಡಿಸಿದ. ವೀರರಾಜೇಂದ್ರಪೇಟೆ ಎಂದು ಹೆಸರಿಟ್ಟ. ೨ನೇ ಮೈಸೂರು ಯುದ್ಧದ ಸಮಯದಲ್ಲಿ ಟೀಪುವಿನಿಂದ ಬಲವಂತ ಮತಾಂತರಗೊಂಡಿದ್ದ ಧಕ್ಷಿಣ ಕನ್ನಡ ಜಿಲ್ಲೆಯ ಕೊಂಕಣಿ ಕ್ರೈಸ್ತರು ತಪ್ಪಿಸಿಕೊಂಡು ಬಂದಾಗ, ಮತಾಂತರಿಸಿದ್ದ ಅಹಮದೀರೆನಿಸಿದ್ದ ಕೊಡಗಿನವರು ತಪ್ಪಿಸಿಕೊಂಡು ಬಂದು ಜಮ್ಮಮಾ ಪಿಳ್ಳಗಳೆನಿಸಿದ್ದಾಗ, ಬಂಗಾಳಿ ಮುಸ್ಲಿಮರಿಗೆ ನೆಲೆ ನೀಡಿದ. ತನ್ನ ಹೆಸರಿನಲ್ಲಿಯ ಪೇಟೆಯನ್ನು ನಿರಾಶ್ರಿತರಿಗೆ, ಅಸರೆ ಬಯಸಿ ಬಂದವರಿಗೆ ಅನುಕೂಲಿಸಿ ನೆಲೆ ಹೆಸರನ್ನು ಅರ್ಥಪೂರ್ಣ ಮಾಡಿದ.[೧೧] ಇದು ವ್ಯಕ್ತಿವಾಚಿ ಅರಸು ಮೂಲದ ಸ್ಥಳನಾಮವಾಗಿದೆ.

ಮಗ್ಗುಲ : ಇದು ವೀರರಾಜೇಂದ್ರಪೇಟೆಯ ಬಳಿ ಅಂಬಟಿ ಬೆಟ್ಟವಿದೆ. ಈ ಬೆಟ್ಟದ ಉತ್ತರ ಪಾರ್ಶ್ವದ ತಪ್ಪಲಿನಲ್ಲಿ ಮಗ್ಗುಲಿಗೆ ಮಗ್ಗುಲ ಗ್ರಾಮವಿದೆ. ಅಂಬಟಿ ಬೆಟ್ಟದ ಈ ಪಾರ್ಶ್ವದಲ್ಲಿ ಮಗ್ಗುಲ ಬೆಟ್ಟವಿದೆ ನೈಸರ್ಗಿಕ ನೆಲೆಯಿಂದ ರೂಪುಗೊಂಡ ಹೆಸರು ಈ ಗ್ರಾಮದ್ದಾಗಿದೆ.

ಅರಮೇರಿ : ಇಲ್ಲಿನ ಭಗವತಿ ದೇವಾಲಯದಲ್ಲಿ ಜೈನ ಅವಶೇಷಗಳು ದೊರೆತಿದೆ. ಈ ವಿಷಯಗಳ ಹಿನ್ನೆಲೆಯಲ್ಲಿ ಅರನಾಥ ತೀರ್ಥಂಕರನ ಸಂದರ್ಭವನ್ನು ಗಮನಿಸ ಬೇಕಾಗುತ್ತದೆ. ೨೪ ತೀರ್ಥಂಕರರ ಪೈಕಿ ೧೮ನೇಯವನು ಅರನಾಥ. ಅಂದರೆ ಈ ಭಗವತಿ ದೇಗುಲವು ಮೊದಲಿಗೆ ಜಿನಬಸದಿಯಾಗಿದ್ದಿರುವ ಸಂಭವಕ್ಕೆ ಇವೆಲ್ಲ ಸಾಕ್ಷಿಯಾಗಿರು ವಂತಿದೆ. ಅಂತಾಗಿ 'ಅರಮೇರಿ' ಎಂಬ ನೆಲೆ ಹೆಸರು ಈ

ಗ್ರಾಮಕ್ಕೆ ಬಂದಂತಿದೆ. ಎರಡನೆಯ ಅಂಶವೂ ಹೀಗಿದೆ : ಹಾಲೇರಿ ವಂಶದ ಕ್ರಿ.ಶ. ೧೬೩೩–೮೭ರ ಮುದ್ದುರಾಜನು ತನ್ನ ಮಗಳು ನೀಲಮ್ಮಾಜಿಯನ್ನು ನಾಯಕಂಡ ಮನೆತನದ ಸ್ಫುರದ್ರೂಪಿ ಉತ್ತನಾಯಕನನ್ನು ಅರಮನೆಯಲ್ಲಿ ಸಾಕಿ ಯುದ್ಧವಿದ್ಯೆ ಇತ್ಯಾದಿ ಅರಮನೆಯ ಸಂಪ್ರದಾಯವನ್ನು ಕಲಿಸಿ, ವೀರಶೈವ ದೀಕ್ಷೆ ಕೊಡಿಸಿ ಚನ್ನಬಸಪ್ಪ ಎಂದು ಹೆಸರಿಡಿಸಿ, ಮದುವೆ ಮಾಡಿಕೊಟ್ಟ ; ರಾಜಪ್ರತಿನಿಧಿಯಾಗಿ ಬೆಪ್ಪು ನಾಡನ್ನು ಆಳಲೂ ನೇಮಿಸಿದ. ಅಂತಾಗಿ 'ಅರಮನೆ'ಯಂಥ ಕಟ್ಟಡವನ್ನು ಅಲ್ಲಿ ಕಟ್ಟಿಸಿದನೆಂದು ಹೇಳಲಾಗಿದೆ. ಅಂತಾಗಿ 'ಅರಮನೆಕೇರಿ' ಎಂಬ ಹೆಸರಾಗಿ ಮುಂದೆ ಜನರೂಢಿಯಲ್ಲಿ 'ಅರಮೇರಿ' ಎಂದಾಯಿತು ಎಂಬ ಐತಿಹ್ಯವೂ ಇದೆ. ಆದರೆ ಅದು 'ಅರನಾಥನ ಕೇರಿ' ಎಂದು ಪ್ರಾಚೀನದ ರೂಢಿ ಇದ್ದಿರುವುದನ್ನು ಪೋಷಿಸುತ್ತದೆ. 'ಆನೆಬೆಪ್ಪುನಾಡು' ಎಂದೂ ಈ ಗ್ರಾಮ ಪ್ರಸಿದ್ಧಿಗೊಂಡಿತ್ತು. ಗಂಡ ತೀರಿದ ಮೇಲೆ ತರುಣ ವಯಸ್ಸಿನ ನೀಲಮ್ಮಾಜಿಯ ಸದ್ಬೋಧೆಗೆ ಈ ಗ್ರಾಮದ ನೆರೆಯಲ್ಲಿ ಅರಮನೆಯಿಂದ ಗುರು ಮಠವನ್ನು ಸ್ಥಾಪಿಸಲಾಯಿತು. ಅದು 'ಅರಮೇರಿ ಮಠ' 'ಕಳ (ಕಣ)ಂಜೇರಿ ಮಠ'ವೆಂದೇ ಇಂದಿಗೂ ಪ್ರಸಿದ್ಧಿಯಲ್ಲಿದೆ.

ಮಲ್ಲಂಭಟ್ಟಿ : ಅರಮೇರಿ ಪನ್ಯ ಕೊಡಗಿನ ಪ್ರಸಿದ್ಧ ಪನ್ಯಜಮಿನುಗಳಲ್ಲಿ ಒಂದು. ಪನ್ಯಜಮಿನುಗಳು ವಿಶಾಲವಾದ ಫಲವತ್ತಾದ ರಾಜರ ಕೃಷಿ ಜಮಿನು ಗಳಾಗಿದ್ದುವು. ಪನ್ಯ ಜಮಿನಿನ ಭತ್ತದಿಂದ ಮಾಡಿದ ಅವಲಕ್ಕಿಯನ್ನು ರಾಜರ ಕಾಲದಲ್ಲಿ ಸೈನಿಕರಿಗೆ ಆಹಾರಕ್ಕೆ ಬಳಸಲಾಗುತ್ತಿತ್ತು. ಅರಮೇರಿ ಬಳಿಯ ಮಲ್ಲಂಭಟ್ಟಿ, ಜಟ್ಟಿಗಳಿಗೆ ನೆಲೆಯಾಗಿ ಭಟ್ಟಿ ಅಂದರೆ ಜಮಿನಿನ ಭತ್ತವನ್ನು ಅವರಿಗೆ ಪುಷ್ಟಿಯ ಆಹಾರವಾಗಿ ನೀಡಿ ಕಾಳಗ, ಕುಸ್ತಿಗಳಿಗಾಗಿ ತರಬೇತಿ ಯನ್ನು ನೀಡುವ ನೆಲೆ ಆಗಿತ್ತು ; ಮಲ್ಲರಿಗೆ ಭಟ್ಟಿ ನೀಡಿ ತರಬೇತುಗೊಳಿಸುತ್ತಿದ್ದ ನೆಲೆ 'ಮಲ್ಲಂಭಟ್ಟಿ' ಎನಿಸಿತು. ಅಂತಾಗಿ ಕಣದ ಕೇರಿಯೂ ಆಗಿತ್ತು ; 'ಕಳಂಚೇರಿ' ಎಂಬ ಹೆಸರೂ ಈ ಪ್ರದೇಶಕ್ಕೆ ಬರಲು ಕಾರಣವಾಗಿತ್ತು. ಅದೊಂದು ರೀತಿ ಗರಡಿಯ ಮನೆ ಹಾಗೂ ಸೈನಿಕ ತರಬೇತಿ ಕೇಂದ್ರವಾಗಿತ್ತು.

ಕುಂದಕುಕ್ಲೂರು: ಕುಕ್ಕರ ಅಂದರೆ ಕೆಳಗಣ, ತಗ್ಗಿನ ಊರು. ಕುಂದ ಎಂದರೆ ಬೆಟ್ಟ, 'ಕುಂದ' ಎಂಬ ಬೆಟ್ಟದ ಹೆಸರಿನ ಗ್ರಾಮವೂ ಈ ತಾಲ್ಲೂಕಿನ ಕೈಕೇರಿ ಬಳಿ ಇದೆ. ಅದರಿಂದ ಬೇರೆ ಇದು ಎಂದು ಹೇಳಲು ಕುಂದಕುಕ್ಲೂರು ಅಥವಾ ಕುಕ್ಲೂರು ಕುಂದ ಎಂಬ ನೆಲೆ ಹೆಸರು ನಿಸರ್ಗವಾಚಿಯಾಗಿ ರೂಢಿಗೆ ಬಂದಿದೆ.

ಕೈಕೇರಿ: ಕೊಡವ ಭಾಷೆಯಲ್ಲಿ ಕೈಮಡ, ಕೈಕುಂಞ, ಕೈಪುಡಿ ಎಂದರೆ ಸಣ್ಣಮಡಿ, ಸಣ್ಣಮಗು, ಸಣ್ಣನಾಡಿ ಸಸಿ ಎಂದೆಲ್ಲ ಅರ್ಥವಿದೆ. 'ಕೈ' ಶಬ್ದವು 'ಸಣ್ಣ' ಎಂಬ ಅರ್ಥದ ಸಂಕೇತವಾಗಿದೆ. ಕ್ರಿ.ಶ. ೧೮೫೪ರ ಕುಂದಬೆಟ್ಟದ ದೇಗುಲದ ಸ್ತಂಭ ಶಾಸನದಲ್ಲಿ (ಕೊಡಗು ೯೯) ತಪ್ಪಲಿನಲ್ಲಿ ಗ್ರಾಮಕ್ಕೆ 'ಕೆಕ್ಕೇರಿ' ಎಂಬ ಹೆಸರಿದೆ. ಅಂದರೆ ಕಲ್ಲುವಾರಿಯಿಂದ ಕೂಡಿದ ಊರು ಅರ್ಥಾತ್ ಸಣ್ಣಕೇರಿಯೆ ಎಂದಾಗುತ್ತದೆ. ಅದಾಗಿ ಕಕ್ಕೇರಿ>ಕೈಕೇರಿ ಇಂದಿನ ರೂಪವಾಗಿದೆ. ಹಾಗೂ ಕೈ + ಕೇರಿ ; ಸಣ್ಣ ಕೇರಿ ಎಂಬ ಸ್ವರೂಪ ನಿಷ್ಪತ್ತಿಯೂ ಒದಗುತ್ತದೆ. ಗಾಂಧಿಯವರು ಇಲ್ಲಿಗೆ ಬಂದಾಗ ಈ ಗ್ರಾಮದಲ್ಲಿ ಭಾಷಣ ಮಾಡಿದ ಗದ್ದೆಗೆ ಈಗಲೂ 'ಗಾಂಧಿಗದ್ದೆ' ಎಂದು ಕರೆಯುತ್ತಾರೆ.[೧೨]

ಕೊಳತ್ತೋಡು-ಬೈತೋಡು ಗ್ರಾಮ: ಇದೊಂದು ಪ್ರಾಗೈತಿಹಾಸಿಕ ನೆಲೆ. ಗೋಣಿಕೊಪ್ಪ ಮತ್ತು ವೀರರಾಜೇಂದ್ರ ಪೇಟೆ ನಡುವಣ ಹಾದಿಯಲ್ಲಿದೆ. ಇಲ್ಲಿ ಬೃಹತ್ ಶಿಲಾಯುಗದ ನಿಲುವುಗಲ್ಲುಗಳು ಎರಡು ಇದ್ದು, ಅಯ್ಯಪ್ಪ, ಸುಬ್ರಮಣ್ಯ ಎಂದು ಪೂಜೆಗೊಳ್ಳುತ್ತಿವೆ. ಆ ಕಾಲದ ಕಿಂಡಿಕೋಣೆ ಸಮಾಧಿಯ ಅವಶೇಷಗಳೂ ಇವೆ. ಈ ಗ್ರಾಮದ ಸುತ್ತ ಗದ್ದೆಗಳ ವಿಶಾಲ ಹರವೂ ಇದೆ. ನೆಲೆ ಹೆಸರಿನಲ್ಲಿಯೆ ನೀರಿನ ಆಸರೆಯ ಜಾಗ ಎಂದು ವಿದಿತವಾಗುತ್ತದೆ. ಇಲ್ಲಿ 'ಗೋಳಗುಂಡಿ' ಹೊಳೆ ತೋಡುಗಳ ರೂಪದಲ್ಲಿ ಹರಿಯುತ್ತದೆ. ನವಶಿಲಾಯುಗದ ಕೈಕೊಡಲಿಯೂ ಇಲ್ಲಿ ಪೂಜೆಗೊಳ್ಳುತ್ತಿದೆ. ಕಾವೇರಿಯು ಪಶ್ಚಿಮ ಘಟ್ಟಗಳ ಏರು ಹೆಚ್ಚುವ ಮುನ್ನ ಹೊಂದಿದ್ದ ಪಶ್ಚಿಮ ಕವಲು ಈ ದ್ವಯ ತೋಡುಗಳ ಪಥದಲ್ಲಿ ಸಾಗುತ್ತಿದ್ದುದಕ್ಕೆ ಭೌಗೋಲಿಕ ಸಾಕ್ಷ್ಯಗಳು ಸಾಂಕೇತಿಕವಾಗಿ ಉಳಿದುಕೊಂಡಿವೆ. ಕೊಳದ ಮೂಲಕ ಸಾಗುತ್ತಿದ್ದ ರಭಸದ ತೋಡುಗಳ ನೆಲೆ ಇದಾಗಿತ್ತು. (ಬಯತ್–ತೋಡು=ಬೈತೋಡು ; ಕೊಳ–ಕೊಳವೆಯ ಬಗೆ ಹರಿವ ತೋಡು ಕೊಳತ್ತೋಡು : ಗೋಳಗುಂಡಿ) ಎಂಬ ನಿಷ್ಪತ್ತಿ ನಿಸರ್ಗವಾಚಿಯಾಗಿ ಕಾಣಬರುತ್ತದೆ.

ಅರವತ್ತೊಕ್ಕಲು: ಅರವತ್ತು ಒಕ್ಕಲುಗಳು ವಾಸ್ತವ್ಯವಿದ್ದ ನೆಲೆ. ಗೋಣಿಕೊಪ್ಪ–ಪೊನ್ನಂಪೇಟೆ ಹಾದಿಯ ನಡುವೆ ಈ ಗ್ರಾಮವಿದೆ.

ಪೊನ್ನಂಪೇಟೆ: ಚಿಕ್ಕವೀರರಾಜೇಂದ್ರ ಒಡೆಯನ (ಹಾಲೇರಿ ಅರಸುವಂಶದ ಕೊನೆಯ ದೊರೆ ೧೮೨೦–೧೮೩೪) ಕಾಲದಲ್ಲಿ ಹಾಗೂ ಆಂಗ್ಲರ ಆಡಳಿತ ಕಾಲದಲ್ಲಿ ಚೆಪ್ಪುದಿರ ಪೊನ್ನಪ್ಪ ದಿವನನಾಗಿದ್ದ. ಅವನ ಮಗ ಚೆಪ್ಪುದಿರ ಮಾದಯ್ಯ ಕ್ರಿ.ಶ. ಸು. ೧೮೪೫–೫೦ರಲ್ಲಿ ತಂದೆಯ ನೆನಪಿಗಾಗಿ ಈ ಪೇಟೆಯನ್ನು ನಿರ್ಮಿಸಿದ.

ಕೈಮುಡಿಕೆ ಹುತ್ತರಿ ಕೋಲಾಟ ಮಂದ್ : 'ಮಂದ್' ಎಂದರೆ ಕೊಡವ ಭಾಷೆಯಲ್ಲಿ 'ಮೈದಾನ' ಎಂಬ ಅರ್ಥವೂ ಇದೆ. ಹುತ್ತರಿ ಹಬ್ಬದ ಐದನೇ ದಿನ ಆಖೈರು ಕೋಲಾಟ ಇಲ್ಲಿರುವ ಇಗ್ಗುತಪ್ಪನ ವೃಕ್ಷದ ಸುತ್ತಲ ವಿಶಾಲ ಮೈದಾನದಲ್ಲಿ ನಡೆಯುತ್ತದೆ. (ಇಂದು ಮೈದಾನದ ವಿಸ್ತಾರ ಕಡಿಮೆ ಗೊಂಡಿದೆ). ಈ ಮೈದಾನದಲ್ಲಿ ಬೆಟ್ಟಿಯತ್‌ನಾಡ್, ಕುತ್ತ್‌ನಾಡ್ ಮತ್ತು ಬೇರಳನಾಡ್ ಎಂಬ ಮೂರು ನಾಡಿನವರು ಸೇರಿ ಆಡುವ ಸಂಯುಕ್ತ ಹುತ್ತರಿ ಕೋಲಾಟ ರಮಣೀಯ. ನಾಡು ಕುಂದಬಟ್ಟದ ಸನಿಹಕ್ಕಿರುವ ಕಾರಣ ಬೆಟ್ಟಿಯತ್ ನಾಡ್ ; ಇಲ್ಲಿ 'ಕೈಮುಡಿಕೆ' ಎಂಬ ನೆಲೆ ಹೆಸರಿನ ರೂಪ 'ಕೈಮುರಿಕೆ, ಕೋಲಾಟ ಮಂದ್ ಎಂದಿತ್ತೆನಿಸುತ್ತದೆ. ಕಾರಣ ಹುತ್ತರಿ ಕೋಲಾಟದಲ್ಲಿ ಕೈ ತಿರುಗಿಸಿ ವಿವಿಧ ಭಂಗಿಗಳನ್ನು ತೋರುವುದಿದೆ. ಕೊಡಗಿನ 'ಬಲಮುರಿ' ಕಾರಂತರ ಸಿರಿಗನ್ನಡ ಅರ್ಥಕೋಶವು 'ಬಲಕ್ಕೆ ತಿರುವುಳ್ಳ' ಎಂಬ ಅರ್ಥ ನೀಡಿದೆ. ಹೀಗಾಗಿ 'ಕೈಮುರಿಕೆ ಹುತ್ರಿ ಕೋಲಾಟ್ ಮಂದ್' 'ಕೈ ಮುಡಿಕೆ ಹುತ್ತಿ ಕೋಲಾಟ ಮಂದ್' ಎಂದು ಹೆಸರುಗೊಂಡು ಪ್ರಸಿದ್ಧಿಗೊಂಡಿದೆ. ಘಟನಾ ವಾಚಿಕೆಯಾಗಿ ನಿಷ್ಪತ್ತಿಕೊಂಡ ನೆಲೆಹೆಸರಾಗಿದೆ.

ಹುದಿಕೇರಿ : ಇದು ಶಾಸನೋಕ್ತವಾಗಿ ಕ್ರಿ.ಶ. ೭–೮ನೇ ಶತಮಾನದ ಹೈಸೊಡ್ಲೂರಿನ ಅಪ್ರಕಟಿತ ಶಾಸನದಿಂದ 'ಪುದುಕ್ಕೇರ್ರಿ' ಎಂಬ ಹೆಸರನ್ನು ಹೊಂದಿತ್ತು ಎಂದು ತಿಳಿಯುತ್ತದೆ. ಈ ಶಾಸನವು ಕೊಡಗಿನ ಮೊದಲ ಕನ್ನಡ ಶಾಸನವಾಗಿ ಸದ್ಯಕ್ಕೆ ಕಂಡುಬಂದಿದೆ. ಕೊಡವ–ಕನ್ನಡ ನಿಘಂಟು, ಪುದಿ > ಹುದಿ ಎಂದರೆ ಕೂಡಿಸು, ಸೇರಿಸು, ಆವರಿಸು, ಎಂಬರ್ಥ ನೀಡಿದೆ. ಕೊಡವ ಭಾಷೆಯ ನಿಘಂಟು 'ಪುದಿಯರ್' ಎಂದು ಹೊಸತು ಎಂದಿದೆ. ಎಡರನ್ನು ಗಮನಿಸಿ ಹೇಳುವಲ್ಲಿ ಊರು, ಗ್ರಾಮಗಳನ್ನು ಸೇರಿಸುವ 'ಕೇರಿ' ಆಗಿತ್ತು. ಕೇರಿ ಶಬ್ದಕ್ಕೆ ಕೊಡವ ನಿಘಂಟು 'ಊರು' ಎಂಬ ಅರ್ಥ ನೀಡಿರುವಲ್ಲಿ ವಿವಿಧ ಊರು ಗ್ರಾಮಗಳನ್ನು ಸೇರಿಸುವ ಹಾದಿಯೂರು 'ಪುದಿಕ್ಕೇರಿ' ಆಗಿತ್ತು ಎಂದಾಗುತ್ತದೆ. ಪೊನ್ನಂಪೇಟೆಯಿಂದ ಹೈಸೂಡ್ಲೂರು ಶ್ರೀಮಂಗಲ ಗ್ರಾಮಗಳಿಗೆ ಹೋಗುವ ಹಾದಿಯಲ್ಲಿ ಈಗಿನ ಈ 'ಹುದಿಕೇರಿ' ಇದೆ. ಅಂದರೆ ಸುಮಾರು ೧೪ ಶತಮಾನದಷ್ಟು ಹಳಮೆಯನ್ನು ಹೊಂದಿರುವ ಪ್ರಾಚೀನ ಊರು ಇದಾಗಿದೆ.

ಇರ್ಪು : (ಇರ್ಪಿ) ಶಬ್ದಕ್ಕೆ ತೇವ, ರಸ, ಇಂಪು ಎಂದೆಲ್ಲ ಅರ್ಥಗಳಿವೆ. ಈ ಇರ್ಪು ಸ್ಥಳದಲ್ಲಿ ಲಕ್ಷ್ಮಣತೀರ್ಥದ ಸುಂದರವಾದ ಹಂತಹಂತವಾಗಿ ಧುಮ್ಮಿಕ್ಕುವ ಇರ್ಪು ಜಲಪಾತವಿದೆ. ಇರ್ಪು ರಾಮೇಶ್ವರ ದೇವಾಲಯವೂ ಇದೆ.

ಲಕ್ಷ್ಮಣ ತೀರ್ಥದ ಬಳಿಯ ಈ ದೇಗುಲಕ್ಕೆ ೧೮೪೦–೪೧ರಲ್ಲಿ ಕಿಗ್ಗಟ್ಟು ಹತ್ತುನಾಡು ದೈತರು ಶಾಸನೋಕ್ತವಾಗಿ ಜೀರ್ಣೋದ್ಧಾರ ಮಾಡಿದ ಸಂಗತಿ ಇದೆ.[೧೩] ತಮಿಳಿನಲ್ಲಿ [<ಈರ್ (<ನೀರ್) + – ಪು] ಎಂದು ಅರ್ಥವಿದೆ. ['ಈರ್' ಹಾಗೆ ಇರ್ಪು ಶಬ್ದಕ್ಕೆ ತೇವ, ದ್ರವ, ಇಂಪು ಎಂದರ್ಥವಿರುವಲ್ಲಿ ತಂಪಾಗಿ, ಇಂಪಾಗಿ ಇಳಿವ ನೀರಿನ ಇರ್ಪಿ ಜಲಪಾತ ಎಂದು ಅರ್ಥೈಸಲು ಅದರ ಭೌಗೋಳಿಕ ಪರಿಸರದಿಂದ ಸಾಧ್ಯವಾಗುತ್ತದೆ.

ಕ್ರಿ.ಶ. ೮೮೮ರ ಬಿಳಿಯೂರು, ಶಾಸನದಲ್ಲಿ 'ಕುನ್ನಿರ್ಪಳ್ಳಿ' ಹನ್ನೆರಡು ಹಳ್ಳಿಗಳು ಎಂದಿರುವಲ್ಲಿ ಪನಿ ನೀರ್‌ಪಳ್ಳಿ–ಹನೀ ನೀರು ಧಾರೆಯ ಇರ್ಪು ಗ್ರಾಮ ಎಂದು ಪರ್ಯಾಯ ರೂಪವಾದರೆ ಇರ್ಪುವಿನ ಇತಿಹಾಸ ೯ನೇ ಶತಮಾನ ದ್ದಾಗುತ್ತದೆ. ಇಲ್ಲಿ ಸುಮಾರು ೧೩೦ ಎಕರೆಗೂ ಮೀರಿದ ಬೃಹತ್ ದೇವರ ಕಾಡು ಇರುವುದು ಅದರ ಶತಶತಮಾನಗಳ ಪ್ರಾಚೀನತೆಗೆ ಸಾಕ್ಷಿಯಾಗಿದೆ.

ತೆರಾಲು : ದಕ್ಷಿಣ ಕೊಡಗಿನ ಮೇಲ್ಸೂಚಿತ ಪ್ರದೇಶಗಳ ಜೊತೆಗೆ 'ತೆರಾಲು' ಗ್ರಾಮವು ಬೌದ್ಧಮೂಲದ ನೆಲೆಯಾಗಿ ಗಮನಕ್ಕೆ ಬರುತ್ತದೆ. ಬೌದ್ಧರ 'ಥೇರ' ಶಬ್ದದ ಅಪಭ್ರಂಶವೆಂಬಂತೆ 'ತೆರಾಲು' ಕಾಣುವಂತಿದೆ. ಕಾರಣ ಇಲ್ಲಿಗೆ ಸನಿಹದ 'ಮಂಜುವಳ್ಳಿ' ಮಂಚಳ್ಳಿ ಎಂದೂ ರೂಢಿಗೆ ನಿಂತಿದೆ. ಈ ಮಂಚಳ್ಳಿಯಲ್ಲಿ ನಾಗಹೆಡೆಯಾವೃತ ಪಾದಯುಗ್ಮ ಶಿಲಾಫಲಕವು ಅಶೋಕನ ಕಾಲದ ಬುದ್ಧಪಿದಯುಗ್ಮಗಳ ಆವರಿಸಿದಂಥ ಮಚಲಿಂದ ನಾಗಶಿಲ್ಪ ಮಾದರಿಯನ್ನು ಹೋಲುವಂತಿದೆ. ಇದನ್ನು ಗಮನಿಸಿದರೆ ಗಂಗರ ಕಾಲಕ್ಕೂ ಬೌದ್ಧ ಸಂಸ್ಕೃತಿಯ ಪ್ರಭಾವ ಈ ಪ್ರದೇಶದಲ್ಲಿತ್ತು ಎಂದಾಗುತ್ತದೆ. ಅದನ್ನು ಥೇರಹಾಳು>ಥೇರಾಳು>ತೇರಾಲು>ತೆರಾಲು ಎಂದು ರೂಪಿಸಿದರೆ, ತೆರಾಲು ಗ್ರಾಮವು ಒಂದು ಕಾಲಕ್ಕೆ ಬೌದ್ಧರ ನೆಲೆಯಾಗಿತ್ತು.

ನಾಗರಹೊಳೆ : ಕೇರಳದ ಗ್ರಂಥಗಳು ಅಗಸ್ತ್ಯ ವೆಲೀಕರ ಕುಟುಂಬಗಳನ್ನು ಹಾಗೂ ಕುರುಬರ ಮೂಲಪುರುಷ ರೆನ್ನಲಾದ ಅರುವಲರ್ ಬುಡಕಟ್ಟಿನವರನ್ನು ಕರೆದುಕೊಂಡು ಬಂದು ಪಶ್ಚಿಮ ಘಟ್ಟಗಳಲ್ಲಿ ಅವರನ್ನು ನೆಲೆಸುವಂತೆ ಮಾಡಿದ ಬಗ್ಗೆ ಈ ಹಿಂದೆಯೇ ತಿಳಿಸಿದೆ. ಹಾಗಿದ್ದರೆ ಅರುವಲರ್ ಬುಡಕಟ್ಟಿನ ಮೂಲದಿಂದ ಬಹುಶಃ ಉಗಮಿಸಿದ ಜೇನು ಕುರುಬರ ಸಾಂಸ್ಕೃತಿಕ ಇತಿಹಾಸದ ನೆಲೆ ನಾಗರಹೊಳೆ ಆಗಿದೆ.

ಕ್ರಿ.ಶ. ೧೩೭೫–೧೪೦೦ರ ಅವಧಿಯಲ್ಲಿ ಚಂಗಾಳ್ವರ ಪೈಕಿಯ ನಾಗರಾಜ ನಾಗರಹೊಳೆಯನ್ನು ಆಳುತ್ತಿದ್ದ ಬಗ್ಗೆ

ಚಾರಿತ್ರಿಕ ಘಟನೆ ಹಾಗೂ ಸ್ಥಳೀಯ ಪರಂಪರೆಯಿಂದ ತಿಳಿಯುತ್ತದೆ. ಕ್ರಿ.ಶ. ೧೫೦೩ರ ಹಿರೇಮಳಲಿ ಶಾಸನವೂ (ಪಿರಿಯಾಪಟ್ಟಣ ೧೩೨) ಚಂಗಾಳ್ವರ ವಂಶಾವಳಿಯಲ್ಲಿ ನಾಗ (ನಾಗರಾಜ) ನನ್ನು ಹೆಸರಿಸಿದೆ. ಇವನು ಕೊಳ್ಳೆಗಾಲದ ಬಳಿಯ 'ಕುಂತೂರು ಸಿಂಹಾಸನ ವೀರಶೈವ ಮಠ'ದ ಪರಂಪರೆಯವರೆಂದು ತೋರುತ್ತದೆ. ಈ ನಾಗರಾಜ ನಾಗರಹೊಳೆ–ಕುಂತೂರನ್ನು ಎರಡನೆ ರಾಜಧಾನಿ ಮಾಡಿಕೊಂಡಿದ್ದ. ನಾಗರಹೊಳೆಯಲ್ಲಿ 'ನಾಗರಾಜ ರಸ್ತೆ' ಎಂದೇ ದಾಖಲಿತ ಹಲಗೆಯೂ ಇತ್ತು.[೧೪] ಈ ಅಂಶಗಳನ್ನು ಪರಿಶೀಲಿಸಿ ನಾಗರಹೊಳೆಯ ಹೆಸರುಗಳು ಸರಣಿಯಾಗಿ ವಿವಿಧ ಕಾಲಘಟ್ಟಗಳಲ್ಲಿ 'ಅವ್ಮಾಳೆ–ನಾಗನಹೊಳೆ–ಕುಂತೂರು–ನಾಣಚ್ಚಿ–ನಾಗನಹೊಳೆ–ನಾಗರಹೊಳೆ' ಎಂಬ ಕ್ರಮದಲ್ಲಿ ಕಾಣಬರುತ್ತವೆ. ೧೯೮೩ರಲ್ಲಿ ಮೊದಲಿಗೆ ನಾಗರಹೊಳೆ ಅಭಯಾರಣ್ಯವೆನಿಸಿದುದು. ೧೯೯೨–೯೩ರಲ್ಲಿ ರಾಜೀವ್ ಗಾಂಧಿ ಅಭಯಾರಣ್ಯವೆಂದು ಮರುನಾಮಕರಣ ಮಾಡಲಾಗಿದೆ.

ಪಾಲ್ಪರೆ : ಇದಕ್ಕೆ 'ಪಾಲುಪುರ' ಎಂದು ಹೆಸರಿತ್ತು. ಚಂಗಾಳ್ವರ ಸಚಿವ ವಂಶದ ೨ನೆಯ ಮಂಗರಸನು (ಕ್ರಿ.ಶ. ೧೩೯೮) ತನ್ನ ನಿಘಂಟುವಿನಲ್ಲಿ 'ಶಶಿಪುರಾಧಿಪತಿ ಸೋಮೇಶ್ವರ' ಎಂದು ಪಾಲ್ಪರೆಯ (ಸೋಮೇಶ್ವರ) ಶಿವಾಲಯದ ಶಿವಲಿಂಗವನ್ನು ಕುರಿತು ಸ್ತುತಿಸಿದ್ದಾನೆ. 'ಪಾಲುಪುರ'ದ ಸಂಸ್ಕೃತರೂಪ 'ಶಶಿಪುರ'. ಪಾಲಪುರ–ಶಶಿಪುರದ ಮಾರ್ಪಾಟು ರೂಪ ಪಾಲ್ಪರೆ. ಕಂಠೀರವ ನರಸರಾಜ ವಿಜಯದಲ್ಲಿ 'ಕಾನನದುಡವೆಯೊಳಡಗಿಯೋ ರಂತಿಹ ಪಾಲುಪರೆ' ಎಂದಿದೆ. 'ಕೆಂಪೇಗೌಡ ಜಯಪ್ರಶಸ್ತಿ' ಯಲ್ಲಿ ಪಾಲುಪರೆ ಹನುಮಪ್ಪನಾಯಕನನ್ನು ಹೆಸರಿಸಲಾಗಿದೆ. ಕ್ರಿ.ಶ. ೧೧೭೧ರ ಸುಮಾರಿನಲ್ಲಿ ಚಂಗಾಳ್ವರ ಮಹಾದೇವನ ಸುರಕ್ಷಾ ದೃಷ್ಟಿಯಿಂದ ಹುಣಸೂರಿನಿಂದ ರಾಜಧಾನಿ ಬಿಟ್ಟು, ಪಾಲ್ಪರೆಯಲ್ಲಿ ಕೋಟೆ ಕಟ್ಟಿ ನಿಂತ[೧೫] ಆದರೆ 'ಪಾಲುಪುರೆ' ಎಂಬುದೇ ಪಾಲ್ಪರೆಯ ಮೂಲರೂಪ ಎಂಬುದು ಹೆಚ್ಚು ತಾರ್ಕಿಕಣಿಗೊಳ್ಳುತ್ತದೆ. ಇದಕ್ಕೆ ಪೂರಕವಾಗಿ ಜನಪದ ಕತೆಯಂತೆ ಹಾಲಿನಂತೆ ಹರಿವ ಕೀರೆ ದಂಡೆಯಲ್ಲಿ ಮತ್ತು ಗೋಸಂಪತ್ತಿನ ನೆಲೆಯಾಗಿದ್ದ 'ಪಾಲುಪುರ' ವನ್ನು ಬೆಣ್ಣೆಕೃಷ್ಣ, ಕೊಲ್ಲಿನಿಂಗರು ಆಳುತ್ತಿದ್ದರೆನ್ನಲಾಗಿದೆ.

ಇಂದಿಗೂ ಪಾಲ್ಪರೆಯ ಶಿಥಿಲ ಕೋಟೆ ಉಳಿದಿದೆ. ನಾಗವರ್ಮನ ಛಂದೋಬುದಿಯ ಛಂದಸ್ಸಿನ ಮಾದರಿಯ ಸಾಲುಗಳು (ಪಡುಬರ ಶಿಲಾಗೋಲಾ...) ಅಲ್ಲಿಯ ಶಿವಾಲಯದ ಭಿತ್ತಿಯಲ್ಲಿ ಶಾಸನಸ್ಥವಾಗಿವೆ. 'ಪಾಲುಪುರ' ಹೀಗೆಲ್ಲ ಪ್ರಸಿದ್ಧಿಗೊಂಡರೂ 'ಪಾಲ್ಪರೆ' ಎಂಬ ಹೆಸರನ್ನೇ ಉಳಿಸಿಕೊಂಡಿದೆ. ಇಲ್ಲಿ ಶ್ರೀರಂಗನಾಥನ ಗುಡಿಯೂ ಪಾಳು ಬಿದ್ದಿದೆ.

ಪೆಣ್ಣಿಕಡಂಗ (ಪೆಣ್ಣಿಗಡಜ್ಗ) : ಬಿಳಿಯೂರು ಶಾಸನದಲ್ಲಿ (ಕೊಡಗು ೯೬ ಕ್ರಿ.ಶ. ೮೮೮) 'ಪೆಣ್ಣಿಗಡಜ್ಗದ ಸತ್ಯವಾಕ್ಯ ಜಿನಾಲಯ' ಎಂದಿರುವಲ್ಲಿ ಅದು ನೆಲೆ ಹೆಸರಾಗಿ ತೋರಿಕೊಳ್ಳುತ್ತದೆ. ಕೊಡವ ಕನ್ನಡ ನಿಘಂಟಿನಲ್ಲಿ 'ಪಣ್ಯ' ಎಂದರೆ ರಾಜರ ಕಾಲದ ಜಾಗ ; ಕ–ಕನ್ನಡ ನಿಘಂಟಿನಲ್ಲಿ ಪೆಣ್ಣಿ=ಪಣ್ಣಿಯ=ವ್ಯವಸಾಯದ ಭೂಮಿ ಎಂದಿದೆ, ಕೃಷಿ ಭೂಮಿ ಎಂದಿದೆ. ತಮಿಳಿನಲ್ಲಿ ಜಾತಿ ಪದಗಳಾಗಿ ಪಣ್ಯೆ, ಪಣ್ಣೈ ಎಂಬ ಶಬ್ದಗಳಿವೆ. ರಾಜರ ಕಾಲದ ವಿಶಾಲವಾದ ಕೃಷಿಭೂಮಿಗೆ ಪನ್ಯಭೂಮಿ ಎಂದಿದ್ದು ಕಾಲಾಂತರದಲ್ಲಿ ರಾಜರ ಫಲವತ್ತಾದ ಖಾಸಗಿ ಕೃಷಿ ಜಮೀನು ಎನಿಸಿತ್ತು. ಕಡಜ್ಗ=ಕಡಂಗ ಶಬ್ದಕ್ಕೆ ಕಾಲುವೆಯಿಂದ ನೀರು ಹಾಯಿಸಲು ಮಾಡಿಕೊಂಡ ಚಿಕ್ಕ ಹೆರಿ ಎಂದಿದೆ. ಕಂದರ ಎಂಬ ಅರ್ಥದಲ್ಲೂ ಇದೆ. ಕೊಡವ–ಕನ್ನಡ ನಿಂಘಟಿನಲ್ಲಿ ಉದ್ದಕ್ಕೂ ಕಟ್ಟಿ ಏರಿಸಲಾದ ಹಿಂದಿನ ಕಾಲದ ಮಣ್ಣಿನ ದಿಣ್ಣೆ ಎಂದಿದೆ. ಅಂದರೆ ಬುಡದಲ್ಲಿ ನೀರಿಲ್ಲದ ಕಂದಕವಿರುವ ಮಣ್ಣಿನ ದಿಬ್ಬ ಅರ್ಥಾತ್ ಗುಡ್ಡೋಣಿಯೆ ಕಡಂಗ ಎಂದು ಇಂದೂ ಕೊಡಗಿನಲ್ಲಿ ಕಾಣಬರುವ ಕಡಂಗಗಳ ಸ್ವರೂಪದಿಂದ ವಿದಿತವಾಗುತ್ತದೆ. ಅಂದರೆ ಪೆಣ್ಣಿ–ಪೆಣ್ಣೈ–ಪನ್ಯ ಜಮೀನುಗಳಿಗೆ ರಕ್ಷಣಾರ್ಥವಾಗಿ ಕಂಡಗಗಳು ನಿರ್ಮಿತವಾಗುತ್ತಿದ್ದುವು; ಇದು ಕೊಡಗಿನಲ್ಲಿ 'ರಕ್ಷಕ ಕಂದಕ'ಗಳೆನ್ನಬಹುದು. ಮನೆಗಳ ಸುತ್ತ ಸಣ್ಣ ಕಡಂಗಗಳಿಗೆ 'ಪೊಟ್ಟ್ ಕಡಂಗ' ಎನ್ನುತ್ತಾರೆ.

ಇದೇ ಶಾಸನದಲ್ಲಿ 'ಪೆದ್ದೊಱೆಗರೆಯ ಬಿಳಿ ಊರ್ಪನಿರ್ಪಳ್ಳಿ' ಎಂದಿದೆ. 'ಪೆದ್ದೊರಗರೆ'ಯು ಆ ಪ್ರದೇಶದ ಲಕ್ಷ್ಮಣತೀರ್ಥದ ಹೊಳೆಗೆ ಅನ್ವಯ ಹಾಗೂ ಆ ಪ್ರದೇಶಕ್ಕೆ ಅದೇ ನೆಲೆ ಹೆಸರನ್ನು ನೀಡಿದೆ. ಅಂತಾಗಿ ಕ್ರಿ.ಶ. ೯೭೮ರ ಪೆಗ್ಗೂರು (ಕೊಡಗು ೯೮) ಶಾಸನದಲ್ಲಿ 'ರಕ್ಕಸ (ಗಂಗ) ಬೆದ್ದೊಱೆಗೆರೆಯನಾಳುತ್ತಿರೆ' ಎಂಬ ಶಬ್ದವೆ ಪೆದ್ದೊಱೆಗರೆ ಸ್ಥಳನಾಮವನ್ನು ದೃಢೀಕರಿಸುತ್ತದೆ.

ಪೆಗ್ಗೂರು : ಕ್ರಿ.ಶ. ೯೭೮ರ ಶಾಸನದಲ್ಲಿ (ಕೊಡಗು ೯೮) ಪೆಗ್ಗದೂರುಂ, ಪೆರ್ಗ್ಗದೂರು ಎಂಬ ಶಬ್ದಗಳಿದ್ದು, 'ದೊಡ್ಡ ಊರು' ಎಂಬ ಅರ್ಥವನ್ನು 'ಪೆಗ್ಗೂರು'ವಿಗೆ ನೀಡಿವೆ. ಅಲ್ಲದೆ ಪೆರ್ಗ್ಗದೂರಿನ ಬಸದಿಗೆ ಗಂಗ 'ಶ್ರೀಪುರುಷ ಮಹಾರಾಜರ ದತ್ತಿ'ಯನ್ನು ನೀಡಿರುವ ದಾನವನ್ನು ಈ ಶಾಸನ ಉಕ್ತ ಮಾಡಿರುವಲ್ಲಿ ಮೇಲಿನ ಅರ್ಥಕ್ಕೆ ಪೋಷಣೆಯಾಗುತ್ತದೆ. ಅದಾಗಿ ಪೆರ್ಗ್ಗದೂರು>ಪೆಗ್ಗದೂರು> ಪೆಗ್ಗೂರು ಎಂಬ ಭೌಗೋಳಿಕ ನಿಷ್ಪತ್ತಿಯ ಸಾಧಿತ ವಾಗುತ್ತದೆ.

ಕೊಡಗು ಶ್ರೀರಂಗಪಟ್ಟಣ: ಇದು ನಂಜರಾಯಪಟ್ಟಣ ಮಾಲ್ದಾರೆ ಸಿದ್ದಾಪುರ ಪ್ರದೇಶವನ್ನೊಳಗೊಂಡ ವಿಶಾಲ ಪಟ್ಟಣವಾಗಿತ್ತು. 'ಕೊಡಗು' ಎಂಬ ಉಪಾದಿಯೊಡನಾಗಿ 'ಕೊಡಗು ಶ್ರೀರಂಗಪಟ್ಟಣ' ಎಂಬ ನೆಲೆ ಹೆಸರು ಸ್ಪಷ್ಟವಾಗಿ ಇದ್ದ ಬಗ್ಗೆ ಮೊಟ್ಟಮೊದಲಿಗೆ ಕ್ರಿ.ಶ. ೧೮೨೨ರ ಮಡಿಕೇರಿ ಶಾಸನದಿಂದ (ಕೊಡಗು ೨) ತಿಳಿಯುತ್ತದೆ. ಅರಕಲಗೂಡಿನ ರಾಮನಾಥಪುರ ಶಾಸನವು (ಅ.ಗೂ. ೪೪) 'ಕೊಡಗು' ಎಂಬ ವಿಶೇಷಣವಿಲ್ಲದೆ 'ರಾಜಧಾನಿ ಕ್ಷೀರಸಮುದ್ರ'ವು ಕೊಡಗಿನ ಪಾಲುಪುರೆ (ಪಾಲ್ಪರೆ) ಕ್ಕೆ ಅನ್ವಯವಾಗುವಂಥದು. ಅಂದರೆ ಕೊಡಗಿನಲ್ಲಿ ಚಂಗಾಳ್ವರ ರಾಜಕುಮಾರರ ವಾಸ್ತವ್ಯದ ರಾಜಧಾನಿ ಇದೇ ಶಾಸನ ರೀತ್ಯಾ (ಕೊಡಗು) ಶ್ರೀರಂಗಪಟ್ಟಣ ವಾಗಿತ್ತು. ಅಂತಾಗಿ ಅದರ ಅಸ್ತಿತ್ವ ಕ್ರಿ.ಶ. ೧೨೪೫ರಲ್ಲಿಯೇ ಇತ್ತು ಎಂಬುದು ಈ ಶಾಸನದಿಂದ ವ್ಯಕ್ತವಾಗುತ್ತದೆ. ಈ ಕೊಡಗು ಶ್ರೀರಂಗಪಟ್ಟಣದ ಆಳ್ವಿಕೆಗೆ ಈ ಚಂಗಾಳ್ವ ವಂಶದ ರಾಜಕುಮಾರರು ಹೊಯ್ಸಳ ಸೋಮೇಶ್ವರನಿಂದ (ಕ್ರಿ.ಶ. ೧೨೩೫ರ) ನಿಯುಕ್ತರಾದರು.

ಇಂದು ನಂಜರಾಯಪಟ್ಟಣ ಪೂರ್ವದಂಡೆಯ ಕಾವೇರಿ ಕವಲುಗಳ ನಡುವೆ 'ಗುತ್ತಿ' ಎಂಬ ದಿಬ್ಬದ ಪ್ರದೇಶದಲ್ಲಿ ದೇಗುಲ ರಚನೆಯ ಕಟ್ಟಡ ಗುತ್ತಿ ಮಠವೆನಿಸಿದೆ ಇಲ್ಲಿಯೆ ಮೊದಲಿಗೆ ಶ್ರೀರಂಗನಾಥ ವಿಗ್ರಹ ಪ್ರತಿಷ್ಠೆ ಆಗಿತ್ತು ಎಂಬುದಕ್ಕೆ ಸನಿಹದಲ್ಲಿ 'ರಂಗಸಮುದ್ರ' ಎಂಬ ಊರು ಇರುವುದು ಸಾಕ್ಷಿ ಹೇಳುವಂತಿದೆ. ಚಂಗಾಳ್ವರ ರಾಜಧಾನಿಯಾಗಿದ್ದ ಸಮಯದಲ್ಲಿ (ಕ್ರಿ.ಶ. ೧೨೪೫) ಇದು ಪ್ರಮುಖ ವ್ಯಾಪಾರಿ ಕೇಂದ್ರವಾಗಿದ್ದ ಬಗ್ಗೆ ಗ್ಯಾಸೆಟಿಯರ್ ತಿಳಿಸುತ್ತದೆ (ಪು. ೪೦೬).

ಕ್ರಿ.ಶ. ೧೫೦೧-೦೨ರ ಸುಮಾರಿನಲ್ಲಿ 'ನಂತರದ ಚಂಗಾಳ್ವ'ರ ವಂಶಿಕನಾದ 'ನಂಜರಾಯ'ನು ಈ ಪ್ರದೇಶಕ್ಕೆ 'ನಂಜರಾಯ ಪಟ್ಟಣ' ಎಂದು ಹೆಸರಿಟ್ಟು ರೂಪಿಸಿದ. ಅದು ತಾಲ್ಲೂಕು ಕೂಡ ಆಗಿತ್ತು. ಅನಂತರ ಕೊಡಗು ಶ್ರೀರಂಗಪಟ್ಟಣವು ನಂಜರಾಯಪಟ್ಟಣ ತಾಲ್ಲೂಕಿನೊಳ ಗಾಗಿದ್ದುದು ಈಗ ಗುರುತಿಗೂ ಕಷ್ಟವಾದ ಮೂಲೆಯೊಂದರಲ್ಲಿ ತನ್ನ ನೆಲೆ ಹೆಸರನ್ನು ಉಳಿಸಿಕೊಂಡಿದೆ ಉಪಗ್ರಾಮವಾಗಿದೆ.

ಮಾಲ್ಪಾರೆ : ಮಾಲೆಯಂತೆ ಬೀಳುತ್ತಿದ್ದ ನೀರಿನ ಪ್ರದೇಶವಾಗಿ ಆ ಹೆಸರು ಹೊಂದಿದೆ. ಸನಿಹದ ಮಾರ್ಗೊಲ್ಲಿ (ಮೂರ್ಕೊಲ್ಲಿ) ಮೂರು ಕೊಲ್ಲಿಗಳು ಸೇರಿ ಘಟ್ಟದ ಹಳ್ಳವೆನಿಸಿ ಹರಿದು ಕಾವೇರಿ ಸೇರುತ್ತದೆ. ಈ ಕೊಲ್ಲಿಗಳಿಂದಾಗಿ 'ಮಾರ್ಗೊಲ್ಲಿ' ಹೆಸರು ಬಂದಿದೆ ಮಾಲ್ದಾರೆಯಿಂದ ನಂಜರಾಯಪಟ್ಟಣಕ್ಕೆ ಬರುವ ಕಾಡು ಹಾದಿಯಲ್ಲಿ ಆಸ್ತಾನ (ಆಸ್ಥಾನ!) ಎಂಬ ನೆಲೆ ಹೆಸರಿದೆ. ಇದು ಚಂಗಾಳ್ವರ ಕಾಲದಲ್ಲಿ ರಾಜಸಭೆ ನಡೆಯುತ್ತಿದ್ದ ನೆಲೆ ಇದ್ದಿರುವಂತಿದೆ.

ಇದಕ್ಕೆ ಸನಿಹದಲ್ಲಿ 'ಚನ್ನಯ್ಯನ ಕೋಟೆ' ಗ್ರಾಮವಿದೆ ಬಹುಶಃ ಫೆರಿಸ್ಟನು ರೀತ್ಯಾ ೧೬ನೇ ಶತಮಾನದಲ್ಲಿ ಹಾಲೇರಿ ಅರಸರ ಮುನ್ನ ಇದ್ದ ನಾಯಕರಲ್ಲಿ ಸಿದ್ದಾಪುರವನ್ನು ಆಳುತ್ತಿದ್ದ ಚನ್ನಯ್ಯನಾಯಕ[೧೬] ಕಟ್ಟಿಸಿದ ಕೋಟೆಯ ನೆನಪಿಗಾಗಿ ಆ ಊರಿನ ಹೆಸರು ರೂಪುಗೊಂಡು ಉಳಿದುಬಂದಿದೆ.

ನಂಜರಾಯಪಟ್ಟಣ: ಕ್ರಿ.ಶ. ೧೫೦೨ರ ಸುಮಾರಿನಲ್ಲಿ ಚಂಗಾಳ್ವರ ನಂಜರಾಜನು ತನ್ನ ಹೆಸರಿನಲ್ಲಿ ಈ ಪಟ್ಟಣವನ್ನು ಕಟ್ಟಿದ. ಇಲ್ಲಿ ಮೊದಲಿಗೆ ಜಿನಬಸದಿ ಇತ್ತು. ಈಗ ಹಾಳಾಗಿದೆ. ಆಸೀನ ಜಿನವಿಗ್ರಹವು ಭಗ್ನವಾಗಿದ್ದುದು ಮಣ್ಣಿನಲ್ಲಿ ಮರೆಯಾಗಿದೆ. ಹಾಲೇರಿ ವಂಶದ ನಂಜುಂಡ ಅರಸು ಪಿರಿಯಾಪಟ್ಟಣದ ಪತನದ ನಂತರ ಇಲ್ಲಿಗೆ ಬಂದು ನೆಲೆ ನಿಂತ ಹಾಗೂ ನಂಜುಂಡೇಶ್ವರ ದೇಗುಲವನ್ನು ಕೊಡಗಿನ ನೆರವಿನಿಂದ ಸ್ಥಾಪಿಸಿದ.

ಕುಶಾಲನಗರ-ಮುಳ್ಳುಸೋಗೆ : ಕಾವೇರಿ ನದಿಯ ಎಡದಂಡೆಯ ಈ ಊರಿಗೆ ಹೈದರಾಲಿ ಸಂತಸದ ಸುದ್ದಿಯೊಂದರ ನೆನಪಿಗೆ 'ಕುಶಾಲನಗರ'ವೆಂದು ಕರೆದನಂತೆ. ಸದ್ಯಕ್ಕೆ ಅದೇ ಮುಂದುವರಿದಿದೆ. ಮೊದಲಿನ ನೆಲೆ ಹೆಸರು 'ಮುಳ್ಳು ಸೋಗೆ' ಎಂದು. ಇಲ್ಲಿಯ ಕಾವೇರಿ ದಂಡೆಯ ವಿಪುಲ ಮುಳ್ಳು ಪೊದೆಗಳ ಪ್ರದೇಶವಿದ್ದು ನವಿಲುಗಳೂ ವಿಪುಲವಾಗಿದ್ದ ಕಾರಣ ಈ ಹೆಸರು ನಿಸರ್ಗವಾಚಿಯಾಗಿ ಒದಗಿದೆ.

ತಾಕೆರಿ : ಇದು 'ತಾಕೇರಿ' ಶಬ್ದದ ಅಪಭ್ರಂಶವೆನಿಸುತ್ತದೆ. ಕೊಡಗಿನಲ್ಲಿ 'ತಾಮನೆ' ಎಂದರೆ 'ತವರುಮನೆ' ಎಂಬ ಅರ್ಥ ನಡುಕೋಶದಲ್ಲಿದೆ. ಅದಾಗಿ ತವರುಕೇರಿ ಅಥವಾ ತಾಯಿಕೇರಿ ಎಂದೂ ಅರ್ಥೈಸಬಹುದು. 'ತಾಯಿಕೇರಿ' ಎಂದಾಗ ಗ್ರಾಮದೇವತೆಯ ಗೌರವಭಕ್ತಿ ಸ್ಮರಣೆಗಾಗಿ ಬಳಸಿದ ಹೆಸರಾಗಿ ಗ್ರಾಮಕ್ಕೆ ಅನ್ವಯಗೊಂಡಿರುವಂತಿದೆ.

ಚೌಡ್ಲು-ಕಲಕಂದೂರು : ಇದು 'ಕಲ್ಲುಕುಂದೂರು' ಎಂಬ ನೆಲೆ ಹೆಸರಿನ ಮಾರ್ಪಾಟು ರೂಪದಂತಿದೆ. ೧೩ನೇ ಶತಮಾನದ (ಕ್ರಿ.ಶ. ೧೨೯೭) ಚೌಡ್ಲು ಶಾಸನದಲ್ಲಿ (ಕೊಡಗು ೬೦) 'ಕುಂದೂರು ತಾವಮಾನೆ' 'ಚವುಡ [ತಾವ] ಮಾನೆ' ಎಂಬ ಶಬ್ದಗಳಿವೆ. ಚೌಡ್ಲು ಬೆಟ್ಟ (ಕರಿಕಲ್ಲು ಬೆಟ್ಟ)ದ ಪಶ್ಚಿಮ ವಾಯುವ್ಯ ಹಿಂಬದಿಗೆ ಈ ಗ್ರಾಮವಿದೆ. ಈ ಗ್ರಾಮದಲ್ಲಿ ಮಾಣಿಕದೇವರ ಶಾಸನೋಕ್ತ ಕ್ರಿ.ಶ. ೧೪೯೦ರ ವಿಗ್ರಹವಿರುವ ಜೈನಬಸದಿ ಇದೆ. ಅಂತಾಗಿ ಕಳಶ, ಕುಂದೂರು ಎಂದೂ ಪರಿಭಾವಿಸಬಹುದು. 'ಕಲ್ಲು' ಹಾಗೂ 'ಕುಂದ' ಎರಡೂ ಶಬ್ದವೂ ಬೆಟ್ಟಕ್ಕೆ ಅನ್ವಯವಾಗುವಲ್ಲಿ ನೆಲೆ ಹೆಸರಿನ ದ್ವಿರುಕ್ತಿ ಕಾಣುತ್ತದೆ; ಭೌಗೋಳಿಕ ಪರಿಸರದ ಮೂಲದಿಂದ ಈ ನೆಲೆ ಹೆಸರು ರೂಪಿತವಾಗಿದೆ. ಕಲ್ಲುಕುಂದೂರು>

ಕಲ್ಕುಂದೂರು>ಕಲ್ಕಂದೂರು> ಕಲಕಂದೂರು, ಆಗಿರುವಂತಿದೆ.

ಚೌಡ್ಲು : 'ಚವುಡ ಠಾವಮಾನೆ' ಎಂಬ ಶಬ್ದ ಚೌಡ್ಲುವಿನ ೧೩ನೇ ಶತಮಾನದ ಶಾಸನದಲ್ಲಿದ್ದರೆ, ಕ್ರಿ.ಶ. ೧೭೯೬ರ ಮಾದಾಪುರ ಶಾಸನದಲ್ಲಿ (ಕೊಡಗು ೩೨) 'ಚವುಗ್ರಾಮ' ಎಂಬ ಶಬ್ದವಿದೆ. ಹೆಗ್ಗಡಹಳ್ಳಿ ಮಠದ ೧೯೨೧ರ ದಾಖಲೆಯೊಂದರಲ್ಲಿ ಗಡಿ ಚಚ್ಚಾರ ಬಾರದಂತೆ ಚವು ಗ್ರಾಮದವರನ್ನು ಕರೆಸಿ ನಮೂದಿಸಿ ಎಂದು ಕೆಳದಿ ಬಸಪ್ಪನಾಯಕ ಹೇಳಿದ್ದ ಬಗ್ಗೆ ತಿಳಿಸಿದೆ. 'ಚವುಡ' ಎಂಬುವನು ಇದರ ನಾಯಕನಾಗಿದ್ದ ಕಾರಣ ಚವುಡ ಠಾವಮಾನೆ ಎಂದು ಹೆಸರುಗೊಂಡು ಚವುಡ>ಚವುಡಲಿ>ಚೌಡ್ಲು, ಚೌಡ್ಲು ಸುಗ್ಗಿಕಟ್ಟೆ ಜಾನಪದ ಹಬ್ಬಕ್ಕೆ ಪ್ರಸಿದ್ಧಿಯಾಗಿದೆ.

ಯಡೂರು : ಮಾಳದ ವೀರಗಲ್ಲು (ಕೊಲೆಕಲ್ಲು), ಅಜ್ಜಬನ, ವೃತ್ತವಾಗಿ ಜೋಡಿಸಿದ ಸಣ್ಣಕಲ್ಲುಗಳ ಸ್ಮಾರಕ ನೆಲೆಗೆ ಪೂರ್ವಜರನ್ನು ನೆನಸಿ ಹಾಕಿರುವ ಕಲ್ಲುಕಾಶಿಗೆ ಎಡೆ ಇಟ್ಟು ವಾರ್ಷಿಕ ಪೂಜಾರಾಧನೆ ನಡೆಸುವ ನೆಲೆಯಾದ ಕಾರಣವೂ ಈ ನೆಲೆ ಹೆಸರಿಗೆ ತಗುಲಿದೆ. ಇದು ಪ್ರಾಗೈತಿಹಾಸಿಕ ಪರಂಪರೆಯದು. ಕ್ರಿ.ಶ. ೧೯೫೫ರ ಇಲ್ಲಿ ದುದ್ದರಸನ ಶಾಸನ ಸುಗ್ಗಿಕಟ್ಟೆ ಸ್ತಂಭದ ಬಳಿಯೆ ಇದೆ. ಹಾನುಗಲ್ಲು ಕದಂಬ ವಂಶಿಕ ದುದ್ದರಸನು ಅಂಬ್ಯನಂಕಕಾರ ಶಿವಪಾದಶೇಖರನಾಗಿದ್ದ ಅವನ ಹೆಸರಿಗೆ ವೀರಶಾಸನ (ಕೊಡಗು ೬೨) ವನ್ನು ಅವನು ಶಿವಲೋಕ ಪ್ರಾಪ್ತನಾಗಲು, ಅವನ ಸೋದರ ಜುಂಜರಸನು ನಿಲ್ಲಿಸಿದ ಬಗ್ಗೆ ಹೇಳಿದೆ. ಅಲ್ಲಿ ಗಣಂಗಳಿಗೆ ಎಡೆ ನೀಡುತ್ತಿದ್ದುದು ಸಹಜವಾಗಿ ಎಡೆಯೂರು>ಯಡೆಯೂರು>ಯಡೂರು ಎಂದು ಉಭಯ ಸಂದರ್ಭಗಳಿಗೆ ಅನ್ವಯವಾಗುತ್ತದೆ.

ಕೊಂಗಲನಾಡು<ಕೊಂಗೊಳಲಿ ನಾಡಿನ ಒಂದು ಸಂಕ್ಷಿಪ್ತ ರೂಪವಾಗಿದೆ. ಕ್ರಿ.ಶ. ೧೨೯೬ರ ಮುಳ್ಳೂರು ಶಾಸನದಲ್ಲಿ 'ಕೊಂಗೊಳಲಿ' ಗ್ರಾಮದ ಪ್ರಸ್ತಾಪವಿದೆ. ಕೊಂಗಾಳ್ವರ ಮಾಲಂಬಿಗೆ ಕೆಲ ಮೈಲುಗಳ ದೂರದ ಈ ಕೆಂಗೊಳಲಯಲ್ಲಿ ಹಾಲೇರಿ ಅರಸರ ಲಿಂಗರಾಜ ಒಡೆಯನ (೨ನೇ) ಅನೇಕ ಪತ್ನಿಯರಿದ್ದ ಕಾರಣ 'ಹೆಣ್ಣೂರು ಕೊಂಗಳಲೆ' ಎಂದು ಹೆಸರುಗೊಂಡಿತು.

ಕೊಂಗೊಳಲಿ : ಇದು ಆಳ್ವಿಕೆ ಕುರುಹಾಗಿ ರೂಪುಗೊಂಡ ಊರು. ಇನ್ನು ಯಡೂರು ಶಾಸನದಲ್ಲಿ 'ಸಂಹಥನಾಡು' ಎಂಬ ನೆಲೆ ಹೆಸರಿದೆ. ಅದ ಸಂಪಥನಾಡು ಅರ್ಥಾತ್ ಸಮಪಥದ ನಾಡು ಎಂದಾಗುತ್ತದೆ. ಇಂದಿನ 'ಸಂಪಾಜೆ' ತಗ್ಗಿನ ಮಡಿಕೇರಿ ಹಾದಿಯಿಂದ ಘಟ್ಟದ ಏರು ಹಾದಿ ಬರುವ ಸುಳ್ಯದ ನಡುವೆ ಇರುವ ಹೆಚ್ಚು ಕಡಿಮೆ ಸಮತಟ್ಟಿನ ಹಾದಿಯ ಪ್ರದೇಶವಾಗಿದೆ. ಅಂತಾಗಿ ಕ್ರಿ.ಶ. ೧೯೫೫ರ ಸಂಹಥನಾಡು (>ಸಂಪಥನಾಡು> (ಸಮಪಥದ ನಾಡು)>ಸಂಪಜೆ>ಸಂಪಾಜೆಯಾಗಿ ವ್ಯಾಪಾರ್ಡು ಹೊಂದಿರುವಂತಿದೆ. ಭೌಗೋಳಿಕ ಪರಿಸರದ ಕಾರಣ ಈ ನೆಲೆ ಹೆಸರು ರೂಪುಗೊಂಡಿದೆ.

ಮಾಲಂಬಿ : ಶನಿವಾರ ಸಂತೆಗೆ ಸನಿಹದ ಊರು. ಕ್ರಿ.ಶ. ೧೦೦೪ರ ಸುಮಾರಿನಲ್ಲಿ ಗಂಗರನ್ನು ಚೋಳರು (ಪಂಚವನ್ ಮಹಾರಾಯನೆನಿಸಿದ ರಾಜೇಂದ್ರ ಚೋಳ) ಪನಸೋಗೆಯಲ್ಲಿ ಸೋಲಿಸಿದರಷ್ಟೆ ಆ ಯುದ್ಧದಲ್ಲಿ ನೆರವಾದ ಕೊಂಗಾಳ್ವರ ಪೈಕಿಯ 'ಮನಿಜ' ವೀರನಿಗೆ 'ಮಾಲವ್ವಿ'ಯಲ್ಲಿ 'ಕ್ಷತ್ರಿಯ ಶಿಖಾಮಣಿ ಕೊಂಗಾಳ್ವ'ನೆಂದು ಪಟ್ಟ ಕಟ್ಟಿ ಮಾಲವ್ವಿಯನ್ನು ನಿರ್ವಹಿಸಲು ಆಣತಿ ಮಾಡಿದ ಬಗ್ಗೆ ೧೧ನೇ ಶತಮಾನದ ಮಾಲಂಬಿ ಶಾಸನವು ತಿಳಿಸುತ್ತದೆ. 'ಮಾಲವ್ವಿ'ಯ ಇಂದಿನ ರೂಪವೇ 'ಮಾಲಂಬಿ'ಯಾಗಿದೆ. ಐತಿಹ್ಯದ ರೀತ್ಯಾ ಬೆಟ್ಟದಪುರದ ಅನ್ನದಾನಿ ಮಲ್ಲಿಕಾರ್ಜುನ ದೇವರ ತಮ್ಮ ಮಾಲಂಬಿ ಬೆಟ್ಟ ಮಳೆ ಮಲ್ಲೇಶ್ವರ ತಗ್ಗಾದ ಮಾಲಂಬಿಬೆಟ್ಟದಲ್ಲಿ ಅಣ್ಣನ ನೆಲೆ ಎತ್ತರಕ್ಕಿರಲಿ ಎಂದು ಬಂದು ನಿಂತನಂತೆ. ಆ ಬೆಟ್ಟದಲ್ಲಿದ್ದ 'ಮುದುಕಿ' ಮಳೆ ಮಲ್ಲೇಶನಿಗೆ ತನ್ನ ನೆಲೆ ಕೊಟ್ಟು, ಬೆಟ್ಟದ ಕೆಳಗಿನ ಗುಡ್ಡವಾದ 'ಮುದುಕಿ ಗುಡ್ಡ'ಕ್ಕೆ ಬಂದು ಅಲ್ಲಿ ಐಕ್ಯವಾದಳಂತೆ. ಮೇಲಿನ 'ಮುದುಕಿ' ಕತೆಯಿಂದ ಆಕೆಯ 'ಮಲೆಯ+ಅವ್ವಿ=ಮಾಲವ್ವಿ' ಆಗಿದ್ದು, ಕೆಳಗಣ ನೆಲೆ ಮುದುಕಿ ಗುಡ್ಡಕ್ಕೆ ಬಂದವಳಾಗಿ, ಊರಿಗೆ ತನ್ನ ಹೆಸರನ್ನು ನೀಡಿದ ಸಂಕೇತ ಕಾಣುತ್ತದೆ.

ಕ್ರಿ.ಶ. ೧೩೯೦ರ ಮುಳ್ಳೂರು ಶಾಸನ (ಕೊಡಗು ೭೫) ದಲ್ಲಿ ಮುಳ್ಳೂರು, ಮುಳ್ಳುನಾಡು, ಕ್ರಿ.ಶ. ೧೨೭೮ರ ನಿಡುತಶಾಸನದಲ್ಲಿ (ಕೊಡಗು ೮೪) ಮುಳ್ಳುನಾಡು ಎಂಬ ಶಬ್ದಗಳಿವೆ. ಅಂತಾಗಿ ಮುಳ್ಳು ಪೊದರು ಸುತ್ತುವರಿಯ ಊರು ಎಂಬ ಸಸ್ಯವಾಚಿ ಮೂಲದ ನೆಲೆ ಹೆಸರನ್ನು ಹೊಂದಿದೆ. ಆ ಪ್ರದೇಶವೂ ಹೆಚ್ಚು ಕಡಿಮೆ ಇಂದಿಗೂ ಅದೇ ಕುರುಹುಗಳನ್ನು ಹೊಂದಿದೆ. ಚಂಗಾಳ್ವ ಹರಿಹರದೇವ ಚೋಳದೇವರ ಕಾಲದಲ್ಲಿ ಮುಳ್ಳೂರಿನಲ್ಲಿ ಕೋಟೆ ಇದ್ದ ಬಗ್ಗೆ ಕ್ರಿ.ಶ. ೧೨೯೬ರ ಮುಳ್ಳೂರು ಶಾಸನ ತಿಳಿಸುತ್ತದೆ.

ತಲೆರೆ ಶೆಟ್ಟಿಹಳ್ಳಿ : ಇಲ್ಲಿ ತಲ್ತೊರೆ ಎಂಬುದು ತಲೆ+ತೊರೆ=ತಲೆತೊರೆ ಎಂಬ ಪದ ವಿಭಾಗಕ್ಕೆ ಅವಕಾಶ ನೀಡುವಂತಿದೆ. ಬಂಡೆಯ ನೆತ್ತಿಯಿಂದ ಧುಮುಕುವ ತೊರೆ ಎಂದರ್ಥವಾಗುತ್ತದೆ. ಜಲಪಾತಕ್ಕೆ ಶುದ್ಧ ಕನ್ನಡ ಪದ 'ತಲೆತೊರೆ ತಲೆತೊರೆ>ತಲ್ತೊರೆ>ತಲ್ತರೆ ಎಂದಾಗಿದೆ. ಇಲ್ಲಿ ಸುಗ್ಗಿಕಟ್ಟೆಯೂ ಇದ್ದು ವಾರ್ಷಿಕ ಆಚರಣೆಗಳಿವೆ.

ಉಲುಗುಲಿ: ಕ್ರಿ.ಶ. ೧೨೬೪ರ ಇಲ್ಲಿನ ಶಾಸನದಲ್ಲಿ (ಕೊಡಗು ೯೫) ತೆಂಗುನಾಡಕಂಡ ವಿಘಳೆಯ ತುಜು ಇಡಿಸಿದಲ್ಲಿ' ಎಂದಿದೆ ; ಗುಡಗೂರಿನ ಹುಚ್ಚಾ ಬಸವೇಶ್ವರ ದೇಗುಲದ ಬಳಿ ದೊರೆತ ಶಾಸನದಲ್ಲಿ (ಕ್ರಿ.ಶ.ಸು. ೯೧೧) 'ಯಟಿಫಟಿಲೆಯ ಶಕ್ರಮನ್' ಎಂದಿದೆ.[೧೭] ಯಟಿಫಟಿ 'ಯಟಿಫಳೆ' ನೆಲೆ ಹೆಸರು 'ಉಲುಗುಲಿ' ಶಬ್ದದ ಪ್ರಾಚೀನ ರೂಪವಾಗಿದೆ. 'ಉಲಗ' ಶಬ್ದಕ್ಕೆ 'ಹೇಲಿಗಲಗಿಡ' ಎಂಬ ಅರ್ಥ ನಿಘಂಟಿನದು. ಇದು ಸಸ್ಯವಾಚಿ ಮೂಲದ ನೆಲೆ ಹೆಸರಾಗಿದೆ ; ಹುಲಿಗಳ ವಾಸದ ಕಾಡು ಎಂದೂ ಅರ್ಥೈಸಬಹುದು. ಗುಡಗೂರು ಜೈನರ ಕೇಂದ್ರವೂ ಆಗಿದ್ದ ಬಗ್ಗೆ ಅಲ್ಲಿ ದೊರೆತ ನಿಷದಿ ಶಾಸನದಿಂದ ಸೂಚಿತವಾಗುತ್ತದೆ. ಗುಡ್ಡರಊರು ಗುಡ್ಡನೂರು ಎನಿಸಿ ಗುಡಗೂರು ಆಗಿರುವಂತಿದೆ.

ಇನ್ನು ಸೋಮವಾರಪೇಟೆ ತಾಲ್ಲೂಕಿನ ಶಾಸನೋಕ್ತ 'ಮೊಳೆತೆ' (ಕೊಡಗು ೬೨) ನೆಲೆ ಹೆಸರು ಮತ್ತು ಮಟ್ತೆ>ಮತ್ತೆ> ಮಳತೆ ; ಮತ್ತಿಮರ-ಅರ್ಜುನ ವೃಕ್ಷಗಳ ನೆಲೆಯಾಗಿ ಸಸ್ಯವಾಚಿ ಮೂಲವನ್ನು ಹೊಂದಿದೆ. 'ಕಿಬ್ಬೆಟ್ಟ'ವು ಸಣ್ಣ ಬೆಟ್ಟವನ್ನು ಹೊಂದಿ ನೆಲೆ ಹೆಸರನ್ನು ಭೌಗೋಳಿಕ ಮೂಲದಿಂದ ಹೊಂದಿದೆ. 'ಇಗ್ಗೊಡ್ಲು'-ಎರಡು ಪ್ರದೇಶಗಳನ್ನು ಕೂಡಿಸುವ ನೆಲೆಯಾಗಿ ನೆಲೆಹೆಸರು ಹೊಂದಿದೆ. ಕೆಳಕೊಡಲಿ, (ಕಿಂಕೊಡ್ಲಿ), ದೊಡ್ಡಕೊಡಲಿ ನೆಲೆ ಹೆಸರುಗಳು ಶಿಲಾಯುಗದ ಕೊಡಲಿಗಳ ಲಭ್ಯತೆಗಳ ಕಾರಣ ಬಂದಿರುವಂತಿದೆ. ನೀಗುರ್ಂದ-ಬೆಟ್ಟದ ಬಳಿಯ ಬಡುದ ನೀರಿನ ಆಸರೆಯ ಕಾರಣ ಒದಗಿದ ನೆಲೆ ಹೆಸರೆನಿಸಿದೆ.

ಹೊಯ್ಸಳರ ಕಾಲದ ಶಾಸನೋಕ್ತ 'ಮಾದ್ರೆ'ಯ ಹೆಸರನ್ನು[೧೮] ಮಾದ್ರಿಪುತ್ರರಾದ ನಕುಲಸಹದೇವ ಆಶಯದಂತೆ ಅವರ ತಾಯಿಯ ಹೆಸರನ್ನಿಡಲಾಗಿದೆ ಎಂದು ಸ್ಥಳೀಯರ ಸ್ಥಳಪುರಾಣ. ಆದರೆ ಮಹಾದೆರೆಗಳ ಕಾರಣ ಈ ನೆಲೆ ಹೆಸರು ರೂಪುಗೊಂಡಿರುವುದಕ್ಕೆ ಭೌಗೋಳಿಕ ಸಾಕ್ಷಿ ದೊರೆಯುತ್ತದೆ. ಕೊಡಗಿನ ಈ 'ಮಾದ್ರೆ' ಎರಡು ದೊಡ್ಡ ತೊರೆಗಳ ನಡುವಣ ಪ್ರದೇಶವಾಗಿ ತನ್ನ ನೆಲೆ ಹೆಸರನ್ನು ಹೊಂದಿರುವುದು ಕಾಣುತ್ತದೆ.

ಸೋಮವಾರಪೇಟೆ ಶನಿವಾರಸಂತೆ ಊರುಗಳು ಅದೇ ವಾರದ ಹೆಸರಿನ ದಿನ ಸೇರುವ ಸಂತೆಯ ಕಾರಣ ಅದನ್ನೇ ನೆಲೆ ಹೆಸರಾಗಿ ಪಡೆದುಕೊಂಡಿವೆ. ದುದ್ದಗಲ್ಲು, ಯಡೂರು ಶಾಸನದ ದುದ್ದರಸನ ಹೆಸರಿನಲ್ಲಿ ರೂಪುಗೊಂಡ ನೆಲೆಯಾಗಿದೆ. ಹಾನುಗಲ್ಲು, ಹಾನುಗಲ್ಲು ಕದಂಬ ವಂಶ ಶಾಖೆಯ ದೊರೆ ದುದ್ದರಸನ ಪೂರ್ವವಂಶಿಕ ನೆಲೆ ಧಾರವಾಡ (ಈಗ ಹಾವೇರಿ ಜಿಲ್ಲೆ) ಜಿಲ್ಲೆಯ ಹಾನುಗಲ್ಲು ನೆಲೆ ಹೆಸರಿನ ಸ್ಮರಣಾ ರೂಪಕವಾಗಿದೆ.

ಹಾಲೇರಿ: ಕೊಡವ ಭಾಷೆಯ ನಾಟ್ ಕಟ್ಟ್ ಪಾಟ್ (ನಾಡು ಕಟ್ಟಿದ ಹಾಡು) ನಲ್ಲಿ 'ಪಾಂಚ್ ಕಣ್ಣ್ ಪಾಲೇರಿ'- ಪೊಂದೇವಡಿ ಪಟ್ಟಿ ಎಂದಿದೆ. ಅಂದರೆ ನಾಗರ ಹಡೆಯ ಕಣ್ಣಿನಂತೆ ಮಿಂಚುವ ತಲೆಬೀಡು, ನೆಲೆಬೀಡು ಹಾಗೂ ದೇವರಹಳ್ಳಿ ಹಟ್ಟಿ ಎಂಬ ಅರ್ಥದಲ್ಲಿದೆ. ಅರ್ಥಾತ್ ರಾಜಧಾನಿ ಆಗಿದೆ ಎಂದರ್ಥ. ಕ್ರಿ.ಶ. ಸು. ೧೫೮೬ರ ಸಮಯದಲ್ಲಿ ಜಂಗಮ ವೇಷಧಾರಿ ಆಗಿ ಇಕ್ಕೇರಿಯ ರಾಜಗುವರ ವೀರವಡೆಯ ಇಲ್ಲಿ ನಿಂತು ವಂಶ ಸ್ಥಾಪಿಸಿ ಆಳಿದ ಕಾರಣ 'ಹಾಲೇರಿ ವಂಶ' ಎಂದೇ ಹೆಸರುಗೊಂಡಿತು. ಹಾಲೇರಿ ಅರಸರ ಶಾಸನಗಳಲ್ಲಿ 'ಹಾಲೇರಿ' ನೆಲೆ ಹೆಸರಿನ ಸಂಸ್ಕೃತ ರೂಪವಾಗಿ 'ಕ್ಷೀರನಗರ' ಎಂದೇ ಬಳಕೆಗೊಂಡಿದೆ. (ಕೊಡಗು ೫, ೯, ೧೧) ಹಾಲೇರಿನಾಡು ಎಂದು ಚಂಗಾಳ್ವರ ಕಾಲದಲ್ಲಿಂಯೆ ಹೆಸರಾಗಿದ್ದು, ಚಂಗಾಳ್ವ ವಂಶಿಕ ಸೋಮಶೇಖರನಾಯಕ. ವೀರಒಡೆಯ ಬರುವ ಮುನ್ನ ಆಳುತ್ತಿದ್ದ.

ಕೊಡಗರಹಳ್ಳಿ: ಇದು ಸುಂಟಿಕೊಪ್ಪ-ಕುಶಾಲನಗರ ಹಾದಿಯ ನಡುವಣ ಗಡಿಗ್ರಾಮ. ಕ್ರಿ.ಶ. ೧೧೭೪ರ ಕಂಪ್ಲಾಪುರ ಶಾಸನದಲ್ಲಿ [ಹುಣಸೂರು ೨೦] 'ಎಲ್ಲನಾಡ ಕೊಡ್ಢಗರು' ಸೇರಿ ಹೊಯ್ಸಳ ದಂಡನಾಯಕ ಬೆಟ್ಟರಸನನ್ನು ಎದುರಿಸಿದ ಸಂಗತಿ ಇದೆ. ಅದಕ್ಕೆ ಪೋಷಕವಾಗಿ 'ಕೊಡಗರಹಳ್ಳಿ' ಎಂಬ ನೆಲೆ ಹೆಸರು ಸಾಂಕೇತಿಕವಾಗಿ ಉಳಿದಿರುವುದು ಗಮನಾರ್ಹ. ಡಿ.ಎನ್. ಕೃಷ್ಣಯ್ಯನವರ 'ಕೊಡಿಗನ ಇತಿಹಾಸ'[೧೯] ಕೃತಿಯಲ್ಲಿ ರಾಜಗುವರಿ ದೇವಮ್ಮಾಜಿಯನ್ನು 'ಕೊಡಗರ ಹೊನ್ನಯ್ಯ ಗೌಡನ ಬಸಪ್ಪ'ನಿಗೆ ಲಿಂಗಧಾರಣೆ ಮಾಡಿಸಿ ಮದುವೆ ಮಾಡಿ ಕೊಟ್ಟ ಸಂಗತಿ ಇದೆ ; ಹಾಗೂ ಶೃಂಗೇರಿ ಮಠಕ್ಕೆ ಕೊಡಲಿ ಮಂದೆ ಸ್ಥಳವನ್ನು ಸರ್ವಮಾನ್ಯವಾಗಿ ಹಾಲೇರಿ ಅರಸ ಕ್ರಿ.ಶ.೧೭೫೬ರಲ್ಲಿ ನೀಡಿದ ದಾನಪತ್ರದ ಸಂಬಂಧ ಮಹಿಸೂರು ನಗರದ ಹೋಬಳಿ ಸೀಮೆ ವಿಚಾರದ ಲಕ್ಷ್ಮೀಕಾಂತಯ್ಯನಿಗೆ ನೀಡಿದ ನಿರೂಪದಲ್ಲಿ 'ಕೊಡಲಿ ಗ್ರಾಮದಲ್ಲಿ ಅರೆವಾಸಿ ಗ್ರಾಮವು ಕೊಡಗರ ಹವಾಲಿಗೆ ಸೇರಿರುವ ಬಗ್ಗೆ ತಿಳಿಸಿ ಶ್ರೀಮಠದ ಹವಾಲಿಗೆ ಧಾರೆ ಎರೆದು ಕೊಟ್ಟ ಸಂಗತಿ ಇದೆ. ಈ ಹಿನ್ನೆಲೆಯಲ್ಲಿ ಕ್ರಿ.ಶ. ೧೧೭೪ರ ಪಾಲ್ಪರೆ ಯುದ್ಧದಲ್ಲಿ ಪಾಲ್ಗೊಂಡ 'ಎಲ್ಲಾ ನಾಡ ಕೊಡಗರ' ಪೈಕಿ ಉಲುಗುಲಿ ಮೂಡಗೇರಿ ನಾಡಿಗೆ ಬಹುಶಃ ಪೂರ್ವದಿಸೆಯ ಈ ನಾಡಿಗೆ ಸೇರಿದ್ದ 'ಕೊಡಗರಹಳ್ಳಿಯ ಜನಕೆ ಸೇರಿದ್ದರೆಂಬ ಕುರುಹಿಗೆ ಸಾಕ್ಷಿಯಾಗಿ ಈ ಗ್ರಾಮ ತನ್ನ ನೆಲೆ ಹೆಸರನ್ನು ಹೊಂದಿರುವಂತಿದೆ.

ಮಡಿಕೇರಿ : ಹಾಲೇರಿ ವಂಶದ ಮೂರನೆಯ ದೊರೆ ಹಾಲೇರಿಯಿಂದ ರಾಜಧಾನಿಯನ್ನು ೧೯೮೧ರಲ್ಲಿ ಮುದ್ದರಾಜನಕೇರಿ ಕಟ್ಟೆ ಬದಲಾಯಿಸಿದ. ಅದೇ ಇಂದಿನ ಮಡಿಕೇರಿ. ಅವನು ಕಟ್ಟಿಸಿದ ಕೋಟೆ, ಅರಮನೆ, ರೂಪಿಸಿದ ಕೇರಿ ಆದ ಕಾರಣ ಮುದ್ದರಾಜನಕೇರಿ>ಮುದ್ದಕೇರಿ>ಮುದಕೇರಿ>ಮುಡಕೇರಿ>ಮಡಿಕೇರಿ ಎಂಬುದು ಸಹಜ ಬಾಯ್ದೆರೆಯ ರೂಪಾಂತರವಾಗಿದೆ.

ತಲಕಾವೇರಿ : ಕವೇರಪುತ್ರಿ ಕಾವೇರಿ ಬ್ರಹ್ಮಗಿರಿಯಲ್ಲಿ ಚಿಮ್ಮುವ ನೆಲೆ. ಕ್ರಿ.ಶ. ೧೦೦೧ರ (ಕೊಡಗು ೨) ಮಡಿಕೇರಿ (ಮ್ಯೂಸಿಯಂ) ಶಾಸನದಲ್ಲಿ 'ಮೊದಲ್ಕಾವೇರಿ' ಎಂದು ತಲಕಾವೇರಿಗೆ ಉಕ್ತವಾಗಿದೆ. ಕ್ರಿ.ಶ. ೧೮೪೯ರ ಭಾಗಮಂಡಲ ಶಾಸನದಲ್ಲಿ (ಕೊಡಗು ೨೪) 'ಮೂಲಕಾವೇರಿ' ಎಂದು ಉಕ್ತವಿದೆ. ಬ್ರಹ್ಮಗಿರಿಯ ನೆತ್ತಿಯಿಂದ (ಶಿರ=ತಲೆ) ಚಿಮ್ಮುವ ಕಾರಣ 'ತಲಕಾವೇರಿ' ಎಂಬುದು ಅನ್ವರ್ಥ ನೆಲೆ ಹೆಸರಾಗಿದೆ.

ಮಲ್ಮ : ಕೊಡಗಿನ ವ್ಯವಸಾಯದ ಅಧಿದೇವತೆ ಪಾಡಿ ಇಗ್ಗುತಪ್ಪನು ಮೊದಲು (ಕೇರಳದಿಂದ ಬಂದ ದೇವತೆ) ಬಂದು ನಿಂತ ನೆಲೆ. ಇಗ್ಗುತಪ್ಪನ ಬೆಟ್ಟದ ಸಮತಟ್ಟಿನ ತುದಿ ನೆಲೆಗೆ 'ಮಲ್ಮ' ಎಂಬ ನೆಲೆ ಹೆಸರಿದೆ. ಮೇಲಿನ ಈ 'ಮೈ' ಮಲೆಯ ಮೇಲಿನ ಮೈ ಸಮತಟ್ಟಾಗಿ ಈ ಹೆಸರು ಪಡೆದಿದೆ.

ಬೇತು : ಗ್ರಾಮವು ನಲವತ್ತು ಒಕ್ಕಲುಗಳ ನೆಲೆಯಾಗಿದ್ದ ನಾಪೋಕ್ಲುವಿಗೆ ಸನಿಹವಿದೆ. ಕ್ರಿ.ಶ. ೯ನೇ ಶತಮಾನದ ಕೋತೂರು ಶಾಸನದಲ್ಲಿ (ಕೊಡಗು ೯೭) 'ಬೇಟ್ಟಿಯ ಭತ್ತದೊಳ್' ಅಂದರೆ ಬಿಳಿಯ ಭತ್ತದಲ್ಲಿ ಎಂದರ್ಥವಿದೆ. ಅಂದರೆ ಕಿಗ್ಗಟ್ಟ್‌ನಾಡ್‌ನಲ್ಲಿ ಕೆಲವು ಪ್ರದೇಶದಲ್ಲಿ ಬಿಳಿಯ ಭತ್ತ ಬೆಳೆಯಲಾಗುತ್ತಿತ್ತು ಎಂದು ತಿಳಿಯುತ್ತದೆ. ಅದಾಗಿ ಬಟ್ಟೆ>ಬೇಟಿತು>ಬೇತು ಎಂದಾಗಿ ನಾಪೋಕ್ಲುವಿನ ಬೇತು ಗ್ರಾಮವು ಬಿಳಿಭತ್ತದ ಬೆಳೆಗೆ ಹೆಸರಾಗಿತ್ತು. ಅಂತಾಗಿ ಮೂಲರೂಪ ಬಿಳಿ ಭತ್ತದ ನೆಲೆ 'ಬೆಟ್ಟಿ', ಇಂದು 'ಬೇತು' ಗ್ರಾಮ ಎನಿಸಿದೆ.

ಮೂರ್ನಾಡು : ಮಡಿಕೇರಿಗೆ ಸನಿಹವಾಗಿ, ಮಡಿಕೇರಿ ವೀರರಾಜೇಂದ್ರ ಪೇಟೆಯ ಹಾದಿಯಲ್ಲಿದೆ. ಕೈಮುಡಿಕೆಯ ಹುತ್ರಿ ಕೋಲಾಟಕ್ಕೆ ಬೇರ್ಳನಾಡು–ಕುತ್‌ನಾಡು ಬೆಟ್ಟಯತ್ ಸೇರಿದಂತೆ ಮೂರ್ನಾಡುವಿನಲ್ಲಿ ಹುತ್ತರಿ ಕೋಲಾಟಕ್ಕೆ ಕಾಂತುಮೂರ್ನಾಡು, ಮುತ್ತಾಯಮಡಿ ಹಾಗೂ ಕಿಗ್ಗಾಲು ಗ್ರಾಮೀಣರು ಕೋಲ್ ಮಂದ್‌ಗೆ ಸೇರುವವರಾಗಿದ್ದಾರೆ. ಅದಾಗಿ ಮೂರು ನಾಡಿನವರು ಸೇರಿ ಕೋಲಾಟ ಮಂದ್‌ನಲ್ಲಿ ಕೋಲಾಟವಾಡುವ ಪದ್ಧತಿ ಇದೆ. ಅದರಿಂದ 'ಮೂರ್ನಾಡು' ಎಂಬ ನೆಲೆ ಹೆಸರಿಗೆ ಇವೆಲ್ಲ ಕಾರಣವಾಗಿರುವಂತಿವೆ.

ಕರಿಕೆ : ಇದರ ಒಂದು ರೂಪ 'ಕಱುಂಕೆ' ನಿಘಂಟುವಿನಲ್ಲಿ ಒಂದು ಬಗೆಯ ಹುಲ್ಲು ಬೆಳೆವ ಪ್ರದೇಶ ಎಂಬ ಅರ್ಥವಿದೆ. ಕುಡಿಯರು ಇಲ್ಲಿ (ಕರಿ) ಚಾಮುಂಡಿಯನ್ನು ಮುಖ್ಯವಾಗಿ ಆರಾಧಿಸುತ್ತಾ ಕೊಂಡೋತ್ಸವವನ್ನು ಏರ್ಪಡಿಸುತ್ತಾರೆ. ಅದಾಗಿ ಸಸ್ಯ ಹಾಗೂ ದೇವತಾ ಮೂಲದ ಅನ್ವಯವಾಗಿ ಈ ನೆಲೆ ಹೆಸರು ರೂಪುಗೊಂಡಿದೆ.

ಬಲ್ಯಮಾವಟಿ (ಬಲ್ಲಮಾವಟಿ) : ಬಲ್ಯ ಎಂದರೆ ದೊಡ್ಡದು. 'ಮಾವಟಿ' ಎಂಬುದು ಮಹಾಹಟ್ಟಿಯ ಬಾಯ್ದರೆ ರೂಪ. ಇದು ಎರಡು ಗ್ರಾಮಗಳ ಸಂಗಮರೂಪ. ಒಂದೇ ಅರ್ಥದ ಎರಡು ಶಬ್ದಗಳ ನೆಲೆಯಾದ ಕಾರಣ 'ಕೂಡಲಸಂಗಮ' ಎಂಬಂತೆ ಇದು ದ್ವಿರುಕ್ತಿ ಬಗೆಯ ನೆಲೆ ಹೆಸರಾಗಿದೆ.

ಇನ್ನು ವೀರರಾಜೇಂದ್ರಪೇಟೆ ತಾಲ್ಲೂಕಿನ 'ಕಳತ್‌ಮಾಡು' ಒಕ್ಕಲು ಕಣದ ವಿಶೇಷ ನೆಲೆಯಾಗಿ ವಿಶಾಲಗದ್ದೆಗಳ ಮೇಲಿನ ಭೂಮಿಯಲ್ಲಿದೆ. ಗದ್ದೆಗಳ ಮೇಲ್ಭಾಗದಲ್ಲಿ ಮಾಡಿನಂತೆ ಇರುವ ನೆಲೆಯಾಗಿದೆ.

ಇದಕ್ಕೆ ಸನಿಹದಲ್ಲಿ 'ಅಮ್ಮತ್ತಿ' ಅಮ್ಮತ್ತಿ ಬಳುಗುಂದ, ಅಮ್ಮತ್ತಿ ಹೊಸೂರು ಇತ್ಯಾದಿ ನೆಲೆ ಹೆಸರುಗಳಿವೆ. 'ಅಮ್ಮತ್ತಿ' ನಾಡನ್ನು ಆಂಗ್ಲರ ಆಳ್ವಿಕೆಗೆ ಬಹಳ ಮುನ್ನ, ಉಮ್ಮತ್ತುನಾಡು ಎಂದು ಕರೆಯುತ್ತಿದ್ದ ಬಗ್ಗೆ ಕೊಡವ ನುಡಿ ಅರ್ಥಕೋಶ (ಐ.ಮ. ಮುತ್ತಣ್ಣ, ಪು. ೬) ಹೇಳಿದೆ. ಆಂಗ್ಲರ ಉಚ್ಚಾರದಲ್ಲಿ ಅದು 'ಅಮ್ಮತ್ತಿ' ಆಯಿತು. ಉಮ್ಮತ್ತು (ಉಮ್ಮತ್ತ) ಎಂದರೆ ದನಗಳಿಗೆ ಔಷಧವಾಗಿ ಬಳಸುವ ಸತ್ವಯುತಕಾರವಾದ ರುಚಿಯ ಒಂದು ಬಗೆ ಎಲೆ ಮತ್ತು ಹೂ ಎಂಬರ್ಥವಿದ್ದು ಈ ಪ್ರದೇಶದಲ್ಲಿ ಬೆಳೆವ ಸಸ್ಯವಾಗಿದೆ ಅಂತಾಗಿ ಸಸ್ಯವಾಚಿ ಮೂಲವು ಈ ನೆಲೆ ಹೆಸರಿಗಿದೆ.

'ಬಿಟ್ಟಂಗಾಲ (ಬೆಟ್ಟಂಗಾಲ)–ಕಂಡಂಗಾಲ' (ಕುಂಡಂಗಾಲ–ಕುಂದಂಗಾಲ) ಅಂದರೆ 'ಬೆಟ್ಟ' ಶಬ್ದಾರ್ಥದ ದ್ವಿರುಕ್ತಿ ನೆಲೆಯಾಗಿ ಇವು ಕಾಣುತ್ತದೆ.

ಕುದುರೆ ಬೋಡ : ಅಕ್ಟೋಬರ್‌ನಲ್ಲಿ ಆರಂಭವಾಗುವ ಈ ಕುದುರೆ ಕುಣಿತ ಇಡೀ ೮ ತಿಂಗಳು ಕೊಡಗಿನೆಲ್ಲೆಡೆ ಆಚರಿಸಲು ನಾಂದಿ ಆಗುತ್ತದೆ. ಜೂನ್ ೧–೨ನೇ ತಾರೀಖಿನಲ್ಲಿ 'ಪಾರಣ ಮಾಡಿ' ಗದ್ದೆಯಲ್ಲಿ ಬೆತ್ತದ ಈ ಕುದುರೆಯನ್ನು ಕಡಿಯುವ ಉತ್ಸವಾಚರಣೆ ಇರುತ್ತದೆ. ಅಂದರೆ ಕುದುರೆಯ ಪ್ರಾಣಹರಣ ಮಾಡುವ ನೆಲೆ. ಕೊಡವ ಭಾಷೆಯಲ್ಲಿ ದೇವಿಗೆ ಅರ್ಪಿಸುವ ಬಲಿ ಎನಿಸುವ 'ಬಾರಣೆ'ಯ ಬದಲಿ ರೂಪ 'ಪಾರಣ'ವಾಗಿರುವಂತಿದೆ. ಅಂತಾಗಿ 'ಪಾರಣಮಾನಿ' ಗದ್ದೆಯಲ್ಲಿ (ಕುದುರೆ

ಕಡಿಯುವುದು) ಗಾದೆಯ ಮಾತಾಗಿ ಆ ನೆಲೆ ಹೆಸರು ಚಾಲ್ತಿಯಲ್ಲಿದೆ.

ಸೋಮವಾರಪೇಟೆ ತಾಲ್ಲೂಕಿನ ದೊಡ್ಡಮಳತೆಯ ಕ್ರಿ.ಶ. ೧೯೯೫ರ ಹೊಸ ಶಾಸನದಲ್ಲಿ (ಇ.ದರ್ಶನ ೨೦/೨೦೦೫, ಪು. ೧೧೦) 'ಪೆದ್ದೇವರ' ಎಂಬ ಶಬ್ದವಿದೆ. ಸುಗ್ಗಿಕಟ್ಟೆ ಹಬ್ಬದಲ್ಲಿ 'ಹೆದ್ದೇವೆ ಬನ'ಕ್ಕೆ ಹೋಗಿ ಪೂಜೆ ಸಲ್ಲಿಸುತ್ತಾರೆ. 'ಹೆದ್ದೇವರ' ಪ್ರಾಚೀನ ಶಾಸನೋಲ್ಲೇಖ ರೂಪ 'ಪೆದ್ದೇವರ' ಆಗಿದ್ದು, ಹೆದ್ದೇವರ ಬನವೆಂಬುದು 'ಹುತ್ತದ ದೇವರ ಬನ' ಎಂದು ಅಲ್ಲಿರುವ ಆರಾಧನಾ ಪ್ರತೀಕಗಳಿಂದ ತಿಳಿಯುತ್ತದೆ. ನಾಗಬನದ ಪ್ರಾಚೀನತೆ ಈ ರೂಪದಲ್ಲಿ ಕೊಡಗಿನ ನೆಲೆ ಹೆಸರೊಂದರಲ್ಲಿ ಹೀಗೆ ಪ್ರಕಟಗೊಂಡಿದೆ. 'ತೋಳೂರು' ಎಂಬ ನೆಲೆ ಹೆಸರು ಕ್ರಿ.ಶ. ೧೧೭೫ರ ನಂದಿಗುಂದ ಶಾಸನದಲ್ಲಿ (ಕೊಡಗು ೭೫) ಇದೆ. ಹೀಗೆಯೇ ಚಿಕ್ಕತೋಳೂರು ಎಂಬ ನೆಲೆ ಹೆಸರೂ ಗ್ರಾಮಪಟ್ಟಿಯಲ್ಲಿ ಕಾಣಬರುತ್ತದೆ. ಇವು ಆ ಗ್ರಾಮಗಳಲ್ಲಿರುವ ಮಾಸ್ತಿ ತೋಳಿನ ಸ್ಮರಣೆ (ಮಾಸ್ತಿಯ ನೆನಪಿನಲ್ಲಿ) ಯಾಗಿ ನೆಲೆ ಹೆಸರು ಪಡೆದಿರುವುದಾಗಿದೆ. ಗ್ರಾಮಕ್ಕೆ ಭೇಟಿ ನೀಡಿದಾಗಲೂ ಮಾಸ್ತಿ ಶಿಲ್ಪಗಳು ಅಲ್ಲಿ ಕಂಡುಬಂದುವು.

ಹಾಲೇರಿ ಅರಸರ ಆಳ್ವಿಕೆಯ ಕಾಲದಲ್ಲಿ ಒಟ್ಟು ಗ್ರಾಮನಾಮಗಳು ೫೨೦ ಇದ್ದುವು. ಉತ್ತರ ಕೊಡಗಿನಲ್ಲಿ ೩೭೦, ದಕ್ಷಿಣ ಕೊಡಗಿನಲ್ಲಿ ೧೫೦ ಗ್ರಾಮಗಳಿದ್ದವು. ಅವುಗಳಲ್ಲಿ ಕೆಲವನ್ನು ಈ ಲೇಖನಕ್ಕೆ ಆರಿಸಿಕೊಳ್ಳಲಾಗಿದೆ. ಶಾಸನಗಳಲ್ಲಿ ಹಾಗೂ ಜನಪದ ರೂಢಿಯಲ್ಲಿದ್ದ ಕೆಲವಾರು ನೆಲೆ ಹೆಸರುಗಳನ್ನು ಇಲ್ಲಿ ಪ್ರಸ್ತಾಪಿಸಿ ಸಂಕ್ಷಿಪ್ತ ಇತಿಹಾಸವನ್ನು ನೀಡಲಾಗಿದೆ.

ಕೊಡಗಿನ ಈ ನೆಲೆ ಹೆಸರುಗಳನ್ನು ಗಮನಿಸುವಾಗ ಪ್ರಾಗೈತಿಹಾಸಿಕ ಮೂಲದಿಂದ, ಭೌಗೋಳಿಕ ಪರಿಸರದಿಂದ, ಸಸ್ಯ, ಪುಷ್ಪ, ಎಲೆ ಇತ್ಯಾದಿ ಮೂಲಗಳಿಂದ, ಹಬ್ಬದಾಚರಣೆ, ಜನಪದ ಉತ್ಸವ ಜನರು, ಧರ್ಮ, ಗಾದೆ, ಕೃಷಿ, ದೇವತೆ, ಜಲ ಮೂಲಗಳಿಂದ ನೆಲೆ ಹೆಸರುಗಳು ರೂಪುಗೊಂಡು ತಮ್ಮ ಸಾಂಸ್ಕೃತಿಕ ಇತಿಹಾಸದ ನೆಲೆಗಟ್ಟನ್ನು ತೋರಿಕೊಂಡಿವೆ. ಕೊಡಗಿನ ಪರಿಸರ ನಿಸರ್ಗ ಬಾಹುಳ್ಯದಿಂದ ಕೂಡಿರುವಲ್ಲಿ ನಿಸರ್ಗವಾಚಿ ನೆಲೆ ಹೆಸರುಗಳು ಹೆಚ್ಚಾಗಿ ಕಾಣಬರುತ್ತವೆ. ಒಟ್ಟಾರೆ ಇಲ್ಲಿನ ನೆಲೆ ಹೆಸರುಗಳು ಚಲನಶೀಲ ಮಾನವ ಬದುಕಿನ ಸಂಕೇತವಾಗಿ ಕಾಣಬರುತ್ತವೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿಗಳು

೧. N.C. Hayavadana Rao's., `The place Names of Mysore', QJMS, The Mythic Society, Bangalore, Vol.6(4), 1915-16 p. 281.

೨. ಡಾ. ಹಂಪ ನಾಗರಾಜಯ್ಯ., ದ್ರಾವಿಡ ಭಾಷಾ ವಿಜ್ಞಾನ, ೧೯೯೧, ಬೆಂಗಳೂರು, ಪುಟ ೧೧೦.

೩. Dr. R. Balakrishnan., Phonology of Kodagu with Vocabalary, 1978, Annamalai University, p. ix.

೪. ಎ.ಕ. ಸಂ. ೫ (ಹೊಸತು)., ಮೈಸೂರು ಜಿಲ್ಲೆ, ೧೯೭೬, ಮೈ. ವಿ.ವಿ., ತಿ.ನ. ೨೩೦ (ತಟೆಮಾಲಿಂಗಿ, ಕ್ರಿ.ಶ. ೧೦೦೪).

೫. ಎ.ಕ. ಸಂ. ೪ (ಹೊ)., ಮೈಸೂರು ಜಿಲ್ಲೆ, ೧೯೭೫, ಚಾಮರಾಜನಗರ ೩೪೭, (ಕುಲಗಾಣ, ಕ್ರಿ.ಶ. ೭-೮-ನೇ ಶತಮಾನ).

೬. i. P.E. Connor., Memoirs of the codagu survey, part ii, 1818, quilon, p. 88.
ii. ಎಂ.ಜಿ. ನಾಗರಾಜ್., ಕೊಡಗಿನ ಹಾಲೇರಿ ರಾಜವಂಶವು, ಭಾಗ ೧, ೨೦೦೪, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ಪುಟ ೧೨.

೭. K.K. Subbaiah., Archacology of Coorg, 1978, Mysore, pp. 18-19.

೮ ಅ.ಎಂ.ಜಿ. ನಾಗರಾಜ್., 'ಭೂ ಇತಿಹಾಸದ ಬೆಳಕಿನಲ್ಲಿ ಕೊಡಗಿನ ಕಾವೇರಿ ಮತ್ತು ಗಂಗ', ಇತಿಹಾಸ ದರ್ಶನ, ಸಂ. ೧೦/೧೯೯೫, ಪು. ೧೪೮.

೯. C. Hayavadanarao., op.cit, p. 281.

೧೦. ಎಂ.ಜಿ. ನಾಗರಾಜ್., ಕೊಡಗಿನ ಹಾಲೇರಿ ರಾಜವಂಶವು, ಅದೇ, ಪುಟ ೩೧೬.

೧೧. i. K. Mammen., Kerala Culture, 1942, Trivendrum pp. 80-81.
ii. A. Sridhara Mencs., Social and cultural History of India-Kerala, 1979, pp. 58-59.

೧೨. ಕೊಡಗಿನ ಹಾಲೇರಿ ರಾಜವಂಶವು ಅದೇ, ಪುಟ. ೧೬೩.

೧೩. ಎಂ.ಜಿ. ನಾಗರಾಜ್., ಕೆಂಬಟ್ಟಿ ಹೊಲೆಯರ ಸಂಸ್ಕೃತಿ, ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪುಟ ೩೨೮.

೧೪. ಎಂ.ಜಿ. ನಾಗರಾಜ್., ಎಚ್.ಎಂ. ಸಿದ್ದನಗೌಡ., 'ಬೆಂಗಳೂರು ಮತ್ತು ಕೊಡುಗಿನ ಕೆಲವು ಅಪ್ರಕಟಿತ ಶಾಸನಗಳು' ಇತಿಹಾಸ ದರ್ಶನ, ಕ.ಇ.ಅ. ಸಂ. ೧೪/೧೯೯೯, ಪುಟ ೩೮.

೧೫. ಎ.ಕ. ಸಂ. ೧ (ಹೊಸತರು).,. ಕೊಡಗು ಜಿಲ್ಲೆ ೧೯೭೨, ಕೊಡಗು ೧೦೬ (ಇರ್ಪು, ಕ್ರಿ.ಶ. ೧೮೪೦-೪೧).

೧೬. ಎಂ.ಜಿ. ನಾಗರಾಜ್, 'ಕೊಡಗಿನ ಎರಡು ಅಪೂರ್ವ ಜೈನ ಮತ್ತು ಬೌದ್ಧ (!) ಶಿಲಾ ಶಿಲ್ಪಗಳು' ಇತಿಹಾಸ ದರ್ಶನ., ಕ.ಇ.ಅ. ಸಂ. ೧೧/೧೯೯೯, ಪುಟ ೭೭, ೮೦.

೧೭. ಎ.ಕ.ಸಂ. ೧ (ಹೊಸತು)., ಅದೇ, ಕೊಡಗು ೯೭ (ಕೋತೂರು, ೯ನೇ ಶತಮಾನ).

೧೮. ಡಾ. ಎಂ.ಜಿ. ಚಂದ್ರಕಾಂತ್ ಮತ್ತು ಎಂ.ಜಿ. ನಾಗರಾಜ್., 'ಕೊಡಗಿನ ನಾಗರಹೊಳೆಯ ಸಾಂಸ್ಕೃತಿಕ ಇತಿಹಾಸ ಮತ್ತು ಚಂಗಾಳ್ವರು, ಇತಿಹಾಸ ದರ್ಶನ, ಕ.ಇ.ಅ. ಸಂ. ೧೨/೧೯೯೭, ಪುಟ ೧೪೩, ೧೪೫, ೧೪೬, ೧೪೮.

೧೯. ಡಿ.ಎನ್. ಕೃಷ್ಣಯ್ಯ., ಕೊಡಗಿನ ಇತಿಹಾಸ, ೧೯೭೪, ಮೈ.ವಿ.ವಿ. ಪುಟ ೪೭.

೨೦. ಎ.ಕ.ಸಂ. ೪ (ಹೊಸತು), ಮೈಸೂರು ಜಿಲ್ಲೆ, ೧೯೭೪, ಮೈ.ವಿ.ವಿ. ಪರಿಯಾಪಟ್ಟಣ ೧೧೮ (ಕಂಪಲಾಪುರ, ಕ್ರಿ.ಶ. ೧೧೭೪).

೨೧. ಎಂ.ಜಿ. ನಾಗರಾಜ್., 'ಕೊಡಗಿನ ಕೊಲೆ ಕಲ್ಲುಗಳು', ಹರತಿಸಿರಿ, ೧೯೮೭, (ಸಂ) ಲಕ್ಷ್ಮಣ್ ತೆಲಗಾವಿ, ಹರ್ತಿಕೋಟೆ, ಪುಟ ೭೩೨.

೨೨. ಎಂ.ಜಿ. ನಾಗರಾಜ್., 'ಕೊಡಗಿನ ಕೊಂಗಾಳ್ವರ ರಾಜಧಾನಿ ಮಾಲಂಬಿ ಮತ್ತು ಮಾದ್ರೆಯ ಹೊಸ ಶಾಸನಗಳು, ಇತಿಹಾಸ ದರ್ಶನ, ಸಂ. ೨೬/೨೦೧೧, ಪುಟ ೧೭೧೭.

೨೩. ಪುರಾಣ ಭಾರತಕೋಶ., ಯಜ್ಞನಾರಾಯಣ ಉಡುಪಿ (ಸಂ), ೧೯೯೭, ಪುಟ ೪೫೪, (ತೃತೀಯ ಮುದ್ರಣ).

೨೪. ಡಿ.ಎನ್. ಕೃಷ್ಣಯ್ಯ., ಕೊಡಗಿನ ಇತಿಹಾಸ, ಅದೇ, ಪುಟ ೧೩೩ ಮತ್ತು ೪೪೦.

೬೫

ಬಯಲುನಾಡು ಕದಂಬರು

ಸುಂಕಂ ಗೋವರ್ಧನ*

ಕನ್ನಡ ನಾಡಿನ ವಾಯುವ್ಯ ಭಾಗದಲ್ಲಿರುವ ಬನವಾಸಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಿ.ಶ. ೪ರಿಂದ ೬ನೆಯ ಶತಮಾನದವರೆಗೆ ಮೂರು ಶತಮಾನಗಳಷ್ಟು ಕಾಲ ಆಳ್ವಿಕೆ ನಡೆಸಿದ ರಾಜವಂಶವೇ ಕದಂಬರು. ವರದಾ ನದಿಯಿಂದ ಪರಿಪೂರಿತವಾದ ಅತ್ಯಂತ ಸಂಪದ್ಭರಿತವಾದ ಬನವಾಸಿ ಮಂಡಲವನ್ನು ಆಳಿದ ಕಾರಣ ಇವರನ್ನು ಬನವಾಸಿಯ ಕದಂಬರು ಎಂದು ಗುರುತಿಸಲಾಗಿದೆ. ಇವರು ಮಾನವ್ಯ ಗೋತ್ರದವರೂ ಮತ್ತು ಹಾರಿತೀ ವಂಶದವರೆಂದು ತಮ್ಮನ್ನು ತಾವು ಕರೆದುಕೊಂಡಿದ್ದಾರೆ. ಮಲೆನಾಡಿನ ಭಾಗವನ್ನು ಆಳಿದ ಇವರು ಮೂಲತಃ ಬ್ರಾಹ್ಮಣ ಕುಲಕ್ಕೆ ಸೇರಿದವರಾದರೂ ನಂತರದ ಕಾಲಘಟ್ಟದಲ್ಲಿ ಕ್ಷಾತ್ರಧರ್ಮಕ್ಕೆ ಪರಿವರ್ತಿತರಾದವರು.

ಹೀಗೆ ಆರಂಭಗೊಂಡ ಕದಂಬರ ಆಳ್ವಿಕೆ ಕದಂಬ ದೊರೆ ಕೃಷ್ಣವರ್ಮನನ್ನು ಕ್ರಿ.ಶ. ೫೪೦ರಲ್ಲಿ ಸೋಲಿಸಿದ ಚಲುಕ್ಯ ದೊರೆ ಒಂದನೆಯ ಪುಲಿಕೇಶಿಯು [ಕ್ರಿ.ಶ. ೫೪೦–೫೬೬] ಈ ಮನೆತನದ ಆಳ್ವಿಕೆಯನ್ನು ಕೊನೆಗಾಣಿಸಿದನು.

ಬನವಾಸಿಯನ್ನು ಕಳೆದುಕೊಂಡ ಕದಂಬ ವಂಶೀಯರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಕನ್ನಡನಾಡಿನ ಹಲವು ಭಾಗಗಳಲ್ಲಿ ಚದುರಿಹೋದರು. ೯ನೆಯ ಶತಮಾನದ ವರೆಗೂ ಅಜ್ಞಾತರಾಗಿದ್ದು ಹಲವು ಭಾಗಗಳಲ್ಲಿ ಆಡಳಿತ ಕೇಂದ್ರವನ್ನು ಸ್ಥಾಪಿಸಿಕೊಂಡು ಪ್ರವರ್ಧಮಾನಕ್ಕೆ ಬಂದರು. ಅವುಗಳಲ್ಲಿ ಪ್ರಮುಖವಾದ ಕದಂಬರ ಶಾಖೆಗಳೆಂದರೆ ಗೋವೆಯಿಂದ ಗೋವೆಯ ಕದಂಬರು[೨], ಹಾನಗಲ್ಲಿನಿಂದ ಹಾನಗಲ್ ಕದಂಬರು[೩], ಬಂಕಾಪುರದಿಂದ ಬಂಕಾಪುರ ಕದಂಬರು[೪], ರಟ್ಟಿಹಳ್ಳಿಯಿಂದ ರಟ್ಟಿಹಳ್ಳಿ ಕದಂಬರು[೫]. ಕರಡಿಕಲ್‌ನಿಂದ ಕರಡಿಕಲ್ ಕದಂಬರು[೬], ಸಕಲೇಶಪುರದಿಂದ ಹಾರುವ ಬೆಲುಹೂರ ಕದಂಬರು[೭], ಕೊಟ್ಟೂರಿನಿಂದ ಕೋಗಳಿ ಕದಂಬರು[೮], ನಾಗರಖಂಡದಿಂದ ಬಂದಳಿಕೆ ಕದಂಬರು[೯], ಮೊಳಿಕಾಲ್ಮೂರಿನಿಂದ ಮೊಳಕಾಲ್ಮೂರು ಕದಂಬರು[೧೦], ಚಂದಾವರದಿಂದ ಚಂದಾವರ ಕದಂಬರು[೧೧], ಪ್ರಮುಖರು.

ಹೀಗೆ ಮೂರ್‍ನಾಲ್ಕು ಶತಮಾನಗಳ ಅಜ್ಞಾತವಾಸದಿಂದ ಬಿಡುಗಡೆ ಹೊಂದಿ ತಮ್ಮದೇ ಆದ ಸ್ವತಂತ್ರ ನೆಲೆಯನ್ನು ಸ್ಥಾಪಿಸಿಕೊಂಡ ಕದಂಬರ ಶಾಖೆಗಳಲ್ಲಿ ಹೆಚ್ಚಿನ ಅಧ್ಯಯನಗಳಿಂದ ವಂಚಿತವಾದ ಅರಸು ಮನೆತನವೆಂದರೆ ಬಯಲ್ನಾಡು ಕದಂಬರು. ಹೀಗಾಗಿ ಈ ಲೇಖನದಲ್ಲಿ ಬಯಲ್ನಾಡು ಕದಂಬರ ಇತಿಹಾಸದ ಬಗ್ಗೆ, ಅವರು ಮುನ್ನೆಲೆಗೆ ಬರಲು ಇದ್ದ ಪ್ರೇರಣೆಗಳ ಬಗ್ಗೆ, ಇವರ ಅಸ್ತಿತ್ವವನ್ನು ಬಲಪಡಿಸಿಕೊಂಡ ನಂತರ ಹೊಯ್ಸಳರಿಗೆ ಸಿಂಹಸ್ವಪ್ನವಾಗಿ ಕಾಡಿದ್ದರ ಬಗ್ಗೆ ಈ ಲೇಖನದಲ್ಲಿ ಚರ್ಚಿಸಲಾಗಿದೆ.

ಬಯಲುನಾಡು

ಪ್ರಸ್ತುತ ಕರ್ನಾಟಕದ ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ ತಾಲ್ಲೂಕು ಮತ್ತು ಈ ತಾಲ್ಲೂಕಿಗೆ ಅಂಟಿಕೊಂಡಂತೆ ಇರುವ ಕೇರಳ ರಾಜ್ಯದಲ್ಲಿ ಸೇರಿರುವ ವಯ್ನಾಡು ಜಿಲ್ಲೆಯ ಬಹುತೇಕ ಭಾಗವು ಬಯಲುನಾಡು ಎಂದು ಕ್ರಿ.ಶ. ೮ನೆಯ ಶತಮಾನದಿಂದ ಪ್ರಸಿದ್ಧವಾಗಿತ್ತು. ದಟ್ಟವಾದ ಮಲೆನಾಡಿನಿಂದ ಬಂದ ಕದಂಬ ವಂಶವು ತನ್ನ ವಂಶದ ಪುನರುತ್ಥಾನಕ್ಕೆ ಆರಿಸಿಕೊಂಡ ಭೂಭಾಗವು ಈ ಬಯಲ್ನಾಡು ಎಂದು ಹೇಳಬಹುದಾಗಿದೆ.

ಬಯಲುನಾಡಿನ ಅತ್ಯಂತ ಪ್ರಮುಖವಾದ ಎರಡು ನದಿಗಳಾದ ಕಪಿಲಾ ಮತ್ತು ನುಗು ನದಿಗಳು ಇಂದಿಗೆ ಕರ್ನಾಟಕದಲ್ಲಿದ್ದರೆ ಬಯಲುನಾಡಿನ ಪಕ್ಕದಲ್ಲಿ ಹರಿಯುವ ಇಂದಿನ ಪೆರಿಯಾರ್ ನದಿ ಕೇರಳದಲ್ಲಿದೆ. ಈ ಪ್ರದೇಶ ಪ್ರಾಚೀನ ಗಂಗರ ಆಳ್ವಿಕೆಗೆ ಒಳಪಟ್ಟಿತ್ತು. ಗಂಗರಲ್ಲಿ ಒಳಜಗಳಗಳು ಸ್ಫೋಟಗೊಂಡ ಸಂದರ್ಭದಲ್ಲಿ ಅವರಿಗೆ ಅಧೀನರಾಗಿದ್ದ ಕದಂಬ ವಂಶದವರು ಗಂಗರ ನಂತರ ಬಯಲುನಾಡಿನ ಅಧಿಪತಿಗಳಾಗಿದ್ದರು.

ಬಯಲುನಾಡಿನಲ್ಲಿ ಗಂಗರು

ಬಯಲುನಾಡಿನ ಉಲ್ಲೇಖ ಬರುವ ಅತ್ಯಂತ ಪ್ರಾಚೀನ ಶಾಸನವೆಂದರೆ ಕಟ್ಟೆಮ ಬಯಲುನಾಡಿನ ನುಗನಹಳ್ಳಿಯ ಶಾಸನ.[೧೨] ಕಾಲದ ಉಲ್ಲೇಖವಿಲ್ಲದೆ ಈ ಶಾಸನವು ಗಂಗರ

* # ೩೩೩೭, ೩ನೇ ಅಡ್ಡರಸ್ತೆ, ೭ನೇ ಮುಖ್ಯರಸ್ತೆ, ಹಂಪಿನಗರ, ವಿಜಯನಗರ ೨ನೇ ಹಂತ, ಬೆಂಗಳೂರು–೫೬೦೧೦೪.

ದೊರೆ ಕೊಂಗಣಿವರ್ಮ ಎರೆಯಪ್ಪರಸನ [ಕ್ರಿ.ಶ. ೮೮೬–೯೨೦] ಕಾಲಕ್ಕೆ ಸೇರಿದ್ದಾಗಿದೆ. ಬಹುಶಃ ಬಯಲುನಾಡನ್ನು ಪಡೆಯಲು ನಡೆದ ಒಂದು ಯುದ್ಧವನ್ನು ಈ ಶಾಸನವು ತಿಳಿಸುತ್ತದೆ. ಸ್ವತಃ ಎರೆಯಪ್ಪರಸನೇ ಬಯಲುನಾಡಿಗೆ ಸೇರಿದ ಕೊತ್ತಮಂಗಲದ ಮೇಲೆ ದಾಳಿ ಮಾಡಿ ಹಸುಗಳನ್ನು ಹೊಡೆದುಕೊಂಡು ಹೋಗುತ್ತಿದ್ದಾಗ ಪೆರ್ವಯಲಿನ ಕೊಂಗಣಿ ಪುಯ್ಯಲನು ಇವನ ವಿರುದ್ಧ ಹೋರಾಡಿ ತುರುಗಳನ್ನು ಬಿಡಿಸಿಕೊಂಡರೂ ಬಯಲುನಾಡನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಹಾಗಾಗಿ ಗಂಗರ ದೊರೆ ಎರೆಯಪ್ಪರಸನಿಗೆ ಈ ಕಾಲದಲ್ಲಿ ಬಯಲುನಾಡು ಸುಲಭವಾಗಿ ಸಂದು ಹೋಯಿತು. ನಂತರ ಎರೆಯಪ್ಪರಸನ ಮಗನಾದ ರಾಚಮಲ್ಲಿ ಬಯಲುನಾಡಿನ ಅಧಿಕಾರವನ್ನು ಪಡೆಯುತ್ತಾನೆ. ಈತ ೩ನೆಯ ರಾಚಮಲ್ಲನಾಗಿದ್ದು ಈತನ ಆಡಳಿತಾವಧಿಯ ಕಾಲ ಕ್ರಿ.ಶ ೯೩೩ ರಿಂದ ೯೩೬.

ಎರೆಯಪ್ಪರಸನ ಮೂರು ಜನ ಮಕ್ಕಳಾದ ನರಸಿಂಹ, ಮೂರನೆಯ ರಾಚಮಲ್ಲ ಹಾಗೂ ಎರಡನೆಯ ಬೂತುಗರ ನಡುವೆ ನಿರಂತರ ಯುದ್ಧಗಳು ನಡೆಯುತ್ತಿದ್ದವು. ಈ ಮೂರು ಜನ ಅಣ್ಣ–ತಮ್ಮಂದಿರ ನಡುವೆ ಯುದ್ಧಗಳು ನಡೆಯುತ್ತಲೇ ಇತ್ತು. ಇಂತಹ ಅಪರೂಪದ ಸಂಗತಿಯೊಂದನ್ನು ಹಿರೇನಂದಿಯ ಶಾಸನವು ತಿಳಿಸುತ್ತದೆ.[೧೩]

ಬಯಲುನಾಡಿನ ಅಧಿಪತಿಯಾಗಿದ್ದ ರಾಚಮಲ್ಲನ ವಿರುದ್ಧ ಭುವನಾದಿತ್ಯನು ಈ ಕಾಲದಲ್ಲಿ ಒಂದು ಯುದ್ಧವನ್ನು ಮಾಡುತ್ತಾನೆ. [ಕ್ರಿ.ಶ. ೯೩೩–೯೩೬ರ ನಡುವೆ] ಈ ಭುವನಾದಿತ್ಯ ಯಾರೂ ಆಗಿರದೇ ಮೂರನೇ ರಾಚಮಲ್ಲನ ಸಹೋದರನಾದ ಇಮ್ಮಡಿ ಬೂತುಗನೇ ಅಗಿರುತ್ತಾನೆ. ಈ ಯುದ್ಧದಲ್ಲಿ ಬಯಲು ನಾಡಿನ ಮೇಲೆ ರಾಚಮಲ್ಲನಲ್ಲದೆ ಇನ್ನಾರ ಪ್ರಭುತ್ವವು ಇರಬಾರದೆಂದು ಐದು ಜನ ಸಾಮಂತರಾಜರು ಸೇರಿ ರಾಚಮಲ್ಲನ ಪರವಾಗಿ ಇಮ್ಮಡಿ ಭೂತುಗನ ವಿರುದ್ಧ ಯುದ್ಧ ನಡೆಸುತ್ತಾರೆ. ಈ ಯುದ್ಧ ನಡೆದದ್ದು ಮಾಗುಂಡಿಯಲ್ಲಿ. ಗಂಗರ ಸಾಮಂತಾಧಿಪತಿಗಳಾಗಿದ್ದ ಬಯಲ್ನಾಡಿನ ಕದಂಬರ ಇನ್ನೊಂದು ಮುಖ್ಯ ಸಾಧನೆ ಯೆಂದರೆ ಚೋಳರು ಬಯಲುನಾಡಿನ ಮೇಲೆ ಆಳ್ವಿಕೆ ನಡೆಸ ದಂತೆ ತಡೆಯಲು ಯಶಸ್ವಿಯಾಗಿದ್ದು. ಬಯಲುನಾಡಿನಲ್ಲಿ ಅತ್ಯಂತ ಪರಾಕ್ರಮಶಾಲಿಯಾದ ಸೈನ್ಯ ಪಡೆಯಿದ್ದ ಸಂಗತಿ ನಮಗೆ ತಿಳಿದುಬರುತ್ತದೆ. ಈ ಬಯಲುನಾಡಿನ ಸೈನ್ಯದಲ್ಲಿ ಕುಮಾರನಾಡು, ನುಗುನಾಡು, ನವಿಲೆನಾಡಿನ ಸೈನಿಕರಲ್ಲ ಸೇರಿದ್ದರು ಎಂಬ ವಿಷಯ ನಮಗೆ ತಿಳಿದುಬರುತ್ತದೆ. ಬಯಲುನಾಡಿನ ಪಕ್ಕದಲ್ಲಿದ್ದ ನುಗುನಾಡು, ನವಿಲೆನಾಡುಗಳು ಚೋಳರ ವಶವಾದರೂ ಬಯಲುನಾಡನ್ನು ಮಾತ್ರ ಚೋಳರು ಪಡೆಯಲಾಗಲಿಲ್ಲ.

ಬಯಲ್ನಾಡು ಕದಂಬರು

ಈಗಾಗಲೇ ಗಮನಿಸಿರುವಂತೆ ಗಂಗರ ಕಾಲದಲ್ಲಿಯೇ ಅಸ್ತಿತ್ವದಲ್ಲಿದ್ದ ಬಯಲ್ನಾಡು.. ಗಂಗರ ನಂತರ ಬಯಲ್ನಾಡು ಕದಂಬರ ಆಳ್ವಿಕೆಗೆ ಸೇರಿಹೋಯಿತು. ಬಹುಶಃ ಗಂಗರ ದೊರೆ ರಾಚಮಲ್ಲನಿಗೆ ನಿಷ್ಠರಾಗಿದ್ದು ಸಾಮಂತತನದಲ್ಲಿದ್ದ ಅಜ್ಞಾತರಾಗಿದ್ದ ಈ ಮನೆತನ ದಾಯಾದಿಗಳ ಜಗಳದಿಂದಲೂ ಹಾಗೂ ತಮ್ಮ ಸ್ವಂತ ಪರಾಕ್ರಮದಿಂದಲೂ ಏಳಿಗೆ ಹೊಂದಿ ತಮ್ಮ ಮೂಲ ನೆಲೆಯಾದ ಬನವಾಸಿಯ ಭೌಗೋಳಿಕ ಪರಿಸರದಂತೆಯೇ ಇದ್ದ ಬಯಲ್ನಾಡನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು.

ಬಯಲುನಾಡ ಕದಂಬರ ಬಗ್ಗೆ ಮೊಟ್ಟಮೊದಲ ಬಾರಿಗೆ ಬೆಳಕನ್ನು ಚೆಲ್ಲಿದವರೆಂದರೆ ಶ್ರೀಯುತ ಬಿ.ಎಲ್. ರೈಸ್‌ರವರು. ತಮ್ಮ ಎಪಿಗ್ರಾಫಿಯಾ ಕರ್ನಾಟಕ ಸಂಪುಟ ಶ್ರೇಣಿಯಲ್ಲಿ ಹೆಗ್ಗಡದೇವನಕೋಟೆ ತಾಲ್ಲೂಕಿನ ಶಾಸನಗಳನ್ನೂ ಒಳಗೊಂಡಂತೆ ನಾಲ್ಕನೆಯ ಸಂಪುಟವಾದ ಮೈಸೂರು ಡಿಸ್ಟ್ರಿಕ್ಟಿನ ಶಾಸನಗಳನ್ನು[೧೪] ಸಂಪಾದಿಸಿ ಪ್ರಕಟಿಸುವಾಗ ಅದರ ಮುನ್ನುಡಿಯಲ್ಲಿ ರೈಸ್‌ರವರು ಬಯಲುನಾಡು ಕದಂಬರನ್ನು ಇತಿಹಾಸ ಪ್ರಪಂಚಕ್ಕೆ ಪರಿಚಯಿಸಿದರು. ರೈಸ್‌ರವರು ಗುರುತಿಸಿರುವಂತೆ ಬಯಲುನಾಡ ಕದಂಬರ ದೊರೆಗಳೆಂದರೆ

೧. ರವಿಯಮ್ಮರಸ (ರವಿವರ್ಮ) – ಕ್ರಿ.ಶ. ೯೯೮.

೨. ಕನ್ದವರ್ಮ್ಮ (ಸ್ಕನ್ದವರ್ಮ) – ಕ್ರಿ.ಶ. ೧೦೭೯.

೩. ಸಿವ . . . . – ಕ್ರಿ.ಶ. ೧೦೮೩

೪. ಕಂಠೀರವ – ಕ್ರಿ.ಶ. ೧೦೯೦.

೫. ಇರವಿಚಲ್ಲಮ್ಮ – ಕ್ರಿ.ಶ. ೧೧೦೭.

೬. ಮುಕ್ಕಣ್ಣ – ಕ್ರಿ.ಶ. ೧೧೩೮.

ಆದರೆ ರೈಸ್‌ರವರ ಶಾಸನ ಸಂಪುಟದಲ್ಲಿ ಅಲ್ಲಲ್ಲಿ ಕೆಲವು ತಪ್ಪುಗಳು ನುಸುಳಿದ್ದವು. ಮೈಸೂರು ವಿಶ್ವವಿದ್ಯಾಲಯದ ವತಿಯಿಂದ ಶಾಸನ ಸಂಪುಟಗಳ ಪರಿಷ್ಕಾರ ನಡೆದ ಸಂದರ್ಭದಲ್ಲಿ ಶ್ರೀಯುತ ಬಾ.ರಾ. ಗೋಪಾಲ್‌ರವರು ಆ ಕೆಲವು ತಪ್ಪುಗಳನ್ನು ಸರಿಪಡಿಸಿ ಸಾಧಾರವಾಗಿ ಬಯಲ್ನಾಡ ಕದಂಬರ ಹೆಸರುಗಳನ್ನು ಪರಿಷ್ಕರಿಸಿದರು. ಈ ಪರಿಷ್ಕೃತ ಶಾಸನ ಸಂಪುಟದ[೧೫] ಹಿನ್ನೆಲೆಯಲ್ಲಿ ಕಂಡುಬರುವ ಬಯಲುನಾಡು ಕದಂಬರ ದೊರೆಗಳೆಂದರೆ.

೧. ಚಾಗಿ

೨. ಉರವಿಯಮ್ಮರಸ–ಕ್ರಿ.ಶ. ೯೯೮

೩. ಈಕರವರ್ಮ–ಕ್ರಿ.ಶ. ೧೦೭೯

೪. ಇರವಿಚಲ್ಲಮ್ಮ – ಕ್ರಿ.ಶ ೧೧೦೭

ಆದರೆ ಈ ಪಟ್ಟಿಯಲ್ಲಿರುವ ಉರವಿಯಮ್ಮರಸ ಎಂಬ ಹೆಸರು ರೈಸ್‌ರವರು ಊಹಿಸಿರುವಂತೆ ರವಿಯಮ್ಮರಸನೇ ಹೊರತು ಉರವಿಯಮ್ಮರಸ ಅಲ್ಲ. ಕಿತ್ತೂರಿನ ೨೬. ೧೧. ೧೦೭೪ ರ ಶಾಸನವು[೪] ಪ್ರಸ್ಥಾಪಿಸುವ ರವಿಯಮೇಶ್ವರ ದೇವಾಲಯವು ಇದೇ ದೊರೆಯ ಸ್ಮಾರಕವಾಗಿ ನಿರ್ಮಾಣ ಆಗಿರುವುದನ್ನು ನೋಡಿದರೆ ಈ ವಿಷಯ ಸ್ಪಷ್ಟವಾಗುತ್ತದೆ.

ಚಾಗಿ

ಬಯಲ್ನಾಡು ಕದಂಬ ದೊರೆಗಳಲ್ಲಿ ಇದುವರೆಗೂ ನಮಗೆ ತಿಳಿದಿರುವ ಮಾಹಿತಿಯಂತೆ ಕಂಡು ಬರುವ ಮೊದಲ ಅರಸನೆಂದರೆ "ಚಾಗಿ" ೧೦ ನೆಯ ಶತಮಾನಕ್ಕೆ ಸೇರಿದ ಮಳಲಿಯ ಶಾಸನವು[೨] ಚಾಗಿಯು ಬಯಲ್ನಾಡನ್ನು ಆಳುತ್ತಿದ್ದುದಕ್ಕೆ ಸ್ಪಷ್ಟವಾದ ಆಧಾರವಾಗಿದೆ. ಈ ಶಾಸನದಲ್ಲಿ ಚಾಗಿಯನ್ನು ನಿರ್ಭಯ ರಾಮ, ಬಿಲ್ಲ ಬಲ್ಲಾತಂ, ಕಡಂಬ ಕಂಟೀರ ಎಂಬ ಬಿರುದುಗಳಿಂದ ಹೊಗಳಲಾಗಿದೆ. ಬಯಲ್ನಾಡು ಕದಂಬರ ಪರವಾಗಿ ಮಣಿಲಿಯ [ಇಂದಿನ ಮಳಲಿ] ಸತ್ತಿಯಾರಮಣನು ಕಟಾರಿ ಕಾಳಗವೊಂದರಲ್ಲಿ ಭಾಗವಹಿಸಿ ಹೋರಾಡಿ ಜಯ ಸಂಪಾದಿಸಿದ ಸಂಗತಿ ಈ ಶಾಸನದಿಂದ ನಾವು ತಿಳಿಯಬಹುದಾಗಿದೆ. ಅದಕ್ಕಾಗಿ ಈತನಿಗೆ ಇನ್ನೂರು ಬತ್ತದ ಪ್ರಮಾಣದ ಭೂಮಿಯನ್ನು ಬಯಲ್ನಾಡು ಕದಂಬ ದೊರೆ ಚಾಗಿಯು ನೀಡಿದನು.

ರವಿಯಮ್ಮರಸ

ಈತನನ್ನು ರೈಸ್‌ರವರು ರವಿಯಮ್ಮರಸ ಅಥವ ರವಿವರ್ಮ ಎಂದು ಗುರುತಿಸಿದ್ದರು. ಆದರೆ ಈತನ ಹೆಸರು ಉರವಿಯಮ್ಮರಸ ಎಂದು ಬಾ.ರಾ. ಗೋಪಾಲ್‌ರವರು ತೀರ್ಮಾನಿಸಿದ್ದಾರಾದರೂ ರೈಸ್‌ರವರು ಹೇಳುವ ರವಿಯಮ್ಮರಸನೇ ಸರಿ ಎಂದು ತೋರುತ್ತದೆ. ಮಗ್ಗೆಯಲ್ಲಿರುವ ಶಾಸನದ[೮] ನಾಲ್ಕನೆಯ ಸಾಲಿನ ಕೊನೆಯ ಅಕ್ಷರವನ್ನು ಉ ಎನ್ನದೆ ಲು ಎಂದು ಓದಿಕೊಂಡರೆ ಸರಿಯಾಗುತ್ತದೆ ಎಂದು ತೋರುತ್ತದೆ. [ಸ್ವಸ್ತಿ ಶ್ರೀಮತು ಸಖವರಿಷ ೯೨೯ ವಿಳಾಂಬಿಚ ಸಂವತ್ಸರದ ಉ(ಲು) ರವಿಯ್ಯಮ್ಮರಸನಾದ ರಾಜಾಧಿರಾಜ ಬೇರಂ ಬಯಲ್ನಾಡ ರಾಜ್ಯಂಗೆಯ್ವನ್ದು]. ಈ ಶಾಸನದಲ್ಲಿ ಓದಲಾಗಿರುವ ಕಾಲ ಶಕವರುಷ ೯೨೯ ಆದರೂ ವಿಳಂಬ ಸಂವತ್ಸರ ಈ ವರುಷಕ್ಕೆ ಹೊಂದಿಕೆಯಾಗದೇ ಶಕವರುಷ ೯೨೦ಕ್ಕೆ ಸರಿಯಾಗುತ್ತದೆ. ಹಾಗಾಗಿ ರವಿಯಮ್ಮರಸನ ಕಾಲವನ್ನು ಕ್ರಿ.ಶ. ೯೯೮ ಎಂದು ತಿಳಿಯಬೇಕಾಗುತ್ತದೆ. ಈತ ಚಾಗಿಗೆ ಯಾವ ರೀತಿ ಸಂಬಂಧಿ ಎಂದು ತಿಳಿದು ಬರುವುದಿಲ್ಲವಾದರೂ ಬಹುಶಃ ಚಾಗಿಯ ಮಗನಾಗಿರಬಹುದಾದ ಸಾಧ್ಯತೆಯನ್ನು ಊಹಿಸಬಹುದಾಗಿದೆ.

ಮಗ್ಗೆಯಲ್ಲಿರುವ ವೀರಗಲ್ಲೊಂದು ಅಪರೂಪದ ವಿಷಯವನ್ನು ಪ್ರಸ್ತಾಪ ಮಾಡುತ್ತದೆ. ಕೆಲವು ಅಕ್ಷರಗಳು ತೃಟಿತಗೊಂಡು ಸ್ವಲ್ಪ ಗೊಂದಲವನ್ನು ಉಂಟು ಮಾಡುವ ಈ ಶಾಸನದಿಂದ ನಾವು ತಿಳಿಯಬಹುದಾದ ಮಾಹಿತಿ ಯೆಂದರೆ ರಾಜಾಧಿರಾಜನಾದ ರವಿಯಮ್ಮರಸನು ವೀರ ಬಯಲ್ನಾಡನ್ನು ಆಳುತ್ತಿದ್ದ ಸಂದರ್ಭದಲ್ಲಿ ಕೊಂಗುನಿಯ ಹೆಗ್ಗಡೆ ಒಂದು ಕೊಡೆಯ ಭೋಗವನ್ನು ಕೊಡು ಎಂದು ಕೇಳಿದನು ಅಂದರೆ ಏಕಛತ್ರಾಪತ್ಯವನ್ನು ಎಂದು ಅರ್ಥ. ಅಂದರೆ ಈ ನಾಡಿನ ಆಡಳಿತವನ್ನು ನನಗೆ ಬಿಟ್ಟು ಕೊಟ್ಟು ಶರಣಾಗತನಾಗು ಎಂದು ತಿಳಿಯಬಹುದಾಗಿದೆ.

ಇದಕ್ಕೆ ಮಣಿಯದ ರವಿಯಮ್ಮರಸನ ವಿರುದ್ಧವಾಗಿ ೩೦೦ ಜನ ಪ್ರಮುಖರನ್ನು ಕರೆದುಕೊಂಡು ಕೊಂಗುನಿಯ ಅಥವಾ ಕೊಂಗುನಾಡಿನ ಅಧಿಪತಿ ಯುದ್ಧಕ್ಕೆ ಬಂದನು. ಈ ಯುದ್ಧದಲ್ಲಿ ಬಯಲುನಾಡಿನ ಅರಸನಿಗೆ ಗೆಲುವಾಯಿತು. ಆದರೆ ಈ ಯುದ್ಧದಲ್ಲಿ ರವಿಯಮ್ಮರಸನ ಪರವಾಗಿ ಹೋರಾಡಿದ ಮಗ್ಗೆಯ ಪೆಲ್ವಾವ್ವನು ಅಸುನೀಗಿದನು. ನಿರಂತರ ಯುದ್ಧಗಳಲ್ಲಿ ತೊಡಗಿದ್ದ ಬಯಲ್ನಾಡಿನ ಅರಸರು ಯಾರಿಗೂ ಬಯಲ್ನಾಡನ್ನು ಬಿಟ್ಟುಕೊಡದೇ ಬೀರಬಯಲ್ನಾಡು ಎಂಬ ಹೆಸರನ್ನು ಪಡೆದಿದ್ದರು ಎಂದು ರವಿಯಮ್ಮರಸನ ಈ ಶಾಸನದಿಂದ ತಿಳಿಯಬಹುದಾಗಿದೆ.

ಈಕರವರ್ಮ್ಮ

ಬಯಲುನಾಡಿನ ದೊರೆಗಳನ್ನು ಅತ್ಯಂತ ಪರಾಕ್ರಮ ಶಾಲಿಯೂ ಅನೇಕರೀತಿಯ ಬಿರುದುಗಳನ್ನು ಪಡೆದಿದ್ದವನೂ, ಪಂಡಿತನೂ ಆಗಿದ್ದ ಅರಸನೆಂದರೆ ಈಕರವರ್ಮ್ಮ. ರೈಸ್ ರವರು ಈತನ ಹೆಸರನ್ನು ಕನ್ದವರ್ಮ್ಮ ಅಥವಾ ಸ್ಕಂನ್ದವರ್ಮ್ಮ ಎಂದು ಗ್ರಹಿಸುತ್ತಿದ್ದರು. ಕಿತ್ತೂರಿನ ರಾಮೇಶ್ವರ ದೇವಾಲಯದ ಮುಂದೆ ನೆಟ್ಟಿರುವ ಶಾಸನವು ಈ ವಂಶದ ಅತ್ಯುನ್ನತ ದಾಖಲೆಯೆಂದು ತೋರುತ್ತದೆ. ಈ ಶಾಸನವು[೯]

"ಸ್ವಸ್ತಿ ಸಮಧಿಗತ ಪಜ್ಚ ಮಹಾತಬ್ದ ಮಹಾಮಣ್ಡಳೇಶ್ವರ ವೀರಮಹೇಶ್ವರ ಕದನ ತ್ರಿಣೇತ್ರ ಮಲೆತರಾದಿತ್ಯ ಕದಂಬ ಕಂಠೀರವಂ ವಯಿಕಳಾನಳಂ ಸತ್ಯರಾಧೇಯಂ ಸಾಹಸೋತ್ತುಜ್ಗಂ ನಿರ್ಭಯ ರಾಮ ನಾತಿಸಾಸ್ತ್ರಾಗಮದಾನ ವಿನೋದಂ ಧರ್ಮ ಸಂಗತ್ಯ ದುಷ್ಟನಿಷ್ಠೂರ ನಿಷ್ಟಜನವತ್ಸಳ ಶ್ರೀ ವಿಷ್ಣುಪದಸೇತಿಕರಂ ಬನವಾಸಿ ವಿಷಯಾಧೇಶ್ವರಭಕ್ತಂ ಮಹೇಶ್ವರ ಭಕ್ತಂ ಶ್ರೀ ಮನ್ಮಹಾಮಣ್ಡಳೇಶ್ವರ ರಾಜಾಧಿರಾಜ ಬೀರೆ ಬಯಲ್ನಾಡ ನಾಡ ಈಕರವರ್ಮ್ಮಂ ಬಯಲ್ನಾಡಯ್ಯು ಮುನ್ನೂರು ಮನೇಕ ರಾಜ್ಯಂಗೆಯ್ಯುತ್ತಿರೆ"

ಎಂದು ದಾಖಲಿಸಿರುವುದನ್ನು ನೋಡಿದರೆ ಬಯಲ್ನಾಡು ಕದಂಬರು ಬನವಾಸಿಯನ್ನು ತೊರೆದು ಬಂದು

ನಾಲ್ಕು ಶತಮಾನಗಳೇ ಕಳೆದಿದ್ದರೂ ಬನವಾಸಿ ದೇಶದಿಂದ ಬಹುದೂರ ಇದ್ದರೂ ತಮ್ಮನ್ನು ತಾವು ಬನವಾಸಿ ವಿಷಯಾಧೀಶ್ವರರು ಎಂದು ಕರೆದುಕೊಳ್ಳುತ್ತಿದ್ದರು ಎಂಬ ಅಂಶ ಮುಖ್ಯವಾಗುತ್ತದೆ. ಇಡೀ ಶಾಸನದ ತುಂಬಾ ಇವರು ಕದನತ್ರಿನೇತ್ರ, ವೀರಮಹೇಶ್ವರ ಮಹೇಶ್ವರ ಭಕ್ತೆ ಎಂಬ ಶೈವಪರವಾದ ಮಾತುಗಳನ್ನು ಆಡಿಯೂ ಶ್ರೀ ವಿಷ್ಣು ಪದಸೇವಕ ಎಂಬ ವೈಷ್ಣವ ಪರವಾದ ಮಾತುಗಳನ್ನು ಆಡಿದ್ದಾರೆ.

ಕಿತ್ತೂರಿನ ಈ ಶಾಸನ ತಿಳಿಸುವ ಅತ್ಯಂತ ಮಹತ್ತ್ವದ ಸಂಗತಿಯೆಂದರೆ ಈ ಶಾಸನ ಕಾಲದಲ್ಲಿ ಎಂದರೆ ೨೪. ೧೧. ೧೦೭೮ ರ ಹೊತ್ತಿಗೆ ಬಯಲುನಾಡು ಕದಂಬರು ಬಯಲಾಡಯ್ದು ಮುನ್ನೂರು ಎಂದರೆ ಮುನ್ನೂರು ಪ್ರಾಂತ್ಯಗಳ ೫ ನಾಡನ್ನು ಎಂದರೆ "ಬಯಲುನಾಡು ಸಾವಿರದಯ್ನೂರು"ನ್ನು ಆಳುತ್ತಿದ್ದರು.

ಈ ಬಯಲುನಾಡಯ್ದು ಮುನ್ನೂರು ಎಂದರೆ ಮುನ್ನೂರು ಗ್ರಾಮಗಳ ಆಡಳಿತದ ಕೇಂದ್ರವಿರುವ ಐದು ನಾಡುಗಳು ಯಾವುವು ಎಂದು ಶಾಸನಗಳಲ್ಲಿ ಖಚಿತ ಮಾಹಿತಿಯಿಲ್ಲವಾದರೂ ಇದೇ ಶಾಸನದ ಆಂತರ್ಯದಲ್ಲಿ ಇರುವ ಮಾಹಿತಿಯನ್ನು ಆಧರಿಸಿ ಸಾಧಾರವಾದ ಒಂದು ಊಹೆಯನ್ನು ಮಾಡಬಹುದು. ಕೇರಳನಾಡು, ಪುನ್ನಾಡು, ನಿಡುಳೆನಾಡು, ಕಾದವಮ್ಮನಾಡು ಮತ್ತು ಕಿಕ್ಕಿನಾಡುಗಳನ್ನು ಪ್ರಸ್ತುತ ಶಾಸನವು ಪ್ರಸ್ಥಾಪಿಸುತ್ತದೆ. ಈಕರವರ್ಮ್ಮನ ತಂದೆಯೋ ಅಥವಾ ತಾತನೋ ಆಗಿರಬಹುದಾದ ರವಿಯಮ್ಮರಸನ ಹೆಸರಿನಲ್ಲಿ ರವಿಯಮ್ಮೇಶ್ವರ ದೇವಾಲಯವನ್ನು ನಿರ್ಮಿಸಿದ ಸಂದರ್ಭದಲ್ಲಿ ಅನೇಕ ದಾನ ಧರ್ಮಗಳನ್ನು ಮಾಡಿದ ಸಂದರ್ಭದಲ್ಲಿ ಈ ಐವರು ನಾಡವರನ್ನು ನಾಡಪ್ರಮುಖರನ್ನು ಪ್ರಸ್ಥಾಪಿಸಿರುವುದೇ ಈ ಊಹೆಗೆ ಮುಖ್ಯವಾದ ಕಾರಣವಾಗಿದೆ. ಈಕರವರ್ಮ್ಮನು ಈ ಐದು ನಾಡುಗಳ ಆಡಳಿತವನ್ನು ಪುನ್ನಾಡಿನ ಅಧಿಕಾರಿಗೆ ವಹಿಸಿದ್ದ ಸಂಗತಿಯನ್ನು ಇದರಿಂದ ತಿಳಿಯಬಹುದು.

ಈಕರವರ್ಮ್ಮನು ರವಿಯಮ್ಮರಸನ ಮಗನೆಂದು ಹೇಳಲು ಇಬ್ಬರ ಶಾಸನಗಳ ನಡುವೆ ಎಂಟು ದಶಕಗಳಷ್ಟು ಅಂತರವಿದೆ. ಆದರೆ ಈಕರವರ್ಮ್ಮನು ಕಿತ್ತೂರಾದ ಅನನ್ತ ಕೀರ್ತಿ ಮಹಾನಗರಪುರದ ರಾಜಸ್ತಾನದಲ್ಲಿದ್ದ ರವಿಯಮ್ಮೇಶ್ವರ ದೇವರಿಗೆ ದಾನ ನೀಡಿದ ಸಂಗತಿಯನ್ನು ತಿಳಿಸುತ್ತದೆ. ಇದು ದೇವಾಲಯ ನಿರ್ಮಾಣವನ್ನು ತಿಳಿಸುವುದಿಲ್ಲವಾದರೂ ದಾನವನ್ನು ಉಲ್ಲೇಖಿಸುತ್ತದೆ. ಹಾಗಾಗಿ ರವಿಯಮ್ಮರಸನ ಹೆಸರಿನಲ್ಲೇ ಈ ದೇವಾಲಯವನ್ನು ನಿರ್ಮಿಸಿರುವುದು ಖಚಿತವಾಗಿ ಕಂಡುಬರುತ್ತದೆ. ಇದರಂತೆ ಈ ದೇವಾಲಯಕ್ಕೆ ಕಿತ್ತೂರು ೧೨ ಕ್ಕೆ ಸೇರಿದ್ದ ಮಟಿರೆಯ ಗಾವುಂಡ ಒಂದು ಸಿದ್ದಾಂತವನ್ನು, ಕಿತ್ತೂರು, ಮುಟ್ಟಿಗೆ, ಕಡಲೆ, ಜಯಪುರ, ಪೊಸವೊಟಿಲು, ಕಡವಲಗಳಿಂದ ಪುದುವಟ್ಟುಗಳನ್ನು ಸಂಗ್ರಹಿಸಲಾಯಿತು. ಈ ಸಂದರ್ಭದಲ್ಲಿ ಸಾಕ್ಷಿಗಳಾಗಿದ್ದ ಪ್ರಮುಖರೆಂದರೆ ಸರಗೂರಿನ ಗಾಮುಂಡ ಮಳೆಯೂರಿನ ಗಾಮುಂಡ, ಕಿತ್ತಡಿಯೂರ ಪೆರ್ಮ್ಮಾಡಿಗಾವುಂಡ, ಸಾಗರೆಯ ಗಾವುಂಡ, ಹದಗರ ಗಾವುಂಡ, ಕುನ್ದತೂರ ನಾಡಾಳ್ವ ಬೆಂಗೆಯೂರ ಪೆರ್ಮ್ಮಾಡಿ ಗಾವುಂಡ, ಕೋಟೆಯ ರಾಚಮಲ್ಲ ಗಾವುಂಡ.

ಇರವಿಚಲ್ಲಮ್ಮ

ಕ್ರಿ.ಶ. ೧೦೭೮ ರ ಈಕರವರ್ಮ್ಮನ ಶಾಸನದ ನಂತರ ಉಲ್ಲೇಖಗೊಳ್ಳುವ ಬಯಲುನಾಡು ಕದಂಬ ದೊರೆ ಇರವಿಚಲ್ಲಮ್ಮ. ಈತನನ್ನು ಉಲ್ಲೇಖಿಸುವ ಸೋಗಳ್ಳಿಯ ವೀರಗಲ್ಲು[೨೦] ಶಾಸನದ ಕಾಲ ಕ್ರಿ.ಶ. ೧೧೦೭. ಇರವಿಚಲ್ಲಮ್ಮನು ಬೀರಬಯಲ್ನಾಡನ್ನು ಆಳುತ್ತಿದ್ದಾಗ ಪೊಸವೊಳಲಿನ ಗಾವುಂಡನಾಗಿದ್ದವನು ಜಕ್ಕಯ್ಯ. ಬಂಕಿಯರಸನ ಕಡೆಯ ಹರಿಯ ಎನ್ನುವವನು ಪೊಸವೊಳಲು, ಸೋಗೆಪಳ್ಳಿಯ ಮೇಲೆ ದಾಳಿ ಮಾಡಿ ಹಸುಗಳನ್ನು ಸೆರೆಯಿಂದ ಬಿಡಿಸಿ ಕಾದು ಸತ್ತನು. ಈ ಯುದ್ಧದ ಪ್ರಮುಖವಾದ ಸಂಗತಿಯೆಂದರೆ ಯುದ್ಧದಲ್ಲಿ ನೂರು ಕುದುರೆ ಸಾವಿರದ ಆರುನೂರು ಜನ ಭಾಗವಹಿಸಿದ್ದರು.

ಇರವಿಚಲ್ಲಮ್ಮನ ಕಾಲಕ್ಕಾಗಲೇ ಹೊಯ್ಸಳರು ಪ್ರವರ್ಧಮಾನರಾಗಿದ್ದರು. ಬಯಲುನಾಡನ್ನು ಗೆಲ್ಲಲು ಹೊಯ್ಸಳರು ನಿರಂತರ ಪ್ರಯತ್ನಶೀಲರಾಗಿದ್ದರು. ಹೊಯ್ಸಳ ದೊರೆ ಎರೆಯಂಗ [ಕ್ರಿ. ಶ. ೧೦೯೮–೧೧೦೨] ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನ ದಬ್ಬೆ ಅಗ್ರಹಾರದ ಶಾಸನವು [೨೧] ಹೊಯ್ಸಳರ ಗಡಿಯನ್ನು ಹೇಳುವಾಗ ಬಯಲುನಾಡನ್ನು ಕೂಡ ಗೆದ್ದಿರುವುದಾಗಿ ತಿಳಿಸುತ್ತದೆ. ಈ ಶಾಸನದ ಕಾಲ ಕ್ರಿ ಶ. ೧೧೦೦ ರ ಹಾಗೂ ಚಿಕ್ಕಮಗಳೂರು ಜಿಲ್ಲೆ ಹಾಗೂ ತಾಲ್ಲೂಕಿಗೆ ಸೇರಿದ ೧೨.೧೦.೧೧೦೩ ರ ಸಿಂಧಗಿರಿ ಯಲ್ಲಿರುವ ಒಂದನೆಯ ಬಲ್ಲಾಳನಿಗೆ ಸೇರಿದ ಶಾಸನವೂ[೨೨] ಸಹ ಹೊಯ್ಸಳರ ಗಡಿಯ ವಿಷಯ ಬಂದಾಗ ಬಯಲ್ನಾಡನ್ನು ಗೆದ್ದಿರುವುದಾಗಿ ತಿಳಿಸಿದೆ. ಕ್ರಿಶ. ೧೧೦೩ರಲ್ಲಿ ಹೊಯ್ಸಳ ಬಲ್ಲಾಳನಿಗೆ ಸೇರಿದ್ದ ಬಯಲುನಾಡನ್ನು ಕ್ರಿ.ಶ. ೧೧೦೭ರ ಹೊತ್ತಿಗಾಗಲೇ ಬಯಲ್ನಾಡು ಕದಂಬರು ಗೆದ್ದಿದ್ದರು. ಈ ಗೆಲುವಿನಲ್ಲಿ ಇರವಿಚಲ್ಲಮ್ಮನ ಪಾತ್ರ ಹಿರಿದಾಗಿದೆ ಎಂದೆನಿಸುತ್ತದೆ. ಹಾಗಾಗಿ ಈ ಕಾಲದಲ್ಲಿ ನಡೆದ ಯುದ್ಧಗಳಲ್ಲಿ ಮಡಿದ ಅನೇಕರ ವೀರಗಲ್ಲುಗಳು ಈ ಪ್ರಾಂತ್ಯದಲ್ಲಿವೆ. ಹೊಯ್ಸಳರು ತಮ್ಮ ಶಾಸನಗಳಲ್ಲಿ

ಬಯಲುನಾಡನ್ನು ಗೆದ್ದ ಸಂಗತಿಯನ್ನು ಮುನ್ನಲೆಗೆ ತಂದಿರುವುದು ಇತಿಹಾಸದಲ್ಲಿ ದಾಖಲಾಗಿರುವಂತೆ ಅಷ್ಟೇ ವೇಗವಾಗಿ ಅದನ್ನು ಕಳೆದುಕೊಳ್ಳುತ್ತಿದ್ದರು ಎಂಬ ಸಂಗತಿ ದಾಖಲಾಗಿಲ್ಲ.

ಮುಕ್ಕಣ್ಣ ಕದಂಬ

ಸುಮಾರು ೧೧ನೆಯ ಶತಮಾನಕ್ಕೆ ಸೇರಿದ ಬಯಲ್ನಾಡು ಕದಂಬರಿಗೆ ಸೇರಿದ ಶಾಸನವೊಂದು[೨೩] ಮಳಲಿಯಲ್ಲಿದ್ದು ಇದರಲ್ಲಿ ರಾಜನ ಹೆಸರು ತೃಟಿತವಾಗಿದೆ. ಈ ಶಾಸನ ಅತ್ಯಂತ ಮಹತ್ತ್ವದ ವಿಷಯವೊಂದನ್ನು ತಿಳಿಸುತ್ತದೆ. ಈ ಶಾಸನದ ಪ್ರಕಾರ ಬಯಲ್ನಾಡ ಕದಂಬರು ಸಿಂಹಲಾಂಛನವನ್ನು ಉಳ್ಳವರಾಗಿದ್ದಾರೆ. ಈ ಶಾಸನದಲ್ಲಿ ಬರುವ ಕಂಠೀರವವನ್ನು, ಕಂಠೀರವ ಎಂಬುವವನೊಬ್ಬ ಅರಸನೆಂದೂ ಆತನ ಕಾಲ ಸುಮಾರು ಕ್ರಿ.ಶ. ೧೦೯೦ ಎಂದೂ ಬಿ.ಎಲ್. ರೈಸ್‌ರವರು ಗುರುತಿಸಿದ್ದರು. ಚಿದ್ದು ಚಿದು ಕಂಠೀರವ ಎಂದು ಅವರು ಓದಿದ್ದರು. ಆದರೆ ಬಾ. ರಾ. ಗೋಪಾಲ್‌ರವರ ಪರಿಷ್ಕೃತ ಪಾಠದನ್ವಯ ಇದೊಂದು ಬಿರುದೇ ಹೊರತು ವ್ಯಕ್ತಿಯ ಹೆಸರಲ್ಲ ಎಂದಾಯಿತು. ಹಾಗೆಯೇ ರೈಸ್‌ರವರು ಮಳಲಿಯ ಶಾಸನದಲ್ಲಿ ಬರುವ ಹೆಸರನ್ನು ಕದಂಬ ಕಣ್ಠೀರ ಎಂದಿರುವುದನ್ನೇ ಗಮನಿಸಿ ಈತನ ಹೆಸರನ್ನು ಕಂಠೀರವ ಎಂದು ಗುರುತಿಸಿದ್ದರು ಎಂದೆನಿಸುತ್ತದೆ. ಆದರೆ ಕದಂಬ ಕಣ್ಠೀರ ಎಂಬುದು ಬಯಲುನಾಡಿನ ದೊರೆ ಚಾಗಿಗೆ ಇದ್ದ ಬಿರುದು ಎಂದು ದೃಢವಾಗಿದೆ.

ರೈಸ್‌ರವರ ಪಾಠದಲ್ಲಿದ್ದ ಹಲವಾರು ನ್ಯೂನ್ಯತೆಗಳು ಪರಿಷ್ಕರಣದಲ್ಲಿ ಬರಲಾದ ಕಾರಣ ನಮಗೆ ಬಯಲುನಾಡಿನ ಕದಂಬರ ಹೆಸರುಗಳಲ್ಲಿದ್ದ ಗೊಂದಲ ಕಡಿಮೆಯಾಯಿತು. ನಮಗೆ ಇದುವರೆಗೆ ಕಂಡುಬಂದಿರುವಂತೆ ಬಯಲ್ನಾಡು ಕದಂಬರಿಗೆ ಸಂಬಂಧಿಸಿದಂತೆ ದೊರೆತಿರುವ ಕೊನೆಯ ಶಾಸನವೆಂದರೆ ಕ್ರಿ.ಶ. ೨೫.೧೧.೧೧೩೭ಕ್ಕೆ ಸೇರಿದ್ದ ನರಸೀಪುರದ ಶಾಸನ[೨೪] ಇದು ಐತಿಹಾಸಿಕವಾಗಿ ಮುಖ್ಯವಾದ ಶಾಸನ. ದುರದೃಷ್ಟವಶಾತ್ ಈ ಶಾಸನದಲ್ಲಿ ಸರಿಯಾಗಿ ಬಯಲ್ನಾಡು ಕದಂಬ ದೊರೆಯ ಹೆಸರು ಇರುವ ಜಾಗವೇ ತೃಟಿತವಾಗಿದೆ. ಆದರೆ ಆತನ ಬಿರುದು ಮಾತ್ರ ಮುಕ್ಕಣ್ಣ ಕದಂಬ ಎಂಬುದಾಗಿದೆ. ಈ ಕಾಲಕ್ಕಾಗಲೇ ಹೊಯ್ಸಳ ವಿಷ್ಣುವರ್ಧನನು ಬಯಲುನಾಡಿನ ಕದಂಬರನ್ನು ಧ್ವಂಸ ಗೊಳಿಸಿದ್ದರಿಂದ ಅವರ ಆಡಳಿತ ಕೊನೆಯಾಗಿತ್ತು. ಆದರೆ ಇದುವರೆಗೆ ತಮ್ಮನ್ನು ತಾವು ಬನವಾಸಿ ಪುರವರಾಧೀಶ್ವರರು ಎಂದು ಬಣ್ಣಿಸಿಕೊಳ್ಳುತ್ತಿದ್ದ ಇವರು ಬಹುಶಃ ಹೊಯ್ಸಳರಿಗೆ ಅಧೀನರಾಗಿ ಕೆಲಕಾಲ ಆಳ್ವಿಕೆ ಮುಂದುವರೆಸಿದಂತೆ ಕಂಡು ಬರುತ್ತದೆ. ಅದೇ ಕಾರಣ ಪ್ರಸ್ತುತ ಶಾಸನದಲ್ಲಿ ತಮ್ಮನ್ನು ತಾವು ದ್ವಾರಾವತೀ ಪುರವರಾಧೀಶ್ವರರು ಎಂದು ಕರೆದುಕೊಂಡಿದ್ದಾರೆ.

ಹೊಯ್ಸಳರು–ಬಯಲುನಾಡ ಕದಂಬರು

ಬಯಲುನಾಡು ಕದಂಬರು ಈಗಾಗಲೇ ತಿಳಿದಿರುವಂತೆ ಅತ್ಯಂತ ಪರಾಕ್ರಮಿಯಾದ ಅರಸರು. ಚೋಳರು ಬಯಲುನಾಡಿಗೆ ಕಾಲಿಡದಂತೆ ತಡೆಯಲು ಸಮರ್ಥರಾದವರು. ಆದರೆ ಹೊಯ್ಸಳ ದೊರೆಗಳ ಪರಾಕ್ರಮಕ್ಕೆ ಸರಿಸಾಟಿಯಾಗಿ ನಿಂತು ಹೋರಾಟ ಮಾಡಿದ ಕೆಲವೇ ಅರಸರಲ್ಲಿ ಪ್ರಮುಖರು. ಹೊಯ್ಸಳರು ಮೇಲಿಂದ ಮೇಲೆ ಬಯಲುನಾಡಿಗೆ ಬಂದು ಅದನ್ನು ಗೆದ್ದು ಮರಳುವಷ್ಟರಲ್ಲಿ ಮತ್ತೆ ಬಯಲುನಾಡ ಕದಂಬರು ಅಲ್ಲಿ ಪ್ರತಿಷ್ಠಿತರಾಗಿರುತ್ತಿದ್ದರು. ಹಾಗಾದರೆ ಹೊಯ್ಸಳರಿಗೆ ಬಯಲುನಾಡಿನ ಮೇಲಿನ ಹಿಡಿತದ ಅವಶ್ಯಕತೆಯಾದರೂ ಏನಿತ್ತು ಎಂಬ ಪ್ರಶ್ನೆ ಮೂಡುತ್ತದೆ. ಆ ಕಾಲದಲ್ಲಿ ಹೊಯ್ಸಳರು ಸಮುದ್ರದ ಮೂಲಕ ವ್ಯಾಪಾರ ನಡೆಸಿದರೆ ಹೆಚ್ಚಿನ ಲಾಭವಿದೆ ಎಂಬ ಅಂಶವನ್ನು ಕಂಡುಕೊಂಡಿದ್ದರು. ಅದಕ್ಕೆ ಸುಸಜ್ಜಿತವಾದ ಬಂದರುಗಳು ಕೇರಳನಾಡಿನಲ್ಲಿ ಅಂತರ್ಗತವಾಗಿತ್ತು. ಕೇರಳನಾಡನ್ನು ತಡೆಯಬೇಕಾದರೆ ಅದಕ್ಕೆ ಮುಖ್ಯವಾದ ದ್ವಾರವೆಂದರೆ ಬಯಲ್ನಾಡೇ ಆಗಿತ್ತು. ಹಾಗಾಗಿ ಅನಿವಾರ್ಯವಾಗಿ ಮತ್ತೆ ಮತ್ತೆ ಬಯಲುನಾಡಿನ ಮೇಲೆ ದಾಳಿ ನಡೆಸುತ್ತಿದ್ದರು. ಮತ್ತು ಬಯಲುನಾಡಿನಲ್ಲಿ ಬೆಳೆಯುತ್ತಿದ್ದ ವ್ಯಾಪಾರೀ ಕೃಷಿ ಪದಾರ್ಥಗಳು ಹಿಂದಿನಿಂದಲೂ ಹೊರನಾಡುಗಳಲ್ಲಿ ಜನಪ್ರಿಯವಾಗಿದ್ದವು. ಫಲವತ್ತಾದ ನದಿಗಳಿಂದ ಕೂಡಿದ ಭೂಮಿ ಇಲ್ಲಿನ ಸಂಪತ್ತಾಗಿತ್ತು. ಅರಣ್ಯೋತ್ಪನ್ನಗಳು ಕೂಡ ಯತೇಚ್ಚವಾಗಿದ್ದವು. ಹಾಗಾಗಿ ಈ ಬಯಲುನಾಡನ್ನು ಮುಟ್ಟಲು ಹೊಯ್ಸಳರು ನಿರಂತರ ಪ್ರಯತ್ನಶೀಲರಾಗಿದ್ದರು.

ಬಯಲ್ನಾಡು ಕದಂಬ ದೊರೆ ಚಾಗಿಯ ಕಾಲ ಸುಮಾರು ಕ್ರಿ.ಶ. ೯೭೫ (೯೬೮)ರ ಸುಮಾರಿಗೆ ರವಿಯಮ್ಮರಸನು ಆಳ್ವಿಕೆ ನಡೆಸುತ್ತಿರುತ್ತಾನೆ. ಇವನ ನಂತರದ ದೊರೆಯನ್ನು ಹೊಯ್ಸಳರು ಸೋಲಿಸಿದ್ದಾರೆ. ಹೊಯ್ಸಳ ದೊರೆ ವಿನಯಾದಿತ್ಯನ ಶಾಸನವೊಂದು[೨೫] ಆತನ ಗಡಿನಾಡನ್ನು ಹೆಸರಿಸುವಾಗ ಬಯಲ್ನಾಡನ್ನೇ ಹೆಸರಿಸುತ್ತದೆ. ಈ ಶಾಸನದ ಕಾಲ ಕ್ರಿ.ಶ. ೧೯.೨.೧೦೪೮ ಆದರೆ ಕ್ರಿ.ಶ. ೨೪.೧೧.೧೦೭೯ ರ ಕಿತ್ತೂರು ಶಾಸನ[೨೬] ತಿಳಿಸುವ ಹಾಗೆ ಆಗ ಬಯಲ್ನಾಡ ಕದಂಬ ದೊರೆ ಈಕರವರ್ಮ್ಮನೇ ಆಳುತ್ತಿರುತ್ತಾನೆ.

ಕ್ರಿ.ಶ. ೧೧೦೦ ರ ದಬ್ಬೆ ಅಗ್ರಹಾರದ ಶಾಸನ[೨೭] ತಿಳಿಸುವಂತೆ ಹೊಯ್ಸಳರ ದೊರೆ ಎರೆಯಂಗ [ಕ್ರಿ.ಶ. ೧೦೯೮–೧೧೦೩] ನ ಕಾಲದಲ್ಲಿ ಮತ್ತು ಕ್ರಿ.ಶ. ೧೧೦೩ರ

ಸಿಂಧಗಿರಿಯ ಶಾಸನದ[೨೮] ಪ್ರಕಾರ ಹೊಯ್ಸಳ ದೊರೆ ಒಂದನೆಯ ಬಲ್ಲಾಳನ [ಕ್ರಿ.ಶ. ೧೧೦೨–೧೧೦೮] ಕಾಲಕ್ಕೆ ಬಯಲುನಾಡು ಹೊಯ್ಸಳರ ಗಡಿನಾಡಾಗಿತ್ತು. ಆದರೆ ಕ್ರಿ.ಶ. ೧೧೦೭ ರಲ್ಲಿ ಬಯಲುನಾಡು ಕದಂಬರ ಆಳ್ವಿಕೆಗೆ ಈ ಪ್ರದೇಶದ ಆಳ್ವಿಕೆ ದಕ್ಕಿತ್ತು. ಈ ಸಮಯದಲ್ಲಿ ಕದಂಬರ ದೊರೆಯಾಗಿದ್ದವನು ಇರವಿಚಲ್ಲಮ್ಮ. ಮೊದಲನೆಯ ಬಲ್ಲಾಳನ ನಂತರ ಹೊಯ್ಸಳರ ಅತೀಮುಖ್ಯ ದೊರೆಯಾದ ವಿಷ್ಣುವರ್ಧನ [ಕ್ರಿ.ಶ. ೧೧೦೮–೧೧೪೧] ನ ಕಾಲದಲ್ಲಿ ಬಯಲ್ನಾಡು ಕದಂಬರು ಸಂಪೂರ್ಣವಾಗಿ ತಮ್ಮ ಅಧಿಕಾರವನ್ನು ಕಳೆದುಕೊಂಡಂತೆ ಕಂಡುಬರುತ್ತದೆ.

ಕ್ರಿ.ಶ. ೧೧೧೬ ರ ಚಾಮರಾಜನಗರ ಶಾಸನ[೨೯] ತಿಳಿಸುವಂತೆ ಹೊಯ್ಸಳ ಚಕ್ರವರ್ತಿ ವಿಷ್ಣುವರ್ಧನನು ತಲಕಾಡು, ಕೊಂಗು ಮತ್ತು ಕೋಳಾಲವನ್ನೊಳಗೊಂಡ ಗಂಗವಾಡಿ ೯೬ ೦೦೦ ವನ್ನು ಆಳುತ್ತಿದ್ದಾಗ ವಿಷ್ಣುವರ್ಧನನ ದಂಡನಾಯಕನಾಗಿದ್ದ ಮಹಾಪರಾಕ್ರಮಿ ಪುಣಿಸಮಯ್ಯನು ನಡೆಸಿದ ದಿಗ್ವಿಜಯಗಳನ್ನು ದಾಖಾಲಿಸುತ್ತದೆ. ಅದರಲ್ಲಿ

"ನೀಳಾದ್ರಿಯಂ ಕೊಣ್ಡು, ತನ್ನೊದವಿಂದಂ ಮಲೆಯಾಳರಂ
ಕದನದೊಳ್ ಬೆಂಕೊಣ್ಡು ತತ್ಸಾಹಸಾಭ್ಯುದೆಯಂ
ಕೈಕೊಳೆ ಕೇರಳಾಧಿಪತಿಯಾಗಿಟ್ಟಿ ಬಯಲ್ನಾಡನಂ ಪದವಿಂ
ಕಾಣಿಸಿ ಕೊಣ್ಡನಿಂತು ಪುಣಿಸಶ್ರೀ ದಂಡನಾದಿಪ" ಎಂದಿದೆ.

ಹಾಗಾಗಿ ಕೇರಳಾಧಿಪತಿಗಳಾಗಿದ್ದ ಬಯಲ್ನಾಡು ಕದಂಬರನ್ನು ಗೆದ್ದದ್ದು ಪುಣಿಸಮಯ್ಯನ ಸಾಧನೆಗಳಲ್ಲಿ ಒಂದು ಎಂದಾದರೆ ಇವರ ವಿಶೇಷತೆಯೆಷ್ಟಿರಬೇಕು ಎಂದು ಚಿಂತಿಸಬೇಕಾಗುತ್ತದೆ. ಆದರೆ ಇದಾದ ಕೆಲವೇ ವರ್ಷಗಳಲ್ಲಿ ಇಲ್ಲಿ ಮತ್ತೆ ಬಯಲ್ನಾಡು ಕದಂಬರು ತಲೆ ಎತ್ತಿರುತ್ತಾರೆ. ಹಾಗಾಗಿ ಚಿಕ್ಕಮಗಳೂರಿನ ಹುಣಸೆಮಕ್ಕಿಯ ಶಾಸನ ತಿಳಿಸುವಂತೆ[೩೦] ಕ್ರಿ.ಶ. ೮.೪.೧೧೩೬ ರಂದು ವಿಷ್ಣುವರ್ಧನನೇ ನೇರವಾಗಿ ಬಯಲುನಾಡಿಗೆ ಬಂದು ಹನ್ನೆರಡುಬೀಡನ್ನು [ಬಹುಶಃ ಕಿತ್ತೂರು ಪನ್ನೆರಡು] ಧ್ವಂಸಗೊಳಿಸುತ್ತಾನೆ. ಈ ಯುದ್ಧದಲ್ಲಿ ಹುಣಸೆಮಕ್ಕಿಯ ಸತ್ತಿವೆರ್ಗಡೆಯನ್ನು ಬಯಲ್ನಾಡು ಕದಂಬರು ಕೊನೆಗಾಣಿಸುತ್ತಾರೆ. ಈ ಸತ್ತಿವೆರ್ಗಡೆ ವಿಷ್ಣುವರ್ಧನನಿಗೆ ಪರಮಾತ್ತನಾಗಿದ್ದು ಮನೆಗೆ ಮಂತ್ರಿ, ಮೊನೆಗೆ ಬಂಟ ಎಂದು ಹೆಸರಾಗಿದ್ದ.

ಕ್ರಿ.ಶ. ೧೧೩೬ ರಲ್ಲಿ ನೇರವಾಗಿ ವಿಷ್ಣುವರ್ಧನನೇ ಬಯಲ್ನಾಡಿಗೆ ಬಂದು ಇವರ ಮೇಲೆ ಬಿದ್ದು ಹೋದ ಮರುವರ್ಷವೇ ಕ್ರಿ.ಶ. ೧೧೨೩ರಲ್ಲಿ ಬಯಲುನಾಡನ್ನು ಬಯಲುನಾಡ ಕದಂಬರೇ ಆ ಪ್ರದೇಶದ ಆಳ್ವಿಕೆ ನಡೆಸುತ್ತಿರುತ್ತಾರೆ ಮತ್ತೆ ವಿಷ್ಣುವರ್ಧನ ಬಯಲುನಾಡಿಗೆ ಬಂದು ಇವರ ಆಳ್ವಿಕೆಯನ್ನು ಕೊನೆಗಾಣಿಸಿದ ಮೇಲೆ ಇವರ ಆಳ್ವಿಕೆ ಸಂಪೂರ್ಣವಾಗಿ ನಿಂತುಹೋದಂತೆ ಕಂಡುಬರುತ್ತದೆ. ಆ ನಂತರದ ಹೊಯ್ಸಳರ ಎಲ್ಲ ದೊರೆಗಳು ತಮ್ಮ ಗಡಿಗಳನ್ನು ಹೇಳಿಕೊಳ್ಳುವಾಗ ಸಾಮಾನ್ಯವಾಗಿ ಬಯಲುನಾಡನ್ನು ಉಲ್ಲೇಖಿಸುವುದು ಸಾಧಾರಣ ಸಂಗತಿಯಾಗಿಬಿಟ್ಟಿದೆ. ಕ್ರಿ.ಶ. ೧೧೮೨ ರ ಬೇಲೂರು ತಾಲ್ಲೂಕಿನ ಹಿರೇಹಳ್ಳಿಯ ಶಾಸನವು[೩೧] ಬಯಲುನಾಡನ್ನು ಅಗ್ಗದ ಬಯಲುನಾಡು ಎಂದು ಕರೆದಿರುವುದನ್ನು ನೋಡಿದರೆ ಇಷ್ಟು ಹೊತ್ತಿಗಾಗಲೇ ಬಯಲುನಾಡ ಕದಂಬರ ಆಳ್ವಿಕೆ ಸಂಪೂರ್ಣವಾಗಿ ಮುಗಿದಿದ್ದು ಹೊಯ್ಸಳರಿಗೆ ಇಲ್ಲಿ ಸ್ಪರ್ಧಿಗಳೇ ಇರಲಿಲ್ಲ ಎಂದು ತಿಳಿಯಬಹುದಾಗಿದೆ.

ಬಹುಶಃ ಗಂಗರ ಆಡಳಿತ ಕಾಲದಲ್ಲಿ ಅವರ ಸಾಮಂತರಾಗಿ ಬಯಲುನಾಡ ಪ್ರಾಂತ್ಯಕ್ಕೆ ಬಂದ ಅತ್ಯಂತ ವೀರಾಗ್ರಣಿಗಳಾದ ಬಯಲುನಾಡ ಕದಂಬರು ಗಂಗರ ನಂತರ ಬಯಲುನಾಡನ್ನು ತಮ್ಮ ಆಳ್ವಿಕೆಗೆ ಸೇರಿಸಿಕೊಂಡರು. ಸ್ವತಂತ್ರವಾಗಿ ಬಯಲುನಾಡನ್ನು ಆಳುತ್ತಿದ್ದ ಇವರು ಚೋಳರು ಬಯಲುನಾಡಿಗೆ ಕಾಲಿಡದಂತೆ ನೋಡಿಕೊಂಡಿದ್ದರು. ಹೊಯ್ಸಳರ ದಾಳಿಗಳನ್ನು ಆರಂಭದಲ್ಲಿ ಸಮರ್ಥವಾಗಿ ಎದುರಿಸಿದರೂ ವಿಷ್ಣುವರ್ಧನನ ನಂತರದ ಕಾಲದಲ್ಲಿ ನೆಲೆ ನಿಲ್ಲಲಾಗದೇ ತಮ್ಮ ಆಡಳಿತವನ್ನೇ ಕೊನೆಗಾಣಿಸಿದರು. ಒಟ್ಟಿನಲ್ಲಿ ಬಯಲುನಾಡ ಕದಂಬರ ಕಾಲವೆಂದರೆ ನಿರಂತರ ಯುದ್ದಗಳ ಕಾಲ. ಇವರ ಅನೇಕ ವೀರಗಲ್ಲುಗಳಿಂದ ಇದು ತಿಳಿಯುತ್ತದೆ. ಆರಂಭದ ಇವರ ಶಾಸನಗಳಲ್ಲಿ ಗೋಗ್ರಹಣ, ಊರಳಿವುಗಳಿಗೆ ಸಂಬಂಧಿಸಿದ್ದೇ ಆಗಿವೆ. ಬರಬರುತ್ತಾ ಈ ಯುದ್ದಗಳು ಕೋಟೆ ಕಾಳಗಗಳಾಗಿ ಮಾರ್ಪಾಟಾಗಿರುವುದು ಇಲ್ಲಿನ ಸಂಪತ್ತನ್ನು ದೋಚುವ ಪ್ರಕ್ರಿಯೆಯಾಗಿ ಕಂಡುಬರುತ್ತದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಕನ್ನಡ ವಿಷಯ ವಿಶ್ವಕೋಶ; ಸಂಪುಟ ೧; ಮೈಸೂರು; ೨೦೦೫; ಪುಟ ೨೨೦.

೨. ಡಾ. ಚೆನ್ನಕ್ಕ ಪಾವಟೆ; ಹಾನಗಲ್ಲು ಕದಂಬರು; ಧಾರವಾಡ; ೧೯೮೮

೩. ಡಾ. ಚೆನ್ನಕ್ಕ ಎಲಿಗಾರ; ಬಂಕಾಪುರ ಶೋಧನೆ; ಧಾರವಾಡ; ೧೯೯೦.

೪. ಡಾ. ವಸುಂಧರಾ ಫಿಲಿಯೋಜಾ; ಗುತ್ತವೊಳಲಿನ ಗುತ್ತರು ಹಾಗೂ ರಟ್ಟೀಹಳ್ಳಿಯ ಕದಂಬರು ಎರಡು ಸಾಮಂತ ಮನೆತನಗಳ ಇತಿಹಾಸ; ಇತಿಹಾಸ ದರ್ಪಣ; ಬೆಂಗಳೂರು ಪುಸ್ತಕ ೧೫; ಪುಟ ೬.

೫. ಡಾ. ಚನ್ನಬಸಪ್ಪ ಬಿ.; ಕರಡಿಕಲ್ ಕದಂಬರು; ಇತಿಹಾಸ ದರ್ಪಣ; ಬೆಂಗಳೂರು ಪುಸ್ತಕ ೯-೭; ೨೦೧೦; ಪುಟ ೩೫.

೬ ಮ. ಸಕಲೇಶ್; ಹಾರುವ ಬೆಲುಹೂರು ಕದಂಬರು; ಸಂ: ರಾಜರಾಮ ಹೆಗ್ಗಡೆ ಮತ್ತು ಅಶೋಕ್‌ಶೆಟ್ಟರ್; ಮಲೆ ಕರ್ನಾಟಕದ ಅರಸುಮನೆತನಗಳು; ಹಂಪಿ; ೨೦೦೧; ಪುಟ ೧೬೯.

೭. ಎಸ್. ಗಂಗಾಂಬಿಕೆ ಗೋವರ್ಧನ; ಕೊಟ್ಟೂರು ಕದಂಬರು; ಪ್ರೊ.ಲಕ್ಷ್ಮಣ ತೆಲಗಾವಿ ಅಭಿನಂದನಾ ಸಂಪುಟ.

೮. ಡಾ. ಭೋಜರಾಜ್ ಬ. ಪಾಟೀಲ; ನಾಗರಖಂಡ-ಬಂದು ಅಧ್ಯಯನ; ಆನಂದಪುರಂ; ೧೯೯೫.

೯. ಡಾ. ಬಿ. ಎಲ್. ರೈಸ್; ಎಪಿಗ್ರಾಫಿಯಾ ಕರ್ನಾಟಕಾ; ಸಂಪುಟ ೧೧; ಬೆಂಗಳೂರು; ೧೯೦೨.

೧೦. ಶ್ರೀನಿವಾಸ ವಿ. ಪಾಡಿಗಾರ; ಚಂದಾವರದ ಕಾದಂಬರು; ಸಂ: ಎಂ. ಎಲ್. ಶಿವ ಶಂಕರ್ ಮತ್ತು ಚನ್ನಬಸಪ್ಪ ಎಸ್. ಪಾಟೀಲ; ಕದಂಬ ಅಧ್ಯಯನ; ಮೈಸೂರು; ೧೯೯೭; ಪುಟ ೬.

೧೧. & ಡಾ. ಗಣಪತಿಗೌಡ; ಶಿಸುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು; ಧಾರವಾಡ; ೨೦೦೭-೦೮.

೧೨. ಎಪಿಗ್ರಾಫಿಯಾ ಕರ್ನಾಟಿಕಾ[ಪರಿಷ್ಕೃತ]; ಸಂಪುಟ ೩; ಹೆಗ್ಗಡದೇವನಕೋಟೆ ೫; ಪುಟ ೪೩೪.

೧೩. ಎಪಿಗ್ರಾಫಿಯಾ ಕರ್ನಾಟಿಕಾ[ಎ.ಕ][ಪ] ೩; ಹೆಗ್ಗಡದೇವನಕೋಟೆ ೨೩; ಪುಟ ೪೪೬.

೧೪. ಎ.ಕ[ರೈಸ್] ಸಂಪುಟ ೪; ಮೈಸೂರು ಡಿಸ್ಟ್ರಿಕ್ ನಲ್ಲಿರುವ ಶಾಸನಗಳು; ಭಾಗ ೨; ಬೆಂಗಳೂರು; ೧೮೯೮; ಪುಟ ೩.

೧೫. ಎ.ಕ [ಪ] ; ಸಂಪುಟ ೩; ಮೈಸೂರು; ೧೯೭೪ ಪುಟ ೭೦.

೧೬. ಎ.ಕ [ಪ] ; ಸಂಪುಟ ೩; ಹೆಗ್ಗಡದೇವನಕೋಟೆ ೧೨೩; ಪುಟ ೫೧೫.

೧೭. ಎ.ಕ [ಪ] ; ಸಂಪುಟ ೩; ಹೆಗ್ಗಡದೇವನಕೋಟೆ ೧೧೦; ಪುಟ ೫೦೭.

೧೮. ಎ.ಕ [ಪ] ; ಸಂಪುಟ ೩; ಹೆಗ್ಗಡದೇವನಕೋಟೆ ೧೪೨; ಪುಟ ೫೨೩.

೧೯. ಎ.ಕ [ಪ] ; ಸಂಪುಟ ೩; ಹೆಗ್ಗಡದೇವನಕೋಟೆ ೧೨೩; ಪುಟ ೫೧೫.

೨೦. ಎ.ಕ [ಪ] ; ಸಂಪುಟ ೩; ಹೆಗ್ಗಡದೇವನಕೋಟೆ ೧೩೫; ಪುಟ ೫೨೦.

೨೧. ಎ.ಕ [ಪ] ; ಸಂಪುಟ ೯; ಬೇಲೂರು ೧೯೦; ಪುಟ ೧೭೭.

೨೨. ಎ.ಕ [ಪ] ; ಸಂಪುಟ ೧೧; ಚಿಕ್ಕಮಗಳೂರು ೨೧೦; ಪುಟ ೧೩೨.

೨೩. ಎ.ಕ [ಪ] ; ಸಂಪುಟ ೩; ಹೆಗ್ಗಡದೇವನಕೋಟೆ ೧೦೮; ಪುಟ ೫೧೯.

೨೪. ಎ.ಕ [ಪ] ; ಸಂಪುಟ ೩; ಹೆಗ್ಗಡದೇವನಕೋಟೆ ೧೧೭; ಪುಟ ೫೧೧.

೨೫. ಎ.ಕ [ಪ] ; ಸಂಪುಟ ೧೧; ಚಿಕ್ಕಮಗಳೂರು ೨೧೦; ಪುಟ ೧೩೨.

೨೬. ಎ.ಕ [ಪ] ; ಸಂಪುಟ ೩; ಹೆಗ್ಗಡದೇವನಕೋಟೆ ೧೨೩; ಪುಟ ೫೧೫.

೨೭. ಎ.ಕ [ಪ] ; ಸಂಪುಟ ೯; ಬೇಲೂರು ೧೯೦; ಪುಟ ೧೭೭.

೨೮. ಎ.ಕ [ಪ] ; ಸಂಪುಟ ೧೧; ಚಿಕ್ಕಮಗಳೂರು ೨೧೦; ಪುಟ ೧೩೨.

೨೯. ಎ.ಕ [ಪ] ; ಸಂಪುಟ ೪; ಚಾಮರಾಜನಗರ ೨; ಪುಟ ೫.

೩೦. ಎ.ಕ [ಪ] ; ಸಂಪುಟ ೧೧; ಚಿಕ್ಕಮಗಳೂರು ೨೨೦; ಪುಟ ೧೪೬.

೩೧. ಎ.ಕ [ಪ] ; ಸಂಪುಟ ೯; ಬೇಲೂರು ೨೪೦; ಪುಟ ೨೨೫.

೬೬

ಕೊಡೇಕಲ್ಲು ನಾಯಕ ಮನೆತನ

ಶಿವರಾಜ ಯತಗಲ್*

ಹೈದರಾಬಾದ್ ಕರ್ನಾಟಕದಲ್ಲಿ ಅನೇಕ ನಾಯಕ ಮನೆತನಗಳು ಆಳ್ವಿಕೆ ಮಾಡಿವೆ. ಅವುಗಳಲ್ಲಿ ಸುರಪುರ, ಗುಡಗುಂಟಿ, ಗುಂತಗೋಳ, ದೇವದುರ್ಗ, ಕನಕಗಿರಿ, ಕರಡಿ ಗುಡ್ಡ, ಗುಡೇಕೋಟೆ ಮತ್ತು ಜರಿಮಲೆ ಮನೆತನಗಳು ಪ್ರಮುಖವಾದವುಗಳು. ಈ ಮನೆತನಗಳೊಂದಿಗೆ ರಾಜಕೀಯ ಹಾಗೂ ವೈವಾಹಿಕ ಸಂಬಂಧವನ್ನು ಹೊಂದಿದ ಹಾಗೂ ಇಲ್ಲಿಯವರೆಗೂ ನಿರ್ಲಕ್ಷ್ಯಕ್ಕೊಳಗಾದ ಮನೆತನವೊಂದಿದೆ, ಅದೇ ಕೊಡೇಕಲ್ಲು ನಾಯಕ ಮನೆತನ.

ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಕೃಷ್ಣಾ ನದಿತೀರಕ್ಕೆ ಹೊಂದಿಕೊಂಡಿರುವುದೇ ಕೊಡೇಕಲ್ಲು ಗ್ರಾಮ. ಇದನ್ನು ಮೊದಲು ಬಟಾವಕಲ್, ಬಟಾರಕಲ್, ಬಳರಿಕಲ್[೧] ಎಂದು ಕರೆಯುತ್ತಿದ್ದರು. ಇಲ್ಲಿ ಕೊಡೆಕಲ್ಲು ನಾಯಕರು ಆಳ್ವಿಕೆ ಮಾಡಿದ ಅನೇಕ ಕುರುಹುಗಳಿವೆ. ಇಲ್ಲಿಯವರೆಗೆ ಈ ನಾಯಕರ ಕುರಿತಾಗಿ ಅಧ್ಯಯನಗಳಾಗಿಲ್ಲ. ಆದುದರಿಂದ ನಾನು ಕ್ಷೇತ್ರಕಾರ್ಯವನ್ನು ಕೈಗೊಳ್ಳುವುದರ ಮೂಲಕ ಹಾಗೂ ಈ ಮನೆತನದ ವಂಶಸ್ಥರನ್ನು ಸಂದರ್ಶಿಸಿ ಅವರಿಂದ ಪಡೆದ ಮಾಹಿತಿ, ದಾಖಲೆಗಳು, ವಂಶಾವಳಿಯನ್ನು ಆಧರಿಸಿ ಈ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ. ಅಲ್ಲದೇ ಕೆಲವು ಕೃತಿಗಳಲ್ಲಿ ಕೊಡೇಕಲ್ಲು ನಾಯಕರ ಪ್ರಸ್ತಾಪ ಅಲ್ಲಲ್ಲಿ ಕಂಡುಬರುತ್ತದೆ. ಆ ಕೃತಿಗಳಲ್ಲಿ ಎಚ್.ಎಂ. ಮಲ್ಲಿಕಾರ್ಜುನ ಸಿದ್ಧಾಂತಿಗಳ 'ನಂದಿಯಾಗಮ ಲೀಲೆ' (೧೯೧೩), ಕಪಟರಾಳ ಕೃಷ್ಣರಾವ್ ರವರ 'ಸುರಪುರ ಸಂಸ್ಥಾನ ಇತಿಹಾಸ' (೧೯೭೭), ಡಾ. ಬಸವಲಿಂಗ ಸೊಪ್ಪಿಮಠರ 'ಕೊಡೇಕಲ್ಲ ಬಸವಣ್ಣ: ಒಂದು ಅಧ್ಯಯನ' (೧೯೯೫), ದೇವೇಂದ್ರಪ್ಪ ರಂಗರಾಜ ಅವರ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಕ್ಕೆ ಸಾದರಪಡಿಸಿದ 'ಸುರಪುರ ಸಂಸ್ಥಾನ: ಒಂದು ಅಧ್ಯಯನ' (೧೯೯೫) ಭಾಸ್ಕರರಾವ್ ಮುಡಬೂಳರವರ 'ಮರೆತುಹೋದ ಸುರಪುರ ಇತಿಹಾಸ' (೨೦೦೧), ಬಿ. ಕೃಷ್ಣಮಾಚಾರ್ಯರ 'ಮರೆಯಲಾಗದ ಸುರಪುರ ರಾಜರ ಚರಿತ್ರೆ' (೨೦೦೩) ಪ್ರಮುಖ ವಾದವುಗಳು.

'ಸುರಪುರ ನಾಯಕ ಅರಸರು' ಹಾಗೂ 'ಕೊಡೇಕಲ್ಲು ನಾಯಕರು' ಒಂದೇ ಮೂಲಕ್ಕೆ ಸೇರಿದವರು. ಇವರನ್ನು 'ಗೋಸಲವಂಶ'[೨]ದವರೆಂದು ಸಲುಹುತ್ತಿದ್ದುದರಿಂದ ಇವರಿಗೆ 'ಗೋಸಲ'ದವರೆಂದು ಕರೆದರು. ನಾಯಕ ಜನಾಂಗದಲ್ಲಿ ಇದೊಂದು 'ಬೆಡಗು'[೩] ಆಗಿದೆ. ಈ ವಂಶದ ಮನೆತನಗಳಲ್ಲಿ ಗುಡಗುಂಟಿನಾಯಕ ಅರಸರೂ ಸೇರಿದ್ದಾರೆ. ಅಲ್ಲದೇ ಇಂದಿಗೂ ಸುರಪುರ ಭಾಗದ ನಾಯಕ ಜನಾಂಗದಲ್ಲಿ ಈ ಬೆಡಗಿನವರು ಅನೇಕರಿದ್ದಾರೆ.

ಸುರಪುರ, ಗುಡಗುಂಟಿ ಹಾಗೂ ಕೊಡೇಕಲ್ಲು ನಾಯಕರ ಮೂಲ ಪುರುಷರು ಒಂದೇ ಆಗಿದ್ದಾರೆ. ಅವರ ಪೂರ್ವಿಕರ ವಂಶಾವಳಿ ಈ ಕೆಳಗಿನಂತಿದೆ:

ನರಸಿಂಹನಾಯಕ

|

ವೀರಬೊಮ್ಮನಾಯಕ

|

ಸಿಂಗಪ್ಪ ನಾಯಕ

|

ಒಡೇರ ನಾಯಕ

|

ಕಲ್ಲಪ್ಪ ನಾಯಕ[೪]

ಇವರುಗಳೆಲ್ಲ ಪ್ರಾರಂಭದಲ್ಲಿ ಸಾರಂಗಕೊಳ್ಳ ಮುಂತಾದ ಸ್ಥಳಗಳಲ್ಲಿ ನೆಲೆಸಿದ್ದರು. ನಂತರದಲ್ಲಿ ಆಯಾ ಭಾಗದಲ್ಲಿ ಅನೇಕ ದೇಶಗತಿಗಳನ್ನು ಗಳಿಸಿ ಆಳ್ವಿಕೆ ಮಾಡಲು ಪ್ರಾರಂಭಿಸಿದರು.

ಒಡೇರನಾಯಕನ ಮಗನಾದ ಕಲ್ಲಪ್ಪನಾಯಕನಿಂದ ಕೊಡೇಕಲ್ಲು ನಾಯಕರ ಮನೆತನದ ಇತಿಹಾಸವು ಪ್ರಾರಂಭ ವಾಗುತ್ತದೆ. ಈ ಕಲ್ಲಪ್ಪನಾಯಕನು ಸಾರಂಗಕೊಳ್ಳದಿಂದ ನಂತರ ದಲ್ಲಿ ತುಂಬಳಕ್ಕೆ ಬರುತ್ತಾನೆ. ಈ ಪೂರ್ವದಲ್ಲಿ ಈತನು ಕಂಪಲಿ ರಾಜ್ಯದ ಅವನತಿಯನ್ನು ಹಾಗೂ ವಿಜಯನಗರ ಸಾಮ್ರಾಜ್ಯದ ಹುಟ್ಟನ್ನು ಕಂಡಿದ್ದವನು. ಹೀಗಾಗಿ ಈತನು ತುಂಬಳದಲ್ಲಿ ಕೆಲವು ದಿನಗಳ ಕಾಲ ನೆಲೆಯೂರಲು ಕಾರಣ ವಾಯಿತು. ಈತನಿಗೆ 'ಕದನ ಕಡುಗಲಿ' ಹಾಗೂ 'ಬಸವ ಶಂಕರ' ಎಂಬ ಬಿರುದುಗಳಿದ್ದವು.[೫] 'ಕದನ ಕಡುಗಲಿ' ಎಂಬ

* ಸಂಶೋಧನ ವಿದ್ಯಾರ್ಥಿ, ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦೦೦೩.

ಬಿರುದು ಬರಲು ಬಹುಶಃ ಆ ಸಂದರ್ಭದಲ್ಲಿ ಈತನು ಯುದ್ಧದಲ್ಲಿ ಭಾಗವಹಿಸಿ ತನ್ನ ಶೌರ್ಯ, ಸಾಹಸಗಳನ್ನು ತೋರಿಸಿದಕ್ಕಾಗಿ ಈ ಬಿರುದನ್ನು ಪಡೆಯಲು ಸಾಧ್ಯವಾಯಿತು. 'ಬಸವ ಶಂಕರ' ಎಂಬ ಬಿರುದು ಶೈವಮತದ ಅನುಯಾಯಿಯಾದ ಕಾರಣ ಬಂದಿರಬಹುದಾದ ಸಾಧ್ಯತೆಗಳಿವೆ. ಈ ಕುರಿತಾಗಿ ಸಂಶೋಧನೆಯ ಅಗತ್ಯತೆ ಇದೆ.

ಕಲ್ಲಪ್ಪನಾಯಕನು ದಿನದಿಂದ ದಿನಕ್ಕೆ ತನ್ನ ಶಕ್ತಿ, ಸಾಮರ್ಥ್ಯಗಳನ್ನು ಒಗ್ಗೂಡಿಸಿಕೊಳ್ಳುತ್ತಾ ತನ್ನ ಅಧಿಕಾರದ ವಿಸ್ತರಣೆ ಮಾಡತೊಡಗಿದನು. ಅದೇ ಸಂದರ್ಭದಲ್ಲಿ ಮುದಗಲ್ಲಿನ ಕೋಟೆಯ ಕಿಲ್ಲೇದಾರನಾದ ಮುಸ್ತಫಾಖಾನ್‌ನ ಗೆಳತನವಾಯಿತು. ಹೀಗಾಗಿ ಕಲ್ಲಪ್ಪನಾಯಕನು ಮುಸ್ತಫಾಖಾನ್‌ನ ಆಹ್ವಾನದಂತೆ ತುಂಬಳದಿಂದ ಕಂಪಿಲಿ, ಗಂಗಾವತಿ, ತಾವರಗೇರಾ ಮಾರ್ಗವಾಗಿ ಮುದಗಲ್ಲಿಗೆ ಬಂದನು. ಈತನಿಗೆ ಆಗಲೇ ಏಳು ಜನ ಮಕ್ಕಳಿದ್ದರು. ಅವರೂ ಸಹಿತ ಈತನೊಂದಿಗೆ ಮುದಗಲ್ಲಿಗೆ ಬಂದರು. ಇವರು ಬಂದು ತಂಗಿದ ಸ್ಥಳವನ್ನು ಇಂದಿಗೂ 'ಗೋಸಲಪೇಟೆ'[೬] ಎಂದು ಕರೆಯುತ್ತಾರೆ. ಇಲ್ಲಿ 'ಗೋಸಲರಾಯ' ಎಂಬ ದೇವಾಲಯವೂ ಇದೆ. ಈ 'ಗೋಸಲಪೇಟೆ' ಹಾಗೂ 'ಗೋಸಲರಾಯ' ದೇವಾಲಯ ಇವರ 'ಗೋಸಲವಂಶ'ವನ್ನು ಹಾಗೂ ಮುದಗಲ್ಲಿನ ವಾಸ್ತವ್ಯಕ್ಕೆ ಪುಷ್ಟಿ ನೀಡುತ್ತವೆ.

ಕಲ್ಲಪ್ಪನಾಯಕನು ತನ್ನ ಏಳು ಜನ ಮಕ್ಕಳಿಗೆ ಹನುಮನಾಯಕರೆಂದೇ ಹೆಸರಿಟ್ಟಿದ್ದನು. ಅವರುಗಳೆಂದರೆ– ಹಿರೇಹನುಮಪ್ಪನಾಯಕ, ಇಮ್ಮಡಿ ಹನುಮಪ್ಪನಾಯಕ, ಮುಮ್ಮಡಿ ಹನುಮಪ್ಪನಾಯಕ, ನಾಲ್ವಡಿ ಹನುಮಪ್ಪನಾಯಕ, ಕರಿ ಹನುಮನಾಯಕ, ಬಿಲ್ಲ ಹನುಮನಾಯಕ ಹಾಗೂ ಚಿನ್ನ ಹನುಮನಾಯಕ. ಇವರ ಪೂರ್ವಿಕರ ಆರಾಧ್ಯದೈವ ಹನುಮಂತನ ಪ್ರಭಾವವೇ ಈ ರೀತಿ ಹೆಸರಿಡಲು ಕಾರಣವಾಗಿರಬಹುದಾಗಿದೆ.

ಮುದಗಲ್ಲಿನಿಂದ ಕಲ್ಲಪನಾಯಕನ ಏಳುಜನ ಮಕ್ಕಳು ಬೇರೆಬೇರೆ ಕಡೆ ತೆರಳಿ ಸ್ವತಂತ್ರವಾದ ದೇಶಗತಿಗಳ ಸ್ಥಾಪನೆಗೆ ಕಾರಣರಾದರು. ಹಿರಿಯಮಗ ಹಿರೇ ಹನುಮಪ್ಪನಾಯಕನು ಕೃಷ್ಣಾ ನದಿಯನ್ನು ದಾಟಿ ಕೊಡೇಕಲ್ಲು, ನಾಲತ್ವಾಡ ಪ್ರದೇಶದಲ್ಲಿ ನೆಲೆಸಿ ದೇಶಗತಿಯೊಂದಿಗೆ ತನ್ನ ಪ್ರಾಬಲ್ಯವನ್ನು ಸ್ಥಾಪಿಸಿದನು. ನಂತರ ಈತನೇ ಸಗರನಾಡಿನ[೭] ಕಕ್ಕೇರಿ ಭಾಗವನ್ನು ಕೇಂದ್ರವಾಗಿಟ್ಟುಕೊಂಡು ಕೊಡೇಕಲ್‌ನಲ್ಲಿ ನಾಯಕ ಮನೆತನ ಸ್ಥಾಪಿಸಿದನು.[೮] ಕೊಡೇಕಲ್ಲು ನಾಯಕರು ವಿಜಯನಗರ ವೈಭವ ಕಾಲದಲ್ಲಿ ಅವರ ಅಧೀನದಲ್ಲಿದ್ದರು.

ವಿಜಯನಗರದ ಅರಸರಿಗೂ ಹಾಗೂ ವಿಜಾಪುರದ ಆದಿಲ್‌ಶಾಹಿಗಳಿಗೂ ಮೇಲಿಂದ ಮೇಲೆ ಯುದ್ಧಗಳು ನಡೆಯುತ್ತಿದ್ದವು. ಈ ಯುದ್ಧಗಳಲ್ಲಿ ಹಿರೇಹನುಮನಾಯಕನು ಭಾಗವಹಿಸಿದ್ದನು. ಯೂಸೂಫ್ ಅಲಿ ಆದಿಲ್‌ಶಾಹ (ಕ್ರಿ.ಶ. ೧೪೮೦–೧೫೧೦)ನೊಂದಿಗೆ ಹನುಮನಾಯಕನು ಹೋರಾಡಿದನು[೧೦]. ಕೊಡೇಕಲ್ ಬಸವನು ಕೊಡೇಕಲ್‌ಗೆ ಬಂದು ಹನುಮನಾಯಕನನ್ನು ಬೆಂಬಲಿಸಿದನು. ಹನುಮನಾಯಕನು ವಿಜಾಪುರದ ಯೂಸೂಫ್ ಆದಿಲ್‌ಶಹನೊಂದಿಗೆ ಯುದ್ಧ ಮಾಡಿ ಗೆಲುವು ಸಾಧಿಸಿದನು. ಸೋತ ಯೂಸೂಫ್‌ನು ಹನುಮನಾಯಕನಿಗೆ 'ಉದಯದ್ವಾರದ ನಾಡದಳವಾರಿಕೆಯನ್ನಿತ್ತು ದಶ ಅಷ್ಟ ಗ್ರಾಮಗಳನ್ನು ತನ್ನ ಮುದ್ರಿಕೆಯೊಂದಿಗೆ ಉಂಬಳಿಯಗಿ ಕೊಟ್ಟನು.[೧೧]

ಹನುಮನಾಯಕನು ವಿಜಾಪುರದ ಬಾದಶಹನಿಂದ ಪೂರ್ವದಿಕ್ಕಿನಲ್ಲಿ (ಉದಯದ್ವಾರ) ಪಡೆದ ೧೮ ಗ್ರಾಮ (ದಶ ಅಷ್ಟಗ್ರಾಮ)ಗಳನ್ನು ಪಡೆದು ತನ್ನ ಆಡಳಿತವನ್ನು ಪ್ರಾರಂಭಿಸಿದನು. ಆ ಗ್ರಾಮಗಳಲ್ಲಿ ಬರದೇವನಾಳ, ಬಸಾಪುರ, ತಡದಹಾಳ, ಹುಲ್ಲಿಕೇರಾ, ಹನುಮಸಾಗರ, ಚವನಬಾವಿ, ಬೂದಿಹಾಳು, ಎಣ್ಣಿ ವಡಗೇರಾ, ಕುಮಲಾಪುರ, ಅಮ್ಮಾಪುರ, ಕರೇಕಲ್, ಹಾಳಬಸಾಪುರ, ನಾರಾಯಣಪುರ, ಜೋಗುಂಡಬಾವಿ, ದೇವರಗಟ್ಟಿ, ಕೋಲೆಗುಡ್ಡ, ಹಗರಟಗಿ, ಮಾರನಾಳ ಮತ್ತು ಜಲದುರ್ಗ ಇನ್ನು ಮುಂತಾದವುಗಳು.

ಜಲದುರ್ಗವು ಹನುಮನಾಯಕನ ಆಡಳಿತದಲ್ಲಿ ಪ್ರಮುಖವಾದ ಸ್ಥಳವಾಗಿತ್ತು. ಇದು ಇಂದು ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನಲ್ಲಿದೆ. ಇದೊಂದು ಐತಿಹಾಸಿಕ ಪ್ರದೇಶ. ಇದನ್ನು 'ಅಮರಕಲ್ಯಾಣ'ವೆಂದು ಕರೆಯುತ್ತಾರೆ. ಹನುಮನಾಯಕನ ಗುರು ಕೊಡೇಕಲ್ ಬಸವ ಹಾಗೂ ಆತನ ಜನ ಜಲದುರ್ಗದಲ್ಲಿ ಅಮರಕಲ್ಯಾಣ ಕಟ್ಟಿಕೊಂಡು ಬಹಳ ದಿನಗಳವರೆಗೆ ನಿಶ್ಚಿಂತೆಯಿಂದ ವಾಸವಾಗಿದ್ದರು.

ನಂತರ ಬಸವನು ಕಡೆಯ ಕಲ್ಯಾಣವೆಂಬ ಕೊಡೇಕಲ್ಲಿಗೆ ಬಂದು ಅಲ್ಲಿದ್ದ ಬೇಡರ ಹನುಮನಾಯಕನಿಂದ ಕೊಡೇಕಲ್ ಭೂಮಿಯನ್ನು ಖರೀದಿಸಿ, ಕಲ್ಯಾಣ ಬಸವ ಮೊದಲು ಜಾಗಮಾಡಿಕೊಂಡಿದ್ದ ಸ್ಥಳದಲ್ಲಿಯೇ (ನೆಲಮಾಳಿಗೆ) ತನ್ನ ಸದನವನ್ನು ರಚಿಸಿಕೊಳ್ಳುತ್ತಾನೆ. ಕೊಡೇಕಲ್ ಬಸವನ ಹಿಂದೆ ಬಂದ ಜನಸಾಮಾನ್ಯರೆಲ್ಲ ಆತನ ಸದನದ ಸುತ್ತಲೂ ತಮ್ಮ ಗೃಹಗಳನ್ನು ನಿರ್ಮಿಸಿಕೊಳ್ಳುತ್ತಾರೆ.[೧೨]

ಜನಜೀವನದ ಸ್ವಾಸ್ಥ್ಯಕ್ಕೆ ಬೇಡನಾಯಕರನ್ನು ರಕ್ಷಣೆಗಿಟ್ಟುಕೊಂಡ ಕೊಡೇಕಲ್ ಹನುಮನಾಯಕನೂ ಸಹ ಬಸವನ ಶಿಷ್ಯತ್ವವನ್ನು ವಹಿಸಿನಿಂತನು. ಬಿಜಾಪುರದ ಅರಸರಿಗೆ ಹೆದರದೆ ತನ್ನ ರಾಜ್ಯವನ್ನು ವಿಸ್ತರಿಸಿಕೊಂಡನು. ಗುತ್ತಿ–ಹಲವುಕಲ್–ಜಲದುರ್ಗಗಳು ಬೇಡರ ಬೀಡಾದವು.[೧೩]

ನಂತರದಲ್ಲಿ ಹಿರೇಹನುಮನಾಯಕನನ್ನು ವಿಜಾಪುರದ ಆದಿಲ್‌ಶಾಹಿಗಳು ಸೋಲಿಸಿದರು. ಕೊಡೇಕಲ್ಲು ಆದಿಲ್‌ಶಾಹಿಗಳ ವಶವಾಯಿತು. ಒಂದನೆ ಅಲಿಆದಿಲ್‌ಶಹ (ಕ್ರಿ.ಶ.೧೫೫೮–೧೫೮೦)ನು ಕ್ರಿ.ಶ. ೧೫೬೫ ಜನವರಿ ೨೩ರಂದು ತಾಳೀಕೋಟೆ ಯುದ್ಧದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಸೋಲಿಸಿದನು.

ಈ ಯುದ್ಧದ ನಂತರ ಶಾಹಿಮನೆತನಗಳಲ್ಲಿ ಒಗ್ಗಟ್ಟು ಉಳಿಯಲಿಲ್ಲ. ವಿಜಾಪುರದ ಅರಸನಿಗೆ ಸಮಸ್ಯೆಗಳು ಸರಮಾಲೆಯಾದವು. ಅಧೀನದಲ್ಲಿದ್ದ ಅನೇಕ ಸರದಾರರು ಸ್ವಾತಂತ್ರ್ಯ ಘೋಷಣೆಗೆ ಹವಣಿಸುತ್ತಿದ್ದರು. ಇನ್ನೊಂದೆಡೆ ಮೊಗಲ್‌ರ ಔರಂಗಜೇಬನ ಆಕ್ರಮಣ, ಮರಾಠರ ಶಿವಾಜಿಯೂ ಸಹ ಈ ಭಾಗಕ್ಕೆ ಲೂಟಿ ಪ್ರಾರಂಭಿಸಿದನು. ಹೀಗಾಗಿ ವಿಜಾಪುರದ ಆದಿಲ್‌ಶಾಹಿಗಳು ತತ್ತರಿಸಿಹೋದರು. ಆ ಸಂದರ್ಭದಲ್ಲಿ ಇವರ ಸಹಾಯಕ್ಕೆ ಬಂದವನೆಂದರೆ ಸುರಪುರ ಸಂಸ್ಥಾನದ ಪಿಡ್ಡನಾಯಕ.

ಕ್ರಿ.ಶ. ೧೬೩೫ರಲ್ಲಿ ಮೊಗಲ್ ಸರದಾರರು ವಿಜಾಪುರದ ಮೇಲೆ ದಾಳಿ ಮಾಡಿ 'ಡೋಣಿ' ನದಿಯ ಫಲವತ್ತಾದ ಪ್ರದೇಶವನ್ನು ಲೂಟಿ ಮಾಡುತ್ತಿದ್ದರು. ಆಗ ಸುರಪುರದ ಪಿಡ್ಡನಾಯಕನು ಸೈನ್ಯದೊಂದಿಗೆ ತೆರಳಿ ಅವರನ್ನು ಅಲ್ಲಿಂದ ಕಾಲ್ತೆಗೆಸಿದನು. ಅಲ್ಲದೇ ಅನೇಕ ಬಾರಿ ಪಿಡ್ಡನಾಯಕನು ಬಿಜಾಪುರದ ಆದಿಲ್‌ಶಾಹಿಗಳ ಪರವಾಗಿ ಹೋರಾಡಿದ್ದಕ್ಕಾಗಿ ಕ್ರಿ.ಶ. ೧೬೩೮–೪೯ರಲ್ಲಿ ತಾಳಿಕೋಟೆ ಸರದೇಶಗತಿಯ ಕೊಡೇಕಲ್ಲನ್ನು ಈತನಿಗೆ ಇನಾಮಾಗಿ ವಿಜಾಪುರದ ಆದಿಲ್‌ಶಾಹಿಗಳು ನೀಡಿದರು[೧೪]. ಅಂದಿನಿಂದ ಕೊಡೇಕಲ್ಲು ಸುರಪುರದ ಅಧೀನಕ್ಕೆ ಬಂದಿತು. ಸುರಪುರ ಸಂಸ್ಥಾನದ ಅಧೀನದ ಒಂದು ಪ್ರಮುಖವಾದ ಭಾಗವಾಯಿತು. ಇವರ ಅಧೀನದಲ್ಲಿದ್ದುಕೊಂಡೇ ಕೊಡೇಕಲ್ಲು ನಾಯಕರು ತಮ್ಮ ಸ್ಥಳೀಯ ಆಡಳಿತವನ್ನು ನಿರ್ವಹಿಸಿದರು. ಈ ಮನೆತನದ ನಾಯಕರಲ್ಲಿ ರಾಜಾ ವೆಂಕಟಪ್ಪನಾಯಕ, ರಾಜಾ ತಿಮ್ಮಪ್ಪ ನಾಯಕ, ರಾಜಾ ವೆಂಕಟಪ್ಪನಾಯಕ ಇನ್ನೂ ಮುಂತಾದವರು ಪ್ರಮುಖರಾದವರು. ಸುರಪುರದ ಅರಸರ ಪ್ರಮುಖ ಯುದ್ಧಗಳಲ್ಲಿ ಕೊಡೇಕಲ್ಲು ನಾಯಕರ ಫೌಜು ಇದ್ದೆ ಇರುತ್ತಿತ್ತು.

ಕೊಡೇಕಲ್ಲು ನಾಯಕರು ಸುಮಾರು ೨೫–೩೦ ಹಳ್ಳಿಗಳ ಕಂದಾಯವನ್ನು ವಸೂಲಿ ಮಾಡಿ ಸುರಪುರ ಸಂಸ್ಥಾನಕ್ಕೆ ಸಲ್ಲಿಸುತ್ತಿದ್ದರು. ಸುರಪುರ ಸಂಸ್ಥಾನದಲ್ಲಿ ನಡೆಯುವ ಅನೇಕ ಹಬ್ಬ–ಹರಿದಿನಗಳಲ್ಲಿ ಅವರೂ ಭಾಗವಹಿಸುತ್ತಿದ್ದರು. ಈ ಕೊಡೇಕಲ್ ನಾಯಕರು ವೈಷ್ಣವ ಮತಾವಲಂಬಿಗಳಾದರೂ ಇಂದಿಗೂ ಕೊಡೇಕಲ್ ಬಸವನ ಸಂಪ್ರದಾಯವನ್ನು ನಿಷ್ಠೆಯಿಂದ ಅನುಸರಿಸುತ್ತಾರೆ. ಈ ಮನೆತನದ ವಂಶಸ್ಥರು ಇಂದಿಗೂ ಕೊಡೇಕಲ್‌ನಲ್ಲಿ ವಾಸವಾಗಿದ್ದಾರೆ. ಆರ್ಥಿಕವಾಗಿಯೂ ಸುಸ್ಥಿತಿಯಲ್ಲಿದ್ದಾರೆ. ರಾಜಾ ವೆಂಕಟಪ್ಪ ನಾಯಕರು ಯೌವ್ವನದಲ್ಲಿಯೇ ಸ್ವರ್ಗಸ್ಥರಾದರು. ಅವರ ಧರ್ಮಪತ್ನಿ ರಾಣಿ ರಂಗಮ್ಮ ಹಾಗೂ ಅವರ ಪುತ್ರ ರಾಜಾ ಜೀತೇಂದ್ರನಾಯಕ ಅವರು ಕೊಡೇಕಲ್ಲಿನಲ್ಲಿ ವಾಸವಾಗಿದ್ದಾರೆ. ಸ್ಥಳೀಯವಾಗಿ ನಡೆಯುವ ಪ್ರತಿಯೊಂದು ಹಬ್ಬ ಹರಿದಿನಗಳಲ್ಲಿ ಈ ಮನೆತನದ ವಂಶಸ್ಥರಾದ ರಾಜಾ ಜೀತೇಂದ್ರನಾಯಕ ಅವರು ಭಾಗವಹಿಸುತ್ತಾರೆ. ಕೊಡೇಕಲ್ಲು ಹಾಗೂ ಸುತ್ತಲಿನ ಹಳ್ಳಿಗಳ ಜನರು ಇವರನ್ನು 'ನಮ್ಮ ದೊರೆಗಳು' ಎಂದು ಗೌರವಭಾವದಿಂದ ನೋಡಿಕೊಳ್ಳುತ್ತಾರೆ. ಅಲ್ಲದೇ ತಮ್ಮ ಕಳ್ಳುಬಳ್ಳಿಯ ಸಂಸ್ಥಾನಗಳಾದ ಸುರಪುರ, ಗುಡಗುಂಟಿ, ಗುಂತಗೋಳ, ದೇವದುರ್ಗ, ಕನಕಗಿರಿ ಗಳೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ್ದಾರೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. **ಕೊಡೇಕಲ್ಲು ಸ್ಥಳನಾಮದ** ಕುರಿತು ವಿವಿಧ ಅಭಿಪ್ರಾಯಗಳಿವೆ. ಈ ಗ್ರಾಮದ ಸುತ್ತಮುತ್ತಲಿನ ಗ್ರಾಮಗಳು ಚಿಕ್ಕಚಿಕ್ಕ ದಿನ್ನೆಯ ಪ್ರದೇಶಗಳಾಗಿವೆ ಹಾಗೂ ಹೆಬ್ಬಂಡೆಗಳಿಂದ ಕೂಡಿವೆ. ಅವು ದೂರಿನಿಂದ ಕೊಡೆಯಾಕಾರದಲ್ಲಿ ಕಾಣುತ್ತವೆ. ಹೀಗಾಗಿ ಕೊಡೆಯಾಕಾರದ ಕಲ್ಲುಗಳಿಂದ ಕೂಡಿರುವುದರಿಂದ ಕೊಡೆಯಕಲ್ಲು ಆಯಿತೆಂದು ಕೆಲವರು ಹೇಳುತ್ತಾರೆ. ಅದನ್ನು ರೀತಿ ಹೇಳಬಹುದಾಗಿದೆ. ಕೊಡೇಕಲ್ಲು ಎತ್ತರವಾದ ಬಂಡೆಕಲ್ಲುಗಳಿಂದ ತುಂಬಿರುವ ಊರು. ಕೋಡಂಗಲ್ಲು > ಕೋಡಗಲ್ಲು > ಕೊಡೇಕಲ್ ಆಗಿರುವುದು. ಬಟಾವಕಲ್, ಬಟಾರಕಲ್ ಎಂದು ಜನಾಭಿಪ್ರಾಯದಂತೆ ಶ್ರೀ ಚನ್ನಮಲ್ಲಿಕಾರ್ಜುನರು ಹೇಳಿದರೆ, ಡಾ. ಬಸವಲಿಂಗ ಸೊಪ್ಪಿಮಠರು ಇದನ್ನು'ಬಳರಿಕಲ್' ಅಂದರೆ ಇದೊಂದು ಹೆಣ್ಣು ದೇವತೆಯ ಹೆಸರು ಎಂದು ಹೇಳುತ್ತಾ, ಅದನ್ನು ಈ ರೀತಿ ಬಿಡಿಸುತ್ತಾರೆ. ಬಳರಿಯ ಕಲ್ಲು > ಬಳಾರ ಕಲ್ಲು > ಬಟಾರಕಲ್. ಕೊಡೇಕಲ್ಲು ಒಂದು ಕಾಲಕ್ಕೆ ಹೆಣ್ಣು ದೇವತೆಯ ನೆಲೆಯಾಗಿತ್ತು ಎನ್ನುತ್ತಾರೆ. ಕೊಡೇಕಲ್‌ಗೆ ಕಾವ್ಯಗಳಲ್ಲಿ ಛತ್ರಶಿಲಾಪುರ, ಕಡೆಯಕಲ್ಯಾಣ ಹಾಗೂ ಅಮರಕಲ್ಯಾಣಗಳೆಂಬ ಹೆಸರುಗಳಿವೆ.

೨. **'ಗೋಸಲ'** ಎನ್ನುವುದು ಗೋಶಾಲಾದಿಂದ ಬಂದಿದೆ ಎಂಬ ಅಭಿಪ್ರಾಯವೂ ಉಂಟು. ಇದು ಹಸುವಿನ ಕೊಟ್ಟಿಗೆಯಾಗಿದ್ದು, ಅಂದು ಗೋ ಸಾಕುವುದು ಪುಣ್ಯದ ಕೆಲಸವಾಗಿತ್ತು. ಇವರುಗಳು ಗೋವುಗಳನ್ನು ಸಾಕುತ್ತಿದ್ದುದರಿಂದ ಇವರನ್ನು ಗೋಸಲದವರೆಂದು ಕರೆದಿರುವ ಸಾಧ್ಯತೆ ಇದೆ.

೩. ನಾಯಕ (ಬೇಡ) ಜನಾಂಗದಲ್ಲಿ **ಬೆಡಗು** ಎಂಬ ಪದ ಬಳಕೆಯಲ್ಲಿದೆ. ಇದು ಬೇಡ ಜಾತಿಯ ಶಬ್ದ. ಇದು ಶುದ್ಧ ದ್ರಾವಿಡ ಶಬ್ದ (ವೇಡನ್+ಕು+ವೇಡಂಕು>ವೇಡಂಗು>ಬೇಡಂಗು>ಬೆಡಗು) ಬ್ರಾಹ್ಮಣತನಕ್ಕೆ ಬ್ರಾಹ್ಮಣ್ಯವೆಂದು ಹೆಸರು. ಹಾಗೆಯೇ ಬೇಡನ ಬೇಡತನಕ್ಕೆ 'ಬೆಡಗು' ಎಂದು ಕರೆಯುತ್ತಾರೆಂದು ಪ್ರೊ. ಎಂ. ವಿ. ಚಿತ್ರಲಿಂಗಯ್ಯನವರು ಅಭಿಪ್ರಾಯಪಡುತ್ತಾರೆ).

೪. ಕಪಟರಾಳ ಕೃಷ್ಣರಾವ್, **ಸುರಪುರ ಸಂಸ್ಥಾನ ಇತಿಹಾಸ,** ೧೯೭೭, ಪುಟ ೩.

೫. **ಅದೇ,** ಪುಟ ೧.

೬ ಮುದಗಲ್ಲಿನಲ್ಲಿ **ಐದು ಪೇಟೆ**ಗಳಿದ್ದವು. ಅವುಗಳೆಂದರೆ ಸೋಮವಾರಪೇಟೆ, ವೆಂಕಟರಾಯಪೇಟೆ, ಗೋಸಲರಾಯಪೇಟೆ, ಹಳೇಪೇಟೆ (ಪುರಾನಪೇಟೆ) ಹಾಗೂ ಮೇಗಳ ಪೇಟೆ (ಉಪರ್‌ಪೇಟೆ) ಇಂದಿಗೂ ಈ ಪೇಟೆಗಳು ಮುದಗಲ್ಲಿನಲ್ಲಿದ್ದು, ಜನರು ಈ ಹೆಸರಿನಿಂದ ಕರೆಯುತ್ತಾರೆ.

೭. ಇದು ಕೃಷ್ಣಾ ಮತ್ತು ಭೀಮಾ ನದಿಗಳ ಪ್ರದೇಶವಾಗಿದೆ. ಇಂದಿನ ಸುರಪುರ, ಶಹಪುರ ಹಾಗೂ ಜೇವರ್ಗಿ ತಾಲ್ಲೂಕುಗಳನ್ನೊಳಗೊಂಡಿದೆ. ರಾಷ್ಟ್ರಕೂಟರು ಮತ್ತು ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಇದೊಂದು ಪ್ರಾದೇಶಿಕ ಘಟಕವಾಗಿತ್ತು. ಕೆಲವು ಶಾಸನಗಳಲ್ಲಿ ಸಗರ-೩೦೦, ಸಗರ-೫೦೦ ಎಂಬ ಉಲ್ಲೇಖಗಳು ಬರುತ್ತವೆ. ಅಂದಿನ ಸಗರನಾಡಿನ ಗಡಿರೇಖೆಗಳೆಂದರೆ ಪೂರ್ವದಲ್ಲಿ ಎಡದೊರೆ-೨೦೦೦, ತರ್ದವಾಡಿ ಸಾಸಿರ, ಉತ್ತರದಲ್ಲಿ ಅಲಂದೆ ಸಾಸಿರ ಹಾಗೂ ದಕ್ಷಿಣದಲ್ಲಿ ಕರಡಿಕಲ್ಲು-೩೦೦ ಪ್ರದೇಶಗಳಿದ್ದವು.

೮. ಕಪಟರಾಳ ಕೃಷ್ಣರಾವ್, **ಪೂರ್ವೋಕ್ತ,** ೧೯೭೭, ಪುಟ ೧.

೯. ಡಾ. ಬಸವಲಿಂಗ ಸೊಪ್ಪಿಮಠರು **'ಕೊಡೇಕಲ್ಲಿನ ಬಸವಣ್ಣ: ಒಂದು ಅಧ್ಯಯನ'** ಕೃತಿಯಲ್ಲಿ ಪುಟ-೪೮ರಲ್ಲಿ ಈ ರೀತಿ ಅಭಿಪ್ರಾಯಪಡುತ್ತಾರೆ. **"**ಕೊಡೇಕಲ್ಲಿನ ಹನುಮನಾಯಕನ ಕಾಲವನ್ನು ಕಪಟರಾಳ ಕೃಷ್ಣರಾವ್‌ರವರು ನಿರ್ಧರಿಸಿಲ್ಲವಾದರೂ, ಸುರಪುರ ಅರಸು ಮನೆತನಕ್ಕೆ ಸೇರಿದ ಗಡ್ಡಿಪಿಡ್ಡನಾಯಕನೆಂಬಾತನ ಕಾಲವನ್ನು ಸು. ಕ್ರಿ.ಶ.೧೬೩೯ ರಿಂದ ೧೬೬೬ ಎಂದು, ವಿಜಾಪುರ ಬಾದಶಹರು ಈ ಪಿಡ್ಡನಾಯಕನಿಗೆ ಕೊಟ್ಟ ಮೂರು ಫಾರಸಿ ಸನದುಗಳ ಮೂಲಕ ಅವರೇ ತೀರ್ಮಾನಸಿದ್ದಾರೆ. ಗಡ್ಡಿಪಿಡ್ಡನಾಯಕನಿಂದ ೧೦ ತಲೆ ಹಿಂದೆ ಕಲ್ಲಪ್ಪ ನಾಯಕ (ಕೋಡೆಕಲ್ ಹನುಮನಾಯಕನ ತಂದೆ)ನಿದ್ದಾನೆ. ಗಡ್ಡಿಪಿಡ್ಡನಾಯಕನ ಕಾಲ ಸು. ಕ್ರಿ.ಶ. ೧೬೩೯-೧೬೬೬ ಎನ್ನುವುದಾದರೆ ಅಲ್ಲಿಂದ ೧೦ ತಲೆಮಾರು ಹಿಂದಕ್ಕೆ (೨೫x೧೦) ಹೋದರೆ ಸುಮಾರು ಕ್ರಿ.ಶ. ೧೪೧೬ರಲ್ಲಿ ಕಲ್ಲಪ್ಪನಾಯಕನದ್ದದು ಗೊತ್ತಾಗುತ್ತದೆ. ಹಾಗಾದರೆ ಈತನ ಮಗನಾದ ಕೊಡೇಕಲ್ ಹನುಮನಾಯಕನು ಸು. ಕ್ರಿ.ಶ. ೧೪೪೧ರಲ್ಲಿ ಇದ್ದಿರಬಹುದೆಂದು ತಿಳಿಯಬಹುದು. ಇದು ಹೆಚ್ಚು ಕಡಿಮೆ ಕೊಡೇಕಲ್ ಬಸವನ ಕಾಲ ಕ್ರಿ.ಶ.೧೪೮೯ಕ್ಕೆ ಹೊಂದಿಕೊಳ್ಳುತ್ತಿದ್ದು, ಕೊಡೇಕಲ್ ಬಸವ ಕ್ರಿ.ಶ. ೧೪೮೯ರಲ್ಲಿ ಜೀವಿಸಿದ್ದುದು ಖಚಿತಪಡುತ್ತದೆ.

೧೦. ಎಚ್. ಎಂ. ಮಲ್ಲಿಕಾರ್ಜುನ ಸಿದ್ಧಾಂತಿಗಳು, **ನಂದಿಯಾಗಮಲೀಲೆ,** ೧೯೧೩, ಪುಟ ೨೧-೨೨.

೧೧. **ಅದೇ,** ಪುಟ ೧೫, ಪದ್ಯ ೨೮.

೧೨. **ಅದೇ,** ಪುಟ ೧೫, ಪದ್ಯ ೧೭ ಮತ್ತು ೧೮.

೧೩. ಡಾ. ಬಸವಲಿಂಗ ಸೊಪ್ಪಿಮಠ, **ಕೊಡೇಕಲ್ಲ ಬಸವಣ್ಣ: ಒಂದು ಅಧ್ಯಯನ,** ೧೯೯೫, ಪುಟ ೬೫.

೧೪. ಕಪಟರಾಳ ಕೃಷ್ಣರಾವ್, **ಪೂರ್ವೋಕ್ತ,** ಪುಟ ೯-೧೦.

ಕೂಹುಂಡಿನಾಡು

ಡಾ. ಅಪ್ಪಣ್ಣ ಎನ್. ಹಂಜೆ*

ಕರ್ನಾಟಕದ ತುಂಗಭದ್ರೆಯ ಆಚೆಗಿನ ಪ್ರದೇಶವನ್ನು ಶಾಸನಗಳು ಹಾಗೂ ಕಾವ್ಯಗಳಲ್ಲಿ ಕುಂತಳನಾಡೆಂದು ಕರೆಯಲಾಗಿದೆ. ಈ ಕುಂತಳನಾಡಿನಲ್ಲಿ ಅನೇಕ, ನಾಡುಗಳು ಅಂತರ್ಗತವಾಗಿದ್ದವು. ಅವುಗಳಲ್ಲಿ ಕೂಹುಂಡಿನಾಡೂ ಒಂದು. ಈ ಕೂಹುಂಡಿನಾಡಿನ ಅಸ್ತಿತ್ವ, ಹರವು ಮೊದಲಾದವುಗಳ ಬಗ್ಗೆ ವಿವರಿಸುವುದೇ ಈ ಲೇಖನದ ಉದ್ದೇಶವಾಗಿದೆ.

ಆರ್.ಸಿ. ಹಿರೇಮಠ ಮತ್ತು ಎಂ.ಎಂ. ಕಲಬುರ್ಗಿ ಅವರು ಕೂಹುಂಡಿನಾಡಿನ ಮೇರೆಗಳಿಗೆ ಸಂಬಂಧಿಸಿದಂತೆ "ಉತ್ತರಕ್ಕೆ ಕೃಷ್ಣಾನದಿ (ಕರಹಡ ನಾಲ್ಸಾಸಿರ ಹಾಗೂ ಮಿರಿಂಜೆ ಮೂಸಾಸಿರ). ದಕ್ಷಿಣಕ್ಕೆ ಮಲಪ್ರಭಾ ನದಿ (ಪಲಸಿಗೆ ಪನ್ನಿರ್ಚ್ಛಾಸಿರ ಪೂರ್ವಕ್ಕೆ ತೊರಗಲೆನಾಡು (ತೊರಗಲ್ಲು ಆರುಸಾವಿರ) ಮತ್ತು ಬೆಳ್ವೊಲ ಮುನ್ನೂರು ಆಡಳಿತ ವಿಭಾಗಗಳ ಗಡಿ, ಪಶ್ಚಿಮದ ಮೇರೆ ನಿಶ್ಚಿತವಾಗಿ ಗೊತ್ತಾಗುವುದಿಲ್ಲ. ಈ ಮೇರೆ ಮಧ್ಯದ ಪ್ರದೇಶವೆಂದರೆ ಈಗಿನ ಬೆಳಗಾವಿ ಜಿಲ್ಲೆ, ಮಹಾರಾಷ್ಟ್ರಕ್ಕೆ ಸೇರಿರುವ ಚಂದಗಡ ತಾಲ್ಲೂಕು" ಎಂದು ಸೂಚಿಸಿದ್ದಾರೆ.[೧] ನಂತರದ ಬಹುತೇಕ ಸಂಶೋಧಕರು ಈ ಮೇರೆಗಳಲ್ಲಿಯೇ ಕೂಹುಂಡಿನಾಡಿನ ವ್ಯಾಪ್ತಿಯನ್ನು ಗುರುತಿಸಲು ಪ್ರಯತ್ನಿಸಿದ್ದಾರೆ[೨]. ಆದರೆ ಕೂಹುಂಡಿನಾಡಿಗೆ ಸಂಬಂಧಿಸಿದಂತೆ ಪ್ರಸ್ತುತ ಲಭ್ಯವಿರುವ ಶಾಸನಗಳ ಹಿನ್ನೆಲೆಯಲ್ಲಿ ಈ ನಾಡಿನ ವ್ಯಾಪ್ತಿಯನ್ನು ಗಮನಿಸಿದರೆ, ಈ ನಾಡು ಇಂದಿನ ಬೆಳಗಾವಿ ಜಿಲ್ಲೆಯ ಬೈಲಹೊಂಗಲ (ಉತ್ತರಭಾಗ), ಸವದತ್ತಿ (ಉತ್ತರಭಾಗ), ರಾಮದುರ್ಗ (ಪಶ್ಚಿಮಭಾಗ), ರಾಯಭಾಗ, ಚಿಕ್ಕೋಡಿ ಹುಕ್ಕೇರಿ, ಗೋಕಾಕ, ಬೆಳಗಾವಿ, ಬಾಗಲಕೋಟ ಜಿಲ್ಲೆಯ ಜಮಖಂಡಿ ಮುಧೋಳ, ಬಾಗಲಕೋಟ ತಾಲ್ಲೂಕುಗಳ ಪಶ್ಚಿಮ ಭಾಗಗಳು. ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯ ಚಂದಗಡ, ಅಜರಾ, ಗಡಹಿಂಗ್ಲಜ, ಶಿರೋಳ ತಾಲ್ಲೂಕುಗಳು, ಸಾಂಗಲಿ ಜಿಲ್ಲೆಯ ಪಶ್ಚಿಮಭಾಗ, ಸಾತಾರ ಜಿಲ್ಲೆಯ ದಕ್ಷಿಣ ಭಾಗದಲ್ಲಿ ವಿಸ್ತಾರವಾಗಿತ್ತೆಂದು ತೋರುತ್ತದೆ. ಈ ನಿಟ್ಟಿನಲ್ಲಿ ಇನ್ನೂ ತಲಸ್ಪರ್ಶಿ ಅಧ್ಯಯನಕ್ಕೆ ಅವಕಾಶವಿದೆ. ಈ ನಾಡಿನ ಪ್ರದೇಶದಲ್ಲಿ ಇದುವರೆಗೂ ಬೆಳಕಿಗೆ ಬಂದಿರುವ ಮಾನಪುರದ ರಾಷ್ಟ್ರಕೂಟರ ಆಳ್ವಿಕೆಯ ಕಾಲದಿಂದ ದೇವಗಿರಿ ಸೇವುಣರು ಅಂತ್ಯದವರೆಗೂ ಅಂದರೆ ಕ್ರಿ.ಶ. ಸುಮಾರು ೫ನೆಯ ಶತಮಾನದಿಂದ ೧೩ನೆಯ ಶತಮಾನದ ಪೂರ್ವಾರ್ಧ ದವರೆಗಿನ ಸುಮಾರು ೧೮೦ಕ್ಕೂ ಹೆಚ್ಚು ಶಾಸನಗಳು ಈ ಕೂಹುಂಡಿ ನಾಡಿನ ಚರಿತ್ರೆ ಮತ್ತು ಸಾಂಸ್ಕೃತಿಕ ಹಿರಿಮೆಯನ್ನು ವಸ್ತುನಿಷ್ಠವಾಗಿ ರೂಪಿಸಲು ಪ್ರಾಥಮಿಕ ಆಕರಗಳಾಗಿವೆ.

ಕೂಹುಂಡಿನಾಡಿನ ಪ್ರದೇಶವು ಉತ್ತಮ ಭೌಗೋಳಿಕ ಪರಿಸರ ಮತ್ತು ನೈಸರ್ಗಿಕ ಸಂಪನ್ಮೂಲಗಳಿಂದ ಸಂಪದ್ಭರಿತ ವಾಗಿತ್ತು. ಅಂತಾಗಿ ಈ ಪ್ರದೇಶದ ಶಾಸನಗಳು ಮತ್ತು ಸಮಕಾಲೀನ ಕೃತಿ-ಕಾವ್ಯಗಳು ಈ ನಾಡಿನ ಪ್ರಾಕೃತಿಕ ಸೌಂದರ್ಯ, ಸಂಸ್ಕೃತಿ, ಹಿರಿಮೆ, ಆಡಳಿತ ವಿಭಾಗಗಳು, ಅಗ್ರಹಾರಗಳು ಇತ್ಯಾದಿ ಸಂಗತಿಗಳನ್ನು ವಿವಿಧ ಬಗೆಯಲ್ಲಿ ಬಣ್ಣಿಸಿವೆ. ಸವದತ್ತಿ ರಟ್ಟರ ೪ನೆಯ ಕಾರ್ತವೀರ್ಯನ ಮಾಂಡಳಿಕ ಗೊಂಕದೇವರಸನ ಜಮಖಂಡಿ ತಾಲ್ಲೂಕಿನ ತೇರದಾಳದ ಕ್ರಿ.ಶ. ೧೧೮೭ರ ಶಾಸನವು-

> **ಕುನ್ತಳವಿಷಯದೊಳು ಗ್ರಾಮನಗರಖೇಡಕರ್ವ್ವಡಮಡಂಬ ದ್ರೋಣಾಮುಖಪತ್ತಣಂಗಳಿಂದಮನೇಕಮಾಟಕೂಟ ಪ್ರಾಸಾದದೇವಾಯತನಂಗಳಿಂದಮೊಪ್ಪುವಗ್ರಹಾರ ಪಟ್ಟಣಂಗಳಿಂದಮತಿಶಯವಪ್ಪ ಶ್ರೀಮತು ಕೂಂಡಿ ಮೂಱುಸಾಸಿರದೊಳಗೆ................||**

ಎಂದು ಕುಂತಳದೇಶದಲ್ಲಿದ್ದ ಕೂಹುಂಡಿನಾಡಿನ ಭೌಗೋಳಿಕ ಮತ್ತು ಸಾಂಸ್ಕೃತಿಕ ವೈಭವವನ್ನು ಸೊಗಸಾಗಿ ವರ್ಣಿಸಿದೆ[೩]. ಸವದತ್ತಿ ರಟ್ಟರ ೪ನೆಯ ಕಾರ್ತವೀರ್ಯನ ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನವು-

> **ಜಂಬೂದ್ವೀಪದ ಭರತದೊಳಂಬುಜಭವಸಾರಸೃಷ್ಟಿ ಕೂಂಡಿಮಹೀಚಕ್ರಂ ಬಗೆಗೊಳಿಪುದು ಸಕಳಜನಾಂಬಕಘನ ಸುಕೃತಫಳವಿಲಾಸನಿವಾಸಂ ||**

ಜಂಬೂದ್ವೀಪದ ಭರತದಲ್ಲಿದ್ದ ಕೂಹುಂಡಿನಾಡನ್ನು ಮನದುಂಬಿ ಬಣ್ಣಿಸಿದೆ[೪]

ಸವದತ್ತಿ ರಟ್ಟರ ಇಮ್ಮಡಿ ಕಾರ್ತವೀರ್ಯನ ಬೈಲ ಹೊಂಗಲ ತಾಲ್ಲೂಕಿನ ಹಣ್ಣಿಕೇರಿಯ ಕ್ರಿ.ಶ. ೧೨೯೮ರ ಶಾಸನವು-

* ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ, ಗದಗ-೫೮೨೧೦೧.

ಶ್ರೀಮಜ್ಜಂಬೂದ್ವೀಪದ ಭೂಮಧ್ಯ ಸ್ತಂಭವೆನಿಸಿ
ಮಂದರಶೈಲಂ
ಆ ಮಂದರ ದಕ್ಷಿಣದಿಗ್ಭೂಮಂಡಳಮೆಸೆಗು ಭರತನಾಮ
ದಿನೆಂದುಂ॥
ಅನ್ತನೇಕ ಮಣಿಗಣಭರಿತ ಭರತಕ್ಷೇತ್ರದೊಳು ಸಮಸ್ತವಸ್ತು
ವಿಸ್ತೀರ್ಣ್ನ
ನಾನಾಜನಪದಬ್ಯಾಕೀರ್ಣ್ನ ಗ್ರಾಮನಗರ ಖೇಡಖರ್ಬ್ಬಡಾ
ದಿನಗರೀ
ಸಂಪೂರ್ಣ್ನ ತ್ರಿಸಹಸ್ರ ಕೂಂಡಿ ಮಂಡಳಮಧ್ಯಪ್ರದೇಶ
ಮನಳಂಕರ್ಸಿ
ಪ್ರಾಜ್ಯರಾಜ್ಯಲಕ್ಷ್ಮೀವಿಳಾಸಾವಾಸಕಾಶ್ರಯವಾಗಿ ಸೊಗಯಿ
ಸುವ
ವೇಣುಗ್ರಾಮಮಹಾಗ್ರಾಮದೊಳೂ ॥

ಜಂಬೂದ್ವೀಪದ ಮಧ್ಯದಲ್ಲಿ ಸ್ತಂಭವೆನಿಸಿದ ಮಂದರ ಶೈಲದ ದಕ್ಷಿಣದ ಭರತಕ್ಷೇತ್ರದಲ್ಲಿರುವ ಕೂಹುಂಡಿನಾಡಿನ ವೈಭವವನ್ನು ಸೊಗಸಾಗಿ ವರ್ಣಿಸಿದೆ[೫]. ಅದೇ ಮನೆತನದ ೪ನೆಯ ಕಾರ್ತವೀರ್ಯನ ಬೈಲಹೊಂಗಲ ತಾಲ್ಲೂಕಿನ ನೇಸರಗಿಯ ಕ್ರಿ.ಶ. ೧೨೧೯ರ ಶಾಸನವು–

ಬೆಳೆಸೆಂದುಂ ಕುಂದದಂತಾ ವಿಘುಳಫಲಚಯಂ
ಕ್ಷೇಮಧ್ಯಾನಂ
ಸ್ವಮಾರ್ಗ್ಗೋಜ್ವಳಧರ್ಮ್ಮಜ್ಯಾಯರೆಲ್ಲಂ ತಮತಮಗೆ
ನರಸ್ವಾರ್ಶ್ವತೈರ್ಯ್ಯಭೋಗಾವಳಿ ಸತ್ಯತ್ಯಾಗ
ಶೌರ್ಯ್ಯೋಂನತಿ
ಸತತವೊಂದಿರ್ಪ್ಪವೆಂದುಂ ತದುರ್ವ್ವೀತಳನಾಥರ್ಗ್ಗೆಂದಡಾ
ಭುಜರ ಮಹಿಮೆಯಂ ಬಣ್ಣಿಸಲು ಬಲ್ಲನಾವಂ ॥
ಕೂಹುಂಡಿನಾಡಿನ ಹಿರಿಮೆಯನ್ನು ಕೊಂಡಾಡಿದೆ.[೬]

ಸವದತ್ತಿ ರಟ್ಟರ ೪ನೆಯ ಕಾರ್ತವೀರ್ಯನ ಗೋಕಾಕ ತಾಲ್ಲೂಕಿನ ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನವು–

ವಿಳಸಿತವಿಪುಳಾಮೃತಗೋ
ಕುಲದಿಂದಂ ಸಕಳಸಸ್ಯಸಂಪದದಿಂ ನಿ
ರ್ಮ್ಮಳವರ್ಣ್ನದಿಂದೆ ವಿಧು
ಮಂಡಳದಂತಿರೆ ಕೊಂಡಿಮಂಡಳಂ ಕಣ್ಗೊಳಿಕಂ ॥

ಕೂಹುಂಡಿನಾಡು ಸಕಲ ಸಸ್ಯ ಸಂಪತ್ತಿನಿಂದ ಕಂಗೊಳಿಸುತ್ತಿತ್ತೆಂದು ವರ್ಣಿಸಿದೆ.[೭] ದೇವಗಿರಿ ಸೇವುಣರ ಕನ್ನರದೇವನ ಗೋಕಾಕ ತಾಲ್ಲೂಕಿನ ಮಮದಾಪುರದ ಕ್ರಿ.ಶ. ೧೨೪೬ರ ಶಾಸನವು–

ತನಮಧ್ಯೇ ಭಾತಿ ಮೇರುನ್ನಪಂ ಸುಮನೋಹರಮ್ಯಚಾರುರ
ದ್ವೀಪಸ್ಥದ ದಕ್ಷಿಣಾಶ್ಯಾಮುಧೀ ವಸತಿಪುರಾಜಾತ
ಜಂಬೂಸಮಾನಃ ॥
ತಜ ಜಂಬೂದ್ವೀಪಮಧ್ಯೇ ವಿಳಸತಿ ಭರತಕ್ಷೇತ್ರ
ಮಾನಂದಪಾತ್ರಂ
ತತ್ರಾಸ್ತೇ ಕುಂತಳೋರ್ಬ್ಬೀ ಜನಜನಿತಯುಳಶ್ರೀ
ಸುಕಾಗಾರಗುರ್ಬ್ಬಿ ॥
ತಸ್ಮಿನ ಸುಷ್ಮೇರಲಕ್ಷ್ಮೀಮುದಿತ ಜನಪದಾಗನ್ಯ
ಪುಣ್ಯೈಕಕೋಶಃ ಸಂಪತಸಂಪೂರಿತಾಶಃ ॥
ದೇಶೀತತ್ರಚರಾಸ್ತಿ ವಾಸ್ತವಾಜನ ಶ್ರೀವರ್ತ್ತನಂ
ಪಟ್ಟಣಂ ಪೂರ್ಣನೇಕ ತಟಾಕರೂಪ
ಸರಸೀ ಸಂಪತ್ತಿ ಶೋಭಾಸ್ಪದಂ ॥
ಯತಸರ್ಬ್ಬತ್ರ ಲತಾಂತ ಪಲ್ಲವಫಲ ಕ್ಷೋಣಿರ್ಮ್ಯ
ರ್ಬ್ಬರಂ ತ್ರಿಂಶದ ಗ್ರಾಮವರಾಧಿ ಗಿರಿನಾಮ
ಶ್ರೀಮತಾವ್ಯಶ್ರಯಃ ॥
ತದಿಹ ಕುರುಂಬೆಟ್ಟ ಮಯಿಲೆ ಪ್ರಖ್ಯಾತ
ಲೋಕಭಾಸ್ಯಾಯಾ ನಗರಂ ॥

ಎಂದು ಕೂಹುಂಡಿನಾಡಿನ ಭೌಗೋಳಿಕ ವ್ಯಾಪ್ತಿ, ಸಾಂಸ್ಕೃತಿಕ ಹಿರಿಮೆ ಮತ್ತು ಇಲ್ಲಿದ್ದ ಆಡಳಿತ ವಿಭಾಗಗಳನ್ನು ಸವಿಸ್ತಾರವಾಗಿ ವರ್ಣಿಸಿದೆ.[೮]

ಕೂಹುಂಡಿನಾಡಿನ ಪೂವಿನಬಾಗೆಯ (ಇಂದಿನ ರಾಯಭಾಗ) ಪ್ರಸಿದ್ಧ ಗಣಿತಜ್ಞನಾದ ಜೈನಕವಿ ರಾಜಾದಿತ್ಯನು ತನ್ನ 'ವ್ಯವಹಾರಗಣಿತ'ದಲ್ಲಿ (ಕ್ರಿ.ಶ. ೧೧೯೦)–

ವನತತಿಯಿಂನದಿನದ ಕುಭೃತ್ಕುಲದಿಂಧನಧಾನ್ಯವರ್ಗದಿಂ
ಜನಪದರಾಜಿಯಿಂ ಬೆಳೆವಕೆಯ್ವೊಲದಿಂದೆಸೆವೊರ್ಗಳಿಂಜಗ॥
ಜ್ಜನನುತಜೈನಧರ್ಮದ ನೆಗಳ್ತೆಯೊಳಿಂಬಿನ ಕೂಂಡಿ
ಮಂಡಲ
ಕ್ಕನುಪಮರತ್ನ ಮಂಡನವೆನಿಪ್ಪುದು ಪೂವಿನಬಾಗೆ ಸಂತತಂ॥

'ಉದ್ಯಾನವನಗಳು, ಉನ್ನತವಾದ ಕುಲದವರು, ಧನ–ಧಾನ್ಯಗಳ ಸಂಪತ್ತನ್ನು ಹೊಂದಿದ ಕೂಹುಂಡಿನಾಡಿನ ಪ್ರಜೆಗಳು ಸಂತೋಷದಿಂದಿದ್ದರು. ಈ ನಾಡಿನಲ್ಲಿ ಜೈನ ಧರ್ಮದ ಪ್ರಭಾವವು ತುಂಬಿ ತುಳುಕುತ್ತಿತ್ತು' ಎಂದು ವರ್ಣನೆ ಮಾಡುವುದರ ಜೊತೆಗೆ, 'ಈ ನಾಡನ್ನು ನಾನು ಏನೆಂದು ಹೊಗಳಲಿ' ಎಂದು ಕೂಂಡಿಮಂಡಲದ ಸಿರಿಯನ್ನು ಮನದುಂಬಿ ಬಣ್ಣಿಸಿದ್ದಾನೆ.[೯] ಜೈನಕವಿ ಬ್ರಹ್ಮಶಿವನು ತನ್ನ 'ಸಮಯಪರೀಕ್ಷೆ'ಯಲ್ಲಿ (ಕ್ರಿ.ಶ. ೧೧೯೦) ಜೈನ ಆಚಾರ್ಯರು ಮತ್ತು ಐತಿಹಾಸಿಕ ವ್ಯಕ್ತಿಗಳನ್ನು ಸ್ತುತಿಸುತ್ತ–

ಪ್ರವಿಮಳಜಿನಶಾಸನದಿಂ
ಪ್ರವಿತ್ರಮೆನೆ ಮಾಡಿ ಕೂಂಡಿಮೂಸಾಸಿರಮಂ ।
ಭುವನನುತನಾದನಾತ್ಮೀ
ಯ ವಚೋಮೃತದಿಂದೆ ಪೇಳ್ದೆ ಪೆರ್ಗ್ಗಡೆ ಬೊಮ್ಮಂ ॥
ಆ ವಿಭುವಿನಗ್ರತನಯಂ
ಪಾವನ ಚರಿತಂ ವಿನೇಯಕಲ್ಪಮಹೀಜಂ ।
ಕೇವಳಮೆ ನಾಗದೇವಂ
ಭೂಮಿಶ್ರುತ ಕೀರ್ತ್ತಿಮಂಡಳೇಶ್ವರ ತಿಲಕಂ ॥

ಎಂದು ಕೂಹುಂಡಿನಾಡಿನ ಪೆರ್ಗ್ಗಡೆ ಬೊಮ್ಮ ಮತ್ತು ನಾಗದೇವ ಮಂಡಳೇಶ್ವರನನ್ನು ಕೊಂಡಾಡಿದ್ದಾನೆ.[೧೦] ಆದರೆ ಇವರಿಬ್ಬರ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ.

ಕೂಹುಂಡಿನಾಡಿನ ಪ್ರಪ್ರಥಮ ಪ್ರಸ್ತಾಪವು ಮಾನಪುರದ ರಾಷ್ಟ್ರಕೂಟರ[೧೧] ಅವಿಧೇಯನ (ಕ್ರಿ.ಶ. ೪೪೦–೪೫೫) ಸತಾರಾ ಜಿಲ್ಲೆಯ ಮಾನ ತಾಲ್ಲೂಕಿನ ವಳಯಿಯ ಕ್ರಿ.ಶ. ೪೪೯ರ ತಾಮ್ರಪಟ ಶಾಸನದಲ್ಲಿ ಗೋಚರಿಸುತ್ತದೆ.[೧೨] ಅಂದು ಇದನ್ನು 'ಕುಣ್ಡಿದೇಶ' ಎಂದು ಕರೆಯಲಾಗಿದೆ. ಬಾದಾಮಿ ಚಲುಕ್ಯರ ೧ನೆಯ ಪೊಲೆಕೇಶಿಯ ಕ್ರಿ.ಶ. ೪೮೯–೯೦ರ ತಾಮ್ರಪಟ ಶಾಸನದಲ್ಲಿ (ಇದು ಈಗ ಲಂಡನ್‌ದ ಬ್ರಿಟಿಷ್ ವಸ್ತುಸಂಗ್ರಹಾಲಯದಲ್ಲಿದೆ) ಕುಹುಣ್ಡಿವಿಷಯ, ೧ನೆಯ ವಿಕ್ರಮಾದಿತ್ಯನ ಧಾರವಾಡದ ಕ್ರಿ.ಶ.೬೬೯ರ ತಾಮ್ರಪಟ ಶಾಸನದಲ್ಲಿ ಕೂಹುಣ್ಡಿವಿಷಯ, ಬಾದಾಮಿ ತಾಲ್ಲೂಕಿನ ಚೋಳಚಗುಡ್ಡದ ಕ್ರಿ.ಶ.೭೦೫ರ ತಾಮ್ರಪಟ ಶಾಸನದಲ್ಲಿ ಕೂಹುಣ್ಡಿನಗರದ ಪ್ರಸ್ತಾಪಗಳಿವೆ.[೧೩] ಮಳಖೇಡದ ರಾಷ್ಟ್ರಕೂಟರು, ಸವದತ್ತಿ ರಟ್ಟರು, ಕೊಲ್ಲಾಪುರದ ಶಿಲಾಹಾರರು, ದೇವಗಿರಿ ಸೇವುಣರ ಕಾಲಾವಧಿಯ ಹಲವು ಶಾಸನಗಳು ಮತ್ತು ರಾಜಾದಿತ್ಯನ ವ್ಯವಹಾರಗಣಿತ, ಪಾರ್ಶ್ವಪಂಡಿತನ ಪಾರ್ಶ್ವನಾಥ ಪುರಾಣ, ಬ್ರಹ್ಮಶಿವನ ಸಮಯಪರೀಕ್ಷೆ ಇತ್ಯಾದಿ ಕೆಲವು ಕೃತಿ–ಕಾವ್ಯಗಳಲ್ಲಿ ಕುಹುಣ್ಡಿ ವಿಷಯ, ಕುಂಡಿವಿಷಯ, ಕೂಂಡಿಕಸಾಸಿರ, ಕಷ್ಮಾಂಡಿವಿಷಯ, ಕುಂಡಿದೇಶ, ಕುಹುಣ್ಡಿದೇಶ, ಕೂಂಡಿಮಂಡಳ, ಕುಹುಣ್ಡಿಮಂಡಲ, ಕೂಹುಂಡಿಮಂಡಳ, ಕೂಂಡಿನಾಡು, ಕೂಹುಂಡಿನಾಡು, ಕೂಂಡಿಮೂಸಾಸಿರ, ಕೂಹುಂಡಿ ಮೂರುಸಾವಿರ, ಕೂಹೂಂಡಿ ತ್ರಿಸಹಸ್ರ, ಕೂಹುಂಡಿ–೩೦೦೦, ಕೂಂಡಿರಾಜ್ಯ ಎಂದೆಲ್ಲ ದಾಖಲಾಗಿದೆ. ಈ ನಾಡಿನ ಹೆಸರಿನ ಹಿನ್ನೆಲೆ, ವ್ಯಾಪ್ತಿ, ಮತ್ತು ಕೇಂದ್ರ ಪಟ್ಟಣ ಯಾವುದೆಂಬ ವಿಚಾರವಾಗಿ ಮತ್ತು ಅದನ್ನು ಗುರುತಿಸಲು ಜೆ.ಎಫ್. ಫ್ಲೀಟ್. ಪಿ.ಬಿ. ದೇಸಾಯಿ, ಶ್ರೀನಿವಾಸ ರಿತ್ತಿ, ಎಸ್.ಸಿ. ನಂದಿಮಠ, ಎಚ್.ಎಸ್. ಥೊಸಾರ ವಿ.ವಿ. ಮಿರಾಶಿ, ಎಂ.ಬಿ. ನೇಗಿನಹಾಳ, ಆರ್.ಸಿ. ಹಿರೇಮಠ, ಎಂ.ಎಂ. ಕಲಬುರ್ಗಿ ಹಂಪ ನಾಗರಾಜಯ್ಯ, ಆರ್.ಎನ್. ಗುರವ, ಹನುಮಾಕ್ಷಿಗೋಗಿ ಮೊದಲಾದ ಕೆಲವು ಸಂಶೋಧಕರು ಪ್ರಯತ್ನಿಸಿದ್ದಾರೆ.

ಈ ನಿಟ್ಟಿನಲ್ಲಿ ಜೆ.ಎಫ್. ಫ್ಲೀಟ್ ಅವರು "There was a town named Kuhundipattana from which the country took its name. It is mentioned in an inscription of A.D. 1135 at Kolhapur. The record names among the persons who made the grant, the Heggade Ravasetti who was the Sasaniga of the Aditygriha of Kundipattana. The town has to be looked for in the Belgeum dist. in the Kolhapur territory. But I cannot as yet find it. And we shall probably eventually identify it with some place now posessing a totally different name. Any genuine tradition which might have helped us to identify and locate the town of Kuhundipattana seems to have been lost" ಎಂದು ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ.[೧೫] ಪಿ.ಬಿ. ದೇಸಾಯಿ ಅವರು "ಇಂದಿನ ಬೆಳಗಾವಿ ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶವು ಹಿಂದೆ ಕೂಂಡಿಮಂಡಲ ಅಥವಾ ಕೂಹುಂಡಿಮಂಡಲ ಎಂದು ಕರೆಯಲ್ಪಡುತ್ತಿತ್ತು. ಇಲ್ಲಿ ಜೈನ ಧರ್ಮಕ್ಕೆ ವಿಶೇಷ ಬೆಂಬಲ ನೀಡಿದ ಕೊಲ್ಲಾಪುರದ ಶಿಲಾಹಾರರು ಮತ್ತು ಸವದತ್ತಿ ರಟ್ಟರು ಆಳುತ್ತಿದ್ದರು" ಎಂದು ಅಭಿಪ್ರಾಯ ಪಟ್ಟಿದ್ದಾರೆ.[೧೬] ಶಿಲಾಗಾರರ ಶಾಸನಗಳನ್ನು ಸಾಕಷ್ಟು ಅಧ್ಯಯನ ಮಾಡಿರುವ ವಿ.ವಿ. ಮಿರಾಶಿ ಅವರು "Kundi desha comprised the region round modern Belgaum. Kundi Pattana is probably Knndalapur in the Miraj Taluka" ಎಂದು ಅಭಿಪ್ರಾಯಪಟ್ಟಿದ್ದಾರೆ.[೧೭]

ಎಂ.ಎಂ. ಕಲಬುರ್ಗಿ ಅವರು "ಕೂಂಡಿಮೂಸಾಸಿರ, ಕುಹುಣ್ಡಿವಿಷಯ, ಕೂಂಡಿತ್ರಿಸಹಸ್ರ ಇತ್ಯಾದಿ ಹೆಸರುಗಳಿಂದ ಶಾಸನಗಳಲ್ಲಿ ಪ್ರಸಿದ್ಧವಾಗಿರುವ ಕೂಹುಂಡಿನಾಡಿನ ಮುಖ್ಯ ಪಟ್ಟಣವಾದ 'ಕೂಂಡಿ' ಗೋಕಾಕ–ರಾಯಬಾಗ ತಾಲ್ಲೂಕುಗಳ ನಡುವೆ ಇದ್ದಿರಬಹುದು. ಇದನ್ನು ಗೊತ್ತುಹಚ್ಚುವುದು ಇನ್ನೂ ಸಾಧ್ಯವಾಗಿಲ್ಲ. ಬಹುಶಃ ಚಿಕ್ಕೋಡಿ, ಹಿರೇಕೋಡಿ ಗ್ರಾಮಗಳ ಹೆಸರು ಚಿಕ್ಕಕುಹುಂಡಿ, ಹಿರಿಕುಹುಂಡಿ ಎಂದು ಬಿಡಿಸಿ, ಇವುಗಳಲ್ಲಿ ಒಂದು ಪ್ರಾಚೀನ ಕೂಹುಂಡಿ ಪಟ್ಟಣವಾಗಿರ ಬೇಕೆಂದು ಊಹಿಸಬಹುದಾಗಿದೆ. ಕೊಲ್ಲಾಪುರದ ಕ್ರಿ.ಶ. ೧೧೩೫ರ ಶಾಸನವು ಕೂಹುಂಡಿಪಟ್ಟಣದಲ್ಲಿ ಆದಿತ್ಯಗೃಹ ಎಂದರೆ ಸೂರ್ಯ ದೇವಾಲಯವಿದ್ದುದನ್ನು ಸೂಚಿಸುತ್ತದೆ. ಈ ಸೂಚನೆಯನ್ನು ಆಧಾರವಾಗಿಟ್ಟುಕೊಂಡು ಈ ನಗರವನ್ನು ಇನ್ನೂ ಖಚಿತವಾಗಿ ಹುಡುಕಬಹುದಾಗಿದೆ. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಪಟ್ಟಣಕುಡಿ ಇತ್ಯಾದಿ ಗ್ರಾಮಗಳಲ್ಲಿ ಶೋಧ ನಡೆಸಿ ರಾಜಧಾನಿ ಕೂಹುಂಡಿಯನ್ನು ಹುಡುಕಬೇಕಾಗಿದೆ" ಎಂದು ಸೂಚಿಸಿದ್ದಾರೆ.[೧೮] ದೇವೇಂದ್ರ ದೊಡ್ಡಣ್ಣವರ ಅವರು "ಕೂಹುಂಡಿನಾಡಿನ ಇಂದಿನ ಬೆಳಗಾವಿ ತಾಲ್ಲೂಕಿನ ಸುಳೇಬಾವಿ ರೈಲು ನಿಲ್ದಾಣದಿಂದ ಹುಕ್ಕೇರಿ ತಾಲ್ಲೂಕಿನ ಬೆಲ್ಲದಬಾಗೇವಾಡಿ ರೈಲು ನಿಲ್ದಾಣದವರೆಗಿನ ಪ್ರದೇಶ ಹಾಗೂ ಮಾರ್ಕಂಡೇಯ, ಹಿರಣ್ಯಕೇಶಿ, ಘಟಪ್ರಭಾ ನದಿಗಳ ಪೂರ್ವಭಾಗದ ಪ್ರದೇಶವನ್ನು 'ಕುಂದರನಾಡು' ಎಂದು ಕರೆಯಲಾಗುತ್ತದೆ. ಇದು ಜೈನ ಧರ್ಮದ ಕುಂದಕುಂದಾಚಾರ್ಯರು (ಕ್ರಿ.ಶ. ಸುಮಾರು ೧–೨ನೆಯ ಶತಮಾನ) ವಿಹಾರ ಮಾಡಿದ ಪ್ರದೇಶವಾದ್ದರಿಂದ 'ಕುಂದನಾಡು' ಅಥವಾ 'ಕುಂದರನಾಡು' ಎಂಬ ಹೆಸರು

ಪಡೆದಿದೆ. ಕುಂದ>ಕುಂದರ>ಕುಂಡ>ಕೊಂಡ?ಕೂಹುಂಡಿ ಎಂದು ರೂಪಾಂತರವಾದ ಸಂದರ್ಭಗಳು ಹೆಚ್ಚಾಗಿರುವುದರಿಂದ ಪ್ರಸ್ತುತ ಪ್ರದೇಶದ ಸುತ್ತಮುತ್ತಲಿನ ಭಾಗದಲ್ಲಿ ಕೂಹುಂಡಿ ಪಟ್ಟಣ ಇರುವ ಸಾಧ್ಯತೆಗಳಿವೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ.[೧೯]

ಈ ಮೇಲಿನ ಎಲ್ಲ ವಿದ್ವಾಂಸರ ಅಭಿಪ್ರಾಯಗಳು ಮತ್ತು ಸೂಚನೆಗಳನ್ವಯ ಕೂಹುಂಡಿ ಪಟ್ಟಣವನ್ನು ಗುರುತಿಸಲು ಕೊಲ್ಲಾಪುರದ ಪಾರ್ಶ್ವನಾಥ ಬಸದಿಯಲ್ಲಿರುವ ಶಿಲಾಹಾರರ ಮಾಹಮಂಡಳೇಶ್ವರ ಗಂಡರಾದಿತ್ಯನ ಕ್ರಿ.ಶ. ೧೧೩೫ರ ಶಾಸನದಲ್ಲಿರುವ "ಕೂಂಡಿಪಣ್ಣದಾದಿತ್ಯಗೃಹದ ಸಾಸನಿಗಂ ಹೆಗ್ಗಡೆ ರಾವಸೆಟ್ಟಿಯಂ" ಎಂಬ ಸಾಲು ಏಕೈಕ ಆಧಾರವಾಗಿದೆ. ಈ ರಾವಸೆಟ್ಟಿಯು ಗಂಡರಾದಿತ್ಯನ ಮಹಾಸಾಮಂತನಾದ ನಿಂಬದೇವನು ಕವಡೆಳ್ಳಗೊದ ಬಳಿಯ ಸಂತೆಯ ಮುದ್ಗೊಡೆಯಲ್ಲಿ ಮಾಡಿಸಿದ ಪಾರ್ಶ್ವನಾಥ ಬಸದಿಯ ಪಾರ್ಶ್ವದೇವರ ಅಷ್ಟವಿಧಾರ್ಚನೆ, ಜೀರ್ಣೋದ್ಧಾರ, ಮುನಿಗಳ ಆಹಾರದಾನಕ್ಕೆ ಮೂಲಸಂಘದ ದೇಸಿಯಗಣದ ಪುಸ್ತಕಗಚ್ಛ ಪರಂಪರೆಯ ಕೊಲ್ಲಾಪುರದ ರೂಪನಾರಾಯಣ ಬಸದಿಯ ಸ್ಥಾನಾಚಾರ್ಯನಾದ ಶ್ರುತಕೀರ್ತಿತ್ರೈವಿಧ್ಯದೇವನ ಕಾಲುಗಳನ್ನು ತೊಳೆದು ದಾನ ಮಾಡಿದ್ದಾನೆ.[೨೦] ಹನುಮಾಕ್ಷಿ ಗೋಗಿ ಅವರು ಚಿಕ್ಕೋಡಿ ತಾಲ್ಲೂಕಿನಲ್ಲಿ ಕುಡಿ, ಕೋಡಿ ಪದಗಳಿಂದ ಅಂತ್ಯವಾಗುವ ಹೆಸರುಗಳುಳ್ಳ ಗ್ರಾಮಗಳಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡು ಪಟ್ಟಣಕುಡಿ ಗ್ರಾಮದ ವಿಠ್ಠಲ ದೇವಾಲಯದಲ್ಲಿ ಕ್ರಿ.ಶ. ಸುಮಾರು ೧೧ನೆಯ ಶತಮಾನದ ಆದಿತ್ಯ (ಸೂರ್ಯ) ಶಿಲ್ಪವನ್ನು ಪತ್ತೆಹಚ್ಚಿದ್ದಾರೆ. ಇದು ೧೯೧೫ರಲ್ಲಿ ಸ್ಥಳೀಯ ಶ್ರೀ ಮಾಲಗಾರ, ಅವರ ಹೊಲದಲ್ಲಿ ವಿದ್ಯುತ್ ಕಂಬವನ್ನು ನಿಲ್ಲಿಸಲು ಅಗೆಯುತ್ತಿದ್ದ ಸಂದರ್ಭದಲ್ಲಿ ದೊರೆತಿದೆ.[೨೧] ಈ ಶಿಲ್ಪವೇ ಕೊಲ್ಲಾಪುರದ ಶಾಸನೋಕ್ತ ಕೂಂಡಿಪಟ್ಟಣದ ಆದಿತ್ಯ ದೇವಾಲಯದ ಗರ್ಭಗೃಹದಲ್ಲಿ ಪ್ರತಿಷ್ಠಾಪಿತವಾಗಿದ್ದ ಶಿಲ್ಪವಾಗಿದೆ. ಆ ದೇವಾಲಯವು ಇಂದು ಉಳಿದು ಬಂದಿಲ್ಲ. ಆದರೆ ಅದಕ್ಕೆ ಸಂಬಂಧಿಸಿದ ಕೆಲವು ಭಗ್ನ ವಾಸ್ತು ಅವಶೇಷಗಳು ಇಂದಿಗೂ ಉಳಿದು ಬಂದಿದ್ದು, ಅಲ್ಲಲ್ಲಿ ಚದುರಿಕೊಂಡಿವೆ.

ಪ್ರಾಚೀನ ಬಹುತೇಕ ರಾಜಧಾನಿ ಅಥವಾ ಪ್ರಾಂತಗಳ ಕೇಂದ್ರಕ್ಕೆ 'ಪಟ್ಟಣ' ಎಂದು ಕರೆಯಲಾಗಿರುವುದು ಅನೇಕ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಪಟ್ಟಣ ಕೂಹುಂಡಿ ಅರ್ಥಾತ್ ರಾಜಧಾನಿ ಕೂಹುಂಡಿಯೇ ಪಟ್ಟಣಕುಡಿ ಎಂಬ ನಿರ್ಣಯಕ್ಕೆ ಬರಬಹುದಾಗಿದೆ. ಪಟ್ಟಣಕೋಡಿ ಎಂಬ ಹೆಸರನ್ನು ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿ ಗಮನಿಸಿದಾಗ ಕೂಹುಂಡಿ>ಕೂಂಡಿ>ಕೂಡಿ> ಕುಡಿ>ಕೋಡಿ ಎಂದಾಗಿರುವಂತೆ ತೋರುತ್ತದೆ. ಮೊದಲು ಮಧ್ಯದ ಅಕ್ಷರ ಲೋಪವಾಗಿ ಹಿಂದಿನ ಅಕ್ಷರ ದೀರ್ಘಾಕ್ಷರವಾಗಿ ನಂತರ ಹ್ರಸ್ವವಾಗಿದೆ. ಕಾಲಕ್ರಮೇಣ ಜನರ ಬಾಯಲ್ಲಿ ಉ>ಓ ಪರಿವರ್ತನೆಯಾಗಿ (ಕುಡು>ಕೊಡು ಆದಂತೆ) ಇಂದಿನ ಪಟ್ಟಣಕೋಡಿ ಎಂಬ ನಾಮರೂಪ ಸಿದ್ಧವಾಗುತ್ತದೆ. ಈ ನಿಟ್ಟಿನಲ್ಲಿ 'ಕೂಹುಂಡಿ' ಸ್ಥಳನಾಮದ ವ್ಯುತ್ಪತ್ತಿಯನ್ನು ನಿಸರ್ಗವಾಚಿ ಮತ್ತು ವ್ಯಕ್ತಿವಾಚಿ ಹಿನ್ನೆಲೆಯಲ್ಲಿ ಗಮನಿಸಲು ಸಾಧ್ಯವಿದೆ. ಕುಪ್ಪೆ+ಗುಂಡಿ>ಕುಪ್ಪಗುಂಡಿ>ಕೂಹುಂಡಿ ಅಥವಾ ಕುಪ್ಪೆ+ಹುಂಡಿ>ಕುಪ್ಪಹುಂಡಿ> ಕೂಹುಂಡಿ ಎಂದು ನಿಸರ್ಗವಾಚಿಯಾಗಿ ಹಾಗೂ ಕುಪ್ಪಯನ+ಗುಂಡಿ> ಕುಪ್ಪಹುಂಡಿ> ಕೂಹುಂಡಿ ಎಂದು ಅಥವಾ ಕುಪ್ಪಯನ+ಹುಂಡಿ>ಕುಪ್ಪಹುಂಡಿ>ಕೂಹುಂಡಿ ಎಂದು ವ್ಯಕ್ತಿವಾಚಿಯಾಗಿ ಬಿಡಿಸಬಹುದಾಗಿದೆ.[೨೨] ಈ ಮೇಲಿನ ಎಲ್ಲ ಕಾವ್ಯಾಧಾರಗಳು, ಶಾಸನಾಧಾರಗಳು, ಭಾಷಾಶಾಸ್ತ್ರ, ಗ್ರಾಮನಾಮ ವಿವೇಚನೆ, ಶಿಲ್ಪಶಾಸ್ತ್ರ ಮತ್ತು ಪಟ್ಟಣಕೋಡಿ ಗ್ರಾಮದ ಪರಿಶೋಧನೆಯಿಂದ ಕೂಹುಂಡಿನಾಡಿನ ಕೇಂದ್ರ ಪಟ್ಟಣ ಇಂದಿನ ಚಿಕ್ಕೋಡಿ ತಾಲ್ಲೂಕಿನ ಪಟ್ಟಣಕುಡಿ ಗ್ರಾಮವೆಂಬುದು ಸ್ಪಷ್ಟವಾಗುತ್ತದೆ.

ಈ ಮೇಲಿನ ಎಲ್ಲ ಸಂಶೋಧಕರ ಅಭಿಪ್ರಾಯಗಳು, ಶಾಸನಾಧಾರಗಳು, ವಾಸ್ತು–ಶಿಲ್ಪ ಕುರುಹುಗಳು ಮತ್ತು ಸ್ವತಃ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿಗಳ ಹಿನ್ನೆಲೆಯಲ್ಲಿ ಇಂದಿನ ಚಿಕ್ಕೋಡಿ ತಾಲ್ಲೂಕಿನ ಪಟ್ಟಣಕುಡಿ ಗ್ರಾಮದಿಂದಲೇ ಈ ಪ್ರದೇಶಕ್ಕೆ ಕುಹುಣ್ಡಿ, ಕೂಹುಂಡಿ ಎಂದು ಕರೆದಿರುವುದು ಮನದಟ್ಟಾಗುತ್ತದೆ. ಅಂದರೆ ಕುಹುಣ್ಡಿ (ಕೂಹುಂಡಿ) ಎಂಬ ಪಟ್ಟಣದಿಂದಲೇ ಈ ನಾಡನ್ನು ಅಥವಾ ಆಡಳಿತ ವಿಭಾಗವನ್ನು ಕುಹುಣ್ಡಿವಿಷಯ, ಕೂಹುಂಡಿನಾಡು ಎಂದು ಕರೆಯಲಾಗಿದೆ. ಆದರೆ ಎಸ್.ಸಿ. ನಂದಿಮಠ ಅವರು ಕೂಹುಣ್ಡಿ ಪಟ್ಟಣವು ಇಂದಿನ ಬೈಲಹೊಂಗಲ ತಾಲ್ಲೂಕಿನ ಯಕ್ಕುಂಡಿ ಎಂತಲೂ, ಎಚ್.ಎಸ್.ಥೊಸಾರ ಅವರು ಚಿಕ್ಕೋಡಿ ತಾಲ್ಲೂಕಿನ ಪಟ್ಟಣಕುಡಿ ಎಂತಲೂ, ಶ್ರೀನಿವಾಸ ರಿತ್ತಿ ಅವರು ರತ್ನಾಗಿರಿ ಜಿಲ್ಲೆಯ ಸಂಗಮೇಶ್ವರ ತಾಲ್ಲೂಕಿನ ಕುಂಡಿ ಎಂತಲೂ, ವಿ.ವಿ. ಮಿರಾಶಿ ಅವರು ಮಿರಜ ತಾಲ್ಲೂಕಿನ ಕುಂಡಲಪುರ ಎಂತಲೂ ಸೂಚಿಸಿದ್ದಾರೆ.[೨೩] ಕುಹುಂಡಿನಾಡಿನ ಪ್ರದೇಶವನ್ನಾಳಿದ ಮತ್ತು ಇಲ್ಲಿ ಆಳ್ವಿಕೆಯ ಪ್ರಭಾವವನ್ನು ಹೊಂದಿದ್ದ ಅರಸು, ಮಹಾಮಂಡಳೇಶ್ವರ, ಮಹಾಸಾಮಂತ, ಪ್ರಭುಗಾವುಂಡ, ಗಾವುಂಡ ಮನೆತನಗಳು ಪಟ್ಟಣಕುಡಿ ಗ್ರಾಮವನ್ನು ರಾಜಧಾನಿ ಮಾಡಿಕೊಂಡಿರುವುದು, ಈ ಗ್ರಾಮದ ನೆಲೆವೀಡಿನಿಂದ ಆಳ್ವಿಕೆ ಮಾಡಿರುವುದು, ದಾನ–ದತ್ತಿಗಳನ್ನು ಕೊಟ್ಟಿರುವುದು ಇತ್ಯಾದಿ ಸಂಗತಿಗಳು

ಸಮಕಾಲೀನ ಶಾಸನಗಳಾದಿ ಕೃತಿ–ಕಾವ್ಯಗಳಲ್ಲಿ ಕಾಣುವುದಿಲ್ಲ. ಕೂಹುಂಡಿನಾಡಿನ ಕೇಂದ್ರ ಪಟ್ಟಣವನ್ನು ಗುರುತಿಸಲು ಇದುವರೆಗೂ ನಡೆದಿರುವ ಅಧ್ಯಯನಗಳು, ವಿದ್ವಾಂಸರ ಅಭಿಪ್ರಾಯಗಳು ಮತ್ತು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿಗಳ ಹಿನ್ನೆಲೆಯಲ್ಲಿ ಚಿಕ್ಕೋಡಿ ತಾಲ್ಲೂಕಿನ ಪಟ್ಟಣಕುಡಿ ಗ್ರಾಮವೇ ಕೂಹುಂಡಿನಾಡಿನ ಕೇಂದ್ರ ಪಟ್ಟಣ ಎಂದು ಭಾಸವಾಗುತ್ತದೆ. ಆದರೆ ಮಾನಪುರದ ರಾಷ್ಟ್ರಕೂಟರು (ಕ್ರಿ.ಶ. ೩೫೦–೫೫೦) ಆಳ್ವಿಕೆ ಮಾಡುತ್ತಿದ್ದ ಇಂದಿನ ಸತಾರಾ ಜಿಲ್ಲೆಯ ತಾಲ್ಲೂಕು ಕೇಂದ್ರ ಮಾನ ಪ್ರದೇಶವು ಅಂದು 'ಕುಣ್ಡಿದೇಶ' ಎಂದು ಕರೆಯಲ್ಪಡುತ್ತಿತ್ತು. ಈ ನಿಟ್ಟಿನಲ್ಲಿ 'ಕುಣ್ಡಿ', 'ಕೂಂಡಿ', 'ಕೂಹುಂಡಿ' ಎಂದೆಲ್ಲ ಕರೆಯಲ್ಪಡುತ್ತಿದ್ದ ಕೂಹುಂಡಿನಾಡಿನ ಕೇಂದ್ರ ಪಟ್ಟಣದ ಕುರಿತು ಇನ್ನೂ ಹೆಚ್ಚಿನ ಅಧ್ಯಯನದ ಅವಶ್ಯವಿದೆ.

ಕೂಹುಂಡಿನಾಡಿನ ಪ್ರದೇಶದಲ್ಲಿ ಮಾನಪುರದ ರಾಷ್ಟ್ರಕೂಟರು, ಬಾದಾಮಿ ಚಲುಕ್ಯರು, ಅಲಕ್ತಕ ನಗರದ ಸೇಂದ್ರಕರು, ಮಳಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು, ಸವದತ್ತಿ ರಟ್ಟರು, ಕೊಲ್ಲಾಪುರದ ಶಿಲಾಹಾರರು, ಕಲ್ಯಾಣದ ಕಲಚೂರಿಯರು, ದೇವಗಿರಿ ಸೇವುಣರು, ದೋರಸಮುದ್ರದ ಹೊಯ್ಸಳರ ಕಾಲಾವಧಿಯ ಶಾಸನಗಳಾದಿ ವಿವಿಧ ಪುರಾತತ್ವ ಕುರುಹುಗಳನ್ನು ಗೋಚರಿಸುತ್ತವೆ.

ಬಾದಾಮಿ ಚಲುಕ್ಯರ ಕಾಲದಲ್ಲಿ ಕುಹುಣ್ಡಿವಿಷಯದ ವ್ಯಾಪ್ತಿಯಲ್ಲಿ ಇಂದಿನ ಬೆಳಗಾವಿ, ಕೊಲ್ಲಾಪುರ ಸಾಂಗಲಿ, ಸತಾರಾ ಜಿಲ್ಲೆಗಳ ಪ್ರದೇಶದ ಕೆಲವು ಗ್ರಾಮಗಳು ಸೇರ್ಪಡೆಯಾಗಿದ್ದಂತೆ ತೋರುತ್ತದೆ. ಆದರೆ ಅಂದು ಈ ವಿಭಾಗದಲ್ಲಿದ್ದ ಗ್ರಾಮಗಳ ಸಂಖ್ಯೆಯ ಕುರಿತು ಸ್ಪಷ್ಟತೆಯಿಲ್ಲ. ಮಾನಪುರದ ರಾಷ್ಟ್ರಕೂಟರು ಮತ್ತು ಮಳಖೇಡದ ರಾಷ್ಟ್ರಕೂಟರ ಬಹುತೇಕ ಶಾಸನಗಳಲ್ಲಿ ಇದು ಕುಣ್ಡಿದೇಶ, ಕುಹುಣ್ಡಿವಿಷಯ ಕುಷ್ಮಾಂಡಿವಿಷಯ ಎಂದು ಉಲ್ಲೇಖಿತವಾಗಿದ್ದು, ಕ್ರಮೇಣ ವಿಸ್ತಾರವಾಗುತ್ತ ಕೂಂಡಿಕಸಾಸಿರ ಎಂದು ಕರೆಯಲ್ಪಟ್ಟಿರುವುದನ್ನು ಗಮನಿಸಿದರೆ ಅಂದು ಈ ವಿಭಾಗದ ವ್ಯಾಪ್ತಿಯಲ್ಲಿ ಸಾವಿರ ಗ್ರಾಮಗಳು ಸೇರ್ಪಡೆಯಾಗಿದ್ದವೆಂಬುದು ಸ್ಪಷ್ಟವಾಗುತ್ತದೆ. ಆದರೆ ಅಂದಿನ ಶಾಸನಗಳಲ್ಲಿ ಈ ವಿಭಾಗದಲ್ಲಿ ಅಲಕ್ತಕವಿಷಯ ಅಥವಾ ಅಲಟಗೆಸಪ್ತಶತಿ (ಇದರ ಕೇಂದ್ರ ಪಟ್ಟಣ ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯ ಹಾತಕಣಗಲಾ ತಾಲ್ಲೂಕಿನ ಅಲ್ತೆ), ಚಂದಗಡವಿಷಯ (ಇದರ ಕೇಂದ್ರ ಪಟ್ಟಣ ಇಂದಿನ ಕೊಲ್ಲಾಪುರ ಜಿಲ್ಲೆಯ ತಾಲ್ಲೂಕು ಕೇಂದ್ರ ಚಂದಗಡ) ಮತ್ತು ಸುಗಂಧವರ್ತಿ ಹನ್ನೆರಡು (ಇದರ ಕೇಂದ್ರ ಪಟ್ಟಣ ಸವದತ್ತಿ) ಎಂಬ ಉಪವಿಭಾಗಗಳ ಪ್ರಸ್ತಾಪಗಳು ಮಾತ್ರ ಗೋಚರಿಸುತ್ತವೆ. ಉಳಿದ ಉಪವಿಭಾಗಗಳ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ. ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಈ ವಿಭಾಗದ ವ್ಯಾಪ್ತಿಯಲ್ಲಿ ಮೂರುಸಾವಿರ ಗ್ರಾಮಗಳಿದ್ದವೆಂಬುದು ಸಮಕಾಲೀನ ಶಾಸನಗಳಾದಿಸ ಕೃತಿ–ಕಾವ್ಯಗಳಲ್ಲಿ ಉಲ್ಲೇಖಿತ ಕೂಂಡಿಮೂಸಾಸಿರ, ಕೂಂಡಿತ್ರಿಸಹಸ್ರ, ಕೂಹುಂಡಿ–೩೦೦೦ ನಿರೂಪಣೆಯಿಂದ ಮನದಟ್ಟಾಗುತ್ತದೆ. ಅಂದು ಈ ವಿಭಾಗದಲ್ಲಿ ತೇರಿದಾಳ ಹನ್ನೆರಡು (ಇದರ ಕೇಂದ್ರ ಪಟ್ಟಣ ಜಮಖಂಡಿ ತಾಲ್ಲೂಕಿನ ತೇರದಾಳ), ಕುಱುಂಬೆಟ್ಟ ಕಂಪಣ (ಇದರ ಕೇಂದ್ರ ಪಟ್ಟಣ ಗೋಕಾಕ ತಾಲ್ಲೂಕಿನ ಮಮದಾಪುರ), ಸುಗಂಧವರ್ತಿ ಪನ್ನೆರಡು, ಹೊರಘಟ್ಟ ಸಪ್ತತಿ (ಇದರ ಕೇಂದ್ರ ಪಟ್ಟಣ ಸವದತ್ತಿ ತಾಲ್ಲೂಕಿನ ಯರಗಟ್ಟಿ), ಹುಬ್ಬಳ್ಳಿ ಹನ್ನೆರಡು (ಇದರ ಕೇಂದ್ರ ಪಟ್ಟಣ ಬೈಲಹೊಂಗಲ ತಾಲ್ಲೂಕಿನ ಮುಗಟಖಾನ ಹುಬ್ಬಳ್ಳಿ). ವೇಣುಗ್ರಾಮೆ ಎಪ್ಪತ್ತು (ಇದರ ಕೇಂದ್ರ ಪಟ್ಟಣ ಬೆಳಗಾವಿ), ಉತ್ಸುಗ್ರಾಮೆ ಮೂವತ್ತು (ಇದರ ಕೇಂದ್ರ ಪಟ್ಟಣ ಬೆಳಗಾವಿ ತಾಲ್ಲೂಕಿನ ಉಚಗಾಂವ), ಕಾದರವಳ್ಳಿ ಮೂವತ್ತು (ಇದರ ಕೇಂದ್ರ ಪಟ್ಟಣ ಬೈಲಹೊಂಗಲ ತಾಲ್ಲೂಕಿನ ಕಾದ್ರೊಳ್ಳಿ), ಕೊರವಳ್ಳಿ ನೂರೈವತ್ತು (ಇದರ ಕೇಂದ್ರ ಪಟ್ಟಣ ಚಿಕ್ಕೋಡಿ ತಾಲ್ಲೂಕಿನ ಜೋಡಕುರಳಿ), ನೂಲೆನಾಡು (ಇದರ ಕೇಂದ್ರ ಪಟ್ಟಣ ಕೊಲ್ಲಾಪುರ ಜಿಲ್ಲೆಯ ಗಡಹಿಂಗ್ಲಜ ತಾಲ್ಲೂಕಿನ ನೂಲಿ), ಕುಂದುರುಗೆ ಕಂಪಣ (ಇದರ ಕೇಂದ್ರ ಪಟ್ಟಣ ಗೋಕಾಕ ತಾಲ್ಲೂಕಿನ ಕುಂದರಗಿ), ಸೊಗಲ ಮೂವತ್ತು (ಇದರ ಕೇಂದ್ರ ಪಟ್ಟಣ ಸವದತ್ತಿ ತಾಲ್ಲೂಕಿನ ಸೊಗಲ), ಮಲ್ಲಗ್ರಾಮ ಮೂವತ್ತು (ಇದರ ಕೇಂದ್ರ ಪಟ್ಟಣ ಮುಧೋಳ ತಾಲ್ಲೂಕಿನ ಮಂಟೂರು?) ಉಪವಿಭಾಗಗಳಿದ್ದವು.[೨೪]

ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಕೂಹುಂಡಿನಾಡಿನ ಮೇಲೆ ಹಿಡಿತವನ್ನು ಸಾಧಿಸಲು ಸಮಕಾಲೀನ ಮಹಾ ಮಂಡಳೇಶ್ವರ ಮನೆತನಗಳು ಪ್ರಯತ್ನಿಸುತ್ತಿದ್ದಂತೆ ತೋರುತ್ತದೆ. ಇದು ೬ನೆಯ ವಿಕ್ರಮಾದಿತ್ಯನ ಹುಬ್ಬಳ್ಳಿ ತಾಲ್ಲೂಕಿನ ಅಮರಗೊಳದ ಕ್ರಿ.ಶ. ೧೧೧೯ರ ಶಾಸನದಲ್ಲಿರುವ–

ಬೆಸಸಲ್ವಿಕ್ರಮ ಚಕ್ರವರ್ತ್ತಿ ವಿಷಮಾದೇಶಂಗಳಂ ತಾನೆ ಸಾ
ಧಿಸಿ ತನ್ದಾ ಜಯಕೇಸಿ ಭೂಪತಿಗೆ ಬೊಪ್ಪಾದೇವಿಯಂ ಕೂಂಡಿ ರಾ
ಜ್ಯ ಸಮೇತಂ ತನಗೀಯೆ ಚಕ್ರಿ ನಿಜ ಸೇನಾಧ್ಯಕ್ಷಮಂ ತಾಳ್ದಿ ಸಾ
ಹಸದಿಂದಂ ಪಡೆದಂ ಪ್ರಧಾನ ಪದಮಂ ಸಲ್ಲಕ್ಷಣಂ ಜಕ್ಕಣಂ॥

'ಚಕ್ರವರ್ತಿ ಕಠಿಣ ಆದೇಶಗಳನ್ನು ನೀಡಿದರೂ ಅವುಗಳನ್ನು ಸಾಧಿಸಿ ತಂದ ಜಯಕೇಸಿಗೆ (ಗೋವೆಯ ಕಾದಂಬರ ಇಮ್ಮಡಿ ಜಯಕೇಶಿ?) ವಾಜಿಕುಳದ ಸೌದೊರೆ

ಜಕ್ಕರಸನು ಕೂಂಡಿ ರಾಜ್ಯವನ್ನು ಬೊಪ್ಪಾದೇವಿಯ ಸಮೇತ ತಂದುಕೊಟ್ಟದ್ದಕ್ಕೆ ಚಕ್ರವರ್ತಿಯಿಂದ ಸೇನಾಧ್ಯಕ್ಷ ಸ್ಥಾನವನ್ನು ಮತ್ತು ಪ್ರಧಾನ ಪದವಿಯನ್ನು ಪಡೆದನು' ಎಂಬ ನಿರೂಪಣೆಯಿಂದ ಮನದಟ್ಟಾಗುತ್ತದೆ.[೨೫]

ದೇವಗಿರಿ ಸೇವುಣರ ಆಳ್ವಿಕೆಯ ಉತ್ತರಾರ್ಧದ ಕಾಲಾವಧಿಯಿಂದೀಚೆಗೆ ಕೂಹುಂಡಿನಾಡಿನ ಪೂರ್ವಭಾಗ ದಲ್ಲಿದ್ದ 'ತೊರಗಲೆನಾಡು' ವಿಸ್ತಾರವಾಗುತ್ತ 'ತೊರಗಲೆ–೬೦೦೦' ಆಡಳಿತ ವಿಭಾಗವಾಗಿರುವುದು ಗಮನಾರ್ಹ ವಾಗಿದೆ. ಇಂದಿನ ರಾಮದುರ್ಗ ತಾಲ್ಲೂಕಿನ ತೋರಗಲ್ಲ ಗ್ರಾಮವು ಈ ವಿಭಾಗದ ಕೇಂದ್ರ ಪಟ್ಟಣವಾಗಿತ್ತು. ಈ ಆಡಳಿತ ವಿಭಾಗದಲ್ಲಿ ಕಾಲಕ್ರಮೇಣ ಕೂಗುಂಡಿನಾಡಿನ ಪೂರ್ವ ಮತ್ತು ದಕ್ಷಿಣ ಭಾಗಗಳಲ್ಲಿದ್ದ ಸತ್ತಿಗೇರಿ, ಹುಲಕುಂದ, ದಾಡೆಭಾವಿ ಗೊರವನೂರು, ಜಂಗವಾಡ, ಮುದಲೂರು, ಸಿಂಧವಿಗೆ, ಅಗನೂರು, ನಾಗರಪುರ, ಮುನಿಪುರ ಮೊದಲಾದ ಹಲವು ಗ್ರಾಮಗಳು ಸೇರ್ಪಡೆಯಾದವು. ಇದನ್ನು ದೇವಗಿರಿ ಸೇವುಣರ ಇಮ್ಮಡಿ ಸಿಂಘಣದೇವ ಮತ್ತು ಕನ್ನರದೇವನ ಸವದತ್ತಿ ತಾಲ್ಲೂಕಿನ ಮುನವಳ್ಳಿಯ ಕ್ರಿ.ಶ. ೧೨೨೨ ಹಾಗೂ ಕ್ರಿ.ಶ. ೧೨೫೨ರ ಶಾಸನಗಳು

ಸಮರ್ಥಿಸುತ್ತವೆ.[೨೬] ಹೀಗಾಗಿಯೇ ಕೂಹುಂಡಿ – ೩೦೦೦ ಆಡಳಿತ ವಿಭಾಗವು ಕ್ರಿ.ಶ. ಸುಮಾರು ೧೫ನೆಯ ಶತಮಾನದ ಪೂರ್ವಾರ್ಧದ ಹೆಚ್ಚಿನ ಶಾಸನಗಳಲ್ಲಿ ಮೂರುಸಾವಿರದ ಬದಲಾಗಿ ಕೂಂಡಿಮಂಡಲ, ಕೂಂಡಿದೇಶ, ಕೂಂಡಿವಿಷಯ ಎಂದು ಮಾತ್ರ ಉಲ್ಲೇಖವಾಗಿದೆ. ತೊರಗಲೆ–೬೦೦೦ ಆಡಳಿತ ವಿಭಾಗದಲ್ಲಿ ಇಂದಿನ ಮಹಾರಾಷ್ಟ್ರದ ಸತಾರಾ ಜಿಲ್ಲೆಯ ನಾಲ್ವೆ ತಾಲ್ಲೂಕು, ಕೊಲ್ಲಾಪುರ ಮತ್ತು ಸಾಂಗಲಿ ಜಿಲ್ಲೆಗಳ ಕೆಲವು ಭಾಗಗಳು, ಬೆಳಗಾವಿ ಜಿಲ್ಲೆಯ ರಾಮದುರ್ಗ, ಗೋಕಾಕ, ಚಿಕ್ಕೋಡಿ, ಬೈಲಹೊಂಗಲ, ಸವದತ್ತಿ ತಾಲ್ಲೂಕುಗಳು, ಬಾಗಲಕೋಟ ಜಿಲ್ಲೆಯ ಬಾಗಲಕೋಟ, ಮುಧೋಳ, ಜಮಖಂಡಿ ತಾಲ್ಲೂಕುಗಳ ಕೆಲವು ಗ್ರಾಮಗಳು ಸೇರ್ಪಡೆಯಾಗಿದ್ದವು.[೨೭]

ಇದುವರೆಗಿನ ಅವಲೋಕನದಿಂದ ಕೂಹುಂಡಿನಾಡು ಮೂಲತಃ ಇಂದಿನ ಮಹಾರಾಷ್ಟ್ರದ ಸತಾರಾ ಜಿಲ್ಲೆಯ ತಾಲ್ಲೂಕು ಕೇಂದ್ರ ಮಾನ ಪ್ರದೇಶಕ್ಕೆ ಸೀಮಿತವಾಗಿತ್ತು. ಕ್ರಮೇಣ ವಿಸ್ತಾರವಾಗುತ್ತ ಇಂದಿನ ಉತ್ತರ ಕರ್ನಾಟಕದ ಬೆಳಗಾವಿ, ಬಾಗಲಕೋಟ ಮತ್ತು ದಕ್ಷಿಣ ಮಹಾರಾಷ್ಟ್ರದ ಸಾಂಗಲಿ ಕೊಲ್ಲಾಪುರ ಜಿಲ್ಲೆಗಳ ಪ್ರದೇಶದಲ್ಲಿ ವ್ಯಾಪಿಸಿತ್ತೆಂಬುದು ಮನವರಿಕೆಯಾಗುತ್ತದೆ. ಇಲ್ಲಿಯ ಚರಿತ್ರೆ, ಸಂಸ್ಕೃತಿ, ಸಾಹಿತ್ಯ, ಭಾಷೆ, ಸಮಾಜ, ಧರ್ಮ, ವಾಸ್ತುಕಲೆ, ಶಿಲ್ಪಕಲೆ, ಮೊದಲಾದ ಸಾಂಸ್ಕೃತಿಕ ಆಯಾಮಗಳು ವಿಶಿಷ್ಟವಾಗಿ ಬೆಳೆದು ಬಂದಿವೆ. ಈ ನಿಟ್ಟಿನಲ್ಲಿ ಕೆಲವು ಸಂಶೋಧನ ಅಧ್ಯಯನಗಳಾಗಿದ್ದರೂ, ಅವು ಒಂದೊಂದು ಜಿಲ್ಲೆ, ತಾಲ್ಲೂಕು, ಪ್ರದೇಶ ಮತ್ತು ಒಂದೊಂದು ನಿರ್ದಿಷ್ಟವಾದ ವಿಷಯಕ್ಕೆ ಸೀಮಿತವಾಗಿವೆ. ಕೂಹುಂಡಿನಾಡಿನ ವ್ಯಾಪ್ತಿಯನ್ನು ಕೇಂದ್ರವಾಗಿಟ್ಟುಕೊಂಡು ಇಲ್ಲಿಯ ಚರಿತ್ರೆ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಒಂದೆಡೆಗೆ ಸಂಗ್ರಹಿಸುವ ಕಾರ್ಯ ಇದುವರೆಗೂ ನಡೆದಿಲ್ಲ. ಈ ನಾಡಿನ ಶಾಸನಗಳು, ದೇವಾಲಯಗಳು, ಬಸದಿಗಳು, ಶಿಲ್ಪಗಳು, ಸ್ಮಾರಕಗಲ್ಲುಗಳು, ಲೌಕಿಕ ನಿರ್ಮಾಣಗಳು ವೈವಿಧ್ಯಮಯವಾಗಿವೆ. ವ್ಯವಸ್ಥಿತವಾದ ಕ್ಷೇತ್ರಕಾರ್ಯದ ಮೂಲಕ ಇವುಗಳನ್ನೆಲ್ಲ ಒಂದೆಡೆಗೆ ಸಂಗ್ರಹಿಸಿ ಪ್ರೌಢ ಅಧ್ಯಯನಗಳನ್ನು ಕೈಗೊಂಡರೆ, ಇಂದಿನ ಉತ್ತರ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರದ ಚರಿತ್ರೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ಅನೇಕ ನೂತನ ಮಾಹಿತಿಗಳು ಬೆಳಕು ಕಾಣುವುದರಲ್ಲಿ ಸಂದೇಹವಿಲ್ಲ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಹಿರೇಮಠ ಆರ್.ಸಿ. ಮತ್ತು ಕಲಬುರ್ಗಿ ಎಂ.ಎಂ. (ಸಂ.), ಪೂರ್ವೋಕ್ತ, ಪು. ೧೩೬–೧೩೭

೨. ಪಾಟೀಲ ಶಿ.ಬಾ., ರಟ್ಟರ ಕಾಲದ ಸಾಂಸ್ಕೃತಿ ಅಧ್ಯಯನ (೧೯೯೫), ಪು ೨೪–೩೩. ಗೋಗಿ ಹನುಮಾಕ್ಷಿ, "ಕುಹುಂಡಿ ಪಟ್ಟಣ ಎಲ್ಲಿದೆ?" ಅನುಶಾಸನ (೨೦೦೨), ಪು ೩೩–೩೮. ನಾಗಯ್ಯ ಜೆ.ಎಂ., ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ (೧೯೯೨), ಪು ೧೩೩–೧೩೪

೩. ಕೆ.ಆಯ್. ಸಂ. V, ಶಾ.ಸಂ. ೯೮, ಪು ೨೯೬–೨೯೯

೪. ಇ.ಆಯ್. ಸಂ. XIII, ಶಾ.ಸಂ. ೩/ಬಿ, ಪು ೨೭–೩೬.

೫. ಕುಂದಣಗಾರ ಕೆ.ಜಿ. (ಸಂ.), ಇನ್ಸ್‌ಕ್ರಿಪ್‌ಶನ್ಸ್ ಇನ್ ನಾರ್ದರ್ನ್‌ನ ಕರ್ನಾಟಕ ಅಂಡ್ ಕೊಲ್ಲಾಪರ ಸ್ಟೇಟ್ (೧೯೩೯), ಶಾ.ಸಂ. ೨೨, ಪು ೯೯–೧೦೫

೬ ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು ೨೪೦–೨೪೧

೭. ಗುರವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಕರ್ನಾಟಕ ಭಾರತಿ ಸಂ. ೬/೩ (ಜನೆವರಿ-೧೯೭೪), ಪು ೪೬-೪೭, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೮. ಇ.ಆಯ್. ಸಂ. XIX ಪು ೧೯-೨೬

೯. ಮರಿಯಪ್ಪಭಟ್ಟ ಎಂ. (ಸಂ.), ರಾಜಾದಿತ್ಯನ ವ್ಯವಹಾರಗಣಿತ (೧೯೫೫), ಮುನ್ನುಡಿ, ಪು ೨.

೧೦. ಕುಲಕರ್ಣಿ ಬಿ.ಎಸ್. (ಸಂ.), ಸಮಯಪರೀಕ್ಷೆ (೧೯೫೮), ಪು ೮

೧೧. ಮಾನಪುರದ ರಾಷ್ಟ್ರಕೂಟರ ಕುರಿತು ಹೆಚ್ಚಿನ ವಿವರಗಳಿಗೆ ಗಮನಿಸಿ: ಹಂಪ ನಾಗರಾಜಯ್ಯ, ರಾಷ್ಟ್ರಕೂಟಾಸ್ : ರೀವಿಜಿಟ್ (೨೦೧೦), ಪು ೧-೧೦, ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್ ಕೃಷ್ಣಪುರ ದೊಡ್ಡಿ. ಭಾರತೀ ಬಿ.ಆರ್. (ಸಂ.), ರಾಷ್ಟ್ರಕೂಟರ ಶಾಸನಗಳು ಸಂಪುಟ-೨ (೨೦೧೧), ಪ್ರಸ್ತಾವನೆ, ಪು. xxviii-xxxvii ಮತ್ತು ಪು ೮೩೨-೮೪೦

೧೨. ಹಂದೂರ ಬಿ.ಆರ್., ಗೋಖಲೆ ಶೋಭನಾ, ಶೇಳಕೆ ನೀಲೇಶ. "ರಾಷ್ಟ್ರಕೂಟರ ಕಾಲದ ಕ್ರಿ.ಶ. ೪೪೯ರ ವಳಯಿಯ ಎರಡು ತಾಮ್ರಶಾಸನ ಪತ್ರೆ", ಜಿನೇಂದ್ರವಾಣಿ ಮಾಸಪತ್ರಿಕೆ (೨೦೧೩ರ ಆಗಸ್ಟ್ ೧೫), ಪು ೬, ಹುಬ್ಬಳ್ಳಿ

೧೩. ಪಾಡಿಗಾರ ಶ್ರೀನಿವಾಸ ವಿ. (ಸಂ.), ಇನ್ಸ್ಕ್ರಿಪ್‌ಶನ್ಸ್ ಆಫ್ ದಿ ಚಲುಕ್ಯಾಸ್ ಆಫ್ ಬಾದಾಮಿ (೨೦೧೦), ಶಾ.ಸಂ. ೪,೪೭, ೭೭.

೧೪. ಗೋಗಿ ಹನುಮಾಕ್ಷಿ, "ಕುಹುಂಡಿ ಪಟ್ಟಣ ಎಲ್ಲಿದೆ?", ಅನುಶಾಸನ (೨೦೦೨), ಪು ೩೩-೩೮

೧೫. ಫ್ಲೀಟ್ ಜೆ.ಎಫ್., "ದಿ ಕೂಂಡಿ ಕಂಟ್ರಿ". ಇಂಡಿಯನ್ ಎಂಟಿಕ್ವೇರಿ ಸಂ. XXIX ಪು ೨೭೮ -೨೮೦.

೧೬. ದೇಸಾಯಿ ಪಿ.ಬಿ., ಜೈನಿಸಂ ಇನ್ ಸೌಥ್ ಇಂಡಿಯಾ ಅಂಡ್ ಸಮ್ ಜೈನ ಎಪಿಗ್ರಾಫ್ಸ್ (೧೯೫೭), ಪು ೧೦೯-೧೧೦.

೧೭. ಉಪಾಧ್ಯ ಜಿ.ಎನ್., ಪೂರ್ವೋಕ್ತ, ಪು ೧೯೬.

೧೮. ಕಲಬುರ್ಗಿ ಎಂ.ಎಂ. (ಸಂ.), ಮಹಾರಾಷ್ಟ್ರದ ಕನ್ನಡ ಶಾಸನಗಳು (೧೯೮೭), ಪು ೨೦. ಕನ್ನಡ ಸಂಶೋಧನಾ ಶಾಸ್ತ್ರ, ಪು ೧೧೫

೧೯. ದೊಡ್ಡಣ್ಣವರ ದೇವೆಂದ್ರ ಬ., ಮಧ್ಯಯುಗೀನ ಜೈನ ಧರ್ಮಾಚಾ ಉತ್ಕರ್ಷ ವ ಮಹಾನ್ ಸಾಧು ಸಂತ (೧೯೯೦), ಪು ೨೫.

೨೦. ಉಪಾಧ್ಯ ಜಿ.ಎನ್. ಮತ್ತು ದೇವರಕೊಂಡಾರೆಡ್ಡಿ (ಸಂ.) ಪೂರ್ವೋಕ್ತ ಶಾ.ಸಂ. ೨೬, ಪು ೩೯-೪೧

೨೧. ಗೋಗಿ ಹನುಮಾಕ್ಷಿ, ಪೂರ್ವೋಕ್ತ

೨೨. ಅದೇ.

೨೩. ಪಾಡಿಗಾರ ಶ್ರೀನಿವಾಸ ವಿ. (ಸಂ.), ಪೂರ್ವೋಕ್ತ ಪು ೧೭೦. ಉಪಾಧ್ಯ ಜಿ.ಎನ್., ಪೂರ್ವೋಕ್ತ, ಪು ೧೯೬

೨೪. ಕೆ.ಆಯ್. ಸಂ. V, ಶಾ.ಸಂ ೨೧, ೨೫, ಕೆ.ಆಯ್. ಸಂ. VI, ಶಾ.ಸಂ. ೭೩, ಇ.ಆಯ್. ಸಂ. XIX, ಪು ೧೯-೨೬. ಇ.ಆಯ್. ಸಂ. XVI, ಪು. ೧. ಎಸ್, ಆಯ್. ಆಯ್. ಸಂ. XX ಶಾ.ಸಂ. ೧೩, ೬೨, ೨೪೭. ಅಣ್ಣಿಗೇರಿ ಎ.ಎಂ. ಮತ್ತು ಜೋಶಿ ಬಿ.ಆರ್., ದಿ ಡಿಸ್ಕ್ರಿಪ್ಟಿವ್ ಲಿಸ್ಟ್ ಆಫ್ ಸ್ಟೋನ್ ಅಂಡ್ ಕಾಪರ್ – ಪ್ಲೇಟ್ ಇನ್ಸ್ಕ್ರಿಪ್‌ಶನ್ಸ್ ಎಗ್‌ಝಾಮಿನ್ಡ್ ಬಾಯ್ ದಿ ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್ ಡ್ಯೂರಿಂಗ್ ದಿ ಇಯರ್ಸ್ ೧೯೪೦-೪೧ (೧೯೬೧), ಶಾ.ಸಂ. ೨೯, ಪು ೫. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೧೨,೨೨. ಇ.ಆಯ್. ಸಂ.XIII, ಶಾ.ಸಂ. ೩/ಎ, ೩/ಬಿ, ೨೮/ಬಿ. ಹಿರೇಮಠ ಆರ್.ಸಿ. ಮತ್ತು ಕಲಬುರ್ಗಿ ಎಂ.ಎಂ. (ಸಂ.), ಪೂರ್ವೋಕ್ತ, ಪು ೧೩೬-೧೩೭. ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ. "ಚಿಕ್ಕೋಡಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು ೧೫೨. ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ". ಕರ್ನಾಟಕಭಾರತಿ ಸಂ. ೧೧/೨ (ನವೆಂಬರ್-೧೯೭೮) ಪು. ೨೨-೪೨, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ. ಅಣ್ಣಿಗೇರಿ ಎ.ಎಂ. ಮತ್ತು ಜೋಶಿ ಬಿ.ಆರ್. ದಿ. ಡಿಸ್ಕ್ರಿಪ್ಟಿವ್ ಲಿಸ್ಟ್ ಆಫ್ ಸ್ಟೋನ್ ಅಂಡ್ ಕಾಪರ್ -ಪ್ಲೇಟ್ ಇನ್ಸ್ಕ್ರಿಪ್‌ಶನ್ಸ್ ಎಗ್‌ಝಾಮಿನ್ಡ್ ಬಾಯ್ ದಿ ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್ ಡ್ಯೂರಿಂಗ್ ದಿ ಇಯರ್ಸ್ ೧೯೪೦-೪೧ (೧೯೬೧), ಶಾ.ಸಂ. ೫೦/೧-೨, ಪು. ೨೧. ಎ.ಆರ್.ಎಸ್.ಆಯ್.ಇ. ೧೯೫೨-೫೩ ಶಾ.ಸಂ.೫೧ ಮತ್ತು ೫೨. ಹಂಜೆ ಅಪ್ಪಣ್ಣ ಎನ್. ಮತ್ತು ಕೆಂಪಣ್ಣವರ ಪಿ.ಜಿ., "ರಾಯಬಾಗದ ವೀರಗಸಲ್ಲು ಶಾಸನ", ಶಾಸನ ಅಧ್ಯಯನ ಸಂ. ೨/೨ (೨೦೦೫), ಪು ೨೬-೨೮, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ. ನಾಗಯ್ಯ ಜೆ.ಎಂ. ಪೂರ್ವೋಕ್ತ, ಪು ೧೩೩-೧೩೪.

೨೫. ಗೋಗಿ ಹನುಮಾಕ್ಷಿ (ಸಂ.), ಹುಬ್ಬಳ್ಳಿ ತಾಲ್ಲೂಕಿನ ಶಾಸನಗಳು (೨೦೧೩), ಶಾ.ಸಂ. ೧, ಪು ೫೨.

೨೬. ಕೆ.ಆಯ್. ಸಂ. ೧, ಶಾ.ಸಂ. ೩೦ ಮತ್ತು ೩೧.

೨೭. ಕೃಷ್ಣಮೂರ್ತಿ ಪಿ.ವಿ., "ಬೆಳಗಾವಿ ಜಿಲ್ಲೆಯ ಪ್ರಾಚೀನ ಆಡಳಿತ ವಿಭಾಗಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೪೬೧.

೬೮

ಬಂದಳಿಕೆ-ಒಂದು ಅವಲೋಕನ

ಬಿ.ಎನ್. ದೊಡ್ಡಪ್ಪ*

'ಬನವಸೆನಾಡದರ್ಕೆ ತೊಡವಿಪ್ಪವೊಲಿಪ್ಪುದು ವಿಶ್ವಧಾರಿಣಿ।
ಜನನುತಮಪ್ಪ ಬಂದಣಿಕೆ ಸಂದಮರಾವತಿಯಂತಿ
ರೊಪ್ಪುಗುಂ ॥[೧]

ಇತಿಹಾಸ ಕಾಲದಲ್ಲಿ ಕುಂತಳನಾಡು ಹಾಗೂ ಅದರ ಒಂದು ಸುಪ್ರಸಿದ್ಧ ಆಡಳಿತ ಮಂಡಳವಾಗಿ ಬನವಾಸಿನಾಡು ಹಾಗೂ ಆ ಮಂಡಳ ರಾಜಧಾನ ಬನವಾಸಿ ಮೆರೆದದ್ದು ಇದೆ. ಇಂಥ ಮಂಡಳದಲ್ಲಿ ಒಳ ಆಡಳಿತ ವಿಭಾಗಗಳಾಗಿ ಅನೇಕ ಕಂಪಣ (ನಾಡು)ಗಳು ಹಾಗೂ ಅವುಗಳ ರಾಜಧಾನಿ ಪಟ್ಟಣಗಳು ತಮ್ಮ ತಮ್ಮ ಶಕ್ತ್ಯಾನುಸಾರ ಮೆರೆದದ್ದು ಇದೆ. ಬನವಾಸಿ ಮಂಡಲದ ಇಂಥ ಕಂಪಣಗಳಲ್ಲೆಲ್ಲ ದಾಖಲೆಯಾಗಿ ಮೆರೆದ ಒಂದು ಕಂಪಣವೆಂದರೆ ನಾಗರಖಂಡ, ಒಂದು ಪಟ್ಟಣವೆಂದರೆ ಇದರ ರಾಜಧಾನಿ ಬಂದಳಿಕೆ. ಇಂದಿನ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನಲ್ಲಿ ಶಿರಾಳಕೊಪ್ಪ ಪಟ್ಟಣದಿಂದ ಉತ್ತರಕ್ಕೆ ಕೇವಲ ೮-೧೦ ಕಿ.ಮೀ. ದೂರದಲ್ಲಿದೆ ಬಂದಳಿಕೆ.

ತೇಗ, ಶ್ರೀಗಂಧ, ನಂದಿ, ಮತ್ತಿಗಳಂಥ ಅಮೂಲ್ಯ ಗಿಡಮರಗಳಿಂದ ಕಿಕ್ಕಿರಿದಿದ್ದ ಅತಿ ದಟ್ಟ ಮಲೆನಾಡಿನಲ್ಲಿ, ಬೆಟ್ಟ-ಕಣಿವೆಗಳ ಮಧ್ಯೆ ನಾಗರಕೆರೆ ನಾಗರಹಳ್ಳ ತೀರದಲ್ಲಿ ನೆಲೆಸಿದ್ದ ಪಟ್ಟಣ ಬಂದಳಿಕೆಯಾಗಿತ್ತು. ಓರ್ವ ಶಾಸನಕವಿ ಅಲ್ಲಿಯ ಚೆಲುವನ್ನು ಕಂಡರಿಸಿರುವುದು ಹೀಗೆ

ಅದು ಬಳಸಿರ್ದ ನಂದನದಿನಂಬುಜ ಷಂಡದಿನೊಳ್ಗಿಂ
ವುಂಗಿನಿಂ
ಪುದಿದೆಲೆವಳ್ಳಿಯಿಂ ಬೆಳೆದಶಾಳಿಯಿಂನೊಪ್ಪುವ
ಕೋಂಟೆಯಿಂ ಸಮಂ
ತೊದವಿದ ಲಕ್ಷ್ಮಿಯಿಂ ವಿಭವದಿಂ ವಿಳಸಜ್ಜನದಿಂ
ಸುದೇವಗೇ
ಹದ ಕಡು ಚೆಲ್ವಿನಿಂದಮಳಕಾಪುರಮಂ ನಗುತಿರ್ಪು
ದೊರ್ಮೆಯುಂ ॥[೨]

ಬಂದಳಿಕೆ ಪಟ್ಟಣ ಕ್ರಿ.ಶ. ೫೮೨ರಿಂದ ಕ್ರಿ.ಶ. ೧೪೪೨ರ ವರೆಗೆ ಅಂದರೆ ಒಂದು ಸಾವಿರ ವರ್ಷಗಳಷ್ಟು ಸುದೀರ್ಘ ಕಾಲ ನಾಗರಖಂಡ ರಾಜ್ಯದ ರಾಜಧಾನಿಯಾಗಿ ಮೆರೆಯಿತು.[೩] ಇಷ್ಟೇ ಅಲ್ಲ ಸಂಶೋಧಕರು ಅಭಿಪ್ರಾಯ ಪಡುವಂತೆ ಶಾತವಾಹನರ ಕಾಲದಿಂದಲೆ ಇದು ಮಹಾನಗರವಾಗಿತ್ತು. ಬನವಾಸಿಯಷ್ಟೇ ಪ್ರಬಲನಗರವಾಗಿತ್ತು. ನಾಗರಖಂಡ ಕಂಪಣದ ಪ್ರಥಮ ಉಲ್ಲೇಖ ಕ್ರಿ.ಶ. ೬೮೫ರಲ್ಲಿ ದೊರೆತಿದೆ. ಬಂದಳಿಕೆ ರಾಜಧಾನಿಯದು ಕ್ರಿ.ಶ. ೫೧೬ರ ಶಿವಳ್ಳಿ ತಾಮ್ರಶಾಸನದಲ್ಲಿ ದೊರೆಯುತ್ತದೆ. ಅಲ್ಲಿ ಬನ್ದನಕ್ಕೆ ವನ್ದನಕ್ಕೆ ಎಂಬೆರಡು ಪ್ರಯೋಗಗಳು ಇವೆ. ಮುಂದಿನ ಕಾಲದ ಶಾಸನಗಳಲ್ಲಿ ಬಂದನಕ್ಕೆ, ಬಂದಣಿಕ್ಕೆ, ಬಂದಣಿಕೆ ಎಂಬ ರೂಪಗಳು ಕಂಡುಬರುತ್ತವೆ. ಇವುಗಳಲ್ಲಿ 'ವನ್ದನಿಕ್ಕೆ' ಎಂಬುದು ಮೂಲರೂಪ. ಡಾ॥ ಎಂ.ಎಂ. ಕಲಬುರ್ಗಿಯವರು ಇದನ್ನು ಬಂದಣ+ಇಕ್ಕೆ ಎಂದು ವಿಗ್ರಹಿಸಿದ್ದಾರೆ. 'ಇದು ಬಂದಣ್ಣನ ಸ್ಥಳ' ಎಂಬ ಅರ್ಥವನ್ನು ಕೊಡುತ್ತದೆ. ಸಂಸ್ಕೃತ ಪಂಡಿತರು ಇದನ್ನು ಬಾಂಧವಪುರ, ಬಾಂಧವನಗರ ಎಂದು ತಪ್ಪಾಗಿ ಅನುವಾದಿಸಿದ್ದಾರೆ.

ಬಂದಳಿಕೆ ಪಟ್ಟಣವು ವಿಶಾಲವಾದ ನಾಗರಕೆರೆಯ ಸುತ್ತಮುತ್ತಲಿನ ವಿಶಾಲವಾದ ಪ್ರದೇಶದಲ್ಲಿ ನೆಲೆಗೊಂಡಿತ್ತು. ಇಲ್ಲಿಯ ಬನಶಂಕರಿ ದೇವಾಲಯದ ದಕ್ಷಿಣ ಹಾಗೂ ಪಶ್ಚಿಮದಲ್ಲಿ ರಾಜಧಾನಿ ನೆಲೆಗೊಂಡಿದ್ದ ಕುರುಹುಗಳು ಕೋಟೆ, ಕಂದಕಗಳು ಇನ್ನಿತರ ಅವಶೇಷಗಳು ಕಂಡುಬರುತ್ತವೆ. ಕ್ರಿ.ಶ.೧೫೩೯ರ ವರೆಗೂ ಬಂದಳಿಕೆ ಪಟ್ಟಣವಾಗಿದ್ದರ ದಾಖಲೆಗಳಿವೆ.[೪] ಕ್ರಿ.ಶ. ೧೨೧೨ರಲ್ಲಿ ಸೇವುಣರ ಸಿಂಘಣ ದೊರೆ ಬಂದಳಿಕೆ ಮೇಲೆ ದಾಳಿಮಾಡಿ ಇದರ ಸಂಪತ್ತು ಲೂಟಿಮಾಡಿದನು.[೫]

ನಾಗರಖಂಡ ಬಂದಳಿಕೆ

ನಾಗರಖಂಡವು ಒಂದು ರಾಜ್ಯವಾದರೆ ಬಂದಳಿಕೆಯ ಅದರ ರಾಜಧಾನಿಯಾಗಿತ್ತು. ಎರಡರ ಮಧ್ಯ ಅವಿನಾಭಾವ ಸಂಬಂಧ. ನಾಗರಖಂಡ ಆಳಿದ ಅರಸರು ಕದಂಬರು ಅವರನ್ನು ನಾಗರಖಂಡದ ಕದಂಬರು ಎಂದೂ ಬಂದಳಿಕೆ ಕದಂಬರು ಎಂದೂ ಇತಿಹಾಸ ಗುರುತಿಸಿತ್ತು. ಆದರೆ ಕ್ರಿ.ಶ. ೬೮೫ರಿಂದ ಕ್ರಿ.ಶ. ೯೮೬ರವರೆಗೆ ವಿವಿಧ ಅರಸು ಮನೆತನಗಳು ವಿವಿಧ ಅರಸರುಗಳು ಇದನ್ನು ಆಳಿದ್ದಾರೆ. ಕ್ರಿ.ಶ.

* S/o ನರಸಪ್ಪ, ಮಡಕೆ ಚೇಲೂರು ಪೋಸ್ಟ್, ಶಿವಮೊಗ್ಗ-೫೭೭೨೧೬.

೯೮೬ರ ಮುಂದೆ ಕ್ರಿ.ಶ. ೧೪೪೨ರ ವರೆಗೆ ಕದಂಬ ಮನೆತನದವರು ಮಾತ್ರ ಆಳಿದರು. ಸುಮಾರು ೧೫ ಜನ ಅರಸರು ಆಳ್ವಿಕೆ ನಡೆಸಿದಂತಿದೆ. ಬಂದಳಿಕೆ ಅರಸರಲ್ಲಿ ಕ್ರಿ.ಶ. ೧೧೬೯–೭೭ರ ವರೆಗೆ ಆಳಿದ ಕದಂಬ ಸೋಯಿದೇವನು ಬಹು ಪ್ರಖ್ಯಾತನಾದ ಅರಸನು. ಈತ ಬೊಪ್ಪರಸ–ಸಿರಿಯಾ ದೇವಿ ರಾಜದಂಪತಿಗಳ ಸುಪುತ್ರನು ಈತನಿಗೆ ಲಚ್ಚಲದೇವಿ, ಮಾಚಲದೇವಿ ಎಂಬ ಈರ್ವರು ಮಹಾರಾಣಿಯರು, ಬೊಪ್ಪ, ಮಲ್ಲಿಕಾರ್ಜುನ, ಲಚ್ಚಲದೇವಿಯರೆ ಸಂತಾನ. ಇವನ ಸಂಗಡ ನಿಷ್ಠಾವಂತ ಅಧಿಕಾರಿಗಳು ಶೂರಸೇನಾಪತಿಗಳು ಇದ್ದರಲ್ಲದೆ ಸ್ವತಃ ಪರಾಕ್ರಮಿಯೂ ಆಗಿದನು. ಆ ಭಾಗದ ಬಲಾಬಲದ ಪರಿಚಯ ಬಿಜ್ಜಳನಿಗೆ ಚನ್ನಾಗಿದ್ದುರಿಂದ ಸೋಯಿದೇವನನ್ನು ತನ್ನ ಆತ್ಮೀಯರಲ್ಲಿ ಒಬ್ಬನನ್ನಾಗಿ ಮಾಡಿಕೊಂಡಿದ್ದನು. ಬಿಜ್ಜಳ ಸೋಯಿದೇವರ ಮಧ್ಯ ಎಂದರೆ ಇದು ಕಲ್ಯಾಣ–ಬಂದಳಿಕೆ ಮಧ್ಯದ ಬಾಂಧವ್ಯ ರಾಯಮುರಾರಿ ಸೋವಿದೇವನ ಕಾಲದಲ್ಲಿ ಈ ಬಾಂಧವ್ಯ ಇನ್ನಷ್ಟು ಗಟ್ಟಿಗೊಂಡಿತು. ಬಿಜ್ಜಳ ಮಹಾರಾಜನು ಸೋಯಿದೇವನ ಕಾಲದಲ್ಲಿಯೆ ನಾಗರಖಂಡಕ್ಕೂ ಬಳ್ಳಿಗಾವೆಗೂ ಆಗಮಿಸಿದ್ದನು.[೬] ಬಂದಳಿಕೆ ರಾಜಧಾನಿಯಾದ ಆರಂಭದಲ್ಲಿಯೇ ಓರ್ವ ಮಹಿಳೆಗೆ ಆಡಳಿತ ನಡೆಸುವ ಅವಕಾಶ ಒದಗಿತ್ತು. ಅವಳೇ ಜಕ್ಕಿಯಬ್ಬೆ ಕ್ರಿ.ಶ. ೯೧೨ ರಿಂದ ಕ್ರಿ.ಶ. ೯೧೮ವರೆಗೆ ಕೇವಲ ಆರುವರ್ಷಗಳ ಕಾಲ ಆಳಿದರೂ ನಾಗರಖಂಡವನ್ನಾಳಿದ ಏಕೈಕ ಮಹಿಳಾ ಮಣಿಯಾಗಿದ್ದಾಳೆ. ಉತ್ತಮ ಪ್ರಭುಶಕ್ತಿಯುಳ್ಳವಳೂ ಜಿನಭಕ್ತಳೂ ಆದ ಜಕ್ಕಿಯಬ್ಬೆ ಬಂದನಿಕೆಯ ತೀರ್ಥದಲ್ಲಿ ಸಮಾಧಿ ಮರಣದಿಂದ ಮುಕ್ತಿಹೊಂದಿದಳು. ಕ್ರಿ.ಶ. ೯೧೮ ಬಂದಳಿಕೆಯ ಈ ಶಾಸನ ಜಕ್ಕಿಯಬ್ಬೆಯ ಅಪ್ರತಿಮ ಗುಣಗಳನ್ನು ಸುಂದರ ಕಾವ್ಯವಾಗಿಸಿದೆ. ಇದರ ಕವಿ ನಾಗವರ್ಮ.

ಬಂದಳಿಕೆ ಪ್ರಬಲ ರಾಜಕೀಯ ಕೇಂದ್ರವಾಗಿದ್ದಂತೆ ಬಹುಪ್ರಾಚೀನ ಕಾಲದಿಂದಲೂ ಒಂದು ಶಕ್ತಿಪೀಠವಾಗಿದ್ದಂತೆ ತಿಳಿದುಬರುತ್ತದೆ. ೬ನೇ ಶತಮಾನದ ಶಿವಳ್ಳಿ ತ್ರಾಮಶಾಸನದಲ್ಲಿ ಬಂದಳಿಕೆಯ ಒಂದು ಭಾಗಕ್ಕೆ 'ಮಾಹೇಶ್ವರಿ ಕ್ಷೇತ್ರ' ಎಂದು ಕರೆಯಲಾಗಿದೆ. ಬನದೇವಿಯ ಉಲ್ಲೇಖ ಬಂದಳಿಕೆ ಶಾಸನದಲ್ಲಿ ಕ್ರಿ.ಶ. ೧೬೯೬ರಲ್ಲಿ ಕಂಡುಬರುತ್ತದೆ. ಈಗಲೂ ಬನದೇವಿಯ ಜಾತ್ರೆ ಬನದ ಹುಣ್ಣಿಮೆಯಂದು ವೈಭವದಿಂದ ನಡೆಯುತ್ತದೆ. ಈ ಕಾಲದಲ್ಲಿ ದೇವಿಯನ್ನು ಹಿಂದಿನ ರಾಜಕೀಯ ನಾಯಕರು ಕಾಣಿಕೆಯತ್ತ ಸ್ವರ್ಣಾಭರಣಗಳನ್ನೆಲ್ಲ ದೇವಿಗೆ ತೊಡಸಿ ಅಲಂಕೃತದೇವಿ ಕಂಡು ಧನ್ಯರಾಗುತ್ತಾರೆ. ಕಾಡಿನ ಮಧ್ಯದಲ್ಲಿ ಸ್ಥಾಪಿತವಾದ ಈ ದೇವಿ 'ಬಳರಿ' ಆಗಿರಬಹುದಾಗಿದೆಯೆಂಬ ವಿಚಾರವೂ ಹಲವರದು. ೧೨ನೆಯ ಶತಮಾನದ ಪ್ರಭುದೇವರ ಮಾಯೆ ಅಲ್ಲಿಂದ ಪ್ರಭುವನ್ನು ಹಿಂಬಾಲಿಸಿ ಇಲ್ಲಿಗೆ ಬಂದಳೆಂದು ಪುರಾಣದವರ ಅಭಿಮತ. ಮಾಯೆ ಬೆಂಬತ್ತಿ ಬಂದಳಾದ್ದರಿಂದ ಬಂದಳು+ಈಕೆ ಬಂದಳಿಕೆ ಆಯಿತೆಂದು ಅವರ ಅಭಿಪ್ರಾಯ.

ಬಂದಳಿಕೆಯಲ್ಲಿ ಅನೇಕ ಶೈವ ಹಾಗೂ ಜೈನ ಸ್ಥಾನಾಚಾರ್ಯರು ಆಗಿ ಹೋಗಿದ್ದಾರೆ. ಇವರು ಮಂಡಲಾಚಾರ್ಯರೆಂದು ಕರೆಸಿಕೊಳ್ಳುತ್ತಿದ್ದರು. ಆಗ ಇದು ಧಾರ್ಮಿಕ ಕೇಂದ್ರವೂ ಆಗಿದ್ದಿತು. ೨ನೇ ಶತಮಾನದಿಂದ ಶೈವಧರ್ಮ, ೬ನೇ ಶತಮಾನದಿಂದ ಜೈನಧರ್ಮಗಳು ಇಲ್ಲಿ ಪ್ರಚಾರದಲ್ಲಿದ್ದುವು. ನಾಗರಖಂಡದ ಪ್ರಥಮ ಜೈನ ಬಸದಿ ಬಂದಳಿಕೆಯಲ್ಲಿಯೇ ಕ್ರಿ.ಶ. ೯೦೨ರಲ್ಲಿ ನಿರ್ಮಾಣವಾಗಿದೆ. ಶಿವಾಲಯಗಳಲ್ಲಿ ಸೋಮೇಶ್ವರ ದೇವಾಲಯ ಕ್ರಿ.ಶ.೧೧೬೩, ಬೊಪ್ಪೇಶ್ವರಾಲಯ ಕ್ರಿ.ಶ. ೧೧೭೪, ಕೊಂಡಸಬಾವಿ ಬ್ರಹ್ಮದೇವರು ಕ್ರಿ.ಶ. ೧೧೨೩, ಮಹಾನವಮಿ ಮಂಟಪ ಕ್ರಿ.ಶ. ೧೨೦೭, ಕಲಿದೇವರ ದೇವಾಲಯ ಕ್ರಿ.ಶ. ೧೨೪೧ರಲ್ಲಿಯೂ ನಿರ್ಮಾಣಗೊಂಡವು. ಇದಲ್ಲದೆ ಸಹಸ್ರಲಿಂಗ, ವೀರಭದ್ರ ಮುಂತಾದ ಹಲವು ದೇವಾಲಯಗಳು ಕಂಡುಬರುತ್ತಿದ್ದು ಇವುಗಳ ನಿರ್ಮಾಣದ ಬಗೆಗೆ ದಾಖಲೆಗಳು ಉಪಲಬ್ಧವಿಲ್ಲ. ಸದ್ಯ ನೆಲಸಮವಾಗಿರುವ ಹತ್ತಾರು ಶಿಲಾದೇಗುಲಗಳು, ಅವಶೇಷಗಳು, ಭಗ್ನವಿಗ್ರಹಗಳೂ ಅಲ್ಲಲ್ಲಿ ಹರಡಿಕೊಂಡಿದ್ದು ದಾಖಲೆ ರಹಿತವಾಗಿವೆ.

ಬಂದಳಿಕೆ ವಿದ್ಯಾಕೇಂದ್ರವೂ ಸರಸ್ವತಿಪೀಠವೂ ಆಗಿ ಶೋಭಿಸಿತು. ಪ್ರಾಚೀನ ಹಾಗೂ ಮಧ್ಯಕಾಲೀನ ಕರ್ನಾಟಕದಲ್ಲಿ ಪ್ರಮುಖ ವಿದ್ಯಾಕೇಂದ್ರಗಳಾಗಿ ದೇವಾಲಯಗಳು, ಮಠಗಳು, ಅಗ್ರಹಾರಗಳು, ಶಿವಪುರ, ಬ್ರಹ್ಮಪುರಿ ಘಟಿಕಾಸ್ಥಾನಗಳು ಶೋಭಿಸಿದವು. ಇಂಥ ಕಲಿಕಾಕೇಂದ್ರಗಳು ರಾಜಧಾನಿ ಪಟ್ಟಣ ಬಂದಳಿಕೆಯಲ್ಲಿಯೂ ನೆಲೆಯಾಗಿದ್ದವು. ಕ್ರಿ.ಶ. ೧೨೦೭ರಲ್ಲಿ ಸೂರ್ಯದಣ್ಣಾಯಕರು ಹಾಗೂ ಹೊಯ್ಸಳ ವೀರಬಲ್ಲಾಳನ ಮಹಾರಾಣಿ ಕೇತಲದೇವಿಯು ಸೇರಿ ಅಲ್ಲಿಯ ಮಹಾಜನರಿಗೂ ದತ್ತಿಗಳನ್ನು ಬಿಟ್ಟಿದ್ದಾರೆ. ಬಂದಳಿಕೆ ತ್ರಿಮೂರ್ತಿ ದೇವಾಲಯದಲ್ಲಿಯ ಕಂಬದಲ್ಲಿಯ ಒಂದು ಶಾಸನವು (ಕ್ರಿ.ಶ. ೧೨೪೮) ಸಹ ಒಂದು ಬ್ರಹ್ಮಪುರಿಯನ್ನು ಉಲ್ಲೇಖಿಸುತ್ತದೆ. ಬಂದಳಿಕೆಯಲ್ಲಿ ವಿಷ್ಣುಘಳಿಸಾಸರು, ಚಿಕ್ಕವಾಗೀಶ್ವರ ಭಟ್ಟರು, ಶ್ರೀರಾಮ ಘಳಿಸಾಸರು ಎಂಬ ಹಲವರು ಘಳಿಸಾಸರುಗಳು ಇದ್ದುದಾಗಿದೆ. ಇವರು ಘಟಿಕಾಸ್ಥಾನದ ಮೇರುವ್ಯಕ್ತಿಗಳು. ಆದ್ದರಿಂದ ವಿದ್ಯಾಕಾಂಕ್ಷಿಗಳು ರಾಜ್ಯದ ನಾನಾಭಾಗಗಳಿಂದ ಇಲ್ಲಿಗೆ ಆಗಮಿಸುತ್ತಿದ್ದರು.

ಬಂದಳಿಕೆ ಇಂದು ಪ್ರವಾಸಿಗರ ತಾಣವೂ ಆಗಿದೆ. ಕಾರಣ ಶಿಲ್ಪಕಲಾ ನೈಪುಣ್ಯದಿಂದ ಕೂಡಿದ ದೇವಾಲಯಗಳು, ವಿಗ್ರಹಗಳು,, ಶಾಸನಗಳು ಹಾಗೂ ಗುಡ್ಡ–ಕೊಳ್ಳ–ಅಡವಿ–ಜುಳುಜುಳು ಹರಿಯುವ ನೀರು.

ಬಂದಳಿಕೆಯ ಪ್ರಮುಖ ಆಕರ್ಷಣೆಗಳೆಂದರೆ ಎರಡು ದೇವಾಲಯಗಳು ಹಾಗೂ ಒಂದು ಜಿನಬಸದಿ. ಸೋಮೇಶ್ವರ ದೇವಾಲಯ, ಕದಂಬ ದೊರೆ ಸೋಯಿದೇವನ ತಳವಾರ ಹಾಗೂ ಸುಂಕದ ಅಧಿಕಾರಿಯಾಗಿದ್ದ ಮಾಚಯ್ಯನಾಯಕ ಕ್ರಿ.ಶ.೧೧೬೩ರಲ್ಲಿ ಈ ದೇವಾಲಯ ನಿರ್ಮಿಸಿದ.

ಪೂರ್ವಾಭಿಮುಖವಾಗಿರುವ ಸದರಿ ದೇವಾಲಯದ ಮುಂಭಾಗದಲ್ಲಿ ಮೊದಲು ಕಿರುಮಂಟಪ ಒಂದು ಇದ್ದಿರಬೇಕೆಂದು ಊಹಿಸಲಾಗಿದೆ.[೭] ಈದ್ವಾರ ಮಂಟಪದ ಹೊರಬದಿಯ ಎರಡು ಅಂಕಣಗಳಲ್ಲಿ ಸುಂದರವಾಗಿ ಕಂಡರಿಸಲಾದ ಎರಡು ಜಾಲಂದರದ ತೆರೆಗಳಿವೆ. ಜಾಲಂಧರದ ಎರಡು ಸಾಲುಗಳ ಮಧ್ಯದಲ್ಲಿ ವಿಸ್ತಾರವಾದ ಅಲಂಕಾರ ಪಟ್ಟಿ ಇದ್ದು ಇದರಲ್ಲಿ ರಾಮಾಯಣ, ಮಹಾಭಾರತದ ದೃಶ್ಯಗಳನ್ನು ಕಂಡರಿಸಲಾಗಿದೆ. ಈ ದೇವಾಲಯದ ಪ್ರಮುಖ ಆಕರ್ಷಣೆ ಈ ಜಾಲಂದರಗಳೇ ನವರಂಗದ ದ್ವಾರದ ತೋಳುಗಳ ಬದಿಯಲ್ಲಿ ದ್ವಾರಪಾಲಕರ ಸ್ಥಾನದಲ್ಲಿ ರತಿಮನ್ಮಥರ ಚೆಲುವಾದ ಉಬ್ಬು ಶಿಲ್ಪಗಳಿವೆ.

ತ್ರೈಪುರುಷ ದೇವಾಲಯ: ಇದು ತ್ರೈಪುರುಷ ದೇವಾಲಯವಾಗಿದ್ದುದು ಮೂರು ಶಿಖರಗಳು ಇವೆ. ಸದ್ಯ ಪಶ್ಚಿಮ ಶಿಖರ ಮಾತ್ರ ಬಿದ್ದಿದೆ. ಕಲ್ಯಾಣ ಚಾಳುಕ್ಯ ಶೈಲಿಯಲ್ಲಿರುವ ಪ್ರತಿಯೊಂದು ಶಿಖರವು ಮೂರು ಹಂತಗಳ ಬುರುಜುಗಳಿಂದ ಮೇಲೇರಿದೆ. ಪ್ರತಿ ಶಿಖರದಲ್ಲಿಯೂ ಕೀರ್ತಿಮುಖದ ಕಮಾನುಗಳಿವೆ. ಇವುಗಳಲ್ಲಿ ಲಕ್ಷ್ಮಿ ನರಸಿಂಹ, ಭೈರವ ಮುಂತಾದ ವಿಗ್ರಹಗಳಿವೆ. ಪ್ರತಿ ಶಿಖರಕ್ಕೂ ಸುಖನಾಸಿ ಇದೆ. ಪಶ್ಚಿಮ ಶಿಖರದ ಸುಖನಾಸಿಯ ಸಿಂಹ ಲಲಾಟವು ಭಾರೀ ಭವ್ಯವಾಗಿದೆ. ಬಾಯ್ದೆರೆದ ಸಿಂಹದ ಉಗ್ರ ಮುಖ ವಿಶಾಲವಾದ ಎರಡು ಕಣ್ಣುಗಳು, ಬಾಯಿಯಿಂದ ಹೊರ ಚಾಚಿದ ನಾಲಿಗೆ, ಎದ್ದುಕಾಣುವ ಮೂರು ಹಲ್ಲುಗಳು ನೋಡುತ್ತಿದ್ದರೆ ಭಾರಿ ಸಿಂಹವೊಂದು ಬಾಯ್ದೆರೆದು ಮಲಗಿದಂತೆ ಭಾಸವಾಗುತ್ತದೆ. ಸಿಂಹಲಲಾಟದ ಮಧ್ಯದಲ್ಲಿರಬೇಕಾದ ನಟರಾಜನ ವಿಗ್ರಹ ನಾಶವಾಗಿದೆ. ತ್ರೈಪುರುಷ ದೇವಾಲಯದ ಪ್ರಮುಖ ಆಕರ್ಷಣೆ ಈ ಸಿಂಹಲಲಾಟವು.

ಶಾಂತಿನಾಥ ತೀರ್ಥಂಕರ ಬಸದಿ : ನಾಗರಕೆರೆಯ ಏರಿಯ ಕೆಳಗೆ ಈ ಬಸದಿ ಇದೆ. ಇದು ಅತ್ಯಂತ ಪ್ರಾಚೀನ ಬಸದಿ ಕ್ರಿ.ಶ. ೫೨೮ರ ಶಿವಳ್ಳಿ ತಾಮ್ರ ಶಾಸನದಲ್ಲಿ ಬಂದಳಿಕೆಯ 'ಶಾಂತತಟಾಕ'ದ ಉಲ್ಲೇಖವಿದೆ. ಶಾಂತಿನಾಥ ತೀರ್ಥಂಕರನಿಂದ ಈ ಕೆರೆಗೆ 'ಶಾಂತ ತಟಾಕ' ಎಂಬ ಹೆಸರು ಬಂದಂತಿದೆ. ಈ ಕೆರೆ ಮೊದಲು 'ನಾಗರಕೆರೆ' ಎಂದು ರೂಢಿಯಲ್ಲಿತ್ತು. ರಾಷ್ಟ್ರಕೂಟರ ಕಾಲದಲ್ಲಿ ಬನವಸೆ ಆಳುತ್ತಿದ್ದ 'ಲೋಕಟೆ' ಅರಸನ ಪೆರ್ಗಡೆ ಬಿಟ್ಟಯ್ಯ ಕ್ರಿ.ಶ. ೯೦೨ರಲ್ಲಿ ಬಂದಳಿಕೆಯಲ್ಲಿ ನಿರ್ಮಿಸಿದ ಬಸದಿ ಇದೇ ಆಗಿರಬಹುದಾಗಿದೆ. ಕ್ರಿ.ಶ. ೯೧೨ರಲ್ಲಿ ನಾಗಾವುಂಡಿ ಜಕ್ಕಿಯಬ್ಬೆ ಈ ಬಸದಿಗೆ ದತ್ತಿ ಬಿಟ್ಟಂತಿದೆ. ಆದರೂ ಈ ಬಸದಿಯ ವಾಸ್ತುಶಿಲ್ಪ ಅಷ್ಟು ಪ್ರಾಚೀನವಾದುದಲ್ಲವೆಂಬ ಅಭಿಪ್ರಾಯವಿದೆ. ಪ್ರಸ್ತುತ ಬಸದಿ ಕ್ರಿ.ಶ. ೧೦೭೫ ಹಾಗೂ ಕ್ರಿ.ಶ. ೧೨೦೪ರಲ್ಲಿ ಹೀಗೆ ಎರಡು ಸಲ ಜೀರ್ಣೋದ್ಧಾರವಾಗಿದೆ. ಆದ್ದರಿಂದ ಮೂಲಸ್ವರೂಪ ಸಂಪೂರ್ಣವಾಗಿ ಬದಲಾಗಿರುವ ಸಾಧ್ಯತೆಯೂ ಇದೆ. ಈ ಬಸದಿಯ ಒಂದು ವಿಶೇಷವೆಂದರೆ ನವರಂಗದ ಕಂಬದಲ್ಲಿ 'ಚಿತ್ರಕವಿತ್ರ' ಕಂಡರಿಸಲಾಗಿದೆ. ಇದು ಬಹು ಅಪರೂಪದ ಸಾಹಿತ್ಯ ಭಾಷೆ ಹಾಗೂ ಸಾಹಿತ್ಯದ ಮೇಲೆ ಅಗಾಧ ಪಾಂಡಿತ್ಯವಿರುವ ಕವಿ ಮಾತ್ರ ರಚಿಸಲು ಸಾಧ್ಯ. ಪಂಡಿತರ ಅಭಿಪ್ರಾಯದಂತೆ ಇಲ್ಲಿರುವುದು ಶ್ರೇಷ್ಠ ಕವಿತ್ವ ಇದನ್ನು ರಚಿಸಿದ ಕವಿ ತನ್ನ ಹೆಸರನ್ನು 'ಸೂರಿ' ಎಂದು ಹೇಳಿಕೊಂಡಿದ್ದಾನೆ. ಪೂರ್ಣ ಹೆಸರು ಸೂರ್ಯಪಂಡಿತ.

ಈ ಬಸದಿಯ ಸುತ್ತಲೂ ಅನೇಕ ನಿಷದಿ ಕಲ್ಲುಗಳು ದಾನ ಶಾಸನಗಳು ಕಂಡುಬರುತ್ತವೆ. ಸದ್ಯ ಪುರಾತತ್ವ ಇಲಾಖೆಯಿಂದ ಸಂರಕ್ಷಿಸಲ್ಪಟ್ಟಿರುವ ಇದರ ಸ್ಥಿತಿ ಉತ್ತಮವಾಗಿದೆ. ಶಾಸನಗಳ ಕಾಲ ೧೧೦೦, ಇಲ್ಲಿ ಏಳು ಸಂಸ್ಕೃತ ಶ್ಲೋಕಗಳನ್ನು (ಕನ್ನಡವನ್ನು ಸೂಚನೆಗೆ ಮಾತ್ರ) ಬಳಸಿದ್ದಾನೆ. ಕವಿಯ ಚಿತ್ರಕವಿತ್ವ ಪಾಂಡಿತ್ಯಕ್ಕೆ ಇದಕ್ಕೂ ಮಿಗಿಲಾದ ಇನ್ನೊಂದು ಉದಾಹರಣೆ ಇರಲಾರದು ಬಂದಳಿಕೆಯ ಅಪರೂಪದ ಸಂಗತಿಗಳಲ್ಲಿ ಇದೂ ಒಂದು.

ಶಾಸನಗಳ ಸಾಧಾರಣ ಎಲ್ಲ ಪ್ರಕಾರಗಳನ್ನು ಇಲ್ಲಿ ಬಂದಳಿಕೆಯಲ್ಲಿ ಕಾಣಬಹುದು. ಗೋಸಾಸಗಳು, ದಾನಶಾಸನಗಳು, ವೀರಗಲ್ಲುಗಳು, ಮಹಾಸತಿ ಕಲ್ಲುಗಳು, ನಿಷದಿ ಕಲ್ಲುಗಳು, ಆತ್ಮಬಲಿ ಕಲ್ಲುಗಳು, ಅಪರೂಪದ ಸಿಡೆತಲೆ ಕಲ್ಲು, ವೇಳೆವಾಳಿ ಕಲ್ಲುಗಳು ಇಲ್ಲಿವೆ. ವೀರ ಹಾಗೂ ಮಾಸ್ತಿ ಕಲ್ಲುಗಳ ಕಂಡರಣೆಯಲ್ಲಿ ವಿವಿಧ ಬಗೆ ಇಲ್ಲಿವೆ. ತ್ರಿಮೂರ್ತಿ ದೇವಾಲಯದ ಹಾಗೂ ಸೋಮೇಶ್ವರ ದೇವಾಲಯದ ಮುಂದಿರುವ ಬಯಲಲ್ಲಿ ಬಲಭಾಗದತ್ತ ಬಂದಳಿಕೆಯಲ್ಲಿ ದೊರೆತ ಶಾಸನಗಳನ್ನು ಒಂದೆಡೆ ಸಾಲಾಗಿ ನಿಲ್ಲಿಸಿರುತ್ತಾರೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಎ.ಕ.ಸಂ. ೮, ಸೊ. ೩೨೮ ಬಾರಂಗಿ ಕ್ರಿ.ಶ. ೧೧೫೯.
೨. ಎ.ಕ.ಸಂ. ೭ ಶಿಕಾ ೨೨೫ ಬಂದಳಿಕೆ ಕ್ರಿ.ಶ. ೧೨೦೪.
೩. ಎ.ಕ.ಸಂ. ೭ ಶಿ ಕಾ ೨೪೦ ಬಂದಳಿಕೆ ಕ್ರಿ.ಶ. ೧೧೪೨.
೪. ಅ.ಸ.ಮೈ.ಎ.ರಿ. ೧೯೨೫ ನಂ. ೬೫ ತಾಮ್ರಶಾಸನ ಕೆಳದಿ ಗುಂಡ ಜೋಯಿಸ.
೫. ಎ.ಕ.ಸಂ. ಸೊರಬ ೬೦೯, ದೋರವಳ್ಳಿ ಕ್ರಿ.ಶ. ೧೨೧೨.
೬ ಎ.ಕ.ಸಂ. ೭ ಶಿಕಾ ೨೬೫ ಬಂದಳಿಕೆ ಕ್ರಿ.ಶ. ೧೨೦೭.
೭. ಅ.ಸ.ಮೈ.ಎ.ರಿ. ೧೯೪೧ ಪುಟ ೯೦.

ಬೆಂಗಳೂರಿನ ಪ್ರಾಚೀನ ಗ್ರಾಮಗಳಲ್ಲೊಂದಾದ ಕದಿರೇನಹಳ್ಳಿ ಸ್ಥಳನಾಮ ಸಮೀಕ್ಷೆ

ಸಂಧ್ಯಾ ವಿ.*

ಬೆಂಗಳೂರು ನಗರದ ದಕ್ಷಿಣದಲ್ಲಿರುವ ಕದಿರೇನ ಹಳ್ಳಿಯು, ಈ ಜಿಲ್ಲೆಯ ಪ್ರಾಚೀನ ಗ್ರಾಮಗಳ ಲ್ಲೊಂದಾಗಿದೆ. ಈ ಗ್ರಾಮವು ಬಿಡಿಎ ವ್ಯಾಪ್ತಿಗೆ ಒಳಪಟ್ಟು ವಾರ್ಡ್ ಸಂಖ್ಯೆ ೧೮೧ ಕುಮಾರಸ್ವಾಮಿ ಬಡಾವಣೆಗೆ ೧೯೮೦ರಲ್ಲಿ ಸೇರ್ಪಡೆ ಯಾಗಿದೆಯಾದರೂ, ಇದು ಪ್ರಾಚೀನ ಬೆಂಗಳೂರಿನಿಂದ ಪ್ರತ್ಯೇಕವಾಗಿ ನೂರಾರು ವರ್ಷಗಳ ಹಿಂದೆಯೇ ಅಸ್ತಿತ್ವದಲ್ಲಿತ್ತು.

ಕದಿರೇನಹಳ್ಳಿ ಗ್ರಾಮವು ಹೊಸದಾಗಿ ನಿರ್ಮಿತವಾದ ಬೆಂಗಳೂರಿನ ಭಾಗವಾಗಿರಲಿಲ್ಲ. ಚಾಮರಾಜಪೇಟೆ ಅಥವಾ ಬಸವಣ್ಣನ ಗುಡಿಯವರೆಗಿದ್ದ ದಕ್ಷಿಣ ಬೆಂಗಳೂರಿನ ಆಚೆ ಕಾಡಿತ್ತು. ಪಿ.ಬಿ.ರಾಧಾಕೃಷ್ಣ ಅವರು ಬರೆದಿರುವ 'ನನ್ನ ತಂದೆ' ಪುಸ್ತಕದಲ್ಲಿ ಸುಮಾರು ೧೯ನೆಯ ಶತಮಾನದ ಕಡೆಯಭಾಗದಲ್ಲಿಯೂ ಇಲ್ಲಿ ಹುಲಿವಾಸವಾಗಿದ್ದಂಥ ಕಾಡು ಇತ್ತು ಎಂಬ ವಿಚಾರ ತಿಳಿದು ಬರುತ್ತದೆ. ಇಲ್ಲಿ ಇವರು ತಿಳಿಸಿರುವಂತೆ ಚಾಮರಾಜಪೇಟೆಯಲ್ಲಿದ್ದ ಇವರ ಮನೆಯಿಂದ ಬಿ.ಪುಟ್ಟಯ್ಯ ಹಸುಗಳನ್ನು ಊರಾಚೆಯ ಕಾಡಿನಲ್ಲಿ ಹುಲ್ಲು ಮೇಯಿಸಲು ಬಿಟ್ಟಾಗ ಹುಲಿಯೊಂದು ಹಿಡಿದಿತ್ತೆನ್ನುವ ಘಟನೆ ದಾಖಲಿಸಿದ್ದಾರೆ.

ಕದಿರೇನಹಳ್ಳಿಯ ಪ್ರಾಚೀನತೆ ಕುರಿತಂತೆ ಯಾವುದೇ ಲಿಖಿತ ದಾಖಲೆಗಳಿಲ್ಲ. ಆದರೆ ಇದು ತನ್ನದೇ ಆದ ಕೆಲವು ಸಾಂಸ್ಕೃತಿಕ, ಧಾರ್ಮಿಕ ಆಚರಣೆಗಳನ್ನು ಹೊಂದಿದ್ದು, ಅವುಗಳ ಮೂಲಕವೇ ಈ ಗ್ರಾಮದ ಹಿರಿಮೆಯನ್ನು ಮೆರೆಯುತ್ತಿದೆ.

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ರಾವ್ ಬಹದ್ದೂರ ಬಿ.ಕೆ. ಗರುಡಾಚಾರ್ ಅವರಿಗೆ ಈ ಕದಿರೇನಹಳ್ಳಿ ಗ್ರಾಮವನ್ನು ದತ್ತಿಯಾಗಿ ಕೊಡಲಾಗಿತ್ತು. ಇವರ ನಂತರ ಈ ಗ್ರಾಮವನ್ನು ಗರುಡಾಚಾರ್ ಅವರ ಸೋದರಳಿಯ ಹಾಗು ಅಂದಿನ ಪ್ರಸಿದ್ಧ ವಕೀಲರಾಗಿದ್ದ ವೆಂಕಟರಂಗ ಅಯ್ಯಂಗಾರ್ ಅವರು ನೋಡುಕೊಳ್ಳುತ್ತಿದ್ದರು.

ಕದಿರೇನಹಳ್ಳಿಯ ನೆರೆಯಲ್ಲಿ ಸರಬಂಡೆಪಾಳ್ಯ (ಇಂದಿನ ಬನಶಂಕರಿ), ಗೌಡನಪಾಳ್ಯ, ಚಿಕ್ಕಲ್ಲಸಂದ್ರ, ಚೆಟ್ಟಿಪಾಳ್ಯವೆಂದು ಕರೆಯಲಾಗುತ್ತಿದ್ದ ಇಂದಿನ ಸುಬ್ರಹ್ಮಣ್ಯಪುರ, ಉತ್ತರಹಳ್ಳಿ ಪ್ರದೇಶಗಳಿದ್ದವು. ಇಂದು ಇಸ್ರೋಲೇಔಟ್ ಇರುವ ಭಾಗದಲ್ಲಿ ಗೋವಿನಾಯಕನಹಳ್ಳಿ ಎಂಬ ಹೆಸರಿನ ಹಳ್ಳಿಯೊಂದಿದ್ದು, ಕಾಲಾಂತರದಲ್ಲಿ ಇಲ್ಲಿನ ಜನರೆಲ್ಲ ಗುಳೆಹೋಗಿ ಊರು ಕಾಲಿ ಆಯಿತೆಂದೂ ತಿಳಿದುಬರುತ್ತದೆ. ಇಲ್ಲಿ ಬ್ರಿಟಿಶ್ ಅಧಿಕಾರಿಯೊಬ್ಬನ ಬಂಗ್ಲೆ ಇದ್ದು ಈ ಭಾಗವನ್ನು ದೊರೆ ಬಂಗ್ಲೆ ಎಂದು ಗುರುತಿಸುತ್ತಿದ್ದರು. ಈಗ ಅದರ ಕುರುಹು ಕಂಡುಬರುವುದಿಲ್ಲ. ಈ ಊರಿನ ಆಚೆ ಇಂದಿಗೆ ಟ್ರೈನಿಂಗ್ ಕಾಲೇಜು, ಡಿ.ಜಿ.ಪೆಟ್ರೋಲ್ ಬಂಕ್ ಇರುವ ಜಾಗದಲ್ಲಿ ಕನ್ನೀರು ಕಟ್ಟೆ ಎಂಬ ಕೆರೆ ಹಾಗೂ ಚಿಕ್ಕಲ್ಲಸಂದ್ರಕ್ಕೆ ಹೋಗವ ದಾರಿಯಲ್ಲಿದ್ದ ಗೌಡನ ಕೆರೆ ಇಲ್ಲಿನ ಜನರಿಗೆ ಕುಡಿಯುವ ಹಾಗೂ ದಿನನಿತ್ಯ ಬಳಕೆಗೆ ನೀರನ್ನು ಒದಗಿಸುತ್ತಿತ್ತು.

ಚಿಂತಾಮಣಿ ಬಳಿಯ ಆಲಂಗಿರಿಯಿಂದ ವಲಸೆ ಬಂದ ನಾಯಕರ ಮನೆತನ ಕದಿರೇನಹಳ್ಳಿಯಲ್ಲಿ ಪಟೇಲರಾಗಿದ್ದು ಇಂದಿಗೂ ಇವರ ವಂಶೀಯರು ಇಲ್ಲಿನ ಗ್ರಾಮದೇವತೆ ಪೂಜೆ, ಊರಹಬ್ಬ ಮೊದಲಾದವುಗಳಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆ. ಈ ಮನೆತನದಲ್ಲಿ ಅವರ ಊರನ್ನು ನೆನಪಿಸುವ ಆಲಂಗಿರಿಯಪ್ಪ ಎಂಬ ಹೆಸರಿನ ವ್ಯಕ್ತಿಗಳು ಕಂಡುಬರುತ್ತಾರೆ. ಜನಪದಕಥೆಯಂತೆ ಹಿಂದೆ ಇವರ ವಂಶದಲ್ಲಿ ೧೦-೧೧ ವರ್ಷದ ಲಚ್ಚಮ್ಮ ಎಂಬ ಹೆಣ್ಣುಮಗಳೊಬ್ಬಳು ಹುಟ್ಟುಕೂದಲು ತೆಗೆಸುವ ಮುನ್ನವೇ ಮೈನೆರೆದದ್ದು, ಘೋರ ಮೈಲಿಗೆಗೆ ಕಾರಣವಾಯಿತೆಂದು ಭಾವಿಸಿ ಅವಳನ್ನು ಕಾಡುಪಾಲು ಮಾಡಿರುತ್ತಾರೆ. ಆದರೆ ಕಾಡಿನಲ್ಲಿ ದಿಕ್ಕೆಟ್ಟ ಆ ಹುಡುಗಿಯು ನೊಂದು ಈ ವಂಶವನ್ನು ಶಪಿಸಿದ್ದಾಳೆ ಎಂಬ ಭಯ ಈ ಮನೆತನದವರನ್ನು ಕಾಡಲು, ಅದಕ್ಕೆ ಪರಿಹಾರವೆಂಬಂತೆ ಇಂದಿಗೂ ಆ ಲಚ್ಚಮ್ಮನ ಹೆಸರಿನಲ್ಲಿ ಪೂಜೆಯನ್ನು ನಡೆಸುತ್ತಾರೆ. ಕದಿರೇನಹಳ್ಳಿಯ ಊರಾಚೆಯ, ಇಂದಿಗೆ ಪದ್ಮನಾಭನಗರಕ್ಕೆ ಸೇರಿದ ಸಣ್ಣ ಗುಡ್ಡದಲ್ಲಿ ಈ ಲಚ್ಚಮ್ಮನಿಗಾಗಿ ಆಶ್ವೀಜಮಾಸದಲ್ಲಿ ಪೂಜೆ ನಡೆಸುತ್ತಾರೆ.

* # ೧೫೩, ೫ನೇ ರಸ್ತೆ, ೧ನೇ ಹಂತ, ಆರ್.ಕೆ. ಲೇಔಟ್, ಪದ್ಮನಾಭನಗರ, ಬೆಂಗಳೂರು-೫೬೦೦೭೦.

ಗ್ರಾಮದ ಸ್ಥಳವಂದಿಗರಲ್ಲಿ ಹಾಲುಮತಸ್ಥರೇ ಹೆಚ್ಚಾಗಿದ್ದು ಇವರಲ್ಲಿ ಆಲಂಗಿರಿಯಪ್ಪ, ಪೂಜಾರಿ ತಿಮ್ಮಯ್ಯ, ಮಲ್ಲೇಗೌಡರ ಕುಟುಂಬ, ಗೌಡ ರಾಮಯ್ಯನವರ ಕುಟುಂಬ, ಮಠದಪ್ಪನವರ ಕುಟುಂಬ ಮೊದಲಾದವರ ವಂಶಸ್ಥರು ಇಂದಿಗೂ ಇಲ್ಲಿ ವಾಸವಾಗಿದ್ದಾರೆ. ಇವರೊಂದಿಗೆ ಬೇಡ ರಾಮಯ್ಯ ಕುಟುಂಬ, ರೆಡ್ಡಿ, ಆದಿಕರ್ನಾಟಕದವರಾದ ಆವಲಪ್ಪನವರ ಕುಟುಂಬ, ಶಾನುಭೋಗ ರಾಮರಾವ್, ಮಡಿವಾಳ ಕುಟುಂಬ ಮೊದಲಾದ ಇತರ ಮನೆತನದ ವಂಶಸ್ಥರೂ ಇಂದಿಗೂ ಇಲ್ಲಿ ನೆಲೆಸಿದ್ದಾರೆ.

ಈ ಗ್ರಾಮದಲ್ಲಿ ಮಹೇಶ್ವರಮ್ಮ, ಮಾರಮ್ಮ, ತುಳಸಿಯಮ್ಮ, ದೇವತೆಗಳಿಗೆ ಪ್ರತ್ಯೇಕ ದೇವಾಲಯಗಳಿವೆ. ಅಲ್ಲದೆ ಅಂದಿನ ಗ್ರಾಮದ ಹೊರಗಿನ ಕಾಡಿನಲ್ಲಿದ್ದ ಕಾನುಮುನೀಶ್ವರನ ಉತ್ಸವಮೂರ್ತಿಗೆ ಊರೊಳಗೆ ದೇವಾಲಯ ನಿರ್ಮಿಸಿದ್ದಾರೆ. ಊರೊಳಗಿನ ಈ ದೇವಾಲಯಗಳಲ್ಲದೆ ಗ್ರಾಮದ ಹೊರಗೆ ನಾಲ್ಕೂ ದಿಕ್ಕಿನಲ್ಲಿಯೂ ನಾಲ್ಕು ದೇವಾಲಯಗಳಿವೆ. ದಕ್ಷಿಣ ಭಾಗದಲ್ಲಿ ಸುಮಾರು ೧ ೧/೨ – ೨ ಕಿ.ಮೀ. ದೂರದಲ್ಲಿ ಕಾಡಿನಲ್ಲಿದ್ದ ಕಾನುಮುನೀಶ್ವರ ಇಂದು ಕುಮಾರಸ್ವಾಮಿ ಬಡಾವಣೆಗೆ ಸೇರಿದೆ. ಈ ದೇವಾಲಯವು ಆಡುಮಾತಿನಲ್ಲಿ ಖಾನೇ ಮುನೀಶ್ವರ ಎಂದಾಗಿದೆ. ಉತ್ತರ ಭಾಗದಲ್ಲಿ ಸುಮಾರು ಮುಕ್ಕಾಲು ಕಿ.ಮೀ ದೂರದಲ್ಲಿ ಆಂಜನೇಯ ಹಾಗೂ ಶನೇಶ್ವರ ಗುಡಿಗಳಿದ್ದು ಇಂದು ಇದರೊಂದಿಗೆ ಮಾರ್ಬಲ್ ಶಿಲೆಯಲ್ಲಿ ನಿರ್ಮಿತವಾದ ರಾಮ, ಸೀತೆ, ಲಕ್ಷ್ಮಣ, ಸುಬ್ರಹ್ಮಣ್ಯ, ಗಣೇಶ ಮೂರ್ತಿಗಳು ಪ್ರತಿಷ್ಠಿತವಾಗಿವೆ. ಈ ಗ್ರಾಮಕ್ಕೆ ಹೊಂದಿಕೊಂಡಂತೆ ಪೂರ್ವದಿಕ್ಕಿನ ಹೊರ ಭಾಗದಲ್ಲಿ ಸಫಲಮ್ಮದೇವಿಯ ದೇವಸ್ಥಾನವಿದೆ. ಪಶ್ಚಿಮ ದಿಕ್ಕಿನಲ್ಲಿ ಸಣ್ಣ ಗುಡ್ಡ ಒಂದರ ಮೇಲೆ ಕಲ್ಲೊಂದನ್ನು ನೆಟ್ಟು ಅದನ್ನು ಲಚ್ಚಮ್ಮನೆಂದು ಪೂಜಿಸುತ್ತಾ, ಗುಡ್ಡಕ್ಕೆ ದೇವರ ಗುಡ್ಡವೆಂದು ಕರೆಯಲಾಗುತ್ತಿದ್ದು, ಇಲ್ಲಿಯೇ ಆಶ್ವೀಜ ಮಾಸದ ಪೂಜೆಯನ್ನು ನಡೆಸಲಾಗುವುದು. ಇತ್ತೀಚೆಗೆ ೨೦ ವರ್ಷದ ಹಿಂದೆ ಈ ಜಾಗದಲ್ಲಿ ಲಕ್ಷ್ಮೀ ವೆಂಕಟೇಶ್ವರ ದೇವಾಲಯವನ್ನು ನಿರ್ಮಿಸಲಾಗಿದೆ.

ಗ್ರಾಮದ ಜನರ ಪೂಜೆಯಲ್ಲಿ ಗ್ರಾಮದೇವತೆ ಮಹೇಶ್ವರಮ್ಮನಿಗೆ ಇಲ್ಲಿ ಮೊದಲು ಆದ್ಯತೆ. ಮಹೇಶ್ವರಮ್ಮನ ದೇವಾಲಯವನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಿ, ವಿನೂತನವಾಗಿ ನಿರ್ಮಿಸಲಾಗಿದೆ. ದೇವಾಲಯದ ಗರ್ಭಗುಡಿಯಯಲ್ಲಿ ಒಂದೇ ಪಾಣಿ ಪೀಠದ ಮೇಲೆ ಎರಡು ದೇವತೆಯ ವಿಗ್ರಹ ಇಲ್ಲಿನ ವಿಶೇಷತೆಯಾಗಿದೆ. ವಾಡಿಕೆಯಲ್ಲಿ ಇದನ್ನು ದೊಡ್ಡಮ್ಮ ಚಿಕ್ಕಮ್ಮ ಎಂದು ಕರೆಯಲಾಗುತ್ತದೆ. ಇದು ಸಪ್ತಮಾತೃಕೆಯಲ್ಲಿನ ಎರಡು ದೇವರುಗಳಾದ ಮಹೇಶ್ವರಿ ಮತ್ತು ಕೌಮಾರಿ ವಿಗ್ರಹಗಳಾಗಿವೆ.

ಈ ದೇವಾಲಯ ಕುರಿತಂತೆ ತಿಳಿದುಬರುವ ಜನಪದೀಯ ಕಥೆಯೊಂದರ ಪ್ರಕಾರ ಪ್ರತಿ ವರ್ಷದಂತೆ ಮೈಸೂರಿನ ಉತ್ತನಹಳ್ಳಿ ದೇವಾಲಯದ ಜಾತ್ರೆಗೆ ತೆರಳಿದ್ದಾಗ ಒಮ್ಮೆ ಈ ದೇವತೆಯರು ಗ್ರಾಮಸ್ಥರನ್ನು ಹಿಂಬಾಲಿಸಿಕೊಂಡು ಬಂದು ಇಲ್ಲಿ ನೆಲೆಸಿದರೆಂದು ಹೇಳಲಾಗುತ್ತದೆ. ಮೈಸೂರಿನ ಚಾಮುಂಡಿ ಹಾಗೂ ಉತ್ತನಹಳ್ಳಿ ಜ್ವಾಲಾಮಾಲಿನಿಯರನ್ನು ಅಕ್ಕ–ತಂಗಿ, ದೊಡ್ಡಮ್ಮ–ಚಿಕ್ಕಮರೆಂದು ಕರೆಯಲಾಗುವಂತೆ, ಇಲ್ಲಿನ ಕುಮಾರಿ, ಮಹೇಶ್ವರಿ ದೇವತೆಯರನ್ನೂ ದೊಡ್ಡಮ್ಮ –ಚಿಕ್ಕಮ್ಮನೆಂದು ಕರೆಯುತ್ತಾರೆ. ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಂತೆ ನಾಗಸಂದ್ರ, ಎಡೆಯೂರು, ಚೆನ್ನಸಂದ್ರ, ಮಂಡ್ಯದ ಬಳಿಯ ಹಲವು ಗ್ರಾಮಸ್ಥರು ಇಂದಿಗೂ ಈ ದೇವಿಯ ದರ್ಶನಕ್ಕೆ ಬರುವುದೂ, ಜಾತ್ರೆಯಲ್ಲಿ ಭಾಗವಹಿಸುವುದೂ, ಹರಕೆ ಸಲ್ಲಿಸುವುದು ನಡೆದಿದೆ.

ಕಾನುಮುನೀಶ್ವರ ದೇವಾಲಯದಲ್ಲಿ ಕುದುರೆಯ ಮೇಲೆ ಕುಳಿತಿರುವ ಮುನೀಶ್ವರನ ೪ ಅಡಿ ವಿಗ್ರಹವಿದೆ. ಈ ದೇವಸ್ಥಾನದಲ್ಲಿ ೧೯೩೪ರಲ್ಲಿ ವಾಗಣ್ಣ ಎಂಬುವವರು ೭ ಎಕರೆ ೭೭ ಗುಂಟೆ ಜಮೀನು ಹಾಗೂ ೫೦ ರೂಪಾಯಿಗಳನ್ನು ದೇವಾಲಯಕ್ಕೆ ಕೊಟ್ಟ ವಿಚಾರ ತಿಳಿಸುವ ಕಲ್ಲಿನ ಶಾಸನವಿದೆ. ಈ ದೇವಸ್ಥಾನಕ್ಕೆ ಬಳೇಪೇಟೆ, ಸುಲ್ತಾನ್ ಪೇಟ್, ಮೊದಲಾದ ಹಳೆ ಬೆಂಗಳೂರು ಗ್ರಾಮಸ್ಥರು, ಕನಕಪುರ, ಮಂಡ್ಯದ ಸುತ್ತಮುತ್ತಲಿನ ಹಲವಾರು ಗ್ರಾಮಸ್ಥರು ಇಂದಿಗೂ ಬಂದು ಪೂಜೆ ಮಾಡಿಸಿಕೊಂಡು ಹೋಗುತ್ತಾರೆ. ಈ ದೇವಾಲಯದ ಬಳಿ ಚಿನ್ನಪ್ಪ ಚಿನ್ನಮ್ಮ ನೆಂಬ ಹೆಸರಿನ ಮನೆದೇವರ ಕಲ್ಲಿದೆ. ಇಲ್ಲಿ ಹರಕೆ ಕೋಳಿ ಕುರಿ ಬಲಿ ಕೊಡುವುದು, ಮುಡಿ ಕೊಡುವುದೂ ನಡೆಯುತ್ತದೆ.

ಜನಾಂಗ ಒಂದರ ಸಂಸ್ಕೃತಿಯು ಅವರ ಅನುಸರಿಸುವ ಧರ್ಮದೊಂದಿಗೆ ಸೇರಿ ಬೆಳೆಯುವುದನ್ನು ಕಾಣುತ್ತೇವೆ. ಅಂತೆಯೇ ಈ ಗ್ರಾಮಸ್ಥರು ಎರಡು ವರ್ಷಕ್ಕೊಮ್ಮೆ ಆಚರಿಸುವ ಊರಹಬ್ಬ, ಪ್ರತಿವರ್ಷ ಆಶಾಡಮಾಸದ ಪ್ರಥಮ ಏಕಾದಶಿಯಂದು ಆಚರಿಸುವ ಕೆಂಚಣ್ಣ, ಕರಿಯಣ್ಣರ ಪೂಜೆ, ಆಲಂಗಿರಿ ಮನೆತನದವರು ನಡೆಸುವ ಆಶ್ವೀಜ ಮಾಸದ ಪೂಜೆ, ರಾಮನವಮಿ ಮೊದಲಾದ ಹಬ್ಬಗಳಲ್ಲಿ ಈ ಗ್ರಾಮಸ್ಥರ ಸಂಸ್ಕೃತಿ, ಹಿಂದಿನಿಂದ ನಡೆದುಕೊಂಡು ಬಂದಿರುವ ಸಂಪ್ರದಾಯ ಕಾಣಬಹುದು.

ಪೂಜಾರ ತಿಮ್ಮಯ್ಯ ಮನೆತನದವರ ಬಳಿ ಎರಡು ಮುಖವಾಡಗಳಿದ್ದು, ಅದನ್ನು ಕೆಂಚಣ್ಣ ಎಂದು ಕರೆಯುತ್ತಾರೆ. ಇದನ್ನು ವರ್ಷಕೊಮ್ಮೆ ಪ್ರಥಮ ಏಕಾದಶಿಯಂದು ಹೊರಕ್ಕೆ

ತೆಗೆದು, ಮಹೇಶ್ವರಮ್ಮನ ದೇವಾಲಯದಲ್ಲಿ, ಮಣೇವು ಹಾಕಿ (ದೊಡ್ಡ ಅನ್ನದ ರಾಶಿಯನ್ನು ಹಾಕಿ), ಅದಕ್ಕೆ ಕೋಳಿಯನ್ನು ಬಲಿಕೊಟ್ಟು ವಿಶೇಷ ಪೂಜೆ ನಡೆಸಿ, ರಾತ್ರಿಯೆಲ್ಲಾ ಭಜನೆ ಮಾಡುತ್ತಾರೆ. ಮಾರನೆಯ ದಿನ ಊರ ಜನರಿಗೆಲ್ಲಾ ಅನ್ನ ದಾಸೋಹ ಏರ್ಪಡಿಸಿರುತ್ತಾರೆ. ಈ ವಿಶೇಷ ಪೂಜೆಗಾಗಿ ದೊಡ್ಡಕಲ್ಲಸಂದ್ರದಿಂದ ದಾಸಯ್ಯರನ್ನು ಕರೆಸುತ್ತಾರೆ.

ಎರಡು ವರ್ಷಗಳಿಗೊಮ್ಮೆ ಚೈತ್ರಮಾಸದಲ್ಲಿ ಇಲ್ಲಿ ಊರ ಹಬ್ಬ ನಡೆಯುತ್ತದೆ. ಇದು ಒಂದು ವಾರ ನಡೆಸುವ ಹಬ್ಬ. ಹಬ್ಬಕ್ಕೂ ಮೊದಲು ಗ್ರಾಮದ ಎಲ್ಲ ಮನೆಯವರೂ ವನಭೋಜನ ನಡೆಸುತ್ತಾರೆ. ಇಂದಿಗೆ ವನವಿಲ್ಲದ ಕಾರಣ ದೇವಾಲಯದಲ್ಲಿ ಇದು ನಡೆಯುತ್ತದೆ. ಇದಾದ ನಂತರ ತಾಟು ಇಡಿಸುತ್ತಾರೆ. ಎಂದರೆ ಡಂಗೂರ ಹೊಡೆಸುತ್ತಾರೆ. ಮೊದಲು ಊರಾಚೆಯ ಆಂಜನೇಯನಿಗೆ ಆನಂತರ ಕಾನುಮುನೀಶ್ವರನಿಗೆ ಪೂಜೆ, ಆರತಿ ಸಲ್ಲಿಸಿ ಪಲ್ಲಕ್ಕಿ ಉತ್ಸವ ನಡೆಸುತ್ತಾರೆ. ಮಾರಮ್ಮ, ತುಳಸಿಯಮ್ಮ, ಸಫಲಮ್ಮ ದೇವರ ಉತ್ಸವಗಳು ನಡೆಯುತ್ತವೆ. ಅಂದು ರಾತ್ರಿ ಕೊಂಡ ಹಾಯುತ್ತಾರೆ. ಕಡೆಯ ದಿನ ಊರಾಚೆಯ ಕ್ಷುದ್ರ ದೇವತೆಗಳ ಶಾಂತಿಗೆಂದು ಪ್ರಾಣಿತಿಯೊಂದನ್ನು ಬಲಿಕೊಟ್ಟು, ಊರಸುತ್ತ ಕಾಪು ಕಟ್ಟಲಾಗುತ್ತದೆ. ಇಂದಿಗೂ ಈ ಆಚರಣೆಗಳನ್ನೂ ನಡೆಸುತ್ತಾ ಬಂದಿದ್ದಾರೆ.

ರಾವ್‌ಬಹದ್ದೂರ್ ಬಿ.ಕೆ.ಗರುಡಾಚಾರ್ ಅವರು ಈ ಗ್ರಾಮವನ್ನು ವಹಿಸಿಕೊಂಡ ಮೇಲೆ ಇಲ್ಲಿ ರಾಮನವಮಿ ಆಚರಣೆ ಜಾರಿಗೆ ಬಂತು. ಇದು ಒಂದು ವರ್ಷ ಮಹೇಶ್ವರಮ್ಮನ ದೇವಾಲಯದಲ್ಲಿ ಒಂದು ವರ್ಷ ಊರಾಚೆಯ ಹನುಂತನ ಗುಡಿಯಲ್ಲಿ ನಡೆಸಲಾಗುತ್ತದೆ.

ಸ್ಥಳನಾಮ

ಕದಿರೇನಹಳ್ಳಿ ಎಂಬ ಹೆಸರಿನಲ್ಲಿನ 'ಕದಿರೇ' ಎಂಬ ಪದವು ವಿಶೇಷವಾಗಿದ್ದು ನಿಘಂಟಿನಲ್ಲಿ ಕದಿರ್ ಎಂದರೆ ಧಾನ್ಯದ ತೆನೆ. ಮಿಂಚು, ಪ್ರಕಾಶಿಸು ಎಂದೆಲ್ಲಾ ಅರ್ಥಗಳಿವೆ. ಬಾಗೇಪಲ್ಲಿ ಮೊದಲಾದ ಸ್ಥಳಗಳಲ್ಲಿ ಕಂಡುಬರುವ ಕದಿರಪ್ಪ ನಾಯಕ, ಕದಿರೇನಾಯನಿ ಎಂಬ ಪಾಳೆಗಾರರ ಹೆಸರು ಇಲ್ಲಿ ಕಂಡುಬರುವುದಿಲ್ಲ, ಹಾಗಾಗಿ ಇದು ವ್ಯಕ್ತಿಯೊಬ್ಬನ ಹೆಸರನ್ನು ಈ ಹಳ್ಳಿಗೆ ಇಟ್ಟಂತೆ ತಿಳಿದು ಬರುವುದಿಲ್ಲ. ಈ ಭಾಗದಲ್ಲಿ 'ಅಕೇಶಿಯ' ಎಂಬ ವೈಜ್ಞಾನಿಕ ಹೆಸರು ಹೊಂದಿರುವ 'ಕದಿರೆ' ಎಂಬ ಜಾತಿಯ ಮುಳ್ಳಿರುವ ಮರಗಳು ಹೇರಳವಾಗಿದ್ದು, ಆ ಮರದಿಂದಾಗಿ ಈ ಪ್ರದೇಶಕ್ಕೆ ಕದಿರೇನಹಳ್ಳಿ ಎಂಬ ಹೆಸರು ಬಂದಿರುವ ಸಾಧ್ಯತೆ ಇದೆ. ಹಾಗೂ, ಬೇಸಾಯದ ಜಮೀನು ಗಳಿದ್ದು, ಬತ್ತದ ವ್ಯವಸಾಯ ಮುಖ್ಯವಾಗಿದೆ. ಬತ್ತದತೆನೆಯನ್ನೂ 'ಕದಿರು'ಎಂದು ಕರೆಯುವುದರಿಂದ ಕದಿರಹಳ್ಳಿ ಎಂದೂ ಆಗಿರುವ ಸಾದ್ಯತೆ ಇದೆ.

ಇಂದಿಗೆ ಪದ್ಮನಾಭನಗರ, ಬೇಂದ್ರೆ ನಗರ, ಟೀಚರ್ಸ್ ಕಾಲೋನಿ, ಇಲಿಯಾಜ್ ನಗರ, ಈ ಗ್ರಾಮದ ಸುತ್ತಲೂ ಬೆಳೆದು ನಿಂತ ಬಡಾವಣೆಗಳಾಗಿವೆ.

ನಗರ ವಿಸ್ತರಣೆಯ ಸಂದರ್ಭದಲ್ಲಿ ಬಹುವ್ಯಾಪಕವಾಗಿ ಬೆಳೆದ ಪಕ್ಕದ ಬಡಾವಣೆ ಪದ್ಮನಾಭನಗರದ ಮರೆಯಲ್ಲಿರುವ ಈ ಗ್ರಾಮದ ತನ್ನದೇ ಆದ ವಿಶಿಷ್ಟ ಸಂಪ್ರದಾಯ, ಆಚರಣೆಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದೆ.

೧೦೦

ಸಾಮಾಜಿಕ ಪರಿವರ್ತನೆಯತ್ತ ತುಳುನಾಡಿನ ಗರೊಡಿಗಳು

ಮಧುರಾಜ್*

ತುಳುನಾಡಿನ ಇತಿಹಾಸದ ಮೇರು ಸಂಸ್ಕೃತಿಯನ್ನು ಎತ್ತಿಹಿಡಿದ ಪ್ರಮುಖ ಸಂಸ್ಥೆಗಳಲ್ಲಿ ತುಳುನಾಡಿನ ಗರೊಡಿಗಳು ಮಹತ್ವದ ಪಾತ್ರ ವಹಿಸಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಈ ಬಗ್ಗೆ ನಡೆದ ಅಧ್ಯಯನಗಳು ಗರೊಡಿಗಳನ್ನು ಕೇವಲ ಯುದ್ಧ ಕಲಾಕೇಂದ್ರ, ಧಾರ್ಮಿಕ ಕ್ಷೇತ್ರವೆಂದು ಬಿಂಬಿಸಿರುವುದು ಸಾಮಾನ್ಯರಿಗೂ ತಿಳಿದ ಸಂಗತಿಯಾಗಿದೆ. ಪ್ರಾಯಶಃ ಗರೊಡಿ ಸ್ಥಾಪನೆಯಾದ ಕಾಲದಿಂದಲೂ ಪೂಜನೆಯ ಕಾರ್ಯಕ್ರಮಗಳನ್ನು ನೋಡಿಕೊಳ್ಳಲು ಪ್ರಾರಂಭವಾಗಿರಬೇಕು. ಧಾರ್ಮಿಕ ಕಾರ್ಯಕ್ರಮವನ್ನು ಜವಾಬ್ದಾರಿಯುತವಾಗಿ ನಿರ್ವಹಿಸುವ ಮಹತ್ತರ ಹೊಣೆ ಗರಡಿ ಮನೆಯದ್ದು ಎನ್ನುವ ಅಭಿಪ್ರಾಯ ಹೆಚ್ಚಾಗಿ ಕಂಡು ಬರುತ್ತದೆ.[೧] ಇಂತಹ ಬೆಳವಣಿಗೆಗಳು ಗರೊಡಿಗಳ ಘನತೆ ಮತ್ತು ಜಾತ್ಯಾತೀತ ನಿಲುವಿಗೆ ಚ್ಯುತಿಯಾಗುವಂತೆ ಕಂಡುಬರುವುದಲ್ಲದೆ ಈ ಸಂಸ್ಥೆಗಳ ಸಮಾಜವಾದಿ ಪ್ರಭಾವವನ್ನು ಸಂಕುಚಿತಗೊಳಿಸುವಂತಿದೆ.

ಸಾಂಸ್ಕೃತಿಕ ಕೇಂದ್ರವೆಂದೇ ಪ್ರಖ್ಯಾತವಾಗಿರುವ ತುಳುನಾಡಿನ ಗರೊಡಿಗಳ ಪುನರ್ ವಿಮರ್ಶೆ ಮತ್ತು ಅದರಲ್ಲಿ ಅಡಕವಾಗಿರುವ ಸತ್ಯವನ್ನು ಹೊರಗೆಳೆಯುವ ಕುತೂಹಲ ಮತ್ತು ವಿಶಾಲ ದೃಷ್ಟಿಕೋನವನ್ನಿಟ್ಟು ಅರ್ಥೈಸಿಕೊಳ್ಳುವ ವಿಶಾಲ ಮನೋಭಾವನೆಯನ್ನು ಬೆಳೆಸಿಕೊಳ್ಳುವುದರೊಂದಿಗೆ ಗರೊಡಿಗಳು ಸಮಸ್ತ ಸಮಾಜದ ಆಸ್ತಿಗಳೆಂದು ನಿರೂಪಿಸುವುದು ಇಂದಿನ ಅಗತ್ಯತೆ. ಆ ಮೂಲಕ ಈ ಸಂಸ್ಥೆ ತೋರಿದ ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸುವುದೇ ಈ ಅಧ್ಯಯನದ ಉದ್ದೇಶ. ಪ್ರಸ್ತುತ ತುಳುನಾಡಿನ ೨೨೫ ಗರೊಡಿಗಳು ಧಾರ್ಮಿಕ ಆಚರಣೆಗಳು ಮತ್ತು ತಮ್ಮದೇ ಆದ ವಿಶಿಷ್ಟ ಸಂಪ್ರದಾಯದಿಂದಾಗಿ ಈ ನಾಡಿನ ಸಾಂಸ್ಕೃತಿಕ ಪ್ರತೀಕವೆನಿಸಿದೆ. ಇವು ತುಳು ನಾಡಿನ ವೀರ ಪರಂಪರೆಯ ಕುರುಹುಗಳೂ ಹೌದು. ಈ ದಿನಗಳಲ್ಲಿ ಆಧುನಿಕ ಪ್ರಭಾವಕ್ಕೊಳಗಾಗಿ ತೀವ್ರತರವಾದ ಬದಲಾವಣೆಗಳಿಗೆ ತನ್ನನ್ನು ತಾನು ಒಗ್ಗಿಸಿಕೊಂಡು ಸಂರಚನೀಯ ಪದರಗಳನ್ನು ಕಳಚಿಕೊಳ್ಳುತ್ತಿರುವುದು ಚರ್ಚೆಗೆ ಗ್ರಾಸವಾದ ವಿಷಯವಾಗಿದ್ದು, ಇದರ ಮೂಲರೂಪದ ಘನತೆ ಹಾಗೂ ಸಿದ್ಧಾಂತಗಳ ಬಗ್ಗೆ ಬೆಳಕು ಚೆಲ್ಲುವ ಅವಶ್ಯಕತೆ ಎದುರಾಗಿದೆ. ಗರೊಡಿಗಳ ಐತಿಹಾಸಿಕ ಪ್ರಾಮುಖ್ಯತೆ ಮತ್ತು ಅವುಗಳು ಬೆಳೆದು ಬಂದ ದಾರಿ, ಸಾಮಾಜಿಕ ಮೌಲ್ಯಗಳನ್ನು ಪೋಷಿಸಿದ ಪರಿ ಮತ್ತು ಜಾನಪದ ಸಿರಿವಂತಿಕೆಯನ್ನು ಜೀವಂತಗೊಳಿಸಿದ ಗರಿಮೆಯನ್ನು ಇಂದಿನ ಜನಾಂಗ ಸರಿಯಾಗಿ ಅರ್ಥೈಸಿಕೊಳ್ಳುವಲ್ಲಿ ಸಫಲವಾದರೆ ಉತ್ತಮ ಸಮಾಜ ಕಟ್ಟಲು ಸಾಧ್ಯವಾದೀತು.

'ಗರೊಡಿ' ಎಂಬುದು ಸಾಂಪ್ರದಾಯಿಕ ಚರ್ಚೆಯಲ್ಲಿ ದ್ರಾವಿಡ ಶಬ್ದ. ಕನ್ನಡ ಅರ್ಥಕೋಶದಲ್ಲಿ 'ಗರಡಿ', 'ಗರುಡಿ' ಎಂಬ ಶಬ್ದಗಳಿವೆ. ಶಸ್ತ್ರವಿದ್ಯೆ ಅಥವಾ ಜಟ್ಟಿಕಾಳಗವನ್ನು ಅಭ್ಯಾಸ ಮಾಡುವ ಸ್ಥಳ ಅಥವಾ ವ್ಯಾಯಮ ಶಾಲೆ ಎಂಬ ಅರ್ಥವಿದೆ.[೨] ಒಂದು ಸಾವಿರ ವರ್ಷಗಳ ಹಿಂದಿನ 'ವರ್ಧಮಾನ ಪುರಾಣ'ವೆಂಬ ಜೈನ ಗ್ರಂಥದಲ್ಲಿ 'ಗರಡಿ' ಶಬ್ದವನ್ನು ವ್ಯಾಯಾಮ ಶಾಲೆ ಎಂಬ ಅರ್ಥದಲ್ಲಿ ಪ್ರಯೋಗಿಸಲಾಗಿದೆ. ಗರಡಿ ಎಂಬ ಶಬ್ದಕ್ಕೆ ವ್ಯಾಯಾಮ ಶಾಲೆ ಎಂಬ ಅರ್ಥದಲ್ಲಿ 'ಸಾಮು' ಮಾಡಿ ತಯಾರಾದ ವ್ಯಕ್ತಿಗಳಲ್ಲಿ ಶೌರ್ಯದೊಂದಿಗೆ ಬಲಿದಾನ ಪಾವಿತ್ರ್ಯವನ್ನು ಬೆಳೆಸುವ ಕೇಂದ್ರಗಳಿವು ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿರುತ್ತಾರೆ.[೩] ಗರುಡನಿಗೆ ಅಥವಾ ಗರುಡತ್ವಕ್ಕೆ ಸಂಬಧಿಯಾದ ಶಬ್ದ ಇದಾಗಿದ್ದು, ವಿಷ್ಣುವಿನ ವಾಹನ ಗರುಡನಿಗೆ ಯಾವುದೇ ಸಂಬಂಧವಿಲ್ಲ. ಅರಸನ ಪ್ರಾಣ ರಕ್ಷಣೆಗೋಸ್ಕರ ಆತ್ಮಾರ್ಪಣೆ ಮಾಡುವ ಅಂಗರಕ್ಷಕನಿಗೆ 'ಗರುಡ' ಎಂದು ಕರೆಯುತ್ತಿದ್ದರು.[೪] ಈ ಮಾತಿಗೆ ಪೋಷಣೆ ನೀಡುವ 'ಬೇರುಂಡ ಮೊತ್ತದ ಕೂಸ'ಗಳ ಉಲ್ಲೇಖವು ಈ ಮೇಲಿನ ಅಭಿಪ್ರಾಯಕ್ಕೆ ಹೆಚ್ಚಿನ ಒತ್ತು ನೀಡುವುದಲ್ಲದೆ ಹೊಯ್ಸಳ ಅರಸರ ಸೇವೆ ಮಾಡುತ್ತಾ ಅನ್ನದ ಋಣಕ್ಕಾಗಿ ಪ್ರಾಣ ನೀಡಿ ವೀರ ಸಿದ್ಧಾಂತವನ್ನು ಸ್ವಾಮಿನಿಷ್ಠೆಯನ್ನು ಮೈಗೂಡಿಸಿಕೊಂಡು ವೀರ ವೃತ್ತಿಯನ್ನು ಪಾಲಿಸಿಕೊಂಡು ಬಂದವರು.[೫] ಕೂಸರ ಹೆಸರಿನ ಬಿಡಿಯಾದ ಉಲ್ಲೇಖಗಳಲ್ಲದೇ ಅರಸರ ವಿಶೇಷ ವೀರ ಪಡೆಯ ಉಲ್ಲೇಖಗಳೂ ಶಾಸನಗಳಲ್ಲಿ ಕಂಡುಬಂದಿದೆ. ಅದನ್ನು

* ಇತಿಹಾಸ ಉಪನ್ಯಾಸಕರು, ಪೂರ್ಣಪ್ರಜ್ಞ ಪದವಿಪೂರ್ವ ಕಾಲೇಜು, ಅದಮಾರು, ಉಡುಪಿ ಜಿಲ್ಲೆ–೫೭೪೧೧೩.

'ಬೇರುಂಡ ಮೊತ್ತ' ಎಂದು ಕರೆಯಲಾಗಿದೆ. ಈ ಬಗ್ಗೆ ನಾವು ಹೊಯ್ಸಳರ ಅನೇಕ ಶಾಸನಗಳಲ್ಲಿ ಉಲ್ಲೇಖಗಳನ್ನು ಕಾಣುತ್ತೇವೆ. ಕ್ರಿ.ಶ. ೧೨೧೮ರ ಚನ್ನರಾಯಪಟ್ಟಣದಲ್ಲಿ ದೊರೆತ 'ನವಿಲೆ' ಶಾಸನವು ಇಮ್ಮಡಿ ಬಲ್ಲಾಳನು ನವಿಲೆ ಎಂಬ ಗ್ರಾಮವನ್ನು ಬೇರುಂಡ ಮೊತ್ತದ ಕೂಸಗಳಿಗೆ ಉಂಬಳಿಯಾಗಿ ನೀಡಿದ್ದನು. ಇಲ್ಲಿ ತಿಳಿಸಿದ ಹೆಸರುಗಳಲ್ಲಿ ಹೆಚ್ಚಿನವರು ನವಿಲೆಯ ಆಸುಪಾಸಿನವರಾಗಿದ್ದದ್ದು ಮಾತ್ರವಲ್ಲ ಇವರೆಲ್ಲರೂ ಏಕಮತ್ಯವಾಗಿ ಅಗ್ರಹಾರವನ್ನಾಗಿ ಮಾಡಿದ್ದನ್ನು ಹೇಳುತ್ತದೆ. ಈ ಶಾಸನದ ಎರಡನೆಯ ಭಾಗ ಇಮ್ಮಡಿ ವೀರ ನರಸಿಂಹನ ಕಾಲದಲ್ಲಿ ರಚಿತವಾಗಿದ್ದು, ವೀರ ಪಡೆಯನ್ನು ಬೇರುಂಡವರ್ಗ ಎಂದು ಕರೆದಿದೆ. ಈತ ಪಟ್ಟವನ್ನಲಂಕರಿಸಿದ ತರುವಾಯ ಮೊದಲ ಮಗರೆಯ ದಿಗ್ವಿಜಯದಲ್ಲಿ ಈ ಪಡೆ ವಿಶೇಷ ಸಾಹಸ ಮೆರೆದು, ನಂತರ ಕಂಚಿಯನ್ನು ವಶಪಡಿಸಿಕೊಂಡ ಬಳಿಕ, ಇದೇ ಪಡೆಯನ್ನು ದಂಗೆಯೇಳದಂತೆ ತಡೆಯಲು ಕೆಲಕಾಲ ತಂಗುವಂತೆ ಆಜ್ಞಾಪಿಸುತ್ತಾನೆ. ಅದರಂತೆ ಅಲ್ಲಿ ನೆಲೆಸಿದ ಈ ಬೇರುಂಡರು ಶಾಂತಿ ಪಾಲನೆಯ ಕರ್ತವ್ಯವನ್ನು ನಿಭಾಯಿಸುತ್ತಾ ಅಲ್ಲಿನ 'ಅಲ್ಲಾಳನಾಥ'ನ ಭರ್ತ್ಯರಾಗಿ ಶಂಖ-ಚಕ್ರಗಳ ಮುದ್ರೆಯನ್ನು ತಮ್ಮ ಭುಜಗಳಿಗೆ ಹಾಕಿಕೊಂಡರು ಎಂದಿದೆ.[೬] ಅದೇ ರೀತಿ ಮೂರನೇ ಬಲ್ಲಾಳನು ಬಾರಕೂರಿ ನಲ್ಲೊಂದು ವಿಶೇಷ ದಂಡನ್ನಿಟ್ಟಿದ್ದನ್ನು, ಶಾಸನ ಉಲ್ಲೇಖಿಸುತ್ತದೆ.[೭] ಹಾಗಾಗಿ ಈ ಕೂಸರು ನಿರ್ಭಯವಾಗಿ ಯಾವುದೇ ಪ್ರದೇಶಕ್ಕೆ ಹೋಗಿ ನೆಲಸಿ, ಶಾಂತಿಪಾಲನೆಯ ಕಾರ್ಯ ಕೈಗೊಳ್ಳುತ್ತಿದ್ದಿರಬೇಕು.

ಕ್ರಿ.ಶ. ೧೦-೧೧ನೇ ಶತಮಾನದ ಬೇರುಂಡ ಶಿಲ್ಪಗಳು ದಾನ ಶಾಸನ ಮತ್ತು ವೀರಗಲ್ಲುಗಳಲ್ಲಿ ಕಾಣಬಹು ದಾಗಿದ್ದು, ಗಂಡ ಬೇರುಂಡ ಮತ್ತು ಗರುಡ ಪಕ್ಷಿ ಒಂದೇ ಸತ್ವವನ್ನು ಪ್ರತಿನಿಧಿಸುವಂತಿದೆ. ಬೌದ್ಧಪುರಾಣದ ಕಥೆಯಲ್ಲಿ ಈ ಬೇರುಂಡ ಪಕ್ಷಿಯ ಒಂದು ತಲೆಯನ್ನು 'ಗರುಡ' ಎಂದೂ, ಇನ್ನೊಂದು ತಲೆಯನ್ನು 'ಉಪಗರುಡ' ಎಂದು ಕರೆಯಲಾಗಿದ್ದು, ಬೇರುಂಡ ಮತ್ತು ಗರುಡ ಸ್ವಾಮಿನಿಷ್ಠರಾಗಿ ವಾಹನಗಳಾಗಿ ಗುರುತಿಸಲ್ಪಟ್ಟಿವೆ.[೮] ಈ ಹಿನ್ನಲೆಯಲ್ಲಿ ಹೊಯ್ಸಳರು ಗಂಡಬೇರುಂಡ ಬಿರುದನ್ನು ತಾವು ಧರಿಸಿದರಲ್ಲದೆ ತಮ್ಮ ನಿಷ್ಠಾವಂತ ವೀರ ಪಡೆಯನ್ನು ಈ ಹೆಸರಿನಿಂದ ಕರೆದಿದ್ದಾರೆ. ಈ ವೀರರು ಧರ್ಮ ಕಾರ್ಯ, ದಯೆ, ಸತ್ಯ, ತ್ಯಾಗ ಯೋಧನಿಗಿರಬೇಕಾದ ಜಾಗರೂಕತೆಯ ಗುಣಗಳನ್ನು ಹೊಂದಿದ್ದುದರಿಂದ ಇವರನ್ನು ಬೇರುಂಡ ಮೊತ್ತ ಅಥವಾ ವರ್ಗವೆಂದು ಹೆಸರಿಸಲಾಗಿದೆ.

ಇಲ್ಲಿ 'ಬೇರುಂಡ ಮೊತ್ತದ ಕೂಸರು' ಎಂದರೆ ಬೇರುಂಡದ ಮರಿಗಳು (ಯಂಗ್ ಮಿಲಿಟೆಂಟ್ಸ್) ಎಂದು ಹೇಳಬಹುದು. ಕಾಲಕ್ರಮೇಣ ವೈಷ್ಣವ ಧರ್ಮದ ಪ್ರಭಾವ ಕ್ಕೊಳಗಾದ ದಕ್ಷಿಣ ಕರ್ನಾಟಕದ ಭಾಗದಲ್ಲಿ ಸ್ವಾಮಿ ಕಾರ್ಯಕ್ಕೋಸ್ಕರ ಪ್ರಾಣವನ್ನು ಮುಡಿಪಾಗಿಟ್ಟ ಇಂತಹ ವೀರರನ್ನು ವಿಷ್ಣುವಿನ ಭಕ್ತ-ಬಂಟರೆನಿಸಿದ ಗರುಡ ಮತ್ತು ಹನುಮಂತನಿಗೆ ಹೋಲಿಸುವ ಪರಿಪಾಠ ಬೆಳೆದಿರಬೇಕು. ಊಳಿಗಮಾನ್ಯ ಸಾಮಾಜಿಕ ರಚನೆಯಿಂದ ವ್ಯವಸ್ಥೆಯಲ್ಲಿ ಇಂತಹ ಸೇವಕರ ವರ್ಗವನ್ನು ಬೆಳೆಯುವಂತೆ ಪ್ರೋತ್ಸಾಹಿಸಿದ್ದು, ಇದು ಮೇಲಿನ ಶಾಸನಗಳಲ್ಲಿ ತಿಳಿದುಬರುತ್ತದೆ. ಈ ಹಿನ್ನೆಲೆಯಲ್ಲಿಯೇ ತುಳುನಾಡಿನಲ್ಲಿ ಗರೊಡಿಗಳ ಉದಯ ವಾಗಿರಬೇಕು. ಅದರಲ್ಲೂ ತುಳುನಾಡಿನಲ್ಲಿ ಹೊಯ್ಸಳರ ವಿಸ್ತರಣೆ ಈ ರೀತಿಯ ಸಂಸ್ಥೆಗಳ ಉದಯಕ್ಕೆ ಕಾರಣ ವಾಗಿರಬಹುದು.

'ಗರಡಿ' ಎಂಬ ಹೆಸರು ದಕ್ಷಿಣ ಕನ್ನಡದಲ್ಲಿ ಪ್ರಚಾರ ಪಡೆದ ನಾಥ ಪಂಥದ ಜೋಗಿಗಳಿಂದ ಬಂದಿರಬೇಕು. ಅವರ ಮಠಗಳನ್ನು 'ಅಖಾಡ' ಎಂದು ಕರೆಯುತ್ತಾರೆ. 'ಅಖಾರ; ಅಥವಾ 'ಅಖಾಡ' ಎಂದರೆ 'ಗರಡಿ' (ಕನ್ನಡದಲ್ಲಿ) ಕೋಟಿ-ಚೆನ್ನಯ್ಯರು ಇಲ್ಲೇ ಕುಸ್ತಿ ಸಾಮು ಕಲಿತಿರಬೇಕು. ಜೋಗಿ ಪುರುಷರು ತಮ್ಮ ಅವರಿಗಿರುವ ಸಂಬಂಧವನ್ನು ನೇಮ ಪ್ರವೇಶದಲ್ಲಿನ ಪಾತ್ರದಲ್ಲಿ ಕಾಣಬಹುದೆಂಬ ಅಭಿಪ್ರಾಯ ವಿದೆ.[೯] ಈ ಶಬ್ದವೇ ಮುಂದೆ ತುಳುವಿನಲ್ಲಿ ಗರೊಡಿಯಾಗಿ ಬಳಕೆಯಾಗಿದೆ. ತುಳುನಾಡಿನ ಪಾಡ್ದನಗಳಲ್ಲಿ ಇಂತಹ ಅನೇಕ ಉದಾಹರಣೆಗಳನ್ನು ನೋಡಬಹುದು. ತುಳುನಾಡಿನ ಬಂಗವಾಡಿಯ ಲಕ್ಷುಮಪ್ಪ ಬಂಗರಸರ ದಳವಾಯಿಯಾದ ಮಣಿಮಜಲಗುತ್ತು ದುಗ್ಗಣಕೊಂಡೆ ಅರುವದ ಅಜಿಲರ ಸೇನಾನಿ ನಾಲೂರ ಬೊಲ್ಲ ಬೈದ್ಯ, ಪೇರೂರು ಪೆರಿಂಜದ ದೇವು ಪೂಂಜ ಹಾಗೂ ಆತನ ಮಾವ ಕಾಂತಣ ಅತಿಕಾರಿ, ಮೂಲ್ಕಿ ಸೀಮೆಯ ಕಾಂತಬಾರೆ ಬೂದಾಬಾರೆ, ಎಣ್ಮೂರು ಯುದ್ಧವೀರರಾದ ಕೋಟಿ ಚೆನ್ನಯ ಗರೋಡಿಗಳಲ್ಲಿ ತರಬೇತಿ ಹೊಂದಿದ ವೀರರೆಂದು ತಿಳಿಸುತ್ತದೆ.[೧೦] ಜನಪದ ಸಾಹಿತ್ಯದಲ್ಲಿ ದೊರಕುವ ಈ ಉಲ್ಲೇಖಗಳು ಐತಿಹಾಸಿಕ ವೆಂದು ತುಳುನಾಡಿನಲ್ಲಿ ಯುದ್ಧ ತರಬೇತಿ ಕೇಂದ್ರಗಳಿದ್ದವು ಎಂದು ಸಂಶೋಧಕರಾದ ಡಾ. ವಸಂತ ಶೆಟ್ಟಿಯವರು ಉಡುಪಿ ತಾಲೂಕಿನ "ನಾನಾಯರ ಗರೊಡಿ ಹಾಗೂ ಬ್ರಹ್ಮಾವರದ ಮೂಡು ಮತ್ತು ಪಡು ಗರೊಡಿ (ವಾರಂಬಳ್ಳಿ ಗರೊಡಿ) ಕಾರ್ಯ ನಿರ್ವಹಿಸುತ್ತಿದ್ದವೆಂದು ಶಾಸನಾಧಾರದಿಂದ ತಿಳಿಸುತ್ತಾರೆ.[೧೧]

ಕರ್ನಾಟಕದಾದ್ಯಂತ ಹರಡಿಕೊಂಡಿರುವ ಶಾಸನಗಳನ್ನು ಗಮನಿಸಿದಾಗ ಶಸ್ತ್ರಾಸ್ತ್ರ ಪರಿಣಿತರಾದ ಪಡೆಯೊಂದು ರಾಜನ ನೆಚ್ಚಿನ ಬಂಟರಾಗಿ ಪ್ರಾಮಾಣಿಕ ಹೋರಾಟಗಾರರಾಗಿ

ವಿಶಿಷ್ಟವಾದ ವೀರ ಪಡೆಗಳು ವೀರ ಪರಂಪರೆಯ ಅಸ್ತಿತ್ವಕ್ಕೆ ಕಾರಣವಾಗಿದೆ. ಈ ಸ್ವಾಮಿನಿಷ್ಠ ವೀರರ ಪರಂಪರೆಯು ಮಧ್ಯಕಾಲೀನ ಕರ್ನಾಟಕದ ಹೊಯ್ಸಳರ ಕಾಲದಲ್ಲಿ ವಿಶೇಷವಾಗಿ ವಿಜ್ರಂಭಿಸಿತು. ಹೊಯ್ಸಳರ ಕಾಲದಲ್ಲಿ 'ಗರುಡ' ಎಂಬ ಪದ ಅರಸರ ಸಾವಾದಾಗ ಆತ್ಮ ಬಲಿದಾನ ಮಾಡಿಕೊಳ್ಳುವವರಿಗೆ ಪಾರಿಭಾಷಿಕ ಪದವಾಗಿದೆ. ಎಂದು ಚಿದಾನಂದ ಮೂರ್ತಿಯುವರು ಅಭಿಪ್ರಾಯುವನ್ನು ವ್ಯಕ್ತಪಡಿಸುತ್ತಾರೆ.[೧೨] ಆದರೆ ಎಂ.ಎಂ. ಕಲ್ಬುರ್ಗಿಯವರ ಅಭಿಪ್ರಾಯದಂತೆ 'ಗರುಡ' ಎನ್ನುವುದು ಶಾಸನಗಳಲ್ಲಿ ಕಂಡುಬರುವ ಪೊರೆದ ಮಗು, ಪ್ರಿಯ ಪುತ್ರ, ವೇಳೆ, ಲೆಂಕ ಎಂಬ ಪದಗಳಿಗೆ ಸಮಾನಾರ್ಥವಾಗಿದ್ದು, ಮಾತ್ರವಲ್ಲ ಈ ಗರುಡ ಎಂಬ ಪದವನ್ನು ಉಪಮೆಯಾಗಿ ಬಳಸಲಾಗಿದೆ. ಎನ್ನುತ್ತಾರೆ.[೧೩]

ಜನಪದ ಸಾಹಿತ್ಯಗಳಲ್ಲಿ ಸಿಗುವ ಗರೊಡಿ ಉಲ್ಲೇಖ ಗಳಲ್ಲಿ ಇದೊಂದು ಯುದ್ಧವಿದ್ಯೆಯ ತರಬೇತಿ ಕೇಂದ್ರಗಳೆಂದು ತಿಳಿಸಿರುವುದು ಗಮನಾರ್ಹವಾಗಿದೆ. ತುಳುನಾಡಿನ ಕೋಟಿ ಚೆನ್ನಯ್ಯರ ಪಾಡ್ದನದ ಕಾಲಾವಧಿ ಸುಮಾರು ಕ್ರಿ.ಶ.೧೭ನೆಯ ಶತಮಾನವೆಂದು ಡಾ. ವಿವೇಕ ರೈಯವರ ಅಭಿಪ್ರಾಯ. ವಿಜಯನಗರ ಕಾಲದ ಯಾವುದೇ ದಾಖಲೆಗಳಲ್ಲಿ ಇವರ ಉಲ್ಲೇಖಗಳಿಲ್ಲದೆ ಇರುವುದರಿಂದ ಈ ಸಾಹಿತ್ಯಗಳು ಕ್ರಿ.ಶ. ೧೬ನೇ ಶತಮಾನದ ನಂತರ ಬೆಳೆದಿರಬೇಕು. ಖ್ಯಾತ ಇತಿಹಾಸ ಕಾರರಾದ ಕೆ.ಜೆ. ವಸಂತ ಮಾಧವರವರು ಕೂಡಾ ಇದಕ್ಕೆ ಅಭಿಮತವನ್ನು ಸೂಚಿಸುತ್ತಾರೆ, ಕೋಟಿ ಚೆನ್ನಯ್ಯರ ಪಾಡ್ದನದಲ್ಲಿ "ಬ್ಯಾರಿ ಪಳ್ಳಿಯೋ', ಕುಟುಂಬ ಇಂಗ್ರೇಜಿಯೋ, ಸೆಟ್ಟಿ ಬತ್ತಿ ಬಸ್ತಿಯೋ, ದೇವರೆ ದೇವ ಮಾಡೊನೊ, ಅವು ತೋಜುಣೆಯೇ; ಬ್ರಹ್ಮರೆ ಸಿಂಗದನೊವೊ ಅವು ತೋಜುಣೆಯೇ[೧೪] (ಬ್ಯಾರಿಯ ಮಸೀದಿಯೋ, ಕ್ರಿಸ್ತನ ಇಗರ್ಜಿಯೋ, ಜೈನರ ಬಸದಿಯೋ, ದೇವರ ದೇವಾಲಯವೋ ಅದು ಕಾಣಿಸುವುದು. ಬ್ರಹ್ಮರ ಸ್ಥಾನವೋ ಅದು ಕಾಣಿಸುತ್ತದೆ) ಎಂದರೆ ಪಾಡ್ದನದ ರಚನೆ ಸಂದರ್ಭದಲ್ಲಿ ಕ್ರೈಸ್ತರ ಆಗಮನದ ನಂತರ ಇಗರ್ಜಿಗಳು ನಿರ್ಮಾಣ ವಾಗಿತ್ತೆಂದು ತಿಳಿಸಿರುವುದರಿಂದ ಈ ಮೇಲಿನ ಅಭಿಪ್ರಾಯ ಸರಿಯೆನ್ನಬಹುದು. ಹಾಗಾಗಿ ವಿಜಯನಗರದ ಪತನದ ನಂತರ ತುಳುನಾಡನ್ನು ಸ್ವತಂತ್ರವಾಗಿ ಆಳುತ್ತಿದ್ದ ಬಂಗರು, ಚೌಟರು, ಅಜಿಲರು, ಸಾವಂತರು ಅರಸರುಗಳಾಗಿದ್ದಾಗ ಅವರ ಕೈ ಕೆಳಗೆ ಕೆಲವು ಮಂದಿ ಬಲ್ಲಾಳರಿದ್ದು ಕ್ರಿ.ಶ. ೧೭ನೇ ಶತಮಾನದ ಪ್ರಥಮಾರ್ಧದಲ್ಲಿ ಒಬ್ಬ ಬಲ್ಲಾಳ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಪಡುಮಾಲೆ (ಪೆರ್ಮಲೆ), ಇನ್ನೋರ್ವ ಸುಳ್ಯ ತಾಲೂಕಿನ ಪಂಜ ಮತ್ತು ಮತ್ತೋರ್ವ ಎಣ್ಮೂರಿನಲ್ಲಿದ್ದನು. ಈ ಕಾಲದಲ್ಲಿ ಜನಿಸಿದವರೇ ಕೋಟಿ ಚೆನ್ನಯ್ಯ.[೧೫]

ಗರೋಡಿಗಳು ತುಳುನಾಡಿಗೆ ಸೀಮಿತವಾಗಿರದೆ ಕೇರಳದ ಜಾನಪದ ಗೀತೆಗಳು "ವಡಕ್ಕನ್ ಪಾಟ್ಟು"ವಿನಲ್ಲಿ ಉಲ್ಲೇಖಿಸಲಾಗಿದೆ. ಈ ಗೀತೆಯನ್ನು ಹಾಡುವ ಪಾಣನ್ ಎಂಬ ಕಥಾ ಪಾತ್ರದ ಅಭಿಪ್ರಾಯದಂತೆ ತುಳುನಾಡಿನ ಗರೋಡಿಗಳಲ್ಲಿ ಅಭ್ಯಸಿಸಿದವರು ಒಳ್ಳೆಯ 'ಚೇಗವ' ನಾಗುತ್ತಾನೆ. 'ಚೇಗವ'ನೆಂದರೆ ಗರಡಿಗಳಲ್ಲಿ ಪರಿಣಿತಿಯನ್ನು ಹೊಂದಿದವನೆಂದು 'ವಲಿಯ ಆರೋಮಲ್ ಚೇಗ್‌ವರ್' ಎಂಬ ಇನ್ನೊಂದು ಜಾನಪದ ಗೀತೆಯಲ್ಲೂ ಈ ಮಾತು ಅಭಿವ್ಯಕ್ತಿಯಾಗಿರುವುದು ಉಲ್ಲೇಖಾರ್ಹ.

ಪ್ರಸ್ತುತ ಕೇರಳದಲ್ಲಿ ಜನಪ್ರಿಯವಾದ 'ಕಳರಿಯ ಪಟ್ಟು' ಯುದ್ಧವಿದ್ಯೆಯನ್ನು ಅಭ್ಯಾಸ ಮಾಡುವ ಉನ್ನತ ಯುದ್ಧ ಶಿಕ್ಷಣ ಕಲಾ ಕೇಂದ್ರಗಳೇ ತುಳುನಾಡಿನ ಗರೋಡಿಗಳೆಂಬುದು ಸ್ಪಷ್ಟವಾಗುತ್ತದೆ. ತುಳುವ ಕದನ ಕಲೆಗೆ ಸಂಬಂಧಿಸಿದ ಕೇರಳದ 'ಕಳರಿ ಪಟ್ಟು' ವಿನಲ್ಲಿ ಬರುವ ಹದಿನೆಂಟು (೧೮) ಅಡವುಗಳಲ್ಲದೆ 'ಪೊಯಿಕಟಕಂ' ಎನ್ನುವ ಅಡವು ಕಲಿಯಲು ವೀರರು ತುಳುನಾಡಿಗೆ ಬರುತ್ತಿದ್ದರೆಂದು ಈ ಜಾನಪದ ಗೀತೆಗಳು ಹೇಳುವುದಲ್ಲದೆ, ಹಲವಾರು ಹೊಡೆತದ ಭಂಗಿಯನ್ನು ನೇಮೋತ್ಸವದ ಕುಣಿತದಲ್ಲಿ ಪ್ರದರ್ಶಿಸುವುದನ್ನು ಇಂದಿಗೂ ನೋಡಬಹುದಾಗಿದೆ.[೧೬] ಈ ಎಲ್ಲಾ ಜಾನಪದ ಅಧ್ಯಯನಗಳು ಗರೋಡಿಗಳನ್ನು ವಿದ್ಯಾ ಕೇಂದ್ರವಾಗಿಯೇ ಪ್ರತಿಬಿಂಬಿಸಿದ್ದು ಹೊರತಾಗಿ ಧಾರ್ಮಿಕ ಕೇಂದ್ರವಾಗಿ ಅಲ್ಲ ಎಂಬುದು ಗಮನಾರ್ಹ. ಇಂದು ಕೆಲವು ಗರಡಿಗಳಲ್ಲಿ ಉಳಿದಿರುವ 'ಗುರುಕಂಭ' ಗರಡಿಯಲ್ಲಿರುವ ಗುರುವಿನ ಸಂಕೇತವೆಂದು ಭಾವಿಸುವುದು ಗೌರವಿಸುವುದನ್ನು ನೋಡುತ್ತೇವೆ. ಕೋಟಿ ಚೆನ್ನಯ್ಯರ ಪಾಡ್ದನದಲ್ಲಿಯೇ ಬೈದ್ಯರ ಮಾವ ಸಾಯನ ಬೈದ ಹೇಳುವಂತೆ (ಏರ್ ಬಾಲೆಲೆ ಕೋಟಿ ಚೆನ್ನಯ್ಯ, ಮುಡಾಯಿ ಪಕ್ಕೊಡು ಪೇರ್ ಪೆರ್ಮುಂಡೆ ಗರೊಡಿದ ಅವನೆಡ್, ಪಡ್ದಾಯಿ ಪಕ್ಕೊಡು ಉಂಡು ಕಟ್ಪಾಡಿ, ನಾನಾರೆ ಗರೊಡಿ ಆವನೆ'[೧೭] ಪುತ್ತೂರಿನ ಪೇರ್ ಪೆಮ್ಮುಂಡೆ ಗರೊಡಿ ಹಾಗೂ ಪಾಂಗಾಳದ ನಾನಾಯರ ಗರೊಡಿ ಕೋಟಿ ಚೆನ್ನಯ್ಯರ ವಿದ್ಯೆಗೆ ಯೋಗ ಕೇಂದ್ರಗಳೆಂದು ಒಪ್ಪಿಕೊಂಡಿರುವುದು ಮೇಲಿನ ಅಧ್ಯಯನಕ್ಕೆ ಹೆಚ್ಚಿನ ಇಂಬು ನೀಡುತ್ತದೆ.

ಕೋಟಿ ಚನ್ನಯರಿಗೆ ಸಮಾಜ ಕಂಠಕರನ್ನು ಶಿಕ್ಷಿಸುವ ಎಲ್ಲಾ ಅರ್ಹತೆಗಳು ಇವರಿಗಿದ್ದು, ಉತ್ತಮ ಪಾಂಡಿತ್ಯವನ್ನು ಪಡೆದವರು ಗರೋಡಿಯ ಯುದ್ಧ ಕಲೆಯಲ್ಲಿ ಪಾರಂಗತ ರಾದವರಲ್ಲದೆ ಪಡುಮಲೆಯಲ್ಲಿ ನಡೆದ ಪೂರ್ವಾಪರವನ್ನು

ತಿಳಿದಿರುವಂತೆ ಕಾಣುತ್ತದೆ. ನಗುಮೊಗದ ಮೂಲಕ ಶ್ರೀ ಸಾಮಾನ್ಯರು ತಮಗೆ ಆಗಿರುವಂತಹ ಅನ್ಯಾಯವನ್ನು ಪ್ರತಿಭಟಿಸುವ ನಾಯಕರ ಆಗಮನವನ್ನು ಸ್ವಾಗತಿಸುವಂತಿದ್ದರೆ ಇನ್ನೊಂದೆಡೆ (ಪಂಜದ ರಾಜ) ಇಂತಹ ಸಮಾಜದ ಕಂಟಕರ ವಿಮೋಚಕರನ್ನು ನಿಯಂತ್ರಿಸಿ ತಮ್ಮ ಪ್ರಭುತ್ವವನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿರುವುದು ಕಂಡುಬರುತ್ತದೆ.

ಅವಳಿ ವೀರರು ವೀರ ಸ್ವರ್ಗವನ್ನು ಪಡೆದ ನಂತರ ಗರೋಡಿಗಳು ತಮ್ಮ ಕಾರ್ಯಕ್ರಮಗಳಲ್ಲಿ ಗಣನೀಯವಾದ ಸ್ಥಿತ್ಯಂತರವನ್ನು ಹೊಂದಿ ಈ ಕೇಂದ್ರಗಳು ದೈವಿಕ ನೆಲೆ ಬೀಡಾಗಿ ಬಿಡುವುದನ್ನು ನಾವು ಕಾಣಬಹುದು. "ಅನ್ಯಾಯಗಳನ್ನು ಎದುರಿಸಿ ಸ್ವಗ್ರಾಮಗಳನ್ನು ಕಾಪಾಡುವುದು ಪುಣ್ಯವೂ, ಕರ್ತವ್ಯವೂ ಎಂದು ಭಾವಿಸಿ ಮಾನವೀಯತೆಯಿಂದ ಸ್ವ ಪ್ರೇರಿತರಾಗಿಯೋ ಇಲ್ಲವೆ ಒಡೆಯನ ಆಜ್ಞೆಯ ಮೇರೆಗೋ ಸಾಮಾನ್ಯರು ಪ್ರಾಣ ತೆರುತ್ತಿದ್ದರು. ಯಾವ ದೃಷ್ಟಿಯಿಂದಲೂ ಶ್ರೀ ಸಾಮಾನ್ಯರು ಸುರಕ್ಷಿತವಾಗಿರದೆ ಸದಾಕಾಲ ಆತಂಕದಲ್ಲೇ ಬದುಕುತ್ತಿದ್ದರು. ಗರೊಡಿಗಳು ಸಹ ತಮ್ಮ ಆಚರಣೆಗಳ ಮೂಲಕ ಕೋಟಿ ಚೆನ್ನಯ್ಯರ ವೀರತ್ವದ ಹೆಸರಿನಲ್ಲಿ ಅನ್ಯಾಯವನ್ನು ಪ್ರತಿಭಟಿಸುವ ಕೇಂದ್ರವಾಗಿ ಬೆಳೆದಂತೆ ಭಾಸವಾಗುತ್ತದೆ.

ಗರೋಡಿಗಳಲ್ಲಿ ಯಜಮಾನ ಸಂಸ್ಕೃತಿಯ ನುಸುಳುವಿಕೆಯನ್ನು ನಾವು ಪಾಡ್ದನಗಳಲ್ಲಿ ಮನಗಾಣಬಹುದು. ಭೌತವಾದದ ಜನಪರ ಸಂಸ್ಕೃತಿಯನ್ನು (ಧರ್ಮವನ್ನು) ಭಾವನಾವಾದದ ಕಡೆಗೆ ಕೊಂಡೊಯ್ಯುವ ಪ್ರಯತ್ನಗಳನ್ನು ನಾವು ಮನಗಾಣಬಹುದು.

ಕೋಟಿ ಚೆನ್ನಯ್ಯ ಪಾಡ್ದನದ ಕಾಲ ಸುಮಾರು ಕ್ರಿ.ಶ. ೧೭ನೇ ಶತಮಾನವಾದ್ದರಿಂದ ಇದಕ್ಕೆ ಸಮಾನಾಂತರವಾಗಿ ಅದ್ವೈತ, ದ್ವೈತ, ವಿಶಿಷ್ಟಾದ್ವೈತ ತತ್ವಗಳು ತುಳುನಾಡಿನಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಂಡಿದ್ದು, ದೇವ ಪಾರಮ್ಯವನ್ನು ಜೀವಿಯ ಬದುಕಿನ ಗಮ್ಯವು ಆ ಪರಮ ಸತ್ಯದೊಂದಿಗೆ ಮಿಲನವೆಂದು ಪ್ರತಿಪಾದಿಸಿದವು. ಇದು ದೇವಾಲಯ ಸಂಸ್ಕೃತಿಗೆ ಉತ್ತೇಜನ ನೀಡಿ ಭೌತವಾದದ ಪ್ರತೀಕವಾದ ಗರೊಡಿಗಳೂ ಸಾಮಾಜಿಕ ಸಂಚಲನದ ತೆಕ್ಕೆಗೆ ಸಿಲುಕಿರಬೇಕು. ಇನ್ನೊಂದೆಡೆ ಭೌತವಾದ ಮೇಲುಗೈ ಸಾಧಿಸಲು ಸಮಾಜೋ ರಾಜಕೀಯ ಕಾರಣ ಮುಖ್ಯವಾಗಿರುತ್ತದೆ. ಜನಪದ ಪ್ರಗತಿಗಾಮಿ ಭೌತವಾದದ ಚಿಂತನೆಗಳು ಆಳುವ ವರ್ಗದ ಯಜಮಾನ ಸಂಸ್ಕೃತಿಗೆ ವಿರೋಧಿಯಾಗಿದೆ. ಜನಸಾಮಾನ್ಯರ ಮೇಲೆ ಹಿಡಿತವನ್ನು ಸ್ಥಾಪಿಸಲು ಯಜಮಾನ ಸಂಸ್ಕೃತಿ ಭಾವನಾವಾದದ ಬೆಂಬಲ ಪಡೆದು ಆ ಸಿದ್ಧಾಂತವನ್ನು ಪ್ರಚುರಪಡಿಸಲು ಧಾರ್ಮಿಕ ಸಂಸ್ಥೆಗಳಿಗೆ ಪೋಷಣೆ ನೀಡಿತು. ಒಂದರ್ಥದಲ್ಲಿ ಕೊಡುಕೊಳ್ಳುವಿಕೆಯ ಪರಸ್ಪರ ಒಡಂಬಡಿಕೆಯಾಗಿದೆ.[೨೦] ಇಂತಹ ಭಾವನಾವಾದದ ಪ್ರಭಾವವು ಜನಮಾನಸದಲ್ಲಿ ಮನೆಮಾಡಿದ್ದು ಗರೊಡಿ ವೀರರ ಜನಪ್ರಿಯತೆ ಹಾಗೂ ಗೌರವವನ್ನು ತಮ್ಮದಾಗಿಸಿಕೊಳ್ಳಲು ಗರೊಡಿಗಳನ್ನು ಧಾರ್ಮಿಕ ಕೇಂದ್ರಗಳಾಗಿ ಪರಿವರ್ತನೆಗೊಳಿಸುವ ಪ್ರಯತ್ನ ಇದಾಗಿದೆ. ಭಾವನಾವಾದವು ಜಗತ್ತನ್ನು ಮಾಯೆಯೆಂದು ಹೇಳಿದರೂ ಧಾರ್ಮಿಕ ಸಂಸ್ಥೆಯು ಒಳಗೊಂಡಂತೆ ಸಮಾಜದ ಸಿಂಹಪಾಲು ಜನ ಸುಖ ಸಂಪತ್ತಿನ ಹಿಂದೆ ಬಿದ್ದಿತ್ತು ಎಂಬುದು ಸತ್ಯ. ಈ ಜನ್ಮವಲ್ಲದಿದ್ದರೂ ಮುಂದಿನ ಜನ್ಮದಲ್ಲಾದರೂ ಸುಖಿಯಾಗಿರಬೇಕೆಂಬ ಆಸೆಗೆ ದಾಸನಾದ ಮಾನವನನ್ನು (ಜನರನ್ನು) ಧರ್ಮ ಮಾರ್ಗಕ್ಕೆ ಎಳೆಯಬೇಕಾಗಿತ್ತು. ಈ ಮೂಲಕ ತನ್ನ ಉಳಿವನ್ನು ಪ್ರಭುತ್ವ ನೋಡಿಕೊಂಡಿತು.

ಕೋಟಿ ಚೆನ್ನಯ್ಯರು ತಮ್ಮ ಜೀವಿತಾವಧಿಯಲ್ಲಿ ಅನೇಕ ಗರಡಿಗಳನ್ನು ಸ್ಥಾಪಿಸುವ ಮೂಲಕ ತಮಗಿದ್ದ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಲು ಪ್ರಯತ್ನಿಸಿದ್ದರು. ಇದು ಆ ಕಾಲದ ಅನಕ್ಷರಸ್ಥ ಸಮಾಜದ ಜನರಿಗೆ ಶಿಕ್ಷಣದ ಮಹತ್ವವನ್ನು ತಿಳಿಸಿ, ಸಮಾಜ ಘಾತುಕ ಪ್ರಭುತ್ವಗಳ ವಿರುದ್ಧ ಹೋರಾಡಲು ಸಮಾಜವನ್ನು ಅದರಲ್ಲೂ ಯುವಕರನ್ನು ಸಿದ್ಧಪಡಿಸುವ ಕೇಂದ್ರಗಳಾಗಿಸಿದ್ದರು. ಗರೋಡಿಗಳಲ್ಲಿ ಸ್ವತಃ ಹನ್ನೆರಡು (೧೨) ವರ್ಷಗಳ ಕಾಲ ಪಡೆದ ಸಮರಕಲೆ ಮಾತ್ರವಲ್ಲದೆ ಮನೋನಿಗ್ರಹವನ್ನು ಬೆಳೆಸಿಕೊಂಡಿದ್ದು, ಇವೆಲ್ಲಾ ದೈಹಿಕ ಮಾತ್ರವಲ್ಲದೆ ಬೌದ್ಧಿಕವಾಗಿಯೂ ಈ ಅವಳಿ ವೀರರನ್ನು ಸದಾಕಾಲ ಸಾಮಾಜಿಕ ಕೆಡುಕುಗಳ ಬಗ್ಗೆ ಜಾಗೃತಗೊಳಿಸುತ್ತಿತ್ತು. ತಮಗೆ ದೊರೆತ ಈ ಗರೊಡಿ ಶಿಕ್ಷಣದ ಮೂಲಕ ತಮ್ಮಂತಹ ಇನ್ನಷ್ಟು ಸಮಾಜ ಪ್ರೇಮಿಗಳ ಹುಟ್ಟಿಗೆ ಕಾರಣರಾಗುತ್ತಾರೆ. ಇಲ್ಲಿ ಸದಾ ಕಾಲ ಶೋಷಿತವರ್ಗ ಅನಕ್ಷರಸ್ಥರಾಗಿದ್ದರಿಂದ ಇವರನ್ನು ಜಾಗೃತಿಗೊಳಿಸುವ ಕಾರ್ಯದಲ್ಲಿ ನಿರತರಾಗಿದ್ದರು. ಮಾತ್ರವಲ್ಲದೆ ಈ ಕಾಲದುದ್ದಕ್ಕೂ ಕೆಳಸ್ತರದ ಅನಕ್ಷರಸ್ತ ಸಮಾಜಕ್ಕೆ ಧಾರ್ಮಿಕ ಕಾರಣಕೊಟ್ಟು ವಂಚಿಸುತ್ತಿದ್ದರು. ಪಾಡ್ದನಗಳು ಅನಕ್ಷರಸ್ಥ ಸಮಾಜದ ಮೌಖಿಕ ಸಾಹಿತ್ಯದ ಪರಂಪರೆಯಾಗಿದ್ದು, ಗರೊಡಿಗಳು ಇಂದಿನ ಶಿಕ್ಷಣ ಹೇಗೆ ಜನರನ್ನು ಪ್ರಬುದ್ಧರಾಗಿಸುತ್ತದೋ ಅದೇ ರೀತಿಯಲ್ಲಿ ಪರ್ಯಾಯ ವಿದ್ಯಾಸಂಸ್ಥೆಗಳಾಗಿ ತುಳುನಾಡಿನ ಗರೊಡಿಗಳನ್ನು ಕೋಟಿ ಚೆನ್ನಯ್ಯರು ಶಿಕ್ಷಣ ಕೇಂದ್ರವಾಗಿ ಬೆಳೆಸಿದ್ದರು. ಆ ಮೂಲಕ ಸಮಾಜಸೇವಾ ಕಾರ್ಯದಲ್ಲಿ ಯುವಕರನ್ನು ಸಜ್ಜುಗೊಳಿಸುತ್ತಿದ್ದರು. ಕೋಟಿ ಚೆನ್ನಯ್ಯರಂತಹ

ಸಾಮರ್ಥ್ಯವಂತರು ಕೆಲವು ವಿಶೇಷ ಅರ್ಹತೆಗಳನ್ನು ಹೊಂದಿದ್ದ ಮೇಲುವರ್ಗದ ಕಿರುಕುಳವನ್ನು ಅನುಭವಿಸಬೇಕಾಯಿತು. ಸಮಾಜದಲ್ಲಿದ್ದ ಅನ್ಯಾಯ ಅಸಮಾನತೆಗಳ ವಿರುದ್ಧ ಧ್ವನಿಯೆತ್ತಿ ಹೋರಾಡುವ ಪ್ರವೃತ್ತಿಯನ್ನು ಬೆಳೆಸಿದವರು[೧೯] ಕೋಟಿ ಚೆನ್ನಯ್ಯರು ದುರ್ಬಲರನ್ನು ಸಬಲರನ್ನಾಗಿಸಲು ಸ್ಥಾಪಿಸಿದ ಗರೋಡಿಗಳು ಸಮಾಜದ ಶಕ್ತಿ ಕೇಂದ್ರಗಳಾಗಿ ಮಾರ್ಪಟ್ಟಿದೆ.

ಗರಡಿಯ ಸ್ಥಾಪನೆಯಲ್ಲಿ ಎಲ್ಲೂ ಕೂಡ ಕೋಟಿ ಚೆನ್ನಯ್ಯರು ತಮ್ಮ ಪರಾಕ್ರಮದ ಪ್ರಭುತ್ವವನ್ನು ತೋರಿಸಿರುವುದು ಕಂಡುಬರುವುದಿಲ್ಲ. "ತಮಗೆ ಸಮಬಲರಾದ ಮುಲ್ಕಿ ಸೀಮೆಯ ಗರೋಡಿ ವೀರರಾದ ಕಾಂತಬಾರೆ ಮತ್ತು ಬೂದಬಾರೆಯರು ಮೂಲ್ಕಿ ಸೀಮೆಯ ಒಂಬತ್ತು ಮಾಗಣೆಯಲ್ಲಿ ತಮ್ಮ ಪ್ರಭಾವವನ್ನಿರಿಸಿಕೊಂಡಿದ್ದು, ದೈವೀ ಪುರುಷರ ಸ್ಥಾನಕ್ಕೇರಿದವರು. ಗರೊಡಿ ರಚನೆಯ ವಿಚಾರದಲ್ಲಿ ಕೋಟಿ ಚೆನ್ನಯ್ಯ ಹಾಗೂ ಕಾಂತಬಾರೆ ಮತ್ತು ಬೂದಬಾರೆಯ ನಡುವೆ ಸಂಘರ್ಷವೇರ್ಪಟ್ಟಿದ್ದರೂ ಒಪ್ಪಂದಕ್ಕೆ ಮಣಿದು, ಮುಲ್ಕಿ ಸೀಮೆಯಲ್ಲಿ ಕೋಟಿ ಚೆನ್ನಯ್ಯರು ತಮ್ಮ ಗರೋಡಿಗಳನ್ನು ಸ್ಥಾಪಿಸದೆ ಈ ಒಂಬತ್ತು ಮಾಗಣೆಯಲ್ಲಿ ಕಾಂತಬಾರೆ ಮತ್ತು ಬೂದಬಾರೆಯರಿಗೆ ಗರೊಡಿ ನಿರ್ಮಿಸಲು ಅನುವು ಮಾಡಿ ಕೊಟ್ಟಿರುವುದು"[೨೦] ಉತ್ತಮ ನಿದರ್ಶನವಾಗಿದೆ.

ಗರೊಡಿಗಳು ಸಾಮಾಜಿಕ ಸ್ಥಿತ್ಯಂತರದ ಬಳಿಕವೂ ಧಾರ್ಮಿಕ ಕೇಂದ್ರವೆಂದು ಪರಿಗಣಿಸಿದರೂ ಸಾಮಾಜಿಕ ದೌರ್ಬಲ್ಯಗಳನ್ನು ವಿರೋಧಿಸಿ ಮೌಲ್ಯಯುತವಾದ ಜಾತ್ಯಾತೀತ ಭಾವನೆಯ ಪ್ರವರ್ತಕರಾಗಿ ಬೆಳೆದು ಬಂದಿರುವುದನ್ನು ನಾವು ಗಮನಿಸಬಹುದು. ತುಳುವರು ಯಾವುದೇ ದೇವ ದೇವತೆಗಳನ್ನು ಪೂಜಿಸುತ್ತಾರೋ ಅವರು ಯಾವುದೇ ಪ್ರಲೋಭ ತೋರಿಸಿದರೂ ತಮ್ಮ ಮೂಲ ಧರ್ಮವನ್ನು ಬಿಟ್ಟುಕೊಟ್ಟಂತಹ ದಾಖಲೆಗಳಿಲ್ಲ.[೨೧] ತುಳು ನಾಡಿನ ದೈವದ ಗುಡಿಯಲ್ಲಿ ಹೆಚ್ಚಿನೆಡೆ ತಾಯಿ ಹಾಗೂ ಅಣ್ಣ ತಂಗಿಯರು ಆರಾಧನೆಗಳೊಳಗಾಗುತ್ತಾರೆ. ಹೊರತಾಗಿ ಗಂಡ ಹೆಂಡತಿಯರಲ್ಲ, ಕೋಟಿ ಚೆನ್ನಯ್ಯರೊಂದಿಗೆ ತಾಯಿ ದೇಯಿ ಬೈದ್ಯತಿ ಮತ್ತು ತಂಗಿ ಕಿನ್ನಿಧಾರು ತಮ್ಮ ಭೌತವಾದದ ದೈವಗಳಾಗಿ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯಿಂದ ಮೈದಳೆದವು.

ಅವಸಾನದ ಕಾಲದಲ್ಲಿ ಕೋಟಿ ಚೆನ್ನಯ್ಯರು ನಮಗೆ ಸ್ಮಾರಕ ಆಯುಧ ಶಾಲೆ 'ಗರೊಡಿ' ಕಟ್ಟಿಸಿ, ಎಂದು ದೇಹ ತ್ಯಜಿಸಿ 'ಬೆರ್ಮರ' (ಪ್ರಕೃತಿಯಲ್ಲಿ) ವಿಲೀನಗೊಳ್ಳುವಾಗಲೂ ಅವಳಿ ವೀರರ ಜೀವನದ ಆದರ್ಶಗಳನ್ನು ಸ್ವೀಕರಿಸಿ ತುಳುನಾಡಿನ ಜನರು ಗರಡಿಗಳನ್ನು ನಿರ್ಮಾಣಗೊಳಿಸಿ ಆರಾಧನೆಗೆ ಮುಂದಾದರು. ಇದು ಬೈದ್ಯರ ಒತ್ತಾಸೆ ಕೂಡ ಆಗಿತ್ತು. ಇದಕ್ಕೆ ನಾವು ಹಲವು ಕಾರಣಗಳನ್ನು ಗುರುತಿಸಬಹುದು. ಕೋಟಿ ಚೆನ್ನಯ್ಯರು ನಡೆಸಿದ ಪ್ರತಿಭಟನೆ ಮತ್ತು ಹೋರಾಟ ಅವರಿಬ್ಬರಿಗೆ ಮಾತ್ರ ಸೀಮಿತವಾದ ವೈಯಕ್ತಿಕ ಪ್ರತಿಭಟನೆಯಲ್ಲ. ಅದರಲ್ಲಿ ಸಮೂಹದ ಹೋರಾಟ ಅನೇಕ ಜನಾಂಗಗಳ ಒತ್ತಾಸೆಯಿದೆ. ಶೋಷಿತ, ವಂಚಿತ ಸಮೂಹದ ಪ್ರತಿನಿಧಿಗಳಾಗಿ ಈ ವೀರರು ಮುಖ್ಯರಾಗುತ್ತಾರೆ.[೨೨] ಇಂತಹ ಸಮೂಹವೊಂದರ ನಾಯಕ ಬಲಿಯಾದಾಗ ಅದಕ್ಕೆ ಕಾರಣರಾದವರು ಆ ಸಮೂಹದ ಜೊತೆ ರಾಜಿ ಮಾಡಿಕೊಳ್ಳುವುದು ಸಾಮಾನ್ಯ. ಹಾಗಾಗಿ ಸ್ಮಾರಕ ಸಮಾಧಿ ಗರೊಡಿ ರಚನೆ. ಕೋಟಿ ಚೆನ್ನಯ್ಯರಂತಹ ಸಾಮರ್ಥ್ಯವಂತರು ಕೆಲವು ವಿಶೇಷ ಸವಲತ್ತನ್ನು ಹೊಂದಿದ ಮೇಲುವರ್ಗದವರ ಕಿರುಕುಳವನ್ನು ಅನುಭವಿಸಬೇಕಾಯಿತು. ಸಮಾಜದಲ್ಲಿದ್ದ ಅನ್ಯಾಯ ಅಸಮಾನತೆಗಳ ವಿರುದ್ಧ ಧ್ವನಿಯೆತ್ತುವ ಪ್ರವೃತ್ತಿ ಬೆಳೆಸುವ ಗರೊಡಿಗಳು ಜೀವಂತಿಕೆ ಪಡೆಯುವುದಕ್ಕೆ ತಮ್ಮ ಸಾವಿಗೆ ಕಾರಣರಾದ ಬಲ್ಲಾಳರ ಮುಖವನ್ನು ನೋಡಿ "ಬಲ್ಲಾಳರೆ ತಮಗೆ ಜಾತಿ ಭೇದ ನೋಡದೆ ಗರಡಿ ಕಟ್ಟಿಸಿ"[೨೩] ಎಂದರು.

ಕೋಟಿ ಚೆನ್ನಯ್ಯನ ಸಮಕಾಲೀನ ಕಟಪಾಡಿಯ ನಾನಯರ ಗರಡಿ ಗುರುಗಳಾದ ಬಲಿಪನಾನಯರು ಮತ್ತು ಪಿಲಿಪ ನಾನಾಯರರಿಂದ ವಿದ್ಯೆ ಕಲಿತ ಗುರುತಿಗೆ ಗುರುಗಳ ಆಶೀರ್ವಾದ ಪೂರ್ವಕ ಪಾಂಡವರ ಅಂಗಿ (ನಿಲುವಂಗಿ) ಮತ್ತು ನಾನಾಯರ ಹಚ್ಚಡ ತೊಡಲ್ಪಟ್ಟದ್ದಾಗಿದೆ. ಇದರೊಂದಿಗೆ ವೀರ ಯೋಧರ ಸ್ಮರಣೆಗಾಗಿ ಪ್ರತಿಷ್ಠಾಪಿಸಿರುವ ಕುಬ್ಜ ವಿಗ್ರಹವನ್ನು ಬಾಲಯ್ಯನ ಅಥವಾ ಚುಟುಕ ವಿಗ್ರಹವೆಂದು ಕರೆಯುತ್ತಾರೆ. ಇವನ್ನು ಓವರ್ ಕೋಟ್ ತರಹದ ಮೇಲಂಗಿ ಧರಿಸಿರುವುದು ಅನ್ಯ ಧರ್ಮೀಯರು ಗರಡಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದರ ಕುರುಹಾಗಿದೆ[೨೪]. ಕೋಟಿ ಚೆನ್ನಯ್ಯರೂ (ಉತ್ತರದ ಕಡೆ) ಈ ಮೇಲಂಗಿ ಧರಿಸುತ್ತಾರೆ. ಇದು ಗರೊಡಿಗಳ ಆದರ್ಶಗಳು ಇತರ ಧರ್ಮೀಯರನ್ನೂ ಆಕರ್ಷಿಸಿದಂತೆ ಕಂಡುಬರುತ್ತದೆ.

ಈ ಎಲ್ಲಾ ಅಧ್ಯಯನಗಳಿಂದ ತಿಳಿದುಬರುವ ಪ್ರಮುಖ ಅಂಶಗಳೇನೆಂದರೆ–

೧) ಗರೊಡಿಗಳು ಮೂಲತಃ ವಿದ್ಯಾಕೇಂದ್ರ (ಸಮರಕಲೆ), ಸಂಘಟನಾ ಕೇಂದ್ರಗಳಾಗಿದ್ದರೂ ಬದಲಾದ ಸಾಮಾಜಿಕ ಸಂಚಲನದಲ್ಲಿ ಇಂದು ಧಾರ್ಮಿಕ ಚಟುವಟಿಕೆಗಳ ಮೂಲಕ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದ್ದು, ಮಾತ್ರವಲ್ಲದೆ ತುಳುನಾಡಿನ ಸಂಸ್ಕೃತಿಯ ಪ್ರಯೋಗ

ಶಾಲೆಯಂತೆ ತನ್ನ ವೈವಿಧ್ಯಪೂರ್ಣ ಧಾರ್ಮಿಕ ಆಚರಣೆಗಳ ಮೂಲಕ ತುಳುನಾಡಿನ ಸಮಸ್ತ ಸಮಾಜದ ಮನೋಸ್ಥೈರ್ಯವನ್ನು ಇಂದಿನವರೆಗೂ ಬೆಳೆಸಿಕೊಂಡು ಬಂದಿದೆ.

೨) ಕೋಟಿ ಚೆನ್ನಯ್ಯರ ಉನ್ನತ ವ್ಯಕ್ತಿತ್ವವನ್ನು ರೂಪಿಸಿದ ಗರೊಡಿಗಳಲ್ಲಿ ಸಮಕಾಲೀನ ಆದರ್ಶವಾದ ವೀರತ್ವವನ್ನು ಬಳಸಿಕೊಂಡು ಸಮಾಜವಿರೋಧಿ ಶಕ್ತಿಯನ್ನು ಮಟ್ಟಹಾಕಲು ಜನಸಾಮಾನ್ಯರ ಸಂಘಟನೆಯ ಅವಶ್ಯಕತೆಯನ್ನು ಈ ವೀರರು ಮನಗಂಡಿದ್ದರು. ಇದಕ್ಕಾಗಿ ಗರೊಡಿಗಳನ್ನೇ ಸಂಘಟನಾ ಕೇಂದ್ರಗಳನ್ನಾಗಿ ಪರಿವರ್ತಿಸಿಕೊಂಡು ತಮ್ಮ ಹೋರಾಟಕ್ಕೆ ಬಲ ನೀಡಿದರು.

೩) ಗರೋಡಿಗಳು ಇಂದು ಭಾವನಾವಾದ ಮತ್ತು ಯಜಮಾನ ಸಂಸ್ಕೃತಿಯ ಪ್ರಭಾವದಿಂದ ತನ್ನ ಮೂಲ ಸ್ವರೂಪವನ್ನು ಕಳಚಿಕೊಂಡು ಧಾರ್ಮಿಕ ಸ್ವರೂಪವನ್ನು ಪಡೆದುಕೊಂಡಿರಬಹುದು. ಆದರೆ ಭೌತವಾದವನ್ನು ಪ್ರತಿನಿಧಿಸುತ್ತಾ ಯಜಮಾನ ಸಂಸ್ಕೃತಿಗೆ ವಿರೋಧವನ್ನು ವ್ಯಕ್ತಪಡಿಸುತ್ತಾ ಬೆಳೆದುಕೊಂಡು ಬಂದಿದ್ದು, ಇಂದಿಗೂ ಗರೊಡಿಗಳು ಜನಮಾನಸದಲ್ಲಿ ಹಸಿರಾಗಿರಲು ಕಾರಣವಾಗಿದೆ.

೪) ಸಾಮಾಜಿಕ ಅಗತ್ಯತೆಗಳಿಗನುಗುಣವಾಗಿ ಗರೊಡಿಗಳು ತನ್ನ ಸ್ವರೂಪದಲ್ಲಿ ಪರಿವರ್ತನೆ ಮಾಡಿಕೊಂಡು ಸಮಾಜದ ಅಗತ್ಯತೆಗಳನ್ನು ಪೂರೈಸಿದೆ. ಕೋಟಿ ಚೆನ್ನಯ್ಯರ ಗರೊಡಿ ಸಾಧನೆ ಅವರನ್ನು ಅಜರಾಮರರನ್ನಾಗಿ ಮಾಡಿದ್ದಲ್ಲದೇ ಇವರ ಸಾಧನೆಯಿಂದ ಗರೊಡಿಗಳು ಸಮಾಜದ ಶೋಷಣೆಯ ವಿರುದ್ಧದ ಶಾಶ್ವತ ಶಕ್ತಿ ಕೇಂದ್ರವಾಗಿ ಬೆಳೆದಿವೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಬನ್ನಂಜೆ ಬಾಬು ಅಮೀನ್, 'ಕೋಟಿ ಚೆನ್ನಯ್ಯ' ಉಡುಪಿ, ೨೦೧೨, ಪುಟ ೧೦೪.
೨. ಕನ್ನಡ ನಿಘಂಟು 'ಕನ್ನಡ ಸಾಹಿತ್ಯ ಪರಿಷತ್ತು, ೧೯೭೫, ಪುಟ ೨೮೦-೮೧.
೩. ಬನ್ನಂಜೆ ಬಾಬು ಅಮೀನ್ ಮತ್ತು ಮೋಹನ್ ಕೋಟ್ಯಾನ್, 'ತುಳುನಾಡ ಗರೋಡಿಗಳ ಸಾಂಸ್ಕೃತಿಕ ಅಧ್ಯಯನ, ಉಡುಪಿ, ೧೯೯೦, ಪು.೩.
೪. ಬನ್ನಂಜೆ ಬಾಬು ಅಮೀನ್ ಮತ್ತು ಮೋಹನ್ ಕೋಟ್ಯಾನ್, 'ತುಳುನಾಡ ಗರೋಡಿಗಳ ಸಾಂಸ್ಕೃತಿ ಅಧ್ಯಯನ, ಉಡುಪಿ, ೧೯೯೦, ಪು.೩.
೫. ಡಾ. ಎನ್. ಆರ್. ಲಲಿತಾಂಬ, ಪೂರ್ವೋಕ್ತಿ, ಪುಟ ೧೭೩.
೬ ಡಾ. ಎನ್. ಆರ್. ಲಲಿತಾಂಬ, ಪೂರ್ವೋಕ್ತಿ, ಪುಟ ೧೭೩.
೭. ಡಾ. ಎನ್. ಆರ್. ಲಲಿತಾಂಬ, ಪೂರ್ವೋಕ್ತಿ, ಪುಟ ೧೭೪-೧೭೫.
೮. ಡಾ. ಎನ್. ಆರ್. ಲಲಿತಾಂಬ, ಪೂರ್ವೋಕ್ತಿ, ಪುಟ ೧೭೪-೧೭೫.
೯. ಬನ್ನಂಜೆ ಬಾಬು ಅಮೀನ್ ಮತ್ತು ಮೋಹನ್ ಕೋಟ್ಯಾನ್, 'ಪೂರ್ವೋಕ್ತಿ' ಮಟ ೪.
೧೦. ಬನ್ನಂಜೆ ಬಾಬು ಅಮೀನ್ ಮತ್ತು ಮೋಹನ್ ಕೋಟ್ಯಾನ್, 'ಪೂರ್ವೋಕ್ತಿ' ಮಟ ೪.
೧೧ ಬನ್ನಂಜೆ ಬಾಬು ಅಮೀನ್ ಮತ್ತು ಮೋಹನ್ ಕೋಟ್ಯಾನ್, 'ಪೂರ್ವೋಕ್ತಿ' ಮಟ ೪.
೧೨ ಡಾ. ಎನ್.ಆರ್. ಲಲಿತಾಂಬ, ಪೂರ್ವೋಕ್ತಿ, ಮಟ ೧೭೨.
೧೩ ಡಾ. ಎನ್.ಆರ್. ಲಲಿತಾಂಬ, ಪೂರ್ವೋಕ್ತಿ, ಮಟ ೧೭೨.
೧೪. ಬನ್ನಂಜೆ ಬಾಬು ಅಮೀನ್ ಮತ್ತು ಮೋಹನ್ ಕೊಟ್ಯಾನ್, ಪೂರ್ವೋಕ್ತಿ, ಮಟ ೧೪.
೧೫. ಬನ್ನಂಜೆ ಬಾಬು ಅಮೀನ್ ಮತ್ತು ಮೋಹನ್ ಕೊಟ್ಯಾನ್, ಪೂರ್ವೋಕ್ತಿ, ಮಟ ೧೪.
೧೬. ಬನ್ನಂಜೆ ಬಾಬು ಅಮೀನ್ ಮತ್ತು ಮೋಹನ್ ಕೊಟ್ಯಾನ್, ಪೂರ್ವೋಕ್ತಿ, ಮಟ ೭.
೧೭. ಅದೇ.
೧೮. ಡಾ. ಎನ್.ಆರ್. ಲಲಿತಾಂಬ, ಪೂರ್ವೋಕ್ತಿ, ಮಟ ೨೧೦.
೧೯. ಡಾ. ವಾಮನ ನಂದಾವರ, 'ಕೋಟಿ ಚೆನ್ನಯ್ಯ ಜಾನಪದೀಯ ಅಧ್ಯಯನ', ೨೦೦೧, ಮಂಗಳೂರು, ಮಟ ೮೩, (Thesis 2001 to Mangalore University.
೨೦. ಬನ್ನಂಜೆ ಬಾಬು ಅಮೀನ್, ಮೋಹನ್ ಕೋಟ್ಯಾನ್, ಪೂರ್ವೋಕ್ತಿ, ಮಟ ೩೭.
೨೧. ಬಿ.ಎಂ. ರೋಹಿಣಿ ಮತ್ತು ಶಶಿಲೇಖಾ ಬಿ, 'ತುಳುನಾಡಿನ ವೀರಗಲ್ಲು ಮತ್ತು ಸತಿ ಕಲ್ಲುಗಳು', ಮಂಗಳೂರು, ೨೦೧೦, ಪುಟ ೨೧.
೨೨. ಡಾ. ವಾಮನ ನಂದಾವರ, ಪೂರ್ವೋಕ್ತಿ, ಮಟ ೮೨.
೨೩. ದಾಮೋದರ ಕಲ್ಮಾಡಿ, 'ಕೋಟಿ ಚೆನ್ನಯ್ಯ ಪಾರ್ದನ', ಸಂಪುಟ, ಬೆಂಗಳೂರು, ೨೦೧೨, ಮಟ ೩೦೪.
೨೪. ಬಿ.ಎಂ. ರೋಹಿಣಿ ಮತ್ತು ಶಶಿಲೇಖಾ ಬಿ., ಪೂರ್ವೋಕ್ತಿ, ಮಟ ೨೨೪.

೧೦೧

ಕೊಡಗಿನಲ್ಲಿ ಜೈನಧರ್ಮ

ಡಾ. ಕೆ.ಎನ್. ಮೋಹನ್*

ಕರ್ನಾಟಕದ ದಕ್ಷಿಣ ಭಾಗಕ್ಕೆ ಪ್ರಾಚೀನ ಕಾಲದಲ್ಲಿಯೇ ಜೈನಧರ್ಮ ಆಗಮನವಾಗಿರುವುದಕ್ಕೆ ನಮಗೆ ಸಾಕಷ್ಟು ನಿದರ್ಶನ ಗಳಿವೆ. ಹಾಗೆಯೇ ಹಾಸನ ಜಿಲ್ಲೆಯ ಶ್ರವಣಬೆಳಗೊಳ ಕೊಡಗಿಗೆ ಸಮೀಪವಿದ್ದುದರಿಂದ, ಅಲ್ಲಿಂದ ಯತಿಗಳು ಕೊಡಗಿಗೆ ಬಂದು ಧರ್ಮ ಬೋಧನೆ ಮಾಡಿ ಹೋಗುತ್ತಿದ್ದುದಕ್ಕೆ ಆಧಾರಗಳಿವೆ. ಸಂಗಂ ಸಾಹಿತ್ಯದಲ್ಲಿ "ಕುಡುಕಂ ಕನ್ನಡಂ" ಎಂದು ಕೊಡಗಿನ ಉಲ್ಲೇಖವಾಗಿದೆ. ನಮಗೆ ಈ ಭಾಗದಲ್ಲಿ ಮೊದಲಿಗೆ ಗಂಗರಾಜ ರಿಂದ ಜೈನಧರ್ಮ ಹರಡಿತು. ತದನಂತರ ಅಧಿಕಾರಕ್ಕೆ ಬಂದಂತಹ ಚಂಗಾಳ್ವ ಮತ್ತು ಕೊಂಗಾಳ್ವರ ಕಾಲದಲ್ಲಿ ಶೈವ ಧರ್ಮದ ನೆಲೆವೀಡಾಗಿದ್ದ ಕೊಡಗಿನಲ್ಲಿ ಜೈನಧರ್ಮ ರಾಜಾಶ್ರಯ ಪಡೆಯುವಂತಾಯಿತು. ನಂತರದ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯ ಜಿನಾಲಯಗಳು ಕೊಡಗಿನಲ್ಲಿ ಕಂಡುಬಂದವು ಹೊಯ್ಸಳರ ಕಾಲದಲ್ಲಿಯು ಸಹ ಸಾಕಷ್ಟು ಪ್ರಭಾವ ಕೊಡಗಿನ ಮೇಲೆ ಆಳರಸರಿಂದಾಯಿತು. ಕೊಡಗಿನ ಪೆಗ್ಗೂರು, ಮುಳ್ಳೂರು, ಕಲ್ಕಂದೂರು, ಮಾಲಂಬಿ, ಬೆಟಗೇರಿ, ಅರಮೇರಿ, ಗಂಡಗೂರು, ಯಡೊರು, ನಂಜರಾಯಪಟ್ಟಣ ಪ್ರಮುಖಕೇಂದ್ರಗಳಾಗಿವೆ. ಹಾಸನದ ಗಡಿಭಾಗವಾದ ಸೋಮವಾರಪೇಟೆ ತಾಲ್ಲೋಕಿನಲ್ಲಿ ಜೈನಧರ್ಮದ ಪ್ರಭಾವ ಅಧಿಕವಾಗಿವೆ. ಒಟ್ಟಾರೆಯಾಗಿ ಕೊಡಗಿನಲ್ಲಿ ಜೈನಧರ್ಮವನ್ನು ಗಂಗರ ಕಾಲದಿಂದ ವಿಜಯ ನಗರ ಕಾಲದವರೆಗೆ ಹಾಗೂ ಸ್ಥಳೀಯ ರಾಜವಂಶಸ್ಥರಾದ ಹಾಲೇರಿ ಅರಸರ ಆಳ್ವಿಕೆವರೆಗೆ ಜೈನಧರ್ಮದ ಪ್ರಭಾವವನ್ನು ಈ ಕಾಲದಲ್ಲಿ ಕಾಣಬಹುದು. ತದನಂತರದಲ್ಲಿ ಈ ಭಾಗವು ಬ್ರಿಟೀಷರ ಆಡಳಿತ ಕೇಂದ್ರವಾದು ದರಿಂದ ಈ ಭಾಗದಲ್ಲಿ ಕ್ರೈಸ್ತಧರ್ಮ ತನ್ನ ಪ್ರಭಾವ ಹೆಚ್ಚಿಸಿ ಕೊಂಡಿತು.

ಕೊಡಗಿನಲ್ಲಿ ಲಭ್ಯವಾಗಿರುವ ೧೦೪ ಶಾಸನಗಳಲ್ಲಿ ಸುಮಾರು ೨೪ ಶಾಸನಗಳು ಜೈನಧರ್ಮಕ್ಕೆ ಸಂಬಂಧಿಸಿದವು ಗಳಾಗಿವೆ. ಈ ಎಲ್ಲಾ ಶಾಸನಗಳನ್ನು ಗಮನಿಸಿದರೆ ಜೈನಧರ್ಮ ಈ ಭಾಗದಲ್ಲಿ ಪ್ರಾಚೀನ ಕಾಲದಿಂದಲೂ ಈ ಭಾಗದಲ್ಲಿ ಇತ್ತೆಂದು ಹೇಳಬಹುದು.

ಕನ್ನಡ ಲಿಪಿಯ ತಾಮ್ರಶಾಸನವೊಂದು ಹಿಂದೆ ಮಡಿಕೇರಿಯ ಜಿಲ್ಲಾ ಖಜಾನೆಯಲ್ಲಿದ್ದು ಪ್ರಸ್ತುತ ಇದು ಸ್ವಿಡ್ಜರ್ಲೆಂಡಿನ ಬ್ಯಾಸೆಲ್‌ನಗರದ ಲುಥೇರೇನ್ ವಸ್ತು ಸಂಗ್ರಹಾಲಯದಲ್ಲಿರುವ ತಾಮ್ರಶಾಸನವು ಸಂಸ್ಕೃತ ಭಾಷೆಯಲ್ಲಿದ್ದು ಈ ಶಾಸನ ೯ನೇ ಶತಮಾನದ ಕಾಲಘಟ್ಟ ದ್ದಾಗಿರುತ್ತದೆ. ಈ ತಾಮ್ರಶಾಸನವು ಗಂಗರ ವಂಶಾವಳಿಯನ್ನು ಅವನೀತನವರೆಗೆ (ಕೊಂಗಣಿವರ್ಮ, ಮಾಧವ, ಹರಿವರ್ಮ) ಉಲ್ಲೇಖಿಸಿದೆ. ಈ ಶಾಸನದ ವಿವರಗಳು ಮೈಸೂರು ಜಿಲ್ಲೆಯ ನಂಜನಗೂಡ ತಾಲೂಕಿಗೆ ಸಂಬಂಧಿಸಿದುದಾಗಿದೆ. ಪೆಗ್ಗೂರಿನ ಕ್ರಿ.ಶ. ೯೭೮ರ ಶಾಸನವು ಗಂಗರ ಕಾಲದ್ದಾಗಿದ್ದು ವಿರಾಜಪೇಟೆಯ ಪೆಗ್ಗೂರು ಬಸದಿಗೆ ಸಂಬಂಧಿಸಿದ್ದಾಗಿದೆ. ಈ ಶಾಸನದಲ್ಲಿ ಬಸದಿಗೆ ದಾನ ನೀಡಿರುವ ಉಲ್ಲೇಖವಿದೆ, ದಾನ ಪಡೆದಾತ ಬೀರಸೇನ ಸಿದ್ಧಾಂತದೇವರ ಶಿಷ್ಯನಾದ ಗುಣಸೇನ ಪಂಡಿತ ಭಟ್ಟಾರಕರ ಶಿಷ್ಯ ಅನಂತವೀರ್ಯ ಎಂಬುವವನು ಈತ ಶ್ರವಣಬೆಳಗೊಳದ ನಿವಾಸಿಯಾಗಿದ್ದು ಪೆಗ್ಗದೂರಿನ ಬಸದಿಗಾಗಿ ಪೆಗ್ಗದೂರು ಮತ್ತು ಪೊಸವಾದಗ ವೆಂಬ ಹಳ್ಳಿಗಳನ್ನು ದಾನ ಪಡೆದನು. ಈ ಶಾಸನದಲ್ಲಿ ಪೆಗ್ಗದೂರು ಬಸದಿಯ ಉಲ್ಲೇಖಗಳು ಕಂಡುಬಂದರೂ ಸಹ ಪ್ರಸ್ತುತ ಈ ಗ್ರಾಮದಲ್ಲಿ ಯಾವ ಬಸದಿಯು ಇಲ್ಲ.

ಮಡಿಕೇರಿಯ ವಸ್ತುಸಂಗ್ರಹಾಲಯದಲ್ಲಿ ಮೂರು ಜೈನ ವಿಗ್ರಹಗಳಿದ್ದು ಅವುಗಳ ಪೀಠದಲ್ಲಿ ೧೨ನೆಯ ಶತಮಾನಕ್ಕೆ ಸೇರಿದ ಶಾಸನಗಳಿವೆ. ಈ ವಿಗ್ರಹಗಳು ಶಾಂತಿನಾಥನ ವಿಗ್ರಹ ಗಳಾಗಿದ್ದು ಇವುಗಳನ್ನು ವಸ್ತುಸಂಗ್ರಹಾಲಯಕ್ಕೆ ಒಯ್ಯುವ ಮುಂಚೆ ಅಂಜನಗಿರಿಯ ಬಸದಿಯಲ್ಲಿದ್ದಂತೆ ತಿಳಿದುಬರುತ್ತದೆ. ಈ ವಿಗ್ರಹಗಳನ್ನು ಕುರಿತು ಕ್ರಿ.ಶ. ೧೬೪೪ರ ಶಾಸನದಲ್ಲಿ ಉಲ್ಲೇಖಗಳಿವೆ. ಶಾಂತಿತೀರ್ಥೇಶ್ವರ ಅನಂತನಾಥ ಸ್ವಾಮಿಯ ಪ್ರತಿಮೆಗಳು ಸುವರ್ಣಾವತಿ ನದಿಯಲ್ಲಿ ಕ್ರಿ.ಶ. ೧೬೩೧-೩೨ರಲ್ಲಿ ದೊರತವೆಂದು ಅವುಗಳು ಅಂಜನಗಿರಿಯಲ್ಲಿ ಮರದಿಂದ ಕಟ್ಟಿಸಲಾದ ಬಸದಿಯಲ್ಲಿ ಪ್ರತಿಷ್ಠಾಪಿಸಿ, ತದನಂತರ ಕ್ರಿ.ಶ. ೧೬೪೪ರಲ್ಲಿ ಶಾಂತಿಕೀರ್ತಿದೇವರ ಅಣತಿಯಂತೆ ಈ ಬಸದಿಯನ್ನು ಕಲ್ಲಿನಿಂದ ಕಟ್ಟಿಸಲಾಯಿತೆಂದು ತಿಳಿಸುತ್ತದೆ. ಹಾಗೆಯೇ ಈ ಶಾಸನದಲ್ಲಿ ಜಿನಾಲಯ ನಿರ್ಮಾಣಕ್ಕೆ ಆದ ಖರ್ಚು ಮತ್ತು ಆದಾಯಗಳನ್ನು ಉಲ್ಲೇಖಿಸಿದೆ. ಈ

* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಶ್ರೀ ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು, ಮೈಸೂರು-೧೫.

ಮೂರ್ತಿಯನ್ನು ಕೊಣಸಗರದ ಶಾಂತೋಪಾಧ್ಯಾಯರು ಪ್ರತಿಷ್ಠಾಪಿಸಿದರೆಂದು ತಿಳಿದುಬರುತ್ತದೆ. ಈ ಶಾಸನದಲ್ಲಿ ಉಲ್ಲೇಖಿತ ಸುವರ್ಣಾವತಿ ನದಿಯನ್ನು ತಾತಂಗಿಯ ಅಂಜನ ಗಿರಿಯ ಸಮೀಪದ ಹಾರಂಗಿ ಎಂದು ಗುರುತಿಸಲಾಗಿದೆ. ನದಿಯ ತೀರದಲ್ಲಿ ತಾತಂಗಿ ಎಂಬ ಒಂದು ಗ್ರಾಮ ವಿದ್ದು, ಇದು ಪ್ರವಾಹದಲ್ಲಿ ಕೊಚ್ಚಿ ಹೋದನಂತರ ಅದರಲ್ಲಿನ ವಿಗ್ರಹಗಳನ್ನು ಕಲ್ಲಿನ ಬಸದಿಯಲ್ಲಿ ಅಭಿನವ ಚಾರುಕೀರ್ತಿ ಪಂಡಿತರು ತಂದು ಪ್ರತಿಷ್ಠಾಪಿಸಿದಂತೆ ತೋರುತ್ತದೆ. ಅಂದಿನ ತಾತಂಗಿ ಎಂಬ ಗ್ರಾಮವೇ ಇಂದಿನ ದಿನಗಳಲ್ಲಿ ಹಾರಂಗಿ ಎಂದು ಕರೆಯುತ್ತಾರೆ. ಈ ಶಾಸನವು ಶ್ರವಣಬೆಳಗೊಳದ ಜೈನಮುನಿ ಗಳ ವಂಶಾವಳಿಯನ್ನು ತಿಳಿಸುತ್ತದೆ. ಈ ವಂಶಾವಳಿಯಲ್ಲಿ ಒಂದನೇ ಚಾರುಕೀರ್ತಿ ಪಂಡಿತ, ಅಭಿನವ ಚಾರುಕೀರ್ತಿ ಪಂಡಿತ ಶಾಂತಿಕೀರ್ತಿದೇವ, ಇಮ್ಮಡಿ ಚಾರುಕೀರ್ತಿ ಪಂಡಿತ ಎಂಬ ಹೆಸರುಗಳನ್ನು ಉಲ್ಲೇಖಿಸಿದೆ. ಚಾರುಕೀರ್ತಿ ಪಂಡಿತ ರಿಗೆ ರಾಯರಾಜಗುರು, ಮಂಡಲಾ ಚಾರ್ಯ ಮಹಾವಾದಾ ವಾದೀಶ್ವರ ಎಂಬ ಬಿರುದುಗಳು ಇದ್ದು ಈತ ಹೊಯ್ಸಳರ ರಾಜಗುರುವಾಗಿದ್ದಂತೆ ಶಾಸನ ದಿಂದ ತಿಳಿದುಬರುತ್ತದೆ.

ಜಿಲ್ಲಾ ವಸ್ತುಸಂಗ್ರಹಾಲಯದ ವಿಗ್ರಹಗಳ ಪೀಠದಲ್ಲಿನ (೪, ೫, ೬ ಶಾಸನಗಳು) ನಾಲ್ಕು ಶಾಸನಗಳು ೧೨ನೇ ಶತಮಾನಕ್ಕೆ ಸೇರಿದ್ದು ತಾತಂಗಿಯ ಮಾಘನಂದಿ ಭಟ್ಟಾರಕರು ಮೂಲಸಂಘ, ದೇಸೀಯಗಣ, ಕುಂದುಕುಂದಾನ್ವಯ, ತಾತಂಗಿಯ ಮಾಘಣಂದಿ, ಭಟ್ಟಾರಕರು ಶಾಂತಿನಾಥ ದೇವರನ್ನು ಪ್ರತಿಷ್ಠಾಪನೆ ಮಾಡಿದರು. ಇಲ್ಲಿನ ಐದನೇ ಶಾಸನ ಜಿನಬಿಂಬದ ಬಲಭಾಗದ ಪ್ರಭಾವಳಿಯಲ್ಲಿದ್ದು ಸ್ಪಷ್ಟವಾಗಿ ಕಾಣುತ್ತಿಲ್ಲ. ಎರಡನೇ ಜಿನಬಿಂಬದ ಪೀಠದ ಮೇಲಿನ ಶಾಸನವು ಸಹ ೧೨ನೇ ಶತಮಾನದ್ದಾಗಿದ್ದು ಇದರ ಪೀಠದಲ್ಲಿ ಹೆರಗಿನ ಹರಿಶ್ಚಂದ್ರ ದೇವರ ಶಿಷ್ಯರಾದ ತಾತಂಗಿ ಪಟ್ಟಣದ ನಕರಗಳು ಮತ್ತೊಂದು ಶಾಂತಿನಾಥ ಪ್ರತಿಮೆಯನ್ನು ಪ್ರತಿಷ್ಠೆ ಮಾಡಿದುದು ಎಂದು ಉಲ್ಲೇಖಿತವಾಗಿದೆ. ಈ ಪ್ರತಿಷ್ಠಾಪನೆಯ ಹೋಲಿಕೆಯನ್ನು ಹೊಯ್ಸಳರ ಕುಸುರಿ ಕೆತ್ತನೆಗೆ ಹೋಲಿಸ ಬಹುದಾಗಿದೆ. ೭ನೇ ಶಾಸನದಲ್ಲಿ (ಮೂರನೇ ಜಿನಬಿಂಬದ ಅನಂತಸ್ವಾಮಿ ಪೀಠ) ಈ ವಿಗ್ರಹದ ದಾನಿಗಳು ಹರಿಯಣ್ಣ ಹೆಗ್ಗಡೆ ಎಂಬಾತನಾಗಿದ್ದು ಈತ ನಯಕೀರ್ತಿ ಸಿದ್ಧಾಂತ ಚಕ್ರವರ್ತಿಯ ಅಶ್ವದಳದ ಮುಖ್ಯಸ್ಥನಾಗಿದ್ದ ಎಂದು ಉಲ್ಲೇಖಿತ ವಾಗಿದ್ದು. ಇಂತಹದೆ ಮತ್ತೊಂದು ಉಲ್ಲೇಖ ಶ್ರವಣ ಬೆಳಗೊಳದ ಶಾಸನದಲ್ಲಿಯು ದೊರೆತಿದೆ. ನಯಕೀರ್ತಿ ಸಿದ್ಧಾಂತ ಚಕ್ರವರ್ತಿಯು ಕ್ರಿ.ಶ. ೧೧೭೬ರಲ್ಲಿ ಮರಣ ಹೊಂದಿದ್ದರ ಬಗ್ಗೆ ಉಲ್ಲೇಖವಾಗಿದೆ. ಆದರೆ ಹರಿಯಣ್ಣ ಹೆಗ್ಗಡೆಯು ಯಾರ ಅಧಿಕಾರಿ ಎಂದು ಸ್ಪಷ್ಟವಾಗಿಲ್ಲ.

ಅತಿ ಹೆಚ್ಚಿನ ಜೈನಶಾಸನಗಳು ಮತ್ತು ಬಸದಿಗಳು ಕೊಡಗಿನಲ್ಲಿ ಕಾಣಸಿಗುವುದು ಸೋಮವಾರಪೇಟೆ ತಾಲ್ಲೂಕಿನಲ್ಲಿ. ಸೋಮವಾರಪೇಟೆಯ ಕಲಕಂದೂರಿನ ಬಸದಿಯ ಬ್ರಹ್ಮದೇವರ ಪೀಠದಲ್ಲಿ ಶಾಸನವಿದೆ (ಶಾ.ಸಂ.೫೮). ಉಲ್ಲೇಖಿತ ಶಾಸನದ ಲಿಪಿಯ ಆಧಾರದಿಂದ ಕ್ರಿ.ಶ. ೧೪ನೇ ಶತಮಾನಕ್ಕೆ ಸೇರಿದ್ದಾಗಿದೆ. ಮಾಣಿಕ್ಯದೇವರ ನಿರ್ಮಾಣದ ಬಗ್ಗೆ ಹಾಕಿಸಿದ ಶಾಸನ ಇದಾಗಿದೆ. ಇದರ ಪಕ್ಕದಲ್ಲಿ ಮತ್ತೊಂದು ಶಾಸನವಿದೆ. ಇದರ ಕತೃವಿನ ಬಗ್ಗೆ ಉಲ್ಲೇಖವಿಲ್ಲ. ೫೯ನೇ ಶಾಸನದಲ್ಲಿರುವ ಅಕ್ಷರಗಳನ್ನ ಆಧರಿಸಿ ೧೯ನೇ ಶತಮಾನಕ್ಕೆ ಹೋಲುವಂತಿದ್ದು ಬಸದಿಗೆ ಒಂದು ಜಾಗಟೆಯನ್ನು ಚಂದಣ್ಣ ಎಂಬುವನಂದ ಚಂದ್ರನಾಥನಗೆ ಕೊಡಮಾಡಲ್ಪಟ್ಟಿತು ಎಂದು ಅರ್ಥೈಸಬಹುದಾಗಿದೆ. ಮುಳ್ಳೂರಿನ (ಶಾ.ಸಂ.೬೮) ಪಾರ್ಶ್ವನಾಥನ ಬಸದಿಯ ಗೋಡೆಯ ಮೇಲಿರುವ ಶಾಸನವು ರಾಜೇಂದ್ರ ಕೊಂಗಾಳ್ವನ ರಾಜ್ಯದಲ್ಲಿ ಆತನ ಪತ್ನಿ ಪೋಚಬ್ಬರಸಿ ಬಸದಿಯನ್ನು ನಿರ್ಮಿಸಿ ಗೋಡೆಯಲ್ಲಿ ಶಾಸನವೊಂದನ್ನು ಹಾಕಿಸಿದಳು. ಬಸದಿಯ ಮತ್ತೊಂದು ಶಾಸನವು ಪೋಚಬ್ಬೆಯ ಮಗ ದಾನ ನೀಡಿರುವುದರ ಬಗ್ಗೆ ತಿಳಿಸುತ್ತದೆ. ಮತ್ತೊಂದು ಶಾಸನ ಇದೆ ಬಸದಿಯ ನವರಂಗದಲ್ಲಿದ್ದು (ಶಾ.ಸಂ.೭೦) ಈ ಬಸದಿಯ ಶಿಲ್ಪಗಳನ್ನು ಪೋಚಬ್ಬರಸಿಯು ಮಾಡಿಸಿದಂತೆ ತಿಳಿದುಬರುತ್ತದೆ. ಈ ಮೂರು ಶಾಸನಗಳನ್ನು ಲಿಪಿಯ ಆಧಾರದಿಂದ ೧೧ನೇ ಶತಮಾನಕ್ಕೆ ಸೇರಿದವುಗಳೆಂದು ನಿರ್ಧರಿಸಬಹುದು.

ಪಾರ್ಶ್ವನಾಥ ಬಸದಿಯಲ್ಲಿರುವ ನಿಷಿಧಿ ಶಾಸನದಲ್ಲಿ (ಶಾ.ಸಂ.೭೧) ಗುಣಸೇನ ಪಂಡಿತರನ್ನ ಹೊಗಳುತ್ತಾ, ನಂದಿಸಂಘ ದ್ರವಿಳಗಣವನ್ನು ಕೊಂಡಾಡಿ, ಈತ ಸಕಲ ಮಹಾಶಬ್ಧ ಶಾಸ್ತ್ರಾಗಾಮಾಧಿ ವ್ಯಾಕರಣ ಮತ್ತು ತರ್ಕಶಾಸ್ತ್ರದ ಪಂಡಿತನೆಂದು ಉಲ್ಲೇಖ ಮಾಡಲಾಗಿದ್ದು "ಸ್ಥಿರಷಟ್ತರ್ಕ ಪ್ರವೀಣ" ಎಂದು ವರ್ಣಿಸಿದೆ. ಗುಣಸೇನರು ಕ್ರಿ.ಶ. ೧೬೦೪ರಲ್ಲಿ ಮರಣಿಸಿದಂತೆ ಉಲ್ಲೇಖಿಸಿದೆ. ಬಸದಿಯ ಮತ್ತೊಂದು ಶಾಸನದಲ್ಲಿ (ಶಾ.ಸಂ. ೭೨) ರಾಜೇಂದ್ರ ಕೊಂಗಾಳ್ವನು ಬಸದಿಗೆ ಸಮೀಪದ ಹಳ್ಳಿಗಳಿಂದ ಕಂಡುಗದ ಲೆಕ್ಕದಲ್ಲಿ ಹುಣಸೆ ಹಣ್ಣನ್ನು ವರ್ಷಂಪ್ರತಿ ಬರುವಂತೆ ಕೊಡುಗೆ ನೀಡಿರುವುದು ಉಲ್ಲೇಖಿತವಾಗಿದೆ.

ಸೋಮವಾರ ಪೇಟೆ ತಾ॥ ಮುಳ್ಳೂರು ಕೊಡಗಿನ ಜೈನ ಕೇಂದ್ರಗಳಲ್ಲಿ ಹೆಚ್ಚು ಪ್ರಸಿದ್ಧವಾದದ್ದು. ಮುಳ್ಳೂರಿನ ಬಸದಿಗಳು ಚತುರಸ್ರಾಕಾರದಲ್ಲಿ ಕಗ್ಗಲ್ಲಿನಲ್ಲಿ ಕಟ್ಟಲ್ಪಟ್ಟಿರುವ ಸರಳ ವಾಸ್ತುಶಿಲ್ಪಗಳಾಗಿದ್ದು, ಇವುಗಳಲ್ಲಿನ ವಿಗ್ರಹಗಳು ಕೊಂಗಾಳ್ವರ ಕಾಲದ ಕಲಾನೈಪುಣ್ಯತೆಯನ್ನು ಸಾರುತ್ತವೆ.

ಕ್ರಿ.ಶ. ೧೦೫೦ರಲ್ಲಿ ಕೊಂಗಾಳ್ವರ ರಾಜಾ ಒಂದನೇ ರಾಜಾಧಿರಾಜ ಕೊಂಗಾಳ್ವ ಮುಳ್ಳೂರಿನಲ್ಲಿ ಬಸದಿಯನ್ನು ಕಟ್ಟಿಸಿದಂತೆ ಶಾಸನೋಕ್ತವಾಗಿದೆ. ಈ ಗ್ರಾಮದಲ್ಲಿ ಚಂದ್ರನಾಥ, ಪಾರ್ಶ್ವನಾಥ, ಮತ್ತು ಶಾಂತಿನಾಥ ಎಂಬ ಹೆಸರಿನ ಮೂರು ಬಸದಿಗಳಿವೆ. ಪಾರ್ಶ್ವನಾಥ ಬಸದಿಯನ್ನು ಇಮ್ಮಡಿ ರಾಜೇಂದ್ರ ಚೋಳನ ಪತ್ನಿ ಪೋಚಬ್ಬರಸಿ ಕಟ್ಟಿಸಿದಳು. ಚಂದ್ರನಾಥ ಬಸದಿಯನ್ನು ಎರಡನೇ ರಾಜಾಧಿರಾಜನು ತನ್ನ ತಾಯಿ ಪೋಚಬ್ಬರಸಿಯ ನೆನಪಾರ್ಥವಾಗಿ ಕಟ್ಟಿಸಿದನೆಂದು ೭೫ನೇ ಶಾಸನದಿಂದ ತಿಳಿಯಬಹುದು. ಶಾಂತಿನಾಥ ಬಸದಿಯ ವಿಗ್ರಹದ ಪೀಠದಲ್ಲಿ ಉಲ್ಲೇಖಿಸಿದಂತೆ ೧೨ನೇ ಶತಮಾನದ ಮಧ್ಯಭಾಗದಲ್ಲಿ ಮಲ್ಲಿಷೇಣದೇವನು ಈ ಬಸದಿಯನ್ನು ಜೀರ್ಣೋದ್ಧಾರ ಮಾಡಿದನೆಂದು ಹೇಳಿರುವುದರಿಂದ, ಈ ಬಸದಿಯನ್ನು ರಾಜಾಧಿರಾಜ ಕೊಂಗಾಳ್ವ ಕಟ್ಟಿಸಿದನೆಂದು ತಿಳಿದುಬರುತ್ತದೆ.

ಕೊಡಗಿನಲ್ಲಿ ಕೊಂಗಾಳ್ವ ರಾಜಮನೆತನವು ಧರ್ಮ ಕಾರ್ಯಗಳಿಗೆ ಹೆಚ್ಚು ಪ್ರೋತ್ಸಾಹ ನೀಡಿತು. ಗುಣಸೇನ ಪಂಡಿತದೇವ, ದ್ರವೀಳ ನಂದಿಸಂಘ ಆರುಂಗಳಾನ್ವಯಕ್ಕೆ ಸೇರಿದ್ದ. ಈತ ಪುಷ್ಯಸೇನ ಸಿದ್ಧಾಂತನ ಶಿಷ್ಯನಾಗಿದ್ದ ಈ ಗುರುವಿನ ಪಾದಗಳನ್ನು ಶಾಂತೀಶ್ವರ ಬಸದಿಯ ಮುಂದಿನ ಬಂಡೆಯ ಮೇಲೆ ಕೆತ್ತಲಾಗಿದೆ. ಕ್ರಿ.ಶ. ೧೦೬೧ರಲ್ಲಿ ಶಾಂತೀಶ್ವರ ಬಸದಿಯು ಗುಣಸೇನ ಪಂಡಿತನ ಸುಪರ್ದಿಗೆ ಸೇರಿದ್ದು ಈತ "ನಖರಗಳಧರ್ಮ" ಎಂಬ ಬಾವಿಯನ್ನು ತೋಡಿಸಿದ (ಶಾ.ಸಂ. ೭೯) ಈ ವಿಷಯ ಪ್ರಸ್ತಾಪಿಸಿರುವ ಶಾಸನದಲ್ಲಿ ಹಾವಿನ ಚಿತ್ರ ಕಂಡರಿಸಲಾಗಿದೆ. ಇದೆ ಗುಣಸೇನ ಪಂಡಿತ ಹೊಯ್ಸಳ ವಿನಯಾದಿತ್ಯನಿಗೂ ಸಹ ಗುರುವಾಗಿದ್ದು ಸೊಸೇವೂರಿನಲ್ಲಿ ಕಟ್ಟಿದ ಬಸದಿಗೆ ಪೆರಿಯಳದೇವಿಯಿಂದ ದತ್ತಿ ಪಡೆದ ಗುಣಸೇನ ಪಂಡಿತ ಎರೆಯಂಗನ ಪತ್ನಿ ಏಚಲದೇವಿಯ ಗುರುವಾಗಿದ್ದ ಎಂದು ಅರಕಲಗೂಡಿನ ಶಾಸನದಲ್ಲಿ ಉಲ್ಲೇಖವಾಗಿದೆ. ಮುಳ್ಳೂರಿನ ಬಂಡೆಯ ಮೇಲೆ ಗುಣಸೇನ ಪಂಡಿತನ ಪಾದವನ್ನು ಕೆತ್ತಿರುವುದನ್ನು ಗಮನಿಸಿದರೆ ಇದೇ ಸ್ಥಳದಲ್ಲಿ ಈತ ತಪಸ್ಸನ್ನು ಕೈಗೊಂಡು ಮರಣಿಸಿರಬಹುದು (ಶಾ.ಸಂ.೭೧) ಎಂದು ನಿರ್ಧರಿಸ ಬಹುದು. ೮೯ನೇ ಶಾಸನದಲ್ಲಿ ಶುಭಚಂದ್ರದೇವರ ಶಿಷ್ಯರಾದ ಪ್ರಭಾಚಂದ್ರದೇವರು ಮರಣಿಸಿದ ವಿಷಯ ಕ್ರಿ.ಶ. ೧೦೪೪ರಲ್ಲಿ ಉಲ್ಲೇಖಿತವಾಗಿದೆ. ಹಾಗೆಯೇ ೧೦೦ನೇ ಶಾಸನದಲ್ಲಿ ಪರಮಶ್ರಾವಕನಾದ ಎಡಯ್ಯನ ಪತ್ನಿ ಜಕ್ಕಿಯಬ್ಬೆಯು ಸನ್ಯಾಸನ ವಿಧಿಯಿಂದ ಮರಣಿಸಿದ್ದನ್ನು ಕುರಿತು ಉಲ್ಲೇಖಿಸಿದೆ. ಮುದವಂಗನಾಡ ದೊರೆ ಕಿವಿರಿಯ್ಯನು ಚಂಗಳ ಬಸದಿಯಲ್ಲಿ ೧೨ ದಿನ ವ್ರತ ಕೈಗೊಂಡು ಮರಣಿಸಿದನೆಂದು ೧೦೧ನೇ ಶಾಸನವು ತಿಳಿಸುತ್ತದೆ.

ಮೇಲಿನ ಶಾಸನೋಕ್ತ ಅಂಶಗಳನ್ನು ಗಮನಿಸಿದರೆ ಕೊಡಗಿನಲ್ಲಿ (ಕೊಡಗಿನಿಂದ ತೆರಕಣಾಂಬಿ) ಕ್ರಿ.ಶ.೫ನೇ ಶತಮಾನದಲ್ಲಿ ಕೊಡಗಿನ ಜಿನಾಲಯಗಳ ಪ್ರಸ್ತಾಪಗಳಿಗೆ ಅನ್ವಯಿಸಿ ಕೊಡಗಿನಲ್ಲಿ ಜೈನಧರ್ಮದ ವಿಸ್ತಾರವನ್ನು ಗುರುತಿಸ ಬಹುದು. ಕೊಡಗಿನಲ್ಲಿ ಸೋಮವಾರಪೇಟೆ ತಾಲ್ಲೂಕು ಹೊರತು ಪಡಿಸಿದರೆ ಉಳಿದಂತೆ ಎರಡು ತಾಲ್ಲೋಕುಗಳಲ್ಲಿ ಕಡಿಮೆ ಸಂಖ್ಯೆಯ ಬಸದಿಗಳಿವೆ. ಕೊಂಗಾಳ್ವರ ಕಾಲದಲ್ಲಿ ಮತ್ತು ಹೊಯ್ಸಳರ ಕಾಲದಲ್ಲಿ ಜೈನಧರ್ಮ ಪ್ರಭಾವಶಾಲಿ ಯಾಗಿರುವುದು ಕೊಡಗಿನಲ್ಲಿ ಕಾಣಬರುತ್ತದೆ. ಇತ್ತೀಚೆಗೆ ಸೋಮವಾರಪೇಟೆಯ ಕಲ್ಲಪ್ಪನಹಳ್ಳಿ, ಚಿಕ್ಕತೊಳೂರು, ಹೊಸೂರು, ಮೊದಲಾದ ಸ್ಥಳಗಳಲ್ಲಿ ಜೈನ ಬಸದಿಗಳೂ ಪತ್ತೆಯಾಗಿರುವುದು ಜೈನಧರ್ಮಕ್ಕೆ ಮತ್ತು ಅದರ ವಿಸ್ತಾರಕ್ಕೆ ಪುಷ್ಠಿ ನೀಡಿದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಎ.ಕ.ಸಂಪುಟ ೧ ಕೊಡಗು ಜಿಲ್ಲೆ.

೨. ಇತಿಹಾಸ ದರ್ಶನ ಸಂಪುಟಗಳು (೦೯,೧೪,೨೫,೨೬,೨೭).

೩. ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್ ಸಂಪುಟಗಳು, ಮೈಸೂರು ಸರಕಾರ ಮತ್ತು ಮೈಸೂರು ವಿ.ವಿ.

೪. ಕೊಡಗು ಜಿಲ್ಲಾ ಗ್ಯಾಸೆಟಿಯರ್, ಕೊಡಗು.

೫. ಎಪಿಗ್ರಫಿಯಾ ಕರ್ನಾಟಿಕ ಕೊಡಗು, ಶಾಸನ ಸಂಖ್ಯೆಗಳು – ೧, ೪, ೫, ೬, ೭, ೧೯, ೫೮, ೫೯, ೬೮, ೬೯, ೭೦, ೭೦, ೭೧, ೭೨, ೭೩, ೭೪, ೭೫, ೭೬, ೭೭, ೭೮, ೭೯, ೮೯, ೧೦೦, ೧೦೧.

೬. ಡಾ.ಎಂ. ಚಿದಾನಂದಮೂರ್ತಿ., "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ", ೨೦೦೪.

೭. ಕೆ.ಶಾರದ., ಕರ್ನಾಟಕದಲ್ಲಿ ಜೈನಧರ್ಮ, ಕನ್ನಡ ವಿಶ್ವವಿದ್ಯಾನಿಲಯ, ೨೦೦೬.

೮. ಎಂ.ಜಿ.ನಾಗರಾಜು., ಬೆಂಗಳೂರು ಮತ್ತು ಕೊಡಗು ಜಿಲ್ಲೆಯ ಅಪ್ರಕಟಿತ ಶಾಸನಗಳು, ಇತಿಹಾಸ ದರ್ಶನ, ಸಂಪುಟ ೧೪, ೧೯೯೯.

೯. ಎಂ.ಜಿ.ನಾಗರಾಜು., ಕೊಡಗಿನ ಶಾಸನ ಸಂಪತ್ತು, ಕನಕಸಿರಿ, ೬೭ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಸ್ಮರಣಾ ಸಂಪುಟ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೦. ಎಂ.ಜಿ.ನಾಗರಾಜು., ಕೊಡಗಿನ ಪನ್ಯಗಳು, ಇತಿಹಾಸ ದರ್ಶನ, ಸಂಪುಟ ೯.

೧೧. Dr. B.Sheik Ali – 1976 – History of Western Gangas, university of Mysore – Mysore.

ಹಿಂದೂ-ಮುಸ್ಲಿಂರ ಭಾವೈಕ್ಯತೆಯ ನೆಲೆ ಬಂಡೆಪ್ಪನಹಳ್ಳಿ

ಬಿ.ಕೆ. ದೇವರಾಜ ಜೆ. ಬಾಗೇವಾಡಿ*

ಮುದ್ದೇಬಿಹಾಳ ತಾಲೂಕಿನ ಕೊನೆಯ ಗ್ರಾಮವಾದ ಬಂಡೆಪ್ಪನಹಳ್ಳಿ ಅಥವಾ ಮಠಕಲ್ಲದೇನಹಳ್ಳಿ, ಇದು ತಾಳಿಕೋಟಿಯಿಂದ ಪೂರ್ವಾಭಿಮುಖವಾಗಿ ೧೨ ಕಿ.ಮೀ. ದಾರಿ ಕ್ರಮಿಸಿದರೆ ಈ ಪುಟ್ಟ ಗ್ರಾಮ ಸಿಗುವುದು. ಈ ಗ್ರಾಮವು ಅತ್ಯಂತ ಚಿಕ್ಕದಾಗಿದ್ದು ಪ್ರಾಚೀನವಾಗಿದೆ. ಸಮಿಪದಲ್ಲಿಯೆ ಆದಿಮಾನವನ ನೆಲೆಗಳಾದ ರಾಜನಕೋಳೂರ ಬುಡ್ಡರ ಮನೆಗಳು (Dolmets) ಮಾಳನೂರ, ಗುಳಬಾಳ, ಮಾರಲಭಾವಿ, ಸಾಲವಾಡಗಿ ಹತ್ತಿರ ಬಂಡೆಪ್ಪನಹಳ್ಳಿ, ಇರುವುದು. ಇದು ಕಲ್ಯಾಣಿ ಚಾಲುಕ್ಯರು, ಬಿಜಾಪುರದ ಸುಲ್ತಾನರು, ಹೈದಾರಾಬಾದಿನ ನಿಜಾಮರ, ಸುರಪುರ ನಾಯಕ ಸಂಸ್ಥಾನಿಕರ ಆಡಳಿತವನ್ನು ಕಂಡಿದ್ದು, ಈ ಗ್ರಾಮದಲ್ಲಿ ದೊರೆತಿರುವ ಶಾಸನಗಳು, ಮೂರ್ತಿಗಳು, ದೇಗುಲಗಳು, ಮಠಗಳು, ಖಾನಕಾಗಳು, ಭೌಗೋಳಿಕ ಸನ್ನಿವೇಶಗಳು ಹಾಗೂ ಇತರೆ ಚಾರಿತ್ರಿಕ ದಾಖಲೆಗಳಿಂದ ಈ ಊರಿನ ಇತಿಹಾಸವನ್ನು ಅರಿಯಬಹುದು. ಭೂಗರ್ಭದಲ್ಲಿ ಈ ಪ್ರದೇಶವು ಜ್ವಾಲಾಮುಖಿಗಳಿಂದ ದೊಡ್ಡ ದೊಡ್ಡ ಹಾಸು ಬಂಡೆಗಳು ಸೇದಿ ಕಲ್ಲಿನ ಕಣಿವೆಗಳು ನಿರ್ಮಿತವಾಗಿದೆ. ದೊಡ್ಡ ದೊಡ್ಡ ಹಾಸುಬಂಡೆಗಳಿರುವ ಕಾರಣ ಈ ಊರಿಗೆ ಬಂಡೆಪ್ಪನಹಳ್ಳಿ ಎಂದಿರಬಹುದು. ಹಾಗೂ ಊರಿನಲ್ಲಿ ಬಂಡಿಸ್ವಾಮಿ ಮಠವಿರುವುದರಿಂದಲೂ ಈ ಗ್ರಾಮಕ್ಕೆ ಬಂಡೆಪ್ಪನಹಳ್ಳಿ ಎಂದು ಕರೆದಿರಬಹುದು. ಮಠವು ಸೇದಿಕಲ್ಲಿನಿಂದ ಕಟ್ಟರುವುದರಿಂದ ಮಠಕಲ್ಲದೇವನ ಹಳ್ಳಿ ಎಂತಲೂ ಕರೆಯುವರು.

ಊರಿನ ಪಶ್ಚಿಮ ದಿಕ್ಕಿನಲ್ಲಿರುವ ಶಿವದೇವಾಲಯವು ಕರಿಯಕಲ್ಲಿ (Black grainet)ನಿಂದ ನಿರ್ಮಿತವಾಗಿದ್ದು ಕಲ್ಯಾಣ ಚಾಲುಕ್ಯರ ಕಾಲದ ವಾಸ್ತುಶಿಲ್ಪಕಲೆ ಶೈಲಿಯ ಎಲ್ಲ ಲಕ್ಷಣಗಳನ್ನು ಹೊಂದಿದೆ. ಮುಖ್ಯದ್ವಾರದ ಮೇಲೆ ಗಜಲಕ್ಷ್ಮೀ ಇದ್ದು ಒಳಗಡೆ ನಾಲ್ಕು ಕಂಬದ ನವರಂಗ ಮಂಟಪವಿದೆ. ಕಂಬಗಳು ಗಿರಕಿ ಹಿಡಿದಿದ್ದು ಸುಂದರವಾಗಿವೆ. ಗರ್ಭಗುಡಿಯಲ್ಲಿ ಚಾಲುಕ್ಯರ ಕಾಲದ ಪೀಠದ ಮೇಲೆ ಶಿವಲಿಂಗವಿದೆ. ನವರಂಗದ ಬಲಭಾಗದಲ್ಲಿ ಸಪ್ತಮಾತೃಕೆಯರು ಮತ್ತು ಪದ್ಮಾಸನದಲ್ಲಿರುವ ಯತಿ ಇದ್ದರೆ ಎಡಭಾಗದಲ್ಲಿ ಕಾಳಭೈರವನ ಶಿಲ್ಪವಿದೆ.

ಶಿಲ್ಪದ ಬಲಗೈಯಲ್ಲಿ ಡಮರು, ಎಡಗೈಯಲ್ಲಿ ತ್ರಿಶೂಲ ಇನ್ನೊಂದು ಕೈಯಲ್ಲಿ ಪಾನಬಟ್ಟಲು ಬಲಗೈ ಅಭಯಹಸ್ತವನ್ನು ತೋರುವುದು ನಾಲ್ಕು ಕೈಗಳಲ್ಲಿ ಕಡಗ ರಟ್ಟೆಯಲ್ಲಿ ರುದ್ರಾಕ್ಷಿ ಮಾಲೆ, ಕೊರಳಲ್ಲಿ ರುಂಡಮಾಲೆ, ಕಾಲಲ್ಲಿ ಹಾವಿಗೆ, ಟೊಂಕದಲ್ಲಿ ಗೆಜ್ಜೆ ಪಟ್ಟಿ, ತಲೆಯ ಮೇಲೆ ಶಿಖೆ ಇದ್ದು, ಕೇಶಾಲಂಕಾರದಿಂದೊಡಗೂಡಿದೆ. ಮುಕುಟಮಣಿ ಧರಿಸಿದ್ದು, ಕಿವಿಯಲ್ಲಿ ಕರ್ಣಕುಂಡಲ, ತೊಡೆಯಲ್ಲಿ ನಾಗರಹೆಡೆ, ಕಾಲಲ್ಲಿ ಕಾಲ್ಗಡಗ ಅಥವಾ ರುಳಿ ಇದೆ. ಮೂರ್ತಿಯ ಎಡಭಾಗದ ಕೆಳಗೆ ಬೇತಾಳವಿದೆ. ಬಲಭಾಗದ ಕೆಳಗೆ ಗೊರವನ ಮೂರ್ತಿ ಇದೆ. ಪೀಠದ ಅಡಿಯಲ್ಲಿ ಚೇಳಿನ ಲಾಂಛನವಿದೆ. ಸುಂದರವಾದ ನಾಗಬಂಧವಿದ್ದು ಮುಖದಲ್ಲಿ ಮಗುವಿನ ಚಿತ್ಕಳೆ ಮಂದಹಾಸ ಬೀರುತ್ತಿದೆ. ಎದೆಯ ಮೇಲೆ ಕಂಠಿಹಾರ, ತಲೆಯ ಹಿಂದೆ ಸುಂದರ ಪ್ರಭಾವಳಿ ಅಥವಾ ಪ್ರಭಾಮಂಡಲದ ಕೇಶರಾಶಿಯ ಪ್ರಭಾವಳಿಯಂತಿದೆ.

ಈ ಶಿಲ್ಪವು ದೇವಾಲಯದ ನವರಂಗದ ಬಲಭಾಗದಲ್ಲಿದೆ. ಪದ್ಮಾಸನದಲ್ಲಿ ಕುಳಿತ ಯೋಗಿಯ ಕೊರಳಲ್ಲಿ ರುದ್ರಾಕ್ಷಿಮಾಲೆ ರಟ್ಟೆಯಲ್ಲಿ, ಮುಂಗೈಯಲ್ಲಿ ರುದ್ರಾಕ್ಷಿಮಾಲೆಗಳು ಇವೆ ಕಿವಿಯಲ್ಲಿ ಕರ್ಣಕುಂಡಲ, ತಲೆಯಲ್ಲಿ ಜುಟ್ಟಾ ಉಚಿತಪೀಠದಲ್ಲಿದ್ದು ಶಿಲ್ಪ ಸುಂದರವಾಗಿದೆ. ಮುಖದಲ್ಲಿ ಯೋಗಿಯ ಚಿತ್ಕಳೆ ಮಂದಸ್ಮಿತವಿದ್ದು. ಇದು ನಾಥಪಂತದಲ್ಲಿ ತಂತ್ರಪಾಲಕರ ವರ್ಗಕ್ಕೆ ಸೇರಿದೆಯೆಂದು ವಿದ್ವಾಂಸರ ಅಭಿಪ್ರಾಯ ಇದರ. ಪಕ್ಕದಲ್ಲಿ ಸಪ್ತಮಾತೃಕೆಯರ ಶಿಲ್ಪವಿದೆ.

ವಿಜಾಪುರದ ಅಲಿ ಆದಿಲಶಾಹಿ ಕಾಲಾವಧಿಯ ಪ್ರಸಿದ್ಧ ಸೂಫಿ ಸಂತ 'ಖ್ವಾಜಾ ಅಮೀನೂದ್ದೀನ್' (ಕ್ರಿ.ಶ. ೧೬೭೫) ಶಿಷ್ಯ ಫಕೀರಸ್ವಾಮಿ ಶಿರಹಟ್ಟಿಯವನು. ಶಿರಹಟ್ಟಿಯಲ್ಲಿ ಇವರ ಮಠವಿರುವುದು. ಅವರ ಪರಮಶಿಷ್ಯನೇ ಬಂಡಿಸ್ವಾಮಿ. ಬಂಡಿಸ್ವಾಮಿಯ ಮೂಲ ಹೆಸರು ಸಿದ್ದಯ್ಯಸ್ವಾಮಿ. ಇವರು ಜಂಗಮ ಸಮಾಜದ ಮೂಲದವನು. ಫಕೀರಸ್ವಾಮಿ ತನ್ನ ಶಿಷ್ಯ ಬಂಡಿಸ್ವಾಮಿಗೆ ಒಂದು ದಿನ ಆಜ್ಞೆ ಮಾಡುವನು

* ಶಿಕ್ಷಕರು, ಕೆಜಿಎಸ್ ತಾಳಿಕೋಟೆ, ಮುದ್ದೇಬಿಹಾಳ ತಾಲ್ಲೂಕು.

ಯಾವ ಸ್ಥಳದಲ್ಲಿ ೩ ತಿಂಗಳ ನೀರ ದೀಪ ನಿತ್ಯ ಉರಿಯುವದು, ಆ ಸ್ಥಳದಲ್ಲಿ ನಿನ್ನ ಮಠ ಕಟ್ಟಿಕೊಳ್ಳಿರೆಂದವನು ಗುರುವಿನ ಆಜ್ಞೆಯನ್ನು ಶಿರದ ಮೇಲೆ ಹೊತ್ತು ಬಂಡಿಸ್ವಾಮಿ ಊರೂರು ಅಲೆಯುತ್ತಾ ಬಂದರು. ಯಾವ ಸ್ಥಳದಲ್ಲಿಯೂ ನೀರದೀಪ ಉರಿಯಲಿಲ್ಲ. ಹನುಮಸಾಗರದಲ್ಲಿ ಅನೇಕ ದಿನ ಅನುಷ್ಠಾನಗೈದರು. ಆದರೆ ನೀರ ದೀವಿಗೆ ಮಾತ್ರ ಉರಿಯ ಲಿಲ್ಲ. ಗುರುವಿನ ಆಜ್ಞೆ ಪೂರೈಸಲಿಲ್ಲವೆಂದು ಮತ್ತೆ ಅಲೆಯುತ್ತಾ ಬಂಡೆಪ್ಪನಹಳ್ಳಿಗೆ ಬಂದರು. ನೀರ ದೀವಿಗೆ ಹಚ್ಚಿದರು. ಅದು ಸತತ ೩ ತಿಂಗಳವರೆಗೆ ಉರಿಯಿತು. ಆಗ ಮಠ ಕಟ್ಟಲು ಪ್ರಾರಂಭಿಸಿದರು. ಊರಿನ ಜನರೂ ಕೂಲಿಗಾಗಿ ಯಾರು ಬರಲಿಲ್ಲ. ತಾನೇ ಭಿಕ್ಷೆ ಬೇಡಿ ತಿನ್ನುವನು ನಮಗೇನು ಕೂಲಿ ಕೊಡುವನೆಂದು ಜನರು ಹಾಸ್ಯ ಮಾಡಿ ನಗುವರು. ತಾನು ಭಿಕ್ಷೆ ಮಾಡಿ ಮಠವನ್ನು ಕಟ್ಟಿಸಿದಂತೆ ಜನಪದ ಗೀತೆ ಹೇಳುತ್ತದೆ.

ಬಂಡಿಸ್ವಾಮಿಯ ಮಣ್ಣಿನ ಗುಂಪಿನಲ್ಲಿ ಕೂಲಿ ಕೊಟ್ಟು ಮಠ ಕಟ್ಟಿಸಿದ ರೀತಿ ಮನೋಜ್ಞವಾಗಿದೆ, ಭಂಟನೂರಿನ ಶ್ರೀ ಕಲ್ಲಪ್ಪ ಸಾಯಬಣ್ಣ ಆಲಾಳ ಅವರು ಹಾಡಿದ್ದಾರೆ.

ಮಠದ ಕಾರ್ಯ ಭರದಿಂದ ನಡೆದ ಸುದ್ದಿಯು ರಾಜಾ ಅಲಿ ಆದಿಲಶಾಹಿಗೆ ತಲುಪುವುದು. ಅವನು ತನ್ನ ಸೈನಿಕರನ್ನು ಕಳಿಸಿ ಬಂಡಿಸ್ವಾಮಿಗಳನ್ನು ಬಂಧಿಸಿ ವಿಜಾಪೂರ ಜೈಲಿನಲ್ಲಿಟ್ಟರು. ಅಂದು ರಾಜನಗೆ ರಾತ್ರಿ ಕನಸಿನಲ್ಲಿ ಇಬ್ಬರು ಮರಿ ಸ್ವಾಮಿಗಳು "ನಾಗಬೆತ್ತದಿಂದ ಹೊಡೆಯಲು ಪ್ರಾರಂಭಿಸಿದರು. ಬೆಳಗಾಗುವದರಲ್ಲಿ ರಾಜನಗೆ ಮೈಯಲ್ಲಿ ಉರುಪು ಶುರುವಾಗುವದು. ಉರುಪು ಶಮನಗೊಳಿಸಲು ಹಕೀಮರು ಎಲ್ಲಾ ಪ್ರಯತ್ನ ಮಾಡಿದರೂ ರಾಜನಗೆ ಗುಣಮುಖವಾಗಲಿಲ್ಲ, ರಾಜಗುರುವಾದ ಖ್ವಾಜಾ ಅಮಿನುದ್ದೀನನ್ನು ಕೇಳಿದಾಗ "ರಾಜಾ ನೀನು ತಪ್ಪು ಮಾಡಿರುವೆ! ಬಂಧಿಸಿರುವ ಬಂಡಿಸ್ವಾಮಿ ನನ್ನ ಪರಮ ಶಿಷ್ಯನೆಂದನು. ರಾಜಾ ತನ್ನ ತಪ್ಪಿನ ಅರಿವಾಗಿ ಬಂಡಿಸ್ವಾಮಿಗೆ ಗುರು ಕಾಣಿಕೆಯನ್ನು ೧೬೦೦ ಎಕರೆ ಜಮಿನನ್ನು ಮಠಕ್ಕೆ ಜಾಹಾಗಿರ ಹಾಕಿ ಕೊಟ್ಟನು. ಇದರ ಸನ್ನದ್ದು ಪತ್ರವು ಬ್ರಿಟಿಷಕಾಲದಲ್ಲಿ ನ್ಯಾಯ ನಡೆದು ಕರಡಗಿರಿಯಲ್ಲಿದೆ. ಹೀಗಾಗಿ ಈ ಮಠದ ವಂಶಸ್ಥರನ್ನು ಜಾಹಾಗಿರದಾರು ಎಂದು ಕರೆಯು ವರು. ಗಚ್ಚು ಗಾರಿಗೆಯಿಂದ ಸೇದಿ ಕಲ್ಲಿನಿಂದ ನಿರ್ಮಿತವಾದ ಮಠವು Indosarsanic Styleನಲ್ಲಿದೆ ಸುತ್ತಲೂ ಕಮಾನು ಗಳು ಪ್ರಮುಖ ನಾಲ್ಕು ದಿಕ್ಕುಗಳಲ್ಲಿ ಮಹಾದ್ವಾರಗಳು ಇದ್ದು ಪೂರ್ವಕ್ಕೆ ಪ್ರಮುಖದ್ವಾರವಿದೆ. ಒಳಗಡೆ ಸುತ್ತಲೂ ದೊಡ್ಡ ದೊಡ್ಡ ಕೊಠಡಿಗಳು ಇವೆ. ಸೂಫಿ ಪಂಥಕ್ಕೆ ಒಳಗಾದ ಈ ಮಠವು (ಖಾನಖಾ)ಗಳಿಗೂ ಈಗ ಇರುವ ಈ ವೀರಶೈವ ಆಗಿರುವ ಮಠಗಳಿಗೂ ಈಗಿರುವ ಸಾಮ್ಯತೆಗಳಿಂದ ಕಣ್ಣಿಗೆ ಕುಕ್ಕುವಂತೆ ಇದೆ. ಪೀರನ ಏಕಾಂತಕ್ಕೆ, ಸಂಸಾರಕ್ಕೆ, ಶಿಷ್ಯರಿಗೆ ಕಲಿಸುವದಕ್ಕೆ, ದೊರೆಯ ಮಂತ್ರಾಲೋಚನೆ ಮಾಡಲು, ಸಾಮಾನ್ಯ ಭಕ್ತರನ್ನು ಬೆಟ್ಟಿ ಮಾಡಲಿಕ್ಕೆ, ದೊಡ್ಡ ದೊಡ್ಡ ಸಭಾಭವನಗಳು (Meating Hall) ಇವೆ. ಖಾನಾಖಾದಲ್ಲಿ ಬೇರೆ ಬೇರೆ ಭಾಗಗಳು ಇವೆ ಖಾನಾಖಾಕ್ಕೆ ನಿಶ್ಚಿತ ಆದಾಯ ಬರುವಂತ ಇನಾಮ ೧೬೦೦ ಎಕರೆ ಜಮೀನ ಜಹಾಗೀರ ಇದೆ. ಇದಕ್ಕೆ ಸಂಬಂಧಿಸಿದ ದಾಖಲೆ ಬಾಂಬೆ ಆಕ್ಟ ೫ ರ ೧೮೬೭ ರಪ್ರಕಾರ ಉತಾರೆ ಇರುವುದು ಇದು ಅನುಭಾವಿ ಧಾರ್ಮಿಕ ಶಿಕ್ಷಣ ಕೇಂದ್ರವಾಗಿದ್ದು ಎಲ್ಲ ಮಠಗಳಲ್ಲಿ ಬೌದ್ಧರ, ನಾಥರ ಕಾಲದಿಂದಲೂ ಅನೇಕ ರೂಪ ಧರಿಸಿವೆ. ಅಂಥವುಗಳಲ್ಲಿ ಸಾವಳಗಿ, ಶಿರಹಟ್ಟಿ, ಬಂಡೆಪ್ಪನಹಳ್ಳಿ ಬಂದೇನವಾಜ ಅಮೀನುದ್ದಿನ, ದರ್ಗಾಗಳಲ್ಲಿ ಖಾನಖಾ ಆರ್ಥಿಕ ವ್ಯವಸ್ಥೆಯಲ್ಲಿದೆ.

ಶಿರಹಟ್ಟಿದಾರ್‍ಯಾಗ ಸಿರಿಗಂಧ ಗಿಡಹುಟ್ಟಿ
ಹನುಮಸಾಗರಕ ಬೇರ ಇಳಿದಾವ । ಬಂಡೆಪ್ಪನಹಳ್ಳಿ
ಮಠದಾಗ ಹೂವ ಸುರಿದಾವ

ಮಠದ ಉತ್ತರ ದಿಕ್ಕಿನಲ್ಲಿ ಹಾಸುಬಂಡೆಗಳ ಮಧ್ಯದಲ್ಲಿಯೆ ಚಿಕ್ಕ ನೀರಿನ ಬುಗ್ಗಿ ಇದೆ. ಅದು ವರ್ಷವಿಡಿ ತುಂಬಿ ಹರಿಯುತ್ತದೆ. ಇದರಿಂದಲೆ ಬಂಡೆಪ್ಪನಹಳ್ಳಿಗೂ, ಬ. ಸಾಲವಾಡಗಿಗೂ ಇಂದಿಗೂ ನೀರು ಪೂರೈಕೆಯಾಗುತ್ತದೆ. ಆದ್ದರಿಂದ ಇಲ್ಲಿಯ ಜನರು ಬುಗ್ಗಿಯನ್ನು ಕುರಿತು "ಬಂಡಿ ತುಂಬಾ ಅನ್ನ ಗಿಂಡಿ ತುಂಬಾ ನೀರು" ಎಂದು ಹೇಳುವರು. ಬೇಸಿಗೆಯಂಥ ಸುಡು ಬಿಸಿಲಿನ ಸಮಯದಲ್ಲಿ ಅತ್ಯಂತ ಶುದ್ಧನೀರು ಇಲ್ಲಿ ಸಿಗುವುದು. ಇದೇ ಗುಂಡದಿಂದ ಮಠಕ್ಕೆ ಏತದಿಂದ ನೀರು ಬಳಕೆಯಾಗುತ್ತಿತ್ತು.

ಜನಪದರು ಹೇಳುವಂತೆ ಈ ಮಠವು ಊರಿನ ಹೋರಗಡೆ ಪೂರ್ವದಿಕ್ಕಿನಲ್ಲಿದೆ. ಸುರಪುರ ನಾಯಕ ವೆಂಕಟಪ್ಪನು ತನ್ನ ಸೈನ್ಯದೊಂದಿಗೆ ದೃಷ್ಟಿ ದೋಷ ಪರಿಹಾರ ಮಾಡಿಕೊಳ್ಳಲು ಬಂಡಿಸ್ವಾಮಿಗಳಿಗೆ ಬೆಟ್ಟಿಯಾಗುವನು. ಬಂಡಿ ಸ್ವಾಮಿಗಳು ಗುಂಡದ ನೀರಿನಿಂದ ಮುಖ ತೊಳೆದು ಪ್ರಸಾದ ಮಾಡಲು ಹೇಳಿದರು. ಬಂಡಿಸ್ವಾಮಿಯ ಧರ್ಮಪತ್ನಿ ರುದ್ರಮ್ಮ ತಾಯಿ ಪ್ರತಿ ದಿನದಂತೆ ಮೂರು ಅನ್ನದ ಉಂಡಿಗಳನ್ನು ಮಾಡುತ್ತಿದ್ದಳು ಒಂದು ಪತಿ ಬಂಡಿಸ್ವಾಮಿಗೆ ಒಂದು ತನಗೆ ಇನ್ನೊಂದು ದಾಸೋಹ ಮಾಡುತ್ತಿದ್ದಳು. ಅಂದು ಸೈನ್ಯ ಸಮೇತರಾಗಿ ಬಂದ ರಾಜಾ ವೆಂಕಟಪ್ಪ ನಾಯಕನಿಗೂ ಹಾಗೂ ಬಂದ ಸೈನಿಕರಿಗೂ ಒಂದೆ ಅನ್ನದ ಉಂಡಿಯಲ್ಲಿ ಪ್ರಸಾದ ಮಾಡಿಸಿದರು. ಆದರೆ ಅನ್ನದ ಉಂಡಿ ಹಾಗೆ ಉಳಿದಿತ್ತು, ವೆಂಕಟಪ್ಪ ನಾಯಕನಿಗೆ ದೃಷ್ಟಿ ದೋಷ

ಪರಿಹಾರವಾಗಿ ರೋಗದಿಂದ ಮುಕ್ತನಾಗಿ ಸಂತೋಷ ಗೊಂಡು ತಾನು ಮಠ ಕಟ್ಟುವದಾಗಿ ತಿಳಿಸಿದನು. ಬೇಡ ಮಾಡಿದ್ದು ಬೇಲಿ ಹೊರಗಿರಲೆಂದು ಊರಿನ ಹೊರಗೆ ಮಠ ಕಟ್ಟಲು ಬಂಡಿಸ್ವಾಮಿ ತಿಳಿಸಿದರು. ಈ ಮಠವು ಇನ್ನು ಗಟ್ಟಿಯಾಗಿದ್ದು ಊರಿನ ಹೊರವಲಯದಲ್ಲಿದ್ದು, ನಾಯಕ ಮಠ ಕಟ್ಟಿದ್ದಕ್ಕೆ ಸಾಕ್ಷಿಯಾಗಿದೆ.

ಬಂಡಿಸ್ವಾಮಿಯ ವಂಶಾವಳಿ

೧)**ಬಂಡಿಸ್ವಾಮಿ**– ಮೂಲ ಹೆಸರು ಸಿದ್ದಯ್ಯಸ್ವಾಮಿ ಶಿರಹಟ್ಟಿ ಫಕಿರ ಸ್ವಾಮಿ ಶಿಷ್ಯ

೨) **ಫಕಿರಸ್ವಾಮಿ** (ಬಂಡಿಸ್ವಾಮಿ ಮಗ)

೩) **ಬಂಡಿಸ್ವಾಮಿ**_(ಫಕೀರಸ್ವಾಮಿಯ ಮಗ)

೪) **ರುದ್ರಸ್ವಾಮಿ**_(ಬಂಡಿಸ್ವಾಮಿಯ ಮಗ ಗಂಡು ಸಂತತಿ ಇರಲಿಲ್ಲ)

೫) **ಚನ್ನಸಂಗಯ್ಯ**–(ರುದ್ರಮ್ಮತಾಯಿ (ಚಂದ್ರಗಿರಿಗೆ ಮದುವೆ ಮಾಡಿಕೊಟ್ಟಿದ್ದ–ತಾ॥ ಕುಷ್ಟಗಿ)

೬) **ಸಂಗನ ಬಸಯ್ಯ**_(ನಿಂಗಯ್ಯಮುತ್ಯಾನ ಸಮಕಾಲಿನವರು)

ರುದ್ರಸ್ವಾಮಿ

ಚಂದ್ರಶೇಖರ & ಸೋಮಶೇಖರ

ಚನ್ನವೀರಸ್ವಾಮಿ

ರಾಜಶೇಖರ, ಸದಾಶಿವ ಹಾಗೂ ಪ್ರಭುದೇವ

ಸಂಗಮೇಶ, ಜಗದೀಶ ಹಾಗೂ ಚನ್ನಸಂಗಯ್ಯ

ಶಿವಕುಮಾರ

ಆನಂದ

ಕಾಶೀನಾಥ

ಕೇದಾರ

ವಿಶ್ವನಾಥ

ಕುಮಾರಸ್ವಾಮಿ

ರವಿಕುಮಾರ

ದಯಾನಂದ

೩೧–೦೮–೧೯೩೮

ಮಲ್ಲಿಕಾರ್ಜುನ ಹಾಗೂ ವಿಶ್ವನಾಥ

ಗುರುಸ್ವಾಮಿ ಸಂಗನಬಸಯ್ಯ ವಿರುಪಾಕ್ಷಯ್ಯ

೧} ರುದ್ರಸ್ವಾಮಿ ೨} ಚನ್ನಸಂಗಯ್ಯ ೩} ಬಂಡಪ್ಪಯ್ಯ ೪} ಸಾವಿತ್ರಮ್ಮ ೫} ಈರಮ್ಮ

ಚನ್ನಸಂಗಯ್ಯ _ (ಸಂಗನ ಬಸಯ್ಯನ ೨ನೇ ಮಗ ದತ್ತು ಪುತ್ರರನ್ನಾಗಿ ಮಾಡಿಕೊಂಡರು ಇವರು ಚಂದ್ರಗಿರಿಯಿಂದ ಬಂದವರು) ನಿಡಸೋಸಿ

೧} ಸಾವಿತ್ರಮ್ಮ _ ಅಯ್ಯಪ್ಪಯ್ಯ ಗಣಾಚಾರಿ ತಾ॥ ಕುಷ್ಟಗಿ (ಈಗಿದ್ದ ಸಾರಂಗ ಮಠದ ಪ್ರಭು ದೇವರ ಅಜ್ಜಿ)

೨} ಈರಮ್ಮ – ಶಾಂತಯ್ಯ ಹಿರೇಮಠ ಬಿ. ಸಾಲವಾಡಗಿ ಗಜದಂಡ ಸ್ವಾಮಿಗಳು ದೇವರ ಭೂಪುರ ಗುಡಗುಂಟ ಅಮರೇಶ್ವರ ದೇವರು.

ಶ್ರೀ ಮಠದ ಸಂಪ್ರದಾಯ : ಗುರು ಶಿಷ್ಯ ಪರಂಪರೆ

ಹಿಂದು ಮುಸ್ಲಿಂ ಸಮನ್ವಯತೆ ಈ ಮಠದಲ್ಲಿ ಎದ್ದು ಕಾಣುತ್ತದೆ. ಕರ್ನಾಟಕದ ಹಲವಡೆ ಸೂಫಿಗಳಂತೆ ಗುರು ಶಿಷ್ಯತ್ವ ಎದ್ದು ಕಾಣುವುದು. ಕಡಕೋಳ ಮಡಿವಾಳಪ್ಪ–ಚನ್ನೂರ ಜಲಾಲಸಾಬ, ಕಡಲೂರ ಸಿದ್ದಪ್ಪ–ಸಾಯಬಣ್ಣ ತಾತ, ಶೇಖಶಾವಲಿ–ಗಾದಿಲಿಂಗ, ಅಲ್ಲಿಸಾಬ–ಶೀಲವೇರಿ ಶಿವಪ್ಪ, ರುಕ್ಮಾಂಗದ ಪಂಡಿತ–ಇಬ್ರಾಹಿಮ ಆದಿಲಶಾಹಿ, ನಂಗಾಶಹ–ಮಹಿಪತಿರಾಯ, ಇವರಂತೆಯೆ ಶಿರಹಟ್ಟಿ ಫಕೀರ ಸ್ವಾಮಿ–ಬಂಡೆಪ್ಪನಹಳ್ಳಿ ಬಂಡಿಸ್ವಾಮಿ – ಮುಂತಾದ ಗುರು–ಶಿಷ್ಯರ ಸಂಪ್ರದಾಯಗಳು ಕರ್ನಾಟಕದಲ್ಲಿವೆ. ಇದನ್ನೆ ಇಸ್ಲಾಮಿಕರಣ ಖಟಚಿಟುಟ, ಹಿಂದೂಕರಣ ಊಟಿಜಣುಟ ಎಂಬ ಮತಿಯ ಪರಿಭಾಷೆಯಲ್ಲಿ ಕರೆದರೆ ಅವುಗಳ ವಿಶಿಷ್ಟತೆ ಕೊಚ್ಚಿಹೊಗುತ್ತದೆ. ಇವುಗಳನ್ನು ಅರಿಯಲು ಮತೀಯವಲ್ಲದ ಮತ್ತೊಂದು ಪರಿಶುದ್ಧ ದೃಷ್ಟಿಕೋನವೇ ಬೇಕು. ಈ ಮಠದ ಜಾತ್ರೆ ಪ್ರತಿ ವರ್ಷದ ಆಗಿಹುಣ್ಣಿಮೆಯಂದು ನಡೆಯುವುದು.

ವೀರಶೈವ ಲಿಂಗಾಯತರು ರಾಜಧಾನಿಗೆ ವಲಸೆ ಬಂದು ಇಸ್ಲಾಮಿಕರಣಕ್ಕೆ ಒಳಗಾಗಿದ್ದರು.

Indeed the whole phenomenon of lingayat devotion alism at sufi darghas holds promising avenues of investigation for researchers utilizing the techniques of gathering oral tradition – ಈಟನ್

ವೇಷ ಭೂಷಣ, ಪಟ್ಟಾಧಿಕಾರ, ಸಮಾಧಿ ಪದ್ಧತಿ

ಸೂಫೀಕರಣಕ್ಕೆ ಒಳಗಾದ ಅನುಭಾವಿಗಳು ತಮ್ಮ ಹೆಸರು ವೇಷ ಭೂಷಣಗಳನ್ನು, ಮತ್ತು ಗದ್ದಿಗೆ ಸಮಾಧಿ ಪದ್ಧತಿಗಳಲ್ಲಿ ಬದಲಾವಣೆ ಕಾಣುತ್ತೇವೆ. ಫಕೀರೇಶ, ಚಾಂಗಪೀರ, ಬದ್ರೂದ್ದೀನ, ಬದ್ರೇಶ್ವರ ಮೌನುದ್ದೀನ, ಹುಚ್ಚೂಸಾಹೇಬ, ಖಾದರಲಿಂಗ, ಜಗದ್ಗುರು, ಎಂದು ಬದಲಿಸಿಕೊಂಡು ಯೌಗಿಕ ಅರ್ಥ ವಿವರಣೆ ನೀಡುವಂತೆ ತಮ್ಮ ಹೆಸರನ್ನು ಬದಲಾಯಿಸಿ ಕೊಳ್ಳುತ್ತಿದ್ದನು. ಬಂಡಿಸ್ವಾಮಿಯಲ್ಲಿಯೂ ಇಂತ ಬದಲಾವಣೆ ಕಾಣುತ್ತೇವೆ. ಬಂಡಿಸ್ವಾಮಿಯ ಮೂಲ ಹೆಸರು ಸಿದ್ದಯ್ಯ ಸ್ವಾಮಿಯೆಂದಿದ್ದರೂ

ಫಕೀರಸ್ವಾಮಿಯ ಶಿಷ್ಯನಾದ ಮೇಲೆ ಹೆಸರು ಬದಲಾವಣೆಗೊಂಡು ಬಂಡಿಸ್ವಾಮಿ ಅಥವಾ "ಬಂಡಿಪಾಚ್ಚಾ" ಎಂದು ಹೆಸರು ಬಂದಿತು. ವೇಷದಲ್ಲಿ ಸಿರಪೆಚ ಹಚ್ಚಿದ ಹಸಿರುಪೆಟಾ, ಶೆರ್ವಾನಿ, ಪಾಯಿಜಾಮ, ಕಪನಿ, ಲುಂಗಿ, ಟೊಪ್ಪಿಗೆ, ಹಸಿರು ಗಲಿಫ, ಹೀಗೆ ಬಾಹ್ಯ ವಸ್ತುಗಳು. ಒಂದು ಕಾಲಲ್ಲಿ ಎಕ್ಕಡ ಮತ್ತೊಂದು ಕಾಲಲ್ಲಿ ಬೂಟು ಇದನ್ನು ಕುರಿತು ಕವಿಯು ಹೀಗೆ ಹೇಳುತ್ತಾನೆ:

ಒಂದು ಚರಣ ಕೆರವು ಕೇಳ ಮ
ತ್ತೊಂದು ಚರಣಕೆ ಪಾಪೋಸು

ಕೊರಳಲ್ಲಿ ಜಪಮಾಲೆ ಧರಿಸುವುದು, ಹಣೆಯಲ್ಲಿ ಕುಂಕುಮ, ವಿಭೂತಿ, ಧರಿಸುವುದು, ಯೋಗಸಾಧನ ಮಾಡುವುದು, ಇವರ ನಿತ್ಯ ಸಾಧನೆ. ಜನಪದರು ಹೇಳುವಂತೆ ಬಂಡಿಸ್ವಾಮಿಯ ವೇಷ ಈ ರೀತಿಯಾಗಿರುವುದನ್ನು ಕಾಣಬಹುದು.

ನೀನೇ ಮೌನನು ನೀನೆ ದೀನನು ನೀನೇ ಪೀರ್ ಫಕೀರನು ಲುಂಗಿ ಕಪನಿಯ ಟೊಪಿ ಪಾದದಲ್ಲಿ ಜಂಗು ನೀ ಧರೀಸಿದೆಯೋ ॥ – ಜನಪದ

ಪಟ್ಟಾಧಿಕಾರ ಮಾಡುವಾಗ ಮೊದಲು ಫಕೀರನು ತನ್ನ ಶಿಷ್ಯನಿಗೆ ಖುರಾನ ಓದಿ ಪಾತೆ ಕೊಡುವನು. ನಂತರ ವೀರಶೈವ ವಿಧಿಗಳನ್ನು ಮಾಡಿ ಅಂಗದ ಮೇಲೆ ಲಿಂಗ ವಸ್ತ್ರ ಧರಿಸಿ, ಹಣೆಯ ಮೇಲೆ ಕುಂಕುಮ, ವಿಭೂತಿ ಧರಿಸಿ, ಕೊರಳಲ್ಲಿ ಜಪಮಾಲೆ ಧರಿಸುವರು. ನಂತರ ರಾಜಾಶ್ರಯ ಪಡೆದ ಮೇಲೆ ರಾಜಪೋಷಾಕುಗಳನ್ನು ಧರಿಸುವರು. ರಾಜಪೋಷಾಕುಗಳು ಬಂಡಿಸ್ವಾಮಿಯವರಿಗೆ ರಾಜಾ ಅಲಿ ಆದಿಲ್ ಶಾಹಿಯಿಂದ ಬಂದವೆಂದು ಕಂಡುಬರುವುದು.

ಬಂಡಿಸ್ವಾಮಿಯವರ ಸಮಾಧಿಯು ಸೂಫಿ ಪಂಥದ ಪದ್ಧತಿಯಂತೆ ದಕ್ಷಿಣೋತ್ತರಕ್ಕೆ ಇರುವುದು. ಮೊದಲು ಸೂಫಿಗಳ ಪ್ರಕಾರ ಖುರಾನನ್ನು ಓದಿ ಪಾತೆ ಕೊಡುವರು. ನಂತರ ವೀರಶೈವ ಲಿಂಗಾಯತರ ಪ್ರಕಾರ ಶವಕ್ಕೆ ಭಸ್ಮ ಲೇಪನ ಮಾಡಿ ರುದ್ರಾಕ್ಷಿ ಜಪಮಾಲೆ ಧರಿಸುವರು. ನಂತರ ಫಕೀರೇಶ್ವರನ ಹೆಸರಿನಲ್ಲಿ ದೀನ್ ಜಗಾಯಿಸಿ ನಂತರ ಶಿಷ್ಯ ಬಂಡಿಸ್ವಾಮಿ ಹೆಸರಿನಲ್ಲಿ ದೀನ್ ಜಗಾಯಿಸುವ ಸಂಪ್ರದಾಯವಿದೆ. ಸಾಂಪ್ರದಾಯಕ ಮುಸ್ಲಿಂ ತತ್ವಕ್ಕೂ ಸಂಪ್ರದಾಯಕ ವೀರಶೈವ ತತ್ವಕ್ಕೂ ಹೊರತಾದ ತತ್ವವೆ ಫಕೀರ ಪರಂಪರೆ. ಇವರ ತತ್ವವು ಸ್ಥಾವರವನ್ನು ನಿರಾಕರಿಸುವ ಶರಣರನ್ನು ನೆನಪಿಸುವುದು. "ನಾ ದೇವನಲ್ಲದೇ ನೀ ದೇವನೇ" "ಅನಲ್ ಹಕ್" "ಅಹಂ ಬ್ರಹ್ಮಾಸ್ಮೀ" "ತತ್ವಂಅಸಿ" "ನಾನು ಆತ್ಮ ಸ್ವರೂಪನಿದ್ದೇನೆ" ತತ್ವವು ಕೂಡ ಇದೆ ಆಗಿದೆ.

ಊರಿನ ಪೂರ್ವದಿಕ್ಕಿನಲ್ಲಿ ರೇಣುಕಾ ಯಲ್ಲಮ್ಮನ ಕೊಳ್ಳವಿದೆ. ಈ ಸ್ಥಳದಲ್ಲಿ ಜಮದಗ್ನಿ ಮಾಹಾಋಷಿಗಳು ಕೆಲವು ದಿನಗಳವರೆಗೆ ತಪಗೈದು ದೇವೇಂದ್ರನಲ್ಲಿರುವ ಕಾಮಧೇನು ಕಲ್ಪವೃಕ್ಷಗಳನ್ನು ತರಿಸಿಕೊಂಡನೆಂದು ಪೌರಾಣಿಕ ಕಥೆಗಳಿವೆ. ಯಲ್ಲಮ್ಮನ ಗುಡಿ ಜಮದಗ್ನಿಋಷಿಯ ಗುಡಿ ಎದುರು ಬದರಾಗಿದ್ದು ನಡುವೆ ಶುದ್ಧ ತಂಪಾದ ನೀರಿನ ಹೊಂಡವಿದೆ. ಈ ತಾಣವು ಮೌನ, ಧ್ಯಾನ, ಯೋಗಾನುಷ್ಠಾನಕ್ಕೆ ಯೋಗಸಾಧಕರಿಗೆ ಯೋಗ್ಯ ಏಕಾಂತ ಸ್ಥಳವಾಗಿದೆ.

ಊರಿನ ಪಶ್ಚಿಮದಿಕ್ಕಿನಲ್ಲಿ ಮಾರಾಯ ನಂಗಣ್ಣ ಮತ್ತು ಸಣ್ಣಕ್ಕಿ ಲಿಂಗಣ್ಣ ಶರಣರ ಗದ್ದುಗೆಗಳು ಇವೆ. ಇವರು ಮೂಲತಃ ಹಾಲುಮತದ ಶರಣರು. ಬಂಡಿಸ್ವಾಮಿಗಳ ನಾಲ್ಕನೆಯ ತಲೆಮಾರಿನ ಸಂಗನಬಸಯ್ಯ ಶರಣರ ಸಮಕಾಲೀನರು. ಇವರ ಮೂಲ ಸ್ಥಾನ ಜೇವರ್ಗಿ ತಾಲೂಕಿನ ಟೆಂಗಳಗಿ ಗ್ರಾಮದ ಗೌಡರು ಮತ್ತು ಮಂದಾಲ ಹಿಪ್ಪರಗಿಯ ದೇಸಾಯಿಗಳಾಗಿದ್ದರು. ಕುರಿ ಕಾಯುವ ಪ್ರಮುಖ ಉದ್ಯೋಗದೊಂದಿಗೆ ದೇವರಲ್ಲಿ ಭಕ್ತಿ ಶ್ರದ್ಧೆಯಿಂದ ಕಾಯಕ ಮಾಡುತ್ತಾ ಹಂಗರಗಿ, ಮುದನೂರ, ಕೊನೆಗೆ ಬಂಡೆಪ್ಪನಹಳ್ಳಿಗೆ ಬಂದು ನೆಲೆಸಿದರು. ಬಂಡಿಸ್ವಾಮಿಯ ಸೂಫಿ ಪರಂಪರೆಗೆ ಮಾರುಹೋಗಿ ಸಂಗನಬಸಯ್ಯ ಶರಣರೊಂದಿಗೆ ಯೋಗ ಸಾಧನೆ ಮಾಡುವರು. ಇದನ್ನು ನೋಡಿದ ಸಂಗನಬಸಯ್ಯನವರು "ಮಾಹಾರಾಯ ನಂಗಣ್ಣ"ನೆಂದು ಅಭಿದಾನ ಮಾಡಿ ತಮ್ಮಲ್ಲಿಯೆ ಸ್ಥಾನ ಕೊಟ್ಟರು. ಇವರು ತಮ್ಮ ವಾಕ್ ಸಿದ್ದಿಯಿಂದ ಅಂದಿನ ಮಳೆ ಬೆಳೆ ಭವಿಷ್ಯದ ಮುನ್ಸೂಚನೆಗಳನ್ನು ನೀಡುತ್ತಾ ಜನರ ಭವ ದುಖಃ ದೂರ ಮಾಡುವರು. ಮಾರಾಯ ಲಿಂಗಣ್ಣ, ಸಣ್ಣಕ್ಕಿ ಲಿಂಗಣ್ಣ ಹಾಗೂ ಮುದನೂರಿನ ಭಕ್ತ ಬಸರೆಡೆಪ್ಪ ಗೌಡನನ್ನು ಕುರಿತು ಜನಪದರು ಕೊಂಡಾಡಿದ್ದಾರೆ. ಇವರ ಹೆಸರಲ್ಲಿ ಇಂದಿಗೂ ಪ್ರತಿ ವರ್ಷ ಕಡ್ಲಿಗಾರ ಹುಣ್ಣಿಮೆಗೆ ಜಾತ್ರೆ ನಡೆಯುವದು,

ಇವರ ಗದ್ದುಗೆಗಳ ಹಿಂದೆ ನಂದರಕೇನ ಮರವೊಂದು ಸೂಮಾರು ೨೦೦ ವರ್ಷದ್ದಾಗಿದೆ. ಈ ಮರದ ಕೆಳಗೆ ಅನ್ಯಾಯ, ಅಪ್ರಾಮಾಣಿಕತೆ ನಡೆಯುವದಿಲ್ಲ ಮತ್ತು ಸುಳ್ಳು ಹೇಳಬಾರದೆಂಬ ನಂಬಿಕೆ ಇದೆ. ಒಂದು ವೇಳೆ ಸುಳ್ಳು ಹೇಳಿದರೆ ಅವರಿಗೆ ಒಳ್ಳೆಯದಾಗುವದಿಲ್ಲ ಎಂದು ಅಲ್ಲಿಯ ಸ್ಥಳಿಯರ ನಂಬಿಕೆ. ಮರದ ಬಗ್ಗೆ ಅತ್ಯಂತ ಪೂಜ್ಯ ಭಾವನೆ ಇದೆ. ಇದು ಈ ಗದ್ದುಗೆಯ ಮೂಲವು ಗೋಲಗೇರಿ ಗೊಲ್ಲಾಳೇಶ್ವರದ ಶಾಖಾ ಪೀಠವಾಗಿದೆ. ಹಂಗರಗಿಯಲ್ಲಿ ಪೂಜಿಸಿದ ಲಿಂಗವನ್ನು ಹಂಗರಗಿಲಿಂಗವೆಂದು, ಹೈಯಾಳದಲ್ಲಿ ಪೂಜಿಸಿದ ಲಿಂಗವನ್ನು ಹೈಯಾಳಲಿಂಗವೆಂದು,

ಮೂದನೂರಿನಲ್ಲಿ ಪೂಜಿಸಿದ ಲಿಂಗವನ್ನು ಸಣ್ಣಕ್ಕಿ ಲಿಂಗವೆಂದು, ಬಂಡೆಪ್ಪನಹಳ್ಳಿಯಲ್ಲಿ ಪೂಜಿಸಿದ ಲಿಂಗವನ್ನು ಮಾರಾಯ ಲಿಂಗಣ್ಣನೆಂದು ಕರೆದರೂ ಇರುವ ನಿರಾಕಾರ ಶಕ್ತಿಮಾತ್ರ ಒಂದೇಯಾಗಿದೆ. ಈ ಮೇಲೆ ಹೇಳಿದ ಗೋಲಗೇರಿ, ಹಂಗರಗಿ, ಹೈಯಾಳ, ಮುದನೂರ, ಬಂಡೆಪ್ಪನಹಳ್ಳಿ ಹಾಲುಮತದವರಿಗೆ ಪವಿತ್ರ ಕ್ಷೇತ್ರಗಳಾಗಿವೆ.

ಕಡ್ಲಗಾರ ಹುಣ್ಣಿವೆಗೆ ಸಣ್ಣಕ್ಕಿಲಿಂಗ ಮತ್ತು ಮಾರಾಯಲಿಂಗಣ್ಣರ ಜಾತ್ರೆಯಂದು ಜೋಡು ಪಲ್ಲಕ್ಕಿ ಉತ್ಸವ ನಡೆಯುವದು. ಮರುದಿನ ಬೇಳಿಗ್ಗೆ ೦೬:೦೦ ಘಂಟೆಗೆ ಫಕೀರರ ಊಟದ ಪಂಕ್ತಿ ಸಾಗುವುದು. ಹಿಂದೂಗಳ ಸಂಪ್ರದಾಯದಂತೆ ಪೂಜ್ಯರನ್ನು ಅಥವಾ ಜಂಗಮ ಮೂರ್ತಿಗಳನ್ನು ದಾಸೋಹದ ಪ್ರಥಮದಲ್ಲಿ ಊಟ ಮಾಡಿಸುವ ವಾಡಿಕೆ ಇದೆ. ಆದರೆ ಈ ಶರಣರ ಜಾತ್ರೆಯಲ್ಲಿ ಮಾತ್ರ ಮೊದಲು ನೂರಾರು ಫಕೀರರನ್ನು (ನೂರಾರು ಮುಸ್ಲಮಾನ ಖಾಜಿಗಳನ್ನು) ಬ. ಸಾಲವಾಡಗಿಯಿಂದ ಕರೆತರಲಾಗುವುದು. ಅವರೆಲ್ಲರನ್ನು ಸಾಲಾಗಿ ಊಟಕ್ಕೆ ಕೂಡಿಸಿ ಪ್ರಸಾದ ನೀಡಿದ ಬಳಿಕ ಪೂಜಾರಿಯವರು ದೀನ್‌ನ್ನು ಈ ರೀತಿಯಾಗಿ ಜಗಾಯಿಸುವರು.

"ಏಕ ಲಾಕ್ ಐಸೀಹಜಾರ್ ಪಾಂಚೋಪೀರ ಪೈಗಂಬರ್ ಜಿತಾ ಪೀರ್ ಮೌನುದ್ದೀನ ಕಾಶಿಪತಿ ಗಂಗಾಧರ ಹರ ಹರ ಮಾಹಾದೇವ "

ಒಂದು ಲಕ್ಷದ ಎಂಬತ್ತು ಸಾವಿರ ಪೈಗಂಬರರು ಮಹಮ್ಮದ ಪೈಗಂಬರರಿಗೂ ಮೊದಲು ಆಗಿ ಹೋಗಿದ್ದಾರೆಂದು ಇಸ್ಲಾಂ ಪುರಾಣಗಳು ಬಣ್ಣಿಸುತ್ತವೆ. ಇದರಲ್ಲಿ ಈಸಾ, ಮುಸಾ, ಅಬ್ರಾಹಂ ಮಹಮ್ಮದ ಮುಂತಾದ ಐದು ಜನ ಗುರುಗಳಿದ್ದು (ಪಾಂಚೋಪೀರ್) ಅವರಲ್ಲಿ ಮೌನುದ್ದೀನನು ಜೀತಾ ಪೀರನಾಗಿದ್ದಾನೆ. ಎಂದು ಈ ದೀನ್ ಸೂಚಿಸುತ್ತಿರಬಹುದು. ಇದು ದೊಸ್ತಾರ ಉದಾಹರಣೆಯು "ಇಸ್ಲಾಂಕರಣ" ಎಂದು ಕರೆಯಲಾಗಿದೆ. ಹೀಗೆ ಕರೆದಿರುವುದು ಅನುಭಾವಿ ಪಂಥಗಳ ನಡುವೆ ನಡೆದಿರಬಹುದಾದ ಸಂಘರ್ಷ ಮತ್ತು ಸಂವಾದಗಳು ಸುಲಭೀಕರಣ ವಿರಬಹುದು.

ಸಾಮಾನ್ಯವಾಗಿ ಬಂಡಿಸ್ವಾಮಿ ಮತ್ತು ಮಾರಾಯಲಿಂಗಣ್ಣ ಸಣ್ಣಕಿಲಿಂಗಣ್ಣರ ಜಾತ್ರೆ ಉತ್ಸವದಲ್ಲಿ ಪ್ರಸಾದವು "ಮಾದಲಿ" ಮತ್ತು ಜೋಳದ "ಬಾನ" (Everlasting food)ದ ಅಪರೂಪದೂಟವಾಗಿರುತ್ತದೆ. ಮಾರಾಯಲಿಂಗಣ್ಣ ಸಣ್ಣಕಿಲಿಂಗಣ್ಣರ ಜಾತ್ರೆಗೆ ಬಂದ ಸಾವಿರಾರು ಭಕ್ತರಿಗೆ ದಾಸೋಹ ನಡೆಯುವದು.

ದಾರಿ ಊಟ ನೀಡುವ ಶಿವಶರಣೆ ಪೂಜ್ಯ ಸರಸ್ವತಿ ತಾಯಿಯವರು

ಬಂದ ಎಲ್ಲ ಭಕ್ತರಿಗೂ ದಾರಿ ಬುತ್ತಿ ಕಟ್ಟಿ ಕೋಡುವ ಸಂಪ್ರದಾಯವಿದೆ. ಹಿಂದಿನ ಶಿವಶರಣೆ ಗಿರಜಮ್ಮಾ ತಾಯಿಯವರು ಮಾರಾಯ ನಿಂಗಣ್ಣನಿಂದ ಬೇಡಿದ ವರ 'ಮಳಕೈ ತುಂಬ ಅನ್ನ ಮೊಳಕಾಲು ತುಂಬ ಸಗಣಿ' ಎಂಬ ವರವನ್ನು ಪಡೆದಿದ್ದರು. ಅಂದರೆ ಅಂದಿನ ದಿನಮಾನಗಳಲ್ಲಿ ಆರ್ಥಿಕ ಸ್ಥಿತಿಗತಿಗಳನ್ನು ದನ ಕರುಗಳ ಮೇಲೆ ಎಣಿಸಲಾಗುತ್ತಿತ್ತು. ಅದರಂತೆ ಹಿಂದಿನ ವರೆಗೂ ಈ ಮನೆತನದಲ್ಲಿ ದನಕರುಗಳು ಸಾಕಷ್ಟು ಇದ್ದು ಅನ್ನ ಸಂಪತ್ತು ಹೇರಳವಾಗಿದ್ದು, ನಿತ್ಯ ದಾಸೋಹ ನಡೆಯುತ್ತದೆ. ಈಗಿದ್ದ ಸರಸ್ವತಿ ತಾಯಿಯವರು ನಿತ್ಯ ದಾಸೋಹನ್ನು ಮಾಡುತ್ತಾ ಬಂದ ಭಕ್ತರಿಗೆ ದಾರಿ ಬುತ್ತಿಯನ್ನ ಕಟ್ಟಿ ಕೊಡುತ್ತಾರೆ. ಪೂಜ್ಯ ತಾಯಿಯವರು ದಯಾ ಹೃದಯ ಉಳ್ಳವರು ಹಾಗೂ ಸದಾ ಹಸನ್ಮುಖದಿಂದ ಎಲ್ಲರೊಂದಿಗೆ ಬೆರತು ನಿತ್ಯ ದಾಸೋಹ ಮಾಡುತ್ತಾರೆ.

ಅಂದಿನ ದಿನ ವಿಷೇಶವಾಗಿ ವೀರಗಾಲ ಆಟ, ಡೊಳ್ಳಿನ ವಾಲಗ, ಡೊಳ್ಳಿನಹಾಡು, ಚೌಡಕಿ ಹಾಡು, ಭಜನೆ, ಗೀಗೀಪದಗಳು, ಮುಂತಾದ ವಿವಿಧ ಕಲೆಗಳು ಜರುಗುವವು. ಜಾನಪದವು ಮನುಷ್ಯನ ಬದುಕಿನೊಂದಿಗೆ ಮೂಡಿಬಂದ ಜೀವಂತ ಕಲೆ. ಇದು ನಮ್ಮ ಸಂಸ್ಕೃತಿಯ ಪ್ರತೀಕವು ಹೌದು ಮತ್ತು ವೈವಿಧ್ಯತೆಯ ಸೂಚಕವು ಹೌದು. ಅನ್ಯ ಕಲೆಗಳಿಗಿಂತ ಜನಪದ ಕಲೆ ಸರಳ ಸುಂದರವು ಭಿನ್ನವು ಆಗಿದ್ದು ಅನಾದಿ ಕಾಲದಿಂದಲೂ ತನ್ನ ವೈಶಿಷ್ಟ್ಯತೆಯನ್ನು ಕಾಯ್ದುಕೊಂಡು ಬಂದಿದೆ. ಜನಪದ ಕಲೆಗಳಿಗೆ ಗುರುವಿನ ಗೊಡವೆ ಇಲ್ಲ. ಬಾಲಕರಿಂದ ಅಬಾಲ ವೃದ್ಧರವರೆಗೂ ಸುಲಭವಾಗಿ ಗ್ರಹಿಸಿ ಪ್ರತ್ಯಕ್ಷ ಪ್ರಮಾಣಿಕರಿಸಿ ನೋಡಬಹುದು. ಆದ್ದರಿಂದ ಜನಪದ ಕಲೆ ಸೃಷ್ಠಿಯಲ್ಲಿ ಜೀವಿಯ ಜೀವಂತ ಮಿಡಿತ, ತುಂಬು ಭಾವನೆಯನ್ನು ಪ್ರತಿಬಿಂಬಿಸುತ್ತದೆ. ಜಾನಪದ ಹುಟ್ಟು ಮತ್ತು ಇರುವು ಗ್ರಾಮಗಳಲ್ಲೆ. ಅವರಿಗೆ ಬೇಸರವಾದಾಗ ನೆಮ್ಮದಿ ಆನಂದ, ಉತ್ಸಾಹ, ಮನೋರಂಜನೆ, ಹಾಗೂ ಮನಸ್ಸಿಗೆ ಮುದ ನೀಡುವಂತಹ ಕ್ರೀಡೆಗಾಳಾಗಿವೆ. ಅವುಗಳಲ್ಲಿ ಪ್ರಮುಖವಾಗಿ ಡೊಳ್ಳುಕುಣಿತ, ಮೊಹರಂ ಹಬ್ಬದ ಕುಣಿತ, ವೀರಗಾಸೆ, ನೀರಗಾಲ ಆಟ ಆಡುವುದು, ಕೋಲಾಟ, ಮುಂತಾದವುಗಳು, ಇಂತಹ ಸುಂದರಕಲೆಗಳ ತಾಣ ಹಿಂದೂ ಮುಸ್ಲಿಂರ ಭಾವೈಕ್ಯತೆಯ ನೆಲೆ ಬಂಡೆಪನಹಳ್ಳಿ ಅಥವಾ ಮಠಕಲ್ಲದೇವನಹಳ್ಳಿ

೧೦೩

ಚಾಮರಾಜನಗರ ಜಿಲ್ಲೆಯ ಮಲೆಯೂರಿನ ಕನಗಿರಿ ಕ್ಷೇತ್ರದ ಜೈನ ಪರಂಪರೆಯ ಒಂದು ಅವಲೋಕನ

ಟಿ. ರಾಜು*

ಮಲೆಯೂರು ಕನಗಿರಿ ಕ್ಷೇತ್ರ ಚಾಮರಾಜನಗರ ಜಿಲ್ಲೆಯ ಅತ್ಯಂತ ಪ್ರಮುಖ ಜೈನರ ನೆಲೆ. ಕನಗಿರಿ ಚಾಮರಾಜ ನಗರದಿಂದ ೨೪ ಕಿ.ಮೀ ದೂರದಲ್ಲಿದೆ. ಭಾರತದ ಪ್ರಸಿದ್ಧ ಜೈನ ಕೇಂದ್ರಗಳಲ್ಲಿ ಮಲೆಯೂರಿನ ಕನಗಿರಿ ಕ್ಷೇತ್ರವೂ ಒಂದು. ಇಲ್ಲಿನ ಬೆಟ್ಟವನ್ನು"ನಾಕೋ ಪರ್ವತ ಶೈಲ" ಎಂದು ಕರೆಯುತ್ತಾರೆ. ಕನಗಿರಿ ಬೆಟ್ಟದ ಬಂಡೆಗಳ ಮೇಲೆ ಶಾಶ್ವತವಾಗಿ ಕೆತ್ತಿರುವ ಚರಣ ಪಾದುಕೆಗಳು, ಶಿಲಾ ಶಾಸನಗಳು, ಸಮಾಧಿಗಳು, ಮಂಟಪಗಳು, ಗುಹೆಗಳು ಜೈನ ಪರಂಪರೆಯ ಬಗ್ಗೆ ತಿಳಿಸುತ್ತವೆ. ಜ್ಞಾನಚಂದ್ರಮುನಿಗಳು ತಮ್ಮ ಘೋರ ತಪಸ್ಸಿನ ಫಲದಿಂದ ಕೈವಲ್ಯ ಜ್ಞಾನವ ಪಡೆದು ಜೈನ ಸಭೆಯಲ್ಲಿ ಧರ್ಮ ಉಪದೇಶ ಮಾಡುತ್ತ ಅನೇಕ ಜ್ಞಾನದರ್ಶನ, ಸುಖ ಬಲ ಸಂಪನ್ನರಾಗಿ ಮೋಕ್ಷವನ್ನು ಪಡೆದರು ಎಂಬ ಹೇಳಿಕೆಯೂ ಇದೆ.

ಶ್ರೀ ಪೂಜ್ಯಪಾದರು ಕ್ರಿ.ಶ. ೧೫೦೧ರಲ್ಲಿ ಕನಗಿರಿಯಲ್ಲಿ ತಪಸ್ಸು ಮಾಡಿ ಇಲ್ಲಿಯೇ ಸಮಾಧಿಯಾಗಿರುವುದು ತಿಳಿದು ಬರುತ್ತದೆ. ಇಲ್ಲಿನ ಭವ್ಯ ಮಂಟಪದಲ್ಲಿ ಇವರ ಪಾದುಕೆಗಳು ಸ್ಥಾಪಿಸಲ್ಪಟ್ಟಿವೆ. ಶ್ರೀ ಪೂಜ್ಯಪಾದರು ಸರ್ವಾರ್ಥಸಿದ್ದಿ, ದಿಶಾಭಕ್ತಿ, ಸಮಾದಿಶಕೆ, ಜೈನೇಂದ್ರ, ವ್ಯಾಕರಣ, ಮಂತ್ರಶಾಸ್ತ್ರ, ಮುಂತಾದ ಮಹಾಗ್ರಂಥಗಳನ್ನು ರಚಿಸಿದ್ದಾರೆ. ವೈದ್ಯಶಾಸ್ತ್ರದಲ್ಲಿಯೂ ಇವರ ಹೆಸರು ಚಿರಸ್ಥಾಯಿಯಾಗಿ ಉಳಿದಿದೆ.

ಕನಗಿರಿ ಬೆಟ್ಟದ ಮೇಲೆ ಪಾರ್ಶ್ವನಾಥ ಬಸದಿ ಇದೆ. ಇದು ಪುರಾತನವಾದ ಜೈನಬಸದಿಯಾಗಿದೆ. ಈ ಬಸದಿಯು ಪೂರ್ವಾಭಿಮುಖವಾಗಿದ್ದು ದ್ರಾವಿಡ ಶೈಲಿಯ ವಿಮಾನವನ್ನು ಹೊಂದಿದೆ. ಇದು ಮೂಲಸಂಘ, ದೇಶಿಯ ಗಣ ಮತ್ತು ಪುಸ್ತಕಗುಚ್ಚ ಸಂಪ್ರದಾಯಕ್ಕೆ ಸೇರಿದ ಬಸದಿಯಾಗಿದೆ. ಈ ಬಸದಿಗೆ ಸಂಬಂಧಿಸಿದಂತೆ ೧೧೮೧ನೇ ಇಸವಿಗೆ ಸೇರಿರುವ ದಾನ ಶಾಸನವೊಂದು ಕಂಡುಬಂದಿದೆ. ಈ ಶಿಲಾಶಾಸನದಲ್ಲಿ ಯಾವುದೇ ರಾಜನ ಉಲ್ಲೇಖಗಳು ಕಂಡುಬರುವುದಿಲ್ಲ. ಅಚ್ಚುತ ವಿರೇಂದ್ರ ಎಂಬ ರಾಜ ಪ್ರಮುಖನು ಇಲ್ಲಿ ವಿದ್ಯಾನಂದ ಸ್ವಾಮಿಯ ಮೂಲಕ ಬಸದಿಯಲ್ಲಿ ಆಚಾರ್ಯರಿಗೆ ದಾನಗಳನ್ನು ನೀಡಿದ ವಿವರಗಳನ್ನು ಕೊಡುತ್ತದೆ. ಈ ಜೈನ ಬಸದಿ ವಿವಿಧ ಹಂತಗಳಲ್ಲಿ ನಿರ್ಮಾಣಗೊಂಡಿದೆ. ಗಂಗ, ಚೋಳರ ಕಾಲದ ದ್ರಾವಿಡ ಶೈಲಿಯ ವಿಮಾನವನ್ನು ಹೋಲುವ ಗರ್ಭಗೃಹ, ಶುಕನಾಶ, ನವರಂಗ ಇದೆ. ಬಸದಿಯ ಅಧಿಷ್ಠಾನವು ಬಹುತೇಕವಾಗಿ ಮಣ್ಣಿನಲ್ಲಿ ಮುಚ್ಚಿ ಹೋಗಿದೆ. ಈಗ ಉಳಿದಿರುವ ಭಾಗವನ್ನು ಗಮನಿಸಿದರೆ ನಾಲ್ಕು ದಿಂಡುಳ್ಳ ಅಧಿಷ್ಠಾನ ಇದಾಗಿತ್ತೆಂದು ತೋರುತ್ತದೆ.

ಪಾರ್ಶ್ವನಾಥ ಬಸದಿಯ ಗರ್ಭಗೃಹದಲ್ಲಿ ಏಳು ಎಡೆ ಸರ್ಪದ ಕೆಳಗೆ ಧ್ಯಾನಮುದ್ರೆಯಲ್ಲಿ ಕುಳಿತಿರುವ ೫ ಅಡಿ ಎತ್ತರದ ಪಾರ್ಶ್ವನಾಥನ ಶಿಲ್ಪ ಇದೆ. ಈ ಬಸದಿಯು ಮೂಲದಲ್ಲಿ ಒಂದು ಸುಂದರ ದ್ರಾವಿಡ ಶಿಬಿರ ಹೊಂದಿದ್ದಿರಬೇಕೆಂದು ತೋರುತ್ತದೆ. ಕಾಲಾನಂತರದಲ್ಲಿ ಹೊಸ ಶಿಖರ ನಿರ್ಮಾಣವಾಗಿದೆ. ಈ ದೇವಾಲಯದಲ್ಲಿ ಪದ್ಮಾವತಿ, ಜ್ವಾಲಾಮಾಲಿನಿ, ಕೂಷ್ಮಾಂಡುನಿ, ಬ್ರಹ್ಮದೇವರು, ಕುದುರೆ ಮುಂತಾದ ಶಿಲ್ಪಗಳು ಇಲ್ಲಿ ಕಂಡುಬರುತ್ತವೆ.

ಶಿಲಾಶಾಸನಗಳ ಪ್ರಕಾರ ಜೈನಮುನಿ, ಚಂದ್ರಸೇನಾಚಾರ್ಯ, ಚಂದ್ರಕೀರ್ತಿಮುನಿ, ವಜ್ರನಂದಿ ಸಿದ್ಧಾಂತದೇವ, ವಿದ್ಯಾನಂದಿ, ವಾದೀಭಸಿಂಹ, ಭಟ್ಟಾರಿಕ ಮುನಿ, ಶ್ರೀ ಮದ್ವಿವಾನಂದಮುನಿ, ಚಂದ್ರದೇವ, ಪ್ರಭಾಚಂದ್ರ, ಬಾಹುಬಲಿಪಂಡಿತ, ಲಲಿತಕೀರ್ತಿಭಟ್ಟಾರಕ, ಮುಂತಾದ ಪ್ರಸಿದ್ಧ ಧರ್ಮ ಜೈನಮುನಿಗಳು ಇಲ್ಲಿದ್ದು ಸಲ್ಲೇಖನ ವಿಧಿ ಸಮಾಧಿ ಪಡೆದವರೆಂದು ತಿಳಿದುಬರುತ್ತದೆ. ಈ ಭಾಗದಲ್ಲಿ ಆಳ್ವಿಕೆ ನಡೆಸಿದ ರಾಜವಂಶದವರಾದ ತಲಕಾಡಿನ ಗಂಗರು ಇಲ್ಲಿನ ಪಾರ್ಶ್ವನಾಥ ಬಸದಿಯ ಮುಂದೆ ಇರುವ ಪ್ರಾಂಗಣವನ್ನು ನಿರ್ಮಿಸಿದ್ದಾರೆ. ಗಂಗರಸರು ತಮ್ಮ ವಿಜಯ ಯಾತ್ರೆಯ ನಂತರ ಇಲ್ಲಿಗೆ ಭೇಟಿ ನೀಡಿದ್ದರಿಂದ ಎಲ್ಲೆಡೆ ಪಾರ್ಶ್ವನಾಥನೆಂದು, ೨೩ನೆಯ ತೀರ್ಥಂಕರನಿಗೆ ಇಲ್ಲಿ ವಿಜಯ ಪಾರ್ಶ್ವನಾಥ ಎಂದು ಕರೆಯಲಾಗಿದೆ. ತಲಕಾಡಿನ ಗಂಗರ

* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಮಹಾವಿದ್ಯಾಲಯ, ಮಂಡ್ಯ.

ನಂತರ ಚೋಳರು ಮತ್ತು ಹೊಯ್ಸಳರ ಶೈಲಿಯ ಬೆಳವಣಿಗೆಯನ್ನು ಗಮನಿಸಬಹುದಾಗಿದೆ. ಮೈಸೂರಿನ ರಾಜ ಒಡೆಯರು ಈ ಭಾಗದಲ್ಲಿ ದೇವಾಲಯಕ್ಕೆ ಪ್ರಾಕಾರಗಳನ್ನು ಕಟ್ಟಿಸಿ ಅನೇಕ ಗ್ರಾಮ ಮತ್ತು ಭೂಮಿಯನ್ನು ದತ್ತಿಯಾಗಿ ಬಿಟ್ಟಿರುವುದಾಗಿ ಶಾಸನಗಳಿಂದ ತಿಳಿದು ಬರುತ್ತದೆ.

ಕನಗಿರಿಯ ಸುತ್ತಣ ಕೋಟೆಯನ್ನು ಮೈಸೂರು ಅರಸರು ಕಟ್ಟಿಸಿರುತ್ತಾರೆ. ಮಹಾರಾಣಿ ದೇವೀರಮ್ಮಣ್ಣಿಯವರು ಬಸದಿಗೆ ದೀಪದ ಕಂಬಗಳನ್ನು ಅಲ್ಲದೆ ಚಿನ್ನಾಭರಣಗಳನ್ನು ಮಾಡಿಸಿಕೊಟ್ಟಿರುತ್ತಾರೆ. ೧೯೮೬ರಲ್ಲಿ ಸಮಾಧಿ ಹೊಂದಿದ ಶ್ರೀ ಚಂದ್ರಸಾಗರಮುನಿ ಮಹಾರಾಜರು ಇಲ್ಲಿನ ಬೆಟ್ಟಕ್ಕೆ ಮೆಟ್ಟಿಲುಗಳನ್ನು ನಿರ್ಮಿಸಿ ಇಪ್ಪತ್ನಾಲ್ಕು ತೀರ್ಥಂಕರರ ಕೂಟಗಳನ್ನು ಚರಣ ಪಾದುಕೆಗಳನ್ನು ಸ್ಥಾಪಿಸಿ ವಿದ್ಯುದ್ದೀಪದ ವ್ಯವಸ್ಥೆಯನ್ನು ಮಾಡಿ ಈ ಪ್ರಾಚೀನ ಕ್ಷೇತ್ರವನ್ನು ಬೆಳಕಿಗೆ ತರಲು ಶ್ರಮಿಸಿದ್ದಾರೆ.

ಆಧಾರಸೂಚಿ

೧. ಹೊನ್ನಹೊಳೆ ಗ್ರಂಥ, ಚಾಮರಾಜನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ ೨೦೦೬.

೨. ಎ.ಕ. ಸಂಚರ ೪ ರಲ್ಲಿ ಕಂಡು ಬರುವ ಶಾಸನಗಳ ಹಿನ್ನೆಲೆಯಲ್ಲಿ ರಚಿಸಲಾಗಿದೆ.

೩. ಡಾ. ಬಿ. ಬಸವರಾಜು, ತಗರಪುರ ರವರ ಐತಿಹ್ಯ ದರ್ಶನ.

೪. ಶ್ರೀ ಕ್ಷೇತ್ರದ ಹಿರಿಯ ವಿದ್ಯಾಂಸರ ಹೇಳಿಕೆ.

೫. ಡಾ. ಬಿ. ಬಸವರಾಜು ರವರ ಗ್ರಂಥ ಚೋಳಕಾಲದ ವಾಸ್ತು ಮತ್ತು ಶಿಲ್ಪ.

೬ ಎ.ಕ. ಸಂಪುಟ ೪ ಶಾಸನ ಸಂಖ್ಯೆ ೩೭೨ (IV ಚಾ.ನ.೧೫೮).

೧೦೪

ಬೆಳಗಾವಿ ಜಿಲ್ಲೆಯ ಜೈನ ಸಮಾಜ (ಕ್ರಿ.ಶ. ೧೩೩೬ರವರಗೆ)

ಡಾ. ಎಸ್.ಜಿ. ಚಲವಾದಿ*

ಜೈನ ಧರ್ಮವನ್ನು ಬೋಧಿಸುವವರು, ಪ್ರಚಾರ ಮಾಡುವವರು ಸ್ತ್ರೀ ಪುರುಷ ಮುನಿ, ಆರ್ಯಿಕೆಯರು, ಧರ್ಮವನ್ನು ಪೋಷಿಸಿ ಬೆಳೆಸುವವರು ಸ್ತ್ರೀ-ಪುರುಷ ಗೃಹಸ್ಥರು. ಈ ಜೈನ ಸಂಘವು ನಾಲ್ಕು ಸ್ತರದ ಮೇಲೆ ಹುಟ್ಟಿಕೊಂಡಂತೆ ಅದು ನಂತರದಲ್ಲಿ ಜೈನ ಸಮಾಜ ವ್ಯವಸ್ಥೆಯಾಗಿ ರೂಪು ಪಡೆಯಿತು.

ವೈವಾಹಿಕ ಜೀವನದಿಂದ ದೂರವಿರುವ ಮುನಿಗಳು, ಆರ್ಯಿಕೆರು ಗೃಹಸ್ಥರದವರಿಗೆ ಆತ್ಮಜ್ಞಾನವನ್ನು, ಧರ್ಮ ಬೋಧನೆಯನ್ನು ನೀಡಿ ಅವರ ಮನಸ್ಸನ್ನು ಪಾರಮಾರ್ಥಿಕ ವಿಚಾರದಲ್ಲಿ ಸ್ಥಿರಗೊಳಿಸುವ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು. ಶ್ರಾವಕ-ಶ್ರಾವಕಿಯರು ಗೃಹ ತ್ಯಾಗಿಗಳಾದ ಮುನಿ-ಆರ್ಯಿಕೆಯರಿಗೆ ಆಹಾರ ಮುಂತಾದವುಗಳನ್ನು ಕೊಟ್ಟು ಅವರು ಧರ್ಮದ ಚಿಂತನೆಯಲ್ಲಿ ಧ್ಯಾನಿಗಳಾಗಿ ಕಾಲ ಕಳೆಯಲು ವಾಸಕ್ಕಾಗಿ ಚೈತ್ಯಾಲಯ, ಬಸದಿಗಳನ್ನು ಕಟ್ಟಿಸಿ ಕೊಡುತ್ತಿದ್ದರು.

ಜೈನಧರ್ಮ ಒಂದು ಸಂಘಟಿತ ಸಮಾಜವೆಂದೆನಿಸಿಕೊಂಡರೂ ಹಿಂದೂ ಸಮಾಜದಂತೆ ಮುನಿ-ಆರ್ಯಿಕೆಯರಲ್ಲಿ ನಂಬಿಕೆ ಬೆಳೆಸಿಕೊಂಡ ಹಾಗೆ ಜೈನ ಸಮಾಜವು ಸಹ ವಿಸ್ತೃತ ಪ್ರಮಾಣದ ಮುನಿಗಳ ಮುಖಾಂತರ ಹಲವಾರು ಪಂಗಡಗಳು, ವರ್ಗಗಳು ಹುಟ್ಟಿಕೊಂಡವು. ಈ ಪಂಗಡಗಳಲ್ಲಿಯೇ ಸಂಘ, ಗಣ, ಗಚ್ಛ, ಪದ್ದಿಯ, ಸಮುದಾಯ, ಅನ್ವಯ, ಬಲಿ (ಬಳ್ಳಿ), ವಂಶ, ಮಂಡಳಿ ಎಂಬ ಹಲವಾರು ಉಪಪಂಗಡಗಳು ಹುಟ್ಟಿಕೊಂಡರು. ಅದಾಗ್ಯೂ ಇವೆಲ್ಲವೂ ಜೈನಸಿದ್ಧಾಂತದ ಒಂದೇ ನೀತಿ ತತ್ವಗಳಡಿಯಲ್ಲಿ ಬೇರೆ-ಬೇರೆ ವ್ಯಕ್ತಿಗಳ ಮುಖಾಂತರ ಹುಟ್ಟಿಕೊಂಡಂತವುಗಳಾಗಿವೆ.[೧]

ಇವುಗಳನ್ನು ನಾವಿಲ್ಲಿ ಜೈನ ಸಮಾಜದ ಪಂಗಡ ಉಪಪಂಗಡಗಳೆಂದು ಕರೆದು ಅವುಗಳ ಹಿನ್ನೆಲೆಯಲ್ಲಿ ನಾವು ಬೆಳಗಾವಿ ಜಿಲ್ಲೆಯ ಸಮಾಜ ವ್ಯವಸ್ಥೆಯನ್ನು ಅರಿತುಕೊಳ್ಳಲು ಪ್ರಯತ್ನಿಸೋಣ.

ಜನರ ಸಾಂಸ್ಕೃತಿಕ ಬದುಕು

ಬೆಳಗಾವಿ ಜಿಲ್ಲೆಯ ಜೈನ ಸಾಂಸ್ಕೃತಿಕ ಅಧ್ಯಯನದಲ್ಲಿ ಜೀವನ ಪ್ರಜ್ಞೆಯಿಂದ ಕೂಡಿದ ಶಾಸನಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಪಡುವರ ಅಂದಂದಿನ ಬದುಕಿನ ಚಿತ್ರಣಕ್ಕೆ ಶಾಸನಗಳಲ್ಲಿ ಅದರ ಕುರುಹೂ ಲಭ್ಯ ಇವುಗಳಿಂದ ಅಂದಿನ ಸಾಮಾಜಿಕ ಪ್ರಜ್ಞೆಯಿಂದ ಮೂಡಿಬಂದಿರುವ ಕೆಲವು ಕಾವ್ಯಗಳು ಅಂದಿನ ಜನಜೀವನಕ್ಕೆ ಜೀವಂತ ಸಾಕ್ಷಿಗಳಾಗಿವೆ.

೧) **ಪ್ರಭುವರ್ಗ:** ಜಿಲ್ಲೆಯ ಜೈನ ಸಂಸ್ಕೃತಿಯನ್ನು ಉಳಿಸಿ ಬೆಳಸಿದವರೆಂದರೆ ಜಿಲ್ಲೆಯಲ್ಲಿ ನಡೆಸಿದ ಸಾಮಂತರು, ಮಂಡಳೇಶ್ವರರು, ದಂಡನಾಯಕರು, ಮಂತ್ರಿಗಳು ಇತರರು ಸ್ತ್ರೀ ಪುರುಷರಲ್ಲಿ ಭೇದವೆಣಿಸದೆ ಇವರಿಬ್ಬರೂ ಆಡಳಿತದಲ್ಲಿ ಸಮನಾಗಿ ಆಡಳಿತ ನಡೆಸಿದವವರಾಗಿದ್ದಾರೆ. ಅವರಲ್ಲಿ ಪ್ರಮುಖವಾಗಿ ಸೌದತ್ತಿಯ ರಟ್ಟರು, ಗೋವೆಯ ಕದಂಬರು, ಭೈಸರು ಪ್ರಮುಖರು. ಜಿಲ್ಲೆಯ ಜೈನ ಸಮಾಜದ ಪ್ರಭುವರ್ಗದಲ್ಲಿ ಮೊದಲಿಗನೆನಿಸಿಕೊಂಡವನು ಸೇನಾಪತಿ ಶೃತಕೀರ್ತಿಯಾಗಿದ್ದಾನೆ. ಅದೇ ರೀತಿಯಾಗಿ ಜಯಕೀರ್ತಿ, ಭಾನುಶಕ್ತಿ ಇತರರು ಸೇವೆ ಸಲ್ಲಿಸಿರುವುದು ಜೈನಧರ್ಮದ ಪೋಷಣೆಗೆ ಸಾಕ್ಷಿಯಾಗಿದೆ. "ಶ್ರುತಕೀರ್ತಿಯ ಭೋಜಕ ವೃತ್ತಿಯನ್ನು ಮಗನಾದ ದಾಮಕೀರ್ತಿಯು ಮುಂದುವರೆಸಿಕೊಂಡು ಬಂದನು.[೨]

೧) ೨)"ಮೃಗೇಶವರ್ಮನ ದಂಡನಾಯಕನಾಗಿ ಯೋಧ ಜಯಂತ ಕಾರ್ಯ ನಿರ್ವಹಿಸುತ್ತಿದ್ದುದನ್ನು ಹಲಸಿ ತಾಮ್ರಪಟ ಶಾಸನ ಉಲ್ಲೇಖನ ಮಾಡುತ್ತದೆ.[೩]

೧) ೩) **ಮುನಿ-ಆರ್ಯಿಕೆಯುರು:** ಜೈನಧರ್ಮದ ನೆಲವೀಡುವ ಬೆಳಗಾಂವ ಜಿಲ್ಲೆ ಜೈನ ಮುನಗಳ, ಆರ್ಯಿಕೆಯರ, ಗೃಹಸ್ಥರ ವಿವಿಧ ಕಾರ್ಯ ಚಟುವಟಿಕೆಗಳ ನೆಲೆಯಾಗಿತ್ತು. ಮುನಿ-ಆರ್ಯಿಕೆಯರು ಜಿಲ್ಲಾ ಪ್ರದೇಶದಲ್ಲಿದ್ದುಕೊಂಡು ನಾಡಿನ ಯೋಗಕ್ಷೇಮ

* ಸಹಾಯಕ ಪ್ರಾಧ್ಯಾಪಕರು, ಪ್ರಾಚೀನ ಭಾರತೀಯ ಇತಿಹಾಸ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ವನ್ನು ವಿಚಾರಿಸುತ್ತಿದ್ದರೆ, ಇನ್ನು ಕೆಲವರು ದೂರ ವಿದ್ದರೂ ಹಲವಾರು ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು.

ಬೆಳಗಾವಿ ಜಿಲ್ಲೆಯಲ್ಲಿ ಕ್ರಿ.ಶ. ೪ನೇ ಶತಮಾನದಿಂದ ೧೬ನೇ ಶತಮಾನದ ಮಧ್ಯಾವಧಿಯಲ್ಲಿ ಅನೇಕ ಮುನಿಗಳು, ಆರ್ಯಿಕೆಯರು, ಆಗಿಹೋಗಿದ್ದು ಅವರಲ್ಲಿ ೧೫೬ ಜಿನಮುನಿಗಳಲ್ಲಿ ೧೦೪ ಮೂಲಸಂಘದವರು, ೩೮ ಜನರು ಯಾಪನೀಯ ಸಂಘದವರು ಮತ್ತು ಇಬ್ಬರು ಪರಲೂರು ಮತ್ತು ಇಬ್ಬರು ಕೂರ್ಚಕ ಸಂಘದವರು, ಒಬ್ಬರು ಅಹರಿಷ್ಠ ಸಂಘದವರೂ ಮತ್ತು ೯ ಜನ ಭಟ್ಟಾರಕರೂ ಆಗಿ ಹೋಗಿದ್ದಾರೆ. ಇವರೆಲ್ಲರ ಕುರಿತು ಕಲಭಾವಿ[೪], ಅಲಕಗಾ[೫], ಗೋಕಾಕ[೬], ಹಲಸಿ[೭], ಹೂಲಿ[೮], ಬೆನವಾಡ[೯], ಅಮ್ಮಣಗಿ[೧೦], ಸವದತ್ತಿ[೧೧], ಬೆಳವಡಿ[೧೨], ಕೊಣೂರು[೧೩], ಗೋಲಿಹಳ್ಳಿ[೧೪] ಗಳಲ್ಲದೆ ಇನ್ನೂ ಹಲವಾರು ಶಾಸನಗಳು ಮಾಹಿತಿ ನೀಡುತ್ತವೆ. ಒಂದೆರಡು ಶಾಸನಗಳು ಕಂತಿಯರ ಕುರಿತು ಉಲ್ಲೇಖ ಮಾಡುತ್ತವೆ. ಕುಲವಳ್ಳಿಯ ಶಾಸನವೊಂದು ರಾಮಶ್ರೀಕಂತಿಯ ಕುರಿತು ಉಲ್ಲೇಖ ಮಾಡುತ್ತದೆ.[೧೫]

೪) **ಶ್ರಾವಕರು (ಗೃಹಸ್ಥರು) ಮತ್ತು ಶ್ರಾವಕಿಯರು:** ಜೈನ ಸಮಾಜದಲ್ಲಿ ಮುನಿ-ಆರ್ಯಿಕೆಯರಂತೆ ಶ್ರಾವಕ ಮತ್ತು ಶ್ರಾವಕಿಯರಿಗೂ ಮಹತ್ವದ ಸ್ಥಾನವಿದೆ. ಜೈನ ಶ್ರಾವಕರು ಎಂಟು ಮೂಲಗುಣಗಳನ್ನು ಪಡೆದಿರಬೇಕಾಗಿತ್ತು. ಅವು ಯಾವುವೆಂದರೆ ಅಹಿಂಸೆ, ಸತ್ಯ, ಅಚಾರ್ಯ, ಬ್ರಹ್ಮಚರ್ಯ, ಮಿತಪರಿಗ್ರಹ ಮತ್ತು ಮಾಂಸ, ಮದ್ಯಗಳ ತ್ಯಾಗ. ಮೂಲ ಅಂದರೆ ಬೇರು ಚೆನ್ನಾಗಿ ಊರಿದಾಗ ಮುಂದೆ ಮರವು ಹೆಮ್ಮರವಾಗಿ ಬೆಳೆಯುವಂತೆ ಈ ಮೂಲ ಗುಣಗಳು ಮುಂದಿನ ಮುನಿ ಧರ್ಮಕ್ಕೆ ಗೃಹಸ್ಥನಾದವನಿಗೆ ಬೇರುಗಳಾಗಿವೆ. ಇವು ಯಾವ ಜೈನನಲ್ಲಿ ಇರುವುದಿಲ್ಲವೋ ಅಂಥವನು ಗೃಹಸ್ಥ (ಶ್ರಾವಕ) ನಾಗಲಾರ[೧೬]. ಗೃಹಸ್ಥರು ತಾವು ಜೀವನೋಪಾಯಕ್ಕೆ ಯಾವುದೇ ಉದ್ಯೋಗ ಮಾಡುತ್ತಿದ್ದರು. ಮೇಲಿನ ಎಂಟು ಗುಣಗಳನ್ನು ಹೊಂದಿರಬೇಕಾಗಿತ್ತು. ಜಿಲ್ಲೆಯ ಹೂಲಿ, ಸವದತ್ತಿ, ಕಾಲಭಾವಿ, ರಾಯಭಾಗ, ಗೋಕಾಗ, ಬೆಳಗಾವಿ, ಕೊಣ್ಣೂರು ಮುಂತಾದ ಕಡೆಗಳಲ್ಲಿ ಪ್ರಾಚೀನ ಕಾಲದಿಂದಲೂ ನೆಲೆನಿಂತು ಜೈನಧರ್ಮ ಉಳಿಸಿ ಬೆಳೆಸಿದ್ದಾರೆ.

೫) **ಸ್ತ್ರೀಯರ ಸ್ಥಾನಮಾನ:** ಜೈನ ಸಮಾಜದಲ್ಲಿ ಬಹಳ ಪ್ರಾಚೀನ ಕಾಲದಿಂದಲೂ ಸ್ತ್ರೀಯರಿಗೆ ವಿಶೇಷ ಸ್ಥಾನಮಾನ ಹಾಗೂ ಹೆಚ್ಚಿನ ಗೌರವವನ್ನು ಕೊಟ್ಟಿರುವುದು ಕಂಡುಬರುತ್ತದೆ. ಬೆಂಕಿ, ಆಕಸ್ಮಿಕ, ಲೂಟಿ ಮತ್ತು ದರೋಡೆ ಮುಂತಾದ ಸಂದರ್ಭಗಳಲ್ಲಿ ಮೊಟ್ಟಮೊದಲು ಮಹಿಳೆಯರನ್ನು ರಕ್ಷಿಸಬೇಕೆಂದು ಜೈನಧರ್ಮ ಸಾಹಿತ್ಯ ಕೃತಿಗಳು ಹೇಳುತ್ತವೆ.[೧೭] ದಿಗಂಬರ ಜೈನ ಸಂಪ್ರದಾಯದಲ್ಲಿ "ಮಹಾಪುರಾಣ" ಪ್ರಮಾಣಗ್ರಂಥ ಅದು ಪುರುಷರಿಗೆ ಹೇಗೋ ಹಾಗೆಯೇ ಸ್ತ್ರೀಯರಿಗೂ ಲೌಕಿಕ ವಿದ್ಯಾಭ್ಯಾಸವು ಅವಶ್ಯವೆಂದು ಹೇಳುತ್ತದೆ. ಅದೇ ರೀತಿ ಶ್ವೇತಾಂಬರ ಪಂಥವು ಪ್ರತಿಪಾದಿಸುತ್ತದೆ. ಆರ್ಯಿಕೆ ಎನಿಸಿ ಕೊಂಡವಳು ಕೇಶಮುಂಡನ ಮಾಡಿಸಿಕೊಳ್ಳಬೇಕಿತ್ತು. ಬಿಳಿಯ ಬಟ್ಟೆಯನ್ನು ಹಾಕಿಕೊಳ್ಳಬೇಕಿತ್ತು. ಆರ್ಯಿಕೆ ಯರನ್ನು ಮುಖ್ಯವಾಗಿ ಕಂತಿ, ಆರ್ಯಿಕೆ, ಅಜ್ಜಿಕೆ, ಅಜ್ಜಿ, ಸನ್ಯಾಸಿ, ಪರಿವ್ರಾಜಿಕೆಯರೆಂಬ ಪದಗಳಿಂದ ಕರೆಯಲಾಗುತ್ತಿತ್ತು. ಕಂತಿ, ಅಜ್ಜಿಕೆ, ಅರ್ಯಿಕೆಯೆಂಬ ಹೆಸರುಗಳೆ ಹೆಚ್ಚು ಪ್ರಚಲಿತದಲ್ಲಿದೆ. ಶ್ರಾವಕಿಯರಲ್ಲಿ ಮೊದಲಿಗಳಾಗಿ ಕಾಣಬರುವ ಮಹಿಳೆಯೆಂದರೆ ಆದಿಕದಂಬರಾಣಿ ಪ್ರಭಾವತಿದೇವಿ, ನಿಜಿಯಬ್ಬರಸಿ, ಹೂಲಿಗ್ರಾಮದ ಲಚ್ಚಬ್ಬರಸಿ, ಮುಂತಾದ ಮಹಿಳೆಯರು ಜೈನ ಸಮಾಜ ಪೋಷಿಸಿದವರಲ್ಲಿ ಪ್ರಮುಖರು.

೬) **ಮೂಢನಂಬಿಕೆಗಳು:** ಜೈನ ಧರ್ಮಾಚಾರ್ಯರು ಸಹ ಸಮಾಜದಲ್ಲಿ ಸಾಮಾನ್ಯ ಜನರ ಮನಸ್ಸನ್ನು ತಮ್ಮತ್ತ ಸೆಳೆದುಕೊಳ್ಳಲು ಪ್ರಯತ್ನಿಸುತ್ತಿದ್ದರು. ಇದು ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದ ಪದ್ಧತಿ. ಮಂತ್ರಗಳ ಬಲದಿಂದ ದೆವ್ವ ಬಿಡಿಸುವ, ಹಾವಿನ ವಿಷ ಇಳಿಸುವ, ರೋಗ ಪರಿಹಾರ ಮಾಡುವ ಮತ್ತು ಜನವಶ್ಯ, ಸ್ತ್ರೀವಶ್ಯ ಮಾಡಿಕೊಡುವ ಮಂತ್ರವಾದಿಗಳನ್ನು ಕಣ್ಣಾರೆ ಕಂಡ ನಯಸೇನ ಅವರ ಕೃತಿಗಳ ಕುರಿತು ಉಲ್ಲೇಖಿಸುತ್ತಾನೆ.[೧೮] ಮಂತ್ರ-ತಂತ್ರ ಪಂಡಿತರ ಪಾಂಡಿತ್ಯಕ್ಕೆ ಸಾಮಾನ್ಯ ಜನರು ಮರುಳಾಗುತ್ತಿದ್ದುದನ್ನು ನೋಡಿ ಅದರ ಲಾಭವನ್ನು ಜೈನಧರ್ಮಗುರುಗಳು ಪಡೆದುಕೊಳ್ಳುತ್ತಿರುವುದು ಸಹಜವಾಗಿದೆ. ಉದಾಹರಣೆ ಗಾಗಿ ಶಾಸನಗಳು ಮುನಿ-ಪಂಡಿತರ ಗುಣಗಾನ ಮಾಡುವಾಗ ಇಂತಹ ಮೂಢನಂಬಿಕೆಗಳ ಕುರಿತು ಸಂದರ್ಭಾನುಸಾರವಾಗಿ ಉಲ್ಲೇಖ ಮಾಡುವುದನ್ನು ಕಾಣುತ್ತೇವೆ.

೭) **ಶ್ರಾವಕರ ಆಚರಣೆಗಳು:** ಜೈನ ಸಮಾಜವು, ಜನಸಾಮಾನ್ಯರು ಚಾರುತ್ರ್ಯವನ್ನು ಶುದ್ಧಿಕರಿಸಿಕೊಳ್ಳಲು ಕೆಲವು ವ್ರತಾಚರಣೆಗಳನ್ನು ವಿಧಿಸಿದೆ. ಅವುಗಳಲ್ಲಿ

ಅಹಿಂಸೆ, ಸತ್ಯ, ಆಚಾರ, ಬ್ರಹ್ಮಚರ್ಯ, ಮಿತಪರಿಗ್ರಹ ಮತ್ತು ಮದ್ಯಮಾಂಸಗಳನ್ನು ತ್ಯಾಗ ಮಾಡಿ ಅನುಸರಿಸ ಬೇಕು.

೮) **ದತ್ತಿದಾನ:** ಕನ್ನಡದ ಮೊದಲ ರಾಜಮನೆತನವಾದ ಕದಂಬ ಕಾಕುಸ್ಥವರ್ಮನು ಜೈನಧರ್ಮಕ್ಕೆ ದಾನ ನೀಡಿ ಪೋಷಿಸಿದವರಲ್ಲಿ ಜಿಲ್ಲೆಯ ಮೊದಲ ವ್ಯಕ್ತಿ ಎನಿಸಿದ್ದಾನೆ. ಕಾಕುಸ್ಥವರ್ಮನ ಪ್ರಾಣವನ್ನು ಯುದ್ಧದಲ್ಲಿ ಕಾಪಾಡಿದ ಜೈನನಾದ ಅವನ ಸೇನಾಪತಿ ಶ್ರುತಕೀರ್ತಿಗೆ ಹಲಸಿಗಿ ಪ್ರದೇಶದಲ್ಲಿರುವ ಖೇಟಗ್ರಾಮದ ಬಳೋವರ ಕ್ಷೇತ್ರವನ್ನು ದಾನಮಾಡಿದನು. ಮತ್ತು ಈ ಖೇಟ ಗ್ರಾಮದಿಂದ ಒಂದು ಭಾಗವನ್ನು ಹಲಸಿಯ ಜೇನಾಲಯಕ್ಕೆ ಹಾಗೂ ಅದರ ಮೇಲ್ವಿಚಾರಕ ಮತ್ತು ತನ್ನ ಪ್ರಾಣರಕ್ಷಕ ಶ್ರುತಕೀರ್ತಿಗೆ ದಾನ ಮಾಡಿರುವುದನ್ನು ಶಾಸನ ಸ್ಪಷ್ಟಪಡಿಸುತ್ತದೆ.[೧೯] ಹೀಗೆ ಕದಂಬರ ಅರಸರ ಕಾಲದಲ್ಲಿ ದಾನದತ್ತಿ ನೀಡುವ ಮಹಾನ್ ಕಾರ್ಯದಲ್ಲಿ ಸ್ತ್ರೀಯರು ಸಹಭಾಗಿಗಳಾಗಿದ್ದಾರೆ. ಅಂತಹವರಲ್ಲಿ ಸಾಯಿಮನೃಪ ಹಮ್ಮಿಕಬ್ಬೆಯರ ಮಗಳಾದ ಲಚ್ಚಲೆಯು ಒಬ್ಬಳು. ಇವಳು ಹೂಲಿ ಗ್ರಾಮದಲ್ಲಿ ಹೂಲಿಯ ಕೇಶವಾದಿತ್ಯನಾಯಕ ಮತ್ತು ಸಾವಿರ ಜನ ಬ್ರಾಹ್ಮಣರಿಂದ ಭೂಮಿಯನ್ನು ಪಡೆದು ಬಸದಿ ಕಟ್ಟಿಸಿ ಬಸದಿ ಮತ್ತು ಬಸದಿಯ ಆಚಾರ್ಯ ಬಾಳಚಂದ್ರ ಭಟ್ಟಾರಕನಿಗೆ ಭೂಮಿದಾನ ಕೈಗೊಂಡಳೆಂದು ಪಂಚಲಿಂಗೇಶ್ವರ ದೇವಾಲಯದ ಶಾಸನ ಉಲ್ಲೇಖ ಮಾಡುತ್ತದೆ.

ಜಿಲ್ಲೆಯಲ್ಲಿ ದೊರೆತಿರುವ ಅನೇಕ ಶಾಸನಗಳು ಜೈನ ಸಮಾಜದ ಜನರ ದಾನದತ್ತಿಗಳ ಕುರಿತು ವಿವರಣೆ ನೀಡುತ್ತದೆ.

ಹಬ್ಬ ಹರಿದಿನಗಳು

ಹಿಂದೂಗಳಂತೆ ಜೈನರು ಸಹ ಹಬ್ಬಗಳನ್ನು ಆಚರಿಸುತ್ತಾರೆ. ಶಾಸನಗಳಲ್ಲಿ ಮುಖ್ಯವಾಗಿ ಎರಡು ಹಬ್ಬಗಳು ಅಥವಾ ವ್ರತಗಳ ಉಲ್ಲೇಖ ವಿಶೇಷವಾಗಿ ಬರುತ್ತದೆ. ಒಂದನೆಯದು "ಜೀವದಯಾಷ್ಟಮಿ" ಎರಡನೆಯದು "ನಂದೀಶ್ವರದಷ್ಟಮಿ" ಈ ಎರಡನೆ ಹಬ್ಬಕ್ಕೆ 'ತಿರುನಂದೀಶ್ವರ' ಎಂಬ ಹೆಸರುಂಟು. ಗೃಹಸ್ಥರಾದವರು ಅನಿವಾರ್ಯವಾಗಿ ತಿಳಿದೋ ತಿಳಿಯದೋ ರಾಗ ಕ್ರೋಧಾದಿಗಳಿಗೆ ಪರವಶರಾಗಿ ಅನೇಕ ಹಿಂಸೆಗಳನ್ನು ಮಾಡುತ್ತಾರೆ. ಈ ಹಿಂಸಾದೋಷವನ್ನು ಪರಿಹರಿಸಿಕೊಳ್ಳಲು ಗೃಹಸ್ಥರಾದವರು ಕೈಗೊಳ್ಳುವ ನೋಂಪಿಯೇ 'ಜೀವದಯಾಷ್ಟಮಿಯ ನೋಂಪಿ' ಇದಕ್ಕೆ ಕನ್ನಡದಲ್ಲಿ ಹಲವಾರು ಕಥೆಗಳು ದೊರಕುತ್ತವೆ.[೨೦]

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಮುನಿ, ಉತ್ತಮಕಮಲ, ಜೈನ, ಜೈನಸೆಕ್ಟ್ಸ್ ಅಂಡ್ಸ್ಕೂಲ್, ಪು.೪

೨. ಇಂಡಿಯನ್ ಆಂಟಿಕ್ವರಿ, ಸಂಪುಟ-೬, ಪು. ೨೫.

೩. ಇಂಡಿಯನ್ ಆಂಟಿಕ್ವರಿ, ಸಂಪುಟ-೬, ಪು. ೨೪.

೪. ಹಂದೂರ, ಬಿ.ಆರ್., ಜೈನ ಪರಂಪರೆಗೆ ಬೆಳಗಾವಿ ಪ್ರಾದೇಶಿಕ ಕೊಡುಗೆ, ಪು. ೨೫೨.

೫. ಇಂಡಿಯನ್ ಆಂಟಿಕ್ವರಿ, ಸಂಪುಟ-೧೮, ಪು. ೩೧೧.

೬ ಅದೇ ಸಂಪುಟ-೨, ಪು. ೨೧೫.

೭. ಎಪಿಗ್ರಾಫಿಯಾ ಇಂಡಿಕಾ, ಸಂಪುಟ-೨೧, ಪು. ೨೮೦.

೮. ಇಂಡಿಯನ್ ಆಂಟಿಕ್ವರಿ, ಸಂಪುಟ-೬, ಪು. ೨೧೫.

೯. ಅದೇ, ಪು. ೩೦.

೧೦. ಹಂದೂರ ಬಿ.ಆರ್., ಜೈನ ಪರಂಪರೆಗೆ ಬೆಳಗಾವಿ ಪ್ರಾದೇಶಿಕ ಕೊಡುಗೆ, ಪು. ೨೫೮.

೧೧. ಜೆ.ಬಿ.ಬಿ.ಆರ್.ಎ.ಎಸ್. ಸಂಪುಟ-೧೦, ಪು. ೧೯೪.

೧೨. ಅದೇ, ಪು. ೨೦೪.

೧೩. ಇಂಡಿಯನ್ ಆಂಟಿಕ್ವರಿ, ಸಂಪುಟ-೩೨, ಪು. ೨೧೭.

೧೪. ಜೆ.ಬಿ.ಬಿ.ಆರ್.ಎ.ಎಸ್., ಸಂಪುಟ-೧೦, ಪು. ೨೮೭.

೧೫. ಕೆ.ಪಿ. ಸಂಪುಟ-೫, ಪು. ೧೩೪.

೧೬. ಭುಜಬಲಶಾಸ್ತ್ರ, ಕೆ. ಮತ್ತು ದೇವಕುಮಾರ ಜೈನ, ಬಿ. ಜೈನಧರ್ಮ, ಪು. ೨೧೧-೨.

೧೭. ಕಮಲಾ ಹಂಪನಾ, ಅನೇಕಾತವದ, ಪು. ೨೩.

೧೮. ಮಲ್ಲಾಪುರ, ಬಿ.ವಿ., ನಯಸೇನ ಮತ್ತು ಅವನ ಸ್ಥಿತಿಗಳು, ಪು. ೨೯೨.

೧೯. ಹಂಪನಾ, ಚಂದ್ರಕೊಡೆ, ಪು. ೧೩೩.

೨೦ . ಚಿದಾನಂದಮೂರ್ತಿ, ಎಂ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೯೯.

೧೧೫

ಕೋಲಾರ ಪ್ರದೇಶದಲ್ಲಿ ನಗರೀಕರಣ ಪ್ರಕ್ರಿಯೆ ಒಂದು ಅವಲೋಕನ

ಡಾ. ಟಿ.ವಿ. ನಾಗರಾಜ*

ಭಾರತದಲ್ಲಿ ನಗರೀಕರಣ ಪ್ರಕ್ರಿಯೆಗೆ ಬಹು ದೊಡ್ಡ ಪರಂಪರೆ ಇದೆ. ಸುಮಾರು ೫೦೦೦ ವರ್ಷಗಳ ಹಿಂದೆಯೇ ಜಗತ್ತಿನ ಪ್ರಾಚೀನ ನಾಗರೀಕತೆಗಳಿಗೆ ಸರಿ ಸಾಟಿಯಾಗಿ ನಿಲ್ಲುವಂತಹ ಹರಪ್ಪ ಸಂಸ್ಕೃತಿ ಒಂದು ಪರಂಪರೆಯಾಗಿ ಶತಮಾನಗಳ ಕಾಲ ಮುಂದುವರಿದು ಬಂದಿದೆ. ಪ್ರಾಚೀನ ಮತ್ತು ಮಧ್ಯಕಾಲೀನ ಕಾಲಘಟ್ಟಗಳಲ್ಲಿ ಸಾಂಸ್ಕೃತಿಕ ಮತ್ತು ರಾಜಕೀಯ ವಿದ್ಯಮಾನಗಳು ನಗರ ಪ್ರಕ್ರಿಯೆಗಳನ್ನು ನಿರ್ದೇಶಿಸುತ್ತಾ ಬಂದಿವೆ. ದಕ್ಷಿಣ ಭಾರತವೂ ಇದಕ್ಕೆ ಹೊರತಾಗಿಲ್ಲವಾದರೂ, ಪ್ರಮಾಣ ಬದ್ಧತೆಯಲ್ಲಿ ಸರಿ ಸಾಟಿಯಾದವು ಗೋಚರಿಸಲಿಲ್ಲ. ಚರಿತ್ರೆಯ ಅಧ್ಯಯನಗಳಲ್ಲಿ ಹರಪ್ಪ ಸಂಸ್ಕೃತಿ ಹೊರತುಪಡಿಸಿ, ನಗರ ಚರಿತ್ರೆ ಬಹುದಿನಗಳ ಕಾಲ ಚರಿತ್ರಕಾರರ ಗಮನ ಸೆಳೆಯದೆ ಹೋಯಿತು. ಆದರೆ ಇತ್ತೀಚಿನ ವರ್ಷಗಳಲ್ಲಿ ಹಲವು ಬಗೆಯಲ್ಲಿ ವಿದ್ವಾಂಸರ ಗಮನ ಸೆಳೆಯಿತು. ಅವರಲ್ಲಿ ಅರ್ನಾಲ್ಡ್ ಟಾಯ್ನಬಿ, ಸ್ಪೆಂಗ್ಲರ್, ಗಾರ್ಡನ್ ಬಿಲ್ಡೆ, ಕಿಂಗ್ಸ್‌ಲಿ ಡೇವಿಸ್, ಛುರ್ಯೆ, ಮಾಕ್ಸ್ ಲೆಬರ್, ಬಿ.ಟಿ. ದತ್ತಿ, ಅಮಿತ್‌ರಾಯ್, ಆರ್. ಎಸ್. ಶರ್ಮಿ, ವಿ.ಕೆ. ಥಾಕುರ್, ಇಂದು ಬಂಗಾ, ಚಂಪಕಲಕ್ಷ್ಮಿ ಗಮನಾರ್ಹರು. ಕರ್ನಾಟಕದಲ್ಲಿ ಮೋಹನ್ ಕೃಷ್ಣ ರೈ ಮಾತ್ರ ಈ ನಿಟ್ಟಿನಲ್ಲಿ ನಗರೀಕರಣ ಕುರಿತಂತೆ ವಿಸ್ತೃತ ಅಧ್ಯಯನ ನಡೆಸಿದ್ದಾರೆ.

ನಗರೀಕರಣ ಒಂದು ಸಂಕೀರ್ಣ ಪ್ರಕ್ರಿಯೆ. ಆ ಪ್ರಕ್ರಿಯೆಯನ್ನು 'ನಗರೀಕರಣ' ಎಂಬುದಾಗಿ ಕರೆಯಲಾಗಿದೆ. ಇದರಲ್ಲಿ ನಗರಗಳ ಹುಟ್ಟು, ಬೆಳವಣಿಗೆ ಪ್ರಧಾನ ಅಂಶಗಳು. ಅವುಗಳ ವಿಸ್ತಾರ, ಹೆಚ್ಚಳ, ಬೆಳವಣಿಗೆಗಳನ್ನು ಗುರುತಿಸಲು ಸಾಧ್ಯ. ಈ ಪ್ರಕ್ರಿಯೆಯಲ್ಲಿ ಭೌಗೋಳಿಕ ಸನ್ನಿವೇಶಗಳು, ಕೃಷಿ ಕ್ಷೇತ್ರದ ಹೆಚ್ಚುವರಿ ಉತ್ಪಾದನೆ, ರಾಜಕೀಯ, ವ್ಯವಸ್ಥೆಯ, ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿದ್ದ ಕುಶಲಕರ್ಮಿಗಳ ಉತ್ಪಾದನೆ, ವ್ಯಾಪಾರ-ವಾಣಿಜ್ಯ, ಅರ್ಥವ್ಯವಸ್ಥೆ, ಸಾರಿಗೆ-ಸಂಪರ್ಕ, ಧರ್ಮ ಮೊದಲಾದವು ಕಾರಣಗಳಾಗಿ ಪರಿಣಮಿಸಿವೆ. ರಾಜಕೀಯ ಚಟುವಟಿಕೆಗಳು ಪ್ರಧಾನವಾಗಿದ್ದ ಕೇಂದ್ರಗಳು. ರಾಜಧಾನಿ ಪಟ್ಟಣಗಳಾಗಿ, ವಾಣಿಜ್ಯ-ವ್ಯಾಪಾರದ ಕೇಂದ್ರಗಳು ವಾಣಿಜ್ಯ ಕೇಂದ್ರಗಳಾಗಿ, ಧಾರ್ಮಿಕ ಚಟುವಟಿಕೆ ಕೇಂದ್ರಗಳು ಧಾರ್ಮಿಕ ಕೇಂದ್ರಗಳಾಗಿ ರೂಪುಗೊಂಡವು. ಈ ಹಿನ್ನೆಲೆಯಲ್ಲಿ ಕೋಲಾರ ಪ್ರದೇಶದ (ಅವಿಭಾಜಪ ಜಿಲ್ಲೆ) ನಗರೀಕರಣ ಪ್ರಕ್ರಿಯೆಯನ್ನು ಸೂಕ್ಷ್ಮ ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನವನ್ನು ಪ್ರಸಕ್ತ ಲೇಖನದಲ್ಲಿ ಮಾಡಲಾಗಿದೆ.

ಈ ಪ್ರದೇಶದ ನಗರೀಕರಣ ಪ್ರಕ್ರಿಯೆಯ ಅಧ್ಯಯನಕ್ಕೆ ಪೂರಕವಾಗಿ ಹಲವು ವ್ಯಾಖ್ಯಾನಗಳನ್ನು ಅರ್ಥೈಸಿಕೊಳ್ಳುವುದು ಅಗತ್ಯವಾಗಿದೆ. ಅರ್ನಾಲ್ಡ್ ಟಾಯನ್‌ಬಿ ರವರ ಪ್ರಕಾರ "ನಗರವು ಒಂದು ಸಮುದಾಯ, ಅಲ್ಲಿನ ಸಮುದಾಯ, ಅನುತ್ಪಾದಕ ವರ್ಗಕ್ಕೆ ಸೇರಿದವರು. ಬೇಕಾದ ಆಹಾರ ನಗರ ಪ್ರದೇಶದಲ್ಲಿ ಉತ್ಪಾದನೆಗೊಳ್ಳುವುದಿಲ್ಲ. ಆದರೆ ನಗರಗಳು ಕೇವಲ ಗ್ರಾಮ ಪ್ರದೇಶದ ಆಹಾರ ಮತ್ತು ಇತರ ಸರಕುಗಳನ್ನು ಖರೀದಿಸಲು ಅಥವಾ ವ್ಯಾಪಾರ ನಡೆಸುವ ಸ್ಥಳ ಮಾತ್ರ ಅಲ್ಲ" ಎಂದು ವ್ಯಾಖ್ಯಾನಿಸುತ್ತಾರೆ. ಸ್ಪೆಂಗ್ಲರ್ "ನಗರ ಚರಿತ್ರೆ – ನಗರೀಕರಣದ ಏಳು-ಬೀಳುಗಳ ಚರಿತ್ರೆ" ಎಂದು ಅಭಿಪ್ರಾಯ ಪಡುತ್ತಾರೆ. ಲೂಯಿಸ್‌ರವರು 'ನಗರ-ನಾಗರೀಕತೆಗಳ ಸಂಕೇತ' ಎಂದು ಸಂಕ್ಷಿಪ್ತ ವ್ಯಾಖ್ಯೆ ನೀಡುತ್ತಾರೆ. ಗಾರ್ಡನ್ ಬಿಲ್ಡೆರವರು "ಒಂದು ಗ್ರಾಮೀಣ ಪ್ರದೇಶ ನಗರವಾಗಿ ಪರಿವರ್ತಿಸಿಗೊಳ್ಳುವ ಪ್ರಕ್ರಿಯೆ" 'ನಗರ-ಕ್ರಾಂತಿ' ಎಂಬ ಪರಿಕಲ್ಪನೆಯಲ್ಲಿ ವಿವರಿಸಿದ್ದಾರೆ.

ಕೋಲಾರ ಪ್ರದೇಶ (ಅವಿಭಾಜಕ ಜಿಲ್ಲೆ) ಕರ್ನಾಟಕದ ದಕ್ಷಿಣ ಮೈದಾನ ಪ್ರದೇಶದಲ್ಲಿದೆ. ಪಶ್ಚಿಮಕ್ಕೆ ಬೆಂಗಳೂರು ಮತ್ತು ತುಮಕೂರು ಜಿಲ್ಲೆಗಳಿಂದಲೂ, ಉತ್ತರಕ್ಕೆ ಆಂಧ್ರಪ್ರದೇಶದ ಚಿತ್ತೂರು ಮತ್ತು ಅನಂತಪುರ ಜಿಲ್ಲೆಗಳಿಂದಲೂ, ದಕ್ಷಿಣಕ್ಕೆ ತಮಿಳುನಾಡುವಿನ ಧರ್ಮಾಪುರ ಮತ್ತು ಉತ್ತರ ಆರ್ಕಾಟ್ ಜಿಲ್ಲೆಗಳಿಂದ ಆವೃತ್ತಿಯಾಗಿದೆ.

'ಕೋಲಾಳ' ಅಥವಾ 'ಕುವಲಾಳಿ' ಗಂಗರ ರಾಜ್ಯಾಧಿಕಾರದ ಕೇಂದ್ರವಾಗಿದ್ದರೂ, ನಗರ ಸ್ವರೂಪ ಅಷ್ಟಾಗಿ ಕಂಡು ಬರುವುದಿಲ್ಲ. ಇದು 'ನಗರ'ವಾಗಿದ್ದಂತೆ ಯಾವುದೇ

*

ಆಧಾರ ಲಭ್ಯವಾಗಿರುವುದಿಲ್ಲ. 'ನಗರ', 'ಪುರ' ಎಂಬ ವಿಶೇಷಣಗಳು ಅನ್ವಯವಾಗಿಲ್ಲವಾದುದರಿಂದ ಗ್ರಾಮೀಣ ನೆಲೆಯಾಗಿ ಈ ಪ್ರದೇಶವನ್ನು ಗುರುತಿಸಿರುವುದು ಕಂಡು ಬಂದಿದೆ. ಕ್ರಿಶ. ೭ನೇ ಶತಮಾನದ ಬೆದರೂರಿನ ಭೂಮಿಕ್ರಮ ಗೌಡನ ಶಾಸನದಲ್ಲಿ (೬೩೪ ಕ್ರಿ.ಶ.) 'ಕೋಲಾರಪುರ'ದಿಂದ ಹೊರಡಿಸಿದ ಶಾಸನವಾಗಿದ್ದು, ಕೋಲಾಳ ಮಿಷ್ಯದ ವಿಕ್ರಮಾದಿತ್ಯ ಗೌಡನಿಗೆ ನೀಡಿದ್ದಾಗಿದೆ. ಈ ಒಂದು ಶಾಸನ ಹೊರತುಪಡಿಸಿದಂತೆ, ಈ ಪ್ರದೇಶದ 'ನಗರ' ಸ್ವರೂಪದ ಬಗ್ಗೆ ಬೇರೆ ಯಾವ ಆಧಾರವೂ ಕಂಡು ಬಂದಿಲ್ಲ. ಸುಮಾರು ೯ ಮತ್ತು ೧೦ನೇ ಶತಮಾನದ ಶಾಸನಗಳಲ್ಲಿ ಗಂಗರನ್ನು "ಕುವಲಾಳ ಪುರವರೇಶ್ವರ"ರೆಂದೆ ಕರೆಯಲಾಗಿದೆ. ಗಂಗರ ಆರಂಭಿಕ 'ರಾಜಧಾನಿ'ಯಾಗಿದ್ದುದರ ಹಿನ್ನೆಲೆಯಲ್ಲಿ ಈ ರೀತಿಯ ಬಿರುದಾವಳಿಗಳು ಮೂಡಿ ಬಂದಿದ್ದು, ರಾಜ್ಯಾಧಿಕಾರದ ಕೇಂದ್ರವಾಗಿದ್ದುದು ಸಹಜವಾಗಿಯೇ 'ನಗರ'ವೆನಿಸಿಕೊಂಡಿದೆ. ಕೋಟೆಯ ಅವಶೇಷಗಳಿದ್ದರೂ ಸಹ ಆ ಕಾಲಘಟ್ಟದ ನಗರೀಕರಣ ಲಕ್ಷಣಗಳು ಉಳಿದು ಬಂದಿಲ್ಲ. ಕ್ರಿ.ಶ. ೧೦೦೦ರ ವೇಳೆಗೆ ಈ ಪ್ರದೇಶವು ಒಂದು ಧಾರ್ಮಿಕ ಕೇಂದ್ರವಾಗಿ ಹೊರಹೊಮ್ಮಿದ್ದು ಅಲ್ಲಿನ ಕೋಲಾರಮ್ಮ ದೇವಾಲಯ ಮತ್ತು ಸಂಬಂಧಿತ ಧಾರ್ಮಿಕ ಸಂಸ್ಥೆಗಳು ಗಂಗರ ಕೊನೆ ಅರಸರ ಅಥವಾ ಚೋಳರ ಕೊಡುಗೆಗಳಾಗಿರಬಹುದು ಎಂದು ಅಭಿಪ್ರಾಯ ಪಡಲಾಗಿದೆ.

ಕನ್ನಡದ ೧೦ನೇ ಶತಮಾನದ ಸಾಹಿತ್ಯಿಕ ಕೃತಿಗಳಲ್ಲಿ ಸಹ ಹಲವು ನಗರ-ಪಟ್ಟಣಗಳ ಸಾಂಪ್ರದಾಯಿಕ ವರ್ಣನೆ ಕಂಡು ಬರುತ್ತಿದೆ. ಪಂಪ ತನ್ನ ಕೃತಿಯಲ್ಲಿ 'ಏಕಚಕ್ರಪುರ'ದ ವರ್ಣನೆ ನೀಡಿದರೂ ಸಹ ಇದು ಯಾವುದೇ ರಾಜ್ಯದ ರಾಜಧಾನಿ ಪಟ್ಟಣವಾಗಿರಲಿಲ್ಲ. ಆದರೂ ನಗರ ಶ್ರೇಣಿಗಳಲ್ಲಿ ಕೆಳಹಂತದ ನಗರವಾಗಿರುವುದು ಎಂದು ಕಾಣುತ್ತದೆ. ಈ ಕೃತಿಯಲ್ಲಿ ಅಲಿನ್ನ ಬೆಟ್ಟ, ಗುಡ್ಡ, ತೋಟ, ಗದ್ದೆ ಉಲ್ಲೇಖನಗಳ ಜೊತೆಯಲ್ಲಿ ದೇವಾಲಯ, ಅಂಗಡಿ, ಮುಂಗಟ್ಟುಗಳು, ಕುಬೇರನನ್ನು ಮೀರುವಷ್ಟು ಸಂಪತ್ತುಳ್ಳ ವಣಿಕ ವರ್ಗಗಳನ್ನು ವಿವರಿಸುತ್ತವೆ. ಆದರೆ ಇಲ್ಲಿನ ಕೋಟೆಗಳಾಗಲಿ, ಖಜಾನೆ ಯಾಗಲಿ ವರ್ಣನೆಗೆ ಒಳಗಾಗಿಲ್ಲದಿರುವುದು ಪ್ರಾಯಶಃ ಇಲ್ಲಿನ ಏಕಚಕ್ರಪುರ ರಾಜಕೀಯ-ಆಡಳಿತ ನೆಲೆಗಿಂತ ಒಂದು ಧಾರ್ಮಿಕ-ವಾಣಿಜ್ಯ ನೆಲೆಯಾಗಿ ಮಾತ್ರ ವಿಜೃಂಭಿಸಿರ ಬೇಕು. ಆವಣಿ, ಶತಶೃಂಗ ಪರ್ವತಗಳು, ಸಾದಲಿ - ಹೀಗೆ ಹಲವು ಸ್ಥಳಗಳು ಪುರಾಣ-ಐತಿಹ್ಯಗಳಲ್ಲಿ ಆಡಳಿತ-ಧಾರ್ಮಿಕ ನೆಲೆಗಳಾಗಿ ಕಂಡು ಬಂದರೂ ಸಹ ನಗರ ಸೀಮಾಂತದ ನೆಲೆಗಳಾಗಿರಲಿಲ್ಲ ಎಂಬುದು ಸೃಷ್ಟಿಗೊಳ್ಳುತ್ತಿದೆ.

ಪಾಲಾರ್ ನದಿಯ ಪೂರ್ವದಲ್ಲಿ ಬಾಣರ ಹಿಡಿತದಲ್ಲಿದ್ದು ದಕ್ಕೆ ಶಾಸನಗಳು ಮಾಹಿತಿ ನೀಡುತ್ತವೆಯಾದರೂ, ೭ನೇ ಶತಮಾನದ ಕೊನೆಯ ವೇಳೆಗೆ ಈ ಪ್ರದೇಶದಿಂದ ಚೋಳರಿಂದ ದೋಚಿಸಿಕೊಂಡು ತಮ್ಮ ಪ್ರಾಬಲ್ಯದ ಕುರುಹು ಗಳು ಸಹ ಉಳಿದಿರಲಿಲ್ಲ. ಗಂಗವಾಡಿ ಆಕ್ರಮಣದೊಂದಿಗೆ ಕೋಲಾರದ ಪೂರ್ವಭಾಗಗಳಿಗೆ ಧಾವಿಸಿದ ಹೊಯ್ಸಳರು ಚೋಳರಿಂದ ಗಂಗವಾಡಿ ಮೇಲೆ ಪೂರ್ಣ ಹತೋಟಿ ಪಡೆದರು. ತಲಕಾಡು, ಕುವಳಾಲಿಪುರಗಳಿಂದ ವಿಷ್ಣುವರ್ಧನ ಕೊಂಗು ಒಳಗೊಂಡಂತೆ ಗಂಗವಾಡಿ ೧೬,೦೦೦ರಲ್ಲಿ ಆಡಳಿತ ನಡೆಸಿದ ನಂಗಲಿ, ಆವಣೆ, ಬೀತದುಂಗೆಲ ಮತ್ತು ಮಡಿವಾಳಗಳು ಹೊಯ್ಸಳ ಕಾಲದಲ್ಲಿ ಪ್ರಾಬಲ್ಯ ಪಡೆದ ವಾದರೂ, ನಗರೀಕರಣ ಪ್ರಕ್ರಿಯೆಗೆ ಒಳಗಾದ ಯಾವ ಸುಳಿವೂ ಕಂಡು ಬರುವುದಿಲ್ಲ. ಹೊಯ್ಸಳ ಸಾಮ್ರಾಜ್ಯದ ವಿಭಜನೆಯಲ್ಲಿ ಈ ಪ್ರದೇಶವು ತಮಿಳು ಪ್ರದೇಶಗಳಲ್ಲಿ ಅಂತರ್ಗತವಾಗಿದ್ದಿತು. ದ್ವಾರಸಮುದ್ರದ ಪತನಾನಂತರ 'ಹೊಸವೀಡು' (ಗೌರಿ ಬಿದನೂರು ತಾಲೂಕಿನ ಹೊಸೂರು) ನಲ್ಲಿ ಹೊಸ ರಾಜಧಾನಿ ಸ್ಥಾಪನೆಗೊಂಡಿತಾದರೂ ಪ್ರವರ್ಧಮಾನಗೊಳ್ಳಲಿಲ್ಲ. ಆದರೆ ವಿಜಯನಗರ ಕಾಲಘಟ್ಟದಲ್ಲಿ 'ಮಡಲಬಾಗಿಲು', ಮುಳುವಾಯಿ ರಾಜ್ಯ' ಎಂದು ಕರೆಯಲಾಗಿದ್ದು, ಈ ರಾಜ್ಯದ ಆಡಳಿತವನ್ನು ಸಂಗಮ ವಂಶಸ್ಥರೇ ನಿರ್ವಹಿಸುತ್ತಿದ್ದರು. ಲಕ್ಕಣ್ಣ ಮತ್ತು ಮುದ್ದಣ್ಣ ಇಲ್ಲಿಂದ ಪ್ರಾದೇಶಿಕ ಕೇಂದ್ರದ ಆಡಳಿತ ನಡೆಸಿದರೆಂದು ಒಂದು ಪ್ರಮುಖ ಆಡಳಿತ ಕೇಂದ್ರ ಮಾತ್ರ ಆಗಿದ್ದಿತು. ಈ ಪ್ರದೇಶದಲ್ಲಿ ವಿಜಯನಗರ ಕಾಲಘಟ್ಟದ ಹಲವು ಪಾಳೆಯ ಪಟ್ಟಿಗಳು ಅಸ್ತಿತ್ವ ಪಡೆಯುವುದರೊಂದಿಗೆ ನೆಲೆಗಳು ಆಡಳಿತ ಕೇಂದ್ರಗಳಾಗಿ ಮತ್ತು ವಾಣಿಜ್ಯ ಚಟುವಟಿಕೆಗಳಿಗೆ ಪೂರಕವಾಗಿ ನಗರೀಕರಣ ಪ್ರಕ್ರಿಯೆಗೆ ಪೋಷಕವಾಗಿ ಬೆಳೆದು ಬಂದ ಸನ್ನಿವೇಶಗಳು ಗೋಚರಿಸತೊಡಗಿದವು. ಶಿಡ್ಲಘಟ್ಟ ತಾಲ್ಲೂಕಿನ "ಸುಗಟೂರು" ಪಾಳೆಯಗಾರರು ತಮ್ಮ ಪ್ರಾಬಲ್ಯವನ್ನು ಪುಂಗನೂರುವರೆಗೆ ವಿಸ್ತರಿಸಿ 'ಚಿಕ್ಕರಾಯ ನಾಡಪ್ರಭು' ಎಂದು ಖ್ಯಾತರಾಗಿದ್ದರು. ಇವರು ಕೋಲಾರ ಪೇಟೆ ವಿಸ್ತರಿಸಿ, ಕೋಟೆ ದುರಸ್ತಿ ಪಡಿಸಿದರು. ಹೊಸಕೋಟೆಯಲ್ಲಿ ನೂತನವಾಗಿ ಕೋಟೆ ನಿರ್ಮಿಸಿ ಈ ಭಾಗದಲ್ಲಿ ಆಡಳಿತ ನಡೆಸುತ್ತಿದ್ದ. ಲಕ್ಕಣ ಮತ್ತವರ ಉತ್ತರಾಧಿಕಾರಿಗಳನ್ನು ಹೊರಗಟ್ಟಿ, ತನ್ನ ನೆಲೆ-ಪಾಳೆಯವನ್ನು ವಿಸ್ತರಿಸಿದನು. ಈ ಸಂದರ್ಭದಲ್ಲಿ ಚಿಕ್ಕರಾಯ ತಿಮ್ಮೇಗೌಡ, ವೀರಶೈವ ವರ್ತಕರಾದ ಚಿಕ್ಕಣ್ಣಶೆಟ್ಟಿ ಮತ್ತು ಕಳಸಣ್ಣ ಶೆಟ್ಟರಿಗೆ ಆಶ್ರಯ ನೀಡಿ ಚಿಕ್ಕಣ್ಣ ಶೆಟ್ಟಿಗೆ ಕೋಲಾರಕ್ಕೂ ಮತ್ತು ಕಳಸಣ್ಣ ಶೆಟ್ಟರಿಗೆ

ಹೊಸಕೋಟೆಗೂ ವಣಿಕ ಚಟುವಟಿಕೆಗಳಿಗೆ ನಿಯೋಜಿಸಿದನೆಂದು, ಆ ನಂತರ ನೆಲೆಗಳಲ್ಲಿ ವಾಣಿಜ್ಯ ಚಟುವಟಿಕೆಗಳು ಇಮ್ಮಡಿಗೊಂಡವೆಂದು ಅಭಿಪ್ರಾಯ ಪಡಲಾಗಿದೆ.

೧೬ನೇ ಶತಮಾನದ ಮಧ್ಯಭಾಗದಿಂದ ದಾಳಿಕೋರರಿಂದ ತತ್ತರಿಸಿ ಈ ಪ್ರದೇಶ, ಮುಂದೆ ಬಿಜಾಪುರ ಸುಲ್ತಾನರು ಮರಾಠರು ಮತ್ತು ಆಂಗ್ಲರ ಸಾರ್ವಭೌಮತ್ವದ ಹೋರಾಟಗಳಿಗೆ ಕಣಭೂಮಿಯಾಗಿತ್ತು. ಹೀಗಾಗಿ ರಾಜಕೀಯ ಪ್ರಕ್ಷುಬ್ಧತೆ ಈ ಭಾಗದ ನಗರೀಕರಣ ಪ್ರಕ್ರಿಯೆಗೆ ಅವಕಾಶವೇ ನೀಡಲಿಲ್ಲ ಎಂಬುದು ದೃಢವಾಗಿದೆ. ಜಿಲ್ಲೆಯ ವಾಯವ್ಯ ಪ್ರದೇಶದಲ್ಲಿ ಯಲಹಂಕನಾಡ ಪ್ರಭುಗಳ ದಾಯಾದಿಗಳಾದ ಮಾರೇಗೌಡ ಮತ್ತು ಅವನ ವಂಶಸ್ಥರು ಚಿಕ್ಕಬಳ್ಳಪುರವನ್ನು ಕೇಂದ್ರವಾಗಿರಿಸಿಕೊಂಡು ನಂದಿದುರ್ಗ ತಳವಾರದುರ್ಗ, ಗುಡೆಬಂಡೆ ಮತ್ತು ಇಟಕಲ ದುರ್ಗಗಳಲ್ಲಿ ಕೋಟೆ–ಕೊತ್ತಲಗಳೆನ್ನು ನಿರ್ಮಿಸಿ ಪೇಟೆಗಳನ್ನು ವಿಸ್ತರಿಸಿದರು. ನೆರೆಯ ಗೊಮ್ಮನಾಯ್ಕನ ಪಾಳ್ಯದ ಅಸ್ತಿತ್ವ ರಾಜಕೀಯ ಪಾಳೆಯದ ಶಕ್ತಿಯಾಗಿ ಹೊರಹೊಮ್ಮಿದರೂ ಸಹ ನಗರೀಕರಣ ಪ್ರಕ್ರಿಯೆಗೆ ಯಾವುದೇ ರೀತಿಯ ಕೊಡುಗೆ ಇರಲಿಲ್ಲ.

ಈ ಪ್ರದೇಶ ವಸಾಹತು ಸಾರ್ವಭೌಮತ್ವಕ್ಕೆ ಒಳಪಡುವುದರೊಂದಿಗೆ ನಗರೀಕರಣ ಪ್ರಕ್ರಿಯೆಗೆ ಹೊಸ ಆಯಾಮವೊಂದು ಮೂಡಿ ಬಂದಿತು. ೧೯ನೇ ಶತಮಾನದ ಕೊನೆಯಲ್ಲಿ ನಗರ/ಪಟ್ಟಣಗಳು ತಾಲ್ಲೂಕು ಆಡಳಿತ ಘಟಕಗಳಾಗಿ ಅಸ್ತಿತ್ವ ಪಡೆದವು. ಸುಮಾರು ೧೧ ತಾಲ್ಲೂಕುಗಳು ನಗರ, ವ್ಯಾಪಾರ, ವಾಣಿಜ್ಯ ಚಟುವಟಿಕೆಗಳ ನೆಲೆಗಳಾಗಿ ರೂಪಾಂತರ ಹೊಂದಲಾರಂಭಿಸಿದವು. ಈ ಭಾಗದಲ್ಲಿ ಸ್ಥಾಪನೆಗೊಂಡ ರೈಲ್ವೆ ರಸ್ತೆ ಸಹ ಈ ವಾಣಿಜ್ಯೀಕರಣ ಸಂಪರ್ಕ ವಲಯದ ವಿಸ್ತರಣೆ, ಆಂಧ್ರದ ಗಡಿ ವ್ಯಾಪಾರ ಚಟುವಟಿಕೆಗಳು ಈ ಪ್ರದೇಶದ ನಗರೀಕರಣ ಪ್ರಕ್ರಿಯೆಗೆ ಸ್ವಲ್ಪ ಮಟ್ಟಿನ ಶಕ್ತಿ ತುಂಬಿದವು.

ಈ ಪ್ರದೇಶದಲ್ಲಿ ಕಂಡು ಬಂದಂತಹ ಉದ್ಯಮಶೀಲ ಆಧಾರಿತ ನಗರೀಕರಣವೆಂದರೆ "ಕೋಲಾರ ಚಿನ್ನದ ಗಣಿ" ಟೇಲರ್ ಕಂಪನಿ ಕೈಗಾರಿಕಾ ಉದ್ಯಮಶೀಲತೆಯಿಂದಾಗಿ ಈ ಭಾಗಕ್ಕೆ ವಲಸೆ ಬಂದ ಅಪಾರ ಸಂಖ್ಯೆಯ ಕುಶಲಕರ್ಮಿಗಳು, ಜನವಸತಿ ನೆಲೆಗಳು ವೃದ್ಧಿ ಸಹಾಯಕವಾದಂತೆ, ಇತರೆ ಚಟುವಟಿಕೆಗಳ ವಿಸ್ತರಣೆಗೂ ಕಾರಣವಾಯಿತು. ಕೇಂದ್ರ ಸರ್ಕಾರ B.E.M.C. ಸ್ಥಾಪನೆಯಾಗುವುದರೊಂದಿಗೆ ನಗರೀಕರಣ ಪ್ರಕ್ರಿಯೆ ಮತ್ತಷ್ಟು ವಿಸ್ತೃತಗೊಂಡು, ಆಧುನಿಕ ಸ್ಪರ್ಶ ಪಡೆಯಿತು.

ಗಂಗರ ಆರಂಭಿಕ ರಾಜಧಾನಿಯಾಗಿದ್ದನ್ನು ಹೊರತು ಪಡಿಸಿದಂತೆ ಕೋಲಾರ ಪ್ರದೇಶವು ಯಾವುದೇ ಕಾಲಘಟ್ಟದಲ್ಲಿ ಕೇಂದ್ರ ಆಡಳಿತ ನೆಲೆ (Core region) ಆಗಿರಲೇಇಲ್ಲ. ವಿವಿಧ ಕಾಲಘಟ್ಟಗಳಲ್ಲಿ ಬಾಣರಿಂದ ಆರಂಭಿಸಿ ಗಂಗ, ಹೊಯ್ಸಳ ವಿಜಯನಗರ, ಪಾಳೆಯಗಾರರು ಅಲ್ಲದೆ ರಾಜಕೀಯ ಪ್ರಕ್ಷುಬ್ಧತೆಯ ತಾಣವಾಗಿದ್ದರೂ ಪ್ರಮುಖ ನೆಲೆಗಳು ಪ್ರವರ್ಧಮಾನಕ್ಕೆ ಬರಲಿಲ್ಲ. ಪ್ರಾಯಶಃ ಈ ಭಾಗದಲ್ಲಿ ಹೆಸರಿಸಬಹುದಾದ ನದಿಗಳಿವೆಯಾದರೂ ಜೀವ ನದಿಗಳಲ್ಲಿ ಸಾಧಾರಣ ಮಳೆಯಾಶ್ರಿತ ಪ್ರದೇಶವಾಗಿದ್ದು ಸಮೃದ್ಧಿಯ ನೆಲೆ ಇದಾಗಿರಲಿಲ್ಲ. ಹೀಗಾಗಿ ಯಾವುದೇ ರಾಜಕೀಯ ಮನಸಿನ ಸಾಮ್ರಾಜ್ಯ ಭದ್ರವಾಗಿ ನೆಲೆಯಾಗಿರಲು ಸಾಧ್ಯವಾಗಲಿಲ್ಲ. ನಗರೀಕರಣ ಚರಿತ್ರೆಯಲ್ಲಿ ಹಲವು ರಾಜಧಾನಿ ಪಟ್ಟಣಗಳು ನಗರೀಕರಣ ಪ್ರಕ್ರಿಯೆಗೆ ಒಳಗಾಗಿದ್ದ ಅಂಶಗಳಲ್ಲಿ ಈ ಭಾಗ ಮಂಡಿತವಾಗಿದ್ದಿತು. ಈ ಪ್ರದೇಶದಲ್ಲಿ ಹಲವು ಧಾರ್ಮಿಕ ಕೇಂದ್ರಗಳು ಉದಾಹರಣೆಗೆ ನಂದಿ, ಕೈವಾರ, ಆವನಿ ಹೀಗೆ ಹಲವು ಪ್ರಮುಖ ನೆಲೆಗಳಾಗಿದ್ದರೂ ಇವು ಯಾವುವು ನಗರೀಕರಣ ಪ್ರಕ್ರಿಯೆಗೆ ಒಳಗಾಗದೆ ಕೇವಲ ಧಾರ್ಮಿಕ ಕೇಂದ್ರಗಳಾಗಿ ಮಾತ್ರ ಉಳಿದು ಬಂದಿವೆ.

ಈ ಪ್ರದೇಶವು ದಕ್ಷಿಣ ಭಾರತದ ಕಂಚಿ ಕಡೆಯಿಂದ ಉತ್ತರ ಭಾರತಕ್ಕೆ ಮತ್ತು ಕರಾವಳಿ ಪ್ರದೇಶಗಳಿಗೆ ಸಾಗುವ ವ್ಯಾಪಾರಿ ಮಾರ್ಗವಾಗಿದ್ದರೂ ಸಹ ನಗರೀಕರಣ ಪ್ರಕ್ರಿಯೆಗೆ ಒಳಗಾಗದೇ ಉಳಿದಿದ್ದಾದರೂ ಏಕೆ ಎಂಬುದಕ್ಕೆ ಆ ಪ್ರಾಂತ್ಯವನ್ನು ಯಲಹಂಕ ನಾಡ ಪ್ರಭುವಾದ ಕೆಂಪೇಗೌಡ. ಬೆಂಗಳೂರನ್ನು ಬೆಳೆಸುವುದರೊಂದಿಗೆ ಈ ಭಾಗವು ನೆರಳಾಗಿಯೇ ಉಳಿದು ಬರಬೇಕಾಯಿತು.

ಗ್ರಂಥಋಣ

೧. ಡಾ. ಕೆ. ಮೋಹನ್ ಕೃಷ್ಣ ರೈ, ವಸಾಹತು ಪೂರ್ವ ಕರ್ನಾಟಕದ ನಗರ ಚರಿತ್ರೆ.

೨. ಡಾ. ಕೆ. ಮೋಹನ್ ಕೃಷ್ಣ ರೈ, ವಸಾಹತು ಶಾಹಿ ಮತ್ತು ನಗರೀಕರಣ.

೩. Mysore Gezetteer, Kolar District Ashishankar K. (Ed).

೪. Hayavadana Rao., C. Mysore Gezetteer. Vol V.

೫. Malini Adiga., Making of South Karnataka.

೬ Epigrophics Carnataka, B.L. Rice welcome X.

೭. Insuiptions of Western Gangas : K.V. Ramesh

೮. ಕೋಲಾರ ಜಿಲ್ಲೆ ಇತಿಹಾಸ ಮತ್ತು ಪುರಾತತ್ವ, ಸಂಪಾದಕರು R. Gopal.

೧೦೩

ಕರ್ನಾಟಕದಲ್ಲಿ ಕೊಡಗು ರಾಜ್ಯದ ವಿಲೀನ, ೧೯೫೬; ಇತಿಹಾಸ ಕಥನದ ಅವಲೋಕನ

ಡಾ. ಮೀನಾಕ್ಷಿ ಎಂ.ಎಂ.*

ಈ ಪ್ರಬಂಧದಲ್ಲಿ ಗಿರಿನಾಡು ಪ್ರಾಂತ್ಯ ಕೊಡಗು ೧೯೫೬ರಲ್ಲಿ ರಾಜ್ಯಗಳ ಪುನರ್‌ಸಂಘಟನಾ ಸಮಿತಿಯ ಶಿಫಾರಸ್ಸಿನ ಮೇರೆಗೆ ವಿಶಾಲ ಮೈಸೂರು (ಇಂದು ಕರ್ನಾಟಕ) ರಾಜ್ಯದಲ್ಲಿ ವಿಲೀನಗೊಂಡ ಪ್ರಕ್ರಿಯೆ ಹಾಗೂ ಆ ಚರಿತಾರ್ಹ ಘಟನೆಯ ಕುರಿತು ಇರುವ ಐತಿಹಾಸಿಕ ಬರವಣಿಗೆ ಅಥವಾ ಇತಿಹಾಸ ಕಥನ (Historiography) ವನ್ನು ವಿಮರ್ಶಾತ್ಮಕವಾಗಿ ಅಧ್ಯಯನವನ್ನು ಮಾಡುವ ಪ್ರಯತ್ನ ಮಾಡಲಾಗಿದೆ.

ಆದ್ದರಿಂದ ಇಲ್ಲಿ, ಕೊಡಗು ಪ್ರಾಂತ್ಯವು ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ೧೯೫೬ರಲ್ಲಿ ವಿಲೀನಗೊಳ್ಳುವ ವರೆಗೂ, ಕೊಡಗಿನಲ್ಲಿ ಉಂಟಾದ ವಿವಿಧ ಬೆಳವಣಿಗೆಗಳ ಬಗ್ಗೆ ಸಮಕಾಲೀನ ಬರವಣಿಗೆಗಳು, ವಿಲೀನದ ಪರಿಸ್ಥಿತಿ ನಿರ್ಮಾಣವಾಗುತ್ತಿರುವುದನ್ನು ಕಣ್ಣಾರೆ ಕಂಡು, ವಿಲೀನಕ್ಕೆ ಸಾಕ್ಷಿಗಳಾದ ಬರಹಗಾರರು, ಇತಿಹಾಸಕಾರರು, ರಾಜಕಾರಣಿಗಳು, ಮುಂತಾದವರ ಗ್ರಹಿಕೆಗಳನ್ನು, ಅಭಿಪ್ರಾಯಗಳನ್ನು,- ಹೆಚ್ಚಾಗಿ ಸ್ಥಳೀಯ ಕೊಡವ ಹಾಗೂ ಕೊಡವೇತರ ಬರಹಗಾರರ ಬರವಣಿಗೆಗಳನ್ನು, ಅವಲೋಕಿಸುತ್ತಾ ಅವರ ವಾದಗಳಲ್ಲಿ ಕಂಡುಬರುವ ವಿವಿಧ ಅಂಶಗಳನ್ನು ವಿಮರ್ಶಿಸಲು ಪ್ರಯತ್ನಿಸಲಾಗಿದೆ. ನಾನು ವಿಮರ್ಶೆಗೆ ತೆಗೆದುಕೊಂಡ ಇತಿಹಾಸ ಕಥನವು ಮುಖ್ಯವಾಗಿ ಐ.ಎಂ. ಮುತ್ತಣ್ಣ, ಬಿ.ಡಿ. ಗಣಪತಿ, ಡಿ.ವಿ. ರಾಮಚಂದ್ರಾಚಾರ್, ಸಿ.ಪಿ. ಬೆಳ್ಳಿಯಪ್ಪ, ಪಿ.ಟಿ. ಬೋಪಣ್ಣ, ಮುಂತಾದವರ ಬರಹಗಳನ್ನು, ಅಭಿಪ್ರಾಯಗಳನ್ನು ಒಳಗೊಂಡಿದೆ.

ಕೊಡಗು ಪ್ರಾಂತ್ಯವು ಬಹಳ ಹಿಂದಿನಿಂದಲೂ ಒಂದು ಪ್ರತ್ಯೇಕ ಪ್ರಾಂತ್ಯವಾಗಿಯೇ ಉಳಿದುಕೊಂಡು ಬಂದಿದ್ದು ಹದಿನಾರನೇ ಶತಮಾನದ ಕೊನೆಯ ಭಾಗದಲ್ಲಿ ಇಕ್ಕೇರಿ ವಂಶಸ್ಥರಿಂದ ಪ್ರಾರಂಭವಾದ ಹಾಲೇರಿ ಆಳ್ವಿಕೆಗೆ ಒಳಪಟ್ಟಿತ್ತು. ಅದು ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲಿ ಸೈನಿಕ ಕಾರಣಗಳಿಂದಾಗಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿತು. ಹತ್ತೊಂಬತ್ತನೆಯ ಶತಮಾನದಲ್ಲಿ ಮತ್ತೊಮ್ಮೆ ಹಾಲೇರಿ ಮನೆತನದ ಆಳ್ವಿಕೆಗೆ ಒಳಗಾದ ಕೊಡಗು ಆಗಲೂ ಕೂಡ ತನ್ನ ರಾಜಕೀಯ ಭೌಗೋಳಿಕ ಪ್ರತ್ಯೇಕತೆಯನ್ನು ಕಾಯ್ದಿರಿಸಿಕೊಂಡಿತ್ತು.[೧] ಕೊಡಗಿನ ಪ್ರಾಕೃತಿಕ ಲಕ್ಷಣಗಳು ಅದರ ಪ್ರತ್ಯೇಕತೆಗೆ ಬಹಳಷ್ಟು ಕಾರಣವಾಗಿತ್ತು; ಆದರೂ ಅಕ್ಕಪಕ್ಕದ ನಾಡುಗಳ, ರಾಜ್ಯಗಳ ಪ್ರಭಾವವು ಪರಿಣಾಮಕಾರಿಯಾಗಿ ಹರಡಿತ್ತು ಎಂದರೆ ತಪ್ಪಾಗಲಾರದು. ಕನ್ನಡ ಭಾಷೆ, ಸಂಸ್ಕೃತಿ, ಆಡಳಿತ ಸಂಸ್ಥೆಗಳು ಕೂಡ ಹಾಲೇರಿ ರಾಜರ ಕಾಲದಲ್ಲಿ- ವೀರಶೈವ ಪಂಥದ ಪ್ರಭಾವ ಹಾಗೂ ಪದ್ಧತಿಗಳಿಂದೊಡಗೂಡಿ ಕೊಡಗಿನಲ್ಲಿ ಜನಪ್ರಿಯಗೊಂಡಿದ್ದವು.

ಕ್ರಿ.ಶ. ೧೮೩೪ರಲ್ಲಿ ಕೊಡಗು ಬ್ರಿಟಿಷರ ವಸಹಾತುಶಾಹಿ ಆಳ್ವಿಕೆಗೆ ಒಳಗಾಗಿ ಅನಂತರ ಭಾರತ ಸರ್ಕಾರದ ಸುಪರ್ದಿಗೆ ಒಳಪಟ್ಟಿತ್ತು.[೨] ಬ್ರಿಟಿಷ್ ವಸಾಹತುಶಾಹಿ ಆಡಳಿತವು ಕೊಡಗಿನಲ್ಲಿ ಪ್ರತ್ಯೇಕತೆಯ ಭಾವನೆಯು ಬಲವಾಗಿ ತಳವೂರಲು ಭದ್ರವಾದ ಅಡಿಗಲ್ಲನ್ನು ಹಾಕಿತ್ತೆಂದರೆ ತಪ್ಪಾಗಲಾರದು. ಕ್ರಿ.ಶ. ೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬರುತ್ತಿದ್ದಂತೆ ಕೊಡಗು ಪಾರ್ಟ್ 'ಸಿ' ಪ್ರಾಂತ್ಯವಾಗಿ ಪರಿಗಣಿಸಲ್ಪಟ್ಟಿತು, ನಂತರ ೧೯೫೦ರ ಸಂವಿಧಾನ ರಚನೆ ಯಾದ ನಂತರ ಕೂಡ ಇದೇ ಪರಿಸ್ಥಿತಿ ಮುಂದುವರಿಯಿತು.[೩] ೧೯೫೨ರಲ್ಲಿ ಭಾರತದ ಮೊತ್ತಮೊದಲ ಸಾರ್ವತ್ರಿಕ ಚುನಾವಣೆಗಳು ನಡೆದಾಗ, ಪಾರ್ಟ್ 'ಸಿ' ಪ್ರಾಂತ್ಯದಲ್ಲಿ ಕೂಡ ಶಾಸನಸಭೆಗೆ ಚುಣಾವಣೆಗಳು ನಡೆದವು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವು ಶಾಸನಸಭೆಯ ೨೪ ಸೀಟುಗಳಲ್ಲಿ ೧೬ನ್ನು ಪಡೆದರೆ, ಕೊಡಗು ಪ್ರತೇಕ ರಾಜ್ಯವಾಗಬೇಕೆಂದು ವಾದಿಸುತ್ತಾ ಚುನಾವಣೆಯಲ್ಲಿ ಸ್ಪರ್ಧಿಸಿದ ಪ್ರತ್ಯೇಕ ಅಥವಾ ವಿಲೀನ ವಿರೋಧಿ ಪಕ್ಷವು ೮ ಸೀಟುಗಳನ್ನು ಪಡೆಯಿತು. ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ ಸಿ.ಎಂ ಪೂಣಚ್ಚನವರು ಕೊಡಗು ರಾಜ್ಯದ ಮೊದಲ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು ಮತ್ತು ಅವರು ಕೊಡವರಾಗಿದ್ದರು. ಕೊಡಗು

* ಇತಿಹಾಸ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು.

ರಾಜ್ಯದ ಮುಖ್ಯಮಂತ್ರಿಯಾಗಿ ೧೯೫೨ರಿಂದ ೧೯೫೬ರ ನಡುವೆ ಕಾರ್ಯನಿರ್ವಹಿಸಿದ ಸಿ.ಎಂ. ಪೂಣಚ್ಚನವರ ಅವಧಿಯು ಆಡಳಿತಾತ್ಮಕವಾಗಿ ಹಾಗು ಹಾಗೆಯೇ ಪ್ರಗತಿಯ ದೃಷ್ಟಿಯಿಂದ ಅಪಾರ ಪ್ರಶಂಸೆಗೆ ಪಾತ್ರವಾಗಿ 'ರಾಮ ರಾಜ್ಯ'ವೆಂದು ಕರೆಯಲ್ಪಟ್ಟಿತು, ಎಂದು ಬಿ.ಡಿ. ಗಣಪತಿಯವರು ಅಭಿಪ್ರಾಯ ಪಡುತ್ತಾರೆ.

ಇದೇ ಅವಧಿಯಲ್ಲಿ ಭಾರತದಾದ್ಯಂತ ತಮ್ಮ ಅಸ್ಮಿಯತೆಯನ್ನು ಕಾಪಾಡಿಕೊಳ್ಳಲು ವಿವಿಧ ಭಾಷಿಕ ಗುಂಪುಗಳಿಂದ ಭಾಷಾವಾರು ರಾಜ್ಯಗಳ ಸೃಷ್ಟಿಗಾಗಿ ಒತ್ತಡಗಳು, ಹೋರಾಟಗಳು ಆರಂಭವಾದವು. ಆಂಧ್ರದಲ್ಲಿ ಉಂಟಾದ ಬೆಳವಣಿಗೆಯ ಹಿನ್ನಲೆಯಲ್ಲಿ ಹಾಗೂ ವಿವಿಧ ಒತ್ತಡಗಳಿಗೊಳಪಟ್ಟು ಪ್ರಧಾನ ನೆಹರುರವರು ಸ್ಟೇಟ್ಸ್ ರೀಆರ್ಗನೈಸೇಷನ್ ಕಮಿಷನ್‌ನನ್ನು ನೇಮಿಸಿದರು. ಕೊಡಗು ತನ್ನ ಪ್ರತ್ಯೇಕತೆಯನ್ನು ಕಾಪಾಡಿಕೊಂಡು ಬೇರೆ ರಾಜ್ಯವಾಗಿರಬೇಕೇ? ಅಥವಾ ಮುಂದೆ ರಚಿಸಲ್ಪಡುವ ಮೈಸೂರು ರಾಜ್ಯದಲ್ಲಿ ವಿಲೀನಗೊಳ್ಳಬೇಕೇ? ಎಂಬ ಮಹತ್ತರ ಪ್ರಶ್ನೆಗಳ ಕುರಿತು ನಿರ್ಧಾರ ಕೈಗೊಳ್ಳಬೇಕಾದ ಗುರುತರ ಜವಾಬ್ದಾರಿ ಮುಖ್ಯಮಂತ್ರಿ ಪೂಣಚ್ಚ ಹಾಗೂ ಕೊಡಗಿನ ಜನತೆಯ ಮೇಲೆ ಇದ್ದಿತ್ತು. ೧೯೫೬ರ ವೇಳೆಗೆ ಮಂಡಿಸಲ್ಪಟ್ಟ ರಾಜ್ಯಗಳ ಪುನಸಂಘಟನಾ ಸಮಿತಿಯ ವರದಿಯಲ್ಲಿ ಕೊಡಗನ್ನು ವಿಶಾಲ ಮೈಸೂರಿನಲ್ಲಿ ಸೇರ್ಪಡೆಗೊಳಿಸಲು ಶಿಫಾರಸ್ಸು ಮಾಡಲಾಗಿತ್ತು. ಪಾರ್ಟ್ 'ಸಿ' ರಾಜ್ಯಗಳನ್ನು ಅಕ್ಕಪಕ್ಕದ ರಾಜ್ಯಗಳೊಂದಿಗೆ ವಿಲೀನಗೊಳಿಸುವುದೇ ಅವರ ಸಮಸ್ಯೆಗಳಿಗೆ ಪರಿಹಾರವೆಂದು ಸಮಿತಿ ಈ ಮೊದಲೇ ಹೇಳಿತ್ತು.[೪] ಆದರೆ "ಒಂದು ವಿಶೇಷ" ಕೊಡುಗೆಯನ್ನು ಸಮಿತಿಯು ನೀಡಿತ್ತು; ಆದು ಕೊಡಗನ್ನು ಮೈಸೂರು ರಾಜ್ಯದಲ್ಲಿ ಒಂದು ಜಿಲ್ಲೆಯನ್ನಾಗಿ ಉಳಿಸಿಕೊಳ್ಳಬೇಕೆಂಬುದಾಗಿತ್ತು.[೫] ಸಮಿತಿಯ ವರದಿಯನ್ನು ಶಾಸನ ಸಭೆಯಲ್ಲಿ ಅದರ ಒಪ್ಪಿಗೆಗಾಗಿ ಮಂಡಿಸಲ್ಪಟ್ಟಾಗ ಧೀರ್ಘ ಚರ್ಚೆಯು ನಡೆದು ಅಂತಿಮವಾಗಿ ವಿಲೀನಪರ ನಿರ್ಧಾರವನ್ನು ೨೨ ಪರ ಹಾಗೂ ೨ ವಿರೋಧ ಮತಗಳ ಅಂತರದಲ್ಲಿ ತೆಗೆದುಕೊಳ್ಳಲಾಯಿತು. ಹೀಗೆ ಕೊಡಗು ತನ್ನ ಪ್ರತ್ಯೇಕ ರಾಜ್ಯದ ಅಸ್ಥಿತ್ವವನ್ನು ಕಳೆದುಕೊಂಡು ವಿಶಾಲ ಕರ್ನಾಟಕದ ಭಾಗವಾಯಿತು. ಇತಿಹಾಸಕಾರ ಐ.ಎಂ ಮುತ್ತಣ್ಣನವರು ಆಭಿಪ್ರಾಯಪಡುವಂತೆ ಕೊಡಗು ಒಂದು ರಾಜ್ಯವಾಗಿ ಒರೆಸಿ ಹಾಕಲ್ಪಟ್ಟಿತು ('Coorg was wiped at as a state').[೬]

ಕೊಡಗಿನ ವಿಲೀನವು ಒಂದು ಭಾವನಾತ್ಮಕ ವಿಷಯವಾಗಿ ಅಪಾರ ಚರ್ಚೆಗೆ ಒಳಗಾಯಿತು, ವಿಲೀನದ ಕುರಿತಂತೆ ನಾವು ಕೆಲವು ಪ್ರಶ್ನೆಗಳನ್ನು ಎತ್ತುತ್ತಾ, ಆ ಕುರಿತು ಇರುವ ಇತಿಹಾಸ ಕಥನವನ್ನು ಚರ್ಚೆಗೆತ್ತಿಕೊಂಡು ಅವುಗಳಿಗೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಬಹುದು.

೧. ಕೊಡಗನ್ನು ವಿಶಾಲ ಮೈಸೂರಿನಲ್ಲಿ ವಿಲೀನಗೊಳಿಸಿದ್ದು ಸರಿಯೇ?

೨. ಕೊಡಗು ಒಂದು ಪ್ರತ್ಯೇಕ ರಾಜ್ಯವಾಗಿ ತನ್ನ ಅಸ್ಥಿತ್ವವನ್ನು ಕಾಯ್ದಿರಿಸಿಕೊಳ್ಳಲು ಅರ್ಹತೆಗಳು/ಸಮರ್ಥನೆಗಳು ಇದ್ದವೇ?

೩. ಕೊಡಗು ವಿಲೀನಗೊಂಡಿದ್ದು ಕೊಡವ ಜನಾಂಗದ ಸೋಲನ್ನು ಹಾಗು ಕೊಡವೇತರ ಜನಾಂಗಗಳ ಗೆಲುವನ್ನು ಪ್ರತಿನಿಧಿಸುತ್ತದೆಯೇ?

೪. ಕೊಡಗಿನ ವಿಲೀನಕ್ಕೆ ಕಾರಣಕರ್ತರಾರು? ಕೇಂದ್ರ ಸರ್ಕಾರವೇ? ವಿಶಾಲ ಮೈಸೂರಿನ ಕಾಂಗ್ರೆಸ್ ಪಕ್ಷದ ನಾಯಕರೇ? ಅಥವಾ ಕೊಡಗಿನ ಮೊದಲ ಮುಖ್ಯಮಂತ್ರಿ ಸಿ.ಯಂ. ಪೂಣಚ್ಚನವರೇ? ಅಥವಾ ಕೊಡವ ಶಾಸನಸಭೆಯ ಸದಸ್ಯರೇ (ಎಂ. ಎಲ್. ಎ. ಗಳೇ)?

೫. ಸಿ.ಯಂ. ಪೂನಚ್ಚನವರು ಕೊಡವರಿಗೆ ದ್ರೋಹ ಬಗೆದರೆನ್ನುವ ಆರೋಪವನ್ನು ಒಪ್ಪಿಕೊಳ್ಳಬಹುದೇ?

೬. ಕೊಡಗಿನ ಜನತೆ, ಜನಪ್ರತಿನಿಧಿಗಳು, ಇತರ ಸಂಘಟನೆಗಳು ವಿಲೀನವನ್ನು ವಿರೋಧಿಸಿದ್ದರೂ, ಕೊಡಗನ್ನು ವಿಲೀನಗೊಳಿಸಲು ಈ ಮೊದಲೇ ಕೇಂದ್ರ ಸರ್ಕಾರ ನಿರ್ಧರಿಸಿದ್ದರಿಂದ, ಇದೊಂದು ಹಿಂದೆ ಸರಿಯಲಾದ ನಿರ್ಧಾರವಾಗಿತ್ತು ಎಂಬ ವಾದವನ್ನು ಒಪ್ಪಬಹುದೇ?

೭. ಕೊಡಗಿನ ಇಂದಿನ ಪರಿಸ್ಥಿತಿಯು ಕೊಡವರನ್ನು ಚಾರಿತ್ರಿಕ ಗತವನ್ನು ನೆನೆಪಿಸಿಕೊಂಡು 'ವಿಲೀನ'ವು ಒಂದು 'ಐತಿಹಾಸಿಕ ತಪ್ಪು' ಎಂದು ವಾದಿಸುತ್ತಿದ್ದಾರೆಯೇ? ಎಂಬ ಹಲವು ಪ್ರಶ್ನೆಗಳನ್ನು ನಾವಿಲ್ಲಿ ಕೇಳಬಹುದು.

ಕೊಡಗನ್ನು ವಿಶಾಲ ಮೈಸೂರಿನ ಭಾಗವಾಗಿಸಬೇಕೆಂದು ಕರ್ನಾಟಕ ಕಾಂಗ್ರೆಸ್ ಪಕ್ಷದ ನಿಲುವು ಅಚಲವಾಗಿದ್ದು ಅದು ವಸಹಾತುಷಾಹಿ ಕಾಲದಿಂದಲೂ ಹರಿದು ಬಂದಿರುವಂತಹದ್ದಾಗಿತ್ತು. ೧೯೩೨ರಲ್ಲಿ ಕನಾಟಕ ಸಾಹಿತ್ಯ ಸಮ್ಮೇಳನ ಕೂಡ ಕೊಡಗಿನಲ್ಲಿ ನಡೆದು ಈ ನಿಲುವನ್ನು ಒತ್ತಿ ಹೇಳಗಾಗಿತ್ತು. ಅಚ್ಚರಿಯ ಅಂಶವೆಂದರೆ ಕೇರಳವು ಕೂಡ ಕೊಡಗು ಆ ರಾಜ್ಯಕ್ಕೆ ಸೇರಬೇಕೆಂಬ ವಾದವನ್ನು ಮುಂದೆ ಇಟ್ಟಂತಹದ್ದು. ಐ.ಎಂ. ಮುತ್ತಣ್ಣನವರು ೧೯೫೩ರಲ್ಲಿ ಬರೆಯುತ್ತಾ ಕೊಡಗಿನವರ ಇರಾದೆಯು ಕೊಡಗನ್ನು ಪ್ರತ್ಯೇಕ

ಪ್ರಾಂತ್ಯವಾಗಿ ಉಳಿಸಿಕೊಳ್ಳುವುದಾಗಿತ್ತು; ಕೊಡಗು, ತನ್ನ ಬುದ್ಧಿವಂತ ಪ್ರಜೆಗಳು, ಚಿಕ್ಕಶಾಸನ ಸಭೆ ಮತ್ತು ಭಾರತದಲ್ಲೇ ಅತ್ಯಂತ ಪುಟ್ಟದಾದ ಮಂತ್ರಿಮಂಡಲವನ್ನು ಹೊಂದಿದ್ದು ಭಾರತದ ನೀತಿಗಳಿಗೆ ಪ್ರಮುಖ ಕೊಡುಗೆಗಳನ್ನು ನೀಡಬಹುದು ಎಂದು ಪ್ರತ್ಯೇಕತೆಯನ್ನು ಪ್ರತಿಪಾದಿಸುತ್ತಾರೆ.[೭] ಆದರೆ ಮುತ್ತಣ್ಣನವರು ತಮ್ಮ ನಂತರದ ೧೯೭೧ರ ಪುಸ್ತಕ Coorg Memoirs ದಲ್ಲಿ ಕೊಡಗಿನಲ್ಲಿ ೧೯೫೨–೫೬ ರ ಅವಧಿಯಲ್ಲಿ ರಾಮರಾಜ್ಯ ಅಸ್ತಿತ್ವದಲ್ಲಿತ್ತು ಎಂಬ ವಾದವನ್ನು ಒಪ್ಪದೆ, ಅಲ್ಲಿದ್ದಿದ್ದು 'ಕಪಟ ಪ್ರಜಾಪ್ರಭುತ್ವದ ನಿಜವಾದ ನಮೂನೆ' ಎಂದು ಮೂದಲಿಸುತ್ತ ಸಿ.ಎಂ. ಪೂಣಚ್ಚರವರನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ.[೮] ಆದರೆ ಅವರು ಕೊಡಗು ಶಾಸನ ಸಭೆಯಲ್ಲಿ ಕೊಡವೇತರ ಶಾಸಕರು ಹೆಚ್ಚು ಸಂಖ್ಯೆಯಲ್ಲಿದ್ದದ್ದು, ಅವರು ವಿಲೀನಪರವಾಗಿದ್ದು ಹಾಗೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಪಕ್ಷವು ಕೊಡಗಿನ ಕಾಂಗ್ರೆಸ್ ಪಕ್ಷದಲ್ಲಿ ವಿಲೀನಪರವಾಗಿದ್ದ ಸದಸ್ಯರನ್ನು ತನ್ನ ಪ್ರಾಂತ್ಯ ಸಮಿತಿಯಲ್ಲಿ ಹೊಂದಿದ್ದರಿಂದ ಪೂಣಚ್ಚನವರು ಅವರ ಪ್ರಭಾವಕ್ಕೊಳಗಾಗಿ ವಿಲೀನಪರ ನಿರ್ಧಾರವನ್ನು ತೆಗೆದುಕೊಂಡರೆಂದು ವಾದಿಸುತ್ತಾರೆ. ಇನ್ನೊಬ್ಬ ಸಾಹಿತಿ ಹಾಗು ಇತಿಹಾಸಕಾರರಾದ ಬಿ.ಡಿ. ಗಣಪತಿಯವರು ಕೊಡಗು ಕಾಂಗ್ರೆಸ್ ಪಕ್ಷವನ್ನು ದೂಷಿಸುತ್ತಾರೆ. ಕೊಡಗನ್ನು, ಕೊಡಗಿನ ಪ್ರಜೆಗಳ ಅಭಿಪ್ರಾಯಗಳನ್ನು ಸಂಗ್ರಹಿಸದೆ, ಅಥವಾ ಜನಮತ ಗಣನೆ ಮಾಡದೆ ಶಾಸಕಾಂಗವೇ ವಿಲೀನಪರ ನಿರ್ಧಾರ ತೆಗೆದುಕೊಂಡಿರುವುದು ಪ್ರಜಾಸತಾತ್ಮಕವಾದುದಲ್ಲ ಎಂದು ಅಭಿಪ್ರಾಯಪಡುತ್ತಾರೆ.[೯]

೧೯೮೦ ಹಾಗು ೧೯೯೦ರ ದಶಕಗಳಲ್ಲಿ ಕೊಡಗಿನಲ್ಲಿ ಹಲವಾರು ರಾಜಕೀಯ ಹಾಗು ರಾಜಕಿಯೇತರ ಸಂಘಟನೆಗಳು ಹುಟ್ಟಿಕೊಂಡು, ಕೊಡಗು ಅಪಾರವಾದ ಆದಾಯವನ್ನು ತೋಟಗಾರಿಕಾ ಕೈಗಾರಿಕಾ ಕ್ಷೇತ್ರದಿಂದ ಪಡೆದು ಕರ್ನಾಟಕಕ್ಕೆ ನೀಡುತ್ತಿದ್ದರೂ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿ, ಜಿಲ್ಲೆಯು ಹಿಂದುಳಿದಿರುವ ಕುರಿತು, ಹಾಗೂ ಪರಿಸರ ವಿನಾಶದ ಬಗ್ಗೆ ಧ್ವನಿಯೆತ್ತುವುದನ್ನು, ಹಾಗೂ ಕೆಲವು ಕೊಡವ ಸಂಘಟನೆಗಳು (ಕೆ.ಯು. ನಾಚಪ್ಪರ 'ಲೀವಾಕ್', ನಂತರ 'ಕೊಡಗು ರಾಜ್ಯ ಮುಕ್ತಿ ಮೋರ್ಚಾ', ಈಗ 'ಸಿ.ಎನ್.ಸಿ') ಕೊಡಗು ಪ್ರತ್ಯೇಕ ರಾಜ್ಯವಾಗಬೇಕೆಂದು ಚಳುವಳಿಗಳನ್ನು ಹೂಡುವುದನ್ನು ಕಾಣುತ್ತೇವೆ. ಈ ಬೆಳವಣಿಗೆಯ ಹಿನ್ನಲೆಯಲ್ಲಿ ಮತ್ತೊಮ್ಮೆ 'ಕೊಡಗಿನ ವಿಲೀನದ' ಪ್ರಶ್ನೆಯು ಚರ್ಚೆಯ ಕೇಂದ್ರ ಬಿಂದುವಾಗುವುದನ್ನು ಕಾಣಬಹುದು. ಕೊಡವರ ಸಂಘಟನೆಗಳು ಸಿ.ಎಂ. ಪೂಣಚ್ಚನವರನ್ನು ತೀವ್ರವಾಗಿ ಟೀಕಿಸುವ ಹಿನ್ನಲೆಯಲ್ಲಿ ಅವರನ್ನು ಸಮರ್ಥಿಸಿಕೊಳ್ಳುವ ಬರವಣಿಗೆಗಳೂ ಕೂಡ ಕಾಣಿಸಿಕೊಂಡವು. ಸಾಹಿತಿ ಹಾಗು ಪೂಣಚ್ಚನವರ ಜೀವನ ಚರಿತ್ರೆಕಾರ, ಡಿ.ಬಿ. ರಾಮಚಂದ್ರಾಚಾರ್ ಇವರು ತಮ್ಮ 'ಅವಕಾಶದ ಅಲೆಗಳ ಮೇಲೆ' ಎಂಬ ಕೃತಿಯಲ್ಲಿ ಪೂಣಚ್ಚನವರನ್ನು ಬಲವಾಗಿ ಸಮರ್ಥಿಸಿಕೊಳ್ಳುತ್ತಾರೆ.[೧೦] ಪೂಣಚ್ಚನವರು ಈ ಲೇಖಕರ ಪ್ರಕಾರ ಅಸಹಾಯಕರಾಗಿದ್ದರು; ಅಂದರೆ ಒಂದೆಡೆ, ಕೊಡಗಿನ ಪ್ರತ್ಯೇಕತೆಯನ್ನು ಆಗ್ರಹಿಸುತ್ತಾ ಪಂಡಿತ್ ನೆಹರೂರವರ ಸಿಟ್ಟಿಗೆ ತುತ್ತಾದರು; ಇನ್ನೊಂದೆಡೆ ಕರ್ನಾಟಕ ರಾಜ್ಯ ಕಾಂಗ್ರೆಸ್ ನಾಯಕರಾಗಿದ್ದ, ಎಸ್. ನಿಜಲಿಂಗಪ್ಪ, ಟಿ. ಸಿದ್ದಲಿಂಗಪ್ಪ, ಹೆಚ್.ಸಿ. ದಾಸಪ್ಪ ಮುಂತಾದವರು ಪೂಣಚ್ಚನವರು ಅಧಿಕಾರದಾಹಿ ಎಂದು ಟೀಕಿಸುತ್ತಾ, ಕೊಡಗನ್ನು ಪ್ರತ್ಯೇಕ ರಾಜ್ಯವನ್ನಾಗಿ ಉಳಿಸಿ ಕೊಂಡು ತಾನೇ ಮುಖ್ಯಮಂತ್ರಿಯಾಗಿ ಮುಂದುವರಿಯಲು ಅವರು ಇಚ್ಚಿಸುತ್ತಿದ್ದಾರೆಂದು ದೂರುತ್ತಾ ಅವರ ಉದ್ದೇಶಗಳ ಬಗ್ಗೆ ಒಂದು ರೀತಿಯಲ್ಲಿ ಸಂಶಯ ಹೊಂದಲಾರಂಬಿಸಿದರು. ಈ ಕಡೆ ಕೊಡವರು ಹಾಗೂ ವಿಲೀನ ವಿರೋಧಿಗಳು, ಪೂಣಚ್ಚನವರು ಕೊಡಗನ್ನು ಕರ್ನಾಟಕಕ್ಕೆ ಸೇರ್ಪಡೆಗೊಳಿಸಿ ಅದರ ಪ್ರತ್ಯೇಕತೆಯನ್ನು ನಾಶಪಡಿಸಲು ಪ್ರಯತ್ನಿಸುತ್ತಿದ್ದಾರೆಂದು ಭಾವಿಸತೊಡಗಿದಾಗ ಪೂಣಚ್ಚನವರ ಸ್ಥಿತಿ ಯಾರಿಗೂ ಬೇಡವಾಗಿತ್ತೆಂದು ಡಿ.ಬಿ. ರಾಮಚಂದ್ರಾಚಾರರು ವಾದಿಸುತ್ತಾರೆ.[೧೧]

ಸ್ವತಃ ಬರಹಗಾರರು ಹಾಗೂ ಇತಿಹಾಸಕಾರರೂ ಆಗಿರುವ ಸಿ.ಯಂ ಪೂಣಚ್ಚನವರ ಮಗ ಸಿ.ಪಿ. ಬೆಳ್ಳಿಯಪ್ಪನವರು ತಮ್ಮ ಬರಹಗಳಲ್ಲಿ, ತಮ್ಮ ತಂದೆಯವರು ಕೊಡಗಿನ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ವಿಲೀನಪರ ನಿರ್ಧಾರವನ್ನು ತೆಗೆದುಕೊಂಡರೆಂದು ವಾದಿಸುತ್ತಾರೆ.[೧೨] ಮತ್ತು ಶಾಸನಸಭೆಯಲ್ಲಿ ಇವರ ನಿರ್ಧಾರವನ್ನು ವಿಲೀನ ವಿರೋಧಿ ಪಕ್ಷದ ೮ ಜನರಲ್ಲಿ ೬ ಜನರು ವಿಲೀನದ ಪರವಾಗಿ ಮತ ಹಾಕುವುದರ ಮೂಲಕ ಬೆಂಬಲಿಸಿದರೆಂದು ವಾದಿಸುತ್ತಾರೆ; ಅಂದರೆ ಒಟ್ಟು ೨೪ ಶಾಸಕರಲ್ಲಿ ೨೨ ಜನರು ವಿಲೀನವನ್ನು ಬೆಂಬಲಿಸಿದರೆಂದಾಗುತ್ತದೆ; ಅದರಲ್ಲೂ ವಿಲೀನದ ತೀವ್ರವಿರೋಧಿಯಾಗಿದ್ದ, ಪ್ರತ್ಯೇಕ ಪಕ್ಷದ ನಾಯಕ, ಸ್ವಾತಂತ್ರ್ಯ ಹೋರಾಟಗಾರ ಪದ್ಯಂಡ ಬೆಳ್ಳಿಯಪ್ಪನವರೇ ವಿಲೀನ ಪರವಾಗಿ ಮತ ಚಲಾಯಿಸಿದ್ದನ್ನು ಬೆಳ್ಳಿಯಪ್ಪನವರು ಉಲ್ಲೇಖಿಸುತ್ತಾರೆ. ಟಿ.ಪಿ. ಬೋಪಣ್ಣನವರು ತಮ್ಮ ಕೃತಿಯಲ್ಲಿ ಕೊಡಗಿನ ಸೇರ್ಪಡೆಯನ್ನು ತೀವ್ರವಾಗಿ ಪ್ರಶ್ನಿಸುತ್ತಾರೆ;[೧೩] ಅವರಿಗೆ ೧೯೫೬ರ ನವೆಂಬರ್ ೧ ಒಂದು 'ಕರಾಳ ದಿನ' ವಾಗಿದೆ. ರಾಜಕೀಯ ವಿದ್ರೋಹವು ಕೊಡಗನ್ನು ವಿಲೀನಗೊಳಿಸಿದ್ದು, ಇದೊಂದು 'ಐತಿಹಾಸಿಕ ತಪ್ಪು' ಎಂದು

ಅವರು ಅಭಿಪ್ರಾಯಪಡುತ್ತಾ ಇಂದಿನ ಕೊಡಗಿನ ಪರಿಸ್ಥಿತಿಯನ್ನು ಸುಧಾರಿಸಲು ಸರ್ಕಾರವು ಕ್ರಮ ಕೈಗೊಳ್ಳದಿದ್ದಲ್ಲಿ ಕೊಡವರು ಮತ್ತೆ ಪ್ರತ್ಯೇಕತೆಯನ್ನು ಬಯಸಿಯಾರು ಎಂದು ಎಚ್ಚರಿಕೆಯನ್ನು ನೀಡುತ್ತಾರೆ. ಕೊಡಗಿನ ವಿಲೀನದ ಪರವಾಗಿ ಕೊಡವೇತರ ಬರವಣಿಗೆಗಳು ಕಡಿಮೆಯಿದ್ದು, ಕನ್ನಡ ಮತ್ತು ಕೊಡಗಿನ ಸಂಸ್ಕೃತಿಗಳು ಹಲವು ಶತಮಾನಗಳಿಂದ ಒಂದಕ್ಕೊಂದು ನಿಕಟ ನಂಟು ಹೊಂದಿದ್ದರ ಹಿನ್ನಲೆಯಲ್ಲಿ ಕರ್ನಾಟಕದಲ್ಲಿ ಕೊಡಗಿನ ವಿಲೀನವು ಬಹು ಹಿಂದೆಯೇ ನಿರ್ಧಾರವಾದುದೆಂದು ಅವುಗಳು ಅಭಿಪ್ರಾಯ ಪಡುತ್ತವೆ.

ಹೀಗೆ ಕೊಡಗಿನ ವಿಲೀನದ ವಿಚಾರವು ಕೊಡಗಿನ ಇಂದಿನ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗಳ ಹಿನ್ನಲೆಯಲ್ಲಿ ಮತ್ತೊಮ್ಮೆ ಚರ್ಚೆಯ ವಿಷಯವಾಗಿದೆ. ವಿಲೀನದ ವಿಚಾರದಲ್ಲಿ ಸ್ಥಳಿಯರಿಗೆ ಧ್ವನಿಯಿತ್ತೇ ಅಥವಾ ಅದು ಮೇಲಿನಿಂದ ಅಂದರೆ ಕೇಂದ್ರದಿಂದ ಹೇರಲ್ಪಟ್ಟ ನಿರ್ಧಾರವೇ, ಕೊಡಗು ತನ್ನ ಪ್ರತ್ಯೇಕತೆಯನ್ನು ಕಾಯ್ದುಕೊಂಡು ಒಂದು ರಾಜ್ಯವಾಗಿ ಯಶಸ್ವಿಯಾಗಿ ಅಸ್ಥಿತ್ವದಲ್ಲಿರಲು ಸಾಧ್ಯವಿತ್ತೆ?, ಇತ್ಯಾದಿ ಪ್ರಶ್ನೆಗಳ ಕುರಿತು ಇನ್ನೂ ಅಧ್ಯಯನಕ್ಕೆ ವಿಪುಲ ಅವಕಾಶಗಳಿವೆಯೆಂದು ಹೇಳಬಹುದು.

ಆಧಾರಸೂಚಿ

೧. ಡಿ.ಎನ್. ಕೃಷ್ಣಯ್ಯ, ಕೊಡಗಿನ ಇತಿಹಾಸ, ಮೈಸೂರು, ೧೯೭೪, ಪುಟ ೨೯೪.

೨. ಬಿ.ಎನ್. ಶ್ರೀಸತ್ಯನ್, ಮೈಸೂರ್ ಸ್ಟೇಟ್ ಗೆಝೆಟಿಯರ್, ಕೂರ್ಗ್ ಸ್ಟೇಟ್, ಬೆಂಗಳೂರು, ೧೯೬೫, ಪುಟ ೮೨.

೩. ಕೂರ್ಗ್ ಸ್ಟೇಟ್, ಎ ಬ್ರೀಫ್ ಅಕೌಂಟ್ ಆಫ್ ದಿ ಪ್ರೋಗ್ರೆಸ್ ಮೇಡ್ ಡ್ಯೂರಿಂಗ್ ೧೯೫೨-೫೬, ಗೌವರ್‌ಮೆಂಟ್ ಆಫ್ ಕೂರ್ಗ್, ಮಡಿಕೇರಿ, ೧೯೫೭, ಪುಟ ೫.

೪. ಬಿ.ಎನ್. ಶ್ರೀಸತ್ಯನ್, ಅದೇ, ಪುಟ ೮೨.

೫. ಬಿ.ಎನ್. ಶ್ರೀಸತ್ಯನ್, ಅದೇ, ಪುಟ ೮೨.

೬ ಐ.ಎಂ. ಮುತ್ತಣ್ಣ, ಕೂರ್ಗ್ ಮೆಮೊಯಿರ್ಸ್ (ದಿ ಸ್ಟೋರಿ ಆಫ್ ದಿ ಕೊಡವಾಸ್) ಮಡಿಕೇರಿ, ಪುಟ ೧೧೦.

೭. ಐ.ಎಂ. ಮುತ್ತಣ್ಣ, ಎ. ಟೈನಿ ಮಾಡೆಲ್ ಸ್ಟೇಟ್ ಆಫ್ ಸೌತ್ ಇಂಡಿಯಾ, ಮೈಸೂರ್, ೧೯೫೩, ಪುಟ. ೧೧೯.

೮. ಐ.ಎಂ. ಮುತ್ತಣ್ಣ, ಕೂರ್ಗ್ ಮೆಮ್ವಾ, ಮೈಸೂರು, ೧೯೭೧, ಪುಟ ೭೦.

೯. ಬಿ.ಡಿ. ಗಣಪತಿ, ಕೊಡವಾಸ್: ದೇರ್ ಕಸ್ಟಮ್ಸ್ ಆ್ಯಂಡ್ ಕಲ್ಚರ್ಸ್, ಮಂಗಳೂರು, ೧೯೬೭, ಪುಟ ೧೭೭.

೧೦. ಡಿ.ಬಿ. ರಾಮಚಂದ್ರಾಚಾರ್, ಅವಕಾಶದ ಅಲೆಗಳ ಮೇಲೆ, ವಿರಾಜಪೇಟೆ, ೧೯೯೦, ಪುಟ ೧೨೩.

೧೧. ಡಿ.ಬಿ. ರಾಮಚಂದ್ರಾಚಾರ್, ಅದೇ, ಪುಟ ೧೨೪.

೧೨. ಸಿ.ಪಿ. ಬೆಳ್ಳಿಯಪ್ಪ, ನಗ್ಗೆಟ್ಸ್ ಫ್ರಂ ಕೂರ್ಗ್ ಇಸ್ಟರಿ, ಬೆಂಗಳೂರು, ೨೦೦೯, ಪುಟ ೧೫೧.

೧೩. ಪಿ.ಟಿ. ಬೋಪಣ್ಣ, ರೈಸ್ ಆ್ಯಂಡ್ ಫಾಲ್ ಆಫ್ ದಿ ಕೂರ್ಗ್ ಸ್ಟೇಟ್ ಕೊಡಗುಸ್ ಲಾಸ್, ಕರ್ನಾಟಕಾಸ್ ಗೈನ್, ಬೆಂಗಳೂರು, ೨೦೦೯, ಪುಟ ೧೧.

೧೦೭

ಸಾಮಾಜಿಕ ಕ್ಷೇತ್ರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಗಳ ಬ್ಯಾಂಕುಗಳ ಪ್ರಭಾವ

ಡಾ. ಲಕ್ಷ್ಮೀದೇವಿ ಎಸ್.ಎ. *

ಸಾಮಾನ್ಯವಾಗಿ ಯಾವುದೇ ಸಮಾಜದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಬ್ಯಾಂಕಿಂಗ್ ಒಂದು ಪ್ರಮುಖವಾದ ಆರ್ಥಿಕ ಅಂಶ. ಸಮಾಜದ ಬೆಳವಣಿಗೆಯಲ್ಲಿ ಆರ್ಥಿಕ ಬದಲಾವಣೆ ಎನ್ನುವುದು ಒಂದು ತೀವ್ರವಾದ ಮತ್ತು ಅಂತಿಮ ಮೂಲವಸ್ತು. ಆರ್ಥಿಕತೆಯ ಎಲ್ಲಾ ಕ್ಷೇತ್ರಗಳು ಬ್ಯಾಂಕಿಂಗ್ ಕ್ಷೇತ್ರದ ಸಂಬಂಧವನ್ನು ಹೊಂದಿರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯು ಬ್ಯಾಂಕರುಗಳ ಮುಂದಾಲೋಚನೆ ಮತ್ತು ಕಾರ್ಯ ತತ್ಪರತೆಯಿಂದ ಅನೇಕ ಬ್ಯಾಂಕುಗಳು ಇಲ್ಲಿ ಜನ್ಮತಾಳಿದವು. ರಾಜ್ಯದ ೭೫ ಬ್ಯಾಂಕುಗಳ ಪೈಕಿ ೨೨ ಈ ಜಿಲ್ಲೆಯಲ್ಲಿ ಹುಟ್ಟಿದವು. ಬಹಳ ಕುತೂಹಲಕಾರಿ ಸಂಗತಿ ಎಂದರೆ ಕೆನರಾ, ಕಾರ್ಪೋರೇಷನ್ ಮತ್ತು ಸಿಂಡಿಕೇಟ್ ಬ್ಯಾಂಕುಗಳು ಕಾರ್ಯಗತಗೊಳಿಸಿದ ಎಲ್ಲಾ ಯೋಜನೆಗಳು ಸಾಮಾಜಿಕ ಉದ್ದೇಶವಿಟ್ಟುಕೊಂಡ ಆರ್ಥಿಕ ಯೋಜನೆಗಳು ಅಥವಾ ಆರ್ಥಿಕ ಉದ್ದೇಶವಿಟ್ಟುಕೊಂಡ ಸಾಮಾಜಿಕ ಯೋಜನೆಗಳು ಕೆಲವೊಮ್ಮೆ ಸಮಾಜದ ಅಭಿವೃದ್ಧಿಗಾಗಿ ಇರುವ ಸಮಗ್ರ ಕಾರ್ಯಕ್ರಮಗಳು. ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ಅಗತ್ಯ ಬೇಕಾದ ಎಲ್ಲಾ ಅಂಶಗಳು ಕೆಲಸ ಮಾಡುವ ಜನರ ಗುಣಮಟ್ಟ, ದಕ್ಷತೆ, ಕೌಶಲ್ಯ ಹೊಂದಿರುವ ತಂತ್ರಜ್ಞರ ಪ್ರಾಮುಖ್ಯತೆಯಲ್ಲಿ ಅಡಕವಾಗಿರುತ್ತದೆ. ಈ ಪರಿಕಲ್ಪನೆಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಬ್ಯಾಂಕುಗಳು ಮನಗಂಡಿದ್ದವು. ಸಾಮಾಜಿಕ ಸೇವೆಗಾಗಿ ಅವು ಬದ್ಧವಾಗಿದ್ದವು. ಮತ್ತು ಸಾಮಾಜಿಕ ಸೇವೆಯನ್ನು ಸಂಘಟಿತ ಚಟುವಟಿಕೆ ಎಂದು ಪರಿಗಣಿಸಿದ್ದವು.

ಕೆನರಾ ಬ್ಯಾಂಕಿನ ಕುಡುಮಲ್ ರಂಗರಾವ್, ಸಾಮಾಜಿಕ ಸುಧಾರಕ, ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಅಸ್ಪಶ್ಯರಲ್ಲಿ ಉಳಿತಾಯ ಹವ್ಯಾಸ ಬೆಳೆಸಲು ನಿಧಿ ಆರಂಭಿಸಿದರು. ಇದೇ ಕೆನರಾ ಬ್ಯಾಂಕಿನ ಹುಟ್ಟಿಗೆ ಕಾರಣವಾಯಿತು.

ಮಾನವ ಅಭಿವೃದ್ಧಿಯಲ್ಲಿ ಶಿಕ್ಷಣ ಒಂದು ಪ್ರಮುಖ ಅಂಶವಾಗಿದ್ದು ಆಮೂಲಾಗ್ರ ಆರ್ಥಿಕ ಪ್ರಗತಿ ಮತ್ತು ಸಾಮಾಜಿಕ ಭದ್ರತೆಗೆ ಶಿಕ್ಷಣ ಅಡಿಪಾಯವಾಗುತ್ತದೆ. ಮಾನವ ಬಂಡವಾಳದಲ್ಲಿ ಶಿಕ್ಷಣ ಒಂದು ಹೂಡುವಿಕೆ. ಆರ್ಥಿಕ ಬೆಳವಣಿಗೆ ಮತ್ತು ಕೃಷಿ ಆರ್ಥಿಕತೆ-ಕೈಗಾರಿಕಾ ಆರ್ಥಿಕತೆಯಾಗುವ ಪರಿವರ್ತನೆ. ಇವೆರಡರ ನಡುವೆ ಶಿಕ್ಷಣ ಸಂಬಂಧ ಕಲ್ಪಿಸುತ್ತದೆ. ದಕ್ಷಿಣ ಕನ್ನಡದಲ್ಲಿ ಮುಸ್ಲಿಂ ಜನಾಂಗವು ಹಿಂದುಳಿದಿದ್ದಾಗ ೧೮೭೦ರ ದಶಕದಲ್ಲಿ ವಿದೇಶಿ ವ್ಯಾಪಾರದಲ್ಲಿ ಹೆಸರುವಾಸಿಯಾಗಿದ್ದ, ಪ್ರಮುಖ ಕಾಫಿ ವರ್ತಕರಾಗಿದ್ದ ಅಬುಬೇಕರ್ ಬೇರಿ, ಹಾಜಿ ಆಲಿ ಸೇಠ್ ಮತ್ತು ವಾಲಿ ಅಬುರವರು ಮಂಗಳೂರು ಮುನಿಸಿಪಾಲಿಟಿಗೆ ಕೌನ್ಸಿಲರ್ಸ್ ಆಗಿ ಮಂಗಳೂರಿಗೆ ನೇಮಕಗೊಂಡಿದ್ದು. ೧೮೭೩ರಲ್ಲಿ ಮದ್ರಾಸ್ ಗವರ್ನರ್ ಲಾರ್ಡ್‌ವೆನ್‌ಲಾಕ್ ಮಂಗಳೂರಿಗೆ ಭೇಟಿ ಕೊಟ್ಟಾಗ ಈ ಮುಸ್ಲಿಂ ಬ್ಯಾಂಕರುಗಳು ಮುಸ್ಲಿಂ ಜನಾಂಗದ ಮಕ್ಕಳಿಗೆ ಶಿಕ್ಷಣ ಕೊಡಿಸಲು ಮನವಿ ಸಲ್ಲಿಸಿದ್ದರು.

ರಾಷ್ಟ್ರದ ಜವಾಬ್ದಾರಿ ಹೊರುವ ಸಾಮರ್ಥ್ಯ ವಿದ್ಯಾವಂತರಿಗೆ ಮಾತ್ರ ಇದೆ ಎಂದು ಮನಗಂಡ ಕೆನರಾಬ್ಯಾಂಕಿನ ಸುಬ್ಬರಾವ್‌ರವರು ಕೆನರಾ ಹೈಸ್ಕೂಲ್, ಕೆನರಾ ಗರ್ಲ್ಸ್ ಸ್ಕೂಲು, ಕೆನರಾ ಹಾಸ್ಟೆಲ್, ಮಂಗಳೂರು ಯುನಿಯನ್ ಸ್ಥಾಪಿಸುವಲ್ಲಿ ಪ್ರಮುಖಪಾತ್ರ ವಹಿಸಿದರು. ಕೆನರಾ ಬ್ಯಾಂಕಿನ ಶೈಕ್ಷಣಿಕ ಸಾಲದ ಯೋಜನೆ ಅರ್ಹ ವಿದ್ಯಾರ್ಥಿಗಳು ವೃತ್ತಿಪರ ಮತ್ತು ಇನ್ನಿತರ ಕೋರ್ಸ್‌ಗಳನ್ನು ಭಾರತ ಮತ್ತು ವಿದೇಶಗಳಲ್ಲೂ ಮಾಡಲು ನೆರವಾಗಿವೆ. ಕಲಿಕೆಯಲ್ಲಿ ಗಳಿಕೆ, ವಯಸ್ಕ ಶಿಕ್ಷಣ ತರಗತಿಗಳನ್ನು ಜಾರಿಯಲ್ಲಿ ತಂದಿತು. ಕೆನರಾ ಬ್ಯಾಂಕಿನ 'ಜ್ಯೂಬಿಲಿ ಎಜುಕೇಶನ್ ಫಂಡ್' ಇದರ ಮುಖ್ಯ ಉದ್ದೇಶ ತಾಂತ್ರಿಕ, ವೈಜ್ಞಾನಿಕ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ ಕೊಡುವುದು. ಈ ಯೋಜನೆಯಿಂದ ನೆರವು ಪಡೆದ ಹಲವಾರು ವಿದ್ಯಾರ್ಥಿಗಳು ಇಂದು ಉನ್ನತ ಹುದ್ದೆಯಲ್ಲಿರುವರು. ಭಾರತದ ಯಾವ ಬ್ಯಾಂಕು ೧೯೫೬

* ಇತಿಹಾಸ ವಿಭಾಗ, ಬಿ.ಎಸ್.ವಿ.ಪಿ. ಡಿಗ್ರಿ ಕಾಲೇಜು, ಬೆಂಗಳೂರು.

ಹಿಂದೆ ಇಂತಹ ಯೋಜನೆಯನ್ನು ಜಾರಿಗೆ ತಂದಿರಲಿಲ್ಲ. ಮಂಗಳೂರು ಮತ್ತು ಬೆಂಗಳೂರಿನಲ್ಲೂ ಮಕ್ಕಳ ಗ್ರಂಥಾಲಯಗಳನ್ನು, ಮೈಸೂರು ವಿಶ್ವವಿದ್ಯಾನಿಲಯದಲ್ಲೂ ಮಕ್ಕಳ ಗ್ರಂಥಾಲಯಗಳನ್ನು ಈ ಬ್ಯಾಂಕು ಸ್ಥಾಪಿಸಿದೆ.

ಕಾರ್ಪೋರೇಷನ್ ಬ್ಯಾಂಕು ಸಹ ವಯಸ್ಕ ಶಿಕ್ಷಣ ಯೋಜನೆಯಲ್ಲೂ ನೆರವಾಗಿದೆ, ಈಗಾಗಲೇ ಶೈಕ್ಷಣಿಕ ರಂಗದಲ್ಲಿ ಕ್ರಿಶ್ಚಿಯನ್ ಮೆಶನರಿಗಳು ಸಾಧಿಸಿದ ಪ್ರಗತಿಯನ್ನು ಗೌರವಿಸುತ್ತಿದ್ದ ಸಿಂಡಿಕೇಟ್ ಬ್ಯಾಂಕಿನ ಪೈರವರು ೧೯೪೮ ರಲ್ಲಿ 'The Academy of General Education' ನ್ನು ಶಿಕ್ಷಣ ಕ್ಷೇತ್ರದಲ್ಲಿ ಆಸಕ್ತಿ ಇರುವವರಿಗೆ ಮಾರ್ಗದರ್ಶನ ನೀಡಲು ಆರಂಭಿಸಿತು. ಸಮಾಜಕ್ಕೆ ಅಗತ್ಯ ಇರುವ ಶಿಕ್ಷಣ ನೀಡಲು ವೃತ್ತಿಪರ ತರಬೇತಿ ನೀಡಲು ಎಂಬ್ರಾಯಿಡೆರಿ, ಹೊಲಿಗೆ, ಕುಂಬಾರ ಕೆಲಸ, ಗ್ಲಾಸ್ ಮೇಕಿಂಗ್, ಹಂಚು ತಯಾರಿಕೆ, ಸಂಗೀತ, ಛಾಯಚಿತ್ರ, ರೇಡಿಯೋ ರಿಪೇರಿ, ಕೋಳಿ ಸಾಕಣೆ, ಜೇನು ಸಾಕಾಣೆ, Salesmanship, Clerkship ಮುಂತಾದವುಗಳನ್ನು ಆರಂಭಿಸಿತು. ಈ ಬ್ಯಾಂಕುಗಳ ಕ್ರಿಯಾತ್ಮಕ ಆರ್ಥಿಕ ಯೋಜನೆಯಿಂದಾಗಿ ಮಣಿಪಾಲು ಶೈಕ್ಷಣಿಕ ಸಂಸ್ಥೆ, ಮಹಾತ್ಮಗಾಂಧಿ ಮೆಮೊರಿಯಲ್ ನಂತರ ಹಲವಾರು ಶೈಕ್ಷಣಿಕ ಸಂಸ್ಥೆಗಳು ಹುಟ್ಟಿಕೊಂಡವು.

ಸಮಾನತೆಯ ಪ್ರಾಮುಖ್ಯತೆ ಬಗ್ಗೆ ಜಾಗೃತಿ ಮೂಡಿಸಲು ಹಲವಾರು ದತ್ತಿ ಉಪನ್ಯಾಸ ಕಾರ್ಯಕ್ರಮ ಗಳನ್ನು ಆಯೋಜಿಸಿತು. ಮಧ್ಯಮವರ್ಗ ಜನರಿಗೆ ನೆರವು ನೀಡಲು ವಿಶೇಷ ವಸತಿ ಯೋಜನೆ ಮತ್ತು ವಿಶೇಷ ಗ್ರಾಹಕ ಸಾಲ ಯೋಜನೆ ರೂಪಿಸಿತು. ಬಡತನ ನಿರ್ಮೂಲನೆ, ಬಡಜನರ ಜೀವನಮಟ್ಟ ಸುಧಾರಿಸಲು ಹಲವಾರು ಯೋಜನೆಗಳನ್ನು ಜಾರಿಗೊಳಿಸಿತು. ಗ್ರಾಮೀಣ ಸಮಾಜದ ಕೆಳಸ್ತರದಲ್ಲಿನ ಜನಸೇವೆಗಾಗಿ ಹಲವಾರು ಸ್ವ ಉದ್ಯೋಗ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ಉದ್ಯೋಗ ಅವಕಾಶ ಕಲ್ಪಿಸಲು ಸಿಂಡಿಕೇಟ್ ಬ್ಯಾಂಕ್ ೧೯೨೮ ರಲ್ಲಿ ಪಿಗ್ಮಿ ಡೆಪಾಸಿಟ್ ಯೋಜನೆ ತಂದಿತು.

ಎಲ್ಲಾ ರೀತಿಯ ಪ್ರಕೃತಿ ವಿಕೋಪಗಳಿಂದ ತೊಂದರೆಗೀಡಾದವರಿಗೆ ವೃದ್ಧ, ಅನಾರೋಗ್ಯ ಪೀಡಿತರಿಗೆ, ಬಡವರಿಗೆ, ಮಕ್ಕಳ ಕ್ಷೇಮಾಭಿವೃದ್ಧಿಗಾಗಿ 'Canara Bank Relief and Welfare Society' ಯನ್ನು ೧೯೬೧ ರಲ್ಲಿ ಕೆನರಾಬ್ಯಾಂಕು ಸ್ಥಾಪಿಸಿತು. ಆ ಮೂಲಕ ಹಲವಾರು ಸಮುದಾಯ ಕ್ಷೇಮಾಭಿವೃದ್ಧಿ ಯೋಜನೆಗಳಾದ ವೈದ್ಯಕೀಯ ಸಹಾಯ ಆಸ್ಪತ್ರೆ ಭೇಟಿ ಕಾರ್ಯಕ್ರಮ, ಆರೋಗ್ಯ ಶಿಬಿರದ ಸಂಘಟನೆ, ದಂತ, ನೇತ್ರ ಶಿಬಿರ, ರಕ್ತದಾನ ಮುಂತಾದ ಸೇವೆಗಳನ್ನು ಒದಗಿಸಿತು. ೧೯೫೯ ರಲ್ಲಿ ಪ್ರವಾಹದಿಂದಾಗಿ ಶಿವಮೊಗ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಗಳು ತೊಂದರೆಗೀಡಾದಾಗ ಬ್ಯಾಂಕು ನೆರವಾಯಿತು. ಬಡವ-ಶ್ರೀಮಂತ ಭೇದವಿಲ್ಲದೆ ಎಲ್ಲರಿಗೂ ವೈದ್ಯಕೀಯ ಸೇವೆ ಸಲ್ಲಿಸಲು 'ಸೇವಾಕ್ಷೇತ್ರ' ಆಸ್ಪತ್ರೆ ಸ್ಥಾಪಿಸಲ್ಪಟ್ಟಿತು. ಇದೇ Society ಅಡಿಯಲ್ಲಿ 'ಮಾತೃ ಛಾಯ'ವನ್ನು ತೊರೆದ ಮಕ್ಕಳಿಗಾಗಿ ತೆರೆಯಿತು.

ಮೊದಲ ಇಂಡೋ-ಯುದ್ಧ ನಂತರ ೧೯೬೬ ರಲ್ಲಿ ವೀರ ಪತ್ನಿ ಛಾಯ ಯೋಜನೆ ಮೂಲಕ ಬೆಂಗಳೂರಿನ ಇಂದಿರಾನಗರದಲ್ಲಿ ಯುದ್ಧದಲ್ಲಿ ಮಡಿದ ವೀರ ಯೋಧರ ಪತ್ನಿಯರಿಗೆ ವಸತಿಯೋಜನೆ ಕಲ್ಪಿಸಿತು. ೧೯೭೨ ರಲ್ಲಿ ಬಾಲವಾಡಿ ಯೋಜನೆ ಮೂಲಕ ಕೊಳಚೆ ಪ್ರದೇಶ ಮಕ್ಕಳಿಗೆ ಮಧ್ಯಾಹ್ನದ ಊಟ ಒದಗಿಸಲು ಬೆಂಗಳೂರಿನ ವಸಂತನಗರದಲ್ಲಿ ಆರಂಭಿಸಿತು.

ಮಹಿಳಾ ಸಬಲೀಕರಣ ಸಾಧಿಸಲು ಕೆನರಾ ಬ್ಯಾಂಕು ಸ್ತ್ರೀಯರಿಗೆ ಬುಟ್ಟಿ ಹೆಣೆಯುವಿಕೆ ಕೆಲಸದಲ್ಲಿ ತಮ್ಮ ಜೀವನೋಪಾಯ ಸಾಗಿಸಲು ಆರ್ಥಿಕ ನೆರವು ನೀಡಿತು. ಆರ್ಥಿಕವಾಗಿ ಡಾ॥ ತೋನ್ಸೆ ಮಾಧವ ಅನಂತ ಪೈ ಆಧುನಿಕ ಕರ್ನಾಟಕದ ವಾಸ್ತುಶಿಲ್ಪ ಅತಿ ಸಣ್ಣ ವಯಸ್ಸಿನಲ್ಲೇ ತಾನು ಕಲಿತ ಶಾಲೆಯಾದ ಕಲ್ಯಾಣಪುರ ಹಿಂದೂಶಾಲೆ ಹಣವಿಲ್ಲದೆ ಮುಚ್ಚಬೇಕಾದ ಪರಿಸ್ಥಿತಿ ಬಂದಾಗ ಬಾಂಬೆಗೆ ಹೋಗಿ ರೂ. ೪,೦೦೦/- ಹಣ ಸಂಗ್ರಹಿಸಿ, ಆ ಶಾಲೆ ಪುನಃ ಆರಂಭವಾಗಲು ಕಾರಣರಾದರು. ೧೯೩೬ ರಲ್ಲಿ ಪ್ರಾಥಮಿಕ ಶಾಲೆ. ೧೯೩೯ ರಲ್ಲಿ ಮಾಧ್ಯಮಿಕ ಮತ್ತು ಪ್ರೌಢಶಾಲೆ ಆರಂಭಿಸಿದರು. ಇವರು ಆರಂಭಿಸಿದ ಸಂಸ್ಥೆಗಳು ಸಾಮಾಜಿಕ ಮತ್ತು ಆರ್ಥಿಕ ಉದ್ಯಮಶೀಲತೆ ಸ್ಥಾನ ಪಡೆದವು. ಹೀಗೆ ಔದ್ಯಮಿಕವಾಗಿ ಉತ್ಪಾದಿತ ಸರಕುಗಳು ರಾಷ್ಟ್ರದ ಸಂಪತ್ತಿಗೆ ಕೊಡುಗೆ ಸಲ್ಲಿಸುತ್ತವೆಯೋ ಹಾಗೇ ಶಾಲಾ-ಕಾಲೇಜುಗಳು ಸಹ ರಾಷ್ಟ್ರೀಯ ಸಂಪತ್ತಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ತಮ್ಮ ಕೊಡುಗೆ ಸಲ್ಲಿಸುತ್ತಾವೆ.

೧೯೬೦ ರಲ್ಲಿ ಕಾರ್ಕಳದಲ್ಲಿ ಭುವನೇಂದ್ರ ಕಾಲೇಜು, ಕುಂದಾಪುರದಲ್ಲಿ ಭಂಡಾರ್ಕರ್ ಕಾಲೇಜು, ಮುಲ್ಕಿಯಲ್ಲಿ ವಿಜಯ ಕಾಲೇಜು, ಶೃಂಗೇರಿಯಲ್ಲಿ J.C. B.M ಕಾಲೇಜು, ಮೂಡಬಿದಿರೆಯಲ್ಲಿ ೧೯೬೫ ರಲ್ಲಿ ಮಹಾವೀರ ಕಾಲೇಜು, ೧೯೫೩ ರಲ್ಲಿ ಕಸ್ತೂರ್‌ಬಾ ಮೆಡಿಕಲ್ ಕಾಲೇಜು, ವೃತ್ತಿಪರ ಕಾಲೇಜುಗಳಾದ ಮಣಿಪಾಲ್ ಇಂಜಿನಿಯರಿಂಗ್ ಕಾಲೇಜು, ಉಡುಪಿ ಉ ಕಾಲೇಜು, ೧೯೬೫ರಲ್ಲಿ ಮಣಿಪಾಲ್ ಕಾಲೇಜು ಆಫ್ ಎಜುಕೇಷನ್, ಆರಂಭವಾದವು. ಒಟ್ಟು ೩೭ ಶೈಕ್ಷಣಿಕ ಸಂಸ್ಥೆಗಳ ರೂವಾರಿ ಈತ.

ಸಮುದಾಯ ಅಭಿವೃದ್ಧಿ ಮೂಲಕ ಸಾಮಾಜಿಕ ಬದಲಾವಣೆ ಸಾಧ್ಯ. ಅಭಿವೃದ್ಧಿ ನಿಜವಾದ ಅರ್ಥದಲ್ಲಿ ಬದಲಾವಣೆ ಮಹಾತ್ಮಗಾಂಧೀಜೀ ಮತ್ತು ವಿನೋಬಾವೆರವರ ರಚನಾತ್ಮಕ ಯೋಜನೆ ಗ್ರಾಮದಾನ, ಗ್ರಾಮ ಸ್ವರಾಜ್ಯ ಚಳುವಳಿಯಿಂದ ಪ್ರೇರಿತವಾದ ಹಲವಾರು ಬ್ಯಾಂಕುಗಳು ಸಮುದಾಯ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡಿದವು. ಇಡೀ ಸಮುದಾಯದ ಜೀವನಮಟ್ಟವನ್ನು ಅವರ ಸಕ್ರಿಯ ಭಾಗವಹಿಸುವಿಕೆ ಮೂಲಕ ಸುಧಾರಿಸುವುದು. ಜಾತಿ ಆಧಾರಿತ ಸಾಮಾಜಿಕ ವಿಂಗಡಣೆ ಮತ್ತು ಅಸ್ಪೃಶ್ಯತೆಯ ಆಚರಣೆ ಒಂದು ಸಾಮಾಜಿಕ ಪಿಡುಗು ಆಗಿದ್ದು, ಆರ್ಥಿಕ ಅಭಿವೃದ್ಧಿಯಲ್ಲಿ ಮಾನವಶಕ್ತಿ ಸಂಪನ್ಮೂಲಗಳನ್ನು ಅದ್ಯಕ್ಷವಾಗಿ ಬಳಸುವಿಕೆಗೆ ನೇರವಾಗಿ ಕೊಡುಗೆ ನೀಡುತ್ತದೆ. ಈ ತುಳಿತಕ್ಕೆ ಒಳಗಾದ ಜನರಿಗೆ ಸಾಮಾಜಿಕ ಸಮಾನತೆ ಒದಗಿಸಲು ಡಾ.ಬಿ.ಆರ್. ಅಂಬೇಡ್ಕರ್ ಬಹಳ ಶ್ರಮಿಸಿದರು. ಈ ನಿಟ್ಟಿನಲ್ಲಿ ಕಾಪೋರೇಷನ್ ಬ್ಯಾಂಕು. ಸಮಾಜದಲ್ಲಿ ಸ್ವಾತಂತ್ರ್ಯ ಹೊಂದಲು 'ಟೈಲರಿಂಗ್ ತರಬೇತಿ ನೀಡಿತು. 'Centre for Entrepreneurship Development for Women' ಸಂಸ್ಥೆ ಆರಂಭಿಸಿತು.

೧೯೩೮ ರಲ್ಲಿ ಸ್ತ್ರೀಯರಿಗೆ ಉದ್ಯೋಗ ಅವಕಾಶ ಕೊಡುವ ನೀತಿಯನ್ನು ಸಿಂಡಿಕೇಟ್ ಬ್ಯಾಂಕು ಆರಂಭಿಸಿತು. ಉದ್ಯೋಗದಲ್ಲಿ ಮಹಿಳೆ ನಿರತವಾಗಲು ಪ್ರೋತ್ಸಾಹಿಸಿದ ಮೊದಲ ಬ್ಯಾಂಕು ಸಿಂಡಿಕೇಟ್ ಬ್ಯಾಂಕು. ಮಹಿಳಾ ಸಬಲೀಕರಣದ ಹೆಜ್ಜೆಯಲ್ಲಿ ಇದು ಮೊದಲ ಸಣ್ಣ ಸಾಮಾಜಿಕ ಕ್ರಾಂತಿ ಎನ್ನಬಹುದು. ದೇಶಭಕ್ತಿ ಪ್ರದರ್ಶಿಸುವಲ್ಲಿ ಈ ಬ್ಯಾಂಕುಗಳು ಹಿಂದೆ ಬಿದ್ದಿಲ್ಲ. ೧೯೬೨ ರಲ್ಲಿ ಚೀನಾ ದಾಳಿ ಸಮಯದಲ್ಲಿ ಕಾರ್ಪೋರೇಷನ್ ಬ್ಯಾಂಕು 'ರಾಷ್ಟ್ರೀಯ ಯುದ್ಧ ನಿಧಿಗೆ ಒಂದು ಲಕ್ಷ ರೂ ಸಂಧಿಸಿತು. ಪರಿಸರ ಸಂರಕ್ಷಣೆ ಕ್ಷೇತ್ರದಲ್ಲೂ ಈ ಬ್ಯಾಂಕುಗಳು ಹಿಂದೆ ಬಿದ್ದಿಲ್ಲ. ಶಿಕ್ಷಣ, ಸಂಗೀತ, ಯಕ್ಷಗಾನ, ಸಾಹಿತ್ಯ ಕೂಟ ಮುಂತಾದ ಪ್ರತಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೂ ಪ್ರೋತ್ಸಾಹ ನೀಡುತ್ತಿದೆ.

ಜಾತಿ ಮತ ಭೇದವಿಲ್ಲದೆ ಬಡ ಮತ್ತು ಹಿಂದುಳಿದ ವರ್ಗದ ಜನರು ಆರ್ಥಿಕವಾಗಿ ಬಲಯುತ ಮತ್ತು ಸ್ವಾವಲಂಬಿಗಳಾಗಲು ದಕ್ಷಿಣ ಕನ್ನಡ ಜಿಲ್ಲೆಯ ಹಲವಾರು ಬ್ಯಾಂಕರ್ಸ್‌ಗಳಾದ ಟಿ.ಎ. ಪೈ, ಕೆ.ಕೆ. ಪೈ, ಹಾಜಿ ಅಬ್ದುಲ್ಲಾ, ಸುಬ್ಬರಾವ್ ಮುಂತಾದವರು ಶ್ರಮಿಸಿದರು. ಹೀಗೆ ದಕ್ಷಿಣ ಕನ್ನಡ ಜಿಲ್ಲೆಯ ಹಲವಾರು ಬ್ಯಾಂಕುಗಳು ತಮ್ಮ ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳ ಮೂಲಕ ಹಲವರ ಬದುಕಿನಲ್ಲಿ ತಮ್ಮನ್ನು ಗುರುತಿಸಿಕೊಂಡಿವೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. D.M. Nanjundappa, "Some Aspects of Karnataka's Economy", Bharat Prakasana, Dharwad, 1917, P-75.

2. N.S. Ramaswamy, "Progressive Polities of Syndicate Bank Ltd", un published seminar paper, 1975, P-3.

3. Narayana D.L."Human Resources Development and Population Education", Man power Journal, July-sept 1974, P-24.

4. John kenneth Galbrailt, "Economic Development in Perspective", Fawceft publications, New Yark.

5. "A Tribute to our Founder Ammenbad subba Rao pai, A man with vision, Occassiational publication, Canara Bank.

6. Memorandum and Articles of Association, Canara Bank Jubile Education Fund.

7. M.V. Kamat "Syndicate Bank - A peole's Bank" Manipal prers, Manipal, 2000, P - 103. Pigmy Economic Review, - Dec - 1968.

8. Navabharat, 12th sept, 1971.

೧೦೮

ಸಂಗಮರ ಕಾಲದ ಸಮರ್ಥ ಆಡಳಿತಗಾರ ಇರುಗಪ್ಪದಂಡನಾಯಕ

ಶ್ರೀಮತಿ ಎಸ್. ಗಂಗಾಬಿಕೆ ಗೋವರ್ಧನ*

ಆರಂಭದಲ್ಲಿ ನಮ್ಮ ಕರುನಾಡಿನ ದಕ್ಷಿಣ ಭಾಗಕ್ಕೆ ಸೀಮಿತವಾಗಿದ್ದ ಹೊಯ್ಸಳ ರಾಜ್ಯವು ಕಾಲಕ್ರಮೇಣ ವಿಸ್ತಾರಗೊಂಡು ಕರ್ನಾಟಕದ ಬಹುಭಾಗವನ್ನು ಮತ್ತು ಈಗಿನ ತಮಿಳುನಾಡಿನ ಕೆಲವು ಭಾಗಗಳನ್ನು ಒಳಗೊಂಡು ಒಂದು ವಿಶಾಲ ಸಾಮ್ರಾಜ್ಯವಾಗಿ ಮಾರ್ಪಟ್ಟಿತು. ಸಾಮ್ರಾಜ್ಯವು ವಿಸ್ತಾರಗೊಂಡಂತೆ ಆಡಳಿತ ಯಂತ್ರದಲ್ಲಿ ಹಲವು ಬದಲಾವಣೆಗಳನ್ನು ತರಲಾಯಿತು. ಅತ್ಯುನ್ನತ ಅಧಿಕಾರವನ್ನು ಹೊಂದಿದ್ದ ರಾಜನ ಕೈಕೆಳಗೆ ರಾಜ್ಯವು ಹಲವಾರು ವಿಭಾಗಗಳನ್ನು ಹೊಂದಿದ್ದು, ಅವುಗಳು ರಾಜವಂಶೀಯರ, ಸಚೀವರ ಮತ್ತು ದಂಡನಾಯಕರ ಮೇಲ್ವಿಚಾರಣೆಗೊಳಗಾಗಿದ್ದವು. ಸಚಿವ ಮತ್ತು ದಂಡನಾಯಕ ಹುದ್ದೆಗಳಿಗೆ ವ್ಯಕ್ತಿಗಳನ್ನು ಆಯ್ಕೆ ಮಾಡುವಾಗ ಅವರ ಶೀಲ, ಶೌರ್ಯ, ಅನುಭವ, ದಕ್ಷತೆ, ಸಾಮರ್ಥ್ಯಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತಿತ್ತು. ಈ ಹುದ್ದೆಗಳು ಕೆಲವು ಸಂದರ್ಭಗಳಲ್ಲಿ ಅನುವಂಶೀಯವಾದವುಗಳಾಗಿದ್ದರೆ, ಇನ್ನು ಕೆಲವು ಸಂದರ್ಭಗಳಲ್ಲಿ ಅನುವಂಶೀಯವಾದವುಗಳಾಗಿರಲಿಲ್ಲ. ಇದಕ್ಕೆ ಒಂದೆರಡು ನಿದರ್ಶನಗಳನ್ನು ಕಾಣಬಹುದು. ಮೂರನೆಯ ನರಸಿಂಹನ ಕಾಲದಲ್ಲಿದ್ದ ಪೆರಮಾಳದೇವದಂಡನಾಯಕ ಮತ್ತು ಅವನ ವಂಶೀಯರು ಹಾಗೂ ಮೂರನೆಯ ಬಲ್ಲಾಳನ ಕಾಲದಲ್ಲಿದ್ದ ಬಲ್ಲಪ್ಪ ದಂಡನಾಯಕ ಮತ್ತು ಅವನ ವಂಶೀಯರು ಆಡಳಿತ ವ್ಯವಸ್ಥೆಯ ವಿವಿಧ ಹುದ್ದೆಗಳನ್ನು ಅಲಂಕರಿಸಿದ್ದರು; ಅನುವಂಶೀಯವಾಗಿ ಆಳಿದ್ದರು.[೧] ಇನ್ನು ಹಲವು ದಂಡನಾಯಕರು ಮತ್ತು ಸಚಿವರ ಹುದ್ದೆಗಳು ಐಚ್ಛಿಕವಾಗಿ ಅನುವಂಶೀಯವಾಗಿದ್ದವು. ಹೊಯ್ಸಳರ ಕಾಲದ ಹಲವು ಮಂತ್ರಿಗಳು ಅನೇಕ ಸಂದರ್ಭಗಳಲ್ಲಿ ಪ್ರಾಂತ್ಯಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಇವರು ತಮ್ಮ ಶೌರ್ಯ, ರಾಜನೀತಿಜ್ಞತೆಗಳ ಜೊತೆಗೆ ದೇಗುಲ ಹಾಗೂ ತಟಾಕಗಳ ನಿರ್ಮಾಣದ ಮೂಲಕ ರಾಜ್ಯದ ಸಾಂಸ್ಕೃತಿಕ ಹಿರಿಮೆಗೆ ದುಡಿದಿದ್ದರು. ಇಂತಹವರಲ್ಲಿ ಹಲವರು ವಿಜಯನಗರ ಸಾಮ್ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿಯೂ ದಂಡನಾಯಕನಾಗಿ, ಪ್ರಾಂತ್ಯಾಧಿಕಾರಿಗಳಾಗಿ, ಮಹಾಪ್ರಧಾನಿಗಳಾಗಿ ಮುಂದುವರಿದರು. ಹೀಗೆ ಹೊಯ್ಸಳ ಹಾಗೂ ವಿಜಯನಗರ ಆಡಳಿತ ವ್ಯವಸ್ಥೆಯಲ್ಲಿ ತನ್ನ ಶೌರ್ಯ, ನೈಪುಣ್ಯತೆಗಳಿಂದ ಗಣ್ಯವಾಗಿ ಗುರುತಿಸಲ್ಪಟ್ಟವರಲ್ಲಿ ಬೈಚಯದಂಡನಾಯಕನೂ ಒಬ್ಬನು. ಈತ ಹೊಯ್ಸಳ ಸಾಮ್ರಾಟ ೩ ನೆಯ ಬಲ್ಲಾಳನ ಪತ್ನಿ ಕಿಕ್ಕಾಯಿತಾಯಿಗೆ ಆಡಳಿತದಲ್ಲಿ ಬಲಗೈಭಂಟನಾಗಿದ್ದ. ಕಿಕ್ಕಾಯಿತಾಯಿಯು ಬಲ್ಲಾಳನ ಪರವಾಗಿ ಹಾಗೂ ಅವನ ಮರಣಾನಂತರ ಸ್ವತಂತ್ರವಾಗಿ ತುಳುನಾಡನ್ನು ಆಳುತ್ತಿದ್ದಳು. ಅವಳ ನಂತರವೂ ತುಳುನಾಡು ಅವಳ ಪ್ರಧಾನಿಯಾಗಿ ಬೈಚಯದಂಡನಾಯಕನ ಸುಪರ್ದಿಯಲ್ಲೇ ಉಳಿಯುತ್ತದೆ. ಮುಂದೆ ವಿಜಯನಗರದ ಸಂಗಮ ದೊರೆ ೧ ನೆಯ ಬುಕ್ಕರಾಯನ ಆಳ್ವಿಕೆಯ ಕಾಲದಲ್ಲಿ ಬೈಚಯದಂಡನಾಯಕನು ತುಳುನಾಡಿನ ಬಹುಮುಖ್ಯ ವಾಣಿಜ್ಯ ಕೇಂದ್ರಗಳಾದ ಬಾರಕೂರು – ಮಂಗಳೂರುಗಳ ಪ್ರಾಂತ್ಯಾಧಿಕಾರಿಯಾಗಿ ಅಧಿಕಾರಸ್ಥನಾಗಿರುತ್ತಾನೆ. ಈ ಬೈಚಯದಂಡನಾಯಕನ ಹಿರಿಯ ಮಗನ ಇರುಗಪ್ಪ ದಂಡನಾಯಕ.

ಇರುಗಪ್ಪ ದಂಡನಾಯಕನ ಶಾಸನೋಕ್ತ ಹೆಸರುಗಳು

ಇರುಗಪ್ಪ ದಂಡನಾಯಕನನ್ನು ಶಾಸನಗಳು ಇರುಗಪ ದಂಡಾಧೀಶ, ಇರುಗಪ್ಪ ಮಂತ್ರಿ, ಯಿರುಗಪ್ಪ ಒಡೆಯ, ಇರುಗಪ ದಂಡನಾಯಕ, ಇರುಗಪ್ಪದಂಣಾಯಕ, ವಿರುಗಪ್ಪ ದಣಾಯಕ, ಇರುಗ ದಂಡನಾಯಕ, ಇರುಗಪ ಧರಣೀಶ, ಇರುಗಕ್ಷಿತೀತ ಎಂದು ಮುಂತಾಗಿ ಕರೆದಿವೆ. ಮೇಲುನೋಟಕ್ಕೆ ಈ ನಾಮಧೇಯಗಳು, ಸಾಮಾನ್ಯವಾಗಿ ಕಂಡರೂ ಅಸಾಮಾನ್ಯತೆಯನ್ನು ಗರ್ಭೀಕರಿಸಿಕೊಂಡಿವೆ. ಏಕೆಂದರೆ, ಈ ಹೆಸರುಗಳು ಅಂದರೆ ಇರುಗಪ್ಪ ದಂಡನಾಯಕ, ಇರುಗಪ್ಪ ಮಂತ್ರಿ, ಪ್ರಧಾನಿ ಇರುಗಪ್ಪ ದಂಡನಾಯಕ – ಎಂಬಿವು ಆತನು ಕ್ರಮೇಣ ತನ್ನ ಜೀವನದಲ್ಲಿ ಗ್ರಹಿಸಿದ ಅಧಿಕಾರ – ಪದವಿಗಳನ್ನು ಸೂಕ್ಷ್ಮವಾಗಿ ಅರಹುತ್ತವೆ. ಇನ್ನು, 'ಒಡೆಯ' ಎಂಬ ಪದವು ಸೂಚಿತವಾಗಿರುವುದರಲ್ಲಿ ಅವನಿಗೆ ಇದ್ದ ವಿಶೇಷ ಗೌರವಾರ್ಥವನ್ನು ತಿಳಿಸುತ್ತದೆ. ಈ ಎಲ್ಲ

* # ಕೆ. ೨೭೨, ಅರ್ಯಾಬಿಕ್ ಕಾಲೇಜ್ ಪೋಸ್ಟ್ ವಿನೋಬನಗರ, ಕಾಡುಗೊಂಡನಹಳ್ಳಿ, ಬೆಂಗಳೂರು-೪೫.

ಹೆಸರುಗಳಿಗಿಂತ ಮಿಗಿಲಾಗಿ ಇರುಗಪ್ಪನಿಗೆ 'ಕ್ಷಿತೀಶ', 'ಧರಣೀಶ' ಎಂದು ಶಾಸನಗಳು ಕೀರ್ತಿಸಿರುವುದು ವಿಶೇಷ ಸಂಗತಿ. ಏಕೆಂದರೆ, ಕ್ಷಿತೀಶ, ಧರಣೀಶ ಪದಗಳು ಅಧಿರಾಜನನ್ನು ಮತ್ತು ಮಹಾರಾಜನ ವಿಶಾಲ ಅಧಿಕಾರವ್ಯಾಪ್ತಿಯನ್ನು ಸೂಚಿಸುತ್ತವೆ. ಬಹುಶಃ ಇರುಗಪ್ಪನು ತನ್ನ ಜೀವಿತದ ಒಂದು ಘಟ್ಟದಲ್ಲಿಯಾದರೂ ಆತ ಅರಸನಿಗೆ ಸಮಾನವಾದ ಅಧಿಕಾರ ಅಥವಾ ಕಾರ್ಯಭಾರಗಳನ್ನು ಹೊಂದಿದ್ದಿರಬೇಕು. ಒಟ್ಟಿನಲ್ಲಿ ಇರುಗಪ್ಪನು ಅರಸನ ಆಡಳಿತ ಯಂತ್ರದಲ್ಲಿ ಸೈನ್ಯವನ್ನು ಮುನ್ನಡೆಸುವ ದಂಡೇಶನಾಗಿ ರಾಜಕೀಯ ತಂತ್ರಗಳ ನಿರ್ವಹಣೆಯಲ್ಲಿ ಮಂತ್ರಿಯಾಗಿ, ಪ್ರಧಾನಿಯಾಗಿ, ವಿಶಾಲವಾದ ಅಧಿಕಾರಿವ್ಯಾಪ್ತಿಯುಳ್ಳ ಪ್ರಾಂತ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದನೆಂಬುದಕ್ಕೆ ಅವನಿಗಿದ್ದ ಶಾಸನೋಕ್ತ ಹೆಸರುಗಳೇ ಸಾಕ್ಷಿಯಾಗಿವೆ.

ಇರುಗಪ್ಪದಂಡನಾಯಕ-ರಾಜ್ಯಾಡಳಿತ

ಲಭ್ಯವಿರುವ ಕೆಲವು ಶಾಸನಗಳೇ ಇರುಗಪ್ಪದಂಡ ನಾಯಕನು ಸಂಗಮ ಅರಸರ ಕಾಲದಲ್ಲಿ ರಾಜ್ಯಾಡಳಿತದ ಹಲವು ಘಟ್ಟಗಳಲ್ಲಿ ನಿರ್ವಹಿಸಿದ್ದ ಪಾತ್ರವನ್ನು ಹಾಗೂ ಅವನ ವಿಶಿಷ್ಠ ಸ್ಥಾನಮಾನಗಳನ್ನು ಸೂಕ್ಷ್ಮವಾಗಿ ತಿಳಿಸುತ್ತವೆ.

ಇರುಗಪ್ಪದಂಡನಾಯಕನ ಪ್ರಥಮ ಉಲ್ಲೇಖ ಕ್ರಿ.ಶ. ೧೩೮೨ ರ ಗಂಗಾವತಿಯ (ಕೊಪ್ಪಳ ಜಿಲ್ಲೆ) ಶಾಸನದಲ್ಲಿ[೨] ದೊರೆಯುತ್ತದೆ. ಈ ಶಾಸನವು ಇರುಗಪ್ಪನನ್ನು ಹೊಗಳಿರುವ ಪರಿ ಇಂತಿದೆ :-

> **"ಹರಿಹರ ಧರಣೀತ್ರಿ ಪ್ರಾಜ್ಯಾಸಾಮ್ರಾಜ್ಯಾ ಲಕ್ಷ್ಮಿಕುವಲಯ ಹಿಮಧಾಮಾಶೌರ್ಯಾಗಾಂಭೀರ್ಯ ಸಿಮಾ ಇರುಗಪ ಧರಣೇಶ"**

ಹರಿಹರನ ಸಾಮ್ರಾಜ್ಯಲಕ್ಷ್ಮಿ ಎಂಬ ಕಮಲಕ್ಕೆ ಇರುಗಪ್ಪನು ರವಿಯಂತಿದ್ದನು ಎಂಬರ್ಥವನ್ನು ಈ ಸಾಲುಗಳು ತಿಳಿಸುತ್ತವೆ. ಈ ಮಾತು ೨ನೇ ಹರಿಹರನ ಕಾಲದ ವಿಜಯನಗರ ಸಾಮ್ರಾಜ್ಯವು ಔನ್ನತ್ಯಕ್ಕೇರುವ ಹಂತದಲ್ಲಿ ಇರುಗಪ್ಪದಂಡನಾಯಕನ ಪರಾಕ್ರಮವು ಸಹಾಯಕವಾಗಿ ತ್ತೆಂಬುದನ್ನು ದೃಢಪಡಿಸುತ್ತದೆ. ಈ ಶಾಸನದ ಮತ್ತೊಂದು ವಿಚಾರವೆಂದರೆ, ಇರುಗಪ್ಪನು ಆನೆಗೊಂದಿಯಲ್ಲಿ ಕಲ್ಲಿನಲ್ಲಿ ಬಸದಿಯನ್ನು ನಿರ್ಮಿಸುತ್ತಾನೆ; ಇದಕ್ಕೆ ಅವನ ತಂದೆ ಬೈಚಯ ದಂಡನಾಯಕನು ದಾನನೀಡುತ್ತಾನೆ. ಇಲ್ಲಿ ೨ ಮುಖ್ಯ ಸಂಗತಿ ಗಳನ್ನು ಎಚ್ಚರಿಕೆಯಿಂದ ಲಕ್ಷಿಸಬೇಕು: ಒಂದು, ಇರುಗಪ್ಪ ದಂಡನಾಯಕನ ಲಭ್ಯ ಶಾಸನಗಳಲ್ಲಿ ಇದೇ ಮೊದಲನೆಯ ಶಾಸನವಾದರೂ ಈ ಶಾಸನದಲ್ಲಿ ದಂಡನಾಯಕ, ಧರಣೀಶ ಎಂಬ ಎರಡು ವಿಶೇಷಣಗಳು ಬಳಕೆಯಾಗಿವೆ. ಅಂದರೆ ೧೩೮೨ರ ವೇಳೆಗಾಗಲೇ ಆತ ಒಬ್ಬ ಪ್ರಬಲ ದಂಡನಾಯಕನು ಮುಖ್ಯ ಅಧಿಕಾರಿಯೂ ಆಗಿ ಪ್ರವರ್ಧಮಾನಕ್ಕೆ ಬಂದು ಬಿಟ್ಟಿದ್ದನು. ಕ್ರಿ.ಶ. ೧೩೮೨ಕ್ಕೆ ಪೂರ್ವದಲ್ಲಿಯೂ ಅವನ ಶಾಸನಗಳು ದೊರೆಯದಿದ್ದರೂ ಬಹುಶಃ ಇದ್ದಿರಲೂ ಬಹುದು. ಎರಡನೆಯದು, ಆತ ಕಲ್ಲಿನಲ್ಲಿ ಬಸದಿಯನ್ನು ನಿರ್ಮಿಸಿದ್ದನೆಂಬುದನ್ನು ಮತ್ತು ಮುಂದಿನ ಅವನ ಶಾಸನಗಳಲ್ಲಿ ಜೈನಧರ್ಮದ ಪರ ಕಾರ್ಯಗಳು, ಧೋರಣೆಗಳು ಕಂಡುಬಂದಿರುವುದರಿಂದ ಈತ ಒಬ್ಬ ಜೈನಧರ್ಮೀಯ ಎಂಬುದು ಸ್ಪಷ್ಟಗೊಳ್ಳುತ್ತದೆ. ಮೂರನೆಯದು, ಯಾವುದೇ ಅಧಿಕಾರಿ ವಿಶೇಷ ಅಧಿಕಾರಗಳನ್ನು, ಸಿರಿವಂತಿಕೆಯನ್ನುಳ್ಳವ ನಾಗಿರದಿದ್ದರೆ ಕಲ್ಲಿನ ನಿರ್ಮಾಣಗಳಿಗೆ ಕೈಹಾಕಲಾರ. ಹಾಗಾಗಿ ಇರುಗಪ್ಪನು ೧೩೮೨ರ ಹೊತ್ತಿಗೆ ಒಬ್ಬ ವಿಶೇಷ ಸವಲತ್ತು ಗಳನ್ನು, ಅಪಾರ ಸಂಪತ್ತನ್ನು, ಅಧಿಕಾರಗಳನ್ನು ಹೊಂದಿದ್ದ ವಿಶಿಷ್ಟ ಮತ್ತು ಪ್ರಬಲ ದಂಡ ನಾಯಕನಾಗಿದ್ದಿರಬೇಕು.

ಕಂಚಿಯ ಸಮೀಪವಿರುವ ತಿರುಪ್ಪರುತ್ತಿಕುನ್ರುವಿನಲ್ಲಿನ ಶಾಸನದನ್ವಯ,[೩] ಇರಂಗಪ್ಪದಂಡನಾಯಕನು ಮಾವಂದೂರನ್ನು ಕಂಚಿಯ ಜೈನದೇಗುಲಕ್ಕೆ ತನ್ನ ಅಧಿರಾಜನಾದ ೨ನೆಯ ಬುಕ್ಕರಾಯನಿಗೆ ಒಳಿತಾಗಲಿ ಎಂದು ಹಾರೈಸಿ ದಾನ ನೀಡಿದ್ದನು. ೨ನೆಯ ಹರಿಹರನ ಆಳ್ವಿಕೆಯ ಅವಧಿಯಲ್ಲಿ ಪ್ರಬಲ ಅಧಿಕಾರಿಯಾಗಿದ್ದ ಇರುಗಪ್ಪನು ಅವನ ಮಗ ೨ನೆಯ ಬುಕ್ಕನಿಗೆ 'ಒಳಿತಾಗಲಿ' ಎಂದು ಹಾರೈಸಿದುದರ ಹಿಂದೆ ಹಲವು ರಾಜಕೀಯ ಸಂಗತಿಗಳು ಅಡಗಿವೆ. ಏಕೆಂದರೆ ೨ನೆಯ ಬುಕ್ಕನು ಯುವರಾಜ್ಯಾಧಿಕಾರ ವಹಿಸಿಕೊಳ್ಳುವ ವೇಳೆಗೆ ೨ನೆಯ ಹರಿಹರನು ಈ ಹೊತ್ತಿಗಾಗಲೇ ಹಲವು ದಂಗೆಗಳನ್ನು ಅಡಗಿಸಿ ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ತಂದಿದ್ದನು. ೨ನೆಯ ಹರಿಹರನ ಮೊದಲ ಮಗನಾದ ೨ನೆಯ ಬುಕ್ಕನು ಮೊದಲು ಮುಳಬಾಗಿಲು ರಾಜ್ಯದ ರಾಜ್ಯಪಾಲನಾಗಿದ್ದನು. ಕಾಲಕ್ರಮದಲ್ಲಿ ಯುವರಾಜ ಪದಗ್ರಹಣ ಮಾಡಿದ ತರುವಾಯ ತನ್ನ ತಂದೆಯಂತೆಯೆ ತನಗೂ ಅಸಮಾಧಾನಗೊಂಡ ನೆರೆಯ ದೊರೆಗಳು ತಮ್ಮ ಆಟಾಟೋಪಗಳನ್ನು ಮುಂದುವರಿಸಿದ್ದರು. ಬಾರಕೂರಿನ ಭೈರರಸ ನಾಯಕರೆ ಮೊದಲಾದವರನ್ನು ಬುಕ್ಕನು ಅಡಗಿಸಿದ್ದನು. ಇದಕ್ಕಿಂತ ಮುಖ್ಯವಾಗಿ ಬುಕ್ಕನ ರಾಜನೀತಿಯ ಸೂಕ್ಷ್ಮತೆ ನಮಗೆ ಗೋಚರಿಸುವುದು. ಆತ ತೆಲಂಗಾಣ, ಕೊಂಡವೀಡುಗಳ ಮೇಲೆ ಆಕ್ರಮಣ ಮಾಡಲು ಹೊರಟಾಗ, ಬಾರಕೂರು ಸುತ್ತಮುತ್ತಲು ಅಂದರೆ ಪಶ್ಚಿಮ ಕರಾವಳಿಯಲ್ಲಿ ತನ್ನ ಸ್ಥಾನವನ್ನು – ಅಧಿಕಾರವನ್ನು ಬಲಗೊಳಿಸಿದ ಮೇಲೆ ಆತ ತನ್ನ ಸಾಮ್ರಾಜ್ಯವನ್ನು ಪೂರ್ವಕರಾವಳಿಯ ಕಡೆಗೆ ವಿಸ್ತರಿಸಲು ಉದ್ದೇಶಿಸಿದಾಗ ಅದಕ್ಕಿದ್ದ ಒಂದು ದೊಡ್ಡ ತಡೆಗೋಡೆ ಎಂದರೆ ತೆಲಂಗಾಣ ಮತ್ತು ಕೊಂಡವೀಡು

ಅರಸುಮನೆತನ. ಬಹುಶಃ ಇವರೊಂದಿಗಿನ ತೀವ್ರಹೋರಾಟದಲ್ಲಿ ೨ ನೆಯ ಬುಕ್ಕನು ನಿರತನಾಗಿದ್ದಾಗ ಈ ಶಾಸನವು ಹುಟ್ಟಿರುವ ಸಾಧ್ಯತೆಯಿದೆ. ಇರುಗಪ್ಪನ ಹಲವು ಶಾಸನಗಳು ಶಾಂತಿಯುತ ಸಂದರ್ಭಗಳಲ್ಲಿ ಮಾಡಿಕೊಂಡಿರುವುದಕ್ಕೆ ಅವುಗಳಲ್ಲಿ ಅಡಗಿರುವ ಶಾಂತಿಸಂದೇಶಗಳು – ದಾನದುದ್ದೇಶಗಳು ಸಾಕ್ಷಿಯಾಗಿವೆ. ಹೀಗಿರುವಾಗ ಇದೊಂದು ಶಾಸನ ಮಾತ್ರ ಅರಸನಿಗೆ ಶುಭವನ್ನು ಬೇಡುವ ಸೂಕ್ಷ್ಮತೆಯನ್ನು ಒಳಗೊಂಡಿರುವುದರಿಂದ ಪ್ರಾಯಶಃ ತೀವ್ರತರ ಯುದ್ಧದ ಈ ಸಂದರ್ಭದಲ್ಲಿ ಮೂಡಿದ್ದಿರಬಹುದು. ಈ ಅವಧಿಯಲ್ಲಿಯೇ ಇರುಗಪ್ಪನ ಸಹಾಯದಿಂದ ೨ ನೆಯ ಬುಕ್ಕನ ಪಂಗಡವನ್ನು ಗೆದ್ದು ತೆಲಂಗಾಣದ ಕಡೆಗೆ ಯುದ್ಧ ಮುಂದುವರಿಸಲು ನಾಂದಿ ಹಾಡಿರುತ್ತಾನೆ.

ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಇರುಗಪ್ಪನ ಪಾತ್ರ:

ಇರುಗಪ್ಪ ದಂಡನಾಯಕನು ಆಳರಸರಂತೆಯೇ ತನ್ನ ಆಡಳಿತದ ಪರಿಧಿಯಲ್ಲಿ ಹಲವು ಸಾಮಾಜಿಕ ಒಲವುಗಳನ್ನು ಹೊಂದಿದ್ದನು. ಹಿಂದೂಪುರ (ಆಂಧ್ರ ಪ್ರದೇಶ) ಚಿಲಮುತ್ತೂರಿನಲ್ಲಿ ಹೊಸದಾಗಿ ಕಲ್ಲುಮಂಚಿಗೆಯನ್ನು ಇರುಗಪ್ಪನು ನಿರ್ಮಿಸುತ್ತಾನೆ.[೪] ಕಂಚಿಯ ಸಮೀಪವಿರುವ (ಈಗಿನ ಜಿನಕಂಚಿ) ತಿರುಪ್ಪರುತ್ತಿಕುನ್ರುವಿನಲ್ಲಿ ಪುಷ್ಪಸೇನ ಮುನಿಗಳ ಆಣತಿಯ ಮೇರೆ ಕಲ್ಲುಮಂಟಪವನ್ನು ಕಟ್ಟಿರುತ್ತಾನೆ.[೫] ಅಹಿಂಸಾ ಧರ್ಮಾನುಯಾಯಿಯಾದ ಇರುಗಪ್ಪನು ಕೇವಲ ದಾನಧರ್ಮಗಳನ್ನಿತ್ತು ಕೈತೊಳೆದು ಕೊಳ್ಳುವ ಅಂಧಾನುಶ್ರದ್ಧೆಯುಳ್ಳವನಾಗದೆ ಜನಹಿತವಾದ ಇಂತಹ 'ನಿಜಧರ್ಮ' ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಮತ್ತು ಜನಸಾಮಾನ್ಯರು ದಣಿವಾರಿಸಿಕೊಳ್ಳಲು, ಆಶ್ರಯ ಪಡೆಯಲು, ಕೆಲಕಾಲ ನೆಲೆನಿಲ್ಲಲು ಸಹಾಯವಾಗುವಂತಹ ಸಾಮಾಜಿಕ ಕಾಳಜಿ ಹೊಂದಿದ್ದನೆಂಬುದು ವಿದಿತವಾಗುತ್ತದೆ.

೨ನೇ ಹರಿಹರನು ಅಧಿಕಾರದಲ್ಲಿದ್ದಾಗ, ಪ್ರಜಾಕ್ಷೇಮಕ್ಕಾಗಿ ಎಷ್ಟೋ ಕಾರ್ಯಗಳು ಯಶಸ್ವಿಯಾಗಿದ್ದವು. ಆದರೂ ಅವನ ಕಾಲದಲ್ಲಿ ಭಾರಿಕ್ಷಾಮವುಂಟಾಗಿ ಸಾಮ್ರಾಜ್ಯದ ದಕ್ಷಿಣದ ಹಲವು ಪ್ರದೇಶಗಳು ನಲುಗಿಹೋಗಿದ್ದವು. ಆಗ ಹರಿಹರನು ಸಕಲ ಸೌಲಭ್ಯಗಳನ್ನು ಪ್ರಜೆಗಳಿಗೆ ಒದಗಿಸಿದನಲ್ಲದೆ ಮುಂಜಾಗ್ರತೆಯ ದೃಷ್ಟಿಯಿಂದ ಕೆರೆ ಕಾಲುವೆಗಳನ್ನು ಪುನರ್ ಉದ್ಧರಿಸಿದನು. ಅಂತೆಯೇ ಇರುಗಪ್ಪದಂಡನಾಯಕನು ಸಹ ಜನಹಿತದುರಂದರನಾಗಿ ಕಾರ್ಯನಿರ್ವಹಿಸಿದ್ದನು. ಇದಕ್ಕೆ ಚಿನ್ನಕಾಟ್ಲದ (ಆಂಧ್ರ ಪ್ರದೇಶ) ಶಾಸನವು ಆಧಾರವಾಗಿದೆ.[೬] ಇದರ ಪ್ರಕಾರ, ಇರುಗಪ್ಪನು ತಾನೇ ಖುದ್ದಾಗಿ ನಿಂತು ಬ್ರಾಹ್ಮಣನೊರ್ವನಿಂದ ಹದಗೆಟ್ಟಿದ್ದ ಕಾಲುವೆಯನ್ನು ಪುನರ್ ನಿರ್ಮಿಸಿದ್ದನು. ಆ ಮೂಲಕ ಈ ಕಲುವೆಯ ಸುತ್ತಮುತ್ತಲಿನ ಕೃಷಿ ಚಟುವಟಿಕೆಗಳು ಬಲಗೊಳ್ಳಲು ಕಾರಣವಾದಂತಾಯಿತು.

ಈ ಮೇಲಿನ ಸಂಗತಿಗಳು ಇರುಗಪ್ಪದಂಡನಾಯಕನ ಜನಪರ ನಿಲುವುಗಳನ್ನು ಮತ್ತು ಆರ್ಥಿಕತೆಯ ದೃಷ್ಠಾರತ್ವವನ್ನು ನವಿರಾಗಿ ವಿದಿತಗೊಳಿಸುತ್ತವೆ.

ಇರುಗಪ್ಪದಂಡನಾಯಕನ ಧಾರ್ಮಿಕ ನಿಷ್ಠೆ

ನಿಲವಾರದ (ಉಡುಪಿಯ ಸಮೀಪದ) ಶಾಸನದನ್ವಯ[೭] ಇರುಗಪ್ಪ ದಂಡನಾಯಕನ ಮನೆಯ ಅಧಿಕಾರಿಯಾಗಿದ್ದ ಬಯಿರಣ್ಣನು ದುರ್ಗಾಭಗವತಿ ದೇವಾಲಯವನ್ನು ಪುನರುದ್ಧಾರಗೊಳಿಸಿ ಅದಕ್ಕೆ ದಾನದತ್ತಿಗಳನ್ನು ನೀಡಿದನು. ಈ ಬಯಿರಣ್ಣನೇ ದುರ್ಗಾಭಗವತಿ ದೇವಾಲಯದ ವಿವಿಧ ಸೇವೆಗಳಿಗೆ, ಜೀರ್ಣೋದ್ದಾರಕ್ಕೆ, ದೇಗುಲದ ಸೇವಕರಿಗೆ ದಾನ ನೀಡಿದುದನ್ನು ಇದೇ ಊರಿನ ಮತ್ತೊಂದು ಶಾಸನವು ತಿಳಿಸುತ್ತದೆ.[೮] ಇಲ್ಲಿಯೇ ದೊರೆತ ಮತ್ತೊಂದು ಶಾಸನವು[೯] ಈ ಬಯಿರಣ್ಣನು ಇರುಗಪ್ಪ ದಂಡನಾಯಕನಿಗೆ ಶುಭವನ್ನು ಹಾರೈಸಿ ಮತ್ತೆ ದುರ್ಗಾಭಗವತಿ ದೇಗುಲಕ್ಕೆ ದಾನ ನೀಡಿದ್ದನು. ಗುತ್ತಿಯ ತ್ರುಟಿತ ಶಾಸನದನ್ವಯ, ಇರುಗಪ್ಪ ದಂಡನಾಯಕನು ಪಾರ್ಶ್ವನಾಥ ಜಿನನಿಗೆ ಚೈತ್ಯಾಲಯವನ್ನು ನಿರ್ಮಿಸಿದ್ದನು. ಇರುಗಪ್ಪನ ಜೈನಧರ್ಮಪರ ಅಭಿಮಾನ ದುತ್ತುಂಗತೆಯ ಹಲವೆಡೆ ಆತ ಅನೇಕ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಲು ಅನುವು ಮಾಡಿಕೊಟ್ಟಿದೆ. ಸ್ವಧರ್ಮರಕ್ಷಣೆ ಮತ್ತು ಪ್ರಚುರತೆಯನ್ನು ಕೈಗೊಳ್ಳುವ ಹಂತದಲ್ಲಿ ಹಂಪಿಯಲ್ಲಿ ಕಂತು ಜಿನಾಲಯವು ಶಿಲೆಯಲ್ಲಿ ಇರುಗಪದಂಡನಾಥನಿಂದ ನಿರ್ಮಾಣಗೊಂಡಿದೆ". ಈ ಅಂಶವನ್ನು ತಿಳಿಸುವ ಹಂಪಿಯ ಶಾಸನವು ಇರುಗಪ್ಪ ದಂಡೇಶವನನ್ನು ಮನದುಂಬಿ ಹೊಗಳಿದೆ:

> **ಆಸೀದಿರುಗ ದಂಡೇಶೋ ನಂದನೋ ಲೋಕನಂದನಃ**
> **ನ ಮೂರ್ತ್ತಾ ನಾಮೂರ್ತ್ತಾ ನಿಖಿಲಭುವನಾಭೋಗಿ**
> **ಕತಯಾ ಶರದ್ರಾಜದ್ರಾಕಾವಿಟ ನಿಟಿಲನೇತ್ರದ್ಯುತಿತತಯಾ।**
> **ಪ್ರಭೂತಾ ಕೀರ್ತ್ತಿಸ್ಯಾ ಚಿರಮಿರುಗದಂಡೇಶ ಕಥಯ**
> **ತ್ಯಾನೇಕಾಂತಾತ್ಮಾತ್ಪರಮಿಹ ನ ಕಿಂಚಿನ್ಮತಮಿತಿ ॥**
> **ಸದ್ವಂಶ ಜೋಪಿ ಗುಣ ವಾನಪಿ ಮಾರ್ಗಣಾನಾಮಧಾರ**
> **ತಾಮಂಪಗ ತೋಪಿ ಚ ಯಸ್ಯ ಚಾಪಃ। ನವ್ರಂಃ ಪರಾನ್ವಿನ**
> **ಮಯನ್ನಿರಂಗಕ್ಷೀತೀಶಸ್ಯೋಚ್ಛ್ರೈರ್ಜ್ನನಾಯ ಖಲು ಸಿಕ್ಷಯತೀವ**
> **ನೀತಿಂ ॥**

ಅಲ್ಲದೆ ಈತ ಮಣೆಗಾರಕೇರಿಯ ಬಸದಿಗೆ ದಾನನೀಡಿದುದು ಬಾರಕೂರಿನ ಶಾಸನದಿಂದ ತಿಳಿದುಬರುತ್ತದೆ. [೧೧] ಈ ಆರು ಶಾಸನಗಳ ಅಧ್ಯಯನದಿಂದ ನಿಚ್ಚಳಗೊಳ್ಳುವ ಸಂಗತಿಯೆಂದರೆ ಇರುಗಪ್ಪದಂಡನಾಯಕನು ಈಗಾಗಲೇ ತನ್ನ ಪ್ರಭಾವವನ್ನು ಕಳೆದುಕೊಂಡಿದ್ದ

ಜೈನಧರ್ಮದ ಉಳಿವಿಗಾಗಿ ಆ ಧರ್ಮವನ್ನು ತನ್ನ ಅಧಿಕಾರವ್ಯಾಪ್ತಿಯಲ್ಲಿ ಪುನರುದ್ಧಾರಗೊಳಿಸುತ್ತಿದ್ದನು;

ತನ್ನ ಧಾರ್ಮಿಕನಿಷ್ಠೆ, ಸಹಿಷ್ಣುತೆಗಳಲ್ಲದೇ ಸಾಮಾಜಿಕ ಮತ್ತು ಆರ್ಥಿಕ ಕೊಡುಗೆಗಳಿಂದ ದಂಡನಾಯಕ ಪದವಿಯಲ್ಲಿದ್ದ ಇರುಗಪ್ಪನು ಆಳರಸರ ವಿಶ್ವಾಸ ಗಳಿಸಿ ಕ್ರಿ.ಶ. ೧೩೬೭ರ ವೇಳೆಗೆ[೧೩] ಬಾರಕೂರು ರಾಜ್ಯದ ಪ್ರಾಂತ್ಯಾಧಿಕಾರಿಯಾಗಿ ನಿಯುಕ್ತಿಗೊಳ್ಳುತ್ತಾನೆ. ಈ ಮೊದಲು ಇದೇ ಬಾರಕೂರು ತನ್ನ ತಂದೆ ಬೈಚಯದಂಡನಾಯಕನು ಬಾರಕೂರನ್ನು ಆಳುತ್ತಾನೆ. ಇರುಗಪ್ಪ ದಂಡನಾಯಕನು ತನ್ನ ರಾಜಕೀಯ ಮತ್ತು ಸಾಂಸ್ಕೃತಿಕ ಸಾಧನೆಯ ಫಲವಾಗಿ ಮುಂದೆ ಬಾರಕೂರು ಸೇರಿದಂತೆ ಇಡೀ ತುಳುರಾಜ್ಯವನ್ನು ಪ್ರತಿಪಾಲಿಸುತ್ತಾನೆ. ಇದನ್ನು ಕ್ರಿ.ಶ. ೧೩೮೯ರ ಹುಂಚದ ಶಾಸನ[೧೪] ಸ್ಪಷ್ಟವಾಗಿ ಅರಹುತ್ತದೆ. ಬಾರಕೂರು ಒಂದು ಮುಖ್ಯಬಂದರಾದ್ದರಿಂದ ಸಮುದ್ರವ್ಯಾಪಾರ ಅಲ್ಲಿ ಚುರುಕಾಗಿಯೇ ಸಾಗುತ್ತಿತ್ತು. ಇದರಿಂದ ಇರುಗಪ್ಪ ದಂಡನಾಯಕನು ವಿಜಯನಗರ ಸಾಮ್ರಾಜ್ಯದೊಂದಿಗಿನ ವಿದೇಶಿ ವ್ಯಾಪಾರ ವಹಿವಾಟಿನಲ್ಲಿ ಮುಖ್ಯ ಪಾತ್ರ ವಹಿಸಿದ್ದನೆಂಬುದು ತಿಳಿಯುತ್ತದೆ. ಇದಕ್ಕೆ ಇದೇ ಶಾಸನದಲ್ಲಿ ಸಾಕ್ಷಿ ದೊರೆಯುತ್ತದೆ. ಅಜ್ಜಸಾಹು ಎಂಬಾತ ಜಲಯಾತ್ರಿಯಾಗಿ ಬಂದು ಇರುಗಪ್ಪನ ಅಧೀನದಲ್ಲಿದ್ದ ತುಳುರಾಜ್ಯದಲ್ಲಿ ಜಮೀನನ್ನು ಖರೀದಿಸುತ್ತಾನೆ ಮತ್ತು ಹುಂಚದ ಪಾರ್ಶ್ವನಾಥ ದೇವರಿಗೆ ದತ್ತಿ ನೀಡುತ್ತಾನೆ.

ಚಿತ್ತೂರಿನ ಶಾಸನವೊಂದು ಬಹಳ ಮುಖ್ಯಸಂಗತಿಯನ್ನು ತಿಳಿಸುತ್ತದೆ. ಈ ಶಾಸನದ ಕಾಲ ಕ್ರಿ.ಶ. ೧೫೯೭. [೧೫] ತಿಪ್ಪಿಸೆಟ್ಟಿ ಮತ್ತು ತಿಮ್ಮಾಯಿ ಎಂಬ ಅಣ್ಣತಂಗಿಯರು ತಮ್ಮ ತಂದೆ-ತಾಯಿಗಳಿಗೆ ಪುಣ್ಯವಾಗಲಿ ಎಂದು ಉದ್ದಗಿರಿಯ ತಿರುವೇಂಗಳನಾಥನಿಗೆ ಕೆಲವು ಭೂದಾನಗಳನ್ನು ನೀಡಿದರು. ಆಗ ಇರುಗಪ್ಪ ದಂಡನಾಯಕನು ತನ್ನ ಜೀವಿತಕಾಲದಲ್ಲಿ ಪಡೆದ ಪರಮೋಚ್ಚ ಸ್ಥಾನವಿದೆ.

ಸಾಹಿತಿಯಾಗಿ ಇರುಗಪ್ಪದಂಡನಾಯಕ

ಇರುಗಪ್ಪ ದಂಡನಾಯಕನು ಒಬ್ಬ ಸಾಹಿತಿಯೂ ಆಗಿದ್ದನು. 'ನಾನಾರ್ಥರತ್ನಮಾಲ' ಎಂಬ ಸಂಸ್ಕೃತಗ್ರಂಥವನ್ನು ಈತ ರಚಿಸಿರುವನು. ಇದರಲ್ಲಿ ಏಕಾಕ್ಷರ, ದ್ವ್ಯಕ್ಷರ, ತ್ರ್ಯಕ್ಷರ, ಚತುರಕ್ಷರ, ಸಂಕೀರ್ಣ, ಅವ್ಯಯ ಎಂಬ ಆರು ಖಂಡಗಳಿವೆ. ಈ ಕೃತಿಯು ಒಂದು ನಿಘಂಟಾಗಿದೆ. ಇದರಲ್ಲಿ ೨೬೪೦ ಪದ್ಯಗಳಿವೆ. ಮಧ್ಯಕಾಲೀನ ಕರ್ನಾಟಕದಲ್ಲಿ ಒಂದೆಡೆ ಶೈವ-ವೀರಶೈವ ಪರಂಪರೆಗಳು, ಮತ್ತೊಂದೆಡೆ ಭಕ್ತಿಪಂಥದ ಮೇಲ್ಮೈ, ಮಗದೊಂದೆಡೆ ವೈಷ್ಣವ ಸಂಪ್ರದಾಯದ ಪ್ರಚರತೆ, ಇನ್ನೊಂದೆಡೆ ಮಹಾರಾಷ್ಟ್ರದ ವಾರಕರಿ ಸಂಪ್ರದಾಯದ ಬೆಳವಣಿಗೆ-ಹೀಗೆ ನಾನಾ ರೀತಿಯಲ್ಲಿ ಸಾಂಸ್ಕೃತಿಕತೆಯು ಮೇಳೈಸಿದ್ದಿತು. ಇಂಥ ಚಾರಿತ್ರಿಕ ಕಾಲಘಟ್ಟದಲ್ಲಿ ಕನ್ನಡ, ತಮಿಳು, ತೆಲುಗು ಭಾಷೆಗಳಲ್ಲಿ ಸೃಜನಶೀಲ ಬರವಣಿಗೆಗಳು ಹೆಚ್ಚಾಗಿದ್ದವು. ಈ ಎಲ್ಲಾ ಸಂದಿಗ್ಧತೆಗಳ ನಡುವೆ ಇರುಗಪ್ಪದಂಡನಾಯಕನು ಒಂದು ನಿಘಂಟನ್ನು ಸಂಸ್ಕೃತದಲ್ಲಿ ಬರೆಯುವುದರ ಕಾರಣವೇನು? ಸೃಜನೇತರ ಬರಹವಾದ ನಿಘಂಟನ್ನು ಬರೆಯುವ ಮೂಲಕ ವಿಶೇಷ ಅಸ್ಮಿತೆಯನ್ನು ಮತ್ತು ಸೃಜನಶೀಲ ಬರಹಗಳಿಗೆ ಸಹಾಯವಾಗಲಿ ಎಂಬ ಸದುದ್ದೇಶವನ್ನು ಆತ ಸಾಧಿಸಲು ಈ ನಿಘಂಟು ಬರೆದಿರಬಹುದು!

ಯತ್ಪಾದಾಂಬುರುಹಾಭಾಯ ದೇವಚೂಡಮಣಿಯತೆ ।
ಯಸ್ಯ ಜ್ಞಾನಾದಯೋನ್ನತ ಸ ದೇವಃ ಶ್ರೇಯಸೇಸ್ತು ನಃ॥

ಎಂದು ಪ್ರಾರಂಭವಾಗುವ 'ನಾನಾರ್ಥರತ್ನಮಾಲ' ವು ಇರುಗಪ್ಪ ದಂಡಾಧೀಶನನ್ನು ಪ್ರಚಂಡ ಬುದ್ಧಿವಂತ, ಸದ್ವೃತ್ತಿಯುಳ್ಳವ, ದಂಡೇಶವಂಶದಲ್ಲಿ ಮುಕ್ತಾಯ ಮಣಿಯಂತಿರುವವ, ೨ ನೆಯ ಹರಿಹರನಿಗೆ ಅಂತಃಕರಣದಂತಿರುವವ, ಚುರುಕುಮತಿಯುಳ್ಳವ, ವಿವಿಧ ಗ್ರಂಥಗಳನ್ನು ಅಧ್ಯಯನ ಮಾಡಿ ಸರಸ್ವತಿಯ ಕನ್ನಡಿಯಂತೆ ತೇಜಸ್ಸುಳ್ಳವನು ಎಂದು ಕೀರ್ತಿಸಿದೆ. ಈ ಕೃತಿಯನ್ನು ಇರುಗಪ್ಪದಂಡನಾಯಕನೆ ಬರೆದನೆಂಬುದಕ್ಕೆ ಕೃತಿಯ ಈ ಮುಂದಿನ ಸಾಲು ಸಾಕ್ಷಿಯೊದಗಿಸುತ್ತದೆ.

ಸೋಯಂ ಗ್ರಥ್ನಾತಿ ನಾನಾರ್ಥರತ್ನಮಾಲಾಂ ಗುಣೋಜ್ವಲಾಂ
ಶ್ರೀಮಾನಿರುಗಪದಂಡೇಶೋ ನಾತ್ಯಲ್ಪಂ ನಾತಿವಿಸ್ತರಂ ॥

ಈ ಕೃತಿಯ ನಾಲ್ಕು ಪ್ರತಿಗಳು ದೊರೆತಿವೆ. ಒಂದು ೧೯೧೯ ರಲ್ಲಿ ಮದ್ರಾಸಿನಲ್ಲಿ ದೊರೆತ ಗ್ರಂಥಲಿಪಿಯಲ್ಲಿರುವ ಪ್ರತಿ; ೨ ನೆಯದು ಬರೋಡಾದ ಓರಿಯಂಟಲ್ ಇನ್ಸಿಟ್ಯೂಟ್‌ನಲ್ಲಿ ದೊರೆತಿರುವ ತೆಲುಗು ಲಿಪಿಹೊಂದಿರುವ ಹಸ್ತಪ್ರತಿ; ೩ ನೆಯದು ಬರೋಡಾದ ಒರಿಯಂಟಲ್ ಇನ್ಸಿಟ್ಯೂಟ್‌ನಲ್ಲಿರುವ ಗ್ರಂಥ ಲಿಪಿಯಲ್ಲಿರುವ ಹಸ್ತಪ್ರತಿ; ನಾಲ್ಕನೆಯದು ಲಂಡನ್‌ನ India office library ಯಲ್ಲಿರುವ ತೆಲುಗು ಭಾಷೆಯಲ್ಲಿರುವ ಮುದ್ರಿತ ಪ್ರತಿ. ಈ ನಾಲ್ಕು ಪ್ರತಿಗಳನ್ನು ಅಭ್ಯಸಿಸಿ, ಸಂಪಾದಿಸಿ ವಿಮರ್ಶಾತ್ಮಕವಾಗಿ ಸಂಕಲಿಸಿ ಬೆಳ್ಳಿಕೋಟೆ ರಾಮಚಂದ್ರ ಶರ್ಮರು ೧೯೫೪ ರಲ್ಲಿ ಪೂನಾದ ಡೆಕ್ಕನ್ ಕಾಲೇಜಿನ ಸ್ನಾತಕೋತ್ತರ ಸಂಶೋಧನಾ ಸಂಸ್ಥೆಯಿಂದ ಹೊರತಂದಿದ್ದಾರೆ.[೧೬]

ಸಂಸ್ಕೃತ ರವಿಚರಿತ್ರೆಯ ಕರ್ತೃ ಎಂ. ಎನ್. ಶ್ರೀನಿವಾಸ ಅಯ್ಯಂಗಾರರು[೧೭] "ಇರುಗಪದಂಡನಾಯಕನಿಗೆ ಭಾಸ್ಕರ ಎಂಬ ಹೆಸರೂ ಇತ್ತು. ವೇದಾಭಾಷ್ಯವನ್ನು ಬರೆದ ಸುಪ್ರಸಿದ್ಧ ಸಾಯಣನ ಸೋದರ; ಮಾಯಣ್ಣನ ಮಗ" ಎಂದು ಹೇಳಿದ್ದಾರೆ. ಭಾಸ್ಕರನೆಂಬ ಕವಿಯು ಹರಿಹರನ ಕಾಲದಲ್ಲಿ ಇದ್ದದೂ ನಿಜ; ಆತ ಸಾಯಣನ ಸೋದರ ಹಾಗೂ ಮಾಯಣನ ಮಗ ಎಂಬುದು ನಿಜ; ಆದರೆ ಭಾಸ್ಕರನೇ ಬೇರೆ. ಈ ಇರುಗಪ್ಪನೇ ಬೇರೆ. ಇಡೀ ನಾನಾರ್ಥರತ್ನಮಾಲದ ಯಾವ ಪದ್ಯಗಳಲ್ಲಿಯೂ ಇವನಿಗೆ ಭಾಸ್ಕರನೆಂಬ ಹೆಸರಿರುವ ಉಲ್ಲೇಖಗಳಿಲ್ಲ. ಬದಲಿಗೆ ೨ನೇ ಹರಿಹರನ ದಂಡನಾಥನಾಗಿದ್ದ ಇರುಗಪ್ಪನು ನಾನಾರ್ಥರತ್ನಮಾಲವನ್ನು ಬರೆದನೆಂಬುದಕ್ಕೆ ಪ್ರತಿಖಂಡದ ಕೊನೆಗೂ ಉಲ್ಲೇಖವಿದೆ. ಅಲ್ಲದೆ ಇದನ್ನು ಸಂಕಲಿಸಿರುವ ಶರ್ಮರು ಈ ಕೃತಿಯ ಮುನ್ನುಡಿಯಲ್ಲಿ ದೊರೆತಿರುವ ೪ ಹಸ್ತಪ್ರತಿಗಳ ಸಹಾಯದಿಂದ ಇದನ್ನು ರಚಿಸಿದವನು ಹರಿಹರನ ದಂಡೇಶ ಇರುಗಪ್ಪನೇ ಎಂಬುದನ್ನು ಸಾಧಾರಾವಾಗಿ, ವಿಶ್ಲೇಷಣಾತ್ಮಕ-ವಿಮರ್ಶಾತ್ಮಕವಾಗಿ ನಿರೂಪಿಸಿದ್ದಾರೆ. ಹಾಗೆಯೇ ಎಚ್. ಎಂ. ನಾಗರಾಜು ಅವರು ತಮ್ಮ 'ವಿಜಯನಗರದ ಇಮ್ಮಡಿದೇವರಾಯ' ಕೃತಿಯಲ್ಲಿ[೧೮] ನಾನಾರ್ಥ ರತ್ನಮಾಲದ ಕರ್ತೃ ಇರುಗಪ್ಪನು ಇಮ್ಮಡಿದೇವರಾಯನ ದಂಡಾಧಿಪತಿಯಾಗಿದ್ದನೆಂದು ಅಭಿಪ್ರಾಯಿಸಿದ್ದಾರೆ. ಇಮ್ಮಡಿ ದೇವರಾಯನ ದಂಡನಾಯಕನಾಗಿ ಇರುಗಪ್ಪನೆಂಬುವವನು ಇದ್ದನಾದರೂ ಆತ ಹರಿಹರನ ದಂಡನಾಥನಲ್ಲ. ಅಂದರೆ ೨ನೇ ಹರಿಹರನಲ್ಲಿದ್ದ ಇರುಗಪ್ಪದಂಡನಾಯಕನೆ ಬೇರೆ. ಅವನ ಅಣ್ಣನಾದ ಮಂಗಪ್ಪದಂಡನಾಯಕ ಮತ್ತು ಜಾನಕಿ ದಂಪತಿಗಳ ದ್ವಿತೀಯ ಪುತ್ರನಾದ ಇರುಗಪ್ಪ ದಂಡನಾಯಕನೆ ಬೇರೆ. ಇವನನ್ನು ೨ ನೆಯ ಇರುಗಪ್ಪದಂಡನಾಯಕ ಎನ್ನಬಹುದು. ಇಮ್ಮಡಿ ಹರಿಹರನ ಅಧೀನದಲ್ಲಿದ್ದ ಇರುಗಪ್ಪದಂಡನಾಯಕನು 'ನಾನಾರ್ಥರತ್ನಮಾಲ'ದ ಕರ್ತೃವೇ ಹೊರತು ಇಮ್ಮಡಿ ದೇವರಾಯನ ಪ್ರಧಾನಿ ಇಮ್ಮಡಿ ಇರುಗಪ್ಪ ದಂಡನಾಯಕನಲ್ಲ. ಮೊದಲನೆಯ ಇರುಗಪ್ಪ ದಂಡನಾಯಕನನ್ನು (೨ನೆಯ ಹರಿಹರನ ಅಧಿಕಾರಿ) ಉಲ್ಲೇಖಿಸುವ ಶಾಸನಗಳು ಕ್ರಿ.ಶ. ೧೩೯೭ ಕ್ಕೆ ಕೊನೆಯಾಗುತ್ತವೆ. ಇನ್ನು ಇಮ್ಮಡಿ ದೇವರಾಯನ ಪ್ರಧಾನಿ ಇಮ್ಮಡಿ ಇರುಗಪ್ಪದಂಡನಾಯಕನನ್ನು ಉಲ್ಲೇಖಿಸುವ ಮೊದಲ ಶಾಸನದ ಕಾಲ ಕ್ರಿ.ಶ. ೧೪೨೨.[೧೯] ಹೀಗಾಗಿ ಕಾಲದ ದೃಷ್ಟಿಯಿಂದಲೂ ಇವರೀರ್ವರೂ ಭಿನ್ನರು; ಆದರೆ ಸಂಬಂಧಿಕರು (ಲೇಖನದ ಕೊನೆಯಲ್ಲಿರುವ ವಂಶವೃಕ್ಷ ನೋಡಿ).

ಒಟ್ಟಿನಲ್ಲಿ ಕ್ರಿ.ಶ. ೧೪ನೆಯ ಶತಮಾನದ ಮಧ್ಯಭಾಗದಿಂದ ಕೊನೆಯುವರೆಗಿನ ಕಾಲದವರೆಗಿನ ಶಾಸನಗಳು ೧ ನೆಯ ಇರುಗಪ್ಪದಂಡನಾಯಕನು ಹೊಯ್ಸಳರ ಕಾಲದಲ್ಲಿ ದಂಡನಾಯಕ ಪದವಿಯಲ್ಲಿದ್ದು, ತನ್ನ ಶೌರ್ಯ ಪರಾಕ್ರಮಗಳಿಂದ ಮಹಾಪ್ರಧಾನಿಯಾಗಿ, ವಿಸ್ತಾರವಾದ ಹಲವು ಪ್ರದೇಶಗಳ ಒಡೆಯನಾಗಿ ಸಂಗಮ ದೊರೆಗಳ ಆಳ್ವಿಕೆಯವಧಿಯಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿದ್ದಾನೆ. ಶಾಂತಿ-ಸೌಹಾರ್ದತೆಗಳಿಂದ ರಾಜ್ಯಾಡಳಿತದಲ್ಲಿ ಪಾಲ್ಗೊಂಡಿದ್ದುದು ಮಾತ್ರವಲ್ಲದೆ ಸಾಂಸ್ಕೃತಿಕವಾಗಿಯೂ ಅನನ್ಯತೆಯನ್ನು ಸಾಧಿಸಿದ್ದಾನೆ.


ಇರುಗಪ್ಪದಂಡನಾಯಕನ ವಂಶೀಯರು

ಇರುಗಪ್ಪದಂಡನಾಯನಾಯಕನ ವಂಶೀಯರ ಸುಮಾರು ೮೦ಕ್ಕೂ ಹೆಚ್ಚು ಶಾಸನಗಳು ದೊರೆತಿದ್ದು, ಅವು ಅಂದಿನ ವಿಶೇಷವಾದ ರಾಜಕೀಯ ಮತ್ತು ಸಾಂಸ್ಕೃತಿಕ ಚಿತ್ರಣವನ್ನು ಒದಗಿಸುತ್ತವೆ. ಈ ಶಾಸನಗಳ ಆಧಾರದಿಂದ ಇರುಗಪ್ಪದಂಡನಾಯಕನ ವಂಶೀಯರ ವಂಶವೃಕ್ಷವನ್ನು ಹೀಗೆ ರಚಿಸಿದ್ದೇನೆ.

ಇರುಗಪ್ಪನ ವಂಶೀಯರು ಸಹ ಅವನಂತೆಯೇ ಸಮರ್ಥ ಆಡಳಿತಗಾರರಾಗಿದ್ದರು. ಅವರು ಬಾರಕೂರು, ಮಂಗಳೂರು, ಗೋವೆ, ಗುತ್ತಿ, ಮಾಗಣಿ ಆರಗಗಳೆಂಬ ಪ್ರತ್ಯೇಕ ಪ್ರಾಂತ್ಯಗಳಿಗೆ ಪ್ರಧಾನಿಗಳಾಗಿ, ರಾಜ್ಯಪಾಲರಾಗಿ ನೇಮಕಗೊಂಡು ಕಾರ್ಯನಿರ್ವಹಿಸಿದ್ದಾರೆ.[೨೦]

ಇರುಗಪ್ಪ ದಂಡನಾಯಕ ಮತ್ತು ಅವನ ವಂಶೀಯರ ಹಲವು ಶಾಸನಗಳಲ್ಲಿ ಅವರ ಧಾರ್ಮಿಕ ಸಹಿಷ್ಣುತೆ-ನಿಷ್ಠೆ, ಶೈಕ್ಷಣಿಕಕೊಡುಗೆ, ಸಾರ್ವಜನಿಕ ಕಾರ್ಯಗಳು, ರಾಜಕೀಯ ದೂರದರ್ಶಿತ್ವಗಳು ಗೋಚರಿಸುತ್ತವೆ. ಹೀಗಾಗಿ ನಮ್ಮ ನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಇರುಗಪ್ಪ ದಂಡನಾಯಕ ಮತ್ತು ಅವನ ವಂಶೀಯರು ಮಿಗಿಲಾದ, ಘನವಾದ ಸ್ಥಾನವನ್ನು ಪಡೆದಿದ್ದಾರೆ.

[ನನ್ನ ಈ ಲೇಖನಕ್ಕೆ ಮಾರ್ಗದರ್ಶನ, ಸಹಕಾರ ನೀಡಿದ ಗುರುಗಳಾದ ಶ್ರೀ. ಎಸ್. ಎಲ್. ಶ್ರೀನಿವಾಸ ಮೂರ್ತಿಯವರಿಗೆ, ನನ್ನ ಪತಿ ಶ್ರೀ ಸುಂಕಂ ಗೋವರ್ಧನ ಮತ್ತು ಗೆಳೆಯ ಶ್ರೀ ಎಸ್. ಕಾರ್ತಿಕ್‌ರವರಿಗೆ ಕೃತಜ್ಞತೆಗಳು.]



ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. ಎಸ್. ಗಂಗಾಂಬಿಕೆ : – 'ಹೊಯ್ಸಳ ಮಹಾಪ್ರಧಾನಿ ಬಲ್ಲಪದಂಡನಾಯಕ ಮತ್ತು ಅವನ ವಂಶೀಯರು', ಇತಿಹಾಸ ದರ್ಶನ ಸಂ–೨೬, ೨೦೧೧, ಪುಟ –'ಹೊಯ್ಸಳ ಮಹಾಪ್ರಧಾನಿ ಮಾಧವದಂಡನಾಯಕ ಮತ್ತು ಅವನ ವಂಶೀಯರು' ಇತಿಹಾಸ ದರ್ಶನ ಸಂ–೨೭, ೨೦೧೨, ಪುಟ – ೨೩೯.

೨. ಕನ್ನಡ ವಿ. ವಿ. ಶಾಸನ ಸಂಪುಟ – ೨, ಕೊಪ್ಪಳ ಜಿಲ್ಲೆ, ಗಂಗಾವತಿ ೨೧.

೩. Epigraphia India. vof. VII, PP 115-116.

೪. SII. IX. Part - 2 142.

೫. E. I. vol, VII, P 166.

೬ ARSIE. 1926, SL, NO. 306.

೭. ARIE - 1928-29, SL, NO. 497, 499.

೮. ಅದೇ., ೯. ಅದೇ.,

೧೦. B. R. Gopal (Ed.), Vijayanagara Inscriptions, vol-4, DAM, Mysore - 1996, AP 121.

೧೧. ಕ.ವಿ.ವಿ. ಶಾಸನ ಸಂಪುಟ ೩, ಹಂಪಿ.

೧೨. ARIE, ೧೯೭೦–೭೧, sl. No. ೨೧೦. ೧೩. ಅದೇ.,

೧೪. ಎ.ಕ (ಪರಿಷ್ಕೃತ) ಸಂಪುಟ – ೧೫, ಹೊಸನಗರ – ೧೪೪

೧೫. SII. XVI. NO. 9.

೧೬ Bellikothe Ramachandrasharma (Ed), Navartha rathnamala of Irugappa Dandadhinatha, Deccan College, Poona, 1954.

೧೭. ಸಂಸ್ಕೃತ ಕವಿಚರಿತ್ರೆ, ಸಂ. ೨, ಲೇಖಕರು: ಎಂ.ಎನ್. ಶ್ರೀನಿವಾಸ ಅಯ್ಯಂಗಾರ್, ಸಂಸ್ಕೃತಿ ರವಿಚರಿತೆ ಪ್ರಕಾಶನ, ಬೆಂ–೧೧, ಪುಟ ೯೩.

೧೮. ಡಾ. ಎಚ್.ಎಂ. ನಾಗರಾಜು; ವಿಜಯನಗರದ ಇಮ್ಮಡಿ ದೇವರಾಯ; ಸಂವಹನ, ಮೈಸೂರು, ೧೯೯೯, ಪುಟ ೨೫೧.

೧೯. ಎ.ಕ (ಪರಿಷ್ಕೃತ), ಸಂ–೨, ಶ್ರವಣಬೆಳಗೊಳ ೩೫೭.

೨೦. ವಿಜಯನಗರ ಅಧ್ಯಯನ, ಸಂಪುಟ ೧೮.

೨೧. ಎಸ್. ಗಂಗಾಂಬಿಕೆ, ಲೇಖನ: 'ಮಹಾಪ್ರಧಾನಿ ಬೈಚಯ ದಂಡನಾಯಕ' ಮತ್ತು ಅವನ ವಂಶೀಯರು], ಪ್ರಾಚ್ಯ ವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು, ೨೦೧೪, ಪುಟ ೧೫೩.

೧೦೬

ಮಾದಾರ ಚೆನ್ನಯ್ಯರು ಒಬ್ಬರಲ್ಲ, ಇಬ್ಬರು!

ಡಾ. ಬಿ. ರಾಜಶೇಖರಪ್ಪ*

ಮಾದಾರ ಚೆನ್ನಯ್ಯ ಈಗ ತಿಳಿದಿರುವಂತೆ ಕ್ರಿ.ಶ. ೧೨ನೆಯ ಶತಮಾನದ ಶರಣರಲ್ಲಿ ಒಬ್ಬ. ಅವನು ವಚನಕಾರನೂ ಆಗಿದ್ದು, ಅವನ ಕೆಲವು (೧೦) ವಚನಗಳು ದೊರೆತಿವೆ. ಕ್ರಿ.ಶ.೧೩ನೆಯ ಶತಮಾನದ ಹರಿಹರ ಕವಿ 'ಮಾದಾರ ಚೆನ್ನಯ್ಯನ ರಗಳೆ' ಎಂಬ ಕೃತಿಯನ್ನು ರಚಿಸಿದ್ದಾನೆ. ಅದರಲ್ಲಿ ಬರುವ ವಿವರ ಹೀಗಿದೆ: ಮಾದಾರ ಚೆನ್ನಯ್ಯ ಚೋಳದೇಶದ ಕರಿಕಾಲಚೋಳ ಮಹಾರಾಜನ ಕುದುರೆಗೆ ಕಾಡಿನಿಂದ ಹುಲ್ಲು ತಂದುಹಾಕುವ ಕಾಯಕದಲ್ಲಿದ್ದು, ಯಾರಿಗೂ ತಿಳಿಯದಂತೆ ಶಿವಭಕ್ತನಾಗಿರುತ್ತಾನೆ. ಅವನ ಗುಪ್ತಭಕ್ತಿ ೬೦ ವರ್ಷ ನಡೆದಾಗ, ಶಿವ ಅವನ ಭಕ್ತಿಯನ್ನು ಇನ್ನು ಜಗತ್ತಿಗೆ ಪ್ರಕಟಪಡಿಸಬೇಕೆಂದು ನಿಶ್ಚಯಿಸುತ್ತಾನೆ. ಅದಕ್ಕಾಗಿ ಚೆನ್ನಯ್ಯ ಅಂಬಲಿ ಉಣ್ಣುವಾಗ, ತಾನೂ ಅದನ್ನು ಸೇವಿಸುತ್ತಾನೆ. ಶಿವಭಕ್ತನಾಗಿದ್ದ ಕರಿಕಾಲಚೋಳ ರಾಜ ಅರ್ಪಿಸಿದ ನೈವೇದ್ಯದ ಭಕ್ಷ್ಯವನ್ನು ಸೇವಿಸದ ಶಿವ ಚೆನ್ನಯ್ಯನ ಅಂಬಲಿಯುಂಡು ತಾನು ತೃಪ್ತನಾಗಿರುವುದಾಗಿ ಹೇಳುತ್ತಾನೆ, ಅಂಥ ಒಬ್ಬ ಭಕ್ತ ಇರುವನೇ ಎಂದು ಆಶ್ಚರ್ಯಪಟ್ಟ ಚೋಳರಾಜ ಚೆನ್ನಯ್ಯನನ್ನು ಹುಡುಕಿ ಕಂಡು ಅವನ ಕಾಲಿಗೆ ನಮಸ್ಕರಿಸುತ್ತಾನೆ. ಇದರಿಂದ ತನ್ನ ಗುಪ್ತಭಕ್ತಿ ಬಯಲಾಯಿತಲ್ಲಾ ಎಂದು ವ್ಯಥಿತನಾದಾಗ, ಶಿವ ಅವನನ್ನು ಸಮಾಧಾನಪಡಿಸಿ ಪುಷ್ಪಕದಲ್ಲಿ ಕೂರಿಸಿ ಕೈಲಾಸಕ್ಕೆ ಕೊಂಡೊಯ್ಯುತ್ತಾನೆ. ಅವನಿಗೆ ಗಣಪದವಿಯನ್ನು ಕೊಟ್ಟು ಸಂತೋಷಿಸುತ್ತಾನೆ. ಇದಿಷ್ಟೂ ಹರಿಹರ ಕವಿ ಕೊಡುವ ಚಿತ್ರ. ಇವನೇ ಮುಂದೆ ಶರಣರಾದ ಬಸವಣ್ಣ ಮೊದಲಾದವರಿದ್ದ ಕಲ್ಯಾಣಕ್ಕೆ ಬಂದನೆಂದೂ ವಚನಗಳನ್ನು ರಚಿಸಿದನೆಂದೂ ಕೆಲವರು ಭಾವಿಸಿದ್ದಾರೆ. ಇನ್ನು ಕೆಲವರು ಅವನು ಮೂಲತಃ ಕನ್ನಡಿಗನೆಂದೂ ಇಲ್ಲಿಂದಲೇ ಚೋಳದೇಶಕ್ಕೆ ಹೋಗಿ ಅಲ್ಲೇ ಕೊನೆಯ ದಿನಗಳನ್ನು ಕಳೆದನೆಂದೂ ಅಲ್ಲಿಗೆ ಹೋಗುವ ಮುನ್ನ ಇಲ್ಲಿಯೇ ವಚನಗಳನ್ನು ರಚಿಸಿದ್ದನೆಂದೂ ಭಾವಿಸಿದ್ದಾರೆ. ಚೋಳದೇಶದಲ್ಲಿದ್ದ ಮಾದಾರ ಚೆನ್ನಯ್ಯ ಮತ್ತು ವಚನಕಾರ ಮಾದಾರ ಚೆನ್ನಯ್ಯ ಬೇರೆ ಬೇರೆಯೆ ಅಥವಾ ಒಬ್ಬರೇ ಎಂಬ ಸಂದೇಹವನ್ನು ಕೆಲವರು ವ್ಯಕ್ತಪಡಿಸಿದ್ದಾರೆ. ಈ ಹೇಳಿಕೆಗಳಲ್ಲಿ ಏನೇನು ಸರಿ ಇದೆ? ಮಾದಾರ ಚೆನ್ನಯ್ಯನ ಐತಿಹಾಸಿಕತೆ ಕುರಿತಂತೆ ಇರುವ ತೊಡಕುಗಳೇನು? ಈಗ ಯಾವ ನಿಲವಿಗೆ ಬರಲು ಸಾಧ್ಯ? – ಈ ಪ್ರಶ್ನೆಗಳನ್ನು ಕುರಿತ ಒಂದು ವಿವೇಚನೆಯನ್ನು ಈ ಸಂಪ್ರಬಂಧದಲ್ಲಿ ಮಾಡಲಾಗಿದೆ.

ಕರಿಕಾಲಚೋಳ ಮತ್ತು ಮಾದಾರ ಚೆನ್ನಯ್ಯರ ಚರಿತ್ರೆಯ ಆಕರಗಳು

ಈ ಬಗ್ಗೆ ಪರಿಶೀಲಿಸಲು ನಮ್ಮೆದುರಿಗೆ ಇರುವ ಬಹುಮುಖ್ಯ ಆಧಾರಗಳೆಂದರೆ, (ಕನ್ನಡದಲ್ಲಿ) ಮಾದಾರ ಚೆನ್ನಯ್ಯನನ್ನು ಪ್ರಸ್ತಾಪಿಸಿರುವ ಬಸವಣ್ಣ ಮತ್ತಿತರ ಶರಣರ ವಚನಗಳು (೧೨ನೆಯ ಶ.ಮಾ.), ಮಾದಾರ ಚೆನ್ನಯ್ಯ ರಚಿತ ವಚನಗಳು, ಹರಿಹರಕವಿಯ 'ಮಾದಾರ ಚೆನ್ನಯ್ಯನ ರಗಳೆ' ಎನ್ನುವ ಕಾವ್ಯ (೧೩ನೆಯ ಶ.ಮಾ.), ಪಾಲ್ಕುರಿಕೆ ಸೋಮನಾಥ ಹಾಗೂ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಕೃತಿಗಳು, ಅಜ್ಞಾತಕವಿ ರಚಿತ 'ಅರವತ್ತುಮೂವರ ಕಥಾಗರ್ಭ'; (ತಮಿಳಿನಲ್ಲಿ) 'ಸಂಘಂ' ಕಾಲದ 'ಅಗನಾನೂರು' ಮತ್ತು 'ಪುರನಾನೂರು' ಸಾಹಿತ್ಯಕೃತಿಗಳು (ಕ್ರಿ.ಶ.ದ ಆರಂಭದ ಶತಮಾನಗಳು), 'ಶಿಲಪ್ಪದಿಗಾರಂ' (೬ನೆಯ ಶ.ಮಾ.), ಸುಂದರಮೂರ್ತಿ ನಂಬಿಯಾರ್ ರಚಿಸಿದ 'ತಿರುತ್ತೊಂಡ ತ್ತೊಗೈ' (೮ನೆಯ ಶ.ಮಾ.), ನಂಬಿಯಾಂಡಾರ್ ನಂಬಿಯ 'ತಿರುವಂದಾದಿ' (೧೦ನೆಯ ಶ.ಮಾ.) ಮತ್ತು ಶೇಕ್ಕಿಳಾರ್ ಕವಿಯ 'ತಿರುತ್ತೊಂಡರ್ ಪುರಾಣಂ' ಅಥವಾ 'ಪೆರಿಯ ಪುರಾಣಂ' (೧೧-೧೨ನೆಯ ಶ.ಮಾ.); ಚೋಳ ದೊರೆಗಳ ಇತಿಹಾಸದ ಸಂಪುಟಗಳು. ಇವುಗಳ ಬೆಳಕಿನಲ್ಲಿ ಚೆನ್ನಯ್ಯರ ಇತಿವೃತ್ತವನ್ನು ಪರಿಶೀಲಿಸಬೇಕಾಗುತ್ತದೆ. ಹಾಗೆ ಪರಿಶೀಲಿಸಿದಾಗ ತಿಳಿದುಬರುವ ಕೆಲವು ಅಚ್ಚರಿಯ ಸಂಗತಿಗಳು ಇಲ್ಲಿವೆ.

ಚೆನ್ನಯ್ಯನ ಬಗ್ಗೆ ಹರಿಹರ ಹೇಳಿರುವುದೇನು?

೧೨ನೆಯ ಶತಮಾನಕ್ಕೆ ಹತ್ತಿರದವನಾಗಿ, ಆ ಕಾಲದ ಅನೇಕ ಶರಣರನ್ನು ಕುರಿತು, ಆಗ್ಗೆ ಲಭ್ಯವಿದ್ದ ಎಲ್ಲ ವಿಷಯವನ್ನು ಸಂಗ್ರಹಿಸಿ, ಅವರ ಮೇಲೆ ಕನ್ನಡದಲ್ಲಿ ಕಾವ್ಯಗಳನ್ನು ರಚಿಸಿದ ಕವಿ ಹರಿಹರ. ಅವನು ಪೂರ್ವದ

* ಕನ್ನಡ ಪ್ರಾಧ್ಯಾಪಕರು, ಪ್ರಾಂಶುಪಾಲರು (ನಿ), ೨ನೆಯ ಕ್ರಾಸ್, ಪಶ್ಚಿಮ, ಜಯಚಾಮರಾಜೇಂದ್ರ ಬಡಾವಣೆ, ಚಿತ್ರದುರ್ಗ-೫೭೭೫೦೧.

ತಮಿಳುನಾಡಿನ ಪುರಾತನರ ಬಗ್ಗೆಯೂ ಅನೇಕ ಕಾವ್ಯಗಳನ್ನು ಬರೆದಿದ್ದಾನೆ. ಚೆನ್ನಯ್ಯನ ಮೇಲೆ ಕಾವ್ಯ ಬರೆದ ಹರಿಹರ ಅವನು ಕನ್ನಡನಾಡಿನ ಮೂಲದವನೆಂದು ಮತ್ತು ಕನ್ನಡನಾಡಿನಿಂದ ತಮಿಳುನಾಡಿಗೆ ಹೋದನೆಂದು ಎಲ್ಲೂ ಹೇಳಿಲ್ಲ, ಸೂಚಿಸಿಯೂ ಇಲ್ಲ. ಹಾಗೆಯೇ ಕಡೆಯಲ್ಲಿ ಅವನು ತಮಿಳುನಾಡಿಂದ ಕನ್ನಡನಾಡಿಗೆ ಮರಳಿದ, ಇಲ್ಲಿ ಬಸವಣ್ಣ ಮುಂತಾದ ಶರಣರ ಹಿರಿಯ ಸಮಕಾಲೀನನಾಗಿ ಇದ್ದ, ಅವನು ವಚನಗಳನ್ನು ರಚಿಸಿದ್ದ ಎಂದೂ ಸೂಚಿಸಿಲ್ಲ. ಚೆನ್ನಯ್ಯ ಒಂದುವೇಳೆ ಕನ್ನಡನಾಡಿನವನೇ ಆಗಿದ್ದರೆ, ಅವನು ಇಲ್ಲಿಂದ ತಮಿಳುನಾಡಿಗೆ ಹೋದವನಿದ್ದರೆ ಮತ್ತು ಅಲ್ಲಿಂದ ಇಲ್ಲಿಗೆ ಮರಳಿಬಂದು ಕಲ್ಯಾಣದಲ್ಲಿದ್ದವನಾದರೆ ಹಾಗೂ ವಚನಗಳನ್ನು ರಚಿಸಿದವನು ಅವನೇ ಇದ್ದರೆ, ಬಸವಣ್ಣ ಮತ್ತು ವಚನಕಾರ(ಶರಣ)ರ ಕಡುಅಭಿಮಾನಿಯಾದ ಹರಿಹರ ಅದನ್ನೆಲ್ಲ ಮೈದುಂಬಿ ಹೇಳದೆ ಇರುತ್ತಿರಲಿಲ್ಲ. ಆದರೆ ಹಾಗೆ ಏನನ್ನೂ ಹೇಳಹೋಗಿಲ್ಲ. ಚೆನ್ನಯ್ಯ ಕನ್ನಡನಾಡಿನವನಾಗಿದ್ದರೆ ಅವನಿಗೆ ಅದನ್ನು ಹೇಳದಿರಲು ಏನು ಕಾರಣವೂ ಕಾಣುವುದಿಲ್ಲ. ಬದಲಿಗೆ, ಚೆನ್ನಯ್ಯ ತನ್ನ ಭಕ್ತಿ ಬಹಿರಂಗಗೊಂಡ ಮೇಲೆ, ಶಿವನ ಆಶಯದಂತೆ ಪುಷ್ಪಕದಲ್ಲಿ ಕುಳಿತು ಕೈಲಾಸಕ್ಕೆ ಹೋದಂತೆ, ಅಲ್ಲಿ ಶಿವನತ್ತ ಗಣಪದವಿಯಿಂದ ಪುರಸ್ಕೃತನಾದಂತೆ ಕವಿ ಹೇಳಿರುವುದರಿಂದ ಚೆನ್ನಯ್ಯ ಕನ್ನಡನಾಡಿಗೆ ಬರದೆ, ತಮಿಳುನಾಡಿನಲ್ಲೇ ಶಿವೈಕ್ಯನಾದನೆಂದು ಹೇಳಿದಂತಾಗಿದೆ.

ಹರಿಹರಕವಿ ಹೇಳಿರುವ ಚೆನ್ನಯ್ಯ ವಚನಗಳನ್ನು ರಚಿಸಿದ್ದನೆ?

ಮಾದಾರ ಚೆನ್ನಯ್ಯ ರಚಿಸಿದ ವಚನಗಳೆಲ್ಲ ಅವನು ತಮಿಳುನಾಡಿಗೆ ಹೋಗುವ ಮುನ್ನ ವಚನಕಾರರ ಪ್ರಭಾವ ಅವನ ಮೇಲೆ ಆಗಿ ರಚಿಸಿದವು ಎಂದು ಡಾ. ಎಂ. ಚಿದಾನಂದ ಮೂರ್ತಿ ಅವರು ಹೇಳಿದ್ದಾರೆ. ಆದರೆ ಅದು ಸಂಶಯಾಸ್ಪದವಾಗಿದೆ. ಏಕೆಂದರೆ, ಎಷ್ಟು ವಯಸ್ಸಿಗೆ ಅವನ ಮೇಲೆ ವಚನಕಾರರ ಪ್ರಭಾವ ಆಗಿತ್ತು? ವಚನಗಳನ್ನು ಅವನು ರಚಿಸಿದ್ದು ಅವನ ಎಷ್ಟನೆಯ ವಯಸ್ಸಿನಲ್ಲಿ? ಆ ವಯಸ್ಸಿನಲ್ಲಿ ಅವನು ಅವುಗಳನ್ನು ರಚಿಸುವುದು ಸಾಧ್ಯವಿತ್ತೆ? ಅವನು ಚೋಳನಾಡಿಗೆ ಹೋಗಿದ್ದು ಯಾವ ವಯಸ್ಸಿನಲ್ಲಿ? – ಈಯೆಲ್ಲ ಅಂಶಗಳನ್ನು ಪರಾಮರ್ಶಿಸಬೇಕಾಗುತ್ತದೆ. ಹರಿಹರ ಕವಿ ಹೇಳಿರುವಂತೆ ಅವನ ಗುಪ್ತ ಭಕ್ತಿ ಸಾಗಿದ್ದು ೬೦ ವರ್ಷ. ಅಂದಮೇಲೆ ಅದಕ್ಕೆ ಮುಂಚೆ ಏನಲ್ಲೆಂದರೂ ಸುಮಾರು ೨೦ ವರ್ಷದಷ್ಟಾದರೂ ವಯಸ್ಸಿನವನದ್ದಾಗ ಅವನು ತಮಿಳುನಾಡಿಗೆ ಬಂದಿರಬೇಕು ಎಂದಿಟ್ಟುಕೊಂಡರೆ, ಅಷ್ಟು ವಯಸ್ಸಿಗಾಗಲೆ ಅವನ ಮೇಲೆ ವಚನಕಾರರ ಪ್ರಭಾವವಾಗಿ ಅವನು ವಚನಗಳನ್ನು ರಚಿಸಿರಬೇಕಾಗುತ್ತದೆ. ಈಗ ಉಪಲಬ್ಧವಿರುವ, ತುಂಬ ಪ್ರಬುದ್ಧ ಮನಃಸ್ಥಿತಿಯ, ಅವನ ವಚನಗಳನ್ನು ನೋಡಿದರೆ, ಆ ವಯಸ್ಸಿಗೆ ಅವನು ಅಂಥ ವಚನಗಳನ್ನು ರಚಿಸುವುದು ಅಷ್ಟು ಸಂಭಾವ್ಯ ಎನಿಸುವುದಿಲ್ಲ. ಇನ್ನು ಅವನ ಗುಪ್ತ ಭಕ್ತಿ ಬಹಿರಂಗವಾದ ಮೇಲಿನ ೮೦ಕ್ಕೂ ಮೇಲ್ಪಟ್ಟ ತುಂಬು ವಯಸ್ಸಲ್ಲಿ ಅವನು ಕನ್ನಡನಾಡಿಗೆ ಮರಳಿಬಂದು, ಶರಣಸಂಕುಲದಲ್ಲಿ ಬೆರೆತು, ಆ ವಯಸ್ಸಿನಲ್ಲಿ ವಚನಗಳನ್ನು ರಚಿಸಿದ ಎನ್ನುವುದೂ ಅಷ್ಟು ಸಂಭಾವ್ಯವಾಗಿ ಕಾಣುವುದಿಲ್ಲ.

ಅದಲ್ಲದೆ, ಮಾದಾರ ಚೆನ್ನಯ್ಯನವೆನ್ನುವ ವಚನಗಳಲ್ಲಿ ಅವನು ಕನ್ನಡನಾಡಿನಿಂದ ತಮಿಳುನಾಡಿಗೆ ಹೋಗಿದ್ದರ ಅಥವಾ ಅಲ್ಲಿ ಇದ್ದುದರ ಇಲ್ಲವೆ ಅಲ್ಲಿಂದ ಕನ್ನಡನಾಡಿಗೆ ಮರಳಿದ್ದರ ಸೂಚನೆ ಇಲ್ಲ. ಹಾಗೇ, ಅವನು ಚೋಳರಾಜನ ಕುದುರೆಗೆ ಹುಲ್ಲು ತಂದುಹಾಕುತ್ತಿದ್ದುದರ ಸೂಚನೆಯೂ ಇಲ್ಲ.

ಇದಲ್ಲದೆ, ವಚನಗಳ ಪ್ರಾರಂಭಕಾರರಲ್ಲೊಬ್ಬ ಎನಿಸಿದ ಶರಣ ಜೇಡರದಾಸಿಮಯ್ಯನ ವಚನಗಳಲ್ಲಿ, ವಚನಗಳು (ತ್ರಿಪದಿಲಯದ ಮೂಲದಿಂದ) ರಚನೆಗೊಳ್ಳುತ್ತಿದ್ದುದರ ಪೂರ್ವಸ್ಥಿತಿಯೊಂದು, ಕಾಣಸಿಗುತ್ತದೆ. ಜೇಡರ ದಾಸಿಮಯ್ಯ ನೆನೆದಿರುವ ಪೂರ್ವದ ಅಥವಾ ತನ್ನ ಸಮಕಾಲೀನ ವಚನಕಾರರಲ್ಲಿ ಮಾದಾರ ಚೆನ್ನಯ್ಯನೂ ಒಬ್ಬ. ವಚನಗಳ ಪ್ರಾರಂಭಕಾರರಲ್ಲಿ ಮಾದಾರ ಚೆನ್ನಯ್ಯನೂ ಒಬ್ಬ ಎಂದು ಕೆಲವರು ಭಾವಿಸಿರುವುದುಂಟು. ಹಾಗಾಗಿ ಅಷ್ಟು ಹೊತ್ತಿಗೆ, ಮಾದಾರ ಚೆನ್ನಯ್ಯನೂ ಸಹ ವಚನಗಳನ್ನು ರಚಿಸಿದ್ದಿರಬೇಕು ಎನ್ನುವುದಾದರೆ, ಈಗ ಲಭ್ಯವಿರುವ ಅವನ ವಚನಗಳಲ್ಲಿ ವಚನ ರಚನೆಯ ಒಂದು ಆದಿಮ ಸ್ಥಿತಿ ಕಾಣಬೇಕಾಗಿತ್ತು. ಆದರೆ, ಹಾಗೆ ಕಾಣುವುದಿಲ್ಲ. ಆದ್ದರಿಂದ ಅವು ಅಷ್ಟು ಹಿಂದೆ ಮತ್ತು ತರುಣ ವಯಸ್ಸಿನಲ್ಲಿ ರಚನೆಗೊಂಡ ವಚನಗಳಾಗಿರಲು ಸಾಧ್ಯವೇ ಇಲ್ಲ ಎನ್ನುವುದು ಸ್ವಯಂಸ್ಪಷ್ಟವಾಗಿದೆ.

ಚೆನ್ನಯ್ಯನ ಸಮಕಾಲೀನ ಎನ್ನಲಾಗಿರುವ ಕರಿಕಾಲಚೋಳರು

ಕರಿಕಾಲಚೋಳ ಹೆಸರಿನ ದೊರೆಗಳು ಚೋಳ ಇತಿಹಾಸದಲ್ಲಿ ಹಲವರು ಬರುತ್ತಾರೆ. ಅವರಲ್ಲಿ ಆದಿಯಲ್ಲಿ ಬರುವ ಕರಿಕಾಲ ಚೋಳ ಕ್ರಿ.ಶ. ಸುಮಾರು ೨ನೆಯ ಶತಮಾನದಲ್ಲಿದ್ದವನು ಎಂದು ತಿಳಿಯಲಾಗಿದೆ. ಆಮೇಲೆ ಬರುವ ೧ನೆಯ ರಾಜೇಂದ್ರಚೋಳ (೧೦೧೨–೧೦೪೪), ೨ನೆಯ ರಾಜೇಂದ್ರಚೋಳ (೧೦೫೧–೧೦೬೩), ವೀರ ರಾಜೇಂದ್ರಚೋಳ (೧೦೬೩–೧೦೭೦), ಅಧಿರಾಜೇಂದ್ರ ಚೋಳ (೧೦೬೭–೧೦೭೦), ೧ನೆಯ ಕುಲೋತ್ತುಂಗ ಚೋಳ (೧೦೭೦–೧೧೨೦), ೨ನೆಯ ಕುಲೋತ್ತುಂಗ ಚೋಳ (೧೧೩೩–೧೧೫೦), ೨ನೆಯ ರಾಜಾಧಿರಾಜ

ಚೋಳ (೧೧೬೬–೧೧೭೮), ೩ನೆಯ ಕುಲೋತ್ತುಂಗ ಚೋಳ (೧೧೭೮–೧೨೧೮) ಮತ್ತು ೩ನೆಯ ರಾಜೇಂದ್ರ ಚೋಳ (೧೨೪೬–೧೨೭೯) – ಇವರುಗಳು ಸಹ ಕರಿಕಾಲ ಚೋಳರೆಂದು ಕರೆಯಲ್ಪಟ್ಟಿದ್ದಾರೆ. ಮಾದಾರ ಚೆನ್ನಯ್ಯನ ಸಮಕಾಲೀನನಾಗಿದ್ದ ಕರಿಕಾಲಚೋಳರಾಜ, ೧೦೭೦ರಿಂದ ೧೧೨೦ರವರೆಗೆ ಆಳಿದ **೧ನೆಯ ಕುಲೋತ್ತುಂಗಚೋಳ** ಎಂದು ಫ.ಗು.ಹಳಕಟ್ಟಿ ಅವರು ಹೇಳಿದ್ದರೆ, ೧೦೬೩ರಿಂದ ೧೦೭೦ರವರೆಗೆ ಆಳಿದ **ವೀರರಾಜೇಂದ್ರಚೋಳ** ಎಂದು ಎಚ್. ದೇವೀರಪ್ಪನವರು ಹೇಳಿರುತ್ತಾರೆ. ಆದರೆ ಡಾ.ಚಿ.ಮೂ. ಅವರು, ಆ ಚೋಳರಾಜ ೧೦೭೦ರಿಂದ ೧೧೨೦(?) ರವರೆಗೆ ಆಳಿದ **ರಾಜೇಂದ್ರಚೋಳ** ಎಂದು ತಮ್ಮ ಹಿಂದಿನ ಒಂದು ಬರಹದಲ್ಲಿ ಹೇಳಿದ್ದರೆ, ೧೧೧೮ರಿಂದ ೧೧೩೫ ರವರೆಗೆ ಆಳಿದ **ವಿಕ್ರಮಚೋಳ** ಎಂದು ಈಚಿನ ಒಂದು ಬರಹದಲ್ಲಿ ಹೇಳಿದ್ದಾರೆ. ಹೀಗೆ ಅವರು ಸಂದಿಗ್ಧ ಹೇಳಿಕೆ ನೀಡಿದ್ದರೂ ಇತ್ತೀಚಿನ ಹೇಳಿಕೆಯನ್ನೇ ಅವರ ಅಂತಿಮ ಹೇಳಿಕೆ ಎಂದು ತೆಗೆದುಕೊಳ್ಳಬೇಕಾಗುತ್ತದೆ. ಮಾದಾರ ಚೆನ್ನಯ್ಯ ಸೇವೆಯಲ್ಲಿದ್ದುದು ೧೦೬೨ರಿಂದ ೧೦೭೦ರವರೆಗೆ ಆಳಿದ **ವೀರರಾಜೇಂದ್ರಚೋಳ** ಎಂದು ಡಾ. ಎಸ್. ವಿದ್ಯಾಶಂಕರ್ ಹೇಳುತ್ತಾರೆ. ಹೀಗೆ ಭಿನ್ನ ಭಿನ್ನ ಅಭಿಪ್ರಾಯ ಗಳು ಬಂದು ಚೆನ್ನಯ್ಯನ ಕಾಲದ ಕರಿಕಾಲಚೋಳ ಯಾರು ಎಂಬುದು ಒಂದು ತೊಡಕಿನ ಪ್ರಶ್ನೆಯಾಗಿದೆ. ಈಗ ಆ ತೊಡಕನ್ನು ನಿವಾರಿಸಿಕೊಳ್ಳುವ ಬಗ್ಗೆ ಪರಿಶೀಲಿಸಬೇಕಾಗಿದೆ. ಇದಕ್ಕೆ ಉತ್ತರ ಕಂಡುಕೊಳ್ಳಲು ೧೨ನೆಯ ಶತಮಾನದ ವಚನಕಾರರ ವಚನಗಳಲ್ಲಿ ಮತ್ತು ಇತರೆಡೆ ಕೆಲವು ಸುಳುಹುಗಳು ದೊರೆಯುತ್ತವೆ.

ಮಾದಾರ ಚೆನ್ನಯ್ಯ ಸೇವೆಯಲ್ಲಿದ್ದ ಕರಿಕಾಲಚೋಳ ಯಾರು?

ಚೆನ್ನಯ್ಯ ಸೇವೆಯಲ್ಲಿ ಇದ್ದದ್ದು ಯಾರಲ್ಲಿ ಎಂಬ ಪ್ರಶ್ನೆಗೆ ಹರಿಹರನಲ್ಲಿ ಸಿಕ್ಕುವ ಉತ್ತರ ಕರಿಕಾಲಚೋಳನಲ್ಲಿ ಎಂದು. ಬಸವಣ್ಣ ಮತ್ತು ಇನ್ನು ಕೆಲವರು ಆ ಹೆಸರು ಹೇಳದೆ ಕೇವಲ **'ಚೋಳ' 'ಚೋಳರಾಯ' 'ರಾಯ'** ಎಂಬ ಮಾತುಗಳಲ್ಲಿ ಅದನ್ನು ಸೂಚಿಸುತ್ತಾರೆ. ಜೊತೆಗೆ ಮಾದಾರ ಚೆನ್ನಯ್ಯ ಶಿವನಿಗೆ ಅಂಬಲಿ ಅರ್ಪಿಸುವ ನೇಮ ಇಟ್ಟು ಕೊಂಡದ್ದು ಮತ್ತು ಅದನ್ನು ಅರ್ಪಿಸಿದ್ದು, ಚೋಳರಾಜನ ಕುದುರೆಗೆ ಹುಲ್ಲು ತಂದುಹಾಕುವ ಕಾಯಕ ಮಾಡಿದ್ದು, ಚೋಳರಾಜನ ಭಕ್ತಿಗೆ ಶಿವ ಹೊನ್ನಿನ ಮಳೆಯನ್ನು ಕರೆದದ್ದು, ಈ ಎಲ್ಲವನ್ನೂ ಅವರು ನೆನೆಯುತ್ತಾರೆ. ಸಿದ್ಧರಾಮೇಶ್ವರ ತನ್ನ ಒಂದು ವಚನದಲ್ಲಿ ಸ್ಪಷ್ಟವಾಗಿ ಕರಿಕಾಲಚೋಳನ ಹೆಸರನ್ನು ಹೇಳಿದ್ದಾನೆ. ಆ ಉಲ್ಲೇಖ ಹೀಗಿದೆ:

'ನಾ ಮಾಡಿದ ಕೆರೆಯೆತ್ತ, ಕರಿಕಾಲಚೋಳ ಮಾಡಿದ ಕೆರೆಯೆತ್ತ!'

ಈ ವಚನೋಕ್ತಿ ಕರಿಕಾಲಚೋಳನ ಹೆಸರನ್ನು ಹೇಳುವುದರೊಟ್ಟಿಗೆ ಅವನು ಕೆರೆಯನ್ನು ಮಾಡಿದವನು ಎಂಬುದನ್ನೂ ಸೂಚಿಸುತ್ತದೆ. ಹೀಗೆ ಸಿದ್ಧರಾಮೇಶ್ವರ ತನ್ನ ವಚನದಲ್ಲಿ ಕರಿಕಾಲಚೋಳನನ್ನು ಉಲ್ಲೇಖಿಸಿರುವುದು ತುಂಬ ಗಮನಾರ್ಹ ಸಂಗತಿ. ಕರಿಕಾಲಚೋಳ ಕಟ್ಟಿಸಿದ್ದು ದೊಡ್ಡ ಅಣೆಕಟ್ಟಾದರೂ ಅದನ್ನು ಸರಳವಾಗಿ ಕೆರೆಯೆಂದು ಕರೆದಿರುವುದು ಇಲ್ಲಿ ಸ್ಪಷ್ಟವಾಗಿದೆ. ಸಿದ್ಧರಾಮೇಶ್ವರ ಅದನ್ನು ಬಹುಶಃ ನೋಡಿರಲಾರ; ಆದರೆ ಅದರ ಬಗ್ಗೆ ಸಾಕಷ್ಟು ಕೇಳಿದ್ದಿರಬೇಕು. ಅಂದರೆ, ಅದು ಒಂದು ಅಸಾಮಾನ್ಯ ಕೆರೆ; ತಾನು ಕಟ್ಟಿದ್ದು ಅಂಥದ್ದಲ್ಲ ಅಥವಾ ಆ ಪ್ರಮಾಣದ್ದಲ್ಲ ಎಂಬುದು ಅವನ ಮಾತಿನಲ್ಲಿ ಸೂಚಿತವಾಗಿದೆ.

ಇನ್ನು, ಕವಿ ವಿರೂಪಾಕ್ಷ ಪಂಡಿತಾರಾಧ್ಯನ 'ಚೆನ್ನಬಸವ ಪುರಾಣ'ದಲ್ಲಿ ಬಂದಿರುವ ಕರಿಕಾಲಚೋಳನ ಬಗೆಗಿನ ವಿವರ ಹೀಗಿದೆ: ಕರಿಕಾಲಚೋಳನು ಕಾವೇರೀ ನದಿಗೆ ಕಟ್ಟೆಯೊಂದನ್ನು ಕಟ್ಟಿದನು. ಅವನ ಆ ಕಾರ್ಯದಲ್ಲಿ ಮುಕ್ಕಣ್ಣಚೋಳ, ಪ್ರಭಾಕರಚೋಳ ಮುಂತಾದ (ಅಧೀನ?) ಅರಸರು ಸಹ ಪಾಲ್ಗೊಂಡರು. ಇದೇ ಕರಿಕಾಲಚೋಳನೇ ಮುಂದೆ ತಾನು ಆರಾಧಿಸುತ್ತಿದ್ದ ಶಿವನಿಗೆ ನೈವೇದ್ಯ ಅರ್ಪಣೆ ಮಾಡಿದಾಗ, ಅವನಿಗೆ ಮಾತು ಕೊಟ್ಟಿದ್ದಂತೆ ಶಿವನು ಎಂದಿನಂತೆ ಆ ನೈವೇದ್ಯವನ್ನು ಮುಟ್ಟದಿದ್ದಾಗ, ಶಿವನು ಮಾದಾರ ಚೆನ್ನಯ್ಯನೊಡನೆ ಉಂಡದ್ದರಿಂದ ಈಗ ನೈವೇದ್ಯ ಸ್ವೀಕರಿಸುತ್ತಿಲ್ಲ ಎಂದು ತಿಳಿಯಿತು. ಮುಂದೆ ಆ ಮಾದಾರ ಚೆನ್ನಯ್ಯನನ್ನು ಕಂಡ ಕರಿಕಾಲಚೋಳ ಅವನ ಪಾದಗಳಿಗೆ ನಮಸ್ಕರಿಸಿ ಅವನನ್ನು ಹೊಗಳಿದಾಗ, ಶಿವನು ಅವರಿಬ್ಬರನ್ನೂ ಕೈಲಾಸಪುರಕ್ಕೆ ಕರೆದೊಯ್ದನು (ಕಾಂಡ ೮, ಸಂಧಿ ೫೫, ಪದ್ಯ ೮ ರಿಂದ ೧೨).

ಈಮೇಲಿನ ಎರಡೂ ಉದಾಹರಣೆಗಳು, ಕನ್ನಡ ಜನತೆಗೆ ಆ ಕಾಲಕ್ಕೆ ಸುಪರಿಚಿತವಿದ್ದ ಕರಿಕಾಲಚೋಳ ಎಂದರೆ ಕಾವೇರಿ ನದಿಗೆ ಅಡ್ಡಕಟ್ಟೆ ಅಥವಾ ಅಣೆಕಟ್ಟು ಕಟ್ಟಿದ ಆದಿಕಾಲದ ಕರಿಕಾಲಚೋಳನೇ ಎಂಬುದನ್ನು ನಿಚ್ಚಳವಾಗಿ ತೋರಿಸಿ ಕೊಡುತ್ತವೆ. ಇದರಿಂದ ೧೨ನೆಯ ಶತಮಾನದ ಕಾಲಕ್ಕೆ ಕನ್ನಡದ ಜನರಿಗೆ ಕೆರೆಯನ್ನು ಕಟ್ಟಿಸಿದ ಚೋಳರಾಜನೆಂದರೆ ಅವನು ಕರಿಕಾಲಚೋಳನೇ ಎಂದು ಜನರಿಗೆ ಸುಪರಿಚಿತ ನಾಗಿದ್ದನೆಂಬುದು ವ್ಯಕ್ತಪಡುತ್ತದೆ. ಅಷ್ಟೇ ಅಲ್ಲ, ೧೨ನೆಯ ಶತಮಾನದ ಹೊತ್ತಿಗೆ ಇದ್ದ ಮತ್ತು ಆ ಹೊತ್ತಿಗೆ ಆಗಿಹೋದ ಕರಿಕಾಲಚೋಳ ಹೆಸರಿನ ಇತರ ಯಾವೊಬ್ಬ ರಾಜನ

ಬಗ್ಗೆಯೂ ಕನ್ನಡಿಗರಿಗೆ ಪ್ರಾಯಃ ತಿಳಿದಿರಲಿಲ್ಲ ಅರ್ಥಾತ್ ಆ ಹೆಸರಿನ ಇತರ ರಾಜರುಗಳಾರೂ ಪರಿಚಿತರಿರಲಿಲ್ಲ ಎಂಬುದೂ ವ್ಯಕ್ತಪಡುತ್ತದೆ.

ಹಾಗಾಗಿ ಮಾದಾರ ಚೆನ್ನಯ್ಯನು ಸೇವೆಯಲ್ಲಿದ್ದ ಕರಿಕಾಲಚೋಳರಾಜ ಬೇರೆ ಯಾರೂ ಅಲ್ಲ, ಅವನು ಕೆರೆಯನ್ನು ಅರ್ಥಾತ್ ಅಣೆಕಟ್ಟನ್ನು ನಿರ್ಮಿಸಿದ್ದನೆನ್ನುವ ೨ನೆಯ ಶತಮಾನದ, ಮೇಲೆ ಹೇಳಿದ ಕರಿಕಾಲಚೋಳನೇ ಎಂದು ತಿಳಿಯಬೇಕಾಗುತ್ತದೆ. ಸಿದ್ಧರಾಮೇಶ್ವರನ ವಚನದ ಹಾಗೂ ಚೆನ್ನಬಸವ ಪುರಾಣದ ಎಳೆಹಿಡಿದು ಈ ನಿಲವಿಗೆ ಬಂದರೆ ಆಗ ಹರಿಹರಕವಿ ಹೇಳುವ ಮಾದಾರ ಚೆನ್ನಯ್ಯ ೧೨ನೆಯ ಶತಮಾನದವನಾಗುವುದಿಲ್ಲ, ಅದಕ್ಕೂ ಪೂರ್ವದ ೨ನೆಯ ಶತಮಾನದವನಾಗುತ್ತಾನೆ. ಅಂದರೆ ಅವನು ಬಸವಣ್ಣನ ಹಿರಿಯ ಸಮಕಾಲೀನನಾದ ಚೆನ್ನಯ್ಯನಿಗಿಂತ ಸುಮಾರು ೧೦೦೦ ವರ್ಷ ಮೊದಲೇ ಆಗಿಹೋದ ಬೇರೆಯ ಇನ್ನೊಬ್ಬ ಚೆನ್ನಯ್ಯ ಎಂದು ವ್ಯಕ್ತವಾಗುತ್ತದೆ.

ಕರಿಕಾಲಚೋಳ ನಿರ್ಮಿಸಿದ ಕೆರೆ ಅಥವಾ ಅಣೆಕಟ್ಟು

ತಮಿಳುನಾಡಿನ ತಿರುಚಿನಾಪಳ್ಳಿ–ಶ್ರೀರಂಗಂ ಸಮೀಪದಲ್ಲಿ, ಕಾವೇರೀ ನದಿಗೆ ಚೋಳ ದೊರೆ ಕಟ್ಟಿಸಿದ ಆ ದೊಡ್ಡ ಅಣೆಕಟ್ಟು (ಅದರ ಉದ್ದ ೩೨೯ ಮೀ. ಅಥವಾ ೧೦೮೦ ಅಡಿ, ಅಗಲ ೨೦ ಮೀ. ಅಥವಾ ೬೦ ಅಡಿ) ಈಗಲೂ ಇದ್ದು, ಅದರ ಉಪಯೋಗ ಈಗಲೂ ಜನರಿಗೆ ದೊರೆಯುತ್ತಿದ್ದು, ಅದು ತಮಿಳುನಾಡಿನ ಒಂದು ಗಣ್ಯ ನೀರಾವರಿ ಯೋಜನೆ ಎನಿಸಿದೆ. ಭಾರತದಲ್ಲಿರುವ ಅತ್ಯಂತ ಪ್ರಾಚೀನ ಅಣೆಕಟ್ಟು ಎಂದಷ್ಟೇ ಅಲ್ಲ, ಜಗತ್ತಿನ ಅತಿಪುರಾತನ ಜಲಾಶಯ ರಚನೆಗಳಲ್ಲಿ ಒಂದು ಎಂಬ ಖ್ಯಾತಿಗೂ ಅದು ಪಾತ್ರವಾಗಿದೆ. ಕರಿಕಾಲಚೋಳ ಇಲಂಗೈ ಅಥವಾ ಲಂಕಾ ದ್ವೀಪವನ್ನು ಗೆದ್ದ ಮೇಲೆ ಈ ಅಣೆಕಟ್ಟನ್ನು ಕಟ್ಟಿದನೆಂದೂ ಅದನ್ನು ಕಟ್ಟುವಾಗ ಲಂಕೆಯಿಂದ ತಂದ ಸೈನಿಕ ಸೆರೆಯಾಳುಗಳನ್ನು ಬಳಸಿಕೊಂಡನೆಂದೂ ಸಹ ಹೇಳುತ್ತಾರೆ. ಈ ಅಣೆಕಟ್ಟಿನ ನಿರ್ಮಾಣದ ಜೊತೆಗೆ ಅವನು ಕಾವೇರಿ ನದಿಯ ದಂಡೆಯ ಕೊರೆತ ತಪ್ಪಿಸಲು ದಂಡೆಯುದ್ದಕ್ಕೂ ರಕ್ಷಣೆಯ ಕಲ್ಲಿನ ತಡೆಗೋಡೆಯನ್ನು ಕಟ್ಟಿಸಿದನೆಂದೂ ಹೇಳಲಾಗಿದೆ. ಈ ಎಲ್ಲ ಸಂಗತಿಗಳು ತಮಿಳು ಸಾಹಿತ್ಯ ಕೃತಿಗಳಲ್ಲಿ ಕಾಣಸಿಗುತ್ತವೆ. ಆದರೆ, ತಮಿಳು ವಿದ್ವಾಂಸರು ಹೇಳುವಂತೆ ಕನ್ನಡ ಸಾಹಿತ್ಯಕೃತಿಗಳಲ್ಲಿ ಕಾಣುವ ಮಾದಾರ ಚೆನ್ನಯ್ಯನ ಪ್ರಸ್ತಾಪವಾಗಲಿ ಕರಿಕಾಲಚೋಳ ಶಿವನಿಂದ ಬಂಗಾರದ ಮಳೆ ಕರೆಸಿದನೆಂಬ ಪ್ರಸ್ತಾಪವಾಗಲಿ ತಮಿಳಿನಲ್ಲಿ ಬಂದಿಲ್ಲವೆನ್ನುವುದು ಆಶ್ಚರ್ಯದ ಸಂಗತಿ.

ಕರಿಕಾಲಚೋಳ ಮತ್ತು ಚೆನ್ನಯ್ಯ ಇದ್ದದ್ದು ಯಾವ ಪಟ್ಟಣದಲ್ಲಿ?

ಇಲ್ಲಿ ಇನ್ನೊಂದು ಅಂಶವನ್ನೂ ಪರಿಶೀಲಿಸಬೇಕಾಗುತ್ತದೆ. ಅದೆಂದರೆ ಕರಿಕಾಲಚೋಳ ಮತ್ತು ಮಾದಾರ ಚೆನ್ನಯ್ಯ ಇದ್ದದ್ದು ಯಾವ ಪಟ್ಟಣದಲ್ಲಿ ಎಂಬುದು. ಹರಿಹರಕವಿ ಯಾವ ಪಟ್ಟಣ ಎಂಬುದನ್ನು ಹೇಳಿಲ್ಲ. ಫ.ಗು. ಹಳಕಟ್ಟಿ ಅವರು ಕರಿಕಾಲಚೋಳ ರಾಜ ಇದ್ದದ್ದು **ಕಾಂಚೀಪಟ್ಟಣದಲ್ಲಿ** ಎಂದು ಬರೆದಿದ್ದಾರೆ. ಅವರ ಈ ಹೇಳಿಕೆಗೆ ಆಧಾರ ಏನೆಂಬುದನ್ನು ಅವರು ನೀಡಿಲ್ಲ. ಡಾ.ಚಿ.ಮೂ. ಅವರು ಚೆನ್ನಯ್ಯ ಇದ್ದದ್ದು **ತಂಜಾವೂರಿನಲ್ಲಿ** ಎಂಬಂತೆ ಬರೆದಿದ್ದಾರೆ. ಇವರೂ ಸಹ ತಮ್ಮ ಹೇಳಿಕೆಗೆ ಆಧಾರ ಏನೆಂದು ತಿಳಿಸಿಲ್ಲ. ಡಾ. ಎಸ್. ವಿದ್ಯಾಶಂಕರ್ ಅವರೂ ಸಹ ತಂಜಾವೂರಿನ ಹೆಸರು ಹೇಳಿದ್ದಾರೆ. ಅವರೂ ಸಹ ಏನೂ ಸ್ಪಷ್ಟನೆ ಕೊಟ್ಟಿರುವುದಿಲ್ಲ. ಈ ಹೇಳಿಕೆಗಳು ಕೇವಲ ಊಹೆಯ ಹೇಳಿಕೆಗಳೋ ಹೇಗೆ?–ಈ ಪ್ರಶ್ನೆ ಬರುತ್ತದೆ.

ಮೇಲೆ ಹೇಳಿದಂತೆ ಚೋಳರು ಕಾಂಚಿಯಿಂದ ಆಳಲಿಲ್ಲ. ಕಾಂಚಿಯಿಂದ ಆಳಿದ್ದು ಪಲ್ಲವರು, ಅದೂ ಬಹುಹಿಂದೆ. ಮಧ್ಯಕಾಲದ ಚೋಳರು ಆಳಿದ್ದು ಮಾತ್ರ ತಂಜಾವೂರಿನಿಂದ (೯ನೆಯ ಶತಮಾನದಿಂದ). ಆದರೆ, ಪೂರ್ವಕಾಲದ ಚೋಳ ದೊರೆಗಳು ಈ ಎರಡೂ ಊರುಗಳಿಂದ ಆಳಲಿಲ್ಲ. ಅವರು ಆಳಿದ್ದು **ಉರೈಯೂರ್** ಎಂಬ ಬೇರೊಂದು ಊರಿನಿಂದ ಎನ್ನುವುದು ಸಂಘಂ ಕಾಲದ ಸಾಹಿತ್ಯಕೃತಿಗಳಿಂದ ತಿಳಿಯುತ್ತದೆ. ಶ್ರೀರಂಗಂನಿಂದ ೩ ಮೈಲಿ ದೂರದಲ್ಲಿರುವ ಈ ಊರಿಗೆ ಹಿಂದೆ **ನಿಚುಲಾಪುರ** ಎಂಬ ಹೆಸರಿತ್ತು ಎಂದು ತಿಳಿದುಬರುತ್ತದೆ. ಆದ್ದರಿಂದ ಕರಿಕಾಲಚೋಳ ಮತ್ತು ಮಾದಾರ ಚೆನ್ನಯ್ಯ ಇದ್ದದ್ದು ಉರೈಯೂರಿನಲ್ಲಿ ಅರ್ಥಾತ್ ನಿಚುಲಾಪುರದಲ್ಲಿ ಎಂದು ಹೇಳಬೇಕಾಗುತ್ತದೆ.

ಕರಿಕಾಲಚೋಳ, ಮಾದಾರ ಚೆನ್ನಯ್ಯ ಮತ್ತು ೬೩ ಪುರಾತನರು

ತಮಿಳುನಾಡಿನ ಶಿವಶರಣರು ೬೩ ಪುರಾತನರು, ನಾಯನ್ಮಾರರು, ನಾಯನಾರರು ಎಂದೇ ಪ್ರಸಿದ್ಧರು, ಅವರೊಳಗೆ ರಾಜರಾಗಿದ್ದವರೂ ಸಾಮಾನ್ಯರೂ ಎಲ್ಲರೂ ಇದ್ದಾರೆ. ೧೨ನೆಯ ಶತಮಾನದ ಹೊತ್ತಿಗಾಗಲೇ ಕನ್ನಡದ ಜನರಿಗೆ ತಮಿಳುನಾಡಿನ ಪುರಾತನರ ವೃತ್ತಾಂತಗಳು ತಿಳಿದುಬಂದಿದ್ದುವು. ಹರಿಹರ ಕವಿಯಂತೂ ೧೩ನೆಯ ಶತಮಾನದ ಪೂರ್ವಾರ್ಧದಲ್ಲಿ ಅನೇಕ ಪುರಾತನರನ್ನು ಕುರಿತು ಕಾವ್ಯಗಳನ್ನು ಬರೆದಿದ್ದಾನೆ. ಹರಿಹರ ನಿರೂಪಿಸಿರುವಂತೆ ಕರಿಕಾಲ ಚೋಳರಾಜ ಮತ್ತು ಮಾದಾರ ಚೆನ್ನಯ್ಯ ಇಬ್ಬರೂ ಮಹಾಭಕ್ತರೇ. ಆ ಪುರಾತನರ ಮಾಲಿಕೆಯೊಳಗೆ

ಅವರೂ ಇರಬೇಕಾಗಿತ್ತು, ಆದರೆ ಇಲ್ಲ. ಅಷ್ಟೇ ಅಲ್ಲ, ತಮಿಳಿನ ಸಂಘಂ ಕಾಲದ ಸಾಹಿತ್ಯಕೃತಿಗಳಲ್ಲಿ ಅಲ್ಲಲ್ಲಿ ಕರಿಕಾಲಚೋಳನ ಪ್ರಸ್ತಾಪ ಬರುವುದಾದರೂ ಅವನ ಕಾಲದಲ್ಲೇ ಇದ್ದ ಮಹಾಭಕ್ತ ಚೆನ್ನಯ್ಯನ ಪ್ರಸ್ತಾಪ ಎಲ್ಲಿಯೂ ಬರುವುದಿಲ್ಲವೆಂಬ ಅಂಶವನ್ನು ತಮಿಳು ವಿದ್ವಾಂಸರು ಹೇಳುತ್ತಾರೆ. ಕನ್ನಡ ಸಾಹಿತ್ಯದಲ್ಲಿ ಅನೇಕ ಕಡೆ ಅವರೀರ್ವರ ಪ್ರಸ್ತಾಪ ಬಂದಿರುವಂತೆ ತಮಿಳಿನಲ್ಲಿ ಬಂದಿರಬೇಕಾಗಿತ್ತು; ಕ್ರಿ.ಶ.೮ನೇಯ ಶತಮಾನದಲ್ಲಿದ್ದ ೬೩ನೆಯ ಅಂದರೆ ಕೊನೆಯ ನಾಯನಾರ್ ಎನಸಿದ ಸುಂದರಮೂರ್ತಿ ನಂಬಿಯಾರ್ ತನಗಿಂತ ಹಿಂದಿನ ೬೨ ನಾಯನಾರ್ ಅವರನ್ನು ಕುರಿತು ತಮಿಳಿನಲ್ಲಿ ರಚಿಸಿದ ಸ್ತೋತ್ರ 'ತಿರುತ್ತೊಂಡತ್ತೊಗೈ'ಯಲ್ಲಿ ಸಹ ಅವರ ಉಲ್ಲೇಖವಿಲ್ಲ. ಇದಲ್ಲದೆ ರಾಜರು, ಬ್ರಾಹ್ಮಣರು, ಪ್ರಾಂತಪ್ರಭುಗಳು, ವರ್ತಕರು, ಕೃಷಿಕರು, ಕುರುಬರು, ಕುಂಬಾರರು, ನೇಕಾರರು, ಬೇಡರು, ಬೆಸ್ತರು, ಅಸ್ಪೃಶ್ಯರು ಮತ್ತು ಮಹಿಳೆಯರು – ಹೀಗೆ ಎಲ್ಲಾ ವರ್ಗಕ್ಕೆ ಸೇರಿದ ೬೩ ನಾಯನಾರರ ಅಥವಾ ಪುರಾತನರ ವಿವರಗಳನ್ನು ವಿಸ್ತಾರವಾಗಿ ಹೇಳುವ ೪೦೦೦ ಪದ್ಯಗಳ ಬೃಹತ್ಕೃತಿ 'ಪೆರಿಯ ಪುರಾಣಂ'ನಲ್ಲಿ ಸಹ ಮಹಾಭಕ್ತ ರೆನಿಸಿದ ಮಾದಾರ ಚೆನ್ನಯ್ಯ ಮತ್ತು ಕರಿಕಾಲಚೋಳರ ವಿವರ ಕಾಣುವುದಿಲ್ಲ. ಹೀಗೆ ಪ್ರಾಚೀನ ತಮಿಳು ಸಾಹಿತ್ಯದಲ್ಲಿ ಇವರ ಉಲ್ಲೇಖ ಬಂದಿಲ್ಲದಿರುವುದು ಆಶ್ಚರ್ಯಕರವಾಗಿದೆ.

ಕನ್ನಡದ ಮಲ್ಲಿಕಾರ್ಜುನ ಪಂಡಿತಾರಾಧ್ಯ ಮತ್ತು ಪಾಲ್ಕುರಿಕೆ ಸೋಮನಾಥ ಇವರ ಪ್ರಕಾರ ಮಾದಾರ ಚೆನ್ನಯ್ಯ ೬೩ ಪುರಾತನರಲ್ಲಿ ಒಬ್ಬ. 'ಅರವತ್ತುಮೂವರ ಕಥಾಗರ್ಭ'ದ (ಕಾಲ ನಿರ್ದಿಷ್ಟವಿಲ್ಲದ) ಅಜ್ಞಾತ ಕರ್ತೃವಂತೂ ಕರಿಕಾಲ ಚೋಳ ಮತ್ತು ಮಾದಾರ ಚೆನ್ನಯ್ಯ ಇಬ್ಬರನ್ನೂ ಪುರಾತನ ರೆಂದೇ ಹೇಳಿ ೬೩ರ ಪಟ್ಟಿಗೆ ಅಧಿಕವಾಗಿ ಸೇರಿಸುತ್ತಾನೆ. ಅವನ ಹೇಳಿಕೆ ಹೀಗಿದೆ:

> **"ಹೊನ್ನ ಮಳೆಯ ಕರೆಸಿದ ಕರಿಕಾಲಚೋಳ, ಕೈಲಾಸಮಂ ಸೂರೆಗೊಂಡ ನಿಂಬಿಯಕ್ಕಗಳು, ಶಿವನಂ ದಣಿಯೆ ಊಡಿಸಿದ ಮಾದರಚೆನ್ನಯ್ಯಂಗಳೊಳಗಾಗಿ ಚೋಳದೇಶದೊಳು ಅರವತ್ತಾರು ಪ್ರಜೆಪುರಾತನರು."**

ಈ ಹೇಳಿಕೆಯಲ್ಲಿ ಅವನು ಅಂದಿಗೆ ಪ್ರಚಲಿತವಿದ್ದ ೬೩ ಪುರಾತನರ ಜೊತೆಗೆ ಮಾದಾರ ಚೆನ್ನಯ್ಯ, ಕರಿಕಾಲಚೋಳ ಮತ್ತು ನಿಂಬಿಯಕ್ಕ ಈ ಮೂವರನ್ನೂ ಸೇರಿಸಿ ಪುರಾತನರ ಸಂಖ್ಯೆಯನ್ನು ೬೬ ಕ್ಕೆ ಏರಿಸಿರುವುದನ್ನು ಗಮನಿಸಬೇಕು. ಹೀಗೆ ಹೆಚ್ಚು ಪ್ರಚುರವಾದ ೬೩ ಪುರಾತನರ ಪಟ್ಟಿಯಲ್ಲಿ ಇವರು ಇರದಿದ್ದರೂ ಒಟ್ಟಿನಲ್ಲಿ ಅವರಂತೆಯೇ ಪುರಾತನರು ಎಂದೇ ಪರಿಗಣಿತವಾದಂತಿದೆ. ಆದರೆ, ವಚನಕಾರರು ೬೩ ಸಂಖ್ಯೆಯಿಂದ ನಿರ್ದೇಶಿತವಾಗುತ್ತಿದ್ದ ತಮಿಳುನಾಡಿನ ಶಿವಭಕ್ತರನ್ನು 'ಪುರಾತನರು' ಎಂದು ಕರೆದಂತೆ, ವಯಸ್ಸಿನಿಂದ ಹಿರಿಯರಾದ ಮತ್ತು ಹಿಂದಿನವರಾದ ಕನ್ನಡನಾಡಿನ ಶರಣರನ್ನೂ 'ಪುರಾತನರು' ಎಂದು ಕರೆದಿದ್ದಾರೆ. ಬಸವಣ್ಣನವರು ಕನ್ನಡ ನಾಡಿನ ಹಿರಿಯ ಶರಣರಾದ ಕಕ್ಕಯ್ಯ ದಾಸಯ್ಯರ ಜೊತೆಗೆ ಚೆನ್ನಯ್ಯನನ್ನೂ ಸೇರಿಸಿ ಅವರೆಲ್ಲರನ್ನೂ 'ಪುರಾತನರು' ಎಂದು ಒಂದು ಕಡೆ ಕರೆದಿದ್ದರೆ, ಇನ್ನೊಂದು ಕಡೆ ಮಾದಾರ ಚೆನ್ನಯ್ಯ ನೊಬ್ಬನನ್ನೇ ಹೆಸರಿಸಿ ಅವನನ್ನು 'ಪುರಾತನ' ಎಂದು ಕರೆದಿದ್ದಾರೆ. ಈ ವಿವರಣೆಯಿಂದ, ಹೇಗಾದರೂ ಸರಿ, ಚೆನ್ನಯ್ಯ ಪುರಾತನರೊಳಗೆ ಒಬ್ಬ ಎಂಬಂತೆ ಕನ್ನಡದ ಜನರಿಂದ ಪರಿಗಣಿತನಾಗಿದ್ದ ಮತ್ತು ಪೂಜ್ಯನೆನಿಸಿದ್ದ ಎನ್ನುವುದು ಸೂಚಿತವಾಗುತ್ತದೆ. ಚೆನ್ನಯ್ಯ ಹೀಗೆ ಪುರಾತ ರೊಳಗೊಬ್ಬನೆಂದು ಪರಿಗಣಿತನಾಗಬೇಕಾದರೆ ಅವನು ತುಂಬ ಹಿರಿಯ ಅಥವಾ ಹಿಂದಿನವ ಇರಬೇಕೆಂದು ತಿಳಿಯ ಬೇಕಾಗುತ್ತದೆ. ಹಾಗೆ ನೋಡಿದರೆ, **ಚೆನ್ನಯ್ಯ ೬೩ ಪುರಾತನ ರಿಗಿಂತ ಪುರಾತನ** ಎಂದು ಹೇಳಬೇಕಾಗುತ್ತದೆ. ಕರಿಕಾಲ ಚೋಳ ಮತ್ತು ಮಾದಾರ ಚೆನ್ನಯ್ಯ ಇವರು ಮಹಾಶಿವಭಕ್ತರೇ ಆದರೂ ಅವರ ಬಗ್ಗೆ ಪ್ರಾಚೀನ ತಮಿಳು ಸಾಹಿತ್ಯದಲ್ಲಿ ಏನೂ ಪ್ರಸ್ತಾಪ ಬಂದಿಲ್ಲದಿರುವುದಕ್ಕೆ ಪುರಾತನರು ೬೩ ಎಂಬ ಪರಿಕಲ್ಪನೆ ಬರುವುದಕ್ಕೆ ಪೂರ್ವದಲ್ಲಿ ಹಾಗೂ ಶಿವಭಕ್ತಿಪಾರಮ್ಯದ ಪ್ರಸರಣವು ಸಾಹಿತ್ಯದ ಮೂಲಕ ಇನ್ನೂ ಅಷ್ಟಾಗಿ ಆಗಿರದಿದ್ದ ಪೂರ್ವದಲ್ಲಿ ಅವರು ಆಗಿಹೋಗಿದ್ದುದು ಕಾರಣವಿರಬೇಕು. ಅದರಿಂದಲೇ ಅವರು ಪುರಾತನರ ಪಟ್ಟಿಯಲ್ಲಿ ಪರಿಗಣಿತರಾಗಿಲ್ಲ ಎಂದು ಭಾವಿಸಬಹುದು.

ತಮಿಳುನಾಡಲ್ಲಿದ್ದ ಚೆನ್ನಯ್ಯ ವೀರಶೈವನಾಗಿದ್ದನೇ?

ಡಾ. ಚಿ.ಮೂ. ಅವರು ಹೇಳಿರುವ ಮತ್ತೆರಡು ಅಂಶ ಗಳನ್ನು ಇಲ್ಲಿ ಪರಿಶೀಲಿಸಬೇಕಿದೆ: ಒಂದು, ೧೧–೧೨ನೇ ಶತಮಾನದಲ್ಲಿ ವೀರಶೈವ ಧರ್ಮವು ತಮಿಳುನಾಡಿನಲ್ಲಿ ಪ್ರಚಾರದಲ್ಲಿರಲಿಲ್ಲ; ಚೆನ್ನಯ್ಯ ಒಬ್ಬ ವೀರಶೈವ; ಶಿವಭಕ್ತ ಚೋಳನು ಚೆನ್ನಯ್ಯನನ್ನು ಬರವಮಾಡಿಕೊಂಡದ್ದು ಸ್ವಾಭಾವಿಕವೇ –ಎಂದಿರುವುದು. ಇನ್ನೊಂದು, ಮಾದಾರ ಚೆನ್ನಯ್ಯ ಎಂಬ ಹೆಸರಿನವರು ಚೋಳದೇಶದಲ್ಲಿ ಇರಲಿಕ್ಕೆ ಸಾಧ್ಯವಿಲ್ಲ; ಅದು ಅಪ್ಪಟ ಕನ್ನಡ ಹೆಸರು; ಆದ್ದರಿಂದ ಅವನು ಕನ್ನಡನಾಡಿನಿಂದ ತಮಿಳುನಾಡಿಗೆ ಹೋದವನು ಎಂಬುದಕ್ಕೆ ಅದು ಸಾಕ್ಷಿ ಎಂದಿರುವುದು. ಈ ಹೇಳಿಕೆಗಳು ಸರಿಯೇ ಎನ್ನುವುದನ್ನು ಪರಿಶೀಲಿಸಬೇಕಾಗಿದೆ.

ಕರಿಕಾಲಚೋಳ ಮತ್ತು ಚೆನ್ನಯ್ಯರಿದ್ದ (೨ನೆಯ ಶತಮಾನದ) ಕಾಲಕ್ಕೆ ವೀರಶೈವ ಇತ್ತೆಂಬುದರ ಬಗ್ಗೆ ಏನೂ ಹೇಳಲಾಗುವಂತಿಲ್ಲ. ಈಗಾಗಲೇ ತಿಳಿದುಬಂದಿರುವಂತೆ

ತಮಿಳುನಾಡಿನ ೬೩ ಪುರಾತನರು ವೀರಶೈವ ಅಥವಾ ಲಿಂಗಾಯತರಲ್ಲ, ಶುದ್ಧಶೈವರು ಮಾತ್ರ. ವಚನಕಾರರೇ ಅವರನ್ನು ಶುದ್ಧಶೈವರೆಂದೇ ಕರೆದಿದ್ದಾರೆ. "ಶುದ್ಧಶೈವಕ್ಕೂ ವೀರಶೈವಕ್ಕೂ ಇರುವ ಕೆಲವು ಮುಖ್ಯ ವ್ಯತ್ಯಾಸಗಳನ್ನು ಗಮನಿಸಬಹುದು. ಶುದ್ಧಶೈವದಲ್ಲಿ ಸ್ಥಾವರಲಿಂಗ ಪೂಜೆಯುಂಟು; ವೀರಶೈವದಲ್ಲಿ ಇಷ್ಟಲಿಂಗ ಪೂಜೆಯೊಂದೇ ... ಇಷ್ಟಲಿಂಗಧಾರಣೆ, ಷಟ್ಸ್ಥಲಾಚರಣೆ, ಜಂಗಮಾರಾಧನೆಗಳು ವೀರಶೈವದ ವೈಶಿಷ್ಟ್ಯಗಳು." ಆದಯ್ಯನ ಒಂದು ವಚನದಲ್ಲಿ "ಮುನ್ನ 'ಅರವತ್ತುಮೂರು' ಮೊದಲಾದ ಅಸಂಖ್ಯಾತರೆನಿಪ ಭಕ್ತರುಗಳು ಶುದ್ಧಶೈವದ ಆಚರಣೆ ಮಾಡಿದರು" ಎಂದೂ "ಶುದ್ಧಶೈವ ಸಂಪನ್ನರಪ್ಪ ಅರವತ್ತುಮೂವರು" (ವಚನ ೧೧೧೨) ಎಂದೂ ಹೇಳಿರುವುದನ್ನು ಗಮನಸಬೇಕು. ಕನ್ನಡನಾಡಿನ ವಚನಕಾರರಿಗೆ 'ಶುದ್ಧಶೈವ'ವು ಪರಿಚಿತವಿದ್ದು, ಅದಕ್ಕೂ ವೀರಶೈವಕ್ಕೂ ಅತಿ ಸಮೀಪದ ಹೋಲಿಕೆಗಳಿವೆ. ಆ ಹೋಲಿಕೆಗಳಲ್ಲೊಂದು ಲಿಂಗಪೂಜೆ ಮತ್ತು ಲಿಂಗಧಾರಣೆ ಯನ್ನು ಕುರಿತದ್ದು. "ಈ ಶುದ್ಧಶೈವರು ತಮಿಳುನಾಡಿನಲ್ಲಿ ಮಾತ್ರವಲ್ಲ", ೧೨ನೆಯ ಶತಮಾನದಲ್ಲಿ ಕನ್ನಡನಾಡಿನಲ್ಲಿಯೂ ಇದ್ದರು. ಬಸವಣ್ಣ ಇದ್ದ ಕೂಡಲಸಂಗಮ ಶುದ್ಧಶೈವಕ್ಕೆ ಸೇರಿತ್ತೆಂದು ಮೋಳಿಗೆ ಮಾರಯ್ಯನ "ಶುದ್ಧಶೈವ ಕಪ್ಪಡಿ ಸಂಗಮನಾಥನಲ್ಲಿ ಐಕ್ಯವಾದನು" ಎಂಬ ವಚನೋಕ್ತಿಯಿಂದ ವ್ಯಕ್ತವಾಗುತ್ತದೆ.

"ಶೈವ–ವೀರಶೈವ ಎರಡರಲ್ಲಿಯೂ ಗುರು ಶಿಷ್ಯನಿಗೆ ಆರಾಧನೆಗೆ ಲಿಂಗವನ್ನು ಕೊಡುತ್ತಾನೆ. ಹೀಗೆ ಲಿಂಗವನ್ನು ಕೊಟ್ಟ ಗುರು ಶುದ್ಧಶೈವದಲ್ಲಿ, ಆ ಲಿಂಗವನ್ನು ಸ್ಥಾವರದಂತೆ ಇದಿರಿಟ್ಟು ಪೂಜಿಸಲು ಹೇಳುತ್ತಾನೆ; ಆದರೆ ವೀರಶೈವದಲ್ಲಿ ಗುರು ಕೊಟ್ಟ ಲಿಂಗವನ್ನು ಅನವರತ ಅಂಗಪೀಠದಲ್ಲಿ ಧರಿಸಲು ತಿಳಿಸುತ್ತಾನೆ." ಶುದ್ಧಶೈವರು ವೀರಶೈವರಂತೆ ದೇಹದ ಮೇಲೂ ಲಿಂಗವನ್ನು ಧರಿಸುತ್ತಿದ್ದರು; ಬೇಕಾದಾಗ ಧರಿಸಿ, ಬೇಡವಾದಾಗ ತೆಗೆದಿರಿಸುತ್ತಿದ್ದರು. ಅವರ ಅಂಥ ಪದ್ಧತಿಯನ್ನು ಶರಣ ಆದಯ್ಯ ಖಂಡಿಸಿದ್ದಾನೆ. ("ಘನಲಿಂಗಿದೇವನು ಒಂದು ವಚನದಲ್ಲಿ ಪಾಶುಪತ ಶೈವರಿಗೂ ಲಿಂಗಧಾರಣವಿದ್ದುದನ್ನು ತಿಳಿಸುತ್ತಾನೆ". ಇಲ್ಲಿ ಅದರ ಬಗ್ಗೆ ಪ್ರಸ್ತಾಪಿಸುವುದು ಅಗತ್ಯವಿಲ್ಲ).

ಶುದ್ಧಶೈವರು ಮತ್ತು ವೀರಶೈವರು ಗುರು ಕೊಟ್ಟ ಇಷ್ಟಲಿಂಗವನ್ನು ಅಂಗದ ಮೇಲೆ ಧರಿಸುತ್ತಿದ್ದರು. ಶುದ್ಧಶೈವರು ಅದನ್ನು ಬೇಕಾದಾಗ ಧರಿಸಿಕೊಂಡು, ಬೇಡವಾದಾಗ ತೆಗೆದಿರಿಸಬಹುದಿತ್ತು, ಹೊರಗೆ ಒಂದು ಕಡೆ ಇಟ್ಟು ಪೂಜಿಸ ಬಹುದಿತ್ತು. ಆದರೆ ವೀರಶೈವರು ಸದಾ ಇಷ್ಟಲಿಂಗವನ್ನು ಧರಿಸಿಕೊಂಡೇ ಇರಬೇಕಾಗಿತ್ತು; ಹೊರಗೆ ತೆಗೆದರೂ ಬೇರೆಲ್ಲೂ ಇಡದೆ ಕರಸ್ಥಲದಲ್ಲಿಟ್ಟು ಪೂಜಿಸಬೇಕಾಗಿತ್ತು.

ಇಷ್ಟಲ್ಲದೆ, "ಲಿಂಗದೊಳು ಬೆರೆತು ಬೇರಾಗದಂತಿ ರ್ಪುದು ವೀರಶೈವರ ಕೊನೆಯ ಗುರಿಯಾಗಿ ರುವುದರಿಂದ ಅವರಿಗೆ 'ಗಣಪದವಿ', 'ರುದ್ರಪದವಿ' ದೊರೆಯಿತೆಂದು ಹೇಳುವುದು ಸರಿಯಲ್ಲವೆಂಬುದು ತೋಂಟದ ಸಿದ್ಧಲಿಂಗ ಯತಿಗಳ ಅಭಿಪ್ರಾಯವಾಗಿದೆ". ಆದಯ್ಯ ಸಹ "ವೀರಶೈವಸಂಪನ್ನರು ಮಹಾಲಿಂಗ ಪದವನೆಯಿದರು; **ಶುದ್ಧಶೈವಸಂಪನ್ನರುಮಪ್ಪ ಅರವತ್ತುಮೂವರು ಪುರಾತನರು** ಅಸಂಖ್ಯಾತರು ಶಿವನಲ್ಲಿ **ಚತುರ್ವಿಧ ಪದವಿಯನೆಯ್ದಿ** ಸುಖಿಯಾದರು" (ವಚನ ೧೧೧೨) ಎಂದು ಹೇಳಿರುವುದು ಸಹ ಅದೇ ಆಗಿರುವುದನ್ನು ಗಮನಸಬೇಕು. ಆದರೆ ಹರಿಹರಕವಿ ತಮಿಳುನಾಡಿನ ಪುರಾತನರಿಗೆ ಶಿವನು ಕಡೆಯಲ್ಲಿ **'ಗಣಪದವಿ'** ಇತ್ತದ್ದನ್ನು ಹೇಳಿದಂತೆಯೇ ಕನ್ನಡ ನಾಡಿನ ನೂತನರು ಕೂಡಾ ಅಂಥ ಪದವಿಗೆ ಅರ್ಹರು ಎಂದು ಭಾವಿಸಿ, ಅವರಿಗೂ ಶಿವನು **'ಗಣಪದವಿ'** ಇತ್ತಂತೆ ವರ್ಣಿಸಿದ್ದಾನೆ. ಆದ್ದರಿಂದ 'ಗಣಪದವಿ' ಎಂಬುದು ಒಬ್ಬ ಶಿವಭಕ್ತ ಶುದ್ಧಶೈವನೋ ವೀರಶೈವನೋ ಎಂಬುದನ್ನು ನಿರ್ಣಯಿಸಲು ಒಂದು ಮಾನದಂಡವಾಗುವುದಿಲ್ಲ. ಆದರೆ, ಮಾದಾರ ಚೆನ್ನಯ್ಯ ಡಾ. ಎಂ. ಚಿದಾನಂದಮೂರ್ತಿ ಅವರು ಹೇಳುವಂತೆ ವೀರಶೈವನಾಗಿರಲಿಲ್ಲ, ಶುದ್ಧಶೈವನಾಗಿದ್ದ ಎಂಬುದು ಈಕೆಳಗಿನ ವಿವರದಿಂದ ಸ್ಪಷ್ಟವಾಗುತ್ತದೆ:

ಶುದ್ಧಶೈವರು ಗುರುವೊಬ್ಬನಿಂದ ಇಷ್ಟಲಿಂಗವನ್ನು ಪಡೆದು ಅದನ್ನು ಅಂಗದ ಮೇಲೆ ಧರಿಸುತ್ತಿದ್ದರೆನ್ನ ಬಹುದಾದರೂ ಕರತಲದಲ್ಲಿಟ್ಟು ಪೂಜಿಸುತ್ತಿದ್ದರೆಂದು ಹೇಳಲಿಕ್ಕೆ ಬರುವುದಿಲ್ಲ. ಹರಿಹರಕವಿ ಚಿತ್ರಿಸಿರುವಂತೆ ಮಾದಾರ ಚೆನ್ನಯ್ಯ ಹುಲ್ಲು ತರಲು ಕಾಡಿಗೆ ಹೋಗುವಾಗ ತನ್ನೊಂದಿಗೆ ಲಿಂಗವನ್ನು ಗುಟ್ಟಾಗಿ ತೆಗೆದುಕೊಂಡು ಹೋಗುತ್ತಿದ್ದ. ಕಾಡಲ್ಲಿ ತನಗೆ ಬೇಕಾದ ನೆಲೆಯನ್ನು ತಲುಪಿದಮೇಲೆ, 'ಸಜ್ಜೆಯೊಳಗೆ' [ಮುಚ್ಚಿಟ್ಟುಕೊಂಡು] ತಂದಿದ್ದ ಆ ಲಿಂಗವನ್ನು ಹೊರತೆಗೆದು, **ಒಂದು ಜಾಗದಲ್ಲಿ ಅದನ್ನಿಟ್ಟು,** ಅದಕ್ಕೆ ತೊರೆಯ ನೀರಿಂದ ಅಭಿಷೇಕ ಮಾಡಿ, ಕಾಡಿನ ವಿವಿಧ ಹೂವುಗಳನ್ನು ತಂದು ಅದನ್ನು ಅಲಂಕರಿಸಿ, ಕಾಡಿನ ಹಣ್ಣುಗಳ ನೈವೇದ್ಯ ಮಾಡಿ, ತನ್ನ ಮನಃತೃಪ್ತಿಯಾಗು ವವರೆಗೂ ಪೂಜಾನಂದದಲ್ಲಿದ್ದು, ಆಮೇಲೆ ಹುಲ್ಲು ಕೊಯ್ದು ಹೊರೆಕಟ್ಟಿ ಎತ್ತಿನ ಮೇಲೆ ಹೇರಿಕೊಂಡು, ಸಂಜೆ ಪಟ್ಟಣಕ್ಕೆ ಮರಳುತ್ತಿದ್ದ. ಹರಿಹರನ ಈಮುಂದಿನ ಕೆಲವು ಸಾಲುಗಳನ್ನು ಗಮನಸಿ:

ಈ ವಿವರ ಡಾ. ಚಿ.ಮೂ. ಅವರ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ, ಚೆನ್ನಯ್ಯ ಇಷ್ಟಲಿಂಗವನ್ನು ಕರಸ್ಥಲದಲ್ಲಿಟ್ಟು ಪೂಜಿಸುತ್ತಿರಲಿಲ್ಲ, ಹೊರಗೆ ತೆಗೆದಿಟ್ಟು ಪೂಜಿಸುತ್ತಿದ್ದ, ಅಂದರೆ

ಚೆನ್ನಯ್ಯ ಇಷ್ಟಲಿಂಗಪೂಜಕನಾಗಿದ್ದ ಆದರೆ, ಅದನ್ನು (ವೀರಶೈವನಂತೆ) ಸದಾ ಅಂಗದ ಮೇಲೆ ಧರಿಸಿಕೊಂಡಿರದೆ ಮತ್ತು ಕರಸ್ಥಲದಲ್ಲಿಟ್ಟು ಪೂಜಿಸದೆ, (ಶುದ್ಧಶೈವನಂತೆ) ಬೇಕಾದಾಗ ಹೊರಗೆ ತೆಗೆದಿಟ್ಟು ಪೂಜಿಸುವವನಾಗಿದ್ದ ಅರ್ಥಾತ್ ಅವನು ವೀರಶೈವನಾಗಿರಲಿಲ್ಲ, ಶುದ್ಧಶೈವನಾಗಿದ್ದ ಎಂಬುದು ಶ್ರುತಪಡುತ್ತದೆ. ಹಾಗೆಯೇ ಪರೋಕ್ಷವಾಗಿ ಶ್ರುತಪಡುವ ಮತ್ತೊಂದು ಸಂಗತಿ ಎಂದರೆ, ಬಸವಣ್ಣನ ಹಿರಿಯ ಸಮಕಾಲೀನನಾಗಿದ್ದ ವಚನಕಾರ ಮಾದಾರ ಚೆನ್ನಯ್ಯ ಮಾತ್ರ ವೀರಶೈವನೇ ಆಗಿದ್ದ ಎಂಬುದು.

'ಮಾದಾರ' 'ಚೆನ್ನಯ್ಯ' ಪದಗಳು ಮತ್ತು ತಮಿಳಿನ ಸಂಬಂಧ

ಇನ್ನು, ಮಾದಾರ ಚೆನ್ನಯ್ಯ ಎಂಬುದು ತಮಿಳಿನ ಹೆಸರಲ್ಲ, ಕನ್ನಡದ ಹೆಸರು; ಆದ್ದರಿಂದ ಅವನು ಮೂಲತಃ ಕನ್ನಡಿಗ ಎಂಬುದಕ್ಕೆ ಹೆಸರಿನ ಈ ರೂಪ ಸಾಕ್ಷಿ. ಹೀಗಾಗಿ ಅವನು ಕನ್ನಡ ನಾಡಿನಿಂದ ತಮಿಳುನಾಡಿಗೆ ಹೋದವನು ಎಂಬ ಡಾ. ಚಿ. ಮೂ.ಅವರ ಹೇಳಿಕೆಯ ಬಗ್ಗೆ ಪರಿಶೀಲಿಸ ಬೇಕಾಗಿದೆ. ಜಾತಿ-ಜನಾಂಗಗಳ ಹೆಸರುಗಳು ಪ್ರತಿಯೊಂದು ಭಾಷೆಯಲ್ಲೂ ಇರುತ್ತವೆ. ಒಂದು ಭಾಷೆಯಲ್ಲಿರುವ ಜಾತಿ-ಜನಾಂಗಗಳ ಹೆಸರುಗಳನ್ನು ಇನ್ನೊಂದು ಭಾಷೆಯಲ್ಲಿ ಹೇಳುವಾಗ, ಮೊದಲ ಭಾಷೆಯಲ್ಲಿ ಅವು ಇದ್ದ ರೂಪದಲ್ಲೇ ಬಳಸಬೇಕಾಗಿಲ್ಲ. ಅವುಗಳ ಬದಲಿಗೆ ಇನ್ನೊಂದು ಭಾಷೆಯಲ್ಲಿ ಆಗಲೇ ಇರುವ ಪದಗಳನ್ನು ಬಳಸುತ್ತೇವಷ್ಟೆ. 'ಮಾದಾರ' ಎಂಬುದು ಜಾತಿಯ ಹೆಸರು; ಅದು ರೂಢನಾಮ. ಚೆನ್ನಯ್ಯ ಎಂಬುದು ವ್ಯಕ್ತಿಯ ಹೆಸರು. ಅದು ಅಂಕಿತನಾಮ. ಒಂದು ಭಾಷೆಯ ಒಂದು ರೂಢನಾಮಕ್ಕೆ ಇನ್ನೊಂದು ಭಾಷೆಯಲ್ಲಿ ಅದೇ ಅರ್ಥದ ಒಂದು ರೂಢನಾಮ ಸಾಮಾನ್ಯವಾಗಿ ಇದ್ದೇಇರುತ್ತದೆ. ಅಂಥ ಅರ್ಥದ ಪದ ಇದ್ದಾಗ ಅದನ್ನು ಬಳಸುವುದು ಸೂಕ್ತ. ಅಂಥ ಪದ ಇಲ್ಲದಿದ್ದಾಗ ಮೊದಲ ಭಾಷೆಯ ಪದವನ್ನೇ ಬಳಸಬಹುದು. ಹೀಗೆ ಒಂದು ಭಾಷೆಯ ರೂಢನಾಮಕ್ಕೆ ಭಾಷಾಂತರದಲ್ಲಿ ಇನ್ನೊಂದು ಭಾಷೆಯ ಅದೇ ಅರ್ಥದ ರೂಢನಾಮವನ್ನು ಬಳಸಬಹುದು. ಆದರೆ, ಅಂಕಿತನಾಮ(ಹೆಸರಿನ ಪದ)ವನ್ನು ಹಾಗೆ ಭಾಷಾಂತರಿಸಲು ಆಗುವುದಿಲ್ಲ. ಹಾಗಾಗಿ 'ಪರ್ಯೆಯನ್' ಎಂಬ ರೂಢನಾಮಕ್ಕೆ ಕನ್ನಡದ 'ಮಾದಾರ' ಎಂಬ ರೂಢನಾಮವನ್ನು ಬಳಸಿರುವುದು ಸೂಕ್ತವಾಗಿದೆ. ಹೀಗಿರುವಾಗ, ಜಾತಿಯನ್ನು ಹೇಳುವ ಪದ ಕನ್ನಡದ್ದೆಂದು ವ್ಯಕ್ತಿಯೂ ಕನ್ನಡಿಗನೆಂದು ಹೇಳುವುದು ಸಮರ್ಪಕವೆನಿಸುವುದಿಲ್ಲ.

ತಮಿಳಿನಲ್ಲಿ 'ಪರ್ಯೆಯನ್' ಎನ್ನುವುದು ಕನ್ನಡದ 'ಮಾದಿಗ' ಎಂಬುದಕ್ಕೆ ಸಂವಾದಿಯಾದ ಪದವಷ್ಟೆ ತಮಿಳಿನಲ್ಲಿ 'ಪರೈ' ಎಂದರೆ ತಮಟೆ ಅಥವಾ ಒಂದು ಚರ್ಮವಾದ್ಯ ಎಂದರ್ಥ. ಕನ್ನಡದಲ್ಲಿ ಅದಕ್ಕೆ 'ಪರೆ', 'ಹರೆ' ಎಂಬವು ಸೋದರಶಬ್ದಗಳಾಗಿವೆ. 'ಪರ್ಯೆಯನ್' ಎಂದರೆ ತಮಟೆ ಬಡಿಯುವವನು ಎಂದರ್ಥ. ಹಿಂದೆ ಆ ಕೆಲಸವನ್ನು ಮಾದಿಗರವನು ಮಾಡುತ್ತಿದ್ದುದರಿಂದ ಅದಕ್ಕೆ 'ಮಾದಿಗ' ಎಂಬ ಅರ್ಥ ಬಂದಿದೆ. (ಕನ್ನಡದ 'ಪಿರಿಯರ್' 'ಹಿರಿಯರು' ಎಂಬ ಪದಗಳು ತಮಿಳಿನ 'ಪರ್ಯೆಯರ್' ಎಂಬುದಕ್ಕೆ ಸಂವಾದಿಯಾಗಿ ಬಳಸಿದ ಪದಗಳಾಗಿರಬಹುದು). ತಮಿಳಿನ ಪರ್ಯೆಯನ್ ಬಗ್ಗೆ ಕನ್ನಡದಲ್ಲಿ ಹೇಳುವಾಗ, ತಮಿಳಿನ ಆ ಪದವನ್ನೇ ಬಳಸುವ ಬದಲಿಗೆ ಕನ್ನಡದಲ್ಲಿರುವ ಮಾದಿಗ, ಮಾದರವನು, ಮಾದಾರ ಎಂಬಂತಹ ಪದ ಬಳಸುವುದು ಸಹಜ ಹಾಗೂ ಸರಿ. ಹಾಗಾಗಿ ತಮಿಳಿನಲ್ಲಿ ಮಾದಾರ ಎಂಬ ಪದ ಇಲ್ಲ ಎಂದು ಮಾದಾರ ಚೆನ್ನಯ್ಯ ಎನ್ನುವವನು ಕನ್ನಡದವನೇ ಹೊರತು ತಮಿಳಿನವನಲ್ಲ-ಎನ್ನುವುದು ಸಮರ್ಪಕವೆನಿಸುವುದಿಲ್ಲ.

ಆದರೆ, ಚೆನ್ನಯ್ಯ ಎಂಬುದು ಅಂಕಿತನಾಮ(ಹೆಸರಿನ ಪದ)ವಾದುದರಿಂದ ಅದು ತಮಿಳಿನ ಪದವೋ ಅಥವಾ ತಮಿಳಿನ ತದ್ಭವದ ರೀತಿಯ ಪದವೋ ಆಗಿರಬೇಕಾಗುತ್ತದೆ. ಕನ್ನಡದಲ್ಲಿ ಚೆನ್ನಪ್ಪ ಎಂಬ ಹೆಸರಿರುವಂತೆ ತಮಿಳಿನಲ್ಲೂ ಚೆನ್ನಪ್ಪ ಸೆನ್ನಪ್ಪ ಎಂಬ ಹೆಸರಿನ ರೂಪಗಳಿರುವುದು ತಿಳಿದುಬರುತ್ತದೆ. ತೆಲುಗಿನ ಸಂಪರ್ಕದಿಂದ ಆ ಪದ ತಮಿಳಿಗೆ ಬಂದಿರಬಹುದೆಂದು ಹೇಳಲಾಗಿದ್ದರೂ ತಮಿಳಿನಲ್ಲಿ ನೆಲೆನಿಂತ ಪದ. ಆದ್ದರಿಂದ ಚೆನ್ನಯ್ಯ ಎಂಬುದಕ್ಕೆ ತಮಿಳಿನಲ್ಲಿ ಚೆನ್ನಯ್ಯನ್ ಅಥವಾ ಸೆನ್ನಯ್ಯನ್ ಎಂಬ ರೂಪ ಇರುವುದಕ್ಕೆ, ಮದರಾಸು ಹೆಸರನ್ನು ಚೆನ್ನೈ ಎಂದು ಬದಲಿಸಿದುದರ ಹಿನ್ನೆಲೆಯನ್ನು ನೋಡಬಹುದು. ಚೆನ್ನಪ್ಪ ನಾಯ್ಡು ಎಂಬುವನು ಆಳಿದ್ದರಿಂದ ಚೆನ್ನೈಪಟ್ಟಣಂ ಎಂಬ ಹೆಸರು ಬಂದಿತೆನ್ನುವುದು ಗಮನಿಸ ಬೇಕಾದ ಅಂಶ. ಕನ್ನಡದ ಹಳೆಯ ದಾಖಲೆಗಳಲ್ಲಿ ಅದನ್ನು ಚನ್ನಪಟ್ಟಣ ಎಂದು ಕರೆದಿದ್ದಾರೆ. ಇದರಿಂದ ಚೆನ್ನಯ್ಯ ಎಂಬುದು ತಮಿಳಿನಲ್ಲಿ ಪ್ರಚಲಿತವಾಗಿದ್ದ - ಆದರೆ ಕನ್ನಡದ್ದು ಎನ್ನುವ ಹಾಗೆ ಕಾಣುವ -ಒಂದು ಹೆಸರಿನ ರೂಪ ಎಂದು ಹೇಳಬಹುದು. ಹೀಗಾಗಿ ಚೆನ್ನಯ್ಯ ಎಂಬುದು ಕೇವಲ ಕನ್ನಡಕ್ಕೆ ಸೀಮಿತವಾದ ಪದವಲ್ಲ. ಆದ್ದರಿಂದ ಮಾದಾರ ಚೆನ್ನಯ್ಯ ಎಂಬುದು ತಮಿಳಿಗೆ ಸೇರಿದ ಪದವಲ್ಲ, ಕನ್ನಡದ್ದು ಮಾತ್ರ ಎಂದು ಡಾ. ಚಿ.ಮೂ. ಹೇಳುವುದು ಸಮಂಜಸ ವೆನಿಸುವುದಿಲ್ಲ.

ಡಾ.ಚಿ.ಮೂ. ಹೇಳುವ ಹಂತಿಯಹಾಡು ಜನಪದಗೀತೆಯೇ?

ಇನ್ನೊಂದು ಅಂಶವನ್ನು ಪ್ರಸ್ತಾಪಿಸಿ ಅಲ್ಲಿಗೆ ಈ ಸಂಪ್ರಬಂಧವನ್ನು ಮುಗಿಸಬಹುದು. 'ಜನಪದಗೀತೆ' ಎನ್ನುವ ಒಂದು ರಚನೆಯಲ್ಲಿ ಬಂದಿರುವ ಮಾದರ ಚೆನ್ನಯ್ಯನ

ವಿಚಾರ. ಡಾ. ಬಿ.ಎಸ್. ಗದ್ದಗಿಮಠ ಅವರ 'ಕನ್ನಡ ಜಾನಪದ ಗೀತಗಳು' ಎಂಬ ಪುಸ್ತಕದ ಕೊನೆಯಲ್ಲಿ 'ಹಂತಿಯ ಹಾಡುಗಳು' ಎಂಬ ವಿಭಾಗದಲ್ಲಿ ಶರಣರನ್ನು ಕುರಿತ ಕೆಲವು ಹಾಡು ಗಳಲ್ಲಿ 'ಮಾದರ ಚೆನ್ನಯ್ಯ' ಎಂಬುದೂ ಒಂದು. ಡಾ. ಎಂ. ಚಿ.ಮೂ. ಅವರು ಅದನ್ನು 'ಬಹುಮುಖ್ಯ' ಆಧಾರ ವೆಂದು ಪರಿಗಣಿಸಿ, ಚೆನ್ನಯ್ಯ ಕನ್ನಡನಾಡಿನಿಂದ ತಮಿಳು ನಾಡಿಗೆ ಹೋದವನು ಎಂದು ಹೇಳಿದ್ದಾರೆ. ಇದರ ಸಮರ್ಪಕತೆಯನ್ನು ಪರಿಶೀಲಿಸುವುದು ಅವಶ್ಯಕವಾಗಿದೆ:

ಆ ಹಾಡಿನಲ್ಲಿ ಬಂದಿರುವ ವಿವರವನ್ನು ಹೀಗೆ ಸಂಗ್ರಹಿಸಬಹುದು: ಶರಣರ ಊರೆನಿಸಿದ್ದ ಬಳ್ಳಿಗಾವಿಯಲ್ಲಿ ಚೆನ್ನಯ್ಯ ತೊಗಲು ಹದಮಾಡುವುದು, ಕಳ್ಳುಮಿಣಿ ಜೋಡು ಗಳನ್ನು ಮಾಡುವುದು, ಅವನ್ನು ಮಾರಿ ಬಂದ ಹಣದಲ್ಲಿ ಜೀವನ ನಡೆಸುತ್ತ ಹಾಗೇ ದಾಸೋಹ ನಡೆಸುವುದು, ಲಿಂಗವನ್ನು ಕರಡಿಗೆಯಲ್ಲಿಟ್ಟು ಧರಿಸಿಕೊಂಡಿದ್ದು ಅದನ್ನು ಪೂಜಿಸುವುದು, ಇವುಗಳಲ್ಲಿ ನಿರತನಾಗಿದ್ದ. ಇಲ್ಲಿ ಆದ ರಾಜರುಗಳ ಘರ್ಷಣೆಯಲ್ಲಿ ಪಲ್ಲವರನ್ನು ತಳ್ಳಿ ಚಾಲುಕ್ಯರು ಆಳತೊಡಗಿದಾಗ, ಶರಣರೆಲ್ಲ ಊರು ಬಿಟ್ಟು ಎಲ್ಲೆಲ್ಲೋ ಹೋದರು. ಕರಿಕಾಲಚೋಳನಂಥ ಶಿವಭಕ್ತ ಅರಸನದ್ದ ನಾಡೇ ತನಗಿನ್ನು ಆಶ್ರಯ ಎಂದು ಅವನು ತನ್ನ ಪತ್ನಿ ಗಂಗೆಯೊಂದಿಗೆ ಕಾಂಚಿಗೆ ಹೊರಟುಹೋದ. ಅಲ್ಲಿ ಅರಸನ ಕುದುರೆಗೆ ಹುಲ್ಲು ತರಲು ಕಾಡಿಗೆ ಹೋದಾಗ, ಕರಡಿಗೆಯಿಂದ ಲಿಂಗವನ್ನು ಹೊರತೆಗೆದು ಪೂಜಿಸುತ್ತಿದ್ದ... (ಇಲ್ಲಿಂದ ಮುಂದಿನ ಕಥೆಯೆಲ್ಲ ಹರಿಹರಕವಿ ನಿರೂಪಿಸಿರುವ ರೀತಿಯಲ್ಲೇ ಸಾಗುತ್ತದೆ). ಕಡೆಯಲ್ಲಿ ಶಿವಶರಣ ಚೆನ್ನಯ್ಯನ ಶಿವಭಕ್ತಿ ಎಷ್ಟು ದೊಡ್ಡದು ಎಂದು ಕಂಡುಕೊಂಡ ಕರಿಕಾಲಚೋಳರಸ 'ಹೊಸ ಮತ' ವನ್ನು ಒಪ್ಪಿ ಚೆನ್ನಯ್ಯನನ್ನೇ ತನ್ನ ಗುರುವೆಂದು ಅಂಗೀಕರಿಸಿದ ಎಂದೂ ಚೆನ್ನಯ್ಯನ ವಚನಗಳು ಮಾನ್ಯವಾದುವು ಎಂದೂ ಹೇಳುವುದರೊಂದಿಗೆ ಆ ಗೀತ ಮುಗಿಯುತ್ತದೆ.

ಐತಿಹಾಸಿಕ ಅಂಶವನ್ನು ನಿರ್ಣಯಿಸುವಲ್ಲಿ ಒಂದು ಜನಪದ ಗೀತವನ್ನು ಒಂದು ಗಂಭೀರ ಆಧಾರವಾಗಿ ತೆಗೆದು ಕೊಳ್ಳುವುದು ಅಥವಾ ಮುಂದಿಡುವುದು ಸಾಧುವೆನಿಸುವುದಿಲ್ಲ. ಇಲ್ಲಿ ಇನ್ನೊಂದು ವಿಚಾರ: ಡಾ.ಚಿ.ಮೂ. ಹೇಳುವ ಆ 'ಜನಪದ ಗೀತ'ದ ಭಾಷೆ ಶೈಲಿ ವಿಷಯ ನಿರೂಪಣೆ ಇವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಅದು ಜನಪದ ಗೀತೆಯೇ ಅಲ್ಲ. ಡಾ.ಎಂ.ಎಂ.ಕಲಬುರ್ಗಿ ಅವರು ಒಂದೆಡೆ ಶಿಷ್ಟ ಮತ್ತು ಜಾನಪದದ ಮಧ್ಯೆ ಬರುವ ಒಂದು ಪ್ರಕಾರವಿದೆ; ಅದೇ 'ಜಾಣಪದ ಗೀತೆ' ಎಂದು ಹೇಳಿರುವುದು ಆ ಪದ್ಯಕ್ಕೆ ಚೆನ್ನಾಗಿ ಅನ್ವಯಿಸುತ್ತದೆ. ಏಕೆಂದರೆ, ಆ ಗೀತ ಮೇಲುನೋಟಕ್ಕೆ ಜಾನಪದದಂತೆ ಕಂಡರೂ, ಅದರಲ್ಲಿ ಎಷ್ಟೋ ಪದಗಳು ಗ್ರಾಂಥಿಕವಾದವು. ಉದಾಹರಣೆಗೆ, ಈಮುಂದಿನ ಪದಗಳನ್ನು ನೋಡಿ: ವರಗೈಯು, ಪಲ್ಲವ, ಚಾಲುಕ್ಯ, ವರಕಾಂಚಿ, ಭಾಳಲೋಚನ, ರುಂಡಧಾರಿ, ನಂದಿವಾಹನ, ಪನ್ನಂಗ (ಪನ್ನಗ)ಧರ, ವರಜಾತಿ, ಶಿವಪದ, ನಾದ-ಬಿಂದು-ಕಲೆ, ಚಿತ್ಕಳೆ, ಮೇಧಾವಿ, ಭಾಗ್ಯನಿಧಿ, ಕ್ಷಾಮ ಇತ್ಯಾದಿ. ಮೂಲತಃ ಜಾನಪದೀಯ ಹಾಡುಗಳಲ್ಲಿ ಇಂಥ ಪದಗಳ ಬಳಕೆ ಅಸಂಭವವೆನ್ನುವುದು ಜಾನಪದದ ಅಭ್ಯಾಸಿಗಳಿಗೆ ತಿಳಿದ ಸಂಗತಿಯೇ. ಗ್ರಾಮೀಣರಿಗೆ ಇಂಥ ಪದಗಳ ಪರಿಚಯ ಇತ್ತೆಂದು ಭಾವಿಸುವುದು, ಇತಿಹಾಸದಲ್ಲಿ ಕಾಣಸಿಗುವ ಪಲ್ಲವ ಚಾಲುಕ್ಯ ಇಂಥ ಹೆಸರುಗಳಾಗಲಿ ಅವರ ಚರಿತ್ರೆಯಾಗಲಿ ತಿಳಿದಿತ್ತೆಂದು ಭಾವಿಸುವುದು ಸರ್ವಥಾ ಸಾಧುವೆನಿಸುವುದಿಲ್ಲ.

ಇದಲ್ಲದೆ, ಈ ಹಾಡಿನ ರಚನಕಾರ ಹರಿಹರನ 'ಮಾದಾರ ಚೆನ್ನಯ್ಯನ ರಗಳೆ'ಯನ್ನು (ಮತ್ತು ಚೆನ್ನಯ್ಯನ ಬಗ್ಗೆ ಫ.ಗು.ಹಳಕಟ್ಟಿ ಅವರು ಬಹುಹಿಂದೆ ಬರೆದಿದ್ದುದನ್ನು ಸಹ) ಬಲ್ಲವನು ಎಂಬುದು ದೃಢಪಡುತ್ತದೆ:

ಹೀಗಾಗಿ, ಅದನ್ನು ರಚಿಸಿದ್ದು ಜನಪದರಲ್ಲ, ಈಚಿನ ಕಾಲದಲ್ಲಿ ಆಗಿಹೋದ ಒಬ್ಬ ಗ್ರಾಮೀಣ ಹಿನ್ನೆಲೆಯ ಪ್ರತಿಭಾವಂತ ಎಂಬುದನ್ನು ಆ ಹಾಡುಗಳ ಸಂಗ್ರಾಹಕರಾದ ಡಾ. ಬಿ.ಎಸ್. ಗದ್ದಗಿಮಠ ಅವರೇ ಹೇಳಿದ್ದಾರೆ: ಅವರು ತಮ್ಮ ಪುಸ್ತಕದಲ್ಲಿ "ಸರ್ವಜ್ಞನು ಮಹಾಜಾನಪದಕವಿ" ಎನ್ನುತ್ತ, ಮುಂದೆ ಅವನಂತಹ ಇನ್ನೊಬ್ಬ ಜಾನಪದಕವಿ ಎಂದರೆ ಈಚೆಗೆ ಕೈಲಾಸವಾಸಿಯಾದ ಸಾವಳಿಗೇಶ್ವರ ಅಥವಾ ಸಾವಳಿಗಯ್ಯ. ಕವಿ ತಾನು ನಿರಕ್ಷರಿ ಎಂದು ಹೇಳಿಕೊಂಡಿದ್ದರೂ, ನಮ್ಮ ಪುರಾಣಗಳು, ಭಕ್ತರ ಕಥೆಗಳು, ವಚನಗಳು, ತತ್ತ್ವಪದಗಳು, ಇವೆಲ್ಲವುಗಳಲ್ಲಿ ಆತನಿಗೆ ತೀವ್ರವಾದ ಗತಿಯಿದೆ (ಜ್ಞಾನವಿದೆ); ಅಲ್ಲಿಯ ಭಾಷೆಯ ಪ್ರಭಾವವು ಈ ಹಾಡುಗಳಲ್ಲಿ ಸ್ವಾಭಾವಿಕವಾಗಿ ಕಂಡುಬರುತ್ತದೆ; ಸರ್ವಜ್ಞ ಮತ್ತು ನಿಜಗುಣ ಶಿವಯೋಗಿಯರಂತೆ ಸಾವಿರಾರು ತ್ರಿಪದಿಗಳಲ್ಲಿ ಇವನು ರಚಿಸಿರುವ 'ಶಿವಶರಣರ ಹಂತಿಯ ಹಾಡುಗಳು' ರಸಭರಿತವಾದ ಜಾನಪದ ಕಾವ್ಯವೆಂದೇ ಹೇಳಬಹುದು – ಎಂದು ಹೇಳಿರುವುದನ್ನು ಗಮನಿಸಬೇಕು.

'ಮಾದರ ಚೆನ್ನಯ್ಯ' ಎಂಬ ಹಂತಿಯ ಹಾಡು ಇತ್ತೀಚಿನ ಕಾಲದಲ್ಲಿದ್ದ ಸಾವಳಿಗಯ್ಯ ಎಂಬುವರು ರಚಿಸಿದ್ದೆಂಬುದನ್ನು ಗಮನಿಸದೆ (ಅಥವಾ ಮರೆತು?) ಡಾ. ಎಂ.ಚಿ.ಮೂ. ಅವರು ಇಂಥ ಹಾಡನ್ನು 'ಬಹುಮುಖ್ಯ' ಆಧಾರವೆಂದು ತೆಗೆದುಕೊಂಡು, ಚೆನ್ನಯ್ಯ ಬಳ್ಳಿಗಾವಿಯವನು, ಕನ್ನಡ ನಾಡಿನಿಂದ ತಮಿಳುನಾಡಿನ ಕಾಂಚೀಪಟ್ಟಣಕ್ಕೆ ಹೋಗಿದ್ದವನು, ಇತ್ಯಾದಿಯಾಗಿ ಸಮರ್ಥಿಸಲು ಪ್ರಯತ್ನಿಸಿರುವುದು ಸುಸಂಗತವೆನಿಸುವುದಿಲ್ಲ.

ಇಬ್ಬರು ದಾಸಿಮಯ್ಯರಂತೆ ಇಬ್ಬರು ಚೆನ್ನಯ್ಯರು

ಇಲ್ಲಿ ಗಮನಿಸಬೇಕಾದ ಇನ್ನೊಂದು ವಿಚಾರವಿದೆ. ಕನ್ನಡ ನಾಡಿನ ಧಾರ್ಮಿಕ ಇತಿಹಾಸದಲ್ಲಿ ಬರುವ ದೇವರ ದಾಸಿಮಯ್ಯ ಜೇಡರ ದಾಸಿಮಯ್ಯ ಈ ಎರಡು ಹೆಸರಿನವರೂ ಒಬ್ಬರೇ ವ್ಯಕ್ತಿ ಎಂದು ಹೇಗೆ ಭಾವಿಸುತ್ತ ಬರಲಾಯಿತೋ ಹಾಗೆಯೇ ಮಾದಾರ ಚೆನ್ನಯ್ಯ ಎಂಬುವರು ಇಬ್ಬರು ಎಂಬುದು ಕಾಲಗರ್ಭದಲ್ಲಿ ಮಸಕಾಗಿಹೋಗಿ ಆ ಹೆಸರಿನವರು ಒಬ್ಬರೇ ಎಂಬಂತೆ ಭಾವಿಸುತ್ತ ಬರಲಾಗಿದೆ. ಈ ಬಗ್ಗೆ ಇಲ್ಲಿ ಕೆಲವು ಮಾತುಗಳನ್ನು ಹೇಳಬೇಕೆನಿಸುತ್ತದೆ: ಜಿನಭಕ್ತಳಾಗಿದ್ದ ಚಾಲುಕ್ಯ ವಂಶದ ಜಯಸಿಂಹನ (೧೦೧೫–೧೦೪೪) ರಾಣಿ ಸುಗ್ಗಲೆಯನ್ನು ಶಿವಭಕ್ತಳನ್ನಾಗಿ ಮಾಡಿದ ಗುರು ದೇವರ ದಾಸಿಮಯ್ಯ. ಅವನು ಇದ್ದದ್ದು ೧೧ನೆಯ ಶತಮಾನದ ಪೂರ್ವಾರ್ಧದಲ್ಲಿ. ಏಕೆಂದರೆ ಅವನ ಶಿಷ್ಯೆಯಾಗಿದ್ದ ಸುಗ್ಗಲೆ ೧೦೨೯ರಲ್ಲಿ ಇದ್ದಳೆಂಬುದು ಅದೇ ವರ್ಷದ **ದೇವೂರು ಶಾಸನ**ದಿಂದ ಸ್ಪಷ್ಟವಾಗಿದೆ. ಈ ದೇವರ ದಾಸಿಮಯ್ಯನನ್ನು ವಚನಕಾರ ಎಂದು ತಿಳಿಯಲಾದದ್ದು ಕನ್ನಡ ಸಾಹಿತ್ಯ ಚರಿತ್ರೆಯ ಒಂದು ವಿಪರ್ಯಾಸ. ವಚನಕಾರನಾಗಿದ್ದವನು ಜೇಡರ ದಾಸಿಮಯ್ಯ ಮಾತ್ರ. ಬಸವಣ್ಣ ಮುಂತಾದ ಶರಣರು ತಮ್ಮ ವಚನಗಳಲ್ಲಿ ಇವನನ್ನು 'ಜೇಡರ' ಎಂಬ ವಿಶೇಷಣ ಸಹಿತವಾಗಿಯೆ ಸ್ಮರಿಸಿದ್ದಾರೆ. ಇವನನ್ನು ಹೆಸರಿಸುವ ತುಂಬ ಹಳೆಯದಾದ **ಗೊಬ್ಬೂರು ಶಾಸನ** ೧೧೪೮ರದ್ದು. ಆದ್ದರಿಂದ ಅವನು ಇದ್ದದ್ದು ಕಲ್ಯಾಣ ಚಾಳುಕ್ಯ ಚಕ್ರವರ್ತಿ ೩ನೆಯ ತೈಲಪ (೧೧೪೯–೧೧೬೨) ಮತ್ತು ಕಲಚೂರಿ ಬಿಜ್ಜಳ (೧೧೫೬–೧೧೬೮) ಇವರು ಇದ್ದ ಕಾಲದಲ್ಲಿ. ಅಂದರೆ ದೇವರ ದಾಸಿಮಯ್ಯನ ಅನಂತರದಲ್ಲಿ ಸುಮಾರು ೧೦೦ ವರ್ಷಗಳ ತರುವಾಯದಲ್ಲಿ ಬಂದವನು ಜೇಡರ ದಾಸಿಮಯ್ಯ. ಹೆಸರಿನ ಸಾದೃಶ್ಯದಿಂದ ಈವರೆಗೆ ಇವರಿಬ್ಬರನ್ನೂ ಒಬ್ಬನೇ ಎಂದು ತಿಳಿಯುತ್ತ ಬರಲಾಗಿದೆ. ಶಾಸನಗಳಿಂದ ಈ ಸಂಗತಿ ಸ್ಪಷ್ಟವಾಗಿದ್ದರೂ ಇನ್ನೂ ಅನೇಕರಲ್ಲಿ ಇದನ್ನು ಒಪ್ಪಿಕೊಳ್ಳುವ ಮನಸ್ಸಿಲ್ಲದೆ ದ್ವಂದ್ವದಲ್ಲಿರುವುದು ಆಶ್ಚರ್ಯಕರವಾಗಿದೆ.

ತಮಿಳರ ಪಾಲಿಗೆ ಆ ವೃತ್ತಾಂತ ನಡೆದಿರಲಿ ನಡೆಯದಿರಲಿ, ಕನ್ನಡದ ಶರಣರು ಮತ್ತು ಕವಿಗಳು ಮಾತ್ರ ಆ ಪ್ರಸಂಗವನ್ನು ನಂಬಿದ್ದಾರೆ; ಅವರನ್ನು ಮಹಾಭಕ್ತರೆಂದೇ ನೆನೆದಿದ್ದಾರೆ, ಗೌರವಿಸಿದ್ದಾರೆ. ಜೊತೆಗೆ ಕನ್ನಡದಲ್ಲಿ ವಚನಗಳನ್ನು ರಚಿಸಿದ ಮಾದಾರ ಚೆನ್ನಯ್ಯ ಎಂಬ ಹೆಸರಿನ ಒಬ್ಬ ಹಿರಿಯ ಶರಣ ಬಸವಣ್ಣನವರ ಕಾಲದಲ್ಲಿ ಬಂದದ್ದು ಬಹುಹಿಂದೆ ಕರಿಕಾಲಚೋಳ ರಾಜನ ಕಾಲದಲ್ಲಿ ತಮಿಳು ನಾಡಲ್ಲಿ ಅದೇ ಹೆಸರಿನವನೊಬ್ಬನಿದ್ದ ಎಂದು ಕನ್ನಡಿಗರ ಮನಸ್ಸಿನಲ್ಲಿ ನೆಲೆಗೊಂಡಿದ್ದ ಆ ವೃತ್ತಾಂತ ಹೆಚ್ಚು ಪ್ರಾಚುರ್ಯ ಪಡೆಯಲು ಸ್ಫೂರ್ತಿಯಾಯಿತೆಂದು ಕಾಣುತ್ತದೆ. ಹೀಗಾಗಿ ಬಸವಣ್ಣ ತಮಿಳುನಾಡಿನ ಮಾದಾರ ಚೆನ್ನಯ್ಯನನ್ನೇ ಬಹುತೇಕ ಕಡೆಯಲ್ಲಿ ಪ್ರಸ್ತಾಪಿಸಿದರೂ, ಒಂದೊಂದು ಕಡೆ, ತನ್ನ ಹಿರಿಯ ಸಮಕಾಲೀನರಾದ ಜೇಡರ ದಾಸಿಮಯ್ಯ ಡೋಹರ ಕಕ್ಕಯ್ಯರ ಜೊತೆ, ತನ್ನ ಇನ್ನೊಬ್ಬ ಹಿರಿಯ ಸಮಕಾಲೀನನಾದ ಮಾದಾರ ಚೆನ್ನಯ್ಯನನ್ನೂ ಸೇರಿಸಿ ಪ್ರಸ್ತಾಪಿಸಿರುವಂತೆ ಕಾಣುತ್ತದೆ. ಶಿವನಿಗೆ ಅಂಬಲಿಯನ್ನು ಅರ್ಪಿಸುವ ನೇಮದ, ಹಾಗೆ ಶಿವನಿಗೆ ಅಂಬಲಿಯನ್ನೇ ಅರ್ಪಿಸಿದ, ಚೋಳರಾಜನ ಕುದುರೆಗೆ ಹುಲ್ಲು ತಂದು ಹಾಕುತ್ತಿದ್ದ – ವಿವರದೊಂದಿಗೆ ಪ್ರಸ್ತಾಪಗೊಳ್ಳುವ ಚೆನ್ನಯ್ಯ ತಮಿಳುನಾಡಿನ ಚೆನ್ನಯ್ಯ ಎಂಬುದನ್ನು ಗಮನಿಸಬೇಕು. ಹೆಸರಿನ ಸಾದೃಶ್ಯ ತಮಿಳುನಾಡಿನಲ್ಲಿದ್ದ ಚೆನ್ನಯ್ಯ ಮತ್ತು ವಚನಕಾರನಾದ ಕನ್ನಡನಾಡಿನ ಚೆನ್ನಯ್ಯ ಒಬ್ಬನೇ ಎಂದು ತಿಳಿಯಲು ಕಾರಣವಾಗಿರಬೇಕು. ಆದರೆ ತಮಿಳುನಾಡಿನ **ಶಿವಭಕ್ತ** ಮಾದಾರ ಚೆನ್ನಯ್ಯನೇ ಬೇರೆ, ಕನ್ನಡನಾಡಿನ **ವಚನಕಾರ** ಮಾದಾರ ಚೆನ್ನಯ್ಯನೇ ಬೇರೆ; **ಇಬ್ಬರ ನಡುವೆ ಸುಮಾರು ೧೦೦೦ ವರ್ಷಗಳ ಕಾಲದ ಅಂತರವಿದೆ** – ಎಂಬ ವಾಸ್ತವವನ್ನು, ಅದೆಷ್ಟೇ ಅಪಥ್ಯವಿರಲಿ, ನಾವಿಂದು ಮನಗಾಣಬೇಕಾಗಿದೆ, ಮನತೆರೆದು ಸ್ವೀಕರಿಸಬೇಕಾಗಿದೆ.

ಆಧಾರಸೂಚಿ

೧. ವೀರಶೈವದ ಉಗಮ ಮತ್ತು ಪ್ರಗತಿ, ಟಿ.ಎಸ್.ಮಲ್ಲಪ್ಪ, ರಾವ್ ಬಹಾದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಧರ್ಮಸಂಸ್ಥೆ, ಬೆಂಗಳೂರು, ೧೯೬೯.

೨. ಸಂಕೀರ್ಣ ವಚನ ಸಂಪುಟ–೧, ಸಂ: ಡಾ.ಎಂ.ಎಂ.ಕಲಬುರ್ಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, ಪ್ರಥಮ ಮುದ್ರಣ ೧೯೯೩.

೩. ಅಮರಗಣಾಧೀಶ್ವರರ ಚರಿತ್ರೆಗಳು, ಫ.ಗು.ಹಳಕಟ್ಟಿ.

೪. ಶರಣಚರಿತಮಾನಸಂ, ಸಂ: ಎಚ್.ದೇವೀರಪ್ಪ, ಶ್ರೀ ಗೌರೀಶಂಕರ ಬುಕ್ ಡಿಪೋ, ದೇವರಾಜ ಮಾರ್ಕೆಟ್, ಮೈಸೂರು, ೧೯೬೮.

೫. ಶರಣ ಚರಿತಾಮೃತ, ಸಿದ್ದಯ್ಯ ಪುರಾಣಿಕ, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು, ೧೯೬೪.

೬ ಪೆರಿಯಪುರಾಣ, ಅನು.ಎಲ್.ಗುಂಡಪ್ಪ, ಬೆಂಗಳೂರು ವಿವಿ., ಬೆಂಗಳೂರು, ೧೯೭೪.

೭. ತಿರುತ್ತೊಂಡತ್ತೊಗ್ಯೆ, ಅನು. ಚ.ಸುಂದರೇಶನ್.

೮. ಜೇಡರ ದಾಸಿಮಯ್ಯನ ವಚನಗಳು, ಸಂ.ಎಚ್.ದೇವೀರಪ್ಪ, ಆರ್.ರಾಚಪ್ಪ, ತರಳಬಾಳು ಪ್ರಕಾಶನ, ಸಿರಿಗೆರೆ, ೧೯೭೪.

೯. ಸಿದ್ಧರಾಮೇಶ್ವರನ ವಚನಗಳು, ಸಂ.ಡಾ.ಎಸ್.ವಿದ್ಯಾಶಂಕರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩.

೧೦. ಚೆನ್ನಬಸವ ಪುರಾಣ, ೨ನೆಯ ಸಂಪುಟ, ಸಂ.ಎಂ.ಚಂದ್ರಶೇಖರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೯.

೧೧. ಸಂಶೋಧನ ತರಂಗ (ಭಾಗ ೧), ಡಾ.ಎಂ.ಚಿದಾನಂದಮೂರ್ತಿ, ಸರಸ ಸಾಹಿತ್ಯ ಪ್ರಕಾಶನ, ಮೈಸೂರು,

೧೨. ವಚನ ಸಾಹಿತ್ಯ, ಡಾ.ಎಂ.ಚಿದಾನಂದಮೂರ್ತಿ, ಬೆಂವಿವಿ, ಬೆಂಗಳೂರು.

೧೩. 'ವಿಜಯವಾಣಿ' ಕನ್ನಡ ದಿನಪತ್ರಿಕೆ, ದಿ.೧೯-೦೪-೨೦೧೪, ಡಾ.ಚಿಮೂ ಅವರ ಲೇಖನ.

೧೪. 'ವಿಜಯವಾಣಿ' ಕನ್ನಡ ದಿನಪತ್ರಿಕೆ, ದಿ.೨೫-೦೪-೨೦೧೪, ಡಾ.ಎಸ್.ವಿದ್ಯಾಶಂಕರ್ ಅವರ ಲೇಖನ.

೧೫. 'ವಿಜಯವಾಣಿ' ಕನ್ನಡ ದಿನಪತ್ರಿಕೆ, ದಿ.೨೯-೦೪-೨೦೧೪, ಡಾ.ಚಿಮೂ ಅವರ ಲೇಖನ.

೧೬. ಶಿವಶರಣಕಥಾರತ್ನಕೋಶ, ತ.ಸು.ಶಾಮರಾಯ, ತ.ವೆಂ.ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೬೭.

೧೭. ಲಿಂಗಾಯತ ಧರ್ಮಸ್ಥಾಪಕರಾರು?, ಬಿ.ಸಿ.ಜವಳಿ, ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಧಾರವಾಡ, ೧೯೭೩.

೧೮. ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ, ಡಾ.ಎಂ.ಚಿದಾನಂದಮೂರ್ತಿ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೫.

೧೯. ಕನ್ನಡ ಜಾನಪದ ಗೀತಗಳು, ಡಾ.ಬಿ.ಎಸ್.ಗದ್ದಗಿಮಠ, ಕರ್ನಾಟಕ ವಿಶ್ವವಿದ್ಯಾಲಯ, ೨ನೇ ಮುದ್ರಣ. ೧೯೬೯.

೨೦. ಆಂಡಾಳ್ ಮಹದೇವಿ ಮೀರ, ಡಾ.ಎಸ್.ವಿನೋದಾಬಾಯಿ, ಉಷಾ ಸಾಹಿತ್ಯಮಾಲೆ, ಮೈಸೂರು, ೧೯೯೯.

೨೧. ಮಾರ್ಗ-ಸಂಪುಟ ೨, ಡಾ.ಎಂ.ಎಂ.ಕಲಬುರ್ಗಿ, ನರೇಶ್ ಅಂಡ್ ಕಂಪನಿ, ಬೆಂಗಳೂರು, ೧ನೆಯ ಮುದ್ರಣ, ೧೯೯೮.

೨೨. Sri Basavesvara – Eighth Centenary Commemoration Volume, Chief Editor: S.S.Wodeyar, Government of Mysore, Bangalore, 1967.

೨೩. The Cholas, K.A.NeelakantaSastri, 1955.

೨೪. Origin and Early History of Saivism in South India, C.V.Narayana Ayyar.

೨೫. ಡಾ.ಎಸ್.ವಿದ್ಯಾಶಂಕರ್, ವಚನಾನುಶೀಲನ, ಸ್ನೇಹ ಪ್ರಕಾಶನ, ಬೆಂಗಳೂರು, ೧೯೮೯.

೨೬. ತಮಿಳು ಕಾವ್ಯಗಳಲ್ಲಿ ವೀರಶೈವ, ಡಾ.ಪ್ರಕಾಶ್ ಹಲಗೇರಿ, ಅಕ್ಷಯ ಪ್ರಕಾಶನ, ಚಿತ್ರದುರ್ಗ, ೨೦೧೦.

೨೭. ಚಿತ್ರದುರ್ಗ ಪಾಳೆಯಗಾರರ ದಾಖಲೆಗಳು, ಸಂ. ಡಾ.ಬಿ.ರಾಜಶೇಖರಪ್ಪ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು, ೨೦೦೭.

೧೧೧

ವಿಜಯನಗರ ಕಾಲದ ಕ್ರೀಡೆ ಮತ್ತು ವಿನೋದಾವಳಿ

ಮಂಜಣ್ಣ ಪಿ.ಬಿ.*

ಕರ್ನಾಟಕದ ಇತಿಹಾಸ ಪುಟಗಳನ್ನು ತಿರುವಿ ಹಾಕಿದರೆ ವಿಜಯನಗರಕ್ಕೆ ಸ್ವಾಭಾವಿಕವಾಗಿಯೇ ಹೆಚ್ಚಿನ ಪ್ರಾಮುಖ್ಯತೆ ಇರುವುದು ಕಂಡುಬರುತ್ತದೆ. ಕ್ರಿ.ಶ. ೧೩೩೬ ರಿಂದ ೧೫೬೫ರ ವರೆಗೆ ಸಮರ್ಥವಾಗಿ ಆಳ್ವಿಕೆ ಮಾಡಿದ ವಿಜಯನಗರ ಕೇವಲ ಸಾಮ್ರಾಜ್ಯ ವಿಸ್ತರಣೆ, ವ್ಯಾಪಾರ, ದೇವಾಲಯ, ಸ್ಮಾರಕಗಳ ನಿರ್ಮಾಣಗಳಲ್ಲಿ ತೊಡಗಿಕೊಳ್ಳದೆ ಸಾಂಸ್ಕೃತಿಕವಾಗಿ ಅನೇಕ ರೀತಿಯ ಧಾರ್ಮಿಕ, ಕ್ರೀಡೆ ಮತ್ತು ಮನರಂಜನಾತ್ಮಕ ಕಾರ್ಯಗಳಲ್ಲಿ ತೊಡಗಿಕೊಳ್ಳುತ್ತಿದ್ದರು, ಅರಸರಾದಿಯಾಗಿ ಸಾಮಂತರು, ಮಾಂಡಲಿಕರು, ರಾಣಿಯರು, ಪ್ರಜೆಗಳು ವರ್ಷದಲ್ಲಿ ವಿವಿಧ ಚಟುವಟಿಕೆಗಳಲ್ಲಿ ತೊಡಗಿ ವರ್ಷದ ಮಧ್ಯೆ ಹಬ್ಬ, ಉತ್ಸವ ಮತ್ತು ಜಾತ್ರೆಗಳಂಥ ಕಾರ್ಯಕ್ರಮ ಗಳಿಂದ ಮನರಂಜನೆಯನ್ನು ಪಡೆಯುತ್ತಿದ್ದರು.

ವಿಜಯನಗರವು ಉತ್ಸವ ಮತ್ತು ಸಮಾರಂಭ ವೈಭವಗಳ ಯುಗವೆಂದರೆ ತಪ್ಪಲ್ಲ. ಈ ನಿಟ್ಟಿನಲ್ಲಿಯೇ ವಿಜಯನಗರ ಕಾಲದಲ್ಲಿ ಅನೇಕ ದೇವಾಲಯ, ಸ್ಮಾರಕಗಳು ನಿರ್ಮಾಣವಾದವು. ಅಂದು ಸಾಂಸ್ಕೃತಿಕವಾಗಿ, ಸಾಮಾಜಿಕ ವಾಗಿ ದಿನನಿತ್ಯ ನಡೆಯುತ್ತಿದ್ದ ಚಟುವಟಿಕೆಗಳನ್ನು ಶಿಲ್ಪಗಳಲ್ಲಿ ಖಂಡರಿಸಿದ್ದಾರೆ. ಹಂಪಿಯ ರಾಜಪ್ರಾಂಗಣದಲ್ಲಿ ಪಶ್ಚಿಮಾಭಿಮುಖವಾಗಿರುವ ಮಹಾನವಮಿ ದಿಬ್ಬವು ಶಿಲ್ಪಕಲೆಯ ದೃಷ್ಠಿಯಿಂದ ಮಹತ್ವದ್ದೆನಿಸಿದೆ. ಸ್ತ್ರೀಯರು ವಿವಿಧ ಭಂಗಿಗಳಲ್ಲಿ ಭರತನಾಟ್ಯ, ಕೋಲಾಟದಲ್ಲಿ ಮಗ್ನವಾಗಿರುವ, ದೊಂಬರಾಟ, ಸಂಗೀತ, ನೃತ್ಯ ಇತ್ಯಾಧಿ ಉಬ್ಬುಶಿಲ್ಪಗಳು ಇದರ ಸುತ್ತಲೂ ಕಾಣಸಿಗುತ್ತವೆ. ಶಿವರಾತ್ರಿ ಮತ್ತು ದಸರಾ ಹಬ್ಬಗಳಲ್ಲಿ ಹೆಚ್ಚು ಕಾರ್ಯಕ್ರಮಗಳು ಜರುಗುತ್ತಿದ್ದರಿಂದ ಇದಕ್ಕೆ ದಸರಾ ದಿಬ್ಬ ಅಥವಾ ಮಹಾನವಮಿ ದಿಬ್ಬ ಎಂದು ಕರೆದಿರುವರು.[೧] ಇದರ ಮೊದಲ ಸ್ತರದ ಎಡ ಮತ್ತು ಬಲ ಭಾಗದಲ್ಲಿ ವಾದ್ಯ ನುಡಿಸುತ್ತಿರುವ, ನೃತ್ಯ ಮಾಡುತ್ತಿರುವ ಸ್ತ್ರೀಯರ ಶಿಲ್ಪಗಳಿವೆ. ಅಂದು ಮಹಾನವಮಿ ಹಬ್ಬದ ಸಂದರ್ಭದಲ್ಲಿ ಕುಸ್ತಿಯಂತಹ ಪಾರಂಪರಿಕ ಕ್ರೀಡೆ ಪ್ರಸಿದ್ಧಿಯನ್ನು ಪಡೆದಿತ್ತು. ಅದಕ್ಕೆ ಈ ದಿಬ್ಬದಲ್ಲಿ ಕುಸ್ತಿಯ ಶಿಲ್ಪಗಳಿವೆ. ದಿಬ್ಬದ ಒಂದು ಬದಿಯಲ್ಲಿ ಇಬ್ಬರು ಜಟ್ಟಿಗಳು ಲಂಗೋಟಿಯನ್ನು ತೊಟ್ಟು ಕೈ, ಕೈ ಮಿಲಾಯಿಸುವಂತಿದೆ. ಮತ್ತೊಂದು ಶಿಲ್ಪದಲ್ಲಿ ಕುಸ್ತಿಯಾಡುತ್ತಿರುವ, ಉಳಿದ ಜಟ್ಟಿಗಳು ಕಸರತ್ತನ್ನು ಮಾಡುತ್ತಾ ನಿಂತಿರವ ಶಿಲ್ಪವಿದೆ.

ಅಂದು ಕುಸ್ತಿಯು ಯಾವ ರೀತಿ ನಡೆಯುತ್ತಿತ್ತು ಎಂದು ಪೋರ್ಚಗೀಸ್ ಪ್ರವಾಸಿ ಡೊಮಿಂಗೋ ಪಾಯೇಸ್ ಹೇಳುವಂತೆ 'ಇಬ್ಬರು ಕ್ರೀಡಾಪಟುಗಳಿದ್ದು ಅವರು ನಾಯಕ ಮತ್ತು ನ್ಯಾಯಾಧೀಶರನ್ನ ಹೊಂದಿರುತ್ತಿದ್ದರು. ಕ್ರೀಡಾಪಟು ಗಳನ್ನು ಯಾವುದೇ ರೀತಿಯ ಭೇದಭಾವ ಮಾಡದೆ ನ್ಯಾಯತೀರ್ಮಾನವನ್ನ ನೀಡುತ್ತಿದ್ದರು'.[೨] ಈ ರೀತಿಯ ಅನೇಕ ಶಿಲ್ಪಗಳು ವಿಜಯನಗರ ಕಾಲದ ದೇವಾಲಯ ಸ್ಮಾರಕ ಗಳಲ್ಲಿವೆ. ಇಂದಿನ ಕುಸ್ತಿಗಿಂತ ಅಂದಿನ ಕುಸ್ತಿಯು ಕ್ರೂರ ವಾಗಿತ್ತು ಎಂಬುದನ್ನು ಶಿಲ್ಪಗಳಲ್ಲಿನ ಮುರಿದ ಹಲ್ಲು, ಹೊರಬಂದ ಕಣ್ಣು, ಆಕಾರವಿಲ್ಲದ ಮುಖಗಳನ್ನು ನೋಡಿದರೆ ತಿಳಿಯುತ್ತದೆ.

ಅಂದು ಮಹಾನವಮಿ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿತ್ತು. ಇಟಲಿಯ ಪ್ರವಾಸಿ ನಿಕೋಲೊ-ದೆ-ಕೊಂತಿ ಮತ್ತು ಡೊಮಿಂಗೊ ಪಾಯೇಸ್ ಇದು ಒಂಬತ್ತು ದಿನಗಳ ಹಬ್ಬವಾಗಿತ್ತೆಂದು ಹೇಳಿದ್ದಾರೆ. ಪ್ರತಿದಿನ ವಿಶೇಷ ಪೂಜೆ, ಉತ್ಸವ, ಪ್ರದರ್ಶನಕಲೆ, ಸಭೆ ಸಮಾರಂಭಗಳು ನಡೆಯುತ್ತಿದ್ದುದರ ಉಲ್ಲೇಖಗಳಿವೆ.[೩]

ಅಬ್ದುಲ್ ರಜ್ಜಾಕ್ ಹೇಳಿರುವಂತೆ ಉತ್ಸವ ನಡೆವ ಸಂದರ್ಭದಲ್ಲಿ ನೃತ್ಯ ಹಾಗೂ ದೊಂಬರು ಆಡುವ ಕೆಲವು ಅದ್ಭುತವಾದ ಚತುರತೆಯ ಆಟಗಳ ಕುರಿತು ಹೇಳಿದ್ದಾನೆ. ಈ ರೀತಿಯ ಶಿಲ್ಪಗಳು ಪೂರ್ವಾಭಿಮುಖವಾಗಿರುವ ಚಂಡಿಕೇಶ್ವರ, ಅಚ್ಯುತ, ಆಂಧ್ರಪ್ರದೇಶದ ಗೋರಂಟ್ಲದ ಮಾಧವರಾಯ, ತಾಡಪತ್ರಿಯಲ್ಲಿನ ಬುಗ್ಗಾರಾಮಲಿಂಗೇಶ್ವರ ದೇವಾಲಯದಲ್ಲಿವೆ. ವಿಜಯನಗರ ಕಾಲದಲ್ಲಿ ದೊಂಬರು ತಮ್ಮ ಜೀವನೋಪಾಯಕ್ಕಾಗಿ ಊರೂರು ಅಲೆದು ವಿವಿಧ ಪ್ರದರ್ಶನದಿಂದ ಜನಗಳಿಗೆ ಮನರಂಜನೆಯನ್ನು ನೀಡುತ್ತಿದ್ದರು. ಹಂಪಿಯ ಚಂಡಿಕೇಶ್ವರ ದೇವಾಲಯದ ಒಂದು ಕಂಬದಲ್ಲಿ ಸ್ತ್ರೀಯು ಹಿಂದಕ್ಕೆ ಬಾಗಿ ಕೆಳಗೆ ಇಟ್ಟಿರುವ

* ಪಿಎಚ್‌ಡಿ ಸಂಶೋಧನಾರ್ಥಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಸ್ತುವನ್ನು ಬಾಯಿಂದ ತೆಗೆಯುವಂತಿದೆ. ಸ್ತ್ರೀಯು ಎದೆ ಮತ್ತು ಸೊಂಟಭಾಗದಲ್ಲಿ ಮಾತ್ರ ಬಟ್ಟೆಯನ್ನು ಧರಿಸಿರುವಳು. ಅದೇ ರೀತಿ ಉತ್ತರಾಭಿಮುಖವಾಗಿರುವ ಅನಂತಶಯನ ಗುಡಿಯ ಒಂದು ಶಿಲ್ಪದಲ್ಲಿ ಗಡ್ಡದಾರಿಯಾದ ವ್ಯಕ್ತಿಯು ಎರಡೂ ಕೈಗಳಲ್ಲಿ ಚಾಟಿಯನ್ನಿಡಿದು ವಿವಿಧ ಪ್ರದರ್ಶನ ಕೊಡುವಂತಿದೆ. ಶಿಲ್ಪದಲ್ಲಿನ ವ್ಯಕ್ತಿ ತಲೆಗೆ ರುಮಾಲು ಮತ್ತು ಸೊಂಟಕ್ಕೆ ಬಟ್ಟೆ ಕಟ್ಟಿಕೊಂಡಿದ್ದಾನೆ.[೪]

ವಿಜಯನಗರ ಕಾಲದಲ್ಲಿ ನೃತ್ಯಕ್ಕೆ ದೊರೆಯುತ್ತಿದ್ದ ಮನ್ನಣೆ ದಕ್ಷಿಣ ಭಾರತದ ಇತಿಹಾಸದಲ್ಲಿ ಅಪೂರ್ವವಾಗಿದೆ.[೫] ಅಬ್ದುರ್ ರಜ್ಜಾಕ್‌ನು ನೃತ್ಯದ ಭಂಗಿಗಳಿಂದ ಮುಗ್ಧನಾಗಿ ಹೋಗಿದ್ದಾನೆ. ನೃತ್ಯಕಲಾ ವಿನ್ಯಾಸವು, ಸ್ತ್ರೀಯರ ಮಧುರ ಭಾವಭಂಗಿಗಳು, ಪಾದಗಳ ಗತಿಯಲ್ಲಿಯ ಮೋಹಕತೆಯು ಜನತೆಯ ಅರಿವನ್ನು ಅಳಿಸಿ ಮಂತ್ರಮುಗ್ಧರನ್ನಾಗಿ ಮಾಡುತ್ತಿತ್ತೆಂದು ಆತನು ಹೇಳುತ್ತಾನೆ. ಅರಮನೆಯಲ್ಲಿ ಒಂದು ನೃತ್ಯ ನಾಟಕ ಶಾಲೆಯಿತ್ತು. ಅಲ್ಲಿ ಗೋಡೆಗಳ ಮೇಲೆ ವಿವಿಧ ಭಂಗಿಗಳನ್ನು ಪ್ರದರ್ಶಿಸುವ ಚಿತ್ರಗಳಿದ್ದವು. ಅವುಗಳಿಂದ ರಾಣಿಯರು ನೃತ್ಯ ಕಲೆಯನ್ನು ಅಭ್ಯಾಸಿಸಬಹುದಾಗಿತ್ತು ಎಂದು ಡೊಮಿಂಗೋ ಪಾಯೇಸ್ ಹೇಳುತ್ತಾನೆ. ಅರಮನೆಯಲ್ಲಿ ನಾಟಕಶಾಲೆ ಇತ್ತೆಂಬ ಮಾತಿಗೆ ಶಾಸನಗಳಿಂದಲೂ ಪುಷ್ಟಿ ದೊರೆಯುತ್ತದೆ. ಪಟ್ಟದ ನಾಟಕ ಶಾಲೆಯು ಶೃಂಗಾರಮ್ಮನು ಶ್ರೀ ಸಾಗರದ ಅಗ್ರಹಾರ ಸ್ಥಾಪಿಸಿದಳೆಂದು ಒಂದು ಶಾಸನದಿಂದ ತಿಳಿಯುತ್ತದೆ. ಇದರಲ್ಲಿ ಅರಮನೆಯ ನಾಟಕ ಶಾಲೆ (ಪಟ್ಟದ ನಾಟಕ ಶಾಲೆ)ಉಲ್ಲೇಖವಿದೆ.[೬]

ನೃತ್ಯದ ಸ್ತ್ರೀಯರಿಗೆ ದೊರೆಯುವ ಮನ್ನಣೆಯಂತೂ ಬಹುಜನ ಪ್ರವಾಸಿಗರು ಮುಕ್ತಕಂಠದಿಂದ ಬಣ್ಣಿಸಿದ್ದಾರೆ. ದೇವಾಲಯದ ಭಿತ್ತಿ, ಕಂಬಗಳಲ್ಲಿ ನೃತ್ಯದ ಅನೇಕ ಶಿಲ್ಪಗಳಿವೆ. ಕೋಲಾಟವಾಡುತ್ತಾ ನೃತ್ಯ ಮಾಡುತ್ತಿರುವ, ಭರತನಾಟ್ಯವಾಡುತ್ತಿರುವ ವಾದ್ಯಗಳನ್ನಿಡಿದು ನುಡಿಸುತ್ತಿರುವ ಶಿಲ್ಪಗಳಿವೆ. ಕೋಲಾಟದ ಶಿಲ್ಪಗಳಲ್ಲಿ ನೃತ್ಯಗಾರ್ತಿಯರು ಮೊಳಕಾಲವರೆಗೆ ಲಂಗವನ್ನು ತೊಟ್ಟು ಕೈಯಲ್ಲಿ ದುಂಡನೆಯ ಕೋಲು ಇತರೆ ವಸ್ತುಗಳನ್ನಿಡಿದು ನೃತ್ಯ ಮಾಡುವಂತಿದೆ. ಕೊರಳಹಾರ, ಕೈಬಳೆ, ತೋಳಬಂಧಿ, ಸೊಂಟಪಟ್ಟಿ ಕಾಲುಕಡಗ ವಿವಿಧ ಆಭರಣಗಳನ್ನು ಧರಿಸಿರವರು. ಹಜಾರ ರಾಮಚಂದ್ರ ದೇವಾಲಯದ ಎರಡನೆಯ ಕಂಬದಲ್ಲಿ ತಮಟೆವಾದ್ಯ ನುಡಿಸುತ್ತಿರುವ ಶಿಲ್ಪವಿದೆ. ತಮಟೆಯನ್ನು ಎಡಭುಜದ ಮೇಲಿಟ್ಟುಕೊಂಡು ಬಲಗೈಯಿಂದ ನುಡಿಸುತ್ತಾ ನೃತ್ಯ ಮಾಡುವಂತಿದೆ. ಈ ರೀತಿಯ ಅನೇಕ ಶಿಲ್ಪಗಳು ವಿಜಯನಗರ ಕಾಲದ ದೇವಾಲಯದ ಭಿತ್ತಿ, ಕಂಬಗಳ ಮೇಲೆ ಇವೆ. ಈ ದೇವಾಲಯದ ಹೊರ ಭಿತ್ತಿಯಲ್ಲಿ ಓಕುಳಿಯಾಡುತ್ತಿರುವ, ಪ್ರವೇಶದಲ್ಲಿ ಕೋಲಾಟದ ಶಿಲ್ಪಗಳಿವೆ. ಇದರಿಂದ ವಿಜಯನಗರ ಕಾಲದಲ್ಲಿ ನೃತ್ಯ ಎಷ್ಟು ಪ್ರಭಾವಿ ಮನರಂಜಕ ಮಾಧ್ಯಮವಾಗಿತ್ತು ಯಾರೆಲ್ಲಾ ಭಾಗವಹಿಸುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ವಿಜಯನಗರ ಕಾಲದಲ್ಲಿ ದೀಪಾವಳಿ ಹಬ್ಬದ ಬಗ್ಗೆ ಶಾಸನಗಳು ಮತ್ತು ವಿದೇಶಿಯ ಬರಹ, ಸಾಹಿತ್ಯಿಕ ಕೃತಿಗಳಲ್ಲಿ ಉಲ್ಲೇಖಗಳು ದೊರೆಯುತ್ತವೆ. ಅಂದು ದೀಪಾವಳಿಯನ್ನು ಅಶ್ವಯುಜ ಬಹುಳ, ಚತುರ್ದಶಿ, ಅಮವಾಸ್ಯೆ ಕಾರ್ತಿಕ, ಶುದ್ಧಪಾಡ್ಯ ಎಂದು ಐದು ದಿನಗಳವರೆಗೆ ಆಚರಿಸುತ್ತಿದ್ದರು[೭]. ವಿದೇಶಿ ಪ್ರವಾಸಿಗನಾದ ನಿಕೊಲೋ-ದೆ-ಕೊಂತಿಯು ವರ್ಷದಲ್ಲಿ ನಾಲ್ಕು ಸಲ ವಿಜಯನಗರದಲ್ಲಿ ವಿಶೇಷ ವೈಭವದ ಉತ್ಸವಗಳನ್ನು ಆಚರಿಸುತ್ತಾರೆ ಎಂದು ಹೇಳಿದ್ದಾನೆ. ಮೊದಲನೆಯದು ಯುಗಾದಿ, ಎರಡನೆಯದು ದೀಪಾವಳಿ, ಮೂರನೆಯದು ಮಹಾನವಮಿ, ನಾಲ್ಕನೆಯದು ಹೋಳಿ ಹಬ್ಬವಾಗಿದೆ, ದೀಪಾವಳಿಯು ಅಕ್ಟೋಬರ್ ತಿಂಗಳದಲ್ಲಿ ನಡೆಯುವುದು. ದೇವಾಲಯಗಳ ಒಳಗೆ ಮತ್ತು ಮಾಳಿಗೆಯ ಮೇಲೆ ಸೂಸಿಮಣ್ಣಿನ ಎಣ್ಣೆಯ ಅಸಂಖ್ಯಾ ದೀಪಗಳನ್ನು ಹಚ್ಚಿ ಅವುಗಳನ್ನು ಹಗಲು ರಾತ್ರಿ ಉರಿಸುತ್ತಾರೆ ಎಂದು ಹೇಳಿದ್ದಾನೆ.[೮] ದೀಪಗಳ ಬೆಳಕಿನಲ್ಲಿ ಮನರಂಜನಾತ್ಮಕ ಚಟುವಟಿಕೆಗಳಾದ ನೃತ್ಯ, ಸಂಗೀತ, ಹಾಡು, ಆಟಗಳಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರು. ಈ ಹಬ್ಬದ ಕುರಿತು ಅನೇಕ ಶಾಸನಗಳಲ್ಲಿ ಉಲ್ಲೇಕಿತವಾಗಿದೆ. ಪ್ರೌಢದೇವರಾಯನ ಕಾಲದಲ್ಲಿ ಬಾರಕೂರು ಪ್ರದೇಶವನ್ನು ಆಳುತ್ತಿದ್ದ ಗುರುವಪ್ಪ ಒಡೆಯರು ರಾಯನ ಅನುಮತಿಯಂತೆ ದೀಪಾವಳಿ ಹಬ್ಬವನ್ನು ಮೂರುದಿನ ಆಚರಿಸಲು ಒಪ್ಪಿಕೊಂಡು ಆತನು ಕೊಟ್ಟ ೨೦ ಗದ್ಯಾಣ ತೆಗೆದುಕೊಂಡು ಜೋಳಿಯ ಕೈಕರ್ಯ ಕಲ್ಲಂಗೇರಿಯ ವಿನಾಯಕ ದೇವರಿಗೆ ದತ್ತಿಯನ್ನು ನೀಡಿ ಮತ್ತು ಆ ಊರಿನವರ ಅನುಮತಿಯನ್ನು ಪಡೆದು ವಿಶೇಷ ವೈಭವದಿಂದ ಮೂರು ದಿನ ದೀಪಾವಳಿ ಹಬ್ಬದ ದೀಪೋತ್ಸವವನ್ನು ನಡೆಸಿದ ವಿವರವಿದೆ. ಈ ಹಬ್ಬದಂದು ಪಗಡೆಯನ್ನು ಆಡುವುದು ಇನ್ನೊಂದು ವಿಶೇಷ. ಇದನ್ನು ಆಡುವವರಿಗೆ ಪುಣ್ಯ ಲಭಿಸುವುದೆಂದು ಜನರ ನಂಬಿಕೆ. ಇದು ವಿಜಯನಗರ ಕಾಲದಲ್ಲೂ ಮುಂದುವರೆದಿತ್ತು. ಹಂಪಿಯ ಕೆಲವು ಅವಶೇಷಗಳ ಮೇಲೆ ಕಾಣುವ ವಿವಿಧ ರೀತಿಯ ಪಗಡೆ ಆಟದ ಚಿತ್ರಗಳಿವೆ. ಅಲ್ಲದೆ ಬರಹಗಳಲ್ಲಿ ಕೃಷ್ಣದೇವರಾಯನ ಮಗಳು ಮೋಹನಾಂಗಿಯು ಈ ಆಟದಲ್ಲಿ ಅತಿ ಪ್ರಸಿದ್ಧಳಾಗಿದ್ದಳು ಎಂಬುದು ಗೊತ್ತಾಗುತ್ತದೆ.[೯] ಕೃಷ್ಣದೇವರಾಯನು ನಂದಿ ತಿಮ್ಮಯ್ಯನೆಂಬ ಕವಿಗೆ ಪಗಡೆ ಆಟದ ಪ್ರಾವೀಣ್ಯಕ್ಕಾಗಿ ಒಂದು ಅಗ್ರಹಾರವನ್ನು ಉಂಬಳಿಯಾಗಿ ಕೊಟ್ಟನೆಂದು ಶಾಸನ ಒಂದರಿಂದ ತಿಳಿದುಬರುತ್ತದೆ.

ಭಾರತೀಯರು ಸೂರ್ಯನನ್ನು ಸೂರ್ಯ ನಾರಾಯಣನೆಂದೂ ಜಗತ್‌ಉದ್ಧಾರಕನೆಂದೂ ಭಾವಿಸಿದ್ದಾರೆ. ಮಕರ ಸಂಕ್ರಾಂತಿ ಅಥವಾ ಮಕರ ಸಂಕ್ರಮಣವು ಸೂರ್ಯನ ಪಥ ಬದಲಾವಣೆಗೆ ಸಂಬಂಧಿಸಿದ ಪರ್ವದಿನ ಸಂಕ್ರಾಂತಿ ಎಂದರೆ ಉಜ್ವಲವಾದ ಬೆಳಕು ಎಂದರ್ಥ. ಸೂರ್ಯನ ಭ್ರಮಣದಿಂದಾಗಿ ಆಗುವ ವ್ಯತ್ಯಾಸ ಕಾಲವನ್ನು ಸರಿಪಡಿಸಲು ೮೦ ವರ್ಷಕ್ಕೊಮ್ಮೆ ಸಂಕ್ರಾಂತಿಯನ್ನು ಒಂದು ದಿನ ಮುಂದೂಡಲಾಗುತ್ತದೆ.[೧೦] ಈ ಹಬ್ಬದ ಅಂಗವಾಗಿ ಕರ್ನಾಟಕ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ಎಳ್ಳು ಬೀರುವ ಸಂಪ್ರದಾಯವಿದೆ.[೧೧] ವಿಜಯನಗರ ಕಾಲದಲ್ಲಿ ಅರಸರು, ಸಾಮಂತರು, ಮಾಂಡಲಿಕರು ಮತ್ತು ಪ್ರಜೆಗಳು ಈ ಹಬ್ಬದಂದು ಭಕ್ತಿಯಿಂದ ತಮಗೆ ತಮ್ಮ ಸಂಬಂಧಿಕರಿಗೆ ಪುಣ್ಯವಾಗಲಿ ಎಂಬ ಉದ್ದೇಶದಿಂದ ಪವಿತ್ರವಾದ ಪುಣ್ಯಕ್ಷೇತ್ರಗಳಲ್ಲಿ ವಿಶೇಷ ಪೂಜೆ, ನೈವೇದ್ಯ, ಅಭಿಷೇಕವನ್ನು ಏರ್ಪಡಿಸಿ ದೇವಾಲಯಗಳಿಗೆ ದಾನ ದತ್ತಿ ನೀಡಿದ ವಿವರವನ್ನು ಶಾಸನೋಕ್ತವಾಗಿ ಉಲ್ಲೇಖಿಸಲಾಗಿದೆ. ಕ್ರಿ.ಶ. ೧೩೮೯ರಲ್ಲಿ ಎರಡನೆಯ ಹರಿಹರನು ಒಂದು ದೇವಾಲಯವನ್ನು ನಿರ್ಮಿಸಿ ಅದರಲ್ಲಿ ಶ್ರೀ ಮಂಜುನಾಥದೇವರ ಮೂರ್ತಿ ಪ್ರತಿಷ್ಠಾಪಿಸಿ ಬ್ರಹ್ಮಸ್ಪತಿ ವಾರದ ಮಕರ ಸಂಕ್ರಾಂತಿಯ ಉತ್ತರಾಯಣದ ಆರಂಭದ ಪುಣ್ಯಕಾಲದಲ್ಲಿ ಪ್ರತಿ ದಿನ ಹನ್ನೆರಡು ಜನ ಬ್ರಾಹಣರಿಗೆ ದಾನದತ್ತಿಯನ್ನು ಕೊಡುವಂತೆ ಅರಸನು ತನ್ನ ಅಧಿಕಾರಿಗಳಿಗೆ ಸೂಚನೆ ನೀಡಿದನು. ಆದರೆ ದಾನದ ವಿವರ ಮಂಜುನಾಥ ದೇವರ, ಸ್ಥಳದ ಉಲ್ಲೇಖವನ್ನು ಈ ಶಾಸನ ತಿಳಿಸಿರುವುದಿಲ್ಲ.[೧೨]

ಸಾಳುವ ವಂಶದ ಅರಸ ನರಸಣ್ಣ ನಾಯಕ ಶ್ರೀಕೃಷ್ಣದೇವರಾಯ, ಸದಾಶಿವರಾಯ ಮತ್ತು ಅಚ್ಯುತರಾಯರ ಕಾಲದಲ್ಲಿ ಮಕರ ಸಂಕ್ರಾಂತಿಯ ದಿನ ದಾನದತ್ತಿ ನೀಡಿದ ಅನೇಕ ಶಾಸನಗಳು ಇವೆ.

ವಿಜಯನಗರ ಕಾಲದಲ್ಲಿ ಪ್ರಸಿದ್ಧವಾದ ನವರಾತ್ರಿ ಉತ್ಸವದ ನಂತರ ಹೆಚ್ಚು ಮಹತ್ವ ಕೊಟ್ಟು ಆಚರಿಸಿದ ಹಬ್ಬಗಳು ಮಕರ ಸಂಕ್ರಾಂತಿ ಮತ್ತು ಶಿವರಾತ್ರಿ ಎಂದು ಶಾಸನಗಳ ಉಲ್ಲೇಖದಿಂದ ತಿಳಿಯುತ್ತದೆ.

ರಥಸಪ್ತಮಿ ಪ್ರಾಚೀನ ಕಾಲದಿಂದ ನಡೆದುಕೊಂಡು ಬಂದ ಹಬ್ಬವಾಗಿದೆ. ಪ್ರತಿ ವರ್ಷ ಜನೇವರಿ ತಿಂಗಳಲ್ಲಿ ಮಾಘ ಶುದ್ಧ ಸಪ್ತಮಿ ತಿಥಿಗೆ ರಥಸಪ್ತಮಿ ಎನ್ನುವರು. ಅಂದು ಸೂರ್ಯನ ಆರಾಧನೆ ಮಾಡುವರು, ವಿಜಯನಗರ ಕಾಲದ ಕೆಲವು ಶಾಸನಗಳು ರಥಸಪ್ತಮಿ ಆಚರಿಸಿದ್ದನ್ನು ಉಲ್ಲೇಖಿಸಿವೆ. ಈ ಪುಣ್ಯದಿನದಂದು ವಿಜೃಂಭಣೆಯಿಂದ ಸಂತೋಷವಾಗಿ ರಾಜ–ರಾಣಿಯರು, ಸಾಮಂತರು ಮತ್ತು ಪ್ರಜೆಗಳು ದಾನದತ್ತಿ ಕೊಡುತ್ತಿದ್ದರು. ಅರಸರು ಈ ಹಬ್ಬದಂದು ಗ್ರಾಮನಾಮಗಳನ್ನು ಬದಲಾಯಿಸಿ ಅವುಗಳನ್ನು ಬ್ರಾಹ್ಮಣರಿಗೆ ದತ್ತಿಯಾಗಿ ನೀಡುತ್ತಿದ್ದುದು ಅವುಗಳನ್ನು ನೀಡುತ್ತಿದ್ದುದು ಕಂಡುಬರುತ್ತದೆ. ಕ್ರಿ.ಶ. ೧೫೨೧ರ ಕೃಷ್ಣದೇವರಾಯನ ಶಾಸನ ರಥಸಪ್ತಮಿಯ ದಿನ 'ಕಲಪೂರ' ಎಂಬ ಹಳ್ಳಿಯನ್ನು 'ಕೃಷ್ಣಾಪುರ' ಎಂದು ಬದಲಾಯಿಸಿ ಅನೇಕ ಬ್ರಾಹ್ಮಣರಿಗೆ ದಾನದತ್ತಿಗಳನ್ನು ಕೊಟ್ಟನು[೧೩]. ಅರಸರಲ್ಲದೆ ಮಾಂಡಲೀಕರು ದಾನದತ್ತಿ ಕೊಡುತ್ತಿದ್ದರು. ಶ್ರೀಕೃಷ್ಣದೇವರಾಯನ ಮಂಡಲೇಶ್ವರನಾದ ಚಿಕ್ಕತಿಮ್ಮಯ್ಯ ಮಹಾದೇವ ಅವರ ಮಗ ತಿಮ್ಮರಾಜ ಇವರು ಸಂಡೂರು ಸೀಮೆಯೊಳಗೆ ಬರುವ ತಾಳೂರು ಗ್ರಾಮದಲ್ಲಿ ಇರುವ ಶ್ರೀ ರಾಮಚಂದ್ರ ದೇವಸ್ಥಾನದಲ್ಲಿ ಉತ್ಸವ ಮಂಟಪ ಮತ್ತು ಒಂದು ಕೆರೆಯನ್ನು ಕಟ್ಟಿಸಿ ತಮ್ಮ ತಂದೆ–ತಾಯಿಗಳಿಗೆ ಪುಣ್ಯ ದೊರೆಯಲಿ ಎಂದು ರಥಸಪ್ತಮಿಯ ಪುಣ್ಯಕಾಲದಲ್ಲಿ ಶ್ರೀ ರಾಮಚಂದ್ರ ದೇವರಿಗೆ ದಾನ ಮಾಡಿದರು.[೧೪]

ಕ್ರಿ.ಶ. ೧೫೩೮ರಲ್ಲಿ ತಿರುಪತಿಯ ಮತ್ತು ತಿರುಮಲ ದೇವಾಲಯದ ಭಕ್ತಾದಿಗಳು ೭೦೦ ವರಹ ಪಣಮ್ ಹಣವನ್ನು ರಥಸಪ್ತಮಿ ಆಚರಿಸಲಿಕ್ಕೆ ಖರ್ಚು ಮಾಡಿದರು. ಅಲ್ಲದೆ ಈ ವೇಳೆಯಲ್ಲಿ ಸೂರ್ಯದೇವರ ಮೂರ್ತಿಯನ್ನು ಬೀದಿಯಲ್ಲಿ ಮೆರವಣಿಗೆ ಮುಖಾಂತರ ವಾದ್ಯಗಳೊಂದಿಗೆ ನೃತ್ಯ ಮಾಡುತ್ತಾ ಹೋಗುತ್ತಿದ್ದರು. ಕ್ರಿ.ಶ. ೧೫೪೮ರಲ್ಲಿ ಅರವೀಡು ವಂಶದ ಬುಕ್ಕರಾಜರ ಮೊಮ್ಮಗ ಚಿನ್ನತಿಮ್ಮಯ್ಯ ದೇವನು ಪಿನಯಮ್ಮಾನೂರು ಹಳ್ಳಿಗೆ ತೆರಿಗೆಯ ರೂಪದ ಹಣವನ್ನು ರಥಸಪ್ತಮಿ ಆಚರಣೆಗೆ ಕಳುಹಿಸಿಕೊಟ್ಟಿದ್ದನು.[೧೫]

ಶಿವರಾತ್ರಿ ಹಬ್ಬವನ್ನು ಪವಿತ್ರ ಹಬ್ಬವೆಂದು ತಿಳಿದುಕೊಂಡಿದ್ದರು. ಈ ಹಬ್ಬ ಆಚರಿಸಿದ ಕುರಿತು ಅನೇಕ ಶಾಸನಗಳಿವೆ. ಸಂಗಮ ವಂಶದ ಶ್ರೀ ವೀರಹರಿಹರನು ಆಳುವಾಗ ಬಾರಕೂರ ಪ್ರದೇಶದಲ್ಲಿ ಮಲ್ಲಪ್ಪ ಒಡೆಯನು ಆಳುತ್ತಿದ್ದ ಈತನ ಕಾಲದಲ್ಲಿ ಮಣೆಗಾರ ಕೇರಿಯೊಳಗೆ ಸೋಮನಾಥ ದೇವರ ಸನ್ನಿಧಿಗೆ ಶಿವರಾತ್ರಿಯ ದಿನದಂದು ತುಳುಹಿನ ಮಾರಶೆಟ್ಟಿಯು ಭೂಮಿ ದಾನ ಮಾಡಿದರು.[೧೬]

ಪ್ರೌಢದೇವರಾಯನು ನಂಜನಗೂಡಿನ ಪ್ರಸಿದ್ಧ ದೇವರಾದ ಶ್ರೀ ನಂಜುಂಡೇಶ್ವರ ಸ್ವಾಮಿಗೆ ಶಿವರಾತ್ರಿಯ ಉತ್ಸವ ದಿನದಂದು ಅಮೃತಪಡಿ, ನೈವೇದ್ಯ, ದೀಪಾರಾಧನೆಗೆ ಬೋವನಹಳ್ಳಿಯ ಸುಂಕವನ್ನು ವಾರಣಾಸಿ ಕೆಂಪದೇವರ ಸಣ್ಣನವರನ್ನು ಕೇಳಿ ತಿರುಪತಿರಾಯ ಮಹಾರಾಯರಿಗೆ ಪುಣ್ಯವಾಗಲೆಂದು ಕ್ರಿ.ಶ. ೧೫೨೯ ಜನವರಿ ೭ ಶಿವರಾತ್ರಿ ದಿನದಂದು ದಾನ ಮಾಡಿದರೆಂದು ಈ ಶಾಸನದಲ್ಲಿದೆ.[೧೭]

ಕ್ರಿ.ಶ. ೧೫೪೪ರ ಸದಾಶಿವರಾಯನ ಶಾಸನವೊಂದು ಹಾಸನ ಸೀಮೆಯ ಬೇಲೂರು ಚೆನ್ನಕೇಶವ ದೇವರ ರಥೋತ್ಸವ ಮತ್ತು ಶಿವರಾತ್ರಿಯಂದು ನಡೆಯುತ್ತದೆ. ಇದಕ್ಕೆ ಚಿಕ್ಕ ಸಿಂಗಪ್ಪನಾಯಕನು ಗೋವಿಂದನಹಳ್ಳಿ ಮತ್ತು ಚಿಕ್ಕೆಗೊಂಡನಹಳ್ಳಿಗಳನ್ನು ದಾನ ಮಾಡಿದನು.[೨೦]

ಆಂಧ್ರದಲ್ಲಿ ಬರುವ ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯವು ಪ್ರಸಿದ್ಧ ಶೈವ ಕೇಂದ್ರವಾಗಿತ್ತು. ವಿಜಯನಗರದ ಸಂಗಮ ವಂಶದ ಅರಸನಾದ ಎರಡನೆಯ ಹರಿಹರನ ಕಾಲದಲ್ಲಿಯೇ ಅದು ವಿಜಯನಗರಕ್ಕೆ ಒಳಪಟ್ಟಿತ್ತು. ಮತ್ತು ಮುಂದೆ ಬಂದ ಅರಸರು ಈ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿ ಅದರ ಮಹತ್ವವನ್ನು ಹೆಚ್ಚಿಸಿದರು.

ವಸಂತೋತ್ಸವದ ಆಚರಣೆಯಲ್ಲಿ ಒಂದು ಮುಖ್ಯ ಸಂಕೇತವೆಂದರೆ ಓಕುಳಿಯ ಎರೆಚಾಟ. ಈ ಎರೆಚಾಟದಲ್ಲಿ ಸ್ತ್ರೀ-ಪುರುಷರಿಬ್ಬರೂ ಭಾಗವಹಿಸುತ್ತಿದ್ದ ವರ್ಣನೆಗಳಿವೆ. ವಿಜಯವಿಠ್ಠಲ, ಹಜಾರರಾಮಚಂದ್ರ ದೇವಾಲಯದ ಮುಂದಿನ ಭಿತ್ತಿಯ ಮೇಲಿನ ಸಾಲಿನಲ್ಲಿ ಮತ್ತು ಹಿಂದಿನ ಭಿತ್ತಿಯ ಮೇಲೆ ಓಕುಳಿಯಾಡುತ್ತಿರುವ ಶಿಲ್ಪಗಳಿವೆ. ಕ್ರಿ.ಶ. ೧೫೨೦ರ ಕೃಷ್ಣದೇವರಾಯನ ಕಾಲದಲ್ಲಿ ನಡೆದ ಒಂದು ಸಂಪ್ರದಾಯಿಕ ವಸಂತೋತ್ಸವವನ್ನು ಕಣ್ಣಾರೆ ಕಂಡ ಪೋರ್ಚಗೀಸ್ ಪ್ರವಾಸಿ ಡೊಮಿಂಗೋ ಪಾಯೇಸ್ ಅದನ್ನು ಈ ರೀತಿ ಬಣ್ಣಿಸಿದ್ದಾನೆ. ಸ್ವತಃ ಸಾಮ್ರಾಟರು, ಮಾಂಡಲಿಕರು ಮತ್ತು ಮನ್ನೆಯರು ಕೂಡಿಕೊಂಡು ಸುಂದರಿಯರಾದ ಸ್ತ್ರೀಯರೊಂದಿಗೆ ಬಣ್ಣದ ನೀರೆರಚಾಟ ನಡೆಸುತ್ತಿದ್ದರಂತೆ. ರಾಜಧಾನಿಯಲ್ಲಿರುವ ಪ್ರಜೆಗಳು ಈ ಸಾಂಪ್ರದಾಯಿಕ ಉತ್ಸವದಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ವಿಜಯನಗರದಲ್ಲಿ ಸಾರ್ವಜನಿಕವಾಗಿ ನಡೆಯುವ ಉತ್ಸವ ದಿನಗಳಲ್ಲಿ ವಿಜಯದಶಮಿಯನ್ನು ಬಿಟ್ಟರೆ ಕಾಮನಹುಣ್ಣಿಮೆಗೆ ಒಂದು ಮಹತ್ವದ ಸ್ಥಾನವಿದ್ದಿತೆಂದು ಹೇಳಿದ್ದಾನೆ.[೧೯] ತೆಲುಗು ಕವಿಯಾದ ನಂದಿ ತಿಮ್ಮಯ್ಯನು ತಾನು ಬರೆದ 'ಪಾರಿಜಾತಾಪಹರಣ'ದಲ್ಲಿ ಶ್ರೀಕೃಷ್ಣದೇವರಾಯನು ಮತ್ತು ಅವನ ರಾಣಿಯರು ಹೋಳಿ ಹಬ್ಬವನ್ನು ಆಚರಿಸಿದ್ದನ್ನ ವಿವರಿಸಿದ್ದಾನೆ. ಸ್ವತಃ ಕೃಷ್ಣದೇವರಾಯನೇ ಬರೆದ 'ಜಾಂಬವತಿ ಕಲ್ಯಾಣ' ಎಂಬ ನಾಟಕವನ್ನು ವಿರೂಪಾಕ್ಷ ದೇವರ ಚೈತ್ರೋತ್ಸವದಂದು ನಾಟಕ ಆಡಿಸಿದ ಉಲ್ಲೇಖಗಳಿವೆ.[೨೦] ಅಂದು ವಿನೋದಕ್ಕಾಗಿ ವಿವಿಧ ಕ್ರೀಡೆಗಳಾದ ಚನ್ನೆಮಣೆಯಾಟ, ಪಗ್ಗದಾಟ, ಹುಲಿಮನೆಯಾಟ, ಚೌಕಾಬಾರ, ಲಗ್ಗೆಯಾಟ, ಗಜ್ಜುಗದಾಟದ ವಿವರಗಳು ಸಾಹಿತ್ಯ ಕೃತಿಗಳಲ್ಲದೆ ಶಿಲ್ಪಗಳ ಮುಖಾಂತರ ಅಧ್ಯಯನ ಮಾಡಬಹುದು. ಬಹುಮಟ್ಟಿನ ಕ್ರೀಡೆಗಳು ಹಿಂದಿನಿಂದ ಕೇಳಿ ಬರುತ್ತಿರುವ ಇಂದಿಗೂ ಉಳಿದು ಕೊಂಡಿರುವುಗಳೇ ಆಗಿವೆ. ಅಂದಿನ ಸಾಹಿತ್ಯ ಕೃತಿ ನೋಡಿದಾಗ ವಿವಿಧ ಬಗೆಯ ಜೂಜಾಟಗಳ ವರ್ಣನೆಯನ್ನು ಕೊಡುವ ಕನಕದಾಸರ ಮೋಹನ ತರಂಗಿಣಿ, ರಾಜಮನೆತನದ ಚೆಂಡಾಟದ ವೈಭವದ ರಂಜನೀಯ ಚಿತ್ತವನ್ನು ನೀಡುವ, ನಂಜುಂಡನ, 'ರಾಮನಾಥಚರಿತ,' ಹಂಪಿ ಪರಿಸರದ ದೇವಾಲಯ ಸ್ಮಾರಕಗಳ ಮೇಲೆ ಅನೇಕ ಕೆತ್ತನೆಗಳಿವೆ. 'ಏಣಾಕ್ಷಿಯೋರ್ವಳಾಡುವ ಗೊಟ್ಟುಗುಳಿಯಾಟ'[೨೧] ಎಂಬ ಕಾವ್ಯ ಪ್ರಯೋಗದಲ್ಲಿ ಇದು ಹೆಣ್ಣುಮಕ್ಕಳಾಡುವ ಆಟ ಎಂಬುದರ ಸುಳಿವು ಇದೆ. ಪಗಡೆಯಾಟವನ್ನು ನೆತ್ತದ ಹಲಗೆ,[೨೨] ಪಾಸಂಗಿ[೨೩] ಎಂದು ಕವಿಗಳು ಕರೆದಿದ್ದಾರೆ. ಅಂದು ಪಗಡೆಯಾಟ ಪ್ರಸಿದ್ಧವಾಗಿತ್ತು ಎಂಬುದಕ್ಕೆ ಇಂದಿಗೂ ಉತ್ಖನನದಲ್ಲಿ ದೊರೆಯುತ್ತಿರುವ ದಾಳಗಳೇ ಆದಾರ, ವಿವಿಧ ಬಗೆಯ ಜೂಜಾಟಗಳಾದ, ಬಾಳೆಹಣ್ಣು, ಕಬ್ಬು, ತೆಂಗಿನಕಾಯಿ ಯಾಟ ಎಂದು ಕನಕದಾಸರ ಮೋಹನ ತರಂಗಿಣಿಯಲ್ಲಿ ಸುರಮ್ಯ ಚಿತ್ರ ದೊರೆಯುತ್ತದೆ. ಚೆಂಡಿನಾಟ, ಟಗರಕಾಳಗ, ಮದಕರಿಗಳ ಹೋರಾಟ, ಕುದುರೆ ಓಟದ ಸ್ಪರ್ಧೆ ದೊಂಬರಾಟ ಇತ್ಯಾದಿ ವಿವರವಿದೆ.

ಆಧಾರಸೂಚಿ

೧. ಸಜ್ಜನ್ ಎಸ್. ವಿಜಯನಗರ ಕಾಲದ ಜಾತ್ರೆ ಮತ್ತು ಉತ್ಸವಗಳು, ಎಂ.ಫಿಲ್. ಅಪ್ರಕಟಿತ ನಿಬಂಧ, ೨೦೦೨ ಕರ್ನಾಟಕ ವಿ.ವಿ. ಧಾರವಾಡ.

೨. ರಾಜಶೇಖರ್ ಎಸ್. ಮಾಸ್ಟರ್ ಪೀಸಸ್ ಆಫ್ ವಿಜಯನಗರ ಆರ್ಟ್. ತಾರಾಪೂಲೊಲ ನೆಹರೂ ರೋಡ್, ಬಾಂಬೆ. ೧೯೮೩. ಪುಟ ೩೪.

೩. ವಿರಕ್ತಮಠ ಶಿವಾನಂದ. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ, ಪ್ರಸಾರಾಂಗ ಕರ್ನಾಟಕ ವಿ.ವಿ. ಧಾರವಾಡ. ೧೯೭೮ ಪುಟ ೫೮.

೪. ನಾಗೇಗೌಡ ಹಚ್ ಎಲ್. ಪ್ರವಾಸಿ ಕಂಡ ಇಂಡಿಯಾ ಸಂಪುಟ-೨, ಪ್ರಸಾರಾಂಗ ಮೈಸೂರು ವಿ.ವಿ. ೧೯೬೬ ಪುಟ-೧೬೫.

೫. ಸಾಲತೊರೆ. ಬಿ.ಎ. ಸೋಷಿಯಲ್ ಅಂಡ್ ಪೊಲಿಟಿಕಲ್ ಲೈಫ್ ಇನ್ ವಿಜಯನಗರ ಎಂಪಾಯಿರ್ ಭಾಗ ೨. ಬಿ.ಜಿ.ಪಾಲ್ ಅಂಡ್ ಕಂಪನಿ ಮದ್ರಾಸ್, ೧೯೩೪ ಪುಟ ೪೦೮.

೬ ಸಜ್ಜನ್ ಎಸ್ ಪೂರ್ವೋಕ್ತ ಪುಟ ೭೨.

೭. ಕನವಳ್ಳಿ ಸದಾನಂದ. ಮರೆತುಹೋದ ಮಹಾಸಾಮ್ರಾಜ್ಯ (ಮೂಲ) ರಾಬರ್ಟ ಸಿವೇಲ್ ಕ.ವಿ.ವಿ. ಹಂಪಿ, ೧೯೯೨ ಪುಟ-೯೨, ೯೩., ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಸನ್ಸ್ ಸಂ. ೭. ನಂ. ೩೩೬.

೮. ರಾಜಶೇಖರ್ ಎಸ್. ಮಾಸ್ಟರ್ ಪೀಸಸ್ ಆಫ್ ವಿಜಯನಗರ ಆರ್ಟ್, ಪುಟ-೩೬-೩೭.

೯. ಜಯಂತ ಬಾಳಾಜಿ ಆಠವಲೆ.ಪ.ಪೂ. ಕುಂದ ಜಯಂತ ಆಠವಲೆ, ಪೂರ್ವೋಕ್ತ, ಪುಟ ೪೬.

೧೦. ಕನ್ನಡ ವಿಶ್ವಕೋಶ ಸಂ. ೧೨. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. ೧೯೮೬, ಪುಟ ೭೩೯.

೧೧. ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಸನ್ಸ್ ಸಂ.೭. ನಂ. ೧೫೦.

೧೨. ಎ.ಕ.ಸಂ. ೫. ತಿ. ನರಸಿಪುರ. ನಂ. ೨೨೫.

೧೩. ೧೬. ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಸನ್ಸ್, ಸಂ ೭. ನಂ. ೩೫೩.

೧೪. ಕುಂದೂರಿ ಸರೋಜನದೇವಿ. ರಿಲಿಜಿಯಸ್ ಇನ್ ವಿಜಯನಗರ ಎಂಪಾಯಿರ್, ಗ್ರೀನ್‌ಪಾರ್ಕ್ ಎಕ್ಸಟೆನ್‌ಷನ್. ನ್ಯೂದೆಹಲಿ. ೧೯೯೦. ಪು. ೨೧೮.

೧೫. ಸೌತ್ ಇಂಡಿಯನ್ ಇನ್ಸ್‌ಕ್ರೀಪ್ಸನ್ಸ್. ಸಂ. ೭: ಸಂ-೩೫೩.

೧೬. ಎ.ಕ. ಸಂ.೩. ನಂಜನಗೂಡು. ನಂ. ೯೩.

೧೭. ಸಾಲತೊರೆ ಬಿ.ಎ. ಪೂರ್ವೂಕ್ತ ಪುಟ ೪೦೪.

೧೮. ಕುಂದೂರಿ ಸರೋಜನಿದೇವಿ ಪೂರ್ವೋಕ್ತ, ಪುಟ ೨೧೮.

೧೯. ಬೆಟಗೇರಿ ಕೃಷ್ಣಶರ್ಮ. ನಮ್ಮ ಸಂಸ್ಕೃತಿಯ ಪರಂಪರೆ, ಜಯಂತಿ ಕಾರ್ಯಲಯ, ಧಾರವಾಡ ೧೯೩೯, ಪುಟ ೧೨೯.

೨೦. ಸಾಲತೊರೆ. ಬಿ.ಎ. ಪೂರ್ವೋಕ್ತ, ಪುಟ ೩೯೭.

೨೧. ದೊಡ್ಡಯ್ಯ. ಚಂದ್ರಪ್ರಭ ಸಾಂಗತ್ಯ, ೧೮ ೯೯.

೨೨. ನಂಜುಂಡ ಕವಿ: ರಾಮನಾಥ ಚರಿತೆ, ೨೨-೫೧.

೨೩. ನಾರಣಪ್ಪ. ಗದುಗಿನ ಭಾರತ-ದ್ರೋಣಪರ್ವ, ೩೧-೨೧.

೧೧೧

ಹೈದರಾಬಾದಿನ ಕರ್ನಾಟಕ ವಿಮೋಚನಾ ಹೋರಾಟದಲ್ಲಿ ತಾಳಿಕೋಟೆ ಮತ್ತು ಇತರೆ ಕೇಂದ್ರಗಳ ಪಾತ್ರ

ಶಿವಪ್ಪ. ನ. ನೀರಲಗಿ *

ಪೀಠಿಕೆ: ಆಗಸ್ಟ್ ೧೫ ೧೯೪೭ ರಂದು ಬ್ರಿಟಿಷರಿಂದ ಭಾರತದೇಶವು ಸ್ವತಂತ್ರವಾಯಿತು. ಆಗ ಭಾರತದಲ್ಲಿ ಸುಮಾರು ೫೬೪ ಸಂಸ್ಥಾನಗಳಿದ್ದು ಸುಮಾರು ೫೬೦ ಸಂಸ್ಥಾನಿಕರು (Princely States) ಭಾರತದ ಗಣರಾಜ್ಯದಲ್ಲಿ ಸೇರಲು ಒಪ್ಪಿಕೊಂಡರು. ಆದರೆ ಜಮ್ಮು ಕಾಶ್ಮೀರದ ರಾಜಾ 'ಹರಿಸಿಂಗ್', ಜೂನಾಗಡದ ಸುಲ್ತಾನ್, ಭೂಪಾಲದ ನವಾಬ, ತಿರುವಾಂಕುರಿನ ಮಹಾರಾಜ ಹಾಗೂ ಹೈದರಾಬಾದದ ಕೊನೆಯ ನಿಜಾಮ 'ನವಾಬಮೀರ್ ಉಸ್ಮಾನ್ ಅಲಿಖಾನ್' (ಕ್ರಿ.ಶ. ೧೯೧೧-೪೮) ಇವರುಗಳು ಸ್ವತಂತ್ರವಾಗಿರಲು ನಿರ್ಧರಿಸಿದರು. ಜಮ್ಮು ಕಾಶ್ಮೀರ ರಾಜ್ಯವು ಭಾರತದ ಉತ್ತರದಲ್ಲಿದ್ದು ರಾಜ್ಯದ ಸುಮಾರು ೭೫% ರಷ್ಟು ಪ್ರಜೆಗಳು ಮುಸ್ಲಿಂರಾಗಿದ್ದು, ಶೇಕಡ ೨೫ರಷ್ಟು ಮಾತ್ರ ಹಿಂದೂಗಳಾಗಿದ್ದರು, ರಾಜನು ಮಾತ್ರ ಹಿಂದೂವಾಗಿದ್ದು ತನಗೆ ಭಾರತದ ಒಕ್ಕೂಟದಲ್ಲಿ ಸೇರಲು ಸಮಯ ಬೇಕೆಂದು ಕೇಳಿದನು. ಆ ಸಂದರ್ಭದಲ್ಲಿ ಪಾಕಿಸ್ತಾನವು ಜಮ್ಮು ಕಾಶ್ಮೀರದ ಮೇಲೆ ದಾಳಿ ಮಾಡಿತು. ಆಗ ರಾಜ ಹರಿಸಿಂಗನು ಭಾರತದ ಸಹಾಯವನ್ನು ಕೇಳಿದನು. ಭಾರತ ಸರ್ಕಾರವು ಪಾಕಿಸ್ತಾನ 'ದೊಡನೆ ಕಾದಾಟಕ್ಕೆ ಇಳಿಯಿತು. ಆಗ ಪಾಕಿಸ್ತಾನವು ಕಾಶ್ಮೀರದ ಅನೇಕ ಭಾಗಗಳನ್ನು ವಶಪಡಿಸಿಕೊಂಡಿತು. ನಾವು ಅದನ್ನೀಗ ಪಾಕಿಸ್ತಾನ ಆಕ್ರಮಿತ ಕಾಶ್ಮೀರ (Pak occupied Kashmir-POK) ಎಂದು ಕರೆಯುತ್ತೇವೆ. ಜೂನಾಗಡ ಸುಲ್ತಾನನು ಮುಸ್ಲೀಂರಾಗಿದ್ದನು. ಆದರೆ ಅವನ ಬಹುಪಾಲು ಪ್ರಜೆಗಳು ಹಿಂದುಗಳಾಗಿದ್ದರು, ಅವನ ರಾಜ್ಯವು ಪಾಕಿಸ್ತಾನದ ಗಡಿಯಿಂದ ಸುಮಾರು ೫೦೦ ಕಿ.ಮೀ.ಗಳ ಅಂತರದಲ್ಲಿ ಇತ್ತು. ಜನಮತಗಣನೆಯ ಮೂಲಕ ಆ ರಾಜ್ಯವನ್ನು ಭಾರತದ ಒಕ್ಕೂಟದಲ್ಲಿ ಸೇರಿಸಿಕೊಳ್ಳಲಾಯಿತು. ತಿರುವಾಂಕುರ ರಾಜ್ಯವು ಅಲ್ಲಿ ದೊರೆಯುವ ಉತ್ಕೃಷ್ಟ ಮಾದರಿಯ ಯೂರೇನಿಯಂ ನಿಕ್ಷೇಪದಿಂದ ಪ್ರಸಿದ್ಧವಾಗಿತ್ತು.

ಹೈದರಬಾದಿನ ನಿಜಾಮ ರಾಜ್ಯವು ಆಂಧ್ರಪ್ರದೇಶ, ಕರ್ನಾಟಕ, ಮಹಾರಾಷ್ಟ್ರ, ಮಧ್ಯಪ್ರದೇಶ ಹಾಗೂ ಓರಿಸ್ಸಾ ರಾಜ್ಯದ ಕೆಲವು ಭಾಗಗಳನ್ನು ಒಳಗೊಂಡಿತ್ತು. ೭೦%ರಷ್ಟು ಪ್ರಜೆಗಳು ಹಿಂದೂಗಳಾಗಿದ್ದರೆ, ಶೇ. ೩೦ರಷ್ಟು ಪ್ರಜೆಗಳು ಮಾತ್ರ ಮುಸ್ಲಿಂರಾಗಿದ್ದು ಆಡಳಿತದಲ್ಲಿ ಬಹುಸಂಖ್ಯಾತ ಮುಸ್ಲಿಂರಿದ್ದರು. ಆದರೆ ನಿಜಾಮನ ಸೇನಾಧಿಪತಿಯಾದ ಖಾಸಿಂ ರಜ್ವಿಯು ರಾಜನಿಗೆ ಸ್ವತಂತ್ರವಾಗಿರಲು ಉಪದೇಶಿಸಿದನು. ತನ್ನ ಸೈನಿಕರಾದ 'ರಜಾಕಾರ'ರನ್ನು ಹಿಂದೂಗಳ ವಿರುದ್ಧ ಎತ್ತಿ ಕಟ್ಟಿದನಲ್ಲದೆ, ನಿಜಾಮ ರಾಜ್ಯದ ಗಡಿಪ್ರದೇಶಗಳಲ್ಲಿ ಕೊಲೆ, ಸುಲಿಗೆ, ಹಿಂದೂ ಸ್ತ್ರೀಯರ ಮಾನಪಹರಣ ಹಾಗೂ ಮಕ್ಕಳ ಶೋಷಣೆ ಮುಂತಾದ ದೌರ್ಜನ್ಯಗಳನ್ನು ರಜಾಕಾರರು ಮಾಡಿದರು. ನಿಜಾಮನಿಗೆ ಆಸ್ಟ್ರೇಲಿಯಾ, ರಷ್ಯ ಮತ್ತು ಇಂಗ್ಲೆಂಡ್ ದೇಶಗಳು ಬೆಂಬಲ ಸೂಚಿಸಿ ವಿಮಾನದ ಮೂಲಕ ಮದ್ದು ಗುಂಡುಗಳನ್ನು ಒದಗಿಸಿದವು. ಇಂತಹ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಲು ಸುಭಾಷ್ ಚಂದ್ರ ಬೋಸ್‌ರ INAಯಲ್ಲಿ (Indian National Army) ತರಬೇತಿ ಪಡೆದ ಸಿಂದಗಿಯ ಸ್ವಾಮಿ ರಮಾನಂದ ತೀರ್ಥರ ಮಾರ್ಗದರ್ಶನದಲ್ಲಿ ನಿಜಾಮನ ಗಡಿಪ್ರದೇಶಗಳಲ್ಲಿ ಯುವ ನೇತಾರರಾದ ದುಮ್ಮದ್ರಿ ಶರಣಗೌಡ, ರಾಜನ್ ಕೋಳೂರಿನ ವಿರೂಪಾಕ್ಷಪ್ಪಗೌಡ, ಹಗರಟಿಗೆಯ ಮಹಂತಗೌಡ ಹಾಗೂ ಕುಂಬಾರ ಗಂಗಾಧರ ಇವರ ನೇತೃತ್ವದಲ್ಲಿ ರಜಾಕಾರರ ದಾಳಿಯನ್ನು ತಡೆಯುವುದಕ್ಕಾಗಿ ಯುವಕರಿಗೆ ತರಬೇತಿಯನ್ನು ಕೊಟ್ಟು ಹಗಲು-ರಾತ್ರಿ ಪಾಳೆಯ ಗಡಿಸಂರಕ್ಷಣೆಗಾಗಿ ಕಂಕಣ ಬದ್ಧರಾದರು.

ಹೋರಾಟಗಾರರ ಧ್ಯೇಯೋದ್ದೇಶಗಳು: ಬೀದರ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಗೋರ್ಟಾ (ಬಿ) ಯಲ್ಲಿ ರಜಾಕಾರರು ಇಡೀ ಊರಿನ ಜನರನ್ನು ಸಾಮೂಹಿಕವಾಗಿ ಹತ್ಯೆಗೈದರು. ಈ ಘಟನೆಯನ್ನು ವಿಮೋಚನಾ ಹೋರಾಟಗಾರರು 'ಕರ್ನಾಟಕದ ಜಾಲಿಯನ್ ವಾಲ್‌ಭಾಗ್' ಎಂದು ಕರೆದಿದ್ದಾರೆ. ಇಂತಹ ಘಟನೆಗಳು ಮರುಕಳಿಸದಂತೆ ತಡೆಯುವುದು, ಹೈದರಾಬಾದ ಪ್ರದೇಶವನ್ನು ನಿಜಾಮನಿಂದ ಮುಕ್ತಗೊಳಿಸುವುದು, ವಾಲಿಕಾರರು ಒಯ್ಯುವ ಟಪಾಲನ್ನು

* ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ, ಸ್ನೇಹ ಬಿಲ್ಡಿಂಗ್ ಸನ್ಮತಿ ಹಾಸ್ಟೆಲ್ ಹಿಂಭಾಗ, ಬೃಂದಾವನ ಲೇಔಟ್, ಧಾರವಾಡ-೦೧.

ತಡೆಯುವುದು, ಕೊಲೆ ಸುಲಿಗೆ, ಹೆಣ್ಣು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಮಕ್ಕಳ ರಕ್ಷಣೆ ರಜಾಕಾರರ ದಾಳಿಯನ್ನು ತಡೆಯುವುದು ಇವೇ ಮುಂತಾದವುಗಳು ಹೋರಾಟಗಾರರ ಧ್ಯೇಯೋದ್ದೇಶಗಳಾಗಿದ್ದವು.

ವಿಮೋಚನಾ ಹೋರಾಟದ ಕೇಂದ್ರಗಳು: ಮುಂಡರಗಿ, ಅಳವಂಡಿ, ಗಜೇಂದ್ರಗಡ, ಸಿಂದಗಿ, ಕಕ್ಕಳಮೇಲ, ತಾಳಿಕೋಟೆ, ಭಂಟನೂರು, ಗೌಡಗಾಂವ, ಇಳಕಲ್, ಲಿಂಗದಹಳ್ಳಿ, ಕೇಸರ ಜವಳಗ ಹಂಪಸಾಗರ, ಸಾಲವಾಡಗಿ ಹಾಗೂ ಕೋಳೂರು ಇವು ಪ್ರಮುಖ ವಿಮೋಚನಾ ಹೋರಾಟದ ಕೇಂದ್ರ ಗಳಾಗಿದ್ದವು. ಮಂಡರಗಿ ಹಾಗೂ ಅಳವಂಡಿಗೆ ಶಿವಮೂರ್ತಿ ಸ್ವಾಮಿಗಳು, ಗಜೇಂದ್ರಗಡಕ್ಕೆ ಪುಂಡಲಿಕ್ಕಪ್ಪ ಜ್ಞಾನಮೇಟಿ, ಸಿಂದಗಿ ಹಾಗೂ ಕಕ್ಕಳಮೇಲಕ್ಕೆ ದುಮ್ಮದ್ರಿಯ ಸರದಾರ ಶರಣಗೌಡ ಇನಾಮದಾರ, ತಾಳಿಕೋಟೆಗೆ ಬ್ಯಾರಿಸ್ಟರ್ ರಾಜಾ ವೆಂಕಟಪ್ಪ ನಾಯಕ, ಕೋಳೂರು ವಿರೂಪಾಕ್ಷಪ್ಪಗೌಡ ಮತ್ತು ಹಗರಟಗಿ ಮಹಂತಗೌಡ, ಭಂಟನೂರಿಗೆ ಸಿದ್ದಪ್ಪಗೌಡ ಐನಾಪುರ, ಕೇಸರಜವಳಗಕ್ಕೆ ಡಿ.ಬಿ. ಕಲ್ಮಣ್‌ಕರ ಹಂಪಸಾಗರಕ್ಕೆ ಶ್ರೀ ಪಂಚಾಕ್ಷರಿ ಹಿರೇಮಠ, ಹಾಗೂ ಯಾದಗಿರಿಗೆ ಕೋಳೂರು ಮಲ್ಲಪ್ಪ ಇವರು ಹೋರಾಟದ ನೇತೃತ್ವವನ್ನು ವಹಿಸಿದ್ದರು. ಕರ್ನಾಟಕದ ಗಾಂಧಿಯೆಂದೇ ಖ್ಯಾತರಾಗಿದ್ದ ಹರ್ಡೇಕರ್ ಮಂಜಪ್ಪನವರು ಸಹ ಈ ಚಳುವಳಿಯಲ್ಲಿ ಭಾಗವಹಿಸಿದ್ದರು.

ತಾಳಿಕೋಟೆ ಕೇಂದ್ರ: ಸುರಪುರದ ಬಾರಿಸ್ಟರ್ ರಾಜಾ ವೆಂಕಟಪ್ಪ ನಾಯಕ, ಕೋಳೂರಿನ ಶ್ರೀ ವಿರೂಪಾಕ್ಷಪ್ಪ ಗೌಡ ಹಾಗೂ ಮಹಂತಗೌಡ ಹಗರಟಗಿ ಇವರು ಈ ಕೇಂದ್ರದ ನೇತೃತ್ವದಲ್ಲಿ ವಹಿಸಿದ್ದು ಈರಪ್ಪ ಜಾಡರ, ಪದಕಿ, ಅಚ್ಚಪ್ಪಗೌಡ ಯಾಳಗಿ, ತಮ್ಮಾಜಪ್ಪ ಮೀರಜಕರ ಮುಂತಾದವರು ಈ ಹೋರಾಟದಲ್ಲಿ ಭಾಗವಹಿಸಿದ್ದರು. ಈಗಿನ ರಾಜವಾಡೆ ಯಲ್ಲಿರುವ ಆನಂದ ರಾವ್ ರಾಸ್ತೆಯವರ ಅರಮನೆಯಲ್ಲಿ ಅನೇಕ ಗುಪ್ತ ಮಂತ್ರಾಲೋಚನೆಗಳು ನಡೆದಿದ್ದು ರಾಸ್ತೇ ಯವರು ವಿಮೋಚನಾ ಹೋರಾಟಗಾರರಿಗೆ ತನು, ಮನ ಧನಗಳಿಂದ ಸಹಾಯವನ್ನಿತ್ತರಲ್ಲದೆ, ಈಗಿನ ಶ್ರೀ ಖಾಸ್ಗತೇಶ್ವರ ಘನಮಠದಲ್ಲಿ ಮೇಲಿಂದ ಮೇಲೆ ರಾಜಕೀಯ ಮುತ್ಸದ್ಧಿಗಳಾದ ಯಾದಗಿರಿಯ ಕೋಳೂರು ಮಲ್ಲಪ್ಪ, ಬಿಜಾಪೂರದ ಎಸ್.ಆರ್. ಕಂಠಿ, ಮದ್ದೆಬಿಹಾಳದ ತಮ್ಮಾಜಪ್ಪ ಮೀರಜ್‌ಕರ್, ಶರಣಗೌಡ ಯಾಳಗಿ ವಜ್ಜಲದ ಸಂಗನಗೌಡ, ಆರ್.ಜಿ. ದುಬೆ, ಅಂಬ್ಲಿ ಚೆನ್ನಬಸಪ್ಪ ಮುಂತಾದವರು ಅನೇಕಸಲ ಸಭೆ ಸೇರಿ ರಜಾಕಾರರ ವಿರುದ್ಧದ ಹೋರಾಟದ ರೂಪರೇಷೆ ಗಳನ್ನು ಗೌಪ್ಯವಾಗಿ ಚರ್ಚಿಸಿ ಹೋರಾಟದ ಸಿದ್ಧತೆಯನ್ನು ಮಾಡಿದರು.

ಭಂಟನೂರು ಕೇಂದ್ರ: ಇಂದಿನ ಯಾದಗಿರಿ ಹಾಗು ಬಿಜಾಪೂರ ಜಿಲ್ಲೆಗಳ ಸರಹದ್ದಿನಲ್ಲಿರುವ ಶಾಸನೋಕ್ತ ಗ್ರಾಮ ಭಂಟನೂರು. ಮುದ್ದೆಬಿಹಾಳ ತಾಲ್ಲೂಕಿನ ತಾಳಿಕೋಟೆಯಿಂದ ಈಶಾನ್ಯಕ್ಕೆ (North-East) ಸುಮಾರು ೧೨ ಕಿ.ಮೀ. ಅಂತರದಲ್ಲಿದ್ದು ಈ ಊರಿನಲ್ಲಿ ನೂತನ ಶಿಲಾಯುಗದ, ಶಿಲಾತಾಮ್ರಯುಗದ ಅವಶೇಷಗಳು, ಕುದುರೆ ಮೇಲೆ ಕುಳಿತು ಹೆಣಗಳನ್ನು ತುಳಿದುಕೊಂಡೇ ವೀರಾವೇಶದಿಂದ ಹೋರಾಡು ತ್ತಿರುವ ವೀರನ ವೀರಗಲ್ಲು, ಸ್ವಲ್ಪ ಎತ್ತರದ ದಿನ್ನೆಯ ಮೇಲೆ ಸತಿ ಹೋದ ಸ್ತ್ರೀಯೊರ್ವಳ ಉಬ್ಬು ಶಿಲ್ಪದ ಪಾದುಕೆಗಳು, ಸರ್ಪದಿಂದ ಹೊಟ್ಟೆಯನ್ನು ಸುತ್ತಿರುವ ಗಣೇಶನ ವಿಗ್ರಹ, ನಾಗರಶಿಲ್ಪ, ವಿಷ್ಣು, ಅಗಸಿಯ ದ್ವಾರದಲ್ಲಿ ಬಿಲ್ಲು ಬಾಣಗಳನ್ನು ಹಿಡಿದುಕೊಂಡು ಹೋರಾಡುತ್ತಿರುವ ವೀರರ ವೀರಗಲ್ಲು ಗಳಿವೆ. ಸುಂದರವಾದ ಮಕರಗಳು ಹಾಗೂ ಹಾಳಾದ ದೇಗುಲದ ಅವಶೇಷಗಳು ಊರ ತುಂಬಾ ಹರಡಿವೆ. ಇದೆಲ್ಲಾ ವನ್ನು ಅವಲೋಕಿಸಿದಾಗ ಇದೊಂದು ಐತಿಹಾಸಿಕ ಗ್ರಾಮ ವೆಂಬುದು ನಮಗೆ ತಿಳಿದುಬರುವುದು. ಈ ಊರಿನ ಪಶ್ಚಿಮದಲ್ಲಿರುವ ಹೊಲವೊಂದನ್ನು 'ಮಾನ್ಯದಡವಿ' ಎಂದು ಕಳೆದಿರುವುದರಿಂದ ವೀರನೊಬ್ಬನಿಗೆ ಭೂಮಿಯನ್ನು ಅವನ ವೀರಾವೇಶದ ಹೋರಾಟಕ್ಕೆ ಕೊಟ್ಟಿರುವುದಕ್ಕೆ ಸಾಕ್ಷಿಯಾಗಿದೆ. ಈ ಊರು ನಿಜಾಮ ಕರ್ನಾಟಕದ ಗಡಿ ಗ್ರಾಮವಾಗಿತ್ತು. ಈ ಊರಿನಿಂದಲೇ ನಿಜಾಮ ಸರ್ಕಾರದ ಸೈನಿಕರಿಗೆ ಹೆಂಡದ ಸರಬರಾಜಾಗುತ್ತಿತ್ತು. ತಾಳಿಕೋಟೆ, ಬಿ.ಸಾಲವಾಡಗಿ, ಸಿಂದಗಿ, ನಾಗರಬೆಟ್ಟ, ರಾಜನ್ ಕೋಳೂರು ಹಾಗೂ ಇಲಕಲ್ಲಗಳ ಹಾಗೆ ಭಂಟನೂರು ಸಹ ನಿಜಾಮನ ವಿರುದ್ಧದ ವಿಮೋಚನಾ ಹೋರಾಟದಲ್ಲಿ ಪಾಲ್ಗೊಂಡಿತ್ತು. ಆಧುನಿಕ ಇತಿಹಾಸಕ್ಕು ಕೂಡಾ ಈ ಊರಿನ ಕೊಡುಗೆ ಅಪಾರವಾದುದಾಗಿದೆ. ಭಾರತ ಸ್ವಾತಂತ್ರ್ಯ ನಂತರ ಈ ಊರಿನ ಯುವಕರು ಹೈದರಬಾದ ನಿಜಾಮನ ವಿರುದ್ಧದ ವಿಮೋಚನಾ ಹೋರಾಟ ದಲ್ಲಿ ಪಾಲ್ಗೊಂಡಿದ್ದರು. ಈ ಊರಿನ ಹೋರಾಟದ ನೇತೃತ್ವವನ್ನು ಶ್ರೀ ಸಿದ್ದಪ್ಪಗೌಡ ಐನಾಪುರ ಇವರು ವಹಿಸಿದ್ದು, ಇವರಿಗೆ ಸಹಾಯಕರಾಗಿ ಯಂಕಪ್ಪ ಗುರಿಕಾರ, ಮಲ್ಲಪ್ಪ ವಾಲಿಕಾರ, ಹನುಮಂತರಾಯ ವಾಲಿಕಾರ, ಈರಪ್ಪ ಶಿವಸಿಂಪಿಗೇರ, ಈಶ್ವರಪ್ಪ ಗುಡಗುಂಟಿ, ಶಿವುಯ್ಯ ಹಿರೇಮಠ, ಅಯ್ಯಪ್ಪ ಐನಾಪುರ, ಶ್ರೀ ದತ್ತಪ್ಪಗೌಡ ಹೆಗರೆಡ್ಡಿ, ಶ್ರೀ ಮದನಪ್ಪ ಆಲಗಡ್ಲಿ ಶ್ರೀ ಬಸಪ್ಪ ಅಸ್ಕಿ ಹಾಗೂ ಭೀಮಸೇನ ನಾವದಗಿ ಮುಂತಾದ ಯುವಕರಿದ್ದರು. ಶ್ರೀ ರೇವಣಸಿದ್ದಪ್ಪ ಪೂಜಾರಿ ಇವರ ಹೊಸಮನೆಯಲ್ಲಿ ಮದ್ದುಗುಂಡುಗಳು ಹಾಗೂ ತುಪಾಕಿಗಳನ್ನು ಸಂಗ್ರಹಿಸಿ ಇಡಲಾಗಿದ್ದು ಈ ಮನೆಯು ವಿಮೋಚನಾ ಹೋರಾಟಗಾರರ ಪ್ರಮುಖ ಕೇಂದ್ರವಾಗಿತ್ತು. ಬೆಳಿಗ್ಗೆ ಹಾಗೂ ಸಾಯಂಕಾಲ ಈ ಯುವಕರು ಶಿಸ್ತಿನ ಸಿಪಾಯಿಗಳಾಗಿ ಮಾರ್ಚ್ ಆಫ್ ಮಾಡುತ್ತಿದ್ದರಲ್ಲದೆ ಈ

ಯುವಕರು ಊರಿನ ದಕ್ಷಿಣದಲ್ಲಿರುವ ಶ್ರೀ ನಡಗೇರಪ್ಪ ನೀರಲಗಿ ಇವರ ಗುತ್ತಿಯ ಹೊಲದಲ್ಲಿ ಬಂದೂಕು ತರಬೇತಿ ಗುರಿ ಸಾಧನೆಯನ್ನು (Firing range practice) ಮಾಡುತ್ತಿದ್ದು, ಈಗಲೂ ಆ ಹೊಲದಲ್ಲಿ ತುಪಾಕಿಯ ಗುಂಡುಗಳು ಸಿಗುತ್ತವೆ. ಈ ಸದ್ದಿನಿಂದ ಭಂಟನೂರಿನ ಈಚಲು ಬನದಲ್ಲಿದ್ದ ಜಿಂಕೆಗಳು ಆ ಪ್ರದೇಶದಿಂದ ಪಲಾಯನಗೈದವು. ಅಲ್ಲದೆ ಈ ಯುವನಾಯಕರು ಕುಸ್ತಿ, ಕಬಡ್ಡಿ ಹಾಗೂ ಹಗ್ಗ ಜಗ್ಗಾಟಗಳ ಸಾಧನೆಯನ್ನು ಮಾಡುತ್ತಿದ್ದರಲ್ಲದೆ, ಗಡಿಪ್ರದೇಶದ ದನಕರುಗಳು, ಹೆಣ್ಣುಮಕ್ಕಳ ಸಂರಕ್ಷಣೆಯನ್ನು ಮಾಡಿದರು. ಭಂಟನೂರಿನಲ್ಲಿರುವ ಈಗಿನ ಕೋಣನಕಟ್ಟೆಯ ಸ್ಥಳದಲ್ಲಿರುವ ನಿಜಾಮನ ಟೋಲ್ ನಾಕವನ್ನು ನಾಶ ಮಾಡಿದರಲ್ಲದೆ ಗಿರ್ದಾವರಿಯ (Revenue officer of Nizam) ಕುದುರೆಯ ಕಿವಿಗಳನ್ನು ಕೊಯ್ದರು. ಗಿರ್ದಾವರಿಯು ಜೀವಭಯದಿಂದ ಹೋರಾಟಗಾರರ ಕೈಯಿಂದ ತಪ್ಪಿಸಿಕೊಂಡು ಓಡಿ ಹೋದನು. ಈ ಘಟನೆಯಿಂದ ಕೋಪಗೊಂಡ ಹೈದರಾಬಾದ ನಿಜಾಮನು ತನ್ನ ಸೈನಿಕರಾದ ರಜಾಕಾರರಿಗೆ ಭಂಟನೂರಿನ ಮೇಲೆ ದಾಳಿ ಮಾಡಲು ಆಜ್ಞೆ ಮಾಡಿದನು. ಈ ಘಟನೆಯಿಂದ ತೀವ್ರಗೊಂಡ ಹೋರಾಟದ ಪರಿಣಾಮವಾಗಿ ಹೋರಾಟಗಾರರು ಅನೇಕ ಯವನ ಯುವಕರನ್ನು ಊರಿನ ಹತ್ತಿರವಿರುವ ವಡ್ಡನ ಹೊಲದಲ್ಲಿ ಹಾಗೂ ಡಬ್-ಡಬ್ ಕೊರೆಯಲ್ಲಿ ಕೊಲೆಗೈದರು. ಆದುದರಿಂದ ಆ ವಡ್ಡನ ಹೊಲಕ್ಕೆ ಜನಪದಿಗರು 'ಕಟಗನ ಕೊರೆ' ಎಂದು ಕರೆದಿದ್ದಾರೆ. ಗೊಮಗೂಡ ಹನುಮಂತರಾಯನ ಹೆಂಡತಿಯ ಕುಬಸ ಮಾಡಲು ಕರಿಭಾವಿಯಿಂದ ಆಗಮಿಸಿದ ಅವರ ಬೀಗರು ರಾತ್ರಿಯಾದ್ದರಿಂದ ಕೈಯಲ್ಲಿ ದೀವಟಿಗೆಯನ್ನು ಹಿಡಿದುಕೊಂಡು ಬಂದಿದ್ದರಿಂದ ಊರಿನ ಸ್ತ್ರೀಯರು ಹಾಗೂ ಪುರುಷರು ರಜಾಕಾರರೇ ಬಂದರೆಂದು ಹೆದರಿ ಗುತ್ತಿಯ ದಕ್ಷಿಣಕ್ಕೆ ಊರಿನಿಂದ ಪಲಾಯನಗೈದರು. ಕೆಲವು ತಾಯಂದಿರು ಹೆದರಿ ಹೌಹಾರಿ ತೊಟ್ಟಿಲದೊಳಗಿನ ತಮ್ಮ ಕೂಸನ್ನು ಬಿಟ್ಟು ಊಚಲು ಬನದೊಳಕ್ಕೆ ಪಲಾಯನಗೈದರು. ಕೆಲವು ಯುವಕರು ನಿಜಾಮನ ಗಡಿ ಪ್ರದೇಶಗಳಲ್ಲಿಯ ಮ್ಲೆಚರ ಮನೆಮಠಗಳ ಲೂಟಿ, ಕೊಲೆ-ಸುಲಿಗೆ ಮುಂತಾದ ಅನೈತಿಕ ಕಾರ್ಯಗಳನ್ನು ಕೈಗೊಂಡರು. ಈ ಎಲ್ಲ ಕಾರ್ಯಗಳಿಗೆ ದುಮ್ಮದ್ರಿಯ ಶರಣಗೌಡ, ಕೋಳೂರು ವಿರೂಪಾಕ್ಷಪ್ಪಗೌಡ, ಕುಂಬಾರ ಗಂಗಾಧರ ಹಾಗೂ ಮಹಂತಗೌಡ ಹಗರಟಗಿ ಇವರು ಈ ಯುವಕರಿಗೆ ಸಹಕಾರವನ್ನು ನೀಡಿದರು.

ಹೋರಾಟದ ತೀವ್ರತೆ: [course of the struggle] – ಕೋಳೂರು ಶ್ರೀ ವಿರೂಪಾಕ್ಷಪ್ಪಗೌಡ ಹಾಗೂ ಶ್ರೀ ಮಹಂತಗೌಡ ಹಗರಟಗಿ ಇವರು ಮೇಲಿಂದ ಮೇಲೆ ಭಂಟನೂರು, ತಾಳಿಕೋಟೆ ಹಾಗೂ ಸಾಲವಾಡಗಿ ಕೇಂದ್ರಗಳಿಗೆ ಹಗಲು ರಾತ್ರಿಯೆನ್ನದೆ ಭೆಟ್ಟಿ ಕೊಡುತ್ತಿದ್ದರು. ವಿರೂಪಾಕ್ಷಪ್ಪಗೌಡರು ಹೈದರಾಬಾದ್‌ನಿಂದ ಮುಂಬೈಗೆಬಂದಿದ್ದ ಯುದ್ಧ ನಿಪುಣರಾದ ಶ್ರೀ ಚಂದ್ರಗುಪ್ತ ಗುರೂಜಿಯವರನ್ನು ಬಂಡೆಪ್ಪನಹಳ್ಳಿ ಸಾಲವಾಡಗಿಗೆ ಕರೆದುಕೊಂಡು ಬಂದು ಅವರಿಂದ ವಿಮೋಚನಾ ಹೋರಾಟಗಾರರಿಗೆ ಯುದ್ಧ ತರಬೇತಿಯನ್ನು ಕೊಡಿಸಿದರು. ಕೋಳೂರು ಶ್ರೀ ವಿರುಪಾಕ್ಷಪ್ಪಗೌಡ ಹಾಗೂ ಶ್ರೀ ಮಹಂತಗೌಡ ಹಗರಟಗಿ ಇವರು ಬಂಡೆಪ್ಪನಹಳ್ಳಿ ಸಾಲವಾಡಿಗಿ ಹಾಗೂ ಮಳೂರು ನಡುವೆ ರಜಾಕಾರರು ಬಣವೆಗೆ ಬೆಂಕಿ ಹಚ್ಚಿದ್ದರಿಂದ ಅದನ್ನು ನಂದಿಸಲು ಹೋದ ಆ ಇಬ್ಬರು ಯುವ ನಾಯಕರು, ಮುಖಾರ್ತಿಗುಡ್ಡದಲ್ಲಿ ರಜಾಕಾರರ ಗುಂಡಿಗೆ ಬಲಿಯಾದರು. ಹೈದರಾಬಾದ್ ರಾಜ್ಯವನ್ನು ವಶಪಡಿಸಿಕೊಳ್ಳಲು ಹಿಂದೇಟು ಹಾಕಿದ ಪ್ರಧಾನಮಂತ್ರಿ ನೆಹರೂರವರನ್ನು ವಿದೇಶ ಪ್ರವಾಸಕ್ಕೆ ಕಳುಹಿಸಿ ಅಂದಿನ ಗೃಹ ಮಂತ್ರಿಗಳಾದ ಸರ್ದಾರ್ ವಲ್ಲಭಬಾಯಿ ಪಟೇಲರು ಭಾರತೀಯ ಸೈನ್ಯಕ್ಕೆ ಹೈದರಾಬಾದ ರಾಜ್ಯವನ್ನು ವಶಪಡಿಸಿಕೊಳ್ಳಲು ೧೩-೦೯-೧೯೪೮ ರಂದು ರಾತ್ರಿ ೧೨ ಘಂಟೆಗೆ ಪೂನಾದಲ್ಲಿ ಸೈನಾಧಿಕಾರಿ ಮೇಜರ್ ಜೆ.ಎನ್. ಚೌಧರಿಯವರಿಗೆ ಆಜ್ಞೆಯನ್ನಿತ್ತರು. ಮುಂಬಯಿ, ಪೂನಾ ಹಾಗೂ ಸೊಲ್ಲಾಪುರಗಳ ಮೂಲಕ ಭಾರತದ ಸೈನ್ಯವು ಹೈದರಾಬಾದವನ್ನು ಪ್ರವೇಶಿಸಿ ಸತತ ೫ ದಿನಗಳವರೆಗೆ ಕಾರ್ಯಾಚರಣೆಯನ್ನು ನಡೆಸಿ ಹೈದರಾಬಾದವನ್ನು ಸೆಪ್ಟೆಂಬರ್ ೧೭, ೧೯೪೮ ರಂದು ವಶಪಡಿಸಿಕೊಂಡಿತು. ಆಗ ಬೀದರಿನ ವಿದ್ಯಾರ್ಥಿಯಾದ ಶ್ರೀ ಸಂಗಪ್ಪಮಟ್ಟಿ ಇವರು ಸೈನ್ಯಕ್ಕೆ ಹೈದರಾಬಾದ ದಾರಿಯ ಮಾರ್ಗದರ್ಶಕರಾಗಿದ್ದರು (Route guide). ನಿಜಮನು ಹೈದರಾಬಾದ ಆಕಾಶವಾಣಿ ಮೂಲಕ ಭಾಷಣ ಮಾಡಿ ಕರಾರು ರಹಿತವಾಗಿ (Unconditionally) ಸಂಪೂರ್ಣವಾಗಿ ಸೈನ್ಯಕ್ಕೆ ಶರಣಾಗತನಾದನು. ಖಾಸಿಂ ರಜ್ವಿಯು ಏನಾದನೆಂಬುದು ಯಾರಿಗೂ ತಿಳಿದು ಬಂದಿಲ್ಲ. ಈ ಕಾರ್ಯಾಚರಣೆಯನ್ನು "ಪೋಲೀಸ್ ಕಾರ್ಯಾಚರಣೆ" (police action) ಅಥವಾ 'ಆಪರೇಷನ್ ಪೋಲೋ' ಎಂದು ಕರೆಯಲಾಗಿದೆ. ಈ ಕಾರ್ಯಾಚರಣೆಯು ೧೯೪೮ರ ಸೆಪ್ಟೆಂಬರ್ ೧೩ರಿಂದ ಪ್ರಾರಂಭವಾಗಿ ಸೆಪ್ಟೆಂಬರ್ ೧೭ಕ್ಕೆ ಮುಕ್ತಾಯವಾಯಿತು.

[ಅಮೂಲ್ಯವಾದ ಮಾಹಿತಿಯನ್ನು ಒದಗಿಸಿದ, ದಿವಂಗತರಾದ ನನ್ನ ತಂದೆ ತಾಯಿ ಶ್ರೀ ನಡಗೇರಪ್ಪ ನೀರಲಗಿ ಮತ್ತು ಶಿವಗಂಗಮ್ಮ ನೀಲರಗಿ, ಸ್ಥಳೀಯರ ಹೇಳಿಕೆಗಳು ಹಾಗೂ ನನ್ನ ಗುರುಗಳಾದ ಶ್ರೀ ರಾಚಯ್ಯ ಎಸ್. ಮಠ ಇವರಿಗೆ ನನ್ನ ಕೃತಜ್ಞತೆಗಳು].

ಆಧಾರಸೂಚಿ

೧. An advanced History of India, Dr. V.D. Mahajan.

೧೧೨

ದಾವಣಗೆರೆ ಜಿಲ್ಲೆಗೆ ಮೈಸೂರು ಒಡೆಯರ ಕೊಡುಗೆಗಳು

ಕೃಷ್ಣಮೂರ್ತಿ ಸಿ.ಎನ್.*

ಮೈಸೂರು ಸಂಸ್ಥಾನವನ್ನು ೧೯೦೦ಕ್ಕೂ ಮೊದಲು ಅನೇಕ ಒಡೆಯರು ಆಳ್ವಿಕೆ ಮಾಡಿದ್ದರು, ಸಹ ೧೯೦೦ರಿಂದ ೧೯೪೭ರ ಕಾಲಾವಧಿಯಲ್ಲಿ ನೋಡಿದಾಗ ಮೈಸೂರು ಸಂಸ್ಥಾನದ ಕೊನೆಯ ಇಬ್ಬರು ಒಡೆಯರಾದ ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಜಯಚಾಮರಾಜ ಒಡೆಯರ ಕಾಲಾವಧಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟದ ಬೆಂಕಿ ಹತ್ತಿಕೊಂಡು ಹುರಿಯುತಿತ್ತು. ಮೈಸೂರು ಸಂಸ್ಥಾನದ ಬೆಂಗಳೂರು, ತುಮಕೂರು, ಮಂಡ್ಯ, ಹಾಸನ, ಚಿತ್ರದುರ್ಗ, ದಾವಣಗೆರೆ ಮತ್ತು ಹರಿಹರ ಇನ್ನೂ ಅನೇಕ ಪ್ರದೇಶಗಳಲ್ಲಿ ಸ್ವಾತಂತ್ರ್ಯ ಚಳವಳಿ ತನ್ನದೇ ಆದ ಸ್ವರೂಪವನ್ನು ಪಡೆದುಕೊಂಡಿತ್ತು.

ಈ ಸಂದರ್ಭದಲ್ಲಿಯು ಸಹ ಮೈಸೂರು ಸಂಸ್ಥಾನದ ಒಡೆಯರಾದ ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಜಯಚಾಮರಾಜ ಒಡೆಯರು ಮತ್ತು ಅವರ ಕಾಲಾವಧಿಯ ದಿವಾನರುಗಳು ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ಪ್ರಮುಖವಾಗಿ ದಾವಣಗೆರೆ ಜಿಲ್ಲೆಯಲ್ಲಿ ಮೈಸೂರು ಒಡೆಯರ ಕೊಡುಗೆಗಳನ್ನು ಕಾಣಬಹುದು.

ದಾವಣಗೆರೆ ಜಿಲ್ಲೆಯಲ್ಲಿ ಶೈಕ್ಷಣಿಕ ಕೇಂದ್ರಗಳು ಮತ್ತು ಶಾಲೆಗಳ ಸ್ಥಾಪನೆ

೧೮೭೧ರಲ್ಲಿ ದಾವಣಗೆರೆಯಲ್ಲಿ ಪ್ರಪ್ರಥಮ ಸರ್ಕಾರಿ ಪ್ರಾಥಮಿಕ ಶಾಲೆ ಪ್ರಾರಂಭವಾಯಿತು. ನಂತರ ೩೦-೦೮-೧೯೨೨ರಲ್ಲಿ ಪ್ರಸ್ತುತದ ಹೈಸ್ಕೂಲು ಮೈದಾನದಲ್ಲಿ ಕಂಡುಬರುವ ಸರ್ಕಾರಿ ಬಾಲಕರ ಫ್ರೌಢಶಾಲೆ ಆರಂಭವಾಯಿತು. ಗಾಂಧೀಜಿಯವರ ಕೋರಿಕೆಯಂತೆ ಹರಿಜನರ ವಿದ್ಯಾಭ್ಯಾಸಕ್ಕಾಗಿ ೦೨-೦೩-೧೯೩೪ರಲ್ಲಿ ಮೈಸೂರಿನ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಅನುಮತಿಯ ಮೇರೆಗೆ ಅಂದಿನ ದಿವಾನರಾದ ಸರ್.ಮಿರ್ಜಾ ಇಸ್ಮಾಯಿಲ್‌ರವರು ಹರಿಜನರ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದರು. ಹರಿಹರದಲ್ಲಿ ಜಯಚಾಮರಾಜ ಒಡೆಯರ ಕಾಲಕ್ಕಾಗಲೆ ಶೈಕ್ಷಣಿಕವಾಗಿ ಪ್ರಾಥಮಿಕ ಶಾಲೆಗಳು ಕಂಡುಬಂದಿದ್ದವು. ೧೯೪೫ರಲ್ಲಿ ತಾಲ್ಲೂಕು ಬೋರ್ಡ್ ಶಾಲೆಗಳು ಜಯಚಾಮರಾಜ ಒಡೆಯರು ಸ್ಥಾಪಿಸುತ್ತಿದ್ದರು. ಹರಿಹರದಲ್ಲಿಯು ಸಹಾ ಜಯಚಾಮರಾಜ ಒಡೆಯರ ಅನುಮತಿಯ ಪಡೆದು ಧರ್ಮರತ್ನಕರ ರಾಜನಹಳ್ಳಿ ಮುದ್ದೂರಾಯಪ್ಪನವರು ತಮ್ಮ ಹೆಸರಿನಲ್ಲಿ ಸರ್ಕಾರಿ ಪ್ರೌಢಶಾಲೆಯನ್ನು ಕಟ್ಟಿಸಿದರು. ಜಯಚಾಮರಾಜ ಒಡೆಯರ ಅನುಮತಿಯಿಂದ ಈ ಶಾಲೆಯ ಸ್ಥಾಪನೆಯನ್ನು ಮೈಸೂರು ಸಂಸ್ಥಾನದ ದಿವಾನರಾದ 'ಆರ್ಕಾಟ್ ರಾಮಸ್ವಾಮಿ ಮೊದಲಿಯರ್'ರವರು ೨೧ ಮೇ ೧೯೪೭ರಲ್ಲಿ ಸ್ಥಾಪಿಸಿದರು. ಈ ಶಾಲೆಯ ಮುಖ್ಯ ಉಪಾಧ್ಯಾಯರಾಗಿ ಎನ್. ಶಾಮರಾವ್(೧೯೪೫-೪೭) ಕಾರ್ಯ ನಿರ್ವಹಿಸಿದ್ದಾರೆ. ೧೯೭೫ರಲ್ಲಿ ಇದೇ ಪ್ರೌಢಶಾಲೆ ಪದವಿಪೂರ್ವ ಕಾಲೇಜ್ ಆಗಿ ಮಾಡಲಾಯಿತು.[೧]

ಹರಿಹರದಲ್ಲಿ ಸೈನಿಕ ನೆಲೆ

ಹರಿಹರವು ಮೈಸೂರು ಒಡೆಯರ ಕಾಲದಲ್ಲಿ ಮೈಸೂರು ಸಂಸ್ಥಾನದ ಕೊನೆಯ ಪ್ರಾಂತ್ಯವಾಗಿತ್ತು. ಆದ್ದರಿಂದ ಆ ಪ್ರಾಂತ್ಯದ ಗಡಿರಕ್ಷಣೆಗೆ ಮೈಸೂರು ಸಂಸ್ಥಾನದ ಸೈನ್ಯ ನೆಲೆಸಿತ್ತು. ನಂತರ ೧೯೦೦ರ ವೇಳೆಗೆ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳವಳಿಯು ಬಿರುಸಿನಿಂದ ಆರಂಭವಾದ್ದರಿಂದ ಹರಿಹರದಲ್ಲಿ (ಹರಿಹರದ ಉತ್ತರ ದಿಕ್ಕಿಗೆ ೪ ಕಿ.ಮೀ. ದೂರದಲ್ಲಿನ ಹರ್ಲಾಪುರದಲ್ಲಿ) ಸಂಪೂರ್ಣವಾಗಿ ಸೈನ್ಯವು ನೆಲೆಗೊಳಿಸಲಾಯಿತ್ತು. ಈ ಸೈನ್ಯದ ಹೆಸರನ್ನು ೧೦ ಎಂ.ಜಿ. ಬೆಟಲಿಯನ್ (10M.G.Battlian) ಎಂದು ಕರೆಯಲಾಗುತ್ತಿತ್ತು.[೨]

ದಾವಣಗೆರೆಯ ಕಾಟನ್ ಮಿಲ್‌ಗಳು

ಜಯಚಾಮರಾಜ ಒಡೆಯರ ಕಾಲದಲ್ಲಿ ದ್ವಿತೀಯ ಮಹಾಯುದ್ಧದ ಸಮಯ ಈ ಸಂದರ್ಭದಲ್ಲು ಸಹಾ ದಾವಣಗೆರೆಯ ಮಹಾನ್ ಪುರುಷರಾದ ರಾಜನಹಳ್ಳಿ ಹನುಮಂತಪ್ಪ, ಚಿಗಟೇರಿ ಮುರಿಗೆಪ್ಪ, ಬಿ.ಟಿ.ಚಂದ್ರಪ್ಪ, ರಾಜನಹಳ್ಳಿ ಮದ್ದೂರಾಯಪ್ಪ, ಕೆ.ಟಿ. ಜಂಬಣ್ಣ, ಗುಂಡಿ ಮಹಾದೇವಪ್ಪ, ಮಾಗನೂರು ಬಸಪ್ಪ[೩] ಇನ್ನೂ ಅನೇಕ ಮಹಾಪುರುಷರು ಮೈಸೂರು ಸಂಸ್ಥಾನದ ಒಡೆಯರಿಂದ

* ಸಂಶೋಧನ ವಿದ್ಯಾರ್ಥಿ, ಹರಿಹರ.

ಅನುಮತಿ ಪಡೆದು ದಾವಣಗೆರೆಯಲ್ಲಿ ಕಾಟನ್ ಮಿಲ್‌ಗಳನ್ನು ಸ್ಥಾಪಿಸಿದರು (ಗಣೇಶ ಕಾಟನ್‌ಮಿಲ್, ಶಂಕರ್ ಕಾಟನ್‌ಮಿಲ್, ಸಿದ್ದೇಶ್ವರ ಕಾಟನ್‌ಮಿಲ್, ಯಲ್ಲಮ್ಮ ಕಾಟನ್‌ಮಿಲ್, ಆಂಜನೇಯ ಕಾಟನ್‌ಮಿಲ್), ಅಲ್ಲದೇ ಹತ್ತಿಯಿಂದ ಬೀಜ ತೆಗೆಯುವ ಹತ್ತಾರು ಗಿರಣಿಗಳು ಸ್ಥಾಪಿಸಿ ದಾವಣಗೆರೆಯನ್ನು ಆರ್ಥಿಕವಾಗಿ ಪ್ರಬಲ ನಗರವನ್ನಾಗಿ ನಿರ್ಮಿಸಿದರು ಮತ್ತು ೩೦೦ ಜನರಿಂದ ಪ್ರಾರಂಭವಾದ ಕಾಟನ್‌ಮಿಲ್ ೬೦೦೦ ಜನರಿಗೆ ಉದ್ಯೋಗ ನೀಡಿತು. ಆದ್ದರಿಂದ ದಾವಣಗೆರೆ ಕರ್ನಾಟಕದ ಮ್ಯಾಂಚೆಸ್ಟರ್ ಎಂದೇ ಪ್ರಸಿದ್ಧವಾಗಿತ್ತು.

ದಾವಣಗೆರೆಯ ನಗರ ಸಭೆಯ ಸ್ಥಾಪನೆ

ದಾವಣಗೆರೆಯು ೧೯೨೦ರ ವೇಳೆಗಾಗಲೆ ಮೈಸೂರು ಸಂಸ್ಥಾನದ ಒಂದು ಪ್ರಮುಖ ನಗರವಾಗಿತ್ತು. ೧೯೩೯ರಲ್ಲಿ ದಾವಣಗೆರೆಯಲ್ಲಿ ಪುರಸಭೆಯು ಸ್ಥಾಪನೆಯಾಗಿ ಪುರಸಭೆಯ ಚುನಾವಣೆ ನಡೆದಿತ್ತು ಆಗ ಕೆ.ಟಿ. ಜಂಬಣ್ಣನವರು ಪುರಸಭೆಯ ಅಧ್ಯಕ್ಷರಾಗಿ ಆಯ್ಕೆಯಾಗಿ ಉತ್ತಮ ಆಡಳಿತವನ್ನು ನೀಡಿದ್ದರಿಂದ ೧೯೪೪ರ ಚುನಾವಣೆಯಲ್ಲಿ ಕೆ.ಟಿ. ಜಂಬಣ್ಣನವರು ಎರಡನೇ ಬಾರಿಗೆ ಪುರಸಭೆಯ ಅಧ್ಯಕ್ಷರಾಗಿ ಚುನಾಯಿತರಾದರು. ನಂತರ ದಾವಣಗೆರೆಯ ಅಭಿವೃದ್ಧಿ ಮತ್ತು ಬೆಳವಣಿಗೆಯನ್ನು ಗಮನಿಸಿದ ಮೈಸೂರು ಸಂಸ್ಥಾನದ ಜಯಚಾಮರಾಜರಿಗೆ ತಮ್ಮ ಕಾಲದಲ್ಲಿ (೧೯೪೮) ದಾವಣಗೆರೆಯ ಪುರಸಭೆಯನ್ನು ನಗರಸಭೆಯಾಗಿ ಮಾಡಿದರು. ಆಗ ಕೆ.ಟಿ. ಜಂಬಣ್ಣನವರು ಮೂರನೇ ಬಾರಿಗೆ ಚುನಾವಣೆಯಲ್ಲಿ ಆಯ್ಕೆಯಾದರು ಮತ್ತು ನಗರಸಭೆಯ ಪ್ರಥಮ ಅಧ್ಯಕ್ಷರಾದರು[೪] ನಗರಸಭೆಗೆ ಪ್ರತ್ಯೇಕವಾದ ಕಟ್ಟಡವನ್ನು ನಿರ್ಮಾಣ ಮಾಡಲು ಅನುದಾನವನ್ನು ನೀಡಿರು. ದಿನಾಂಕ ೭ ಆಗಸ್ಟ್ ೧೯೫೧ರಂದು ಜಯಚಾಮರಾಜ ಒಡೆಯರೆ ಈ ನಗರ ಸಭೆಯ ಕಟ್ಟಡದ ಸ್ಥಾಪನೆ ಮಾಡಿದ್ದಾರೆ. ಪ್ರಸ್ತುತದ ನಗರಸಭೆಯು ೬-೧-೨೦೦೭ರಿಂದ ಮಹಾನಗರ ಪಾಲಿಕೆಯಾಗಿದೆ.

ರಾಜನಹಳ್ಳಿ ಹನುಮಂತಪ್ಪ ಛತ್ರ (ಆರ್.ಹೆಚ್.ಚೌಟ್ರಿ)

ಇಡೀ ಕರ್ನಾಟಕ ರಾಜ್ಯದಲ್ಲಿ ಯಾವುದಾದರೂ ಒಂದು ಕಲ್ಯಾಣಮಂಟಪ ಸಂಪೂರ್ಣ ಉಚಿತವಾಗಿದ್ದರೆ ಅದುವೇ ರಾಜನಹಳ್ಳಿ ಹನುಮಂತಪ್ಪ ಧರ್ಮಶಾಲೆ ಈ ದಾವಣಗೆರೆಯ ಧರ್ಮಶಾಲೆಯನ್ನು ರಾಜನಹಳ್ಳಿ ಹನುಮಂತಪ್ಪನವರ ತಂದೆಯವರಾದ ಶ್ರೀ ಭೀಮರಾಯಪ್ಪನವರ ಜ್ಞಾಪಕಾರ್ಥವಾಗಿ ಕಟ್ಟಿಸಿ ಅಂದಿನ ಮೈಸೂರು ಸಂಸ್ಥಾನದ ಮಹಾರಾಜರಾದ ಜಯಚಾಮರಾಜ ಒಡೆಯರಿಂದ ೧೯೪೭ರ ಜುಲೈ ೧೫ರಂದು ಉದ್ಘಾಟಿಸಿದರು. ಈ ದಾವಣಗೆರೆಯ ರಾಜನಹಳ್ಳಿ ಹನುಮಂತಪ್ಪನವರ ಗುಣವನ್ನು ಗಮನಿಸಿದ ಜಯಚಾಮರಾಜ ಒಡೆಯರು ರಾಜನಹಳ್ಳಿ ಹನುಮಂತಪ್ಪನವರಿಗೆ "ಧರ್ಮಪ್ರವರ್ತ" ಎಂದು ಬಿರುದು ನೀಡಿದ್ದಾರೆ.[೫]

ಸಾರ್ವಜನಿಕ ಆಸ್ಪತ್ರೆಗಳಿಗೆ ಒಡೆಯರ ಅನುಮತಿ:

೧೯೩೯ರಲ್ಲಿ ದಾವಣಗೆರೆಯಲ್ಲಿ ರಾಜನಹಳ್ಳಿ ಮದ್ದೂರಾಯಪ್ಪನವರು ತಮ್ಮ ತಂದೆತಾಯಿಯರ ಹೆಸರಿನಲ್ಲಿ ದಾವಣಗೆರೆ ಜನತೆಗೆ ದಾವಣಗೆರೆಯ ಚಾಮರಾಜಪೇಟೆಯಲ್ಲಿ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಯನ್ನು ಸ್ಥಾಪಿಸಿದರು. ನಂತರ ಜಯಚಾಮರಾಜ ಒಡೆಯರ ಕಾಲಾವಧಿಯಲ್ಲೆ ಚಿಗಟೇರಿ ಮುರಿಗೆಪ್ಪನವರು[೬] ೨೯ ಎಕರೆ ಜಮೀನು ನೀಡಿ ಸಾರ್ವಜನಿಕರ ಆರೋಗ್ಯದ ಯೋಗಕ್ಷಮಕ್ಕೆ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಯನ್ನು ಸ್ಥಾಪಿಸಿದರು. ಈ ಎಲ್ಲಾ ಶ್ರಮವು ದಾವಣಗೆರೆಯ ಮಹಾಪುರುಷರ ಪರಿಶ್ರಮವಾಗಿ ಕಂಡು ಬರುತ್ತದೆ.

ಹರಿಹರದಲ್ಲಿ ಮೈಸೂರು ಕಿರ್ಲೋಸ್ಕರ್ ಸ್ಥಾಪನೆ

ಮೈಸೂರು ಸಂಸ್ಥಾನದಿಂದ ಜಯಚಾಮರಾಜ ಒಡೆಯರು ಹರಿಹರದಲ್ಲಿ ಮೈಸೂರು ಕಿರ್ಲೋಸ್ಕರ್ ಕಂಪನಿಯನ್ನು ಸ್ಥಾಪಿಸಲು ೭ ಎಪ್ರಿಲ್, ೧೯೪೧ರಂದು ಲಕ್ಷ್ಮಣ್‌ರಾವ್‌ರವರಿಗೆ ಅನುಮತಿಯನ್ನು ನೀಡಿ ಆರ್ಥಿಕವಾಗಿ ಹಣದ ಸಹಾಯ ಮಾಡಿ ಈ ಕಂಪನಿ ನಿರ್ಮಿಸಲು ೩೦೦ ಎಕರೆ ಭೂಮಿಯನ್ನು ತುಂಗಭಧ್ರಾ ನದಿಯ ಪೂರ್ವದಂಡೆಯ ಮೇಲೆ ೧೯೪೭ರಲ್ಲಿ ಜಯಚಾಮರಾಜ ಒಡೆಯರೆ ಸ್ಥಾಪನೆ[೭] ಮಾಡಿ ಸಾವಿರಾರು ಜನರಿಗೆ ಉದ್ಯೋಗ ನೀಡಿ ಈ ಮೈಸೂರು ಕಿರ್ಲೋಸ್ಕರ್ ಕಂಪನಿಯನ್ನು ರಾಷ್ಟ್ರಮಟ್ಟ ಹಾಗೂ ಅಂತರಾಷ್ಟ್ರೀಯ ಮಟ್ಟಕ್ಕೆ ಇದರ ಹೆಸರನ್ನು ಪರಿಚಯಿಸಿದರು.

ದಾವಣಗೆರೆಯಲ್ಲಿ ಪಿ.ಜೆ. ಬಡಾವಣೆ (ರೈತರ ಬೀದಿ)

ಪ್ರಸ್ತುತದ ಸರ್ಕಾರಿ ಬಾಲಕರ ಪ್ರೌಢಶಾಲೆಯ ಪಕ್ಕದಲ್ಲಿ ಕಂಡುಬರುವುದೆ ಪಿ.ಜೆ. ಬಡಾವಣೆ (ಪ್ರಿನ್ಸ್ ಜಯಚಾಮರಾಜ ಒಡೆಯರ್ ಬಡಾವಣೆ) ಮೈಸೂರು ಸಂಸ್ಥಾನದ ಒಡೆಯರ ಆಳ್ವಿಕೆಯ ಕಾಲದಲ್ಲಿ ರೈತರಿಗಾಗಿ ಈ ಭೂಮಿಯನ್ನು ಉಳಮೆ ಮಾಡಲು ನೀಡಲಾಗಿದೆ. ನಂತರದ ದಿನಗಳಲ್ಲಿ ನಗರ ಬೆಳದು ರೈತರ ವಸತಿಗೃಹಗಳು ನಿರ್ಮಾಣಗೊಂಡು ಈ ಬಡಾವಣೆಯ ಕೆಲವು ಬೀದಿಗಳಿಗೆ ರೈತರ ಬೀದಿ ಎಂದು ಕರೆಯಲಾಯಿತು. ೨ ಅಕ್ಟೋಬರ ೧೯೮೭ರಂದು ಈ ಬಡಾವಣೆಯ ಮುಖ್ಯರಸ್ತೆಯಲ್ಲಿ (ಪುಣೆ-ಬೆಂಗಳೂರು ರಸ್ತೆ) ಜಯಚಾಮರಾಜ ಒಡೆಯರ ವೃತ್ತವನ್ನು ನಿರ್ಮಿಸಲಾಗಿದೆ.

ಮೈಸೂರು ಒಡೆಯರ ಕಾಲದ ನಗರಗಳ ಇತಿಹಾಸವನ್ನು ಅಧ್ಯಯನ ಮಾಡಿದಾಗ ದಾವಣಗೆರೆ ಜಿಲ್ಲೆಯ ವ್ಯಾಪಾರ ಮತ್ತು ವಾಣಿಜ್ಯ, ಸಾಂಸ್ಕೃತಿಕ, ಸೈನಿಕ, ಶೈಕ್ಷಣಿಕ

ಮತ್ತು ವಿದ್ಯಾಕೇಂದ್ರಗಳ ಅಭಿವೃದ್ಧಿಯಲ್ಲಿ ಮೈಸೂರು ಒಡೆಯರ ಕೊಡುಗೆಗಳು ಅಪಾರ. ದಾವಣಗೆರೆ ನಗರದ ಕೆಲವು ಮನೆತನಗಳಾದ ರಾಜನಹಳ್ಳಿ ಮನೆತನ, ಚಿಗಟೇರಿ ಮನೆತನ ಇನ್ನು ಕೆಲವು ಮನೆತನಗಳು ಮೈಸೂರು ಒಡೆಯರ ಸಹಾಯದಿಂದ ಅಥವಾ ಒಡೆಯರ ಅನುದಾನದಿಂದ ದಾವಣಗೆರೆಯನ್ನು ಅಭಿವೃದ್ಧಿಗೊಳಿಸಿದರು. ದಾವಣಗೆರೆ ಜಿಲ್ಲೆಯು ವ್ಯಾಪಾರ, ವಾಣಿಜ್ಯ ಮತ್ತು ಕೈಗಾರಿಕಾ ನಗರ ವಾಗಿರದೆ ಶೈಕ್ಷಣಿಕವಾಗಿಯು ಅಭಿವೃದ್ಧಿ ಹೊಂದಿತ್ತು. ಕರ್ನಾಟಕದ ಕೇಂದ್ರಸ್ಥಾನದಲ್ಲಿರುವ ದಾವಣಗೆರೆ ಜಿಲ್ಲೆಯನ್ನು ಗುರುತಿಸಿ ಮೈಸೂರು ಒಡೆಯರು ಅಲ್ಲಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ಲಭ್ಯವಿದ್ದ, ಕಚ್ಚಾ ಸಂಪನ್ಮೂಲಗಳನ್ನು ಬಳಸಿ ಕೊಳ್ಳುವ ಸಾರಿಗೆ ವ್ಯವಸ್ಥೆಯನ್ನು ಉತ್ತಮಪಡಿಸಿದ್ದು ಕೈಗಾರಿಕೆ ಗಳು ಪೂರ್ಣ ಅಭಿವೃದ್ಧಿ ಹೊಂದಲು ಸಾಧ್ಯವಾಯಿತು. ಹೀಗೆ ದಾವಣಗೆರೆ ಜಿಲ್ಲೆಯನ್ನು ಕರ್ನಾಟಕದ ಮ್ಯಾಂಚೆಸ್ಟಾರ್ ಎಂದು ಪ್ರಸಿದ್ಧಿ ಪಡೆಯುವಂತೆ ಮಾಡುವಲ್ಲಿ ಮೈಸೂರು ಒಡೆಯರ ಕೊಡುಗೆ ಅಪಾರವಾಗಿದೆ.

ಆಧಾರಸೂಚಿ

೧. ಸಂದರ್ಶನ: ಪ್ರಿನ್ಸಿಪಾಲರು ಡಿ.ಆರ್.ಎಂ. ಕಾಲೇಜು, ಹರಿಹರ ದಿನಾಂಕ: ೧೦/೦೮/೨೦೧೩.

೨. ಸಂದರ್ಶನ: ಜಿ.ಕೃಷ್ಣಮೂರ್ತಿ ದಿನಾಂಕ: ೧೫/೧೧/೨೦೧೨.

೩. ಟಿ. ಗಿರಿಜಾ, 'ದಾವಣಗೆರೆ ಇದು ನಮ್ಮ ಜಿಲೆ', ನಿಹಾರಿಕ ಪ್ರಕಾಶನ, ೨೦೦೧.

೪. ಅದೇ ಪುಟ ಸಂ. ೮೦.

೫. ಡಾ. ಎಂ.ಜಿ. ಈಶ್ವರಪ್ಪ, 'ಶತಮಾನದ ದಾವಣಗೆರೆ'. ಚಂಪಾಲಾಲ್ ಬಿ ಡೆಲ್ಲರಿಯಾ ಪ್ರಕಾಶನ, ದಾವಣಗೆರೆ, ೨೦೦೧, ಪುಟ ಸಂ. ೨೮೨.

೬ ಟಿ. ಗಿರಿಜಾ, 'ದಾವಣಗೆರೆ ಇದು ನಮ್ಮ ಜಿಲ್ಲೆ', ನಿಹಾರಿಕ ಪ್ರಕಾಶನ, ೨೦೦೧. ಪುಟ ಸಂ. ೨೦೬.

೭. ಸಂದರ್ಶನ ಎನ್.ಎಂ. ಚಂದ್ರಶೇಖರಯ್ಯ, ದಿ. ೨೧/೧೨/೨೦೧೨.

ಬೆಳಗಾವಿ ನಗರ ಪ್ರದೇಶದ ಪಾರಂಪರಿಕ ಬೀದಿಗಳು ಮತ್ತು ಓಣಿಗಳು : ಒಂದು ಅವಲೋಕನ

ಡಾ. ಸ್ಮಿತಾ ಪಿ. ಸುರೇಬಾನಕರ*

೨೦೦೦ ವರ್ಷಗಳಷ್ಟು ಪ್ರಾಚೀನ ನಗರವಾದ ಬೆಳಗಾವಿ ಇತಿಹಾಸ ಮತ್ತು ಸಂಸ್ಕೃತಿಯನ್ನು ತನ್ನ ಉದರ ದಾಳದಲ್ಲಿ ಅಡಗಿಸಿಕೊಂಡ ನಗರ.ಇತಿಹಾಸದ ವಿವಿಧ ಕಾಲಘಟ್ಟಗಳಲ್ಲಿ ಮಹತ್ವವಾದ ಪಾತ್ರ ವಹಿಸಿದ ಬೆಳಗಾವಿ ಇತಿಹಾಸದ ಕವಚದ ಕೊಂಡಿ ಹೊಂದಿದೆ. ಶಾತವಾಹನ, ಆದಿಕದಂಬ, ಬದಾಮಿ ಚಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳ, ವಿಜಯನಗರ, ಬಹಮನಿ ಮತ್ತು ಆದಿಲಶಾಹಿಗಳ ಆಳ್ವಿಕೆಯನ್ನು ಕಂಡುಂಡ ಬೆಳಗಾವಿ ಮುಂದೆ ಮರಾಠರು, ಪೇಶ್ವೆಯರು, ಅನೇಕ ದೇಶಗತಿ ಮನೆತನಗಳು, ಪೋರ್ಚುಗೀಸ್ ಮತ್ತು ಇಂಗ್ಲೀಷರ ಅಧೀನತೆಯಲ್ಲೂ ಇತ್ತು. ಈ ಎಲ್ಲ ಆಳರಸರ ಆಳ್ವಿಕೆ ಬೆಳಗಾವಿ ಸಾಂಸ್ಕೃತಿಕ ಕುಸುಮವಾಗಿ ಬಿರಿದು ಎಲ್ಲೆಡೆ ತನ್ನ ಸೌರಭವನ್ನು ಸೂಸಿ ಪಾರಂಪರಿಕತೆಯನ್ನು ತನ್ನಲ್ಲಿ ಹಾಸುಹೊಕ್ಕಾಗಿಸಿಕೊಳ್ಳಲು ಕಾರಣೀಭೂತವಾಯಿತು. ಎರಡು ಸಹಸ್ರವರ್ಷಗಳ ಹಿಂದೆಯೇ ಬೆಳಗಾವಿ ಯೋಜನಾಬದ್ಧ ನಗರವಾಗಿತ್ತೆಂಬ ಅಂಶ ಶಾತವಾಹನರ ನೆಲೆಯಾದ, ಬೆಳಗಾವಿಯ ಹೃದಯ ಸ್ಥಾನದಲ್ಲಿರುವ ವಂಡಗಾಂವ ಮಾಧವಪುರ ಉತ್ಖನದಿಂದ ಸಿದ್ಧವಾಗಿದೆ. ಹೀಗೆ ಬೆಳಗಾವಿಯ ನಗರಯೋಜನೆಯ ವಿಕಸನದ ಹಂತ ಶಾತವಾಹನರಿಂದ ಪ್ರಾರಂಭವಾಗಿ ಮುಂದೆ ೧೬ನೆಯ ಶತಮಾನದಲ್ಲಿ ವಿಜಾಪೂರದ ಆದಿಲಶಾಹಿ ಆಳ್ವಿಕಾವಧಿಯಲ್ಲಿ ಎರಡನೆಯ ಹಂತ ತಲುಪಿತು. ಆದಿಲಶಾಹಿ ಗವರ್ನರ ಅಸದಖಾನ ಮಧ್ಯಯುಗದಲ್ಲಿ ಬೆಳಗಾವಿ ನಗರ ನಿರ್ಮಾಣದ ಪುನರುತ್ಥಾನದ ಕೈಂಕರ್ಯಗೈದ ರೂವಾರಿ. ಈತನಿಂದ ದುರಸ್ತಿಗೊಂಡು ರೂಪುಗೊಂಡ ಬೆಳಗಾವಿ ಕೋಟೆ, ಮಾರುಕಟ್ಟೆ, ರಸ್ತೆಗಳು, ಓಣಿಗಳು, ಬೀದಿಗಳು, ದರ್ಗಾಗಳು ಮತ್ತು ಮಸೀದಿ ಗೋರಿಗಳು ಇಂದಿಗೂ ಆದಿಲಶಾಹಿ ಇರುವನ್ನು ಮತ್ತು ಪ್ರಭಾವವನ್ನು ಸಾರಿ ಹೇಳುತ್ತಿವೆ.

ಮರಾಠಾ, ಪೇಶ್ವೆಯರ ಮತ್ತು ಸಾಂಗ್ಲಿಯ ಪಟವರ್ದನರ ಆಳ್ವಿಕೆಯ ಪ್ರಭಾವದಿಂದ ಗಣಪತಿ ಆರಾಧನೆ ಬೆಳಗಾವಿಯಲ್ಲಿ ಜನಪ್ರಿಯಗೊಂಡು ಪ್ರತಿ ಓಣಿ ಗಲ್ಲಿಗಳಲ್ಲಿ ಪೇಶ್ವೆಕಾಲದ ಗಣಪತಿ ಮಂದಿರಗಳನ್ನು ಕಾಣಬಹುದು. ೧೫ ಮಾರ್ಚ್ ೧೮೧೮ ರಂದು ಮನ್ರೋ ಬೆಳಗಾವಿ ನಗರವನ್ನು ಮತ್ತು ೧೧ ಏಪ್ರಿಲ್ ೧೮೧೮ ರಿಂದ ಬೆಳಗಾವಿ ಕೋಟೆಯನ್ನು ವಶಪಡಿಸಿಕೊಂಡು ಪೇಶ್ವೆಯರ ಆಳ್ವಿಕೆಯನ್ನು ಕೊನೆಗೊಳಿಸಿದನು. ಕ್ರಿ.ಶ. ೧೮೨೧ರಲ್ಲಿ ಸಾಂಗ್ಲಿಯ ಪಟವರ್ಧನರು ಶಹಾಪೂರ ಪರಗಣದ [ಬೆಳಗಾವಿ ನಗರ ದಲ್ಲಿರುವ ಬಡಾವಣೆ] ಎಂಟು ಗ್ರಾಮಗಳ ಜಾಗೀರನ್ನು ಬ್ರಿಟೀಷರಿಗೆ ಹಸ್ತಾಂತರಿಸಿದರು.

ನಗರೀಕರಣದ ಇತಿಹಾಸವನ್ನು ಅವಲೋಕಿಸಿದಾಗ ಆಯಾ ನಗರಗಳು ವಿಕಸನಗೊಂಡು ಬೆಳೆದು ಬಂದ ಬಗೆ ರೋಚಕವೆನಿಸುತ್ತದೆ. ಅನೇಕ ಬೀದಿಗಳು, ಓಣಿಗಳು, ಗಲ್ಲಿಗಳು, ನಗರದ ದಿಕ್ಸೂಚಿಯಂತಿರುವ ಭವ್ಯವಾದ ಪಾರಂಪರಿಕ ಸೌಧಗಳು, ಉಪಯೋಗಕ್ಕನುಗುಣವಾಗಿ ಬೆಳೆದು ಬಂದ ಮಾರುಕಟ್ಟೆ ಪ್ರದೇಶ, ಸರಕಾರಿ ಸೌಧಗಳಾದ ಅಂಚೆ ಕಚೇರಿ, ಆಡಳಿತ ಕಚೇರಿ, ಕಂದಾಯ ಕಚೇರಿ, ಸೈನಿಕ ಪಾಳ್ಯ, ದಂಡುಮಂಡಲ, ಇಗರ್ಜಿ, ಮಸೀದಿ, ದೇವಾಲಯ ಗಳು, ವ್ಯಾಪಾರ-ವಹಿವಾಟು ನಡೆಯುವ ಪ್ರದೇಶಗಳು - ಇವೇ ಮುಂತಾದವುಗಳು ಕಾಲಕ್ರಮೇಣ ನಗರಗಳ ಭಾಗವಾಗಿದ್ದನ್ನು ಕಾಣಬಹುದು. ಬೆಳಗಾವಿ ಇದಕ್ಕೆ ಹೊರತಲ್ಲ.

ಪ್ರಸ್ತುತ ಪ್ರಬಂಧದಲ್ಲಿ ಬೆಳಗಾವಿ ನಗರ ಪ್ರದೇಶದಲ್ಲಿ, ನಗರ ಪರಂಪರೆಯ ಅವಿಭಾಜ್ಯ ಅಂಗಗಳಾದ ಓಣಿ, ಕೇರಿ, ಗಲ್ಲಿ, ಬೀದಿ ಇವೇ ಮುಂತಾದವುಗಳ ಉಗಮ ಮತ್ತು ವಿಕಾಸವನ್ನು ಐತಿಹಾಸಿಕ ದೃಷ್ಟಿಕೋನದಿಂದ ೧೯ ಮತ್ತು ೨೦ನೆಯ ಶತಮಾನದ ಪ್ರಾರಂಭಿಕ ಕಾಲಘಟ್ಟದಲ್ಲಿ ಪ್ರತಿಬಿಂಬಿಸುವ ಕಿರುಪ್ರಯತ್ನ ಮಾಡಲಾಗಿದೆ.

ಐದು ರಿಜರ್‌ವಾಯರಗಳನ್ನು ಹೊಂದಿದ ಗೋಲಾಕಾರದಲ್ಲಿರುವ ಬೆಳಗಾವಿನಗರ ಕೋಟೆಕೆರೆ, ನಾಗಝರಿ, ಆರ್ಗನ ತಲಾವ, ಕಪಿಲೇಶ್ವರ ಮತ್ತು ಜಾರ್ಕಿ ಹೊಂಡ, ಅನೇಕಾನೇಕ ಬಾವಿಗಳು, ಕೆರೆ-ತೊರೆಗಳು, ಝರಿ-ಜಲಪಾತಗಳಿಂದ ತುಂಬಿದೆ. ಆಡಳಿತದ ಅನುಕೂಲತೆಗಾಗಿ

* ಅಸೋಸಿಯೇಟ್ ಪ್ರೊಫೆಸರ್ ಮತ್ತು ಮುಖ್ಯಸ್ಥರು, ಇತಿಹಾಸ ವಿಭಾಗ, ರಾಣಿ ಪಾರ್ವತಿ ದೇವಿ ಮಹಾವಿದ್ಯಾಲಯ, ಬೆಳಗಾವಿ.

ಬ್ರಿಟೀಷರು ಬೆಳಗಾವಿಯನ್ನು ನಾಗರೀಕ ವಿಭಾಗ ಮತ್ತು ದಂಡುಮಂಡಲ ಅಥವಾ ಸೈನಿಕ ಪಾಳ್ಯ ಎಂದು ವಿಭಾಗಿಸಿದರು. ನಾಗರೀಕ ವಿಭಾಗ ನಗರದ ಪೂರ್ವೋತ್ತರಕ್ಕೆ ಹಬ್ಬಿದ್ದರೆ ಸೈನಿಕ ಪಾಳ್ಯ ನಗರದ ಪಶ್ಚಿಮಭಾಗದಲ್ಲಿದೆ. ೧೯ ನೇಯ ಶತಮಾನದ ಆದಿಭಾಗದಲ್ಲಿ ಬ್ರಿಟಿಷರು ಬೆಳಗಾವಿ ಯನ್ನು ವಶಪಡಿಸಿಕೊಂಡಾಗ, ಸುಮಾರು ೩೫೦ ಎಕರೆಗಳಷ್ಟು ವಿಸ್ತಾರವಾದ ಪ್ರದೇಶದಲ್ಲಿ ನಗರ ಹರಡಿದ್ದು, ೨೩,೧೧೫ ಜನಸಂಖ್ಯೆಯನ್ನು ಹೊಂದಿತ್ತು.

ಬೆಳಗಾವಿ ಮುನ್ಸಿಪಾಲಿಟಿ ಅಸ್ತಿತ್ವಕ್ಕೆ ಬಂದ ನಂತರ ನಗರಾಡಳಿತದ ಅನುಕೂಲತೆಗಾಗಿ ಬೆಳಗಾವಿಯನ್ನು ನಾಲ್ಕು ವಾರ್ಡುಗಳಾಗಿ ವಿಂಗಡಿಸಿದ್ದು ೫೪ ಉಪವಿಭಾಗಗಳಾದ ವಾಡೆ, ಗಲ್ಲಿ ಮುಂತಾದವುಗಳನ್ನು ಒಳಗೊಂಡಿತು. ಬಹುತೇಕ ಗಲ್ಲಿ/ ವಾಡೆಗಳು/ ಓಣಿ ಅಲ್ಲಿ ವಾಸಿಸುವ ಪ್ರಮುಖ ನಾಗರೀಕ ಹೆಸರಿನಿಂದ ಕರೆಯಲ್ಪಟ್ಟಿವೆ. ನಗರದ ದಕ್ಷಿಣ ತುದಿಗೆ ಇರುವ ಕಪಿಲೇಶ್ವರ ದೇವಾಲಯದಿಂದ ಆ ಬೀದಿಗೆ ಕಪಿಲೇಶ್ವರ ವಾಡಾ ಎಂಬ ಹೆಸರಿದೆ.

೧೮೭೦ರ ಜನಗಣತಿಯಲ್ಲಿ ಮತ್ತು ಗ್ರಾಮಲೆಕ್ಕಿಗರ ದಾಖಲೆಗಳಲ್ಲಿ ಈಗಲೂ ಈ ಗಲ್ಲಿಗಳ ಹೆಸರನ್ನು ನೋಡ ಬಹುದು. ಕಪಿಲೇಶ್ವರಿ ಬೀದಿಯಲ್ಲಿರುವ ಪ್ರಖ್ಯಾತ ನಾಗರೀಕ ಭಾತೆಯವರ ಬಂಗ್ಲೆ ಪ್ರಸಿದ್ಧವಾದದ್ದು. ಕಪಿಲೇಶ್ವರ ಬೀದಿಯ ಪಶ್ಚಿಮಕ್ಕೆ ಭಾಂದೂರಗಲ್ಲಿ ಇದ್ದು, ಇದು ಈ ಪ್ರದೇಶದಲ್ಲಿ ಹೇರಳವಾಗಿ ಬೆಳೆಯುವ ಭಾದುರ್ಗಿ ಸಸ್ಯದಿಂದ ಬಂದಿದೆ. ತಂಗಡಿ ಎಂಬ ಈ ಪ್ರದೇಶದಲ್ಲಿ ಹೇರಳವಾಗಿ ಹೆಸರಿನಿಂದ ಕರೆಯಲ್ಪಡುವ ತಂಗಡಿವಾಡಾ, ಪಾಟೀಲ ಕುಟುಂಬದವರ ವಾಸತಾಣವಾದ ಪಾಟೀಲಗಲ್ಲಿ ನಗರದ ಪುರಾತನ ಓಣಿಗಳಲ್ಲೊಂದು. ಹೇರಳವಾಗಿ ಬಳಸಿದ ಸಾಗವಾನಿ ಕಟ್ಟಿಗೆಯ ಕುಸುರಿಕೆಲಸದ ಮುಂಭಾಗ (Facade) ಹೊಂದಿದ ಪಾರಂಪರಿಕ ಮನೆಗಳ ಸಾಲುಗಳನ್ನು ಇಲ್ಲಿ ಕಾಣಬಹುದು. ಈ ಗಲ್ಲಿಯ ಪಶ್ಚಿಮತುದಿಗೆ ಚಮ್ಮಾರರ ಓಣಿಯಿದ್ದು, ಅನೇಕ ತಲೆಮಾರುಗಳಿಂದ ಉತ್ತಮ ಗುಣಮಟ್ಟದ ಮೆಟ್ಟು ತಯಾರಿಕೆಯಲ್ಲಿ ತೊಡಗಿದ್ದಾರೆ. ಇಲ್ಲಿ ಥೇಡಭಾವಿ ಎಂಬ ಬಾವಿ ಇದ್ದು, ಇದು ನಗರದ ಅತ್ಯಂತ ಪುರಾತನ ಕಟ್ಟಡ ಗಳಲ್ಲೊಂದು ಎಂದು ಸ್ಟೋಕ್ಸ್ ಎಂಬುವವರು ಅಭಿಪ್ರಾಯ ಪಡುತ್ತಾನೆ. ಕಂಗ್ರಾಳ ಎಂಬ ಹೆಸರಿನ ಪ್ರಮುಖ ನಾಗರೀಕರ ಹೆಸರಿನ ಕಂಗ್ರಾಳಗಲ್ಲಿ, ಇದರ ಉತ್ತರಕ್ಕೆ ಮುಜಾವರಗಲ್ಲಿ ಮುಜಾವರ ಅಥವಾ ಅಸದಖಾನ ದರ್ಗಾ ಗುಡಿಸಿ ಸ್ವಚ್ಛಗೊಳಿಸುವವರ, ಅದರ ಉತ್ತರಕ್ಕೆ ಶೇರಿಗಲ್ಲಿ ಶೇರಿ ಎಂಬ ನಾಗರೀಕ ಹೆಸರಿನ ಅದರ ದಕ್ಷಿಣಕ್ಕೆ ಅಲ್ಲಿರುವ ಲಿಂಗಾಯತ ಮಠದಿಂದಾಗಿ ಹೆಸರು ಪಡೆದ ಮಠಗಲ್ಲಿ, ಇದರ ಉತ್ತರಕ್ಕೆ ಕುಲಕರ್ಣಿಗಲ್ಲಿ ದೇಶಸ್ಥ ಬ್ರಾಹ್ಮಣರಾದ ಬೆಳಗಾವಿ ಕುಲಕರ್ಣಿಗಳ ವಾಸದ ಬೀಡು. ಕುಲಕರ್ಣಿಗಲ್ಲಿಯ ಉತ್ತರಕ್ಕಿರುವ ಅನಂತಶಯನ ವಿಷ್ಣುವಿನ ದೇವಾಲಯ ದಿಂದಾಗಿ ಕರೆಯಲ್ಪಡುವ ಅನಂತಶಯನಗಲ್ಲಿ ಮಾಧ್ವ ಬ್ರಾಹ್ಮಣರ ವಾಸದ ಮನೆಗಳಿಂದ ಕೂಡಿದೆ. ಬೀದಿಯ ಕೊನೆಯಲ್ಲಿ ಜೈನ ಬಸದಿ ಹಾಗೂ ಕೆಲವು ಜೈನಧರ್ಮಿಯರ ಮನೆಗಳಿವೆ. ಇದರ ಉತ್ತರಕ್ಕೆ ಬಸವಣ್ಣಗಲ್ಲಿ ಬಸವಣ್ಣ ದೇವಾಲಯದಿಂದಾಗಿ ಹೆಸರು ಪಡೆದಿದ್ದು, ಇದು ಅನೇಕ ರೈತಾಪಿ ಕುಟುಂಬಗಳ ಮನೆಗಳನ್ನು ಹೊಂದಿದೆ. ಇದರ ಸಮೀಪದಲ್ಲಿ ದ್ಯಾಮವ್ವ ಅಥವಾ ಲಕ್ಷ್ಮೀದೇವಿಯ ಗುಡಿಯಿದ್ದು ಇದು ಬೆಳಗಾವಿನಗರದ ಮೂಲಗ್ರಾಮದೇವತೆ ಎಂಬ ಪ್ರತೀತಿ ಇದೆ. ಉತ್ತರಕ್ಕೆ ಇದರ ಬದಿಗಿರುವುದೇ ದೇಶಪಾಂಡೆಗಲ್ಲಿ. ಇಲ್ಲಿರುವ ದೇಶಪಾಂಡೆ ಕುಟುಂಬಗಳು, ಅದರಲ್ಲೂ ವಿಶೇಷವಾಗಿ ದೇಶಪಾಂಡೆ ವಕೀಲರ ಸೌಧದಿಂದಾಗಿ ಈ ಹೆಸರು ಪಡೆದಿದೆ. ಎರಡಂತಸ್ತಿನ ಮಾರುತಿಗುಡಿಯಿಂದಾಗಿ ಹೆಸರು ಪಡೆದ ಮಾರುತಿಗಲ್ಲಿ ದೇಶಪಾಂಡೆಗಲ್ಲಿಯ ಉತ್ತರ ಬದಿಗಿದೆ. ಈ ಮಾರುತಿ ರಕ್ಷಣಾ ದೇವತೆ ಎಂದು ಪರಿಗಣಿಸಲ್ಪಟ್ಟಿದ್ದು ಜನನಿಬಿಡವಾದ ಮಾರುಕಟ್ಟೆ ಪ್ರದೇಶದಲ್ಲಿದೆ. ಇಲ್ಲಿ ನಡೆಯುವ ರವಿವಾರದ ಸಂತೆಯಿಂದಾಗಿ ರವಿವಾರಪೇಟೆ ಎಂದು ಹೆಸರು ಪಡೆದಿದ್ದು ವ್ಯಾಪಾರಿಗಳಿಂದ ಕೂಡಿದ್ದು ಜನನಿಬಿಡವಾದ ಪ್ರದೇಶ. ರವಿವಾರಪೇಟದ ಪೂರ್ವಕ್ಕೆ ಗಣಪತಿಗಲ್ಲಿಯಿದ್ದು ಗಣಪತಿ ದೇವಾಲಯದಿಂದಾಗಿ ಹೆಚ್ಚಾಗಿ ತೆಲ್ಲಿಗರು ಅಥವಾ ಗಾಣಿಗರು ವಾಸಿಸುತ್ತಾರೆ. ಗಣಪತಿಗಲ್ಲಿಯ ಪಶ್ಚಿಮಕ್ಕೆ ಕಡೋಲಕರಗಲ್ಲಿಯಿದ್ದು ಇಲ್ಲಿರುವ ಕಡೋಲಕರ ಎಂಬ ಪ್ರಮುಖ ಸಾರಸ್ವತ ಬ್ರಾಹ್ಮಣ ಕುಟುಂಬದಿಂದಾಗಿ ಹೆಸರು ಪಡೆದಿದೆ. ಇಲ್ಲಿ ಹೆಚ್ಚಾಗಿ ಹತ್ತಿಬಟ್ಟೆ ನೂಲುವ ನೇಕಾರ ಕುಟುಂಬಗಳಿವೆ. ಇದರ ಉತ್ತರಬದಿಗೆ ಮೇದಾರ ವೃತ್ತಿಯವರು ವಾಸಿಸುವ ಬುರುಡಗಲ್ಲಿಯಿದೆ. ಬಾಪಟ ಎಂಬ ಹೆಸರಿನ ಜಮಿನ್ದಾರರ ಬಂಗ್ಲೆಯಿರುವ ಬಾಪಟಗಲ್ಲಿ, ಇದರ ಅಕ್ಕ–ಪಕ್ಕದಲ್ಲಿ ಮುಸಲ್ಮನ ವಸತಿಯಿದ್ದು ಆದಿಲಶಾಹಿ ಕಾಲದ ಮಸೀದಿ ಇಲ್ಲಿದೆ. ಬೋಗಾರ ಎನ್ನುವ ತಾಮ್ರಲೋಹ ಗಾರಿಕೆಯಲ್ಲಿ ತೊಡಗಿರುವ ಜನಸಮೂಹದ ಪ್ರದೇಶವಾದ ಬೋಗಾರವೇಸ ನಗರದ ಪಶ್ಚಿಮ ಎಲ್ಲೆಯಲ್ಲಿದ್ದು, ಈ ಪ್ರದೇಶ ದಲ್ಲಿ ಪೇಶ್ವಕಾಲೀನ ವೇಶ್ಯಾವಾಟಿಕೆಗಳಿದ್ದ ಬಗ್ಗೆ ಉಲ್ಲೇಖ ದೊರೆಯುತ್ತದೆ. ಈ ಪ್ರದೇಶದಲ್ಲಿರುವ ರಂಗೂಬಾಯಿ ಪಾಲೆಸ ಎಂಬ ಬೃಹತ್ ಸೌಧ ಆ ಹೆಸರಿನ ವೇಶ್ಯೆಗಾಗಿ ನಿರ್ಮಿಸಿದ್ದ ಸೌಧ ಎಂಬುದು ಉಲ್ಲೇಖನೀಯ.

ಕೇಳ್ಕರ ಎಂಬ ಕೊಂಕಣಸ್ಥ ಬ್ರಾಹ್ಮಣರ ಉದ್ಯಾನವನ ದಿಂದಾಗಿ ಕೇಳ್ಕರಭಾಗ ಎಂಬ ಹೆಸರನ್ನು ಪಡೆದಿದೆ. ಈ

ಉದ್ಯಾನ ಕೋಕೋ ಪ್ಲಾಂಟೇಷನಗಾಗಿ ಪ್ರಸಿದ್ಧಿ ಪಡೆದಿತ್ತು. ಇದು ಬ್ರಾಹ್ಮಣ ಕೇರಿಯಾಗಿದ್ದಿತ್ತು. ಇದರ ಆರಂಭಕ್ಕೆ ದಳವಿ ವಿಲ್ಲಾ ಎಂಬ ಖ್ಯಾತಿಯ ನಿವೃತ್ತ ನ್ಯಾಯಾಧೀಶರ ಉತ್ಕೃಷ್ಟ ವಾಸ್ತುಶಿಲ್ಪ ರಚನೆ ಎನಿಸಿದ ಬಂಗ್ಲೆ ಇದ್ದು, ಇದು ವಸಹಾತುವಾಸ್ತುಶಿಲ್ಪದ ಉತ್ತಮ ಉದಾಹರಣೆ. ಕೇಳ್ಕರ ಭಾಗದಲ್ಲಿ ಬಾರಾಗಡಗಡೆ ಬಾವಿ ಹೆಸರಿನಿಂದ ಕರೆಯಲ್ಪಡುವ ಹನ್ನೆರಡು ರಾಗಟೆಗಳುಳ್ಳ ವಿಶಾಲವಾದ ಚೌಕಾಕಾರದ ಬಾವಿ ಇದೆ. ಕೇಳ್ಕರಬಾಗದ ಮುಂದಿರುವುದು ರಾಮದೇವಗಲ್ಲಿ ರಾಮನ ದೇವಾಲಯದಿಂದಾಗಿ ಮತ್ತು ಬೆಲೆಬಾಳುವ ಹರಳಿನ ವ್ಯಾಪಾರದಿಂದಾಗಿ ಹೆಸರು ಪಡೆದ ಖಡೆಬಝಾರ. ಇಲ್ಲಿ ಮೂರು ಅಂತಸ್ತಿನ ಸುಂಠನಕರ ಎಂಬವರ ಪಾರಂಪರಿಕ ಸೌಧವಿದೆ. ಗೋಂಧಳಿ ಸಮುದಾಯದ ಜನರ ವಾಸಸ್ಥಳವಾದ ಗೋಂಧಳಿಗಲ್ಲಿ, ಸವಾದೇವಿಗಲ್ಲಿ [ಸವಾದೇವಿ ಗುಡಿಯಿಂದಾಗಿ], ನಾರ್ವೇಕರ ಎಂಬ ವೈಣಿಕ ಸಮುದಾಯ ಜನರ ವಾಸಸ್ಥಳವಾದ ನಾರ್ವೇಕರಗಲ್ಲಿ, ಪ್ರಸಿದ್ಧ ಶೆಟ್ಟಿ, ಹೆಸರಿನ ನಾಗರೀಕರ ನಿವಾಸವಿದ್ದ ಶೆಟ್ಟಿಗಲ್ಲಿ, ಹಳೆಯ ಪೋಲಿಸ ಸ್ಟೇಷನ ಇದ್ದ ಕೊತ್ವಲಗಲ್ಲಿ ಮುಂತಾದವುಗಳು. ಇದಲ್ಲದೆ [ಇಲ್ಲಿರುವ ಆಲದಮರದಿಂದಾಗಿ] ಕಮತಗಲ್ಲಿ [ಕೃಷಿಕರ ಓಣಿ] ಕಸಬಗಲ್ಲಿ [ಕಟುಕರ ಓಣಿ], ಜಹಮವಾಡಾ/ಘರ್ಲಳೀ [ನಾವಿದರ ಓಣಿ] ಭೇಂಡಿಬಜಾರ [ಮೂಲತಃ ಮಾರುಕಟ್ಟೆ ಓಣಿ], ಭೋಯಿಗಲ್ಲಿ [ಮೀನುಗಾರರ ಓಣಿ] ಪಾಂಗುಗಳಲ್ಲಿ [ಪಾಂಗುಳ ಹೆಸರಿನ ನಾಗರಿಕ] ಭಾತಖಾಂಡೆ ಗಲ್ಲಿ [ಭತ್ತ ಮಾರುವವರ ಓಣಿ] ಮಾಳಿಗಲ್ಲಿ [ಮಾಳಿಗಳ ಓಣಿ] ಇವು ಉಳಿದ ಓಣಿಗಳು. ಇದಲ್ಲದೆ, ಕೆಲ ಧಾರ್ಮಿಕ ಕಟ್ಟಡಗಳಿರುವ ಪ್ರದೇಶಗಳಾದ ಖಂಜರಗಲ್ಲಿ, ರಸೂಲಬಾಗ ದರ್ಗಾಗಲ್ಲಿ, ಮಸೀದಿ ಓಣಿ, ಬಸ್ತಿಗಲ್ಲಿ, ಮಠಗಲ್ಲಿ, ದೇವಾರಗಲ್ಲಿ ಚರ್ಚಬೀದಿ, ಕೋಟೆಓಣಿ, ಇವೇ ಮುಂತಾದವುಗಳು.

ಇದರಲ್ಲಿ ಆನೆಗಳಿಗೆ ನೀರು ಒದಗಿಸುವ ಆನೆಕೊಳ ಅನಗೊಳ ಎಂದೂ, ಅಗ್ರಹಾರ ನೆಲೆಯಾದ ವಡವಗ್ರಾಮ ವಡಗಾಂವ ಎಂದೂ, ಆನೆಗಳ ಹಿಂಡು ತಿರುಗುತ್ತಿರುವ ಪ್ರದೇಶವನ್ನು ಹಿಂಡಲಗಾ ಎಂದೂ, ಕೈಗಾರಿಕೆಗಳ ಸಮೂಹವುಳ್ಳ ಪ್ರದೇಶವನ್ನು ಉದ್ಯಮಬಾಗ ಎಂದೂ, ಪೀರನ ವಾಸಸ್ಥಳವಿದ್ದ ಪ್ರದೇಶವನ್ನು ಪೀರನವಾಡಿ ಎಂದೂ ಹೆಸರಿಸಲಾಗಿದೆ. ಬೆಳಗಾವಿ ನಗರಕ್ಕೆ ಪ್ಲೇಗ ಸಾಂಕ್ರಾಮಿಕ ರೋಗ ತಲೆದೋರಿದಾಗ ನಗರದ ಹೊರವಲಯಕ್ಕೆ ಜನವಸತಿ ಸ್ಥಳಾಂತರಿಸಲ್ಪಟ್ಟ ಪ್ರದೇಶಕ್ಕೆ ಟಿಳಕವಾಡಿ ಎಂದು ಕರೆಯಲಾಗಿದೆ. ಟಿಳಕ/ತಿಳಕವಾಡಿಯಲ್ಲಿ ಅನೇಕ ಪ್ರಮುಖ ನಾಗರೀಕರ ಹೆಸರಿನಿಂದ ಕರೆಯಲ್ಪಡುವ ದೇಶಮುಖ ರೋಡ, ಅಗರಕರ ರೋಡ, ಲೇಲೆರೋಡ, ರಾಯ ರೋಡ, ೧೯೨೪ರಲ್ಲಿ ನಡೆದ ೩೯ ನೇಯ ಕಾಂಗ್ರೆಸ್ ಅಧಿವೇಶನ ಸಂದರ್ಭದಲ್ಲಿ ಕಾಂಗ್ರಸಿಗರಿಂದ ಜನನಿಬಿಡವಾದ ರಸ್ತೆಯನ್ನು ಕಾಂಗ್ರೆಸ್ ರಸ್ತೆ ಎಂದು ಕರೆಯಲಾಗಿದೆ. ಕಾಂಗ್ರೆಸ ಅಧಿವೇಶನದ ಸಂದರ್ಭದಲ್ಲಿ ಕಾಂಗ್ರೆಸ್ ಪ್ರತಿನಿಧಿಗಳ ನೀರು ಪೂರೈಕೆಗಾಗಿ ಕಟ್ಟಿಸಿದ ಬಾವಿ ಕಾಂಗ್ರೆಸ ಬಾವಿ ಎಂಬ ಹೆಸರು ಪಡೆದಿದೆ.

೧೮೨೦ರಲ್ಲಿ ೭೬೫೨ ಜನಸಂಖ್ಯೆಯಿದ್ದು ೧೩೪೯ ವಾಸದ ಮನೆಗಳಿದ್ದರೆ, ೧೮೭೨ರಲ್ಲಿ ೪೩೮೮ ಮನೆಗಳಿದ್ದು ಸುಮಾರು ೮೨೭ ಸೌಧಗಳಿದ್ದವೆಂದು ಜೇಮ್ಸ್ ಕಾಂಬೆಲ್ ತಿಳಿಸುತ್ತಾನೆ. ಮತ್ತು ೨೬,೯೪೭ ಜನಸಂಖ್ಯೆ ಇದ್ದು, ೧೮೮೧ರಲ್ಲಿ ೭೭೧೩ ಕ್ಕೆ ಮನೆಗಳ ಸಂಖ್ಯೆ ಬೆಳೆಯಿತು.

ಕ್ಯಾಂಪ ಅಥವಾ ಸೈನಿಕಪಾಳ್ಯದಲ್ಲಿ ಅನೇಕ ಬ್ರಿಟೀಷ ಮಿಲಿಟರಿ ಸೇನಾನಿಗಳ ಹೆಸರಿನಿಂದ ಕರೆಯಲ್ಪಡುವ ಬೀದಿಗಳಿವೆ. ಉದಾಹರಣೆಗೆ ಎಲಿಫಿನ್ಸಟನ್ ರೋಡ, ಚರ್ಚರೋಡ, ಸೇನಾಪತಿ ಬಾಪಟ ರೋಡ, ಅವೆನ್ಯೂ ರೋಡ, ಮಿಲಿಟರಿ ಆಸ್ಪತ್ರೆ ರೋಡ, ಬರಾಕ ರೋಡ, ರಂಪಾರ್ಟ ರೋಡ, ಮಿಲಿಟರಿ ಡೇರಿ ರೋಡ ಇವೇ ಮುಂತಾದವುಗಳು. ಹಚ್ಚ ಹಸುರಿನ ಮರಗಳು ಅಗಲವಾದ ರಸ್ತೆ, ರಸ್ತೆಯ ಎರಡು ಬದಿಗೆ ಯೋಜನಾಬದ್ಧವಾಗಿ ನಿರ್ಮಿಸಿದ ವಸಹಾತು ವಾಸ್ತುಶಿಲ್ಪ ಶೈಲಿಯಸೌಧ ಸಾಲುಗಳು ಇಂದಿಗೂ ಬ್ರಿಟಿಷ ಇರುವನ್ನು ಮತ್ತು ಪ್ರಭಾವವನ್ನು ಸಾರಿ ಹೇಳುತ್ತವೆ.

ಬೆಳಗಾವಿ ನಗರದ ಬಡಾವಣೆ ಎನಿಸಿರುವ ಶಾಪೇಟ ಈಗ ಶಹಾಪೂರ ಹೆಸರಿನಿಂದ ಪ್ರಸಿದ್ಧಿ ಪಡೆದಿದೆ. ಶಹಾಪೂರ ಪರಗಣ ಸಾಂಗ್ಲಿ ಪಟವರ್ಧನರ ಅಧೀನಲ್ಲಿತ್ತು. ಈ ಕಾರಣಕ್ಕೆ ಮರಾಠ ವಾಸ್ತುಶಿಲ್ಪ ಬಿಂಬಿಸುವ, ಯತೇಚ್ಛವಾಗಿ ಸಾಗವಾನಿ ಕಟ್ಟಿಗೆಯನ್ನು ಬಳಸಿ ನಿರ್ಮಿಸಿರುವ ವಾಸದ ಮನೆಗಳ ಸಾಲುಗಳನ್ನು ರಸ್ತೆಯ ಇಕ್ಕೆಲಗಳಲ್ಲಿ ಕಾಣಬಹುದು. ಇಲ್ಲಿರುವ ಕಛೇರಿಗಲ್ಲಿ, ಆಚಾರಗಲ್ಲಿ, ಸರಾಫಕಟ್ಟಾ, ನಾಥಪೈ ಚೌಕ, ಹುತಾತ್ಮಾ ಚೌಕ, ಮಹಾದ್ವಾರ ಬೀದಿ ಇವೇ ಮುಂತಾದವುಗಳು ಮರಾಠರ ಇರುವನ್ನು ಇಂದಿಗೂ ಸೂಚಿಸುತ್ತವೆ. ಶಹಾಪೂರ ನಾಯಕ ಬಂಗ್ಲೆ ಮತ್ತು ಎಲ್ಲಕ್ಕೂ ಮಿಗಿಲಾಗಿ ವಿಠ್ಠಲ ಗುಡಿ, ಬಾಲಾಜಿ ಗುಡಿ ಜೈನ ಬಸ್ತಿ ಮತ್ತು ವೆಂಕಟರಮಣ ದೇವಾಲಯಗಳು ಗಮನಾರ್ಹ. ನಯನಾಜೂಕಿನ ಉತ್ತಮ ಅಲಂಕರಣದ ಕಾಷ್ಟಶಿಲ್ಪದ ಸೂಕ್ಷ್ಮ ಕೆತ್ತನೆಯ ಈ ಭವ್ಯ ದೇವಾಲಯಗಳು ಬೆಳಗಾವಿ ನಗರದ ಹೆಮ್ಮೆಯ ಪಾರಂಪರಿಕ ಸೌಧಗಳು. ಇವೆಲ್ಲ ಓಣಿಗಳು ಯೋಜನಾಬದ್ಧವಾದ ನಿರ್ಮಿತಿಗಳಾಗಿದ್ದು, ಇಕ್ಕೆಲ್ಲಗಳಲ್ಲಿ ಕೆಂಪು ಹಂಚಿನ ಹೊದಿಕೆಯ ವಾಸದ ಮನೆಗಳು, ಅಂಗಡಿಗಳು, ವ್ಯಾಪಾರ ವಹಿವಾಟಿನ

ಮಳಿಗೆಗಳು ಮತ್ತು ಪ್ರಮುಖ ನಾಗರೀಕ ಮನೆಗಳನ್ನು ಹೊಂದಿದ್ದವು.

ಒಟ್ಟಾರೆ ಇತಿಹಾಸದ ವಿವಿಧ ಕಾಲಾವಧಿಯಲ್ಲಿ ಅಸ್ತಿತ್ವಕ್ಕೆ ಬಂದ ಈ ಗಲ್ಲಿಗಳ/ವಾಡೆಗಳ/ಓಣಿಗಳ ಮತ್ತು ಬೀದಿಗಳ ಪಾರಂಪರಿಕ ಹಿನ್ನೆಲೆ ಮತ್ತು ಮಹತ್ವದ ಸ್ಥೂಲಚಿತ್ರಣ ಕೊಡುವ ಪ್ರಯತ್ನ ಪ್ರಸ್ತುತ ಪ್ರಬಂಧದಲ್ಲಿದೆ. ಇದೊಂದು ಸೂಕ್ಷ್ಮಸ್ಥರದ ಅಧ್ಯಯನವಾಗಿದ್ದು, ಇಂತಹ ಅಧ್ಯಯನ ಕರ್ನಾಟಕದ ಇನ್ನುಳಿದ ಪ್ರಾಚೀನ ನಗರಗಳ ಕುರಿತಾಗಿ ಕೈಗೊಳ್ಳುವುದು ಅತ್ಯಗತ್ಯವಾಗಿದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

೧. Stokes, Historical Sketches of Belgaum District, Belgaum, 1878.

೨. James Cambell (Ed.) Gazetteer of Bombay Presidency, Belgaum, Bombay, 1884.

೩. ಬೆಳಗಾವಿ ನಗರ ಸಭೆಯಲ್ಲಿ ಲಭ್ಯವಿದ್ದ ಸಂಬಂಧಿತ ದಾಖಲೆಗಳು ಮತ್ತು ನಕಾಶೆಗಳು.

೪. ಬೆಳಗಾವಿಯ ವಿವಿಧ ಬೀದಿ, ಓಣಿಗಳಲ್ಲಿ ಕೈಗೊಂಡ ಕ್ಷೇತ್ರಕಾರ್ಯ.

೧೧೪

ಐತಿಹಾಸಿಕ ಮೈಸೂರು ದಸರಾ ಕಾರ್ಯಕ್ರಮದಲ್ಲಿ ಪೊಲೀಸರ ಪಾತ್ರ

ಡಾ. ಬಿ.ಸಿ. ಸುರೇಶ*

ವಿಜಯನಗರ ಸಾಮ್ರಾಜ್ಯದ ಪತನಾನಂತರ ಅಲ್ಲಿ ನಡೆಯುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳು ಮೈಸೂರಿನಲ್ಲಿ ಆರಂಭಗೊಂಡವು, ಅದರಲ್ಲಿ ದಸರಾ ಕಾರ್ಯಕ್ರಮವು ಒಂದು. ಮೈಸೂರು ಎಂದರೆ ಸಾಂಸ್ಕೃತಿಕ ನಗರಿ ಎಂದು ಪ್ರಸಿದ್ಧಿಯನ್ನು ಪಡೆದಿದೆ. ಇದಕ್ಕೆ ಪೂರಕವಾಗಿರುವುದೆ ದಸರಾ ಭಾರತದ ಹಲವಾರು ಭಾಗಗಲ್ಲಿ ಆಚರಿಸಲಪ್ಪಡುತ್ತದೆ. ಈ ಹಬ್ಬವನ್ನು ಮೈಸೂರಿನಲ್ಲಿ "ಮೈಸೂರು ದಸರಾ", "ನಾಡಿನ ಹಬ್ಬ" 'ದುಷ್ಟ ನಿಗ್ರಹ ಶಿಷ್ಟ ಪರಿಪಾಲನೆ'ಯ ಹಬ್ಬವೆಂದು ಕರೆಯುತ್ತಾರೆ. ವಿಜಯನಗರದ ಅರಸರು ಅನಂತರ ಮೈಸೂರು ಅರಸರು ಆಚರಿಸಿಕೊಂಡು ಬರುತ್ತಿರುವ ಈ ದಸರಾ ವಿಶ್ವವಿಖ್ಯಾತಿ ಪಡೆದಿದೆ. ಇದು ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಸಾರುವ ದಸರಾ ಐತಿಹಾಸಿಕ ಉತ್ಸವವಾಗಿ ನಡೆಯುತ್ತಿದೆ. ಈ ಭಾಗದಲ್ಲಿ ರಾಜರ ಆಳ್ವಿಕೆಯು ಕೊನೆಗೊಂಡು ಪ್ರಜಾಪ್ರಭುತ್ವದ ಆಡಳಿತ ಬಂದ ಅನಂತರದಲ್ಲೂ ದಸರಾ ಕಾರ್ಯಕ್ರಮಗಳು ನಡೆಯುತ್ತಾ ಬಂದಿವೆ. ಈ ದಸರಾ ಕೇವಲ ಮೈಸೂರು ಅರಮನೆಗೆ ಅಥವಾ ರಾಜರ ಖಾಸಗೀ ಸಾಂಪ್ರದಾಯಿಕ ಉತ್ಸವವಾದರೂ ಸಹ ಇದು ಪ್ರಜೆಗಳೆಲ್ಲರ ಹಬ್ಬವಾಗಿದೆ. ಮೈಸೂರನ್ನು ಆಳಿದ ರಾಜರುಗಳಲ್ಲಿ ಜಯಚಾಮರಾಜೇಂದ್ರ ಒಡೆಯರ್ ಅವರ ಮರಣಾನಂತರ ಇದನ್ನು 'ನಾಡಹಬ್ಬ'ವಾಗಿ ಆಚರಿಸಲಾಗುತ್ತಿದೆ.

ಕ್ರಿ.ಶ. ೧೩೯೯ರಲ್ಲಿ ಯದುರಾಯರಿಂದ ಮೈಸೂರಿನ ಯುದುವಂಶ ಆರಂಭವಾಯಿತು ಎಂಬುದು 'ಶ್ರೀ ಮನ್ಮಹಾರಾಜರವರ ವಂಶಾವಳಿ'ಯಿಂದ ತಿಳಿಯುತ್ತದೆ. ಯದುರಾಯರು ನೆಲೆಸಿದ್ದು ಮೈಸೂರಿನ ಅರಮನೆಯಲ್ಲಿ ಎಂದು ಹಲವು ಗ್ರಂಥಗಳು ಉಲ್ಲೇಖಿಸಿದರೂ ಸಹ ಆ ಅರಮನೆಯು ಪ್ರಸ್ತುತವಾಗಿರುವ ಅರಮನೆಯಲ್ಲ ಎಂದು ಹೇಳಬಹುದು. ಇದು ಅಂದಿನ ಅರಸು ಮನೆಯನ್ನು ಅರಮನೆ ಎಂದು ಪರಗಣಿಸಿರಬೇಕು ಎಂದು ಪ್ರೊ. ವಿ. ನಂಜರಾಜ ಅರಸು ರವರು ಅಭಿಪ್ರಾಯ ಪಡುತ್ತಾರೆ. ಕ್ರಿ.ಶ. ೧೭೬೦ರಲ್ಲಿ ಹೆಸರಿಗೆ ಪ್ರಧಾನಿ ಎಂದು ಕರೆಯುಲಾಗುತ್ತಿದ್ದರೂ ಸರ್ವಾಧಿಕಾರಿಯಾಗಿದ್ದ ಹೈದರ್ ಆಲಿ 'ಮಹಾರಾಜ'ರಾದ ಇಮ್ಮಡಿ ಕೃಷ್ಣರಾಜ ಒಡೆಯರನ್ನು ಅವರ ರಾಜಧಾನಿ ಮೈಸೂರು ಹಾಗೂ ಅವರ ಅರಮನೆಯನ್ನು ವೀಕ್ಷಿಸಲು ಶ್ರೀರಂಗಪಟ್ಟಣದಿಂದ ಕರೆತಂದರು. ಅನಂತರ ಅರಮನೆಯ ಬಗ್ಗೆ ಉಲ್ಲೇಖವಾಗುವುದು ೧೭೯೩ರಲ್ಲಿ ಅರಮನೆ ಕುರುಹುಗಳನ್ನ ಪ್ರಾಚೀನ ಮಹತ್ವ ಗ್ರಂಥಗಳನ್ನು ಟಿಪ್ಪು ನಾಶಗೊಳಿಸಿದ. ಅರಮನೆ ಹಾಳಾದರೂ ಅಲ್ಲಿಯ ದೇವಾಲಯುಗಳು ಹಾಗೆಯೇ ಇದ್ದವು. ಟಿಪ್ಪುವಿನ ಮರಣಾನಂತರ ಕ್ರಿ.ಶ. ೧೭೯೯ರಲ್ಲಿ ನಜರ್‌ಬಾದ್‌ನಲ್ಲಿ (ಟಿಪ್ಪು ಹೊಸ ಮೈಸೂರೆಂದು ಕರೆದ ಸ್ಥಳ) ರಾಜರಿಗೆ ತಕ್ಕ ಅರಮನೆಯಿಲ್ಲದೆ ಇದ್ದುದರಿಂದ ಕಾರ್ಮಿಕರ ಜೋಪಡಿಗಳ ಮುಂದೆ ದೊಡ್ಡ ಚಪ್ಪರವನ್ನು ಹಾಕಿ ೩೦ ಜೂನ್ ೧೭೯೯ರಂದು ಪಟ್ಟಾಭಿಷೇಕವನ್ನು ಮಾಡಲಾಯಿತು. ಪಟ್ಟಾಬಿಷೇಕದ ಸಂದರ್ಭದಲ್ಲಿ ಅವರ ಬೆಂಗಾವಲು ಪಡೆ ಮತ್ತು ಅಶ್ವದಳದ ಒಂದು ತಂಡ ಕೂಡ ಆಗಮಿಸಿತ್ತು. ರಾಜಮರ್ಯಾದೆಗೆ ತಕ್ಕಂತೆ ಸೇನಾಪಡೆ ಕುಶಾಲ ತೋಪು ಹಾರಿಸುವುದೇ ಅಲ್ಲದೆ ಶಿಸ್ತಿನ ಗೌರವ ಸಲ್ಲಿಸಿತು. ಇದಕ್ಕಾಗಿ ತುಪಾಕಿಯ ಗಾಡಿಗಳನ್ನು ಶ್ರೀರಂಗಪಟ್ಟಣದಿಂದ ತರಿಸಲಾಗಿತ್ತು. ಪಟ್ಟಾಭಿಷೇಕಕ್ಕೆ ಲೆಫ್ಟಿನೆಂಟ್ ಜನರಲ್ ಹ್ಯಾರಿಸ್ ಮತ್ತು ಮೀರ್ ಆಲಮ್‌ರು ಮಹಾರಾಜರ ಹಸ್ತ ಹಿಡಿದು ಸಿಂಹಾಸನದ ಬಳಿ ಕರೆತಂದು ಗೌರವ ಸಲ್ಲಿಸಿದರು. ಅವರ ಎಕ್ಸೆಲೆನ್ಸಿ ದಿ ಕಮಾಂಡರ್ ಇನ್ ಛೀಫ್-ಸೇನಾಪಡೆಯ ಮುಖ್ಯಸ್ಥರು ಮಹಾರಾಜರಿಗೆ ರಾಜಮುದ್ರೆಯನ್ನು ನೀಡಿದರು. ಈ ರೀತಿ ಯಲ್ಲಿ ಅಂದಿನಿಂದಲೂ ಸಹ ಪೊಲೀಸರು ತುಪಾಕಿಗಳನ್ನು ಹಾರಿಸುವುದು ಮತ್ತೀತರ ಕೆಲಸಗಳನ್ನು ಮಾಡುತ್ತಿದ್ದರು.

ಮೈಸೂರು ದಸರಾ ಕ್ರಿ.ಶ. ೧೬೧೦ರಿಂದ ಆರಂಭ ವಾಯಿತು. ಮೊದಲು ವಿಜಯನಗರ ಕಾಲದಲ್ಲಿ ಆರಂಭವಾಗಿ ನಂತರ ಶ್ರೀರಂಗಪಟ್ಟಣದಲ್ಲಿ ನಡೆಯುತಿತ್ತು. ಮೈಸೂರು ರಾಜಧಾನಿಯಾದ ನಂತರ ಮೈಸೂರಿನಲ್ಲಿ ನಡೆಯಲು ಆರಂಭವಾಯಿತು. ನವರಾತ್ರಿ ಆರಂಭಕ್ಕೂ ಮುನ್ನ ಮಂಗಳ

* ಇತಿಹಾಸ ಸಹಾಯಕ ಪ್ರಾಧ್ಯಾಪಕ, ಶ್ರೀ ಮದ್ದಾನೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಬ್ಬಹಳ್ಳಿ, ಗುಂಡ್ಲುಪೇಟೆ ತಾಲ್ಲೂಕು.

ಮುಹೂರ್ತದಂದು ಭದ್ರಕೋಣೆಯಲ್ಲಿ ಸುರಕ್ಷಿತವಾಗಿ ಇಟ್ಟಿರುವ ಸಿಂಹಾಸನದ ಬಿಡಿ ಭಾಗಗಳನ್ನು ಅರಮನೆಯ ಜನಾನಾ ಸಮ್ಮುಖದವರು (ಇವರಿಗೆ ಖಾಸ್ ಸಮ್ಮುಖ ಮತ್ತು ಖಾಂಗೀ ಇಲಾಖೆಯವರು ಸಹಾಯ ಮಾಡುತ್ತಾರೆ) ಒಟ್ಟುಗೂಡಿಸಿ ದರ್ಬಾರ್ ಸಭಾಂಗಣಕ್ಕೆ ಬಿಡದಿ ನೀರಿನವರ ಸಹಾಯದಿಂದ ತರುತ್ತಾರೆ. ಅರಮನೆಯ ಜೋಯಿಸರು ಒಂದು ಶುಭಗಳಿಗೆಯನ್ನು ನಿರ್ಧರಿಸುತ್ತಾರೆ ಆಗ ಪುರೋಹಿತರು ಹೋಮ ಹವನಾದಿಗಳನ್ನು ನೆರವೇರಿಸಿ ಪುಣ್ಯಾಹ್ಯ ಮಾಡಿ ಪೂಜೆಯನ್ನು ಸಲ್ಲಿಸುತ್ತಾರೆ. ಆಗ ಹುಜೂರ್ ಸೆಕೆಟ್ರಿ, ದರ್ಭಾರ್ ಭಕ್ಷಿ, ಅರಮನೆಯ ಇಂಜಿನಿಯರ್ ಮತ್ತು ಆಡಳಿತಾಧಿಕಾರಿಗಳು ಹಾಜರಿರುತ್ತಾರೆ ಆಗ ಪೊಲೀಸ್ ಪಡೆ ರಕ್ಷಣಾ ಕಾರ್ಯವನ್ನು ನಿರ್ವಹಿಸುತ್ತದೆ. ಅಂದಿನ ಪೊಲೀಸರ ವಸ್ತ್ರವು ಕಚ್ಚೆಪಂಚೆ, ಉದ್ದನೆಯ ದ್ಯೋತಿ, ದುಂಡನೆಯ ಟೋಪಿಯನ್ನು ಧರಿಸುತ್ತಿದ್ದರು.

ರಾಜರು ವಿಶೇಷ ದರ್ಬಾರ್ ಉಡುಪು ಧರಿಸಿ, ಖಾಸಗೀ ಕೊಠಡಿಯಿಂದ ಹೊರಬಂದು ಆತ್ಮವಿಲಾಸ ವಿನಾಯಕನ ದರ್ಶನ ಪಡೆದು ದರ್ಬಾರ್ ಸಭಾಂಗಣಕ್ಕೆ ಹೋಗಿ ಅಲ್ಲಿ ಸಿಂಹಾಸನದ ನೈಋತ್ಯ ದಿಕ್ಕಿನಲ್ಲಿ ಸ್ಥಾಪನೆ ಮಾಡಿರುವ ನವಗ್ರಹಕ್ಕೆ ಪೂಜೆ ಸಲ್ಲಿಸಿ ಅಲ್ಲಿ ಮುವತ್ತೆರಡು ಕಳಶಗಳನ್ನು ಸ್ಥಾಪನೆ ಮಾಡಿ ನವಗ್ರಹ ಕಳಶಪೂಜೆ ಮಾಡುವರು. ನಂತರ ಪ್ರಭುಗಳು ಬಿಜಂಯಗೈಯುವರು ಸಾಲುಕಟ್ಟಿ ನಿಂತಿದ್ದ ದರ್ಬಾರಿಗಳೆಲ್ಲರು ಎದ್ದು ನಿಂತು ರಾಜರಿಗೆ ನಮಸ್ಕರಿಸಿ ಪರಾಕ್ ಬಹುಪರಾಕ್ ಹೇಳುವರು. ರಾಜರು ಸಿಂಹಾಸನದ ಸುತ್ತ ಮೂರು ಸುತ್ತು ಪ್ರದಕ್ಷಿಣೆ ಹಾಕಿ ಸಿಂಹಾಸನಕ್ಕೆ ಏರುವರು. ಆಗ ಜೋಯಿಸರು ಮಂಗಳಾಷ್ಟಕ ಪಠಣ ಮಾಡುವರು. ಆಗ ಅರಮನೆಯ ಬತೇರಿಯಿಂದ ಸೈನಿಕರು ಇಪ್ಪತ್ತೊಂದು ಕುಶಾಲ ತೋಪು ಗಳನ್ನು ಹಾರಿಸುವರು. ಆಗ ರಾಜ್ಯಗೀತೆಯನ್ನು ನುಡಿಸುವರು. ಪ್ರಭುಗಳು ಸಿಂಹಾಸನದ ಕೂರ್ಮಾಸನ ಪೀಠದಲ್ಲಿ ಮಂಡಿಸುವಾಗ ಪಕ್ಕದಲ್ಲಿ ಪಟ್ಟದ ಕತ್ತಿ ಮತ್ತು ರಾಜಮೊಹರನ್ನು ಇಡುತ್ತಿದ್ದರು. ಸೇನಾ ತುಕಡಿಗಳಿಂದ ಮಾರ್ಚ್‌ಫಾಸ್ಟ್ ಮಾಡಿಸಿ ಸೆಲ್ಯೂಟ್ ಮಾಡಿಸಲಾಗುತ್ತದೆ. ಅನಂತರ ದಿವಾನರು, ಹಿರಿಯ ಅರಸು ಸರದಾರರು, ರಾಜಬಂಧುಗಳು, ರಾಜ್ಯದ ಪ್ರಮುಖ ಅಧಿಕಾರಿಗಳು, ಸೇನಾ ಪ್ರಮುಖರು, ಗಣ್ಯ ನಾಗರೀಕರು ಸಾಲಾಗಿ ಆಗಮಿಸಿ ಗೌರವ ಸಲ್ಲಿಸುತ್ತಾರೆ ಆಗ ಅಂಗರಕ್ಷಕ ಪಡೆಯು ಇರುತ್ತಿದ್ದರು.

ಅನಂತರ ಸೋಮೇಶ್ವರ ದೇವಾಲಯದಿಂದ ಪಟ್ಟದ ಆನೆ, ಪಟ್ಟದ ಕುದುರೆ, ಮತ್ತು ಪಟ್ಟದ ಹಸುವಿನ ಮೆರವಣಿಗೆ ಮಂಗಳವಾದ್ಯ, ಜಿಲ್ಲೋ ಸೈನ್ಯದ ಮರ್ಯಾದೆಯೊಡನೆ ದರ್ಬಾರ್ ಹಾಲ್‌ಗೆ ಆಗಮಿಸುತ್ತವೆ. ಅವುಗಳಿಂದ ಗೌರವ ಸ್ವೀಕರಿಸಿ ಅವುಗಳಿಗೆ ಪೂಜೆ ಸಲ್ಲಿಸುತ್ತಾರೆ. ಸೈನಿಕರ ಬೆಂಗಾವಲಿನೊಡನೆ ಮೆರವಣಿಗೆಯಲ್ಲಿ ಕೋಟೆ ಪಕ್ಕದ ಸೋಮೇಶ್ವರ ದೇವಸ್ಥಾನಕ್ಕೆ ಪೂಜೆಗೆಂದು ಕರೆದೊಯ್ಯ ಲಾಗುತ್ತದೆ. ಪೂಜೆ ನಂತರ ಆಸ್ಥಾನ ವಿದ್ವಾಂಸರಿಂದ ಸಂಗೀತ ಕಛೇರಿ, ಜಟ್ಟಿಗಳಿಂದ ಕುಸ್ತಿಗಳು, ಪೊಲೀಸ್ ಪಡೆಯ ತುಕಡಿಗಳಿಂದ ಕವಾಯತು ಮತ್ತು ಕ್ರೀಡಾಕೌಶಲ ಪ್ರದರ್ಶನ ಮುಂತಾದವು ನಡೆಯುತಿತ್ತು.

ಅಶ್ವಯುಜ ಶುಕ್ಲ ನವಮಿಯಂದು ನೇರವೇರುವ ವಿಶಿಷ್ಟ ಪೂಜೆಯೆ ಆಯುಧ ಪೂಜೆ. ಈ ಆಯುಧ ಪೂಜೆಯ ಬಗ್ಗೆ ಆರಂಭದಲ್ಲಿಯೇ ಚರ್ಚಿಸಲಾಗಿದೆ. ಇದು ಕೊನೆಯ ದಿನವಾಗಿದ್ದು ಅರಮನೆಯ ಆಯುಧಗಳು, ಖಾಸಾ ಶಸ್ತ್ರಗಳು ಮುಂತಾದ ವಸ್ತುಗಳಿಗೆ ಬೆಳಿಗ್ಗೆ ೫.೩೦ ರಿಂದ ೬.೦೦ ಗಂಟೆಯೊಳಗೆ ಪ್ರಾರಂಭಿಕ ಪೂಜೆ ಸಲ್ಲಿಸಿ ಅವುಗಳನ್ನು ಚಿನ್ನದ ಪಲ್ಲಕ್ಕಿಯುಳ್ಳ ರಥದಲ್ಲಿರಿಸಿ ಮಂಗಳವಾದ್ಯದೊಡನೆ ಜಿಲ್ಲೋ ಪಡೆಯ ಗೌರದೊಡನೆ ಪಟ್ಟದ ಕುದುರೆ, ಪಟ್ಟದ ಆನೆ, ಪಟ್ಟದ ಹಸುಗಳಿಗೆ ಪೂಜೆ ಸಲ್ಲಿಸಲಾಗುತ್ತದೆ. ಈ ಮೆರವಣಿಗೆ ಜಯಮಾರ್ತಾಂಡ ಹೆಬ್ಬಾಗಿಲ ಬಳಿ ಬಂದು ಮತ್ತೊಂದು ಭಾಗದಿಂದ ಶ್ರೀ ಅಮಲದೇವತಾ ದೇವಿಯ ಮೆರವಣಿಗೆ ಒಂದಾದ ಮೇಲೆ ಆನೆಬಾಗಿಲಿಗೆ ಬಂದಾಗ ಆಯುಧಗಳಿಗೆ ಮಹಿಳೆಯರು ಕೆಂಪು ಆರತಿ ಬೆಳಗುವರು. ಆಯುಧಗಳು ಕಲ್ಯಾಣ ಮಂಟಪದ ದಕ್ಷಿಣ ಭಾಗದ ಮೊಗಸಾಲೆಯ ವೇದಿಕೆಯ ಮೇಲೆ ಆಯುಧಗಳನ್ನು ಇರಿಸಿ ಶ್ರೀ ಅಮಲದೇವಿಯ ಮೂರ್ತಿಯನ್ನು ಚಾಮುಂಡಿ ತೊಟ್ಟಿಯ ಮೊದಲ ಉಪ್ಪರಿಗೆ ಪಶ್ಚಿಮ ಭಾಗದಲ್ಲಿರುವ ಗುಡಿಗೆ ತೆಗೆದುಕೊಂಡು ಹೋಗಿ ಸ್ವಸ್ಥಾನದಲ್ಲಿ ಇರಿಸುತ್ತಾರೆ. ಒಂಭತ್ತು ಗಂಟೆಗೆ ಸರಿಯಾಗಿ ರಾಜರು ತಮ್ಮ ಪರಿವಾರ ದೊಂದಿಗೆ ವಿನಾಯಕನ ದರ್ಶನ ಪಡೆದು ತೀರ್ಥಪ್ರಸಾದ ಪಡೆದು ಚಂಡೀಹೋಮ ತೊಟ್ಟಿಗೆ ಆಗಮಿಸುವರು. ಅಲ್ಲಿ ಪೂರ್ಣಾಹುತಿಯ ಅನಂತರ ರಾಜರು ವಿಶೇಷ ಧಿರಿಸಿ ನೊಂದಿಗೆ ಅಮೃತ ಶಿಲಾಸೋಪಾನಗಳ ಮೂಲಕ ವಿನಾಯಕನ ದರ್ಶನ ಪಡೆದು ಕಲ್ಯಾಣ ಮಂಟಪಕ್ಕೆ ಬರುತ್ತಾರೆ. ಅಲ್ಲಿರುವ ಧಾರ್ಮಿಕ ಕಾರ್ಯಗಳನ್ನು ಮುಗಿಸಿ ಮಂಟಪದ ವಿಶೇಷ ವೇದಿಕೆಯ ಮೇಲೆ ಬರುತ್ತಾರೆ. ಆಗ ರಾಜ್ಯಗೀತೆ ಯನ್ನು ನುಡಿಸಲಾಗುತ್ತದೆ. ಇದು ಮೈಸೂರಿನ ರಾಜ್ಯಗೀತೆ ಎನ್ನಲಾಗುತ್ತಿದೆ. ಒಡೆಯರ ಕುಲದೇವತೆಯಾದ ಶ್ರೀ ಚಾಮುಂಡೇಶ್ವರಿ ಅಥವಾ ಗೌರಿಯನ್ನು ಸ್ತುತಿಸುವ ರಾಜ್ಯಗೀತೆಯನ್ನು ರಚಿಸಿದವರು ಆಸ್ಥಾನ ಸಾಹಿತಿ ವಿದ್ವಾನ್ ಬಸಪ್ಪಶಾಸ್ತ್ರಿಯವರು. ಇದನ್ನು ಹತ್ತನೆಯ ಚಾಮರಾಜೇಂದ್ರ

ಒಡೆಯರ್ ಅವರು ತಮ್ಮ ಬ್ಯಾಂಡ್ ಮಾಸ್ಟರ್ ಮತ್ತು ವಿದ್ವಾಂಸರಾದ ವೈಣಿಕ ಶಿಖಾಮಣಿ ಶೇಷಣ್ಣ ಅವರ ಸಹಯೋಗದೊಂದಿಗೆ ಖುದ್ದಾಗಿ ರಾಗ ಸಂಯೋಜಿಸಿದರು.

ಆ ದಿನ ಸಂಜೆ ಯೂರೋಪಿಯನ್ ದರ್ಬಾರ್ (ಇಂಗ್ಲೀಷ್ ದರ್ಬಾರ್) ಆರಂಭವಾಗುತ್ತದೆ. ಬ್ರಿಟೀಷ್ ರೆಸಿಡೆಂಟ್‌ರು ನಾಲ್ಕು ಕುದುರೆಗಳು ಎಳೆಯುವ ರಾಜ್ಯರಥದಲ್ಲಿ ಕುಳಿತು ಅಶ್ವಾರೋಹಿಗಳ ಕಾವಲಿನಲ್ಲಿ ಅರಮನೆಗೆ ಬರುತ್ತಾರೆ. ರೆಸಿಡೆಂಟರು ಸಿಂಹಾಸನದ ಬಲಭಾಗದಲ್ಲಿರುವ ಚಿನ್ನದ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾರೆ. ದಿವಾನರು ರೆಸಿಡೆಂಟರಿಗೆ ಪುಷ್ಪವನ್ನು ನೀಡಿ ಗೌರವಿಸುವರು. ಪ್ರತಿಯೊಬ್ಬ ಯೂರೋಪಿಯನ್ ಅತಿಥಿಗಳು ಮಹಾಪ್ರಭುಗಳ ಮುಂದೆ ಬಂದು ನಮಿಸಿ ಹೋಗುತ್ತಾರೆ. ಆ ಸಮಯದಲ್ಲಿ ಸಜ್ಜೆಯ ಕೆಳಗೆ ಇಂಗ್ಲೀಷ್ ಬ್ಯಾಂಡ್, ವಾದ್ಯಗೋಷ್ಠಿ ನಡೆಯುತ್ತದೆ. ಮುಂದಿನ ಅಂಗಳದಲ್ಲಿ ಅಶ್ವದಳದಿಂದ ವಿವಿಧ ರೀತಿಯ ಆಕರ್ಷಕ ಡ್ರಿಲ್, ಕಸರತ್ತು, ಮದ್ದು ಹೂಬುಟ್ಟಿಯ ವರ್ಣರಂಜಿತ ಪ್ರದರ್ಶನಗಳು ನಡೆಯುತ್ತವೆ.

೧೯೦೨ರಲ್ಲಿ ಅಶ್ವದಳದ ಒಂದು ಪಡೆ ಮತ್ತು ಒಂದು ರಥ ಯೂರೋಪಿಯನ್ ರೆಸಿಡೆಂಟನ ಮನೆ ಬಳಿ ಇದ್ದು ಅವರನ್ನು ಜಗನ್ಮೋಹನ ಅರಮನೆಗೆ ಕರೆತರಬೇಕಿತ್ತು. ೧೯೨೩ರಲ್ಲಿ ರೆಸಿಡೆಂಟರ ನಿವಾಸದ ಬಳಿ ಅರ್ಧಗಂಟೆ ಮುಂಚಿತವಾಗಿ ಕಾದು ಅರಮನೆಗೆ ಕರೆತರಬೇಕು. ರೆಸಿಡೆಂಟರು ಜಗನ್ಮೋಹನ ಅರಮನೆಗೆ ಬಂದಾಗ (೧೯೦೨) ಕೋಟೆಯಿಂದ ೧೩ ಕುಶಲ ತೋಪುಗಳನ್ನು ಹಾರಿಸಲಾಗುತ್ತದೆ. (೧೯೨೩) ರೆಸಿಡೆಂಟರು ಅರಮನೆಯ ಅಂಗಳಕ್ಕೆ ಬಂದಾಗ ಸೇನಾಗೌರವ ರಕ್ಷೆ ನೀಡಬೇಕು. ಜಗನ್ಮೋಹನ ಅರಮನೆಯಲ್ಲಿ ರೆಸಿಡೆಂಟ್‌ನಿಗೆ (೧೯೦೨) ಸೇನಾತುಕಡಿ ಗೌರವ ಸಲ್ಲಿಸಬೇಕು. ೧೯೨೩ ರಲ್ಲಿ ರೆಸಿಡೆಂಟ್‌ನನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಒರ್ವ ರೆಸಿಡೆಂಟ್ ಆನೆಬಾಗಿಲ ಬಳಿ ನಿಂತು ಸ್ವಾಗತಿಸಿ ಸಜ್ಜೆಗೆ ಕರೆತರಬೇಕು. ಮೆಟ್ಟಿಲವರೆಗೆ ಕೆಂಪು ಹಾಸನ್ನು ಹಾಸಿರಬೇಕು. ಎರಡು ಬದಿಯಲ್ಲೂ ಅರಮನೆ ಪೊಲೀಸರು ಇರಬೇಕಿತ್ತು.

ವಿಜಯದಶಮಿಯ ಬೆಳಿಗ್ಗೆ ೯ ಗಂಟೆಗೆ ಮಹಾಪ್ರಭುಗಳು ದರ್ಬಾರ್ ಉಡುಗೆಯಲ್ಲಿ ಸಜ್ಜೆಯಿಂದ ಹೊರಟು ಆತ್ಮವಿಲಾಸದ ಗುಡಿಯ ಬಳಿ ವಿನಾಯಕನ ದರ್ಶನ ಪಡೆದು ತೀರ್ಥಪ್ರಸಾದ ಪಡೆದು ನಂತರ ಕಲ್ಯಾಣ ಮಂಟಪಕ್ಕೆ ಬಂದು ಆಯುಧಗಳಿಗೆ ಉತ್ತರಪೂಜೆ ಮಾಡುತ್ತಾರೆ. ಶ್ರೀ ಮದ್ಯುವರಾಜರು ಖಾಸ್ ಸವಾರಿಗೆ ಮುಜರೆ ಮಾಡುತ್ತಾರೆ. ಪುರೋಹಿತರು ಹಲವು ಪೂಜೆ ಪುನಸ್ಕಾರಗಳನ್ನು ಮಾಡುತ್ತಾರೆ. ತದನಂತರ ಸವಾರ್ ತೊಟ್ಟಿಯಲ್ಲಿ ನಿರ್ಮಿಸಿದ್ದ ವಿಶೇಷ ಅಖಾಡದಲ್ಲಿ ಎರಡು ಜೊತೆ ಜಟ್ಟಿಗಳು ವಜ್ರಮುಷ್ಠಿ ಕಾಳಗವನ್ನು ನಡೆಸುತ್ತಾರೆ. ವಜ್ರಮುಷ್ಟಿ ಕಾಳಗವಾದ ನಂತರ ರಾಜರು ಫಲಪೂಜೆಯನ್ನು ನೆರವೇರಿಸುತ್ತಾರೆ. ಉತ್ತರ ಪೂಜೆಯ ಅನಂತರ ರಾಜರು ಪಟ್ಟದ ಕತ್ತಿಯನ್ನು ಶ್ರೀ ಮಧ್ಯುವರಾಜರು ಮತ್ತೊಂದು ಕತ್ತಿಯನ್ನು ಹಿಡಿದು ಕಲ್ಯಾಣ ಮಂಟಪದಿಂದ ಹೊರನಡೆಯುತ್ತಾರೆ. ಆಗ ಇತರ ಸರದಾರರು, ಅರಸು ಬಂಧುಗಳು ಇನ್ನಿತರ ಆಯುಧಗಳನ್ನು ಹಿಡಿದು ರಾಜರನ್ನು ಹಿಂಬಾಲಿಸುತ್ತಾರೆ. ಅಲ್ಲಿ ರಾಜರು ಚಿನ್ನದ ಪಲ್ಲಕ್ಕಿಗೆ ತಮ್ಮ ಕೈಯಲ್ಲಿದ್ದ ಕತ್ತಿಯನ್ನು ಇಟ್ಟು ನಮಿಸುತ್ತಾರೆ. ಆಗ ಕುದುರೆ, ಆನೆ, ಮುಂತಾದವು ಸೈನ್ಯದ ಮರ್ಯಾದೆಯೊಡನೆ ಬನ್ನಿಮಂಟಪಕ್ಕೆ ಹೊರಡುತ್ತವೆ. ಆಗ ೨೧ ಕುಶಾಲ ತೋಪುಗಳು ಗೌರವಾರ್ಥ ಹಾರಿಸಲ್ಪಡುತ್ತವೆ. ಚಿನ್ನದ ಅಂಬಾರಿಯ ಮುಂದಿನ ಆಸನದಲ್ಲಿ ಕುಳಿತುಕೊಳ್ಳುತ್ತಾರೆ ನಂತರ ಹಿಂದಿನ ಆಸನದಲ್ಲಿ ಯುವರಾಜರು ಕುಳಿತುಕೊಳ್ಳುತ್ತಾರೆ. ಇದು ನವರಾತ್ರಿಯ ವಿಜಯಯಾತ್ರೆಯ ಜಂಬೂಸವಾರಿ. ಮೆರವಣಿಗೆಯಲ್ಲಿ ಹೋಗಬೇಕಾದರೆ ಶಿಸ್ತುಬದ್ಧವಾಗಿ ಕ್ರಮವಾಗಿ ಹೋಗಬೇಕು. ಯಾವುದೇ ಕಾರಣಕ್ಕೂ ಅಡ್ಡಾದಿಡ್ಡಿಯಾಗಿ ಹೋಗುವಂತಿಲ್ಲ.

ಅಂಬಾರಿಯ ಮುಂಭಾಗದಲ್ಲಿ ವಿವಿಧ ಸೇನಾ ತುಕಡಿಗಳು, ಬ್ರಿಟೀಷ್ ಆಡಳಿತದ ಪರವಾಗಿ ಇಂಪೀರಿಯಲ್ ಸರ್ವಿಸ್ ಅಶ್ವದಳ, ಮಹಾರಾಜರ ಅಶ್ವದಳ, ಪದಾತಿದಳ, ಮಹಾರಾಜರ ಖಾಸಗೀ ಅಂಗರಕ್ಷಕ ಅಶ್ವಪಡೆ, ಮಹಾರಾಜರ ಖಾಸಾಗೀ ಅಂಗರಕ್ಷಕ ಸೈನಿಕ ಪಡೆಗಳು ಸಾಗುತ್ತಿದ್ದವು.

ಅರಮನೆಯಿಂದ ಹೊರಟ ವಿಜಯ ಯಾತ್ರೆಯ ಜಂಬೂಸವಾರಿ ರಾಜಪಥವನ್ನು ಕ್ರಮಿಸಿ ಕೋಲ್ಸ್ ಮೈದಾನದಲ್ಲಿರುವ ಬನ್ನಮಂಟಪವನ್ನು ತಲುಪಿ, ಅಲ್ಲಿ ಪುರೋಹಿತರು ಪೂಜಾ ಕಾರ್ಯಗಳನ್ನು ನಡೆಸಿ ಪಟ್ಟದ ಹಸು, ಪಟ್ಟದ ಆನೆ, ಪಟ್ಟದ ಕುದುರೆ ಮತ್ತು ಆಯುಧಗಳಿಗೆ ಪೂಜೆ ಸಲ್ಲಿಸಿ ಅನಂತರ ಶಮೀ ವೃಕ್ಷದ ಬಳಿ ಪೂಜೆ ಸಲ್ಲಿಸಿ ಬನ್ನಿ ಮುಡಿಯುವರು ಅನಂತರ ಪುರೋಹಿತರು ರಾಜರಿಗೆ ಬನ್ನಿ ಪ್ರಸಾದವನ್ನು ನೀಡುವರು. ನಂತರ ಮಹಾಕಾಳಿಯ ಆಶೀರ್ವಚನವನ್ನು ಪುರೋಹಿತರು ರಾಜರಿಗೆ ಓದಿ ಹೇಳುವರು. ಅನಂತರ ರಾಜ ಮತ್ತು ಯುವರಾಜರು ಕತ್ತಿಗಳನ್ನು ಹಿಡಿದುಕೊಂಡು ಉಳಿದ ಆಯುಧಗಳನ್ನು ಸರ್ದಾರರು ಮತ್ತು ಅರಸುಗಳಿಗೆ ನೀಡಿ ಅನಂತರ ಉಳಿದ ಆಯುಧಗಳನ್ನು ರಥದಲ್ಲಿಟ್ಟು ಆನೆ, ಕುದುರೆ ಮುಂತಾದವುಗಳನ್ನು ಅರಮನೆಗೆ ವಾಪಸ್ಸು ಹೊರಡಿಸಲಾಗುತ್ತದೆ.

ವಿಶ್ರಾಂತಿ ಪಡೆದ ರಾಜ ಮತ್ತು ಯುವರಾಜರು ಪೆರೇಡ್ ಮೈದಾನದ ವಿಶೇಷ ಮಂಟಪಕ್ಕೆ ಹೋಗಿ ಅಲ್ಲಿ

ಸೇನಾಪಡೆಯಿಂದ ಗೌರವ ರಕ್ಷೆ ಪಡೆದು ಅನಂತರ ಆಯ್ದ ಸೈನಿಕರಿಂದ ಸೇನಾ ತುಕಡಿಗಳಿಂದ ವಿವಿಧ ರೀತಿಯ ಕವಾಯತುಗಳು ನಡೆಯುತ್ತವೆ. ಬಹಳ ಆಕರ್ಷಣೆಯಾದ ಕಾರ್ಯಕ್ರಮವೆಂದರೆ ಪಂಜಿನ ಕವಾಯತು, ಸೈನಿಕರು ಕುದುರೆ ಸವಾರರು ನಡೆಸುವ ಹಲವು ಭಂಗಿಯ ಪಂಜಿನ ಕವಾಯತು ಎಲ್ಲರನ್ನು ರೋಮಾಂಚನಗೊಳಿಸುವಂತಿರುತ್ತಿತ್ತು. ಅನಂತರ ಬಣ್ಣ ಬಣ್ಣದ ಬಾಣ ಬಿರುಸುಗಳು ನಡೆಯುತ್ತದೆ. ಎಲ್ಲಾ ಕಾರ್ಯಕ್ರಮಗಳು ಮುಗಿದ ನಂತರ ರಾಜರು ಮತ್ತೆ ಅದೇ ಪಥದ ಮುಖಾಂತರ ಅಂಬಾರಿಯ ಮೇಲೆ ಬರುತ್ತಾರೆ. ಪ್ರಸ್ತುತ ಈ ರೀತಿ ಇರುವುದಿಲ್ಲ. ಭದ್ರತಾ ವಾಹನದ ಮೇಲೆ ಅಂಬಾರಿಯನ್ನು ತರುತ್ತಾರೆ.

ಮಹಾರಾಜರು ಖಾಸಗಿ ಕೊಠಡಿಯಿಂದ ಹೊರ ಬರುವ ತನಕ ದ್ವಾರದಲ್ಲಿ ಬಾಡಿಗಾರ್ಡ್‌ಗಳು ನಿಂತಿರುತ್ತಿದ್ದರು. ಆಗ ಅರಮನೆಯ ಮುಂಭಾಗದಲ್ಲಿ ಆಯ್ದ ಸೇನಾ ತುಕಡಿಗಳಿಂದ ಮಾರ್ಚ್‌ಫಾಸ್ಟ್ ಮಾಡಿಸಿ ಅನಂತರ ಸುರೂಟ್ - ಸೆಲ್ಯೂಟ್ ಮಾಡಿಸಿ ಜಯಕಾರ ಹೇಳಲಾಗುತ್ತದೆ. ಮಹರಾಜರಿಗಲ್ಲದೇ ಸೇನಾತುಕಡಿಯಿಂದ ರೆಸಿಡೆಂಟರಿಗೆ ಗೌರವವಂದನೆಯನ್ನು ನೀಡಬೇಕಾಗಿತ್ತು. ಅವರು ಅರಮನೆಗೆ ಬಂದಾಗ ಪೊಲೀಸರು ೧೩ ಕುಶಾಲತೋಪುಗಳನ್ನು ಹಾರಿಸುತ್ತಿದ್ದರು. ರೆಸಿಡೆಂಟನಿಗೆ ಜಿಲ್ಲೋ ಸೈನಿಕರು ಸಹ ಅಂಗರಕ್ಷಕರಾಗಿ ಅರಮನೆಯ ವತಿಯಿಂದ ಇರುತ್ತಿದ್ದರು.

ಮೆರವಣಿಗೆ ಕೋಟೆಯ ಉತ್ತರದ ಮಹಾದ್ವಾರದ ಮೂಲಕ ಬನ್ನಿಮಂಪಟಕ್ಕೆ ತೆರಳಿದಾಗ ಕರ್ನಾಟಕ ವಾದ್ಯ ಸಂಗೀತ ಮತ್ತು ಇಂಗ್ಲೀಷ್ ಬ್ಯಾಂಡ್ ದಾರಿಯುದ್ದಕ್ಕೂ ಸಂಗೀತವನ್ನು ಮೇಳೈಸುತ್ತಿದ್ದರು. ಇವರು ಸಂಪ್ರದಾಯಿಕ ಮತ್ತು ಯೂರೋಪಿಯನ್‌ನ ಕೆಲವು ಸಂಗೀತಗಳನ್ನು ನುಡಿಸುತ್ತಿದ್ದರು. ದಾರಿಯುದ್ದಕ್ಕೂ ರಾಜಧ್ವಜ ಮತ್ತು ರಾಜಲಾಂಛನವನ್ನು ಹಿಡಿದ ಪದಾತಿ ದಳದವರು ಇರುತ್ತಿದ್ದರು. ಅಂಬಾರಿ ಆನೆಯ ಹಿಂಬಾಗದಲ್ಲಿ ರಾಜರ ಬೆಂಗಾವಲಿನ ಪಡೆ ಇರುತ್ತಿತ್ತು. ಮೆರವಣಿಗೆ ಎಡ ಮತ್ತು ಬಲಪಾರ್ಶ್ವಗಳಲ್ಲಿ ರಾಜರ ಅಂಗರಕ್ಷಕ ಪಡೆಯವರು ಇರುತ್ತಿದ್ದರು. ಅಂಬಾರಿಯ ಮುಂಭಾಗದಲ್ಲಿ ವಿವಿಧ ಸೇನಾ ತುಕಡಿಗಳು, ಬ್ರಿಟಿಷ್ ಆಡಳಿತದ ಪರವಾಗಿ ಇಂಪೀರಿಯಲ್ ಸರ್ವಿಸ್‌ನ ಅಶ್ವದಳ, ಮಹಾರಾಜರ ಅಶ್ವದಳ, ಪದಾತಿದಳ, ಮಹಾರಾಜರ ಖಾಸಗೀ ಅಂಗರಕ್ಷಕ ಅಶ್ವಪಡೆ ಅನಂತರ ಮಹಾರಾಜರ ಖಾಸಗೀ ಅಂಗರಕ್ಷಕ ಸೈನಿಕ ಪಡೆ ಇರುತ್ತಿದ್ದವು. ಅಂಬಾರಿಯ ಹಿಂಭಾಗ ದಲ್ಲಿ ರಾಜರ ಬೆಂಗಾವಲ ಪಡೆ ಇರುತಿತ್ತು.

ಮೆರವಣಿಗೆ ಬನ್ನಿಮಂಟಪವನ್ನು ತಲುಪಿದ ಅನಂತರದಲ್ಲಿ ಪೆರೇಡ್ ಮೈದಾನದಲ್ಲಿ ಸೇನಾ ತುಕಡಿಗಳಿಂದ ವಿವಿಧ ರೀತಿಯ ಕವಾಯತುಗಳನ್ನು ಮಾಡುತ್ತಿದ್ದರು. ಆಗ ಮೂರು ಸುತ್ತು ಕುಶಾಲ ತೋಪುಗಳನ್ನು ಹಾರಿಸಿ ಕಾರ್ಯಕ್ರಮವನ್ನು ಆರಂಭಿಸುತ್ತಾರೆ. ಅಶ್ವದಳದವರು ವಿವಿಧ ರೀತಿಯ ಕವಾಯತುಗಳನ್ನು ನಡೆಸಿಕೊಡುತ್ತಾರೆ. ಪ್ರಸಕ್ತ ದಸರಾಗಳಲ್ಲೂ ಸಹ ರೆಜಿಮೆಂಟ್ ವಿಭಾಗದವರು ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದಾರೆ. ಅಲ್ಲಿ ತುಂಬಾ ಆಕರ್ಷಣೀಯವಾಗಿ ನಡೆಯುವ ಕಾರ್ಯಕ್ರಮವೆಂದರೆ ಪಂಜಿನ ಕವಾಯತು. ಇದನ್ನು ಆಯ್ದ ಯುವ ಸೈನಕ ಪಡೆ ನಡೆಸಿಕೊಡುತ್ತದೆ. ಇಂದಿಗೂ ಸಹ ಇದನ್ನು ಕರ್ನಾಟಕ ಪೊಲೀಸ್ ಪಡೆಯು ವಿಭಿನ್ನ ರೀತಿಯಲ್ಲಿ ಅತ್ಯಂತ ಜನಾಕರ್ಷಕವಾಗಿ ನಡೆಸಿಕೊಡುತ್ತದೆ. ಅನಂತರ ಬಣ್ಣ ಬಣ್ಣದ ಬಾಣ ಬಿರುಸುಗಳು ನಡೆಯುತ್ತವೆ.

ಈ ರೀತಿಯಲ್ಲಿ ಪೊಲೀಸರ ಕೆಲಸ ಏಕಮುಖ ವಾಗಿರದೆ ಬಹುಮುಖವಾಗಿದ್ದವು, ದಸರಾ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಭದ್ರತೆಯನ್ನು ಒದಗಿಸುವುದು ಮತ್ತು ದಸರಾಕ್ಕೆ ಸಂಗೀತ, ಪೆರೆಡ್ ಮುಂತಾದ ಕಾರ್ಯಕ್ರಮಗಳನ್ನು ನಡೆಸಿಕೊಡುವುದು ಇವರ ಕೆಲಸವಾಗಿತ್ತು. ಹಿಂದೆ ಪೊಲಿಸರು ಎಂದರೆ ಕೇವಲ ನಿಯಮಿತವಾದ ಕೆಲಸವನ್ನು ಮಾಡುವುದಾಗಿತ್ತು, ಆದರೆ ದಸರಾ ಸಂದರ್ಭದಲ್ಲಿ ಅವರು ನಡೆಸಿಕೊಡುವ ವಿಶೇಷ ಕಾರ್ಯಕ್ರಮಗಳು ಅವರ ವಿಭಿನ್ನತೆಯನ್ನು ತೆರೆದಿಡುವುದರಲ್ಲಿ ಸಾಕಾರವಾಗಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಡುವುದರ ಮೂಲಕ ಸಾಮಾನ್ಯ ಜನರ ಜೊತೆಯಲ್ಲಿ ಇವರು ಒಬ್ಬರಾಗಿರುವಂತಹ ಸ್ಥಿತಿ ನಿರ್ಮಾಣವಾಯಿತು. ಕೆಲಸಕ್ಕೆ ನೇಮಿಸಿಕೊಂಡಂತಹ ಪೊಲೀಸರಿಗೆ ದೈನಂದಿನ ಡ್ರಿಲ್ ಹಾಗೂ ದೈಹಿಕ ಶ್ರಮದ ತರಬೇತಿಯನ್ನು ನೀಡಲಾಗುತ್ತಿತ್ತು. ಡ್ರಿಲ್ ಕವಾಯತು ಬಹುಶಃ ಅಂದಿನ ಬಾಡಿಗಾರ್ಡ್, ಜಿಲ್ಲೋ ಕಛೇರಿ, ಖಿಲ್ಲೇ ಕಛೇರಿ ಹಾಗೂ ಟ್ರೂಪ್ಸ್‌ಗಳಲ್ಲಿ ಸಹಜ ವಾದಂತಹ ದೈಹಿಕ ಶ್ರಮದಾನವಾಗಿತ್ತು ಆದುದರಿಂದಲೇ ದಸರಾ ಮಿಲಿಟರಿ ಆಟೋಟಗಳಲ್ಲಿ ಭಾವಹಿಸುವುದು ಸೇರಿ ದಂತೆ ಅಂದಿನ ಎಲ್ಲ ಪ್ರಮುಖವಾದ ಪಂದ್ಯಾವಳಿಗಳಲ್ಲಿ ಭಾಗವಹಿಸುತ್ತಿದ್ದರು.

ಹಿಂದೆ ರಾಜಸ್ಪರ್ಶದೊಂದಿಗೆ ಆರಂಭವಾದ ದಸರಾ ಈಗ ರಾಜಸ್ಪರ್ಶ ಕಳೆದುಕೊಂಡು ಧಾರ್ಮಿಕ ವಿಧಿವಿಧಾನಗಳು ಅಲ್ಪ ಪ್ರಮಾಣದಲ್ಲಿ ಕಡಿಮೆಯಾಗಿ ಸಾಂಸ್ಕೃತಿಕ ಉತ್ಸವವಾಗಿದೆ. ಅಂದು ಧಾರ್ಮಿಕ ನವರಾತ್ರಿಯಾಗಿದ್ದ ದಸರಾ ಈಗ ಸಾಂಸ್ಕೃತಿಕ ನವರಾತ್ರಿಯಾಗಿದೆ. ಪ್ರಭುನವರಾತ್ರಿಯು ಇಂದು ಪ್ರಜಾನವರಾತ್ರಿಯಾಗಿದೆ. ಅರಮನೆಯ ನವರಾತ್ರಿ ಈಗ ನಾಡ ನವರಾತ್ರಿಯಾಗಿದೆ.

ಆಧಾರಸೂಚಿ

೧. ಬಿ. ರಾಮಕೃಷ್ಣ ರಾವ್, ಶ್ರೀಮನ್ಮಹಾರಾಜರವರ ವಂಶಾವಳಿ, ಭಾಗ ೧, ಮೈಸೂರು ೧೯೧೬, ಭಾಗ–೨, ಮೈಸೂರು, ೧೯೨೨.

೨. ಎ.ಎನ್.ನಿರಂಜನ ಅರಸು, ಮುಮ್ಮಡಿ ಶ್ರೀ ಕೃಷ್ಣರಾಜ ಮಹಿಪಾಲ ವಂಶರತ್ನಾಕರ, ಮೈಸೂರು, ೧೯೯೩.

೩. ಡಾ. ಆರ್. ಗೋಪಾಲ್, ಡಾ. ಎಸ್. ನರೇಂದ್ರ ಪ್ರಸಾದ್, ಮುಮ್ಮಡಿ ಕೃಷ್ಣರಾಜ ಒಡೆಯರು ಒಂದು ಚಾರಿತ್ರಿಕ ಅಧ್ಯಯನ, ಮೈಸೂರು, ೨೦೦೪.

೪. ಪ್ರೊ. ಪಿ.ವಿ. ನಂಜರಾಜ ಅರಸು, ಮೈಸೂರು ; ನೂರಿನ್ನೂರು ವರ್ಷಗಳ ಹಿಂದೆ, ಮೈಸೂರು, ೨೦೦೪.

೫. ಸೇವಂತಿ. ಡಿ.ಆರ್., ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್, ಮೈಸೂರು, ೨೦೦೧.

೬ ಸೆಲೆಕ್ಷನ್ ಫ್ರಮ್ ದ ರೆಕಾರ್ಡ್ಸ್ ಆಫ್ ದ ಮೈಸೂರು ಪ್ಯಾಲೇಸ್.

೭. ಡಾ. ಅಯ್ಯ ಇಕೆಗಾಮೆ, ರಾಯಲ್ಟಿ ಇನ್ ಕಲೋನಿಯಲ್ ಮೈಸೂರು.

೮. ಗೈಡ್ ಟು ರೆಕಾರ್ಡ್ಸ್ ಇನ್ ದಿ ಡಿವಿಜನಲ್ ಆರ್ಕೈವ್ಸ್.

೯. ಹಯವದನರಾವ್ ಸಿ., ಹಿಸ್ಟರಿ ಆಫ್ ಮೈಸೂರು. ೧೯೯೩.

೧೦. ವೆಂಕಟರಾಮಯ್ಯ ಸಿ.ಕೆ., ಆಳಿದ ಮಹಾಸ್ವಾಮಿಯವರು ದಿವಂಗತರಾದ ಶ್ರೀ ಮನ್ಮಹಾರಾಜ ಶ್ರೀ ಮನ್ನಾಲ್ವಡಿ ಶ್ರೀ ಕೃಷ್ಣರಾಜೇಂದ್ರ ಒಡೆಯರವರ ಜೀವನ ಚರಿತ್ರೆ, ಬೆಂಗಳೂರು, ೧೯೪೧.

೧೧. ಪ್ಯಾಲೇಸ್ ಅಡ್ಮಿನಿಸ್ಟ್ರೇಷನ್ ರಿಪೋರ್ಟ್ಸ್, ೧೯೨೯–೩೦, ೧೯೪೩–೪೪, ೧೯೪೪–೪೫, ೧೯೪೫–೪೬, ೧೯೪೬–೪೭, ೧೯೪೭–೪೮, ೧೯೪೮–೪೯.

೧೧೫

ಕೊಡಗು ಜಿಲ್ಲೆಯಲ್ಲಿ ಅರಣ್ಯ ಹಾಗೂ ಪರಿಸರ ಚಳುವಳಿ ವಸಾಹತುವಿನಿಂದ ಸಮಕಾಲೀನವರೆಗಿನ ಒಂದು ಅವಲೋಕನ

ಅವಿನಾಶ್.ವಿ.*

ಪೀಠಿಕೆ

ಕೊಡಗು ಅತೀ ಪ್ರಾಮುಖ್ಯವಾದ ಜೀವವೈವಿಧ್ಯತೆಯನ್ನು ತನ್ನೊಳಗೆ ಇಟ್ಟುಕೊಳ್ಳುವ ಒಂದು ಸೂಕ್ಷ್ಮ ಪರಿಸರ ತಾಣವಾಗಿದೆ; ಇದು ಕುರುಚಲು, ಸ್ವಲ್ಪ ತೇವವಿರುವ ಸಸ್ಯಗಳು, ಎಲೆ ಉದುರುವ ಮತ್ತು ಮುಳ್ಳಿನ ಅರಣ್ಯಗಳಿಂದ ಕೇಂದ್ರಿಕೃತವಾದ ನಿತ್ಯ ಹರಿದ್ವರ್ಣದ ಅರಣ್ಯ ಪ್ರದೇಶವಾಗಿದೆ.[೧] ಪಶ್ಚಿಮ ಘಟ್ಟದ ಬೆಟ್ಟಗುಡ್ಡಗಳು, ಗಿರಿಕಂದರಗಳು ಮತ್ತು ಇಳಿಜಾರುಗಳಿಂದಾಗಿ ತೋಟಗಾರಿಕೆಗೆ ಪ್ರಸಿದ್ಧಿಯಾಗಿದೆ. ಕೊಡಗು ಕರ್ನಾಟಕ ರಾಜ್ಯದ ಒಂದು ಪ್ರಮುಖವಾದ ಜಿಲ್ಲೆಯಾಗಿದ್ದು, ಇದು ಅರಣ್ಯಗಳ ಹುಟ್ಟಿಗೆ ಪ್ರೇರಣೆಯ ಜೊತೆಗೆ ಜೀವ ವೈವಿಧ್ಯತೆಯ ಘಟಕವಾಗಿದೆ.[೨]

ಭಾರತದ ರಾಜಕೀಯದಲ್ಲಿ ಬ್ರಿಟೀಷರು ಸಕ್ರೀಯವಾಗಿ ತೊಡಗಿದ ತರುವಾಯ, ಆಡಳಿತದ ಅನುಕೂಲಕ್ಕೆ ಹಲವಾರು ಕಾನೂನು ಮತ್ತು ಕಾಯ್ದೆಗಳನ್ನು ಜಾರಿಗೊಳಿಸಿದರು. ಹಾಗೆಯೇ ಆರ್ಥಿಕ ಸಂಪತ್ತಿನ ಕ್ರೋಢೀಕರಣಕ್ಕಾಗಿ, ಕಚ್ಚಾವಸ್ತುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲು ಹಾಗೆಯೇ ಸಿದ್ದವಸ್ತುಗಳನ್ನು ಬ್ರಿಟೀಷ್ ಕಾರ್ಖಾನೆ, ಕೋಟೆಗಳು ಮತ್ತು ನಗರಗಳಿಂದ ಸಾಗಿಸಲು ಸಂಪರ್ಕ ವ್ಯವಸ್ಥೆಯ ಅನಿವಾರ್ಯತೆಯಿಂದಾಗಿ ಬ್ರಿಟೀಷ್ ಸರ್ಕಾರ ರಸ್ತೆಗಳ ನಿರ್ಮಾಣ, ರೈಲ್ವೆ, ಹಡಗುಗಳ ತಯಾರಿಕೆಗೆ ಅಧಿಕ ಪ್ರಮಾಣದ ಮರಮುಟ್ಟುಗಳ ಅವಶ್ಯಕತೆಯಿದ್ದು ಮತ್ತು ಅರಣ್ಯ ಆಡಳಿತಕ್ಕಾಗಿ ಕೇಂದ್ರೀಯ ಕಾನೂನು ಕಾಯ್ದೆಗಳನ್ನು ಜಾರಿಗೊಳಿಸುವುದರೊಂದಿಗೆ, ಪ್ರಾಂತ್ಯಾಡಳಿತಕ್ಕೂ ಅನ್ವಯಿಸುವಂತೆ ಜಾಗ್ರತೆ ವಹಿಸಿದರು.[೩] ೧೮೦೬ರಲ್ಲಿ ಅರಣ್ಯ ಸಂರಕ್ಷಣೆ ಮತ್ತು ಉಸ್ತುವಾರಿಗೆ ಮದ್ರಾಸ್ ಸರ್ಕಾರ ಕ್ಯಾಪ್ಟನ್ ವ್ಯಾಟ್ಸನ್‌ರವರನ್ನು ಅರಣ್ಯಾಧಿಕಾರಿಯಾಗಿ ನೇಮಿಸಿತ್ತು. ಆದರೆ ಅರಣ್ಯಗಳ ನಿರ್ವಹಣೆಯ ಸಮಸ್ಯೆಯಿಂದಾಗಿ ೧೮೨೩ರಲ್ಲಿ ಸರ್ಕಾರವು ಆ ಹುದ್ದೆಯನ್ನು ವಜಾಗೊಳಿಸಿತು[೪]. ಇದರಿಂದಾಗಿ ಬ್ರಿಟೀಷ್ ಸರ್ಕಾರ ಅರಣ್ಯಗಳ ಸಂರಕ್ಷಣೆಗೆ ಲಾರ್ಡ್ ಡಾರ್ಲ್‌ಹೌಸಿಯೂ ೧೮೫೫ರಲ್ಲಿ **"ಅರಣ್ಯಕಾಯ್ದೆ"**ಯನ್ನು ಅನುಷ್ಠಾನಗೊಳಿಸುವುದರೊಂದಿಗೆ ಬ್ರಿಟೀಷ್ ಸರ್ಕಾರ ಅರಣ್ಯ ರಕ್ಷಣೆಯಲ್ಲಿ ಸಕ್ರಿಯವಾಗಿ ತೊಡಗುವುದನ್ನು ಕಾಣಬಹುದು.[೫] ಬ್ರಿಟೀಷ್ ಭಾರತದ ವೈಜ್ಞಾನಿಕ ಅರಣ್ಯ ಇಲಾಖೆಯೂ ೧೮೬೪ರಲ್ಲಿ ಸ್ಥಾಪನೆಗೊಂಡಿತು, ಇದು ಅರಣ್ಯಗಳ ಸಂರಕ್ಷಣೆಯ ಕುರಿತಂತೆ ಭಾರತದ ಪ್ರತಿರಾಜ್ಯದಲ್ಲಿ ಅರಣ್ಯ ಇಲಾಖೆ ಮತ್ತು ಅರಣ್ಯ ತರಬೇತಿ ಕೇಂದ್ರವನ್ನು ಸ್ಥಾಪಿಸಲಾಯಿತು. ೧೮೭೮ರಲ್ಲಿ ಮೊದಲ ಅರಣ್ಯ ತರಬೇತಿ ಕೇಂದ್ರವನ್ನು ಡೆಹರಾಡ್ಯೂನ್‌ನಲ್ಲಿ ಸ್ಥಾಪಿಸಿ ಅರಣ್ಯಧಿಕಾರಿಗಳಿಗೆ ತರಬೇತಿಯನ್ನು ನೀಡಲಾಯಿತು.[೬] ಜರ್ಮನ್‌ನ ಅರಣ್ಯತಜ್ಞ ಡಾ. ವೊಯತಾಕರ್‌ರವರ ವರದಿಯ ಆಧಾರದ ಮೇಲೆ ೧೮೯೪ರಲ್ಲಿ ಮೊಟ್ಟಮೊದಲಿಗೆ **"ಅರಣ್ಯ ನೀತಿ"**ಯನ್ನು ರೂಪಿಸುವುದರೊಂದಿಗೆ **"ರಕ್ಷಿತ"** ಮತ್ತು **"ಕಾದಿಟ್ಟ"** ಅರಣ್ಯಗಳೆಂದು ವಿಭಾಗಿಸಲಾಯಿತು.[೭] ಇದರೊಂದಿಗೆ ಸ್ಥಳೀಯರು ಅಥವಾ ಬುಡಕಟ್ಟು ಸಮುದಾಯವು ಹೊಂದಿದ್ದ ಅರಣ್ಯಧಿಕಾರವನ್ನು ಸರ್ಕಾರವು ಪ್ರಶ್ನಿಸುವುದರೊಂದಿಗೆ ಅರಣ್ಯಗಳ ಮೇಲೆ ಬ್ರಿಟೀಷ್ ಸರ್ಕಾರದ ಪ್ರಾತಿನಿಧ್ಯತೆಯನ್ನು ಕೇಂದ್ರೀಕರಿಸಿತು.

೧೮೩೪ರಲ್ಲಿ ಕೊಡಗು ಬ್ರಿಟೀಷ್ ಸರ್ಕಾರದ ನೇರ ಆಡಳಿತಕ್ಕೆ ಸಿಲುಕಿ, ಮದ್ರಾಸ್ ಸರ್ಕಾರದ ಅಧೀನಕ್ಕೊಳಗೊಂಡಿತು. ಈ ಮೊದಲೇ ಮೈಸೂರು ಪ್ರಾಂತ್ಯವು ಬ್ರಿಟೀಷ್ ಆಡಳಿತಕ್ಕೊಳಪಟ್ಟಿದ್ದು ಅದರ ಕಾನೂನು ಮತ್ತು ಕಾಯ್ದೆಗಳು ಕೊಡಗಿಗೂ ಅನ್ವಯಿಸತೊಡಗಿತು. ಕೊಡಗು ಮತ್ತು ಮೈಸೂರು ಪ್ರಾಂತ್ಯವು ದಟ್ಟವಾದ ಅರಣ್ಯದಿಂದಾಗಿ ಅದು ತನ್ನನ್ನು ಅಭಯಾರಣ್ಯವಾಗಿ ಗುರುತಿಸಿಕೊಂಡಿತ್ತು.[೮] ಇದರಿಂದಾಗಿ ಬ್ರಿಟೀಷ್ ಸರ್ಕಾರ ಅದರ ನಿರ್ವಹಣೆ, ಸಂಪತ್ತಿನ ಕ್ರೋಢೀಕರಣಕ್ಕಾಗಿ ಕೊಡಗು ಮತ್ತು ಮೈಸೂರ್

* ಸಂಶೋಧನ ವಿದ್ಯಾರ್ಥಿ, ಇತಿಹಾಸ ವಿಭಾಗ, ಮಂಗಳಗಂಗೋತ್ರಿ, ಮಂಗಳೂರು.

ಪ್ರಾಂತ್ಯಕ್ಕೆ ಮೇಜರ್ ಹಂಟರ್ ಎಂಬುವರನ್ನು ಸಂರಕ್ಷರನ್ನಾಗಿ ನೇಮಿಸಿ, ಅವರ ಸಹಾಯಕರಾಗಿ ಲೆಫ್ಟಿನೆಂಟ್ ಸೋಮರ್ನ್ ಮತ್ತು ಲೆಫ್ಟಿನೆಂಟ್ ಮಿಲ್ಲರ್ ಎಂಬುವರು ನೇಮಕಗೊಂಡರು. ಸೋಮರ್ನ್‌ರವರನ್ನು ಕೊಡಗಿನ ಅರಣ್ಯಾಧಿಕಾರಿಯಾಗಿ ನಿಯೋಜಿಸಿತು. ಈ ಅವಧಿಯಲ್ಲಿ ಎರಡು ಮುಖ್ಯ ಅಂಶಗಳನ್ನು ಕಾಣಬಹುದಾಗಿದೆ. ಮೊದಲನೆಯದು, ಬ್ರಿಟೀಷ್ ಅರಣ್ಯಾಡಳಿತ ಮತ್ತು ಅದರ ಪ್ರಭುತ್ವ, ಮತ್ತೊಂದು ತೋಟಗಾರಿಕೆಯ ಅಭಿವೃದ್ಧಿ ಮತ್ತು ಸ್ಥಳೀಯರು ಆಡಳಿತಕ್ಕೆ ಸ್ಪಂದಿಸುವಂತೆ ಜಾಗ್ರತೆ ವಹಿಸುವುದು.[೯]

ಕೊಡಗಿನಲ್ಲಿ ಅರಣ್ಯ ಆಡಳಿತಕ್ಕೆ ಸಂಬಂಧಿಸಿದಂತೆ ಬ್ರಿಟಿಷ್ ವಸಾಹತ್ತುಶಾಹಿಗಳ ಪಾತ್ರ ಪ್ರಮುಖವಾಗಿದೆ. ಬ್ರಿಟಿಷ್ ಆಡಳಿತದಲ್ಲಿ ಕೊಡಗು ಒಂದು ಪ್ರತ್ಯೇಕವಾದ ರಾಜ್ಯ. ಕಾರಣ ಇದರ ಗಾತ್ರ, ವಿಸ್ತೀರ್ಣದಿಂದಲ್ಲ, ಬದಲಿಗೆ ಇದು ಬೆಟ್ಟಗುಡ್ಡಗಳಿಂದ ಕೇಂದ್ರೀಕೃತವಾದ ಪ್ರದೇಶವೆಂದು.[೧೦] ೧೮೫೦ರಲ್ಲಿ ಬ್ರಿಟಿಷರು ಕೊಡಗಿನ ಕೆಲವು ಲಾಭದಾಯಕವಾದ ಮರಗಳನ್ನು ಸಂರಕ್ಷಿಸಿದ್ದರೂ ಕೂಡ ಪೂರ್ತಿಯಾಗಿ ಅರಣ್ಯಗಳ ರಕ್ಷಣೆಗೆ ಅವರು ಪ್ರಯತ್ನಿಸಲಿಲ್ಲ.[೧೧] ಆದರೆ ಅರಣ್ಯಗಳ ವಾಣಿಜ್ಯಕರಣದಿಂದಾಗಿ ಜಿಲ್ಲೆಯ ಭೌತಿಕ ಬದಲಾವಣೆಯ, ಜೊತೆಗೆ ಪಶ್ಚಿಮ ಘಟ್ಟದ ಅರಣ್ಯಗಳನ್ನು ಪ್ಲಾಂಟೇಷನ್‌ಗಳಾಗಿ ಪರಿವರ್ತಿಸಿದರು.[೧೨] ಬ್ರಿಟಿಷರು ಕೊಡಗಿನ ಮಧ್ಯಭಾಗದಲ್ಲಿ ತೋಟಗಾರಿಕೆಯ ಬೆಳವಣಿಗೆಯ ಜೊತೆಗೆ, ಸಂಪರ್ಕ ಮತ್ತು ನೌಕಪಡೆಗಾಗಿ ಮರಗಳನ್ನು ಕತ್ತರಿಸಿ ರೈಲುಗಳ ಬಿಡಿಭಾಗ, ಬಂದರುಗಳ ನಿರ್ಮಾಣ ಮತ್ತು ಶಸ್ತ್ರಾಸ್ತ್ರಗಳ ತಯಾರಿಕೆಗೆ ಅರಣ್ಯಗಳನ್ನು ಬಳಸಲಾಗುತ್ತಿತ್ತು.[೧೩] ಸ್ವಾತಂತ್ರದ ನಂತರ ಜನಸಂಖ್ಯೆಯ ಬೆಳವಣಿಗೆಯಿಂದಾಗಿ ನಿರಂತರವಾದ ಅರಣ್ಯ ನಾಶವನ್ನು ಕಾಣಬಹುದು.[೧೪] ಬ್ರಿಟಿಷ್ ಭಾರತದ ರಾಜಕೀಯ ಆರ್ಥಿಕತೆ ಮತ್ತು ಅರಣ್ಯ ನೀತಿಯನ್ನು ಸ್ವಾತಂತ್ರ್ಯದ ನಂತರ ಭಾರತದ ಶಾಸಕಾಂಗವು ಬಹಳಷ್ಟು ಚರ್ಚೆಗೆ ಒಳಪಡಿಸಿದ್ದು, ರಾಮಚಂದ್ರ ಗುಹಾ ಹಾಗು ಮಾಧವ್ ಗಾಡ್ಗೀಳ್‌ರವರು ವಸಾಸಹತ್ತುಶಾಹಿ ಆಳ್ವಿಕೆಯು ತಮ್ಮ ಅವಲಂಬನೆಗಾಗಿ ಅರಣ್ಯ ಕಾನೂನು ಹಾಗು ಕಾಯ್ದೆಯನ್ನು ಅನುಷ್ಠಾನಗೊಳಿಸಿದರೇ ವಿನಹ ರಕ್ಷಣೆಯ ಉದ್ದೇಶದಿಂದಲ್ಲ.[೧೫] ಬ್ರಿಟಿಷರ ಅರಣ್ಯ ನೀತಿಯಿಂದಾಗಿ ಅರಣ್ಯಭೂಮಿಯೂ ದಿನದಿಂದ ದಿನಕ್ಕೆ ಬದಲಾಗುತ್ತಾ, ವಾಣಿಜ್ಯೋದ್ಯಮದ ಬೆಳವಣಿಗೆ ಮತ್ತು ಪರಿಸರದ ಮೇಲೆ ಪರಿಣಾಮ ಬೀರುವುದನ್ನು ಕಾಣಬಹುದು.[೧೬]

ಜಮ್ಮಾಭೂಮಿ ಮತ್ತು ಪರಿಸರ ಒಂದು ಸಮಕಾಲೀನ ವಿಶ್ಲೇಷಣೆ

ಕೊಡಗಿನ ಹಾಲೇರಿ ರಾಜರು ತಮ್ಮ ಅರಮನೆ ಹಾಗೂ ಸೈನ್ಯದಲ್ಲಿ ಸಲ್ಲಿಸಿದ ಸೇವೆಗೆ ಭೂಮಿಯನ್ನು ಉಡುಗೊರೆಯಾಗಿ ನೀಡುತ್ತಿದ್ದರು. ಈ ಪದ್ಧತಿಯು ಮುಂದೆ ಬ್ರಿಟೀಷ್ ಆಡಳಿತದಲ್ಲಿ ಸ್ಥಳೀಯರ ಸಂಪರ್ಕ ಮತ್ತು ಸೈನ್ಯದ ಬೆಳವಣಿಗೆಗೆ ಭೂಮಿಯನ್ನು ನೀಡುತ್ತಿದ್ದರು. ಇದು ಒಂದು ಎಕರೆ ವ್ಯವಸಾಯದ ಭೂಮಿಗೆ ಎರಡು ಎಕರೆ ಅರಣ್ಯವನ್ನು ರೈತರಿಗೆ ದೈನಂದಿನ ಉಪಯೋಗಕ್ಕಾಗಿ ನೀಡುತ್ತಿದ್ದರು. ಈ ಭೂಮಿಯು ಸ್ಥಳೀಯರ ಸಾಂಸ್ಕೃತಿಕ ಭೂಮಿಯಾಗಿ, 'ಜಮ್ಮಾ' ಭೂಮಿಯಾಗಿ ಕೊಡಗಿನಲ್ಲಿ ಗುರುತಿಸಿಕೊಂಡಿದೆ. ಈ ಜಮ್ಮ ಭೂಮಿಯು ಕೃಷಿ ಮತ್ತು ತೋಟಗಾರಿಕೆಯ ಭೂಮಿಯಾಗಿದೆ.[೧೭] ಈ ಜಮ್ಮ ಭೂಮಿಯು ಕೊಡವ ಮತ್ತು ಕೊಡವೇತರರ ಆರ್ಥಿಕತೆಗೆ ಮಾತ್ರವಾಗಿರದೆ ಇದು ಒಂದು ಪ್ರತಿಷ್ಠೆಯ ಸಂಕೇತವಾಗಿದೆ.[೧೮] ಯೂರೋಪಿಯನ್ ಪ್ಲಾಂಟರ್‌ಗಳು ಕೊಡಗಿನ ಗೋಮಾಳ ಮತ್ತು ಬಾಣೆ ಭೂಮಿಯಲ್ಲಿ ಕಾಫಿಯನ್ನು ಸ್ಥಳೀಯರಿಗೆ ಪರಿಚಯಿಸುವುದರೊಂದಿಗೆ ಸ್ಥಳೀಯರು ತಮ್ಮ ಪುರಾತನ ಕೃಷಿ ಮತ್ತು ಮಿಶ್ರ ಬೇಸಾಯವನ್ನು ತೊರೆದು ಕಾಫಿ ಉತ್ಪಾದನೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾ ಜಮ್ಮ ಹಾಗೂ ಬಾಣೆ ಭೂಮಿಯ ಮೇಲಿನ ತಮ್ಮ ಒಡೆತನವನ್ನು ಪುಷ್ಠಿಕರಿಸುತ್ತಾರೆ. ಆದರೆ ೧೮೯೯ರ ಕೂರ್ಗ್ ಲ್ಯಾಂಡ್ ಆಂಡ್ ರೆವಿನ್ಯೂ ರೆಗ್ಯುಲೇಷನ್ ಆಕ್ಟ್ ಅನ್ವಯ, ಜಮ್ಮ ಭೂಮಿಯ ಮಾರಾಟ, ಭಾಗಮಾಡಲು, ಒಡೆತನಕ್ಕಾಗಲಿ ಹಾಗು ಅದರ ಮೇಲಿನ ಸಾಲಕ್ಕೆ ಸಂಬಂಧಿಸಿದಂತೆ ಅಧಿಕಾರವಿರುವುದಿಲ್ಲವೆಂದು ಸೂಚಿಸಿದ್ದು ಇದು ಕೊಡಗಿನ ಜಮ್ಮ ರೈತರಿಗೆ ಅಸಮುದಾನವನ್ನು ಉಂಟು ಮಾಡಿದ್ದು.[೧೯] ಇದರಿಂದ ೧೯೨೪ರಲ್ಲಿ ಕೂರ್ಗ್ ಲೆಜಿಸ್ಲೇಟಿವ್ ಕೌನ್ಸಿಲ್‌ನ ಸ್ಥಾಪನೆಯಿಂದಾಗಿ, ಕೊಡಗಿನ ರೈತರು ಇದರ ಸದಸ್ಯರುಗಳಾಗಿ, ಭಾಗವಹಿಸುವುದರ ಜೊತೆಗೆ ಜಮ್ಮ ಭೂಮಿಯಲ್ಲಿ ಸರ್ಕಾರದ ಪಾತ್ರವನ್ನು ಪ್ರಶ್ನಿಸುತ್ತಾರೆ? ಅವರು ಹೇಳುವಂತೆ ಹಿಂದೂ ರಾಜರುಗಳಿಂದ ಬಳುವಳಿಯಾಗಿ ಬಂದ ಈ ಭೂಮಿಯಲ್ಲಿ ಮುಸಲ್ಮಾನರು ಹಾಗು ಬ್ರಿಟಿಷರು ಆಳ್ವಿಕೆ ಮಾಡಿದ್ದರೂ ಕೂಡ, ಪಿತ್ರಾರ್ಜಿತವಾದ ಆಸ್ತಿಯಾ ಮೇಲೆ ಯೂವುದೇ ರೀತಿಯ ಹಕ್ಕು ಇಲ್ಲವೆಂದು ವಾದಿಸುತ್ತಾರೆ.[೨೦] ಸ್ವಾತಂತ್ರ್ಯದ ನಂತರ ೧೯೫೬ರಲ್ಲಿ ರಾಜ್ಯ ಪುನರ್ ವಿಗಂಡಣೆಯಿಂದಾಗಿ ನಾನಾ ಭಾಗಗಳಲ್ಲಿ ಜಾರಿಯಲ್ಲಿದ್ದ ಕಾಯಿದೆ, ನಿಬಂಧನೆಗಳನ್ನೆಲ್ಲಾ ಕ್ರೋಢೀಕರಿಸಿ ಒಂದು ಸಮರೂಪದ ಭೂ ಸುಧಾರಣಾ ಕಾಯಿದ್ದೆಯನ್ನು ಜಾರಿಗೊಳಿಸುವುದು ಅನಿವಾರ್ಯವಾಗಿತು. ಇದ್ದರಿಂದ ರಾಜ್ಯ ಸರ್ಕಾರವು ೧೯೫೭ರಲ್ಲಿ ಶ್ರೀ ಬಿ.ಡಿ. ಜತ್ತಿಯವರ ಅಧ್ಯಕ್ಷತೆಯಲ್ಲಿ ಗೇಣಿ ಮತ್ತು ಕೃಷಿ ಭೂಮಿಯ ಸಮಿತಿಯನ್ನು ರಚಿಸಿತ್ತು. ಈ 'ಜತ್ತಿ ಸಮಿತಿ'ಯು ೧೯೫೭ರಲ್ಲಿ ವರದಿಯನ್ನು ಸಲ್ಲಿಸಿ, ೧೯೬೧ ರ ಕರ್ನಾಟಕ ವಿಧಾನಸಭೆಯಲ್ಲಿ ಒಪ್ಪಿಗೆಯನ್ನು

ಪಡೆಯಿತು. ಈ ಜತ್ತಿ ಸಮಿತಿಯ ಮುಖ್ಯ ಉದ್ದೇಶವೆಂದರೆ ಜಮೀನಿಗೆ ಸಂಬಂಧಪಟ್ಟ ರಾಜ್ಯದ ವಿವಿಧ ಭಾಗಗಳಲ್ಲಿ ಇರುವ ವಿಶಿಷ್ಟ ಗುಣಲಕ್ಷಣಗಳ ವಿಭಿನ್ನ ಕಾನೂನುಗಳನ್ನು ಹಾಗು ಆಡಳಿತ ಪದ್ಧತಿಗಳನ್ನು ಒಂದುಗೂಡಿಸುವುದಾಗಿದೆ.[೨೧]

೧೯೬೪ರ ಕೂರ್ಗ್ ಲ್ಯಾಂಡ್ ಆಂಡ್ ರೆವಿನ್ಯೂ ಆಕ್ಟ್ ಕಾಯ್ದೆಯ ಅನ್ವಯ ಜಮ್ಮ ಮಾಲೀಕತ್ವವನ್ನು ಅದರ ಮಾಲೀಕರಿಗೆ ನೀಡಲಾಗಿತು. ಆದರೆ ಸರ್ಕಾರದಿಂದ ಯಾವುದೇ ರೀತಿಯ ಅಧಿಕಾರವನ್ನು ನೀಡಿರಲಿಲ್ಲ ಮತ್ತು ಭಾರತೀಯ ಶಸ್ತ್ರಾಸ್ತ್ರ ಕಾಯಿದೆಯ ಅನ್ವಯ ಜಮ್ಮ ಮಾಲೀಕರು ಬಂದೂಕಿನ ಪರವಾನಿಗೆಯನ್ನು ಹೊಂದುವಂತೆ ಇರಲಿಲ್ಲ.[೨೨] ಇದರಿಂದ ಜಮ್ಮ ಮಾಲೀಕರು ಈ ಕಾಯಿದೆಯನ್ನು ವಿರೋಧಿಸಿದ್ದರು ಹಾಗು ಅನುಮಾನದಿಂದಲೇ ನೋಡಿದ್ದರು. ೧೯೮೮ರಲ್ಲಿ ನ್ಯಾಯಾಲಯವು ಜಮ್ಮಾ ಭೂಮಿಯ ಪಾಲುದಾರಿಕೆ, ನೊಂದಣಿ, ಭೂಮಿಯ ಒಡೆತನ, ಸಾಲ ಹಾಗು ಹಕ್ಕುಬಾಧ್ಯತೆ ಹೊಂದುವಂತೆ ತಿದ್ದುಪಡಿಗೆ ಆದೇಶಿಸಿತ್ತು. ಹಾಗೆಯೇ ೧೯೮೮ರ ಕಾಯ್ದೆಯು ಜಮ್ಮ ಭೂಮಿಯನ್ನು ಭಾಗ ಮಾಡಲು ಹಾಗು ಮಾರಾಟದ ಅಧಿಕಾರವನ್ನು ನೀಡಲಾಯಿತ್ತು.[೨೩] ೧೯೯೯ರಲ್ಲಿ ಕರ್ನಾಟಕ ರಾಜ್ಯಸರ್ಕಾರವೂ ತನ್ನ ಒಂದು ಸುತ್ತೋಲೆಯ ಮೂಲಕ ೧೮೯೯ರ ಭೂಕಂದಾಯ ಕಾಯ್ದೆಯನ್ನು ರದ್ದುಗೊಳಿಸಿ, ಅದರ ಸ್ಥಾನದಲ್ಲಿ ೧೯೬೪ರ ಕೂರ್ಗ್ ಲ್ಯಾಂಡ್ ಆಂಡ್ ರೆವಿನ್ಯೂ ಆಕ್ಟ್ ಕಾಯ್ದೆಯನ್ನು ಜಾರಿಗೂಳಿಸಿ ಅಲ್ಲಿಗೆ ಬಹುತೇಕ ಜಮ್ಮ ಸಮಸ್ಯೆ ಪರಿಹಾರವಾಯಿತೆಂದು ಭಾವಿಸಲಾಗಿತು.

ಆದರೆ ಸ್ವಾತಂತ್ರ್ಯದ ತರುವಾಯದಲ್ಲಿಯೂ ಕೊಡಗಿನ ಅರಣ್ಯ ಇಲಾಖೆಯು ಬ್ರಿಟಿಷ್ ಸರ್ಕಾರದ ಕಾಯ್ದೆಗಳನ್ನು ಪಾಲನೆ ಮಾಡುತ್ತಿರುವುದು ಒಂದು ರೀತಿ ವಿಸ್ಮಯವೇ ಆಗಿದೆ. ಅರಣ್ಯ ಇಲಾಖೆಯ ಪ್ರಕಾರ ಕೊಡಗು ಜಿಲ್ಲೆಯೇ ಒಂದು ಅರಣ್ಯ ಪ್ರದೇಶ. ಈ ಪ್ರದೇಶವನ್ನು ಸಾರ್ವಜನಕರು ಅತಿಕ್ರಮಣ ಮಾಡಿಕೊಂಡಿದ್ದಾರೆ.[೨೪] ಆದರೆ ೧೯೬೪ರ ಭೂ ಕಂದಾಯದ ಕಾಯ್ದೆಯು ಸಂಪೂರ್ಣ ಕರ್ನಾಟಕ ರಾಜ್ಯಕ್ಕೆ ಒಂದಾಗಿದೆ ಆದರೆ ಕೊಡಗಿಗೆ ಮಾತ್ರ ವಿಭಿನ್ನವಾಗಿದೆ. ಇದರಿಂದಾಗಿ ಕೊಡಗಿನಲ್ಲಿ ಜಮೀನಿನ ಮರದ ಹಕ್ಕು ಮಾಲೀಕನಿಗೆ ಇಲ್ಲ ಎನ್ನುವ ವಿಚಿತ್ರವಾದ ಸನ್ನಿವೇಶವನ್ನು ಅರಣ್ಯ ಇಲಾಖೆ ನಿರ್ಮಿಸಿದೆ.[೨೫] ಆ ನಂತರ ಜಮೀನಲ್ಲಿರುವ ಮರದ ಹಕ್ಕು ಮರದ ಮಾಲೀಕನದು ಎಂಬ ಹೋರಾಟ ಪ್ರಾರಂಭವಾಯಿತು. ಮರದ ಹಕ್ಕನ್ನು ಮಾಲೀಕ ಹಾಗು ಆತನ ಕುಂಟುಬಕ್ಕೆ ಸಿಮೀತವಾಗುಂತೆ, ಒಂದು ವೇಳೆ ಮರದ ಹಕ್ಕನ್ನು ಪೂರ್ಣವಾಗಿ ನೀಡಿದಲ್ಲಿ ಸಂಪೂರ್ಣ ಕಾಡು ನಾಶವಾಗುತ್ತದೆಎಂದು ಅರಣ್ಯಗಳನ್ನು ಸಂರಕ್ಷಿಸಿ ಎಂದು ಹೇಳುತ್ತಿರುವವರು ಇಂದು 'ಡೋಂಗಿ' ಪರಿಸರವಾದಿಗಳು ಹಾಗು ಪಿತೂರಿಗಾರರು ಎಂದು ಬಿಂಬಿತವಾಗುತ್ತಿದ್ದಾರೆ.[೨೬] ಕೊಡಗಿನ ಕೆಲವು ಸಮಸ್ಯೆಗಳಿಗೆ ಕರ್ನಾಟಕ ಸರ್ಕಾರವೂ ಸಕಾರಾತ್ಮವಾಗಿ ಸ್ಪಂದಿಸುತ್ತಿರುವುದು ನಮಗೆಲ್ಲರಿಗೂ ಸಂತಸದ ವಿಷಯವಾಗಿದೆ. ಜಮ್ಮ ಭೂ ಹಿಡುವಳಿ ವ್ಯವಸ್ಥೆಯನ್ನು ಕುರಿತಂತೆ ಬ್ರಿಟಿಷರ ಕಾಲದಿಂದಲೂ ಪ್ರಸ್ತುತದವರೆಗೆ ನಿರಂತರವಾಗಿ ಜಮ್ಮ ಭೂ ಮಾಲೀಕರು ತಮ್ಮ ಹಕ್ಕಿನ ಸ್ವರೂಪದ ವಿಶ್ಲೇಷಣೆಯನ್ನು ಮುಂದಿಟ್ಟುಕೊಂಡು ಹೋರಾಟವನ್ನು ಮಾಡಿಕೊಂಡು ಬರುತ್ತಿದ್ದಾರೆ.[೨೭] **"ಜಮ್ಮ ನಮ್ಮ ಜನ್ಮ ಸಿದ್ಧ ಹಕ್ಕು"** ಆದ್ದರಿಂದ ಜಮ್ಮ ಹಕ್ಕು ಬೇಕು ಎನ್ನುವವರು ಒಂದೆಡೆ ಹಾಗೆಯೆ ಜಮ್ಮ ತಿದ್ದುಪಡಿಯಿಂದಾಗಿ ಭಾರತದ ಒಂದು ವಿಭಿನ್ನ ಸಂಸ್ಕೃತಿಯ ನೆಲೆಯಾದ ಕೊಡಗಿನ ಮೇಲೆ ಕಪ್ಪು ಛಾಯೆಯನ್ನು ಬೀರುತ್ತದೆ. ಇದರಿಂದ ಕೊಡಗಿನ ಅವಿಭಕ್ತ ಕುಟುಂಬ, ಐನ್‌ಮನೆ, ಸಂಸ್ಕೃತಿ, ಆಚಾರ-ವಿಚಾರಗಳಲ್ಲಿ ಬದಲಾವಣೆ ಉಂಟುಮಾಡುತ್ತದೆ. ಹಾಗೆಯೆ ಕೊಡಗಿನ ಪಶ್ಚಿಮಘಟ್ಟದಲ್ಲಿ ಪ್ರವಾಸೋದ್ಯಮ ಬೃಹತ್ತಾಗಿ ಬೆಳೆಯುತ್ತಿದು. ಇದಕ್ಕೆ ಪೂರಕವೆಂಬಂತೆ ಭೂಮಿಯ ಮೌಲ್ಯವು ಹೆಚ್ಚುತ್ತಿದೆ. ಇವು ಎಲ್ಲಕ್ಕಿಂತ ಮುಖ್ಯವಾಗಿ ವ್ಯಾಪಾರಿಗಳು ಹಾಗು ಮಧ್ಯವರ್ತಿಗಳು ತಮ್ಮ ಕಾರ್ಯ ಸಾಧನೆಗಾಗಿ ಬಲಿಷ್ಠವಾಗಿ ಬೆಳೆದು ನಿಂತಿರುವ ಮರಗಳ ಕಡಿದು ಜಾಗಗಳ ಮೂಲಕ ನೆರೆಯ ರಾಜ್ಯ ವಲಸಿಗರಿಗೆ ಸೈಟುಗಳಾಗಿ ಪರಿವರ್ತಿಸಿ ಇಲ್ಲಿಯೇ ನೆಲೆಯೂರುವಂತೆ ಮಾಡಿದ್ದಾರೆ. ಜಮ್ಮ ಹಕ್ಕನಿಂದಾಗಿ ಜಮ್ಮ ಭೂಮಿ ಮಾರಾಟ ವಾಗಿ ರೆಸಾರ್ಟ್‌ಗಳು ತಲೆ ಎತ್ತಿದೆ. [೨೮]ಹೀಗೆ ಕೊಡಗು ದಿನದಿಂದ ದಿನಕ್ಕೆ ತನ್ನ ಸಂಸ್ಕೃತಿ ಮತ್ತು ವಿಚಾರಗಳ ಅಭಿವೃದ್ಧಿಗೆ ಬದಲಾಗಿ ಆಧುನಿಕತೆ ಎನ್ನುವ ಬಿರುಗಾಳಿಗೆ ಸಿಲುಕಿ ತನ್ನ ಅಸ್ಥಿತ್ವವನ್ನು ಕಳೆದುಕೊಳ್ಳುವ ಸನ್ನಿವೇಶವನ್ನು ರಚಿಸಿಕೊಂಡಿದೆ.

ಉಪಸಂಹಾರ

ಅರಣ್ಯ ಮತ್ತು ಪರಿಸತರ ಒಂದೇ ನಾಣ್ಯದ ಎರಡು ಮುಖಗಳಂತೆ, ಆದರೆ ಮನುಷ್ಯನ ಅತಿಯಾದ ಸ್ವಾರ್ಥ ಮನೋಭಾವದಿಂದಾಗಿ ಅರಣ್ಯ ಮತ್ತು ಪರಿಸರವನ್ನು ನಾಶಮಾಡುವುದರೊಂದಿಗೆ ನೈತಿಕ ಮೌಲ್ಯವನ್ನು ಕಳೆದು ಕೊಳ್ಳುತ್ತಿದ್ದಾನೆ[೨೯]. ಬ್ರಿಟೀಷ್ ಆಡಳಿತದಲ್ಲಿ ಅರಣ್ಯ ಆರ್ಥಿಕ ಚಟುವಟಿಕೆಯ ಕೇಂದ್ರವಾಯಿತು. ನಮ್ಮ ಕಾಡುಗಳು ಅವರ ವಾಣಿಜ್ಯ ಎಸ್ಟೇಟ್‌ಗಳಾಗಿ ಮಾರ್ಪಾಡಾದವು. ಅರಣ್ಯವನ್ನೇ ನಂಬಿ ಬದುಕು ಸಾಗಿಸುತ್ತಿರುವ ನಮ್ಮ ಬುಡಕಟ್ಟು (ಗಿರಿ ಜನರು) ಜನರು ಈ ಎಸ್ಟೇಟ್‌ಗಳಲ್ಲಿ ಕೂಲಿ ಕಾರ್ಮಿಕರಾದರು.[೩೦] ಯೂರೋಪಿನ ಪ್ಲಾಂಟರ್ಸ್‌ಗಳು ಕಾಫಿಯ

ಉತ್ಪಾದನೆಯನ್ನು ಪರಿಚಯಿಸುವುದರೊಂದಿಗೆ ಸಾವಿರಾರು ಎಕರೆ ಕಾರ್ಡಮಮ್ (ಏಲಕ್ಕಿ) ಅರಣ್ಯಗಳು ಕಾಫಿ ಎಸ್ಟೇಟ್‌ಗಳಾಗಿ ಮಾರ್ಪಡಾದವು. ಇದರಿಂದಾಗಿ ದಿನೇ ದಿನೇ ಬೆಳವಣಿಗೆಯನ್ನು ಹೊಂದುತ್ತಿರುವ ಕಾಫಿಯ ಉತ್ಪಾದನೆಯಿಂದಾಗಿ ಪ್ರೇರಿತರಾದ ಸ್ಥಳೀಯರು, ಭೂಮಿಯ ಮೇಲೆ ನಿಯಂತ್ರಣ ಹೊಂದುವುದು ಪ್ರಾರಂಭವಾದವು. ಭತ್ತ ಉತ್ಪಾದನೆಯೂ ಕುಂಠಿತಗೊಳ್ಳುತ್ತಾ ಕಾಫಿಯ ವ್ಯಾಮೋಹ ಹೆಚ್ಚು ಆದವು ನಂತರದಲ್ಲಿ ಜಮ್ಮ ಭೂಮಿಯ ಮೇಲಿನ ಏಕಸ್ವಾಮ್ಯ ಹಾಗೂ ಬ್ರಿಟಿಷ್ ಆಡಳಿತದಲ್ಲಿ ಜಮ್ಮ, ಬಾಣೆ ಹಾಗೂ ಬರಕೆ ಭೂಮಿಯನ್ನು ರೈತರಿಗೆ ಕಾಫಿ, ಕಿತ್ತಳೆ, ಕರಿಮೆಣಸು ಹಾಗು ಏಲಕ್ಕಿ ಸೇರಿದಂತೆ ಇತರ ಸಾಂಬಾರ ಬೆಳೆಗಳನ್ನು ಬೆಳೆಯಲು ನೀಡಿದ್ದರು. ಹಾಗೆಯೇ ಕಂದಾಯವನ್ನು ಹೇರುವುದರೊಂದಿಗೆ, ಸ್ಥಳೀಯರಿಗೆ ನೈತಿಕ ಹಕ್ಕನ್ನು ನಿರಾಕರಿಸುತ್ತಾ ಅರಣ್ಯ ಹಾಗೂ ಆಡಳಿತದ ಮೇಲೆ ಕೇಂದ್ರಿಕೃತವಾದ ಕಾಯಿದೆಗಳ ಮೂಲಕ ನಿಯಂತ್ರಣ ಹಾಗೂ ಅಧಿಕಾರವನ್ನು ಹೇರತೊಡಗಿದ್ದರು.[೩೧] ಸ್ವಾತಂತ್ರ್ಯದ ನಂತರ ನಮ್ಮ ಸರ್ಕಾರ ಅರಣ್ಯಾಡಳಿತಕ್ಕೆ ಅನೇಕ ಇಲಾಖೆಗಳನ್ನು ಸ್ಥಾಪಿಸಿದರು.ಅರಣ್ಯಾಧಿಕಾರಿಗಳು ತಲೆ ತಲಾಂತರಗಲಿಂದ ಬದುಕುತ್ತಿದ್ದ ಸ್ಥಳೀಯರ ಸಾಂಸ್ಕೃತಿಕ ಭೂಮಿಯನ್ನು ಅರಣ್ಯ ಭೂಮಿ ಎಂದು ಒಂದು ರೀತಿಯ **'ನಿಯಮ'**ವೇ ಇಲ್ಲದ **'ಅರಣ್ಯ ನಿಯಮ'**ವನ್ನು ಜಾರಿಗೊಳಿಸಿದರು. ಕೊಡಗನ್ನು ಸೂಕ್ಷ್ಮಪ್ರದೇಶವೆಂದು ಮಾಡಲು ಹೊರಟಿರುವ ಇಂದಿನ ಸರ್ಕಾರ, ಆ ಪ್ರದೇಶದಲ್ಲಿ ತಲತಲಾಂತರಗಳಿಂದ ವಾಸಿಸುತ್ತಿರುವ ಸ್ಥಳೀಯರು, ಬುಡಕಟ್ಟು ಜನರ ಕುರಿತಂತೆ ಅವರ ನಿಲುವುಗಳು ನಿಗೂಢವಾಗಿದೆ. "ಸೂಕ್ಷ್ಮ ಪರಿಸರ", "ವಿಶ್ವಪರಂಪರೆ" ಎಂಬ ಪದಪುಂಜಗಳು ಸ್ಥಳೀಯರ ಪ್ರತಿಭಟನೆಗೆ ಕಾರಣವಾಗಿದೆ. ಈಗಾಗಲೇ ಪ್ಲಾಂಟೇಷನ್ ಮತ್ತು ಪ್ರವಾಸೋದ್ಯಾಮದಿಂದಾಗಿ ಸ್ಥಳೀಯರು ತಮ್ಮ ಇರುವಿಕೆಗಾಗಿ ಹೋರಾಡುವ ವಾತಾವರಣ ಸೃಷ್ಟಿಯಾಗುತ್ತಿದೆ.[೩೨] ಮಾಧವ್ ಗಾಡ್ಗೀಳ್‌ರವರ ವರದಿಯು ಜನ ವಿರೋಧಿ ನಿಲುವನ್ನು ತಾಳಿರುವುದರಿಂದಾಗಿ, ಪರಿಸರ ಹಾಗೂ ವನ್ಯಜೀವಿಗಳ ಸಂರಕ್ಷಣೆಗೆ ಕುರಿತಂತೆ ಸರ್ಕಾರ ಕಸ್ತೂರಿ ರಂಗನ್ ನೇತೃತ್ವದ ತಂಡವನ್ನು ನೇಮಿಸಿತು. ಈ ತಂಡವು ಸ್ಥಳೀಯರನ್ನು ಮತ್ತು ಅವರ ಆಶೋತ್ತರಗಳಿಗೆ ಸ್ಪಂದಿಸದೆ ಸೂಕ್ಷ್ಮಪರಿಸರ ತಾಣವೆಂದು ಕೊಡಗಿನ ಗ್ರಾಮಗಳು ಮತ್ತು ತಾಲೂಕುಗಳನ್ನು ಪಟ್ಟಿಮಾಡಿರುವುದರಿಂದ ಸ್ಥಳೀಯರ ವಿರೋಧಕ್ಕೆ ಕಾರಣವಾಯಿತು. ಸರ್ಕಾರದ ನಿಲುವೆಂದರೆ ಅರಣ್ಯ ಮತ್ತು ಕಂದಾಯ ಇಲಾಖೆಯ ಮುಖಾಂತರ ಸಾಗುವಳಿ ಆಗದೆ ಇರುವ ಬಾಣೆ ಭೂಮಿಯನ್ನು ಸರ್ಕಾರಿ ಅರಣ್ಯ ಭೂಮಿಯನ್ನಾಗಿ ಮಾಡುವ ಕಾರ್ಯದಲ್ಲಿ ತೊಡಗಿದೆ. ಹಾಗೆಯೇ ವಿಶ್ವಪರಂಪರೆಯ ಪಟ್ಟಿಗೆ ಕೊಡಗನ್ನು ಸೇರಿಸುವ ಹುನ್ನಾರದಲ್ಲಿ ತೊಡಗಿದೆಯೆಂದು ಸ್ಥಳೀಯರು ಪರಿಸರದ ಸಂರಕ್ಷಣೆ ಮತ್ತು ಸ್ಥಳೀಯತೆಯ ಉಳಿವಿಗಾಗಿ ಹೋರಾಡುವ ಸನ್ನಿವೇಶವನ್ನು ಪ್ರಸ್ತುತ ಕೊಡಗಿನಲ್ಲಿ ಕಾಣಬಹುದಾಗಿದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿಗಳು

೧. ಸೂರ್ಯನಾಥ ಕಾಮತ್, ಕರ್ನಾಟಕ ರಾಜ್ಯ ಗೆಜ್ಜೆಟಿಯರ್, ಕೊಡಗು ಜಿಲ್ಲೆ, ಪುಟ ೩೮, ೧೯೯೨.

೨. Ibid.p.51.

೩. Talboys Wheeles. J, *Indian under British Rule from the Foundation of the East India Company*, Discovery Publishing House, Delhi, 1886.

೪. ರಿಕ್ಟರ್, ಜಿ. *ಗೆಜ್ಜೆಟಿಯರ್ ಆಫ್ ಕೂರ್ಗ್*, ಪುಟ ೪೨೧–೪೨೩, ೧೮೭೦.

೫. ಜಿ.ಯ್.ಸಿನ್ಹಾ, ಬ್ರಿಟಿಷ್ ಇಂಡಿಯಾಸ್ ಫಾರೆಸ್ಟ್ರಿ ಅಂಡ್ ಮೊರ್ಡನ್ ಎನ್‌ವಾರ್‌ನಮೆಂಟಲಿಸಮ್, ಪುಟ ೧–೨.

೬ ಅಜೇಯ್.ಎಸ್.ರಾವತ್, ಎವಲ್ಯೂಷನ್ ಆಫ್ ಸಿಗ್ನಿಫಿಕೆಂಟ್ ಫಾರೆಸ್ಟ್ರಿ ಇನ್ ಬ್ರೀಟಿಷ್ ಇಂಡಿಯಾ, ಪ್ರೊಸೀಡಿಂಗ್ಸ್ ಆಫ್ ದಿ ಇಂಡಿಯನ್ ಹಿಸ್ಟರಿ ಕಾಂಗ್ರೆಸ್, ಪುಟ ೫೩೩–೫೩೪, ೧೯೮೮.

೭. ಅಜ್ಜಂಪುರ ಕೃಷ್ಣಸ್ವಾಮಿ, ಅರಣ್ಯಶಾಸ್ತ್ರ, ಸರ್ವನಾಭ ಮುದ್ರಣ, ಬೆಂಗಳೂರು, ಪುಟ ೨೦, ೧೯೯೮.

೮. ಡಾ. ಕೆ.ಸಿ. ಮೋಹನ, ಕೊಡಗಿನಲ್ಲಿ ಅರಣ್ಯ ಆಡಳಿತ ಒಂದು ಅಧ್ಯಯನ ೧೮೦೦–೧೯೪೭ (ಅಪ್ರಕಟಿತ ಮಹಾಪ್ರಬಂಧ) ಮಂಗಳೂರು ವಿಶ್ವವಿದ್ಯಾನಿಲಯ, ೨೦೧೦.

೯. ರಾಮಸ್ವಾಮಿ.ಎಸ್.ಎನ್, ಕರ್ನಾಟಕದ ಅರಣ್ಯವೃಕ್ಷಗಳು, ಪ್ರಸಾರಾಂಗ ಮೈಸೂರು, ಪುಟ ೨, ೧೯೭೬.

೧೦. ಐ. ಎಮ್, ಮುತ್ತಣ್ಣ, ಎ ಟಿನಿ ಸ್ಟೇಟ್ ಆಫ್ ಸೌತ್ ಇಂಡಿಯಾ, ಪುಟ ೧೮–೨೪, ೧೯೫೩.

೧೧. ಸೂರ್ಯನಾಥ ಕಾಮತ್, ಕರ್ನಾಟಕ ರಾಜ್ಯ ಗೆಜ್ಜೆಟಿಯರ್, ಕೊಡಗು ಜಿಲ್ಲೆ, ಪುಟ ೪೯–೫೦.

೧೨. ಡಾ.ಕೆ.ಸಿ. ಮೋಹನ ಕುಮಾರ್, ಕೊಡಗಿನಲ್ಲಿ ಅರಣ್ಯ ಆಡಳಿತ ಒಂದು ಅಧ್ಯಯನ ೧೮೦೦–೧೯೪೭ (ಅಪ್ರಕಟಿತ ಮಹಾಪ್ರಬಂಧ), ಪುಟ ೧೦೫, ೨೦೧೦.

೧೩. Ibid.p.96.

೧೪. ದಿ ಕಾಮನ್ ಲಾ ಎಬ್ರಾಡ್ಡ್ ಕಾನ್‌ಸ್ಟುಷ್ಯನಲ್ ಅಂಡ್ ಲೀಗಲ್ ಲೆಗಸ್ಸಿ ಆಫ್ ದಿ ಬ್ರೀಟಿಷ್ ಎಂಪ್ಲಾಯರ್, ಪುಟ ೪೭೧–೪೮೦, ೨೦೦೧.

೧೫. ರಾಮಚಂದ್ರ ಗುಹ ಮತ್ತು ಮಾಧವ ಗಾಡ್ಗಿಲ್, ದಿಸ್ ಪುಸರ್ಡ್ ಲ್ಯಾಂಡ್ : ಆನ್ ಇಕೊಲಾಜಿಕಲ್ ಹಿಸ್ಟರಿ ಆಫ್ ಇಂಡಿಯಾ, ಪುಟ ೭೭–೮೫, ೧೯೯೩.

೧೬. ಪ್ರೊ. ಬಿ. ಸುರೇಂದ್ರರಾವ್ ಮತ್ತು ಡಾ. ಕೆ.ಎಮ್. ಲೋಕೇಶ್, ಕೂರ್ಗ್ ಇನ್ವೆಂಟರ್ಸ್, ಮಂಗಳೂರು ವಿಶ್ವವಿದ್ಯಾನಿಲಯ.

೧೭. ಟಿ.ಪಿ. ವಿಜಯ್, ಜಮ್ಮ ಟೆನಿರ್ ಇನ್ ಕೊಡಗು–ಈಟ್ಸ್ ಸಿಸ್ಟಮ್ ಸೊಷೊ ಎಕಾನಾಮಿಕ್ ಡೈಮೆನ್ಸನ್ಸ್ ೧೮೦೦–೧೯೮೦ (ಅಪ್ರಕಟಿತ ಮಹಾಪ್ರಬಂಧ), ಪುಟ ೮೯, ೧೯೯೩.

೧೮. ವಿಜಯ್. ಟಿ.ಪಿ. ಆಧುನಿಕ ಕೊಡಗು, ೨೦೦೦.

೧೯. ತಮ್ಮಯ್ಯ.ಟಿ.ಸಿ, ಬಾಣೆ ಜಮೀನಿನ ಸುತ್ತ, ೨೪–೭–೨೦೧೧, ಪುಟ ೨.

೨೦. ಟಿ.ಪಿ. ವಿಜಯ್, ಜಮ್ಮ ಟೆನಿರ್ ಇನ್ ಕೊಡಗು–ಈಟ್ಸ್ ಸಿಸ್ಟಮ್ ಸೊಷೊ– ಎಕಾನಾಮಿಕ್ ಡೈಮೆನ್ಸನ್ಸ್ ೧೮೦೦–೧೯೮೦ (ಅಪ್ರಕಟಿತ ಮಹಾಪ್ರಬಂಧ) ಪುಟ ೯೨, ೧೯೯೩.

೨೧. ಎಂ.ಎ.ಎಸ್. ರಾಜನ್, ಕರ್ನಾಟಕದಲ್ಲಿ ಭೂ ಸುಧಾರಣೆ, ಐಬಿಎಚ್ ಪ್ರಕಾಶನ, ಬೆಂಗಳೂರು, ಪುಟ ೧೪, ೧೯೮೭.

೨೨. ವಿಜಯ್. ಟಿ.ಪಿ. ಆಧುನಿಕ ಕೊಡಗು, ೨೦೦೦.

೨೩. ಸರ್ಕಾರದ ಸುತ್ತೋಲೆಯಲ್ಲಿ ಆದೇಶವೇನೂ ಇಲ್ಲ. ಅದು ಕೇವಲ ಸುತ್ತೋಲೆಯಷ್ಟೆ ಎಂದು ವಾದಿಸುತ್ತಾ ೧೯೮೧ರಲ್ಲಿ ಎ.ಕೆ. ಸುಬ್ಬಯ್ಯ ತನ್ನ ಹೆಸರಿನಲ್ಲಿ ರಿಟ್ ಅರ್ಜಿಯನ್ನು ರಾಜ್ಯ ಉಚ್ಚನ್ಯಾ ಯಲಯಕ್ಕೆ, ಅಲ್ಲಿಂದ ಜಿಲ್ಲಾಧಿಕಾರಿಗಳ ಸುತ್ತೋಲೆಯನ್ನು ನ್ಯಾಯಲಯ ವಜಾಗೊಳಿಸಿತ್ತು. ನಂತರ ರೀತಿಯಿಂದ ಚೇಕ್ಕೆರ ಪೂವಯ್ಯ ಕು ಂಬಸ್ಥರ ಜಮ್ಮಾ ಭೂಮಿಯ ಪಾಲುದಾರಿಕೆಯ ನೊಂದಾವಣೆಗೆ ನೊಂದಣಾಧಿಕಾರಿ ನಿರಾಕರಿಸಿದರು. ನಂತರ ಇದರ ವಿರುದ್ಧ ನ್ಯಾ ಲಯಕ್ಕೆ ಮೊರೆ ಹೋಗಿ ಅಲ್ಲಿಂದ ಅವರು ಸಪಲರಾಗಿದ್ದರು. ಇದು ಭೂಮಿಯ ಮೇಲೆ ಅಧಿಕಾರವಿರುವುದನ್ನು ಪುಷ್ಠೀಕರಿಸುತ್ತದೆ. ಇಂಡಿ ಯನ್ ಆರ್ಮ್ಸ ಆಕ್ಟ್ ಅನ್ವಯ ಸ್ಥಳೀಯರಿಗರ ಬಂದೂಕಿನ ಪರವಾನಿಗೆಯನ್ನು ಹೊಂದುವಂತೆ ಇಲ್ಲವೆಂದು ತಿಳಿಸುತ್ತದೆ. ಇದರ ತಿದ್ದುಪಡಿಗೆ ಒ ತ್ತಾಯಿಸಿ ರಾಜ್ಯಸರ್ಕಾರದ ಮೊರೆ ಆದರೆ ರಾಜ್ಯ ಸರ್ಕಾರದಿಂದ ತಿರಸ್ಕೃತಗೊಂಡ ಪರಿಣಾಮ ಕರ್ನಾಟಕದ ಹೈಕೋರ್ಟಿಗೆ ಮೊರೆಹೋಗಬೇ ಯಿತು. (ಕೊಡಗು ಸಮಚಾರ ೨೨–೧೧–೨೦೧೨)

೨೪. ಶಕ್ತಿ ದಿನ ಪತ್ರಿಕೆ, ಜಮ್ಮ ತಿದ್ದುಪಡಿ ವಿರುದ್ದ ನ್ಯಾಯಲಯದಲ್ಲಿ ಅರ್ಜಿ, ೧೦.೦೬.೨೦೧೩.

೨೫. ೧೯೭೫ರ ಸರ್ವೋಚ್ಚ ನ್ಯಾಯಲಯದಲ್ಲಿನ ಇ.ಸಿ.ವೈಟ್ ಪ್ರಕರಣದಲ್ಲಿ ನ್ಯಾಯಲಯವೂ ಪರಾಧೀನ ಜಮೀನಿನಲ್ಲಿರುವ ಮರದ ಹಕ್ಕು ಭೂಮಾಲೀಕನದ್ದು ಎಂದು ತೀರ್ಪು ನೀಡಿ ಆದರೆ ಅರಣ್ಯ ಇಲಾಖೆ ಇದನ್ನು ಸ್ವೀಕರಿಸಲು ಸಿದ್ದವಿಲ್ಲ. (ಕೊಡಗು ಸಮಚಾರ ೩೦–೧–೨೦೧೩).

೨೬. ಚೇಕ್ಕೆರ ಪೂವಯ್ಯ ಪ್ರಕರಣದ ತೀರ್ಪಿನ ನಂತರ ಕೊಡಗಿನ ಬಾಣೆ ಸಮಸ್ಯೆ ಇತ್ಯರ್ಥವಾದಂತೆ ಆಗಿತ್ತು. ಈ ತೀರ್ಪಿನ ಅನ್ವಯ ಕೃಷಿಗೆ ಒಳಪಟ್ಟ ಬಾಣೆಯು ಕಂದಾಯಕ್ಕೆ ಒಳಪಟ್ಟು, ಅದು ಹಿಡುವಳಿದಾರನ ಹಕ್ಕಾಗಿರುತ್ತದೆ. ಮತ್ತು ಪರಾಧಿನವಾಗಿರುತ್ತದೆ. ಉಳಿದಂತೆ ಕೃಷಿ ಮಾಡದೇ ಇರುವಂತಹ ಬಾಣೆಗೆ ಯಾವುದೇ ಕಂದಾಯ ಇರುವುದಿಲ್ಲ ಮತ್ತು ಈ ಬಾಣೆ ಸೀಮಿತ ಹಕ್ಕು. (ಕೊಡಗು ಸಮಚಾರ ೨೩–೩–೨೦೧೩).

೨೭. ಡಾ. ಕೋಡೀರ ಲೋಕೇಶ ಮೊಣ್ಣಪ್ಪ, ೪ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಭಾಷಣ,ಅಮ್ಮತ್ತಿ, ಕೊಡಗು, ಪುಟ ೧೨, ೨೦೧೧.

೨೮. ಶಕ್ತಿ ದಿನ ಪತ್ರಿಕೆ, ಜಮ್ಮ ತಿದ್ದುಪಡಿ ವಿರುದ್ದ ನ್ಯಾಯಲಯದಲ್ಲಿ ಅರ್ಜಿ, ೧೦.೦೬.೨೦೧೩, ಪುಟ ೨.

೨೯. ನಂಜುಡಯ್ಯ. ಸಿ, ಫಾರೆಸ್ಟ್ ಎನ್‌ವಾರ್‌ನಮೆಂಟ್ ಅಂಡ್ ಲೋಕಲ್ ಕಮ್ಯುನಿಟಿ –ಎ ಕೇಸ್ ಸ್ಟಡಿ ಆಫ್ ಕೂರ್ಗ್, ಮೈಸೂರು ವಿಶ್ವವಿದ್ಯಾನಿಲಯ, ಪುಟ ೯೨, ೨೦೦೪.

೩೦. ಡಾ. ಕೆ.ಸಿ.ಮೋಹನ, ಕೊಡಗಿನಲ್ಲಿ ಅರಣ್ಯ ಆಡಳಿತ ಒಂದು ಅಧ್ಯಯನ, ೧೮೦೦–೧೯೪೭, (ಅಪ್ರಕಟಿತ ಮಹಾಪ್ರಬಂಧ), ಮಂಗಳೂರು ವಿಶ್ವವಿದ್ಯಾನಿಲಯ, ಪುಟ ೧೦೬–೧೨೨, ೨೦೧೦.

೩೧. ಪ್ರೊ. ಬಿ. ಸುರೇಂದ್ರರಾವ್ ಮತ್ತು ಡಾ. ಕೆ.ಎಮ್. ಲೋಕೇಶ್, ಕೂರ್ಗ್ ಇನ್ವೆಂಟರ್ಸ್, ಮಂಗಳೂರು ವಿಶ್ವವಿದ್ಯಾನಿಲಯ.

೩೨. ಕೊಡಗು ಸಮಾಚಾರ, ೨೨–೧೧–೨೦೧೨, ೩೦–೧–೨೦೧೩, ೨೩–೩–೨೦೧೩.

೧೧೩

ದೈವಿಕರಲ್ಲಿ ಸಂಘರ್ಷ ನೀತಿ : ಒಂದು ದೃಶ್ಯಚಿಂತನೆ

ಡಾ. ಎನ್.ಎಂ. ಅಂಗಡಿ*

ಮನುಷ್ಯ ಬಹುಷ್ಯ ಹುಟ್ಟಿನಿಂದ ಮಾನಸಿಕ ಹಾಗೂ ದೈಹಿಕ ಸಂಘರ್ಷಗಳನ್ನು ಮೈಗೂಡಿಸಿಕೊಂಡು ಅವುಗಳನ್ನು ಎದುರಿಸಿ ಬೆಳೆದು ಬಂದಿರುವುದು ಅವನ ಜೀವನ ಕ್ರಮದಿಂದ ತಿಳಿಯುತ್ತದೆ. ಪ್ರಾಚೀನ ಮನುಷ್ಯನು ಕೂಡಾ ಆಹಾರಕ್ಕಾಗಿ ಹಾಗೂ ತನ್ನ ಜೀವ ರಕ್ಷಣೆಗಾಗಿ ಅನೇಕ ಸವಾಲುಗಳನ್ನು ಸ್ವೀಕರಿಸಿ ಸಂಘ ಜೀವಿಯಾಗಿ ತನ್ನ ಬದುಕನ್ನು ಕಟ್ಟಿಕೊಂಡು ಬಂದಿರುವುದು ಐತಿಹ್ಯ. ಈ ಪರಂಪರೆ ಮುಂದಿನ ನಾಗರಿಕತೆಯ ಬದುಕಿನುದ್ದಕ್ಕೂ ವಿಕಸನಗೊಂಡಿದೆ ಮನುಷ್ಯನಲ್ಲಿ ಈ ಮನೋವೃತ್ತಿ ನಾಗರಿಕತೆಯ ಹಂತದಲ್ಲಿ ವೈವಿಧ್ಯಮಯ ಹರವು ರೂಪ ಪಡೆದುಕೊಂಡು ಮುಂದಿನ ತಲೆಮಾರಿನವರ ಬದುಕಿನ ರೀತಿ ನೀತಿಗಳ ಬದಲಾವಣೆಗೆ ಕಾರಣವಾಯಿತೆನ್ನಬಹುದು.

ಮಾನವನ ಸಂಘರ್ಷದ ಬದುಕು ಇಂದು ನಿನ್ನೆಯದಲ್ಲ. ನಮ್ಮ ಮಹಾನ್ ಕಾವ್ಯಗಳಾದ ರಾಮಾಯಣ, ಮಹಾಭಾರತದ ಕಥೆ, ಕಥಾಪ್ರಸಂಗ ಹಾಗೂ ಕಥೆಯ ಪಾತ್ರಗಳು ಮಾನವನ ಅಸ್ತಿತ್ವವನ್ನು ತಿಳಿಸುತ್ತವೆ. ಇಲ್ಲಿ ದೈವಿಕ ಪಾತ್ರಗಳು ಪ್ರಸ್ತಾಪಗೊಂಡಿದ್ದರೂ ಸಹ ಮಾನವ ಬದುಕಿನ ಸಾಮಾಜಿಕ ವ್ಯವಸ್ಥೆಯನ್ನು ತಿಳಿಯಪಡಿಸುತ್ತವೆ, ಖ್ಯಾತ ವಿಮರ್ಶಕ ಡಾ. ಜಿ.ಎಸ್. ಆಮೂರ 'ಮಹಾಭಾರತವು' ಒಂದು ಲೌಕಿಕ ಕಾವ್ಯ ಅದು ವೀರಗಾಥೆಯಲ್ಲ, ಸಮರಗೀತವೂ ಅಲ್ಲ, ಮಾನವನ ಕಠಿಣ ಲೋಕಯಾತ್ರೆಯ ಕಾವ್ಯ. ಹುಟ್ಟಿನಿಂದ ಸಾವಿನವರೆಗಿನ ಮನುಷ್ಯನ ಬದುಕನ್ನು ಅದು ಒಂದು ಯಾತ್ರೆಯ ರೂಪದಲ್ಲಿ ಕಲ್ಪಿಸುವಂತೆ ಅದನ್ನು 'ಲೋಕಯಾತ್ರೆ' ಎಂದು ಕರೆಯುತ್ತಾರೆ. ಈ ಯಾತ್ರೆಯು ಮಹಾಭಾರತದಲ್ಲಿ 'ದೇಹಯಾತ್ರೆ', 'ಪ್ರಾಣಯಾತ್ರೆ', 'ಸಂಸಾರಯಾತ್ರೆ'ಗಳೆಂಬ ಪರ್ಯಾಯ ಪದಗಳೂ ಇವೆ. ಈ ಲೋಕಯಾತ್ರೆಯ ಸ್ವರೂಪವನ್ನು ಹಾಗೂ ವಿಧಾನಗಳನ್ನು ಸ್ವತಃ ಬ್ರಹ್ಮನೆ ವಿವರಿಸಿದ್ದಾನೆ ಎನ್ನುತ್ತದೆ ಮಹಾಭಾರತ. ಇವರು ತಮ್ಮ ಮಹಾಭಾರತ ಲೋಕಯಾತ್ರೆಯಲ್ಲಿ ಪ್ರಾಚೀನರ ಯುದ್ಧನೀತಿ ಹಾಗೂ ರಾಜಕೀಯ ಅಸ್ತಿತ್ವವನ್ನು ಪ್ರಸ್ತುತಪಡಿಸಿದ್ದಾರೆ. ಈ ನೀತಿಯ ಮುಂದಿನ ಆಳರಸರಲ್ಲಿ ಕಂಡುಬಂದದ್ದು ಅವರ ರಾಜಕೀಯ ಚರಿತ್ರೆಗಳು ನಿದರ್ಶನವಾಗಿವೆ. ರಾಮಾಯಣ ಮಹಾಭಾರತ ಮಹಾನ್ ಕಾವ್ಯಗಳು ರಚನೆಗೊಂಡ ಕಾಲದ ನಿರ್ದಿಷ್ಠತೆ ಗೊತ್ತಿರದಿದ್ದರೂ ಸಹ ತಲೆಮಾರಿನಿಂದ ತಲೆಮಾರಿನ ವರೆಗೆ ವರ್ಗಾವಣೆಗೊಂಡು ಇಂದು ಜನಮಾನಸದಲ್ಲಿ ಹಿಂದುತ್ವದ ಧರ್ಮಸಾರವನ್ನು ಪ್ರತಿನಿಧಿಸುತ್ತದೆ. ಅವನ್ನು ಪವಿತ್ರ ಧರ್ಮ ನೀತಿಯನ್ನು ತಿಳಿಸುವ ಕಾವ್ಯಗಳೆಂದು ಒಪ್ಪಿಕೊಳ್ಳಲಾಗುತ್ತದೆ.

ರಾಮಾಯಣ ಹಾಗೂ ಮಹಾಭಾರತದ ಕಾವ್ಯಗಳಲ್ಲಿನ ವಿವಿಧ ಪಾತ್ರಗಳು ಸಮರಕಲೆಯ ವೈವಿಧ್ಯಮಯ ನೀತಿಯನ್ನು ಅನುಸರಿಸಿ ೆ. ಪ್ರಾಣಿ, ಪಕ್ಷಿಗಳನ್ನು, ಜಲಚರ ಪ್ರಾಣಿಗಳನ್ನು ಹಾಗೂ ಸ ೃಸೃಪಗಳಂತಹ ಜೀವರಾಶಿಗಳನ್ನು ಆ ಕಾಲದ ಸಮರ ೀರರು ಬಹಳ ಸಮರ್ಪಕವಾಗಿ ಬಳಸಿ ಕೊಂಡಿರು ರು. ಕೃಷ್ಣನನ್ನು ಕೊಲ್ಲುವುದಕ್ಕೆ ಕಂಸನು ಪ್ರಯೋಗಿಸಿ ನ ಸಮರ ತಂತ್ರಗಳು ಸಾಕಷ್ಟು ಪ್ರಸ್ತಾವಗೊಂಡಿವೆ. ವಿಷಕಾರಿ ಸ ್ಪಗಳ ಮೂಲಕ, ಸುಂದರ ಸ್ತ್ರೀಯರ ಮೂಲಕ, ಶಸ್ತ್ರಾಸ್ತ್ರಗ ಮೂಲಕ ವೈವಿಧ್ಯಮಯ ತಂತ್ರಗಳು ವೈಫಲ್ಯಗೊಂಡಿರುವುದು ಕೃಷ್ಣನ ಕಥೆಯಿಂದ ತಿಳಿಯುತ್ತದೆ. ಕೃಷ್ಣನು ಸಾಕ್ಷಾತ್ ಮಹಾನ್ ವಿಷ್ಣು ಅಂದರೆ ದೈವಿಶಕ್ತಿಯಾಗಿದ್ದರೂ ಸಹ ಅವನಿಗೆ ಎದುರಾದ ಸಂಕಷ್ಟಗಳನ್ನು ಮೌಲೀಕರಿಸಿ ನೋಡುವುದಾದರೆ ಒಬ್ಬ ಸಮರ್ಥ ವ್ಯಕ್ತಿಯ ಬದುಕಿನುದ್ದಕ್ಕೂ ಎದುರಾಗುವ ಸಂಕಷ್ಟಗಳನ್ನು ಹೇಗೆ ಎದುರಿಸುತ್ತಾನೆ ಎಂಬುದು ಮುಖ್ಯವೆನಿಸುತ್ತದೆ. ಜೊತೆಗೆ ಸತ್ಯಕ್ಕೆ ಯಾವತ್ತು ಜಯ ಇದ್ದೆ ಇರುತ್ತದೆ. ಧರ್ಮಕ್ಕೆ ನ್ಯಾಯ ಯಾವಾಗಲೂ ಇದ್ದೆ ಇರುತ್ತದೆ ಎಂಬ ವಿಚಾರಕ್ಕೆ ಹಾದಿ ಮಾಡಿಕೊಡುತ್ತದೆ. ಈ ಎರಡು ಮಹಾನ್ ಕಾವ್ಯಗಳ ಸಾಂದರ್ಭಿಕ ಚಿತ್ರಗಳನ್ನು ನಮ್ಮ ಚಿತ್ರಕಾರರು ಆ ಸಮಕಾಲೀನ ಸಂದರ್ಭವನ್ನು ಕಣ್ಣಿಗೆ ಕಟ್ಟುವಂತೆ ಪ್ರತಿಬಿಂಬಿಸಿದ್ದಾರೆ. ಅಲ್ಲದೆ ಜನಮಾನಸವನ್ನು ಆ ಲೋಕಯಾತ್ರೆ ಮಾಡಿಸುತ್ತದೆ.

'ರಾಮಾಯಣ, ಮಹಾಭಾರತ' ಕಾವ್ಯಗಳ ಕಥಾಹಂದರ ಮನುಷ್ಯ ಬದುಕಿನ ಮಾರ್ಗದರ್ಶನವನ್ನು ನೀಡುತ್ತದೆ. ಈ

* ಅಧ್ಯಾಪಕರು, ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಬನಶಂಕರಿ, ಬಾದಾಮಿ.

ಎರಡು ಕಾವ್ಯಗಳು ಸ್ವತಂತ್ರ ರೂಪವನ್ನು ಪಡೆದಿಲ್ಲ ಇವನ್ನು ಹಲವಾರು ಕವಿ, ಪಂಡಿತರು ತಮ್ಮ ಧರ್ಮ, ಜಾತಿ ಹಾಗೂ ದೈವಿಕ ನೆಲೆಯಲ್ಲಿ ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ಇವುಗಳಲ್ಲಿ ಬರುವ ಪ್ರಧಾನ ಪಾತ್ರಗಳನ್ನು ತಮಗಿಷ್ಟದಂತೆ ಧನಾತ್ಮಕ ಹಾಗೂ ಋಣಾತ್ಮಕ ವಿಚಾರಗಳನ್ನು ಪಾತ್ರಗಳ ಮೂಲಕ ಪರಿಚಯಿಸಿದ್ದಾರೆ. ರಾಮಾಯಣದಲ್ಲಿ ಎರಡು ಮುಖ್ಯ ಪಾತ್ರಗಳು ಬರುತ್ತವೆ. ಒಂದು ರಾಮನದ್ದು ಇನ್ನೊಂದು ರಾವಣನದ್ದು. ಇವರಿಬ್ಬರನ್ನು ಕಡು ವೈರಿಗಳಂತೆ ಪ್ರತಿಬಿಂಬಿಸಿ ಇವರಲ್ಲಿಯೇ ಒಬ್ಬರದ್ದು ಒಳ್ಳೆಯ ಪಾತ್ರ ಇನ್ನೊಬ್ಬನದು ದುಷ್ಟಪಾತ್ರವನ್ನು ಕಲ್ಪಿಸಲಾಗಿದೆ. ಇಲ್ಲಿ ಮನುಷ್ಯ ಸ್ವಭಾವವನ್ನು ಮೌಲೀಕರಿಸಲಾಗಿದೆ. ಶ್ರೀರಾಮಚಂದ್ರನು ಪ್ರಾರಂಭದಿಂದ ಕೊನೆಯವರೆಗೂ ಒಬ್ಬ ನಾಯಕನಂತೆ ಕೆಲಸ ಮಾಡುತ್ತಾನೆ ಅದೇ ರಾವಣನು ಖಳನಾಯಕನಂತೆ ಅವಸಾನದವರೆಗೂ ಗೋಚರಿಸುತ್ತಾನೆ. ಇವರಿಬ್ಬರ ವೈರತ್ವಕ್ಕೆ ಮುಖ್ಯ ಕಾರಣವೇನು? ಒಬ್ಬರನ್ನೊಬ್ಬರು ಯಾಕೆ ದ್ವೇಷಿಸುತ್ತಾರೆಂಬುದು ಕಥೆಯ ಕುತೂಹಲ. ಆಸ್ತಿಗಾಗಿಯೇ? ಹೆಣ್ಣಿಗಾಗಿಯೇ? ಸ್ವಪ್ರತಿಷ್ಠೆಗಾಗಿಯೇ? ಎನ್ನುವುದು ನೋಡುಗನ ಜಿಜ್ಞಾಸೆ. ಕಾರಣ ಏನೇ ಆಗಿರಬಹುದು ಇಲ್ಲಿ ಮನುಷ್ಯ ಸ್ವಭಾವವನ್ನು ಪ್ರತಿನಿಧಿಸುತ್ತದೆ. ಚಿತ್ರಕಲಾವಿದರು ಇವರಿಬ್ಬರ ಪಾತ್ರಗಳನ್ನು ಹಾಗೂ ಅವರ ವ್ಯಕ್ತಿತ್ವವನ್ನು ಅತ್ಯಂತ ಮನೋಜ್ಞವಾಗಿ ಚಿತ್ರಿಸಿದ್ದಾರೆ. ರಾಮನ ಸ್ವಭಾವವನ್ನು ಒಳ್ಳೆಯವನೆಂದು ನಿರೂಪಿಸಲು ಶ್ರೀರಾಮನ ದೈಹಿಕ ಲಕ್ಷಣಗಳನ್ನು, ಮುಖಲಕ್ಷಣಗಳನ್ನು, ಆಭರಣಗಳನ್ನು, ಆಯುಧಗಳನ್ನು, ಉಡುಗೆ ತೊಡುಗೆಗಳನ್ನು ನೋಡುಗನ ಮನಸ್ಸಿನಲ್ಲಿ ಒಳ್ಳೆಯ ಭಾವನೆ ಮೂಡುವಂತೆ ಚಿತ್ರಿಸಿದ್ದಾರೆ. ಅವನ ವ್ಯಕ್ತಿತ್ವವು ವಿಶೇಷವಾಗಿ ಕಾಣಲು ಎಲ್ಲರಿಗಿಂತಲೂ ಭಿನ್ನತೆ ಕಾಣಲು ಮೈಬಣ್ಣವನ್ನು ಶ್ಯಾಮಲ ವರ್ಣದಿಂದ ಚಿತ್ರಕಾರರು ಸಂಯೋಜಿಸಿದ್ದಾರೆ. ಇಲ್ಲಿ ರಾಮನು ಕಪ್ಪು ವರ್ಣದವನಿರಬಹುದೆಂದು ಊಹಿಸಲು ಬಹುದಾಗಿದೆ. ಶತ್ರುಗಳನ್ನು ಎದುರಿಸಲು ಇವನ ಆಯುಧಗಳು ಬಿಲ್ಲು ಮತ್ತು ಬಾಣಗಳಿಂದ ಕೂಡಿದೆ. ಆ ಕಾಲದಲ್ಲಿ ವೈರಿಯನ್ನು ದೂರದಿಂದ ಎದುರಿಸಲು ಬಾಣಗಳನ್ನು ಪ್ರಧಾನವಾಗಿ ಬಳಸಲಾಗುತ್ತಿದ್ದಿರಬೇಕು ಹಾಗೂ ಪ್ರತಿಷ್ಠಿತರು ಹೆಚ್ಚಾಗಿ ಈ ಆಯುಧವನ್ನು ಬಳಸುತ್ತಿರಬೇಕು. ಕತ್ತಿ, ಗದೆ, ಕಠಾರಿ, ಈಟಿ, ಭರ್ಜಿಯಂತಹ ಮುಂತಾದ ಲೋಹದ ಆಯುಧಗಳು ಬಳಸುತ್ತಿರಲುಬಹುದು. ಪ್ರತಿಷ್ಠರು ಬಳಸುವ ಬಿಲ್ಲುಬಾಣಗಳು ಒಂದೇ ರೀತಿಯಲ್ಲಿರಲಿಕ್ಕಿಲ್ಲ. ಇವುಗಳಲ್ಲಿ ವೈವಿಧ್ಯಮಯ ಬಾಣಗಳನ್ನು ತಯಾರಿಸಿ ವೈರಿಗಳನ್ನು ಎದುರಿಸಲು ಬಳಸುತ್ತಿದ್ದರು. ವೈರಿಮೂರ್ಛೆ ಬರುವಂತಹ ಶಾಶ್ವತ ಅಂಗವೈಕಲ್ಯ ತರುವಂತಹ, ಮರಣ ತರುವಂತಹ ಬಾಣ ಪ್ರಯೋಗಗಳನ್ನು ಮಾಡುವ ಸಮರಕಲೆ ಅರಿತಿದ್ದರು. ಲಕ್ಷ್ಮಣನು ಮೂರ್ಛೆ ಹೋದಾಗ ಅವನ ದೇಹದಲ್ಲಿನ ವಿಷವನ್ನು ತೆಗೆಯಲು ಸಂಜೀವಿನ ಗಿಡಮೂಲಿಕೆಯನ್ನು ಬಳಸಿ ಪ್ರಾಣ ಉಳಿಸಿದ್ದು ರಾಮಾಯಣದ ಒಂದು ಪ್ರಸಂಗ ತಿಳಿಸುತ್ತದೆ. ಅಂದರೆ ಆಗಿನ ಜನರಿಗೆ ವೈರಿಗಳಿಂದಾದ ಅಪಾಯವನ್ನು ಪರಿಹರಿಸಿಕೊಳ್ಳಲು ಔಷಧಿಗಳ ಪರಿಚಯ ವಿತ್ತೆಂದು ತೋರುತ್ತದೆ.

ಮನುಷ್ಯ ತನ್ನ ಸ್ವಾರ್ಥಸಿದ್ಧಿಗಾಗಿ ಏನಾದರೊಂದು ಕುತಂತ್ರಗಾರಿಕೆಯನ್ನು ಮಾಡುತ್ತಲೇ ಇರುತ್ತಾನೆ. ಇದೆ ರಾವಣನ ಪ್ರಸಂಗವನ್ನು ವಿವರಿಸುವುದಾದರೆ ಶಿವನ ಪರಮ ಭಕ್ತನೂ ಹಾಗೂ ಪರಾಕ್ರಮಿಯೂ ಆದ ರಾವಣನು ತನ್ನ ಶಕ್ತಿ ಸಿದ್ಧಿಗಾಗಿ ಕಠಿಣ ತಪಸ್ಸನ್ನು ಗೈದು ಪರಶಿವನಿಂದಲೇ ಆತ್ಮಲಿಂಗವನ್ನು ಪಡೆದುಕೊಂಡು ತಾಯಿಯ ಆಸೆ ಪೂರೈಸುವುದರ ಜೊತೆಗೆ ರಾಮನನ್ನು ಸಂಹರಿಸಲು ಇನ್ನಷ್ಟು ಶಕ್ತಿ ಸಂಪಾದನೆ ಮಾಡುವ ಯೋನೆಯಾಗಿತ್ತು. ಆದರೆ ಅದು ವಿಫಲವಾದುದು ಕಥೆಯ ನಿಜದೃಶ್ಯ. ಇಲ್ಲಿ ಒಬ್ಬ ವ್ಯಕ್ತಿಗೆ ದೈವಬಲವಿಲ್ಲದಿರುವುದಕ್ಕೆ ಒಂದು ನಿದರ್ಶನ. ಮನುಷ್ಯ ಎಷ್ಟೇ ಪರಾಕ್ರಮಿಯಾಗಿರಲಿ ಬಲಿಷ್ಠನಾಗಿರಲಿ ಅವನು ಅಧರ್ಮಿಯಾಗಿದ್ದರೆ ಅವನ ಯಾವುದೇ ಯೋಜನೆಗಳು ಸಿದ್ಧಿಸುವುದಿಲ್ಲ. ರಾಮಾಯಣದ ಕಾವ್ಯವರ್ಣನೆಯ ದೃಶ್ಯಗಳು ನಮ್ಮ ಕಲಾವಿದರು ರಾಮ ರಾವಣರ ಪರಿವಾರವನ್ನು ಸಾಂಪ್ರದಾಯಿಕ ಚಿತ್ರಗಳಲ್ಲಿ ಆ ಸಮಕಾಲೀನ ಸಂದರ್ಭಗ ಸಾಮಾಜಿಕ ಬದುಕನ್ನು ಬಿಂಬಿಸಿದರೆ ಅದೇ ಆಧುನಿಕ ಕಲಾವಿದರು ಸಾಂಪ್ರದಾಯಿಕ ವಿಚಾರಗಳ ಜೊತೆಗೆ ಆಧುನಿಕತೆಯ ಕಲ್ಪನೆಯನ್ನು ಸಮೀಕರಿಸಿದ್ದಾರೆ. ದಶಕಂಠನಾದ ರಾವಣನ ಪಾತ್ರವನ್ನು ಅವಲೋಕಿಸಿದರೆ ಅವನ ವ್ಯಕ್ತಿತ್ವವನ್ನು ಕವಿಯು ಕಾವ್ಯದ ವರ್ಣನೆಯ ಜೊತೆಗೆ ಚಿತ್ರಕಲಾವಿದನಾದವನು ಚಿತ್ರನಿರೂಪ ಪ್ರಜ್ಞೆಯೂ ಅಷ್ಟೇ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ರಾವಣನು ಹತ್ತು ಜನರ ದೈಹಿಕ ಶಕ್ತಿ ಸಾಮರ್ಥ್ಯ, ಹತ್ತು ಜನರ ಬುದ್ಧಿ ಸಾಮರ್ಥ್ಯವನ್ನು ಹೊಂದಿರಬೇಕು ಹಾಗಾಗಿ ಅವನ ವ್ಯಕ್ತಿತ್ವವನ್ನು ಕವಿಯು ವರ್ಣನೆ ಮಾಡಿದ್ದಾನೆ. ಇದು ಕಾವ್ಯದ ಮೂಲಕ ವರ್ಣನೆ ಮಾಡಿದರೆ ಸಹೃದಯನಿಗೆ ಅಷ್ಟಾಗಿ ತಲುಪುವುದಿಲ್ಲ. ಇದು ಇನ್ನಷ್ಟು ಮನದಲ್ಲಿ ಗಟ್ಟಿಯಾಗಿ ಮೂಡಬೇಕಾದರೆ ಚಿತ್ರ ಅಥವಾ ಶಿಲ್ಪಕಲೆಯ ಮೂಲಕ ಸಾಧ್ಯವಾಗುತ್ತದೆ. ಆ ಸಾಧ್ಯತೆಯನ್ನು ನಮ್ಮ ಚಿತ್ರಕಾರರು ತಂದಿದ್ದಾರೆ.

ಪ್ರತಿಯೊಬ್ಬ ಮನುಷ್ಯನಿಗೆ ಶತ್ರು ಭಯ ಇದ್ದೇ ಇರುತ್ತದೆ. ಅದು ಅತಿರೇಕವಾಗಿಯೂ ಇರುತ್ತದೆ. ಎನ್ನುವುದಕ್ಕೆ ನಮ್ಮ

ರಾಜಮಹಾರಾಜರು ತಮ್ಮ ರಕ್ಷಣೆಗೆ ಕಟ್ಟಿಕೊಂಡಿದ್ದ ಬಲಿಷ್ಠ ಕೋಟೆಗಳ ನಿರ್ಮಾಣ, ಸೈನಿಕ ವ್ಯವಸ್ಥೆಯನ್ನು ಅವಲೋಕಿಸ ಬಹುದು. ಇವುಗಳ ವ್ಯವಸ್ಥೆಯೂ ಸಹ ಆ ಜನರ ಶಕ್ತಿ ಸಾಮರ್ಥ್ಯ ಹಾಗೂ ತಂತ್ರಗಾರಿಕೆಯೂ ಸಹ ಮುಖ್ಯವಾಗಿತ್ತು. ಮೊಗಲ್, ಮರಾಠ, ದಖ್ಖನಿ ಹಾಗೂ ವಿಜಯನಗರ ಅರಸರು ತಮ್ಮ ರಾಜ್ಯವನ್ನು ಶತ್ರುಗಳಿಂದ ರಕ್ಷಿಸಿಕೊಳ್ಳಲು ಸುಭದ್ರ ಕೋಟೆಯನ್ನು ನಿರ್ಮಿಸಿಕೊಂಡಿದ್ದರು. ಮುದುಗಲ್ ಕೋಟೆ, ಚಿತ್ರದುರ್ಗದ ಕೋಠೆ, ವಿಜಯನಗರ ಅರಸರ ಕೋಟೆ ಮುಂತಾದವುಗಳನ್ನು ಹೆಸರಿಸಬಹುದು ಈ ಚಿಂತನೆ ಇಂದು ನಿನ್ನೆಯದಲ್ಲಿ ನಮ್ಮ ಪುರಾತನರಲ್ಲೂ ಸಹ ಇಂಥ ಕೋಟೆಗಳ ನಿರ್ಮಾಣ ಪರಿಕಲ್ಪನೆ ಇತ್ತೆಂಬುದಕ್ಕೆ ನಮ್ಮ ಪುರಾತನರ ವರ್ಣಚಿತ್ರಗಳು ಪುಷ್ಠಿ ಕೊಡುತ್ತವೆ. ಕೋಟೆಗಳ ವಿನ್ಯಾಸ, ಶತ್ರುಗಳು ಸುಲಭವಾಗಿ ಆಕ್ರಮಣ ಮಾಡಲು ಸಾಧ್ಯವಾಗುವ ತಂತ್ರಗಾರಿಕೆ ಮುಂತಾದ ಪರಿಕಲ್ಪನೆ ಆ ಸಮಕಾಲೀನರು ಕಂಡುಕೊಂಡಿದ್ದರು.

೧೪-೧೫ನೇ ಶತಮಾನದಲ್ಲಿ ಆಳರಸರ ಯುದ್ಧ ನೀತಿಗಳು ಮತ್ತು ಶಸ್ತ್ರಾಸ್ತ್ರಗಳ ಪ್ರಯೋಗಗಳು ವೈವಿಧ್ಯತೆಯಿಂದ ನಡೆಯುತ್ತಿದ್ದವು. ಬಹುಶಃ ಇವರ ಯುದ್ಧ ನೀತಿಯು ಸ್ವಪ್ರತಿಷ್ಠೆಗಾಗಿ ಹಾಗೂ ಧಾರ್ಮಿಕ ದೃಷ್ಟಿಯಿಂದ ಪ್ರಧಾನ ಗೊಂಡಿತ್ತೆನ್ನಬಹುದು. ಆ ಜನರಲ್ಲಿ ಧರ್ಮ ಸ್ವೀಕಾರ ಹಾಗೂ ಧರ್ಮ ಪ್ರಚಾರವು ಆಳರಸರು ಅನುಸರಿಸುವ ಆಧಾರಗಳ ಮೇಲೆ ಅವಲಂಬಿಸುತ್ತಿತ್ತು. ಯಾವಾಗ ಮುಸ್ಲಿಮರು ಮತ್ತು ವಿದೇಶಿ ವರ್ತಕರು ಅಂದರೆ ಬ್ರಿಟಿಷರು (ಕ್ರೈಸ್ತ ಧರ್ಮಿಗಳು) ಭಾರತಕ್ಕೆ ಬಂದರೋ ಅಲ್ಲಿಂದ ನಮ್ಮ ನೀತಿ ರೀತಿಗಳು ಬದಲಾದವು. ಮೊಗಲ ಅರಸರು ಮೂಲತಃ ಇಸ್ಲಾಮ್ ಅನುಯಾಯಿಗಳಾಗಿರುವುದರಿಂದ ಹಿಂದೂ ಆಳರಸರ ಮೇಲೆ ದಬ್ಬಾಳಿಕೆಗಳು ಹೆಚ್ಚಗೊಡಗಿದವು. ಇವರು ಪ್ರಬಲರು ಹಾಗೂ ಬಲಿಷ್ಠರಾಗಿರುವುದರಿಂದ ಸಣ್ಣ ಪುಟ್ಟ ಸಾಮಂತರನ್ನು ತಮ್ಮ ಹಿಡಿತದಲ್ಲಿರಿಸಿಕೊಂಡು ದಬ್ಬಾಳಿಕೆ ಮಾಡುತ್ತಿದ್ದರು. ಮೊಗಲ ಅರಸರು ಎಲ್ಲರೂ ಆ ರೀತಿ ಮಾಡಿರುವುದಿಲ್ಲ ವಾದರೂ ಅಕ್ಬರನ ಕಾಲಕ್ಕೆ ಹಿಂದೂ ಮತ್ತು ಇಸ್ಲಾಂರನ್ನು ಸಮದೃಷ್ಟಿಯಿಂದ ಕಾಣಲಾಗುತ್ತಿತ್ತು. ಕೆಲವು ಮೊಲಗ ಕಾಲದ ಸಾಂಪ್ರದಾಯಿಕ ಚಿತ್ರಗಳು ಇದಕ್ಕೆ ಸಾಕ್ಷಿಯೆನ್ನಬಹುದು. ಶಿವನ ವಿಷಯಕ್ಕೆ ಸಂಬಂಧಿಸಿದ ಚಿತ್ರಗಳು ಸಾಕಷ್ಟು ಸಂಖ್ಯೆಗಳಲ್ಲಿ ರಚನೆಗೊಂಡಿದ್ದು ಶಿವನ ಕಥಾ ಸಂದರ್ಭವನ್ನು ನಿರೂಪಿಸುವ ಕೆಲವು ಚಿತ್ರಗಳಲ್ಲಿ ಶಿವನ ಆಯುಧ ತ್ರಿಶೂಲವನ್ನು ವೈವಿಧ್ಯಮಯ ರೀತಿಯಲ್ಲಿ ಕಲಾವಿದರು ನಿರೂಪಿಸಿದ್ದಾರೆ. ಅವರು ಆ ಕಾಲದಲ್ಲಿ ಬಳಕೆಯಲ್ಲಿದ್ದ ವಿನ್ಯಾಸಗಳನ್ನು ಈ ದೇವತೆಯ ಚಿತ್ರಗಳಿಗೆ ಸಂಯೋಜಿಸಲಾಗಿದೆ. ಇಲ್ಲಿ ಕಲಾವಿದರು ಶಿವನ ವಿವಿಧ ಆಯುಧಗಳನ್ನು ಸಂಯೋಜನೆ ಮಾಡಿ ಆಯುಧಗಳ ತೀಕ್ಷ್ಣತೆ, ಆಕಾರ, ವಿನ್ಯಾಸ ಅವುಗಳ ನಿಖರತೆಯನ್ನು ರೇಖಾಚಿತ್ರಗಳ ಮೂಲಕ ತಿಳಿಸಲು ಪ್ರಯತ್ನಿಸಿದ್ದಾರೆ. ಇವು ಪುರಾಣ ಕಲ್ಪನೆಯಾದರೂ ಸಹ ಸಾಮಾಜಿಕ ಬದುಕಿನ ಪರಿಕರಗಳನ್ನು ಪ್ರತಿನಿಧಿಸುತ್ತವೆ. ಶಿವ ಹಾಗೂ ಅವನ ಪರಿವಾರ ವಿಷ್ಣು ಹಾಗೂ ಅವನ ಪರಿವಾರ ಅಥವಾ ಯಾವುದೇ ದೇವಾನುದೇವತೆಗಳ ಪ್ರಹಾರ ಪ್ರಕ್ರಿಯೆ ದುಷ್ಟ ಶಕ್ತಿಯನ್ನು ದಮನ ಮಾಡಲು ಪ್ರಾಯೋಗಿಕ ಸಂಕೇತವಷ್ಟೇ. ವಾಸ್ತವವಾಗಿ ಮಾನವನ ಮಾನಸಿಕ ಭಾವನಾತ್ಮಕ ಸಂಬಂಧವನ್ನು ಕಲ್ಪಿಸಬಹುದು. ಮನುಷ್ಯ ದೇವತೆಗಳನ್ನು ತನಗಿಂತಲೂ ಎತ್ತರದಲ್ಲಿ ಹಾಗೂ ಶಕ್ತಿರೂಪದಲ್ಲಿ ನಿಲ್ಲಿಸುತ್ತಾನೆ. ಶಿವನ ವಿವಿಧ ಅವತಾರಗಳನ್ನು ಇಲ್ಲಿ ಕಲ್ಪಿಸಬಹುದು.

ಯುದ್ಧ ನೀತಿ ಹಾಗೂ ಶಸ್ತ್ರಾಸ್ತ್ರಗಳ ಸಮರ ಕಲೆಯಲ್ಲಿ ಶಸ್ತ್ರಾಸ್ತ್ರಗಳ ಬಳಕೆ ಹಾಗೂ ಯುದ್ಧ ಪ್ರಕ್ರಿಯೆ ಗಮನಿಸ ಬಹುದಾದರೆ ಈ ಮೊದಲು ಪ್ರಸ್ತಾಪಿಸಿದಂತೆ ಬಿಲ್ಲು ಬಾಣಗಳ ಪ್ರಯೋಗವು ವ್ಯಕ್ತಿಯ ದೈಹಿಕ ಸಾಮರ್ಥ್ಯದಿಂದ ಪರಿಗಣಿಸಲಾಗುವುದಿಲ್ಲ. ಯಾಕೆಂದರೆ ವ್ಯಕ್ತಿಯ ತೀಕ್ಷ್ಣದೃಷ್ಟಿ, ಕುಶಲತೆ, ಸಮಯಪ್ರಜ್ಞೆ ಬೇಕಾಗುತ್ತದೆ. ಅದೇ ರೀತಿ 'ಗದಾಯುದ್ಧ'ವನ್ನು ವ್ಯಕ್ತಿಯ ದೈಹಿಕ ಶಕ್ತಿ ಸಾಮರ್ಥ್ಯವನ್ನು ಹಾಗೂ ಧೈರ್ಯ ವ್ಯಕ್ತಿತ್ವವನ್ನು ಬೇಡುತ್ತದೆ. ಭೀಮ, ದುರ್ಯೋಧನ, ಕರ್ಣ ಮುಂತಾದವರನ್ನು ಹೆಸರಿಸಬಹುದು. ಇನ್ನು ಕತ್ತಿ, ಖಡ್ಗ, ಈಟಿ ಮುಂತಾದವುಗಳನ್ನು ಸಾಮಾನ್ಯ ಸೈನಿಕರು ಬಳಸುತ್ತಿದ್ದರು. ಶ್ರೀರಂಗಪಟ್ಟಣದ ಭಿತ್ತಿ ಕಿರುಗತ್ತಿ ಗಳನ್ನು ಹಿಡಿದು ಯುದ್ಧ ಮಾಡುತ್ತಿರುವ ದೃಶ್ಯಗಳು ಕಂಡುಬರುತ್ತಿದ್ದು ಕೆಲವರು ಅಶ್ವಧಾರಿಗಳಾದರೆ ಕೆಲವರು ಕಾಲ್ದಳ ಯೋಧರಾಗಿ ಬಿಂಬಿತಗೊಂಡಿದ್ದಾರೆ. ಇಂಥದೇ ದೃಶ್ಯಗಳು ನರಗುಂದದ ಭಿತ್ತಿಚಿತ್ರಗಳಲ್ಲಿಯೂ ಸಹ ಕಾಣಬಹುದು. ಈ ಭಿತ್ತಿಚಿತ್ರಗಳು ಬ್ರಿಟಿಷರು ಭಾರತದಲ್ಲಿದ್ದ ಸಂದರ್ಭದಲ್ಲಿ ಚಿತ್ರಿತಗೊಂಡಿದ್ದು ಚಿತ್ರಗಳು ಬ್ರಿಟಿಷರ ವಿರುದ್ಧ ಹೋರಾಡುವ ಸನ್ನಿವೇಶಗಳಾಗಿವೆ. ಕೇವಲ ಹರಿತ ಆಯುಧಗಳನ್ನು ನಮ್ಮ ಭಾರತೀಯರು ಬಳಸಿದ್ದರರೆ ಬ್ರಿಟಿಷ್ ಯೋಧರು ತಮ್ಮ ನಾಡಿನಿಂದ ತಂದ ಬಂದೂಕು, ನಾಡ ಪಿಸ್ತೂಲುಗಳನ್ನು ಬಳಸಿರುವುದನ್ನು ಗಮನಿಸಬಹುದು. ನಮ್ಮವರು ತಮ್ಮ ನಾಡಿನಿಂದ ತಂದ ಬದುಕು, ನಾಡ ಪಿಸ್ತೂಲುಗಳನ್ನು ಬಳಸಿರುವುದನ್ನು ಗಮನಿಸಬಹುದು. ನಮ್ಮವರು ತಮ್ಮ ರಕ್ಷಣೆಗಾಗಿ ಮದ್ದು ಗುಂಡುಗಳ ತೋಪುಗಳನ್ನು ಬಳಕೆ ಮಾಡಿರುವರು. ಈ ತಂತ್ರಗಾರಿಕೆ ಮೊಗಲ ಹಾಗೂ ದಖ್ಖನ್ ಅರಸರೂ ಸಹ ಪ್ರಯೋಗಿಸು

ತ್ತಿದ್ದರು. ದೇಶಿ ಚಿತ್ರಗಳನ್ನು ಗಮನಿಸಿದರೆ ಯುದ್ಧ ಪ್ರಸಂಗದ ಹಲವಾರು ಚಿತ್ರಗಳು ಪ್ರಸ್ತುತಗೊಂಡಿವೆ. ಅವರ ಯುದ್ಧ ನೀತಿ ಹಾಗೂ ಸಮರಾಸ್ತ್ರಗಳ ಬಳಕೆ ಆಯಾ ರಾಜರ ಹಾಗೂ ಬುದ್ಧಿ ಶಕ್ತಿಯಿಂದ ಕೂಡಿದ್ದವು. ಅವರು ಶತ್ರು ಸೈನ್ಯವನ್ನು ಎದುರಿಸಲು ಏನೆಲ್ಲಾ ಅಸ್ತ್ರಗಳನ್ನು ಬಳಸುತ್ತಿದ್ದರೆಂದರೆ ಆನೆ, ಕುದುರೆ, ಒಂಟೆ, ಕಾಲ್ದಳ ಹೀಗೆ ಹಲವಾರು ವೈವಿಧ್ಯಮಯ ಪ್ರಾಣಿಗಳನ್ನು ಬಳಸಲಾಗುತ್ತಿತ್ತು. ಯಾಕೆಂದರೆ ಈಗಿನಂತೆ ಯಾವುದೇ ನೌಕಾದಳ, ವಾಯುದಳಗಳಿದ್ದಿಲ್ಲ. ನೌಕಾದಳವಿದ್ದರೂ ಸಹ ಸಮುದ್ರದ ಗಡಿಗಳಲ್ಲಿ ಮಾತ್ರ ಪ್ರಚಲಿತವಿದ್ದವು. ವಿವಿಧ ಕಾಲಘಟ್ಟಗಳಲ್ಲಿ ನಡೆಯುತ್ತಿದ್ದ ಮಾನವ ಸಂಘರ್ಷವನ್ನು ನಮ್ಮ ಕಲಾವಿದರು ಅತ್ಯಂತ ನೈಜರೂಪದಲ್ಲಿ ದಾಖಲಿಕರಿಸಿದ್ದಾರೆ. ಇವರಿಗೆ ಆಯಾ ಅರಸರ ಪ್ರೋತ್ಸಾಹ ಹಾಗೂ ಸಹಕಾರವಿತ್ತೆಂದು ತೋರುತ್ತದೆ. ಇದರಿಂದಲೇ ನಮ್ಮ ಪೂರ್ವಜರ ಸಂಸ್ಕೃತಿಯನ್ನು ತಿಳಿದುಕೊಳ್ಳಲು ಇಂದು ನಮಗೆ ಸಾಧ್ಯವಾಗಿದೆ.

ನಮ್ಮಲ್ಲಿ ಸಂಘರ್ಷ ಭಾವನೆಯು ಇತ್ತೀಚಿನ ದಿನಗಳಲ್ಲಿ ಧರ್ಮ, ಜಾತಿ, ಬಡವ, ಶ್ರೀಮಂತಿಕೆ, ಅಸಮಾನತೆ, ಸಮಾಜದ ರೀತಿ ನೀತಿ, ರಾಜಕೀಯ ದುಸ್ಥಿತಿ, ನಿರುದ್ಯೋಗ, ಸ್ವಪ್ರತಿಷ್ಠೆಯಂತಹ ಅಂಧಕಾರ ತುಂಬಿಕೊಂಡಿರುವುದರಿಂದ ಅರಾಜಕತೆಗೆ ಹಾದಿ ಮಾಡಿಕೊಟ್ಟಿದೆ. ಇತ್ತೀಚಿನ ದಿನಗಳಲ್ಲಿ ಇದು ಅತಿರೇಕದಲ್ಲಿ ಜನರ ಭಾವವನ್ನು ಆವರಿಸಿಕೊಂಡಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಭಾರತದಲ್ಲಿ ರಾಜಮಹಾರಾಜರ ಆಡಳಿತದಲ್ಲಿ ಒಂದು ರೀತಿಯ ಯುದ್ಧ ನೀತಿಗಳಿದ್ದವು ಇಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವ್ಯಕ್ತಿ ಸ್ವಾತಂತ್ರ್ಯ ಬದುಕಿಗೆ ಸಾಕಷ್ಟು ಸವಾಲುಗಳು ಎದುರಿಸುವುದು ಅನಿವಾರ್ಯವಾಗಿದೆ.

ಚಿತ್ರಕಲಾವಿದರು ಸಮರ ವೀರರನ್ನು ಸಾಂಪ್ರದಾಯಿಕ ಚಿತ್ರಗಳಲ್ಲಿ ಸಾಂಕೇತಿಕ ರೂಪದಲ್ಲಿ ಸಂಯೋಜನೆ ಮಾಡಲಾಗಿದ್ದು ಸೈನಿಕರ ದೈಹಿಕ ಲಕ್ಷಣಗಳನ್ನು ಅವರ ದೈಹಿಕ ಸಾಮರ್ಥ್ಯ, ಕಟ್ಟುಮಸ್ತಾದ ದೇಹಾಂಗಗಳ ರಚನೆ, ವೇಷ–ಭೂಷಣಗಳು ನೈಜರೂಪದಲ್ಲಿ ಕಂಡುಬಂದಿಲ್ಲವಾದರೂ ಕಲಾವಿದರು ರಚಿಸಿದ ರೇಖಾ ವಿನ್ಯಾಸ ಹಾಗೂ ವರ್ಣ ಸಂಯೋಜನೆಯಿಂದ ಸೈನಿಕ ವೀರರ ಪೌರುಷವನ್ನು ದೃಷ್ಟೀಕರಿಸಬಹುದು. ಅದೇ ರೀತಿ ಪಾಶ್ಚಾತ್ಯರ ಪ್ರಭಾವದಿಂದ ಉಂಟಾದ ಅಂದರೆ ಆಧುನಿಕ ಚಿತ್ರಗಳಲ್ಲಿ ಚಿತ್ರಣವನ್ನು ಮೂರು ಆಯಾಮಗಳ ರೂಪದಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಜಾಗತೀಕರಣದ ಭರಾಟೆಯಲ್ಲಿ ಇಂದು ವಿಜ್ಞಾನ ಮತ್ತು ತಂತ್ರಜ್ಞಾನವು ಬಹು ಎತ್ತರದಲ್ಲಿದ್ದು, ಕ್ಷಣಾರ್ಧದಲ್ಲಿ ವಿನಾಶವಾಗುವಂತಹ ಯುದ್ಧ ಪರಿಕರಗಳು ಪ್ರಚಲಿತವಿರುವುದರಿಂದ ಮನುಷ್ಯ ತನ್ನ ಬೆನ್ನಿಗೆ ಸದಾ ಕಾಲನನ್ನು ಕಟ್ಟಿಕೊಂಡು ಜೀವನ ನಡೆಸುತ್ತಿದ್ದಾನೆ. ಇಲ್ಲಿ ಕಲಾವಿದ ಕಲೆ ಮತ್ತು ಸಂಘರ್ಷ ಬದುಕು ಸೃಷ್ಟಿಯ ಪ್ರಾರಂಭದಿಂದಲೂ ತನ್ನ ಸ್ವರೂಪವನ್ನು ವಿಕಾಸಗೊಳ್ಳುತ್ತಾ ಸಾಗಿದೆ.

ಆಧಾರಸೂಚಿ

೧. India Art and culture, 1300-1900, by Stuart cary Welch, prestel-mapin publishing pvt. ltd.

೨. The paintings of siva in Indian art by chitralekh singh, Volume I and II.

೩. ಕರ್ನಾಟಕ ಭಿತ್ತಿ ಚಿತ್ರ ಪರಂಪರೆ, ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೮, ಲೇ. ಡಾ. ಅ.ಲ. ನರಸಿಂಹನ್.

೪. ಕರ್ನಾಟಕ ಭಿತ್ತಿಚಿತ್ರಗಳು ಕರ್ನಾಠಕ ಲಲತಿಕಲಾ ಅಕಾಡೆಮಿ, ಬೆಂಗಳೂರು, ೧೯೮೩, ಲೇ. ಬಿ.ವಿ.ಕೆ. ಶಾಸ್ತ್ರಿ.

೫. ದಖ್ಖನಿ ಚಿತ್ರಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೦, ಲೇ. ಡಾ. ಎಸ್.ಕೆ. ಅರುಣಿ.

೧೧೭

ಕಾರವಾರದಲ್ಲಿ ಮಹಾತ್ಮಗಾಂಧಿ

ವೇಮಗಲ್ ಸೋಮಶೇಖರ್✷

ಅಸ್ಪೃಶ್ಯತಾ ನಿವಾರಣ ಕಾರ್ಯದ ಭಾಗವಾಗಿ ಮಹಾತ್ಮಾ ಗಾಂಧೀಜಿ ದಕ್ಷಿಣ ಭಾರತದಲ್ಲಿ ಪ್ರವಾಸ ಮಾಡುತ್ತಾ ಮಂಗಳೂರು, ಕುಂದಾಪುರ ಮಾರ್ಗವಾಗಿ ೧೯೩೪ರ ಫೆಬ್ರವರಿ ೨೭ ಮಂಗಳವಾರದಂದು ಸಮುದ್ರ ಮಾರ್ಗವಾಗಿ 'ದಯಾವತಿ' ಎಂಬ ಹಡಗಿನಲ್ಲಿ ಕಾರವಾರಕ್ಕೆ ಸಂಜೆ ಆಗಮಿಸಿದರು. ಆ ಸಮಯದಲ್ಲಿ ಕಾರವಾರದ ಕಡಲು ಸ್ವಲ್ಪ ಅಲ್ಲೋಲ ಕಲ್ಲೋಲಗೊಂಡಿದ್ದರಿಂದ ಬಂದರಿನ ಒಂದು ಫರ್ಲಾಂಗ್ ದೂರದಲ್ಲಿಯೇ ಹಡಗಿನಿಂದ ಇಳಿದು ದೋಣಿಗಳಲ್ಲಿ ರೇವಿಗೆ ಆಗಮಿಸಿದರು. ಮೊದಲ ದೋಣಿಯಲ್ಲಿ ಮಹಾತ್ಮರ ಅಂದಿನ ಕಾರ್ಯದರ್ಶಿಗಳಾಗಿದ್ದ ವಾಲಾಜಿಭಾಯಿ ದೇಸಾಯಿ ಮೊದಲಾದವರಿದ್ದರೆ ಹಿಂದಿನ ದೋಣಿಯಲ್ಲಿ ಗಾಂಧಿಯವರಿದ್ದರು. ಆಗತಾನೆ ಶಾಂತವಾಗುತ್ತಿದ್ದ ಸಮುದ್ರದ ಮೇಲೆ ಅತ್ತಿತ್ತ ಹೊಯ್ದಾಡುತ್ತಾ ಬರುತ್ತಿದ್ದ ದೋಣಿಯಲ್ಲಿ ಗಾಂಧೀಜಿ ಪ್ರಾರ್ಥನಾ ಸಮಯವಾಗಿದ್ದುದರಿಂದ ಸಾಯಂಪ್ರಾರ್ಥನೆಗೆ ಮಂಡಿಸಿದವರಂತೆ ಆಸನಸ್ಥರಾಗಿದ್ದರು. ರೇವಿಗೆ ತಲುಪಿದೊಡನೆ ಅವರೆದುರಿಗೆ ಕುಳಿತಿದ್ದ ಮೀರಾಬಹನ್ ಮಹಾತ್ಮರ ಕೈಹಿಡಿದು ಇಳಿಸಿದರು. ಬೆಳದಿಂಗಳಿನಿಂದಾಗಿ ಕಾರವಾರ ಬಂದರಿನ ಶೋಭೆ ಮತ್ತಷ್ಟು ಹೆಚ್ಚಿತ್ತು.

ಬೆಳಗಾವಿಯಿಂದ ಕಾರಿನಲ್ಲಿ ಆಗಮಿಸಿದ್ದ ದೇಶಪಾಂಡೆ ಗಂಗಾಧರರಾಯರು, ಸಂಯುಕ್ತ ಕರ್ನಾಟಕ ಪತ್ರಿಕೆಯ ಪ್ರತಿನಿಧಿಯಾದ 'ಅವಿನಾಶ'ರು, ಕಾರಿನ ಚಾಲಕರಾದ ನಾನಾ ಸಾಹೇಬ ಯಾಳಗಿಯವರು, ಹಳದಿಪುರಕರ್, ನಾಡಕರ್ಣಿ, ಮಜುಂದಾರ್, ಕರ್ನಾಟಕ ಪ್ರಾಂತ್ಯದ ಹರಿಜನ ಸೇವಕ ಸಂಘದ ಅಧ್ಯಕ್ಷರಾದ ಸರದಾರ ವೀರನಗೌಡ ಪಾಟೀಲರು, ಹುಕ್ಕೇರಿಕರ್ ರಾಮರಾಯರು ಮುಂತಾದವರೆಲ್ಲರೂ ಗಾಂಧೀಜಿಯನ್ನು ಸ್ವಾಗತಿಸಿದರು. ಅಲ್ಲಿ ಸೇರಿದ್ದ ಜನರ ಸಂಭ್ರಮ ಹೇಳಲು ಸಾಧ್ಯವಿಲ್ಲದಾಗಿತ್ತು. ಜಯಘೋಷದೊಂದಿಗೆ ನಮಸ್ಕಾರ ಮಾಡುತ್ತಿದ್ದೆಲ್ಲರಿಗೆ ಗಾಂಧೀಜಿ ಪ್ರತಿ ನಮಸ್ಕಾರ ಮಾಡುತ್ತಾ ಮುಂದೆ ಸಾಗಿದರು. ಗಂಗಾಧರರಾಯರು ಅಂದು ಬೆಳಗಿನಿಂದ ಏಳು ತಾಸುಗಳವರೆಗೆ ಒಂದೇ ಸಮನೆ ಪ್ರವಾಸ ಮಾಡಿ ಬಂದಿದ್ದುದರಿಂದ ತುಂಬಾ ದಣಿದವರಾಗಿದ್ದರು. ರೇವಿನಿಂದ ಬಂದ ಗಾಂಧೀಜಿ ಕಾರಿನಲ್ಲಿ ಕುಳಿತುಕೊಂಡು ಅತ್ತಿತ್ತ ನೋಡಲಾಗಿ ಗಂಗಾಧರರಾಯರು ಕಣ್ಣಿಗೆ ಬಿದ್ದರು. ಒಡನೆಯೇ 'Hallo the young old man has come!' ಎನ್ನುತ್ತಾ ಜೋರಾಗಿ ನಗತೊಡಗಿದರು. ಆಗ ರಾಯರಿಗೆ ೬೪ ವರ್ಷ ವಯಸ್ಸಾಗಿತ್ತು.

ಹಳದೀಪುರಕರರು ಕಾರವಾರದಲ್ಲಿ ನೂತನವಾಗಿ ನಿರ್ಮಿಸಿದ್ದ ಗೃಹದಲ್ಲಿ ಗಾಂಧಿಯವರಿಗೆ ವಸತಿ ಏರ್ಪಾಟು ಮಾಡಲಾಗಿತ್ತು. ಅಲ್ಲಿಗೆ ಗಾಂಧೀಜಿ ತಲುಪಿದೊಡನೆ ಗಂಗಾಧರರಾಯರನ್ನು ತಮ್ಮ ಬಳಿಗೆ ಕರೆಯಿಸಿಕೊಂಡರು. ಅವರೊಂದಿಗೆ ಅವಿನಾಶರು ಹೋದರು. ಆಗ ಗಾಂಧೀಜಿ ಮಲಗಿಕೊಳ್ಳುವ ಸಿದ್ಧತೆಯಲ್ಲಿದ್ದರು. ಆ ಮನೆಯ ಮಹಡಿಯ ಅಂಗಳದಲ್ಲಿ ಮೀರಾಬಹನ್ ಮಹಾತ್ಮರ ಹಾಸಿಗೆಯನ್ನು ಹಾಕಿ ಸೊಳ್ಳೆ ಪರದೆಯನ್ನು ಕಟ್ಟುತ್ತಿದ್ದರು. ಗಂಗಾಧರರಾಯರು ಕುಳಿತ ಬಳಿಕೆ ಸಂಭಾಷಣೆ ಪ್ರಾರಂಭವಾಯಿತು. ಗಾಂಧೀಜಿ ಹಿಂದಿಯಲ್ಲಿ ಮಾತನಾಡುತ್ತಿದ್ದು ನಡುನಡುವೆ ಇಂಗ್ಲೀಷಿನಲ್ಲಿಯೂ ಮಾತನಾಡುತ್ತಿದ್ದರು. ಗಂಗಾಧರರಾಯರು ಅವಿನಾಶರನ್ನು ಮಹಾತ್ಮರಿಗೆ ಪರಿಚಯಿಸುತ್ತಾ "He is Mr. Avinash a Journalist, friend of mine" ಎಂದು ತಿಳಿಸಿದರು. ಗಾಂಧೀಜಿ "I see then his presence is inevitable everywhere" ಎಂದು ನಗೆ ನುಡಿದರು.

ಆ ಸಮಯದಲ್ಲಿ ದಿನಕರರಾಯರು, ಮೈಲಾರ ಮಹಾದೇವ ಮತ್ತು ಮಹಾತ್ಮರಿಗೆ ತಮ್ಮ ಮಗನಿಗಿಂತಲೂ ಹೆಚ್ಚಿಗೆ ಪ್ರಿಯರಾಗಿ ಕಾರ್ಯದರ್ಶಿಯಾಗಿದ್ದ ಮಹದೇವಭಾಯಿ ದೇಸಾಯಿ ಈ ಮೂವರೂ ಬೆಳಗಾವಿಯ ಹಿಂಡಲಗಾ ಸೆರೆಮನೆಯಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿದ್ದರು. ಮಹದೇವ ದೇಸಾಯಿ ಕೈಸಾ ಹೈ? ಎಂಬುದು ಗಾಂಧಿಯವರ ಮೊಟ್ಟ ಮೊದಲ ಪ್ರಶ್ನೆಯಾಗಿತ್ತು.

ಗಂಗಾಧರರಾಯರು: ಎಂದರು.

ಗಾಂಧೀಜಿ: (ನಗುತ್ತಾ) ಉಸ್ ಕೆ ಸಾಥ್ ತುಮಾರಿ ಡಾಕ್ ಚಲ್ ರಹೀ ಹೈನಾ (ಅವರೊಂದಿಗೆ ನಿಮ್ಮ ಟಪಾಲು ಹೋಗುತ್ತಾ ಬರುತ್ತಾ ಇದೆಯಷ್ಟೆ?)

✷ # ೧೩೦, 'ದೀಪ', ಆನೇ ತಿರುವು, ಲಕ್ಷ್ಮೀಪುರ, ಕೆಂಪೇಗೌಡನಗರ, ಬೆಂಗಳೂರು–೧೯.

ರಾಯರು: ಹಾಂ, ಹಾಂ, ಠೀಕ್ ಚಲ್ ರಹೀ ಹೈ. Only the Yesterday I got his letter, He is alright ಎಂದರು.

ಗಾಂಧೀಜಿ: ದಿವಾಕರ್ ಕೀ ತಬೀಯತ್ ಕೈಸೀ ಹೈ? ಉಸ್ ಕಿ ಬೀಮಾರಿ ಕ್ಯಾ ಹೈ?

ರಾಯರು: It is only weakness and nothign else. I think it must be due to pyorrhoea. (ಅಶಕ್ತತೆ ಮಾತ್ರ, ಮತ್ತೇನೂ ಅಲ್ಲ. ದಂತರೋಗದಿಂದ ಅದು ಬಂದಿರಬೇಕೆಂದು ನನಗೆನಿಸುತ್ತದೆ.)

ಗಾಂಧೀಜಿ: (ಮುಂದಕ್ಕೆ ಬೆಳಗಾವಿಗೆ ಹೋಗುವುದರಲ್ಲಿದ್ದುದರಿಂದ) ಬೆಳಗಾವಿಯಲ್ಲಿ ಹರಿಜನ ನಿಧಿಯನ್ನು ಎಷ್ಟು ಕೂಡಿಸಿದ್ದೀರಿ? ಎಂದು ಬೆಳಗಾವಿಯವರೇ ಆದ ರಾಯರನ್ನು ಕೇಳಿದರು.

ರಾಯರು: ಸುಮಾರು ೨೦,೦೦೦ದ ವರೆಗೆ ಕೂಡಿದೆ ಎಂದರು.

ಗಾಂಧೀಜಿ: Only twenty thousand? Very poor collection from Belgaum! Even Bangalore has given me more than one lakh!

ರಾಯರು: But Bangalore is the capital of Karnataka, we are but a poor town.

ಗಾಂಧೀಜಿ: Capital of Karnataka? You have to capture Mysore to make Bangalore your Capital!

ರಾಯರು: You have alreaddy captured it for us. Mysore is part of our Karnataka provinence.

ಈ ಸಂದರ್ಭದಲ್ಲಿ ಗಂಗಾಧರರಾಯರು ಮೈಸೂರು ಸೀಮೆಯಲ್ಲಿ ಪ್ರತ್ಯೇಕತಾ ವೃತ್ತಿಯು ನಿರ್ಮಾಣವಾಗಿರುವುದನ್ನು, ಹರಿಜನ ಕಾರ್ಯಕ್ಕಾಗಿ ಅಲ್ಲಿಯ ಜನರು ಸ್ವತಂತ್ರವಾದ ಸಂಘವನ್ನು ಸ್ಥಾಪಿಸಿಕೊಂಡದ್ದನ್ನು, ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯೊಳಗಿಂದ ಸಿಡಿದು ಹೋಗಿ ತಮ್ಮದೊಂದು ಸ್ವತಂತ್ರ್ಯ ಸಮಿತಿಯನ್ನೇ ಸ್ಥಾಪಿಸಿಕೊಳ್ಳಬೇಕೆಂಬ ಯತ್ನ ಅಲ್ಲಿ ನಡೆದಿದೆಯೆಂಬುದನ್ನು ಮಹಾತ್ಮರಿಗೆ ತಿಳಿಸಿದರು. ಗಾಂಧೀಜಿ ಆಗತಾನೇ ಮೈಸೂರು ಸಂಸ್ಥಾನದಲ್ಲಿ ಸಂಚರಿಸಿ ಬಂದಿದ್ದುದರಿಂದ ಅವರಿಗಾದರೂ ಇದೆಲ್ಲಾ ವಿಷಯವು ಮೊದಲೇ ತಿಳಿದಿತ್ತು. ಗಂಗಾಧರರಾಯರ ಮಾತುಗಳನ್ನು ಕೇಳಿದ ಬಳಿಕ ಕ್ಷಣ ಹೊತ್ತು ಏನೂ ಮಾತಾಡದೆ ಸುಮ್ಮನಿದ್ದರು. ನಂತರ ಗಾಂದೀಜಿ ಒಮ್ಮೆಲೆ ಹೀಗೆಂದರು : We are irrevocably committed to the linguistic Principle. Either Mysore will come to Karnataka or Karnataka will goto Mysore. The two are parts of one and the same territory. They cannot forever remained separated and isolated. (ಭಾಷಾನುಗುಣ ಪ್ರಾಂತ ರಚನೆಯ ತತ್ವಕ್ಕೆ ಹಿಂದೆ ಸರಿಯಲು ಶಕ್ತವಿಲ್ಲದಷ್ಟು ಗಟ್ಟಿಮುಟ್ಟಾಗಿ ನಾವು ಅಂಟಿಕೊಂಡಿದ್ದೇವೆ. ಮೈಸೂರು ಕರ್ನಾಟಕದಲ್ಲಿ ವಿಲೀನವಾಗಬಹುದು. ಇಲ್ಲವೇ ಕರ್ನಾಟಕವು ಮೈಸೂರಿನಲ್ಲಿ ಕೂಡಿಕೊಳ್ಳಬಹುದು. ಇವೆರಡೂ ಪ್ರದೇಶಗಳೂ ಒಂದೇ ನಾಡಿನ ಭಾಗಗಳಾಗಿವೆ. ಅನಂತ ಕಾಲದವರೆಗೂ ಇವೆರಡೂ ಪ್ರದೇಶಗಳು ಪ್ರತ್ಯೇಕವಾಗಿ ಮತ್ತು ಭಿನ್ನವಾಗಿ ಉಳಿಯುವುದು ಶಕ್ಯವಿಲ್ಲ.) ಹೀಗೆ ಬಹಳ ಹೊತ್ತಿನವರೆಗೂ ಸಂಭಾಷಣೆ ನಡೆಯಿತು.

ಮರುದಿನ

ಮರುದಿನ ಬೆಳಗ್ಗೆ (೨೮-೨-೧೯೩೪) ಮೀರಾ ಬಹನ್ ಪ್ರಾರ್ಥನೆಯನ್ನು ನಡೆಸಿದರು. ಗಾಂಧೀಜಿ ಭಗವದ್ಗೀತೆಯ ೧೬-೧೭ನೇ ಅಧ್ಯಾಯಗಳನ್ನು ಪಠಿಸಿದರು. ಎಂಟು ಗಂಟೆಗೆ ಕಾರವಾರದ ಸಾರ್ವಜನಿಕ ಸಭೆಯಲ್ಲಿ ಹಿಂದಿಯಲ್ಲಿ ಭಾಷಣ ಪ್ರಾರಂಭಿಸಿದರು. ಗಂಗಾಧರರಾಯರು ಮರಾಠಿಯಲ್ಲಿ ಅದರ ಅನುವಾದವನ್ನು ಮಾಡತೊಡಗಿದೊಡನೆ ಹಸನ್ಮುಖದೊಂದಿಗೆ ಗಾಂಧೀಜಿ ರಾಯರ ಕಡೆ ನೋಡಿದರು. ವಾಲಾಜಿಭಾಯಿ ದೇಸಾಯಿ ಕೂತಲ್ಲಿಂದಲೇ "ಯೇ ಕರ್ನಾಟಕ ಹೈನಾ! ಕ್ಯಾನರೀಜ್ ಮೆ ತರ್ಜುಮಾ ಹೋನಾ ಚಾಹಿಯೇ" ಎಂದರು. ಆದರೆ ಅವರ ಮಾತು ಅಲ್ಲಿಯೇ ಉಳಿದು ರಾಯರ ಮರಾಠಿ ಭಾಷಾಂತರ ಮುಂದೆ ಸಾಗಿತು. ಕಾರವಾರ, ಚಿಕ್ಕೋಡಿ ಮತ್ತು ನಿಪ್ಪಾಣಿ ಈ ಮೂರು ಊರುಗಳಲ್ಲಿ ಮರಾಠಿಯಲ್ಲಿಯೇ ಬಾಷಾಂತರ ಮಾಡಿದರು. ಉಳಿದೆಲ್ಲ ಕಡೆ ಕನ್ನಡದಲ್ಲಿ ನಡೆಯಿತು. ಈ ಸಂಚಾರದಲ್ಲಿ ಮಹಾತ್ಮರು ಎಲ್ಲೆಡೆ ಹರಿಜನ ಕಾರ್ಯದ ಸಂಬಂಧವಾಗಿ ಒಂದು ಪಡಿಯಚ್ಚಿನ ಸ್ವರೂಪದ ಭಾಷಣವನ್ನೇ ಮಾಡುತ್ತಿದ್ದರು. "ಸವರ್ಣ ಹಿಂದೂಗಳು ಹರಿಜನರ ಸೇವೆ ಮಾಡುವುದೆಂದರೆ ಅವರ ಮೇಲೆ ಉಪಕರ ಮಾಡಿದಂತಲ್ಲ. ಇಂದಿನವರೆಗೆ ಮಾಡಿದ ಪಾಪವನ್ನು ಈ ಸೇವಾರೂಪದ ಪ್ರಾಯಶ್ಚಿತ್ತದಿಂದ ನಾವು ತೊಳೆದುಕೊಳ್ಳಬೇಕಾಗಿದೆ. ಹರಿಜನರ ಉದ್ಧಾರವಾಗದಿದ್ದರೆ ಹಿಂದೂ ಸಮಾಜದ ಅಥವ ಭಾರತದೇಶದ ಉದ್ಧಾರವು ಪೂರ್ಣವಾದಂತೆ ಆಗುವುದಿಲ್ಲ. ಈಗ ಸವರ್ಣ ಹಿಂದೂಗಳು ಅಸ್ಪೃಶ್ಯತೆ ಎಂಬುದಕ್ಕೆ ಆಧಾರವೇ ಇಲ್ಲ. ಸರ್ವರನ್ನೂ ಸಮದೃಷ್ಟಿಯಿಂದ ನೋಡುವ ಪರಮಾತ್ಮನು ಸಮಾಜದೊಳಗಿನ ಒಂದು ವರ್ಗವನ್ನು ಅಸ್ಪೃಶ್ಯವಾಗಿ ಎಂದೂ ನಿರ್ಮಿಸಲಾರನು. ಈಗ ನಡೆದಿರುವ ಹರಿಜನೋದ್ಧಾರದ ಕಾರ್ಯಕ್ಕೆ ನೀವೆಲ್ಲರೂ ಶಕ್ಯವಿದ್ದಷ್ಟು ಧನ ಸಹಾಯ ಮಾಡಬೇಕು. ಸಾರ್ವಜನಿಕ ಸ್ಥಳಗಳಲ್ಲಿ ವಾಹನಗಳಲ್ಲಿ

ಗುಡಿಗಂಡಾರಗಳಲ್ಲಿ, ಉಪಾಹಾರಗೃಹಗಳಲ್ಲಿ ಹರಿಜನರಿಗೆ ಪ್ರವೇಶವನ್ನು ನಿರಾಕರಿಸಬಾರದು." ಇದೇ ಮಹಾತ್ಮ ಗಾಂಧೀಜಿ ಅವರ ಭಾಷಣದ ತಿರುಳಾಗಿತ್ತು.

ಆಗ್ಗೆ ಒಂದು ತಿಂಗಳ ಮುಂಚೆ (೧೫–೧–೧೯೩೪ ರಂದು) ಬಿಹಾರದಲ್ಲಿ ಭೀಕರವಾದ ಭೂಕಂಪ ಸಂಭವಿಸಿ ಲಕ್ಷಾವಧಿ ಜನರು ಸಂತ್ರಸ್ತರಾಗಿದ್ದುದರಿಂದ ಅವರ ಸಹಾಯಾರ್ಥವಾಗಿಯೂ ಮಹಾತ್ಮರು ಉತ್ತರ ಕರ್ನಾಟಕ ಸಂಚಾರದಲ್ಲಿನ ಸಭೆಗಳಲ್ಲಿ ಅರಿಕೆ ಮಾಡಿಕೊಂಡರು. ಕಾರವಾರದಿಂದ ಬಿಜಾಪುರದವರೆಗೆ ಹತ್ತು ದಿನ ಪರಿವಾರ ಸಮೇತನಾಗಿ ಪ್ರವಾಸ ಮಾಡಿದ ಗಾಂಧೀಜಿ ಮಾರ್ಚ್ ಎಂಟರಂದು ಹೈದರಾಬಾದ್‌ನತ್ತ ಪ್ರಯಾಣಿಸಿದರು.

ಮಹಾತ್ಮಗಾಂಧೀಯವರ ಈ ಹರಿಜನೋದ್ಧಾರ ಕಾರ್ಯ ಭವ್ಯ ಭಾರತದ ನಿರ್ಮಾಣಕ್ಕೊಂದು ದಿಕ್ಸೂಚಿಯಾಯಿತೆಂದರೆ ತಪ್ಪಾಗಲಾರದು.

[ಈ ಲೇಖನದ ಕರಡು ಪ್ರತಿಯನ್ನು ತಿದ್ದುಪಡಿಮಾಡಿ ಸಹಕರಿಸಿದ ಕರ್ನಾಟಕ ಗ್ಯಾಸೆಟಿಯರ್ ಸಂಪಾದಕರಾದ ಶ್ರೀ ರಾಜೇಂದ್ರಪ್ಪನವರಿಗೆ ಕೃತಜ್ಞತೆಗಳು.]

ಪರಾಮರ್ಶಿಸಿದ ಕೃತಿಗಳು

೧. ಗಾಂಧಿ ಮತ್ತು ಕರ್ನಾಟಕ, ಗಾಂಧಿ ಶತಾಬ್ದಿ ಸಂಚಿಕೆ, ೧೯೬೯.

೨. ಸಂಯುಕ್ತ ಕರ್ನಾಟಕ, ಗಾಂಧಿ ಶತಾಬ್ದಿ ಸಂಚಿಕೆ, ೧೯೬೯.

೩. Gandhi (1915-48), A detailed Chronology, Gandhi Peace Foundation, New Delhi, 1971.

೧೧೮

ದಾವಣಗೆರೆಯ ಶರಣ ಮಾಗನೂರು ಬಸಪ್ಪನವರ ಸಾಮಾಜಿಕ ಕೊಡುಗೆಗಳು

ಡಾ. ಎನ್.ಜಿ. ಸಂತೋಷ್*

ಮಾಗನೂರು ಬಸಪ್ಪನವರು ಕೇವಲ ವ್ಯಾಪಾರಿಗಳಾಗಿರಲಿಲ್ಲ. ಸಾಮಾಜಿಕ ಕಳಕಳಿಯನ್ನು ಹೊಂದಿದವರಾಗಿದ್ದರು. ಇವರು ಜಾತಿ ಮತವೆನ್ನದೆ ಪ್ರತಿಯೊಬ್ಬರ ನೋವುಗಳಿಗೆ ಸ್ಪಂದಿಸಿ ತಮ್ಮಿಂದಾಗುವ ಸಹಾಯವನ್ನು ಮಾಡುತ್ತಿದ್ದರು. ವಿದ್ಯಾರ್ಥಿಗಳಿಗೆ, ಅಂಗವಿಕಲರಿಗೆ, ಬಡವರಿಗೆ, ರೋಗಿಗಳಿಗೆ ಅನೇಕ ರೀತಿಯಲ್ಲಿ ಸಹಾಯವನ್ನು ಮಾಡಿದವರಾಗಿದ್ದಾರೆ.

ಗಾಂಧೀಜಿಯವರ ಪ್ರೇರಣೆಯಿಂದ ಮಾಗನೂರು ಬಸಪ್ಪನವರು ದೀನ ದಲಿತರಿಗೆ ಸಹಾಯ ಮಾಡಲು ಮುಂದಾದರು. ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದ ಅಂಗವಿಕಲರಿಗೆ ಉಚಿತ ಊಟ ಮತ್ತು ವಸತಿಯನ್ನು ಕಲ್ಪಿಸುವ ಆಲೋಚನೆ ಮೂಡಿತು. ಈ ವಿಷಯವನ್ನು ತಮಗಿಂತಲೂ ಹಿರಿಯರೂ ತಮ್ಮ ಮಾರ್ಗದರ್ಶಕರೂ ಆದ ಕಾಸಲ ಶ್ರೀನಿವಾಸ ಶೆಟ್ಟರ ಮುಂದೆ ಚರ್ಚಿಸಿ ಅಶಕ್ತ ಪೋಷಕರ ಸಂಘವನ್ನು ೧೯೩೩ರಲ್ಲಿ ಸ್ಥಾಪಿಸಿದರು. ಈ ಅಶಕ್ತರಿಗೆ ವಸತಿ ಕಲ್ಪಿಸಲು ನಿವೇಶನ ಮತ್ತು ಮನೆಯ ಅವಶ್ಯಕವಿದ್ದಿತು. ಇದಕ್ಕಾಗಿ ಕೊಂಡಜ್ಜಿ ಬಸಪ್ಪನವರ ಸಹಾಯದಿಂದ ಡಿಸ್ಟ್ರಿಕ್ ಬೋರ್ಡ್‌ನಿಂದ ನಿವೇಶನ ಮತ್ತು ಹಂಚಿನ ಮನೆಯನ್ನು ಪಡೆದುಕೊಂಡರು. ಮೊದಲು ಅಂಗವಿಕಲರು, ಭಿಕ್ಷುಕರಿಗೆ ಉಚಿತ ಊಟವನ್ನು ಹಾಕಲಾಯಿತು. ಭಿಕ್ಷುಕರ ಸಂಖ್ಯೆ ಹೆಚ್ಚಾಯಿತು. ಮುಂದೆ ಈ ಯೋಜನೆಯನ್ನು ಕೈಬಿಟ್ಟು ಬಡ ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿಯನ್ನು ಉಚಿತವಾಗಿ ನೀಡುವ ವ್ಯವಸ್ಥೆಯನ್ನು ಕೈಗೊಳ್ಳಲಾಯಿತು. ಇಂದಿಗೂ ಬಡ ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಬರಲಾಗುತ್ತಿದೆ.

ಅಶಕ್ತ ಪೋಷಕರ ಸಂಘಕ್ಕೆ ನೀಡಿದ ಜಾಗವು ನಗರದ ಮಧ್ಯಭಾಗದಲ್ಲಿದ್ದುದಲ್ಲದೆ ರೈಲ್ವೆನಿಲ್ದಾಣಕ್ಕೆ ಮತ್ತು ಖಾಸಗಿ ಬಸ್ ನಿಲ್ದಾಣದ ಪಕ್ಕದಲ್ಲಿಯೇ ಇದೆ. ಈ ನಿವೇಶನವನ್ನು ದೂರವಾಣಿ ಕೇಂದ್ರವನ್ನು ಸ್ಥಾಪಿಸಲು ಅಂದಿನ ದೂರ ಸಂಪರ್ಕ ಸಚಿವರಾದ ಬಹುಗುಣರವರು ಮತ್ತು ಅಂಚೆ ಅಧಿಕಾರಿಗಳು ಬಸಪ್ಪನವರನ್ನು ಕೇಳಿಕೊಂಡರು. ಆದರೆ ಬಸಪ್ಪನವರು ಈ ನಿವೇಶನವನ್ನು ಕೊಡಲು ಖಡಾಖಂಡಿತವಾಗಿ ನಿರಾಕರಿಸಿದರು. ಅನಂತರ ದಾವಣಗೆರೆಯ ಗಣ್ಯರು ಮತ್ತು ಅಂದಿನ ಕೇಂದ್ರ ಸಚಿವರಾದ ಕೊಂಡಜ್ಜಿ ಬಸಪ್ಪನವರ ಒತ್ತಾಯ ಮತ್ತು ಮನವಿಯ ಮೇರೆಗೆ ಅರ್ಧ ಜಾಗವನ್ನು ದೂರವಾಣಿ ಕೇಂದ್ರಕ್ಕೆ ಬಿಟ್ಟುಕೊಟ್ಟರು. ಅಶಕ್ತ ಪೋಷಕರ ಸಂಘದ ಮೊದಲಿನ ಕಟ್ಟಡದಲ್ಲಿ ಹೋಟೆಲ್, ಬಾಳೆಹಣ್ಣಿನ ಅಂಗಡಿಗಳು ಇತರೆ ಚಿಕ್ಕಪುಟ್ಟ ಅಂಗಡಿಗಳು ನೆಲಬಾಡಿಗೆ ಪಡೆದು ಡಬ್ಬಿ ಅಂಗಡಿಗಳನ್ನು ಕಟ್ಟಿಸಿಕೊಂಡಿದ್ದರು. ಅಲ್ಲಿ ವ್ಯಾಪಾರ ಜೋರಾಗಿ ನಡೆಯುತ್ತಿತ್ತು. ಇದರಿಂದ ಈ ಜಾಗವನ್ನು ಬಿಡಲು ಬಾಡಿಗೆದಾರರು ಒಪ್ಪದೆ ತಮ್ಮ ಸ್ವಂತಕ್ಕೆ ಕಟ್ಟಡವನ್ನು ಕಟ್ಟಲು ಮುಂದಾದರು. ಇದರಿಂದ ಮಾಗನೂರು ಬಸಪ್ಪನವರು ದೆಹಲಿಯ ಸುಪ್ರೀಂಕೋರ್ಟ್‌ವರೆಗೂ ಹೋಗಿ, ಬಾಡಿಗೆದಾರರನ್ನು ಖಾಲಿ ಮಾಡಿಸುವಲ್ಲಿ ಯಶಸ್ವಿಯಾದರು. ಈ ನಿವೇಶನದಲ್ಲಿದ್ದ ಹಳೆಯ ಕಟ್ಟಡವನ್ನು ಕೆಡವಿ, ಹೊಸ ವ್ಯಾಪಾರಿ ಮಳಿಗೆಯ ಸಂಕೀರ್ಣವನ್ನು ಕಟ್ಟಿಸಿದರು. ಈ ಸಂಕೀರ್ಣದಲ್ಲಿ ಮಳಿಗೆಗಳು ಬೇಕಾದವರಿಗೆ ಮುಂಗಡ ಹಣವನ್ನು ಪಡೆದು ಕಟ್ಟಡವನ್ನು ಕಟ್ಟಿಸಿದರು. ಈ ಕಟ್ಟಡದ ಕೆಳಭಾಗದಲ್ಲಿ ವ್ಯಾಪಾರಿ ಮಳಿಗೆಗಳಿದ್ದು, ಮೇಲ್ಭಾಗದಲ್ಲಿ ಬಡ ವಿದ್ಯಾರ್ಥಿಗಳಿಗಾಗಿ ಉಚಿತ ಕೊಠಡಿಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಈ ಕಟ್ಟಡದಲ್ಲಿ ಪ್ರತಿವರ್ಷ ಸುಮಾರು ೧೩೦–೧೫೦ ವಿದ್ಯಾರ್ಥಿಗಳು ಇದರ ಅನುಕೂಲವನ್ನು ಪಡೆದುಕೊಳ್ಳುತ್ತಿದ್ದಾರೆ. ಪ್ರತಿವರ್ಷ ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆಯಲು ಬೇರೆ ಬೇರೆ ಊರುಗಳಿಂದ ದಾವಣಗೆರೆಗೆ ಬರುತ್ತಿದ್ದರು. ಈ ವಿದ್ಯಾರ್ಥಿಗಳು ದಾವಣಗೆರೆಯ ಜಯದೇವ ಹಾಸ್ಟೆಲ್‌ನಲ್ಲಿ ಉಳಿದುಕೊಳ್ಳುತ್ತಿದ್ದರು. ಇವರಿಗೆ ಮಾಗನೂರು ಬಸಪ್ಪನವರು ಪ್ರತಿವರ್ಷ ಉಚಿತವಾಗಿ ಊಟದ ವ್ಯವಸ್ಥೆಯನ್ನು ಮಾಡಿಸುತ್ತಿದ್ದರು.

* ಉಪನ್ಯಾಸಕರು, ಇತಿಹಾಸ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ.

ಮಾಗನೂರು ಬಸಪ್ಪನವರ ಸ್ವಗ್ರಾಮವಾದ ಮಾಗನೂರಿನಲ್ಲಿ ಮಾರಿಹಬ್ಬ ನಡೆಸಲು ಮುಂದಾದರು. ಆಗ ಬಸಪ್ಪನವರು ಅಹಿಂಸಾ ತತ್ವದಲ್ಲಿ ನಂಬಿಕೆ ಹೊಂದಿದ್ದ ರಿಂದ ಹಬ್ಬವನ್ನು ನಡೆಸದಂತೆ ಮನವಿ ಮಾಡಿಕೊಂಡರೂ ಜನರು ಮಾಡಲೇ ಬೇಕೆಂದು ವಾದಿಸಿದರು. ಆಗ ಬಸಪ್ಪನವರು ಧಾರವಾಡಕ್ಕೆ ಹೋಗಿ ಜಿಲ್ಲಾಧಿಕಾರಿಗಳನ್ನು, ಪೋಲಿಸರನ್ನು ಕರೆದುಕೊಂಡು ಬಂದು ಮಾರಿಹಬ್ಬವನ್ನು ನಿಲ್ಲಿಸಿದರು. ಈ ಹಬ್ಬವು ಸುಮಾರು ೪೭ ವರ್ಷಗಳ ಕಾಲ ನಡೆದಿರಲಿಲ್ಲವೆಂದು ಮಾಗನೂರು ಗ್ರಾಮದ ಹಿರಿಯರಾದ ಬಸವಣಪ್ಪ ಶಿವಬಸಪ್ಪ ಕರಡೇರವರು ತಿಳಿಸುತ್ತಾರೆ. ಬಸಪ್ಪನವರ ಗ್ರಾಮದ ಕೆಲವು ವ್ಯಕ್ತಿಗಳು ಹಬ್ಬವನ್ನು ನಿಲ್ಲಿಸಿದಕ್ಕೆ ಬೈದರು. ಇದರಿಂದ ಬೇಸರಗೊಂಡ ಬಸಪ್ಪನವರು ಸುಮಾರು ವರ್ಷಗಳ ಕಾಲ ಮಾಗನೂರಿಗೆ ಹೋಗುವುದನ್ನು ನಿಲ್ಲಿಸಿದರು.

ಮಾಗನೂರು ಬಸಪ್ಪನವರು ಶಿಕ್ಷಣ ಪ್ರೇಮಿಗಳಾಗಿದ್ದರು ಶಿಕ್ಷಣವು ಪ್ರತಿಯೊಬ್ಬರ ಜೀವನಕ್ಕೆ ದಾರಿ ದೀಪವೆಂದು ತಿಳಿದ್ದರು. ಅದಕ್ಕಾಗಿ ಎಲ್ಲಾ ಸಮಾಜದ ಜನರಿಗೂ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ತಿಳಿಸುತ್ತಿದ್ದರು. ಗಾಂಧೀಜಿಯವರ ಮನವಿಯ ಮೇರೆಗೆ ಹರಿಜನರಿಗಾಗಿ ಹಾಸ್ಟೆಲ್‌ನ್ನು ಕಟ್ಟಿಸಲು ಮುಂದಾದರು. ಇದಲ್ಲದೆ ೧೯೪೨ರಲ್ಲಿ ಹರಿಜನರ ಹಾಸ್ಟೆಲ್‌ನ ಅಡುಗೆ ಮನೆಯನ್ನು ಕಟ್ಟಿಸಲು ಹತ್ತು ಸಾವಿರ ರೂಪಾಯಿ ಯನ್ನು ಖರ್ಚು ಮಾಡಿದರು. ೧೯೭೫ರಲ್ಲಿ ಛಲವಾದಿ ಹಾಸ್ಟೆಲ್ ಕಟ್ಟಿಸಲು ಮೂವತ್ತು ಸಾವಿರ ರೂಪಾಯಿಗಳನ್ನು ನೀಡಿದರು. ೧೯೭೫ರಲ್ಲಿ ನಾಯಕರ ಹಾಸ್ಟೆಲ್ ಕಟ್ಟಿಸಲು ಸಹ ಮೂವತ್ತು ಸಾವಿರ ರೂಪಾಯಿಯನ್ನು ನೀಡಿದರು. ಇವುಗಳನ್ನು ಕಟ್ಟಿಸುವ ಜವಾಬ್ದಾರಿಯನ್ನು ಕಾಸಲ ಶ್ರೀನಿವಾಸ ಶೆಟ್ಟರು ಮತ್ತು ಮಾಗನೂರು ಬಸಪ್ಪನವರೇ ನಿರ್ವಹಿಸಿದರು. ಹೀಗೆ ಮಾಗನೂರು ಬಸಪ್ಪನವರು ದೀನ ದಲಿತರ ಶಿಕ್ಷಣದ ಬೆಳವಣಿಗೆಗೂ ಸಹಾಯ ಮಾಡಿರುವುದು ತಿಳಿದುಬರುತ್ತದೆ.

ಮಾಗನೂರು ಬಸಪ್ಪನವರು ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ವಿಷಯ ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ಶಿವಮೊಗ್ಗ, ರಾಣೆಬೆನ್ನೂರು, ಹೊನ್ನಾಳಿ, ಚನ್ನಗಿರಿ, ಹರಪನಹಳ್ಳಿ, ಹರಿಹರ ಹೀಗೆ ಅನೇಕ ಪ್ರದೇಶಗಳ ಜನರಿಗೆ ತಿಳಿದಿದ್ದಿತು. ಇದರಿಂದ ಕೆಲವು ವಿದ್ಯಾರ್ಥಿಗಳು ಕಾಲೇಜು ಗಳಲ್ಲಿ ಓದಲು ಸೀಟನ್ನು ಕೊಡಿಸುವಂತೆ ಶಿಫಾರಸ್ಸು ಮಾಡು ವಂತೆ ಕೇಳಿಕೊಳ್ಳುತ್ತಿದ್ದರು. ಆಗ ಬಸಪ್ಪನವರು ಸಾವಿರಾರು ವಿದ್ಯಾರ್ಥಿಗಳಿಗೆ ಓದಲು ಅವಕಾಶ ಮಾಡಿಕೊಟ್ಟಿದ್ದಾರೆ.

ಹೊನ್ನಾಳಿಯ ಪ್ರತಿಭಾನ್ವಿತ ವಿದ್ಯಾರ್ಥಿಯೊಬ್ಬ ಬಸಪ್ಪನವರ ಅಂಗಡಿಗೆ ಬಂದು ನಾನು ಎಂ.ಬಿ.ಬಿ.ಎಸ್. ಓದಲು ಆಸಕ್ತಿ ಇದೆ. ಆದರೆ ಓದಲು ಹಣವಿಲ್ಲವೆಂದು ಕೇಳಿಕೊಂಡಾಗ ಆ ವಿದ್ಯಾರ್ಥಿಯ ಓದು ಮುಗಿಯುವವರೆಗೆ ಪ್ರತಿ ತಿಂಗಳು ಅಂಚೆಯ ಮೂಲಕ ಹಣವನ್ನು ಕಳುಹಿಸಿ ಕೊಡುತ್ತಿದ್ದರೆಂದು ಸಂಗಮೇಶಗೌಡರು ತಿಳಿಸುತ್ತಾರೆ.

ಈಗಿನ ಹಳೆ ಸಿರಿಗೆರೆ ಹಾಸ್ಟೆಲ್ ಜಾಗದಲ್ಲಿ ಬಸಪ್ಪನವರ ನಾಯಕತ್ವದಲ್ಲಿ ತರಳಬಾಳು ಹುಣ್ಣಿಮೆ ಮಹೋತ್ಸವ ಯಶಸ್ವಿಯಾಗಿ ನಡೆಸಿ, ಉಳಿದ ಹಣದಲ್ಲಿ ಉತ್ಸವದ ನೆನಪಿಗಾಗಿ ಓದುವ ಮಕ್ಕಳಿಗೆ ಹಾಸ್ಟೆಲ್‌ನ್ನು ಕಟ್ಟಿಸಿದರು. ಈ ಕಟ್ಟಡ ಕಟ್ಟಲು ಸುತ್ತಮುತ್ತಲ ಗ್ರಾಮಸ್ತರಿಂದ ಹಣವನ್ನು ಸಂಗ್ರಹಿಸಿ ಕಟ್ಟಡ ಕಟ್ಟಿ ಬಡ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟರು.

ದಾವಣಗೆರೆಗೆ ಬರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಯಿತು. ಇದರಿಂದ ಮಾಗನೂರು ಬಸಪ್ಪನವರು ನಗರಸಭೆಯ ಅಧ್ಯಕ್ಷರಾಗಿದ್ದ ಕೆ.ಟಿ. ಜಂಬಣ್ಣನವರ ನೆರವಿನಿಂದ ಸಾದು ಲಿಂಗಾಯಿತ ಸಮಾಜದವರಿಗೆ ಹಾಸ್ಟೆಲ್ ಕಟ್ಟಲು ನವೇಶನವನ್ನು ಪಡೆದುಕೊಂಡರು. ಹಾಸ್ಟೆಲ್ ಕಟ್ಟಿಸಲು ವ್ಯಾಪಾರಿಗಳಿಂದ, ನಗರದ ಜನರಿಂದ, ಸುತ್ತಮುತ್ತಲ ಗ್ರಾಮದ ಜನರಿಂದ ಹಣ ಮತ್ತು ಧಾನ್ಯಗಳನ್ನು ಪಡೆದು ಕಟ್ಟಡವನ್ನು ಕಟ್ಟಿಸಲು ಮುಂದಾದರು. ಇದಲ್ಲದೆ ಕೆಲವರಿಗೆ ಒಂದೊಂದು ಕೊಠಡಿಗಳನ್ನು ಕಟ್ಟಿಸಿಕೊಡುವಂತೆ ವ್ಯಾಪಾರಿ ಮನೆತನ ದವರಿಗೆ, ಶ್ರೀಮಂತ ಜಮೀನ್ದಾರರಿಗೆ ಮನವಿ ಮಾಡಿ ಕೊಂಡಾಗ ಹಲವಾರು ಜನರು ಒಂದೊಂದು ಕೊಠಡಿಗಳ ನಿರ್ಮಾಣದ ಖರ್ಚನ್ನು ವಹಿಸಿಕೊಂಡರು. ಅವರುಗಳು ನೀಡಿದ ದೇಣಿಗೆಯ ನೆನಪಿಗಾಗಿ ಆ ಕೊಠಡಿಗಳ ಮುಂದೆ ಕಲ್ಲಿನಲ್ಲಿ ಅವರ ಹೆಸರುಗಳನ್ನು ಕೆತ್ತಿಸಲಾಗಿದೆ. ಶಾಮನೂರು ಕೆರೆಯ ಪಕ್ಕದಲ್ಲಿ ಇಟ್ಟಿಗೆಗಳನ್ನು ತಯಾರಿಸುತ್ತಿದ್ದರು.

ಈ ಇಟ್ಟಿಗೆ ಬಟ್ಟಿಗಳಿಂದ ಒಂದೊಂದು ಸಾವಿರ ಇಟ್ಟಿಗೆ ಗಳನ್ನು ದಾನವಾಗಿ ನೀಡಿದ್ದಾಗಿ ಶಾಮನೂರು ಟೋಪಿ ಹಾಲಪ್ಪನವರು ತಿಳಿಸುತ್ತಾರೆ. ಹೀಗೆ ಗುರುಶಾಂತ ದೇಶೀಕೇಂದ್ರೀಯ ವಿದ್ಯಾರ್ಥಿ ನಿಲಯವನ್ನು ಕಟ್ಟಿಸಿದರು. ಇದರಲ್ಲಿ ೭೫ ಕೊಠಡಿಗಳಿವೆ. ಇಂದು ಈ ವಿದ್ಯಾರ್ಥಿ ನಿಲಯದಲ್ಲಿ ೩೨೦ ವಿದ್ಯಾರ್ಥಿಗಳಿದ್ದಾರೆ. ಈ ವಿದ್ಯಾರ್ಥಿ ನಿಲಯದಲ್ಲಿ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿ ವ್ಯವಸ್ಥೆಗೆ ಅವಕಾಶವಿದೆ.

ಮಾಗನೂರು ಬಸಪ್ಪನವರ ಕಡ್ಲೆಬಟ್ಟಿಯಲ್ಲಿ ಮುಸ್ಲಿಂ ವ್ಯಕ್ತಿಯೊಬ್ಬರು ಕೆಲಸ ಮಾಡುತ್ತಿದ್ದರು. ಇವರ ಕುಟುಂಬದ ಹೆಣ್ಣುಮಕ್ಕಳು ಮಾಗನೂರು ಬಸಪ್ಪನವರ ಮನೆಯಲ್ಲಿ ಕೆಲಸ ಮಾಡುತ್ತಿದ್ದರು. ಇವರಲ್ಲಿ ಮಾಜ ಎಂಬುವಳಿಗೆ ಬಾಪೂಜಿ ಆಸ್ಪತ್ರೆಯಲ್ಲಿ ಜವಾನ ಕೆಲಸ ಕೊಡಿಸಿದ್ದಾರೆ. ಇವಳ ಅಕ್ಕನ ಇಬ್ಬರು ಹೆಣ್ಣುಮಕ್ಕಳಿಗೆ ನರ್ಸಿಂಗ್ ಸೀಟು ಕೊಡಿಸಿ, ಓದುವ

ಖರ್ಚನ್ನು ನೋಡಿಕೊಳ್ಳುವುದರ ಜೊತೆಗೆ ಬಂಗಾರ ನೀಡಿ ಮದುವೆ ಖರ್ಚನ್ನು ನೀಡಿದ್ದಾರೆ. ಇದರಿಂದ ಧಾರ್ಮಿಕ ಭೇದಭಾವ ಮಾಡದೆ ಬಡವರಿಗೆ ಸಹಾಯ ಮಾಡುತ್ತಿದ್ದರು.

ಮಾಗನೂರು ಬಸಪ್ಪನವರ ಚೌಕಿಪೇಟೆಯಲ್ಲಿ ಇವರ ಅಂಗಡಿಯ ಪಕ್ಕದಲ್ಲಿ ಮೊಹರಂ ಹಬ್ಬಕ್ಕೆ ಒಂದು ಕಟ್ಟಡವನ್ನು ಕಟ್ಟಿಸಿ ಕೊಟ್ಟಿದ್ದಾರೆ. ಈ ಕಟ್ಟಡವನ್ನು ಬಾಡಿಗೆಕೊಟ್ಟು ಇದರಿಂದ ಬರುವ ಹಣವನ್ನು ಮೊಹರಂ ಹಬ್ಬಕ್ಕೆ ಉಪಯೋಗಿಸಿ ಕೊಳ್ಳುತ್ತಾರೆ.

ಬಸಪ್ಪನವರು ತಮ್ಮ ಊರಿನಲ್ಲಿದ್ದ ಒಂದೂವರೆ ಎಕರೆ ಭೂಮಿಯಲ್ಲಿ ಹುಣಸೆ ಮರಗಳಿವೆ. ಈ ಮರಗಳಿಂದ ಬರುವ ಆದಾಯವನ್ನು ಮೊದಲಿಗೆ ಶಾಲೆಯ ಅಭಿವೃದ್ಧಿಗೆ ಬಳಸಿ ಕೊಳ್ಳಲು ನೀಡುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಈ ಆದಾಯ ವನ್ನು ಆಂಜನೇಯ ದೇವಸ್ಥಾನಕ್ಕೆ ನೀಡುತ್ತಿದ್ದಾರೆ. ಇದಲ್ಲದೆ ಆಂಜನೇಯ ದೇವಸ್ಥಾನದ ಪುನರ್ ನಿರ್ಮಾಣಕ್ಕೆ ಅವರ ಮಗನಾದ ಸಂಗಮೇಶಗೌಡರು ಒಂದು ಲಕ್ಷ ರೂಪಾಯಿ ದೇಣಿಗೆ ನೀಡಿದ್ದಾರೆ.

ಮಾಗನೂರು ಬಸಪ್ಪನವರ ಕಾರಿನಲ್ಲಿ ಮತ್ತು ಅವರ ಕೋಟಿನ ಜೇಬಿನಲ್ಲಿ ಯಾವಾಗಲೂ ಜ್ವರ, ನೆಗಡಿ, ಕೆಮ್ಮಿನ ಗುಳಿಗೆಗಳನ್ನು ಇಟ್ಟುಕೊಂಡಿರುತ್ತಿದ್ದರು. ಯಾರಿಗಾದರೂ ಹುಷಾರಿಲ್ಲ ಎಂದರೆ ತಮ್ಮಲ್ಲಿದ್ದ ಗುಳಿಗೆಗಳನ್ನು ನೀಡುತ್ತಿದ್ದರು. ತಮ್ಮ ತೋಟದಲ್ಲಿ ಕೆಲಸಗಾರರಿಗೂ ಹುಷಾರು ಇಲ್ಲದಾಗ ತಮ್ಮಲ್ಲಿದ್ದ ಗುಳಿಗೆಗಳನ್ನು ನೀಡುತ್ತಿದ್ದರು. ಇಲ್ಲವೆ ದಾವಣಗೆರೆಗೆ ತಮ್ಮ ಕಾರಿನಲ್ಲಿ ಕರೆದುಕೊಂಡು ಬಂದು ಚಿಕಿತ್ಸೆ ಕೊಡಿಸಿ ಕಳುಹಿಸುತ್ತಿದ್ದರು.

ಮಾಗನೂರು ಮತ್ತು ತಮ್ಮ ಗ್ರಾಮದ ಸುತ್ತಮುತ್ತಲಿನ ಜನರು ಹಾಗೂ ತಮ್ಮ ಅಂಗಡಿಯ ಗ್ರಾಹಕರು ಬಸಪ್ಪನವರ ಅಂಗಡಿಗೆ ಬಂದು ಚಿಕಿತ್ಸೆಗಾಗಿ ಹಣವನ್ನು ಪಡೆದುಕೊಂಡು ಹೋಗುತ್ತಿದ್ದರು. ಚಿಕಿತ್ಸೆಗಾಗಿ ಪಡೆದುಕೊಂಡ ಹಣವನ್ನು ಸಾಮಾನ್ಯವಾಗಿ ಹಿಂದಿರುಗಿಸುತ್ತಿದ್ದರು. ಚಿಕಿತ್ಸೆಗಾಗಿ ದೂರದ ಊರಿನಿಂದ ಬಂದವರಿಗೆ ಉಳಿಯಲು ಚಿಗಟೇರಿ ಸಾರ್ವಜನಿಕ ಆಸ್ಪತ್ರೆಯ ಎದುರಿನಲ್ಲಿ ಇವರ ಖಾಲಿ ಮನೆ ಇದ್ದಿತು. ಈ ಮನೆಯಲ್ಲಿ ಉಳಿದುಕೊಳ್ಳಲು ಅವಕಾಶ ಮಾಡಿ ಕೊಡುತ್ತಿದ್ದರು.

ಮಾಗನೂರು ಬಸಪ್ಪನವರು ಬಡವರ ಮದುವೆ ಮುಂತಾದ ಸಮಾರಂಭಗಳಿಗೆ ಅಕ್ಕಿ, ಬೆಲ್ಲ, ಬೇಳೆಯನ್ನು ಕೊಡುತ್ತಿದ್ದರು. ಇದಲ್ಲದೆ ಬಡವರಿಗೆ ಮತ್ತು ತಮ್ಮ ತೋಟದಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ ದೀಪಾವಳಿ ಸಂದರ್ಭದಲ್ಲಿ ಅಂಗಿ, ಪಂಚೆ, ಟವಲ್, ಸೀರೆ, ಬೆಡ್‌ಶೀಟುಗಳನ್ನು ಕೊಡುತ್ತಿದ್ದರು. ಇವರ ಮನೆಯ ಮುಂದೆ ಜಂಗಮರ ಮನೆ ಇದ್ದಿತು. ಆ ಮನೆಯ ತಂದೆ-ತಾಯಿಗಳು ತೀರಿಕೊಂಡಾಗ, ಅವರ ಮೂರು ಜನ ಮಕ್ಕಳ ಜವಾಬ್ದಾರಿಯನ್ನು ಮಾಗನೂರು ಬಸಪ್ಪನವರು ನೋಡಿಕೊಳ್ಳುತ್ತಿದ್ದರು. ಈ ಮನೆಯವರಿಗೆ ಬೇಕಾದ ಅಕ್ಕಿ, ರಾಗಿ, ಜೋಳ, ಬೇಳೆ, ತರಕಾರಿಗಳನ್ನು ಪ್ರತಿವಾರ ಅವರ ಮನೆಗೆ ಕಳುಹಿಸುತ್ತಿದ್ದರು. ಇದಲ್ಲದೆ ಆ ಮಕ್ಕಳನ್ನು ಓದಿನ ಖರ್ಚನ್ನು ನಿಭಾಯಿಸಿ, ಇಬ್ಬರ ಮದುವೆಗೆ ಹೆಣ್ಣುಗಳನ್ನು ನೋಡಿ ಮದುವೆ ಮಾಡಿದರು. ಇನ್ನೊಬ್ಬ ಕಿರಿಯ ಮಗ ಮುರುಘಾಮಠದಲ್ಲಿ ಸ್ವಾಮಿಯಾಗಿದ್ದಾರೆಂದು ಕ್ಷೇತ್ರಕಾರ್ಯದಲ್ಲಿ ತಿಳಿದುಕೊಳ್ಳಲಾಯಿತು.

ಪ್ರತಿವರ್ಷ ಆನಗೋಡು ನಂಜುಂಡಪ್ಪನವರು ಲಯನ್ಸ್ ಕ್ಲಬ್ ವತಿಯಿಂದ ಡಾ. ಎಂ.ಸಿ. ಮೋದಿಯವರು ಉಚಿತ ಕಣ್ಣು ಪರೀಕ್ಷೆ ಮತ್ತು ಆಪರೇಷನ್ ಕ್ಯಾಂಪನ್ನು ಆನಗೋಡಿನಲ್ಲಿ ಆಯೋಜಿಸುತ್ತಿದ್ದರು. ಈ ಕ್ಯಾಂಪಿಗೆ ಬರುವ ರೋಗಿಗಳಿಗೆ ಉಚಿತವಾಗಿ ಹಾಲು, ಹಣ್ಣು, ಊಟವನ್ನು ನೀಡುತ್ತಿದ್ದರು. ಈ ಕ್ಯಾಂಪಿಗೆ ಮಾಗನೂರು ಬಸಪ್ಪನವರು ಹಣ, ಅಕ್ಕಿ, ಮತ್ತು ಹಣ್ಣನ್ನು ದಾನವಾಗಿ ನೀಡುತ್ತಿದ್ದರು. ಇವರು ಹಣವನ್ನು ನೀಡುವಾಗ ರಸೀದಿ ಪುಸ್ತಕ ತಂದಿರುವೆಯಾ? ಲೆಕ್ಕವನ್ನು ಸರಿಯಾಗಿ ಇಡಬೇಕು ಎಂದು ಸಲಹೆಯನ್ನು ನೀಡುತ್ತಿದ್ದರು. ಪ್ರತಿವರ್ಷ ಕ್ಯಾಂಪಿಗೆ ಇವುಗಳನ್ನು ಉದಾರವಾಗಿ ನೀಡುತ್ತಿದ್ದರೆಂದು ನಂಜುಂಡಪ್ಪನವರು ತಿಳಿಸುತ್ತಾರೆ. ಇದಲ್ಲದೆ ಆನಗೋಡಿನಲ್ಲಿ ಪ್ರತಿವರ್ಷ ಎನ್.ಸಿ.ಸಿ. ಕ್ಯಾಂಪ್ ಹಾಕು ತ್ತಿದ್ದರು. ಈ ಕ್ಯಾಂಪಿನಲ್ಲಿಯೂ ಬಸಪ್ಪನವರು ಅತಿಥಿಗಳಾಗಿ ಭಾಗವಹಿಸುತ್ತಿದ್ದರು. ಈ ಕಾರ್ಯಕ್ರಮದಲ್ಲಿ ದೇಶಭಕ್ತಿ ಮೂಡಿಸಿಕೊಳ್ಳುವಂತೆ ಮತ್ತು ನಿಸ್ವಾರ್ಥಿಗಳಾಗಿ ಬದುಕುವಂತೆ ಎನ್.ಸಿ.ಸಿ. ವಿದ್ಯಾರ್ಥಿಗಳಿಗೆ ಕರೆ ನೀಡುತ್ತಿದ್ದರು.

ಮಾಗನೂರು ಬಸಪ್ಪನವರು ಬೆಂಗಳೂರಿನಲ್ಲಿ ತೋಟದಪ್ಪ ಛತ್ರಕ್ಕೆ ಪ್ರತಿವರ್ಷ ಹಣವನ್ನು ದೇಣಿಗೆಯಾಗಿ ನೀಡುತ್ತಿದ್ದರು. ಈ ಛತ್ರದಲ್ಲಿ ವಿದ್ಯಾರ್ಥಿಗಳಿಗಾಗಿ ಉಚಿತ ಊಟ ಮತ್ತು ವಸತಿಯನ್ನು ನೀಡುತ್ತಿದ್ದರು. ಆನಗೋಡಿನ ಮರುಳಸಿದ್ದೇಶ್ವರ ದೇವಸ್ಥಾನಕ್ಕೆ ಕಾಣಿಕೆ ಹುಂಡಿಯನ್ನು ನೀಡುವಂತೆ, ಧರ್ಮದರ್ಶಿಗಳಾಗಿದ್ದ ನಂಜುಂಡಪ್ಪನವರು ಕೇಳಿಕೊಂಡಾಗ ಸಂತೋಷದಿಂದ ತಮ್ಮ ಧರ್ಮಪತ್ನಿ ಸರ್ವಮಂಗಳಮ್ಮನವರ ಹೆಸರಿನಲ್ಲಿ ೧೭ ಸಾವಿರ ರೂಪಾಯಿಯ ಟ್ರಜುರಿಯನ್ನು ಕಾಣಿಕೆಯಾಗಿ ದೇವಸ್ಥಾನಕ್ಕೆ ನೀಡಿದರು.

ಮಾಗನೂರು ಬಸಪ್ಪನವರ ಮನೆಗೆ ಮಾಗನೂರು ಗ್ರಾಮದ ಜನರು ಗ್ರಾಮದ ಅಭಿವೃದ್ಧಿಗೆ ಹಣಕೇಳಲು ಆಗಮಿಸಿದ್ದರು. ಆಗ ಬಸಪ್ಪನವರು ಸಂಗಮೇಶಗೌಡ ಬಂದ

ಮೇಲೆ ಕೇಳಿಕೊಡುವುದಾಗಿ ತಿಳಿಸಿದರು. ಆಗ ಬಸಪ್ಪನವರ ಧರ್ಮಪತ್ನಿ ಸರ್ವಮಂಗಳಮ್ಮನವರು ಬಂದು ನಿಮ್ಮೂರಿನ ಒಳ್ಳೆಯ ಕೆಲಸಕ್ಕೆ ಯಾರನ್ನ ಏಕೆ ಕೇಳಬೇಕು ಎಂದು ಹೇಳಿ ಬಸಪ್ಪನವರಿಂದ ಹಣವನ್ನು ಕೊಡಿಸಿದರೆಂದು ಗ್ರಾಮದ ಜನರು ಹೆಮ್ಮೆಯಿಂದ ತಿಳಿಸುತ್ತಾರೆ. ಇದರಿಂದ ಬಸಪ್ಪನವರ ಧರ್ಮಪತ್ನಿ ಸರ್ವಮಂಗಳಮ್ಮನವರೂ ಸಹ ಒಳ್ಳೆಯ ಕೆಲಸಗಳಿಗೆ ಪ್ರೋತ್ಸಾಹ ನೀಡುತ್ತಿದ್ದರೆಂದು ತಿಳಿಯಬಹುದಾಗಿದೆ.

ಡಾ. ಪಂಚಾಕ್ಷರಪ್ಪನವರು ಬಸಪ್ಪನವರ ಕುಟುಂಬದ ಸ್ನೇಹಿತರಾಗಿದ್ದರು. ಇವರು ತರಳಬಾಳು ಬಡಾವಣೆಯಲ್ಲಿ ಹೊಸ ಮನೆ ಕಟ್ಟಿಸಿದ್ದರು. ಒಮ್ಮೆ ವಾಕಿಂಗ್ ಹೋಗುವಾಗ, ಜೊತೆಗಿದ್ದ ಡಾಕ್ಟರನ್ನು ಹೊಸ ಮನೆ ಕಟ್ಟಿಕೊಂಡು ಆರಾಮವಾಗಿದ್ದೀಯಾ ಎಂದು ತಮಾಷೆ ಮಾಡಿದರಂತೆ ಆಗ ಪಂಚಾಕ್ಷರಪ್ಪನವರ ಸ್ನೇಹಿತರು ಹೇಗೆ ಆರಾಮಾಗಿರಲು ಸಾಧ್ಯ? ಎಂದು ಪ್ರಶ್ನಾರ್ಥಕವಾಗಿ ಮಾತಾಡಿದರಂತೆ, ಆಗ ಬಸಪ್ಪನವರು ಏನು ಎಂದು ವಿಚಾರಿಸಿದಾಗ ಮನೆ ಕಟ್ಟಲು ಡಾಕ್ಟರು ೪ ರೂಪಾಯಿ ಬಡ್ಡಿಯಂತೆ ಮಾರ್ವಾಡಿಯಿಂದ ಹಣ ತಂದಿದ್ದಾರೆ. ಈಗ ಬಡ್ಡಿ ಏರುತ್ತಾ ಹೋಗಿ ಸಾಲ ಹೆಚ್ಚಾಗಿದೆ. ಹಾಗಾಗಿ ಹೊಸ ಮನೆಯಲ್ಲಿ ನೆಮ್ಮದಿ ಇಲ್ಲದಾಗಿದೆ ಎಂದಾಗ ಬಸಪ್ಪನವರು ಬಾಪೂಜಿ ಬ್ಯಾಂಕಿನಲ್ಲಿ ತಾವೇ ಶೂರಿಟಿ ನೀಡಿ ಸಾಲ ಕೊಡಿಸಿ ಮಾರ್ವಾಡಿ ಸಾಲ ತೀರಿಸಿದ್ದಾಗಿ ಡಾ॥ ಪಂಚಾಕ್ಷರಪ್ಪನವರು ತಿಳಿಸಿದರು.

ಇವರು ನಗರಸಭಾ ಸದಸ್ಯರಾಗಿದ್ದಾಗ ಈಗಿನ ಕಾರ್ಪೋರೇಷನ್ ಕಟ್ಟಡವನ್ನು ಕಟ್ಟಿಸಲಾಯಿತು. ಇದರಿಂದಾಗಿ ಸಂತೆ ಮೈದಾನ (ಹೊಂಡದ ರೋಡ್), ಆನೆಕೊಂಡ, ಬಸವನಕೆರೆ (ಎ.ಪಿ.ಎಂ.ಸಿ. ಹತ್ತಿರ), ನಟ್ಟುವಳ್ಳಿ ಕೆರೆಗಳನ್ನು ಹೊಡೆದು ಸ್ವಚ್ಛಗೊಳಿಸಿ ಅವುಗಳನ್ನು ನಿವೇಶನಗಳನ್ನಾಗಿ ಮಾಡಿ ಕಡಿಮೆ ಹಣಕ್ಕೆ ಹಂಚಲಾಯಿತು. ಅನೇಕ ಜನ ಬಡವರು ಕಾರ್ಮಿಕರು, ದಾವಣಗೆರೆ ನಗರದಲ್ಲಿ ನಿವೇಶನ ಹೊಂದಿ ತಮ್ಮದೇ ಮನೆಗಳನ್ನು ಹೊಂದಲು ಅವಕಾಶವಾಯಿತು. ಇದಲ್ಲದೆ ದಾವಣಗೆರೆ ನಗರವು ಇನ್ನಷ್ಟು ವಿಸ್ತರಣೆಹೊಂದಿತು. ಇವರ ಅಂಗಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಗುಮಾಸ್ತರುಗಳು, ಹಮಾಲರಿಗೆ ತಾವೇ ಹಣ ನೀಡಿ ನಿವೇಶನ ಪಡೆಯಲು ಅನುಕೂಲ ಮಾಡಿಕೊಟ್ಟರು.

ಮಾಗನೂರು ಬಸಪ್ಪನವರು ವ್ಯಾಪಾರ ಮತ್ತು ಜೀವನದಲ್ಲಿ ಪ್ರಾಮಾಣಿಕತೆಯನ್ನು ಹೊಂದಿದ್ದರು. ರೈತರುಗಳು ತಮ್ಮ ತಮ್ಮ ಸರಕುಗಳ ತೂಕವನ್ನು ನೋಡದೆ ಬಸಪ್ಪನವರ ಅಂಗಡಿಗೆ ಬಿಡುತ್ತಿದ್ದರು. ಕೆಲವು ದಿನಗಳ ನಂತರ ಮಾರಾಟ ಮಾಡಿ ಅವರ ಹಣವನ್ನು ತಲುಪಿಸುತ್ತಿದ್ದರು. ಆನೆಕೊಂಡದ ಸಿದ್ದಬಸಪ್ಪ ಮತ್ತು ಸಿರಿಗೆರೆ ಬೃಹನ್ಮಠದ ನಿವೃತ್ತ ಆಡಳಿತಾಧಿಕಾರಿಗಳಾದ ನಿಜಲಿಂಗಪ್ಪನವರು ಮಾಗನೂರು ಬಸಪ್ಪನವರ ಅಂಗಡಿಗೆ ಬೆಲ್ಲವನ್ನು ಉತ್ಪಾದಿಸಿ, ತಮ್ಮ ಕೆಲಸಗಾರರ ಮೂಲಕ ಬೆಲ್ಲವನ್ನು ಕಳುಹಿಸುತ್ತಿದ್ದರು. ಬೆಲ್ಲ ತಲುಪಿದಾಗ ಮತ್ತು ಮಾರಾಟವಾದ ಮೇಲೆ ಮಾಲಿಕರಿಗೆ ಪತ್ರ ಬರೆದು ಹಣ ಒಯ್ಯುವಂತೆ ತಿಳಿಸುತ್ತಿದ್ದರು.

ಸರಕನ್ನು ಅಂಗಡಿಗೆ ಬಿಟ್ಟು ಆ ಹಣವನ್ನು ಎಷ್ಟೋ ಜನರು ಒಯ್ಯಲು ಬರದೇ ಇದ್ದಾಗ ಹಣವನ್ನು ಪ್ರಾಮಾಣಿಕವಾಗಿ ತಲುಪಿಸುವ ಕಾರ್ಯವನ್ನು ಮಾಗನೂರು ಬಸಪ್ಪನವರು ಮಾಡಿದ್ದಾರೆ. ಗುಬ್ಬಿ ತಾಲ್ಲೂಕು ಹೆಸರಳ್ಳಿ ಲಿಂಗಪ್ಪ ಎಂಬುವರು ಬಸಪ್ಪನವರ ಅಂಗಡಿಯಲ್ಲಿ ಧಾನ್ಯವನ್ನು ಮಾರಾಟಕ್ಕೆ ಬಿಟ್ಟಿದ್ದರು. ಲಿಂಗಪ್ಪನು ಹಣವನ್ನು ಪಡೆಯಲು ಯಾರನ್ನಾದರೂ ಕಳಿಸುತ್ತೇನೆಂದು ತಿಳಿಸಿದ್ದರು. ಅಷ್ಟರಲ್ಲಿ ಲಿಂಗಪ್ಪನು ಮರಣ ಹೊಂದಿದಾಗ ಆತನ ಮಗ ಹಣವನ್ನು ನೀಡುವಂತೆ ಕೇಳಿದಾಗ, ಆತನ ವರ್ತನೆ ಬಸಪ್ಪನವರಿಗೆ ಸರಿ ಕಾಣಲಿಲ್ಲ. ಆನಂತರ ಆ ಹುಡುಗನಿಗೆ ಏನು ಓದುತ್ತಿದ್ದೀಯ ಎಂದು ಕೇಳಿದಾಗ ಎಸ್.ಎಸ್.ಎಲ್.ಸಿ. ಎಂದು ತಿಳಿಸಿದನು. ಪಾಸು/ಫೇಲು ಎಂದು ಕೇಳಿದಾಗ ಫೇಲು ಎಂದನಂತೆ ಆಗ ಬಸಪ್ಪನವರು ಎಸ್.ಎಸ್.ಎಲ್.ಸಿ. ಪಾಸು ಮಾಡಿಕೊಂಡು ಬಾ ಆನಂತರ ಹಣವನ್ನು ನೀಡುತ್ತೇನೆಂದು ಹೇಳಿದರು. ಆನಂತರ ಬಸಪ್ಪನವರು ತಮ್ಮಲ್ಲಿದ್ದ ಲಿಂಗಪ್ಪನ ಹಣವನ್ನು ಅವರ ಮನೆಯ ಆರೋಗ್ಯ, ಶಿಕ್ಷಣ, ಮನೆಯ ಇತರೆ ಖರ್ಚುಗಳನ್ನು ತಾವೇ ನಿರ್ವಹಿಸಿದರು. ಅನಂತರ ಲಿಂಗಪ್ಪನ ಮಕ್ಕಳು ವಿದ್ಯಾವಂತರಾಗಿ ಹೆಣ್ಣುಮಕ್ಕಳು ಮದುವೆಯ ತನಕ ಅವರ ಹಣವನ್ನು ಮಿತವ್ಯಯವಾಗಿ ಖರ್ಚು ಮಾಡಿ, ಉಳಿದ ಹಣವನ್ನು ಬಡ್ಡಿ ಸಮೇತ ನೀಡಿದರು. ಎಸ್.ಎಸ್.ಎಲ್.ಸಿ. ಫೇಲಾಗಿದ್ದ ಲಿಂಗಪ್ಪನ ಮಗ ಮುಂದೆ ಬಿ.ಇ. ಮುಗಿಸಿ ಕುಕ್ಕುವಾಡ ಶುಗರ್ ಫ್ಯಾಕ್ಟರಿಯಲ್ಲಿ ಎಂಜಿನಿಯರ್ ಕೆಲಸವನ್ನು ಬಸಪ್ಪನವರೇ ಕೊಡಿಸಿದರು.

ಇದಲ್ಲದೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ತಂಬ್ರಳ್ಳಿಯ ವ್ಯಕ್ತಿ, ಬೇತೂರು ರಸ್ತೆಯಲ್ಲಿನ ಹೋಟೆಲ್ ಶಂಕ್ರಪ್ಪನ ಹಣ, ಊರಿಕುಂಡೆ ಮುಪ್ಪಮ್ಮ, ಹಾವೇರಿಯ ಹೆಗಡೆ ಇನ್ನೂ ಇಂತಹ ಅನೇಕ ಜನರಿಗೆ ಅವರ ಹಣವನ್ನು ಪ್ರಾಮಾಣಿಕವಾಗಿ ತಲುಪಿಸಿದ್ದಾರೆ.

ನಾಡಿನ ಹೆಮ್ಮೆಯ ವಿದ್ಯಾಸಂಸ್ಥೆಗಳಲ್ಲೊಂದಾದ ಬಾಪೂಜಿ ವಿದ್ಯಾಸಂಸ್ಥೆಯ ಸ್ಥಾಪನೆಗೆ ಕಾರಣಕರ್ತರಲ್ಲೊಬ್ಬರು. ಈಗಿರುವ ಬಾಪೂಜಿ ವಿದ್ಯಾ ಸಂಸ್ಥೆಯ ಕಛೇರಿ, ಎ.ವಿ.ಕೆ. ಕಾಲೇಜು, ಕಾನೂನು ಕಾಲೇಜು, ಸಂಜೆ ಕಾಲೇಜು, ಮಹಿಳಾ ಹಾಸ್ಟೆಲ್‌ಗಳಿಗೆ ನಿವೇಶನ ಒದಗಿಸಿಕೊಟ್ಟಿದ್ದು

ಬಸಪ್ಪನವರಾಗಿದ್ದಾರೆ. ನಂತರ ಮೆಡಿಕಲ್ ಕಾಲೇಜು ಮತ್ತು ಹಾಸ್ಟೆಲ್‌ಗಳ ಸ್ಥಾಪನೆ ಅವುಗಳಿಗೂ ನಿವೇಶನ ಒದಗಿಸಿ ಕೊಡುವಲ್ಲಿ ಮಾಗನೂರು ಬಸಪ್ಪನವರ ವರ್ಚಸ್ಸು ಮುಖ್ಯ ಕಾರಣವಾಗಿತ್ತು.

ಈಗ ನಗರದಲ್ಲಿ ಹಲವಾರು ಶಾಖೆಗಳನ್ನು ಹೊಂದಿರುವ ಬಾಪೂಜಿ ಸಹಕಾರಿ ಬ್ಯಾಂಕು, ಶಿವ ಸಹಕಾರಿ ಬ್ಯಾಂಕು, ವರ್ತಕರ ಸಂಘ, ಛೇಂಬರ್ ಆಫ್ ಕಾಮರ್ಸ್, ನಗರದ ಆರ್ಥಿಕ ಬೆಳವಣಿಗೆಯಲ್ಲಿ ಅದ್ಭುತ ಕಾಣಿಕೆ ನೀಡಿವೆ. ಇವೆಲ್ಲಾ ಮಾಗನೂರು ಬಸಪ್ಪನವರ ದೂರದೃಷ್ಟಿಯ ಫಲ. ನಗರ ಮತ್ತು ಗ್ರಾಮೀಣ ಜನರನ್ನು ಹತ್ತಿರ ತರುವಲ್ಲಿ ಈ ಸಂಸ್ಥೆಗಳು ಗಣನೀಯ ಪಾತ್ರ ವಹಿಸಿವೆ.

ಮಾಗನೂರು ಬಸಪ್ಪನವರು ತಮ್ಮ ಹಿತೈಷಿಗಳಿಗೆ, ಸ್ನೇಹಿತರಿಗೆ, ವ್ಯಾಪಾರಿಗಳಿಗೆ ತಮ್ಮ ತಮ್ಮ ಕೆಲಸಗಳ ಜೊತೆಗೆ ಸಾಮಾಜಿಕ ಕಾರ್ಯಗಳನ್ನು ಪ್ರಾಮಾಣಿಕತೆಯಿಂದ ಮಾಡಬೇಕು ಎಂದು ಹೇಳುತ್ತಿದ್ದರು. ಇವರ ಪ್ರಾಮಾಣಿಕತೆ, ಶ್ರದ್ಧೆ ಎಲ್ಲಾ ಸಮಾಜಗಳ ಮೇಲೆ ಹೊಂದಿದ್ದ ಅನುಕಂಪದಿಂದಾಗಿ ಮಾಗನೂರು ಬಸಪ್ಪನವರು ಮರಣ ಹೊಂದಿದಾಗ ಎಲ್ಲಾ ಹಿಂದುಳಿದ ವರ್ಗಗಳು ದಾವಣಗೆರೆಯಲ್ಲಿ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಕೈಗೊಂಡರು. ಇದರಿಂದ ಹಿಂದುಳಿದ ವರ್ಗದವರ ಪ್ರೀತಿಗೂ ಪಾತ್ರರಾಗಿದ್ದಾರೆಂದು ತಿಳಿಯಬಹುದಾಗಿದೆ.

ಆಧಾರಸೂಚಿ

೧. ಈಶ್ವರಪ್ಪ ಎಂ.ಜಿ. (ಸಂ) ಶತಮಾನದ ದಾವಣಗೆರೆ, ಚಂಪಲಾಲ್ ಬಿ. ಡೆಲೆರಿಯಾ ದಾವಣಗೆರೆ, ೨೦೧೧.

೨. ಮಾಗನೂರು ಬಸಪ್ಪನವರ ಆತ್ಮಚರಿತ್ರೆ, ತರಳಬಾಳು ಬೃಹನ್ಮಠ, ಸಿರಿಗೆರೆ, ಮೊದಲ ಮುದ್ರಣ ೧೯೫, ಆರನೇ ಮುದ್ರಣ ೨೦೧೧.

೩. ಕಡ್ಲೆಬಾಳು ಬಸವರಾಜಪ್ಪ, ಜಾದವ್ ಮೆಡಿಕಲ್ಸ್, ಎಂಸಿಸಿ 'ಬಿ' ಬ್ಲಾಕ್ ಗುಂಡಿಮಹದೇವಪ್ಪ ಕಲ್ಯಾಣಮಂಟಪ ಪಕ್ಕ, ದಾವಣಗೆರೆ.

೪. ಚಂದ್ರಶೇಖರ, ಮಾಗನೂರು ಬಸಪ್ಪನವರ ಕಿರಿಯ ಮಗ, ದಾವಣಗೆರೆ.

೫. ಚನ್ನಪ್ಪ ಕೆ.ಜಿ, ಬಸಪ್ಪನವರ ಅಂಗಡಿಯ ಗುಮಾಸ್ತರು, ಬಿ. ಕಲಪನಹಳ್ಳಿ, ದಾವಣಗೆರೆ ತಾಲ್ಲೂಕು.

೬. ನಜಲಿಂಗಪ್ಪನವರು, ವಿಶ್ರಾಂತ ಆಡಳಿತಾಧಿಕಾರಿಗಳು, ಬೃಹನ್ಮಠ, ಸಿರಿಗೆರೆ.

೭. ಜಯದೇವಯ್ಯ, ಮುಖ್ಯಗುಮಾಸ್ತರು, ಮಾಗನೂರು ಬಸಪ್ಪನವರ ಅಂಗಡಿ, ದಾವಣಗೆರೆ.

೮. ಬೇತೂರು ಸಿದ್ಧಬಸಪ್ಪ, ಆನೇಕೊಂಡ, ದಾವಣಗೆರೆ.

೯. ಸಂಗಮೇಶಗೌಡ, ಮಾಗನೂರು ಬಸಪ್ಪನವರ ನಾಲ್ಕನೇ ಮಗ, ದಾವಣಗೆರೆ.

೧೦. ಸೋಮಶೇಖರಗೌಡ, ಮಾಗನೂರು ಬಸಪ್ಪನವರ ಕಿರಿಯ ಮಗ, ದಾವಣಗೆರೆ.

ಬೆಂಗಳೂರು ನಗರದ ವಿಶ್ವೇಶ್ವರಪುರದ ಮರಾಠಾ ಗಣ್ಯರು

ಡಾ. ಬೆಂ.ಶಾ. ಶ್ಯಾಮಲಾ ರತ್ನಕುಮಾರಿ*

ಬೆಂಗಳೂರು ನಗರದ ಪ್ರತಿಷ್ಠಿತ ಪ್ರದೇಶಗಳಲ್ಲಿ ವಿಶ್ವೇಶ್ವರಪುರಂ ಒಂದೆಂದು ಪರಿಗಣಿಸಲ್ಪಟ್ಟಿದೆ. ಬೆಂಗಳೂರು ಸಿಟಿ ಮತ್ತು ಬಸವನಗುಡಿ ವಿಭಾಗಗಳ ನಡುವಣ ಪ್ರದೇಶವೇ ವಿಶ್ವೇಶ್ವರಪುರಂ. ಕ್ರಿ.ಶ. ೧೯೧೮ರಲ್ಲಿ ಆಧುನಿಕ ಮೈಸೂರಿನ ಶಿಲ್ಪಿ ದಿವಾನರು ಭಾರತರತ್ನ ಮೋಕ್ಷಗುಂಡಂ ಸರ್.ಎಂ. ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ವಿಶ್ವೇಶ್ವರಪುರಂ ಬಡಾವಣೆಯು ರೂಪುಗೊಂಡಿತು. ಮೈಸೂರು ಸರ್ಕಾರವು ಇಲ್ಲಿನ ಭೂಮಿಯನ್ನು ಹರಾಜ್ ಮೂಲಕ ಮಾರಿದಾಗ ಕೊಂಡು ಮರಾಠರು ಈ ಪ್ರದೇಶದಲ್ಲಿ ನೆಲೆಗೊಂಡರು.

ರಜಪೂತ ಮೂಲದ್ದು ಭೌನ್ಸ್ಲೆ ಮನೆತನ. ರಾಜಾಸ್ಥಾನದ ಮಾರವಾಡದಿಂದ ಮುಸ್ಲಿಂ ಧಾಳಿಯಿಂದ ಪಾರಾಗಲು ಬೋಸವತ (ಭೋಜ) ಭೂಸಾಜಿಯ ವಂಶದವರೇ ಭೋಸಲೆ ಅಥವಾ ಭೋನ್ಸ್ಲೆ ಎಂಬ ಹೆಸರಿನಿಂದ ಮಹಾರಾಷ್ಟ್ರಕ್ಕೆ ಬಂದು ಮರಾಠರೆನಿಸಿದರು. ಭೋಸವತ್ ಅಥವಾ ಭಸಾವತ್ ಮನೆತನ ಸೂರ್ಯ ವಂಶೀಯರು. ಚರಿತ್ರಾರ್ಹ ರಾಣಾ ಪ್ರತಾಪನ ವಂಶಜರು ಭೋನ್ಸ್ಲೆ ಮನೆತನ. ಈ ಮನೆತನದ ಮಾಲೋಜಿ ಭೋನ್ಸ್ಲೆ ೧೫೭೭ರಲ್ಲಿ ಮಹಾರಾಷ್ಟ್ರದ ಅಹಮದನಗರದಲ್ಲಿ ಆಳ್ವಿಕೆ ನಡೆಸುತ್ತಿದ್ದ ಮುರ್ತಜಾ ನಿಜಾಮ್ ಶಹನ ಸೇನೆಯಲ್ಲಿ ಬಿಲೇದಾರನಾದನು ಮನ್ಸಬದಾರನಾದನು. ಕ್ರಿ.ಶ. ೧೬೦೦ ರಲ್ಲಿ ಈ ಮಾಲೋಜಿಗೆ ಅವನ ಪತ್ನಿ ದೀಪಾಬಾಯಿಗೆ ಜನಿಸಿದ ಹಿರಿಯ ಪುತ್ರನೇ ಷಹಜಿ ಭೋನ್ಸ್ಲೆ. ಸೂಫಿ ಸಂತ ಷಹ ಷರೀಫ್‌ನ ಆಶೀರ್ವಾದದಿಂದ ಹುಟ್ಟಿದ್ದರಿಂದ ಷಹಜಿ ಎಂಬ ಹೆಸರು ಬಂದಿತು. ಷಹಜಿ ೧೬೨೬ ರಲ್ಲಿ ಬಿಜಾಪುರದ ಮಹಮ್ಮದ್ ಆದಿಲ್ ಶಹನ ಸೇವೆಯಲ್ಲಿ ಸೇರಿದನು. ಷಹಜಿ ಎರಡನೆಯ ಕೆಂಪೇಗೌಡನನ್ನು ಸೋಲಿಸಿ ಬೆಂಗಳೂರನ್ನು ಬಿಜಾಪುರದ ಅಧೀನತೆಗೊಳಪಡಿಸಿದ. ಷಹಜಿಗೆ ವೀರಮಾನ್ಯವಾಗಿ ಬೆಂಗಳೂರನ್ನು ಜಹಗೀರಿಯಾಗಿ ೧೬೩೭ರಲ್ಲಿ ನೀಡಿದನು. ಆದಿಲ್ ಷಾ. ಷಹಜಿ ತನ್ನ ಜಹಂಗೀರನ್ನು ಪಾಲಿಸಲು ಬೆಂಗಳೂರಿಗೆ ಬಂದು ೨೫ ವರ್ಷಗಳ ಕಾಲ ಇಲ್ಲಿ ಆಳ್ವಿಕೆ ನಡೆಸಿದನು. ಷಹಜಿಯ ಅರಮನೆಯು ಬಸವನಗುಡಿಯಲ್ಲಿ ಇದ್ದಿತೆಂದು 'ಶಿವ ದಿಗ್ವಿಜಯ' ಗ್ರಂಥದಲ್ಲಿ ಉಲ್ಲೇಖವಿದೆ. ಕ್ರಿ.ಶ. ೧೬೩೭ ರಿಂದ ೬೪ರ ವರೆಗೆ ಷಹಜಿ, ೬೪ ರಿಂದ ೭೭ ಸಂಬಾಜಿ ಮತ್ತು ಏಕೋಜಿ, ೭೭ ರಿಂದ ೮೦ರವರೆಗೆ ಶಿವಾಜಿ ೮೦-೮೫ ರ ವರೆಗೆ ಶಿವಾಜಿಯ ಮಗ ಸಾಂಬಾಜಿ ೮೨-೮೯ ಸಾಂಬಾಜಿಯ ಭಾವ ಹರಜೀ ರಾಜೇ ಮಹಾಡಿಕ್ ಬೆಂಗಳೂರಿನಲ್ಲಿ ಆಳ್ವಿಕೆ ನಡೆಸಿದರು. ಪುನಃ ೧೮ನೇ ಶತಮಾನದ ಉತ್ತರಾರ್ಧದಲ್ಲಿ ಹೈದರಾಲಿ ಮತ್ತು ಟಿಪ್ಪು ಮೈಸೂರಿನ ರಾಜ್ಯಸೂತ್ರಗಳನ್ನು ಹಿಡಿದಾಗ ಅವರ ಆಡಳಿತದಲ್ಲಿ ಅಧಿಕಾರಿಗಳಾಗಿ ಬಹುಮಂದಿ ಮರಾಠರು ನೇಮಕಗೊಂಡರು. ಈ ನಿಟ್ಟಿನಲ್ಲಿ ಸಾಧನೆಗೈದ ಕೆಲವು ಮರಾಠ ಕುಟುಂಬಗಳು ವಿಶ್ವೇಶ್ವರಪುರದಲ್ಲಿ ನೆಲೆಸಿದ್ದುವು. ಅಂತಹ ಸಾಧಕರ ಬಗ್ಗೆ ಈ ಲೇಖನ.

ಮುತ್ತೋಜಿರಾವ್ ಸಿಂಧ್ಯಾ (ಶಿಂಧ್ಯೆ)

ಮುತ್ತೋಜಿರಾವ್ ಸಿಂಧ್ಯಾ ಅವರ ಪೂರ್ವಜರು ಮಹಾರಾಷ್ಟ್ರದ ಕೊಲ್ಲಾಪುರ ದವರು. ೧೮೬೪ರಲ್ಲಿ ಮುತ್ತೋಜಿರಾವ್ ಸಿಂಧ್ಯಾ ತಮ್ಮ ಪತ್ನಿ ಸಕ್ಕೂಬಾಯಿಯವರೊಂದಿಗೆ ಬೆಂಗಳೂರಿಗೆ ಬಂದರು. ಬೆಂಗಳೂರಿನ ಮನೆವಾರ್ತೆ ಪೇಟೆಯಲ್ಲಿ ಬಂಗಲೆಯನ್ನು ಕಟ್ಟಿಕೊಂಡು ವಾಸವಾಗಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರು ಮೈಸೂರಿನ ಮಹಾರಾಜರಾಗಿದ್ದರು. ಲಾರ್ಡ್‌ಲೂಯಿ ಬೆಂಥಾಮ್ ಬೌರಿಂಗ್ ಮೈಸೂರಿನ ಚೀಫ್ ಕಮೀಷನರಾಗಿದ್ದರು. ೧೮೬೫ರಲ್ಲಿ ಘೋರ ಕ್ಷಾಮ ಉಂಟಾಯಿತು. ಆ ಸಂದರ್ಭದಲ್ಲಿ ಬೆಂಗಳೂರಲ್ಲಿ ಮಂಡಿಯನ್ನಿಟ್ಟು ದವಸ ಧಾನ್ಯಗಳ ಸಗಟು ವ್ಯಾಪಾರವನ್ನು ಕೈಗೊಂಡರು. ೧೮೬೮ ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಮೃತರಾದರು. ಬ್ರಿಟಿಷ್ ಕಮೀಷನರರು ಆಡಳಿತದಲ್ಲಿ ಗಮನಾರ್ಹ ಪ್ರಗತಿಪರ ಕಾರ್ಯಗಳನ್ನು ಕೈಗೊಂಡರು. ಬೊಂಬು ಬಜಾರಿನಲ್ಲಿ ಟಿಂಬರ್ ಮರ್ಚೆಂಟ್ ಆಗಿ ಚೌಬೀನೆ ವ್ಯಾಪಾರವನ್ನು ೧೮೯೯ ರಲ್ಲಿ ಮುತ್ತೋಜಿರಾವ್ ಸಿಂಧ್ಯಾರವರು ಪ್ರಾರಂಭಿಸಿ ಈ ವ್ಯಾಪಾರದಲ್ಲಿ ಮೊದಲಿಗರಾದರು. ಸಿಂಧ್ಯಾರವರು ಪ್ರಾರಂಭಿಸಿದ ಚೌಬೀನೆ ವ್ಯಾಪಾರದ ಮಳಿಗೆಯು 'ಭವಾನಿ

* ೨೭(೬), 'ವಿಶಾಲಾಕ್ಷ ಕೃಪ', ೨ನೇ ಬ್ಲಾಕ್, ೨ನೇ ಮುಖ್ಯರಸ್ತೆ, ಪರಮಹಂಸ ರಸ್ತೆ, ತ್ಯಾಗರಾಜನಗರ, ಬೆಂಗಳೂರು-೫೬೦೦೨೮.

ಸಾಮಿಲ್ಸ್' ಹೆಸರಿನಲ್ಲಿ ಪ್ರಸ್ತುತ ಇರುವ ಸೂಪರ್ ಥಿಯೇಟರಿನ ವಿಶಾಲವಾದ ಪ್ರದೇಶದಲ್ಲಿದ್ದಿತು. ಇವರು ಬೆಂಗಳೂರು ನಗರದ ದೊಡ್ಡ ಸಿವಿಲ್ ಕಾಂಟ್ರಾಕ್ಟರ್ ಸಹ ಆಗಿದ್ದರು. ೧೯೦೯ ರಲ್ಲಿ ಮುತ್ತೋಜಿರಾವ್ ಸಿಂಧ್ಯಾರವರ ಸೋದರ ಮುಕುಂದ ರಾವ್ ಸಿಂಧ್ಯಾರವರ ಮನೆಯಲ್ಲಿ (ಬಸವನಗುಡಿಯ ಬೆಣ್ಣೆ ಗೋವಿಂದಪ್ಪನ ರಸ್ತೆಯಲ್ಲಿದ್ದಿತು) ಸಿಲ್ವರ್ ವೆಂಕಟರಾವ್ ಭೋಜಗಡೆಯವರು ಮೈಸೂರು ಸಂಸ್ಥಾನದಲ್ಲಿದ್ದ ಮರಾಠಾ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಿದರು. ಆ ವಿದ್ಯಾರ್ಥಿ ನಿಲಯವು ಇಂದು ದೊಡ್ಡ ಬಸವಣ್ಣನ ದೇವಾಲಯದ ರಸ್ತೆಯಲ್ಲಿದೆ. ಬಹಳ ವರ್ಷಗಳ ಕಾಲ ಮುತ್ತೋಜಿರಾವ್ ಸಿಂಧ್ಯಾ ಈ ಮರಾಠಾ ವಿದ್ಯಾರ್ಥಿ ನಿಲಯದ ಕಾರ್ಯದರ್ಶಿಗಳಾಗಿ ದುಡಿದರು. ಮುತ್ತೋಜಿ ರಾವ್ ಸಿಂಧ್ಯಾ ಆ ಕಾಲಕ್ಕೆ ಹೆಸರಾಂತ ಕಟ್ಟಡ ನಿರ್ಮಾಪಕರಾಗಿದ್ದರು. ದಿವಾನ್ ಕೆ. ಶೇಷಾದ್ರಿ ಅಯ್ಯರ್ ಅವರ ಕಾಲದಲ್ಲಿ ೧೮೮೭ ರಲ್ಲಿ ಬ್ರಿಟಿಷ್ ಮಹಾರಾಣಿ ವಿಕ್ಟೋರಿಯಾ ಆಸ್ಪತ್ರೆಯ ನಿರ್ಮಾಣದ ಗುತ್ತಿಗೆದಾರರಾಗಿದ್ದರು. (Building Contractor) ಕರ್ನಲ್ ಸಿ. ಬೋವೆನ್ (Bowen) ಆರ್.ಇ. ಚೀಫ್ ಎಂಜಿನಿಯರ್, ಮೆಚ್ಯುಹಿಮ್ (Mechuehin), ಕರ್ನಲ್ ಡಿ ಮಾಕ್ಸೈಲ್ ಕ್ಯಾಂಪ್‌ಬೆಲ್, ಜೆ.ಎಂ. ವ್ಹಿಟ್ಲೆ (Whitly) ವಿಕ್ಟೋರಿಯಾ ಆಸ್ಪತ್ರೆ ಕಟ್ಟಡದ ಎಂಜಿನಿಯರುಗಳಾಗಿದ್ದರು. ಈ ಎಲ್ಲಾ ಬ್ರಿಟಿಷ್ ಕಟ್ಟಡದ ನಿರ್ಮಾಪಕರ ಮಧ್ಯೆ ಇದ್ದ ಒಬ್ಬರೇ ಭಾರತೀಯ ಕಟ್ಟಡ ನಿರ್ಮಾಪಕರೆಂದರೆ ಮುತ್ತೋಜಿ ರಾವ್ ಸಿಂಧ್ಯಾರವರು. ಮುತ್ತೋಜಿರಾವ್ ಸಿಂಧ್ಯಾ ಸಕ್ಕೂಬಾಯಿ ದಂಪತಿಗಳಿಗೆ ರಾಮಚಂದ್ರರಾವ್ ಸಿಂಧ್ಯಾ ಎಂಬ ನಾಲ್ಕು ಜನ ಗಂಡುಮಕ್ಕಳು ಹಾಗೂ ರಾಧಾಬಾಯಿ ಎಂಬ ಮಗಳೂ ಇದ್ದರು.

ಕೃಷ್ಣರಾವ್ ಸಿಂಧ್ಯಾ ಮೈಸೂರು ರಸ್ತೆಯಲ್ಲಿ ತಮ್ಮ ತಂದೆಯ ಹೆಸರಿನಲ್ಲಿ ಪಶುವೈದ್ಯ ಶಾಲೆಯನ್ನು ಕಟ್ಟಿಸಿದರು. ಈ ಆಸ್ಪತ್ರೆಯಲ್ಲಿ ಪ್ರಧಾನವಾಗಿ ಕುದುರೆಗಳಿಗೂ ಪಶುಗಳಿಗೂ ಉಚಿತವಾಗಿ ಚಿಕಿತ್ಸೆಯನ್ನು ನೀಡಲಾಗುತ್ತಿದ್ದಿತು. ಪ್ರಾಯಶಃ ಬೆಂಗಳೂರಿನಲ್ಲಿಯೇ ಇದು ಮೊಟ್ಟಮೊದಲ ಪಶುವೈದ್ಯಶಾಲೆಯಾಗಿದ್ದಿತು.

ಮುತ್ತೋಜಿರಾವ್ ಸಿಂಧ್ಯೆಯವರ ಮಗಳಾದ ರಾಧಾಬಾಯಿಯು ತಮ್ಮ ತಂದೆ ತಮಗೆ ಬಸವಗುಡಿಯ ಬಾಂದುರವರ ಬೀದಿಯಲ್ಲಿ (ಖಣಡಿತಜಥಿಠಡಿ ಣಡಿಜಜಣ) ಕಟ್ಟಿಕೊಟ್ಟಿದ್ದ ಮನೆಯನ್ನು ಮಾರಿ ಸನ್ಯಾಸಿನಿಯಾಗಿ ಮುಕ್ತಾ ಎಂಬ ಹೆಸರನ್ನು ಹೊಂದಿ ಗವಿಪುರದಲ್ಲಿ ಗೋಸಾಯಿಮಠದ ಎದುರಿನಲ್ಲಿ 'ಮುಕ್ತಾಶ್ರಮ'ವನ್ನು ತೆರೆದರು. ರಾಧಾಬಾಯಿಯವರ ಮೈದುನ ಕೃಷ್ಣರಾವ್ ಫೋಳ್ ರೇಷ್ಮೆ ವ್ಯಾಪಾರಿಗಳಾಗಿದ್ದು ವಿದ್ಯಾರ್ಥಿನಿಯರಿಗಾಗಿ ವಿದ್ಯಾಲಯವನ್ನು ತೆರೆದರು. ಕೃಷ್ಣರಾವ್ ಫೋಳರ ಮಗಳಾದ ರುಕ್ಮಿಣಿಬಾಯಿಯವರು ಈ ಮಹಾರಾಷ್ಟ್ರ ಮಹಿಳಾ ವಿದ್ಯಾಲಯವನ್ನು ಅಭಿವೃದ್ಧಿಪಡಿಸಿದರು. ಈಗ ಈ ಶಾಲಾ ಕಟ್ಟಡವನ್ನು ಆರ್ಯವೈಶ್ಯರು ಖರೀದಿಸಿ ಅಲ್ಲಿ ತಮ್ಮದೇ ಆದ ವಾಸವಿ ವಿದ್ಯಾನಿಕೇತನ್ ಎಂಬ ಹೆಸರಿನಲ್ಲಿ ವಿದ್ಯಾಸಂಸ್ಥೆಯನ್ನು ಕಟ್ಟಿ ನಡೆಸುತ್ತಿದ್ದಾರೆ.

ಮುತ್ತೋಜಿರಾವ್ ಸಿಂಧ್ಯಾ ಅಪಾರ ಹಣ ಸಂಪಾದಿಸಿ ಆ ಸಂಪತ್ತನ್ನು ವಿದ್ಯಾರ್ಥಿನಿಲಯ, ಗೋಸಾಯಿ ಮಠ, ಆಶ್ರಮ ಹಾಗೂ ಅನಾಥಾಲಯಗಳಿಗಾಗಿ ಸದ್ವಿನಿಯೋಗಿಸಿ ಹೃದಯ ಶ್ರೀಮಂತಿಕೆಯನ್ನು ಮೆರೆದರು. ಗವಿಪುರದಲ್ಲಿದ್ದ ಗೋಸಾಯಿ ಮಠದ ಶ್ರೀ ಲವಂಗಭಾರತಿ ಸ್ವಾಮಿಗಳು ಇವರ ಆಧ್ಯಾತ್ಮಿಕ ಗುರುಗಳಾಗಿದ್ದರು.

ಮುತ್ತೋಜಿರಾವ್ ಸಿಂಧ್ಯಾ ಶ್ರೀಮಂತರೆಲ್ಲರಿಗೂ ಆದರ್ಶಪ್ರಾಯರಾಗಿ ತಮ್ಮ ಜನಾಂಗಕ್ಕೆ ಸಮಾಜಕ್ಕೆ ಕಾಯಾ ವಾಚಾ ಮನಸಾ ಸೇವೆ ಸಲ್ಲಿಸುತ್ತಾ ೧೯೧೨ರಲ್ಲಿ ಜೀವನ್ಮುಕ್ತರಾದರು.

ಶ್ರೀ ಎಂ. ರಾಮಚಂದ್ರರಾವ್ ಶಿಂಧ್ಯೆ

ಮುತ್ತೋಜಿರಾವ್ ಸಿಂಧ್ಯಾ ಸಕ್ಕೂಬಾಯಿಯವರ ಹಿರಿಯ ಮಗನಾಗಿ ೧೮೭೬ ರಲ್ಲಿ ಜನಿಸಿದರು. ಲಂಡನ್ ಮಿಷನ್ ಪ್ರೌಢಶಾಲೆಯಲ್ಲಿ ಮೆಟ್ರಿಕ್ಯುಲೇಶನ್ ವಿದ್ಯಾಭ್ಯಾಸವನ್ನು ಪಡೆದಿದ್ದರು. ವಿದ್ಯಾರ್ಥಿದೆಸೆಯಲ್ಲಿ ಕ್ರೀಡಾ ಪಟುಗಳಾಗಿದ್ದು ಫುಟ್‌ಬಾಲ್, ಟೆನ್ನಿಸ್ ಆಟಗಾರರಾಗಿದ್ದರು. ಕುದುರೆ ಸವಾರಿ ಅವರಿಗೆ ಅತ್ಯಂತ ಪ್ರಿಯ ಹವ್ಯಾಸವಾಗಿದ್ದಿತು. ಒಂದು ಕೋಚ್‌ಗಾಡಿ ಕುದುರೆ ಸಾರೋಟನ್ನು ಇಟ್ಟುಕೊಂಡಿದ್ದರು.

೧೯೧೨ರಲ್ಲಿ ತರಗುಪೇಟೆಯಲ್ಲಿ ಶ್ರೀ ರಾಮಕೃಷ್ಣ ಆಯಿಲ್‌ಮಿಲ್ ಸ್ಥಾಪನೆ ಮಾಡಿದರು. ಬಿ.ಕೆ. ಗರುಡಾಚಾರ್ ರೊಡಗೂಡಿ ಕಡಲೆಕಾಯಿ ಎಣ್ಣೆ, ಕೊಬ್ಬರಿ ಎಣ್ಣೆ ಹೊಂಗೆ ಎಣ್ಣೆ, ಸೀಗೇಕಾಯಿಪುಡಿ, ಅರಿಶಿನಪುಡಿಗಳನ್ನು ತಯಾರಿಸಿ ಕರ್ನಾಟಕದಾದ್ಯಂತ ಹಾಗೂ ಮುಂಬಯಿಗಳಲ್ಲಿ ವಿತರಣೆ ಮಾಡುತ್ತಿದ್ದರು. ಸೂಪರ್ ಥಿಯೇಟರ್‌ನ ಬಳಿ ಭವಾನಿ ಸಾ ಮಿಲ್ಸ್ ಪ್ರಾರಂಭಿಸಿದರು.

೧೯೩೩ರಲ್ಲಿ ತಮ್ಮ ಮಿತ್ರ ರಾಜಾ ಟಿ. ಮನೆಯವರೊಂದಿಗೆ ರಾಮಚಂದ್ರರಾವ್ ಸಿಂಧ್ಯಾ ಮೂರು ತಿಂಗಳುಗಳ ಕಾಲ ಯುರೋಪಿನ ಜರ್ಮನಿ, ಇಟಲಿ, ಹಾಗೂ ಆಸ್ಟ್ರೇಲಿಯಾ ದೇಶಗಳಿಗೆ ನೌಕಾಯಾನ ಮಾಡಿ ಹೋಗಿ ಬಂದರು. ಬರ್ಲಿನ್‌ಲ್ಲಿ ಸ್ಟೀಮ್ ಉಪಯೋಗಿಸಿ ಗಂಧದ ಮರದೆಣ್ಣೆ ತೆಗೆಯುವ ವಿಧಾನವನ್ನು ಕಲಿತು ಬಂದರು.

ಭಾರತದಲ್ಲಿಯೇ ಮೊಟ್ಟಮೊದಲ ಬಾರಿ ಗಂಧದ ಎಣ್ಣೆ ವ್ಯಾಪಾರ ಪ್ರಾರಂಭಿಸುವ ಮಹದಾಕಾಂಕ್ಷೆ ಇವರಿಗಿದ್ದಿತು. ಅಂದಿನ ದಿವಾನರಾಗಿದ್ದ ಸರ್ ಮಿರ್ಜಾಇಸ್ಮಾಯಿಲರು ಮೈಸೂರು ರಾಜ್ಯ ಸರ್ಕಾರಕ್ಕೆ ಗಂಧದೆಣ್ಣೆ ವ್ಯಾಪಾರವನ್ನು ಬಿಟ್ಟುಕೊಡುವಂತೆ ಸಿಂಧ್ಯಾರ ಮನವೊಲಿಸಿದರು.

೧೯೩೯-೪೦ರಲ್ಲಿ ತುಳಸೀತೋಟದ ಬಳಿ, ಬೆಂಗಳೂರಿನಲ್ಲಿ 'ಆಲ್ ಇಂಡಿಯನ್ ಛರ್ವೇ ಎಂಪೋರಿಯಂ' ಸ್ಥಾಪಿಸಿ ಸೀರೆ ವ್ಯಾಪಾರವನ್ನು ಪ್ರಾರಂಭಿಸಿದರು. ೧೯೩೯-೪೦ ರಲ್ಲಿ ದ್ವಿತೀಯ ವಿಶ್ವಯುದ್ಧದ ಸಂದರ್ಭದಲ್ಲಿ ಸಿದ್ಧಪಡಿಸಿದ ಉಡುಪುಗಳ ವ್ಯಾಪಾರವನ್ನು, ೧೯೪೦ರಲ್ಲಿ ಬಟ್ಟೆಯ ಮೇಲೆ ಪ್ರಿಂಟ್ ಮಾಡುವ ವ್ಯಾಪಾರವನ್ನು ಆರಂಭಿಸಿದರು. ಮುತ್ತೋಜಿರಾವ್ ನಡೆಸುತ್ತಿದ್ದ ತರಗುಪೇಟೆಯಲ್ಲಿನ ಮಂಡಿ ವ್ಯಾಪಾರವನ್ನು ಮುಂದುವರೆಸಿಕೊಂಡು ಬಂದರು.

ಮಾಗಡಿ ರಸ್ತೆಯಲ್ಲಿ ಇಟ್ಟಿಗೆ ಹಾಗೂ ಹೆಂಚಿನ ಕಾರ್ಖಾನೆಯನ್ನು ಪ್ರಾರಂಭಿಸಿ ಕೆಲವು ವರ್ಷಗಳ ನಂತರ ಜೈಮುನಿರಾವ್ ಅವರಿಗೆ ಬಿಟ್ಟುಕೊಟ್ಟರು.

ತುಳಸೀ ತೋಟದ ಬಳಿ 'ಗಜಲಕ್ಷ್ಮಿ ಸ್ಯಾರೀಸ್ ವೀವಿಂಗ್ ಫ್ಯಾಕ್ಟರಿಯನ್ನು ನಡೆಸುತ್ತಿದ್ದು ಕೆಲ ವರ್ಷಗಳ ನಂತರ ವಿಶ್ವೇಶ್ವರಪುರದ ಕೋಟಾ ಕಾಮಾಕ್ಷಯ್ಯ ಎಂಬ ಆರ್ಯವೈಶ್ಯ ವ್ಯಾಪಾರಿಗೆ ಮಾರಿದರು.

ಸಿವಿಲ್ ಕಾಂಟ್ರಾಕ್ಟ್, ಸರ್ಕಾರಿ ಕಾಮಗಾರಿಕೆಯನ್ನು ಮಾಡುತ್ತಿದ್ದರು. ತಿಪ್ಪೆಗಾನಹಳ್ಳಿ (ದೊಡ್ಡಬಳ್ಳಾಪುರ ತಾಲ್ಲೂಕು) ಕೆರೆ ದುರಸ್ತಿಯ ಕಂಟ್ರಾಕ್ಟರರೂ ಆಗಿ ಯಶಸ್ವಿಯಾಗಿ ಆ ಕಾರ್ಯವನ್ನು ಪೂರೈಸಿದರು.

ತಮ್ಮ ತಂದೆ ಮುತ್ತೋಜಿರಾವ್ ಸಿಂಧ್ಯಾರವರಂತೆ ರಾಮಚಂದ್ರರಾವ್ ಸಿಂಧ್ಯಾರವರೂ ಸರ್ಕಾರದಲ್ಲಿ ಸಾಮಾಜಿಕವಾಗಿ ಉನ್ನತ ಸ್ಥಾನವನ್ನು ಪಡೆದಿದ್ದರು.

ಸೆಂಟ್ರಲ್ ಕೋ ಆಪರೇಟಿವ್ ಬ್ಯಾಂಕ್, ಏಪೆಕ್ಸ್ ಬ್ಯಾಂಕ್, ಶ್ರೀ ಮಾಧ್ವ ಸಿದ್ಧಾಂತ ಬ್ಯಾಂಕುಗಳ ನಿರ್ದೇಶಕರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಗ್ರೈನ್ ಮರ್ಚೆಂಟ್ಸ್ ಬ್ಯಾಂಕಿನ ಸ್ಥಾಪಕ ನಿರ್ದೇಶಕರೂ ಆಗಿದ್ದರು. ಇವರು ಚಿಕ್ಕಬಳ್ಳಾಪುರ ರೈಲ್ವೇ ಹಾಗೂ ವಿದ್ಯುಚ್ಛಕ್ತಿ ಕಂಪೆನಿಯ ನಿರ್ದೇಶಕರಾಗಿಯೂ, ಫಿಲಂ ಸೆನ್ಸಾರ್ ಬೋರ್ಡಿನ ಚೇರ್‌ಮನ್‌ರಾಗಿಯೂ, ಟಾಟಾ ಸೈನ್ಸ್ ಬೋರ್ಡಿನ ಡೈರೆಕ್ಟರ್‌ಗಳಲ್ಲಿ ಇವರು ಒಬ್ಬರಾಗಿದ್ದರು. ಅಲ್ಲದೆ ಮೈಸೂರು ಛೇಂಬರ್ ಆಫ್ ಕಾಮರ್ಸಿನ ಸದಸ್ಯರೂ ಆಗಿದ್ದು ಕಾರ್ಯಶೀಲತೆಯ ಪ್ರತೀಕವಾಗಿದ್ದರು. ಬ್ಯಾಂಕಿಂಗ್, ಉದ್ಯಮ, ಕಂಪೆನಿಗಳೇ ಅಲ್ಲದೆ ವಿದ್ಯಾಸಂಸ್ಥೆಗಳಾದ ಎಸ್.ಎಲ್.ಎನ್. ವಿದ್ಯಾಸಂಸ್ಥೆ (ದೊಡ್ಡಣ್ಣಶೆಟ್ಟರದು), ಒಕ್ಕಲಿಗರ ಸಂಘದ ವಿದ್ಯಾಸಂಸ್ಥೆ ಹಾಗೂ ನ್ಯಾಷನಲ್ ಹೈಸ್ಕೂಲುಗಳ ಆಡಳಿತದಲ್ಲಿ ಪ್ರಮುಖರಾಗಿದ್ದು ಧನಸಹಾಯವನ್ನು ನೀಡಿ ಈ ವಿದ್ಯಾಸಂಸ್ಥೆಗಳ ಅಭಿವೃದ್ಧಿಗಾಗಿ ಶ್ರಮಿಸಿ ತಮ್ಮ ವಿದ್ಯಾಪ್ರೇಮವನ್ನು ಮೆರೆದರು. ಬಸವನಗುಡಿ ಕ್ಲಬ್ಬಿಗೂ ದೇಣಿಗೆ ನೀಡಿದ ಪೋಷಕರಾಗಿದ್ದರು. ಮಾಗಡಿ ರಸ್ತೆಯ 'ಆದಿಕರ್ನಾಟಕ ವಿದ್ಯಾಸಂಸ್ಥೆ'ಯ ವಿದ್ಯಾರ್ಥಿಗಳಿಗೆ ಎಣ್ಣೆ ಅಭ್ಯಂಜನ ಸ್ನಾನಕ್ಕಾಗಿ ತಮ್ಮ ಆಯಿಲ್‌ಮಿಲ್‌ನಿಂದ ಸೀಗೆಕಾಯಿ, ಎಣ್ಣೆ, ನೀಡುತ್ತಿದ್ದರು. ಶ್ರೀ ರಾಮಚಂದ್ರರಾವ್ ಶಿಂಧ್ಯೆಯವರು ಮೈಸೂರು ಪ್ರಜಾಪ್ರತಿನಿಧಿ ಸಭೆಯ ನಾಮಕರಣಗೊಂಡ ಸದಸ್ಯರೂ ಆಗಿದ್ದು ಗೆಜೆಟ್ಟ್ (ಸರ್ಕಾರದ ರಾಜ್ಯಪತ್ರ) ನಲ್ಲಿಯೂ ಇವರ ಹೆಸರು ನಮೂದಾಗಿದ್ದಿತು. ಎಂ.ಎಲ್.ಸಿ. ಕೂಡ ಆಗಿದ್ದರು. ಹೀಗೆ ಸರ್ಕಾರದ ಕಾರ್ಯಗಳಲ್ಲೂ ಕೈಜೋಡಿಸಿದ್ದರಿಂದ ಖ್ಯಾತಿ ಪಡೆದಿದ್ದು ಅಂದಿನ ಮೈಸೂರು ರಾಜ್ಯದ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಅವರ ಅಭಿಮಾನಕ್ಕೂ ಪಾತ್ರರಾಗಿದ್ದರು.

ಶ್ರೀ ರಾಮಚಂದ್ರರಾವ್ ಸಿಂಧ್ಯಾ ಅವರು ಪ್ರಗತಿಪರರೂ ಅಧ್ಯಾತ್ಮ ಚಿಂತಕರೂ ಆಗಿದ್ದರು. ಬ್ರಹ್ಮಾನಂದಸ್ವಾಮಿ ಮಠ, ಸಿದ್ಧಾರೂಢಾಶ್ರಮ, ಅನಂತಾಶ್ರಮ, ಕಬೀರಾಶ್ರಮಗಳಿಗೆ ಸಹಾಯಹಸ್ತ ನೀಡಿ ಅವುಗಳ ಆಧ್ಯಾತ್ಮಿಕ ಚಿಂತನೆ ಚಟುವಟಿಕೆಗಳಲ್ಲಿ ತಾವೂ ಪಾಲ್ಗೊಂಡು ತಮ್ಮ ಅಧ್ಯಾತ್ಮಿಕ ಒಲವನ್ನು ಪ್ರಕಟಪಡಿಸಿದರು.

ರಾಮಚಂದ್ರರಾವ್ ಸಿಂಧ್ಯಾ + ನಿಂಬಾಬಾಯಿ ದಂಪತಿಗಳಿಗೆ ಮುತ್ತೋಜಿರಾವ್ ಸಿಂಧ್ಯಾ, ಅನಂತರಾವ್ ಸಿಂಧ್ಯಾ, ರಾಮಕೃಷ್ಣರಾವ್ ಸಿಂಧ್ಯಾ, ಅಚ್ಯುತರಾವ್ ಸಿಂಧ್ಯಾ, ಶಾಮರಾವ್ ಸಿಂಧ್ಯಾ, ಶಿವಾಜಿರಾವ್ ಸಿಂಧ್ಯಾ ಎಂಬ ಆರು ಜನ ಗಂಡುಮಕ್ಕಳೂ ಮುತ್ತೂಬಾಯಿಮನೆ, ರುಕ್ಮಿಣೀಬಾಯಿ ಕದಂ ಮತ್ತು ಅನಸೂಯಾಬಾಯಿ, ಮೀರಾಬಾಯಿ ಜಾದವ್ ಎಂಬ ಹೆಣ್ಣುಮಕ್ಕಳೂ ಇದ್ದರು. ಮುತ್ತೋಜಿರಾವ್ ಸಿಂಧ್ಯಾ ಐ.ಜಿ.ಪಿ. (ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್) ಆಗಿದ್ದರು. ಮಿಕ್ಕ ಗಂಡುಮಕ್ಕಳು ಆಯಿಲ್ ಮಿಲ್ಸ್ ನಡೆಸುತ್ತಾ ಆಯಿಲ್ ಮರ್ಚೆಂಟ್ಸ್ ಆಗಿ ಗಣ್ಯರೆನಿಸಿದರು. ಹೆಣ್ಣುಮಕ್ಕಳೆಲ್ಲರೂ ಕರಕುಶಲಾ ಪ್ರವೀಣೆಯರಾಗಿದ್ದರು. ಬೊಂಬೆ ತಯಾರಿಕೆ, ವರ್ಣಚಿತ್ರಕಲೆ, ಕಸೂತಿ ಕಲೆಗಳಲ್ಲಿ ನಿಷ್ಣಾತರಾಗಿದ್ದರು. ರುಕ್ಮಿಣೀಬಾಯಿ ಕದಂ ತಮ್ಮ ಕರಕುಶಲ ಪ್ರಾವೀಣ್ಯತೆಗಾಗಿ ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರಿಂದ ಬಹುಮಾನ ಪಡೆದಿದ್ದರು. ರಾಮಚಂದ್ರರಾವ್ ಸಿಂಧ್ಯಾ ಅವರು ತಮ್ಮ ಹೆಣ್ಣು ಮಕ್ಕಳಿಗೆಲ್ಲರಿಗೂ ವಿಶ್ವೇಶ್ವರಪುರದಲ್ಲಿ ೬೦x೯೦ ಅಡಿ ವಿಸ್ತೀರ್ಣವುಳ್ಳ ಮನೆಯನ್ನು ನೀಡಿದ್ದರು. ಅವರಲ್ಲಿ ಕೆಲವರು ಇಂದಿಗೂ ಅಲ್ಲಿಯ ಮನೆಗಳಲ್ಲಿ ವಾಸವಾಗಿದ್ದರು.

ಸಿಂಧ್ಯಾ ಮನೆತನದ ಎಸ್.ಕೆ. ಸಿಂಧ್ಯಾ ಬಹುಮುಖ ಪ್ರತಿಭೆಯುಳ್ಳ ವ್ಯಕ್ತಿ ಉದ್ಯಮಿ, ಷಿಕಾರಿ, ವನ್ಯಜೀವನ ಸಂರಕ್ಷಣೆಯ ಪ್ರಚಾರಕ, ವನ್ಯಚಿತ್ರಗ್ರಾಹಕ ನಿಪುಣ, ಷೂಟಿಂಗ್ ಪರಿಣಿತ, ನಿಸರ್ಗಚಿತ್ರ ಗ್ರಾಹಕರಲ್ಲಿ ಅಗ್ರಗಣ್ಯ. ಕ್ಯಾಮೆರಾ-ನಿಷ್ಠೆ, ಸೌಂದರ್ಯಗ್ರಹಣ ಸಾಮರ್ಥ್ಯ ಅವರ ವಿಶೇಷ ಗುಣಗಳು. ಆ ಗುಣಗಳ ಸಾಕಾರತೆ 'ದಿ ಫೋಟೋಗ್ರಾಫಿಕ್ ಸೊಸೈಟಿ' ಸ್ಥಾಪನೆಯಲ್ಲಿ ಅಭಿವ್ಯಕ್ತಗೊಂಡವು. ರಾಷ್ಟ್ರೀಯ ಅಂತರಾಷ್ಟ್ರೀಯ ಚಿತ್ರಕಲಾ ಪ್ರದರ್ಶನಗಳಲ್ಲಿ ಇವರ ೨೦೦ ಕ್ಕೂ ಹೆಚ್ಚು ಚಿತ್ರಗಳು ಪ್ರದರ್ಶನಗೊಂಡು ೨೫ ಬಹುಮಾನಗಳನ್ನು ಪಡೆದಿವೆ. ೧೯೪೬ ರಲ್ಲಿ ಅಂತರ ರಾಷ್ಟ್ರೀಯ ಫೋಟಾಗ್ರಫಿ ಫೆಡರೇಷನ್ನಿಂದ ಆರ್ಟಿಸ್ಟ್, ಎಫ್.ಐ.ಪಿ. ಪದವಿ, ೧೯೭೨ರಲ್ಲಿ ರಾಯಲ್ ಫೋಟಾಗ್ರಾಫಿಕ್ ಸೊಸೈಟಿ ಸದಸ್ಯತ್ವ ಮುಖ್ಯವಾದವು.

ಶ್ರೀಮತಿ ಮುತ್ತೂಬಾಯಿ ಮಾನೆ-೧೯೦೩-೧೯೯೪

ಶ್ರೀಮತಿ ಮುತ್ತೂಬಾಯಿ ಶ್ರೀ ರಾಮಚಂದ್ರರಾವ್ ಸಿಂಧ್ಯೆಯುವರ ಹಿರಿಯ ಮಗಳೂ ನಾಗೇಶರಾವ್ ಮಾನೆಯುವರ ಪತ್ನಿಯೂ ಆಗಿದ್ದರು. ಶ್ರೀಮಂತ ಕುಟುಂಬದಲ್ಲಿ ಹುಟ್ಟಿ ಶ್ರೀಮಂತ ಉದ್ಯಮಿಗಳಾಗಿದ್ದ ಮಾನೆ ಕುಟುಂಬಕ್ಕೆ ಸೊಸೆಯಾಗಿ ಹೋದರೂ ನಿಗರ್ವಿ, ಸರಳಜೀವಿ, ಸೇವಾಪರರು, ಪ್ರಗತಿಪರ ಧೋರಣೆ, ಧೈರ್ಯ, ಸಾಹಸ, ವೈಚಾರಿಕ ಚಿಂತನೆ, ದೃಢತೆ, ನ್ಯಾಯಪರತೆ, ಸಾಧನೆಯ ಫಲ, ಮಹಿಳಾ ಶಿಕ್ಷಣಕ್ಕೆ ಉತ್ತೇಜನ, ಇತ್ಯಾದಿಗಳು ಹುಟ್ಟಿನಿಂದಲೇ ಬಂದ ಸಂಸ್ಕಾರಗುಣ ವೈಶಿಷ್ಟ್ಯಗಳಾಗಿದ್ದವು.

ಇವರು ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿದ್ದರು. 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಸಕ್ರಿಯರಾಗಿ ಪಾಲ್ಗೊಂಡು ತಮ್ಮ ಹೆಣ್ಣು ಮಕ್ಕಳೂ ಈ ಚಳುವಳಿಯಲ್ಲಿ ಭಾಗವಹಿಸುವಂತೆ ಪ್ರೇರಣೆ ಪ್ರೋತ್ಸಾಹಗಳನ್ನು ನೀಡಿದರು. ಈ ಸಂದರ್ಭದಲ್ಲಿ ಅವರ ಮನೆಯೇ ಚಳುವಳಿಯ ಕೇಂದ್ರಸ್ಥಾನವಾಗಿದ್ದಿತು. ತಮ್ಮ ಜೀವಿತದ ಕೊನೆಯವರೆಗೂ ಖಾದಿ ಸೀರೆ ರವಿಕೆಯನ್ನೇ ಧರಿಸುತ್ತಿದ್ದರು. ತಮ್ಮ ನಾಲ್ವರು ಪುತ್ರರಾದ ಮನೋಹರರಾವ್ ಮಾನೆ, ಭೂಮಾನಂದ ಮಾನೆ, ವೆಂಕೋಬರಾವ್ ಮಾನೆ, ಭಾಸ್ಕರ್‌ರಾವ್ ಮನೆ - ಇವರಿಗೆ ಡಿಪ್ಲೋಮಾ ಮತ್ತು ಬಿ.ಇ. ಪದವಿ ಶಿಕ್ಷಣವನ್ನು ಕೊಡಿಸಿದ್ದರು. ಹಾಗೂ ತಮ್ಮ ಒಂಭತ್ತು ಮಂದಿ ಹೆಣ್ಣುಮಕ್ಕಳಾದ ಮಂಜುಳಾ, ಸುನಂದಾಎಂ.ಎ., ಗಿರಿಜಾ ಎಂ.ಎ., ಇಂದಿರಾ-ಆಯುರ್ವೇದ ಡಾಕ್ಟರು, ನಿವೇದಿತಾ-ಬಿ.ಕಾಂ, ಸುಜಯಾ-ಎಂ.ಎ., ಶಕುಂತಲಾ-ಎಂ.ಕಾಂ.ಎಲ್.ಎಲ್.ಬಿ., ಹಂಸ-ಎಂ.ಎ., ಗೀತಾ-ಎಂ.ಎ., ಪದವಿ ಶಿಕ್ಷಣ ಪಡೆದಿದ್ದರು. ಉಪನ್ಯಾಸಕಿಯ ರಾಗಿ, ವೈದ್ಯರಾಗಿ, ವೃತ್ತಿಪರರೂ ಆಗಿದ್ದರೂ.

ಕಲಿಕೆಗೆ ವಯಸ್ಸಿಲ್ಲವೆಂದು ತಮ್ಮ ೭೦ನೆಯ ವಯಸ್ಸಿನಲ್ಲಿ ಎಸ್.ಎಸ್.ಎಲ್.ಸಿ. ಯನ್ನೂ ನಂತರ ಬಿ.ಎ. ಪರೀಕ್ಷೆಗಳಿಗೆ ಕುಳಿತು ತೇರ್ಗಡೆಹೊಂದಿ ಪದವೀಧರರಾದರು. ೧೯೪೯ ರಲ್ಲಿ ಚಾಮರಾಜಪೇಟೆಯಲ್ಲಿ 'ಕರ್ನಾಟಕ ಮಹಿಳಾ ಹಿಂದಿ ಸೇವಾ ಸಮಿತಿ' ಯನ್ನು ಸ್ಥಾಪಿಸಿ ಅದರ ಅಧ್ಯಕ್ಷಿಣಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಸಮಸ್ತ ಭಾರತದಲ್ಲಿಯೇ ಏಕೈಕ ಮಹಿಳಾ ಹಿಂದಿ ಸಂಸ್ಥೆಯನ್ನು ಪ್ರಾರಂಭಿಸಿ ೪೧ ವರ್ಷಗಳ ಕಾಲ ಅಲ್ಲಿ ಸೇವೆಗೈದು ಹಿಂದೀ ಭಾಷಾ ಕಲಿಕೆ ಮತ್ತು ಹಿಂದೀ ಶಿಕ್ಷಣಕ್ಕಾಗಿ ಭಾರತದಾದ್ಯಂತ ಪ್ರಚಾರ ಕೈಗೊಂಡರು. ಮಕ್ಕಳಿಗೆ ಹಿಂದಿ ಕಲಿಸಿದರು. ಅಂದಿನ ಪ್ರಧಾನಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರಿಂದ ಪ್ರಶಸ್ತಿಯನ್ನೂ ಪ್ರಧಾನಮಂತ್ರಿ ಶ್ರೀ ರಾಜೀವ ಗಾಂಧಿಯವರಿಂದ ತಾಮ್ರಪತ್ರವನ್ನೂ ೧೦,೦೦೦/- ರೂ. ಗಳನ್ನೂ ಹಿಂದಿ ಪ್ರಚಾರ ಸೇವೆಯ ದ್ಯೋತಕವಾಗಿ ಪಡೆದರು. ಆ ೧೦, ೦೦೦/- ರೂ. ಗಳನ್ನು 'ಕರ್ನಾಟಕ ಮಹಿಳಾ ಹಿಂದೀ ಸೇವಾ ಸಮಿತಿ' ಗೇ ದೇಣಿಗೆ ನೀಡಿದರು.

ಶ್ರೀಮತಿ ಮುತ್ತೂಬಾಯಿ ಮಾನೆಯುವರು ಕಲಾಕಾರರೂ ಕರಕುಶಲಿಗಳೂ ಆಗಿದ್ದರು. ಸಂಗೀತಗಾಯನ, ವಾದ್ಯವಾದನ, ನೃತ್ಯ, ಚಿತ್ರಕಲೆಗಳಲ್ಲಿ ಇವರಿಗೆ ಪರಿಶ್ರಮವಿದ್ದಿತು. ವರ್ಣಚಿತ್ರಕಲೆ, ಗೊಂಬೆಗಳ ತಯಾರಿಕೆ, ಚಮಕಿ ಕಸೂತಿ ಮುಂತಾದ ಕುಶಲ ಕಲೆಗಳಲ್ಲಿ ಪರಿಣತರಾಗಿದ್ದರು. ತಮ್ಮ ೬೫ನೇ ವಯಸ್ಸಿನಲ್ಲಿ ಮುಂಬೈಗೆ ಹೋಗಿ ಅಲ್ಲಿ ಮೂರು ತಿಂಗಳು ಇದ್ದು ಪ್ಲಾಸ್ಟರ್ ಆಫ್ ಪಾರಿಸ್‌ನಲ್ಲಿ ಗೊಂಬೆ ತಯಾರಿಕೆಯನ್ನು ಕಲಿತು ಬಂದರು. ತಂಜಾವೂರಿಗೆ ಹೋಗಿ ತಂಜಾವೂರು ಶೈಲಿಯ ವರ್ಣಚಿತ್ರ ಕಲೆಯನ್ನು ಕಲಿತರು. ತಮ್ಮ ಸ್ವಂತ ಮನೆಯಲ್ಲಿಯೇ ವಿದ್ಯಾರ್ಥಿನಿಯರಿಗೆ ಆಶ್ರಯ ನೀಡಿದರು. ಬಡ ಹೆಂಗೆಳೆಯರಿಗೆ ಹೊಲಿಗೆಯನ್ನೂ, ನೂಲುವುದನ್ನೂ ಕಲಿಸಿದರು, ಅನೇಕ ಬಡ ಕುಟುಂಬಗಳಿಗೆ ಆಸರೆಯಾದರು. ತಮ್ಮ ಹೆಣ್ಣು ಮಕ್ಕಳಿಗೆ ನೃತ್ಯ, ಸಂಗೀತ ಗಾಯನ, ಪಿಟೀಲು, ವೀಣೆ, ಹಾರ್ಮೋನಿಯಂ, ಮೃದಂಗ, ತಬಲ, ಜಲತರಂಗ ಮುಂತಾದ ಸಂಗೀತ ವಾದ್ಯವಾದನದಲ್ಲಿ ಶಿಕ್ಷಣ ಕೊಡಿಸಿದ್ದರು. ತಮ್ಮ ಮನೆಯ ಸಮೀಪವೇ ಇದ್ದ ಮಹಿಳಾ ಪುರೋಗಾಮಿ ಸಂಸ್ಥೆಯಾದ ಆರ್ಯಸಮಾಜದ ತತ್ವ ಮತ್ತು ಕಾರ್ಯ ಸಾಧನೆಯ ಪ್ರಭಾವಕ್ಕೆ ಒಳಗಾಗಿದ್ದ ಮುತ್ತೂಬಾಯಿ ಮಾನೆಯವರು ಮರಾಠಾ ಜನಾಂಗದ ಹೆಣ್ಣುಮಕ್ಕಳಿಗೂ ಉಪನಯನ ಸಂಸ್ಕಾರವನ್ನು ಮಾಡಿಸಿ ಯಜ್ಞೋಪವೀತವನ್ನು ಧಾರಣೆ ಮಾಡಿಸಿದರು. ಜಾತ್ಯಾತೀತ ಮನೋಭಾವದ ಮುತ್ತೂಬಾಯಿ ಮಾನೆಯವರು ತಮ್ಮ ಮಗ ಮತ್ತು ಮಗಳ ಅಂತರ್ಜಾತೀಯ ವಿವಾಹಗಳಿಗೆ

ಯಾವ ವಿರೋಧವನ್ನು ತೋರದೆ ತಾವೇ ಮುಂದೆ ನಿಂತು ವಿವಾಹ ಮಾಡಿಸಿದ್ದಾರೆ. ಯಾವ ವೈಭವ, ಡಾಂಭಿಕತೆ ಮತ್ತು ದುಂದುವೆಚ್ಚಗಳಿಲ್ಲದೆ ಅತ್ಯಂತ ಸರಳವಾಗಿ ಎರಡು ದಿನಗಳ ಬದಲು ಒಂದೇ ದಿನದ ವಿವಾಹವನ್ನು ತಮ್ಮ ಮಕ್ಕಳಿಗೆ ಮಾಡಿದ್ದಾರೆ. ತಮ್ಮ ಹೆಣ್ಣುಮಕ್ಕಳಿಗೂ ತಮ್ಮ ಗಂಡುಮಕ್ಕಳಿಗೂ ಆಸ್ತಿಯನ್ನು ಸಮಾನವಾಗಿ ಹಂಚಿಕೊಟ್ಟಿದ್ದಾರೆ. ವಿವಾಹ ವಿಚ್ಛೇದಿತರಿಗೆ, ಬಾಲವಿಧವೆಯರಿಗೆ, ಅನಾಥ ಬಾಲಕಿಯರಿಗೆ, ದೀನದಲಿತ ಹೆಂಗೆಳೆಯರಿಗೆ ಆಶ್ರಯವನ್ನೂ ತಮ್ಮ ಬಸವನಗುಡಿಯ ಮನೆಯಲ್ಲಿ ನೀಡಿದರು. ಕರ್ನಾಟಕದಲ್ಲಿ ಮೊಟ್ಟಮೊದಲ ಮರಾಠಾ ಮಹಿಳಾ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿಕೊಂಡು ಬಂದ ಧೀಮಂತ ಸಜ್ಜನಿಕೆಯುಳ್ಳ ಮಹಿಳೆಯಾಗಿದ್ದರು ಮುತ್ತೂಬಾಯಿ ಮಾನೆಯವರು.

ಇವರು ಗಾಂಧೀವಾದಿಗಳೂ ಆಗಿದ್ದರು. ಹರಿಜನರು ದೇವಾಲಯ ಪ್ರವೇಶ ಮಾಡುವುದಕ್ಕಾಗಿ ನಡೆದ ಚಳುವಳಿಯಲ್ಲಿ ತಾವೇ ಮುಂದಾಳತ್ವ ವಹಿಸಿದರು. ಹರಿಜನರ ಕೇರಿಗಳಿಗೆ ಹೋಗಿ ಅಲ್ಲಿಯ ಜನರ ಸುಖ ದುಃಖಗಳ ಬಗ್ಗೆ ವಿಚಾರಿಸಿ ಅವರಿಗೆ ಸಾಂತ್ವನ, ಧೈರ್ಯ, ಉತ್ತೇಜನಪೂರ್ವಕವಾದ ಮಾತುಗಳನ್ನಾಡಿ ಅವರ ಮನೆಯಲ್ಲಿ ನೀರು ಕುಡಿದು ಸಮಾನತಾ ಭಾವನೆಯನ್ನು ಮೂಡಿಸುವ ಪ್ರಯತ್ನ ಮಾಡಿದರು.

ಮುತ್ತೂಬಾಯಿ ಮಾನೆಯವರು ವರದಕ್ಷಿಣೆ ಪದ್ಧತಿಯ ತೀವ್ರ ವಿರೋಧಿಗಳಾಗಿದ್ದರು. ವರದಕ್ಷಿಣೆ ಸಂಪ್ರದಾಯವು ಸಮಾಜದ ಬಹುದೊಡ್ಡ ಪಿಡುಗೆಂದೂ ಅದನ್ನು ನಿವಾರಿಸಲು ಮದುವೆ ಯೋಗ್ಯ ವಯಸ್ಸಿನ ಹೆಣ್ಣುಮಕ್ಕಳು ವರದಕ್ಷಿಣೆ ಕೇಳುವ ಹುಡುಗರನ್ನು ವಿವಾಹ ಮಾಡಿಕೊಳ್ಳಲು ನಿರಾಕರಿಸಬೇಕೆಂದೂ, ವರದಕ್ಷಿಣೆ ಸ್ವೀಕರಿಸಿ ವಿವಾಹ ಮಾಡಿಕೊಳ್ಳುವ ಗಂಡು ಹುಡುಗರಿಗೆ ಬುದ್ಧಿ ಕಲಿಸಲು ಅವಿವಾಹಿತರಾಗಿಯೇ ಜೀವನ ಪರ್ಯಂತ ಉಳಿಯುವುದು ಮೇಲೆಂದೂ ತಿಳಿಯ ಹೇಳಿದರು.

ತಮ್ಮ ೭೦ನೆಯ ವಯಸ್ಸಿನಲ್ಲಿ ಅಮೇರಿಕಾದಲ್ಲಿ ನಡೆದ ಅಂತರರಾಷ್ಟ್ರೀಯ ಸಮಾವೇಶದಲ್ಲಿ ಭಾಗವಹಿಸಿ ಏಕಾಕಿನಿಯಾಗಿ ವಿಶ್ವ ಪರ್ಯಟನ ಮಾಡಿ ಬಂದ ದಿಟ್ಟ ಮಹಿಳೆ ಮುತ್ತೂಬಾಯಿ ಮಾನೆಯವರು.

ತಮ್ಮ ೯೧ನೇ ವಯಸ್ಸಿನಲ್ಲೂ ತಮ್ಮ ಬಂಗಲೆಯಲ್ಲಿ ಏಕಾಕಿನಿಯಾಗಿ ಆತ್ಮಬಲದಿಂದ ತುಂಬು ಆಯುಷ್ಯದ ಸಾರ್ಥಕ ಜೀವನ ನಡೆಸಿ ತಮ್ಮ ೧೩ ಮಕ್ಕಳ ಮತ್ತು ೪೫ ಮೊಮ್ಮಕ್ಕಳ ಕಣ್ಮುಂದೆ ೧೯೬೪ರ ಸೆಪ್ಟೆಂಬರ್ ೨೨ನೇ ತಾರೀಖಿನಂದು ಇಹಲೋಕ ತ್ಯಜಿಸಿ ಕೈಲಾಸವಾಸಿಗಳಾದರು.

ಶ್ರೀ ನಾಗೇಶರಾವ್ ಮಾನೆ ೧೮೯೧-೧೯೭೧

ಇವರು ಹೆಸರಾಂತ ಕೈಗಾರಿಕೋದ್ಯಮಿಗಳು ಮತ್ತು ಸಮಾಜ ಸೇವಕರು ಚಿಂತಾಮಣಿ ತಾಲ್ಲೂಕಿನ ಮುರುಗಮಲ್ಲ ಸಮೀಪದ ದರ್ಗಾ ಗ್ರಾಮದಲ್ಲಿ ಎಂ.ವಿ. ವೆಂಕೋಬರಾವ್ ಮತ್ತು ಲಾಡುಬಾಯಿ ದಂಪತಿಗಳಿಗೆ ಅವರ ಏಳು ಜನ ಮಕ್ಕಳಲ್ಲಿ ಎರಡನೆಯವರಾಗಿ ಜನಿಸಿದರು.

ಬೆಂಗಳೂರಿನಲ್ಲಿ ಪ್ರೌಢಶಾಲಾ ಶಿಕ್ಷಣದ ನಂತರ ಮುಂಬೈನಲ್ಲಿದ್ದ ದಿ ಎಲೆಕ್ಟ್ರಿಕಲ್ ಎಂಜಿನಿಯರ್ ಇನ್ಸ್ಟಿಟ್ಯೂಷನ್, ಲಂಡನ್ ಸಂಸ್ಥೆಯಲ್ಲಿ ಮೆಕಾನಿಕಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಶಿಕ್ಷಣ ಪಡೆದು ೧೯೧೫ ರಲ್ಲಿ ಪದವಿಯನ್ನು ಪಡೆದರು. ಅನಂತರದಲ್ಲಿ ಉನ್ನತ ಶಿಕ್ಷಣವನ್ನು ಪಡೆದರು.

೧೯೨೫ ರಲ್ಲಿ ಶಂಕರಪುರದಲ್ಲಿ **'ಸಿಟಿ ವರ್ಕ್‌ಷಾಪ್'** ಎಂಬ ಹೆಸರಿನಲ್ಲಿ ಕಾರ್ಖಾನೆಯನ್ನು ಪ್ರಾರಂಭಿಸಿ ತಮ್ಮ ಕೈಗಾರಿಕೋದ್ಯಮದ ವೃತ್ತಿ ಜೀವನಕ್ಕೆ ನಾಂದಿ ಹಾಡಿದರು. ಆರಂಭದಲ್ಲಿ ಸೀತಾರಾಮ್ ಬಿ.ಇ. ರವರು ಈ ಕಾರ್ಖಾನೆಯ ಪಾಲುದಾರ ರಾಗಿದ್ದರು. ೩೦-೪೦ ಜನ ಕಾರ್ಮಿಕರು ಇಲ್ಲಿ ಕೆಲಸ ಮಾಡಲಾರಂಭಿಸಿದರು. ನಂತರ **ಆರ್.ಎಸ್.ಡಿ.** ಎಂಬ **ಕಾರ್ಖಾನೆಯನ್ನೂ** ಯಶವಂತಪುರದಲ್ಲಿ **'ಸ್ಟೀಲ್ ಮಾಗ್'** ಎಂಬ **ಕಾರ್ಖಾನೆಯನ್ನೂ** ತೆರೆದರು. ಈ ಕಾರ್ಖಾನೆಯಲ್ಲಿ ಶರಾವತಿ ನದಿಯ ವಿದ್ಯುತ್ ಜಲಾಶಯಕ್ಕೆ ಸಂಬಂಧಪಟ್ಟ ವಿದ್ಯುತ್‌ಚ್ಛಕ್ತಿ ಕಂಬಗಳನ್ನು ಸಿದ್ಧಮಾಡಿಕೊಟ್ಟರು. ಕಬ್ಬಿಣದ ಕಂಬಗಳು ತುಕ್ಕುಹಿಡಿಯದಂತೆ ಅವುಗಳಿಗೆ ಜಿಂಕ್ (ಸತು) ಲೇಪನ ಮಾಡಿದರು. ೯೦ ಅಡಿಯ ಕಂಬಗಳನ್ನು ಜಿಂಕ್ ಎಲೆಕ್ಟ್ರೋಪ್ಲೇಟಿಂಗ್ ಮಾಡುವ ಬೃಹತ್ ಯೋಜನೆ ಯಶಸ್ವಿಯಾಗಿ ನಿರ್ವಹಿಸಿದ್ದು ಗಮನಾರ್ಹ ಸಾಧನೆಯಾಗಿದೆ. ಈ ಕಾರ್ಖಾನೆಯಲ್ಲಿ ಸಿದ್ಧಪಡಿಸಲಾದ ಇತರ ವಸ್ತುಗಳೆಂದರೆ ಆಯಿಲ್ ಎಕ್ಸ್‌ಪೆಲರ್ಸ್, ಆಯಿಲ್ ಬಾಯ್ಲರ್ಸ್, ಶಾವಿಗೆ ಯಂತ್ರಗಳು, ದೊಡ್ಡ ದೊಡ್ಡ ಕಬ್ಬಿಣದ ತೊಲೆಗಳು ಹಾಗೂ ಸಣ್ಣ ಗೃಹೋಪಯೋಗಿ ವಸ್ತುಗಳು ಸ್ಟೀಲ್ ಕನ್‌ಸ್ಟ್ರಕ್ಷನ್ ಕಂಪೆನಿ ಲಿಮಿಟೆಡ್ ಎಂಬ ಸ್ಟೀಲ್ ಪ್ಲಾಂಟನ್ನು ತೆರೆದರು. ರಾಷ್ಟ್ರೀಯ ವಿದ್ಯಾಲಯಕ್ಕೆ ಕಬ್ಬಿಣದ ಅನೇಕ ವಸ್ತುಗಳನ್ನು ತಯಾರಿಸಿ ನೀಡಿದ್ದಾರೆ. ಶ್ರೀನಿವಾಸಯ್ಯನವರು ವಿಶ್ವೇಶ್ವರಪುರದಲ್ಲಿ ವ್ಯಾಯಾಮ ಶಾಲೆಯನ್ನು ಸ್ಥಾಪಿಸಿದಾಗ ವ್ಯಾಯಾಮ ಪಟುಗಳಿಗೆ ಅವಶ್ಯಕವಿದ್ದ ಪ್ಯಾರಲಲ್ ಬಾರ್, ಡಂಬಲ್ಸ್ ಮುಂತಾದ ವಸ್ತುಗಳನ್ನು ತಯಾರಿಸಿ ಕೊಟ್ಟರು.

ನಾಗೇಶರಾವ್ ಮಾನೆಯವರು ಹೆಸರಾಂತ ಅರಸೋಜಿರಾವ್ ಟ್ರಸ್ಟ್‌ನಲ್ಲಿ ೨೫ ವರ್ಷಗಳ ಕಾಲ ಅಧ್ಯಕ್ಷ

ರಾಗಿದ್ದರು. ಅನೇಕ ವಿದ್ಯಾಸಂಸ್ಥೆಗಳಿಗೆ, ಅನಾಥಾಶ್ರಮಗಳಿಗೆ ಬಡ ವಿದ್ಯಾರ್ಥಿಗಳಿಗೆ ಧನಸಹಾಯ ಮಾಡಿದ್ದಾರೆ. ಆಶ್ರಯ ನೀಡಿದ್ದಾರೆ. ದೊಡ್ಡಬಳ್ಳಾಪುರ ತಾಲ್ಲೂಕಿನ ಭಂಡಾರಹಳ್ಳಿಯಲ್ಲಿ ಭೂಮಿಯನ್ನು ಖರೀದಿಸಿ ವಿಭಿನ್ನ ಬೆಳೆಗಳನ್ನು ಬೆಳೆದು ಒಳ್ಳೇ ಕೃಷಿಕರೆನಿಸಿದರು.

ನಾಗೇಶರಾವ್ ಮಾನೆ ಮುತ್ತೂಬಾಯಿ ಮಾನೆಯವರ ನಾಲ್ವರು ಗಂಡುಮಕ್ಕಳೂ ತಂದೆಯಂತೆ ಕೈಗಾರಿಕೋದ್ಯಮಿಗಳಾಗಿ ಹೆಸರುಗಳಿಸಿದರು. ಹಿರಿಯ ಮಗ ಮನೋಹರರಾವ್ ಮಾನೆ ತಂದೆ ಸ್ಥಾಪಿಸಿದ ಕಾರ್ಖಾನೆಗಳನ್ನು ಮುನ್ನಡೆಸಿದರು. ಎರಡನೇ ಮಗ ಭೂಮಾನಂದರಾವ್ ಮಾನೆ ಬಿ.ಇ. ಪದವೀಧರರಾಗಿದ್ದು ಹೊಸೂರು ರಸ್ತೆಯಲ್ಲಿ ಬಿಮಾಕ್ ಕಂಪೆನಿಯನ್ನು ತೆರೆದು ಅದರ ಮಾಲೀಕರಾದರು. ಅವರ ಪತ್ನಿ ಶಕುಂತಲಾ ನಿಕ್ಕಂ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಅಪ್ಪೂರಾವ್ ನಿಕ್ಕಂ ರವರ ಮಗಳು ಮೂರನೇ ಮಗ ವೆಂಕೋಬರಾವ್ ಮಾನೆಯೂ ಬಿ.ಇ. ಪದವೀಧರ ರಾಗಿದ್ದು ಮ್ಯಾನ್‌ಟನ್ಸ್ ಕ್ರೇನ್ ತಯಾರಿಕಾ ಕಂಪೆನಿಯಲ್ಲಿದ್ದರು. ಕೊನೆಯ ಮಗ ಭಾಸ್ಕರರಾವ್ ಮಾನೆ ಕನಕಪುರದ ರಸ್ತೆಯಲ್ಲಿನ ಆರೋಮಾಟಿಕ್ ಕಂಪೆನಿ ನಡೆಸುತ್ತಿದ್ದಾರೆ.

ತಮ್ಮ ಒಂಬತ್ತು ಜನ ಹೆಣ್ಣು ಮಕ್ಕಳಿಗೂ ಉನ್ನತ ಶಿಕ್ಷಣ ನೀಡಿ ಸ್ವಾವಲಂಬಿಗಳಾಗಿ ವೃತ್ತಿ ಜೀವನ ನಡೆಸಲೂ ಅನುವು ಮಾಡಿಕೊಟ್ಟಿದ್ದರು. ಹೆಣ್ಣು ಮಕ್ಕಳಲ್ಲಿ ಸುನಂದಾ ಪಿ. ಜಾದವ್ ಆಚಾರ್ಯ ಪಾಠಶಾಲಾ ಮಹಾವಿದ್ಯಾಲಯದಲ್ಲಿ ಇತಿಹಾಸ ಪ್ರಧ್ಯಾಪಕರಾಗಿದ್ದರು. ೧೯೭೨ ರಲ್ಲಿ ಶ್ರೀಮತಿ ಭಾಗೀರಥಿ ನಾರಾಯಣರಾವ್ ಕಾಲೇಜನ್ನು ಸ್ಥಾಪಿಸಲು ಮುನ್ನೇತೃತ್ವವಹಿಸಿ ಸ್ಥಾಪಕ ಕಾರ್ಯದರ್ಶಿನಿಯಾಗಿ ಇಂದಿಗೂ ದುಡಿಯುತ್ತಿದ್ದಾರೆ. ಅರಸೋಜಿರಾವ್ ಧಾರ್ಮಿಕ ಟ್ರಸ್ಟ್‌ನಲ್ಲಿಯೂ ಕಾರ್ಯಕರ್ತರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇನ್ನೊಬ್ಬ ಮಗಳು ಹಂಸಾ ಘೋರ್ಪಡೆಯವರೂ ಬಿ.ಎಂ.ಎಸ್. ಕಾಲೇಜಿನಲ್ಲಿ ಇತಿಹಾಸ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಶಕುಂತಲಾರವರು ಅಡ್ವೋಕೇಟ್ ಆಗಿ ಹಾಗೂ ಇಂದಿರಾ ಆಯುರ್ವೇದ ಶಿಕ್ಷಣ ಪಡೆದು ಕರಕುಶಲ ಕಲೆಗಳಲ್ಲೂ ನಿಷ್ಣಾತರಾಗಿ, ಸಾಮಾಜಿಕ ಕಳಕಳಿಯಿಂದ ಸೇವಾ ಕಾರ್ಯಗಳಲ್ಲಿ ತೊಡಗಿಕೊಂಡಿದ್ದಾರೆ.

೧೨೦

ಶ್ರೀರಂಗಪಟ್ಟಣದ ಗೇಣಿದಾರರ ಹೋರಾಟದಲ್ಲಿ ಡಾ. ಸಿ. ಬಂದೀಗೌಡರ ಪಾತ್ರ

ಮಹಾಂತೇಶ ಕುತನಿ*

ಡಾ. ಸಿ.ಬಂದೀಗೌಡರು ಉತ್ತಮ ಸಮಾಜ ಸುಧಾರಕರು, ಸಾಮಾಜಿಕ ನ್ಯಾಯಕ್ಕಾಗಿ ದುಡಿದವರು, ಗಾಂಧೀಜಿಯವರ ಪ್ರಭಾವ ಗೌಡರ ಮೇಲಾಗಿ ಸಮಾಜ ಶುದ್ಧೀಕರಣಕ್ಕಾಗಿ ತಮ್ಮ ಜೀವಿತದುದ್ದಕ್ಕೂ ದುಡಿಯುತ್ತಿರುವ ಆದರ್ಶಪ್ರಿಯರು, ತನ್ನ ಸುತ್ತಲಿನ ಗ್ರಾಮೀಣ ರೈತರ ಹಿತಕ್ಕಾಗಿ ಜಮೀನ್ದಾರರಾಗಿದ್ದ ಗೌಡರು ತಮ್ಮ ಜಮೀನು ಕಳೆದುಕೊಳ್ಳುವ ಸಂದರ್ಭದಲ್ಲೂ ಗೇಣಿ ಶಾಸನವನ್ನು ಜಾರಿಗೊಳಿಸುವಂತೆ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಒಂದು ದೊಡ್ಡ ಆಂದೋಲನ ವನ್ನೇ ಮಾಡಿದವರು. ಆ ನಿಟ್ಟಿನಲ್ಲಿ ಗೌಡರು ನಮಗೆ ಒಬ್ಬ ಸಮಾಜಿಕ ನಾಯಕರಾಗಿ ಕಾಣುತ್ತಾರೆ. ಸ್ವಾರ್ಥ, ಸ್ವಜನ ಪಕ್ಷಪಾತವೇ ತುಂಬಿ ತುಳುಕುತ್ತಿರುವ ಇಂದಿನ ಸಮಾಜದಲ್ಲಿ ನಿಸ್ವಾರ್ಥ ಜನಸೇವಕರಾಗಿ ದುಡಿಯುತ್ತಿರುವ ಗೌಡರ ಬದುಕು ಆದರ್ಶಮಯ ಹಾಗೂ ಅನುಕರಣೀಯವಾದುದು.

ಸಿ.ಬಂದೀಗೌಡರು ಶ್ರೀರಂಗಪಟ್ಟಣ ತಾಲ್ಲೂಕಿನ ಶ್ರೀನಿವಾಸ ಅಗ್ರಹಾರ ಎಂಬ ಹಳ್ಳಿಯಲ್ಲಿ ದಿನಾಂಕ ೦೨ ಮಾರ್ಚ್ ೧೯೧೭ ರಂದು ಜನಿಸಿದರು. ಇವರ ತಂದೆ ಚಿಕ್ಕಣ್ಣ ಮತ್ತು ತಾಯಿ ದೇವಮ್ಮ.

ಪ್ರಾಥಮಿಕ ಹಂತದ ಶಿಕ್ಷಣವನ್ನು ಶ್ರೀನಿವಾಸ ಅಗ್ರಹಾರದ ಮಾರಿಗುಡಿಯಲ್ಲಿ ಪಡೆದು ಮುಂದೆ ೧೯೨೬ ರಲ್ಲಿ ಶ್ರೀರಂಗಪಟ್ಟಣದಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಪಡೆದರು. ೧೯೨೭ರಲ್ಲಿ ಶ್ರೀರಂಗಪಟ್ಟಣಕ್ಕೆ ಗಾಂಧೀಜಿಯವರ ಭೇಟಿ ನೀಡಿದ್ದಾಗ ತಮ್ಮ ತಂದೆಯವರಾದ ಚಿಕ್ಕಣ್ಣವರೊಂದಿಗೆ ನೋಡಿ ಅವರಿಂದ ಗಾಂಧೀಜಿಯವರ ಬಗ್ಗೆ ಮಾಹಿತಿ ಪಡೆದು, ಅವರಿಂದ ಪ್ರಭಾವಿತರಾದರು. ೧೯೩೮ರಲ್ಲಿ ಏಪ್ರಿಲ್ ತಿಂಗಳ ೧೦, ೧೧, ಮತ್ತು ೧೨ನೇ ತಾರೀಖು ಶಿವಪುರ ಧ್ವಜಾ ಸತ್ಯಾಗ್ರಹದಲ್ಲಿ ಸ್ವಯಂ ಸೇವಕರಾಗಿ ಭಾಗವಹಿಸಿದ್ದರು. ಮೈಸೂರಿನ ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್. ಅಧ್ಯಯನ ವೇಳೆ ೧೯೪೨ ರಲ್ಲಿ ಬ್ರಿಟೀಷರೇ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ (ಕ್ವಿಟ್ ಇಂಡಿಯಾ ಅಥವಾ ಚಲೇಜಾವ್ ಚಳುವಳಿ) ಭಾಗವಹಿಸಿದ್ದರು.

೧೯೪೬ ಮಾರ್ಚ್ ೨೧ರಂದು ಶ್ರೀರಂಗಪಟ್ಟಣ ದಲ್ಲಿರುವ ಕೃಷ್ಣಮೂರ್ತಿ ಬಂಗಲೆಯಲ್ಲಿ ರುಕ್ಮಿಣಿಯಮ್ಮ ರೊಂದಿಗೆ ವೈವಾಹಿಕ ಜೀವನಕ್ಕೆ ಕಾಲಿಟ್ಟರು. ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ, ೧೯೪೬ರ ಮೇ ೨೯ನೇ ತಾರೀಖು ಬಧುವಾರ ಮೈಸೂರು ಪ್ರಜಾಪ್ರತಿ ನಿಧಿಯ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಿದರು. ಪ್ರಜಾಪ್ರತಿನಿಧಿಯ ಸಭೆಯಲ್ಲಿ ಮಂಡ್ಯ ಜಿಲ್ಲೆಯ ರೈತಾಪಿ ಜನರ ಹಲವು ಜ್ವಲಂತ ಸಮಸ್ಯೆಗಳನ್ನು ನಿಲುವಳಿ ಸೂಚನೆಯ ಮೇಲೆ ಚರ್ಚಿಸುತ್ತಾ ಸಭೆಯ ಗಮನ ಸೆಳೆದಿದ್ದರು. ಸ್ವಾತಂತ್ರ್ಯ ನಂತರ ಜನಪ್ರತಿನಿಧಿಗಳ ಆಡಳಿತ ಶುರುವಾದಾಗ ಶ್ರೀರಂಗಪಟ್ಟಣ ಪುರಸಭೆಯ ಪ್ರಥಮ ಅಧ್ಯಕ್ಷರಾಗಿ (೧೯೪೮–೧೯೫೦)ರವರೆಗೆ ಕಾರ್ಯನಿರ್ವಹಿಸಿದರು.

೧೯೪೪ರಲ್ಲಿ ಶ್ರೀರಂಗಪಟ್ಟಣದಲ್ಲಿ ತಮ್ಮ ಅಜ್ಜಿ–ಕಲ್ಯಾಣಮ್ಮನವರ ಸವಿನೆನಪಿನಲ್ಲಿ 'ಕಲ್ಯಾಣ ಚಿಕಿತ್ಸಾಲಯ' ಆರಂಭಿಸಿ ಸಾಮಾನ್ಯ ಜನರಿಗೆ ಕೈಗೆಟುಕುವ ವೈದ್ಯರಾಗಿ, 'ಜನತಾವೈದ್ಯ' ಎಂಬ ಪ್ರೀತಿಗೆ ಪಾತ್ರರಾಗಿದ್ದರು. ಶ್ರೀರಂಗ ಪಟ್ಟಣದ ಭಾಗದಲ್ಲಿ 'ಒಂದಾಣಿ ಡಾಕ್ಟರ್' ಎಂದೇ ಹೆಸರುವಾಸಿಯಾಗಿದ್ದರು.

೧೯೬೪–೧೯೭೦ ರ ಅವಧಿಯಲ್ಲಿ ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗಿ ವಿಧಾನಪರಿಷತ್ತಿನ ಸದಸ್ಯರಾಗಿ ಹಲವು ಜನಪರ ಕಾರ್ಯಗಳ ಬಗ್ಗೆ ಸದನದ ಗಮನ ಸೆಳೆದಿದ್ದರು.

ಗಾಂಧೀಜಿಯವರ ಚಿತಾಭಸ್ಮವನ್ನು ವಿಸರ್ಜಿಸಿದ್ದ ಶ್ರೀರಂಗಪಟ್ಟಣದ ಪಶ್ಚಿಮವಾಹಿನಿಯಲ್ಲಿ (ಕಾವೇರಿನದಿ) ೧೯೪೮ ರಿಂದ 'ಸರ್ವೋದಯ ಮೇಳ' ಮೂಲಕ ಗಾಂಧೀಜಿಯವರ ಆಚಾರ–ವಿಚಾರಗಳನ್ನು ಜನರಿಗೆ, ಯುವ ಪೀಳಿಗೆಗೆ ತಿಳಿಸುವ ಕಾರ್ಯವನ್ನು ನಿರಂತರವಾಗಿ ನಡೆಸಿ ಕೊಂಡು ಬರುತ್ತಿದ್ದರು.[೧]

* ಸಂಶೋಧನಾ ವಿದ್ಯಾರ್ಥಿ, ಕರ್ನಾಟಕ ಸಂಘ (ರಿ), ಎಂ.ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ, ಗುರುಭವನ ಹಿಂಭಾಗ, ಮಂಡ್ಯ.

ಅವರ ಜೀವಿತ ಅವಧಿಯಲ್ಲಿ ಹಲವು ಜನಪರ ಹೋರಾಟಗಳನ್ನು ಮಾಡುವುದರ ಮೂಲಕ ರೈತಾಪಿ ಜನಗಳ ಮನದಲ್ಲಿ ಅಚ್ಚಳಿಯದೆ ಉಳಿದಿದ್ದಾರೆ. ಅಂತಹ ಹೋರಾಟಗಳಲ್ಲಿ ಶ್ರೀರಂಗಪಟ್ಟಣದ ಗೇಣಿ ಶಾಸನದ ವಿರುದ್ಧದ ಹೋರಾಟವು ಪ್ರಮುಖವಾಗಿದೆ.

ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ನೂರಕ್ಕೆ ತೊಂಭತ್ತು ಮಂದಿ ರೈತಾಪಿ ಸಮುದಾಯದವರು ಸಿರಿವಂತರ ದಬ್ಬಾಳಿಕೆ, ದೌರ್ಜನ್ಯಗಳಿಗೆ ಬಲಿಯಾಗಿರುವುದನ್ನು ನೋಡಬಹುದು. ಭೂ ಮಾಲೀಕರು, ಭೂ ಹೀನರನ್ನು ಹಲವು ವಿಧಾನಗಳಲ್ಲಿ ಶೋಷಿಸು ತ್ತಿದ್ದರು, ಹಿಂಸಿಸುತ್ತಿದ್ದರು. ರೈತಾಪಿ ಜನಾಂಗ ವರ್ಷವಿಡೀ ತಾವು ಬೆಳೆದುದ್ದೆನ್ನೆಲ್ಲಾ ಜಮೀನ್ದಾರರಿಗೆ ಒಪ್ಪಿಸಿ, ಒಂದೊತ್ತಿನ ಗಂಜಿಗೂ ಗತಿ ಇಲ್ಲದೇ ಬದುಕ ಬಂಡಿಯನ್ನು ಸಾಗಿಸಬೇಕಿತ್ತು. ಗುತ್ತಿಗೆ ಪದ್ಧತಿಯು ವರ್ಷದಿಂದ ವರ್ಷಕ್ಕೆ ಬದಲಾಗುತ್ತಿತ್ತು. ಜಮೀನ್ದಾರರು ತನ್ನ ಭೂಮಿಗೆ ರೈತರು ವರ್ಷಕ್ಕೆ ಎಷ್ಟು ಖಂಡುಗ ಭತ್ತವನ್ನು ಗುತ್ತಿಗೆಯಾಗಿ ಕೊಡಬೇಕೆಂದು ಮೊದಲೇ ನಿರ್ಧಾರ ವಾಗುತ್ತಿತ್ತು. ಆ ರೈತರು ಅಷ್ಟು ವಾರ್ಷಿಕ ಭತ್ತವನ್ನು ಕೊಟ್ಟರೂ, ಮುಂದಿನ ವರ್ಷ ಅದಕ್ಕಿಂತ ಹೆಚ್ಚು ಭತ್ತವನ್ನು ಕೊಡುವ ರೈತರಿಗೆ ಜಮೀನ್ದಾರರು ತಮ್ಮ ಭೂಮಿಯನ್ನು ಗುತ್ತಿಗೆ ಕೊಡುತ್ತಿದ್ದರು.

ಇಷ್ಟೆಲ್ಲಾ ಬೆಳವಣಿಗೆಯಿಂದ ಅಂತಿಮವಾಗಿ ಗೇಣಿದಾರರಿಗೆ ಸಾಕಷ್ಟು ಕಷ್ಟ ನಷ್ಟಗಳುಂಟಾಗುತ್ತಿದ್ದವು. ತಮಗೆ ಎಷ್ಟೇ ಕಷ್ಟ ನಷ್ಟಗಳು ಸಂಭವಿಸಿದರೂ, ತಮ್ಮ ಜೀವನಕ್ಕೆ ಆಧಾರವಾಗಿದ್ದ ಭೂಮಿಯ ಗುತ್ತಿಗೆಯನ್ನು ಕಳೆದುಕೊಳ್ಳುವ ಆತಂಕದ ನಡುವೆಯೂ ತಾವು ಬೆಳೆದ ಬೆಳೆಯಲ್ಲಿ ಹೆಚ್ಚು ಪಾಲು ಜಮೀನ್ದಾರರಿಗೆ ನೀಡಿ, ಮತ್ತಷ್ಟು ಸಾಲಸೋಲಗಳ ಸುಳಿಗೆ ಸಿಲುಕಿ ನಿರಂತರವಾಗಿ ನರಳುವುದು. ಹೆಚ್ಚಿನ ಸಂಖ್ಯೆಯ ಜಮೀನ್ದಾರರು ರೈತರ ದೃಷ್ಟಿಯಲ್ಲಿ ಖಳನಾಯಕರೇ ಆಗಿದ್ದರು.

ಬಂದೀಗೌಡರ ತಂದೆ ಚಿಕ್ಕಣ್ಣನವರು ಜಮೀನ್ದಾರ ರಾಗಿದ್ದರು. ಚಿಕ್ಕಣ್ಣನವರಿಗೆ ಇಪ್ಪತ್ತು ಎಕರೆ ತರಿ ಜಮೀನದ್ದು, ಅದರಲ್ಲಿ ೧೫ ಎಕರೆ ಜಮೀನನ್ನು ಗೇಣಿ ಕೊಟ್ಟಿದ್ದರು. ಚಿಕ್ಕಣ್ಣಗೌಡರು ಎಲ್ಲಾ ಜಮೀನ್ದಾರರಂತೆ ರೈತರನ್ನು ಶೋಷಿಸು ತ್ತಿರಲಿಲ್ಲ. ರೈತರ ಹಿತಚಿಂತನೆಯನ್ನು ಬಯಸುವವರಾಗಿದ್ದರು. ರೈತರಿಂದ ನ್ಯಾಯಯುತವಾದ ಗುತ್ತಿಗೆಯನ್ನು ಪಡೆಯು ತ್ತಿದ್ದರು. ಅಲ್ಲದೇ ಗೇಣಿದಾರರನ್ನು ಹೆಚ್ಚಿನ ಲಾಭಕ್ಕಾಗಿ ವರ್ಷ ವರ್ಷ ಬದಲಾಯಿಸುತ್ತಿರಲಿಲ್ಲ. ಬಂದೀಗೌಡರು ತಮ್ಮ ತಂದೆಯ ಮಾನವೀಯ ಗುಣಗಳಿಂದ ಉತ್ತೇಜಿತರಾಗಿ, ರೈತಾಪಿ ಜನರ ಗೇಣಿ ನೀತಿಯ ಪರವಾಗಿ ನಿಲ್ಲಲು ಕಟಿಬದ್ಧ ರಾಗಿದ್ದರು.[೨]

೧೯೫೨ರ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಕೆಂಗಲ್ ಹನುಮಂತಯ್ಯನವರು ರಾಜ್ಯ ಮುಖ್ಯಮಂತ್ರಿ ಯಾಗಿದ್ದಾಗ ಅವರ ಸಚಿವ ಸಂಪುಟದಲ್ಲಿ ಕಂದಾಯ ಮಂತ್ರಿಯಾಗಿದ್ದ ಕಡಿದಾಳ್ ಮಂಜಪ್ಪನವರು ಮೈಸೂರು ಗೇಣಿಶಾಸನ, ಮೈಸೂರು ಇನಾಂ ರದ್ಧತಿ ಮೊದಲಾದ ಶಾಸನಗಳನ್ನು ರಚಿಸುವಲ್ಲಿ ಯಶಸ್ವಿಯಾದರು. ಈ ಶಾಸನಗಳು ಸಮಾಜಕ್ಕೆ ಪೂರಕವಾದವು. ಇದರಿಂದಾಗಿ ಮಂಜಪ್ಪನವರು ಶ್ರೀಮಂತರ ಟೀಕೆಗೆ ಗುರಿಯಾದರು. ಮಠ ದೇವಸ್ಥಾನಗಳಿಗೆ ಮಾನ್ಯವಾಗಿ ಕೊಟ್ಟಿದ್ದ ಭೂಮಿಯನ್ನು ಬೆವರು ಸುರಿಸಿ ಬೇಸಾಯ ಮಾಡುವ ರೈತರಿಗೆ ಕೊಡಬೇಕು ಎಂಬ ಮೈಸೂರು ಗೇಣಿಶಾಸನವನ್ನು ಮಂಡಿಸುವಲ್ಲಿ ಇವರು ಮಹತ್ತರವಾದ ಪಾತ್ರವನ್ನು ವಹಿಸಿದರು. ಗೇಣಿದಾರರ ಪರವಾಗಿ ಮಾತನಾಡಿದವರು ಮೈಸೂರು ರಾಜ್ಯದಲ್ಲಿ ಇವರೊಬ್ಬರೇ ಎನ್ನುವ ಮಾತೂ ಕೂಡ ಕಡಿದಾಳರಿಗೆ ಬಂತು.[೩]

ಕಡಿದಾಳ್‌ಮಂಜಪ್ಪನವರು ಗೇಣಿದಾರರ ಶೋಷಣೆ ಯನ್ನು ತಡೆಗಟ್ಟುವ ಮಸೂದೆಯನ್ನು ಪಡೆದು "ಗೇಣಿ ಶಾಸನ "ವನ್ನು ಸರ್ಕಾರ ಸಿದ್ಧಪಡಿಸಿತ್ತು. ಈ ಗೇಣಿ ಶಾಸನವು ಹಲವು ಪ್ರಮುಖಾಂಶಗಳನ್ನು ಒಳಗೊಂಡಿತ್ತು. ಅವುಗಳೆಂದರೆ,

೧. ಜಮೀನ್ದಾರರು ತಮ್ಮ ಮನೋ ಇಚ್ಛೆಯಂತೆ ಗೇಣಿದಾರರನ್ನು ಪದೇ ಪದೇ ಬದಲಿಸಬಾರದು ಮತ್ತು ಅವರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಒಕ್ಕಲೆಬ್ಬಿಸುವ ಕೆಲಸ ಮಾಡಬಾರದು ಅಥವಾ ಅವರನ್ನು ಬದಲಾಯಿಸಬಾರದು.

೨. ಗೇಣಿದಾರ ಬೆಳೆದ ಬೆಳೆಯಲ್ಲಿ ಎಲ್ಲವನ್ನೂ ಅವನಿಂದ ಕಿತ್ತುಕೊಳ್ಳಬಾರದು. ಶೇಕಡ ಮೂರರಲ್ಲಿ ಒಂದು ಭಾಗ ಭೂ ಮಾಲೀಕರಿಗೆ ಹಾಗೂ ಎರಡನೇ ಮೂರು ಭಾಗ ಗೇಣಿದಾರನಿಗೆ ಸೇರಬೇಕು.

೩. ಪ್ರತಿಯೊಬ್ಬ ಗೇಣಿದಾರನಿಗೆ ತನ್ನ ಹೆಸರು, ಬೆಳೆದ ಬೆಳೆಯ ವಿವರಗಳನ್ನು ಒಳಗೊಂಡ ಪಹಣಿ ವಿತರಣೆಯಾಗಬೇಕು. ಗೇಣಿದಾರರಿಗೆ ಸಂಬಂಧಿಸಿದ ಭೂ ದಾಖಲೆಗಳು ತಾಲ್ಲೂಕು ಕಛೇರಿಯಲ್ಲಿರಬೇಕು.

೪. ಜಮೀನ್ದಾರರು ತಮ್ಮ ಭೂಮಿಯನ್ನು ಪರಭಾರೆ ಮಾಡಬೇಕಾದ ಅಂದರೆ ಮಾರುವ ಅಗತ್ಯಬಿದ್ದಾಗ ಮೊದಲ ಆದ್ಯತೆಯನ್ನು ತನ್ನ ಗೇಣಿದಾರನಿಗೆ ಕೊಂಡುಕೊಳ್ಳುವಂತೆ ನೋಟೀಸ್ ಜಾರಿ ಮಾಡಿ ಗೇಣಿದಾರನಿಂದ ನಿರಾಕರಣೆಯ ಉತ್ತರ ಬಂದಾಗ ಮಾತ್ರ ಇತರರಿಗೆ ತಮ್ಮ ಭೂಮಿಯನ್ನು ಮಾಲೀಕರು ಮಾರಬಹುದು.[೪]

ಕಂದಾಯ ಮಂತ್ರಿಯಾಗಿದ್ದ ಕಡಿದಾಳ್‌ಮಂಜಪ್ಪನವರು ಗೇಣಿದಾರರ ಶೋಷಣೆ ತಪ್ಪಿಸಲು ಸರ್ಕಾರ ಈ ಶಾಸನವನ್ನು ಜಾರಿ ಮಾಡಿ, ಮಾದರಿಗಾಗಿ ರಾಜ್ಯದ ಒಂದು ತಾಲ್ಲೂಕಿನಲ್ಲಿ ಜಾರಿಗೆ ತರಲು ನಿರ್ಧರಿಸಿತ್ತು. ಅದರ ಸಾಧಕ ಭಾದಕಗಳನ್ನು ಗಮನಿಸಿ ಅನಂತರ ರಾಜ್ಯದಾದ್ಯಂತ ಜಾರಿಗೆ ತರಲು ರಾಜ್ಯ ಸರ್ಕಾರ ನಿರ್ಧರಿಸಿತ್ತು. ಬಂದೀಗೌಡರು ಈ ಕಾಯಿದೆಯನ್ನು ಸಮರ್ಪಕವಾಗಿ ಜಾರಿಗೊಳಿಸಿದ್ದೆಯಾದಲ್ಲಿ ಗೇಣಿದಾರರ ಬಹುಪಾಲು ಸಂಕಷ್ಟಗಳೆಲ್ಲವೂ ನಿವಾರಿಸುತ್ತವೆಂದು ತಿಳಿದು, ಗೇಣಿದಾರರ ಪರ ಹೋರಾಟಕ್ಕೆ ನಿಂತು. ಕಂದಾಯ ಮಂತ್ರಿಯಾಗಿದ್ದ ಕಡಿದಾಳ್ ಮಂಜಪ್ಪನವರನ್ನು ಭೇಟಿ ಮಾಡಿ ಗೇಣಿದಾರರ ಶಾಸನವನ್ನು ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಜಾರಿಗೆ ತರಲು ಮನವಿ ಮಾಡಿಕೊಂಡರು. ಗೇಣಿ ಶಾಸನವನ್ನು ಜಾರಿಗೊಳಿಸುವ ಬಂದೀಗೌಡರ ಪ್ರಯತ್ನದ ಸುಳಿವನ್ನು ತಿಳಿದ ತಾಲ್ಲೂಕಿನ ಜಮೀನ್ದಾರರು ಕಂದಾಯ ಮಂತ್ರಿಗಳನ್ನು ಭೇಟಿ ಮಾಡಿ "ತಾಲ್ಲೂಕಿನಲ್ಲಿ ಭೂ ಮಾಲೀಕರು ಮತ್ತು ಗೇಣಿದಾರರು ಅಣ್ಣ–ತಮ್ಮಂದಿರಂತೆ ಬದುಕುತ್ತಿದ್ದೇವೆ. ನಮ್ಮಗಳ ನಡುವೆ ಯಾವುದೇ ತರಹದ ಕಚ್ಚಾಟವಿಲ್ಲ. ತಾಲ್ಲೂಕಿನಲ್ಲಿ ಗೇಣಿ ಶಾಸನ ಜಾರಿಗೊಳಿಸುವ ಅವಶ್ಯಕತೆ ಇಲ್ಲ" ಎಂದು ಮನವಿ ಮಾಡಿಕೊಂಡರು. ಆದರೆ ಬಂದೀಗೌಡರು ಮುಖ್ಯಮಂತ್ರಿ ಕೆ.ಹನುಮಂತಯ್ಯ ಅವರನ್ನು ಭೇಟಿ ಮಾಡಿ ಗೇಣಿದಾರರ ಶಾಸನವನ್ನು ತಾಲ್ಲೂಕಿನಲ್ಲಿ ಜಾರಿಗೆ ತರಲೇಬೇಕೆಂದು ಒತ್ತಾಯಿಸಿದರು.[೫]

ಶ್ರೀರಂಗಪಟ್ಟಣದಲ್ಲಿ ಗೇಣಿದಾರರ ಹಾಗೂ ಜಮೀನ್ದಾರರ ನಡುವಿನ ಸಂಬಂಧದ ವಸ್ತು ಸ್ಥಿತಿಯನ್ನು ಸ್ವತಃ ಅರಿಯಲು ಕಂದಾಯ ಮಂತ್ರಿ ಕಡಿದಾಳ್ ಮಂಜಪ್ಪನವರನ್ನೇ ಶ್ರೀರಂಗಪಟ್ಟಣಕ್ಕೆ ಬಂದೀಗೌಡರು ಆಹ್ವಾನಿಸಿದಾಗ, ಅದಕ್ಕೊಪ್ಪಿದ ಕಂದಾಯ ಮಂತ್ರಿಗಳು ತಾಲ್ಲೂಕಿಗೆ ಬರಲು ಒಪ್ಪಿದರು. ಅವರ ಬರುವಿಕೆಯ ಖಾತರಿಯಾದಾಗ ಬಂದೀಗೌಡರು ತಾಲ್ಲೂಕಿನ ಹಳ್ಳಿ ಹಳ್ಳಿಗಳಲ್ಲಿ ಸಂಚರಿಸಿ ಗೇಣಿದಾರರನ್ನು ಒಗ್ಗೂಡಿಸಿ ಗೇಣಿದಾರರ ಶಾಸನದ ಜಾರಿಯಿಂದ ಉಂಟಾಗುವ ಪ್ರಯೋಜನಗಳನ್ನು ವಿವರಿಸಿದರು.

೧೯೫೨ರಲ್ಲಿ ಶ್ರೀರಂಗಪಟ್ಟಣದ ಚಾಮರಾಜೇಂದ್ರ ಮೊಮೋರಿಯಲ್ ಛತ್ರದಲ್ಲಿ ಏರ್ಪಾಡಾಗಿದ್ದ ಸಭೆಯಲ್ಲಿ ಕಂದಾಯ ಮಂತ್ರಿಗಳಾದ ಕಡಿದಾಳ್ ಮಂಜಪ್ಪ ನವರು ಹಾಜರಾಗಿದ್ದರು. ಜಮೀನ್ದಾರರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಗೇಣಿದಾರರೇ ಸೇರಿದ್ದ ಈ ಸಭೆಯಲ್ಲಿ ಗೇಣಿದಾರರು ಜಮಿನ್ದಾರರಿಂದ ಅನುಭವಿಸಿದ್ದ ಹಲವು ಕಷ್ಟ ಸಂಕೋಲೆ ಗಳನ್ನು ನಿವೇದಿಸಿಕೊಂಡು ಗೇಣಿ ಶಾಸನವನ್ನು ಬಹುಬೇಗನೆ ಜಾರಿಗೊಳಿಸುವಂತೆ ಕೋರಿಕೊಂಡರು. ಇದರಿಂದ ಜಮೀನ್ದಾರರ ಜಂಘಾ ಬಲವೇ ಅಡುಗುವಂತೆ ತಾಲ್ಲೂಕಿನ ಹಳ್ಳಿಗಳಲ್ಲಿ ಮಿಂಚಿನ ಸಂಚಾರ ನಡೆಸಿ ಗೇಣಿದಾರರನ್ನು ಒಗ್ಗಟ್ಟಾಗಿಸಿದ್ದ ಬಂದೀಗೌಡರು ಗೆದ್ದರು.[೬]

ಈ ಟೆನೆಸ್ಸಿ ಆ್ಯಕ್ಟ್‌ನ ಮೇಲೆ ೧೯೫೩ ರ ಮಾರ್ಚ್ ೨೭ರಂದು ಪಿ.ಸೀತಾರಾಮಯ್ಯ ಎಂಬುವವರು ಸ್ಪಷ್ಟೀಕರಣ ಕೋರಿದಾಗ ಕಂದಾಯ ಮಂತ್ರಿಗಳಾಗಿದ್ದ ಕಡಿದಾಳ್ ಮಂಜಪ್ಪನವರೇ ಸ್ವತಃ ವಿಧಾನ ಮಂಡಲದಲ್ಲಿ ಸ್ಪಷ್ಟೀಕರಣ ನೀಡಿದರು. ಈ ಕಾಯ್ದೆಯು ಭಾರತದಲ್ಲಿ ಜಾರಿಯಲ್ಲಿದ್ದ ಅತೀ ಸೌಮ್ಯದ ಟೆನಾಸ್ಸಿ ಕಾಯ್ದೆಯೆಂದು ತಿಳಿಸುತ್ತಾ, ಈ ಕಾಯ್ದೆಯನ್ನು, ಬೊಂಬೈ ಟೆನಾಸ್ಸಿ ಕಾಯ್ದೆಯ ಮಾದರಿಯ ಆಧಾರದ ಮೇಲೆ ರಚಿಸಲಾಗಿದೆ. ಜಮೀನುದಾರರಿಗೆ ನನ್ನ ಕಳಕಳಿಯ ವಿನಂತಿಯೇನೆಂದರೆ, ಅವರು ಸಮಯಕ್ಕನು ಸಾರವಾಗಿ ನಡೆಯಬೇಕು. ಇಲ್ಲದಿದ್ದರೆ ಅವರ ಅಧೋಗತಿಯೇ ಸರಿ, ಅದಕ್ಕಾಗಿಯೇ ಪಿ. ಸೀತಾರಾಮಯ್ಯನವರು "ಗೇಣಿದಾರರ ಮತ್ತು ಜಮೀನುದಾರರ ನಡುವೆ ಸಾಮರಸ್ಯ ಇಲ್ಲವೆಂಬ ಹೇಳಿಕೆ ಸತ್ಯವಾದದ್ದು., ಪ್ರಾರಂಭಿಕ ಹಂತದಲ್ಲಿ, ಇಂಥ ಸನ್ನಿವೇಶಗಳು ಬಂದೊದಗುವುದು ಸಹಜ, ಆದರೆ ಕ್ರಮೇಣ, ಈ ಕಾಯ್ದೆಯ ಉಪಬಂಧಗಳ ಪ್ರಕಾರ ಜಮೀನುದಾರರು ಮತ್ತು ಗೇಣಿದಾರರು ಹೊಂದಿಕೊಂಡು ಹೋಗಬೇಕು.[೭]

ಕೆಲವು ಜನರು ಈ ಗೇಣಿ ಕಾಯ್ದೆಯ ವಿರುದ್ಧ ಇದ್ದಾರೆ ಎಂಬುದು ಸತ್ಯ. ಏಕೆಂದರೆ, ಕಾಯ್ದೆಯ ವಿರುದ್ಧ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಕೆಲಸ ಮಾಡುವುದು ಸಹಜ ಮತ್ತು ಸ್ವಾಭಾವಿಕ ಕಾಯ್ದೆಯಲ್ಲಿ ಮಾರ್ಪಾಡು ಮಾಡಬೇಕಾಗುತ್ತದೆ. ಭಾರತದಲ್ಲಿ ಅತೀ ಉತ್ತಮವಾದ ಕಾಯ್ದೆ ಎಂದು, ಹೆಸರು ಪಡೆದ, ಬಾಂಬೆ ಟೆನೆನ್ಸಿ ಕಾಯ್ದೆಯು ೧:೬ ದಷ್ಟು ಉತ್ಪನ್ನವು ಬಾಡಿಗೆಗೆ ಅವಕಾಶ ಮಾಡಿಕೊಡುತ್ತದೆ. ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಬಾಡಿಗೆಯ, ಉತ್ಪನ್ನದ ಅರ್ಧದಷ್ಟು ಇರುತ್ತದೆ. ಕೆಲವು ರೈತರ ಪ್ರಕಾರ ಕಾಯ್ದೆಯನ್ನು ಇಡೀ ರಾಜ್ಯಕ್ಕೆ ಅನ್ವಯವಾಗುವಂತಾಗಬೇಕು ಮತ್ತು ಗೇಣಿದಾರರಿಗೆ ಕೆಲವು ರಕ್ಷಣೆಗಳು ಸಿಗುವಂತಾಗಬೇಕು. ಸೀತಾರಾಮಯ್ಯನವರು ಹೇಳಿದಂತೆ ಭೂಮಿಯ ಕಿಮ್ಮತ್ತು ಇಳಿಮುಖವಾಗಿರುತ್ತದೆ. ಕಾಯ್ದೆಯು ಕೇವಲ ಶ್ರೀರಂಗಪಟ್ಟಣ ತಾಲ್ಲೂಕಿಗೆ ಅನ್ವಯಿಸುವುದಿಲ್ಲ. ಅದು ಉಳಿದ ತಾಲ್ಲೂಕುಗಳಿಗೂ ಅನ್ವಯಿಸುತ್ತದೆ. ಶ್ರೀರಂಗಪಟ್ಟಣ ತಾಲ್ಲೂಕು ಬಿಟ್ಟರೆ, ಬೇರೆಯಾವ ತಾಲ್ಲೂಕುಗಳಲ್ಲಿ, ಜಮೀನುದಾರರು, ಕಾಯ್ದೆಯ ವಿರುದ್ಧ ಆಕ್ಷೇಪಣೆ ಮಾಡಿಲ್ಲ, ಕಾಯ್ದೆಯು ಜಮೀನುದಾರರ ಹಿತಾಸಕ್ತಿಗಳನ್ನು ಕಾಪಾಡಲು ಅವಕಾಶ ನೀಡುತ್ತದೆ.

ಗೇಣಿದಾರನು, ಬಾಡಿಗೆ ಕೊಡದಿದ್ದಲ್ಲಿ ಮಾತ್ರ ಅವನ ಸ್ವಾಧೀನತೆಯನ್ನು ತಪ್ಪಿಸಲಾಗುತ್ತದೆ. ಒಂದು ವೇಳೆ ಅವನು ಸಮರ್ಪಕವಾಗಿ ಭೂಮಿಯನ್ನು ಸಾಗುವಳಿ ಮಾಡದಿದ್ದಲ್ಲಿ ಅವನ ಭೂ ಸ್ವಾಧೀನತೆಯನ್ನು ಕಸಿದುಕೊಳ್ಳಲಾಗುತ್ತದೆ.[೮]

ಸಿ.ಬಂದೀಗೌಡರು ಶ್ರೀರಂಗಪಟ್ಟಣ ತಾಲ್ಲೂಕಿನ ಎಲ್ಲೆಡೆ ಮತ್ತೆ ಸಂಚರಿಸಿ ಗೇಣಿದಾರರು ಗುತ್ತಿಗೆ ಮಾಡುತ್ತಿದ್ದ ಜಮೀನಿನ ವಿವರಗಳನ್ನು ತಾಲ್ಲೂಕು ಕಛೇರಿಗೆ ಲಿಖಿತವಾಗಿ ಸಲ್ಲಿಸಿದರು. ಕಂದಾಯ ಇಲಾಖೆಯ ಅಧಿಕಾರಗಳನ್ನು ಸಂಪರ್ಕಿಸಿ ಗೇಣಿದಾರರ ಹೆಸರಿಗೆ ಪಹಣಿಗಳು ಬರೆಯಲ್ಪಟ್ಟವು. ಸ್ವತಃ ಜಮೀನ್ದಾರರ ಮಗನಾದ ಗೌಡರು ತಮ್ಮ ಸ್ವಂತ ಭೂಮಿ ಗೇಣಿದಾರರಿಗೆ ಹೋದರೂ ಚಿಂತಿಸದೇ, ನೂರಾರು ವರ್ಷಗಳಿಂದ ಅತಂತ್ರರಾಗಿ ಬದುಕನ್ನು ನಡೆಸುತ್ತಿದ್ದ ಎಲ್ಲಾ ಜಾತಿಮತಗಳಿಗೆ ಸೇರಿದ ಸಾವಿರಾರು ಮಂದಿ ಬಡಗೇಣಿ ದಾರರಿಗೆ ಸುಭದ್ರವಾದ ಆರ್ಥಿಕ ಭದ್ರತೆಯನ್ನು ಒದಗಿಸುವಲ್ಲಿ ಡಾ. ಸಿ. ಬಂದೀಗೌಡರು ನಡೆಸಿದ ಹೋರಾಟ ಅವಿಸ್ಮರಣೀಯವಾದುದು.

ಆಧಾರಸೂಚಿ

೧. ಮಹಾಂತೇಶ ಕುತನನಿ, ಸ್ವಾತಂತ್ರ್ಯ ಹೋರಾಟಗಾರ ಸಿ.ಬಂದೀಗೌಡರ ಜೀವನ ಸಾಧನೆ. (ಅಪ್ರಕಟಿತ ಎಂ.ಫಿಲ್. ನಿಬಂಧ) ಚರಿತ್ರೆ' ವಿಭಾಗ ಹಂಪಿ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೨೦೧೨, ಪುಟ ೪೪.

೨. ನಾಗರಾಜ.ಸಿ.ಪಿ., ಮೌನಸಾಧಕ ಡಾ. ಸಿ. ಬಂದೀಗೌಡ, ಬಂಧುಮಿತ್ರ ಪ್ರಕಾಶನ, ಮಂಡ್ಯ, ೨೦೦೫, ಪುಟ ೩೬.

೩. ಪ್ರತಿಭಾವಂತ ಸಂಸದೀಯ ಪಟು–ಕಡಿದಾಳ್ ಮಂಜಪ್ಪ, ಬೆಂಗಳೂರು ೧೯೯೯, ಪುಟ ೦೬.

೪. ನಾಗರಾಜ.ಸಿ.ಪಿ. ಮೇಲೆ ಉದ್ಧರಿಸಿದ ಗ್ರಂಥ ಪುಟ ೩೭.

೫. ಅದೇ ಪುಟ ೩೬, ೩೭.

೬ ರಾಜಶೇಖರ.ಪಿ.ಕೆ. (ಸಂ.) ಮಣ್ಣಿನ ಹಣತೆ, ಪುಟ ೫೫೦.

೭. Mysore Legislative council debates 27th March 1953

೮. 1bid-1953.

ಶ್ಯಾಮರಾವ್ ಕೈಕಿಣಿ ಅವರ ಕನ್ನಡ ಕೈಂಕರ್ಯ

ಡಾ. ಜ್ಯೋತ್ಸ್ನಾ ಕಾಮತ್*

ಉತ್ತರ ಕನ್ನಡ ಜಿಲ್ಲೆಯ ಆಗಿನ್ನೂ ಚಿಕ್ಕ ಹಳ್ಳಿಯಾಗಿದ್ದ ಮುರ್ಡೇಶ್ವರದಲ್ಲಿ ೧೮೪೧ರಲ್ಲಿ ಶಾಮರಾಯರು, ಗೌಡ ಸಾರಸ್ವತ ಬ್ರಾಹ್ಮಣ ಜನಾಂಗದ ಉಪ ಪಂಗಡವಾಗಿದ್ದ ಚಿತ್ರಾಪುರ ಸಾರಸ್ವತ ಮನೆತನದ ವಿಠ್ಠಲ ಮಂಜುನಾಥಯ್ಯ ಕಾಯಕಿಣಿ ಅವರ ಎರಡನೆ ಮಗನಾಗಿ ಹುಟ್ಟಿದರು. ವ್ಯಾಪಾರ–ವಾಣಿಜ್ಯಗಳು ಸಾಧಿಸದ ಈ ಪಂಗಡದ ಸದಸ್ಯರು ಹೆಚ್ಚಾಗಿ ಕೆಳದಿ, ಸೋಂದಾ, ಬಿಳಗಿ, ಗೇರಸೊಪ್ಪಾ, ತುಂಡರಸರ ಪ್ರದೇಶದ ಗ್ರಾಮಗಳಲ್ಲಿ ಪಟೇಲ–ಶಾನಭೋಗರಾಗಿದ್ದವರು. ಬ್ರಿಟಿಷರ ಕಾಲದಲ್ಲಿ ಕಷ್ಟ ಪಟ್ಟು ಇಂಗ್ಲೀಷ್ ಕಲಿತು ಚಿಕ್ಕಪುಟ್ಟ ಸರಕಾರಿ ಸೇವೆಗಳನ್ನು ಕೈಕೊಂಡ ಈ ಜನ, ಮನೆ ಮಾತು ಕೊಂಕಣಿ ಮತ್ತು ಕೆಲವು ಸಂಪ್ರದಾಯಗಳನ್ನು ಬಿಟ್ಟರೆ ಮುಕ್ಕಾಲು ಕನ್ನಡಿಗರಾಗಿಯೇ ಬೆಳೆದವರು. ಬ್ರಿಟಿಷರ ಅಡ್ಡ ಹೆಸರು ಅಥವಾ ಖಣಿಡಿಟಿಚಿಟಜ ಪದ್ಧತಿಯಂತೆ ತಮ್ಮ ಶಾನಭೋಗಿಕೆಯ ಅಥವಾ ಪೂರ್ವಜರ ಗ್ರಾಮಗಳ ಹೆಸರುಗಳನ್ನೇ ಸ್ವೀಕರಿಸಿದ್ದನ್ನು ನೋಡಬಹುದು. ಕಾಯಕಿಣಿ, ಚಂದಾವರ, ಕಾರ್ನಾಡ, ಪಂಜೆ, ಸಾಲೆತೊರೆ ಸಿರೂರ ಇತ್ಯಾದಿ. ಶಾಮರಾಯರ ಬಾಲ್ಯದಲ್ಲಿ ಇಡೀ ಜಿಲ್ಲೆಯಲ್ಲಿ ಒಂದು ಹಾಯ್ ಸ್ಕೂಲ್ ಇರಲಿಲ್ಲ! ಹೊನ್ನಾವರವೇ ಅಂದಿನ ದೊಡ್ಡ ಊರು. ಅಲ್ಲಿ ಮುಲ್ಕಿ ಪರೀಕ್ಷೆವರೆಗೆ ಪ್ರಾಥಮಿಕ ಶಾಲಾಭ್ಯಾಸ ಮುಗಿಸಿ, ಖಾಸಗಿಯಾಗಿ ಇಂಗ್ಲಿಷ್ ಓದಿ ಉಡಿಚಿಜಜ ಪರೀಕ್ಷೆ ಖ ಕೊಟ್ಟು ರೆವೆನ್ಯೂ ಖಾತೆಯಲ್ಲಿ ಗುಮಾಸ್ತರಾದರು. ತಮ್ಮ ಇಂಗ್ಲೀಷ್–ಕನ್ನಡ ಪರಿಣತಿಯಿಂದ ಕಲೆಕ್ಟರ್ ವೆಡರ್‌ಬರ್ನ್ ಅನ್ನುವವರ ಮೆಚ್ಚಿಗೆಗೆ ಪಾತ್ರರಾದರು. ಓದಿಗಾಗಲೀ ವೃತ್ತಿಗಾಗಲೀ ಯಾವ ಅವಕಾಶಗಳೂ ಇಲ್ಲದೇ ಆಗಿನ ಮುಂಬೈ ನಗರಕ್ಕೆ ಪ್ರಸ್ಥಾನ ಮಾಡಿ ಬೆಳೆದವರಲ್ಲಿ ಶಾಮರಾವ್ ವಿಠಲ ಕಾಯಕಿಣಿ ಅವರು ಮೊದಲಿಗರು. (೧೮೬೪)

ರೇಮಂಡ್‌ವೆಸ್ಟ್ ಎಂಬ ಜಿಲ್ಲಾ ನ್ಯಾಯಾಧೀಶರು ಮುಂದೆ ಮುಂಬೈ ಹೈಕೋರ್ಟ್ ನ್ಯಾಯಾಧೀಶರಾದರು. ಅವರ ಮೆಚ್ಚಿಗೆಯ ಶಾಮರಾವ್ ವಿಠ್ಠಲ ಕಾಯಕಿಣಿ ಉಚ್ಚನ್ಯಾಯಾಲಯದಲ್ಲಿ ಅವರು ಏಕಮೇವ ಕನ್ನಡ ಭಾಷಾಂತರಕಾರ ಮತ್ತು ವಿವರಣಕಾರರಾಗಿ ನೇಮಿಸಲ್ಪಟ್ಟಾಗ ಬಂಡಿಗಟ್ಲೆ ಕನ್ನಡ ಕೇಸುಗಳು ಅವರಿಗಾಗಿ ಕಾದಿದ್ದವು, ಬರುತ್ತಲೇ ಇದ್ದವು. ಇವುಗಳಲ್ಲಿ ಪ್ರಿ.ವಿ. ಕೌನ್ಸಿಲ್‌ಗೆ ಹೋಗಬೇಕಾದ ಅಪೀಲುಗಳೂ ಇದ್ದವು. ಬೆಳಗಾಂವ, ಧಾರವಾಡ, ಬಿಜಾಪುರ, ಕಾರವಾರ ಜಿಲ್ಲೆಯಿಂದ ಬಂದವುಗಳು. ಶಾಮರಾಯರ ಉಭಯ ಭಾಷಾ ಪ್ರಭುತ್ವ ಬೇಗನೆ ಜನಪ್ರಿಯವಾಗಿಸಿತು. ಅವುಗಳನ್ನೆಲ್ಲ ಓದಿ–ಬರೆದು ಕೋರ್ಟಿನಲ್ಲಿ ಹಾಜರಪಡಿಸುತ್ತಲೇ, ಹೈಕೋರ್ಟ್ ಪ್ಲೀಡರ್ ಎಂದು ಎರಡು ವರ್ಷದ ಪರೀಕ್ಷೆ ಕಟ್ಟಿ ಉಚ್ಚ ದರ್ಜೆಯಲ್ಲಿ ಉತ್ತೀರ್ಣರಾದರು. ಅಲ್ಲಿಂದ ವೃತ್ತಿಯ ಜೊತೆಗೆ ಮುಂಬೈ ಮಹಾನಗರದ ಸಾಮಾಜಿಕ ಸುಧಾರಣೆಗಳು, ಸಾಂಸ್ಕೃತಿಕ ಜೀವನ ಹಾಗೂ ರಾಜಕೀಯ ಜಾಗೃತಿಗಳ ಸಂಘಟನೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು.

ಆಗಿನ್ನೂ 'ಸದರ್ನ ಮರಾಥಾ ಕಂಟ್ರಿ' ಎಂದೇ ಗುರುತಿಸಲ್ಪಡುತ್ತಿದ್ದ, ಈಗಿನ ಮುಂಬೈ ಕರ್ನಾಟಕದಲ್ಲಿ ಮರಾಠಿ ಗರ್ಜನೆಯೇ ಜೋರಾಗಿತ್ತು. ಕನ್ನಡ ಜನತೆ ೫ ಆಡಳಿತ ಪ್ರದೇಶಗಳಲ್ಲಿ ಹಂಚಿಹೋಗಿತ್ತು. ಮೈಸೂರು, ಹೈದರಾಬಾದ್ ಸಂಸ್ಥಾನಗಳು, ಮುಂಬೈ ಮತ್ತು ಮದ್ರಾಸ್ ಪ್ರೆಸಿಡೆನ್ಸಿ ಅಥವಾ ಪ್ರಾಂತಗಳು ಮತ್ತು ಕೊಡಗು ಮಹಾರಾಜರ ಮೈಸೂರು ಬಿಟ್ಟರೆ ಕನ್ನಡದ ಸೊಲ್ಲು ಎಲ್ಲೂ ಕೇಳಿ ಬರುತ್ತಿರಲಿಲ್ಲ. ಇಂಥಲ್ಲಿ ಬಹುಭಾಷೆಗಳಿಗೆ ನೆಲೆವೀಡು ಒದಗಿಸಿದ ಮಹಾನಗರಿ ಮುಂಬೈಗೆ ಬಂದೊಡನೆ ಶಾಮರಾಯರು, ತನ್ನನ್ನು ಕನ್ನಡ ಮತ್ತು ಕರ್ನಾಟಕತ್ವದ ಕುರಿತ ಜಾಗೃತಿ ಮೂಡಿಸುವಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು.

'Charity begins at home' ಎಂಬ ಗಾದೆಯಿದೆ. ಅತಿ ಬಡ, ಹಿಂದುಳಿದ ಜಿಲ್ಲೆಯೆಂದೇ ಮುಂಬೈ ಪ್ರಾಂತದಲ್ಲಿ ಗುರುತಿಸಲ್ಪಟ್ಟ ಜಿಲ್ಲೆಯ ಜಾತಿ ಬಾಂಧವರಿಗೆ ಮುಕ್ತ ಹಸ್ತದ ಸಹಾಯವನ್ನು ಕೈಕಿಣಿಯವರು ನೀಡಿದರು. ಶಿಕ್ಷಣಕ್ಕೋ, ನೌಕರಿಗೋ ಅವಕಾಶ ಹುಡುಕಿಕೊಂಡು ಬರುತ್ತಿದ್ದ ಎಳೆಯರಿಗೆ, ಗೃಹಸ್ಥರಿಗೆ ಗಿರಗಾಂವದ ಕಾಯಕಿಣಿಯವರ ಮನೆ, ತೆರೆದ ಬಾಗಿಲು ಆಗಿತ್ತು. ಅವರಿಂದ ತಾತ್ಪೂರ್ತಿಕ ಸಹಾಯ ಪಡೆದು ಬಳಿಕ ಮುಂಬೈಯಲ್ಲಿಯೇ ನೆಲೆಸಿದವರಿಗೆ

*# ೧೧೦, 'ಶಶಿಕಿರಣ', ೧೮ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–೫೬೦೦೫೫.

ಲೆಕ್ಕವಿಲ್ಲ. ಬಂದವರಿಗಾಗಿ ಕ್ರಮೇಣ 'ಕೆನರಾ ಕ್ಲಬ್' ರೂಪಗೊಂಡಿತು. ಅಡಿಗೆಗೆ ಕೊಂಕಣಿಯವರು ಬಂದರು. ಚಿಕ್ಕ ಗೆಸ್ಟ್ ಹೌಸ್ ಕಾಣಿಸಿಕೊಂಡಿತು. ಕಾಯಕಿಣಿ ದಂಪತಿಗಳ ಅಂತಃಕರಣದ ಸಹಾಯದಿಂದ ಹಲವಾರು ಜನ ಡಾಕ್ಟರ್, ಇಂಜಿನಿಯರ್, ಶಿಕ್ಷಕರು, ವಕೀಲರು, ವಿಜ್ಞಾನಿಗಳಾದರು. ನೇರ ಸಹಾಯ ಪಡೆದು B.A., LLB ಓದಿ ಮುಂದೆ ಮುಂಬೈ ಉಚ್ಚನ್ಯಾಯಾಧೀಶರಾದ ಸರ್ ನಾರಾಯಣ ಗಣೇಶ್ ಚಂದಾವರಕರ (೧೮೫೫–೧೯೨೩) ಕಾಯಕಿಣಿಯವರ ಸೋದರಳಿಯ. ಮುಂದೆ ಇಂದೋರ್ ಸಂಸ್ಥಾನದ ಪ್ರಧಾನಮಂತ್ರಿಯಾಗಿ, ಪಕ್ಕಾ ರಾಷ್ಟ್ರೀಯವಾದಿ ಆಗಿ ಗಾಂಧಿಯುಗದಲ್ಲಿ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್‌ದ ಸಕ್ರಿಯ ಕಾರ್ಯಕರ್ತರಾಗಿ, ೧೯೦೦ನೇ ವರ್ಷದ ಲಾಹೋರ್ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರೂ ಆಗಿ ದುಡಿದರು. ಸೋದರ ಮಾವ + ಅಳಿಯ ರಾನಡೆ, ತೇಲಂಗ್ ಭಾಂಡಾರಕರ್ ಜೊತೆ ಸೇರಿಕೊಂಡು ಹತ್ತಾರು ಸಾಮಜಿಕ, ಶೈಕ್ಷಣಿಕ, ರಾಜಕೀಯ ಕ್ಷೇತ್ರಗಳಲ್ಲಿ ಹೆಸರುವಾಸಿ ಆದರು.

ಶಾಮರಾವ್ ವಿಠ್ಠಲ ಕೈಕಿಣಿ ಅವರ ಬಲಗೈ ಬಂಟನೆಂದೇ ಹೆಸರಾದ ಶ್ರೀಪಾದ ಎಸ್. ತಾಳ್ಮಕಿ ಅವರು (೧೮೬೮–೧೯೪೮) ಕಡಿಮೆ ಆದಾಯದ ಬಾಂಧವರಿಗೂ ಮುಂಬೈಯಲ್ಲಿ ಸ್ವಂತ ನೆಲೆ ಒದಗಿಸಲು ಶಾಮರಾವ್‌ರೊಂದಿಗೆ ದುಡಿದರು. ೧೯೦೪ರಲ್ಲಿ ಜಾರಿಗೆ ಬಂದ ಸಹಕಾರಿ ಸಂಘಗಳ ಕಾಯ್ದೆಯ ಲಾಭ ಪಡೆದು ಕೆನರಾ ಕೊ–ಆಪರೇಟಿವ್ ಕ್ರೆಡಿಟ್ ಸೊಸಾಯಟಿ ಪ್ರಾರಂಭಿಸಿದರು. ಈ ಸಂಸ್ಥೆಯ ಸಹಕಾರಿ ಗೃಹ ನಿರ್ಮಾಣ ಸಂಸ್ಥೆ, ಇಡೀ ಏಷ್ಯ ಖಂಡದಲ್ಲೇ ಮೊದಲನೆಯದೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಮುಂದೆ ಶಾಮರಾವ್ ಅವರ ನಿಧನದ ಬಳಿಕ ಇದೇ Co-operative Credit ಸೊಸಾಯಟಿ – ಶಾಮರಾವ್ ವಿಠ್ಠಲ್ ಕೋ–ಆಪರೇಟಿವ್ ಬ್ಯಾಂಕ್ ಆಗಿ ಪರಿವರ್ತಿತವಾಯಿತು. ತನ್ನವರಿಗಾಗಿ ದುಡಿದು ಅಸಂಖ್ಯರಿಗೆ ನೆಲೆ ಒದಗಿಸಿದ ಶಾಮರಾಯರ ಹೆಸರನ್ನು ಬ್ಯಾಂಕಿಗೆ ಇಡುವಲ್ಲಿ ತಾಳ್ಮಕಿ ಯಶಸ್ವಿ ಆದರು.

ಕೈಕಿಣಿ ಅವರ ಕನ್ನಡದ ಸೇವೆ: ಸುಮಾರು ೧೮೮೭ರಲ್ಲಿ ಕರ್ನಾಟಕ ಪ್ರೆಸ್ ಮುಂಬೈಯಲ್ಲಿ ಪ್ರಾರಂಭವಾಗಲು ಶಾಮರಾಯರು ಪ್ರೇರಕಶಕ್ತಿಯಾದರು. ಇದನ್ನು ಪ್ರಾರಂಭಿಸಿದವರು ಬಂಕಿಕೊಡ್ಲ (ಹನೇಹಳ್ಳಿ)ಯ ಮಂಗೇಶ ಶಾಂತಪ್ಪ ನಾಡಕರ್ಣಿ ಅವರು. ಮುಂಬೈ ಕನ್ನಡಿಗರೆಲ್ಲ ಆಗಾಗ ಕೆನರಾ ಕ್ಲಬ್‌ದಲ್ಲಿ ಭೇಟಿ ಆಗಿ ತಮ್ಮವರಿಗೆಲ್ಲ ಸಹಾಯ ನೀಡುವ ಉಪಾಯಗಳನ್ನು ಚರ್ಚಿಸುತ್ತಿದ್ದರು. 'ಇಗ್ಗಪ್ಪ ಹೆಗಡೆ ವಿವಾಹ ಪ್ರಸಂಗ' ಬರೆದ ಕೀರ್ತಿ ವೆಂಕಟರಮಣ ಶಾಸ್ತ್ರಿ ಸೂರಿ, ಪ್ರಮುಖರಾಗಿದ್ದರು. ಜಿಲ್ಲೆಯ ಸಂಸ್ಕೃತ ವಿದ್ವಾಂಸರಿಗೆ ಹೆಸರಾಂತ ಕಲಾವಿದರಿಗೆ ಮುಂಬೈಯಲ್ಲಿ ಕಾರ್ಯಕ್ರಮ ನೀಡಲು ಸಹಾಯ ಒದಗಿಸುತ್ತಿದ್ದರು. 'ಹವ್ಯಕಸುಬೋಧ ಪತ್ರಿಕೆ'ಯನ್ನು ಪ್ರಾರಂಭಿಸಿದ ಸೂರಿ ಅವರು ಸಾಕಷ್ಟು ಕಾಲ ತಮ್ಮ ಬರವಣಿಗೆಗೆ ಕರ್ನಾಟಕ ಪ್ರೆಸ್‌ದ ಸೇವೆ ಬಳಸಿದ್ದಾರೆ.

ವಾರ ಪತ್ರಿಕೆ: ಸುಮಾರು ಇದೇ ಹೊತ್ತಿಗೆ ಕನ್ನಡ ಸುವಾರ್ತೆ ಎಂಬ ವಾರ ಪತ್ರಿಕೆ ಮುಂಬೈಯಲ್ಲಿ ಪ್ರಾರಂಭ ವಾಯಿತು. ಶಾಮರಾಯರು ಸಂಪಾದಕರಾದರು ಕರ್ನಾಟಕ ಪ್ರೆಸ್, ತನ್ನ ೧೨೫ ವರ್ಷಗಳಲ್ಲಿ ೪ ತಲೆಮಾರುಗಳಲ್ಲಿ – ಮೂರು ಕುಟುಂಬಗಳಲ್ಲಿ ಹಸ್ತಾಂತರಿಸಲ್ಪಟ್ಟಿತು. ಕೊನೆಯವರಾದ ಧವಳೆಯವರು, ಯಾರಿಗೂ ಹೇಳದೇ ಕೇಳದೇ ಪ್ರೆಸ್ + ಪತ್ರಿಕೆಯ ಪ್ರಾರಂಭದ ಇತಿಹಾಸ, ಘಟನೆಗಳು ಅಷ್ಟೇಕೆ ಸ್ಥಾಪಕರ ಇನ್ನಿತರ ಮುಖಂಡರ ಭಾವಚಿತ್ರಗಳನ್ನೆಲ್ಲ ರದ್ದಿಗೆ ಹಾಕಿದರೆಂದು ಕೃತಿಯಲ್ಲಿ ದಿ॥ ಸದಾನಂದ ಭಟ್ಕಳ ಬರೆದಿದ್ದಾರೆ. ಅವರು ಪೊಪ್ಯುಲರ್ ಪ್ರಕಾಶನ ಸಂಸ್ಥೆಯ ಮಾಲೀಕರಾಗಿ ಕೆಲವು ಉತ್ತಮ ಕೃತಿಗಳನ್ನು ಹೊರತಂದವರು. ಕರ್ನಾಟಕ ಪ್ರೆಸ್ ಮತ್ತು 'ಕನ್ನಡ ಸುವಾರ್ತೆ'ಯ ಚರಿತ್ರೆ ಬರೆಯಲು ಭಟ್ಕಳ ಅವರು ಇನ್ನಿಲ್ಲದಂತೆ ಶ್ರಮಿಸಿದರು. ಆದರೆ ಬೇಕಾದ ಮಾಹಿತಿ ಸಿಗಲೇ ಇಲ್ಲ.

ವಾರಪತ್ರಿಕೆಯಾಗಿ ಕನ್ನಡ ಸುವಾರ್ತೆಯಲ್ಲಿ ಅಂದಿನ ರಾಜಕೀಯ ಸಾಮಾಜಿಕ ಘಟನೆಗಳು ಪ್ರಕಟಗೊಳ್ಳುತ್ತಿದ್ದವು. ಸಾಂಘಿಕ ಪ್ರಯತ್ನವಾಗಿ ಪ್ರಕಟವಾಗುತ್ತಿದ್ದ ಪತ್ರಿಕೆಯಲ್ಲಿ ಎಲ್ಲರೂ ಪಾಲ್ಗೊಂಡು ದುಡಿಯುತ್ತಿದ್ದರು. ಹೆಸರಿಲ್ಲದೇ ದುಡಿಯುತ್ತಿದ್ದ ರಾದ್ದರಿಂದ ಶಾಮರಾಯರವೇ ಲೇಖಗಳನ್ನು ಗುರುತಿಸು ವುದು ಕಷ್ಟ! ಸಿಕ್ಕ ಹಳೇ ಸಂಚಿಕೆಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಪ್ರಮುಖ ಘಟನೆಗಳನ್ನು ಅದರಲ್ಲೂ ಅರಣ್ಯ ಖಾತೆಯು ಬ್ರಿಟಿಷರ ಪರವಾಗಿ ನಡೆಸಿದ್ದ ಕಾನೂನು ಬದ್ಧ ಶೋಷಣೆಗಳನ್ನು ಖಂಡಿಸಿ ಬರೆದವುಗಳು ಕೈಕಿಣಿ ಅವರವೇ ಎಂದು ಗುರುತಿಸುತ್ತಾರೆ. ಕರ್ನಾಟಕ ಪ್ರೆಸ್ ಮುಂಬೈಯಲ್ಲಿ ಮೊದಲ ಭಾರತೀಯರ ಅರ್ಥಾತ್ ಕನ್ನಡಿಗರ ಮುದ್ರಣೋದ್ಯಮವಾಗಿತ್ತು.

ಕನ್ನಡ ಸುವಾರ್ತೆ, ಮದರಾಸು, ಮಂಗಳೂರು, ಕೊಚ್ಚಿ ಕುಂದಾಪುರಗಳವರೆಗೂ ತಲುಪುತ್ತಿತ್ತು. ಬಹುಶಃ ಆಗ ಪ್ರಾರಂಭವಾಗಿದ್ದ ಸ್ಟೀಮರ್ ಸರ್ವಿಸ್ ಕರಾವಳಿಯ ನೆಲೆಸಿಗರಿಗೆ ಶೀಘ್ರವಾಗಿ ತಲುಪುವ ಮಾರ್ಗವಾಗಿತ್ತು.

ಇದೇ ಕಾಲಕ್ಕೆ ಕೈಕಿಣಿಯವರನ್ನು ಮುಂಬೈ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರನ್ನಾಗಿ ಮಾಡ ಲಾಯಿತು. ತಡಮಾಡದೇ ಕನ್ನಡ ಭಾಷೆಯ ಅಧ್ಯಯನವನ್ನು M.A. ಕ್ಲಾಸ್‌ವರೆಗೆ ಸೇರ್ಪಡೆ ಮಾಡುವದರಲ್ಲಿ ಯಶಸ್ವಿ

ಆದರು. ಆತನಕ ಗುಜರಾಥಿ, ಮರಾಠಿ, ಪರ್ಶಿಯನ್ ಭಾಷೆಗಳು ಮಾತ್ರ ಸ್ನಾತಕೋತ್ತರವಾಗಿ ಕಲಿಸಲ್ಪಡುತ್ತಿದ್ದವು. ಇದಲ್ಲದೇ ಮೆಟ್ರಿಕ್ಯುಲೇಶನ್‌ದಿಂದ ಸ್ನಾತಕ ಪರೀಕ್ಷೆಯವರೆಗೂ ಕನ್ನಡ ಪಠ್ಯಕ್ರಮ ವ್ಯವಸ್ಥೆಯಲ್ಲಿ ಸಲಹಾಕಾರರಾಗಿ ಪರೀಕ್ಷಕರಾಗಿ ೧೯೬೯–೨೬ರವರೆಗೆ ಮುಂದುವರಿದರು. ಮುಂದೆ SSLC ಎಂದು ಕರೆಯಲ್ಪಡುತ್ತಿದ್ದ Matriculation ಪರೀಕ್ಷೆ, ಆ ದಿನಗಳಲ್ಲಿ ವಿಶ್ವವಿದ್ಯಾಲಯದ ಹೊಣೆಯಾಗುತ್ತಿತ್ತು. ಹೀಗಾಗಿ ವೆಂಕಟರಂಗೋ ಕಟ್ಟಿಯಂತಹ ಶಿಕ್ಷಕ – ವಿದ್ವಾಂಸರೆಲ್ಲ ಕೈಕಿಣಿ ಅವರ ಆತ್ಮವಲಯದಲ್ಲಿದ್ದರು.

ಕೈಕಿಣಿಯವರು ಮಹಾದೇವ ಚಿಮಣ ಅಪ್ಟೆ ಎನ್ನುವವರೊಂದಿಗೆ ಸೇರಿಕೊಂಡು ಮುಂಬೈಯಲ್ಲಿ ಗಾಯನ ಸಮಾಜ ಸ್ಥಾಪಿಸಿದರು. ಶಾಸ್ತ್ರೀಯ ಸಂಗೀತ, ಹರಿಕಥೆ ಮತ್ತಿತರ ಸಾಂಪ್ರದಾಯಿಕ ಕಲೆಗಳನ್ನು ರೂಢಿಸಿಕೊಂಡವರಿಗೆ ಅವಕಾಶ ಕಲ್ಪಿಸಿದರು. ಈ ಸಂಸ್ಥೆ ಈಗಲೂ ಕಾರ್ಯಪ್ರವೃತ್ತ ವಾಗಿದೆ.

ಅವರ ಸಮಾಜ ಸುಧಾರಕ ಚಟುವಟಿಕೆಗಳು ನಡೆದೇ ಇದ್ದವು. ಸಮುದ್ರಯಾನ ಮಾಡಿ ಬಂದವರಿಗೆಲ್ಲ ಚಿತ್ರಾಪುರ ಸಾರಸ್ವತ ಸ್ವಾಮಿಗಳು– (ಸರ್ ನಾರಾಯಣ ಚಂದಾವರ ಕರರೂ ಸೇರಿದಂತೆ) ಬಹಿಷ್ಕಾರ ಹಾಕಿದರು. ಸುಶಿಕ್ಷಿತರೇ ಹೆಚ್ಚಾಗಿದ್ದ, ಆದರೆ ಮುಂಬೈ ನಿವಾಸಿಗಳಲ್ಲಿ ಮತ್ತು ಜಿಲ್ಲೆಯ ಸಣ್ಣ ಊರುಗಳಲ್ಲಿದ್ದು ಮಠದ ವರ್ಚಸ್ಸಿಗೆ ಒಳಪಟ್ಟ ಕುಟುಂಬಗಳಲ್ಲಿ ವೈಚಾರಿಕ ಕಂದಕ ಏರ್ಪಟ್ಟಿತು ಈ ಪುಟ್ಟ ಸಮುದಾಯ ಒಡೆದು ಹೋಳಾಗದಂತೆ ಕೈಕಿಣಿಯವರು ವಿಶೇಷವಾಗಿ ಶ್ರಮಿಸಿದರು.

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ರೂಪತಾಳಿದ್ದು ೧೮೯೦ರಲ್ಲಿ ರಾ.ಹ. ದೇಶಪಾಂಡೆ ಅವರ ಮುಂಚೂಣಿಯಲ್ಲಿ. ಅದಕ್ಕೆ ಕೈಕಿಣಿ ಅವರು ಸ್ಥಾಪನಾ ಚಾರ್ಯರಲ್ಲಿ ಒಬ್ಬರು. ಈ ಸಂಘಕ್ಕೆ ಹೆಚ್ಚಿನ ಪ್ರಚೋದನೆ ದೊರೆತದ್ದು ಮುಂಬೈ–ಪುಣೆಗಳ ಕನ್ನಡ ನೆಲಸಿಗರನ್ನು ಅವರು ಸಂಘಟಿಸಿ ನೆರವು ದೊರಕಿಸಿದರು. ಶಾಮರಾವ್ ಅವರ ಮುಂದಾಳತ್ವದಲ್ಲಿ ಇದ್ದದ್ದು ಹಲವು ವರ್ಷ ೧೮೯೧ರಿಂದ ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿ, ೧೯೦೫ರಲ್ಲಿ ಪ್ಲೇಗ್‌ದಿಂದ ನಿಧನ ಹೊಂದುವವರೆಗೂ ಮುಂದುವರಿದಿದ್ದರು. ಮುಂಬೈಯ ಹೊರಗೂ ಕನ್ನಡ ಭಾಷೆಯ ಪ್ರಚಾರ, ಕನ್ನಡ ಗ್ರಂಥ ರಚನೆಗಳತ್ತ ವಿಶೇಷ ಗಮನ ಹರಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಇನ್ನೂ ಸ್ಥಾಪನೆ ಆಗಿರಲಿಲ್ಲ. ಆದರೂ ಮೈಸೂರು ಕರ್ನಾಟಕದ ಹಲವು ಧೀಮಂತರ ಸಂಪರ್ಕವನ್ನು ಶಾಮರಾಯರು ಹೊಂದಿದ್ದರು.

ಭಾರತ ಚರಿತ್ರೆಗೆ ಸಂಬಂಧಿಸಿದಂತೆ ಶಾಮರಾವ್ ವಿಠ್ಠಲ್ ಕಾಯಕಿಣಿ ಅವರ ಅನೇಕ ಲೇಖಗಳಿವೆ. J.B.B.R.A.Sದಲ್ಲಿ ಪ್ರಕಟವಾಗಿವೆ. ಒಂದೆರಡು ಅವರ ನಿಧನಾನಂತರ ಪ್ರಕಟವಾದವು. ಆಗಿನ ಕಾಲದ ಅತ್ಯಂತ ಪ್ರಸಿದ್ಧ ಇತಿಹಾಸಕಾರರಾಗಿದ್ದ ಆರ್. ಜಿ. ಭಾಂಡಾರಕರರ ಅಭಿಪ್ರಾಯಗಳನ್ನು ನಿಸ್ಸಂಕೋಚವಾಗಿ ಪ್ರಶ್ನಿಸುತ್ತಿದ್ದರು. ಅವುಗಳಲ್ಲಿ ಮುಖ್ಯವಾದದ್ದು ಸ್ಮೃತಿಗಳ ನಿರ್ಮಾಣದ ಕಾಲ. ಬೌದ್ಧಧರ್ಮ ಇಳಿಮುಖವಾಗಿದ್ದಾಗ ಸ್ಮೃತಿಗಳು ಹುಟ್ಟಿ ಕೊಂಡವು! ಎಂದು ಭಾಂಡಾರಕರರು ಪ್ರತಿಪಾದಿಸಿದ್ದರು. ಕೈಕಿಣಿ ಅವರು ಅದನ್ನು ಒಪ್ಪಿಕೊಂಡಿರಲಿಲ್ಲ. ಬುದ್ಧನಿಗಿಂತ ಮೊದಲೇ ಶ್ರುತಿ–ಸ್ಮೃತಿ ಪ್ರಣೀತವಾದ ವೈದಿಕ ಧರ್ಮ ನೆಲೆಗೊಂಡಿತ್ತು ಎಂದು ಸಾಧಾರವಾಗಿ ಬರೆದಿದ್ದಾರೆ.

ಕರ್ನಾಟಕ ಚರಿತ್ರೆಗೆ ಸಂಬಂಧಿಸಿದಂತೆ ಶಾಮರಾಯರ ಕೆಲ ಲೇಖಗಳಿವೆ. ೧೮೯೮ರಷ್ಟು ಹಿಂದೆಯೇ ವಿದ್ಯಾರಣ್ಯರು, ಮಾಧವ ಆಚಾರ್ಯರು ಭಿನ್ನರಾಗಿದ್ದಾರೆ! ಎಂದು ಪ್ರತಿಪಾದಿಸಿದ್ದರು. ವಿಜಯನಗರ ರಾಜ್ಯ ಸ್ಥಾಪನೆಗೆ ವಿದ್ಯಾತೀರ್ಥರೆಂಬವರು ಕಾರಣರು. ವಿದ್ಯಾರಣ್ಯರಲ್ಲ. ಆ ರಾಜ್ಯದಲ್ಲಿ ಮಾಧವಾ(ಚಾರ್ಯ)ರು ಮಂತ್ರಿಯಾಗಿದ್ದರು. ಮುಂದೆ ವೃದ್ಧಾಪ್ಯದಲ್ಲಿ, ಶೃಂಗೇರಿಯ ಪೀಠಾಧಿಪತಿಗಳಾದ ಅವರಿಗೆ ವಿದ್ಯಾರಣ್ಯ ಎಂಬ ಹೆಸರು ಬಂದಿತು ಎನ್ನುವುದು ಶಾಮರಾಯರ ವಾದ.

ಇದೇ ಅಭಿಪ್ರಾಯವನ್ನು ಮುಂದಿನ ಶತಕದಲ್ಲಿ ಫಾದರ್ ಹೆರಾಸ್ ಮತ್ತಿತರರು ಎತ್ತಿ ಹಿಡಿದರು. ಈ ಮಾಧವ, ವಿದ್ಯಾ ಶಕ್ತಿ, ವಿದ್ಯಾರಣ್ಯರನ್ನು ಗುರುತಿಸುವ ಪ್ರಯತ್ನ ಶತಮಾನ ದುದ್ದಕ್ಕೂ ನಡೆದೇ ಇದೆ...... ಬಹುಶಃ ಈ ವಾದ–ಪ್ರತಿವಾದಗಳ ಪ್ರಾರಂಭ ಶಾಮರಾಯರ ಬರಹದಿಂದಲೇ ಪ್ರಾರಂಭ ವಾಗಿರಬೇಕು! ಎಂಬುದು ಒಂದು ಅನಿಸಿಕೆ!

ಕೊನೆಯಲ್ಲಿ ಅವರು ಚರಿತ್ರಾರ್ಹ ಕೃತಿಯೊಂದನ್ನು ಸಂಸ್ಕೃತದಿಂದ ಕನ್ನಡಕ್ಕೆ ಭಾವಾನುವಾದ ಸಹಿತ ಅನುವಾದಿಸಿದ ಅಪರೂಪದ ಪ್ರಯತ್ನವನ್ನು ಉಲ್ಲೇಖಿಸಲೇಬೇಕು. ವಿಶ್ವಗುಣಾದರ್ಶ: ಎಂಬುದು ವೆಂಕಟಾಧ್ವರಿ ಕವಿಯು ಸಂಸ್ಕೃತದಲ್ಲಿ ರಚಿಸಿದ ಚಂಪೂ ಕಾವ್ಯವಿದೆ. ಸುಮಾರು ೩೭೫ ವರ್ಷಗಳ ಹಿಂದೆ ರಚಿಸಿದ್ದು. ಈ ಕೃತಿ ಅಂದಿನ ಭಾರತದ ಅದರಲ್ಲೂ ದಕ್ಷಿಣ ಭಾರತದ ಧಾರ್ಮಿಕ, ಸಾಮಾಜಿಕ ಜೀವನದ ಮೇಲೆ ಬೆಳಕು ಚಲ್ಲುತ್ತದೆ. ಜೊತೆಗೆ ರಾಜ್ಯಗಳ ಪ್ರಾಕೃತಿಕ ಸ್ವರೂಪ, ನದಿ–ಪರ್ವತಾದಿಗಳು ಅಂದರೆ ಭೌಗೋಲಿಕ ಹಾಗೂ ಪುರಾಣರೂಪಿ ಮಾಹಿತಿ ಕೊಡುತ್ತದೆ. ಗುಜರಾಥಿ, ಹಿಂದಿ ಭಾಷೆಗಳಲಿ ಅನುವಾದಗೊಂಡಿರುವ ಈ ಕೃತಿಯ ಜನಪ್ರಿಯತೆ ದೊಡ್ಡದು. ಭಾರತದ ಪ್ರಮುಖ ತೀರ್ಥಕ್ಷೇತ್ರಗಳು ಆ ಕುರಿತ ಆಖ್ಯಾಯಿಕೆಗಳು ಪೌರಾಣಿಕ ಉಲ್ಲೇಖಗಳು ದೇಶದ ಬೇರೆ ಬೇರೆ ಪ್ರಾಂತಗಳ ರೂಢಿ, ಆಚಾರ–ವಿಚಾರ–ನಂಬಿಕೆಗಳನ್ನು ಈ ಕೃತಿಯಿಂದ ತೌಲನಿಕವಾಗಿ ಅರಿಯಬಹುದಾಗಿದೆ. ಶಾಮರಾಯರು ತಮ್ಮ

ಸಂಸ್ಕೃತ–ಕನ್ನಡ ಭಾಷೆಗಳ ಪ್ರಭುತ್ವವನ್ನು ಈ ಕೃತಿಯಲ್ಲಿ ಚೆನ್ನಾಗಿ ಬಳಸಿಕೊಂಡಿದ್ದಾರೆ.

'ವಿಶ್ವಗುಣಾದರ್ಶ'ದ ಕರ್ತೃ ವೆಂಕಟಾಧ್ವರಿ, ೧೭ನೇ ಶತಮಾನದ ಪ್ರಚಂಡ, ವಿದ್ವಾಂಸರಾಗಿದ್ದ ಅಪ್ಪಯ್ಯ ದೀಕ್ಷಿತರ ಮೊಮ್ಮಗನಾಗಿದ್ದ. ಮೂಲ ಸಂಸ್ಕೃತ ಹಸ್ತಪ್ರತಿ, ದೇವನಾಗರಿಯಲ್ಲಿದ್ದದ್ದು, ಇನ್ನೊಂದು ೧೮೭೯ರಲ್ಲಿ ತೆಲುಗು ಲಿಪಿಯಲ್ಲಿ ಮುದ್ರಿತ ಪ್ರತಿ ಮತ್ತು ಇತರೇ ತಾಳೆಗರಿ ಹಸ್ತ ಪ್ರತಿಗಳ ಆಧಾರದ ಮೇಲೆ ಕನ್ನಡ ಭಾಷಾಂತರವನ್ನು ಶಾಮರಾಯರು ಕೈಕೊಂಡರು. ಇದೇ ಕೃತಿಯನ್ನು ಏಕೆ ಆರಿಸಿಕೊಂಡರು? ಎಂದು ಯೋಚಿಸಿದಾಗ, ಅಂದಿನ ನಮ್ಮ ಸಮಾಜವನ್ನು ಛಿದ್ರಗೊಳಿಸುತ್ತಿದ್ದ ಮೂಢನಂಬಿಕೆ, ಆಚಾರ ವಿಚಾರಗಳಿಂದ ನೊಂದುಕೊಂಡು, ಸಾಮೂಹಿಕ ಶಿಕ್ಷಣ, ವಿಧವಾ ವಿವಾಹ, ಸಂಘಟಿತ ಆರ್ಥಿಕ ಪ್ರಯತ್ನಗಳಲ್ಲಿ ತೊಡಗಿಕೊಂಡಿದ್ದ ಕಾಯಕಿಣಿಯವರಿಗೆ 'ವಿಶ್ವಗುಣಾದರ್ಶ'ದಲ್ಲಿ ಭಾರತೀಯ ಸಂಸ್ಕೃತಿಯನ್ನು ಬೆಸೆಯುವ, ಒಡೆಯುವ ಅಂಶಗಳು ಕಂಡು ಬಂದು ಜನಜಾಗೃತಿಗಾಗಿ ಅದನ್ನು ಅನುವಾದಿಸುವ ಹಂಬಲ ಉಂಟಾದಂತಿದೆ! ೧೮೮೮ರಲ್ಲಿ ಇದು, ಮುಂಬಯಿಯ ಕರ್ಣಾಟಕ ಛಾಪಖಾನೆಯಲ್ಲಿ ಛಾಪಿಸಲ್ಪಟ್ಟಿತು. ಅವರು ಮಾತುಗಳಲ್ಲಿಯೇ ಅವರ ಉದ್ದೇಶ ತಿಳಿದುಕೊಳ್ಳೋಣ.

"ಹಿಂದುಸ್ತಾನದ ಜನರಲ್ಲಿ ಅನೇಕ ಜಾತಿಗಳಿದ್ದು ಒಂದು ಜಾತಿಯವರು ಮತ್ತೊಂದು ಜಾತಿಯವರ ಊನಗಳನ್ನು ಉಚ್ಚರಿಸಿ ನಿಂದೆ ಮತ್ತು ದ್ವೇಷ ಮಾಡುವದು ಸಾಮಾನ್ಯವಾಗಿದೆ. ಇದು ಹೊರತು ಗುರು, ಪುರೋಹಿತ, ಭಟ್ಟ ಮೊದಲಾದವರಿಗೆ ವಶವಾಗಿ, ಅವರಲ್ಲಿ ವಂಚಕರಾದ ಅನೇಕರು ಬೀಸುವ ಠಕ್ಕುತನದ ತಂತ್ರೋಪಾಯಗಳ ಬಲೆಯಲ್ಲಿ ಹೊರಳ್ಯಾಡುವ ಅಜ್ಞಾನಿಗಳ ಸಂಖ್ಯೆಯು, ಹೇರಳವಾಗಿರುತ್ತದೆ. ಒಂದು ಜಾತಿಯ ಜನರಲ್ಲಿ ಒಂದು ದೋಷವಿದ್ದರೆ ಇನ್ನೊಂದು ಗುಣ ಉಂಟು. ಮತ್ತೊಂದು ಜ್ಯಾತಿಯ ಜನರಲ್ಲಿ ಒಂದು ಗುಣವಿದ್ದರೆ ಇನ್ನೊಂದು ದೋಷ ಉಂಟು ಎಂಬ ನ್ಯಾಯವನ್ನು ತೋರಿಸಿ ಜಾತಿದ್ವೇಷ ತಗ್ಗಿಸುವ ಹೇತುವಿನಿಂದಲೂ, ಧರ್ಮೋಪದೇಶಕ ತನವೇ ಮೊದಲಾದ ಪಾರಮಾರ್ಥಿಕ ವೇಷ ಹಾಕಿಕೊಂಡು, ಮೇದಿನಿಯ ಮೇಲೆ ವಿಷಯಕ್ಕಾಗಿ ತಿರುಗಿ ಅರಿಯದವರಲ್ಲಿ ಅಜ್ಞಾನ ಬೆಳೆಸಿ, ಅವರ ಚಿತ್ತ–ವಿತ್ತ ಹರಣ ಮಾಡುವವರ ಪ್ರಾಬಲ್ಯದ ಪ್ರವಾಹಕ್ಕೆ ಕಟ್ಟು ಹಾಕುವ ಹೇತುವಿನಿಂದಲೂ ಕವಿಯು ಈ ಕಾವ್ಯ ರಚಿಸಿದನೆಂದು ನಾವು ತಿಳಿಯುತ್ತೇವೆ. ಇಂಥ ಲೋಕೋಪಕಾರಕವಾದ ಕಾವ್ಯದೊಳಗಿನ ವಿಚಾರಗಳ ತಿಳುಹು, ಸಂಸ್ಕೃತವನ್ನು ಅರಿಯದವರಿಗೂ ಸ್ವಲ್ಪ ಮಟ್ಟಿಗೆ ಆಗಲಿ! ಎಂಬ ಕೋರಿಕೆಯಿಂದ ಈ ಆವೃತ್ತಿಯಲ್ಲಿ ಮೂಲಗ್ರಂಥದ ಅರ್ಥವನ್ನು ಕನ್ನಡ ಭಾಷೆಯಲ್ಲಿ ಶೇ(ಸೇ)ರಿಸಿದ್ದೇವೆ" ಎಂದು ಪ್ರಸ್ತಾವನೆಯಲ್ಲಿ ಶಾಮರಾಯರು ಹೇಳಿಕೊಂಡಿದ್ದಾರೆ. ಅವರ ಸಾಮಾಜಿಕ ಕಳಕಳಿ, ಸಾಹಿತ್ಯದ ಮತ್ತು ಅನುವಾದದ ಕ್ಷೇತ್ರಕ್ಕೂ ವ್ಯಾಪಿಸಿತ್ತು ಎನ್ನುವುದು. ಅವರು ಅನುವಾದಕ್ಕಾಗಿ ಆಯ್ಕೆ ಮಾಡಿದ ಕೃತಿಯ ಉದ್ದೇಶದಿಂದ ಅರ್ಥವಾಗುತ್ತದೆ. ಓರ್ವ ಪ್ರಾಮಾಣಿಕ ಚರಿತ್ರಕಾರನ ಕಳಕಳಿ ಅಂದರೆ ಸಾಮಜಿಕ ಸಮಸ್ಯೆಗಳಿಗೆ ಚಾರಿತ್ರಿಕ ವಿಶ್ಲೇಷಣೆ ನೀಡಿ, ಜನಜಾಗೃತಿಗೆ ಎಳಸುವದು ಅವರ ಪ್ರಯತ್ನವಾಗಿತ್ತು. 'ಸದರ್ನಮರಾಠಾಕಂಟ್ರಿ' ಎಂದೇ ಬ್ರಿಟಿಷರಿಗೂ ಇತರರಿಗೂ ಪರಿಚಿತವಿದ್ದ ನಾಲ್ಕೂ ಜಿಲ್ಲೆಗಳ ಧೀಮಂತರನ್ನು ಸಂಘಟಿಸಿ ಕರ್ನಾಟಕತ್ವದ ಪ್ರಜ್ಞೆ ಮೂಡಿಸಿದವರಲ್ಲಿ ಶಾಮರಾವ್ ಕೈಕಿಣಿ ಮೊದಲಿಗರು. ಪ್ರೆಸಿಡೆನ್ಸಿಯ ರಾಜಧಾನಿ ಮುಂಬೈಯಲ್ಲಿ ಮೊದಲ ಕರ್ನಾಟಕ ಪ್ರೆಸ್, ಕನ್ನಡ ಸುವಾರ್ತೆ ಎಂಬ ಮೊದಲ ಪತ್ರಿಕೆ, ಕೆನರಾ ಕ್ಲಬ್, ಕೆನರಾ ಯೂನಿಯನ್ ಮತ್ತು ಕೆನರಾ Co-operative ಸೊಸಾಯಿಟಿ ರೂಪಗೊಳ್ಳಲು ಕಾರಣರಾದರು. ಒಂದು ಇಡೀ ಚಿತ್ರಾಪುರ ಸಮಾಜಕ್ಕೆ ಮುಖಂಡತ್ವ ಒದಗಿಸಿ ದಂತಕತೆಯಾಗಿ ಹೋದರು. ಆದರೆ ಅವರ ಪ್ರಾರಂಭದಿಂದಲೂ ಆರಾಧಿಸಿ ಕೊನೆಯವರೆಗೂ ಕನ್ನಡ ಮಾತೆಯ ಸುಪುತ್ರರಾಗಿ ಬೆಳೆದದ್ದನ್ನು ಸ್ಮರಿಸಲೆಂದು ಈ ಬರಹ. ಇತಿಹಾಸ ಕ್ಷೇತ್ರದಲ್ಲಿ ಅವರ ಬರವಣಿಗೆ ಅಲ್ಪವಾದರೂ ಮಹತ್ವದ್ದು.

ವಿಖ್ಯಾತ ವಿದ್ವಾಂಸರು, ನುರಿತ ಪತ್ರಿಕಾಕಾರರು ಆಗಿದ್ದ ಗೌರೀಶ ಕಾಯಕಿಣಿಯವರ ಒಂದು ಮಾತನ್ನು ಇಲ್ಲಿ ಉದ್ಧರಿಸಬಹುದು. ಅವರ ಕಾಲದಲ್ಲಿ ಕನ್ನಡಿಗ ಪ್ರಮುಖರು ಅನೇಕರು ಮುಂಬೈಯಲ್ಲಿದ್ದರು. ಆದರೆ ಹೆಚ್ಚಿನವರಿಗೆ ಕನ್ನಡ ಅಭಿಮಾನ ಇರಲಿಲ್ಲ! ಅಭಿಮಾನ ಇದ್ದವರಿಗೆ ಧೈರ್ಯ ಇರಲಿಲ್ಲ! ಧೈರ್ಯ ಇದ್ದವರಿಗೆ ಅವಕಾಶ ಇರಲಿಲ್ಲ! ಆದರೆ ಮೂರನ್ನೂ ಶಾಮರಾಯರು ಆತ್ಮಸಾತ್ ಮಾಡಿಕೊಂಡರು.

ಆಧಾರಸೂಚಿ

೧. A caste in a changing world, Frank F Conlon centre for South and South East Asian studies University of California Berkley, 1977.

೨. The Karnatak Press Saga, Sadanand Bhatkal popular Prakashan, Mumbai, 2009.

೩. ವಿಶ್ವ ಗುಣಾದರ್ಶ, ಮಹಾಕವಿ ಶ್ರೀ ವೇಂಕಟಾಧ್ವರಿ ಪ್ರಣೀತ: ಭಾವದರ್ಪಣಾಖ್ಯಾಯಾ ವ್ಯಾಖ್ಯಾಯಾ ಸನಾಥೀ ಕೃತಃ ಕರ್ಣಾಟಕಾಖ್ಯ ಭಾಷಾನುವಾದ ಸಮೇತಶ್ಚ–ಮುಂಬಯಿ ಶಕಾಬ್ದಾ, ೧೮೮೯.

೪. ಹೊಸಗನ್ನಡದ ಅರುಣೋದಯ : ಶ್ರೀನಿವಾಸ ಹಾವನೂರ (ಎರಡನೇ ಆವೃತ್ತಿ) ಬೆಂಗಳೂರು ೨೦೦೦ AD.

೫. Saraswat Families : Shripad S. Talmaki Panduranga N. Nadkarni Kanara Saraswat Association, Mumbai, 1997.

೬ ಶ್ಯಾಮರಾವ್ ವಿಠ್ಠಲ ಕೈಕಿಣಿ (ಜೀವನ ಮತ್ತು ಕಾರ್ಯ) ಗೌರೀಶ ಕಾಯಕಿಣಿ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೭೨.

೧೨೨

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ ಬಳ್ಳಾರಿ ಸಿದ್ದಮ್ಮನವರ ಪಾತ್ರ

ಡಾ. ನಾಗರತ್ನಮ್ಮ ಎಸ್.*

ಭಾರತದ ರಾಷ್ಟ್ರೀಯ ಹೋರಾಟದಲ್ಲಿ ಮಹಿಳೆಯರ ಭಾಗವಹಿಸುವಿಕೆಯು ಒಂದು ಮಹತ್ವವಾದ ಅಂಶ. ಗಾಂಧಿ ಪೂರ್ವಕಾಲದಲ್ಲಿ ಕೇವಲ ಬೆರಳೆಣಿಕೆಯಷ್ಟು ಮಹಿಳೆಯರು ಭಾಗವಹಿಸಿದರೆ ಗಾಂಧಿಯುಗದಲ್ಲಿ ಹೆಚ್ಚು ಹೆಚ್ಚು ಮಹಿಳೆಯರು ಪಾಲ್ಗೊಂಡಿದ್ದನ್ನು ಕಾಣಬಹುದು. ಗಾಂಧಿಯವರು ಮಹಿಳೆಯರಲ್ಲಿ ಸ್ವಾತಂತ್ರ್ಯ ಹೋರಾಟದ ಕಿಡಿ ಹೊತ್ತಿಸುವಲ್ಲಿ ಪ್ರಮುಖ ಪಾತ್ರವಹಿಸಿದರು. "ನಮ್ಮ ಅಹಿಂಸಾ ಚಳುವಳಿ ಇವರಲ್ಲಿ ಮಾನವಶಕ್ತಿಯನ್ನು ಅಳೆಯಬೇಕಾಗಿಲ್ಲ. ಸಹನೆ, ತಾಳ್ಮೆ, ತ್ಯಾಗ ಇಂತಹ ಸದ್ಗುಣಗಳು ಇಲ್ಲಿ ಅಗತ್ಯ, ಈ ಗುಣಗಳಲ್ಲಿ ಪುರುಷರಿಗಿಂತ ಸ್ತ್ರೀ ಹೆಚ್ಚು ದಕ್ಷಳೆಂದು ನನ್ನ ಭಾವನೆ" ಎಂಬ ಮಹಾತ್ಮ ಗಾಂಧಿಯವರ ಮಾತುಗಳು ಮಹಿಳೆಯರನ್ನು ಉತ್ತೇಜಿಸಿದವು. ಈ ರೀತಿ ಉತ್ತೇಜನಗೊಂಡ ಮಹಿಳೆಯರಲ್ಲಿ ಬಳ್ಳಾರಿಸಿದ್ದಮ್ಮನವರು ಸಹ ಒಬ್ಬರು.

ರಾಷ್ಟ್ರೀಯ ಹೋರಾಟದ ಪ್ರಾರಂಭಿಕ ಹಂತದಲ್ಲಿ ಮಹಿಳೆಯರ ಚಟುವಟಿಕೆಗಳು ಕೇವಲ ರಚನಾತ್ಮಕ ಕಾರ್ಯಕ್ರಮಗಳಿಗೆ ಸೀಮಿತವಾಗಿದ್ದವು. ಆದರೆ ಅವರಿಗೆ ಆ ಸೀಮಿತತೆಯಿಂದ ಹೊರಗೆ ಬರಬೇಕಾದ ಅಗತ್ಯ ಕಂಡುಬಂದಿದ್ದು ನಾಗರೀಕ ಕಾನೂನುಭಂಗ ಚಳವಳಿಯ ಸಂದರ್ಭದಲ್ಲಿ ಇವರು ಮನೆ-ಮಕ್ಕಳನ್ನು ಬಿಟ್ಟು ಮನೆಯಿಂದ ಹೊರಬಂದು ಪುರುಷರಷ್ಟೆ ಮಹತ್ವವಾದ ಪಾತ್ರವನ್ನು ವಹಿಸಿದರು. ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ, ಉಮಾಬಾಯಿ ಕುಂದಾಪುರ, ಕೃಷ್ಣಬಾಯಿ ಪಣಜೀಕರ್, ಸಿದ್ದಮ್ಮ ಜೋಯಿಸ್, ಯಶೋಧರಮ್ಮದಾಸಪ್ಪ, ಭಾಗೀರಥಮ್ಮ ಜೆ.ಸಿ. ಮತ್ತು ಬಳ್ಳಾರಿ ಸಿದ್ದಮ್ಮ ಪ್ರಮುಖ ಹೋರಾಟಗಾರರಾಗಿದ್ದಾರೆ.

ಮಹಿಳೆಯರೆಂದರೆ ಹೇಡಿತನದ ಸಂಕೇತವೆಂದು ಪರಿಗಣಿಸಿದವರಿಗೆ ದಿಗ್ಭ್ರಮೆ ಹುಟ್ಟಿಸುವ ಕ್ರಿಯಾಶೀಲ ಹೋರಾಟಗಾರ್ತಿ ಬಳ್ಳಾರಿಸಿದ್ದಮ್ಮ. ಇವರು ಇಂದಿನ ಹಾವೇರಿ ಜಿಲ್ಲೆಯ ದುಂಡಸೀ ಗ್ರಾಮದ ಸಂಪ್ರದಾಯಸ್ಥ ಲಿಂಗಾಯಿತ ಕುಟುಂಬದಲ್ಲಿ ೧೯೦೩ರಲ್ಲಿ ಜನಿಸಿದರು. ಇವರ ತಂದೆ ಕೊಟ್ಟಿಗಿಬಸಪ್ಪ ವೃತ್ತಿಯಲ್ಲಿ ವ್ಯಾಪಾರಸ್ಥರಾದರೂ, ಒಬ್ಬ ದೇಶಭಕ್ತರಿಗೆ ಇರಬೇಕಾದ ಎಲ್ಲಾ ಗುಣಗಳನ್ನು ಮೈಗೂಡಿಸಿ ಕೊಂಡಿದ್ದರು. ಸಿದ್ದಮ್ಮನವರಿಗೆ ಬಾಲ್ಯದಲ್ಲೇ ರಾಷ್ಟ್ರೀಯ ಹೋರಾಟದ ಬಗ್ಗೆ ಸಾಕಷ್ಟು ಆಸಕ್ತಿ ಇತ್ತು. ಇದನ್ನರಿತ ಕೊಟ್ಟಗಿ ಬಸಪ್ಪನವರು ದಿನಪತ್ರಿಕೆ ಮತ್ತು ನಿಯತಕಾಲಿಕೆಗಳನ್ನು ತರಿಸಿಕೊಡುತ್ತಿದ್ದರಿಂದ ರಾಷ್ಟ್ರೀಯ ವಿಷಯಗಳನ್ನು ಓದಿ ತಿಳಿಯುತ್ತಿದ್ದರು.

ಪ್ರತಿಯೊಬ್ಬ ಪುರುಷನ ಸಾಧನೆಯ ಹಿಂದೆ ಸ್ತ್ರೀ ಇರುತ್ತಾಳೆ ಎಂಬುದು ಎಷ್ಟು ಸತ್ಯವೋ, ಅದೇ ರೀತಿ ಪ್ರತಿಯೊಬ್ಬ ಮಹಿಳೆಯ ಸಾಧನೆಯ ಹಿಂದೆ ಒಬ್ಬ ಪುರುಷ ನಿರುತ್ತಾನೆ ಎಂಬುದೂ ಅಷ್ಟೇ ಸತ್ಯ. ಬಹುಶಃ ಬಳ್ಳಾರಿ ಸಿದ್ದಮ್ಮನವರು ಇದರಿಂದ ಹೊರತಾಗಿರಲಿಲ್ಲ. ಇವರು ನಿಷ್ಠಾವಂತ, ರಚನಾತ್ಮಕ ಕಾರ್ಯಕರ್ತರಾದ ಬಳ್ಳಾರಿ ಮುರಗಪ್ಪನವರನ್ನು ಕೈಹಿಡಿದದ್ದು ಅವರ ದೇಶಸೇವಾ ಕಾರ್ಯಕ್ಕೆ ಅನುವು ಮಾಡಿಕೊಟ್ಟಿತು. ದಂಪತಿಗಳಿಬ್ಬರೂ ಗುಜರಾತಿನ ವಾರ್ಧಾ ಆಶ್ರಮದಲ್ಲಿ ತರಬೇತಿ ಪಡೆದು, ಮುಂದೆ ಮಹಿಳಾ ಆಶ್ರಮವನ್ನು ಸ್ಥಾಪಿಸಿ ಮಹಿಳೆಯರ ಏಳಿಗೆಗಾಗಿ ಶ್ರಮಿಸಿದರು.

ಬಳ್ಳಾರಿ ಸಿದ್ದಮ್ಮನವರು ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಯ ಪರಿಸರದಲ್ಲಿ ರಚನಾತ್ಮಕ ಕಾರ್ಯಕರ್ತರಾಗಿದ್ದರು. ೧೯೩೮ರ ಸಂದರ್ಭಕ್ಕೆ ಕರ್ನಾಟಕ ದುರೀಣರಾದ ಸರ್ದಾರ್ ವೀರಣ್ಣಗೌಡ, ಎಸ್. ನಿಜಲಿಂಗಪ್ಪ, ಟಿ. ಸಿದ್ದಲಿಂಗಯ್ಯ, ಕೆ.ಎಫ್. ಪಾಟೀಲ್ ಇಂತಹವರ ಪರಿಚಯ ವಾಯಿತು. ಈ ಮಹನೀಯರ ಸಹಕಾರದಿಂದ ಸಿದ್ದಮ್ಮನವರ ಚಟುವಟಿಕೆಗಳು ಮತ್ತಷ್ಟು ವಿಸ್ತೃತಗೊಂಡವು. ೧೯೩೮ರಲ್ಲಿ ಮೈಸೂರು ಸಂಸ್ಥಾನದಲ್ಲಿ ಮೈಸೂರು ಕಾಂಗ್ರೆಸ್ ಸಂಸ್ಥೆ ಜನ್ಮ ತಾಳಿತು. ಇದರ ಪ್ರಥಮ ಅಧಿವೇಶನ ಮದ್ದೂರು ತಾಲ್ಲೂಕಿನ ಶಿವಪುರದಲ್ಲಿ ನಡೆಸುವ ಬಗ್ಗೆ ಚರ್ಚಿಸುವ ಸಂದರ್ಭದಲ್ಲಿ, ಕೆಲವು ಕಾಂಗ್ರೆಸ್ಸಿಗರು ಸರ್ಕಾರದ ನಿಷೇಧಾಜ್ಞೆಗಳು ಜಾರಿಯಲ್ಲಿರುವುದರಿಂದ ಸಮಾವೇಶದ ಸಂದರ್ಭದಲ್ಲಿ

* ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ.

ಧ್ವಜಾರೋಹಣ ಮಾಡುವುದು ಉಚಿತವಲ್ಲ ಎಂಬ ಅಭಿಪ್ರಾಯುವನ್ನು ವ್ಯಕ್ತಪಡಿಸಿದರು. ಆಗ ಬಳ್ಳಾರಿ ಸಿದ್ದಮ್ಮನವರು ಮೈಸೂರು ಕಾಂಗ್ರೆಸ್‌ನ ಬಾವುಟವು ನಮ್ಮ ಏಕತೆ, ಸಮಗ್ರತೆ ಮತ್ತು ಆತ್ಮಗೌರವದ ಸಂಕೇತ, ಪುರುಷರಿಗೆ ಇದರ ಬಗ್ಗೆ ಏನೇ ಅಭಿಪ್ರಾಯಗಳಿದ್ದರೆ ಇರಲಿ, ನಾವು ಧ್ವಜಾರೋಹಣ ಮಾಡುತ್ತೇವೆ, ಯಾವುದೇ ಕಾರಣಕ್ಕೂ ಧ್ವಜಾರೋಹಣ ಕಾರ್ಯವನ್ನು ನಿಲ್ಲಿಸುವುದಿಲ್ಲ"[೧] ಎಂದು ಆವೇಶದಿಂದ ಮಾತಾನಾಡಿದರು. ಅಂತಿಮವಾಗಿ ಬಳ್ಳಾರಿ ಸಿದ್ದಮ್ಮನವರ ಅಭಿಪ್ರಾಯಕ್ಕೆ ಮನ್ನಣೆ ದೊರೆಯಿತು.

ಕಾಂಗ್ರೆಸ್ಸಿನ ಮೊದಲ ಅಧಿವೇಶನವನ್ನು ದಿನಾಂಕ ೧೧-೦೪-೧೯೩೮ ರಂದು ಕಾಂಗ್ರೆಸ್ ಅಧ್ಯಕ್ಷರಾದ ಟಿ. ಸಿದ್ದಲಿಂಗಯ್ಯನವರು ಉದ್ಘಾಟಿಸಿ. ಧ್ವಜಾರೋಹಣ ಕಾರ್ಯಕ್ರಮ ನೆರವೇರಿಸಿದರು. ಈ ಕಾರ್ಯಕ್ರಮ ಮುಗಿಯುವವರೆಗೂ ಬಳ್ಳಾರಿಸಿದ್ದಮ್ಮ ಮತ್ತಿತರ ಮಹಿಳಾ ಸ್ವಯಂ ಸೇವಕಿಯರು, ದೇಶಭಕ್ತಿ ಗೀತೆಗಳನ್ನಾಡುತ್ತಾ ಧ್ವಜಸ್ತಂಭವನ್ನು ಸುತ್ತುವರಿದು ಕಾಂಗ್ರೆಸ್ ಅಧ್ಯಕ್ಷರಿಗೆ ಬೆಂಗಾವಲಾಗಿದ್ದರು. ಎರಡನೆಯ ದಿನದ ಕಾರ್ಯಕ್ರಮವು ಮುಕ್ತಾಯವಾಯಿತು. ನಂತರ ಬಳ್ಳಾರಿಸಿದ್ದಮ್ಮನವರು ಮಹಿಳೆಯರಿಗೆ ಧ್ವಜಾರೋಹಣ ಕಾರ್ಯಕ್ರಮ ನಡೆಸಿಕೊಡುವಂತಹ ಅವಕಾಶವನ್ನು ಕೊಡಬೇಕೆಂದೂ ತಮ್ಮ ಅಭಿಪ್ರಾಯವನ್ನು ಕಾಂಗ್ರೆಸ್ ಮುಖಂಡರಲ್ಲಿ ತಿಳಿಸಿದಾಗ, ಬಳ್ಳಾರಿ ಸಿದ್ದಮ್ಮನವರಿಗೆ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗವಹಿಸಲು ಸೂಚಿಸಿದರು. ದಿನಾಂಕ ೧೩-೦೪-೧೯೩೮ರಂದು ಕೆ.ಟಿ. ಭಾಷ್ಯಂ ಅವರು ಧ್ವಜಾರೋಹಣ ಮಾಡಲು ಸಿದ್ದಾರಾಗುತ್ತಿದ್ದಂತೆ ಪೋಲೀಸರು ಅವರನ್ನು ಬಂಧಿಸಿದರು. ಕೆ.ಟಿ. ಭಾಷ್ಯಂ ಅವರು ಬಳ್ಳಾರಿ ಸಿದ್ಧಮ್ಮನವರಿಗೆ ಆ ದಿನದ ಕಾರ್ಯಕ್ರಮವನ್ನು ನೆರವೇರಿಸಲು ಸೂಚಿಸಿದರು. ತಕ್ಷಣವೇ ಬಳ್ಳಾರಿಸಿದ್ದಮ್ಮ ಧ್ವಜಾರೋಹಣ ಮಾಡಿ ಧ್ವಜಾವಂದನಾ ಕಾರ್ಯಕ್ರಮವನ್ನು ನೆರವೇರಿಸಿ ದಸ್ತಗಿರಿಯಾದರು.[೨]

ಬಳ್ಳಾರಿ ಸಿದ್ದಮ್ಮನವರು ಶಿವಪುರ ರಾಷ್ಟ್ರಕೂಟದಲ್ಲಿ ಧ್ವಜವಂದನಾ ಕಾರ್ಯಕ್ರಮವನ್ನು ನೆರವೇರಿಸಿ, ದಸ್ತಗಿರಿಯಾದ ವಿಷಯ ತಿಳಿದ, ಅಂದಿನ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರವರು ಸಿದ್ದಮ್ಮನವರಿಗೆ ತಮ್ಮ ಆಸ್ಥಾನಕ್ಕೆ ಬರಲು ಆಹ್ವಾನಿಸಿದರು. ಆ ಸಂದರ್ಭದಲ್ಲಿ ಬಳ್ಳಾರಿಸಿದ್ದಮ್ಮನವರು 'ನಾನೊಬ್ಬಳೇ ನಮ್ಮ ಅತಿಥ್ಯವನ್ನು ಸ್ವೀಕರಿಸುವ ಆಸಕ್ತಿ ನನಗಿಲ್ಲ, ನನ್ನನ್ನು ಕಾಣುವ ಆಸಕ್ತಿ ಇದ್ದರೆ, ನನ್ನ ಜೊತೆಯಲ್ಲಿ ಬಂಧಿತರಾದ ಎಲ್ಲರನ್ನು ಅಹ್ವಾನಿಸಬೇಕು" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ನಂತರ ಕೆ.ಟಿ. ಭಾಷ್ಯಂ, ಹೆಚ್.ಸಿ. ದಾಸಪ್ಪ ಮತ್ತು ಸಿದ್ದಮ್ಮನವರು ಮಂಡ್ಯದ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡಿಸಿ ಮೈಸೂರು ಪೋಲೀಸ್ ಆಕ್ಟ್ ೭೦ಎ ಮತ್ತು ೭೩ನೇ ಸೆಕ್ಷನ್ ಪ್ರಕಾರ ತಲಾ ನಾಲ್ಕು ತಿಂಗಳ ಶಿಕ್ಷೆ ಮತ್ತು ಇನ್ನೂರು ರೂಪಾಯಿಗಳ ದಂಢವನ್ನು ವಿಧಿಸಿ, ಸಿದ್ದಮ್ಮನವರಿಗೆ ಮಾತ್ರ ೨೫ ದಿನಗಳ ಸಾದಾ ಶಿಕ್ಷೆಯನ್ನು ವಿಧಿಸಲಾಯಿತು.

ಇಡೀ ಸಂಸ್ಥಾನಾದ್ಯಂತ ಸಿದ್ದಮ್ಮನವರು ಪುರುಷರಂತೆ ಧ್ವಜಾರೋಹಣ ಮಾಡಿ ದಸ್ತಗಿರಿಯಾದ ವಿಷಯ ಸುದ್ದಿಯಾಗಿತ್ತು. ದಿನಾಂಕ ೧೪-೦೪-೧೯೩೮ರ ಸಂಯುಕ್ತ ಕರ್ನಾಟಕ ಪತ್ರಿಕೆಯಲಿ "ಕರ್ನಾಟಕದ ವೀರ ಮಹಿಳೆಯರು" ಎಂಬ ಶಿರೋನಾಮೆ ಅಡಿಯಲ್ಲಿ "ಶಿವಪುರದಲ್ಲಿ ರಾಷ್ಟ್ರಧ್ವಜವನ್ನೇರಿಸಬಾರದೆಂದು, ಸಂಸ್ಥಾನದ ಸರ್ಕಾರ, ದಬ್ಬಾಳಿಕೆಯನ್ನು ನಡೆಸಿತು. ಆದರೆ ಒಮ್ಮೆ ಏರಿಸಿದ ಧ್ವಜವನ್ನು ಕೆಳಗಿಳಿಸಬಾರದೆಂದು, ಕರ್ನಾಟಕದ ವೀರ ಮಹಿಳೆಯರು ಗಂಡಸರಂತೆ ಧೃಢವಾಗಿ ಸೆಡ್ಡು ಹೊಡೆದು ನಿಂತು ಕರ್ನಾಟಕದ ಕೀರ್ತಿಯನ್ನು ಹೆಚ್ಚಿಸಿದರು. ರಾಷ್ಟ್ರಧ್ವಜದ ಮಾನವನ್ನು ರಕ್ಷಿಸುವುದಕ್ಕೆ ಎಂತಹ ಕಷ್ಟಗಳನ್ನೂ ಎದುರಿಸಲು ಸಿದ್ದರಾದ ಈ ಮಹಿಳೆಯರ ತ್ಯಾಗ ಮತ್ತು ಧೈರ್ಯವನ್ನು ಮೆಚ್ಚುವಂತಹದ್ದು, ಈ ಸಂದರ್ಭದಲ್ಲಿ ದಸ್ತಗಿರಿಯಾದ ಏಕೈಕ ಮಹಿಳೆ ಬಳ್ಳಾರಿಸಿದ್ದಮ್ಮ" ಎಂದು ವರದಿ ಮಾಡಿತು. ಇದು ಬಳ್ಳಾರಿ ಸಿದ್ದಮ್ಮನವರ ಘನತೆ-ಗೌರವಗಳನ್ನು ಮತ್ತಷ್ಟು ಹೆಚ್ಚಿಸಿತು. ಶ್ರೀಯುತ ಮುದವೀಡು ಕೃಷ್ಣರಾಯರ ಸಹ ಸಂಸ್ಥಾನ ಸರ್ಕಾರದ ನಿಷೇಧಾಜ್ಞೆನೆಗಳನ್ನು ಉಲ್ಲಂಘಿಸಿದ್ದಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ದಾವಣಗೆರೆಯಲ್ಲಿ ಮಹಿಳಾ ಕಾರ್ಯಕರ್ತರಾದ ಸರಸ್ವತಿಅಮ್ಮಾಳ್, ಸಿ.ಎನ್. ಕಮಲಾ ಬಾಯಿ. ಮುಂತಾದವರು ರಾಧಮ್ಮನವರ ನೇತೃತ್ವದಲ್ಲಿ ಪ್ರತಿಭಟನಾ ಮೆರವಣಿಗೆಯನ್ನು ಮಾಡಿ ಸರ್ಕಾರದ ದಮನಕಾರಿ ನೀತಿಯನ್ನು ಖಂಡಿಸಿದರು. ಸಂಸ್ಥಾನದಲ್ಲಿ ಸರ್ಕಾರದ ಕಾನೂನು ಉಲ್ಲಂಘನೆಮಾಡಿ, ದಸ್ತಗಿರಿಯಾದ ಪ್ರಪ್ರಥಮ ಮಹಿಳೆ ಎಂಬ ಹೆಗ್ಗಳಿಕೆಗೆ ಸಿದ್ದಮ್ಮನವರು ಪಾತ್ರರಾದರು.

ಸಿದ್ದಮ್ಮನವರು ದಸ್ತಗಿರಿಯಾಗಿ, ಶಿಕ್ಷೆ ಅನುಭವಿಸಿ ಬಿಡುಗಡೆ ಹೊಂದಿದ ನಂತರ ಇವರನ್ನು ಸಂಸ್ಥಾನದ ಜನತೆ ಬಹಳ ಗೌರವದಿಂದ ಕಾಣಲಾರಂಭಿಸಿದರು. ಸಿದ್ದಮ್ಮ ಕಾಂಗ್ರೆಸ್ ನಾಯಕರಾಗಿ ಸಾರ್ವಜನಕ ಸಭೆಗಳಲ್ಲಿ ರಾಷ್ಟ್ರೀಯ ವಿಷಯಗಳ ಬಗ್ಗೆ ಭಾಷಣಗಳನ್ನು ಮಾಡತೊಡಗಿದರು. ನಂಜನಗೂಡಿನಲ್ಲಿ ಕಾಂಗ್ರೆಸ್ ಸಂಘಟಿಸಿದ್ದ ಸಭೆಯಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ ಬಲಿದಾನಗಳಿಗೆ ಜನತೆ ಸಿದ್ದರಾಗಬೇಕು, ತ್ಯಾಗವನ್ನು ಹಲವು ರೂಪಗಳಲ್ಲಿ ವ್ಯಕ್ತಪಡಿಸಬಹುದೆಂದು ಮಾತನಾಡಿದರು.[೩]

೧೯೩೯ರಲ್ಲಿ ಸಂಸ್ಥಾನದ ಸರ್ಕಾರ ಮಧ್ಯಪಾನ ನಿಷೇಧ ಜಾರಿಗೆ ತರುವಲ್ಲಿ ಅಸಮರ್ಥವಾದ್ದರಿಂದ ಮೈಸೂರು ಕಾಂಗ್ರೆಸ್, ಸಂಸ್ಥಾನದಲ್ಲಿ ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಈಚಲು ಮರಗಳನ್ನು ಕಡಿಯುವ ಅರಣ್ಯ ಸತ್ಯಾಗ್ರಹ ಹಮ್ಮಿಕೊಳ್ಳಲು ತೀರ್ಮಾನಿಸಿತು. ಈ ಅರಣ್ಯ ಸತ್ಯಾಗ್ರಹದಲ್ಲಿ ಸಿದ್ದಮ್ಮನವರು ಸಕ್ರಿಯವಾಗಿ ಭಾಗವಹಿಸಿದರು. ೧೯೩೯ ರಲ್ಲಿ ಇತಿಹಾಸ ಪ್ರಸಿದ್ದ ಅರಣ್ಯ ಸತ್ಯಾಗ್ರಹವು ಚಿತ್ರದುರ್ಗ ಜಿಲ್ಲೆಯ ತುರುವನೂರಿನ ಅರಣ್ಯದಲ್ಲಿ ಪ್ರಾರಂಭ ವಾಯಿತು. ಜಿಲ್ಲೆಯ ಪ್ರಮುಖ ಕಾಂಗ್ರೆಸ್ಸಿಗರಾದ ಎಸ್. ನಿಜಲಿಂಗಪ್ಪ, ಎಸ್. ವಾಸುದೇವರಾವ್, ರಾಜಶೇಖರ್ ಹಿರೇಮಠ್ ಮತ್ತು ನಾಗರತ್ನಮ್ಮ ಹಿರೇಮಠ್, ಬಳ್ಳಾರಿಸಿದ್ದಮ್ಮ ನವರ ನೇತೃತ್ವದಲ್ಲಿ ನಡೆಯಿತು. ನಂತರ ಸಿದ್ದಮ್ಮನವರು, ದಾವಣಗೆರೆ ತಾಲ್ಲೂಕಿನ ಅನಗೋಡು ಮತ್ತು ಮಾಯಕೊಂಡ ಅರಣ್ಯಗಳಲ್ಲಿನ ಈಚಲು ಮರಗಳನ್ನು ಕಡಿದು ದಿನಾಂಕ ೨೯-೦೯-೧೯೩೯ ರಿಂದ ೮-೦೯-೧೯೪೦ ರವರೆಗೂ ಜೈಲುಶಿಕ್ಷೆಯನ್ನು ಅನುಭವಿಸಿದರು.[೪]

ನಂತರ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮ ಗಳ ಕಡೆ ಗಮನಹರಿಸಿದರು. ಗ್ರಾಮೀಣ ಪ್ರದೇಶದ ಮಹಿಳೆ ಯರ ಆರೋಗ್ಯ ಕಾಪಾಡಲು ಚಿತ್ರದುರ್ಗ, ಗಣನಾಯಕನಹಳ್ಳಿ ಮತ್ತು ದಾವಣಗೆರೆಯಲ್ಲಿ "ಮಾತೃಮಂದಿರ" ಗಳನ್ನು ಪ್ರಾರಂಭಿಸಿ, ಗ್ರಾಮೀಣ ಬಡಮಹಿಳೆಯರ ಆಶಾಕಿರಣ ವಾದರು. ಹೀಗೆ ಬಳ್ಳಾರಿ ಸಿದ್ದಮ್ಮನವರು ಜೀವನದಲ್ಲಿ ಸಾಂಸಾರಿಕ ಸುಖ-ಸಂತೋಷಗಳಿಗಿಂತ ಹೆಚ್ಚಿನದಾಗಿ ತಮ್ಮ ಜೀವನವನ್ನು ರಾಷ್ಟ್ರೀಯ ಚಟುವಟಿಕೆಗಳಲ್ಲಿ ಕಳೆದರು.

ದಾವಣಗೆರೆಯ ಖಾದಿ ಮಂಡಳಿಯ ಸದಸ್ಯರಾಗಿ ಸೇವೆಸಲ್ಲಿಸಿ ಸರ್ಕಾರದಿಂದ ತಾಮ್ರಪತ್ರವನ್ನು ಪಡೆದರು. ಇವರ ಅನುಪಮವಾದ ಸೇವೆಯನ್ನು ಪರಿಗಣಿಸಿದ ರಾಜ್ಯಸರ್ಕಾರವು ೧೯೭೨ರಲ್ಲಿ "ಸಾರ್ವಜನಿಕ ಸೇವಾ ಪ್ರಶಸ್ತಿ" ಯನ್ನು ಮತ್ತು ೧೯೭೩-೭೪ ರಲ್ಲಿ "ಸನ್ಮಾನ ಪತ್ರ" ವನ್ನು ನೀಡಿ ಗೌರವಿಸಿತು. ಇವರು ತಮ್ಮ ೭೮ನೇ ವಯಸ್ಸಿನವರೆಗೆ ಸಾರ್ವಜನಿಕ ಸೇವೆಯಲ್ಲಿ ತೊಡಗಿ ೧೯೮೧ರಲ್ಲಿ ಸ್ವರ್ಗಸ್ಥರಾದರು.

ಬಳ್ಳಾರಿ ಸಿದ್ದಮ್ಮನವರ ನೆನಪಿಗಾಗಿ ದಾವಣಗೆರೆ ಯಲ್ಲಿ ಸಾರ್ವಜನಿಕರ ಉದ್ಯಾನವನ್ನು ನಿರ್ಮಿಸಿ ಆ ಉದ್ಯಾನವನಕ್ಕೆ ಇವರ ಹೆಸರನ್ನು ನಾಮಕರಣ ಮಾಡ ಲಾಯಿತು. ಈ ಉದ್ಯಾನವನದಲ್ಲಿ ದಿನಾಂಕ ೧೪-೦೮-೨೦೦೫ ರಂದು ಚಿತ್ರದುರ್ಗದ ಶ್ರೀಮುರುಘರಾಜೇಂದ್ರ ಮಠದ ಸ್ವಾಮೀಜಿಗಳಾದ ಶ್ರೀ ಶಿವಮೂರ್ತಿಸ್ವಾಮಿಯವರು ಬಳ್ಳಾರಿ ಸಿದ್ದಮ್ಮನವರ 'ಪುತ್ಥಳಿ'ಯನ್ನು ಅನಾವರಣ ಗೊಳಿಸಿದರು. ಈ ಸಂದರ್ಭದಲ್ಲಿ ಕೆಂಪುಕೋಟೆಯ ಮೇಲೆ ತ್ರಿವರ್ಣ ಧ್ವಜಹಾರಿಸಿದ ಗದಗ ಜಿಲ್ಲೆಯ ಬೆಟಗೇರಿಯ ಸ್ವಾತಂತ್ರ್ಯ ಹೋರಾಟಗಾರರಾದ ದೇವಪ್ರಿಯಮಾಳೆಕರರು ರಾಷ್ಟ್ರೀಯ ಹೋರಾಟದ ಕೆಲವು ಘಟನೆಗಳನ್ನು ಸ್ಮರಿಸುತ್ತ ಸಿದ್ದಮ್ಮನವರ ರಾಷ್ಟ್ರ ಪ್ರೇಮ ಮತ್ತು ದಿಟ್ಟತನವನ್ನು ಶ್ಲಾಘಿಸಿದರು.

ಆಧಾರಸೂಚಿ

೧. ಮೈಸೂರು ಕಾಂಗ್ರೆಸ್, ಕಡತದ ಸಂಖ್ಯೆ, ೧-೪-೩೮ ರಿಂದ ೨೨-೬-೩೮. ಕ.ರಾ.ಪ. ಇಲಾಖೆ.
೨. ಕಾಂಗ್ರೆಸ್ ಕನ್‌ವೆನ್‌ಷನ್ ಶಿವಪುರ, ದಿನಾಂಕ ೧೩-೦೪-೧೯೩೮, ಕ.ರಾ.ಪ.ಇಲಾಖೆ.
೩. ಮೈಸೂರು ಕಾಂಗ್ರೆಸ್, ಕಡತದ ಸಂಖ್ಯೆ ೧-೪-೩೮ ರಿಂದ ೨೨-೬-೩೮. ನಂಜನಗೂಡು.
೪. ಚಿತ್ರದುರ್ಗ ಸತ್ಯಾಗ್ರಹ, ಕಡೆತದ ಸಂಖ್ಯೆ ಸೆಪ್ಟಂಬರ್ ೧೯೩೯.

ಪರಾಮರ್ಶನ ಗ್ರಂಥಗಳು

೧. ಮೈಸೂರು ಕಾಂಗ್ರೆಸ್, ಕಡತದ ಸಂಖ್ಯೆ ೧-೪-೩೮ ರಿಂದ ೨೨-೬-೩೮. ನಂಜನಗೂಡು.
೨. ಕಾಂಗ್ರೆಸ್ ಕನ್‌ವೆನ್‌ಷನ್ ಶಿವಪುರ, ದಿನಾಂಕ ೧೩-೦೪-೧೯೩೮, ಕ.ರಾ.ಪ. ಇಲಾಖೆ.
೩. ಚಿತ್ರದುರ್ಗ ಸತ್ಯಾಗ್ರಹ, ಸೆಪ್ಟಂಬರ್ ೧೯೩೯.
೪. ಗಾಂಧಿ. ಎಂ.ಕೆ. ವುಮೆನ್ ಅಂಡ್ ಸೋಸಿಯಲ್ ಇನ್ ಜಸ್ಟೀಸ್, ಅಹಮದಾಬಾದ್, ೧೯೪೨.
೫. ನಾಗರತ್ನಮ್ಮ ಎಸ್., ಕರ್ನಾಟಕದಲ್ಲಿ ಅಸಹಕಾರ ಮತ್ತು ನಾಗರೀಕ ಕಾನೂನು, ಭಂಗ ಚಳುವಳಿ, ಬೆಂಗಳೂರು, ೨೦೦೯.
೬ ಸರೋಜಿ ಸಿಂಧ್ರಿ & ವುಮೆನ್ ಫ್ರೀಡಮ್ ಫೈಟರ್ಸ್ ಇನ್ ಕರ್ನಾಟಕ, ರಾಘವೇಂದ್ರ ರಾವ್, ಧಾರವಾಡ, ೧೯೮೩.
೭. ಸೂರ್ಯನಾಥ ಕಾಮತ್: ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂಪುಟ ೨, ೩ ಗೌರ್ನಮೆಂಟ್ ಆಫ್ ಮೈಸೂರು, ೧೯೭೭, ೧೯೮೦.
೮. ವೀರತಪ್ಪ ಕೆ., ರೀಡಿಂಗ್ಸ್ ಇನ್ ಮಾರ್ಡನ್ ಹಿಸ್ಟರಿ ಆಫ್ ಮೈಸೂರು, ನ್ಯೂ ಡೆಲ್ಲಿ, ೧೯೮೫.
೯. ಲಿಂಗಯ್ಯ ಡಿ., ಶಿವಪುರ ಧ್ವಜ ಸತ್ಯಾಗ್ರಹ.

೧೨೩

ಹಜರತ್ ಷಮ್‌ಶುದ್ದೀನ್ ರಹಮತ್ ಉಲ್ಲಾಅಲ್ಲೈಹಿ ಬಂಗಾರಪೇಟೆಯ ಸೂಫಿ ಸಂತ

ಡಾ. ಶಾಹೀನಾ ಬಾನೂ*

ಹಜರತ್ ಷಮ್‌ಶುದ್ದೀನ್ ರಹಮತ್ ಉಲ್ಲಾಅಲ್ಲೈಹಿ ಇವರ ದರ್ಗಾ ಕೋಲಾರ ಜಿಲ್ಲೆಯ ಬಂಗಾರಪೇಟೆ ಪಟ್ಟಣ ದಲ್ಲಿದೆ. ಜನರು ಇವರಿಗೆ ಷಮ್‌ಶುಮ ಎಂದು ಕರೆಯು ತ್ತಿದ್ದರು. ಘಮ್‌ಶುಮ ಇವರು ಮಜ್ಜೂಬ್ ಸೂಫಿ ಸಂತರು. ಇವರು ೧೯ನೇ ಶತಮಾನದಲ್ಲಿ ದೇವರ ವ್ಯಾಮೋಹದಲ್ಲಿ ತೊಡಗಿದ್ದರು. ಇವರ ದರ್ಗಾದಲ್ಲಿ ಲಭ್ಯವಾದ ಅರಬ್ಬೀ ಶಾಸನದ ಮಾಹಿತಿಯ ಪ್ರಕಾರ ಇವರು ಕ್ರಿ.ಶ. ೧೮೭೪ರಲ್ಲಿ ಬಂಗಾರಪೇಟೆ ಪಟ್ಟಣದಲ್ಲಿ ಜನಿಸಿದರು. ಇವರು ೫೦ನೇ ವಯಸ್ಸಿನಿಂದ ಅಲ್ಲಾಹನ ಸಾನಿಧ್ಯ ಸೇರುವವರೆಗೂ ಜನರಿಗೆ ಮಜ್ಜೂಬ್ ಸ್ಥಿತಿಯಲ್ಲಿ ಕಂಡುಕೊಳ್ಳುತ್ತಿದ್ದರು. ಮೈಮೇಲೆ ಹಾಕಿಕೊಂಡಿರುವ ಒಂದು ಜೊತೆ ಬಟ್ಟೆ, ಒಂದು ಚಿಕ್ಕ ಗುಡಿಸಲು (ಜೋಪಡಿ) ಬಿಟ್ಟು ಯಾವ ತರಹದ ಸಂಪತ್ತು ಇರಲಿಲ್ಲ. ಇಡೀ ದಿನ ಪಟ್ಟಣದಲ್ಲಿ ಪ್ರವಾಸ ಮಾಡಿ ರಾತ್ರಿ ಜೋಪಡಿಯಲ್ಲಿ ವಿಶ್ರಾಂತಿ ಮಾಡುತ್ತಿದ್ದರು ಇವರ ಜೋಪಡಿ ಬಂಗಾರಪೇಟೆಯ ಜನರ ನಿವಾಸ (ವಾಸಸ್ಥಳ)ದಿಂದ ೪ ಕಿ.ಮೀ. ದೂರದಲ್ಲಿತ್ತು.

ಇವರು ನಶ್ಯೆ ಮತ್ತು ಎಲೆ ಅಡಿಕೆ ಬಳಸುತ್ತಿದ್ದರು. ಇವರು ಯಾವ ಅಂಗಡಿಗೆ ತೆಗೆದುಕೊಳ್ಳಲು ಹೋದರೆ ಅವರ ಅಂಗಡಿಯಲ್ಲಿ ಸದರಿ ನಶ್ಯೆ, ಎಲೆ ಅಡಿಕೆ ಮತ್ತು ಇತರೆ ವಸ್ತು ಮುಟ್ಟಿದರೆ ಅವರ ಅಂಗಡಿಯಲ್ಲಿ ಹೆಚ್ಚು ವ್ಯಾಪಾರವಾಗುತ್ತಿತ್ತು ಮತ್ತು ಹೆಚ್ಚು ಲಾಭ ಸಿಗುತ್ತಿತ್ತು. ಜನರು ಅಂದರೆ ವ್ಯಾಪಾರಿಗಳು ಇವರು ಬಂದರೆ ಸಾಕು ಎಂದು ಕಾಯುತ್ತಿದ್ದರು. ಇವರು ಎಲೆ ಅಡಿಕೆ ತಿಂದು ಉಗುಳಿದರೆ ಜನರು ಗೌರವದಿಂದ ಎತ್ತುಕೊಂಡು ತಮ್ಮ ಮನೆಗಳಲ್ಲಿ ಶುಭ ಆಗಲಿ ಎಂದು ನಂಬಿಕೆಯಿಂದ ಇಡುತ್ತಿದ್ದರು. ಇವರ ಮೇಲೆ ಜನರಿಗೆ ತುಂಬಾ ನಂಬಿಕೆಯಿತ್ತು. ಹಿಂದೂ ಜನರಾಗಲಿ ಮತ್ತು ಮುಸ್ಲಿಂ ಜನರಾಗಲಿ ಐಕ್ಯತೆಯಿಂದ ಒಂದಾಗಿ ಕೂಡಿ ಒಮ್ಮತಯಿಂದ ಭೇದ ಭಾವವಿಲ್ಲದೆ ಅಣ್ಣ–ತಮ್ಮಂದಿರಂತೆ ಇರುತ್ತಿದ್ದರು. ಇವರು ಅನೇಕ ಪವಾಡಗಳನ್ನು ಮಾಡಿದರು.



ಬಂಗಾರಪೇಟೆಯಲ್ಲಿ ವಾಸವಾಗಿದ್ದ ಇವರ ಭಕ್ತ ಕಾರ್ಡ್ ಅವರ ಹರಕೆ ಪೂರ್ಣ ಹೊಂದಿದ ಮೇಲೆ ಷಮ್‌ಶುಮ ಸಮಾಧಿ ಮೇಲೆ ದರ್ಗಾ ಕಟ್ಟಿದನು. ಇವರ ದರ್ಗಾ ೨ ೧/೨ ಎಕರೆ ಭೂಮಿ ಮೇಲೆ ವಿಸ್ತಾರವಾಗಿದೆ. ಇವರ ದರ್ಗಾಗೆ ಒಂದು ಗುಮ್ಮಟ, ನಾಲ್ಕು ಮಿನಾರುಗಳು ಇವೆ. ಈ ದರ್ಗಾದ ಮುಂಭಾಗದಲ್ಲಿ ಒಂದು ಮಸೀದಿ, ಷಮ್ಸ್ ಈದ್‌ಗಾ, ಮದುವೆ ಸಭಾಂಗಣ, ಅರಬೀ ಮದ್‌ರಸ, ಐ.ಬಿ.ಎಮ್ (I.B.M.) ಶಾಲೆ, ಇಬ್ಬರು ಸೂಫಿಸಂತರು, ಫಕರ್‌ರುದ್ದೀನ್ ಮತ್ತು ಮೆನುರುದ್ದೀನ್ ಮಜಾರಗಳು ಇವೆ.

ಹಜರತ್ ಷಮ್‌ಶುಮ ಅಲ್ಲಾಹನ ಸಾನಿಧ್ಯ ಸೇರಿದಾಗಿನಿಂದ ಹಿಡಿದು ಪ್ರತಿ ವರ್ಷ ೨೧, ೨೨ ಮತ್ತು ೨೩ನೇಯ ನವೆಂಬರ್ ತಿಂಗಳಿನಲ್ಲಿ ಅವರ ಉರ್ಸ ಬಹು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಇವರ ಉರ್ಸದಲ್ಲಿ ಹಿಂದೂ ಮುಸಲ್ಮಾನರು ಅನೇಕ ಜಾತಿ ಧರ್ಮದ ಜನ ಭಕ್ತರು ಇಂದಿಗೂ ಅವರ ದರ್ಗಾಕ್ಕೆ ಬಂದು ಅವರ ಕೃಪೆಗೆ ಪಾತ್ರರಾಗುತ್ತಾರೆ. ಇವರ ಉರ್ಸ್‌ಗೆ ಸರ್ವ ಧರ್ಮದವರೂ ಬಂದು ತಮ್ಮ ಹರಕೆಗಳನ್ನು ಪೂರೈಸಿಕೊಂಡು ಹೋಗುತ್ತಾರೆ.

* ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕನಕಪುರ.

ಆಧಾರಸೂಚಿ

೧. Mysore Gazetteer, Kolar District, K. Abhishankar, Bangalore, 1968, P. 301.

೨. Majlis Miliya Dargh Hazrat Shamshuma Trust, Bangarpate, Ishtehar of Urs, Bangalore, 2012, P. 1.

೩. Wakf Board, Gazetteer of Kolar District, 1968, Bangalore.

೪. Kolar Gille, Published by Government of Karnataka a Publicity, 1966.

೫. Sayed Shah Abdul Smeed Surosh Hataka- Shamshuma, Hyderabad, 1950, P.16.

೬ Abdul Razak, Dictionary of the Technical term of Sufis, Calcutta, 1848.

೭. Abdul Jabbar Malkapuri, Fi-Tazkira-yi-Ayliya-i-Deccan, Vol.II, Hasan Press, Hyderbad, 1913.

೮. Basheeruddin Ahmed, Waquiyate Mumlikate Bijapur, Vol.-II, Publisher Karnataka Urdu Academy Bangalore, 2004.

೯. Deccan Herald (Spectrum), 5th March, 1999.

೧೦. Gulbarga District Gazetteer, Government of Karnataka Publications, 1997.

೧೧. Hussaini, S.S.K., Gisudiraz on Sufism, Delhi, 1983.

೧೨. Moinuddin Ahmed, Vlama, The Boon and Bane of Islamic Society, Kitab Bhavan, New Delhi, 1990.

೧೩. Mujeeb, M., The Indian Muslims London, 1967.

೧೪. Richard Maxwell Eation, Sufi's of Bijapur, 130-1700, Princeton University Press, Princeton, 1978.

೧೫. The Souvenir of Hazrat Khaja Bandanawaz Gesudaraz[RH], 600th Urs Celebrations 2004, Hyderabad, 2004.

೧೬. The Souvenir of Hazrat Khaja Bandanawaz Gisudiraz[RH], 606 Urs Celebration, Hyderabad, 2010.

೧೭. ರಹಮತ್ ತರೀಕೆರೆ, ಕರ್ನಾಟಕದ ಸೂಫಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ (೧೯೯೮), ೨೦೦೧.

೧೮. Mohamed Sulemani Sidiqui, The Bahmani Sufis, Idria Adabiy, Delhi, 1989.

೧೯. ಹರದೇಶಿ ನಾಗೇಶಿ, ಸಂ. ಬಿ.ಬಿ. ಹೆಂಡಿ, ಎಂ.ಎಸ್. ಲಠ್ಠೆ ಹಾಗೂ ಎಂ.ಜಿ. ಬಿರಾದಾರ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೮೩.

೨೦. ಗುಲ್ಬರ್ಗ ಜಿಲ್ಲೆಯ ತ್ರಿಪದಿಗಳು, ಸಂ. ಚೆನ್ನಣ್ಣವಾಲಿಕಾರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೭.

೨೧. ರಾಜಶೇಖರ, ಜಿ., ಬಿಜಾಪುರದ ಸೂಫಿಗಳು, ಸಾಹಿತ್ಯ ವಿಮರ್ಶೆ ೧೯೮೮ (ಸಂ. ರಾಜೇಂದ್ರ ಚೆನ್ನಿ), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೯.

೨೨. Saiyid Athar Abbas Rizvi, A History of Sufism in India, Vol.1 (1978), Munishiram Mohanlal Publication Pvt. Ltd., Delhi, 1986.

೨೩. Saiyid Athar Abbas Rizvi, A History of Sufism in India, Vol.II (1983), Munishiram Mohani Publications Pvt. Ltd., Delhi, 1992.

೧೨೪

ಭೀಮಸಮುದ್ರದ ಐತಿಹಾಸಿಕ ಕೆರೆ ಹಾಗೂ ನೀರಿಗಾಗಿ ರೈತರ ಹೋರಾಟ

ಡಾ. ಹೆಚ್. ಗುಡ್ಡದೇಶ್ವರಪ್ಪ*

ಚಿತ್ರದುರ್ಗ ತಾ॥ ಹಿರೇಗುಂಟನೂರು ಹೋಬಳಿಯ ಭೀಮಸಮುದ್ರ ಗ್ರಾಮವು ಐತಿಹಾಸಿಕ ಹಿನ್ನೆಲೆ ಹೊಂದಿದ ಸ್ಥಳವಾಗಿದೆ. ಚಿತ್ರದುರ್ಗದ ವಾಯುವ್ಯ ದಿಕ್ಕಿಗಿರುವ ಈ ಗ್ರಾಮವು ತಾಲ್ಲೂಕು ಕೇಂದ್ರದಿಂದ ೧೮ ಕಿ.ಮೀ. ಅಂತರದಲ್ಲಿದೆ. ರಾಜ್ಯ ಹೆದ್ದಾರಿ-೪೮ ಇಲ್ಲಿ ಹಾದುಹೋಗುತ್ತದೆ. ಪ್ರಾಚೀನ ಕಾಲದಿಂದಲೂ ಇದು ಜನವಸತಿ ಪ್ರದೇಶವಾಗಿತ್ತು.

ಭೀಮಸಮುದ್ರ ಗ್ರಾಮಕ್ಕೆ ಪ್ರಾಚೀನ ಕಾಲದಲ್ಲಿ **"ಹೆಮ್ಮೂರು"** (ದೊಡ್ಡ ಊರು) **"ಹೊನ್ನುಂದ" ಎಂಬ ಹೆಸರಿತ್ತು. ಚಿತ್ರದುರ್ಗ ಪಾಳೆಯಗಾರರ ಕಾಲಕ್ಕೆ ಹೊನ್ಕುಂದವು "ಹೊಲತಿಹಾಳು"** ಎಂದಾಯಿತು. ಬಿಚ್ಚುಗತ್ತಿ ಭರಮಣ್ಣ ನಾಯಕನ (೧೬೮೯ ರಿಂದ ೧೭೨೧) ಕಾಲದಲ್ಲಿ ಈ ಸ್ಥಳದಲ್ಲಿ ನಿಧಿ ಸಿಕ್ಕಿದ್ದರಿಂದ ಇಲ್ಲಿ ಭೀಮೇಶ್ವರ ದೇವಾಲಯ ನಿರ್ಮಿಸಿ, ಇಲ್ಲಿದ್ದ ಕೆರೆಯನ್ನು ಜೀರ್ಣೋದ್ಧಾರಗೊಳಿಸಲಾಯಿತು. ಹೀಗಾಗಿ ಈ ಊರಿಗೆ ಭೀಮಸಮುದ್ರ ಎಂದು ನಾಮಕರಣ ಮಾಡಲಾಯಿತು. ಇದಕ್ಕೆ ಸಂಬಂಧಿಸಿದಂತೆ ಕೆರೆಯ ಏರಿಯ ಮೇಲೆ ಶಿಲಾಶಾಸನ ಹಾಕಿಸಲಾಗಿದೆ. ಜನಪದರ ಪ್ರಕಾರ ಭೀಮನಷ್ಟು ಬಲಿಷ್ಟ ದೇವಾಲಯ ಸಮುದ್ರದಂತಹ ವಿಶಾಲವಾದ ಕೆರೆ ಇರುವುದರಿಂದ ಈ ಗ್ರಾಮಕ್ಕೆ ಭೀಮಸಮುದ್ರ ಎಂದು ಹೆಸರು ಬಂದಿತೆಂದು ಹೇಳುತ್ತಾರೆ. ಈ ಕೆರೆಯು ಸುಮಾರು ಕ್ರಿ.ಶ. ೧೦೬೬ರ ಹಿಂದೆಯೇ ನಿರ್ಮಾಣವಾಗಿರಬಹುದು.

ಶಾಸನ

ಭೀಮಸಮುದ್ರದ ಕೆರೆಯ ಏರಿಯ ಮೇಲೆ ಇರುವ ಶಾಸನವನ್ನು ಚಿತ್ರದುರ್ಗ ಪಾಳೇಗಾರನಾದ ಬಿಚ್ಚುಗತ್ತಿ ಭರಮಣ್ಣನಾಯಕ (೧೬೮೯ರಿಂದ ೧೭೨೧) ರಾಜ್ಯವಾಳುತ್ತಿದ್ದಾಗ ಭೀಮೇಶ್ವರ ದೇವಾಲಯವನ್ನು ನಿರ್ಮಿಸಿ, ಈ ಶಾಸನವನ್ನು ಹಾಕಿಸಲಾಯಿತು. ಶಾಸನದಲ್ಲಿ ಈ ಕೆರೆಯನ್ನು **"ಪಿರಿಯ ಕೆರೆ"** ಎಂದು ಉಲ್ಲೇಖಿಸಲಾಗಿದೆ. ಪಿರಿಯಕೆರೆಯೆಂದರೆ ದೊಡ್ಡಕೆರೆ ಎಂದರ್ಥ. ಈ ಪಿರಿಯ ಕೆರೆಗೆ ಮಳೆಯ ಕೊರತೆಯಿಂದ ಆಗಾಗ ನೀರಿನ ಅಭಾವ ಉಂಟಾಗುತ್ತಿದ್ದರಿಂದ ವಿಜಯ ನಗರಸಾಮ್ರಾಟ ೨ನೇ ಹರಿಹರರಾಯನ ಮಗನಾದ ಕಂಪಣ್ಣೊಡೆಯನು ಚಿಮ್ಮತ್ತೂರು ಕಲ್ಲು (ಚಿತ್ರದುರ್ಗ) ರಾಜ್ಯವಾಳುತ್ತಿದ್ದಾಗ ಅವರ ಮನೆಯ ಪ್ರಧಾನನಾಗಿದ್ದ ಲಕ್ಷ್ಮೀಧರ ಪಂಡಿತನ ಮಗ ಕಂಪಣ್ಣನು ಕ್ರಿ.ಶ.೧೩೯೨ರಲ್ಲಿ ಕಕ್ಕೆಯಹರವಿನ (ಕಕ್ಕೇರು) ಬಳಿ ಜಿನಗಿಹಳ್ಳಕ್ಕೆ ಅಡ್ಡ ಕಟ್ಟೆ ಹಾಕಿ ಅದರ ದಿಕ್ಕನ್ನ ಬದಲಿಸಿ, ಹೊನ್ಕುಂದದ (ಭೀಮಸಮುದ್ರ) ಕೆರೆಗೆ ನೀರು ಹರಿದು ಬರುವಂತೆ ಮಾಡಿದನು. ಈ ಕಾಲುವೆಗೆ ಮಂಗಳ ಮಹಾ ಶ್ರೀ ಶ್ರೀ ಶ್ರೀ ,,,,,,,,,,,,,,, ಎಂದು ಶಾಸನ ತಿಳಿಸುತ್ತದೆ. ಈಗ ಫೀಡರ್ ಚಾಲನ್ ಎಂದು ಇದನ್ನು ಕರೆಯುತ್ತಿದ್ದು, ನೀರು ಭರ್ತಿ ಮಾಡುವ ಕಾಲುವೆ ವ್ಯವಸ್ಥೆಯು ಇದಕ್ಕೆ ಇದೆ. ಈ ಶಾಸನದಿಂದ ಕೆರೆಯ ಇತಿಹಾಸ ತಿಳಿಯುತ್ತದೆ.

ಚಿತ್ರದುರ್ಗ ಪಾಳೆಗಾರರ ಕಾಲದಲ್ಲಿ ೩೦೦ ಕೆರೆಗಳು ನಿರ್ಮಾಣವಾದವು. ಕೆಲವು ಕೆರೆಗಳನ್ನು ದುರಸ್ತಿ ಮಾಡಲಾಯಿತು. ಇಂತಹ ಕಾರ್ಯ ತಿಮ್ಮಣ್ಣನಾಯಕನಂದ ಆರಂಭವಾಗಿ ಮದಕರಿ ನಾಯಕನ ಕಾಲದವರೆಗೂ ನಡೆಯಿತು. ಅತಿ ಹೆಚ್ಚು ಕೆರೆಗಳ ನಿರ್ಮಾಣ ಬಿಚ್ಚುಗತ್ತಿ ಭರಮಣ್ಣನಾಯಕ (೧೬೮೯-೧೭೨೧)ನ ಕಾಲದಲ್ಲಿ ನಿರ್ಮಾಣವಾದವು, ಮುಖ್ಯವಾಗಿ ಇಟ್ಟಿಗೆ ಹಳ್ಳಿಕೆರೆ, ಲಿಂಗವ್ವನಾಗ್ತಿಕೆರೆ, ಚಿತ್ರಹಳ್ಳಿ ಸೀಮೆಯ ಹಂಗವಾರದಕೆರೆ, ಅಣಜಿಕೆರೆ, ಜಂಪಣ್ಣನಾಯಕನ ಕೋಟೆ ಕೆರೆ, ಮದಕೇರಿನಾಯಕನ ಕೋಟೆ ಕೆರೆ, ಚಿಕ್ಕಸಿದ್ದವ್ವನಾಗ್ತಿಕೆರೆ, ಅನ್ನೇಹಾಳು ಗ್ರಾಮದ ಚಿಕ್ಕ ಸಿದ್ದವ್ವನಹಳ್ಳಿ ನಾಗತಿಕೆರೆ, ಆಲಗಟ್ಟದ ಬಳಿ ಹುಚ್ಚವ್ವನಾಗತಿಕೆರೆ, ಜಗಳೂರು ಸೀಮೆಯ ಭರಮಸಮುದ್ರದಕೆರೆ, ಮಾಯಕೊಂಡ ಸೀಮೆಯ ಭರಮ ಸಾಗರದ ಕೆರೆ, ಕುರುಬರಹಳ್ಳಿ ಗ್ರಾಮದ ಚಿಕ್ಕಪಾಲವ್ವನ ಕೆರೆ, ಕುರುಬರಮರಡಿಕೆರೆ ದ್ಯಾಮವ್ವನಕೆರೆ, ಸಂತೆಹೊಂಡ, ಸಿಹಿನೀರು ಹೊಂಡದ ನಿರ್ಮಾಣ, ಹಾಗೂ ಮುರಗಿಮಠದ ಕೆರೆಗಳು, ಭೀಮಸಮುದ್ರ ಕೆರೆಗಳ ಜೀರ್ಣೋದ್ಧಾರ ಕಾರ್ಯ ನಡೆಯಿತು.

* ಮುಖ್ಯಸ್ಥರು, ಸ್ನಾತಕೋತ್ತರ ಇತಿಹಾಸ ವಿಭಾಗ, ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ-೫೭೭೫೦೧.

ಭೀಮಸಮುದ್ರ ಕೆರೆಯ ಪರಿಚಯ

ಭೀಮಸಮುದ್ರದ ಕೆರೆಯ ನೀರಿನ ವಿಸ್ತೀರ್ಣ ೮೬೪,೭೯ ಹೆಕ್ಟೇರ್ ಇದ್ದು, ಕೆರೆಯ ನೀರಿನ ಸಂಗ್ರಹಣಾ ಸಾಮರ್ಥ್ಯ ೮೦೦.೧೫, ಮಿಲಿಯನ್ ಸಿ.ಎಫ್.ಟಿ (೦.೮೦ ಟಿ.ಎಂ.ಸಿ) ಆಗಿರುತ್ತದೆ. ಕೆರೆಯ ಏರಿಯ ಉದ್ದ ೮೪೦ ಮೀ. ಆಗಿರುತ್ತದೆ. ಈ ಏರಿಯ ಅಗಲ ೨೦ ಮೀ (ಸರಾಸಿ) ಇದ್ದು, ಈ ಏರಿಯ ಎತ್ತರ ೧೪ ರಿಂದ ೨೦ ಮೀ. ಆಗಿದೆ. ಇದರ ನೀರಿನ ಸಂಗ್ರಹದ ಮಳೆ ಬೀಳುವ ಪ್ರದೇಶ ೧೧೮.೧೧ ಚದರ ಕಿ.ಮೀ. ಆಗಿದ್ದು ಇಲ್ಲಿಯ ವಾರ್ಷಿಕ ಸರಾಸರಿ ಮಳೆ ೪೦೮ ಮಿ.ಮೀ. ಹಳ್ಳ ಇದಕ್ಕೆ ಹರಿಯುವ ಹಳ್ಳಗಳು ಜಿನಗಿ, ಅಂಡು ಮಾರನಹಳ್ಳಿ, ಬಂಡಿಹಳ್ಳ, ನಲ್ಲಿಕಟ್ಟೆಹಳ್ಳ, ಕಂದವಾಡಿಹಳ್ಳಿ, ಜೋಗಿಹಳ್ಳ. ಇದರ ಒಟ್ಟು ಅಚ್ಚುಕಟ್ಟು ಪ್ರದೇಶ ೩೦೫೦.೦೦ ಎಕರೆ ಆಗಿದ್ದು, ಇದರ ಕಾಲುವೆಗಳ ಸಂಖ್ಯೆ ೧೦.

ತೂಬುಗಳ ವಿವರ

ಕೋಡಿ ತೂಬು, ದೊಡ್ಡ ತೂಬು, ಕತ್ತರಿ ತೂಬು – ಈ ಮೂರು ತೂಬುಗಳಿಂದ ಹೊರಬಂದ ನೀರು ಹತ್ತು ಕಾಲುವೆಗಳ ಮೂಲಕ ಸುಮಾರು ೩೩ ಹಳ್ಳಿಗಳ ಸುಮಾರು ೩೦೫೦,೦೦ ಎಕರೆ ಪ್ರದೇಶಕ್ಕೆ ನೀರು ಹರಿಯುತ್ತದೆ.

ಕೆರೆಯ ಏರಿಗೆ ಗುಬ್ಬಿಕಲ್ಲಿನ ಮಣ್ಣನ್ನು ಹಾಕಿ ಗಟ್ಟಿ ಮಾಡಲಾಗಿದೆ. ಭೀಮಸಮುದ್ರದ ಸುತ್ತಮುತ್ತ ನಡೆಯುವ ಗಣಿಗಾರಿಕೆಯಿಂದ ಅಲ್ಲಿನ ಅದಿರು ಮಣ್ಣಿನ ದೂಳು ಕೆರೆಯಲ್ಲಿ ತುಂಬಿಕೊಂಡಿದೆ. ೧೯೬೧ರಲ್ಲಿ ೨೧ ಅಡಿ ಆಳ ಹೊಂದಿದ್ದ ಕೆರೆ ಇಂದು ೧೩ ಅಡಿ ಆಳ ಹೊಂದಿದೆ. ಇದರಿಂದಾಗಿ ನೀರಿನ ಸಾಮರ್ಥ್ಯ ಕಡಿಮೆಯಾಗಿದೆ. ಮಳೆಯ ಕೊರತೆಯಿಂದಾಗಿ ಹಳ್ಳಿಗಳ ಜೀವನಾಡಿ ಭೀಮಸಮುದ್ರ ಕೆರೆಗೆ ನೀರಿಲ್ಲದಂತಾಗಿದೆ. ಕೆರೆಯ ನೀರಿನ ಆಶ್ರಯವನ್ನೇ ನಂಬಿಕೊಂಡು ರೈತರು ತಮ್ಮ ಅಚ್ಚುಕಟ್ಟು ಪ್ರದೇಶದಲ್ಲಿ ಅಡಿಕೆ, ತೆಂಗು, ಬಾಳೆ ತೋಟಗಳನ್ನು ಬೆಳೆಸಿದ್ದು, ಹಾಗೂ ಇತರೆ ಬೆಳೆಗಳನ್ನು ಬೆಳೆಯುತ್ತಿದ್ದು, ಕೆರೆಯಲ್ಲಿ ನೀರು ಇಲ್ಲದೆ ಕಂಗಾಲಾಗಿದ್ದಾರೆ. ಹಾಗಾಗಿ ಭದ್ರಾ ಕಾಲುವೆಯಿಂದ ಭೀಮಸಮುದ್ರದ ಕೆರೆಗೆ ನೀರು ತರಲು ಸುಮಾರು ೨೦ ವರ್ಷಗಳಿಂದ ರೈತರು ಹೋರಾಟವನ್ನು ನಡೆಸುತ್ತಾ ಬಂದಿದ್ದಾರೆ.

ನೀರಿಗಾಗಿ ರೈತರ ಹೋರಾಟ

ಭೀಮಸಮುದ್ರದ ಕೆರೆ ದೊಡ್ಡಕೆರೆಯಾಗಿದ್ದು, ಇತ್ತೀಚಿನ ವರ್ಷಗಳಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿದ್ದರಿಂದ ಈ ಕೆರೆ ಬತ್ತಿ ಹೋಗಿದೆ. ಕೆಲವೊಮ್ಮೆ ಬಂದ ಮಳೆಯ ನೀರಿನ ಸಂಗ್ರಹಣ ಸಾಮರ್ಥ್ಯ ಕಡಿಮೆಯಾಗಿದೆ. ಈ ಭಾಗದ ರೈತರಿಗೆ ಕೆರೆಯು ಜೀವನಾಡಿಯಾಗಿದ್ದು, ಕೆರೆಯಾಶ್ರಿತ ಪ್ರದೇಶದಲ್ಲಿ ರೈತರು ಹೆಚ್ಚಾಗಿ ಅಡಿಕೆ, ತೆಂಗು, ಬಾಳೆ, ಹಾಗೂ ಇತರೆ ಬೆಳೆಗಳನ್ನು ಬೆಳೆಯುತ್ತಿದ್ದು, ಕೆರೆಯ ನೀರನ್ನೇ ನಂಬಿದ್ದು, ನೀರಿನ ಕೊರತೆಯಿಂದಾಗಿ ರೈತರು ಕಂಗಾಲಾಗಿದ್ದಾರೆ.

ಅನೇಕ ಗ್ರಾಮಗಳ ಮುಖಂಡರು ಭೀಮಸಮುದ್ರದ ಕೆರೆಗೆ ಬೇರೆ ಮೂಲದಿಂದ ನೀರು ತರಲು ೧೯೮೬ರಿಂದ ಹೋರಾಟದ ಮೂಲಕ ಸರ್ಕಾರದ ಗಮನ ಸೆಳೆದಿದ್ದಾರೆ.

ಮೊದಲ ಹಂತ: ೧೯೮೬–೮೮

೧೯೮೬ರಲ್ಲಿ ಕೆರೆಗೆ ನೀರು ತರಲು ಹೋರಾಟವನ್ನು ಪ್ರಾರಂಭಿಸಲಾಯಿತು. ೩೨ ಹಳ್ಳಿಯ ರೈತ ಮುಖಂಡರುಗಳು, ಜನಪ್ರತಿನಿಧಿಗಳು ಈ ಹೋರಾಟದಲ್ಲಿ ಭಾಗವಹಿಸಿದರು. ಅನೇಕ ರೈತರು ಭಾಗವಹಿಸಿ ಹೋರಾಟಕ್ಕೆ ಹೊಸ ರೂಪ ನೀಡಿದರು. ರೈತ ಹೋರಾಟಗಾರರು ಬೆಂಗಳೂರಿಗೆ ಹೋಗಿ ವಿಧಾನಸೌಧದ ಮುಂದೆ ಧರಣಿ ಸತ್ಯಾಗ್ರಹ ನಡೆಸಿ ಭದ್ರಾ ಕಾಲುವೆಯಿಂದ ೧/೨ ಟಿ.ಎಂ.ಸಿ. ನೀರು ಕೆರೆಗೆ ಹರಿಸಲು ಅಂದಿನ ಮುಖ್ಯಮಂತ್ರಿಯವರಾಗಿದ್ದ ರಾಮಕೃಷ್ಣ ಹೆಗಡೆಯವರಿಗೆ ಮನವಿ ಸಲ್ಲಿಸಿದರು.

ದಾವಣಗೆರೆ ಲೋಕಸಭಾ ಸದಸ್ಯರಾದ ಜಿ. ಮಲ್ಲಿಕಾರ್ಜುನಪ್ಪನವರ ನೇತೃತ್ವದಲ್ಲಿ ಹಾಗೂ ಬಿ.ಟಿ. ಚನ್ನಬಸಪ್ಪನವರ ಮಾರ್ಗದರ್ಶನದಲ್ಲಿ ೧೯೯೯ರಲ್ಲಿ ಸಭೆ ಸೇರಿ ತೋಟಗಳ ರಕ್ಷಣೆಗಾಗಿ ಹೋರಾಟ ಸಮಿತಿ ರಚಿಸಿದರು. ಭೀಮಸಮುದ್ರದ ಅಚ್ಚುಕಟ್ಟು ಪ್ರದೇಶದಲ್ಲಿ ನೀರಿಲ್ಲದೆ ಅಡಿಕೆ ತೋಟಗಳು ವಿನಾಶದತ್ತ ಸಾಗಿದ್ದ ಸಮಯದಲ್ಲಿ **"ಭೀಮ ಸಮುದ್ರ ಕೆರೆ ವ್ಯಾಪ್ತಿಯ ತೋಟ ಉಳಿಸಿ ಅಂದೋಲನಕೆ"** ಚಾಲನೆ ನೀಡಲಾಯಿತು.

ಯೋಜನೆ–ರೂಪರೇಷೆಗಳು

ಜಿ.ಎಸ್. ಮಂಜುನಾಥ್‌ರವರ ಮುಖಂಡತ್ವದಲ್ಲಿ ನೂರಾರು ಜನ ರೈತರು ಚಿತ್ರದುರ್ಗ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಧರಣಿ ಸತ್ಯಾಗ್ರಹ ನಡೆಸಿ ಭದ್ರಾ ಕಾಲುವೆಯಿಂದ ನೀರು ಹರಿಸಲು ಒತ್ತಾಯಿಸಿ ಅಂದಿನ ಜಿಲ್ಲಾಧಿಕಾರಿ ಎಂ.ಎ. ಸಾಧಿಕ್‌ರವರಿಗೆ ಮನವಿ ಸಲ್ಲಿಸಲಾಯಿತು.

ಇಲ್ಲಿಯವರೆಗೂ ಭದ್ರಾ ಮೇಲ್ದಂಡೆ ನೀರಾವರಿ ಯೋಜನೆಯ ಮೂಲಕ ನೀರು ತರಲು ಚಿಂತಿಸಲಾಗಿತ್ತು. ಆದರೆ ಇದು ಕಷ್ಟ ಸಾಧ್ಯವಾಗಬಹುದೆಂದು ಮನಗಂಡ ರೈತರು ಭೀಮಸಮುದ್ರಕ್ಕೆ ೫೦ ಕಿ.ಮೀ. ಅಂತರದಲ್ಲಿರುವ ನೀರು ಸಂಗ್ರಹ ತಾಣವಾದ ಸೂಳೇಕೆರೆಯಿಂದ ಕೊಳವೆ ನಾಲೆಯೊಂದನ್ನುಹಾಕಿ ಕೆರೆಗೆ ನೀರು ತರಲು ಸರ್ಕಾರ

ದೊಂದಿಗೆ ಮಾತುಕತೆ ಮೂಲಕ ಹೋರಾಟ ಮಾಡಲು ನಿರ್ಧರಿಸಿದರು. ಮುಂದುವರೆದು ಚರ್ಚಿಸಿ ತೋಪೇನ ಹಳ್ಳಿಯಿಂದ ಏತ ನೀರಾವರಿ ಮೂಲಕ ನೀರು ತರುವ ಯೋಜನೆ ಹಾಕಲಾಯಿತು.

ಬಹುಕೋಟಿ ಯೋಜನೆ

ಭೀಮಸಮುದ್ರದ ಕೆರೆಗೆ ವಿವಿಧ ಮೂಲಗಳಿಂದ ನೀರು ತರುವ ಉದ್ದೇಶದಿಂದ ರೈತ ಮುಖಂಡರು ಭೀಮಸಮುದ್ರ ಗ್ರಾಮದಲ್ಲಿ ೧೯೯೯ರಲ್ಲಿ ಸಭೆ ಸೇರಿ ಹಲವು ವಿಷಯಗಳ ಬಗ್ಗೆ ಚರ್ಚೆ ನಡೆಸಿದರು. ಈ ಸಂದರ್ಭದಲ್ಲಿ ಏತ ನೀರಾವರಿ ಯೋಜನೆಯ ಒಟ್ಟು ಮೊತ್ತದ ಶೇಕಡ ೧೦%ರಷ್ಟನ್ನು ಕೇಂದ್ರಸರ್ಕಾರದಿಂದ ಕೊಡಿಸುವುದಾಗಿ ಅಂದಿನ ದಾವಣಗೆರೆ ಲೋಕಸಭಾ ಕ್ಷೇತ್ರದ ಸಂಸದರಾದ ಶ್ರೀ ಜಿ. ಮಲ್ಲಿಕಾರ್ಜುನಪ್ಪ ನವರು ಭರವಸೆ ನೀಡಿದರು. ಜಿ.ಎಸ್. ಮಂಜುನಾಥ್‌ರವರ ಮುಂಜಾಗ್ರತ ಕ್ರಮದಿಂದಾಗಿ ಈಗಾಗಲೇ ನೀರಾವರಿ ಯೋಜನೆಗೆ ತಗಲುವ ಅಂದಾಜು ವೆಚ್ಚವನ್ನು ತಯಾರಿಸಲು ನೀರಾವರಿ ತಜ್ಞರಿಗೆ ತಿಳಿಸಿದ್ದರು. ಸಭೆಯಲ್ಲಿ ಭಾಗವಹಿಸಿದ್ದ ನೀರಾವರಿ ತಜ್ಞ ಬಸವನಗೌಡ ಮಾತನಾಡಿ ಯೋಜನೆಯ ಜಾರಿಗೆ ಸುಮಾರು ೧೫.೦೦ ಕೋಟಿ ರೂ. ಬೇಕಾಗಿದ್ದು, ಇದರ ಶೇಕಡ ೧೦%ರಷ್ಟು ಹಣವನ್ನು ಕೆರೆಯ ಅಚ್ಚುಕಟ್ಟುದಾರರಿಂದ ಸಂಗ್ರಹಿಸಿ, ಉಳಿದ ಹಣವನ್ನು ಸರ್ಕಾರದಿಂದ ಪಡೆಯಲು ಸಲಹೆ ನೀಡಿದರು. ಈ ಸಮಯದಲ್ಲಿ ಜಿ.ಎಂ. ಸಿದ್ದೇಶ್ವರ, ಬಿ.ಜೆ. ಶ್ರೀನಿವಾಸ್, ನ್ಯಾಯವಾದಿ ವೇದಮೂರ್ತಿಸ್ವಾಮಿ, ಶಿವಾನಂದಮೂರ್ತಿ, ಮುಂತಾದ ರೈತ ಮುಖಂಡರು ಹಾಜರಿದ್ದರು.

ಎರಡನೇ ಹಂತ ಹೋರಾಟ: ಕರ್ನಾಟಕ ರಾಜ್ಯದಲ್ಲಿ ೧೫-೦೬-೨೦೦೦ರಂದು ಕೆರೆ ನೀರು ಬಳಕೆದಾರರ ಸಹಕಾರ ಸಂಘಗಳು ಬೆಂಗಳೂರಿನಲ್ಲಿ ಅಸ್ತಿತ್ವಕ್ಕೆ ಬಂದವು. ಬೆಂಗಳೂರಿನಲ್ಲಿ ನಡೆದ ಸಭೆಗೆ ಕರ್ನಾಟಕದ ಮೂಲೆ ಮೂಲೆಗಳಿಂದ ರೈತರು ಭಾಗವಹಿಸಿದ್ದರು.

ಶ್ರೀ ಭೀಮೇಶ್ವರಸ್ವಾಮಿ ಕೆರೆ ನೀರು ಬಳಕೆದಾರರ ಸಹಕಾರಿ ಸಂಘ ಸ್ಥಾಪನೆ

ಶ್ರೀ ಭೀಮೇಶ್ವರಸ್ವಾಮಿ ಕೆರೆ ನೀರು ಬಳಕೆದಾರರ ಸಹಕಾರಿ ಸಂಘವನ್ನು ೨೫-೦೬-೨೦೦೦ರಂದು ಸ್ಥಾಪಿಸಲಾಯಿತು. ಭೀಮಸಮುದ್ರ ಗ್ರಾಮದ ಶ್ರೀ ತರಳಬಾಳು ಕಲ್ಯಾಣ ಮಂಟಪದಲ್ಲಿ ಕೆರೆಯ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬರುವ ತುರೆಬೈಲು ಬೊಮ್ಮೇನಹಳ್ಳಿ, ಹಿರೇಗುಂಟನೂರು, ಹೊಸಹಳ್ಳಿ ಮುಂತಾದ ಗ್ರಾಮದ ರೈತರು ಸಭೆ ಸೇರಿ ಈ ಸಂಘವನ್ನು ಸ್ಥಾಪಿಸಿದರು. ಇದರ ಅಧ್ಯಕ್ಷತೆಯನ್ನು ಶ್ರೀ ಜಿ.ಶಿವಪ್ಪನವರು ವಹಿಸಿದ್ದರು. ಜಿ. ಮಲ್ಲಿಕಾರ್ಜುನಪ್ಪನವರು ಉದ್ಘಾಟಿಸಿದರು. ಬಿ.ಟಿ. ಚನ್ನಬಸಪ್ಪ ಎಂ.ಚಂದ್ರಪ್ಪ, ಜಿ.ಎಸ್. ಮಂಜುನಾಥ್. ಎಂ.ಪಿ. ಸಿದ್ದೇಶ್, ರಂಗಸ್ವಾಮಿ, ಬಿ.ಜಿ.ಶ್ರೀನಿವಾಸ್, ಮುಂತಾದ ರೈತ ಮುಖಂಡರು ಭಾಗವಹಿಸಿದ್ದರು. ಇದರ ರುವಾರಿ ಜಿ.ಎಸ್. ಮಂಜುನಾಥ್ ಹೋರಾಟದ ರೂಪರೇಷೆಗಳನ್ನು ತಿಳಿಸಿದರು. ಈ ಸಂಘವು ಕರ್ನಾಟಕದ ಏತ ನೀರಾವರಿಗಾಗಿ ಸ್ಥಾಪಿತವಾದ ಪ್ರಥಮ ಸಂಘವಾಗಿ ರೂಪುಗೊಂಡಿತು.

ಅರ್ಧ ಟಿ.ಎಂ.ಸಿ. ನೀರು ತರಲು ಹೆಚ್.ಕೆ. ಪಾಟೀಲರ ಭರವಸೆ

ದಿನಾಂಕ: ೦೯-೧೧-೨೦೦೦ರಂದುಜಿಲ್ಲಾ ನೀರಾವರಿ ಯೋಜನೆ ವಿಚಾರ ಸಂಕಿರಣವನ್ನು ಚಿತ್ರದುರ್ಗದ ಶ್ರೀ ಮುರುಘಾಮಠದಲ್ಲಿ ಏರ್ಪಡಿಸಲಾಗಿತ್ತು. ವಿಚಾರ ಸಂಕಿರಣ ದಲ್ಲಿ ಭಾಗವಹಿಸಿದ್ದ ಮಾನ್ಯ ನೀರಾವರಿ ಸಚಿವರಾದ ಎಚ್.ಕೆ. ಪಾಟೀಲರು ಭದ್ರನಾಲೆಯಿಂದ ಅರ್ಧ ಟಿ.ಎಂ.ಸಿ. ನೀರು ಒದಗಿಸುವ ಯೋಜನೆ ಹಾಕಿಕೊಂಡಿದ್ದು ಬಹುತೇಕ ಜಾರಿಗೆ ತರುವುದಾಗಿ ತಿಳಿಸಿದರು. ಆದರೆ ಕೆರೆ ಅಚ್ಚುಕಟ್ಟುದಾರರು ೧೫ ಕೋಟಿ ರೂ. ವೆಚ್ಚದಲ್ಲಿ ಅರ್ಧ ಟಿ.ಎಂ.ಸಿ. ನೀರು ತರುವ ವಿಚಾರವಾಗಿ ಸಹಕಾರ ಸಂಘದ ಮೂಲಕ ನಿರಂತರ ಹೋರಾಟ ಮುಂದುವರೆಯಿತು.

ಚಿತ್ರದುರ್ಗ ಜಿಲ್ಲಾ ನೀರಾವರಿ ಹೋರಾಟ ಸಮಿತಿಯ ಪ್ರವೇಶ

ಬಚಾವತ್ ತೀರ್ಪಿನನ್ವಯ ಚಿತ್ರದುರ್ಗ ಜಿಲ್ಲೆಗೆ ಸಿಗಬೇಕಾದ ನೀರು ಸಿಗಲಿಲ್ಲವಾದ್ದರಿಂದ ಹೋರಾಟ ಮಾಡಲೇಬೇಕಾದ ಅನಿವಾರ್ಯತೆಯನ್ನು ಜಿಲ್ಲಾ ನೀರಾವರಿ ಸಮಿತಿ ಅಧ್ಯಕ್ಷರಾದ ಕೋದಂಡರಾಮಯ್ಯನವರು ಸಂಘಟಿತ ಹೋರಾಟಕ್ಕೆ ಕರೆ ನೀಡಿದರು. ಕೃಷ್ಣ 'ಎ' ಯೋಜನೆಯ ಬಹುಪಾಲು ನೀರನ್ನು ಉತ್ತರ ಕರ್ನಾಟಕಕ್ಕೆ ಹರಿಸಿಲಾಗಿದೆ. 'ಬಿ' ಯೋಜನೆಯ ನೀರನ್ನು ಚಿತ್ರದುರ್ಗ ಜಿಲ್ಲೆಗೆ ತರಬೇಕು, ಜೊತೆಗೆ ಭೀಮಸಮುದ್ರದ ಕೆರೆಗೆ ನೀರು ತರಲು ಹೋರಾಟ ಚುರುಕಾಗಬೇಕೆಂದು ಕರೆ ನೀಡಿದರು. ಇದಕ್ಕೆ ಚಿತ್ರದುರ್ಗ ಶ್ರೀ ಬೃಹನ್ಮಠದ ಶಿವಮೂರ್ತಿ ಮುರುಘರಾಜೇಂದ್ರ ಶರಣರ ಬೆಂಬಲ ವ್ಯಕ್ತಪಡಿಸಿದರು.

ಬೆಂಗಳೂರು ಚಲೋ

ಕೆರೆಗೆ ಭದ್ರಾ ಜಲಾಶಯದಿಂದ ನೀರನ್ನು ತರುವ ವಿಚಾರವಾಗಿ ಕೆರೆ ನೀರು ಬಳಕೆದಾರರ ಸಂಘದ ಅಧ್ಯಕ್ಷರಾದ ಜಿ.ಎಸ್. ಮಂಜುನಾಥ್ ಅವರ ಮುಖಂಡತ್ವದಲ್ಲಿ ೧೫-೦೧-೨೦೦೨ರಲ್ಲಿ ಅಂದಿನ ಮುಖ್ಯಮಂತ್ರಿಗಳಾದ **ಎಸ್.ಎಂ. ಕೃಷ್ಣ** ಹಾಗೂ ಭಾರಿ ನೀರಾವರಿ ಸಚಿವರಾದ ಮಾನ್ಯ **ಹೆಚ್.ಕೆ. ಪಾಟೀಲ್‌ರವರನ್ನು** ಬೇಟಿ ಮಾಡಿ ಚರ್ಚಿಸಲು ಭೀಮಸಮುದ್ರ ವ್ಯಾಪ್ತಿಯ ಹಲವಾರು ಹಳ್ಳಿಗಳ ರೈತರೊಂದಿಗೆ ಬೆಂಗಳೂರಿನ

ವಿಧಾನಸೌಧಕ್ಕೆ ತೆರಳಿ ಮನವಿ ಸಲ್ಲಿಸಿದರು. ಇದಕ್ಕೆ ಸ್ಪಂಧಿಸಿದ ಮುಖ್ಯಮಂತ್ರಿಗಳು ಸಚಿವ ಸಂಪುಟದಲ್ಲಿ ಪ್ರಸ್ತಾಪಿಸಿ ೨೦೦೨-೦೩ರ ಬಜೆಟ್‌ನಲ್ಲಿ ಮಂಜೂರಾತಿ ನೀಡುವ ಭರವಸೆ ನೀಡಿದರು.

ವಿದ್ಯುತ್ ಸಂಗ್ರಹಣಾ ಕೇಂದ್ರ ಸ್ಥಾಪನೆ

ದಿನಾಂಕ: ೦೬-೦೧-೨೦೦೨ರಂದು ಇಂದನ ಸಚಿವರಾದ ವೀರಕುಮಾರ್ ಪಾಟೀಲರನ್ನು ಬೇಟಿ ಮಾಡಿದ ಕೆರೆ ನೀರು ಬಳಕೆದಾರರ ಸಂಘದ ಪದಾಧಿಕಾರಿಗಳು ಹಾಗೂ ರೈತರು ಹಿರೇಗುಂಟನೂರಿನಲ್ಲಿ ೬/೧೧ ಕೆ.ವಿ. ವಿದ್ಯುತ್ ಸ್ಟೇಷನ್ ಸ್ಥಾಪಿಸಬೇಕೆಂದು ಮನವಿ ಸಲ್ಲಿಸಿದರು. ಈ ಹೋರಾಟದ ಪ್ರತಿಫಲವಾಗಿ ೨೪-೦೪-೨೦೦೨ರಂದು ವಿದ್ಯುತ್ ಕೇಂದ್ರವನ್ನು ಸ್ಥಾಪಿಸಲಾಯಿತು.

ಬಸವರಾಜ ಬೊಮ್ಮಾಯಿಯವರ ಬೇಟಿ

ದಿನಾಂಕ: ೧೦-೧೦-೨೦೧೧ರಂದು ಭೀಮ ಸಮುದ್ರಕ್ಕೆ ಭೇಟಿ ನೀಡಿದ ಜಲ ಸಂಪನ್ಮೂಲ ಸಚಿವ ಬಸವರಾಜ ಬೊಮ್ಮಾಯಿಯವರು ಬೃಹತ್ ನೀರಾವರಿ ಯೋಜನೆಯಡಿ ರಾಜ್ಯದ್ಯಾಂತ ೫೦೦ ಕೆರೆಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದ್ದು, ಪ್ರಧಾನ ಮಂತ್ರಿಗಳ ವಿಶೇಷ ಪ್ಯಾಕೇಜ್ ಯೋಜನೆಯಡಿ ೯.೫೦ ಕೋಟಿ ವೆಚ್ಚದಲ್ಲಿ ಭೀಮಸಮುದ್ರಕೆರೆ ಪುನಶ್ಚೇತನಗೊಳಿಸಲಾಗುತ್ತದೆ ಎಂಬ ಭರವಸೆಯನ್ನು ನೀಡಿದರು ಹಾಗೂ ಶಂಕುಸ್ಥಾಪನೆ ನೆರವೇರಿಸಿದರು.

ಮೂರು ಯೋಜನೆಯುಲ್ಲಿ ಕಾಮಗಾರಿ

ಬೆಟ್ಟದನಾಗೇನಹಳ್ಳದಿಂದ ನೀರೊದಗಿಸುವ ಪೂರಕನಾಲೆ ನಿರ್ಮಾಣಕ್ಕೆ ೬೫ ಲಕ್ಷ, ಅನ್ನೇಹಾಳ್ ಕೆರೆಕೋಡಿಯ ಹೆಚ್ಚುವರಿ ನೀರನ್ನು ಪೂರಕ ಕಾಲುವೆ ಮೂಲಕ ಭೀಮಸಮುದ್ರ ಕೆರೆಗೆ ತರಲು ೪ ಕೋಟಿ, ಭೀಮಸಮುದ್ರ ಕೆರೆಯ ಪುನಶ್ಚೇತನಕ್ಕೆ ೪ ಕೋಟಿ ಅಲ್ಲದೆ ನಾಲಾ ಆಧುನೀಕರಣ, ರಸ್ತೆ ದುರಸ್ತಿ, ಭದ್ರಾ ಮೇಲ್ದಂಡೆ ಯೋಜನೆಯುಡಿ ಚಿತ್ರದುರ್ಗದ ಕೆರೆಗಳಿಗೆ ನೀರು ಒದಗಿಸಲಾಗುವುದೆಂದು ಸಚಿವರು ತಿಳಿಸಿದರು.

ಭದ್ರಾ ಕಾಲುವೆಯಿಂದ ಕೆರೆಗೆ ನೀರು ತರುವ ಯೋಜನೆಯ ವಿವರ

ಭೀಮಸಮುದ್ರ ಕೆರೆಗೆ ೧೧೮.೧ ಚದುರ ಕಿ.ಮೀ. ಪ್ರದೇಶ ಕೆರೆಯ ಮೇಲುಗಡೆಯಿದ್ದು ಪಶ್ಚಿಮ ದಿಕ್ಕಿನಲ್ಲಿ ಎತ್ತರ ದಿಂದ ನೀರು ಬರುವ ಹಳ್ಳಿಗಳೆಂದರೆ ರಾಮಬಾಣಕಾಲುವೆ, ಬಂಡಿಹಳ್ಳಿ, ಕಟ್ಟೆಹಳ್ಳಿ, ಆದರೆ ಈ ಹಳ್ಳಗಳಿಂದ ನೀರು ಕೆರೆಗೆ ಬರಬೇಕಾದರೆ ಆ ಪ್ರದೇಶಗಳಲ್ಲಿ ಹೆಚ್ಚು ಮಳೆಯಾಗಬೇಕು. ಆದರೆ ಹಲವಾರು ವರ್ಷಗಳಿಂದ ಉತ್ತಮ ಮಳೆಯಿಲ್ಲದೆ ಕೆರೆ ನೀರಿಲ್ಲದೆ ಸೊರಗಿ ಹೋಗಿದೆ. ಶಾಶ್ವತ ನೀರಿನ ವ್ಯವಸ್ಥೆ ಮಾಡಬೇಕೆಂದರೆ "ಭದ್ರ ಕಾಲುವೆ" ಮೂಲಕ ನೀರು ತರುವುದಾಗಿದೆ.

ಭದ್ರಾ ಕಾಲುವೆಯು (ದಾವಣಗೆರೆ ಬ್ರಾಂಚ್ ಕಾಲುವೆ) ಕೆರೆಯ ಪಶ್ಚಿಮ ದಿಕ್ಕಿನಲ್ಲಿ ಸು. ೨೫ ಕಿ.ಮೀ. ಅಂತರದಲ್ಲಿ ಸಂತೆಬೆನ್ನೂರಿಗೆ ಹತ್ತಿರದಲ್ಲಿ ಹಾದುಹೋಗಿದ್ದು, (ತೋಪನ ಹಳ್ಳಿ ಚನ್ನಗಿರಿ ತಾ॥) ಈ ಕಾಲುವೆಯಿಂದ ನೀರು ತರಲು ವ್ಯವಸ್ಥೆಯಾಗಬೇಕು. ಇದು ಸೂಕ್ತಮಾರ್ಗ, ಇದಲ್ಲದೆ ಚನ್ನಗಿರಿ ತಾಲ್ಲೂಕಿನಲ್ಲಿರುವ "ಶಾಂತಿಸಾಗರ"ದಿಂದ (ಸೂಳೆಕೆರೆ) ನೀರು ತರುವ ವ್ಯವಸ್ಥೆಯನ್ನು ಪರಿಗಣಿಸಬಹುದು. ಇದಕ್ಕೆ ಭದ್ರಾ ಮೇಲ್ದಂಡೆ ಕಾಲುವೆಯಿಂದ ನೀರು ಪಡೆಯಬಹುದು. ಸದರಿ ಭದ್ರಾ ಕಾಲುವೆಯಿಂದ ಸಿಮೆಂಟ್ ಪೈಪುಗಳ ಮೂಲಕ ಹಂತ ಹಂತವಾಗಿ ಮೋಟಾರು ಪಂಪು ಅಳವಡಿಸುವ ಮೂಲಕ ಎತ್ತರದ ಪ್ರದೇಶಕ್ಕೆ ನೀರಿನ ವ್ಯವಸ್ಥೆಯನ್ನು ತೋಪೇನಹಳ್ಳಿಯಿಂದ ಸಿದ್ದಮಠ, ದಂಡಿಗೇನಹಳ್ಳಿ, ವಿಶ್ವನಾಥನಹಳ್ಳಿ, ಕಾಳಘಟ್ಟದಹಳ್ಳಿ, ಮೂಲಕ ದಕ್ಷಿಣ ರೈಲ್ವೆ ಸೇತುವೆ ಮುಖಾಂತರ ಹಾದು ಬಿ. ದುರ್ಗದ ಹತ್ತಿರದಿಂದ ಕಲ್ಲವ್ವನಾಗತಿಹಳ್ಳಿ ಮೂಲಕ ಹಿರೇಕಂದವಾಡಿ ತನಕ ಪೈಪ್‌ಲೈನ್ ಮೂಲಕ ನೀರು ತಂದರೆ ಅಲ್ಲಿಂದ ಮುಂದೆ ಇಳಿಜಾರು ಪ್ರದೇಶವಾಗಿರುವುದರಿಂದ ಕಾಲುವೆ ಮೂಲಕ ಗುಡ್ಡದ ಹತ್ತಿರ ಇರುವ ಇಳಿಜಾರು ಪ್ರದೇಶಕ್ಕೆ ಬಿಟ್ಟರೆ ಮುಂದೆ ಹಳ್ಳದ ಮೂಲಕ ನೀರು ಭೀಮಸಮುದ್ರ ಕೆರೆ ಸೇರುತ್ತದೆ.

ಭೀಮಸಮುದ್ರದ ಕೆರೆಯ ಆಶ್ರಯಿತ ರೈತರು ಸುಮಾರು ೩೦ ವರ್ಷಗಳಿಂದ ನೀರಿಗಾಗಿ ನಿರಂತರ ಹೋರಾಟ ನಡೆಸಿದ್ದಾರೆ. ಆದರೆ ಯಾವ ಪ್ರಯೋಜನವಾಗಿಲ್ಲ. ಇತ್ತೀಚೆಗೆ ಕರ್ನಾಟಕ ಘನ ಸರ್ಕಾರವು ಬಜೆಟ್‌ನಲ್ಲಿ ಭದ್ರಾಮೇಲ್ದಂಡೆ ಯೋಜನೆಯ ಜಾರಿಗೆ ಹಣಕಾಸಿನ ಅನುಮೋದನೆ ನೀಡಿದ್ದು, ಕಾಮಗಾರಿ ಬಿರುಸಾಗಿ ನಡೆಯುವ ಸೂಚನೆಗಳು ಕಾಣುತ್ತಿವೆ. ಈ ಯೋಜನೆ ಅತೀ ಶೀಘ್ರದಲ್ಲಿ ಕಾರ್ಯಗತಕ್ಕೆ ಬಂದಲ್ಲಿ ಭರದ ನಾಡಿಗೆ ಭದ್ರಾನೀರು ಹರಿದು ಕಂಗಾಲಾದ ರೈತರ ಮೊಗದಲ್ಲಿ ನಗು ಕಾಣುತ್ತದೆ. ಭವಿಷ್ಯ ಕಟ್ಟಲು ಸಹಾಯಕ ವಾಗುತ್ತದೆ. ರೈತರ ನಿರಂತರ ಹೋರಾಟಗಳಿಗೆ ಫಲ ಸಿಗಲಿ ಈ ಯೋಜನೆಯ ಮೂಲಕ ಚಿತ್ರದುರ್ಗ ಜಿಲ್ಲೆಯ ಕೆರೆಗಳಿಗೆ ನೀರು ತುಂಬುವ ಕೆಲಸವಾಗಬೇಕು. ಇದರ ಹಿಂದೆ ನಡೆದ ಭೀಮಸಮುದ್ರದ ರೈತರ ಹೋರಾಟ ಚಿರಸ್ಮರಣೀಯವಾಗಲಿ ಜನಪ್ರತಿನಿಧಿಗಳು, ಘನ ಸರ್ಕಾರ, ಇತ್ತ ಕಡೆ ಗಮನ ನೀಡಿ, ನೀರು ಹರಿಸುವ ಕೆಲಸಕ್ಕೆ ಮುಂದಾದಾಗ ರೈತನ ಪರ ಕೆಲಸ ಮಾಡಿದಂತಾಗುತ್ತದೆ. ಚಳುವಳಿಗೊಂದು ಅರ್ಥ ಸಿಗುತ್ತದೆ.

೧೨೫

ಮೈಸೂರು ಮೈಸೂರಿನವರಿಗಾಗಿ ನಡೆದ ಹೋರಾಟ: ಮೈಸೂರು ಸಂಸ್ಥಾನದ ಮೊದಲ ಸಾಮಾಜಿಕ ಮತ್ತು ರಾಜಕೀಯ ಚಲನೆ

ಡಾ. ಹೆಚ್.ಎಸ್. ರಾಕೇಶ್*

ಭಾರತದಲ್ಲಿ ಬ್ರಿಟಿಷ್ ವಸಾಹತುಶಾಹಿಯ ವಿರುದ್ಧ ಆರಂಭಗೊಂಡ ಸ್ವಾತಂತ್ರ್ಯ ಹೋರಾಟ ಆರಂಭದಲ್ಲಿ ಕೆಲವೇ ಪ್ರದೇಶಗಳಿಗೆ ಹಾಗೂ ಸಂಸ್ಥಾನಗಳಿಗೆ ಸೀಮಿತವಾಗಿದ್ದರೂ, ಕ್ರಮೇಣ ಅದು ವಿಸ್ತಾರಗೊಂಡು ರಾಷ್ಟ್ರೀಯತೆಯ ನೆಲೆಗಟ್ಟಿನಲ್ಲಿ ಭಾರತೀಯರ ಹೋರಾಟವಾಗಿ ರೂಪುಗೊಂಡಿತು. ಬ್ರಿಟಿಷ್ ಸಾಮ್ರಾಜ್ಯಶಾಹಿ ಧೋರಣೆಗೆ ಭಾರತದಲ್ಲಿ ಪ್ರಬಲ ಪ್ರತಿರೋಧಗಳು ಕಂಡುಬಂದರೂ, ಕೆಲವು ಸಂಸ್ಥಾನಗಳು ಬ್ರಿಟಿಷ್ ಆಳ್ವಿಕೆಯನ್ನು ಒಪ್ಪಿಕೊಂಡು ಆಶ್ರಿತ ಸಂಸ್ಥಾನ ಗಳಾಗುವುದರ ಮೂಲಕ ತಮ್ಮ ರಾಜತ್ವದ ಅಸ್ತಿತ್ವವನ್ನು ಉಳಿಸಿಕೊಂಡವು. ಇಂಥ ಸಂಸ್ಥಾನಗಳಲ್ಲಿ ಮೈಸೂರು ಸಂಸ್ಥಾನವೂ ಒಂದು. ಇಲ್ಲಿ ಎರಡು ಪ್ರಭುತ್ವಗಳ ದಬ್ಬಾಳಿಕೆ ಮೈಸೂರು ಸಂಸ್ಥಾನದ ಜನತೆಯ ಮೇಲೆ ಬಿದ್ದಿತು. ಈ ಎರಡೂ ಪ್ರಭುತ್ವಗಳನ್ನು ಮಟ್ಟಹಾಕಲು ಸಂಸ್ಥಾನದ ಜನತೆ ಮುಂದಾದರು. ಈ ಪ್ರಭುತ್ವಗಳನ್ನು ಹತ್ತಿಕ್ಕಿ ಪ್ರಜೆಗಳು ಜನಪ್ರಭುತ್ವವನ್ನು ಸ್ಥಾಪಿಸಲು ಕಾರ್ಯರೂಪಿಸತೊಡಗಿದರು. ಇದರ ನಡುವೆ ಅನೇಕ ಕಾರ್ಯಯೋಜನೆಗಳನ್ನ ಮಹಾರಾಜರು ದಿವಾನರೊಡಗೂಡಿ ಕಾರ್ಯರೂಪಕ್ಕೆ ತಂದರು. ಅದರಲ್ಲಿ ಪ್ರಮುಖವಾಗಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿಸಲ್ಪಟ್ಟ ಪ್ರಜಾಪ್ರತಿನಿಧಿ ಸಭೆ. ಇದರ ಹಿಂದಿನ ಉದ್ದೇಶ ವೇನೇ ಇದ್ದರು ಅನೇಕ ಚರ್ಚೆಗಳು ನಡೆಯಲು ಅವಕಾಶ ವಾಯಿತು. ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡು ಸರ್ಕಾರಿ ಕಲಾಪವನ್ನ ಹತ್ತಿರದಿಂದ ವೀಕ್ಷಿಸುವುದರ ಮೂಲಕ ಮೈಸೂರು ಸಂಸ್ಥಾನದ ಆಡಳಿತದಲ್ಲಿ 'ಮದ್ರಾಸಿಗ'ರಿಗೆ ಹೆಚ್ಚಿನ ಪ್ರಾಬಲ್ಯ ವಿತ್ತು. ಮೊದಲ ದಿವಾನರಾಗಿ ನೇಮಕಗೊಂಡ ವ್ಯಕ್ತಿಗಳು ಮದ್ರಾಸು ಪ್ರಾಂತ್ಯದವರು. ಅವರ ಪ್ರಭಾವದಿಂದಾಗಿ ಹೆಚ್ಚು ಮದ್ರಾಸಿಗಳು ಆಡಳಿತದಲ್ಲಿ ಬರಲು ಅವಕಾಶವಾಯಿತು.[೧] ಈ ದಿವಾನರು ಬ್ರಿಟಿಷರ ಹಿತಾಸಕ್ತಿಗೆ ಅನುಕೂಲಕರವಾಗಿ ನಡೆದುಕೊಳ್ಳುತ್ತ ಮೈಸೂರಿಗರ ಹಿತಾಸಕ್ತಿಗಳನ್ನ ಕಡೆಗಣಿಸಲ್ಪಟ್ಟಿ ದ್ದಾರೆಂದು ದೂರಲಾರಂಭಿಸಿದರು. ಹೀಗೆ 'ಮೈಸೂರು ಮೈಸೂರಿಗರಿಗಾಗಿ' ಎಂಬ ಘೋಷಣೆಯನ್ನು ಹುಟ್ಟು ಹಾಕಿದರು.[೨]

೧೮೬೦ರ ಮಧ್ಯಭಾಗದಿಂದ ೧೯೧೦ರವರೆಗೆ ಮೈಸೂರು ಸಂಸ್ಥಾನದಲ್ಲಿ ಪ್ರಾದೇಶಿಕ ಭಿನ್ನತೆಯಡಿಯಲ್ಲಿ ಸಾಮಾಜಿಕ ಬಲಶಾಲಿಯಾಗಿದ್ದಂತಹ ಬ್ರಾಹ್ಮಣ ಸಮುದಾಯಗಳು ಮದ್ರಾಸಿಗರಿಗೆ ಬ್ರಿಟಿಷರು ಕೊಟ್ಟ ಬೆಂಬಲ ಹಾಗೂ ಅವರಿಗೆ ಸಿದ್ಧಿಸಿದ್ದ ಪರಿಣಿತಿಯಿಂದ ಒಂದಕ್ಕೊಂದು ತಾಕಲಾಡಿ ತಮ್ಮ ತಮ್ಮ ಹಿತಾಶಕ್ತಿಗಾಗಿ ಹೋರಾಡಿದವು. ಈ ಹೋರಾಟವನ್ನು ಮೈಸೂರು ಮದ್ರಾಸಿ ಬ್ರಾಹ್ಮಣರ ನಡುವಿನ ಹೋರಾಟವೆಂದೇ ಕರೆಯುತ್ತಾರೆ. ಈ ಬಗ್ಗೆ ಕೆಲಸ ಮಾಡಿದ ವಿದ್ವಾಂಸರು ಈ ಹೋರಾಟವನ್ನು ಸಂಸ್ಥಾನದ ಮೊದಲ ಸಾಮಾಜಿಕ-ರಾಜಕೀಯ ಚಲನೆ ಎಂದೇ ಗುರುತಿಸಿದ್ದಾರೆ.[೩] ಆದರೆ ನಾನು ಇಲ್ಲಿ ೧೮೮೧ರಲ್ಲಿ ಸಿ.ರಂಗಾಚಾರ್ಲುರವರಿಂದ ಸಂಸ್ಥಾಪನೆಯಾದಂತಹ ಪ್ರಜಾಪ್ರತಿನಿಧಿ ಸಭೆ ಈ ಸಭೆಯೊಳಗೆ ಈ ಹೋರಾಟ ಅದರ ಪ್ರತಿಧ್ವನಿಯ ಮೂಲಕ ಈ ಹೋರಾಟವನ್ನು ವಿಮರ್ಶಿಸಬಯಸುತ್ತೇನೆ.

ಮದ್ರಾಸಿಗರು ಮತ್ತು ಮೈಸೂರಿಗರು ಎಂಬ ಹೋರಾಟ ಮೈಸೂರಿನ ಅಧಿಕಾರ ಕೇಂದ್ರದ ಹಿಡಿತವನ್ನು ಸಾಧಿಸುವ ಸಲುವಾಗಿ ಮದ್ರಾಸಿನ ಬ್ರಾಹ್ಮಣ ಮತ್ತು ಮೈಸೂರಿನ ಬ್ರಾಹ್ಮಣರ ನಡುವೆ ಪ್ರಮುಖವಾಗಿ ಈ ಹೋರಾಟ ಕಾಣಿಸಿಕೊಂಡಿತು. ಮದ್ರಾಸಿಗರು ಉತ್ತಮ ವಾದಂತಹ ಶಿಕ್ಷಣವನ್ನು ಪಡೆದುಕೊಂಡಿದ್ದರು. ಏಕೆಂದರೆ ಮದ್ರಾಸಿನಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸವು ಒಂದು ಶತಮಾನದ ಮೊದಲೇ ಆರಂಭವಾಗಿತ್ತು. ಮದ್ರಾಸ್ ವಿದ್ಯಾರ್ಥಿಗಳು ಇಂಗ್ಲಿಷ್ ಶಿಕ್ಷಣದಲ್ಲಿಯೂ ಮತ್ತು ಇತರೆ ವಿಷಯಗಳಲ್ಲಿಯೂ ಚೆನ್ನಾಗಿ ಕಲಿತಿದ್ದರು. ಆದರೆ ಆಗ ಮೈಸೂರಿನಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಹಿಂದೆ ಉಳಿದಿತ್ತು. ಏಕೆಂದರೆ ಇಲ್ಲಿ ಕಾಲೇಜುಗಳು ಕಡಿಮೆ ಇದ್ದವು. ವಿದ್ಯಾರ್ಥಿಗಳು ಹೆಚ್ಚಿನ ವಿದ್ಯಾಭ್ಯಾಸಕ್ಕೆ

* ಉಪನ್ಯಾಸಕರು, ಇತಿಹಾಸ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ-೦೨.

ದೂರದ ಮದ್ರಾಸಿಗೆ ಹೋಗಬೇಕಾಗಿತ್ತು. ಇದರಿಂದ ಈ ಅವಧಿಯಲ್ಲಿ ಮದ್ರಾಸಿನ ಬ್ರಾಹ್ಮಣರು ಮೈಸೂರಿನ ಆಡಳಿತ ಬಹು ಭಾಗವನ್ನು ಆಕ್ರಮಿಸಿದರು.

೧೮೮೧ರಲ್ಲಿ ಮೈಸೂರು ಸಂಸ್ಥಾನದ ದಿವಾನರಾದಂತಹ ಸಿ. ರಂಗಾಚಾರ್ಲುರವರು ಮೂಲತಃ ಮದ್ರಾಸಿಗರೆ ಆಗಿದ್ದರು, ಮೈಸೂರು ಪಕ್ಷದ ವಿರೋಧಿಗಳನ್ನು ರಂಗಚಾರ್ಲು ತಮ್ಮ ಜಾಣ್ಮೆಯಿಂದ ಸುಲಭವಾಗಿಯೇ ಎದುರಿಸಿದರು. ೧೮೮೨ರಲ್ಲಿ ಸಿ. ರಂಗಚಾರ್ಲು ನಿಧನವಾದ ನಂತರ ೧೮೮೩ರಲ್ಲಿ ಮತ್ತೆ ಮದ್ರಾಸಿಗರೇ ಆದಂತಹ ಶೇಷಾದ್ರಿ ಅಯ್ಯರವರು ದಿವಾನರಾದರು. ಶೇಷಾದ್ರಿ ಅಯ್ಯರ್ ರವರು ದೊಡ್ಡ ದೊಡ್ಡ ಹುದ್ದೆಗಳೆ ಅಲ್ಲದೆ ಇತರ ಚಿಕ್ಕ ಹುದ್ದೆಗಳಿಗೂ ಸಹ ಮದ್ರಾಸಿಗರನ್ನು ಹೆಚ್ಚು ಹೆಚ್ಚಾಗಿ ನೇಮಿಸುತ್ತ ಅನೇಕ ಸಂದರ್ಭಗಳಲ್ಲಿ ಅರ್ಹತೆ ಇದ್ದರೂ ಮೈಸೂರಿನವರಿಗೆ ಹುದ್ದೆಗಳನ್ನು ನೀಡುತ್ತಿರಲಿಲ್ಲ.

ಶೇಷಾದ್ರಿ ಅಯ್ಯರವರು ಚಾಣಾಕ್ಷರಾದರೂ ನಿರಂಕುಶ ಅಧಿಕಾರಿ. ಮೈಸೂರಿಗರ ಟೀಕೆಗಳಿಂದ ಬೇಸತ್ತು ಪ್ರತಿನಿಧಿ ಸಭೆಯ ಅಭಿಪ್ರಾಯವನ್ನು ಗಮನಕ್ಕೆ ತೆಗೆದುಕೊಳ್ಳಲೇ ಇಲ್ಲ. ಶೇಷಾದ್ರಿ ಅಯ್ಯರವರಲ್ಲಿನ ಎಲ್ಲ ನೀತಿಗಳನ್ನು "ವಿದೇಶಿ ದಿವಾನರ ಮೈಸೂರು ವಿರೋಧಿ ಮೈಸೂರಿಗರ ವಿರೋಧಿ ನೀತಿಯೆಂದು" ಮೈಸೂರು ಪಕ್ಷ ಟೀಕಿಸಲಾರಂಭಿಸಿತು.[೪]

ಶೇಷಾದ್ರಿ ಅಯ್ಯರವರು ೧೮೯೧ರಲ್ಲಿ ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆಯನ್ನು ಪರಿಚಯಿಸಿದರು. ಸರ್ಕಾರದ ದೊಡ್ಡ ಹುದ್ದೆಗಳಿಗೆ ಜನರನ್ನು ನೇಮಿಸುವಾಗ ಈ ಪರೀಕ್ಷೆಯನ್ನು ಏರ್ಪಡಿಸುತ್ತಿದ್ದರು. ಇದರಲ್ಲಿ ಉತ್ತಮವಾದಂತಹ ಸ್ಥಾನವನ್ನು ಪಡೆದು ತೇರ್ಗಡೆಯೊಂದಿದವರನ್ನು ಮಾತ್ರ ಪ್ರೊಬೆಷನರಿ ಅಸಿಸ್ಟೆಂಟ್ ಕಮಿಷನರ್ ಹುದ್ದೆಗೆ ನೇಮಿಸಲಾಗುತ್ತಿತ್ತು. ನ್ಯಾಯವಾಗಿ ಮೈಸೂರಿನಲ್ಲಿ ಹುಟ್ಟಿ ಬೆಳೆದವರಿಗೂ ಮೈಸೂರಿನಲ್ಲಿ ನೆಲೆಸಿರುವವರಿಗೂ ಇದು ನಿಯಮಿತವಾಗಿರಬೇಕಿತ್ತು. ಅಖಿಲ ಭಾರತೀಯರಿಗೆ ತೆರೆದಿದ್ದರಿಂದ ಮದ್ರಾಸಿಗರೇ ಹೆಚ್ಚಾಗಿ ಹುದ್ದೆಗಳನ್ನು ಪಡೆದುಕೊಂಡರು.

ಹೀಗೆ ಮೈಸೂರಿನವರಿಗೆ ಆಗುತ್ತಿದ್ದ ಅನ್ಯಾಯವನ್ನು ಮೈಸೂರಿನವರು ವಿರೋಧಿಸಲು ಆರಂಭಿಸಿದರು. ಪ್ರಮುಖವಾಗಿ ಪ್ರಜಾಪ್ರತಿನಿಧಿ ಸಭೆಯಲ್ಲಿ ವಿರೋಧದ ಧ್ವನಿ ಕಾಣಿಸಿತು. ೧೮೯೧ರಲ್ಲಿ ತಂದ ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆಯಿಂದ ಮೈಸೂರಿಗರಿಗೆ ಆಗುತ್ತಿದ್ದ ಅನ್ಯಾಯದ ವಿರುದ್ಧ ಪ್ರತಿನಿಧಿ ಸಭೆಯ ಸದಸ್ಯರುಗಳು ಸಭೆಯಲ್ಲಿ ಪ್ರಶ್ನಿಸಿದರು.[೫]

ಪ್ರಮುಖವಾಗಿ ೧೮೯೨ ಅಕ್ಟೋಬರ್‌ನ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೊದಲ ಬಾರಿಗೆ ಇದರ ಧ್ವನಿ ಕಾಣಿಸಿಕೊಂಡಿತು. ಸದಸ್ಯರಾದಂತ ಸಿ. ಶ್ರೀನಿವಾಸರಾವ್‌ರವರು ಈ ವಿಷಯವನ್ನು ಪ್ರಸ್ತಾಪಿಸಿದರು. ಅವರು ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆಯನ್ನು ಆರಂಭಿಸಿರುವುದರಿಂದ ಈ ಪರೀಕ್ಷೆಯಲ್ಲಿ ಯಾವ ಪ್ರಾಂತ್ಯದ ಜನರು ಬೇಕಾದರೂ ಈ ಪರೀಕ್ಷೆ ಬರೆಯುವ ಅವಕಾಶವಾಗಿರುವುದರಿಂದ ವಿದೇಶಿಯರೇ ಹೆಚ್ಚಾಗಿ ತೇರ್ಗಡೆಯೊಂದುವುದರಿಂದ ಅವರಿಗೆ ಇಲ್ಲಿನ ಸ್ಥಳೀಯ ಭಾಷೆ ಬರುವುದಿಲ್ಲ. ಆದ್ದರಿಂದ ಸ್ವದೇಶಿ ವಿದ್ಯಾವಂತರಿಗೆ ಅವಕಾಶ ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ಹಾಗೆಯೇ ಮತ್ತೊಬ್ಬ ಸದಸ್ಯರಾದಂತಹ ಮಿ. ಅಂಬ್ಲಿಅಣ್ಣಯ್ಯ ಪಂಡಿತ್ ರವರು ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆಯಲ್ಲಿ ಕನ್ನಡ ವಿಷಯದ ಪತ್ರಿಕೆ ಇರಬೇಕು. ಯಾರು ಕನ್ನಡ ಪತ್ರಿಕೆಯಲ್ಲಿ ಪಾಸಾಗುತ್ತಾರೆ ಅಂತಹ ಅಭ್ಯರ್ಥಿಗಳಿಗೆ ಮಾತ್ರ ಸರ್ಕಾರದ ಉನ್ನತ ಹುದ್ದೆಗಳನ್ನು ನೀಡಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಹಾಗೆಯೇ ಎಂ. ವೆಂಕಟಕೃಷ್ಣಯ್ಯನವರು ಕೂಡ ಅವರ ಅಭಿಪ್ರಾಯಕ್ಕೆ ಧ್ವನಿಗೂಡಿಸಿದರು. ಡೆಪ್ಯೂಟಿ ಅಮಲ್ದಾರುಗಳು ಮತ್ತು ಶೇಕದಾರ್‌ಗಳಿಗೆ ಬಡ್ತಿ ನೀಡುವುದರ ಮೂಲಕ ಉನ್ನತ ಹುದ್ದೆಗಳಿಗೆ ಅವರನ್ನು ನೇಮಿಸಬೇಕೆಂದು ತಿಳಿಸಿದರು.[೬] ಇದಕ್ಕೆ ಸರ್ಕಾರ ಸರಿಯಾದ ಉತ್ತರ ನೀಡಲಿಲ್ಲ.

೧೮೯೪ರಲ್ಲಿ ನಡೆದ ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆಯಲ್ಲಿ ತೇರ್ಗಡೆಯಾದ ಒಟ್ಟು ೨೩ ಅಭ್ಯರ್ಥಿಗಳಲ್ಲಿ ಕೇವಲ ಇಬ್ಬರು ಮಾತ್ರ ಮೈಸೂರಿನವರಾಗಿದ್ದರು.[೭] ದಿವಾನ್ ಶೇಷಾದ್ರಿ ಅಯ್ಯರ್ ಅವರ ಕಾಲದಲ್ಲಿ ಅವರ ದಿವಾನಗಿರಿಯ ಅವಧಿ ಮುಗಿಯುವವರೆಗೂ ಮದ್ರಾಸಿಗರಿಗೂ ಮೈಸೂರಿಗರಿಗೂ ಬೇಧ ಬಹಳವಾಗಿತ್ತು. ಇವರು ಎರಡು ಗುಂಪುಗಳಾದರು. ಶೇಷಾದ್ರಿ ಅಯ್ಯರ್‌ರವರು ಜನತಾಂತ್ರಿಕ ವಿಧಾನದಂತೆ ನಡೆದುಕೊಳ್ಳದೆ ನಿರಕುಂಶವಾದ ವರ್ತನೆ ತೋರುತ್ತಿದ್ದರು.

ಅಯ್ಯರ್‌ರವರ ಆಡಳಿತ ಏಕಸ್ವಾಮ್ಯ ನೀತಿಯನ್ನು ವಿರೋಧಿಸಿ ಎಂ. ವೆಂಕಟಕೃಷ್ಣಯ್ಯರವರು ಮತ್ತು ಅವರ ಮಿತ್ರರೂ ಪ್ರತಿನಿಧಿ ಸಭೆಯಲ್ಲಿ ಅನೇಕ ಬಾರಿ ಪ್ರತಿಭಟನೆಯ ಧ್ವನಿ ಎತ್ತಿದರು. "ಮೈಸೂರು ಮೈಸೂರಿನವರಿಗಾಗಿ" ಎಂಬ ನೀತಿಗಾಗಿ ಸಕಾರದೊಡನೆ ಬಹಳವಾದ ಮಾಡಿದರು. ಶೇಷಾದ್ರಿ ಅಯ್ಯರ್‌ವರು ಮತ್ತು ಅವರ ಮಿತ್ರರು ಮೈಸೂರಿನ ಈ ಚಳುವಳಿಯನ್ನು ಅಲ್ಪತನವೆಂದು ಅಲ್ಲಗಳೆದರು. ಹೀಗೆ

ಹೇಳುವುದು ಸರಿಯಲ್ಲ ಮೈಸೂರಿನವರು ಉನ್ನತ ಭಾರತೀಯರಾಗಿದ್ದುದ್ದಲ್ಲದೆ ತಮ್ಮ ಪ್ರಾಂತ್ಯದ ಜನರ ಹಕ್ಕುಗಳಿಗೆ ಹೋರಾಡುವುದರಲ್ಲಿ ಅಲ್ಪತನವೇನಿದೆ ಎಂದು ಎಂ. ವೆಂಕಟಕೃಷ್ಣಯ್ಯನವರು ಅವರ ಮಿತ್ರರು ಪ್ರಶ್ನಿಸಿದರು.[೮]

ಗವರನಮೆಂಟ್‌ನವರು ಅಸಿಸ್ಟೆಂಟ್ ಕಮಿಷನರ್ ಅಧಿಕಾರಿಗಳಿಗೆ ಪರೀಕ್ಷೆಯನ್ನು ಇಡಕೂಡದು. ಇದರಿಂದ ಪರದೇಶದವರು ಬರುವುದಕ್ಕೆ ಮಾರ್ಗವಾಗುತ್ತದೆ. ಸಂಸ್ಥಾನದಲ್ಲಿ ಎರಡು ಪಾರ್ಟಿಗಳಾಗುತ್ತವೆ. ಪ್ರಜಾ ಸರ್ಕಾರದ ಅಭಿವೃದ್ಧಿಗೂ ತುಂಬಾ ಕುಂದಾಗುತ್ತದೆ ಆದ್ದರಿಂದ ಸಂಸ್ಥಾನ ದೊಳಗಿನ ವಿಧ್ಯಾಭ್ಯಾಸಗಳಲ್ಲಿ ಮೇಲ್ಮೈಯಾಗಿ ತೇರ್ಗಡೆ ಯೊಂದಿ ಸಮರ್ಥರಾಗಿರುವವರು ಇರುವಾಗ ಹೊರಗಿನ ವರಿಗೆ ಏಕೆ ಕೊಡಬೇಕು? ಪರದೇಶಿಯರಿಗೆ ಕನ್ನಡ ತಿಳಿಯದು ಆದ್ದರಿಂದ ಅವರಿಗೆ ಅವಕಾಶ ನೀಡಬಾರದು ಎಂದು ಸದಸ್ಯರು ಪ್ರಸ್ತಾಪಿಸಿದರು.[೯] ದಿವಾನರು ಇದಕ್ಕೆ ಉತ್ತರಿಸಿ ಈ ರೀತಿ ಆಕ್ಷೇಪಣೆ ಮಾಡಬಾರದು ಈ ಪರೀಕ್ಷೆಯಲ್ಲಿ ಇಲ್ಲಿನ ಯುವಕರೇ ಪಾಸಾಗಬಹುದು. ಆಗ ಹೊರಗಿನವರು ಬಂದರೆಂಬ ಆಕ್ಷೇಪಣೆ ಹೋಗುತ್ತದೆ ಎಂದು ಉತ್ತರಿಸಿದರು.

ಈ ವಿವಾದವು ಶೇಷಾದ್ರಿ ಅಯ್ಯರ್‌ರವರ ಕಾಲದಲ್ಲಿ ಅಲ್ಲದೆ ಅನಂತರವು ಮುಂದುವರಿಯಿತು. ಎಂ. ವೆಂಕಟ ಕೃಷ್ಣಯ್ಯನವರು ಮತ್ತು ಇತರರು ಮೈಸೂರಿನವರಿಗೆ ಹೆಚ್ಚು ಪ್ರಶಸ್ತ್ಯ ನೀಡಬೇಕು ಎಂದು ವಾದಿಸುತ್ತಲೇ ಇದ್ದರು.[೧೦] ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆಯನ್ನು ಮೈಸೂರಿ ನವರಿಗೆ ಮಾತ್ರ ಸೀಮಿತಗೊಳಿಸಬೇಕು ಎಂದು ಅಸೆಂಬ್ಲಿ ಯಲ್ಲಿಯೂ ಸಹ ವಾದಿಸುತ್ತಲೇ ಇದ್ದರು.

ಕಡೆಗೆ ೧೯೧೨ರಲ್ಲಿ ಟಿ. ಆನಂದರಾಯರು ದಿವಾನ ರಾದ ನಂತರ ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆಯನ್ನು ವಜಾಮಾಡಿ ಹೊಸ ಪದ್ಧತಿಯನ್ನು ಜಾರಿಗೆ ತಂದರು.[೧೧] ಹೊಸ ಪದ್ಧತಿಯ ಪ್ರಕಾರ ಈ ಪರೀಕ್ಷೆಗೆ ಮೈಸೂರಿನಲ್ಲಿ ಪದವಿ ಪಡೆದವರಿಗೆ ಮಾತ್ರ ಅವಕಾಶ ಮಾಡಿಕೊಡಲಾಯಿತು. ಹೀಗೆ ಮೈಸೂರು ಮೈಸೂರಿನವರಿಗೆ ಎಂಬ ಹೋರಾಟಕ್ಕೆ ೧೯೧೨ರಲ್ಲಿ ಪರಿಹಾರ ಕಾಣಿಸಿತು.[೧೨] ಆದರೂ ಸರಿಯಾದ ನ್ಯಾಯ ದೊರಕಲಿಲ್ಲ. ಬೇರೆ ಪ್ರಾಂತ್ಯಗಳಿಂದ ಬಂದು ಇಲ್ಲಿ ಡಿಗ್ರಿ ತೆಗೆದುಕೊಂಡು ತೇರ್ಗಡೆ ಹೊಂದಿದ ಪರದೇಶಿಯರಿಗೆ ಅವಕಾಶ ಮಾಡಿಕೊಟ್ಟಿದ್ದರು. ನಂತರ ಸದಸ್ಯರು ಈ ವಿಚಾರವನ್ನು ಮತ್ತೆ ಪ್ರಸ್ತಾಪಿಸಿ ಕೇವಲ ಸ್ಥಳಿಯರಿಗೆ, ಸ್ಥಳೀಯ ಪದವೀಧರರಿಗೆ ಮಾತ್ರ ಅವಕಾಶ ನೀಡುವಂತೆ ಒತ್ತಾಯಿಸಿ ದರು. ಹೀಗೆ ಮೈಸೂರು ಸಂಸ್ಥಾನದಲ್ಲಿ ಕಾಣಿಸಿಕೊಂಡ ಮದ್ರಾಸಿ ಮೈಸೂರಿನವರ ಹೋರಾಟವು ಸಂಸ್ಥಾನದ ಮೊದಲ ಸಾಮಾಜಿಕ-ರಾಜಕೀಯ ಚಲನೆಯಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಈ ವಿವಾದ ರಾಜಕೀಯ ಹಾಗೂ ಹೆಚ್ಚಾಗಿ ಒಂದು ಗುಂಪಿನ ಹಿತಾಸಕ್ತಿಗಾಗಿ ಜನ್ಮ ಪಡೆದ ಪ್ರತಿನಿಧಿಸಭೆಯ ಮೂಲಕ ಹೆಚ್ಚು ಸತ್ಯವನ್ನು ಪಡೆದರೂ ಈ ಘರ್ಷಣೆಯಲ್ಲಿ ವ್ಯಕ್ತವಾಗುವ ಒಂದು ಸಾಮಾಜಿಕ ಆಯಾಮವನ್ನು ನಾವು ಕಡೆಗಣಿಸುವಂತಿಲ್ಲ.

ಆಧಾರಸೂಚಿ ಮತ್ತು ಅಡಿಟಿಪ್ಪಣಿಗಳು

೧. ಬಿ.ಹೆಟ್ನೆ, 'Political Economy of Indirect Mysore, 1881-1947, (New Delhi-1978), Page No. 72.

೨. ಎಸ್. ಚಂದ್ರಶೇಖರ್- ವಸಾಹತು ಕಾಲೀನ ಕರ್ನಾಟಕ, (ಬೆಂಗಳೂರು ೨೦೦೬), Page No. 58.

೩. ಬಿ.ಹೆಟ್ನೆ, 'Political Economy of Indirect Rule Mysore, 1881-1947, (New Delhi-1978), Page No. 73-74.

೪. Proceeding of the Mysore Representative Assembly, 1885, Subject 33-44.

೫. Proceeding of the Mysore Representative Assembly, (PMRA), Oct 1891, Page NO. 33-44.

೬ ಪಿ.ಆರ್. ರಾಮಯ್ಯ-ದಯಾಸಾಗರ, ಎಂ. ವೆಂಕಟಕೃಷ್ಣಯ್ಯ ಜೀವನ ಸಾಧನೆ, ಪುಟ ೭

೭. Proceeding of the Mysore Representative Assembly, (PMRA), Oct 1892, Page No. 46.

೮. Proceeding of the Mysore Representative Assembly, (PMRA), Oct 1892, Page No. 47.

೯. Proceeding of the Mysore Representative Assembly, (PMRA), Oct 1893, Page No. 60-61.

೧೦. ಪಿ.ಆರ್. ರಾಮಯ್ಯ-ದಯಾಸಾಗರ, ಎಂ.ವೆಂಕಟಕೃಷ್ಣಯ್ಯ ಜೀವನ ಸಾಧನೆ, ಪುಟ ೫೯-೫೯.

೧೧. ವೃತ್ತಾಂತ ಪತ್ರಿಕೆ, ಅಕ್ಟೋಬರ್ ೪, ೧೯೦೬, ಪುಟ ೨.

೧೨. ೧೯೧೪ರ ನಂತರ PMRA ನೋಡಬಹುದು.

೧೨೬

ದಕ್ಷಿಣ ಕನ್ನಡ ಜಿಲ್ಲೆಯ ವಿಜಯನಗರ ಕಾಲದ ಕುರಿತಾದ ಇತಿಹಾಸ ಕಥನ: ಒಂದು ಅವಲೋಕನ

ಸುಜಾತ*

ಐತಿಹಾಸಿಕ ಬರವಣಿಗೆಗಳ ಅಧ್ಯಯನ ವಿಧಾನವೇ ಇತಿಹಾಸ ಲೇಖನ ಕಲೆ ಅಥವಾ ಇತಿಹಾಸ ಕಥನ ಎನ್ನಬಹುದು. ಎಂದರೆ ಇತಿಹಾಸ ರಚನೆಯ ಪ್ರಕ್ರಿಯೆಯಲ್ಲಿ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ನೈತಿಕ ಚರಿತ್ರೆಯಿಂದ ಹಿಡಿದು ಕಾಲಾಂತರದಲ್ಲಿ ವಿವಿಧ ದೃಷ್ಟಿಕೋನಗಳಲ್ಲಿ ರಚಿಸಲ್ಪಟ್ಟ ಚಾರಿತ್ರಿಕ ಬರವಣಿಗೆಗಳ ಮರುಪರಿಶೀಲನೆ, ಅಧ್ಯಯನ ವ್ಯಾಪ್ತಿಯನ್ನು ಗುರುತಿಸುವುದಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸವು ಪೂರ್ವೇತಿಹಾಸ ಕಾಲದಿಂದ ಹಿಡಿದು ಇತಿಹಾಸ ಕಾಲಕ್ಕೆ ಆಳುಪರ ಆಳ್ವಿಕೆಯಿಂದೀಚೆಗೆ ಗೋಚರಿಸುತ್ತದೆ. ಕ್ರಿ.ಶ. ೭ನೆಯ ಶತಮಾನದಿಂದ ಅಳುಪರ ಶಾಸನಗಳು ಕಂಡುಬಂದಿದ್ದು ಸುಮಾರು ೧೪ನೆಯ ಶತಮಾನದವರೆಗೂ ದೀರ್ಘ ಕಾಲ ಆಳ್ವಿಕೆ ನಡೆಸಿದ್ದರೆಂಬುದು ತಿಳಿದುಬರುತ್ತದೆ. ನಂತರದ ಕಾಲಘಟ್ಟ ವಿಜಯನಗರ ಆಳ್ವಿಕೆಯದ್ದು. ಈ ಕಾಲಘಟ್ಟವು ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸದಲ್ಲಿ ಮಹತ್ವದ್ದಾಗಿದೆ. ನಂತರ ಜಿಲ್ಲೆಯ ಇತಿಹಾಸವು ಇಕ್ಕೇರಿ ಕೆಳದಿ ಅರಸರ ಆಳ್ವಿಕೆ, ಮೈಸೂರು ಸುಲ್ತಾನರಾದ ಹೈದರ್ ಟಿಪ್ಪು ಕಾಲದಿಂದ ಬ್ರಿಟಿಷ್ ಆಳ್ವಿಕೆಯವರೆಗೂ ಮುಂದುವರಿಯುತ್ತದೆ. ಬ್ರಿಟಿಷ್ ಆಳ್ವಿಕೆಯಲ್ಲಿ ಕರಾವಳಿ ಪ್ರದೇಶವನ್ನು ಕ್ರಿ.ಶ ೧೮೬೦ರಲ್ಲಿ ಉತ್ತರ ಹಾಗೂ ದಕ್ಷಿಣ ಭಾಗಗಳಾಗಿ ಮಾಡಲಾಯಿತು. ಅಲ್ಲದೆ ಕ್ರಿ.ಶ. ೧೮೬೨ರಲ್ಲಿ ದಕ್ಷಿಣ ಭಾಗವನ್ನು ಮದ್ರಾಸು ಪ್ರೆಸಿಡೆನ್ಸಿಗೊಳಪಡಿಸಲಾಯಿತು ಮತ್ತು ಈ ಭಾಗವು ಕುಂದಾಪುರ, ಉಡುಪಿ, ಮಂಗಳೂರು, ಉಪ್ಪಿನಂಗಡಿ, ಕಾಸರಗೋಡು ಎಂದು ೫ ತಾಲೂಕುಗಳನ್ನೊಳಗೊಂಡಿತು.

ಹದಿನೆಂಟನೆಯ ಶತಮಾನದ ಕೊನೆಯಲ್ಲಿ ಹಾಗೂ ಹತ್ತೊಂಬತ್ತನೆಯ ಶತಮಾನದಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಯ ಅಧಿಕಾರಿಗಳಿಂದ, ಕಲೆಕ್ಟರ್‌ಗಳಿಂದ ರಚಿಸಲ್ಪಟ್ಟ ಬರವಣಿಗೆಗಳು ತುಳುನಾಡಿನ ಇತಿಹಾಸ ರಚನೆಯ ಆರಂಭಿಕ ಪ್ರಯತ್ನವೆಂಬಂತೆ ಕಂಡುಬರುತ್ತದೆ. ಇಲ್ಲಿನ ಸಂಸ್ಕೃತಿ, ಪರಂಪರೆ, ಭಾಷೆ, ಆಡಳಿತ ಮೊದಲಾದುವುಗಳನ್ನು ಅರಿತುಕೊಳ್ಳುವಲ್ಲಿ ರಚಿಸಲಾದ ಈ ಬರವಣಿಗೆಗಳಲ್ಲಿ ವಸಾಹಾತುಶಾಹಿ ಧೋರಣೆಯು ಕಂಡು ಬಂದರೂ ಇವರು ತುಳುನಾಡಿನ ಇತಿಹಾಸದ ಅಧ್ಯಯನಕ್ಕೆ ಬುನಾದಿಯನ್ನಿತ್ತವರು ಎಂದರೆ ತಪ್ಪಾಗಲಾರದು. ನಂತರ ಇಪ್ಪತ್ತನೆಯ ಶತಮಾನದಲ್ಲಿ ಹವ್ಯಾಸಿ ಬರಹಗಾರರಿಂದ ಮತ್ತು ವೃತ್ತಿಪರ ಇತಿಹಾಸಕಾರರಿಂದ ಸಂಶೋಧನಾತ್ಮಕ, ಕ್ರಮಬದ್ಧ, ಐತಿಹಾಸಿಕ ಬರವಣಿಗೆಗಳು ತುಳುನಾಡಿನಲ್ಲಿ ಕಂಡು ಬಂದವು.

ತುಳುನಾಡಿನ ಐತಿಹಾಸಿಕ ಬರವಣಿಗೆಗಳು ತುಳುನಾಡಿನ ವಿವಿಧ ಕಾಲಘಟ್ಟದ ಚರಿತ್ರೆಯನ್ನು ಬಿಂಬಿಸುತ್ತವೆ. ಪ್ರಸ್ತುತ ಲೇಖನವು ದಕ್ಷಿಣ ಕನ್ನಡ ಜಿಲ್ಲೆಯ ವಿಜಯನಗರ ಕಾಲದ ಇತಿಹಾಸ ಕುರಿತಾದ ಬರವಣಿಗೆಗಳ ಆರಂಭ, ಬೆಳವಣಿಗೆ, ಕಾಲಾನುಕ್ರಮವಾಗಿ ಅಧ್ಯಯನದ ವ್ಯಾಪ್ತಿಯ ಕುರಿತು ಪರಿಚಯಿಸುವ ಒಂದು ಕಿರು ಪ್ರಯತ್ನ ಕೈಗೊಂಡಿದೆ.

ತುಳುನಾಡಿನ ಇತಿಹಾಸ ರಚನೆಯ ಸಂದರ್ಭ ತುಳುನಾಡಿನಲ್ಲಿ ವಿಜಯ ನಗರ ಕಾಲೀನ ಇತಿಹಾಸ ಕುರಿತಾಗಿ ಬೆಳಕು ಚೆಲ್ಲುವಲ್ಲಿ ಮೊತ್ತ ಮೊದಲ ಬಾರಿಗೆ ಜಾನ್ ಸ್ಟರಕ್ ಹಾಗೂ ಸ್ಟುವರ್ಟ್‌ರವರು ಸಂಪಾದಿಸಿರುವ 'ಮದ್ರಾಸ್ ಡಿಸ್ಟ್ರಿಕ್ಟ್ ಮ್ಯಾನುವಲ್ಸ್' ಸಂಪುಟಗಳು ಕ್ರಿ.ಶ. ೧೮೯೪ರಲ್ಲಿ ಪ್ರಕಟಗೊಂಡವು. ಈ ಸಂಪುಟಗಳು ತುಳುನಾಡಿನ ಇತಿಹಾಸ, ಪುರಾತತ್ವ, ಜನ ಸಮುದಾಯಗಳ ಬಗ್ಗೆ, ಭೂ ಒಡೆತನ, ಕಂದಾಯ ವ್ಯವಸ್ಥೆ ಕುರಿತಾದ ಮಾಹಿತಿಯನ್ನು ಒದಗಿಸುತ್ತದೆ. ಈ ಮಾಹಿತಿ ಸಂಗ್ರಹಣೆ ವಸಾತುಶಾಹಿ ಧೋರಣೆಗೆ ಪೂರಕವೆಂಬಂತೆ ಭಾಸವಾಗುತ್ತದೆ. ಮದ್ರಾಸ್ ಪ್ರಾಚ್ಯ ಶಾಸ್ತ್ರ ವಿಭಾಗದ ಸುಪರಿಂಟೆಂಡೆಂಟ್ ಡಾ. ಎ. ಹುಲ್ಸ್‌ರವರು ಮದ್ರಾಸ್ ಪ್ರಾಂತ್ಯದ ಕರಾವಳಿಯ ಶಾಸನಗಳನ್ನು ಸಂಗ್ರಹಿಸಿ 'ಆ್ಯನುವಲ್ ರಿಪೋರ್ಟ್ಸ್ ಆಫ್ ದಿ ಡಿಪಾರ್ಟ್‌ಮೆಂಟ್' ಎಂಬುದಾಗಿ ಪ್ರಕಟಿಸಿ ಮಹತ್ವದ ಹೆಜ್ಜೆಯನ್ನಿಟ್ಟರು. ಮುಂದೆ ಇವು ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಶನ್ಸ್ ಸಂಪುಟ ೭, ೯, ೨೭ಗಳಲ್ಲಿ ತುಳುನಾಡಿನ ಶಾಸನಗಳ ದಾಖಲಾಯಿತು.

* ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳ ಗಂಗೋತ್ರಿ.

ಕ್ರಿ.ಶ. ೧೯೧೫ರಲ್ಲಿ ತುಳುನಾಡಿನ ಐತಿಹಾಸಿಕ ಬರವಣಿಗೆಯು ದೇಶಿ ಬರವಣಿಗೆಯಲ್ಲಿ ಹವ್ಯಾಸಿ ಬರಹಗಾರರಾದ ಪೊಳಲಿ ಶೀನಪ್ಪ ಹೆಗ್ಗಡೆಯವರ "ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳ ಪಾಂಡ್ಯನ ಅಳಿಯಕಟ್ಟು" ಎಂಬ ಕೃತಿಯಿಂದ ಆರಂಭಗೊಂಡಿದೆ. ಕೃತಿ ರಚನೆಗೆ ಗ್ರಾಮಪದ್ಧತಿ, ಸಹ್ಯಾದ್ರಿಕಾಂಡ, ಪಾಡ್ದನಗಳು, ಐತಿಹ್ಯಗಳು ಮತ್ತು ಸ್ಥಳಪುರಾಣಗಳನ್ನು ಆಕರಗಳನ್ನಾಗಿ ಬಳಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಸ್ಥಳೀಯ ಅರಸುಮನೆತನಗಳಾದ ಬಂಗ, ಚೌಟ, ಅಜಿಲರು, ಸಾವಂತರ ಕುರಿತು ಅವರ ರಾಜ್ಯ ವಿಸ್ತಾರವನ್ನು ತಿಳಿಸಿದ್ದಾರೆ. ಅಲ್ಲದೆ ತುಳುವರ ಬದುಕಿನ ಕುರಿತು ಇವರು ಮಾಹಿತಿಯನ್ನು ನೀಡಿರುತ್ತಾರೆ. ಶೀನಪ್ಪ ಹೆಗ್ಗಡೆಯವರ ನಂತರ ಗಣಪತಿ ರಾವ್ ಐಗಳ್‌ರವರು ತುಳುನಾಡಿನ ಇತಿಹಾಸ ರಚನೆಯ ಹಾದಿಯಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಕ್ರಿ.ಶ. ೧೯೨೩ರಲ್ಲಿ ಹೊರ ಬಂದ "ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ" ಇವರ ಕೃತಿಯು ಅವರ ಕ್ಷೇತ್ರಕಾರ್ಯ ಮತ್ತು ವಿಮರ್ಶಾತ್ಮಕವಾಗಿ ಹೊರಬಂದ ಕೃತಿಯಾಗಿದೆ. ಕೃತಿಯ 'ವಿಜಯನಗರದ ಅರಸರು' ಎಂಬ ಹದಿನಾರನೆಯ ಅಧ್ಯಾಯದಲ್ಲಿ ವಿಜಯನಗರ ಪೂರ್ವ ಅರಸರು ಮತ್ತು ವಿಜಯನಗರ ಕಾಲದ ಅರಸರ ಬಗ್ಗೆ ತಿಳಿಸಿದ್ದಾರೆ. ವಿಜಯನಗರ ಪೂರ್ವ ಅರಸರ ಬಗೆಗಿನ ವಿವರಣೆಯಲ್ಲಿ ಐತಿಹಾಸಿಕತೆ ಕಂಡು ಬರುವುದಿಲ್ಲ. ವಿಜಯನಗರ ಕಾಲದ ಸ್ಥಳೀಯ ಮೂರು ಮನೆತನದ ವಂಶಾವಳಿಯನ್ನು ಕುರಿತು ಈ ಕೃತಿಯಲ್ಲಿ ಹೇಳಲಾಗಿದೆ ಮತ್ತು ತುಳುನಾಡಿನಲ್ಲಿ ವಿಜಯನಗರ ರಾಜರ ಆಳ್ವಿಕೆಯನ್ನು ಕುರಿತು ಅತ್ಯಲ್ಪವಾಗಿ ವಿವರಿಸಿದ್ದಾರೆ. ಐಗಳ ನಂತರ ಇನ್ನೋರ್ವ ತುಳುನಾಡಿನ ಶ್ರೇಷ್ಠ ವೃತ್ತಿಪರ ಇತಿಹಾಸಕಾರ ಡಾ. ಬಿ.ಎ. ಸಾಲೆತ್ತೂರು. ಇವರ "ಸೋಶಿಯಲ್ ಆಂಡ್ ಪೊಲಿಟಿಕಲ್ ಲೈಫ್ ಇನ್ ದ ವಿಜಯನಗರ ಎಂಪಾಯರ್" ಮಹಾಪ್ರಬಂಧವು ಶಾಸನ ಹಾಗೂ ನಾಣ್ಯಗಳನ್ನು ಆಧರಿಸಿ ರಚಿಸಲಾಗಿದೆ. ಈ ಮಹಾಪ್ರಬಂಧವು ವಿಸ್ತೃತವಾದ ವಿಜಯನಗರ ಇತಿಹಾಸವನ್ನು ಬಿಂಬಿಸುತ್ತದೆ. ಇವರ ಇನ್ನೊಂದು ಕೃತಿ "ಮಿಡೀವಲ್ ಜೈನಿಸಮ್ ವಿದ್ ಸ್ಪೆಷಲ್ ರೆಫರೆನ್ಸ್ ಟು ದ ವಿಜಯನಗರ ಎಂಪೈರ್" (ಕ್ರಿ.ಶ. ೧೯೩೮). ಈ ಕೃತಿಯಲ್ಲಿ ೧೨ ಅಧ್ಯಾಯಗಳಿದ್ದು ಕೊನೆಯ ಆರು ಅಧ್ಯಾಯಗಳು ವಿಜಯನಗರ ಕಾಲದ ಜೈನ ಧರ್ಮದ ವಾಸ್ತುಶಿಲ್ಪ, ಕಾವ್ಯಗಳು, ಶಾಸ್ತ್ರಗಳು ಮೊದಲಾದವುಗಳ ಮೇಲೆ ಬೆಳಕು ಚೆಲ್ಲುತ್ತದೆ. ಈ ಸಂದರ್ಭ ತುಳುನಾಡಿನ ಜೈನಧರ್ಮದ ಕುರಿತು ಹೇಳಲಾಗಿದೆ.

ಸ್ವಾತಂತ್ರ್ಯ ನಂತರದಲ್ಲಿ ದೇಶದ ಇತಿಹಾಸ ರಚನೆಯಲ್ಲಿ ಹೊಸ ಚಿಂತನೆ, ರಚನಾ ಮಾರ್ಗಗಳನ್ನು ಅಳವಡಿಸಿಕೊಳ್ಳಲಾಗಿದೆ. ತುಳುನಾಡಿನ ಇತಿಹಾಸ ರಚನಾ ವಿಧಾನದಲ್ಲಿಯೂ ಈ ಬದಲಾವಣೆಯನ್ನು ಗುರುತಿಸಲಾಗಿದೆ. ಈ ಕಾಲದ ತುಳುನಾಡಿನ ಪ್ರಮುಖ ಇತಿಹಾಸಕಾರರೆಂದರೆ ಡಾ. ಪಿ. ಗುರುರಾಜ್ ಭಟ್, ಡಾ. ಕೆ.ವಿ. ರಮೇಶ್,ಡಾ.ವಸಂತ ಶೆಟ್ಟಿ, ಕೆ.ಜಿ. ವಸಂತ ಮಾಧವ, ಡಾ. ಪಿ. ಗಣಪಯ್ಯ ಭಟ್, ಡಾ.ಜಗದೀಶ ಶೆಟ್ಟಿ ಮೊದಲಾದವರು.

ಡಾ. ಪಿ. ಗುರುರಾಜ ಭಟ್‌ರವರ "ತುಳುನಾಡು", ಕ್ರಿ.ಶ. ೧೯೬೩ರಲ್ಲಿ ಪ್ರಕಟಗೊಂಡ ಕೃತಿಯು ತುಳುನಾಡಿನ ಸಾಮಾಜಿಕ ಅಧ್ಯಯನದ ಕೇಂದ್ರ ಬಿಂದುವಾಗಿದೆ. ಈ ಅಧ್ಯಯನವು ಶಾಸನಗಳ ಆಧಾರದಿಂದ ನಡೆಸಿದ ಅಧ್ಯಯನವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬ್ರಾಹ್ಮಣ್ಯದ ಮೂಲವನ್ನು ಕುರಿತು, ಕ್ರಿ.ಶ. ೧೫ನೇ ಶತಮಾನದಲ್ಲಿ ಸ್ಥಾನಿಕ ಬ್ರಾಹ್ಮಣರ ಉಚ್ರಾಯ ಸ್ಥಿತಿ, ನಂತರದ ದಿನಗಳಲ್ಲಿ ಬೇರೆ ಬೇರೆ ಬ್ರಾಹ್ಮಣ ಪಂಗಡಗಳ ಆಗಮನದಿಂದ ಸ್ಥಾನಿಕರ ಪ್ರಾಬಲ್ಯದ ಹಿನ್ನಡೆ, ಸ್ಥಾನಿಕ ವರ್ಗದ ಸ್ಥಾನಮಾನ ಕುರಿತು ಚರ್ಚಿಸಿರುತ್ತಾರೆ. ವಿಜಯನಗರ ಕಾಲದಲ್ಲಿ ತುಳುರಾಜ್ಯದ ವಿಸ್ತಾರ (ತುಳು, ಕೊಂಕಣ, ದೈವ, ನಗಿರೆ ರಾಜ್ಯ),ರಾಜಕೀಯ ವಿಭಾಗ, ಅಧಿಕಾರ ಸಂಸ್ಥೆಗಳು, ಸಾಂಸ್ಕೃತಿಕವಾಗಿ ಬೆಳೆದ ಬಗ್ಗೆಯೂ ಲೇಖಕರು ವಿವರಿಸಿದ್ದಾರೆ. ವಿಜಯನಗರ ಕಾಲದಲ್ಲಿ ತುಳುನಾಡಿನಲ್ಲಿ ಜೈನರ ಆಡಳಿತ ಕುರಿತು ಅತ್ಯಲ್ಪವಾಗಿ ಲೇಖಕರು ತಿಳಿಸಿದ್ದಾರೆ. ಆದರೆ ಈ ಎಲ್ಲಾ ಅಂಶಗಳ ಮೇಲೆ ಈ ಕೃತಿಯಲ್ಲಿ ಆಳವಾದ ಅಧ್ಯಯನ ನಡೆದಿಲ್ಲ.

ಅಲ್ಲದೆ ಸೂರ್ಯನಾಥ ಕಾಮತ್ ರವರ "ತುಳುವ ಇನ್ ವಿಜಯನಗರ ಟೈಮ್ಸ್" ಅಪ್ರಕಟಿತ ಮಹಾಪ್ರಬಂಧವಾಗಿದೆ.

ಡಾ. ಕೆ.ವಿ. ರಮೇಶ್ ರವರ 'ಎ ಹಿಸ್ಟರಿ ಆಫ್ ಸೌತ್ ಕೆನರಾ', ಕ್ರಿ.ಶ. ೧೯೭೦ರಲ್ಲಿ ಪ್ರಕಟಗೊಂಡ ಕೃತಿಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ ಆರಂಭ ಕಾಲದಿಂದ ವಿಜಯನಗರ ಆಳ್ವಿಕೆವರೆಗಿನ ತುಳುನಾಡಿನ ಒಟ್ಟು ಇತಿಹಾಸವನ್ನು ಈ ಕೃತಿಯು ಬಿಂಬಿಸುತ್ತದೆ. ಶಾಸನಗಳು ಮತ್ತು ತಮಿಳು, ಕನ್ನಡ, ಸಂಸ್ಕೃತ ಸಾಹಿತ್ಯಗಳು, ವಿದೇಶಿ ಬರವಣಿಗೆಗಳನ್ನು ಕೃತಿ ರಚನೆಗೆ ಅಳವಡಿಸಿಕೊಂಡಿದ್ದಾರೆ. ಈ ಕೃತಿಯ ಆರನೆಯ ಅಧ್ಯಾಯದಲ್ಲಿ ವಿಜಯನಗರ ಆಳ್ವಿಕೆಯಡಿಯಲ್ಲಿ ತುಳುನಾಡಿನ ರಾಜ್ಯಪಾಲರುಗಳ ಆಳ್ವಿಕೆ, ಸ್ಥಳೀಯ ಅರಸುಮನೆತನಗಳ ಬಗ್ಗೆ ಹೇಳಲಾಗಿದೆ. ಬಾರಕೂರು ಮಂಗಳೂರು ರಾಜ್ಯದ ಒಟ್ಟು ೬೯ ರಾಜ್ಯಪಾಲರುಗಳ ಹೆಸರುಗಳನ್ನು ಪಟ್ಟಿ ಮಾಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಳಿಯ ಸಂತಾನ ಪದ್ಧತಿಯು ವಿಜಯನಗರ ಕಾಲಕ್ಕೆ ಬೆಳವಣಿಗೆಯನ್ನು ಕಂಡಿದೆ ಮತ್ತು ಸ್ಥಳೀಯ ಅರಸು ಮನೆತನಗಳಲ್ಲಿ ಈ ಬೆಳವಣಿಗೆಯನ್ನು ಕಾಣಬಹುದು

ಎಂದಿರುತ್ತಾರೆ. ಕೆ.ವಿ. ರಮೇಶ್‌ರವರು ಈ ಕೃತಿಯಲ್ಲಿ ತುಳು ನಾಡಿನ ವಿಜಯನಗರ ಆಡಳಿತದ ವಿಸ್ತೃತ ಅಧ್ಯಯನವನ್ನು ಕೈಗೊಂಡಿದ್ದಾರೆ. ವಿಜಯನಗರ ಕಾಲದಲ್ಲಿ ಕರಾವಳಿ ಸಾಗರೋತ್ತರ ವ್ಯಾಪಾರ ಕುರಿತು, ವ್ಯಾಪಾರಿ ಸಂಘ, ವ್ಯಾಪಾರಿ ಪಟ್ಟಣಗಳು, ಬಂದರುಗಳು ಕುರಿತು ಕೂಡಾ ಮಾಹಿತಿಯನ್ನು ಈ ಕೃತಿಯಲ್ಲಿ ನೀಡಲಾಗಿದೆ. ತುಳುನಾಡಿನ ಇತಿಹಾಸಕ್ಕೆ ಈ ಕೃತಿಯು ಒಂದು ವಸ್ತುನಿಷ್ಠ ಮಾದರಿ ಕೃತಿಯಂತಿದೆ. ಒಟ್ಟಿನಲ್ಲಿ ಕೃತಿಯು ತುಳುನಾಡಿನ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಇತಿಹಾಸವನ್ನು ಕುರಿತು ಬೆಳಕು ಚೆಲ್ಲುತ್ತದೆ. ಹೀಗೆ ತುಳುನಾಡಿನ ಇತಿಹಾಸ ಸಂಶೋಧನೆಗೆ ಕೆ.ವಿ. ರಮೇಶ್‌ರವರು ಭದ್ರ ಬುನಾದಿಯನ್ನು ಹಾಕಿ ಕೊಟ್ಟರು.

ಡಾ. ಪಿ. ಗುರುರಾಜ ಭಟ್‌ರವರ "ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್", ಕ್ರಿ.ಶ. ೧೯೭೫ರಲ್ಲಿ ಪ್ರಕಟಗೊಂಡ ಕೃತಿಯು ತುಳುನಾಡಿನ ಇತಿಹಾಸ, ಸಂಸ್ಕೃತಿ, ಕಲೆ, ವಾಸ್ತುಶಿಲ್ಪ ಮೊದಲಾದ ವಿಷಯಗಳ ಮೇಲೆ ರೂಪಿತ ಗೊಂಡ ವಿಸ್ತೃತ ಗ್ರಂಥ. ಪ್ರಕಟಿತ ಆಧಾರಗಳಿಗಿಂತ ಮುಖ್ಯವಾಗಿ ಕ್ಷೇತ್ರಕಾರ್ಯದ ಮೂಲಕ ರೂಪಿತಗೊಂಡ ಕೃತಿಯಾಗಿದೆ. ತುಳುನಾಡಿನ ಒಟ್ಟು ರಾಜಕೀಯದ ಜೊತೆಗೆ ಸ್ಥಳೀಯ ಅರಸು ಮನೆತನಗಳ ಇತಿಹಾಸವನ್ನು ವಿಸ್ತಾರವಾಗಿ ಅಧ್ಯಯನ ನಡೆಸಿದ್ದಾರೆ. ವಿಜಯನಗರ ಕಾಲದ ತುಳುನಾಡಿನ ೩೨ ರಾಜಪಾಲರ ಹೆಸರುಗಳನ್ನು ನೀಡಲಾಗಿದೆ. ಕಲೆ, ವಾಸ್ತುಶಿಲ್ಪಕ್ಕೆ ಸಂಬಂಧಿಸಿದಂತೆ ತುಳುನಾಡಿನ ವಿಭಿನ್ನ ಶೈಲಿಯ ದೇವಾಲಯಗಳಲ್ಲಿ ವಿಜಯನಗರ ಶೈಲಿಯ ದೇವಾಲಯ ಗಳನ್ನು ಗುರುತಿಸಿರುವುದು ತುಳುನಾಡಿನ ಕಲೆ, ವಾಸ್ತುಶಿಲ್ಪಕ್ಕೆ ನೀಡಿದ ಕೊಡುಗೆಯಾಗಿದೆ.

ಬಾಲಕೃಷ್ಣ ಸಾಮಗರವರ 'ದಕ್ಷಿಣ ಕನ್ನಡದಲ್ಲಿ ವಿಜಯನಗರ ಕಾಲೀನ ಶಾಸನಗಳು' ಎಂಬ ಲೇಖನವು ಕ್ರಿ.ಶ. ೧೯೭೭ರಲ್ಲಿ ಪ್ರಕಟಗೊಂಡಿದೆ. ಈ ಲೇಖನವು ತುಳು ನಾಡಿನ ವಿಜಯನಗರ ಕಾಲದ ಶಾಸನಗಳ ಮಹತ್ವದ ಬಗ್ಗೆ ಹೇಳುತ್ತದೆ. ತುಳುನಾಡಿನ ವಿಜಯನಗರ ಕಾಲದ ಶಾಸನಗಳ ಭಾಷೆ, ಶಾಸನಗಳಲ್ಲಿ ವ್ಯಕ್ತವಾಗಿರುವ ಅಂಶಗಳು, ನ್ಯೂನತೆಗಳು, ರಾಜವಂಶಾವಳಿ ಆಡಳಿತ ವಿಭಾಗಗಳು, ಆಡಳಿತ ಹುದ್ದೆ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ನ್ಯಾಯಾಡಳಿತ, ನಾಣ್ಯಪದ್ಧತಿ ಎಲ್ಲಾ ವಿವರಣೆಗಳನ್ನು ಈ ಲೇಖನದಲ್ಲಿ ಪರಿಚಯಿಸಿರುವುದು ವಿಶೇಷವಾಗಿದೆ.

ಕೆ.ವಿ. ರಮೇಶ್‌ರವರ "ತುಳುನಾಡಿನ ಶಾಸನಗಳು", ಕ್ರಿ.ಶ. ೧೯೭೮ ರಲ್ಲಿ ಪ್ರಕಟಗೊಂಡ ಮಹತ್ವದ ಕೃತಿಯಾಗಿದೆ. ಶಾಸನಗಳ ಭಾಷೆ, ಲಿಪಿ ಬೆಳವಣಿಗೆಯ ದೃಷ್ಟಿಯಿಂದ ಪ್ರಾಚೀನ, ಮಧ್ಯಯುಗೀನ ಹಾಗೂ ವಿಜಯನಗರ ಶಾಸನಗಳೆಂದು ಮೂರು ವಿಭಾಗವಾಗಿ ವಿಂಗಡಿಸಿರುವುದು ಈ ಕೃತಿಯ ವೈಶಿಷ್ಟ್ಯ. ಇದು ತುಳುನಾಡಿನ ವಿಜಯನಗರ ಕಾಲದ ಸುಮಾರು ೪೪ ಶಾಸನಗಳ ಪಾಠ ಹಾಗೂ ಸಾರಾಂಶವನ್ನು ಹೊಂದಿರುವ ಕೃತಿಯಾಗಿದೆ.

ಡಾ. ಕೆ.ವಿ. ರಮೇಶ್ ಮತ್ತು ಎಂ.ಜೆ. ಶರ್ಮಾರವರ "ತುಳುನಾಡಿನ ಅರಸುಮನೆತನಗಳು ಮತ್ತು ಧರ್ಮ ಸಮನ್ವಯ", ಕ್ರಿ.ಶ. ೧೯೮೫ ರಲ್ಲಿ ಪ್ರಕಟಗೊಂಡ ಈ ಕೃತಿಯಲ್ಲಿ 'ವಿಜಯನಗರ ಕಾಲದ ತುಳುನಾಡು' ಎಂಬ ಮೂರನೇ ಅಧ್ಯಾಯದಲ್ಲಿ ವಿಜಯನಗರ ಕಾಲದ ಶಾಸನಗಳಿಂದ ತಿಳಿದು ಬರುವ ತುಳುನಾಡಿನ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಆದ ಕ್ರಾಂತಿಕಾರಕ ಬದಲಾವಣೆಯನ್ನು ಕುರಿತು ಲೇಖಕರು ಪ್ರಸ್ತಾಪಿಸಿದ್ದಾರೆ.

ಡಾ. ಬಿ. ವಸಂತಶೆಟ್ಟಿ ಇವರ 'ವಿಜಯನಗರ ಪ್ರಾಂತೀಯ ಧೋರಣೆಗೆ ಸ್ಥಳೀಯ ಪ್ರತಿಕ್ರಿಯೆ', ಕ್ರಿ.ಶ. ೧೯೯೦ರಲ್ಲಿ ಪ್ರಕಟಗೊಂಡ ಈ ಲೇಖನವು ಶಾಸನಗಳ ನ್ನಾಧರಿಸಿ ಬರೆದುದಾಗಿದೆ. ವಿಜಯನಗರ ಆಡಳಿತ ಕಾಲದಲ್ಲಿ ಬಾರಕೂರು ಹಾಗೂ ಮಂಗಳೂರು ರಾಜ್ಯ ಎರಡು ಆಡಳಿತ ವಿಭಾಗದಲ್ಲಿ ರಾಜ್ಯಪಾಲರುಗಳು ಆಡಳಿತ ನಡೆಸುತ್ತಿದ್ದರು. ಈ ಸಂದರ್ಭ ಪ್ರಾಂತ್ಯಕ್ಕೆ ನ್ಯಾಯ ನೀಡುವಲ್ಲಿ ಕೇಂದ್ರೀಯ ಸರ್ಕಾರದ ಪಾತ್ರ, ವ್ಯಾಪಾರಿ ಸಂಘ, ಜನ ಪ್ರತಿನಿಧಿಗಳ ಅಧಿಕಾರ, ದಬ್ಬಾಳಿಕೆ ಸಂದರ್ಭ ಜನರ ಪ್ರತಿಕ್ರಿಯೆ ಮೊದಲಾದ ವಿಷಯಗಳ ಬಗ್ಗೆ ಸಮಗ್ರವಾಗಿ ವಿಶ್ಲೇಶಿಸಿದ್ದಾರೆ.

ಡಾ. ಬಿ. ಜಗದೀಶ ಶೆಟ್ಟಿಯವರ 'ವಿಜಯನಗರದಲ್ಲಿ ದಕ್ಷಿಣ ಕನ್ನಡದ ವ್ಯವಸಾಯಿಕ ಪದ್ಧತಿಯಲ್ಲಿ ಅರುವಾರ', ಕ್ರಿ.ಶ. ೧೯೯೧ರಲ್ಲಿ ಪ್ರಕಟಗೊಂಡ ಈ ಲೇಖನವು ಶಾಸನಾ ಧಾರಿತವಾಗಿದೆ. ಅರುವಾರ ಎಂದರೆ ಭೂ ಅಡವು ಕ್ರಮ ಎಂಬರ್ಥ. ತುಳುನಾಡಿನ ವಿಜಯನಗರ ಆಡಳಿತದಲ್ಲಿ ಅರುವಾರ ಪದ್ಧತಿಯು ಪ್ರಚಲಿತವಿದ್ದುದನ್ನು ಮತ್ತು ಮೂರು ವಿಧದ ಅರುವಾರ ಪದ್ಧತಿಯನ್ನು ಲೇಖಕರು ಸಮಗ್ರವಾಗಿ ವಿಶ್ಲೇಷಿಸಿದ್ದಾರೆ.

ಡಾ. ಕೆ.ಜಿ. ವಸಂತ ಮಾಧವ ರವರ "ದಕ್ಷಿಣ ಕನ್ನಡ ಜಿಲ್ಲೆಯ, ಕಂಗುಮಠ ಐತಿಹಾಸಿಕ ವಿಶ್ಲೇಷಣೆ" ಕ್ರಿ.ಶ. ೧೯೯೪ರ ಈ ಲೇಖನವು ಆದಿ ಉಡುಪಿಯ ಕಂಗುಮಠದ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ. ಇಲ್ಲಿ ದೊರೆತ ಶಾಸನಗಳ ಆಧಾರದಿಂದ ವಿಜಯನಗರ ಅರಸರ,ಭೂದಾನ, ಹೊನ್ನುದಾನ ಕುರಿತು, ಕಂಗುಮಠವು ವೈಷ್ಣವ ದೇವತೆಗಳ ಆರಾಧನಾ ಸ್ಥಳವಾಗಿತ್ತು ಎಂದೂ, ಭೌಗೋಳಿಕ ಮಾಹಿತಿ ಯನ್ನು ಕಲೆ ಹಾಕಿರುವುದು ಈ ಲೇಖನದ ವಿಶೇಷತೆ ಯಾಗಿದೆ.

ಗೋವಿಂದ ಪೈರವರ 'ವಿಜಯನಗರದ 'ತುಳುವ' ಅಥವಾ 'ತುಳುವ ವಂಶ', ಕ್ರಿ.ಶ. ೧೯೯೫ ರಲ್ಲಿ ಪ್ರಕಟಗೊಂಡ ಈ ಲೇಖನದಲ್ಲಿ ಪೈ ರವರು ವಿಜಯನಗರ ಕಾಲದ ತುಳುವ ವಂಶವು ಸಾಳುವ ವಂಶದ ನರಸಿಂಹನೆಂಬ ಸೇನಾನಿಯಿಂದ ಸ್ಥಾಪನೆಯಾಯಿತು ಎಂದಿದ್ದಾರೆ. ಶಾಸನ ಮತ್ತು ಪುರಾಣವನ್ನು ಆಧರಿಸಿ ತುಳುವ ಪದದ ವಿಶ್ಲೇಷಣೆ ಮಾಡಿದ್ದಾರೆ. ಇವರ ಈ ಪ್ರಯತ್ನ ಸಂಗಮ ವಂಶದ ಶಾಖೆಯೊಂದು ಯದುವಿನ ಮಗನಾದ ತುರ್ವಸುವನ್ನು ತಮ್ಮ ವಂಶವೆಂದು ಒಪ್ಪಿ ತಮ್ಮನ್ನು ತುಳುವರೆಂದು ಕರೆದಿರಬಹುದೇ ಎನ್ನುತ್ತಾರೆ.

ಡಾ. ವಸಂತ ಶೆಟ್ಟಿಯವರ, 'ಐತಿಹಾಸಿಕ ಮಹತ್ವದ ಉಡುಪಿ ತಾಲೂಕಿನ ಶಾಸನಗಳು', ಕ್ರಿ.ಶ. ೧೯೯೫ರಲ್ಲಿ ಪ್ರಕಟಗೊಂಡ ಈ ಕೃತಿಯು ಶಾಸನವನ್ನಾಧಾರಿಸಿದೆ. ಕೃತಿಯು ಪ್ರಸ್ತುತ ಉಡುಪಿ ತಾಲೂಕಿನ ವಿಜಯನಗರ ಆಡಳಿತದ ಇತಿಹಾಸವನ್ನು ಬಿಂಬಿಸುತ್ತದೆ. ವಿಜಯನಗರ ಕಾಲದ ಭೂ ವಿವರ, ಗಡಿ, ನಾಣ್ಯ ಚಲಾವಣೆ, ದಾನ ಶಾಸನ, ಆಡಳಿತ ವಿಭಾಗಗಳು ಮೊದಲಾದ ವಿವರ ಇಲ್ಲಿದೆ. ಉಡುಪಿ ತಾಲೂಕಿನ ವಿಜಯನಗರ ಕಾಲದ ಮೊದಲ ಶಾಸನ ಹೆಗ್ಗುಂಜೆ ಗ್ರಾಮದ ಹೆಬ್ಬಾಡಿ ಗುಂಡಿ ಎಂಬಲ್ಲಿ ಡಾ. ವಸಂತ ಶೆಟ್ಟಿಯವರು ಪತ್ತೆ ಹಚ್ಚಿರುವುದು ಅಲ್ಲದೆ ಈ ಕಾಲದ ಮೊದಲ ತಾಮ್ರ ಶಾಸನ ೧೩೫೨ ರಲ್ಲಿ ದೊರೆತ ಬಗ್ಗೆ ಹಾಗೂ ಈ ಶಾಸನದಲ್ಲಿ ಭೂ ವಿವರ, ಭೂಮಿಯನ್ನು 'ಜನನ' ಎಂದು ಕರೆದಿರುವ ಕುರಿತು ಲೇಖಕರು ತಿಳಿಸಿದ್ದಾರೆ. ಈ ಕೃತಿಯು ವಿಜಯನಗರ ಕಾಲದ ಅಧಿಕಾರಿಗಳ ದುರಾಡಳಿತ, ಇದಕ್ಕೆ ಜನಸಾಮಾನ್ಯರ ಪ್ರತಿಕ್ರಿಯೆ ಕುರಿತ ಸಾಮಾಜಿಕ-ಆರ್ಥಿಕ ಕೇಂದ್ರಿತ ಇತಿಹಾಸ ವನ್ನು ವಿಶ್ಲೇಷಿಸಿ ಮರುನಿರೂಪಣೆ ಮಾಡಿರುವುದು ಈ ಕೃತಿಯ ವಿಶೇಷವಾಗಿದೆ.

ಡಾ. ಕೆ.ಜಿ. ವಸಂತಮಾಧವ ಇವರ 'ವಿಜಯನಗರ ಅರಸರ ಸಾಗರೋತ್ತರ ವ್ಯಾಪಾರ-ಒಂದು ಅಧ್ಯಯನ', ಕ್ರಿ.ಶ. ೨೦೦೧ರ ಈ ಲೇಖನವನ್ನು ಶಾಸನ, ಅನುಷಂಘಿಕ ಆಕರಗಳು, ದಾಖಲೆ ಪತ್ರ ಮೊದಲಾದವನ್ನು ಆಧರಿಸಿ ರಚಿಸಲಾಗಿದೆ. ಕೃತಿಯಲ್ಲಿ ಲೇಖಕರು ವಿಜಯನಗರ ಸಾಮ್ರಾಜ್ಯದ ಪಶ್ಚಿಮ ಕರಾವಳಿ ರೇವಿನ ಚಟುವಟಿಕೆ ವ್ಯಾಪಾರ ಕುರಿತು ಅಧ್ಯಯನ ಕೈಗೊಂಡಿದ್ದಾರೆ. ಶಾಸನಗಳು, ಸಾಹಿತ್ಯ ಕೃತಿಗಳು, ಜಾನಪದೀಯ ಕಾವ್ಯಗಳನ್ನು ಮುಖ್ಯ ಆಕರ ಗಳನ್ನಾಗಿ ಬಳಸಿ ಅವುಗಳಿಗೆ ಸಮರ್ಥನೀಯವಾಗಿ ವಿದೇಶಿ ದಾಖಲೆಗಳನ್ನು ಬಳಸಿಕೊಂಡಿದ್ದಾರೆ. ಸಾಗರೋತ್ತರ ವ್ಯಾಪಾರ ದಲ್ಲಿ ವರ್ತಕ ಸಂಘಗಳು, ಪಶ್ಚಿಮ ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆಯ ರೇವುಗಳನ್ನು ಕುರಿತು ತಿಳಿಸಿದ್ದಾರೆ. ಈ ಕಾಲದಲ್ಲಿ ವಿಜಯನಗರ ಅರಸರು ವ್ಯಾಪಾರಿ ಕ್ಷೇತ್ರವನ್ನು ಸಂಘಟಿಸುವಲ್ಲಿ ಹಿಂದಿದ್ದರು. ಕಾರಣ ಸಮರ್ಪಕವಾದ ಸಮುದ್ರಯಾನ ಸಂಪರ್ಕವನ್ನು ಸಾಧಿಸದಿರುವುದು ಎಂಬುದಾಗಿ ವಿಶ್ಲೇಷಿಸಿರುವುದು ಸ್ವೀಕಾರಾರ್ಹವಾಗಿದೆ.

ಹೊ.ನ. ನೀಲಕಂಠೇಗೌಡ, ಡಾ. ಎಂ.ಜಿ. ಮಂಜುನಾಥ ರವರ "ಮೂಡಬಿದಿರೆಯ ಎರಡು ಅಪ್ರಕಟಿತ ಶಾಸನಗಳು", ಕ್ರಿ.ಶ. ೨೦೦೧ರ ಈ ಲೇಖನದಲ್ಲಿ ವಿಜಯನಗರ ಕಾಲದ ಮೂಡಬಿದಿರೆಯ ಒಂದು ಶಾಸನದ ಕುರಿತು ಹೊ.ನ. ನೀಲಕಂಠೇಗೌಡ ಮತ್ತು ಡಾ. ಎಂ.ಜಿ. ಮಂಜುನಾಥ ಅವರು ವಿವರಿಸಿದ್ದಾರೆ. ಕ್ರಿ.ಶ. ೧೫೧೧ ಇಸವಿಯ ಈ ಶಾಸನವು ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿ ಕೃಷ್ಣದೇವರಾಯನ ಆಳ್ವಿಕೆಯ ಕಾಲದ್ದಾಗಿದ್ದು ಬಾರಕೂರು ಮಂಗಳೂರು ರಾಜ್ಯವನ್ನು ರತ್ನಪ್ಪೊಡೆಯರು ಆಳುತ್ತಿದ್ದರು ಎಂದಿದ್ದಾರೆ. ರತ್ನಪ್ಪೊಡೆಯರ ಕೈಕೆಳಗೆ ವಿಠರಸವೊಡೆಯರು ಆಳುತ್ತಿದ್ದರು. ಮೂಡಬಿದಿರೆ ಪ್ರಾಂತ್ಯದ ಮುಖಂಡರಾದ ಅಣಸೇನಬೋವರ ಕಡೆಯವರು ಸೆಟ್ಟಿಕಾರರಿಗೆ ತಮ್ಮ ಕಡೆಯವರಿಂದ ಅನ್ಯಾಯ ವಾದದ್ದಕ್ಕಾಗಿ ತಪ್ಪು ಕಾಣಿಕೆ ಕೊಟ್ಟು ಬರೆಸಿದ ಶಾಸನದ ಕುರಿತು ವಿವರಿಸಿದ್ದಾರೆ. ಇದು ವಿಜಯನಗರ ಕಾಲದ ಸ್ಥಳೀಯ ನ್ಯಾಯಾಡಳಿತ ಕುರಿತು ತಿಳಿಸುವ ಈ ಲೇಖನವು ಪ್ರಾದೇಶಿಕ ಇತಿಹಾಸಕ್ಕೆ ನೀಡಿದ ಕೊಡುಗೆಯಾಗಿದೆ.

ನಾರಾಯಣ ನಾಯಕ್‌ರವರ 'ಕೂಳೂರು ಮಾಗಣೆಯ ಇತಿಹಾಸ-ಒಂದು ಅವಲೋಕನ', ೨೦೦೧ ರಲ್ಲಿ ಪ್ರಕಟವಾದ ಈ ಲೇಖನವು ತುಳುನಾಡಿನ ಮಂಗಳೂರು ಹತ್ತಿರದ ಕೂಳೂರು ಮಾಗಣೆಯ ಸಂಕ್ಷಿಪ್ತ ಇತಿಹಾಸವನ್ನು ಶಾಸನಗಳ ಆಧಾರದಿಂದ ಮತ್ತು ಕ್ಷೇತ್ರ ಪರಿಶೀಲನೆಯಿಂದ ಮಾಡಿರುತ್ತಾರೆ. ಕೂಳೂರು ಮಾಗಣೆಯು ಬಲ್ಲಾಳರ ಆಳ್ವಿಕೆಯು ವಿಜಯನಗರ ಕಾಲದಿಂದ ಅಧಿಕಾರ ಹೊಂದಿತ್ತು ಎನ್ನುತ್ತಾರೆ.

ಎಂ.ಬಿ. ಪಾಟೀಲರವರ "ವಿಜಯನಗರ ಕಾಲದ ಸಂತೆಗಳು ಒಂದು ವಾಣಿಜ್ಯಿಕ ಅಧ್ಯಯನ", ೨೦೦೧ರಲ್ಲಿ ಪ್ರಕಟವಾಗಿರುವ ಈ ಲೇಖನವು ವಿಜಯನಗರ ಕಾಲದ ಶಾಸನ, ವಿದೇಶಿ ಬರವಣಿಗೆಗಳನ್ನಾಧರಿಸಿ ಆ ಕಾಲದ ಆರ್ಥಿಕ ಇತಿಹಾಸದಲ್ಲಿ ಸಂತೆಗಳ ಪಾತ್ರ ಕುರಿತು ಈ ಲೇಖನದಲ್ಲಿ ಹೇಳಲಾಗಿದೆ. ಬಜಾರ್ ವಾಣಿಜ್ಯಿಕ ಪರಿಭಾಷೆಯು ಕಾಲ ದಿಂದ ಕಾಲಕ್ಕೆ ಬದಲಾಗುತ್ತಾ ಬಂದಿರುವುದು ಮತ್ತು ಈ ವಾಣಿಜ್ಯ ಚಟುವಟಿಕೆಗಳಲ್ಲಿ ಸಂತೆಯನ್ನು ಮೊದಲ ಹಂತವನ್ನಾಗಿ ಎಂ.ಬಿ. ಪಾಟೀಲ ಇವರು ಗುರುತಿಸಿರುವುದು ದೊರೆತ ಶಾಸನಾಧಾರದಿಂದ ಸ್ಪಷ್ಟವಾದುವಾಗಿದೆ.

ಕೆ.ಜಿ. ವಸಂತ ಮಾಧವರವರ "ಮಲೆಯಾಳಂ ಸಾಹಿತ್ಯ ದಲ್ಲಿ ಕರ್ನಾಟಕದ ಕರಾವಳಿ ಮತ್ತು ಮಲೆನಾಡು ಸಂಸ್ಕೃತಿ",

೨೦೦೧ರ ಈ ಲೇಖನ ಕ್ರಿ.ಶ. ಹದಿನಾಲ್ಕನೆಯ ಶತಮಾನದಿಂದ ೧೮ನೆಯ ಶತಮಾನದವರೆಗೆ ಮಲೆಯಾಳಂ ಸಾಹಿತ್ಯ ಕೃತಿಗಳಲ್ಲಿ ವ್ಯಕ್ತವಾಗಿರುವ – ಕರ್ನಾಟಕದ ಕರಾವಳಿ ಮತ್ತು ಮಲೆನಾಡಿನ ಸಂಸ್ಕೃತಿ ಕುರಿತು ಹೇಳಲಾಗಿದೆ. ಈ ಮಲೆಯಾಳಂ ಸಾಹಿತ್ಯಗಳಲ್ಲಿ ವ್ಯಕ್ತವಾಗಿರುವ ತುಳುನಾಡಿನ ಆಡಳಿತ ವಿಭಾಗಗಳು, ವ್ಯಾಪಾರ, ಕೃಷಿ ಒಟ್ಟು ಆ ಕಾಲದ ಜನಜೀವನ, ತುಳುನಾಡಿನ ಕೋಟೆ ವಿಚಾರ, ವಾಣಿಜ್ಯ, ವ್ಯಾಪಾರ, ಧಾರ್ಮಿಕ ಜೀವನವನ್ನು ತಿಳಿಯುವಲ್ಲಿ ಮತ್ತು ತುಳುನಾಡು ತನ್ನದೇ ಆದ ಸಂಸ್ಕೃತಿಯನ್ನು ಹೊಂದಿ ಕೇರಳದ ಜನ ಜೀವನದೊಂದಿಗೆ ಸಂಪರ್ಕವನ್ನು ಇಟ್ಟುಕೊಂಡಿರುವ ಕುರಿತು ಐತಿಹಾಸಿಕತೆಯನ್ನು ಲೇಖಕರು ಇಲ್ಲಿ ಪರಿಚಯಿಸಿದ್ದಾರೆ.

ಡಾ. ಕೆ.ಜಿ. ವಸಂತ ಮಾಧವರವರ "ಪಶ್ಚಿಮ ಕರಾವಳಿ ಮಾಲ್ಡೀವ ದ್ವೀಪ: ಕರಾವಳಿ ಕರ್ನಾಟಕದ ಸಂಪರ್ಕ ಒಂದು ವಿಶ್ಲೇಷಣೆ" ಕ್ರಿ.ಶ. ೨೦೦೨ರಲ್ಲಿ ಪ್ರಕಟವಾಗಿರುವ ಈ ಲೇಖನದಲ್ಲಿ ಕ್ರಿ.ಶ. ೧೫–೧೬ನೆಯ ಶತಮಾನದಲ್ಲಿ ಪಶ್ಚಿಮ ಕರಾವಳಿ ರೇವುಗಳಿಂದ ಮಾಲ್ಡೀವಕ್ಕೆ ವ್ಯಾಪಾರ ಸಂಪರ್ಕ, ತೆಗೆದುಕೊಂಡು ಹೋಗುತ್ತಿದ್ದ ವಸ್ತುಗಳು, ಪ್ರದೇಶದ ಬೆಳೆಗಳು ಮೊದಲಾದ ಕುರಿತ ಮಾಹಿತಿಯನ್ನು ನೀಡಲಾಗಿದೆ. ಅಲ್ಲದೆ ಸಾಂಸ್ಕೃತಿಕ ಸಂಬಂಧದ ಕುರಿತು ಕೂಡಾ ಮಾಹಿತಿ ನೀಡಲಾಗಿದೆ. ಕ್ರಿ.ಶ. ೧೪ನೇ ಶತಮಾನದಲ್ಲಿ ಬಂದ ಇಬನ್ ಬತೂತನ, ಕ್ರಿ.ಶ. ೧೫೧೨ರಲ್ಲಿ ಬಂದ ಪ್ರವಾಸಿ ಬಾರ್ಬೋಸನ ಬರವಣಿಗೆಗಳನ್ನು ಆಧರಿಸಿ ಪ್ರಸ್ತುತ ಲೇಖನದಲ್ಲಿ ಈ ಮೊದಲಾದ ಮಹತ್ತ್ವಾದ ಮಾಹಿತಿಯನ್ನು ನೀಡಲಾಗಿದೆ.

ಡಾ. ಪುಂಡಿಕ್ಕಾ ಗಣಪಯ್ಯ ಭಟ್‌ರವರ "ಹಿಸ್ಟೋರಿಕಲ್, ಕಲ್ಚರಲ್ ಜಿಯಾಗ್ರಫಿ ಆಂಡ್ ಎತ್ನೋಗ್ರಫಿ ಆಫ್ ತುಳುನಾಡು", ಕ್ರಿ.ಶ. ೧೯೯೪ ರಲ್ಲಿ ಪ್ರಕಟಗೊಂಡ ಮಹಾಪ್ರಬಂಧವು ತುಳುನಾಡಿನ ಇತಿಹಾಸ ಕಾಲದಿಂದ ವಿಜಯನಗರ ಕಾಲದವರೆಗಿನ ಚಾರಿತ್ರಿಕ, ಸಾಂಸ್ಕೃತಿಕ, ಜನಾಂಗೀಯ ಭೂಗೋಳದ ಬಗ್ಗೆ ಬೆಳಕು ಚೆಲ್ಲಿದೆ. ಇವರ "ಮೂಡುಬಿದಿರೆ ಸಾವಿರ ಕಂಬಂದ ಬಸದಿ ಜೀರ್ಣೋದ್ಧಾರ ವೃತ್ತಾಂತ", ಕ್ರಿ.ಶ ೨೦೦೨ ರ ಲೇಖನದಲ್ಲಿ ತುಳುನಾಡಿನ ಮಂಗಳೂರು ರಾಜ್ಯದ ಮೂಡುಬಿದಿರೆಯ ತ್ರಿಭುವನದ ತಿಲಕ ಚೂಡಾಮಣಿ ಬಸದಿ ಯು ೧೫ನೇಯ ಶತಮಾನದಲ್ಲಿ ಇಮ್ಮಡಿ ದೇವರಾಯ ನಿರ್ಮಾಣಗೊಂಡು ಮೂರು ಹಂತಗಳಲ್ಲಿ ಪೂರ್ಣಗೊಂಡ ಕುರಿತು ಶಾಸನಗಳಿಂದ ತಿಳಿದು ಬಂದಿರುವುದನ್ನು ಅಧ್ಯಯನಕ್ಕೊಳಪಡಿಸಿದ್ದಾರೆ. ಬಸದಿಯ ಮುಂಭಾಗದ ಶಿಲಾಮಯ ಮಂಟಪವು ವಿಜಯನಗರ ಶೈಲಿಯಲ್ಲಿರುವುದನ್ನು ಗುರುತಿಸಿರುವುದು ತುಳುನಾಡುನ ವಾಸ್ತುಶಿಲ್ಪ ಅಧ್ಯಯನಕ್ಕೆ ನೀಡಿದ ಕೊಡುಗೆಯಾಗಿದೆ. ಇಂತಹ ಅಧ್ಯಯನಗಳ ಅಗತ್ಯತೆ ಈ ತುಳುನಾಡಿಗಿದೆ.

ಡಾ. ಹನುಮ ನಾಯಕರವರ "ಮೂಳೂರಿನ ಕಿಳ್ಳ ವಂಶಸ್ಥರು", ಕ್ರಿ.ಶ. ೨೦೦೨ರಲ್ಲಿ ಪ್ರಕಟವಾಗಿರುವ ಲೇಖನವಾಗಿದೆ. ತುಳುನಾಡಿನ ಇತಿಹಾಸದ ಕುರಿತು ಬಂಟ್ವಾಳ ತಾಲೂಕಿನ ಮುಡಿಪು ಬಳಿಯ ಮೂಳೂರು ಗ್ರಾಮದ ಪರಮೇಶ್ವರ ದೇವಸ್ಥಾನದ ಆವರಣದಲ್ಲಿರುವ ಮೂರು ಶಿಲಾ ಶಾಸನದ ಬಗ್ಗೆ ಲೇಖಕರು ಎ.ಆರ್.ಐ. ವರದಿ, ಕ್ಷೇತ್ರ ಪರಿಶೀಲನೆ, ಸ್ಥಳೀಯರಿಂದ ಸಂಗ್ರಹಿಸಿದ ವಿಷಯಗಳನ್ನು ಆಧರಿಸಿ ಈ ಲೇಖನವನ್ನು ಬರೆದಿದ್ದಾರೆ. ಸ್ಥಳ ಪರಿಶೀಲನೆ ಮತ್ತು ಶಾಸನದ ಆಧಾರದಲ್ಲಿ ಕ್ರಿ.ಶ. ೧೧ರಿಂದ ೧೬ ಶತಮಾನದವರೆಗೂ ಮೂಳೂರು ಒಂದು ಆಡಳಿತ ಕೇಂದ್ರವಾಗಿತ್ತೆಂದು ಲೇಖಕರು ಅಭಿಪ್ರಾಯ ಪಟ್ಟಿರುವುದು ಅಗೋಚರವಾಗಿರುವ ಈ ಪ್ರದೇಶದ ಈತಿಹಾಸಿಕತೆಯನ್ನು ಪರಿಚಯಿಸಿದಂತಾಗಿದೆ.

ಡಾ. ಬಿ. ಜಗದೀಶ ಶೆಟ್ಟಿಯವರ "ಮಣಿಪುರ ಶಾಸನ –ಒಂದು ಅಧ್ಯಯನ", ೨೦೦೨ರಲ್ಲಿ ಪ್ರಕಟವಾಗಿರುವ ಈ ಲೇಖನದಲ್ಲಿ ವಿಜಯನಗರ ಆಳ್ವಿಕೆಗೊಳಪಟ್ಟ ತುಳುನಾಡು ಆ ಕಾಲದಲ್ಲಿ ಬಾರಕೂರು ರಾಜ್ಯದಲ್ಲಿ ಮಹಾಪ್ರಧಾನರು ನ್ಯಾಯಾಡಳಿತ ನೀಡಿರುವ ಬಗ್ಗೆ ಮಣಿಪುರ ಶಾಸನವು ನೀಡಿರುವ ಮಾಹಿತಿಯನ್ನು ನೀಡಿದ್ದಾರೆ: ಜನಸಾಮಾನ್ಯರಲ್ಲಿ ಏರ್ಪಟ್ಟ ಕಲಹಕ್ಕೆ ಪರಿಹಾರವಾಗಿ ಅನ್ಯಾಯಕ್ಕೊಳಗಾದವನಿಗೆ ನೀಡಿರುವ ಭೂದಾನ ಪರಿಹಾರ, ಪರಿಹಾರ ನೀಡುವ ಸಂದರ್ಭ ಭಾಗಿಯಾದ ಅಧಿಕಾರಿ, ಹೆಗ್ಗಡೆ ಮೊದಲಾದ ಭೂ ಮಾಲಕ ವರ್ಗಗಳ ಉಲ್ಲೇಖ, ಇವೆಲ್ಲವೂ ಆ ಕಾಲದಲ್ಲಿ ಭೂ ಮಾಲಕರು ಹೆಚ್ಚಿರುವ ಸಂಕೇತ ಎಂದಿದ್ದಾರೆ. ಒಟ್ಟಿನಲ್ಲಿ ಇದು ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ಕುರಿತು ಪರಿಚಯಿಸುವ ಲೇಖನವಾಗಿದೆ.

ಎಸ್.ಡಿ. ಶೆಟ್ಟಿಯವರ "ತುಳುನಾಡಿನ ಜೈನಧರ್ಮ –ಒಂದು ಸಾಂಸ್ಕೃತಿಕ ಅಧ್ಯಯನ", ೨೦೦೨ರಲ್ಲಿ ಪ್ರಕಟಗೊಂಡ ಇವರ ಮಹಾಪ್ರಬಂಧದಲ್ಲಿ ತುಳುನಾಡಿನ ಧಾರ್ಮಿಕ ಪರಂಪರೆಯ ಹಿನ್ನೆಲೆಯಲ್ಲಿ ಜೈನಧರ್ಮದ ಹಿನ್ನೆಲೆ, ಹುಟ್ಟು, ಬೆಳವಣಿಗೆ ಮತ್ತು ನೀಡಿದ ಕೊಡುಗೆಗಳನ್ನು ವಿವರಿಸುವಲ್ಲಿ ವಿಜಯನಗರ ಕಾಲದಲ್ಲಿ ಜೈನಧರ್ಮದ ಉಚ್ಛ್ರಾಯ ಸ್ಥಿತಿಯನ್ನು ಗುರುತಿಸಿದ್ದಾರೆ. ಜೈನಧರ್ಮದ ಸಾಂಸ್ಕೃತಿಕ ಬೆಳವಣಿಗೆಯನ್ನು ಗುರುತಿಸುವಲ್ಲಿ ವಿಜಯನಗರ ಕಾಲದ ಒಂದು ಪ್ರಮುಖ ಸಾಂಸ್ಕೃತಿಕ ಬೆಳವಣಿಗೆಯನ್ನು ಕುರಿತು ಅಧ್ಯಯನ ನಡೆಸಿದ್ದಾರೆ. ಅಲ್ಲದೆ ವಿಜಯನಗರ ಕಾಲದ ಆಡಳಿತ, ತುಂಡರಸರು, ಜೈನಧರ್ಮದ ಬೆಳವಣಿಗೆಯಲ್ಲಿ

ವಿಜಯನಗರದ ಅರಸರ ಕೊಡುಗೆ, ಮಠಗಳ ಸ್ಥಾಪನೆ, ಜೈನ ವ್ಯಾಪಾರ ಕೇಂದ್ರಗಳು, ಜೈನ ಸಮಾಜದ ಒಟ್ಟು ಚಿತ್ರಣವನ್ನು ಕುರಿತು ಈ ಮಹಾಪ್ರಬಂಧದಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ. ತುಳುನಾಡಿನ ಸಾಂಸ್ಕೃತಿಕ ಇತಿಹಾಸಕ್ಕೆ ಈ ಕೃತಿಯು ಮಹತ್ವವಾದ ಕೊಡುಗೆಯನ್ನಿತ್ತಿದೆ ಎಂದರೆ ತಪ್ಪಾಗಲಾರದು.

ಡಾ. ಪಿ.ಎನ್. ನರಸಿಂಹಮೂರ್ತಿಯವರು "ವಿಜಯ ನಗರ ಕಾಲೀನ ಆಡಳಿತದಲ್ಲಿ ನ್ಯೂನತೆ–ಕೋಟೇಶ್ವರ ಶಾಸನದ ಅವಲೋಕನ", ೨೦೦೭ರಲ್ಲಿ ಪ್ರಕಟವಾದ ಈ ಲೇಖನದಲ್ಲಿ ಉಡುಪಿ ತಾಲೂಕಿನ ಕೋಟೇಶ್ವರದ ಕೋಟಿ ಲಿಂಗೇಶ್ವರ ದೇವಾಲಯದಲ್ಲಿ ದೊರೆತ ಕ್ರಿ.ಶ ೧೫೪೬ರ ಶಾಸನವು ಸದಾಶಿವರಾಯನ ಆಳ್ವಿಕೆಯ ಕಾಲದ್ದು ಎಂದಿದ್ದಾರೆ. ಈ ಶಾಸನದ ಉತ್ತರಾರ್ಧದಲ್ಲಿ ವಿವರಿಸಿದ ಅಂಶವೆಂದರೆ ಬ್ರಾಹ್ಮಣರು ಹಾಗೂ ಶೂದ್ರರ ನಡುವೆ ಕಾದಾಟವಾಗಿ ದೇವಾಲಯದ ಒಳಗೂ ಹೆಣಗಳು ಉರುಳಿದವು. ಈ ಘಟನೆಗೆ ಕಾರಣವನ್ನು ಶಾಸನವು ವ್ಯಕ್ತಪಡಿಸಿಲ್ಲವಾದರೂ ಈ ಕುರಿತು ಇದರ ಹಿಂದೆ ರಾಜಕೀಯ ಅಸ್ಥಿರತೆ, ರಾಜಕೀಯ ಪಿತೂರಿ, ಸಂಚು ಮತ್ತು ಗುಂಪೊಂದು ಸಕಲ ಸಿದ್ಧತೆಯಿಂದ ದೇವಾಲಯದ ಒಳಗೆ ಹಾಗೂ ಹೊರಗೆ ಜಮಾಯಿಸಿರ ಬಹುದೆಂದು ನರಸಿಂಹಮೂರ್ತಿಯವರು ಅಭಿಪ್ರಾಯ ಪಟ್ಟಿದ್ದಾರೆ.

ಜಗದೀಶ ಶೆಟ್ಟಿ ಬಿ. ಯವರ "ದಿ ಆಗ್ರೋ ಇಕಾನಮಿಕ್ ರಿಲೇಷನ್ಸ್ ಆಂಡ್ ಸೋಶಿಯಲ್ ಸ್ಟ್ರಕ್ಚರ್ ಇನ್ ದಕ್ಷಿಣ ಕನ್ನಡ (ಕ್ರಿ.ಶ. ೧೦೦೦–೧೬೦೦)" ೧೯೯೨ರಲ್ಲಿ ಪ್ರಕಟವಾದ ಮಹಾಪ್ರಬಂಧದಲ್ಲಿ ವಿಜಯನಗರ ಆಡಳಿತ, ಸ್ಥಳಿಕ ಅರಸುಮನೆತನಗಳ ಬಗ್ಗೆ, ಈ ಕಾಲದ ಆರ್ಥಿಕ ಇತಿಹಾಸ ಕೇಂದ್ರಿತ ಭೂ ಒಡೆತನ, ಭೂ ತೆರಿಗೆ, ತೆರಿಗೆ ವಿಧಗಳು, ವ್ಯಾಪಾರ ವಾಣಿಜ್ಯಕ ಶ್ರೇಣಿಗಳು, ಕುಶಲಕರ್ಮಿ, ತೂಕ, ಅಳತೆ, ಭೂ ಅಳತೆ ಹೀಗೆ ಕೃಷಿಯಾಧಾರಿತ ಅರ್ಥವ್ಯವಸ್ಥೆಯ ವಿಶ್ಲೇಷಣೆಯನ್ನು ಈ ಕೃತಿಯಲ್ಲಿ ಮಾಡ ಲಾಗಿದೆ.

ಡಾ. ಬಿ. ಜಗದೀಶ ಶೆಟ್ಟಿಯವರ "ಬಾರಕೂರು ರಾಜ್ಯ ದಲ್ಲಿ ವಿಜಯನಗರ ಕಾಲದ ನೀರಾವರಿ ವ್ಯವಸ್ಥೆ" ೨೦೦೦ ರಲ್ಲಿ ಪ್ರಕಟವಾದ ಈ ಲೇಖನವು ಶಾಸನವನ್ನಾಧರಿಸಿದ ಲೇಖನ. ತುಳುನಾಡು ರಾಜಕೀಯವಾಗಿ ವಿಜಯನಗರ ಸಾಮ್ರಾಜ್ಯದೊಂದಿಗೆ ವಿಲೀನಗೊಂಡ ಬಳಿಕ ಬಾರಕೂರು ರಾಜ್ಯದ ಕೃಷಿ ಚಟುವಟಿಕೆಗೆ ಮಳೆ ಅಭಾವದ ಸಂದರ್ಭದಲ್ಲಿ ಸರಕಾರ ವಹಿಸಿದ ಪಾತ್ರ ಕುರಿತು ಇಲ್ಲಿ ಹೇಳಲಾಗಿದೆ. ಕೆರೆಯಲ್ಲದೆ ಇತರ ನೀರಿನ ಮೂಲಗಳು, ಕೆರೆ ನಿರ್ಮಾಣದಲ್ಲಿ ಖಾಸಗಿಯವರ ಪಾತ್ರ, ದೇವಸ್ಥಾನದ ಕೆರೆಗಳು, ವ್ಯವಸಾಯಕ್ಕೆ ಮೂಲವಾಗಿ ಪರಿಣಮಿಸಿದ ರೀತಿ, ಹೊಸ ಕೆರೆಗಳ ನಿರ್ಮಾಣದಿಂದ ನೀರಾವರಿ ಸೌಲಭ್ಯದ ವಿಸ್ತರಣೆ, ಕೃತಕವಲ್ಲದ ಇತರೆ ನೀರಾವರಿ ಮೂಲಗಳು, ನೀರಾವರಿ ವ್ಯವಸ್ಥೆಯ ನಿರ್ವಹಣೆ ಮತ್ತು ಸಂಬಂಧಿಸಿದ ನೀತಿ ನಿಯಮಗಳು, ಸರಕಾರ ಮತ್ತು ಖಾಸಗಿ ವ್ಯಕ್ತಿಗಳ ಪಾತ್ರ ಇವೇ ಮೊದಲಾದ ಮಾಹಿತಿಯನ್ನು ಸ್ಪಷ್ಟವಾಗಿ ಕಲೆಹಾಕಿರುತ್ತಾರೆ. ಒಟ್ಟಿನಲ್ಲಿ ವ್ಯವಸಾಯ ಪ್ರಧಾನವಾಗಿದ್ದ ವಿಜಯನಗರ ಆರ್ಥಿಕ ವ್ಯವಸ್ಥೆ ಯಲ್ಲಿ ನೀರಾವರಿ ವ್ಯವಸ್ಥೆಗೆ ನೀಡಿದ ಮಹತ್ವವನ್ನು ಈ ಲೇಖನದಲ್ಲಿ ಹೇಳಲಾಗಿದೆ.

ಡಾ. ಬಿ. ಜಗದೀಶ ಶೆಟ್ಟಿಯವರ "ಬಾರಕೂರು ರಂಗನ ಕೇರಿ ಶಾಸನ" ಒಂದು ಕಿರು ಲೇಖನವಾಗಿದೆ. ವಿಜಯನಗರ ಕಾಲದ ಆಡಳಿತ ಪ್ರಾಂತೀಯ ರಾಜಧಾನಿಯಾಗಿದ್ದ ಬಾರಕೂರು ರಾಜ್ಯದ ರಂಗನಕೇರಿ ಎಂಬಲ್ಲಿ ದೊರೆತ ಶಾಸನವು ಆ ಕಾಲದ ರಾಜಕೀಯ, ಧಾರ್ಮಿಕ, ಆರ್ಥಿಕ ಇತಿಹಾಸವನ್ನು ತಿಳಿಸುತ್ತದೆ. ಕ್ರಿ.ಶ. ೧೫೬೨ರ ಸದಾಶಿವ ರಾಯನ ಈ ಶಾಸನವು ರಾಜನ ನಿರೂಪದಿಂದ ವೆಂಕಟಾದ್ರಿ ರಾಯರು ಕೆಳದಿ ಸದಾಶಿವ ನಾಯಕನಿಗೆ ಬಾರಕೂರು ರಾಜ್ಯ ನೀಡಿದ ಕುರಿತಾಗಿದೆ. ಶಾಸನದಲ್ಲಿ ವ್ಯಕ್ತವಾಗಿರುವ ಇತರೆ ಅಂಶಗಳಾದ ಸ್ಥಳನಾಮಗಳು, ವಿವಿಧ ವರ್ಗದ ಭೂಮಿಯ ವಿವರದೊಂದಿಗೆ ಆರ್ಥಿಕ ಇತಿಹಾಸವನ್ನು ಈ ಕೃತಿಯಲ್ಲಿ ಸಮಗ್ರವಾಗಿ ಬಿಂಬಿಸಿರುತ್ತಾರೆ.

ಉಪಸಂಹಾರ:

ದಕ್ಷಿಣ ಕನ್ನಡ ಜಿಲ್ಲೆಯ ವಿಜಯನಗರ ಕಾಲದ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಇತಿಹಾಸ ಕುರಿತಂತೆ ಅನೇಕ ಇತಿಹಾಸಕಾರರು ತಮ್ಮದೇ ಆದ ರೀತಿ ಯಲ್ಲಿ ವಿಶ್ಲೇಷಿಸಿದ್ದಾರೆ. ಅಲ್ಲದೆ ಇತರೆ ಹೊಸ ಮಾಹಿತಿಗಳನ್ನು ಕಲೆಹಾಕಿ ತಮ್ಮದೇ ದೃಷ್ಟಿಕೋನದಲ್ಲಿ ವ್ಯಾಖ್ಯಾನಿಸಿದ್ದಾರೆ. ಈ ರೀತಿಯಲ್ಲಿ ವಿಜಯನಗರ ಕಾಲದ ಇತಿಹಾಸ ಅಧ್ಯಯನದ ಸಂಕಥನಗಳು ಬೆಳವಣಿಗೆಯನ್ನು ಕಂಡುಬಂದಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸಕ್ಕೆ ನೀಡಿದ ಕೊಡುಗೆಯಾಗಿದೆ.

[ಕೃತಜ್ಞತೆ: ಈ ಪ್ರಬಂಧವನ್ನು ರಚನೆ ಮಾಡುವಲ್ಲಿ ಸಲಹೆ ಮಾರ್ಗದರ್ಶನ ನೀಡಿರುವ ನನ್ನ ಗುರುಗಳು ಹಾಗೂ ಸಂಶೋಧನಾ ಮಾರ್ಗದರ್ಶಕರಾಗಿರುವ ಡಾ.ಹನುಮನಾಯಕರವರಿಗೆ ನಾನು ಅಭಾರಿಯಾಗಿರುತ್ತೇನೆ].

ಆಧಾರಸೂಚಿ

೧. ಸಾಲೆತ್ತೂರು. ಬಿ.ಎ, "ಸೋಶಿಯಲ್ ಆಂಡ್ ಪೊಲಿಟಿಕಲ್ ಲೈಫ್ ಇನ್ ದ ವಿಜಯನಗರ ಎಂಪಾಯರ್" ಮದ್ರಾಸ್, ೧೯೩೪.

೨. ರಮೇಶ್. ಕೆ.ವಿ, "ಎ ಹಿಸ್ಟರಿ ಆಫ್ ಸೌತ್ ಕೆನರಾ", ಧಾರವಾಡ, ೧೯೭೦.

೩. ಗುರುರಾಜ ಭಟ್. ಪಿ, "ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್" ಮಣಿಪಾಲ, ೧೯೭೫.

೪. ಬಾಲಕೃಷ್ಣ ಸಾಮಗ, 'ದಕ್ಷಿಣ ಕನ್ನಡದಲ್ಲಿ ವಿಜಯನಗರ ಕಾಲೀನ ಶಾಸನಗಳು', ಇನ್, ಅಡ್ಯನಡ್ಕ ಕೃಷ್ಣ ಭಟ್ (ಸಂ) "ಸುದರ್ಶನ", ಮುಲ್ಕಿ, ೧೯೭೭.

೫. ರಮೇಶ್. ಕೆ.ವಿ, "ತುಳುನಾಡಿನ ಶಾಸನಗಳು", ೧೯೭೮.

೬ ರಮೇಶ್. ಕೆ.ವಿ, ಮತ್ತು ಶರ್ಮಾ, ಎಂ.ಜೆ. "ತುಳುನಾಡಿನ ಅರಸುಮನೆತನಗಳು ಮತ್ತು ಧರ್ಮ ಸಮನ್ವಯ", ಮಂಗಳೂರು ವಿಶ್ವವಿದ್ಯಾನಲಯ, ೧೯೮೫.

೭. ವಸಂತಶೆಟ್ಟಿ. ಬಿ, "ವಿಜಯನಗರ ಪ್ರಾಂತೀಯ ಧೋರಣೆಗೆ ಸ್ಥಳೀಯ ಪ್ರತಿಕ್ರಿಯೆ", ಎಂ.ಜಿ.ನಾಗರಾಜು, ಪಿ.ವಿ. ಕೃಷ್ಣಮೂರ್ತಿ, ಇತಿಹಾಸ ದರ್ಶನ, ಸಂಪುಟ –೬, ಬೆಂಗಳೂರು, ೧೯೯೧.

೮. ಜಗದೀಶ ಶೆಟ್ಟಿ. ಬಿ, "ವಿಜಯನಗರದಲ್ಲಿ ದಕ್ಷಿಣ ಕನ್ನಡದ ವ್ಯವಸಾಯಿಕ ಪದ್ಧತಿಯಲ್ಲಿ ಅರುವಾರ", ಇತಿಹಾಸ ದರ್ಶನ, ಸಂಪುಟ–೬, ೧೯೯೧.

೯. ವಸಂತಮಾಧವ. ಕೆ.ಜಿ, "ವಿಜಯನಗರ ಅರಸರ ಸಾಗರೋತ್ತರ ವ್ಯಾಪಾರ–ಒಂದು ಅಧ್ಯಯನ", ವಿಜಯನಗರದ ಅಧ್ಯಯನ, ಸಂಪುಟ ೬, ೧೯೯೧.

೧೦. ಶೆಟ್ಟಿ, ಜಗದೀಶ ಬಿ, "ದಿ ಆಗ್ರೋ ಇಕಾನಮಿಕ್ ರಿಲೇಷನ್ಸ್ ಆಂಡ್ ಸೋಶಿಯಲ್ ಸ್ಟ್ರಕ್ಚರ್ ಇನ್ ದಕ್ಷಿಣ ಕನ್ನಡ (ಕ್ರಿ.ಶ. ೧೦೦೦–೧೬೦೦)", ಮಂಗಳೂರು ವಿಶ್ವವಿದ್ಯಾನಿಲಯ, ೧೯೯೨.

೧೧. ವಸಂತ ಮಾಧವ, ಕೆ.ಜಿ, 'ದಕ್ಷಿಣ ಕನ್ನಡ ಜಿಲ್ಲೆಯ ಕಂಗುಮಠ ಐತಿಹಾಸಿಕ ವಿಶ್ಲೇಷಣೆ', "ಇತಿಹಾಸ ದರ್ಶನ", ಸಂಪುಟ ೯, ಬೆಂಗಳೂರು, ೧೯೯೪.

೧೨. ಗೋವಿಂದ ಪೈ, 'ವಿಜಯನಗರದ 'ತುಳುವ' ಅಥವಾ 'ತುಳುವ ವಂಶ', ಹೆರಂಜೆ ಕೃಷ್ಣ ಭಟ್ಟ ಮುರಳೀಧರ ಉಪಾಧ್ಯಾಯ ಹಿರಿಯಡಕ (ಸಂ) "ಗೋವಿಂದ ಪೈ ಸಂಪುಟ", ಉಡುಪಿ, ೧೯೯೫.

೧೩. ವಸಂತ ಶೆಟ್ಟಿ, "ಐತಿಹಾಸಿಕ ಮಹತ್ವದ ಉಡುಪಿ ತಾಲೂಕಿನ ಶಾಸನಗಳು", ೧೯೯೫.

೧೪. ಪುಂಡಿಕ್ಯಾ ಗಣಪಯ್ಯ ಭಟ್, "ಹಿಸ್ಟೋರಿಕಲ್, ಕಲ್ಚರಲ್ ಜಿಯಾಗ್ರಫಿ ಆಂಡ್ ಎತ್ನೋಗ್ರಫಿ ಆಫ್ ತುಳುನಾಡು", ಮೈಸೂರು, ೧೯೯೪.

೧೫. ನೀಲಕಂಠೇಗೌಡ, ಹೊ.ನ, ಎಂ.ಜಿ. ಮಂಜುನಾಥ, 'ಮೂಡಬಿದಿರೆಯ ಎರಡು ಅಪ್ರಕಟಿತ ಶಾಸನಗಳು', ಎಂ.ಜಿ.ನಾಗರಾಜ್, ಪಿ.ವಿ.ಕೃಷ್ಣಮೂರ್ತಿ, "ಇತಿಹಾಸ ದರ್ಶನ", ಸಂಪುಟ–೧೬, ಬೆಂಗಳೂರು, ೨೦೦೧.

೧೬. ನಾರಾಯಣ ನಾಯಕ್, 'ಕೂಳೂರು ಮಾಗಣೆಯ ಇತಿಹಾಸ–ಒಂದು ಅವಲೋಕನ', ಇನ್, ಎಂ.ಜಿ.ನಾಗರಾಜ್ ಮತ್ತು ಪಿ.ವಿ.ಕೃಷ್ಣಮೂರ್ತಿ, "ಇತಿಹಾಸ ದರ್ಶನ", ಸಂಪುಟ–೧೬, ಬೆಂಗಳೂರು, ೨೦೦೧.

೧೭. ಪಾಟೀಲ. ಎಂ.ಬಿ, "ವಿಜಯನಗರ ಕಾಲದ ಸಂತೆಗಳು ಒಂದು ವಾಣಿಜ್ಯಿಕ ಅಧ್ಯಯನ", ಇನ್, ಎಂ. ನಾಗರಾಜ, ಇತಿಹಾಸ ದರ್ಶನ, ಸಂಪುಟ–೧೬, ಬೆಂಗಳೂರು, ೨೦೦೧.

೧೮. ವಸಂತ ಮಾಧವ. ಕೆ.ಜಿ, "ಮಲೆಯಾಳಂ ಸಾಹಿತ್ಯದಲ್ಲಿ ಕರ್ನಾಟಕದ ಕರಾವಳಿ ಮತ್ತು ಮಲೆನಾಡು ಸಂಸ್ಕೃತಿ", ಇತಿಹಾಸದರ್ಶನ ಸಂಪುಟ ೧೬, ೨೦೦೧.

೧೯. ವಸಂತ ಮಾಧವ. ಕೆ.ಜಿ, "ಪಶ್ಚಿಮ ಕರಾವಳಿ ಮಾಲ್ಡೀವ ದ್ವೀಪ: ಕರಾವಳಿ ಕರ್ನಾಟಕದ ಸಂಪರ್ಕ ಒಂದು ವಿಶ್ಲೇಷಣೆ", ಎಂ.ಜಿ. ನಾಗರಾಜ್, ಪಿ.ವಿ. ಕೃಷ್ಣಮೂರ್ತಿ (ಸಂ),ಇತಿಹಾಸ ದರ್ಶನ, ಸಂಪುಟ ೧೭, ೨೦೦೨.

೨೦. ಗಣಪಯ್ಯ ಭಟ್. ಪಿ, "ಮೂಡುಬಿದಿರೆ ಸಾವಿರ ಕಂಬದ ಬಸದಿ ಜೀರ್ಣೋದ್ಧಾರ ವೃತ್ತಾಂತ", ಇನ್, ಎಂ.ಜಿ. ನಾಗರಾಜ್, ಪಿ.ವಿ. ಕೃಷ್ಣಮೂರ್ತಿ (ಸಂ),ಇತಿಹಾಸ ದರ್ಶನ, ಸಂಪುಟ –೧೭, ಬೆಂಗಳೂರು, ೨೦೦೨.

೨೧. ಹನುಮ ನಾಯಕ, 'ಮೂಳೂರಿನ ಕಿಳ್ಳ ವಂಶಸ್ಥರು', ಇನ್, ಎಂ.ಜಿ. ನಾಗರಾಜ್, ಪಿ.ವಿ. ಕೃಷ್ಣಮೂರ್ತಿ (ಸಂ), "ಇತಿಹಾಸ ದರ್ಶನ", ಸಂಪುಟ–೧೭, ಬೆಂಗಳೂರು, ೨೦೦೨.

೨೨. ಶೆಟ್ಟಿ, ಜಗದೀಶ ಬಿ,, 'ಮಣಿಪುರ ಶಾಸನ – ಒಂದು ಅಧ್ಯಯನ', ಎಂ.ಜಿ. ನಾಗರಾಜ್, ಪಿ.ವಿ. ಕೃಷ್ಣಮೂರ್ತಿ (ಸಂ), "ಇತಿಹಾಸ ದರ್ಶನ", ಸಂಪುಟ ೧೭, ೨೦೦೨.

೨೩. ಶೆಟ್ಟಿ, ಎಸ್.ಡಿ, "ತುಳುನಾಡಿನ ಜೈನಧರ್ಮ – ಒಂದು ಸಾಂಸ್ಕೃತಿಕ ಅಧ್ಯಯನ", ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ, ೨೦೦೨.

೨೪. ಶೆಟ್ಟಿ, ಜಗದೀಶ.ಬಿ, "ಬಾರಕೂರು ರಾಜ್ಯದಲ್ಲಿ ವಿಜಯನಗರ ಕಾಲದ ನೀರಾವರಿ ವ್ಯವಸ್ಥೆ" ಆರ್. ಗೋಪಾಲ್, ಬಿ.ಎಂ. ಚಿಕ್ಕಮಾರೇಗೌಡ, ಟಿ.ಎಸ್. ಗಂಗಾಧರ (ಸಂ), ವಿಜಯನಗರ ಅಧ್ಯಯನ ಸಂಪುಟ– ೧೦, ೨೦೦೫.

೨೫. ಶೆಟ್ಟಿ, ಜಗದೀಶ.ಬಿ, 'ಬಾರಕೂರು ರಂಗನಕೇರಿ ಶಾಸನ', ಇನ್ "ವಿಜಯನಗರ ಅಧ್ಯಯನ", ಸಂಪುಟ ೧೨, ೨೦೦೭.

೨೬. ನರಸಿಂಹಮೂತಿ. ಪಿ. ಎನ್, 'ವಿಜಯನಗರ ಕಾಲೀನ ಆಡಳಿತದಲ್ಲಿ ನ್ಯೂನತೆ–ಕೋಟೇಶ್ವರ ಶಾಸನದ ಅವಲೋಕನ', ಆರ್. ಗೋಪಾಲ್, ಬಿ.ಎಂ. ಚಿಕ್ಕಮಾರೇಗೌಡ, ಟಿ.ಎಸ್. ಗಂಗಾಧರ (ಸಂ), "ವಿಜಯನಗರ ಅಧ್ಯಯನ", ಸಂಪುಟ–೧೨, ಮೈಸೂರು, ೨೦೦೭.

೧೨

ನಗರೀಕರಣದ ಪ್ರಕ್ರಿಯೆಯಲ್ಲಿ ಶ್ರೀರಂಗಪಟ್ಟಣ: ಒಂದು ಐತಿಹಾಸಿಕ ವಿಶ್ಲೇಷಣೆ

ಲಿಂಗರಾಜು*

ನಗರಗಳ ಹುಟ್ಟು ಮತ್ತು ಬೆಳವಣಿಗೆಯನ್ನು ಅಧ್ಯಯನ ಮಾಡುವಾಗ ವಿವಿಧ ರೀತಿಯ ನಗರ ಕೇಂದ್ರಗಳನ್ನು ಕಾಣುತ್ತೇವೆ. ನಗರ ಕೇಂದ್ರಗಳಲ್ಲಿ ಕೆಲವು ಆಡಳಿತ ಕೇಂದ್ರಗಳಾಗಿ, ಕೆಲವು ವಾಣಿಜ್ಯ ಕೇಂದ್ರಗಳಾಗಿ, ಕೆಲವು ಶೈಕ್ಷಣಿಕ ಕೇಂದ್ರಗಳಾಗಿ, ಮತ್ತೆ ಕೆಲವು ಪ್ರಾಚೀನವಾದ ಹಾಗೂ ಪವಿತ್ರವಾದ ಧಾರ್ಮಿಕ ಕೇಂದ್ರಗಳಾಗಿ ಹಾಗೂ ಐತಿಹಾಸಿಕ, ಸಾಂಸ್ಕೃತಿಕ ಕೇಂದ್ರಗಳಾಗಿದ್ದವು.[೧]

ವಿಜಯ ಟಾಕೂರ್‌ರವರು ಪ್ರಾಚೀನ ಭಾರತದ ನಗರೀಕರಣವನ್ನು ಎರಡು ಹಂತಗಳಲ್ಲಿ ಗುರುತಿಸಿದ್ದಾರೆ. **ಮೊದಲನೆ ಹಂತದ ನಗರೀಕರಣ** ಕ್ರಿ.ಪೂ. ೨೩೫೦ ರಿಂದ ಕ್ರಿ.ಪೂ. ೧೬೦೦ರ ಅವಧಿಯಲ್ಲಿ (ಕೆಲವು ವಿದ್ವಾಂಸರ ಪ್ರಕಾರ ಕ್ರಿ.ಪೂ. ೩೦೦೦ದಿಂದ ಕ್ರಿ.ಪೂ. ೨೪೦೦) ಇದು ಸಿಂಧೂ ನಾಗರೀಕತೆಯಲ್ಲಿ ಕಾಣಿಸಿಕೊಂಡಿರುವುದು. ೨) ಎರಡನೆ ಹಂತದ ನಗರೀಕರಣ ಕ್ರಿ.ಪೂ. ೬೦೦ ರಿಂದ ಕ್ರಿ.ಶ. ೩೦೦ರ ಅವಧಿಯಲ್ಲಿ. **ಆರ್.ಎಸ್. ಶರ್ಮರವರ 'ಅರ್ಬನ್ ಡಿಕೇ'** ಗ್ರಂಥ (ಡೆಲ್ಲಿ–೧೯೮೭) ನಗರ ಚರಿತ್ರೆಯ ಅಧ್ಯಯನಕ್ಕೆ ಬಹುಮುಖ್ಯ ಕೊಡುಗೆ.[೨]

ಕರ್ನಾಟಕದಲ್ಲಿ ಭಾರತದಲ್ಲಿನ ಎರಡನೇ ಹಂತದ ನಗರೀಕರಣವನ್ನು (ಕ್ರಿ.ಪೂ. ೬೦೦ರಿಂದ ಕ್ರಿ.ಶ. ೩೦೦ರವರೆಗೆ) **ಪ್ರಥಮ ಹಂತದ ನಗರೀಕರಣವೆಂಬುದಾಗಿ** ಕರೆಯಲಾಗಿದೆ. ಕರ್ನಾಟಕದ ಮೊದಲ ಹಂತದ ನಗರೀಕರಣದ ಪ್ರದೇಶಗಳೆಂದರೆ ಬ್ರಹ್ಮಗಿರಿ, ಚಂದ್ರವಳ್ಳಿ, ಸನ್ನತಿ, ಹೆಮ್ಮಿಗೆ, ವಡಗಾಂವ್, ಮಾಧವಪುರ, ಬನವಾಸಿ ಮೊದಲಾದವು. **ಭಾರತದಲ್ಲಿನ ತೃತೀಯ ಹಂತದ** (ಕ್ರಿ.ಶ.೧೧ನೇ ಶತಮಾನ) ನಗರೀಕರಣ[೩] ಕರ್ನಾಟಕದಲ್ಲಿ ದ್ವಿತೀಯ ಹಂತದ ನಗರೀಕರಣವಾಗುತ್ತದೆ.

೧) ನಗರೀಕರಣದ ಪ್ರಕ್ರಿಯೆಯಲ್ಲಿ ಶ್ರೀರಂಗಪಟ್ಟಣದ ಭೌಗೋಳಿಕ ಹಿನ್ನಲೆ ೨) ಐತಿಹಾಸಿಕವಾಗಿ ಶ್ರೀರಂಗಪಟ್ಟಣದ ಬೆಳವಣಿಗೆಯ ಹಿನ್ನಲೆ ೩) ಪ್ರಾರಂಭದ ಮೈಸೂರು ಒಡೆಯರ ಕಾಲದಲ್ಲಿ ಶ್ರೀರಂಗಪಟ್ಟಣದ ನಗರೀಕರಣದ ಪ್ರಕ್ರಿಯೆ ಮತ್ತು ವಿಸ್ತರಣೆಯಾದ ರೀತಿ ೪) ಹೈದರ್ ಮತ್ತು ಟಿಪ್ಪು ಕಾಲದ ಆರ್ಥಿಕ ಅಭಿವೃದ್ಧಿಗಳು ಹೇಗೆ ನಗರೀಕರಣದ ಪ್ರಕ್ರಿಯೆಯಲ್ಲಿ ಶ್ರೀರಂಗಪಟ್ಟಣಕ್ಕೆ ರಾಷ್ಟ್ರೀಯ, ಅಂತರರಾಷ್ಟ್ರೀಯ ಖ್ಯಾತಿಯನ್ನು ತಂದುಕೊಟ್ಟಿತ್ತೆಂಬುದರ ವಿಶ್ಲೇಷಣೆ ಹಾಗೂ ೫) ಪ್ರಸ್ತುತ ಶ್ರೀರಂಗಪಟ್ಟಣವನ್ನು ಪ್ರವಾಸೋದ್ಯಮ ಕೇಂದ್ರವಾಗಿ ಅಭಿವೃದ್ಧಿ ಪಡಿಸುವುದರ ಮೂಲಕ ನಗರೀಕರಣದ ಅಭಿವೃದ್ಧಿಗೆ ವಿಪುಲ ಅವಕಾಶಗಳಿರುವುದರ ಬಗ್ಗೆ ಗಮನಸೆಳೆಯಲು ಪ್ರಯತ್ನಿಸಿದ್ದೇನೆ.

ಶ್ರೀರಂಗಪಟ್ಟಣದ ಭೌಗೋಳಿಕ ಹಿನ್ನೆಲೆ

ಬ್ರಿಟೀಷ್‌ರಿಂದ **'ಸೆರಿಂಗಪಟ್ಟಣಂ' ಎಂದು ಕರೆಸಿಕೊಂಡು ಅಂತರರಾಷ್ಟ್ರೀಯ ಖ್ಯಾತಿಗಳಿಸಿದ್ದ ಮಹಾನಗರ** ಶ್ರೀರಂಗಪಟ್ಟಣ ಇಂದು ಮಂಡ್ಯ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರವಾಗಿದೆ. ಇದು ಸಮುದ್ರ ಮಟ್ಟಕ್ಕಿಂತ ೭೧೧ ಮೀಟರ್ ಎತ್ತರವಾಗಿದೆ. ಭೌಗೋಳಿಕವಾಗಿ ಹಾಗೂ ಸ್ವಾಭಾವಿಕವಾಗಿ ಕಾವೇರಿ ನದಿಯಿಂದ ಸುತ್ತುವರಿಯಲ್ಪಟ್ಟಿರುವ ಒಂದು ಸುಂದರ ದ್ವೀಪಪ್ರದೇಶವಾಗಿ ಕಂಗೊಳಿಸುತ್ತಿದೆ. ಉತ್ತರ–ದಕ್ಷಿಣವಾಗಿ, ಅಗಲವಾಗಿದ್ದು, ಪೂರ್ವ–ಪಶ್ಚಿಮವಾಗಿ ಕಿರಿದಾಗುತ್ತಾ ಹೋಗುವ ಈ ನಗರ ಐದು ಕಿ.ಮೀ.ನಷ್ಟು ವಿಸ್ತೀರ್ಣತೆಯನ್ನು ಹೊಂದಿದೆ. ಇದರ ಜನಸಂಖ್ಯೆ ೧೬೭೩ ರಿಂದ ೧೭೦೪ರ ಅವಧಿಯಲ್ಲಿ ಸುಮಾರು ೧,೫೦,೦೦೦ದಷ್ಟು ಇದ್ದುದು ೧೭೯೯ರಲ್ಲಿ ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧಾನಂತರ ಜನಸಂಖ್ಯೆಯಲ್ಲಿ ಇಳಿಮುಖವಾಗತೊಡಗಿತು. ಇಂದಿನ ಜನಸಂಖ್ಯೆ ಸುಮಾರು ೨೫,೦೦೦ರಷ್ಟಿದೆ.

೨.೨. ಶ್ರೀರಂಗಪಟ್ಟಣದ ಐತಿಹಾಸಿಕ ಹಿನ್ನೆಲೆ

ಶಾಸನಗಳು ಶ್ರೀರಂಗಪಟ್ಟಣವನ್ನು **'ಶ್ರೀರಂಗಪುರ'** (ಎ.ಕ.೦೬, (ಪು.ಮು) ಶ್ರೀ.ಪ. ೦೧), **'ತಿರುವ ರಂಗ ನಾರಾಯಣ ಚತುರ್ವೇದಿ ಮಂಗಲ'** (ಎ.ಕ. ೦೬, (ಪು.ಮು) ಶ್ರೀ.ಪ. ೦೧) **'ಗೌತಮ ಕ್ಷೇತ್ರ' 'ಉಭಯ ಕಾವೇರಿ ಮಧ್ಯವರ್ತಿ'** (ಎ.ಕ.೦೬. ಕೃ.ಪೇ. ೬೫) ಎಂದು ಉಲ್ಲೇಖಿಸಿವೆ.

* ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಮಹಾವಿದ್ಯಾಲಯ, ಮಂಡ್ಯ.

ಮೂರು ರಂಗನಾಥ ಕ್ಷೇತ್ರಗಳಲ್ಲಿ ಮೊದಲನೆಯದಾಗಿರುವುದರಿಂದ **ಪುರಾಣಗಳಲ್ಲಿ 'ಆದಿರಂಗ ಕ್ಷೇತ್ರ'ವೆಂದು** ಕರೆಯಲ್ಪಟ್ಟಿರುವ ಶ್ರೀರಂಗಪಟ್ಟಣ ತನ್ನದೇ ಆದ ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿದೆ. ಐತಿಹಾಸಿಕವಾಗಿ **ಕ್ರಿ.ಶ.೮೯೪ರಲ್ಲಿ ಗಂಗರ** ದಂಡನಾಯಕ ತಿರುಮಲಯ್ಯನು ಮೊದಲಿಗೆ ಶ್ರೀರಂಗಪಟ್ಟಣವನ್ನು ಒಂದು ಪ್ರಾಂತ್ಯವನ್ನಾಗಿ ಮಾಡಿಕೊಂಡು, ಶ್ರೀರಂಗನಾಥ ದೇವಾಲಯದ ನವರಂಗ ಮಂಟಪ ಮತ್ತು ತಿರುಮಲದೇವನ ದೇವಸ್ಥಾನಗಳನ್ನು ನಿರ್ಮಿಸಿ **'ಶ್ರೀರಂಗಪುರ'** ಎಂದು ನಾಮಕರಣ ಮಾಡಿ ಆಳ್ವಿಕೆ ನಡೆಸಿದನು.[೪] ಅಂದಿನಿಂದ ಶ್ರೀರಂಗಪಟ್ಟಣ ಒಂದು ಆಡಳಿತ ಕೇಂದ್ರವಾಗಿ ಪ್ರವರ್ಧಮಾನಕ್ಕೆ ಬಂದಿತು.

ಚೋಳ ರಾಜನ ಕಿರುಕುಳವನ್ನು ಸಹಿಸದ ಶ್ರೀರಾಮಾನುಜಾಚಾರ್ಯರು ಶ್ರೀರಂಗಪಟ್ಟಣ ಪ್ರದೇಶದಲ್ಲಿ ಬಂದು ನೆಲೆಸಿದ್ದರಿಂದ ಹೊಯ್ಸಳ ದೊರೆ ಬಿಟ್ಟಿದೇವ **ಕ್ರಿ.ಶ. ೧೧೧೭ರಲ್ಲಿ** ಕಾವೇರಿ ತೀರದ ಅಷ್ಟಗ್ರಾಮಗಳನ್ನು ಬಿಟ್ಟುಕೊಟ್ಟು, ಈ ಗ್ರಾಮಗಳ ಮೇಲ್ವಿಚಾರಣೆಗೆ **'ಹೆಬ್ಬಾರರು'** ಅಥವಾ **'ಪ್ರಭು'**ಗಳೆಂಬ ಅಧಿಕಾರಿಗಳನ್ನು ನೇಮಿಸಿದನು.[೫]

ಕ್ರಿ.ಶ. ೧೧೨೦ರಲ್ಲಿ ವಿಷ್ಣುವರ್ಧನನ ಸಹೋದರ ವಿನಯಾದಿತ್ಯ ಶ್ರೀರಂಗಪಟ್ಟಣದಲ್ಲಿ ಅಧಿಕಾರಿಯಾಗಿದ್ದಾಗ ಬಲವಾದ ಕೋಟೆಯೊಂದನ್ನು ನಿರ್ಮಿಸಿದನೆಂದು ಶಾಸನಾಧಾರಗಳಿಂದ ತಿಳಿದುಬರುತ್ತದೆ. ಅರಿಕುಟಾರಗ್ರಾಮ ರಾಜರ ಕೈಫಿಯತ್ತು, ಸೋಗಾನಿ ಅಗ್ರಹಾರದ ಕೈಫಿಯತ್ತುಗಳಲ್ಲಿ ವಿಷ್ಣುವರ್ಧನ ಮತ್ತು ಶ್ರೀರಂಗಪಟ್ಟಣ ಸೀಮೆಯ ಬಗ್ಗೆ ಮಾಹಿತಿಗಳಿವೆ. ಹೀಗೆ ಹೊಯ್ಸಳರು ತಮ್ಮ ಅಧೀನಕ್ಕೆ ತೆಗೆದುಕೊಂಡು ಅದನ್ನು ಒಂದು ಅಷ್ಟಗ್ರಾಮವನ್ನಾಗಿ ಪರಿವರ್ತಿಸಿದರು.

ಕ್ರಿ.ಶ. ೧೧೨೦ರ ಶಾಸನದ ಪ್ರಕಾರ ಶ್ರೀರಂಗಪಟ್ಟಣವು ೧೨ನೇ ಶತಮಾನದ ವೇಳೆಗೆ ಶ್ರೀ ವೈಷ್ಣವರ ನೆಲೆಯಾಗಿತ್ತೆಂದು ಹೇಳಬಹುದು. ಈ ಶಾಸನವು **'ಬ್ರಹ್ಮಪುರಂ'** ಅಥವಾ **'ಚತುರ್ಮುಖ ನಾರಾಯಣ ಚತುರ್ವೇದಿ ಮಂಗಳಂ'** ಎಂಬ ಹೆಸರಿನ ಗ್ರಾಮವನ್ನು ಶ್ರೀರಂಗಪಟ್ಟಣದ ಭಟ್ಟರಿಂದ ಕ್ರಯಕ್ಕೆ ಕೊಂಡುಕೊಂಡು ಸ್ಥಳ ಪ್ರಭುವಾಗಿದ್ದ **'ವರಂತರು ಪೆರುಮಾನ್'** ಎಂಬವವನು ದಾನ ಕೊಟ್ಟನೆಂದು ಶಾಸನವೊಂದು ದಾಖಲಿಸುತ್ತದೆ.[೬] ಹೊಯ್ಸಳರ ಕಾಲದಲ್ಲಿ ಶ್ರೀರಂಗಪಟ್ಟಣ ಒಂದು ಅಷ್ಟಗ್ರಾಮವಾಗಿ ಪರಿವರ್ತನೆಗೊಂಡಿತು.

ಕ್ರಿ.ಶ. ೧೪೫೪ರಲ್ಲಿ ಶ್ರೀರಂಗಪಟ್ಟಣ ಪ್ರಾಂತ್ಯ ನಾಗಮಂಗಲದ ಪ್ರಭು ತಿಮ್ಮಣ್ಣನಿಗೆ ವರ್ಗವಾಗಿ ವಿಜಯನಗರದ ಅರಸರಿಂದ **'ಡಣ್ಣಾಯಕ'** ಎಂಬ ಗೌರವವನ್ನು ಸಂಪಾದಿಸಿ, ತನಗೆ ಸಿಕ್ಕಿದ ದ್ರವ್ಯದಿಂದ ಶ್ರೀರಂಗಪಟ್ಟಣದ ಸುತ್ತ ಕೋಟೆಯನ್ನು ಬಲಪಡಿಸಿದನು. ಶ್ರೀರಂಗನಾಥ ದೇವಾಲಯದ ಹೊರ ಪ್ರಕಾರದ ಗೋಡೆ, ದೊಡ್ಡ ಗೋಪುರ ಮತ್ತು ಮಹಾದ್ವಾರಗಳನ್ನು ಕಟ್ಟಿಸಿದನು. ತಿಮ್ಮಣ್ಣನ ವಂಶಸ್ಥರು ೧೪೯೫ರವರೆಗೆ ಆಳಿದರು. ಅನಂತರ ವಿಜಯನಗರದ ಅರಸರ ನೇರ ಆಳ್ವಿಕೆಗೆ ಶ್ರೀರಂಗಪಟ್ಟಣ ಒಳಪಟ್ಟಿತು.[೭]

ವಿಜಯನಗರ ಕಾಲದಲ್ಲಿ ಶ್ರೀರಂಗಪಟ್ಟಣವು ಒಂದು ಪ್ರಮುಖ ರಾಜಕೀಯ ಹಾಗೂ ಆಡಳಿತ ಕೇಂದ್ರವಾಗಿ ಪ್ರಸಿದ್ಧಿಯನ್ನು ಪಡೆಯಿತು. ನೀರಿನ ಸೌಕರ್ಯ ಹಾಗೂ ರಕ್ಷಣೆಯ ದೃಷ್ಟಿಯಿಂದ ಶ್ರೀರಂಗಪಟ್ಟಣ ಆಯಕಟ್ಟಿನ ಸ್ಥಾನದಲ್ಲಿದ್ದಿತು. **ಎಂ.ಎಚ್. ಕೃಷ್ಣರವರ ಪ್ರಕಾರ** ಕ್ರಿ.ಶ. ೧೫ನೇ ಶತಮಾನದ ಆರಂಭದಲ್ಲಿ ತಿರುಮಲದೇವನೆಂಬ ಪಾಳೆಯಗಾರ ವಿಜಯನಗರದ ದೇವರಾಯನ ಅನುಮತಿ ಪಡೆದು ಶ್ರೀರಂಗಪಟ್ಟಣದಲ್ಲಿ ಒಂದು ಕೋಟೆಯನ್ನು ನಿರ್ಮಿಸಿದನು. ಸಾಳ್ವ ನರಸಿಂಹನು (೧೪೮೫–೧೫೦೬) ಉಮ್ಮತ್ತೂರು ದೊರೆಗಳನ್ನು ಸೋಲಿಸಿ ಶ್ರೀರಂಗಪಟ್ಟಣದ ಕೋಟೆಯನ್ನು ವಶಪಡಿಸಿಕೊಂಡು ಬಲಿಷ್ಟ ಕೇಂದ್ರವನ್ನಾಗಿ ಮಾಡಿಕೊಂಡಿದ್ದನು. ಕ್ರಿ.ಶ. **೧೫೦೦ರ ಮಳವಳ್ಳಿ ತಾಲ್ಲೂಕಿನ ವಡಗಲಪುರದ ಶಾಸನವು ಸ್ವಾಳ್ವ ನರಸಿಂಹನನ್ನು 'ಶ್ರೀರಂಗಪಟ್ಟಣದ ರಾಜ್ಯಾಧಿಪತಿ'** ಎಂದು ಉಲ್ಲೇಖಿಸಿದೆ. ಕೃಷ್ಣದೇವರಾಯನು ಕ್ರಿ.ಶ. ೧೫೧೧ರಲ್ಲಿ ಉಮ್ಮತ್ತೂರಿನ ಪಾಳೆಯಗಾರ ಗಂಗರ್‍ಾಜನನ್ನು ಸೋಲಿಸಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡು ಶ್ರೀರಂಗಪಟ್ಟಣದಲ್ಲಿ ಆಳುತ್ತಿದ್ದ ಸಾಮಂತ **ಕುಮಾರ ವೀರಯ್ಯನ** ಪುತ್ರಿಯನ್ನು ವಿವಾಹವಾದನೆಂದೂ, ಈಕೆಯೇ ಕೃಷ್ಣದೇವರಾಯನ ಮೂವರು ರಾಣಿಯರಲ್ಲಿ ಒಬ್ಬಳಾಗಿದ್ದಳೆಂದು ತಿಳಿದುಬರುತ್ತದೆ.[೮] **ಕ್ರಿ.ಶ. ೧೫೨೮ರ ವೇಳೆಗೆ 'ಶ್ರೀರಂಗಪಟ್ಟಣ ಸೀಮೆ'** ಒಂದು ಆಡಳಿತ ಕೇಂದ್ರವಾಗಿ ಪ್ರವರ್ಧಮಾನಕ್ಕೆ ಬಂದಿತು. ಶ್ರೀರಂಗಪಟ್ಟಣ ಸೀಮೆಯೊಳಗೆ ಅನೇಕ ಸ್ಥಳಗಳೆಂಬ ಆಡಳಿತ ವಿಭಾಗಗಳಿದ್ದವು ಎಂಬುದಾಗಿ ಶ್ರೀರಂಗಪಟ್ಟಣದ ಶಾಸನದಿಂದ ತಿಳಿದುಬರುತ್ತದೆ. **(ಎ.ಕ. ಸಂ.೦೬, ಶ್ರೀ.ಪ.೮) ಕ್ರಿ.ಶ. ೧೫೨೮ರಲ್ಲಿ** ಮಹಾಮಂಡಲೇಶ್ವರ ಚಮ್ಮಟ ಬೋಗಯ್ಯ ದೇವ ಮಹಾರಾಜ ಎಂಬುವವನು ಶ್ರೀರಂಗಪಟ್ಟಣ ಸೀಮೆಯ ಅಮರ ನಾಯಕನಾಗಿದ್ದನು. ಅರವೀಡು ವಂಶದ ಕಾಲದಲ್ಲಿ ಶ್ರೀರಂಗಪಟ್ಟಣ ವಿಜಯನಗರ ಅರಸರ ಪ್ರತಿನಿಧಿಯ ಆಡಳಿತ ಕೇಂದ್ರವಾಯಿತು.[೯]

ವಿಜಯನಗರದರಸರ ಪ್ರತಿನಿಧಿಯಾಗಿ ಆಳ್ವಿಕೆ ನಡೆಸಿದ **'ಶ್ರೀರಂಗರಾಯನು'** ಶ್ರೀರಂಗಪಟ್ಟಣವನ್ನು ಮತ್ತಷ್ಟು ವಿಸ್ತರಿಸಿದನು. ಅಲ್ಲದೆ ಶ್ರೀರಂಗನಾಥ ದೇವಾಲಯದ ವಿವಿಧ ಪ್ರಕಾರಗಳನ್ನು ನಿರ್ಮಿಸಿದನು. ಸು. ಒಂದು ಶತಮಾನದ

ಕಾಲ ವಿಜಯನಗರದರಸರ ಪ್ರತಿನಿಧಿಗಳ ಆಳ್ವಿಕೆಗೊಳ ಪಟ್ಟಿತ್ತು.[೧೦] ವಿಜಯನಗರದರಸರ ಕಾಲದಲ್ಲಿ ಉತ್ತರ ಭಾಗದ ಪಾಳೆಯಪಟ್ಟುಗಳು ರಾಜನ ನೇರ ಹತೋಟಿಗೊಳಪಟ್ಟಿದ್ದರೆ ದಕ್ಷಿಣ ಭಾಗದ ಪಾಳೆಯಪಟ್ಟುಗಳು ಮಹಾಮಂಡಲೇಶ್ವರನ ಅಧೀನಕ್ಕೊಳಪಟ್ಟಿದ್ದವು. ದಕ್ಷಿಣದಲ್ಲಿ ಶ್ರೀರಂಗಪಟ್ಟಣ ಇಂತಹ ಮಹಾಮಂಡಲೇಶ್ವರನ ರಾಜಧಾನಿಯಾಗಿ[೧೧] ಪ್ರವರ್ಧಮಾನಕ್ಕೆ ಬಂದಿತು.

೨.೩. ಪ್ರಾರಂಭದ ಮೈಸೂರಿನ ಒಡೆಯರ ಕಾಲದಲ್ಲಿ ಶ್ರೀರಂಗಪಟ್ಟಣದ ನಗರೀಕರಣ ಪ್ರಕ್ರಿಯೆ

ಕ್ರಿ.ಶ. ೧೬೧೦ರಲ್ಲಿ ರಾಜ ಒಡೆಯರು(೧೫೭೮–೧೬೧೭) ವಿಜಯನಗರದ ದುರ್ಬಲ ರಾಜಪ್ರತಿನಿಧಿ ತಿರುಮಲನನ್ನು ಹೊರಹಾಕಿ ಶ್ರೀರಂಗಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದು, ರಾಜಕೀಯ ಕ್ಷೇತ್ರದಲ್ಲಿ ಹೊಸ ತಿರುವನ್ನು ಪಡೆದುಕೊಂಡಿತು. ಅಂದಿನಂದ ಶ್ರೀರಂಗಪಟ್ಟಣ ಮೈಸೂರಿನ ಒಡೆಯರ ರಾಜಧಾನಿಯಾಗಿ ಪ್ರವರ್ಧಮಾನಕ್ಕೆ ಬರುವುದರ ಮೂಲಕ ರಾಜಕೀಯ ಕೇಂದ್ರವಾಗಿ ಆಡಳಿತ ಪ್ರಕ್ರಿಯೆಯಲ್ಲಿ ಮತ್ತಷ್ಟು ಪ್ರಗತಿಯನ್ನು ಕಂಡಿತು.[೧೨] ರಾಜ ಒಡೆಯರು ಅಧಿಕಾರ ವಹಿಸಿಕೊಂಡ ನಂತರ ಶ್ರೀರಂಗಪಟ್ಟಣವನ್ನು ನಗರೀಕರಣದ ಪ್ರಕ್ರಿಯೆಗೆ ಒಳಪಡಿಸುವಲ್ಲಿ ಶ್ರಮಿಸಿದರು.

ಕಂಠೀರವ ನರಸರಾಜ ಒಡೆಯರ ಕಾಲದಲ್ಲಿದ್ದ ಪ್ರಮುಖ ವಿದ್ವಾಂಸರಾದ (೧೬೩೮–೧೬೫೯) ಗೋವಿಂದ ವೈದ್ಯರು ತಮ್ಮ 'ಕಂಠೀರವ ನರಸರಾಜ ವಿಜಯ' ಕೃತಿಯಲ್ಲಿ ಶ್ರೀರಂಗ ಪಟ್ಟಣವನ್ನು ಹೀಗೆ ಬಣ್ಣಿಸಲಾಗಿದೆ. "ಶ್ರೀರಂಗಪಟ್ಟಣವು ವಿಶಾಲ ವಾದ ಸುಂದರ ನಗರ. ಅದರ ಕೋಟೆಗಳೂ, ಕಂದಕಗಳೂ ಆಳ್ವೇರಿಗಳೂ ಶಾಲಿವಾಹನಗಳೂ ಧ್ವಜ ಸ್ತಂಭವೂ ವೀಕ್ಷಕರ ಕಣ್ಣಿಗೆ ಹಬ್ಬವಾಗಿದೆ. ದುರ್ಗದ ಗೋಡೆಗಳಲ್ಲಿ **'ಹುಲಿಮೊಗ'**ದ ಚಿತ್ರಗಳಿವೆ. ಕೋಟೆ ಕೊತ್ತಲಗಳಲ್ಲಿ ನಗರ ರಕ್ಷಣೆಗೆಂದು ಶಥಘ್ನಿಗಳು ಸ್ಥಾಪಿತವಾಗಿವೆ. ಕಾವಲುಗಾರರು ಆಯುಧ ಸಜ್ಜಿತರಾಗಿ ಸದಾ ಕೋಟೆಯನ್ನು ರಕ್ಷಿಸುತ್ತಿರುವರು. ನಗರಕ್ಕೆ ಮೂರು ಹೆಬ್ಬಾಗಿಲುಗಳಿವೆ. (ಪೂರ್ವದ ಬಾಗಿಲು, ಮೈಸೂರು ಬಾಗಿಲು, ಬಿಜಾಪುರ ಬಾಗಿಲುಗಳೆಂದು ಅವುಗಳ ಹೆಸರುಗಳು.) ಕೇಂದ್ರ ವೀಧಿಯಲ್ಲಿ ಹಾಗೂ ಪೂರ್ವದ ಬಾಗಿಲಿನಲ್ಲಿ ಅಶ್ವಾಲಯ, ಗಜಾಲಯಗಳಿವೆ. ರಾಜಧಾನಿಯಲ್ಲಿ 'ರವಿಬೀದಿ' 'ಶಶಿಬೀದಿ' 'ಮೌಕ್ತಿಕ ಬೀದಿ', 'ನೀಲಬೀದಿ', 'ಹವಳಬೀದಿ' ಎಂಬ ಹೆಸರಿನ ವಿಶಾಲವಾದ ಬೀದಿಗಳಿವೆ. ಬೀದಿಗಳ ಇಕ್ಕೆಲಗಳಲ್ಲಿ ಭವ್ಯ ಭವನಗಳಿವೆ.[೧೩] **'ಕಂಠೀರವ ನರಸರಾಜ ವಿಜಯ'**ದಲ್ಲಿ ಶ್ರೀರಂಗಪಟ್ಟಣದ ಅಂಗಡಿ ಬೀದಿಗಳು ಹೃದಯಂಗಮವಾಗಿ ವರ್ಣಿತವಾಗಿವೆ. ಬೀದಿಯ ಇಕ್ಕೆಡೆಗಳಲ್ಲಿ ಅಂಗಡಿಗಳು ಅಮೂಲ್ಯವಾದ ಪಣ್ಯ ವಸ್ತುಗಳಿಂದ ಕಿಕ್ಕಿರಿದು ತುಂಬಿವೆ. ಹರಸಖನು (ಕುಬೇರನು) **'ನವನಿಧಿ'**ಗಳನ್ನು ಈ ಪುರದೊಳಗೆ ಇರಿಸಿದನೆಂಬುದರಲ್ಲಿ ಪಿರಿದೆನಸುವ ಹೊನ್ನರಾಶಿಗಳಲ್ಲಿ ಚಿನ್ನವಾರದರು ಪರಿಶೋಭಿಸುತ್ತಿರುವರು.' ಈ ಬೀದಿಗಳಲ್ಲದೆ ಬೇರೆ ಬೇರೆ ಜಾತಿಯವರಿಗೆ ಮೀಸಲಾದ ಕೇರಿಗಳಿದ್ದವು. ಬ್ರಾಹ್ಮಣ ಬೀದಿಯಲ್ಲಿ ವೇದಾಂತ ಪಾರಂಗತರಾದ ವಿದ್ವಾಂಸರು, ಜ್ಯೋತಿಷಿಗಳು ವಾಸವಾಗಿದ್ದರು. ಮಂತ್ರಿಗಳ ಮನೆಗಳು ಅಲ್ಲಿಯೇ ಇದ್ದವು. ನಗರದ ಇನ್ನೊಂದೆಡೆಯಲ್ಲಿ ಹರದರ ಮನೆಗಳಿದ್ದವು. 'ಒಕ್ಕಲಗರ ಕೇರಿ' 'ಶಿವಭಕ್ತನ ಕೇರಿ' ಹೀಗೆ ಗಂದಿಗರು, ಬೋಗರು, ತಿಲಗಾತಕ(ಗಾಣಿಗ)ರು, ತಾಮ್ರವರ್ಧಕರು, ಮಲ್ಲರು, ಜಾಲಗಾರರು, ಮೊದಲಾದ ಜಾತಿಯವರ ಬೇರೆ ಬೇರೆ ಕೇರಿಗಳಿದ್ದವು.[೧೪] ಅದರಂತೆ ತಾಳಧಾರಿಗಳು, ಮದಳಿಗರು, ನಾಗಸರ, ಮೌರಿಯ, ಆಳಾಪಿಗಳು, ನಡುವಿಗರು, ಜೋಗಿಗರು, ಮುಚ್ಚಿಗರು ಮೊದಲಾದವರ ನಿವಾಸಿಗಳ ಪ್ರತ್ಯೇಕ ಕೇರಿಗಳಲ್ಲಿದ್ದವು. ಅರಮನೆಯ ಪರಿಚಾರಕ ವರ್ಗಕ್ಕೆ ಸೇರಿದ 'ದೀವಟಿಗರು, ಕಟ್ಟೆಗೆಯವರು, ರಾವುತರು, ಮಾವುತರು,' ಮೊದಲಾದವರಿಗೂ ಬೇರೆ ಬೇರೆ ಕಡೆ ಮನೆಗಳಿದ್ದವು. ಹೀಗೆ ಧೀರ ನಾಯಕರೂ, ಶೂರರೂ, ನೀತಿ ವಿಹಾರರೂ, ಸದ್ಗುಣ ಗಣಸಾರರೂ, ಸಕಲ ಕಲಾವಿದರೂ ಸರ್ವಜ್ಞರೂ ಶ್ರೀರಂಗಪಟ್ಟಣದ ಎಲ್ಲೆಡೆ ಗಳಲ್ಲೂ ತುಂಬಿದ್ದರು. ಶ್ರೀರಂಗನಾಥ ದೇವಾಲಯ, ಲಕ್ಷ್ಮೀ ನರಸಿಂಹ ದೇವಾಲಯ, ತಿರುವೆಂಕಟೇಶ್ವರ ದೇವಾಲಯ, ತಿರುಮಲೇಶ್ವರ ದೇವಾಲಯ, ಗಂಗಾಧರ ದೇವಾಲಯ, ವೀರೇಶ ಗುಡಿ, ಬಾಗಿಲ ವೆಂಕಟೇಶನ ಗುಡಿ, ಮೊದಲಾದ ದೇವಾಲಯಗಳಿಂದ ಶ್ರೀರಂಗಪಟ್ಟಣವು ಶೋಭಿಸುತ್ತಿದ್ದಿತು. ಕಂಠೀರವ ವಿಜಯದಲ್ಲಿ ಜಯಂತನೆಂಬ ರಾಜಧಾನಿಯ ನಿವಾಸಿ (ಪಟ್ಟಣಿಗನು) ವರ್ಣಿತನಾಗಿದ್ದಾನೆ. ನಾಗರೀಕನ ವೇಷ ಭೂಷಣಗಳು ಆಡಂಬರ ಪೂರ್ಣವಾಗಿವೆ.[೧೫] 'ಕಂಠೀರವ ನರಸರಾಜ ವಿಜಯ'ದಲ್ಲಿರುವ ನಗರ ವಿವರಣೆಯನ್ನು **೧೬೫೧**ರಲ್ಲಿ ರಾಜಧಾನಿಗೆ ಬಂದಿದ್ದ **ಫಾದರ್ ಸಿನ್ನಾಮಿಯ** ಬರವಣಿಗೆಯೂ ಪುಷ್ಟೀಕರಿಸುತ್ತದೆ. ಹೀಗೆ ಶ್ರೀರಂಗಪಟ್ಟಣ ನಗರೀಕರಣದ ವಿಕಾಸದ ಬಗ್ಗೆ ತಿಳಿದು ಕೊಳ್ಳಬಹುದು.

ಚಿಕ್ಕದೇವರಾಜ ಒಡೆಯರ ಕಾಲದಲ್ಲಿ (೧೬೭೩ರಿಂದ ೧೭೦೪) ಶ್ರೀರಂಗಪಟ್ಟಣ ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಬಲ ರಾಜಕೀಯ ಶಕ್ತಿಯಾಗಿ ರೂಪುಗೊಂಡಿತು. ರಾಜಧಾನಿ ಶ್ರೀರಂಗಪಟ್ಟಣದಲ್ಲಿ **'ಅಠಾರ ಕಛೇರಿ'ಯನ್ನು (ಹದಿನೆಂಟು ಇಲಾಖೆ)** ಸ್ಥಾಪಿಸಿ ಫಿರಂಗಿ ಮತ್ತು ಮದ್ದು

ಗುಂಡುಗಳ ಯುದ್ಧೋಪಕರಣಗಳನ್ನು ತಯಾರಿಸುವ ಕೇಂದ್ರವನ್ನು ವಿಸ್ತರಿಸಿದರು.[೧೬] ಇವರ ಕಾಲದಲ್ಲಿ ಶ್ರೀರಂಗ ಪಟ್ಟಣಕ್ಕೆ ರಾಜಕೀಯ ದೃಷ್ಟಿಯಿಂದ ಅದುವರೆಗೂ ಬನವಾಸಿ, ದ್ವಾರ ಸಮುದ್ರ, ಅರಗ, ಮೊದಲಾದ ನಗರಗಳಿಗಿದ್ದ ಪ್ರಾಮುಖ್ಯತೆ ಪ್ರಾಪ್ತವಾಯಿತು. ಸಾಂಸ್ಕೃತಿಕ ಕೇಂದ್ರವಾಗಿ ಪ್ರವರ್ಧಮಾನಕ್ಕೆ ಬಂದಿತು. ಭಾರತದಲ್ಲಿ ಅಂದು ಮಹತ್ವ ಕಾಂಕ್ಷಿಗಳಾಗಿದ್ದ ಸಕಲ ರಾಜ್ಯಗಳ ಗಮನವೂ ಶ್ರೀರಂಗ ಪಟ್ಟಣದತ್ತ ಆಕರ್ಷಿತವಾಗಿದ್ದಿತು.[೧೭]

ಚಿಕ್ಕದೇವರಾಜ ಒಡೆಯರ ಕಾಲದ ಕ್ರಿ.ಶ. ೧೬೮೫ರ ಶಾಸನ 'ಶ್ರೀರಂಗಪಟ್ಟಣ ಜಗತ್ತಿನ ಬಹು ಶ್ರೇಷ್ಠ ನಗರಗಳಲ್ಲೊಂದಾಗಿ, ಸಾಹಿತ್ಯದ ಸಕಲ ಕಲೆಗಳ ಆಗರವಾಗಿ ಸಕಲ ಸಂಪತ್ತುಗಳ ತವನಿಧಿಯಾಗಿ ಅತ್ಯಂತ ವೈಭವದಿಂದ ಮೆರೆದ ನಗರವಾಗಿತ್ತೆಂದೂ, 'ಭೂ ವನಿತೆಗೆ ಭೂಷಣ ಪ್ರಾಯ' ವೆಂದು ವರ್ಣಿಸಲ್ಪಟ್ಟಿದೆ. "ಕಾವೇರಿಯಿಂದ ಮಾಲಾಕಾರವಾಗಿ ಸುತ್ತುವರಿಯಲ್ಪಟ್ಟು, ಕವಿಗಳು, ಜ್ಞಾನಿಗಳು, ಶ್ರುತಿ, ಸ್ಮೃತಿ-ಧರ್ಮಗಳನ್ನರಿತ ಶಾಸ್ತ್ರಜ್ಞರು, ಗಗನಚುಂಬಿಗಲಾದ ತೆಂಗು, ಹಲಸು, ಮಾವು, ದ್ರಾಕ್ಷಿ, ಲಿಂಬೆ, ಕಿತ್ತಳೆ, ಅಂಜೂರ, ಮೊದಲಾದ ಫಲ-ವೃಕ್ಷಗಳು, ಬೆಟ್ಟದಂತಹ ಎತ್ತರವಾದ ಸೌಧಗಳು ಸೊಗಸಾದ ಕೊಸವಾಲು ಕರೆವ ಕೆಚ್ಚಲಿನ ಹಸುಗಳು, ವೇದಾಂತ ಪಾರಂಗತರಾದ ವಿದ್ವಾಂಸರು ದೇವಾಲಯಗಳ ಗೋಪುರಗಳು, ಮರ ಗಿಡಗಳು, ಐರಾವತ ದಂತಹ ಆನೆಗಳು, ಮೇಘ ಘರ್ಜನೆಯಂತೆ ಕೆನೆಯುವ ಅಶ್ವಗಳು ಸೊಗಸಾದ ನಗರ ದ್ವಾರಗಳು, ಪುಷ್ಪೋದ್ಯಾನಗಳು, ಕಾರಂಜಿಗಳಿಂದ ರಂಜಿಸುವ ಭೂದೇವಿಯ ಆಭರಣದಂತಹ ಸುಂದರ ನಗರ"ವೆಂಬ ವರ್ಣನೆಯಿದೆ.[೧೮]

'ದಳವಾಯಿಗಳ ಆಧಿಪತ್ಯದ ಕಾಲ'ದಲ್ಲಿ (ಕ್ರಿ.ಶ. ೧೭೦೪ರಿಂದ ೧೭೬೧ರವರೆಗೆ) **ಪೇಶ್ವೆ ಬಾಜೀರಾಯನು** ೧೭೨೫ರಲ್ಲಿ ಶ್ರೀರಂಗಪಟ್ಟಣದ ಮೇಲೆ ಧಾಳಿ ನಡೆಸಿದಾಗ ದೇವರಾಜಯ್ಯನು ಪಿರಂಗಿಗಳ ಪರಿಣಾಮಕಾರಿ ಬಳಕೆಯಿಂದ ಶತ್ರು ಸೈನ್ಯವನ್ನು ಹಿಮ್ಮೆಟ್ಟಿಸಿದನು. ಮರಾಠ ಸೈನ್ಯ ಮೈಸೂರು ಸೈನ್ಯದ ಶೌರ್ಯವನ್ನು ಅವರ ಶಸ್ತ್ರಾಸ್ತ್ರಗಳ ದಕ್ಷತೆಯನ್ನು ಮೆಚ್ಚಿಕೊಂಡು ಇದು ಶ್ರೀರಂಗಪಟ್ಟಣವಲ್ಲ 'ಪಿರಂಗಿಪಟ್ಟಣ'[೧೯] ಎಂದುಕೊಂಡು ಹಿಂದಿರುಗಿದರು.

ಸರ್ವಾಧಿಕಾರಿಗಳಾದ ದೇವರಾಜಯ್ಯ, ನಂಜರಾಜಯ್ಯ, ಸಹೋದರರು (೨ನೇ ಕೃಷ್ಣರಾಜ ಒಡೆಯರ ಕಾಲದಲ್ಲಿ) ಆರ್ಕಾಟಿನ ನವಾಬ ದೋಸ್ತ್‌ಅಲಿ ಖಾನ್ ಶ್ರೀರಂಗಪಟ್ಟಣದ ಸಂಪತ್ತನ್ನು ದೋಚಲು ೧೭೩೫ರಲ್ಲಿ ಧಾಳಿ ನಡೆಸಿದಾಗ ಚನ್ನಪಟ್ಟಣದ ಬಳಿಯ ಕೈಲಂಚದಲ್ಲಿ ಬಲಿಷ್ಟ ಶತೃ ಸೈನ್ಯವನ್ನು ಸೋಲಿಸಿದ ದೇವರಾಜಯ್ಯನು ಶ್ರೀರಂಗಪಟ್ಟಣದ ಶ್ರೇಷ್ಟತೆಯನ್ನು ಪ್ರದರ್ಶಿಸಿದನು.[೨೦]

ಹೈದರ್ ಟಿಪ್ಪು ಕಾಲದಲ್ಲಿ ಶ್ರೀರಂಗಪಟ್ಟಣ ನಗರೀಕರಣದ ಪ್ರಕ್ರಿಯೆ

ಹೈದರ್ ಟಿಪ್ಪು ಕಾಲದಲ್ಲಿ ಶ್ರೀರಂಗಪಟ್ಟಣ ಮೈಸೂರು ರಾಜ್ಯದ ರಾಜಧಾನಿಯಾಗಿ ಅನಂತರ ಇಡೀ ದಕ್ಷಿಣ ಭಾರತದ ಆಡಳಿತ ಕೇಂದ್ರವಾಗಿ ರೂಪುಗೊಂಡುದ್ದು ಅತ್ಯಂತ ಆಸಕ್ತಿದಾಯಕವಾದ ಬೆಳವಣಿಗೆ. ಭಾರತದ ಇತಿಹಾಸದಲ್ಲಿ ಹೈದರ್ ಟಿಪ್ಪುರವರ ಆಳ್ವಿಕೆ ಒಂದು ಮಹತ್ವದ ಕಾಲವಾಗಿದ್ದಿತು. ಇವರು ನಲ್ವತ್ತು ವರ್ಷಗಳ ಕಾಲ ಆಳ್ವಿಕೆ ನಡೆಸಿದ್ದರೂ ಅದು ತುಂಬಾ ಮಹತ್ವದ್ದಾಗಿದ್ದಿತು. ಇದು ಯಾವ ರೀತಿಯೆಂದರೆ ೧೮ನೇ ಶತಮಾನದ ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪನಿಯ ವಿಸ್ತರಣೆಯ ನೀತಿಯ ಮೇಲೆ ಪ್ರಭಾವ ಬೀರುವಷ್ಟು ಮಹತ್ವದ್ದಾಗಿದ್ದಿತು. ಹೈದರ್‌ನ ಕಾಲದಲ್ಲಿ ಶ್ರೀರಂಗಪಟ್ಟಣದ ರಾಜ್ಯ ವಿಸ್ತರಣೆಯ ವ್ಯಾಪ್ತಿ ೪೮೦ ಮೈಲಿ ಸುತ್ತಲತೆಯಿಂದ ಕೂಡಿದ್ದಿತು. ಹೈದರ್ ಟಿಪ್ಪು ಕಾಲದಲ್ಲಿ ಕೃಷಿಯೇತರ ಚಟುವಟಿಕೆಗಳು ಸಂಘಟಿತ ಆರ್ಥಿಕ ಚಟುವಟಿಕೆಗಳಾಗಿ ಕಾಣಿಸಿಕೊಂಡಾಗ ಶ್ರೀರಂಗಪಟ್ಟಣದ ನಗರೀಕರಣದ ಪ್ರಕ್ರಿಯೆ ಆಧುನಿಕ ಸ್ವರೂಪದಡಿಯಲ್ಲಿ ಹೇಗೆ ಅಭಿವೃದ್ಧಿಗೊಳಪಟ್ಟಿತ್ತೆಂಬುದನ್ನು ಕೆಳಗಿನ ಅಂಶಗಳಿಂದ ವಿಶ್ಲೇಷಿಸಬಹುದು.

ಆಡಳಿತ

ಹೈದರ್ ಟಿಪ್ಪು ಸುಲ್ತಾನ್‌ರವರು ಶ್ರೀರಂಗಪಟ್ಟಣದಲ್ಲಿ ಕೇಂದ್ರೀಕೃತ ಆಡಳಿತವನ್ನು ಜಾರಿಗೆ ತಂದುದ್ದರಿಂದ ಶ್ರೀರಂಗಪಟ್ಟಣ ಎಲ್ಲಾ ಚಟುವಟಿಕೆಗಳ ಕೇಂದ್ರವಾಗಿ ವಿಕಾಸಗೊಂಡಿತು. ಹೈದರ್‌ನ ಕಾಲದಲ್ಲಿ ಮೈಸೂರು ರಾಜ್ಯ ರಾಜಧಾನಿ ಶ್ರೀರಂಗಪಟ್ಟಣವು ಒಳಗೊಂಡಂತೆ ಐದು **'ಅಸೋಫಿ'** ಅಥವಾ ಪ್ರಾಂತ್ಯಗಳಿಂದ, ೧೭೧ **'ಪರಗಣ'**ಗಳಿಂದ, **'ಸಿಂಪ್ತ್'** ಎಂಬ ಕೆಲವೇ ಗ್ರಾಮಗಳನ್ನು ಹೊಂದಿದ್ದ ಅತೀ ಸಣ್ಣ ಆಡಳಿತ ಘಟಕಗಳಿಂದ ಕೂಡಿದ್ದಿತು. ರಾಜಧಾನಿ ಶ್ರೀರಂಗಪಟ್ಟಣದಲ್ಲಿ ನಾಲ್ಕು ಜನ ಮಂತ್ರಿಗಳಿದ್ದು ಐದು ಇಲಾಖೆಗಳನ್ನು ನೋಡಿಕೊಳ್ಳುತ್ತಿದ್ದರು. ಪ್ರತಿ ಮಂತ್ರಿಗೂ ಸಲಹಾ ಮಂತ್ರಿಗಳಿರುತ್ತಿದ್ದರು.[೨೧]

ಕೃಷಿ ಅಭಿವೃದ್ಧಿ

ಟಿಪ್ಪು ಕೃಷಿ ಅಭಿವೃದ್ಧಿಗಾಗಿ ಹಳೆಯ ಕಾಲುವೆಗಳನ್ನು ಪುನರುಜ್ಜೀವನಗೊಳಿಸಿ ಸುಮಾರು ಒಂಬತ್ತು ಕಿ.ಮೀ.ವರೆಗೂ ನೀರಾವರಿ ಯೋಜನೆಯನ್ನು ವಿಸ್ತರಿಸಿದ್ದನು. ಕೃಷಿ ಕ್ಷೇತ್ರದಲ್ಲಿ ಪರಿಣಿತರಾಗಿದ್ದ ಮುಸ್ಲಿಂರನ್ನು ಮದರಾಸ್‌ನಿಂದ ಕರೆತಂದು ಗಂಜಾಂನಲ್ಲಿ ನೆಲೆಗೊಳಿಸಿದ್ದನು. ಇವರನ್ನು **ಲಬ್ಬೆ ಮುಸ್ಲಿಂರೆಂದು** ಕರೆಯುತ್ತಾರೆ. ಇವರು ಟಿಪ್ಪುವಿನ ಪಥನಾನಂತರ ನಾನಾ ಕಡೆಗಳಿಗೆ ವಲಸೆ ಹೋದರು.

ಭೂಕಂದಾಯ ವ್ಯವಸ್ಥೆ

ಹೈದರ್ ಯುದ್ಧಗಳಲ್ಲಿ ಹೆಚ್ಚಿನ ಸಮಯವನ್ನು ಕಳೆದರೂ ಕಂದಾಯದ ಅಕ್ರಮವನ್ನು ತಡೆಗಟ್ಟಲು ಪ್ರತಿ ತಾಲ್ಲೂಕಿನಲ್ಲಿ ಹರಿಕಾರರನ್ನು ನೇಮಿಸಿದನು. ಆದರೆ ಟಿಪ್ಪು ಹೊಸ ಬಗೆಯ ಕಂದಾಯ ವ್ಯವಸ್ಥೆಯನ್ನು ಜಾರಿಗೊಳಿಸಿದನು. ಪ್ರಾಂತ್ಯವನ್ನು ಪ್ರತಿ ಐದು ಪಗೋಡಗಳಿಗೊಂದರಂತೆ **'ತುಕಡಿ'**ಗಳನ್ನಾಗಿ ವಿಭಜಿಸಿ ಕಂದಾಯ ಆಡಳಿತ ನಿರ್ವಹಣೆ ವಸೂಲಿ, ಮತ್ತು ರಕ್ಷಣೆಗಾಗಿ ಪ್ರತಿ ತುಕಡಿಗೂ ಒಬ್ಬೊಬ್ಬ ಅಧಿಕಾರಿಗಳನ್ನು ನೇಮಿಸಿದನು.[೨೨] ಹೈದರ್ ರಾಜ್ಯದ ಆದಾಯವನ್ನು ಹೆಚ್ಚಿಸಲು **'ಇನಾಂ'** ಮತ್ತು **'ರುಸ್ತುಂ'** ಪದ್ಧತಿಗಳನ್ನು ರದ್ದು ಪಡಿಸಿದ್ದರಿಂದ ಶೇ. ಐದರಿಂದ ಹತ್ತರವರೆಗೆ ಆದಾಯ ಹೆಚ್ಚಿತಲ್ಲದೆ, ಹೈದರ್‌ನು ಪಾಳೆಯಗಾರರು ಸಲ್ಲಿಸುತ್ತಿದ್ದ **'ಪೇಷ್ ಕಷ್'** ಎಂಬ ಕಾಣಿಕೆಯನ್ನು ತೆರಿಗೆಯಾಗಿ ಪರಿವರ್ತಿಸಿದನು. ಟಿಪ್ಪು ಸಹ ತಂದೆಯ ನೀತಿಯನ್ನು ಮುಂದುವರಿಸಿದನು.[೨೩]

ಪಶುಸಂಗೋಪನೆ

ಹೈದರ್ ಮತ್ತು ಟಿಪ್ಪುರವರು ಸೈನಕ ಸಲಕರಣೆಗಳನ್ನು ಸಾಗಿಸಲು, ಸೈನ್ಯವನ್ನು ಬಲಾಢ್ಯಗೊಳಿಸಲು ಬಲಾಢ್ಯವಾದ ಮತ್ತು ಉತ್ತಮವಾದ ತಳಿಹಸು ಹಾಗೂ ಎತ್ತುಗಳನ್ನು ಆಭಿವೃದ್ಧಿಗೊಳಿಸಿಲು **'ಪಶುಸಂಗೋಪನಾ ಇಲಾಖೆ'ಯನ್ನು** ಸ್ಥಾಪಿಸಿದ್ದರು.

ಹೈದರ್ ಉತ್ತಮವಾದ ಬಲಿಷ್ಟವಾದ **'ಅಮೃತ್ ಮಹಲ್'** ತಳಿ ಹಸುಗಳನ್ನು ಅಭಿವೃದ್ಧಿಗೊಳಿಸಿದನು. ಹೈದರ್ ಕಾಲದಲ್ಲಿ ೬೦ ಸಾವಿರ ಅಮೃತ್‌ಮಹಲ್ ತಳಿ ಹಸುಗಳಿದ್ದವೆಂದು ತಿಳಿದಬರುತ್ತದೆ. ಅಮೃತ್ ಮಹಲ್ ಹಸುಗಳು ೧.೩೫ ರಿಂದ ೧.೫ ಮೀಟರ್ ಎತ್ತರವಾಗಿದ್ದು, ಉದ್ದವಾದ ಕೊಂಬುಗಳನ್ನು ಹೊಂದಿದ್ದವು. ಅಗತ್ಯವೆನಿಸಿದಾಗ ಶತ್ರುಗಳ ವಿರುದ್ಧ ಧಾಳಿ ಮಾಡಲು ಈ ಹಸುಗಳನ್ನು ಬಳಸುತ್ತಿದ್ದನು. ಹೈದರ್‌ನು ಇಂತಹ ಅಮೃತ್‌ಮಹಲ್ ತಳಿಯನ್ನು ತನ್ನ ಸೈನ್ಯದ ಹಿಂದೆ ಇಟ್ಟುಕೊಂಡು ಹಲವಾರು ಕದನಗಳನ್ನು ಜಯಗಳಿಸಿದ್ದನು. ಟಿಪ್ಪು ಸಹ **ಅಮೃತ್‌ಮಹಲ್** ತಳಿಯನ್ನು ಮತ್ತಷ್ಟು ಅಭಿವೃದ್ಧಿಗೊಳಿಸಿ **'ಸುಲ್ತಾನ್ ಬ್ರೀಡ್'** ಎಂದು ಕರೆದನು.

೨.೪.೫. ತೋಟಗಾರಿಕೆ ಹಾಗೂ ವಾಣಿಜ್ಯ ಬೆಳೆ

ಹೈದರ್ ಮತ್ತು ಟಿಪ್ಪುರವರು ಫ್ರಾನ್ಸ್, ಚೈನಾ, ಕಾಬೂಲ್, ಕಾಂದಹಾರ್, ದಕ್ಷಿಣ ಆಫ್ರೀಕಾ, ದೆಹಲಿ, ಮುಲ್ತಾನ್, ಲಾಹೋರ್‌ಗಳಿಂದ ವಿವಿಧ ಬಗೆಯ ಬೀಜಗಳನ್ನು ಕಸಿ ಗಿಡಗಳನ್ನು ಅಮದು ಮಾಡಿಕೊಳ್ಳುವುದರ ಮೂಲಕ ಶ್ರೀರಂಗಪಟ್ಟಣದಲ್ಲಿ ತೋಟಗಾರಿಕೆಯನ್ನು ಉದ್ಯಾನವನಗಳನ್ನು ಅಭಿವೃದ್ಧಿಗೊಳಿಸಿದರು. ಉದಾ: ಟಿಪ್ಪು ದರಿಯಾ ದೌಲತ್, ರಂಗಮಹಲ್, ಗುಂಬಜ್‌ನ ಲಾಲ್‌ಬಾಗ್ ಪರಿಸರವನ್ನು ಫಲ–ಪುಷ್ಪ ವೃಕ್ಷಗಳಿಂದ ಶ್ರೀಮಂತಗೊಳಿಸಿದನು. ಮಾವು, ಸೇಬು, ಕಿತ್ತಳೆ, ನಿಂಬೆ, ಸೀತಾಫಲ, ದಾಳಿಂಬೆ, ಮರಸೇಬು, ಮತ್ತು ಹಿಪ್ಪುನೇರಳೆ ವನವನ್ನೂ ರೂಪಿಸಿದ್ದನೆಂದೂ ತಿಳಿದುಬರುತ್ತದೆ.

ಟಿಪ್ಪು ವಾಣಿಜ್ಯ ಬೆಳೆಯಾದ ರೇಷ್ಮೆ ಉದ್ಯಮಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿ, ಅಭಿವೃದ್ಧಿಗೊಳಿಸಿದನು. ಮೈಸೂರು ರಾಜ್ಯದ ದಕ್ಷಿಣ ಭಾಗದಲ್ಲಿ ರೇಷ್ಮೆ ಹುಳು ಸಾಕಣಿಕೆಯ ಘಟಕವೊಂದನ್ನು ಸ್ಥಾಪಿಸಿದನು. ರೇಷ್ಮೆಹುಳುವಿನ ಮೊಟ್ಟೆಗಳನ್ನು ಪತ್ತೆ ಹಚ್ಚುವುದಕ್ಕಾಗಿ ಧೂತರನ್ನು ವಿಶ್ವದ ವಿವಿಧ ಭಾಗಗಳಿಗೆ ಕಳುಹಿಸಿ ಇದರಲ್ಲಿ ಯಶಸ್ವಿಯಾಗಿ, ರಾಜ್ಯದ ಹವಾಮಾನಕ್ಕೆ ಸೂಕ್ತವಾದ ದಕ್ಷಿಣ ಚೀನಾದ ಹಳದಿ ರೇಷ್ಮೆ ಉತ್ಪಾದಿಸುವ ತಳಿಯನ್ನು ಮೈಸೂರು ರಾಜ್ಯದಲ್ಲಿ ಪರಿಚಯಿಸಿದನು. ಮೈಸೂರು ರಾಜ್ಯ ವಿಶ್ವದ ರೇಷ್ಮೆ ಉತ್ಪಾದನೆ ಮಾಡುವ ಅಗ್ರಗಣ್ಯ ರಾಷ್ಟ್ರಗಳಲ್ಲಿ ಒಂದಾಗಬೇಕೆಂಬ ಮಹತ್ವಕಾಂಕ್ಷೆ ಹೊಂದಿದ್ದನು.[೨೪]

ಮೂರನೇ ಆಂಗ್ಲೋ–ಮೈಸೂರು ಯುದ್ಧದ ಸಂದರ್ಭದಲ್ಲೂ ರೇಷ್ಮೆ ಹುಳುಗಳನ್ನು ತರುವಂತೆ ತನ್ನ ಸೈನ್ಯಾಧಿಕಾರಿಗಳಾದ **ಕಸ್ತೂರಿ ರಂಗ ಹಾಗೂ ಬುರ್‌ಹಾನ್‌ವುದ್ದೀನ್‌ರನ್ನು** ಬಂಗಾಳಕ್ಕೆ ಕಳುಹಿಸಿಕೊಟ್ಟಿದ್ದು ಈ ಉದ್ದಿಮೆಯ ಮೇಲೆ ಟಿಪ್ಪು ಹೊಂದಿದ್ದ ಆಸಕ್ತಿಯನ್ನು ತೋರಿಸುತ್ತದೆ. ಟಿಪ್ಪುವಿನ ರೇಷ್ಮೆ ಉದ್ಯಮ ಆ ಕಾಲದಲ್ಲೇ ಬ್ರಿಟಿಷ್‌ರ ವ್ಯಾಪಾರದ ಮೇಲೆ ವ್ಯತಿರಕ್ತ ಪರಿಣಾಮ ಬೀರಿದ್ದ ಬಗ್ಗೆ ದಾಖಲೆಗಳಿಂದ ತಿಳಿದುಬರುತ್ತದೆ. ಮೈಸೂರಿನ ರೇಷ್ಮೆ ಅರೇಬಿಯಾದ ಮಾರುಕಟ್ಟೆಗಳಲ್ಲಿ ತುಂಬಾ ಬೇಡಿಕೆಯ ವಸ್ತುವಾಗಿತ್ತು. ಶ್ರೀರಂಗಪಟ್ಟಣ, ಗುಬ್ಬಿ, ಹೈದರ್‌ನಗರ ಚಿತ್ರದುರ್ಗ, ಚನ್ನರಾಯಪಟ್ಟಣಗಳು ಪ್ರಮುಖ ರೇಷ್ಮೆಯ ಮಾರಾಟ ಕೇಂದ್ರಗಳಾಗಿದ್ದವು. ಟಿಪ್ಪುವಿನ ಮರಣಾ ನಂತರ ಶ್ರೀರಂಗಪಟ್ಟಣದಲ್ಲಿ ರೇಷ್ಮೆ ಉದ್ದಿಮೆ ನಶಿಸಿತು.

ಕೈಗಾರಿಕಾಭಿವೃದ್ಧಿ

ಹೈದರ್ ಟಿಪ್ಪು ಶ್ರೀರಂಗಪಟ್ಟಣವನ್ನು ಕೇಂದ್ರವನ್ನಾಗಿ ಮಾಡಿಕೊಂಡಂತೆ ಇಡೀ ಮೈಸೂರು ರಾಜ್ಯವನ್ನೇ ಒಂದು ಕೈಗಾರಿಕಾ ರಾಜ್ಯವನ್ನಾಗಿ ರೂಪಿಸಲು ಪ್ರಯತ್ನಿಸಿದ್ದರು. ಕಬ್ಬಿಣದ ಉದ್ದಿಮೆ ಸರ್ಕಾರದ ಏಕ ಸ್ವಾಮ್ಯದಲ್ಲಿತ್ತು. ಹೈದರ್ ಮತ್ತು ಟಿಪ್ಪು ಸರ್ಕಾರದ ಏಕ ಸ್ವಾಮ್ಯವನ್ನು ಮುಂದುವರಿಸಿದರು. ಕಬ್ಬಿಣ ಕರಗಿಸುವ ಮತ್ತು ಎರಕ ಹೊಯ್ಯುವ ಉದ್ದಿಮೆಗೆ ಶ್ರೀರಂಗಪಟ್ಟಣ ಮುಖ್ಯ ಕೇಂದ್ರವಾಗಿತ್ತು. ಶ್ರೀರಂಗಪಟ್ಟಣ ಹಾಗೂ ದೇವರಾಯನ ದುರ್ಗದ ಬಳಿ ಉಕ್ಕು

ತಯಾರಾಗುತ್ತಿತ್ತು. ಶ್ರೀರಂಗಪಟ್ಟಣದಲ್ಲಿ ಕಬ್ಬಿಣವನ್ನು ಉಕ್ಕಾಗಿ ಪರಿವರ್ತಿಸುವ ಐದು ಘಟಕಗಳಿದ್ದವು. ದೊರೆಗುಡ್ಡ ಹಾಗೂ ಚಿಕ್ಕದೇವ ಬೆಟ್ಟದಲ್ಲಿ ಕಬ್ಬಿಣದ ಘಟಕವನ್ನು ಸ್ಥಾಪಿಸಲಾಯಿತು. ಶ್ರೀರಂಗಪಟ್ಟಣದಲ್ಲಿ ಬಂದೂಕು, ಪಿಸ್ತೂಲು, ಫಿರಂಗಿ, ಚಾಕು, ಕತ್ತರಿ, ಕಲ್ಪೇರಿ, ಗಡಿಯಾರಗಳನ್ನು ತಯಾರಿಸುವ ಉದ್ದಿಮೆಗಳಿದ್ದವು. **ಕಿರ್ಮಾನಿ ತನ್ನ ನಿಶಾನ್ ಹೈದರಿಯಲ್ಲಿ** ಶ್ರೀರಂಗಪಟ್ಟಣದ ಉದ್ದಿಮೆಯು ದೇಶದಲ್ಲಿ ಪ್ರಖ್ಯಾತವಾಗಿತ್ತು ಎಂದಿದ್ದಾರೆ.[೨೫] **ವಿಲ್ಕ್ಸ್‌ರವರು** ಶ್ರೀರಂಗಪಟ್ಟಣದಲ್ಲಿ ಒಟ್ಟು ೮೫೩ ಕಬ್ಬಿಣದ ಕುಲುಮೆಗಳಿದ್ದವು. ವಿವಿಧ ಉದ್ದಿಮಗಳಲ್ಲಿ ತೊಡಗಿದ್ದ ೧೦,೯೮೭ ಕುಟುಂಬಗಳಿದ್ದವೆಂದು ತಿಳಿಸಿದ್ದಾರೆ. (ಸಾಕಿ.) (ಇವುಗಳಲ್ಲದೆ ಚಿನ್ನ, ಬೆಳ್ಳಿ ಹಾಗೂ ಹಿತ್ತಾಳೆ, ಉದ್ಯಮದವರು, ಬಡಗಿಗಳು ಕಲ್ಲುಕುಟಿಗರು)

ಶ್ರೀರಂಗಪಟ್ಟಣ, ಬೆಂಗಳೂರು, ಬಿದನೂರು, ಚಿತ್ರದುರ್ಗ ಹಾಗೂ ಮಂಗಳೂರಿನಲ್ಲಿದ್ದ ಪ್ರಮುಖ ಕೈಗಾರಿಕೆಗಳು ನೇರವಾಗಿ ಸರ್ಕಾರದಿಂದ ಸ್ಥಾಪನೆಗೊಂಡಿದ್ದು ಅವುಗಳನ್ನು '**ತಾರಾಮಂಡಲ**'ವೆಂದು ಕರೆಯಲಾಗುತ್ತಿತ್ತು.[೨೬] ಟಿಪ್ಪು ಕಾಬೂಲ್ ಹಾಗೂ ಕಂದಾಹಾರ್‌ಗಳ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಗಾಜು, ಬಟ್ಟೆ, ಕಾಗದ, ಗಡಿಯಾರ, ಮತ್ತು ಕತ್ತರಿ ಚಾಕುಗಳನ್ನು ತಯಾರಿಸುವ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರಯತ್ನಿಸಿದನು. ಆದರೆ ಈ ತಂತ್ರಜ್ಞಾನ ರಹಸ್ಯವಾಗಿದ್ದವೆಂದು ಬುಕನಾನ್ ಉಲ್ಲೇಖಿಸಿದ್ದಾನೆ. ಯೂರೋಪ್ ತಂತ್ರಜ್ಞರನ್ನು ಅದರಲ್ಲೂ ಫ್ರಾನ್ಸ್‌ನಿಂದ ಗಡಿಯಾರ, ಚಾಕು, ಕತ್ತರಿ ಉತ್ಪಾದಿಸಲು ಅಲ್ಲದೆ ಬಡಗಿಗಳನ್ನೂ ಕಮ್ಮಾರರನ್ನೂ, ಕರೆಸಿಕೊಂಡಿದ್ದನು.[೨೭]

ಟಿಪ್ಪುವಿನಿಂದ ಮೇಲುಕೋಟೆಯ ಗೋಪಿಚಂದನ ಸಕ್ಕರೆಯ ಉದ್ದಿಮೆಗಳು ಶ್ರೀರಂಗಪಟ್ಟಣದಲ್ಲಿ ಪರಿಚಯಿಸಲ್ಪಟ್ಟವು. ಶುದ್ಧ ಮೃದುಸಕ್ಕರೆಯನ್ನು ಮಣಕ್ಕೆ ೨೦ ಸುಲ್ತಾನಿ 'ಪಣಂ'ಗಳಿಗೆ ಮಾರಾಟವಾಗುತ್ತಿತ್ತು. ಇಬ್ಬರು ಬ್ರಾಹ್ಮಣರು ಇದರ ತಯಾರಿಕೆಯಲ್ಲಿ ತೊಡಗಿದ್ದರು.[೨೮] **ಪಾಲಹಳ್ಳಿ ಗ್ರಾಮದಲ್ಲಿ** ೧೭೯೩ರಲ್ಲಿ ಸ್ಥಾಪಿಸಿದ್ದ ಸಕ್ಕರೆ ಕಾರ್ಖಾನೆಯ ಅವಶೇಷಗಳು ಇಂದಿಗೂ ಗದ್ದೆ ಬಯಲಿನಲ್ಲಿ ಹರಡಿಕೊಂಡಿದೆ. ಸಕ್ಕರೆ ಉದ್ದಿಮೆಯನ್ನು ಅಭಿವೃದ್ದಿಗೊಳಿಸಲು ಚೀನಿ ತಂತ್ರಜ್ಞರನ್ನು ಕರೆತರಲಾಗಿತ್ತು. ಶ್ರೀರಂಗಪಟ್ಟಣದ ಸಮೀಪದ **ನೆಲಘಟ್ಟ ಜವಳಿ ಉದ್ಯಮದ ಕೇಂದ್ರವಾಗಿದ್ದು,** ಇಲ್ಲಿ **'ಸಾದಾಶಿಲೆ'** ಎಂಬ ಬಟ್ಟೆ ತಯಾರಾಗುತ್ತಿತ್ತು. ಈ ರೀತಿ ಶ್ರೀರಂಗಪಟ್ಟಣ ಮೈಸೂರು ರಾಜ್ಯದ '**ಔದ್ಯೋಗಿಕ ನಗರ**'ವಾಗಿ ಪರಿವರ್ತನೆಯಾಗಿತ್ತು.

ರಾಕೆಟ್ ತಂತ್ರಜ್ಞಾನ

ಹೈದರ್‌ನ ಕಾಲದಲ್ಲಿ ಬ್ರಿಟೀಷ್ ಸೈನ್ಯಾಧಿಕಾರಿಗಳಾದ ಕರ್ನಲ್ ಬೇಲಿ ಮತ್ತು ಪ್ಲೆಚರ್ ವಿರುದ್ಧ ನಡೆದ ಯುದ್ಧದಲ್ಲಿ ರಾಕೆಟ್‌ನ್ನು ಬಳಸಿರುವುದು ಕಂಡು ಬರುತ್ತದೆ. ಹೈದರ್ ಟಿಪ್ಪು ಸೈನ್ಯದಲ್ಲಿ ಕ್ರಮವಾಗಿ ೭೦೦೦ ಮತ್ತು ೫೦೦೦ ಮಂದಿ ರಾಕೆಟ್ ಉಡಾಯಿಸುವ ಪರಿಣಿತರಿದ್ದರೆಂದು ತಿಳಿದುಬರುತ್ತದೆ.

ಕ್ರಿ.ಶ. ೧೭೯೯ರ ಮೇ ೪ರಂದು ನಡೆದ ಶ್ರೀರಂಗಪಟ್ಟಣದ ಕೊನೆಯ ಹೋರಾಟದಲ್ಲಿ ರಾಕೆಟ್ ಸಂಗ್ರಹಿಸಿಡಲಾಗಿದ್ದ ಉಗ್ರಾಣಕ್ಕೆ ಆಕಸ್ಮಿಕವಾಗಿ ಬೆಂಕಿ ಬಿದ್ದು ಸಂಗ್ರಹಿಸಿಟ್ಟಿದ್ದ ಎಲ್ಲಾ ರಾಕೆಟ್‌ಗಳು ಆಸ್ಫೋಟಿಸಿ ಹೆಚ್ಚಿನ ಜೀವಹಾನಿ ಸಂಭವಿಸಿತಂತೆ. ಬೆಂಗಳೂರಿನ **'ತಾರಾಮಂಡಲ ಪೇಟೆ'** (ಇಂದಿನ ಕಬ್ಬನ್ ಪೇಟೆ)ಯಲ್ಲೂ ರಾಕೆಟ್‌ಗಳನ್ನು ತಯಾರಿಸುತ್ತಿದ್ದರು.[೨೯]

ಪೇಟೆ ಅಥವಾ ಷಹರ್ ಗಂಜಾಂ

ಹೈದರ್ ಶ್ರೀರಂಗಪಟ್ಟಣ ಕೋಟೆಯ ಹೊರಭಾಗದಲ್ಲಿ ವ್ಯಾಪಾರಿ ಕೇಂದ್ರವನ್ನು ಸ್ಥಾಪಿಸಿ ಅದನ್ನು **'ಷಹರ್ ಗಂಜಾಂ'** ಎಂದು ಕರೆದನು. **'ಷಾಹರ್ ಗಂಜಾಂ'** ಟಿಪ್ಪು ಕಾಲದಲ್ಲಿ ಶ್ರೀರಂಗಪಟ್ಟಣದ ಬಜಾರ್ ಆಗಿ ಮತ್ತಷ್ಟು ಅಭಿವೃದ್ಧಿ ಹೊಂದಿತು. ಅಲ್ಲಿ ಮುಸ್ಲೀಂ ಜನಸಂಖ್ಯೆಯನ್ನು ಅಭಿವೃದ್ಧಿಪಡಿಸಲು ಟಿಪ್ಪು ತುಮಕೂರು ಜಿಲ್ಲೆಯ ಸಿರಾದಿಂದ ಸಹಸ್ರಾರು ಕುಲಭಾಂದವರ ಕುಟುಂಬಗಳನ್ನು ಕರೆತಂದು ನೆಲೆಗೊಳಿಸಿದ್ದನು. 'ಪೇಪರ್' ಹಾಗೂ 'ಜರಿಯಾ' ರುಮಾಲುಗಳನ್ನು ತಯಾರಿಸಲೆಂದು ತಾನು ಸಿರಾದಿಂದ ಕರೆತಂದ ಕುಶಲಕರ್ಮಿಗಳ ಕುಟುಂಬಗಳ ವಸತಿಗಾಗಿ ಟಿಪ್ಪು ನಿರ್ಮಿಸಿದ್ದ ಪಟ್ಟಣ ಇದಾಗಿದ್ದು, **ಶಾಸನವೊಂದರಲ್ಲಿ** ಇಲ್ಲಿದ್ದ **'ಸಿರಾ ಬಜಾರಿನ'** ಉಲ್ಲೇಖವಿದೆ. ಹಿಂದೆ ಜನಸಂದಣಿಯಿಂದ ಕೂಡಿದ್ದ ಇದು ಕ್ರಿ.ಶ. ೧೭೯೯ರ ಪ್ಲೇಗ್‌ಗೆ ಬಲಿಯಾಗಿ ಕುಗ್ರಾಮವಾಯಿತು.[೩೦]

ವ್ಯಾಪಾರ–ವಾಣಿಜ್ಯ

ಮೊದಲ ಬಾರಿಗೆ ಶ್ರೀರಂಗಪಟ್ಟಣಕ್ಕೆ ಅಂತರರಾಷ್ಟ್ರೀಯ ಹಾಗೂ ಸಾಗರೋತ್ತರ ವ್ಯಾಪಾರವನ್ನು ಪರಿಚಯಿಸಿದ ಕೀರ್ತಿ ಹೈದರ್‌ನಗೆ ಸಲ್ಲುತ್ತದೆ. ಹೈದರ್ ಅರಬ್ ವ್ಯಾಪಾರಿಗಳ ಸಂಪರ್ಕದಿಂದ ಪರ್ಶಿಯನ್ ಕೊಲ್ಲಿ ಮತ್ತು ಶ್ರೀರಂಗಪಟ್ಟಣದ ನಡುವೆ ಅಂತರರಾಷ್ಟ್ರೀಯ ವ್ಯಾಪಾರ ವ್ಯವಹಾರಕ್ಕೆ ನಾಂದಿಯಾಡಿದನು. **೧೭೭೯ರಲ್ಲಿ ಆಸ್ಟ್ರೀಯಾದ ವ್ಯಾಪಾರಿ ವಿಲಿಯಂ ಬೋಲ್ಟ್‌ನು** ಹೈದರಾಲಿಯನ್ನು ಶ್ರೀರಂಗಪಟ್ಟಣದಲ್ಲಿ ಭೇಟಿಯಾಗಿ ತನ್ನ ವ್ಯಾಪಾರಕೇಂದ್ರಗಳನ್ನು ತೆರೆಯಲು ಅನುಮತಿ ಕೋರಿದ್ದನು. **ಆಸ್ಟ್ರೀಯಾದಿಂದ** ಹೈದರ್‌ನಗೆ ಬೇಕಾಗಿದ್ದ ಫಿರಂಗಿ, ಗನ್, ಹಾಗೂ ಸಕ್ಕರೆ ತಯಾರಿಕೆಗೆ ಬೇಕಾದ ಪರಿಕರಗಳನ್ನು ಪೂರೈಸಿ ಮಂಗಳೂರು, ಕಾರವಾರ, ಮತ್ತು ಮಡಕ್ಕಾನ್ ದ್ವೀಪದಲ್ಲಿ ತಮ್ಮ ವ್ಯಾಪಾರಿ ಕೆಂದ್ರಗಳನ್ನು

ತೆರೆದಿದ್ದನು. ಹೈದರ್ ೧೭೮೦ರಲ್ಲಿ ಮೈಸೂರು ರಾಜ್ಯದ ಆದಾಯವನ್ನು ಒಂದು ಕೋಟಿ ಹತ್ತು ಲಕ್ಷ ವರಹಗಳಿಗೆ (೧=೩, ರೂಪಾಯಿ) ಹೆಚ್ಚಿಸಿದ್ದನು. (ಎಂ.ಎ.ಆರ್. ೧೯೩೦, ಪು.೧೦೧) ಒಡೆಯರ ಕಾಲದಲ್ಲಿ ಕೇವಲ ೪೦ ಲಕ್ಷ ವರಹವಾಗಿತ್ತು. ಕೊಡಗಿನಿಂದ ಪ್ರತಿದಿನ ೭೦ ಎತ್ತಿನ ಗಾಡಿಗಳಲ್ಲಿ, ವಾರ್ಷಿಕವಾಗಿ ೫ರಿಂದ ೬ ಸಾವಿರ ಎತ್ತಿನಗಾಡಿಗಳಲ್ಲಿ ದವಸ–ಧಾನ್ಯ ಶ್ರೀರಂಗಪಟ್ಟಣ ಮತ್ತು ಚಿತ್ರದುರ್ಗಕ್ಕೆ ಆಮದಾಗುತ್ತಿತ್ತು. ಪ್ರತಿ ಗಾಡಿಯ ಸರಕು ಪ್ರಮಾಣ ೧೮೨ ಪೌಂಡ್‌ಗಳಾಗಿರುತ್ತಿತ್ತು.[೩೧]

ಟಿಪ್ಪು ಬ್ರಿಟೀಷರೊಡನೆ ಹೊಂದಿದ್ದ ವ್ಯಾಪಾರವನ್ನು ನಿಷೇಧಿಸಿ, ಫ್ರಾನ್ಸ್, ಪರ್ಶಿಯಾ, ಮತ್ತು ಕಾನ್‌ಸ್ಟಾಂಟಿನೋಪಲ್ ಮೊದಲಾದ ರಾಷ್ಟ್ರಗಳೊಡನೆ ವ್ಯಾಪಾರ ಸಂಪರ್ಕವನ್ನು ವೃದ್ಧಿಗೊಳಿಸಲು ತನ್ನ ರಾಯಭಾರಿಗಳನ್ನು ಕಳುಹಿಸಿದನು. ಅಲ್ಲದೆ ಸರಕಾರದ ಅಧೀನದಲ್ಲಿ **'ವಾಣಿಜ್ಯ ಇಲಾಖೆ'**ಯನ್ನು ಸ್ಥಾಪಿಸಿ, ರಾಜ್ಯದ ಆಂತರೀಕ ಮತ್ತು ಅಂತರರಾಷ್ಟ್ರೀಯ ವ್ಯಾಪಾರ ಅಭಿವೃದ್ಧಿಗೆ, ಪೂರ್ಣಾಧಿಕಾರದ **'ಪ್ರತಿನಿಧಿ ಮಂಡಳಿ'**ಯನ್ನು ನೇಮಿಸಿದನು. ಗುಜರಾತ್ ರಾಜ್ಯದ ಮುಂದ್ರ ಮತ್ತು ಮಾಂಡವಿ ನಗರಗಳಲ್ಲಿ, ಸಿಂಧನಲ್ಲಿರುವ ಕರಾಚಿ ಪೂರ್ವ ಏಷ್ಯಾದ ಜೆಡ್ಡಾ ಮತ್ತು ಇತರ ಮುಖ್ಯ ನಗರಗಳಲ್ಲಿ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಿ ವಿದೇಶಿ ವ್ಯಾಪಾರಕ್ಕೆ ಪ್ರೋತ್ಸಾಹ ನೀಡಿದನು. ಟಿಪ್ಪುವಿನ ಕಾಲದಲ್ಲಿ ಹೊಗೆಸೊಪ್ಪು, (ತಂಬಾಕು) ಕಬ್ಬಿಣ, ಮೆಣಸು, ಮತ್ತು ಶ್ರೀಗಂಧದ ಮರ ಇವು ಸರ್ಕಾರಿ ಏಕ ಸ್ವಾಮ್ಯಕ್ಕೊಳಪಟ್ಟ ವಸ್ತುಗಳಾಗಿದ್ದವು. ಇವುಗಳನ್ನು ಸಾರ್ವಜನಿಕರಿಂದ ಸರಕಾರ ಮಾತ್ರ ಖರೀದಿಸಬೇಕಾಗಿತ್ತು. ಮೈಸೂರಿನ ಒಡೆಯರ ಕಾಲದಲ್ಲೂ ಸಹ ಶ್ರೀಗಂಧದ ಮೇಲೆ ರಾಜ್ಯದ ಏಕಸ್ವಾಮ್ಯವಿದ್ದಿತು.[೩೨]

ಹೈದರ್ ಮತ್ತು ಟಿಪ್ಪು ರಾಜಧಾನಿ ಶ್ರೀರಂಗಪಟ್ಟಣವನ್ನು ವ್ಯಾಪಾರ ಕೇಂದ್ರವಾಗಿ ಪರಿವರ್ತಿಸಿದ್ದಲ್ಲದೆ, ನಗರದ ಪ್ರತಿಯೊಂದು ರಸ್ತೆಯಲ್ಲೂ ನಿರ್ದಿಷ್ಟವಾದ ವಸ್ತುಗಳಿಗೆ ಪ್ರತ್ಯೇಕ ಮಾರುಕಟ್ಟೆಯನ್ನು ನಿರ್ಮಿಸಿದ್ದರು. ರಸ್ತೆಯ ಹೆಸರೇ ಯಾವ ವಸ್ತುವನ್ನು ತಯಾರಿಸಿ ಮಾರಾಟ ಮಾಡುತ್ತಿದ್ದರು. ಎಂಬುದನ್ನು ಸೂಚಿಸುತ್ತಿತ್ತು. **ಉದಾ:** ಬಟ್ಟೆಯನ್ನು ನೇಯ್ಗೆ ಮಾಡಿ, ಮಾರಾಟ ಮಾಡುವ **ಮಗ್ಗದ ಬೀದಿ**, ಎತ್ತಿನ ಗಾಡಿಗಳನ್ನು ತಯಾರಿಸಿ ಮಾರಾಟ ಮಾಡುವ **ಗಾಡಿ ಕಾರ್ಖಾನೆ ಬೀದಿ,** ಹೀಗೆ ಟಿಪ್ಪು ಶ್ರೀರಂಗಪಟ್ಟಣದಲ್ಲಿ ಹತ್ತಿ, ರೇಷ್ಮೆ, ಕಾಗದ, ಅಡಿಗೆ ಮನೆಯ ಸಾಮಾಗ್ರಿಗಳು, ಆಯುಧಗಳು, ಎತ್ತಿನ ಗಾಡಿ, ಮೊದಲಾದ ಉದ್ದಿಮೆಗಳನ್ನು ಸ್ಥಾಪಿಸಿದ್ದನು. ಪ್ರತಿಯೊಂದು ಅಗತ್ಯ ವಸ್ತುಗಳಿಗೆ ಎಲ್ಲಾ ಪ್ರಾಂತ್ಯದವರು ರಾಜಧಾನಿಯ ಮೇಲೆ ಅವಲಂಬಿತವಾಗುವಂತೆ ಮಾಡಿದ್ದರು. ಹೀಗೆ ಗಂಜಾಂ ಸೇರಿದಂತೆ ಶ್ರೀರಂಗಪಟ್ಟಣ ದೊಡ್ಡ ವ್ಯಾಪಾರ–ವಾಣಿಜ್ಯ ಚಟುವಟಿಕೆಗಳ ಕೇಂದ್ರವಾಗಿತ್ತು. **"ಬಾರಾ ಬಂದರ್ ಪಟ್ಟಣ್ ಕೆ ಅಂದರ್"** (**ಹನ್ನೆರಡು ಬಂದರುಗಳು ಪಟ್ಟಣದ ಒಳಗೆ**) ಎನ್ನುವಷ್ಟು ವಹಿವಾಟು ಇಲ್ಲಿ ಜರುಗುತ್ತಿತ್ತು.

ಬ್ಯಾಂಕಿಂಗ್ ವ್ಯವಸ್ಥೆ

ಹೈದರಾಲಿಯ ಕಾಲದಿಂದಲೂ ಶ್ರೀರಂಗಪಟ್ಟಣದಲ್ಲಿ ಸಾಹುಕಾರರು ಮತ್ತು ಗ್ರಾಮ ಲೇವಾದೇವಿಗಾರರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಬೇರೆಡೆಯಿಂದ ಬಂದ ಗುಜರಾತಿಗಳು ಪ್ರಮುಖ ಲೇವಾದೇವಿಗಾರರಾಗಿದ್ದರು. ಅವರು ವ್ಯಕ್ತಿಗತ ವಿಶ್ವಾಸದ ಮೇಲೆ ಹೆಚ್ಚಾಗಿ ಸಾಲ ನೀಡುತ್ತಿದ್ದರು. ಸ್ವತಃ ಹೈದರಾಲಿಯೇ ಬ್ಯಾಂಕರ್ ಆಗಿದ್ದನೆಂದು ಸಹ ಹೇಳಲಾಗುತ್ತದೆ. ಆತ ತನ್ನ ನೌಕರರಿಗೆ ಸಾಲವನ್ನು ನೀಡುತ್ತಿದ್ದನು. ಸಾಲದ ಹಣ ಮರು ಪಾವತಿ ಮಾಡದ ನೌಕರರ ವೇತನದಲ್ಲಿ ೩\೧ ಭಾಗವನ್ನು ತಡೆಹಿಡಿಯುತ್ತಿದ್ದನೆಂದು ಹೇಳಲಾಗುತ್ತದೆ.[೩೩]ಟಿಪ್ಪು ಸುಲ್ತಾನ್‌ನು ಸಾರ್ವಜನಕರಿಂದ ಠೇವಣಿಗಳನ್ನು ಸಂಗ್ರಹಿಸಲು ಸರ್ಕಾರದ ಮಾರಾಟ ಮಳಿಗೆಗಳನ್ನು ಸ್ಥಾಪಿಸಿದ್ದನು. ಈ ರೀತಿ ಸಂಗ್ರಹಿಸಿದ ಠೇವಣಿಗಳನ್ನು ಮಾರಾಟ ಮಳಿಗೆಗಳಿಗೆ ವ್ಯವಹಾರಿಕ ಬಂಡವಾಳವನ್ನಾಗಿ ಪರಿವರ್ತಿಸಿ ಠೇವಣಿದಾರರಿಗೆ **'ಲಾಭಂಶ'**ವನ್ನು ನೀಡುತ್ತಿದ್ದನು. (ಇಸ್ಲಾಂ ಧರ್ಮ ಈ ಬಡ್ಡಿ ವ್ಯವಸ್ಥೆಯ ಲೇವಾದೇವಿಗೆ ವಿರುದ್ಧವಾಗಿತ್ತು.) ಈ**'ಲಾಭಾಂಶವು'** ಠೇವಣಿಯ ಮೊತ್ತವನ್ನು ಅನುಸರಿಸಿದ್ದು ಕಡಿಮೆ ಮೊತ್ತಕ್ಕೆ ಹೆಚ್ಚಿನ **'ಲಾಭಂಶ'**ದರ ಸಲ್ಲುತ್ತಿತ್ತು. ಬಹುಶಃ ಸಣ್ಣ ಉಳಿತಾಯಗಾರರನ್ನು ಪ್ರೋತ್ಸಾಹಿಸುವ ಸಲುವಾಗಿ ಈ ವ್ಯವಸ್ಥೆಯಿದ್ದಿತು.[೩೪]

ಸಾರಿಗೆ ಸಂಪರ್ಕ

ಹೈದರ್ ಮತ್ತು ಟಿಪ್ಪು ಹಳೆಯ ರಸ್ತೆಗಳನ್ನು ವ್ಯವಸ್ಥಿತ ರೀತಿಯಲ್ಲಿ ನಿರ್ವಹಣೆ ಮಾಡಿದ್ದರು. ಪಶ್ಚಿಮ ಕರಾವಳಿ ಪ್ರದೇಶದಲ್ಲಿ **ಬ್ರಿಟೀಷ್ ಕಮೀಶನರ್ ಆಗಿದ್ದ ಕರ್ನಲ್ ಡ್ಯೂ** ಹೇಳುವಂತೆ ಟಿಪ್ಪು ಸುಲ್ತಾನ್‌ನು ತನ್ನ ರಾಜಧಾನಯಾಗಿದ್ದ ಶ್ರೀರಂಗಪಟ್ಟಣದಿಂದ ತಾನು ಗೆದ್ದ ಎಲ್ಲಾ ಪ್ರದೇಶಗಳಿಗೆ ಒಳ್ಳೆಯ ವ್ಯವಸ್ಥಿತ ರಸ್ತೆ–ಸಂಪರ್ಕಗಳನ್ನು ನರ್ಮಿಸಿದ್ದನು. ಆತನು ಬ್ರಿಟೀಷ್‌ರ ಸಂಗಡ ಯುದ್ಧ ಮಾಡುವಾಗ ತನ್ನ ಗಣನೀಯವಾದ ಸೈನ್ಯ ಹಾಗೂ ಆಯುಧಗಳನ್ನು ಈ ರಸ್ತೆಗಳ ಮೂಲಕ ಸಾಗಿಸುತ್ತಿದ್ದನು. ಟಿಪ್ಪು ನಿರ್ಮಿಸಿದ ಫಿರಂಗಿ ಸಾಗಿಸುವ ರಸ್ತೆಗಳ ಬಗ್ಗೆ ಹೆಚ್ಚಿನ ವಿವರಗಳು ದೊರೆಯುವುದಿಲ್ಲ.[೩೫]

ಹೋವ್ ರಚಿಸಿರುವ '೧೭೯೧ರ **ಮೈಸೂರು ರಾಜ್ಯ'ವೆಂಬ ಭೂಪಟದಲ್ಲಿ** ಶ್ರೀರಂಗಪಟ್ಟಣದ ಜೊತೆ ಸಂಪರ್ಕಿಸುವ ಆರು ಪ್ರಮುಖ ರಸ್ತೆ ಮಾರ್ಗಗಳನ್ನು

ವಿವರಿಸಿದ್ದಾನೆ. (ಕಲ್ಲಿಕೋಟೆ, ಕಣ್ಣೂರು, ಬಿದನೂರು, ತುಮಕೂರು, ಬೆಂಗಳೂರು, ಹಾಗೂ ಹೊಸೂರು.)[೩೬] ಇವುಗಳಲ್ಲದೆ ಹೈದರ್ ಟಿಪ್ಪು ಕಾಲದ ಪ್ರಮುಖ ರಸ್ತೆ ಸಂಪರ್ಕಗಳ ಬಗ್ಗೆ ಮಾಹಿತಿಯಿದೆ. ಉದಾ: ೧). ಶ್ರೀರಂಗಪಟ್ಟಣ–ಪಾಲಹಳ್ಳಿ–ಬೆಳಗೊಳ–ಮಡಿಕೇರಿ–ಕಣ್ಣೂರು ರಸ್ತೆ, ೨). ಶ್ರೀರಂಗಪಟ್ಟಣ–ಮೈಸೂರು–ತಲ್ಲಚೇರಿ–ಕಲ್ಲಿಕೋಟೆ ರಸ್ತೆ. ೩). ಶ್ರೀರಂಗಪಟ್ಟಣ–ಮೈಸೂರು–ಎಚ್.ಡಿ.ಕೋಟೆ–ಮಾನಂದವಾಡಿ–ಸುಲ್ತಾನ್‌ಬತೇರಿ–ಕಲ್ಲಿಕೋಟೆ ರಸ್ತೆ. ೪). ಶ್ರೀರಂಗಪಟ್ಟಣ–ಚಾಮರಾಜನಗರ–ಸತ್ಯಮಂಗಲ–ಕೊಯಮತ್ತೂರು ರಸ್ತೆ. ೫). ಶ್ರೀರಂಗಪಟ್ಟಣ–ಕೊಳ್ಳೆಗಾಲ–ಸೇಲಂ–ಸಕ್ಕರೆಪಟ್ಟಣ–ಮಂಗಳೂರು–ಚಾರ್ಮಡಿ ಘಾಟ್–ಸಕಲೇಶಪುರ–ಬೆಂಗಳೂರು ರಸ್ತೆ. ೬). ಬಿಳಗಿ–ಕುಮಟ–ಬಿದನೂರು–ಭಟ್ಕಳ ಹುಲಿಕಲ್ ಘಾಟ್ ಮೊದಲಾದ ರಸ್ತೆ ಸಂಪರ್ಕಗಳು ಶ್ರೀರಂಗಪಟ್ಟಣದ ಬಯಲು ಪ್ರದೇಶದಿಂದ ಕರಾವಳಿಗಳಿಗೆ ಸಂಪರ್ಕ ಕಲ್ಪಿಸುವ ಮೂಲಕ ವ್ಯಾಪಾರ ವ್ಯವಹಾರಗಳಿಗೆ ಉತ್ತೇಜನ ನೀಡಿದ್ದರು.[೩೭] ಹೇಗೆ **"ರೋಮನ್ ಸಾಮ್ರಾಜ್ಯದ ಎಲ್ಲಾ ರಸ್ತೆಗಳು ರೋಮ್ ನಗರದ ಕಡೆಗೆ"** ಸಂಪರ್ಕ ಕಲ್ಪಿಸುತ್ತಿದ್ದವೋ **ಹಾಗೆಯೇ "ಎಲ್ಲಾ ಅಂತರರಾಜ್ಯ ಪ್ರಮುಖ ರಸ್ತೆಗಳು ಶ್ರೀರಂಗಪಟ್ಟಣದ ಕಡೆಗೆ"** ಸಂಪರ್ಕ ಕಲ್ಪಿಸುತ್ತಿದ್ದವು.[೩೮] ಶ್ರೀರಂಗಪಟ್ಟಣದೊಡನೆ ಪೂರ್ವ ಮತ್ತು ಪಶ್ಚಿಮದ ಪ್ರದೇಶಗಳನ್ನು ಸಂಪರ್ಕಿಸುವಲ್ಲಿ ಈ ರಸ್ತೆಗಳು ಸಹಕಾರಿಯಾಗಿದ್ದವು.

ಹೀಗೆ ಹೈದರ್ ಟಿಪ್ಪುರವರು ಮೈಸೂರು ರಾಜ್ಯವನ್ನು ವಿಸ್ತರಿಸಿ ಶ್ರೀರಂಗಪಟ್ಟಣವನ್ನು ಎಲ್ಲಾ ಚಟುವಟಿಕೆಗಳ ಕೇಂದ್ರವನ್ನಾಗಿ (ಕೃಷಿ, ಕೈಗಾರಿಕೆ, ವ್ಯಾಪಾರ, ವಾಣಿಜ್ಯ) ವಿಕಾಸಗೊಳಿಸಿದ್ದರಿಂದ ಶ್ರೀರಂಗಪಟ್ಟಣ ನಗರೀಕರಣದ ಪ್ರಕ್ರಿಯೆಯಲ್ಲಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಖ್ಯಾತಿಯನ್ನು ಪಡೆಯಿತು.

ಟಿಪ್ಪುವಿನ ಮರಣಾನಂತರ ಶ್ರೀರಂಗಪಟ್ಟಣ ನಗರೀಕರಣದ ಪ್ರಕ್ರಿಯೆಯಿಂದ ಮೂಲೆಗುಂಪಾಯಿತು. ಕ್ರಿ.ಶ. ೧೭೯೯ರ ನಂತರ ಶ್ರೀರಂಗಪಟ್ಟಣ ಬ್ರಿಟೀಷ್ ಸೈನ್ಯದ ಅಧೀನಕ್ಕೊಳಪಟ್ಟಿತು. ಕ್ರಿ.ಶ. ೧೮೦೦ರ ಮೇನಲ್ಲಿ ಶ್ರೀರಂಗಪಟ್ಟಣಕ್ಕೆ ಭೇಟಿ ನೀಡಿದ್ದ **ಬುಕನಾನ್‌ನ ಪ್ರಕಾರ** ಒಂದು ಲಕ್ಷದ ಐವತ್ತು ಸಾವಿರವಿದ್ದ ಜನಸಂಖ್ಯೆ ಮುವತ್ತೆರಡು ಸಾವಿರಕ್ಕೆ ಇಳಿದ್ದಿತ್ತು. ಯುದ್ಧದಿಂದಾಗಿ ಕೃಷಿಕರು, ಕರಕುಶಲಗಾರರು, ವ್ಯಾಪಾರಸ್ಥರು ನಗರವನ್ನು ಬಿಟ್ಟು ವಲಸೆ ಹೋದರು, ಕೈಗಾರಿಕೆಗಳು ನಶಿಸಲ್ಪಟ್ಟವು. ಲೂಟಿಕೋರರು ನಗರವನ್ನು ಎಲ್ಲಾ ರೀತಿಯಲ್ಲೂ ಲೂಟಿ ಮಾಡಿದರು. ರಸ್ತೆಗಳು, ಅಂಗಡಿ, ಮುಗ್ಗಟ್ಟುಗಳು ಹಾಳಾಗಿವೆ ಎಂದು ವಿವರಿಸಿದ್ದಾನೆ. **ಕ್ರಿ.ಶ. ೧೮೦೫ರವರೆಗೆ** ಸೇನಾಧಿಪತಿಯಾಗಿದ್ದ ಆರ್ಥರ್ ವೆಲ್ಲಸ್ಲಿ ಶ್ರೀರಂಗಪಟ್ಟಣ ಯಾವುದೇ ರೀತಿಯಲ್ಲೂ ಚೇತರಿಸಿಕೊಳ್ಳದಂತೆ ಕಾರ್ಯ ನಿರ್ವಹಿಸಿದನು. ಎಲ್ಲಾ ರೀತಿಯ ಕೈಗಾರಿಕೆಗಳು ನಶಿಸುವಂತೆ ನೋಡಿಕೊಂಡನು.

ಶ್ರೀರಂಗಪಟ್ಟಣ ನಗರ ಪಥನಾನಂತರವೂ ಅದರ ಕೀರ್ತಿ **ಆಂಗ್ಲ ಕವಿಗಳಿಗೆ ಕಾದಂಬರಿಕಾರರಿಗೆ** ವಸ್ತು ವಿಷಯವಾಯಿತು. **ಸರ್ ಹೆನ್ರಿ ನ್ಯೂಬೋಲ್ಟ್** ಶ್ರೀರಂಗಪಟ್ಟಣವನ್ನು ಕುರಿತು ಕವಿತೆಯನ್ನು ರಚಿಸಿದರೆ **ಸರ್ ವಾಲ್ಟರ್ ಸ್ಕಾಟ್** ತನ್ನ ಕಾದಂಬರಿಯಲ್ಲಿ ಶ್ರೀರಂಗಪಟ್ಟಣವನ್ನು ಹೀಗೆ ವರ್ಣಿಸಿದ್ದಾನೆ. "ಹೆಸರಾಂತ ವಿಷ್ಣು ದೇವಾಲಯವನ್ನೂ, ಭವ್ಯವಾದ ಪೇಟೆಯ ಬೀದಿಯಲ್ಲಿ ಸುಂದರವಾದ ಲಾಲ್‌ಬಾಗ್ ಉದ್ಯಾನವನ್ನು ಹೊಂದಿರುವ ಮಹಾನಗರ. ಹೈದರ್‌ನ ಸಮಾಧಿಯ ಸುತ್ತಮುತ್ತ ಇರುವ ಮಾವಿನ ಮರಗಳ ತೋಪಿನ ಮೂಲಕ ಬಾಲಚಂದ್ರನು ನದಿಯ ಕಲರವದ ನಡುವೆ ಕ್ಷೀಣವಾಗಿ ಮಿನುಗುತ್ತಿದ್ದಾನೆ. ನೈಟಿಂಗಲ್ ಪಕ್ಷಿಯ ಮಧುರವಾದ ಹಾಡು ಗುಲಾಬಿಯ, ಹಳದಿಯ ಜೀಜಿಯ ಕಿತ್ತಲೆ ಮತ್ತು ಮಾದಳ ಪುಷ್ಪಗಳ ಹಾಗೂ ಪರ್ಶಿಯಾದ ನಾರ್ಸಿಸ್‌ನ ಪರಿಮಳ ಇವೆಲ್ಲಾ ಇಂದಿಗೂ ನಮ್ಮ ಮನಸ್ಸನ್ನೂ ಸೂರೆ ಮಾಡುತ್ತಿವೆ."

ಪ್ರಸ್ತುತ ಪ್ರವಾಸೋದ್ಯಮದ ಹಿನ್ನಲೆಯಲ್ಲಿ ಶ್ರೀರಂಗಪಟ್ಟಣ

ಮೈಸೂರು ಹಾಗೂ ಬೆಂಗಳೂರು ನಗರಗಳ ನಡುವೆ ಸಮರ್ಪಕವಾದ ರಸ್ತೆಮಾರ್ಗ ಹಾಗೂ ರೈಲು ಮಾರ್ಗಗಳಿರುವುರಿಂದ ಪ್ರಸ್ತುತ ದಿನಗಳಲ್ಲಿ ಇತಿಹಾಸಕಾರರು ಮತ್ತು ನಮ್ಮ ಸರ್ಕಾರಗಳು ಹೆಚ್ಚಿನ ಆಸಕ್ತಿ ವಹಿಸಿದರೆ ಶ್ರೀರಂಗಪಟ್ಟಣವನ್ನು ಪ್ರವಾಸೋದ್ಯಮ ಕೇಂದ್ರವಾಗಿ ಅಭಿವೃದ್ದಿಪಡಿಸಬಹುದು. (ಯೋರೋಪ್‌ನ ಕೆಲವು ರಾಷ್ಟ್ರಗಳ ಆದಾಯದ ಬಹುಪಾಲು ಪ್ರವಾಸೋದ್ಯಮದಿಂದ ಬರುತ್ತಿದೆ. ಉದಾ: ಫ್ರಾನ್ಸ್, ಇಟಲಿ, ಆಸ್ಟ್ರೀಯ, ಸ್ವಿಟ್ಸರ್‌ಲ್ಯಾಂಡ್, ಮೊದಲಾದವು.)

ಪ್ರವಾಸೋದ್ಯಮದ ಮೂಲ ಸೌಕರ್ಯಗಳಾದ **ಭೌತಿಕ (ಪ್ರಾಕೃತಿಕ) ಮೂಲ ಸೌಕರ್ಯಗಳು ಉದಾ:** ಪ್ರಕೃತಿ ಧಾಮ, (ವನ್ಯಧಾಮ) ಪಕ್ಷಿಧಾಮ, ಉದಾ: ರಂಗನತಿಟ್ಟು, ನದಿಕಣಿವೆ ಹಾಗೂ ಕೆ.ಆರ್.ಎಸ್. ಅಣೆಕಟ್ಟೆ ಮೊದಲಾದವು.

ಐತಿಹಾಸಿಕ, ಸಾಂಸ್ಕೃತಿಕ ಮೂಲ ಸೌಕರ್ಯಗಳು ವಿಪುಲ ಪ್ರಮಾಣದಲ್ಲಿವೆ **ಉದಾ:** ಕರ್ನಾಟಕದಲ್ಲೇ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿರುವಷ್ಟು ಪ್ರಾಚೀನ ಸ್ಮಾರಕಗಳಿರುವ ಊರು ಮತ್ತೊಂದಿಲ್ಲ. **ಉದಾ:** ಮೂರುಸುತ್ತಿನ ಕೋಟೆ, ಶ್ರೀರಂಗನಾಥ ದೇವಾಲಯ, ಲಕ್ಷ್ಮೀನರಸಿಂಹ ದೇವಾಲಯ, ಗಂಗಾಧರೇಶ್ವರ ದೇವಾಲಯ, ಜನಾರ್ಧನ ದೇವಾಲಯ, ನಿಮಿಷಾಂಭ ದೇವಾಲಯ, ಆದಿನಾಥನ ಬಸದಿ,

(ವೃಷಭನಾಥ) ಕೋಟೆಯ ಗೋಡೆಗೆ ಹೊಂದಿಕೊಂಡಂತಿರುವ ನೆಲಮಾಳಿಗೆಯ ಎರಡು ಸೆರೆಮನೆಗಳು(ಡಂಜನ್‌ಗಳು) ಜಾಮಿ ಮಸೀದಿ, ಫ್ರೆಂಚ್ ತಂತ್ರಜ್ಞನಿಂದ ನಿರ್ಮಾಣವಾದ ಸು.೧೧೨ ಅಡಿ ಉದ್ದದ ಕಮಾನು ಸೇತುವೆ. ೧೯೩೯ರಲ್ಲಿ ನೆಲಸಮವಾಯಿತು. ವಿಜಯನಗರದ ರಾಜಪ್ರತಿನಿಧಿಗಳ, ಮೈಸೂರು ಒಡೆಯರ ಅರಮನೆಯ ಪಾಳುಕಟ್ಟಡ, ಝುಂಡಾ ಭತೇರಿ (ವಿಜಯನಗರ, ಮೈಸೂರು ಒಡೆಯರು, ಹೈದರ್ ಟಿಪ್ಪು ಬ್ರಿಟೀಷ್‌ರ ಧ್ವಜಗಳು ಹಾರಾಡಲ್ಪಟ್ಟ ಸ್ಥಳ) ಪಾಳು ಮದ್ದಿನ ಮನೆ, ದರಿಯಾ ದೌಲತ್ (ಸಾಗರ ಸಂಪತ್ತಿನ ಅಥವಾ ಬೇಸಿಗೆ ಅರಮನೆ) ಷಹಾರ್ ಗಂಜಾಂ, ಅಬ್ಬೆದುಬೆಯ ಇಗರ್ಜಿ, ಚಿಕ್ಕ ದೊಡ್ಡ ಘೋಸಾಯಿ ಘಾಟ್‌ಗಳು, ಕರ್ನಲ್ ಬೇಲಿಯ ಸಮಾಧಿ, ಹೈದರ್, ಟಿಪ್ಪು ಹಾಗೂ ಅವರ ಕುಟುಂಬದವರ ಸಮಾಧಿಗಳಿರುವ ಗುಂಬಜ್, ದಿವಾನ್ ಪೂರ್ಣಯ್ಯ ಬಂಗಲೆ, ಪಶ್ಚಿಮವಾಹಿನಿಯ ಸ್ನಾನಘಟ್ಟ, ಮಂಟಪ, ಅರವಟ್ಟಿಗೆ, ಛತ್ರಗಳು, ರಾಜಘಟ್ಟ, ಸತ್ತವರ ಅಸ್ತಿ ವಿಸರ್ಜಿಸುವ ವಾರ್ಷಿಕ ಶ್ರಾದ್ಧಾ ಆಚರಿಸುವ ಧಾರ್ಮಿಕ ಸ್ಥಳವಾಗಿದೆ. ಅಲ್ಲದೆ ಸತ್ಯಸಾಯಿ ಆಶ್ರಮವಿರುವ ಶ್ರೀರಂಗಪಟ್ಟಣ ಇಂದು ಸಾಂಸ್ಕೃತಿಕವಾಗಿ ಜಾತ್ಯಾತೀತ ಮನೋಭಾವನೆ ಮೂಡಿಸುವ ಸ್ಮಾರಕಗಳನ್ನೊಳಗೊಂಡಿರುವ ಜಗತ್ ಪ್ರಸಿದ್ಧ ಐತಿಹಾಸಿಕ ನಗರವಾಗಿದೆ.

ಉಪಸಂಹಾರ

ಹೀಗೆ ನಗರಗಳು ಪ್ರಾಚೀನ ಕಾಲದಿಂದಲೂ ನಾಗರೀಕ ಜೀವನದ ಸಂಕೇತವಾಗಿದ್ದರೂ, ಇತ್ತೀಚಿನ ವರ್ಷಗಳಲ್ಲಿ ಜಗತ್ತಿನಾದ್ಯಂತ ನಗರೀಕರಣ ಕುರಿತು ಅಧ್ಯಯಯನ ಮಾಡಲು ಇತಿಹಾಸಕಾರರು, ವಿದ್ವಾಂಸರು ಗಮನ ಹರಿಸಿರುವುದರಿಂದ ನಗರಗಳ ಬಗ್ಗೆ ಅಧ್ಯಯನ ಮಾಡುವುದು ಇತ್ತೀಚೆಗೆ ಬೆಳೆದುಬಂದಿರುವ ಶೈಕ್ಷಣಿಕ ಶಿಸ್ತಾಗಿದೆ. ಆದ್ದರಿಂದ ಶ್ರೀರಂಗಪಟ್ಟಣದ ನಗರೀಕರಣದ ಪ್ರಕ್ರಿಯೆಯನ್ನು ವಿವಿಧ ಕಾಲಘಟ್ಟಗಳಲ್ಲಿ ಚಾರಿತ್ರಿಕ ಬೆಳವಣಿಗೆಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

ಶ್ರೀರಂಗಪಟ್ಟಣ ಗಂಗರ ಕಾಲದಲ್ಲಿ ಪ್ರವರ್ಧಮಾನಕ್ಕೆ ಬಂದು ಹೊಯ್ಸಳರ ಕಾಲದಲ್ಲಿ ಒಂದು ಅಷ್ಟಗ್ರಾಮವಾಗಿ, ವಿಜಯನಗರದರಸರ ಕಾಲದಲ್ಲಿ ಸಾಮಂತರ, ರಾಜಪ್ರತಿನಿಧಿಗಳ ಆಡಳಿತ ಕೇಂದ್ರವಾಗಿ, ಪ್ರಾರಂಭದ ಮೈಸೂರು ಒಡೆಯರ ಕಾಲದಿಂದ ರಾಜಧಾನಿಯಾಗಿ ಪ್ರವರ್ಧಮಾನಕ್ಕೆ ಬರುವುದರ ಮೂಲಕ ನಗರೀಕರಣದ ಪ್ರಕ್ರಿಯೆಯಲ್ಲಿ ಪ್ರಗತಿಯನ್ನು ಕಂಡಿತು. ಹೈದರ್ ಟಿಪ್ಪುರವರು ಮೈಸೂರು ರಾಜ್ಯವನ್ನು ವಿಸ್ತರಿಸಿ ಶ್ರೀರಂಗಪಟ್ಟಣವನ್ನು ಎಲ್ಲಾ ಚಟುವಟಿಕೆಗಳ ಕೇಂದ್ರವನ್ನಾಗಿ (ಕೃಷಿ, ಕೈಗಾರಿಕೆ, ವ್ಯಾಪಾರ, ವಾಣಿಜ್ಯ) ವಿಕಾಸಗೊಳಿಸಿದ್ದರಿಂದ ಶ್ರೀರಂಗಪಟ್ಟಣ ನಗರೀಕರಣದ ಪ್ರಕ್ರಿಯೆಯಲ್ಲಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಖ್ಯಾತಿಯನ್ನು ಪಡೆದ ನಗರವಾಗಿ ವಿಕಾಸಗೊಂಡಿತು.

ಆಧಾರಸೂಚಿ ಮತ್ತು ಅಡಿಟಿಪ್ಪಣಿಗಳು

೧. ಮೋಹನ್ ಕೃಷ್ಣ ರೈ.ಕೆ. ಚರಿತ್ರೆ ಕಥನ, ಪಲ್ಲವ ಪ್ರಕಾಶನ, ಬಳ್ಳಾರಿ, ೨೦೦೯, ಪುಟ ೧೪೪.

೨. ಮೋಹನ್ ಕೃಷ್ಣ ರೈ.ಕೆ. ಚರಿತ್ರೆ ಕಥನ, ಪಲ್ಲವ ಪ್ರಕಾಶನ, ಬಳ್ಳಾರಿ, ೨೦೦೯, ಪುಟ ೧೪೨.

೩. ಅದೇ, ಪುಟ ೧೭೬.

೪. ೫. ಅದೇ, ಪುಟ ೩೭.

೫. ಅದೇ, ಪುಟ ೩೭.

೬ ಇ.ಸಿ.೬, (ಎನ್.ಎಸ್) ನಂ. ೧, ೧೨೧೦ ಎ.ಡಿ. ಪುಟ ೯.

೭. ಎಂ.ಪಿ. ಮಂಜಪ್ಪ ಶೆಟ್ಟಿ, (ಸಂ), ತಿಮ್ಮ ಕವಿ, ಪಶ್ಚಿಮರಂಗ ಮಹಾತ್ಮೆ ಮತ್ತು ಚಿಕ್ಕದೇವರಾಜ ವಂಶಾವಳಿ, ಕ.ಅ.ಸಂ. ಮೈಸೂರು, ಪುಟ ೩೭–೩೮) (MIR Hussain Ali Khan Kirmani- History of Tipu Sultan (Sec Ed) Calcutta, 1958, p.141)

೮. ಪುಟ ೧೪೪–೧೪೫, ರಾಜೇಗೌಡ.ಹ.ಕ.(ಸಂ) ಸಿಂಗಾರ, ೧೯೮೮, ಮಂಡ್ಯ ಜಿಲ್ಲೆಯ ಸಂಕ್ಷಿಪ್ತ ಇತಿಹಾಸ, ಜಿ.ಆರ್. ರಂಗಸ್ವಾಮಯ್ಯ.

೯. M.H.Krishna- A guide to Srirangapattana, Mysore,-1937, p. 3.

೧೦. ಎಂ.ಪಿ. ಮಂಜಪ್ಪ ಶೆಟ್ಟಿ, (ಸಂ) ಪುಟ ೯, ತಿಮ್ಮ ಕವಿ, ಪಶ್ಚಿಮರಂಗ ಮಹಾತ್ಮೆ ಮತ್ತು ಚಿಕ್ಕದೇವರಾಜ ವಂಶಾವಳಿ, ಕ.ಅ.ಸಂ. ಮೈಸೂರು, ಪುಟ ೩೭.

೧೧. ರೈಸ್.ಬಿ.ಲೆವಿಸ್, ಮೈಸೂರು ಸಂಪುಟ ೦೧, ವೆಸ್ಟ್ ಮಿಟುಸ್ಟರ್, ೧೯೮೭, ಪುಟ ೩೫೬.

೧೨. ರಾಮಕೃಷ್ಣರಾವ್ ಬಿ. ಶ್ರೀ ಮನ್ಮಹಾರಾಜರ ವಂಶಾವಳಿ, ಭಾಗ ೧, ಪುಟ ೨೬.

೧೩. ಕೃಷ್ಣರಾವ್ ಎಂ.ವಿ. ಮತ್ತು ಕೇಶವಭಟ್ ಎಂ. ಕರ್ನಾಟಕದ ಇತಿಹಾಸ ದರ್ಶನ, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಚಾಮರಾಜಪೇಟೆ, ಬೆಂಗಳೂರು, ೧೯೭೦, ಪುಟ ೯೯೭.

೧೪. ಅದೇ, ಪುಟ ೯೯೭.

೧೫. ಕೃಷ್ಣರಾವ್ ಎಂ.ವಿ. ಮತ್ತು ಕೇಶವಭಟ್ ಎಂ. ಕರ್ನಾಟಕದ ಇತಿಹಾಸ ದರ್ಶನ, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಚಾಮರಾಜಪೇಟೆ, ಬೆಂಗಳೂರು, ೧೯೭೦, ಪುಟ ೯೯೯.

೧೬. ಕರ್ನಾಟಕ ಪರಂಪರೆ, ಸಂ. ೦೨, ಮಧ್ಯಕಾಲ ಮತ್ತು ಆಧುನಕ ಕಾಲ, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬, ಪುಟ ೨೪೧.

೧೭. ಕೃಷ್ಣರಾವ್ ಎಂ.ವಿ. ಮತ್ತು ಕೇಶವಭಟ್ ಎಂ. ಕರ್ನಾಟಕ ಇತಿಹಾಸ ದರ್ಶನ, ಕರ್ನಾಟಕ ಸಹಕಾರಿ ಪ್ರಕಾಶನ, ಬೆಂಗಳೂರು, ೧೯೭೦, ಪುಟ ೫೩೯.

೧೮. ತೈಲೂರು ವೆಂಕಟಕೃಷ್ಣ, ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ, ಭಾನು ಪ್ರಕಾಶನ, ಮಂಡ್ಯ, ೧೯೯೨, ಪುಟ ೧೪.

೧೯. ನಾಯಕ್.ಹೆಚ್.ಹೆಚ್. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೯, ಪುಟ ೭೮೧.

೨೦. ಶ್ರೀನಿವಾಸ್.ಎಂ.ವಿ. (ಸಂ) ಡಾ. ಕೆ.ಎಸ್.ಶಿವಣ್ಣ, ದಳವಾಯಿ ಸಹೋದರರು, ಮೈಸೂರು, ೧೯೯೪, ಪುಟ ೯೧

೨೧. ಸೂರ್ಯನಾಥ.ಯು.ಕಾಮತ್. (ಮು.ಸಂ) ಭಾರತದ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ರಾಸೆಟಿಯರ್, ಭಾಗ ೦೨, ೧೯೮೫, ಪುಟ ೩೮೭.

೨೨. ಅದೇ, ಪುಟ ೪೧೮.

೨೩. ಅದೇ, ಪುಟ ೪೨೫.

೨೪. ಸೂರ್ಯನಾಥ. ಯು.ಕಾಮತ್. (ಮು.ಸಂ) ಭಾರತದ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ರಾಸೆಟಿಯರ್, ಭಾಗ ೦೨, ೧೯೮೫, ಪುಟ ೧೫.

೨೫. Tipu Sultan, Sourenier, p.101.

೨೬. Gopal.M.H. Tipu Sulta's Mysore An Economics Study, p. 95, 96.

೨೭. ಸೂರ್ಯನಾಥ.ಯು.ಕಾಮತ್. (ಮು.ಸಂ) ಭಾರತದ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ರಾಸೆಟಿಯರ್, ಭಾಗ ೦೨, ೧೯೮೫, ಪುಟ ೦೪.

೨೮. Francis Buchanan. H. Vol. I, p.340-341.

೨೯. ಗೋಪಾಲ್‌ರಾವ್ 'ನಮ್ಮದಿದು ಇತಿಹಾಸ', ಅಭಿನವ ಪ್ರಕಾಶನ, ಬೆಂಗಳೂರು ೨೦೧೦, ಪುಟ ೧೨೮.

೩೦. ಪಾರ್ಥಸಾರಥಿ.ಟಿ.ಎ. (ಮು.ಸಂ) ಮಂಡ್ಯ ಜಿಲ್ಲಾ ಗ್ಯಾಸೆಟಿಯರ್ (ಪರಿಷ್ಕೃತ ಆವೃತ್ತಿ), ಪುಟ ೧೬.

೩೧. Franchis Buchanan, Journey, I, p. 357.

೩೨. ಸೂರ್ಯನಾಥ.ಯು.ಕಾಮತ್. (ಮು.ಸಂ) ಭಾರತದ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ರಾಸೆಟಿಯರ್, ಭಾಗ ೦೨, ೧೯೮೫, ಪುಟ ೨೦೦.

೩೩. ಪಾರ್ಥಸಾರಥಿ.ಟಿ.ಎ. (ಮು.ಸಂ) ಮಂಡ್ಯ ಜಿಲ್ಲಾ ಗ್ಯಾಸೆಟಿಯರ್ (ಪರಿಷ್ಕೃತ ಆವೃತ್ತಿ), ಪುಟ ೩೧೮.

೩೪. ಸೂರ್ಯನಾಥ.ಯು.ಕಾಮತ್. (ಮು.ಸಂ) ಭಾರತದ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ರಾಸೆಟಿಯರ್, ಭಾಗ ೦೨, ಕರ್ನಾಟಕ ರಾಜ್ಯ ಸರಕಾರದ ಪ್ರಕಟಣೆ. ೧೯೮೫, ಪುಟ ೨೦೦.

೩೫. ಅದೇ, ಪುಟ ೨೦೦.

೩೬. Home, Select Views In Mysore, Mr.Bowyer, London, 1794, P.165.

೩೭. Saki, Making of History, Vol. I, P.45745, Saki, Making of History, Vol. I, P.457

೩೮. Foreign Miscellaneous No, XIX.

೧೨೮

ವಸಹಾತುಶಾಹಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಂಡವಾಳಶಾಹಿ ತೋಟಗಾರಿಕಾ ಬೆಳವಣಿಗೆ

ರವಿರಾಜ್ ಬಿ.ವಿ.*

ಪೀಠಿಕೆ

ಕರ್ನಾಟಕದ ಮಲೆನಾಡು ಪ್ರದೇಶಗಳಲ್ಲಿ ಒಂದಾದ ಚಿಕ್ಕಮಗಳೂರು (ಕಡೂರು) ಜಿಲ್ಲೆಯು ೧೭೬೩ರ ವರೆಗೆ ಮೈಸೂರಿನ ಒಡೆಯರು ಮತ್ತು ಕೆಳದಿಯ ಮನೆತನಗಳ ಆಳ್ವಿಕೆಗೆ ಒಳಪಟ್ಟಿತ್ತು. ಹೈದರ್ ಆಲಿ ೧೭೬೩ರಲ್ಲಿ ಈ ಪ್ರದೇಶವನ್ನು ವಶಪಡಿಸಿಕೊಂಡಿದ್ದು ೧೭೯೯ರಲ್ಲಿ ಟಿಪ್ಪುವಿನ ಪತನದವರೆಗೂ ಅದು ಮೈಸೂರಿನ ಹಿಡಿತದಲ್ಲಿತ್ತು. ಟಿಪ್ಪುವಿನ ಆಳ್ವಿಕೆಯ ಅವಧಿಯಲ್ಲಿ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಪ್ರಗತಿಯನ್ನು ಕಂಡಿತು. ಆತನ ಪತನದ ನಂತರ ಬ್ರಿಟಿಷರು ದಕ್ಷಿಣ ಕನ್ನಡ (ಮಂಗಳೂರು) ಜಿಲ್ಲೆಯಿಂದಲೇ ಕಾರ್ಯಾರಂಭ ಮಾಡಿ ಚಿಕ್ಕಮಗಳೂರು ಸೇರಿದಂತೆ ಮೈಸೂರು ಸಂಸ್ಥಾನದ ಮಲೆನಾಡಿನ ಉದ್ದಗಲಕ್ಕೂ ಚದುರಿ ಹೋದರು.[೧] ನಂತರ ಬ್ರಿಟಿಷರು ಮೈಸೂರು ರಾಜ್ಯದ ಆಡಳಿತವನ್ನು ಆ ಸಂಸ್ಥಾನದ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ವಹಿಸಿಕೊಟ್ಟು ಚಿಕ್ಕಮಗಳೂರು ಜಿಲ್ಲೆಯನ್ನೂ ಮೈಸೂರು ಸಂಸ್ಥಾನದ ವ್ಯಾಪ್ತಿಗೆ ಒಳಪಡಿಸಿದರು, ಇದು ನಗರ ಡಿವಿಷನ್‌ಗೆ ಸೇರಿದ ಜಿಲ್ಲೆಯಾಗಿದ್ದು ಬ್ರಿಟಿಷರು ೧೮೩೦ರಲ್ಲಿ ನಗರದಂಗೆಯನ್ನು, ೧೮೩೪ರಲ್ಲಿ ತರೀಕೆರೆ ಪಾಳೆಗಾರರ ದಂಗೆಯನ್ನು ಅಡಗಿಸಿ ನಂತರ ಅದರ ಆಡಳಿತದ ಜವಾಬ್ದಾರಿಯನ್ನು ೧೮೩೧ರಿಂದ ೧೮೮೧ರವರೆಗೆ ತಾವೇ ಕಮಿಷನರುಗಳ ಮೂಲಕ ನಡೆಸಿದರು.[೨] ಮಲೆನಾಡಿನ ಸಮೃದ್ಧ ಜಿಲ್ಲೆಗಳಾದ ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳು ಹೆಚ್ಚಾಗಿ ಕೃಷಿಯನ್ನೇ ಅವಲಂಬಿಸಿದ್ದ ಜಿಲ್ಲೆಗಳಾಗಿದ್ದು ಬ್ರಿಟಿಷ್ ವಸಾಹತುಷಾಹಿ ಕಾಲದಲ್ಲಿ ಐರೋಪ್ಯ ಬಂಡವಾಳದಾರರು ಅಪಾರ ಬಂಡವಾಳವನ್ನು ಹೂಡಿ ಸ್ಥಳೀಯರ ಸಹಕಾರದಿಂದ ತೋಟಗಾರಿಕಾ ಬೆಳೆಗಳಾದ ಕಾಫಿ, ಟೀ, ರಬ್ಬರ್, ಸಿಂಕೋನಾ, ಸೆಣಬು ಮುಂತಾದ ವಾಣಿಜ್ಯ ಬೆಳೆಗಳನ್ನು ಪರಿಚಯಿಸಿ, ರೈಲ್ವೆ, ಗಣಿಗಾರಿಕೆ ಮತ್ತು ಸಾರಿಗೆ ಸಂಪರ್ಕ ಮುಂತಾದ ಆಧುನಿಕ ಸವಲತ್ತುಗಳನ್ನು ಜಿಲ್ಲೆಗೆ ಕಲ್ಪಿಸುವುದರ ಮೂಲಕ ಈ ಪ್ರದೇಶಗಳಲ್ಲಿ ಆರ್ಥಿಕ ಅಭಿವೃದ್ಧಿಗೆ ಕಾರಣರಾದರು. ೧೮೩೧ರಲ್ಲಿ ಮೈಸೂರು ರಾಜ್ಯವನ್ನು ಪಡೆದ ಬ್ರಿಟಿಷರು ಮಂಜರಾಬಾದ್, ಚಿಕ್ಕಮಗಳೂರು ಮತ್ತು ಮೂಡಿಗೆರೆ ವಿಭಾಗಗಳಲ್ಲಿ ವಾಣಿಜ್ಯ ಬೆಳೆ ಕಾಫಿಯ ಎಸ್ಟೇಟ್‌ಗಳನ್ನು ತೆರೆದು ಅವುಗಳಿಂದ ಬಂದ ಉತ್ಪನ್ನಗಳನ್ನು ವಿದೇಶಗಳಿಗೆ ರಫ್ತು ಮಾಡಲಾರಂಬಿಸಿದರು. ಕೃಷಿಯ ವಾಣಿಜ್ಯಕರಣದ ಪ್ರಕ್ರಿಯೆಯು ಈ ರೀತಿಯಲ್ಲಿ ಪ್ರಾರಂಭವಾಯಿತು, ಇದರಿಂದ ಐರೋಪ್ಯ ಬಂಡವಾಳದಾರರು, ಪ್ಲಾಂಟರುಗಳು ಅಧಿಕ ಲಾಭವನ್ನು ಗಳಿಸುತ್ತಿದ್ದರೆ ಸ್ಥಳೀಯರಿಗೆ ಉದ್ಯೋಗಗಳವಕಾಶಗಳು ದೊರೆತು, ಗ್ರಾಮೀಣ ಆರ್ಥಿಕ, ಸಾಮಾಜಿಕ ವಾತಾವರಣದಲ್ಲಿಯೂ ಪರಿವರ್ತನೆಯುಂಟಾಯ್ತು[೩]

ಚಿಕ್ಕಮಗಳೂರು ಜಿಲ್ಲೆಯಲ್ಲಿ ತೋಟಗಾರಿಕಾ ಬೆಳವಣಿಗೆ

ಭಾರತದಲ್ಲಿ ಮೊಟ್ಟ ಮೊದಲಿಗೆ ವಾಣಿಜ್ಯ ಬೆಳೆಯಾದ ಕಾಫಿಯನ್ನು ಬಾಬಬುಡನ್ ಎಂಬ ಸಂತನು ಪರಿಚಯಿಸಿದನೆಂಬ ಪ್ರತೀತಿ ಇದೆ. ಆತನು ಮೆಕ್ಕಾಯಾತ್ರೆಗೆ ೧೬೦೦–೧೬೯೫ರ ಅವಧಿಯಲ್ಲಿ ಹೋಗಿ ಬರುವಾಗ ೭ ಕಾಫಿ ಬೀಜಗಳನ್ನು ತಂದು ತನ್ನ ಮಾತೃಭೂಮಿಯಾದ ಕರ್ನಾಟಕ ರಾಜ್ಯದ ಚಿಕ್ಕಮಗಳೂರು (ಕಡೂರು) ಜಿಲ್ಲೆಯ ಗಿರಿಯ ತಪ್ಪಲಿನಲ್ಲಿ ಬಿತ್ತಿದನೆಂಬ ನಂಬಿಕೆ ಇದೆ.[೪] ೧೮೨೦ರವರೆಗೆ ಈ ಕಾಫಿಬೆಳೆಯನ್ನು ಬೇರೆ ಕಡೆಯಲ್ಲಿ ಬೆಳೆಯುತ್ತಿರಲಿಲ್ಲ; ನಂತರ ಕೇರಳ, ತಮಿಳುನಾಡು, ಕರ್ನಾಟಕದ ಕೊಡಗು, ಶಿವಮೊಗ್ಗ, ಮಂಜರಾಬಾದ್ ಮುಂತಾದ ಕಡೆಗಳಲ್ಲಿ ಬೆಳೆಯಲಾಯಿತು. ಯುರೋಪಿಯನ್ ಬಂಡವಾಳದಾರರು ಹೆಚ್ಚು ಹೆಚ್ಚು ಬಂಡವಾಳವನ್ನು ಹೂಡಿ ಈ ವಾಣಿಜ್ಯ ಬೆಳೆಯನ್ನು ಭಾರತದಾದ್ಯಂತ ವಿಸ್ತರಿಸುತ್ತಾ ಬಂದರು. ಒಟ್ಟಿನಲ್ಲಿ ಯುರೋಪಿಯನ್ನರ ದಾಖಲೆಗಳು ಮತ್ತು ಭಾರತೀಯ ದಾಖಲೆಗಳಲ್ಲಿ ಬಾಬಬುಡನ್ ಎಂಬ ಸಂತನಿಂದಲೇ ಕಾಫಿ ಕೃಷಿಯು ಭಾರತದಲ್ಲಿ ಪ್ರಾರಂಭವಾಯಿತೆಂದು ಉಲ್ಲೇಖಿಸಲಾಗಿದೆ. ಯುರೋಪಿಯನ್ನರ ವಸಾಹತುಷಾಹಿ ನೀತಿಯು

* ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

ಮುಂದುವರೆಯುತ್ತಾ ಸಾಗುತ್ತಿರುವ ಸಂದರ್ಭದಲ್ಲಿ ವಾಣಿಜ್ಯ ಬೆಳೆಗಳ ಪಸರಿಸುವಿಕೆಯೂ ಅವ್ಯಾಹತವಾಗಿ ನಡೆಯುತ್ತಾ ಸಾಗಿತು. ಐರೋಪ್ಯ ಬಂಡವಾಳದ ಮೂಲಕ ಎಬ್ಬಿಸಲ್ಪಟ್ಟ ವಾಣಿಜ್ಯ ಬೆಳೆಗಳ ತೋಟಗಳು ಐರೋಪ್ಯರ ಉದ್ಯಮಶೀಲತೆ, ಸಾಹಸ, ಉತ್ಸಾಹ, ಲಾಭಗಳಿಸುವ ಆಶಯ, ಮುಂತಾದುವುಗಳಿಗೆ ಪ್ರತೀಕವಾಗಿತ್ತು.[೫]

ಚಿಕ್ಕಮಗಳೂರು ಜಿಲ್ಲೆಯ ಮೈಲಿಮನೆ ಎಂಬಲ್ಲಿ ೧೮೩೦ ರಲ್ಲಿ ಐರೋಪ್ಯ ಪ್ಲಾಂಟರನಾದ ಥಾಮಸ್ ಕ್ಯಾನನ್ ಎಂಬಾತನು ಕಾಫಿ ಎಸ್ಟೇಟನ್ನು ವಸಾಹತುಷಾಹಿ ಆಡಳಿತಾವಧಿಯಲ್ಲಿ ಪ್ರಪ್ರಥಮವಾಗಿ ಪ್ರಾರಂಭಿಸಿದನು. ಇದು ಇಂದಿಗೂ ಉತ್ತಮ ಪಸಲು, ಉತ್ಪಾದನೆಯನ್ನು ಕೊಡುವ ಸ್ಥಿತಿಯಲ್ಲಿದೆ. ಚಿಕ್ಕಮಗಳೂರು ಜಿಲ್ಲೆಯ ಸಮೀಪ ಜಿಲ್ಲೆಯಾದ ಶಿವಮೊಗ್ಗದಲ್ಲಿ ಸ್ಟೋಕ್ಸ್ ಎಂಬ ಬ್ರಿಟಿಷ್‌ನು ೧೮೩೫ರಲ್ಲಿ ಕಾಫಿ ಎಸ್ಟೇಟನ್ನು ಮಾಡುತ್ತಾನೆ. ಆದರೆ ಕಾಲಕಾಲಕ್ಕೆ ಸರಿಯಾಗಿ ಮಳೆ ಬೀಳದೆ ಹವಾಮಾನದ ವೈಪರೀತ್ಯದಿಂದಾಗಿ ಬೆಳೆ ಅವನತಿಯನ್ನು ಕಂಡಿತು. ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯಲ್ಲಿ ಜಾನ್‌ಡೆಂಟನ್ ಮತ್ತು ವಿಲಿಯಂ ಡೆಂಟನ್ ಎಂಬ ಆಂಗ್ಲ ಸಹೋದರರು ನೊಜ್ಜೆ ಕಟ್ಟೆ, ಸಾಂತವೇರಿ, ಕಲ್ಲತ್ತಿ, ಕೆಸುವಿನ ವರ್ತಿ ಹಾಗೂ ಸಂಪಿಗೆ ಎಂಬಲ್ಲಿ ಕಾಫಿ ಎಸ್ಟೇಟುಗಳನ್ನು ಮಾಡಿದರು. ಹೆಚ್. ಕಾರ್ಫೆಲ್ ಎಂಬಾತ ಮಸ್ಕಲ್, ಮರಡಿ, ಚೌಡಿಖಾನ್, ಕುರ್ಕನಮಟ್ಟಿ ಎಂಬ ಹೆಸರಿನ ಕಾಫಿ ತೋಟಗಳನ್ನು ಮಾಡಿದರು. ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೆಚ್ಚು ಕಾಫಿ ಎಸ್ಟೇಟುಗಳನ್ನು ಮಾಡಿದ ಪ್ಲಾಂಟರುಗಳಲ್ಲಿ ಆಂಗ್ಲರೇ ಪ್ರಮುಖರು, ಕ್ರಾಫರ್ಡ್ ಸಹೋದರರು. ಡಬ್ಲ್ಯು. ಎಲ್. ಕ್ರಾಫರ್ಡ್ ಮತ್ತು ಸಿ.ಎಸ್. ಕ್ರಾಫರ್ಡ್ ಎಂಬುವವರು ಕರಡಿಖಾನ್, ಕೋಲಾರ್‌ಖಾನ್, ಗಂಗೆಗಿರಿ, ಕೊಂಡದಖಾನ್, ಬಿದರೆ, ಸುಗುಡುವಾಣಿ, ಹೂವಿನಹಕ್ಲು, ಕೆರೆಹಕ್ಲು, ಘಂಟನಾಯ್ಕ್ ಮತ್ತು ವಡ್ಡಿಗುಡ್ಡ ಎಂಬ ಇತರೇ ಹೆಸರಿನ ಪ್ರದೇಶಗಳಲ್ಲಿ ತೋಟಗಳನ್ನು ಮಾಡಿದರು. ಹಾಗೆಯೇ ಬಾಳೆಹೊನ್ನೂರಿನಲ್ಲಿರುವ ಕಾಫಿ ಸಂಶೋಧನಾ ಕೇಂದ್ರಕ್ಕೆ ೧೮ ಎಕರೆ ಕಾಡು ಪ್ರದೇಶವನ್ನು ದಾನದ ರೂಪದಲ್ಲಿ ನೀಡಿದರು. ಈ ಕಾಫಿ ಸಂಶೋಧನಾ ಕೇಂದ್ರವನ್ನು ಅಂದಿನ ಮೈಸೂರು ರಾಜ್ಯದ ಒಡೆಯರಾದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಮೊದಲ ಹಂತದಲ್ಲಿ ಉದ್ಘಾಟನೆ ಮಾಡುತ್ತಾರೆ. ಚಿಕ್ಕಮಗಳೂರು ಸಮೀಪದ ಆಲ್ದೂರು ಭಾಗದಲ್ಲಿರುವ ಎಲೆಗುಡಿಗೆ ಎಂಬ ಕಾಫಿ ತೋಟವನ್ನು ಯುರೋಪಿಯನ್ ಪ್ಲಾಂಟರನಾದ ಮಿಡ್ಲ್‌ಟನ್ ಎಂಬಾತನು ಮಾಡುತ್ತಾನೆ. ಈತನು ಮೈಸೂರು ರಾಜ್ಯದ ಪ್ರಜಾಪ್ರತಿನಿಧಿ ಸಭೆಯ ಸದಸ್ಯನೂ ಆಗಿದ್ದು ತೋಟಗಾರಿಕಾ ಬೆಳೆಗಳ ಅಭಿವೃದ್ಧಿಗೆ ಶ್ರಮವಹಿಸಿದ್ದಾನೆ. ಕೊಪ್ಪದ ಸಮೀಪ ಚಹಾ, ಸಿಂಕೋನಾ, ರಬ್ಬರ್ ತೋಟಗಳನ್ನೂ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಈ ಎಸ್ಟೇಟುಗಳ ಉಸ್ತುವಾರಿಯನ್ನು ಜಿ.ಡಬ್ಲ್ಯೂ ಓವೆನ್ ಎಂಬುವವನಿಗೆ ವಹಿಸಿಕೊಟ್ಟನು.[೬]

ಕೋಲ್ಮನ್, ಕೆಂಟ್ ಮತ್ತು ತಮ್ಮಾನ ಎಂಬ ಮೂರು ಬ್ರಿಟೀಷ್ ಸಹೋದರರು ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲೂಕಿನ ಹೆಗ್ಗಾನು ಎಂಬಲ್ಲಿ ಸುಮಾರು ೫೦೦ ಎಕರೆ ಪ್ರದೇಶದಲ್ಲಿ ಏಲಕ್ಕಿ ಮತ್ತು ವೆನಿಲ್ಲಾ ತೋಟಗಳನ್ನು ಮಾಡುತ್ತಾರೆ ಹಾಗೂ ಮಾತೊಳ್ಳಿ ಎಂಬಲ್ಲಿ ೧೨೦೦ ಎಕರೆ, ನೆಮ್ಮಾರಿನಲ್ಲಿ ೫೦೦ ಎಕರೆಗಳಷ್ಟು ಪ್ರದೇಶಗಳಲ್ಲಿ ಕಾಫಿ ತೋಟಗಳನ್ನು ಮಾಡಿದರು. ಹೆಗ್ಗಾನು ತೋಟವನ್ನು ೧೯೦೫ರಲ್ಲಿ ಕೋಲ್‌ಮನ್ ಸಹೋದರರು ಕೆಳಗೂರು ಮಥಾಯಿಸ್ ಎಂಬುವವರಿಗೆ ೩೫೦೦೦ ರೂ. ಗಳಿಗೆ ಮಾರಾಟ ಮಾಡಿದರು. ಕ್ರಮೇಣ ಈ ತೋಟವನ್ನು ನೋಡಿಕೊಳ್ಳುವವರಿಲ್ಲದಾಯಿತು. ಆದುದರಿಂದ ೧೯೨೬ರಲ್ಲಿ ದಿವಾನ್ ಶೇಷಾದ್ರಿ ಐಯ್ಯರ್‌ರವರ ಆಡಳಿತಾವಧಿಯಲ್ಲಿ ಸರ್ಕಾರವು ವಶಕ್ಕೆ ತೆಗೆದುಕೊಂಡಿತು.[೭]

ಮೂಡಿಗೆರೆ ತಾಲೂಕಿನ ಬಾಳೂರು ತೋಟವನ್ನು ೧೮೭೦ರಲ್ಲಿ ಕೋಲೋನಲ್ ಓನ್‌ಸ್ಲೋ ಎಂಬ ಆಂಗ್ಲ ಫ್ಲಾಂಟರನು ಪ್ರಾರಂಭಿಸಿದನು. ಈ ತೋಟವು ೧೮೫೨ರ ಅವಧಿಯಲ್ಲಿ ಇಂಗ್ಲೆಂಡಿನಲ್ಲಿಯೇ ರಿಜಿಸ್ಟ್ರೇಷನ್ ಹೊಂದಿತ್ತು ಎಂದು ವಸಾಹತುಷಾಹಿ ದಾಖಲೆಗಳು ಹೇಳುತ್ತವೆ. ಹಾಗೆಯೇ ಬಣಕಲ್‌ನಲ್ಲಿ ಕನ್ನಗೆರೆ, ಕುದುರೆಗುಂಡಿ, ಬೆಳಗೋಡು, ಮಡಬೂರ್ ಮತ್ತು ಮೂಡಿಗೆರೆಯ ಕೊಳ್ಳಿಬೈಲ್ ತೋಟಗಳು ವಸಾಹತುಷಾಹಿ ಕಾಲದಲ್ಲಿಯೇ ಅಸ್ತಿತ್ವವನ್ನು ಪಡೆದುಕೊಂಡಿದ್ದವು. ಪ್ಲಾಂಟರುಗಳು ತಮ್ಮ ಇಚ್ಛೆಗೆ ಅನುಗುಣವಾಗಿ ತಮ್ಮ ತೋಟದ ಕೆಲಸಗಳನ್ನು ಮಾಡಲು ಬೇಕಾದ ಕೂಲಿಗಳನ್ನು ಬಳಸಿಕೊಳ್ಳುತ್ತಿದ್ದರು, ದಕ್ಷಿಣಕನ್ನಡ, ತಮಿಳುನಾಡು ಮುಂತಾದ ಭಾಗಗಳಿಂದ ಹೆಚ್ಚಾಗಿ ಕೂಲಿಗಳು ಕೆಲಸವನ್ನು ಹುಡುಕುತ್ತಾ ಮಲೆನಾಡಿನ ಭಾಗಗಳಿಗೆ ಬಂದು ಎಸ್ಟೇಟಿನಲ್ಲಿಯೇ ನೆಲೆಸಿ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡಿ ನಂತರ ಹಿಂತಿರುಗುತ್ತಿದ್ದರು. ಧಟ್ಟ ಅರಣ್ಯದ ತಪ್ಪಲುಗಳಲ್ಲಿ ಅಥವಾ ಎಸ್ಟೇಟಿನ ಸಮೀಪದಲ್ಲಿ ಕೂಲಿಗಳಿಗೆ ಗುಡಿಸಲುಗಳನ್ನು (ಲೈನ್) ಒದಗಿಸಿ ಕೊಡುತ್ತಿದ್ದರು ತಮ್ಮ ಬಡತನವನ್ನು ಹೋಗಲಾಡಿಸಲು ಅನಿವಾರ್ಯವಾಗಿ ಕಾಡುಪ್ರಾಣಿಗಳಾದ ಹುಲಿ, ಚಿರತೆ ಮತ್ತು ಹಾವುಗಳ ಹಾವಳಿಯಿದ್ದರೂ ಅವುಗಳನ್ನು ಸಹಿಸಿಕೊಂಡು ಪ್ಲಾಂಟರನ ನಿರ್ದೇಶನದಂತೆ ಕೆಲಸವನ್ನು ಮಾಡಬೇಕಿತ್ತು. ಕೂಲಿಗಳಿಗೆ ಬೇಕಾದ ಕಂಬಳಿ, ಬಟ್ಟೆ, ಆಹಾರ ಮತ್ತು ಹಣವನ್ನು ಒದಗಿಸಿಕೊಡಲಾಗುತ್ತಿತ್ತು,

ನಿರುದ್ಯೋಗಿಗಳಿಗೆ ಉದ್ಯೋಗಾವಕಾಶಗಳು ಸಿಗುತ್ತಿದ್ದವು. ಹಾಗೆಯೇ ಕಾರ್ಮಿಕರ ಜೀವನ ಮಟ್ಟದಲ್ಲಿ ಸುಧಾರಣೆ ಯಾಗುವುದರ ಜೊತೆಗೆ ಪ್ಲಾಂಟರುಗಳ ಬದುಕೂ ವೃದ್ಧಿಸುತ್ತಾ ಬಂದಿತು ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ತೋಟಗಾರಿಕಾ ಬೆಳೆಗಳಿಗೆ ಬೇಡಿಕೆಯೂ ಹೆಚ್ಚಾಗುತ್ತಾ ಬಂದಿತು. ೧೯೧೧ರಲ್ಲಿ ಕೆಂಟ್ ಎಂಬುವವನು ಅರೇಬಿಕಾ ತಳಿಯನ್ನು ಮೊದಲು ಆಲ್ದೂರಿನ ಬಳಿಯ ದೊಡ್ಡನಗುಡ್ಡ ತೋಟದಲ್ಲಿ ಬೆಳೆದ. ಇವನು ಕಂಡುಹಿಡಿದ ಈ ಕಾಫಿಗೆ ನಂತರ 'ಕೆಂಟ್ ಕಾಫಿ' ಎಂದೇ ಹೆಸರಾಯಿತು. ೧೯೨೪ರ ಅವಧಿಯಲ್ಲಿ ೧೦೮ ಚದರ ಮೈಲಿಗಳಷ್ಟು ಕಾಫಿಯ ವಿಸ್ತೀರ್ಣವು ಹಬ್ಬಿತು. ಚಿಕ್ಕಮಗಳೂರು ತಾಲೂಕಿನಲ್ಲಿ ೨೧,೭೫೫ ಎಕರೆ, ಕಡೂರು ೭೬೦ ಎಕರೆ, ಕೊಪ್ಪ ೧೧,೪೫೪ ಮೂಡಿಗೆರೆ ೧೭,೨೦೯, ತರೀಕರೆ ೯,೩೦೭, ನರಸಿಂಹರಾಜಪುರ ೮೦೦೫ ಗಳಷ್ಟಿತ್ತು ಎನ್ನಲಾಗಿದೆ.[೮]

ಕಾಫಿಯನ್ನು ಹೊರತುಪಡಿಸಿದರೆ ಇತರೇ ತೋಟಗಾರಿಕಾ ಬೆಳೆಗಳಾದ ಟೀ, ರಬ್ಬರ್, ಸಿಂಕೋನಾ, ಕರಿಮೆಣಸು, ಏಲಕ್ಕಿ ಮುಂತಾದ ಬೆಳೆಗಳು ವಸಾಹತುಶಾಹಿ ಕಾಲದಲ್ಲಿ ಈ ಜಿಲ್ಲೆಯಲ್ಲಿ ಬೆಳವಣಿಗೆಯನ್ನು ಕಂಡಿತು. ಫ್ರಾನ್ಸಿಸ್ ಬುಕನನ್ "ಎ ಜರ್ನಿ ಫ್ರಮ್ ಮದ್ರಾಸ್, ಮೈಸೂರು, ಕೆನರಾ ಅಂಡ್ ಮಲಬಾರ್" ಎಂಬ ಪ್ರವಾಸ ಕಥನದಲ್ಲಿ ಮೈಸೂರು ರಾಜ್ಯದ ವ್ಯಾಪ್ತಿಗೆ ಒಳಪಟಿದ್ದ ಚಿಕ್ಕಮಗಳೂರು ಜಿಲ್ಲೆಯ ಹಲವಾರು ಸ್ಥಳಗಳನ್ನು ಬುಕನನ್ ಉಲ್ಲೇಖಿಸುತ್ತಾನೆ. ಅವುಗಳಲ್ಲಿ ಶೃಂಗೇರಿ, ಕೊಪ್ಪ, ಕಿಗ್ಗಾ, ನೆಮ್ಮಾರು, ಕಳಸ ಮುಂತಾದ ಸ್ಥಳಗಳ ಬಗ್ಗೆ ವಿವರಿಸುತ್ತಾ ಅಪಾರ ಪ್ರಮಾಣದ ಕರಿಮೆಣಸು, ಶ್ರೀಗಂಧ ಮುಂತಾದವುಗಳನ್ನು ಈ ಭಾಗಗಳಲ್ಲಿ ಬೆಳೆಯಲಾಗುತ್ತಿತ್ತು ಮತ್ತು ಇಲ್ಲಿನ ಬೆಳೆಗಳಿಗೆ ರಾಷ್ಟ್ರ ಮಟ್ಟದಲ್ಲಿ ಮಾತ್ರವಲ್ಲದೆ ಅಂತರಾಷ್ಟ್ರೀಯ ಮಟ್ಟದಲ್ಲೂ ಬೇಡಿಕೆ ಇತ್ತು ಎನ್ನುತ್ತಾನೆ. ಬ್ರಿಟಿಷ್ ಪ್ಲಾಂಟರುಗಳು ಕಾಫಿಯ ಜೊತೆ ಟೀ, ಸಿಂಕೋನಾ ಬೆಳೆಗಳನ್ನು ಬೆಳೆದರು, ಅದರಲ್ಲಿ ಮುಖ್ಯವಾಗಿ ಟೀ ಯು ಕೊಪ್ಪ ಮತ್ತು ಕೆಳಗೂರು ಎಂಬಲ್ಲಿ ಕಾಣಬಹುದು, ಹಾಗೆಯೇ ಸಿಂಕೋನಾ ಬೆಳೆಯನ್ನು ಕೊಪ್ಪ, ಮೂಡಿಗೆರೆಗಳಲ್ಲಿ ಬೆಳೆಯಲಾಗುತ್ತಿತ್ತು. ರಬ್ಬರ್ ಬೆಳೆಯೂ ಕೂಡ ಕೊಪ್ಪ, ಮೂಡಿಗೆರೆ ವ್ಯಾಪ್ತಿಯಲ್ಲಿ ಇತ್ತು ಎನ್ನುತ್ತಾರೆ.[೯]

ತೋಟಗಾರಿಕಾ ಬೆಳವಣಿಗೆಯು ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೆಚ್ಚಾಗಿ ವಸಾಹತುಶಾಹಿ ಕಾಲಾವಧಿಯಲ್ಲಿಯೇ ಆಯಿತು. ಆಂಗ್ಲರು ಐರೋಪ್ಯ ಬಂಡವಾಳವನ್ನು ವಾಣಿಜ್ಯ ಕೃಷಿಯನ್ನು ಬೆಳೆಯುವುದಕ್ಕೆ ಹೆಚ್ಚು ವ್ಯಯಮಾಡಿ ಅದರಿಂದ ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಲಾಭವನ್ನು ಗಳಿಸುತ್ತಿದ್ದರು. ಹಾಗೆಯೇ ಅಂದಿನ ಮೈಸೂರು ರಾಜ್ಯದ ಒಡೆಯರುಗಳ ಸಹಕಾರದಂತೆ ಹಾಗೂ ಬ್ರಿಟಿಷ್ ಸರ್ಕಾರದ ನಿರ್ದೇಶನದಂತೆ ತೋಟಗಾರಿಕಾ ಕೃಷಿಯನ್ನು ಮಾಡಲು ಬಟಾಯಿ ಭೂಮಿ ಗಳನ್ನು ವಿತರಿಸುವುದಾಗಿ ಆದೇಶ ಹೊರಡಿಸಿತು. ಇದರ ಪರಿಣಾಮವಾಗಿ ಹಲವಾರು ಸ್ಥಳೀಯ ಹಾಗೂ ಐರೋಪ್ಯ ಭೂ ಒಡೆಯರುಗಳು ಬಟಾಯಿ ಭೂಮಿಯನ್ನು ಪಡೆದು ವಾಣಿಜ್ಯ ಕೃಷಿಯನ್ನು ಬೆಳೆಯುವಲ್ಲಿ ಸಫಲರಾದರು, ಮೈಸೂರು ರಾಜ್ಯಕ್ಕೆ ನಗದಿತ ಪ್ರಮಾಣದ ಕಂದಾಯವನ್ನು ನೀಡಬೇಕಿತ್ತು. ೧೮೨೩ರಲ್ಲಿ ಪ್ಯಾರಿ ಮತ್ತು ಕಂಪೆನಿಯವರು ಪ್ರತಿ ವರ್ಷದಲ್ಲಿ ೪೨೭೦ರೂ ಸರ್ಕಾರಕ್ಕೆ ಕಂದಾಯ ಪಾವತಿ ಮಾಡುವಂತೆ ಒಪ್ಪಂದವನ್ನು ಮಾಡಿಕೊಟ್ಟು ಕಂದಾಯ ವಸೂಲಿ ಜವಾಬ್ದಾರಿ ಯನ್ನು ಅವರಿಗೆ ನೀಡಲಾಯಿತು.[೧೦] ರಾಜ್ಯದಲ್ಲಿ ಕಮಿಷನರು ಗಳ ಆಡಳಿತಾವಧಿಯಲ್ಲಿ ವಾಣಿಜ್ಯ ತೋಟಗಾರಿಕಾ ಉದ್ದಿಮೆ ಗಳು ರಾಜ್ಯದಲ್ಲಿ ಪ್ರಗತಿಯನ್ನು ಕಂಡಿತು. ಕಮಿಷನರುಗಳು ಹೆಚ್ಚು ಹೆಚ್ಚು ಬಂಡವಾಳವನ್ನು ತೋಟಗಾರಿಕೆಗೆ ವ್ಯಯಿಸಿದ ರಲ್ಲದೆ, ರಾಜ್ಯದ ಆರ್ಥಿಕ ಪ್ರಗತಿಗೆ ಕಾರಣರಾದರು. ದಿವಾನರು ಗಳ ಆಡಳಿತಾವಧಿಯಲ್ಲೂ ಕೃಷಿ ಮತ್ತು ತೋಟಗಾರಿಕೆಯು ಪ್ರಗತಿಯನ್ನು ಕಂಡಿತು. ಅಂದಿನ ಮೈಸೂರಿನ ದಿವಾನರಾಗಿದ್ದ ಸಿ. ರಂಗಾಚಾರ್ಲುರವರ ಆಡಳಿತಾವಧಿಯಲ್ಲಿ ಅವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಿ ತೋಟಗಾರಿಕಾ ಬೆಳೆಗಾರರ ಹಿತದೃಷ್ಟಿ ಯಿಂದ ಬ್ಯಾಂಕಿಂಗ್ ಸೌಲಭ್ಯವನ್ನು ಜಾರಿಗೆ ತಂದರು, ಅಂತೆಯೇ ಆಗ ಚಿಕ್ಕಮಗಳೂರಿನಲ್ಲಿಯೂ ಬ್ಯಾಂಕುಗಳು ಸ್ಥಾಪನೆಗೊಂಡು ಬೆಳೆಗಾರರಿಗೆ ಹಣಕಾಸು ಸೌಲಭ್ಯಗಳನ್ನು ಒದಗಿಸಿ, ಜಿಲ್ಲೆಯ ರೈತರ ಆರ್ಥಿಕ ಪ್ರಗತಿಗೆ ಕಾರಣರಾದರು.[೧೧]

ವಿವಿಧ ಜಿಲ್ಲೆಗಳಲ್ಲಿ ಬೇರೆ ಬೇರೆ ಜಾತಿ ಸಮುದಾಯ ಗಳಿಗೆ ಸೇರಿದ ಕಾರ್ಮಿಕರು ಎಸ್ಟೇಟಿಗೆ ಕೆಲಸವನ್ನು ಮಾಡಲು ಮುಕ್ತ ಭಾವನೆಗಳನ್ನು ಮತ್ತು ತಮ್ಮ ಜೀವನಾವಶ್ಯಕತೆಗೆ ಬೇಕಾದ ಉದೋಗವನ್ನು ಇಟ್ಟುಕೊಂಡು ಬರುತ್ತಿದ್ದರು, ಆದರೆ ಕೆಲವೊಂದು ಪ್ಲಾಂಟರುಗಳು ಕಾರ್ಮಿಕರನ್ನು ಎಸ್ಟೇಟಿ ನಿಂದ ಹೊರಗೆ ಹೋಗದಂತೆ ಕೆಲವೊಂದು ಕಟ್ಟುಪಾಡು ಗಳನ್ನು ಜಾರಿಗೊಳಿಸಿ ಕಾರ್ಮಿಕರನ್ನು ಬಾಹ್ಯ ಪ್ರಪಂಚದ ಆಗುಹೋಗುಗಳಲ್ಲಿ ಭಾಗವಹಿಸಲು ಬಿಡುತ್ತಿರಲಿಲ್ಲ. ಕೆಲವು ಕಡೆಗಳಲ್ಲಿ 'ಫ್ರೀ' ಹಾಗು 'ಅನ್ ಫ್ರೀ' ವ್ಯವಸ್ಥೆ ಇತ್ತು. ಕೆಲವು ಕಡೆ ಉಚಿತವಾಗಿ ದುಡಿಸಿಕೊಳ್ಳುವ ಪದ್ಧತಿಯಿತ್ತು, ಹಾಗೆಯೇ ಕೆಲವು ಕಡೆ ಬಿಡುವಿಲ್ಲದ ಕೆಲಸವನ್ನು ಮಾಡಿಸುತ್ತಿದ್ದರು. ಒಟ್ಟಾರೆಯಾಗಿ ಪ್ಲಾಂಟೇಷನ್ ಸಂಸ್ಕೃತಿಯು ಒಂದು ಕೂಲಿ ಗಳಿಗೆ ಕೆಲವೊಮ್ಮೆ ಅನುಕೂಲಕರವಾಗಿದ್ದರೆ ಕೆಲವೊಮ್ಮೆ ಕಷ್ಟದ ವಾತಾವರಣವನ್ನು ಸೃಷ್ಟಿಸಿತು.[೧೨]

ಕಾಫಿಯ ತವರು ಎಂದು ಕರೆಸಿಕೊಂಡಿರುವ ಚಿಕ್ಕಮಗ ಳೂರು ಜಿಲ್ಲೆಯು ಕೃಷಿಯ ಜೊತೆಗೆ ವಾಣಿಜ್ಯ ಬೆಳೆಗಳನ್ನು

ಬೆಳೆಯುವ ಜಿಲ್ಲೆಯಾಗಿದ್ದು ಯುರೋಪಿಯನ್ನರ ಆಗಮನದ ನಂತರ ಹಲವಾರು ಬದಲಾವಣೆಯನ್ನು ಕಂಡಿತು. ೧೯ನೇ ಶತಮಾನದಲ್ಲಿ ಜಿಲ್ಲೆಗೆ ಪ್ರವೇಶಿಸಿದ ಯುರೋಪಿಯನ್ನರು ಧಟ್ಟ ಅರಣ್ಯ ಪ್ರದೇಶಗಳಿಂದ ಕೂಡಿದ್ದ ಚಿಕ್ಕಮಗಳೂರು ಜಿಲ್ಲೆಯಲ್ಲಿ ವಾಣಿಜ್ಯ ನೀತಿಗಳನ್ನು ಜಾರಿಗೆ ತಂದು ಸಮಗ್ರ ಪ್ರಗತಿಗೆ ಯೋಜನೆಗಳನ್ನು ತಂದು ವ್ಯವಸ್ಥಿತ ಸಾರಿಗೆ ಸಂಪರ್ಕ ವನ್ನು ಕಲ್ಪಿಸಿ ತೋಟಗಾರಿಕಾ ಉದ್ಯಮವನ್ನು ಪ್ರಾರಂಬಿಸಿ ಸ್ಥಳೀಯರ ಸಹಕಾರವನ್ನು ಪಡೆದು ವಾಣಿಜ್ಯ ಬೆಳೆಗಳನ್ನು ಬೆಳೆಯಲಾರಂಭಿಸಿದರು. ಹೀಗೆ ಯುರೋಪಿಯನ್ ಬಂಡವಾಳದಾರರಿಂದ ಪ್ರಾರಂಭವಾದ ತೋಟಗಾರಿಕಾ ಉದ್ಯಮವು ಒಂದು ರೀತಿಯಲ್ಲಿ ಜಿಲ್ಲೆಯ ಹಾಗು ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಕಾರಣವಾದರೆ, ಇನ್ನೊಂದು ರೀತಿಯಲ್ಲಿ ಮಲೆನಾಡಿನ ಜಿಲ್ಲೆಗಳಾದ ಚಿಕ್ಕಮಗಳೂರು, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿದ್ದ ನೈಸರ್ಗಿಕ ಧಟ್ಟ ಅರಣ್ಯ ಪ್ರದೇಶಗಳು ವಿನಾಶದ ಹಂತವನ್ನು ತಲುಪುತ್ತಾ ಬಂದಿತು. ಬ್ರಿಟಿಷ್ ಭಾರತದಲ್ಲಿ ನಡೆಯುತ್ತಿದ್ದ ಶೋಷಣೆಗಳು, ದೌರ್ಜನ್ಯಗಳು ಸ್ವಾತಂತ್ರ್ಯ ನಂತರ ಕಡಿಮೆಗೊಂಡು ತೋಟಗಾರಿಕಾ ಉದ್ಯಮವು ಸ್ಥಳೀಯ ಬೆಳೆಗಾರರ, ರೈತರ ಮತ್ತು ಕಾರ್ಮಿಕರ ಜೀವನಾವಶ್ಯಕತೆಗಳನ್ನು ಪೂರೈಸಿಕೊಳ್ಳುವ ಮತ್ತು ರಾಷ್ಟ್ರೀಯ, ಅಂತರಾಷ್ಟ್ರೀಯ ಮಟ್ಟದಲ್ಲಿ ಆರ್ಥಿಕ ಪ್ರಗತಿಯನ್ನು ಸಾಧಿಸುವ ಮಾದ್ಯಮವಾಗುತ್ತಾ ಬರುತ್ತಿರುವುದನ್ನು ಕಾಣಬಹುದು.

ಆಧಾರಸೂಚಿ ಮತ್ತು ಅಡಿಟಿಪ್ಪಣಿಗಳು

೧. Shetty, Ravichandra, Coffee Naadina Jeevana Kathegalu, (Kannada), Bagalore, 2003, p. 14.

೨. Rice, Lewis, Mysore and Coorg Gazetteer, Vol III, Bangalore, 1878, p.44.

೩. S. Muthiah, A Planting Century: the first hundred years of The United Planters Association of Southern India 1893-1993, Madras, 1993, p.301.

೪. Nagegowda H.L., Bettadinda Battalige (Kannada), Bangalore, 1978 (IInd Ed), p.59.

೫. Elliot, Robert H., Gold, Sport and Coffee Planting in Mysore, London, 1894, p.19.

೬ Shetty, Ravichandra. Op. cit., p.15.

೭. Krishnan G.Y., Coffee Guide (Kannada), Central Coffee Research Centre, Chikmagalur District, Bangalore, 1989, p.3.

೮. S. Muthiah, Op. cit., p.27.

೯. Buchanan, Francis, A Journey from Madras through the countries of Mysore, Canara, Malabar (vol 3), London, 1807, p.228.

೧೦. Nagegowda H.L., Op. cit., p.59.

೧೧. C. Hayavadana Rao, Mysore Gazetteer vol IV, Delhi, 1984, p.2979.

೧೨. Baak, Paul Eric Plantation Development in South West India 1743-1963, Plantation Production and Political Power, Delhi, 1997, p.17.

ಗ್ರಂಥಋಣ

೧. Shetty, Ravichandra, Coffee Naadina Jeevana Kathegalu, (Kannada), Bagalore, 2003.

೨. Rice, Lewis, Mysore and Coorg Gazetteer, Vol III, Bangalore, 1878.

೩. S. Muthiah, A Planting Century: the first hundred years of The United Planters Association of Southern India 1893-1993, Madras, 1993.

೪. Nagegowda H.L., Bettadinda Battalige (Kannada), Bangalore, 1978 (IInd Ed).

೫. Elliot, Robert H., Gold, Sport and Coffee Planting in Mysore, London, 1894.

೬ Krishnan G.Y., Coffee Guide (Kannada), Central Coffee Research Centre, Chikmagalur District, Bangalore, 1989.

೭. Buchanan, Francis, A Journey from Madras through the countries of Mysore, Canara, Malabar (3 volumes), London, 1807.

೮. C. Hayavadana Rao, Mysore Gazetteer vol IV, Delhi, 1984.

೧೨೯

ಹುದಲಿ ಖಾದಿಗ್ರಾಮೋದ್ಯೋಗ ಕೇಂದ್ರ ಒಂದು ನೋಟ

ಡಾ. ಶಿವಕುಮಾರ್ ಎ.*

ಗಾಂಧೀಜಿಯವರು ಗುಜರಾತಿನ ಸಬರಮತಿಯಲ್ಲಿ ಆಶ್ರಮವನ್ನು ಸ್ಥಾಪಿಸಿದ ನಂತರ ಈ ಆಶ್ರಮದ ಮಾದರಿಯಲ್ಲಿಯೇ ದೇಶದ ವಿವಿಧ ಭಾಗಗಳಲ್ಲಿ ಆಶ್ರಮಗಳು ಸ್ಥಾಪನೆಯಾದವು. ಆ ಸಂದರ್ಭದಲ್ಲಿ ಕರ್ನಾಟಕದಲ್ಲಿ ಗಂಗಾಧರ್ ರಾವ್ ದೇಶಪಾಂಡೆಯವರ ನಾಯಕತ್ವದಲ್ಲಿ ಹುದಲಿಯಲ್ಲಿ "ಕುಮರಿ" ಆಶ್ರಮ ಸಹ ಸ್ಥಾಪನೆಯಾಯಿತು. ಮಹಾತ್ಮಾ ಗಾಂಧೀಜಿಯವರಿಂದ ಪ್ರಭಾವಿತರಾದಂತಹ ನಾಯಕರುಗಳು ದೇಶದೆಲ್ಲೆಡೆ ಆಶ್ರಮಗಳನ್ನು ಸ್ಥಾಪಿಸಿ ಅವುಗಳ ಮೂಲಕ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಂಡರು. ಹೀಗಾಗಿ ಅದೇ ಮಾದರಿಯನ್ನು ಅನುಸರಿಸಿದ ಗಂಗಾಧರ್‌ರಾವ್ ದೇಶಪಾಂಡೆಯವರು ಕರ್ನಾಟಕದ ಬೆಳಗಾವಿ ಜಿಲ್ಲೆಯ ಹುದಲಿಯಲ್ಲಿ ೧೯೨೩ರಲ್ಲಿ ಆಶ್ರಮವನ್ನು ತಮ್ಮ ಸ್ವಂತ ಖರ್ಚಿನಿಂದ ತಮ್ಮ ಜಮೀನನಲ್ಲಿ ಸ್ಥಾಪಿಸಿದರು. ಕುಂದರ ನಾಡಿನ ಭಾಗದಲ್ಲಿ ಇವರು ಖಾದಿ ಮತ್ತು ಗ್ರಾಮೋದ್ಯೋಗಗಳ ಅಭಿವೃದ್ಧಿಗೆ ಹೆಚ್ಚು ಶ್ರಮಿಸಿದರು.

ಹುದಲಿ ಕೇಂದ್ರವು ೧೯೨೫ರಿಂದ ಖಾದಿ ಉತ್ಪಾದನೆಯ ಕಾರ್ಯಾರಂಭ ಮಾಡಿತು. ಗಂಗಾಧರ್ ರಾಯರು ಇದರ ಜವಾಬ್ದಾರಿಯನ್ನು ಹೊತ್ತು ಮುನ್ನೆಡೆಸಿದರು. ಈ ಹುದಲಿ ಆಶ್ರಮವು ಖಾದಿ ಪ್ರಚಾರದ ಜೊತೆಗೆ ಸತ್ಯಾಗ್ರಹಿಗಳನ್ನು ತಯಾರು ಮಾಡುವ ಕೇಂದ್ರವಾಯಿತು. ಕರ್ನಾಟಕ ಮತ್ತು ಮಹಾರಾಷ್ಟ್ರದ ಸತ್ಯಾಗ್ರಹಿಗಳು ಹುದಲಿಗೆ ಬಂದು ಖಾದಿ ಗ್ರಾಮೋದ್ಯೋಗ ಹಾಗೂ ಇತರೆ ಚಟುವಟಿಕೆಗಳ ಬಗ್ಗೆ ತರಬೇತಿಯನ್ನು ಪಡೆದುಕೊಳ್ಳುತ್ತಿದ್ದರು. ಗಂಗಾಧರ್ ರಾಯರು ಕುಂದರನಾಡಿನ ಹೆಣ್ಣುಮಕ್ಕಳಿಗೆ ಅವರ ಬಿಡುವಿನ ವೇಳೆಯಲ್ಲಿ ಬಂದು ಆಶ್ರಮದಲ್ಲಿ ಖಾದಿ ಕೆಲಸ ಮಾಡಬೇಕೆಂದು ಕೇಳಿಕೊಂಡರು. ಇವರ ಈ ರೀತಿಯ ಪ್ರೇರಣೆಯಿಂದ "ರಾಟಿ ಮೇಟಿಗಳೇ ರಾಷ್ಟ್ರದ ಉದ್ಧಾರದ ಸಂಕೇತ" ಎಂದು ಜನರು ನೇಯುವ ಕಾರ್ಯದಲ್ಲಿ ತೊಡಗಿದರು. ಶ್ರೀಯುತರ ಆಹ್ವಾನವನ್ನು ಸ್ವೀಕರಿಸಿದ ಅಲ್ಲಿನ ಹೆಣ್ಣುಮಕ್ಕಳು ಮತ್ತು ನೇಕಾರರು ಖಾದಿ ಉತ್ಪಾದನೆ ಮತ್ತು ನೇಯ್ಗೆ ಕೆಲಸದಲ್ಲಿ ತೊಡಗಿದರು.[೧]

ಕರ್ನಾಟಕದಿಂದ ೧೬ ಜನ ಸತ್ಯಾಗ್ರಹಿಗಳು "ಜಮ್ನೋಲಾಲ್ ಖಾದಿ ವಿದ್ಯಾಲಯ"ದ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅವರಲ್ಲಿ ಸೋಮಲಿಂಗ ಅಪ್ಪಣ್ಣ ಮಳಗಲಿಯವರು ಸಹ ಒಬ್ಬರಾಗಿದ್ದು, ಅಲ್ಲಿ ನೇಯುವ ತರಬೇತಿಯನ್ನು ಪಡೆದುಕೊಂಡು ಬಂದು ಖಾದಿ ನೇಯುವ ಕಾರ್ಯದಲ್ಲಿ ತೊಡಗಿದರು. ಬಿಜಾಪುರದ ನೀಲಕಂಠಯ್ಯ ಗಣಾಚಾರಿಯವರು ೧೮ ಹಳ್ಳಿಗಳಲ್ಲಿ ನೇಯ್ಗೆ ಕಾರ್ಯ ಪ್ರಾರಂಭಿಸಿದರು. ಅವರು ಸ್ವತಃ ತಾವೇ ನೇಯ್ದ ಬಟ್ಟೆಗಳನ್ನು ಧರಿಸುತ್ತಿದ್ದರು. ಈ ಕೇಂದ್ರಕ್ಕೆ ಮೂಲ ಕಚ್ಚಾವಸ್ತುಗಳು ಜಿಲ್ಲೆಯ ಸುಲಧಾಳ, ಅಕ್ಕತಂಗೇರಹಾಳ, ಮದವಾಲ, ಉರಬಿನಹಟ್ಟಿ ಮತ್ತು ಪಾಚ್ಚಾಪುರ ಮುಂತಾದ ಗ್ರಾಮಗಳಲ್ಲಿನ ನೂತ ನೂಲು ಹುದಲಿ ಆಶ್ರಮದ ನೇಯ್ಗೆ ಕೇಂದ್ರಕ್ಕೆ ಪೂರೈಕೆಯಾಗುತ್ತಿತ್ತು.[೨]

ಈ ರೀತಿಯಾಗಿ ಖಾದಿ ಕಾರ್ಯಕರ್ತರು ಖಾದಿ ಮತ್ತು ಗ್ರಾಮೋದ್ಯೋಗ ಕಾರ್ಯಗಳನ್ನು ಕೈಗೊಳ್ಳುವುದರ ಮೂಲಕ ರಾಷ್ಟ್ರದ ಸ್ವಾತಂತ್ರ್ಯ ಚಳುವಳಿಗೆ ಹೆಚ್ಚಿನ ಬೆಂಬಲವನ್ನು ನೀಡಿದರು. ಈ ಕಾರಣದಿಂದಾಗಿ ೧೯೩೫ರವರೆಗೆ ಹುದಲಿ ಆಶ್ರಮವನ್ನು ಸರ್ಕಾರ ವಶಪಡಿಸಿಕೊಂಡಿತು. ಆ ವೇಳೆಯಲ್ಲಿ ಖಾದಿ ಕಾರ್ಯವು ಸ್ಥಗಿತಗೊಂಡಿತು. ಈ ವೇಳೆಯಲ್ಲಿ ಬಿಡುಗಡೆಯಾದ ಸತ್ಯಾಗ್ರಹಿಗಳು ಹುದಲಿಯಲ್ಲಿ ಖಾದಿ ಕಾರ್ಯವನ್ನು ಪುನಃ ಪ್ರಾರಂಭಿಸಬೇಕೆಂದು ತೀರ್ಮಾನಿಸಿದರು. ಪುಂಡಾಲೀಕಾಜಿ ಕಾತಗಡೆ ರಾಮಚಂದ್ರ ವಡವಿ, ಗಂಗಪ್ಪಯಮಕನಮರಡಿ ಹುದಲಿಯಲ್ಲಿ, ದಾದಾಕಾಳೆಯವರು ಸುಲಧಾಳದಲ್ಲಿ, ವಾಮನರಾವ್ ಬಿದರಿಯವರು ಅಕ್ಕತಂಗೇರಹಾಳದಲ್ಲಿ, ಅಣುಗುರೂಜಿ ಪಾಶ್ಚಾಪುರದಲ್ಲಿ, ಹೀಗೆ ಪ್ರತಿಯೊಬ್ಬರು ಒಂದೊಂದು ಭಾಗದಲ್ಲಿ ಖಾದಿ ಕಾರ್ಯವನ್ನು ನಿರ್ವಹಿಸುತ್ತಾ ಹುದಲಿಯ ಕುಮರಿ ಆಶ್ರಮದ ಸಾರ್ವಜನಿಕ ಚಟುವಟಿಕೆಗಳನ್ನು ಮುಂದುವರೆಸಿದರು. ನಂತರದ ದಿನಗಳಲ್ಲಿ ಕರ್ನಾಟಕದಲ್ಲಿ ಖಾದಿ ಕೆಲಸ ನಡೆಸುವ ಸಂಘಗಳು ಚರಕ ಸಂಘದ ಪರವಾಗಿ ಕೆಲಸ ಮಾಡುತ್ತಿದ್ದರಿಂದ ಹುದಲಿ ಭಾಗದ ಖಾದಿ ಕೆಲಸವೂ ಸಹ ಚರಕ ಸಂಘಕ್ಕೆ ಒಳಪಟ್ಟಿದ್ದು ಹುದಲಿ

* ಇತಿಹಾಸ ಉಪನ್ಯಾಸಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಗಡಿ.

ಭಾಗದಲ್ಲಿ ತಯಾರಾದಂತಹ ಖಾದಿ ಅಂಗಡಿಗಳಿಗೆ ಕಳುಹಿಸ ಲಾಗುತ್ತಿತ್ತು. ನಂತರದ ದಿನಗಳಲ್ಲಿ ಗಂಗಪ್ಪ ಯಮಕನಮರಡಿ, ಅಣ್ಣಾಬಸಪ್ಪ ಮರಲಿಂಗಣ್ಣನವರ, ತಿಪ್ಪಣ್ಣ ಬೆಟಗೇರಿ ಇವರುಗಳು ಚರಕ ಸಂಘದ ಕಾರ್ಯಕರ್ತರಾಗಿ ಕೆಲಸ ನಿರ್ವಹಿಸಿದರು.

೧೯೩೬ರಲ್ಲಿ ಹುದಲಿಯಲ್ಲಿ "ತರುಣರ ಸಂಘ" ಸ್ಥಾಪಿಸಲ್ಪಟ್ಟಿತ್ತು. ಈ ತರುಣ ಸಂಘದ ಸದಸ್ಯರು ಖಾದಿದಾರಿ ಗಳಾಗಿದ್ದರು. ತರುಣ ಸಂಘದ ಸದಸ್ಯರಾಗಿದ್ದಂತಹ ಬೀಮಪ್ಪ ನಿಂಗಪ್ಪ ಭೂಶಿ, ಬೀ.ಚ ಯಲಿಗಾರ, ಕೆಂಚನಗೌಡ ಪಾಟೀಲ್, ತಿ.ಯ ಬೆಟಗೇರಿ ಇವರುಗಳು ಪ್ರತಿದಿನ ಹಂಜಿ ತಯಾರಿಸಿ ಖಾದಿ ಉತ್ಪಾದನೆ ಮಾಡುತ್ತಿದ್ದು ಈ ಕೇಂದ್ರದಲ್ಲಿ ಖಾದಿ ಉತ್ಪಾದನೆಯನ್ನು ದ್ವಿಗುಣಗೊಳಿಸಿದರು. ಹುದಲಿಯಲ್ಲಿ ೧೯೩೭ರ ಏಪ್ರಿಲ್ ೧೬ರಿಂದ ಏಳು ದಿವಸಗಳ ಕಾಲ "ಅಖಿಲ ಭಾರತ ಖಾದಿ ಸೇವಾಸಮ್ಮೇಳನ" ನಡೆಯಿತು. ಈ ಸಮ್ಮೇಳನವನ್ನು ಗಂಗಾಧರರಾಯರು ಆಶ್ರಮದ ಹಿರಿಯ ಕಾರ್ಯಕರ್ತರಾಗಿದ್ದಂತಹ ಶ್ರೀ ಪುಂಡಲೀಕಾಜಿ, ಶ್ರೀ ವಡವಿಜಿ, ಅಣ್ಣುಗುರೂಜಿ ಮತ್ತು ವಾಮನರಾವ್ ಬಿದರಿ ಯವರ ಸಹಕಾರದೊಂದಿಗೆ ಸಂಘಟಿಸಿದರು. ಗಾಂಧೀಜಿ ಯವರು ಈ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ತರುಣ ಸಂಘದ ಮುಂಚೂಣಿ ಕಾರ್ಯಕರ್ತರಾದಂತಹ ಭೀಮಪ್ಪ ನಿಂಗಪ್ಪ ಭೋಶಿ, ಬೀ.ಚ ಯಲಿಗಾರ ಇವರು ಏಳು ದಿವಸ ಗಳ ಕಾಲ ಗಾಂಧೀಜಿಯವರ ಜೊತೆಗಿದ್ದು, ಅವರಿಗೆ ಬೇಕಾದಂತಹ ಹಂಜಿಯನ್ನು ತಯಾರಿಸಿ ಕೊಡುತ್ತಿದ್ದರು. ಖಾದಿಯ ಪ್ರದರ್ಶನವನ್ನು ಸಹ ಈ ಸಂದರ್ಭದಲ್ಲಿ ಏರ್ಪಡಿಸ ಲಾಗಿತ್ತು.[೩]

ಗಾಂಧೀಜಿಯವರನ್ನು ನೋಡಲು ಬಂದವರೆಲ್ಲಾ ಖಾದಿಯನ್ನು ಕೊಳ್ಳುತ್ತಿದ್ದರಿಂದ ಮತ್ತು ಖಾದಿ ದಾರಿಗಳಾಗಲು ಪ್ರತಿಜ್ಞೆ ತೊಡುತ್ತಿದ್ದರಿಂದ ಹೆಚ್ಚಿನ ಮಟ್ಟದಲ್ಲಿ ಈ ಸಂದರ್ಭದಲ್ಲಿ ಖಾದಿಯ ಮಾರಾಟವಾಯಿತು. ಮುಂಬಯಿ ಪ್ರಾಂತ್ಯದಲ್ಲಿ ಬಿ.ಜಿ. ಕೇರ್ ನಾಯಕತ್ವದಲ್ಲಿ ಸರ್ಕಾರ ರಚನೆಯಾಗಿ ಈ ಸರ್ಕಾರ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ನೇಯ್ಗೆ ತರಬೇತಿಗೆ ಆದ್ಯತೆ ನೀಡಿತು. ಇದರಿಂದಾಗಿ ಖಾದಿಯು ಮತ್ತಷ್ಟು ಪ್ರಚಾರಗೊಂಡಿತು.

೧೯೩೬ರಲ್ಲಿ ಗಂಗಾಧರರಾಯರು ತಮ್ಮ ಸ್ವಂತ ಪರಿಶ್ರಮದಿಂದಲೇ ಈ ಭಾಗದ ಜನರಲ್ಲಿ ಖಾದಿ ಕಾರ್ಯದ ಜೊತೆಗೆ ರಾಷ್ಟ್ರಭಕ್ತಿಯನ್ನು ಜಾಗೃತಗೊಳಿಸಿದರು. ಈ ಸಂಸ್ಥೆಯು ೧೯೩೬ರಲ್ಲಿ ಅಖಿಲ ಭಾರತ ಚರಕ ಸಂಘದ ಮೇಲ್ವಿಚಾರಣೆ ಯಲ್ಲಿ ತನ್ನ ಕಾರ್ಯವನ್ನು ಮುಂದುವರೆಸಿತು. ಗಂಗಾಧರ ರಾಯರು "ಕರ್ನಾಟಕ ಚರಕ ಸಂಘ"ದ ಅಧ್ಯಕ್ಷರಾಗಿ ೧೯೩೭ ರಿಂದ ೧೯೪೪ರ ತನಕ ಹುದಲಿಯ ಆಶ್ರಮವನ್ನು ಚರಕ ಸಂಘದ ಆಶ್ರಯದಲ್ಲಿ ಮುನ್ನಡೆಸಿದರು. ೧೯೪೧ರಲ್ಲಿ ಹುದಲಿಯಲ್ಲಿಯೇ 'ಜಮನ್‌ಲಾಲ್ ಖಾದಿ ವಿದ್ಯಾಲಯವು' ಪ್ರಾರಂಭವಾಯಿತು.[೪] ಖಾದಿಯ ಕೆಲಸವು ಚರಕ ಸಂಘದಿಂದ ಪ್ರಗತಿಪರವಾಗಿ ನಡೆಯುತ್ತಿರುವಾಗಲೇ "ವಾಧಾ ಆಶ್ರಮ"ದ ಮಾದರಿಯಲ್ಲಿಯೇ ಹುದಲಿಯಲ್ಲಿಯೂ ಸಹ ವಿದ್ಯಾಲಯ ವನ್ನು ಪ್ರಾರಂಭಿಸಿ. ಈ ಭಾಗದ ಸತ್ಯಾಗ್ರಹಿಗಳಿಗೆ ಖಾದಿಯನ್ನು ತಯಾರಿಸುವ ಬಗ್ಗೆ ಹಾಗೂ ಬೌದ್ಧಿಕವಾಗಿ ಗಾಂಧೀ ತತ್ವಜ್ಞಾನ ಮತ್ತು ಖಾದಿ ತತ್ವಜ್ಞಾನವನ್ನು ಕಲಿಸಿಕೊಡುತ್ತಿತ್ತು. ಪ್ರಾರಂಭದಲ್ಲಿ ಈ ವಿದ್ಯಾಲಯಕ್ಕೆ ದುರ್ಯೋಧನಸಿಂಗ್ ಎಂಬುವವರು ಶಿಕ್ಷಕರಾಗಿದ್ದರು. ಪ್ರಾರಂಭದಲ್ಲಿ ೧೪ ಜನರು ಈ ಶಿಕ್ಷಣ ಪಡೆಯಲು ಸೇರಿಕೊಂಡರು.[೫]

ಈ ವಿದ್ಯಾಲಯ ಪ್ರಾರಂಭವಾದ ಒಂದು ವರ್ಷದ ನಂತರ ಸೇವಾ ಗ್ರಾಮದಿಂದ "ದೇವದರಭಾಯಿ ಕಿಶೋರ ಲಾಲಜಿ"ಯವರು ಹುದಲಿಯ ಜಮನ್‌ಲಾಲ್ ಖಾದಿ ವಿದ್ಯಾಲಯಕ್ಕೆ ಬಂದು ಇವರನ್ನು ಪರೀಕ್ಷೆಗೆ ಒಳಪಡಿಸಿ "ಕತಾಯಿ" ಕಾರ್ಯಕರ್ತರೆಂದು ಘೋಷಿಸಿದರು. ನಂತರ ಎರಡನೇ ತಂಡದ ತರಬೇತಿ ಕಾರ್ಯವು ೧೯೪೨ರ ಜೂನ್ ನಲ್ಲಿ ಶ್ರೀ ವಾಸುದೇವಗೋಸಾಲಿಯವರ ಮಾರ್ಗದರ್ಶನದಲ್ಲಿ ನಡೆಯಿತು. ನಂತರದ ದಿನಗಳಲ್ಲಿ ಈ ಆಶ್ರಮದ ಸತ್ಯಾಗ್ರಹ ಕಾರ್ಯಕರ್ತರುಗಳನ್ನೆಲ್ಲ ಚಲೇಜಾವ್ ಚಳುವಳಿಯ ಕಾರಣದಿಂದ ಬಂಧನಕ್ಕೊಳಪಡಿಸಿದಾಗ ಈ ವಿದ್ಯಾಲಯದ ಕಾರ್ಯ ಚಟುವಟಿಕೆಗಳು ೧೯೪೨ರಲ್ಲಿ ಸ್ಥಗಿತಗೊಂಡು ಪುನಃ ೧೯೪೪ರಲ್ಲಿ ಪ್ರಾರಂಭವಾದವು ಈ ಸಂದರ್ಭದಲ್ಲಿ ಕಾರ್ಯಕರ್ತರುಗಳೆಲ್ಲ ಜೈಲಿನಂದ ಹೊರಬಂದ ಮೇಲೆ ಪುನಃ ಚರಕ ಸಂಘದ ಪರವಾಗಿ ಖಾದಿ ಕಾರ್ಯವು ಆರಂಭವಾಯಿತು.

ಈ ವಿದ್ಯಾಲಯವು ಉತ್ತಮ ಖಾದಿ ಕಾರ್ಯಕರ್ತರನ್ನು ನಿರ್ಮಾಣ ಮಾಡುವ ಜವಾಬ್ದಾರಿಯನ್ನು ಹೊಂದಿತ್ತು. ಗಂಗಾಧರರಾವ್ ದೇಶಪಾಂಡೆ ಪುಂಡಲೀಕಾಜಿ, ರಾಮಚಂದ್ರ ವಡವಿ, ಮತ್ತು ಕಾತಗಡೆ ಇವರುಗಳು ಈ ವಿದ್ಯಾಲಯದಲ್ಲಿ ತರಬೇತಿಯನ್ನು ನೀಡುತ್ತಿದ್ದರು. ಮುಂದೆ ೧೯೪೪ರಲ್ಲಿ ಪುಂಡಲೀಕಾಜಿಯವರ ಅಧ್ಯಕ್ಷತೆ ಮತ್ತು ಸೋಮಲಿಂಗ ಅಪ್ಪಣ್ಣ ಮಳಗಲಿ ಅವರ ವ್ಯವಸ್ಥಾಪಕತ್ವದಲ್ಲಿ "ಸಮಗ್ರ ಗ್ರಾಮ ಸೇವಾ ಸಮಿತಿ" ಅಸ್ತಿತ್ವಕ್ಕೆ ಬಂದಿತು. ಈ ಸಮಿತಿಯು ಖಾದಿಯ ಉತ್ಪಾದನೆ ಅಷ್ಟೇ ಅಲ್ಲದೆ ಗೋಸಂರಕ್ಷಣೆ, ಅಸ್ಪೃಶ್ಯತಾ ನಿವಾರಣೆ, ಪಾನನಿರೋಧ, ಶಿಕ್ಷಣ ಮತ್ತು ಗ್ರಾಮಸ್ವರಾಜ್ಯ ಮುಂತಾದ ಇತರೆ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿ ಕೊಂಡಿತು.

೧೯೪೨ರಲ್ಲಿ ಗಾಂಧೀಜಿಯವರ ಬಂಧನವಾಗಿ ನಂತರ ಬಿಡುಗಡೆಯಾದ ಮೇಲೆ ಆಶ್ರಮಗಳನ್ನು ವಿಕೇಂದ್ರಿಕರಿಸುವಂತಹ ಕಾರ್ಯವನ್ನು ನಡೆಸಿದರು. ಆಗ ಹುದಲಿ ಆಶ್ರಮವೂ ಸಹ ಆ ವ್ಯವಸ್ಥೆಗೆ ಒಳಪಟ್ಟಿತು. "ಹುದಲಿಯು ಸಮಗ್ರ ಬೆಳಗಾವಿ ಜಿಲ್ಲಾ ಗ್ರಾಮೋದ್ಯೋಗ ಕೇಂದ್ರ, ಸಾಲಹಳ್ಳಿ, ಹುಲ್ಕುಂದ ಬೈಲಹೊಂಗಲ" ಇತ್ಯಾದಿ ಕೇಂದ್ರಗಳಾಗಿ ವಿಭಾಗವಾಯಿತು. ಗ್ರಾಮ ಸೇವಾ ಸಮಿತಿಯ ಏಕಮೇವ ಟ್ರಸ್ಟಿಗಳಾದ ಶ್ರೀ ಪುಂಡಲೀಕಾಜಿಯವರು ಅನಿವಾರ್ಯ ಕಾರಣಗಳಿಂದ ಖಾದಿ ಕೆಲಸವನ್ನು ಕ್ರಿ.ಶ. ೧೯೫೩ರಲ್ಲಿ ಸಂಪೂರ್ಣವಾಗಿ ನಿಲ್ಲಿಸಿದ ಮೇಲೆ ಹನ್ನೊಂದು (೧೧) ಜನ ಖಾದಿ ಪ್ರೇಮಿ ನಿಷ್ಠಾವಂತ ಕಾರ್ಯಕರ್ತರು[೬] ಆಗಿನ ಪ್ರಧಾನ ಮಾನ್ಯ ನೆಹರೂರವರ ಸಹಕಾರ ತತ್ವದ ಧೋರಣೆಯಂತೆ ೧೯೫೪ರಲ್ಲಿ ಖಾದಿ ಗ್ರಾಮೋದ್ಯೋಗ ಸಹಕಾರ ನಿಯಮಿತ" ಎಂಬ ಸಂಘವನ್ನು ೫೦೦ ರೂಪಾಯಿಗಳ ಬಂಡವಾಳದಿಂದ ಸ್ಥಾಪನೆ ಮಾಡಿದವರು. ಅದು ಇಂದು ಬೃಹದಾಕಾರವಾಗಿ ಬೆಳೆದು ೮ ಕೋಟಿಗಳ ವ್ಯವಹಾರ ವಹಿವಾಟನ್ನು ನಡೆಸುತ್ತಿದೆ.

ಈ ಸಂಘವು ಇಂದಿಗೂ ಶ್ರಮದಾನ, ಭೂದಾನ, ಭಾವೈಕ್ಯ ನಿರ್ಮಾಣ ಗ್ರಾಮೋದ್ಯೋಗ ವಸ್ತುಗಳ ನರ್ಮಾಣ, ಸಾಬೂನು ತಯಾರಿಕೆ, ಊದುಬತ್ತಿ ತಯಾರಿಕೆ, ಉಪ್ಪಿನಕಾಯಿ ಮತ್ತು ಚರ್ಮವನ್ನು ಹದಗೊಳಿಸಿ ಚಪ್ಪಲ ತಯಾರಿಸುವಂತಹ ತರಬೇತಿ ನೀಡುತ್ತಿದೆ. ಪ್ರಸ್ತುತ ಗಂಗಪ್ಪ ಮುದ್ದಪ್ಪ ಮಾಳಗಿಯವರು ಸಂಘದ ಅಧ್ಯಕ್ಷರಾಗಿದ್ದು. ಇಂದಿಗೂ ಸಹ ಯಶಸ್ವಿಯುತವಾಗಿ ಮುನ್ನಡೆಸುತ್ತಿದ್ದಾರೆ.

ಹೀಗೆ ಗಾಂಧೀಜಿಯವರು ತಮ್ಮ ರಚನಾತ್ಮಕ ಕಾರ್ಯಕ್ರಮಗಳ ಮೂಲಕ ೧೯೨೩ರಲ್ಲಿ ಹುದಲಿಯಲ್ಲಿ ಪ್ರಾರಂಭವಾದ ಖಾದಿ ಕೇಂದ್ರವು ಮೊದಲು ಖಾದಿ ನೂಲು ತೆಗೆಯುವ ಕಾರ್ಯವನ್ನಷ್ಟೇ ಮಾಡಿತು. ನಂತರ ಹಂತ ಹಂತವಾಗಿ ತನ್ನ ಕಾರ್ಯವನ್ನು ವಿಸ್ತರಿಸಿ ಗ್ರಾಮೋದ್ಯೋಗಗಳನ್ನು ಅಭಿವೃದ್ಧಿಗೊಳಿಸುವಂತಹ ಕಾರ್ಯಕ್ರಮಗಳನ್ನು ರೂಪಿಸಿದರು. ಹುದಲಿಯ ಗ್ರಾಮೋದ್ಯೋಗ ಯಶಸ್ವಿಯಾಗಿ ಜನತೆಯಲ್ಲಿ ಹೊಸ ಆಶಾಭಾವನೆಯನ್ನು ಮೂಡಿಸಿದವು. ಹುದಲಿಯ ಗ್ರಾಮೋದ್ಯೋಗ ಕೇಂದ್ರವು ಖಾದಿಯ ಉತ್ಪಾದನೆ ಹಣ್ಣು ಮತ್ತು ತರಕಾರಿಗಳ ಸಂಸ್ಕರಣ ಘಟಕ, ಸರಕು ಸರಂಜಾಮ ವಿಭಾಗ, ಗೋಬರ್ ಗ್ಯಾಸ್, ಅನಲ ಘಟಕ, ಸಾಬೂನು ಹಾಗೂ ಅಗರಬತ್ತಿ ತಯಾರಿಕಾ ಕೇಂದ್ರ ಮತ್ತು ಆಶ್ರಮದ ಹಾಗೂ ಸುತ್ತಮುತ್ತಲಿನ ಜನಕ್ಕೆ ಅಕ್ಕಿ, ಗೋಧಿ ಎಣ್ಣೆಕಾಳು ಇತ್ಯಾದಿಗಳನ್ನು ವಿತರಿಸುವ ರೇಷನ್ ವಿಭಾಗ ಇವುಗಳ ಮೂಲಕ ಗ್ರಾಮೋದ್ಯೋಗವನ್ನು ಯಶಸ್ವಿಗೊಳಿಸುವಂತಹ ಕಾರ್ಯವನ್ನು ಕೈಗೊಂಡರು.[೭]

ಈ ಆಶ್ರಮದ ಅಡಿಯಲ್ಲಿ ಹಲವಾರು ಗ್ರಾಮೋದ್ಯೋಗಗಳು ಕಾರ್ಯರೂಪಕ್ಕೆ ಬಂದು ಈ ಭಾಗದ ಜನರಿಗೆ ಸ್ವಾವಲಂಬಿ ಬದುಕು ರೂಪಿಸಿಕೊಳ್ಳಲು ಸಹಕಾರಿಯಾಗಿದೆ. ಪ್ರಸ್ತುತ ಈ ಆಶ್ರಮದ ಮಾದರಿಯಲ್ಲೇ ಧಾರವಾಡ ಜಿಲ್ಲೆಯ ಕೆಲವು ತಾಲೂಕುಗಳಲ್ಲಿ ಗ್ರಾಮೋದ್ಯೋಗ ಕಾರ್ಯ ಚಟುವಟಿಕೆಗಳು ನಡೆಯುತ್ತಿವೆ. ಪ್ರಸ್ತುತ ಸಂದರ್ಭದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗಗಳ ಸ್ಥಿತಿಗತಿಯನ್ನು ಗಮನಸಿದಾಗ ಕರ್ನಾಟಕದ ದಕ್ಷಿಣ ಭಾಗಗಳಿಗಿಂತ ಉತ್ತರ ಭಾಗಗಳಲ್ಲಿ ಹೆಚ್ಚಿನ ಉತ್ಪತ್ತಿ ಮತ್ತು ಬಳಕೆಯಾಗುತ್ತಿರುವುದನ್ನು ಕಾಣಬಹುದಾಗಿದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿಗಳು

೧. ಕ್ಷೇತ್ರಕಾರ್ಯ, ಹುದಲಿ ಖಾದಿ ಗ್ರಾಮೋದ್ಯೋಗ ಕೇಂದ್ರ. ಹುದಲಿ, ಬೆಳಗಾಂ ಜಿಲ್ಲೆ. ದಿನಾಂಕ: ೧೩-೧೨-೨೦೧೧.

೨. ಸಂದರ್ಶನ, ಸೋಮಲಿಂಗ ಅಪ್ಪಣ್ಣ ಮಳಗಲಿ, ಬೆಳಗಾಂ, ದಿನಾಂಕ ೧೪-೧೨-೨೦೧೧.

೩. ಗಂಗಪ್ಪ ಮುದ್ದಪ್ಪ ಮಾಳ, ಖಾದಿ ಕಿರಣ, ಖಾದಿ ಮತ್ತು ಗ್ರಾಮೋದ್ಯೋಗ ಸಹಕಾರ ಸಂಘ (ರಿ.) ಹುದಲಿ ೧೯೯೮ ಪುಟ ೫೮.

೪. ಅದೇ, ಪುಟ ೫೯.

೫. ಹುದಲಿಯ ಸೋಮಲಿಂಗ ಅಪ್ಪಣ್ಣ ಮಳಗಲಿ, ನಿಂಗಪ್ಪ ಎಲ್ಲಪ್ಪ ತುಕ್ಕಾರ, ಭೀಮಪ್ಪ ನಿಂಗಪ್ಪ ಜೂಶಿ, ಬೀ.ಚ ಯಲಿಗಾರ, ಕೆಂಚನಗೌಡ ಪಾಟೀಲ, ಅ.ಶಿ. ವಾರೀಮನಿ, ಹುಚ್ಚಪ್ಪ ಹೊಳೆಯಾಚೆ, ನೀಲಕಂಠೆ ಗಣಾಚಾರಿ, ಪಿ.ಬಿ. ಪಾಟೀಲ, ನಾರಾಯಣ ದೀಕ್ಷಿತ ಮುಂತಾದವರು.

೬. ಶ್ರೀ ಕಾ.ಮ. ತೋಟಗಿ, ಗಂಗಪ್ಪ ಮುದ್ದಪ್ಪ ಮಾಳಗಿ, ಭೀಮಪ್ಪ ನಿಂಗಪ್ಪ ಭೂಶಿ ನಿಂಗಪ್ಪ ಎಲ್ಲಪ್ಪ ತುಕ್ಕಾರ, ಗೌಡಪ್ಪ ಚನ್ನಪ್ಪ ಪಾಟೀಲ, ವಾ.ನ.ಕದಮ, ಸೋಮಲಿಂಗ ಅಪ್ಪಣ್ಣ ಮಳಗಲಿ, ರಾ.ಬ. ಬಡಿಗೇರ ಬ.ಸಿ. ಯಮಕನಮಡಿ, ಮಾ.ಲ ಮೊಳಗಿ, ಮಾ.ಬ. ಮಜ್ಜಿಗಿ.

೭. ಸಂದರ್ಶನ : ಭೀಮಪ್ಪ, ನಿಂಗಪ್ಪ ಭೂಶಿ, ನಿವೃತ್ತ ರಚನಾತ್ಮಕ ಕಾರ್ಯಕರ್ತರು, ಹುದಲಿ ದಿನಾಂಕ : ೧೩-೧೨-೨೦೧೧.

೧೩೦

ಟಿಪ್ಪುಸುಲ್ತಾನರು ಜಾರಿಗೆ ತಂದ ಕೆಲವು ಆಡಳಿತಾತ್ಮಕ ಸುಧಾರಣೆಗಳು

ಪ್ರೊ. ಮಹಾದೇವಿ*

ಭಾರತದಲ್ಲಿ ಬ್ರಿಟೀಷರ ಆಧಿಪತ್ಯವನ್ನು ತಪ್ಪಿಸುವ ಸಲುವಾಗಿ ತನ್ನ ಜೀವವನ್ನೇ ಪಣವಾಗಿರಿಸಿದ ಟಿಪ್ಪು ಸುಲ್ತಾನನು ಭಾರತದ ಇತಿಹಾಸದಲ್ಲಿ ಎದೆಗಾರಿಕೆಯುಳ್ಳ ಕುಶಲ ರಾಜಕಾರಣಿಯಾಗಿದ್ದಂತೆ ಕೌಶಲ್ಯ ರಾಜ್ಯಾಡಳಿತ ಪಟುವಾಗಿ ಪ್ರಜ್ವಲಿಸಿದ್ದಾನೆ. ಭಾರತದ ಎಲ್ಲಾ ರಾಜರುಗಳಂತೆ ಇವನ ಆಡಳಿತ ಕೇಂದ್ರೀಕೃತವಾದುದ್ದಾದರೂ ಇತರ ರಾಜ್ಯಗಳ ಪರಿವೃತ್ತಕ್ಕಿಂತ ವಿಶಾಲವಾದುದಾಗಿತ್ತು. ರಾಜ್ಯದ ರಕ್ಷಣೆಗಾಗಿ ಬ್ರಿಟೀಷರೊಂದಿಗೂ ಸ್ಥಳೀಯ ಅರಸರೊಂದಿಗೂ ಅನೇಕ ಯುದ್ಧಗಳನ್ನು ಮಾಡಬೇಕಾಗಿ ಬಂದರೂ ಟಿಪ್ಪು ತನ್ನ ನಾಡಿನ ಸುರಕ್ಷತೆ ಹಾಗೂ ಕಾನೂನಿನ ಪಾಲನೆಯೊಂದಿಗೆ ಆಡಳಿತದ ದಕ್ಷತೆಯನ್ನು ಸಮಗ್ರವಾಗಿಡಲು ಪಾಶ್ಚಾತ್ಯರ ಅಭಿವೃದ್ಧಿಯಾತ್ಮಕ ನೀತಿಗಳನ್ನು ಅಳವಡಿಸಿಕೊಂಡು ತನ್ನ ಸರ್ಕಾರದಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದನು.

ಪ್ರಜೆಗಳ ಕ್ಷೇಮಾಭ್ಯುದಯವನ್ನೇ ಧ್ಯೇಯವಾಗಿರಿಸಿ ಕೊಂಡಿದ್ದ ಟಿಪ್ಪು ತನ್ನ ಆಡಳಿತದಲ್ಲಿ ಇಸ್ಲಾಂ ಹಾಗೂ ಹಿಂದೂ ಕಾನೂನುಗಳೆರಡನ್ನೂ ಅಳವಡಿಸಿಕೊಂಡು ಒಬ್ಬ ಸಮರ್ಥ, ದಕ್ಷ ಆಡಳಿತಗಾರನಾಗಿ ಅವರಿಗೆ ನಿಷ್ಠೆ ಬರುವಂತೆ ಆಡಳಿತ ನಡೆಸಿದನು. ನನ್ನ ಸರ್ಕಾರವನ್ನು "ದೈವದತ್ತವಾದ ರಾಜ್ಯ ವೆಂದೂ" ಸೇನೆ ಪವಿತ್ರ ಶೀಬಿರವೆಂದೂ ತನ್ನ ಪ್ರಜೆಗಳು ಭಗವಂತನಿಗಾಗಿ ಸೃಷ್ಟಿಯಾದ ಅದ್ವಿತೀಯವಾದ ಸಂಸ್ಥೆ ಎಂದೂ ನಂಬಿ ಅವರ ಅಭಿವೃದ್ಧಿಗಾಗಿ ಪ್ರಮಾಣಿಕ ಪ್ರಯತ್ನ ನಡೆಸಿದನು. ಇಂತಹ ಶ್ರೇಷ್ಠ ಆಡಳಿತಗಾರನ ರಾಜ್ಯಾಡಳಿತದ ವಿವಿಧ ಅಂಗಗಳಲ್ಲಿ ಕೈಗೊಂಡಿದ್ದ ಕೆಲವು ಆಡಳಿತ ಸುಧಾರಣೆ ಗಳನ್ನು ಅವಲೋಕಿಸುವುದು ಈ ಪ್ರಬಂಧದ ಉದ್ದೇಶ.

ಟಿಪ್ಪುವಿನದು ಕೇಂದ್ರೀಕೃತ ಆಡಳಿತವಾಗಿದ್ದರೂ ಆಡಳಿತದಲ್ಲಿ ಸುಧಾರಣೆಗಳನ್ನು ತರುವ ಉದ್ದೇಶದಿಂದ ತನ್ನ ಸರ್ಕಾರವನ್ನು ಏಳು ಪ್ರಧಾನ ಇಲಾಖೆಗಳನ್ನಾಗಿ ವಿಭಾಗಿಸಿದನು. ೧. ಕಂದಾಯ ಮತ್ತು ಹಣಕಾಸು, ೨. ಸೇನೆ, ೩. ಜುಮ್ರ, ೪. ವಾಣಿಜ್ಯ, ೫. ಯುದ್ಧ ಸಾಮಗ್ರಿಗಳು ಮತ್ತು ರಕ್ಷಣ ಸೇನೆ, ೬. ಬೊಕ್ಕಸ ಮತ್ತು ಟಂಕಶಾಲೆ ಇಲಾಖೆ, ೭. ಕಡಲಸಂಬಂಧವಾದ ಇಲಾಖೆ ಇವೇ ಆ ಏಳು ವಿಭಾಗಗಳಾಗಿದ್ದವು. ಇವುಗಳೊಂದಿಗೆ ಕೆಲವು ಉಪ ಇಲಾಖೆಗಳನ್ನೂ ಸ್ಥಾಪಿಸಿದನು. ಪ್ರತಿಯೊಂದು ಇಲಾಖೆ ಯಲ್ಲಿಯೂ ಒಬ್ಬ ಮುಖ್ಯಾಧಿಕಾರಿಯನ್ನೊಳಗೊಂಡ ಒಂದು ಸಮಿತಿ ರಚನೆಗೊಂಡಿದ್ದು, ಈ ಸಮಿತಿಗಳು ಒಂದು ಕಡೆ ಸಭೆ ಸೇರಿ ತಮ್ಮ ಇಲಾಖೆಗಳಿಗೆ ಸಂಬಂಧಿಸಿದ ವಿಚಾರಗಳನ್ನು ಚರ್ಚಿಸುತ್ತಿದ್ದರಲ್ಲದೆ, ಪ್ರಮುಖ ನಿರ್ಣಯಗಳನ್ನು ಮತ ಹಾಕುವ ಮೂಲಕ ಅಂಗೀಕರಿಸಿ ಆ ವರದಿಯನ್ನು ಟಿಪ್ಪುವಿಗೆ ಸಲ್ಲಿಸುತ್ತಿದ್ದರು. ಅದನ್ನು ಪರಿಶೀಲಿಸಿದ ನಂತರ ಟಿಪ್ಪು ತನ್ನ ಒಪ್ಪಿಗೆ ನೀಡುತ್ತಿದ್ದನು. ಇದು ಅವನ ಉತ್ತಮ ಆಡಳಿತಕ್ಕೊಂದು ಶ್ರೇಷ್ಠ ನಿದರ್ಶನ. ಹಾಗೂ ಉತ್ತಮ ಆಡಳಿತದ ದೃಷ್ಟಿಯಿಂದ ಟಿಪ್ಪು ತನ್ನ ರಾಜ್ಯವನ್ನು ಮೂರು ಭಾಗಗಳಾಗಿ ವಿಂಗಡಿಸಿದ್ದ. ಅವುಗಳಿಗೆ ಕರಾವಳಿ ಜಿಲ್ಲೆಗಳು ಅಥವಾ 'ಯಮಸುಬಾ', ಪರ್ವತ ಪ್ರದೇಶಗಳು ಅಥವಾ 'ತರಾನ ಸುಬಾ', ಬಯಲು ಪ್ರದೇಶಗಳು ಅಥವಾ 'ಘಾಬ್ರ ಸುಬಾ' ಎಂದು ಕರೆಯ ಲಾಗುತ್ತಿತ್ತು.

ಈ ಕಾಲದಲ್ಲಿ ಪ್ರಾಂತೀಯ ಮತ್ತು ಸ್ಥಳೀಯ ಆಡಳಿತವು ಜಾರಿಯಲ್ಲಿತ್ತು. ಉತ್ತಮ ಆಡಳಿತಕ್ಕೆ ಸಹಾಯಕವಾಗಲೆಂದು ತನ್ನ ರಾಜ್ಯವನ್ನು ಅನೇಕ ಪ್ರಾಂತ್ಯಗಳನ್ನಾಗಿ ವಿಂಗಡಿಸಿದ್ದನು. ಈ ಪ್ರಾಂತೀಯ ಮತ್ತು ಸ್ಥಳೀಯ ಆಡಳಿತಗಳು ಪ್ರಾಂತ್ಯಗಳ ನಾಗರಿಕಾಡಳಿತಾಧಿಕಾರಿ (ಅಸಫ) ಮತ್ತು ಸೈನ್ಯಾಡಳಿತಾಧಿಕಾರಿ ಗಳ (ಫೌಜುದಾರ) ಅಧೀನದಲ್ಲಿರುತ್ತಿದ್ದವು. ಪೌರಾಡಳಿತ ಪ್ರತಿ ಘಟಕದಲ್ಲಿ ಅಮಲ್ದಾರರು, ತರಫದಾರರು (ಸೇನಾಧಿಕಾರಿಗಳು) ಮತ್ತು ಶಿರಸ್ತೆದಾರರೆಂಬ ಮೂವರು ಅಧಿಕಾರಿಗಳಿರುತ್ತಿದ್ದರು. ಇವರಿಗೆ ಗುಮಾಸ್ತರು ಮತ್ತು ಜವಾನರುಗಳು ಸಹಾಯಕರಾಗಿದ್ದು ಅಧಿಕಾರಿಗಳು ಮತ್ತು ನಾಗರಿಕರಿಗೆ ಸೇತುವೆಯಂತಿದ್ದು ಪ್ರಾಂತ್ಯಾಡಳಿತದ ಯಶಸ್ಸಿಗೆ ಶ್ರಮಿಸುತ್ತಿದ್ದರು. ಹೀಗೆ ಭಾರತದ ಇತರ ರಾಜರುಗಳಿಗಿಂತ ಭಿನ್ನವಾದ ವಿಶಿಷ್ಟವಾದ ಅತ್ಯುನ್ನತ ಮಟ್ಟದಾಗಿದ್ದ ಆಡಳಿತ ಸುಧಾರಣೆಗಳನ್ನು ಜಾರಿಗೆ ತಂದ ಟಿಪ್ಪುಸುಲ್ತಾನನು ಸಮರ್ಥ, ದಕ್ಷ ರಾಜ್ಯವನ್ನಾಗಿ ಪರಿವರ್ತಿಸಿ ಮೈಸೂರು ರಾಜ್ಯಕ್ಕೆ ಕೀರ್ತಿ ಯನ್ನು ತಂದುಕೊಟ್ಟನು.

೧. ಕಂದಾಯ ಮತ್ತು ಹಣಕಾಸು ನೀತಿ: ಟಿಪ್ಪುವು ಅಧಿಕಾರಕ್ಕೆ ಬರುವ ಮೊದಲೇ ಕಂದಾಯದ ಬಗ್ಗೆ ವಿಶೇಷ ಅನುಭವ ಪಡೆದಿದ್ದು, ಅಧಿಕಾರಕ್ಕೆ ಬಂದ ಮೇಲೆ ಅದರ ಪ್ರಗತಿಗೆ ಹೆಚ್ಚು ಗಮನ ಹರಿಸಿದನು. ಕಂದಾಯ ವ್ಯವಸ್ಥೆ ಹಿಂದಿನಂತೆಯೇ ಮುಂದುವರಿದುಕೊಂಡು ಬಂದರೂ ಟಿಪ್ಪುವಿನ ಕಾಲದಲ್ಲಿ ಅದು ಹೆಚ್ಚು ದಕ್ಷತೆಯಿಂದ ಕೂಡಿತ್ತು.

* ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕ.ರಾ.ಮು.ವಿ., ಮೈಸೂರು.

ಕಂದಾಯದ ಮೂಲ ಹೆಚ್ಚು ಕೃಷಿಯನ್ನೇ ಅವಲಂಬಿಸಿದ್ದುದರಿಂದ ಸಾಗುವಳಿ ಮಾಡುವ ವಿವಿಧ ಭೂಮಿಗಳನ್ನು ವರ್ಗೀಕರಿಸಿದ್ದನು. ಗದ್ದೆ, ಬಿಜ್ಜಲು, ಪಾಳುಭೂಮಿ, ಬಂಜರು ಭೂಮಿ, ಬರಡುಭೂಮಿ, ಬೆಟ್ಟತಿಟ್ಟು ಇವೇ ಮುಂತಾದ ಭೂಮಿಗಳನ್ನು ಹೊಸದಾಗಿ ಅಳತೆ ಮಾಡಿಸಿ ಅಲ್ಲೇ ಬೆಳೆಯುವ ಫಸಲಿನ ಪ್ರಮಾಣದ ಆಧಾರದ ಮೇಲೆ ಕಂದಾಯ ನಿಗಧಿಗೊಳಿಸಿದ್ದನು. ಕಂದಾಯ ಇಲಾಖೆಯಲ್ಲಿ ಲಂಚ ಪಡೆಯುವ ವ್ಯವಸ್ಥೆಯನ್ನು ನಿರ್ಮೂಲನ ಮಾಡಲು ಪ್ರಯತ್ನಿಸಿ ಪ್ರಾಮಾಣಿಕ ಅಧಿಕಾರಿಗಳನ್ನು ಗುರುತಿಸಿ ಅವರಿಗೆ ಅಕರ್ಷಕ ಸಂಬಳವನ್ನು ನೀಡಿ ಶ್ರದ್ಧೆ ಮತ್ತು ನಿಷ್ಠೆಯಿಂದ ಕೆಲಸ ನಿರ್ವಹಿಸುವಂತೆ ಉತ್ತೇಜನ ನೀಡಿದ್ದನು. ತೆರಿಗೆದಾರರಿಗೆ ಹೆಚ್ಚಿನ ತೊಂದರೆಯಾಗಬಾರದೆಂಬುದೇ ಟಿಪ್ಪುವಿನ ಈ ಕ್ರಮಕ್ಕೆ ಕಾರಣವಾಗಿತ್ತು. ಸರ್ ಮನ್ರೊರವರ ಹೇಳಿಕೆಯಂತೆ ಟಿಪ್ಪುವಿನ ರಾಜ್ಯದಲ್ಲೆ ೧/೧೦, ೧/೬, ೧/೫ ಹಾಗೂ ೧/೩ ಭಾಗದಷ್ಟು ಕಂದಾಯವನ್ನು ನಿಗದಿಗೊಳಿಸಲಾಗಿದ್ದು ಆತನ ಕಂದಾಯ ಸುಧಾರಣಾತ್ಮಕ ನೀತಿಗೆ ಒಂದು ಶ್ರೇಷ್ಠ ನಿದರ್ಶನವಾಗಿದೆ.

ಇದಲ್ಲದೆ ಪ್ರಾಂತೀಯ ಕಂದಾಯ ಕಛೇರಿಗಳನ್ನು ತೆರೆದು ಬೇಸಾಯ ಮಾಡದೆ ಹಾಗೇ ಪಾಳು ಬಿದ್ದಿರುವ ಜಮೀನುಗಳನ್ನು ಅಧಿಕೃತವಲ್ಲದ ಇನಾಂ ಜಮೀನುಗಳನ್ನು ಹಾಗೂ ಜಮೀನ್ದಾರರು ಅಮಿಲರು ಅನುವಂಶಕವಾಗಿ ಹೊಂದಿದ್ದ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡು ಅವುಗಳನ್ನು ಜಮೀನು ರಹಿತ ಒಕ್ಕಲಿಗರು ಮತ್ತು ಬಡರೈತರಿಗೆ ಹಂಚಿ ವ್ಯವಸಾಯ ಮಾಡಲು ಪ್ರೋತ್ಸಾಹಿಸಿದನು. ಟಿಪ್ಪು ಕೈಗೊಂಡ ಈ ಉದಾರ ಮತ್ತು ಸಮತೋಲನ ಕ್ರಮಗಳಿಂದ ಬೇಸಾಯ ಮಾಡುವ ಭೂಮಿಯ ವಿಸ್ತೀರ್ಣ ಗಣನೀಯವಾಗಿ ಹೆಚ್ಚಾಯಿತಲ್ಲದೆ ರಾಜ್ಯದ ವ್ಯವಸಾಯೋತ್ಪನ್ನ ವೃದ್ಧಿಯಾಗಿ ರಾಜ್ಯದ ಆದಾಯ ಹೆಚ್ಚಾಯಿತು. ಹೀಗೆ ಟಿಪ್ಪು ಕಂದಾಯ ವ್ಯವಸ್ಥೆಯಲ್ಲಿ ಅನೇಕ ಮಾರ್ಪಾಡುಗಳನ್ನೂ ಸುಧಾರಣೆಗಳನ್ನೂ ಜಾರಿಗೆ ತಂದುದರಿಂದ ಕ್ರಿ.ಶ. ೧೭೯೨ರಲ್ಲಿ ಅವನ ರಾಜ್ಯದ ಕಂದಾಯ ಸಂಗ್ರಹ ಎರಡು ಕೋಟಿಗೂ ಮೀರಿತ್ತು. ಅವನ ಕಂದಾಯ ನಿಬಂಧನೆಗಳ ಸಂಹಿತೆಯು ಆ ಮಹಾನ್ ಆಡಳಿತಗಾರನ ಬುದ್ಧಿಮತ್ತೆಗೆ ವಿಶೇಷ ಸಾಕ್ಷಿಯಾಗಿದೆ. ಟಿಪ್ಪುಸುಲ್ತಾನನು ಈ ಸುಧಾರಾಣಾತ್ಮಕ ನೀತಿಗಳನ್ನು ಅಳವಡಿಸಿಕೊಂಡಿದ್ದುದರಿಂದ ಟಿಪ್ಪುವಿನ ಮೈಸೂರು ಅವನ ಆಡಳಿತದ ಉತ್ತರಾರ್ಧದಲ್ಲಿ ಕೂಡ ಅವನ ನೆರೆಹೊರೆಯವರದಕ್ಕಿಂತ ಉತ್ತಮವೂ ಸಂತೋಷದಾಯಕವೂ ಆಗಿತ್ತು ಎಂದು ಡಾ. ಎಂ.ಎಚ್. ಗೋಪಾಲರವರು ಪ್ರಶಂಸಿದ್ದಾರೆ.

ಕಂದಾಯ ವ್ಯವಸ್ಥೆಯಂತೆಯೇ ಟಿಪ್ಪುವಿನ ಹಣಕಾಸು ಆಡಳಿತ ನಿರ್ವಹಣೆಯು ಬಹು ದಕ್ಷವಾಗಿತ್ತು. ಕಂದಾಯ ಇಲಾಖೆಯ ಅಧ್ಯಕ್ಷನು ಹಣಕಾಸು ಇಲಾಖೆಯನ್ನೂ ನಿರ್ವಹಿಸುತ್ತಿದ್ದನು. ಟಿಪ್ಪುಸುಲ್ತಾನನು ಹಣಕಾಸು ವ್ಯವಹಾರ ಹಾಗೂ ಆರ್ಥಿಕ ಸುಧಾರಣೆಗಳ ಬಗ್ಗೆ ವೈಯಕ್ತಿಕವಾಗಿ ಆಸಕ್ತಿ ಹೊಂದಿದ್ದನು. ರಾಜ್ಯದ ಹಣಕಾಸು ಸ್ಥಿತಿಯನ್ನು ಸುಧಾರಿಸಲೆಂದೇ ನವೀನ ರೀತಿಯ ಕಂದಾಯ ವ್ಯವಸ್ಥೆಯನ್ನು ಜಾರಿಗೊಳಿಸಿದ್ದುದಲ್ಲದೆ ಹೊಸ ನಾಣ್ಯ ಪದ್ಧತಿಯನ್ನು ಜಾರಿಗೆ ತಂದು ಸುಂದರವಾದ ನಾಣ್ಯಗಳನ್ನು ಟಂಕಿಸಿದನು.

ಅವನ ನಾವೀನ್ಯಪ್ರಿಯತೆ ಅವನ ನಾಣ್ಯಗಳಲ್ಲಿ ಉತ್ತಮವಾಗಿ ವ್ಯಕ್ತಗೊಂಡಿದೆ. ಅವನು ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಹೊರಡಿಸಿದ. ಅವನ ನಾಣ್ಯಗಳಲ್ಲಿ ತನ್ನ ತಂದೆಯ ಹೆಸರಿನ ಮೊದಲನೆಯ ಅಕ್ಷರ 'ಹೈ' ಕಾಣಿಸಿಕೊಳ್ಳುತ್ತದೆ. ತನ್ನ ಹೊಸ ನಾಣ್ಯಗಳಲ್ಲಿ ಅವನು ಈ ರೀತಿ ಕೆತ್ತಿಸಿದ್ದ: ಅಹ್ಮದನ ನಂಬಿಕೆಯು ಹೈದರನ ವಿಜಯಗಳಿಂದ ಪ್ರಪಂಚಕ್ಕೆ ಘೋಷಿಸಲ್ಪಟ್ಟಿದೆ. ಅವನ ಹೊಸ ನಾಣ್ಯಗಳಲ್ಲಿ ಮೌಲುದಿ ಶಕೆಯು ನಮೂದಾಗಿದ್ದು ಇದು ಪ್ರವಾದಿಯ ಜನನ, ೧೧೯೯ರಲ್ಲಿ ಜಲು, ಹಿಜರಿ-ಇಂದ ಆರಂಭವಾಗುತ್ತದೆ. ನಾಣ್ಯಗಳ ಹಿಂಬದಿಯಲ್ಲಿ ಅವನೊಬ್ಬನೇ (ದೇವರೊಬ್ಬನೇ) ಸುಲ್ತಾನ ನ್ಯಾಯಪರ ಎಂದು ನಮೂದಿಸಲಾಗಿದೆ. ಅವನ ನಾಣ್ಯಗಳ ಪೈಕಿ ಕೆಲವದರಲ್ಲಿ ಹಿಜರಿ ಮತ್ತು ವತಾಲುದಿ ಶಕೆಗಳೆರಡನ್ನು ನಮೂದಿಸಲಾಗಿತ್ತು. ಮುಹಲ್ ಅಥವಾ ಅಹ್ಮದಿ (ಮೌಲ್ಯ ನಾಲ್ಕು ಪಗೋಡಗಳಿಗೆ ಸಮನಾದುದು), ಅರ್ಧ ಮೊಹರು ಅಥವಾ ಸಿದ್ಧಿಗಿ (ಎರಡು ಪಡೋಡಗಳು) ಕಾಲು ಮುಹಲ್ ಅಥವಾ ಫರುಖ (ಮೂರೂವರೆ ರೂಪಾಯಿಗಳು) ಫನಮೌ (ಪಗೋಡದ ೧/೧೦ನೇ ಭಾಗ).

ಡೇನರು ಹೊರಡಿಸಿದ ಚಿನ್ನದ ಪಗೋಡದ ಮೇಲ್ಮುಖದಲ್ಲಿ ಆರನೆಯ ದೊರೆ ಕ್ರಿಶ್ಚಿಯನ್ನನ ಕಿರೀಟ ಕೂಡಕ್ಷರವಿದ್ದು, ಹಿಮ್ಮುಖದಲ್ಲಿ ಹೈದರಾಲಿಯ ಅಧ್ಯಕ್ಷರದ ಪರ್ಷಿಯನ್ ಅಕ್ಷರವಿದೆ. ಈ ನಾಣ್ಯವು ಪೂರ್ವದಲ್ಲಿನ ಡೇನ್ (ಡೆನ್ಮಾರ್ಕ್) ಪ್ರಭುತ್ವವು ಮೈಸೂರಿನ ರಾಜರಾದ ಹೈದರಾಲಿ ಹಾಗೂ ಟಿಪ್ಪುಸುಲ್ತಾನರ ಬಗ್ಗೆ ತೋರುತ್ತಿದ್ದ ಗೌರವವನ್ನು ಸೂಚಿಸುತ್ತದೆ ಎಂದು ಹೇಳಲಾಗಿದೆ. ಟಿಪ್ಪುಸುಲ್ತಾನನು ಹಲವು ಬಗೆಯ ಬೆಳ್ಳಿಯ ನಾಣ್ಯಗಳನ್ನು ಹೊರಡಿಸಿದನು. ಇವುಗಳೆಂದರೆ ಹೈದರಿ (ಎರಡು ರೂಪಾಯಿಗಳು) ಇಮಾಮಿ (ಒಂದು ರೂಪಾಯಿ) ಅಬೀದೀ (ಅರ್ಧ ರೂಪಾಯಿ) ಬಖೀರೀ (ಕಾಲು ರೂಪಾಯಿ) ಜಫರಿ (ರೂಪಾಯಿಯ ಎಂಟನೆಯ ಒಂದು ಭಾಗ), ಕಯೀಮಿ (ರೂಪಾಯಿಯ ಹದಿನಾರನೆಯ ಒಂದು ಭಾಗ) ಮತ್ತು ಖಿಜ್ರ (ರೂಪಾಯಿಯ ಮೂವತ್ತೆರಡನೆಯ ಒಂದು ಭಾಗ) ಅವನು ಐದು ಬಗೆಯ ತಾಮ್ರದ ನಾಣ್ಯಗಳನ್ನು ಹೊರಡಿಸಿದ. ಅವೆಂದರೆ ಬಸ್ಮಾನ (ಎರಡು ಪೈಸೆ), ಜೊಹ್ರಾ (ಪೈಸೆ), ಬಬ್ರನ್ (ಅರ್ಧಪೈಸೆ) ಆಖ್ತರ್ (ಪೈಸೆಯ ನಾಲ್ಕನೆಯ ಒಂದು ಭಾಗ ಮತ್ತು ಕುತುರ್ (ಪೈಸೆಯ ಎಂಟನೆಯ ಭಾಗ).

೨. ನವೀನ ಸ್ವರೂಪಗಳು: ಟಿಪ್ಪುಸುಲ್ತಾನ ನಾವೀನ್ಯಪ್ರಿಯನಾಗಿದ್ದ. ಅವನು ಪಟ್ಟಣಗಳು ಹಾಗೂ ಊರುಗಳು ಹೆಸರನ್ನು ಬದಲಾಯಿಸಿ ಅವುಗಳಿಗೆ ಹೊಸ ನಾಮಕರಣ ಮಾಡಿದ ಉದಾಹರಣೆಗೆ ಮೈಸೂರು-ನಜರಬಾದ್ ಹಾಸನ-ಕಯಾಂಬಾದ, ನಂದೀದುರ್ಗ-ಗುರ್ದೂನೆಷುಕ್, ಗುತ್ತಿ-ಫೈಜ್ ಹಿಸಾರ್, ಬಿದನೂ ನಗರ, ಮಂಗಳೂರು-ಜಮಾಲಬಾದ್ ಇತ್ಯಾದಿ. ಅವನು ಎಲ್ಲ ಜಿಲ್ಲೆಗಳಲ್ಲಿ ಚುನಾಯಿತ ಮಂಡಳಿಗಳನ್ನು ತಂದ. ಸುಲ್ತಾನನಿಗೆ ಪ್ರಜೆಗಳು ನೇರವಾಗಿ

ಮನವಿ ಸಲ್ಲಿಸಬಹುದಾದ ಹಕ್ಕನ್ನು ನೀಡಲಾಯಿತು. ಸುಲ್ತಾನನಿಗೆ ಮನವಿ ಸಲ್ಲಿಸುವ ಹಕ್ಕು ಪ್ರತಿ ಪ್ರಜೆಗೂ ಇದ್ದಿತು. ಮಂತ್ರಿಗಳು ಮತ್ತು ಕಾರ್ಯದರ್ಶಿಗಳಿಗೆ ವಿಶೇಷ ಸವಲತ್ತುಗಳು ಇರಲಿಲ್ಲ.

೩. ಹೊಸ ಸುಧಾರಣೆಗಳು: ಟಿಪ್ಪುಸುಲ್ತಾನನು ಅನೇಕ ಹೊಸ ಆಡಳಿತಾತ್ಮಕ ಸುಧಾರಣೆಗಳನ್ನು ತಂದ. ಕಾಲಗಣನೆಯ ನವವಿಧಾನವೊಂದನ್ನು ಅವನು ಜಾರಿಗೆ ತಂದ. ಅರವತ್ತು ವರ್ಷಗಳ ಬೃಹಸ್ಪತಿಯ ಅವರ್ತದ ಆಧಾರದ ಮೇಲೆ ಪಂಚಾಂಗ ಸುಧಾರಣೆ ಮಾಡಿದ. ವರ್ಷಕ್ಕೆ ೩೫೪ ದಿನಗಳೆಂದು ಗಣಿಸಿದ. ಪ್ರತಿಯೊಂದು ತಿಂಗಳನ್ನು ಆಕಾರಾದಿಯಾಗಿ ಒಂದೊಂದು ಹೆಸರಿನಿಂದ ಕರೆದ. ೧೭೮೪ನೇ ವರ್ಷದಿಂದ ಅವನ ಪತ್ರಗಳಲ್ಲೆಲ್ಲ ಹೊಸ ಹೆಸರಿನ ತಿಂಗಳುಗಳಲ್ಲಿನ ದಿನಗಳ ಬಳಕೆಯಾಗಿದೆ.

೪. ಅಧಿಕಾರಿಗಳಿಗೆ ನಿರ್ದೇಶನ: ಟಿಪ್ಪುಸುಲ್ತಾನ ತನ್ನ ಅಧಿಕಾರಿಗಳಿಗೆ ಸುದೀರ್ಘವಾದ ಸೂಚನೆಗಳನ್ನು ಬರೆಯುತ್ತಿದ್ದ. ಎಲ್ಲ ಸೇನಾ ಕಾರ್ಯಾಚರಣೆಗಳಿಗಾಗಲಿ, ಸಾಮಾನ್ಯ ನಿಬಂಧನೆಗಳಿಗಾಗಲಿ ಇಲ್ಲವೇ ಸಣ್ಣಪುಟ್ಟ ವ್ಯಾಪಾರ ವಿಷಯಗಳಿಗಾಗಲೀ ಸ್ಪಷ್ಟವಾದ ಆದೇಶಗಳನ್ನು ನೀಡುತ್ತಿದ್ದ. ನಿಜವಾದ ಇಸ್ಲಾಮ್ ರಾಜ್ಯದ ಅಧಿಕೃತ ಭಾಷೆ ಪರ್ಷಿಯನ್ ಆಗಿರಬೇಕು ಎಂಬುದು ಅವನ ಅಭಿಪ್ರಾಯವಾಗಿತ್ತು. ಹಾಗೂ ಎಲ್ಲ ಆಡಳಿತಾತ್ಮಕ ವಿಷಯಗಳಲ್ಲಿ ಪರ್ಷಿಯನ್ ಜಾರಿಗೆ ತಂದ.

ಕಾನೂನಿನ ದೃಷ್ಟಿಯಲ್ಲಿ ಪ್ರತಿ ಪ್ರಜೆಯೂ ಸಮಾನ; ಯಾರಿಗೆ ಆಗಲಿ ವಿಶೇಷ ಸವಲತ್ತಾಗಲೀ ಸ್ಥಾನಮಾನವನ್ನಾಗಲೀ ನೀಡಬಾರದೆಂದು ಅವನು ಅಜ್ಞೆ ಹೊರಡಿಸಿದ. ಅವನು ತನ್ನ ಅಧಿಕಾರಿಗಳು, ಸೇನಾನಿಗಳು ಮತ್ತು ರಾಜ್ಯಪಾಲರೊಡನೆ ಚರ್ಚಿಸಲು ಸದಾ ಸಿದ್ದನಾಗಿದ್ದ. (ಆತ ಚರ್ಚೆಯ ಮಧ್ಯದಲ್ಲಿ ತುಂಬ ಕಡಿಮೆ ಮಾತನಾಡುತ್ತಿದ್ದ; ಹೆಚ್ಚು ನಗುತ್ತಲೂ ಇರಲಿಲ್ಲ) ತುಂಬ ಮುಖ್ಯವಾದ ಹಾಗೂ ಗಮನಾರ್ಹವಾದ ಚರ್ಚೆಗಳ ಬಗ್ಗೆ ಅಷ್ಟೊಂದು ತೀವ್ರ ಗಮನ ಹರಿಸುತ್ತಿದ್ದ. ಸಮಸ್ಯೆಗಳನ್ನು ಕುರಿತ ಆತನ ಪರಿಹಾರಗಳನ್ನು ಎಲ್ಲ ಅಧಿಕಾರಿಗಳಿಗೂ ಲಿಖಿತವಾಗಿ ಕಳುಹಿಸಲಾಗುತ್ತಿತ್ತು.

ಆಡಳಿತಾತ್ಮಕ ಸಮಸ್ಯೆಗಳ ಬಗ್ಗೆ ಚರ್ಚಿಸುವಾಗ ಇತರರನ್ನು ತನ್ನ ಸಮಾನರು ಎಂಬಂತೆ ಪರಿಗಣಿಸುತ್ತಿದ್ದ. ಅವನು ತನ್ನ ಅಧಿಕಾರವನ್ನಾಗಲೀ ತನ್ನ ಸ್ಥಾನಮಾನವನ್ನಾಗಲೀ ಬಳಸುವುದರ ಮೂಲಕ ವಾದದಲ್ಲಿ ಯಶಸ್ವಿಯಾಗಲು ಯತ್ನಿಸದೆ ಯುಕ್ತ ತರ್ಕದ ಮೂಲಕ ಮನದಟ್ಟು ಮಾಡಲು ಯತ್ನಿಸುತ್ತಿದ್ದ. ವೈಭವ, ಸಾಹಸ ಮತ್ತು ದುರಾಸೆಯ ಭಾವನೆಗಳಿಗೆ ಅವನು ಬಲಿಯಾಗುತ್ತಿರಲಿಲ್ಲ. ಪ್ರಜೆಗಳ ಹಕ್ಕುಗಳಿಗೆ, ನ್ಯಾಯ ಹಾಗೂ ನಿಷ್ಪಕ್ಷಪಾತತೆಗೆ ಪ್ರಾಧಾನ್ಯ ಹಾಗು ಪ್ರಾಮುಖ್ಯ ನೀಡುತ್ತಿದ್ದ. ಪರಿಷತ್ತುಗಳಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಸೂಚನೆ ಹಾಗೂ ಮುಂದಿನ ಮಾರ್ಗದರ್ಶನಕ್ಕಾಗಿ ಲಿಖಿತವಾಗಿ ಅಧಿಕಾರಿಗಳಿಗೆ ಸೂಚಿಸಲಾಗುತ್ತಿತ್ತು.

೫. ಕೃಷಿ ನೀತಿ: ಕೃಷಿಯೇ ನಾಡಿನ ಜೀವಾಳ ಎಂದು ಅವನು ಪರಿಗಣಿಸಿದ್ದನು. ಯಾರು ಜಮೀನಿನಲ್ಲಿ ಶ್ರಮಪಟ್ಟು ದುಡಿಯುವರೋ ಅವರಿಗೆ ತಕ್ಕ ಪ್ರತಿಫಲ ಲಭಿಸುತ್ತದೆ. ಅವನು ೧೨೭ ಕಂದಾಯ ಸಂಹಿತೆಗಳನ್ನು ಹೊರಡಿಸಿದ. ಎಲ್ಲ ರೈತರನ್ನು ಪ್ರೋತ್ಸಾಹಿಸಿ ಅವರಿಗೆ ನೆರವಾಗಬೇಕೆಂದು, ಆ ಮೂಲಕ ಕೃಷಿ ಉತ್ಪಾದನೆಯನ್ನು ಉತ್ತಮಪಡಿಸಬೇಕೆಂದು ತನ್ನ ಅಧಿಕಾರ ವರ್ಗದವರಿಗೆ ಆದೇಶಿಸಿದ್ದ. ಕಂದಾಯ ಸಂಹಿತೆಯ ೧೨೭ ನಿಬಂಧನೆಗಳನ್ನು ನೀವು ತತಕ್ಷಣ ಜಾರಿಗೊಳಿಸಬೇಕೆಂದು ಅಪೇಕ್ಷಿಸಲಾಗಿದ್ದೆ ನೇಗಿಲು ಮೊದಲಾದುವುಗಳನ್ನು ಖರೀದಿಸಲು ಅಗತ್ಯವಿರುವ ರೈತರಿಗೆ ನಗದು ಮುಂಗಡಗಳ ನೀಡಿಕೆ, ವಾರಸುದಾರರಿಲ್ಲದ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವ ಕ್ರಮಗಳನ್ನು ಕೈಗೊಳ್ಳುವುದು ಮತ್ತು ಕೃಷಿಕ ಹಾಗೂ ಅವನ ವಂಶಜರಿಗೆ ರಕ್ಷಣೆ ನೀಡುವುದು ಇವುಗಳಿಗೆ ಸಂಬಂಧಿಸಿದ ಉಪಬಂಧಗಳತ್ತ ವಿಶೇಷವಾಗಿ ನಿಮ್ಮ ಗಮನ ಸೆಳೆಯಲಾಗಿದೆ.

ಕಂದಾಯ ನಿರ್ಧರಣೆಯಲ್ಲಿ ಉದಾರವಾಗಿರುವಂತೆ ಕಂದಾಯ ಸಂಗ್ರಹಣೆಯಲ್ಲಿ ಕಟ್ಟುನಿಟ್ಟಾಗಿರುವಂತೆ ತನ್ನ ಅಮಲ್ದಾರರಿಗೆ ಸದಾ ಸೂಚನೆ ನೀಡುತ್ತಿದ್ದನು. ಪ್ರಜೆಗಳ ಹಕ್ಕುಗಳನ್ನು ನಿರ್ಲಕ್ಷಿಸದೆ ಸ್ಥಳೀಯ ಪರಿಸ್ಥಿತಿಗಳೊಡನೆ ಸುಸಂಗತವಾದ ಉಪಾಯ ಕೌಶಲ್ಯವನ್ನು ಅವಲಂಬಿಸುವಂತೆ ತನ್ನೆಲ್ಲ ಅಧಿಕಾರ ವರ್ಗದವರಿಗೆ ಸಾಮಾನ್ಯ ಆದೇಶಗಳನ್ನು ಹೊರಡಿಸಿದ್ದ. ಎಲ್ಲ ಜಮೀನುಗಳನ್ನು ಕೃಷಿಗೆ ಒಳಪಡಿಸಬೇಕು ಇಲ್ಲವಾದಲ್ಲಿ ಅವನ್ನು ಮುಟ್ಟುಗೋಲು ಹಾಕಿಕೊಳ್ಳ (ವಶಪಡಿಸಿಕೊಳ್ಳ) ಲಾಗುವುದು ಎಂದು ಆದೇಶಿಸಿದರು. ಅನಾವೃಷ್ಟಿಂಘ ಪರಿಸ್ಥಿತಿಯಲ್ಲಿ ಕಂದಾಯವನ್ನು ಕಡಿಮೆ ಮಾಡಬೇಕು ಇಲ್ಲವೇ ಸಂಪೂರ್ಣವಾಗಿ ಮನ್ನಾ ಮಾಡಬೇಕು. ಕಂದಾಯವನ್ನು ಜಮೀನಿನ ಉತ್ಪಾದಕತೆ ಹಾಗೂ ರೈತಾಪಿ ವರ್ಗದ ಜೀವನದ ಸ್ಥಿತಿಗತಿಗಳನ್ನು ಆಧರಿಸಿ ಲೆಕ್ಕ ಹಾಕಬೇಕು. ಪ್ರಜೆಗಳ ಹಕ್ಕುಗಳನ್ನು ನಿರ್ಲಕ್ಷಿಸದೆ ಅವರ ಸಾಮಾಜಿಕ ಸ್ಥಿತಿಗತಿಗಳನ್ನು ಪರಿಗಣಿಸಬೇಕು ಎಂದು ತನ್ನ ಅಧಿಕಾರಿಗಳಿಗೆ ಆದೇಶಿಸಿದ್ದನು.

೬. ಸಾಮಾಜಿಕ ಸುಧಾರಣೆಗಳು: ಟಿಪ್ಪುಸುಲ್ತಾನ ತನ್ನ ರಾಜ್ಯದ ಜನತೆಯ ನೈತಿಕತೆ ಹಾಗೂ ಸುಸ್ಥಿತಿಗೆ ವಿಶೇಷ ಪ್ರಾಮುಖ್ಯ ನೀಡಿದ. ಯುವ ಪೀಳಿಗೆಯ ಶೀಲಸಂವರ್ಧನಾ ಚಟುವಟಿಕೆಗಳ ಬಗ್ಗೆ ಪ್ರಾಮುಖ್ಯ ನೀಡಿದ. ದಕ್ಷಿಣ ಭಾರತದ ಇತಿಹಾಸದಲ್ಲಿ ಪಾನನಿಷೇಧವನ್ನು ಜಾರಿಗೆ ತಂದ ಮೊತ್ತಮೊದಲ ದೊರೆ ಟೀಪೂ. ಅವನ ಹಣಕಾಸು ಸಚಿವ ಮೀರ್ ಸಾದಿಕ್‌ನು ಪಾನ ನಿಷೇಧದಿಂದ ಸರ್ಕಾರಕ್ಕೆ ಅಪಾರವಾದ ಹಣಕಾಸು ನಷ್ಟ ಉಂಟಾಗುವುದು ಎಂಬ ದೃಷ್ಟಿಯಿಂದ ಅದನ್ನು ವಿರೋಧಿಸಿದಾಗ ಟೀಪೂ ಹೇಳಿದ ಮಾತುಗಳು: 'ಹಣಕಾಸು ಪರಿಗಣನೆಗಳಿಂದ ನಿರ್ಭೀತರಾಗದ ವಿಷಯ ಇದಾಗಿದೆ. ಸಂಪೂರ್ಣ ಪಾನ ನಿರೋಧ ನಿಷೇಧ ನನಗೆ ಅತ್ಯಂತ ಪ್ರಿಯವಾದ ವಿಷಯ. ನಾವು ನಮ್ಮ ಜನತೆಯ ಆರ್ಥಿಕ ಸುಸ್ಥಿತಿ ಹಾಗೂ ನೈತಿಕ ಔನ್ನತ್ಯದ ಬಗ್ಗೆ ಚಿಂತಿಸಬೇಕು ಮತ್ತು ನಮ್ಮ ನಂಬಿಕೆ (ಧರ್ಮ) ಶೀಲನಿರ್ಮಾಣದ ಅಗತ್ಯದ ಬಗ್ಗೆ ಆಲೋಚಿಸಬೇಕು. ತಕ್ಷಣದ ಹಣಕಾಸು ನಷ್ಟದ ಬಗ್ಗೆ ನಿನ್ನ ಆತಂಕದ ಬಗ್ಗೆ ನನ್ನ ಮೆಚ್ಚುಗೆಯಿದೆಯಾದರು ನಾವು

ಭವಿಷ್ಯದತ್ತ ದೃಷ್ಟಿ ಹಾಯಿಸಬೇಡವೇ? ನಮ್ಮ ಖಜಾನೆಯ ಲಾಭವನ್ನು ನಮ್ಮ ಜನತೆಯ ಆರೋಗ್ಯ ಮತ್ತು ನೈತಿಕತೆಗಿಂತ ಹೆಚ್ಚಾಗಿ ಪರಿಗಣಿಸಬೇಕೇ?'

ಮತ್ತುಂಟು ಮಾಡುವಂಥ ಪಾನೀಯಗಳ ಮಾರಾಟವನ್ನು ಅವರು ಕಟ್ಟುನಿಟ್ಟಾಗಿ ನಿಷೇಧಿಸಿದ. ಫ್ರೆಂಚ್ ಕಮ್ಯಾಂಡರ್ ಎಂ.ಲ್ಯಾಲಿಗೆ ಮದ್ಯದಂಗಡಿ ತೆರೆಯಲು ಅವನು ಅನುಮತಿ ನೀಡಿದನಾದರು ಆತನ ಸೇವೆಯಲ್ಲಿದ್ದ ಫ್ರೆಂಚ್ ಸೈನಿಕರಿಗೆ ಮಾತ್ರ ಅದನ್ನು ಕಟ್ಟುನಿಟ್ಟಾಗಿ ಸೀಮಿತಗೊಳಿಸಿದ. ಮದ್ಯದಂಗಡಿಗಳನ್ನು ಮುಚ್ಚುವಂತೆ ಅವನು ಬೆಂಗಳೂರಿನಲ್ಲಿನ ಅಧಿಕಾರಿ ವರ್ಗದವರಿಗೆ ೧೭೮೭ರಲ್ಲಿ ಆದೇಶಿಸಿದ. ಆ ಕಸಬಿನಲ್ಲಿ ನಿರತರಾಗಿದ್ದವರಿಗೆ ಬೇರೆ ಉದ್ಯೋಗಗಳನ್ನು ಕೈಗೊಳ್ಳುವಂತೆ ಸೂಚಿಸಿದ. ಆತ ಸೂಚಿಸಿದುದೇನೆಂದರೆ ನಮ್ಮ ಜನತೆಯ ಸಾಮಾಜಿಕ, ಆರ್ಥಿಕ ಹಾಗೂ ನೈತಿಕ ಉನ್ನತಿಗಾಗಿ ಮದ್ಯಗಳ ಭಟ್ಟಿಯಿಳಿಸುವಿಕೆ ಹಾಗು ಮಾರಾಟದ ಸಂಪೂರ್ಣ ನಿಷೇಧವಿರತಕ್ಕದ್ದು, ವಿದೇಶಿಯರಿಗೆ ಮಾತ್ರವೇ ಮಾರಾಟ ಮಾಡಲು ಸೀಮಿತ ಪರಿಪೂರ್ಣಗಳಿಗಾಗಿ ಲೈಸನ್ಸುಗಳನ್ನು ನೀಡತಕ್ಕದ್ದು.

ನಾಡಿನ ಪರಂಪರೆಗಳು ಮತ್ತು ಪದ್ಧತಿಗಳನ್ನು ಪಾಲಿಸುವ ಬಗ್ಗೆ ಅವನು ತೀವ್ರವಾಗಿ ಉತ್ಸುಕನಾಗಿದ್ದ. ಜನರ ಅನಾಗರೀಕ ಅಭ್ಯಾಸಗಳು ಮತ್ತು ಪದ್ಧತಿಗಳನ್ನು ಕಟುವಾಗಿ ಖಂಡಿಸಿದ. ಮಲಬಾರಿನ ಒಂದು ಬುಡಕಟ್ಟಿನ ಜನರು ತಮ್ಮ ಸ್ತನಗಳನ್ನು ಮುಚ್ಚಿಕೊಳ್ಳದೆ ಓಡಾಡುತ್ತಿದ್ದುದನ್ನು ಗಮನಿಸಿ, ಅದನ್ನು ಟೀಕಿಸಿದ. ಅದು ಸದಭಿರುಚಿ ಮತ್ತು ನೈತಿಕತೆಗೆ ಹೊಂದದ ಪದ್ಧತಿ ಎಂದ. ಅವನ ಸಾಮಾಜಿಕ ಸುಧಾರಣೆಗಳು ಜನತೆಯ ಸಕಲ ವರ್ಗಗಳಿಗೂ ಲಾಭಧಾಯಕವಾಗಿದ್ದವು. ಬಡವರ ಶಿಕ್ಷಣ, ವಿವಾಹ, ವಿಶ್ರಾಂತಿ ಗೃಹಗಳು, ಅನಾಥಾಶ್ರಮಗಳು ಮೊದಲಾದವುಗಳಿಗೆ ಹಲವಾರು ಕೊಡುಗೆಗಳನ್ನಿತ್ತು ಅಶಕ್ತರಿಗೆ ದಾರಿ ದೀಪವಾದ.

೭. ನ್ಯಾಯಾಡಳಿತ: ಅವನ ನ್ಯಾಯಾಡಳಿತ ವ್ಯಸ್ಥಿತವಾಗಿದ್ದಿತು. ಅಪರಾಧಗಳ ಬಗ್ಗೆ ನ್ಯಾಯಾಲಯ ವಿಚಾರಣೆ ನಡೆಸಬೇಕು; ಎಲ್ಲ ವಿಚಾರಣೆಗಳ ಲಿಖಿತ ದಾಖಲೆಗಳು ಲಭ್ಯವಿರಬೇಕು; ಪ್ರತಿಯೊಂದು ದಂಡನೆಗೆ ಸಂಬಂಧಿಸಿದಂತೆ ಮೇಲ್ಮನವಿಗೆ ಅವಕಾಶವಿರಬೇಕು. ಅಂತಿಮ ತೀರ್ಪು ನೀಡುವ ಮೊದಲು ಕಾಲಾವಕಾಶವಿರಬೇಕು. ಅವನ ಕಾನೂನು ಮತ್ತು ವರ್ತನೆಯ ಸಂಹಿತೆಯು ಈ ರೀತಿ ಇದೆ. "ನಮ್ಮ ಪ್ರಜೆಗಳೊಡನೆ ಜಗಳವಾಡುವುದು ಎಂದರೆ ನಾವೇ ಜಗಳವಾಡಿಕೊಂಡಂತೆ. ಅವರೇ ನಮ್ಮ ರಕ್ಷಕರು ಮತ್ತು ಸಂರಕ್ಷಕರು. ನಮಗೆ ಸಮಸ್ತವನ್ನೂ ಒದಗಿಸಿಕೊಡುವವರು ಅವರೇ. ವೈಷಮ್ಯದ ಬಲವನ್ನು ನಮ್ಮ ಶತ್ರುಗಳಿಗೆ ಮೀಸಲಾಗಿಡೋಣ".

ಬ್ರಿಟೀಷರಿಗೆ ಸಹಾಯ ಮಾಡಿ ತನಗೆ ದೇಶದ್ರೋಹ ಬಗೆದ ೧೬ ಜನರಿಗೆ ಕ್ಷಮಾದಾನ ಮಾಡಿದ ಅವರು ಮೈಸೂರು ಸಂಸ್ಥಾನಕ್ಕೆ ಅಪಾರ ಸೇವೆ ಸಲ್ಲಿಸಿದುದೇ ಇದಕ್ಕೆ ಕಾರಣವಾಗಿತ್ತು. ಅವರ ಮಂತ್ರಿಗಳು ಈ ತೀರ್ಮಾನವನ್ನು ವಿರೋಧಿಸಿದಾಗ ಒಂದು ಕಾಲದಲ್ಲಿ ಅವರು ತನ್ನ ತಂದೆಗಾಗಿ ಮತ್ತು ಮೈಸೂರು ರಾಜ್ಯಕ್ಕಾಗಿ ತಮ್ಮ ಜೀವ ನೀಡಲು ಕೂಡ ಸಿದ್ಧರಾಗಿದ್ದವರು ಅವರು ಎಂದು ವಿವರಿಸಿದ. ನ್ಯಾಯಾಡಳಿತದಲ್ಲಿ ವಿಚಾರಣಾ ವಿಧಿ-ವಿಧಾನಗಳ ಸಮಯದಲ್ಲಿ ಅವನು ಉದಾರಿಯಾಗಿದ್ದರೂ, ಅಂತಿಮ ತೀರ್ಪು ನೀಡಿದ ನಂತರ ಯಾವುದೇ ರೀತಿಯಲ್ಲಿ ದಯೆ ತೋರಿಸಕೂಡದೆಂದು ಅವನು ಪ್ರತಿಪಾದಿಸುತಿದ್ದ. "ಕಾನೂನಿನ ಅನುಸಾರವಿಲ್ಲದೆ ಬೇರೆ ಯಾವುದೇ ರೀತಿಯಲ್ಲಿ ಯಾವುದೇ ವ್ಯಕ್ತಿಯನ್ನು ಶಿಕ್ಷಿಸಬಾರದು. ಅನಾದಿ ಪದ್ಧತಿಯ ಕಾನೂನು ಹಾಗೂ ನಮ್ಮ ಪರಂಪರೆಗಳಲ್ಲಿ ಅಡಕವಾಗಿರುವ ಕಾನೂನನ್ನು ನಾವು ಗೌರವಿಸಬೇಕು; ಇದರಿಂದ ಜನತೆ ಕಾನೂನಿನ ಉಗ್ರತೆ ಹಾಗೂ ವ್ಯಾಪ್ತಿಯನ್ನು ಅರಿಯುವಂತಾಗುವುದು. ಜನತೆಗೆ ತಮ್ಮ ಹಕ್ಕುಗಳು ಕರ್ತವ್ಯಗಳು, ಬಾಧ್ಯತೆಗಳು ಹಾಗು ಹೊಣೆಗಾರಿಕೆಗಳು ಕೂಡ ಅವರು ಅರಿತಿರಬೇಕು. ಕಾನೂನಿನ ಸಂಹಿತೀಕರಣ ಕೈಗೊಳ್ಳಬೇಕೆಂದು ನಾವು ತೀರ್ಮಾನಿಸಿದ್ದೇವೆ".

೮. ಧಾರ್ಮಿಕ ನೀತಿ: ಅವನು ತನ್ನ ಧಾರ್ಮಿಕ ನೀತಿಯಲ್ಲಿ ಶ್ರದ್ಧಾವಂತ, ನಿಷ್ಠೆಯ ಮುಸ್ಲಿಂನಾಗಿದ್ದ. ಆದರೆ ಅವನು ತನ್ನ ಧಾರ್ಮಿಕ ನೀತಿಯನ್ನು ವೈಯುಕ್ತಿಕವಾದುದೆಂದು ಪರಿಗಣಿಸಿದ್ದಾನೇ ವಿನಹ ರಾಜ್ಯದ ನೀತಿಯೆಂದು ಪರಿಗಣಿಸಿರಲಿಲ್ಲ. ಅವನು ಸಾಧಾರಣವಾಗಿ ಉದಾರಿಯಾಗಿ ಮತ್ತು ಸಹಿಷ್ಣುವಾದ ರಾಜನಾಗಿದ್ದ. ಹಿಂದೂಗಳನ್ನು ತನ್ನ ಸರ್ಕಾರದಲ್ಲಿ ಉನ್ನತ ಸ್ಥಾನಗಳಿಗೇರಿಸಿದ. ಉತ್ತಮ ತಿಳುವಳಿಕೆಯುಳ್ಳ ದೊರೆ ಅವನು. ಅವನು ಆರಾಧನಾ ಸ್ವಾತಂತ್ರ್ಯ ನೀಡಿದ್ದ, ದೇವಾಲಯಗಳು ಮತ್ತು ಬ್ರಾಹ್ಮಣರಿಗೆ ದಾನ-ದತ್ತಿಗಳನ್ನು ನೀಡಿದ. ಮಸೀದಿ ಮಂದಿರಗಳನ್ನೂ ನಿರ್ಮಿಸಿದ್ದ. ತಮ್ಮ ಧಾರ್ಮಿಕ ನೀತಿಗಳ ಬಗ್ಗೆ ಮೇಲ್ವಿಚಾರಣೆ ಮಾಡಲು ಹಾಗೂ ನಿಜವಾದ ಧರ್ಮದ ಬಗ್ಗೆ ಬೋಧಿಸಲು ಅವನು ಧಾರ್ಮಿಕ ಬೋಧಕರನ್ನು ನೇಮಿಸಿದ್ದ. ಧಾರ್ಮಿಕ ವಿಷಯಗಳ ಬಗ್ಗೆ ಮೇಲ್ವಿಚಾರಣೆ ನಡೆಸಲು ಅಧಿಕಾರಿಗಳನ್ನು ನೇಮಿಸಿದವರ ಪೈಕಿ ಅಶೋಕನನ್ನು ಬಿಟ್ಟರೆ ಇವನೇ ಎರಡನೆಯ ದೊರೆ. ಕುರಾನಿನ ಈ ಅಂಶದಲ್ಲಿ ಅವನ ನಂಬಿಕೆ ದೃಢವಾಗಿತ್ತು "ವಿವೇಕದ ಉದ್ಯಾನದಲ್ಲಿ ಅನೇಕ ಕುಸುಮಗಳು ವಿಕಸಿಸುತ್ತವೆ; ಆದರೆ ಅವೆಲ್ಲವುಗಳಲ್ಲಿ ಅಮರವಾದ ಪ್ರೀತಿಯ ಸುಧೆಯನ್ನು ತಮ್ಮಲ್ಲಿ ಅಡಗಿಸಿಕೊಂಡಿರುತ್ತವೆ. ಅದೇ ರೀತಿ ಪ್ರಪಂಚದ ಸಕಲ ಧರ್ಮಗಳೂ ಕೂಡಾ ಇವೆ". "ಮಾನವತೆಯ ಏಕತೆ ಹಾಗೂ ಮಾನವ ಜನಾಂಗದ ಭಾತೃತ್ವದ" ತತ್ವವನ್ನು ಪಾಲಿಸಿಕೊಂಡು ಬಂದ.

ಜನತೆಯ ಪೈಕಿ ಕಡುಬಡವನಿಗೂ ಶ್ರೀಸಾಮಾನ್ಯನಿಗೂ ಧರ್ಮಶೀಲ ಟೀಪುವಿನ ಬಗ್ಗೆ ತಿಳಿದಿತ್ತು. ಎಲ್ಲ ಜನರು ಅವನನ್ನು ಹೊಗಳುತ್ತಿದ್ದರು, ಮೆಚ್ಚುತ್ತಿದ್ದರು. ಅವನು ತಮ್ಮ ಮಕ್ಕಳಿಗೆ(ಜನತೆ)ಗೆ ಪ್ರೀತಿಯ ತಂದೆಯಾಗಿದ್ದ. ರಾಜ್ಯದ ಜನತೆಯೆಲ್ಲ ಅವನನ್ನು ಆರಾಧಿಸುತ್ತಿದ್ದರು. "ಟೀಪು ಮಹಾಶಯ" ಎಂದು ಕರೆಯುವುದರಲ್ಲಿ ಸಮರ್ಥನೆ ಇದೆ.

೧೩೧

ಸಾಮಾಜಿಕ ಚಳವಳಿಯಲ್ಲಿ ಒಕ್ಕಲಿಗರ ಪತ್ರಿಕೆಯ ಪಾತ್ರ

ಡಾ. ಬಿ.ಎಸ್. ಪುಟ್ಟಸ್ವಾಮಿ*

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಮೈಸೂರು ಸಂಸ್ಥಾನದಲ್ಲಿ ನಡೆದ ಹಿಂದುಳಿದ ವರ್ಗಗಳ ಚಳವಳಿಯ ಅಂಗವಾಗಿ ಹುಟ್ಟಿಕೊಂಡ ಸಂಸ್ಥೆಗಳಲ್ಲಿ ಒಕ್ಕಲಿಗರ ಸಂಘ ಮೊದಲನೆಯದು ಹಾಗು ಮುಖ್ಯವಾದುದು. ಒಕ್ಕಲಿಗರ ಬೆಳವಣಿಗೆಯ ಭಾಗವಾಗಿ ಜನ್ಮತಾಳದ ಒಕ್ಕಲಿಗರ ಪತ್ರಿಕೆ ನಮ್ಮನಾಡಿನ ಸಾಮಾಜಿಕ ಇತಿಹಾಸದಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಒಕ್ಕಲಿಗರ ಸಂಘವು ಸ್ಥಾಪನೆಯಾದಾಗ ತಮ್ಮ ಸಮುದಾಯವನ್ನು ಸಂಘಟಿಸುವ ಉದ್ದೇಶಕ್ಕಾಗಿ ಹಾಗೂ ಸಂಸ್ಥಾನದ ವಿವಿಧ ಕಡೆ ವಾಸಿಸುವ ಕುಲಬಾಂಧವರನ್ನು ಸಂಪರ್ಕಿಸಿ ಅವರಿಗೆ ಸಂದೇಶವನ್ನು ರವಾನಿಸುವ ಉದ್ದೇಶದಿಂದ ಒಂದು ಪತ್ರಿಕೆಯನ್ನು ಸ್ಥಾಪಿಸಬೇಕೆಂದು ಸ್ಥಾಪಕರು ನಿರ್ಧರಿಸಿದರು. ಅದರಂತೆ ಸಂಘದ ಮೊದಲನೇ ಮಹಾಸಭೆಯಲ್ಲಿಯೇ ಪತ್ರಿಕೆಯನ್ನು ಪ್ರಾರಂಭಿಸುವ ಬಗ್ಗೆ ಸಂಘದ ಪದಾಧಿಕಾರಿಗಳು ಅಗತ್ಯ ಕ್ರಮಗಳನ್ನು ಕೈಗೊಂಡರು. ಕೆ.ಹೆಚ್. ರಾಮಯ್ಯನವರು ಚಿತ್ರದುರ್ಗದಲ್ಲಿ ಹೆಡ್ ಮುನ್ಷಿಯಾಗಿದ್ದ ಪುಟ್ಟಯ್ಯನವರನ್ನು ಸಂಧಿಸಿ ಅವರನ್ನು ಬೆಂಗಳೂರಿಗೆ ಬರುವಂತೆ ಮನವಿ ಮಾಡಿಕೊಂಡರು. ಒಕ್ಕಲಿಗರ ಸಂಘದ ಮಹಾಸಭೆಗೆ ಸಂಬಂಧಿಸಿದ ಸಮಸ್ತ ಬರವಣಿಗೆಯ ಕಾರ್ಯವನ್ನು ಪುಟ್ಟಯ್ಯನವರೊಬ್ಬರೇ ಏಕಾಂಗಿಯಾಗಿ ನಿರ್ವಹಿಸಿದ್ದನ್ನು ಗಮನಿಸಿದ ರಾಮಯ್ಯ ನವರು ಹಾಗು ಕೆಲವು ಮುಖಂಡರು ಸಂಘಕ್ಕೆ ಅದರಲ್ಲೂ ಪತ್ರಿಕೆಗೆ ಇಂತಹವರ ಸೇವೆ ಅತ್ಯಗತ್ಯವೆಂದು ಕಂಡುಕೊಂಡರು. ದಿವಾನ ವಿ.ಪಿ. ಮಾಧವರಾಯರು ಪುಟ್ಟಯ್ಯನವರಿಗೆ ಸಂಬಳ ವಿಲ್ಲದೇ ರಜೆಯನ್ನು ಮಂಜೂರು ಮಾಡಿಸಲು ಒಪ್ಪಿ ಕೊಂಡರು. ದಿವಾನರನ್ನು ರಾಮಯ್ಯನವರು ಭೇಟಿ ಮಾಡಿ ಪುಟ್ಟಯ್ಯನವರು ಯಾವ ತೊಂದರೆಯು ಇಲ್ಲದೇ ಒಕ್ಕಲಿಗರ ಸೇವೆಯಲ್ಲಿ ನಿರತರಾಗಿ ಒಕ್ಕಲಿಗರ ಪತ್ರಿಕೆಯ ಸಂಪಾದಕರಾಗಿ ಹಾಗೂ ಮುದ್ರಣಾಲಯದ ಮೇಲ್ವಿಚಾರಕರಾಗಿ ಇರಬಹು ದೆಂದು ರಾಮಯ್ಯನವರು ತಿಳಿಸಿದರು.

೧೯೦೭ರ ಮಾರ್ಚ್ ೧೫ರಂದು ಯುಗಾದಿಯ ದಿನ ಒಕ್ಕಲಿಗರ ಪತ್ರಿಕೆಯ ಬಿಡುಗಡೆಯಾಯಿತು. ಪತ್ರಿಕೆಯನ್ನು ಕೋಟೆಯಲ್ಲಿದ್ದ ನಡೆಗನ್ನಡಿ ಪತ್ರಿಕೆಯನ್ನು ಹೊರಡಿಸುತ್ತಿದ್ದ ಶ್ರೀನಿವಾಸಯ್ಯಂಗಾರ್‌ರವರ ಮುದ್ರಣಾಲಯದಲ್ಲಿ ಮುದ್ರಿಸಲಾಗುತ್ತಿತ್ತು. ಸಂಘದ ಮುಖಂಡರ ಪೂರ್ಣ ಬೆಂಬಲ ಮತ್ತು ಪುಟ್ಟಯ್ಯನವರ ಉತ್ತಮ ಬರವಣಿಗೆಯ ಪತ್ರಿಕೆಯು ಉತ್ತಮ ಗುಣಮಟ್ಟದಿಂದ ಹೊರಬಂದಿತು. ಬಹುಬೇಗ ಇದು ಸಂಸ್ಥಾನದ ನಾನಾ ಭಾಗಗಳಲ್ಲಿದ್ದ ಒಕ್ಕಲಿಗರನ್ನು ತಲುಪಿ ವಿವಿಧ ವಿಷಯಗಳಲ್ಲಿ ಅವರಿಗೂ ಆಸಕ್ತಿಯನ್ನು, ಕುತೂಹಲವನ್ನು ಉಂಟುಮಾಡಿತು. ಪ್ರಾರಂಭದಲ್ಲಿ ನಾಲ್ಕು ಪುಟಗಳ ಪತ್ರಿಕೆ ವಾರಪತ್ರಿಕೆಯಾಗಿ ಪ್ರತಿ ಮಂಗಳವಾರ ಸಾಯಂಕಾಲ ಪ್ರಕಟವಾಗುತ್ತಿತ್ತು. ಪತ್ರಿಕೆಯ **ವಾರ್ಷಿಕ ಚಂದಾ ಸ್ಥಳೀಯರಿಗೆ ಒಂದು ರೂಪಾಯಿ, ಪರಸ್ಥಳದವರಿಗೆ ಒಂದು ರೂಪಾಯಿ ಹದಿನಾಲ್ಕು ಆಣೆಯಾಗಿತ್ತು.** ಮೊದಲ ವರ್ಷಗಳಲ್ಲಿ ಸಂಘದ ಮತ್ತು ಸಂಸ್ಥಾನದ ಸುದ್ದಿಗಳನ್ನು ಪ್ರಕಟಿಸಲಾಗುತ್ತಿತ್ತು. ಅನಂತರ ಆಗಿನ ಇತರ ಪತ್ರಿಕೆಗಳಂತೆ "ದೇಶ ವಿದೇಶಗಳ ವಿದ್ಯಮಾನಗಳನ್ನು ವರದಿ ಮಾಡುತ್ತಿದ್ದುದ್ದಲ್ಲದೇ ಸಕಾಲಿಕವಾದ, ವಿಮರ್ಶಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನ ಮಾಲಿಕೆಯನ್ನು ಪ್ರಕಟಿಸುತ್ತಿತ್ತು". ಆ ಸಮಯದಲ್ಲಿ ಮೈಸೂರು ಸ್ಟಾರ್ ಹಾಗೂ ವೃತ್ತಾಂತ ಪತ್ರಿಕೆಗಳು ಸಂಸ್ಥಾನದ ಪ್ರಮುಖ ಪತ್ರಿಕೆಗಳಾಗಿದ್ದವು. ಅನಂತರ "ರಾಷ್ಟ್ರದ ನಾನಾ ಕಡೆಗಳಿಂದ ಬರುವ ಸುದ್ದಿ ಸಂಗ್ರಹಗಳು, ಲೇಖನಗಳು, ಕವನ, ಕಥೆಗಳು, ಸರ್ಕಾರ ಪ್ರಕಟಣೆಗಳು, ಶ್ರೀಮನ್ಮಹಾ ರಾಜರವರ ಸರ್ಕಾರದ, ದಿವಾನರ ಆಯ-ವ್ಯಯ ವರದಿಗಳು, ದಸರಾ ಭಾಷಣಗಳು, ಮಂತ್ರಾಲೋಚನ ಸಭೆಯ ವಾರ್ತೆಗಳು, ಕೃಷಿ ಸಂಬಂಧವಾದ ಲೇಖನಗಳು, ವಿದೇಶ ವೃತ್ತಾಂತರಗಳು, ಪ್ರಬಂಧಗಳು, ಜೀವನ ಚರಿತ್ರೆಗಳು, ಧಾರವಾಹಿ ಲೇಖನಗಳನ್ನು ಸೂಕ್ತವಾಗಿ ಪ್ರಕಟಿಸಿ ಉತ್ತಮ ರೀತಿಯಲ್ಲಿ ಪತ್ರಿಕೋದ್ಯಮದ ಮಟ್ಟವನ್ನು ಹಾಗೂ ಆ ವೃತ್ತಿಯ ಗೌರವವನ್ನು ಕಾಪಾಡಿಕೊಂಡು ಬಂದಿದ್ದಾರೆ.

ಒಕ್ಕಲಿಗರ ಪತ್ರಿಕೆಯ ಮುಖಪುಟ, ತಲೆಬರಹ ಹಾಗೂ ಲಾಂಛನಗಳು ಪತ್ರಿಕೆಯ ಹಾಗೂ ಸಂಘದ ಧ್ಯೇಯ ಧೋರಣೆಗಳನ್ನು ಪ್ರತಿಬಿಂಬಿಸುತ್ತಿದ್ದವು. ಪತ್ರಿಕೆ. ಮೇಲ್ಭಾಗದಲ್ಲಿ

* ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ವಿ.ವಿ.ಪುರಂ ಕಲಾ ಕಾಲೇಜು, ಬೆಂಗಳೂರು-೫೬೦೦೦೪.

ದಪ್ಪ ಅಕ್ಷರಗಳಲ್ಲಿ ಒಕ್ಕಲಿಗರ ಪತ್ರಿಕೆ ಎಂಬ ಹೆಸರಿನ ಮಧ್ಯಭಾಗದಲ್ಲಿ ದಕ್ಷಿಣ ಭಾರತದ ಭೂಪಟ, ಆ ಭೂಪಟದ ಮಧ್ಯೆ ಉದಯಿಸುತ್ತಿರುವ ಸೂರ್ಯನ ಚಿತ್ರವಿದೆ. ಕೆಳಭಾಗದಲ್ಲಿ ನೇಗಿಲು ಹಿಡಿದ ರೈತನ ಚಿತ್ರವಿದ್ದು "ಇದು ರೈತ ಕೇವಲ ಹೊಲವನ್ನುಳುವುದಲ್ಲದೇ ತನ್ನ ಸಾಕ್ಷಿ ಪ್ರಜೆಯನ್ನು ಉಳುವಿಕೆಗೆ ಈಡು ಮಾಡಿ ಅರಿವನ್ನು ಬಿತ್ತಿ ಬೆಳೆಯುವ ಶ್ರಮಪೂರಿತ ಬದ್ಧತೆ ಮತ್ತು ಶಿಸ್ತಿನ ಪ್ರತೀಕವಾಗಿದ್ದಾನೆ."

ಬಿ. ಪುಟ್ಟಯ್ಯನವರು ಒಂದೂವರೆ ವರ್ಷಗಳ ಕಾಲ ಪತ್ರಿಯೊಂದು ಸಂಚಿಕೆಯಲ್ಲಿರುವ ಅಗ್ರ ಲೇಖನಗಳನ್ನು, ಇತರ ಲೇಖನಗಳನ್ನು ತಾವೇ ಬರೆಯುತ್ತಿದ್ದರು. ಸ್ವಂತ ಮುದ್ರಣಾಲಯವನ್ನು ಸ್ಥಾಪಿಸಿದ ಮೇಲೂ ಮುದ್ರಣ ಕಾರ್ಯದ ಜೊತೆಗೆ "ಪತ್ರಿಕೆಗಳಲ್ಲಿ ಬರೆಯುವುದಲ್ಲದೇ ಅವುಗಳನ್ನು ಸುತ್ತಿ ಟಪಾಲಿಗೆ ಕೊಡುವ ಕೆಲಸವನ್ನು ಸ್ವಹಸ್ತದಿಂದ ಮಾಡುತ್ತಿದ್ದರು". ಪತ್ರಿಕೆಗಳಿಗೆ ಅಗ್ರಲೇಖನಗಳನ್ನು **ಸಿ. ಲಕ್ಷ್ಮಣಗೌಡ** ಬರೆದುಕೊಡುತ್ತಿದ್ದು ಇವರ ಅಗ್ರಲೇಖನಗಳು ಸ್ಫುಟವಾಗಿಯೂ, ಅರ್ಥಗರ್ಭಿತವಾಗಿಯೂ ಇರುತ್ತಿದ್ದವು.

ದಿವಾನ್ ಮಾಧವರಾಯರು ಸಂಸ್ಥಾನದಲ್ಲಿ ಒಕ್ಕಲಿಗರ ಪತ್ರಿಕೆ ಹಾಗೂ ವೃತ್ತಾಂತ ಪತ್ರಿಕೆಗಳನ್ನು ಎಲ್ಲ ಜನರು ಅದರಲ್ಲೂ ಗ್ರಾಮೀಣ ಜನರು ಓದಬೇಕಾಗಿದೆ ಎಂದು ಸಲಹೆ ಮಾಡಿದರು. ಇವರು ತಿಳಿಸುವಂತೆ–

ಪ್ರತಿಗ್ರಾಮದಲ್ಲಿಯೂ ಒಂದೆರಡು ಪತ್ರಿಕೆಗಳು ಇರಬೇಕು. ಪಟೇಲರು ಅಥವಾ ಶ್ಯಾನುಭೋಗರು ಗ್ರಾಮಸ್ಥರಿಗೆ ಅವುಗಳನ್ನು ಓದಿ ಹೇಳಬೇಕು. ಒಕ್ಕಲಿಗರ ಪತ್ರಿಕೆ ಮತ್ತು ವೃತ್ತಾಂತ ಪತ್ರಿಕೆ ಇವೆರಡನ್ನು ಗ್ರಾಮಸ್ಥರು ತರಿಸಿಕೊಂಡು ಒಂದಕ್ಕೆ ಪಟೇಲರೂ ಹಾಗೂ ಮತ್ತೊಂದಕ್ಕೆ ಶ್ಯಾನುಭೋಗರು ಚಂದಾ ಕೊಡುವಂತೆ ಮಾಡಬೇಕು. ಇವೆರಡು ಪತ್ರಿಕೆಗಳನ್ನು ಅರ್ಧ ಖರೀದಿಗೆ ಪಟೇಲರಿಗೂ, ಶ್ಯಾನುಭೋಗರಿಗೂ ಕಳುಹಿಸಬೇಕು. ಗ್ರಾಮಸ್ಥರು ವರ್ತಮಾನ ಪತ್ರಿಕೆಗಳಲ್ಲಿ ಕಂಡು ಬರುವ ವಿಷಯಗಳನ್ನು ತಿಳಿಯುವುದರ ಮೂಲಕ ದೀರ್ಘ ನಿದ್ರೆಯಿಂದ ಏಳುವುದಕ್ಕೆ ಅನುಕೂಲವಾಗುತ್ತದೆ.

ಒಕ್ಕಲಿಗರ ಪತ್ರಿಕೆಯು ಜನಪ್ರಿಯವಾದಂತೆಲ್ಲಾ ಕೆಲಸವು ಹೆಚ್ಚಾಯಿತು. ಆದರೆ ಪುಟ್ಟಯ್ಯನವರ ದುಡಿಮೆಯು ಒಂದಕ್ಕೆ ಎರಡರಷ್ಟಾಯಿತು. ಅವರು ಉಳಿದ ಕೆಲಸ ಕಾರ್ಯಗಳನ್ನು ಬಿಟ್ಟು ವಿಶ್ರಾಂತಿ ಇಲ್ಲದೆ ಪತ್ರಿಕೆಗೆ ತಮ್ಮೆಲ್ಲಾ ಸಮಯವನ್ನು ವಿನಿಯೋಗಿಸುತ್ತಿದ್ದರು. ಪತ್ರಿಕೆಯ ಮಟ್ಟವನ್ನು ಕಾಪಾಡಲು ತುಂಬಾ ನಿಷ್ಠುರವಾದಿಯಾಗಬೇಕಾಯಿತು. ಒಮ್ಮೆ ಇವರ ಸಹೋದರಿ ತನ್ನ ಹೆಸರನ್ನು ಪತ್ರಿಕೆಯಲ್ಲಿ ಹಾಕಿಸಬೇಕೆಂದು ಕೇಳಿಕೊಂಡಾಗ ಪುಟ್ಟಯ್ಯನವರು ಪತ್ರಿಕೆಗೆ ಸೂಕ್ತವಾದ ಲೇಖನಗಳನ್ನು ಬರೆದರೆ ಮಾತ್ರ ಅದನ್ನು ಪ್ರಕಟಿಸುವುದುದಾಗಿ ನಿಷ್ಠುರವಾಗಿ ತಿಳಿಸಿದರು.

ಈ ಮಧ್ಯೆ ಸಂಸ್ಥಾನದ ಸರ್ಕಾರವು ಪುಟ್ಟಯ್ಯನವರನ್ನು ಮುದ್ರಣದಲ್ಲಿ ವಿಶೇಷ ತರಬೇತಿ ಪಡೆಯಲು ೧೯೧೨ರಲ್ಲಿ ಇಂಗ್ಲೆಂಡಿಗೆ ಕಳುಹಿಸಿಕೊಟ್ಟಿತು. ಪುಟ್ಟಯ್ಯನವರು ತಮ್ಮ ವಿದೇಶದ ತರಬೇತಿ ಸಮಯದಲ್ಲಿ ಪತ್ರಿಕೆಯನ್ನು ಮರೆಯದೇ ಅದಕ್ಕೆ ತಮ್ಮ ಪ್ರವಾಸದ ಅನುಭವ, ತಾವು ಕಂಡ ಹೊಸ ವಸ್ತು, ಹೊಸ ನೋಟ ಎಲ್ಲವನ್ನು ದಾಖಲಿಸುತ್ತಾ ಹೋದರು. ವಾರ ಪತ್ರಿಕೆಯಲ್ಲಿ ಬರೆದು ಬಂದ ಲೇಖನಗಳು ಕೊನೆಗೆ ಪುಸ್ತಕ ರೂಪದಲ್ಲಿ ಅಚ್ಚಾದವು. ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲದೇ ಕೆ.ಹೆಚ್. ರಾಮಯ್ಯನವರಿಗೆ, ಬಂಧುಗಳಿಗೆ ಪತ್ರಗಳನ್ನು ಬರೆದು ಅವುಗಳಲ್ಲಿಯೂ ಪತ್ರಿಕೆಗಳ ಬಗ್ಗೆ ಬರೆಯುತ್ತಿದ್ದರು. ಪುಟ್ಟಯ್ಯನವರು ಲಂಡನ್ನಿನ ಟೈಮ್ಸ್ ಮೊದಲಾದ ಪತ್ರಿಕೆಗಳ ಕಛೇರಿಗೆ ಭೇಟಿ ನೀಡಿ ಒಕ್ಕಲಿಗರ ಪತ್ರಿಕೆಯುನ್ನು ಅದರಂತೆ ಪರಿಷ್ಕರಿಸಿ ಸುಧಾರಣೆ ಮಾಡಬೇಕೆಂದು ಬಯಸಿದರು. ಪತ್ರಿಕೆಗೆಂದು ಮುದ್ರಣ ಯಂತ್ರಗಳನ್ನು ತರಬೇಕು. ಅದರ ಆಕಾರವನ್ನು ದೊಡ್ಡದು ಮಾಡಬೇಕು. ಅಧಿಕ ಸಿಬ್ಬಂದಿಯನ್ನು ನೇಮಿಸಿಕೊಂಡರು ಪತ್ರಿಕೆಯನ್ನು ಉತ್ತಮ ಪಡಿಸಬೇಕು ಎಂದು ಮೇಲಿಂದ ಮೇಲೆ ಪತ್ರಗಳನ್ನು ಬರೆಯುತ್ತಿದ್ದರು. ಈ ರೀತಿಯಲ್ಲಿ ಪುಟ್ಟಯ್ಯ ನವರು ಒಕ್ಕಲಿಗರ ಪತ್ರಿಕೆ ಬೆಳೆಯಲು ಶ್ರಮಿಸಿದರು.

ಪುಟ್ಟಯ್ಯನವರ ನಂತರವೂ ಒಕ್ಕಲಿಗರ ಪತ್ರಿಕೆಯಲ್ಲಿ ಅನೇಕ ಪ್ರತಿಭಾವಂತ ಸಂಪಾದಕರು ಮುನ್ನಡೆಸಿದರು. ಪುಟ್ಟಯ್ಯನವರ ನಂತರ ಬಂದ ಎಸ್.ವಿ. ವೆಂಕಟರಾಮಯ್ಯ ನವರು ನುರಿತ ಪತ್ರಕರ್ತರಾಗಿದ್ದರು. ಇವರು ಹಲವು ಭಾಷೆಗಳಲ್ಲಿ ನೈಪುಣ್ಯತೆಯನ್ನು ಪಡೆದಿದ್ದರು. ವಿವೇಕೋದಯ ಎಂಬ ಮಾಸಪತ್ರಿಕೆಯನ್ನು ಪ್ರಕಟಿಸಿ ಅನುಭವವನ್ನು ಪಡೆದು ಕೊಂಡಿದ್ದರು. ಸುಮಾರು ಮೂರು ವರ್ಷಗಳ ಕಾಲ ವೆಂಕಟ ರಾಮಯ್ಯನವರು ಒಕ್ಕಲಿಗರ ಪತ್ರಿಕೆಯನ್ನು ಸಮರ್ಥವಾಗಿ ನಡೆಸಿಕೊಂಡು ಹೋದರು. ಈ ಪತ್ರಿಕೆಗೆ ಮೈಸೂರು ಸರ್ಕಾರವು ಪ್ರೋತ್ಸಾಹ ನೀಡಿದ್ದರಿಂದ ಅದಕ್ಕೆ ಹೆಚ್ಚಿನ ಮಾನ್ಯತೆಯು ದೊರೆತ್ತಿದ್ದಿತು. ಸ್ವಲ್ಪ ಸಮಯದಲ್ಲೇ ಪತ್ರಿಕೆ ಹೆಚ್ಚು ಜನಪ್ರಿಯತೆಯನ್ನು ಗಳಿಸಿದ್ದಲ್ಲದೇ ಪ್ರತಿ ಸಂಚಿಕೆಯ ಪ್ರಸಾರದ ಸಂಖ್ಯೆಯು ಅಧಿಕವಾಯಿತು. ೧೯೨೩ರಲ್ಲಿ ಪತ್ರಿಕೆಯ ಕಛೇರಿಗೆ ಒಂದು ಉತ್ತಮವಾದ ವಿದೇಶಿ ಮುದ್ರಣ ಯಂತ್ರವು ಬಂದು ಮುದ್ರಣದ ಮಟ್ಟ ಮತ್ತಷ್ಟು ಸುಧಾರಿಸಿತು. ಸರ್ವಾಂಗ ಸುಂದರವಾಗಿ ಹೊರಬರುತ್ತಿದ್ದ ಪತ್ರಿಕೆಗೆ ಸಾರ್ವಜನಿಕರಿಂದಲೂ ಸರ್ಕಾರದಿಂದಲೂ ಮನ್ನಣೆ ದೊರೆಯಿತು. ಸರ್ಕಾರವು ಒಕ್ಕಲಿಗರ ಪತ್ರಿಕೆಗೆ ಅಧಿಕೃತ ಮನ್ಯತೆಯನ್ನು ನೀಡಿ ಅದಕ್ಕೆ ವ್ಯವಸ್ಥಿತವಾಗಿ ಜಾಹಿರಾತು ನೀಡಲು ಪ್ರಾರಂಭಿಸಿತು. ಒಕ್ಕಲಿಗರ ಪತ್ರಿಕೆಯು ಉತ್ತಮ

ಗುಣಮಟ್ಟವನ್ನು ಹೊಂದಿದ್ದುದನ್ನು ಹಾಗೂ ಸರ್ಕಾರ ಒಕ್ಕಲಿಗ ಸಮುದಾಯಕ್ಕೆ ಪರೋಕ್ಷವಾಗಿ ಬೆಂಬಲ ನೀಡುತ್ತಿತ್ತೆಂಬುದನ್ನು ಇದು ಸೂಚಿಸುತ್ತದೆ.

ಹೆಚ್.ಕೆ. ವೀರಣ್ಣಗೌಡರು ಒಕ್ಕಲಿಗರ ಪತ್ರಿಕೆಯ ಸಂಪಾದಕರಾಗಿ ಸಲ್ಲಿಸಿದ ಸೇವೆ ಅಮೋಘವಾದುದು. ಒಕ್ಕಲಿಗರ ಪತ್ರಿಕೆಗೆ ಸಂಪಾದಕರೊಬ್ಬರು ಬೇಕೆಂದು ಬೆಂಗಳೂರು ಒಕ್ಕಲಿಗರ ಸಂಘದವರು ಪತ್ರಿಕೆಗಳಲ್ಲಿ ಪ್ರಕಟಿಸಿದ್ದರು. ಆ ಸಂದರ್ಭದಲ್ಲಿ ಅವರು ಅರ್ಜಿ ಸಲ್ಲಿಸಿದರು. ಆ ವೇಳೆಗಾಗಲೇ ವೀರಣ್ಣಗೌಡರು ಉಪಾಧ್ಯಾಯ ವೃತ್ತಿಯಲ್ಲಿದ್ದರು. ಪತ್ರಿಕೆಯ ಸಂಪಾದಕರಾಗಿ ಆಯ್ಕೆಯಾಗಿರುವ ಪತ್ರ ತಲುಪಿದಾಗ ಉಪಾಧ್ಯಾಯ ವೃತ್ತಿಯನ್ನು ಬಿಟ್ಟು ಒಕ್ಕಲಿಗರ ಪತ್ರಿಕೆಯ ಸಂಪಾದಕರಾಗಿ ೧೯೨೭ ಜನವರಿ ೧ ರಂದು ಕೆಲಸಕ್ಕೆ ಸೇರಿಕೊಂಡರು. ಈ ವೇಳೆಯಲ್ಲಿ ಪತ್ರಿಕೆಯ ಪ್ರಧಾನ ಲೇಖನಗಳನ್ನು ಇಂಗ್ಲಿಷಿನಲ್ಲಿ ಬರೆದು ಪ್ರಕಟಿಸುತ್ತಿದ್ದರು. "ಬೀದಿ ಮಾತು" ಮತ್ತು "ಮಾತುಗಾರ ಮಲ್ಲ" ಎಂಬ ಅಂಕಣ ಲೇಖನಗಳನ್ನು ಪ್ರಕಟಿಸಿ ಬಹಳ ಜನ ಓದುಗರನ್ನು ಆಕರ್ಷಿಸಿದರು. ಇವರು ಎರಡು ವರ್ಷಗಳ ನಂತರ ರಾಜಿನಾಮೆ ಕೊಡುವ ಸಂದರ್ಭದಲ್ಲಿ ಚಂದಾದಾರ ಸಂಖ್ಯೆ ಮೊದಲಿದ್ದುದಕ್ಕಿಂತ ಐದು ಪಟ್ಟು ಹೆಚ್ಚಾಗಿತ್ತು.

೧೯೨೮ರ ಒಕ್ಕಲಿಗರ ಪತ್ರಿಕೆಯ ವಾರ್ಷಿಕ ಸಂಚಿಕೆಯ ವೈವಿಧ್ಯಮಯವಾಗಿತ್ತು. ೧೯೨೮ರ ಫೆಬ್ರವರಿ ತಿಂಗಳಿನಲ್ಲಿ ಕನ್ನಡ ಪತ್ರಿಕೋದ್ಯಮಕ್ಕೆ ಹೊಸ ಕೊಡುಗೆಯಾಗಿ ಒಕ್ಕಲಿಗರ ಪತ್ರಿಕೆಯ ಈ ವಾರ್ಷಿಕ ಸಂಚಿಕೆ ಹದಿನೆಂಟು ಪುಟಗಳ ರಟ್ಟಿನ ರಕ್ಷಾಕವಚನವನ್ನು ಹೊಂದಿದ್ದ ವಿಶಿಷ್ಟ ಪತ್ರಿಕೆಯಾಗಿತ್ತು. ಆಗ ಕನ್ನಡದಲ್ಲಿದ್ದ ಪತ್ರಿಕೆಗಳೆಂದರೆ ವೃತ್ತಾಂತ ಪತ್ರಿಕೆ, ಮೈಸೂರು ಸ್ಟಾರ್, ಒಕ್ಕಲಿಗರ ಪತ್ರಿಕೆ, ಅರ್ಥಸಾಧಕ ಪತ್ರಿಕೆ ಇತ್ಯಾದಿಗಳು. ಮೈಸೂರು ಸ್ಟಾರ್ ಪತ್ರಿಕೆ ಬ್ರಾಹ್ಮಣೇತರ ಮುಖಂಡರ ಪತ್ರಿಕೆಯಾಗಿತ್ತು. ಅಂದಿನ ಪತ್ರಿಕೆಗಳು ವಾರ್ಷಿಕ ಸಂಚಿಕೆಗಳನ್ನು ಪ್ರಕಟಿಸುತ್ತಿರಲಿಲ್ಲ. **ಕನ್ನಡ ವಾರಪತ್ರಿಕೆಗಳಲ್ಲಿ ಮೊದಲ ವಿಶೇಷ ಸಂಚಿಕೆ ಪ್ರಕಟವಾದುದು ಒಕ್ಕಲಿಗರ ಪತ್ರಿಕೆಯಲ್ಲಾದುದು** ಹೆಮ್ಮೆಯ ವಿಷಯವಾಗಿದ್ದಿತು. ಈ ಸಂಚಿಕೆಯ ಮೊದಲ ಪುಟದಲ್ಲಿ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಭಾವಚಿತ್ರವಿದ್ದಿತು. ನಂತರದ ಪುಟಗಳಲ್ಲಿ ಕುವೆಂಪು, ಪಂಡಿತ್ ತಾರಾನಾಥ, ದತ್ತಾತ್ರೇಯ, ಕೃಷ್ಣ ಭಾರಾದ್ವಾಜ, ತೀ.ನಂ.ಶ್ರೀ., ದೇವುಡು ನರಸಿಂಹಶಾಸ್ತ್ರಿ, ತಿ.ತಾ. ಶರ್ಮ ಮುಂತಾದ ಖ್ಯಾತ ಬರಹಗಾರರ ಲೇಖನಗಳಿದ್ದುದಲ್ಲದೆ ಬರಹಗಾರರ ಭಾವಚಿತ್ರಗಳು, ಆದಿಚುಂಚನಗಿರಿ ಮಠಾಧಿಪತಿಗಳಾಗಿದ್ದ ಶ್ರೀ ಭಕ್ತನಾಥ ಸ್ವಾಮಿಗಳ ಭಾವಚಿತ್ರ, ಒಕ್ಕಲಿಗರ ಸಂಘದ ಮುಖಂಡರ ಭಾವಚಿತ್ರಗಳೂ, ಮೈಸೂರು ಸಂಸ್ಥಾನದ ಪ್ರಸಿದ್ಧ ಗುಡಿಗೋಪುರಗಳು, ವರ್ಣಚಿತ್ರಗಳು ಇದ್ದು, **'ಶಿವಾಜಿ ವಿಜಯ'** ಎಂಬ ಹೆಸರಿನ ಸಂಪಾದಕರು ಬರೆದಿದ್ದ ಕನ್ನಡ ಗದ್ಯ ನಾಟಕವು ಸೇರಿದ್ದಿತು ಮತ್ತು ಕೆಲವು ವ್ಯಕ್ತಿಗಳ ಬಗ್ಗೆ ಕಿರು ಲೇಖನಗಳನ್ನು ಇದರಲ್ಲಿ ಪ್ರಕಟಿಸಲಾಗಿತ್ತು.

ವಾರ್ಷಿಕ ಸಂಚಿಕೆ ಹೊರಬಂದ ಒಂದೆರಡು ದಿನಗಳಲ್ಲಿಯೇ ಪ್ರಕಟಗೊಂಡ ಎಲ್ಲ ಪ್ರತಿಗಳು ಮುಗಿದು ಹೋಯಿತು. ಆ ಸಮಯದಲ್ಲಿ ಪ್ರಸಾರದಲ್ಲಿದ್ದ 'ಮೈಸೂರು ಸ್ಟಾರ್' ಮೊದಲಾದ ಪತ್ರಿಕೆಗಳು ಒಕ್ಕಲಿಗರ ಪತ್ರಿಕೆಯ ಜನಪ್ರಿಯತೆಯ ಸುಳಿಯಲ್ಲಿ ತತ್ತರಿಸಿದವು. ಆದರೆ ವೀರಣ್ಣಗೌಡರ ಅದಮ್ಯ ಪ್ರತಿಭೆ ಮತ್ತು ಸೃಜನಶೀಲತೆ ಒಕ್ಕಲಿಗರ ಪತ್ರಿಕೆಗೆ ಬಹಳ ಕಾಲ ದಕ್ಕಲಿಲ್ಲ. ಕೇವಲ ಒಂದು ವರ್ಷ ಹತ್ತು ತಿಂಗಳವರೆಗೆ ಕಾರ್ಯನಿರ್ವಹಿಸಿದ ಇವರು ತಮ್ಮ ಮತ್ತು ಆಡಳಿತ ವರ್ಗದವರ ನಡುವಿನ ಭಿನ್ನಾಭಿಪ್ರಾಯಗಳ ಕಾರಣ ಪತ್ರಿಕೆಗೆ ರಾಜೀನಾಮೆ ನೀಡಿ ತಮ್ಮದೇ ಆದ **ಚಿತ್ರಗುಪ್ತ** ಪತ್ರಿಕೆಯನ್ನು ಪ್ರಾರಂಭಿಸಿದರು.

ಹೆಚ್.ಕೆ. ವೀರಣ್ಣಗೌಡರ ನಂತರ ಬಿ. ಪುಟ್ಟಸ್ವಾಮಯ್ಯ ಮತ್ತು ಶ್ರೀ ಬಿ.ಆರ್. ನರಸಿಂಹಯ್ಯನವರು ಪತ್ರಿಕೆಯ ಸಂಪಾದಕರುಗಳಾಗಿ ಕರ್ತವ್ಯ ನಿರ್ವಹಿಸಿದರು. ೧೯೩೨–೩೩ರಲ್ಲಿ ಡಿ.ಆರ್. ರಾಮಯ್ಯನವರು ಒಕ್ಕಲಿಗರ ಪತ್ರಿಕೆ ಮತ್ತು ಮುದ್ರಣಾಲಯಗಳೆರಡನ್ನೂ ಒಂದು ವರ್ಷದ ಅವಧಿಗೆ ಗುತ್ತಿಗೆದಾರರಾಗಿ ವಹಿಸಿಕೊಂಡು ತಿಂಗಳಿಗೆ ಒಂದು ನೂರು ರೂಪಾಯಿ ಗುತ್ತಿಗೆಯಂತೆ ಒಕ್ಕಲಿಗರ ಸಂಘಕ್ಕೆ ಸಲ್ಲಿಸುತ್ತಿದ್ದರು. ಉಳಿದ ವರ್ಷಗಳಲ್ಲಿ ಒಕ್ಕಲಿಗರ ಪತ್ರಿಕೆ, ಒಕ್ಕಲಿಗರ ಸಂಘದ ನೇರ ಆಡಳಿತದಲ್ಲಿ ನಡೆಯುತ್ತಿತ್ತು. ಒಕ್ಕಲಿಗರ ಪತ್ರಿಕೆಗೆ ತನ್ನದೇ ಆದ ಇತಿಹಾಸವಿದ್ದು ಪ್ರಾರಂಭದಲ್ಲಿ ಇದರ ವಾರ್ಷಿಕ ಚಂದಾದಾರರು ಒಂದು ರೂಪಾಯಿ ಮುಖಬೆಲೆಯನ್ನು ಕೊಡುತ್ತಿದ್ದು, ೧೯೬೨ರ ವೇಳೆಗೆ ಇದರ ವಾರ್ಷಿಕ ಚಂದಾದಾರರು ಆರು ರೂಪಾಯಿಯನ್ನು ಕೊಡಬೇಕಾಯಿತು. ಆದರೆ ಪತ್ರಿಕೆ. ವಿನ್ಯಾಸವೂ ಬದಲಾಗದ ಇತಿಹಾಸದಿಂದೆದ್ದೂ ಬಾರದ ಪ್ರಬುದ್ಧ ಮಾರ್ಗದರ್ಶಿಯಂತೆ ಗೋಚರಿಸುತ್ತದೆ.

ಒಕ್ಕಲಿಗರ ಪತ್ರಿಕೆಯು ಪ್ರಾರಂಭದಲ್ಲಿ ಒಕ್ಕಲಿಗ ಸಮುದಾಯ ಹಾಗೂ ಮೈಸೂರು ಸಂಸ್ಥಾನದಲ್ಲಿ ಜನಪ್ರಿಯತೆಯನ್ನು ಪಡೆಯಿತು. ಒಕ್ಕಲಿಗರ ಪತ್ರಿಕೆಗೆ ದುಡಿದ ಸಂಪಾದಕರುಗಳ ಹೆಸರುಗಳು ಈ ಕೆಳಕಂಡಂತಿದೆ.


೧. ಸಿ. ಲಕ್ಷಣಗೌಡ	೯. ಬಿ.ಆರ್. ನರಸಿಂಹಯ್ಯ
೨. ಬಿ. ಪುಟ್ಟಯ್ಯ	೧೦. ಡಿ.ಆರ್. ರಾಮಯ್ಯ
೩. ಎಸ್.ವಿ. ವೆಂಕಟರಾಮಯ್ಯ	೧೧. ಬಿ.ಸಿ. ಹನುಮಯ್ಯ
೪. ಜಿ.ಎಸ್. ಗಿರಿಯಪ್ಪಗೌಡ	೧೨. ಸಿ.ಆರ್. ಕಾಮತ್

೫. ಎಂ. ಸುಬ್ಬಯ್ಯ	೧೩. ಕೆ.ಪಿ. ಮುದ್ದಪ್ಪ
೬. ಬಿ. ಹನುಮಂತಯ್ಯಗೌಡ	೧೪. ಎಂ ಶಂಕರಲಿಂಗೇಗೌಡ
೭. ಹೆಚ್.ಕೆ. ವೀರಣ್ಣಗೌಡ	೧೫. ಎನ್.ಸಿ. ಅಣ್ಣಯ್ಯ
೮. ಬಿ. ಪುಟ್ಟಸ್ವಾಮಯ್ಯ	೧೬. ಬಿ.ಸಿ. ಹನುಮಯ್ಯ
೧೭. ಎಂ.ಕೆ. ತಿಮ್ಮೇಶಪ್ರಭು.	

೧೯೬೩–೬೪ರಲ್ಲಿ ಒಕ್ಕಲಿಗರ ಪತ್ರಿಕೆಯ ಸಂಪಾದಕರಾಗಿ ನಿಯುಕ್ತಿಗೊಂಡ ಎಂ.ಕೆ. ತಿಮ್ಮೇಶಪ್ರಭು ಇವರು ಪತ್ರಿಕೆಯನ್ನು ಮತ್ತಷ್ಟು ಸುಂದರಗೊಳಿಸಿದಲ್ಲದೆ ಇನ್ನಷ್ಟು ಮೈದುಂಬಿಸಿಕೊಂಡು ಹೊರಬರುವಂತೆ ಮಾಡಿದರು. ಪತ್ರಿಕೆ ಬೆಳೆದು ಬಂದ ಈ ಎಲ್ಲಾ ಸಂದರ್ಭಗಳಲ್ಲೂ ಎಂದೂ ಅದು ಸಮುದಾಯದ ಮುಖವಾಣಿಯಾಗಿರಲಿಲ್ಲ. ಪತ್ರಿಕೆ ಹೆಚ್ಚಾಗಿ ದೇಶ, ವಿದೇಶಗಳ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ವಿದ್ಯಮಾನಗಳನ್ನು ವರದಿ ಮಾಡುತ್ತಿದ್ದುದಲ್ಲದೇ ಜನಸಾಮಾನ್ಯರ ಬದುಕು ಬವಣೆಗಳನ್ನು, ಸಮಾಜಮುಖಿಯಾದ ಆಶೋತ್ತರಗಳನ್ನೊಳಗೊಂಡ ಲೇಖನಗಳನ್ನು, ವರದಿಗಳನ್ನು ಪ್ರಕಟಿಸುವಲ್ಲಿ ಹೆಚ್ಚಿನ ಆಸ್ಥೆಯನ್ನು ವಹಿಸುತ್ತಿತ್ತು. ಅಂದಿನ ಖ್ಯಾತ ಲೇಖಕರ ಸಣ್ಣ ಕಥೆಗಳನ್ನು, ಕವನಗಳನ್ನು, ಪ್ರವಾಸಿ ಧಾಮಗಳ ಬಗೆಗಿನ ವಿವರಗಳನ್ನು ಮೆದುಳಿಗೆ ಕಸರತ್ತು ನೀಡುವ ವಿಷಯಗಳನ್ನು, ಸಭೆ ಸಮಾರಂಭ, ಮದುವೆ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳ ಬಗ್ಗೆ ವಿವರಗಳನ್ನು ಪತ್ರಿಕೆ ಪ್ರಕಟಿಸುತ್ತಿತ್ತು. ಇಷ್ಟೆಲ್ಲಾ ವಿಷಯ ವೈವಿಧ್ಯತೆಯನ್ನು ಹೊಂದಿದ್ದ ಪತ್ರಿಕೆಯ ಬಿಡಿ ಬೆಲೆ ಆಗ ಬಹಳ ಕಡಿಮೆಯಿದ್ದು ಕೇವಲ ಹತ್ತು ಪೈಸೆಗಳಾಗಿದ್ದಿತು.

೬೫ ವರ್ಷಗಳ ಇತಿಹಾಸವಿದ್ದ ಒಕ್ಕಲಿಗ ಪತ್ರಿಕೆಯ ಅರವತ್ತರ ದಶಕದಲ್ಲಿ ಕೃಶವಾಗುತ್ತಾ ಒಂದು ೧೯೭೦ರಲ್ಲಿ ನಿಂತು ಹೋಯಿತು. ಈ ವೇಳೆಗೆ ಜನರು ಸ್ವಲ್ಪ ಮಟ್ಟಿಗೆ ಪ್ರಬುದ್ಧವಾಗಿದ್ದರು. ಸಂಸ್ಥಾನದಲ್ಲಿ ಅನೇಕ ಪತ್ರಿಕೆಗಳು ಸಾಹಿತ್ಯ, ಕಲೆ, ಸಂಸ್ಕೃತಿ ಮೊದಲಾದ ವಿಷಯಗಳನ್ನು ರಾಜಕೀಯ ವಿದ್ಯಮಾನಗಳನ್ನು ಪ್ರಬುದ್ಧವಾಗಿಯೂ ಆಕರ್ಷಕವಾಗಿಯೂ ನಿರೂಪಿಸಲು ಪ್ರಾರಂಭಿಸಿದ್ದವು. ಒಕ್ಕಲಿಗರ ಸಂಘವು ನಾಡಿನ ಪ್ರಮುಖ ಪತ್ರಿಕೆಗಳು ಹೊಂದಿದ್ದಷ್ಟು ಮೂಲಭೂತ ಸೌಕರ್ಯ, ಪ್ರಬುದ್ಧ ಸಂಪಾದಕ ಬಳಗ ಹಾಗೂ ನುರಿತ ಲೇಖಕರ ಗುಂಪನ್ನು ಹೊಂದಿರುವುದು ಸಾಧ್ಯವಾಗಿರಲಿಲ್ಲ. ಮೇಲಾಗಿ ಈ ಪತ್ರಿಕೆಯ ಸಂಪಾದಕರಾಗಲು ಯಾವ ಜವಾಬ್ದಾರಿಯುತ ವ್ಯಕ್ತಿಯೂ ಮುಂದೆ ಬರಲಿಲ್ಲ. ಇಂತಹ ಸಂದರ್ಭದಲ್ಲಿ ಒಕ್ಕಲಿಗರ ಪತ್ರಿಕೆಯು ನಾಡಿನ ಹಾಗೂ ಭಾರತದ ಆಕರ್ಷಕ ಹಾಗೂ ಪ್ರಬುದ್ಧ ಪತ್ರಿಕೆಗಳ ಜೊತೆಯಲ್ಲಿ ಪೈಪೋಟಿ ಮಾಡುವಷ್ಟು ಶಕ್ತವಾಗಿರಲಿಲ್ಲ. ಈ ಎಲ್ಲಾ ಕಾರಣಗಳಿಂದ ನಾಡಿನ ಹೆಸರಾಂತ 'ಒಕ್ಕಲಿಗರ ಪತ್ರಿಕೆ' ಸ್ಥಗಿತಗೊಂಡಿತು. ಸುಮಾರು ಅರವತ್ತೈದು ವರ್ಷಗಳ ಕಾಲ ಅವಿರತ ಸೇವೆಯನ್ನು ಸಲ್ಲಿಸಿ, ಪತ್ರಿಕೆ ಸ್ಥಗಿತಗೊಂಡರೂ ಅದು ಸಮುದಾಯದಲ್ಲಿ ಸಲ್ಲಿಸಿದ ಸೇವೆ ವೈಶಿಷ್ಟ್ಯಪೂರ್ಣವಾದುದು. ಓದು ಬರಹ ಬಾರದವರು ಅಧಿಕವಾಗಿದ್ದ ಒಕ್ಕಲು ಸಮುದಾಯಕ್ಕೆ ಸಾಮಾನ್ಯ ಜ್ಞಾನಾಭಿವೃದ್ಧಿಗೆ ಕಾರಣವಾದುದು ಅದರ ಹೆಗ್ಗಳಿಕೆ. ಸಾಹಿತ್ಯ ಕ್ಷೇತ್ರದ ಕೆಲವು ದಿಗ್ಗಜರು ಈ ಪತ್ರಿಕೆಯನ್ನು ಕೈ ಹಿಡಿದು ನಡೆಸಿರುವುದು ಗಮನಾರ್ಹವಾದುದು. ಹಾಗೆಯೇ ಮೈಸೂರು ಸಂಸ್ಥಾನ ಪ್ರಮುಖ ಸಾತಂತ್ರ್ಯ ಸೇನಾನಿಗಳೂ, ಜನನಾಯಕರೂ, ಒಕ್ಕಲಿಗರ ಪತ್ರಿಕೆಯ ಸಂಪಾದಕ ವರ್ಗದಲ್ಲಿದ್ದು ಅದರ ಪ್ರಗತಿಗೆ ಕಾರಣರಾದರು. ಒಟ್ಟಿನಲ್ಲಿ ಸುಧೀರ್ಘವಾದ ಕಾಲಾವಧಿಯಲ್ಲಿ ತನಗೆ ದೊರೆತ ಅವಕಾಶದಲ್ಲಿ ನಾಡು ನುಡಿಗೆ ಸೇವೆ ಸಲ್ಲಿಸಿ ತಾತ್ಕಾಲಿಕವಾಗಿ ಸ್ಥಗಿತವಾದ ಒಕ್ಕಲಿಗರ ಪತ್ರಿಕೆ ಜನಮಾನಸದಲ್ಲಿ ಉನ್ನತ ಸ್ಥಾನ ಪಡೆದ್ದಿತ್ತೆಂಬುದು ನಿಸ್ಸಂಶಯವಾದುದು.

ಲೇಖನ – ೧



ಪ್ರಾಗಿತಿಹಾಸ ಕಾಲದ
ಸ್ತ್ರೀಯ ಪ್ರಸವದ
ಅಪೂರ್ವ ಚಿತ್ರ



ಲೇಖನ – ೨ ಪ್ರಾಗಿತಿಹಾಸ ಕಾಲದ ಶಿಲಾವೃತ್ತ



ಪ್ರಾಗಿತಿಹಾಸ ಕಾಲದ ನಿಲುವು ಗಲ್ಲುಗಳು



ಪ್ರಾಗಿತಿಹಾಸ ಕಾಲದ ಡಾಲ್ಮೆನ್



ಲೇಖನ – ೩ ಪ್ರಾಗಿತಿಹಾಸ ಕಾಲದ ಶಿಲಾವೃತ್ತ



ಲೇಖನ – ೩ ಪ್ರಾಗಿತಿಹಾಸ ಕಾಲದ ಶಿಲಾವೃತ್ತ



ಲೇಖನ – ೪ ಆಮೆಚಿಪ್ಪಿನಾಕೃತಿಯ ತಿರುಳು




ಲೇಖನ – ೪ ಬೃಹತ್ ಶಿಲಾಯುಗ ಕಾಲದ ಶಿಲಾವೃತ್ತ




ಲೇಖನ – ೫೮ ಈ ನೆಲೆಯಲ್ಲಿನ ಕಿಂಡಿಕೋಣೆ ಸಮಾಧಿ



ಲೇಖನ – ೫೮ ಈ ನೆಲೆಯಲ್ಲಿನ ಸ್ವಸ್ತಿಕ್ ಆಕಾರದ ಸಮಾಧಿ



ಲೇಖನ – ೫೮ ಬೃಹತ್ ಶಿಲಾಯುಗದ ಸಮಾಧಿ ವೃತ್ತ



ಲೇಖನ – ೫೮ ಬೃಹತ್ ಶಿಲಾಯುಗದ ಕೈಗೊಡಲಿಗಳು




ಲೇಖನ – ೫೮ ಬೃಹತ್ ಶಿಲಾಯುಗದ ಕಲ್ಲಾಸರೆ




ಲೇಖನ – ೬ ಬೃಹತ್ ಶಿಲಾಯುಗದ ಕಿಂಡಿಕೋಣೆ ಸಮಾಧಿ



ಲೇಖನ – ೭ ಬೃಹತ್ ಶಿಲಾಯುಗದ ಕೈಗೊಡಲಿಗಳು



ಲೇಖನ – ೭ ಬೃಹತ್ ಶಿಲಾಯುಗದ ಆಯುಧಗಳು



ಲೇಖನ – ೯ ಕದಂಬರ ಕಾಲದ ಶಾಸನ



ಲೇಖನ – ೧೨ ಕಂಚಿನ ವಜ್ರಸತ್ವ ವಿಗ್ರಹ



ಲೇಖನ – ೧೨ ವಜ್ರಸತ್ವ ವಿಗ್ರಹದ ಹಿಂಭಾಗದ ಶಾಸನ



ಲೇಖನ – ೧೩ ಗೋಸಾಸ ಕಲ್ಲುಗಳು ಮತ್ತು ಒಕ್ಕೈ ಮಾಸ್ತಿಕಲ್ಲು




ಲೇಖನ – ೧೬ ನರಸಿಂಹ ಶಿಲ್ಪ



ಲೇಖನ – ೧೬ ಸೂರ್ಯ ಶಿಲ್ಪ



ಲೇಖನ – ೧೭ ವೀರಗಲ್ಲು ಶಿಲ್ಪಗಳು





ಲೇಖನ – ೧೮ ಉಜನಿ ಶಿಲಾಶಾಸನ ಮತ್ತು ಪ್ರಾಚ್ಯಾವಶೇಷಗಳು



ಲೇಖನ – ೧೯ ಗಂಟೆ ಮೇಲಿನ ಶಾಸನ



ಲೇಖನ – ೧೯ ಶಾಸನೋಕ್ತ ಹರೆ



ಲೇಖನ – ೨೧ ಕಣಿನೂರು ಗ್ರಾಮದ ವೀರಗಲ್ಲುಗಳು



ಲೇಖನ – ೨೨ ನಂದಿಬೇವೂರು ಮಾಸ್ತಿಕಲ್ಲು




ಲೇಖನ – ೨೭ ರಾಜಸ ಕಾಲಭೈರವ ಚಂದ್ರಗುತ್ತಿ



ಲೇಖನ – ೨೭ ಕ್ರೋದ ಭೈರವ ಸಾತ್ವಿಕ ರೂಪ ಮತ್ತು ದೇವಿ ಕೌಮಾರಿ ಔಸನ ಗ್ರಾಮ

ಲೇಖನ – ೨೮ ಲಕ್ಷ್ಮೇಶ್ವರ ಸೋಮೇಶ್ವರ ದೇವಾಲಯದಲ್ಲಿನ ವೀರಗಲ್ಲುಗಳು


ಕೋಟೆಕಾಳಗ


ಕುದುರೆಕಾಳಗ


ಯುದ್ಧ ದೃಶ್ಯ

ಲೇಖನ – ೪೦ ನಾಣ್ಯದ ಮುಂಭಾಗ ಮತ್ತು ಹಿಂಭಾಗ



ನಾಣ್ಯ – ೧



ನಾಣ್ಯ – ೨



ನಾಣ್ಯ – ೩



ಲೇಖನ – ೪೬ ಹಂಪಿಯ ನೃತ್ಯ ಕಾಳಿ ಶಿಲ್ಪ




ಲೇಖನ – ೬೧ ಗುಡಿಯ ಮುಂದಿರುವ ಬಲಿ ಕಂಬ



ಲೇಖನ – ೬೧ ಆಚರಣೆಯಲ್ಲಿ ಮಹಿಷಂತಾಯ (ನಂದಿಗೋನ)



ಲೇಖನ – ೮೨ ಮಹೀಷ ಮರ್ಧಿನಿ



ಲೇಖನ – ೮೭ ಪ್ರಾಚ್ಯಾವಶೇಷಗಳು





ಲೇಖನ – ೮೪ ನಿಂಬಾಪುರದ ಪ್ರಾಚ್ಯಾವಶೇಷಗಳು




ಲೇಖನ – ೮೮ ಪಂಚಲೀಂಗೇಶ್ವರ ಮತ್ತು ಬಸವಣ್ಣ




ಲೇಖನ – ೯೦ ಚನಪ್ಪಯ್ಯನ ಹಳ್ಳಿಯಲ್ಲಿನ ಗಡಿಕಲ್ಲು ಮತ್ತು ವೀರಗಲ್ಲು



ಲೇಖನ – ೯೨ ಮಂಗಸೂಳಿ ವಾಡೆ, ತಾ. ಅಥಣಿ, ಜಿ. ಬೆಳಗಾವಿ,
ರಕ್ಷಣಾ ಗೋಡೆ



ಲೇಖನ – ೯೨ ಶಿರಸಂಗಿ ವಾಡೆ, ತಾ. ಸವದತ್ತಿ, ಜಿ. ಬೆಳಗಾವಿ,
ವಾಡೆಯ ರಕ್ಷಣಾ ಗೋಡೆಯೊಂದಿಗೆ ದಿಡ್ಡಿ ಬಾಗಿಲು



ಲೇಖನ – ೯೩ ಕಣವಿ ಸಿದ್ಧೇಶ್ವರ ಗುಡಿ



ಲೇಖನ – ೧೦೨ ಬಂಡಿಸ್ವಾಮಿ ಮಠ



ಲೇಖನ – ೯೪ ವೀರರಾಜೇಂದ್ರಪೇಟೆ ಅರಮನೆಯ ಪ್ರವೇಶ ದ್ವಾರ



ಲೇಖನ – ೧೦೨ ಚಿಕ್ಕ ನೀರಿನ ಹೊಂಡ



ಲೇಖನ – ೯೪ ಶ್ರೀರಂಗನಾಥನ ಗುಡಿಯಿದ್ದ ಸ್ಥಳ



ಲೇಖನ – ೧೧೬ ದೈವಿಕರಲ್ಲಿ ಸಂಘರ್ಷ ನೀತಿ – ಚಿತ್ರ

೨೭ನೇ ವಾರ್ಷಿಕ ಸಮ್ಮೇಳನದಲ್ಲಿ ಪಿಎಚ್.ಡಿ. / ಡಿಲಿಟ್ ಪಡೆದ ಸದಸ್ಯರಿಗೆ ಸನ್ಮಾನ



ಕೆಳದಿ ಗುಂಡಾಜೋಯಿಸ್



ಡಾ. ಪಂಪಾದೇವಿ



ಡಾ. ನಂಜುಂಡಸ್ವಾಮಿ



ಸಿಸ್ಟರ್ ಆನ್‌ಮೇರಿ



ಡಾ. ಪ್ರಕಾಶ್



ಡಾ. ಕುಸುಮಾ

೨೭ನೇ ವಾರ್ಷಿಕ ಸಮ್ಮೇಳನ



ಶ್ರೀ ಅಶೋಕ್ ಕುಮಾರ್‌ರವರಿಗೆ
ಡಾ॥ ದೇವರಕೊಂಡಾರೆಡ್ಡಿಯವರಿಂದ ಸನ್ಮಾನ



ಸಮ್ಮೇಳನದಲ್ಲಿ ಪ್ರಬಂಧ ಮಂಡನೆಯ ಗೋಷ್ಠಿ



ಸಮ್ಮೇಳನದಲ್ಲಿ ಪ್ರಬಂಧ ಮಂಡನೆಯ ಗೋಷ್ಠಿ



ಸಮ್ಮೇಳನದಲ್ಲಿ ಪ್ರಬಂಧ ಮಂಡನೆಯ ಗೋಷ್ಠಿ



ಸಮ್ಮೇಳನದಲ್ಲಿ ವಿದ್ವತ್ ಸಭೆ



ಶಾಸನ ಕವಿಗಳ ವಿಚಾರ ಸಂಕಿರಣ

ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ ೨೦೧೩



ಹುಲುಕೋಟಿ ಗ.ಸ.ಜ.ಗಿ. ಪ.ಪೂ. ಕಾಲೇಜಿನಲ್ಲಿ
ಡಾ॥ ದೇವರಕೊಂಡಾರೆಡ್ಡಿಯವರಿಂದ ಕಾರ್ಯಕ್ರಮ ಉದ್ಘಾಟನೆ



ಕನ್ನಡ ಸಂಶೋಧನ ಸಂಸ್ಥೆ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ
ಪ್ರೊ.ಹೆಚ್.ಟಿ. ಪೋತ ಅವರಿಂದ ಕಾರ್ಯಕ್ರಮ ಉದ್ಘಾಟನೆ



ಶ್ರೀ ಗಾಯತ್ರಿ ಆಂಗ್ಲಶಾಲೆ ವಿಜಿನಾಪುರ, ಬೆಂಗಳೂರು
ಪರಂಪರೆ ಉಳಿಸಿ ಕಾರ್ಯಕ್ರಮ



ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗದಗ
ಪರಂಪರೆ ಉಳಿಸಿ ಕಾರ್ಯಕ್ರಮ



ಶ್ರೀ ಬೀರಲಿಂಗೇಶ್ವರ ಪದವಿ ಪೂರ್ವ ಕಾಲೇಜು, ದಾವಣಗೆರೆ
ಪರಂಪರೆ ಉಳಿಸಿ ಕಾರ್ಯಕ್ರಮ



ಶ್ರೀ ಎಸ್.ಆರ್. ನರಸಾಪೂರ ಕಲಾ ಮತ್ತು ಶ್ರೀ ಎಂ.ಬಿ. ಶಿರೂರ
ವಾಣಿಜ್ಯ ಮಹಾವಿದ್ಯಾಲಯ, ಬಾಗಲಕೋಟೆ
ಪರಂಪರೆ ಉಳಿಸಿ ಕಾರ್ಯಕ್ರಮ

ಕರ್ನಾಟಕ ಇತಿಹಾಸ ಅಕಾದೆಮಿ (ರಿ).

ಬಿ.ಎಂ.ಶ್ರೀ. ಕಲಾಭವನ ಆವರಣ, ೩ನೇ ಮುಖ್ಯರಸ್ತೆ, ನರಸಿಂಹರಾಜಾ ಕಾಲೋನಿ

ಬೆಂಗಳೂರು - ೫೬೦ ೦೧೯

೨೦೧೩-೧೪ನೆಯ ಸಾಲಿನ ವಾರ್ಷಿಕ ವರದಿ

ಪ್ರಿಯ ಸದಸ್ಯ ಬಂಧುಗಳೇ,

ಕರ್ನಾಟಕ ಇತಿಹಾಸ ಅಕಾದೆಮಿಯ ೨೮ನೆಯ ವಾರ್ಷಿಕ ಸಮ್ಮೇಳನಕ್ಕಾಗಿ ನಾವೆಲ್ಲಾ ಉಡುಪಿ ಜಿಲ್ಲೆಯ ಶಿರ್ವದ ಎಂ.ಎಸ್.ಆರ್.ಎಸ್. ಕಾಲೇಜು ಸಭಾಂಗಣದಲ್ಲಿ ಸಮಾವೇಶಗೊಂಡಿದ್ದೇವೆ. ಕಳೆದ ಎರಡೂವರೆ ದಶಕಗಳಿಂದ ಅಕಾದೆಮಿಯ ಅಭ್ಯುದಯದಲ್ಲಿ ನಿರಂತರವಾಗಿ ಸಹಕರಿಸುತ್ತಾ ಬಂದಿರುವ ಎಲ್ಲರಿಗೂ ಅನಂತ ಧನ್ಯವಾದಗಳು. ಕಳೆದ ೨೭ ಸಮ್ಮೇಳನಗಳಿಗೆ ಆಶ್ರಯ ನೀಡಿ ಅಕಾದೆಮಿಯನ್ನು ಪೋಷಿಸಿರುವ ಎಲ್ಲಾ ಸಂಘಸಂಸ್ಥೆ ಹಾಗೂ ಧರ್ಮಪೀಠಗಳಿಗೆ ಅಕಾದೆಮಿಯು ಕೃತಜ್ಞವಾಗಿದೆ.

ಐತಿಹಾಸಿಕ ಪರಂಪರೆ ಉಳಿಸಿ-೨೦೧೩

೨೦೧೩ರ ಸಾಲಿನ 'ಐತಿಹಾಸಿಕ ಪರಂಪರೆ ಉಳಿಸಿ' ಸಪ್ತಾಹದ ಉದ್ಘಾಟನಾ ಸಮಾರಂಭವನ್ನು ದಿನಾಂಕ ೧೬-೦೮-೨೦೧೩ರ ಶುಕ್ರವಾರ ಸಂಜೆ ೫.೦೦ ಗಂಟೆಗೆ ಬೆಂಗಳೂರಿನ ಬಸವನಗುಡಿಯಲ್ಲಿರುವ ನ್ಯಾಷನಲ್ ಕಾಲೇಜಿನ ಮಲ್ಟಿಮೀಡಿಯಾ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ವರ್ಷವೂ ಎಂದಿನಂತೆ 'ಐತಿಹಾಸಿಕ ಪರಂಪರೆ ಉಳಿಸಿ' ಸಪ್ತಾಹ ಕಾರ್ಯಕ್ರಮಕ್ಕೆ ಕರ್ನಾಟಕ ರಾಜ್ಯಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆರ್ಥಿಕ ಸಹಯೋಗ ದೊರೆತಿತ್ತು.

ಮೊದಲಿಗೆ ಡಾ. ಕೂ.ಸ.ಅಪರ್ಣ ಮತ್ತು ಸಂಗಡಿಗರಿಂದ ಪ್ರಾರ್ಥನೆ ಹಾಗೂ ಲಾವಣಿಯ ಗಾಯನದೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು. ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು ಸಭೆಗೆ ಸ್ವಾಗತ ಕೋರಿ ಪ್ರಾಸ್ತಾವಿಕ ಭಾಷಣ ಮಾಡಿದರು. ಕಾರ್ಯಕ್ರಮದ ಉದ್ಘಾಟನೆಯಲ್ಲಿ ಭಾಗವಹಿಸಿದ್ದ ಡಾ. ಮಲ್ಲೇಪುರಂ ಜಿ.ವೆಂಕಟೇಶ್, ಕುಲಪತಿಗಳು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅವರು "ಐತಿಹಾಸಿಕ ಪರಂಪರೆ ಉಳಿಸಿ" ಸಪ್ತಾಹವನ್ನು ಜ್ಯೋತಿ ಬೆಳಗಿಸುವ ಮೂಲಕ ವಿಧಿವತ್ತಾಗಿ ಉದ್ಘಾಟಿಸಿ, ಪರಂಪರೆ-ಸಂಸ್ಕೃತಿ ಬಗ್ಗೆ ಚಿಂತನಾಶೀಲ ಮಾತುಗಳನ್ನು ಆಡಿದರು. ಆಧುನಿಕ ಯುಗದಲ್ಲಿ ಕರ್ನಾಟಕ ಇತಿಹಾಸ ಅಕಾದೆಮಿ ಮತ್ತು ಪ್ರಾಚ್ಯವಸ್ತು ಪರಂಪರೆ ಇಲಾಖೆ ಜೊತೆಗೂಡಿ ಕಾರ್ಯಕ್ರಮ ನಡೆಸುವುದನ್ನು ಶ್ಲಾಘಿಸಿದರು. ಇತಿಹಾಸ ಅಧ್ಯಯನವು ತಳಮೂಲದಿಂದಲೇ ಅಂದರೆ ಪ್ರಾಥಮಿಕ ಶಾಲೆಯಿಂದಲೇ ಆರಂಭವಾಗಬೇಕು ಎಂದು ತಿಳಿಸಿದರು. ನಮ್ಮ ಪರಂಪರೆಯ ವಸ್ತು-ಸ್ಥಿತಿಗಳ ಬಗ್ಗೆ ಪ್ರೀತಿಯ ಅಧ್ಯಯನದ ಮೂಲಕ ಇತಿಹಾಸ ತಿಳಿಯುವಂತಾಗಬೇಕು. ಆಧುನಿಕ ತಂತ್ರಜ್ಞಾನ ಯುಗದಲ್ಲಿ ಇತಿಹಾಸದ ಅಧ್ಯಯನ, ತಿಳುವಳಿಕೆ ಹಾಗೂ ಪ್ರೀತಿ ಮುಖ್ಯವಾದವುಗಳು. ಇತಿಹಾಸದ ಪ್ರೀತಿಯನ್ನು ವಿದ್ಯಾರ್ಥಿಗಳಲ್ಲಿ ಹುಟ್ಟಿಸುವ ಶಿಕ್ಷಣ ಮುಖ್ಯವಾದುದು ಎಂದು ತಿಳಿಸಿದರು. ರಾಜ್ಯಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ನಿರ್ದೇಶಕರಾದ ಡಾ. ಆರ್. ಗೋಪಾಲ್ ಅವರು ಈ ಸಂದರ್ಭಕ್ಕೆಂದೇ ಕಲಾವಿದ ವೆಂಕಟೇಶ್ ಅವರು ಅಕಾದೆಮಿಗಾಗಿ ಸಿದ್ಧಪಡಿಸಿದ್ದ ವಿಶೇಷ ಭಿತ್ತಿಚಿತ್ರ ವಿನ್ಯಾಸವನ್ನು ಅನಾವರಣ ಮಾಡಿದರು. ಡಾ. ಆರ್. ಗೋಪಾಲ್ ಅವರು, ಪರಂಪರೆಯ ರಕ್ಷಣೆ ಹಾಗೂ ಇತಿಹಾಸಪ್ರಜ್ಞೆಯನ್ನು ವಿದ್ಯಾರ್ಥಿಗಳಿಗೆ ಪ್ರಾಥಮಿಕ ಹಂತದಿಂದಲೇ ಅರಿವು ಮೂಡಿಸಬೇಕು. ಇನ್ನೂ ಹೆಚ್ಚು ಜನ ಜಾಗೃತಿಗೊಂಡು ಪರಂಪರೆ ಹಾಗೂ ಐತಿಹಾಸಿಕದ ಮಹತ್ವ ಮೂಡಿಸಬೇಕಾಗಿದೆ. ಪ್ರಾಚ್ಯವಸ್ತು ಪರಂಪರೆ ಇಲಾಖೆಯೊಂದಿಗೆ ಅಕಾದೆಮಿಯು ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿರುವುದನ್ನು ಶ್ಲಾಘಿಸಿದ್ದಲ್ಲದೆ, ತಮ್ಮ ಸಂಸ್ಥೆಯಿಂದ ಎಲ್ಲಾ ರೀತಿಯ ಸಹಕಾರ ನೀಡುವ ಭರವಸೆ ಕೊಟ್ಟರು. ಅಕಾದೆಮಿಯ ಸದಸ್ಯರಲ್ಲಿ ಅಂತರಾಷ್ಟ್ರೀಯ ಖ್ಯಾತಿಯ ವಿದ್ವಾಂಸರಿದ್ದು ಅಂತಹವರಿಗೆ ಕರ್ನಾಟಕ ಸರ್ಕಾರದಿಂದ ರಾಜ್ಯೋತ್ಸವ ಪ್ರಶಸ್ತಿಗಳು ಸಿಗುವಂತಾಗಬೇಕು ಎಂದು ತಿಳಿಸಿದರು. ಇದರ ಬಗ್ಗೆ ಅಕಾದೆಮಿಯ ಸರ್ವಸದಸ್ಯರ ಸಭೆಯಲ್ಲಿ ಠರಾವು ಮಂಡಿಸುವ ಬಗ್ಗೆ ಸೂಚನೆ ನೀಡಿದರು.

ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ. ಲೀಲಾವತಿ, ಪ್ರಾಂಶುಪಾಲರು, ನ್ಯಾಷನಲ್ ಪದವಿ ಕಾಲೇಜು, ಬಸವನಗುಡಿ, ಅವರು ಅಧ್ಯಕ್ಷೀಯ ಭಾಷಣದಲ್ಲಿ, ಪ್ರಾಚ್ಯವಸ್ತುಗಳು ನಮ್ಮಲ್ಲಿ ಹೇರಳವಾಗಿದೆ. ಇದರ ಅರಿವು, ರಕ್ಷಣೆ ಕೆಲಸಗಳು ಆಗಬೇಕು. ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕದಲ್ಲಿ ಐತಿಹಾಸಿಕ ಮಹತ್ವದ ವಿಚಾರವನ್ನು ಸುಲಭ ರೀತಿಯಲ್ಲಿ ತಿಳಿಸುವಂತಾಗಿ ಆಸಕ್ತಿ ಮೂಡಿಸಬೇಕು ಎಂದು ತಿಳಿಸಿದರು.

ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು ಘಟಕವು ಡಾ. ಇಂದಿರಾ ಹೆಗ್ಗಡೆ ಅವರ ಅಧ್ಯಕ್ಷತೆಯಲ್ಲಿ, ಬೆಂಗಳೂರು ನಗರದ ಪ್ರೌಢಶಾಲೆ, ಪದವಿಪೂರ್ವ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಏರ್ಪಡಿಸಿದ ಭಾಷಣ ಹಾಗೂ ಪ್ರಬಂಧಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಡಾ. ಮಲ್ಲೇಪುರಂ ಜಿ.ವೆಂಕಟೇಶ್, ಡಾ. ಆರ್. ಗೋಪಾಲ್, ಡಾ. ಲೀಲಾವತಿ ಹಾಗೂ ಡಾ. ದೇವರಕೊಂಡಾರೆಡ್ಡಿ, ಮತ್ತು ಡಾ. ಇಂದಿರಾ ಹೆಗ್ಗಡೆ ಅವರು ಬಹುಮಾನ ಹಾಗೂ ಪ್ರಶಸ್ತಿಪತ್ರಗಳನ್ನು ನೀಡಿದರು. ಭಾಷಣ ಹಾಗೂ ಪ್ರಬಂಧ ಸ್ಪರ್ಧೆಗಳಲ್ಲಿ ಒಟ್ಟು ೧೭೮ ಶಿಕ್ಷಣ ಸಂಸ್ಥೆಗಳಿಂದ ಒಟ್ಟು ೩೩೬ ಸ್ಪರ್ಧಿಗಳು ಭಾಗವಹಿಸಿದ್ದರು. ಪಾರಿತೋಷಕಗಳನ್ನು ಪ್ರಾಯೋಜಿಸಿದ ಪ್ರಾಯೋಜಕರಿಗೆ ಗೌರವಾದರವನ್ನೂ ಸ್ಪರ್ಧಾ ಕಾರ್ಯಕ್ರಮದಲ್ಲಿ ಸಹಕರಿಸಿದ ಸ್ವಯಂಸೇವಕರು ಹಾಗೂ ತೀರ್ಪುಗಾರರಿಗೆ ಡಾ. ಇಂದಿರಾ ಹೆಗ್ಗಡೆ ಅವರು ಕೃತಜ್ಞತೆ ಸಲ್ಲಿಸಿದರು.

ಅಕಾದೆಮಿಯ ೨೦೧೩ನೇ ಸಾಲಿನ "ಐತಿಹಾಸಿಕ ಪರಂಪರೆ ಉಳಿಸಿ" ಸಪ್ತಾಹ ಕಾರ್ಯಕ್ರಮ ಉದ್ಘಾಟನೆಗೆ ಹಾಗೂ ಸ್ಪರ್ಧೆಗಳನ್ನು ನಡೆಸಲು ಎಲ್ಲಾ ರೀತಿಯಿಂದ ಸಹಕರಿಸಿದ, ಸ್ಥಳಾವಕಾಶ ಮಾಡಿಕೊಟ್ಟ ಬಸವನಗುಡಿ ನ್ಯಾಷನಲ್ ಕಾಲೇಜಿನ ಆಡಳಿತವರ್ಗಕ್ಕೆ ಅಕಾಡೆಮಿಯು ಕೃತಜ್ಞತೆ ಸಲ್ಲಿಸಿತು. ಅಕಾದೆಮಿಯ ಪ್ರಧಾನ ಕಾರ್ಯದರ್ಶಿ ಶ್ರೀ ಜಿ.ಕೆ. ದೇವರಾಜಸ್ವಾಮಿ ಕಾರ್ಯಕ್ರಮ ಸಂಯೋಜನೆ ಹಾಗೂ ನಿರೂಪಣೆ ಮಾಡಿದರು. ಈ ಕಾರ್ಯಕ್ರಮವು ಯಶಸ್ವಿಯಾಗುವಲ್ಲಿ ಸಹಕರಿಸಿದ ಸರ್ವರಿಗೂ ಅಕಾದೆಮಿಯ ಡಾ. ಅನಂತಪದ್ಮನಾಭ ಅವರು ವಂದನೆ ಅರ್ಪಿಸುವುದರೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

ಬೆಂಗಳೂರು ನಗರದಲ್ಲಿ ಕರ್ನಾಟಕ ಇತಿಹಾಸ ಅಕಾದೆಮಿಯ ವತಿಯಿಂದ ರಾಜ್ಯಮಟ್ಟದಲ್ಲಿ "ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ" ಕಾರ್ಯಕ್ರಮವು ಉದ್ಘಾಟನೆಗೊಂಡು ಸದರಿ ವರ್ಷದಲ್ಲಿ ವಿಶೇಷ ಭಿತ್ತಿಪತ್ರಗಳ ಅನಾವರಣದ ನಂತರ ರಾಜ್ಯದಾದ್ಯಂತ ವಿವಿಧ ಸ್ಥಳಗಳಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಗಳು ನಡೆದಿವೆ. ಅಕಾದೆಮಿಯ ಸದಸ್ಯರ ಅಪೇಕ್ಷೆಯಂತೆ ಅಗತ್ಯವಿರುವ ಭಿತ್ತಿಪತ್ರ, ಸಂಬಂಧಿತ ಸಾಹಿತ್ಯ ಹಾಗೂ ಪ್ರಚಾರಪತ್ರಗಳನ್ನು ಸದಸ್ಯರಿಗೆ ಮುಂಚಿತವಾಗಿ ಕಳುಹಿಸಲಾಗಿತ್ತು. ಆ ಪ್ರಕಾರ ಅಕಾದೆಮಿಯ ಸದಸ್ಯರು, ಇತಿಹಾಸ ಆಸಕ್ತರು ಹಾಗೂ ಸಂಘಸಂಸ್ಥೆಗಳು ನಾಡಿನಾದ್ಯಂತ ವರ್ಷದುದ್ದಕ್ಕೂ "ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮವನ್ನು ಹಮ್ಮಿಕೊಂಡು ಆಚರಿಸಿದ ಕಾರ್ಯಕ್ರಮಗಳ ವಿವರವನ್ನಿಲ್ಲಿ ಸಂಕ್ಷಿಪ್ತವಾಗಿ ನೀಡಲಾಗಿದೆ.

ದಿನಾಂಕ ೨೩-೮-೨೦೧೩, ಬೆಂಗಳೂರು

ಬೆಂಗಳೂರು ಜಿಲ್ಲೆ ವಿಜಿನಾಪುರದ ಶ್ರೀ ಗಾಯತ್ರಿ ಆಂಗ್ಲ ಪ್ರೌಢಶಾಲೆಯು ಶ್ರೀ ಆದಪ್ಪ ಪಾಸೋಡಿ ಅವರ ಮಾರ್ಗದರ್ಶನದಲ್ಲಿ, ದಿನಾಂಕ ೨೩-೮-೨೦೧೩ರಂದು 'ಐತಿಹಾಸಿಕ ಪರಂಪರೆ ಉಳಿಸಿ' ಸಪ್ತಾಹ ಹಮ್ಮಿಕೊಂಡಿತ್ತು. ಶಾಲೆಯ ಮುಖ್ಯೋಪಾಧ್ಯಾಯಿನಿಯಾದ ಶ್ರೀಮತಿ ಪದ್ಮಾವತಿ ಅವರು ವಿದ್ಯಾರ್ಥಿಗಳನ್ನು ಕುರಿತು ಐತಿಹಾಸಿಕ ಸ್ಮಾರಕಗಳು ಅವುಗಳು ಸಂಸ್ಕೃತಿಯಲ್ಲಿನ ಪಾತ್ರ ಹಾಗೂ ಅವುಗಳ ರಕ್ಷಣೆಗಾಗಿ ವಿದ್ಯಾರ್ಥಿಗಳು ಕೈಗೊಳ್ಳಬಹುದಾದ ಕಾರ್ಯದ ಬಗ್ಗೆ ತಿಳಿಸಿದರು. ಶಾಲೆಯ ಅಧ್ಯಕ್ಷರಾದ ಶ್ರೀಯುತ ಶ್ರೀನಿವಾಸರೆಡ್ಡಿಯವರು ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದರು.

ದಿನಾಂಕ ೨೫-೮-೨೦೧೩, ಬಾಗಲಕೋಟೆ

ಬಾಗಲಕೋಟೆ ಜಿಲ್ಲೆಯ ಶ್ರೀ ಎಸ್.ಆರ್. ನರಸಾಪುರದ ಕಲಾ ಮತ್ತು ಶ್ರೀ ಎಂ.ಬಿ. ಶಿರೂರ ವಾಣಿಜ್ಯ ವಿದ್ಯಾಲಯವು ದಿನಾಂಕ ೨೫-೮-೨೦೧೩ರಂದು ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಕರ್ನಾಟಕ ವಿಶ್ವವಿದ್ಯಾಲಯ ಪ್ರಾಚೀನ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಶ್ರೀನಿವಾಸ ಪಾಡಿಗಾರ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ, ಪ್ರಾಚೀನ ಸ್ಮಾರಕಗಳು ಅವುಗಳ ಮಹತ್ವ ಹಾಗೂ ರಕ್ಷಣೆ ಕುರಿತು ಮಾತನಾಡಿದರು. ವಿದ್ಯಾಪ್ರಸಾರಕ ಮಂಡಲದ ಗೌರವ ಕಾರ್ಯದರ್ಶಿಗಳಾದ ಶ್ರೀ ಎಸ್.ಬಿ. ಸತ್ಯನಾರಾಯಣ ಅವರ ಉಪಸ್ಥಿತಿಯಲ್ಲಿ ಕಾರ್ಯಕ್ರಮ ಜರುಗಿತು. ಉಪಕಾರ್ಯಾಧ್ಯಕ್ಷರಾದ ಶ್ರೀ ಶ್ರೀನಾಥ ಮಳಗಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯರಾದ ಶ್ರೀ ಎಸ್.ಎ. ಗುಮಾಸ್ತೆ ದೇಶಪಾಂಡೆ, ಇತಿಹಾಸ ವಿಭಾಗದ ಮುಖ್ಯಸ್ಥ ಡಾ. ಡಿ.ಜಿ. ಕುಲಕರ್ಣಿ ಅವರು ಉಪಸ್ಥಿತರಿದ್ದರು. ವಿದ್ಯಾರ್ಥಿಗಳಿಂದ ಹಲಗಲಿ ಬೇಡರು ನಾಟಕ ಪ್ರದರ್ಶನ, ಚಿತ್ರ ಬಿಡಿಸುವ, ಘೋಷಣೆ ಬರೆಯುವ, ಮತ್ತು ವೇಷಭೂಷಣ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿತ್ತು.

ದಿನಾಂಕ ೨೭-೮-೨೦೧೩, ದಾವಣಗೆರೆ

ದಾವಣಗೆರೆ ಜಿಲ್ಲೆಯ ಶ್ರೀ ಬೀರಲಿಂಗೇಶ್ವರ ಪದವಿಪೂರ್ವ ಕಾಲೇಜಿನಲ್ಲಿ ದಿನಾಂಕ ೨೭-೮-೨೦೧೩ರಂದು ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವು ಪ್ರಾಂಶುಪಾಲರಾದ ಪ್ರೊ. ಬಾಗೂರು ಆನಂದ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮುಖ್ಯ ಅತಿಥಿಗಳಾಗಿ ಸಂಶೋಧಕರಾದ ಬುರುಡೇಕಟ್ಟೆ ಮಂಜಪ್ಪ ಆಗಮಿಸಿದ್ದರು. ವಿದ್ಯಾರ್ಥಿಗಳಿಗೆ ಶಾಸನ, ಸ್ಮಾರಕ, ನಾಣ್ಯ, ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಸಾಂಸ್ಕೃತಿಕವಾಗಿ ಅವುಗಳ ಮಹತ್ವವನ್ನು ತಿಳಿಸಿದರು. ನಿವೃತ್ತ ಉಪನ್ಯಾಸಕ ಪ್ರೊ. ರೇವಣಸಿದ್ದಪ್ಪ ಬಿ.ಜಿ. ಅವರು ಭಾಗವಹಿಸಿ ವಿದ್ಯಾರ್ಥಿಗಳಿಗೆ ಚರಿತ್ರೆಯ ಮಹತ್ವ ತಿಳಿಸಿದರು. ಕಾಲೇಜಿನ ಅಧ್ಯಾಪಕವರ್ಗದವರೂ ಭಾಗಿಯಾಗಿದ್ದರು.

ದಿನಾಂಕ ೧೩-೯-೨೦೧೩, ಕೆಂಭಾವಿ

ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಕೆಂಭಾವಿ ಬಾಲಕಿಯರ ಪ್ರೌಢಶಾಲೆಯಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದಲ್ಲಿ ಇತಿಹಾಸ ಸಂಶೋಧಕ ನಿಂಗನಗೌಡ ದೇಸಾಯಿ ಅವರು ಮುಖ್ಯ ಅತಿಥಿಗಳಾಗಿ, ಶಿಲಾಶಾಸನ, ಕೋಟೆ ಕೊತ್ತಲಗಳ, ಹಸ್ತಪ್ರತಿಗಳ ರಕ್ಷಣೆ, ಪರಂಪರೆ ಕುರಿತು ವಿದ್ಯಾರ್ಥಿಗಳಿಗೆ ವಿವರಿಸಿದರು. ಪ್ರಾಂಶುಪಾಲರಾದ ಶ್ರೀ ಅನಿಲಕುಮಾರ್ ಅವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಯುತ ವಿಠ್ಠಲ್ ಚವಾಣ್ ಅವರು ಕಾರ್ಯಕ್ರಮ ಉದ್ಘಾಟಿಸಿ ಐತಿಹಾಸಿಕ ಮಹತ್ವವನ್ನು ತಿಳಿಸಿದರು. ಶಾಂತಗೌಡ ಕೆರುಟಗಿ, ನಂದೆಪ್ಪಗೌಡರ್, ನಾಗಲಕ್ಷ್ಮೀ ಸಜ್ಜನ, ಸತೀಶ ನೆಲ್ಲಗಿ, ಎನ್.ಡಿ. ಅವರಾದಿ ಹಾಗೂ ನಾಗರತ್ನ, ಯಮುನೇಶ, ಗಂಗಾ ಅವರು ಉಪಸ್ಥಿತರಿದ್ದರು.

ದಿನಾಂಕ ೧೬-೯-೨೦೧೩, ವಜ್ಜಲ, ಹುಣಸಗಿ

ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ವಜ್ಜಲದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಆಶ್ರಯದಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಮುಖ್ಯೋಪಾಧ್ಯಾಯರಾದ ಶ್ರೀ ಶಾಂತಗೌಡ ಪಾಟೀಲ ಅವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯಶಿಕ್ಷಕರಾದ ಈರಯ್ಯ ವಸ್ತದ ಕಾರ್ಯಕ್ರಮ ಉದ್ಘಾಟಿಸಿದರು. ಅತಿಥಿಗಳಾದ ನಿಂಗನಗೌಡ ದೇಸಾಯಿ ಅವರು ಐತಿಹಾಸಿಕ ಸ್ಮಾರಕಗಳ ರಚನೆ, ಪರಂಪರೆ ಬಗ್ಗೆ ವಿವರಿಸಿದ್ದಲ್ಲದೆ, ಅವುಗಳ ರಕ್ಷಣೆ ಬಗ್ಗೆ ಪ್ರಸ್ತಾಪಿಸಿದರು. ಶಿಕ್ಷಕರೂ ಐತಿಹಾಸಿಕ ಸ್ಮಾರಕಗಳ ಬಗ್ಗೆ ತಿಳಿಸಿದರು. ಬಸವರಾಜ್, ಶಿವಕುಮಾರ್, ಬಸಪ್ಪ, ಹಾಗೂ ವಿದ್ಯಾವತಿ, ಸಿದ್ದಪ್ಪ ಅಗ್ನಿ, ಮೀನಾಕ್ಷಿ ಕುಲಕರ್ಣಿ ಅವರೂ ಉಪಸ್ಥಿತರಿದ್ದರು.

ಸುರಪುರದ ತಾಲ್ಲೂಕಿನ ಹುಣಸಗಿಯ ಸರ್ಕಾರಿ ಬಾಲಕರ ಶಾಲೆಯಲ್ಲಿ ದಿನಾಂಕ ೧೬-೯-೨೦೧೩ರ ಮಧ್ಯಾಹ್ನ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ ಪ್ರಾಚಾರ್ಯ ಆರ್.ಎಲ್. ಸುಣಗಾರ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಎಸ್.ಎನ್. ಮೇಟಿ ನಿರೂಪಣೆಯೊಂದಿಗೆ ಎಸ್.ಎಸ್. ಹೂಗಾರ್ ಸ್ವಾಗತಿಸಿದರು. ಅತಿಥಿಗಳಾದ ಸಂಶೋಧಕ ನಿಂಗನಗೌಡ ದೇಸಾಯಿ ಅವರು, ಸ್ಥಳೀಯ ಪ್ರಾಗೈತಿಹಾಸಿಕ ಶೋಧ, ಸ್ಮಾರಕ, ಶಾಸನಗಳ ಮಹತ್ವ ತಿಳಿಸಿದ್ದಲ್ಲದೆ ಕಾಪಾಡುವ ಬಗ್ಗೆಯನ್ನು ವಿದ್ಯಾರ್ಥಿಗಳಲ್ಲಿ ಮನದಟ್ಟು ಮಾಡಿದರು. ಅಧ್ಯಕ್ಷರು ಆಸಕ್ತಿಯಿಂದ ಇತಿಹಾಸ ಅಧ್ಯಯನ, ಸಂಶೋಧನಾಸಕ್ತಿ ಬಗ್ಗೆ ಬೆಳಕು ಚೆಲ್ಲಿದರು. ಶಿಕ್ಷಕರಾದ ಕಿಶನ್ ಡೋಬಳೆಕರ್, ರುದ್ರಗೌಡ ಅವರು ಉಪಸ್ಥಿತರಿದ್ದರು.

ದಿನಾಂಕ ೧೨-೧೧-೨೦೧೩, ಗದಗ

ಗದಗ ಜಿಲ್ಲೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ದಿನಾಂಕ ೧೨-೧೧-೨೦೧೩ರಂದು ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಇತಿಹಾಸ ವಿಭಾಗದ ಮುಖ್ಯಸ್ಥ ಡಾ. ಅಪ್ಪಣ್ಣ ಎನ್. ಹಂಜಿ, ಅಧ್ಯಕ್ಷತೆಯಲ್ಲಿ ಅತಿಥಿ ಉಪನ್ಯಾಸಕ ಪ್ರೊ. ಎಸ್.ಎಸ್.

ಹುಲ್ಲೂರ, ಪ್ರೊ. ಕೆ.ಎಸ್. ಶಿರೂರ ಅವರ ನೇತೃತ್ವದಲ್ಲಿ ಕಾರ್ಯಕ್ರಮ ಜರುಗಿತು. ಇನ್ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದಲ್ಲದೆ, ಕಾಲೇಜಿನಿಂದ ತ್ರಿಕೂಟೇಶ್ವರ ದೇವಾಲಯಕ್ಕೆ ಮೆರವಣಿಗೆ ಏರ್ಪಡಿಸಿತ್ತು. ದೇವಾಲಯದಲ್ಲೇ ಕಾರ್ಯಕ್ರಮವೇರ್ಪಡಿಸಿದ್ದು ಅರ್ಥಪೂರ್ಣವಾಗಿತ್ತು. ಸಂಶೋಧಕ ಅ.ದ.ಕಟ್ಟಿಮನಿ, ಕನ್ನಡ ವಿಭಾಗದ ಪ್ರೊ. ಬಿ.ಎಸನ್. ಬುಳ್ಳನವರ, ಪ್ರೊ. ಆರ್.ಎಂ. ಕಲ್ಲನಗೌಡರ ಅವರೂ ಭಾಗವಹಿಸಿದ್ದಲ್ಲದೆ, ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ, ಮಹತ್ವ, ಪ್ರಾಚೀನ ಸಾಂಸ್ಕೃತಿಕ ಇತಿಹಾಸ ಕುರಿತು ಗಣ್ಯರೆಲ್ಲರೂ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿದರು.

ದಿನಾಂಕ ೧-೧೨-೨೦೧೩, ಬೆಂಗಳೂರು

ಬೆಂಗಳೂರಿನ ಡಾ. ಶೈಲಜಾ ಮಂಗಳ, (ಸಂಸ್ಕೃತ ಪ್ರಾಧ್ಯಾಪಕರು, ಎಂ.ಇ.ಎಸ್. ಕಾಲೇಜು) ರಾಜಾಜಿನಗರ ಅವರ ಮನೆಯಂಗಳದಲ್ಲಿ ದಿನಾಂಕ ೨-೧೨-೨೦೧೩ರಂದು ಅವರ ಅಧ್ಯಕ್ಷತೆಯಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಡಾ. ಹರಿಹರ ಶ್ರೀನಿವಾಸರಾವ್, ಮುಖ್ಯ ಅತಿಥಿಗಳಾಗಿ 'ಸಿಂಗಟಾಲೂರು ಏತ ನೀರಾವರಿ ಯೋಜನೆಯಲ್ಲಿ ಮುಳುಗಡೆಯಾಗಲಿರುವ ಐತಿಹಾಸಿಕ ಸ್ಥಳ ಮಾಗಳ' ಎಂಬ ವಿಷಯ ಕುರಿತು ಮಾತನಾಡಿದರು. ಆಧುನಿಕ ಯೋಜನೆಯಲ್ಲಿ ಐತಿಹಾಸಿಕ ಸ್ಥಳ, ಸ್ಮಾರಕ, ಶಾಸನಗಳು ಹೇಗೆ ನಾಶವಾಗುತ್ತವೆ ಎಂದು ತಿಳಿಸುತ್ತಾ, ತುಂಗಭದ್ರಾನದಿ ಬಲದಂಡೆಯಲ್ಲಿರುವ ಮಾಗಳದ ಸುತ್ತಮುತ್ತ, ಹೊಯ್ಸಳ ದೇವಾಲಯ, ಸೂರ್ಯ, ಈಶ್ವರ ಮುಂತಾದ ಪ್ರಾಚೀನ ದೇವಾಲಯ, ಹತ್ತಾರು ಶಾಸನ, ಶಿಲ್ಪ, ಪ್ರಾಚೀನ ಅಗ್ರಹಾರಗಳು ಪ್ರಸ್ತುತ ಯೋಜನೆಯಲ್ಲಿ ನಾಶವಾಗುವ ಬಗ್ಗೆ, ಹಾಗೂ ಸ್ಮಾರಕ ಇತ್ಯಾದಿ ರಕ್ಷಣಾಕ್ರಮವನ್ನು ಕುರಿತು ವಿವರಿಸಿದರು. ಬೆಂಗಳೂರಿನಲ್ಲಿ ನೆಲೆಸಿದ ಮಾಗಳ ಸುತ್ತಮುತ್ತಲಿನವರು ಭಾಗವಹಿಸಿದ್ದರು.

ದಿನಾಂಕ ೨೧-೧೨-೨೦೧೩, ಹುಲಕೋಟಿ

ಕ.ಇ.ಅ. ಬೆಂಗಳೂರು, ಗದಗ ಜಿಲ್ಲಾಘಟಕ ಹಾಗೂ ಗ.ಸ.ಜ.ಗಿ.ಪ.ಪೂ ಮಹಾವಿದ್ಯಾಲಯ ಹುಲಕೋಟಿ ಇವುಗಳ ಸಹಯೋಗದೊಂದಿಗೆ ದಿನಾಂಕ ೨೧-೧೨-೨೦೧೩ರಂದು ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ ಶ್ರೀ ವಿ.ವೈ. ಹರ್ಲಾಪುರ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಉದ್ಘಾಟಕರಾಗಿ ಆಗಮಿಸಿದ್ದ ಡಾ. ದೇವರಕೊಂಡಾರೆಡ್ಡಿ ಅಧ್ಯಕ್ಷರು, ಕ.ಇ.ಅ. ಬೆಂಗಳೂರು, ಅವರು ಮಾತನಾಡಿ, ಪ್ರಾಚೀನ ಇತಿಹಾಸ ಮತ್ತು ಪರಂಪರೆಯನ್ನು ಭಾರತವು ಹೊಂದಿದ್ದು, ಎಲ್ಲಾ ಸಮಸ್ಯೆಗಳಿಗೆ ಸ್ಪಂದಿಸುವ ರಾಜಮಹಾರಾಜರ ಆಡಳಿತವಾಗಿತ್ತು. ಕೆರೆ-ಕಾಲುವೆ, ಕೋಟೆ-ಕೊತ್ತಲ, ದೇವಾಲಯ, ಸ್ಮಾರಕ, ಇವುಗಳಲ್ಲಿ ಅತ್ಯುನ್ನತ ತಂತ್ರಜ್ಞಾನ ಬಳಕೆ, ದೂರದೃಷ್ಟಿಕೋನ, ಉದಾರತೆ ಸಮಾಜದ ರಚನೆಗೆ ಮಹತ್ವವಾಗಿತ್ತು. ಸ್ಮಾರಕಗಳ ರಕ್ಷಣೆಯ ಅಗತ್ಯ ಕುರಿತು ವಿವರಿಸಿದರು.

ವಿದ್ಯಾರ್ಥಿಗಳು ಸಂಗ್ರಹಿಸಿದ ಪ್ರಾಚೀನ ನಾಣ್ಯಗಳ ಪ್ರದರ್ಶನವೇರ್ಪಟ್ಟಿತ್ತು. ಮುಖ್ಯ ಅತಿಥಿಗಳಾದ ಪ್ರೊ. ಎಸ್.ಎನ್. ಆದಿ, ಉಪನ್ಯಾಸಕರು, ಸರ್ಕಾರಿ ಪ.ಪೂ. ಕಾಲೇಜು ಹೊಂಬಳ ಅವರು ಕರ್ನಾಟಕ ಏಕೀಕರಣ ಚಳುವಳಿಯ ಸಾಂಸ್ಕೃತಿಕ ಮಹತ್ವ ಕುರಿತು ಮಾತನಾಡಿದರು. ಅತಿಥಿಗಳಾಗಿ ಆಗಮಿಸಿದ್ದ, ಶೈಕ್ಷಣಿಕ ಸಲಹಾಸಮಿತಿ ಛೇರಮನ್ನರಾದ ಶ್ರೀ ಡಿ.ಬಿ. ಓದುಗೌಡರ, ಸದಸ್ಯರಾದ ಶ್ರೀ ಸಿ.ಬಿ. ಕರಿಕಟ್ಟಿ ಹಾಗೂ ಶ್ರೀ ಎಂ.ಡಿ. ದುರಗಣ್ಣನವರ ಅವರುಗಳು ಐತಿಹಾಸಿಕ ಸ್ಮಾರಕ, ಪರಂಪರೆ, ಹಾಗೂ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ಕ.ಇ.ಅ. ಕಾರ್ಯಕಾರಿ ಸಮಿತಿಯ ಸದಸ್ಯರೂ, ಉಪನ್ಯಾಸಕರೂ ಆದ ಪ್ರೊ. ಕೆ.ಎಂ. ಗರಗ ಅವರು ಕಾರ್ಯಕ್ರಮವನ್ನು ಸಂಯೋಜಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ದಿವಂಗತ ಪದ್ಮಾವತಿ ಎಸ್. ಪಂಚಭಾವಿಯವರ ಸ್ಮರಣಾರ್ಥ ನೆನಪಿನ ಕಾಣಿಕೆಗಳನ್ನು ಅತಿಥಿಗಳಿಗೆ ನೀಡಲಾಯಿತು. ವಿದ್ಯಾರ್ಥಿಗಳಾದ ರಾಧಾ ಶಿರಹಟ್ಟಿ, ಪ್ರಗತಿ ದುರ್ಗಣ್ಣ ಪ್ರಿಯಾಂಕ ಹಿರೇಮಠ ಇವರು ಕಾರ್ಯಕ್ರಮವನ್ನು ನಿರೂಪಿಸಿದರು.

ದಿನಾಂಕ ೧೨-೧೦-೨೦೧೩, ಗದಗ

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು, ಗದಗ ಜಿಲ್ಲಾಘಟಕ ಹಾಗೂ ಎಕ್ಸಲೆಂಟ್ ಕೋಚಿಂಗ್ ಸೆಂಟರ್, ಗದಗ ಇವರ ಸಂಯುಕ್ತ ಆಶ್ರಯದಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವು ದಿನಾಂಕ ೧೨-೧೦-೨೦೧೩ರಂದು ನೆರವೇರಿತು. "ಕರ್ನಾಟಕ ಏಕೀಕರಣಕ್ಕೆ ಉತ್ತರ ಕರ್ನಾಟಕದ ಕೊಡುಗೆ" ಎಂಬ ಉಪನ್ಯಾಸ ಕಾರ್ಯಕ್ರಮವು ಪ್ರೊ. ಎಸ್.ಎನ್. ಆದಿ, ಇತಿಹಾಸ ಉಪನ್ಯಾಸಕರು, ಸರ್ಕಾರಿ ಪ.ಪೂ.ಕಾಲೇಜು, ಹೊಂಬಳ ಇವರ ಉಪನ್ಯಾಸದೊಂದಿಗೆ ನಡೆಯಿತು. ಐತಿಹಾಸಿಕ ಪರಂಪರೆ, ಬ್ರಿಟೀಷ್ ಆಡಳಿತ, ಏಕೀಕರಣ ಕುರಿತು ಮಾತನಾಡಿದರು. ಅಧ್ಯಕ್ಷತೆಯನ್ನು ಡಾ. ವೈ.ಆರ್. ಬೇಲೇರಿ, ಕ.ಇ.ಅ., ಗದಗ, ಜಿಲ್ಲಾ ಘಟಕ ಅಧ್ಯಕ್ಷರು ಇವರು ಭಾಗವಹಿಸಿದ್ದರು. ಅತಿಥಿಗಳಾಗಿ ಪ್ರೊ. ಕೆ.ಎಂ. ಗರಗ, ಸದಸ್ಯರು, ಕಾರ್ಯಕಾರಿ ಸಮಿತಿ ಕ.ಇ.ಅ., ಶ್ರೀಮತಿ ಶಕುಂತಲಾ ಸಿಂಧೂರ, ಜಿಲ್ಲಾ ಸಂಚಾಲಕರು, ಗದಗ, ಪ್ರೊ. ದತ್ತಪ್ರಸನ್ನ ಪಾಟೀಲ, ಕಾರ್ಯದರ್ಶಿ, ಗದಗ ಜಿಲ್ಲಾಘಟಕ ಇವರು ಉಪಸ್ಥಿತರಿದ್ದರು. ಉಪನ್ಯಾಸಕರಾದ ಆರ್.ಎಸ್.ಹೆಬಸೂರ, ಆವಾರಿ, ಎಸ್. ಆರ್ಯ, ಮೇಟಿ, ಕೆ.ಟಿ. ವಡ್ಡಿನ, ರತ್ನಾಕರ್ ಹಾಗೂ ವಿವಿಧ ಕಾಲೇಜು ಉಪನ್ಯಾಸಕರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ದಿನಾಂಕ ೧೨-೦೧-೨೦೧೪, ಗದಗ

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು, ಗದಗ ಜಿಲ್ಲಾಘಟಕ ಹಾಗೂ ಎಕ್ಸಲೆಂಟ್ ಕೋಚಿಂಗ್ ಸೆಂಟರ್, ಗದಗ ಇವರ ಸಂಯುಕ್ತ ಆಶ್ರಯದಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವು ದಿನಾಂಕ ೧೨-೧೦-೨೦೧೩ರಂದು ನೆರವೇರಿತು. ಡಾ. ವೈ.ಆರ್. ಬೇಲೇರಿ, ಕ.ಇ.ಅ., ಗದಗ, ಜಿಲ್ಲಾ ಘಟಕ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರೊ. ಸಿ.ಜಿ. ಹುಡೇದಗಡ್ಡಿ, ಪ್ರಾಧ್ಯಾಪಕರು, ಎ.ಎಸ್.ಎ. ಪದವಿ ಕಾಲೇಜು, ನರೇಗಲ್ ಇವರು "ಹೊಯ್ಸಳರ ಕಾಲದ ಸಾಹಿತ್ಯಕ ಕೊಡುಗೆಗಳು" ಎಂಬ ವಿಷಯ ಕುರಿತು ಮಾತನಾಡಿದರು. ಹೊಯ್ಸಳರ ರಾಜಕೀಯ, ವಾಸ್ತುಶಿಲ್ಪ, ಸಾಹಿತ್ಯಕ ಕೊಡುಗೆಗಳ ಬಗ್ಗೆ ಬೆಳಕು ಚೆಲ್ಲಿದರು. ಸ್ಮಾರಕ ರಕ್ಷಣೆ ಕುರಿತು ಮನವರಿಕೆ ಮಾಡಿದರು.

ಅತಿಥಿಗಳಾಗಿ ಪ್ರೊ. ಕೆ.ಎಂ. ಗರಗ, ಸದಸ್ಯರು, ಕಾರ್ಯಕಾರಿ ಸಮಿತಿ ಕ.ಇ.ಅ., ಡಾ. ವಿ.ಕೆ. ದ್ಯಾಮನಗೌಡ್ರು, ಉಪಾಧ್ಯಕ್ಷರು, ಗದಗ ಘಟಕ, ಪ್ರೊ. ಡಿ.ಎಲ್. ಪಾಟೀಲ್, ಕಾರ್ಯದರ್ಶಿ, ಶ್ರೀಮತಿ ಶಕುಂತಲಾ ಸಿಂಧೂರ, ಜಿಲ್ಲಾ ಸಂಚಾಲಕರು, ಪ್ರೊ. ಕೆ.ಟಿ. ವಡ್ಡಿಮ, ಎಕ್ಸಲೆಂಟ್ ಕೋಚಿಂಗ್ ಸೆಂಟರ್, ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ದಿನಾಂಕ ೯-೨-೨೦೧೪, ಗದಗ

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು, ಗದಗ ಜಿಲ್ಲಾಘಟಕ ಹಾಗೂ ಎಕ್ಸಲೆಂಟ್ ಕೋಚಿಂಗ್ ಸೆಂಟರ್, ಗದಗ ಇವರ ಸಂಯುಕ್ತ ಆಶ್ರಯದಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವು ದಿನಾಂಕ ೦೯-೦೨-೨೦೧೪ರಂದು ನೆರವೇರಿತು. ಡಾ. ವೈ.ಆರ್. ಬೇಲೇರಿ, ಅಧ್ಯಕ್ಷರು, ಕ.ಇ.ಅ., ಜಿಲ್ಲಾಘಟಕ ಗದಗ, ಅವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಸುರೇಶ್‌ಗೌಡ ಪಾಟೀಲ. ಸಾವಯವ ಕೃಷಿ ತಜ್ಞರು, ಹುಲಕೋಟಿ ಇವರು "ಪ್ರಾಚೀನ ಕೃಷಿ ಸಂಪ್ರದಾಯಗಳು ಆಚರಣೆ ಹಾಗೂ ವೈಶಿಷ್ಟಗಳು" ಎಂಬ ವಿಷಯ ಕುರಿತು ಉಪನ್ಯಾಸ ಮಾಡಿದರು. ಪ್ರಾಚೀನ ಪರಂಪರೆಯ ಕೃಷಿ ಮಹತ್ವ, ಅದರ ಈಗಿನ ಅಗತ್ಯತೆ ಹಾಗೂ ಮುಂದುವರಿಕೆ ಕುರಿತು ಮಾತನಾಡಿದರು. ಅತಿಥಿಗಳಾಗಿ ಪ್ರೊ. ಕೆ.ಎಂ.ಗರಗ, ಕಾರ್ಯಕಾರಿ ಸಮಿತಿ ಸದಸ್ಯರು ಕ.ಇ.ಅ. ಬೆಂಗಳೂರು, ಡಾ. ವಿ.ಕೆ. ದ್ಯಾಮನಗೌಡ್ರು, ಉಪಾಧ್ಯಕ್ಷರು, ಗದಗ ಘಟಕ, ಪ್ರೊ. ಡಿ.ಎಲ್. ಪಾಟೀಲ್, ಕಾರ್ಯದರ್ಶಿ, ಗದಗ, ಪ್ರೊ. ಶ್ರೀಮತಿ ಶಕುಂತಲಾ ಸಿಂಧೂರ, ಜಿಲ್ಲಾ ಸಂಚಾಲಕರು ಹಾಗೂ ಪ್ರೊ. ಕೆ.ಟಿ. ವಡ್ಡಿನ, ಎಕ್ಸಲೆಂಟ್ ಕೋಚಿಂಗ್ ಸೆಂಟರ್, ಗದಗ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

ದಿನಾಂಕ ೧೦-೧೦-೨೦೧೩, ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಕನ್ನಡ ಸಂಶೋಧನಾ ಸಂಸ್ಥೆಯಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವು ಪ್ರೊ. ಎಚ್.ಟಿ. ಪೋತೆ, ಕುಲಸಚಿವರು, ಮೌಲ್ಯಮಾಪನ, ಕ.ವಿ.ವಿ. ಇವರಿಂದ ಉದ್ಘಾಟನೆಗೊಂಡಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಎಸ್.ಕೆ. ಕಲ್ಲೋಳಿಕರ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪ್ರೊ. ಎಸ್.ವಿ. ಪಾಡಿಗಾರ್, ಮುಖ್ಯಸ್ಥರು, ಪ್ರಾಚೀನ ಭಾರತದ ಇತಿಹಾಸ, ಅವರು ಕಾರ್ಯಕ್ರಮದಲ್ಲಿ ಐತಿಹಾಸಿಕ ಪರಂಪರೆಯ ಸಾಂಸ್ಕೃತಿಕ ಮಹತ್ವ, ಸ್ಮಾರಕಗಳ ರಕ್ಷಣೆ ಕುರಿತು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿದರು. ಡಾ. ಎಸ್.ಕೆ. ಮೇಲಾಕಾರ ಅವರು ಕಾರ್ಯಕ್ರಮ ಸಂಘಟಿಸಿದ್ದರು.

ದಿನಾಂಕ, ಆಗಸ್ಟ್, ೨೦೧೩, ಕಿತ್ತೂರು

ಧಾರವಾಡ ಜಿಲ್ಲೆ, ಕಿತ್ತೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವು ಸ್ಥಳೀಯ ಶಾಸಕರಿಂದ ಉದ್ಘಾಟನೆಗೊಂಡಿತು. ಅತಿಥಿಗಳಾದ ಡಾ. ಎಸ್.ಕೆ. ಮೇಲಾಕಾರ ಅವರು ಐತಿಹಾಸಿಕ ಪರಂಪರೆ ಉಳಿಸಿ ಎನ್ನುವ ಸಂದೇಶದ ಹಿನ್ನೆಲೆಯನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿದರು. ಅಧ್ಯಕ್ಷತೆಯನ್ನು ಪ್ರಾಚಾರ್ಯರು ವಹಿಸಿದ್ದರು. ಇತಿಹಾಸ ಉಪನ್ಯಾಸಕ ಶ್ರೀ ಹಳೇಮನಿ ಅವರು ಕಾರ್ಯಕ್ರಮ ಸಂಯೋಜಿಸಿದ್ದರು.

ದಿನಾಂಕ ಸೆಪ್ಟೆಂಬರ್ ೨೦೧೩, ಧಾರವಾಡ

ಧಾರವಾಡ ಜಿಲ್ಲೆಯ ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿ ಶಿಬಿರದಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವು, ತಾಲೂಕು ಶಿಕ್ಷಣಾಧಿಕಾರಿಗಳಿಂದ ಉದ್ಘಾಟಿಸಲ್ಪಟ್ಟಿತು. ಅತಿಥಿ ಡಾ. ಎಸ್.ಕೆ ಮೇಲಾಕಾರ ಅವರು ಐತಿಹಾಸಿಕ ಸ್ಮಾರಕಗಳ ಸಾಂಸ್ಕೃತಿಕ ಹಿನ್ನೆಲೆ, ಮಹತ್ವ ರಕ್ಷಣೆಯ ಹೊಣೆಯನ್ನು ಶಿಕ್ಷಕರಿಗೆ ತಿಳಿಸಿದರು. ಹಾಗೂ ವಿದ್ಯಾರ್ಥಿಗಳಲ್ಲಿ ಇವುಗಳ ಬಗ್ಗೆ ಆಸಕ್ತಿ ಮೂಡಿಸಬೇಕೆಂದು ತಿಳಿಸಿದರು. ಶಿಕ್ಷಕರಾದ ಶ್ರೀ ಎಸ್.ಬಿ. ದೇಸನೂರ ಅವರು ಕಾರ್ಯಕ್ರಮ ಸಂಘಟಿಸಿದ್ದರು.

ದಿನಾಂಕ ಫೆಬ್ರವರಿ ೨೦೧೪, ಕಲಘಟಗಿ

ಧಾರವಾಡ ಜಿಲ್ಲೆ ಕಲಘಟಗಿ ಸರ್ಕಾರಿ ಪ್ರ.ದ. ಕಾಲೇಜಿನಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವು ಮಾನ್ಯ ಸಚಿವರಾದ ಸಂತೋಷ್ ಲಾಡ್ ಅವರಿಂದ ಉದ್ಘಾಟನೆಗೊಂಡಿತು. ಅತಿಥಿ ಉಪನ್ಯಾಸಕರಾಗಿ ಡಾ. ಮೇಲಾಕಾರ ಅವರು ಐತಿಹಾಸಿಕ ಸ್ಮಾರಕಗಳು ಮತ್ತು ಅವುಗಳ ಬಗ್ಗೆ ಕಾಳಜಿ, ಸಂರಕ್ಷಣೆ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿದರು. ಪ್ರಾಚಾರ್ಯರಾದಿ ಡಾ. ಕಲ್ಲೂರ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಡಾ. ಶುಭಾಸ್ ನಾಟಿಕಾರ ಕಾರ್ಯಕ್ರಮ ಸಂಘಟಿಸಿದ್ದರು.

ದಿನಾಂಕ ಫೆಬ್ರವರಿ, ೨೦೧೪, ಬೆಳ್ಳುಬ್ಬಿ

ಧಾರವಾಡ ಜಿಲ್ಲೆಯ ಬೆಳ್ಳುಬ್ಬಿ ಕೆ.ಎಲ್.ಇ. ಸಂಸ್ಥೆಯ ಪದವಿ ಕಾಲೇಜಿನಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವು ಇತಿಹಾಸ ಅಧ್ಯಾಪಕರ ಅಧ್ಯಕ್ಷತೆಯಲ್ಲಿ ನೆರವೇರಿತು. ವಿದ್ಯಾರ್ಥಿಗಳಿಗೆ ಐತಿಹಾಸಿಕ ಸ್ಮಾರಕಗಳು ಅವುಗಳ ಪರಂಪರೆ ಮತ್ತು ಅವುಗಳ ರಕ್ಷಣೆಗೆ ಮಹತ್ವ ನೀಡಲು ತಿಳಿಸಲಾಯಿತು. ಡಾ. ಹೆಗ್ಗಣ್ಣನವರು ಸಂಘಟಿಸಿದ್ದರು.

ದಿನಾಂಕ, ೨೦೧೪ ಗದಗ

ಗದಗ ಜಿಲ್ಲೆಯ ಗಜೇಂದ್ರಗಡದ ಎಸ್.ಎಂ. ಭೂಮರೆಡ್ಡಿ ಪದವಿಪೂರ್ವ ಕಾಲೇಜಿನಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವು ಡಾ. ಕೆ. ರವೀಂದ್ರನಾಥ್, ಉಪಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ ಹಂಪಿ, ಅವರಿಂದ ಉದ್ಘಾಟನೆಗೊಂಡಿತು. ಅವರು ನಮ್ಮ ಪರಂಪರೆಯನ್ನು ಚರಿತ್ರೆಯೊಂದಿಗೆ ಸಮೀಕರಿಸುತ್ತಾ ವರ್ತಮಾನವನ್ನು ರೂಪಿಸಿಕೊಳ್ಳಬೇಕು. ಇತಿಹಾಸವೆಂದರೆ ನಮ್ಮವರ ಬದುಕು, ಪರಂಪರೆ ಮಹತ್ವ ತಿಳಿಸುತ್ತಾ, ತಾಳೆಗರಿ, ಹಸ್ತಪ್ರತಿ, ಕಡತಗಳನ್ನು ತೋರಿಸಿದ್ದಲ್ಲದೆ, ರೈಸ್, ಫ್ಲೀಟ್, ಮೆಕೆಂಜೆ ಮುಂತಾದವರ ಬಗ್ಗೆ ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತೆ ತಿಳಿಸಿದರು. ಅತಿಥಿಗಳಾದ ಡಾ. ಮಲ್ಲಿಕಾರ್ಜುನ ಕುಂಬಾರ ಅವರು ವಿದ್ಯಾರ್ಥಿಗಳನ್ನು ಕುರಿತು ಅಸಂಖ್ಯ ಜನಗಳ ಜೀವನ, ಗತಿಸಿದ ತಲೆಮಾರುಗಳ ವಿಷಯಗಳಂತೂ ನೆನಪಿರುವುದು ಕಷ್ಟ ನಮ್ಮ ಜನಾಂಗದಿಂದ ಕಣ್ಮರೆಯಾದ ಸಂಸ್ಕೃತಿಯ ಕಣಜದಂತೆ ಶೋಭಿಸುವ ಐತಿಹಾಸಿಕ ಸ್ಮಾರಕಗಳು ಈ ನಾಡಿನ ಅಮೂಲ್ಯನಿಧಿಗಳಾಗಿವೆ ಎಂದು ತಿಳಿಸುತ್ತಾ ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸಿದರು. ಅಧ್ಯಕ್ಷತೆಯನ್ನು ಪ್ರಾಚಾರ್ಯರಾದ ಡಾ. ಎಸ್.ಎನ್. ಶಿವರೆಡ್ಡಿ ಅವರು ವಹಿಸಿದ್ದರು. ಅಧ್ಯಾಪಕ ಬಿ.ಎ. ಕೆಂಚರೆಡ್ಡಿ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಅರವಿಂದ ವಡ್ಡರವರು ಸಂಯೋಜಿಸಿದ ಕಾರ್ಯಕ್ರಮವು ಅಧ್ಯಾಪಕಿ ಕುಮಾರಿ ಚಳಗೇರಿಯವರ ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.

"ಕರ್ನಾಟಕ ಶಾಸನ ಕವಿಗಳು" ವಿಚಾರಸಂಕಿರಣ: ದಿನಾಂಕ ೨೦೧೩, ಡಿಸೆಂಬರ್ ೭ ಮತ್ತು ೮

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು, ದಿನಾಂಕ ೨೦೧೩ನೇ ಡಿಸೆಂಬರ್, ೭ ಮತ್ತು ೮ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು, ಇವರ ಸಹಯೋಗದೊಂದಿಗೆ "ಕರ್ನಾಟಕ ಶಾಸನಕವಿಗಳು" ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಬಿ.ಎಂ.ಶ್ರೀ. ಕಲಾಭವನದ ಆವರಣದಲ್ಲಿ ವಿಚಾರ ಸಂಕಿರಣವು ಡಾ. ಲಲಿತಾಂಬ ಅವರ ಪ್ರಾರ್ಥನೆಯೊಂದಿಗೆ, ಡಾ. ಕೆ.ಆರ್. ರಾಮಕೃಷ್ಣ, ಭಾ.ಆ.ಸೇ. ಆಯುಕ್ತರು (ನಿ.) ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಉದ್ಘಾಟಿಸಿದರು. ಅವರು ಶಾಸನಗಳ ಮಹತ್ವ, ಸ್ಮಾರಕಗಳ ಮಹತ್ವ, ಹಾಗೆಯೇ ಶಾಸನ ರೂವಾರಿಗಳು (ಕವಿಗಳು) ಕನ್ನಡ ನಾಡಿನ ಶಾಸನ–ಸಾಹಿತ್ಯದಲ್ಲಿ ಅವರ ಪಾತ್ರ ಕುರಿತು ವಿವರಿಸಿದರು. ನಾವು ಸಾಹಿತ್ಯಕವಿಗಳಿಗೆ ಮಹತ್ವ ನೀಡಿರುವಷ್ಟು ಶಾಸನಕವಿಗಳಿಗೆ ನೀಡಿಲ್ಲ. ಈ ಹಿನ್ನೆಲೆಯಲ್ಲಿ ಈ ವಿಚಾರ ಸಂಕಿರಣವು ಬಹಳ ಮಹತ್ವವಾದುದೆಂದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಡಾ. ಸಿ.ಜಿ. ಬೆಟಸೂರಮಠ, ಕೆ.ಎ.ಎಸ್., ಆಯುಕ್ತರು, ರಾಜ್ಯಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಇವರನ್ನು ಆಹ್ವಾನಿಸಲಾಗಿತ್ತು. ಅನಿವಾರ್ಯ ಕಾರಣಗಳಿಂದ ಅವರು ಬರಲಾಗಲಿಲ್ಲ. ಡಾ. ಬಿ. ರಾಜಶೇಖರಪ್ಪ, ನಿವೃತ್ತ ಪ್ರಾಂಶುಪಾಲರು, ಚಿತ್ರದುರ್ಗ, ಇವರನ್ನು ಮುಖ್ಯ ಅತಿಥಿಗಳಾಗಿ ಆಹ್ವಾನಿಸಲಾಯಿತು. ಇವರು ಶಾಸನಕವಿಗಳು ಎನ್ನುವುದಕ್ಕಿಂತ "ಶಾಸನ ರಚಕರು" ಎಂದು ಬಳಸುವುದು ಸೂಕ್ತವಾದುದು ಎಂದು ತಿಳಿಸಿದರು. ಬಹುಪಾಲು ವಿದ್ವಾಂಸರು ಇದೇ ಸೂಕ್ತ ಮತ್ತು ಇದನ್ನೇ ಬಳಸಬಹುದೆಂದೂ ಸಭೆಯಲ್ಲಿ ತಿಳಿಸಿದರು. ಶಾಸನಕವಿ, ಶಿಲ್ಪಿ, ರಚಕ ಮುಂತಾದ ವಿಷಯ ಸ್ಪಷ್ಟತೆ ಬಗ್ಗೆ ಮಾತನಾಡಿ ಈ ವಿಚಾರ ಸಂಕಿರಣದಲ್ಲಿ ಹೊಸ ಹೊಳಹು ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು ವಹಿಸಿದ್ದಲ್ಲದೆ, ವಿಚಾರಸಂಕಿರಣದ ಉದ್ದೇಶ, ವಿಷಯ ವ್ಯಾಪ್ತಿಯನ್ನು ತಿಳಿಸಿ, ಶಾಸನಕವಿಗಳ ಬಗ್ಗೆ ಆಗಬೇಕಾದ ಕೆಲಸದ ಬಗ್ಗೆಯೂ ಸೂಚಿಸಿದರು. ಎರಡೂ ದಿನಗಳು ನಡೆದ ವಿಚಾರ ಸಂಕಿರಣದಲ್ಲಿ, ಕರ್ನಾಟಕದ ಪ್ರತೀ ಜಿಲ್ಲೆಗೆ ಸಂಬಂಧಿಸಿದ ಶಾಸನಗಳ ಹಿನ್ನೆಲೆಯಲ್ಲಿ 'ಶಾಸನಕವಿ'ಗಳನ್ನು ಕುರಿತು ಪ್ರಬಂಧ ಮಂಡಿಸಲು ಮೊದಲೇ ವಿದ್ವಾಂಸರನ್ನು ಆಹ್ವಾನಿಸಲಾಗಿತ್ತು. ಆಯಾ ಜಿಲ್ಲೆಗಳ ಶಾಸನಕವಿಗಳ ಬಗ್ಗೆ ವಿದ್ವಾಂಸರು ಪ್ರಬಂಧ ಮಂಡಿಸಿದ ವಿವರ ಹೀಗಿದೆ. ಶ್ರೀಮತಿ ಸ್ಮಿತಾರೆಡ್ಡಿ (ಬೆಂಗಳೂರು, ಬೆಂ.ಗ್ರಾಮಾಂತರ ಮತ್ತು ರಾಮನಗರ), ಡಾ.ಪರಮಶಿವಮೂರ್ತಿ (ತುಮಕೂರು), ಡಾ. ಬಿ. ರಾಜಶೇಖರಪ್ಪ (ಚಿತ್ರದುರ್ಗ), ಡಾ. ಎಂ. ಕೊಟ್ರೇಶ್ (ದಾವಣಗೆರೆ), ಡಾ. ಕೆಳದಿ ವೆಂಕಟೇಶ ಜೋಯ್ಸ್ (ಶಿವಮೊಗ್ಗ), ಡಾ. ಕೆ. ವಸಂತಲಕ್ಷ್ಮೀ (ಹಾಸನ), ಡಾ. ಚಿತ್ತಯ್ಯ ಪೂಜಾರ್ (ಚಿಕ್ಕಮಗಳೂರು), ಡಾ. ಗೋಪಾಲಕೃಷ್ಣ (ಮೈಸೂರು ಮತ್ತು ಕೊಡಗು), ಡಾ. ಪಿ.ವಿ. ಕೃಷ್ಣಮೂರ್ತಿ (ಕೋಲಾರ ಮತ್ತು ಚಿಕ್ಕಬಳ್ಳಾಪುರ), ಡಾ. ಪುಂಡಿಕ್ಯಾ ಗಣಪತಿ ಭಟ್ (ದಕ್ಷಿಣ ಕನ್ನಡ ಮತ್ತು ಉಡುಪಿ), ಡಾ. ದೇವರಕೊಂಡಾರೆಡ್ಡಿ (ಹಾವೇರಿ), ಡಾ. ಎಂ.ಎಸ್. ನರೇಗಲ್ (ಗದಗ), ಡಾ. ಅಮರೇಶ್ ಯತಗಲ್ (ಬಿಜಾಪುರ), ಡಾ. ಶೀಲಾಕಾಂತ ಪತ್ತಾರ್ (ಬಾಗಲಕೋಟೆ), ಡಾ. ಸ್ಮಿತಾ ಸುರೇಬಾನಕರ್ (ಬೆಳಗಾವಿ), ಡಾ. ಹನುಮಾಕ್ಷಿ ಗೋಗಿ (ಬೀದರ್, ಗುಲ್ಬರ್ಗಾ, ಯಾದಗಿರಿ), ಡಾ. ಲಲಿತಾಂಬ (ರಾಯಚೂರು), ಡಾ. ಕೆ. ಮನ್ವಾಚಾರ್ (ಬಳ್ಳಾರಿ), ಡಾ. ಬಿ.ಆರ್. ಭಾರತಿ (ಕೊಪ್ಪಳ), ಡಾ. ಪಿ.ಎನ್. ನರಸಿಂಹಮೂರ್ತಿ (ಮಂಡ್ಯ), ಡಾ. ಎಚ್.ಎಸ್. ಉಷಾರಾಣಿ (ಆಂಧ್ರ, ತಮಿಳುನಾಡು, ಮಹಾರಾಷ್ಟ್ರ ಕನ್ನಡ ಶಾಸನಗಳು). ಎರಡು ದಿನಗಳು ನಡೆದ ವಿಚಾರ ಸಂಕಿರಣವು ವಿದ್ವಾಂಸರ ಪ್ರಬಂಧ ಮಂಡನೆ, ಚರ್ಚೆ, ವಿಚಾರಗಳೊಂದಿಗೆ ಶಾಸನಕವಿಗಳ ಅಧ್ಯಯನದ ವ್ಯಾಪ್ತಿ ಬಗ್ಗೆ ಹೊಸ ಬೆಳಕು ಮೂಡಿತು ಎನ್ನಬಹುದು. ಗೋಷ್ಠಿಗಳ ಅಧ್ಯಕ್ಷತೆಯನ್ನು ಡಾ. ಪರಮಶಿವಮೂರ್ತಿ, ಡಾ. ಹನುಮಾಕ್ಷಿ ಗೋಗಿ, ಡಾ. ಬಿ. ರಾಜಶೇಖರಪ್ಪ ಮತ್ತು ಡಾ. ಪಿ.ಎನ್. ನರಸಿಂಹ ಮೂರ್ತಿ ಇವರುಗಳ ವಹಿಸಿದ್ದರು. ದಿನಾಂಕ ೮–೧೨–೨೦೧೩ರಂದು ಸಂಜೆ ಸಮಾರೋಪ ಸಮಾರಂಭವು ಡಾ. ದೇವರಕೊಂಡಾರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಮುಖ್ಯ ಅತಿಥಿಗಳಾಗಿ ಶ್ರೀ ಎಂ.ಬಿ. ಪಾಟೀಲ, ಸಂಪಾದಕರು (ನಿ.) ಕರ್ನಾಟಕ ಗೆಜೆಟಿಯರ್ ಹಾಗೂ ಕೋಶಾಧಿಕಾರಿಗಳು, ಕರ್ನಾಟಕ ಇತಿಹಾಸ ಅಕಾದೆಮಿ ಅವರನ್ನು ಆಹ್ವಾನಿಸಲಾಗಿತ್ತು. ಅವರು ಎರಡು ದಿನ ನಡೆದ ಶಾಸನಕವಿಗಳು ವಿಚಾರಸಂಕಿರಣದ ಮಹತ್ವ ಹಾಗೂ ಶಾಸನ ಕ್ಷೇತ್ರದಲ್ಲಿ ಇನ್ನೂ ಆಗಬೇಕಾದ ಕೆಲಸಗಳ ಬಗ್ಗೆ ಮಾತನಾಡಿದರು. ಶ್ರೀ ಜಿ.ಕೆ. ದೇವರಾಜಸ್ವಾಮಿ ಹಾಗೂ ಗುರುಪ್ರಸಾದ ಅವರು ಕಾರ್ಯಕ್ರಮ ಸಂಯೋಜಿಸಿದರು. ಅಕಾದೆಮಿ ಸದಸ್ಯರು, ಇತಿಹಾಸ ಆಸಕ್ತರು, ಶಾಸನತಜ್ಞರು, ವಿದ್ಯಾರ್ಥಿಗಳು ಎರಡೂ ದಿನವೂ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು ಜಿಲ್ಲಾ ಘಟಕವು ದಿನಾಂಕ ೦೧–೦೩–೨೦೧೪ರಂದು ಡಾ. ಇಂದಿರಾ ಹೆಗ್ಗಡೆ, ಅಧ್ಯಕ್ಷರು, ಬೆಂಗಳೂರು ಜಿಲ್ಲಾಘಟಕ ಅವರ ನೇತೃತ್ವದಲ್ಲಿ ಕಾಸರಗೋಡಿಗೆ ಪ್ರವಾಸ ಹಮ್ಮಿಕೊಂಡಿತ್ತು, ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಅವರ ನಿವಾಸಕ್ಕೆ ಭೇಟಿ ನೀಡಿತ್ತು. ಕುಂಬ್ಳೆಕೋಟೆ, ಬೇಕಲ್‌ಕೋಟೆ ಮತ್ತು ಮದೂರು ಗಣಪತಿ ದೇವಸ್ಥಾನ, ಅನಂತಪುರ ದೇವಸ್ಥಾನ ನೋಡಲಾಯಿತು. ೦೨–೩–೨೦೧೪ರಂದು ಮಲ್ಪೆಯ ಸಂತ ಮೇರಿದ್ವೀಪ ಸಂದರ್ಶಿಸಿತು.

ದಿನಾಂಕ: ೩–೮–೨೦೧೪ರಂದು ಕರ್ನಾಟಕ ಇತಿಹಾಸ ಅಕಾದೆಮಿಯ ಘಟಕವು ಡಾ. ಜಯಮ್ಮ ಕರಿಯಣ್ಣ ಅವರ ನೇತೃತ್ವದಲ್ಲಿ ಒಂದು ದಿನದ ಪ್ರವಾಸವನ್ನು ನಾಗಮಂಗಲ, ಮೇಲುಕೋಟೆ, ಮತ್ತು ತೊಣ್ಣೂರುಗಳಿಗೆ ಹಮ್ಮಿಕೊಳ್ಳಲಾಗಿತ್ತು. ಸುಮಾರು ೨೩ ಜನ ಸದಸ್ಯರು ಭಾಗವಹಿಸಿದ್ದು, ಸದರಿ ದಿನದಂದು ಬೆಳಗ್ಗೆ ಬೆಂಗಳೂರಿನಿಂದ ಬಸ್ಸಿನಲ್ಲಿ ಪ್ರಯಾಣ. ಆಯಾಸ್ಥಳಗಳಲ್ಲಿನ ಇತಿಹಾಸ, ವಾಸ್ತುಶೈಲಿ, ಶಿಲ್ಪ ಮುಂತಾದ ಹಾಗೂ ಧಾರ್ಮಿಕ ವಿಚಾರ, ರಾಮಾನುಜಾಚಾರ್ಯರ ಸಿದ್ಧಾಂತ, ಅದರ ವಿಸ್ತರಣೆ, ಭಕ್ತಿಪಂಥ ಮುಂತಾದ ವಿಚಾರಗಳನ್ನು ಡಾ. ದೇವರಕೊಂಡಾರೆಡ್ಡಿ ಅವರು ಸದರಿ ಸ್ಥಳಗಳಲ್ಲಿ ಸದಸ್ಯರಿಗೆ ಮನದಟ್ಟುವಂತೆ ವಿವರಿಸಿದರು. ದೇವಸ್ಥಾನಗಳ ವಾಸ್ತುಶೈಲಿ ಬಗ್ಗೆ ಶ್ರೀ ಪ್ರಭಾಕರ್ ಎಂ.ಎನ್. ಅವರೂ ಆಯಾ ಸ್ಥಳಗಳಲ್ಲಿ ಮಾಹಿತಿ ನೀಡಿದರು.

ಇಪ್ಪತ್ತೇಳನೆಯ ವಾರ್ಷಿಕ ಸಮ್ಮೇಳನ

ಕರ್ನಾಟಕ ಇತಿಹಾಸ ಅಕಾದೆಮಿಯು ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಂಗಳೂರು ಹಾಗೂ ರಾಜ್ಯಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಸಹಯೋಗದೊಂದಿಗೆ ೨೦೧೩, ಸೆಪ್ಟೆಂಬರ್ ೨೧ರಿಂದ ೨೩ರವರೆಗೆ ಮೂರು ದಿನಗಳ ಕಾಲ ಹಮ್ಮಿಕೊಂಡಿದ್ದ ೨೭ನೆಯ ವಾರ್ಷಿಕ ಸಮ್ಮೇಳನಕ್ಕೆ, ದಿ ಮಿಥಿಕ್ ಸೊಸೈಟಿ, ಬೆಂಗಳೂರು ಆಶ್ರಯ ನೀಡಿತ್ತು.

ಉದ್ಘಾಟನಾ ಸಮಾರಂಭ: ದಿನಾಂಕ ೨೧-೯-೨೦೧೩ರ ಬೆಳಗ್ಗೆ ೧೦.೦೦ ಗಂಟೆಗೆ ಶ್ರೀ ಜಿ.ಎಸ್. ಸತ್ಯನಾರಾಯಣ, ಪೂಜ್ಯ ಮಹಾಪೌರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಅವರು ಜ್ಯೋತಿ ಬೆಳಗಿಸಿ ಸಮ್ಮೇಳನವನ್ನು ಉದ್ಘಾಟಿಸಿ ಉದ್ಘಾಟನಾ ಭಾಷಣವನ್ನು ಮಾಡಿದರು.

ಡಾ. ಪಿ.ವಿ. ಕೃಷ್ಣಮೂರ್ತಿ ಹಾಗೂ ಶ್ರೀ ಎಸ್. ರಾಜೇಂದ್ರಪ್ಪ ಸಂಪಾದಿತ "ಇತಿಹಾಸ ದರ್ಶನ" ೨೮ನೆಯ ವಾರ್ಷಿಕ ಸಂಚಿಕೆಯನ್ನು ಡಾ. ಎಂ.ಎಕೆ.ಎಲ್.ಎನ್.ಶಾಸ್ತ್ರಿ, ಅಧ್ಯಕ್ಷರು, ದಿ ಮಿಥಿಕ್ ಸೊಸೈಟಿ, ಬೆಂಗಳೂರು, ಅವರು ಬಿಡುಗಡೆ ಮಾಡಿದರು. ಡಾ. ಕೆ.ವಸಂತಲಕ್ಷ್ಮೀ ಅವರ "ಡಾ. ಸೂರ್ಯನಾಥ ಕಾಮತ್ – ಜೀವನ ಸಾಧನೆ" ಕೃತಿಯನ್ನು ಬಿಡುಗಡೆ ಮಾಡಿ ಮಾತನಾಡಿದರು.

'ಡಾ. ಬಾ.ರಾ. ಗೋಪಾಲ್ ಪ್ರಶಸ್ತಿ'ಯನ್ನು ಶಾಸನತಜ್ಞರಾದ ಡಾ. ಆರ್. ಶೇಷಶಾಸ್ತ್ರಿ, ಅನಂತಪುರ, ಅವರಿಗೆ ಪ್ರಧಾನ ಮಾಡಿದರು. ಈ ಸಂದರ್ಭದಲ್ಲಿ ಶ್ರೀಮತಿ ಎಸ್.ವೈ. ನಿರ್ಮಲಾ ಅವರು ಸನ್ಮಾನಿತರ ಕಿರುಪರಿಚಯವನ್ನು ಸಭೆಗೆ ಮಾಡಿಕೊಟ್ಟರು. ಬೈಸಾನಿ ರುಕ್ಷಣಮ್ಮ ರತ್ನಂಶೆಟ್ಟಿ ನೆನಪಿನಲ್ಲಿ ನೀಡುವ "ಇತಿಹಾಸ ಸಂಸ್ಕೃತಿ ಶ್ರೀ" ಪ್ರಶಸ್ತಿಯನ್ನು ಎರಡನೇ ಬಾರಿಗೆ ಡಾ. ಸೂರ್ಯನಾಥ ಯು. ಕಾಮತ್ ಅವರಿಗೆ ನೀಡಲಾಗಿದ್ದು, ಡಾ. ಸೂರ್ಯನಾಥ ಕಾಮತ್ ಅವರ ಅನಾರೋಗ್ಯ ಕಾರಣ ಈ ದಿನ ಸಂಜೆ ಅವರ ಮನೆಯಲ್ಲಿಯೇ ಅವರಿಗೆ, ಬಿ.ಆರ್.ಆರ್. ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷರಾದ ಶ್ರೀ ಬಿ.ಆರ್. ಸುಬ್ಬಣ್ಣ, ಕಾರ್ಯದರ್ಶಿ ಶ್ರೀ ಅಶೋಕ ಕುಮಾರ್ ಸಹೋದರರು ಪ್ರಧಾನ ಮಾಡಿದರು. ಆ ಸಂದರ್ಭದಲ್ಲಿ ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ, ಶ್ರೀ ಎಂ.ಬಿ. ಪಾಟೀಲ್, ಡಾ. ಎಂ.ಜಿ. ನಾಗರಾಜ್, ಡಾ.ಎಸ್. ನಾಗರಾಜ್, ಡಾ. ಅ.ಸುಂದರ ಮುಂತಾದವರು ಉಪಸ್ಥಿತರಿದ್ದರು. ಉದ್ಘಾಟನಾ ಸಮಾರಂಭದ ಸಂದರ್ಭದಲ್ಲಿ ವೇದಿಕೆಯನ್ನು ಅಲಂಕರಿಸಿದ್ದ ನಿಕಟಪೂರ್ವ ಸಮ್ಮೇಳನಾಧ್ಯಕ್ಷರಾದ ಡಾ. ಎಸ್.ವಿ. ವೆಂಕಟೇಶಯ್ಯ ಅವರು ಮಾತನಾಡಿದರು. ಡಾ. ಎಸ್.ಕೆ. ಜೋಷಿ, ಅವರ ಕಿರುಪರಿಚಯವನ್ನು ಶ್ರೀಮತಿ ಜಿ. ಸೀತಾರಾವ್ ಅವರು ಸಭೆಗೆ ಮಾಡಿಕೊಟ್ಟರು. ಅಕಾದೆಮಿಯ ೨೭ನೆಯ ಸಮ್ಮೇಳನದ ಸರ್ವಾಧ್ಯಕ್ಷ ಪದವಿಯ ಗೌರವಕ್ಕೆ ಪಾತ್ರರಾಗಿದ್ದ ಪುರಾತತ್ವವಿದರು ಮತ್ತು ಸಂಶೋಧಕರೂ ಆದ ಡಾ. ಎಸ್.ಕೆ. ಜೋಷಿ ಅವರು ಕರ್ನಾಟಕದ ಚಾರಿತ್ರಿಕ ಪುರಾತತ್ವ ನೆಲೆ, ಚಾರಿತ್ರಿಕ ವಾಸ್ತುಶಿಲ್ಪ, ಉತ್ಖನನ ಮತ್ತು ಸಂರಕ್ಷಣೆಗಳ ಬಗ್ಗೆ ತಮ್ಮ ಕಾರ್ಯಾನುಭವದೊಂದಿಗೆ ವಿಷಯ ತಿಳಿಸುತ್ತಾ, ಮುಂದೆ ಆಗಬೇಕಾದ ಸಂಶೋಧನೆಗಳ ಬಗ್ಗೆ ಬೆಳಕು ಚೆಲ್ಲಿದರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ಇತಿಹಾಸ ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು ವಹಿಸಿದ್ದರು. ಶ್ರೀ ವಿ. ನಾಗರಾಜ್, ಕಾರ್ಯದರ್ಶಿಗಳು, ದಿ ಮಿಥಿಕ್ ಸೊಸೈಟಿ, ಇವರು ಅತಿಥಿಗಳನ್ನು ಸ್ವಾಗತಿಸಿ ಐತಿಹಾಸಿಕ ಪರಂಪರೆ, ಸಂಶೋಧನೆ ಬಗ್ಗೆ ತಿಳಿಸಿದರು.

ಹಿಂದಿನ ಸಮ್ಮೇಳನದ ೨೦೧೨-೧೩ನೇ ಶೈಕ್ಷಣಿಕ ಸಾಲಿನಲ್ಲಿ ನಂತರ ಸದಸ್ಯರು ಪಿಎಚ್.ಡಿ/ಡಿ.ಲಿಟ್ ಪದವಿ ಪಡೆದು ಗೌರವಕ್ಕೆ ಪಾತ್ರರಾದವರಿಗೆ ಡಾ.ಎಂ.ಕೆ.ಎಲ್.ಎನ್. ಶಾಸ್ತ್ರಿ, ಅಧ್ಯಕ್ಷರು, ದಿ ಮಿಥಿಕ್ ಸೊಸೈಟಿ, ಅವರು ಸನ್ಮಾನಿಸಿದರು. ಕುಮಾರಿ ಕಾವ್ಯ ಅವರ ಪ್ರಾರ್ಥನೆಯೊಂದಿಗೆ ಸಮಾರಂಭವು ಆರಂಭಗೊಂಡು, ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು ಪ್ರಾಸ್ತಾವಿಕ ನುಡಿಗಳೊಂದಿಗೆ ಸ್ವಾಗತ ಕೋರಿದರೆ, ಶ್ರೀ ಜಿ.ಕೆ.ದೇವರಾಜಸ್ವಾಮಿ, ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಇತಿಹಾಸ ಅಕಾದೆಮಿ ಇವರು ವಂದನೆ ಸಲ್ಲಿಸಿದ್ದು, ಕುಮಾರಿ ಕಾವ್ಯ ಅವರು ಕಾರ್ಯಕ್ರಮದ ನಿರ್ವಹಣೆ ಮಾಡಿದರು.

ಪಿಎಚ್‌ಡಿ ಮತ್ತು ಡಿ.ಲಿಟ್ ಪದವಿ ಪಡೆದ ಸನ್ಮಾನಿತರು

ಕ್ರ ಸಂ.	ಪಿಎಚ್.ಡಿ./ಡಿ.ಲಿಟ್ ಪದವಿ ಪಡೆದವರ ಹೆಸರು	ಮಾರ್ಗದರ್ಶಕರ ಹೆಸರು	ವಿಷಯ	ವಿಶ್ವವಿದ್ಯಾಲಯ
೧	ಡಾ. ಕೆಳದಿ ಗುಂಡಾಜೋಯಿಸ್	– – –	ಗೌರವ ಡಾಕ್ಟರ್ ಆಫ್ ಲಿಟ್ರೆಚರ್	ಶ್ರೀ ಕೃಷ್ಣದೇವರಾಯ ವಿ.ವಿ., ಬಳ್ಳಾರಿ,
೨	ಡಾ. ಜಿ.ಎಸ್. ಭೂಸಗೊಂಡ	– – –	ಚಿತ್ರಕಲಾವಿದ ಚಂದ್ರವರ್ಮ ಬಿ.ಆರ್.ಕೋಟ್ಯಾಳಕರ:ಒಂದು ಅಧ್ಯಯನ	ಕನ್ನಡ ವಿ.ವಿ., ಹಂಪಿ
೩	ಡಾ.ಕನ್ಯಾಕುಮಾರ್ ಪಿ.	ಡಾ.ಎಸ್. ನಾಗರತ್ನಮ್ಮ	ಕರ್ನಾಟಕದ ರಾಣಿಯರು ಒಂದು ಸಮಗ್ರ ಅಧ್ಯಯನ	ಬೆಂಗಳೂರು ವಿ.ವಿ.
೪	ಡಾ.ಸಿಸ್ಟರ್ ಅನ್‌ಮೇರಿ	ಡಾ॥ ಮಹಾದೇವಿ	**Christianity in the princely state of Mysore (1831-1974 A.D.)**	ಕರ್ನಾಟಕ ರಾಜ್ಯ ಮುಕ್ತ ವಿ.ವಿ., ಮೈಸೂರು
೫	ಡಾ. ಜಯರಾಮ ಶೆಟ್ಟಿಗಾರೆ	ಡಾ. ಪುಂಡಿ ಕ್ಯಾಗಣಪತಿ ಭಟ್	ಉಡುಪಿ ಸಾಂಸ್ಕೃತಿಕ ಅಧ್ಯಯನ	ಕನ್ನಡ ವಿ.ವಿ., ಹಂಪಿ
೬	ಡಾ. ರಾಕೇಶ್ ಎಚ್.ಎಸ್.	ಡಾ. ಆರ್. ರಾಜಣ್ಣ	"ಮೈಸೂರು ಒಡೆಯರು ಮತ್ತು ಶೃಂಗೇರಿಮಠ ಒಂದು ಸಮಗ್ರ ಅಧ್ಯಯನ ಕ್ರಿ.ಶ. ೧೬೭೩ ರಿಂದ ೧೯೪೭"	ಮೈಸೂರು ವಿ.ವಿ.
೭	ಡಾ.ನರಹರಿ ಕೆ.ಎನ್.	ಡಾ. ಕೆ.ಜಿ. ಭಟ್ ಸೂರಿ	ಕಿತ್ತೂರು ಸಂಸ್ಥಾನದ ಆಡಳಿತ ವಿಭಾಗ ವಿಸ್ತಾರ	ಕನ್ನಡ ವಿ.ವಿ., ಹಂಪಿ
೮	ಡಾ. ಶಿವಕುಮಾರ್ ಎ.	ಡಾ. ಎಸ್. ನಾಗರತ್ನಮ್ಮ	ಕರ್ನಾಟಕದಲ್ಲಿ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳು ಒಂದು ಅಧ್ಯಯನ ೧೯೧೯-೧೯೪೭"	ಬೆಂಗಳೂರು ವಿ.ವಿ.

೯	ಡಾ.ನಂಜುಂಡ ಸ್ವಾಮಿ ಎಸ್.	ಡಾ. ಡಿ.ಟಿ. ಬಸವರಾಜ್	ಮಂಡ್ಯಜಿಲ್ಲೆಯ ಶಾಸನಗಳು ಒಂದು ಅಧ್ಯಯನ	ಕರ್ನಾಟಕ ರಾಜ್ಯ ಮುಕ್ತ ವಿ.ವಿ. ಮೈಸೂರು
೧೦	ಡಾ.ಕುಸುಮಾ ಎನ್.	ಡಾ. ದೇವರಕೊಂಡಾರೆಡ್ಡಿ	ಕೋಲಾರ ಜಿಲ್ಲೆಯ ಕನ್ನಡ ಶಾಸನಗಳ ಅಧ್ಯಯನ	ಕನ್ನಡ ವಿ.ವಿ., ಹಂಪಿ
೧೧	ಡಾ.ಪ್ರಕಾಶ್ ಕೆ.ಪಿ.	ಡಾ. ದೇವರಕೊಂಡಾರೆಡ್ಡಿ	ಕನಕಪುರ ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿ	ಕನ್ನಡ ವಿ.ವಿ. ಹಂಪಿ
೧೨	ಡಾ.ಚಿಕ್ಕಚನ್ನಯ್ಯ	ಡಾ. ಮುನಿರಾಜಪ್ಪ	ಜನಪದ ನೆಲೆಯಲ್ಲಿ ಕರ್ನಾಟಕ ಸಾಂಸ್ಕೃತಿ ಚರಿತ್ರೆ	ಬೆಂಗಳೂರು ವಿ.ವಿ.
೧೩	ಡಾ.ಕೃಷ್ಣೇಗೌಡ ಎಚ್.ಎನ್.	ಡಾ. ಎಸ್.ಸಿ. ಪಾಟೀಲ್	ಕರ್ನಾಟಕ ಬೌದ್ಧ ಚಿತ್ರಕಲೆ	ಕನ್ನಡ ವಿ.ವಿ., ಹಂಪಿ
೧೪	ಡಾ.ಸುನಿತಾ ಟಿ.	ಡಾ. ಎ. ಸೋಮಶೇಖರ್	ಕನ್ನಡ ಕೈಫಿಯತ್ತುಗಳು ಮತ್ತು ಸ್ತ್ರೀಯರು	ಕರ್ನಾಟಕ ರಾಜ್ಯ ಮುಕ್ತ ವಿ.ವಿ. ಮೈಸೂರು
೧೫	ಡಾ.ಪಂಪಾದೇವಿ	– – –	"Forest Administration in Mysore 1832 to 1947"	ಮೈಸೂರು ವಿ.ವಿ.

೨೭ನೆಯ ಸಮ್ಮೇಳನದಲ್ಲಿ ನಡೆದ ಗೋಷ್ಠಿಗಳು: ಮೂರು ದಿನ ನಡೆದ ಈ ಸಮ್ಮೇಳನದಲ್ಲಿ ೨೧-೯-೨೦೧೩ರ ಮಧ್ಯಾಹ್ನ ೨.೦೦ ಗಂಟೆಯಿಂದ ೨೩-೦೯-೨೦೧೩ರ ಸಂಜೆ ೪ ಗಂಟೆವರೆಗೆ ದಿ ಮಿಥಿಕ್ ಸೊಸೈಟಿ, ಬೆಂಗಳೂರು ಇಲ್ಲಿಯ ಎರಡೂ ಸಭಾಂಗಣದಲ್ಲಿ ನಡೆದ ೨೦ ಸಮಾನಾಂತರ ಗೋಷ್ಠಿಗಳಲ್ಲಿ ಒಟ್ಟು ೧೮೦ಕ್ಕೂ ಹೆಚ್ಚು ಪ್ರಬಂಧಗಳು ಮಂಡನೆಯಾದವು.

ಗೋಷ್ಠಿಗಳ ಅಧ್ಯಕ್ಷತೆಯನ್ನು ಕ್ರಮವಾಗಿ ಪ್ರೊ. ಶರಣಬಸಪ್ಪ ಕೋಲ್ಕಾರ, ಡಾ. ಎಚ್.ಎಸ್. ಗೋಪಾಲರಾವ್, ಡಾ. ಕೆ.ಎಸ್. ಕುಮಾರಸ್ವಾಮಿ, ಡಾ. ಎಫ್.ಟಿ. ಹಳ್ಳಿಕೇರಿ, ಡಾ. ಎ.ಕೆ. ಶಾಸ್ತ್ರಿ, ಡಾ. ಸಿ.ಯು. ಮಂಜುನಾಥ್, ಡಾ. ಎಂ.ಜಿ. ಮಂಜುನಾಥ್, ಶ್ರೀ ಎಂ.ಎನ್. ಪ್ರಭಾಕರ, ಡಾ. ಬಿ. ರಾಜಶೇಖರಪ್ಪ, ಡಾ. ಸಿ. ಮಹಾದೇವ, ಡಾ. ಕೆ. ರವೀಂದ್ರನಾಥ್, ಡಾ. ಸ್ಮಿತಾ ಸುರೇಬಾನಕರ್, ಡಾ. ಡಿ.ಎನ್. ಯೋಗೀಶ್ವರಪ್ಪ, ಡಾ. ಸಿ. ವಾಸುದೇವನ್, ಡಾ. ಕೆಳದಿ ವೆಂಕಟೇಶ್ ಜೋಯ್ಸ್, ಡಾ. ಎಚ್. ಚಂದ್ರಶೇಖರ್, ಶ್ರೀ ಎಂ.ಬಿ. ಪಾಟೀಲ್, ಡಾ. ಟಿ.ವಿ. ನಾಗರಾಜ್, ಡಾ. ಎಂ.ಜಿ. ನಾಗರಾಜ್, ಡಾ. ಜಗದೀಶ್ ಅವರುಗಳು ಅಧ್ಯಕ್ಷತೆ ವಹಿಸಿ ಗೋಷ್ಠಿಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

ಗೋಷ್ಠಿಗಳ ನಿರ್ವಹಣೆಯನ್ನು ಶ್ರೀ ರಾ. ಶಶಿಧರ್, ಶ್ರೀ ಎಂ.ಆರ್. ಹೆಗಡೆ, ಶ್ರೀ ಗುರುಪ್ರಸಾದ್, ಡಾ. ನಂದೀಶ್ವರ, ಶ್ರೀ ಆದಪ್ಪ ಪಾಸೋಡಿ, ಡಾ. ಪದ್ಮಜಾ ದೇಸಾಯಿ, ಶ್ರೀ ಮುರುಳಿ ಕೂಡ್ಲೂರು, ಡಾ. ಬಾಲಕೃಷ್ಣ ಹೆಗಡೆ, ಡಾ. ಕನ್ಯಾಕುಮಾರ್, ಶ್ರೀ ಕಾರ್ತಿಕ್, ಡಾ. ಲಲಿತಾಂಬ, ಶ್ರೀಮತಿ ಮಂಜುಳಾ ಆಚಾರಿ, ಡಾ. ಜಯಮ್ಮ ಕರಿಯಣ್ಣ, ಶ್ರೀಮತಿ ಸ್ಮಿತಾರೆಡ್ಡಿ, ಶ್ರೀಮತಿ ಸಂಧ್ಯಾ ವಿ., ಇವರುಗಳ ಗೋಷ್ಠಿಗಳ ನಿರ್ವಹಣೆಯನ್ನು ಮಾಡಿದರು.

ಸಮಾರೋಪ ಸಮಾರಂಭ: ದಿನಾಂಕ ೨೩-೯-೨೦೧೩ರಂದು ಸಂಜೆ ೪.೪೫ ಗಂಟೆಗೆ ಸಮಾರೋಪ ಸಮಾರಂಭವು ಅಕಾದೆಮಿಯ ಸದಸ್ಯರಾದ ಡಾ. ಲಲಿತಾಂಬ ಅವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಿ.ಕೆ. ದೇವರಾಜಸ್ವಾಮಿ ಆರಂಭದಲ್ಲಿ ಸ್ವಾಗತ ಕೋರಿದರು. ಅಧ್ಯಕ್ಷತೆಯನ್ನು ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಾ. ಅ.ಸುಂದರ ಅವರು ಭಾಗವಹಿಸಿ, ಸಮ್ಮೇಳನದ ಪ್ರಬಂಧಗಳ ಮಂಡನೆ, ಯುವಸಂಶೋಧಕರ ಆಸಕ್ತಿ ಬಗ್ಗೆ ತಿಳಿಸುತ್ತಾ ಸಂಶೋಧನಾ ವಿಧಾನದ ಎಚ್ಚರಿಕೆಯನ್ನು ನೀಡಿದರು. ಶ್ರೀ ವಿ. ನಾಗರಾಜ್, ಕಾರ್ಯದರ್ಶಿಗಳು, ದಿ ಮಿಥಿಕ್ ಸೊಸೈಟಿ, ಅವರು ಅಕಾದೆಮಿ ಕಾರ್ಯಕ್ರಮದ ಚಟುವಟಿಕೆಯ ಬಗ್ಗೆ ಹಾಗೂ ಸಂಶೋಧನಾ ಪ್ರಬಂಧಗಳಲ್ಲಿ ಮೂಡಿಬಂದ ಹೊಸ ವಿಚಾರದತ್ತ ಬೆಳಕು ಚೆಲ್ಲಿದರು.

ಸಮ್ಮೇಳನ ನಡೆದ ಬಗ್ಗೆ ತಮ್ಮ ಅನಿಸಿಕೆಗಳನ್ನು ಡಾ. ಶ್ರೀನಿವಾಸ ಮಾನೆ, ಡಾ. ಬಾಲಕೃಷ್ಣ ಹೆಗಡೆ, ಡಾ. ಅನ್ನಪೂರ್ಣ ಗೋಸ್ವಾಳ ಅವರು ತಿಳಿಸಿದರು. ಸಮ್ಮೇಳನದ ಸರ್ವಾಧ್ಯಕ್ಷರಾದ ಡಾ. ಎಸ್.ಕೆ. ಜೋಷಿ ಅವರು ಸಮ್ಮೇಳನ ಯಶಸ್ವಿಯಾಗಿರುವುದಕ್ಕೆ ತಮ್ಮ ಸಂತೋಷವನ್ನು ಹಂಚಿಕೊಂಡರಲ್ಲದೆ, ಎಲ್ಲರೂ ಅಕಾದೆಮಿಯ ಕಾರ್ಯವನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಮುಂದುವರಿಯಲು ಸಹಕರಿಸಬೇಕೆಂದು ತಿಳಿಸಿದರು. ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಅಕಾದೆಮಿಯ ಪ್ರಧಾನ ಕಾರ್ಯದರ್ಶಿ ಶ್ರೀ ಜಿ.ಕೆ. ದೇವರಾಜಸ್ವಾಮಿ ಮಾತನಾಡಿ, ಈ ಸಮ್ಮೇಳನವು ಯಶಸ್ವಿಯಾಗುವಲ್ಲಿ ಸಹಕರಿಸಿರುವ ಸರ್ವರಿಗೂ ವಂದನಾರ್ಪಣೆ ಮಾಡುವುದರೊಂದಿಗೆ ೨೭ನೆಯ ವಾರ್ಷಿಕ ಸಮ್ಮೇಳನವು ಮುಕ್ತಾಯಗೊಂಡಿತು.

ಸರ್ವಸದಸ್ಯರ ಸಭೆಯ ವರದಿ: ೨೦೧೩-೨೦೧೪

ದಿನಾಂಕ ೨೨-೦೯-೨೦೧೩ರ ಭಾನುವಾರದಂದು ಸಂಜೆ ೬-೩೦ ಗಂಟೆಗೆ ಅಕಾದೆಮಿಯ ೨೭ನೆಯ ವಾರ್ಷಿಕ ಸಮ್ಮೇಳನದ ಸಭಾಸ್ಥಾನವಾದ ಬೆಂಗಳೂರಿನ ದಿ ಮಿಥಿಕ್ ಸೊಸೈಟಿ ಶತಮಾನೋತ್ಸವ ಸಭಾಭವನದಲ್ಲಿ, ಆ ಮೊದಲೇ ಸರ್ವಸದಸ್ಯರಿಗೂ ಪತ್ರಮುಖೇನ ತಿಳಿಸಿದ್ದ ಪ್ರಕಾರ ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸರ್ವಸದಸ್ಯರ ಸಭೆಯ ನಡಾವಳಿ ಈ ಕೆಳಕಂಡಂತಿದೆ.

ಸಭೆಯಲ್ಲಿ ೧೫೫ ಸದಸ್ಯರು ಹಾಜರಿದ್ದರು. ಅವರ ಸಹಿ ಇರುವ, ಸರ್ವಸದಸ್ಯರ ಸಹಿ ಪಡೆಯುವ ವಹಿಯಲ್ಲಿ ಸಹಿ ಪಡೆಯಲಾಗಿದೆ.

ಸರ್ವಸದಸ್ಯರ ಸಭೆಯ ತಿಳುವಳಿಕೆ ಪತ್ರವನ್ನು ಅಂಚೆಯ ಮೂಲಕ ಎಲ್ಲ ಸದಸ್ಯರಿಗೂ ಮೊದಲೇ ಕಳುಹಿಸಲಾಗಿತ್ತು. ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿಯವರು ಸಭೆಯನ್ನು ಆರಂಭಿಸಲು ಹಾಜರಿದ್ದ ಸದಸ್ಯರ ಅನುಮತಿ ಕೇಳಿದರು. ಸರ್ವಸದಸ್ಯರ ಸಭೆಯ ಆರಂಭಕ್ಕೆ ಅನುಮೋದನೆ

ನೀಡಬಹುದೆಂಬ ಡಾ. ಎಚ್.ಎಸ್. ಗೋಪಾಲರಾವ್ ಅವರ ಸೂಚನೆಯನ್ನು ಶ್ರೀ ಎಂ.ಎನ್. ಪ್ರಭಾಕರ್ ಅವರು ಅನುಮೋದಿಸಿದರು. ಸರ್ವಸದಸ್ಯರೂ ಸಭೆಯ ಆರಂಭಕ್ಕೆ ಅನುಮೋದನೆ ನೀಡಿದರು.

ಸರ್ವಸದಸ್ಯರ ಸಭೆಯು ಡಾ. ಲಲಿತಾಂಬ ಅವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಕಳೆದ ಸರ್ವಸದಸ್ಯರ ಸಭೆಯ ನಂತರ ಈವರೆಗಿನ ಅವಧಿಯಲ್ಲಿ ನಿಧನರಾಗಿರುವ ಅಕಾದೆಮಿಯ ಸದಸ್ಯರು ಹಾಗೂ ನಾಡಿನ ಹಿರಿಯರಿಗೆ ಸಭೆಯು ಒಂದು ನಿಮಿಷದ ಮೌನಾಚಾರಣೆಯ ಮೂಲಕ ಶ್ರದ್ಧಾಂಜಲಿ ಅರ್ಪಿಸಿತು. ಶ್ರದ್ಧಾಂಜಲಿಗೆ ಪಾತ್ರರಾದವರ ಹೆಸರುಗಳು ಈ ಕೆಳಕಂಡಂತಿವೆ.

ಕರ್ನಾಟಕ ಇತಿಹಾಸ ಅಕಾದೆಮಿಯ ಸದಸ್ಯರು:

ಡಾ. ನರಸಿಂಹನ್ ಅ.ಲ., ಶ್ರೀಮತಿ ಡಾ. ನಿರುಪಮ ಕೆ., ಶ್ರೀ ಬೆಳಗೆರೆ ಕೃಷ್ಣಶಾಸ್ತ್ರಿ, ಬೆಳಗೆರೆ; ಶ್ರೀ ನಾಡಿಗ್ ರಾಘವೇಂದ್ರರಾವ್, ಡಿ. ಚಿಕ್ಕಮಗಳೂರು; ಡಾ. ಕೆ.ವಿ.ರಮೇಶ್, ಮೈಸೂರು, ಶ್ರೀ ಹನುಮೇಶರಾವ್ ಮದರ್‌ಕಲ್, ರಾಯಚೂರು.

ಸದಸ್ಯೇತರರು: ಶ್ರೀ ಶ್ರೀ ಶ್ರೀ ಆದಿಚುಂಚನಗಿರಿ ಮಹಾಸ್ವಾಮಿಗಳು, ಡಾ. ಎಸ್.ಆರ್. ರಾವ್, ಶ್ರೀಮತಿ ಉಷಾ ಕಾಮತ್, ಶ್ರೀ ಡಿ. ಲಿಂಗಯ್ಯ

ಶ್ರದ್ಧಾಂಜಲಿ ಸಲ್ಲಿಕೆಯ ನಂತರ ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರನ್ನು, ಅಕಾದೆಮಿಯ ಪ್ರಧಾನ ಕಾರ್ಯದರ್ಶಿ ಶ್ರೀ ಜಿ.ಕೆ. ದೇವರಾಜಸ್ವಾಮಿ ಅವರು ಸ್ವಾಗತಿಸಿದರು.

೨೦೧೨ನೆಯ ಸಾಲಿನ ವರದಿ

೨೦೧೨ನೆಯ ಸಾಲಿನ ವಾರ್ಷಿಕ ವರದಿಯನ್ನು ಪ್ರಧಾನ ಕಾರ್ಯದರ್ಶಿ ಜಿ.ಕೆ. ದೇವರಾಜಸ್ವಾಮಿ ಮಂಡಿಸಿದರು. ವಾರ್ಷಿಕ ವರದಿಯ ಮುದ್ರಿತ ಪ್ರತಿಗಳನ್ನು ಸಭೆಯ ಆರಂಭದಲ್ಲೇ ಹಾಜರಿದ್ದ ಎಲ್ಲ ಸದಸ್ಯರಿಗೂ ವಿತರಿಸಲಾಗಿತ್ತು. ಅದರ ವಾಚನದ ಅವಶ್ಯಕತೆ ಇದೆಯೆ ಎಂದು ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು ಪ್ರಶ್ನಿಸಿದರು. ವಾಚನದ ಅವಶ್ಯಕತೆ ಇಲ್ಲವೆಂದು ಹಾಜರಿದ್ದ ಸದಸ್ಯರೆಲ್ಲ ಸೂಚಿಸಿದರು.

೨೦೧೨ನೇ ಸಾಲಿನ ವಾರ್ಷಿಕ ವರದಿಯನ್ನು ಸ್ವೀಕರಿಸಬಹುದೆಂಬ ಡಾ. ಮೇಲಾಕಾರ ಅವರ ಸೂಚನೆಯನ್ನು ಡಾ. ಎಫ್.ಟಿ. ಹಳ್ಳಿಕೇರಿ ಅವರು ಅನುಮೋದಿಸಿದರು.

೨೦೧೨ನೆಯ ಸಾಲಿನ ಪರಿಶೋಧಿತ ಲೆಕ್ಕಪತ್ರ ಮಂಡನೆ

೨೦೧೨ನೆಯ ಸಾಲಿನ ವಾರ್ಷಿಕ ವರದಿಯ ಜೊತೆಗೆ ೨೦೧೨ನೆಯ ಸಾಲಿನ ಪರಿಶೋಧಿತ ಲೆಕ್ಕಪತ್ರಗಳ ಮುದ್ರಿತ ಪ್ರತಿಗಳನ್ನು ಸದಸ್ಯರಿಗೆ ನೀಡಲಾಗಿತ್ತು. ಅದನ್ನು ಕೋಶಾಧಿಕಾರಿ ಶ್ರೀ ಎಂ.ಬಿ. ಪಾಟೀಲ್ ಮಂಡಿಸಿದರು.

೨೦೧೨ನೆಯ ಸಾಲಿನ ಪರಿಶೋಧಿತ ಲೆಕ್ಕಪತ್ರಗಳನ್ನು ಒಪ್ಪಬಹುದೆಂಬ ಡಾ. ಡಿ.ಎಂ. ನಾಗರಾಜ್ ಅವರ ಸೂಚನೆಯನ್ನು ಶ್ರೀ ಎಂ.ಎನ್. ಪ್ರಭಾಕರ್ ಅನುಮೋದಿಸಿದರು.

೨೦೧೨ನೆಯ ಸಾಲಿನ ಮುಂಗಡ ಲೆಕ್ಕಪತ್ರಗಳು

೨೦೧೨ನೆಯ ಸಾಲಿನ ಪರಿಶೋಧಿತ ಲೆಕ್ಕಪತ್ರಗಳ ಜೊತೆಗೆ ೨೦೧೩ನೆಯ ಸಾಲಿನ ಮುಂಗಡ ಲೆಕ್ಕಪತ್ರಗಳ ಪ್ರತಿಗಳನ್ನು ಸದಸ್ಯರಿಗೆ ನೀಡಲಾಗಿತ್ತು. ಅದನ್ನು ಕೋಶಾಧಿಕಾರಿ ಶ್ರೀ ಎಂ.ಬಿ. ಪಾಟೀಲ್ ಅವರು ಮಂಡಿಸಿದರು. ಸಂಸ್ಥೆಯ ಸದಸ್ಯತ್ವವನ್ನು ಹೆಚ್ಚಿಸಲು ಎಲ್ಲಾ ಸದಸ್ಯರೂ ಸಹಕರಿಸಬೇಕೆಂದು ಕೋಶಾಧಿಕಾರಿ ಮನವಿ ಮಾಡಿದರು. ಕಾರ್ಪೋರೇಟ್ ಸದಸ್ಯರನ್ನು ಅಕಾದೆಮಿಗೆ ಸೇರಿಸಿಕೊಳ್ಳುವುದರ ಮೂಲಕ ಮೂಲಧನವನ್ನು ಹೆಚ್ಚಿಸಿಕೊಳ್ಳಬಹುದೆಂದೂ, ಮತ್ತು ಅಕಾದೆಮಿಯು ೮೦ಜಿ ಗೆ ಪ್ರಯತ್ನಿಸಿ ಪಡೆದಲ್ಲಿ ಅನುಕೂಲವಾಗುವುದೆಂದೂ ಶ್ರೀಮತಿ ಸೀತಾರಾವ್ ಅವರು ಸೂಚಿಸಿದರು. ಅದಕ್ಕೆ ಸರ್ವಸದಸ್ಯರೂ ಒಪ್ಪಿಗೆ ನೀಡಿದರು. ಕೋಶಾಧಿಕಾರಿ ಶ್ರೀ ಎಂ.ಬಿ. ಪಾಟೀಲ್ ಅವರು ೮೦ಜಿ ಗೆ ಕೂಡಲೇ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

೨೦೧೩ನೇ ಸಾಲಿನ ಮುಂಗಡ ಬಡ್ಜೆಟ್‌ನ್ನು ಒಪ್ಪಬಹುದೆಂದೂ ಡಾ. ಎಸ್.ಜಿ. ಸಾಮಕ್ ಅವರ ಸೂಚನೆಯನ್ನು ಡಾ. ನಂಜುಂಡಸ್ವಾಮಿ ಅವರು ಅನುಮೋದಿಸಿದರು. ಸರ್ವಸದಸ್ಯರ ಅನುಮೋದನೆಯೂ ದೊರೆಯಿತು.

೨೦೧೩ನೇ ಸಾಲಿಗೆ ಲೆಕ್ಕಪತ್ರ ಪರಿಶೋಧಕ (ಆಡಿಟರ್) ನೇಮಕ

ಈವರೆಗೆ ಅಕಾದೆಮಿಯ ಲೆಕ್ಕಪತ್ರಗಳನ್ನು ಪರಿಶೋಧಿಸಿ ಕೊಟ್ಟಿರುವ ಶ್ರೀ ಕೆ.ವಿ. ಆಚಾರ್ಯ (ಖಡಿ ಏ.ಗಿ. ಂಛಿಛಿಚಿಡಿಥಿಚಿ) ಬೆಂಗಳೂರು ಅವರನ್ನೇ ೨೦೧೩ನೆಯ ಸಾಲಿನ ಲೆಕ್ಕಪತ್ರಗಳ ಪರಿಶೋಧನೆಗೂ, ಹಿಂದಿನ ವರ್ಷ ನೀಡಿದ್ದಷ್ಟೇ ಸಂಭಾವನೆಯನ್ನು ನೀಡಿ ನೇಮಿಸಿಕೊಳ್ಳಬಹುದೆಂಬ ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ ಅವರ ಸೂಚನೆಯನ್ನು ಡಾ. ಬಾಲಕೃಷ್ಣ ಹೆಗಡೆ ಅನುಮೋದಿಸಿದರು.

ಠರಾವುಗಳ ಮಂಡನೆ

'ಕರ್ನಾಟಕ ಸರ್ಕಾರದ ದ್ವಿತೀಯ ಪಿ.ಯು.ಸಿ. ಇತಿಹಾಸ ಪಠ್ಯಕ್ರಮದ ಪರಿಷ್ಕರಣೆಗಾಗಿ ಈಗ ಸಮಿತಿಯೊಂದನ್ನು ರಚಿಸಿದ್ದು, ಇದರಲ್ಲಿ ಭಾರತ ಹಾಗೂ ಕರ್ನಾಟಕದ ಇತಿಹಾಸ ಒಳಗೊಂಡಿರುತ್ತದೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ಬನವಾಸಿ ಕದಂಬರ ಶಾಸನವಾದ, ಗುಡ್ನಾಪುರದ ರವಿವರ್ಮನ ಶಾಸನ ಅಥವಾ ಅರತಲೆಯ ಪ್ರಿಯವೃತವರ್ಮನ ಶಾಸನಗಳನ್ನು ಪಠ್ಯಕ್ರಮದಲ್ಲಿ ಸೇರಿಸಬೇಕೆಂದು ಪದವಿಪೂರ್ವ ಶಿಕ್ಷಣ ಇಲಾಖೆಯನ್ನು ಸರ್ವಸದಸ್ಯರ ಈ ಸಭೆಯು ಒತ್ತಾಯಿಸುತ್ತದೆ'.

ಎಂಬ ಠರಾವನ್ನು ಅಂಗೀಕರಿಸಬೇಕೆಂಬ ಡಾ ಎಸ್.ಜಿ. ಸಾಮಕ್ ಅವರ ಸೂಚನೆಯನ್ನು ಡಾ. ಎಚ್.ಎಸ್. ಗೋಪಾಲರಾವ್ ಅನುಮೋದಿಸಿದರು. ಸರ್ವಸದಸ್ಯರು ಇದಕ್ಕೆ ದನಿಗೂಡಿಸಿದರು. ಆಗ ಮಾತನಾಡಿದ ಡಾ. ಅ. ಸುಂದರ ಅವರು ತಾವು ವರದಿ ಪಠ್ಯವನ್ನು ತಯಾರಿಸಿ ಕೊಡುವುದಾಗಿಯೂ ಹಾಗೂ ಕರ್ನಾಟಕ ಇತಿಹಾಸಕ್ಕೆ ಬೇರೆ ಬೇರೆ ವಿಷಯಗಳನ್ನು ಸೇರಿಸುವ ಬಗ್ಗೆ, ವಿದ್ವಾಂಸರು ಮಾಹಿತಿಯನ್ನು ಒದಗಿಸಿದರೆ ಪರಿಷ್ಕರಿಸಿ ಒಂದು ವರದಿ

ಸಿದ್ಧಪಡಿಸುವುದಾಗಿ ತಿಳಿಸಿದರು. ಸರ್ವಸದಸ್ಯರೂ ಇದಕ್ಕೆ ಒಪ್ಪಿಗೆ ಸೂಚಿಸಿದರು. ತದನಂತರ ವರದಿ ಸಿದ್ಧಪಡಿಸಿ ಪದವಿಪೂರ್ವ ಶಿಕ್ಷಣ ಇಲಾಖೆಗೆ ಕಳುಹಿಸಲಾಗುವುದೆಂದು ತಿಳಿಸಿದರು. ಸರ್ವಸದಸ್ಯರ ಸಭೆಯು ಸ್ವಾಗತಿಸಿತು. ಅದರಂತೆ ಠರಾವನ್ನು ಅಂಗೀಕರಿಸಿತು.

ಇತರೆ ವಿಷಯಗಳು

೧. ಅಕಾದೆಮಿಗೆ ದೇಣಿಗೆ ನೀಡಿದವರ ಹೆಸರನ್ನು (ರೂ.೫೦೦/– ಕ್ಕೂ ಹೆಚ್ಚು ನೀಡಿದವರು) ಇತಿಹಾಸ ದರ್ಶನದಲ್ಲಿ ಪ್ರಕಟಿಸಿರುವ ಬಗ್ಗೆ ಕೋಶಾಧಿಕಾರಿ ಶ್ರೀ ಎಂ.ಬಿ. ಪಾಟೀಲ್ ವಿವರಿಸಿದರು ಹಾಗೂ ಟಿ.ಎಚ್.ಎಂ. ಬಸವರಾಜು ಅವರು ಸ್ನೇಹಿತರ ಮೂಲಕ ಅಕಾದೆಮಿಗೆ ಕಳುಹಿಸಿದ ರೂ.೧,೦೦೦/– (ಒಂದು ಸಾವಿರ)ದ ವಿಷಯ ಸಭೆಗೆ ತಿಳಿಸಿದರು.

೨. ಅಕಾದೆಮಿಯ ಬ್ಲಾಗ್‌ನ್ನು ನಿರ್ವಹಿಸುತ್ತಿರುವ ಹಿರಿಯರಾದ ಶ್ರೀ ಶೇಷಗಿರಿರಾವ್ ಅವರು ಈಗಾಗಲೇ ನೂರಾರು ಇತಿಹಾಸ ದರ್ಶನದ ಲೇಖನ, ಇತರೆ ಅಕಾದೆಮಿಯ ಮಾಹಿತಿಗಳನ್ನು ಹಾಕುತ್ತಿದ್ದಾರೆ. ದಿನವೂ ಅಕಾದೆಮಿಯ ಹೊಸ ವಿಷಯಗಳನ್ನು ಬ್ಲಾಗ್ ಮೂಲಕ ತಿಳಿಸುತ್ತಿದ್ದಾರೆ. ಇದಕ್ಕಾಗಿ ಯಾವುದೇ ವೇತನವಿಲ್ಲದೆ ನಿರ್ವಹಿಸುತ್ತಿದ್ದಾರೆ. ಅವರನ್ನು ಅಭಿನಂದಿಸಬೇಕೆಂದು ಡಾ. ಬಾಲಕೃಷ್ಣ ಹೆಗಡೆ ತಿಳಿಸಿದ ವಿಷಯವನ್ನು ಸರ್ವಸದಸ್ಯರೂ ಸಂತೋಷದಿಂದ ಶ್ರೀ ಶೇಷಗಿರಿರಾವ್ ಅವರನ್ನು ಅಭಿನಂದಿಸಿದರು. ಅಕಾದೆಮಿಯ ಸದಸ್ಯರು ಬ್ಲಾಗ್‌ನ್ನು ಹೆಚ್ಚು ಹೆಚ್ಚಾಗಿ ಬಳಸಿಕೊಳ್ಳುವಂತೆ ಶ್ರೀ ಶೇಷಗಿರಿರಾವ್ ಅವರು ಸೂಚಿಸಿ, ಸಭೆಗೆ ವಂದಿಸಿದರು.

೩. ಇತಿಹಾಸ ದರ್ಶನ ಮುದ್ರಣ ಹಾಗೂ ಸಮ್ಮೇಳನಕ್ಕೆ ಭಾರತೀಯ ಅನುಸಂಧಾನ ಪರಿಷತ್ (ಐಅಊಖ)ನ ಆರ್ಥಿಕ ನೆರವು ಪಡೆಯಬಹುದೆಂದು ಶ್ರೀ ಹಂ.ಗು. ರಾಜೇಶ್ ಅವರು ಸೂಚಿಸಿದರು. ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿಯವರು, ಈಗಾಗಲೇ ಸಂಬಂಧಿಸಿದ ಪ್ರಯತ್ನ ಮಾಡಿರುವುದಾಗಿ ಹಾಗೂ ಆರ್ಥಿಕ ನೆರವು ದೊರೆಯುವ ನಿರೀಕ್ಷೆಯಲ್ಲಿದ್ದೇವೆ ಎಂದು ತಿಳಿಸಿದರು.

೪. ಅಕಾದೆಮಿಯ ಸದಸ್ಯರಾದವರು ವಾರ್ಷಿಕ ಸಮ್ಮೇಳನದಿಂದ ಮುಂದಿನ ಸಮ್ಮೇಳನದ ಒಳಗೆ ಕೆಲಸದಿಂದ ನಿವೃತ್ತಿ ಹೊಂದುವವರನ್ನು ಸರ್ವಸದಸ್ಯರ ಸಭೆ/ವಾರ್ಷಿಕ ಸಮ್ಮೇಳನದಲ್ಲಿ ಗೌರವಿಸಬೇಕೆಂದು ಶ್ರಿ ಎಸ್.ಎಸ್. ಹರಳಿ ಅವರಗೆರೆ ಅವರ ಸೂಚನೆಯನ್ನು ಸರ್ವಸದಸ್ಯರೂ ಸ್ವಾಗತಿಸಿದರು.

೫. ೨೭ನೆಯ ವಾರ್ಷಿಕ ಸಮ್ಮೇಳನದ ಸರ್ವಾಧ್ಯಕ್ಷರಾದ ಡಾ. ಎಸ್.ಕೆ. ಜೋಷಿ ಅವರು 'ಕನ್ನಡ ಸಂಸ್ಕೃತಿ ಇಲಾಖೆಯಲ್ಲಿ ಅಕಾದೆಮಿಗೆ ಕಟ್ಟಡವನ್ನು ಕೇಳಬಹುದೆಂದು ಸೂಚಿಸಿದರು. ಇದಕ್ಕೆ ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು, ಕಾರ್ಪೋರೇಷನ್‌ನಲ್ಲಿ ಖಾಲಿ ಜಾಗಕ್ಕಾಗಿ ಪ್ರಯತ್ನ ಮಾಡುತ್ತಿರುವುದಾಗಿ ತಿಳಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಜಿ.ಕೆ. ದೇವರಾಜಸ್ವಾಮಿ ಅವರು ಸರ್ಕಾರಕ್ಕೆ ಪತ್ರ ಬರೆದ ಬಗ್ಗೆ ಮಾಹಿತಿ ನೀಡಿದರು. ಶ್ರೀ ರೇಣುಕಾ ಪ್ರಸಾದ್ ಅವರು, ಪತ್ರ ವ್ಯವಹಾರಕ್ಕಿಂತ, ಸದಸ್ಯರಲ್ಲೇ ಒಂದು ಕಮಿಟಿ ಮಾಡಿ ಸರ್ಕಾರಕ್ಕೆ ಒತ್ತಡ ತರಬೇಕೆಂದು ಸೂಚಿಸಿದರು. ಇದನ್ನು ಸರ್ವಸದಸ್ಯರೂ ಸ್ವಾಗತಿಸಿದರು.

೬. ಅಕಾದೆಮಿಯ ಆರ್ಥಿಕ ಸಹಾಯಕ್ಕೆ, "ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ" ಎಲ್ಲ ಜಿಲ್ಲೆ / ತಾಲ್ಲೂಕುಗಳಲ್ಲಿ ನಡೆಸುವುದು ಮತ್ತು ಇತರೆ ವಿಚಾರಗೋಷ್ಠಿಗಳನ್ನು ನಡೆಸಿದರೆ ಅನುಕೂಲವಾಗುವುದೆಂದು ಶ್ರೀ ರೇಣುಕಾ ಪ್ರಸಾದ್ ತಿಳಿಸಿದರು. ಅದಕ್ಕೆ ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು, ಪರಂಪರೆ ಉಳಿಸಿ ಕಾರ್ಯಕ್ರಮವನ್ನು ಆಯಾ ಜಿಲ್ಲಾ ಘಟಕಗಳು / ಜಿಲ್ಲಾಸದಸ್ಯರು ಆಸಕ್ತಿ ವಹಿಸಿ ಮಾಡಬೇಕೆಂದು ಹಾಗೂ ವರದಿಯನ್ನು ಕಳುಹಿಸುವಂತೆ ಸೂಚಿಸಿದರು. ಕನ್ನಡ ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ "ಕರ್ನಾಟಕದ ಶಾಸನ ಕವಿಗಳು" ಎಂಬ ವಿಚಾರಗೋಷ್ಠಿ ನಡೆಸುವ ಬಗ್ಗೆ ಸಂಸ್ಕೃತಿ ಇಲಾಖೆಯೊಂದಿಗೆ ಪತ್ರವ್ಯವಹಾರ ನಡೆಯುತ್ತಿರುವುದನ್ನು ಮನವರಿಕೆ ಮಾಡಿದರು.

೭. ಅಕಾದೆಮಿಯ ೨೭ನೇ ವಾರ್ಷಿಕ ಸಮ್ಮೇಳನದಲ್ಲಿ (೨೧ ಸೆಪ್ಟೆಂಬರ್, ೨೦೧೩) ವೆಬ್‌ಸೈಟ್‌ನ್ನು ಲೋಕಾರ್ಪಣೆ ಮಾಡಿದೆ. ಅದರಲ್ಲಿ ಇತಿಹಾಸ ದರ್ಶನದ ಆಯ್ದ ಲೇಖನಗಳನ್ನು ಹಾಕಲಾಗುವುದು ಎಂದು ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು ತಿಳಿಸಿದರು. ಆದ್ದರಿಂದ ಇತಿಹಾಸ ದರ್ಶನಕ್ಕೆ, ಮಂಡಿಸಿದ ಪ್ರಬಂಧಗಳ ಲೇಖನವನ್ನು ಪರಿಷ್ಕರಿಸಿ / ವಿದ್ವಾಂಸರಿಂದ ಮಾಹಿತಿ ಪಡೆದು ಕಳುಹಿಸುವಂತೆ ಮನವಿ ಮಾಡಿದರು. ಅಂತರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕದಲ್ಲಿನ ವಿಚಾರ/ವಿಷಯಗಳು ಬೆಳಕಿಗೆ ಬರುವುದರಿಂದ ಸಂಶೋಧನಾ ಲೇಖನಗಳು ಮಹತ್ವವಾದವುಗಳು. ಆದ್ದರಿಂದ ಅತ್ಯುತ್ತಮ ಚಿತ್ರ/ಲೇಖನಗಳನ್ನು ಕಳುಹಿಸುವಂತೆ ಸದಸ್ಯರಿಗೆ ಸೂಚಿಸಿದ್ದನ್ನು ಸರ್ವಸದಸ್ಯರೂ ಒಪ್ಪಿ ಸ್ವಾಗತಿಸಿದರು.

೮. ಕರ್ನಾಟಕ ಇತಿಹಾಸ ಅಕಾದೆಮಿ ವೆಬ್‌ಸೈಟ್ ತಿತಿತಿ.ಇಚಿಡಿಟಿಚಿಣಚಿಞಚಿಣಿಜಿಚಿಚಿಜಿಚಿಜಿಜಿಜಟಥಿ.ಠಡಿರ ನ್ನು ರೂಪಿಸಿದ ಶ್ರೀಮತಿ ಸೀತಾರಾವ್ ಅವರು ಅಕಾದೆಮಿಯ ವೆಬ್‌ಸೈಟ್ ಬಳಸುವ ಬಗ್ಗೆ ವಿವರಿಸಿ, ಹೆಚ್ಚಿನ ಸಂಶೋಧನಾ ಲೇಖನಗಳು, ಛಾಯಚಿತ್ರಗಳನ್ನು ಅಕಾದೆಮಿಯ ಈ–ಮೇಲ್‌ಗೆ ಕಳುಹಿಸಲು ಸೂಚಿಸಿದರು. ಅದನ್ನು ಪರಿಷ್ಕರಿಸಿ ಅವಶ್ಯವಿದ್ದವುಗಳನ್ನು ವೆಬ್‌ಸೈಟ್‌ನಲ್ಲಿ ಲೇಖಕರ ಹೆಸರಿನಲ್ಲಿಯೇ ಬಿತ್ತರಿಸುವಂತೆ ಮಾಡಲಾಗುತ್ತದೆಂದರು. ಇದಕ್ಕೆ ಸರ್ವಸದಸ್ಯರೂ ಒಪ್ಪಿಗೆ ಸೂಚಿಸಿದರು.

೨೮ನೆಯ ವಾರ್ಷಿಕ ಸಮ್ಮೇಳನ

ಸರ್ವಸದಸ್ಯರ ಸಭೆಯಲ್ಲಿ ಅಕಾದೆಮಿಯ ಮುಂದಿನ ಅಂದರೆ ೨೮ನೆಯ ವಾರ್ಷಿಕ ಸಮ್ಮೇಳನಕ್ಕೆ ಶ್ರೀ ರಾಮಚಂದ್ರ ಮಿಟ್ಟಿಮನಿ, ಧಾರವಾಡ; ಡಾ. ಯೋಗೀಶ್ವರಪ್ಪ, ತುಮಕೂರು; ಡಾ. ಟಿ.ವಿ. ನಾಗರಾಜ್, ಕೋಲಾರ; ಡಾ. ಮುರುಗೇಶಿ, ಉಡುಪಿ ಇವರುಗಳು ಸದರಿ ಸ್ಥಳದಲ್ಲಿ ೨೮ನೆಯ ವಾರ್ಷಿಕ ಸಮ್ಮೇಳನ ನಡೆಸಲು ಉತ್ಸುಕರಾಗಿದ್ದು ಆಹ್ವಾನವನ್ನು ನೀಡಿದ್ದಾರೆ. ಸ್ಥಳೀಯ ಕೆಲವು ಸಂಘ–ಸಂಸ್ಥೆಗಳೊಂದಿಗೆ ತಮ್ಮ ಸಂಪರ್ಕವಿದ್ದು ಪ್ರಯತ್ನಿಸುವುದಾಗಿ ಮೇಲ್ಕಂಡ ಸದಸ್ಯರು ತಿಳಿಸಿದರು. ಅಕಾದೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು ಮಾತನಾಡಿ, ಸದರಿ ಸಂಸ್ಥೆಗಳಿಂದ ಮೊದಲಿಗೆ ಪತ್ರ ಎಲ್ಲಿಂದ ಬರುವುದೋ ಅಲ್ಲಿ ೨೮ನೆಯ ವಾರ್ಷಿಕ ಸಮ್ಮೇಳನ ನಡೆಸಬಹುದೆಂದು ತಿಳಿಸಿದರು. ಸರ್ವಸದಸ್ಯರ ಸಭೆಯು ಅದನ್ನು ಅನುಮೋದಿಸಿತು.

ಅಧ್ಯಕ್ಷರ ಭಾಷಣ

ಸರ್ವಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿದ್ದ ಡಾ. ದೇವರಕೊಂಡಾರೆಡ್ಡಿ ಅವರು ಅಕಾದೆಮಿಯ ೨೭ನೆಯ ವಾರ್ಷಿಕ ಸಮ್ಮೇಳನಕ್ಕೆ ಆಶ್ರಯ ನೀಡಿ, ಎಲ್ಲ ಸದಸ್ಯರಿಗೂ ಸಂತೋಷವಾಗುವಂತೆ, ಸಮರ್ಥವಾಗಿ ಸಮ್ಮೇಳನವನ್ನು ನಡೆಸುವಲ್ಲಿ ಸಹಕರಿಸಿರುವ ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು; ದಿ ಮಿಥಿಕ್ ಸೊಸೈಟಿ, ಬೆಂಗಳೂರು, ಇವರಿಗೆ ಗೌರವಪೂರ್ವಕ ಅಭಿನಂದನೆ ಸಲ್ಲಿಸಿದರು. ೨೭ನೆಯ ವಾರ್ಷಿಕ ಸಮ್ಮೇಳನವು ಯಶಸ್ವಿಯಾಗುವಲ್ಲಿ ಸಹಕರಿಸಿದ ಎಲ್ಲಾ ಗಣ್ಯರಿಗೆ ಧನ್ಯವಾದಗಳನ್ನು ಕೋರುತ್ತಾ, ಅಕಾದೆಮಿಯ ಪ್ರಗತಿಗೆ ಸದಸ್ಯರ ಸಹಕಾರವೇ ಮುಖ್ಯ ಎಂದು ತಿಳಿಸುತ್ತಾ ಮುಂದೆಯೂ ಸಹಕಾರ ನೀಡುವಂತೆ ಕೋರಿದರು.

ಕೃತಜ್ಞತೆ

ಅಕಾದೆಮಿಯ ೨೭ನೆಯ ವಾರ್ಷಿಕ ಸಮ್ಮೇಳನಕ್ಕೆ ಆಶ್ರಯ ನೀಡಿ, ಎಲ್ಲ ಸದಸ್ಯರಿಗೂ ಸಂತೋಷವಾಗುವಂತೆ ಅಕಾದೆಮಿಯ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿಕೊಟ್ಟ ದಿ ಮಿಥಿಕ್ ಸೊಸೈಟಿ, ಬೆಂಗಳೂರು; ಅಲ್ಲಿಯ ಪದಾಧಿಕಾರಿಗಳಿಗೂ, ಸಿಬ್ಬಂದಿಗೂ, ಇತಿಹಾಸ ದರ್ಶನ ಮುದ್ರಿಸಿದ ಲಕ್ಷ್ಮೀ ಮುದ್ರಣಾಲಯದವರಿಗೆ, ವಾಗ್ದೇವಿ ಮುದ್ರಣಾಲಯದವರಿಗೆ, ಇತಿಹಾಸ ದರ್ಶನ ಸಂಪಾದಕರಿಗೆ, ಪ್ರಾಯೋಜತ್ವ ನೀಡಿದ ಪ್ರಗತಿ ಕೋ-ಆಪರೇಟಿವ್ ಬ್ಯಾಂಕ್, ಮಲ್ಲೇಶ್ವರ, ಅವರಿಗೆ, ವೆಬ್‌ಸೈಟ್ ತಯಾರಿಸಿದ ಶ್ರೀಮತಿ ಸೀತಾರಾವ್ ಅವರಿಗೆ, ವಸತಿ ವ್ಯವಸ್ಥೆಗೆ ಸಹಕರಿಸಿದ ಶ್ರೀ ಚಂದ್ರಶೇಖರ್, ಶ್ರೀಮತಿ ಸ್ಮಿತಾರೆಡ್ಡಿ, ಹಾಗೂ ಮೊಮೆಂಟೋ ತಯಾರಿಸಿದ ಶ್ರೀ ವೆಂಕಟೇಶ್ ಅವರಿಗೆ ಕೃತಜ್ಞತೆಗಳನ್ನು ಅರ್ಪಿಸಲಾಯಿತು. ೨೭ನೇ ವಾರ್ಷಿಕ ಸಮ್ಮೇಳನದ ಯಶಸ್ಸಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕಾರಣರಾದ ಎಲ್ಲರಿಗೂ ಅಕಾದೆಮಿಯ ಪ್ರಧಾನ ಕಾರ್ಯದರ್ಶಿ ಶ್ರೀ ಜಿ.ಕೆ. ದೇವರಾಜಸ್ವಾಮಿ ಅವರು ಕೃತಜ್ಞತಾಪೂರ್ವಕವಾಗಿ ವಂದನೆ ಸಲ್ಲಿಸಿದರು. ಇದರೊಂದಿಗೆ ಸರ್ವದಸ್ಯರ ಸಭೆಯು ಮುಕ್ತಾಯವಾಯಿತು.

ಕಾರ್ಯಕಾರಿ ಸಮಿತಿ ಸಭೆಗಳು

೨೦೧೩-೧೪ರ ಸಾಲಿನಲ್ಲಿ ಅಕಾದೆಮಿಯ ಕಾರ್ಯಕಾರಿ ಸಮಿತಿಯ ಸಭೆಗಳು ಒಟ್ಟು ೫ ಬಾರಿ ನಡೆದಿದೆ. ಸದಸ್ಯರು ಕಾರ್ಯಕಾರಿ ಸಮಿತಿಯ ಸಭೆಗಳಲ್ಲಿ ಖುದ್ದು ಹಾಜರಿದ್ದು ಅಥವಾ ಪತ್ರದ ಮೂಲಕ ಇಲ್ಲವೇ ದೂರವಾಣಿ, ಎಸ್.ಎಂ.ಎಸ್., ವಿದ್ಯುನ್ಮಾನ ಟಪಾಲುಗಳ ಮೂಲಕ ಸೂಚನೆ, ಒಪ್ಪಿಗೆಗಳನ್ನು ನೀಡಿ ಅಕಾದೆಮಿಯ ಯಶಸ್ಸಿಗೆ ಸಹಕರಿಸುತ್ತಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದಗಳು

ಅಕಾದೆಮಿಯ ಸದಸ್ಯ ಬಲ

ಈ ಸಮ್ಮೇಳನದ ಆರಂಭದ ವೇಳೆಗೆ ಕರ್ನಾಟಕ ಇತಿಹಾಸ ಅಕಾದೆಮಿಯ ಸದಸ್ಯತ್ವ ಬಲ ಈ ಕೆಳಕಂಡಂತಿದೆ.

ಆಜೀವ	ಸಂಸ್ಥೆ	ಒಟ್ಟು
೧೬೨೬	೫೦	೧೬೭೬

ಅಕಾದೆಮಿಯ ಜಿಲ್ಲಾ ಘಟಕಗಳು

ಬೆಂಗಳೂರು ನಗರ ಜಿಲ್ಲಾ ಘಟಕ: ಡಾ. ಇಂದಿರಾ ಹೆಗಡೆ ಅವರ ಅಧ್ಯಕ್ಷತೆಯಲ್ಲಿ ಹಾಗೂ ಶ್ರೀ ಗುರುಪ್ರಸಾದ್ ಕಾರ್ಯದರ್ಶಿತ್ವದಲ್ಲಿ ಬೆಂಗಳೂರು ಘಟಕವು ಕಾರ್ಯ ನಿರ್ವಹಿಸುತ್ತಿದ್ದ ಎಂದಿನಂತೆ ಈ ವರ್ಷವೂ ಕೂಡ ಅದು ನಗರದ ಪ್ರೌಢಶಾಲೆ, ಪದವಿಪೂರ್ವ, ಪದವಿ ಕಾಲೇಜುಗಳಲ್ಲಿ ವ್ಯಾಸಂಗಾರ್ಥಿಗಳಿಗೆ ಪ್ರಬಂಧ ಹಾಗೂ ಭಾಷಣ ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನ ಪಾರಿತೋಷಕಗಳನ್ನು ನೀಡಿ ಪ್ರೋತ್ಸಾಹಿಸುತ್ತಿದೆ. ಈ ಸ್ಪರ್ಧೆಗಳಿಗಾಗಿ ಡಾ. ಜಿ.ಎಸ್. ದೀಕ್ಷಿತ್, ಡಾ. ಸೂರ್ಯನಾಥ ಕಾಮತ್, ಶ್ರೀ ಅಂಗದ, ಶ್ರೀಮತಿ ಎ.ವಿ. ವರಮಹಾಲಕ್ಷ್ಮಿ ಮತ್ತು ಶ್ರೀ ಬಿ.ರಾಮಣ್ಣ ಹಾಗೂ ಶ್ರೀಮತಿ ಇಂದಿರಾ ಇವರ ಹೆಸರಿನಲ್ಲಿ ಪರ್ಯಾಯ ಪಾರಿತೋಷಕಗಳನ್ನು ನೀಡಲಾಗುತ್ತಿದೆ. ಶ್ರೀ ದಯಾನಂದ ಸಾಗರ್ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಶ್ರೀ ಗಾಳಿಸ್ವಾಮಿ ಅವರು ಶ್ರೀ ಅಂಗದ್ ಸ್ಮಾರಕ ಪರ್ಯಾಯ ಪಾರಿತೋಷಕ ಪ್ರಾಯೋಜಿಸಿ ಸಹಕರಿಸುತ್ತಿದ್ದಾರೆ.

೨೦೧೨-೧೩ ಹಾಗೂ ೨೦೧೩-೧೪ಕ್ಕೆ ಹೊಸ ಕಾರ್ಯಕಾರಿ ಸಮಿತಿಯನ್ನು ಬೆಂಗಳೂರು ಘಟಕವು ರಚಿಸಿಕೊಂಡಿದ್ದು, ಡಾ. ಇಂದಿರಾ ಹೆಗಡೆ ಅಧ್ಯಕ್ಷರಾಗಿ, ಡಾ. ಪಾಂಡುಕುಮಾರ್ ಮತ್ತು ಶ್ರೀ ವೇಮಗಲ್ ಸೋಮಶೇಖರ್ ಅವರು ಉಪಾಧ್ಯಕ್ಷರಾಗಿ, ಶ್ರೀ ಗುರುಪ್ರಸಾದ್, ಶ್ರೀಮತಿ ಸೀತಾರಾವ್ ಅವರು ಕಾರ್ಯದರ್ಶಿಗಳಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ. ಅನಂತಪದ್ಮನಾಭ, ಗುಜ್ಜಾರಪ್ಪ, ಆದಪ್ಪ ಪಾಸೋಡಿ, ಚಂದ್ರಶೇಖರ್, ವೆಂಕಟೇಶ್‌ರವರು ಕಾರ್ಯಕಾರಿ ಸಮಿತಿಯ ಸದಸ್ಯರಿದ್ದು, ಘಟಕವು ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸುತ್ತಿದೆ.

ಬೆಂಗಳೂರು ಜಿಲ್ಲಾ ಘಟಕವು "ಐತಿಹಾಸಿಕ ಪರಂಪರೆ ಉಳಿಸಿ" ಆಂದೋಲನವನ್ನು ಹೆಚ್ಚು ಪರಿಣಾಮಕಾರಿಯಾಗಿಸಲು ವಿಶೇಷವಾಗಿ ಆಸ್ಥೆವಹಿಸಿ ಅಂತರ ಪ್ರೌಢಶಾಲೆ, ಅಂತರ ಕಾಲೇಜು ಪ್ರಬಂಧ ಮತ್ತು ಭಾಷಣ ಸ್ಪರ್ಧೆ ಕುರಿತಾಗಿ ಬೆಂಗಳೂರಿನ ಶಾಲಾ ಕಾಲೇಜುಗಳಲ್ಲಿ ಪ್ರಚಾರ ನೀಡಿತು. ಸ್ಪರ್ಧಾ ಕಾರ್ಯಕ್ರಮಗಳು ಬೆಂಗಳೂರಿನ ನ್ಯಾಷನಲ್ ಕಾಲೇಜು, ಬಸವನಗುಡಿಯಲ್ಲಿ ದಿನಾಂಕ ೨೯-೭-೨೦೧೨ರಂದು ನಡೆಯಿತು. ಇದೇ ಕಾಲೇಜಿನಲ್ಲಿ ೧೬ನೇ ಆಗಸ್ಟ್ ೨೦೧೩ರಂದು 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮದಲ್ಲಿ ಸ್ಪರ್ಧಾ ವಿಜೇತರಿಗೆ ಬಹುಮಾನಗಳನ್ನು ನೀಡಲಾಯಿತು.

ಹೊಸಪೇಟೆ ತಾಲ್ಲೂಕು ಘಟಕ: ಡಾ. ಕೆ.ಎಂ. ಸುರೇಶ್, ಡಾ. ಎಂ. ಕೊಟ್ರೇಶ್, ಡಾ. ಟಿ. ಮಂಜುನಾಥ, ಡಾ. ಕೆ. ರವೀಂದ್ರನಾಥ ಮತ್ತಿತರ ಸ್ನೇಹಿತರೊಡಗೂಡಿ ಬೇರೆ ಬೇರೆ ಸ್ಥಳಗಳಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹಗಳನ್ನು ಎಂದಿನಂತೆ ನಡೆಸಿಕೊಂಡು ಬರುತ್ತಿದೆ.

ಉಡುಪಿ ಜಿಲ್ಲಾ ಘಟಕ: ಡಾ. ಜಗದೀಶ್ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಸ್ಥಳೀಯವಾಗಿ ಶಾಲಾಕಾಲೇಜುಗಳಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಗಳನ್ನು ಆಯೋಜಿಸಿ ಐತಿಹಾಸಿಕ ಅರಿವನ್ನು ಜಾಗೃತಗೊಳಿಸುವ ಕೆಲಸವನ್ನು ಮಾಡುತ್ತಿದೆ.

ಶಿವಮೊಗ್ಗ ಜಿಲ್ಲಾ ಘಟಕ: ಬೆಕ್ಕಿನ ಕಲ್ಮಠದ ಸ್ವಾಮೀಜಿಯವರ ಪೋಷಣೆಯಲ್ಲಿ ಶ್ರೀ ಎಚ್.ಎಂ. ಚಂದ್ರಶೇಖರಪ್ಪ (ಅಧ್ಯಕ್ಷರು), ಶ್ರೀ ಜಯದೇವಪ್ಪ ಜೈನಕೇರಿ (ಪ್ರಧಾನ ಕಾರ್ಯದರ್ಶಿ), ಡಾ. ಎಸ್.ಜಿ. ಸಾಮಕ್, ಡಾ. ಬಿ. ಜಗದೀಶ, ಡಾ. ಕೆಳದಿ ವೆಂಕಟೇಶ್ ಜೋಯಿಸ್, ಡಾ. ಕೆಳದಿ ಗುಂಡಾ

ಜೋಯಿಸ್. ಡಾ. ಜಿ.ಪಿ. ಕಲ್ಲಾಪುರ ಮುಂತಾದವರ ಸಹಭಾಗಿತ್ವದಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಗಳ ಜೊತೆಗೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ.

ಮೈಸೂರು ಜಿಲ್ಲಾಘಟಕ (ಮಂಡ್ಯ ಜಿಲ್ಲೆಯೂ ಸೇರಿ): ಈ ಘಟಕವು ಕಾರ್ಯಾರಂಭ ಮಾಡಿದ್ದು, ಪ್ರೊ. ಚಂದ್ರರಾಜೇ ಅರಸ್ ಅವರ ಗೌರವಾಧ್ಯಕ್ಷತೆಯಲ್ಲಿ ಡಾ. ಎಚ್.ಎಸ್. ಉಷಾರಾಣಿ (ಕಾರ್ಯಾಧ್ಯಕ್ಷೆ), ಶ್ರೀ ತೈಲೂರು ವೆಂಕಟಕೃಷ್ಣ, ಡಾ. ಬಿ.ಪಿ, ಇಂದಿರಾ, ಡಾ. ಎಸ್. ಸದಾಶಿವ (ಉಪಾಧ್ಯಕ್ಷ), ಡಾ. ಬಿ.ವಿ. ಸುಧಾಮಣಿ (ಪ್ರಧಾನ ಕಾರ್ಯದರ್ಶಿ), ಶ್ರೀ ಎಚ್.ಡಿ. ಹರೀಶ್ ಹಾಗೂ ಪ್ರೊ. ನಯಿಂ–ಉರ್–ರೆಹಮಾನ್ (ಸಹ ಕಾರ್ಯದರ್ಶಿಗಳು) ಹಾಗೂ ಶ್ರೀಮತಿ ಬಿ.ಎಸ್. ಸುಭದ್ರ ಖಜಾಂಚಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಇತಿಹಾಸ ಕಾರ್ಯಾಗಾರ ಮಾಸಿಕ ಉಪನ್ಯಾಸ, ಐತಿಹಾಸಿಕ ಸ್ಥಳಗಳಿಗೆ ಪ್ರವಾಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಉಪನ್ಯಾಸ, ಐತಿಹಾಸಿಕ ಸ್ಥಳಗಳಿಗೆ ಪ್ರವಾಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಚಾರಿತ್ರಿಕ ಅರಿವನ್ನು ಮೂಡಿಸಲು ಶ್ರಮಿಸುತ್ತಿದೆ.

ಬೆಳಗಾವಿ ಜಿಲ್ಲಾ ಘಟಕ: ಡಾ. ಸ್ಮಿತಾ ಸುರೇಬಾನಕರ್, ಶ್ರೀ ಬಿ.ಐ. ಚಿನಗೋಡಿ, ಡಾ. ಎಚ್.ಬಿ. ಕೋಲಕಾರ, ಡಾ. ಬಿ.ಆರ್. ಹಂದೂರು, ಶ್ರೀ ಮಂಜುನಾಥ ಹದ್ಲಿ ಮುಂತಾದವರ ನೇತೃತ್ವ ಮತ್ತು ಚಚಡಿಯ ಸರ್ಕಾರ ವ್ಹಿ.ಜಿ.ದೇಸಾಯಿ ಫೌಂಡೇಷನ್ ಅಧ್ಯಕ್ಷ ಶ್ರೀ ನಾಗರಾಜ ಈಶಪ್ಪನಾಯಕ ದೇಸಾಯಿ ಅವರ ಸಹಕಾರದೊಂದಿಗೆ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ.

ಕೃತಜ್ಞತೆಗಳು

ಕರ್ನಾಟಕ ಇತಿಹಾಸ ಅಕಾದೆಮಿಯನ್ನು ಸೋದರ ಸಂಸ್ಥೆ ಎಂಬಂತೆ ಪರಿಗಣಿಸಿ ಸಹಕರಿಸುತ್ತಾ ಬಂದಿರುವ ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಮತ್ತು ವಸ್ತು ಸಂಗ್ರಹಾಲಯ ನಿರ್ದೇಶನಾಲಯಗ ನಿರ್ದೇಶಕರು, ಅಧಿಕಾರಿಗಳು ಹಾಗೂ ಸಿಬ್ಬಂದಿ, ಅಕಾದೆಮಿಯ ವಾರ್ಷಿಕ ಸಮ್ಮೇಳನ ಸಂದರ್ಭದಲ್ಲಿ ವಸ್ತುಪ್ರದರ್ಶನ ಏರ್ಪಡಿಸಿ, ಸಹಕರಿಸುತ್ತಿರುವ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗ, ೨೦೧೩ರ "ಐತಿಹಾಸಿಕ ಪರಂಪರೆ ಉಳಿಸಿ' ಸಪ್ತಾಹ ಕಾರ್ಯಕ್ರಮದ ಉದ್ಘಾಟನಾ ಸಮಾರಂಭಕ್ಕೆ ಆಶ್ರಯನೀಡಿ ಸಹಕರಿಸಿರುವ ಬೆಂಗಳೂರಿನ ನ್ಯಾಷನಲ್ ಕಾಲೇಜು, ಬಸವನಗುಡಿಯ ಆಡಳಿತ ಮಂಡಳಿ, ಅಧಿಕಾರಿ ಮತ್ತು ಸಿಬ್ಬಂದಿ ವರ್ಗ, ಬೆಂಗಳೂರಿನ ದಿ ಮಿಥಿಕ್ ಸೊಸೈಟಿಯ ಪದಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ, ಬಿ.ಎಂ.ಶ್ರೀ. ಪ್ರತಿಷ್ಠಾನದ ಪದಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ, ಶ್ರೀ ಬೈಸಾಕಿ ರುಕ್ಮಣಮ್ಮ ರತ್ನಂಶೆಟ್ಟಿ ಕುಟುಂಬದ ಸೇವಾ ಟ್ರಸ್ಟ್‌ನ ಶ್ರೀ ಅಶೋಕ ಕುಮಾರ್, ವಾಗ್ದೇವಿ ಮುದ್ರಣಾಲಯದ ಶ್ರೀ ಪ್ರಭು ಮತ್ತು ಸಿಬ್ಬಂದಿ ವರ್ಗ, ಶ್ರೀ ದಯಾನಂದ ಸಾಗರ್ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಶ್ರೀ ಗಾಳಿಸ್ವಾಮಿ, ಡಾ. ಬಾ.ರಾ.ಗೋಪಾಲ ಪ್ರಶಸ್ತಿಗೆ ದತ್ತಿ ನೀಡಿರುವ ಡಾ. ಬಾ.ರಾ.ಗೋಪಾಲ್ ಕುಟುಂಬ ವರ್ಗ, ಸಮ್ಮೇಳನಾಧ್ಯಕ್ಷರ ಗೌರವಸ್ಮರಣ ಫಲಕವನ್ನು ಪ್ರಾಯೋಜಿಸಿರುವ ಶ್ರೀ ಕೆ. ಅಭಿಶಂಕರ ಕುಟುಂಬ ವರ್ಗ, 'ಇತಿಹಾಸ ಸಂಸ್ಕೃತಿಶ್ರೀ" ಪ್ರಶಸ್ತಿಯನ್ನು ಪ್ರಾಯೋಜಿಸುತ್ತಿರುವ ಬೈಸಾನಿ ಶ್ರೀಮತಿ ರುಕ್ಮಣಮ್ಮ ಶ್ರೀ ರತ್ನಂಶೆಟ್ಟಿ ಟ್ರಸ್ಟಿನವರಿಗೆ, ಡಾ. ಬಾ.ರಾ. ಗೋಪಾಲ್ ಪ್ರಶಸ್ತಿಯ ಸ್ಮರಣಫಲಕವನ್ನು ಪ್ರಾಯೋಜಿಸುತ್ತಾ ಬಂದಿರುವ ಶ್ರೀ ವೇಮಗಲ್ ಸೋಮಶೇಖರ್, ಇತಿಹಾಸ ದರ್ಶನ ವಾರ್ಷಿಕ ಸಂಚಿಕೆಯ ಮುದ್ರಣಕ್ಕೆ ಆಶೀರ್ವಾದಪೂರ್ವಕವಾಗಿ ಪ್ರತಿ ವರ್ಷದಂತೆ ಈ ವರ್ಷವೂ ರೂ.೨೫,೦೦೦/- (ಇಪ್ಪತ್ತೈದು ಸಾವಿರ ರೂ.) ನೆರವು ನೀಡಿರುವ ಬಾಳೆಹೊನ್ನೂರಿನ ಶ್ರೀಮದ್ರಂಭಾಪುರಿ ಮಹಾಸಂಸ್ಥಾನದ ಜ.ಶ್ರೀ.ಪ್ರಸನ್ನರೇಣುಕ ವೀರಸೋಮೇಶ್ವರ ರಾಜದೇಶೀಕೇಂದ್ರಶಿವಾಚಾರ್ಯ ಮಹಾಸ್ವಾಮೀಜಿ ಅವರಿಗೆ ಅಕಾದೆಮಿಯ ೨೭ನೆಯ ವಾರ್ಷಿಕ ಸಮ್ಮೇಳನಕ್ಕೆ ಆಶ್ರಯ ನೀಡಿ ಸಮ್ಮೇಳನದ ಯಶಸ್ವಿಗೆ ಕಾರಣರಾದ ದಿ ಮಿಥಿಕ್ ಸೊಸೈಟಿ, ಬೆಂಗಳೂರು, ಇದರ ಅಧ್ಯಕ್ಷರಾರ ಡಾ. ಎಂ.ಕೆ.ಎಲ್.ಎನ್. ಶಾಸ್ತ್ರಿ ಹಾಗೂ ಕಾರ್ಯದರ್ಶಿಗಳಾದ ಶ್ರೀ ವಿ. ನಾಗರಾಜ್ ಅವರಿಗೆ, ಇತರ ಕಾರ್ಯಕರ್ತರಿಗೂ ಅಕಾದೆಮಿಯು ಅಭಾರಿಯಾಗಿದೆ. ಇತಿಹಾಸ ದರ್ಶನ ಸಂಚಿಕೆಯ ೨೯ನೆಯ ಸಂಪುಟವನ್ನು ಸಂಪಾದಿಸಿ ಕೊಟ್ಟಿರುವ ಸಂಪಾದಕರಾದ ಡಾ. ದೇವರಕೊಂಡಾರೆಡ್ಡಿ, ಶ್ರೀ ಜಿ.ಕೆ. ದೇವರಾಜಸ್ವಾಮಿ ಅವರಿಗೆ ಸಂಪುಟವನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಲಕ್ಷ್ಮೀ ಮುದ್ರಣಾಲಯದ ಮಾಲೀಕರು ಹಾಗೂ ಸಿಬ್ಬಂದಿ ವರ್ಗದವರಿಗೆ ಅಕಾದೆಮಿಯು ಅಭಾರಿಯಾಗಿದೆ.

ಕಾರ್ಯಕಾರಿ ಸಮಿತಿಯ ಅನುಮತಿ ಮೇರೆಗೆ

ಗೌರವಾಧ್ಯಕ್ಷರು ಡಾ. ಸೂರ್ಯನಾಥ ಯು. ಕಾಮತ್

ಡಾ. ದೇವರಕೊಂಡಾರೆಡ್ಡಿ
ಅಧ್ಯಕ್ಷರು

ಡಾ. ಎಂ.ಜಿ. ನಾಗರಾಜ್
ಡಾ. ಬಿ. ರಾಜಶೇಖರಪ್ಪ
ಉಪಾಧ್ಯಕ್ಷರುಗಳು

ಶ್ರೀ ಜಿ.ಕೆ. ದೇವರಾಜಸ್ವಾಮಿ
ಪ್ರಧಾನ ಕಾರ್ಯದರ್ಶಿ

ಶ್ರೀ ಎಂ.ಬಿ. ಪಾಟೀಲ
ಕೋಶಾಧಿಕಾರಿ

ಡಾ. ಪಿ.ವಿ. ಕೃಷ್ಣಮೂರ್ತಿ
ಡಾ. ಜಯಮ್ಮ ಹೆಚ್. ಕರಿಯಣ್ಣ
ಕಾರ್ಯದರ್ಶಿಗಳು

ದಿನಾಂಕ ೦೧-೦೪-೨೦೧೪ ರಿಂದ ೮-೯-೨೦೧೪ರವರೆಗೆ

ದಾನಿಗಳು

೧.	ಶ್ರೀ ರಂಭಾಪುರಿ ಮಠ, ಬಾಳೆಹೊನ್ನೂರು	೨೫,೦೦೦.೦೦
೨.	ಡಾ. ದೇವರಕೊಂಡಾರೆಡ್ಡಿ, ಬೆಂಗಳೂರು	೨೫,೦೦೦.೦೦
೩.	ಶ್ರೀ ಕೆ.ಎಸ್. ಮಂಜು ಲಕ್ಷ್ಮೀ ಮುದ್ರಣಾಲಯ, ಬೆಂ.	೧೦,೦೦೦.೦೦
೪.	ಶ್ರೀ ಶ್ರೀನಿವಾಸ ಟಿ. ದಾಸರಹಳ್ಳೀ, ಬೆಂಗಳೂರು	೫,೦೦೦.೦೦
೫.	ಶ್ರೀ ಶಾಂತರಾಮಪ್ರಭು, ಬೆಂಗಳೂರು	೫,೦೦೦.೦೦
		೭೦,೦೦೦.೦೦

ದತ್ತಿನಿಧಿ

೧.	ಶ್ರೀ ಜಿ. ರಾಜನ್, ತುಮಕೂರು (ಪಿಎಚ್.ಡಿ./ಡಿಲಿಟ್ ಪದವಿ ಪಡೆದ ಸದಸ್ಯರಿಗೆ ಪ್ರೋತ್ಸಾಹಧನ)	೫೦,೦೦೦.೦೦

ACHARYA & Co.,
CHARTERED ACCOUNTANTS

"RAJALAKSHMI"
No. 107, Diagonal Road
Vishweshwarapuram,
BANGALORE - 560 004
Telephone : 26509606, 22422714
e-mail : headoffice@acharya.co

AUDITORS' REPORT

TO THE

MEMBERS OF KARNATAKA ITHIHASA ACADEMY (R)

We have audited the attached Balance Sheet of Karnataka Ithihasa Academy (R) as at 31st March, 2014 and the Income and Expenditure Account for the year ended on that date annexed thereto and report that :

1. We have obtained all the information and explanations which to the best of our knowledge and belief were necessary for the purpose of our audit.

2. The Balance Sheet and the Income and Expenditure Account dealt with by this report are in agreement with the Books of Accounts.

3. In our opinion and to the best of our information and according to the explanations given to us, the accounts give a true and fair view :

   i. in the case of Balance Sheet of the State of Affairs of the Academy as at 31st March, 2014 and

   ii. in the case of Income and Expenditure Account of the Excess of Expenditure over Income for the year ended on that date.

For ACHARYA & Co.,
Chartered Accountants,

ACHARYA & CO. ★ CHARTERED ACCOUNTANTS ★ BANGALORE-4

(CA K. V. ACHARYA)
Partner
M.No. 013020

31.07.2014
BANGALORE.

Branch : 'Sri Krishna', 13/3, Pampamahakavi Road, Shankarpuram, Bangalore - 560 004.
Telephone : 26618897, 41692593, e-mail : branchoffice@acharya.co

KARNATAKA ITHIHASA ACADEMY (REGD) : BANGALORE - 560 019.

RECEIPTS & PAYMENTS FOR THE YEAR ENDED 31ST MARCH, 2014

PREVIOUS YEAR	RECEIPTS		AMOUNT	PREVIOUS YEAR	PAYMENTS	AMOUNT
(1)	(2)		(3)	(4)	(5)	(6)
Rs.			Rs.	Rs.		Rs.
	To Opening Balance :-					
3,332	" Cash on hand	9,495		13,50,000	By Invested in FD with Pragathi Co-op Bank	2,50,000
	" Cash at Syndicate Bank					
9,687	SB A/c. No. 9765	43,200		1,58,909	" Printing of Ithihasa Darshana Vol XXVIII	2,03,193
	" Cash at Pragathi Co-op Bank					
1,620	SB A/c. No. 6609	1,685	54,380		" Save Historical Heritage Week-	
				1,05,841	Celebrations Expenses	1,00,490
	" Grant Received from State Govt.			-	" Kannada Shasana Kavigalu Sple. Prog.	1,01,349
3,00,000	(for special programmes)		3,00,000			
23,000	" Delegates fee		66,200	99,796	" Annual Conference & AGM Expenses	2,19,233
66,000	" Life Membership fees		86,000	30,000	" Office Maintenance	24,000
100	" Annual Membership		-		" Filing of Annual Returns and	
	" Fixed Deposit with Pragathi Co-op			3,365	Scanning Charges	2,000
12,00,000	Bank -Pre-Matured		2,00,000	16,365	" Conveyance & Travelling	16,104
16,03,739	C/f		7,06,580	17,64,276	C/f	9,16,369

(1)	(2)	(3)	(4)	(5)		(6)
Rs.		Rs.	Rs.			Rs.
16,03,739	B/f	7,06,580	17,64,276	B/f		9,16,369
	To Donations		2,740	" Printing & Stationery		7,318
46,001	" Corpus Donations	1,47,566	1,444	" Postage & Telegrams		1,815
35,722	" Sale of Academy Publications	5,345	6,742	" Audit fees		11,236
1,53,622	" Interest on Bank FD A/cs.	1,36,825	273	" Bank Charges		250
1,882	" Interest on Bank SB A/cs.	2,685	4,820	" Miscellaneous		1,410
-	" Miscellaneous Receipts	7,110	3,755	" Interest on Loan		-
-	" Dividend from Pragathi Co-op Bank Ltd.	145	52,517	" Book Printing Charges		-
49,981	" Reimbursement of Expenses	-		By Closing Balance :-		
	(Printing of Subramanya Inscription)		9,495	" Cash on Hand	3,793	
				" Cash at Syndicate Bank		
			43,200	SB A/c. 9765	62,166	
				" Cash at Pragathi Co-op Bank		
			1,685	SB A/c. 6609	1,900	67,859
18,90,947	TOTAL	10,06,257	18,90,947	TOTAL		10,06,257

Previous year's figures have been re-grouped wherever necessary and rounded off to the nearest rupee.

For Acharya & Co.,
Chartered Accountants

(PRESIDENT)
(DR. DEVARAKONDAREDDY)

(GEN. SECRETARY)
(G. K DEVARAJASWAMY)

(TREASURER)
(M. B. PATIL)

(CA K. V. Acharya)
Partner
M. No. 013020

ACHARYA & CO. * CHARTERED ACCOUNTANTS * BANGALORE-4

BANGALORE
31.07.2014

KARNATAKA ITHIHASA ACADEMY (REGD.) : BANGALORE - 560 019

INCOME AND EXPENDITURE ACCOUNT FOR THE YEAR ENDED 31.03.2014

PREVIOUS YEAR	EXPENDITURE		AMOUNT	PREVIOUS YEAR	INCOME		AMOUNT
Rs.			Rs.	Rs.			Rs.
	To Printing of Ithihasa Darshana				By Grants Received from State Govt.		
1,58,909	Vol.XXVIII	2,03,193			1) Printing of Ithihasa Darshana		
	" Save Historical Heritage week			1,00,000	Vol.XXVIII	1,00,000	
1,05,841	celebration expenses	1,00,490	3,03,683		2) Save Historical Heritage week		
				1,00,000	celebrations	1,00,000	
-	To Kannada Shasan Kavigalu - Special Prog.		1,01,349	1,00,000	3) XXVII Annual Conference	1,00,000	3,00,000
16,365	" Conveyance & Travelling		16,104	35,722	By Sale of Academy Publications		5,345
99,796	" XXVII Annual Conference and AGM Exp.		2,19,233	23,000	" Delegate Fees		66,200
24,000	" Office Maintenance (Per Sch)		24,000	1,53,622	" Interest received on Bank FD A/cs. (Per Sch)		1,36,825
3,365	" Filing of Annual Returns		2,000	-	" Dividends (Pragathi Co-op. Bank Ltd.)		145
1,444	" Postage & Telegrams		1,815	1,882	" Interest from Bank SB A/cs.	(Per Sch)	2,685
6,742	" Audit fees		11,236	-	" Miscellaneous Receipts		7,110
2,740	" Printing & Stationery		7,318	100	" Annual Membership Fees		-
3,755	" Interest on Bank Loan		-	-	" Excess of Expenditure over Income		1,80,745
273	" Bank charges		250				
2,536	" Book Printing Charges		-				
4,820	" Miscellaneous (Per Sch)		11,904				
182	" Depreciation		164				
83,558	" Excess of Income over Expenditure for the year transferred to Balance Sheet		-				
5,14,326	TOTAL		6,99,055	5,14,326	TOTAL		6,99,055

Previous year's figures have been re-grouped wherever necessary and rounded off to the nearest rupee.

Bangalore,
31.07.2014

(PRESIDENT)
(DR. DEVARAKONDAREDDY)

(GEN. SECRETARY)
(G. K DEVARAJASWAMY)

(TREASURER)
(M. B. PATIL)

For ACHARYA & Co.,
Chartered Accountants,

(CA K. V. ACHARYA)
Partner
M. No. 013020

ACHARYA & CO. BANGALORE-4 CHARTERED ACCOUNTANTS

KARNATAKA ITHIHASA ACADEMY (REGD.) : BANGALORE - 560 019

BALANCE SHEET AS AT 31.03.2014

PREVIOUS YEAR Rs.	LIABILITIES		AMOUNT Rs.
98,050	Endowment Fund		98,050
1,86,815	Corpus Fund	(Per Sch)	3,34,381
8,39,333	Life Membership Fees (Per last B/S)	8,39,333	
	Add : Collected during the year	86,000	9,25,333
2,84,077	Excess of Income over Expenditure	2,84,077	
	Less : Excess of Expenditure over Income for the year	1,80,745	1,03,332
	Outstanding Liabilities for expenses		
6,742	Audit Fee Payable		11,236
14,15,017	TOTAL		14,72,332

PREVIOUS YEAR Rs.	ASSETS		AMOUNT Rs.
1,636	Furniture and Fixtures	1,636	
	Less : Deprn. @ 10%	164	1,472
1,000	Investment in Pragathi Co-op. Bank Ltd. - 10 Shares @ Rs.100 each		1,000
13,50,000	FD with Pragathi Co-op. Bank Ltd.	(Per Sch)	14,00,000
2,000	Rental Deposit	(" ")	2,000
6,000	Prepaid Expenses - Rent		-
	Cash And Bank Balances :		
9,495	Cash on hand	3,793	
44,885	Cash @ Banks (Per Sch)	64,066	67,859
14,15,017	TOTAL		14,72,332

Previous year's figures have been re-grouped wherever necessary and rounded off to the nearest rupee.

Bangalore,
31.07.2014

(PRESIDENT)
(DR. DEVARAKONDAREDDY)


G.K. Devarajaswamy
(GEN. SECRETARY)
(G. K DEVARAJASWAMY)

(TREASURER)
(M. B. PATIL)


For ACHARYA & Co.,
Chartered Accountants,
(CA K. V. ACHARYA)
Partner
M. No. 013020

ACHARYA & CO. BANGALORE-4 CHARTERED ACCOUNTANTS

ಲೇಖನ ೨೫ : ಹೆಬ್ಬೂರಿನ ಅಪ್ರಕಟಿತ ದಾನಪತ್ರ







ಶ್ರೀ

ಶ್ರೀ ಗುರುಬ್ರಹ್ಮಣೇನಮಃ.

ಕುರುಬರ ಕೈಪಿಡಿ.

ಕುರುಬರಿಗೂ, ಒಕ್ಕಲಿಗರಿಗೂ ಮತಸಮ್ಮಂಧವಾದ ವ್ಯಾಜ್ಯವು
ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟ್‌ರವರ ಕೋರ್ಟಿನಲ್ಲಿ
ಒದಗಿ ಗ್ರಂಥಗಳನ್ನು ಪರಿಶೋಧಿಸಿ ಘನವುಳ್ಳ ಮ್ಯಾಜಿ
ಸ್ಟ್ರೇಟರವರು ತೀರ್ಮಾನ ಮಾಡಿರುವುದನ್ನು ಇಂ
ಗ್ಲೀಷಿನಿಂದ ಕನ್ನಡಕ್ಕೆ ಪಂಡಿತರ ಸಹಾಯದಿಂದ
ತರ್ಜುಮೆ ಮಾಡಿಸಿರುತ್ತೆ.

Edited by,

M N. LINGAPPA,

Kulachintamani, Editor Kuruvijaya.

1000 Copies.

Printed at the Indira Press Bangalore City.

(Registered Copyright)

1917.

ಲೇಖನ ೬೯ : ಕುರುಬರ ಕೈಪಿಡಿ



ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ಭಿತ್ತಿ ಪತ್ರ - 2013

ಕರ್ನಾಟಕ ಇತಿಹಾಸ ಅಕಾದೆಮಿ(ರಿ.)

ಬೆಂಗಳೂರು

ಸಹಯೋಗ

ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು

ಐತಿಹಾಸಿಕ

ಪರಂಪರೆ ಉಳಿಸಿ ಸಪ್ತಾಹ


ಮನುಷ್ಯನಿಗೆ ನೆನಪು ಹೇಗೋ
ದೇಶಕ್ಕೆ ಇತಿಹಾಸ ಹಾಗೆ

ಹಳೆಯ ಕೆರೆಗಳ ದುರ್ಲಕ್ಷ
ತಂದಿತೆಮಗೆ ದುರ್ಭಿಕ್ಷ






ಕೋಟೆ ಕೊತ್ತಲದ ಕಲ್ಲು ಕಿತ್ತರೆ
ಪ್ರಾಚೀನ ಪರಂಪರೆಯ ಪಂಚಾಂಗ ಕಿತ್ತಂತೆ



ಪ್ರಾಚೀನ ದೇಗುಲ, ಶಿಲ್ಪ, ಮೂರ್ತಿ
ನಮ್ಮ ಹಿರಿಯರ ಕಲೆಯ ಕೀರ್ತಿ

ಪ್ರಾಚೀನ ಶಾಸನಗಳ ನಾಶ
ಇತಿಹಾಸ ಪುರುಷನಿಗೆ ಪಾಶ

ಹಳೆಯ ಕೋಟೆ ಹಳೆ ದೇಗುಲ ಹಳೆ ಕಾಗದ ಕಡತ
ಹೇಳುವುದು ನಮಗೆಲ್ಲ ಪ್ರಾಚೀನರ ತುಡಿತ



ಪ್ರಾಚೀನ ಇಗರ್ಜಿ ಮಸೀದಿ ಗುಡಿ
ನಮ್ಮ ಪರಂಪರೆಯ ಭವ್ಯ ಮುಡಿ

ತಾಳೆ ಹೊತ್ತಗೆಯ ರಕ್ಷಣೆ, ಹಳೆಯ ಪರಂಪರೆ ಪೋಷಣೆ



ವಿನ್ಯಾಸ : ಶ್ರೀನಿವಾಸ್

ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ಭಿತ್ತಿ ಪತ್ರ - 2014

E-mail : karnatakaitihasaacademy25@gmail.com
Blog : itihasaacademy.blogspot.in
web : www.karnatakaitihasaacademy.org

ISBN-978-81-921255-4-1

9 788192 125541

LAKSHMI MUDRANALAYA 080-26613123